REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭. ಮೈಸೂರು—ಸನ್ ೧೯೧೦ ನೇ ಇಸವಿ ಜನವರಿ ತಾರೀಖು ೬ ನೇ ಗುರುವಾರ. ಸಂಚಿಕೆ ೩೨

COLLEGE SCHOLARSHIPS

13-1

The undersigned will furnish two scholarships at Rs. 15 per month each, for four years to Christian young men who have passed the Matriculation Examination if they will give bond to serve as teachers in our Mission High School for five years after passing the B. A Examination

Apply with testimonials to

REV. W. D. BEAL,
M. E. Mission,
Belgaum.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 52

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕು ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೈಮಗ್ಗದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ಕೊಂಡು ನೋಡಿ ದರೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೩ ಆಣೆಯಿಂದ ೬ ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ನೋಟಿಫಿಕೇಷನ್.

89-1

ಅಮೃತಮಹಲ್ ಇಲಾಖಾ ಬಾಬ್ತು ಕೆಲವು ಗಂಡು ದನುಗಳನ್ನು ಬರುವ ೧೯೧೦ ನೇ ಜನವರಿ ೧೯ ನೇ ತಾರೀಖು ಮೊದಲ್ಗೊಂಡು "ಹೊಳಲ್ಕೆರೆ ರೈಲ್ವೆ ಸ್ಟೇಷನ್" ಬಳಿಯಲ್ಲೂ ಅದೇ ತಿಂಗಳು ೨೫ ನೇ ತಾರೀಖು ಬಾಗಾಯ್ತು ಚಿತ್ರದುರ್ಗದ ತಾಲ್ಲೂಕು 'ಅಯ್ಯನಹಳ್ಳಿ' ಕಾವಲಿನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಹಾಜರಾಗಿ ಛಡಸವಾಲಿನಲ್ಲಿ ದನುಗಳನ್ನು ಪಡೆಯಬಹುದು.

ಕ್ಯಾಂಪ್ ಮೈಸೂರು, ಎಚ್. ನಂಜುಂಡರಾಜೇ ಅರಸ್,
ತಾ. ೨೨-೧೨-೦೯ ಸೂಪರಿಂಟೆಂಡೆಂಟ್, ಅಮೃತಮಹಲ್ ಇಲಾಖಾ

ಸಂಜೀವಿನೀ ಔಷಧಾಲಯ, ಮೈಸೂರು.

23 48

ಎಂ. ಎಸ್. ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ವೀರ್ಯದೋಷ, ಚರ್ಮವ್ಯಾಧಿ, ಕೆಮ್ಮು, ವಾಯುಸಂಬಂಧವಾದ, ಶರೀರಜ್ವರ, ಅಗ್ನಿಮಾಂದ್ಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಮಾಂದ್ಯ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ಶರೀರದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ದೇಹದೃಢ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಶಕ್ತಿಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಸೀಸೆ ೧ ಕ್ಕೆ ೧ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ರೋಗ, ಇವುಗಳಿಗೆ ಖಾತರಿಯಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿವಸಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಡಬ್ಬಿ ೧ ಕ್ಕೆ ೧ ರೂಪಾಯಿ

ಕಾಲರಾಹರ ವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ.

ಸುಮನೇತ್ರ ಬಿಂದು—ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು ಶಿರೋಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರತರವಾದ ಅತ್ತರುಗಳೂ, ಗಂಧದಬಿಲ್ಲೆಗಳು ಮತ್ತುಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಹೆಡ್ ಕ್ವಾರ್ಟರ್ಸುಗಳಲ್ಲಿ ಏಜಂಟರುಗಳೂ ಬೇಕು. ಅರ್ಜಿಗಳನ್ನು ಬೇಗ ಬರೆಯಿರಿ.

ಡಿ. ಕೆ. ಸ್ವಾಮಿ,
ಪ್ರೊಪ್ರೈಟರ್.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೧೦ ನೇ ವರ್ಷದ ಕ್ಯಾಲೆಂಡರು. ದೊಡ್ಡ ಸೈಜು. ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ, ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶ್ರೀಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ. ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ 'ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು. ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡಲೆ ಬರೆಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪ್ರೋತ್ಸಾಹಕೋರಿ.

2-2

ಹಾಸನ್ ಟೋಪಿಯು ಸುಪೀರಿಯರ್ ಉಲ್‌ದಾರ 1 ಟೋಪಿ ದಾರಕ್ಕೆ 0-8-0 10 ಟೋಪಿಯಾಗುವ ಬಂಡಲ್ 1 ಕ್ಕೆ ರೂ 3-7-0 ಬಣ್ಣದಲ್ಲಿ ಎಣ್ಣೆ ಕೆಂಪು ಕಪ್ಪು ತೇಟಿ ಕೆಂಪು ಹಳದಿ ಗುಲಾಬಿ ಪಚ್ಚೆ ನೀಲಿ ಮತ್ತು ಕಾಫಿ ಬಣ್ಣಗಳಲ್ಲಿ—ಹಾಸನ್ ಟೋಪಿ ಹೊಲಿಯುವ ಸಾಧಾರಣ ದಪ್ಪದ ಉಲ್ ಪೌಂಡು 1 ಕ್ಕೆ 2-1-0, ಅರೆ 1 ಕ್ಕೆ 0-10-0, ರಂಗಿನಲ್ಲಿ ಯೆಣ್ಣೆ ಕೆಂಪು ಕಪ್ಪು ಮತ್ತು ತೇಟಿ ಕೆಂಪು ಮಿಶ್ರ ಉಲ್ ಪೌಂಡು 1 ಕ್ಕೆ 2-12-0. ಆರು ಟೋಪಿ ಆಗುವದು ಕಂಕ್ಕೆ ಸೂಜಿ 1 ಕ್ಕೆ 0-1-6 ಮತ್ತು 0-3-0, ಹಾಸನ್ ಟೋಪಿ ಹೊಲಿಯುವ ದಪ್ಪದ ಉಲ್ ಪೌಂಡು 1 ಕ್ಕೆ ರೂ. 1-12-0

ಹಾಸನ್ ಟೋಪಿಗಳು ಡಜನ್ 1 ಕ್ಕೆ 8-0-0 ಮತ್ತು 13-0-0, ತರಹೆವಾರಿನ ರಂಗಿನಲ್ಲಿ ಕಸೂತಿಕೆಲಸದ ಉಲನ್ ದಾರಗಳು ಪೌಂಡು 1 ಕ್ಕೆ ರೂ 3-4-0.

ಕೆಪಿಟೋ ಬಾಂ ಬುಲಾ ತರದ ವಾಚಕ್ಕೆ 0-8-0, ದೊಡ್ಡವರ ಕಾಲುಚೀಲಗಳು ಆಣೆ 0-1-0 ರಿಂದ 1-8-0. ಮರೀ ಮಕ್ಕಳ ಕಾಲುಚೀಲಗಳು 0-4-0 ಮತ್ತು 0-6-0. ದೊಡ್ಡವರ ಕಾರ್ಡಿಗನ್ ಬನಿಯನ್ 1 ಕ್ಕೆ 8 ಆಣೆಯಿಂದ 1-0-0. ದೊಡ್ಡವರ ಮುಸುಕಿನ ಟೋಪಿ 1 ಕ್ಕೆ 1-0-0 ಹಣಕಾಸುಗಳು ಹಾಕುವ ಉಲ್‌ದಾರದ ಪಾಕೆಟ್ 1 ಕ್ಕೆ 0-3-0 ಉಲ್‌ದಾರದ ವಾಚ್ ಪಾಕೆಟ್ 1 ಕ್ಕೆ 0-2-0 ಉಲ್‌ದಾರದ ಕಮರ್‌ಬಂದ್ 1 ಕ್ಕೆ 10 ಆಣೆಯಿಂದ 1-4-0 ಬಾಚಣಿಗೆಗಳು 1 ಕ್ಕೆ 0-1-0, 0-1-6 ರಿಂದ 0-4-0. ಪುನುಗಿನ ಕಡ್ಡಿ ತೊಲೆ 1 ಕ್ಕೆ 0-2-0 ದಶಾಂಗ ತೊಲೆ 1 ಕ್ಕೆ 0-4-0 ಪಿನನಾ ದಬ್ಬಿ 1 ಕ್ಕೆ 0-4-0. ವಾಚು ಸರಪಣಿ 1 ಕ್ಕೆ ಆಣೆ 6 ರಿಂದ 0-12-0 ವರೆಗೆ ರಬ್ಬರ್ ಸ್ಟ್ಯಾಂಪು ಶಾಯಿ ಬಾಟಲಿ 1 ಕ್ಕೆ 0-1-0 ಸೇಕ್‌ಸೀಜ್ ಕಾಂಬಿನೇಷನ್ ಮಾತ್ರೆಯು 300 ಮಾತ್ರೆಗಳಿರುವ ಪಾಕೆಟ್ 1 ಕ್ಕೆ 0-3-0 ಮೆಂತ್ಯಾಲ್ ದಬ್ಬಿ 1 ಕ್ಕೆ 0-3-0 ಗಜಕರ್ಣದ ಮುಲಾಮು ದಬ್ಬಿ 1 ಕ್ಕೆ 0-5-0. ದೇಶಿ ಕೈವಸ್ತ್ರಗಳು ಡಜನ್ 1 ಕ್ಕೆ 1-0-0 ಲಿನನ್ ಕೈವಸ್ತ್ರಗಳು ಡಜನ್ 1 ಕ್ಕೆ 1-6-0 ಕಸ್ತೂರಿಮಾತ್ರೆ 200 ರ ಶೀಸೆ 1 ಕ್ಕೆ 0-4-0 ಕಾಮಿನಿಯ ತೈಲವು ಅನೇಕ ತರದ ತೈಲಗಳಲ್ಲಿ ಪಸಂದಾದದ್ದು ಶೀಸೆ 1 ಕ್ಕೆ 1-0-0 ಪರಿಮಳ ನಸ್ಯದಬ್ಬಿ 1 ಕ್ಕೆ 0-3-0 ದಂತಮಜ್ಜನ ದಬ್ಬಿ 1 ಕ್ಕೆ 0-1-6 ಪೊಮಟ ಶೀಸೆ 1 ಕ್ಕೆ 0-5-0. ದಿಲ್‌ಬಹಾರ್ ಇದು ಅಮೂಲ್ಯವಾದ ಅತ್ತರ್ ಶೀಸೆ 1 ಕ್ಕೆ 1-8-0. ಕಾಮಿನಿ ಅತ್ತರ್ ಶೀಸೆ 1 ಕ್ಕೆ 1-8-0 ರೋಜ್ ಅತ್ತರ್ ಶೀಸೆ 1 ಕ್ಕೆ 2-0-0 ಇಂಗ್ಲಿಷ್ ಅಕ್ಷರದ ಪಟ್ಟಿಗೆ 1 ಕ್ಕೆ 0-10-0 ಯಿಂದ 3-0-0 ಬಿಳೀ ಪೋಸ್ಟು ಕಾರ್ಡುಗಳು 100 ಕ್ಕೆ 0-3-0. ರೂಲು ಹಾಕಿದ ಲೆಟರ್ ಪೇಪರ್ ಪ್ಯಾಕೆಟ್ 1 ಕ್ಕೆ 0-4-0 ಇದಕ್ಕಾಗುವ ಕವರ್ 100 ಕ್ಕೆ 0-5-0 ಕಾಬೂಲ್ ದೇಶದ ಹಿಂಗು 12 ತೊಲೆ ದಬ್ಬಿ 1 ಕ್ಕೆ 0-14-0 ಕೆಂಪುನೂಲಿನಿಂದ ಹೆಣೆದ ಕಮರ್‌ಬಂದ್—0-4-0, 0-7-0 ಮತ್ತು 0-9-0 ಸಂಗೀತ ಪಾರಿಜಾತವೆಂಬ ಹಾಡಿನ ಪುಸ್ತಕ 0-1-0

1910 ನೇ ಡೈರಿ 1 ಕ್ಕೆ 0-2-0 ನಮಗೆ ಅಲ್ಪ ಕಮಿಷನ್ ಕೊಟ್ಟಲ್ಲಿ ಮಂಗಳೂರಲ್ಲಿ ದೊರೆಯುವ ಯಾವ ಸಾಮಾನು ಬೇಕಾದರೂ ಚಿಕಿತ್ಸೆಯಿಂದ ಪಡೆದು ರವಾನಿಸುವೆವು ವಿ ಪಿ ಯಿಂದ ತರಿಸುವವರು ಟಪಾಲು ಖರ್ಚು ಜಾಸ್ತಿ ಕೊಡಬೇಕಾಗುವದು

ನಮ್ಮ ವಿಳಾಸ.—ದಿ ಉಲನ್ ಮಾರ್ಟ್,
ನಂ. ೧, ಮಂಗಳೂರು, ದ. ಕ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. ... ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕೂಳ್ಯದ ವೆಂಕಟಾಚಲ ಪಂಡಿತರ

4-47

ಲೋಕೋಪಕಾರ ಕಸ್ತೂರೀ ಮಾತ್ರೆಯು.

ನಿಮ್ಮ ಕಸ್ತೂರೀಮಾತ್ರೆಯು ಬಹಳ ಉಪಯೋಗಕ್ಕೆ ಬಂದಿರುತ್ತೆ. ಕೂಡಲೆ ದಯವಿಟ್ಟು ಈ ಮಾತ್ರೆಯ ೬ ಸೀಸೆಗಳನ್ನು ಕಳುಹಿಸಿಕೊಡಬೇಕು.

ಎಸ್ ನಂಜುಂಡಯ್ಯ, ಸ್ಕೂಲ್ ಮಾಸ್ಟರ್, ಕಂದಿಕೆರೆ.

ತಮ್ಮ ಕಸ್ತೂರೀ ಮಾತ್ರೆಗಳು ಬಹು ಶ್ಲಾಘ್ಯವಾದದ್ದಾಗಿರುತ್ತೆ. ತುಂಬಾ ಅನುಭವಸಿದ್ಧವಾದದ್ದು ಸದರಿ ಮಾತ್ರೆಗಳ ೬ ಸೀಸೆಯನ್ನು ಜರೂರು ಕಳುಹಿಸಬೇಕು

ಶ್ರೀನಿವಾಸರಾವ್, ರಿಕಾರ್ಡ್‌ಕೀಪರ್, ಚೆನ್ನರಾಯನಕೋಟೆ

ತಮ್ಮ ಕಸ್ತೂರೀ ಮಾತ್ರೆಗಳು ಇಲ್ಲಿ ಕೆಲಕೆಲ್ಲ ರೋಗಿಗಳಿಗೆ ಕೊಟ್ಟದ್ದರಲ್ಲಿ ಬಹಳ ಗುಣಕಾರಿಯಾತು ಜರೂರು ಸದರಿ ಮಾತ್ರೆಗಳ ೬ ಸೀಸೆಗಳನ್ನು ಕಳುಹಿಸಿಕೊಡಬೇಕು

ಸುಬ್ರಾಯರೊಮಲಯನ್, ದತ್ತರಬಂದಿ, ಹೊಸಕೋಟೆ

ತಮ್ಮ ಕಸ್ತೂರೀ ಮಾತ್ರೆ ಸೀಸೆಗಳು ಬಹಳ ಉತ್ತಮವಾಗಿ ಕಾಣುವಂಥವು ತುರ್ತಾಗಿ ೧೨ ಸೀಸೆ ಮಾತ್ರೆಗಳನ್ನು ಕಳುಹಿಸಿಕೊಡಬೇಕು

ಪಿ ಪುಟ್ಟಯ್ಯ, ಬೊಮ್ಮಸಿದ್ದನಹಳ್ಳಿ, ಚಿತ್ರದುರ್ಗ ತಾಲ್ಲೂಕು.

ನಿಮ್ಮ ಕಸ್ತೂರೀ ಮಾತ್ರೆಯಿಂದ ನಮಗೂ ನಮ್ಮ ಮಿತ್ರರಿಗೂ ಗುಣಕಾರಿಯಾಗಿರುತ್ತದೆ ಆದರೆ ಈ ಸಾರಿ ೬ ಬಾಟ್ಲುಗಳನ್ನು ತೀವ್ರವಾಗಿ ರವಾನೆ ಮಾಡಿ

ಸಿದ್ಧಲಿಂಗಪ್ಪ, ಹೊಸಗಡಿ, ಬ್ಯಾಡಗಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

8-1

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ;
೧ ರೂ ೬ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೩

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ. ; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ. ೬ ಆ ;

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

5 38

ತಲೆನೋವು, ವಾಯುನೋವು, ಸೆಳತ ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ನಿಲುಕದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಸುತ್ತಾರೆ ಮುಖ್ಯ ಏಜಂಟರ ವಿಳಾಸ— ಜಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್ ಪೀಟರ್ಸ್,

೩೩, ಪೇದನಾಯಕನ ಪೇಟೆ ಬೀದಿ, ಪೇಟ್ಟೇರಿ, ಮದರಾಸ್

CHAMBERLAIN'S COUGH REMEDY.

ಚೇಂಬರ್ಲೇನಯವರು ಕಂಡುಹಿಡಿದ ಕೆಮ್ಮಿನ ಔಷಧವು

8 1

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು   ಸಣ್ಣ ಶೀಸೆಗೆ ೧ ರೂಪಾಯಿ   ದೊಡ್ಡ ಶೀಸೆಗೆ ೨ ರೂಪಾಯಿ

ನಿನಗೆ ಸ್ವಸ್ಥವಿಲ್ಲವೋ ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾ—ಎಂದರೆ, ನಿನಗೆ ಯಾವ ನೋವೇ ಉಂಟಾಗಲಿ—'ನನಗೆ ದಿನಕ್ಕೆ ಒಂದು ಸಲವಾದರೂ ಕಾಲಶುದ್ಧಿಯಾಗುತ್ತದೆಯೇ ?' ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಡೀನರ್ ಮಾತ್ರೆಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ—ಪಿತ್ತಕೋಶ ರೋಗ ಪಿತ್ತ ವಿಕಾರ, ಅಜೀರ್ಣ ಅಗ್ನಿಮಾಂದ್ಯ, ಗಾಬರಿ, ಅರುಚಿ, ಎದೆಯುರಿ, ತಲೆಸುತ್ತು, ತಲೆಭಾರ, ತಲೆನೋವು, ಹೊಟ್ಟೆಯುಬ್ಬರ ಮುಳೆಗೆ ನವ ಹೊಟ್ಟೆ ನೋವು, ಚರ್ಮ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಡೀನರ್‌ಮಾತ್ರೆಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [6-19]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು ಅಥವಾ, ಡೋನ್, ಪಿ. ಒ. ಬಾಕ್ಸ್ ೨೦, ಬೆಂಗಳೂರು—ಇವರಲ್ಲಿ ದೊರೆಯುವುದು

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 9 1

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇವಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಮೀನುಮನುಷ್ಯ ಇರುವ ಈ ಔಷಧದ ಗುರುತು

ಜ್ವರಹರಿ. II 1

ಇದು ಸಾಧಾರಣ ಜ್ವರ, ಚಳೀಜ್ವರ, ಮರೀಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿಹಿಡಿಯುವುದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಸುಪರಿಂಟೆಂಡೆಂಟ್ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ ೩—೧೨ ರೂ ೨—೧೨ ೮ ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಯಾಗುವದು

ಅಮೃತಾಂಜನ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವುದು, ರಕ್ತಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪರಸ್ಪರ "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಗಳಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [7 45]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಊದಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಶೀತ, ಗಾಯ, ದುಮ್ಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು ೦-೮-೦

ಗಜಕರ್ಣದ ಮುಲಾಮು.

ಮುಂತಿ ಸಾರಿ ಹಾಕುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಅಶ್ವಾಮಿಶ್ರಣ	೨ ೦-೦
ಬೋಳುತಲೆತದ ಮದ್ದು	೦ ೮-೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದು ಹುಡುಗರಿಗೆ	೦-೮ ೦
ಜುಲಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೪-೦
ಬಾಲ ಮುಲಾಮು—ಮಕ್ಕಳ ಬಿಚ್ಚಿಗೆ	೦ ೬-೦
ಕೇಶವರ್ಧಿನೀ ತೈಲ—ತಲೆಯ ಕೂದಲಿಗೆ	೧ ೦-೦
ಕಫನಾಶಕ ಚೂರ್ಣ—ಅಸ್ತಮ ರೋಗಕ್ಕೆ	೦-೮-೦

ದಯವಿಟ್ಟು ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು.—"ಅಮೃತಾಂಜನ," ಮುಂಬಯಿ.

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ—(196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು. ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ 0—0—6

(80 ಪೇಜು) 0—1—0

(160 ಪೇಜು) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-1]

ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

3—12—1909 ರಿಂದ 10—12—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	7	7	0	0
ಮೈಸೂರು ,,	21	1[illegible]	0	0
ಬೆಂಗಳೂರು ಡಿಸ್ಟ್ರಿಕ್ಟು	19	16	0	1
ಮೈಸೂರು ,,	51	34	60	40
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	3	0	0	0
ಚಿತ್ರದುರ್ಗ ,,	1	1	45	25
ಕಡೂರ್ ,,	5	2	0	0
ಶಿವಮೊಗ್ಗ ,,	5	6	0	0
ಜುಮ್ಲಾ	111	82	105	66

ಸಚಿತ್ರಕಲಾತರಂಗ.

೧ ನೇ ಭಾಗ

ಕ್ರಯ ಪುಸ್ತಕ ೧ಕ್ಕೆ ರೂ ೧ ೪ ೦

ಒಂದನೇ ಅಧ್ಯಾಯ — ಸಂವತ್ಸರ, ಮಾಸ, ವಾರ ಇವುಗಳುತ್ಪತ್ತಿಗೆ ಕಾರಣ, ಭೂಮಂಡಲವು, ಚಂದ್ರನು, ಸೂರ್ಯ, ಗ್ರಹಗಳು, ಗ್ರಹಣಗಳು, ಧೂಮಕೇತುಗಳು, ಉಲ್ಕಾಪಾತಗಳು, ಗ್ರಹಸಂಚಾರಗಳು ಇವುಗಳ ವಿಷಯ

ಎರಡನೇ ಅಧ್ಯಾಯ —ಕಾಂತಿಯ ಪ್ರಭಾವವು (ಶಕ್ತಿಯು), ಎಣ್ಣೆಯಿಲ್ಲದ ದೀಪಗಳು ನಡೆಯುವದೀಪ, ರಂಗಿನದೀಪಗಳು, ಸ್ಫುರಶಕ್ತಿಯಿಂದಾಗುವ ಪ್ರಯೋಜನಗಳು, ಸೂರ್ಯನಕಾಂತಿಯಿಂದ ರೋಗಗಳನ್ನು ಗುಣಮಾಡುವಿಕೆ, ನೀಲಿ ಸೀಸಾಯಿಯ ನೀರಿನಿಂದ ಶಾಂತಿಯಾಗುವ ರೋಗಗಳು ಕೆಂಪು ಗಾಜಿನ ಬೆಳಕು ಕೆಂಪು ಸೀಸಾಯಿಯ ನೀರು ಇವುಗಳ ಉಪಯೋಗ, ಸೂರ್ಯಶಕ್ತಿಯಿಂದ ಅಡಿಗೆಮಾಡುವಿಕೆ, ಅಗ್ನಿಪರ್ವತಗಳು, ಕಲ್ಪಿತಸೂರ್ಯಶಕ್ತಿಯು

ಮೂರನೇ ಅಧ್ಯಾಯ —ನೀರಿನಿಂದ ಘಾಳಿಯನ್ನು ಮಾಡುವುದು, ನೀರಿನಿಂದ ರೋಗಗಳು ಗುಣವಾಗುವಿಕೆ, ಬಾಷ್ಪಸ್ನಾನವು, ಕಟಿಸ್ನಾನವು ಲಿಂಗಸ್ನಾನವು, ಆತಪಸ್ನಾನವು, ಮುಖಪ್ರಕ್ಷಾಳನವಿದ್ಯೆ, ನೀರಿನಿಂದ ನಡೆಯುವ ಯಂತ್ರಗಳು ಎತ್ತರವಾದ ಸ್ಥಳಕ್ಕೆ ನೀರನ್ನು ತರಿಸುವಿಕೆ ನೀರಿನ ಯಂತ್ರವು

ನಾಲ್ಕನೇ ಅಧ್ಯಾಯ —ರಸೋತ್ಪತ್ತಿ, ಲೋಹೋತ್ಪತ್ತಿಯು, ಕಬ್ಬಿಣ, ಉಕ್ಕು, ತಾಮ್ರ, ಬೆಳ್ಳಿ, ಭಂಗಾರವು ಅಲ್ಯುಮಿನಂ, ಕ್ಯಾಲ್ಸಿಯಂ, ತವರವು, ಕಂಚು, ಹಿತ್ತಾಳೆ ಸೀಸವು, ತುತ್ತುನಾಗವು, ಜರ್ಮನ್ ಸಿಲ್ವರ್, ಪ್ಲಾಟಿನಂ, ಲೋಹೋತ್ಪತ್ತಿ ರಸ ಗಂಧಕವು ತೈಲೋತ್ಪತ್ತಿ, ಅಭ್ರಕವು, ಶಿಲೋತ್ಪತ್ತಿ, ಹವಳಗಳು, ಕ್ರಿಮಿಕೀಟಗಳ ಉತ್ಪತ್ತಿ, ಹಿಂಗು, ಅಫೀಂ, ಅರಗು, ಕಪು ಆರ ಸು ಕೆರೊಸೀನ್ ಆಯಿಲ್ (ಸೀಮೆಯೆಣ್ಣೆ), ರಬ್ಬರು

ಐದನೇ ಅಧ್ಯಾಯ —ವಾಯುವು, ಗಾಳಿಯಾತ್ರವು, ಗಾಳಿಯ ಪ್ರತಿಗಳು, ಗಾಳಿಯಿಂದ ನೀರು ಸೇದಿಸುವುದು ಆಕಾಶವಿಮಾನಗಳು ಅಥವಾ ಆಕಾಶಬುಟ್ಟಿಗಳು ಗಾಳಿ ವಾಹಿಗಳು, ಗಾಳಿಯಿಂದಗ್ನಿಯನ್ನುಂಟುವ ದು ವೃತು, ಗಾಳಿಯಿಂದ ನೀರನ್ನುಂಟುಮಾಡುವುದು, ಗಾಳಿಯಿಂದ ಬೆಂಕಿಯನ್ನಾರಿಸುವುದು, ಗಾಳಿಯ ದೀಪಗಳು (ಗ್ಯಾಸ್‌ಲೈಟ್), ಬಾತರ ಸ್ಕ್ರೂ, ಸ್ಟೀಮ್

ಆರನೇ ಅಧ್ಯಾಯ —ವಸ್ತುಗಳನ್ನು ಪರೀಕ್ಷಿಸುವ ಮಾರ್ಗಗಳು, ಕಸ್ತೂರಿಪರೀಕ್ಷೆಯು, ಜಲಪರೀಕ್ಷೆ, ಅಶ್ವಪರೀಕ್ಷೆ ಮೂತ್ರಪರೀಕ್ಷೆ, ಔಷಧಪರೀಕ್ಷೆಯು, ಸ್ಥಳಪರೀಕ್ಷೆ, ಕ್ಷೀರಪರೀಕ್ಷೆ ಅಕ್ಷರಪರೀಕ್ಷೆ, ಗರಳಪರೀಕ್ಷೆ, ಸುವರ್ಣಪರೀಕ್ಷೆ ನಾಡೀಪರೀಕ್ಷೆಯು, ಉಷ್ಣಪರೀಕ್ಷೆ ವಿಷಪರೀಕ್ಷೆಯು

ಏಳನೇ ಅಧ್ಯಾಯ —ಕಾಗದವನ್ನು ಮಾಡುವಿಕೆ ರೂಲುಹಾಕುವ ಪೆನ್ಸಿಲುಮಾಡುವವಿಧ, ಬೆಂಕಿಕಡ್ಡಿಗಳನ್ನು ಮಾಡುವವಿಧವು, ಬೆಂಕಿಪೆಟ್ಟಿಗೆ ಯಲ್ಲಿರಲು ಕಡ್ಡಿಗಳನ್ನು ಮಾಡುವಕ್ರಮ ಬಾರದ ಬೆಂಕಿಕಡ್ಡಿಗಳು, ಕಾಗದದ ಬೆಂಕಿಕಡ್ಡಿಗಳು ಬೆಂಕಿಪೆಟ್ಟಿಗೆಗಳನ್ನು ಮಾಡುವಿಕೆ, ಹಾಲುಸಕ್ಕರೆಮಾಡುವವಿಧ ಗಂಧಕದ ಬಟ್ಟಲು ಮಾಡುವವಿಧ ಸಾಣೆಯುಗಾಲಿ, ಕಲ್ಲುಸಕ್ಕರೆಮಾಡುವವಿಧ, ಮಜನಗಡ್ಡೆಮಾಡುವವಿಧ ಕಪ್ಪುಶಾಯಿಮಾಡುವಕ್ರಮವು, ಕೆಂಪುಮಸಿ ಊದಾ ಮಸಿ, ನೀಲಿಮಸಿಮಾಡುವವಿಧ ಹಸುರುಶಾಯಿ ಕಾಪಿಯಿಂಗ್‌ಶಾಯಿ ೩ ನೇ ವಿಧ, ೪ ನೇ ವಿಧ ೫ ನೇ ವಿಧ, ಬಿಳೀಶಾಯಿ ಕನ್ನಡಿಯ ಮೇಲೆ ಬರೆಯುವ ಮಸಿ, ಗುಪ್ತಪತ್ರಿಕಾಲೇಖನಕ್ಕೆ ಮಸಿ ಮೋಣದಬತ್ತಿ ಮಾಡುವಕ್ರಮ, ಸಾಬೂನು (ಸೋಪು) ಮಾಡುವ ವಿಧವು, ಸುವಾಸನೆಯ ಸಾಬೂನು, ನಾಟುಸಬ್ಬು ಮಾಡುವವಿಧ ಮೈಲುತುತ್ತಮಾಡುವುದು, ರಬ್ಬರುಮುದ್ರೆ ಕೆಂಪು ಇಂಕಿ ಮಾಡುವಿಕೆ ರಬ್ಬರು ಮುದ್ರೆಯ ಊದಾಯಿಂಕಿ ಮಾಡುವಿಕೆ, ರಬ್ಬರುಮುದ್ರೆ ಕಪ್ಪು ಇಂಕು, ಸ್ಟ್ಯಾಂಪು ಕರೆಮಸಿ, ಪಿಟಿಗೆ ಮಾಡುವಿಕೆ ಬಟ್ಟೆಯ ಮೇಲೆ ಹಾಕಿಕೊಳ್ಳುವ ಅಕ್ಷರು ಕಾಂಬೋಡಿಯಾ, ಕಾಂಚೀಲವಿಸೋದ ಮಾತ್ರೆಗಳು, ಭೋಗವಟಿಯಮಾತ್ರೆಗಳು ಪರಿಮಳಸ್ನಾನಚೂರ್ಣ, ಮಲ್ಲಿಗೆಯ ಎಣ್ಣೆ, ಸಂಪಿಗೆಯೆಣ್ಣೆ ಕೇದಿಗೆ (ಸುರಾ), ಪಯಾರುವಮಾಡುವವಿಧ ಸಮೀ ಸಿ ರಸ್ನು ಕುಟಿಮಾಡುವವಿಧಾನ ಉಳಿಗೆ ಹದವನ್ನು ಕೊಡುವುದು ಕತ್ತಿ ಮೊದಲಾದವು ಗಳಿಗೆ ಹದವು, ಅರ ಮೊದಲಾದವುಗಳಿಗೆ ಹದವು ಹಲಸಿನಹಣ್ಣನ್ನು ವೃದ್ಧಿಮಾಡುವಿಕೆ, ಕಿತ್ತಳೆ ಹಣ್ಣು ವೃದ್ಧಿಮಾಡುವಿಕೆ ಮಾವಿನಹಣ್ಣು ವೃದ್ಧಿಮಾಡುವಿಕೆ, ಸೀಬೆ, ಬದನೆ ಇವೆರಡನ್ನೂ ಸೇರಿಸಿ ಅಂಟುಕಟ್ಟುವವಿಧ ಗಿಡದಲ್ಲಿನ ಹೂವುಗಳ ಬಣ್ಣಗಳನ್ನು ಬದಲಾಯಿಸುವುದು ಅಂಟುಕಟ್ಟುವವಿಧ, ದ್ರಾಕ್ಷೆ ಗಿಡಕ್ಕೆ ಕಸಿಮಾಡುವುದು ನೌತೆಕಾಯನ್ನು ಜಟ್ಟಾಗಿ ಬಿಡುವಂತೆ ಮಾಡುವಿಕೆ ಹೂದಾಳಿಂಬೆಹಣ್ಣುಗಳನ್ನು ಸಿಹಿಯಾಗಿ ಮಾಡುವಿಕೆ, ಹುಳಿಯಾಗಿರುವುದನ್ನು ಹುಳಿಯಾಗಿ ಮಾಡುವಿಕೆ, ಮಾವಿನಹಣ್ಣುಗಳನ್ನು ಬಹಳ ದಿವಸದವರೆಗೆ ಕೆಡದಂತೆ ಮಾಡುವುದು ಸಿಂಬೆಯಹಣ್ಣುಗಳನ್ನು ಕೆಡದಂತೆ ಇಡುವುದು ಹಣ್ಣುಗಳಿಗೆ ಹೇರಾಗಿ ಎಲೆಯನ್ನು ಟುವಾಡುವಿಕೆ, ಪುಷ್ಪಗಳ ಬಣ್ಣವನ್ನು ಬದಲಾಯಿಸುವದು, ಗಿಡ ಉಳಿಡುದಂತೆ ಮಾಡುವುದು, ಮಣ್ಣಿನಪಾತ್ರೆಗಳ ರಂಧ್ರವನ್ನು ಮುಚ್ಚುವದು ಮಣ್ಣು ಉಪ್ಪುಮಾಡುವಿಕೆ, ಮೇಣರೇಕಿಗೆ ಬಣ್ಣವನ್ನು ಕೊಡುವದು, ಹಾಗಲಕಾಯಿಯ ಕಹಿಯನ್ನು ಹೋಗಲಾಡಿಸುವುದು ಸೌತೆಕಾಯಿಯ ಕಹಿಯನ್ನು ತೆಗೆಯುವುದು ಅಗ್ನಿದರ್ಪಣವು, ಸೂರ್ಯಕಿರಣದಿಂದ ಉರಿಯುವಂತೆ ಮಾಡುವುದು ಹಗಲಿನಲ್ಲಿ ನಕ್ಷತ್ರವನ್ನು ನೋಡುವುದು ಬರೆದ ಅಕ್ಷರಗಳನ್ನು ಕಾಣದಹಾಗೆ ಮಾಡುವಿಕೆ ಜಲತರಂಗಿಣೀನಾದವು ಜ ವಾಯುವೇಗ ಪರೀಕ್ಷೆಯು, ಸೂಕ್ಷ್ಮಕಿರಣದರ್ಪಣ ವಾಯು ಕಬ್ಬಿಣವನ್ನು ಕರಗಿಸುವುದು ಬೆಂಕಿಯು ಉರಿಯುವ್ನಾರಿಸುವುದು, ಕ್ರೋಮೋಫಾರವನ್ನು ಮಾಡುವಕ್ರಮವು, ಕುಮು ಮಾಡುವ ಪದ್ಧತಿ, ಅರಗಿನ (ಬಣ್ಣದ) ಕ್ರೋಮೋಫಾರಮಾಡಿಸುವಿಕೆ, ರಂಗುಕಲಂಕುಮವನ್ನು ಮಾಡುವುದು ರಬ್ಬರುಮುದ್ರೆಯನ್ನು ಮಾಡುವ ವಿಧವು, ಎಲ್ಲಾ ವಿಧವಾದ ಗಿಲೀಟು ಕೆಲಸಗಳು, ವಿದ್ಯುಚ್ಛಕ್ತಿಯಿಂದ ಗಿಲೀಟುಮಾಡುವಿಕೆ ಕಬ್ಬಿಣಕ್ಕೆ ಸತ್ತುವಿನ ಕಾವು ಕೊಡುವುದು ಕೆಂಪಿನಗಿಲೀಟು ಬೆಳ್ಳಿಯ ಕಲಾಯಿ, ಭಂಗಾರದ ಕಲಾಯಿ ಕಲಾಯಿಮಾಡುವುದಕ್ಕೆ ಸರಕುಗಳನ್ನು ಶುಭ್ರಪಡಿಸುವುದು ಹಿತ್ತಾಳೆಯಪಾತ್ರೆಗಳ ಮಡುವಿಕೆ, ಕಬ್ಬಿಣಕ್ಕೆ ಹಿತ್ತಾಳೆಯ ಕಲಾಯಿ, ಸತ್ತಿನಪಾತ್ರೆಗೆ ಹಿತ್ತಾಳೆಗಿಲ್ಟು ಸೀಸದವಸ್ತುಗಳಿಗೆ ಹಿತ್ತಾಳೆ ಗಿಲ್ಟು ಪಚ್ಚೆಗಿಲ್ಟು ಮಾಡಲು ಭಂಗಾರದ ಗಿಲ್ಟು, ಕಾಗದಗಳಿಗೆ ಗಿಲ್ಟುಮಾಡುವಿಕೆ, ಪಾತ್ರೆಯನ್ನು ಶುದ್ಧಮಾಡುವಿಕೆ ಬೆಳ್ಳಿಕಲಾಯಿ ಕನ್ನಡಿಗಳಿಗೆ ಗಾಜಿನ ಗಡ್ಡಿಗೆ ಗಿಲ್ಟುಮಾಡುವಿಕೆ ಕಾಗದಗಳಿಗೆ ಮೆರುಗುಕೊಡುವುದು, ಮಣ್ಣಿನಪಾತ್ರೆಗಳ್ಲಿ ಹುಳುಬೀಳದಂತೆ ಮಾಡುವುದು, ಸೂರಜಡಗಡ್ಡೆಯ ಸೊಂಕುತೆಗೆಯುವುದು, ಸೆಣಬಿನ ಕೈಗವಸುಗಳು ತೆಗೆಯುವುದು, ಜಲಭೂತದರ್ಪಣವು ಆಳದ ನೀರಿನಲ್ಲಿರುವ ವಸ್ತುವನ್ನು ನೋಡುವಬಗೆ ಹಂತಬೀಳಿಸುವವಿಧವು ಕಲ್ಲುಹಾಕುವ ಉಪಾಯವು, ಹಟ್ಟಾಗಿ ಬಣ್ಣ ತೆಗೆಯುವರೀತಿ ಕಾಗದಕ್ಕೆಬಿದ್ದ ಕಪ್ಪನ್ನು ತೆಗೆಯುವಿಕೆ ಹಿತ್ತಾಳೆಪಾತ್ರೆಯನ್ನು ಶುದ್ಧಮಾಡುವುದು, ಅಲ್ಯುಮಿನಿಯಂಪಾತ್ರೆಗಳ ಶುದ್ಧಿ, ಬಣ್ಣಹೋಗದರೀತಿ ವಸ್ತ್ರಗಳನ್ನು ಒಗೆಯುವುದು, ಮೊಹರುಮಾಡುವ ಕರೀ ಅರಗು, ನೀಲಿ ಅರಗು ಕೆಂಪರಗು ರಾಗಗಳಿಗೆ ಉಪಯೋಗಿಸುವ ಕರೀವಾರ್ನಿಷು, ಮರದಸಾಮಾನುಗಳಿಗೆ ವಾರ್ನಿಷು ಹಾಕುವ ಪದ್ಧತಿ, ಮರದಸಾಮಾನುಗಳ ವಾರ್ನಿಷ್, ಕುರ್ಚಿ ಮೇಜು, ಕಿಟಕಿಯ ಬಾಗಿಲು ಮೊದಲಾದವುಗಳಿಗೆ ಬಳಿಯುವ ವಾರ್ನಿಷ್, ರೇಷ್ಮೆಬಟ್ಟೆಯಲ್ಲಿನ ಎಣ್ಣೆಜಿಡ್ಡು ತೆಗೆಯುವರೀತಿ, ರೇಷ್ಮೆಬಟ್ಟೆಯ ಕಲೆಗಳನ್ನು ತೆಯುವರೀತಿ, ರಕ್ತದಕಲೆಯನ್ನು ಹೋಗಲಾಡಿಸುವರೀತಿ, ಬಟ್ಟೆಯಲ್ಲಿನ ಕಬ್ಬಿಣದಕಲೆ ಹೋಗಿಸುವರೀತಿ, ಬಟ್ಟೆಯಲ್ಲಿನ ಎಣ್ಣೆ ಕಲೆ ತೆಗೆಯುವುದು, ಒಟ್ಟೆಯ ಮೇಲೆ ಅಂಕೆಕಲೆ ತೆಗೆಯುವುದು, ಸಾಧಾರಣಕಲೆಗಳನ್ನು ಹೋಗಲಾಡಿಸುವರೀತಿ, ಬೆಳ್ಳಿಯ ಸಾಮಾನುಗಳನ್ನು ಶುಭ್ರಪಡಿಸುವರೀತಿ, ಸುಣ್ಣಒಳಿಯುವುದಕ್ಕೆ ಒಳ್ಳೆಯರೀತಿ, ಗಚ್ಚು ಗಟ್ಟಿಯಾಗಿರುವಂತೆ ಮಾಡುವುದು, ಜರ್ಮನ್‌ಸಿಲ್ವರ್‌ಗೆ ಮೆರುಗಿಡುವವಿಧ, ಒಡೆದ ಪಿಂಗಾಣಿ ಅಥವಾ ಗಾಜಿನ ಸಾಮಾನುಗಳನ್ನು ಅಂಟಿಸುವಿಕೆ, ಪರಗಳ ಬಿರಟ್ಟಿನ ಕೊಳೆ ತೆಗೆಯುವುದು, ಗಿಲೀಟ್ ಬೊಕಟ್ಟುಗಳ ಕೊಳೆ ತೆಗೆಯುವುದು, ಸಿಸದಕಡ್ಡಿಯಿಂದ ಕನ್ನಡಿಯ ಮೇಲೆ ಬರೆಯುವುದು, ಕಬ್ಬಿಣ ಮತ್ತು ಉಕ್ಕಿನ ಆಯುಧಗಳ ಮೇಲೆ ಹೆಸರು ಬರೆಯುವುದು, ಬೆಳ್ಳಿ ಭಂಗಾರಗಳ ಕಲಾಬತ್ತಿನ ಕೊಳೆ ತೆಗೆಯುವುದು, ಒಟ್ಟೆ ಅಥವಾ ನೂಲುಗಳಿಗೆ ಕೆಂಪಿಯ ಬಣ್ಣಹಾಕುವುದು, ತಾಳೆ, ಈಚಲುಗರಿಗಳಿಗೂ ಬಿದಿರುಬಟ್ಟೆಗಳಿಗೂ ಬಣ್ಣ ಕೊಡುವುದು, ಉಪಯೋಗಮಾಡದ ಹೊಸ ಕತ್ತಿಗಳಿಗೆ ತುಕ್ಕುಹಿಡಿಯದಂತೆ ಮಾಡುವವಿಧ, ಕತ್ತಿಯ ತುಕ್ಕು ತೆಗೆಯುವುದು, ಮೊಟ್ಟೆಗಳ ಮೇಲೆ ಬರೆಯುವರೀತಿ, ಎಣ್ಣೆಯೊಡನೆ ಬೆರೆದ ನೀರನ್ನು ಬೇರೆಮಾಡುವುದು, ಗಾಜುಬುಡ್ಡಿಯನ್ನು ಕತ್ತರಿಸುವರೀತಿ, ಬಿರಡೆಯನ್ನು ಒರಸಿದ್ದರೆ ಕಂಡುಹಿಡಿವವಿಧ ಗಾಜಿನಪಾತ್ರೆಯೊಡನೆ ಹಿತ್ತಾಳೆ ಪಾತ್ರೆಗಳನ್ನು ಅಂಟಿಸುವುದು, ಮರದಸಾಮಾನುಗಳಿಗೆ ಬಣ್ಣಹಾಕುವ ಪೂರ್ವದಲ್ಲಿ ಮಾಡಬೇಕಾದ ಕೆಲಸಗಳು ಮರದಸಾಮಾನಿಗೆ ಬಣ್ಣಹಾಕುವಿಕೆ, ವಜ್ರವನ್ನು ಸದಾ ನೀರಾಗಿಡುವಿಕೆ, ಅಭ್ರಕನವನೀತಪದ್ಧತಿ, ಲ್ಯಾಂಪ್ ಮುಂತಾದವುಗಳನ್ನು ಚನ್ನಾಗಿ ಉರಿಯುವಂತೆ ಮಾಡುವುದು, ಜಡದಿಂದ ಪ್ರತಿಬಿಂಬ ತೆಗೆಯುವರೀತಿ, ಅಚ್ಚುಪಠದಿಂದ ಬೇರೆ ಪ್ರತಿ ತೆಗೆಯುವುದು, ಗಿಡಗಳನ್ನು ಒಣಗಿಸುವರೀತಿ, ಮರಗಿಡಗಳಲ್ಲಿನ ಹುಳುಗಳನ್ನು ಹೋಗಲಾಡಿಸುವರೀತಿ, ಮೇಣವನ್ನು ಶುದ್ಧಿ ಮಾಡುವುದು, ನಾಟುಸಬ್ಬು ಮಾಡುವರೀತಿ, ಬಿಳಿಯತಾಂಬ್ರವೆಂಬ ಜರ್ಮನ್‌ಸಿಲ್ವರ್ ಮಾಡುವರೀತಿ, ವಸ್ತ್ರಗಳನ್ನು ಬಣ್ಣಹಾಕುವರೀತಿ, ಬಾದಾಮಿಮೆಣವು, ಕೂದಲು ಉದುರದೆ ವೃದ್ಧಿಯಾಗುವುದಕ್ಕೆ, ಕೂದಲನ್ನು ಹೋಗಲಾಡಿಸುವುದಕ್ಕೆ, ದಂತಮಂಜನಗಳು, ಸುವಾಸನಾಚೂರ್ಣ (ಸೆಂಟ್ ಪೌಡರು), ಸ್ಮೆಲ್ಲಿಂಗ್‌ಸಾಲ್ಟು ಮಾಡುವಕ್ರಮ, ಕಾಪಿಯಿಂಗ್‌ಪೇಪರ್ ಕೃತ್ರಿಮ ಜೇನುತುಪ್ಪ ಮಾಡುವರೀತಿ

ಎಂಟನೇ ಅಧ್ಯಾಯ —ಖೇದಿಷರಬತ್ತು, ನೆಲ್ಲೀಕಾಯಿಷರಬತ್ತು, ಸೊಗದೇಬೆ ರಿನಷರಬತ್ತು, ಗುಲಾಬಿಷರಬತ್ತು ಕ್ಯಾದಿಗೆಮೊಲೆ ಷರಬತ್ತು, ನಿಂಬೆಹಣ್ಣಿನ ಷರಬತ್ತು, ಹೇಳೆಹಣ್ಣಿನ ಷರಬತ್ತು, ತಂಗಡಿ (ಆವರಿಗೆ) ಷರಬತ್ತು, ಬಾದಾಮಿ ಷರಬತ್ತು, ದೊಡ್ಡದ್ರಾಕ್ಷಿ ಷರಬತ್ತು, ಎಳಚಿಹಣ್ಣಿನ ಷರಬತ್ತು, ರಸಪಾಕ, ಮದ್ಯಪಾನದ ದುರಭ್ಯಾಸವನ್ನು ದೂರಮಾಡುವರೀತಿ, ಲಿಮನೇಡ್ ಮಾಡುವರೀತಿ, ಜಿಂಜರ್‌ಬೀರ್ ಮಾಡುವರೀತಿ, ಗುಲಾಬಿಹೂವಿನ ಗುಲ್ಕನ್, ಮುಳ್ಳುಶ್ಯಾವಂತಿಗೆಹೂವಿನ ಗುಲ್ಕನ್, ಜೇನಿನಹುವ್ವಿನ ಗುಲ್ಕನ್, ಆವರಿಕೆಹೂವಿನ ಗುಲ್ಕನ್ ನೆಲ್ಲಿಕಾಯಿ ಮುರಬ್ಬ, ಮಾದಲದಕಾಯಿ ಮುರಬ್ಬ, ಅಂಲೆಕಾಯಿ ಮುರಬ್ಬ, ಯಿರುಪುಳ್ಳಿಕಾಯಿಮುರಬ್ಬ, ಬೂದಕುಂಬಳಕಾಯಿ ಮುರಬ್ಬ, ಚಪ್ಪರದ್ರಾಕ್ಷಿಹಣ್ಣಿನ ಮುರಬ್ಬ, ಅಂಜೂರಹಣ್ಣಿನ ಮುರಬ್ಬ, ಸೇಬಹಣ್ಣಿನ ಮುರಬ್ಬ ಬೇವಿನಕಾಯಿ ಮುರಬ್ಬ, ಪುಷ್ಪಗಳ ಸತ್ತು ತೆಗೆವವಿಧ ಕಪ್ಪೂರಮಾಡುವವಿಧ, ಪಚ್ಚಕರ್ಪೂರಮಾಡುವವಿಧವು

ಕ್ರಯ ಪುಸ್ತಕ ೧ಕ್ಕೆ ರೂ ೧—೪—೦ ವಿ ಪಿ ಚಾರ್ಜು ಸೇರಿ ರೂ ೧—೬—೦ [12 1]

ನಮ್ಮ ವಿಳಾಸ —ದಿ ಉರ್ಲವರ್ಕ್ಸ್,
ನಂ ೧, ಮಂಗಳೂರು, ದ ಕ

ಸುಗಂಧಗಳು.

I-8

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೩೧, ೫, ೪, ೩ ೮ ೦, ೧ ೪-೦ ಬಿಲ್ಲೆಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಸೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ಪೇಟೇ ಧಾರಣೆ

ದಿವಸಿ		ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ	ರೂ	೧೪-೦ ೦	೧೪ ೮ ೦
ಕೆಂಬತ್ತಿ ಅಕ್ಕಿ ಅವಲ್		೧೪ ೦ ೦	೧೪ ೦ ೦
,, ದುಯಂ		೧೩ ೮ ೦	೧೩ ೮ ೦
ಜಾಪಾನ ಅಕ್ಕಿ		೧೪ ೦ ೦	೧೪ ೮ ೦
ಸಣ್ಣಕ್ಕಿ ಅವಲ್		೧೪ ೦	೧೬-೦ ೦
,, ದುಯಂ		೧೪ ೧೩ ೦	೧೫ ೦-೦
ಕೊಗರೀ ಬೇಳೆ ಪಲ್ಲಾ ೧ಕ್ಕೆ		೧೩-೮ ೦	೧೪ ೮-೦
,, ದುಯಂ		೧೩ ೦ ೦	೧೪ ೦ ೦
ಹೈಕ ರಾಗಿ ಪಲ್ಲಾ ೧ಕ್ಕೆ		೮-೦-೦	೮ ೮ ೦
ಕಾರ್ರಾಗಿ		೭ ೧೨ ೦	೮ ೦ ೦
ಜೋಳ		೭ ೮-೦	೮ ೦ ೦
ಹಲಸಂದೆ ಪಲ್ಲಾ ೧ಕ್ಕೆ		೧೦ ೨-೦	೯ ೦ ೦
ಬಿಳೀ ಅವರೆ		೧೩ ೦ ೦	೧೦ ೮ ೦
ಹೆಸರು		೧೦-೦-೦	೧೦ ೦ ೦
ಉದ್ದು		೧೩ ೮-೦	೧೦ ೮ ೦
ಕಡಲೆ		೧೩-೮-೦	೧೦ ೦ ೦
ಎಳ್ಳು ಸೇ ೧೨೭ಕ್ಕೆ		೧೫ ೦ ೦	೧೪-೦ ೦
ಹುರುಳಿ		೮ ೦-೦	೯ ೦ ೦
ಹರಳು ೧೨೭ ಸೇರಿಗೆ		೧೪ ೦ ೦	೧೩ ೮ ೦
ಸೀಗೇಕಾಯಿ ಮಣ ೧ಕ್ಕೆ		೩ ೦ ೦	೧ ೮ ೦
ಮೆಣಸಿನಕಾಯಿ		೪ ೮ ೦	೪ ೮
,, ದುಯಂ		೪ ೪ ೦	೪ ೦ ೦
ದಪ್ಪ ದೊಡ್ಡ ಅಚ್ಚು		೫ ೮-೦	ಮ ೩ ೪ ೦
ಒಳ್ಳೆಣ್ಣೆ ಮಣ ೧ಕ್ಕೆ		೪ ೮ ೦	೪ ೪ ೦
ಹರಳೆಣ್ಣೆ		೫ ೮ ೦	೪ ೬ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೯-೦ ೦	೯ ೦ ೦
ಉಪ್ಪು		೬ ೪ ೦	೫-೧೨ ೦
ಹುಣಸೇ ಹಣ್ಣು		೩-೪ ೦	೧-೧೦-೦
,, ಹಳೇದು		೩ ೦-೦	೧ ೮ ೦
ಸುಪ್ಪ ಮಣ ೧ಕ್ಕೆ		೧೬-೮ ೦	೧೪ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪ ೪ ೦	೪ ೨ ೦
ತೆಂಗಿನಕಾಯಿ ೧೦೦ಕ್ಕೆ		೫ ೦ ೦	೬ ೦ ೦
ಅಳಲೇಕಾಯಿ ಮಣ ೧ಕ್ಕೆ		೧ ೦ ೦	೦ ೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧-೦ ೦	೦ ೧೧-೦
ಚಿನ್ನ (ಪವನ್) ಒಂದು		೧೫ ೯ ೦	೧೫ ೪-೦
,, ,, ಪಸಿಮೆ		೧೬ ೦ ೦	೧೫ ೮-೦
,, ,, ಗಟ್ಟಿ ತೊಲ ೧ಕ್ಕೆ		೨೪-೮ ೦	೨೪ ೫-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೬೭-೪-೦	೬೪-೪-೦

ಶಾಲಿವಾಹನ ಶಕೆ ವರುಷಂಗಳು ೧೮೨೧ ನೇ ಸೌಮ್ಯನಾಮ ಸಂವತ್ಸರದ ಮಾರ್ಗಶಿರ ಬಹುಳ ಏಕಾದಶಿ ಶುಕ್ರವಾರದಿಂದ ಮಾರ್ಗಶಿರ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೦ ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಧನು ಮಾಸ
7	ಶುಕ್ರ *	ಏಕಾದಶಿ	17 28	ವಿ	6 28	24
8	ಶನಿವಾ §	ದ್ವಾದಶಿ	21-9	ಅ	11-42	25
9	ರವಿವಾ ,	ತ್ರಯೋದಶಿ	23 36	ಜ್ಯೇ	15-36	26
10	ಚಂದ್ರ	ಚತುರ್ದಶಿ	25-20	ಮೂಲ	18 32	27
11	ಕುಜ	ಅಮಾವಾಸ್ಯೆ	25 22	ಪೂಷಾ	20 19	28
12	ಬುಧ †	ಪಾಡ್ಯಮಿ	23 36	ಉತ್ರಷಾ	20 30	29
14	ಗುರು ‡	ಬಿದಿಗೆ	22 –	ಶ್ರ	20 4	1

* ಶೂನ್ಯತಿಥಿ ಸರ್ವತ್ರ ಏಕಾದಶಿ

§ ಶನಿಪ್ರದೋಷ

ಮಾಸಶಿವರಾತ್ರಿ

ಸರ್ವತ್ರ ಅಮಾವಾಸ್ಯೆ

† ಚಂದ್ರೋದಯ

‡ ಭೋಗ್ಯೋತ್ಸವ ಪೊಂಗಲ್ ಚಾ ನ ಕುರುಸ್ವದೇವೋತ್ಸವಾರಂಭ, ಶಿವಗಂಗೆಯಲ್ಲಿ ಗಂಗೋತ್ಪತ್ತಿ

ಗತಿಸಿದ ಬಾಬು ರಮೇಶಚಂದ್ರದತ್ತರವರ ಲಘುಚರಿತ್ರೆಯು

ಇವರು ೧೮೪೮ ನೇ ಇಸವಿ ಆಗಸ್ಟು ತಿಂಗಳು ೨೩ ನೇ ತಾರೀಖಿನಲ್ಲಿ ಕಲ್ಕತ್ತೆಯಲ್ಲಿ ಸದ್ವಂಶದಲ್ಲಿ ಜನಿಸಿದರು ಇವರ ತಂದೆಗಳು ಆಗ್ಗೆ ಈಸ್ಟ್ ಇಂಡಿಯಾ ಕಂಪೆನಿಯ ಶಾಖೆಯಲ್ಲಿ ಡೆಪ್ಯುಟಿ ಕಲೆಕ್ಟರ್ ಪದವಿಯನ್ನು ವಹಿಸಿದ್ದರು ರಮೇಶಚಂದ್ರದತ್ತರು ತಮ್ಮ ಬಾಲ್ಯಾವಸ್ಥೆಯನ್ನು ಬಂಗಾಳದಲ್ಲಿ ಕಳೆದರು ಈ ಚಿಕ್ಕವಯಸ್ಸಿನಲ್ಲೇ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತವು ಚೆನ್ನಾಗಿ ಮನಗೊಂಡಿತ್ತು ಲಾರ್ಡ್ ಡಾಲ್ ಹೌಸಿ ಪ್ರಭುಗಳು ತಮ್ಮ ಕೆಲಸದಿಂದ ನಿವೃತ್ತಿಹೊಂದಿ ಸೀಮೆಗೆ ಪ್ರಯಾಣವಾಗಿದ್ದನ್ನೂ ಇವರ ಕೆಲಸಕ್ಕೆ ಲಾರ್ಡ್ ಕ್ಯಾನಿಂಗ್ ಪ್ರಭುಗಳು ಬಂದದ್ದನ್ನೂ ಬಲ್ಲರು ದೊಡ್ಡ ಸಿಪಾಯಿ ದಂಗೆಯಾದ ನಂತರ ಸಭ್ಯಾದಲ್ಲಿ ಮಹಾರಾಣಿ ವಿಕ್ಟೋರಿಯಾಯವರ ಆಸ್ತಿಕಾರ್ ನಾಮೆಯು ಓದಲ್ಪಟ್ಟಾಗ ಅವರ ತಂದೆಯ ಸಂಗಡ ಅಲ್ಲಿಗೆ ಹೋಗಿದ್ದರು

೧೮೬೮ ನೆ ಇಸವಿಯ ಮಾರ್ಚಿ ತಿಂಗಳಲ್ಲಿ ಸುರೇಂದ್ರನಾಥ ಬಾನರ್ಜಿಯವರ ಜತೆಯಲ್ಲಿ ವಿಲಾಯತಿಗೆ ಹೋಗಲು ಇವರು ನಿರ್ಧರಿಸಿದರು ಸುರೇಂದ್ರರಂತೆ ತಮ್ಮ ಪೋಷಕರ ಅನುಮತಿಯನ್ನು ಪಡೆಯದೇ ತಮ್ಮ ಮಿತ್ರರಾದ ವಿಹಾರಿಲಾಲಗುಪ್ತರೊಡನೆ ಯಾರಿಗೂ ತಿಳಿಸದೆ ಮನೆ ಬಿಟ್ಟು ರಾತ್ರಿ ಜಹಜು ಪ್ರಯಾಣ ಮಾಡಿದರು ಆಗಿನ ಕಾಲದಲ್ಲಿ ಆ ತಿ ನಿರ್ಬಂಧಗಳು ಯಾವ ರೀತಿಯಲ್ಲಿದ್ದವು ದೂರದೇಶ ಪ್ರಯಾಣ ದುಸ್ತರವೆಂಬ್ದು ದುರ್ಘಟವಿದ್ದು ಮಾರ್ಗದಲ್ಲಿ ಸಂಭವಿಸಬಹುದಾದ ಕಷ್ಟಗಳು ಎಷ್ಟಿದ್ದವೆಂದು ಹೇಳಲು ತೀರದು ೧೮೬೯ರಲ್ಲಿ ಈ ಮೂವರು ವಿಲಾಯತಿಯಲ್ಲಿ ಐ ಸಿ ಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾದರು ಇದರಲ್ಲಿ ರಮೇಶರೇ ಮೂರನೆಯವರಾಗಿದ್ದರು ಅಲ್ಲಿಂದ ಹಿಂದೂದೇಶಕ್ಕೆ ವಾಪಸು ಬಂದು ೧೮೭೧ ರಿಂದ ೧೮೯೭ ರವರೆಗೂ ಇವರು ಬಂಗಾಳದಲ್ಲಿ ಬೇರೆ ಬೇರೆ ಉದ್ಯೋಗಗಳನ್ನು ಮಾಡಿದರು ದೇಶೀಯರಲ್ಲಿ ಕಮಿಷನರ್ ಎಂಬ ದೊಡ್ಡ ಪದವಿಗೆ ಬಂದವರಲ್ಲಿ ಇವರೇ ಮೊದಲನೆಯವರು, ಈ ಅವಧಿಯಲ್ಲ ನವಕರಿಯನ್ನು ಮಾಡಿ ಉಳಿದ ವೇಳೆಯನ್ನು ಅವರು ವ್ಯರ್ಥವಾಗಿ ಕಳೆಯುತ್ತಿರಲಿಲ್ಲ ವಿಲಾಯತಿಯಲ್ಲಿದ್ದಾಗ ಅವರ ಅನುಭವದ ವಿಷಯವಾಗಿಯೂ ಮತ್ತು ವ್ಯವಸಾಯ ಮತ್ತು ವಾಂಛ್ಯಾಯ ವಿಷಯವಾಗಿ ಸಣ್ಣಸಣ್ಣ ಪುಸ್ತಕಗಳನ್ನು ಬರೆದು ಪ್ರಕಟಿಸಿದರು

ಒಂದು ದಿವಸ ಕಲ್ಕತ್ತೆಯಲ್ಲಿ ಇವರ ಪರಮ ಸ್ನೇಹಿತರಾದ ಬಂಕಿಂಚಂದ್ರಚಟರ್ಜಿಯವರನ್ನು ಭೇಟಿ ಮಾಡಿದಾಗ ಇವರು ರಮೇಶಚಂದ್ರರವರಿಗೆ ಕಾದಂಬರಿ (ವಚನಗ್ರಂಥಗಳನ್ನು) ಬರೆಯುವಂತೆ ತಿಳಿಸಿದರು ಅದರಂತೆ ೧೮೭೪ ರಿಂದ ೧೮೭೮ ರವರಿಗ ರಮೇಶಚಂದ್ರರು ಐತಿಹಾಸಗಳಿಂದ ನಾಲ್ಕು ಕಾದಂಬರಿಗಳನ್ನು ಬರೆದರು ಈ ಕಥ ಬಾಗಗಳಾದರೋ ಸ್ವದೇಶಾಭಿಮಾನಯುತ ಬಂಗಾಳಿ ಭಾಷೆಯ ಮೂರ್ತಿಮತ್ತೆನಿಸು ಹೇಳಬೇಕು ಅದರಲ್ಲಿ "ಆಗ್ರಾದಲ್ಲಿ ದಾಸಿಯ ಹುಡುಗಿಯು" ಎಂಬ ಸರ್ವೋತ್ಕೃಷ್ಟವಾದ ಕಾದಂಬರಿಯು ಇಂಗ್ಲೀಷಿನಲ್ಲಿ ತರ್ಜುಮೆಯಾಗಿರುವುದು ೧೮೭೯ ರಿಂದ ೧೮೮೨ ವರೆಗೆ ಎರಡು ಸಾರಿ ಜಿಲ್ಲಾ ಮಜಿಸ್ಟ್ರೇಟರಾಗಿದ್ದರು ೧೮೮೫ ರಲ್ಲಿ ಎರಡು ವರ್ಷಗಳ ಕಾಲ ರಜಾಮೇಲಿದ್ದಾಗ "ಶಿ ಕಲಫ್‌ಸಾಂ" ಎಂಬ ಕಾದಂಬರಿಯನ್ನು ಬರೆದರು ಇದು ಬಂಗಾಲಿ ಮತ್ತು ಇಂಗ್ಲಿಷ್ ಇವೆರಡು ಭಾಷೆಗಳಲ್ಲಿ ತರ್ಜುಮೆಯಾಗಿರುವುದು ೧೮೮೭ ನೇ ಇಸವಿಯಲ್ಲಿ ಅನೇಕ ಪಂಡಿತರ ಸಹಾಯದಿಂದ ಋಗ್ವೇದದ ಭಾಷಾಂತರವನ್ನು ಪೂರೈಸಿದರು ಅನಂತರ ಇವರು ಬಂಧುಗಳಾದ ಜೋಗೇಶಚಂದ್ರ ಜತೆ ... ವಿಲಾಯತಿಗೆ ಹೋಗಿದ್ದರು ... ಕೆಲಸಕ್ಕೆ ಸೇರಿಸಲ್ಪಟ್ಟರು ... ಬಂದಮೇಲೆ ಹಿಂದೂ ಚರಿತ್ರೆಯನ್ನು ಬರೆಯಬೇಕೆಂದು ... ಸಂಸ್ಕೃತ ಕಾವ್ಯಗಳ ಮತ್ತು ಇಂಗ್ಲಿಷ್ ಚರಿತ್ರೆ ಕಾರರ ಪುಸ್ತಕಗಳ ಆಧಾರದ ಮೇಲೆ ೧೮೯೦ ರಲ್ಲಿ ಚರಿತ್ರೆಯನ್ನು ಬರೆದು ಪ್ರಕಟಿಸಿದರು ಆಗ್ಗೆ ಬರೋಡಾದ ಮಹಾರಾಜರವರು ಮೈಸೂರು ... ಆಗ ಅಲ್ಲಿಯ ... ಕೆಲಸವನ್ನು ನೋಡಿಕೊಳ್ಳುವದಲ್ಲದೆ ಮಹಾರಾಜರ ವಿದ್ಯಾಭ್ಯಾಸದ ಭಾರವು ಸಹ ಇವರಿಗೆ ವಹಿಸಿತ್ತು ... ಇವರು ದಿನಾಜಪುರ ... ಮೊದಲಾದ ಸ್ಥಳಗಳಲ್ಲಿ ಮಾಡಿದ ನೌಕರಿಯಲ್ಲಿ ಅಕ್ಷಯ ... ೧೮೯೦ ರಲ್ಲಿ ಇವರಿಗೆ ಸಿ ಐ ಇ ಬಿರುದು ದೊರಕಿತು ೧೮೯೭ ರಲ್ಲಿ ವಿಶ್ರಾಂತಿಗಾಗಿ ವಿಲಾಯತಿಗೆ ಹೋಗಿ ವಾಪಸು ಬಂದಮೇಲೆ ಬರ್ಡ್ವಾನ್ ಕಮಿಷನರಾಗಿ ನೇಮಿಸಲ್ಪಟ್ಟು ಕೆಲಸ ... ನಂತರ ... ಕೆಲಸದಿಂದ ನಿವೃತ್ತರಾದರು ಇದಾದ ಮೇಲೆ ಲೋಕಪ್ರಸಿದ್ಧವಾದ ಲಂಡನ್ ಮಹಾ ನಗರದ ಸರ್ವಕಲಾಶಾಲೆಯಲ್ಲಿ ಇವರಿಗೆ ಹಿಂದೂ ಚರಿತ್ರೆಯನ್ನು ಬೋಧಿಸುವ ಕೆಲಸವಾಯಿತು ಈ ಕೆಲಸದಲ್ಲಿರುವಾಗ್ಗೆ ಇವರು ನೂತನವಾದ ರೀತಿಯಲ್ಲಿ ಹಿಂದೂದೇಶದ ಆರ್ಥಿಕಸ್ಥಿತಿಯನ್ನು ಬರೆದು ಪ್ರಕಟಿಸಿದರು ೧೮೯೯ ರಲ್ಲಿ ಲಖ್ನೌದಲ್ಲಿ ಕೂಡಿದ ರಾಷ್ಟ್ರಸಭೆಗೆ ಅಧ್ಯಕ್ಷರಾಗಿದ್ದರು ೧೯೦೪ ರಲ್ಲಿ ಶ್ರೀಗಾಯಕವಾಡ ಸರಕಾರದವರ ಮಂತ್ರಿ ಅಮಾತ್ಯರಾಗಿದ್ದು, ಆ ಕೆಲಸದಲ್ಲೇ ಕೆಲ ತಿಂಗಳು ಪರಲೋಕವಾಸಿಗಳಾದರು

ವೃತ್ತಾಂತ ಪತ್ರಿಕೆ.

ಸನ್ ೧೯೧೦ ನೇ ಇಸವಿ ಜನವರಿ ತಾ ೬ ನೇ ಗುರುವಾರ

ಮೈಸೂರು ದೇಶದಲ್ಲಿ ತಲೆದೋರಿದ್ದ ಕ್ಷಾಮ

೧೯೦೮ ನೇ ವರುಷದಲ್ಲಿ ಮೈಸೂರು ಸಂಸ್ಥಾನದ ನಾಲ್ಕು ಕಡೆಗಳಲ್ಲಿ ಕಾಣಿಸಿಕೊಂಡಿದ್ದ ಕ್ಷಾಮವನ್ನು ನಿವಾರಣೆಮಾಡುವುದಕ್ಕೋಸ್ಕರ ಸರ್ಕಾರದವರು ಮಾಡಿದ ಏರ್ಪಾಡುಗಳನ್ನು ಕುರಿತಾದ ಒಂದು ರಿಪೋರ್ಟು ಪ್ರಕಟವಾಗಿರುವುದು ಇದನ್ನು ರೆವಿನ್ಯೂ ಕಮಿಷನರಾಗಿರುವ ರಾಜಕಾರ್ಯಪ್ರವೀಣ ಮೆ। ರಂಗಸ್ವಾಮಯ್ಯಂಗಾರರು ಬರೆದಿರುತ್ತಾರೆ

ಮೇಲ್ಕಂಡ ರಿಪೋರ್ಟಿನಲ್ಲಿ ಮೈಸೂರು ದೇಶವು ಬ್ರಿಟಿಷರಿಂದ ಗತಿಸಿದ ಶ್ರೀಮನ್ಮಹಾರಾಜರವರಿಗೆ ವಹಿಸಲ್ಪಟ್ಟಾರಭ್ಯ ಮಳೆಬೆಳೆಗಳ ವಿವರಣೆಯು ಸಂಕ್ಷೇಪವಾಗಿ ಬರೆಯಲ್ಪಟ್ಟದೆ ಹಿಂದಿನ ವರುಷಗಳಲ್ಲಿ ಮಳೆಯು ನಿಂತುಹೋಗಿ ಜನಗಳಿಗೂ ಸರ್ಕಾರಕ್ಕೂ ತೊಂದರೆ ಸಂಭವಿಸಿದ್ದುಂಟು ಆದರೆ ೧೯೦೮ ನೇ ವರುಷದಲ್ಲಿ ಕ್ಷಾಮದ ವಶದಿಂದಾದ ಬಾಧೆಯು ಹಿಂದೆ ಯಾವಾಗಲೂ ಸಂಭವಿಸಿರಲಿಲ್ಲವು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿಯವರು ಅಲ್ಲಲ್ಲಿ ಕೂಟಗಳನ್ನು ಏರ್ಪಡಿಸಿಕೊಂಡು ತಮ್ಮಿಂದಾದಮಟ್ಟಿಗೂ ಕ್ಷಾಮಪೀಡಿತರಾದ ಜನಗಳಿಗೆ ಕೆಲಸಗಳನ್ನು ಕಲ್ಪಿಸಿಕೊಟ್ಟರು ರಿಲೀಫ್ ಕಾಮಗಾರಿಗಳು ನಾನಾವಿಧದಲ್ಲಿದ್ದುವು ಹ್ಯಾಗೆಂದರೆ (೧) ನೀರು ಬತ್ತಿಹೋದ ಕೆರೆಗಳಲ್ಲಿ ವ್ಯವಸಾಯಮಾಡಲು ಅಪ್ಪಣೆ ಕೊಟ್ಟದ್ದು (೨) ಸರ್ಕಾರದ ಹುಲ್ಲುಗಾವಲುಗಳಲ್ಲಿ ದನಗಳನ್ನು ಮೇಯಿಸುವುದಕ್ಕೆ ಅಪ್ಪಣೆ ಕೊಟ್ಟದ್ದು (೩) ಬಡವರಾಗಿರತಕ್ಕ ಮುದುಕರಿಗೂ, ಕೆಲಸಮಾಡಲು ಅಂಗಸಹಾಯವಿಲ್ಲದವರಿಗೂ, ಗೋಷಾ ಹೆಂಗಸರಿಗೂ ಆಹಾರವನ್ನು ಒದಗಿಸಿಕೊಟ್ಟದ್ದು, (೪) ಬಿತ್ತನೆ ಬೀಜಗಳನ್ನು ಕೊಳ್ಳಲು ಹಣವನ್ನು ಮುಂಗಡವಾಗಿ ಕೊಟ್ಟದ್ದು, (೫) ಹಳ್ಳಿಗಳಲ್ಲಿರತಕ್ಕ ಕಾಮಗಾರಿಗಳನ್ನು ಇನ್ನೂ ಹೆಚ್ಚಿಸಿದ್ದು, (೬) ಕಂದಾಯವನ್ನು ಮಾಫಿ ಬಿಟ್ಟದ್ದು, (೭) ನೇಯಿಗೆ ಕಸಬುದಾರರಿಗೆ ಹಣವನ್ನು ಮುಂಗಡವಾಗಿ ಕೊಟ್ಟದ್ದು, (೮) ಧಾನ್ಯವನ್ನು ಹಂಚಿದ್ದು, (೯) ಹುಲ್ಲನ್ನು ಸುಲಭಕ್ರಯಕ್ಕೆ ತರಿಸಿದ್ದು ಇತ್ಯಾದಿ

ಸರ್ಕಾರದವರು ಏರ್ಪಡಿಸಿದ್ದ ಮೇಲ್ಕಂಡ ಸೌಲಭ್ಯಗಳಿಂದ ದೇಶಕ್ಕೆ ಬಹಳ ಪ್ರಯೋಜನ ಉಂಟಾಯಿತು ಗೋಕಾವಿಗಳಲ್ಲಿ ವಿಶೇಷ ನಷ್ಟವಾದರೂ ಜನಗಳಲ್ಲಿ ಯಾರೂ ಹಸಿವೆಯಿಂದ ಮಡಿದುಹೋಗಲಿಲ್ಲ ಕಳೆದ ವರುಷದ ಪ್ರಾರಂಭದಲ್ಲಿ ಬಿದ್ದ ಮಳೆಗಳಿಂದ ಜಾನುವಾರುಗಳಿಗೆ ವಿಶೇಷವಾದ ಹುಲ್ಲೂ ಕುಡಿಯುವುದಕ್ಕೆ ನೀರೂ ದೊರೆತುದಲ್ಲದೆ ಜನಗಳಿಗೂ ಬಹಳ ಪ್ರಯೋಜನವುಂಟಾಯಿತು

ಈ ಕ್ಷಾಮದ ದೆಸೆಯಿಂದ ಸರ್ಕಾರಕ್ಕೆ ೧೨ ಲಕ್ಷ ರೂಪಾಯಿ ವ್ರಯವಾಯಿತು. ಇಷ್ಟು ಹಣವನ್ನು ಸರ್ಕಾರದವರು ಪ್ರಯೋಜನಕರವಾದ ರೀತಿಯಲ್ಲಿ ವಿನಿಯೋಗಿಸಿರುತ್ತಾರೆಂದು ನಾವು ದೃಢವಾಗಿ ನಂಬಿರುತ್ತೇವೆ ಕ್ಷಾಮವನ್ನು ನಿವಾರಣೆಮಾಡಲು ಕೆಲಸಮಾಡಿರತಕ್ಕ ಆಯಾ ಆಫೀಸರುಗಳು ಬಹಳ ಚಟುವಟಿಕೆಯಿಂದಲೂ ಆಸಕ್ತಿಯಿಂದಲೂ ಕೆಲಸಮಾಡಿರುತ್ತಾರೆಂದು ತಿಳಿದು ಸಂತೋಷಪಡಬೇಕಾಗಿದೆ ಜನರ ಕಷ್ಟವನ್ನು ಹೋಗಲಾಡಿಸುವುದರಲ್ಲಿ ಸರ್ಕಾರದವರು ಹೊಂದಿರತಕ್ಕ ಜಯಕ್ಕೆ ನಾವು ಅವರನ್ನು ವಂದಿಸುವುದು ನ್ಯಾಯವಾಗಿದೆ

ಮೇಲ್ಕಂಡ ರಿಪೋರ್ಟಿನಲ್ಲಿ ಕ್ಷಾಮವು ತಲೆದೋರಿದ ಸ್ಥಳಗಳನ್ನು ವಿಶದವಾಗಿ ತಿಳಿಸಲು ಅಲ್ಲಲ್ಲಿ ನಕ್ಷೆಗಳನ್ನು ಪ್ರಕಟಿಸಿರುತ್ತಾರೆ ಇಂಥಾ ರಿಪೋರ್ಟು ಸರ್ಕಾರದವರು ಕ್ಷಾಮನಿವಾರಣೆಯ ಕಾರ್ಯದಲ್ಲಿ ತೋರಿಸಿದ ಸಾಹಸವನ್ನು ಪ್ರತ್ಯಕ್ಷಪಡಿಸುವ ರಿಕಾರ್ಡಿನಂತಿರುವುದು.

ಮೈಸೂರು ದೇಶದವರೆಲ್ಲರೂ ಜ್ಞಾಪಕದಲ್ಲಿಟ್ಟು ಕೃತಜ್ಞತೆಯುಳ್ಳವರಾಗಿರುವುದಕ್ಕೆ ಮತ್ತೊಂದು ಕಾರಣವುಂಟು. ಅದೇನೆಂದರೆ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಬಹಳ ದಿವಸಗಳಿಂದಲೂ ಜರ್ಮನಿ ದೇಶಕ್ಕೆ ಹೋಗಬೇಕೆಂದಿದ್ದ ಪ್ರಯಾಣವನ್ನು ನಿಲ್ಲಿಸಿ ಕ್ಷಾಮಪೀಡಿತವಾದ ಊರುಗಳಿಗೆ ವಿಚಾರಣೆಬಗ್ಗೆ ಸಂಚಾರಮಾಡಿದ್ದು ಇದರಿಂದ ನಮ್ಮನ್ನಾಳುವ ಧೊರೆಗಳಿಗೆ ತಮ್ಮ ಪ್ರಜೆಗಳ ಮೇಲೆ ಇರುವ ಅಪಾರವಾದ ಪ್ರೀತಿಯು ವ್ಯಕ್ತವಾಗುತ್ತೆ

ಹಗಲು ಕೆಲಸ, ಇರುಳು ವಿಶ್ರಾಂತಿ.

ನಮ್ಮ ಊರಿನ ನಡುಪೇಟೆಯಲ್ಲಿ ಕ್ರೈಸ್ತರದೊಂದು ದೇವಾಲಯವಿದೆ ಇದರ ನೆರೆಯಲ್ಲಿ ಸಾಹುಕಾರ್ ಚನ್ನಮಲ್ಲಪ್ಪಸೆಟ್ಟರು ದೊಡ್ಡ ಮನೆಯಲ್ಲಿ ವಾಸಮಾಡುತ್ತಾರೆ ಇವರು ಸಮೀಪದಲ್ಲಿ ವಾಸಮಾಡುತ್ತಿರುವ ಸಿದ್ಧಲಿಂಗಯ್ಯನವರನ್ನು ಕಳೆದ ಜನವರಿ ಗುರು ತಾರೀಖು ಬೆಳಗ್ಗೆ ಕಂಡು ವಂದನೆ ಪ್ರತಿವಂದನೆಗಳಾದನಂತರ ಸೆಟ್ಟರು ಅಯ್ಯನವರನ್ನು ಕುರಿತು—ಏನು ಸ್ವಾಮಿ ನೆನ್ನೆ ರಾತ್ರಿ ಈ ಪಾದ್ರಿಗಳ ದೇವಾಲಯದಲ್ಲಿ ಬಹುಮಂದಿ ಕೂಡಿಬಂದು ಏನೋ ತಮಾಷೆ, ವಿನೋದ ಮಾಡುತ್ತಿದ್ದಹಾಗಿತ್ತು ಮೃದಂಗ, ಪಿಟೀಲು, ತಂಬೂರಿ ವಾದ್ಯಗಳೊಂದಿಗೆ ಸಂಗೀತವು ನಡೆಯುತ್ತಿತ್ತು ಅವರಿಗೇನಾದರೂ ಇದು ವಿಶೇಷದ ಕಾಲವೋ?

ಸಿದ್ಧಲಿಂಗಯ್ಯ—ಅಹುದು ಸೆಟ್ಟರೆ ಅವರಿಗೆ ಈ ದಿನ ಯುಗಾದಿ ನೆನ್ನೆ ರಾತ್ರಿ ಕಳೆದ ವರುಷದ ಕಡೇ ತಾಸಿನಲ್ಲಿ ಅವರೆಲ್ಲರೂ ಗಂಡಸರೂ ಹೆಂಗಸರೂ ಮಕ್ಕಳೂ ದೇವಾಲಯದಲ್ಲಿ ಸೇರಿ ದೇವರ ಸನ್ನಿಧಾನದಲ್ಲಿ ಕಳೆದ ವರುಷವನ್ನು ಮುಗಿಸಿ ಹೊಸ ವರುಷವನ್ನು ಆರಂಭಿಸುವ ಪದ್ಧತಿಯು ಅವರಲ್ಲಿ ವಾಡಿಕೆಯಾಗಿದೆ

ಮಲ್ಲಪ್ಪಸೆಟ್ಟಿ—ಓಹೋ! ಆ ಜನಗಳಲ್ಲಿ ನಿಮಗೆ ಹೆಚ್ಚು ಬಳಕೆ ಇದೆ ಸರಿ ತಾವೇನಾದರೂ ಆ ಸಮಯದಲ್ಲಿ ಹೋಗಿದ್ದಿರೋ? ಅಲ್ಲಿ ಅವರು ಏನು ಮಾಡುತ್ತಾರೆ? ಆ ದಿನ ಅವರು ನಡಿಸುವ ಕ್ರಮವೇನು?

ಸಿ ಲಿಂ—ಆ ಜನಗಳಲ್ಲಿ ಕೆಲವರು ನನಗೆ ಸ್ನೇಹಿತರಾಗಿದ್ದಾರೆ ಮುಖ್ಯವಾಗಿ ಅವರ ಪುರೋಹಿತರಾದ ಭಾಸ್ಕರಯ್ಯನವರು ನನ್ನ ಮಿತ್ರರು ನಾನೂ ಅವರೂ ಒಂದೇ ಶಾಲೆಯಲ್ಲಿ ಓದಿದೆವು ಬಾಲ್ಯದಿಂದ ಒಬ್ಬರನ್ನೊಬ್ಬರು ಬಲ್ಲೆವು ಅವರು ನೆನ್ನೆ ಸಾಯಂಕಾಲ ನನ್ನನ್ನು ಕಂಡು—ಸ್ನೇಹಿತನೇ ನಮ್ಮ ಆಲಯದಲ್ಲಿ ರಾತ್ರಿ ಸುಮಾರು ಹನ್ನೊಂದು ಗಂಟೆಗೆ ವಿಶೇಷವಾದ ದೇವಾರಾಧನೆ ನಡಿಯುತ್ತೆ ಎಂದು ನನಗೆ ಹೇಳಿದ್ದರು ನಾನು ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಹೋಗಿದ್ದೆ

ಮ ಸೆ—ಒಳ್ಳೇದು ಸ್ವಾಮಿ ಅಲ್ಲಿ ಏನು ನಡಿಯಿತು? ಅಲ್ಲಿ ಅವರು ಮಾಡುವದೆಲ್ಲಾ ಬಹಿರಂಗವಾಗಿ ಎಲ್ಲರೂ ನೋಡಬಹುದೇ? ರಹಸ್ಯವಾದದ್ದೇನೂ ಇಲ್ಲವೋ?

ಸಿ ಲಿಂ—ಇಲ್ಲ ಭಾಸ್ಕರಯ್ಯನವರು ಹೋಗಿ ನಿಂದು ನಾನು ಹೋದ ಕೂಡಲೇ ಆಲಯದಲ್ಲಿ ನನಗೆ ಬೆಟವಾಗಿ ಅವರು ನಡಿಸುವ ಎಲ್ಲಾ ಕಾರ್ಯಗಳನ್ನು ನೋಡುವದಕ್ಕೂ ಕೇಳುವದಕ್ಕೂ ಅನುಕೂಲವಾದ ಕಡೆ ಕರಕೊಂಡು ಹೋಗಿ ನನ್ನನ್ನು ಕೂರಿಸಿದರು ಅಲ್ಲಿ ಹೇಳಿದ ಹಾಗೆ ಸಭಿಕರೆಲ್ಲರೂ ನೆರೆದುಬಂದಿದ್ದರು ಸಂಗೀತಗಾರರು ವಾದ್ಯಗಳನ್ನು ನುಡಿಸುತ್ತ ಸಂಗೀತಗಳನ್ನು ಹೇಳುತ್ತಿದ್ದರು ಆ ಸಮಯ ಏಕಾಂತವೂ ಹರ್ಷಕ್ಕೆ ಸಮಾನವಾಗಿದ್ದಿತು

ಮ ಸೆ—ಒಳ್ಳೇದು ಮುಂದೆ ಸಾಗಿಸಿರಿ

ಸಿ ಲಿಂ—ಆಗ ಅಕಸ್ಮಾತ್ತಾಗಿ ಒಬ್ಬ ದೊಡ್ಡ ಮನುಷ್ಯರು ನಿಲುವಂಗಿಯನ್ನು ಧರಿಸಿಕೊಂಡು ಹಿಂದಣ ಕೊಠಡಿಯಿಂದ ಹೊರಗೆ ಬಂದು ಎತ್ತರವಾಗಿದ್ದ ಪೀಠವನ್ನು ಹತ್ತಿ ನಿಲ್ಲಲು, ಸಂಗೀತಗಾರರು ವಾದ್ಯಗಳನ್ನು ನಿಲ್ಲಿಸಿ ಮೌನವಾಗಿ ಕೂತುಕೊಂಡರು

ಮ ಸೆ—ಅವರ್ಯಾರು? ನಿಮಗೆ ಗೊತ್ತಾಗಲಿಲ್ಲವೋ?

ಸಿ ಲಿಂ—ಮೊದಲು ಅವರ್ಯಾರೆಂತ ತಿಳಿಯಲಿಲ್ಲ ಅನಂತರ ಅವರು ಸ್ವರವೆತ್ತಿ ಮಾತನಾಡಿದಾಗ ಅವರೇ ಭಾಸ್ಕರಯ್ಯನವರೆಂದು ಸ್ಪಷ್ಟವಾಯಿತು

ಮ ಸೆ—ಅವರು ಅಲ್ಲಿ ನಿಂತು ಏನು ಹೇಳಿದರು?

ಸಿ ಲಿಂ—ಅವರು ಇನ್ನೊಂದು ಸಂಗೀತವನ್ನು ಹೇಳಿಸಿ ದೇವರಿಗೆ ಪ್ರಾರ್ಥನೆ ಹೇಳಿ ಆ ಮೇಲೆ ಅವರ ವೇದದ ಒಂದು ಭಾಗವನ್ನು ಎಲ್ಲರೂ ಕೇಳುವಂತೆ ಸ್ಪಷ್ಟವಾಗಿ ಓದಿದರು

ಮ ಸೆ—ಅವರು ಓದಿದ್ದು ಯಾವ ವಿಷಯ?

ಸಿ ಲಿಂ—ಅದೆಲ್ಲಾ ಜ್ಞಾಪಕದಲ್ಲಿ ನಿಲ್ಲಲಿಲ್ಲ ಅವೆಲ್ಲಾ ದೇವರಲ್ಲಿ ಭಕ್ತಿಯನ್ನು ಅಭಿವೃದ್ಧಿಪಡಿಸತಕ್ಕ ವಿಷಯಗಳೇ ಸರಿ ಆದರೆ ಒಂದು ನುಡಿ ಮಾತ್ರ ಪುನಃ ಓದಿ ಯಾರೂ ಎಂದಿಗೂ ಮರೆಯಲಾರದಂತೆ ನೆನಪಿಗೆ ತಂದರು ಅದರ ಆಧಾರದ ಮೇಲೆ ಅವರು ಹೇಳಿದ ಉಪನ್ಯಾಸ ಬಹು ಗಂಭೀರತರವಾಗಿದ್ದಿತು ಆ ನುಡಿ ಯಾವದೆಂದರೆ—ನಾವು ಹಗಲಿರುವಾಗಲೇ ನಮ್ಮನ್ನು ಕಳುಹಿಸಿದಾತನ ಕಾರ್ಯಗಳನ್ನು ನಡೆಸಬೇಕು ರಾತ್ರಿ ಬಂದೇಬರುತ್ತದೆ ಅದು ಬಂದ ಮೇಲೆ ಯಾರೂ ಕೆಲಸಮಾಡಲಾರರು

ಮ ಸೆ—ಈ ಮಾತಿನೊಳಗೇನೂ ವಿಶೇಷವಿಲ್ಲ ಇದರ ಅರ್ಥ ಮೇಲೆ ಕಾಣಬರುತ್ತೆ.

ಸಿ ಲಿಂ—ಇರಲಿ, ಅವರು ಹೇಳಿದ್ದು ಕೇಳಿರಿ ಏನೆಂದರೆ—ನಾವೆಲ್ಲರೂ ಕೆಲಸಮಾಡುವದಕ್ಕಾಗಿ ಹುಟ್ಟಿದ್ದೇವೆ ಇದಕ್ಕಾಗಿಯೇ ನಮ್ಮನ್ನು ನೇಮಿಸಿ ಕಳುಹಿಸಿದವನೊಬ್ಬನಿದ್ದಾನೆ ಆತನೆ ದೇವರು ನಮಗೆ ನೇಮಕವಾದ ಕೆಲಸವನ್ನು ಮಾಡಿ ಪೂರೈಸುವದಕ್ಕೆ ಕಾಲವೂ ಕ್ಲುಪ್ತವಾಗಿದೆ, ಅದೇ ಹಗಲು ಲೋಕದಲ್ಲಿ ಸಾಧಾರಣವಾಗಿ ವಾಡಿಕೆಯಾಗಿರುವ ಅಭಿಪ್ರಾಯವೇನೆಂದರೆ ನಾವು ಲೋಕದಲ್ಲಿ ಎಷ್ಟುಕಾಲ ಇರುತ್ತೇವೋ ಗೊತ್ತಿಲ್ಲ ಆದರೆ ಇರುವತನಕ ಪ್ರಯಾಸವಿಲ್ಲದೆ ಸೌಖ್ಯಪಡುವದೇ ಮುಖ್ಯ ಆದ್ದರಿಂದ ದನಿಕರೂ ಅಧಿಕಾರಿಗಳೂ ಅನ್ನವಸ್ತ್ರಗಳಿಗೆ ಕೊರತೆಯಿಲ್ಲದವರಾಗಿರುವದರಿಂದ ಅವರು ಕಷ್ಟಪಟ್ಟು ಕೆಲಸಮಾಡಲಗತ್ಯವಿಲ್ಲ ಆದರೆ ಬಡವರು ಹೊಟ್ಟೆಪಾಡಿಗಾಗಿ ಕಷ್ಟಪಟ್ಟು ಕೂಲಿಮಾಡಬೇಕು. ಕಷ್ಟಪಟ್ಟರೂ ಅವರಿಗೆ ಸಿಕ್ಕುವದು ರಾಗಿಹಿಟ್ಟು, ಹರಕುಬಟ್ಟೆ ಇದೇನೋ ಇವರ ಮರ್ಮವೇ? ಗೊತ್ತಾಗುವದಿಲ್ಲವೆನ್ನುತ್ತಾರೆ ಆದರೆ ಧನಿಕರು ಸುಖವಾಗಿ ಕೂತಿದ್ದು ತಿಂದು ಒಂದು ದಿನ ಸಾಯುವದಕ್ಕೂ ಬಡವರು ಕಷ್ಟಪಟ್ಟು ಹೊಟ್ಟೆತುಂಬಿಸಿಕೊಳ್ಳುತ್ತ ಒಂದುದಿನ ಸಾಯುವದಕ್ಕೂ ಹುಟ್ಟಿಲ್ಲ ಬಡವನಿಗೂ ದನಿಕನಿಗೂ, ವಿದ್ಯಾವಂತನಿಗೂ ಅವಿದ್ಯವಂತನಿಗೂ ಒಂದೊಂದು ಗೊತ್ತಾದ ಕೆಲಸವು ನೇಮಕವಾಗಿದೆ ಅವನವನು ಅದನ್ನು ಮಾಡಿ ತೀರಿಸುವದಕ್ಕೆ ಕರ್ತವ್ಯಬದ್ಧನಾಗಿಯೂ ಜವಾಬ್ದಾರನಾಗಿಯೂ ಇದ್ದಾನೆ ಅವಧಿ ಪೂರೈಸುವದರೊಳಗಾಗಿ ಯಾವನು ತನ್ನ ಕರ್ತವ್ಯವನ್ನು ಮಾಡಿ ತೀರಿಸುತ್ತಾನೋ ಅವನಿಗೆ ಧಣಿಯು ‖ ಭಲಾ, ನಂಬಿಗಸ್ತನಾದ ಆಳು ನೀನು, ಸ್ವಲ್ಪಕೆಲಸದಲ್ಲಿ ನೀನು ನಂಬಿಗಸ್ತನಾಗಿದ್ದಿ, ಭಾರೀ ಉದ್ಯೋಗವನ್ನು ನಿನಗೆ ನೇಮಿಸುತ್ತೇನೆ, ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರು ಯೆಂದು ಅವನನ್ನು ತನ್ನ ಬಾಗ್ಯದಲ್ಲಿ ಪಾಲುದಾರನನ್ನು ಮಾಡುವನು. ಆದರೆ ಧನಿಕನಾಗಲಿ ಬಡವನಾಗಲಿ ತನಗೆ ನೇಮಕವಾದ ಕರ್ತವ್ಯವನ್ನು ಮಾಡದೆ ಇದ್ದಲ್ಲಿ ಧಣಿಯು ಅವನಿಗೆ ಮೈಗಳ್ಳನಾದ ಕೆಟ್ಟ ಆಳು ನೀನು, ಕೆಲಸಕ್ಕೆ ಬಾರದ ಈ ಆಳನ್ನು ಹೊರಗೆ ಕತ್ತಲೆಗೆ ಹಾಕಿಬಿಡಿರಿ ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇವನಪಾಲಿಗೆ ಬರುವದೆಂದು ದೊಬ್ಬಿಸುವನು ಆದ್ದರಿಂದ ನಾವೆಲ್ಲರೂ ನಮಗೆ ನೇಮಕವಾದ ಕೆಲಸ ಹೊಟ್ಟೆಪಾಡಿಗಾಗಿ ನಾವು ಆದುಕೊಂಡದ್ದೆಂದು ಭಾವಿಸದೆ ದೇವರೇ ಅದನ್ನು ನಮಗೆ ಕಟ್ಟುಮಾಡಿದ್ದಾನೆಂದು ತಿಳಿಯಬೇಕು ಆದ್ದರಿಂದ ಉಪಾಧ್ಯಾಯನು—ನನ್ನ ಕೈಗೊಪ್ಪಿಸಿದ ಬಾಲಕರು ಕೆಟ್ಟುಹೋದಾರಲ್ಲಾ ಯೆಂಬ ಭಯದಿಂದ ಸಂಬಳಕಲ್ಲ ದೇವರಿಗೆ ಅಂಜಿ ಕೆಲಸಮಾಡಬೇಕು ಗುರುಗಳು ಬರೀ ಕಾಣಿಕೆ ವಸೂಲು ಮಾಡುತ್ತ ಶಿಷ್ಯರೊಳಗೆ ತಿರುಗುವದು ಪ್ರಯೋಜನವಿಲ್ಲ ಇಷ್ಟೊಂದು ಜನಗಳ ಗುರುವೆನ್ನಿಸಿಕೊಂಡಿರುವ ನಾನು ಅವರಿಗೆ ತಕ್ಕ ಧರ್ಮೋಪದೇಶವನ್ನು ಮಾಡದಿದ್ದರೆ ದೇವರಿಗೆ ನಾನು ಏನು ಪ್ರತ್ಯುತ್ತರ ಹೇಳಲಿಯೆಂದು ಸದಾ ಅವರ ಹಿತಚಿಂತಕನಾಗಿರಬೇಕು ಅರಸುಗಳೂ ಅಧಿಕಾರಿಗಳೂ ಧರ್ಮೋಪದೇಶಕರೂ ಅಜ್ಞಾನವೆಂಬ ಕತ್ತಲು ಮುಸುಕಿರುವ ಈ ಲೋಕದಲ್ಲಿ ಬೆಳಕುಗಳಂತೆ ಇದ್ದಾರೆ ದೀಪಗಳಂತೆ ಅವರು ಪ್ರಕಾಶಿಸಬೇಕು ಮತ್ತು ಉಪದೇಶ ಹೇಳಲಾರದ ಸಾಧಾರಣ ಜನಗಳು ಸಹ ತಮ್ಮ ನಡತೆಯಲ್ಲಿ ನಿಷ್ಕಳಂಕರಾಗಿಯೂ ವ್ಯಾಪಾರದಲ್ಲಿ ಪ್ರಾಮಾಣಿಕರಾಗಿಯೂ ಶಕ್ತ್ಯಾನುಸಾರ ಪರೋಪಕಾರಿಗಳಾಗಿಯೂ ಇರಬೇಕು ನಮಗೆ ಕ್ಲುಪ್ತವಾದ ಕಾಲವೆಷ್ಟೊ ಗೊತ್ತಿಲ್ಲ ಆದರೆ ಇಷ್ಟು ಮಾತ್ರ ಎಲ್ಲರಿಗೂ ಗೊತ್ತು ಏನಂದರೆ ಆ ಅವಧಿಯ ಕಾಲದಲ್ಲಿ ಒಂದು ವರುಷ ಮುಗಿದು ಹೋಯಿತು ಅದು ಹಿಂದಕ್ಕೆ ಬರುವದೇ ಇಲ್ಲ ಆದರ ಆ ಕಾಲವನ್ನು ಹ್ಯಾಗೆ ಪ್ರಯೋಗಿಸಿದ್ದೀರೋ ನಮ್ಮನ್ನು ಈ ಲೋಕಕ್ಕೆ ಕಳುಹಿಸಿರುವ ದೇವರ ಮುಂದೆ ಯೋಚಿಸಿರಿ ಅವಧಿಕಾಲವು ನಮ್ಮ ನಮ್ಮ ಮರಣಕಾಲಕ್ಕೆ ಪೂರೈಸುವದು ಇದೇ ಹಗಲು ಆಮೇಲೆ ನಮ್ಮ ಕಾಲವು ಮುಗಿದು ನಮ್ಮ ಸೇವೆಯ ಲೆಖ್ಖವನ್ನು ಕೊಡಲಿಕ್ಕೆ ದೇವರ ಬಳಿಗೆ ಹೋಗಬೇಕು

ಮ ಸೆ—ಅಯ್ಯ ಇಷ್ಟೊಂದು ಅರ್ಥವು ಈ ಮಾತುಗಳಲ್ಲಿ ಗರ್ಭಿತವಾಗಿದೆಂದು ತಿಳಿದಿರಲಿಲ್ಲ ಈ ಉಪದೇಶವು ಅತ್ಯುನ್ನತವಾದುದು ಇದರಂತೆ ನಾವು ನಡಿಯಬೇಕು

ಒಳದೇಶದ ವೃತ್ತಾಂತಗಳು

ನಂಜನಗೂಡಿನಲ್ಲಿ ಇನ್ನೂ ಕಾಲರಾ ಮತ್ತು ಪ್ಲೇಗ ರೋಗಗಳು ಇವೆಯೆಂದು ಕೇಳುತ್ತೇವೆ

* * *

ಹೋದ ವಾರ ನಾವು ತಿಳಿಸಿದಂತೆ ನಮ್ಮ ಚಂದಾದಾರರೆಲ್ಲರಿಗೆ ನೂತನ ವರುಷದ ಪಂಚಾಂಗವನ್ನು ಈ ವಾರ ಕಳುಹಿಸಿರುತ್ತೇವೆ

* * *

ಕೋಲಾರದ ಆಸ್ಪತ್ರೆಯಲ್ಲಿ ಕೆಲಸಮಾಡುವ ಸ್ತ್ರೀಯರಿಗೆ ಅವರು ವಾಸಮಾಡಲು ಸರಕಾರದವರು ಮನೆಗಳನ್ನು ಕಟ್ಟಿಸಿಕೊಡುವುದಾಗಿ ಒಪ್ಪಿರುತ್ತಾರೆ

* * *

ಮೈಸೂರುಸೀಮೆಯಲ್ಲಿ ರೆಸಿಡೆಂಟರಾಗಿರುವ ಮೆ। ಪ್ರೇಸರ್ ಸಾಹೇಬರು ಇದೇ ತಿಂಗಳು ೭ ನೇ ತಾರೀಖಿನಲ್ಲಿ ಕೊಡಗು ಪ್ರಾಂತ್ಯ ಸರ್ಕೀಟು ಹೊರಡುವರು

* * *

ಕೃಷಿಶಾಸ್ತ್ರದಲ್ಲಿಯೂ ಆರೋಗ್ಯಶಾಸ್ತ್ರದಲ್ಲಿಯೂ ಹೆಚ್ಚಿನ ಪರಿಚಯವನ್ನು ಹೊಂದಲು ಮೈಸೂರು ಸರಕಾರದಿಂದ ವಿಲಾಯಿತಿಗೆ ಕಳುಹಿಸಲ್ಪಟ್ಟಿದ್ದ ಡಾಕ್ಟರ್ ಶ್ರೀನಿವ ಸರಾಯರು ಮೈಸೂರು ದೇಶಕ್ಕೆ ವಾಪಸುಬಂದು ತಮ್ಮ ಕೆಲಸದ ಚಾರ್ಜನ್ನು ವಹಿಸಿಕೊಂಡರು ಇದರವರೆಗೂ ಕೆಲಸಮಾಡುತ್ತಿದ್ದ ಡಾಕ್ಟರ್ ಪಾಣಿಯವರು ಒಂದು ತಿಂಗಳ ರಜವನ್ನು ತೆಗೆದುಕೊಂಡಿರುತ್ತಾರೆ

* * *

ಪ್ರತಿವರುಷದ ಜನವರಿ ತಿಂಗಳು ಮೊದಲನೇ ತಾರೀಖಿನಲ್ಲಿ ಸಾರ್ವಭೌಮರು ಬಿರುದುಗಳನ್ನು ಪ್ರಸಿದ್ಧರಾದ ಉದ್ಯೋಗಸ್ಥರಿಗೂ ಪ್ರಜೆಗಳಿಗೂ ದಯಪಾಲಿಸುವರಷ್ಟೆ ಬೆಂಗಳೂರಲ್ಲಿ ಧರ್ಮಕಾರ್ಯಾಸಕ್ತರಾದ ಮೆ। ಗುಬ್ಬಿ ತೋಟದಪ್ಪನವರಿಗೆ ಸಾರ್ವಭೌಮರು ರಾವ್ ಬಹದ್ದೂರ್ ಎಂಬ ಬಿರುದನ್ನು ಕೊಟ್ಟಿರುವರು ಮೆ। ಗುಬ್ಬಿ ತೋಟದಪ್ಪನವರು ವೀರಶೈವಮತಸ್ಥರಾದ್ದರಿಂದ ಸದರೀ ಪಂಗಡದವರೆಲ್ಲರೂ ತಮ್ಮ ಸಂತೋಷಾತಿಶಯವನ್ನು ತೋರ್ಪಡಿಸುವುದಕ್ಕಾಗಿ ಅವರಿಗೆ ಒಂದು ವಂದನಾಪತ್ರಿಕೆಯನ್ನು ಓದಿ ಒಪ್ಪಿಸಬೇಕೆಂದು ತೀರ್ಮಾನಿಸಿರುತ್ತಾರೆ

* * *

ಬೆಂಗಳೂರಲ್ಲಿ ನಡೆಯುತ್ತಿದ್ದ ಆಯುರ್ವೈದ್ಯ ಮಹಾಸಭೆಯು ಕಳೆದ ಬುಧವಾರ ಮುಕ್ತಾಯವಾಯಿತು ಮೇಲ್ಕಂಡ ಸಭೆಯಲ್ಲಿ ಬಾಲ್ಯ ವಿವಾಹದಿಂದಾಗುವ ಕೇಡುಗಳನ್ನೂ ವಿವಾಹ ಕಾಲಗಳಲ್ಲಿ ಯಥೇಚ್ಛವಾದ ಹಣವ್ರಯದಿಂದಾಗತಕ್ಕ ನಷ್ಟಕಷ್ಟಗಳನ್ನೂ ಖಂಡಿಸಿದುದಲ್ಲದೆ ಸ್ತ್ರೀ ವಿದ್ಯಾಭ್ಯಾಸವನ್ನು ಪ್ರೋತ್ಸಾಹಪಡಿಸುವುದಕ್ಕೆ ಎಲ್ಲರೂ ಒಪ್ಪಿಕೊಂಡಿರುತ್ತಾರೆ ಈ ಸಂಘವು ಸರ್ಕಾರದಲ್ಲಿ ರಿಜಿಸ್ಟರಾಯಿತು ೪೩,೦೦೦ ರೂಪಾಯಿಗಳನ್ನು ಗೌರ್ನಮೆಂಟ್ ಬ್ಯಾಂಕಿನಲ್ಲಿ ಇಟ್ಟಿರುತ್ತಾರೆ ಡೆಪ್ಯುಟಿ ಕಮಿಷನರ ಮೆ॥ ಚೆಂಗಯ್ಯಸೆಟ್ಟರು ಮಾಡಿದ, ಬುದ್ಧಿವಾದಗಳಿಂದ ಕೂಡಿದ, ಉಪನ್ಯಾಸವನ್ನ ವಾಚಕರೆಲ್ಲರೂ ಓದಲು ಮತ್ತೊಂದುಕಡೆ ಪೂರ್ತಿಯಾಗಿ ಪ್ರಕಟಿಸಿರುತ್ತೇವೆ

* * *

ಬೆಂಗಳೂರು ದಂಡಿನಲ್ಲಿ ಮಿಸ್ ಕ್ರಾಸ್ಲಿ ಎಂಬೊಬ್ಬ ೭೫ ವರುಷ ವಯಸ್ಸಿನ ವೃದ್ಧಳು ಬಹಳಕಾಲದಿಂದ ಒಂಟಿಯಾಗಿ ವಾಸಮಾಡಿಕೊಂಡಿದ್ದಳು ಈಕೆಯು ಕೊಡಿದಮಟ್ಟಿಗೂ ಸ್ಥಿತಿವಂತಳಾಗಿದ್ದಳು ಕಳೆದ ಬುಧವಾರ ಬೆಳಗ್ಗೆ ಈಕೆಯ ಆಳು ಬಂಗಲೆಗೆ ಬಂದು ನೋಡುವಲ್ಲಿ ಕದಗಳೆಲ್ಲಾ ತೆರೆಯಲ್ಪಟ್ಟು ತನ್ನ ಯಜಮಾನಿಯು ಸತ್ತುಹೋಗಿರುವುದನ್ನು ಕಂಡಳು ಮನೆಯಲ್ಲಿದ್ದ ಒಡವೆ ವಸ್ತುಗಳನ್ನು ಕಳ್ಳರು ದೋಚಿಕೊಂಡು ಹೋಗಿದ್ದರು ಪೋಲೀಸಿನವರು ಬಂದು ಹೆಣವನ್ನು ಪರೀಕ್ಷೆಮಾಡಲು ಡಾಕ್ಟರ ಹತ್ತಿರ ಕಳುಹಿಸಿಕೊಟ್ಟರು ಡಾಕ್ಟರು ಹೆಣವನ್ನು ಪರೀಕ್ಷಿಸಿ ಯಾವ ಗಾಯವೂ ಇಲ್ಲದ್ದರಿಂದಲೂ ಆಕೆಯ ಹೃದಯವು ಕ್ಷೀಣದೆಸೆಯಲ್ಲಿದ್ದುದರಿಂದಲೂ ಆಕೆಯು ಕಳ್ಳರನ್ನು ನೋಡಿ ಗಾಬರಿಬಿದ್ದು ಎದೆ ಒಡೆದು ಸತ್ತಿರುವಳೆಂದು ತಿಳಿಸಿರುತ್ತಾರೆ

ವ್ಯವಸಾಯದ ವಿಷಯಗಳು

ಬಿತ್ತನೆ ಬೀಜದ ಚುನಾವಣೆ

ಧಾನ್ಯಾದಿಗಳನ್ನು ಬೆಳೆಯುವದರಲ್ಲಿ ಪೂರಾದ ಬೀಜವನ್ನು ಬಿತ್ತಿದರೆ ಉತ್ಪತ್ತಿಯು ನಿಸ್ಸಾರವಾದ ಬಿತ್ತದಿಂದ ಬರುವದಕ್ಕಿಂತಲೂ ಜಾಸ್ತಿಯಾಗಿ ಆಗುತ್ತದೆಂತಲೂ ಹೀಗೆ ಪೂರಾದ ಬಿತ್ತವನ್ನೇ ಆರಿಸಿಕೊಳ್ಳುವದಕ್ಕೆ ಹಿಡಿಯುವ

ವ್ಯವಸಾಯ, ಕೆಲಸವು ಮತ್ತು ಖರ್ಚು ಫಸಲಿನಿಂದ ದೊರೆಯುವ ಹೆಚ್ಚಿನ ಬೆಳೆಯಿಂದ ಧಾರಾಳವಾಗಿ ಸಲ್ಲುವದೆಂತಲೂ ಅಮೇರಿಕಾ ಮತ್ತು ಯೂರೋಪು ದೇಶಗಳಲ್ಲಿ ಅನೇಕ ಅಜಮಾಯಿಷಿಗಳಿಂದ ಗೊತ್ತು ಮಾಡಲ್ಪಟ್ಟಿರುತ್ತದೆ

ಭಾರವಾಗಿರುವ ಬೀಜಗಳು ಜಾಗ್ರತೆಯಾಗಿ ಮೊಳಕೆ ಬಿಡುವವು ಮತ್ತು ಇವುಗಳ ಸಸಿಗಳೂ ಕೂಡ ದೃಢವಾಗಿಯೂ ಮತ್ತು ವೇಗವಾಗಿಯೂ ಬೆಳವಣಿಗೆ ಹೊಂದುತ್ತವೆ ಫಸಲುತ್ಪತ್ತಿಯಂತು ಮೊದಲೇ ಹೇಳಿರುವ ಮೇರೆ ಜಾಸ್ತಿಯಾಗುವದಲ್ಲದೆ ಕಾಳುಗಳ ಆಕಾರ ಒಂದೇ ಸಮನಾಗಿರುವುದು ಭಾರವಾದ ಕಾಳುಗಳನ್ನು ಹಗುರವಾದವುಗಳನ್ನು ಪ್ರತ್ಯೇಕಿಸುವದಕ್ಕೆ ತಕ್ಕ ಕಣ್ಣುಗಳುಳ್ಳ ಜಲಡಿಗಳಲ್ಲಾಡುವದು ಒಂದು ಅತಿ ಸಾಮಾನ್ಯೋಪಾಯ ನೀರಿನಲ್ಲಿ ಧಾನ್ಯವನ್ನು ಹಾಕಿ ಪರೀಕ್ಷಿಸುವದು ಮತ್ತೊಂದು ಮಾರ್ಗ ತೂಕವಾದವು ನೀರಿನೊಳಗೆ ಮುಳುಗಿ ಹಗುರವಾದವು ತೇಲುವವು ಆದರೆ ಇದರಲ್ಲಿ ಒಂದು ಪ್ರತಿಕೂಲವೇನಂದರೆ, ಸಣ್ಣ ಸಣ್ಣ ನೀರ್ಗುಳ್ಳೆಗಳು ಬೀಜಕ್ಕೆ ಅಂಟಿಕೊಂಡರೆ ಭಾರವಾದ ಬೀಜವೂ ಕೂಡ ತೇಲುವದುಂಟು ಇದಕ್ಕೆ ಪ್ರತಿಯಾಗಿ ಒಂದು ಗಾಜಿನ ಸೀಸೆಯ ಅಡಿಯಲ್ಲಿ ಒಂದು ರಂಧ್ರವನ್ನು ಮಾಡಿ ಈ ರಂಧ್ರಕ್ಕೆ ಒಂದು ತಿತ್ತಿಯ ಬಾಯಿಗೆ ಸೇರಿರುವ ರಬ್ಬರು ಕೊಳವೆಯನ್ನು ಜಂಟಿಸಿ ಧಾನ್ಯವನ್ನು ಸೀಸೆಯಲ್ಲಿ ಹಾಕಿ ಗಾಳಿ ಊದಿದರೆ ಹಗುರವಾದ ಬೀಜವೆಲ್ಲ ಹಾರಿಹೋಗುತ್ತದೆ ಈ ರೀತಿ ಹೊಗೆಗೊಸ್ಸಿನ ಬೀಜವನ್ನು ಪ್ರತ್ಯೇಕಿಸಿರುತ್ತಾರಂತೆ ಮುಖ್ಯವಾಗಿ ಯಾವ ರೀತಿಯಲ್ಲೇ ಆಗಲಿ ತೂಕವಾದ ಬೀಜಗಳನ್ನೇ ಆರಿಸಿಕೊಂಡು ಪೈರು ಮಾಡುವದರಲ್ಲಿ ಬರ್ಮ ಪ್ರಾಯಃ ಜನಗಳು ಟೊಂಡು ತೋರುವವರಿಂದ ಅದರಂತೆ ಸಾಧ್ಯವಾದ ಮಟ್ಟಿಗೂ ಬೇಸಾಯಗಾರರು ಅನುಸರಿಸುವದು ಒಳ್ಳೇದು

ಬಾತ್ಮಿದಾರರಿಗೆ ನೋಟೀಸ್

ತಿಳಿಸದು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸಿಗಾಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

[ಕ್ರೈಸ್ತನ ಶರಣ ಕುಟೋದ್ಯ — ಇದನ್ನು ನಾವು ಮೈಸೂರು ಕ್ರಿಶ್ಚಿಯನ್ ಮಾಸ್ಟರಿಗೆ ಕಳಿಸಿದೆವೆ ಅವರು ಎಲ್ಲವನ್ನು ಸರಿಪಡಿಸುವರು ಎಡಿಟರ್ ವೃ ಪ]

ಕರೆಸ್ಪಾಂಡೆನ್ಸ್

ಎಂಡೋರ್ಸ್ ಲೈಸೆನ್ಸ್ ವಿಷಯ

ಅಯ್ಯಾ,

ಈ ಗುಬ್ಬಿ ತಾಲ್ಲೂಕು ಮೇಲೆ ಜನಗಳು ಬಂದೂಕುಗಳನ್ನು ಇಟ್ಟುಕೊಳ್ಳುವದಕ್ಕೆ ಲೈಸೆನ್ಸುಗಳನ್ನು ಪಡೆಯಬೇಕಷ್ಟೆ ೧೯೦೮ ನೆ ಡಿಸಂಬರ್—೧೯೦೯ ನೆ ಜನವರಿ ತಿಂಗಳಲ್ಲಿ ಕೊಟ್ಟ ಲೈಸೆನ್ಸು ಅರ್ಜಿಗಳು ಈ ನಕಲ್ ವರೆವಿಗೆ ಕೆಲವು ಜನಗಳಿಗೆ ಇನ್ನು ಬಂದೇ ಇರುವದಿಲ್ಲ ಇದಕ್ಕಾಗಿ ಎಷ್ಟು ಅರ್ಜಿಗಳಿಂದ ಕಗಾದೆ ಮಾಡಿದಾಗ್ಯೂ ವಿಚಾರಿಸುವರೇ ದಿಕ್ಕಿಲ್ಲದಂತೆ ಆಗಿ ಇರುತ್ತೆ ಈಗಲು ನಮ್ಮ ಹಜರತ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಪೂರ್ಣ ಮನಸ್ಸಿಗೆ ತೆಗೆದುಕೊಂಡರೆ ಕೆಲವು ಗುಮಾಸ್ತರಿಗೆ ತುಂಬಾ ಭಯವೂ ಪ್ರಜೆಗಳಿಗೆ ಕ್ಷೇಮವೂ ಉಂಟಾದೀತೆಂದು ನಂಬುತ್ತೇನೆ

ಒಬ ಬಂದಾದಾರ್

ಭಯಂಕರವಾದ ಕೊಲೆ

ಅಯ್ಯಾ,

ಹೋಳ್ಕೆರೆ ತಾಲ್ಲೂಕು ತಾಳ್ಯದ ವಾಸಸ್ಥನಾದ ಹನುಮಂತಭಟ್ಟನೆಂಬಾತನು ಈಗೆ ೧೧ ೧೨ ದಿವಸದ ಕೆಳಗೆ ಒಂದು ದಿನ ಮನೆಯಿಂದ ಹೊರಗೆ ಹೋದವನು ಪುನಹಾ ಮನೆಗೆ ಬರಲಿಲ್ಲವೆಂತಲೂ ಇಂಥಾ ಸ್ಥಳದಲ್ಲಿದ್ದಾನೆಂಬ ಸಂಗತಿಯು ತಿಳಿಯಲಿಲ್ಲವೆಂತಲೂ ಆತನ ವಾರಸುದಾರರು ಹುಡುಕುತ್ತಿದ್ದಾರೆಂತಲೂ ವರ್ತಮಾನವು ಈ ದಿನ ಕೇಳಿದ್ದರಲ್ಲಿ ಆತನ ಹೆಣ ತಾಳ್ಯಕ್ಕೆ ೭ ಮೈಲಿ ಫಾಸಲೆಯಲ್ಲಿರತಕ್ಕ ಅಬ್ಬನಾಯ್ಕನಹಳ್ಳಿ ಕೆರೆ ನೀರಿನಲ್ಲಿ ತೇಲುತ್ತಿದೆ ಎಂತಲೂ ಅದನ್ನು ನೋಡಿ ವಿಚಾರಿಸಲಿಕ್ಕೆ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರೂ ಡೆಪ್ಯುಟಿ ಕಮಿಷನರವರೂ ಈ ದಿನ ಅಬ್ಬನಾಯ್ಕನಹಳ್ಳಿಗೆ ಹೋಗಿದ್ದಾರೆಂತಲೂ ತಿಳಿಯಬರುತ್ತೆ ಈ ಹನುಮಂತಭಟ್ಟನು ದ್ರವ್ಯವಂತನಾಗಿ ಸದಾ ಸಿವಲ್ ಕ್ರಿಮಿನಲ್ ಕೋರ್ಟುಗಳಲ್ಲೇ ಇರತಕ್ಕ ವಾದಿಕೆಯುಳ್ಳ ಮನುಷ್ಯನಾಗಿದ್ದನು ಈತನನ್ನು ಯಾರೋ ಆತನ ದ್ವೇಷಿಗಳು ಖೂನಿ ಮಾಡಿ ಆತನ ದೇಹಕ್ಕೆ ವಿಶೇಷ ಭಾರವಾದ ೭ ಕಲ್ಲುಗಳನ್ನು ಕಟ್ಟಿ ಅಬ್ಬನಾಯ್ಕನಹಳ್ಳಿ ಕೆರೆ ನೀರಿನಲ್ಲಿ ಹಾಕಿದ್ದರು ಪೊಲೀಸಿನವರು ಲ್ಹಾಷನ್ನ ನೀರಿನಿಂದ ಹೊರಗೆ ತೆಗೆದು ವಾರಸುದಾರರ ಸಮಕ್ಷಮ ವಿಚಾರಣೆ ನಡಿಸಿದರು ಆ ಲ್ಹಾಷು ಹನುಮಂತಭಟ್ಟನದೇ ಎಂದು ವಾರಸುದಾರರು ಗುರ್ತಿಸಿದರಂತೆ ಕೇಸು ಪೊಲೀಸಿನವರ ವಿಚಾರಣೆಯಲ್ಲಿದೆ

ಚಿತ್ರದುರ್ಗದ ನಿವಾಸಿ

ವಿವಿಧ ವೃತ್ತಾಂತಗಳು

ಬ್ರೆಸ್ಸಿಕ್ ರಾಜ್ಯದ ರೀಜೆಂಟರವರು ತಮ್ಮ ಪತ್ನಿಯವರೊಡನೆ ಇಂಡಿಯಾ, ಸಯಾಂ ಜಪಾನ್, ಚೈನಾ ಮೊದಲಾದ ದೇಶಗಳಲ್ಲಿ ಸಂಚಾರ ಮಾಡುವುದಕ್ಕೆ ಹೊರಟಿರುತ್ತಾರೆ

* * *

ದಕ್ಷಿಣ ಅಮೇರಿಕಾಕ್ಕೆ ಸೇರಿದ ಟ್ರಿನಿಡಾಡ್ ದೇಶದಲ್ಲಿ ಹಾಲು ತೆಗದ ಕಬ್ಬಿನ ಶಿಪ್ಪೆಯಿಂದ ಕಾಗದ ಮಾಡುಕಾರರಂತೆ ಅನೇಕತರದ ಒರಟುಕಾಗದಗಳನ್ನು ಆಗಲೆ ಮಾಡಿರುತ್ತಾರೆ ಆದರೆ ಶುಭ್ರವಾದ ಕಾಗದವನ್ನು ಮಾಡುವದು ಇನ್ನೂ ಅಜಮಾಯಿಷಿಯಲ್ಲಿರುತ್ತೆ

* * *

೧೯೦೯ ನೆ ಇಸವಿ ನವೆಂಬರು ೩೦ ಕ್ಕೆ ಆಖೈರು ಆಗುವ ೩ ತಿಂಗಳಲ್ಲಿ ಮದರಾಸು ಅಧಿಪತ್ಯದಿಂದ ಯೂರೋಪು ರಾಜ್ಯಗಳಿಗೂ ಸಿಲೋನ್ ಮತ್ತು ಜಪಾನ್ ದ್ವೀಪಗಳಿಗೂ ಸುಮಾರು ೪ ಲಕ್ಷ ರೂಪಾಯಿ ಬಾಳುವ ೧ ಲಕ್ಷ ಮಣ ತಾಳೆಯನಾರು ಸಮುದ್ರ ಮಾರ್ಗವಾಗಿ ರಫ್ತಾಗಿರುತ್ತದೆ

ಜರ್ಮನ್ ದೇಶದ ರಾಜಮನೆತನಕ್ಕೆ ಸೇರಿದ ಪ್ರಿನ್ಸ್ ವಾರಿಸ್ ಎಂಬವರು ಆಫ್ರಿಕಾ ದೇಶದ ಯುಗಾಂಡಾ ಶೀಮೆಯನ್ನು ನೋಡುವುದಕ್ಕೆ ಹೊರಟಿರುತ್ತಾರೆ ಇವರ ಜೊತೆಯಲ್ಲಿ ದೇಶಾಟನೆಯಲ್ಲಿ ಹೆಸರುಗೊಂಡಿರುವ ಕೋರ್ಟ್ ಫೈಲ್ ಎಂಬವನು ಹೋಗಿರುವನು

* * *

ಇಂಗ್ಲೆಂಡ್ ದೇಶದ ಸೀಮೆ ನಾಲೆಗಳನ್ನು ಕ್ರಮಪಡಿಸಲು ಒಂದು ಕಮಿಟಿಯು ಏರ್ಪಾಟಾಗಿತ್ತು ಇನ್ನು ಮುಂದೆ ಹೊಸ ನಾಲೆಗಳನ್ನು ತೋಡಿಸುವುದಕ್ಕೂ ಹಳೇ ನಾಲೆಗಳನ್ನು ಸರಿಪಡಿಸುವುದಕ್ಕೂ ೩೩೦ ಲಕ್ಷ ರೂಪಾಯಿಗಳನ್ನು ಕರ್ಚು ಮಾಡತಕ್ಕದ್ದೆಂದು ಅಂದಾಜು ಹಾಕಿರುತ್ತಾರೆ

* * *

ಪಂಜಾಬ್‌ನಲ್ಲಿ ಸರ್ಕಾರಿ ವ್ಯವಸಾಯ ಇಲಾಖೆಯವರು ವ್ಯವಸಾಯ ಸಂಬಂಧವಾದ ಯಂತ್ರೋಪಕರಣಗಳನ್ನು ತರಿಸಿ ಮಾರಾಟ ಮಾಡುತ್ತಿದ್ದರು ಈಚೆಗೆ ಅಲ್ಲಿನ ವರ್ತಕರು ಈ ಕೆಲಸವನ್ನು ವಹಿಸಿರುವದು ನೋಡಿದರೆ ಇವುಗಳನ್ನು ಜನಗಳು ಉಪಯೋಗಿಸುವದು ಹೆಚ್ಚುತ್ತಿದೆ ಎಂದು ಹೇಳಬಹುದು

* * *

ಬಾಗ್‌ದಾದ್ ಎಂಬ ಮಹಮದೀಯರ ಪುಣ್ಯಕ್ಷೇತ್ರಕ್ಕೆ ಒಂದು ಭಾರಿ ರೈಲ್ ರಸ್ತೆಯನ್ನು ಹಾಕುತ್ತಿರುವರಷ್ಟೆ ಈ ರೈಲ್ ರಸ್ತೆಯನ್ನು ಮುಂದಕ್ಕೆ ಜಾಗ್ರತೆಯಿಂದ ಸಾಗಿಸಲು ಸ್ವಿಟ್ಸರ್‌ಲಾಂಡಿನ ಗ್ಲೇರಸ್ ಪಟ್ಟಣದಲ್ಲಿ ಒಂದು ಕಂಪೆನಿಯು ಏರ್ಪಾಡಾಗಿ ಕೆಲಸಕ್ಕೆ ಬೇಕಾದ ಹಣವು ಕೂಡಿಸಲ್ಪಟ್ಟಿದೆ ಈ ಕಂಪೆನಿಗೆ ಜರ್ಮನಿ, ಫ್ರಾನ್ಸ್, ಆಸ್ಟ್ರಿಯಾ, ಸ್ವಿಟ್ಸರ್ ಲಾಂಡ್ ಮೊದಲಾದ ದೇಶಗಳ ಪ್ರತಿನಿಧಿಗಳು ಸೇರಿರುತ್ತಾರೆ

* * *

ಈಗ ಸೆರೆಯಲ್ಲಿರುವ ಮಾಜಿ ತುರ್ಕಿ ಸುಲ್ತಾನರಾದ ಹಾಮಿದ್‌ರವರ ಆಧೀನದಲ್ಲಿ ಕೆಲಸ ಮಾಡುತ್ತಿದ್ದ ಕೆಲವು ತುರ್ಕಿ ಸೈನಿಕರು ಅಫ್ಘಾನಿಸ್ಥಾನದ ಅಮೀರರ ಸೈನ್ಯದಲ್ಲಿ ಕೆಲಸ ಮಾಡುತ್ತಿರುವರೆಂದು ಒಂದು ಸುದ್ದಿಯು ಹುಟ್ಟಿದೆ ಇದರಿಂದ ರಾಜಕೀಯವಾದ ಗಲಾಟೆಗಳು ಹುಟ್ಟಬಹುದೆಂಬ ಭೀತಿಯು ಸಹ ಉಂಟು ಆದರೆ ಈಗಿನ ನೂತನ ತುರ್ಕಿ ಸರಕಾರದವರು ತಮ್ಮಲ್ಲಿರುವ ಯಾವ ಉದ್ಯೋಗಸ್ಥರನ್ನು ಕೊಡುವರಾಗಿಲ್ಲವೆಂದು ಖಂಡಿತವಾಗಿ ತಿಳಿಸಿರುವರಂತೆ

* * *

ಮದರಾಸು ಅಧಿಪತ್ಯದ ಪಾಮ್ಬಾರು ಯಾಸೆ ಮೀನು ಹಿಡಿಯುವ ಕಸುಬಿನ ವಿಷಯವಾಗಿ ಸರ್ ಎಫ್ ಎ ನಿಕಲ್ಸನ್‌ಯವರು ಬರೆದಿರುವ ಲೇಖನದಲ್ಲಿ ಮುತ್ತಿನಚಿಪ್ಪು ಗುಂಡಿಗಳ ತಯಾರಿಯನ್ನು ಕುರಿತು ಅಭಿಪ್ರಾಯಪಡುವದೇನಂದರೆ ಪ್ರತಿ ಸಾಲ್‌ನಲ್ಲಿಯೂ ಸಿಲೋನಿನಿಂದ ಮುತ್ತಿನಚಿಪ್ಪು ವಿಶೇಷವಾಗಿ ಯೂರೋಪ್ ರಾಜ್ಯಗಳಿಗೂ ಮತ್ತು ಜಪಾನಿಗೂ ರಫ್ತಾಗುತ್ತಿದೆ ೧೯೦೬ ರಲ್ಲಿ ಸುಮಾರು ೫ ಸಾವಿರ ಮಣದಷ್ಟು ಮುತ್ತಿನಚಿಪ್ಪು ಜರ್ಮನಿ, ಜಪಾನು ಮತ್ತು ಗ್ರೇಟ್ ಬ್ರಿಟನ್ ರಾಜ್ಯಗಳಿಗೆ ಸಾಗಿ ಹೋಗಿರುತ್ತೆ ಆ ರಾಜ್ಯಗಳಲ್ಲಿ ಇದರಿಂದ ಗುಂಡಿಗಳನ್ನು ತಯಾರು ಮಾಡುತ್ತಾರೆ ಇಂಥಾ ಮುತ್ತಿನ ಚಿಪ್ಪಿನ ಗುಂಡಿಗಳನ್ನು ಇಲ್ಲಿ ತಯಾರು ಮಾಡಿದರೆ ಒಳ್ಳೆ ಲಾಭ ಎಂಬುವದರಲ್ಲಿ ಸಂದೇಹವಿಲ್ಲ ಈ ಕೆಲಸಕ್ಕೆ ಹೆಚ್ಚು ಸಾಧನವೇ ಆಗಲಿ, ತಿಳುವಳಿಕೆ ಅಥವಾ ಬಂಡವಾಳವೇ ಆಗಲಿ ಏನೇನೂ ಅಗತ್ಯವಿಲ್ಲ

* * *

ಇಂಗ್ಲೆಂಡ್ ದೇಶವು ಅನೇಕ ಧರ್ಮಕಾರ್ಯಗಳಿಗೆ ವಾಸಸ್ಥಾನವಾಗಿದೆಯೆಂದು ಎಲ್ಲರಿಗೂ ಗೊತ್ತಾದ ಸಂಗತಿಯಷ್ಟೆ ಹೋದ ತಿಂಗಳು ಓಟೊಬೇಟ್ ಎಂಬ ಪುಣ್ಯಾತ್ಮನು ವೈದ್ಯಶಾಸ್ತ್ರದ ಅಭಿವೃದ್ಧಿಗೋಸ್ಕರ ತನ್ನ ಆಸ್ತಿಯಲ್ಲಿ ೭ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಉಯಿಲು ಬರೆದು ತನ್ನ ತಮ್ಮನ ಸ್ವಾಧೀನಮಾಡಿದ್ದನು ಆದರೆ ಈ ಮೊಬಲಗು ಸಾಲದೆ ಬಂದುದರಿಂದ ತಮ್ಮನಾದವನು ಅಣ್ಣನು ಕೊಟ್ಟ ೭ ಲಕ್ಷ ರೂಪಾಯಿಗೆ ಮತ್ತೆ ೩೭ ಲಕ್ಷ ರೂಪಾಯಿಗಳನ್ನು ತನ್ನ ಆಸ್ತಿಯಿಂದ ಕೂಡಿಸಿ ಲಂಡನ್ ಮಹಾನಗರದಲ್ಲಿರುವ ಸರ್ವಕಲಾಶಾಲೆಯ ಕಮಿಟಿಯವರಿಗೆ ಒಪ್ಪಿಸಿರುತ್ತಾನೆ ಈ ಹಣದಿಂದ ವರುಷ ಒಂದಕ್ಕೆ ೧ ಲಕ್ಷದ ೧೨ ಸಾವಿರ ರೂಪಾಯಿ ಬಡ್ಡಿ ಬರುವುದಂತೆ ಇಷ್ಟು ಹಣವನ್ನು ಕೊಟ್ಟ ಈ ಪುಣ್ಯಾತ್ಮನ ಧರ್ಮಗುಣವನ್ನು ಮೇಲ್ಕಂಡ ಸರ್ವಕಲಾಶಾಲೆಯವರು ಬಹಳವಾಗಿ ಕೊಂಡಾಡಿರುತ್ತಾರೆ

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ವಾರ ಇಂಡಿಯಾ ದೇಶದಲ್ಲೆಲ್ಲಾ ೬,೫೪೯ ಪ್ಲೇಗ್ ಮರಣಗಳಾಗಿರುತ್ತವೆ

* * *

ಹಿಂದೂ ದೇಶಕ್ಕೆ ಹೊಸದಾಗಿ ಬಂದಿರುವ ದಳಪತಿಗಳಾದ ಸರ್ ಓಮೂರ್ ಕ್ರಿಯವರು ಈ ತಿಂಗಳ ಮಧ್ಯಭಾಗದಲ್ಲಿ ಬರ್ಮಾ ದೇಶದಲ್ಲಿ ಸಂಚರಿಸುವರು

* * *

ಹಿಂದೂ ದೇಶದಲ್ಲಿ ಹೊಸದಾಗಿ ಏರ್ಪಾಡಾಗುತ್ತಿರುವ ನ್ಯಾಯವಿಧಾಯಕ ಸಭೆಗಳು ಪ್ರಾರಂಭವಾದ ಮೇಲೆ ವೈಸ್‌ರಾಯರಾದ ಲಾರ್ಡ್ ಮಿಂಟೊ ಪ್ರಭುಗಳು ಸಿಕಾಂಗೋಸ್ಕರ ಮಧ್ಯಪ್ರಾಂತ್ಯಗಳಿಗೆ ಹೊರಡುವರು

* * *

ಕಳೆದ ವಾರ ಜರುಗಿದ ನ್ಯಾಷನಲ್ ಕಾಂಗ್ರೆಸ್ ಎಂಬ ದೇಶೀಯರ ಸಭೆಯಲ್ಲಿ ದಕ್ಷಿಣಾಫ್ರಿಕದಲ್ಲಿ ದೇಶೀಯರ ಹಕ್ಕುಬಾಧ್ಯತೆಗಳನ್ನು ಸರಿಪಡಿಸುವ ಕಾರ್ಯಕ್ಕೆ ೧೮,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ

* * *

ಹೋದವರುಷ ಬೊಂಬಾಯಿ ಪಟ್ಟಣದಲ್ಲಿ ಮೊಹರಮ್ ಹಬ್ಬವಾಗುವಾಗ್ಗೆ ದೊಂಬಿಗಳು ನಡೆದವು ಈ ವರುಷ ಅಂಥಾ ಗಲಾಟೆಗಳೇನೂ ನಡೆಯದಂತೆ ಪೊಲೀಸ್ ಕಮೀಷನರು ಆಗಲೇ ಏರ್ಪಾಡುಗಳನ್ನು ಮಾಡಿರುತ್ತಾರೆ

* * *

ಈ ವರುಷ ವಿಲಾಯತಿಗೆ ಹೋಗಿ ಗಾಜಿನ ಮತ್ತು ಮಣ್ಣಿನ ಪದಾರ್ಥಗಳನ್ನು ತಯಾರುಮಾಡುವ ಕಸಬನ್ನು ಕಲಿಯುವುದಕ್ಕೆ ಅರ್ಹನಾಗಿರತಕ್ಕ ವಿದ್ಯಾರ್ಥಿಗೆ ವೇತನವನ್ನು ಕೊಡುವುದಾಗಿ ಪಂಜಾಬ್ ಸರಕಾರದವರು ಫಾಯಿಷ್ ಮಾಡಿರುತ್ತಾರೆ

* * *

ಬಳ್ಳಾರಿಯಲ್ಲಿ ಕೂಡಿದ್ದ ವೀರಶೈವ ಮಹಾ ಸಭೆಯವರು ತಮ್ಮ ಮತಸ್ಥರಿಂದ ಹಿಂದೂದೇಶದ ನಾನಾ ಮಂತ್ರಾಲೋಚನಾ ಸಭೆಗಳಿಗೆ ಪ್ರತಿನಿಧಿಗಳನ್ನು ಚುನಾಯಿಸುವ ಅಧಿಕಾರವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವಂತೆ ತೀರ್ಮಾನಿಸಿರುತ್ತಾರೆ

* * *

ಆಕಾಶ ವಿಮಾನಗಳ ರಚನೆಯು ವೇದಗಳಲ್ಲಿ ಸೂಚಿತವಾಗಿದೆಯೆಂದು ಪಂಡಿತರಾದ ಶಿವಕರ್ ಬಾಪೂಜಿಯವರು ತಿಳಿಸಿರುತ್ತಾರೆ ಇವರ ಮಾತನ್ನು ನಂಬಿ ಡಾಕ್ಟರ್ ದಾಂಡೇಕರ್ ನಾಯಕ್ ಎಂಬವರು ಆಕಾಶ ವಿಮಾನಗಳನ್ನು ಕಟ್ಟಲು ಚಂದಾ ಹಣ ಕೂಡಿಸುವರಂತೆ

* * *

ಧಾತಿಯ ಪ್ರಾಂತ್ಯದ ಮಹಾರಾಜರವರು ತಮ್ಮ ಪ್ರಜೆಗಳಲ್ಲಿ ಯಾರೂ ಬ್ರಿಟಿಷ್‌ರಾಜ್ಯಕ್ಕೆ ವಿರೋಧವಾಗಿ ರಾಜದ್ರೋಹ ನಡಿಸದಂತೆಯೂ ಮಿಂಟೋ ಪ್ರಭುಗಳಿಂದ ಈ ದೇಶದ ರಾಜರಿಗೂ ಪ್ರಜೆಗಳಿಗೂ ಅನೇಕ ಪ್ರಯೋಜನಗಳುಂಟಾಗಿವೆಯೆಂತಲೂ ದರ್ಬಾರಿನಲ್ಲಿ ತಿಳಿಸಿರುತ್ತಾರೆ

* * *

ದಕ್ಷಿಣ ಹಿಂದೂಸ್ಥಾನದ ಪ್ರಸಿದ್ಧ ಪಟ್ಟಣವಾದ ಮಧುರೆಯಲ್ಲಿರುವ ತಮಿಳ್ ಭಾಷಾಭಿವೃದ್ಧಿಯ ಸಂಘಕ್ಕೆ ಇಟ್ಟಯಪುರದ ಜಮಾನುದಾರರು ೩,೫೦೦ ರೂಪಾಯಿಗಳನ್ನು ಕೊಟ್ಟಿರುವುದಲ್ಲದೆ ಪ್ರತಿ ತಿಂಗಳಲ್ಲೂ ೧೦ ರೂಪಾಯಿ ಚಂದಾ ಕೊಡುವಂತೆ ಒಪ್ಪಿರುತ್ತಾರೆ

* * *

ಕ್ವೆಟ್ಟಾದಿಂದ ಕರಾಚಿಗೆ ಬರುತಿದ್ದ ಮೇಲ್ ಟ್ರೇನಿಗೆ ಯಾರೋ ಗುರಿಕಟ್ಟಿ ಬಂದೂಕಿನಿಂದ ಹೊಡದರೆಂದು ಸಮಾಚಾರವು ಬಂದಿತ್ತು ಆದರೆ ಪೊಲೀಸಿನವರು ವಿಚಾರಿಸಲು ಸ್ಟೇಷನ್ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನರ ಮಗನು ಆಕಸ್ಮಾತ್ತಾಗಿ ತುಬಾಕಿಯನ್ನು ಹಾರಿಸಿದನೆಂದು ಗೊತ್ತಾಯಿತು

* * *

ಕಲ್ಕತ್ತಾ ಪಟ್ಟಣದ ಮೈದಾನದಲ್ಲಿ ಪಂಜಾಬ್ ದೇಶದವನೊಬ್ಬನು ಹಾರತಕ್ಕ ಯಂತ್ರವನ್ನು ೪೦ ಗಜಗಳ ತನಕ ನಡಿಸಿಕೊಂಡು ಹೋದನಂತೆ ಈ ನೂತನ ಯಂತ್ರಕ್ಕೆ ಎರಡು ರೆಕ್ಕೆಗಳಿದ್ದವು ಇಂಥಾ ನೂತನ ಯಂತ್ರವನ್ನು ನಮ್ಮ ದೇಶದಲ್ಲಿ ಮಾಡಿದ್ದು ಇದೇ ಮೊದಲೆಂದು ತೋರುತ್ತದೆ

* * *

ಮದರಾಸ್ ಅಧಿಪತ್ಯಕ್ಕೆ ಏರ್ಪಾಡಾಗಿರುವ ಲೆಜಿಸ್ಲೆಟಿವ್ ಕೌನ್ಸಿಲ್ ಎಂಬ ಮಂತ್ರಾಲೋಚನಾ ಸಭೆಗೆ ದೇಶೀಯ ಕೈಸ್ತರಲ್ಲಿ ಪ್ರಮುಖರಾಗಿರುವ ದಿವಾನ್ ಬಹದ್ದೂರ್ ಮತ್ತು ಅಡ್ಮಿನಿಸ್ಟ್ರೇಟರ್ ಜನರಲ್ ಆಗಿರುವ ಮೆ॥ ಎನ್ ಸುಬ್ರಮಣ್ಯಂ ಎಂಬ ದೊಡ್ಡ ಮನುಷ್ಯರನ್ನು ಮದರಾಸ್ ಗವರ್ನರವರು ನೇಮಕಮಾಡಿರುತ್ತಾರೆ

* * *

ಉತ್ತರ ದೇಶದ ಅಂಬಾಲಾ ಪಟ್ಟಣದಡೆಪ್ಯುಟಿ ಕಮೀಷನರ ಬಂಗಲೆ ಗೇಟಿನ ಹತ್ತಿರ ಯಾರೋ ದುರಾತ್ಮರು ಸಿಡಿಮದ್ದನ್ನು ಒಂದು ಮೂಟೆಯಲ್ಲಿ ಕಟ್ಟಿ ಇಟ್ಟಿದ್ದರು ಡೆಪ್ಯುಟಿ ಕಮೀಷನರ ದನಾ ಕಾಯುವವನು ಅದನ್ನು ಸಿಡಿಮದ್ದಿನ ಮೂಟೆಯೆಂದು ಕಾಣದೆ ಮನೆಗೆ ತೆಗೆದುಕೊಂಡು ಹೋಗಿ ಬಿಚ್ಚಲು ಅದು ಬಹು ರಭಸದಿಂದ ಹಾರಿ ಅವನ ಕೈಯನ್ನು ನುಚ್ಚುನೂರಾಗಿ ಮಾಡಿದೆ

* * *

ಇಂಡಿಯಾ ದೇಶದ ವೈಸ್‌ರಾಯರಾದ ಲಾರ್ಡ್ ಮಿಂಟೋ ಪ್ರಭುಗಳು ತಮ್ಮ ಪ್ರಯಾಣವನ್ನು ತೀರಿಸಿಕೊಂಡು ಉತ್ತರ ದೇಶಕ್ಕೆ ಹಿಂತಿರುಗಿದ ಮೇಲೆ ಅವರಿಗೆ ಜ್ವರವು ಕಾಣಿಸಿಕೊಂಡು ಅವರು ಎಲ್ಲಿಗೂ ಹೋಗದಂತೆ ಮಾಡಿತ್ತು ಅವರು ಈಗ ಪೂರ್ಣ ಕ್ಷೇಮದಲ್ಲಿರುತ್ತಾರೆಂತಲೂ ಪೋಲೋ ಚಂಡಾಟವನ್ನು ನೋಡುವುದಕ್ಕೆ ಹೋಗಿದ್ದರೆಂತಲೂ ಸಮಾಚಾರವು ಬಂದಿರುತ್ತದೆ

* * *

ನಾರಂಟ್ ಡಾಯಲ್ ಎಂಬ ಇಂಗ್ಲಿಷ್ ಶಿಪಾಯಿಯು ಕರಾಚಿ ಪಟ್ಟಣಕ್ಕೆ ೪೦ ಮೈಲಿ ದೂರದಲ್ಲಿ ರೈಲ್‌ರಸ್ತೆಯ ಮೇಲೆ ನಡೆದುಕೊಂಡು ಬರುತ್ತಿದ್ದನು ಇವನು ಎದುರಿಗೆ ಬರುತ್ತಿದ್ದ ಒಂದು ಗೂಡ್ಸ್‌ಗಾಡಿಯನ್ನು ಹತ್ತಲು ಪ್ರಯತ್ನ ಪಟ್ಟಾಗ್ಗೆ ಕೈಜಾರಿ ಗಾಡಿಯ ಅಡಿಗೆ ಸಿಕ್ಕಿ ಬಿದ್ದನು ಕಾಲುಗಳೆರಡೂ ಮುರಿದುಹೋಗಿ ಪ್ರಾಣವು ಹೋಗಿತ್ತು ಕೊಂಚ ಹೊತ್ತಾದಮೇಲೆ ಬಂದ ಮತ್ತೊಂದು ಗೂಡ್ಸ್‌ಗಾಡಿಯು ಇವನ ಹೆಣವನ್ನು ಕರಾಚಿಗೆ ತಂದಿತು

* * *

ಇಂಡಿಯಾ ದೇಶದ ಮಂತ್ರಿಶ್ರೇಷ್ಠರಾದ ಲಾರ್ಡ್ ಮಾರ್ಲೆ ಪ್ರಭುಗಳಿಗೆ ಕಳೆದ ವಾರ ೭೧ ವರುಷ ವಯಸ್ಸು ತುಂಬಿತು ಇವರು ಇಷ್ಟು ವೃದ್ಧಾಪ್ಯರಾದರೂ ಕಾಯಪುಷ್ಟಿಯೂ ಮನಸ್ಸಿನ ಚಟುವಟಿಕೆಯೂ ಬಹು ಅದ್ಭುತವಾದ ರೀತಿಯಲ್ಲಿರುವವು ಇವರು ರಾಜಕೀಯ ಕಾರ್ಯಗಳಲ್ಲಿ ಅಗ್ರಗಣ್ಯರಾಗಿರುವುದಲ್ಲದೆ ಪುಸ್ತಕಗಳನ್ನು ಬರೆಯುವುದರಲ್ಲಿಯೂ ರಾಜ್ಯಾಡಳಿತ ಸಂಬಂಧವಾದ ಉಪನ್ಯಾಸಗಳನ್ನು ಮಾಡುವುದರಲ್ಲಿಯೂ ಲೋಕಪ್ರಸಿದ್ಧರೆನ್ನಿಸಿಕೊಂಡಿರುವರು

* * *

ಇಂಡಿಯಾ ದೇಶವು ಈಚೀಚೆಗೆ ಬಹಳ ಜಾಗ್ರತೆಯಿಂದ ಅಭಿವೃದ್ಧಿಯಾಗುತ್ತಾ ಬರುತ್ತಿದೆಯೆಂದು ವಾಚಕರಿಗೆ ಗೊತ್ತಿದೆಯಷ್ಟೆ ನಾಗಪುರದಲ್ಲಿ ತೋಟಗಳನ್ನು ಶಾಸ್ತ್ರೀಯವಾದ ರೀತಿಯಲ್ಲಿ ಇಲ್ಲಿನವರಿಗೆ ಕಲಿಸಿಕೊಡಲು ಏರ್ಪಾಡಾಗಿರುವುದು ಪ್ರತಿ ವರುಷವೂ ನಾಲ್ಕು ಮಂದಿ ವಿದ್ಯಾರ್ಥಿಗಳು ಈ ಶಾಲೆಗೆ ಹೋಗಿ ತೋಟದ ಕೆಲಸಗಳನ್ನು ಅಭ್ಯಾಸಪೂರ್ವಕವಾಗಿ ಕಲಿಯುವರು ಮೇಲ್ಕಂಡ ಕೆಲಸವನ್ನು ಕಲಿಯುವುದಕ್ಕೆ ಮೂರು ವರುಷಗಳ ಅಭ್ಯಾಸವು ಬೇಕಾಗುವುದಂತೆ

* * *

ನಾಶಿಕ ಪಟ್ಟಣದ ಕಲೆಕ್ಟರಾದ ಮೆ॥ ಜಾಕ್ಸನ್‌ರವರನ್ನು ಅನಾಯಕ ಸಂಘಕ್ಕೆ ಸೇರಿದವನೊಬ್ಬನು ಕೊಂದುಹಾಕಿದನೆಂಬ ದುಃಖಕರವಾದ ಸಂಗತಿಯನ್ನು ಹೋದ ವಾರ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ ಪೊಲೀಸಿನವರು ಈ ಕೊಲೆಗೆ ಸಂಬಂಧಪಟ್ಟ ೨೭ ಮಂದಿಯನ್ನು ಹಿಡಿದಿರುವರು ಈಗಿನ ರಾಜ್ಯಭಾರವನ್ನು ತಪ್ಪಿಸಲಿಕ್ಕೆ ಮಾಡಬೇಕೆಂಬ ಒಂದು ದೊಡ್ಡ ಪಿತೂರಿಯು ನಡೆಯುತ್ತಾ ಇತ್ತೆಂದು ಈವರೆಗೆ ಗೊತ್ತಾಗಿದೆ ಪೊಲೀಸಿನವರು ನಾಶಿಕ ಪಟ್ಟಣದಲ್ಲಿ ಇನ್ನೂ ಮನೆಗಳನ್ನು ಶೋಧಿಸುತ್ತಿರುವರು

* * *

ಮದರಾಸು ಪಟ್ಟಣದಲ್ಲಿ ಹೆಸಗೊಂಡಿರುವ ಕ್ರಿಸ್ಟಿಯನ್ ಕಾಲೇಜಿನ ವರುಷೋತ್ಸವವು ಕಳೆದ ವಾರ ಅತಿ ವಿಜೃಂಭಣೆಯಿಂದ ಜರುಗಿತು ಗುಂಟೂರಿನ ಸರ್ಕ್ಯುಟ್ ಜಡ್ಜಿಗಳಾದ ಮೆ॥ ರಂಗಾಚಾರ್ಯರು ಅಗ್ರಾಸನವನ್ನು ವಹಿಸಿದ್ದರು ಮೇಲ್ಕಂಡ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ, ದೊಡ್ಡ ಉದ್ಯೋಗಗಳಲ್ಲಿರುವ ಹಳೆ ವಿದ್ಯಾರ್ಥಿಗಳಲ್ಲಿ ಅನೇಕರು ಆ ದಿನ ಕೂಟಕ್ಕೆ ಬಂದಿದ್ದರು ಸಂತೋಷಸೂಚಕವಾದ ಅನೇಕ ಉಪನ್ಯಾಸಗಳು ಕೊಡಲ್ಪಟ್ಟವು ಈ ಕಾಲೇಜಿನ ಮುಖ್ಯೋಪಾಧ್ಯಾಯರಾಗಿದ್ದು ವೃದ್ಧಾಪ್ಯದ ದೆಸೆಯಿಂದ ವಿಲಾಯತಿಯಲ್ಲಿರುವ ಡಾಕ್ಟರ್ ಮಿಲ್ಲರ್‌ರವರು ಬುದ್ಧಿವಾದವನ್ನುಳ್ಳ ಒಂದು ಉಪನ್ಯಾಸವನ್ನು ಬರೆದು ಕಳುಹಿಸಿದ್ದರು

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಶಾಖಾ

ತಾ| 1—1—1910 —ಈ ದಿವಸದಲ್ಲಿ ಈ ಸಮಾಜದ ಕಾರ್ಯಗಳೆಲ್ಲವೂ ಬಹು ವಿಜೃಂಭಣೆಯಿಂದ ನಡೆಸಲ್ಪಟ್ಟವು ಮೆಂಬರುಗಳಲ್ಲದೆ ಬಹು ಮಂದಿ ದೊಡ್ಡ ಮನೆತನದ ಸ್ತ್ರೀಗಳೆಲ್ಲರೂ ಸಭೆಯನ್ನಲಂಕರಿಸಿ ಇದ್ದರು ವೀಣೆ, ಹಾರ್ಮೋನಿಯಂ, ಇವುಗಳನ್ನು ಬಹು ಶ್ರಾವ್ಯವಾಗಿ ನುಡಿಸಿದರು ಕೆಲವರು ಅತಿ ಸುಂದರವಾಗಿ ಹಾಡಿದರು ಮೆಂಬರುಗಳಲ್ಲಿ ಅಗ್ರಗಣ್ಯರಾದವರೊಬ್ಬರು "ಪರಿಣಾಮ" ಎಂಬ ವಿಷಯವನ್ನು ಕುರಿತು ಒಂದು ವ್ಯಾಸವನ್ನು ಓದಿದರು ಈ ವ್ಯಾಸವು ವಿಶೇಷ ಬುದ್ಧಿಯುಕ್ತವಾದದ್ದಾಗಿತ್ತು ಆದಿ ಅಂತ್ಯಗಳೆಂಬದೇ ಪರಿಣಾಮ ಅವಸ್ಥೆಯೆಂದು ಹೇಳಲ್ಪಟ್ಟಿತು ಆತ್ಮಪರಿಣಾಮ, ದೇಹಪರಿಣಾಮ ಇವುಗಳು ವಿವರಿಸಲ್ಪಟ್ಟವು ಪರಿಣಾಮವೆಂಬದು ಪ್ರಪಂಚಕ್ಕೆಲ್ಲಕ್ಕೂ ಸಾಮಾನ್ಯವಾಗಿರುತ್ತೆಂದು ಹೇಳಿದರು ಆದಾಗ್ಯೂ ಆತ್ಮಪರಿಣಾಮವೆಂಬದು ಮುಖ್ಯವಾದ್ದರಿಂದ ಅದರ ವಿವರವನ್ನು ಸುಲಭಶೈಲಿಯಿಂದ ಚೆನ್ನಾಗಿ ಹೇಳಿ ವ್ಯಾಸವನ್ನು ಪೂರ್ತಿ ಪಡಿಸಿದರು

ಮಹಾರಾಜಮಾನ್ಯರಾಜಶ್ರೀ ಡೆಪ್ಯುಟಿ ಚೀಫ್ ಇಂಜನೀರ್ ವೈ ಶ್ರೀನಿವಾಸರಾಯರವರ ಧರ್ಮಪತ್ನಿಗಳಾದ ಸೌಭಾಗ್ಯವತಿ, ಕಮಲಾಬಾಯಮ್ಮನವರು, ಈಚೆಗೆ ಶ್ರೀ ಆನಿಬಿಸೆಂಟ್‌ರವರು ಸ್ಥಾಪಿಸಿರತಕ್ಕ "ಭಾರತಪುತ್ರಿಗಳ" ಸಮಾಜದ ಪ್ರಯೋಜನವನ್ನೂ ಮತ್ತು ಭಾರತಪುತ್ರಿಗಳಾಗಿ ತಾವು ಮಾಡಬೇಕಾದ ಕೆಲಸಗಳನ್ನು ಕುರಿತು ಬಹು ವಿಮರ್ಶೆಯಾದ ಕೆಲವಿಷಯಗಳನ್ನು ಪ್ರಸ್ತಾಪಿಸಿದರು ಈ ಸಮೂಹಕ್ಕೆ ಸೇರುವ ಪಕ್ಷಕ್ಕೆ ಹಾಗೆ ಸೇರುವ ಭಾರತಪುತ್ರಿಗಳಿಂದ, ಅವರು ದೃಢಚಿತ್ತರಾಗಿದ್ದ ಪಕ್ಷದಲ್ಲಿ ದೇಶಾಭಿವೃದ್ಧಿ ಉಂಟಾಗಲು ಯಾವ ಸಂದೇಹವೂ ಇಲ್ಲವೆಂದು ಹೇಳಿದರು ಮಂದಿರದ ಉದ್ದೇಶ್ಯಗಳು ಅಂಥಾವುಗಳೇ ಆದರೂ ಒಬ್ಬೊಬ್ಬ ಪುತ್ರಿಯು ಒಂದೊಂದು ವ್ರತವನ್ನು ಹಿಡಿದು ಆ ಕಾರ್ಯವನ್ನು ಧೈರ್ಯೋತ್ಸಾಹಗಳಿಂದ ಬಿಡದೆ ಕೊನೆ ಕಾಣಿಸುವದೇ ಪುತ್ರಿಗಳ ಸ್ವರೂಪವಾಗಿರುವದೆಂದು ನುಡಿದು ಸಾಮಾಜಿಕರೆಲ್ಲರಿಗೂ ಸಂತೋಷವನ್ನುಂಟು ಮಾಡಿದರು ಸುಮಾರು 7 ಗಂಟೆಗೆ ಕೋಲಾಹಲಧ್ವನಿಯಿಂದ ಸಭೆಯು ಪೂರ್ತಿಯಾಯಿತು

ಬರುವ ಜನವರಿ 8 ನೇ ತಾರೀಖು ಶನಿವಾರ ಕ್ರಮವಾಗಿ ನಡೆಸಲ್ಪಡುವದು ಮೆಂಬರುಗಳು ಮತ್ತು ಹಿತೈಷಿಗಳೆಲ್ಲರೂ ಇದರಿಂದ ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿರುತ್ತೆ

ಸೌಭಾಗ್ಯವತಿ ಕಮಲಾಬಾಯಮ್ಮನವರ ಉಪನ್ಯಾಸಕ್ಕೆ ಮುಂಚೆ ರಮಣೀಯವಾದ ಪ್ರಶ್ನೋತ್ತರಗಳ ಪತ್ರ ಒಂದು ಶ್ರೀಮತಿ, ಮಹಲಕ್ಷ್ಮಮ್ಮನವರಿಂದ ಓದಲ್ಪಟ್ಟಿತು ಇದು ಬಹು ಶ್ಲಾಘ್ಯವಾಗಿ ಇತ್ತು

ಎರಡನೇ ವರ್ಯ ವೈಶ್ಯ ಮಹಾ ಸಭೆಯು

ಡಿಸ್ಟ್ರಿಕ್ಟ್ ಕಮಿಷನರ್ ಮೆ|| ಜಂಗೈಯ್ಯ ಶೆಟ್ಟರ ಉಪನ್ಯಾಸ

ಆರ್ಯರೇ ಸಹೋದರರೇ

ಈ ಮಹಾ ಸಭೆಗೆ ತಾವುಗಳು ದಯಮಾಡಿಸಿರುವದು ಬಹಳಾ ಸಂತೋಷವಾಗಿದೆ ಇದು ಮುಂದೆ ಆಗಬಹುದಾದ ಅನೇಕ ಶುಭಕಾರ್ಯಗಳನ್ನು ಸೂಚಿಸುತ್ತದೆ ವಾಣಿಜ್ಯ ಕೆಲಸದಲ್ಲಿ ಪ್ರವರ್ತಿಸಿರತಕ್ಕ ತಾವುಗಳು ತಮ್ಮ ಕೆಲಸವನ್ನು ಬಿಟ್ಟುಬರುವದರಿಂದ ಉಂಟಾಗಬಹುದಾದ ಅನಾನುಕೂಲಗಳನ್ನು ಮನಸ್ಸಿಗೆ ತಾರದೆ ಈ ಮಹಾ ಸಭೆಗೆ ದಯಮಾಡಿಸಿರುವದು ನೋಡಿದರೆ, ಈಗ ಯೋಚಿಸಬೇಕಾದ ವಿಷಯಗಳಲ್ಲಿ ತಮಗೆ ವಿಶೇಷ ಆಸಕ್ತಿ ಇರುವದನ್ನು ವ್ಯಕ್ತಪಡಿಸುತ್ತದೆ ಮೈಸೂರು ಪಟ್ಟಣದಲ್ಲಿ ನಡೆದ ಮೊದಲನೆ ಸಭೆಗೆ ದಯಮಾಡಿದ್ದ ನಮ್ಮಲ್ಲಿ ಅನೇಕರು ಆ ಪುರ ನಿವಾಸಿಗಳು ನಮ್ಮನ್ನು ಸತ್ಕರಿಸಿದ ವಿಷಯವನ್ನು ಮರೆತಿರಲಾರರೆಂಗಿ ನಂಬಿದ್ದೇನೆ ನಮ್ಮೆಲ್ಲರನ್ನು ಪಕರೀತಿಯಾಗಿ ಅವರು ವಿಶೇಷ ಉಪಚರಿಸಿದ್ದು ಸತ್ಕರಿಸಿದ್ದು, ಶ್ಲಾಘ್ಯವಾದದ್ದಲ್ಲದೆ ಅದು ಈಗಲೂ ಎಲ್ಲರಿಗೂ ಚೆನ್ನಾಗಿ ಜ್ಞಾಪಕದಲ್ಲಿಯೇ ಇದೆ ಎನ್ನುವದಕ್ಕೆ ಸಂಶಯವಿಲ್ಲ ಇಂಥಾ ಮಹನೀಯರೇ ಈ ಸಭೆಯ ಅಭ್ಯುದಯಕ್ಕೆ ಕಾರಣರಾಗಿರುತ್ತಾರೆ ಕಳೆದ ಒಂದು ವರುಷದಿಂದಲೂ ಸಂಭವಿಸಿದ ಅನೇಕ ತೊಂದರೆಗಳು, ನಿಷ್ಕಾರಣವಾದ ನಿಂದನೆಗಳು, ಮತ್ತು ಈ ಶ್ಲಾಘ್ಯವಾದ ಕೆಲಸವನ್ನು ನಿಷ್ಫಲ ಮಾಡಬೇಕೆಂಬ ಉದ್ದೇಶ್ಯದಿಂದ ಮಾಡಿದ ಪ್ರಯತ್ನಗಳು ಇವುಗಳ ಮಧ್ಯದಲ್ಲಿ ಈ ಸಭೆಯು ಪೋಷಿತವಾದದ್ದು ಈ ಮಹನೀಯರಿಂದಲ್ಲವೇ

2 ಮುಂದಿನ ಸಭೆಯು ಯಾವ ಸ್ಥಳದಲ್ಲಿ ನಡಿಸಬೇಕೆಂದು ಆಗ್ಗೆ ಪ್ರಶಂಸೆ ಹುಟ್ಟಿ, ಇದೇ ವಿಷಯವನ್ನು ಈ ಸಂಸ್ಥಾನದ ಇತರ ಕಡೆಯವರು ಯೋಚಿಸುತ್ತಿರುವಾಗ್ಗೆ, ಮಹನೀಯರಾದ ರಾಯ ಸೀತಾರಾಮ ಶ್ರೇಷ್ಠಿ ಕೊಮಾರಲ ಗುರಪ್ಪ ಶ್ರೇಷ್ಠಿಯವರು ಮುಂದರಿದು ಬಂದು ತ್ಯಾಮಗೊಂಡ್ಲಿನಲ್ಲಿ ನಡಿಸುವದಾಗಿ ಅತಿ ಸಂಭ್ರಮದಿಂದ ತಮ್ಮ ಅಭಿಪ್ರಾಯವನ್ನು ಸೂಚಿಸಿದರು ನಮ್ಮಲ್ಲಿ ಅವರಿಗಿರುವ ಸಹೋದರ ವಾತ್ಸಲ್ಯಕ್ಕೂ ಈ ಸಭೆಯ ಅಭಿವೃದ್ಧಿಯಲ್ಲಿ ಅವರಿಗಿರುವ ಉತ್ಸಾಹಕ್ಕೂ ಅವರ ಧೈರ್ಯ ಸ್ಥೈರ್ಯ, ಅಸ್ವಾರ್ಥತಾದಿ ಗುಣಕ್ಕೂ ಮತ್ತು ನಮ್ಮ ಮತಸ್ಥರ ಅಭಿವೃದ್ಧಿ ವಿಚಾರದಲ್ಲಿ ಅವರಿಗಿರುವ ಅಸದೃಶವಾದ ಔದಾರ್ಯಕ್ಕೂ ಅವರನ್ನು ಎಷ್ಟು ಕೊಂಡಾಡಿದರೂ ಸಾಲದು ತ್ಯಾಮಗೊಂಡ್ಲಿನ ತ ಹನೀಯರಂತೆ ಇಲ್ಲಿ ಸೇರಿರತಕ್ಕ ಪ್ರತಿಯೊಬ್ಬರಿಗೂ ಅದೇ ರೀತಿಯಾದ ಮನೋಗತವು ಉಂಟಾಗಬೇಕೆಂಬುವದೇ ನನ್ನ ಮನಃಪೂರ್ವಕವಾದ ಕೋರಿಕೆಯಾಗಿದೆ

ಮೊದಲನೆ ಸಭೆಯು ಮುಗಿದ ಕೆಲವು ದಿವಸಗಳ ಮೇಲೆ ಸಂಸ್ಥಾನದಲ್ಲಿ ಮುಖ್ಯ ಪಟ್ಟಣವಾಗಿಯೂ ದೊಡ್ಡ ವ್ಯಾಪಾರ ಸ್ಥಳವಾಗಿಯೂ ಇರುವ ಬೆಂಗಳೂರು ಪುರನಿವಾಸಿಗಳು ಅನೇಕ ಕಾರಣಗಳಿಂದ ತಮ್ಮ ಪಟ್ಟಣದಲ್ಲಿ ಎರಡನೆ ಸಭೆಯು ಸೇರುವದು ಉಚಿತವೆಂದು ಅಭಿಪ್ರಾಯ ಸೂಚಿಸಿದರು ಈ ಅಭಿಪ್ರಾಯ ಕ್ರಮೇಣ ಬಲವೊಂದಿ ಈ ದಿವಸ ನಾವು ನೋಡುವಂತೆ ಇಲ್ಲಿ ಸಭೆ ಸೇರಿರುವದೇ ಅದರ ಫಲವಾಗಿದೆ ಬೆಂಗಳೂರು ಪುರನಿವಾಸಿಗಳಾದ ನಮ್ಮ ಸಹೋದರರು ಈ ರೀತಿಯಾಗಿ ಈ ಸಭೆಯನ್ನು ಇಲ್ಲಿ ನಡಿಸಲು ಅವಶ್ಯಕವಾದ ಏರ್ಪಾಟುಗಳನ್ನು ಮಾಡಲು ಯೋಚಿಸಿರಲಾಗಿ ಈ ಕಾರ್ಯ ನೆರವೇರಿಸುವದಕ್ಕೆ ಸಹಾಯ ಮಾಡಲು ಮುಂದರಿದುಬಂದ ಧಾರಾಳ ಮನಸ್ಸುಳ್ಳ ದೊಡ್ಡ ಮನುಷ್ಯರುಗಳ ಸಂಗಡ ಈ ವಿಷಯವನ್ನು ಮಾತನಾಡಿ ಕಾರ್ಯ ಪ್ರಾರಂಭಿಸುವ ಭಾರವನ್ನು ಯಾರೂ ವಹಿಸಲು ಇಷ್ಟವುಳ್ಳವರಾಗಿರಲಿಲ್ಲ ಜನಗಳು ಯಥೇಚ್ಛವಾಗಿ ಮಾತನಾಡಬಹುದು ಅವರ ಸ್ವಪ್ರಯೋಜನಕ್ಕಲ್ಲದೆ ಇತರರ ಕ್ಷೇಮ ಚಿಂತನೆಗೋಸ್ಕರ ದ್ರವ್ಯವೆಚ್ಚ ಮಾಡಿ ಪ್ರಯತ್ನಪಡಬೇಕಾದ ಸಂದರ್ಭಗಳಲ್ಲಿ ಅಲ್ಲವೇ ಇಂಥಾ ಅಡಚಣೆಗಳು ಬಂದೊದಗುವವು ನಾನು ಅವರಿಗೆ ಲೇಖನ ಮೂಲಕ ತಿಳಿಸಿದಾಗ ತಮ್ಮ ಪಟ್ಟಣದಲ್ಲಿ ತಮ್ಮ ಖರ್ಚಿನಿಂದಲೇ ಈ ಸಭೆಯ ಸಮ್ಮಂಧದ ಮಹತ್ಕಾರ್ಯ ನಡಿಸಲು ಎಷ್ಟು ಕುತೂಹಲವುಳ್ಳವರಾಗಿದ್ದರೋ ಅಷ್ಟು ಕುತೂಹಲದಿಂದ ಇದನ್ನು ನಿರ್ವಹಿಸುವದಾಗಿ ಬಹಳ ಹರ್ಷದಿಂದ ಶೀಘ್ರದಲ್ಲಿಯೇ ಒಪ್ಪಿಗೆಯನ್ನು ಕೊಟ್ಟರು

3 ಕಳೆದ ವರುಷ ನಾನು ಸೂಚಿಸಿದಂತೆ ಯಾವದಾದರು ಒಂದು ಮಹತ್ಕಾರ್ಯವನ್ನು ನೆರವೇರಿಸಲು ಉದ್ಯುಕ್ತಪಟ್ಟರೆ ಅದು ಕೊನೆಗಾಣುವದೋ ಇಲ್ಲವೋ ಎಂಬ ಅನುಮಾನ ಬರುವದು ವಾಡಿಕೆಯಾಗಿದೆ ಪರಸ್ಪರ ಸಹಾಯ ಮಾಡಲು ಇಷ್ಟವುಳ್ಳವರಾಗಿದ್ದರೂ, ಖರ್ಚಿಗೆ ಬೇಕಾದ ದ್ರವ್ಯವನ್ನು ಒದಗಿಸಲು ಇಷ್ಟವುಳ್ಳವರಾಗಿದ್ದರೂ, ದೀರ್ಘಕಾಲದಿಂದ ನೆರವೇರಿಸಬೇಕೆಂದು ಮನಸ್ಸಿನಲ್ಲಿ ರತಕ್ಕ ತಮ್ಮ ಒಳ್ಳೇ ಉದ್ದೇಶ್ಯಗಳನ್ನು ಸಾಫಲ್ಯಕ್ಕೆ ತರಲು ಧೈರ್ಯವನ್ನು ತಾಳಿ ಮುಂದರಿದು ಬರಲು ಹಿಂತೆಗೆಯುವರು ಜನಗಳಲ್ಲಿ ತಮಗಿರುವ ಗೌರವಕ್ಕೆ ಹಾನಿಯುಂಟಾಗುವದೆಂಬ ಮತ್ತು ಇತರ ಮತಸ್ಥರು ತಮ್ಮನ್ನು ನಗುಪಾಟಲು ಮಾಡುತ್ತಾರೆಂಬ ಹೆದರಿಕೆಯು ಬಹಳ ದಿವಸದಿಂದ ಬಾಧಿಸುವದರಿಂದ ಮಾಡಬೇಕಾದ ಕಾರ್ಯವನ್ನು ನಿರ್ಣಯಿಸಿ ಅದನ್ನು ನೆರವೇರಿಸುವದಕ್ಕೆ ನಿಷ್ಕರ್ಷೆಯಾದ ಏರ್ಪಾಟು ಮಾಡಲು ಅಡ್ಡಿಯಾಗಿತ್ತು ಈ ಮೇರಿಗೆ ಬಹಳ ದಿವಸದ ವರಿಗೂ ಚಂಚಲರಾಗಿದ್ದು ಈಗ ದೈವಕೃಪೆಯಿಂದ ಅವರು ಮನೋಧಾರಢ್ಯವನ್ನು ವಹಿಸಿ ತಮ್ಮ ಶಕ್ತಿ ಸಾಹಸದಿಂದ ಈ ಸಭೆಯು ಎಲ್ಲಾ ಭಾಗದಲ್ಲೂ ಸಂಪೂರ್ಣ ಸಫಲವಾಗುವಂತೆ ಮಾಡಿರುತ್ತಾರೆ ನಾವು ಈಗ ಅವರ ವಿಶ್ವಾಸಪೂರ್ವಕವಾದ ಆತಿಥ ಸತ್ಕಾರವನ್ನು ಹೊಂದುತ್ತಿರುವದರಿಂದ ಈ ಭಾಗದಲ್ಲಿ ಹೆಚ್ಚಿಗೆ ಹೇಳುವದು ಅನಾವಶ್ಯಕ ಈ ಕಾರ್ಯಸಾಧನೆಯನ್ನು ಎಲ್ಲರೂ ಸೇರಿ ನಿರ್ವಹಿಸಿರುವಲ್ಲಿ ಕೆಲವರ ಹೆಸರು ಮಾತ್ರ ಹೇಳುವದು ಅನುಚಿತ

5 ಮೊದಲು ಸಭೆ ನಡೆದ ಒಂದುವರೆ ವರುಷದಾರಭ್ಯ ಈ ಸಭೆಯ ಅಭಿವೃದ್ಧಿ ವಿಷಯದಲ್ಲಿ ಎಷ್ಟರ ಮಟ್ಟಿಗೆ ವ್ಯವಸಾಯ ನಡೆದಿರುತ್ತೆಂಬುವದನ್ನು ಸಂಕ್ಷೇಪವಾಗಿ ಯೋಚಿಸೋಣ ಈ ಶ್ಲಾಘ್ಯವಾದ ಕಾರ್ಯವನ್ನು ಪ್ರೋತ್ಸಾಹಪಡಿಸಲು ಏನೂ ಮಾಡದೆ ಇರುವದು ನೋಡಿ ವಿಷಾದಿಸಬೇಕಾಗಿರುತ್ತೆ ಇದಕ್ಕೆ ಅನೇಕ ಕಾರಣಗಳುಂಟು ಈ ಪೈಕಿ ಮುಖ್ಯವಾದದ್ದಾವವೆಂದರೆ—ಕಳೆದ ವರುಷ ಸಂಸ್ಥಾನಾಮಳೆ ಪ್ರಾಪ್ತವಾದ ಎಲ್ಲರ ಮನಸ್ಸಿನಲ್ಲೂ ಖೇದವನ್ನುಂಟು ಮಾಡಿದ ಮತ್ತು ನಾಶಾರವನ್ನು ಅಲ್ಲೋಲಕಲ್ಲೋಲ ಮಾಡಿದ ಕ್ಷಾಮವೇ ಕಾರಣವಾಗಿದೆ ಆದರೆ ಈ ದೈವಿಕವಾದ ತೊಂದರೆಯು ಸಂಭವಿಸದೇ ಇದ್ದಲ್ಲಿ ಕೊಂಚ ಮಟ್ಟಿಗೆ ಅನುಕೂಲವಾಗುತ್ತಿತ್ತು ತರುವಾಯ ವಸೂಲಾದ ಚಂದಾ ಹಣವನ್ನು ಎಲ್ಲಿ, ಯಾರ ಹೆಸರಿನಲ್ಲಿ ಇಡಬೇಕೆಂಬ ಪ್ರಶ್ನೆ ಹುಟ್ಟಿ ಅದನ್ನು ನಿರ್ಧರಿಸಬೇಕಾಯಿತು ಈ ಉದ್ದೇಶ್ಯದಿಂದ ಇತರ ಧರ್ಮ ಸ್ಥಾಪನೆಗಳಿಗೆ ಅನುಕೂಲಪಡಿಸಿ ಕೊಟ್ಟಿರುವಂತೆ ನಮ್ಮ ಮೊಬಲಗನ್ನು ತೆಗೆದುಕೊಂಡು ಏಕರದರಂತೆ ಬಡ್ಡಿ ಕೊಡಬೇಕಾಗಿ ಸರ್ಕಾರದವರಿಗೆ ಮನವಿ ಮಾಡಿಕೊಂಡೆವು ಇದಕ್ಕೆ ಕಂಪೆನಿ ಆಕ್ಟು ಪ್ರಕಾರ ನಮ್ಮ ಸಂಘವನ್ನು ರಿಜಿಸ್ಟರು ಮಾಡಿಸಬೇಕೆಂದು ತಿಳಿಸಿದರು ಹಾಗೆ ಮಾಡಬೇಕಾದರೆ, ನಾವು ಕ್ರಮವಾಗಿ ನಿಬಂಧನೆಗಳನ್ನು ಏರ್ಪಡಿಸಬೇಕು ಈ ವಿಷಯ ಈ ಸಭೆಯಲ್ಲಿ ಯೋಚಿಸತಕ್ಕ ಅಂಶವಾಗಿದೆ ಈ ಕಾರಣದಿಂದಲೇ ಮೊದಲನೆ ಸಭೆಯಲ್ಲಿ ಕೆಲವು ದೊಡ್ಡ ಮನುಷ್ಯರು ಧಾರಾಳವಾಗಿ ವಾಗ್ದಾನ ಮಾಡಿದ ಚಂದಾ ಮೊಬಲಗನ್ನು ವಸೂಲ್ಮಾಡಲು ಪ್ರಯತ್ನ ಪಡದೆ ಇರಬೇಕಾಯಿತು ಈ ಸಂಘದ ಕಾರ್ಯ ಸಿದ್ಧಿಗೆ ಇವೇ ಮೊದಲಾದ ಕಾರಣಗಳು ಪ್ರತಿಬಂಧಕವಾದಾಗ್ಯೂ, ಮೈಸೂರಲ್ಲಿ ನಡೆದ ಸಭೆಯಿಂದ ವಾಪಸು ಹೋದ ನಂತರ ನಮ್ಮಲ್ಲಿ ಅನೇಕರಿಗೆ ಎಲ್ಲಾ ಆಸಕ್ತಿಯು ಕಡಮೆಯಾದ್ದಕ್ಕೆ ತುಂಬಾ ವಿಷಾದಿಸಬೇಕಾಗಿದೆ ಆ ಸಭೆಯಲ್ಲಿ ನಿರ್ಧರಿಸಿದ ಅಂಶಗಳು ಪೂರ್ತಿಯಾಗಿ ಮರೆತಂತೆ ತೋರುತ್ತದೆ ಸ್ವವಿಷಯವಲ್ಲದ ಇತರ ವಿಚಾರದಲ್ಲಿ ಸರ್ವಸಾಧಾರಣವಾಗಿ ಯಾವ ರೀತಿ ಉದಾಸೀನರಾಗುವರೋ, ಅದೇ ರೀತಿ ಈ ವಿಷಯದಲ್ಲಿಯೂ ಸಹ ಉದಾಸೀನವನ್ನು ವಹಿಸಿರುವಂತೆ ತೋರುತ್ತೆ ಇಷ್ಟು ಖಂಡಿತವಾಗಿ ಹೇಳಲು ಕಾರಣವೇನೆಂದರೆ ಅನೇಕ ಕಡೆಗಳಲ್ಲಿ ಉಪ ಸಂಘಗಳನ್ನು ಏರ್ಪಡಿಸಲಿಲ್ಲ ಶುಭ ಕಾರ್ಯಗಳಲ್ಲಿ ವಸೂಲ್ಮಾಡಬೇಕೆಂದು ಕ್ಲುಪ್ತವಾದ ವರ್ತನವನ್ನು ಪದೆ ಪದೆ ತಗಾದೆ ಮಾಡಿದಾಗ್ಯೂ ವಸೂಲ್ಮಾಡಿ ಹೆಡ್ ಆಫೀಸಿಗೆ ಕಳುಹಿಸಲಿಲ್ಲ ಇಂಥಾ ಉದಾಸೀನಕ್ಕೆ ಏನು ಕಾರಣವೆಂಬುವದು ತಿಳಿಯಲು ಅಪೇಕ್ಷಿಸುತ್ತೇನೆ ಈ ರೀತಿ ಮಾಡೋಣದರಿಂದ ನಾವು ಇತರ ಜನಾಂಗದವರ ತಿರಸ್ಕಾರಕ್ಕೂ ಪರಿಹಾಸ್ಯಕ್ಕೂ ಪಾತ್ರರಾಗುವದಲ್ಲದೆ, ನಮ್ಮ ಗೌರವವನ್ನೂ ಸಹಾ ಮೂಲೋತ್ಪಾಟನೆ ಮಾಡಿಕೊಳ್ಳಲು ನಾವೇ ಸಾಧನೆಗಳನ್ನು ಕಲ್ಪಿಸಿಕೊಂಡಂತೆ ಆಗಿ ಕೊನೆಗೆ ನಾವೇ ವ್ಯಥೆಪಡತಕ್ಕವರು ಮತ್ತು ನಮ್ಮ ಸ್ವಪ್ರಯೋಜನಕ್ಕೇ ಸಂಕಟ ಉಂಟಾಗುವದು ಹ್ಯಾಗೆಂದರೆ ಒಬ್ಬ ಅನುಕೂಲಸ್ಥನಿಗೆ ವಿವಾಹಕ್ಕಾಗತಕ್ಕ ಹೆಣ್ಣು ಮಕ್ಕಳು ಇದ್ದಾರೆಂದು ಭಾವಿಸೋಣ ಆತನು ಅನುಕೂಲಸ್ಥರಾದ ಸದ್ಗುಣ ಸಂಪನ್ನರಾದ ಸತ್ಕುಲ ಪ್ರಸೂತರಾದವರ ಮನೆತನಗಳಲ್ಲಿ ಸುಶೀಲರಾದ ಮತ್ತು ವಿದ್ಯಾವಂತರಾದ ವರಗಳನ್ನು ಹುಡುಕುವದು ಸ್ವಾಭಾವಿಕವಾಗಿರುತ್ತೆ ಅನುಕೂಲವಾದ ವರನು ದೊರಕಿ ನಮ್ಮ ಮನೋಭಿಷ್ಟಗಳು ಕೈಗೂಡಲು ಎಷ್ಟು ಕಷ್ಟವಿರುತ್ತೆಂಬ ವಿಷಯ ಇಲ್ಲಿ ಸೇರಿರತಕ್ಕ ಎಲ್ಲರಿಗೂ ಅನುಭವಸಿದ್ಧನಾಗಿಯೇ ಇರುತ್ತೆ ಇದರಿಂದಲ್ಲವೋ ಎಷ್ಟೋ ಜನ ತಮಗೆ ಹೆಣ್ಣು ಮಕ್ಕಳು ಬೇಡವೆಂದು ಹೇಳುತ್ತಾರೆ ಇದಕ್ಕೆ ಕಾರಣವೇನು ಸ್ವಲ್ಪ ಯೋಚಿಸೋಣ ನಾವು ನಮ್ಮ ಜನಗಳ ಅಭ್ಯುದಯಕ್ಕೆ ಸಹಕಾರಿಯಾಗುವಂತೆ ನಮ್ಮ ಕರ್ತವ್ಯಗಳನ್ನು ನಡಿಸಲಿಲ್ಲವೆಂಬುವದು ಸ್ಪಷ್ಟಪಡುತ್ತೆ ನಮ್ಮ ಜನಾಂಗದವರು ಉನ್ನತ ಸ್ಥಿತಿಗೆ ಬಂದರೇನೇ ವರನ ಚುನಾವಣೆಗೆ ಹೆಚ್ಚಿಗೆ ಅವಕಾಶವುಂಟಾಗಿ ನಮ್ಮ ಮನೋಭಿಷ್ಟ ಪರಿಪೂರ್ಣವಾಗುವ ಸಂಭವ ಒದಗುತ್ತೆ ಈ ಮೇರಿಗೆ ನಮ್ಮ ಪ್ರಯೋಜನವು ಇತರರ ಪ್ರಯೋಜನದಿಂದೊಡಗೂಡಿರುವದು ವ್ಯಕ್ತಪಡುತ್ತೆ

6 ನಾವು ಯಾವದಾದರೂ ಕಾರ್ಯಸಿದ್ಧಿಗೆ ಮನಸ್ಸು ಮಾಡಿದರೆ, ಯಾವ ಕಷ್ಟ ಬಂದಾಗ್ಯೂ ನಿರ್ವಹಿಸಿ ಅನುಕೂಲ ಪ್ರತಿಕೂಲಗಳಲ್ಲಿ ಏಕರೀತಿಯಾಗಿ ನಮ್ಮ ಮನೋಭಿಷ್ಟಗಳನ್ನು ನೆರವೇರಿಸಿಕೊಳ್ಳತಕ್ಕವರೆಂದು ನಮ್ಮ ಜನಗಳಿಗೆ ಪ್ರತೀತಿಯುಂಟಾಗಿದೆ ಹೀಗಿರುವಲ್ಲಿ ನಮ್ಮಲ್ಲಿ ಅನೇಕರು ಯಾತಕ್ಕೆ ಈ ರೀತಿಯಾಗಿ ಉದಾಸೀನವನ್ನು ವಹಿಸಿದರೆಂಬುವದು ನನಗೆ ಆಶ್ಚರ್ಯವಾಗಿದೆ ಮೇಲೆ ಹೇಳಿದಂತೆ ಶುಭ ಕಾರ್ಯಗಳಲ್ಲಿ ವಸೂಲ್ಮಾಡಬೇಕೆಂದು ಕ್ಲುಪ್ತವಾದ ಸ್ವಲ್ಪ ಸ್ವಲ್ಪ ವರಮಾನವು ಒಟ್ಟಾಗಿ ಸೇರಿ ಭಾರಿ ಮೊಬಲಗು ಆಗಿ, ನಮ್ಮ ಅನೂಚಾನವಾದ ಪದ್ಧತಿ, ಸ್ವತಂತ್ರ ಮತ್ತು ವೇದೋಕ್ತವಾಗಿ ಮಾಡಬೇಕಾದ ಕರ್ಮಾಚರಣೆಗೆ ನಮಗಿರತಕ್ಕ ಹಕ್ಕು ಈ ವಿಷಯಗಳಲ್ಲಿ ಇತರರು ಮಾಡಿದ ದೂಷಣೆಗಳನ್ನು ಖಂಡನೆ ಮಾಡುವದಕ್ಕೆ ಎಷ್ಟೋ ಸಹಕಾರಿಯಾಗುತ್ತಿತ್ತು ಮಹನೀಯರೇ, ನೀವು ಉದಾಸೀನವನ್ನು ಬಿಟ್ಟು ನಮ್ಮ ಜನಗಳ ಅಭಿವೃದ್ಧಿಯನ್ನೇ ಪರಮ ಮುಖ್ಯವಾದ ಧರ್ಮಕಾರ್ಯವೆಂದೆಣಿಸಿ ಎಂದಿಗೂ ಚ್ಯುತಿ ಬಾರದಂತೆ ಭದ್ರವಾದ ಅಸ್ತಿಭಾರವನ್ನು ಹಾಕಬೇಕಾಗಿ ಮತ್ತೊಂದಾವರ್ತಿ ಪ್ರಾರ್ಥಿಸುತ್ತೇನೆ ಕಳೆದ ವರುಷ ನಾನು ಅಗ್ರಾಸನಾಧಿಪತ್ಯವನ್ನು ವಹಿಸಿ ಮಾಡಿದ ಉಪನ್ಯಾಸದಲ್ಲಿ ಪಾರಶೀಕರು, ಜಪಾನ್ ದೇಶದವರು ಕೆಲವು ಕಾಲದಲ್ಲಿಯೇ ಹ್ಯಾಗೆ ಮುಂದಕ್ಕೆ ಬಂದರೆಂಬುವದನ್ನು ತಿಳಿಸಿರುತ್ತೇನಷ್ಟೆ ಅವರುಗಳ ಘನವಾದ ಅಭಿಮತವು, ಸ್ವದೇಶಾಭಿಮಾನವು, ಅದ್ಭುತವಾದ ಕಾರ್ಯಸಿದ್ಧಿಯನ್ನು ಹೊಂದಲು ಅನುಕೂಲವಾಯಿತೆಂಬ ವಿಷಯವನ್ನು ಪುನಃ ತಮ್ಮಗಳ ಅವಗಾಹನೆಗೆ ತರುತ್ತೇನೆ ಅವರ ದೃಷ್ಟಾಂತವನ್ನೇ ಜ್ಞಾಪಕದಲ್ಲಿಟ್ಟುಕೊಂಡರೆ, ನಾವು ಮಾರ್ಗತಪ್ಪಿ ಹೋಗಲು ಕಾರಣವಿಲ್ಲ ನಮ್ಮ ಮನಸ್ಸಿನಲ್ಲಿ ಮಾಡತಕ್ಕ ತೀರ್ಮಾನಗಳನ್ನು ನಾವು ಆ ಕೂಡಲೆ ಜಾರಿಗೆ ತಾರದೆ ಹೋದಲ್ಲಿ, ನಮ್ಮ ನರಸಮುದಾಯಗಳು ಕಾರ್ಯವಿಹೀನತೆಯನ್ನು ಹೊಂದಿ, ಮನಶಕ್ತಿಯನ್ನು ದುರ್ಬಲಪಡಿಸುವದೆಂದು ಶಾಸ್ತ್ರಜ್ಞರು ಹೇಳಿರುವರು

7 ನಾವು ಸತ್ಕಾರ್ಯದಲ್ಲಿ ದೃಢಪ್ರಯತ್ನವನ್ನು ಮಾಡಿದುದೆ ಆದರೆ, ಅನೇಕ ಬಾಧಕಗಳು ಬಂದಾಗ್ಯೂ ಜಯವನ್ನು ಹೊಂದುವದರಲ್ಲಿ ಸಂದೇಹವಿಲ್ಲವೆಂಬ ವಿಷಯದಲ್ಲಿ ನಿದರ್ಶನಕ್ಕೆ ವಿಶೇಷ ಶ್ರಮಪಡಬೇಕಾದದ್ದಿಲ್ಲ ಈಗ ನಮ್ಮ ಸಂಸ್ಥಾನವನ್ನು ಆಳತಕ್ಕ ರಾಜವಂಶಕ್ಕೆ ಮೈಸೂರು ರಾಜ್ಯಭಾರವನ್ನು ಪುನಃ ದೊರಕುವಂತೆ ಮಾಡಿದ ಮಹಾರಾಣಿ ಲಕ್ಷ್ಮಜಮ್ಮಣ್ಣಿಯವರ ಕೀರ್ತಿ ಪ್ರಭಾವವುಳ್ಳ ಚರಿತ್ರೆಯನ್ನು ನೀವುಗಳು ಓದಿದ್ದೀರೊ ಇಲ್ಲವೊ ನಾನರಿಯೆ ಮೈಸೂರು ದೇಶವು ಹೈದರನಿಂದ ಆಕ್ರಮಿಸಲ್ಪಟ್ಟು ಪುನಹ ನ್ಯಾಯವಾದ ಹಿಂದು ಸಂತತಿಗೆ ಬರುವವರಿಗ ಮೈಸೂರು ಸೀಮೆಯ ಚರಿತ್ರೆಯನ್ನು ಓದಲು ಅವಕಾಶವುಂಟಾದ ಪ್ರತಿ ಒಬ್ಬರಿಂದಲೂ ಲಕ್ಷ್ಮಜಮ್ಮಣ್ಣಿಯವರ ಧೈರ್ಯ ಸ್ಥೈರ್ಯಾದಿ ಗುಣಗಳು ಮತ್ತು ಮರ್ಯಾದೆಯೂ ಶ್ಲಾಘನೆ ಮಾಡಿಸಿಕೊಳ್ಳಲು ಅರ್ಹವಾಗಿವೆ ಮೈಸೂರು ದೇಶದ ರಾಜವಂಶಕ್ಕೆ ಅವರು ಅಧಿದೇವತೆಯೋಪಾದಿಯಲ್ಲಿ ಇದ್ದರೆಂದು ಭಾವಿಸಬೇಕು ಆ ಮಹಾರಾಣಿಯವರ ಅಸಾಧಾರಣವಾದ ಬುದ್ಧಿ ಚಮತ್ಕಾರಗಳು, ಅವರ ದೃಢವಾದ ಮನಸ್ಸು ಮತ್ತು ಉದ್ದಿಶ್ಯ ಏಕಾಗ್ರಚಿತ್ತತೆ ಮತ್ತು ಹಿಡಿದ ಮಹಾಕಾರ್ಯದಲ್ಲಿ ಒಂದೆ ಕಷ್ಟಗಳನ್ನು ಲಕ್ಷ್ಯ ತಾರದೆ ಇರತಕ್ಕ ದೃಢವಾದ ಪ್ರಯತ್ನಗಳನ್ನು ವಹಿಸಿದರು ಪ್ರತಿ ಕ್ಷಣದಲ್ಲಿಯೂ ಕೊಲೆಪಾತಕರಿಂದ ಪ್ರಾಣಭಯವು ಅಥವ ಖಾವಜ [illegible] ಸೆರೆಯಲ್ಲಿ ಹಾಕಿ ನಾನಾ ಬಗೆಯಲ್ಲಿ ಹಿಂಸೆಪಡತಕ್ಕ ಭಯವು ಇತ್ತು ಇಂಥಾ ದುರ್ದೆಶೆಯಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿ ತಮ್ಮ ದೇಶಕ್ಕೆ ಅಪೋಘವಾದ [illegible] ಮಾಡಿ ಪ್ರಖ್ಯಾತಿಯನ್ನು ಹೊಂದಿದವರೂ [illegible] ಸಂದರ್ಭವಿದ್ದಾಗ್ಯೂ ಆ ಮಹಾರಾಣಿಯವರು ಸ್ಥಿರವಾಗಿ [illegible] ತಮ್ಮ ಮನೋರಥವು ಕೈಗೂಡಿದ್ದನ್ನು ನೋಡಿದರು

8 ಅಪಹರಿಸಲ್ಪಟ್ಟ ದೇಶವನ್ನು ಘನವಾದ ಮತ್ತು [illegible] ಬ್ರಿಟಿಷ್ ಸರ್ಕಾರದವರು ಪುನಃ ನ್ಯಾಯವಾದ ಹಕ್ಕುದಾರರಿಗೆ ಕೊಡಿಸುವದಕ್ಕೆ ಮುಖ್ಯ ಕಾರಣಭೂತರಾರೆಂಬುವದನ್ನು ನೀವು ಬಲ್ಲಿರಾ? ಅವರು ಮೇಲೆ ಹೇಳಿದ ಮಹಾರಾಣಿಯವರೇ

9 ದೌರವು ಇಂಥಾ ಶಂಸಾಯಮಾನವಾದ ಸ್ಥಿತಿಯಲ್ಲಿರುವಲ್ಲಿ ಆ ಮಹಾರಾಣಿಯವರು ನ್ಯಾಯದ ಆಳಿಕೆಯನ್ನು ಕೊನೆಗೊಳಿಸತಕ್ಕ ಬ್ರಿಟಿಷ್‌ನವರ ಜೊತೆಯಲ್ಲಿ ಸಂಧಿ ನಡಿಸುತ್ತಿದ್ದರು ಈ ಕಾಲದಲ್ಲಿ ಅವರ ಮನಸ್ಸು [illegible] ಸ್ಥಿತಿಯಲ್ಲಿತ್ತೆಂಬ ವಿಷಯ [illegible] ಎಷ್ಟು [illegible] ದನ್ನೂ ವಿವರಿಸುವದಕ್ಕಿಂತಲೂ ಊಹಿಸುವದು ಸುಲಭ ಪ್ರಖ್ಯಾತರಾದ ಪುರುಷರಾಗಲಿ ಸ್ತ್ರೀಯರಾಗಲಿ ಮನೋಧೈರ್ಯಕ್ಕೆ ಸಹಕಾರಿಯಾಗುವರೇ ಹೊರತು, ತಮ್ಮ ಸ್ವಪ್ರಯೋಜನಕ್ಕೆ ಎಂದಿಗೂ ಗಮನಕೊಡರೆಂದು ಹಿಂದಿನ ಚರಿತ್ರೆಯಿಂದ ತಿಳಿಯಬರುತ್ತೆ ಅವಶ್ಯ ಉಂಡರೆ ಇನ್ನೂ ಅನೇಕ ಸಾಮ್ಯಗಳನ್ನು ಕೊಡಬಹುದು ಇತರರು ಅಭಿವೃದ್ಧಿ ಸ್ಥಿತಿಯಲ್ಲಿರುವದನ್ನು ನೋಡಿದರೆ ನೈಜವಾದ ಸಂತೋಷವುಂಟಾಗುವದು ದೇಶವನ್ನು ಆಕ್ರಮಿಸಿದ ಹೈದರಾಲಿಯಿಂದ ಕಿತ್ತು ನ್ಯಾಯವಾದ ಹಕ್ಕುದಾರರಿಗೆ ಕೊಡಿಸಬೇಕೆಂಬುವದೇ ಆ ಮಹಾರಾಣಿಯವರ ಅತಿಶಯವಾದ ಮನೋಭಿಪ್ರಾಯವಾಗಿತ್ತು ಈ ರೀತಿಯಾಗಿ ಅವರು ತಮ್ಮ ಸ್ವಪ್ರಯೋಜನವ ಈ ಮಹತ್ಕಾರ್ಯಕ್ಕೆ ಅಧೀನನ್ನಾಗಿ ಮಾಡಿದರು

10 ಇಂಥಾ ಸಾಹಸವಾದ ಕೆಲಸವನ್ನು ನಾವೇನಾದರೂ ಮಾಡಬೇಕಾಗಿ ಧೇಯೇ ಇಲ್ಲ ಅಂಥಾದ್ದೇನೂ ಇಲ್ಲ ನಮ್ಮ ಜನಗಳ ಪ್ರಯೋಜನಕ್ಕಾಗಿ ನಮ್ಮ ಸ್ವಪ್ರಯೋಜನವನ್ನು ಸ್ವಲ್ಪ ಮಾತ್ರ ಬಿಡಬೇಕಾಗಿರುತ್ತೆ ಇದು ಬಹಳ ಕಷ್ಟದ ಕೆಲಸವೇ "ಮನಸಿದ್ದಲ್ಲಿ ಮಾರ್ಗ" ಎಂಬ ವಚನವು ಎಲ್ಲರಿಗೂ ಗೊತ್ತಾದದ್ದಾಗಿದೆ ಹೀನಸ್ಥಿತಿಗೆ ಬಂದಿರತಕ್ಕ ನಮ್ಮ ಜನಗಳ ಶ್ರೇಯೋಭಿವೃದ್ಧಿಗಾಗಿ ನಾವೆಲ್ಲರೂ ಸೇರಿ ತೀರ್ಮಾನಿಸುವ ಕಾರ್ಯ ನೆರವೇರುವದಕ್ಕಾಗಿ ನಾವೆಲ್ಲರೂ ದ್ರವ್ಯಸಹಾಯ ಮಾಡಬೇಕು ಈ ಕೆಲಸವು ಸಾರೋದ್ಧಾರವಾಗಿ ನಡಿಯುವದಕ್ಕೆ ದ್ರವ್ಯಾರ್ಜನೆಯನ್ನು ನೂರು ವಿಧದಲ್ಲಿ ಮಾಡಬಹುದು ಈಗ ನಾವುಗಳು ಚರ್ಚಿಸತಕ್ಕ ವಿಷಯಗಳಿಂದ ಯಾವುದಕ್ಕೋಸ್ಕರ ದ್ರವ್ಯಾರ್ಜನೆಯಾಗಬೇಕೆಂಬ ಉದ್ದೇಶ್ಯ ವ್ಯಕ್ತಪಡುತ್ತೆ ಕೆಲವು ಸಂದರ್ಭಗಳಲ್ಲಿ ಅಲ್ಪಸ್ವಲ್ಪ ಕಾಣಿಕೆಗಳನ್ನು ವಸೂಲ್ಮಾಡಬೇಕಲ್ಲದೆ ಅನುಕೂಲಸ್ಥರಿಂದ ದೊಡ್ಡ ದೊಡ್ಡ ದ್ರವ್ಯ ಸಹಾಯ ಪಡೆಯಬೇಕೆಂದು ಕಳೆದ ವರುಷ ತೀರ್ಮಾನಿಸಲಾಯಿತು

11 ಈಗ ಇನ್ನೊಂದು ವಿಷಯವನ್ನು ತಮ್ಮಗಳ ಆಲೋಚನೆಗೆ ತರತಕ್ಕದ್ದಿದೆ ಈ ಕೆಳಗೆ ಉದಹರಿಸಿರುವಂತೆ ಪ್ರತಿ ಸಂಸಾರದವರು ಚಂದಾ ಮೊಬಲಗನ್ನು ಕೊಡಬೇಕೆಂದು ಕೇಳಿಕೊಳ್ಳಬೇಕು ಪ್ರತಿ ಸಂಸಾರದ ವರಮಾನ ಮೇಲೆ 1—0—0 0—12—0, 0—8—0, 0—4—0 ಈ ರೀತಿ ದರ ನಿಷ್ಕರ್ಷಿಸಬೇಕು ಈ ಚಂದಾ ಮೊಬಲಗನ್ನು ಉಗಾದಿ ಹಬ್ಬದ ದಿವಸ ಪ್ರತಿ ಸ್ಥಳದ ಯಜಮಾನರು ವಸೂಲ್ಮಾಡಿ ಕ್ರಮೇಣ ಕಳುಹಿಸಬೇಕು ಈ ರೀತಿ ದರ್ಜೆವಾರಾಗಿ ಚಂದಾದಾರರಾಗು ಮಾಡುವದರಿಂದಲೂ ವರುಷಕ್ಕೆ ಒಂದಾವರ್ತಿ ಕೊಡಬೇಕಾದ್ದರಿಂದಲೂ ಯಾರೊಬ್ಬರಿಗೂ ಕಷ್ಟವಾಗಿ ತೋರಲಾರದು

12 ನಮ್ಮ ಜನರಲ್ಲಿ ಸ್ಥಳ ಪದ್ಧತಿ ಮೀರಿ ಗೊತ್ತಾದ ದ್ರವ್ಯವನ್ನು ಕೊಡದೆಹೋದ ಸಂದರ್ಭದಲ್ಲಿ ಮಾತಕಟ್ಟೆ ನಿರ್ಬಂಧಗಳನ್ನು ಜಾರಿಯಲ್ಲಿ ತರುವದುಂಟಷ್ಟೆ - ಈ ನಿರ್ಬಂಧನೆಗಳನ್ನು ಈ ಮೊಬಲಗು ವಸೂಲಿ ವಿಷಯದಲ್ಲೂ ಜಾರಿಯಲ್ಲಿ ತರಬೇಕೆಂತ ಕೇಳಿಕೊಳ್ಳುತ್ತೇನೆ ಹಾಗಿಲ್ಲವಾದರೆ ಇಲ್ಲಿ ವಿಷಯಗಳನ್ನು ತೀರ್ಮಾನಿಸುವದೇ ಪ್ರಯೋಜನವಿಲ್ಲ ಪ್ರತಿಯೊಂದು ಕಾರ್ಯವು ತನ್ನಷ್ಟಕ್ಕೆ ತಾನೆ ನಿರಾತಂಕವಾಗಿ ನಡಿಯಬೇಕು ಈ ಮೊಬಲಗು ವಸೂಲ್ಮಾಡುವ ವಿಷಯವು ಒಂದು ಕಟ್ಟಳೆಯಂತೇ ಭಾವಿಸಬೇಕು ಮನುಷ್ಯನು ಸಂಘ ಬಿಟ್ಟರದೆ ಇರತಕ್ಕ ಸ್ವಭಾವವುಳ್ಳವನಾಗಿರುತ್ತಾನೆ ಮತ್ತು ಹಿಂದೂಗಳಾದ

ನಾವುಗಳು ಸರ್ವಪೂರ್ವ ಆತ್ಮವನ್ನು ಪರಿಶುದ್ಧ ಮಾಡಿ ತನ್ಮೂಲಕ ಸದ್ಗತಿಗೆ ಪಾತ್ರನಾಗುವದಂತ ನಂಬಿದವರಾಗಿರುತ್ತೇವೆ ಮತ್ತು ಈ ಸದ್ಗತಿ ಸಂಪಾದನೆಗೋಸ್ಕರ ಮನಸ್ಸನ್ನು ಪರಿಪಕ್ವಗೊಳಿಸುವದಕ್ಕೆ ಹವ್ಯಕವ್ಯಾದಿ ಕ್ರಿಯೆಗಳನ್ನು ಮಾಡಬೇಕು ಪ್ರಯುಕ್ತ ನಮ್ಮ ನಡವಳಿಕೆಗಾಗಿ ಕೆಲವು ಕಟ್ಟಳೆಗಳನ್ನು ಏರ್ಪಡಿಸಿ ಅವುಗಳನ್ನು ಬಿಟ್ಟುಹೋಗದಂತೆ ನೋಡಿಕೊಳ್ಳಲು ಒಬ್ಬ ಯಜಮಾನನ ಕೈನ್ನು ಬಲಾಯಿಸುವದು ಯುಕ್ತವಾಗಿದೆ ಸಂಕ್ಷೇಪವಾಗಿ ಇದನ್ನೇ ಸ್ವತಂತ್ರನ್ನು ... ಶಾಧಿಪತವೆಂದು ಹೇಳಬಹುದು ಆದ್ದರಿಂದ ಇಂಥಾ ಏರ್ಪಾಟುಗಳು ಅವಿಚ್ಛಿನ್ನವಾಗಿ ನಡೆಯುವಂತೆ ಪ್ರೋತ್ಸಾಹಪಡಿಸಬೇಕು ದುರದೃಷ್ಟವಶಾತ್ ಈಚೆಗೆ ಕೆಲವರು ಶಾಪ ಪ್ರಾಶಸ್ತ್ಯವನ್ನು ಹೊಂದಬೇಕೆಂಬ ಉದ್ದೇಶದಿಂದ ಈ ಕಟ್ಟಳೆಗಳನ್ನು ವಿಸಾರಿಸೋಗುತ್ತಾರೆ ಇದಲ್ಲದೆ! ಅಲ್ಲಲ್ಲಿ ಪಂಗಡಗಳು ಉಂಟಾಗಿವೆ ... ಏಕವೃತ್ತದಿಂದ ಇರಬೇಕೆಂಬ ಯೋಚನೆಯು ಪ್ರಪಂಚದಲ್ಲೆಲ್ಲಾ ಹರಡಿಕೊಂಡಿರುವಾಗ, ಪಟ್ಟಣಗಳಲ್ಲೂ ಗ್ರಾಮಗಳಲ್ಲೂ ಸಹಾ ಪಂಗಡಗಳು ಇರುವದು ಕೇವಲ ಅವಮಾನಕರ ಇದಕ್ಕೆ ಕೆಲವು ಜನರ ಹಟಸ್ವಭಾವವೇ ಕಾರಣವಾಗಿದೆ ತಾವು ಸರಿಯಾದ ಮಾರ್ಗದಲ್ಲಿ ಇರುವದರಿಂದಲೇ ಸೋಲಬಾರದು ಎಂಬದಾಗಿ ಅವರು ಯೋಚಿಸುವರು ಈಗಿನ ಸ್ಥಿತಿಯಲ್ಲಿರುವಂತೆ ಮನುಷ್ಯ ಸ್ವಭಾವವನ್ನು ಯೋಚಿಸಿದ್ದಾದರೆ ಪ್ರತಿ ಒಬ್ಬರು ತಮ್ಮ ತಮ್ಮ ಅಭಿಪ್ರಾಯವನ್ನು ಇಟ್ಟುಕೊಳ್ಳಲು ಅಭ್ಯಂತರವೇನೂ ಇಲ್ಲ ಆದರೆ ಒಂದು ವೇಳೆ ತಮ್ಮ ಅಭಿಪ್ರಾಯ ವಿಷಯವಾಗಿದ್ದಾಗ್ಯೂ ಸಮೂಹದಲ್ಲಿ ಮಹಾ ಜನರ ಅಭಿಮತಕ್ಕೂ ತೀರ್ಮಾನಕ್ಕೂ ಒಳಪಡಬೇಕು ಹಾಗಾಗದಿದ್ದರೆ ನಮ್ಮ ಕೆಲಸಗಳು ಕೊನೆಗಾಣದೆ ಹೋಗುವವು ಈ ಕೆಳಗೆ ವಿವರಿಸಿ ಇಂತಕ್ಕ ಸಾಧಾರಣವಾದ ಗಾದೆಯನ್ನು ಎಲ್ಲರೂ ಮನಸ್ಸಿನಲ್ಲಿಡಬೇಕು

13 ಯಾವ ಮನುಷ್ಯನು ಸೋಲುವನೋ, ಆತನು ಇತರರಲ್ಲಿ ಘನತೆ ಹೊಂದುವನು ಓಗೆ ಮಾಡೋಣದರಿಂದ ನಮಗೆ ಅಪಜಯವಾಯಿತೆಂದು ಯೋಚಿಸಬಾರದು ನಮ್ಮನ್ನು ಧಾರಾಳ ಮನಸ್ಸುಳ್ಳವರೆಂದು ಭಾವಿಸುವರು ನಮ್ಮ ಜನಗಳ ಪ್ರಯೋಜನಕ್ಕಾಗಿ ನಮ್ಮ ಸ್ವಪ್ರಯೋಜನವನ್ನು ಅಧೀನಪಡಿಸಬೇಕು ನಾವೆಲ್ಲರೂ ಅಲ್ಪವಾದ ಪರಸ್ಪರ ವೈಶಮ್ಯವನ್ನು ಬಿಟ್ಟು ಎಲ್ಲರೂ ಒಟ್ಟಾಗಿ ಸೇರಿ ಮನಸಾಕಾಯವಾಚಾ ಒಂದಾಗಿರಬೇಕು ಪ್ರತಿ ಸಂವತ್ಸರವು ಸಭೆ ಸೇರುವಾಗ ಎರಡು ಮೂರು ದಿವಸಗಳು ಪುಷ್ಕಳವಾಗಿ ಭೋಜನ ಮಾಡಿ ಹೋಗುವದಕ್ಕಲ್ಲ ನಮ್ಮ ಅಭಿಪ್ರಾಯಗಳನ್ನು ಹೊರಪಡಿಸಿ ಪರಸ್ಪರ ಸಮ್ಮತಿಯಿಂದ ನಮ್ಮಲ್ಲಿರತಕ್ಕ ವೈಶಮ್ಯಗಳನ್ನೂ ವಕ್ರತೆಗಳನ್ನೂ ಹೋಗಲಾಡಿಸಿಕೊಂಡು ನಮ್ಮ ಏಕಮತ್ಯವನ್ನು ಬಲಪಡಿಸಿಕೊಳ್ಳುವದಕ್ಕಾಗಿಯೇ ಆದಕಾರಣ ನಾವು ವಾಸಮಾಡುವ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ಅನೇಕ ಸಂಸಾರಗಳಲ್ಲಿ ಇರತಕ್ಕ ವೈರತ್ವಗಳನ್ನು ಹೋಗಲಾಡಿಸಿ ತಕ್ಷಣದಲ್ಲಿ ಪ್ರಾಪ್ತವಾಗಿರತಕ್ಕ ನಮ್ಮ ಜನರ ದುರವಸ್ಥೆಯನ್ನು ತಪ್ಪಿಸಿ ಉನ್ನತಸ್ಥಿತಿಗೆ ಬರುವಂತೆ ಮಾಡುವದಕ್ಕೋಸ್ಕರ ಪ್ರಯತ್ನ ಮಾಡಿ ಈ ಸಂಘ ಶಾಶ್ವತವಾಗಿ ನಿಲ್ಲುವಂತೆ ಭದ್ರವಾದ ಆಧಾರವನ್ನು ಹಾಕಬೇಕೆಂಬದಾಗಿ ಮತ್ತೊಂದಾವರ್ತಿ ಬೇಡಿಕೊಳ್ಳುತ್ತೇನೆ

11 ಈ ನಮ್ಮ ಸಭೆಯಲ್ಲಿ ಆಲೋಚಿಸುವ ಅಂಶಗಳು ಸಾರ್ಥಕವಾಗಲೆಂದು ನಾನು ದೇವರಲ್ಲಿ ಭಕ್ತಿಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ ಮಹನೀಯರೇ, ಈಗ ನಾನು ನಿಮ್ಮನ್ನು ಕೇಳಿಕೊಳ್ಳುವದೇನೆಂದರೆ—ಅಗ್ರಾಸನಾಧಿಪತ್ಯವನ್ನು ವಹಿಸಿರತಕ್ಕ ಈ ಮಹನೀಯರು ಸ್ವಾರ್ಥಾಪೇಕ್ಷೆ ಇಲ್ಲದೆ ನಮ್ಮ ಉಪಕಾರಾರ್ಥವಾಗಿ ನಮಗೆ ಉಂಟಾಗುವ ಅನಾನುಕೂಲಗಳನ್ನು ಲಕ್ಷಿಸದೆ ಇಲ್ಲಿಗೆ ಸಂತೋಷದಿಂದ ದಯಮಾಡಿ ಹೇಳತಕ್ಕ ಉತ್ತಮವಾದ ಬುದ್ಧಿವಾದದ ಮಾತುಗಳನ್ನು ಚನ್ನಾಗಿ ಕಿವಿಗೊಟ್ಟು ಲಾಲಿಸಿರಿ ಇವರ ಸಮಾಗಮವು ನಮ್ಮ ಪುಣ್ಯೋದಯದಿಂದ ಲಭಿಸಿದ್ದಾಗಿದೆ

"ಪರಸ್ಪರ ವೈಶಮ್ಯವೇ ನಮಗೆ ಹಾನಿಕರವಾದದ್ದು"
"ಏಕಮತ್ಯವೇ ನಮ್ಮಗಳ ಅಭಿವೃದ್ಧಿಗೆ ಸಹಕಾರಿ"

ಎಂಬದಾಗಿ ಚನ್ನಾಗಿ ತಿಳಿದುಕೊಳ್ಳಿ

ತಾಲ್ಲೂಕು ವರ್ತಮಾನಗಳು

ಮುಳಬಾಗಲ್—ಈ ಮುಳಬಾಗಲು ಟವನ್ನಲ್ಲಿ ನೂತನವಾಗಿ ಓಪನ್ ಮಾಡಲ್ಪಟ್ಟಿರುವ "ಅಂಜುಮನ್ ನ ರೀಡಿಂಗ್ ರೂಂ ಯಾ ವಾಚಕಶಾಲೆಯ" ಪ್ರಥಮ ಮೀಟಿಂಗ್ ನಿನ್ನೆ ಅಂದರೆ ೩೦ ನೇ ತಾರೀಖು ಸಾಯಂಕಾಲ ೬ ಘಂಟೆಗೆ ಇಲ್ಲಿನ ಹಿಂದುಸ್ತಾನಿ ಬಾಯ್ಸ್ ಸ್ಕೂಲಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು ಕಂಟ್ರಾಕ್ಟರ್ ಮಿಸ್ಟರ್ ಮಹಮ್ಮದ್ ಯೂಸಿಂ ಸಾಹೇಬರವರು ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು ಮರ್ಚೆಂಟ್ ಮಿಸ್ಟರ್ ಗೌಸ್ ಖಾನ್ ಸಾಹೇಬರವರು ಹಿಂದುಸ್ತಾನಿಯಲ್ಲಿ ವಿದ್ಯಾವಿಷಯದಲ್ಲಿ ಒಂದು ಉಪನ್ಯಾಸವನ್ನು ಓದಿದರು ಮಿಸ್ಟರ್ ಪಿ ಮುನಿಸ್ವಾಮಯ್ಯನವರು ಕನ್ನಡ, ತೆಲುಗು ಭಾಷೆಗಳಲ್ಲಿ ಮೇಲ್ಕಂಡ ವಿಷಯವನ್ನು ಕುರಿತು ಬೋಧಿಸಿದರು—ಈ ಮುಳಬಾಗಲು ದೊಡ್ಡ ಗ್ರಾಮ ಟವನ್ನಲ್ಲಿ ಈವರಿಗೂ "ವಾಚಕಶಾಲೆ" ಎನ್ನುವ ಪ್ರಸಕ್ತಿಯೇ ಇರಲಿಲ್ಲ ಈಗ ಕೆಲವು ಮಹಮ್ಮದೀಯರು ಇತರರ ದ್ರವ್ಯ ಸಹಾಯವನ್ನಪೇಕ್ಷಿಸದೆ ಈರೀತಿ ಮಾಡಿರುವದು ತುಂಬಾ ಉಲ್ಲಾಸಕರವಾದ ವಿಷಯವಾಗಿದೆ ಹೀಗೆಯೇ ಎಲ್ಲಾ ಗ್ರಾಮಗಳಲ್ಲಿಯೂ ವಿದ್ಯಾವಿಷಯವನ್ನು ಪ್ರಚುರಪಡಿಸಿ ಕೀರ್ತಿ ಸಂಪಾದಿಸಲಪೇಕ್ಷಿಸುವ ಜನಗಳು ವಾಚಕಶಾಲೆಯನ್ನೇರ್ಪಡಿಸಿ "ಏಕಮತ್ಯವೇ ಬಲ" ವೆಂಬ ಗಾದೆಯನ್ನು ನೆನಪಿಟ್ಟು ಇದಕ್ಕೆ ವಿಶೇಷ ಗಮನಿಸಿ ವಿದ್ಯಾಪ್ರಚುರಪಡಿಸುವ ರೀಡಿಂಗ್ ರೂಂ ಏರ್ಪಡಿಸುವರೆಂತ ನಂಬಿರುತ್ತೇನೆ

ಶ್ರೀ ಬಿಳಿಗಿರಿರಂಗಸ್ವಾಮಿ ಬೆಟ್ಟ—ಶ್ರೀ ಬಿಳಿಗಿರಿರಂಗಸ್ವಾಮಿಯವರ ಬೆಟ್ಟದಲ್ಲಿ ಈಗ ಹಗಲು ಹೊತ್ತಿನಲ್ಲಿ ಚೆನ್ನಾಗಿ ಬಿಸಲು ಕಾಯುತ್ತಾ ಇದೆ ರಾತ್ರಿ ಕಾಲದಲ್ಲಿ ಬೆಳದಿಂಗಳೂ ಚೆನ್ನಾಗಿ ಕಾಯುತ್ತಾ ಇದೆ ಮತ್ತು ಈಗ ಇಲ್ಲಿ ಬಹಳ ಆರೋಗ್ಯವಾಗಿ ಇದೆ ಯಳಂದೂರ್ ತಾಲ್ಲೋಕು ಯರಗಂಬಳ್ಳಿ ಗ್ರಾಮದಲ್ಲಿ ಒಬ್ಬ ದನಾಕಾಯುವವನು ದನಗಳನ್ನು ಮೇಯಿಸುವದಕ್ಕೆ ಎಂದಿನಂತೆ ಕಾಡಿಗೆ ಕಳೆದ ತಾ|| ೨೪ ನೇ ಶುಕ್ರವಾರ ದಿವಸ ದನಗಳನ್ನು ಹೊಡೆದುಕೊಂಡು ಹೋಗಿ ಮೇಯಿಸುತ್ತಾ ಇದ್ದನು ಆ ಕಾಲದಲ್ಲಿ ಒಂದು ಹುಲಿಯು ಬಂದು ಅವನ ಮೇಲೆ ಬಿದ್ದು ಅವನನ್ನು ಎಳೆದುಕೊಂಡು ಹೋಗಿ ಅರ್ಧ ಭಾಗವನ್ನು ತಿಂದಿತ್ತು ಅಷ್ಟರೊಳಗೆ ಜನಗಳು ಬೆದರಿಸಿದರು ಆದರೂ ಬೆದರದೆ ಘರ್ಜನೆ ಮಾಡಿಕೊಂಡು ಹೋಯಿತು ಕಾಡಿನಲ್ಲಿ ಜನಗಳು ಸಂಚಾರ ಮಾಡುವದಕ್ಕೆ ಭಯಪಡುತ್ತಾರೆ ಸರಕಾರದವರು ಭಯವನ್ನು ತಪ್ಪಿಸಬೇಕೆಂದಿರುವರು ಮತ್ತು ಶ್ರೀ ಬಿಳಿಗಿರಿರಂಗಸ್ವಾಮಿಯವರ ದೇವಸ್ಥಾನದಲ್ಲಿ ಬಹಳ ಆಭಾಸವಾದ ೫ ಮಂದಿ ದಾಸಿಯರು ಇರುತ್ತಾರೆ ಇಲ್ಲಿ ಇವರು ಇರುವದರಿಂದ ಈ ಮಹಾ ಸ್ಥಳದ ಹೆಸರು ಕೆಡುವದರಲ್ಲಿ ಸಂಶಯವಿಲ್ಲ ಇದಕ್ಕೋಸ್ಕರವೇ ಮೈಸೂರು ಸರಕಾರಿ ದೇವಸ್ಥಾನದಲ್ಲಿ ಇದ್ದ ದಾಸಿಯರನ್ನು ವಜಾ ಮಾಡಿರುತ್ತಾರೆ ಆದ್ದರಿಂದ ಇವರು ಈ ಸ್ಥಳದಲ್ಲಿ ಇರುವದರಿಂದ ಖಂಡಿತವಾಗಿ ಈ ಮಹಾ ಸ್ಥಳದ ಹೆಸರು ಕೆಟ್ಟೇ ಹೋಗುತ್ತೆ ಮೈಸೂರು ಸರಕಾರಿ ದೇವಸ್ಥಾನಗಳ ಹಾಗೆ ಈ ದೇವಸ್ಥಾನದಲ್ಲಿಯೂ ನಮ್ಮ ಯಳಂದೂರ್ ಜಹಗೀರ್ದಾರರು ಈ ಮೇಲ್ಕಂಡ ದಾಸಿಯರನ್ನು ವಜಾ ಮಾಡುತ್ತಾರೆಂತ ಶ್ರೀ ಬಿಳಿಗಿರಿರಂಗಸ್ವಾಮಿಯವರನ್ನು ಪ್ರಾರ್ಥನೆ ಮಾಡುತ್ತಾ ಇರುತ್ತೇವೆ

ಕುಣಿಗಲ್ ತಾಲ್ಲೂಕು ಶೆಟ್ಟಿಗೆರೆ.—ಈ ಪ್ರಾಂತ್ಯ ಬೆಳೆಯೆಲ್ಲವು ಕೈಸೇರಿತು ರಾಗಿ ಮೆದೆಗಳು ಅಲಂಕಾರವಾಗಿ ಕಂಗೊಳಿಸುತ್ತವೆ ರಾಗಿ ರೂಪಾಯಿ ೧ ಕ್ಕೆ ೧೬ ಸೇರು, ಅಕ್ಕಿ ೮-೯ ಸೇರು ಇದೆ ಬಡವರ ದುಃಖವು ನಿವಾರಣೆಯಾಯಿತು ಕಳೆದ ತಿಂಗಳ ೧೮ ತಾ|| ವೃತ್ತಾಂತಪತ್ರಿಕೆಯಲ್ಲಿ ವ್ಯಾಕ್ಸಿನೇಟರು ಒಂದು ೨ ವರುಷವಾಯಿತು, ಸಿಡುಬಿನ ಉಪದ್ರ ಪ್ರಬಲವಾಗಿರುತ್ತೆಂದು ನಮೂದಿಸಿದ್ದೆನಷ್ಟೆ ೧೨ ಮಕ್ಕಳಿಗೆ ಸೋಂಕು ತಗಲಿತು ಈ ಪೈಕಿ ೨ ಮಕ್ಕಳು ಮೃತಪಟ್ಟವು ೩೦ ನೆ ತಾರೀಖಿನಲ್ಲಿ ವ್ಯಾಕ್ಸಿನೇಟರು ಬಂದು ೨೫ ಮಕ್ಕಳಿಗೆ ದೇವಿ ಹಾಕಿದರು ಅಲವಾಗಾಯ್ತು ಮತ್ತಲ್ಲಿಯು ಸಿಡುಬು ವ್ಯಾಪಿಸದೆ ಸೋಂಕು ಅಡಗಿ ಹೋಗಿ ಸರ್ವಮಕ್ಕಳು ಆರೋಗ್ಯದಲ್ಲಿರುತ್ತಾರೆ ಈ ಡಿಸೆಂಬರ್ ತಾ|| ೨೭ ರಲ್ಲಿ ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಸ್ಯಾನಿಟರಿ ಅಸಿಸ್ಟೆಂಟ್ ಸಾಹೇಬರವರ ದಿವ್ಯಸವಾರಿಯು ಈ ಗ್ರಾಮಕ್ಕೆ ಚಿತ್ತೈಸಿತು ದೇವಿಹಾಕಿರತಕ್ಕ ಮಕ್ಕಳನ್ನು ಪರಾಂಬರಿಸಿ ಸಿಡುಬಿನ ಕಲೆಯು ನಿರ್ನಾಮವಾದದ್ದಕ್ಕೆ ಸಂತೋಷಪಟ್ಟು ಸದರಿ ಸೋಂಕು ವ್ಯಾಪಿಸಿದಕೂಡ್ಲೆ ವ್ಯಾಕ್ಸಿನೇಷನ್ ಮಾಡಿಸಿಕೊಂಡರೆ ಬಾಲಕರು ಅಂಗಹೀನರಾಗದೆ ಸಿಡುಬಿನ ಬಾಯಿಗೆ ತುತ್ತಾಗದೆ ಸುರಕ್ಷಿತವಾಗಿ ಬಾಳುತ್ತಾರೆಂಬದಾಗಿ ಅಪ್ಪಣೆಕೊಡಿಸಿ ತಮ್ಮ ಸಮಕ್ಷಮ ೮ ಮಕ್ಕಳಿಗೆ ದೇವಿಹಾಕಿಸಿದರು ಸಾಹೇಬರವರು ನನ್ನಿಂದ ಈ ಗ್ರಾಮಕ್ಕೆ ವ್ಯಾಕ್ಸಿನೇಟರು ಬಂದು ಎಷ್ಟು ವರುಷವಾಯಿತೆಂದು ಮುಚ್ಚಳಿಕೆ ತೆಗೆದುಕೊಂಡಾಗ್ಯೆ ಕೈತಪ್ಪಿನಿಂದಾ ಒಂದು ವರುಷವಾಯ್ತೆಂದು ಇರುತ್ತೆ ಅದನ್ನು ಎರಡು ವರುಷವಾಗಿರುತ್ತೆಂದು ತಿದ್ದಿ ಓದಿಕೊಳ್ಳಬೇಕಾಗಿ ಬೇಡುತ್ತೇನೆ ಇದಕ್ಕೆ ದೃಷ್ಟಾಂತರವಾಗಿ ಪ್ರತಿಮಾಹೆಯಲ್ಲೂ ಪಟೇಲರು ರವಾನೆಮಾಡತಕ್ಕ ಜನನ, ಮರಣ ಫಾರಂ ಪುರಾಹೆಡ್ಡಿಂಗಿಲ್ಲಿ ವ್ಯಾಕ್ಸಿನೇಟರು ಗ್ರಾಮಕ್ಕೆ ಬಂದಿದಾರೆ? ಇಲ್ಲಾ? ಯೆಂಬದಾಗಿ ಬರೆಯಲು ಪಟೇಲರಿಗೆ ಆರ್ಡರು ಇರುತ್ತೆ ಡಿಟೋ ಎರಡು ವರುಷದ ಲಾಗಾಯ್ತು ತಲ್ಪರತಕ್ಕ ಫಾರಂಗಳನ್ನು ಪರಾಂಬರಿಸಿದ್ದಲ್ಲಿ ನಾನು ಬರದಿರತಕ್ಕ ಅಂಶ ಸುಳ್ಳು ಸತ್ಯವೆಂಬುವದು ದಿವ್ಯಚಿತ್ತಕ್ಕೆ ವೇದ್ಯವಾಗುತ್ತೆ ಹಳ್ಳಿಯ ಅನಾಗರೀಕರ ಮೂಢಮಾರ್ಗವನ್ನು ತ್ಯಜಿಸಿ ದಯಾಳು ಸರಕಾರದವರು ಪ್ರಜಾರಕ್ಷಣೆಬಗ್ಗೆ ಯೇರ್ಪಾಡಿಟ್ಟಿರತಕ್ಕ ವ್ಯಾಕ್ಸಿನೇಷನ್ನನ್ನು ತಪ್ಪ ಮಕ್ಕಳುಗಳಿಗೆ ಹಾಕಿಸಿ ಅಕಾಲ ಮರಣಕ್ಕೆ, ಅಂಗಹೀನತ್ವಕ್ಕೆ ಕಾರಣವಾಗದಂತೆ ಜ್ಞಾನೋದಯವಾದಾರೆಂತ ಸದಾಕಾಲವು ಹಾರೈಸುತ್ತೇನೆ

ಚಿತ್ರದುರ್ಗ—ಈಚೆಗೆ ಚಳಿ ಬಹಳ ಜಾಸ್ತಿಯಾಗಿದೆ ಊರಲ್ಲಿ ಚಳಿಜ್ವರ ಜಾಸ್ತಿಯಾಗುತ್ತಲೂ ಅದರಿಂದ ಮರಣಗಳು ಉಂಟಾಗುತ್ತಲೂ ಇವೆ ನೀರಿನ ಕಷ್ಟ ಅದರಿಂದುಂಟಾಗುವ ನಷ್ಟ ಅನಾನುಕೂಲಗಳು ಮೊದಲಿಂದ ತಿಳಿಸುತ್ತ ಬಂದಿದೆ ಆ ವಿಷಯ ಇನ್ನೂ ಕ್ರಮವಿಲ್ಲ ಪ್ರಜೆಗಳಿಗೆ ಅನುಕೂಲವಾಗಲಿಲ್ಲ ಈ ಗ್ರಾಮದಲ್ಲಿ ರಿಟೈರ್ಡ್ ಹೆಡ್ ಕ್ವಾರ್ಟರ್ ಪೋಲೀಸ್ ಇನ್ಸ್ಪೆಕ್ಟರ್ ಮೆ|| ಕೃಷ್ಣರಾಯರು ವಾಸದ ಪಕ್ಕದ ಗಲ್ಲಿಯಲ್ಲಿ ಅವರ ಮತ್ತು ನೂರಾರು ಕುರುಬರ ವಗೈರೆರಮನೆಗಳಿವೆ ಇವರೆಲ್ಲರ ಉಪಯೋಗಕ್ಕೆ ಮೊದ್ಲು ಈ ಬೀದಿಯಲ್ಲಿ ವಾಸವಾಗಿದ್ದ ಸ್ಕೂಲ್‌ಗಳ ಡೆ ಇನ್ಸ್ಪೆಕ್ಟರ್ ಮ|| ಕೆ ಎನ್ ವೀರಭದ್ರಯ್ಯನವರು ಸ್ವಂತಲಾಗವಡಿನಿಂದ ಇಡಿಸಿದ್ದ ಒಂದು ಪೈಪ್‌ನಲ್ಲಿ ಇವೆ ಅದಕ್ಕೆ ಫಿಟ್ಟರಿಗೆ ಮನಸು ಬಂದರೆ ನೀರು ಬಿಡುತ್ತಾನೆ ಇಲ್ಲದಿದ್ದರೆ ಇಲ್ಲ ಈ ವಿಷಯದಲ್ಲಿ ಅನೇಕ ದಫಾ ಆಫೀಸರುಗಳಿಗೆ ಹೇಳಿಕೊಂಡದ್ದರ ಮೇಲೆ ಈಚೆಗೆ ರಾತ್ರಿ ೯-೧೦ ಗಂಟೆಗೆ ಈ ನಲ್ಲಿಗೆ ನೀರು ಬಿಡುತ್ತಾನೆ ಒಂದೊಂದು ದಿವಸ ಅದೂ ಇಲ್ಲ ಈ ಗಲ್ಲಿಯಲ್ಲಿ ಲಾಂದ್ರವಿಲ್ಲ ಅಪ್ಪಾಳೆಹೊತ್ತಿನಲ್ಲಿ ಹೆಂಗಸರು ನೀರಿಗಾಗಿ ಪಡತಕ್ಕ ತೊಂದರೆ ಹೇಳತಕ್ಕದ್ದಾಗಿಲ್ಲ ೨೯ ೧೨ ೦೯ ನೆ ತಾ|| ರಾತ್ರಿ ನೀರಿಗಾಗಿ ನಲ್ಲಿ ಒಳ ಇಟ್ಟಿದ್ದ ಮೆ|| ಕೃಷ್ಣರಾಯರ ಬಾಬತು ಹೊಸ ತಾಂಬ್ರದ ಕೊಡ ಯಾರೊ ತೆಗೆದುಕೊಂಡು ಹೋಗಿಬಿಟ್ಟರು, ಈ ವಿಷಯ ಪೋಲೀಸಿಗೆ ತಿಳಿಸಿದೆ—ಭೀಮಸಂದ್ರದ ಪ್ರಸಿದ್ಧ ಕೈಷ ತೋಟದ ಸಿದ್ದಪ್ಪ ಖೂನಾ ದವಿಷಯ ಈ ಮೊದಲೆ ತಿಳಿಸಿದೆಯಷ್ಟೆ ಈಚೆಗೆ ಅಂದರೆ ೧೧-೧೨ ೦೯ ರಲ್ಲಿ ಹೊಳಲ್ಕೆರೆ ತಾಲ್ಲೂಕ್ ತಾಳ್ಯದ ವಾಸಸ್ತ ಹನುಮಂತ ಭಟ್ಟನೆಂಬುವನ್ನ ಆತನ ದ್ವೇಷಿಗಳು ಖೂನ್ ಮಾಡಿ ಹೆಣವಿಗೆ ಕಲ್ಲುಗಳು ಕಟ್ಟಿ ಅಬನಾಯ್ಕನ ಕೆರೆ ನೀರಿನಲ್ಲಿ ಹಾಕಿದ್ದದ್ದು ೨೩ ೧೨-೦೯ ರಲ್ಲಿ ಪತ್ತೆಆಗಿ ಮೇಲಿನವರು ವಿಚಾರಿಸುತ್ತಿದ್ದಾರೆ ಈ ಖೂನಾದ ಬ್ರಾಹ್ಮಣ ಸದಾಸಿವಲ್ ಕ್ರಿಮಿನಲ್ ಕೋರ್ಟುಗಳಲ್ಲಿರತಕ್ಕ ವಾಡಿಕೆಯುಳ್ಳವನಾಗಿದ್ದನು ಚಿತ್ರದುರ್ಗದ ಟವನ್‌ನಲ್ಲಿ ಮೆ|| ಕೋಲ್ ಸಾ|| ಡೆ|| ಕಮಿಷನರಾಗಿದ್ದಾಗ ಅಂದರೆ ೪೦ ವರುಷದ ಕೆಳಗೆ ಹಾಕಿಸಿರುವ ತೆಂಗಿನ ಮರಗಳಲ್ಲಿ ಈಗ ಚನ್ನಾಗಿ ಫಲಬಿಡುತ್ತದ ಆ ಪೈಕಿ ಒಂದು ಮರದ ಸುಳೆಬಳಿ ೩೦ ೧೨ ೦೯ ರಲ್ಲಿ ದಿವಾ ೧೧ ಗಂಟೆಗೆ ಆಕಸ್ಮಾತ್ ಬೆಂಕಿಹತ್ತಿ ಸುಳಿ ಬೆಂದುಹೋದ್ದಲ್ಲದೆ ಅದರಲ್ಲಿ ಗೂಡುಕಟ್ಟಿದ್ದ ಹದ್ದಿನ ಮರಿಗಳು ಸುಟ್ಟು ಬಿದ್ದಿತ್ತು ಬೆಂಕಿ ಹತ್ತಲಿಕ್ಕೆ ಅಲ್ಲಿ ವಾಸಮಾಡುತ್ತಿದ್ದ ಹದ್ದು ಗೂಡಿನಲ್ಲಿ ತಂದಿಟ್ಟದ್ದ ಬೆಂಗಡ್ಡಿಯೆ ಕಾರಣವೆಂತ ಜನಗಳು ಊಹಿಸುತ್ತಿದ್ದಾರೆ ಊರಿಗೆ ಅಲಂಕಾರವಾಗಿದ್ದ ಈ ಮರಗಳು ಇಂಥಾ ಕಾರಣದಿಂದಲೂ ಪ್ರಜೆಗಳು ಮನೆಗಳನ್ನು ಮುಂದಕ್ಕೆ ಒತ್ತಿಕಟ್ಟಿಕೊಂಡು ಮನೆಕಟ್ಟತಕ್ಕದ್ದರಿಂದಲೂ ಹೀನಸ್ಥಿತಿಗೆ ಬರುತ್ತಾ ಇವೆ

ದೊಡ್ಡಬಳ್ಳಾಪುರ—ಕೋಟೆಯಲ್ಲಿ ಶ್ರೀ ಕೆಟ್ಟೀ ಆಂಜನೇಯಸ್ವಾಮಿ ಗುಡಿಯು ಹೂತುಹೋಗಿತ್ತು ಇಲ್ಲಿನ ಆಸ್ತಿಕರಾದ ಮಹನೀಯರು ಇದನ್ನು ಜೀರ್ಣೋದ್ಧಾರ ಮಾಡಿದರು ಇದರ ಸಂತೋಷಕ್ಕಾಗಿ ಆಸ್ತಿಕರಾದ ಮಹನೀಯರೆಲ್ಲಾ ಸೇರಿ ದ್ರವ್ಯ ಸೇರಿಸಿ, ೧೬ ತಾ|| ನಲ್ಲಿ ಊಟಮಾಡತಕ್ಕ ಎಲ್ಲಾ ಕೋಮಿನ ಜನರಿಗೂ ಸುಭೋಜನವನ್ನು ಮಾಡಿಸಿದರು ಸುಮಾರು ಮೂರುಸಾವಿರ ಜನರು ಊಟಮಾಡಿದರು ಆ ದಿನ ಒಂದು ದೊಡ್ಡ ಪರಿಶೆಯಾಗಿತ್ತು ಇಲ್ಲಿ ಕಲ್ಲಿನ ಅರ್ಧ ಶಾಸನವು ಸಿಕ್ಕಿದೆ ಇನ್ನು ಅರ್ಧವನ್ನು ಹುಡುಕಿ ಕೊಡುವವರಿಗೆ ಪೋಲೀಸ್ ಇನ್ಸ್ಪೆಕ್ಟರ್ ಮೆ|| ಜಿ ರಾಜಾರಾಮರಾಯರು ಐದು ರೂಪಾಯಿ ಬಹುಮಾನ ಕೊಡುತ್ತೇವೆಂದು ನೋಟೀಸ್ ಹಾಕಿದ್ದಾರೆ—ಹೆಬ್ಬಾಳ ನಂಜಪ್ಪನವರು, ಸಿ ನಾಗಮಲ್ಲಯ್ಯನವರು, ಹೊಸೂರು ಸೂರಪ್ಪನವರೇ ಮೊದಲಾದ, ಪಗಡ ಸಾಲಿಪೇಟೆಯ ವರ್ತಕಮಂಡಲಿಯವರು ಸೇರಿ, ತಮ್ಮ ಅಂಗಡಿಗಳ ಮುಂದೆ ಚಪ್ಪರ ತೋರಣಾದಿಗಳನ್ನು ಕಟ್ಟಿ ೨೬ ನೇ ತಾ|| ರಾತ್ರಿ ತ್ರಿಲಕ್ಷ ದೀಪೋತ್ಸವವನ್ನು ಮಾಡಿಸಿ, ಜನರನ್ನು ಸಂತೋಷಪಡಿಸಿದರು ಕಾಶಿವಿಶ್ವೇಶ್ವರನ ಉತ್ಸವವೂ ನಡೆಯಿತು—ತಾ|| ೨೯ ರಲ್ಲಿ ನಮ್ಮ ಪೋಲೀಸ್ ಇನ್ಸ್ಪೆಕ್ಟರ್, ಮೆ|| ಜಿ ರಾಜಾರಾಮರಾಯರು ಮುಖ್ಯಸ್ಥರಾಗಿ ನಿಂತುಕೊಂಡು, ಬಹುಪ್ರಯಾಸ ತೆಗೆದುಕೊಂಡು, ಧಾತ್ರಿಹವನವನ್ನು ಮಾಡಿಸಿದರು ತ್ರಿಮತಸ್ಥರಿಗೂ ಸುಭೋಜನವಾಯಿತು ಮತ್ತು ಬಡವರಾದ ಬೇರೆ ಜನರಿಗೂ ಊಟಕೊಟ್ಟರು ಸುಮಾರು ಒಟ್ಟು ೮೦೦ ಜನರಿಗೆ ಭೋಜನವಾಯಿತು ಈ ಸಂತೋಷಕ್ಕೆ ಸಬ್‌ಡಿವಿಜನ್ ಸಾಹೇಬರೂ ಅಮಲ್ದಾರ್ ಸಾಹೇಬರೂ ದಯಮಾಡಿಸಿದ್ದರು ನಮ್ಮ ಇನ್ಸ್ಪೆಕ್ಟರ್‌ರವರು ಇಂಥಾ ಸತ್ಕಾರ್ಯದಲ್ಲಿ ತುಂಬಾ ಆಸಕ್ತರಾಗಿದ್ದಾರೆ ತಾ|| ೧೬ ರಲ್ಲಿ ಉಲಳದ ಬೆಟ್ಟದಹತ್ರ ಸಾವಿರಾರು ಜನರು ಕೋಳಿಬೇಟೆಗೆ ನೆರೆದಿದ್ದರು ಆ ಸಮಯದಲ್ಲಿ ಜಗಳವುಂಟಾಗಿ ೮-೯ ಜನರಿಗೆ ಘೋರಾ ಗಾಯಗಳು ಆಗಿ, ಇನ್ನು ಬೇರೆಯವರಿಗೂ ಏಟುಗಳು ಬಿದ್ದವಂತೆ ೪-೫ ಮಂದಿ ಪೋಲೀಸಿನವರಿಗೂ ಏಟು ಬಿದ್ದವಂತೆ ಇಂಥಾ ಗಲಾಟೆಗೆ ಆಸ್ಪದವಾಗುವ ಈ ಕೋಳಿಬೇಟೆಗೆ ಆಸ್ಪದಕೊಡದೆ ಅರಮನೆಯಲ್ಲಿ ೨೦ ವರ್ಷದ ನಂಜಮ್ಮ ಎಂಬ ಹೆಂಗಸು ಯಾವಕಾರಣದಿಂದಲೋ ಭಾವಿಯಲ್ಲಿ ಬಿದ್ದು ಸತ್ತಳು ಹೆಣವನ್ನು ತಂದು ಇದ್ದರು

ತಿಪಟೂರು—ಈ ಟವನಿನಲ್ಲಿಯೂ ಮತ್ತು ಸೊಣವಿನ ಕೆರೆ ಮುಂತಾದ ಸ್ಥಳಗಳಲ್ಲಿಯೂ ಸ್ಥಾಪಿಸಲ್ಪಟ್ಟಿರುವ ಕೊ ಆಪರೇಟಿವ್ ಸೊಸೈಟಿಗಳನ್ನು ಪರಾಂಬರಿಸಲೋಸುಗ ಈ ಸೊಸೈಟಿಗಳ ರಿಜಿಸ್ಟ್ರಾರ್ ಸಾಹೇಬರವರಾದ ಮೆ|| ಎಂ ಶಾಮರಾವ್ ಎಂ ಎ ಯವರು ಡಿಸಂಬರ್ ತಾ ೩೦ ರಲ್ಲು ಈ ಟವನಿಗೆ ಬಿಜಯಂಗೈಸಿ ಸದರಿ ಸೊಸೈಟಿಗಳನ್ನು ಪರಾಂಬರಿಸಿಕೊಂಡು, ಪಾಠಶಾಲೆಗಳಲ್ಲಿ ಶ್ರೀಮನ್ ಮಹಾರಾಜರವರ ಆಜ್ಞಾಪ್ರಕಾರ ಮತಬೋಧೆಯೂ ಮತ್ತು ನೀತಿಬೋಧೆಯೂ ಸರ್ವಮತಸಮ್ಮತವಾಗಿ ನಡೆಯುವುದೆ ಎಂಬದಾಗಿ ತಮ್ಮ ಭೇಟಿಗೋಸ್ಕರ ಬಂದಿದ್ದ ಇಲ್ಲಿನ ಎ ವಿ ಸ್ಕೂಲ್ ಹೆಡ್ಮಾಸ್ಟರ್ ಮೆ|| ವಿ ಎನ್ ಸುಬ್ರಹ್ಮಣ್ಯ ಐಯ್ಯರವರನ್ನು ಪ್ರಶ್ನೆ ಮಾಡಲು, ಆಜ್ಞಾಪ್ರಕಾರ ನಡೆಸಲ್ಪಡುತ್ತಿದೆಯೆಂದು ಹೇಳಿದರು ಅದರ ಮೇಲೆ ಸದರಿ ಸಾಹೇಬರವರು, ಹಾಗಾದರೆ ಈ ದಿವಸ ಈ ಟವನಿನಲ್ಲಿರುವ ಸಮಸ್ತ ದೊಡ್ಡ ಮನುಷ್ಯರುಗಳನ್ನು ಮತ್ತು ನಿಮ್ಮ ಪಾಠಶಾಲೆಯ ವಿದ್ಯಾರ್ಥಿಗಳನ್ನು ಹಾಜರ್ಪಡಿಸಿಕೊಂಡಿದ್ದಲ್ಲಿ ನಾವು ಬಂದು ಸದರಿ ಬೋಧೆಯು ಹ್ಯಾಗೆ ನಡೆಯುತ್ತಲಿದೆಯೆಂಬುದನ್ನು ನೋಡಬೇಕೆಂದಿರುತ್ತೇವೆ ಎಂದು ಅಪ್ಪಣೆ ಮಾಡಿದರು ಅದರಂತೆ ನಮ್ಮ ಹೆಡ್ ಮಾಸ್ಟರವರು ಈ ಟವನಿನ ಎಲ್ಲಾ ದೊಡ್ಡ ಮನುಷ್ಯರಿಗೂ ನೋಟೀಸ್ ಕೊಟ್ಟ ಮೇರೆ, ಅಮಲ್ದಾರರೂ, ಎಂಜನಿಯರ್ ಇಲಾಖಾ ಸಬ್ ಡಿವಿಜನ್ ಆಫೀಸರವರೂ, ಮೆಡಿಕಲ್ ಆಫೀಸರವರೂ, ಪೋಲೀಸ್ ಇನ್ಸ್ಪೆಕ್ಟರವರೂ ಮತ್ತು ಎಲ್ಲಾ ತಾಲ್ಲೂಕು ನೌಕರರೂ, ಪುರನಿವಾಸಿಗಳಲ್ಲಿ ಎಲ್ಲಾ ಕೋಮಿನ ದೊಡ್ಡ ಮನುಷ್ಯರುಗಳೂ ಎ ವಿ ಸ್ಕೂಲ್ ಕಟ್ಟಡದಲ್ಲಿ ಸಭೆಯನ್ನಲಂಕರಿಸಿದರು ಸದರಿ ವಾರ್ತೆಯನ್ನು ಕೇಳಿ ನಮ್ಮ ರಿಜಿಸ್ಟ್ರಾರ್ ಸಾಹೇಬರವರು ಬಿಜಯಂಗೈಸಿದರು ನಮ್ಮ ಹೆಡ್ಮಾಸ್ಟರವರು ಕೇಳಿಕೊಂಡ ಮೇರೆಗೆ ರಿಜಿಸ್ಟ್ರಾರ್ ಸಾಹೇಬರವರು ಅಗ್ರಾಸನವನ್ನು ಅಲಂಕರಿಸಿದರು ಅನಂತರ ನಮ್ಮ ಹೆಡ್ಮಾಸ್ಟರ್ ಮೆ|| ಸುಬ್ರಹ್ಮಣ್ಯ ಐಯ್ಯರವರು 'ವಿಧೇಯತೆ ವಿಷಯ' ವಾಗಿಯೂ, ಅಸಿಸ್ಟೆಂಟ್ ಮಾಸ್ಟರ್ ಮೆ|| ಜಿ ತಮ್ಮಯ್ಯನವರು 'ದೇವರು ಮತ್ತು ದೈವಭಕ್ತಿ' ವಿಷಯವಾಗಿಯೂ, ಬಹಳ ಸರಸವಾಗಿಯೂ, ಯುಕ್ತಾಯುಕ್ತವಾಗಿಯೂ ಸಭೆಯನ್ನಲಂಕರಿಸಿದ್ದ ಸಕಲರೂ ಒಪ್ಪುವಂತೆಯೂ ಉಪನ್ಯಾಸಗಳನ್ನು ಮಾಡಿದರು ಅನಂತರ ಅಗ್ರಾಸನಾಧಿಪತಿಗಳಾದ ಮೆ|| ಎಂ ಶಾಮರಾವ್ ಎಂ ಎ ಯವರು ಆನಂದಭರಿತರಾಗಿ ಸಮಯೋಚಿತವಾದ ಮತ್ತು ಆನಂದಕರವಾದ ತಮ್ಮ ಭಾಷಣದಿಂದ ಸಕಲರನ್ನು ಸಂತೋಷಗೊಳಿಸಿ ಇದೇ ರೀತಿಯಲ್ಲಿ ಈ ಸಂಸ್ಥಾನದ ಎಲ್ಲಾ ಪಾಠಶಾಲೆಗಳಲ್ಲಿಯೂ ಬಾಲಕರು ನೀತಿ ಮತ್ತು ಮತಬೋಧೆಗಳನ್ನು ಹೊಂದಿ ನಮ್ಮ ಶ್ರೀಮನ್ ಮಹಾರಾಜರವರಿಗೆ ಈಗಲೂ ಮತ್ತು ಮುಂದೆಯೂ ಪ್ರಜೆಗಳಾಗತಕ್ಕ ಬಾಲಕರೆಲ್ಲರೂ ನೀತಿಯುತರಾಗಿಯೂ ದೈವಭಕ್ತಿವಿಶಾರದರಾಗಿಯೂ ಆಗಿ ಕೀರ್ತಿವಂತರಾಗಬೇಕಾದುದೇ ಮುಖ್ಯವಾದ ಉದ್ದೇಶವೆಂದು ಮೊದಲಾಗಿ ತಮ್ಮ ಸಂತೋಷವನ್ನು ಪ್ರದರ್ಶಿಸಿದರು ಆ ತರುವಾಯ ನಮ್ಮ ಹೆಡ್ಮಾಸ್ಟರವರಿಂದ ಸಭಾಧ್ಯಕ್ಷರಿಗೆ ವಂದನೆಯು ಸಮರ್ಪಿಸಲ್ಪಟ್ಟು ಸಭೆಯು ಸಂಪೂರ್ಣ ಮಾಡಲ್ಪಟ್ಟಿತು

ಚನ್ನರಾಯಪಟ್ಟಣ—ಈ ಊರಿನ ಸ್ಥಿತಿಯು ಆರೋಗ್ಯಕರವಾಗಿದೆ ಸುಭಿಕ್ಷವು ಜನಗಳಲ್ಲಿ ಹರ್ಷವನ್ನುಂಟುಮಾಡಿದೆ ಹಿಂದೆ ಹತ್ತು ಹನ್ನೆರಡು ಸೇರು ಮಾರುತ್ತಿದ್ದ ರಾಗಿ ಈಗ ಹದಿನೈದು ಹದಿನಾರು ಸೇರಿನ ವರೆಗೂ ಮಾರಲ್ಪಡುತ್ತೆ ಅಕ್ಕಿ ಹಿಂದೆ ರೂ ಆರು ಏಳು ಸೇರು ಇದ್ದದ್ದು ಹತ್ತು ಸೇರಿನ ವರೆಗೂ ಮಾರಲ್ಪಡುತ್ತೆ ಇನ್ನೂ ಅಗ್ಗವಾಗಬಹುದೆಂದು ಬಡವರು ಹಿಗ್ಗಿಕೊಳ್ಳುತ್ತಿರುತ್ತಾರೆ ಅರಸೀಕೆರೆಯ ಪ್ಲೇಗಿನ ಸುದ್ದಿಯು ಜನರಲ್ಲಿ ಸ್ವಲ್ಪ ಭೀತಿಯನ್ನುಂಟು ಮಾಡುತ್ತಲಿದೆ. ಜನವರಿ ತಾರೀಖು ಒಂದನೇ ಶನಿವಾರ ಹೊಸ ವರ್ಷದ ಉತ್ಸವವು ಬಹು ಸಂಭ್ರಮವಾಗಿ ಜರಿಗಿತು ಅಮಲ್ದಾರ್ ಮೆ|| ಶ್ರೀನಿವಾಸರಾಯರು ಸರ್ಕಾರಿ ಆಫೀಸರುಗಳನ್ನೂ ಸ್ಥಳೀಯ ದೊಡ್ಡ ಮನುಷ್ಯರನ್ನೂ ಎ ವಿ ಸ್ಕೂಲ್, ಮಿಷನ್ ಸ್ಕೂಲ್ ಮಾಸ್ಟರುಗಳನ್ನೂ ಒಂದೆರಡು ದಿನಗಳ ಹಿಂದೆಯೇ ಬರಮಾಡಿಕೊಂಡು ಮೀಟಿಂಗ್ ನಡಿಸಿದ್ದರು ಮೀಟಿಂಗಿನಲ್ಲಿ ಏರ್ಪಾಡು ಮಾಡಿದ್ದಂತೆ ಶನಿವಾರ ಮಧ್ಯಾಹ್ನ ಎ ವಿ ಸ್ಕೂಲ್ ಮಿಷನ್ ಸ್ಕೂಲ್ ಬಾಲಕ ಬಾಲಕಿಯರನ್ನು ಟ್ರಾವಲರ್ಸ್ ಬಂಗ್ಲೆಗೆ ಬರಮಾಡಿಕೊಂಡು ಬಾಲಕರಿಂದ ಸ್ಪೋರ್ಟ್ಸ್ ಎಂಬ ನಾನಾ ಆಟಗಳನ್ನು ಆಡಿಸಿ ಗೆದ್ದವರಿಗೆ ಬಾಲಕರಿಗೆ ಉಪಯೋಗಕರವಾದ ಪುಸ್ತಕಗಳು, ನೋಟ್‌ಬುಕ್ಕುಗಳು, ಲೇಖಿನಿ, ಸೀಸದಕಡ್ಡಿ ಮೊದಲಾದವುಗಳು ಬಹುಮಾನ ಕೊಡುವುದಾಗಿ ಮಾಡಿದ್ದರು ಮತ್ತು ಬಾಲಕಿಯರಿಗೆ ಅವರಿಗೆ ಪ್ರೀತಿಯಾದ ಬಣ್ಣದ ಗೊಂಬೆಗಳು ಬಾಚಣಿಗೆ ಮುಂತಾದ ಬಹುಮಾನಗಳನ್ನು ಏರ್ಪಾಡು ಮಾಡಿದ್ದರು ಆಟಗಳೆಲ್ಲಾ ಮುಗಿದ ಮೇಲೆ ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚಲ್ಪಟ್ಟಿತು ಕೂಡಿ ಬಂದಿದ್ದ ದೊಡ್ಡ ಮನುಷ್ಯರಿಗೆ ಕಾಫಿ, ಟೀಪಾರ್ಟಿ ಏರ್ಪಡಿಸಲ್ಪಟ್ಟಿತು ಇವೆಲ್ಲವು ತೀರಿದ ಮೇಲೆ ಬಾಲಕಿಯರಿಗೂ ಗೆದ್ದ ಬಾಲಕರಿಗೂ ಅಮಲ್ದಾರರ ಸ್ವಹಸ್ತದಿಂದ ಬಹುಮಾನಗಳು ಹಂಚಲ್ಪಟ್ಟವು, ಅನಂತರ ಬಂಗ್ಲೆಯ ವಠಸಾಲೆಯಲ್ಲಿ ಅಲಂಕರಿಸಲ್ಪಟ್ಟಿದ್ದ ಸಾರ್ವಭೌಮ ಚಕ್ರವರ್ತಿ ಚಕ್ರವರ್ತಿನಿಯರ ಭಾವಚಿತ್ರಗಳ ಎದುರಿನಲ್ಲಿ ಅನಾಲ್ಡ್ರೀ ಅವಿಯಾಗಿ ಸರ್ವರು ನಿಂತಿರಲು ಮಿಷನ್ ಸ್ಕೂಲ್ ಬಾಲಕಿಯರು ಇಂಗ್ಲಿಷಿನಲ್ಲಿ ರಾಷ್ಟ್ರಗೀತೆಯನ್ನು ನಮ್ಮ ಶ್ರೀಮನ್ ಮಹಾರಾಜರ ಮೇಲಣ

ಸ್ತೋತ್ರದ ಪದ್ಯವನ್ನು ಮನೋಹರವಾಗಿ ಹಾಡಿದರು ಅನಂತರ ಬ್ಯಾಂಡಿನವರು ಸಲಾಂಬಾಜವನ್ನು ಬಾರಿಸಿದರು ಆ ವೇಳೆ ಪೋಲೀಸಿನವರು ಭಾವಚಿತ್ರಗಳ ಎದುರಿನಲ್ಲಿ ಮರ್ಯಾದೆಯೊಡನೆ ನಿಂತು ಸೆಲ್ಯೂಟ್ ಮಾಡಿದರು ಆ ಮೇಲೆ ಚಕ್ರವರ್ತಿ ಸಾರ್ವಭೌಮರ ಶ್ರೀಮನ್ ಮಹಾರಾಜರವರ ಸ್ಮರಣೆಯು ಜಯಘೋಷದೊಡನೆ ಬಾಲಕ ಬಾಲಕಿಯರ ಕವಾಯತು ಮುಕ್ತಾಯವಾಯಿತು ಅನಂತರ ಅಮಲ್ದಾರರೇ ಆದಿಯಾಗಿ ದೊಡ್ಡ ಮನುಷ್ಯರೆಲ್ಲರೂ ಬಂಗ್ಲೆಯ ಪಡಸಾಲೆಯಲ್ಲಿ ಸೇರಲು ಸಬ್ ಓವರ್ಸಿಯರ್ ಮೆ॥ ಸದ್ಗುಣ ಮೊದಲಿಯಾರರು ಶಾಪು ನೂತನವಾಗಿ ತರಿಸಿರುವ ಗ್ರಾಮಫೋನ್ ಮೂಲಕ ಕನ್ನಡ, ತೆಲುಗು, ತಮಿಳು, ಹಿಂದುಸ್ಥಾನಿ, ಇಂಗ್ಲಿಷ್ ಭಾಷೆಗಳಲ್ಲಿ ಬಹು ಇಂಪಾದ ಗಾನಗಳು ಸುಮಾರು ಎರಡು ಗಂಟೆಯ ಕಾಲ ನಡಿಸಲ್ಪಟ್ಟು ತುಂಬಾ ಹರ್ಷವನ್ನುಂಟು ಮಾಡಿತು ಅನಂತರ ಮೆ॥ ಅಮಲ್ದಾರರು ಎದ್ದು ನಿಂತು ಸಭಿಕರನ್ನು ಕುರಿತು ಸಾರ್ವಭೌಮ ಪ್ರಜೆಗಳಾದ ನಾವುಗಳೆಲ್ಲರೂ ಒಗ್ಗಟ್ಟಾಗಿ ಸೇರಿ ಈ ನೂತನ ವರ್ಷದಲ್ಲಿ ಸೇರಿರುತ್ತೇವೆ ನಮ್ಮ ನಮ್ಮ ಕೆಲಸಕಾರ್ಯಗಳು ಬೇರೆ ಬೇರೆ ರೀತಿಯಲ್ಲಿದ್ದರೂ ಈಗ ನಾವೆಲ್ಲರೂ ಸೋದರರು, ಸ್ನೇಹಿತರಾಗಿದ್ದೇವೆ ದೇವರು ಈ ನೂತನ ವರ್ಷದಲ್ಲಿ ನಮ್ಮಗಳಿಗೆ ಎಲ್ಲಾ ಅನುಕೂಲ ಪಡಿಸಲಿ ಎಂದು ಹರಸಿದರು ಪುನಃ ಸಾರ್ವಭೌಮರಿಗೂ ಶ್ರೀಮನ್ ಮಹಾರಾಜರಿಗೂ ಜಯಘೋಷಗಳು ಹೇಳಲ್ಪಟ್ಟವು ಸಭಿಕರು ಅಗ್ರಾಸನವನ್ನು ವಹಿಸಿದ್ದ ಅಮಲ್ದಾರರಿಗೂ ಆಟಪಾಟಗಳಲ್ಲಿ ತುಂಬಾ ಪ್ರೋತ್ಸಾಹ ಪಡಿಸುವ ಮತ್ತು ಗ್ರಾಮಫೋನ್ ಗಾನವನ್ನು ನಡಿಸಿದ ಮೆ॥ ಸದ್ಗುಣ ಮೊದಲಿಯಾರರಿಗೂ ಜಯಘೋಷ ಮಾಡಿ ಸಭೆಯು ಮುಕ್ತಾಯವಾಯಿತು ರಾಜಭಕ್ತಿ ಪೂರ್ವಕವಾದ ಈ ಉತ್ಸವವು ಬಹು ಸಮರ್ಪಕವಾಗಿಯೂ ಗಾಂಭೀರ್ಯವಾಗಿಯೂ ನೆರವೇರಿಸಲ್ಪಟ್ಟಿತು

ಕೊಪ್ಪ —ಇಲ್ಲಿ ೮-೧೦ ತಿಂಗಳಿಂದಲೂ ಪ್ಲೇಗ್ ರೋಗವು ಸೌಮ್ಯರೂಪದಲ್ಲಿ ಕಾಣಿಸಿಕೊಂಡು ಜನರ ತಿಳುವಳಿಕೆಗೆ ಬಾರದ ರೀತಿಯಲ್ಲಿ ಅಲ್ಲೊಂದು ಇಲ್ಲೊಂದು ಪ್ರಾಣಗಳನ್ನು ಅಪಹರಿಸುತ್ತಾ ಗುಪ್ತಚೋರನಂತೆ ಸಂಚರಿಸುತ್ತಿತ್ತು ಇದನ್ನು ತಿಳಿದು, ಇಲ್ಲಿನ ಡಾಕ್ಟರವರು ಮತ್ತು ನಮ್ಮ ತಾಲೂಕ್ ಅಮಲ್ದಾರ್ರವರು ಇನಾಕ್ಯುಲೇಷನ್ ಮಾಡುವದಕ್ಕಾಗಿ ಡಾಕ್ಟರನ್ನು ಕಳುಹಿಸಿಕೊಡುವಂತೆ ಮೇಲ್ಪಟ್ಟ ಆಫೀಸರುಗಳಿಗೆ ಬರೆದುಕೊಂಡಿದ್ದರು ಅದರಂತೆ ಕಳೆದ ವಾರ ತರೀಕೆರೆ ಡಾಕ್ಟರ್ ಮೆ॥ ಗುರುರಾಜರವರು ಇಲ್ಲಿಗೆ ಬಂದು ನಾಲ್ಕೈದು ದಿನಗಳ ಪರಿಯಂತರಕ್ಕೂ ಬಹಳ ಸಾಹಸಪಟ್ಟು ಜನರಿಗೆ ಇನಾಕ್ಯುಲೇಷನ್ ಮಾಡಿದರು ಇಲ್ಲಿನ ಡಾಕ್ಟರ್ ಮೆ॥ ನಾರಾಯಣರಾಯರು ಮೊದಲು ಹಾಕಿಸಿಕೊಂಡು ಮಾದರಿ ತೋರಿಸಿದರು ನಮ್ಮ ತಾಲೂಕ್ ಅಮಲ್ದಾರ್ರವರು ಡಾಕ್ಟರವರ ಜೊತೆಯಲ್ಲಿ ಆಗಾಗ್ಗೆ ಬಂದು ಬೀದಿಯಲ್ಲಿ ತಿರುಗಾಡಿ ಅವರವರ ಮನೆ ಮುಂದೆ ನಿಂತು ಜನರಿಗೆ ಬುದ್ಧಿವಾದಗಳನ್ನು ಹೇಳಿ ಇನಾಕ್ಯುಲೇಷನ್ ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರು ಇವರ ಪ್ರೋತ್ಸಾಹಪ್ರೇರಣೆಗಳಿಂದಲೇ ಭಯಭ್ರಾಂತರಾದ ಅನೇಕ ಜನರು ಇನಾಕ್ಯುಲೇಷನ್ ಮಾಡಿಸಿಕೊಂಡದ್ದರಿಂದ ಸುಮಾರು ೧೦೦ ಕ್ಕಿಂತಲೂ ಹೆಚ್ಚಿನ ಜನರು ಈ ಪ್ಲೇಗ್ ನಿರೋಧಕ ಕಾರ್ಯಕ್ಕೆ ತಮ್ಮ ಮನಸ್ಸುಗಳನ್ನೊಪ್ಪಿಸಿ ಸುಖಿಗಳಾಗಿರುತ್ತಾರೆ ಇನಾಕ್ಯುಲೇಷನ್ ಮಾಡಿಸಿಕೊಂಡವರಲ್ಲಿ ಒಬ್ಬನಾದ ನನಗೆ ಸಾಧಾರಣ ಮೈ ಬೆಚ್ಚಗಾಗಿ ೧-೨ ದಿನ ಕೋಳಿನಲ್ಲಿ ಸ್ವಲ್ಪ ನೋವಿದ್ದು ಪೂರ್ಣಗುಣವಾಗಿರುತ್ತದೆ ಇದರಂತೆಯೇ ಹಾಕಿಸಿಕೊಂಡವರೆಲ್ಲರಿಗೂ ಆಗಿರುವದರಿಂದ ಇನ್ನು ಮುಂದೆ ಇನಾಕ್ಯುಲೇಷನ್ ಮಾಡಿಸಿಕೊಳ್ಳಲು ಸಂದರ್ಭವುಂಟಾದರೆ ಯಾರೂ ಭಯಪಡಬೇಕಾದ ಅವಶ್ಯವಿಲ್ಲ ದಯಾಳುಗಳಾದ ಅಮಲ್ದಾರ್ರವರೂ ಡಾಕ್ಟರವರೂ ಇನಾಕ್ಯುಲೇಷನ್ ಮಾಡಿಸಿಕೊಂಡವರ ಮನೆಗಳಿಗೆ ಬಂದು ಅವರವರ ಕ್ಷೇಮವನ್ನು ವಿಚಾರಿಸಿ ಧೈರ್ಯಹೇಳಿ ತಮ್ಮ ಪ್ರೀತಿವಾತ್ಸಲ್ಯಗಳನ್ನು ಪ್ರಕಾಶಪಡಿಸುತ್ತಿದ್ದರು ಇದಲ್ಲವೇ ಅಧಿಕಾರಿಗಳಲ್ಲಿರುವ ಪ್ರಜಾವಾತ್ಸಲ್ಯ ಇದನ್ನೇ ಅಧಿಕಾರಿಗಳ ಮುಖ್ಯಕರ್ತವ್ಯ ಇಂಥಾ ಪ್ರಜಾಹಿತೈಷಿಗಳು ಚಿರಕಾಲವಿದ್ದು ನಮ್ಮ ಮೈಸೂರು ಮಹಾರಾಜಾ ಸರ್ಕಾರದವರ ಸದುದ್ದೇಶಗಳನ್ನು ನೆರವೇರಿಸಿ ಪ್ರಜಾಕೋಟಿಯ ಪ್ರಾಣರಕ್ಷಣೆಯಲ್ಲಿ ನಿರತರಾಗಿದ್ದು ಕೀರ್ತಿಯನ್ನು ಪಡೆಯಲೆಂದು ಹಾರೈಸುತೇನೆ

ಶಿಕಾರಿಪುರ —ಇಲ್ಲಿಯ ಪೇಟೆಯಲ್ಲಿ ಕೆಲವು ಖಾಲಿ ನಿವೇಶನಗಳನ್ನೇ ಜನರು ತಮ್ಮ ಪಾಯಖಾನೆಗಳನ್ನಾಗಿ, ಮಾಡಿಕೊಂಡಿರುವದರಿಂದ, ಗ್ರಾಮದ ನಾಶೀಕ, ಅಕೃಸ್ಟಿಕರವಾಗಿದೆ ಪಬ್ಲಿಕ್ ರಸ್ತೆಯಲ್ಲಿಯೇ ಇಂಥಾ ಅಸಹ್ಯವು ಇರುವದರಿಂದ ಜನರ ಅನಾರೋಗ್ಯಕ್ಕೂ ಇತರ ರೋಗೋಪದ್ರಗಳ ವ್ಯಾಪನೆಗೂ ಅನುಕೂಲವಾಗಿದೆ ಈ ಪ್ಲೇಗ್ ಕಾಲದಲ್ಲಿ, ಇಂಥಾ ಹೇಸಿಗೆ ಇರೋದ್ದರಿಂದ ಈಗಿನ ಹೊಸ ಅಮಲ್ದಾರರೂ ಮುನಸೀಪಾಲಿಟಿಯವರೂ ಈ ವಿಷಯ ಹೆಚ್ಚು ಗಮನ ಕೊಟ್ಟು ಕ್ರಮಪಡಿಸಬೇಕಾಗಿದೆ ಅಲ್ಲದೆ ಇದರೊಂದಿಗೆ ಅಲ್ಲಲ್ಲಿ ಜನರ ಹೇಸಿಗೆಗೂ ಇತರ ದುರ್ವಾಸನೆಗೂ ಅನುಗುಣವಾಗಿರುವ, ಹಳ್ಳಕೊಳ್ಳಗಳನ್ನೂ ಸಹ, ಮುನಸೀಪಾಲಿಟಿಯವರು, ಹಣ ಖರ್ಚುಮಾಡಿ, ಮುಚ್ಚಿಸಬೇಕಾಗಿದೆ ಇದು ಮಲೆನಾಡು ಪ್ರಾಂತ್ಯವಾದರೂ ಜನರು ಇಲ್ಲಿ ನೀರಿಗಾಗಿ ಪಡುವ ಶ್ರಮ ನೋಡಿದರೆ, ಬೈಲು ಸೀಮೆಯೇ ಇದಕ್ಕಿಂತ ಮೇಲೆಂದು, ಯೋಚಿಸಬೇಕಾಗುತ್ತೆ ಜನರಿಗೆ ಪೇಟೆಯಲ್ಲಿ ನೀರಿಗೆ ಹೇಳಲಸಾಧ್ಯವಾದ ಕಷ್ಟಗಳಿವೆ ಅದಕೋಸ್ಕರ ಈ ಬೇಸಿಗೆ ಕಾಲದಲ್ಲಿ, ಸಂಬಂಧಿಸಿದ ಈ ಮನೆಗಳಿಗೇನಾದರೂ ಅಗ್ನಿ ಪ್ರವೇಶವಾದರೆ, ಸುಮಾರು ||| ಮೈಲು ದೂರದಲ್ಲಿರುವ ಮಠದ ಭಾವಿ ಮೊದಲಾದವುಗಳಿಂದ ನೀರು ತಂದು ಆರಿಸುವದರೊಳಗಾಗಿ, ಪೇಟೆಯು ಅರ್ಧಭಾಗವೇ ಬೆಂಕಿಯಿಂದ ನಾಶವಾಗಬಹುದು ಆದ್ದರಿಂದ ಈಗ ಈ ತೊಂದರೆಯನ್ನು ನೀಗಿಸಲೋಸುಗ ಸ್ಯಾಂಕ್ಷನ್ ಆಗಿರುವ ಹಣದಲ್ಲಿ ಪೇಟೆಗೆ ಲಗತ್ತಾಗಿ, ಕೇವಲ ಸಮೀಪವಾಗಿರುವ ಸ್ಥಾನದಲ್ಲಿಯೇ ಭಾವಿ ತೆಗೆಯಿಸಿದರೆ, ಹೆಚ್ಚು ಪ್ರಜಾ ಸಂಖ್ಯೆಯಿಂದ ಭರಿತವಾಗಿರುವ ಈ ಪೇಟೆಗೆ ಪುಣ್ಯೋದಯವಾದೀತೆಂದು ಹೇಳಬಹುದು ಅಲ್ಲದೆ ಅನೇಕ ವರುಷಗಳಿಂದ ತಿರುಗಣೆ ಮೊದಬರುವದೆಂದು ಜನರು ನಿರೀಕ್ಷಿಸಿ ನಿರೀಕ್ಷಿಸಿ, ದಣಿದರು ಅನೇಕ ವರುಷಗಳಿಂದ ಬರೀ ಅಂದಾಜು ಪಟ್ಟಿಗಳು ತಯಾರಾಗುವವೇ ಹೊರತು ಕಾರ್ಯ ಮಾತ್ರ ಸಿದ್ಧಿಯಾಗಲಿಲ್ಲ ಈ ತಿರುಗಣೆ ಮೋರಿ, ಕ್ರಮಪಟ್ಟರೆ ಹೊನ್ನಾಳಿ ಶಿಕಾರಿಪುರ, ಈ ಎರಡು ತಾಲ್ಲೋಕುಗಳಿಗೂ ತುಂಬ ಸಮೃದ್ಧಿಯೂ, ನೀರಿನ ವಸ್ತಿಯೂ, ಜಾಸ್ತಿಯಾಗುವದಲ್ಲದೆ ಇದರಿಂದ ಸರ್ಕಾರಕ್ಕೇ ಕೇವಲ ಫಾಯಿದೆ ಉಂಟು ಈ ಭಾಗದಲ್ಲಿ ಸರ್ಕಾರದವರು, ಅವಶ್ಯ ಗಮನಿಸಿ, ಉಪಕಾರ ಮಾಡಬೇಕಾಗಿದೆ ಇಲ್ಲಿಯ ಭಾವಾಜಿ ಮಠದಲ್ಲಿ, ಸನ್ಯಾಸಿ ಭಾವಾಜಿಯವರು, ಆರೆರ ಜಾತಿಯ ಅಥವಾ ಮರಾಠಿಯವರ ಮಹನೀಯರಿಗೆಲ್ಲಾ ವಿಶೇಷ ಸಂಭ್ರಮದ ಭೋಜನಾ ಸತ್ಕಾರವನ್ನು ತಮ್ಮ ಭಿಕ್ಷಾಟನೆಯಿಂದ ಮಾಡಿಸಿ, ತೃಪ್ತಿಪಡಿಸಿದರು ಅಲ್ಲದೆ ಕೆಲವು ಒಳೆಗಳ ಬಹುವಚನದ ಕುಸ್ತಿಗಳನ್ನು ಸಹಾ ಮಾಡಿಸಿ, ಅನೇಕರಿಗೆ ಸಂತೋಷವನ್ನಿತ್ತರು ತಮ್ಮ ಮತಸಂಬಂಧವಾಗಿಯೂ ಮತ್ತು ತಮ್ಮ ಜನರು ಪ್ರವರ್ಧಮಾನಕ್ಕೆ ಬರುವ ವಿಶೇಷ ಕಾರ್ಯ ಸಾಧಕಗಳ ವಿಷಯವಾಗಿಯೂ ಕೆಲವು ಉಪನ್ಯಾಸಗಳನ್ನು ಮಾಡಿದರೆಂದೂ ವರ್ತಮಾನ —

ಇಲ್ಲಿ ಸುಮಾರು ೧೨ ವರುಷದ ಯುವತಿಯು ನೀರು ತರಲು ಹೋಗಿ ಕಾಲು ತಪ್ಪಿ ಭಾವಿಗೆ ಬಿದ್ದು ಮೃತ್ಯುವಶಳಾದಳು ಈ ತಾಲ್ಲೋಕಿಗೆ ಸೇರಿದ ಜ್ಯಾಡಗನಹಳ್ಳಿ ಎಂಬ ಗ್ರಾಮದಲ್ಲಿ ಸ್ತ್ರೀ ಸಂಬಂಧಗಳಿಂದ ಒಬ್ಬನನ್ನು ಖೂನಿ ಮಾಡಿದರು ಈ ಬಗ್ಗೆ ಶಿವಮೊಗ್ಗಾ ಪೋಲೀಸ್ ಸೂಪರಿಂಟೆಂಡೆಂಟರು ಮೆ॥ ರಾಣೋಜಿರಾಯರು ಬಂದು ಎಲ್ಲಾ ವಿದ್ಯಮಾನ ಪರಿಶೀಲನೆ ಮಾಡಿದರೆಂದು ವರ್ತಮಾನ ಇಲ್ಲಿಯ ಲಿಂಗಾಯಿತ ಮಹನೀಯರ ಪೈಕಿ ಗತಿಸಿದ ಹಲಕಟ್ಟಿ ಮೆ॥ ವೀರಬಸಯ್ಯನವರ ಮೆಂಬರ್ ಸ್ಥಾನಕ್ಕೆ ಈ ಮಹನೀಯರ ಪೈಕಿಯೇ ಇನ್ನೂ ಯಾರೊಬ್ಬರು ಚುನಾಯಿಸಲ್ಪಡಲಿಲ್ಲವೆಂದು ವರ್ತಮಾನ ಗತಿಸಿದ ಮೆ॥ ಗುರುಬಸಯ್ಯನವರು ಎಂಬುದು ಹಿಂದೆ ಮಿಸ್ಪ್ರಿಂಟಾಗಿತ್ತು ಗತಿಸಿದ ಮೆ॥ ವೀರಬಸಯ್ಯನವರು ಎಂಬುವದು ಸರಿ) ಈ ಗುರುಬಸಯ್ಯನವರು ಅವರ ತಮ್ಮಂದಿರರಾಗಿ, ಜೀವಿತರಾಗಿದ್ದಾರೆ ಇಲ್ಲಿ ಲಿಂಗಾಯಿತರ ಸಂಖ್ಯೆಯೇ ಜಾಸ್ತಿಯಾಗಿರುವದರಿಂದಲೂ ಅವರಲ್ಲಿಯೂ ಇನ್ನೂ ಇತರ ಕೋಮುಗಳ ಕೆಲವರಲ್ಲಿಯೂ ಹಾಲಿ ಮೆಂಬರಾಗಿರುವ ಕೆಲವರಿಗಿಂತಲೂ ಮತ್ತು ಇತರರಿಗಿಂತಲೂ ಹೆಚ್ಚು ಕಂಡಾಬು ಮೊಹತರ್, ಇತ್ಯಾ ಕೊಡುತ್ತಾರಾದ್ದರಿಂದ ಇಂಥವರೇ ಚುನಾಯಿಸಲ್ಪಡುವದು ಮುನಸೀಪಾಲಿಟಿಗೆ ಕೇವಲ ಸಹಾಯವೆಂದೂ ತೋರುತ್ತೆ ಇದೇ ತಾಲ್ಲೋಕಿಗೆ ಸೇರಿದ ಶಿರಳಕೊಪ್ಪದ ಆಸ್ಪಟಲ್ ಅಸಿಸ್ಟಂಟರಾಗಿದ್ದ ಮೆ॥ ಸಿ ಬಸಪ್ಪಾಚೆಟ್ಟಿಯವರಿಗೆ ಮುಳಬಾಗಿಲಿಗೆ ವರ್ಗವಾದ್ದರಿಂದ ಅಲ್ಲಿಯ ಮಹನೀಯರೆಲ್ಲರೂ ವಿಶೇಷ ಮರ್ಯಾದೆಗಳಿಂದಲೂ ಸಂಗೀತ ವಗೈರೆಗಳಿಂದಲೂ ಅವರನ್ನು ಸಾಗಕಳುಹಿಸಿದರು ಅವರು ಸಜ್ಜನ ಪ್ರಿಯರಾಗಿಯೂ ದುರ್ಜನ ತ್ಯಾಜ್ಯರಾಗಿಯೂ ಇದ್ದರೆಂದೂ ಇಂಥವರು ತಮ್ಮನ್ನು ಬಿಟ್ಟಿದ್ದು ತಮಗೆ ಸಾನೆ ಖೇದವೆಂದೂ ಜನರು ಮಾತಾಡುತ್ತಿರುವರು ಅದೇ ಶಿರಾಳಕೊಪ್ಪದ ಹಾಲಿ ನಿವಾಸಿ ಮೆಂಬರ್ ಮೆ॥ ಗಬ್ಬೂರು ಮಡಿವಾಳಪ್ಪನವರ ಕಡೆಯವರಿಗೆ ಇವರಿಗೆ ಕೊಡಬೇಕಾದ ಮೌಲ್ಯಕ್ಕೆ ಬ್ಯಾಡಗಿಯ ಒಬ್ಬ ಮಹನೀಯರು ನೂರು ರೂಪಾಯಿಯ ನೋಟು ಕೊಟ್ಟರೆಂದೂ ಅವರು ಕೆಲಸಗಳ ಅನಿವಾರ್ಯದಿಂದ ಆ ಎರಡು ತುಂಡುಗಳನ್ನು ಹಾಗೆಯೆ ಜೇಬಿನಲ್ಲಿಟ್ಟುಕೊಂಡು ಊರಿಗೆ ಬಂದು ಪರೀಕ್ಷಿಸುವಲ್ಲಿ ಈ ಎರಡು ತುಂಡುಗಳೂ ಬೇರೆ ಬೇರೆ ನಂಬರುಗಳಾಗಿರುವದನ್ನು ಕಂಡು, ಅವರು ಬ್ಯಾಡಗಿಯ ಶೆಟ್ಟರಿಗೆ ಬರೆಯಲಾಗಿ ಅವರು ಹಿಂದೆ ತಾವು ಕೊಟ್ಟದ್ದು ಸರಿಯಾಗಿತ್ತೆಂದು ಉತ್ತರ ಕೊಟ್ಟರಂತೆ ಹಾಲಿ ಮೆ॥ ಗಬ್ಬೂರು ಮಡಿವಾಳಪ್ಪನವರಲ್ಲಿ ಈಗ B B 66 41051 ಮದ್ರಾಸ್, ಈ ನಂಬರಿನ ಅರ್ಧ ಭಾಗದ ನೋಟೂ ಮತ್ತು B B 65 80794 ಮದ್ರಾಸ್ ಎಂಬುವರ್ಧಭಾಗದ ಮತ್ತೊಂದು ನೋಟೂ ಇರುತ್ತದೆ B B 65 80794 ಮದ್ರಾಸ್ ಈ ಅರ್ಧ ನೋಟನ್ನು ಅಪೇಕ್ಷಿಸುವವರು, ತಮಗೆ B B 66 41051 ಮದ್ರಾಸ್ ಈ ಅರ್ಧ ಭಾಗವನ್ನ ಕೊಟ್ಟರೆ ಅದನ್ನು ಕೊಡುವರೆಂದೂ ಈ ಮೂಲಕ ತಿಳಿಸಿದ್ದಾರೆ ಅದೇ ಶಿರಾಳಕೊಪ್ಪದ ಹಾಲಿ ಈಗ ಜಾವಗಲ್ಲು ಎಂಬುವ ಗ್ರಾಮದಲ್ಲಿರುವ ಕಂಟ್ರಾಕ್ಟರ್ ಮೆ॥ ಭರಮಯ್ಯ ಎಂಬುವವರು ಹಿಂದೆ ಇಲ್ಲಿಯ ತಾಲ್ಲೋಕು ಕಚೇರಿಯಿಂದ ತಪ್ಪಿಸಿಕೊಂಡು ಹೋಗಿದ್ದ ಕಳ್ಳರಾದ ಕೊರಚರ ಪೈಕಿ ಒಬ್ಬನನ್ನು ಮೊಳಕಾಲ್ಮೂರು ಚಾವಡಿಗೆ ವೇಷ ಮರೆಯಿಸಿಕೊಂಡು ಬಂದಿದ್ದ ಇವನನ್ನ ಹಿಡಿದರೆಂದೂ ಆಪ್ತರಲ್ಲಿ ಇವನು ವೀರೆ ಸನ್ಯಾಸಿ ಮೂಲಕ ಫಲಾಯನ ಸೂತ್ರ ಬೆಳಸುವದರಲ್ಲಿದ್ದನೆಂದೂ ಅಂಥಾ ಕಳ್ಳನನ್ನು ಮೆ॥ ಭರಮಯ್ಯನವರು ಇವನೇ ತಪ್ಪಿಸಿಕೊಂಡು ಬಂದಿರುವ ಕಳ್ಳನೆಂದು ಅತಿಪ್ರಯತ್ನದಿಂದ ಹಿಡಿದು, ಆ ಕಳ್ಳನನ್ನು ತಂದು ಇಲ್ಲಿಯ ಕಚೇರಿಗೆ ತಲುಪಿಸಿರುವರು, ಮೊಳಕಾಲ್ಮೂರು ಭರಮಯ್ಯನವರು ಸರ್ಕಾರದವರಿಗೆ ಬದಲಾಗಿ ಹೆಚ್ಚು ಮೆಹನತ್ತಿನಿಂದ ಕಳ್ಳನನ್ನು ಹಿಡಿದು ತಂದಿರುವದಕ್ಕಾಗಿ ಗೌರ್ನಮೆಂಟಿನವರು ಇವರಿಗೆ ಏನಾದರೂ ವಿಶೇಷ ಬಹುಮಾನ ಕೊಡಬೇಕಾಗಿದೆ ಹಾಗೆ ಕೊಟ್ಟ ಭಾಗದಲ್ಲಿ ಇತರರಿಗೂ ಇದರಲ್ಲಿ ಅಭಿರುಚಿ ಹುಟ್ಟಿ ಅವರೂ ಸಹ ಗುಪ್ತ ಕಳ್ಳರನ್ನು ಪತ್ತೆ ಮಾಡುವರು ಇದರಿಂದ ಕಳ್ಳರ ನಿಲ್ಲಿಸ ಕೇವಲ ಸಹಾಯವಾಗುವದು

ಕೈಗಾರಿಕೆಯ ವಿಷಯಗಳು

ಬೊಂಬಾಯಿ ಅಧಿಪತ್ಯದ ಕೈನೇಗೆ ಕಸಬು

ಬೊಂಬಾಯಿ ಸರ್ಕಾರದವರು ತಮ್ಮ ಅಧಿಪತ್ಯದ ಕೈಮಗ್ಗದ ನೇಗೆ ಕಸಬಿನ ಪ್ರಥಮಸ್ಥಿತಿಯನ್ನು ತಿಳಿದು ಅದಕ್ಕೆ ಒತ್ತಾಸೆಯಾಗಿ ಸುಲಭಸಾಧ್ಯವಾದ ಸಲಹೆಗಳನ್ನು ಸೂಚಿಸುವಬಗ್ಗೆ ಇಂಡಿಯಾ ಗೌರ್ನಮೆಂಟಿನಿಂದ ವೇತನವನ್ನು ಪಡೆದು ಇಂಗ್ಲೆಂಡಿನಲ್ಲಿ ನೇಗೆ ಕಸಬನ್ನು ಕಲಿತುಕೊಂಡು ಬಂದಿರುವ ಮೆ॥ ಪಿ ಎನ್ ಮೆಹತಾಯವರನ್ನು ನೇಮಿಸಿದ್ದರು ಮೆ॥ ಮೆಹತಾಯವರು ಈ ಕಸಬು ನೆಲಗೊಂಡಿರುವ ಮುಖ್ಯಸ್ಥಳಗಳನ್ನು ನೋಡಿಕೊಂಡುಬಂದು ಬರೆದ ರಿಪೋರ್ಟನಮೇರೆ ಗೌರ್ನಮೆಂಟನವರು ಮಾಡಿರುವ ಹುಕುಮಿನ ಕೆಲವು ಮುಖ್ಯಾಂಶಗಳನ್ನು ಇದರಡಿ ನಮೂದಿಸಿರುತ್ತೇವೆ

ಮೆ॥ ಮೆಹತಾಯವರು ಅಭಿಪ್ರಾಯಪಡುವದೇನಂದರೆ —ಸಧ್ಯದಲ್ಲಿ ಆಚರಣೆಯಲ್ಲಿರುವ ವಿಧಾನಗಳಲ್ಲಿ ಕೆಲವು ದೋಷಗಳಿರುತ್ತವೆ ಹಾಸು ನುಲಿಯುವದಕ್ಕೂ ಮತ್ತು ಮಗ್ಗದಮೇಲೆ ನುರಿಯುವದಕ್ಕೂ ವಿಶೇಷ ಕಾಲಹರಣವೂ ಮತ್ತು ಖರ್ಚ ಆಗುತ್ತದೆ ಉಪಯೋಗಿಸುವ ಮಗ್ಗವು ತುಂಬಾ ಹಳೇ ತರಹಾದ್ದು ನೂಲು ಕೊಂಡುಕೊಳ್ಳುವದೂ ಮತ್ತು ತಯಾರಾದ ಸರಕನ್ನು ಮಾರುವದೂ ವ್ಯಾಪಾರರೀತಿಗನುಗುಣವಾಗಿರುವದಿಲ್ಲ ತಿದ್ದುಪಡಿಯಾದ ನೂತನ ಮಗ್ಗವನ್ನು ಉಪಯೋಗಿಸುವದಕ್ಕೆ ಮೊದಲು ಹಾಸುತಯಾರಿಸಿ ಮಗ್ಗಕ್ಕೆ ಒದಗಿಸುವ ಕ್ರಮವನ್ನು ಸರಿಪಡಿಸಿಕೊಳ್ಳಬೇಕು ಅಧಿಪತ್ಯದಲ್ಲಿನ ಅನೇಕ ನೇಗೆಯುವರ ಅವಶ್ಯಕತೆಗೆ ತಕ್ಕಹಾಗೆ ತಿದ್ದುಪಡಿಯಾದ ಮಗ್ಗವು ಇನ್ನೂ ಮಾರಂಟಕ್ಕೆ ಬಂದಿಲ್ಲ ಈಗಿನ ಹಳೇಮಗ್ಗಕ್ಕೇನೆ ಸರಿಯಾಗಿ ನುಲಿದ ಹಾಸುಗಳನ್ನು ಒದಗಿಸುವದರಿಂದ ಸರಕಿನ ತಯಾರಿಯನ್ನು ಸಧ್ಯದಲ್ಲಾಗುವದಕ್ಕಿಂತಲೂ ಇನ್ನೂ ಶೇಕಡಾ ೨೦ ರಷ್ಟು ಹೆಚ್ಚಿಸಬಹುದು

ಹೊಸ ಮಾದರಿ ಮಗ್ಗದ ಕುಂಟೆಯನ್ನು ಒದಗಿಸಿಕೊಳ್ಳಬೇಕಾದರೆ ಇದರ ಜೊತೆಗೆ ನೂಲು ರಾಟೆಯಾಡುವ ಯಂತ್ರಗಳು, ಹಾಸು ನುಲಿಯುವ ಯಂತ್ರಗಳು, ಇವೇ ಮೊದಲಾದ ಯಂತ್ರಗಳನ್ನು ಉಪಯೋಗಿಸಬೇಕಾಗುತ್ತದೆ ಈ ಯಂತ್ರಗಳ ಉಪಯೋಗದಿಂದ ಹಾಸು ತಯಾರುಮಾಡಿಕೊಳ್ಳುವದು ಒಬ್ಬಂಟಿಗರಿಗೆ ಸಾಧ್ಯವಾದ ಕೆಲಸವಲ್ಲ ಇದಕ್ಕೆ ಬಹಳ ಬಂಡವಾಳ ಬೇಕು ಮತ್ತು ಈ ಯಂತ್ರ ಸಾಧನಗಳಿಂದ ತಯಾರಾಗುವ ಹಾಸು ಒಬ್ಬ ನೇಗೆಯವನಿಗೆ ಸಾಕೆ ಹೆಚ್ಚಾಗುವದು ಇಷ್ಟೇ ಅಲ್ಲದೆ ನೇಗೆಯುವರೆಲ್ಲಾ ಬಹಳವಾಗಿ ವರ್ತಕರಿಗೆ ಸಾಲಗಾರರಾಗಿರುತ್ತಾರೆ ಈ ವರ್ತಕರು ನೇಗೆಯುವರಿಗೆ ನೂಲನ್ನು ಕೊಟ್ಟು ಇದಕ್ಕೆ ಬದಲಾಗಿ ತಯಾರಾದ ಬಟ್ಟೆಯನ್ನು ತೆಗೆದುಕೊಳ್ಳುವರು ಇದರ ಪರಿಣಾಮವೇನಂದರೆ ನೇಗೆಯುವರು ಹಣಸ್ಥರ ಕೈವಶರಾಗಿರುವದರಿಂದ ತಿದ್ದುಪಾಟಾದ ನೇಗೆ ಕ್ರಮಗಳಿಂದಲೂ ಶ್ರೇಷ್ಠವಾದ ಯಂತ್ರೋಪಕರಣಗಳ ಉಪಯೋಗದಿಂದಲೂ ಬರುವ ಹೆಚ್ಚಿಗೆ ಆದಾಯವು ನೇಗೆಯುವರಿಗೆ ಸೇರದೆ ವರ್ತಕನಿಗೆ ಸೇರಿ ಈ ವರ್ತಕನಿಂದ ಕಾರಿಗಾರನಿಗೇನೋ ಜೀವನಕ್ಕೆ ಸಾಕಾಗುವಷ್ಟು ಮಾತ್ರ ಸಲ್ಲುವದು ಆದಕಾರಣ ಈ ಕಸಬುದಾರಿಯನ್ನು ಅಭಿವೃದ್ಧಿಪಡಿಸಲು ಮಾಡಬೇಕಾದ ಪ್ರಯತ್ನಗಳಲ್ಲಿ ನೇಗೆಯುವರ ದ್ರವ್ಯಾನುಕೂಲತೆಯನ್ನು ಹೆಚ್ಚಿಸುವದೇ ಮೊದಲನೆ ಸಲಹೆಯಾಗಿರಬೇಕು ಇದಕ್ಕಾಗಿ ಈ ಕಾರಿಗಾರರ ಸಂಘಗಳನ್ನು ಸ್ಥಾಪಿಸಿ ತನ್ಮೂಲಕ ಮೆಂಬರುಗಳ ಜಂಟಿ ಆಧಾರದಮೇಲೆ ನೂಲನ್ನು ರಿಯಾಯಿತಿ ದರಗಳಿಗೆ ಕೊಳ್ಳಬೇಕು, ಮೆಂಬರುಗಳ ಮಗ್ಗಗಳಿಗೆ ಬೇಕಾಗುವ ಹಾಸುಗಳನ್ನು ಒದಗಿಸುವದಕ್ಕಾಗಿ ಹಾಸು ನುಲಿಯುವ ಕಾರ್ಖಾನೆಗಳನ್ನು ಏರ್ಪಡಿಸಿಕೊಳ್ಳಬೇಕು, ಮತ್ತು ತಿದ್ದುಪಡಿಯಾದ ಮಗ್ಗಗಳು ಕ್ರಯಕ್ಕೆ ದೊರೆತಾಗ ಅವುಗಳನ್ನು ನೇಗೆಯುವರ ಉಪಯೋಗಕ್ಕಾಗಿ ಕೊಳ್ಳಬೇಕು ನೇಗೆಯುವರು ತಮ್ಮ ತಮ್ಮ ನಂಬಿಕೆ ವಿಶ್ವಾಸಗಳನ್ನು ನ್ಯಾಯರೀತಿಯಲ್ಲಿ ವಿನಿಯೋಗಿಸುವದನ್ನು ಕಲಿತು ಎಲ್ಲರೂ ಸೇರಿ ಸಂಘತ್ವೇನ ಕೆಲಸ ಮಾಡುವದರ ಪ್ರಯೋಜನಗಳನ್ನು ತಿಳಿದುಕೊಂಡವಿನಹ ಇವರ ಸ್ಥಿತಿಯು ನಿಜವಾದ ರೀತಿಯಲ್ಲಿ ಉತ್ತಮಪಡಲಾರದು

ಮೇಲ್ಕಂಡ ಮೆ॥ ಮೆಹತಾಯವರ ಅಭಿಪ್ರಾಯಗಳನ್ನು ಪರ್ಯಾಲೋಚಿಸಿ ಸರ್ಕಾರದವರು ಹುಕುಂ ಮಾಡಿರುವದೇನಂದರೆ ಪ್ರಥಮದಲ್ಲಿ ನೇಗೆಯುವರನ್ನು ಒಟ್ಟುಗೂಡಿಸಿ ಜಂಟಿಯಾಗಿ ಕೆಲಸ ನಡೆಸುವದಕ್ಕಾಗಿ ಅಲ್ಲಲ್ಲಿ ಅನ್ಯೋನ್ಯ ಸಹಾಯಕ ಸಂಘಗಳನ್ನು ಸ್ಥಾಪಿಸುವ ಸನ್ನಾಹ ಮಾಡಬೇಕು ಈ ಕೆಲಸವು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರವರಿಗೆ ಸೇರತಕ್ಕದ್ದು ಇವರಿಗೆ ಸಹಾಯವಾಗಿ ನೇಗೆ ಕಸಬಿನಲ್ಲಿ ಘಟ್ಟಿಗನಾದ ಒಬ್ಬ ಅಸಿಸ್ಟೆಂಟನ್ನು ಸಧ್ಯಕ್ಕೆ ಮೂರು ವರುಷಗಳ ಪರ್ಯಂತರ ಮೊಕರರು ಮಾಡಿರುತ್ತೆ ಈ ಅಸಿಸ್ಟೆಂಟರು ಅಧಿಪತ್ಯದ ಕೈಮಗ್ಗದವರಲ್ಲಿ ಅನ್ಯೋನ್ಯಸಹಾಯಕ ಸಂಘಗಳನ್ನು ಏರ್ಪಡಿಸುವ ಮೂಲಕ ಕಾರಿಗಾರರ ಹೀನಸ್ಥಿತಿಯನ್ನು ತಪ್ಪಿಸಿ ಆ ಜನರು ಹಾಸುನುಲಿಯುವ ಕಾರ್ಖಾನೆಗಳ ಸ್ಥಾಪನೆ, ತಿದ್ದುಪಡಿಯಾದ ಮಗ್ಗಗಳನ್ನು ಕೊಳ್ಳೋಣ, ತಯಾರಾದ ತಮ್ಮ ಸರಕನ್ನು ಸರಿಯಾದ ಕ್ರಯಕ್ಕೆ ವಿಕರೀಮಾಡುವದು, ಇತ್ಯಾದಿಗಳಿಂದ ತಮ್ಮ ಕಸಬುದಾರಿಯಲ್ಲಿ ನೂತನ ಕ್ರಮಗಳನ್ನು ಅನುಸರಿಸುವಂತೆ ಮಾಡುವ ಭಾಗದಲ್ಲಿ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರವರಿಗೆ ಸಲಹೆಗಳನ್ನು ಕೊಡುತ್ತಿರಬೇಕು

ವಿದೇಶ ವರ್ತಮಾನಗಳು

ತುರ್ಕಿ ರಾಜ್ಯಭಾರವನ್ನು ನಡಿಸುತ್ತಿದ್ದ ಮಂತ್ರಿಯು ರಾಜೀನಾಮೆ ಕೊಟ್ಟಿರುವರೆಂತಲೂ ರೋಂ ನಗರದಲ್ಲಿ ರಾಯಭಾರಿಯಾಗಿದ್ದ ಹಾಕ್ಕಿಬೇ ಎಂಬವರು ತುರ್ಕಿರಾಜ್ಯಕ್ಕೆ ಹೊಸ ಮಂತ್ರಿಯಾಗಿರುವರೆಂತಲೂ ತಿಳಿದು ಬರುತ್ತದೆ

* * *

ರಷ್ಯಾ ದೇಶದ ಡ್ಯೂಮಾ ಪಾರ್ಲಿಮೆಂಟ್ ಸಭೆಯವರು ತಮ್ಮ ನೌಕದ ಸೈನ್ಯವನ್ನು ಉತ್ತಮ ಸ್ಥಿತಿಯಲ್ಲಿಡುವದಕ್ಕೆ ೧೫೦ ಲಕ್ಷ ರೂಪಾಯಿಗಳನ್ನು ವಿನಿಯೋಗಿಸುವಂತೆ ಅಂದಾಜು ಹಾಕಿರುತ್ತಾರೆ

* * *

ವಿಲಾಯಿತಿಯಲ್ಲಿ ನಡೆದ ಇಂಜನಿಯರಿಂಗ್ ಪರೀಕ್ಷೆಯಲ್ಲಿ ಮಂಗಳೂರಿನಿಂದ ಅಲ್ಲಿಗೆ ಹೋಗಿದ್ದ ಮೆ॥ ಉಳ್ಳಾಲ್ ಸಂಜೀವರಾವ್ ಎಂಬವರು ತೇರ್ಗಡೆಯಾಗಿರುತ್ತಾರೆ ಇವರು ಮಾಂಚೆಸ್ಟರ ಪಟ್ಟಣದಲ್ಲಿರುವ ಸರ್ವ ಕಲಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು

* * *

ಕಳೆದ ತಿಂಗಳು ನೂಜಿಲೆಂಡಿನಲ್ಲಿ ಡಾಕ್ಟರ್ ಅಲೆಕ್ಸಾಂಡರ್ ಗ್ರೀವ್ ಡಫ್ ಎಂಬ ವೈದ್ಯರು ತಮ್ಮ ೭೪ ನೆ ವಯಸ್ಸಿನಲ್ಲಿ ಕಾಲವಾದರು ಇವರು ಇಂಡಿಯಾ ದೇಶಕ್ಕೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ತಂದ ಡಾಕ್ಟರ್ ಡಫ್ ಎಂಬ ಪ್ರಸಿದ್ಧ ಪಾದ್ರಿಗಳ ಮಕ್ಕಳು

* * *

ಅಮೆರಿಕ ದೇಶದ ಸಂಯುಕ್ತ ಸಂಸ್ಥಾನಗಳಲ್ಲಿ ವಿಪರೀತವಾದ ಮಂಜಿನ ಮಳೆಯೂ ಮಂಜಿನ ಗಾಳಿಯೂ ಪ್ರಾರಂಭವಾಗಿ ಅನೇಕರು ಮನೆಮಠಗಳನ್ನು ಕಳೆದುಕೊಂಡು ಅಲೆಯುವಸ್ಥಿತಿಗೆ ಬಂದಿರುತ್ತಾರೆ ಕೆಲವರು ಇವುಗಳ ಹೊಡತದಿಂದ ಪ್ರಾಣಗಳನ್ನು ಕಳೆದುಕೊಂಡಿರುವರು

* * *

ಅಮೆರಿಕ ದೇಶದ ವ್ಯವಸಾಯಗಾರರು ಇದುವರೆವಿಗೂ ಹಬೆಯ ಯಂತ್ರಗಳ ಸಹಾಯದಿಂದ ತಮ್ಮ ಕೆಲಸಗಳನ್ನು ಸಾಗಿಸಿಕೊಂಡು ಬರುತ್ತಿದ್ದರು ಈಗ ಆ ದೇಶದಲ್ಲಿ ವಿದ್ಯುಚ್ಛಕ್ತಿಯ ಸಹಾಯವು ಹೆಚ್ಚಾಗಿ ದೊರಕುವುದರಿಂದ ಇನ್ನು ಮೇಲೆ ವ್ಯವಸಾಯದ ಯಂತ್ರಗಳನ್ನು ಈ ನೂತನ ಶಕ್ತಿಯಿಂದ ನಡಿಸುವರು

* * *

ಇಂಗ್ಲೆಂಡ್ ದೇಶದ ಮಂತ್ರಿಶ್ರೇಷ್ಠರಾಗಿದ್ದ ಮೆ॥ ಗ್ಲಾಡಸ್ಟನ್ ರವರ ಜನ್ಮದಿನವನ್ನು ಇಂಗ್ಲೆಂಡ್ ಗ್ರೀಸ್ ಮತ್ತು ಬಲ್ಗೇರಿಯಾ ದೇಶಗಳಲ್ಲಿ ಬಹಳ ಅಟ್ಟಹಾಸದಿಂದ ಕೊಂಡಾಡಿದರು ಗ್ರೀಸ್ ದೇಶದ ರಾಜಧಾನಿಯಾದ ಏಥೆನ್ಸ್ ಪಟ್ಟಣದಲ್ಲಿರುವ ಮೆ॥ ಗ್ಲಾಡಸ್ಟನ್ ರವರ ಪ್ರತಿಮೆಯನ್ನು ಹೂಮಾಲೆಗಳಿಂದ ಅಲಂಕರಿಸಿದ್ದರು

* * *

ವಿಲಾಯಿತಿಯಲ್ಲಿ ಕಾಲವಾದ ಮೆ॥ ಬಾರ್ನ್ಸ್ಲೇಟರ ಎಂಬ ರೇಷ್ಮೆ ವ್ಯಾಪಾರಿಯು ೨೨ ಲಕ್ಷ ರೂಪಾಯಿಗಳನ್ನೂ, ಫೀಲಿಕ್ಸ್ ಕೊಬ್ಬಾಲ್ಡ್ ಎಂಬವನು ೪ ಲಕ್ಷ ರೂಪಾಯಿಗಳನ್ನೂ, ಚಾರ್ಲ್ಸ್ ಥಾಮಸ್ ಎಂಬವನು ೧೫ ಸಾವಿರ ರೂಪಾಯಿಗಳನ್ನೂ, ಎಲ್ಲಿಸ್ ಫ್ರಾಂಕ್ಲಿನ್ ಎಂಬವನು ೬೬ ಲಕ್ಷ ರೂಪಾಯಿಗಳನ್ನೂ ನಾನಾತರವಾದ ಧರ್ಮಕಾರ್ಯಗಳಿಗೆ ವಿನಿಯೋಗಿಸುವಂತೆ ಮರಣಶಾಸನಗಳನ್ನು ಬರೆದಿಟ್ಟಿರುವರು

Printed and Published by the Rev H GULLIFORD, Proprietor and Manager, Wesleyan Mission Press, Mysore 6/1/1910

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೮ | ಮೈಸೂರು—ಸನ್ ೧೯೧೦ ನೇ ಇಸವಿ ಜನವರಿ ತಾರೀಖು ೧೩ ನೇ ಗುರುವಾರ. | ಸಂಚಿಕೆ ೩೩

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಪತ್ರ ಕಳುಹಿಸುವ ಅಂಚೆಯ ಮೇಲೆ ಕಳಿಸಿ ಪಡೆಯುವದಕ್ಕೆ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟ್ ಸೇರಿ ರೂ ೧—೧೪—೦

" " " " " ೦—೧೧—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಬತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ದೊಡ್ಡೇರಿ ವೆಂಕಟಾಚಲ ಪಂಡಿತರ

4 48

ಲೋಕಾಮಯಹರ ಕಸ್ತೂರೀ ಮಾತ್ರೆಯು

ನಿಮ್ಮ ಕಸ್ತೂರೀ ಮಾತ್ರೆಯು ಬಹಳ ಉಪಯೋಗಕ್ಕೆ ಬಂದಿರುತ್ತೆ ಕೂಡಲೆ ದಯವಿಟ್ಟು ಈ ಮಾತ್ರೆಯ ೬ ಸೀಸೆಗಳನ್ನು ಕಳುಹಿಸಿಕೊಡಬೇಕು

ಎಸ್ ನಂಜುಂಡಯ್ಯ, ಸ್ಕೂಲ್ ಮಾಸ್ಟರ್, ಕಂದಿಕೆರೆ

ನಿಮ್ಮ ಕಸ್ತೂರೀ ಮಾತ್ರೆಗಳು ಬಹು ಶ್ಲಾಘ್ಯವಾದದ್ದಾಗಿರುತ್ತೆ ತುಂಬಾ ಅನುಭವಸಿದ್ಧವಾದದ್ದು ಸದರಿ ಮಾತ್ರೆಗಳ ೬ ಸೀಸೆಯನ್ನು ಜರೂರು ಕಳುಹಿಸಬೇಕು

ಶ್ರೀನಿವಾಸರಾವ್, ರಿಕಾರ್ಡ್ ಕೀಪರ್, ಹಗ್ಗ ದೇವನಕೋಟೆ

ನಿಮ್ಮ ಕಸ್ತೂರೀ ಮಾತ್ರೆಗಳು ಇಲ್ಲಿ ಕೆಲಕೆಲ ರೋಗಿಗಳಿಗೆ ಕೊಟ್ಟದ್ದರಲ್ಲಿ ಬಹಳ ಗುಣಕೊಟ್ಟಿತು ಜರೂರು ಸದರಿ ಮಾತ್ರೆಗಳ ೬ ಸೀಸೆಗಳನ್ನು ಕಳುಹಿಸಿಕೊಡಬೇಕು

ಸುಬ್ರಮಣ್ಯಪಿಳ್ಳೆ, ದಸ್ತರಬಂದಿ ಹೊಸಕೋಟೆ

ನಿಮ್ಮ ಕಸ್ತೂರೀ ಮಾತ್ರೆ ಸೀಸೆಗಳು ಬಹಳ ಉತ್ತಮವಾಗಿ ಕಾಣಬಂದವೆ ತುರ್ತು ೧೨ ಸೀಸೆ ಮಾತ್ರೆಗಳನ್ನು ಕಳುಹಿಸಿಕೊಡಬೇಕು

ಸಿ ತಿಮ್ಮಯ್ಯ, ಸೆಟಲ್ಮೆಂಟ್ ಶಿರಸ್ತೇದಾರ್, ಚಿತ್ರದುರ್ಗ ತಾಲ್ಲೂಕು

ನಿಮ್ಮ ಕಸ್ತೂರೀ ಮಾತ್ರೆಯಿಂದ ನನಗೂ ನನ್ನ ಮಿತ್ರರಿಗೂ ಗುಣಕಾರಿಯಾಗಿರುತ್ತದೆ ಆದರೆ ಈ ಬಾರಿ ೬ ಬಾಟ್ಲುಗಳನ್ನು ತೀವ್ರವಾಗಿ ರವಾನೆ ಮಾಡಿ

ಸಿದ್ಧಲಿಂಗಪ್ಪಾ, ಹೊಸಗಡಿ ಬ್ಯಾಡಗಿ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

S 2

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ತಯಾರಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರೆಯದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೇರ್ಪಾಗಿ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಗಂಡ ಟೋಪಿಗಳು ೧ ರೂ ೧೨ ಆ ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

COLLEGE SCHOLARSHIPS

13 2

The undersigned will furnish two scholarships at Rs 15 per month each, for four years to Christian young men who have passed the Matriculation Examination if they will give bond to serve as teachers in our Mission High School for five years after passing the B A Examination

Apply with testimonials to

REV W D BEAL,
M. E. Mission
Belgaum

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

14 2

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚರ್ಕ ಬಟ್ಟೆಗಳು ನಾಜೂಕಾಗಿ ತಲೆ ರಿಕಲ್ಲಟ್ಟು ಬಹು ಬಾಳಿಕೆ ಬರುವಂಥವುಗಳಾಗಿವೆ ಬಣ್ಣವು ಹೋಗುವದಿಲ್ಲ ಬೀಡಿ ಬಹಳ ಕಡಿಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರೆಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ನೋಟಿಫಿಕೇಷನ್.

89-2

ಅಮೃತಮಹಲ್ ಇಲಾಖಾ ಬಾಬ್ತು ಕೆಲವು ಗಂಡು ರಾಸುಗಳನ್ನು ಬರುವ ೧೯೧೦ ನೇ ಜನವರಿ ೧೯ ನೇ ತಾರೀಖು ಲಾಗಾಯ್ತು ಹೊಳಲ್ಕೆರೆ ರೈಲ್ವೆ ಸ್ಟೇಷನ್ ಒಳಿಯಲ್ಲೂ ಅದೆ ಮಾಹೆ ೨೪ ನೆ ತಾರೀಖು ಲಾಗಾಯ್ತು ಚಿತ್ರದುರ್ಗದ ತಾಲ್ಲೂಕು ಅಯ್ಯನಹಳ್ಳಿ ಕಾವಲಿನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ ಇಷ್ಟವುಳ್ಳವರು ಹಾಜರಾಗಿ ಛಡಸವಾಲಿನಲ್ಲಿ ರಾಸುಗಳನ್ನು ಪಡೆಯಬಹುದು

ಕ್ಯಾಂಪ್ ಮೈಸೂರು, ಎಚ್. ನಂಜುಂಡರಾಜೇ ಅರಸ್,
ತಾ ೨೨ ೧೨ ೦೯ ಸೂಪರಿಂಟೆಂಡೆಂಟ್ ಅಮೃತಮಹಲ್ ಇಲಾಖಾ

ಸಂಜೀವಿನೀ ಔಷಧಾಲಯ, ಮೈಸೂರು.

28-49

ಎಂ ಎಸ್ ಕುಮಾರಯ್ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ವಿಸ್ಮೃತಿ, ರಕ್ತದೋಷ ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕೃಶತ್ವ ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ ಬಲ ಧೈರ್ಯ, ಕಾಂತಿ, ಉತ್ಸಾಹ ಜ್ಞಾಪಕಶಕ್ತಿ, ಇಂದ್ರಿಯಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ, ಸೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಕ —ಪ್ಲೇಗ್ ಗೆಡ್ಡೆ ಮೊದಲಾಗಿ ಎಲ್ಲಾ ತರದ ಗೆಡ್ಡೆಗಳಿಗೂ ಮೇಲೆ ಹಚ್ಚುವ ಔಷಧ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಶೀತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಂಜುಗಣ್ಣು, ತಲೆನೋವು, ತಲೆಭಾರ ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರತಾವರಿ ಅತ್ತರುಗಳೂ, ಗಂಧದಬಿಲ್ಲೆ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಥಾಗಿ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ೭ ಆಣೆ

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ವಾರ್ಟರ್ ಬರ್ನಾರ್ಡ್ ಡಾಸ್ ಆರ್ ಇ, ಯವರು ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್ ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ [illegible]ವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ -ಇದೇ ಜನವರಿ ಅಖೈರಿನೊಳಗಾಗಿ ವೃತ್ತಾಂತ ಪತ್ರಿಕೆಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರೆಯಿರಿ ವಿಳಾಸ —

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪ್ರೋತ್ಸಾಹಕೋರಿ

2 3

ಹಾಸನ್ ಟೋಪಿಯ ಸುಪೀರಿಯರ್ ಉಲ್ ದಾರ 1 ಟೋಪಿ ದಾರಕ್ಕೆ 0 8 0 10 ಟೋಪಿಗಾಗುವ ಬಂಡಲ್ 1 ಕ್ಕೆ ರೂ 3 7 0 ಬಣ್ಣದಲ್ಲಿ ಎಲ್ಲಾ ಕೆಂಪು ಕಪ್ಪು ತೀಟಿ ಕೆಂಪು ಹಳದಿ ಗುಲಾಬಿ ಪಚ್ಚೆ ನೀಲಿ ಮತ್ತು ಕಾಫಿ ಬಣ್ಣಗಳಲಿ — ಹಾಸನ್ ಟೋಪಿ ಹೊಲಿಯುವ ಸಾಧಾರಣ ದಪ್ಪದ ಉಲ್ ಪೌಂಡು 1 ಕ್ಕೆ 2 4 0, ಅಡಿ 1 ಕ್ಕೆ 0 10 0 ರಂಗಿನಲ್ಲಿ ಯೆಲ್ಲಾ ಕೆಂಪು ಕಪ್ಪು ಮತ್ತು ತೀಟಿ ಕೆಂಪು ಮಿಶ್ರ ಉಲ್ ಪೌಂಡು 1 ಕ್ಕೆ 2 12 0 ಅರು ಟೋಪಿ ಆಗುವದು ಕೊಕ್ಕೆ ಸೂಜಿ 1 ಕ್ಕೆ 0 1 0 ಮತ್ತು 0 3 0 ಹಾಸನ್ ಟೋಪಿ ಹೊಲಿಯುವ ದಪ್ಪದ ಉಲ್ ಪೌಂಡು 1 ಕ್ಕೆ ರೂ 1 12 0

ಹಾಸನ್ ಟೋಪಿಗಳು ಡಜನ್ 1 ಕ್ಕೆ 8 0 0 ಮತ್ತು 11 0 0 ತರತಾವರಿನ ರಂಗಿನಲ್ಲಿ ಕಸೂತಿಕೆಲಸದ ಉಲ್ ದಾರಗಳು ಪೌಂಡು 1 ಕ್ಕೆ ರೂ 1 4 0

ಕೆಪಿಟೋ ಬಾಂ ಬಾಳಾ ತರದ ಪಾಕಿಟ್ಟು 0-8-0, ದೊಡ್ಡವರ ಕಾಲುಚೀಲಗಳು ಆಣೆ 0 4 0 ರಿಂದ 1 8 0 ಯಳೇ ಮಕ್ಕಳ ಕಾಲುಚೀಲಗಳು 0 4 0 ಮತ್ತು 0 6-0 ದೊಡ್ಡವರ ಕಾಟನ್ ಬನಿಯನ್ 1 ಕ್ಕೆ 8 ಆಣೆಯಿಂದ 1 0-0 ದೊಡ್ಡವರ ಮುಸುಕಿನ ಟೋಪಿ 1 ಕ್ಕೆ 1-0-0 ಹಣಕಾಸುಗಳು ಹಾಕುವ ಉಲ್ ದಾರದ ಪಾಕೆಟ್ 1 ಕ್ಕೆ 1 2-0 ಉಲ್ ದಾರದ ವಾಚ್ ಪಾಕೆಟ್ 1 ಕ್ಕೆ 0-2 0 ಉಲ್ ದಾರದ ಕಮರ್ ಬಂದ್ 1 ಕ್ಕೆ 10 ಆಣೆಯಿಂದ 1 4 0 ಬಾಚಣಿಗೆಗಳು 1 ಕ್ಕೆ 0 1 0 0 1 6 ರಿಂದ 0 1 0 ಪುನುಗಿನ ಕಡ್ಡಿ ಶೀಸೆ 1 ಕ್ಕೆ 0 2 0 ದಸಾಂಗ ತೊಲೆ 1 ಕ್ಕೆ 0 4 0 ಪಿತನಾ ದಬ್ಬಿ 1 ಕ್ಕೆ 0-4 0 ಮಣಿ ಸರಪಣಿ 1 ಕ್ಕೆ ಆಣೆ 6 ರಿಂದ 0 12 0 ವರೆಗೆ ರಬ್ಬರ್ ಸ್ಟಾಂಪು ಶಾಯಿ ಬಾಟ್ಲಿ 1 ಕ್ಕೆ 0 -0 ಸೇಫ್ ಸೇಫ್ ತಾಂಬೂಲಸುಗಂಧ 100 ಮಾತ್ರೆಗಳಿರುವ ಪಾಕೆಟ್ 1 ಕ್ಕೆ 0 3-0 ಮೆಂತ್ಯಾಲ್ ಡಬ್ಬಿ 1 ಕ್ಕೆ 0 1 0 ಗಜಕರ್ಣದ ಮುಲಾಮು ಡಬ್ಬಿ 1 ಕ್ಕೆ 0 . 0 ದೇಶಿ ಕೈವಸ್ತ್ರಗಳು ಡಜನ್ 1 ಕ್ಕೆ 1-0 0 ಲಿನನ್ ಕೈವಸ್ತ್ರಗಳು ಡಜನ್ 1 ಕ್ಕೆ 1 6 0 ಕಸ್ತೂರಿಮಾತ್ರೆ 200 ರ ಶೀಸೆ 1 ಕ್ಕೆ 0 4 0 ಕಾಮಿನಿಯ ತೈಲವು ಅನೇಕ ತರದ ತೈಲಗಳಲ್ಲಿ ಪಸಂದಾದದ್ದು ಶೀಸೆ 1 ಕ್ಕೆ 1-0 0 ನರಿಮೂಳೆ ನಸ್ಯದಬ್ಬಿ 1 ಕ್ಕೆ 0 2 0 ದಂತಮಂಜನ ಡಬ್ಬಿ 1 ಕ್ಕೆ 0 1 6 ಪೊಮೇಟ ಶೀಸೆ 1 ಕ್ಕೆ 0 . 0 ದಿಲ್ ಬಾರ್ ಇದು ಅಮೂಲ್ಯವಾದ ಅತ್ತರ್ ಶೀಸೆ 1 ಕ್ಕೆ 1 6 0 ಕಾಮಿನಿ ಅತ್ತರ್ ಶೀಸೆ 1 ಕ್ಕೆ 1 8 0 ರೋಸ್ ಅತ್ತರ್ ಶೀಸೆ 1 ಕ್ಕೆ 2-0-0 ಇಂಗ್ಲಿಷ್ ಅಕ್ಷರದ ಪೆಟ್ಟಿಗೆ 1 ಕ್ಕೆ 0 10 0 ಮುಂದ 4 0 0 ವಿಸಿಟಿಂಗ್ ಕಾರ್ಡುಗಳು 100 ಕ್ಕೆ 0 3-0 ರೂಲುಹಾಕಿದ ಲೆಟರ್ ಪೇಪರ್ ಪ್ಯಾಕೆಟ್ 1 ಕ್ಕೆ 0 1 0 ಇದಕ್ಕಾಗುವ ಕವರ್ 100 ಕ್ಕೆ 0 5 0 ಕಾಬೂಲ್ ದೇಶದ ಹಿಂಗು 12 ತೊಲೆ ಡಬ್ಬಿ 1 ಕ್ಕೆ 0 14 0 ಕೆಂಪುನೂಲಿನಿಂದ ತಯಾರಿಸಿದ ಕಮರ್ ಬಂದ್—0 4 0, 0 7 0 ಮತ್ತು 0 9 0 ಸಂಗೀತ ಪಾರಿಜಾತವೆಂಬ ಹಾಡಿನ ಪುಸ್ತಕ 0 1 0

1910 ನೇ ಡೈರಿ 1 ಕ್ಕೆ 0 2 0 ನಮಗೆ ಅಲ್ಪ ಕಮಿಷನ್ ಕೊಟ್ಟಲ್ಲಿ ಮಂಗಳೂರಲ್ಲಿ ದೊರೆಯುವ ಯಾವ ಸಾಮಾನು ಬೇಕಾದರೂ ಚವಕಿಯಿಂದ ಪಡೆದು ರವಾನಿಸುವೆವು ವಿ ಪಿ ಯಿಂದ ತರಿಸುವರು ಟಪಾಲು ಖರ್ಚು ಜಾಸ್ತಿ ಕೊಡಬೇಕಾಗುವದು

ನಮ್ಮ ವಿಳಾಸ -ದಿ ಉಲನ್ ಮಾರ್ಟ್,
ನಂ ೧, ಮಂಗಳೂರು, ದ ಕ

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 81

ತಲೆನೋವು, ವಾಯುನೋವು, ಕಳಕ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ [illegible] ಈ ಔಷಧವನ್ನು [illegible]

[illegible]

ಎಸ್ ಪೀಟರ್ಸನ್

೩೩, ನೈನಿಯಪ್ಪ ನಾಯಕ್ ಬೀದಿ, ಪೇಟೆ ಮದರಾಸ್

ಸ್ವಸ್ಥ ಮೂತ್ರಪಿಂಡಕ್ಕೆ ಉಪಾಯವು

[illegible]

ಡೋನ್ ರವರ ಮೂತ್ರಕೋಶದ ಗುಳಿಗೆಗಳು [illegible] [6-20]

[illegible]



ರೂ ೨—೦—೦ ಅಥವಾ [illegible] ೧೦ ೮ ೦ [illegible] ಡೋನ್ಸ್, [illegible]

WILLIAM & Co, FORT, BOMBAY

ಅಮೃತಾಂಜನ
ಹಿಂದುಸ್ಥಾನದ ವನಸ್ಪತಿಗಳಿಂದ
ತಯಾರಿಸಲ್ಪಟ್ಟದ್ದು

[illegible] [7 10]

ತಲೆನೋವು, ಗಂಟು ಉಬ್ಬುವದು, [illegible] ಗಂಟು, ಗಂಟ್ಲು ನೋವು, [illegible] ಇತ್ಯಾದಿ

[illegible] ಬಾಟ್ಲು ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

[illegible] ೦ ೨ ೦ [illegible] ೨ ೦ ೦

ಅಶ್ವಗಂಧ	೨ ೦ ೦
[illegible]	೦ ೮ ೦
[illegible]	೧ ೦ ೦
[illegible]	೦ ೮ ೦
[illegible]	೦ ೮ ೦
[illegible]	೦-೯-೦
[illegible]	೦ ೪ ೦
[illegible]	೧ ೦ ೦
[illegible]	೦ ೨ ೦

[illegible]

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವ್ಪರಿಹರ ಔಷಧವು

82



[illegible]

ವಾಯುನೋವೆಂದರೇನು ?

[illegible]

SCOTT'S EMULSION

92

(ಸ್ಕಾಟ್ಸ್ ಇಮಲ್ಷನ್)

[illegible]

ಕ್ರೈಸೋಲ್ ಯದು ತಯಾರಾದದ್ದು

[illegible]

ಈ ಮೀನುಮನುಷ್ಯ ಇರುವ
ಔಷಧವನ್ನೇ ಕೊಂಡುಕೊಳ್ಳಿ

ಜ್ವರಹರಿ

12



[illegible]

[illegible]

[illegible] Capsules

ಈ ಔಷಧವು [illegible]

[illegible]

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, [illegible] ಔಷಧ ವ್ಯಾಪಾರಿಗಳಲ್ಲೂ [illegible] ಪಡೆಯಿರಿ —

ಹನಿಯವರ ಗ್ರೇಟ್ ಇಂಡಿಯ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ (1[illegible] ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶದ ಸ್ಥಿತಿಯು ನಮಗೆ ಸರಿಯಾಗಿ ಗೊತ್ತಾಗುವದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಕ್ರಯಒಂದಕ್ಕೆ 0—1—0

ಎಕ್ಸರ್ಸೈಜ್ ಪುಸ್ತಕಗಳು

(40 ಹಾಳೆ) ಕ್ರಯಒಂದಕ್ಕೆ 0—0—6
(80 ಹಾಳೆ) 0—1—0
(100 ಹಾಳೆ) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10-2]

ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

17—12—1900 ರಿಂದ 24—12—1900 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	3	0	0
ಮೈಸೂರು „	11	11	0	0
ಬೆಂಗಳೂರು ಡಿಸ್ಟ್ರಿಕ್ಟು	1	1	0	0
ಮೈಸೂರು „	21	19	11	10
ಕೋಲಾರ್ „	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	2	2
ಹಾಸನ „	9	6	0	0
ಚಿತ್ರದುರ್ಗ „	0	0	0	1
ಕಡೂರ್ „	3	1	0	0
ಶಿವಮೊಗ್ಗ „	0	0	0	0
ಒಟ್ಟು	38	43	19	24

ಹಿಂದೂ ಪಂಚಾಂಗ. ಸಾಲಿವಾಹನ ಶಕ ವರುಷಂಗಳು ೧೮೩೧ನೇ ಸೌಮ್ಯನಾಮ ಸಂವತ್ಸರದ ಪುಷ್ಯ ಬಹುಳ ತದಿಗೆ ಶುಕ್ರವಾರದಿಂದ ಪುಷ್ಯ ಬಹುಳ ದಶಮಿ ಗುರುವಾರ ವರೆಗಿನ [illegible]

೧೯೧೦ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಷ ಮಾಸದ ದಿನ
14	ಶುಕ್ರ *	ತದಿಗೆ	18 40	ಪು	15-8	2
15	ಶನಿ	ಚೌತಿ	11 35	ಶ್ಲೇ	15 38	3
16	ರವಿ	ಪಂಚಮಿ	9-28	ಪುಭಾ	14 18	4
17	ಸೋಮ	ಸಪ್ತಮಿ	1-3	ಉಷಾ	51-20	5
18	ಕುಜ	ಅಷ್ಟಮಿ	53 38	ರೇ	1-40	6
19	ಬುಧ †	ನವಮಿ	10 42	ಸ್ವಾ	0 12	7
20	ಗುರು	ದಶಮಿ	40 03	ಶ್ರ	51 34	8

* ಉತ್ತರಾಯಣ ಪುಣ್ಯಕಾಲ, ಶಕುನಾಂತ್ಯದ [illegible] ಮಂಗಳವಾಸ್ಯಪ್ರತಿ [illegible] ರಥ [illegible] ರಂಗನಾಥ ರಥ, ಪೊಂಗಲ್ ಹಬ್ಬ, [illegible] । ನ್ಯಸ್ತಯೋಗ

ಪೇಟೆ ಧಾರಣೆ

[illegible]		ಮೈಸೂರು	ಬೆಂಗಳೂರು
ಅಕ್ಕಿ ಒಳ್ಳೆಯ ಮೊದಲನೇ [illegible]	ಕಂ	೧೩ ೦-೦	೧೨ ೮ [illegible]
ಕೊಯಮ ಅಕ್ಕಿ ಒದಲ		೧೩ [illegible]	[illegible]
,, ಮೂ [illegible]		೧೨ ೮ [illegible]	೧೩ [illegible]
ಹಾಯ್ಕಿನ ಅಕ್ಕಿ		೧೩ ೦ ೦	೧೪ ೮
ನಾಣ್ಯ ಒದಲ		೧೪ [illegible]	೧೫ ೮
,, ಮೂರು		೧೩ ೧೨ ೦	೧೫ [illegible]
ಕಡಲೇ ಬೇಳೆ ಮೊದಲನೆ [illegible]		೧೨ ೮ [illegible]	೧೪ ೦ ೦
,, ಮೂರು		೧೨ ೦ ೦	೧೩ ೦ ೦
ಹುರುಳಿ ಮೊದಲ [illegible]		೮ ೦ [illegible]	೮ ೮ [illegible]
ಜೋಳ [illegible]		೭ ೧೨	೮ ೦ [illegible]
ಮೆಣಸು		೭ ೮ ೦	೯ ೦ ೦
ಕಡಲೆ ಮೊದಲ [illegible]		೧೦ ೦ ೦	೧೦ ೦ [illegible]
ತೊಗರಿ ಅವರೆ		೧೨ ೦ ೦	೧೦ ೦ ೦
ಹೆಸರು		[illegible] ೦ ೦	೯ ೧೨ [illegible]
ಉದ್ದು		೧೨ ೫ ೦	೧೦-೮ ೦
ಅವರೆ		೧೨ ೮ [illegible]	೯ ೮
ಎಳ್ಳು ಕೆಂಪು [illegible]		೧೫ ೦-೦	೧೫-೦ [illegible]
ಹುರುಳಿ		೮ ೦ ೦	[illegible]
ಹರಳು [illegible] ಕಾಳಿಗೆ		೧೪ ೦ ೦	೧೨ [illegible]
ಸೀಗೇಕಾಯಿ ಮಾಲು [illegible]		೩ ೦-೦	೩ ೦
ಮೆಣಸಿನಕಾಯಿ		೪ ೮ ೦	೩ ೪ ೦
,, ಮೂರು		೪ ೪ ೦	೩ ೦ [illegible]
ಬೆಲ್ಲ ಮೊದಲ ಜಾತಿ		೯-೮-೦	[illegible] ೨ ೪ [illegible]
ಒಳ್ಳೆ ಮಾಲು [illegible]		೪ ೮ ೦	೬-೮ [illegible]
ಹರಳೆಣ್ಣೆ ,,		೫ ೮ ೦	೬ ೮ ೦
ಕೊಬ್ಬರಿ ಮೊದಲ [illegible]		೭ ೮ ೦	೯ ೦ ೦
ಉಪ್ಪು ,,		[illegible]	೫ ೮-೦
ಹುಣಸೇ ಹಣ್ಣು		೨-೪ ೦	೧ ೧೨ ೦
,, ಹಾಗಲ		೨ [illegible]	೧ ೮ ೦
ತುಪ್ಪ ಮಾಲು [illegible]		೧೫ ೮ ೦	೧೪ [illegible]
ಸಾಮೆಯಕ್ಕಿ ಮಟ್ಟ [illegible]		೪ ೪	೪ [illegible]
ಕೊಂಗಿತಾಯಿ [illegible]		೫ [illegible]	೫ ೪ [illegible]
ಅರಿಶಿನ ಮಾಲು [illegible]		[illegible]	[illegible] ೧೨ [illegible]
ಅಡಿಕೆ [illegible] ಮಾಲು [illegible]		೧ ೦-೦	೦ ೧೧ ೦
ಹತ್ತಿ (ಬೀಜ) ಕೆಂಪು		೧೫ ೯ ೦	೨೫ [illegible] ೦
,, ,, ಬಿಳಿ		[illegible] ೨ ೦	೨೫ ೮ ೦
,, ,, ಗಟ್ಟಿ ಹೊಲ [illegible]		೨೪ ೮ ೦	೨೪ ೩-೦
ಹತ್ತಿ ಗಟ್ಟಿ ಹೊಲ [illegible]		[illegible] ೪ ೦	[illegible] ೪ [illegible]

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಲೆ.

ಈ ೮ನೇ ಶನಿವಾರದ ದಿನ ಸಾಯಂಕಾಲ [illegible] ಬಾಲಿಕೆಯರು [illegible] ಅವರಿಗೆ ಬೇಕಾದ ಇತರ ಶಿಕ್ಷಕರುಗಳಿಂದ [illegible] ಮಂದಿ ಮಾಡಿರದ ವಿದ್ಯಾರ್ಥಿನಿಯರನ್ನು [illegible] ದೇಶಾಭಿಮಾನದ [illegible] ಬರಲಿಲ್ಲ. ಹಾಗೆ ಬಂದವರ [illegible] ಕಮಲಾಬಾಯಿಯವರೇ [illegible] ಸೌಭಾಗ್ಯವತಿ ಕೆಂಪಮ್ಮನವರು ಶ್ರೀ ರಂಗಮ್ಮ [illegible] ವಿಷಯದಲ್ಲಿ ಅತ್ಯಂತ ಸುಂದರವಾದ ಒಂದು ವ್ಯಾಸವನ್ನು ಓದಿದರು. ಈ ವ್ಯಾಸವು ಬಹಳ ಶ್ಲಾಘ್ಯವಾದದ್ದಾಗಿಯೂ, ಬುದ್ಧಿ ವಿಕಾಸಕವನ್ನು ಉಂಟುಮಾಡತಕ್ಕದ್ದಾಗಿಯೂ ಇತ್ತು. ಶ್ರೀಮತಿ [illegible] ಕೆಲವು [illegible] ಪತ್ರವನ್ನು ಓದಿದರು. ಅನಂತರ [illegible] ಸುಮಾರು ೬ ಘಂಟೆಗೆ [illegible] ಪೂರೈಸಲ್ಪಟ್ಟವು.

ಬರುವ [illegible] ೧೫ನೇ ತಾ ಶನಿವಾರದ ದಿನ ನಡೆಯುತ್ತದೆ. [illegible] ಮತ್ತು ಇತರ ಅಭಿಮಾನಿಗಳು ಎಲ್ಲರೂ ದಯಮಾಡಿ ಬರುವರೆಂದು ನಿರೀಕ್ಷಿಸಲ್ಪಟ್ಟಿರುತ್ತದೆ.

ಮೆ॥ ಭಾಭಾ ಸಾಹೇಬರವರ ಮೆಮೋರಿಯಲ್ ಫಂಡು

ಚಂದಾಪಟ್ಟಿ

ಮೈಸೂರು ಸರ್ಕಲ್ ಇನ್ಸ್‌ಪೆಕ್ಟರ್ ಮೆ॥ ಶ್ರೀನಿವಾಸರಾಯರು ರೂ ೨೫, ಮೈಸೂರು ಮರಿಮಲ್ಲಪ್ಪನವರ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಎಂ ವೆಂಕಟಕೃಷ್ಣಯ್ಯನವರು ರೂ ೧೦, ದೊಡ್ಡಬಳ್ಳಾಪುರದ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಡಿ ಕೊಂಗಾಡಿಯಪ್ಪ, ಹೊಸದುರ್ಗದ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ನ ಶಾಮಣ್ಣ, ರಾಬರ್ಟ್‌ಸನ್ ಪೇಟೆ ಸ್ಕೂಲ್ ಹೆಡ್ [illegible] ಮೆ॥ ಪಿ ಕೃಷ್ಣಯ್ಯ, ಮಂಗಡಿ ಇಂಡಸ್ಟ್ರಿಯಲ್ ಸ್ಕೂಲ್ ಮೆ॥ ಪೀರ [illegible] ತಲಾ ರೂ ೫, ಚಿಕ್ಕಮಗಳೂರು ಎ ವಿ ಸ್ಕೂಲ್ ಹೆ ಮಾ. ಮೆ ಬಿ ಸಂಪತ್ಕುಮಾರಯ್ಯಂಗಾರ್ ರೂ ೩, ರಾಬರ್ಟ್‌ಸನ್ ಪೇಟೆ [illegible] ಸ್ಕೂಲ್ ಪಿ ಮಿಸ್ಟ್ರೆಸ್ ಬಿ ರುಕ್ಮಿಣಿಯಮ್ಮನವರು, ಸೋಮನಹಳ್ಳಿ [illegible] ಮಾ ಆರ್ ಸಿದ್ದಲಿಂಗರಾವ್, ಹೊಸೂರು ಸ್ಕೂ ಹೆ ಮಾ [illegible] ಹೊಸೂರು ಸ್ಕೂ ಹೆ ಮಾ ಜಿ ಸಿದ್ದಪ್ಪ, ಅದೇ ಊರಿನ ಸ್ಕೂಲ್ ಮಾಸ್ಟರುಗಳಾದ ಕೆ ಸುಬ್ಬರಾವ್, ಸಬಿಂಗರಾವ್, ಜಿ ನರಸಿಂಗರಾವ್, ದೊಡ್ಡಬಳ್ಳಾಪುರದ ಸೇಠ್ ಸ್ಕೂ ಮಾ ಜಿ ಹನುಮಂತಗೌಡ, ಅನ್ನಸಂದ್ರದ ಹೆ ಮಾ ಸೈಯದ್ ಅಬ್ದುಲ್ ಖುದೂಸ್, [illegible] ಸ್ಕೂ ಮಾ ಡಿ ಮಧ್ವರಾವ್ ತಲಾ ರೂ ೨, ಬ್ರಹ್ಮಸಮಾಜ ಸ್ಕೂಲ್ ಮಾಸ್ಟರ್ ಬಿ [illegible], ಚಿಕ್ಕಮಾಗಡಿ ಸ್ಕೂಲ್ ಹೆ ಮಾ [illegible] ಮುಂಗಯ್ಯ, ಹೊಸೂರು ಸ್ಕೂಲ್ ಮಾಸ್ಟರುಗಳಾದ ಅಬ್ದುಲ್ ಮಜೀದ್ [illegible], ನವೀನ ಬಿಯುವರು, ವೈ [illegible], ಎಚ್ [illegible], ಡ್ರಾಯಿಂಗ್ ಮಾಸ್ಟರ್ ಎಂ ಶಾಮಣ್ಣ, ಬಿ ಪಿ [illegible] ಸ್ಕೂಲ್ ಮಾಸ್ಟರುಗಳು ಕೆ ರಾಮಸ್ವಾಮಯ್ಯಂಗಾರ್, ಬಿ [illegible] ರಾವ್, [illegible] ಸ್ಕೂಲ್ [illegible] ಶ್ರೀನಿವಾಸರಾವ್, ಚಿಕ್ಕಮಗಳೂರು ಸ್ಕೂಲ್ ಮಾಸ್ಟರುಗಳಾದ ಪಿ ಭೀಮಪ್ಪ, [illegible] ಎ ನರಸಿಂಹಯ್ಯ, ಎಚ್ ಪಿ ರಾಮಸ್ವಾಮಯ್ಯಂಗಾರ್, ಬಿ [illegible] ಎಚ್ ದೇವರ್ಯ, ಎಸ್ [illegible], [illegible], [illegible] ಸ್ಕೂಲ್ ಹೆ ಮಾ ಎಂ ರಂಗನಾಥ [illegible] ಸ್ಕೂಲ್ ಹೆಡ್ ಮಾಸ್ಟರ್ ವೆಂಕಟಸುಬ್ಬಯ್ಯ, ಟಿ [illegible], ಎಸ್ ನಾರಣಪ್ಪ, ಆರ್ ರಾಮಸ್ವಾಮಯ್ಯಂಗಾರ್ ತಲಾ ರೂ ೧

[illegible] ಸೆಕ್ರೆಟರಿ

ಸಂಘಗಳೂ ಸಮಾಜಗಳೂ

ಆಯ್ಯಾ, ನಮ್ಮ ಈ ದೇಶದಲ್ಲಿ ವಿದ್ಯಾಭಿವೃದ್ಧಿಗಾಗಿ [illegible] ಮಹನೀಯರು ತಮ್ಮ ತಮ್ಮ [illegible] ಕೊಂಡು, [illegible] ಎಂಬ ಸಾಧಾರಣ [illegible] ಸರಿಸಿ [illegible] ಸೇರಿದ ಸಮಸ್ತ ವ್ಯಕ್ತಿಗಳೂ ಒಂದಾಗಿ ಸೇರಿ [illegible] ತಮ್ಮ ಸ್ವಜನಗಳು ಉತ್ತಮಸ್ಥಿತಿಗೆ ಬರಲು ಅವಕಾಶವುಳ್ಳದೆಂದು ಯೋಚಿಸಿ, [illegible] ತಮ್ಮ ಸ್ವಂತ ವ್ಯಕ್ತಿಗಳಿಂದಲೇ ಸೇರಿದ ಒಂದೊಂದು ಸಭೆಯನ್ನು ಮಾಡಿಕೊಂಡು ಲೋಕಪ್ರಸಿದ್ಧರಾಗಿಯೂ, [illegible] ಸ್ವಜಾತಿಯವರನ್ನು ಉದ್ಧರಿಸುತ್ತಾ ಬಂದಿದ್ದಾರೆ. ಇದೇ [illegible] ದೇಶದ [illegible] ನಮ್ಮ ಮೈಸೂರು ದೇಶದ [illegible] ಈ ಕೆಳಗೆ ಹೇಳಿರುವ [illegible] ಇದನ್ನು ಮಹಮ್ಮದೀಯರ [illegible] ಆಗಿರತಕ್ಕ [illegible] ಮೆ॥ [illegible] ಸುಬ್ಬಿ [illegible] ಮೆ॥ ಕೆ ಪಿ [illegible] ರವರೂ [illegible] ತಮ್ಮ [illegible] ವಿದ್ಯಾಮಾತರ ಸಹಾಯದಿಂದ ಈ ಮಹಾ ಸಭೆಯನ್ನು ಸ್ಥಾಪಿಸಿದರು. ಈ ಮಹಾ ಸಭೆ ಎಂಬ [illegible] ಬೆಳೆದು [illegible] ಅಮೃತೋಪಮಾನವಾದ ವಿದ್ಯೆಯ ಫಲ ಕೊಟ್ಟು ರಕ್ಷಿಸುತ್ತಾ ಇದೆ.

೨ ಒಕ್ಕಲಿಗರ ಮಹಾ ಸಭೆ. ಇದನ್ನು ಲೇಟ್ ಶ್ರೀಮಂತ ಮೆ॥ ಟಿ [illegible] ಮಾರಪ್ಪನವರು, ಮೆ॥ [illegible] ಗೌಡರು, ಈ ಪಕ್ಕದ ದೊಡ್ಡ ಮನುಷ್ಯರು ನಮ್ಮ ಪ್ರಭುಗಳೂ ಮತ್ತು ಅವರ ಮಂತ್ರಿಗಳಾಗಿದ್ದ ಮೆ॥ ವಿ ಪಿ ಮಾಧವರಾಯರವರ ಕೃಪಾಕಟಾಕ್ಷದಿಂದ ಈ ಮಹಾ ಸಭೆಯನ್ನು ಸ್ಥಾಪಿಸಿದರು. ಅದು ಈಗ [illegible] ಉದ್ಧಾರವಾಗುತ್ತಾ ಇದೆ.

೩ ಜೈನರ ಮಹಾ ಸಭೆ. ಇದನ್ನು ಮೈಸೂರು ನಿವಾಸರಾದ ಶ್ರೀಮಂತ ಮೆ॥ [illegible] ಮುಂತಾದ ದೊಡ್ಡ ಗೃಹಸ್ಥರು ಸ್ಥಾಪಿಸಿದರು. ಇದು ಕ್ರಮೇಣ ವೃದ್ಧಿಗೆ ಬರತಕ್ಕದ್ದಾಗಿದೆ.

೪ [illegible] ವೈಶ್ಯ [illegible] ಸಭೆ. ಇದನ್ನು ಮೆ॥ ಎಂ [illegible] ಪ್ರಯತ್ನದಿಂದ ಮೈಸೂರು ನಿವಾಸರಾದ ಆರ್ಯವೈಶ್ಯ ದೊಡ್ಡ ಮನುಷ್ಯರು ಸ್ಥಾಪಿಸಿದರು. ಅದು ಈಗೀಗ ಅಭಿವೃದ್ಧಿಯ ಅಂಕುರ ತೋರಿಸುತ್ತಾ ಇದೆ.

೫ ರಂಗಾರೆಯವರ ಮಹಾ ಸಭೆ. ಇದನ್ನು ಹರಿಹರದ ನಿವಾಸರಾದ [illegible] ಅಸಿಸ್ಟೆಂಟ್ ಕಮಿಷನರ್ ಮೆ॥ ಆರ್ ಟಿ ಮಹದೇವರಾಯರು ವಿಶೇಷ ಸಾಹಸದಿಂದ ಸ್ಥಾಪಿಸಿದರು. ಇದು ಈಗ [illegible] ಅಧಿಪತ್ಯದಲ್ಲಿ ಸಣ್ಣ [illegible] ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಾ ಇದೆ.

ಮೇಲಿನಂತೆ ಎಲ್ಲಾ ವ್ಯಕ್ತಿಗಳೂ ತಮ್ಮ ತಮ್ಮ ಕುಲಸ್ಥರ ಅಭಿವೃದ್ಧಿಯ ವಿಷಯದಲ್ಲಿ ಶ್ರಮಪಡುತ್ತಿರುವ ಈ ನಾಗರಿಕ ಕಾಲದಲ್ಲಿ ಈ ದೇಶದಲ್ಲಿರತಕ್ಕ [illegible] ಮಾತ್ರ ದೀರ್ಘನಿದ್ರೆಯಲ್ಲಿರುತ್ತಾ ಪ್ರತಿಯೊಬ್ಬರೂ ತಮ್ಮ ಸುಖದಲ್ಲಿ ನಿರತರಾಗಿರುತ್ತಾರೆ. ಈ ದೇಶದಲ್ಲಿರತಕ್ಕ ಅಲ್ಪಸಂಖ್ಯೆಯುಳ್ಳ ಈ ಜಂಗಮದವರು ಯಾರ ಆಶ್ರಯವಿಲ್ಲದೆ ದಿನೇ ದಿನೇ ಹೀನಸ್ಥಿತಿಗೆ ಬರುತ್ತಿದ್ದಾರೆ. ಮತ್ತು ಅವರಲ್ಲಿ ಶ್ರೀಮಂತರಾಗಿರತಕ್ಕವರೂ ದೇವಸ್ಥಾನಗಳನ್ನು ಕಟ್ಟಿಸತಕ್ಕವನ್ನು ಬ್ರಾಹ್ಮಣರಿಗೆ ಸಂತರ್ಪಣೆ ಮಾಡುವುದು ಇದೇ ತಮ್ಮ ಶ್ರೇಯಸ್ಸಿಗೂ ಪರಲೋಕಪ್ರಾಪ್ತಿಗೂ ಸಾಧಕವಾದದ್ದೆಂದು ತಿಳಿದು ಅವರಂತೆ ನಡೆಯುತ್ತಾ ದಿನೇ ದಿನೇ ಹೀನಸ್ಥಿತಿಗೆ ಬರುತ್ತಾ ತಮ್ಮ ಸ್ವಕುಲಕ್ಕೆ ಆಶ್ರಯವಿಲ್ಲದಂತೆ ಮಾಡುತ್ತಿದ್ದಾರೆ. ಈ ಕಾರಣಗಳಿಂದ ಜಂಗಮ ಕುಲದಲ್ಲಿ ಜನಿಸಿರತಕ್ಕ ಶ್ರೀಮಂತರಿಗೆ ಇವರಿಂದ ನಾನು ತಿಳಿಸುವುದೇನೆಂದರೆ, ಹೀನಸ್ಥಿತಿಯಲ್ಲಿರತಕ್ಕ ಸ್ವಕುಲಸ್ಥರನ್ನು ವಿದ್ಯಾವಂತರನ್ನಾಗಿ ಮಾಡಿ, ಆ ಸಂಘಗಳು ವಿಶೇಷವಾಗಿ ಬಾಳುವಂತೆ ಮಾಡತಕ್ಕ ಧರ್ಮಕ್ಕಿಂತಲೂ ಇನ್ನಾವ ಧರ್ಮವೂ ಶ್ರೇಷ್ಠವಾದದ್ದಾಗಿಲ್ಲ. ಈ ವಿಷಯವನ್ನು ಆ ಸಂಘದಲ್ಲಿ ಜನಿಸಿರತಕ್ಕ ಮಹನೀಯರು ಯೋಚಿಸಿ ಇತರರಂತೆ ತಾವೂ ಇಂಥಾ ಕಾರ್ಯದಲ್ಲಿ ನಿರತರಾಗಿ ಸ್ವಕುಲೋದ್ಧಾರಕರಾದಾರೆಂದು ನಂಬಿದೇನೆ.

[illegible] ಆಫೀಸರ್

ಈಸ್ಟರ್ನರು ಹಿಂದೂ ನಾರೀ ಮಣಿಗಳು

ಅದ್ಭುತ ಸಾಹಸಗಳು.

ಈಸ್ಟ್ ಬೆಂಗಾಲ್ ಸ್ಟೇಟ್ ರೈಲ್ವೆಗೆ ಸೇರಿದ ಒಂದು ಸ್ಟೇಷನ್‌ನಲ್ಲಿ ಇವರು ನಾರೀ ಮಣಿಗಳು ದಸ್ತಗಿರಿ ಮಾಡಲ್ಪಟ್ಟರು. ಅವರ ಕಥೆಯು ಬಹು ವಿಚಿತ್ರವಾಗಿರುತ್ತೆ. ಇವರಿಗೆ ಸಂಬಂಧಪಟ್ಟ ಕೆಲವು [illegible] [illegible] ಗವರ್ನಮೆಂಟ್ ರೈಲ್ವೆ ಪೊಲೀಸ್ ಸ್ಟೇಷನ್‌ನಲ್ಲಿ ಇಟ್ಟಿಟ್ಟಿರುತ್ತವೆ.

ಗೋಗುಡಂಗ ಎಂಬ ಸ್ಟೇಷನ್‌ನಲ್ಲಿ ಇಬ್ಬರು ಗಂಡಸರು ಒಬ್ಬ ಸರಾಫನ ಬಳಿಯಲ್ಲಿ ಒಂದು ಚಿನ್ನದ ತೋಡಾವನ್ನು ಮಾರಲು ಪ್ರಯತ್ನಪಡುತ್ತಿರಲು, ಅವರನ್ನು ನೋಡಿ ಒಬ್ಬ ಪೊಲೀಸಿನವನಿಗೆ ಅನುಮಾನ ಉಂಟಾಗಿ ಅವರನ್ನು ದಸ್ತಗಿರಿ ಮಾಡಿದನು. ತೋಡಾ ವಿಷಯವನ್ನು ಪ್ರಶ್ನೆ ಮಾಡಲು ಇಬ್ಬರ ಪೈಕಿ ಒಬ್ಬನು ಅದು ತನ್ನ ಹೆಂಡತಿಯ ಆಭರಣವೆಂತಲೂ, ಆಕೆ ಸ್ಟೇಷನ್‌ನಲ್ಲಿ ವೇಟಿಂಗ್ ರೂಮಿನೊಳಗೆ [illegible] ಕಾದಿರುವಳೆಂತಲೂ, ಮತ್ತು ತನ್ನಲ್ಲಿದ್ದ ಹಣವೆಲ್ಲವೂ ವೆಚ್ಚವಾಗಿ ಹೋದದ್ದರಿಂದ ದಾರಿ ಖರ್ಚುಗಳಿಗಾಗಿ ಈ ಆಭರಣವನ್ನು ವಿಕ್ರಯಿಸಬೇಕಾಗಿ ಬಂದಿತೆಂದೂ ಹೇಳಿದನು.

ಪೊಲೀಸ್ ಮನುಷ್ಯನು ಈ ಮಾತುಗಳಿಂದ ಸಮಾಧಾನಪಡದೆ ಅವರಿಬ್ಬರನ್ನು ಸ್ಟೇಷನಿಗೆ ಕರೆದುಕೊಂಡು ಹೋಗಲು, ಅವರು ಹೇಳಿದಂತೆ ಇಬ್ಬರು ನಾರೀಮಣಿಗಳು ಅಲ್ಲಿ ಒಂದು ಬೆಂಚಿನ ಮೇಲೆ ಕುಳಿತು ಇದ್ದರು. ಇದು ಪೊಲೀಸ್ ಮನುಷ್ಯನ ಅನುಮಾನಕ್ಕೆ ಇನ್ನೂ ಹೆಚ್ಚಿದ ಕಾರಣವಾಯಿತು. ಯಾತಕ್ಕೆಂದರೆ ಆ ಸ್ತ್ರೀಯರು ತಮ್ಮ ರೂಪಿನಿಂದಲೂ ಉಡುಪಿನಿಂದಲೂ ಧರಾಸಿಂಗರಾಗಿ ತೋರಿದರು. ಈ ಇಬ್ಬರು ಮನುಷ್ಯರ ಹೇಳಿಕೆಯಿಂದ ಆ ಈಸ್ಟರ್ನರು ಸ್ತ್ರೀಯರೂ ಅವರ ಭಾರ್ಯೆಗಳಾಗಿ ತೀರಿಯ ಬಂದಿತು. ಅದರೆ ಇದರ ಸ್ತ್ರೀಯರನ್ನು ಪ್ರಶ್ನೆ ಮಾಡಲು, ಅವರು ಆ ಇಬ್ಬರೂ ತಮ್ಮ ಗಂಡಂದಿರಲ್ಲವೆಂತಲೂ, ತಮ್ಮನ್ನು [illegible] ಗೋರಕ್‌ಪುರ್ ಎಂಬ ಗ್ರಾಮದವರೆಂತಲೂ, ಈ ಇವರು ಮನುಷ್ಯರೊಡನೆ [illegible] ಊರಿಗೆ ಹೋಗಿ ಅಲ್ಲಿ ಕೆಲವು ಕಾಲ ವಾಸಿಸಲು ಉದ್ದೇಶಿಸಿರುವರೆಂತಲೂ ಹೇಳಿದರು.

ಇವರ ವಿಷಯವು ಕೇವಲ ಗುಪ್ತವಾಗಿರುವಂತೆ ಕಂಡುಬಂದದ್ದರಿಂದ ಪೊಲೀಸಿನವರು ಗೋಗುಡಂಗ ರೈಲ್ವೆ ಪೊಲೀಸಿಗೆ [illegible] ಬಗ್ಗೆ ತಿಳುಹಿಸಿದ್ದಕ್ಕೆ ಅವರು ಸರಿಯಾದ ವಿಚಾರಣೆಯ ಬಗ್ಗೆ [illegible] ಗವರ್ನಮೆಂಟ್ ರೈಲ್ವೆ ಪೊಲೀಸಿಗೆ ಕಳುಹಿಸಿಕೊಟ್ಟರು. ಅಲ್ಲಿ ಈ ಇಬ್ಬರು [illegible] ಈ ಸ್ತ್ರೀಯರುಬ್ಬರ ಮನೆಯಲ್ಲಿ ಇರತಕ್ಕ [illegible] ಆ ಹೆಂಗಸರಿಬ್ಬರೂ ಓರಗಿತ್ತಿಯರೆ [illegible] ಈ ಪೈಕಿ ಒಬ್ಬಳಿಗೆ [illegible] ಈ ಹುಡುಗಿಯನ್ನು ಮೋಸದಿಂದ ಎತ್ತಿಕೊಂಡು ಬಂದರು. ಮತ್ತೊಬ್ಬಳು [illegible] ವರುಷದವಳು, ಏತಂತು ಇವಳನ್ನು ಉಬ್ಬಿಸಿ ಕರೆದುಕೊಂಡು ಬಂದರು. ಈ ಚಿಕ್ಕ ವಯಸ್ಸಿನ ಹುಡುಗಿಯ ತಂದೆ ಹೆಸರನ್ನು ಗೊತ್ತುಮಾಡಿ ಆತನಿಗೆ ವಿಷಯವು ತಿಳಿಸಲ್ಪಟ್ಟಿತು. ಆತನು ತನ್ನ ಮಗಳನ್ನು ತನ್ನ ಸೊಸೆಯು ದುರ್ಬೋಧನೆಯಿಂದ ತನ್ನ ನೌಕರನ ಸಂಗಡ ಮೋಸದಿಂದ ಹೊರಟು ಹೋದಂತೆ ತಿಳಿದನು. ಹೀಗೆ ಗೊತ್ತಾಗಲು, ಆ ಹೆಂಗಸರನ್ನು [illegible] ಹೀಗೆ ಅವರು ಓಡಿಬಂದರೆಂದು ಕೇಳಲು, ಒಂದು ವಿಚಿತ್ರವಾದ ವಿಷಯವು ಹೊರಪಟ್ಟಿತು. ಆ ಚಿಕ್ಕ ವಯಸ್ಸಿನವಳು ತನ್ನ ಮುಖದಮೇಲಿದ್ದ ಘೋಷಾ ವಸ್ತ್ರವನ್ನು ತೆಗೆದುಹಾಕಿ ಧೈರ್ಯದೊಡನೆ ಪೊಲೀಸ್ ಇನ್‌ಸ್ಪೆಕ್ಟರ ಮುಂದೆ ಬಂದು ಎದುರುನಿಂತು, ಗಂಡನಿಂದ ಬಿಡಲ್ಪಟ್ಟವಳಾದ ಹಿಂದೂ ಜಾತಿಯ ಹೆಂಗಸಿಗೆ ಮನಶ್ಶಾಂತಿ ಎಂಬುದು ಉಂಟೇ? ಎಂದು ಕೇಳಿದಳು. "ನಾನು ಎರಡು ವರುಷಗಳಿಗೆ ಮುಂಚೆ ಒಬ್ಬ ಮನುಷ್ಯನಿಗೆ ಮದುವೆ ಮಾಡಲ್ಪಟ್ಟೆನು. ಅವನು ಏನಾದರೂ ಆಗಬಹುದು. ಮನುಷ್ಯ [illegible] ಮಾತ್ರ ಅಲ್ಲ. ನನ್ನ ಮದುವೆ ಜರುಗಿದನಂತರ ಅವನು ನನ್ನಲ್ಲಿಗೆ ಬಂದದ್ದು ಒಂದೇ ಸಲ. ನನ್ನ ಬಾಲ್ಯದಾರಭ್ಯ ನಾನು ವಿದ್ಯಾಬುದ್ಧಿಗಳನ್ನು ಕಲಿತಿರುವೆನು. [illegible], ನರ್ತನ, [illegible] ನನಗೆ ಬರುವವು. ನನ್ನ ಗಂಡನು ಬಂದಾಗ ಅವನನ್ನು ಸಂತೋಷಪಡಿಸಲು ಸುಂದರವಾಗಿ ಹಾಡಿ ನನ್ನ ವಿದ್ಯೆಯನ್ನು ತೋರ್ಪಡಿಸಿದೆನು. ಆದರೆ ಅವನು ವ್ಯಾಕರಣ [illegible] ಕರುಣೆ ಎಂಬುದಿಲ್ಲದೆ ತಾನದೇ ನನಗೆ ಬಿಸ್ತ್ರಿಯಾಯಿತು. ನಾನು ದುರ್ನಡತೆಯುಳ್ಳವಳಾದ್ದರಿಂದ ಸಂಗೀತ ನೊದಲಾದವು ಕಲಿತವಳಾದೆನೆಂದು ಹೇಳಿ ಅವನು ನನ್ನನ್ನು ತ್ಯಜಿಸಿದನು. ಅಂದಿನಿಂದ ನನಗೆ ಯಾವಾಗಲೂ ಮನಶ್ಶಾಂತಿ ಲಭಿಸುವದೆಂದು ಯೋಚಿಸಿ ಬೇಸರಗೊಂಡವಳಾಗಿದ್ದು ಒಂದು ಪಟ್ಟಣದಲ್ಲಿ ಜೀವಿಸಬೇಕೆಂದು ಯೋಚಿಸಿದೆನು. ಆತ್ಮಹತ್ಯವನ್ನು ಮಾಡಿಕೊಳ್ಳಬೇಕೆಂದು ಯೋಚಿಸಿದೆನು. ಪರಂತು [illegible] ಮಾಡಿ ನನ್ನ ಮನಸ್ಸಿನಲ್ಲಿ [illegible] ಅದು ಸರಿಯಲ್ಲ, ಇದೇ ಸರಿಯೆಂದು ತೋರಿತು. ಅಯ್ಯೋ, [illegible] ಇಲ್ಲವೇ ಇಲ್ಲ" ಎಂದು ಹೇಳಿದಳು.

ಈ ಹುಡುಗಿಯು ಈ ಕಥೆಯನ್ನು ಹೇಳುವದರಲ್ಲಿ ಆ ಇಬ್ಬರು ಗಂಡಸರ ಪೈಕಿ ಒಬ್ಬನನ್ನು ಪೊಲೀಸಿನವರು ಯಜಮಾನನ ಆಜ್ಞೆಯ ಮೇರೆಯು ಈ ಕುಲಾಂಗನೆಯರನ್ನು ನೀನು ಯಾಕೆ ಕರೆದು ತಂದೆ ಎಂದು ಕೇಳುತ್ತಿರಲು ಮತ್ತೊಬ್ಬ ಸ್ತ್ರೀಯು ಎದ್ದು "ಅಯ್ಯಾ, ಆತನನ್ನು ಏನೂ ಅನ್ನಬೇಡಿ, ದೇವರಿಗೋಸ್ಕರ ಆತನಿಗೆ ತೊಂದರೆಯನ್ನು ಕೊಡಬೇಡಿ. ನಾನು ಆತನನ್ನು ನನ್ನ ಮನಃಪೂರ್ವಕವಾಗಿ ಪ್ರೀತಿಸುತ್ತೇನೆ. ನನ್ನನ್ನು ಜೈಲಿನಲ್ಲಿ ಹಾಕಿದರೂ ಸರಿ. ಆತನಿಗೆ ಮಾತ್ರ ಬಾಧೆ ಉಂಟುಮಾಡಬೇಡಿ. ನನ್ನ ಕಾರ್ಯಕ್ಕೆ ಆತನನ್ನು ದಂಡಿಸಬೇಡಿ" ಎಂದು ಹೇಳಿದಳು.

ತರುವಾಯ ಆ ಸ್ತ್ರೀಯರು ಒಬ್ಬ ವಿಯರನ್ನು ಇಟ್ಟು [illegible] ಮೇಲೆ ಖುಲಾಸೆಯಾದರು. ಒಬ್ಬ ಸ್ತ್ರೀಯು ಒಬ್ಬ ನೌಕರನನ್ನು [illegible] ಮಾಡಿಸಿದಳು. ದುಷ್ಟಬುದ್ಧಿಯುಳ್ಳ ಜೈಲಿಗೆ ಕಳುಹಿಸಲ್ಪಟ್ಟನು. ಇವರಿಬ್ಬರೊಬ್ಬರ [illegible] ಪೊಲೀಸ್ ಮ್ಯಾಜಿಸ್ಟ್ರೇಟರಲ್ಲಿ ನಾಲ್ಕು ವರುಷಕ್ಕೆ, ೨೦೦ ರೂಪಾಯಿ ಜುರ್ಮಾನೆ [illegible] ಶಿಕ್ಷೆಯನ್ನು ಈ ಕಾಲದಲ್ಲಿ ನಡೆಯುವಂತೆ ಗೊತ್ತಾಗಿದೆ.

ಅಯ್ಯಾ, ಮೇಲಿನ ವರ್ತಮಾನವನ್ನು ತಮ್ಮ ಪತ್ರಿಕೆಗೆ ಕಳುಹಿಸಲು ಕಾರಣವೇನೆಂದರೆ, ಹಿಂದು ಮುಂದು ಯೋಚನೆ ಇಲ್ಲದೆ ಅವರವರು ಮಾಡುವ ಮದುವೆಗಳಲ್ಲಿ ಹೀಗೂ ಜನಗಳಿಗೆ ಈ ರೀತಿಯಾದ ದುಃಖವೂ, ಮಾನ ಭಂಗವೂ ಪ್ರಾಪ್ತವಾಗುವದರಿಂದ ಹಿಂದೂ ವಿವಾಹಗಳನ್ನು ಮನುಧರ್ಮಶಾಸ್ತ್ರದಂತೆ ನಡೆಸುವದಾದರೆ ದೇಶಕ್ಕೆ ಸೋಲುಂಟಾಗದೆಂಬುದಾಗಿ ಊಹಿಸಿ ಸೋತು ಹೋಗುವವರ ತಾಂತ್ಯರ್ಥವಾಗಿ ಈ ವರ್ತಮಾನವನ್ನು ಪ್ರಕಟಪಡಿಸುವೆನು.

ಒಬ್ಬ ವಾಚಕ

ಸುಗಂಧಗಳು.

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧೨, ೫, ೩, ೨-೮-೦, ೧ ೪ ೦ ಬಿಲ್ಲೆಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ಪುಡಿ ೧ ಸೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ವೃತ್ತಾಂತ ಪತ್ರಿಕೆ

ಸನ್ ೧೯೧೦ ನೇ ಇಸವಿ ಜನವರಿ ತಾ ೧೩ ನೇ ಗುರುವಾರ

ಸಭೆಗಳೂ ಸಮಾಜಗಳೂ

ವರುಷದ ಕಡೇ ವಾರ ಹಿಂದುಸ್ಥಾನದಲ್ಲಿ ನಾನಾಪ್ರಕಾರವಾದ ಸಭೆಗಳೂ ಸಮಾಜಗಳೂ ನಡೆಯುತ್ತವೆ ನ್ಯಾಷನಲ್ ಕಾಂಗ್ರೆಸ್ ಅಥವಾ ರಾಷ್ಟ್ರಕೂಟವೂ, ಸೋಷಲ್ ಕಾಂಗ್ರೆಸ್ ಅಥವಾ ಸಮುದಾಯಾಚಾರ ಪರಿಷ್ಕರಣ ಕೂಟವೂ ಲಾಹೋರ್ ಪಟ್ಟಣದಲ್ಲಿ ಜರುಗಿದವು ಮಹಮದೀಯರು ಕೆಲವು ಸ್ಥಳಗಳಲ್ಲಿ ಸೇರಿ ಸಭೆಗಳನ್ನು ನಡೆಸಿದರು ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿದೆವೆಂದು ಹೇಳುವವರು ಕಾಶೀಪಟ್ಟಣದಲ್ಲಿ ಸಭೆ ಸೇರಿದ್ದರು ಬ್ರಾಹ್ಮಣರು ಕ್ಷತ್ರಿಯರು, ರಾಜಪುತ್ರರು ಮಹಾರಾಷ್ಟ್ರರು ಈ ಮೊದಲಾದ ನಾನಾ ಪಂಗಡಗಳವರು ಬೇರೆ ಬೇರೆ ಪಟ್ಟಣಗಳಲ್ಲಿ ಕೂಟಗಳನ್ನು ನಡೆಸಿ ಭಕ್ತಿ ಸಂಬಂಧವಾದ ಮತ್ತು ಸಾಮುದಾಯಾಚಾರಿಕ ವಿಚಾರಗಳನ್ನು ಕುರಿತು ಉಪನ್ಯಾಸಗಳನ್ನು ಮಾಡಿ ಹಲವು ತೀರ್ಮಾನಗಳನ್ನು ಮಾಡಿದರು ಅಂತು ಈ ಸಲ ೧೯೦೯ ನೇ ಇಸವಿಯ ಅಂತ್ಯಭಾಗದಲ್ಲಿ ಹಿಂದೂಸ್ಥಾನದೊಳಗೆ ನಡೆದಷ್ಟು ಉಪನ್ಯಾಸಗಳೂ ವಾಗ್ವಾದಗಳೂ ಹಿಂದೆ ಯಾವಾಗಲೂ ನಡೆದಂತೆ ನಮಗೆ ತೋರುವುದಿಲ್ಲ

ಕಷ್ಟಸಾಧ್ಯವಾದ ವಿಚಾರಗಳನ್ನು ಕುರಿತು ಚರ್ಚೆ ಮಾಡಿ ಪಕ್ಷ ಪರಪಕ್ಷಗಳನ್ನು ತಿಳಿದುಕೊಳ್ಳುವುದರಲ್ಲಿ ನಮ್ಮ ಆಕ್ಷೇಪಣೆಯೂ ಇರುವುದಿಲ್ಲ ಉತ್ಸಾಹಶೀಲರೂ ಸಮರ್ಥರೂ ವಿವೇಕಶಾಲಿಗಳೂ ಆದ ಮುಖಂಡ ಪ್ರಜೆಗಳು ಸೇರಿ ಸಮುದಾಯತ್ವೇನ ವ್ಯವಹರಿಸುವಂಥಾ ವಿಚಾರಗಳನ್ನು ಕುರಿತು ಚರ್ಚೆಮಾಡಬೇಕಾದದ್ದೇನೋ ಅವಶ್ಯವೇ ಸರಿ. ಹೀಗೆ ಮಾಡೂಣದರಿಂದ ಮನಸ್ಸಿನಲ್ಲಿರುವ ಸಂಶಯಗಳು ನಿವಾರಣೆಯಾಗುವವು, ಕಷ್ಟನಷ್ಟಗಳು ಹೊರಬೀಳುವವು, ಅವುಗಳನ್ನು ತಪ್ಪಿಸಿಕೊಳ್ಳಬಹುದಾದ ಮಾರ್ಗಗಳು ಗೊತ್ತಾಗುವವು ಈ ಅರ್ಥಕ್ಕೆ ಕೂಟಗಳೂ ಸಮಾಜಗಳೂ ತುಂಬಾ ಸಹಾಯಕಾರಿಗಳೆನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಸಭೆಗಳಲ್ಲೂ ಸಮಾಜಗಳಲ್ಲೂ ಉಪನ್ಯಾಸಗಳೂ ವಾಗ್ವಿವಾದಗಳೂ ಪೂರೈಸಿ ತೀರ್ಮಾನಗಳು ನಿಷ್ಕರ್ಷೆಯಾದಬಳಿಕ ಮೆಂಬರುಗಳು ತಮ್ಮ ಉದ್ದೇಶ ಕಾರ್ಯವೆಲ್ಲಾ ನೆರವೇರಿತೆಂದೂ ಅಲ್ಲಿಗೆ ಕೃತಕೃತ್ಯರಾದೆವೆಂದೂ ಭಾವಿಸಿಕೊಳ್ಳುತ್ತಾರೆಂಬದಾಗಿ ನಮಗೆ ತೋರುವುದು ಅವರು ಕೂಟಗಳಲ್ಲಿ ನಿಷ್ಕರ್ಷೆ ಮಾಡಿಕೊಂಡ ಪ್ರಕಾರ ಕಾರ್ಯಸಾಧನೆ ಮಾಡುವುದರಲ್ಲಿ ಅಷ್ಟೇನೂ ಕುತೂಹಲವುಳ್ಳವರಾಗಿರುವಂತೆ ತೋರುವುದಿಲ್ಲ ವಾಕ್ಚಾತುರ್ಯವುಳ್ಳವರು ನೂರಾರುಮಂದಿ ಬೇಕಾದರೂ ಸಿಕ್ಕಬಹುದು, ಆದರೆ ಕಾರ್ಯಸಾಧನಾಪರರು ಎಲ್ಲಿದ್ದಾರೆ? ನಿಷ್ಕರ್ಷೆ ಮಾಡಿಕೊಂಡಿರುವ ಪ್ರಕಾರ ಕೆಲಸ ಮಾಡುವಂಥ ಮನುಷ್ಯರು ಸಭದಲ್ಲಿ ಹಿಂದುಸ್ಥಾನಕ್ಕೆ ಬೇಕಾಗಿರುವರು ಅವರು ಸತ್ಯಶೀಲರೂ ಸದ್ಗುಣಿಗಳೂ ಚಿತಮನಸ್ಕರೂ ಆಗಿರಬೇಕು, ಮತ್ತು ಅವರು ನಿಧಾನವಾಗಿ ಕಾರ್ಯಸಾಧನೆಯಲ್ಲೇ ನಿರತರಾಗಿರಬೇಕು ಇಂಥವರಿಗೆ ವಿರೋಧಿಗಳು ಹುಟ್ಟುವರು, ಅವರು ದೂಷಣೆಗೂ ಅಪಹಾಸ್ಯಕ್ಕೂ ಹಿಂಸೆಗೂ ಒಳಪಡುವರು ಸ್ವಜನಗಳ ಮಧ್ಯೆ ಅವರನ್ನು ಹೊಗಳುವುದಕ್ಕೆ ಪ್ರತಿಯಾಗಿ ಜರಿಯುವರು, ತೇಜೋವಧೆಯನ್ನು ಮಾಡುವರು ಜನಸಮುದಾಯದಲ್ಲಿ ಅವರು ಗುಟ್ಟಿಲ್ಲಿಯನ್ನುಂಟುಮಾಡತಕ್ಕವರೆನ್ನಿಸುವರು ಕಡೆಗೆ ಅವರು ಬಹಿಷ್ಕಾರಕ್ಕೂ ಕೂಡ ಗುರಿಯಾಗುತ್ತಾರೆ ಕಾರ್ಯಸಾಧಕರಿಗೆ ಈ ರೀತಿಯಾಗಿ ನಾನಾ ಕಷ್ಟನಷ್ಟ ಮನೋವ್ಯಥೆಗಳನ್ನು ಕಲ್ಪಿಸುತ್ತಾರೆ ಆದರೂ ಸಧ್ಯ ಹಿಂದುಸ್ಥಾನದಲ್ಲಿ ಇಂಥಾ ಕಾರ್ಯಸಾಧಕರಾದ ಮನುಷ್ಯರೇ ಬಹಳ ವಿಶೇಷವಾಗಿ ಅವಶ್ಯವಾಗಿದಾರೆ

ಓಟು ಕೊಡುತ್ತೇನೆಂದು ನಂಬಿಸಿ ಕೊಡದೆ ತಪ್ಪಿಬಿಟ್ಟ ವಿಷಯವು ಯೋಗ್ಯವಾದದ್ದೋ ಅಯೋಗ್ಯವಾದದ್ದೋ ಎಂಬ ವಿಚಾರವಾಗಿ ಈಗ ಮದರಾಸ್ ಪತ್ರಿಕೆಗಳಲ್ಲಿ ಚರ್ಚೆಯಾಗುತ್ತಿರುವುದನ್ನು ಓದಿದರೆ ನಮ್ಮ ಜನಗಳಲ್ಲಿ ಅನೇಕಾನೇಕರ ಶೀಲಸ್ವಭಾವಗಳು ಹೊರಪಡುವವು ಬಹಿರಂಗವಾಗಿ ನಡೆಯುವ ಸಭೆಗಳಲ್ಲಿ 'ಹಾಗೆ ಮಾಡಬೇಕಾದದ್ದೇ ನ್ಯಾಯ ಮತ್ತು ಆವಶ್ಯಕ' ಎಂದು ಮನಃಪೂರ್ವಕವಾಗಿ ಹೇಳಿ, ಸಂತೋಷದಿಂದ ಕೈಯೆತ್ತುವವರು ಅನೇಕವಾಗಿದಾರೆ ಆದರೆ ಅಂಥಾ ತೀರ್ಮಾನದಂತೆ ನಡೆದುಕೊಳ್ಳಬೇಕೆಂಬುವುದನ್ನು ಅವರ ಮನಸ್ಸು ಬಾಧಿಸುವುದಿಲ್ಲ ಮದರಾಸ್ ಗವರ್ನರವರ ನ್ಯಾಯವಿಧಾಯಕ ಸಭೆಯ ಒಬ್ಬ ಮೆಂಬರು ಡಾ|| ನಾಯರ್ ಯವರಿಗೆ ಓಟ್ ಕೊಡುವುದಾಗಿ ವಾಗ್ದಾನಮಾಡಿದ್ದುಂಟೆಂದೂ, ಆದರೆ ಆ ರೀತಿ ತಾವು ಕೊಡಲಿಲ್ಲವೆಂದೂ ಒಪ್ಪಿಕೊಂಡು, ಹೀಗೆ ಕೊಡದೆ ತಪ್ಪಿಬಿಟ್ಟದ್ದು ಅಯೋಗ್ಯವಾದ ಕಾರ್ಯವೇನೂ ಅಲ್ಲವೆಂದು ಹೇಳುತ್ತಾರೆ ಹೀಗೆಯೇ ಸಭೆ ಮತ್ತು ಸಮಾಜಗಳ ತೀರ್ಮಾನ ಈ ವಿಷಯದಲ್ಲೂ ಅನೇಕಾನೇಕರು ಇಂಥಾ ಅಭಿಪ್ರಾಯವನ್ನೇ ಪಡೆದಿರುವರು ಜನರು 'ಆಗಲಿ' ಎಂದು ಸಮ್ಮತಿಸಹುತ್ತಾರೆ ಆದರೆ ಆದರಂತೆ ನಡೆಯಬೇಕಾದ ಸಂದರ್ಭ ಒದಗಿದಾಗ ತಪ್ಪಿಹೋಗುವರು ಇಂಥಾ ಜನರನ್ನು ನಂಬುವುದು ಎಂದಿಗೂ ಸಾಧ್ಯವಲ್ಲ ಬಾಯಿಂದ ಆಡಿದ ಮಾತಿನಂತೆ ನಡೆದು ತೋರಿಸುವಂಥಾ ಮಹಾನುಭಾವರು ಹಿಂದುಸ್ಥಾನದಲ್ಲಿ ಹೆಚ್ಚಾಗುವ ವರೆಗೂ ಈ ರಾಷ್ಟ್ರವು ವೃದ್ಧಿಗೆ ಬರಲಾರದು ಬರಿಯ ನಿಷ್ಕರ್ಷೆಗಳೂ ತೀರ್ಮಾನಗಳೂ ಆ ಪ್ರಕಾರ ನಡೆದುಕೊಂಡ ಹೊರತು ಯಾವ ಪ್ರಯೋಜನಕ್ಕೂ ಬರುವುದಿಲ್ಲ ಅವುಗಳಿಂದ ಫಲವನ್ನನುಭೋಗಿಸಬೇಕಾದಲ್ಲಿ ಜನರು ಸರ್ವಕಾಲವೂ ಜಿತಮನಸ್ಸಿನಿಂದಲೂ ತಾಳ್ಮೆಯಿಂದಲೂ ಆ ಪ್ರಕಾರ ಕಾರ್ಯಸಾಧನೆಯನ್ನು ಮಾಡಬೇಕಾಗಿದೆ ಇಂಥಾ ಕಾರ್ಯದಕ್ಷರು ಒದಗಿದಲ್ಲದೆ ಕೂಟಗಳಿಂದಲೂ ಸಮಾಜಗಳಿಂದಲೂ ಜನಾಂಗಕ್ಕೆ ಯಾವ ಹಿತವೂ ಉಂಟಾಗುವುದಿಲ್ಲ ಆಡಿದ ಮಾತಿನಂತೆ ನಡೆದು ತೋರಿಸಬೇಕಾಗಿದೆ

ಕ್ಷಮೆ

ನಾನು ಕೆಲವು ದಿನಗಳು ಊರಲ್ಲಿರಲಿಲ್ಲ ನನ್ನ ಮಿತ್ರರಾದ ಕೃಷ್ಣಭಟ್ಟರು ಎರಡು ಮೂರಾವರ್ತಿ ನನ್ನನ್ನು ವಿಚಾರಿಸಿಕೊಂಡು ಬಂದಿದ್ದರೆಂದು ಕೇಳಿದ್ದರಿಂದ ಮಾರನೆ ದಿನದ ಬೆಳಗ್ಗೆ ಅವರ ಭೇಟಿಗೆ ನಾನೇ ಹೋದೆನು ಅವರು ತಮ್ಮ ದಿವಾನ್ ಖಾನೆಯಲ್ಲಿ ತಮ್ಮ ಕಿರಿಮಗನ ಸಂಗಡ ಸರಸವಾಡುತ್ತ ವಿರಾಮವಾಗಿ ಹೊತ್ತು ಕಳೆಯುತ್ತಿದ್ದರು ಅವರು ನನ್ನನ್ನು ಕಂಡ ಒಡನೆಯೇ ತಮ್ಮ ಮಗನನ್ನು ಎತ್ತಿಕೊಂಡು ನನಗೆ ಸುಸ್ವಾಗತವನ್ನು ಬಯಸಿದರು ಹೀಗೆ ನಾವು ಎದುರುಬದುರಿಗೆ ಕೂತುಕೊಂಡು ಪರಸ್ಪರ ಕ್ಷೇಮಗಳನ್ನು ವಿಚಾರಿಸಿದ ನಂತರ ಕೃಷ್ಣಭಟ್ಟರು ಹೇಳುತ್ತಾರೆ —

"ಉಪದೇಶಿಗಳೇ, ನಿಮ್ಮನ್ನು ಕಾಣಬೇಕೆಂದು ಎರಡು ಮೂರಾವರ್ತಿ ನಿಮ್ಮ ಮನೆಗೆ ಬಂದಿದ್ದೆ ಆದರೂ ನಿಮ್ಮ ಭೇಟಿಯಾಗಲಿಲ್ಲ"

ನಾನು—ಸ್ವಾಮಿ, ಹಳ್ಳಿಗೆ ಹೋಗಬೇಕಾದ ಜಂಜಡವಿದ್ದಿತು ಕ್ಷಮಿಸಬೇಕು ಮತ್ತೇನು ವಿಶೇಷ? ಈಗ ಅಪ್ಪಣೆಯಾಗಲಿ

ಕೃ ಭ—ಹೇಳುತ್ತೇನೆ ಕೇಳಿರಿ ನಾನು ನಿಮ್ಮ ಮನೆಗೆ ಬಂದುದು ನಮ್ಮ ನಾರಾಯಣನ ಸಂಗತಿ ಮಾತಾಡಿದ ನಂತರ ಅವ ನಿಮ್ಮಲ್ಲಿ ಬಂದಿದ್ದನೋ?

ನಾನು—ಹೌದು ಬಂದಿದ್ದ ಅದರ ವಿಚಾರ ಈಗ ಯಾತಕ್ಕೆ?

ಕೃ ಭ—ಅಂದಿನಿಂದ ಅವನ ನಡತೆಯೇ ಸೋಜಿಗವಾಗಿದೆ ಅವನು ಎಲ್ಲಿದ್ದನೋ ಅವನ ಸಪ್ಪಳವೇ ಕೇಳಬರುವದಿಲ್ಲ ಅವನ ತಾಯಿಯಂತೂ ಅವನ ಉತ್ತಮ ನಡತೆಯನ್ನು ನೋಡಿ ದಂಗಾಗಿದ್ದಾಳೆ ಇದಕ್ಕೆ ಮೊದಲು ಅವಳನ್ನು ಗದರಿಸುವದೂ ಹೆದರಿಸುವದೂ ಅವಿಧೇಯನಾಗಿರುವದೂ ಬಹು ಸಾಧಾರಣವಾಗಿದ್ದಿತು ಈಗಲಾದರೋ ಆಕೆಯ ಮನಸ್ಸೇನಾದರೂ ನೊಂದೀತೂ ಯೆಂದು ತನ್ನ ಮನೆಯ ಕರ್ತವ್ಯಗಳನ್ನು ಹೇಳಿಸಿಕೊಳ್ಳದಲೇ ತಾನಾಗಿ ಮಾಡುತ್ತಾನೆ ಘಟ್ಟಿಯಾಗಿ ಮಾತನಾಡಿ ಗದರಿಸಿದ್ದು ಇಲ್ಲವೇ ಇಲ್ಲ ತಮ್ಮಂದಿರನ್ನೂ ತಂಗಿಯರನ್ನೂ ಅವನು ಮುದ್ದಿಸುವವನನ್ನು ಕಂಡರೆ ಮನಸ್ಸಿಗೆ ಆನಂದವಾಗುತ್ತೆ ಅತ್ತಲಾಗಿ ಪಾಠಶಾಲೆಯಲ್ಲಿ ವಿಚಾರಿಸಿದರೆ ಅಲ್ಲಿಯೂ ಅವನ ನಡತೆ ಬಹು ತೃಪ್ತಿಕರವಾಗಿಯೇ ಇದೆ ಈಗೀಗ ಅವನು ಪಾಠ ಒಪ್ಪಿಸದ ದಿನವೇ ಇಲ್ಲ ತರಗತಿಯಲ್ಲಿ ಅವನೇ ಮೊದಲನೆಯವನು ಕೆಟ್ಟ ಹುಡುಗರ ಸಹವಾಸವನ್ನೇ ಸೇರನು, ಹೀಗೆಂದು ಅವನ ಉಪಾಧ್ಯಾಯರೇ ಹೇಳುತ್ತಾರೆ ಇದು ವಿಶೇಷವಲ್ಲವೆ?

ನಾನು—ಬಹಳ ವಿಶೇಷವೇ ಸರಿ ಇಷ್ಟುಬೇಗ ಅವನು ಇಂಥಾ ಭಲೋ ಮಾರ್ಗವನ್ನವಲಂಬಿಸಿದ್ದು ನನಗೆ ಬಹು ಸಂತೋಷ ಒಳ್ಳೇದು, ನಿಮ್ಮ ಕಡೆಗೆ ನಾರಾಯಣನ ನಡತೆಯು ಹ್ಯಾಗಿದೆ

ಕೃ ಭ—ಅದನ್ನೇನು ಕೇಳುತ್ತೀರಿ ಅದು ಮತ್ತಷ್ಟು ಸೋಜಿಗಕ್ಕೆ ಕಾರಣವಾಗಿದೆ ಮೊದಲೂ ಮೊದಲು ನನ್ನ ಬಳಿಗೆ ಬಂದು ಏನೋ ಹೇಳಬೇಕೆಂಬವನಂತೆ ಕಾಣುತ್ತಿದ್ದರೂ ಅತ್ತಿತ್ತ ಅಲ್ಲಾಡುತ್ತಿದ್ದನೇ ಹೊರತು ಸಮೀಪ ಬರಲಿಲ್ಲ ನನ್ನ ಇಂಗಿತವನ್ನು ತಿಳಿದು ನನಗೆ ಆಗಬೇಕಾದ ಸಣ್ಣ ಸಣ್ಣ ಕೆಲಸಗಳನ್ನು ನಾ ಹೇಳುವದಕ್ಕೆ ಮುಂಚೆಯೆ ಮಾಡುತ್ತಿದ್ದ, ಆದರೂ ಮುಖ ಬಾಡಿದವನಾಗಿ ದುಃಖದಿಂದಲೆ ತಿರುಗಾಡುತ್ತಿದ್ದುದನ್ನು ನಾನು ಆಗಾಗ್ಯೆ ನೋಡುತ್ತಿದ್ದೆ ಆಗಾಗ್ಗ ಅಳುತ್ತಲೂ ತಾಯಿ ಕಾರಣವನ್ನು ಕೇಳಿದರೆ ಹೇಳದೆ ಕಣ್ಣೀರು ಕೊಂಡು ಕೆಲಸದ ಮೇಲೆ ಹೋಗುತ್ತಾ ಇದ್ದಾನೇ ಅತನ ತಾಯಿ ನನಗೆ ಹೇಳಿದಳು ನಾನು ಅದೇ ಸಾಯಂಕಾಲ ಪಾಠಶಾಲೆಯಿಂದ ಬಂದವನನ್ನು ಕರೆದು ಕೇಳಲು ಅವನು ಪಳಪಳನೆ ಕಣ್ಣೀರು ಸುರಿಸುತ್ತ ನನ್ನೆದುರಿಗೆ ಬಂದು ಕೈ ಜೋಡಿಸಿ ನಿಂತು—ಅಪ್ಪಯ್ಯಾ! ನನಗೆ ಕ್ಷಮಿಸಿರಿ ನಾನು ನಿಮ್ಮ ಪ್ರೀತಿ, ಉಪಕಾರಗಳನ್ನು ಎಣಿಸದೆ ಬಗೆ ಬಗೆಯಾದ ದುಷ್ಕೃತ್ಯಗಳನ್ನು ನಡಿಸಿ ನಿಮ್ಮ ಮನಸ್ಸನ್ನು ನೋಯಿಸಿದ್ದೇನೆ ಇನ್ನೆಂದಿಗೂ ಹಾಗೆ ಮಾಡುವದಿಲ್ಲವೆಂದು ಭಾಷೆ ಮಾಡುತ್ತೇನೆ ಅಂದನು ಇದೆಲ್ಲಾ ನಿಮ್ಮ ಉಪದೇಶದ ಫಲ ಸಂದೇಹವಿಲ್ಲ ನೀವು ಅವನಿಗೆ ಏನ ಮಂತ್ರೋಪದೇಶ ಮಾಡಿದಿರಿ

ನಾನು ಅದಿರಲಿ ನೀವು ಅವನಿಗೆ ಕ್ಷಮಿಸಿದಿರೋ? ಏನುಹೇಳಿದಿರಿ?

ಕೃ ಭ—ಏನು ಹೇಳಲಿಲ್ಲಯ್ಯಾ ನನಗಂತೂ ಬಾಯಲ್ಲಿ ಮಾತೇ ಹೋದವು ಆಗ ನಾನೇನಂದೆನೋ ಏನು ಮಾಡಿದೆನೋ ನನಗೇ ಗೊತ್ತಿಲ್ಲ ಇಷ್ಟು ಮಾತ್ರ ಚನ್ನಾಗಿ ನೆನಪಿದೆ ಏನಂದರೆ ಅವನ ಮಾತುಗಳನ್ನು ಕೇಳಿ ನನ್ನ ಆನಂದ ಬಾಷ್ಪಗಳನ್ನು ಸುರಿಸುತ್ತ ಎದ್ದು ಅವನನ್ನು ಆಲಿಂಗಿಸಿಕೊಂಡು ಮುದ್ದಾಡಿದೆನು

ನಾನು ಶಹಬಾಸ್ ಇಂಥಹ ಶುಭವಾರ್ತೆಯನ್ನು ಕೇಳಿ ನಾನು ಆನಂದಭರಿತನಾಗಿದ್ದೇನೆ ಭಟ್ಟರೆ, ನಿಮ್ಮ ಮಗನನ್ನು ರಕ್ಷಿಸಿಕೊಂಡಿರಿ

ಕೃ ಭ—ನಿಮ್ಮ ಉಪದೇಶವು ರಕ್ಷಿಸಿತು ಇದಕ್ಕಾಗಿ ನಾನು ಜೀವಾವಧಿ ನಿಮಗೆ ಋಣಿಯಾಗಿರುವೆನು ಆದರೆ ನಾನು ಮಾಡಿದ ದಂಡನೆಗಿಂತ ನೀವು ಹೇಳಿದ ಬುದ್ಧಿವಾದವೇ ಫಲಕಾರಿಯಾಯಿತಲ್ಲ ಇದರ ಮರ್ಮವೇನು?

ನಾನು—ಸ್ವಾಮಿ ಸಕಾಲದಲ್ಲಿ ನ್ಯಾಯವಾಗಿ ಮಾಡುವ ದಂಡನೆಯೂ ಕ್ಷಮೆಯೂ ಎರಡೂ ಒಳ್ಳೆಯವೆ ಆದರೆ ಕ್ಷಮೆಯೇ ಎಂದರಲ್ಲಿ ಉತ್ತಮವಾದದ್ದೆಂತ ನನಗೆ ತೋರುತ್ತೆ ದಂಡನೆಯಲ್ಲಿ ನಾನಾ ವಿಧಗಳುಂಟು ಹುಡುಗರು ತಪ್ಪು ಮಾಡಿದಾಗ ಮಿತಿಮೀರಿ ಅವರ ಮೇಲೆ ರೌದ್ರವನ್ನು ತಾಳಿ ಮನಸ್ವೇಚ್ಛೆ ಹೊಡೆಯುವದು ಸ್ವಲ್ಪವೂ ಸರಿಯಲ್ಲ ಶಾಂತತೆಯಿಂದ ಅವರ ತಪ್ಪನ್ನು ಅವರಿಗೆ ತಿಳಿಸಿ ಅಪರಾಧಕ್ಕೆ ತಕ್ಕ ದಂಡನೆ ಮಾಡಬೇಕು ಆದರೆ ಪ್ರಾಯಸ್ಥರಾದ ಮಕ್ಕಳನ್ನು ತಿಳುವಿಕೆ ಬಂದ ಅವರ ಮನಸ್ಸನ್ನು ಹಚ್ಚಿಸಬೇಕು ದಂಡಿಸುವದರಿಂದ ಕಳೆದು ಹೋದ ಪದಾರ್ಥ ಹಿಂತಿರುಗಿ ಬರುವದಿಲ್ಲವಷ್ಟೆ

ಕೃ ಭ—ಬರುವದಿಲ್ಲ ಸರಿ ಆದರೆ ಕ್ಷಮಿಸಿದರೂ ಕಳಕೊಂಡಿದ್ದು ತಿರಿಗಿ ಬರುವದಿಲ್ಲವಷ್ಟೆ

ನಾನು ಬರುವದಿಲ್ಲ ಸರಿ ಆದರೆ ದಂಡನೆಯಿಂದ ಆಪರೋಕ್ಷವಾಗಿ ಅನಿವಾರ್ಯ ಉಗ್ರದಂಡನೆಯಿಂದ ಹುಡುಗರ ಮನಸ್ಸು ಕಠಿಣವಾಗಲಿಕ್ಕೂ ನಿಮ್ಮನ್ನು ಕಂಡರೆ ಹೆದರಿಕೊಳ್ಳಲಿಕ್ಕೂ ಕಾರಣವಾಗುತ್ತದೆ ಆಲೋಚನೆಗೆ ಕಾರಣ ಹುಟ್ಟಲಿಕ್ಕಿಲ್ಲ ತಮ್ಮ ಅಪರಾಧವನ್ನು ತಿಳಿದು ಬಿಡಲಿಕ್ಕೆ ಕಾರಣವಾಗದೆ ಕೇವಲ ದಂಡನೆಗೆ ಹೆದರಿಕೊಂಡು ತಮ್ಮ ಮನೋರಥಗಳನ್ನು ನೀವು ಕಾಣದಂತೆ ಸಫಲಗೊಳ್ಳಲಿಕ್ಕೆ ಹಂಚಿಕೆಯನ್ನು ಹುಡುಕುವರು ಆದರೆ ಅವರ ಸಂಗಡ ಪ್ರೀತಿಯಿಂದ ಮಾತನಾಡಿ ಅವರ ಅಪರಾಧದಿಂದ ಸಂಭವಿಸಿದ ನಷ್ಟವನ್ನೂ ತೋರಿಸಬೇಕು ಪದಾರ್ಥ ನಷ್ಟಕಿಂತ ಇನ್ನೊಂದು ಭಾರೀ ನಷ್ಟವನ್ನು ಅವರಿಗೆ ತೋರಿಸಬೇಕು ಏನಂದರೆ ಅಪರಾಧದಿಂದ ತನಗೂ ತನ್ನ ತಂದೆ ತಾಯಿಗಳಿಗೂ ಉಂಟಾದ ಮಾನಹಾನಿಯನ್ನೂ ಅದಕ್ಕಿಂತ ಮುಖ್ಯವಾಗಿ ಅವನ ಸದ್ಗುಣ ಸದ್ಭಾವ ಕೆಟ್ಟು ಹೋದ ನಷ್ಟವನ್ನೂ ಅವನಿಗೆ ಪರಿಷ್ಕಾರವಾಗಿ ವಿವರಿಸಬೇಕು ಇಷ್ಟಾದರೂ ಕಳೆದು ಹೋದ ಪದಾರ್ಥ ಪುನಹ ಬರಲಿಲ್ಲವೆಂದೀರಿ ಆದರೆ ಆ ಹುಡುಗನು ಪಶ್ಚಾತ್ತಾಪಪಟ್ಟು ಇನ್ನು ಮುಂದೆ ಅಂಥಾ ಕೃತ್ಯ ತನ್ನಿಂದ ನಡೆಯದಂತೆ ಹುಷಾರಾಗುವನು ಇದು ಲಾಭವಲ್ಲವೋ?

ಒಳದೇಶದ ವೃತ್ತಾಂತಗಳು

ಮೈಸೂರು ನ್ಯಾಯವಿಧಾಯಕ ಸಭೆಯು ಈ ದಿವ ಮಧ್ಯಾಹ್ನ ಬೆಂಗಳೂರು ಅಠಾರಾ ಕಚೇರಿಯಲ್ಲಿ ನಡೆಯುವುದಾಗಿದೆ

ಕಳೆದ ವಾರ ಬ್ರಿಟಿಷ್ ರೆಸಿಡೆಂಟರು ರೈಲುದಾರಿಯ ಮೂಲಕ ಕೊಡಗು ಪ್ರಾಂತ್ಯಕ್ಕೆ ದಯಮಾಡಿದರು ಅಸಿಸ್ಟೆಂಟ್ ರೆಸಿಡೆಂಟರೂ ಹೋಗಿರುತ್ತಾರೆ

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ರಾಬರ್ಟ್‌ಸನ್ ಪೇಟೆಯಲ್ಲಿ ಚರಂಡಿ ಬತ್ತಲುಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ೧೫,೩೫೦ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ

ಈ ಸಲ ಕಾಕನಕೋಟೆಯ ಕೆಡ್ಡಾದಲ್ಲಿ ಹಿಡಿದಿರುವ ಆನೆಗಳ ಪೈಕಿ ಸುಮಾರು ೧೦೦ ಆನೆಗಳನ್ನು ಸರ್ಕಾರದವರು ವಿಕ್ರಯಮಾಡುವುದಾಗಿ ಗೊತ್ತು ಮಾಡಿರುತ್ತಾರೆ ಇದರಿಂದ ಸುಮಾರು ೨೦ ಸಾವಿರ ರೂಪಾಯಿ ಉತ್ಪತ್ತಿಯಾದೀತೆಂದು ಹೇಳುವರು

ಹಿರಿಯೂರು ಟವನ್ನಿನಲ್ಲಿ ವಾಸಮಾಡುವ ಎಲ್ಲಾ ಇಲಾಖೆಗಳ ಸರ್ಕಾರಿ ನೌಕರರಿಗೂ ಸ್ಥಳವಸತಿಯನ್ನು ಕಲ್ಪಿಸಿ ಕೊಡುವ ತನಕ ೧೦ ಕ್ಕೆ ೨ ರೂಪಾಯಿ ನಂತ ಸ್ಥಳೀಯ ಅಲೋಯನ್ಸನ್ನು ಕೊಡುತ್ತಾ ಬರಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ

ಕಳೆದ ವಾರ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಮೋಟಾರ್ ಗಾಡಿಗಳಲ್ಲಿ ರಾಜಧಾನಿಯಿಂದ ದಯಮಾಡಿ ಒಂದು ದಿನ ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನೂ, ಒಂದು ದಿನ ಕಾಕನಕೋಟೆ ಕೆಡ್ಡಾದಲ್ಲಿ ಆನೆಗಳನ್ನು ಕಟ್ಟಿಹಾಕಿದ್ದನ್ನೂ ಪರಾಂಬರಿಸಿಕೊಂಡು ಬಂದರು

ಈ ಸಂಸ್ಥಾನದ ರೆಸಿಡೆಂಟರವರ ಅಸಿಸ್ಟೆಂಟರಾಗಿರುವ ಮೆ|| ಟಿ ಬಿ ಕೋಸ್‌ಲೆಂಡ್‌ಯವರಿಗೆ ವರ್ಗವಾಯಿತು ಇವರ ಸ್ಥಾನಕ್ಕೆ ಮೇಜರ್ ಡಬ್ಲ್ಯು ಜಿ ಗ್ರೇಯವರು ನೇಮಕವಾಗಿದಾರೆ ಇವರು ಮುಂದಿನ ಸೋಮವಾರ ಸೀಮೆಯಿಂದ ಬೆಂಗಳೂರಿಗೆ ಬಂದು ಕೆಲಸದ ಭಾರವನ್ನು ವಹಿಸಿಕೊಳ್ಳುವವರಾಗಿದಾರೆ

ಸೀಯಳದ ಅಮಲ್ದಾರರಾಗಿದ್ದ ಮೆ|| ಎಂ ಎ ಶ್ರೀನಿವಾಸಯ್ಯಂಗಾರ್, ಬಿ ಎ, ಬಿ ಎಲ್ ಯವರು ೧೦ ೧೨ ದಿನ ಶೀತಜ್ವರದಲ್ಲಿ ನರಳಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರಿಗೆ ಇನ್ನೂ ಸುಮಾರು ೨೮ ವರುಷ ವಯಸ್ಸಾಗಿತ್ತು ಚಿಕ್ಕ ಪ್ರಾಯದ ಹೆಂಡತಿಯೂ, ಒಂದು ಗಂಡ ಮಗುವೂ ವಿಯೋಗದುಃಖಕ್ಕೆ ಪಾತ್ರರಾದರು

ನೆನ್ನೆ ರಾಜಧಾನಿಯಲ್ಲಿ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಲೇಟ್ ಮಹಾರಾಜರವರ ಯಡೇಕಟ್ಟೆಯನ್ನು ಸೇರವೇರಿಸಿ, ವೈದಿಕರಿಗೆ ದಾನ

ಧರ್ಮಗಳನ್ನು ದಯಮಾಲಿಸಿದರು ಬಡಬಗ್ಗರಿಗೆ ಸಮಾರಾಧನೆಯನ್ನು ಮಾಡಿಸಿದರು ಸಾವಿರಾರು ಮಂದಿ ಸುಖಿ ಭೋಜನವನ್ನು ಮಾಡಿದರು ಸಾಯಂಕಾಲ ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಡುವಂತೆ ಏರ್ಪಾಡಾಗಿತ್ತು

ಯಡತೊರೆ ತಾಲ್ಲೂಕಿಗೆ ಸೇರಿದ ಚುಂಚನ ಕಟ್ಟೆಯಲ್ಲಿ ನಾಳೆಯಿಂದ ರಥೋತ್ಸವ ನಡೆಯುತ್ತದೆ ಈ ಸಂದರ್ಭದಲ್ಲಿ ಸರ್ಕಾರದವರು ಅಲ್ಲಿ ದನಗಳ ಪ್ರದರ್ಶನವನ್ನು ನಡಿಸುವವರಾಗಿದ್ದಾರೆ ಹಳ್ಳಿಕಾರ, ಚಿಟ್ಟದವುರ, ನಾಡು ಎಂಬೀ ಮೂರು ಜಾತಿಯ ದನಗಳಲ್ಲಿ ಚನ್ನಾಗಿರುವ ರಾಸುಗಳಿಗೆ ೩೭ ಬಹುಮಾನಗಳನ್ನು (ಅಂದರೆ ೨೦೦ ರೂಪಾಯಿಯನ್ನು) ವಿನಿಯೋಗ ಮಾಡುತ್ತಾರೆ ಮತ್ತು ಸರ್ಟಿಫಿಕೇಟುಗಳನ್ನೂ ಕೊಡುವರು

ನಾಳೆ ಭಾನುವಾರ ಶ್ರೀಮನ್ ಯುವರಾಜರವರು ಪರಿವಾರಸಮೇತ ಶಿಕಾರಿಗಾಗಿ ರಾಜಧಾನಿಯಿಂದ ಹೊರಟು ಚಾಮರಾಜನಗರದ ತಾಲ್ಲೂಕಿನ ಜಂಗಲಿಗೆ ದಯಮಾಡುತ್ತಾರೆ ಅವರ ಕೂಡ ಮಹಾರಾಜರವರ ಪ್ರೈವೇಟ್ ಸೆಕ್ರಿಟರಿ ಮೆ|| ಕ್ಯಾಂಬೆಲ್ ಯವರೂ, ಮದರಾಸಿನ ಮೇಜರ್ ಎ ಎ ಡಫ್ ಯವರೂ, ಕ್ಯಾಪ್ಟನ್ ಜಿ ಹೆಸಲ್ಟೈನ್ ಯವರೂ ಹೋಗುವರು ಸುಮಾರು ೮-೧೦ ದಿವಗಳ ಮೇಲೆ ಅವರೆಲ್ಲಾ ವಾಪಸು ಬರುವವರಾಗಿದ್ದಾರೆ

ಬೆಂಗಳೂರು ದಂಡಿನಲ್ಲಿ ಮುಖ್ಯರಾದ ಕೆಲವು ವರ್ತಕರು ದಂಡಿನಲ್ಲೂ ಪೇಟೆಯಲ್ಲೂ ಮ್ಯುನಿಸಿಪಲ್ ಆಕ್ಟ್ರಾಯಿ ಸುಂಕಗಳನ್ನಿಟ್ಟಿರೋಣದರಿಂದ ತಮಗೆ ತುಂಬಾ ಕಷ್ಟವಾಗಿದೆ ಎಂದೂ ಅದನ್ನು ವಜಾಮಾಡಿಕೊಡಬೇಕೆಂದೂ ಬ್ರಿಟಿಷ್ ರೆಸಿಡೆಂಟರನ್ನು ಕೇಳಿಕೊಂಡರು ರೆಸಿಡೆಂಟರು ವರುಷಕ್ಕೆ ಸುಮಾರು ೬೩,೦೦೦ ರೂಪಾಯಿ ಉತ್ಪತ್ತಿಯ ಗುತ್ತಿರುವ ಈ ಬಾಬನ್ನು ವಜಾಮಾಡಿದರೆ ಮ್ಯುನಿಸಿಪಲ್ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯಲಾಗವೆಂದು ಹೇಳಿ ಜವಾಬು ಕೊಟ್ಟು ಕಳುಹಿದರು

ರಿಯೂರು ಬಿ ಶ್ರೀದ್ದಾರರು ಒರೆಯ ತ್ತವೇನಿಂದರೆ —ನಮ್ಮ ಊರು ಸರಿ ಬಳಿ ಸೊಪ್ಪಿನ ಕೊಟಿದಲ್ಲಿ ಈಗ ೧೫ ೨೦ ದಿನಗಳ ಲಾಗಾಯ್ತು ಸೇರಿ ಜನಗಳಿಗೂ ದನಗಳಿಗೂ ತೊಂದರೆ ಕೊಡುತ್ತಿದ್ದ ಸುಳಿಯನ್ನು ಎನ್ನುವದನ್ನು ಹೊಡೆಯಬೇಕೆಂದು ಊರು ಜನಗಳು ಹೋಗಿ ಮೆಳೆಯಲ್ಲಿ ಇದ್ದದ್ದನ್ನು ಹೊರಡಿಸಿದರು ಹೊರಡಿಸಿದ ತಕ್ಷಣ ಅದು ನಮ್ಮ ಊರು ದುರ್ಗದ ಸಿದ್ದಪ್ಪ ಎಂಬುವನ ಎಡಗೈಯನ್ನು ಹಿಡಿದುಕೊಂಡಿತು ಹಾಜರಿದ್ದವರು ಓಡಿಬಂದರು ಬಂದ ಕೂಡಲೆ ಅದು ಬಿಟ್ಟು ಮೆಳೆಯಲ್ಲಿ ಸೇರಿಕೊಂಡಿತು ಅದನ್ನು ನಮ್ಮ ಪಾರೀಕಗಾರ ಮೆ|| ರೈಸ್ ನಾಯೇಬರವರು ಬಹಳ ಸಾಹಸಪಟ್ಟು ಒಂದೇ ಏಟಿಗೆ ಹೊಡೆದು, ಜನರ ತಿರುಗಾಟಕ್ಕೆ ಅನುಕೂಲಮಾಡಿದ್ದಕ್ಕಾಗಿ ಬಹಳ ಸಂತೋಷಪಡಬೇಕಾಗುತ್ತೆ

ಶ್ರೀಮನ್ ಮಹಾರಾಜರವರಿಗೆ ಪಟ್ಟಾಭಿಷೇಕವಾದದ್ದರ ಜ್ಞಾಪಕಾರ್ಥವಾಗಿ ಸಕಲೇಶಪುರದಲ್ಲಿ ಆ ಪ್ರಾಂತ್ಯದ ದೊಡ್ಡ ಮನುಷ್ಯರೂ ಕಾಫಿಪ್ಲಾಂಟರುಗಳೂ ಒಂದು ಛತ್ರವನ್ನು ಕಟ್ಟಿಸಿ, ಈ ಕಟ್ಟಡವನ್ನು ಜನವರಿ ತಾ ೧ರಲ್ಲಿ ಪ್ರತಿಷ್ಠೆ ಮಾಡಿದರು ಮೆ|| ಗ್ರೇಹಂ ಆಂಡ್ರಸನ್, ಸಿ ಐ ಇ ಯವರು ಆ ದಿನದ ಉತ್ಸವದಲ್ಲಿ ಮುಂದಾಳುಗಳಾಗಿ ನಿಂತು ಪ್ರತಿಷ್ಠೆಯ ಕಾರ್ಯಗಳನ್ನು ನೆರವೇರಿಸಿ, ಸಮಯೋಚಿತವಾದ ಉಪನ್ಯಾಸವನ್ನು ಮಾಡಿದರು ಸರ್ಕಾರಿ ಅಧಿಕಾರಿಗಳೂ ದೇಶೀಯ ಮತ್ತು ಯೂರೋಪಿಯನ್ ದೊಡ್ಡ ಮನುಷ್ಯರೂ ಹಾಜರಾಗಿದ್ದರು ಮಿ ಆಂಡರ್ಸನ್‌ರವರ ಭಾಷಣವನ್ನು ಸಬ್ ರೆಜಿಸ್ಟ್ರಾರ್ ಮೆ|| ರಾಮದಾಸಪ್ಪನವರು ಕನ್ನಡದಲ್ಲಿ ಸಭಿಕರಿಗೆ ತಿಳಿಯಹೇಳಿದರು ಕಡೆಯಲ್ಲಿ ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿ ಸಭೆಯು ಮುಕ್ತಾಯ ಮಾಡಲ್ಪಟ್ಟಿತು

ರಾಜಧಾನಿಯ ಜನರಲ್ ಆಸ್ಪತ್ರೆಯ ಎದುರಿಗೆ ಸಯ್ಯಾಜಿ ರಾವ್ ರಸ್ತೆಯಲ್ಲಿ ಸರ್ಕಾರದವರು ಲೇಟ್ ಚಾಮರಾಜ ಒಡೆಯರವರ ಹೆಸರಿನ ಮೇಲೆ ದೊಡ್ಡ ಕೈಗಾರಿಕೆ ವಿದ್ಯಾಶಾಲೆಯನ್ನು ಕಟ್ಟಬೇಕೆಂದು ಗೊತ್ತುಮಾಡಿ, ಅದಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡಿದ್ದಾಗ ಅವರ ಹಸ್ತದಿಂದ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠೆ ಮಾಡಿಸಿದರಷ್ಟೆ ಈ ಪಾಠಶಾಲೆಯ ಕಟ್ಟಡವು ಸುಮಾರು ಮೂರು ತಿಂಗಳ ಕೆಳಗೆ ಪ್ರಾರಂಭವಾಯಿತು ಅದಕ್ಕೆ ಒಟ್ಟು ೨,೫೫,೦೦೦ ರೂಪಾಯಿ ಅಂದಾಜು ಆಗಿರುತ್ತದೆ ಈ ಪೈಕಿ ಸುಮಾರು ೪೦,೦೦೦ ರೂಪಾಯಿ ಖರ್ಚುಮಾಡಿ ಮನೆಗಳನ್ನು ಕೊಂಡು ಒಡೆದು ನಿವೇಶನವನ್ನು ಬಿಡಿಸಿದ್ದಾಯಿತು ಈ ಕಟ್ಟಡದ ಕಂಟ್ರಾಕ್ಟನ್ನು ಇಲ್ಲಿನ ದೊಡ್ಡ ಪೇಟೆಯಲ್ಲಿರುವ ಷಾಪ್ ಕೀಪರ್ ಮೆ|| ರಂಗಣ್ಣನವರು ವಹಿಸಿಕೊಂಡು, ೧೯೧೧ ನೇ ಇಸವಿ ಜೂನ್ ತಿಂಗಳೊಳಗಾಗಿ ಕಾಮಗಾರಿಯನ್ನು ಪೂರೈಸಿಕೊಡುವದಾಗಿ ಒಪ್ಪಿ ಬಹಳ ಚಟುವಟಿಕೆಯಾಗಿ ಕೆಲಸಗಳನ್ನು ಮಾಡಿಸುತ್ತಲಿದ್ದಾರೆ ಸರ್ಕಾರದವರು ಈ ಕಟ್ಟಡದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ಇಂಜನಿಯರ್ ಮೆ|| ತಾಂಡೋಣೆರಾಯರನ್ನು ನೇಮಿಸಿರುವರು

ಮೈಸೂರು ಗೆಜೆಟ್ ಸಂಗ್ರಹ.

೧೯೧೦ ನೇ ಇಸವಿ ಫೆಬ್ರವರಿ ತಾ ೧ ರಿಂದ ಎರಡು ವರ್ಷಗಳ ವರೆಗೆ ಮುಂದೆ ಹೇಳುವ ಮ್ಯುನಿಸಿಪಾಲಿಟಿಗಳ ಸರಹದ್ದಿನಲ್ಲಿ ದೇವೀಶಿಡುಬನ್ನು ಬಲಾತ್ಕರಿಸಿ ಹಾಕುವ ಕಾನೂನನ್ನು ಜಾರಿಗೆ ತರಲಾಗುತ್ತದೆ —ಚಾಮರಾಜನಗರ, ಶ್ರೀರಂಗಪಟ್ಟಣ, ಹುಣಸೂರು ಯಡತೊರೆ, ಗುಂಡ್ಲುಪೇಟೆ, ನಂಜನಗೂಡು, ತಿರುಮಕೂಡ್ಲು ನರಸೀಪುರ, ಮಳವಳ್ಳಿ, ಮಂಡ್ಯ, ಕೃಷ್ಣರಾಜಪೇಟೆ,

ತಿರುಮಕೂಡ್ಲು ನರಸೀಪುರ ತಾಲ್ಲೂಕು ಮುಡುಕುತೊರೆ ಜಾತ್ರೆಗೆ ಪ್ಲೇಗ್ ಇರುವ ಪ್ರದೇಶಗಳಿಂದ ಹೋಗತಕ್ಕವರನ್ನು ಫೆಬ್ರವರಿ ತಾ ೭೮ ದ ಮಾರ್ಚಿ ತಾ ೩ ರವರಿಗೆ ಬಿಡುವುದಿಲ್ಲ

ಶೃಂಗೇರಿ ಮ್ಯುನಿಸಿಪಲ್ ಸರಹದ್ದಿನೊಳಗೆ ೧೫ ವರುಷದೊಳಗಿರತಕ್ಕ ಮಕ್ಕಳಿಗೆಲ್ಲಾ ಬಲಾತ್ಕರಿಸಿ ದೇವೀಶಿಡುಬು ಹಾಕಬೇಕೆಂದು ಸರ್ಕಾರದವರು ವಿಧಿಸಿರುತ್ತಾರೆ ಈ ವಿಧಿಯು ಇದೇ ಜನವರಿ೧ಗಾಯಿತು ಎರಡು ವರುಷಗಳ ತನಕ ಜಾರಿಯಲ್ಲಿರುವುದು

ಮೆ|| ರಂಗಪ್ಪನವರನ್ನೂ ಮೆ|| ಸೀತಾರಾಮಶೆಟ್ಟರನ್ನೂ ಶ್ರೀನಿವಾಸಪುರ ಟೌನ್ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಕ ಮಾಡಿದೆ

ಮೈಸೂರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ|| ಡಿ ದೇವರಾಜೇ ಅರಸಿನವರಿಗೆ ಕ್ರಿಸ್ಮಸ್ ರಜಾದೊಂದಿಗೆ ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅಸಿಸ್ಟೆಂಟ್ ಮೆ|| ಎಂ ಲಕ್ಷ್ಮೀನಾರಾಯಣಶಾಸ್ತ್ರಿಯವರು ಇನ್ಸ್‌ಪೆಕ್ಟರ್ ಜನರಲ್‌ರವರ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು

ಅ|| ಕಂಟ್ರೋಲರ್ ಮೆ|| ಟಿ. ಲಕ್ಷ್ಮೀನರಸಿಂಹರಾಯರಿಗೆ ಜನವರಿ ತಾ ೩ ರಿಂದ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ|| ಕೆಮಿಸ್ಟ್ ಮೆ|| ಬಿ. ವೆಂಕಟರಾಯರಿಗೆ ಕೊಟ್ಟಿರುವ ಪ್ರಿವಿಲೆಜ್ ಮತ್ತು ಫರ್ಲೋ ರಜವನ್ನು ರದ್ದು ಮಾಡಿದೆ

ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ಮೆ|| ಪಿ ರಂಗರಾಯರಿಗೆ ಈಗ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜಾ ಜೊತೆಗೆ ಒಂದು ವರುಷ ಒಂಭತ್ತು ತಿಂಗಳ ಫರ್ಲೋ ರಜಾ ಕೊಟ್ಟಿದೆ

ಕಡೂರ್ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಎಂ ಎಸ್ ರಾಮಚಂದ್ರ ರಾಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನಗಳಿಗೆ ಜಾಸ್ತಿ ಮಾಡಿದೆ ಈಗಿನ ಬದಲಿ ಏರ್ಪಾಡೇ ನಡೆಯತಕ್ಕದ್ದು

ಶಿವಮೊಗ್ಗಾ ತಾಲ್ಲೂಕ್ ಅಮಲ್ದಾರ್ ಮೆ|| ಟಿ ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕುಂಸಿ ಸಬ್ ತಾಲ್ಲೂಕ್ ಡೆಪ್ಟಿ ಅಮಲ್ದಾರ್ ಮೆ|| ಎ ರಾಜಾರಾಯರು ಶಿವಮೊಗ್ಗಾ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ,

ಶಿವಮೊಗ್ಗಾ ಡೆಪ್ಟಿಕಮೀಷನರವರ ಆಫೀಸ್ ಆಕ್ಟಿಂಗ್ ಹೆಡ್ ಕ್ಲಾರ್ಕ್ ಮೆ|| ಸಿ ಬಿ ರಾಮರಾಯರು ಕುಂಸಿ ಸಬ್ ತಾಲ್ಲೂಕಿನ ಡೆಪ್ಟಿ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ

ಸೀರಾ ತಾಲ್ಲೂಕ್ ಅಮಲ್ದಾರ್ ಮೆ|| ಎಂ ಎ ಶ್ರೀನಿವಾಸೈಯಂಗಾರ್ರವರಿಗೆ ಡಿಸೆಂಬರ್ ತಾ ೧೪ ರಿಂದ ತಾ ೨೬ ರವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮದ್ದಗಿರಿ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಎಚ್. ಬಸವರಾಜೇ ಅರಸಿನವರನ್ನು ಸೀರಾ ತಾಲ್ಲೂಕಿಗೆ ಹಂಗಾಮಿಯಾಗಿ ವರ್ಗಮಾಡಿದೆ

ಸಬ್ ರೆಜಿಸ್ಟ್ರಾರ್ ಮೆ|| ಇ ಎಸ್ ವೆಂಕಟರಮಣ ಯ್ಯರವರನ್ನು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮದ್ದಗಿರಿ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ಮೆ|| ಟಿ ಜಿ ರಾಮ ಐಯರವರೂ, ಮೆ|| ಬಿ ಟಿ ಕೇಶವ ಐಯಂಗಾರ್ರವರೂ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಒಂದನೆ, ಎರಡನೆಯವರಾಗಿ ತೇರ್ಗಡೆ ಹೊಂದಿದ್ದರಿಂದ ಶ್ರೀಮನ್ ಮಹಾರಾಜರವರು ಅವರಿಬ್ಬರನ್ನೂ ಪ್ರೊಬೇಷನರಿ ಅ|| ಕಮಿಷನರ್ರನ್ನಾಗಿ ನೇಮಕಮಾಡಿರುತ್ತಾರೆ

ಶ್ರೀಮನ್ ಮಹಾರಾಜರವರು ಮುಂದೆ ಹೇಳುವವರನ್ನು ಅ|| ಕಮಿಷನರ್ರನ್ನಾಗಿ ನೇಮಕಮಾಡಿರುತ್ತಾರೆ —ಮೆ|| ಅಬ್ದುಲ್ ವಜೀದ್ ಯವರು, ಮೆ|| ಎಚ್ ವಿ ರಾಮಸ್ವಾಮಯ್ಯನವರು

ಶ್ರೀಮನ್ ಮಹಾರಾಜರವರು ಮುಂದೆ ಹೇಳುವವರನ್ನು ಅ|| ಕಮಿಷನರ್ರನ್ನಾಗಿ ನೇಮಕಮಾಡಿರುತ್ತಾರೆ —

ಅಮಲ್ದಾರ್ ಮೆ|| ಎಂ ಲಕ್ಷ್ಮೀನಾರಾಯಣಶಾಸ್ತ್ರಿಯವರು, ಅಮಲ್ದಾರ್ ಮೆ|| ಎ ಕೃಷ್ಣಸ್ವಾಮಿ ಐಯಂಗಾರ್ರು, ಮುನ್ಸಿಫ್ ಮೆ|| ಟಿ ಆ ಜಯರಾಮ ಐಯರವರು, ಮುನ್ಸಿಫ್ ಮೆ|| ಎಸ್ ಹಿರಿಯಣ್ಣಯ್ಯನವರು, ಅಮಲ್ದಾರ್ ಮೆ|| ಸಿ ಎಸ್ ಕುಪ್ಪುಸ್ವಾಮೈಯಂಗಾರ್ರು

ಮೆ|| ಜೆ ವೀರ್ ರವರನ್ನು ಮೈಸೂರು ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್‌ರಾಗಿ ನೇಮಕಮಾಡಿರುವ ಕಾರಣ ಮೆ|| ಎ ಇ ಅಡಾಲ್ಫಸ್ ಯವರನ್ನು ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್ ಆಗಿ ಕೆಲಸ ನೋಡುವಂತೆ ನೇಮಿಸಲಾಗಿದೆ

ದಿವಾನ್‌ರವರ ಆಫೀಸ್ ಕ್ಲಾರ್ಕ್ ಮೆ|| ಎನ್ ಗೋಪಾಲೈಯಂಗಾರ್ರನ್ನು ಚನ್ನಪಟ್ಟಣದ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ಮುಂದೆ ಹೇಳುವ ಅ| ಕಮಿಷನರುಗಳ ವರ್ಗಾವರ್ಗಿ ಹುಕುಂಮಾಡಿದೆ —ಮೆ|| ಬಿ ರಾಮಸ್ವಾಮೈಯನವರು ದಿವಾನ್‌ರವರ ಆಫೀಸಿನಲ್ಲಿ ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ ಕೆಲಸಕ್ಕೆ, ಮೆ|| ಸಿ ರಂಗನಾಥರಾಯರು ದಿವಾನ್‌ರವರ ಆಫೀಸಿನಲ್ಲಿ ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಕೆಲಸಕ್ಕೆ, ಮೆ|| ಬಿ ವೆಂಕೋಬರಾಯರು ರೆವಿನ್ಯೂ ಕಮಿಷನರ್‌ರವರ ಆಫೀಸಿಗೆ

ವೈದ್ಯ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂಮಾಡಿದೆ —ಅ|| ಸರ್ಜನ್ ಮೆ|| ಸಿ ರಾಜಾರಾಮರಾಯರನ್ನು ಹಾಸನದಿಂದ ಮೈಸೂರಿಗೆ, ಸಬ್ ಅ|| ಸರ್ಜನ್ ಮೆ|| ಜಿ ಆಶೀರ್ವಾದಂಯವರನ್ನು ಮೈಸೂರಿನಿಂದ ಹಾಸನಕ್ಕೆ

ಮೆ|| ಜಸ್ಟಿಸ್ ನೇಟ್ಸೂರ್‌ಯವರು ಕೆಲಸ ಬಿಟ್ಟಿದ್ದರಿಂದ ಮೆ|| ಕೆ ಎಸ್ ಚಂದ್ರಶೇಖರ ಐಯರವರು ಡಿಸೆಂಬರ್ ತಾ ೪ ರಲ್ಲಿ ಚೀಫ್ ಕೋರ್ಟಿನ ಜಡ್ಜರ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ತರೀಕೆರೆ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಪಿ ಎಸ್. ವಾಸುದೇವರಾಯರಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಕಾನೂನಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ಹಿಡಿದು ತನಿಖೆ ಮಾಡುವ ಅಧಿಕಾರ ವಹಿಸಿದೆ

ಮೆ|| ಬಿ ವೆಂಕೋಬರಾಯರನ್ನು ರೆವಿನ್ಯೂ ಕಮಿಷನರ್‌ರವರ ಆಫೀಸಿಗೆ ವರ್ಗಮಾಡಿದ್ದರಿಂದ ಅ|| ಕಮಿಷನರ್ ಮೆ|| ಸಿ ಎಸ್ ಕುಪ್ಪುಸ್ವಾಮೈಯಂಗಾರ್ರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿ ಕುಣಿಗಲ್ ಪೇಟೆ ಸಬ್ ಡಿವಿಜನ್‌ಗೆ ವರ್ಗಮಾಡಿದೆ

ಅ| ಇ ಜನಿಯರ್ ಮೆ|| ಎಂ ಎ ಆನಂದಾಳ್ವಾರೈಯಂಗಾರ್ಯರಿಗೆ ಸೆಪ್ಟಂಬರ್ ತಾ ೧೬ ರಿಂದ ಎರಡು ತಿಂಗಳೂ ಹತ್ತೊಂಭತ್ತು ದಿನಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ಮೂರು ತಿಂಗಳೂ ಹನ್ನೊಂದು ದಿನಗಳ ಕಾಯಿಲೆ ರಜವನ್ನೂ ಕೊಟ್ಟಿದೆ

ಮೆ|| ಅಜಿತ ಮೋಹನ ಸರ್ ಯವರನ್ನು ಇದೇ ಜನವರಿ ತಾ ೩ ರಿಂದ ಮೈಸೂರು ಭೂಗರ್ಭ ಶೋಧನಾ ಇಲಾಖೆಯಲ್ಲಿ ಅ|| ಜಿಯಾಲಜಿಸ್ಟ್ ಕೆಲಸಕ್ಕೆ ನೇಮಕಮಾಡಿದೆ

ಇಂಡಿಯಾ ದೇಶದ ವೃತ್ತಾಂತಗಳು.

ಬರಹಾಂಪುರದಲ್ಲಿ ನಡೆದ ಒಂದು ಕೊಲೆ ಮೊಕದ್ದಮೆಯಲ್ಲಿ ಸರ್ಕಾರದವರು ಹರದಕಂಡಿಯ ಮಹಂತರನ್ನು ದಸ್ತಗಿರಿ ಮಾಡಿರುತ್ತಾರೆ

ಬೊಂಬಾಯಿ ಪಟ್ಟಣದ ಪ್ರಭಾದೇವೀ ರೋಡಿನಲ್ಲಿರುವ ನೂಲಿನ ಕಾರ್ಖಾನೆಗೆ ಬೆಂಕಿ ಬಿದ್ದು ೪೦,೦೦೦ ರೂಪಾಯಿನ ಸರಕು ಸುಟ್ಟುಹೋಯಿತು.

ಗ್ವಾಲಿಯರ್ ಮತ್ತು ಬಿಕಾನೀರ್ ಸಂಸ್ಥಾನಗಳ ಮಹಾರಾಜರುಗಳು ಈ ವಾರ ವೈಸ್‌ರಾಯಿಯವರ ಭೇಟಿಗಾಗಿ ಕಲ್ಕತ್ತೆಗೆ ದಯಮಾಡುವವರಾಗಿದ್ದಾರೆ

ಆಗ್ರಾ ಪಟ್ಟಣದ ಮೆ|| ಎಡ್ವರ್ಡ್ ಜಾನ್ ಎಂಬವರು ಆ ಪಟ್ಟಣದಲ್ಲಿ ಕೈಗಾರಿಕೆಗಳನ್ನು ಕಲಿಸುವಂಥಾ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವುದಕ್ಕಾಗಿ ಒಂದು ಲಕ್ಷ ರೂಪಾಯಿ ಧರ್ಮಮಾಡಿರುವರು

ಕೊಚ್ಚಿ ಸಂಸ್ಥಾನದ ರಾಜರವರು ಸಂಸಾರ ಸಮೇತ ಒಂದು ತಿಂಗಳಿಂದ ಕಲ್ಕತ್ತಾ ಮೊದಲಾದ ಪ್ರಾಂತ್ಯಗಳಲ್ಲಿ ಸಂಚಾರಮಾಡುತ್ತಿದ್ದು ಕಳೆದ ವಾರ ಹಿಂತಿರುಗಿ ಮದರಾಸಿಗೆ ಸ್ಪೆಷಲ್ ರೈಲಿನಲ್ಲಿ ಬಂದಿರುತ್ತಾರೆ.

ಕಪೂರ್ಥಲ ಸಂಸ್ಥಾನದಲ್ಲಿ ಮಹಾರಾಜರವರು ಅಲ್ಲಿನ ವಿದ್ಯಾಶಾಲೆಯಲ್ಲಿ ಬಹುಮಾನಗಳನ್ನು ಹಂಚಿ, ವಿದ್ಯಾರ್ಥಿಗಳಿಗೆಲ್ಲಾ ರಾಜಕೀಯ ವಿಚಾರಗಳಲ್ಲಿ ಪ್ರವರ್ತಿಸಬಾರದೆಂತಲೂ, ವಿದ್ಯಾಸಂಪಾದನೆಯಲ್ಲಿಯೇ ನಿರತರಾಗಿರಬೇಕೆಂತಲೂ ಹಿತೋಕ್ತಿಗಳನ್ನು ಅಪ್ಪಣೆಕೊಡಿಸಿದರು

ಬೊಂಬಾಯಿನಲ್ಲಿರುವ ಗುಜರಾತಿ ಬ್ಯಾಂಕಿನಲ್ಲಿ ಮಹದೇವದಾಜಿ ಎಂಬೊಬ್ಬ ನೌಕರನು ೪,೦೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ಅಪಹರಿಸಿದ್ದರಿಂದ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವರುಷ ಕಠಿಣಸಜವನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು

ಪಂಜಾಬ್ ಗವರ್ನ್‌ಮೆಂಟಿನವರು ಆ ಅಧಿಪತ್ಯದೊಳಗೆ ಯಾವ ಯಾವ ಗ್ರಂಥ ಮತ್ತು ಪುಸ್ತಕಗಳನ್ನು ಜನರು ತರಿಸಿ ಓದಕೂಡದೆಂದು ಕಟ್ಟುಮಾಡಿರುತ್ತಾರೋ ಆ ಥರಗಳನ್ನು ಯಾರಾದರೂ ತಮ್ಮ ಬಳಿ ಇಟ್ಟುಕೊಂಡಿದ್ದರೆ ಅವರನ್ನು ಶಿಕ್ಷೆಗೆ ಗುರಿಮಾಡುವುದಾಗಿ ಇಸ್ತಿಹಾರು ಕೊಟ್ಟಿದ್ದಾರೆ

ಲಾಹೋರ್ ಪಟ್ಟಣದಲ್ಲಿ "ಶಿಲಕ್" ಎಂಬ ಪತ್ರಿಕೆಯ ಎಡಿಟರಾದ ಭಾಗವತ ಸಿಂಗ್‌ಯವರ ಮೇಲೆ ಅವರು ಬೋಟಾನಾಣ್ಯಗಳನ್ನು ತಯಾರ್ ಮಾಡುತ್ತಿದ್ದರೆಂದು ಮೊಕದ್ದಮೆ ಹುಟ್ಟಿ ವಿಚಾರಣೆಯಾಯಿತು. ಚೀಫ್ ಕೋರ್ಟಿನವರು ದಯಪಾಲಿಸಿಮಾಡಿ, ಅವರ ಮೇಲೆ ಮೊಕದ್ದಮೆ ರುಜುವಾತಾಗಲಿಲ್ಲವೆಂದು ಹೇಳಿ, ಅವರನ್ನು ಬಂಧನದಿಂದ ಖುಲಾಸ್ ಮಾಡಿರುತ್ತಾರೆ

ಭಾವಾನಗರ ಸಂಸ್ಥಾನದ ಮಹಾರಾಜರವರ ಕುಮಾರ್ತೆಯಾದ ಸಣ್ಣವಯಸ್ಸಿನ ಶ್ರೀಮನೋಹರಿ ಬಾಯಿಯು ಜರಕಾರಿ ಕೆಲಸಮಾಡಿ ಲಾಹೋರ್ ಪ್ರದರ್ಶನಶಾಲೆಗೆ ಕಳುಹಿಸಿದ್ದ ಪದಾರ್ಥಕ್ಕೆ ಒಂದು ಚಿನ್ನದ ಮೆಡಲು ದೊರಕಿತೆಂದು ತಿಳಿಯುವುದು. ಇದಲ್ಲದೆ ಆ ರಾಜಕುಮಾರ್ತೆಗೆ ಕಳೆದ ವರುಷ ಮೈಸೂರು ದಸರಾ ಎಗ್ಜಿಭಿಷನ್ನಲ್ಲೂ, ರಂಗೂನ್ ಪ್ರದರ್ಶನ ಶಾಲೆಯಲ್ಲೂ ಎರಡು ಚಿನ್ನದ ಮೆಡಲುಗಳು ಕೊಡೋಣಾಗಿರುತ್ತವೆ.

ಹಿಮಾಚಲದ ತಪ್ಪಲಲ್ಲಿ ನಾಯಿ ನರಿ ಕಡಿದ ರೋಗಿಗಳಿಗೆ ಚಿಕಿತ್ಸೆ ಮಾಡುವಂಥಾ ಆಸ್ಪತ್ರೆಯು ಕಸೌಲಿ ಪಟ್ಟಣದಲ್ಲಿ ಏರ್ಪಾಡಾಗಿರುತ್ತದಷ್ಟೆ. ದೇಶೀಯ ಜನರು ರೋಗ ಚಿಕಿತ್ಸೆಗಾಗಿ ಅಲ್ಲಿಗೆ ಹೋದರೆ ಇಳುಕೊಳ್ಳುವುದಕ್ಕೆ ಸ್ಥಳವಸತಿ ಇಲ್ಲದೆ ಅನಾನುಕೂಲವಾಗಿತ್ತು. ಪಾಟಿಯಾಲಾ ಸಂಸ್ಥಾನದ ಮಹಾರಾಜರವರೂ ಕಾಶೀ ಮಹಾರಾಜರವರೂ ಅಲ್ಲಿ ಧರ್ಮಶಾಲೆಗಳನ್ನು ಕಟ್ಟಿಸುವುದಕ್ಕೆ ತಲಾ ೧೦,೦೦೦ ರೂಪಾಯಿನಂತೆ ಕೊಟ್ಟಿರುತ್ತಾರೆ.

ಕಳೆದ ವರುಷ ಏಪ್ರಿಲ್ ತಾ ೧ ರಿಂದ ನವಂಬರ್ ಆಖೈರು ವರೆಗೆ ಹೊರಗಿನಿಂದ ಹಿಂದುಸ್ಥಾನಕ್ಕೆ ೬೭೭ ಲಕ್ಷ ರೂಪಾಯಿನ ಬೆಳ್ಳಿಯೂ, ೫೧೦ ಲಕ್ಷ ರೂಪಾಯಿನ ಬಂಗಾರವೂ ರಫ್ತಾಗಿ ಬಂದಿರುವುದು ಟಂಕಸಾಲೆಗಳೊಳಗೆ ಹೊಸ ರೂಪಾಯಿಗಳನ್ನು ಛಾಪಾ ಹಾಕಲಿಲ್ಲ ೨೭ ಲಕ್ಷ ರೂಪಾಯಿಗಳನ್ನು ಪರೀಕ್ಷೆಮಾಡಿ ದೇಶೀಯ ಸಂಸ್ಥಾನಗಳಿಗೆ ಟಂಕಸಾಲೆಗಳಿಂದ ರವಾನೆಮಾಡಿದ್ದಾರೆ. ೮ ಲಕ್ಷ ರೂಪಾಯಿನಷ್ಟು ಇಂಗ್ಲಿಷ್ ಡಾಲರ್ ಎಂಬ ನಾಣ್ಯಗಳು ಛಾಪಾ ಆಗಿರುತ್ತವೆ

ಮದರಾಸ್ ಮತ್ತು ದಕ್ಷಿಣ ಮಹರಾಷ್ಟ್ರ ರೈಲ್ವೆಯಲ್ಲಿ ವಾಲ್ಟೇರ್ ಮತ್ತು ದುವ್ವಾಡಾ ಎಂಬೀ ಸ್ಟೇಷನುಗಳ ನಡುವೆ ಕಳೆದ ಗುರುವಾರ ರಾತ್ರಿ ಒಂದು ಸೇತುವೆಯ ಮೇಲೆ ರೈಲ್ ಗಾಡಿಯು ಹೋಗುತ್ತಿರುವಲ್ಲಿ ೧೩ ಜನರು (೬ ಮಂದಿ ಗಂಡಸರು, ೫ ಮಂದಿ ಹೆಂಗಸರು, ೪ ಮಂದಿ ಮಕ್ಕಳು) ಗಾಡಿಯ ಕೆಳಗೆ ಸಿಕ್ಕಿ ಮೃತಪಟ್ಟರೆಂದೂ, ಸರ್ಕಾರದವರೂ ರೈಲ್ವೆ ಇಲಾಖೆಯವರೂ ಈ ಅಪಘಾತಕ್ಕೆ ಕಾರಣವೇನೆಂದು ತನಿಖೆ ಮಾಡುತ್ತಿರುವುದಾಗಿಯೂ ವರ್ತಮಾನ ಬಂದಿದೆ

ಕಲ್ಕತ್ತೆ ಬಳಿ ಮಿದ್ನಾಪುರದಲ್ಲಿ ಸಿಡಿಮದ್ದಿನ ಗುಂಡು ತಯಾರ್ ಮಾಡುವುದಕ್ಕಾಗಿ ಪಿತೂರಿ ಮಾಡಿದರೆಂದು ಸರ್ಕಾರದವರು ಕೆಲವು ಜನರನ್ನು ದಸ್ತಗಿರಿ ಮಾಡಿ, ಕಡೆಗೆ ಕೆಲವರನ್ನು ನಿರಪರಾಧಿಗಳೆಂದು ಖುಲಾಸ್ ಮಾಡಿದ್ದರಷ್ಟೆ. ಈ ಪೈಕಿ ಬಾಬು ಅಬನಾಶಚಂದ್ರಮಿತ್ರರವರೂ, ಉಪೇಂದ್ರನಾಥಮಾಹಿತಿಯವರೂ ತಮ್ಮನ್ನು ಅನ್ಯಾಯವಾಗಿ ದಸ್ತಗಿರಿ ಮಾಡಿ ಅಪಮಾನ ಪಡಿಸಿದರೆಂತಲೂ, ತಮಗೆ ತಲಾ ೫೦,೦೦೦ ರೂಪಾಯಿ ಡಾಮೇಜು ಕೊಡಿಸಬೇಕೆಂದೂ ಸರ್ಕಾರಿ ನೌಕರರ ಮೇಲೆ ಮಿದ್ನಾಪುರದ ಸಬ್ ಜಡ್ಜರ ಕೋರ್ಟಿನಲ್ಲಿ ಮೊಕದ್ದಮೆ ತಂದಿದ್ದಾರೆ.

ಚಿತ್ರದುರ್ಗದ ಕೃಷಿಶಿಲ್ಪಾಭಿವರ್ಧಕ ಸಮಾಜ

ವರುಷೋತ್ಸವದ ಮೀಟಿಂಗು

ಈ ಡಿಸ್ಟ್ರಿಕ್ಟಿನಲ್ಲಿ ಜನಾನುರಾಗಕ್ಕೆ ಪಾತ್ರರಾಗಿರುವ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಮೆ॥ ಯಂ. ಚಂಗಯ್ಯ ಸೆಟ್ಟರವರ ಸಹಾಯದಿಂದ "ಚಿತ್ರದುರ್ಗದ ಡಿಸ್ಟ್ರಿಕ್ಟು ಕೃಷಿಶಿಲ್ಪಾಭಿವರ್ಧಕ ಸಮಾಜ" ವೆಂಬುದು ಹಿಂದಿನ ವರ್ಷ ಈ ಊರಲ್ಲಿ ಸ್ಥಾಪಿತವಾಗಿದೆ.

ಈ ಸಮಾಜದ ವಾರ್ಷಿಕ ಮೀಟಿಂಗು ಕಳೆದ ತಿಂಗಳು ೧೬ ತಾ ಸಾಯಂಕಾಲ ನಡೆಯಿತು. ಸದರಿ ಮೀಟಿಂಗಿಗೆ ಡೆಪ್ಯುಟಿ ಕಮಿಷನರವರು ದಯಮಾಡಿ ಅಗ್ರಾಸನವನ್ನು ವಹಿಸಿದ್ದರು. ತಾಲ್ಲೋಕು ಅಮಲ್ದಾರ್ರುಗಳೂ, ಚಿತ್ರದುರ್ಗದ ಟೌನಿನಲ್ಲಿರುವ ಆಫೀಸರುಗಳೂ, ದೊಡ್ಡ ಮನುಷ್ಯರುಗಳು ಸಹ ಸೇರಿದ್ದರು. ಮೀಟಿಂಗಿನಲ್ಲಿ ಓದಲ್ಪಟ್ಟ ರಿಪೋರ್ಟಿನಿಂದ ಈ ಸಮಾಜಕ್ಕೆ ಸುಮಾರು ೪೫೦ ಜನಗಳ ಮೇಲೆ ಮೆಂಬರುಗಳು ಸೇರಿರುವದಾಗಿ ತಿಳಿಯುತ್ತದೆ. ಈ ಸಮಾಜವು ಮೈಸೂರು ಸೀಮೆಯ ಕೋ ಆಪರೇಟಿವ್ ಸೊಸೈಟಿಗಳ ನಿಬಂಧನೆ ಪ್ರಕಾರ ರಿಜಿಸ್ಟರಾಗಿರುತ್ತದೆ. ಈ ಊರಲ್ಲಿ "ಮಾಧವ ಮಂತ್ರಿ ಲೈಬ್ರರಿ" ಎಂಬ ಹೆಸರಿನಿಂದ ಒಂದು ಪುಸ್ತಕ ಭಂಡಾರವು ಏರ್ಪಾಡಾಗಿದೆ. ಇದರಲ್ಲಿರುವ ಪುಸ್ತಕಗಳನ್ನು ಅನೇಕರು ಓದುತ್ತಲಿದ್ದಾರೆ. ಇದು ಮೇಲ್ಕಂಡ ಸಮಾಜಕ್ಕೆ ಸೇರಿಸಲ್ಪಟ್ಟಿದೆ. ಇದರಲ್ಲಿರುವ ಪುಸ್ತಕಗಳು ಈಗ ಕಡಮೆ. ಸಮಾಜದವರು ಇನ್ನೂ ಹೆಚ್ಚಿಗೆ ಪುಸ್ತಕಗಳನ್ನು ತರಿಸುವದು ಅವಶ್ಯಕವೆಂದು ತೋರುತ್ತೆ. ಈ ಸಮಾಜಕ್ಕೆ ತಾಲ್ಲೋಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಬಹಳ ಸಹಾಯಕರಾಗಿರುವದರಿಂದ ಈ ಸಮಾಜವು ಚೆನ್ನಾಗಿ ಅಭಿವೃದ್ಧಿಗೆ ಬಂದು ರೈತರುಗಳಿಗೆ ಅನುಕೂಲವಾಗುವದರಲ್ಲಿ ಸಂದೇಹವಿಲ್ಲ. ರೆವಿನ್ಯೂ ಕಮಿಷನರ್ ಸಾಹೇಬರವರು ಈ ಸಮಾಜಕ್ಕೆ ಕಳುಹಿಸಿದ್ದ "ಆಸ್ ಪ್ಯಾಡಿ" ಎಂಬ ಸಣ್ಣ ಭತ್ತವನ್ನು ಸಮಾಜದ ಮೆಂಬರುಗಳು ಅವಗಾಹಿಸಲಿಕ್ಕಾಗಿ ಬಿತ್ತಿ ಬೆಳೆದ ಭತ್ತವನ್ನೇ ಮೀಟಿಂಗಿನಲ್ಲಿ ತೋರಿಸಿದರು. ಈ ಭತ್ತವು ಉತ್ತಮವಾಗಿಯೂ ರಾಶಿಕರವಾಗಿಯೂ ಇರುವಂತೆ ಕಂಡುಬರುತ್ತದೆ. ನಾಲ್ಕು ಭತ್ತದಂತೆ ಈ ಭತ್ತವನ್ನು ಬೆಳೆಯಬಹುದಾಗಿದೆ. ಒಂದು ಸೇರಿಗೆ ೫೦ ಸೇರು ಭತ್ತ ಬೆಳೆ ಆಗುವಂತೆ ತಿಳಿಯುತ್ತೆ.

ಚಿತ್ರದುರ್ಗದಲ್ಲಿ ಈ ಸಮಾಜದವರು ಬೀಜಗಳನ್ನೂ, ವ್ಯವಸಾಯದ ಯಂತ್ರಗಳನ್ನೂ, ತರತರವಾಗಿ ತರಿಸಿ ಇಟ್ಟು, ರೈತರುಗಳಿಗೆ ಸುಲಭ ಕ್ರಯಕ್ಕೂ ಸಾಲವಾಗಿಯೂ ಕೊಡಲು ಏರ್ಪಾಡು ಮಾಡುವಂತೆಯೂ, ಇದಕ್ಕಾಗಿ ಒಂದು ಕಟ್ಟಡವನ್ನು ಸಂತೇ ಪೇಟೆಯಲ್ಲಿ ಕಟ್ಟಿಸಬೇಕಾಗಿಯೂ ನಿರ್ಧರವಾಯಿತು.

ಡೆಪ್ಯುಟಿ ಕಮಿಷನರ್ ಸಾಹೇಬರವರು ಗೊಬ್ಬರದ ವಿಷಯವಾಗಿ ಚಿಕ್ಕ ಉಪನ್ಯಾಸವನ್ನು ಮಾಡಿದ ನಂತರ ಮೀಟಿಂಗು ಮುಗಿಯಿತು. ಈ ಸಮಾಜದವರು ಒಂದೇ ನಿಷ್ಠೆ ಶ್ರದ್ಧೆಯಿಂದ ಕೆಲಸ ಮಾಡಿ ನಮ್ಮ ರೈತರುಗಳಿಗೆ ಉಪಯೋಗವಾಗುವರೆಂದು ನಂಬಿದೇನೆ.

ರೈತಾಭಿಮಾನಿ

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು

ಐದನೇ ಮೀಟಿಂಗು

ಈ ಮಾಹೆ ತಾ ೩ನೇ ಸೋಮವಾರ ಮಧ್ಯಾಹ್ನ ೪ ಘಂಟೆಗೆ ಚಿತ್ರದುರ್ಗದ ಗರ್ಲ್ಸ್ ಸ್ಕೂಲ್ ಹಾಲ್‌ನಲ್ಲಿ ತಿಂಗಳ ಗಟ್ಲೆ ಸಭೆಯು ಸೇರಿತು. ಸುಮಾರು ೧೨ ಜನ ಉಪಾಧ್ಯಾಯರುಗಳೂ ವಿದ್ಯಾಭ್ಯಾಸದ ಇಲಾಖಾ ದೊಡ್ಡ ಆಫೀಸರುಗಳೂ ಇತರೇ ದೊಡ್ಡ ಮನುಷ್ಯರೂ ಸೇರಿ ೩೦ ಜನದ ವರೆಗೆ ಸಭೆಯನ್ನಲಂಕರಿಸಿದ್ದರು. ವಾಡಿಕೆಯಂತೆ ಸಭೆಯು ಸೆಕ್ರೆಟರಿಯವರಿಂದ ಕಳೆದ ಮೀಟಿಂಗಿನ ವಿಷಯಗಳೆಲ್ಲಾ ಸಂಕ್ಷೇಪವಾಗಿ ತಿಳಿಸಲ್ಪಟ್ಟವು. ಆಗ ಸಭೆಯ ಪ್ರೆಸಿಡೆಂಟರಾದ ಮೆ॥ ತಿರುಮಲಚಾರ್, ಬಿ. ಎ., ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ರವರು ಚರ್ಚಾಂಶಗಳನ್ನು ರಿಕಾರ್ಡ್ ಮಾಡಿಸಿ ಮುಂದಿನ ಕಾರ್ಯಗಳಿಗೆ ಪ್ರಾರಂಭಿಸಿದರು.

ಆ ಸಭೆಯ ಮಧ್ಯದಲ್ಲಿಯೇ ತಕ್ಕ ಉಪಕರಣಗಳೊಂದಿಗೆ ಒಂದು ತರಗತಿಯು ೧೨ ಜನ ಬಾಲಕರಿಂದ ಕೂಡಿ ಸಿದ್ಧವಾಗಿತ್ತು. ಆಗ ಉಪಾಧ್ಯಾಯ ಕೆಲಸದಲ್ಲಿ ಹೆಚ್ಚು ಅನುಭವಶಾಲಿಗಳಾಗಿಯೂ ವಿದ್ಯಾವಂತರಾಗಿಯೂ ಇರತಕ್ಕ ಎ. ವಿ. ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮೆ॥ ನರಸಿಂಹಾಚಾರ್ಯರು ಆ ತರಗತಿಯಲ್ಲಿ ಎಣಿಕೆ ಮತ್ತು ಅಂಕನವನ್ನು ಬೋಧಿಸಿದರು. ಇವರ ಬೋಧನೆಯು ಬಾಲಕರಿಗೆ ಹರ್ಷವಾಗಿ ಮೇಲ್ಪಟ್ಟದ್ದಾಗಿತ್ತು. ಅನಂತರ ಹೈಸ್ಕೂಲ್ ಮ್ಯಾಥಮೆಟಿಕ್ಸ್ ಪ್ರೊಫೆಸರ್ ಮೆ॥ ಶಿವರಾಮಕೃಷ್ಣಯ್ಯನವರಿಂದ ಅಂಕಗಣಿತ ವಿಷಯವಾಗಿ ಒಂದು ಉಪನ್ಯಾಸವು ಮಾಡಲ್ಪಟ್ಟಿತು. ಆ ಕಾಲದಲ್ಲಿ ಅವರು ತೋರಿಸಿದ ಕೆಲವು ಹೊಸ ಪದ್ಧತಿಗಳು ಬಹು ಸುಲಭವಾದವುಗಳಾಗಿಯೂ ಪ್ರಯೋಜನಕಾರಿಗಳಾಗಿಯೂ ಇದ್ದವು. ಸಭಿಕರೆಲ್ಲರೂ ಬಹಳ ಸಂತೋಷಪಟ್ಟರು.

ಕಳೆದ ಸಾರಿ ಕೊಡಲ್ಪಟ್ಟಿದ್ದ ಪ್ರಶ್ನೆಗೆ ಐದು ಜನಗಳು ಒಳ್ಳೇ ಉಪನ್ಯಾಸರೂಪವಾದ ಉತ್ತರಗಳನ್ನು ಬರೆದು ಕಳುಹಿಸಿದ್ದರು. ಇವುಗಳನ್ನು ಶೋಧಿಸಿ ಉತ್ತಮವಾದದ್ದನ್ನು ಸಭೆಯಲ್ಲಿ ತಿಳಿಸಲು ವ್ಯವಧಾನವಾಗಲಿಲ್ಲ. ಇದನ್ನು ಮುಂದಿನ ಸಾರಿಗೆ ಹೊರಪಡಿಸುವಂತೆ ನಿಶ್ಚಯಿಸಿದರು. ಉತ್ತರಗಳನ್ನು ಬರೆದವರ ಹೆಸರುಗಳನ್ನು ಈ ಕೆಳಗೆ ತಿಳಿಸಿದೆ —ಮೆ॥ ಗಳಾದ ಹನುಮಂತರಾವ್, ಅ॥ ಮಾಸ್ಟರ್, ಗರ್ಲ್ಸ್ ಸ್ಕೂಲ್, ಚಿತ್ರದುರ್ಗ, ವೆಂಕಣ್ಣಾಚಾರ್, ಅ॥ ಮಾ॥, ಎ. ವಿ. ಸ್ಕೂಲ್, ಹರಿಹರ, ರಾಮರಾವ್ ಹೆಡ್ ಮಾಸ್ಟರ್, ಜಾಲಿಕಟ್ಟೆ, ಚಿತ್ರದುರ್ಗ, ವೀರಭದ್ರಪ್ಪ, ಅ॥ ಮಾ॥, ಎ. ವಿ. ಸ್ಕೂಲ್, ಚಿತ್ರದುರ್ಗ, ನಾರಾಯಣರಾವ್, ಹೆ॥ ಮಾ॥, ಬೆನಗವಾಡಿ, ಕಡೂರು ಡಿಸ್ಟ್ರಿಕ್ಟು.

ಮುಂದಿನ ಫೆಬ್ರವರಿ ತಿಂಗಳ ೭ನೇ ತಾ ಸೋಮವಾರ ನಡೆಯುವ ಮೀಟಿಂಗಿಗಾಗಿ ಈ ಕೆಳಗಿನ ಪ್ರಶ್ನೆಯನ್ನು ನಿಯಮಿಸಿದೆ. ಮೈಸೂರು ಸೀಮೆಯಲ್ಲಿರುವ ಯಾವ ಉಪಾಧ್ಯಾಯರೇ ಆಗಲಿ ಇದಕ್ಕೆ ಉಪನ್ಯಾಸರೂಪವಾಗಿ ಉತ್ತರವನ್ನು ಬರೆದು ಈ ತಿಂಗಳು ತಾ ೩೦ರ ಒಳಗಾಗಿ ಸೆಕ್ರೆಟರಿಯವರಿಗೆ ತಲುಪುವಂತೆ ಕಳುಹಿಸಬೇಕಾಗಿ ಕೇಳಿಕೊಂಡಿದೆ. ಬಹಳ ಆದರಪೂರ್ವಕವಾಗಿ ಸ್ವೀಕರಿಸುವರು. ಪ್ರಶ್ನೆ — "ಬೋಧನೆಯೆಂದರೇನು? ಅದರ ಕ್ರಮಗಳಾವುವು?" ಷರಾ — ಉತ್ತರವು ಅನುಭವಯುಕ್ತವಾಗಿಯೂ ನಿಯಮಗಳುಳ್ಳದ್ದಾಗಿಯೂ ಇರತಕ್ಕದ್ದು.

ವೀರಭದ್ರಪ್ಪ, ಉಪಾಧ್ಯಾಯ ಸಂಘ, ಸೆಕ್ರೆಟರಿ, ಚಿತ್ರದುರ್ಗ

ವೀರಶೈವ ಮಹಾಸಭೆಯು.

ಐದನೇ ಸಭೆಯ ತೀರ್ಮಾನಗಳು.

೧ ಹಿಂದುಸ್ಥಾನದ ವೈಸ್ರಾಯರಾದ ಲಾರ್ಡ್ ಮಿಂಟೋ ದೊರೆಗಳ ಪ್ರಾಣಕ್ಕೆ ಸಿಡಿಮದ್ದಿನಿಂದ (ಬಾಂಬು ಗುಂಡಿನಿಂದ) ಅಪಾಯವನ್ನುಂಟುಮಾಡುವುದಕ್ಕಾಗಿ ಒಬ್ಬನೊಬ್ಬ ರಾಜದ್ರೋಹಿಯು ಮಾಡಿದ ಪ್ರಯತ್ನವು ಅಧಮತನದ್ದಾಗಿರುವುದರಿಂದ, ಐದನೇ ವೀರಶೈವ ಮಹಾಸಭೆಯವರಾದ ನಾವು ಅದನ್ನು ಸಂಪೂರ್ಣವಾಗಿ ನಿಷೇಧಿಸುತ್ತೇವೆ ಮತ್ತು ಜಗದೀಶ್ವರನ ಕೃಪೆಯಿಂದ ಲಾರ್ಡ್ ಮಿಂಟೋ ದೊರೆಗಳು ಈ ಗಂಡಾಂತರದಿಂದ ವಿಮುಕ್ತರಾದುದಕ್ಕಾಗಿ ನಾವು ಆನಂದವನ್ನು ಪ್ರದರ್ಶಿಸುತ್ತೇವೆ.

೨ ಲೋಕಪ್ರಿಯರೂ ನ್ಯಾಯಶೀಲರೂ ದಯಾಳುಗಳೂ ವಿದ್ವಾಂಸರೂ ಆದ ನಾಸಿಕದ ಕಲೆಕ್ಟರ್ ಮಿ. ಜಾಕ್ಸನ್ ಸಾಹೇಬರನ್ನು ಒಬ್ಬಾನೊಬ್ಬ ರಾಜದ್ರೋಹಿಯಾದ ತರುಣನು ಅಧಮತನದಿಂದ ಕೊಲೆಮಾಡಿದಕಾರಣ, ಈ ವೀರಶೈವ ಮಹಾಸಭೆಯವರಾದ ನಾವು ನಮಗೆ ಉಂಟಾಗಿರುವ ದುಃಖವನ್ನು ಪ್ರದರ್ಶಿಸುವದಲ್ಲದೆ, ಆ ನೀಚಕೃತ್ಯವನ್ನು ಸಂಪೂರ್ಣವಾಗಿ ನಿಷೇಧಿಸುತ್ತೇವೆ.

೩ ಬ್ರಿಟಿಷ್ ಸಾರ್ವಭೌಮರ ಆಧಿಪತ್ಯದಿಂದ ನಮ್ಮ ವೀರಶೈವ ಜನರ ಅಭಿವೃದ್ಧಿಗೆ ಸೌಲಭ್ಯವೂ ಸ್ವಾಸ್ಥ್ಯವೂ ದೊರೆದಿದ್ದು, ಅವು ಇನ್ನೂ ದಿನೇ ದಿನೇ ಹೆಚ್ಚು ಹೆಚ್ಚಾಗಿ ದೊರೆಯುತ್ತಿರುವಕಾರಣ, ನಾವು ನಮ್ಮ ರಾಜನಿಷ್ಠೆಯನ್ನೂ, ಕೃತಜ್ಞತೆಯನ್ನೂ ಪ್ರದರ್ಶಿಸುವದಲ್ಲದೆ, ಬ್ರಿಟಿಷ್ ರಾಜ್ಯಾಧಿಕಾರವು ಭರತಖಂಡದಲ್ಲಿ ಚಿರಕಾಲವಾಗಿ ನೆಲೆಗೊಳ್ಳಲೆಂದು ಶ್ರೀಮತ್ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

೪ ಹೊಸ ಕೌನ್ಸಿಲ್ ಆಕ್ಟಿನ ಪ್ರಕಾರ ಪ್ರಾವಿನ್ಸಿಯಲ್ ಮತ್ತು ಇಂಪೀರಿಯಲ್ ಕೌನ್ಸಿಲ್ಲುಗಳ ರಚನೆಯಲ್ಲಿ ಮತ್ತು ಅವುಗಳ ಮೆಂಬರುಗಳ ಅಧಿಕಾರದಲ್ಲಿ ವಿಶೇಷ ಸುಧಾರಣೆಯನ್ನು ಮಾಡಿ, ಅವುಗಳಲ್ಲಿ ಮುಸಲ್ಮಾನ್ ದೇಶಬಾಂಧವರಿಗೆ ಎಲೆಕ್ಷನ್ (ಚುನಾವಣೆಯ) ಅಧಿಕಾರವನ್ನು ಸ್ವತಂತ್ರವಾಗಿ ಕೊಟ್ಟು, ಕೌನ್ಸಿಲ್ಲುಗಳಲ್ಲಿ ಆ ಜಾತಿಯವರಿಗಾಗಿ ಕೆಲವು ಸ್ಥಾನಗಳನ್ನು ಕಾದಿಡುವ ವ್ಯವಸ್ಥೆಯನ್ನು ಮಾಡಿರುವುದರಿಂದ, ಅದಕ್ಕಾಗಿ ನಾವು ಸಂತೋಷಿಸುವದಲ್ಲದೆ, ನಮ್ಮ ಸಮಾಜವು ಸಂಖ್ಯೆಯಿಂದಲೂ ಉದ್ಯೋಗ ವ್ಯಾಪಾರ ಒಕ್ಕಲತನ ಇವುಗಳಿಂದಲೂ ವೃದ್ಧಿಹೊಂದುತ್ತಿರುವುದರಿಂದ, ನಮ್ಮ ವಿದ್ಯಾಭಿವೃದ್ಧಿಗೆ ಉತ್ತೇಜನವು ದೊರಕುವುದಕ್ಕಾಗಿ, ಮತ್ತು ರಾಜ್ಯಕಾರ್ಯಭಾರಕ್ಕೆ ನಮ್ಮ ಸಮಾಜದಿಂದಲೂ ಹೆಚ್ಚು ಸೇವೆಯು ಉಂಟಾಗುವಂತೆ ಮಾಡುವುದಕ್ಕಾಗಿ ಮುಸಲ್ಮಾನರಿಗೆ ಕೊಟ್ಟಿರುವಂತೆ ನಮ್ಮ ಸಮಾಜದವರಿಗೂ ಸ್ವತಂತ್ರವಾಗಿ ಎಲೆಕ್ಷನ್ ಅಧಿಕಾರವನ್ನು ದೊರಕಿಸಿಕೊಡಬೇಕೆಂದು ನಾವು ಇಂಡಿಯಾ ಗವರ್ನಮೆಂಟಿನವರನ್ನು ಪ್ರಾರ್ಥಿಸುತ್ತೇವೆ ಮತ್ತು ಈ ಎಲೆಕ್ಷನ್ನಿನ ಹಕ್ಕು ನಮಗೆ ಸ್ವತಂತ್ರವಾಗಿ ದೊರೆಯುವ ವರೆಗೆ ನಮ್ಮಲ್ಲಿರುವ ಯೋಗ್ಯರೂ ಅನುಭವಸ್ಥರೂ ಆದ ಜನನ್ನು ಎಂದರೆ ಕನಿಷ್ಠಪಕ್ಷಕ್ಕೆ ಮೂರು ಜನರನ್ನಾದರೂ ಪ್ರತಿಯೊಂದು ಕೌನ್ಸಿಲ್ಲಿಗೆ ಮತ್ತು ಇಬ್ಬರನ್ನು ಇಂಪೀರಿಯಲ್ ಕೌನ್ಸಿಲ್ಲಿಗೆ ನೇಮಕ ಮಾಡಿಕೊಳ್ಳುವಂತೆ ಆಗಬೇಕೆಂದು ನಾವು ಇಂಡಿಯಾ ಗವರ್ನಮೆಂಟನ್ನು ಪ್ರಾರ್ಥಿಸುತ್ತೇವೆ ಮತ್ತು ಶ್ರೀಮಂತ ಸರ್ ದೇಸಾಯಿ ಒಂಟಮುರಿಕರ ಇವರನ್ನು ಮುಂಬಯಿ ಕೌನ್ಸಿಲ್ಲಿಗೆ ಈ ವರ್ಷ ನೇಮಕ ಮಾಡಿಕೊಂಡಿರುವುದಕ್ಕಾಗಿ ನಾವು ಸಂತೋಷ ಪ್ರದರ್ಶನವನ್ನು ಮಾಡುತ್ತೇವೆ. ಮೈಸೂರು ಸರಕಾರದವರು ತಮ್ಮ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಮೈಸೂರು ಸಂಸ್ಥಾನದ ವೀರಶೈವರ ಕಡೆಯಿಂದ ಕನಿಷ್ಠಪಕ್ಷ ಒಬ್ಬ ಮೆಂಬರನ್ನಾದರೂ ನೇಮಕ ಮಾಡಿಕೊಳ್ಳಬೇಕೆಂದು ಈ ಮಹಾಸಭೆಯವರಾದ ನಾವು ಪ್ರಾರ್ಥಿಸುತ್ತೇವೆ.

೫ ಬಾಲ್ಯವಿವಾಹ, ವೃದ್ಧವಿವಾಹಗಳು ಆರೋಗ್ಯಶಾಸ್ತ್ರ ದೃಷ್ಟಿಯಿಂದ ಅನರ್ಥಕಾರಕವಾಗಿಯೂ, ಧರ್ಮಶಾಸ್ತ್ರ ದೃಷ್ಟಿಯಿಂದ ಅಯೋಗ್ಯವಾಗಿಯೂ ಇರುವುದರಿಂದ ಅವುಗಳನ್ನು ನಮ್ಮ ಸಮಾಜದವರು ತಪ್ಪಿಸಬೇಕೆಂತಲೂ, ಪ್ರೌಢವಿವಾಹವನ್ನು ಪ್ರಚಾರದಲ್ಲಿ ತರಬೇಕೆಂತಲೂ ಈ ಮಹಾಸಭೆಯವರಾದ ನಾವು ನಿರ್ಧರಮಾಡಿರುತ್ತೇವೆ.

೬ ವೀರಶೈವರ ಮಿಲ್ಲು (ಗಿರಣಿ), ವೀರಶೈವರ ಬ್ಯಾಂಕು—ಇವುಗಳಿಂದ ನಮ್ಮ ಸಮಾಜದ ಸಾಂಪತ್ತಿಕ ಸ್ಥಿತಿಯು ವಿಶೇಷವಾಗಿ ಸುಧಾರಿಸುವುದಲ್ಲದೆ ಇವುಗಳ ಉತ್ಪತ್ತಿಯ ಸ್ವಲ್ಪ ಭಾಗವನ್ನು ಉಪಯೋಗಿಸಿಕೊಳ್ಳುವುದರಿಂದ ಧಾರ್ಮಿಕ ವ್ಯಾವಹಾರಿಕಾದಿ ಸುಧಾರಣೆಗಳನ್ನು ಮಾಡಿಕೊಳ್ಳುವುದಕ್ಕೆ ತುಂಬಾ ಅನುಕೂಲಿಸುವುದರಿಂದ ನಮ್ಮ ಸಮಾಜದ ಪ್ರಮುಖರು ಇಂಥ ಗಿರಣಿ ಬ್ಯಾಂಕು ಇವುಗಳನ್ನು ಒಗ್ಗಟ್ಟಿನಿಂದ ಸ್ಥಾಪಿಸುವ ಯತ್ನವನ್ನು ಕೈಕೊಳ್ಳಬೇಕೆಂದು ಈ ಮಹಾಸಭೆಯವರಾದ ನಾವು ನಿರ್ಧರಮಾಡಿರುತ್ತೇವೆ.

೭ ಪಟ್ಟ, ಚರಮೂರ್ತಿ, ವಿರಕ್ತ — ಈ ಅಧಿಕಾರಸ್ಥಾನಗಳಿಗೆ ಮುಮುಕ್ಷುತ್ವಾದಿ ಯೋಗ್ಯತೆಯುಳ್ಳ ವಿದ್ಯಾಭ್ಯಾಸದ ಮನೆತನದ ಗುರುಸ್ಥಲದ ವಟುಗಳನ್ನೇ ಆರಿಸಿಕೊಳ್ಳಲು ಪ್ರತಿಯೊಂದು ಸ್ಥಲದ ವೀರಶೈವರೂ ಪ್ರಯತ್ನವನ್ನು ಮಾಡಬೇಕೆಂದು ಈ ಮಹಾಸಭೆಯವರಾದ ನಾವು ನಿರ್ಧರಮಾಡಿರುತ್ತೇವೆ.

೮ ಮೈಸೂರು ಸ್ಟಾರ್ ಪತ್ರಿಕೆಯು ನಮ್ಮ ಸಮಾಜದ ಸುಧಾರಣೆಗೂ ಮಹಾಸಭೆಗೂ ವಿಶೇಷ ಸಹಾಯಕವಾಗಿರುವುದರಿಂದ ಅದರ ಪ್ರೋತ್ಸಾಹಾರ್ಥವಾಗಿ ಇನ್ನೂರೈವತ್ತು ರೂಪಾಯಿಗಳನ್ನು ಪ್ರತಿಯೊಂದು ವೀರಶೈವ ಮಹಾಸಭೆಯವರೂ ಕೊಡಬೇಕೆಂದು ಈ ಮಹಾಸಭೆಯವರು ನಿರ್ಧರಮಾಡಿರುತ್ತೇವೆ.

೯ ವೀರಶೈವ ಸಮಾಜದ ಒಬ್ಬರಾದರೂ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ರಾಜದ್ರೋಹದ ಯಾವ ಪ್ರಯತ್ನಗಳಲ್ಲಿಯೂ ಸೇರಕೂಡದೆಂತಲೂ ಇಂಥಾ ಪ್ರಯತ್ನಗಳಲ್ಲಿ ಸೇರಿದವರನ್ನು ವೀರಶೈವ ಸಮಾಜದಿಂದ ತಿರಸ್ಕರಿಸತಕ್ಕದ್ದೆಂತಲೂ ಈ ಮಹಾಸಭೆಯವರು ನಿರ್ಧರಮಾಡಿರುತ್ತೇವೆ.

೧೦ ೧ನೆಯ ಮಹಾಸಭೆಯವರ ಪ್ರಾರ್ಥನೆಯ ಮೇರೆ ಮುಂಬಯಿ ಸರ್ಕಾರದವರು ಕಾರಾಗೃಹದಲ್ಲಿ ವೀರಶೈವ ಮತದ ಕೈದಿಗಳ ದೇಹದಿಂದ ಲಿಂಗವಿಯೋಗವನ್ನು ಮಾಡದೆ ಇರುವಂತೆ ಏರ್ಪಡಿಸಿಕೊಟ್ಟ ಪ್ರಕಾರ ಮೈಸೂರು ಮತ್ತು ಮದರಾಸು ಸರ್ಕಾರದವರೂ ಮಾಡಿಕೊಡಬೇಕೆಂದು ಅವರನ್ನು ಪ್ರಾರ್ಥಿಸಬೇಕೆಂಬದಾಗಿ ಈ ಮಹಾಸಭೆಯವರು ನಿರ್ಧರಿಸಿರುತ್ತೇವೆ ಮತ್ತು ನಿಜಾಂ ಸರ್ಕಾರದವರು ಪೂರ್ವದಿಂದಲೂ ವೀರಶೈವರ ಕೈದಿಗಳನ್ನು ಲಿಂಗವಿಹೀನರನ್ನಾಗಿ ಮಾಡದೆಯೂ, ಅವರ ಸಜಾತೀಯರಿಂದಲೇ ಅನ್ನೋದಕಗಳನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಿಯೂ ಇರುತ್ತಾರೆಂಬುದನ್ನು ತಿಳಿದು ಈ ಮಹಾಸಭೆಯವರು ನಮ್ಮ ಕೃತಜ್ಞತೆಯನ್ನು ಆ ಸರ್ಕಾರಕ್ಕೆ ಪ್ರದರ್ಶಿಸುತ್ತೇವೆ.

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾಕೊಡಲಾರೆವು. ಆದಕಾರಣ ಬಾತ್ಮಿದಾರರು ತಮ್ಮ ಒಳ್ಳೆತನಕ್ಕೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ನಿಗಾಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿಟರ್

ಒಬ್ಬ ಬಾತ್ಮಿದಾರರು ಹೊಳೆನರಸೀಪುರದ ತಾಲ್ಲೂಕು ದೊಡ್ಡಕಾಡನೂರು ಹೋಬಳಿ ಮರಹಳ್ಳಿ ಕೊಪ್ಪಲಲ್ಲಿ ಒಂದು ಪಾಠಶಾಲೆಯನ್ನು ಇಡಿಸಕೊಡಬೇಕೆಂತಲೂ, ದೊಡ್ಡಹಳ್ಳಿ ದಾಖಲೆ ಬೋರೇಹಳ್ಳಿಯಲ್ಲಿ ಆಗುವ ಗುರುವಾರದ ಸಂತೆಯಲ್ಲಿ ಜನರಿಗೂ ಜಾನವಾರುಗಳಿಗೂ ನೀರಿಗೆ ತುಂಬಾ ಕಷ್ಟವಾಗುತ್ತಿದೆ. ಆದ್ದರಿಂದ ಅಲ್ಲಿ ಒಂದು ಭಾವಿಯನ್ನು ತೆಗೆಸಿಕೊಡಬೇಕೆಂತಲೂ ಬರೆದುದರಿಂದ ಗ್ರಾಮಸ್ಥರು ಸೇರಿ ಮೊದಲನೇ ವಿಚಾರಕ್ಕೆ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ರವರಿಗೂ, ಎರಡನೇ ವಿಚಾರಕ್ಕೆ ಹಾಸನದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಿಗೂ ಅರ್ಜಿಗಳನ್ನು ಬರೆದುಕೊಂಡರೆ ಅವರು ತನಿಖೆಮಾಡಿಸಿ ನೆರವೇರಿಸಿಕೊಡುವರೆಂದು ನಿರೀಕ್ಷಿಸುತ್ತೇವೆ.

ಸ್ವದೇಶೀ ರಿಟೈರ್ಡ್ ಆಫೀಸರ್, ಚಿತ್ರದುರ್ಗ —ಯಾವ ಪತ್ರಿಕೆಯಲ್ಲಿ ನೀವು ಆಕ್ಷೇಪಣೆಯನ್ನು ಓದಿದಿರೋ ಆ ಪತ್ರಿಕೆಗೇ ನಿಮ್ಮ ಸಮಾಧಾನಗಳನ್ನು ಬರೆಯಬೇಕು.

ರೈಲ್ವೆ ನೌಕರನ ಕುಚೋದ್ಯ ಪ್ರತ್ಯಕ್ಷದರ್ಶಿ, ಮೈಸೂರು —ನೀವು ಆ ದಿನವೇ ಆ ನೌಕರನ ಹೆಸರು, ಉದ್ಯೋಗ, ಆ ಹೆಂಗಸಿನ ಹೆಸರು, ವಾಸಸ್ಥಳ ಮುಂತಾದ ಸಂಗತಿಗಳನ್ನು ಗೊತ್ತುಮಾಡಿ ತಿಳಿದುಕೊಂಡು ಸಾಕ್ಷಿಗಳ ಸಹಿತ ರೈಲ್ವೆ ಸ್ಟೇಷನ್ ಮಾಸ್ಟರಿಗೆ ತಿಳಿಸಿದ್ದರೆ ಅಥವಾ ಅರ್ಜಿಬರೆದುಕೊಂಡಿದ್ದರೆ ಚೆನ್ನಾಗಿತ್ತು. ನೀವು ಹಾಗೆ ಮಾಡದೆ ಈಗ ಮೊಗಂ ಆಗಿ ಆಕ್ಷೇಪಣೆಯಾಗಿ ಬರೆದಿರುವ ಬಾತ್ಮಿಯನ್ನು ಪ್ರಕಟಿಸೋಣದರಿಂದ ಪ್ರಯೋಜನವಾಗಲಾರದೆಂದು ಎಣಿಸುತ್ತೇವೆ.

ಜಿ. ಸಿ. ಬಲರಾಂತಿಂಗ್, ಗುಬ್ಬಿ —ನೀವು ವಿವರಿಸಿರುವ ವಿಷಯವು ಬಹಳ ದುಃಖಕರವಾದದ್ದಾಗಿದ್ದರೂ ಠಕ್ಕ ಸಂಬಂಧಿಗಳು ಪೋಲೀಸಿಗೆ ತಿಳಿಸದೆ ಸುಮ್ಮನಿರುವುದು ಆಶ್ಚರ್ಯವಾಗಿದೆ. ಅನುಭವಿಸುವವರೇ ಮೌನವಾಗಿರುವಲ್ಲಿ ಯಾರೇನು ಮಾಡಬಹುದು?

ಶಿಡ್ಲಘಟ್ಟ ಗ್ರಾಮದ ಸಮೀಪಸ್ಥ ವೆಂಕಟಾಪುರ ಗ್ರಾಮದಲ್ಲಿ ಚಾವಡಿ ಕಟ್ಟಡದ ವಿಚಾರವಾಗಿ "ಪ್ರತ್ಯಕ್ಷದರ್ಶಿ" ಯು ಡೆಪ್ಯುಟಿ ಕಮಿಷನರವರಿಗೆ ಬರೆದುಕೊಂಡಲ್ಲಿ ಅವರು ಅದನ್ನು ಕ್ರಮಪಡಿಸುವರೆಂದು ನಿರೀಕ್ಷಿಸುತ್ತೇವೆ.

ಟಿ. ಅ., ಚಿತ್ರದುರ್ಗ —ನೀವು ಬರೆದ ವಿಚಾರವನ್ನು ಮೊದಲು ನಿಮ್ಮ ಪೋಲೀಸ್ ಸೂಪರಿಂಟೆಂಡೆಂಟರಿಗೆ ಬರೆದು ತಿಳಿಸಿದಲ್ಲಿ ಅವರು ಗಮನಕೊಟ್ಟು ಆ ಅಕ್ರಮವನ್ನು ಅಡಗಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

—ಎಡಿಟರ್.

ಕರೆಸ್ಪಾಂಡೆನ್ಸ್.

ವೈಶ್ಯಾಭಿವೃದ್ಧಿಯು

ಅಯ್ಯಾ,

ನಾನು ಬೆಳಗೂರು ಗ್ರಾಮದಿಂದ ನನ್ನ ಕಾರ್ಯಾರ್ಥವಾಗಿ ಶಿವಮೊಗ್ಗಕ್ಕೆ ಹೋಗಿದ್ದೆನು. ತಾ ೮ನೇ ಶನಿವಾರ ರಾತ್ರಿ ೮ ಗಂಟೆಯಲ್ಲಿ ಶಿವಮೊಗ್ಗಾ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದಲ್ಲಿ ನಮ್ಮ ವೈಶ್ಯ ಮಹನೀಯರ ಸಭೆ ಸೇರಿತ್ತು. ಈ ಸಭೆಗೆ ಅಧ್ಯಕ್ಷರಾಗಿ ಸಾಹುಕಾರ್ ಶೇಷಗಿರಿ ಶೆಟ್ಟರು ಬೆಳಗೂರು ಲಕ್ಷ್ಮೀನಾರಾಯಣ ಶೆಟ್ಟರು ಆಗ ಸಭಾಧಿಪತ್ಯವನ್ನು ವಹಿಸಿ ತಿಳುಹಿಸಿದ ಸಾರಾಂಶವೇನೆಂದರೆ, ಬೆಂಗಳೂರಿನಲ್ಲಿ ನಡೆದ ಎರಡನೇ ಆರ್ಯ ವೈಶ್ಯ ಮಹಾಸಭೆಯಲ್ಲಿ ನಡೆದ ಎಲ್ಲಾ ಸಾರಾಂಶವೂ ಅಲ್ಲಿನ ತೀರ್ಮಾನದ ವಿಷಯಗಳೂ, ಆ ಸಭೆಯಿಂದಾಗುವ ಪ್ರಯೋಜನವೂ ವಗೈರೆ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಮತ್ತು "ಸಣ್ಣ ಸಣ್ಣ ಗ್ರಾಮಾಂತರಗಳಲ್ಲಿ ಉಪಸಭೆಗಳನ್ನು ಏರ್ಪಡಿಸಿಕೊಂಡು ನಮ್ಮ ವೈಶ್ಯಾಭಿವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಏರ್ಪಡಿಸಿಕೊಳ್ಳುತ್ತಿರುವಾಗ ಈ ಮಹಾ ಪಟ್ಟಣವಾಸಿಗಳಾದ ಈ ಗ್ರಾಮದ ವೈಶ್ಯರು ಯಾವ ಪ್ರಯೋಜನವನ್ನೂ ಪಡೆಯದೆ ಇರುವದು ತುಂಬಾ ಶೋಚನೀಯವಾಗಿದೆ" ಎಂದು ಬೆಂಗಳೂರು ಕಾನ್ಫರೆನ್ಸಿನಲ್ಲಿ ನೋಟೀಸಿಗೆ ಬಂದದ್ದರಿಂದ ಈ ವಿಷಯವಾಗಿ ನಮಗೆ ತುಂಬಾ ಕುತೂಹಲವುಂಟಾಗಿರುವದರಿಂದ ಇನ್ನು ಮುಂದೆ ನಾವು ಆ ದೊಡ್ಡ ಸಭೆಗೆ ವಿಧೇಯರಾಗಿ ನಡೆದುಕೊಂಡು ನಮ್ಮ ಗಂಡು ಮಕ್ಕಳಲ್ಲಿ ೧೨ ವರುಷಕ್ಕೆ ಮೇಲ್ಪಟ್ಟ ಹುಡುಗರಿಗೆಲ್ಲಾ ಈ ಮಾಘಮಾಸದಲ್ಲಿಯೇ ಉಪನಯನವನ್ನು ಮಾಡಿಸುವಂತೆ ತೀರ್ಮಾನಿಸಿಕೊಂಡು ಇರುತ್ತಾ ಅಗ್ನಿ ವೇದೋಕ್ತವಾಗಿ ನಡಿಸಿಕೊಳ್ಳುವ ವಿಚಾರಕ್ಕೆ ತಕ್ಕ ಏರ್ಪಾಟುಗೋಸ್ಕರ ಪುನಹ ತಾ ೧೫ನೇ ಶನಿವಾರ ಸಭೆಗೂಡುವದಾಗಿಯೂ ತೀರ್ಮಾನಿಸಿಕೊಂಡರಲ್ಲದೆ ಈ ವೈಶ್ಯಮಹಾಭಿವೃದ್ಧಿಗೋಸ್ಕರ ತಕ್ಕ ಏರ್ಪಾಟುಗಳನ್ನು ಏರ್ಪಡಿಸಿದ ನಮ್ಮ ಘನವನ್ನೈದಿದ ಮೆ॥ ಸಂಗಾಪುರದ ಚಂಗಯ್ಯಶೆಟ್ಟಿ, ಬಿ. ಎ. ಯವರಿಗೂ ಮತ್ತು ಈ ಎರಡನೇ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮೆ॥ ಮದ್ರಾಸು ಹೈಕೋರ್ಟು ಬ್ಯಾರಿಸ್ಟರ್ ಗುರುಸ್ವಾಮಿಶೆಟ್ಟಿ, ಎಂ. ಎ. ಯವರಿಗೂ ವಂದನೆಗಳನ್ನು ಅರ್ಪಿಸಿದರಲ್ಲದೆ ಅವರನ್ನು ತುಂಬಾ ಸ್ತೋತ್ರಮಾಡಿ ಶ್ರೀ ಜನಾರ್ದನ ಸ್ವಾಮಿ ದೇವರಿಗೆ ಮಂಗಳಾರತಿಯನ್ನು ನಡಿಸಿ, ದೇವತಾ ಸ್ತೋತ್ರ ಮಾಡಿ ಆ ದಿನದ ಸಭೆಯನ್ನು ಮುಕ್ತಾಯ ಮಾಡಿದರು.

ಆದ್ದರಿಂದ ಇದೇ ಪ್ರಕಾರವಾಗಿ ಎಲ್ಲಾ ಗ್ರಾಮದವರೂ ಸಭೆಗೂಡಿ ತಕ್ಕ ಏರ್ಪಾಡುಗಳನ್ನು ಮಾಡಿಕೊಂಡರೆ ನಮ್ಮ ಜನಗಳ ಶ್ರೇಯೋಭಿವೃದ್ಧಿಯೂ, ವಿದ್ಯಾಭಿವೃದ್ಧಿಯೂ, ಮತಾಭಿವೃದ್ಧಿಯೂ ಜಾಗ್ರತೆಯಾಗಿ ಕೈಗೂಡುವದರಲ್ಲಿ ಸಂದೇಹವಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ.

ಬೆಳಗೂರು — ಕನಕ್ಕೆ ಎನವರ ಕೃಷ್ಣಪ್ಪಶೆಟ್ಟಿ

ತುಮಕೂರು ಪೋಲೀಸ್

ಅಯ್ಯಾ,

ತುಮಕೂರು ಹೊರಪೇಟೆ ಗೌರ್ನಮೆಂಟ್ ಆಯರ್ ಬಾಲಿಕಾ ಪಾಠಶಾಲಾ ಹೆಡ್ ಮಾಸ್ಟರ್ ಎಚ್. ವೆಂಕಟರಮಣಯ್ಯನವರು ಕಳೆದ ಕ್ರಿಸ್‌ಮಸ್ ರಜಾದಲ್ಲಿ ಸಂತೆಪೇಟೆಯಲ್ಲಿ ವಾಸಮಾಡುತ್ತಿದ್ದ ತಮ್ಮ ಮನೆಗೆ ಬೀಗ ಹಾಕಿಕೊಂಡು

ಹುಡಾರ ಸರ್ವೀಸ್ ವರಸ್ಥಳಕ್ಕೆ ಹೋಗಿದ್ದು, ಈ ಮಾಹೆ ೨ನೇ ತಾ. ಸಾಯಂಕಾಲ, ಯಾರೋ ಹಿತ್ತಲ ಬಾಗಿಲ ಚಿಲಕವನ್ನು ಮುರಿದು ಒಳಕ್ಕೆ ಪ್ರವೇಶಿಸಿ ಪೆಟ್ಟಿಗೆಯ ಬೀಗವನ್ನು ಎಬ್ಬಿ ತೆಗೆದು ಅದರಲ್ಲಿದ್ದ ಸೀರೆ ವಗೈರೆ ಕೆಲವು ಸಾಮಾನುಗಳನ್ನು ಕಳುವು ಮಾಡಿಕೊಂಡು ಹೋಗಿರುವದಾಗಿ ತಿಳಿದು ಮಾರು ದಿನದ ಬೆಳಗ್ಗೆ ಟವರ್ ಪೋಲೀಸ್ ಸ್ಟೇಷನ್ನಿಗೆ ಈ ವಿಷಯದಲ್ಲಿ ರಿಪೋರ್ಟು ಮಾಡಿಕೊಂಡರು. ಆ ಕೂಡಲೇ ಟವರ್ ಪೋಲೀಸ್ ಇನ್‌ಸ್ಪೆಕ್ಟರವರೂ ಜಮಾದಾರರೂ ದಫೇದಾರರೂ ತಮ್ಮ ಕೈಕೆಳಗಣ ಪೋಲೀಸ್ ಸಿಬ್ಬಂದಿಯೊಡನೆ ಬಂದು ಕೃತ್ಯ ನಡೆದ ಸ್ಥಳವನ್ನು ಪರಿಶೀಲಿಸಿ ೧-೨ ಗಂಟೆಯಲ್ಲೇ ಕಳುವಾದ ಮನೆಯ ಪಕ್ಕದ ಮನೆಯಲ್ಲಿ ವಾಸವಾಗಿರುವ ಪೆನ್ಷನ್ ಶೇಖದಾರ್ ಕಂದಸ್ವಾಮಿ ಪಿಳ್ಳೆಯವರ ಮಗ ದಕ್ಷಿಣಾಮೂರ್ತಿ ಎಂಬವನನ್ನು ಗುಮಾನಿಯಿಂದ ಹಿಡಿದು ಅವನ ಮನೆಯ ಒಳಗೂ ಹಿತ್ತಲಲ್ಲಿಯೂ ಬಚ್ಚಿಟ್ಟಿದ್ದ ಕಳುವಿನ ಮಾಲುಗಳನ್ನು ಅವನಿಂದಲೇ ಹೊರಗೆ ತೆಗಿಸಿ ಮಾರನೇ ದಿನವೇ ಆಸಾಮಿಯನ್ನು ಕ್ರಿಮಿನಲ್ ಕೋರ್ಟಿಗೆ ಗುರಿಪಡಿಸಿ, ಕಳವು ಹೋಗಿದ್ದ ಸಾಮಾನುಗಳನ್ನು ವಾಲೀಕರಿಗೆ ಕೊಡಿಸಿಕೊಟ್ಟರು. ಈ ಕೃತಜ್ಞತಾಪೂರ್ವಕವಾದ ಸಂತೋಷದಿಂದ ರಿಟೈರ್ ಎಟ್ ಮೆಂಕಟ್ಟರಮಣ್ಯಯನವರು ಈ ಮೋದ್ಧವೆಯ ಪತ್ರಿಕೆಯಲ್ಲಿ ಒಡನೆ ಚಟುವಟಿಕೆಯನ್ನು, ಸಾಹಸವನ್ನೂ ತೋರಿಸಿದ ಪೋಲೀಸ್ ನೌಕರರಿಗೆ ಹಂಚುವದಕ್ಕೆ ಕೊಂಚ ಬಹುಮಾನ ದ್ರವ್ಯವನ್ನು ತೆಗೆದಿಟ್ಟುಕೊಂಡು ಈ ಬಗ್ಗೆ ಪೋಲೀಸ್ ಸೂಪ್ರೆಂಟ್ ಸಾಹೇಬರವರ ಅಪ್ಪಣೆಯನ್ನು ಪಡೆಯಬೇಕೆಂದಿದ್ದಾರೆ.

ಈ ಸಂತಪೇಟೆಯಲ್ಲಿ ಬಹು ದಿವಸಗಳಿಂದಿದ್ದ ಟವರ್ ಪೋಲೀಸ್ ಸ್ಟೇಷನ್ನನ್ನು ತೆಗೆದುಹಾಕಿಯಲ್ಲಿ ಇಲ್ಲಿ ಕಳುವು, ಹಾದರ, ಜೂಜು, ಚೋಪ್ಪು ಜಗಳಗಳು ಆಗಾಗ್ಗೆ ನಡೆಯುವದು ಹೆಚ್ಚುತ್ತಿರುವುದರಿಂದಲೂ, ಈ ಪೇಟೆಯು ಈ ಟೌನಿಗೆ ಕೊನೇ ಸರಹದ್ದಾಗಿರುವುದರಿಂದಲೂ, ಇದಕ್ಕೆ ಸಮೀಪವಾಗಿರುವ ತೋಟಗಳಲ್ಲಿ ಬಹಳ ಗಲಾಟೆಗಳು ನಡೆಯುತ್ತಿರುವುದರಿಂದಲೂ, ಇಲ್ಲಿ ಸ್ಥಳೀಕರೂ ಸರ್ಕಾರದ ನೌಕರರೂ ಆದ ... ಬಹಳವಾಗಿ ವಾಸವಾಗಿರುವುದು ... ತುಂಬಲೂ ... ಒಂದು ಸಂಜೆಯಲ್ಲಿ ... ಆಗಾಗಲೇ ಬಹಳ ರಾಂಗ್ ಮಾಡುತ್ತಿರುವುದರಿಂದಲೂ, ಈ ಕಡೆ ... ಬಹಳವಾಗಿ ಗಾಡಿಗಳ ಓಡಾಟ ನಡೆಯುತ್ತಿರುವುದರಿಂದಲೂ ಇಂಥಾ ಗಲಾಟೆಯ ಸ್ಥಳದಲ್ಲಿ ಜನಗಳ ನೆಮ್ಮದಿಗೆ ಭಂಗವುಂಟಾಗದಂತೆ ಒಂದು ಟೌನ್ ಪೋಲೀಸ್ ಸ್ಟೇಷನ್ನನ್ನಾದರೂ ಸ್ಥಾಪಿಸುವುದು ಅತ್ಯವಶ್ಯಕವಾಗಿದೆ.

ತುಮಕೂರು, ೧೧-೧-೧೯೧೦. ಎಚ್. ಆರ್.

— — —

ಮದರಾಸಿನ ಫಾರಿನ್ ವಾಚ್ ಕಂಪೆನಿಯು

ಅಯ್ಯಾ,

ಮದರಾಸಿನ ಸಾಹುಕಾರ್ ಪೇಟೆಯಲ್ಲಿ ಇರುವ ಫಾರಿನ್ ವಾಚ್ ಕಂಪೆನಿ ಮ್ಯಾನೇಜರ್ ಮೆ॥ ಟಿ. ಆರ್. ದಾಸ್ ಎಂಬವರು ನನ್ನನ್ನು ಏಜೆಂಟನನ್ನಾಗಿ ಕಳೆದ ಸುಮಾರು ೨-೩ ವರುಷದಲ್ಲಿ ಸೇರಿಸಿಕೊಂಡು ನಾನು ಈ ದೇಶದ ಜನಗಳಿಗೆ ನಂಬಿಕೆ ಹೇಳಿ ಇವರ ಕಂಪೆನಿಯಲ್ಲಿ ಸಾಮಾನು ಖರೀದಿಮಾಡಿಸಿದರೆ ಏಜೆಂಟರಾದ ನನಗೆ ಕಮಿಷನ್ ಕೊಡುವಂತೆಯೂ, ನಾವು ಕಳಿಸಿಕೊಂಡ ಸಾಮಾನಿನ ಪೈಕಿ ಚನ್ನಾಗಿಲ್ಲದೆ ಬಿಗ್ಗ ಕೆಟ್ಟ ಸಾಮಾನನ್ನು ವಾಪಸು ಇವರಿಗೆ ಕಳುಹಿಸಿದರೆ ಬದಲೀ ಸಾಮಾನುಗಳಾಗಲಿ ಹಣವಾಗಲಿ ಕೊಡುವುದಾಗಿ ಒಪ್ಪಿ ನನಗೆ ನೋಟೀಸ್ ಕಳುಹಿಸಿದ ಮೇರೆ ನಾನು ಇವರ ಲಿಖಿತ ಪ್ರಮಾಣವಾದ ನೋಟೀಸ್ ಮೇಲೆ ... ಕಮಿಷನ್ ಪಟ್ಟಿಯನ್ನೇ ದೃಢವಾಗಿ ನಂಬಿ ಈ ದೇಶದ ಜನಗಳಿಗೆ ಇವರ ಕಂಪೆನಿಗೆ ಆರ್ಡರುಗಳನ್ನು ಬರಸಿ ಕಳುಹಿಸುತ್ತ, ಬಿಗ್ಗ ಕೆಟ್ಟ ಸಾಮಾನನ್ನು ವಾಪಸು ಇವರಿಗೆ ರವಾನಿಸಿ ಬೇರೆ ಸಾಮಾನು ತರಿಸಿ ಕೊಳ್ಳುತ್ತಿದ್ದೆನು. ಆದರೆ ಇವರ ... ನಾನು ... ಯಲ್ಲಿ ತರಿಸಿದ್ದ ಕೆಲವು ... ರೂಪಾಯಿ ಸಾಮಾನು ... ಕೆಟ್ಟದ್ದರಿಂದ ಇವನ್ನು ... ರಲ್ಲಿ ವಾಪಸು ಕಳುಹಿಸಿದೆನು. ಅಲ್ಲದೆ ... ಯಲ್ಲಿ ... ಕಮಿಷನ್ ಪಟ್ಟಿ ... ಜನಗಳಿಂದ ... ಸಾಮಾನು ಖರೀದಿಮಾಡಿ ದ್ರವ್ಯಾಗಿ ನಮಗೆ ... ಕಮಿಷನ್ ... ಇವರಿಂದ ... ನನಗೆ ಬರಬೇಕಾದದ್ದಕ್ಕೆ ಬದಲಾಗಿ ಬೇರೆ ಸಾಮಾನು ಆಗಲಿ, ಹಣವಾಗಲಿ, ಸದುತ್ತರವಾದ ಜವಾಬು ಆಗಲಿ ಬರಬೇಕೆಂದು ಇವರಿಗೆ ... ರುಜುಮಾಡಿ ಟಪ್ಪಾಲ್ ಮೂಲಕ ಇದುವರೆಗೆ ೧೦ ಬೇರಿಂಗು ಕವರು, ೪ ರಿಜಿಸ್ಟರ್ಡು ಕಾರ್ಡು, ೮ ಪೈಡು ಕಾರ್ಡು, ೪ ಬೇರಿಂಗು ಕಾರ್ಡು, ೪೭-೧೧೦-೭ ಈ ನಂಬರುಳ್ಳ ಅಕ್ನಾಲೆಡ್ಜ್‌ಮೆಂಟು ರಿಜಿಸ್ಟರ್ ಕವರು ೩, ೬೯ನೇ ನಂಬರ್ ರಿಜಿಸ್ಟರ್ ಅಕ್ನಾಲೆಡ್ಜ್‌ಮೆಂಟ್ ಕಾರ್ಡು ೧, ಪುನಃ ತಾ ೧೭-೧೨ ೦೯ ನೇ ಮುಕ್ಕಾಂ ೩೭ನೇ ನಂಬರ್ ಅಕ್ನಾಲೆಡ್ಜ್‌ಮೆಂಟ್ ರಿಜಿಸ್ಟರ್ ಕವರು ೧, ಒಟ್ಟು ಈ ವರೆಗೆ ೩೧ ಕಾಗದಗಳು ಬರೆದೆನು. ಇದುವರೆಗೆ ನಿರೀಕ್ಷಿಸಿದಾಗ್ಯೂ ಇವರು ಕಹಲ್‌ವರೆಗೂ ಸದುತ್ತರವಾದ ಜವಾಬೇ ಆಗಲಿ, ನಾನು ಕೇಳಿದ ಸಾಮಾನುಗಳಾಗಲಿ, ಹಣವಾಗಲಿ ರವಾನಿಸದೇ ಮೋಸಮಾಡುತ್ತಾರೆ. ಇಂಥಾ ಸ್ವಲ್ಪ ವಿಚಾರಕ್ಕಲ್ಲ ನಾವು ತುಂಬಾ ನಿಗಾಕೊಡಬೇಕಾದರೆ ೧-೨ ರೂಪಾಯಿನ ಸಾಮಾನು ಕಳುಹಿಸತಕ್ಕವರಿಗೆ ಬಹಳ ದುಬಾರಿ ವೆಚ್ಚಕ್ಕೆ ಕಾರಣವಾಗಿರುತ್ತೆ. ಆದ್ದರಿಂದ ಈ ಮ್ಯಾನೇಜರವರ. ನನಗೆ ಮಾಡಿದಕ್ಕಿಂಥಾ ಮೋಸದ ವಿಚಾರ ಮುಂದೆ ಇವರ ಕಂಪೆನಿಯಲ್ಲಿ ಏಜೆಂಟರಾಗುವವರಿಗೂ ಸಾಮಾನು ತರಿಸತಕ್ಕ ದರಖಾಸ್ತುದಾರರಿಗೂ ತಿಳಿಯುತಕ್ಕ ಬಗ್ಗೆ ಕೃಪೆಯಿರುವ ತಮ್ಮ ಈ ಪತ್ರಿಕೆಯನ್ನು ದಯವಿಟ್ಟು ಸಕಲರು ಓದಿ ತಿಳಿದುಕೊಂಡು ಜ್ಞಾಪಕದಲ್ಲಿಡಬೇಕಾಗಿ ಪ್ರಾರ್ಥಿಸುವುದಲ್ಲದೆ ಈ ರೀತಿ ಮೋಸಮಾಡತಕ್ಕದ್ದನ್ನು ನ್ಯಾಯವೇ? ಇದನ್ನು ಮೇಲ್ಪಂಕ್ತಿಯವರೆಲ್ಲಾ ಯೋಚಿಸಿ ನೋಡಬೇಕಾಗಿ ಪ್ರಾರ್ಥನೆ ಮತ್ತು ಈ ಕಂಪೆನಿ ಮ್ಯಾನೇಜರು ಈ ರೀತಿ ಮೋಸಮಾಡತಕ್ಕದ್ದನ್ನು ಮುಂದಾದರೂ ಬಿಟ್ಟು ನಂಬಿಕೆಯಿಂದ ನಡೆಸ ಪಕ್ಷದಲ್ಲಿ ಕಂಪೆನಿಗೆ ಗೌರವವೂ ನಂಬಿಕೆಯೂ ಉಂಟಾಗಿ ಜನರು ಬೇಕಾದ ಸಾಮಾನಿಗೆ ಬರೆಸುವುದರಲ್ಲಿ ಸಂದೇಹವಿಲ್ಲವೆಂದು ಕೇಳುವ ಗುಂಡ್ಲುಪೇಟೆ ತಾಲ್ಲೂಕು ಬೊಂಬಾಪುರದಲ್ಲಿ ಇರುವ

ಶೆಟ್ಟಿಪುರದ ಶಾ॥ ಕೃಷ್ಣಪ್ಪನವರ ಮಗ ಟಿ. ರಾಮಚಂದ್ರಯ್ಯ

ಇಂಡಿಯಾ ದೇಶದ ವೃತ್ತಾಂತಗಳು.

ನಾಸಿಕದಲ್ಲಿ ಕಲೆಕ್ಟರಾಗಿದ್ದ ಮೆ॥ ಜಾಕ್ಸನ್‌ರವರನ್ನು ಕೈಪಿಸ್ತೂಲಿನಿಂದ ಕೊಂದುಹಾಕಿದ ಮೊಕದ್ದಮೆಯಲ್ಲಿ ಪೋಲೀಸಿನವರು ಇದುವರೆಗೆ ೪೨ ಜನರನ್ನು ದಸ್ತಗಿರಿ ಮಾಡಿರುತ್ತಾರೆ. ಮೆ॥ ಜಾಕ್ಸನ್‌ರವರ ಮೆಮೋರಿಯಲ್ ಫಂಡಿಗೆ ೧,೫೦೦ ರೂಪಾಯಿ ಚಂದಾ ವಸೂಲಾಗಿರುವುದು.

* * *

ಕಲ್ಕತ್ತೆಯ ಸಮುದ್ರ ತೀರದಲ್ಲಿ ನಾರಿನ ಗಟ್ಟಾಗಳಿಂ ಭರ್ತಿಯಾಗಿದ್ದ ಒಂದು ಹಡಗಿಗೆ ಕಳೆದ ವಾರ ಬೆಂಕಿ ಬಿದ್ದು ಸಾಹುಕಾರನಿಗೆ ೩೫,೦೦೦ ರೂಪಾಯಿ ನಷ್ಟವಾಯಿತು.

* * *

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಇಷ್ಟರಲ್ಲೇ ಕಲ್ಕತ್ತೆಯಿಂದ ಹೊರಟು ಪೂನಾ, ಕಾಶಿ, ರಾಂಪುರ, ಪಾಟಿಯಾಲಾ ಎಂಬೀ ಪ್ರಾಂತ್ಯಗಳಲ್ಲಿ ಸಂಚಾರಮಾಡಿಕೊಂಡು ಬರುವವರಾಗಿದ್ದಾರೆ.

* * *

ಜಯಪುರದ ಮಹಾರಾಜರವರು ಹಿಂದುಸ್ಥಾನದ ಇತರ ಕಡೆಗಳಲ್ಲಿ ಪ್ರಕಟವಾಗುವ ೪೫ ವರ್ತಮಾನ ಪತ್ರಿಕೆಗಳನ್ನು ತಮ್ಮ ಸಂಸ್ಥಾನದ ಪ್ರಜೆಗಳ್ಯಾರೂ ತರಿಸಿ ಓದಕೂಡದೆಂದು ಇಸ್ತಿಹಾರು ಹಾಕಿಸಿರುತ್ತಾರೆ.

* * *

ಬೊಂಬಾಯಿ ಪಟ್ಟಣದ ಸಮುದ್ರತೀರದಲ್ಲಿ ೩,೦೦೦ ಪೀಪಾಯಿಗಳ ತುಂಬ ಭರ್ತಿಯಾಗಿದ್ದ ಯುಕ್ಲ್ ... ಹತ್ತಿಕೊಂಡು, ಹಡಗು ಸಹಿತವಾಗಿ ಸುಟ್ಟು ಹೋಯಿತು. ಒಬ್ಬ ಕೂಲಿಯವನ ಮೈಸುಟ್ಟು ಗಾಯಗಳಾಗಿ ಮೃತಪಟ್ಟನು.

* * *

ವೈಸ್‌ರಾಯಿಯವರ ಪ್ರೈವೆಟ್ ಸೆಕ್ರೆಟರಿಯವರಾದ ಕರ್ನಲ್ ಸರ್ ಜೇಂಸ್ ಡನ್‌ಲಾಪ್ ಸ್ಮಿತ್‌ಯವರು ಫೆಬ್ರವರಿ ತಾ. ೧೩ ಕ್ಕೆ ಸೀಮೆಗೆ ತೆರಳುತ್ತಾರೆ. ಅವರ ಸ್ಥಾನಕ್ಕೆ ನೇಮಕವಾಗಿರುವ ಕರ್ನಲ್ ಎ ಫ್ ಪಿನ್‌ಹೇಯವರು ಸೀಮೆಯಿಂದ ಬಂದು ಫೆಬ್ರವರಿ ತಾ ೩ ರಲ್ಲಿ ಕೆಲಸದ ಚಾರ್ಜನ್ನು ವಹಿಸುವರು.

* * *

ಲಾಹೋರ್ ಪಟ್ಟಣದಲ್ಲಿ "ಸಹಾಯಕ" ಎಂಬ ಪತ್ರಿಕೆಯನ್ನು ಅಚ್ಚು ಹಾಕಿಕೊಡುತ್ತಿದ್ದ ಮನುಷ್ಯನನ್ನು ಸರ್ಕಾರದವರು ದಸ್ತಗಿರಿ ಮಾಡಿ, ಆ ಪತ್ರಿಕೆಯ ಎಡಿಟರನ್ನು ಹುಡುಕುತ್ತಿದ್ದಾರೆ. ದೆಹಲಿ ಪಟ್ಟಣದಲ್ಲಿ "ಆಕಾಶ" ಎಂಬ ಪತ್ರಿಕೆಯ ಎಡಿಟರಿಂದ ಗಣೇಶಲಾಲನನ್ನು ಹಿಡಿದು ವಿಚಾರಣೆಗೋಸ್ಕರ ಲಾಹೋರಿಗೆ ಕರೆದುಕೊಂಡು ಹೋದರು.

* * *

ಕಲ್ಕತ್ತಾ ಪಟ್ಟಣದ ಪ್ರೆಸಿಡೆನ್ಸಿ ಕಾಲೇಜಿನ ಸಹಾಯೋಪಾಧ್ಯಾಯನಾದ ಪಂಡಿತ ಅರುಣಾಶಾಸ್ತ್ರಿ ಎಂಬಾತನ ಹೆಂಡತಿ ಮಕ್ಕಳು ಕಳೆದ ಭಾನುವಾರ ರಾತ್ರಿ ಮಲಗಿ ನಿದ್ದೆಮಾಡ ... ಸೊಳ್ಳೆ ಪರದೆ ... ದೀಪದಲ್ಲಿ ಹತ್ತಿಕೊಂಡು ಉರಿದು ಮಂಚವನ್ನು ಸುಟ್ಟುಹಾಕಿತು. ಇಬ್ಬರು ಮಕ್ಕಳು ಮೃತಪಟ್ಟರು. ಹೆಂಡತಿಗೂ ಇನ್ನಿಬ್ಬರು ಮಕ್ಕಳಿಗೂ ಸುಟ್ಟ ಗಾಯಗಳಾಗಿರುತ್ತವೆ.

* * *

ಬೊಂಬಾಯಿನ ವರ್ತಕರಲ್ಲಿ ಒಂದು ಭಾರೀ ಮುತ್ತು ಬಂದು ಮಾರಾಟಕ್ಕೆ ಯಾಗುತ್ತಿದೆ. ಇದು ೩೪ ಕ್ಯಾರೆಟ್ ತೂಕವುಳ್ಳದ್ದಾಗಿಯೂ ... ಅಂಗುಲ ದಪ್ಪನಾಗಿ ... ಬಹು ಪ್ರಕಾಶಮಾನವಾಗಿಯೂ ಇರುವುದು. ಇದಕ್ಕೆ ಸಮಾನವಾದ ಮುತ್ತು ಪ್ರಪಂಚದಲ್ಲಿ ಎಲ್ಲೂ ಇಲ್ಲವೆಂದು ಹೇಳುತ್ತಾರೆ. ವರ್ತಕರು ಇದಕ್ಕೆ ಎಷ್ಟು ಬೆಲೆಯನ್ನು ಕಟ್ಟುವರೋ ಮುಂದೆ ತಿಳಿಯಬೇಕಾಗಿದೆ.

* * *

ಬೊಂಬಾಯಿನಲ್ಲಿ ಕಟ್ಟಮೇಮನ್ ಪಂಗಡದ ಸುಲ್ತಾನ್ ಅಬ್ದುಲ್ ವಾಹೇದ್‌ಯವರು ಆ ಪಟ್ಟಣದ ಷೆರಿಫರಾಗಿ (ಪುರಾಧ್ಯಕ್ಷರಾಗಿ) ಇದ್ದ ಕಾಲದಲ್ಲಿ ಅವರು ಪರಹಿತಕಾರ್ಯಗಳನ್ನು ಬಹಳವಾಗಿ ಮಾಡಿದ್ದನ್ನು ನೋಡಿ, ಆ ಪಂಗಡದ ಜನರು ಒಂದು ಫಂಡನ್ನು ಕೂಡಿಸಿ ಆತನ ಹೆಸರಿನ ಮೇಲೆ ತಮ್ಮ ಬಾಲಕರ ವಿದ್ಯಾಭ್ಯಾಸಕ ಕಾರ್ಯಕ್ಕೆ ವಿನಿಯೋಗಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ಫಂಡಿಗೆ ಇದುವರೆಗೆ ೨೪,೦೦೦ ರೂಪಾಯಿ ವಸೂಲಾಗಿರುತ್ತದೆ.

* * *

ಮದರಾಸ್ ಪಟ್ಟಣದಲ್ಲಿ ವಣಿಕುಲ ಕ್ಷತ್ರಿಯ ಮಹಾ ಸಂಘದವರು ಕಳೆದ ವಾರ ಹಿಂದು ಮಹಾ ಸಭೆ ಒಂದನ್ನು ನಡಿಸಿ, ದಕ್ಷಿಣ ಆಫ್ರಿಕದಲ್ಲಿ ಗವರ್ನಮೆಂಟಿನವರು ಹಿಂದುಸ್ಥಾನದ ಜನರನ್ನು ಕಿರುಕುಳಪಡಿಸುತ್ತಾರಾದ್ದರಿಂದ ಅಲ್ಲಿಗೆ ಕೂಲಿಗಳು ಜನರ್‍ಯಾರೂ ದಕ್ಷಿಣ ದೇಶದಿಂದ ಹೋಗಕೂಡದೆಂದು ತಡೆಯಬೇಕೆಂತಲೂ, ಅವರ ಕಿರುಕುಳಗಳಿಗಾಗಿ ತಮಿಳಿನಲ್ಲಿ ಮೂರು ಲಕ್ಷ ನೋಟೀಸುಗಳನ್ನು ಅಚ್ಚುಹಾಕಿಸಿ ಅಲ್ಲಿನ ಕಷ್ಟನಷ್ಟಗಳನ್ನು ವಿವರಿಸಿ ಎಚ್ಚರಿಕೆ ಕೊಡಬೇಕೆಂತಲೂ ತೀರ್ಮಾನ ಮಾಡಿದರು.

* * *

ಇಂಡಿಯಾ ಗವರ್ನಮೆಂಟಿನಲ್ಲಿ ವೈಸ್‌ರಾಯಿಯವರ ಪ್ರೈವೆಟ್ ಸೆಕ್ರೆಟರಿಯಾಗಿದ್ದ ಕರ್ನಲ್ ಸರ್ ಜೆ ಡನ್‌ಲಾಪ್ ಸ್ಮಿತ್‌ಯವರ ಹೆಸರನ್ನು ಶಾಶ್ವತಪಡಿಸಬೇಕೆಂದು ಗ್ವಾಲಿಯರ್, ಜೋಧಪುರ, ಬಿಕಾನೀರ್, ಪಾಟಿಯಾಲಾ, ಇದಾರ್, ಕಾಶ್ಮೀರ ಮಹಾರಾಜರುಗಳೂ ಢಕ್ಕಾ ನವಾಬರವರೂ ಭೋಪಾಲ್ ಬೇಗಂರವರೂ ಚಂದಾ ಹಣವನ್ನು ಕೊಟ್ಟು ಒಂದು ಫಂಡು ಕೂಡಿಸುತ್ತಿದ್ದಾರೆ. ವಿಲಾಯಿತಿಯಲ್ಲಿ ಓದುವ ಹಿಂದುಸ್ಥಾನದ ವಿದ್ಯಾರ್ಥಿಗಳಿಗೆ ಈ ಫಂಡಿನ ಉತ್ಪತ್ತಿಯಿಂದ ವೇತನವನ್ನು ಕೊಡುವಂತೆ ಏರ್ಪಾಡು ಮಾಡಿರುತ್ತಾರೆ.

* * *

ಬೊಂಬಾಯಿ ಪಟ್ಟಣದಲ್ಲಿ ಒಂದು ಕಂಪನಿಯವರು ಸರ್ಕಾರದಿಂದ ಖಾಲೀ ನಿವೇಶನಗಳನ್ನು ಕಡಮೆ ಕ್ರಯಕ್ಕೆ ಪಡೆದುಕೊಂಡು ಸಾಲು ಸಾಲಾಗಿ ಆರೋಗ್ಯಕರವಾದ ಮನೆಗಳನ್ನು ಕಟ್ಟಿಸಿ ಗುಮಾಸ್ತೆ ಮೊದಲಾದ ಸಾಮಾನ್ಯ ನೌಕರಿಗಳಿಂದ ಜೀವನ ಮಾಡುವಂಥಾ ಪ್ರಜೆಗಳಿಗೆ ಬಾಡಿಗೆ ಕೊಡುವವರಾಗಿದ್ದಾರೆ. ಈ ಮನೆಯವರು ೨೦ ವರುಷ ಕಾಲ ಬಾಡಿಗೆ ಕೊಡುತ್ತಾ ಬಂದಲ್ಲಿ ಬಳಿಕ ಆ ಮನೆಯು ಅವರದೇ ಆಗಿ ಹೋಗುವುದು. ಈ ರೀತಿಯಾಗಿ ಏರ್ಪಾಡು ಮಾಡುವುದು ಪುರಾಭಿವೃದ್ಧಿಗೂ ಪ್ರಜೆಗಳ ಆರೋಗ್ಯಕ್ಕೂ ತುಂಬಾ ಸಹಾಯವಾಗುತ್ತದೆನ್ನುವುದಕ್ಕೆ ಸಂಶಯವಿಲ್ಲ.

* * *

ಪಂಜಾಬ್ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರ್ ಸರ್ ಲೂಯಿ ಡೇನ್‌ರವರು ಕಳೆದ ವಾರ ಲಾಹೋರ್ ಪಟ್ಟಣದಲ್ಲಿ ನಡೆದ ಪರಸ್ಪರ ಸಹಾಯಕ ಕಂಪನಿಗಳ ಯಜಮಾನರ ಸಭೆಯಲ್ಲಿ ಅಗ್ರಸ್ಥಾನವನ್ನು ವಹಿಸಿ, ಅವರನ್ನು ಕುರಿತು—ಈ ಅಧಿಪತ್ಯದಲ್ಲಿ ಇದುವರೆಗೆ ೩೮೫ ಪರಸ್ಪರ ಸಹಾಯಕ ಬ್ಯಾಂಕುಗಳು ಏರ್ಪಾಡಾಗಿರುತ್ತವೆ. ಅವುಗಳ ಮೇಲ್ವಿಚಾರಣೆಗೆ ಸರ್ಕಾರದಿಂದ ನಾಲ್ವರು ಇನ್‌ಸ್ಪೆಕ್ಟರುಗಳನ್ನು ನೇಮಿಸುತ್ತೇವೆ. ಕೆಲವು ಕಾಲಾನಂತರ ಅವರ ಕೆಲಸವು ತೃಪ್ತಿಕರವಾಗಿ ನಡೆಯುತ್ತದೆ ಎಂದು ತಿಳಿದ ಬಳಿಕ ಆ ಇನ್‌ಸ್ಪೆಕ್ಟರುಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ವಹಿಸುವೆವು ಎಂದು ತಿಳಿಸಿದರು.

* * *

ಕಳೆದ ತಾ ೧೧ಕ್ಕೆ ಆಖೈರಾದ ಒಂದು ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೭,೭೦೫ ಪ್ಲೇಗ್ ಮರಣಗಳಾಗಿರುತ್ತವೆ. ಇವುಗಳಲ್ಲಿ ಸಂಯುಕ್ತಪ್ರಾಂತಗಳಲ್ಲಿ ೩,೫೮೨, ಪಂಜಾಬಿನಲ್ಲಿ ೧,೩೦೮, ಬಂಗಾಳದಲ್ಲಿ ೯೧೧, ಮಧ್ಯಪ್ರಾಂತಗಳು ಮತ್ತು ಬೇರಾರಿನಲ್ಲಿ ೯೦೯, ಬೊಂಬಾಯಿ ಅಧಿಪತ್ಯದಲ್ಲಿ ೫೪೫, ರಾಜಪುಟಾನ ಮತ್ತು ಅಜ್ಮೀರ್-ಮೇರ್ವಾರದಲ್ಲಿ ೨೧೫, ಬರ್ಮದಲ್ಲಿ ೮೧, ಮೈಸೂರು ಸೀಮೆಯಲ್ಲಿ ೫೮, ಮದ್ರಾಸ್ ಅಧಿಪತ್ಯದಲ್ಲಿ ೪೪, ಮಧ್ಯಹಿಂದುಸ್ಥಾನದಲ್ಲಿ ೪೧, ಹೈದರಾಬಾದು ಸೀಮೆಯಲ್ಲಿ ೨೭, ಮತ್ತು ಕಾಶ್ಮೀರದಲ್ಲಿ ೪, ಈ ಪ್ರಕಾರವಾಗಿ ಮರಣಗಳಾಗಿರುತ್ತವೆ.

* * *

ಶಾಂತಿಪುರಕ್ಕೆ ಸೇರಿದ ದೇವೇಂದ್ರನಾಥ ಗೋಸ್ವಾಮಿ ಎಂಬ ಬಂಗಾಳಿಯು ಪೋಲೀಸಿನವರ ಉಡುಪನ್ನು ಹಾಕಿಕೊಂಡು ಗೋವಲಂದು ಎಂಬ ಊರಿನ ರೈಲ್ವೆ ಸ್ಟೇಷನ್ನಲ್ಲಿ ಮೂರನೇ ಕ್ಲಾಸಿನ ಗಾಡಿಯೊಳಕ್ಕೆ ನುಗ್ಗಿ ತಾನು ಒಬ್ಬ ಪೋಲೀಸ್ ಅಧಿಕಾರಿ ಎಂತಲೂ ಜನಗಳ ಗಂಟು ಮೂಟೆಗಳಲ್ಲಿ ಸಿಡಿಮದ್ದು ಗುಂಡುಗಳನ್ನು ಇಟ್ಟಿರುವರೆಂಬ ಸಂಶಯದಿಂದ ಸದರಿ ಮೂಟೆಗಳನ್ನು ಶೋಧಿಸಬೇಕೆಂತಲೂ ಬೆದರಿಸಿದನು. ಇಷ್ಟಲ್ಲದೆ ತನಗೆ ಒಂದೆರಡು ರೂಪಾಯಿ ಲಂಚ ಕೊಟ್ಟರೆ ತಾನು ಅವುಗಳನ್ನು ಶೋಧನೆಮಾಡುವುದಿಲ್ಲವೆಂದು ತಿಳಿಸಿದನು. ಜನಗಳು ಇವನ ಮಾತಿನಲ್ಲಿ ಸಂಶಯವನ್ನು ಹೊಂದಿ ಪೋಲೀಸಿನವರಿಗೆ ತಿಳಿಸಲು ಅವರು ಇವನನ್ನು ಹಿಡಿದು ವಿಚಾರಣೆಗೆ ಗುರಿಮಾಡಿರುತ್ತಾರೆ.

* * *

ಲಾಹೋರ್ ಪಟ್ಟಣದಲ್ಲಿರುವ ಅಚ್ಚಿಸನ್ ಕಾಲೇಜ್ ಎಂಬ ರಾಜಕುಮಾರರ ವಿದ್ಯಾಶಾಲೆಯ ಆವರಣದಲ್ಲಿ ಹಿಂದೂ ದೇವಾಲಯವನ್ನು ಕಟ್ಟುವುದಕ್ಕೆ ಕಳೆದ ವಾರ ದರ್ಭಾಂಗದ ಮಹಾರಾಜಾ ಬಹದೂರ್‌ಯವರು ಅಸ್ತಿಭಾರ ಶಿಲೆಯನ್ನು ಹಾಕಿದರು. ಹಿಂದುಗಳೂ ಮಹಮ್ಮದೀಯರೂ ಸಿಕ್ಕರೂ ಆ ವಿದ್ಯಾಶಾಲೆಯಲ್ಲಿ ಕಲಿಯುತ್ತಾರೆ. ಮಹಮ್ಮದೀಯರಿಗೂ ಸಿಕ್ಕರಿಗೂ ದೇವಾಲಯಗಳು ಆ ಆವರಣದೊಳಗೆ ಇರುವವು. ಈಗ ಹಿಂದುಗಳಿಗೂ ಒಂದು ದೇವಸ್ಥಾನವು ಏರ್ಪಾಡಾಗುವುದು ತುಂಬಾ ಸಂತೋಷಕರವಾಗಿದೆ ಎಂದೂ, ಈಗ ಬಾಲಕರಿಗೆ ಭಕ್ತಿ ವಿಚಾರವನ್ನು ಪಾಠಶಾಲೆಗಳಲ್ಲಿ ಕಲಿಸಿಕೊಡದೆ ಇರೋಣದರಿಂದ ಅವರು ದುರ್ಮಾರ್ಗಗಳಿಗೆ ಬಿದ್ದು ಕೆಟ್ಟು ಹೋಗುವುದಕ್ಕೆ ಅವಕಾಶವುಂಟಾಗಿದೆ ಎಂದೂ, ಪ್ರಜೆಗಳೂ ಸರ್ಕಾರದವರೂ ಇನ್ನು ಮುಂದೆ ಈ ಲೋಪವನ್ನು ನಿವಾರಣೆ ಮಾಡಿಕೊಡಬೇಕೆಂದೂ ಮಹಾರಾಜರವರು ಆ ಸಮಯದಲ್ಲಿ ಉಪನ್ಯಾಸಮಾಡಿದರು.

* * *

ಕಲ್ಕತ್ತೆಯಲ್ಲಿರುವ ಮಹಮ್ಮದೀಯರ ಮದ್ರಸಾ ಎಂಬ ವಿದ್ಯಾಶಾಲೆಯ ಮುಖ್ಯೋಪಾಧ್ಯಾಯರಾದ ಡಾಕ್ಟರ್ ಡೆನಿಸನ್ ರಾಸ್‌ಯವರು ಆ ಪಟ್ಟಣದ ಒಂದು ಸರಸ್ವತೀ ಭಂಡಾರದಲ್ಲಿ ಸುಮಾರು ೧೦೦ ವರುಷಗಳ ಹಿಂದಿನ ವಿಷಯಗಳನ್ನು ತಿಳಿಸುವ ಬರವಣಿಗೆಯುಳ್ಳ ಒಂದು ಕಾಗದವನ್ನು ಕಂಡು ಹಿಡಿದಿರುತ್ತಾರೆ. ಹಂಗೇರೀ ರಾಜ್ಯದ ಸಿಸೋಮಡಿ ಕೋರಸ್ ಎಂಬೊಬ್ಬ ಪ್ರಜೆಯು ೧೮೨೨ನೇ ಇಸವಿಯಲ್ಲಿ ಯೂರೋಪ್ ಖಂಡದಿಂದ ಹೊರಟು ಏಷಿಯಾ ರಾಜ್ಯದ ಮೂಲಕ ಲಾಹೋರ್ ಪಟ್ಟಣಕ್ಕೆ ಕಾಲ್ನಡೆಯಲ್ಲೇ ಬಂದು, ಟಿಬೆಟ್ ರಾಜ್ಯದಲ್ಲೂ ಹಿಂದುಸ್ಥಾನದಲ್ಲೂ ಸಂಚಾರಮಾಡುತ್ತಿದ್ದು ೧೮೪೨ರಲ್ಲಿ ಡಾರ್ಜಿಲಿಂಗ್ ಪಟ್ಟಣದಲ್ಲಿ ಕಾಲವಾದನು. ಈತನು ತನ್ನ ಪ್ರಯಾಣದ ವೃತ್ತಾಂತವನ್ನೆಲ್ಲಾ ಈಗ ಸಿಕ್ಕಿರುವ ಕಾಗದದಲ್ಲಿ ಬರೆದಿರುತ್ತಾನೆ. ಇಂಥಾ ಪ್ರಾಚೀನಕಾಲದ ಕಾಗದವು ಸಿಕ್ಕಿರುವುದನ್ನು ಕೇಳಿ ಅನೇಕ ಚರಿತ್ರಕಾರರು ತುಂಬಾ ಸಂತೋಷಪಟ್ಟು, ಅದರಲ್ಲಿ ವಿವರಿಸಲ್ಪಟ್ಟಿರುವ ವಿಚಾರಗಳನ್ನು ತಿಳಿಯಬೇಕೆಂದು ಕುತೂಹಲಪಡುತ್ತಿದ್ದಾರೆ. ಡಾ॥ ರಾಸ್‌ಯವರು ಅದರ ವಿಷಯದಲ್ಲಿ ಉಪನ್ಯಾಸಮಾಡುವವರಾಗಿದ್ದಾರೆ.

* * *

ಕಳೆದ ೫ನೇ ತಾ ಬುಧವಾರ ತಿರುವಾಂಕೂರು (ಅನಂತಶಯನ) ಸಂಸ್ಥಾನದ ರಾಜಧಾನಿಯಾದ ತಿರುವನಂತಪುರದಲ್ಲಿ ವಿಕ್ಟೋರಿಯಾ ಜೂಬಿಲಿ ಟೌನ್ ಹಾಲ್ ಬಂಗಲೆಯೊಳಗೆ ಆರನೆಯ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಯಿತು. ಬ್ರಿಟಿಷ್ ರೆಸಿಡೆಂಟರವರೂ ಸಂಸ್ಥಾನದ ಮುಖ್ಯಾಧಿಕಾರಿಗಳೂ ಪ್ರಜಾಪ್ರತಿನಿಧಿಗಳೂ ಸಭೆಯಲ್ಲಿ ಹಾಜರಾಗಿದ್ದರು. ದಿವಾನರಾದ ಮೆ॥ ರಾಜಗೋಪಾಲಾಚಾರ್ಯರವರು ಸಂಸ್ಥಾನದ ಆದಾಯ ವ್ಯಯಗಳನ್ನೂ ಇತರ ಕಾರುಬಾರುಗಳನ್ನೂ ಕುರಿತ ಭಾಷಣವನ್ನು ಓದಿದರು. ಕಳೆದ ವರುಷ ಸಂಸ್ಥಾನದ ಹುಟ್ಟುವಳಿಯು ೧,೧೬,೯೮,೦೦೦ ರೂಪಾಯಿ, ಈ ಪೈಕಿ ೧,೧೧,೯೦,೦೦೦ ರೂಪಾಯಿ ಖರ್ಚಾಗಿ ೫,೦೮,೦೦೦ ರೂಪಾಯಿ ಶಿಲ್ಕು ಉಳಿಯಿತು. ಫಾರೆಸ್ಟ್ ಖಾತೆನಲ್ಲಿ ೨,೭೫,೦೦೦ ರೂಪಾಯಿಯೂ, ಉಪ್ಪಿನ ಮೇಲೆ, ಎಕ್ಸೈಸ್, ಸುಂಕ, ಈ ಬಾಬುಗಳಿಂದ ಹೋದ ವರುಷಕ್ಕಿಂತ ಹೆಚ್ಚಾಗಿ ೩,೯೧,೮೮೮ ರೂಪಾಯಿಯೂ ಹುಟ್ಟುವಳಿ ಆಗಿದೆ. ತಾಲ್ಲೂಕ್ ಅಮಲ್ದಾರರುಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ತಪ್ಪಿಸಿ, ಮುನ್ಸಿಫರುಗಳಿಗೆ ವಹಿಸುತ್ತಾ ಬಂದಿದ್ದಾರೆ. ಕಳೆದ ವರುಷ ನೀರಾವರಿ, ರಸ್ತೆ, ಸೇತುವೆ, ಕಟ್ಟಡಗಳು ಮುಂತಾದ ಕಾಮಗಾರಿಗಳಿಗೆ ಸರ್ಕಾರದವರು ೨೩,೭೯,೦೦೦ ರೂಪಾಯಿಯನ್ನು ಖರ್ಚು ಮಾಡಿದರು. ಈ ಪೈಕಿ ಕೊಚ್ಚಿಯಾರ್ ಕಾಲುವೆಯ ಕಾಮಗಾರಿಗೆ ಒಂದು ಲಕ್ಷ ರೂಪಾಯಿ ಖರ್ಚಾಯಿತು. ಕ್ವಿಲಾನ್‌ನಿಂದ ಸೆಂಗೋಟೆಗೆ ಹೋಗುವ ರೈಲಿನಿಂದ ಆಗುತ್ತಿರುವ ಉತ್ಪತ್ತಿಯು ಬಹಳ ಕಡಮೆ. ಅದಕ್ಕೆ ೧೧೮ ಲಕ್ಷ ರೂಪಾಯಿ ಖರ್ಚಾಗಿದೆ. ಕಳೆದ ವರುಷಕ್ಕೆ ೨ ರೂಪಾಯಿ ಕೂಡ ಬಡ್ಡಿ ಗಿಟ್ಟುವುದಿಲ್ಲ. ಈಗ ಈ ರೈಲ್ ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಜಮೀನುಗಳನ್ನು ಮಾಡಿ ಗ್ರಾಮಗಳನ್ನು ಕಲ್ಪಿಸಿದರೆ ರೈಲಿನ ಉತ್ಪತ್ತಿ ಹೆಚ್ಚಬಹುದೆಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಈ ರೈಲಿನ ಸಾಲವನ್ನು ತೀರಿಸುವುದಕ್ಕೆ ರಾಜಾದಾಯದಲ್ಲಿ ಪ್ರತಿ ವರುಷವೂ ೨ ಲಕ್ಷ ರೂಪಾಯಿನಂತೆ ತೆಗೆದಿಡಬಹುದೆಂದೂ, ಈ ಸಾಲ ತೀರಲು ೩೨ ವರುಷಗಳಾಗುವವೆಂದೂ ದಿವಾನರವರು ತಿಳಿಸಿದರು. ವಿದ್ಯಾಭ್ಯಾಸದ ಇಲಾಖೆಯಲ್ಲಿ ಹೊಸ ತಿದ್ದುಪಾಟುಗಳನ್ನು ರೂಢಿಸುತ್ತಿದ್ದಾರೆ. ಎಲ್ಲಾ ಪ್ರೈಮರಿ ಪಾಠಶಾಲೆಗಳಲ್ಲೂ ೧ರಿಂದ ೪ನೇ ತರಗತಿಯ ವರೆಗೆ ಸ್ಕೂಲ್ ಫೀಜನ್ನು ಮಾಫ್ ಮಾಡಿರುವರು.

ತಾಲ್ಲೂಕು ವರ್ತಮಾನಗಳು

ಮಂಡ್ಯ —ಈಚೆಗೆ ಇಲ್ಲಿ ಬೆಳೆಯು ಅಧಿಕವಾಗಿದೆ ರಾಗಿಯೂ ಭತ್ತವೂ ಕಟಾವಾಗಿರುತ್ತದೆ ರಾಗಿಯ ಧಾರಣೆ ಇನ್ನೂ ಇಳಿತರಕ್ಕೆ ಬಂದಿಲ್ಲ ಅಕ್ಕಿಯ ಧಾರಣೆ ಸ್ವಲ್ಪ ಮಟ್ಟಿಗೆ ಇಳಿದಿರುತ್ತದೆ —ನಮ್ಮ ಅಮಲ್ದಾರ್ ಮೆ|| ಬಿ ನಾರಾಯಣಾಚಾರ್ಯರು ಕೇವಲ ಗುಣಾಢ್ಯರೂ ಎಲ್ಲರ ವಿಶ್ವಾಸಕ್ಕೆ ಪಾತ್ರರಾದವರೂ ಆಗಿರುತ್ತಾರೆ ಇಂಥವರಿಗೆ ಅಪಾರವಾದ ವ್ಯಸನ ಪ್ರಾಪ್ತವಾದದ್ದಕ್ಕಾಗಿ ತುಂಬಾ ವಿಷಾದಿಸುತ್ತೇವೆ ಇವರ ಕುಮಾರ ಕೃಷ್ಣಸ್ವಾಮಿರಾವ್ ಎಂಬಾತನು ಕಳೆದ ಡಿಸೆಂಬರ್ ೨೭ನೇ ತಾ ರಾತ್ರಿ ದೈವಾಧೀನನಾದನು ಇವನು ಮಿಷನ್ ಸ್ಕೂಲಿನಲ್ಲಿ ಬಾಲಕರ ಅಭಿವೃದ್ಧಿಗಾಗಿ ನಡಿಸಲ್ಪಡುವ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವದ ಸಮಯದಲ್ಲಿ ಉತ್ತಮವಾದ ಬಹುಮಾನವನ್ನು ಸಂಪಾದಿಸಿದ್ದನು —ಇಲ್ಲಿ ಜೂಜಾಟವು ದಿನೇ ದಿನೇ ಹೆಚ್ಚುತ್ತಲಿದೆ ಈ ವಿಷಯ ಪೋಲೀಸಿನವರಿಗೆ ತಿಳಿಸಿದಾಗ್ಯೂ ಗ್ಯಾಂಬ್ಲಿಂಗ್ ಆಕ್ಟು ಇನ್ನೂ ಜಾರಿಗೆ ಬಂದಿಲ್ಲವೆಂದು ಹೇಳುತ್ತಾರೆ ಸರ್ಕಾರದವರು ಇಂಥಾ ಆಟಗಳನ್ನು ನಿಲ್ಲಿಸುವದಕ್ಕೆ ಕೂಡಲೆ ತಕ್ಕ ಏರ್ಪಾಡು ಮಾಡುವದು ಬಹಳ ಅವಶ್ಯ —ಇಲ್ಲಿನ ಮಿಷನ್ ಎ ವಿ ಸ್ಕೂಲಿನಲ್ಲಿ ಕಳೆದ ವರುಷ ೩ ಜನ ವಿದ್ಯಾರ್ಥಿಗಳು ಲೋವರ್ ಸೆಕೆಂಡರಿ ಪರೀಕ್ಷೆಗೆ ಕಳುಹಿಸಿದ್ದರು ಇವರಲ್ಲಿ ಇಬ್ಬರಿಗೆ ತೇರ್ಗಡೆಯಾಗಿ ಒಬ್ಬನಿಗೆ ಫಸ್ಟ್‌ಕ್ಲಾಸಿನಲ್ಲಾಯಿತು ಇಂತಹ ಉತ್ತಮವಾದ ಫಲಿತಾಂಶವನ್ನು ಇದುವರೆಗೂ ಬಂದಿರಲಿಲ್ಲ ಈಗಿನ ಕಾಲಕ್ಕೆ ಅತ್ಯವಶ್ಯಕವಾದ ಇಂಗ್ಲೀಷ್ ಭಾಷೆಯನ್ನು ಅಭ್ಯಾಸ ಮಾಡಲು ಈ ಸ್ಥಳದಲ್ಲಿ ಮೊದಲಿಗಿಂತಲೂ ಅತಿಶಯವಾದ ಅನುಕೂಲವಿರುವದು ಇದರಿಂದ ವ್ಯಕ್ತವಾಗಿರುತ್ತದೆ ಇಂಗ್ಲೀಷ್ ಓದುವದಕ್ಕೆ ಅನುಕೂಲ ಇದ್ದಾಗ್ಯೂ ಅನೇಕ ವಿದ್ಯಾರ್ಥಿಗಳು ಇನ್ನೂ ವೃಥಾ ಕಾಲ ಕಳೆಯುತ್ತಾರೆ

ಆನೇಕಲ್ಲು —ಕಳೆದ ಡಿಸೆಂಬರ್ ಮಾಹೆಯಲ್ಲಿ ಕಸಬಾ ಲಂಡನ್ ಮಿಷನ್ ಎ ವಿ ಸ್ಕೂಲಿನಲ್ಲಿ ಬಾಲಕ ಬಾಲಕಿಯರಿಗೆ ಇನಾಂ ಕೊಡಲ್ಪಟ್ಟಿತು ಆ ಕಾಲದಲ್ಲಿ ಈ ಊರಿನ ದೊಡ್ಡ ಮನುಷ್ಯರೂ ವಿಶಿಷ್ಟ ಸರ್ಕಾರಿ ನೌಕರರೂ ಸೇರಿದ್ದರು ಈ ಸ್ಕೂಲಿನ ಪ್ರಿನ್ಸಿಪಲ್‌ರಾದ ರೆವ್ ಜಿ ವಿಲ್ಕಿನ್ಸ್ ಸಾಹೇಬರವರು, ರೆವ್ ಜಿ ಮಾಥರ್ಸ್, ರೆವ್ ಶಾರ್ಪ್, ರೆವ್ ಸ್ಟೀವೆಲ್ ಸಾಹೇಬರುಗಳ ಸಂಗಡ ದಯಮಾಡಿಸಿದ್ದರು ಅಮಲ್ದಾರ್ ಮೆ|| ನಾರಾಯಣಸ್ವಾಮಿಯಂಗಾರ್ಯರವರು ಅಗ್ರಾಸನವನ್ನಲಂಕರಿಸಿದ್ದರು ಸ್ಕೂಲ್ ಮಾಸ್ಟರ್ ರಾಮಸ್ವಾಮಿಯಂಗಾರ್ಯರಿಂದ ಅಗ್ರಾಸನಾಧಿಪತಿಗಳ ವಿಷಯವಾಗಿಯೂ ಸಾಹೇಬರುಗಳ ವಿಷಯವಾಗಿಯೂ ನೂತನವಾಗಿ ರಚಿಸಲ್ಪಟ್ಟಿದ್ದ ಸಂಗೀತವು ಬಾಲಕರಿಂದ ಹಾಡಲ್ಪಟ್ಟಿತು ಮೆ|| ವಾ|| ಶ್ರೀನಿವಾಸಯಂಗಾರ್ಯರ ರಿಪೋರ್ಟಿನ ಮೂಲಕ ಸ್ಕೂಲಿನ ಸ್ಥಿತಿಯು ಸಮಸ್ತ ಸಭಾಸದರಿಗೂ ವಿಶದವಾಯಿತು ಅಗ್ರಾಸನಾಧಿಪತಿಗಳು ಬಾಲಕರಿಗೆ ಇನಾಂ ಕೊಟ್ಟ ತರುವಾಯ ತಮ್ಮ ಉಪನ್ಯಾಸದಿಂದ ಸರ್ವರ ಮನಸ್ಸನ್ನೂ ಸಂತೋಷಪಡಿಸಿದರು ತರುವಾಯ ಸಭಾಸ್ಥರು ಪುಷ್ಪ ಹಾರಗಳನ್ನು ಸ್ವೀಕರಿಸಲು ಬಾಲಕರಿಂದ ಮಹಾರಾಜರವರ ಮೇಲೆ ಮಂಗಳವು ಹಾಡಲ್ಪಟ್ಟಿತು ಸಭೆಯು ಬರಖಾಸ್ತಾಯಿತು —ಡಿಸೆಂಬರ್ ತಾ ೨೯ ನೇ ಬುಧವಾರ ಶ್ರೀ ಕೃಷ್ಣವಿಲಾಸ್ ರೀಡಿಂಗ್ ರೂಮಿನ ೩ ನೇ ವರ್ಷ ವರ್ಧಂತಿಯು ನೆರವೇರಿಸಲ್ಪಟ್ಟಿತು ಅಮಲ್ದಾರ್ರವರೇ ಮೊದಲಾದ ಸಮಸ್ತ ಸರ್ಕಾರಿ ನೌಕರರೂ ದೊಡ್ಡ ಮನುಷ್ಯರೂ ಹಾಜರಾಗಿದ್ದರು ಮೆ। ತ್ಯಾಗರಾಜೈಯರ್, ಅಸಿಸ್ಟಂಟ್ ಕಮಿಷನ್ ಸಾಹೇಬರವರು ಅಗ್ರಾಸನವನ್ನಲಂಕರಿಸಿದ್ದರು ಮೆ। ಸುಬ್ಬರಾಯಶಾಸ್ತ್ರಿಗಳು ರೀಡಿಂಗ್ ರೂಂಗಳನ್ನು ಏರ್ಪಡಿಸಿಕೊಳ್ಳುವುದರಿಂದ ಜನರಿಗೆ ಉಂಟಾಗತಕ್ಕ ಉಪಯುಕ್ತಾಂಶವನ್ನು ಉಪನ್ಯಾಸಮಾಡಿದರು ಅಗ್ರಾಸನಾಧಿಪತಿಗಳು ತಮ್ಮ ಉಪನ್ಯಾಸವನ್ನು ಮುಗಿಸಿದ ಕೂಡಲೆ ಈ ರೀಡಿಂಗ್‌ರೂಮಿನ ಪುಸ್ತಕ ಭಂಡಾರಕ್ಕೆ ತಮ್ಮ ಕೈಲಾದಮಟ್ಟಿಗೂ ಸಹಾಯ ಮಾಡಲು ವಾಗ್ದಾನ ಮಾಡಿದರು ಅನಂತರ ಸಭಾಸದರೆಲ್ಲರೂ ಪುಷ್ಪ ಗಂಧ ತಾಂಬೂಲಾದಿಗಳನ್ನು ಸ್ವೀಕರಿಸಿ ತಮ್ಮ ತಮ್ಮ ಭವನಗಳಿಗೆ ತೆರಳಿದರು —ಅಸಿಸ್ಟಂಟ್ ಕಮಿಷನರ್ ಮೆ। ತ್ಯಾಗರಾಜಯ್ಯರವರು ಗ್ರಿ| ಸ್ಕೂಲ್ ಬಾಲಕರಿಗೂ, ಯಲ್ ಯಂ ಎ ವಿ ಸ್ಕೂಲ್ ಬಾಲಕರಿಗೂ ಅಂಗಸಾಧನೆಗೆ ಅನುಕೂಲವಾದ ಕ್ರಿಕೆಟ್ ಚಂಡಾಟದ ಸಾಮಾನನ್ನು ಕೊಡಿಸುವಂತೆ ಅಪ್ಪಣೆ ಕೊಟ್ಟು ದಯಮಾಡಿಸಿದರು

ಚನ್ನಪಟ್ಟಣ —ಇಲ್ಲಿ ಒಂದು ತಿಂಗಳಿಂದಲೂ ಇಲಿಗಳು ಸಾಯಲಿಕ್ಕೆ ಪ್ರಾರಂಭಿಸಿ, ಕಳೆದ ವಾರ ಒಂದೇ ಮನೆಯಲ್ಲಿ ೫ ಜನರು ಪ್ಲೇಗಿನಿಂದ ಮೃತಪಟ್ಟರು ಅಲ್ಲದೆ ಬೇರೆ ಬೇರೆ ಕಡೆಗಳಲ್ಲೂ ಮೂರು ನಾಲ್ಕು ಮರಣಗಳಾಗಿರುವಂತೆ ತಿಳಿದುಬಂದಿದೆ ಅಂತು ಊರಿನ ಬೇರೆ ಬೇರೆ ಭಾಗಗಳಲ್ಲಿ ಇಲಿಗಳು ಸಾಯುತ್ತಿರುವವು ಜನರು ಮನೆಯಿಂದ ಮನೆಗೆ ಬದಲಾಯಿಸುತ್ತಿರುವರು ಒಂದೆರಡು ಕುಟುಂಬದವರು ಗ್ರಾಮಾಂತ್ರ ಸೇರಿರುವದಾಗಿಯೂ ಗೊತ್ತಾಗುತ್ತೆ ಪ್ಲೇಗ್ ಸಿರಮು ಹಾಕಿಸಿಕೊಳ್ಳುವದಕ್ಕಾಗಿ ಸೀನಿಯರ್ ಸರ್ಜನ್ ರವರ ಆಫೀಸಿಗೆ ಅರ್ಜಿ ಬರೆದು ಕೇಳಿಕೊಳ್ಳಲಾಗಿದೆ ಪ್ರಾಯಶಃ ಒಂದೆರಡು ದಿನಗಳಲ್ಲೇ ಡಿಸ್ಟ್ರಿಕ್ಟ್ ಸರ್ಜನ್‌ರವರು ಸಿರಮು ಹಾಕಲಿಕ್ಕಾಗಿ ಬರಬಹುದು ನಮ್ಮ ಊರಿನವರೆಲ್ಲರೂ ಅನುಮಾನಪಡದೆ ಈ ಸಿರಮನ್ನು ಹಾಕಿಸಿಕೊಂಡಾರು ಇದರಿಂದ ಬಡಬಗ್ಗರು ಮನೆಮಾರು ಬಿಟ್ಟು ಗುಡಿಸಲ ವಾಸಮಾಡಬೇಕಾದ ಅಗತ್ಯವೂ ಕಷ್ಟವೂ ತಪ್ಪುವದು —ನಮ್ಮ ಅಮಲ್ದಾರ್ ಮೆ|| ಕುಪ್ಪುಸ್ವಾಮಿಯಂಗಾರ್ಯರಿಗೆ ವರ್ಗವಾಯಿತು ಇವರು ಬಂದು ಮೂರು ತಿಂಗಳು ಮಾತ್ರವೇ ಆದರೂ ಒಳ್ಳೆಯವರೂ ಬಹು ನಿಧಾನಿಗಳೂ ನ್ಯಾಯನಿಷ್ಠರುಗಳೂ ಆಗಿದ್ದು ಅಪರಾಧಿಗಳನ್ನು ಸಾವಕಾಶಕ್ಕೆ ಬಿಡದೆ ಶಿಕ್ಷೆ ವಿಧಿಸುತ್ತಾ ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾದರು ಇವರು ಅ|| ಕಮಿಷನರ್ ದರ್ಜೆಗೆ ಪ್ರಮೋಷನ್ ಹೊಂದಿ ಪಕ್ಕದ ಕ್ಲೋಸ್‌ಪೇಟೆಯ ಸಬ್ ಡಿವಿಜನ್ ಛಾರ್ಜು ವಹಿಸಲು ನೆನ್ನೆ ಪ್ರಯಾಣ ಬೆಳಸಿದರು —ಇಲ್ಲಿನ ಮೆಡಿಕಲ್ ಆಫೀಸರಾದ ಮೆ| ವಿ ಪಿ ಚಿದಂಬರಂ ಪಿಳ್ಳೆಯವರೂ ಸಹಾ ಮೈಸೂರಿಗೆ ವರ್ಗವಾಗಿರುವದಾಗಿ ತಿಳಿದುಬಂದಿದೆ ಇವರೂ ಗುಣಾಢ್ಯರೂ ಸಂಭಾಷಿಗಳೂ ಆಗಿದ್ದು ಅನೇಕರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು ಇವರು ಈ ಸ್ಥಳ ಬಿಟ್ಟು ಹೋಗುವದು ವ್ಯಸನವೇ ಸರಿ —ಊರಿನಲ್ಲಿ ಸೀತಾಳ ಸಿಡುಬೂ ಸಹಾ ಉಂಟು —ಈ ಟೌನಿಗೆ ಸೇರಿದ ಎತ್ತಿಕೇರಿಯು ತುಂಟರ ತವರುಮನೆ ಆಗಿರುವಂತೆ ತೋರುತ್ತೆ ಆ ಭಾಗದಲ್ಲಿ ಆಗಾಗ್ಗೆ ಕಳುವು ದೊಂಬಿ, ಅಕ್ರಮ ಕಲಹಗಳು ಪದೇ ಪದೇ ಸರ್ಕಾರಕ್ಕೆ ದಾಖಲಾಗುತ್ತಲೇ ಇರುವವು ಕೆಲವು ಜನರು ತಂಗಿನಕಾಯಿ ಕಿತ್ತು ಮೋಕದ್ದಮೆಗೆ ಸಿಕ್ಕಿ ಜುಲ್ಮಾನೆ ಹೊಂದಿದರು ಕೆಲವರು ಸಜಾ ಅನುಭವಿಸಲಿಕ್ಕೆ ಹೋಗಿರುವರು ಆದರೂ ಗೊಂಡಮುಡುವು ಎಂಬ ಹೆಸರಿಗೆ ಸರಿಯಾಗಿ ಅದರಲ್ಲಿ ಭಯಂಕರ ಕೃತ್ಯಗಳು ಅಡಗಿರುವವು ಸರ್ಕಾರದವರ ದೃಷ್ಟಿಯು ಆ ಭಾಗದವರ ಮೇಲೆ ವಿಶೇಷವಾಗಿ ಇರುವದೆಂದು ನಿವೇದನೆ ಇಲ್ಲವಾದರೆ ಮಹದನರ್ಥಗಳ ಮಡುವೇ ಆದೀತು

ಹಾಸನ —ಇಲ್ಲಿ ಚಳಿಯ ಝಳವು ಈಗ್ಗೆ ೨೦ ೨೫ ದಿವಸಗಳಿಂದ ಜೋರಾಗುತ್ತಾ ಬಂದಿದೆ ಈ ಪ್ರಾಂತ್ಯ ಎಷ್ಟು ಮಳೆ ಬೆಳೆಗಳಾಗಿದ್ದರೂ ಧಾರಣೆ ವಾಸಿಗಳು ಇಳಿಯಲೇ ಇಲ್ಲ ಈ ತಿಂಗಳ ೬ ೭ ರಲ್ಲಿ ನಡೆದ ದನಗಳ ಪ್ರದರ್ಶನವು ಇಲ್ಲಿನ ರೈತಾಪಿ ಜನಗಳಿಗೆ ಬಹಳ ಉತ್ಸಾಹವನ್ನುಂಟುಮಾಡಿತು ಈ ಪ್ರದರ್ಶನವು ೫ ನೇ ತಾ ಬುಧವಾರ ಪ್ರಾರಂಭವಾಗಿ ೮ ನೇ ತಾ ಶನಿವಾರ ಮುಕ್ತಾಯವಾಯಿತು ಗೌರ್ನಮೆಂಟಿನವರು ಈ ರೀತಿ ರೈತರಿಗೆ ಪ್ರೋತ್ಸಾಹವನ್ನು ಕೊಟ್ಟದ್ದು ತುಂಬಾ ಸ್ತೋತ್ರಾರ್ಹವಾಗಿದೆ ಈ ಪ್ರದರ್ಶನಕ್ಕೆ ಸುಮಾರು ಎರಡು ಮೂರು ಸಾವಿರ ದನಗಳು ಬಂದಿದ್ದವು ಸುಮಾರು ಹತ್ತು ಸಾವಿರದ ವರೆಗೂ ಜನಗಳು ಸೇರಿದ್ದರು ಈ ಪ್ರದರ್ಶನೋತ್ಸವದಲ್ಲಿ ಸಾಧಾರಣವಾಗಿ ಎಂಟು ಒಂಭತ್ತು ಸಾವಿರ ರೂಪಾಯಿಗಳ ವ್ಯಾಪಾರವು ನಡೆದಿದೆ ಈ ಪ್ರದರ್ಶನಕ್ಕೆ ಬಂದಿದ್ದ ಉತ್ಕೃಷ್ಟವಾದ ದನಗಳಿಗೆ ಬಹುಮಾನಗಳು ದೊರಕಿದವು ಇದೇ ರೀತಿ ಪ್ರತಿ ವರ್ಷವೂ ಈ ಪ್ರದರ್ಶನವನ್ನು ನಡೆಯಿಸುತ್ತಾರೆಂದು ನಾವುಗಳೆಲ್ಲರೂ ನಂಬಿರುತ್ತೇವೆ —ಈ ಪ್ರದರ್ಶನದಲ್ಲಿ ಒಂದು ತೇರನ್ನು ತಯಾರುಮಾಡಿಸಿ ದೇವರ ಉತ್ಸವವನ್ನು ಮಾಡಿಸುವುದಲ್ಲದೆ ಈ ಜಾತ್ರೆಯನ್ನು ಎಂಟು ದಿವಸಗಳ ವರೆಗೆ ನಡೆಯಿಸುವುದರಿಂದ ಇನ್ನೂ ಹೆಚ್ಚಾಗಿ ವ್ಯಾಪಾರಾಭಿವೃದ್ಧಿಯಾಗುವುದಲ್ಲದೆ, ಊರು ಇನ್ನೂ ಬಹಳ ಅಭಿವೃದ್ಧಿ ಸ್ಥಿತಿಗೆ ಬರಲು ಏನೂ ಸಂದೇಹವಿಲ್ಲ ಈ ಪ್ರದರ್ಶನವು ಇನ್ನೂ ಅನೇಕ ಜನಗಳಿಗೆ ಪರಿಚಯವಿಲ್ಲವಾದದ್ದರಿಂದ ಈ ಜಾತ್ರೆಗೆ ಇನ್ನೂ ಹೆಚ್ಚಾಗಿ ಜನಗಳು ಸೇರುವುದಕ್ಕೆ ಅವಕಾಶವಾಗಲಿಲ್ಲ ಇದೂ ಅಲ್ಲದೆ ಇಲ್ಲಿನ ರೈತರುಗಳು ಎಂದೂ ಕಾಣದೆ ಇರುವ ರಾಗಿಯನ್ನೂ, ಬತ್ತವನ್ನೂ, ಒಕ್ಕುವ ಯಂತ್ರವನ್ನೂ, ಜೋಳದ ಕಡ್ಡಿಯನ್ನು ಕತ್ತರಿಸುವ ಯಂತ್ರವನ್ನೂ, ಸೀಮೆ ಕಬ್ಬಿಣದ ನೇಗಿಲುಗಳನ್ನೂ ಸರ್ಕಾರದವರು ರೈತಾಪಿ ಜನಗಳಿಗೆ ತರಿಸಿ ಅವುಗಳ ಉಪಯೋಗಿಸುವ ವಿಧಾನವನ್ನು ತೋರಿಸಿದ್ದರಿಂದ ಇನ್ನೂ ಉತ್ಸಾಹವು ಹೆಚ್ಚಾಯಿತು —ಇಲ್ಲಿನ ಮಿಷನ್ ಆಸ್ಪತ್ರೆಯಲ್ಲಿ ಈಗತಾನೆ ಸೀಮೆಯಿಂದ ಬಂದು ಕೆಲಸ ಮಾಡುತ್ತಿರುವ ಮಿಸ್ ಪಾರ್ಕರ್ ಎಂಬ ದೊರೆಸಾನಿಯು ಬಹಳ ಮುತುವರ್ಜಿಯಿಂದ ರೋಗಿಗಳಿಗೆ ಚಿಕಿತ್ಸೆ ಮಾಡುವುದರಿಂದ ಅನೇಕ ಜನರು ಗುಣಹೊಂದಿದಾರೆ ಆದ್ದರಿಂದ ರೋಗವುಳ್ಳ ಯಾವ ಹೆಂಗಸೇ ಆಗಲಿ ಹುಡುಗರೇ ಆಗಲಿ ಅಲ್ಲಿಗೆ ಹೋಗುವರೆಂದು ನಂಬಿದ್ದೇನೆ ಮೇಲೆ ಹೇಳಿದ ಪ್ರದರ್ಶನದಲ್ಲಿ ನಮ್ಮ ಅಮಲ್ದಾರ್ ಮೆ|| ಅಪ್ಪಣ್ಣಯ್ಯಂಗಾರ್ರವರು ಬಹಳ ಮುತುವರ್ಜಿಯಿಂದ ಎಲ್ಲಾ ಕೆಲಸಗಳನ್ನೂ ಮಾಡಿಸಿದ್ದರಿಂದ ಅವರನ್ನು ಕೊಂಡಾಡುತ್ತಿದಾರೆ ಇದೂ ಅಲ್ಲದೆ ಎಂಟು ತಾಲ್ಲೋಕುಗಳ ಅಮಲ್ದಾರರುಗಳೂ ಈ ಪ್ರದರ್ಶನಕ್ಕೆ ಹಾಜರಾಗಿದ್ದರು ಇವರುಗಳೆಲ್ಲರೂ ಬಹಳ ಮುತುವರ್ಜಿಯಿಂದ ಕೆಲಸವನ್ನು ನಡಿಸಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇನೆ

ವಿದೇಶ ವರ್ತಮಾನಗಳು

ಜರ್ಮನಿ ರಾಜ್ಯದಲ್ಲಿ ಒಟ್ಟು ೬,೧೫,೯೯೯ ಯುದ್ಧಭಟರು ಇರುತ್ತಾರೆ ಈ ಪೈಕಿ ಹುದ್ದೇದಾರರು ೨೫ ೪೩೪ ಮಂದಿ ಸೈನ್ಯದಲ್ಲಿ ಒಟ್ಟು ೧,೦೪,೧೮೨ ಕುದುರೆಗಳಿರುತ್ತವೆ

ಡಾ|| ಲಡ್‌ವಿಗ್ ಮಾಂಡ್ ಎಂಬ ಧರ್ಮಾತ್ಮನು ತನ್ನ ಆಸ್ತಿಯಿಂದ ೭|| ಲಕ್ಷ ರೂಪಾಯನ್ನು ಪರೋಪಕಾರ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾನೆ

ಯೂರೋಪ್ ಖಂಡದ ದಕ್ಷಿಣಭಾಗದಲ್ಲಿರುವ ಇಟಲಿ ರಾಜ್ಯದಲ್ಲಿ ಮೆಸ್ಸೀನಾ, ಕೆಲೇಬ್ರಿಯಾ ಎಂಬ ಸ್ಥಳಗಳಲ್ಲಿ ಕಳೆದ ವಾರ ಮತ್ತೆ ಭೂಕಂಪಗಳಾದವು ದೇವರ ದಯದಿಂದ ಕಷ್ಟನಷ್ಟಗಳೇನೂ ಸಂಭವಿಸಲಿಲ್ಲ

ಫ್ರಾನ್ಸಿನಲ್ಲಿ ಎಂ ಲಾಥಾಂ ಎಂಬ ಕಾರೇಗಾರನು ಮೌರ್ಮೆಲಾನ್ ಎಂಬ ರಾಜ್ಯದಲ್ಲಿ ತನ್ನ ವಿಮಾನಯಂತ್ರದಲ್ಲಿ ಕುಳಿತು ಭೂಮಿಯ ಮೇಲೆ ೧,೧೦೦ ಗಜಗಳ ವರೆಗೆ ಹಾರಿ ಹೋಗಿ ಅಂತರಿಕ್ಷದಲ್ಲಿ ಸಂಚರಿಸಿಕೊಂಡು ಬಂದು ಇಳಿದಿರುತ್ತಾನೆ

ವಿಲಾಯತಿ ರಾಜ್ಯದ ರಾಜಕುಮಾರರಾದ ಆಲ್ಬರ್ಟ್ ಮತ್ತು ಎಡ್ವರ್ಡರವರು ಪರಿವಾರ ಸಹಿತ ೧೯೧೧ ನೇ ಇಸವಿಯಲ್ಲಿ ವಿಲಾಯತಿಯಿಂದ ಹೊರಟು, ಇಂಗ್ಲಿಷ್ ರಾಜ್ಯಾಂಗಗಳಲ್ಲೆಲ್ಲಾ ಸಂಚಾರ ಮಾಡಿಕೊಂಡು ಬರುವವರಾಗಿದಾರೆಂದು ಪ್ರಕಟವಾಗಿದೆ

ಫ್ರಾನ್ಸ್ ಸಂಸ್ಥಾನಕ್ಕೆ ಸೇರಿದ ಬೋರ್ಡೋ ಪಟ್ಟಣದಲ್ಲಿ ಡಿಲಾಗ್ರಾಂಜ ಎಂಬೊಬ್ಬ ಕಾರೇಗಾರನು ತನ್ನ ವಿಮಾನದಲ್ಲಿ ಕುಳಿತು ಸಂಚಾರ ಮಾಡುತ್ತಿದ್ದಾಗ ಕಳೆದ ವಾರ ಬಹಳ ಮೇಲಿನಿಂದ ವಿಮಾನಸಹಿತವಾಗಿ ಭೂಮಿಯ ಮೇಲೆ ಬಿದ್ದು ಅಪ್ಪಚ್ಚಿಯಾಗಿ ಮೃತಪಟ್ಟನು

ದಕ್ಷಿಣ ಧ್ರುವ ಪ್ರಾಂತ್ಯದಲ್ಲಿ ಸಂಚಾರಮಾಡಿ ಅಲ್ಲಿನ ಸ್ಥಿತಿಗತಿಗಳನ್ನು ತಿಳಿದು ಬರುವುದಕ್ಕಾಗಿ ಕ್ಯಾಪ್ಟನ್ ಸ್ಕಾಟ್ ಎಂಬಾತನು ಚಂದಾ ಕೂಡಿಸುತ್ತಿದಾನೆ ಈ ಇಂಗ್ಲಿಷ್ ಸಾಹಸಿಗೆ ವಿಲಾಯತಿ ಗೌವರ್ನ್‌ಮೆಂಟಿನವರು ಮೂರು ಲಕ್ಷ ರೂಪಾಯಿ ಸಹಾಯ ದ್ರವ್ಯವನ್ನು ಕೊಡಿಸಿರುತ್ತಾರೆ

ಫ್ರಾನ್ಸ್ ಸಂಸ್ಥಾನದವರು ಅಲ್ಲಿಗೆ ಅನ್ಯ ರಾಜ್ಯಗಳಿಂದ ರಫ್ತಾಗಿ ಬರುವ ವ್ಯಾಪಾರ ಪದಾರ್ಥಗಳ ಮೇಲೆ ಸುಂಕವನ್ನು ಜಾಸ್ತಿಯಾಗಿ ತೀರ್ಮಾನ ಮಾಡಿದಾರೆ ಇದರಿಂದ ಜರ್ಮನಿ ರಾಜ್ಯದ ವರ್ತಕರಿಗೂ ಕಾರೇಗಾರರಿಗೂ ತಮ್ಮ ಪದಾರ್ಥಗಳು ಫ್ರಾನ್ಸಿನಲ್ಲಿ ಬಿಕರಿ ಆಗದಂತೆ ನಷ್ಟವಾಗುವುದೆಂದು ಚಿಂತೆಯುಂಟಾಗಿದೆ

ದಕ್ಷಿಣ ಅಮೇರಿಕಕ್ಕೆ ಸೇರಿದ ಬ್ರೆಜಿಲ್ ಎಂಬ ಸ್ವತಂತ್ರ ಪ್ರಜಾಪ್ರಭುತ್ವದಲ್ಲಿ ಭಂಗಾರವು ಕೆಲವು ಕಡೆಗಳಲ್ಲಿ ಸಿಕ್ಕುತ್ತದೆ ಈಗ ಲಾವ್ರಾಸ್, ಅರೋರಾ ಮೊದಲಾದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಗಣಿಗಳನ್ನು ತೋಡಿ ಪರೀಕ್ಷೆ ಮಾಡುತ್ತಿದಾರೆ ಅಲ್ಲಿ ಬಹು ಅಪೂರ್ವವಾದ ಭಂಗಾರವು ಅಪಾರವಾಗಿ ದೊರಕುವುದೆಂದು ತಿಳಿದು ಬಂದಿದೆ

ಗ್ರೀಸ್ ರಾಜ್ಯದ ರಾಜಧಾನಿಯಾದ ಅಥೆನ್ಸ್ ಪಟ್ಟಣದಲ್ಲಿ ಕಳೆದವಾರ ಅರಮನೆಗೆ ಬೆಂಕಿ ಬಿದ್ದು ಎರಡು ಅಂತಸ್ತು ಸುಟ್ಟುಹೋಯಿತು ಸೈನಿಕರು ಸೇರಿ ಬೇಗನೆ ಬೆಂಕಿಯನ್ನು ಆರಿಸಿದರು ಪ್ರಾಣ ನಷ್ಟವೇನೂ ಸಂಭವಿಸಲಿಲ್ಲ ದೊರೆಯವರು ಆ ಸಮಯದಲ್ಲಿ ಇನ್ನೊಂದು ಊರಿನಲ್ಲಿದ್ದು ಈ ವರ್ತಮಾನ ತಲಪಿದ ಕೂಡಲೇ ವಾಪಸು ಬಂದರು

ಆಫ್ರಿಕದ ಉತ್ತರ ಪಾರ್ಶ್ವದಲ್ಲಿರುವ ಸೊಮಾಲಿಲ್ಯಾಂಡಿನಲ್ಲಿ ಇಂಗ್ಲಿಷ್ ಸೈನ್ಯವನ್ನು ಬೂರಾಸ್ ಎಂಬ ರಾಜ್ಯಕ್ಕೆ ಕಳುಹಿಸಿದರು ಹರ್ಗೇಸಿಯಾ ಎಂಬ ರಾಜ್ಯದಲ್ಲೂ ಕೆಲವು ಸೈನ್ಯವನ್ನು ಇಟ್ಟಿದಾರೆ ಆ ಪ್ರಾಂತ್ಯದಲ್ಲಿರುವ ಅಬ್ಸೀನಿಯಾ ಜನರಿಗೂ ದೇಶೀಯ ಕುಲಸ್ಥರಿಗೂ ಮನಸ್ತಾಪಗಳುಂಟಾಗಿರೋದರಿಂದ ಇಂಗ್ಲಿಷ್ ಸೈನ್ಯಗಳು ಆ ಕುಲಸ್ಥರ ಸಂರಕ್ಷಣೆಗಾಗಿ ಕಳುಹಲ್ಪಟ್ಟಿರುವವು

ಐರಿಷ್ ಕಡಲು ಕಾಲುವೆಯಲ್ಲಿ ದಕ್ಷಿಣ ಆಫ್ರಿಕಕ್ಕೂ ಆಸ್ಟ್ರೇಲಿಯಕ್ಕೂ ೨೦೦ ಜನ ಪ್ರಯಾಣಸ್ಥರನ್ನು ಕೂಡಿಸಿ ಕರೆದುಕೊಂಡು ಹೋಗುತ್ತಿದ್ದ ಎರ್ ಸ್ಪೈರ್ ಎಂಬ ಹಡಗು ಇನ್ನೊಂದು ಹಡಗಿಗೆ ಬಡಿದು ಒಡೆದುಹೋಯಿತು ಹದಿಮೂರು ಜನರು ಸಮುದ್ರದ ಪಾಲಾದರು ಇವರೆಲ್ಲಾ ಆ ಹಡಗಿನಲ್ಲಿ ಕೆಲಸ ಮಾಡುತ್ತಿದ್ದವರೆಂದೂ, ಪ್ರಯಾಣಸ್ಥರೆಲ್ಲಾ ಬದುಕಿಕೊಂಡರೆಂದೂ ತಿಳಿದು ಬಂದಿದೆ

ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಸ್ತ್ರೀಯರ ಸಮಾಜವೊಂದು ನಡೆಯಿತು ಹೆಣ್ಣು ಮಕ್ಕಳಿಗೆ ಚಿಕ್ಕಂದಿನಲ್ಲಿ ಕೆಲವು ವರುಷಗಳ ತನಕ ಬಲಾತ್ಕಾರ ಮಾಡಿ ಮನೆಗಳಲ್ಲಿ ಕಸ ಮುಸರೆ ಅಡಿಗೆ ಮುಂತಾದ ಕೆಲಸಗಳನ್ನು ಕಲಿಸಬೇಕೆಂದು ಈ ಸಮಾಜದವರು ತೀರ್ಮಾನ ಮಾಡಿದರು ಗವರ್ನ್‌ಮೆಂಟಿನವರು ಅದೇ ರೀತಿ ಒಂದು ಕಾನೂನನ್ನು ಮಾಡಿ ರಾಜ್ಯದಲ್ಲೆಲ್ಲಾ ಜಾರಿಗೆ ತರುವವರಾಗಿದಾರೆಂದು ತಿಳಿದು ಬಂದಿದೆ

ಕಳೆದ ವಾರ ಎಂ ಸಾಂಟೋಸ್ ಡ್ಯೂಮೋ ಎಂಬ ಕಾರೇಗಾರನು ಸೆಂಟ್ ಸೈರ್ ಎಂಬ ಸ್ಥಳದಲ್ಲಿ ತನ್ನ ವಿಮಾನ ಯಂತ್ರದಲ್ಲಿ ಕುಳಿತು ಭೂಮಿಯಿಂದ ೮೦ ಅಡಿ ಮೇಲಕ್ಕೆ ಹಾರಿಹೋಗಿ ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದಾಗ ಆ ಯಂತ್ರವು ಅಕಸ್ಮಾತ್ತಾಗಿ ಕಳಚಿಕೊಂಡು ಬೀಳುತ್ತಿತ್ತು ಕಾರೇಗಾರನು ಸಾವಧಾನದಿಂದ ಅದನ್ನು ತಡೆದು ನಿದಾನವಾಗಿ ಭೂಮಿಗೆ ಇಳಿಯುವಂತೆ ಮಾಡಿದನು ಆದರೂ ಆತನಿಗೆ ಸ್ವಲ್ಪ ಗಾಯಗಳಾಗಿರುತ್ತವೆ

ಪೂರ್ವಕಾಲದಲ್ಲಿ ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಲ್ಲಿ ದೊಡ್ಡ ದಂಗೆ ನಡೆದಾಗ್ಗೆ ಮೆ|| ರಾಬರ್ಟ್ ಮಾರಿಸ್ ಎಂಬೊಬ್ಬ ಮಹದೈಶ್ವರ್ಯವಂತನು ಗವರ್ನ್‌ಮೆಂಟಿಗೆ ೧೮ ಕೋಟಿ ರೂಪಾಯನ್ನು ಸಾಲ ಕೊಟ್ಟಿದ್ದನು ಈಗ ಆತನ ವಂಶೀಕರು ಗವರ್ನ್‌ಮೆಂಟಿನಿಂದ ಆ ಹಣವು ತಮಗೆ ವಾಪಸ್ ಆಗಲಿಲ್ಲವೆಂದು ದಾವಾ ಮಾಡಿದಾರೆ ಈ ಹಣವನ್ನೂ ಅದರ ಚಕ್ರಬಡ್ಡಿಯನ್ನೂ ಸರ್ಕಾರದಿಂದ ಬರಮಾಡಿಕೊಳ್ಳಬೇಕೆಂದು ವ್ಯಾಜ್ಯ ಹುಟ್ಟಿದೆ

ಮಹಮ್ಮದೀಯರ ಯಾತ್ರಾಸ್ಥಾನವಾದ ಹೆಜ್ಜಾಸ್ ಪ್ರಾಂತ್ಯದಲ್ಲಿ ಅಪಾರವಾದ ಮಳೆ ಸುರಿಯಿತು ಮಕ್ಕೆಯಲ್ಲೂ ಪ್ರವಾಹಗಳು ವಿಶೇಷವಾಗಿ ಎಂದಿರುತ್ತವೆ ಕಳೆದ ಬುಧವಾರ ದೊಡ್ಡ ಮಸೀತಿಯೊಳಕ್ಕೆ ಪ್ರವಾಹ ನುಗ್ಗಿ ಬಹಳ ನಷ್ಟಪಡಿಸಿದೆ ಮಕ್ಕೆಯಲ್ಲಿ ೭ ಮಂದಿ ನೀರಿನಲ್ಲಿ ಸಿಕ್ಕಿ ಮೃತಪಟ್ಟರು ಅನೇಕ ಮನೆಗಳೂ ಕಳಚಿ ಬಿದ್ದು ಹೋದವು ರೈಲ್ ರಸ್ತೆಯೂ ಕಿತ್ತು ಹೋಗಿದೆ ಈಜಿಪ್ಟಿನ ಸುಲ್ತಾನರು ಅಲ್ಲಿಂದ ಹಿಂತಿರುಗಬೇಕೆಂದು ನಿಷ್ಕರ್ಷೆ ಮಾಡಿದ್ದು ಈ ಪ್ರವಾಹದ ದೆಸೆಯಿಂದ ನಿಲ್ಲಿಸಬೇಕಾಯಿತು ಎಂದು ತಂತೀ ವರ್ತಮಾನ ಬಂದಿದೆ

ಚೀಣಾ ರಾಜ್ಯದ ಕೆಲವು ಅಧಿಕಾರಿಗಳೂ ರಾಜಕುಮಾರರೂ ಯೂರೋಪ್ ಖಂಡಕ್ಕೆ ಹೋಗಿ ಅಲ್ಲಿನ ರಾಜ್ಯಗಳಲ್ಲಿ ಸಂಚಾರ ಮಾಡುತ್ತಾ ಅಲ್ಲಲ್ಲಿ ಸೈನ್ಯಗಳ ತರಪೇತನ್ನೂ ಯುದ್ಧದ ಮತ್ತು ಇತರ ಇಲಾಖೆಗಳ ಶಿಸ್ತುಗಳನ್ನೂ ನೋಡಿ ಮುಂದಷ್ಟು ಮಾಡಿಕೊಳ್ಳುತ್ತಾ ಬಂದಿದಾರೆ ಇವರು ಈಗ ವಿಲಾಯತಿಯಿಂದ ಜರ್ಮನಿ ರಾಜ್ಯಕ್ಕೆ ಹೋಗಿರುವರು ಅಲ್ಲಿನ ಚಕ್ರವರ್ತಿಯವರೂ ರಾಜಕುಮಾರರೂ ಅಧಿಕಾರಿಗಳೂ ಚೀಣಾ ಪ್ರತಿನಿಧಿಗಳನ್ನು ಬಹು ಉತ್ಸಾಹದಿಂದಲೂ ಗೌರವವಾಗಿಯೂ ಎದುರುಗೊಂಡು ಆಟ್ಟಹಾಸದಿಂದ ಸತ್ಕರಿಸಿ ಅವರಿಗೆ ಜರ್ಮನಿ ರಾಜ್ಯದ ಹಡಗಿನ ಸೈನ್ಯಗಳನ್ನೂ ಇತರ ಇಲಾಖೆಗಳ ಕಾರುಬಾರುಗಳನ್ನೂ ತೋರಿಸಿ ವಿವರಿಸಿದರು ಚೀಣಾ ಪ್ರತಿನಿಧಿಗಳಿಗೆ ಚಕ್ರವರ್ತಿಯವರು ಕಳೆದ ವಾರ ದಿವ್ಯವಾದ ಔತನವನ್ನು ಮಾಡಿದರು ಪ್ರತಿನಿಧಿಗಳು ಜರ್ಮನಿಯ ರಾಜ್ಯಭಾರದ ವಿತರಣೆಯನ್ನು ಕೊಂಡಾಡಿ ಚಕ್ರವರ್ತಿಯವರನ್ನು ಬಹಳವಾಗಿ ವಂದಿಸಿದರು

ವಿಲಾಯತಿಯಲ್ಲಿ ಪಾರ್ಲಮೆಂಟ್ ಮೆಂಬರುಗಳ ಚುನಾವಣೆಯು ಬಹು ರಭಸವಾಗಿ ನಡೆಯುತ್ತಲಿದೆ ಮೆಂಬರಾಗಿ ಚುನಾಯಿಸಲ್ಪಡಬೇಕೆಂಬುವವರು ಆಯಾ ಊರು ಪಟ್ಟಣಗಳಲ್ಲಿ ಸಭೆಗಳ ಮಧ್ಯೆ ನಿಂತು ಉಪನ್ಯಾಸಗಳನ್ನು ಮಾಡುತ್ತಾ, ಜನರ ಓಟುಗಳನ್ನು ಸಂಪಾದಿಸಿಕೊಳ್ಳಬೇಕೆಂದು ಸಾಹಸಪಡುತ್ತಿದಾರೆ ಒಂದೊಂದು ಸಭೆಯಲ್ಲಿ ಜನರು ಸಾವಿರಗಟ್ಟಲೆ ಕೂಡುತ್ತಿರುವರು ಲಿಬರಲ್ ಪಕ್ಷದವರು ತಮಗೆ ಹೆಚ್ಚು ಓಟುಗಳು ಬರಬೇಕೆಂದೂ, ಯೂನಿಯನ್ ಪಕ್ಷದವರು ತಾವು ಅಧಿಕಾರಕ್ಕೆ ಬರಬೇಕೆಂದೂ ತಮ್ಮ ತಮ್ಮ ಚತುರತೆ ಸಾಮ ಭೇದಾದಿಗಳನ್ನು ಪ್ರಯೋಗಮಾಡುತ್ತಿದಾರೆ ಒಂದೆರಡುಕಡೆ ನಡೆದ ಸಭೆಗಳಲ್ಲಿ ಜನರ ಗಲಭೆಯೂ ಹೋರಾಟವೂ ಹೆಚ್ಚಾಗಿ ಹುವರಿಗೆ ಜಖಂ ಆಗಿರುತ್ತದೆ ಒಬ್ಬಿಬ್ಬರು ಪ್ರಾಣವನ್ನೇ ಕಳೆದುಕೊಂಡರು ಅಂತು ಈ ಚುನಾವಣೆಯ ಸಡಗರವೂ ಗಲಭೆಯೂ ಉತ್ಸಾಹವೂ ಪಕ್ಷ ಪರಪಕ್ಷಗಳ ಹೋರಾಟವೂ ಅಪಾರವಾಗಿರುತ್ತವೆ

Printed and Published by the Rev. H Gulliford Proprietor and Manager, Wesleyan Mission Press, Mysore 13/1/1910

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—೫ ೧೯೧೦ ನೇ ಇಸವಿ ಜನವರಿ ತಾರೀಖು ೨೦ ನೇ ಗುರುವಾರ. ಸಂಚಿಕೆ ೩೪

THE "PRINCESS" BURNER

15-1

Is an up-to-date Burner, reckoned and admitted as one of the latest Marvels in Lampware. It is very simple and strong in construction, and produces a powerful light.

It is a real, good Kerosine Oil Burner of 100 Candle power. It can be fixed on to any 14" line oil lamp. No smoke or smell and quite easily handled. Greatly reduces the wastage and expense of oil. It is fitted with chimney lifter and extinguisher.

Price of Burner, Chimney Mantle, Wick and Brush Rs. 7 8 0, Full Sett Rs. 9 8—0.

Address, M S SIDDAPPA & BROS.,
General Merchants,
Krishnaraja Mohalla, Mysore City.

ಎಲ್ಲರೂ ಓದಿ ನೋಡಬೇಕಾದ ಹೊಸ ಸೂಚನೆ.

ಇಂಥಾ ಸಮಯ ಮುಂದೆ ಸಿಕ್ಕಲಾರದು

ನಾವು ಈ ವಾಚುಗಳ ವಿಷಯದಲ್ಲಿ ವಿಶೇಷ ಹೊಗಳಬೇಕಾದುದಿಲ್ಲ ಯಾತಕ್ಕೆಂದರೆ ಸರ್ವರೂ ಉಪಯೋಗಮಾಡುತ್ತಾ ಇದಾರೆ

ಜನವರಿ ಪ್ರಜೆಕ್ಟೇಷನ್ ವಾಚ್.



ಮಜಬೂತಾದ ಮತ್ತು ಬಹಳ ದಿವಸ ಬಾಳಿಕೆ ಬರುವಂಥಾ ಅಮೇರಿಕನ್ ಲೀವರ್ ವಾಚ್ ಮುಂಚಿನ ಕ್ರಯ ೩—೮—೦ ರೂ ಸರ್ವರಿಗೂ ಗೊತ್ತೇ ಇದೆ ಇದು ೩ ತಿಂಗಳ ಪರಿಯಂತ್ರ ಸರಪಣಿ ಇಲ್ಲದೆ ೨—೧೨—೦ ರೂಪಾಯಿಗೆ ಕೊಡುತ್ತೇವೆ ಮತ್ತು ರೈಲ್ವೆ ರೆಗ್ಯುಲೇಟರ್ ಎಂಬ ಮಜಬೂತಾದ ವಾಚ್ ಇದರ ಹಿಂದೆ ರೈಲ್ವೆ ರೆಗ್ಯುಲೇಟರ್ ಮಾರ್ಕ್ ಇರುತ್ತದೆ ಮೊದಲಿನ ಕ್ರಯ ೪—೮—೦ ರೂ ಇನ್ನು ೩ ತಿಂಗಳ ಪರಿಯಂತರ ಸರಪಣಿ ಇಲ್ಲದೆ ೩—೪—೦ ರೂಪಾಯಿಗೆ ಕೊಡುತ್ತೇವೆ ಗೋಲ್ಡು ಗಿಲ್ಟು ವಾಚಿನ ಸರಪಣಿಯು ಅಂದವಾಗಿರುತ್ತೆ ಕ್ರಯ ೧ಕ್ಕೆ ೦—೬—೦ ತ್ವರೆಯಾಗಿ ಆರ್ಡರ್ ಕೊಟ್ಟು ಬೇಗ ತರಿಸಿಕೊಳ್ಳಿರಿ ಮುಗಿದುಹೋದನಂತರ ಸಿಕ್ಕದೇ ಹೋದ ದುಃಖಕ್ಕಿಂತಲೂ ಜಾಗ್ರತೆ ಬರೆದು ತರಿಸಿಕೊಳ್ಳುವುದುತ್ತಮ ವಿ ಪಿ ಯಿಂದಲೂ ರವಾನಿಸುತ್ತೇವೆ ಪೋಸ್ಟೇಜು ಅಲಾಯಿದಾ ಬೀಳುತ್ತೆ ಅಮೇರಿಕನ್ ಕೆರೋಸಿನ್ ಆಯಿಲ್ ವ್ಯಾಕ್ಯೂಂಟಲ್ ಲ್ಯಾಂಪು ಎಂಬ ಹೊಸ ನಮೂನೆ ಲ್ಯಾಂಪು ಚಿಮಣಿಯನ್ನು ಹಾಕಿ ಉರಿಸತಕ್ಕದ್ದು ೧೦೦ ಮೇಣದ ಬತ್ತಿಗಳನ್ನು ಏಕಕಾಲದಲ್ಲಿ ಹತ್ತಿಸಿದರೆ ಯಾವ ಪ್ರಕಾಶವಾಗುತ್ತೋ ಆ ಪ್ರಕಾರ ಈ ಒಂದು ಲ್ಯಾಂಪಿನಿಂದಲೇ ಆಗುತ್ತೆ ಎಣ್ಣೆ ಖರ್ಚು ಬಹಳ ಕಡಮೆ ೧ ಸೀಸೆ ಎಣ್ಣೆ ೧೦½ ಘಂಟೆಗಳ ಕಾಲ ಉರಿಯುತ್ತೆ ಕ್ರಯ ಫುಲ್ ಸೆಟ್ ೧ಕ್ಕೆ ರೂ ೯—೮—೦

ವಿಳಾಸ— ಯಂ ಯಸ್ ಸಿದ್ದಪ್ಪ ಅಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್,
ಕೃಷ್ಣರಾಜ ಮೊಹಲ್ಲಾ, ಮೈಸೂರು

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

33

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ? ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಶ್ಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಎಡೆಗಳಲ್ಲಿ ತಯಾರಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀರಾದದ್ದು ಆದ್ದರಿಂದ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಉಪಯೋಗಿಸುವ ಟೋಪಿಗಳ ದಾರ ಬೆಂಗಳೂರು ಮಿಲ್ಲಿಗೆ ನಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ನಾನಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ, ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಜರಿಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹುವೆವು ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಸಂಜೀವಿನೀ ಔಷಧಾಲಯ, ಮೈಸೂರು.

23 50

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕ್ಷೋಮು, ವಾಯುರೋಗಗಳೂ, ಹಳೇ ಜ್ವರ, ಕ್ಷಯ, ಅಜೀರ್ಣ ಕಲಿನೋವು, ಸೊಂಟನೋವು, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಟುತ್ವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಸೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೆಟ್ಟಿಗೆ ೧ಕ್ಕೆ ೧ ರೂಪಾಯಿ

ಕಾಲಕೂಟ ಪಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು ಕೆಂಗಣ್ಣು, ಪಾಚೆಗಣ್ಣು, ಕಣ್ಣುನೋವು, ಕಣ್ಣುಭಾರ ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮಿದುಳಿಗೂ ತಂಪನ್ನುಂಟುಮಾಡಿ ದೃಷ್ಟಿಸಾಮರ್ಥ್ಯವನ್ನೂ ಮಿದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ಕರಿಮಾನಿ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಥಾಗಿ ಲೇಬಲ್ ಇಟ್ಟು ಬರೆಯಿರಿ

ಡಿ ಕೆ. ಸ್ವಾಮಿ,
ಪ್ರೊಪ್ರೈಟರ್.

ನೋಡಿ, ಅಮೂಲ್ಯಸಂಧಿ.

16-1

ನಿರುಪಮಾ—ಐದು ಅಂಕಗಳುಳ್ಳ ಹೊಸ ನಾಟಕ.

ಆಡುವುದಕ್ಕೂ ಓದುವುದಕ್ಕೂ ಅನುಕೂಲವಾಗಿದೆ ವೇಶ್ಯೆಯರ ಚಮತ್ಕಾರ, ಜೂಜುಕೋರರ ಅವ್ಯವಸ್ಥೆ, ಕಳ್ಳರ ಪರಿಣಾಮ, ಇವುಗಳನ್ನೊಳಗೊಂಡಿದೆ ಕ್ರಯ ೧೨ ಆಣೆ ಹನ್ನೆರಡು ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಳ್ಳುವವರಿಗೆ ಅರ್ಧಕ್ರಯ ಪುಸ್ತಕವ್ಯಾಪಾರಿಗಳಿಗೆ ಧಾರಾಳವಾದ ರಿಯಾಯತಿ

ವಿಳಾಸ — 'ಕರ್ನಾಟಕ ಚಂದ್ರಿಕೆ," ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಪರಸ ಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ರವಾನೆ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪ್ರೋತ್ಸಾಹಕೋರಿ

2-4

ಹಾಸನ ಟೋಪಿಯ ಸುಪೀರಿಯರ್ ಉಲ್‌ದಾರ 1 ಟೋಪಿ ದಾರಕ್ಕೆ 0-8-0 10 ಟೋಪಿಯಾಗುವ ಬಂಡಲ್ 1 ಕ್ಕೆ ರೂ 3 7 0 ಒಗ್ಗದಲ್ಲಿ ಒಗ್ಗ ಕೆಂಪು ಕಪ್ಪು ತೇಟ ಕೆಂಪು ಹಳದಿ ಗುಲಾಬಿ ಪಚ್ಚೆ ನೀಲಿ ಮತ್ತು ಕಾಫಿ ಒಗ್ಗಗಳಲ್ಲಿ—ಹಾಸನ ಟೋಪಿ ಹೊಲಿಯುವ ಸಾಧಾರಣ ದಪ್ಪದ ಉಲ್ ಪೌಂಡು 1 ಕ್ಕೆ 2 4-0, ಲಡಿ 1 ಕ್ಕೆ 0 10 0, ರಂಗಿನಲ್ಲಿ ಯಿಪ್ಪೆ ಕೆಂಪು ಕಪ್ಪು ಮತ್ತು ತೇಟ ಕೆಂಪು ಮಿಶ್ರ ಉಲ್ ಪೌಂಡು 1ಕ್ಕೆ 3-12-0 ಅರು ಟೋಪಿ ಆಗುವದು ಕೊಕ್ಕೆ ಸೂಜಿ 1 ಕ್ಕೆ 0 1 6 ಮತ್ತು 0 3 0 ಹಾಸನ ಟೋಪಿ ಹೊಲಿಯುವ ದಪ್ಪದ ಉಲ್ ಪೌಂಡು 1 ಕ್ಕೆ ರೂ 1 12-0

ಹಾಸನ ಟೋಪಿಗಳು ಡಜನ್ 1 ಕ್ಕೆ 8-0-0 ಮತ್ತು 13-0-0 ಹರಳೆಣ್ಣೆ ರಿನ ರಂಗಿನಲ್ಲಿ ಕಸೂತಿಕೆಲಸದ ಉಲನ್ ದಾರಗಳು ಪೌಂಡು 1 ಕ್ಕೆ ರೂ 3-4 0

ಕೆಪಿಕೋ ಬಾಂ ಯುಲ್ಲಾ ತರದ ಪಾತಕ್ಕೆ 0-8-0, ದೊಡ್ಡವರ ಕಾಲುಚೀಲಗಳು ಆಣೆ 0 4 0 ರಿಂದ 1-8-0 ಯಳೇ ಮಕ್ಕಳ ಕಾಲುಚೀಲಗಳು 0-1 0 ಮತ್ತು 0 6 0 ದೊಡ್ಡವರ ಕಾಟನ್ ಬನಿಯನ್ 1 ಕ್ಕೆ 8 ಆಣೆಯಿಂದ 1-0-0 ದೊಡ್ಡವರ ಮುಸುಕಿನ ಟೋಪಿ 1 ಕ್ಕೆ 1-0-0 ಹಡಕಾಸುಗಳು ಹಾಕುವ ಉಲ್‌ದಾರದ ಪಾಕೆಟ್ 1 ಕ್ಕೆ 0-2-0 ಉಲ್‌ದಾರದ ವಾಚ್ ಪಾಕೆಟ್ 1 ಕ್ಕೆ 0 2 0 ಉಲ್‌ದಾರದ ಕಮರ್‌ಬಂದ್ 1 ಕ್ಕೆ 10 ಆಣೆಯಿಂದ 1 4 0 ಬಾಚಣಿಗೆಗಳು 1 ಕ್ಕೆ 0 1-0, 0 1-6 ರಿಂದ 0-4 0 ಫ್ರಾನ್ಸಿನ ಕಡ್ಡಿ ತೋಟಿ 1 ಕ್ಕೆ 0 2-0 ದಸಾಂಗ ಕೋಲಿ 1 ಕ್ಕೆ 0 1-0 ಪಿಕನಾ ಡಬ್ಬಿ 1 ಕ್ಕೆ 0-4 0 ಬಾಚು ಸರಪಣಿ 1 ಕ್ಕೆ ಆಣೆ 6 ರಿಂದ 0 13-0 ವರೆಗೆ ರಬ್ಬರ್ ಸ್ಟ್ಯಾಂಪು ಶಾಯಿ ಬಾಟೀ 1 ಕ್ಕೆ 0-1-0. ಸೇಫ್‌ಸೇಫ್ ತಾಂಬೂಲಮಿತ್ರನು 300 ಮಾತ್ರೆಗಳಿರುವ ಪಾಕೆಟ್ 1 ಕ್ಕೆ 0 3-0. ಮೆಂತಾಲ್ ಡಬ್ಬಿ 1ಕ್ಕೆ 0 3 0 ಗಡಕರ್ಣದ ಮುಲಾಮು ಡಬ್ಬಿ 1 ಕ್ಕೆ 0-5 0 ದೇಶಿ ಕೈವಸ್ತ್ರಗಳು ಡಜನ್ 1 ಕ್ಕೆ 1-0-0 ಲಿನನ್ ಕೈವಸ್ತ್ರಗಳು ಡಜನ್ 1 ಕ್ಕೆ 1-6 0 ಕಸ್ತೂರಿಮಾತ್ರೆ 200 ರ ಸೀಸೆ 1ಕ್ಕೆ 6 4 0 ಕಾಮಿನಿಯ ತೈಲವು ಅನೇಕತರದ ತೈಲಗಳಲ್ಲಿ ಪಸಂದಾದದ್ದು ಸೀಸೆ 1ಕ್ಕೆ 1-0 0 ಪರಿಮಳ ನಸ್ಯಡಬ್ಬಿ 1ಕ್ಕೆ 0 2 0 ದಂತಮಂಜನ ಡಬ್ಬಿ 1 ಕ್ಕೆ 0-1 6 ಪೊಮೇಟ ಸೀಸೆ 1 ಕ್ಕೆ 0 5 0 ದರ್‌ಬಾರ್ ಇದು ಅಮೂಲ್ಯವಾದ ಅತ್ತರ್ ಸೀಸೆ 1 ಕ್ಕೆ 1-8-0 ಕಾಮಿನಿ ಅತ್ತರ್ ಸೀಸೆ 1 ಕ್ಕೆ 1-8 0 ರೋಜ್ ಅತ್ತರ್ ಸೀಸೆ 1 ಕ್ಕೆ 2-0-0 ಇಂಗ್ಲಿಷ್ ಅಕ್ಷರದ ಪೆಟ್ಟಿಗೆ 1ಕ್ಕೆ 0 10 0 ಯಿಂದ 3-0 0 ಬಿಳಿ ಪೋಸ್ಟ್‌ಕಾರ್ಡು ಗಳು 100ಕ್ಕೆ 0-3-0 ರೂಲುಹಾಕಿದ ಲೆಟರ್ ಪೇಪರ್ ಪ್ಯಾಕೆಟ್ 1 ಕ್ಕೆ 0 4-0. ಇದಕ್ಕಾಗುವ ಕವರ್ 100 ಕ್ಕೆ 0 5 0 ಕಾಬೂಲ್ ದೇಶದ ಹಿಂಗು 12 ತೊಲೆ ಡಬ್ಬಿ 1 ಕ್ಕೆ 0 14-0 ಕೆಂಪುಮೂಲಿನಿಂದ ನೇಯಿಸಿದ ಕಮರ್‌ಬಂದ್—0-4 0, 0 7 0 ಮತ್ತು 0 9-0 ಸಂಗೀತ ಪಾರಿಜಾತವೆಂಬ ಹಾಡಿನ ಪುಸ್ತಕ 0 4-0

1910 ನೇ ಡೈರಿ 1 ಕ್ಕೆ 0 2 0 ನಮಗೆ ಅಲ್ಪ ಕಮಿಷನ್ ಕೊಟ್ಟಲ್ಲಿ ಮಂಗಳೂರಲ್ಲಿ ದೊರೆಯುವ ಯಾವ ಸಾಮಾನು ಬೇಕಾದರೂ ಬಜಾರಿಯಿಂದ ಪಡೆದು ರವಾನಿಸುವೆವು ವಿ ಪಿ ಯಿಂದ ತರಿಸುವವರು ಟಪಾಲು ಖರ್ಚು ಜಾಸ್ತಿ ಕೊಡಬೇಕಾಗುವದು

ನಮ್ಮ ವಿಳಾಸ—ದಿ ಉಲನ್ ಮಾರ್ಟ್,
ನಂ. ೧, ಮಂಗಳೂರು, ದ. ಕ.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5-35

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆನಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟುಕೊಂಡು ಇರುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ಒಕ್ಕೆ ೧೨ ಆಣೆ ಪ್ಯಾಕಿಂಗ್ ೬ ಆಣೆ ಅವರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಜೆ ಎಸ್ ಕನ್ನಯಶೆಟ್ಟಿ ಅಂಡ್ ಕಂಪನಿ ತುಮಕೂರು ಮತ್ತು

ಎಸ್ ಪೀಟರ್ಸ್,

೩೩, ವೇದವಲ್ಲಿಪಿಳ್ಳೆ ಬೀದಿ ವೇಪೇರಿ, ಮದರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಲ್ಲಿ ಛಳುಕು ನಿದ್ದೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಶೇಷವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ ಬಳಲಿಕೆ, ಎದೆ ಕಲ್ಲು ಸುರಿದು ತಲೆನೋವು ಗಾಬರಿ ಕಣ್ಣು ಮೊಬ್ಬು ತಲೆತಿರುಗುವಿಕೆ, ಮೈನೋವು ಕೀಲುನೋವು ಮರವು ನಿಶ್ಶಕ್ತಿ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂಳೆವ್ಯಾಧಿಯ ವಾಯು ಮೈಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್ಸವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [6-21]

ಆರೋಗ್ಯವು ಬೇಕಾದ? ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨-೦-೦ ಅಥವಾ ೬ ಬುರುಗಳಿಗೆ ರೂ ೧೦-೮-೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್ ೨೦, ಪಿ ಒ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದಗ ಔಷಧಿಯು 7 47

ತಲೆನೋವು ಗಂಟು ಉಬ್ಬುವದು, ವಾತ, ಸಂಧಿವಾತ ಉಳುಕು ಆಣಿ ಗಂಟು ಗಂಟ್ಲು ನೋವು, ಅರ್ಧಾಂಗವಾಯು ಎದೆಶೀತ, ಫ್ಲೂ, ಜಖಮು, ಇತ್ಯಾದಿ

ಇವರ ವಿಷಯವಾಗಿ ಸರ್ಟಿಫಿಕೇಟು ಕೊಂಡಿರುತ್ತಾರೆ ಬಾಟ್ಲು ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮುಲಾಮು ಹಾಕಿದ ಕೂಡಲೇ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಏನೂ ಇಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೩-೦ ೧೨ ಡಬ್ಬಿಗಳಿಗೆ ೪-೦-೦

ಆಸ್ತಾಮಿಶ್ರಣ	೨ ೦ ೦
ಚೇಳುಕಡಿತದ ಮದ್ದು	೦ ೮ ೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದಿ ಜಗಳಿಗೆ	೦ ೮ ೦
ಗುಲಾಬಿ ವಾತ—ಗುಲಾಬಿಗೆ	೦ ೮-೦
ನೇತ್ರಾಂಜನ—ಕಾಂದ ದೃಷ್ಟಿಗೆ	೦ ೪ ೦
ಬಿಷ್ಟ ಮುಲಾಮು ದದ್ದು ಖಜ್ಜಿಗೆ	೦ ೩ ೦
ಕೇಶವರ್ಧಿನೀ ತೈಲ ಕೂದಲು ಬೆಳೆಯಲು	೧ ೦ ೦
ಕಷನಾಶಕ ಚೂರ್ಣ—ಉಬ್ಬಸ ರೋಗಕ್ಕೆ	೦ ೮ ೦

ದಯಮಾಡಿ ಕ್ಯಾಟಲಾಗ್ ತರಿಸಿ ವಿಳಾಸ —

ವಿಲಿಯಂ ಮತ್ತು ಕಂಪೆನಿ ಪ್ರೊಪ್ರೈಟರ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — ಅಮೃತಾಂಜನ, ಮುಂಬಯಿ

CHAMBERLAIN'S COLIC CHOLERA
AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

8 3



ಕೆಳ ಹೊಟ್ಟೆಯ ನೋವು, ಬರಿ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮೋತ್ಕೃಷ್ಟವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಬ್ರಾಹ್ಮಣಕವಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

113

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ಪಾಚೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಕಿರಿದು ಆಗುವ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೧ ಆಣೆಯಿಂದ ೬|| ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ದೊರಕುತ್ತದೆ ಶಾಲುಗಳು, ಹಾಸಿನ ಟೋಪಿಗಳು, ಮುಸುಕಿನ ಟೋಪಿಗಳು ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್

ಸಿ ಎಲ್ ಎಸ್ ಬುಕ್ ಡಿಪ್ರೋ ಮೈಸೂರು

ಮೊಳ್ಳದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

4 49

ಲೋಕಾಮಯದ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಚಳಿಜ್ವರ ಜ್ವರ ಹೊಟ್ಟೆಶೂಲೆ, ಸಂದುಗಳ ನೋವು ಮೈ ಕೈಕಾಲು ಕೊಡತ (ಘಾರು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನಿಗಡಿ ನಿಶ್ಶಕ್ತಿ ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ ಇಚ್ಚುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪಟ್ಟಿ ಔಷಧದ ಸಂಗಡಲೇ ಇರುತ್ತದೆ

೨೨೦ ಮಾತ್ರೆಯುಳ್ಳ ಕುಪ್ಪಿಗೆ ೬ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೬ಂದ ೧೨ ಕುಪ್ಪಿವರೆಗೆ ಪೋಸ್ಟೇಜು ೬ ಆಣೆ

ವಿಳಾಸ ಮೊಳ್ಳದ ವೆಂಕಟಾಚಲ ಪಂಡಿತ, ಎಸ್ ಎಸ್ ಐದ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್ ಮೈಸೂರು.

ವೃತ್ತಾಂತ ಪತ್ರಿಕೆಯ ಸಂಚಾಂಗವು.

ಸಿದ್ಧವಾಗಿದ ಕ್ರಯ ಒಂದಾಣೆ

೧೯೧೦ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ ಯವರು ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಪ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಜನವರಿ ಮೂವತ್ತೊಂದರೊಳಗಾಗಿ ವೃತ್ತಾಂತ ಪತ್ರಿಕೆ ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರಿಯಿರಿ ವಿಳಾಸ —

ಮ್ಯಾನೇಜರ್ ವೃತ್ತಾಂತ ಪತ್ರಿಕೆ ಮೈಸೂರು

ಮಕ್ಕಳ ಹಿತಕಾರಿ

ಎಂದು

SCOTT'S EMULSION 9-3

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹಸರಿಟ್ಟಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧವ್ಯಾಪಾರಸ್ಥರಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ವಿಸಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ — (196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(180 ಪೇಜು)	0—3—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10-3]

ಮ್ಯಾನೇಜರ್ ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ನೋಟಿಫಿಕೇಷನ್.

೮೯-೩

ಅಮೃತಮಹಲ್ ಇಲಾಖಾ ಜಾಬ್ಟು ಕೆಲವು ಗಂಡು ರಾಸುಗಳನ್ನು ಬರುವ ೧೯೧೦ನೇ ಜನವರಿ ೧೯ನೇ ತಾರೀಖು ಲಾಗಾಯ್ತು "ದೊಳಲ್ಕೆರೆ ರೈಲ್ವೆ ಸ್ಟೇಷನ್" ಬಳಿಯಲ್ಲೂ ಅದೇ ಮಾಹೆ ೨೬ನೇ ತಾರೀಖು ಲಾಗಾಯ್ತು ಚಿತ್ರದುರ್ಗದ ತಾಲ್ಲೋಕು "ಅಯ್ಯನಹಳ್ಳಿ" ಕಾವಲಿನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಹಾಜರಾಗಿ ಭಡಸನಾಹಿನಲ್ಲಿ ರಾಸುಗಳನ್ನು ಪಡೆಯಬಹುದು

ಕ್ಯಾಂಪ್ ಮೈಸೂರು, ಎಚ್. ನಂಜುಂಡರಾಜೇ ಅರಸ್,

೩೦ ೧೨ ೧೯೦೯ ಸುಪರಿಂಟೆಂಡೆಂಟ್, ಅಮೃತಮಹಲ್ ಇಲಾಖಾ

ಜ್ವರಹರಿ. ೧೧ ೩

ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವ ೨ ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚೀಫ್ ಕಚೇರಿಯಲ್ಲಿರುವ ಮರಾಮತ್ ಇಲಾಖಾ ಚೀಫ್ ಚಾರ್ಜ್ ಆಫೀಸರ್ ಎಸ್ ಟಿ ವೆಂಕಟೇಶ ಅಯ್ಯರವರು—ನೀವು ಕಳುಹಿಸಿದ [illegible] ಹಿಂದೆ ಕಳುಹಿಸಿ ಕೊಟ್ಟ ೨೦ ಬಾಟಲಿ ಜ್ವರಹರಿಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಮ್ಮ ಔಷಧದಿಂದ ಅನೇಕ ಮಂದಿ ಜ್ವರಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯುತ್ತಾ [illegible] ಇನ್ನೊಂದು ೨೦ ಬಾಟಲಿ ಕಳುಹಿಸಬೇಕು [illegible] ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ, [illegible] ರೂ ೨—೧೨ ಆ, ೧೧ ರೂ, ಡಜನ್ನ ಸೀಸೆ ತರಿಸಿಕೊಂಡರೆ ಪೋಸ್ಟ್ ಖರ್ಚು ವಜಾಹಿಡಿಯಲಾಗುವದು

ಹಿಮಂಕಪೂರ.

[illegible]

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ ಕೈಲಾ ಮಹಾ ಶಕ್ತಿಯಾಗಿ ವಾಸಿಮಾಡುವದು ಮತ್ತು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧ ದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಐಯರು—ಹಿಮಂಕಪೂರವನ್ನು ನಾನೂ ನನ್ನ ತಾಟೆದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅತಿಸಾರ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಪೆಸ್ತ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಪುಷ್ಯ ಶುದ್ಧ ಏಕಾದಶಿ ಶುಕ್ರವಾರದಿಂದ ಪುಷ್ಯ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಜನವರಿ

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಮಕರ ಮಾಸ
21	ಶುಕ್ರ *	ಏಕಾದಶಿ	36 2	ರೇ	49-29	9
22	ಶನಿವಾ ‖	ದ್ವಾದಶಿ	31-10	ಅ	48-56	10
23	ರವಿವಾ ,,	ತ್ರಯೋದಶಿ	28-12	ಭ	45-23	11
24	ಚಂದ್ರ	ಚತುರ್ದಶಿ	25-16	ಕೃ	44-46	12
25	ಕುಜ ‡	ಪೂರ್ಣಿಮಾ	24 20	ರೋ	45-22	13
26	ಬುಧ	ಪಾಡ್ಯಮಿ	24-12	ಮೃ	47-8	14
27	ಗುರು †	ಬಿದಿಗೆ	25-28	ಆ	50-8	15

* ಸರ್ವತ್ರ ಏಕಾದಶಿ.

‖ ಕೊಂಭಾಯನಗತೋರವಿ, ಮೊಹರಂ ಕಡೇ ದಿನ

,, ಪ್ರದೋಷ

‡ ಪೂರ್ಣಿಮಾ

† ಮೇಲುಕೋಟೆ ರಥೋತ್ಸವ

ಮೈಸೂರು ಸೀಮೆಯಲ್ಲಿ ಪ್ಲೇಗು, ಕಾಲರಾ ಸ್ಥಿತಿ.

17—12—1909 ರಿಂದ 24—12—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	3	0	0
ಮೈಸೂರು ,,	18	11	0	0
ಬೆಂಗಳೂರು ಡಿಸ್ಟ್ರಿಕ್ಟು	1	1	0	0
ಮೈಸೂರು ,,	21	19	21	19
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	2	2
ಹಾಸನ ,,	9	6	0	0
ಚಿತ್ರದುರ್ಗ ,,	0	[illegible]	6	3
ಕಡೂರ್	2	3	0	0
ಶಿವಮೊಗ್ಗ ,,	0	0	0	0
ಜುಮ್ಲಾ	48	43	39	24

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಒಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩-೦-೦	೧೨ ೮-೦
ಕೆಂಬೂತಿ ಅಕ್ಕಿ ಅವಲ್	...	೧೩-೦-೦	೧೪-೦-೦
,, ದುಮು	..	೧೨-೮-೦	೧೩-೦-೦
ಜವಾರಿ ಅಕ್ಕಿ	.	೧೩-೦-೦	೧೪-೮-೦
ಸಣ್ಣಕ್ಕಿ ಅವಲ	.	೧೯-[illegible]	೧೫ ೮ ೦
,, ದುಮು	...	೧೩-೧೨-೦	೧೫-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ	..	೧೨-೮-೦	೧೪-೦-೦
,, ದುಮು	..	೧೨-೦-೦	೧೩-೦-೦
ಹೈಗ ರಾಗಿ ಪಲ್ಲಾ ೧ಕ್ಕೆ	..	೮-೦-೦	೮-೮ ೦
ಹಾರಾಗಿ	.	೭-೧೨-೦	೮ ೦-೦
ಜೋಳ	..	೭-೮-೦	೯-೦-೦
ಹಲಸಂದೆ ಪಲ್ಲಾ ೧ಕ್ಕೆ	.	೧೦-೦-೦	೧೦ ೦-೦
ಬೇಳೆ ಅವರೆ		೧೨-೦-೦	೧೦ ೦-೦
ಹೆಸರು	...	೧೦-೦-೦	೯-೧೨-೦
ಉದ್ದು	..	೧೨-೮-೦	೧೦-೮-೦
ಕಡಲೆ	..	೧೨-೮-೦	೯-೮-೦
ಎಳ್ಳು ಸೇರು ೧೨೭ಕ್ಕೆ	.	೧೫-೦-೦	೧೫-೦-೦
ಹುರುಳಿ	...	೮-೦-೦	೮-೦-೦
ಹರಳು ೧೨೭ ಸೇರಿಗೆ		೧೪ ೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	.	೨-೦-೦	೨-೦ ೦
ಮೆಣಸಿನಕಾಯಿ	..	೪-೫-೦	೩-೪-೦
,, ದುಮು	.	೪-೪-೦	೩-೦ ೦
ಬೆಲ್ಲ ದೊಡ್ಡ ಅಚ್ಚು	.	೫-೮-೦	ಮ ೨-೪-೦
ಒಳ್ಳೆಣ್ಣೆ ಮಣ ೧ಕ್ಕೆ	.	೪-೮-೦	೪ ೮ ೦
ಹರಳೆಣ್ಣೆ ,,		೫ ೮ ೦	೬-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	.	೯-೦-೦	೯ ೦-೦
ಉಪ್ಪು		೬-೪-೦	೫-೮-೦
ಹುಣಸೇ ಹಣ್ಣು		೨-೪-೦	೧-೧೦-೦
,, ಹಳೇದು		೨ ೦-೦	೧-೮-೦
ತುಪ್ಪ ಮಣ ೧ಕ್ಕೆ	.	೧೬-೮-೦	೧೪-೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೪ ೦	೪ ೬-೦
ತೆಂಗಿನಕಾಯಿ ೧೦೦ಕ್ಕೆ	.	೫-೦-೦	೫-೪-೦
ಅಡಕೆಕಾಯಿ ಮಣ ೧ಕ್ಕೆ		೧-೦-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	.	೧-೦-೦	೦-೧೧ ೦
ಚಿನ್ನ (ಪೌನ್) ಕೆಂಪು	.	೧೫-೯-೦	೧೫-೪-೦
,, ,, ಪಸಿಮೆ	.	೧೬-೦-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ	..	೨೪-೮ ೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	.	೬೭-೪-೦	೬೫-೪-೦

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖಾ.

15 1-1910—ಈ ದಿನ ಪೊಂಗಲ್ ಹಬ್ಬವಾದಾಗ್ಯೂ ತದುದ್ದೇಶ್ಯ ಸ್ತ್ರೀಯರಿಗೆ ವಿಶೇಷ ಕೆಲಸವಿರುತ್ತಲಿದ್ದಾಗ್ಯೂ ಬಹು ಮಂದಿ ನಾರೀಮಣಿಗಳು ಮಂದಿರದ ಸೌದವನ್ನು ಅವರ ಸಹಾಯದ ವಿನಾ [illegible] ನಡೆದವುಗಳನ್ನು ನಡೆಸಲು ಜನಸಾಮಾನ್ಯ ಇದ್ದರು ಸೌಭಾಗ್ಯವತಿ ರತ್ನಮ್ಮನವರು ಸುಂದರವಾಗಿ ಗೀತೆಯನ್ನು ನುಡಿಸಲು ಮತ್ತು ಒಬ್ಬೊಬ್ಬರು ಮೆಂಬರುಗಳು ಹಾರ್ಮೋನಿಯಂ ವಾದ್ಯವನ್ನು ನುಡಿಸಿದರು ಸೌಭಾಗ್ಯವತಿ ಕಾವೇರಮ್ಮನವರು ಒಳ್ಳೆ ವಿವೇಕಯುಕ್ತವಾದ ಎರಡು ವಿಷಯಗಳನ್ನು ಕುರಿತು ಕೆಲವಂಶಗಳನ್ನು ಓದಿದರು ಒಂದು "ಪಾತ್ರಧರ್ಮವಾವುದು, ಅಪಾತ್ರಧರ್ಮವಾವುದು" ಎಂಬ ಸಂಗತಿಯನ್ನು ಕುರಿತದ್ದಾಗಿತ್ತು, ಮತ್ತೊಂದು "ಸಮಾಜದ ಮೆಂಬರುಗಳ ಕರ್ತವ್ಯ" ಯಾವುದೆಂಬದನ್ನು ಕುರಿತು ವಿವರಿಸಲ್ಪಟ್ಟದ್ದಾಗಿತ್ತು ಈ ಎರಡು ವಿಷಯಗಳು ಚೆನ್ನಾಗಿದ್ದವು ಎರಡನೇ ವಿಷಯದಲ್ಲಿ ಹೆಸರಿಗೆ ಮಾತ್ರ ಮೆಂಬರುಗಳಾಗಿದ್ದರೆ ಪ್ರಯೋಜನವಿಲ್ಲವೆಂತಲೂ, ಮೆಂಬರುಗಳಾದ ನಂತರ ಸಮಾಜದ ಕಾರ್ಯಗಳನ್ನು ತಮ್ಮ ಸ್ವಕಾರ್ಯದಂತೆ ಎಣಿಸಿ ಕಷ್ಟಪಟ್ಟು ಕೆಲಸ ಮಾಡಿದ್ದಾದರೆ ಪ್ರಯೋಜನವಾಗುವದೆಂತಲೂ, ಹಾಗೆ ಈ ಸ್ತ್ರೀ ಸಭೆ ಏರ್ಪಡುವದರಿಂದ ಬಹಳ ಲಾಭ ಉಂಟಾಗುವದೆಂತಲೂ ಹೇಳಿದರು ಕಾರ್ಯದರ್ಶಿಯಾದಾಕೆಯು ಕಾಯಿಲೆಯ ಕಾರಣ ಈ ವಾರದಲ್ಲಿ ಸಹಾ ಬರಲು ಅವಕಾಶವಿಲ್ಲದೆ ಇದ್ದರೂ ಶ್ರೀಮತಿ ಕಾವೇರಮ್ಮ ಮತ್ತು ಸೌಭಾಗ್ಯವತಿ ಕೆಂಪಮ್ಮನವರು ಮುಖಾಂತರ ಕಾರ್ಯಗಳೆಲ್ಲವನ್ನು ಕ್ರಮವಾಗಿ ಜರುಗಿಸಿದರು

ಮಂಗಳವನ್ನು ಹಾಡಿ ಸಭೆಯನ್ನು ಪೂರ್ತಿ ಮಾಡೋಣವಾದಲ್ಲಿ ಬರುವ 23 ನೇ ತಾ ಭಾನುವಾರ ನಡೆಸತಕ್ಕ ವಿಶೇಷ ಸಭೆಯ [illegible] ಸೂಚಿಸಿದ ಮಾತ್ರವಲ್ಲದೆ, ಆ ದಿನದಲ್ಲಿ ಸೌಭಾಗ್ಯವತಿ ಅಂಬಾಬಾಯಮ್ಮನವರು ಉಪನ್ಯಾಸ ಕೊಡುವರೆಂದು ಹೇಳಿದರು

ಚಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಚಾತ್ಮಿಗಳಿಗೆ ನಾವು ಗಮನಕೊಡಲಾರೆವು. ಆದಕಾರಣ ಚಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು ಮತ್ತು ಚಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಗಮನ ಕೊಡಲಾರೆವು

ಚಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆದಾರರಾಗುವದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಕರೆಸ್ಪಾಂಡೆನ್ಸ್.

ವಿವಾಹಕ್ಕೆ ಕನ್ಯಾ ಬೇಕು

ಅಯ್ಯಾ,

ವಿವಾಹವಾಗತಕ್ಕ ವರನು ವೈಷ್ಣವ ಬ್ರಾಹ್ಮಣನಾಗಿಯೂ, ೨೪ ವರುಷ ವಯಸ್ಸುಳ್ಳವನಾಗಿಯೂ ಪೋಲೀಸ್ ಇಲಾಖೆಯಲ್ಲಿ ನಾಯಕನಾಗಿ ೧೫ ರೂಪಾಯಿನ ನೌಕರನಾಗಿಯೂ ಇದ್ದಾನೆ ಕನ್ಯಾ ಕೊಡಬೇಕೆಂತ ಇಚ್ಛೆ ಪಡುವವರು ಈ ಕೆಳಗಿನ ವಿಳಾಸದಾರರಿಗೆ ಕಾಗದ ಬರೆದರೆ ಸಕಲ ವಿಷಯವೂ ಗೊತ್ತಾಗುತ್ತೆ

ಸಿ ರಾಮಚಂದ್ರರಾವ್, ಹೆಡ್‌ಕಾನ್‌ಸ್ಟೇಬಲ್, ಜಾವಗಲ್ ಹೋಬಳಿ, ಬಾಣಾವಾರ ಪೋಸ್ಟ್, ಹಾಸನ ಡಿಸ್ಟ್ರಿಕ್ಟು

ಹೊಸಕೋಟೆಯಲ್ಲಿ ರೈತರ ಕಷ್ಟವು.

ಅಯ್ಯಾ,

ಹೊಸಕೋಟೆಯಲ್ಲಿ ಈಗ್ಗೆ ೩-೪ ವರುಷಗಳಿಂದ ಕ್ಷಾಮ ಪ್ರಾಪ್ತವಾಗಿ ಕೆರೆ ಬೆಳೆ, ಖುಷ್ಕಿ ಬೆಳೆ ಇಲ್ಲದೆ ಪ್ರಜೆಗಳು ಜೀವನ ಮಾಡುವದೇ ಬಹಳ ಕಷ್ಟವಾಗಿತ್ತು ದೇವರ ದಯದಿಂದ ಈ ವರುಷ ಮಳೆಯಾಗಿ ದೊಡ್ಡ ಕೆರೆ, ಚಿಕ್ಕಕೆರೆ, ಉಪ್ಪಾರು ಕೆರೆಗಳು ಭರ್ತಿಯಾಗಿ [illegible] ಹೋಯಿತು ಉಪ್ಪಾರು ಕೆರೆ ಕೆಳಗೆ ಮಳೆಗಾಲದ ಫಸಲ್ ಇಟ್ಟದ್ದರು ಇದರಿಂದ ೩-೪ ವರುಷಗಳ ನಷ್ಟವು ತಮಗೆ ಬರಲಿಲ್ಲವೆಂದು ರೈತಾಪಿ ಜನಗಳು ವ್ಯಸನಪಡುತ್ತಿದ್ದಾರೆ ಉಪ್ಪಾರು ಕೆರೆ ಕೆಳಗೆ ಬೇಸಿಗೆ ಫಸಲು ಇಡಕೂಡದೆಂದು ಸರ್ಕಾರದವರು ಡಂಗೂರ ಮೂಲಕ ಪ್ರಸಿದ್ಧ ಪಡಿಸಿರುತ್ತಾರೆ ಇದರಿಂದ ರೈತಾಪಿ ಜನಗಳು ಬಹಳ ಚಿಂತೆಯುಳ್ಳವರಾಗಿದ್ದಾರೆ ಯಾಕೆಂದರೆ ಅವರು ೩-೪ ವರುಷಗಳು ಬೆಳೆ ಇಲ್ಲದೆ ಸುಮ್ಮನೆ ಕಂದಾಯವನ್ನು ಕಟ್ಟಿದರು ದೈವಾನುಗ್ರಹದಿಂದ ಈ ವರುಷ ಕೆರೆ ತುಂಬಿತು ಬೇಸಿಗೆ ಫಸಲು ಯಾಕೆ ಇಡಕೂಡದೆಂದು ನವಂಬರು ತಿಂಗಳಿನಲ್ಲಿ ಕೆಲವು ಜನ ದೊಡ್ಡಮನುಷ್ಯರು ಅರ್ಜಿಯನ್ನು ಬರೆದು ತಾಲ್ಲೂಕ್ ಕಚೇರಿಗೆ ಕಳುಹಿಸಿದರು ಅದಕ್ಕೆ ಇದುವರೆಗೂ ಯಾವ ಉತ್ತರವೂ ಬರಲಿಲ್ಲ ಕಾರಣವು ತಿಳಿಯಲಿಲ್ಲ ಮತ್ತು ಕೂಬಿನ ಬೇರಿ ಎಂಬು ಕರೆ ಒಡೆದುಹೋಗಿ ನೀರೆಲ್ಲಾ ಚಿಕ್ಕ ಕೆರೆಗೆ ಹೋಗುತ್ತಾ ಇದೆ ಪಟೇಲ್ ಶಾನುಭೋಗರು ತಾಲ್ಲೂಕು ಕಚೇರಿಗೆ ರಿಪೋರ್ಟು ಮಾಡಿದರು ಅದಕ್ಕೆ ಯಾವ ಉತ್ತರವೂ ಬರಲಿಲ್ಲ ಸರ್ಕಾರದವರು ಒಡೆದು ಹೋಗಿರುವ ಕಟ್ಟೆಗಳನ್ನು ನೀರು ಹೋಗದಂತೆ ಒಂದೋಬಸ್ತು ಮಾಡಿಸಿದರೆ ಮುಂದಕ್ಕೆ ರೈತಾಪಿ ಜನಗಳಿಗೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಅದೇ ಪಿರಿಸಿಂದ ಸಾಗುವಳಿ ಮಾಡಿಕೊಳ್ಳುವಂತೆ ಅಪ್ಪಣೆಯಾದರೆ ಗಂಜಿ ರೈತರು ಬದುಕಿಕೊಳ್ಳುತ್ತೇವೆಂದು ಬಾಯಿ ಬಿಡುತ್ತಾ ಅಪ್ಪಣೆ ಗೋಸ್ಕರ ಕಾದುಕೊಂಡಿದಾರೆ

ರೈತವರ್ಗಹಿತಚಿಂತಕ

ಮಾಲೂರು ತಾ ತೊರಲಕ್ಕಿಗೆ ಸ್ಕೂಲು ಬೇಕು

ಅಯ್ಯಾ,

ಈ ಗ್ರಾಮವು ೧೫-೨೦ ಮನೆ ವಿಶ್ವಕರ್ಮರಿಂದಲೂ, ೧೦-೧೨ ಮನೆ ಮೊರಸುಒಕ್ಕಲಿಗರಿಂದಲೂ, ೨೦-೨೫ ಮನೆ ಕುಂಚಿಟಿಗರ ವರ್ತಕ ಮಂಡಲಿಯವರಿಂದಲೂ, ಸುಮಾರು ೭೦-೮೦ ಮನೆ ಇತರ ಕಸಬುದಾರರಿಂದಲೂ ಕೂಡಿಕೊಂಡು ಈ ಸಮ್ಮತಿಗೆ ಎರಡನೆಯ ಪುರವಾಗಿದೆ ಪ್ರತಿ ರ ಕ್ಕಾವಾರವೂ ಇಲ್ಲಿ ಸಂತೆ ಕೂಡಿ ೩,೦೦೦ ರೂಪಾಯಿ ವರಿಗೂ ವ್ಯಾಪಾರ ನಡೆಯುತ್ತೆ ಮತ್ತು ಕಾವೇರಿ ಎಲೆಕ್ಟ್ರಿಕ್ ಲೈನೂ ಅದಕ್ಕೆ ಸಂಬಂಧಪಟ್ಟ ರಮ್ಯವಾದ ಬಂಗಲೆಯೂ ಅದರ ಸುತ್ತುಲಲ್ಲಿ ಮಾರ್ಕಂಡೇಯಾಭಿದಾನವುಳ್ಳ ನದಿಯೂ ಸಹ ಇರುವವು ಇದಕ್ಕೆ ೬ ಮೈಲಿ ದೂರದಲ್ಲಿ ಬೈದರ್ಸ್ ರೈಲ್ವೆ ಮಾರ್ಗದ ಒಂದು ರೈಲ್ವೆ ಸ್ಟೇಷನೂ ಉಂಟು ಇಂಥಾ ಪಟ್ಟಣದ ಈ ಅಗ್ರಹಾರದಲ್ಲಿ ಶಿ ಕಾರಾವಿಯ್ಯನವರು ಮಹಾನುಭಾವನ ಪ್ರಯತ್ನದಿಂದ ಸುಮಾರು ೧೬ ವರುಷಗಳ ಹಿಂದೆ ಒಬ್ಬನೇ ಮನುಷ್ಯರುಳ್ಳ ಒಂದು ಸಣ್ಣ ಮಠವನ್ನು ಸರಕಾರದವರು ದಯಪಾಲಿಸಿದ್ದರು ಇದು ದಿನೇ ದಿನೇ ಪ್ರಬಲ ಸ್ಥಿತಿಗೆ ಬಂದು ಲೋವರ್ ಸೆಕೆಂಡರಿಗೆ ತನ್ನಾಲಕ್ ಬಾಲಕರನ್ನು ಕಳುಹುವಷ್ಟಾಯಿತು ನ್ಯಾಯವಾದ ಒಬ್ಬ ವಿದ್ಯಾರ್ಥಿಯು ಎದೆ ಕಸಬಿನಿಂದಲೇ ಜೀವಿಸುತ್ತಿದಾನೆ ಈ ರೀತಿ ತಲೆ ಎತ್ತಿಕೊಂಡು ಕನ್ನಕಕ್ಕೆ ಮೀರಿ ಮೆರೆಯುತ್ತಿದ್ದ ಈ ವಿದ್ಯಾಲಯವು ಅಧಾರ ಭೂತನು ಪರಲೋಕವಾಸಿಯಾದ ನಂತರ ಕೆಲಮಧ್ಯಮ ಸ್ಥಿತಿಗೆ ಬಂತು ಅದರೂ ಬುದು ಕಡಲಿದ ಅಲದ ಮಾರವು ಬೀಳಲುಗಳ ಸಹಾಯದಿಂದ ನಿಂತಿರುವ ಮೇರಿಗೆ ಈ ಸ್ಕೂಲು ಪ್ರಾವಿನ್ಷಿಯಲ್ ಸ್ಕೂಲುಗಳಿಗೆ ೭ನೇ ಸ್ವತಂತ್ರವಾಗಿ ತನ್ನ ಪೂರ್ವ ಸ್ಥಿತಿಯನ್ನು ಪೂರ್ತಿಯಾಗಿ ಕಳೆದುಕೊಂಡಿದ್ದಾಗಲಿಲ್ಲ

ಇಂಥಾ ಸಂದರ್ಭದಲ್ಲಿ ಅಕಸ್ಮಾತ್ ಇದು ಈ ಸರ್ಕಲ್ ಅಸ್ಸಿಸ್ಟೆಂಟ್ ಇನ್ಸ್‌ಪೆಕ್ಟರ್ ಸಾಹೇಬರವರಾದ ಮ ತಿರುನಾರಾಯಣಯ್ಯಂಗಾರ್ ಸ್ವಾಮಿಯವರ ಅಗ್ರಹಕ್ಕೆ ಒಳಗಾಗಿ ಪ್ರಾಸಿಕ್ಯೂಷನನ್ನು ಹೊಂದಿ ಇದೇ ತಾಲ್ಲೂಕು ದೊಡ್ಡ ಇಗ್ಗಲೂರು ಸೇರಿತು ಇದು ಪರಾಧೀನವಾಗುವುದರಿಂದ ಇಗಾಗಿಯೇ ಸಾಕಷ್ಟಾಗಿ ಇರುತ್ತಿದ್ದ ಊರು ಮುಂದೆ ಬಯಲಿನಲ್ಲಿ ಒಂದು ತೆಂಗಿನ ಮನೆ ನಿರ್ಮಿಸಿಕೊಟ್ಟಿತು ಈ ಮನೆಯು ೩ ವರುಷಗಳ ಬಾಗಾಯಿತು ಲಿಂಗಿಲ್ಲದ ತಿರಾಬಾಲರಂತೆ ಪಾಳುಬಿದ್ದಿರುವುದರಿಂದಲೂ, ಕೈಯಿಂದ ಹಣ ವ್ಯಯ ಮಾಡಿದವರ ಕನಸೆಲ್ಲಾ ಸ್ಕೂಲು ಸ್ಮಶಾನ ಆಗಿರುವುದರಿಂದಲೂ, ಇದರಲ್ಲಿ ಸಾತ್ವಿಕವಾದ ಪಾಠ ಪ್ರವರ್ತನಗಳಿಲ್ಲದಿರುವ ಹುಡುಗರ ಬಾಯಿಗಳಿಗೆ ಅಕ್ಷರಾಭ್ಯಾಸವು ಜನನ ಸಹಜವಾದ ರಿಯರು ಸೇರಿಕೊಂಡಿರುವುದರಿಂದಲೂ ನಮ್ಮ ವಿದ್ಯಾಧ್ಯಕ್ಷರಾದ ಇಲಾಖಾ ಹೊಸ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ॥ ಪಿಯರ್ ಸಾಹೇಬರವರು ಕರುಣಿಸಿ ಈ ಗ್ರಾಮಕ್ಕೆ ಸ್ಕೂಲನ್ನು ಕೊಡುತ್ತಾರೆಂದು ನಂಬಿದ್ದೇನೆ

ವಿದ್ಯಾ ಸಕ್ತನಾತ.

ಸುಗಂಧಗಳು.

1-10

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ. ೨೧, ೫, ೩, ೨-೮-೦, ೧-೮-೦ ಬಿಲ್ಲೆಗಳು ೧ ಕೊಸೆಗೆ ರೂ ೧ ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ತೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ.—ಟಿ ಎಲ್. ಉಪಾಧ್ಯಾಯ, ಮೈಸೂರು

ವೃತ್ತಾಂತ ಪತ್ರಿಕೆ

– ೦

ಸಹ ೧೯೧೦ ನೇ ಇಸವಿ ಜನವರಿ ತಾ ೨೦ ನೇ ಗುರುವಾರ

ಇಂಗ್ಲಿಷ್ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯು

ಈಗ ವಿಲಾಯತಿಯಿಂದ ವಿಶೇಷವಾಗಿ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯ ವಿಚಾರವಾದ ವರ್ತಮಾನಗಳೇ ದಿನವೂ ಬರುತ್ತಿರುವವು ಇದುವರೆಗೆ ನಡೆದಿರುವ ಚುನಾವಣೆಗಳ ಫಲಿತಾಂಶವನ್ನು ನೋಡಿದಲ್ಲಿ ಲಿಬರಲ್ ಮತ್ತು ಯೂನಿಯನ್ ಎಂಬ ಎರಡು ಪಕ್ಷಗಳ ಪೈಕಿ ಯಾವ ಒಂದು ಪಕ್ಷಕ್ಕೂ ಹೆಚ್ಚು ಮೆಂಬರುಗಳು ಚುನಾಯಿಸಲ್ಪಟ್ಟಿಲ್ಲ ಎರಡು ಪಕ್ಷಗಳಿಗೂ ಸ್ವಲ್ಪ ಹೆಚ್ಚು ಕಡಮೆ ಒಂದೇ ಸಂಖ್ಯೆಯ ಮೆಂಬರುಗಳು ಚುನಾವಣೆಯಾಗಿರುತ್ತಾರೆ ಆದಕಾರಣ ಯಾವ ಪಕ್ಷದವರು ಬಹು ಪ್ರಜಾ ಸಮ್ಮತಿಯನ್ನೂ ವಿಶ್ವಾಸವನ್ನೂ ಪಡೆದು ರಾಜ್ಯಭಾರ ಕಾರ್ಯಗಳನ್ನು ವಹಿಸುತ್ತಾರೋ ಈಗಲೇ ಹೇಳುವುದಕ್ಕಾಗದು

ಈ ಚುನಾವಣೆ ನಡೆಯುವ ಕಾಲದಲ್ಲಿ ಎರಡು ಮೂರು ಮುಖ್ಯ ವಿಚಾರಗಳು ಉಭಯಪಕ್ಷದ ಮುಖಂಡರುಗಳಿಂದಲೂ ಚರ್ಚಿಸಲ್ಪಟ್ಟಿರುತ್ತವೆ ಆ ಪೈಕಿ ಹೌಸ್ ಆಫ್ ಲಾರ್ಡ್ಸ್ ಎಂಬ ಮೊದಲನೇ ಸಭೆಯ (ಪಾರ್ಲಿಮೆಂಟಿನ) ಅಧಿಕಾರವೆಷ್ಟು ಮಟ್ಟಿನದು ಎಂಬುವುದೇ ಬಹು ವಿಶೇಷವಾದದ್ದು ಯಾಕಂದರೆ ಹೌಸ್ ಆಫ್ ಕಾಮನ್ಸ್ ಎಂಬ ಎರಡನೇ ಸಭೆಯವರು ಚಾಲ್ತಿ ಸಾಲಿನ ಬಡ್ಜೆಟ್ಟನ್ನು ತುಮಾನರ್ಮಾಡಿ ಮೊದಲನೇ ಸಭೆಯ ಸಮ್ಮತಿಯನ್ನು ಪಡೆಯುವುದಕ್ಕಾಗಿ ಕಳುಹಿಸಿದರು ಈ ಮೊದಲನೇ ಸಭೆಯವರು ಅದರಲ್ಲಿದ್ದ ವಿಚಾರಗಳನ್ನು ಒಪ್ಪದೆ ಬಡ್ಜೆಟ್ಟನ್ನು ತಳ್ಳಿಪಡಿಮಾಡಿ ಬಿಟ್ಟಿರುತ್ತಾರೆ ಈಗ ವಿಲಾಯತಿಯಲ್ಲಿ ಅನೇಕರು ಈ ಮೊದಲನೇ ಸಭೆಗೆ ಅಂಥಾ ಅಧಿಕಾರವೇನೂ ಇರುವುದಿಲ್ಲವೆಂದು ಪ್ರತಿಭಟಿಸುವರು. ಮತ್ತು ಹೌಸ್ ಆಫ್ ಲಾರ್ಡ್ಸ್ ಎಂಬ ಪ್ರಥಮ ಸಭೆಯ ರಚನೆಯು ತೃಪ್ತಿಕರವಾಗಿಲ್ಲವೆಂದೂ, ಅದಕ್ಕೆ ಮೆಂಬರುಗಳನ್ನು ಸೇರಿಸುವ ವಿಷಯದಲ್ಲಿ ಕೆಲವು ಹೊಸ ಕ್ರಮಗಳನ್ನು ಮಾಡಬೇಕಾಗಿದೆ ಎಂದೂ ಉಭಯಪಕ್ಷದವರೂ ಬಹುಶಾ ಒಪ್ಪಿಕೊಂಡು ಇದ್ದಾರೆಂದು ಹೇಳಬಹುದು ಈ ಮೊದಲನೇ ಸಭೆಯಲ್ಲಿ ವಂಶಪಾರಂಪರ್ಯವಾಗಿಯೇ ಮೆಂಬರಾಗಿರುವ ಹಕ್ಕು ಇರೋಣದರಿಂದ ಅಂಥಾ ಸಭೆಯಲ್ಲಿ ಯಾವ ರೀತಿಯಾದ ಹೊಸ ನಿಬಂಧನೆಗಳನ್ನು ಮಾಡಿ, ಕ್ರಮಪಡಿಸಬಹುದೋ ಗೊತ್ತುಮಾಡಿ ಹೇಳುವುದು ಸಾಧ್ಯವಲ್ಲ ಎಲ್ಲಾ ಪಂಗಡಗಳವರೂ ಬೇರೆ ಬೇರೆ ರೀತಿಯಾದ ಕ್ರಮಗಳನ್ನು ಸೂಚಿಸುತ್ತಿದಾರೆ ಆದಕಾರಣ ಈ ಸಭೆಯನ್ನು ಕ್ರಮಪಡಿಸುವುದು ಈಗಾಗಲೇ ಇತ್ಯರ್ಥವಾಗುವಂತೆ ಇಲ್ಲವೆಂದೂ, ಇನ್ನೂ ಕೆಲವು ವರುಷಗಳ ತನಕ ಈ ವಿಚಾರವು ಚರ್ಚೆಯಾಗುತ್ತಲೇ ಬಂದೀತೆಂದೂ ತೋರುತ್ತದೆ ಈ ಸಭೆಯನ್ನು ತೆಗೆದುಹಾಕಬೇಕೆಂದು ಯಾವ ಪಕ್ಷದವರೂ ಅಭಿಪ್ರಾಯಪಡುವುದಿಲ್ಲ ಯಾಕಂದರೆ ಈ ಸಭೆಯು ಇರುವುದರಿಂದ ತುಂಬಾ ಪ್ರಯೋಜನವುಂಟೆಂದು ಬಲ್ಲರು ಆದರೆ ಈ ಸಭೆಯ ಅಧಿಕಾರವು ಇಷ್ಟು ಮಟ್ಟಿನದೇ ಎಂಬುವುದು ಸ್ಪಷ್ಟವಾಗಿ ತಿಳಿಯುವಂತಾಗಬೇಕು

ವ್ಯಾಪಾರದ ಸರಕಿನ ಮೇಲೆ ಹಾಕುವ ಸುಂಕದ ವಿಚಾರವನ್ನೂ ಬಹಳ ಮುತುವರ್ಜಿಯಿಂದ ಚರ್ಚೆಮಾಡುತ್ತಿದಾರೆ. ಈಗ ಹೊರಗಿನಿಂದ ವಿಲಾಯತಿಗೆ ರಫ್ತಾಗಿ ಬರುವ ಅನೇಕ ವ್ಯಾಪಾರ ಪದಾರ್ಥಗಳ ಮೇಲೆ ಯಾವ ಸುಂಕವನ್ನೂ ವಸೂಲ್ಮಾಡುವುದಿಲ್ಲ ಈಗ ವಿಲಾಯತಿ ರಾಜ್ಯದಲ್ಲಿ ಬಹಳ ವರುಷಕ್ಕೆ ಮೀರಿದ ನಿರ್ಗತಿಕರಾದ ಮುದುಕರಿಗೆ ಸರ್ಕಾರದಿಂದ ಪೋಷಣೆ ಕೊಡಲಾರಂಭಿಸಿದಾರೆ ಹೊಸದಾಗಿ ಯುದ್ಧದ ಜಹಜುಗಳನ್ನು ಮಾಡಿಸಬೇಕಾಗಿವೆ. ಮತ್ತು ಇತರ ಬಾಬುಗಳಿಗೂ ಹೆಚ್ಚು ಹಣ ಬೇಕಾಗಿರುವುದು ಹಿಂದುಸ್ಥಾನಕ್ಕೆ ಹೊರಗಿನಿಂದ ರಫ್ತಾಗಿ ಬರುವ ಪದಾರ್ಥಗಳ ಮೇಲೆ ಸುಂಕ ಹಾಕಿ ವಸೂಲ್ಮಾಡುತ್ತಿರುವಂತೆ ವಿಲಾಯತಿಯಲ್ಲೂ ಪರರಾಜ್ಯಗಳಿಂದ ಬರತಕ್ಕ ಸರಕಿನ ಮೇಲೆ ಸುಂಕವನ್ನು ಹಾಕಬೇಕೆಂದು ಒಂದು ಪಕ್ಷದವರು ಹೇಳುತ್ತಾರೆ ಎದುರುಪಕ್ಷದವರಾದರೋ ಸುಂಕವನ್ನು ಹಾಕಿದರೆ ಪದಾರ್ಥಗಳ ಖರೀದಿಯು ಹೆಚ್ಚಿ ವಿಲಾಯತಿಯಲ್ಲಿ ಬಡವರ ಜೀವನ ಕಷ್ಟವಾಗುವುದೆಂದೂ, ಅದಕ್ಕೆ ಬದಲಾಗಿ ಜಮೀನಿನ ಮೇಲೆ ಕಂದಾಯವನ್ನು ಹಾಕಬೇಕೆಂದೂ, ಇತರ ಆಸ್ತಿಗಳ ಕಂದಾಯವನ್ನು ಹೆಚ್ಚಿಸಬೇಕೆಂದೂ ಹೇಳುವರು. ಈಗ ಗವರ್ನಮೆಂಟಿನ ಖರ್ಚು ಬಾಬುಗಳಿಗೆ ಹೆಚ್ಚು ಹಣವೇನೋ ಬೇಕಾಗಿರುತ್ತದೆ ಇದನ್ನು ಹ್ಯಾಗೂ ಉತ್ಪತ್ತಿಮಾಡಿಕೊಂಡೇ ತೀರಬೇಕು ಯಾವ ರೀತಿ ಉತ್ಪತ್ತಿಮಾಡಬೇಕೆಂಬ ವಿಚಾರದಲ್ಲಿ ನಾನಾಬಗೆಯ ಅಭಿಪ್ರಾಯಗಳು ಉಂಟಾಗಿರುವವು ಇವೆಲ್ಲಾ ಇತ್ಯರ್ಥವಾಗುವುದಕ್ಕೆ ಕೆಲವು ಕಾಲ ಹಿಡಿದೀತೆಂದು ಹೇಳಬಹುದಾಗಿದೆ

ಈಗ ನಡೆಯುತ್ತಿರುವ ಮೆಂಬರುಗಳ ಚುನಾವಣೆಗಳೆಲ್ಲಾ ಬಹುಶಾ ಈ ವಾರದಲ್ಲೇ ಮುಕ್ತಾಯವಾಗುವವು ಆ ಬಳಿಕ ಯಾವ ಪಕ್ಷದವರ ಸ್ಥಿತಿಯು ಹ್ಯಾಗೆ ಪರಿಣಮಿಸುವುದೋ ಗವರ್ನಮೆಂಟು ನಡೆಯುವುದಕ್ಕೆ ಯಾವ ಏರ್ಪಾಡುಗಳು ರೂಢಿಸಲ್ಪಡುವವೋ ತಿಳಿಯಬೇಕಾಗಿದೆ ಹೊಸ ಪಾರ್ಲಿಮೆಂಟು ಫೆಬ್ರವರಿ ತಾ ೧೫ ರಲ್ಲಿ ಕೂಡುವುದು ಆಗ ಮುಖ್ಯವಾದ ವಿಚಾರಗಳ ವಿಷಯದಲ್ಲಿ ಮೆಂಬರುಗಳು ಬಹಳ ದೀರ್ಘವಾಗಿ ಚರ್ಚೆಮಾಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ

ಪಶ್ಚಾತ್ತಾಪ

ಒಬ್ಬ ತಂದೆಗ ಒಬ್ಬನೇ ಮಗನಿದ್ದನು ತಂದೆಯು ಅವನನ್ನು ಬಹಳವಾಗಿ ಪ್ರೀತಿಮಾಡುತ್ತಿದ್ದನೆಂದು ಹೇಳುವದು ಅನಾವಶ್ಯಕವಷ್ಟೆ ಹುಡುಗನು ಇದನ್ನು ತಿಳಿದಿದ್ದಾಗ್ಯೂ, ಪ್ರಾಯದ ಹುಡುಗನಾಗಿ ಜೊತೆಗಾರರ ಸಂಗದ ಆಡುವದರಲ್ಲೂ ಸಂಗೀತಸಾಹಿತ್ಯಗಳಲ್ಲಿಯೂ ವಿನೋದಪಡುತ್ತ ನಿಲಕ್ಷ್ಯದಿಂದ ಕಾಲ ಕಳೆಯುತ್ತಿದ್ದನು ಹೀಗೆ ಕೆಲವು ಕಾಲ ಗತಿಸಿದನಂತರ ತಂದೆಗೆ ಕಠಿಣವಾದ ಸನ್ನಿಪಾತ ಜ್ವರವು ಬಂದಿತು ಮಾರನೇ ದಿನ ತಂದೆಯು ತನ್ನ ಕೆಲಸಕ್ಕೆ ಹೋಗಲಾರದೆ ನರಳುತ್ತಿರುವದನ್ನು ನೋಡಿ ಮಗನು ಸ್ವಲ್ಪ ಚಿಂತಾಕಾತ್ರನಾದರೂ ಲಕ್ಷಿಸದೆ ಗೆಳೆಯರ ಕೂಡ ಆಟಕ್ಕೆ ಹೋದನು ಮಧ್ಯಾಹ್ನದ ಊಟದ ಸಮಯದ ತನಕ ಬರಲಿಲ್ಲ ಊಟವಾದ ಮೇಲೆ ಹೊರಗೆ ಹೋಗುತ್ತಿರುವ ಹುಡುಗನನ್ನು ಸಂಕಟಪಡುತ್ತ ಹಾಸಿಗೆ ಮೇಲೆ ಮಲಗಿದ್ದ ತಂದೆಯು ಕರೆದು,—ಅಪ್ಪಾ ಮಗನೇ, ನಾನು ಜ್ವರದಿಂದ ಬಹಳ ಕಷ್ಟಪಡುತ್ತಿದ್ದೇನೆ ಇಗೋ, ಈ ಚೀಟಿಯನ್ನು ತೆಗದುಕೊಂಡು ಇಲ್ಲಿಂದ ಎರಡು ಮೈಲು ದೂರದಲ್ಲಿರುವ ವೈದ್ಯರಿಗೆ ತೋರಿಸಿ ಅವರು ಕೊಡುವ ಔಷಧಿ ತೆಗೆದುಬಂದರೆ ನನಗೆ ಅದರಿಂದ ಗುಣವಾಗುವದು ಅಂದನು ಆ ಚೀಟಿಯನ್ನು ತೆಗೆದುಕೊಂಡು ವೈದ್ಯನ ಮನೆಗೆ ಹೋಗುವದು ಅವನಿಗೆ ಹಿತಕರವಾಗಿರಲಿಲ್ಲವಾದುದರಿಂದ ಹೋಗುತ್ತೇನೆಂದು ನಟಿಸಿ ಚೀಟಿ ತೆಗೆದುಕೊಂಡು ಎಲ್ಲಿಯೋ ಹೋಗಿದ್ದು ಎರಡು ಗಂಟೆಗಳ ನಂತರ ಮನೆಗೆ ಬಂದು—ಅಪ್ಪಾ, ಆ ಔಷಧಿ ವೈದ್ಯರಲ್ಲಿಲ್ಲವಂತೆ ಎಂದು ಸುಳ್ಳು ಹೇಳಿದನು ಆಗ ತಂದೆಯು—ಅಯ್ಯೋ, ಆ ಔಷಧಿ ಸಿಕ್ಕಿದ್ದರೆ ನಾನು ಹುಷಾರಾಗುತ್ತಿದ್ದೆ ಆದರೆ ಈಗೇನು ಮಾಡಲಿ ಎಂದುದುಃಖಿಸಲಿಕ್ಕೆ ಆರಂಭಿಸಿ —ನನಗೆ ಮರಣವು ಸಮೀಪವಾಗಿದೆ ಎಂದು ತನ್ನ ಪತ್ನಿಗೂ ಮಗನಿಗೂ ಹೇಳಿದನು ಆಗ ಹುಡುಗನು ತಂದೆಯ ಸ್ಥಿತಿಯನ್ನು ನಿಜವಾಗಿ ತಿಳಿದು ತನ್ನ ಅವಿಧೇಯತ್ವಕ್ಕಾಗಿ ಬಹಳವಾಗಿ ದುಃಖಪಟ್ಟು ಚೀಟಿಯನ್ನು ತೆಗೆದುಕೊಂಡು ವೈದ್ಯರ ಬಳಿಗೆ ಓಡಿಹೋಗಿ ಔಷಧಿ ತೆಗೆದುಕೊಂಡು ಬಂದನು ಆದರೆ ಅಷ್ಟರೊಳಗಾಗಿ ತಂದೆಗೆ ಅವಸಾನ ಕಾಲವು ಪ್ರಾಪ್ತವಾಗಿ ಮರಣವೇದನೆ ಪಡುತ್ತಿದ್ದು ಕಡೆಗೆ ಸತ್ತೇ ಹೋದನು ಅನಂತರ ಹುಡುಗನು ಔಷಧಿ ತಂದು—ಅಪ್ಪಾ, ಇಗೋ, ಔಷಧಿ ತಂದಿದ್ದೇನೆ ಎದ್ದು ಕುಡಿ ಎಂದು ಎಷ್ಟು ಕೂಗಿದಾಗ್ಯೂ ತಂದೆ ಮಾತನಾಡದಿದ್ದದ್ದನ್ನು ನೋಡಿ ಹೊರಗೆ ಹೋಗಿ ಬಹಳವಾಗಿ ಪ್ರಲಾಪಿಸಿ ತನ್ನ ಪ್ರಿಯ ತಂದೆಯನ್ನು ತನ್ನ ಅವಿಧೇಯತ್ವದಿಂದಲೂ ಸುಳ್ಳಿನಿಂದಲೂ ಕಳಕೊಂಡದಕ್ಕಾಗಿ ಜೀವಾವಧಿ ವ್ಯಸನಾಕ್ರಾಂತನಾಗಿದ್ದನು

ಮನುಷ್ಯನು ಪಾಪಮಾಡಿ ತಪ್ಪು ದಾರಿಯನ್ನು ಹಿಡಿಯುವದು ಸ್ವಭಾವಿಕವಾಗಿದೆ ಆದರೆ ತನ್ನ ತಪ್ಪನ್ನು ಒಬ್ಬನು ತಿಳುಕೊಂಡಮೇಲೂ ಆ ಹಾದಿಯನ್ನು ಬಿಡದೆ ನಡೆಯುತ್ತಿರುವದು ಸರಿಯಲ್ಲವಷ್ಟೆ ಇದಕ್ಕೆ ಎಲ್ಲರೂ ಒಪ್ಪಿಕೊಂಡರೂ ಪಾಪದ ಮಾರ್ಗದಲ್ಲಿ ಸಂತೋಷವು ತಮಗೆ ಸಿಕ್ಕುತ್ತದೆಂದು ಭಾವಿಸಿ ಅದನ್ನು ಬಿಡಲೊಲ್ಲದವರಾಗಿದಾರೆ ಇದು ಕಡೆ ಕಡೆಗೆ ಅವರನ್ನು ಅಧೋಗತಿಗೆ ಸೇರಿಸಿ ಆಗ ಅವರು ತಮ್ಮ ದುರ್ಮಾರ್ಗತನವನ್ನು ಬಿಡಬೇಕೆಂದು ಪ್ರಯತ್ನಪಟ್ಟರೂ ಫಲಕಾರಿಯಾಗಲಾರದು ತಪ್ಪು ಮಾರ್ಗವನ್ನು ತಿಳಿದಮೇಲೆ ಒಂದು ಕ್ಷಣವಾದರೂ ಅದರಲ್ಲಿರದೆ ಸರ್ಪದಂತೆ ಅದನ್ನು ಭಾವಿಸಿ ಸನ್ಮಾರ್ಗವನ್ನು ಹುಡುಕಬೇಕು ಇಲ್ಲದಿದ್ದರೆ ಕಾಲ ಕಳೆದ ಮೇಲೆ ನಾವು ಎಷ್ಟೇ ಕಷ್ಟಿಯಾಗಿ ಶೋಕ ಮಾಡಿದರೂ ಅದರಿಂದ ನಮಗೆ ಸನ್ಮಾರ್ಗವು ದೊರೆಯದೆ ಕೇವಲ ದಂಡನೆಗೆ ಗುರಿಯಾಗುವೆವು

ಆದರೆ ಬರೀ ದಂಡನೆಯ ಭಯದಿಂದ ದುರ್ಮಾರ್ಗತನವನ್ನು ತ್ಯಜಿಸಬೇಕೆಂದು ನಾವು ಹೇಳುವದಿಲ್ಲ ನಮಗೊಬ್ಬ ತಂದೆ ಇದ್ದಾನೆ ಆ ತಂದೆಯು ಸರ್ವವನ್ನೂ ಸೃಷ್ಟಿಸಿ ಪಾಲಿಸುತ್ತ ಬರುವ ದೇವರೇ ಆತನು—ಪಾಪಮಾಡುವದರಿಂದ ನೀವು ಕೆಟ್ಟು ನಾಶನಕ್ಕೆ ಗುರಿಯಾಗುವದಲ್ಲದೆ ನನಗೆ ಅದು ಕೇವಲ ದುಃಖವನ್ನುಂಟುಮಾಡುವುದಾಗಿದೆ ಎಂದು ಅಪ್ಪಣೆ ಕೊಟ್ಟಿದಾನೆ ಜೆತ್ತ ತಂದೆಯನ್ನು ಯಾವನೂ ದುಃಖಪಡಿಸಲೆತ್ನಿಸುವುದಿಲ್ಲ ಮಗನನ್ನು ಕಳಕೊಳ್ಳಲಿಕ್ಕೆ ಯಾವ ತಂದೆಯೂ ಒಪ್ಪುವದಿಲ್ಲ ಹಾಗಾದರೆ ನಮ್ಮ ಪರಮತಂದೆಯಾದ ದೇವರನ್ನು ದುಃಖಿತನ್ನಾಗಿಪಡಿಸಿ ನಮ್ಮನ್ನು ಕೆಡಿಸತಕ್ಕ ಈ ಪಾಪವು ನಮಗೆ ತಾನೇ ಸಂತೋಷಕರವಾಗಿದ್ದೀತು? ನಮ್ಮ ತಂದೆಯಾದ ದೇವರು ನಮ್ಮನ್ನು ನೋಡಿ—ನೀವು ನನ್ನ ಸನ್ನಿಧಿಯಲ್ಲಿ ಸದಾ ಸಂತೋಷಭರಿತರಾಗಿ ನನ್ನ ಪರಮಾನಂದದಲ್ಲಿ ಭಾಗಿಗಳಾಗಿರಬೇಕು ಆದರೆ ಇಂಥಾ ಸ್ಥಿತಿಯು ನಿಮಗೆ ದೊರಕಬೇಕಾದರೆ ಒಂದೇ ಒಂದು ನಿರ್ಬಂಧ ಉಂಟು ಅದೇನಂದರೆ ನೀವು ಪರಿಶುದ್ಧರಾಗಿಯೂ ನಿಷ್ಕಳಂಕರಾಗಿಯೂ ಇರಬೇಕು ಯಾಕಂದರೆ ನನ್ನ ಸನ್ನಿಧಾನವು ಪಾಪಿಗಳಿಗೆ ದೊರಕಲಾರದು ಅವರು ಅದನ್ನು ಅನುಭವಿಸಲಾರರು ಎಂದು ಖಂಡಿತವಾಗಿ ಹೇಳಿದ್ದಾನೆ ಈ ಸತ್ಯವನ್ನು ನಾವು ಗ್ರಹಿಸಿಕೊಂಡು ನಮ್ಮ ತಂದೆಯಾದ ದೇವರಲ್ಲಿ ನಮಗೆ ಬಾಧ್ಯವಾಗಿ ಬರಬೇಕಾದ ಈ ಬಾಧ್ಯತೆಗೆ ತಕ್ಕವರಾಗಬೇಕಲ್ಲವೇ

ಒಳದೇಶದ ವೃತ್ತಾಂತಗಳು

—

ರಾಜಧಾನಿಯ ಹಳೇ ಕುಗ್ರಾಮ ಬಡಾವಣೆಯಲ್ಲಿ ರಸ್ತೆಗಳಿಗೆ ಚರಂಡಿಗಳನ್ನು ಕಟ್ಟುವುದಕ್ಕೆ ಟ್ರಸ್ಟ್ ಬೋರ್ಡಿನವರು ೭,೯೦೦ ರೂಪಾಯಿ ಸ್ಯಾಂಕ್ಷನ್ ಮಾಡಿದರೆ

* * *

ಪೆನ್ಷನ್ ಇನ್‌ಸ್ಪೆಕ್ಟರ್ ಜನರಲ್ ಮೆ|| ಎಚ್ ಜಿ ಭಾಭಾಯವರು ಕಳೆದ ವಾರ ಶ್ರೀಮನ್ ಮಹಾರಾಜರವರ ಭೇಟಿಗಾಗಿ ರಾಜಧಾನಿಗೆ ಬಂದಿದ್ದು ಬೆಂಗಳೂರಿಗೆ ಪ್ರಯಾಣಮಾಡಿದರು

* * *

ಕಡೂರು ಡಿಸ್ಟ್ರಿಕ್ಟಿನ ಕೆ ಪ್ಪದಲ್ಲಿ ವ ಎರೆ ಹಳ್ಳದ ಸೇತುವೆಯನ್ನೂ ಬಾಳೆಹೊನ್ನೂರಿನ ಬಳಿ ತಣ್ಣೀರು ಹಳ್ಳದ ಸೇತುವೆಯನ್ನೂ ಕಟ್ಟಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ

* * *

ಕೋಲಾರ್ ತಾಲ್ಲೂಕ ಹೊರಳೂರು ಹೋಬಳಿ ಕಾಯಂಗುತ್ತ ಮಲ್ಲಸಂದ್ರ ಗ್ರಾಮದಲ್ಲಿ ಒಂದು ಚತ್ರವನ್ನು ಕಟ್ಟುವುದಕ್ಕೆ ಸರ್ಕಾರದವರು ಕೆಲವು ಜಮೀನುಗಳನ್ನು ಕೊಂಡುಕೊಳ್ಳುವವರಾಗಿದಾರೆ

* * *

ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಲಕ್ವಳ್ಳಿ, ಕಡೂರು, ಬಗ್ಗವಳ್ಳಿಗಳಲ್ಲಿ ಪ್ರತ್ಯೇಕವಾಗಿ ನಡೆಯುತ್ತಿದ್ದ ಯೂನಿಯನ್ ಪಂಚಾಯತಿಗಳನ್ನು ಮುಂದಿನ ಸಾಲಿನಿಂದ ವಜಾಮಾಡಬೇಕೆಂದು ತೀರ್ಮಾನವಾಗಿರುತ್ತದೆ

* * *

ಮೈಸೂರು ಡೆಪ್ಯುಟಿ ಕಮಿಷನರವರು ಇಲ್ಲಿನ ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಈ ತಿಂಗಳ ತಾ ೩೧ ನೇ ಸೋಮವಾರ ಮಧ್ಯಾಹ್ನ ಸುಮಾರು ೧,೫೦೦ ತೊಲದಷ್ಟು ದಂತವನ್ನು ಹರಾಜುಮೂಲಕ ವಿಕ್ರಯಿಸುವವರಾಗಿದಾರೆ

* * *

ಕೋಲಾರ್ ಚಿನ್ನದ ಗಣಿಗಳಲ್ಲಿ ಹಳಬರಾಗಿರುವ ಪೊಲೀಸ ಹುದ್ದೇದಾರರನ್ನು ಇತರ ಕಡೆಗಳಿಗೆ ವರ್ಗಮಾಡಬೇಕೆಂದೂ, ಹೊಸಬರನ್ನು ತಂದಿಡಬೇಕೆಂದೂ ಪೋಲೀಸ್ ಇನ್‌ಸ್ಪೆಕ್ಟರ್ ಜನರಲರವರು ತೀರ್ಮಾನ ಮಾಡಿರತ್ತಾರೆ

* * *

ವಿದ್ಯುಚ್ಛಕ್ತಿಯ ವಿಷಯದಲ್ಲಿ ನೂತನ ವಿಚಾರಗಳನ್ನು ಕಲಿತು ಬರುವುದಕ್ಕಾಗಿ ಯೂರೋಪಿಗೂ ಅಮೇರಿಕಕ್ಕೂ ಹೋಗಿದ್ದ ಮೆ|| ಗಿಬ್ಸ್‌ಯವರೂ, ಮೆ|| ದ್ವಾರಕನಾಥರವರೂ ಮೆ|| ಪದ್ಮನಾಭರಾಯರೂ ಕಳೆದ ವಾರ ವಾಪಸು ಬೆಂಗಳೂರಿಗೆ ಬಂದಿರುತ್ತಾರೆ

* * *

ಬೆಂಗಳೂರು ದಂಡಿನಲ್ಲಿ ಒಬ್ಬ ಅಂಗಡಿಯವನು ಲೈಸೆನ್ಸು ಪಡೆಯದೆ ಸಾರಾಯಿ ಬಿಕರಿ ಮಾಡಿದ್ದನ್ನು ಮೆ|| ಆವಿಸ್ ಎಂಬ ನೌಕರನು ಹಿಡಿದಾಗ ಅವನು ಆ ನೌಕರನಿಗೆ ೧೦ ರೂಪಾಯಿ ಲಂಚ ಕೊಡುವುದಕ್ಕೆ ಬಂದನೆಂದು ರಿಪೋರ್ಟು ಕೊಟ್ಟನು ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡುತ್ತಿದಾರೆ

* * *

ಕಳೆದ ಗುರುವಾರ ಮಧ್ಯಾಹ್ನ ಬೆಂಗಳೂರಿನಲ್ಲಿ ನ್ಯಾಯವಿಧಾಯಕ ಸಭೆಯು ನಡೆಯಿತು ಪ್ರಜಾಪ್ರತಿನಿಧಿ ಸಭೆಯವರು ಚುನಾಯಿಸಿದ ಇಬ್ಬರು ಮೆಂಬರುಗಳೂ ಹಾಜರಾಗಿದ್ದರು ಮೆಂಬರುಗಳು ಕೆಲವು ಕಾನೂನುಗಳ ರಚನೆಯ ವಿಚಾರವನ್ನು ಕುರಿತು ಚರ್ಚೆ ಮಾಡಿ ಸಭೆಯನ್ನು ಮುಗಿಸಿದರು

* * *

ಮುಜರಾಯಿ ಸೂಪರಿನ್‌ಟೆಂಡೆಂಟರಾದ ಮೆ|| ವಿ ಸುಬ್ರಹ್ಮಣ್ಯಯ್ಯನವರು ಕಳೆದ ತಾ ೧೩ ನೇ ಸೋಮವಾರ ರಾಜಧಾನಿಯಲ್ಲಿ ಆಯುರ್ವೇದವನ್ನು ಕಲಿಯಲಪೇಕ್ಷಿಸಿ ಬಂದಿದ್ದ ೧೧ ಮಂದಿ ವಿದ್ಯಾರ್ಥಿಗಳನ್ನು ಪರೀಕ್ಷೆಮಾಡಿದರು. ತೇರ್ಗಡೆ ಹೊಂದಿದವರ ಪೈಕಿ ೫ ಮಂದಿಗೆ ಸರ್ಕಾರಿ ವೇತನಗಳು ದೊರಕುವವು

* * *

ಶಿಡ್ಲಘಟ್ಟದ ತಾಲ್ಲೂಕು ತಲಕಾಯಲ ಬೆಟ್ಟದಲ್ಲಿ ಈ ದಿನದಿಂದ ನಡೆಯುವ ವೆಂಕಟರಮಣಸ್ವಾಮಿಯ ರಥೋತ್ಸವಕ್ಕೆ ಧರ್ಮದರ್ಶಿ ಮೆ|| ಶ್ಯಾ ವೆಂಕಟರಾಯಪ್ಪನವರು ನಮಗೆ ಒಂದು ಲಗ್ನ ಪತ್ರಿಕೆಯನ್ನು ಕಳುಹಿಸಿರುತ್ತಾರೆ ಈ ರಥೋತ್ಸವ ಕಾಲದಲ್ಲಿ ದನಗಳ ಪ್ರದರ್ಶನವೂ ನಡೆಯುವುದೆಂದು ತಿಳಿಯುತ್ತೇವೆ

* * *

ಬೆಂಗಳೂರು ದಂಡಿನಲ್ಲಿ ಪೊಲೀಸ್ ಡಿಸ್ಟ್ರಿಕ್ಟ್ ಸೂಪರಿನ್‌ಟೆಂಡೆಂಟರಾಗಿರುವ ಮೆ|| ಪಿ. ಹ್ಯಾನ್ನಿಂಗ್‌ಟನ್‌ರವರನ್ನು ನಮ್ಮ ಸರ್ಕಾರದವರು ಮೈಸೂರು ಸಂಸ್ಥಾನದ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಕೆಲಸಕ್ಕೆ ನೇಮಕಮಾಡಿಕೊಳ್ಳುತ್ತಾರೆಂದೂ, ಮೆ|| ಡಿ ಡೆ ಮರಾಜೀ ಅರಸಿನವರಿಗೆ ಬೇರೇ ಇಲಾಖೆಗೆ ವರ್ಗವಾಗುವುದೆಂದೂ ಪ್ರಕಟವಾಗಿದೆ

* * *

ಎರಡನೇ ಮಹಾರಾಜ ಕುಮಾರಿಯವರ ವಯಸ್ಸಾದ ಒಬ್ಬ ಕುಮಾರ್ತೆಗೆ ರಟ್ಟೆಯ ಮೇಲೆ ಏನೋ ಒಂದು ಗಾಯವಾಗಿ ಅದರಲ್ಲಿ ಕೀವು ಕಟ್ಟುತ್ತಲೂ ಬಹಳ ಬಾಧೆಪಡಿಸುತ್ತಲೂ ಅದರ ದೆಸೆಯಿಂದ ಆ ಕುಮಾರ್ತೆಯು ಸ್ವಲ್ಪ ದುರ್ಬಲಸ್ಥಿತಿಯಲ್ಲಿರುವುದಾಗಿ ಕೇಳುತ್ತೇವೆ ಸೀನಿಯರ್ ಸರ್ಜನ್‌ರವರು ಆಗಾಗ್ಗೆ ಬಂದು ತಕ್ಕ ಇಲಾಜನ್ನು ಮಾಡುವಂತೆ ಸೂಚಿಸಿ ಹೋಗುತ್ತಿದಾರೆ ಮಹಾರಾಣಿ ಶ್ರೀಯವರು ಆ ಕುಮಾರ್ತೆಯನ್ನು ಆರೈಕೆ ಮಾಡುವುದರಲ್ಲೇ ನಿರತರಾಗಿರುವರು ಈ ಮಗುವಿನ ಉಪಾಧಿಯು ಬೇಗನೆ ವಾಸಿಯಾಗಲೆಂದು ಹಾರೈಸುತ್ತೇವೆ

ದೊಡ್ಡ ಬಳ್ಳಾಪುರದ ತಾಲ್ಲೂಕು ಘಾಟಿ ಸುಬ್ರಹ್ಮಣ್ಯದಲ್ಲಿ ಕಳೆದ ೩ ೧೫ ರಿಂದ ದನಗಳ ಜಾತ್ರೆ ನಡೆಯಲಾರಂಭವಾಗಿದೆ ಡೆಪ್ಯುಟಿ ಕಮಿಷನರ್‌ರವರು ಅಗ್ಗೆ ಅಲ್ಲಿ ಗೋವುಗಳ ಪ್ರದರ್ಶನವನ್ನು ನಡಿಸಿ, ಉತ್ತಮವಾದ ಒಂಭತ್ತು ತರಹ ದನಗಳಿಗೆ ೨೪ ಬಹುಮಾನಗಳನ್ನು ಅಂದರೆ, ೩೦೫ ರೂಪಾಯಿಗಳನ್ನು ಹಂಚಿಕೊಡುವುದಾಗಿ ಏರ್ಪಾಡಾಗಿದೆ

. ˙ .

ಕಳೆದ ಶನಿವಾರ ಬೆಳಿಗ್ಗೆ ಜೈನರ ಮುಖ್ಯ ಆಚಾರ್ಯರಾದ ಶ್ರೀಮಂತ ವಿದ್ಯಾಸಾಗರ ನ್ಯಾಯರತ್ನ ಶಾಂತಿವಿಜಯಜೀ ಮಹಾರಾಜ್‌ಯವರು ಹೈದರಾಬಾದಿನಿಂದ ಬೆಂಗಳೂರಿಗೆ ಬಂದರೆಂದೂ, ಅವರ ಜನರು ಅವರನ್ನು ಎದುರುಗೊಂಡು ಸನ್ಮಾನಪೂರ್ವಕವಾಗಿ ಕರೆದುಕೊಂಡುಹೋಗಿ ಸಾಹುಕಾರರ ಮನೆಯಲ್ಲಿ ಇಳಿಸಿ ಸತ್ಕರಿಸುತ್ತಿದ್ದಾರೆಂದೂ ತಿಳಿದುಬಂದಿದೆ

. ˙ .

ಕೋಲಾರ ಚಿನ್ನದ ಗಣಿಗಳಿಗೆ ಸೇರಿದ ಮೈಸೂರ್ ಮೈನ್ ಎಂಬ ಗಣಿಯಲ್ಲಿ ಅನಾಹುತ ಸಂಭವಿಸಿ, ಒಬ್ಬ ಕೂಲಿಯವನು ಮೃತಪಟ್ಟನು ಮತ್ತು ಎರಡು ತಿಂಗಳ ಕೆಳಗೆ ಸೀಮೆಯಿಂದ ಬಂದು ಟ್ಯಾಂಕ್ ಬ್ಲಾಕ್ ಎಂಬ ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಮೆ॥ ವ್ಯಾಟ್ಸನ್ ಎಂಬಾತನಿಗೆ ವಿದ್ಯುಚ್ಛಕ್ತಿಯ ಹಿಡಿಯು ಬಡಿದು ಕಳೆದ ಗುರುವಾರ ಮೃತಪಟ್ಟನು

. ˙ .

ಮಾಜಿ ದಿವಾನ್ ಮೆ॥ ವಿ ಪಿ ಮಾಧವರಾಯರು ಉತ್ತರದೇಶದಲ್ಲಿ ಸಂಚಾರವಾಡಿಕೊಂಡು ಕಳೆದ ವಾರ ಹಿಂತಿರಿಗಿ ಬೆಂಗಳೂರಿಗೆ ಬಂದರು ಮುಂದಿನ ತಿಂಗಳು ಅನಂತಪುರಕ್ಕೆ ಸೇರಿದ ಕಾಲಡಿಯಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳು ಸಂಸ್ಥಾನ ಮುಖದಿಂದ ಆದಿ ಶಂಕರಾಚಾರ್ಯರ ಪ್ರತಿಷ್ಠಾ ಕಾರ್ಯಗಳನ್ನು ನಡಿಸುವಾಗ್ಗೆ ಮೆ॥ ಮಾಧವರಾಯರು ಅಲ್ಲಿಗೆ ಪ್ರಯಾಣಮಾಡುವರೆಂದು ಕೇಳುತ್ತೇವೆ.

. ˙ .

ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರ್ ಮೆ॥ ಎಂ ಶಾಮರಾಯರು ಸಿಬ್ಬಂದಿ ಸಹಿತ ಕಳೆದ ವಾರ ಮೈಸೂರಿಗೆ ಬಂದು, ಇಲ್ಲಿರುವ ಮೂರು ಪರಸ್ಪರ ಸಹಾಯಕ ಸಂಘಗಳ ಲೆಕ್ಕ ಪತ್ರ, ಜಮಾ ಖರ್ಚು ಸ್ಥಿತಿಗತಿ ಮುಂತಾದದನ್ನು ಶೋಧನೆಮಾಡಿಕೊಂಡು, ಕಳೆದ ಭಾನುವಾರ ಬೆಂಗಳೂರಿಗೆ ಪ್ರಯಾಣಮಾಡಿದರು ಅವರು ಮತ್ತೆ ಮುಂದಿನ ತಿಂಗಳಲ್ಲಿ ರಾಜಧಾನಿಗೆ ಬರುವವರಾಗಿದ್ದಾರೆಂತ ತಿಳಿಯುವುದು

. ˙ .

ರಾಜಧಾನಿಯ ಚಾಮುಂಡಿ ಮೊಹಲ್ಲಾದಲ್ಲಿ ಲೇಟ ದಿವಾನ್ ಸರ್ ಕೃಷ್ಣಮೂರ್ತಿಯವರ ಬಂಗಲೆಯು ಅದರಣಕ್ಕೆ ಸೇರಿರುವ ಕಲವು ಭಾಗದ ಖಾಲೀ ನಿವೇಶನವನ್ನು ಸರ್ಕಾರದವರು ಕೊಂಡುಕೊಂಡು ಅಲ್ಲಿ ಮಹಾರಾಣಿಯವರ ಕಾಲೇಜಿನ ವಿದ್ಯಾರ್ಥಿನಿಯರ ವಾಸಕ್ಕಾಗಿ ಒಂದು ವಿದ್ಯಾರ್ಥಿನಿಲಯವನ್ನೋ, ಇಲ್ಲವೇ ಗವರನ್‌ಮೆಂಟ ಅತಿಥಿಗಳು ಇಳಿಯುವುದಕ್ಕೆ ಅನುಕೂಲವಾದ ಬಂಗಲೆಯನ್ನೋ ಕಟ್ಟಬೇಕೆಂದು ನಿಷ್ಕರ್ಷೆಯಾಗಿರುತ್ತದೆ

. ˙ .

ಮುಂದೆ ಹೇಳುವ ಪೆನ್‌ಷನ್ ತಾಲೂಕ ರಿಜಿಸ್ಟ್ರಾರರನ್ನು ಸರ್ಕಾರದವರು ಗ್ರಾಮಾಂತರಗಳಲ್ಲಿರುವ ಪರಸ್ಪರ ಸಹಾಯಕ ಸಂಘಗಳ ಮೇಲ್ವಿಚಾರಕರನ್ನಾಗಿ ನೇಮಕ ಮಾಡಿರುತ್ತಾರೆ ಮೈಸೂರು ತಾಲ್ಲೂಕಿಗೆ ಮೆ॥ ಕೃಷ್ಣಯ್ಯಂಗಾರ್ಯರು, ತುಂಕೂರು ತಾಲ್ಲೂಕಿಗೆ ಮೆ ಟಿ ಬಿ ಲಕ್ಷ್ಮಣರಾಯರು, ಬೆಂಗಳೂರು ತಾಲ್ಲೂಕಿಗೆ ಮೆ॥ ಶ್ರೀನಿವಾಸರಾವ್ ಬಿನ ಗುಂಡೇರಾಯರು. ಹಾಸನ ಮತ್ತು ಆಲೂರ್ ಸಬ್ ತಾಲ್ಲೂಕಿಗೆ ಮೆ ಎನ. ಟಿ ನಾರಣಪ್ಪನವರು.

. ˙ .

ಮೈಸೂರು ಸರ್ಕಾರಿ ನೌಕರನಾದ ಮಹಮದ್ ಹಯಾತ್ ಎಂಬೊಬ್ಬ ಆನೇ ಮಾವುತನು ದಕ್ಷಿಣ ಕನಡಾ ಜಿಲ್ಲೆಯಿಂದ ತನ್ನ ಗರ್ಭಿಣಿಯಾದ ಹೆಂಡತಿಯನ್ನು ಶಿವಮೊಗ್ಗೆಗೆ ಕರೆದುತರುತ್ತಾ ಅವಳನ್ನು ಕುಂಪಾಶೀ ಸೀಮೆಯಲ್ಲಿ ಕೊಂದು ಹಾಕಿದನು ಅಲ್ಲಿನ ಸೆಷನ್ಸ್ ಜಡ್ಜರು ಅವನಿಗೆ ಮರಣ ದಂಡನೆಯನ್ನು ವಿಧಿಸಿದ್ದರು ಮದರಾಸ್ ಹೈಕೋರ್ಟಿನಲ್ಲಿ ಅವನು ಅಪೀಲ್ ಮಾಡಿಕೊಂಡದ್ದಕ್ಕೆ ಅವನಿಗೆ ಮರಣ ದಂಡನೆ ತಪ್ಪಿ ಬಂಕೋಲ್ ಶಿಕ್ಷೆಯು ವಿಧಿಸಲ್ಪಟ್ಟಿತು

. ˙ .

ರಾಜಧಾನಿಯಲ್ಲಿ ಮೊಹರಂ ಹಬ್ಬದ ವೇಷಗಳು ಮೊನ್ನೆಯಿಂದ ಪ್ರಾರಂಭವಾಗಿ ಮೆರವಣಿಗೆಯಾಗುತ್ತಿರುವವು ಪ್ರಜಾ ಆರೋಗ್ಯವು ತೃಪ್ತಿಕರವಾಗಿರೋಣದರಿಂದಲೂ, ಆದಾ ೨ ದಿವಸಗಳ ತಕ್ಕಮಟ್ಟಿಗೆ ಅಗ್ಗವಾಗಿರೋಣದರಿಂದಲೂ ಈ ಸಲ ಮೊಹರಂ ಹಬ್ಬದ ವಿನೋದಗಳು ವಿಶೇಷವಾಗಿ ನಡೆಯುವವೆಂದು ತೋರುತ್ತದೆ ಪ್ರಜಾ ನೆಮ್ಮದಿಗೆ ಭಂಗವುಂಟಾಗದಂತೆ ಪೋಲೀಸ್ ಇಲಾಖೆಯವರು ಮುಂಜಾಗ್ರತೆಯ ಏರ್ಪಾಟುಗಳನ್ನು ಮಾಡಿರುತ್ತಾರೆ ವನರೂ ವೇಷಧಾರಿಗಳೂ ಗಿರೋವಿಗಳೂ ಕೆಡದಂತೆ ಚೌಕಗಳಲ್ಲಿ ಪೋಲೀಸಿನವರನ್ನೂ ಕುದುರೇ ಸವಾರರನ್ನೂ ನೇಮಕ ಮಾಡಿರುವರು

. ˙ .

ಶ್ರೀಮನ್ ಯುವರಾಜರವರು ಕಳೆದ ಭಾನುವಾರ ಹುಲಿಬೇಟೆಗಾಗಿ ಚಾಮರಾಜನಗರದ ತಾಲ್ಲೂಕು ಅಟುಗುಳಿಪುರದ ಕ್ಯಾಂಪಿಗೆ ಪರಿವಾರಸಹಿತ ಪ್ರಯಾಣ ಮಾಡಿದರು ಅವರು ಈ ದಿವಸವೋ ನಾಳೆಯೋ ವಾಪಸು ದಯಮಾಡುವವರಾಗಿದ್ದಾರೆ. ಅವರ ಕ್ಯಾಂಪಿಗೆ ಹೋಗುತ್ತಿದ್ದ ಕೆಲವು ಸಾಮಾನಿನ ಬಂಡಿಗಳಿಗೆ ಕಳೆದ ವಾರ ಬೆಂಡ್ರವಾಡಿಯ ಬಳಿ ಕಳ್ಳರು ಬಿದ್ದು ಸರಕನ್ನು ಅಪಹರಿಸಿದರೆಂದು ವರ್ತಮಾನ ಬಂದದ್ದರಿಂದ ಡೆಪ್ಯುಟಿ ಕಮೀಷನರ್ ಮೆ॥ ಎಂ ಕಾಂತರಾಜೇ ಅರಸಿನವರು ಮೊನ್ನೆ ಸೋಮವಾರ ಮೋಟಾರ್ ಗಾಡಿಯಲ್ಲಿ ಅಲ್ಲಿಗೆ ಹೋಗಿ ಸ್ಥಳ ಅಜಮಾಯಿಷಿ, ತನಿಖೆ ಮುಂತಾದದ್ದನ್ನು ಮಾಡಿಕೊಂಡು ಬಂದರು

. ˙ .

ಕಳೆದ ವಾರ ಶ್ರೀಮನ್‌ಮಹಾರಾಜರವರು ಡೆಪ್ಯುಟಿ ಕಮೀಷನರ್ ಮೆ॥ ಕಾಂತರಾಜೇ ಅರಸಿನವರ ಸಮೇತ ಯಳಂದೂರು ತಾಲ್ಲೂಕು ಬಿಳಿಗಿರಿರಂಗನಬೆಟ್ಟಕ್ಕೆ ಮೋಟಾರ್ ಗಾಡಿಗಳಲ್ಲಿ ಚಿತ್ತೈಸಿ, ಶ್ರೀರಂಗದೇವರ ರಥೋತ್ಸವವನ್ನು ಸರಾಂಬರಿಸಿದರು ಅಲ್ಲಿ ನಡೆಯುವ ಪ್ರದರ್ಶನಕ್ಕಾಗಿ ಬಂದಿದ್ದ ಗೋಶಾಲೆಗಳಲ್ಲಿ ಸುಂದರವಾಗಿ ದಷ್ಟಪುಷ್ಟವಾಗಿದ್ದ ನೂರಾರು ರಾಸುಗಳನ್ನು ಶ್ರೀಮನ್‌ಮಹಾರಾಜರವರಿಗೆ ಕಾಣಿಸಿದರು ಬಳಿಕ ಆಯಾ ರಾಸುಗಳಲ್ಲಿ ಉತ್ತಮವಾದವುಗಳನ್ನು ಆರಿಸಿ ಗಾಡಿಗಳಿಗೆ ಕಟ್ಟಿ ಫೋಟೊಗ್ರಾಫ್ ತೆಗೆಯಿಸಿ ಓಡಿಸಿದರು ಶ್ರೀಮನ್‌ಮಹಾರಾಜರವರು ಅದನ್ನೆಲ್ಲಾ ನೋಡಿ ಸಂತೋಷಪಟ್ಟುಕೊಂಡು ಮೋಟಾರುಗಳಲ್ಲಿ ವಾಪಸು ರಾಜಧಾನಿಗೆ ದಯಮಾಡಿದರು

ಪೆನ್‌ಷನ್ ಎಗ್ಸಿಕ್ಯುಟಿವ್ ಇನ್‌ಜನಿಯರ್ ಮೆ॥ ವಿ. ಅರುಣಾಚಲ ಮೊದಲಿಯಾರ್ರವರು ೬೦ ವರುಷ ವಯಸ್ಸಿನವರಾಗಿ ಕೆಲವು ದಿವಸಗಳಿಂದ ಖಾಯಿಲೆಯಾಗಿದ್ದು ಇದೇ ತಿಂಗಳು ತಾ ೭ ರಲ್ಲಿ ತಮ್ಮ ಸ್ವಗೃಹದಲ್ಲಿ (ಚಾಮರಾಜೇಂದ್ರ ಪೇಟೆ, ಬೆಂಗಳೂರು) ಮೃತಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಮೈಸೂರು ಸಂಸ್ಥಾನದ ಇಂಜಿನಿಯರ್ ಇಲಾಖೆಯಲ್ಲಿ ಪ್ರಾಥಮ್ಯವಾದ ೩೬ ವರುಷಗಳ ಸರ್ವಿಸ್ ಮಾಡಿ ಈಚೆಗೆ ಸುಮಾರು ೪ ವರುಷಗಳ ಹಿಂದೆ ಪೆನ್‌ಷನ್ ಪಡೆದು ನಿವೃತ್ತರಾಗಿದ್ದರು ಮೇಜರ್ ಕೆನ್‌ಸಿಂಗ್‌ಟನ್ ಸಾಹೇಬರವರು ಇವರ ಮುಖವರ್ಚಿ ಮತ್ತು ಮೆಹನತ್ತಿನ ಕೆಲಸಗಳನ್ನು ನೋಡಿ ಸಂತೋಷಪಟ್ಟು ಇವರನ್ನು ಒಳ್ಳೇ ಪದವಿಗೆ ತಂದಿದ್ದರು ಇವರು ಎಲ್ಲಾ ಜನಗಳಲ್ಲಿಯೂ ಬಂಧುಮಿತ್ರರುಗಳಲ್ಲಿಯೂ ದಯಾರಸವುಳ್ಳವರಾಗಿಯೂ ಅನ್ಯೋನ್ಯರಾಗಿಯೂ ಇದ್ದರು ಇವರ ಹಿಂದೆ ತಮ್ಮ ಇಬ್ಬರು ಮಕ್ಕಳನ್ನೂ ಅನೇಕ ಬಂಧು ಮಿತ್ರರನ್ನೂ ವ್ಯಸನಕ್ಕೆ ಪಾತ್ರರಾಗಿ ಮಾಡಿರುತ್ತಾರೆ.

. ˙ .

ಒಬ್ಬ ಬಾತ್ಮಿದಾರರು ಬರೆಯುವುದು.—ಬೆಂಗಳೂರಿನಲ್ಲಿ ಪ್ರಸಿದ್ಧ ಪುರುಷರಾದ ಮು॥ ರಾ॥ ಗುಬ್ಬಿ ತೋಟದಪ್ಪನವರು ಧರ್ಮ ಛತ್ರವನ್ನು ಸ್ಥಾಪಿಸಿ, ಬಂದ ಅಧಿತಿಗಳಿಗೆ ಅನ್ನೋದಕಗಳನ್ನು ಒದಗಿಸುವುದಕ್ಕೂ, ಅನಾಥರಾದ ವಿದ್ಯಾರ್ಥಿಗಳಿಗೆ ಬೇಕಾದ ಸಲಕರಣೆಗಳನ್ನು ಒದಗಿಸುವದಕ್ಕೂ, ಸಾರ್ವಜನಿಕ ವಿಷಯವಾದ ಸಭೆಗಳು ಕೂಡುವದಕ್ಕೂ ಅನುಕೂಲವಾದದೊಡ್ಡ ಕಟ್ಟಡವನ್ನು ಕಟ್ಟಿಸಿರುವರು. ಇವರ ಧರ್ಮ ಬುದ್ಧಿಯನ್ನೂ ದಯಾಳುತ್ವವನ್ನೂ ನೋಡಿ ಘನವನ್ನು ಹೊಂದಿದ ಶ್ರೀಮನ್‌ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಯವರು ಸಾಹುಕಾರ್ ತೋಟದಪ್ಪನವರಿಗೆ "ಧರ್ಮವರ್ತಕ" ಎಂಬ ಬಿರುದನ್ನು ದಯಪಾಲಿಸಿರುವರಲ್ಲದೆ ಕಳೆದ ತಿಂಗಳಲ್ಲಿ ಸಾರ್ವಭೌಮರವರು "ರಾಯಿಬಹದ್ದೂರ್" ಎಂಬ ಶ್ರೇಷ್ಠವಾದ ಬಿರುದನ್ನು ದಯಪಾಲಿಸಿರುವುದು ಸರ್ವರಿಗೂ ತುಂಬಾ ಸಂತೋಷವನ್ನುಂಟುಮಾಡುತ್ತಲಿದೆ ಇಂತಹ ಸಂತೋಷವನ್ನು ತೋರ್ಪಡಿಸುವುದಕ್ಕಾಗಿ ಬೆಂಗಳೂರು ಪುರನಿವಾಸಿಗಳಾದ ಮಹಾ ಜನಗಳೆಲ್ಲರೂ ಸೇರಿ ಕಳೆದ ೧೨ನೇ ತಾ ಮುಖನೀಯರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿ ತಮಗೆ ಉಂಟಾಗಿರುವ ಸಂತೋಷವನ್ನೂ, ಅಪಾರವಾದ ವಿಶ್ವಾಸವನ್ನೂ ತೋರ್ಪಡಿಸಿದರು ಅದಕ್ಕಾಗಿ ಅವರು ಉಚಿತ ವಾಕ್ಯಗಳಿಂದ ಸಭಾಸದರನ್ನು ಸಂತೋಷಗೊಳಿಸಿದರು

. ˙ .

ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ ಪ್ಲೇಗ್ ಚುಚ್ಚನ್ನು ಹಾಕಿಸಿದ ಇಬ್ಬರು ಗ್ರಾಮ ನೌಕರರ ವಿಷಯಗಳಲ್ಲಿ ಸರ್ಕಾರದವರು ಹುಕುಂಕೊಟ್ಟಿರುವುದೇನೆಂದರೆ — ಪ್ಲೇಗ್ ರೋಗವು ತಗುಲದ ಹಾಗೆ ಚುಚ್ಚು ಹಾಕಿಸಿಕೊಳ್ಳಬೇಕೆಂದ ಜನಗಳಿಗೆ ಪ್ರೋತ್ಸಾಹಪಡಿಸಿ ಬಹಳ ಮೆಹನತ್ತು ಮಾಡಿದ ಕೆಲವು ಗ್ರಾಮನೌಕರರಿಗೆ ಉಚಿತವಾದ ಬಹುಮಾನಗಳನ್ನು ಕೊಡಬೇಕೆಂದು ತರೀಕೆರೆ ಆಸ್ಪತ್ರೆ ಅಸಿಸ್ಟೆಂಟರು ಮೈಸೂರು ಸೀಮೆಯ ಸ್ಯಾನಿಟರಿ ಕಮೀಷನರವರಿಗೆ ಲೇಖನವನ್ನು ಬರೆಸಿದರು ಅತ್ತಿಗನಾಳು ಮತ್ತು ನಂದಿ ಗ್ರಾಮಗಳ ಪಟೇಲರು ತಮ್ಮ ತಮ್ಮ ಗ್ರಾಮಗಳಲ್ಲಿ ಜನರು ಪ್ಲೇಗ್ ಚುಚ್ಚು ಹಾಕಿಸಿಕೊಳ್ಳುವಂತೆ ಅವರಿಗೆ ಪ್ರೋತ್ಸಾಹಪಡಿಸುವುದರಲ್ಲಿ ಬಹಳ ಮೆಹನತ್ತು ಮಾಡಿರುತ್ತಾರೆಂದು ರಿಪೋರ್ಟ ಮಾಡಿ, ಈ ಮೆಹನತ್ತಿಗಾಗಿ ಸದರಿ ಪಟೇಲರಿಗೆ ಬೆಳ್ಳಿಯ ಮೆಡಲುಗಳನ್ನು ಯುಕ್ತವಾದ ಲಿಖಿತದೊಂದಿಗೆ ಬಹುಮಾನವಾಗಿ ಕೊಡಬೇಕೆಂದು ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರು ಶಿಫಾರಸು ಮಾಡಿರುವರು ಡೆಪ್ಯುಟಿ ಕಮೀಷನರವರು ಶಿಫಾರಸು ಮಾಡಿರುವುದು ನ್ಯಾಯವಾದದ್ದೆಂದು ಸರ್ಕಾರದವರು ಒಪ್ಪಿ ಮೇಲ್ಕಂಡ ಇಬ್ಬರು ಪಟೇಲರಿಗೂ ಒಂದೊಂದು ಬೆಳ್ಳಿಯ ಮೆಡಲನ್ನು ಜನಗಳೆಲ್ಲಾ ಸೇರತಕ್ಕ ವಿಶೇಷ ಸಂದರ್ಭದಲ್ಲಿ ಡೆಪ್ಯುಟಿ ಕಮೀಷನರವರು ಕೊಡತಕ್ಕದ್ದೆಂದು ಹುಕುಂ ಮಾಡಿದಾರೆ ಈ ಮೆಡಲುಗಳಿಗೆ ತಗುಲುವ ಖರ್ಚನ್ನು ಪ್ಲೇಗ ಫಂಡಿನ ಹಣದಿಂದ ಕೊಡತಕ್ಕದ್ದು ಇವುಗಳಿಗೆ ಎಷ್ಟು ಖರ್ಚು ತಗಲುತ್ತದೆ ಎಂಬುವುದನ್ನು ಸ್ಯಾನಿಟರಿ ಕಮೀಷನರವರು ಸರ್ಕಾರಕ್ಕೆ ತಿಳಿಸಬೇಕಾಗಿದೆ

ಮೈಸೂರು ಗೆಜೆಟ್ ಸಂಗ್ರಹ

ಚೊಟ್ಟನ ಹಳ್ಳಿ ಪಟೇಲ್ ಮ॥ ರಾಜೇಗೌಡರನ್ನು ಮಳವಳ್ಳಿ ತಾಲ್ಲೂಕ್ ಬೋರ್ಡ ಮೆಂಬರಾಗಿ ನೇಮಿಸಿದೆ

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ॥ ಡಿ ದೇವರಾಜ್ ಅರಸಿನವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ಅದನ್ನು ರದ್ದು ಮಾಡಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಡಿ ರಘುನಾಥರಾಯರಿಗೆ ಕ್ರಿಸ್‌ಮಸ್ ರಜಾದೊಂದಿಗೆ ಜನವರಿ ತಾ ೩ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಚನ್ನರಾಯಪಟ್ಟಣದ ಸಬ್ ಡಿವಿಜನ್ ಅ॥ ಕಮೀಷನರ್ ಮೆ॥ ಸಿ ದೇವರಾಜೇ ಅರಸಿನವರಿಗೆ ಡಿಸೆಂಬರ್ ತಾ ೧೬ ರಿಂದ ಒಂದು ತಿಂಗಳು ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನದ ತಾಲ್ಲೂಕ್ ಅಮಲ್ದಾರ್ ಮ॥ ಎಸ್ ಎನ್ ಅಪ್ಪಣ್ಣಯ್ಯಂಗಾರ್ಯರವರನ್ನು ಅ॥ ಕಮೀಷನರಾಗಿ ಬದಲಿ ನೇಮಿಸಿದೆ ಇವರು ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ಚನ್ನರಾಯಪಟ್ಟಣದ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು

ಅ॥ ಕಮೀಷನರ್ ಮೆ॥ ಆರ್ ನಾರಾಯಣರಾಯರಿಗೆ ಕೊಟ್ಟಿರುವ ಎಂಟು ತಿಂಗಳ ರಜವನ್ನು ಇನ್ನೂ ಹದಿನೇಳು ದಿನ ಜಾಸ್ತಿ ಮಾಡಿದೆ

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿ ಹುಕುಂ ಮಾಡಿದೆ — ಮೆ॥ ಜಿ ನಾರಾಯಣರಾಯರು ಮಂಡ್ಯದಿಂದ ಚಾಮರಾಜನಗರದ ತಾಲ್ಲೂಕಿಗೆ ಮೆ॥ ಎಸ್ ವೆಂಕಟರಮಣ ಶಾಸ್ತ್ರಿಯವರು ಚಾಮರಾಜನಗರದಿಂದ ಟಿ ನರಸೀಪುರದ ತಾಲ್ಲೂಕಿಗೆ, ದಿವಾನ್ ರವರ ಆಫೀಸ್ ಕ್ಲಾರ್ಕ ಮೆ॥ ಸಿ ಬಿ ಲಕ್ಷ್ಮಣರಾಯರು ಮಂಡ್ಯ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಆಫೀಸಿಂಗ್ ಅ ಕಮೀಷನರ್ ಮೆ॥ ಮಹಮದ್ ಓಬೇದುಲ್ಲಾಯವರನ್ನು ಮಾಲೂರ್ ಸಬ್ ಡಿವಿಜನ್ನಿಂದ ಕಡೂರ್ ಸಬ್ ಡಿವಿಜನ್ ಛಾರ್ಜಿಗೆ ವರ್ಗ ಮಾಡಿದೆ

ಅ॥ ಕಮೀಷನರ್ ಮೆ॥ ಟಿ ಇ. ಜಯರಾಮ ಅಯ್ಯರವರು ಕೋಲಾರ್ ಡಿಸ್ಟ್ರಿಕ್ಟ್ ಮಾಲೂರ್ ಸಬ್ ಡಿವಿಜನ್ ಛಾರ್ಜಿಗೆ ವರ್ಗ ಮಾಡಲ್ಪಟ್ಟಿದಾರೆ ಇವರು ಮೆ॥ ಜಿ ಹ್ಯೂಂ ರೈಟ್‌ಯವರಿಗೆ ಛಾರ್ಜು ಕೊಟ್ಟ ಮೇಲೆ ಹೋಗತಕ್ಕದ್ದು

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಜಿ ಕೃಷ್ಣಮೂರ್ತಿನಾಯುಡುಯವರನ್ನು ಮತ್ತೆ ಮೈಸೂರಿನಿಂದ ಶಿವಮೊಗ್ಗಾ ಸಬ್ ಡಿವಿಜನ್ನಿಗೆ ವರ್ಗವ ಡಿದೆ

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಎಂ ಎ ವರದಾಚಾರ್ಯರನ್ನು ಶಿವಮೊಗ್ಗೆಯಿಂದ ಕಡೂರ್ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ

ಅ॥ ಕಮೀಷನರ್ ಮೆ॥ ಎ ಕೃಷ್ಣಸ್ವಾಮಿಯಂಗಾರ್ಯರನ್ನು ಕೋಲಾರ್ ಡಿಸ್ಟ್ರಿಕ್ಟ್ ಮಾಲೂರ್ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ

ಮೈಸೂರು ಇಂಜನಿಯರ್ ಇಲಾಖೆಯಲ್ಲಿ ಸೂಪ್ರವೈಜರುಗಳಾಗಿರುವ ಮೆ॥ ಎಲ್ ಕೆ ಸ್ವಾಮಿನಾಥ ಐಯರವರನ್ನೂ ಮೆ॥ ಎಫ್. ಎಚ್ ಬರ್ ಯವರನ್ನೂ ಅನರರಿ ಅ॥ ಇಂಜನಿಯರ್ ಪದವಿಗೆ ಸರ್ಕಾರದವರು ಬಡ್ತಿ ಮಾಡಿರುತ್ತಾರೆ

ಸ್ವದೇಶಾಭಿಮಾನವು.

ತಾಯಿ ತಂದೆಗಳು ತಮಗೂ ತಮ್ಮ ಮಕ್ಕಳಿಗೂ ಭೇದಮಾಡದೆ ಅವರಲ್ಲಿ ಅತ್ಯಂತ ಪ್ರೇಮದಿಂದ ಅವರಿಗಾಗಿ ಯಾವ ಕಷ್ಟವನ್ನಾದರೂ ಅನುಭವಿಸುವರು. ಮಕ್ಕಳು ಮುಂದಕ್ಕೆ ಬರಬೇಕೆಂದು ಮಾಡಬಹುದಾದುದನ್ನೆಲ್ಲಾ ಮನಃಪೂರ್ವಕವಾಗಿ ಮಾಡುವರು ಇದರಿಂದ ಅವರ ಮಕ್ಕಳು ಅಭಿವೃದ್ಧಿಗೆ ಬರುವರು ಹಾಗೆಯೇ ಒಂದು ದೇಶವು ಏಳಿಗೆಗೆ ಬರಬೇಕಾದರೆ, ಅದರಲ್ಲಿರುವ ಪ್ರತಿ ಮನುಷ್ಯನೂ ಸ್ವದೇಶವನ್ನು ತನ್ನ ಸಂಸಾರದಂತೆ ಭಾವಿಸಿಕೊಂಡು ಪ್ರೀತಿಸುತ್ತಾ, ಅದರ ಶ್ರೇಯಸ್ಸಿಗಾಗಿ ಯಾವ ಕಷ್ಟವನ್ನಾದರೂ ಅನುಭವಿಸುವುದಕ್ಕೆ ಹಿಂಜರಿಯದಿರಬೇಕು ಸ್ವದೇಶದ ವಿಷಯದಲ್ಲಿ ಪ್ರತಿಯೊಬ್ಬನಿಗೂ ಇರಬೇಕಾದ ಇಂಥ ಪ್ರೀತಿಗೆ ಸ್ವದೇಶಾಭಿಮಾನವೆಂದು ಹೆಸರು ಯಾವ ದೇಶದ ಪ್ರಜೆಗಳು ಸ್ವಾರ್ಥಪರರಾಗಿಯೂ ದೇಶಾಭಿಮಾನಹೀನರಾಗಿಯೂ ಇರುವರೋ ಆ ದೇಶವು ಎಂದಿಗೂ ಏಳಿಗೆಗೆ ಬರಲಾರದು

ಸ್ವದೇಶಾಭಿಮಾನಕ್ಕೆ ಪ್ರಖ್ಯಾತಿಗೊಂಡ ಮಹಾ ಪುರುಷರು ಪ್ರತಿ ದೇಶದಲ್ಲಿಯೂ ಉಂಟು ಪೂರ್ವಕಾಲದಲ್ಲಿ ಗ್ರೀಕರಲ್ಲಿಯೂ ರೋಮನ್ ಜನರಲ್ಲಿಯೂ ಇಂಥವರನೇಕರಿದ್ದರು ಅದರಿಂದಲೇ ಅವರ ರಾಜ್ಯಗಳು ಬಹಳ ಉನ್ನತ ಸ್ಥಿತಿಗೆ ಬಂದುವು ಹಿಂದೂ ದೇಶದಲ್ಲಿಯೂ ಪೂರ್ವದಲ್ಲಿ ರಾಜಪುತ್ರರೂ ಮರಾಟೆಯವರೂ ಸ್ವದೇಶಕ್ಕಾಗಿ ಪ್ರಾಣಗಳನ್ನು ಒಪ್ಪಿಸಿರುವರು ಈಗಿನ ಕಾಲದಲ್ಲಿ ಇಂಗ್ಲೆಂಡ್ ಸ್ವಿಟ್ಜರ್ಲೆಂಡ್, ಜಪಾನ್ ದೇಶಗಳ ಜನರು ಸ್ವದೇಶಾಭಿಮಾನಕ್ಕೆ ಪ್ರಸಿದ್ಧರು ಜಪಾನ್ ದೇಶದ ಪ್ರತಿಯೊಬ್ಬ ಪುರುಷನೂ ಸ್ತ್ರೀಯೂ ಸ್ವದೇಶಕ್ಕಾಗಿ ಪ್ರಾಣಕೊಡಲು ಸಿದ್ಧರಾಗಿರುವರು ಕೆಲವು ವರ್ಷಗಳ ಕೆಳಗೆ ಜಪಾನಿಗೂ ರಷ್ಯಕ್ಕೂ ನಡೆದ ಯುದ್ಧದಲ್ಲಿ ಲಕ್ಷಾಂತರ ಜಪಾನ್ ದೇಶೀಯರು ಹೋರಾಡಿ ಪ್ರಾಣಗಳನ್ನೊಪ್ಪಿಸಿದ್ದರಿಂದಲೇ ಅವರ ಕಡೆ ಅದ್ಭುತವಾದ ಜಯವುಂಟಾಯಿತು ಆ ಯುದ್ಧದಲ್ಲಿ ಮನೆಮನೆಗೂ ಒಬ್ಬೊಬ್ಬರಿಗೆ ಕಡಮೆ ಇಲ್ಲದೆ ಕಾಳಗಕ್ಕೆ ತಾವಾಗಿಯೇ ನುಗ್ಗಿದರು ಒಂದು ಮನೆಯಲ್ಲಿ ತಾಯಿಗೆ ಒಬ್ಬನೇ ಮಗನಿದ್ದನು ಎಲ್ಲರಂತೆ ತಾನೂ ಯುದ್ಧಸನ್ನದ್ಧನಾಗಿದ್ದರೂ, ಆತನು ತನ್ನ ತಾಯನ್ನು ದಿಕ್ಕಿಲ್ಲದೆ ಬಿಟ್ಟುಹೋಗಲಾರದೆ ಚಿಂತಿಸುತ್ತಿದ್ದನು ಇದನ್ನರಿತು ಆತನ ತಾಯಿ "ನನ್ನ ದೇಶವು ನನಗಿಂತ ಹೆಚ್ಚು ಪ್ರೀತಿಗೆ ಪಾತ್ರವಾದದ್ದು ಅದಕ್ಕೆ ಮಹಾ ವಿಪತ್ತು ಬಂದಿರುವಲ್ಲಿ ನನ್ನ ರಕ್ತವ್ಯವನ್ನು ಮಾಡದೆ ಹಿಮ್ಮೆಟ್ಟಕೂಡದು" ಎಂದು ಹೇಳುತ್ತಾ ತನ್ನ ಪ್ರಾಣವನ್ನು ಕಳೆದುಕೊಂಡು, ಮಗನು ಯುದ್ಧಕ್ಕೆ ಹೋಗಲು ಅನುಕೂಲಮಾಡಿಕೊಟ್ಟಳು

ಸ್ವದೇಶಾಭಿಮಾನವನ್ನು ತೋರಿಸಲು ಎಲ್ಲರೂ ಸಿಪಾಯಿಗಳಾಗಿ ಪ್ರಾಣಬಿಡಬೇಕಾದುದಿಲ್ಲ ಸ್ವದೇಶಾಭಿಮಾನವು ಎಂಥ ಕೆಲಸ ಮಾಡುವವನಲ್ಲಾದರೂ ಇರಬಹುದು ಯಾವನು ತನ್ನ ದೇಶಕ್ಕೆ ಕೆಟ್ಟ ಹೆಸರು ಬಾರದೆ ಎಚ್ಚರಿಕೆಯಾಗಿರುವನೋ, ಯವನು ತನ್ನ ಕಾರ್ಯಗಳಿಂದ ತನ್ನ ದೇಶಕ್ಕೆ ಗೌರವವೂ ಯಶಸ್ಸೂ ಬರುವಂತೆ ನಡೆದುಕೊಳ್ಳುವನೋ ಅವನು ಸ್ವದೇಶಾಭಿಮಾನವುಳ್ಳವನು ಸ್ವದೇಶಾಭಿಮಾನಿಯು ಎಷ್ಟೇ ಕೀಳುತರದ ಕೆಲಸ ಮಾಡುತ್ತಿರಲಿ, ಅದನ್ನು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಚೆನ್ನಾಗಿ ಮಾಡುವನು ಎಂದಿಗೂ ಸನ್ಮಾರ್ಗವನ್ನು ಬಿಟ್ಟು ಹೋಗನು ಸ್ವದೇಶೀಯರನ್ನು ತನ್ನ ಸಹೋದರರಂತೆ ಪ್ರೀತಿಸುವನು ತನ್ನ ಒಳ್ಳೆಯ ನಡತೆಯಿಂದ ಎಲ್ಲರಿಗೂ ಮೇಲ್ಪಂಕ್ತಿಯಾಗಿರುವನು ಇತರರಲ್ಲಿ ಕಂಡು ಬರುವ ದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನಿಸುವನು ಒಬ್ಬರಿಗೆ ಮೋಸಮಾಡಿ ಲಾಭ ಸಂಪಾದಿಸನು ಯಾವಾಗಲೂ ಪ್ರಜಾಕ್ಷೇಮ ಚಿಂತನೆಯಲ್ಲಿಯೂ ರಾಜಭಕ್ತಿಯಲ್ಲಿಯೂ ನಿರತನಾಗಿರುವನು ಅನ್ಯದೇಶೀಯರನ್ನು ಸ್ನೇಹಿಸುವುದೂ ನಿಂದಿಸುವುದೂ, ಸ್ವದೇಶೀಯರ ವಿಷಯದಲ್ಲಿ ಕಣ್ಣು ಮುಚ್ಚಿಕೊಂಡಿರುವುದೂ, ಸರಕಾರವನ್ನು ಸುಮ್ಮನೆ ದೂಷಿಸುವುದೂ ಸ್ವದೇಶಾಭಿಮಾನಕ್ಕೆ ಲಕ್ಷಣಗಳಲ್ಲ ಕೆಲವರು ವಾಚಾಲರು ತಾವು ಸ್ವದೇಶಾಭಿಮಾನಿಗಳೆಂದು ತೋರಿಸಿಕೊಂಡು ಉಪನ್ಯಾಸಗಳನ್ನು ಮಾಡಿ, ಜನರಿಗೆ ತಮ್ಮಲ್ಲಿ ನಂಬಿಕೆ ಹುಟ್ಟಿಸಿ, ಅವರನ್ನು ಮರುಳುಮಾಡಿಕೊಂಡು ಅವರಿಂದ ತಮ್ಮ ಕೆಲಸವನ್ನು ನೆರವೇರಿಸಿಕೊಳ್ಳುವುದುಂಟು ಇಂಥ ಸ್ವಾರ್ಥಪರರನ್ನು ಸ್ವದೇಶಾಭಿಮಾನಿಗಳೆಂದು ಗಣಿಸದೆ ದೂರತ್ಯಜಿಸಬೇಕು

ಸ್ವದೇಶಾಭಿಮಾನಕ್ಕೆ ಎಲ್ಲೆಲ್ಲಿಯೂ ಪುರಸ್ಕಾರವುಂಟು ಸ್ವದೇಶಾಭಿಮಾನಿಗಳ ಹೆಸರು ಚಿರಸ್ಥಾಯಿಯಾಗಿ ನಿಲ್ಲುವಂತೆ, ಅವರ ಜ್ಞಾಪಕಾರ್ಥವಾಗಿ ಕಟ್ಟಡಗಳನ್ನು ಕಟ್ಟಿಸುವ ವಾಡಿಕೆ ಇದೆ ದೇಶದ್ರೋಹಿಗೆ ಅತಿ ಕಠಿಣವಾದ ಶಿಕ್ಷೆಯನ್ನು ವಿಧಿಸುವರು ಪೂರ್ವಕಾಲದಲ್ಲಿ ನಮ್ಮ ದೇಶವು ಪಡೆದಿದ್ದ ಹೆಚ್ಚುಗಾರಿಕೆಯನ್ನು ನೆನೆದುಕೊಂಡು ಸುಮ್ಮನೆ ತೃಪ್ತರಾಗಿದ್ದರೆ ಏನೂ ಫಲವಿಲ್ಲ ಪೂರ್ವದ ಯಶಸ್ಸು ಮುಂದೆಯೂ ನಿಂತು, ಅದಕ್ಕಿಂತ ಅತಿಶಯವಾದ ಕೀರ್ತಿ ನಮ್ಮ ದೇಶಕ್ಕೆ ಒದಗುವಂತೆ ನಾವೆಲ್ಲರೂ ಧರ್ಮವಾಗಿ ನಡೆದುಕೊಳ್ಳುವುದು ಕರ್ತವ್ಯವಾಗಿದೆ

ಹಿಂದುಸ್ಥಾನದ ರಾಷ್ಟ್ರೀಯಕೂಟವು

ಕಳೆದ ತಿಂಗಳ ತಾ ೨೭ ರಿಂದ ಲಾಹೋರ್ ಪಟ್ಟಣದಲ್ಲಿ ಈ ರಾಷ್ಟ್ರೀಯ ಸಾರ್ವಜನಿಕ ಸಮಾಜವು ಪ್ರಾರಂಭವಾಗಿ ಮೂರು ದಿನಗಳು ನಡೆಯಿತು. ಮೆ॥ ಮದನ ಮೋಹನ ಮಾಲವ್ಯರವರು ಸಭಾ ನಾಯಕರಾಗಿದ್ದರು. ಈ ಸಮಾಜದಲ್ಲಿ ತೀರ್ಮಾನ ಮಾಡಲ್ಪಟ್ಟ ವಿಷಯಗಳನ್ನು ಇಲ್ಲಿ ತಿಳಿಸುವೆವು.

೧ ಮಾರ್ಕ್ವಿಸ್ ಆಫ್ ರಿಪ್ಪನ್‌ರವರು ನಮ್ಮ ಭಾರತೀಯರ ಕ್ಷೇಮಾರ್ಥವಾಗಿ ವೈಸ್‌ರಾಯಿಯವರಾಗಿದ್ದಾಗಲೂ, ಈಚೆಗೂ ಅನೇಕ ಉಪಕಾರಗಳನ್ನು ಮಾಡಿ ನಮ್ಮಗಳ ಪ್ರೀತಿಗೂ, ಗೌರವಕ್ಕೂ, ಕೃತಜ್ಞತೆಗೂ ಅತ್ಯಂತವಾಗಿ ಪಾತ್ರರಾಗಿದ್ದರು. ಇವರ ಮರಣದಿಂದ ಇಂಡಿಯಾ ದೇಶಕ್ಕೆ ಉಂಟಾದ ಅನಿರ್ವಚನೀಯವಾದ ನಷ್ಟವನ್ನು ಈ ಕಾಂಗ್ರೆಸ್ ಸಭೆಯವರು ರಿಕಾರ್ಡು ಮಾಡತಕ್ಕದ್ದು.

೨. ಗೌರ್ನರ್‌ಜನರಲ್‌ರವರ ಎಗ್ಸಿಕ್ಯೂಟಿವ್ ಕೌನ್ಸಿಲ್‌ಗೆ ಮೆ॥ ಸಿಂಹರವರನ್ನು ನಿಯಮಿಸಿದ್ದಕ್ಕೋಸ್ಕರವೂ, ನಮ್ಮ ಎಡ್ವರ್ಡ್ ಮಹಾ ಚಕ್ರವರ್ತಿಯವರು ಪ್ರಿವಿ ಕೌನ್ಸಿಲ್‌ಗೆ ಮೆ॥ ಅಮೀರಲ್ಲಿಯವರನ್ನು ಮೆಂಬರುಗಳಾಗಿ ಮಾಡಿದ್ದಕ್ಕೋಸ್ಕರವೂ ಎಡ್ವರ್ಡ್ ಮಹಾ ಪ್ರಭುಗಳಿಗೆ ನಮ್ಮ ಕೃತಜ್ಞತೆಯನ್ನು ವಿಜ್ಞಾಪಿಸತಕ್ಕದ್ದು.

೩. ಲಾರ್ಡ್ ಮಾರ್ಲೆ ಮತ್ತು ಲಾರ್ಡ್ ಮಿಂಟೋರವರು ಶಾಂತವಾದ ತಿದ್ದುಪಾಟುಗಳನ್ನು ಜಾರಿಗೆ ತರುವುದಕ್ಕೋಸ್ಕರ ೧೯೦೯ನೇ ಇಸವಿಯ ಇಂಡಿಯನ್ ಕೌನ್ಸಿಲ್ ಆಕ್ಟನ್ನು ಜಾರಿಗೆ ತಂದರು. ಈ ಆಕ್ಟಿನ ಏರ್ಪಾಡುಗಳು ಧರ್ಮವಾಗಿಯೂ, ಉದಾರವಾಗಿಯೂ ಇರುವವು. ಆದರೆ ಈ ಆಕ್ಟನ್ನು ಜಾರಿಗೆ ತರುವುದರಲ್ಲಿ ಒಂದು ಮತದವರಿಗೆ ಪ್ರಾಶಸ್ತ್ಯವನ್ನು ಕೊಟ್ಟು ಮತಾಂತರದವರಿಗೆ ನ್ಯೂನಾತಿರೇಕಗಳನ್ನು ಉಂಟುಮಾಡುವ ರೂಲುಗಳು ಏರ್ಪಾಡಾದವು. ಈ ರೂಲುಗಳು ಲಾರ್ಡ್ ಮಾರ್ಲೆಯವರ ಹುಕುಮಿನಲ್ಲಿ ಗರ್ಭಿತವಾಗಿರತಕ್ಕ ಉದಾರಭಾವಕ್ಕೆ ಸಂಪೂರ್ಣವಾಗಿ ವಿರೋಧವಾಗಿರುವವು. ಒಂದು ಮತಸ್ಥರಿಗೆ ಪಕ್ಷಪಾತವನ್ನು ತೋರಿಸಿ ಇತರ ಮತಸ್ಥರ ಹಕ್ಕು ಬಾಧ್ಯತೆಗಳಿಗೆ ವಿರೋಧವನ್ನು ಉಂಟುಮಾಡಿರುವದರಿಂದಲೂ, ಚುನಾಯಿಸತಕ್ಕವರ ಯೋಗ್ಯತೆ ಮೊದಲಾದವುಗಳ ವಿಷಯದಲ್ಲಿಯೂ ಇದೇ ವಿಧವಾದ ಪಕ್ಷಪಾತವು ತೋರಿಸಲ್ಪಟ್ಟಿರುವದರಿಂದಲೂ, ಕೌನ್ಸಿಲ್ಲಿಗೆ ಅನುಮೋದನವಾದಲಾಗತಕ್ಕವರ ಯೋಗ್ಯತೆಯ ವಿಷಯದಲ್ಲಿಯೂ ಅತ್ಯಂತ ಅಧರ್ಮವಾದ ನಿರ್ಬಂಧಗಳಿರುವದರಿಂದಲೂ, ವಿದ್ಯಾವಂತರಾದವರು ಈ ತಿದ್ದುಪಾಟುಗಳ ಪ್ರಯೋಜನವನ್ನು ಹೊಂದುವದಕ್ಕೆ ಪ್ರತಿಬಂಧಕವಾಗಿರುವಂತೆ ರೆಗ್ಯುಲೇಷನ್‌ಗಳು ಮಾಡಲ್ಪಟ್ಟಿರುವದರಿಂದಲೂ, ಪ್ರಾವಿನ್ಷಿಯಲ್ ಕೌನ್ಸಿಲ್‌ಗಳಲ್ಲಿ ಚೀರೋಬುಗಾರರು ಹೆಚ್ಚಾಗುವಂತೆ ಮಾಡಬೇಕಾದ ಏರ್ಪಾಡುಗಳೂ ಕೂಡಾ ನಿಷ್ಪ್ರಯೋಜನವಾಗಿ ಪರಿಣಮಿಸುವಂತೆ ಮಾಡಲ್ಪಟ್ಟಿರುವದರಿಂದಲೂ, ಈ ಕಾಂಗ್ರೆಸ್ಸಿನವರು ಈ ವಿಷಯದಲ್ಲಿ ತಮ್ಮ ಬಲವಾದ ಅಸಮಾಧಾನವನ್ನು ರಿಕಾರ್ಡು ಮಾಡಿದಾರೆ. ಈ ಚುನಾವಣೆಗಳು ಪೂರೈಸಿದಮೇಲಾದರೂ ಗವರ್ನ್‌ಮೆಂಟಿನವರು ಇದನ್ನು ಪರ್ಯಾಲೋಚಿಸಿ, ಈ ರೆಜಲ್ಯೂಷನ್‌ಗಳಲ್ಲಿ ಗರ್ಭಿತವಾಗಿರುವ ನ್ಯೂನಾತಿರೇಕಗಳನ್ನು ಪರಿಹಾರ ಮಾಡುವರೆಂದು ನಂಬಲ್ಪಟ್ಟಿದೆ.

೪ ಬಂಗಾಳದ ವಿಭಾಗವು ಗವರ್ನ್‌ಮೆಂಟಿನವರ ಪರ್ಯಾಲೋಚನೆಗೆ ಅರ್ಹವಾದದ್ದು. ಬಂಗಾಳಿ ಭಾಷೆಯನ್ನು ಮಾತನಾಡತಕ್ಕ ಜನಗಳೆಲ್ಲರೂ ಒಂದು ಭಾಗದಲ್ಲಿರುವಂತೆ ಏರ್ಪಾಡಾಗುವದು ಅವಶ್ಯಕ. ತಪ್ಪನ್ನು ಮಾಡಿದಾಗ್ಯೂ ಮಾಡಿದ ಕೆಲಸವು ತಪ್ಪುಕೆಲಸವೆಂದು ಗೊತ್ತಾದ ಕೂಡಲೇ ಅದನ್ನು ತಿದ್ದಿಕೊಳ್ಳುವದು, ಧರ್ಮವಾಗಿ ರಾಜ್ಯಭಾರ ಮಾಡತಕ್ಕವರಿಗೆ ಮುಖ್ಯವಾದ ಲಕ್ಷಣ. ಎಡ್ವರ್ಡ್ ಮಹಾ ಪ್ರಭುಗಳ ಗೌರ್ನ್‌ಮೆಂಟಿನವರು ಈ ವಿಷಯವನ್ನು ಪರ್ಯಾಲೋಚಿಸಿ ಈ ವಿಭಾಗದಿಂದ ಉಂಟಾಗಿರತಕ್ಕ ಅನರ್ಥಗಳನ್ನು ಪರಿಹಾರ ಮಾಡಿ ಚಕ್ರಾಧಿಪತ್ಯದ ಗೌರವವನ್ನು ಅಭಿವೃದ್ಧಿಮಾಡಿಕೊಳ್ಳಬೇಕು. ಈ ವಿಭಾಗದಿಂದ ಉಂಟಾಗಿರತಕ್ಕ ಅನರ್ಥಗಳನ್ನು ಈ ಭರತಖಂಡದ ರಾಜ್ಯಭಾರದ ಜವಾಬ್ದಾರಿಯನ್ನು ವಹಿಸಿರತಕ್ಕ ಬ್ರಿಟಿಷ್ ಮಹಾಜನಗಳಿಗೆ ತಿಳಿಸುವುದಕ್ಕೋಸ್ಕರ ವಿಲಾಯಿತಿಗೆ ಹೋಗಬೇಕೆಂದು ಈ ಸಭೆಯವರು ಮೆ॥ ಸುರೇಂದ್ರನಾಥ ಬಾನರ್ಜಿಯವರನ್ನೂ, ಮೆ॥ ಭೂಪೇಂದ್ರನಾಥ ಬೋಸ್‌ರವರನ್ನೂ ನಿಯಮಿಸಿರುವರು.

೫ ಟ್ರಾನ್ಸ್‌ವಾಲ್ ದೇಶದಲ್ಲಿರತಕ್ಕ ಭಾರತೀಯರು ಅಸಾಧಾರಣವಾದ ದೇಶಾಭಿಮಾನವನ್ನೂ, ಅಪ್ರತಿಹತವಾದ ಧೈರ್ಯವನ್ನೂ, ಅಭೂತಪೂರ್ವಕವಾದ ಕ್ಲೇಶವನ್ನೂ ತೋರಿಸಿರುವರು. ಈ ಭಾರತೀಯರಲ್ಲಿ ಮಹಮ್ಮದೀಯರೂ, ಹಿಂದುಗಳೂ, ಪಾರಸಿಗಳೂ, ಮತ್ತು ಕ್ರೈಸ್ತರೂ ಇರುವರು. ತಮ್ಮ ದೇಶದ ಪ್ರತಿಷ್ಠೆಗೆ ನ್ಯೂನತೆ ಬರದೇ ಇರುವಂತೆ ಈ ಜನಗಳು ಅನಿರ್ವಚನೀಯವಾದ ಕ್ಲೇಶವನ್ನೂ ಕೂಡಾ ತೃಣಪ್ರಾಯವಾಗಿ ತಿಳಿದುಕೊಂಡು ಅಸಾಧಾರಣವಾದ ಸ್ಥೈರ್ಯದಿಂದ ಅನುಭವಿಸುತ್ತಾ, ತಮ್ಮ ಹಕ್ಕು ಬಾಧ್ಯತೆಗಳಿಗೋಸ್ಕರ ಶಾಂತವಾಗಿ ಹೊಡೆದಾಡುತ್ತಿರುವರು. ಈ ಭಾರತೀಯರ ಸಂಗಡಕ್ಕೆ ಮುಖಂಡರಾದ ಮ॥ ಮೋ. ಕೆ. ಗಾಂಧಿಯವರೂ ಮತ್ತು ಇವರ ಮಿತ್ರರೂ ಪಡುತ್ತಿರುವ ಕಷ್ಟವೂ ಮಾಡುತ್ತಲಿರುವ ಸಾಂತವಾದ ಸಾಹಸಕೃತ್ಯಗಳೂ ಬಹಳ ವಿಸ್ಮಯವನ್ನುಂಟುಮಾಡುವವು. ಇವರು ತಮ್ಮ ಹಕ್ಕು ಬಾಧ್ಯತೆಗಳಿಗೋಸ್ಕರ ಎಂಥಾ ಕಷ್ಟಗಳಿಗೂ ಹೆದರದೇ ಗುದ್ದಾಡುತ್ತಿರುವದನ್ನು ನೋಡಿ ಮೆ॥ ಆರ್. ಜೆ. ತಾತಾರವರು ಇಂಥಾ ಕಷ್ಟಕಾಲದಲ್ಲಿ ಅವರ ಖರ್ಚಿಗೋಸ್ಕರ ೨೫,೦೦೦ ಸಾವಿರ ರೂಪಾಯಿಗಳನ್ನು ಕಳುಹಿಸಿರುವರು. ಟ್ರಾನ್ಸ್‌ವಾಲ್ ದೇಶವು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ್ದು, ಭಾರತೀಯರು ಬ್ರಿಟಿಷ್ ಪ್ರಜೆಗಳು. ತಮ್ಮ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಕಾಪಾಡತಕ್ಕದ್ದು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಕರ್ತವ್ಯವಾದದ್ದು. ಭಾರತೀಯರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿ ಬ್ರಿಟಿಷ್ ಪ್ರಜೆಗಳಿಗಿರತಕ್ಕ ಹಕ್ಕು ಬಾಧ್ಯತೆಗಳಿಲ್ಲದಂತೆ ಮಾಡುವದು ಬ್ರಿಟಿಷ್ ಧರ್ಮಕ್ಕೆ ವಿರೋಧವಾದದ್ದು. ಈ ರೀತಿಯಲ್ಲಿ ಮಾಡುವದು ಬ್ರಿಟಿಷ್ ಜನಗಳ ಲಾಭಕ್ಕೂ, ಧರ್ಮಕ್ಕೂ, ಪ್ರತಿಷ್ಠೆಗೂ ಪ್ರತಿಕೂಲವಾದದ್ದು. ಈ ವಿಷಯಗಳನ್ನು ಪರ್ಯಾಲೋಚಿಸಿ ಇನ್ನು ಮೇಲೆ ದಕ್ಷಿಣ ಆಫ್ರಿಕಾಕ್ಕೆ ನಮ್ಮ ದೇಶೀಯರು ಕರೆದುಕೊಂಡು ಹೋಗಲ್ಪಡತಕ್ಕದ್ದನ್ನು ತಪ್ಪಿಸಬೇಕಾದದ್ದಲ್ಲದೆ, ಈಗ ಅಲ್ಲಿ ದಕ್ಷಿಣ ಆಫ್ರಿಕಾ ಗವರ್ನ್‌ಮೆಂಟಿನ ನಿರಂಕುಶ ಪ್ರವರ್ತನಕ್ಕೆ ಬ್ರಿಟಿಷ್ ಪ್ರಜೆಗಳಾದ ಭಾರತೀಯರು ಗುರಿಯಾಗದಂತೆ ಮಾಡಬೇಕು.

೬. ೧೮೫೮ನೇ ಇಸವಿಯಲ್ಲಿ ವಿಕ್ಟೋರಿಯಾ ಮಹಾರಾಜ್ಞಿಯವರ ಇಷ್ಟಾರು ರೂಪವಾದ ಮಹಾಸನ್ನದು ಇಂಡಿಯಾ ದೇಶೀಯರಿಗೆ ಕೊಡಲ್ಪಟ್ಟಿತು. ಈ ಸನ್ನದಿನ ಪ್ರಕಾರ ಆಂಗ್ಲೇಯ ಪ್ರಜೆಗಳಿಗೂ, ಭಾರತೀಯ ಪ್ರಜೆಗಳಿಗೂ ಯಾವ ವೈಲಕ್ಷಣ್ಯವೂ ಮಾಡಲ್ಪಡಕೂಡದೆಂಬದಾಗಿಯೂ, ಸರ್ಕಾರದ ಉದ್ಯೋಗದಲ್ಲಿ ಸಮಸ್ತ ಭಾರತೀಯರೂ ಅವರವರ ಯೋಗ್ಯತೆಗೆ ಅನುಸಾರವಾಗಿ ಜಾತಿ, ಮತ, ಕುಲ, ಗೋತ್ರ, ಮೊದಲಾದವುಗಳಿಗೆ ಯಾವ ಪುರಸ್ಕಾರವನ್ನೂ ಕೊಡದೆ ಭಾರೀ ಉದ್ಯೋಗಗಳಿಗೆ ನಿಯಮಿಸಲ್ಪಡಬೇಕೆಂಬದಾಗಿಯೂ ನಿಷ್ಕರ್ಷೆ ಮಾಡಲ್ಪಟ್ಟಿರುವುದು. ಈ ನಿಷ್ಕರ್ಷೆಯನ್ನು ಜಾರಿಗೆ ತರುವ ವಿಷಯದಲ್ಲಿ ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಪಾರ್ಲಿಮೆಂಟಿನವರು ೧೮೯೩ನೇ ಇಸವಿ ಜೂನ್ ನಲ್ಲಿ ತಕ್ಕ ಹುಕುಮನ್ನು ಮಾಡಿರುವರು. ಈ ಹುಕುಮಿನಿಂದ ಎಲ್ಲಾ ಪರೀಕ್ಷೆಗಳೂ ವಿಲಾಯಿತಿಯಲ್ಲಿ ಮಾತ್ರ ಮಾಡಲ್ಪಡದೇ ಇಂಡಿಯಾದಲ್ಲಿಯೂ ಮಾಡಲ್ಪಡಬೇಕೆಂದು ಗೊತ್ತುಮಾಡಲ್ಪಟ್ಟಿರುವುದು. ಕಾಂಪಿಟೇಟಿವ್ ಸಿವಿಲ್ ಸರ್ವಿಸ್ ಪರೀಕ್ಷೆಯು ಇಂಗ್ಲೆಂಡಿನಲ್ಲಿಯೂ ಇಂಡಿಯಾ ದೇಶದಲ್ಲಿಯೂ, ಎರಡು ಕಡೆಯಲ್ಲಿಯೂ ಆಗಬೇಕು. ಇಂಡಿಯಾದ ಮೆಡಿಕಲ್ ಸರ್ವಿಸ್ಸಿಗೆ ಜನಗಳನ್ನು ನಿಯಮಿಸುವದರಲ್ಲಿ ಅರ್ಹರಾದ ಭಾರತೀಯರನ್ನು ಚುನಾಯಿಸಬೇಕು. ಭಾರತೀಯರಿಗೋಸ್ಕರ ಇಂಡಿಯನ್ ಮಿಲಿಟರಿ ಮೆಡಿಕಲ್ ಸರ್ವಿಸ್ ಎಂಬದಾಗಿ ಪ್ರತ್ಯೇಕವಾದ ಏರ್ಪಾಡನ್ನು ಮಾಡಬೇಕು. ಈ ರೆಜಲ್ಯೂಷನ್ನು ಬೊಂಬಾಯಿ ಸಂಸ್ಥಾನದ ಮೆ॥ ಸಮರ್ಥರವರು ಒಂದು ಉಪನ್ಯಾಸದ ಮೂಲಕ ಸೂಚಿಸಿದರು. ಅದಕ್ಕೆ ಸರ್ವರೂ ಒಪ್ಪಿದರು.

೭ ಈ ಭರತಖಂಡದಲ್ಲಿ ಭಾರಿವಾಸಿಗಳು ಚಡಾವಾಗಿ ಕೆಲವು ವರ್ಷಗಳಿಂದ ಜನಗಳಿಗೆ ಬಹಳ ಕಷ್ಟವಾಗಿ ಇದೆ. ಬಡವರಿಗೆ ಇದರಿಂದ ಉಂಟಾಗಿರತಕ್ಕ ತೊಂದರೆಯೂ, ಅನರ್ಥಗಳೂ ಅನಿರ್ವಚನೀಯಗಳಾಗಿರುವವು. ಇದಕ್ಕೆ ಕಾರಣಗಳನ್ನು ಪರೀಕ್ಷಿಸಿ ಅದರ ನಿವಾರಣೆಗೆ ತಕ್ಕ ಉಪಾಯಗಳನ್ನು ಮಾಡತಕ್ಕದ್ದು ಅತ್ಯಂತ ಅವಶ್ಯಕವಾದದ್ದು. ಈ ಕೆಲಸವನ್ನು ಮಾಡುವದಕ್ಕೋಸ್ಕರ ಸರ್ಕಾರದವರು ಒಂದು ಕಮಿಷನ್ನನ್ನು ಏರ್ಪಾಡು ಮಾಡಬೇಕೆಂಬದಾಗಿ ಮ॥ ಪೀಟರ್ ಪಾಲ್ ಪಿಳ್ಳೆಯವರು ಸೂಚಿಸಿದರು. ಅದನ್ನು ಪ್ರೊ॥ ಕರೆಯವರು ಅನುಮೋದಿಸಿದರು, ಇದಕ್ಕೆ ಸರ್ವರೂ ಒಪ್ಪಿದರು.

೮ ಪ್ರೈಮರಿ ವಿದ್ಯಾಭ್ಯಾಸವು ಈಗ ಸದ್ಯಕ್ಕೆ ಉಚಿತವಾಗಿ ಮಾಡಲ್ಪಟ್ಟು ಕ್ರಮಕ್ರಮವಾಗಿ ಬಲಾತ್ಕಾರವಾಗಿ ಮಾಡಿಸಲ್ಪಡುವಂತೆ ಸರ್ಕಾರದವರು ಏರ್ಪಾಡನ್ನು ಮಾಡಬೇಕು.

೯ ಸೆಕೆಂಡರಿ ವಿದ್ಯಾಭ್ಯಾಸಕ್ಕೂ, ಹೈಸ್ಕೂಲ್ ವಿದ್ಯಾಭ್ಯಾಸಕ್ಕೂ, ಉಚ್ಚ ಜನರ ವಿದ್ಯಾಭ್ಯಾಸಕ್ಕೂ ಸಾಕಾದಷ್ಟು ದ್ರವ್ಯವನ್ನು ಸ್ಯಾಂಕ್ಷನ್ ಮಾಡಬೇಕು.

೧೦ ಕಾಲದ ವರ್ತಮಾನಗಳಿಗೆ ಅನುಸಾರವಾಗಿ ಸಾಕಾದಷ್ಟು ಕೈಗಾರಿಕೆಗಳ ಅಭ್ಯಾಸಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕು.

೧೧ ವಿದ್ಯಾಭ್ಯಾಸದ ವಿಷಯದಲ್ಲಿ ಗವರ್ನ್‌ಮೆಂಟಿನವರು ಮಾಡತಕ್ಕ ಏರ್ಪಾಡುಗಳ ಜೊತೆಗೆ ಮಹಾಜನಗಳೂ ಕೂಡಾ ತಮ್ಮ ಶಕ್ತ್ಯನುಸಾರ ಶಾಸ್ತ್ರ, ಕೈಗಾರಿಕೆ ಮೊದಲಾದವುಗಳ ಅಭಿವೃದ್ಧಿಗೋಸ್ಕರ ಮಾಡಿಕೊಳ್ಳುವ ಏರ್ಪಾಡಿಗೆ ಸರಕಾರದವರು ಪ್ರೋತ್ಸಾಹವನ್ನು ಮಾಡಬೇಕು. ಪ್ರತಿಬಂಧಕವನ್ನು ಮಾಡಕೂಡದು.

೧೨ ಎಗ್ಸಿಕ್ಯೂಟಿವ್ ಅಧಿಕಾರಿಗಳಿಗೆ ಜ್ಯುಡಿಷಿಯಲ್ ಅಧಿಕಾರವು ಇರುವದರಿಂದ ಪ್ರಜೆಗಳಿಗೆ ಅನೇಕ ವಿಧವಾದ ತೊಂದರೆಗಳು ಉಂಟಾಗುವವು. ಆದುದರಿಂದ ಒಬ್ಬ ಅಧಿಕಾರಿಗೆ ಈ ಎರಡು ಅಧಿಕಾರಗಳೂ ಇಲ್ಲದಂತೆ ಪ್ರತ್ಯೇಕ ಮಾಡಲ್ಪಡಬೇಕು.

೧೩ ಜ್ಯುಡಿಷಿಯಲ್ ಇಲಾಖೆಯ ನೌಕರಿಗಳಿಗೆ ಲಾ ಪರೀಕ್ಷೆಗಳನ್ನು ಕೊಟ್ಟು ಲಾಯರುಗಳಾಗಿರತಕ್ಕವರನ್ನು ನಿಯಮಿಸಬೇಕು.

೧೪. ಮ್ಯುನಿಸಿಪಲ್ ಮತ್ತು ಲೋಕಲ್ ಫಂಡು ಬೋರ್ಡುಗಳವರು ಸರ್ಕಾರದ ಮೇಲ್ವಿಚಾರಣೆಯಿಲ್ಲದೆ ಸ್ವತಂತ್ರವಾಗಿ ನಡೆಸಿಕೊಳ್ಳುವದಕ್ಕೆ ಏರ್ಪಾಡನ್ನು ಮಾಡಬೇಕು.

೧೫ ಸ್ಥಳದ ಪಂಚಾಯತು ಮೊದಲುಗೊಂಡು ಡಿಸ್ಟ್ರಿಕ್ಟ್ ಮತ್ತು ಮ್ಯುನಿಸಿಪಲ್ ಬೋರ್ಡುಗಳಿಗೆ ಮೆಂಬರುಗಳಾಗತಕ್ಕವರು ಪ್ರಜೆಗಳಿಂದ ಚುನಾಯಿಸಲ್ಪಟ್ಟವರಾಗಿರಬೇಕು.

೧೬. ಪರ್ಮನೆಂಟ್ ಸೆಟ್ಲ್‌ಮೆಂಟು ಬಂಗಾಳದಲ್ಲಿರುವಂತೆ ಒಡಲಾಯಿಸಲ್ಪಡತಕ್ಕದಾಗಿ ಇರಕೂಡದು. ಅಂದರೆ, ಪರ್ಮನೆಂಟ್ ಸೆಟ್ಲ್‌ಮೆಂಟನ್ನು ಮಾಡಿಕೊಡಬೇಕು. ಆಗಾಗ್ಗೆ ಸೆಟ್ಲ್‌ಮೆಂಟುಗಳನ್ನು ಮಾಡುವದರಿಂದ ಕಂದಾಯಗಳು ಹೆಚ್ಚಿ ರೈತರಿಗೆ ತುಂಬಾ ನಷ್ಟ ಉಂಟಾಗುವದು. ೬೦ ವರುಷಕ್ಕೊಂದಾವರ್ತಿ ಸೆಟ್ಲ್‌ಮೆಂಟಾಗುವಂತೆ ಮಾಡಿದಾಗ್ಯೂ ಈ ಕ್ಲೇಶವು ಸ್ವಲ್ಪ ಕಡಮೆಯಾಗುವದು.

೧೭ ಮಿಲಿಟರಿ ಇಲಾಖೆಯ ಖರ್ಚು ದಿನೇ ದಿನೇ ಹೆಚ್ಚುತ್ತಲಿರುವದು. ಈ ಚಕ್ರಾಧಿಪತ್ಯದ ಹುಟ್ಟುವಳಿಯಲ್ಲಿ ಮೂರರಲ್ಲಿ ಒಂದು ಭಾಗವು ಈ ಇಲಾಖೆಯಲ್ಲಿ ಖರ್ಚಾಗುವದು. ಇದರಿಂದ ಚಕ್ರಾಧಿಪತ್ಯದಲ್ಲಿ ಜನಗಳು ಸುಖವಾಗಿರುವದಕ್ಕೆ ಮಾಡಬೇಕಾದ ಇತರ ಏರ್ಪಾಡುಗಳಿಗೆ ದ್ರವ್ಯವು ಸಾಲದೆ ಹೋಗುವದು. ಆದುದರಿಂದ ಈ ಖರ್ಚನ್ನು ಕಡಮೆ ಮಾಡುವ ಬಾಗದಲ್ಲಿ ಗವರ್ನ್‌ಮೆಂಟಿನವರು ಸರಿಯಾದ ಗಮನವನ್ನು ಕೊಡಬೇಕು.

೧೮ ವಿದ್ಯಾರ್ಥಿಗಳು ವಾಲಂಟಿಯರುಗಳಾಗುವದಕ್ಕೆ ಪ್ರತಿಬಂಧಕವಾದ ಸರ್ಕ್ಯೂಲರ್‌ಗಳು ಕೊಡಲ್ಪಟ್ಟಿರುವದರಿಂದ ದೊಡ್ಡ ಮನುಷ್ಯರನೇಕರು ವಾಲಂಟಿಯರುಗಳಾಗಿ ಈ ಸಭೆಯಲ್ಲಿ ಕೆಲಸ ಮಾಡಬೇಕಾಯಿತು. ಹೀಗೆ ಕೆಲಸ ಮಾಡಿದ ವಾಲಂಟಿಯರುಗಳಿಗೆ ಈ ಸಭೆಯವರು ತಮ್ಮ ವಂದನೆಯನ್ನು ಅರ್ಪಿಸುತ್ತಾರೆ.

೧೯ ಸಂಯುಕ್ತಪ್ರಾಂತ್ಯಗಳ ರಾಜ್ಯಭಾರ ಕ್ರಮವು ವಿಶೇಷ ನ್ಯೂನಾತಿರೇಕಗಳುಳ್ಳದ್ದಾಗಿರುವದರಿಂದ ಇವುಗಳ ಪರಿಹಾರಾರ್ಥವಾಗಿ ಒಂದು ವಿಚಾರಣೆಯು ಮಾಡಲ್ಪಟ್ಟು ಇವುಗಳ ಪರಿಹಾರಕ್ಕೆ ತಕ್ಕ ಉಪಾಯವು ಮಾಡಲ್ಪಡಬೇಕು.

ಕಡೆಯಲ್ಲಿ ೧೯೧೦ನೇ ವರುಷದ ಡಿಸೆಂಬರಿನಲ್ಲಿ ಈ ಕಾಂಗ್ರೆಸ್ ಮಹಾಸಭೆಯು ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ನಡೆಯತಕ್ಕದ್ದೆಂದು ತೀರ್ಮಾನವಾಯಿತು.

ಇಂಡಿಯಾ ದೇಶದ ವೃತ್ತಾಂತಗಳು.

ಮದರಾಸ್ ಗವರ್ನಮೆಂಟಿನವರು ಗುಂಟೂರಿನಲ್ಲಿ ಪ್ರಜೆಗಳು ಕಟ್ಟುವ ಒಂದು ಬಾಲಿಕಾ ಪಾಠಶಾಲೆಯ ಫಂಡಿಗೆ ೧೨,೦೦೦ ರೂಪಾಯಿ ಸಹಾಯದ್ರವ್ಯವನ್ನು ಸ್ಯಾಂಕ್ಷನ್ ಮಾಡಿದಾರೆ.

ಲಾಹೋರ್ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ನಡಿಸುವ ಪಾಠಶಾಲೆಗಳಲ್ಲೆಲ್ಲಾ ಮಕ್ಕಳಿಗೆ ಪ್ರೈಮರಿ ವಿದ್ಯೆಯನ್ನು ಫೀ ಇಲ್ಲದೆ ಕಲಿಸಬೇಕೆಂದು ಮೆಂಬರುಗಳು ತೀರ್ಮಾನ ಮಾಡಿರುತ್ತಾರೆ.

* * *

ಹಿಂದುಸ್ಥಾನದ ಸರ್ವ ಸೇನಾಪತಿಯಾಗಿದ್ದ ಲಾರ್ಡ್ ಕಿಚ್ನರ್‌ರವರ ಹೆಸರನ್ನು ಈ ದೇಶದಲ್ಲಿ ಶಾಶ್ವತಪಡಿಸುವುದಕ್ಕೆ ಏರ್ಪಾಡಾಗಿರುವ ಫಂಡಿಗೆ ಇದುವರೆಗೆ ೬೦,೦೦೦ ರೂಪಾಯಿ ಚಂದಾ ವಸೂಲಾಗಿರುತ್ತದೆ.

* * *

ಬೊಂಬಾಯಿ ಗವರ್ನರವರು ಕಳೆದ ನವಂಬರ್ ಬೊಂಬಾಯಿಂದ ರಾಜಕೋಟೆಗೆ ಪ್ರಯಾಣ ಮಾಡಿದರು. ಅವರ ಗುಜರಾತ್ ಪ್ರಾಂತ್ಯದಲ್ಲಿರುವ ದೇಶೀಯ ಸಂಸ್ಥಾನಗಳಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದಾರೆ.

* * *

ಹಿಂದುಸ್ಥಾನದ ಜನರಿಗೆ ದಕ್ಷಿಣ ಆಫ್ರಿಕದಲ್ಲಿ ಉಂಟಾಗಿರುವ ಕಷ್ಟನಷ್ಟಗಳನ್ನು ಪರಿಹರಿಸುವುದಕ್ಕಾಗಿ ಹಿಂದುಸ್ಥಾನದಲ್ಲಿ ಒಂದು ಫಂಡು ಏರ್ಪಾಡಾಗಿರುತ್ತದೆ. ಇದುವರೆಗೆ ಈ ಫಂಡಿಗೆ ೫೦,೦೦೦ ರೂಪಾಯಿ ಚಂದಾ ವಸೂಲಾಗಿರುವುದು.

* * *

ದಕ್ಷಿಣ ಇಂಡಿಯಾ ರೈಲ್ವೆ ಕಂಪನಿಯನ್ನೂ ಉತ್ತರದೇಶದಲ್ಲಿರುವ ಸಿಂದ್ ಪಂಜಾಬ್ ಡೆಲ್ಲಿ ರೈಲ್ವೇ ಕಂಪನಿಯನ್ನೂ ಈ ವರುಷದ ಆಖೈರಿನಲ್ಲಿ ಸರ್ಕಾರಕ್ಕೆ ವಹಿಸಿಕೊಳ್ಳುತ್ತೇವೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಆ ಕಂಪನಿಗಳ ಮುಖ್ಯಾಧಿಕಾರಿಗಳಿಗೆ ನೋಟಿಸ್ ಕೊಟ್ಟಿದಾರೆ.

* * *

ಲಾಹೋರ್ ಪಟ್ಟಣದಲ್ಲಿ "ಬೇದಾರಿ" ಎಂಬ ಪತ್ರಿಕೆಯ ಎಡಿಟರಾದ ಬನಾರಿ ಪ್ರಸಾದ್ ಎಂಬಾತನು ರಾಜದ್ರೋಹಾಪರಾಧಕ್ಕೆ ಗುರಿಯಾಗಿ ದಸ್ತಗಿರಿ ಮಾಡಲ್ಪಟ್ಟನು. ಮ್ಯಾಜಿಸ್ಟ್ರೇಟರು ಆತನನ್ನು ಜಾಮೀನಿನಮೇಲೆ ಬಿಡುವುದಿಲ್ಲವೆಂದು ಹೇಳಿಬಿಟ್ಟರು.

* * *

ಆಗ್ರಾ ಪಟ್ಟಣದ ಸದ್ದರ್ ಬಜಾರ್ ಬೀದಿಯಲ್ಲಿ ಭಾರೀ ವರ್ತಕನಾದ ಲಾಲಾ ಮೇಘಾರಾಂ ಎಂಬಾತನ ಮನೆಗೆ ಕಳ್ಳರು ನುಗ್ಗಿ ಆತನನ್ನೂ ಆತನ ಹೆಂಡತಿಯನ್ನೂ ಚನ್ನಾಗಿ ಹೊಡೆದು ಸಾವಿರಾರು ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು.

* * *

ಕಲ್ಕತ್ತಾ ಪಟ್ಟಣದಲ್ಲಿರುವ ಒಂದು ಇಂಗ್ಲಿಷ್ ವ್ಯಾಪಾರದ ಕಂಪನಿಯೊಳಗೆ ಕ್ಯಾಷಿಯರಾಗಿದ್ದ ನಾಗೇಂದ್ರನಾಥ ಸಾಹರಿ ಎಂಬವನು ಕಂಪನಿಯ ಹಣವನ್ನು ತಿಂದುಹಾಕಿದನು. ಕಳೆದ ವಾರ ಇವನಿಗೆ ಹೈಕೋರ್ಟಿನ ಸೆಷನ್ಸ್ ಜಡ್ಜರು ಮೂರು ವರುಷಗಳ ಕಠಿಣಸಜಾ ವಿಧಿಸಿದರು.

* * *

ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು ಕಳೆದ ವಾರ ಕಲ್ಕತ್ತಾ ಪಟ್ಟಣಕ್ಕೆ ದಯಮಾಡಿದ್ದರು. ಆಗ್ಗೆ ವೈಸ್‌ರಾಯಿ ಪ್ರಭುಗಳು ಅವರಿಗೆ ಬ್ರಿಟಿಷ್ ಸೈನ್ಯದಲ್ಲಿ ಮೇಜರ್ ಜನರಲ್ ಎಂಬ ಹುದ್ದೆಯ ಬಿರುದು ದಯಪಾಲಿಸಲ್ಪಟ್ಟಿದೆ ಎಂದು ಹೇಳಿ ಅವರಿಗೆ ಸನ್ನದನ್ನು ಕೊಟ್ಟರು.

* * *

ಲಕ್ನೋ ಪಟ್ಟಣದ ಮ್ಯುನಿಸಿಪಾಲಿಟಿಯವರು ಆ ಪಟ್ಟಣಕ್ಕೆ ರಾತ್ರಿಯೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಬೇಕೆಂದು ತೀರ್ಮಾನ ಮಾಡಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಒದಗಿಸುವುದಕ್ಕೆ ಇಷ್ಟವುಳ್ಳವರು ಕಂಟ್ರಾಕ್ಟು ವಹಿಸಿಕೊಳ್ಳಬಹುದೆಂದು ಪ್ರಕಟ ಮಾಡಿರುತ್ತಾರೆ.

* * *

ನಾಸಿಕದ ಕಲೆಕ್ಟರಾಗಿದ್ದ ಮೆ॥ ಜಾಕ್ಸನ್‌ರವರನ್ನು ಕೊಂದ ಹಾಕಿದ ಮೊಕದ್ದಮೆಯಲ್ಲಿ ಪೋಲೀಸಿನವರು ಏಳು ಮಂದಿಯ ಮೇಲೆ [illegible] ನಾಸಿಕದ ಮ್ಯಾಜಿಸ್ಟ್ರೇಟ್ ಮೆ॥ ಮಾಂಟೋ ಮೆ॥ ಸಾಹೇಬರು ಕಳೆದ ಗುರುವಾರ ವಿಚಾರಣೆಯನ್ನು ಪ್ರಾರಂಭಿಸಿದರು. ಸಾಕ್ಷಿಗಳ ಕೈಫಿಯತ್ತು ನಡೆಯುತ್ತಲಿದೆ.

* * *

ರಂಗೂನ್ ಪಟ್ಟಣದಿಂದ ಮಾಂಡಲೆಗೆ ಶ್ವೆಪ್ಯೀರ್ ಎಂಬ ಒಂದು ಹೊಸ ಜಹಜು ಹೋಗುತ್ತಾ ಪೇದಾಯಿ ಎಂಬ ತೀರದಲ್ಲಿ ತಂಗಿರುವಾಗ ಕಳೆದ ವಾರ ಅದರಲ್ಲಿ ಬೆಂಕಿ ಹತ್ತಿಕೊಂಡ ಜಹಜು ಸುಟ್ಟುಹೋಯಿತು. ೮೦ ಜನರು ಹಾಳಾದರೆಂದೂ, ಸುಮಾರು ೮ ಲಕ್ಷ ರೂಪಾಯಿ ನಷ್ಟವಾಯಿತೆಂದೂ ತಂತಿ ವರ್ತಮಾನ ಬಂದಿದೆ.

* * *

ಕಲ್ಕತ್ತೆಯ ಬಳಿ ಇರುವ ಗಂಗಾಸಾಗರವೆಂಬ ಹಿಂದೂ ಯಾತ್ರಾಸ್ಥಳಕ್ಕೆ ಕಳೆದ ವಾರ ೩೦,೦೦೦ ಭಕ್ತಾದಿಗಳು ದೋಣಿಗಳಲ್ಲಿ ಕುಳಿತು ಹೊರಟರು. ಮತ್ತು ರೈಲ್ ಗಾಡಿಗಳಲ್ಲೂ ಅನೇಕರು ಹೋಗಿರುತ್ತಾರೆ. ಈ ಜಾತ್ರೆಯ ಕಾಲದಲ್ಲಿ ಸುಮಾರು ಒಂದು ಲಕ್ಷ ಪ್ರಜೆಗಳೂ ವಿಶೇಷವಾಗಿ ಬೈರಾಗಿಗಳೂ ಅಲ್ಲಿ ಸೇರುವರೆಂದು ತಿಳಿಯುತ್ತದೆ.

* * *

ಬೊಂಬಾಯಿ ಆಧಿಪತ್ಯದಿಂದ ವಿಲಾಯಿತಿಗೆ ವಿದ್ಯಾಭ್ಯಾಸ ಮಾಡುವುದಕ್ಕಾಗಿ ಹೋಗುವಂಥಾ ಯೌವನಸ್ಥರಿಗೆ ಬೇಕಾದ ತಿಳುವಳಿಕೆಯನ್ನು ಕೊಟ್ಟು ಯೋಗ್ಯರಾದವರನ್ನು ಚುನಾಯಿಸುವುದಕ್ಕೆ ಗವರ್ನರವರು ಒಂದು ಕಮಿಟಿಯನ್ನು ನೇಮಕ ಮಾಡಿದಾರೆ. ಈ ಕಮಿಟಿಯಲ್ಲಿ ಹಿಂದೂ ಮಹಮ್ಮದೀಯ ದೊಡ್ಡ ಮನುಷ್ಯರೇ ಮೆಂಬರುಗಳಾಗಿರುವರು.

* * *

ಸೂರತ್ ಪಟ್ಟಣದಲ್ಲಿ ಭಾರೀ ವರ್ತಕನೆಂದು ಹೆಸರು ಪಡೆದಿದ್ದ ಕಾಲ್ಯಾಣಭಾಯಿ ಮೋತೀಭಾಯಿ ಎಂಬಾತನ ಮನೆಯನ್ನು ಪೋಲೀಸಿನವರು ಶೋಧನೆ ಮಾಡಿದಾಗ ಕೋಕೇನ್ ಎಂಬ ನಿಷಾ ಪದಾರ್ಥವು ಬಚ್ಚಿಟ್ಟಿದ್ದದ್ದು ಸಿಕ್ಕಿದ್ದರಿಂದ ಮ್ಯಾಜಿಸ್ಟ್ರೇಟರು ಅವನಿಗೆ ಎರಡು ತಿಂಗಳ ಕಠಿಣ ಸಜವನ್ನೂ ೩೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

* * *

ಬೊಂಬಾಯಿ ಪಟ್ಟಣದಲ್ಲಿ ಮೆ॥ ಕೆ. ಆರ್. ಕಾಮಾ ಎಂಬವರ ಹೆಸರನ್ನು ಶಾಶ್ವತ ಪಡಿಸುವುದಕ್ಕೆ ಸಕಲ ಪ್ರಜೆಗಳೂ ಉಪಯೋಗಿಸುವಂಥಾ ಒಂದು ಸರ

ಸ್ಮಾರಕ ಭಂಡಾರವನ್ನು ಧರ್ಮಾರ್ಥವಾಗಿ ಕಲ್ಪಿಸಬೇಕೆಂದು ತೀರ್ಮಾನವಾಗಿದೆ ಆಸ್ಥಾನ ಸ್ಥಿತ ಸರ್ದಾರರೆಲ್ಲಾ ಸೇರಿ ಅದಕ್ಕಾಗಿ ೧೦೦,೦೦೦ ರೂಪಾಯಿ ಕೊಡಿಸಿದಾರೆ

ಕಳೆದ ಶನಿವಾರ ಸಾಯಂಕಾಲ ಮದರಾಸ್ ಪಟ್ಟಣದ ವಿಕ್ಟೋರಿಯಾ ಪಬ್ಲಿಕ್ ಹಾಲ್ ಬಳಿ ಲೇಟ್ ವಿಕ್ಟೋರಿಯಾ ಮಹಾರಾಜ್ಞಿ ರವರ ಛಾಯಾ ಚಿತ್ರ ಪಟವನ್ನು ಗವರ್ನರವರು ದೊಡ್ಡ ಸಭೆಯಲ್ಲಿ ಉಪನ್ಯಾಸ ಪೂರ್ವಕವಾಗಿ ಪ್ರತಿಷ್ಠೆ ಮಾಡಿದರು ಮದರಾಸಿನ ಸಗುಣ ವಿಲಾಸ ಸಭೆಯವರು ಚಂದಾ ಹಾಕಿ ಈ ಪ್ರತಿಮೆಯನ್ನು ಮಾಡಿಸಿ ತರಿಸಿ ಒಪ್ಪಿಸಿರುತ್ತಾರೆ

ವೈಸ್‌ರಾಯಿ ಪ್ರಭುಗಳ ಪ್ರೈವೇಟ್ ಸೆಕ್ರೆಟರಿಯಾಗಿದ್ದ ದಿವಂಗತ ಡನ್‌ಲಾಪ್ ಸ್ಮಿತ್‌ರವರ ಮೆಮೋರಿಯಲ್ ಫಂಡಿಗೆ ವೈಸ್‌ರಾಯಿ ಲಾರ್ಡ್ ಮಿಂಟೋರವರು ರೂ ೧,೫೦೦, ಕೂಚ್‌ಬೇಹಾರ್ ಮಹಾರಾಜರವರು ರೂ ೧,೦೦೦, ಆಗಾಖಾನ್‌ರವರು ರೂ ೭,೫೦೦, ಮಂಡಿ ರಾಜಾಸಾಹೇಬರು ರೂ ೫೦೦ ಜನರಲ್ ಪ್ರತಾಪ್ ಸಿಂಗ್‌ರವರು ರೂ ೨೦೦, ಈ ರೀತಿ ಚಂದಾ ಕೊಟ್ಟಿದಾರೆ

ಕಳೆದ ತಾ ೧೧ ನೇ ಮಂಗಳವಾರ ಶ್ರೀಂಗೇರಿ ಸ್ವಾಮಿಗಳವರು ಪರಿವಾರ ಸಮೇತ ಕೊಚ್ಚಿ ಸಂಸ್ಥಾನದ ರಾಜಧಾನಿಯಾದ ತ್ರಿಚೂರ್ ಪಟ್ಟಣಕ್ಕೆ ದಯ ಮಾಡಿ, ಹಳೇ ಅರಮನೆಯಲ್ಲಿ ಇಳಿದಿರುತ್ತಾರೆ ಆ ದಿನ ಗೌರವಾರ್ಥವಾದ ೧೧ ಕೋವಿಗಳು ಹಾರಿಸಲ್ಪಟ್ಟವು ಸರ್ಕಾರಿ ಅಧಿಕಾರಿಗಳೂ ಸಾಹುಕಾರರೂ ಎಲ್ಲಾ ಪಂಗಡಗಳ ಪ್ರಜೆಗಳೂ ಸ್ವಾಮಿಗಳನ್ನು ಸನ್ಮಾನಮಾಡಿ ಸತ್ಕರಿಸುತ್ತಿದಾರೆ

ವಿಲಾಯಿತಿಯಿಂದ ಹಿಂದೂಸ್ಥಾನಕ್ಕೆ ಬಂದಿರುವ ಕರ್ನಲ್ ಪ್ಯಾಸ್ಲಿ ಎಂ ಕಾರೀಗಾರನು ಕಲ್ಕತ್ತಾ ಪಟ್ಟಣದಲ್ಲಿ ಕಳೆದ ವಾರ ಅಂತರಿಕ್ಷದಲ್ಲಿ ಸಂಚಾರ ಮಾಡುವಂಥ ವಿಮಾನಗಳ ಪೂರ್ವೋತ್ತರವನ್ನು ಕುರಿತು ಉಪನ್ಯಾಸ ಮಾಡಿ, ಬಳಿಕ ಅಲ್ಲಿಂದ ಮೊನ್ನೆ ಅದೇ ಉದ್ದೇಶದಿಂದ ಮದರಾಸಿಗೆ ಬಂದಿರುತ್ತಾನೆ ಈತನು ಬೆಂಗಳೂರಿಗೆ ಬಂದು ಈ ವಾರ ಅಲ್ಲಿ ಉಪನ್ಯಾಸ ಮಾಡುವನೆಂದು ಪ್ರಕಟವಾಗಿದೆ

ಮೆ॥ ಲಾಥಂ ಎಂಬ ಪ್ರಸಿದ್ಧ ಕಾರೀಗಾರನ ಪ್ರಥಮ ಶಿಕ್ಷಣವನ್ನು ಹೊಂದಿದ ಮೆ॥ ಎಚ್ ಫೈರ್ಡ್ ಗ್ರ್ಯಾಂಟ್ಸ್ ಎಂಬಾತನು ಫೆಬ್ರವರಿ ಮೊದಲನೆಯ ವಾರದಲ್ಲಿ ಈಜಿಪ್ಟಿನಿಂದ ಸಿಲೋನ್ (ಲಂಕಾ) ದ್ವೀಪಕ್ಕೆ ಬಂದು ತನ್ನ ವಿಮಾನದಲ್ಲಿ ಕುಳಿತು ಅಲ್ಲಿನವರಿಗೆ ಅಂತರಿಕ್ಷ ಸಂಚಾರವನ್ನು ಮಾಡಿ ತೋರಿಸುತ್ತೇನೆಂದೂ, ಇದಕ್ಕೆ ಅಲ್ಲಿನವರು ತನಗೆ ೧೫ ಸಾವಿರ ರೂಪಾಯಿ ಪ್ರತಿಫಲವನ್ನು ಕೊಡಬೇಕೆಂದೂ ತಿಳಿಸಿರುತ್ತಾನೆ

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳ ಅಧಿಕಾರದ ಅವಧಿಯು ಮುಗಿದ ಬಳಿಕ ಲಾರ್ಡ್ ಮೆಕ್ಡಾನಲ್ ರವರು ವೈಸ್‌ರಾಯಿಯಾಗಿ ನೇಮಿಸಲ್ಪಡುವರೆಂದು ವರ್ತಮಾನಹುಟ್ಟಿದೆ ಈ ವರುಷದ ನವಂಬರ್ ತಿಂಗಳ ತನಕ ಲಾರ್ಡ್ ಮಿಂಟೋ ರವರೇ ವೈಸ್‌ರಾಯಿಯರಾಗಿರುತ್ತಾರಾದ್ದರಿಂದ ಇಷ್ಟು ಬೇಗ ಅವರ ಸ್ಥಾನಕ್ಕೆ ಇನ್ನೊಬ್ಬರು ನೇಮಕವಾದರೆಂಬ ಸುದ್ದಿಯು ನಂಬತಕ್ಕದ್ದಲ್ಲವೆಂದು ಕೆಲವು ಪತ್ರಿಕೆಗಳು ಸಂಶಯಪಡುವವು

ಬೊಂಬಾಯಿ ಪಟ್ಟಣದಲ್ಲಿ ಜನರ ಮನೆಗಳಲ್ಲಿ ಉಪಯೋಗಿಸದೆ ಮುಚ್ಚಿಟ್ಟಿರುವ ಬಾವಿಗಳೊಳಗೆ ಒಂದು ಜಾತಿಯ ಸೊಳ್ಳೆ ಇರುವುದೆಂತಲೂ, ಅದು ಮಲೇರಿಯಾ ಜ್ವರವನ್ನುಂಟುಮಾಡುವ ಕ್ರಿಮಿಯನ್ನು ತಂದು ಹಾಕುತ್ತಿರೋಣ ದರಿಂದ ಆ ಪಟ್ಟಣದಲ್ಲಿ ಪ್ರಜೆಗಳಿಗೆ ಮಲೇರಿಯಾ ಜ್ವರ ಹಿಡಿಯುತ್ತದು ಕಡಮೆ ಎಂದೂ ಡಾಕ್ಟರ್ ಬೆಂಟ್ಲೀಯವರು ತಿಳಿಸಿರುತ್ತಾರೆ ಈ ವೈದ್ಯರು ಈ ಭಾಗವನ್ನು ಇನ್ನೂ ಪರಿಶೋಧನೆ ಮಾಡುತ್ತಾ ಬಂದಿದಾರೆ

ಅಲಹಾಬಾದ್ ಪ್ರಯಾಗ) ಪಟ್ಟಣದ ಎಲ್ಗಿನ್ ರಸ್ತೆಯಲ್ಲಿ ವಿಶೇಷವಾಗಿ ದೊರೆಗಳೇ ವಾಸಮಾಡುತ್ತಾರೆ ಕೆಲವು ಮಂದಿ ಕಳ್ಳರು ಕಳೆದ ವಾರ ಒಂದೆರಡು ಮನೆಗಳಿಗೆ ನುಗ್ಗಿದಾಗ ಅವರಿಗೂ ಕಾವಲುಗಾರರಿಗೂ ಜಗಳವಾಯಿತು ಕಾವಲಿನವರು ಅವರನ್ನು ಓಡಿಸಿಕೊಂಡು ಹೋಗುತ್ತಿದ್ದಾಗ ಕಳ್ಳರು ತಿರುಗಿ ಬಿದ್ದು ದೊಣ್ಣೆಗಳಿಂದ ಹೊಡೆದು ಒಬ್ಬನನ್ನು ಕೊಂದುಬಿಟ್ಟರು ಇನ್ನೊಬ್ಬನಿಗೆ ಪೂರಾ ಪೆಟ್ಟು ಬಿದ್ದಿದೆ ಕಳ್ಳರು ತಪ್ಪಿಸಿಕೊಂಡು ಓಡಿಹೋದರು

ಬರ್ಮಾ ಅಧಿಪತ್ಯದಲ್ಲಿ ಭತ್ತದ ಬೆಳೆ ಆಗುವ ಹದಿನೈದು ಡಿಸ್ಟ್ರಿಕ್ಟುಗಳಲ್ಲಿ ಈಗ ೭೫,೭೭,೦೦೦ ಎಕರೆ ಜಮೀನಿನಲ್ಲಿ ಪೈರು ಸಸಲು ಆಗಿರುತ್ತದೆ, ಅಂದರೆ, ಹಿಂದಿನ ವರುಷಕ್ಕಿಂತ ೮,೦೦೦ ಎಕರೆ ಹೆಚ್ಚು ಈಗಿನ ಭತ್ತದ ಬೆಳೆಯು ತೃಪ್ತಿಕರವಾಗಿರುವುದು ಕುಯಿಲು ಆದಮೇಲೆ ಬೆಳೆದಲ್ಲಿ ಅಲ್ಲಿಗೆ ಬೇಕಾದಷ್ಟು ಉಳಿಸಿಕೊಂಡು, ಇತರ ಕಡೆಗಳಿಗೆ ರಫ್ತು ಮಾಡಲು ೨ ಲಕ್ಷದ ೧೦ ಸಾವಿರ ಟನ್ನು ಅಕ್ಕಿ ಉಳಿಯುವುದೆಂದು ಪ್ರಕಟವಾಗಿದೆ

ಹೌರಾ ಪಟ್ಟಣದ ಬಳಿ ಗೂಸರಿ ಎಂಬ ಸ್ಥಳದಲ್ಲಿ ಒಂದು ದೊಡ್ಡ ನಾರಿನ ಕಾರ್ಖಾನೆಯೊಳಗೆ ಇಬ್ಬರು ನೆಯ್ಗೆಯವರು ಒಬ್ಬ ನೌಕರನನ್ನು ಲಾಳಿಯಿಂದ ಅವನ ಮುಖದ ಮೇಲೆ ಗಾಯಮಾಡಿದ್ದಕ್ಕೆ ಅವರಿಬ್ಬರನ್ನೂ ಕೆಲಸದಿಂದ ವಜಾ ಮಾಡಿದರು ಈ ವಿಚಾರವು ಅಲ್ಲಿ ಕೆಲಸ ಮಾಡುವವರಿಗೆಲ್ಲಾ ಗೊತ್ತಾಯಿತು ಸುಮಾರು ೬೦೦ ಮಂದಿ ಕೂಲಿಯವರು ಕಾರ್ಖಾನೆಗೆ ಬರುವುದಿಲ್ಲವೆಂದು ಹೇಳಿ ಕಳೆದ ವಾರ ನಿಂತುಬಿಟ್ಟಿದಾರೆ ಕಾರ್ಖಾನೆಯಲ್ಲಿ ಕೆಲಸವೆಲ್ಲಾ ನಿಂತು ಹೋಗಿರುವುದು

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಕಲ್ಕತ್ತಾ ಪಟ್ಟಣದಲ್ಲಿರುವ ಪ್ರೆಸಿಡೆನ್ಸಿ ಕಾಲೇಜಿನ ಪಂಡಿತರಾದ ಮಹಾಮಹೋಪಾಧ್ಯಾಯ ಸತೀಶಚಂದ್ರ ಆಚಾರ್ಯ ವಿದ್ಯಾಭೂಷಣರವರನ್ನು (ಸಿಲೋನ್) ಲಂಕಾ ದ್ವೀಪಕ್ಕೆ ಹೋಗಿ ಆರು ತಿಂಗಳ ತನಕ ಅಲ್ಲಿದ್ದು ಪಾಲಿಭಾಷೆಯನ್ನು ಕಲಿತು, ಬೌದ್ಧ ಮತ ತತ್ವಗಳನ್ನು ಚನ್ನಾಗಿ ತಿಳಿದುಕೊಂಡು ಬರಬೇಕೆಂದು ಕಳುಹಿಸಿರುತ್ತಾರೆ ಆ ಬಳಿಕ ವಿದ್ಯಾಭೂಷಣರವರು ಕಾಶೀ ಪಟ್ಟಣಕ್ಕೆ ಹೋಗಿ ಹಿಂದೂ ಮತ ತತ್ವಗಳನ್ನು ಪರಿಶೋಧನೆ ಮಾಡುವವರಾಗಿದಾರೆ

ಬೊಂಬಾಯಿ ಪಟ್ಟಣದಲ್ಲಿರುವ ಯಜುಶ್ಶಾಖೆಯ ಬ್ರಾಹ್ಮಣ ಮುಖಂಡರೂ ವೈದಿಕರೂ ಶಾಸ್ತ್ರಿಗಳೂ ಕಳೆದ ೬ ನೇ ತಾ ಭಾನುವಾರ ಸದಾನಂದಜೋಸಿಯವರ ಗೃಹದಲ್ಲಿ ಸಭೆ ಸೇರಿ, ಬ್ರಾಹ್ಮಣರು ತಮಗೆ ವಿಧಿಸಲ್ಪಟ್ಟಿರುವ ಷಟ್ಕರ್ಮಗಳನ್ನು ಕ್ರಮವಾಗಿ ಆಚರಿಸಿಕೊಂಡು ಬರಬೇಕೆಂದೂ, ತಮ್ಮ ಮಕ್ಕಳಿಗೆ ಸದ್ವ್ಯಾಸಂಗವನ್ನು ಮಾಡಿಸಿ ಭಯಭಕ್ತಿಗಳಲ್ಲಿ ಬೆಳೆಯುವಂತೆ ನೋಡಿಕೊಳ್ಳಬೇಕೆಂದೂ, ಅವರು ದುರ್ಮಾರ್ಗದಲ್ಲಿ ಬಿದ್ದು ಪಾಪಕೃತ್ಯಗಳನ್ನು ಮಾಡದಂತೆ ವಿವೇಕ ಹೇಳಿ ಕೊಡಬೇಕೆಂದೂ ಗೊತ್ತುಮಾಡಿಕೊಂಡರು

ಬಹಳ ಹುಲುಸಾದ ಭತ್ತದ ಬೆಳೆಗೆ ಎಲೆ ಗೊಬ್ಬರವೇ ಬಹು ಮುಖ್ಯವಾದದ್ದು ಇಂಥಾ ಎಲೆ ಗೊಬ್ಬರಗಳನ್ನು ಬೆಳೆಯುವ ಬೀಜವನ್ನೂ ನೆಲ್ಲೀಲಂ ಸ್ಟೇಷನ್ನಲ್ಲಿರುವ ವ್ಯವಸಾಯದ ಇನ್‌ಸ್ಪೆಕ್ಟರ್ ಮೆ॥ ಸಿ ನಾರಾಯಣ ಅಯ್ಯರವರಿಗೆ ಬರೆದು ಅಸಲ್ ಕ್ರಯಕ್ಕೆ ತರಿಸಿಕೊಳ್ಳಬಹುದಾಗಿದೆ ಮತ್ತು ಅಮ್ಮಪೇಟೆ, ನಿಡಮಂಗಲ, ಕೊರದಚೇರಿ ಎಂಬ ಸ್ಥಳಗಳಲ್ಲೂ ಬೆಳೆಯಾಗುವುದು ಈ ಬಿತ್ತನೆ ಬೀಜವನ್ನೂ ತರಿಸಿ ಗದ್ದೆಗಳಲ್ಲಿ ಚೆಲ್ಲಿ ಎಲೆಗೊಬ್ಬರವಾದ ಮೇಲೆ ತುಳಿದು ಭತ್ತದ ಬೆಳೆ ಮಾಡಿದರೆ ಪೈರು ಹುಲುಸಾಗುವುದೆಂದು ತಿಳಿಸುತ್ತಾರೆ

ಬೊಂಬಾಯಿ ಪಟ್ಟಣದ ವೈದಿಕರೂ, ಶಾಸ್ತ್ರಿಗಳೂ, ಪುರಾಣೀಕರು ಅಲ್ಲಿನ ರಾವ್ ಬಹದೂರ್ ಎನ್ ಟಿ ವೈದ್ಯರವರ ಮಂದಿರದಲ್ಲಿ ಕಳೆದ ಶುಕ್ರವಾರ ಒಂದು ಸಮಾಜವನ್ನು ನಡಿಸಿದರು ಚಿತ್ಪಾವನ ಬ್ರಾಹ್ಮಣ ಜಾತಿಯವನು ನಾಸಿಕದಲ್ಲಿ ಕಲೆಕ್ಟರ್ ಮೆ॥ ಜಾಕ್‌ಸನ್ ರವರನ್ನು ಕ್ರೂರತನದಿಂದ ಕೊಂದು ಹಾಕಿ ಬ್ರಾಹ್ಮಣ ಮಂಡಲಿಗೆಲ್ಲಾ ಅಪಖ್ಯಾತಿಯನ್ನು ತಂದಿರುತ್ತಾನೆಂದೂ, ಇಂಥಾ ಪಾಪಕೃತ್ಯ ಮಾಡಿದವರನ್ನು ಅವರ ಸಂಬಂಧಿಗಳನ್ನೂ ಬಹಿಷ್ಕರಿಸಬೇಕೆಂದೂ, ಪಾಠಶಾಲೆಗಳಲ್ಲಿ ಹುಡುಗರಿಗೆ ಭಕ್ತಿ ನೀತಿಗಳನ್ನು ಕಲಿಸಿಕೊಡುವಂತೆ ಗವರ್ನ್‌ಮೆಂಟಿನವರನ್ನು ಕೇಳಿಕೊಳ್ಳಬೇಕೆಂದೂ ತೀರ್ಮಾನವಾಡಿದರು

ರಂಗೂನ್ ಪಟ್ಟಣದಲ್ಲಿ ಬರ್ಮಾ ಅಧಿಪತ್ಯದ ಮುಖಂಡ ಪ್ರಜೆಗಳು ಸಭೆ ಸೇರಿ, ಹಿಂದೂಸ್ಥಾನದ ಪ್ರಜೆಗಳಿಗೆ ದಕ್ಷಿಣ ಆಫ್ರಿಕದಲ್ಲಿ ಪ್ರಾಪ್ತವಾಗಿರುವ ಕಷ್ಟನಷ್ಟಗಳನ್ನು ನಿವಾರಣೆಮಾಡಿಕೊಡುವ ವಿಷಯದಲ್ಲಿ ವೈಸ್‌ರಾಯಿ ಪ್ರಭುಗಳಿಗೆ ಅರಿಕೆ ಮಾಡಿಕೊಳ್ಳಬೇಕೆಂದು ತೀರ್ಮಾನ ಮಾಡಿದರು ವೈಸ್‌ರಾಯಿಯವರು ಈ ವಿಜ್ಞಾಪನೆಯನ್ನು ಅಂಗೀಕರಿಸಿ, ಈ ವಿಚಾರವು ಇಂಡಿಯಾ ಗವರ್ನ್‌ಮೆಂಟಿನವರ ಆಲೋಚನೆಯಲ್ಲಿದೆ ಎಂದೂ, ದಕ್ಷಿಣ ಆಫ್ರಿಕದಲ್ಲಿ ಹಿಂದೂಸ್ಥಾನದವರಿಗೆ ಸರ್ಕಾರದಿಂದ ಕುಂದು ಕೊರತೆಗಳೇನೂ ಆಗದಂತೆ ಮಾಡಲು ಸಾಹಸಪಡುತ್ತಿದೇವೆಂದೂ ಪ್ರತ್ಯುತ್ತರವನ್ನು ದಯಪಾಲಿಸುತ್ತಾರೆ

ಧಾರವಾಡ ಜಿಲ್ಲಾ ಹುಬ್ಬಳ್ಳಿಯಲ್ಲಿ ಕೆಲವು ಮುಖಂಡ ಪ್ರಜೆಗಳು ಸೇರಿ ಒಂದು ಕಾರ್ಖಾನೆಯನ್ನು ಸ್ಥಾಪಿಸ ಬೇಕೆಂದು ತೀರ್ಮಾನಿಸಿರುತ್ತಾರೆ ಮೆ॥ ಜಿ ಎನ್ ಪಟ್ಟಣದ ಎಂಬುವರು ಜರ್ಮನಿಗೆ ಹೋಗಿ ಸಕ್ಕರೆಯ ತಯಾರಿ, ಎಣ್ಣೆಗಳನ್ನು ತೆಗೆಯುವುದು, ಇತರ ಉಪಯುಕ್ತವಾದ ದ್ರಾವಕಾದಿಗಳನ್ನು ಮಾಡುವುದು, ಈ ಮೊದಲಾದ ಕಸಬುಗಳನ್ನು ಕಲಿತುಕೊಂಡು ಬಂದಿದಾರೆ ಇವರಿಗೆ ಹುಬ್ಬಳ್ಳಿಯವರು ಪ್ರೋತ್ಸಾಹ ಪಡಿಸಿ ಇವರಿಂದ ಒಂದು ಕಂಪನಿಯನ್ನು ಮಾಡಿ ಸಕ್ಕರೆಯ ಕಾರ್ಖಾನೆಯನ್ನೂ ಎಣ್ಣೆಯ ಒಟ್ಟಿಯನ್ನೂ ಇಡಿಸಬೇಕೆಂದು ಗೊತ್ತು ಮಾಡಿರುವರು ಈ ಕಂಪನಿಯ ಮೂಲಧನ ಒಂದು ಲಕ್ಷ ರೂಪಾಯಿ ಷೇರು ಒಂದಕ್ಕೆ ೨೫ ರೂಪಾಯಿಯಂತೆ ಕೂಡಿಸುತ್ತಿದಾರೆ

ಮಧ್ಯ ಹಿಂದೂಸ್ಥಾನಕ್ಕೆ ಸೇರಿದ ಬಾರ್ವಾನಿ ಸಂಸ್ಥಾನದಲ್ಲಿ ಕಳೆದ ವಾರ ರಾವ್ ರಾಣಾರವರಿಗೆ ಪಟ್ಟಾಭಿಷೇಕವಾಗಿ, ಅವರು ಸಂಸ್ಥಾನದ ಆಳ್ವಿಕೆಯನ್ನು ವಹಿಸಿಕೊಂಡರು ಗವರ್ನರ್ ಜನರಲ್‌ರವರ ಏಜಂಟರಾದ ಕರ್ನಲ್ ಡಾಲಿಯವರು ದರ್ಬಾರಿನಲ್ಲಿ ರಾಣಾರವರಿಗೆ ಸನ್ನದನ್ನು ಒಪ್ಪಿಸಿದರು ಆಗ ರಾಣಾರವರು ದರ್ಬಾರಿನಲ್ಲಿ ಹಾಜರಾಗಿದ್ದ ಪ್ರಜೆಗಳ ಮುಖಂಡರನ್ನು ಕುರಿತು—ನಾವು ಬ್ರಿಟಿಷ್ ಚಕ್ರಾಧಿಪತ್ಯದ ವಿಷಯದಲ್ಲಿ ಅವಿಚ್ಛಿನ್ನವಾದ ಭಕ್ತಿ ಪ್ರೀತಿಗಳನ್ನುಳ್ಳವರಾಗಿದೇವೆ ನಮ್ಮ ಪ್ರಜೆಗಳಲ್ಲಿ ಯಾರೇ ಆಗಲಿ ಈ ನಮ್ಮ ಅಭಿಮತಕ್ಕೆ ವಿರೋಧವಾದ ಅಭಿಪ್ರಾಯವನ್ನು ಇಟ್ಟುಕೊಂಡಾಗಲಿ ಫಿತೂರಿ ಮುಂತಾದದ್ದನ್ನು ನಡಿಸಿದರೂ ಅವರನ್ನು ನಮ್ಮ ಶತ್ರುಗಳೆಂದು ಭಾವಿಸುತ್ತೇವೆ ಎಂಬೀ ರೀತಿಯಾಗಿ ಉಪನ್ಯಾಸ ಮಾಡಿದರು

ಒಬ್ಬ ಬಂಗಾಳೀ ಹುಡುಗನು ಪಶಾವರ ಪಟ್ಟಣದಲ್ಲಿ ಪೋಲೀಸಿನವರಿಗೆ ಕೆಲವು ಗೋಪ್ಯವಿಚಾರಗಳನ್ನು ಹೇಳಿ ಅಲ್ಲಿ ಕೆಲವು ದೊಡ್ಡಮನುಷ್ಯರು ರಾಜದ್ರೋಹಿಗಳಾಗಿ ಸಿಪಾಯಿಗಳ ಕುತ್ತಿದಾರೆಂದು ತಿಳಿಸಿದನು ಅವನ ಮಾತನ್ನು ನಂಬಿ ಪೋಲೀಸಿನವರು ಆ ದೊಡ್ಡಮನುಷ್ಯರ ಮನೆಗಳಿಗೆ ನುಗ್ಗಿ ಪರಿಶೋಧನೆ ಮಾಡಿದರು ಅವರು ದ್ರೋಹಿಗಳೆಂದೂ ಫಿತೂರಿಗಾರರೆಂದೂ ಹೇಳುವುದಕ್ಕೆ ಯಾವ ದೃಷ್ಟಾಂತವೂ ದೊರಕದೆಹೋಯಿತು ಕಡೆಗೆ ಪೋಲೀಸಿನವರು ಆ ಬಂಗಾಳಿಯನ್ನು ಕೇಳಿದಾಗ ಅವನು ತಾನು ಹೇಳಿದ್ದೆಲ್ಲಾ ಸುಳ್ಳು ಸುದ್ದಿ ಎಂದೂ, ಆ ಜನರಮೇಲೆ ಹೊಟ್ಟೆಕಿಚ್ಚಿನಿಂದ ಆ ರೀತಿ ದೂಷಣೆಯನ್ನು ಹೇಳಿದನೆಂದೂ ಒಪ್ಪಿಕೊಂಡನು ಈಗ ಪೋಲೀಸಿನವರು ಅವನನ್ನು ಸುಳ್ಳುಪ್ರಮಾಣ ಕೊಟ್ಟವನೆಂದು ಹಿಡಿದು ಮೊಕದ್ದಮೆ ಮಾಡುವವರಾಗಿದಾರೆ

ಮುಂದಿನ ಫೆಬ್ರವರಿ ತಾ ೫ ರಿಂದ ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಕಾಲಡಿ ಎಂಬ ಕ್ಷೇತ್ರದಲ್ಲಿ ಒಂದು ಜ್ಯೋತಿಷ ಸಿದ್ಧಾಂತ ಸಮಾಜವು ಪ್ರಾರಂಭವಾಗಿ ಎರಡು ವಾರಗಳ ವರೆಗೆ ನಡೆಯುವುದು ಪಂಚಾಂಗಗಳನ್ನು ಗಣಿಸತಕ್ಕ ಜೋಯಿಸರನ್ನು ಅಲ್ಲಿಗೆ ಕರೆಸಿಕೊಂಡು ಒಂದೇ ವಿಧವಾದ ಪಂಚಾಂಗ ಬರೆಯುವಂತೆ ಏರ್ಪಾಡು ಮಾಡುತ್ತಾರೆ ಶ್ರೀ ಶಂಕರಾಚಾರ್ಯ ಸ್ವಾಮಿಗಳವರು ಬುದ್ಧಿವಂತರಾದ ಜೋಯಿಸರಿಗೆ ತಲಾ ೧೦೦ ರೂಪಾಯಿಯಂತೆ ಬಹುಮಾನಗಳನ್ನೂ ದಯಪಾಲಿಸುವವರಾಗಿದಾರೆ ಅಲ್ಲಿಗೆ ಹೋಗಲು ಅನನುಕೂಲವಿರುವವರು ತಮ್ಮ ಸಿದ್ಧಾಂತವನ್ನು ಕುರಿತು ಒಂದು ಉಪನ್ಯಾಸವನ್ನು ಬರೆದು ಆ ಸಭೆಗೆ ಕಳುಹಿಸಬಹುದಾಗಿದೆ ಸ್ವಾಮಿಗಳ ಫೆಬ್ರವರಿ ಆಖೈರಿನಲ್ಲಿ ಅಲ್ಲಿ ಸಿದ್ಧವಾಗುವ ದೇವಸ್ಥಾನದಲ್ಲಿ ಸರಸ್ವತಿಯ ಮತ್ತು ಆದಿ ಶಂಕರಾಚಾರ್ಯರ ಪ್ರತಿಮೆಗಳನ್ನು ಪ್ರತಿಷ್ಠೆ ಮಾಡುವವರಾಗಿದಾರೆ

ಪೂನಾ ಪಟ್ಟಣದ ವಿದ್ಯಾಶಾಲೆಗಳ ಉಪಾಧ್ಯಾಯರುಗಳೂ ಮೇಲ್ವಿಚಾರಣೆಯ ಕಮಿಟಿಯ ಮೆಂಬರುಗಳೂ ಹುಡುಗರ ತಂದೆತಾಯಿಗಳೂ ಸಭೆ ಸೇರಿ, ವಿದ್ಯಾರ್ಥಿಗಳು ದುರ್ಮಾರ್ಗಗಳಿಗೆ ಬೀಳದಂತೆ ಎಚ್ಚರಿಕೆಯ ಕಾರ್ಯಗಳನ್ನು ಸ್ಕೂಲುಗಳ ಅಧಿಕಾರಿಗೂ ತಂದೆ ತಾಯಿಗಳೂ ಮಾಡಿಟ್ಟು ಮೇಲ್ವಿಚಾರಣೆ ನೋಡಿಕೊಳ್ಳುತ್ತಾ ಬರಬೇಕೆಂದು ತೀರ್ಮಾನ ಮಾಡಿರುತ್ತಾರೆ ಈಗ ಅನೇಕ ಕಡೆಗಳಲ್ಲಿ ಬ್ರಿಟಿಷ್ ಆಳ್ವಿಕೆಯ ವಿಷಯದಲ್ಲಿ ಜನರಿಗೆ ದ್ವೇಷಾಸೂಯೆಗಳುಂಟಾಗಿ, ಆ ಆಳ್ವಿಕೆಯು ಈ ರಾಷ್ಟ್ರಕ್ಕೆ ಕೇಡುಕಾರಿಯಾದದ್ದೆಂದೂ, ಇಂಗ್ಲಿಷರು ನಮ್ಮ ಮಧ್ಯೆ ಇರೋಣದರಿಂದ ನಮಗೆ ಒಳ್ಳೆಯದಾಗಲಾರದೆಂದೂ ದುರಭಿಪ್ರಾಯ ಉಂಟಾಗಿ, ಕ್ರೂರ ಕೃತ್ಯಗಳು ನಡೆಯುವುದಕ್ಕೆ ಪ್ರೋತ್ಸಾಹವಾಗುತ್ತಿದೆಯಾದದ್ದರಿಂದ ಅಂಥಾ ದುರಭಿಪ್ರಾಯಗಳನ್ನು ಜನರಲ್ಲಿ ಕೊಡೆಯುವುದಕ್ಕೆ ವಿವೇಕಿಗಳಾದ ದೊಡ್ಡ ಮನುಷ್ಯರು ಸಾಹಸಪಡಬೇಕೆಂದು ಆ ದಿನ ಗೊತ್ತು ಮಾಡಿದರು

ಅಹಮದಾಬಾದಿನ ಮ್ಯುನಿಸಿಪಾಲಿಟಿಯವರು ಗತಿಸಿದ ಮಹಾರಾಜ್ಞಿ ವಿಕ್ಟೋರಿಯಾರವರ ಹೆಸರನ್ನು ಶಾಶ್ವತ ಪಡಿಸುವದಕ್ಕೆ ಒಂದು ಉದ್ಯಾನವನವನ್ನು ಕಲ್ಪಿಸಿ, ಅದರಲ್ಲಿ ಅಕೆಯವರ ಒಂದು ಶಿಲಾಪ್ರತಿಮೆಯನ್ನು ಕೆತ್ತಿಸಿ ಇಡಿಸಿ ಕಳೆದವಾರ ಪ್ರತಿಷ್ಠೆ ಮಾಡಿಸಿದರು ಈ ಪ್ರತಿಮೆಯನ್ನು ಬೊಂಬಾಯಿನಲ್ಲಿರುವ ಮೆ॥ ಎಚ್ ಸಿ ಮಾತ್ರೆ ಎಂಬ ದೇಶೀಯ ಕಾರೀಗಾರನು ಬಹು ಸುಂದರವಾಗಿ ಕೆತ್ತಿ ಮಾಡಿರುತ್ತಾನೆ ಈತನು ಮಾಡಿದ ಕೆತ್ತನೆ ಕೆಲಸಗಳಿಗೆ ಯೂರೋಪಿಯನ್ ರಾಜ್ಯಗಳ ಪ್ರದರ್ಶನ ಶಾಲೆಗಳಲ್ಲಿ ಬಹುಮಾನಗಳು ದೊರಕಿರುತ್ತವೆ ಈಗ ರಚಿಸಲ್ಪಟ್ಟಿರುವ ಪ್ರತಿಮೆಯು ಬಹು ನೇತ್ರಾನಂದಕರವಾಗಿದೆ ವಿಕ್ಟೋರಿಯಾ ಮಹಾರಾಜ್ಞೀರವರು ಕಿರೀಟವನ್ನು ಧರಿಸಿ, ಹಸ್ತದಲ್ಲಿ ರಾಜದಂಡವನ್ನು ಹಿಡಿದು ದಿವ್ಯವಾದ ಉಡುಪಿನಲ್ಲಿ ಅಲಂಕಾರಮಾಡಿದ ಎತ್ತರವಾದ ಶಿಲಾಪೀಠದಮೇಲೆ ಕುಳಿತಿರುವಂತೆ ಆತನು ಪ್ರತಿಮೆಯನ್ನು ಕೆತ್ತಿ ಬಹುಚಮತ್ಕಾರವಾಗಿ ತಯಾರುಮಾಡಿರುತ್ತಾನೆ

ಇಂಡಿಯಾ ಗವರ್ನ್‌ಮೆಂಟಿನವರು ಟಂಕಸಾಲೆಗಳಲ್ಲಿ ರೂಪಾಯಿಗಳನ್ನು ಛಾಪಾ ಹಾಕದೆ ನಿಲ್ಲಿಸಿಬಿಟ್ಟಿರೋಣದರಿಂದ ಈ ರಾಷ್ಟ್ರಕ್ಕೆ ಅಪಾರವಾದ ಬೆಳ್ಳಿ ರಫ್ತಾಗಿ ಬರುವುದಕ್ಕೂ ಬೆಳ್ಳಿಯ ಧಾರಣೆ ಕಡಮೆಯಾಗುವುದಕ್ಕೂ ಅವಕಾಶವಾಗಿದೆ ಎಂತಲೂ, ಗವರ್ನ್‌ಮೆಂಟಿನವರು ಹೊರಗಿನಿಂದ ಬರುವ ಬೆಳ್ಳಿಯಮೇಲೆ ತಕ್ಕಷ್ಟು ಸುಂಕವನ್ನು ವಸೂಲ್ಮಾಡುತ್ತಾ ಬಂದರೆ ಬೆಳ್ಳಿಯ ಬೆಲೆ ಹೆಚ್ಚಿ ಪ್ರಜೆಗಳಿಗೆ ನಾನಾ ಮಾರ್ಗಗಳಲ್ಲಿ ಅನುಕೂಲವಾಗುತ್ತದೆಂತಲೂ ಮೆ॥ ವೆಬ್ ಎಂಬೊಬ್ಬ ದೊಡ್ಡ ಮನುಷ್ಯನು ಬರೆಯುತ್ತಾನೆ ಇದು ಅಗತ್ಯವೆಂದು ಕೆಲವು ವರ್ತಕರು ಹೇಳುತ್ತಾರೆ ಈಗ ರೈತನ ಮನೆಯಲ್ಲಿರುವ ಬೆಳ್ಳಿ ನಗಗಳ ಬೆಲೆಯು ಬಹಳ ಕಡಮೆಯಾಗಿರುವುದು ಸುಂಕ ಹಾಕಿ ಬೆಳ್ಳಿಯ ಧಾರಣೆಯನ್ನು ಹೆಚ್ಚಿಸಿದರೆ ಗವರ್ನ್‌ಮೆಂಟಿಗೆ ಉತ್ಪತ್ತಿಯಾಗುವುದಲ್ಲದೆ ಪ್ರಜೆಗಳ ಆಭರಣಗಳ ಬೆಲೆ ಹೆಚ್ಚಿ ಐಶ್ವರ್ಯವಂತರಾಗುವುದಕ್ಕೆ ಸಹಾಯವಾಗುತ್ತದೆ ಎಂದೂ, ಖೋಟಾ ನಾಣ್ಯಗಳ ತಯಾರಿಯೂ ಕಡಮೆಯಾಗುತ್ತದೆಂದೂ ಹೇಳುತ್ತಾರೆ

ಮಹಾಭಾರತದ ಪ್ರಾಚೀನ ಪ್ರತಿಗಳನ್ನು ಸಂಗ್ರಹ ಮಾಡಿ ಪರಿಶೋಧನೆಯಿಂದ ಶುದ್ಧವಾದ ಪ್ರತಿಯನ್ನು ಬರೆದು ಪ್ರಕಟಿಸಬೇಕೆಂದು ಯೂರೋಪ್ ಖಂಡದಲ್ಲಿರುವ ಸಂಸ್ಕೃತ ಪಂಡಿತರು ಸಾಹಸ ಪಡುತ್ತಿದಾರೆ ಇದಕ್ಕಾಗಿ ವಿಲಾಯಿತಿಯಲಿ ಒಂದು ಪಂಡು ಏರ್ಪಾಡಾಗಿದೆ ಅಲ್ಲಿನ ಪಂಡಿತರುಗಳೇ ಸೇರಿ ತಮ್ಮ ತಮ್ಮಲ್ಲೇ ಆ ಗ್ರಂಥಪರಿಶೋಧಕರಿಗೆ ಬಹುಮಾನ ಕೊಡಬೇಕೆಂದು ೪೭,೫೦೦ ರೂಪಾಯಿ ಚಂದಾ ಕೂಡಿಸಿರುವರು ಶುದ್ಧವಾದ ಪ್ರತಿಯನ್ನು ಅವರು ಬರೆದಿಟ್ಟ ಮೇಲೆ ಅದನ್ನು ಸರಿಯಾಗಿ ಅಚ್ಚು ಹಾಕಿಸುವುದಕ್ಕೆ ಒಂದು ಲಕ್ಷ ರೂಪಾಯಿ ಬೇಕಾಗುವುದೆಂದು ಅಂದಾಜಾ ಮಾಡಿ, ಈ ಹಣವನ್ನು ಹಿಂದೂಸ್ಥಾನದ ದೇಶೀಯ ರಾಜರು, ಮಹಾರಾಜರುಗಳಿಂದಲೂ ಇತರ ಐಶ್ವರ್ಯವಂತರಿಂದಲೂ ಚಂದಾ ರೂಪವಾಗಿ ಎತ್ತಿ ಕೂಡಿಸಬೇಕೆಂದು ಹಿಚ್ಚಯಿಸಿದರು ಕಲ್ಕತ್ತಾ ಪಟ್ಟಣದಲ್ಲಿರುವ ಮಹಾರಾಜಾ ಬಹದೂರ್ ಸರ್ ಪ್ರದ್ಯೋತಕುಮಾರ ಟಾಗೂರ್‌ರವರು ಈ ಕಾರ್ಯಕ್ಕೆ ಮುಂದಾಳಾಗಿ ನಿಂತು ಚಂದಾ ಕೂಡಿಸಲಾರಂಭಿಸಿದಾರೆ

ಬೊಂಬಾಯಿ ಪಟ್ಟಣದಲ್ಲಿ ಹೆಂಗಸರಿಗೆ ಹೆರಿಗೆಕಾಲದಲ್ಲಿ ಕಸಬನ್ನೂ ಕಲಿತಿರುವಂಥಾ ಸೂಲಗಿತ್ತಿಯರ ಸಹಾಯವು ದೊರಕ ದ್ದಕ್ಕೆ ಅವಕಾಶವಿಲ್ಲದೆ ಬಹುಮಂದಿ ಮೌಢ್ಯಾಚಾರಗಳನ್ನು ಇಟ್ಟುಕೊಂಡು ತಾವೂ ಮೃತಪಡುವುದನ್ನೂ ಶಿಶುಗಳ ಸಂರಕ್ಷಣೆಯು ತಾಯಂದಿರಿಗೆ ತಿಳಿಯದೆ ಅನೇಕ ಮಕ್ಕಳು ಸತ್ತುಹೋಗುವುದನ್ನೂ ಆ ಪಟ್ಟಣದ ಹೆಲ್ತ್ ಆಫೀಸರಾದ ಡಾಕ್ಟರ್ ಟರ್ನರ್‌ಯವರು ಗೊತ್ತುಮಾಡಿ, ಬಡ ಬಗ್ಗರಾದ ಸ್ತ್ರೀಯರಿಗೆ ಹೆರಿಗೆ ಮಾಡುವುದಕ್ಕೂ ಮಕ್ಕಳ ಪೋಷಣೆಗೂ ಪ್ರತ್ಯೇಕವಾದ ಆಸ್ಪತ್ರೆಗಳನ್ನು ಕಲ್ಪಿಸಬೇಕೆಂದು ಮ್ಯುನಿಸಿಪಾಲಿಟಿಗೆ ಸೂಚಿಸಿದರು ಈ ಏರ್ಪಾಡು ಬಹಳ ಅವಶ್ಯವಾದದ್ದೆಂದು ಮೆಂಬರುಗಳೆಲ್ಲಾ ಒಪ್ಪಿಕೊಂಡಿದಾರೆ ಇಂಥ ಆಸ್ಪತ್ರೆಗಳನ್ನು ಕಟ್ಟಿಸುವುದೇ ಮುಂತಾದ ಕಾರ್ಯಗಳನ್ನು ನಡಿಸುವುದಕ್ಕೆ ಒಂದು ಕಮಿಟಿಯು ನೇಮಕವಾಗಿ ದೇಶೀಯ ದೊಡ್ಡ ಮನುಷ್ಯರುಗಳಾದ ಸರ್ ವಿಟ್ಠಲದಾಸ್ ಥ್ಯಾಕರ್ಸೇ, ಸರ್ ಸೆಸೂನ್ ಡೇವಿಡ್ ಸರ್ ಜಾಂಸೆಟ್‌ಜಿ ಜೀಜೀಭಾಯಿ, ಮೆ॥ ಜಾಂಸೆಟ್‌ಜಿ ಅರ್ದೇಶಿ ವಾಡಿಯಾ, ಮೆ॥ ಸಿ ಎನ್ ವಾಡಿಯಾ, ಮೆ॥ ಜಹಾಂಗೀರ್ ಬೋಮನ್‌ಜಿ ಪೆಟಿಟ್, ಮೆ॥ ಫಜಲ್‌ಭಾಯಿ ಕರೀಂಭಾಯಿ ಇಬ್ರಾಹಿಂ, ಈ ಮೊದಲಾದವರು ಈ ಕಾರ್ಯಕ್ಕೆ ಮುಖಂಡರಾಗಿ ನಿಂತಿರುವರು

ಲಾಹೋರ್ ಪಟ್ಟಣದ ರಾಯ ಸಾಹೇಬ್ ಕೆ ಬಿ ಥಾಪರ್ ಎಂಬೊಬ್ಬ ದೇಶೀಯ ವಿದ್ಯಾವಂತರು ಹಿಂದುಗಳಿಗೂ ಇಂಡಿಯಾ ಗವರ್ನ್‌ಮೆಂಟಿಗೂ ಉಂಟಾಗಿರುವ ವೈಷಮ್ಯಗಳನ್ನು ನಿವಾರಣ ಮಾಡುವುದಕ್ಕಾಗಿ ಪ್ರತಿ ಒಂದು ಅಧಿಪತ್ಯದಲ್ಲೂ ದೇಶೀಯ ದೊಡ್ಡ ಮನುಷ್ಯರು ಒಂದೊಂದು ಸಭೆಯನ್ನು ಮಾಡಿಕೊಳ್ಳಬೇಕೆಂದು ಸೂಚಿಸಿರುತ್ತಾರೆ ಈ ಸಭೆಯವರು ಮಾಡಬೇಕಾದ ಕಾರ್ಯಗಳೇನೆಂದರೆ ದೇಶೀಯ ವರ್ತಮಾನ ಪತ್ರಿಕೆಗಳಲ್ಲಿ ಸರ್ಕಾರದವರನ್ನು ವೃಥಾ ದೂಷಣೆ ಮಾಡಿ ಅಲ್ಲಗಳೆಯುವಂಥಾ ವಾಕ್ಯಗಳನ್ನು ಬರೆಯುವವರನ್ನೂ, ರಾಜದ್ರೋಹವನ್ನುಂಟುಮಾಡುವ ಪುಸ್ತಕಾದಿಗಳನ್ನು ಬರೆದು ಪ್ರಕಟಿಸುವವರನ್ನೂ, ಸಭೆ ಮೀಟಿಂಗುಗಳಲ್ಲಿ ನಿಂತು ತೀವ್ರತರವಾದ ಉಪನ್ಯಾಸಗಳನ್ನು ಮಾಡಿ ಪ್ರಜೆಗಳಿಗೆ ಸರ್ಕಾರದವರ ಮೇಲೆ ದುರಭಿಪ್ರಾಯವುಂಟಾಗುವಂತೆ ಮಾಡತಕ್ಕವರನ್ನೂ ಆಯಾ

ಅಧಿಪಕ್ಷದ ಮೇಲ್ಕಂಡ ಸಭೆಯವರು ಕರೆಸಿಕೊಂಡು ಅಂತರಂಗದಲ್ಲಿ ಅವರಿಗೆ ವಿವೇಕ ಹೇಳಬೇಕು ಹಾಗೆ ಅವರು ನಡೆಯದೆ ತಮ್ಮ ಮಾರ್ಗಗಳನ್ನು ತ್ಯಜಿಸದೇ ಹೋದರೆ ಅವರ ವಿಷಯದಲ್ಲಿ ಸರ್ಕಾರಕ್ಕೆ ವರದಿ ಮಾಡಬೇಕು ಈ ರೀತಿಯಾಗಿ ಮಾಡುತ್ತಾ ಬಂದರೆ ಈ ರಾಷ್ಟ್ರದಲ್ಲಿ ಉಂಟಾಗಿರುವ ಅಸಮಾಧಾನವು ನಿವಾರಣೆಯಾಗುತ್ತದೆ ಎಂದು ಮೇಲ್ಕಂಡ ದೊಡ್ಡ ಮನುಷ್ಯರು ಸೂಚಿಸಿದಾರೆ

ಇಂಡಿಯಾ ಗವರ್ನ್‌ಮೆಂಟಿನವರು ೧೯೦೮ ನೇ ಇಸವಿ ೨ ಅಪರಾಧಗಳ ಕಾನೂನನ್ನೂ, ರಾಜದ್ರೋಹಕರವಾದ ಕೂಟಗಳ ಕಾನೂನನ್ನೂ ಕಳೆದ ವಾರ ಹಿಂದೂಸ್ಥಾನದ ಎಲ್ಲಾ ಅಧಿಪತ್ಯಗಳಿಗೂ ಜಾರಿಗೆ ತಂದಿರುತ್ತೇವೆಂದು ಕಳೆದ ವಾರ ಇಸ್ತಿಹಾರು ಹಾಕಿಸಿರುತ್ತಾರೆ ಈ ಎರಡನೇ ಕಾನೂನು ಪೂರ್ವಬಂಗಾಳದಲ್ಲಿ ಜಾರಿಯಲ್ಲಿದೆ ಲೆಫ್ಟಿನೆಂಟ್ ಗವರ್ನರವರು ಅದನ್ನು ಬಾಕರ್‌ಗಂಜ್ ಡಿಸ್ಟ್ರಿಕ್ಟಿನಲ್ಲಿ ರೂಢಿಸುತ್ತಿದಾರೆ ಈ ಕಾನೂನನ್ನು ಇತರ ಅಧಿಪತ್ಯಗಳಿಗೂ ಈಗ ಜಾರಿಗೆ ತಂದಿರೋದರಿಂದ ಆಯಾ ಡಿಸ್ಟ್ರಿಕ್ಟಿನಲ್ಲಿ ಕಲೆಕ್ಟರಿಗೆ ಯಾವ ಕೂಟದ ವಿಷಯದಲ್ಲಾದರೂ ಅನುಮಾನ ಕಂಡುಬಂದರೆ ಅಂಥಾ ಸಭೆಯನ್ನು ನಡಿಸಕೂಡದೆಂದು ಆಜ್ಞೆಮಾಡಿ ನಿಲ್ಲಿಸಿಬಿಡುವದಕ್ಕೆ ಅಧಿಕಾರ ಉಂಟು ಮತ್ತು ಅಪರಾಧಗಳ ಕಾನೂನು ಇದುವರೆಗೆ ಬಂಗಾಳಾದಲ್ಲೂ ಪೂರ್ವಬಂಗಾಳಾದಲ್ಲೂ ಬೊಂಬಾಯಿನಲ್ಲೂ ಮಾತ್ರ ಜಾರಿಯಲ್ಲಿತ್ತು ಈಗ ಗವರ್ನ್‌ಮೆಂಟಿನವರು ಈ ಕಾನೂನನ್ನು ಕೂಡ ಇತರ ಅಧಿಪತ್ಯಗಳಿಗೂ ಜಾರಿಮಾಡಿರುತ್ತಾರೆ ಇದರಿಂದ ಯಾವ ಅಪರಾಧಿಗಳನ್ನಾಗಲಿ ಗವರ್ನರವರು ೨ ಸ್ಪೆಷಲ್ ಮ್ಯಾಜಿಸ್ಟ್ರೇಟರಿಂದ ದಯಾರ್ಷಿ ಆಗಬೇಕೆಂದು ಹುಕುಂ ಮಾಡಬಹುದು ಅವರ ವಿಚಾರಣೆಯು ಗೋಪ್ಯದಲ್ಲಿ ನಡೆದು, ಶರ ಮಾಯು ಅವರು ಸೆಷನ್ ವಿಚಾರಣೆಗೆ ಗುರಿಯಾಗುವರು

ಲಾಹೋರ್ ಪಟ್ಟಣದಲ್ಲಿರುವ ದಯಾನಂದ ಕಾಲೇಜಿನ ಉಪಾಧ್ಯಾಯನಾದ ಭಾಯಿಪರಮಾನಂದ ಎಂಬಾತನು ಎರಡು ವರುಷ ವಿಲಾಯತಿಯಲ್ಲಿದ್ದು ವಾಪಸು ಬಂದನು ಹಿಂದೂಸ್ಥಾನದ ಪ್ರಜೆಗಳನ್ನು ಗವರ್ನ್‌ಮೆಂಟಿನ ಮೇಲೆ ಎತ್ತಿಕಟ್ಟುವ ರಾಜದ್ರೋಹ ಕಾರ್ಯದಲ್ಲಿ ಪರಮಾನಂದ, ಅಜಿತಸಿಂಗ್, ಲಾಲಾ ಲಾಜಪತ್‌ರಾಯಿ ಮೊದಲಾದವರಿಗೆ ಕೆಲವು ಕಾಗದ ಪತ್ರಗಳು ಗುಟ್ಟಾಗಿ ನಡೆಯುತ್ತಿದ್ದವೆಂದೂ, ರಾಜದ್ರೋಹಕರವಾದ ಪುಸ್ತಕಗಳನ್ನು ಪ್ಯಾರಿಸ್ಸಿನಲ್ಲಿರುವ ಶ್ಯಾಮಾಜಿ ಕೃಷ್ಣವರ್ಮ ಎಂಬಾತನಿಂದ ತರಿಸಿ ದೇಶಭಾಷೆಯಲ್ಲಿ ಬರೆದು ಅಚ್ಚು ಹಾಕಿಸಿ ಪ್ರಜೆಗಳಿಗೆ ಬಿಕರಿ ಮಾಡುತ್ತಿದ್ದರೆಂದೂ ಸರ್ಕಾರಕ್ಕೆ ಅನುಮಾನ ಕಂಡುಬಂದು, ಪರಮಾನಂದನ ಮನೆಯನ್ನು ಶೋಧನೆ ಮಾಡಿದರು ಲಾಜಪತ್‌ರಾಯಿಯವರು ಆತನಿಗೆ ವಿಲಾಯತಿಗೆ ಬರೆದಿದ್ದ ಕಾಗದಗಳು ಆತನ ಮನೆಯಲ್ಲಿ ಸಿಕ್ಕಿ ಕೋರ್ಟಿಗೆ ಹಾಜರಾಗಿರುತ್ತವೆ ಈ ವಿಚಾರವು ಉತ್ತರ ದೇಶದಲ್ಲೆಲ್ಲಾ ತುಂಬಾ ಕಳವಳವನ್ನುಂಟು ಮಾಡಿರುವುದು ಇವರು ತಾವು ಪ್ರಕಟಿಸಿದ ಪುಸ್ತಕಗಳಲ್ಲಿ ಆಗಿಂದಾಗ್ಗೆ ದೊಡ್ಡ ಮನುಷ್ಯರು ಬಹಿರಂಗವಾಗಿ ಹೇಳಿದುವಂಥಾ ಅಭಿಪ್ರಾಯಗಳನ್ನೂ ಇತರಕಡೆ ದೇಶಭಕ್ತರು ಪ್ರಕಟಿಸಿರುವ ಪುಸ್ತಕಗಳಲ್ಲಿ ಇರುವಂಥಾ ಅಭಿಪ್ರಾಯಗಳನ್ನೂ ಸಂಗ್ರಹ ಮಾಡಿ ಅಚ್ಚು ಹಾಕಿಸಿರುತ್ತೇವೆಂದು ಸಮಾಧಾನ ಹೇಳುತ್ತಿದಾರೆ ಈ ಮೊಕದ್ದಮೆಯಲ್ಲಿ ಮೆ॥ ಗಳಾದ ಗೋಖಲೆ, ರಾಶ್‌ಬಿಹಾರಿಘೋಷ್, ಸುರೇಂದ್ರನಾಥಬ್ಯಾನರ್ಜಿ, ಕೆಲ್ಕಾರ್, ನಟೇಸನ್, ಗಂಗಾಪ್ರಸಾದ್, ಆಲ್‌ಫ್ರೆಡ್‌ನಂದಿ, ಲಾಹೋರಿನ ಬಿಷಪ್ಪರು ಈ ಮೊದಲಾದ ದೊಡ್ಡ ಮನುಷ್ಯರನ್ನು ಅಪರಾಧಿಗಳು ತಮ್ಮ ಕಡೆಯ ಸಾಕ್ಷಿಗಳೆಂದು ತಿಳಿಸಿರುವರು ಮೊಕದ್ದಮೆಯು ಈಗ ವಿಚಾರಣೆಯಾಗುತ್ತಿದೆ

ತಾಲ್ಲೂಕು ವರ್ತಮಾನಗಳು

ಗುಬ್ಬಿ ಈ ಗ್ರಾಮದಲ್ಲಿ ಸಿಡುಬಿನಿಂದಲೂ ಅಮ್ಮತಂಕ ವ್ಯಾಧಿಯಿಂದಲೂ ಈಗ ೨ ತಿಂಗಳಿಂದ ಸುಮಾರು ನೂರಾರು ಮಕ್ಕಳು ತೀರಿಹೋದರು ಸಿಡುಬು ಹಾಕಿಸದೆ ಮೌಢ್ಯವನ್ನಿಡಿದ ಜನರು ಈಗ ತಾನೇ ಪಶ್ಚಾತ್ತಾಪ ಪಡುತ್ತಾ ಇದಾರೆ —ಮೊನ್ನೆ ಶುಕ್ರವಾರ ಶ್ರೀ ವರ್ಧಮಾನ ಸ್ವಾಮಿಗಳ ಛಾಯಾಚಿತ್ರವನ್ನು ತಿಪಟೂರಿಂದ ಈ ಗ್ರಾಮಕ್ಕೆ ತಂದು, ಬ್ಯಾಂಡು ವಾದ್ಯಗಳಿಂದ ವೀರಶೈವ ಪ್ರಜೆಗಳೆಲ್ಲಾ ಸೇರಿ ಬಹಳ ವಿಜೃಂಭಣೆಯಿಂದ ಪುರದಲ್ಲೆಲ್ಲಾ ಮೆರವಣಿಗೆ ಮಾಡಿ ದೇವಸ್ಥಾನಕ್ಕೆ ತರಲು ಅಲ್ಲಿ ಮಾಡಿದ್ದ ಆರಾಧನೆ ಭಜನೆಗಳನ್ನು ನಡಿಸಿ, ಭೋಜನ ಮಾಡಿಸಿದರು —ತಾ ೧೩ ನೆ ಗುರುವಾರ ಇಲ್ಲಿ ಒಬ್ಬ ಮಹಮ್ಮದೀಯ ಹೆಂಗಸು ತನ್ನ ಬಂಧುವಾದ ಒಬ್ಬ ಹೆಂಗಸನ್ನು ಒಂದು ಗಂಗಳದ ವಿಷಯವಾಗಿ ವ್ಯಾಜ್ಯ ನಡೆದು ಆಕೆಯ ಎಡಕೈ ಎರಡನೇ ಬೆರಳನ್ನು ಒಂದು ಅಂಗುಲದ ಮಟ್ಟಿಗೆ ತನ್ನ ಹಲ್ಲಿಂದ ಕಚ್ಚಿದ್ದಕ್ಕೆ ಅದು ತುಂಡಾಗಿ ನೆಲದ ಮೇಲೆ ಬಿದ್ದು ರಕ್ತ ಸುರಿಯಿತು ಇದು ಪೋಲೀಸಿಗೆ ರಿಪೋರ್ಟಾಗಿ ವಿಚಾರಣೆಯಾಗುತ್ತಿದೆ ಡಾಕ್ಟರು ಇಲಾಜು ಮಾಡುತ್ತಾ ಇದಾರೆ

ಬೇಲೂರು —ಈ ಊರು ಪೇಟೆಯಲ್ಲಿ ಪ್ಲೇಗು ಪ್ರಾರಂಭವಾಗಿ ಸುಮಾರು ಒಂದು ತಿಂಗಳಾಗಿ ಇದುವರಿವಿಗೆ ೧೫-೨೦ ಮಂದಿ ಕಾಲವಾದರು. ಕೋಟೆಯಲ್ಲೂ ಕೆಲವೆಡೆಗಳಲ್ಲಿ ಇಲಿ ಬೀಳುತ್ತಿರುವುದಾಗಿ ವರ್ತಮಾನ ಗೌರ್ನ್‌ಮೆಂಟಿನವರು ಇಲ್ಲಿಗೆ ಅನುಭವದ ಶಾನಿಟರಿ ಇನ್‌ಸ್ಪೆಕ್ಟರನ್ನು ಕಳುಹಿಸಬೇಕಾಗಿದೆ —ನಮ್ಮ ಅಮಲ್ದಾರರು ಊರಾಚೆ ಷೆಡ್ಡುಗಳಲ್ಲಿ ವಾಸಮಾಡಿಕೊಂಡಿದಾರೆ ತಾ ೮ ನೇ ಶನಿವಾರ ಸಾಯಂಕಾಲ ಕೆಲವಕ್ಕೆ ಬೆಂಕಿ ಬಿದ್ದು ೩-೪ ಷೆಡ್ಡುಗಳು ಸುಟ್ಟು ಹೋದವು ಪೇಟೆ ಈರಣ್ಣ ವಗೈರೆಯರು ಆ ಉರಿಯುವ ಬೆಂಕಿಯಲ್ಲಿ ನುಗ್ಗಿ ಬಹಳ ಮೆಹನತ್ತಿನಿಂದ ಆರಿಸಿದ್ದರೆ, ಅವರ ಸರ್ವಸ್ವವೂ ಸುಟ್ಟುಹೋಗುತ್ತಿತ್ತು ಆದರೂ ಅಪೂರ್ವವಾದ ಕೆಲವು ಪುಸ್ತಕಗಳೂ ಬಹಳ ಸಾಮಾನುಗಳೂ ನಷ್ಟವಾದುದಾಗಿ ವರ್ತಮಾನ ಈ ಊರಿನಲ್ಲಿ ಈ ಸಾರಿ ಕನ್ನಡದಲ್ಲಿ ೫ ಕ್ಕೆ ೩, ಇಂಗ್ಲೀಷಿನಲ್ಲಿ ೪ ಕ್ಕೆ ೩, ಸಂಸ್ಕೃತದಲ್ಲಿ ೩ ಕ್ಕೆ ೪, ಹಿಂದುಸ್ಥಾನಿಯಲ್ಲಿ ೧ಕ್ಕೆ ೧, ಈ ರೀತಿ ಲೋಯರ್ ಸೆಕೆಂಡರಿಯಲ್ಲಿ ಪ್ಯಾಸಾಗಿರುವರು —ಇಲ್ಲಿನ ಸಂಸ್ಕೃತ ಪಾಠಶಾಲೆಯು ಹೆಸರಿಗೆ ಮಾತ್ರ ಊರಿನವರದಾಗಿರುವುದೇ ಹೊರತು ಪಾಠಶಾಲಾ ಪಂಡಿತರ ಸಂಬಳವೆಲ್ಲಾ ಸರ್ಕಾರದ ಗ್ರಾಂಟಿನಿಂದಲೇ ಸಲ್ಲುವುದು ಇದರಿಗೆ ಊರಿನವರ ಸಹಾಯವು ಕೊಂಚವೂ ಇಲ್ಲ ಈ ಪಂಡಿತರಾದರೋ ವಿದ್ಯಾರ್ಥಿಗಳನ್ನು ಪ್ರತಿವರುಷ ಮೈಸೂರಿಗೂ ಲೋಯರ್ ಸೆಕೆಂಡರಿ ಪರೀಕ್ಷೆಗೂ ಈ ಪಂಡಿತಶಾಲೆಯಿಂದ ಕಳುಹಿಸುವರು ಬಾಲಕರೆಲ್ಲರೂ ಪ್ಯಾಸಾಗಿ ಬಹುಮಾನ ಪಡೆಯುತ್ತಿರುವರು ನಮ್ಮ ಅಮಲ್ದಾರರವರು ಇದನ್ನು ನೋಡಿ, ಈ ಪಾಠಶಾಲೆಯನ್ನು ಗೌರ್ನ್‌ಮೆಂಟಿಗೆ ಸೇರಿಸಬೇಕೆಂದು ಶಿಫಾರಸು ಮಾಡಿರುವುದು ಅದ್ಯಾಪಿ ಫಲಕಾರಿಯಾಗದೆ ಇದೆ

ಒಡಬೌಡನ ಹಳ್ಳಿ —ಇದೇ ಮಾಹೆ ೧೩ ನೇ ತಾ ರಾತ್ರಿ ನಿಟ್ರಹಳ್ಳಿಯಲ್ಲಿ ದೊಂಬರಾಸರು ಕಂಭ ವಿನೋದದ ಆಟವನ್ನು ಆಡಿದರು ಇಂಥಾ ಸಮಯಗಳಲ್ಲಿ ಹಳ್ಳಿಯವರು ದೂರದ ಹಳ್ಳಿಗಳಿಂದಲೂ, ಹತ್ತಿರದ ಹಳ್ಳಿಗಳಿಂದಲೂ ಸಂದ ತಂಡವಾಗಿ ಗಂಡಸರೂ ಹೆಂಗಸರೂ ಮಕ್ಕಳೂ ಹೋಗುವ ವಾಡಿಕೆಯಂತೆ ಹೋದರು ಅದೇ ರಾತ್ರಿ ಒಡಬೌಡನ ಹಳ್ಳಿಯಲ್ಲಿ ಸಂಜೀವಪ್ಪನ ಮನೆಗೆ ೪ ಮಂದಿ ಕಳ್ಳರು ಬಂದು ಅಗಳಿಯನ್ನು ತೆಗೆದು ನಿಟ್ರಹಳ್ಳಿಗೆ ಇದ್ದ ಸ್ಥಳಕ್ಕೆ ಹೋಗಿ ಬರುವಾಗ್ಗೆ ಮನೆಯಲ್ಲಿದ್ದ ಹೆಂಗಸು ಎಚ್ಚರವಾಗಿ ಹೊರಗೆ ಹೋದರು ಅಷ್ಟರಲ್ಲಿಯೇ ಮನೆ ಯಜಮಾನನೂ ಆತನ ಆಳುಗಳೂ ಮನೆ ಹತ್ತಿರ ಬರುವಾಗ್ಗೆ ೪ ಮಂದಿ ನಿಂತಿದ್ದನ್ನು ಕಂಡು ಮಾತಾಡಿಸಿದರು ಅವರು ಮಾತನಾಡದ್ದರಿಂದ ಅವರನ್ನು ಹಿಡಿಯುವದಕ್ಕೆ ಪ್ರಯತ್ನಪಡಿಸಿದಾಗ ಅವನು ಅವರ ಹಿಂದೆ ಮನೆಬಿಟ್ಟು ಕೊಂಚದೂರ ಹೋಗುವದರಲ್ಲಿಯೇ ಕಲ್ಲಿನಿಂದ ಹೊಡೆದರು ಆ ಕಲ್ಲಿನ ಏಟಿನಿಂದ ಒಂದು ಹಲ್ಲು ಮುರಿದಿದೆ, ಬಾಗೊಂಡು ಅಲ್ಲಾಡುತ್ತ, ತುಟಿಗೆ ಪೂರಾ ಘಾಯವಾಗಿದೆ ಏಟು ತಿಂದವನು ನೆಲಕ್ಕೆ ಬೀಳಲಾಗಿ ಜೊತೆಯಲ್ಲಿದ್ದವರು ಕೂಗಿಕೊಂಡರು ಆಗ ಕಳ್ಳರು ಪರಾರಿಯಾದರು ಕಳ್ಳರು ನಂ ಎಕೊಂಡು ನಡಿಸಿದ ಚಲನೆಗಳನ್ನೂ, ರೀತಿಯನ್ನೂ ಕಂಡವನು ಹೇಳುತ್ತಿದ್ದರೆ ಕೇಳಿದವರು ಪರಗ್ರಾಮದವರಲ್ಲ ಸ್ಥಳೀಯರೇ ಎಂದು ಅನುಮಾನಿಸಿ ಜನರು ಗ್ರಾಮದ ಸ್ಥಿತಿಗಾಗಿ ಚಿಂತಿಸುತ್ತಿರುವರು ಒಂದು ಗ್ರಾಮದಲ್ಲಿ ಆಟ ಆಡಿದರೆ ಆಜು ಬಾಜು ಗ್ರಾಮದ ರೈತರೂ ಪಟೇಲ್ ಶ್ಯಾನುಭೋಗರೂ ಗ್ರಾಮ ಗಸ್ತು ಚನ್ನಾಗಿ ಇಡಬೇಕು ಅಲ್ಲದೆ ಒಂದು ಗ್ರಾಮಕ್ಕೆ ಹಲವರು ಹೋದರೆ ಸಾಕಾಗಿದೆ ಗುಂಪಾಗಿ ಹೋದರೆ ಕಳ್ಳರಿಗೆ ತುಂಬಾ ಅನುಕೂಲವಲ್ಲವೇ ? ಮನೆಯ ಯಜಮಾನರು ಸಮಯಕ್ಕೆ ಬಂದಕಾರಣ ಆ ಮನೆ ಹೆಂಗಸಿಗೆ ಯಾವ ತೊಂದರೆಯೂ ಆಗಲಿಲ್ಲ

ಮಂಚೇನಹಳ್ಳಿ —ಈ ಊರಿನಲ್ಲಿ ಒಂದೆರಡು ತಿಂಗಳಿಂದ ಸಿಡುಬಿನ ಉಪದ್ರವು ಪ್ರಾಬಲ್ಯವಾಗಿ, ಸ್ವಲ್ಪ ಮನೆಗಳ ಹೊರತು ಎಲ್ಲಾ ಮನೆಗಳಲ್ಲಿಯೂ ರೋಗವು ಪ್ರವೇಶಮಾಡಿ ಬಹಳ ನಷ್ಟವನ್ನುಂಟುಮಾಡಿದೆ ಸುಮಾರು ೭೦ ಮಂದಿಯವರಿಗೆ ಎಳೇ ಮಕ್ಕಳು ಈ ರೋಗದಿಂದ ಮೃತಪಟ್ಟವೆಂದು ತಿಳಿಸಲು ವ್ಯಸನ ಪಡುತ್ತೇನೆ ಮೊನ್ನೆ ದಿನ ೭ ಮಕ್ಕಳು ಮೃತಪಟ್ಟವು ಈಗಲೂ ಪ್ರತಿ ದಿನವೂ ಹೊಸ ಕೇಸುಗಳಾಗುತ್ತಿವೆ ಭಗವಂತನು ಬೇಗನೆ ಈ ಭಯಂಕರ ವ್ಯಾಧಿಯನ್ನು ನಿವಾರಣೆ ಮಾಡಬೇಕೆಂಬದಾಗಿ ಪ್ರಾರ್ಥಿಸುತ್ತೇವೆ — ಈ ಊರಿನಿಂದ ಈಸಲ ಲೋಯರ್‌ಸೆಕೆಂಡರಿ ಪರೀಕ್ಷೆಗೆ ಗವರ್ನ್‌ಮೆಂಟ್ ಕನ್ನಡ ಸ್ಕೂಲಿನಿಂದ ೬ ಜನ ವಿದ್ಯಾರ್ಥಿಗಳೂ ಇಂಗ್ಲಿಷ್ ಸ್ಕೂಲಿನಿಂದ ೪ ಜನ ವಿದ್ಯಾರ್ಥಿಗಳೂ ಪರೀಕ್ಷೆಗೆ ಹೋಗಿದ್ದರು ಈ ೧೦ ಜನ ವಿದ್ಯಾರ್ಥಿಗಳ ಪೈಕಿ ಇಂಗ್ಲಿಷ್ ವಿದ್ಯಾರ್ಥಿ ಒಬ್ಬನ ವಿನಹಾ ಒಂಭತ್ತು ಜನ ವಿದ್ಯಾರ್ಥಿಗಳು ಉತ್ತಮ ತರಗತಿಯಲ್ಲಿ ತೇರ್ಗಡೆಯಾದರೆಂದು ತಿಳಿಸಲು ಸಂತೋಷಿಸುತ್ತೇನೆ ಈ ಉಭಯ ಸ್ಕೂಲಿನ ಹೆಡ್ ಮಾಸ್ಟರುಗಳು ಎಷ್ಟು ಶ್ರದ್ಧೆಯಿಂದ ಕೆಲಸ ಮಾಡಿರುತ್ತಾರೆಂದು ಈ ಫಲಿತಾಂಶದಿಂದಲೇ ತಿಳಿಯುತ್ತದೆ ಕಂಚಾಪುರದ ಗಾಯನ ವಿದ್ವಾಂಸರಾಗಿರುವ ಮೆ॥ ವೇದವಾಣಿಶಾಸ್ತ್ರಿಗಳವರು ಕಳೆದ ವಾರ ಈ ಊರಿಗೆ ದಯಮಾಡಿಸಿದ್ದರು ಇಲಿನ ದೊಡ್ಡ ಮನುಷ್ಯರುಗಳೆಲ್ಲಾ ಅವರನ್ನು ಕಾಣಿಸಿಕೊಂಡು ಅವರ ವಿದ್ಯಾಮಾನಗಳನ್ನೆಲ್ಲಾ ವಿಚಾರಿಸಿ ೧೮ ನೇ ೧೩ ನೇ ತಾರೀಖಿನ ಸಾಯಂಕಾಲಗಳಲ್ಲಿ ಅವರಿಂದ ಗಾಯನ ಕಾಲಕ್ಷೇಪ ಮಾಡಿದರು ಪರಭಾಷೆ ಎಂಬ ಒಂದು ಕಾರಣವಲ್ಲದೆ ಉಳಿದ ಎಲ್ಲಾ ವಿಷಯಗಳಿಗೂ ಸರ್ವರೂ ಸಂಪೂರ್ಣರಾದ ಹಾಗಿದ್ದರು ಅವರ ಸಂಗೀತಗಳು ಸರ್ವಮತಸ್ಥರೂ ಒಪ್ಪಿಕೊಳ್ಳತಕ್ಕ ನೀತಿವಾಕ್ಯಗಳಿಂದ ತುಂಬಿದ್ದಾಗಿರುತ್ತದೆ ಫಿಟೀಲು ಬಾರಿಸುವದರಲ್ಲಿ ಅವರು ಬಹು ಸಮರ್ಥರು ಆದ್ದರಿಂದ ಈ ಊರಿನ ಪ್ರಾಮಿಸ್ಸರಿಯಾದ ಮೆ॥ ತಾ। ವೆಂಕಟಸುಬ್ಬಯ್ಯನವರೂ, ಇಂಗ್ಲಿಷ್ ಸ್ಕೂಲಿನ ಹೆಡ್ ಮಾಸ್ಟರ್ ಮೆ॥ ವಿಟ್ಠಲಮೂರ್ತಿ ಆಚಾರ್ಯರೂ, ಸಂಸ್ಕೃತ ಪಂಡಿತರಾದ ಮೆ॥ ಸುಬ್ಬರಾಯಶಾಸ್ತ್ರಿಗಳವರೂ, ಕನ್ನಡ ಸ್ಕೂಲ್ ಹೆಡ್ ಮಾಸ್ಟರು ಮೆ॥ ಸುಬ್ಬರಾಯರೂ ಬ್ರಾಂಚ್ ಪೋಸ್ಟ್‌ಮಾಸ್ಟರ್ ಮೆ॥ ನರಸಿಂಗರಾಯರೂ ಅವರ ಪಾಂಡಿತ್ಯಕ್ಕೆ ಮೆಚ್ಚಿ ಅವರಿಗೆ ಬಹುಮಾನದೊಡನೆ ಒಂದು ಸರ್ಟಿಫಿಕೇಟು ದಯಪಾಲಿಸಿದರು

ವಿದೇಶ ವರ್ತಮಾನಗಳು

ವಿಲಾಯತಿಗೆ ಸೇರಿದ ಕಿಲ್‌ಬರ್ನ್ ಪಟ್ಟಣದಲ್ಲಿ ಕಳೆದ ವಾರ ಅಂಗಡಿ ಮಳಿಗೆಗಳಿಗೆ ಬೆಂಕಿ ಬಿದ್ದು ೧೩ ಮಳಿಗೆಗಳು ಸಾಮಾನು ಸಹಿತ ಸುಟ್ಟುಹೋದವು ವರ್ತಕರಿಗೆ ೧೫ ಲಕ್ಷ ರೂಪಾಯಿ ನಷ್ಟವಾಗಿದೆ

ಈಜಿಪ್ಟಿನ ಖೆಡೀವ್ ರಾಜರು ಮಕ್ಕೆಯಿಂದ ಮದೀನಾವನ್ನು ತಲುಪಿ, ಅಲ್ಲಿ ಮಹಮ್ಮದೀಯ ಯಾತ್ರಾರ್ಥಿಗಳು ನಡಿಸುವಂಥಾ ಕರ್ಮಾಂತರಗಳನ್ನು ಆಚರಿಸುತ್ತಿದಾರೆ ಈಜಿಪ್ಟಿನ ಅರಸರು ಇದುವರೆಗೆ ಅಲ್ಲಿಗೆ ಹೋದದ್ದು ತುಂಬಾ ಅಪರೂಪವೆಂದು ಪ್ರಕಟವಾಗಿದೆ

ಚಕ್ರವರ್ತಿ ಸಾರ್ವಭೌಮರವರು ಕಳೆದ ವಾರ ಒಂದು ಇಸ್ತಿಹಾರನಾಮೆಯನ್ನು ಪ್ರಕಟ ಮಾಡಿಸಿದರು ಅದರಲ್ಲಿ ಕಂಡಂತೆ ಇಂಗ್ಲಾಂಡಿನ ಹೊಸ ಪಾರ್ಲಿಮೆಂಟು ಫೆಬ್ರವರಿ ತಾ ೧೫ ನೇ ಮಂಗಳವಾರ ಕೂಡುವರು ಅಷ್ಟರೊಳಗೆ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನೆಲ್ಲಾ ಚುನಾಯಿಸಬೇಕಾಗಿದೆ

ವಿಲಾಯತಿಗೆ ಸೇರಿದ ಲ್ಯಾಂಕ್ಯಾಸ್ಟರ್ ಪಟ್ಟಣದಲ್ಲಿ ಲಾರ್ಡ್ ಆಷ್ಟನ್ ಯವರು ೨೩,೭೫,೦೦೦ ರೂಪಾಯಿ ಮುಟ್ಟಿ ಒಂದು ಟೌನ್ ಹಾಲ್ ಬಂಗಲೆಯನ್ನು ಕಟ್ಟಿ, ಪುರ ಜನರ ಉಪಯೋಗಕ್ಕಾಗಿ ವಹಿಸಿ ಕೊಟ್ಟರು ಅದು ೨,೫೦೦ ಜನರು ಏಕ ಕಾಲದಲ್ಲಿ ಕುಳಿತುಕೊಳ್ಳುವಷ್ಟು ವಿಸ್ತಾರವುಳ್ಳದ್ದಾಗಿದೆ

ಸೋಮಾಲಿ ಲ್ಯಾಂಡಿನ ಮುಲ್ಲಾ ಎಂಬ ಮುಖಂಡನ ಕಡೆಯ ಗೂಢಚಾರರು ಇಂಗ್ಲಿಷರ ಆಶ್ರಯದಲ್ಲಿರುವಂಥಾ ಒಂದು ಗುಂಪಿನ ದೇಶೀಯ ಜನರ ಮೇಲೆ ಬಿದ್ದು, ೨೦ ಜನರನ್ನು ಹೆಂಗಸರು ಮಕ್ಕಳ ಸಮೇತ ಕೊಂದು ಹಾಕಿ, ೫೦೦ ಒಂಟೆಗಳನ್ನು ಲೂಟಿ ಮಾಡಿ ಹೊತ್ತುಕೊಂಡು ಹೋಗಿದಾರೆ.

ಫ್ರಾನ್ಸ್ ಸಂಸ್ಥಾನದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಶೃಂಗಾರ ಯುಕ್ತವಾದ ಅನೇಕ ಕಟ್ಟಡಗಳನ್ನು ಕಟ್ಟಿ ಅಲಂಕಾರಯುಕ್ತವಾಗಿ ಮಾಡುವುದಕ್ಕೂ ಆರೋಗ್ಯ ವಿಚಾರಗಳನ್ನು ಕ್ರಮಪಡಿಸಿ ಅಭಿವೃದ್ಧಿಪಡಿಸುವುದಕ್ಕೂ ಸರ್ಕಾರದವರು ೫೪ ಕೋಟಿ ರೂಪಾಯಿ ಸಾಲ ಮಾಡುವವರಾಗಿದಾರೆ

ವಿಲಾಯತಿಗೆ ಸೇರಿದ ನಾರ್ದಂಬರ್ಲಂಡಿನ ೨೦ ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುವ ೧೭,೦೦೦ ಕೂಲಿಕಾರರು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದಾರೆ ದರ್ಹಾಂ ಪಟ್ಟಣದ ೫೦೦ ಕೂಲೀ ಜನರ ತಾವು ಗಣಿ ಕೆಲಸಗಳಿಗೆ ಹೋಗದೆ ಇಂಗ್ಲಾಂಡಿನ ಸಕಲ ಗಣಿಗಳ ಜನಗಳಿಗೂ ಕೆಲಸಕ್ಕೆ ಹೋಗಬೇಡಿ ಎಂಬದಾಗಿ ನೋಟೀಸುಗಳನ್ನು ಕೊಟ್ಟು ತಿಳಿಸಿದಾರೆ

ಹೋದ ವರುಷ ರಷ್ಯಾ ರಾಜ್ಯದಲ್ಲಿ ೧,೩೧೮ ಜನರಿಗೆ ಸರ್ಕಾರದವರು ಮರಣದಂಡನೆಯನ್ನು ವಿಧಿಸಿದರು ಇದುವರೆಗೆ ಆ ಪೈಕಿ ೫೧೭ ಜನರನ್ನು ಗಲ್ಲಿಗೆ ಹಾಕಿರುತ್ತಾರೆ ಇದಲ್ಲದೆ ಅಲ್ಲಿ ಪ್ರಕಟವಾಗುವ ೧೬೫ ವರ್ತಮಾನ ಪತ್ರಿಕೆಗಳ ಎಡಿಟರುಗಳಿಗೆ ಸರ್ಕಾರದವರು ಕಳೆದ ವರುಷ ೧,೮೨,೧೬೮ ರೂಪಾಯಿ ಜುಲ್ಮಾನೆಯನ್ನು ಹಾಕಿ ವಸೂಲ್ಮಾಡಿದರು

ವಿಲಾಯತಿಯಲ್ಲಿ ಹತ್ತಿ ಬೆಳೆಯನ್ನು ಮಾಡಿಸುವುದಕ್ಕಾಗಿ ಒಂದು ಸಂಘವು ಏರ್ಪಡಾಗಿದೆ ಈ ಸಂಘದವರು ವ್ಯವಸಾಯಗಾರರಿಗೆ ಬೇಕಾದ ತಿಳುವಳಿಕೆಯನ್ನು ಕೊಟ್ಟು ದ್ರವ್ಯಸಹಾಯವನ್ನೂ ಮಾಡುವರು ಈ ಸಂಘದ ಕಾರ್ಯಕ್ಕಾಗಿ ಲಾರ್ಡ್ ಕ್ರೂರವರು ಮೂರು ವರುಷಗಳವರೆಗೆ ಪ್ರತಿ ವರುಷವೂ ಒಂದೂವರೆ ಲಕ್ಷ ರೂಪಾಯಿಯಂತೆ ದ್ರವ್ಯ ಸಹಾಯಮಾಡುತ್ತಾ ಬರುವುದಾಗಿ ವಾಗ್ದಾನ ಮಾಡಿದಾರೆ

ಲಂಡನ್ ಪಟ್ಟಣದ ವಿದ್ಯಾನಿಲಯದಲ್ಲಿ ಶಾಸ್ತ್ರ ಪಂಡಿತನಾಗಿದ್ದ ಮಿಸ್ಟರ್ ಚಾರಲ್ಸ್ ಗೇಹಂ ಎಂಬಾತನು ತನ್ನ ಆಸ್ತಿಯಲ್ಲಿ ಆರು ಲಕ್ಷ ರೂಪಾಯನ್ನು ಒಂದು ಫಂಡು ಹಾಕಿ, ಅದರ ಉತ್ಪತ್ತಿಯಿಂದ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಬೇಕೆಂದೂ, ವಿದ್ಯಾರ್ಥಿಗಳು ಪ್ರಜೆಗಳ ರೋಗಾದಿಗಳ ನಿವಾರಣೆಗೆ ಉಪಯುಕ್ತವಾದ ವಿಷಯಗಳನ್ನು ಕಂಡು ಹಿಡಿಯುವುದರಲ್ಲಿ ಉದ್ಯುಕ್ತರಾಗಿರಬೇಕೆಂದೂ ಮರಣಶಾಸನವನ್ನು ಬರೆದಿರುತ್ತಾನೆ

ಉತ್ತರ ಅಮೇರಿಕಕ್ಕೆ ಸೇರಿದ ಓರಿಗಾನ್ ಪ್ರಾಂತ್ಯದಲ್ಲಿ ಜಾರೀ ಎಂಬ ಜಹಜು ಬಂಡೆಗೆ ಬಡಿದು ನಾಶವಾಯಿತು ಅದರಲ್ಲಿದ್ದ ಜನರು ಒಪ್ಪಿನ ಹಗ್ಗ ಮುಂತಾದವುಗಳನ್ನು ಹಿಡಿದುಕೊಂಡು ತೀರಕ್ಕೆ ಬರುತ್ತಿರುವಲ್ಲಿ ಅಲೆಗಳು ಒಡೆದು ಸಮುದ್ರದೊಳಕ್ಕೆ ಸೆಳೆಯಲ್ಪಟ್ಟು, ಮೂವತ್ತು ಮಂದಿ ನೀರಿನ ಪಾಲಾದರು ದಡದ ಮೇಲಿದ್ದವರು ಈ ದುಃಖಕರವಾದ ನೋಟವನ್ನು ನೋಡುತ್ತಿದ್ದರೂ ಅವರು ಯಾವ ಸಹಾಯವನ್ನೂ ಮಾಡಲಾರದೆ ಇದ್ದರು

ಸ್ಪೇನ್ ರಾಜ್ಯದಲ್ಲಿ ಗವರ್ನ್‌ಮೆಂಟಿನವರು ಸೈನ್ಯದ ಇಲಾಖೆಯವರಿಗೆ ಅನೇಕರಿಗೆ ಪಕೆ ಷವಾದ ಒಡ್ಡಿಗಳನ್ನೂ ಬಹುಮಾನಗಳನ್ನೂ ಕೊಟ್ಟರು ಇದು ಅನೇಕ ಸ್ವಮಸ್ಯಾಧಿಪತಿಗಳಲ್ಲಿ ಅಸಮಾಧಾನವನ್ನುಂಟುಮಾಡಿರುವುದು ಎಡಮಾಡದ ಹಾಗೆ ದಾರರು ದಂಗೆ ಕೃತ್ಯಗಳನ್ನು ನಡಿಸುವವರಾಗಿದ್ದರಿಂದ ತಿಳಿದದ್ದರಿಂದ ಸರ್ಕಾರದವರು ಆ ಪೈಕಿ ಹಲವರನ್ನು ದಸ್ತಗಿರಿ ಮಾಡಿ ಕೊಮ್ ಕೈದಿಯಲ್ಲಿಟ್ಟಿದಾರೆ ಒಬ್ಬ ಮುಖ್ಯಾಧಿಕಾರಿಯನ್ನು ಕೆಲಸದಿಂದ ವಜಾ ಮಾಡಿಬಿಟ್ಟರು

ಮಧ್ಯ ಆಫ್ರಿಕಾದಲ್ಲಿ ಮಗಾದಿ ಎಂಬ ಸ್ಥಳದೊಳಗೆ ಒಬ್ಬ ಮಾಜಿ ಯೂರೋಪಿಯನ್‌ರು ಒಂದು ಕರೆಯನ್ನು ಹೊಸದಾಗಿ ಸೃಷ್ಟಿಸಿರುವಲ್ಲಿ ಆ ಕರೆಯೊಳಗೆ ಮೇಲ್ಭಾಗದಲ್ಲಿ ಕೆಲವು ಅಂಗುಲಗಳ ತನಕ ಕೆಂಪಾದ ನೀರು ನಿಂತಿತ್ತು ಆ ನೀರಿನ ಕೆಳಗಡೆ ಸೋಡಾ ಪುಡಿಯು ಜಮೆಯಾಗಿರುವುದು ಕಂಡು ಬಂದಿತು ಅದು ಸುಮಾರು ೨೦ ಮೈಲಿ ಚದರದಲ್ಲಿ ದೊರಕುವುದೆಂದೂ, ಅದರ ಸುತ್ತಲೂ ಎತ್ತರವಾದ ಗುಡ್ಡ ಕಡಿದಾದ ಕಲ್ಲು ಬಂಡೆಗಳು ಇರುವುದೂ ಗೊತ್ತಾಗಿವೆ ಯಾಗಾಂಡಾದಿಂದ ಆ ಸ್ಥಳದ ತನಕ ರೈಲ್ ರಸ್ತೆಯನ್ನು ಹಾಕಿ, ಅಲ್ಲಿ ಸಿಕ್ಕುವ ಸೋಡಾವನ್ನು ಸಾಗಿಸುತ್ತಾರೆಂದು ತಿಳಿಯುತ್ತದೆ

ವಿಲಾಯತಿಯಲ್ಲಿ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯು ರಭಸವಾಗಿ ನಡೆಯುತ್ತಲಿದೆ ಯೂನಿಯನ್ ಎಂಬ ಪಕ್ಷದ ಮುಖಂಡರಾದ ಮೆ॥ ಚೇಂಬರ್ಲೇನ್‌ರವರೂ ಮೆ॥ ಬಾಲ್ಫರ್‌ಯವರೂ ಸೇರಿ, ಪ್ರಜೆಗಳೆಲ್ಲಾ ತಮ್ಮ ಪಕ್ಷದ ಮೆಂಬರುಗಳನ್ನೇ ಪಾರ್ಲಿಮೆಂಟಿಗೆ ಮೆಂಬರಾಗಿ ಚುನಾಯಿಸಬೇಕೆಂದು ಒಂದು ನೋಟೀಸನ್ನು ಪ್ರಕಟಿಸಿದಾರೆ ಅದರಲ್ಲಿ ಅವರು ಹೇಳುವ ಅಭಿಪ್ರಾಯವೇನಂದರೆ,—ಪರ ರಾಜ್ಯಗಳಿಂದ ವಿಲಾಯತಿಗೆ ಬರುವ ಎಲ್ಲಾ ಪದಾರ್ಥಗಳ ಮೇಲೂ ಸುಂಕವನ್ನು ಹಾಕಿದರೆ ಇಂಗ್ಲಿಷ್ ಪ್ರಜೆಗಳ ಆಹಾರ ಪದಾರ್ಥಗಳ ಧಾರಣೆಯು ಇದುವರೆಗಿದ್ದುದಕ್ಕಿಂತ ಏರುವುದಿಲ್ಲ ಸಾಮಾನ್ಯವಾಗಿ ಪ್ರಜೆಗಳು ಉಪಯೋಗಿಸುವ ಆಹಾರ ಪದಾರ್ಥಗಳು ಅಗ್ಗವಾಗುತ್ತವೆ ಕೆಲಸ ಕಾರ್ಯಗಳು ಜನರಿಗೆ ವಿಶೇಷವಾಗಿ ದೊರಕುವವು ಇಂಗ್ಲಿಷ್ ಸ್ವಾಸ್ಥ್ಯಗಳ ಆಮದು ರಫ್ತು ವ್ಯಾಪಾರವು ಬಹಳವಾಗಿ ಅಭಿವೃದ್ಧಿಗೆ ಬರುತ್ತದೆ ಎಂಬುದೇ

ಅಮೇರಿಕಕ್ಕೆ ಸೇರಿದ ಸ್ಯಾನ್ ಫ್ರಾನ್ ಸಿಸ್ಕೊ ಪಟ್ಟಣದ ಸರ್ಕಾರದವರು ಚೀನಾ ಜನರು ಅಲ್ಲಿಗೆ ಹೋದರೆ ಅವರಿಗಾಗಿ ಒಂದು ದ್ವೀಪವನ್ನು ಬಿಟ್ಟುಕೊಟ್ಟು, ಅವರು ಅಲ್ಲಿ ವಾಸಮಾಡತಕ್ಕದ್ದೆಂದೂ ಪಟ್ಟಣದೊಳಗೆ ಮನೆಗಳನ್ನು ಮಾಡಿಕೊಂಡು ವಾಸಮಾಡಕೂಡದೆಂದೂ ಕಟ್ಟಳೆಯನ್ನು ಕಲ್ಪಿಸಿದಾರೆ ಅಲ್ಲಿರುವ ಚೀನಿಯವರು ತಮಗೆ ಉಂಟಾದ ಅವಮಾನವನ್ನು ತಮ್ಮ ದೇಶಕ್ಕೆ ತಿಳಿಸಿ, ಇನ್ನು ಮುಂದೆ ಅಮೇರಿಕದವರು ಚೀನಕ್ಕೆ ಕಳುಹಿಸುವ ವ್ಯಾಪಾರದ ಸರಕನ್ನು ಅಲ್ಲಿ ಯಾರೂ ಕೊಂಡುಕೊಳ್ಳದೆ ಬಹಿಷ್ಕಾರ ಮಾಡಬೇಕೆಂದೂ, ಅವರು ತಮಗೆ ಅಮೇರಿಕದಲ್ಲಿ ಕಲ್ಪಿಸಿರುವ ತಡೆಯನ್ನು ತೆಗೆದು ಹಾಕಿದರೆ ಆಗ ಬಹಿಷ್ಕಾರವನ್ನು ತೆಗೆದುಬಿಡಬಹುದೆಂದೂ ತಿಳಿಸಿರುತ್ತಾರೆ ಅದೇ ರೀತಿ ಈಗ ಅಮೇರಿಕದ ಸರಕನ್ನು ಚೀನಿಯವರು ಕೊಂಡುಕೊಳ್ಳದೆ ವರ್ಜಮಾಡಿರುವರು ಈ ವಿಚಾರವನ್ನು ಚೀನಾ ರಾಯಭಾರಿಯು ಅಮೇರಿಕದ ಸರ್ಕಾರದ ಗಮನಕ್ಕೆ ತಂದು, ಅವರು ಕಲ್ಪಿಸಿರುವ ತಡೆಯನ್ನು ತೆಗೆಯತಕ್ಕದ್ದೆಂದು ಮಾತು ಕೊಟ್ಟಿದಾರೆ

Printed and Published by the Rev. H GULLIFORD, Proprietor and Manager Wesleyan Mission Press, Mysore 20/1/1910

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—೧೯೧೦ ನೇ ಇಸವಿ ಜನವರಿ ತಾರೀಖು ೨೭ ನೇ ಗುರುವಾರ. ಸಂಚಿಕೆ ೩೫

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

14 4

ನಮ್ಮಲ್ಲಿ ಈಗ ನೂರು ಟಕ್ಕೆ ಸಿದ್ಧವಾಗಿರುವ ಚಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂಥವುಗಳಾಗಿವೆ. ಒಬ್ಬೊಬ್ಬರು ಹೊಲಿಸುವದಿಲ್ಲ. ಸುರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಇವುಗಳ ಈ ಬಟ್ಟೆಗಳ ಪ್ರಯೋಜನವು ನಮಗೆ ಗೊತ್ತಾಗುವದು. ಗಜ ಒಂದಕ್ಕೆ ೫ ಆಣೆಯಿಂದ ೮ ಆಣೆ ವರೆಗೂ ಚಿಲ್ಲರೆಯಾಗಿ ಅಗಲೀ ಬಟ್ಟಾಗಿ ಅಗಲೀ ಕಳುಹಿಸಲ್ಪಡುತ್ತವೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಎಚ್. ಎಸ್. ಬುಕ್ ಡಿಪೋ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲಿ ಇತರ ಕಡೆಗಳಲ್ಲಿ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ ಅಡ್ವಾನ್ಸು) .. ರೂ ೧—೦—೦

ಪೋಸ್ಟ್ ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

THE P... E ... OF HASSAN CAPS IS HASSAN.

ನಿಮ್ಮ ತಲೆಯು ಮೋಳಿರುವದೇನು ?

ಹಾಸನದ ಟೋಪಿ ಇಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3 4

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ತಯಾರಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ. (೧) ನಮ್ಮಲ್ಲಿ ಉಪಯೋಗಿಸುವ ಟೋಪಿಗಳ ದಾರವೆಲ್ಲಾ ಪೆಟ್ಟಿಗೆ ವಿಲಾಯಿತಿಯಿಂದ ಬರುವದು. (೨) ಟೋಪಿಗಳನ್ನು ಮುದ್ದಾಗಿ ನೂರು ಸಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆ ದಾರ, ಚನ್ನಾಗಿ ನೆಸೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಹಾಗೂ ಕೆಂಪು, ಕಪ್ಪು, ಬಿಳಿ, ಕಾಸಿ ಬಣ್ಣಗಳ ಟೋಪಿಗಳು ೧ ರೂ ೮ ಆ ರೂ ೬ ಆ, ೧ ರೂ. ೪ ಆ

ಕುಚ್ಚಿಯುಳ್ಳ ಟೋಪಿಗಳು ರೂ ೧ ೮; ರೂ ೧-೧೨

ರೇಷ್ಮೆ ಕುಚ್ಚಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ., ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ರಿಪಟ್ಟು. ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ. ಹಾಸನ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

4 60

ಬೋಕಾಮಯಾರಿ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಕವಳದ ಘನ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ವೈಕ್ಕೆಕಾಲು ಕೊಡತ (ಬಾವು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸೇದಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರು ಹವೆಗಳ ಬದಲಾವಣೆಯನ್ನು ಸಹಿಸಿ ರಕ್ತದಲ್ಲಿ ದೋಷವನ್ನು ತೆಗೆದು ಬುದ್ಧಿ ವೃದ್ಧಿಪಡಿಸುವದು. ಸ್ತ್ರೀಯರ ಸೂತಿಕಾಶೂಲೆ, ಮಕ್ಕಳ ಎಳವು, ಜ್ವರ ಕೆಮ್ಮು ಜ್ವರ ಕ್ಲೇಶಗಳನ್ನು ಬಹು ಬೇಗನೆ ಗುಣಪಡಿಸುತ್ತವೆ.

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿವೆ.

ಅನುಪಾನವಿಧಿ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೮ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವಿಳಾಸ.—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ. 11 4



ಇದು ಸಾಧಾರಣ ಜ್ವರ, ಚಳೀಜ್ವರ, ನಿತ್ಯಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ಟ ... ರೂ ೩—೧೨ ಆ, ೧೧ ರೂ. ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಿನಾಯಿತಿಯಾಗುವದು.

ಅಮೃತಾಂಜನ? ಸುಮಂಗಳ ಸ್ಪೋರ?



ಈ ಔಷಧಿ ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಮನವರು—ಹೆನ್ರಿಯ ಓಮಂಕರ್ಪೂರವನ್ನು ನಾನೂ ನನ್ನ ಶಾಪೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷದ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಂತ್ರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೧೦ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು. ಇದರಲ್ಲಿ ಗತಿಸಿದ ಕ್ವಾರ್ಟರ್ ಓಲ್ಡ್ ಫೀಲ್ಡ್ ಜಾನ್, ಐ. ಸಿ. ಎಸ್., ಯವರು, ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ತ್ರಿವೇಣಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ. ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಜನವರಿ ೩೧ನೇ ತಾರೀಖಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು. ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡಲೆ ಬರೆಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಪ್ರಸಿದ್ಧಿಯನ್ನು ಹೊಂದಿದ ಅಮೇರಿಕಾ ಖಂಡದ ಯೋಗವು.

ಪ್ರೊಫೆಸರ್ ಜೇಂಸ್‌ರವರ

ವಿದ್ಯುಚ್ಛಕ್ತಿಯ ಮಾತ್ರೆಗಳು.

ಈ ಮಾತ್ರೆಗಳನ್ನು ... ರೀತಿಯಾಗಿ ಪ್ರತಿ ಋತುವಿನಲ್ಲಿ ಕೆಲಸ ಮಾಡುವಂತೆ ವಿದ್ಯುಚ್ಛಕ್ತಿಯು ... ಇದರಿಂದ ಮಾನವ ದೇಹದಲ್ಲಿ ವಿದ್ಯುಚ್ಛಕ್ತಿಯು ... ರೋಗಗಳು ... ಈ ವಿದ್ಯುಚ್ಛಕ್ತಿಯ ... ರಕ್ತವನ್ನು ಶುದ್ಧ ಮಾಡುವದು, ಹೊಸ ರಕ್ತವನ್ನು ... ಪುಷ್ಟಿಯಾಗುವಂತೆ ಮಾಡುವದು ... ಅಜೀರ್ಣವು ... ಇರುವದೂ, ಕಾಲುಗಳ ನೋವು, ... ಕಟ್ಟಿಕೊಳ್ಳುವದು, ಮನೋವ್ಯಥೆ ... ಇರುವದು, ನರಗಳಲ್ಲಿ ... ಮೈಯ ನೋವು, ಮುಖದಲ್ಲಿ ... ಹೋಗುವದು, ಇವುಗಳನ್ನೆಲ್ಲಾ ... ಆರೋಗ್ಯವನ್ನುಂಟುಮಾಡುವದು. ಸ್ತ್ರೀಯರು ... ದೌರ್ಬಲ್ಯ, ... ನಡುವಿನ ನೋವು, ... ಮೊದಲಾದವುಗಳಿಗೆ ಈ ಮಾತ್ರೆಗಳು ಸಿದ್ಧೌಷಧಗಳು. ... ಈ ಮಾತ್ರೆಗಳ ಸೇವನೆಯಿಂದ ... ವೃದ್ಧಿಯಾಗಿ ... ಈ ಮಾತ್ರೆಗಳನ್ನು ಸೇವಿಸುವದಕ್ಕೆ ... ಜೀರ್ಣಶಕ್ತಿ ಹೆಚ್ಚುವದು, ... ಜೀರ್ಣಕ್ಕೆ ... ಈ ಮಾತ್ರೆಗಳನ್ನು ಸೇವಿಸಿದರೆ ಜನರು ಆರೋಗ್ಯದೃಢಕಾಯರಾಗುವರು. ಎಂಟು ... ದರೂ ಈ ಮಾತ್ರೆಗಳನ್ನು ಸೇವಿಸಬೇಕು.

ಕ್ರಯ — ೩೦ ಮಾತ್ರೆಗಳಿಗೆ ರೂಪಾಯಿ ೧-೪-೦, ೧೦೦ ಮಾತ್ರೆಗಳಿಗೆ ೩ ರೂಪಾಯಿ. ವಿ. ಪಿ. ... ೧ ಸೀಸೆ ಮೊದಲು ೩ ಸೀಸೆ ವರೆಗೂ ೫ ಆಣೆ.

ಕೆಲವು ಪ್ರಶಂಸಾಪತ್ರಗಳ ಮುಖ್ಯ ಅಭಿಪ್ರಾಯಗಳು

ರಾಜಾ ... — ಇನ್ನೂ ... ವಿದ್ಯುಚ್ಛಕ್ತಿ ಮಾತ್ರೆಗಳನ್ನು ವಿ. ಪಿ. ಮೂಲಕ ಕಳುಹಿಸಬೇಕು.

... ರಾಜಾಪ್ಪರು ... —ಇದುವರೆಗೂ ತರಿಸಿಕೊಂಡ ವಿದ್ಯುಚ್ಛಕ್ತಿಯ ಮಾತ್ರೆಗಳು ತುಂಬಾ ಕೆಲಸ ಮಾಡಿವೆ. ಕೂಡಲೆ ಇನ್ನು ನಾಲ್ಕು ... ಮಾತ್ರೆಗಳನ್ನು ಕಳುಹಿಸಿ ಕೊಡಬೇಕು. [2-5]

ಕೇಶವರ್ಧಿನೀ ... ಬಾಂ

ಇದು ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ... ಇದರಿಂದ ವಾತ, ಸಂಧಿವಾತ, ... ಉರಿ, ಶೀತ, ಕೆಮ್ಮು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಪಕ್ಷವಾತ ಅಂಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ... ಇದು ಉತ್ತಮ ಎಂಬುವದಕ್ಕೆ ಸಂಶಯವಿಲ್ಲ. ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ.

ಟಾ 1 ೧ಕ್ಕೆ ೮ ಆಣೆ

ಧಿಲಬಹಾರ ... ಗುಲಾಬ್

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸನೆಯಾದ ಅತ್ತರು. ಇದರ ವಾಸನೆಯು ... ಯೂ ಇದೆ. ಎಲ್ಲಾ ಅತ್ತರುಗಳಿಂತಲೂ ಇದೇ ಉತ್ತಮವಾದದ್ದು. ಬಾಟ್ಲಿ ಒಂದಕ್ಕೆ ರೂ ೧—೮—೦

ಏಜೆಂಟರು :—ದಿ ಉಲ್ಲಾಸ್ ಮೋರ್ಸ್, ಮಂಗಳೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 86

ತಲೆನೋವು, ವಾಯುನೋವು, ಶೀತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶಿರೋರೋಗಗಳು, ಬೆನ್ನುನೋವು, ಕೀಲುಗಳು ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ನಿಲುಕದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ನೋವಿನಿಂದ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ಒಂದಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಸಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ— ಜೆ ಎಸ್ ಕನ್ನಿಂಘಮ್ ಅಂಡ್ ಕಂಪೆನಿ ತುಮಕೂರು ಮುಂತಾ

ಎಸ್ ಪೀಟರ್ಸನ್,

೨೩, ನೇದಮುಬಲಿಪ್ಳೆ ಬೀದಿ ವೇಪೇರಿ ಮದರಾಸ್

ನಿಮಗೆ ಮೈಸ್ವಸ್ಥವಿಲ್ಲವೋ ?

ನಿನಗೆ ಮೈಸ್ವಸ್ಥವಿಲ್ಲವೆ ದ ಕೋರಿಬಾ ಎಂದರೆ ನಿನಗೆ ಯಾವ ನೋವು ಉಂಟಾಗಿದೆ ನನಗೆ ಏನಕ್ಕೆ ದ ನೋವಾದರೂ ಕಾಲಪ್ರವೃತ್ತಿಯಾಗುತಿದೆಯೇ ? ಎಂದು ನಿನ್ನನ್ನು ನೀನೇ ಕೇಳಿಕೋ ಹಾಗೆ ಆಗಿದ್ದರೆ ದೋಷದ ಜೀರ್ಣಕೋಶಂಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ಅಥವಾ ಮಲಗುವುದಕ್ಕೆ ಮುಂಚೆ ತೆಗೆದುಕೋ ನಾಳೆ ದಿವಸ ಬೆಳಗ್ಗೆ ಸುಖವಾಗಿ ಶಾಲ ಪ್ರವೃತ್ತಿಯಾಗಿ ನೀನು ಮೈ



(೧ ಆಣೆ ಬಿಲ್ಲೆ ರ ಮಾತ್ರ) ಸ್ವಸ್ಥವಾಗುವೆ. ಮಲಬದ್ಧತೆಯಿಂದ ಅಥವಾ ಸ್ವಲ್ಪ ದಿನದಿಂದ ಮಲಬದ್ಧವಾಗಿರುವುದರಿಂದ ಬರುವ ರೋಗಗಳು ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಾಮವಾಗುವುದು ಈ ವಿಷಮ ಸ್ಥಿತಿ ಬರದ ರೋಗಗಳಿಗೆ ಅನೇಕರಿಗೆ ಮೂಲ ಕಾರಣವಾಗಿರುವುದು ... ದಿಂದ ರೋಗಗಳಿಗೆ ಕೆಲಸಮಾಡುವಂಥವುಗಳನ್ನು ಇದರಿಂದ ತಿಳಿಯಬಹುದು ... ಇದೇ ಗುಳಿಗೆಗಳಿಂದ — ಪಿತ್ತಕೋಶದ ರೋಗ ಪಿತ್ತ ... ಅಜೀರ್ಣ, ಉದರ ... ಅಸ್ವಸ್ಥತೆ, ಹೊಟ್ಟೆ ಉಬ್ಬರ, ಹುಳಿತೇಗು ... ಮೊದಲಾದ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತದ ... ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್ಸ್ ರವರ ... ಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ಗಂಡಸರಿಗೂ ಹೆಂಗಸರಿಗೂ ಮಕ್ಕಳಿಗೂ ಎಲ್ಲರಿಗೂ ಸರಿಯಾದವು ... ಮಲವನ್ನು ಶುದ್ಧಮಾಡಿ ... ಮಲಾಶಯದಿಂದ ಹೊರಕ್ಕೆ ತಳ್ಳಿ ಪಿತ್ತಕೋಶವನ್ನು ಬಲಪಡಿಸಿ ಪಿತ್ತವ ... ಚೆನ್ನಾಗಿ ಇಳಿಯುವಂತೆ ಮಾಡಿ ಅಂಗದ ಸ್ಥಿತಿಯನ್ನು ... ಇಟ್ಟು ಶರೀರದ ಬೇರೆ ನೋವನ್ನು ಪರಿಹರಿಸಿ ಆರೋಗ್ಯವನ್ನುಂಟು ಮಾಡುವುವು [6 22]

ಬೆಲೆ ... ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ... ಮಾತ್ರಗಳು ಎಂಬತ್ತು ೪ ಆಣೆ ಬುಡ್ಡಿಗಳಲ್ಲಿರುವುದಕ್ಕಿಂತ ಇ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಿ ಸಿಕ್ಕುವುವು ಅಥವಾ ಡೋನ್ಸ್ ... ಬೆಂಗಳೂರು — ಇವರಿಂದ ದೊರೆಯುವುದು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕುದಾದ ೧ ಅಣೆಯು [7 46]

ತಲೆನೋವು, ಗಂಟು ಉಬ್ಬುವುದು, ವಾತ ದ ಧಿಮತ, ಉಳುಕು, ಅಟಲು ಗಂಟು, ಗಂಟಲು ನೋವು, ಅರ್ಧಾಂಗವಾಯು, ಎದೆಶೀತ, ಧಾಯ, ಚಳಿಮು, ಇತ್ಯಾದಿ

ಇವರ ವಿಳಾಸವಾಗಿ ಸರ್ವೇಜನರು ಕೇಳಿಮಾಡುತ್ತಾರೆ ಬಾಟ್ಲಿ ಒಂದರ ಕ್ರಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮುಲಾಮು ಸಾಕಿ ತೆಗೆಸುವವರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕ್ರಿಮ್ಮತು ೦-೩-೦ ೧೨ ಡಬ್ಬಿಗಳಿಗೆ ೪ ೦-೦

ಅಮೃತಮಿಶ್ರಿತ	೨ ೦-೦
ಚೇಳುಕಡಿತದ ಮದು	೦ ೮ ೦
ಪ್ರವಗುಟಿಕ —ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದಿ ಬಣ್ಣಕೆ	೦ ೮ ೦
ಬಾಲಾಮೃತ—ಬಾಲಕರಿಗೆ	೦ ಳ-೦
ನೇತ್ರಾಂಜನ—ಮುಂದ ದೃಷ್ಟಿಗೆ	೦-೪-೦
ಪಿಚ್ಚಿ ಮುಲಾಮು—ಮಕ್ಕಳ ಪಿಚ್ಚಿಗೆ	೦ ೩ ೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧ ೦ ೦
ಕಫನಾಶಕ ಚೂರ್ಣ—ಅಸ್ತಮಾ ರೋಗಕ್ಕೆ	೦ ೮ ೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು



84

ಶೀತದ ಕೆಮ್ಮು ಗಟ್ಟಿ ಕಫವನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲನೋವು ಎದೆಯೂ ಹಟ್ಟುವ ಸಮಸ್ತ ವ್ಯಾಧಿಗಳು — ಇವುಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಿದರೆ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಕ್ಲಿಷ್ಟ ಕಟ್ಟುವದನ್ನು ಶೀಘ್ರ ಬೀಳುವುದನ್ನು ಹುಡಿ ತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಲಕ್ಷಣವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ ಸ್ವಸ್ಥತೆಯನ್ನು ಉಂಟುಮಾಡುವ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್ ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ವಿಶ್ವಾಸಕ್ಕೆ ತಕ್ಕದ್ದು

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು	ಸಣ್ಣ ಶೀಸೆಗೆ ೧ ರೂಪಾಯಿ	ದೊಡ್ಡ ಶೀಸೆಗೆ ೨ ರೂಪಾಯಿ

ಶ್ವಾಸಕೋಶಗಳು ಗುಣವಾಗುವದಕ್ಕೋಸ್ಕರ

ಕಾಡ್ ಲಿವರ್ ಎಣ್ಣೆಯ ಉತ್ತಮ

SCOTT'S EMULSION. 61

(ಸ್ಕಾಟ್ಸ್ ಎಮಲ್ಷನ್)

ಶ್ವಾಸಕೋಶದ ವ್ಯಾಧಿಯ ಮಹಾರೋಗ ವಾಂತಿ ... ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗಪ್ರಬಲರನ್ನೂ ದುರ್ಬಲರನ್ನೂ ಬೇಗನೆ ಗುಣ ಹಿಡಿಯುತ್ತದೆ

ಶ್ವಾಸ ವ್ಯಾಧಿಯ ರೋಗಗಳಿಂದ ಬಳಲುತ್ತಿರುವ ಎದೆಯ ಭಾಗವನ್ನು ಬಲಪಡಿಸಿ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ವಿಕ್ರಯವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ

ಲಂಡನ್ ಇಂಗ್ಲೆಂಡ್

ಈ ಮನುಷ್ಯನುಳ್ಳ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಕೇಳಿದ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕಳುಹುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ ! !

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ (೧೬ ಪುಟಗಳು ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಹಿಂದಿನ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇದ್ದನು ಈತನು ಇಂಗ್ಲೀಷ್ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವ ಸಿಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು, ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಹಾಳೆ) ಪ್ರತಿಯೊಂದಕ್ಕೆ	0—0—6
(80 ಹಾಳೆ)	0—1—0
(160 ಹಾಳೆ)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-4]

ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು

ಸುಗಂಧಗಳು.

1 11

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ... ೧೦, ೧೪೦ ಬತ್ತಿಗಳು ೧ ತೊಲೆಗೆ ರೂ ೧ ದರ್ಜಂಗ ಪೆಟ್ಟಿಗೆ ೧ ಆಣೆ ತಾಂಬೂಲ ವಿಹಾರಿಣಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ ಮೈಸೂರು

ಸಂಜೀವಿನೀ ಔಷಧಾಲಯವು, ಮೈಸೂರು

2141

ಎಂ ಎಸ್ ಕುಮಾರಯ್ಯನವರ ದಿವ್ಯೌಷಧಗಳು

ಸಂಜೀವಿನಿ ಬಿಂದು ... ಮರುವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ... ದೋಷ, ಚರ್ಮವ್ಯಾಧಿ ಜೋಮು, ವಾಯುನೋವುಗಳು ಹಳೇ ಜ್ವರ, ... ಅಜೀರ್ಣ ತಲೆನೋವು, ಹೊಟ್ಟೆಯುರಿ ತಲೆಭಾರ ಮಲಬಂಧ, ... ಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ ರಕ್ತಪುಷ್ಟಿಗಳನ್ನು ಹೆಚ್ಚಿಸಿ, ... ದೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಬಲ ... ಗಳನ್ನು ವೃದ್ಧಿಪಡಿಸುವುದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ ಇವುಗಳಿಗೆ ಪಾಶುರಾ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ... ದಿನಕ್ಕೊಂದಾದರೂ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೆಟ್ಟಿಗೆ ೧ಕ್ಕೆ ೧ ರೂಪಾಯಿ

ಕಾಲರಾಟಕ ವಟಿಕ ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳೂ ಮೇಲೆ ಹಚ್ಚುವ ಔಷಧ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಟಗಣ್ಣು ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಶಕ್ತಿಯನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತಯಾರಾದ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳು ಬೇಕು ಅರ್ಜಿಗಳಿಗೆ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,

ಪ್ರೊಪ್ರೈಟರ್

ಶಾಲಿವಾಹನ ಶಕ ವರುಷಂಗಳು ೧೮೩೧ನೇ ಸೌಮ್ಯನಾಮ ಸಂವತ್ಸರದ ಪುಷ್ಯ ಬಹುಳ ತದಿಗೆ ಶುಕ್ರವಾರದಿಂದ ಪುಷ್ಯ ಬಹುಳ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ಮಕರ ಮಾಸ
28	ಶುಕ್ರ *	ತದಿಗೆ	27 50	ಪುಷ್ಯ	64 21	16
29	ಶನಿವಾ §	ಚೌತಿ	31 30	ಪುಷ್ಯ	59 40	17
30	ರವಿವಾ	ಪಂಚಮಿ	38 6	ಆಶ್ರೇ	60 0	18
31	ಚಂದ್ರ	ಷಷ್ಠಿ	14 20	ಆಶ್ರೇ	6 38	19
1	ಕುಜ ‡	ಸಪ್ತಮಿ	46 39	ಮಖ	31 0	20
2	ಬುಧ †	ಅಷ್ಟಮಿ	51 52	ಪುಬ್ಬ	18 12	21
3	ಗುರು	ನವಮಿ	56 28	ಉ	24 38	22

* ಸಂಕಷ್ಟಚತುರ್ಥಿ

§ ಮಂಗಳೂರು ಬೆಳುಕು ಕಡಿಯುವುದು

‡ ಕಿಸ್ಟೋವ್ಯಾಹಿಕ

† ಮಹಾವ್ಯತಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೩-೧೨-೧೯೦೯ ರಿಂದ ೭-೧-೧೯೧೦ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3	3	0	0
ಮೈಸೂರು ,,	16	14	0	0
ಬೆಂಗಳೂರು ಡಿಸ್ಟ್ರಿಕ್ಟು	6	4	0	0
ಮೈಸೂರು ,,	14	14	66	41
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	2	1	0	0
ಹಾಸನ ,,	8	3	0	0
ಚಿತ್ರದುರ್ಗ ,,	0	0	0	0
ಕಡೂರ್ ,,	4	1	0	0
ಶಿವಮೊಗ್ಗ ,,	12	7	0	0
ಜುಮ್ಲಾ	59	47	66	41

ಪೇಟೇ ಧಾರಣೆ.

ದಿನಸು	ಮೈಸೂರು	ಬೆಂಗಳೂರು
ಕಲ್ಲು ಅಕ್ಕಿ ಪಲ್ಲ ೧ಕ್ಕೆ ರೂ	೧೨-೮-೦	೧೩-೮-೦
ಕೆಂಬತ್ತಿ ಅಕ್ಕಿ ದವಲ್	೧೧-೮-೦	೧೪-೦-೦
,, ಮಧ್ಯಮ	೧೨-೦-೦	೧೨-೦
ಚಾವಣೆ ಅಕ್ಕಿ	೧೨-೪-೦	೧೪-೦
ಸಣ್ಣಕ್ಕಿ ಉವಲ್	೧೪-೫	೧೬-೦
,, ಮಧ್ಯಮ	೧೪-೦-೦	೧೪-೦
ಹೆಸರು ಬೇಳೆ ಪಲ್ಲ ೧ಕ್ಕೆ	೧೨-೪-೦	೧೪-೦
,, ಮಧ್ಯಮ	೧೨-೦-೦	೧೪-೦
ಕೆಂಪು ರಾಗಿ ಪಲ್ಲ ೧ಕ್ಕೆ	೮-೦-೦	೮-೦-೦
ರಾಗಿ	೨-೧೨-೦	೬-೧೨-೦
ಜೋಳ	೬-೫-೦	೬-೦-೦
ಹಲಸಂದೆ ಪಲ್ಲ ೧ಕ್ಕೆ	೧೧-೦-೦	೧೦-೦-೦
ಅವರೆ	೧೧-೦-೦	೧೦-೦-೦
ಹೆಸರು	೧೧-೦-೦	೯-೪
ಉದ್ದು	೧೩-೦-೦	೧೦-೦-೦
ಕಡಲೆ	೧೩-೮-೦	೯-೮-೦
ಎಳ್ಳು ಸೇರು ೧೦೦ಕ್ಕೆ	೧೫-೦-೦	೧೫-೦-೦
ಹುರುಳಿ	೮-೦-೦	೮-೦-೦
ತವಡು ೧೦೦ ಸೇರಿಗೆ	೧೪-೦-೦	೧೨-೦
ಸೀಗೆಕಾಯಿ ಮಣ ೧ಕ್ಕೆ	೨-೦-೦	೨-೦-೦
ಮೆಣಸಿನಕಾಯಿ	೪-೮-೦	೩-೪-೦
,, ಮಧ್ಯಮ	೪-೪-೦	೩-೦-೦
ಬೆಲ್ಲ ದೊಡ್ಡ ಅಚ್ಚು	೫-೮-೦	೫-೩-೦
ಒಣಕೊಬ್ಬರಿ ಮಣ ೧ಕ್ಕೆ	೫-೦-೦	೪-೮-೦
ಹರಳು ,,	೫-೮-೦	೬-೪-೦
ಕೊತ್ತುಂಬರಿ ಪಲ್ಲ ೧ಕ್ಕೆ	೧೬-೦-೦	೯-೦-೦
ಉಪ್ಪು	೬-೦-೦	೫-೮-೦
ಹುಣಿಸೇ ಹಣ್ಣು	೨-೪-೦	೧-೧೦-೦
,, ಹಳೇದು	೩-೦-೦	೧-೮-೦
ತುಪ್ಪ ಮಣ ೧ಕ್ಕೆ	೧೬-೮-೦	೧೪-೦-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	೫-೪-೦	೪-೨-೦
ತೆಂಗಿನಕಾಯಿ ೧೦೦ಕ್ಕೆ	೫-೦-೦	೫-೦-೦
ಅಡಿಕೆಕಾಯಿ ಮಣ ೧ಕ್ಕೆ	೦-೧೨-೦	೦-೧೨-೦
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೨-೦
ಚಿನ್ನ (ಪವನ್) ಕೆಂಪು	೧೫-೯-೦	೧೫-೬-೦
,, ,, ಪಸಿಮೆ	೧೬-೦-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ	೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೬೬-೪-೦	೬೪-೦-೦

ಗತಿಸಿದ ಮೆ|| ಎಲ್ ಬಿ ಬೌರಿಂಗ್ ಯವರು

ಮೈಸೂರು ಸಂಸ್ಥಾನದ ಚೀಫ್ ಕಮಿಷನರಾಗಿದ್ದು ಪೆನ್ಷನ್ ಪಡೆದು ಇಂಗ್ಲಾಂಡಿನಲ್ಲಿ ವಿಶ್ರಾಂತಿ ಸುಖವನ್ನನುಭವಿಸುತ್ತಿದ್ದ ಮೆ|| ಲೂಯಿ ಬೆಂಥಂ ಬೌರಿಂಗ್, ಸಿ ಎಸ್ ಐ ಯವರು ಕಾಲವಾದರೆಂದು ಕಳೆದ ತಾ. ೧೭ನೇ ಸೋಮವಾರ ತಂತೀ ವರ್ತಮಾನ ಬಂದಿದೆ ಎಂದು ತಿಳಿಸಲು ವಿಷಾದಿಸುತ್ತೇವೆ. ಇವರು ಬಂಗಾಳಾ ಗವರ್ನ್ ಮೆಂಟಿನಲ್ಲಿ ನೌಕರಿ ಮಾಡುತ್ತಿದ್ದು ಸುಮಾರು ಐವತ್ತು ಸಂವತ್ಸರಗಳ ಹಿಂದೆ ಮೈಸೂರು ಸಂಸ್ಥಾನದಲ್ಲಿ ಒಳ್ಳೇ ಕೀರ್ತಿಯನ್ನು ಸಂಪಾದಿಸಿಕೊಂಡರು. ಇವರು ೧೮೨೬ ನೇ ಇಸವಿ ೧೯೧ ರಲ್ಲಿ ಸರ್ ಜಾರ್ಜ್ ಬೌರಿಂಗ್ ಯವರ ಮೂರನೇ ಕುಮಾರರಾಗಿ ಜನಿಸಿ, ಎಗ್ಸೀಟರ್, ಲೀಪ್ ಜಿಗ್, ಹೇಲಿಬರಿ ಮುಂತಾದ ನಗರುಗಳಲ್ಲಿ ವಿದ್ಯಾಭ್ಯಾಸ ಮಾಡಿ, ಹಿಂದುಸ್ಥಾನಕ್ಕೆ ಬಂದು ೧೮೪೯ ರಲ್ಲಿ ಬಂಗಾಳಾ ಗವರ್ನ್ ಮೆಂಟ್ ನೌಕರಿಯನ್ನು ಪಡೆದುಕೊಂಡರು. ತರುವಾಯ ೧೮೫೪ ರಲ್ಲಿ ಅವರಿಗೆ ಲಾಹೋರ್ ಅ|| ರೆಸಿಡೆಂಟರ ಕೆಲಸವಾಯಿತು. ಬಳಿಕ ೧೮೫೮ ರಿಂದ ೧೮೬೨ನೇ ಇಸವಿಯ ತನಕ ಪಂಜಾಬ್ ಅಧಿಪತ್ಯದಲ್ಲಿ ನೌಕರಿ ಮಾಡಿದರು. ಮೆ|| ಬೌರಿಂಗ್ ಯವರನ್ನು ಗವರ್ನರ್ ಜನರಲ್ ರಾದ ಲಾರ್ಡ್ ಕ್ಯಾನಿಂಗ್ ಪ್ರಭುಗಳು ೧೮೫೮ ರಿಂದ ೬೨ನೇ ಇಸವಿಯ ತನಕ ತಮ್ಮ ಬಳಿ ಪ್ರೈವೆಟ್ ಸೆಕ್ರೆಟರಿಯಾಗಿ ನೇಮಕ ಮಾಡಿಕೊಂಡಿದ್ದರು. ವೈಸ್ ರಾಯಿಯವರು ಸೀಮೆಗೆ ಹೊರಟು ಹೋದ ಮೇಲೆ ಮೈಸೂರು ಮತ್ತು ಕೊಡಗಿನ ಕಮಿಷನರ ಕೆಲಸವು ಖಾಲಿಬಿದ್ದು, ಮೆ|| ಬೌರಿಂಗ್ ಯವರು ನೇಮಕವಾಗಿ ಬಂದರು. ಅದುವರೆಗೆ ಅಂದರೆ ೧೮೩೪ ರಿಂದ ೧೮೬೧ ರ ತನಕ ಸರ್ ಮಾರ್ಕ್ ಕಬ್ಬನ್ ಸಾಹೇಬರು ಕಮಿಷನರಾಗಿದ್ದು ಕೆಲಸದಿಂದ ನಿವೃತ್ತರಾದರು. ಇವರು ಬಹಳ ಸಾಹಸವಂತರಾಗಿಯೂ, ಪ್ರಜಾಪ್ರೀತಿಯುಳ್ಳವರಾಗಿಯೂ, ಸತ್ಯಸಂಧರಾಗಿಯೂ ಈ ಸಂಸ್ಥಾನವನ್ನು ಆಳಿ ಕೀರ್ತಿಯನ್ನು ಸಂಪಾದಿಸಿಕೊಂಡಿದ್ದರು. ಇಂಥವರ ಸ್ಥಾನದಲ್ಲಿ ಬಂದು ನಿಂತು ಸಂಸ್ಥಾನದ ಕಾರುಬಾರುಗಳನ್ನು ನಡಿಸಿ ಸಮರ್ಥರೆನ್ನಿಸಿಕೊಳ್ಳುವುದು ಮೆ|| ಬೌರಿಂಗ್ ಯವರಿಗೆ ಸುಲಭವಾಗಿರಲಿಲ್ಲ. ಆದರೂ ಮೆ|| ಬೌರಿಂಗ್ ಸಾಹೇಬರು ಬಹಳ ಅನುಭವಶಾಲಿಗಳಾಗಿದ್ದುದರಿಂದ ಸಂಸ್ಥಾನವನ್ನು ದಕ್ಷತೆಯಿಂದಲೂ ವಿಚಕ್ಷಣೆಯಿಂದಲೂ ಆಳಿ ಬಹಳ ಅಭಿವೃದ್ಧಿಗೆ ತಂದರೆನ್ನುವುದಕ್ಕೆ ಸಂಶಯವಿಲ್ಲ. ಇವರ ಹಿಂದೆ ಇಬ್ಬರು ಕಮಿಷನರುಗಳಿದ್ದರು. ತರುವಾಯ ಇಬ್ಬರನ್ನೂ ತೆಗೆದು ಒಬ್ಬರೇ ಚೀಫ್ ಕಮಿಷನರಾಗಿ ನೇಮಕವಾದರು. ಮೆ|| ಬೌರಿಂಗ್ ಯವರು ಎಂಟು ವರುಷ ಕಾಲ ಅಂದರೆ ೧೮೬೨ರಿಂ ೧೮೭೦ರ ವರೆಗೆ ಈ ಸಂಸ್ಥಾನದ ಚೀಫ್ ಕಮಿಷನರಾಗಿದ್ದುಕೊಂಡು, ಅನೇಕ ಜನರಂಜಕವಾದ ಬದಲಾವಣೆಗಳನ್ನೂ ಸಂಸ್ಥಾನದಲ್ಲಿ ಹಲವು ನೂತನ ಕಿಸ್ತುಗಳನ್ನೂ ಮಾಡಿಟ್ಟು ರೂಢಿಸುತ್ತಾ ಬಂದರು. ಇವರು ಸಂಸ್ಥಾನದಲ್ಲಿ ಈಗಲೂ ರೂಢಿಯಾಗಿರುವ ಅಷ್ಟಗ್ರಾಮ, ನಗರ, ನಂದಿದುರ್ಗ ಎಂಬ ಮೂರು ಡಿವಿಜನ್ ಗಳನ್ನೂ ಎಂಟು ಡಿಸ್ಟ್ರಿಕ್ಟುಗಳನ್ನೂ ನಿರ್ಮಾಣಮಾಡಿ, ಮೂವರು ಸೂಪರಿಂಟೆಂಡೆಂಟರನ್ನೂ ಎಂಟು ಮಂದಿ ಡೆಪ್ಟಿ ಸೂಪರಿಂಟೆಂಡೆಂಟರನ್ನೂ ನೇಮಿಸಿದರು. ಇವರಿಗೆ ಕೆಲವು ಮಂದಿ ಅಸಿಸ್ಟೆಂಟರುಗಳೂ ನೇಮಕವಾದರು. ಇವರು ಬಂದ ಮೇಲೆ ಸಂಸ್ಥಾನದ ಹುಟ್ಟುವಳಿಯೂ ಖರ್ಚೂ ನಿಗದಿಯಾಗಿ ಒಪ್ಪಟ್ಟು ಜಮಾ ದಾಯಿತು. ೧೮೬೩ನೇ ಇಸವಿಯಲ್ಲಿ ಮೆ|| ಬೌರಿಂಗ್ ಯವರು ರೆವಿನ್ಯೂ ಸರ್ವೆ ಸೆಟ್ಲ್ ಮೆಂಟನ್ನು ಮಾಡಿಸಿ ಸರಕಾರಕ್ಕೆ ರೈತರಿಗೆ ಒರತಕ್ಕ ಕಂದಾಯ ಇಷ್ಟೇ ಎಂಬುದನ್ನು ಗೊತ್ತು ಮಾಡಿಸಿದರು. ಇನಾಂ ಕಮಿಷನ್ ಸೂ ಇವರ ಕಾಲದಲ್ಲೇ ಪ್ರಾರಂಭವಾದದ್ದು. ಮುಜರಾಯಿ ಛತ್ರ ದೇವಸ್ಥಾನಾದಿ ಧರ್ಮಗಳು ಸ್ಥಿರಗೊಳಿಸಲ್ಪಟ್ಟವು. ಫಾರೆಸ್ಟು ಮತ್ತು ನೀರಾವರಿ ಏರ್ಪಾಡುಗಳನ್ನೂ ಮೆ|| ಬೌರಿಂಗ್ ಯವರು ಕ್ರಮಕ್ಕೆ ತಂದಿಟ್ಟರು. ಇದಲ್ಲದೆ ಸಿವಿಲ್ ನ್ಯಾಯಗಳ ಇತ್ಯರ್ಥದ ಬಗ್ಗೆ ಅವರು ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ನ್ಯಾಯಸ್ಥಾನಗಳನ್ನು ಕಲ್ಪನೆ ಮಾಡಿ, ಪ್ರಜೆಗಳ ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಅನೇಕವಾದ ಪಾಠಶಾಲೆಗಳನ್ನು ಸ್ಥಾಪನೆ ಮಾಡಿದರು. ಪ್ರಜಾ ಆರೋಗ್ಯಾಭಿವೃದ್ಧಿಯ ಕಾರ್ಯಗಳನ್ನು ನಡಿಸುವಂಥಾ ಮುನಿಸಿಪಾಲಿಟಿಗಳು ಇವರ ಕಾಲದಲ್ಲೇ ಪ್ರಾರಂಭವಾದವು. ಅಂತು ಮೈಸೂರಿನಲ್ಲಿ ಮೆ|| ಬೌರಿಂಗ್ ಯವರು ಪ್ರಾರಂಭಿಸಿ ಕ್ರಮಪಡಿಸದೆ ಬಿಟ್ಟ ಬಾಬೇ ಇಲ್ಲವೆಂದು ಹೇಳಬಹುದಾಗಿದೆ. ಈ ಸಂಸ್ಥಾನಕ್ಕೆ "ಮೇಲ್ಪಂಕ್ತಿಯ ಸಂಸ್ಥಾನ" ವೆಂಬ ಹೆಸರು ಸಂಪಾದನೆಯಾಗುವುದಕ್ಕೆ ಅವಶ್ಯವಾದ ಪ್ರಥಮ ಕಾರ್ಯಗಳೆಲ್ಲಾ ಇವರ ಕಾಲದಲ್ಲೇ ಅಂಕುರಮಾಡಲ್ಪಟ್ಟವು.

ಮೆ|| ಬೌರಿಂಗ್ ಯವರ ಕಾಲದಲ್ಲೇ ಲೇಟ್ ಕೃಷ್ಣರಾಜ ಒಡೆಯರವರಿಗೆ ಸಂಸ್ಥಾನದ ಆಳ್ವಿಕೆಯನ್ನು ವಹಿಸಬೇಕೆಂಬ ವಿಚಾರದಲ್ಲಿ ಕಾಗದ ಪತ್ರಗಳು ನಡೆಯುತ್ತಿದ್ದು, ಕಡೆಗೆ ಅವರ ದತ್ತಪುತ್ರರಾದ ಲೇಟ್ ಚಾಮರಾಜೇಂದ್ರ ಒಡೆಯರವರಿಗೆ ಸಂಸ್ಥಾನವನ್ನು ವಹಿಸತಕ್ಕದ್ದೆಂದು ವಿಲಾಯತಿಯಿಂದ ಹುಕುಂ ಬಂದಿತು. ಈ ಹುಕುಂ ತಲಪಿದ ಒಂದು ವರುಷದ ಮೇಲೆ ವೃದ್ಧ ಕೃಷ್ಣರಾಜ ಒಡೆಯರವರು ಕಾಲವಾದರು. ಅಷ್ಟರಲ್ಲೇ ೧೮೬೬ನೇ ಇಸವಿಯಲ್ಲಿ ಇಂಗ್ಲಿಷ್ ಗವರ್ನ್ ಮೆಂಟಿನವರು ಮೆ|| ಬೌರಿಂಗ್ ಯವರ ಆಳ್ವಿಕೆಯ ವಿಚಕ್ಷಣೆಯನ್ನೂ ಸಾಮರ್ಥ್ಯವನ್ನೂ ಮೆಚ್ಚಿ ಅವರಿಗೆ ಸಿ ಎಸ್. ಐ ಎಂಬ ಬಿರುದನ್ನು ದಯಪಾಲಿಸಿದರು. ಮೆ|| ಬೌರಿಂಗ್ ಯವರೇ ಲೇಟ್ ಚಾಮರಾಜೇಂದ್ರ ಒಡೆಯರವರಿಗೆ ೧೮೬೮ನೇ ಇಸವಿ ಸೆಪ್ಟೆಂಬರ್ ತಾ ೨೩ ರಲ್ಲಿ ನವರಾತ್ರಿ ಉತ್ಸವ ಕಾಲದಲ್ಲಿ ಪಟ್ಟವನ್ನು ಕಟ್ಟಿ, ಬಳಿಕ ಎರಡು ವರುಷಗಳ ತನಕ ಚೀಫ್ ಕಮಿಷನರಾಗಿದ್ದುಕೊಂಡು, ಸಂಸ್ಥಾನದ ಕಾರುಬಾರುಗಳನ್ನು ನೋಡಿಕೊಳ್ಳುತ್ತಾ ಬಂದು, ೧೮೭೦ನೇ ಇಸವಿಯಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಮೈಸೂರು ಸಂಸ್ಥಾನದ ಸಕಲ ಪ್ರಜೆಗಳಿಂದಲೂ ಹೊಗಳಿಸಿಕೊಳ್ಳುತ್ತಾ ಸೀಮೆಗೆ ತೆರಳಿದರು.

ಮೈಸೂರು ಸೀಮೆಯಲ್ಲಿ ಈಗಲೂ ಅನೇಕಾನೇಕ ಪ್ರಜೆಗಳು ಮೆ|| ಬೌರಿಂಗ್ ಸಾಹೇಬರ ಹೆಸರನ್ನು ಬಹಳ ಚನ್ನಾಗಿಯೂ ಪ್ರೀತಿಪೂರ್ವಕವಾಗಿಯೂ ನೆನಸಿಕೊಳ್ಳುತ್ತಾರೆ. ಬೆಂಗಳೂರಿನಲ್ಲಿರುವ ಬೌರಿಂಗ್ ಇನ್ಸ್ಟಿಟ್ಯೂಟ್ ಎಂಬ ವಾಚಕ ಶಾಲೆಯೂ, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಬೌರಿಂಗ್ ಪೇಟೆ ಎಂಬ ಊರೂ ಅವರ ಹೆಸರನ್ನು ಶಾಶ್ವತಪಡಿಸುವವುಗಳಾಗಿವೆ. ಅವರ ಕುಮಾರರಾದ ಮೆ|| ಪಿ ಎಫ್ ಬೌರಿಂಗ್ ಯವರು ಕೋಲಾರ್ ಚಿನ್ನದ ಗಣಿಗಳಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ಈ ಸಂಸ್ಥಾನದ ನೌಕರಿಯಲ್ಲಿರುತ್ತಾರೆ. ಅಂತು ವಯೋವೃದ್ಧರಾದ ಅಂದರೆ ೮೪ ವರುಷ ವಯಸ್ಸಿನ ಮೆ|| ಬೌರಿಂಗ್ ಯವರು ಕಾಲವಾದರೆಂಬ ವಾರ್ತೆಯು ಮೈಸೂರಿನ ಪ್ರಜೆಗಳಿಗೆ ತುಂಬಾ ವಿಷಾದವನ್ನುಂಟುಮಾಡುವುದೆನ್ನುವುದಕ್ಕೆ ಸಂಶಯವಿಲ್ಲ.

ತಾಲ್ಲೂಕು ವರ್ತಮಾನಗಳು

ಮೊಳೆನರಸೀಪುರ.—ಈ ಊರಿನಲ್ಲಿ ಹವಾ ತಕ್ಕಮಟ್ಟಿಗೆ ಆರೋಗ್ಯಕರವಾಗಿ ರೋಗಾದಿಗಳ ಭಯವೇನೂ ಇಲ್ಲ. ರಾತ್ರಿಯಲ್ಲಿ ಛಳಿ ಬಹಳ, ಹಗಲಲ್ಲಿ ಬಿಸಿಲು ಬಹಳ. ಮುನಿಸಿಪಾಲಿಟಿಯವರು ಊರು ಶುಚಿಯಾಗಿಡುವ ವಿಷಯದಲ್ಲಿ ವಿಶೇಷವಾಗಿ ನೋಡುತ್ತಿರುವುದು ತುಂಬಾ ಅನುಕೂಲ.—ಈ ಊರಿನಲ್ಲಿ ಮೊಹರಮ್ ಹಬ್ಬವು ವಿಜೃಂಭಣೆಯಿಂದ ನಡೆಯಿತು. ಆದರೆ ೮ನೇ ಕತ್ತಲ ರಾತ್ರಿ ಇದೇ ಪೇಟೆಯಲ್ಲಿ ಬಿ ನಿಗರ ಬೀದಿಯಲ್ಲಿರುವ ಶಾನುಭೋಗರ ಮನೆಯ ಮುಂಭಾಗದಲ್ಲಿ ಹಾಕಿದ್ದ ೧೨ ಸೇರಿನ ಒಂದು ದೀವಿಗೆಯನ್ನು ಯಾರೋ ತುಂಟ ಜನಗಳು ಒಡೆದುಕೊಂಡು ಹೋಗಿ ಕೊಳಕ್ಕೆ ಹಾಕಿಬಿಟ್ಟರು. ಅದೇ ರಾತ್ರಿ ನಾಯಕರ್ ಮೆ|| ಕೋದಂಡರಾಮಶೆಟ್ಟರ ಮನೆ ಹಿಂಭಾಗದ ಹಿತ್ತಲಲ್ಲಿ ಎರಡು ಗಾಡಿ ಸೌದೆ ಮತ್ತು ನಾಲ್ಕು ಪೆಟ್ಟಿಗಳನ್ನು ಯಾರೋ ಕದ್ದುಕೊಂಡು ಹೋದರು. ಆ ದಿನವೇ ಗೌರ್ನಮೆಂಟ್ ಇಂಡಸ್ಟ್ರಿಯಲ್ ಸ್ಕೂಲ್ ಹೆಡ್ ಮಾಸ್ಟರು ಮೆ|| ಸಂಪತ್ತಯ್ಯಂಗಾರ್ಯ ಮನೆ ಹಿತ್ತಲಿನಿಂದ ಬಂದು ಮನೆಯ ಪ್ರಾಕಾರದಲ್ಲಿದ್ದ ಒಂದು ಸೀರೆ, ಪಂಚೆ, ಶಾಲು ಇವನ್ನು ಸಹಾ ತೆಗೆದುಕೊಂಡು ಹೋಗಿರುತ್ತಾರೆ. ಈಗ ಸುಮಾರು ೩—೪ ತಿಂಗಳಿಂದ ಪೋಲೀಸ್ ಬೀಟು ಅಷ್ಟು ಚೆನ್ನಾಗಿಲ್ಲ. ಬೀಟಿನ ಪೋಲೀಸಿನವರು ಮೆ|| ರಾಮಶೆಟ್ಟರ ಛತ್ರದ ಜಗಲಿಯ ಮೇಲೆ ರಾತ್ರಿ ಸುಖನಿದ್ರೆ ಮಾಡುವದೇ ಅವರ ಮುಖ್ಯ ಕರ್ತವ್ಯವಾಗಿರುತ್ತದೆಂದು ಜನರು ಆಡಿಕೊಳ್ಳುವರು. ಪೋಲೀಸ್ ಇನ್ಸ್ ಪೆಕ್ಟರ್ ಸಾಹೇಬರು ಇದನ್ನು ತನಿಖೆಮಾಡಿ ಊರಿನಲ್ಲಿ ಯಾವ ಗಲಾಟೆಯೂ ಆಗದ ರೀತಿ ತಕ್ಕ ಬಂದೋಬಸ್ತು ಮಾಡುವರೆಂದು ನಿರೀಕ್ಷಿಸಲ್ಪಡುತ್ತದೆ.—ಧಾರಣೆವಾಸಿಗಳು ತಕ್ಕಮಟ್ಟಿಗೆ ಇಂತರವಾಗಿದೆ. ರಾಗಿ ರೂಪಾಯಿಗೆ ೧೬ ಸೇರು, ಅಕ್ಕಿ ೧೦-೧೧ ಸೇರು, ಈ ಪ್ರಕಾರವಾಗಿ ಮಾರುತ್ತಾರೆ.

ಚಾಳಗಟ್ಟ.—ಈ ಗ್ರಾಮವು ಯಡೇಹಳ್ಳಿಯಿಂದ ಶೃಂಗೇರಿಗೆ ಹೋಗುವ ಮಧ್ಯಮಾರ್ಗದಲ್ಲಿ ಇರುತ್ತೆ. ಕೊಪ್ಪದ ತಾಲ್ಲೂಕು ಕಛೇರಿ, ಅಸಿಸ್ಟೆಂಟ್ ಇಂಜಿನಿಯರ್ ಆಫೀಸು, ಪುಲ್ ವರ್ಕ್ಸ್ ಇನ್ಸ್ ಪೆಕ್ಟರ ಆಫೀಸು, ಗವರ್ನ್ ಮೆಂಟು ಸ್ಕೂಲು ಮುಂತಾದ ಕಟ್ಟಡಗಳೆಲ್ಲಾ ಇಲ್ಲೇ ಕಟ್ಟಿರುತ್ತಾರೆ. ತಾಲ್ಲೂಕು ಮತ್ತು ಇತರ ಸರಕಾರಿ ಆಫೀಸರುಗಳಿಗೂ ಮತ್ತು ನೌಕರರಿಗೂ ಸರಕಾರದವರೇ ಅನುಕೂಲವಾದ ಮನೆಗಳನ್ನು ಕಟ್ಟಿಕೊಟ್ಟಿರುತ್ತಾರೆ. ಈ ಮನೆಗಳನ್ನು ಲೈನ್ ಆಗಿ ಕಟ್ಟಿರುವುದರಿಂದ ನೋಡುವುದಕ್ಕೆ ಬಹಳ ಅಂದವಾಗಿ ಕಾಣುತ್ತೆ. ಟ್ರಾವಲರ್ಸ್ ಬಂಗಲೆಯು ಸಹ ಇಲ್ಲೇ ಇರುವುದರಿಂದ ಹೊರಗಿನಿಂದ ಬರತಕ್ಕ ದೊಡ್ಡ ಆಫೀಸರುಗಳು ಇಲ್ಲೇ ಇಳಿಯುತ್ತಾರೆ.—ಇದೇ ಮಾಹೆ ೧೦ಕ್ಕೆ ಕಲೂರ್ ಸ್ಟ್ರೀಟ್ಸ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಇಲ್ಲಿಗೆ ದಯಮಾಡಿ ೧೫ನೇ ತಾ. ವರಿಗೆ ಜಮಾಬಂದಿ ಕಾರ್ಯಗಳನ್ನು ಪೂರೈಸಿಕೊಂಡು ಮುಂದಕ್ಕೆ ಶೃಂಗೇರಿಗೆ ಪ್ರಯಾಣ ಮಾಡಿದರು. ಅ|| ಮೈಸೂರು ಜಸ್ಟ್ ಮೆ|| ವೆಂಕಟರಾಯರವರು ಇಲ್ಲಿಗೆ ದಯಮಾಡಿ ೧೬ನೇ ತಾ. ರಾತ್ರಿ ಮಠದಲ್ಲಿ ಅಡಿಕೆ ಮರಗಳಿಗೆ ಬರುವ ಕೊಳೆ ರೋಗದ ವಿಚಾರವಾಗಿ ಉಪನ್ಯಾಸ ಮಾಡಿದರು. ಸುಮಾರು ೫೦ ಜನಗಳ ವರಿಗೆ ಈ ಉಪನ್ಯಾಸವನ್ನು ಕೇಳುವುದಕ್ಕೆ ಬಂಗಲೆಯಲ್ಲಿ ಸೇರಿದ್ದರು. ರೋಗ ವ್ಯಾಪ್ತವಾಗುವ ಸವ ಕಾಲಗಳನ್ನೆಲ್ಲಾ ಮೈಕ್ರೋಸ್ಕೋಪಿನ ಮುಖಾಂತರ ಸರ್ವರಿಗೂ ತೋರಿಸಿ, ಈ ರೋಗವು ಬಾರದ ಹಾಗೆ ಮಾಡಿಕೊಳ್ಳಬೇಕಾದರೆ ಮೈಲ್ ತುತ್ತ, ಸುಣ್ಣ, ಗೋಂದ, ರಾಳ, ಇವುಗಳನ್ನು ನೀರಿನಲ್ಲಿ ಕದಡಿಸಿ ಯಂತ್ರದ ಸಹಾಯದಿಂದ ಅಡಿಕೆ ಕಾಯಿಗಳ ಮೇಲೆ ಸುರಿದರೆ ರೋಗ ಬರುವುದಿಲ್ಲವೆಂದು ಹೇಳಿದರು. ಅನೇಕರು ಈ ಕೆಲಸವ ಮಾಡುವುದಕ್ಕೆ ಇಷ್ಟಪಟ್ಟಿರುತ್ತಾರೆ.—ಇಲ್ಲಿನ ಸ್ಕೂಲು ದಿನೇದಿನೇ ಅಭಿವೃದ್ಧಿಗೆ ಬರುತ್ತಾ ಇದೆ. ಸ್ಕೂಲ್ ಮಾಸ್ಟರ್ ಮೆ|| ಎನ್ ನಾರಾಯಣರಾಯರು ಇಲ್ಲಿಗೆ ಬಂದು ೫ ವರ್ಷವಾಗುತ್ತಾ ಬಂತು. ಇವರು ಇಲ್ಲಿಗೆ ಬಂದಾಗ್ಗೆ ಸ್ಕೂಲಿಗೆ ಸರಿಯಾದ ಕಟ್ಟಡವಿರಲಿಲ್ಲ. ಈಚೆಗೆ ಸರಕಾರದವರು ಸ್ಕೂಲಿಗೆ ಅನುಕೂಲವಾದ ಕಟ್ಟಡವನ್ನು ಕಟ್ಟಿಸಿ ಕೊಟ್ಟಿರುತ್ತಾರೆ. ಈಗ ಸ್ಕೂಲಿನಲ್ಲಿ ೩೦ ಮಂದಿ ಹುಡುಗರಿರುತ್ತಾರೆ. ಈ ವರ್ಷ ಈ ಸ್ಕೂಲಿನಿಂದ ಮೂರು ಮಂದಿ ವಿದ್ಯಾರ್ಥಿಗಳು ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿ ಮೂರು ಮಂದಿಯೂ ಪ್ಯಾಸಾದರು. ೬ ೭ನೇ ಕ್ಲಾಸುಗಳಿಗೆ ಒಬ್ಬರೇ ಮಾಸ್ಟರು. ಇಂಥಾದ್ದರಲ್ಲಿ ಹುಡುಗರು ಪ್ಯಾಸಾದದ್ದು ಬಹಳ ಆಶ್ಚರ್ಯ.

ದಾವಣಗೆರೆ.—ಈ ಊರಿನಲ್ಲಿ ಪ್ಲೇಗ್ ರೋಗವು ಕಾಣಿಸಿಕೊಂಡ ಈಗ ಸುಮಾರು ೧½ ತಿಂಗಳ ಒಳಗೆ ೩ ಜನಗಳಿಗೆ ರೋಗ ತಗಲಿದುದರಿಂದ ಊರಿನವರು ಗಾಬರಿಗೊಂಡು ಹೊರಗೆ ಕ್ಯಾಂಪುಗಳಲ್ಲಿ ವಾಸಮಾಡಬೇಕೆಂದಿದ್ದರು. ಇವರಲ್ಲಿ ಒಂದೆರಡು ಸಂಸಾರದವರು ಸಹ ಹೊರಗಿರುವ ತಮ್ಮ ಬಂಗಲೆ ಮುಂತಾದ ಸ್ಥಳಕ್ಕೆ ಹೋದರು. ರೋಗ ತಗಲಿದವರ ಪೈಕಿ ಇಬ್ಬರು ಮಹಮ್ಮದೀಯರು ಮೃತಪಟ್ಟರು. ಒಬ್ಬ ವೀರಶೈವ ಸಾಹುಕಾರನು ಭಗವದನುಗ್ರಹದಿಂದ ಬದುಕಿಕೊಂಡನು. ಈಚೆಗೆ ಒಂದು ತಿಂಗಳಿಂದ ಕಾಣಿಸಿಕೊಳ್ಳದೆ ಸುಮ್ಮನಿದ್ದು ಪುನಹ ರೋಗವು ಮತ್ತೊಂದು ಬೀದಿಯಲ್ಲಿ ಕಲಿಯುತ್ತಿದ್ದ ಒಂದು ಮನೆತನದಲ್ಲಿ ೩ ಜನಗಳಿಗೂ, ಇನ್ನೊಂದು ಕಡೆ ೧-೨ ಜನಗಳಿಗೂ ರೋಗ ತಗಲಿ ಅವರು ಮೃತಪಟ್ಟರು. ಈ ರೋಗವಿದ್ದ ಬೀದಿಯಲ್ಲೇ ವೆಸ್ಲಿಯನ್ ಮಿಷನ್ ಇಲಾಖೆಯವರ ಮನೆ ಇದೆ. ಈ ಮನೆಯಲ್ಲಿರುವ ಉಪದೇಶಿಕರಾದ ರಾ|| ಜಾನ್ ಅಯ್ಯನವರು ಬೀದಿಯಲ್ಲಿ ರೋಗವಿದೆ ಎಂದು ಭಯಪಟ್ಟು, ಸುಮಾರು ೧೩ ವರ್ಷದ ಆನಂದಮ್ಮನೆಂಬ ಪುತ್ರಿಯನ್ನು ತಾ. ೧೩ ರಲ್ಲಿ ಬೆಂಗಳೂರಿಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದರು. ಈ ಮಗಳಿಗೆ ತಾ. ೧೬ ರಲ್ಲಿ ಪ್ಲೇಗ್ ತಗಲಿ ತಾ. ೧೭ ರಲ್ಲಿ ಮೃತಪಟ್ಟಿತೆಂದು ವರ್ತಮಾನ ಬಂದಿರುತ್ತದೆ. ಇಲ್ಲಿಯ ರೋಗದ ಸೋಂಕಿನಿಂದ ಮೃತಪಟ್ಟಿತೆಂದು ಊರಿನವರು ಆಡುತ್ತಾರೆ. ವಿದ್ಯಾವತಿಯಾಗಿಯೂ ಗುಣವತಿಯಾಗಿಯೂ ಇದ್ದ ಮಗಳನ್ನು ಕಳೆದುಕೊಂಡ ತಂದೆ ತಾಯಿಗಳ ದುಃಖವು ಅಪಾರವಾಗಿದೆ. ಇಲ್ಲಿ ಜನಗಳು ೧-೨ ವಾರಗಳಲ್ಲಿ ಈ ಬೀದಿಯಲ್ಲಿರುವ ಕೆಲವು ಮನೆಗಳನ್ನು ಬಿಟ್ಟಿರುತ್ತಾರೆ. ನಮ್ಮ ಅಮಲ್ದಾರರವರೂ ರಾಕ್ಷರವರೂ ಬಹು ಮುತುವರ್ಜಿಯಿಂದ ಊರಿನ ಜನಗಳಿಗೆ ಪ್ರೋತ್ಸಾಹಪಡಿಸಿ ದೊಡ್ಡವರಿಗೂ ಚಿಕ್ಕವರಿಗೂ ಸಹ ಇನಾಕ್ಯುಲೇಷನ್ ಮಾಡಿಸುತ್ತಾ ಇದ್ದಾರೆ.—ಈಗ ಮೊಹರಂ ಹಬ್ಬ ಒಂದುದರಿಂದ ಮಹಮ್ಮದೀಯರು ತಾಬೂತುಗಳನ್ನು ಬಹಳ ಚಂದವಾಗಿ ಕಟ್ಟಿದ್ದರು. ಈ ಪೈಕಿ ೨ ಹಸರು ಕಾಗದದಿಂದ ಮಲ್ಲಿಗೆ ಸೇವಂತಿಗೆ ಬಳ್ಳಿಗಳನ್ನು ಮಾಡಿ ಅವುಗಳಲ್ಲಿ ಹೂಗಳನ್ನು ಸಹ ನೋಡಿದವರ ಕಣ್ಣಿಗೆ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಹಾಗೆ ರಚಿಸಿದ್ದರು. ಈ ಮೊಹರಂ ಕಡೇ ದಿನ ತಾ. ೨೨ ರಲ್ಲಿ ಗಿರಿಯವು ಮೊದಲಾದ ಅನೇಕ ವೇಷಗಳು ನಡಿಯುತ್ತಿರುವಾಗ ಬೀದಿಯಲ್ಲಿ ಜನಸಮೂಹವು ಸೇರಿ ವೈಭವಗಳನ್ನು ನೋಡುತ್ತಾ ಬಹು ಸಂತೋಷವನ್ನು ಹೊಂದಿದರು. ಈ ವೇಷಗಳ ಪೈಕಿ ಕೆಲವು ಹುಲಿವೇಷ ಮೊದಲಾದವುಗಳಿಗೆ ಬೆಳ್ಳಿ ಕಡೇವು ವಸ್ತ್ರ ಮುಂತಾದವುಗಳನ್ನು ಶಿಕ್ಷಾಸಿಗಳು ದಯಪಾಲಿಸಿದರು. ಈ ಜನಸಮೂಹದಲ್ಲಿ ಏನೊಂದೂ ಗಲಾಟೆಗೆ ಆಸ್ಪದವಾಗದಂತೆ ಪೋಲೀಸು ಅಧಿಕಾರಿಗಳು ನೋಡಿಕೊಂಡರು.—ಊರಿನಲ್ಲಿರುವ ಪುರುಷರು, ಸ್ತ್ರೀಯರು, ಹುಡುಗರು, ಹುಡುಗಿಯರು, ಸರ್ವರೂ ಪ್ಲೇಗ್ ಚುಚ್ಚನ್ನು ಹಾಕಿಸಿಕೊಂಡರೆ ಪ್ಲೇಗ್ ರೋಗವು ತಗಲುವುದಿಲ್ಲವಾದ್ದರಿಂದ ಪ್ಲೇಗ್ ಉಪದ್ರವು ಶಮನವಾಗುವುದೆಂದು ತುಂಬಾ ನಂಬಿಕೆ ಇದೆ.

ಮೈಸೂರು ಪಟ್ಟಣದ ಪ್ರಜೆಗಳಿಗೆ ನೋಟೀಸು.

ಮೈಸೂರು ಸಿಟಿಯಲ್ಲಿರುವ ದನಗಳಲ್ಲಿ ಕಾಲುಬ್ಬರ ಬಾಯಿ ಜ್ವರ ಸಹ ವ್ಯಾಪಿಸಿರುತ್ತೆ. ಕಾಯಿಲೆ ಸೋಂಕುಳ್ಳ ದನಗಳ ಹಾಲು ಕುಡಿಯುವವರ ಮೂಲಕ ಮನುಷ್ಯರಿಗೆ ಆ ಬಾಧ್ಯ ಬರುವ ಸಂಭವವಿರುವ ಕಾರಣ ಹಾಲನ್ನು ಚನ್ನಾಗಿ ಕಾಯಿಸಿ ಕುಡಿಯುವುದು ಯುಕ್ತವಾಗಿದೆ

ಮೈಸೂರು ಸಿಟಿ, ಏ ಎಲ್ ನಾಂಕರ್,
20–1 1910. ಹೆಲ್ತ್ ಆಫೀಸರ್.

ವೃತ್ತಾಂತ ಪತ್ರಿಕೆ.

ಶಕೆ ೧೮೩೧ ನೇ ಸೌಮ್ಯ ಜನವರಿ ತಾ ೨೭ ನೇ ಗುರುವಾರ

ಇಂಗ್ಲಿಷ್ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯು

ವಿಲಾಯತಿಯಲ್ಲಿ ಹೌಸ್ ಅಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಗೆ ಪ್ರಜೆಗಳು ಈಗ ಹೊಸ ಮೆಂಬರುಗಳನ್ನು ಚುನಾವಣೆ ಮಾಡುತ್ತಿದ್ದಾರೆಂದು ಕಳೆದ ವಾರ ತಿಳಿಸಿದೆವಷ್ಟೆ. ಅಲ್ಲಿನ ಬೇರೆ ಬೇರೆ ಸ್ಥಳಗಳ ಪ್ರಜೆಗಳು ಓಟುಗಳನ್ನು ಹಾಕಿದ್ದು, ಯಾವ ಯಾವ ಮೆಂಬರಿಗೆ ಎಷ್ಟೆಷ್ಟು ಓಟುಗಳು ಬಂದವು, ಆ ಪೈಕಿ ಯಾವ ಪ್ರತಿನಿಧಿಯು ಪಾರ್ಲಿಮೆಂಟ್ ಮೆಂಬರಾದನು, ಹೀಗೆ ಚುನಾಯಿಸಲ್ಪಟ್ಟವರು ಯಾವ ಯಾವ ಕಕ್ಷಿಗಳಿಗೆ ಸೇರಿದವರು, ಈ ವಿಚಾರಗಳನ್ನೆಲ್ಲಾ ಲಂಡನಿನಿಂದ ಪ್ರತಿ ದಿನವೂ ಬರುತ್ತಿರುವ ತಂತೀ ವರ್ತಮಾನಗಳು ತಿಳಿಸುತ್ತಲಿವೆ. ಇನ್ನೂ ಎಲ್ಲಾ ಮೆಂಬರುಗಳೂ ಚುನಾವಣೆಯಾಗಿರುವದಿಲ್ಲ. ಪ್ರತಿನಿತ್ಯವೂ ಅನೇಕ ಸ್ಥಳಗಳಲ್ಲಿ ಚುನಾವಣೆ ನಡೆಯುತ್ತಲೇ ಇದೆ. ಈ ಚುನಾವಣೆಯೆಲ್ಲಾ ಪೂರೈಸುವ ತನಕ ಫಲಿತಾರ್ಥ ಹೀಗೇ ಆಯಿತೆಂದು ಹೇಳುವುದಕ್ಕಾಗದು. ಇದುವರೆಗೆ ನಡೆದಿರುವ ಚುನಾವಣೆಗಳಿಂದ ಯಾವ ಯಾವ ಕಕ್ಷಿಯ ಪ್ರತಿನಿಧಿಗಳು ಎಷ್ಟೆಷ್ಟು ಮಂದಿ ಪಾರ್ಲಿಮೆಂಟ್ ಮೆಂಬರಾಗಿರುತ್ತಾರೆಂದರೆ,—

ಯೂನಿಯನ್ ಪಕ್ಷದ ಮೆಂಬರುಗಳು		೨೧೪ ಮಂದಿ
ಲಿಬರಲ್	,,	೧೭೭ ,,
ಲೇಬರ್	,,	೩೨ ,,
ನ್ಯಾಷನಲಿಸ್ಟ್	,,	೭೦ ,,

ಯೂನಿಯನ್ ಪಕ್ಷದವರು (ಅಂದರೆ, ಬ್ರಿಟಿಷ್ ರಾಜ್ಯಾಂಗಗಳಲ್ಲದ ಪರರಾಷ್ಟ್ರಗಳಿಂದ ವಿಲಾಯತಿಗೆ ಬರುವ ಸರಕುಗಳ ಮೇಲೆ ಸುಂಕಗಳನ್ನು ಹಾಕಬೇಕಾದದ್ದು ಆವಶ್ಯವೆಂಬ ಪಕ್ಷದವರು) ಹಿಂದಿನ ಚುನಾವಣೆಯಲ್ಲಿ ಎಷ್ಟು ಮೆಂಬರುಗಳಿದ್ದರೋ ಅದಕ್ಕಿಂತಲೂ ಈಗ ಈ ಹೊಸ ಚುನಾವಣೆಯಲ್ಲಿ ಹೆಚ್ಚಿರುತ್ತಾರೆ. ಪ್ರಜೆಗಳು ಮೊದಲಿಗಿಂತಲೂ ಈಗ ಈ ಪಕ್ಷದ ಮೆಂಬರುಗಳನ್ನು ಹೆಚ್ಚಾಗಿ ಚುನಾಯಿಸಿರುವರು. ಇದರಿಂದ ರಾಜ್ಯದಲ್ಲಿ ಈ ಪಕ್ಷದವರ ಬಲವು ಈಗ ಹೆಚ್ಚಿರುತ್ತದೆ. ಭಾರಿಯಾದ ಕಸಬುಗಳು ನಡೆಯುತ್ತಿರುವಂಥಾ ದೊಡ್ಡ ಪಟ್ಟಣಗಳಾದರೋ ಈಗಿನ ಲಿಬರಲ್ ಗವರ್ನಮೆಂಟಿನ ಪಕ್ಷವನ್ನೇ ಹಿಡಿದಿರುವವು. ಅನೇಕ ಸಣ್ಣ ಸಣ್ಣ ಪಟ್ಟಣಗಳು ಗವರ್ನಮೆಂಟಿನ ವಿರೋಧಪಕ್ಷವನ್ನು ವಹಿಸಿರುತ್ತವೆ. ಈಗಿನ ಚುನಾವಣೆಗಳನ್ನು ನೋಡಲಾಗಿ ಯೂನಿಯನ್ ಪಕ್ಷದವರಿಗಿಂತಲೂ ಲಿಬರಲ್ ಮತ್ತು ಲೇಬರ್ ಪಕ್ಷಗಳ ಮೆಂಬರುಗಳೇ ಹೆಚ್ಚು ಹೆಚ್ಚಾಗಿ ಚುನಾವಣೆಯಾಗಬಹುದೆಂದು ತಾಳುವುದು. ಆದರೂ ಐರ್ಲಾಂಡಿನ ಪಾರ್ಟಿಯ ಮೆಂಬರುಗಳ ಸಹಾಯ ದೊರಕದ ಹೊರತು ಲಿಬರಲ್ ಪಕ್ಷದವರು ಯೂನಿಯನ್ ಪಕ್ಷದವರಿಗಿಂತಲೂ ವಿಶೇಷ ಪ್ರಬಲರಾದಾರೆಂದು ತೋರುವದಿಲ್ಲ. ಈ ಐರ್ಲಾಂಡಿನ ಪಾರ್ಟಿಯವರು ಐರ್ಲಾಂಡಿಗೇ ಪ್ರತ್ಯೇಕವಾದ ಪಾರ್ಲಿಮೆಂಟು ಡಬ್ಲಿನ್ ನಗರದಲ್ಲಿ ನಿರ್ಮಾಣವಾಗಬೇಕೆಂಬ ಉದ್ದೇಶವುಳ್ಳವರಾಗಿರೋಣದರಿಂದ ಅವರು ತಮ್ಮ ಉದ್ದೇಶವನ್ನು ನೆರವೇರಿಸಿಕೊಡುವಂಥಾ ಪಕ್ಷವನ್ನು ವಹಿಸಿರುತ್ತಾರೆ. ಆದಕಾರಣ ಈ ಐರ್ಲಾಂಡಿನ ಪಾರ್ಟಿಯವರೇ ಈಗ ಪ್ರಾಮುಖ್ಯತೆಯನ್ನು ಪಡೆದಿರುವರು. ಯಾಕೆಂದರೆ ಯೂನಿಯನ್ ಕಕ್ಷಿಯವರಾಗಲಿ, ಲಿಬರಲ್ ಕಕ್ಷಿಯವರಾಗಲಿ ಆ ಪಾರ್ಟಿಯವರ ಸಹಾಯವನ್ನು ಸಂಪಾದಿಸಿಕೊಳ್ಳದಿದ್ದಲ್ಲಿ ರಾಜ್ಯಭಾರ ಕಾರ್ಯಗಳನ್ನು ನಡೆಸಲು ಸಮರ್ಥರಾಗಲಾರರು.

ಮೇಲ್ಕಂಡ ವಿದ್ಯಮಾನಗಳನ್ನು ಕುರಿತು ಪರ್ಯಾಲೋಚಿಸಿದರೆ ಈಗಿನ ಚುನಾವಣೆಯಿಂದ ಏರ್ಪಡಾಗುವ ಪಾರ್ಲಿಮೆಂಟು ದೀರ್ಘಕಾಲ ನಡೆಯಲಾರದೆಂದೂ, ಕೆಲವು ಕಾಲದೊಳಗಾಗಿಯೇ ಈ ಪಾರ್ಲಿಮೆಂಟು ಬರಖಾಸ್ತಾದೀತೆಂದೂ ತೋರುತ್ತಿದೆ. ಯಾಕೆಂದರೆ ಯೂನಿಯನ್ ಪಕ್ಷದವರು ರಾಜ್ಯಭಾರವನ್ನು ವಹಿಸಿದರೂ, ಅಥವಾ ಈಗಿನಂತೆ ಲಿಬರಲ್ ಪಕ್ಷದವರೇ ರಾಜ್ಯಭಾರವನ್ನು ನಿರ್ವಹಿಸುವವರಾದರೂ ತಮ್ಮ ಉದ್ದೇಶದಲ್ಲಿರುವ ಕಾನೂನುಗಳನ್ನೂ ಕಾರ್ಯಗಳನ್ನೂ ಚಲಾವಣೆಗೆ ತರುವುದಕ್ಕೆ ಪೂರ್ಣ ಸಮರ್ಥರಾಗಿರುವರೆಂದು ಹೇಳಲಾಗದು. ಹಾಗಾದರೆ ಗವರ್ನಮೆಂಟಿನವರು ಪ್ರಜೆಗಳ ಅಭಿಪ್ರಾಯವನ್ನು ಖಂಡಿತವಾಗಿ ತಿಳಿಯುವದಕ್ಕೋಸ್ಕರ ಪಾರ್ಲಿಮೆಂಟನ್ನು ಬರಖಾಸ್ತು ಮಾಡಿ ಮತ್ತೆ ಹೊಸ ಮೆಂಬರುಗಳನ್ನು ಚುನಾಯಿಸುವಂತೆ ವಿಧಿಸಬೇಕಾಗುತ್ತದೆ.

ಈಗಿರುವ ಹೌಸ್ ಅಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಎರಡನೇ ಸಭೆಯ ರಚನೆಯನ್ನು ಕ್ರಮಪಡಿಸಬೇಕಾಗಿದೆ ಎಂಬೀ ವಿಷಯದಲ್ಲಿ ಎಲ್ಲರೂ ಏಕಾಭಿಪ್ರಾಯವುಳ್ಳವರಾಗಿರೋಣದರಿಂದ ಯೂನಿಯನ್, ಲಿಬರಲ್ ಎಂಬೀ ಎರಡು ಕಕ್ಷಿಗಳೂ ಏಕೀಭವಿಸಿ ಆ ಕಾರ್ಯದಲ್ಲಿ ಉದ್ಯುಕ್ತರಾಗಬಹುದು. ಇದು ಸಾರ್ಥಕವಾಗಿ ನೆರವೇರಿ ಆ ಸಭೆಯ ಅಧಿಕಾರವೂ ಹಕ್ಕೂ ಇಷ್ಟೇ ಎಂದು ನಿರ್ಧಾರವಾದ ಪಕ್ಷದಲ್ಲಿ, ವಯೋವೃದ್ಧರಿಗೆ ಪೆನ್ಷನ್ ಕೊಡುವುದಕ್ಕೂ, ಸಮುದ್ರ ಸೈನ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೂ, ಬೇಕಾಗುವ ಹಣವನ್ನು ಉತ್ಪತ್ತಿ ಮಾಡುವ ಭಾಗದಲ್ಲಿ ಗವರ್ನಮೆಂಟಿನವರು ಸಾವಧಾನದಿಂದ ಆಲೋಚಿಸಲು ವಿಶೇಷ ಅನುಕೂಲಿಸುತ್ತದೆ.

ಇದುವರೆಗೆ ಆಗಿರುವ ಮೆಂಬರುಗಳ ಚುನಾವಣೆಯಿಂದ ಸಿದ್ಧಾಂತವಾಗಿರುವುದೇನೆಂದರೆ, ಮಿ॥ ಅಸ್ಕಿತ್‌ರವರೂ ಅವರ ಪಕ್ಷದ ಲಿಬರಲ್ ಪಾರ್ಟಿಯವರೂ ತಮ್ಮ ಉದ್ದೇಶ ಕಾರ್ಯವನ್ನು ನಡಿಸುವುದು ಬಹಳ ಪ್ರಯಾಸವಾಗಿದೆ. ಯಾಕೆಂದರೆ ಪಾರ್ಲಿಮೆಂಟಿನಲ್ಲಿ ಯೂನಿಯನ್ ಪಕ್ಷದವರಿಗಿಂತಲೂ ಲಿಬರಲ್ ಪಕ್ಷದವರೇ ಹೆಚ್ಚಾಗಿದ್ದರೂ ಕೂಡ ಐರ್ಲಾಂಡಿನ ಪಾರ್ಟಿಯವರು ಲಿಬರಲ್ ಪಕ್ಷದವರಿಗೆ ವಿರೋಧಿಗಳಾಗಿ ನಿಲ್ಲುವವರಾದರೆ ಲಿಬರಲ್ ಪಕ್ಷದವರ ಮೆಜಾರಿಟಿಯು (ಹೆಚ್ಚು ಸಂಖ್ಯೆ) ನಿರ್ನಾಮವಾಗುವುದು.

ಮುಂದಿನ ವಾರದೊಳಗಾಗಿ ಚುನಾವಣೆಗಳೆಲ್ಲಾ ಬಹುಶಃ ಮುಕ್ತಾಯವಾಗಬಹುದು. ಆಗ್ಗೆ ಮುಂದಿನ ಸಂಭವಗಳನ್ನೂ ಸಂಗತಿಗಳನ್ನೂ ತಕ್ಕಮಟ್ಟಿಗೆ ನಿಶ್ಚಯವಾಗಿ ಹೇಳಲು ಅನುಕೂಲವಾದೀತೆಂದು ನಿರೀಕ್ಷಿಸುತ್ತೇವೆ.

ಅಂತು ಇಂಗ್ಲಾಂಡ್, ವೇಲ್ಸ್, ಸ್ಕಾಟ್ಲೆಂಡ್, ಐರ್ಲಾಂಡುಗಳಲ್ಲಿ ಸಕಲ ಪ್ರಜೆಗಳೂ ಈ ರಾಜ್ಯಭಾರ ಕ್ರಮಗಳ ವಿಷಯದಲ್ಲಿ ಬಹು ದೀರ್ಘವಾಗಿ ಆಲೋಚಿಸುತ್ತಲೂ, ಚರ್ಚೆ ಮಾಡುತ್ತಲೂ ಬಂದಿದಾರೆ. ಓಟುಗಳನ್ನು ಕೊಡಿಸುವ ಸ್ಥಳಗಳಿಗೆ ವಿಶೇಷ ಸಂಖ್ಯೆಯ ಓಟರುಗಳು ಹೋಗಿ ತಮ್ಮ ಸಮ್ಮತಿಗಳನ್ನು ಹಾಕುತ್ತಿರುವುದನ್ನು ನೋಡಿದರೆ ಪ್ರಜೆಗಳ ಅಭಿಮತವೇನೆಂಬದನ್ನು ನಿರ್ಧರಿಸಲು ಪಕ್ಷ ಪರಪಕ್ಷಗಳ ಮುಖಂಡರು ಬಹಳ ಸಾಹಸಪಟ್ಟಿದಾರೆಂದು ಹೇಳಬಹುದು.

ಅದೃಷ್ಟವೆಂಬುದು ಲೋಕದಲ್ಲಿರುತ್ತದೆಯೋ ?

ನಮ್ಮ ದೇಶೀಯರಲ್ಲಿ ಅದೃಷ್ಟವೆಂಬ ಶಬ್ದ ಮಾತು ಬಹು ಸಾಧಾರಣವಾಗಿರುತ್ತದೆ. ಅನೇಕರು ಅದೃಷ್ಟದಲ್ಲಿ ಸಂಪೂರ್ಣವಾದ ನಂಬಿಕೆಯನ್ನಿಟ್ಟಿರುವರು. ರೋಗಿಯು ತನ್ನ ರೋಗವನ್ನು ಪರಿಹರಿಸಿಕೊಳ್ಳಲು ತಕ್ಕ ವೈದ್ಯನನ್ನು ಕರೆಯಿಸದ ಕೆಲಸಕ್ಕೆ ಬಾರದ ಔಷಧಾದಿಗಳನ್ನು ಸೇವಿಸಿ ಸತ್ತುಹೋಗುವ ಸಮಯದಲ್ಲಿ ತನ್ನ ಮರಣವು ಅದೃಷ್ಟವಿದ್ದಂತಾಯಿತೆಂದು ಹೇಳುವದು ಅಪರೂಪವಲ್ಲ. ಒಬ್ಬ ವಿದ್ಯಾರ್ಥಿಯು ತನ್ನ ಸಮಯವನ್ನು ಯೋಗ್ಯವಾದ ರೀತಿಯಲ್ಲಿ ವಿನಿಯೋಗಿಸದೆ ಪರೀಕ್ಷೆಯಲ್ಲಿ ಬಿದ್ದುಹೋದರೆ ತನ್ನ ಅಪಜಯವನ್ನು ಅದೃಷ್ಟದ ಮೇಲೆ ಹಾಕುವನು. ವ್ಯಾಪಾರಿಯು ಹೆಚ್ಚಾಗಿ ಲಾಭವನ್ನು ಪಡೆದರೆ ಅದು ತನ್ನ ಹಣೆಯಲ್ಲಿ ಬರೆದಿತ್ತೆಂದು ಹೇಳುವನು. ಮನೆಯಲ್ಲಿ ಕೇವಲ ಬಡತನವಿದ್ದರೆ ಅದಕ್ಕೆ ಅದೃಷ್ಟವೇ ಕಾರಣವೆಂದು ಮನೆಯ ಯಜಮಾನನು ಹೇಳುವುದು ರೂಢಿಯಲ್ಲಿರುತ್ತದಲ್ಲವೆ. ಅದೃಷ್ಟವೆಂಬ ಮಾತು ನಮ್ಮ ದೇಶದವರನ್ನೇ ತನ್ನ ಅದೃಶ್ಯವಾದ ಉಪಾಸಂಕೋಲೆಗಳಿಂದ ಬಂಧನ ಮಾಡಿರುವುದು.

ನಡೆದ ಒಂದು ಸಂಗತಿಯ ನಿಜವಾದ ಕಾರಣಗಳು ಮನುಷ್ಯನ ಆಲೋಚನೆಗೆ ಆ ಸಮಯದಲ್ಲಿ ಗೋಚರವಾಗದಿದ್ದರೆ ಅವನು ಆಯಾ ಕಾರಣಗಳನ್ನು ಚನ್ನಾಗಿ ಪರಿಶೋಧಿಸುವದಕ್ಕೆ ಬದಲು ಆ ಕಾರ್ಯವು ಅದೃಷ್ಟವಿದ್ದಂತೆ ಆಯಿತೆಂದು ಹೇಳುವದು ನಮ್ಮ ದೇಶದಲ್ಲಿ ಸರ್ವಸಾಧಾರಣವಾಗಿರುತ್ತದೆ. ಪ್ಲೇಗ್ ಮಹಾಮಾರಿಯು ನಮ್ಮ ದೇಶದಲ್ಲಿ ಪ್ರಥಮತಃ ಕಾಣಿಸಿಕೊಂಡಾಗ್ಗೆ ಅನೇಕರು ಆ ಬಾಧ್ಯದ ನಿಜವಾದ ಕಾರಣಗಳನ್ನು ಗ್ರಹಿಸುವದಕ್ಕೆ ಅಶಕ್ತರಾದುದರಿಂದಲೂ ತಿಳಿದವರಿಂದ ಆಯಾ ಕಾರಣಗಳನ್ನು ತಿಳಿಯುವುದಕ್ಕೆ ಇಷ್ಟವಿಲ್ಲದಿದ್ದುದರಿಂದಲೂ ಬಾಲ್ಯದಿಂದ ಅದೃಷ್ಟದಲ್ಲಿ ಕೇವಲ ಭರವಸವನ್ನಿಟ್ಟಿದ್ದರಿಂದಲೂ ಹಣೇ ಬರಹವಿದ್ದಂತೆ ಆಗುತ್ತದೆಂದು ರೋಗಕ್ಕೆ ತುತ್ತಾದರು. ಇತರ ವಿವೇಕಿಗಳಾದವರು ಪ್ಲೇಗ್ ರೋಗದ ಗುಟ್ಟುಗಳನ್ನು ತಿಳಿದಿರುವುದರಿಂದ ತಾವು ಅದೃಷ್ಟದಲ್ಲಿ ನಂಬಿಕೆಯನ್ನಿಡದೆ ದೇವರು ತಮಗೆ ಕೊಟ್ಟಿರತಕ್ಕ ಬುದ್ಧಿಯನ್ನು ಪ್ರಯೋಗಿಸಿ ಅದರ ಹಾವಳಿಗೆ ತಪ್ಪಿಸಿಕೊಂಡಿರುವರು.

ಅದೃಷ್ಟದಲ್ಲಿ ನಂಬಿಕೆ ಇಟ್ಟಿರುವವರು ದೇವರ ನಿಜವಾದ ಗುಣಸ್ವಭಾವಗಳನ್ನು ತಿಳಿದುಕೊಂಡಿಲ್ಲವೆಂದು ಪರಿಷ್ಕಾರವಾಗಿ ಕಂಡುಬರುತ್ತದೆ. ದೇವರು ಮನುಷ್ಯನಿಗೆ ಬುದ್ಧಿ ವಿವೇಕಗಳನ್ನು ಕೊಟ್ಟು ಎಚ್ಚರಿಕೆಯಾಗಿ ನಡೆದುಕೊಳ್ಳುವಂತೆ ಆಜ್ಞಾಪಿಸಿರುತ್ತಾನೆ. ಎಲ್ಲಾ ಕಾರ್ಯಗಳನ್ನು ದೀರ್ಘವಾಗಿ ಯೋಚಿಸುವುದಕ್ಕೆ ಆತನು ನಮಗೆ ಯೋಚನಾಶಕ್ತಿಯನ್ನು ಕೊಟ್ಟಿರುವನು. ನಾವು ಅದನ್ನು ಅಭಿವೃದ್ಧಿ ಮಾಡತಕ್ಕದ್ದಾಗಿದೆ. ಕಾರಣಾಕಾರಣಗಳನ್ನು ತಿಳಿಯದೆ ಜಯಾಪಜಯಗಳನ್ನು ಅದೃಷ್ಟದ ಮೇಲೆ ಹಾಕುವುದಾದರೆ ನಾವು ದೇವರ ಅತಿಶಯವಾದ ಪರಾಮರಿಕೆಯನ್ನು ಅಲ್ಲಗಳೆಯುವವರಾಗಿರುವೆವು. ದೇವರು ತನ್ನ ಅಪರಿಮಿತವಾದ ವಿವೇಕದಿಂದ ಭೂಲೋಕದ ಕಾರ್ಯಗಳನ್ನು ನ್ಯಾಯವಾದ ರೀತಿಯಲ್ಲಿ ನಡಿಸಲುದ್ದೇಶಪಡುತ್ತಾನೆ. ಆದರೆ ಮನುಷ್ಯನು ತನ್ನ ಮೌಢ್ಯದಿಂದ ವಿವಿಧವಾದ ಕಷ್ಟಗಳನ್ನು ತಂದಿಟ್ಟುಕೊಂಡು ಅವುಗಳಿಗೆ ಕಾರಣಗಳು ಅದೃಷ್ಟವೇ ಎಂದು ತಿಳಿಸುವನು.

ಅದೃಷ್ಟದಲ್ಲಿ ನಂಬಿಕೆ ಇಡುವದು ಅನೇಕ ಕೇಡುಗಳಿಗೆ ಕಾರಣಭೂತವಾಗಿರುತ್ತದೆ. ಅನೇಕರು ದುಷ್ಕೃತ್ಯಗಳನ್ನು ಮಾಡಿ ಅವುಗಳಿಗೋಸ್ಕರ ಪಶ್ಚಾತ್ತಾಪ ಪಡದೆ ಆಯಾ ಕಾರ್ಯಗಳಿಗೆ ಅದೃಷ್ಟವೇ ಕಾರಣವೆಂದು ಹೇಳುವರು. ಅದೃಷ್ಟದಲ್ಲಿ ನಂಬಿಕೆ ಇಡುವುದರಿಂದ ಅನೇಕರು ಸೋಮಾರಿಯಾಗುವುದಕ್ಕೆ ಆಟಂಕವಾಗಿರುವುದಲ್ಲದೆ ದೇವರ ಅತಿಶಯವಾದ ಉದ್ದೇಶಗಳನ್ನು ಗ್ರಹಿಸಿ ಆತನನ್ನು ಪ್ರೀತಿಮಾಡಲು ಅಸಾಧ್ಯವಾಗಿರುವದು. ಅದೃಷ್ಟವು ಸ್ವಪ್ರಯಾಸಕ್ಕೆ ಪರಮ ಶತ್ರುವಾಗಿರುತ್ತದೆ. ಅದೃಷ್ಟವನ್ನು ನಂಬಿದ ಮನುಷ್ಯನು ನಾನಾತರವಾದ ಕಷ್ಟಗಳಿಗೆ ಸಿಕ್ಕಿದ ವೇಳೆ ತನ್ನ ದುಃಖ ಶಮನವನ್ನು ಹೊಂದಲಾರನು. ಮನುಷ್ಯನು ದೇವರ ಮೇಲೆ ಭರವಸವಿಟ್ಟು ಕಾರ್ಯಸಾಧನೆ ಮಾಡದಂತೆ ಅದೃಷ್ಟವು ಅಡ್ಡಿಯಾಗಿರುವದು.

ಆದುದರಿಂದ ಅದೃಷ್ಟವು ಬರೀ ಊಹೆಯೇ ಹೊರತು ನಿಜವಾಗಿಯೂ ಇರತಕ್ಕ ಸಂಗತಿಯಲ್ಲ. ಅದೃಷ್ಟದಲ್ಲಿ ನಂಬಿಕೆ ಇಟ್ಟು ಕೆಟ್ಟುಹೋದಮೇಲೆ ಬುದ್ಧಿ ತಂದುಕೊಳ್ಳುವದಕ್ಕಿಂತ ಜಗನ್ನಿರ್ಮಾಣಕನಾದ ದೇವರ ಅತಿಶಯವಾದ ಕಾರ್ಯಗಳಲ್ಲಿ ಅಡಗಿರುವ ಆತನ ದಿವ್ಯ ಉದ್ದೇಶಗಳನ್ನು ಗ್ರಹಿಸಿ, ಆತನೊಬ್ಬನಲ್ಲಿಯೇ ಭರವಸವಿಟ್ಟು ಆತನಿಗೆ ಭಕ್ತರುಗಳಾಗುವದು ಸರ್ವಶ್ರೇಷ್ಠವಾದುದಲ್ಲದೆ ಪ್ರಾರ್ಥನೆಯ ಮೂಲಕ ಬೇಡುವ ಎಲ್ಲಾ ವರಗಳನ್ನು ಆತನು ಕನಿಕರಿಸಿ ತನ್ನ ದಿವ್ಯಚಿತ್ತದ ಪ್ರಕಾರವಾಗಿಯೂ ಅವರವರ ಸ್ಥಿತಿಗತಿಗಳಿಗನುಸಾರವಾಗಿಯೂ ಆಯಾ ಕಾರ್ಯಗಳ ಕಾರಣಾಕಾರಣಗಳನ್ನು ಪ್ರಕಟಿಸುವನು. ಪ್ರಪಂಚ ಆತನನ್ನು ಆಶ್ರಯಿಸುವದು ನಮ್ಮ ಜೀವಮಾನದ ಮುಖ್ಯ ಕರ್ತವ್ಯವಾಗಿರಲಿ.

ಒಳದೇಶದ ವೃತ್ತಾಂತಗಳು

ಫೆಬ್ರವರಿ ತಾ ೫ನೇ ಶನಿವಾರ ಬೆಂಗಳೂರು ಲಾಲ್‌ಬಾಗ್ ಉದ್ಯಾನವನದಲ್ಲಿ ಫಲಪುಷ್ಪಾದಿಗಳ ವಾರ್ಷಿಕ ಪ್ರದರ್ಶನವು ನಡೆಯುವುದು.

* * *

ಮೈಸೂರಿನಲ್ಲಿರುವ ಮಿ॥ ವಿ. ಸಿಂಗರ್ ಸಾಹೇಬರು ಕಳೆದ ವಾರ ಇಲವಾಲದ ಬಳಿಯ ಕಾಡಿನಲ್ಲಿ ಒಂದು ಚಿರತೆಯನ್ನು ಶಿಕಾರಿ ಮಾಡಿದರು.

* * *

ಗತಿಸಿದ ಮಿ॥ ಎಲ್ ಬಿ ಬೌರಿಂಗ್‌ರವರ ಜ್ಞಾಪಕಾರ್ಥವಾಗಿ ಬೆಂಗಳೂರಿನಲ್ಲಿ ದಿವಾನರವರ ಆಫೀಸಿಗೂ, ರೆಸಿಡೆಂಟರವರ ಕಚೇರಿಗೂ ಒಂದೊಂದು ದಿನ ರಜಾ ಕೊಟ್ಟಿದ್ದರು.

* * *

ಮಿ॥ ಎ ರಂಗಸ್ವಾಮಿಯಯ್ಯಂಗಾರ್ಯರವರು ಈ ಸಾಲ್ ಅಕ್ಟೋಬರ್ ವರೆಗೆ (೨೦೦ ರೂ) ರೆವಿನ್ಯೂ ಕಮಿಷನರಾಗಿ ಕೆಲಸ ನೋಡುವಂತೆ ಸ್ಯಾಂಕ್ಷನ್ ಆಗಿರುವುದಾಗಿ ಕೇಳುತ್ತೇವೆ.

* * *

ನಮ್ಮ ಸರ್ಕಾರದವರು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿದ ಶಿಕಾರಿಪುರದಲ್ಲಿ ಹೊಸ ಮ್ಯುನಿಸಿಪಲ್ ಕಾನೂನಿನಂತೆ ಮುನಿಸಿಪಾಲಿಟಿಯನ್ನು ಕಲ್ಪಿಸಬೇಕೆಂದು ಉದ್ದೇಶಪಟ್ಟಿದಾರೆ.

* * *

ಮೈಸೂರು ಸಂಸ್ಥಾನದಲ್ಲಿ ಬೇರೆ ಬೇರೆ ಅಧಿಕಾರಗಳನ್ನು ಮಾಡುತ್ತಿದ್ದ ಮಿ॥ ಜೆ ಹ್ಯೂಂ ರೈಟ್ ರವರು ಸೌಖ್ಯ ಪಡದ ಕೆಲಸದಿಂದ ನಿವೃತ್ತರಾಗಿ ಪತ್ನಿ ಸಹಿತ ಸೀಮೆಗೆ ತೆರಳುವವರಾಗಿದಾರೆ.

* * *

ಕಳೆದ ಭಾನುವಾರ ಮಧ್ಯಾಹ್ನದ ರೈಲಿನಲ್ಲಿ ದಿವಾನ್ ಮಿ॥ ಟಿ ಆನಂದರಾಯರವರು ಪರಿವಾರಸಹಿತ ರಾಜಧಾನಿಗೆ ದಯಮಾಡಿದರು. ಅವರು ಈ ವಾರ ಬೆಂಗಳೂರಿಗೆ ವಾಪಸು ತೆರಳುವವರಾಗಿದಾರೆ.

* * *

ಬೌರಿಂಗ್ ಪೇಟೆಯ ಬಳಿ ಒಂದು ಮೈಲಿ ದೂರದಲ್ಲಿ ಅಂಚೆ ವಸ್ತುಗಳನ್ನು ಕಳುವು ಮಾಡಿದ ನಾಲ್ಕು ಮಂದಿ ಅಪರಾಧಿಗಳನ್ನು ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡಿ, ಪ್ರತಿ ಒಬ್ಬನಿಗೂ ನಾಲ್ಕು ವರುಷ ಕಠಿಣ ಸಜಾ ವಿಧಿಸಿರುತ್ತಾರೆ.

* * *

ಶ್ರೀಮನ್ ಮಹಾರಾಜರವರು ಮುಂದಿನ ಭಾನುವಾರ ಯುವರಾಜರವರ ಸಮೇತ ರಾಜಧಾನಿಯಿಂದ ಪ್ರಯಾಣ ಮಾಡಿ

ಟೊಂಬಾಯಿಗೆ ದಯಮಾಡುತ್ತಾರೆಂದೂ, ಎರಡು ವಾರಗಳಲ್ಲಿ ವಾಪಸು ಬೆಂಗಳೂರಿಗೆ ಚಿತ್ತೈಸುವರೆಂದೂ ಕೇಳುತ್ತೇವೆ

ಪೋಲೀಸ್ ಇನ್ಸ್ಪೆಕ್ಟರು, ಜಮಾದಾರರು, ಸ್ಟೇಷನ್ ಹೌಸ್ ಆಫೀಸರುಗಳನ್ನು ತರಬೇತು ಮಾಡುವುದಕ್ಕೆ ಸರ್ಕಾರದವರು ಬೆಂಗಳೂರಿನಲ್ಲಿ ಮುಂದಿನ ತಿಂಗಳ ೧ನೇ ತಾರೀಖಿನಿಂದ ಪೋಲೀಸ್ ಟ್ರೈನಿಂಗ್ ಸ್ಕೂಲನ್ನು ಪ್ರಾರಂಭಿಸುವವರಾಗಿದ್ದಾರೆ

ರಾಜಧಾನಿಯಲ್ಲಿರುವ ಆಪ್ಸರ್ ರೆಸಿಡೆನ್ಸಿ ಎಂಬ ಬಂಗಲೆಯನ್ನು ಅರಮನೆ ಇಲಾಖೆಗೆ ಪಡೆದುಕೊಂಡು, ಅಲ್ಲಿ ಕೆಲವು ಹೊಸ ಕಟ್ಟಡಗಳನ್ನು ಕಟ್ಟಿಸುವವರಾಗಿದ್ದಾರೆ ಈ ಬಂಗಲೆಯು ಶ್ರೀಮನ್ ಯುವರಾಜರವರ ವಾಸಸ್ಥಳವಾಗುವುದೆಂದು ಕೇಳುತ್ತೇವೆ

ಬೆಂಗಳೂರಿನಲ್ಲಿ ಹೊಸ ಮನೆ ಕಟ್ಟಿಕೊಳ್ಳುವವರಿಗೆ ಸುಲಭ ದರದ ಬಡ್ಡಿಯಿಂದ ಸಾಲ ಕೊಡುವಂಥಾ ಒಂದು ಪರಸ್ಪರ ಸಹಾಯಕ ಬ್ಯಾಂಕು ಏರ್ಪಾಡಾಗಿದೆ ರಾಜಧಾನಿಯಲ್ಲೂ ಇಂಥಾ ಬ್ಯಾಂಕನ್ನು ಏರ್ಪಾಡುಮಾಡಬೇಕಾದದ್ದು ಅವಶ್ಯವೆಂದು ಸೂಚಿಸುತ್ತೇವೆ

ಶ್ರೀಮನ್ ಯುವರಾಜರವರು ಪರಿವಾರಸಹಿತ ಮೊನ್ನೆ ಸೋಮವಾರ ಸಾಯಂಕಾಲ ಚಾಮರಾಜನಗರದ ಶಿಕಾರಿ ಕ್ಯಾಂಪಿನಿಂದ ಮೋಟಾರ್ ಗಾಡಿಗಳಲ್ಲಿ ರಾಜಧಾನಿಗೆ ವಾಪಸು ಬಂದರು ಒಂದು ಹುಲಿಯನ್ನೂ ಎರಡು ಕಾಡೆತ್ತುಗಳನ್ನೂ ಶಿಕಾರಿ ಮಾಡಿದರೆಂದು ಕೇಳುತ್ತೇವೆ

ಗುಪ್ಪಹಳ್ಳಿ ಮಿ|| ಜಿ ಎಸ್. ಮುನಿಗೆಪ್ಪನವರು ಬರೆಯುವುದೇನೆಂದರೆ - "... ನೇ ಜನವರಿ ತಾ. ೧೧ನೇ ಸೋಮವಾರ ಗುಪ್ಪಹಳ್ಳಿ ... ಎ ವಿ ಸ್ಕೂಲಿನಲ್ಲಿ ಫೋರ್ತ್ ಫಾರಂ ತರಗತಿಯು ಪ್ರಾರಂಭಿಸಲ್ಪಡುತ್ತದೆ ಇದಕ್ಕೆ ಸೇರತಕ್ಕ ವೀರಶೈವ ... ಗಳಿಗೆ ಧರ್ಮಾರ್ಥವಾಗಿ ಭೋಜನದ ಏರ್ಪಾಡೂ ಮತ್ತು ಸ್ಕಾಲರ್‌ಷಿಪ್ (ವೇತನ) ಸಹ ದೊರೆಯುವುದು" ಎಂಬುದೇ

ಒಬ್ಬ ... ದಾರರು ಬರೆಯುವುದು ... ಶಿಕಾರಿಪುರ ತಾಲ್ಲೋಕು ಲಿಂಗದಹಳ್ಳಿ ಸ್ಕೂಲು ಸ್ಥಾಪಿತವಾಗಿ ೩೦ ೪೦ ವರುಷಗಳಾಗಿದ್ದಾಗ್ಯೂ ಅದು ಬಹಳ ಹೀನಸ್ಥಿತಿಯಲ್ಲಿತ್ತು ... ದರೆ ಹಾಲಿ ಈ ಸ್ಕೂಲಿಗೆ ... ಬಂದಿರುವ ಮಿ|| ಬೇಲೂರು ರಾಮಪ್ಪನವರು ... ಕಡು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಈ ವರುಷ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಒಬ್ಬನು ಇಂಗ್ಲೀಷು ಕ್ಲಾಸಿನಲ್ಲಿ, ಒಬ್ಬನು ೨ನೇ ಕ್ಲಾಸಿನಲ್ಲಿ ತೇರ್ಗಡೆ ಹೊಂದಿದ್ದಾರೆ ಉಪಾಧ್ಯಾಯರ ಶ್ರಮವು ಸಾರ್ಥಕವಾಯಿತೆಂದು ಸಂತೋಷಪಡುತ್ತೇನೆ

ಒಬ್ಬ ವರ್ತಮಾನದಾರರಿಂದ ... ಚಿಕ್ಕಮಗಳೂರು ತಾಲ್ಲೋಕು ಬೆಳವಾಡಿ ಹೋಬಳಿ ... ಗ್ರಾಮದಲ್ಲಿ ೧೦ ೨ ಜನಗಳ ಮನೆಗೆ ಅಕಸ್ಮಾತ್ತು ಬೆಂಕಿ ಬಿದ್ದರೂ ಜನಗಳಿಗೂ ಜಾನುವಾರುಗಳಿಗೂ ಹಾನಿ ಯೊಂದರ ... ಇದ್ದದ್ದು ತುಂಬಾ ಸಹಾಯವಾಯಿತು. ಈ ... ಜನಗಳು ಕೇವಲ ಗರೀಬರು. ಹೋದ ವರುಷದ ... ಸುವಾರಿಸಿಕೊಂಡು, ... ಕೊಂಡಿದ್ದರು. ... ಚಿಕ್ಕಮಕ್ಕಳು ಅಗಿ ಕಾಳು ದಿನಸಿ ವಗೈರೆ ... ಕೊಂಡು ಇದ್ದರು ಅದು ಇವರಿಗೆ ಇಲ್ಲವಾಯಿತು ... ಈ ಕಷ್ಟದ ಸಂಗತಿಯನ್ನು ... ತಾಲ್ಲೋಕು ಡೆಪ್ಯುಟಿ ಅಮಲ್ದಾರರವರ ಸನ್ನಿಧಿಗೆ ಈ ಗ್ರಾಮದ ... ಅರಿಕೆಮಾಡಿಕೊಂಡದ್ದರ ಮೇಲೆ ಅಮಲ್ದಾರರು ... ಡಿಸ್ಟ್ರಿಕ್ಟ್ ಅ|| ಕಮಿಷನರ್ ಸಾಹೇಬರವರ ಆಜ್ಞೆ ... ಜನಗಳಿಗೆ ೩೦ ವಾರು ... ಮಾಡಿಸಿದಂತೆ ... ಕೆಲವು ಬಂಗಲೆ ಸಲಕರಣೆಗಳೂ ಸಹಾಯ ... ಈ ದಯಾವೃತ್ತಿ ತುಂಬಾ ಪರಿಹಿತರಾಗಿ ಅವರನ್ನು ಹರಸುತ್ತಿದ್ದಾರೆ

ರಾಜದ್ರೋಹದ ಕೃತ್ಯಗಳನ್ನು ಅಡಗಿಸುವುದು

ವೈಸ್‌ರಾಯಿಯವರಿಗೂ ... ರಾಜರುಗಳಿಗೂ ನಡೆದಿರುವ ... ಗಳು

ಇಂಡಿಯಾ ದೇಶದಲ್ಲಿ ಈಗ ಕೆಲವು ವರ್ಷಗಳಿಂದೀಚೆಗೆ ಇಂಗ್ಲೀಷು ಸರ್ಕಾರವನ್ನು ... ತೊಲಗಿಸಬೇಕೆಂಬ ದುರಭಿಪ್ರಾಯದಿಂದ ಕೆಲವರು ದುರಾತ್ಮರು ರಾಜದ್ರೋಹದ ಕೃತ್ಯಗಳನ್ನು ಪ್ರಾರಂಭಿಸಿರುವುದು ಎಲ್ಲರಿಗೂ ತಿಳಿದಿರುತ್ತದಷ್ಟೆ ... ನಿರ್ಮೂಲಮಾಡುವ ಉದ್ದೇಶದಿಂದ ಇಂಡಿಯಾ ಗವರ್ನಮೆಂಟಿನವರು ಅನೇಕ ಏರ್ಪಾಡುಗಳನ್ನು ಮಾಡಿದರು, ರಾಜದ್ರೋಹಕರವಾದ ವಾರ್ತೆಗಳನ್ನು ಬರೆದ ಅನೇಕ ಪತ್ರಿಕಾ ಕರ್ತರನ್ನು ಹಿಡಿದು ವಿಚಾರಣೆಮಾಡಿ ಬಂದೀಖಾನೆಗೆ ಕಳುಹಿಸಿದರು. ಮತ್ತು ಬಂಕೋಲು ಸಹಿತ ಎಫಿಡರು ದೇಶದಲ್ಲಿ ಗಲ್ಲಾಟೆಯೆಬ್ಬಿಸಿಕೊಂಡಿದ್ದ ಅನೇಕ ಮಂದಿ ದುಷ್ಟಮನುಷ್ಯರನ್ನು ಗಡೀಪಾರುಮಾಡಿದರು, ಮತ್ತು ರಾಜದ್ರೋಹಕರವಾದ ವಿಷಯಗಳನ್ನು ಬಹಿರಂಗವಾಗಿ ಜನರಿಗೆ ಉಪದೇಶ ಮಾಡದೇ ಇರುವುದಕ್ಕೋಸ್ಕರ ಸಭೆಗಳು ಸೇರದಂತೆ ಅಡ್ಡಿಪಡಿಸಿದರು ಆ ಕ್ರಮಗಳನ್ನೆಲ್ಲಾ ಜಾಗ್ರತೆಯಾಗಿ ಜಾರಿಯಲ್ಲಿ ತರುವುದಕ್ಕೋಸ್ಕರ ಪ್ರತ್ಯೇಕವಾಗಿ ಒಂದು ಕಾನೂನನ್ನೇ ಏರ್ಪಡಿಸಿದರು. ಈ ಏರ್ಪಾಡುಗಳ ದೆಸೆಯಿಂದ ರಾಜದ್ರೋಹಪ್ರವರ್ತಕರ ಹಾವಳಿಯು ಎಷ್ಟೋ ಕಡಮೆಯಾಯಿತು ಆದರೂ ಅದು ನಿರ್ಮೂಲವಾಗದೇ ಹೋದದ್ದು ಶೋಚನೀಯವಾಗಿದೆ.

ಘನವನ್ನು ಹೊಂದಿದ ವೈಸ್‌ರಾಯಿ ಪ್ರಭುಗಳು ಇದರ ಮೂಲೋತ್ಪಾಟನೆಗೋಸ್ಕರ ದೇಶೀಯ ರಾಜರುಗಳ ಸಹಾಯವನ್ನು ಪಡೆಯುವುದಕ್ಕೂ, ಅವರು ತಮ್ಮ ತಮ್ಮ ಸಂಸ್ಥಾನಗಳಲ್ಲಿ ರಾಜದ್ರೋಹವು ಹರಡದಂತೆ ನಿರೋಧಿಸಲು ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೂ ಅವರಿಗೆ ಖರೀತಗಳನ್ನು ಕಳುಹಿಸಿ ಅವರ ಅಭಿಮತವನ್ನು ಕೇಳಿದರು ಅವರಿಗೆ ಎಲ್ಲಾ ರಾಜರೂ ಉತ್ತರಗಳನ್ನು ಬರೆದಿರುತ್ತಾರೆ ಈ ಕಾಗದಪತ್ರಗಳನ್ನೆಲ್ಲಾ ಇಂಡಿಯಾ ಸರ್ಕಾರದವರು ಪ್ರಜೆಗಳ ತಿಳುವಳಿಕೆಯಬಗ್ಗೆ ಇಂಡಿಯಾ ಗೆಜೆಟ್ಟಿನಲ್ಲಿ ಪ್ರಕಟಿಸಿ ಮಾಡಿದ್ದಾರೆ

ಬ್ರಿಟಿಷ್ ಸಾಮ್ರಾಜ್ಯಕ್ಕೆ ನಾವು ಅತ್ಯಂತ ರಾಜಭಕ್ತಿಯುತರಾಗಿರುವರೆಂತಲೂ, ಅನಾಯಕ ಪ್ರವರ್ತನೆಗಳನ್ನು ನಿಲ್ಲಿಸುವುದಕ್ಕೋಸ್ಕರ ಬೇಕಾಗುವ ಏರ್ಪಾಡುಗಳನ್ನೆಲ್ಲಾ ತಾವಲ್ಲದೂ ಮಾಡಲು ಸಿದ್ಧರಾಗಿರುವರೆಂತಲೂ, ಈ ಭಾಗದಲ್ಲಿ ಇಂಡಿಯಾ ಸರ್ಕಾರದವರೊಡನೆ ಏಕೀಭವಿಸಿ ಯುಕ್ತವಾದ ಕ್ರಮಗಳನ್ನು ಆಚರಣೆಯಲ್ಲಿ ತರುವುದಕ್ಕೆ ತಾವು ಸಂತೋಷವಾಗಿ ಸಹಾಯ ಮಾಡುವರೆಂತಲೂ ಸಮಸ್ತ ರಾಜರುಗಳೂ ವೈಸ್‌ರಾಯಿಯವರಿಗೆ ಜವಾಬನ್ನು ಕೊಟ್ಟಿರುವರು ಇವುಗಳಲ್ಲಿ ನಮ್ಮ ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರು ಕೊಟ್ಟಿರುವ ಉತ್ತರದ ಅಭಿಪ್ರಾಯವೇನೆಂದರೆ: —

ಈ ರಾಜದ್ರೋಹದ ಪ್ರವರ್ತನೆಯನ್ನು ಹೇಗೆ ನಿರ್ಮೂಲ ಮಾಡಬೇಕೆಂಬುದು ನಮಗೆ ಬಹು ಯೋಚನೆಯನ್ನುಂಟುಮಾಡುತ್ತಿದೆ ಇದು ನಮ್ಮ ಸಂಸ್ಥಾನದಲ್ಲಿ ಬೇರೂರದಂತೆ ಮಾಡುವುದಕ್ಕೆ ಮಾಡಬೇಕಾದ ಸಾಹಸವನ್ನೆಲ್ಲಾ ಎಡೆಬಿಡದೆ ಮಾಡುತ್ತೇವೆಂದು ತಮಗೆ ಭರವಸೆ ಕೊಡುತ್ತೇವೆ. ಯಾವ ರಾಜದ್ರೋಹಿಯಾದ ಉಪದೇಶಕನಾದರೂ ಅನಾಯಕತ್ವವನ್ನು ಬೋಧಿಸಿ, ನಮ್ಮ ಪ್ರಜೆಗಳ ಮನಸ್ಸನ್ನು ಕೆಡಿಸದಂತೆ ನೋಡಿಕೊಳ್ಳುತ್ತೇವೆ ಯಾವನಾದರೂ ಇಂತಹ ಕೃತ್ಯವನ್ನು ಮಾಡಲು ಪ್ರಯತ್ನಪಟ್ಟರೆ ಅವನು ಕ್ರಿಮಿನಲ್ ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಡುವನು, ಅಥವಾ ಸಂಸ್ಥಾನದಿಂದಾಚೆಗೆ ಗಡೀಪಾರು ಮಾಡಲ್ಪಡುವನು ರಾಜದ್ರೋಹವನ್ನು ಬೋಧಿಸುವ ಬೋಧಕರು ಹೊರಗಡೆಯಿಂದ ಸಂಸ್ಥಾನದೊಳಕ್ಕೆ ಬಾರದಂತೆ ನಮ್ಮ ಮ್ಯಾಜಿಸ್ಟ್ರೇಟರೂ ಪೋಲೀಸಿನವರೂ ನೋಡಿಕೊಳ್ಳುತ್ತಿದ್ದಾರೆ.

ರಾಜದ್ರೋಹವನ್ನು ಬಹಿರಂಗವಾಗಿ ಉಪದೇಶಮಾಡದಂತೆ ಅಡ್ಡಿ ಮಾಡುವುದೊಂದೇ ಸಾಲದು. ಯಾವನೇ ಆಗಲಿ ಎಷ್ಟು ಉನ್ನತಪದವಿಯಲ್ಲಿ ಎಂಥಾ ಮಹತ್ತಿನ ಕಾರ್ಯಗಳನ್ನು ಮಾಡಿದವನಾದರೂ ಅನಾಯಕ ಪಾರ್ಟಿಯವರ ಗುಂಪಿಗೆ ಯಾವ ರೀತಿಯಿಂದಲಾದರೂ ಸೇರಿದವನೆಂದು ಕಂಡುಬಂದರೆ ಅಂಥವನ ನಡತೆಯನ್ನು ಕ್ರೂರವಾಗಿ ಖಂಡಿಸಬೇಕು. ಈ ಅಂಶವನ್ನು ಪ್ರತಿಯೊಬ್ಬ ದೇಶೀಯ ರಾಜರೂ ತಮ್ಮ ಪ್ರಜೆಗಳಿಗೆ ಸ್ಪಷ್ಟಪಡಿಸಬೇಕು ನಾವು ... ಯದಲ್ಲಿ ಈ ಕೆಲಸ ಮಾಡುವುದಕ್ಕೆ ಹಿಂತೆಗೆಯುವುದಿಲ್ಲವೆಂದು ಧಾರಾಳವಾಗಿ ಹೇಳುತ್ತೇವೆ

ವರ್ತಮಾನ ಪತ್ರಿಕೆಗಳಲ್ಲಿ ರಾಜದ್ರೋಹಕರವಾದ ಬರವಣಿಗೆಗಳನ್ನು ಬರೆದು ಜನರಲ್ಲಿ ಹರಡಿಸುವುದನ್ನು ತಪ್ಪಿಸುವುದಕ್ಕೋಸ್ಕರ ವರ್ತಮಾನ ಪತ್ರಿಕೆಗಳ ಕಾನೂನನ್ನು ಜಾರಿಯಲ್ಲಿ ತಂದು ವಿಶೇಷವಾಗಿ ಅಧಿಕಾರವನ್ನು ಪಡೆದುಕೊಂಡಿರುತ್ತೇವೆ ರಾಜದ್ರೋಹಿಗಳನ್ನು ಶಿಕ್ಷಿಸುವ ಉದ್ದೇಶ್ಯ ಸಂಪೂರ್ಣವಾದ ಅಧಿಕಾರವನ್ನು ಈ ಕಾನೂನು ನಮ್ಮ ಸರ್ಕಾರದವರಿಗೆ ಕೊಟ್ಟಿದೆ ಒಂದು ವರ್ತಮಾನ ಪತ್ರಿಕೆಯು ರಾಜದ್ರೋಹಕರವಾದುದು ಅಥವಾ ಅಲ್ಲವೆಂಬುದನ್ನು ಕೋರ್ಟುಗಳಲ್ಲಿ ಕ್ರಮವಾಗಿ ವಿಚಾರಣೆಯ ಮೂಲಕ ನಿರ್ಧರಿಸಬೇಕಾದರೆ ಕಾಲವಿಳಂಬಕ್ಕೂ, ವೃಥಾ ಖರ್ಚಿಗೂ ಕಾರಣವಾಗುತ್ತದೆ ಆದುದರಿಂದ ರಾಜದ್ರೋಹವನ್ನು ನಿರ್ಮೂಲ ಮಾಡಬೇಕಾಗಿರುವಂಥಾ ಮುಖ್ಯ ಸಂದರ್ಭಗಳಲ್ಲಿ ಸರ್ಕಾರದವರಿಗೆ ಯಥೇಚ್ಛವಾಗಿ ಅಧಿಕಾರವಿರಬೇಕಾದ್ದು ಅವಶ್ಯಕವೆಂದು ನಮಗೆ ತೋರುತ್ತದೆ ಆದುದರಿಂದಲೇ ಮೈಸೂರು ಸಂಸ್ಥಾನದ ಕಾನೂನಿನಲ್ಲಿ ಇಂಥಾ ಅಧಿಕಾರವು ವಿಶೇಷವಾಗಿ ಸರ್ಕಾರದವರಿಗೆ ವಹಿಸಿರುವುದು

ರಾಜದ್ರೋಹ ಪ್ರವರ್ತನೆಯನ್ನು ಅಡಗಿಸುವುದರಲ್ಲಿ ಈ ಕಾನೂನು ಎಷ್ಟು ... ವಾಗಿದೆ ಈ ಕಾನೂನನ್ನು ಜಾರಿಯಲ್ಲಿ ತರಕೂಡದೆಂದು ವರ್ತಮಾನ ಪತ್ರಿಕೆಗಳಲ್ಲಿ ಮಾಡಿರುವ ಆಕ್ಷೇಪಣೆಗಳು ನಮಗೆ ವ್ಯಸನವನ್ನುಂಟುಮಾಡಲಿಲ್ಲ. ನಿಜವಾಗಿಯೂ ತಪ್ಪಿತಸ್ಥರಾದವರು ಈ ಕಾನೂನಿನಿಂದ ಶಿಕ್ಷಿಸಲ್ಪಡುವರೇ ಹೊರತು ರಾಜಭಕ್ತಿಯುಳ್ಳವರ್‍ಯಾರೂ ಇದರಿಂದ ಭಯಪಡುವುದಕ್ಕೆ ಕಾರಣವಿಲ್ಲ ಈ ಕಾನೂನು ಅತ್ಯಂತ ಅವಶ್ಯಕವಾದದ್ದೆಂದೂ ವಿಶೇಷ ಯುಕ್ತವಾದ್ದೆಂತಲೂ ದೃಢವಾಗಿ ನಂಬಿದೇವೆ ಆದುದರಿಂದ ... ದರಲ್ಲಿ ಬದಲಾವಣೆಗಳನ್ನು ಮಾಡುವುದಕ್ಕೆ ನಾವು ಒಡಂಬಡುವುದಿಲ್ಲ

ರಾಜದ್ರೋಹದ ತಪ್ಪುಗಳನ್ನು ಮಾಡುವರೆಂಬ ಗುಮಾನಿಯುಳ್ಳ ಜನರ ಮೇಲೆ ನಿಗಾ ಇಡುವುದಕ್ಕೂ, ಅವರ ನಾಯಕರಾದ ವರ್ತಮಾನಗಳನ್ನು ತಿಳಿದುಕೊಳ್ಳುವುದಕ್ಕೂ ಯುಕ್ತವಾದ ಏರ್ಪಾಡುಗಳನ್ನು ಮಾಡುವ ವಿಷಯದಲ್ಲಿ ದೇಶೀಯ ರಾಜರು ಇಂಡಿಯಾ ಗವರ್ನಮೆಂಟಿನವರಿಗೆ ಆಗಬೇಕಾದ ಸಹಾಯವನ್ನೆಲ್ಲಾ ಮಾಡಲು ಬದ್ಧರಾಗಿರುತ್ತಾರೆ ಈ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರು ಕೊಡಬಹುದಾದ ಸಲಹೆಗಳನ್ನು ಕುರಿತು ನಾವು ಪರ್ಯಾಲೋಚಿಸಿ ತಕ್ಕ ಏರ್ಪಾಡುಗಳನ್ನು ಮಾಡಲು ಸಿದ್ಧರಾಗಿರುತ್ತೇವೆ. ನಮ್ಮ ಸಂಸ್ಥಾನದಲ್ಲಿ ದೇಶಭಾಷೆಯ ಪತ್ರಿಕಾ ಕರ್ತರು ಪ್ರಕಟಿಸುತ್ತಿರುವ ವಿಚಾರಗಳ ಮೇಲೆ ಹೆಚ್ಚು ನಿಗಾ ಇಡಿಸಿ, ಆ ಪತ್ರಿಕೆಗಳಲ್ಲಿ ಬರೆಯಲ್ಪಡುವ ಮುಖ್ಯ ವಾರ್ತೆಗಳನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿಸಿ, ಆ ತರ್ಜುಮೆಯ ಪತ್ರಿಕೆಗಳನ್ನು ಸಂಸ್ಥಾನದ ಮ್ಯಾಜಿಸ್ಟ್ರೇಟರು ಮತ್ತು ಪೋಲೀಸು ಅಧಿಕಾರಿಗಳಿಗೆ ಕಳುಹಿಸಿಕೊಡಬೇಕೆಂದು ಆಲೋಚಿಸುತ್ತಿದ್ದೇವೆ.

ಬ್ರಿಟಿಷ್ ಸರ್ಕಾರದಿಂದ ಮೈಸೂರು ಸಂಸ್ಥಾನಕ್ಕೆ ಅನೇಕ ಉಪಕಾರಗಳಾಗಿರುತ್ತವೆಂಬುದನ್ನು ನಮ್ಮ ಪ್ರಜೆಗಳು ನೆನಪಿನಲ್ಲಿಟ್ಟುಕೊಂಡಿದ್ದಾರೆಂದು ನಾವು ಧಾರಾಳವಾಗಿ ಹೇಳುತ್ತೇವೆ. ನಮ್ಮ ಪ್ರಜೆಗಳಲ್ಲಿ ಕೆಲವರು ವಿದ್ಯಾವಂತರು ಇಂಡಿಯಾ ದೇಶದ ಇತರ ಕಡೆಗಳಲ್ಲಿ ಜನರು ಕೂಗುತ್ತಿದ್ದ ಕೆಟ್ಟ ಕೂಗನ್ನು ಕೇಳಿ ವರ್ತಮಾನ ಪತ್ರಿಕೆಗಳಲ್ಲಿ ಮನಸ್ವಿ ಬರವಣಿಗೆಯನ್ನು ಬರೆಯಲು ಪ್ರಕ್ರಮಿಸಿದರು ಮೇಲ್ಕಂಡ ಕಾನೂನನ್ನು ಜಾರಿಗೆ ತಂದು ಇವರ ಸ್ವೇಚ್ಛೆಯಾದ ಬರವಣಿಗೆಯನ್ನು ನಿಲ್ಲಿಸಿದ್ದಾಯಿತು ಇಂಥಾ ಕೆಟ್ಟ ಜನರು ನಮ್ಮ ಸಂಸ್ಥಾನದಲ್ಲಿ ಎಷ್ಟೋ ಸ್ವಲ್ಪ ಮಂದಿ ಇದ್ದಾರೆ ಇವರು ವಿನಹ ಸಂಸ್ಥಾನದ ಪ್ರಜೆಗಳೆಲ್ಲರೂ ಎಡ್ವರ್ಡ್ ಚಕ್ರವರ್ತಿಯವರ ವಿಷಯದಲ್ಲಿ ಅಪಾರವಾದ ರಾಜಭಕ್ತಿಯುಳ್ಳವರಾಗಿರುತ್ತಾರೆಂದು ದೃಢವಾಗಿ ಹೇಳಬಲ್ಲೆವು ಅನಾಯಕತ್ವವೂ, ರಾಜದ್ರೋಹವೂ ಇದುವರೆವಿಗೂ ನಮ್ಮ ಸಂಸ್ಥಾನದಲ್ಲಿ ನೆಲೆಗೊಂಡಿಲ್ಲ. ನಮ್ಮ ಪ್ರಜೆಗಳು ಇಂಗ್ಲೀಷರ ದವಲತ್ತಿನ ವಿಷಯದಲ್ಲಿ ಕೇವಲ ಸ್ನೇಹಭಾವವನ್ನೂ, ಕೃತಜ್ಞತೆಯನ್ನೂ, ರಾಜಭಕ್ತಿಯನ್ನೂ ಉಳ್ಳವರಾಗಿದ್ದಾರೆಂದು ಧೈರ್ಯವಾಗಿ ಹೇಳುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

... ತಾಲ್ಲೋಕು ... ಹೋಬಳಿಯಲ್ಲಿ ... ನಡೆಯುವ ಜಾತ್ರೆಗೆ ಫೆಬ್ರವರಿ ತಾ. ೭ ರಿಂದ ಮಾರ್ಚಿ ತಾ ೩ ರ ವರೆಗೆ ಪ್ಲೇಗ್ ಇರುವ ಸ್ಥಳದಿಂದ ಯಾರನ್ನೂ ಬಿಡುವುದಿಲ್ಲ

ಕೃಷ್ಣರಾಜಪೇಟೆ ತಾಲ್ಲೋಕು ... ಜಾತ್ರೆಗೂ ದನಗಳ ಪ್ರದರ್ಶನಕ್ಕೂ ಪ್ಲೇಗ್ ಇರುವ ಸ್ಥಳದಿಂದ ಫೆಬ್ರವರಿ ೧೦ ರ ಲಾಗಾಯತು ೨೮ ರ ವರೆಗೆ ಯಾರನ್ನೂ ಬಿಡುವುದಿಲ್ಲ.

ಶಿಡ್ಲಘಟ್ಟದ ತಾಲ್ಲೋಕು ... ಹೋಬಳಿ ... ರಥೋತ್ಸವಕ್ಕೆ ಫೆಬ್ರವರಿ ತಾ ೨೧ ರಿಂದ ಮಾರ್ಚಿ ತಾ ೧ ರ ವರೆಗೆ ಪ್ಲೇಗ್ ಇರುವ ಊರುಗಳಿಂದ ಹೋಗತಕ್ಕವರನ್ನು ಬಿಡುವುದಿಲ್ಲ.

ಚಾಮರಾಜನಗರದ ಮ್ಯುನಿಸಿಪಲ್ ಬೋರ್ಡಿಗೆ ಪ್ರಜೆಗಳು ಮುಂದೆ ಹೇಳುವವರನ್ನು ಮೆಂಬರಾಗಿ ಚುನಾಯಿಸಿದ್ದಾರೆ.— ಮೆ|| ಗಳಾದ ಬಾಚಿ ಸುಬ್ರಾಯಶೆಟ್ರು, ... ಯಂಗಾರ್‍ರು, ... ನವರು, ಸಿದ್ಧಗಂಗಪ್ಪನವರು, ವೀರಪ್ಪನವರು, ಸರ್ಕಾರದಿಂದ ನೇಮಕವಾಗಿರುವ ಮೆಂಬರುಗಳ್ಯಾರೆಂದರೆ.— ಮೆ|| ಗಳಾದ ಮಹಮದ್ ಉಮ್ಮರ್‌ಸಾಹೇಬರು, ವೆಂಕಟಶೆಟ್ಟರು, ಬಿ ಸುಬ್ಬಶೆಟ್ಟರು, ... ಶೆಟ್ಟರು, ... ಶೆಟ್ಟರು

ಮಾಲೂರು ತಾಲ್ಲೋಕು ಚಿಕ್ಕ ತಿರುಪತಿ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ... ಗ್ರಾಮದ ಶ್ಯಾನುಭೋಗ ಮೆ|| ಭೋಗ್ಯಯನವರನ್ನು ಐದು ವರ್ಷ ... ನೇಮಕಮಾಡಿದೆ

ಕೋಲಾರದ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ್ ಮೆ|| ಎ. ಕೆ ಸೈಯದ ... ಅವರಿಗೆ ಕ್ರಿಸ್ಮಸ್ ರಜಾದೊಂದಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಟ್ರೆಜರಿ ಅ|| ಕಮಿಷನರ್‌ರವರು ಎಕ್ಸೈಜ್ ಆಫೀಸರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು

ಕೋಲಾರದ ... ಮೆ|| ಎಂ. ಎಲ್. ಶ್ರೀಕಂಠೇಗೌಡರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಬೆಂಗಳೂರು ಅಡ್ವೊಕೇಟ್ ಮೆ|| ... ವೆಂಕಟಾಚಲ ಅಯ್ಯಂಗಾರ್‍ರವರು ಕೋಲಾರದ ಮುನ್ಸಿಫರಾಗಿ ನೇಮಿಸಲ್ಪಟ್ಟಿದ್ದಾರೆ

ಮೈಸೂರು ನಗರಾಭಿವೃದ್ಧಿಯ ಡಿವಿಜನ್ ಎಗ್ಸಿಕ್ಯುಟಿವ್ ಇನ್‌ಜನಿಯರ್ ಮೆ|| ಟಿ ... ಡಿಕ್ರೂಸ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ|| ಇಂಜನಿಯರ್ ಮೆ|| ಟಿ ಎಸ್ ... ಯ್ಯಂಗಾರ್‍ರವರು ಆ ಡಿವಿಜನ್ನಿನ ಎಗ್ಸಿಕ್ಯುಟಿವ್ ಇನ್‌ಜನಿಯರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಸೈನ್ಯಗಳ ಚೀಫ್ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಟಿ ದೇಸರಾಜೇ ಅರಸಿನವರಿಗೆ ಕೊಟ್ಟಿದ್ದ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ಅದನ್ನು ರದ್ದು ಮಾಡಿದೆ

ತುಮಕೂರು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ್ ಮೆ|| ಸಿ ಕೃಷ್ಣಮಾನಾಯುಡರವರಿಗೆ ಹದಿನೈದು ದಿನಗಳ ಕಾಯಿಲೆ ರಜಾ ಕೊಟ್ಟಿದೆ

ಶ್ರೀಮನ್ ಮಹಾರಾಜರವರು ಮೆ|| ತಿಮ್ಮಪ್ಪರಾಜೇ ಅರಸಿನವರನ್ನು ಮೈಸೂರು ಇನ್‌ಫೆಂಟ್ರಿ ೨ ನೇ ಬಟಾಲಿಯನ್ ೨ ನೇ ಗ್ರೇಡ್ ಜಮಾದಾರರನ್ನಾಗಿ ನೇಮಕಮಾಡಿರುತ್ತಾರೆ.

ನಂಜನಗೂಡು ಸಬ್ ಡಿವಿಜನ್ ಅ|| ಕಮಿಷನರ್ ಮೆ|| ಟಿ ಕೆ ಸುಂದರರಾಜೈಯ ... ರಿಗೂ, ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಅ|| ಕಮಿಷನರ್ ಮೆ|| ಪಿ ನಾರಾಯಣರಾಯರಿಗೂ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಡಲಾಗಿದೆ

ಮೆ|| ಕೆ ಎಸ್. ಚ ದ್ರಶೇಖರ ಅಯ್ಯರವರು ಮೈಸೂರು ನ್ಯಾಯವಿಧಾಯಕ ಸಭೆಯ ಅಡಿಷನಲ್ ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವುದನ್ನು ಗವರನ್‌ಮೆಂಟಿನವರು ಅಂಗೀಕರಿಸಿರುತ್ತಾರೆ.

ಎಗ್ಸಿಕ್ಯುಟಿವ್ ಇನ್‌ಜನಿಯರ್ ಮೆ|| ಕೆ. ಕೃಷ್ಣೈಯ್ಯಂಗಾರ್‍ಯರನ್ನು ಸಂಸ್ಥಾನದ ಚೀಫ್ ಇನ್‌ಜನಿಯರ ಸ್ಪೆಷಲ್ ಅಸಿಸ್ಟೆಂಟರನ್ನಾಗಿ ನೇಮಕಮಾಡಿದೆ.

ಅ|| ಇನ್‌ಜನಿಯರ್ ಮೆ|| ಕೆ ಅನಂತಾಚಾರ್ಯರನ್ನು ಬೆಂಗಳೂರು ಡಿವಿಜನ್ ಎಗ್ಸಿಕ್ಯುಟಿವ್ ಇನ್‌ಜನಿಯರಾಗಿ ಕೆಲಸನೋಡುವ ಹಾಗೆ ನೇಮಕ ಮಾಡಿದೆ

ಮಂಜರಾಬಾದ್ ತಾಲ್ಲೋಕು ಅಮಲ್ದಾರ್ ಮೆ|| ಸಿ. ನಾರಾಯಣರಾಯರಿಗೆ ಕ್ರಿಸಮಸ್ ರಜಾದೊಡನೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿರಸ್ತೇದಾರ್ ಎಂ ಎ ತಿರುಮಲಾಚಾರ್ಯರು ತಾಲ್ಲೂಕಿನ ಬಾಬ್ತು ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು

ಮೈಸೂರು ಪಟ್ಟಣದ ಅಭಿವೃದ್ಧಿ ಕಾರ್ಯಗಳು

ಮನೆಗಳನ್ನು ಒಡೆಯುವುದೂ ಕಟ್ಟುವುದೂ

(ಒಬ್ಬ ಬಾತ್ಮೀದಾರರು ಬರೆದದ್ದು)

ಈ ಸಂಸ್ಥಾನಕ್ಕೆ ರಾಜಧಾನಿಯಾಗಿರುವ ಮೈಸೂರು ಪಟ್ಟಣವನ್ನು ಅಲಂಕಾರವಾಗಿಯೂ ಆರೋಗ್ಯಕರವಾಗಿಯೂ ಮಾಡಬೇಕೆಂದು ಶ್ರೀಮನ್ ಮಹಾರಾಜರವರು ಆರೇಳು ವರುಷಗಳ ಹಿಂದೆ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಂಬ ಸಂಘವನ್ನು ಕಲ್ಪಿಸಿದರು ಈ ಸಂಘದಲ್ಲಿ ಸರ್ಕಾರದ ಅಧಿಕಾರಿಗಳೂ ಪ್ರಜೆಗಳ ಪ್ರತಿನಿಧಿಗಳೂ ಮೆಂಬರುಗಳಾಗಿರುತ್ತಾರೆ ಇದಕ್ಕೆ ಸಹಾಯವಾಗಿ ಒಂದು ಇಂಜನಿಯರ್ ಆಫೀಸು ಕೊಡಲ್ಪಟ್ಟಿದೆ ಪಟ್ಟಣವನ್ನು ಅಭಿವೃದ್ಧಿ ಮಾಡಬೇಕಾದರೆ ಯಾವಯಾವ ಭಾಗದಲ್ಲಿ ಬಡಾವಣೆ ಮಾಡಬೇಕೋ ಆಯಾ ಭಾಗಗಳಲ್ಲಿ ಮೊದಲು ನಿವೇಶನಗಳನ್ನು ವಿಂಗಡಿಸಿ ನೀರು ಬೆಳಕು ರಸ್ತೆ ಚರಂಡಿ ಮೊದಲಾದ ಸೌಕರ್ಯಗಳನ್ನು ಕಲ್ಪಿಸಿ, ಪೋಲೀಸ್ ಸ್ಟೇಷನ್ನು ಆಸ್ಪತ್ರೆ ಸ್ಕೂಲು ಮಾರ್ಕೆಟ್ಟು ಮುಂತಾದ ಅನುಕೂಲಗಳನ್ನು ಉಂಟು ಮಾಡಿಕೊಟ್ಟು, ಆ ಬಳಿಕ ಪಟ್ಟಣದ ಒಳಭಾಗದಲ್ಲಿ ಒತ್ತಾಗಿಯೂ, ಕೊಳಕಾಗಿಯೂ, ಬಿಸಿಲು ಗಾಳಿ ಬೆಳಕಿಗೆ ಅವಕಾಶವಿಲ್ಲದೆಯೂ, ರಸ್ತೆಯ ಮಟ್ಟಕ್ಕಿಂತ ತಗ್ಗಿನಲ್ಲಿಯೂ ಇರುವಂಥಾ ಮನೆಗಳನ್ನು ಒಡೆಯಬೇಕು ಟ್ರಸ್ಟ್ ಬೋರ್ಡು ಏರ್ಪಾಡಾದ ಪ್ರಥಮ ಭಾಗದಲ್ಲಿ ಇದೇ ಪ್ರಕಾರವಾದ ಅಭಿವೃದ್ಧಿ ಕಾರ್ಯಗಳು ನಡೆದವು ಈದ್ಗಾ, ಹೊಲಗೇರಿ, ಕರುಣಾಪುರ ಈ ಕಡೆಗಳಲ್ಲಿ ಅನುಕೂಲವಾದ ಏರ್ಪಾಡುಗಳನ್ನು ಮಾಡಿಕೊಟ್ಟದ್ದರಿಂದಲೂ, ಪ್ರಜೆಗಳಿಗೆ ಪ್ರೋತ್ಸಾಹ ಕೊಟ್ಟದ್ದರಿಂದಲೂ ಬಡಾವಣೆಗಳು ಈಗ ಮನೆಗಳಿಂದ ತುಂಬಿವೆ

ಈಗೀಗ ಈ ಅಭಿವೃದ್ಧಿಯ ಕಾರ್ಯಗಳು ಹ್ಯಾಗೆ ಪರಿಣಮಿಸಿವೆಯೋ ಅದನ್ನು ವಿವರಿಸುವುದು ಕಷ್ಟ ಯಾಕೆಂದರೆ ಈಗ ಟ್ರಸ್ಟ್ ಬೋರ್ಡಿನವರು ಪ್ರಜೆಗಳ ಮನೆಗಳನ್ನು ಅದಷ್ಟು ಸುಲಭ ಕ್ರಯಕ್ಕೆ ಕೊಂಡುಕೊಂಡು ಕೆಡವಿಬಿಡುತ್ತಿದಾರೆಯೇ ಹೊರತು ಅವರಿಗೆ ಹೊಸ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಶ್ಯವಾದ ಅನುಕೂಲಗಳನ್ನು ಕಲ್ಪಿಸಿ ಕೊಡುತ್ತಾ ಇಲ್ಲ ಮನೆ ಕಟ್ಟಿಕೊಳ್ಳುವುದಕ್ಕೆ ನಿವೇಶನಗಳೂ, ನಿರ್ದೇಶವಾಗಿಲ್ಲ ಅಲ್ಲಲ್ಲಿ ಕೆಲವು ನಿವೇಶನಗಳಿದ್ದರೆ ಅದಕ್ಕೆ ಟ್ರಸ್ಟ್ ಬೋರ್ಡಿನವರು ಬಹಳ ಹೆಚ್ಚು ಕ್ರಯವನ್ನು ಕೊಟ್ಟಲ್ಲದ ಕೊಡುವುದಿಲ್ಲ ಸ್ಥಳಗಳನ್ನು ಹರಾಜು ಮೂಲಕ ವಿಕ್ರಯಿಸುವುದು ರೂಢಿಗೆ ಬಂದಿದೆ ಇದರಿಂದ ಬಡಬಗ್ಗರಾದ ನೂರಾರು ಸಂಸಾರದವರು ಇದ್ದ ಮನೆಗಳನ್ನು ಕಳೆದುಕೊಂಡು ಹೊಸದಾಗಿ ಕಟ್ಟುವುದಕ್ಕೆ ಶಕ್ತಿಸ್ವಾಮ್ಯವಿಲ್ಲದ ಇರುವ ಮನೆಗಳಲ್ಲೇ ದುಬಾರಿ ಬಾಡಿಗೆಗಳನ್ನು ಕೊಡುತ್ತಾ ಸೇರಿಕೊಂಡಿದಾರೆ ಅನೇಕ ಮನೆಗಳಲ್ಲಿ ಈಗ ೨—೩ ಸಂಸಾರಗಳು ಇರುವವು ದೊಡ್ಡದಾಗಿದ್ದರೂ ಇದರಿಂದ ಮನೆಗಳು ಕೊಳಕಾಗುವುದಕ್ಕೆ ಸಂಶಯವಿಲ್ಲ ದೃಷ್ಟಾಂತವಾಗಿ ಈಗ ಟ್ರಸ್ಟ್ ಬೋರ್ಡಿನವರು ಕೋಟೆಯೊಳಗೆ ಮನೆಗಳನ್ನು ಒಡದು ಹಾಕುತ್ತಿದಾರೆ ಇದುವರೆಗೆ ಸುಮಾರು ಒಂದೂವರೆ ಲಕ್ಷ ರೂಪಾಯಿ ಖರ್ಚುಮಾಡಿ ೧೫೦ ಮನೆಗಳ ತನಕ ಒಡದು ಹಾಕಿದರು ಇನ್ನೂ ನೂರಾರು ಮನೆಗಳನ್ನು ಮುತುವರ್ಜಿಯಿಂದ ಒಡೆಯುವ ಉದ್ಯೋಗದಲ್ಲಿದಾರೆ ಮನೆಗಳನ್ನು ಕಳೆದುಕೊಂಡವರಿಗೆ ಬೋರ್ಡಿನವರು ಹಣವನ್ನೇನೋ ಕೊಡುತ್ತಿದಾರೆ ಈ ಹಣದ ಪರಿಣಾಮವೇನಾಗುವುದು? ಸಾಲಗಾರರು ಬಂದು ವಸೂಲುಮಾಡಿಕೊಳ್ಳುತ್ತಾರೆ ಮನೆಯವರಿಗೆ ಮನೆಯೂ ಹೋಯಿತು ಹಣವೂ ಕೈಸೇರಲಿಲ್ಲ ಅವರು ಮನೆ ಕಟ್ಟುವ ಬಗೆ ಹೇಗೆ? ಇಂದವರು ಇತರ ಮೊಹಲ್ಲೆಗಳಲ್ಲಿರುವ ಮನೆಗಳನ್ನು ಹುಡುಕಿ ದುಬಾರಿ ಬಾಡಿಗೆ ಕೊಟ್ಟು ವಾಸ ಮಾಡಬೇಕು ಎಲ್ಲರೂ ಮನೆ ಹುಡುಕುವವರಾದರೆ ಮನೆಯ ಕ್ರಯವೂ ಬಾಡಿಗೆಯೂ ಹೆಚ್ಚುವದೇನು ಆಶ್ಚರ್ಯವಲ್ಲ ಒಂದುವೇಳೆ ಸಾಲಗಾರರಿಲ್ಲದ ಮನೆಯ ಹಣವಲ್ಲಾ ಅಂದರೆ ಕೆಲವು ನೂರಾರು ರೂಪಾಯಿಗಳು ಬಂತೆಂದು ಹೇಳೋಣ ಈ ಹಣದಲ್ಲಿ ಮನೆ ಕಳಕೊಂಡವರು ಹೊಸ ಮನೆ ಕಟ್ಟುವುದು ಬಹಳ ಕಷ್ಟ ಯಾಕೆಂದರೆ ಊರೊಳಗಿರುವ ನಿವೇಶನವನ್ನು ಕೇಳಿದರೆ ಅದಕ್ಕೆ ಟ್ರಸ್ಟ್ ಬೋರ್ಡಿಗೆ ಹೆಚ್ಚು ಕ್ರಯ ಕೊಡಬೇಕು ಊರ ಹೊರಗೆ ಸುಲಭ ಕ್ರಯದ ನಿವೇಶನವನ್ನು ಕೊಂಡು ಮನೆಕಟ್ಟಿಕೊಂಡರೆ ಅವನು ದಿನವಹಿ ಎರಡುಹೊತ್ತೂ ಕೆಲವು ಸಮಯದಲ್ಲಿ ಅವೇಳೆ ಹೊತ್ತಿನಲ್ಲಿ ತನ್ನ ಜೀವನ ನಡೆಯುವ ಕೆಲಸಕ್ಕಾಗಿ ಊರೊಳಗೆ ಬಂದು ಹೋಗುವುದು ಮಹಾ ಪ್ರಯಾಸ ಆದ್ದರಿಂದ ಇವನು ಮನೆ ಕಟ್ಟದೆ ಊರೊಳಗೇ ದುಬಾರಿ ಬಾಡಿಗೆಯನ್ನಾದರೂ ಕೊಟ್ಟು ಮನೆ ಹುಡುಕಿಕೊಳ್ಳುವನು ಹ್ಯಾಗೂ ಇದುವರೆಗೆ ಕೋಟೆಯೊಳಗೆ ಮನೆ ಕಳೆದುಕೊಂಡವರು ಅಂದರೆ ೧೫೦ ಸಂಸಾರದವರು ೧೦೦ ಆಗಲಿ, ೫೦ ಆಗಲಿ, ೧೫ ಆಗಲಿ ಹೊಸ ಮನೆಗಳನ್ನು ಕಟ್ಟಿಲ್ಲ ಪಟ್ಟಣವು ಅಭಿವೃದ್ಧಿಯಾಯಿತೇ? ಅಭಿವೃದ್ಧಿ ಮಾಡುವದಕ್ಕಾಗಿಯೇ ಏರ್ಪಟ್ಟ ಟ್ರಸ್ಟ್ ಬೋರ್ಡಿನವರು ಪ್ರಜೆಗಳಿಗೆ ಯಾವ ತರಹ ಪ್ರೋತ್ಸಾಹವನ್ನು ಕೊಡುತ್ತಿದಾರೆ ಮನೆಗಳನ್ನು ಒಡೆದು ಹಾಕುವುದೇ ಅಭಿವೃದ್ಧಿ ಎನ್ನುವ ಪಕ್ಷಕ್ಕೆ ಈ ಕೆಲಸವೇನೋ ಆತುರದಿಂದಲೂ ಮುತುವರ್ಜಿಯಾಗಿಯೂ ನಡೆಯುತ್ತಿದೆ

ಜಾತಿಕೋಮುವಾರಾಗಿ ವಿಂಗಡಿಸಿದ ನಿವೇಶನಗಳಿಲ್ಲ ಪಟ್ಟಣದೊಳಗೆ ಕೆಲಸವನ್ನಿಟ್ಟುಕೊಂಡಿರುವವರಿಗೆ ೨—೩ ಮೈಲಿ ಆಚೆ ನಿವೇಶನವನ್ನು ತೋರಿಸಿದರೆ ಅವರು ಅಲ್ಲಿ ಎಂದಿಗೂ ಮನೆ ಕಟ್ಟಿಕೊಂಡು ವಾಸಮಾಡಲು ಒಪ್ಪುವುದಿಲ್ಲ ತಿಂಗಳುಗಟ್ಲೆ ಹೆಚ್ಚಾದ ವರಮಾನವಿರತಕ್ಕವರೂ ರಾಜ ಮನೆತನದವರೂ ಅರಸುಗಳೂ ಸಾಹುಕಾರರೂ ಹಲವು ಹೊಸ ಮನೆಗಳನ್ನು ಕಟ್ಟುತ್ತಿರುವ ಕಾರಣ ಕೂಲಿಯ ದರವೂ ಸಾಮಾನುಗಳ ಕ್ರಯವೂ ಈಗ ದುಬಾರಿಯಾಗಿರುತ್ತವೆ ಸಾಮಾನ್ಯವಾಗಿ ಬಡಬಗ್ಗರಿಗೂ ವಿಶೇಷವಾಗಿ ಮಧ್ಯಸ್ಥಿತಿಯ ಪ್ರಜೆಗಳಿಗೂ ಹೊಸ ಮನೆ ಕಟ್ಟುವುದು ಸಾಧ್ಯವಿಲ್ಲದಂತೆ ಪರಿಣಮಿಸಿದೆ ಅಂತು ಈಗ ಇಂಥಾ ಪ್ರಜೆಗಳಿಗೆ ರಾಜಧಾನಿಯಲ್ಲಿ ವಾಸಕ್ಕೆ ಮನೆಗಳಿಲ್ಲದೆ ಬಹಳವಾಗಿ ಪರದಾಡುತ್ತಿದಾರೆ ಟ್ರಸ್ಟ್ ಬೋರ್ಡಿನವರು ಮನೆಗಳನ್ನು ಒಡದು ಹಾಕುವುದರಲ್ಲಿ ಹ್ಯಾಗೆ ಮುತುವರ್ಜಿಯನ್ನೂ ಆತುರವನ್ನೂ ತೋರಿಸುತ್ತಿದಾರೆಯೋ ಹಾಗೆಯೇ ಮನೆ ಕಳೆದುಕೊಂಡವರು ಹೊಸ ಮನೆ ಕಟ್ಟಿಕೊಳ್ಳುವಂತೆ ಮಾಡುವುದರಲ್ಲೂ ಹೆಚ್ಚಾದ ಮುತುವರ್ಜಿಯನ್ನೂ ಆತುರವನ್ನೂ ವಹಿಸದೆ ಇರುವದು ವಿಷಾದಕರವಾಗಿದೆ ಒಡಯಲ್ಪಟ್ಟ ಮನೆಯ ಸಾಮಾನುಗಳನ್ನೇ ಉಪಯೋಗಿಸಿಯೋ, ಇತರ ವಿಧವಾಗಿಯೋ ಟ್ರಸ್ಟ್ ಬೋರ್ಡಿನವರೇ ಕೆಲವು ಮನೆಗಳನ್ನು ಕಟ್ಟಿಸಿ ಬಡಬಗ್ಗರಿಗೂ ಸಾಮಾನ್ಯ ಪ್ರಜೆಗಳಿಗೂ ಬಾಡಿಗೆಗೂ, ಕ್ರಯಕ್ಕೂ ಕೊಡುವಂತೆ ಏರ್ಪಾಡುಮಾಡಬೇಕೆಂದು ಕೆಲವು ದಿನಗಳ ಹಿಂದೆ ಚರ್ಚೆ ನಡೆದು, ಈ ವಿಷಯದಲ್ಲಿ ಟ್ರಸ್ಟ್ ಬೋರ್ಡಿಗೂ ಗವರ್ನಮೆಂಟಿಗೂ ಕಾಗದ ಪತ್ರಗಳು ಓಡಾಡುತ್ತಿರುವವು ಈ ಕಾರ್ಯವು ಯಾವಾಗ ಕೊನೆಮುಟ್ಟಿ ಮನೆಗಳು ಸಿದ್ಧವಾಗುವವೋ ಹೇಳಲಾಗದು ಸರ್ಕಾರದವರ ಮುಖ್ಯಾಧಿಕಾರಿಗಳು ಪ್ರಜೆಗಳ ಮುಖಂಡರನ್ನು ಪ್ರೋತ್ಸಾಹಪಡಿಸಿ ಅವರಿಗೆ ತಕ್ಕ ಸೌಕರ್ಯಗಳನ್ನು ಒದಗಿಸಿ ಕೊಡುವುದಾದರೆ ಆ ಪೈಕಿ ಕೆಲವರಾದರೂ ಹಣ ಹಾಕಿ ಬಡಬಗ್ಗರಿಗೂ ಇತರರಿಗೂ ಹೊಸ ಮನೆಗಳನ್ನು ಕಟ್ಟಿಸಿ ಕೊಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ ಈ ಅರ್ಥಕ್ಕೆ ಕೆಲವು ದಿನಗಳ ಹಿಂದೆ ಒಂದು ಸಭೆ ನಡದು ಕೆಲವು ಪುಣ್ಯವಂತರು ಕಟ್ಟಿಸಿ ಕೊಡುತ್ತೇವೆಂದು ಒಪ್ಪಿಕೊಂಡೂ ಇರುತ್ತಾರೆ ಸರ್ಕಾರದವರು ಇಂಥಾ ಕಾರ್ಯಗಳನ್ನು ಮೊದಲು ಪ್ರಾರಂಭಿಸಿ ನೆರವೇರಿಸದೆ, ಇರುವ ಮನೆಗಳನ್ನೂ ಒಡೆದು ಹಾಕುವುದರಲ್ಲೇ ಉದ್ಯುಕ್ತರಾಗಿರೋಣದರಿಂದ ಅವರಿಗೆ ಪ್ರಜಾ ಹಿತಚಿಂತನೆಯಲ್ಲಿ ಅಷ್ಟೇನೂ ವಿಶೇಷವಾದ ಆಸಕ್ತಿಯಿಲ್ಲವೆಂಬುದು ಪ್ರಕಾಶವಾಗುತ್ತಿದೆ

ಪ್ರಜೆಗಳಲ್ಲಿ ಪುಣ್ಯವಂತರಾದಂಥಾ ಮೆ॥ ಗಳಾದ ಒಡ್ಡಣ್ಣನವರು, ಬಸಮ್ಮೈಯ್ಯನವರು, ವರ್ಧಮಾನೈಯ್ಯನವರು, ಪುರುಷೋತ್ತಮದಾಸಂಡಗಿರಿ ಗೋಸಾಯಿಯವರು, ನರಸಿಂಹಸ್ವಾಮಿಯವರು, ಗುಂಜಾನರಸಿಂಹಯ್ಯನವರು, ಮೊಹಿದೀನ್ ಸಾಹೇಬರು ಮದ್ದಣ್ಣನವರು, ಈ ಮೊದಲಾದವರೆಲ್ಲ ಏಕೀಭವಿಸಿಯೋ, ಪ್ರತ್ಯೇಕವಾಗಿಯೋ ಪ್ರಜೆಗಳ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ನೂರಾರು ಮನೆಗಳು ಬೇಗನೆ ಸಿದ್ಧವಾಗುವವೆಂದು ಹೇಳಬಹುದಾಗಿದೆ ಮನೆಗಳಿಲ್ಲದೆ ಪರದಾಡುತ್ತಿರುವ ನೂರಾರು ಸಂಸಾರಗಳ ಕಷ್ಟವು ನಿವಾರಣೆಯಾಗಿ, ಈ ದೊಡ್ಡಮನುಷ್ಯರ ಹೆಸರು ಶಾಶ್ವತವಾಗಿ ನಿಲ್ಲುತ್ತದೆ ಅವರು ಕಟ್ಟುವ ಮನೆಗಳು ಅವರಿಗೆ ಉತ್ಪತ್ತಿಯನ್ನು ತರುವವು ಕಲ್ಕತ್ತಾ ಬೊಂಬಾಯಿ ಮೊದಲಾದ ಪಟ್ಟಣಗಳಲ್ಲಿ ಸಾಹುಕಾರರು ಬಡಬಗ್ಗರಿಗೂ ಮಧ್ಯಸ್ಥ ಪ್ರಜೆಗಳಿಗೂ ವಾಸಕ್ಕೆ ಅನುಕೂಲವಾದ ಸಾಲು ಮನೆಗಳನ್ನು ಆರೋಗ್ಯಸೂತ್ರಗಳಿಗನುಸಾರವಾಗಿ ಕಟ್ಟಿಸಿ ಸುಲಭವಾದ ಬಾಡಿಗೆಗಳಿಗೆ ಕೊಟ್ಟಿರುತ್ತಾರೆ ಇಂಥಾ ಕೆಲಸವನ್ನು ನಮ್ಮ ಮೈಸೂರು ಪಟ್ಟಣದ ಶ್ರೀಮಂತರೂ ಮಾಡಿಕೊಟ್ಟು, ಅನೇಕ ಸಂಸಾರಗಳ ಕೃತಜ್ಞತೆಗೆ ಪಾತ್ರರಾದಾರೆಂದು ಕೋರುತ್ತೇವೆ ಹಿಂದೆಸ್ಯೇಗು ಪ್ಲೇಗು ಉಪದ್ರ, ಕ್ಷಾಮ, ಮೊದಲಾದ ಕಷ್ಟಗಳು ಸಂಭವಿಸಿ ಪ್ರಜೆಗಳು ಕಷ್ಟಕ್ಕೆ ಗುರಿಯಾಗಿದ್ದ ಸಂದರ್ಭಗಳಲ್ಲಿ ಮೇಲ್ಕಂಡ ಪುಣ್ಯವಂತರೂ ಇತರರೂ ದ್ರವ್ಯವನ್ನೂ ದವಸಧಾನ್ಯಗಳನ್ನೂ ದಾರಾಳವಾಗಿ ಒದಗಿಸಿ ಪ್ರಜೆಗಳ ಮೇಲೆ ತಮಗಿರುವ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿರುತ್ತಾರೆ ಈಗಲೂ ಸಹ ಅವರು ಉದ್ಯುಕ್ತರಾಗಿ ಪಟ್ಟಣದ ಒಳಪಾರ್ಶ್ವಗಳಲ್ಲೂ ಸಮೀಪವಾದ ಹೊರಪ್ರಾಂತ್ಯದಲ್ಲೂ ನೂರಾರು ಹೊಸ ಮನೆಗಳನ್ನು ಕಟ್ಟಿಸಿಕೊಟ್ಟು ತಮ್ಮಲ್ಲಿರುವ ಭೂತದಯಾಪಶ್ಚಾತ್ತಾಪ ಪರೋಪಕಾರಗುಣಗಳನ್ನು ಮತ್ತೆ ಪ್ರಕಾಶಕ್ಕೆ ತಂದಾರೆಂದು ನಂಬಿ ನಿರೀಕ್ಷಿಸುವವು

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖಾ

ತಾ. ೨೨ 1 1910 — ಈ ದಿನ ಮಹಿಳಾ ಸಮಾಜದ ಮೆಂಬರುಗಳು ಮತ್ತು ಅವರ ಹಿತೈಷಿಗಳ ಕೂಟವು ಅತಿ ವಿಜೃಂಭಣೆಯಿಂದ ನಡೆಯಿತು ಒಬ್ಬ ಮಂದಿ ದೊಡ್ಡವರು ಮಂದಿರದ ಸೌಧವನ್ನು ಅಲಂಕರಿಸಿದ್ದರು ಆರಂಭದಲ್ಲಿ ಸ್ವಸ್ತಿಸೂಚಕವಾದ ವಾದ್ಯಘೋಷಾನಂತರ ಕವಿಗಳು ಭಾಷೆಯಲ್ಲಿ ಪ್ರಸಿದ್ಧರಾದ ದೇವಿಕ ಸಾ॥ ಅಂಡಾಳಮ್ಮನವರು ಪ್ರವಚನೋಪದೇಶ ವಿಷಯವನ್ನು ಕುರಿತು ಎರಡು ಘಂಟೆಯ ಕಾಲ ಅತಿಶ್ರಾವ್ಯವಾಗಿ ಪ್ರವಾಹರೂಪೇಣ ಎಲ್ಲರ ಮನಸ್ಸಿನಂದದಾಗಿ ಉಪನ್ಯಾಸವಂ ಗೈದರು ಕ್ರೈಸ್ತ ಸಾರ್ವತ್ರಿಕ ಮತವಾಗಿ ಸ್ತ್ರೀ ಅದರಲ್ಲಿ ಉದಾಹರಿಸಲ್ಪಟ್ಟಿರತಕ್ಕ ಸತ್ಯಗಳು ಸಾರ್ವತ್ರಿಕ ಅವಶ್ಯಕ ಆ ಸಿದ್ಧಾಂತವು ಪುರುಷಾರ್ಥಕ್ಕೆ ಸಾಧಕವಾದದ್ದು ಎಂದು ಹೇಳಿದರು

ಈ ಶ್ಲಾಘ್ಯವಾದ ಉಪನ್ಯಾಸಾನಂತರ ಆ ಅಧ್ಯಕ್ಷೆಯಾದಾಕೆಯು ಸಮಾಜದ ವಂದನೆಗಳನ್ನು ಉಪನ್ಯಾಸಕರಿಗೆ ತಿಳಿಸುವಲ್ಲಿ—ಲೋಕದಲ್ಲಿ ಇರುವ ಸಮಸ್ತ ಮತಗಳಿಗೂ ಸತ್ಯವೆಂಬುದು ಸಾಮಾನ್ಯವಾಗಿ ಸತ್ಯವಿಲ್ಲದ ಮತವೇ ಇಲ್ಲ ಅನ್ಯಮತಗಳಾಗಿದ್ದ ಪಕ್ಷದಲ್ಲಿ ಜಗತ್ಕಾರಣಕರ್ತನೆಂದ ಒಬ್ಬ ಈಶ್ವರನಿರುತ್ತಾನೆಂದು ಎಲ್ಲರೂ ಒಪ್ಪುವರು ಆತನನ್ನು ತಿಳಿದು ಆತನ ಪಾದಾರವಿಂದಗಳನ್ನು ಸೇರಲು ಈ ಮಾರ್ಗಗಳೆಲ್ಲವೂ ಅಷ್ಟು ದಾರಿಗಳಾಗಿರುವವು ಪ್ರತಿ ಮತದ ಶ್ರೇಷ್ಠತ್ವವೂ ಒಪ್ಪಬೇಕಾದದ್ದು ಹಾಗೆ ಒಪ್ಪುವದರಲ್ಲಿ ಸ್ವಮತ ತ್ಯಾಜವೆಂಬದು ಅನಾವಶ್ಯಕ ಅಲ್ಪಭೇದಗಳಿಂದ ಪ್ರಯೋಜನವಿಲ್ಲ ಮತಗಳ ದುರಭಿಮಾನಗಳಿಂದ ಈ ವರೆಗೆ ಉಂಟಾಗಿರತಕ್ಕ ಕೇಡು ಸಾಕಾಗಿರುತ್ತೆ ಮತದಲ್ಲಿ ಸತ್ಯವೇ ಮುಖ್ಯ ವಿಷಯವಾಗಿರುವದರಿಂದ ನಮ್ಮಲ್ಲಿ ಸೋದರ ಸೋದರಿಭಾವ, ಐಕಮತ್ಯ, ಪರಸ್ಪರ ವಿಶ್ವಾಸ, ಪರಸ್ಪರ ಸಹಾಯ, ಪರಸ್ಪರ ಕ್ಷಮೆ ಆಸ್ತಿಕತಾಬುದ್ಧಿ, ಭೂತದಯೆ, ದೀನರಪೋಷಣೆ, ನಮ್ಮ ದೇಶೋನ್ನತಿ ಇವೇ ನಮಗೆ ಮುಖ್ಯೋದ್ದೇಶಗಳಾಗಿರಬೇಕು ಎಂದು ಹೇಳಿ ಪ್ರಸಂಗವನ್ನು ಪೂರೈಸಿದರು

ಅನಂತರ ಚಿ॥ ಪೊನ್ನಮ್ಮ ಎಂಬ ಸಣ್ಣ ಹುಡುಗಿಯು ಅತಿ ಮನೋಹರವಾಗಿ ಸೀತಾಕಲ್ಯಾಣದ ವೈಭವವನ್ನು ಕುರಿತು ಸುಸ್ವರದಿಂದ ಕೆಲ ಹಾಡುಗಳನ್ನು ಹಾಡಿದಳು ತರುವಾಯ ಚಿ॥ ರಾಜಮ್ಮನೆಂಬ ಹುಡುಗಿ ... ಶ್ರೇಯೋಭಿವೃದ್ಧಿಗಾಗಿ ಕೆಲ ಹಾಡುಗಳನ್ನು ಸವಿಯಾಗಿ ಹೇಳಿದಳು ಪ್ರಕೃತ ಕಾಲ ಸಂಕ್ರಾಂತಿ ಹಬ್ಬವಾದ್ದರಿಂದ ಹಿಂದುಗಳಲ್ಲಿ ಸ್ನೇಹವರ್ಧಕ ಸೂಚಕಗಳಿಂದ ನಾನಾ ವಿಧ ಸಕ್ಕರೆಯ ಪದಾರ್ಥಗಳನ್ನು ಸೌಧದಲ್ಲಿ ನೆರೆದ್ದ ನಾರೀಮಣಿಗಳಿಗೆ ದಿವಾನ್ ರವರ ಧರ್ಮಪತ್ನಿಗಳಾದ ಸಾ॥ ಸುಂದರಾಬಾಯಿಯವರು ಹಂಚಲ್ಪಟ್ಟಿತು ಮಂಗಳವನ್ನು ಹಾಡುವದರಿಂದಲೂ, ಕರ್ಪೂರದ ನೈವೇದ್ಯದಿಂದಲೂ, ದೀಪಗಳು ಹಚ್ಚಿದನಂತರ ಸಭಾ ಕಾರ್ಯಗಳು ಪೂರೈಸಿ ನಡವು ಈ ವರ್ಷದಲ್ಲಿ ಈ ದಿವಸದ ಮೀಟಿಂಗು ಬಹಳ ಪ್ರಬಲವಾದದ್ದಾಗಿ ಭಾವಿಸಬಹುದಾಗಿದೆ

ಬರುವ ಮೀಟಿಂಗು ಇದೇ ತಿಂಗಳು ೨೯ನೇ ತಾ ಕ್ರಮವನ್ನನುಸರಿಸಿ ನಡೆಯುತ್ತಾದದ್ದರಿಂದ ಎಲ್ಲರೂ ದಯವಿಟ್ಟು ಬರಬೇಕಾಗಿ ಸೂಚಿಸಲ್ಪಟ್ಟಿರುತ್ತದೆ ಮತ್ತು ಭಾರತ ಸ್ತ್ರೀಗಳ ವಿಷಯವಾಗಿ ಎಲ್ಲರೂ ಯೋಚಿಸಿ ಆ ಸಮಾಜದ ಮೆಂಬರುಗಳಾಗಲು ಸಂಕಲ್ಪ ಮಾಡಿದವರಾದರೆ ಬಹಳ ಶ್ಲಾಘ್ಯವಾಗಿರುವದೆಂದು ಅನೇಕ ದೊಡ್ಡವರ ಅಭಿಪ್ರಾಯ ಇದಕ್ಕೆ ಹಣಕಾಸು ಅವಶ್ಯಕವಿಲ್ಲ, ನಮ್ಮ ಸಂಕಲ್ಪವೂ ಮತ್ತು ದೇಶಸೇವೆಯೇ ಮುಖ್ಯೋದ್ದೇಶಗಳಾಗಿರ ವಹ.

ಒಬ್ಬ ಬಾತ್ಮೀದಾರರಿಂದ

ನೀರಾವರಿ ಸೌಕರ್ಯದಿಂದಾಗುವ ನಾನಾ ಪ್ರಯೋಜನಗಳು

I—

ಸಾಮಾನ್ಯವಾಗಿ ಜನಗಳು ಕೆರೆಕಟ್ಟೆಗಳನ್ನು ಕಟ್ಟುವದರಿಂದಲೂ ಮತ್ತು ನದಿಗಳಿಂದ ನಾಲಾ ಮತ್ತು ಕಾಲುವೆಗಳನ್ನು ತೋಡುವದರಿಂದಲೂ ಮಳೆ ಹೆಚ್ಚಾಗಿ ಬೀಳದ ಪ್ರದೇಶಗಳಲ್ಲಿ ಭೂವ್ಯವಸಾಯಕ್ಕೆ ಅನುಕೂಲವೆಂಬ ಒಂದು ಅಂಶವನ್ನು ಮಾತ್ರ ತಿಳಿದುಕೊಂಡಿರುತ್ತಾರೆಯೇ ಹೊರತು, ಇದರಿಂದ ಸಮೃದ್ಧಿಯಾಗಿ ಮಳೆ ಬೀಳುವ ಪ್ರದೇಶಗಳಲ್ಲಿಯೂ ಕೂಡ ಇತರ ವಿಧವಾದ ಅನೇಕ ಪ್ರಯೋಜನಗಳುಂಟೆಂಬುವದು ಅವರಿಗೆ ಅಷ್ಟು ಪ್ರತ್ಯಕ್ಷವಾಗಿಲ್ಲ

ಮಳೆ ಸರಿಯಾಗಿ ಸುರಿದು ಮೊದಲ ಮೊದಲು ಪೈರುಗಳು ಚೆನ್ನಾಗಿ ಬೆಳೆದಿದ್ದರೂ ಕೂಡ ಮಧ್ಯ ಕಾಲದಲ್ಲಿ ಇಬ್ಬನಿ ಬೀಳುವದರಿಂದಲೋ ಅಥವಾ ಮಿಡತೆ ಹುಳು ಮತ್ತು ಮೃಗಾದಿಗಳ ಕಾಟದಿಂದಲೋ ಬೆಳೆ ಕೆಟ್ಟು ಹೋಗುವದುಂಟು ಇಂಥಾ ಸಂದರ್ಭಗಳಲ್ಲಿ ನೀರಾವರಿ ಚೆನ್ನಾಗಿದ್ದರೆ ಮುಂದಿನ ಮಳೆಗಾಲದ ವರೆಗೂ ಕಾದಿರದೆ ಪೈರು ಕೆಟ್ಟುಹೋದ ಕಡೆಗಳಲ್ಲಿ ಕೂಡಲೇ ಹೊಸದಾಗಿ ಬಿತ್ತಿ ತಿರಿಗಿ ವ್ಯವಸಾಯ ಆರಂಭಿಸಬಹುದು ಮತ್ತು ಜಾಗ್ರತೆಯಾಗಿ ಕಟಾವಿಗೆ ಬರುವ ಬೇರೆ ತರದ ಫಸಲು ಇಡುವದಕ್ಕೂ ಅನುಕೂಲವಾಗುತ್ತದೆ

ನೀರಿನ ಅನುಕೂಲತೆಗಳನ್ನು ಮಾಡಿಕೊಳ್ಳದೆ ಬರೀ ಮಳೆಯ ನೀರನ್ನೇ ನಂಬಿ ವ್ಯವಸಾಯ ಮಾಡುವ ಕಡೆಗಳಲ್ಲಿ ಒಂದೇ ಹೊಲದಲ್ಲಿ ಒಂದು ಸಾಲಿಗೆ ರಾಗಿ ಇನ್ನೊಂದಕ್ಕೆ ಅವರೆ, ಮತ್ತೊಂದಕ್ಕೆ ಗೋಧಿ, ಈ ರೀತಿ ಎರಡು ಮೂರು ತರಹ ಧಾನ್ಯಗಳನ್ನು ಚೆಲ್ಲಿ, ಈ ಪೈಕಿ ಯಾವದರಿಂದಲಾದರೂ ಅನುಕೂಲವಾದ ಫಸಲು ಬಂದೀತೆಂದು ನಿರೀಕ್ಷಿಸುವದುಂಟು ಆದರೆ ಈ ಪ್ರಕಾರವಾಗಿ ಬೇರೆಬೇರೆ ಜಾತಿಯ ಧಾನ್ಯಗಳನ್ನು ಬಿತ್ತುವದರಿಂದ ಕೆಲವಕ್ಕೆ ವಿಶೇಷ ನೀರು ಬೇಕು ಕೆಲವಕ್ಕೆ ಅಷ್ಟು ಬೇಕಿಲ್ಲ ಮತ್ತೆ ಕೆಲವು ಬೇಸಿಗೆ ಪೈರುಗಳು, ಹೀಗೆಲ್ಲಾ ವ್ಯತ್ಯಾಸಗಳುಂಟಾಗಿ ಕಡೆಗೆ ಎಲ್ಲವೂ ಒಂದೇ ವಿಧವಾಗಿ ಸರಿಯಾದ ಫಸಲನ್ನು ಕೊಡುವದಿಲ್ಲ ನೀರಾವರಿ ಸರಿಯಾಗಿದ್ದ ಪಕ್ಷದಲ್ಲಿ ಮಳೆಯನ್ನೇ ಅಷ್ಟು ನಚ್ಚಿರಬೇಕಾದದ್ದಿಲ್ಲ ಕೆರೆ ಕಟ್ಟೆಗಳು ಮತ್ತು ನಾಲೆಗಳ ಮೂಲಕ ಬೇಕಾದಾಗಲೆಲ್ಲಾ ನೀರು ಹಾಯಿಸಿಕೊಂಡು ಹೆಚ್ಚು ಆದಾಯಕರವಾದ ಪೈರುಗಳನ್ನೇ ಚುನಾಯಿಸಿ ಬೆಳೆದು ಏಕಪ್ರಕಾರವಾಗಿ ಒಳ್ಳೇ ಫಸಲನ್ನು ತಪ್ಪದೆ ತೆಗೆಯುತ್ತಿರಬಹುದು ನೀರಿಲ್ಲದೆ ಫಸಲು ಎಲ್ಲಿ ಕೆಟ್ಟೀತೋ ಎಂದು ಅನುಮಾನಪಡಬೇಕಾದದ್ದಿಲ್ಲ

ನೀರಿನ ಸರಬರಾಯಿ ಚೆನ್ನಾಗಿರುವ ಕಡೆಗಳಲ್ಲಿ ಒಂದು ಬೆಳೆ ಕೈಗೆ ಬಂದ ಕೂಡಲೆ ಮತ್ತೊಂದನ್ನು ಆರಂಭಿಸಬಹುದಾದ್ದರಿಂದ ರೈತರಿಗೂ ಮತ್ತು ಕೂಲಿಯಿಂದ ಜೀವನಮಾಡುವವರಿಗೂ ವರುಷದಲ್ಲಿ ಯಾವಾಗಲೂ ಬೇಸಾಯದ ಕೆಲಸವಿದ್ದೇ ಇರುತ್ತದೆ ಹೀಗೆ ಬಡಬಗ್ಗರು ಜೀವನ ಎಕ್ಕೆ ಅನ್ನಕ್ಕೆ ಅಷ್ಟು ತಾಪತ್ರಯಪಡಬೇಕಾಗಿರುವದಿಲ್ಲವಾದಕಾರಣ ಅವರು ದುರ್ವ್ಯಸನಗಳಲ್ಲಿ ಪ್ರವರ್ತಿಸುವದು ಕಡಮೆಯಾಗಿ ಪ್ರಜೆಗಳಲ್ಲಿ ನೆಮ್ಮದಿಯೂ ಸಹಜವಾಗಿ ಉಂಟಾಗುವದು

ನೀರು ಸಮೃದ್ಧಿಯಾಗಿ ಒದಗುವ ಪ್ರಾಂತ್ಯಗಳಲ್ಲಿ ದನಕರಗಳಿಗೆ ಬೇಕಾದಷ್ಟು ತಿನ್ನುವದಕ್ಕೆ ಹುಲ್ಲೂ ಮತ್ತು ಕುಡಿಯುವದಕ್ಕೆ ನೀರೂ ದೊರೆತು, ಸೌಖ್ಯವುಂಟಾಗುತ್ತದೆಂದು ಹೇಳಬೇಕಾದ್ದೇ ಇಲ್ಲ

ಹೀಗೆ ನಾಲೆಗಳ ಆಸರೆಯಿಂದ ಭೂವ್ಯವಸಾಯ ಮಾಡುವದಾದರೆ ಉಷ್ಣ ಹವಾ ಪ್ರದೇಶಗಳಲ್ಲಿ ಜನರ ಆರೋಗ್ಯವು ಕೆಡುತ್ತದೆಂದು ಹೇಳುತ್ತಾರೆ ಇದರಿಂದ ಸ್ವಲ್ಪ ಜ್ವರೋತ್ಪತ್ತಿಯಾಗುವದೇನೋ ನಿಜ ಆದರೆ ಇತರ ಮಹತ್ತರವಾದ ಆರೋಗ್ಯಾನುಕೂಲತೆಗಳು ಲಭಿಸುವದರಿಂದ ಈ ಒಂದು ಪ್ರತಿಕೂಲವು ಅಷ್ಟು ಗಣನಾಸ್ಪದವಾದದ್ದಲ್ಲ ಹೇಗೆಂದರೆ ನಮ್ಮ ದೇಶೀಯರು ಹಾಲುಮೊಸರನ್ನು ವಿಶೇಷವಾಗಿ ಉಪಯೋಗಿಸುತ್ತಾರೆ ಆದಕಾರಣ ಕರಾವು ಆಕಳುಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವದು ಅತ್ಯವಶ್ಯಕವಾಗಿರುತ್ತದೆ ಅನೇಕ ವೇಳೆ ದನಕರುಗಳು ಸಣ್ಣಸಣ್ಣ ಹಳ್ಳಗಳಲ್ಲಿನ ಹೊಲಸು ನೀರನ್ನು ಕುಡಿದು ರೋಗವನ್ನು ಆಗಿಸಿಕೊಳ್ಳುತ್ತವೆ ಇದರಿಂದ ಜನರಿಗೆ ಬಹಳ ಅಪಾಯವುಂಟು ಯಾಕೆಂದರೆ ಆಕಳುಗಳಲ್ಲಿ ಅವು ಆಹಾರ ನೀರುಗಳ ಮೂಲಕ ತೆಗೆದುಕೊಳ್ಳಬಹುದಾದ ವಿಷಕರವಾದ ಪದಾರ್ಥಗಳನ್ನು ಹಾಲಿನಲ್ಲಿ ಬಿಟ್ಟುಬಿಡುವ ಸ್ವಭಾವವುಂಟು ಇದರಿಂದ ನೀರಿನ ಕ್ಷಾಮವಿರುವ ಕಡೆಗಳಲ್ಲೆಲ್ಲಾ ಜಾಡ್ಯಗಳ ಉತ್ಪತ್ತಿಗೆ ಕಾರಣವನ್ನು ಸುಲಭವಾಗಿ ಊಹಿಸಬಹುದು ಇಂಡಿಯಾದಲ್ಲಿ ಜನಗಳು ಹೊಟ್ಟೆಗಿಲ್ಲದೆ ಸಾಯುವದು ಕಡಮೆ, ಕುಡಿಯುವದಕ್ಕೆ ನೀರಿಲ್ಲದೆ ವಿಶೇಷ ಸಾಯುತ್ತಾರೆಂದು ಹೇಳುವದು ಸತ್ಯವಾದದ್ದು ಭಾರೀ ನದಿಗಳಿಂದ ಕಾಲುವೆಗಳನ್ನು ತರುವದರಲ್ಲಿ ಮತ್ತೊಂದು ಅನುಕೂಲವೇನಂದರೆ ನೆರೆಹೊರೆಯಲ್ಲಿನ ಉಪ್ಪುನೀರು ಭಾವಿಗಳೆಲ್ಲ ಸಿಹಿನೀರು ಭಾವಿಗಳಾಗುತ್ತವೆ ಇದರಿಂದ ಜನಗಳು ಕುಡಿಯುವ ನೀರಿಗಾಗಿ ಪಡುವ ತಾಪತ್ರಯವು ತಪ್ಪುವದು ಇದಕ್ಕೆ ಉತ್ತರ ಹಿಂದೂಸ್ಥಾನದಲ್ಲಿನ ಮಧುರೆ ಮತ್ತು ಆಗ್ರಾ ಡಿಸ್ಟ್ರಿಕ್ಟುಗಳೇ ದೃಷ್ಟಾಂತವಾಗಿರುತ್ತವೆ ಅಲ್ಲಿ ಮೊದಲು ಭಾವಿಗಳಲ್ಲೆಲ್ಲಾ ನೀರು ಉಪ್ಪಾಗಿದ್ದು, ಜನರು ಬಂದು ಬಿಂದಿಗೆ ಸಿಹಿನೀರಿಗೆ ಬಹಳ ತೊಂದರೆಪಡುತ್ತಿದ್ದರಂತೆ ನದೀ ಕಾಲುವೆಗಳು ಬಂದ ಮೇಲೆ ಈ ಭಾವಿಗಳ ನೀರು ಸಿಹಿಯಾಗಿ ಜನಗಳ ಕಷ್ಟವು ನಿವಾರಣೆಯಾಗಿರುತ್ತದೆ

ಮುಖ್ಯವಾಗಿ ಈ ದೇಶವು ಭೂವ್ಯವಸಾಯಕ್ಕೆ ಅಗ್ರಸ್ಥಳವಾಗಿರುತ್ತದೆಯಾಗಿ, ನದಿಗಳ ನೀರು ಸಮುದ್ರವನ್ನು ಸೇರಿ ವ್ಯರ್ಥವಾಗುವದನ್ನು ತಪ್ಪಿಸಿ, ದೇಶದ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸಬೇಕಾದದ್ದು ಬಹಳ ಅವಶ್ಯಕವಾಗಿರುತ್ತದೆ. ಇದರಿಂದ ಲಕ್ಷೋಪಲಕ್ಷ ಜನಗಳಿಗೆ ಆಹಾರ ಉದ್ಯೋಗಗಳು ಒದಗುವದಲ್ಲದೆ ದೇಶದ ಸಂಪತ್ತಿಯೂ ಉತ್ತಮವಾಗುವದು.

ಬಾತ್ಮಿದಾರರಿಗೆ ನೋಟೀಸ್

ಹೆಸರು ಇಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾಕೊಡಲಾರೆವು. ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸಬೇಕಾದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಬರೆಯುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಶ್ರೀನಿವಾಸಪುರದ ಪೋಲೀಸ್ ಪಟೇಲ್ ಸುಬ್ಬರಾಯಪ್ಪನವರು —ನೀವು ತಿಳಿಸುವ ವಿಷಯದಲ್ಲಿ ದಿವಾನ್ ಸಾಹೇಬರವರು ಹ್ಯಾಗೆ ತೀರ್ಮಾನ ಮಾಡುತ್ತಾರೋ ಅದನ್ನು ನಿರೀಕ್ಷಿಸಿ

ಆರ್ ಪಿ ರಾಜು ಬೆಂಗಳೂರು —ನಿಮ್ಮ ಬಾತ್ಮಿಯನ್ನು ಪ್ರಕಟಿಸಲು ತಕ್ಕದ್ದು ವಿಚಾರಿಸುತ್ತೇವೆ

ಸುಬ್ಬಾಜಿರಾವ್ ಪದ್ಮನಾಭರ್ ಕಾಯೂರ್, ಮೈಸೂರು —ನಿಮ್ಮ ಬಾತ್ಮಿಯ ವಿಷಯದಲ್ಲಿ ಗವರ್ನಮೆಂಟಿನವರ ತೀರ್ಮಾನವನ್ನು ಎದುರು ನೋಡುವುದು ಉತ್ತಮ

ಎಸ್ ಅಪ್ಪಣ್ಣ, ಬಳ್ಳಾರಿ —ನಿಮ್ಮ ಬಾತ್ಮಿಯು ಬೇರೊಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ ಅದನ್ನೇ ನಮ್ಮ ಪತ್ರಿಕೆಯಲ್ಲೂ ಪ್ರಕಟಿಸ ಬೇಕಾದ ಅಗತ್ಯ ಕಾಣುವುದಿಲ್ಲ

ಕರೆಸ್ಪಾಂಡೆನ್ಸ್.

ಮೈಸೂರು ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಅಧಿಕಾರವು

ಅಯ್ಯಾ,

ತಮ್ಮ ಪೇಪರಿನಲ್ಲಿ ಈ ದೇಶದ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಕೆಲಸಕ್ಕೆ ಬೇರೆಯವರನ್ನು ತರುತ್ತಾರೆಂಬ ವರ್ತಮಾನವನ್ನು ಓದಿದೆನು ಈ ಕೆಲಸಕ್ಕೆ ನಮ್ಮ ದೇಶದ ಗವರ್ನಮೆಂಟ್ ಸರ್ವೀಸಿನಲ್ಲಿ ಈಗ ಇರತಕ್ಕ (೧) ಮಿಸ್ಟರ್ ಹಂಟರ್ ಹಾರ್ಸ್‌ಫೋರ್ಡವರು, (೨) ಮೆ|| ಆರ್ ಬಿ ಪವಾರ್ ಯವರು (೩) ಪಿ. ಎ ಪರಮಶಿವ ಐಯರವರು, ಈ ೩ ಜನ ಸರ್ವೀಸ್ ಜಡ್ಜಿಗಳೂ ಅಲ್ಲದೆ ದಕ್ಷರಾಗಿಯೂ ದೇಶದ ಸ್ಥಿತಿಗತಿ ಚೆನ್ನಾಗಿ ತಿಳಿದವರಾಗಿಯೂ ಇರುವರೆ ಅವರಲ್ಲಿ ೧, ೨ನೇ ಯವರು ಮೊದಲು ಪೋಲೀಸ್ ಸೂಪರಿಂಟೆಂಡೆಂಟರುಗಳಾಗಿದ್ದು ಬಹಳ ಚೆನ್ನಾಗಿ ಕೆಲಸ ಮಾಡಿದವರಾಗಿರುತ್ತಾರೆ ಪ್ರಜೆಗಳ ಈ ಅಪೇಕ್ಷೆಯನ್ನು ನಮ್ಮ ಗವರ್ನಮೆಂಟಿನವರು ಮನ್ನಿಸ್ಯಾರಾಗಿ ನಂಬಿ ಇದ್ದೇನೆ

ದೇಶಾಭಿಮಾನಿಯಾದ ರಿಟೈರ್ಡ್ ಆಫೀಸರ್

ಮೈಸೂರು ಶೀಮೆಯ ಜೈನರ ಸ್ಥಿತಿಯು

ಅಯ್ಯಾ,

ಕೆಲವು ಶತಮಾನಗಳ ಹಿಂದೆ ಇಂಡಿಯಾ ದೇಶದ ಬಹುಭಾಗವು ಜೈನರಾಜರಿಂದ ಆಳಲ್ಪಟ್ಟು ಅದ್ವಿತೀಯವಾದ ವಿದ್ವಾಂಸರಿಂದ ಅನೇಕ ಉದ್ಗ್ರಂಥಗಳು ಹುಟ್ಟಿ ಈ ಮತವು ತುಂಬಾ ಉನ್ನತಿಯ ಸ್ಥಿತಿಯಲ್ಲಿತ್ತೆಂಬ ಸಂಗತಿಗಳು ಅನೇಕ ಆಧಾರಗಳಿಂದ ತಿಳಿಯಬಂದಿದೆ ಕ್ರಮೇಣ ಇವರ ಪ್ರಾಬಲ್ಯವು ಕಡಿಮೆಯಾಗಿ ಹೀನಸ್ಥಿತಿಗೆ ಬಂದು, ಹಾಲಿ ಕೃಷಿವಾಣಿಜ್ಯಾದಿಗಳಿಂದ ಜೀವಿಸುತ್ತಿದ್ದಾರೆ. ಈ ನಮ್ಮ ಶೀಮೆಯ ಜೈನ ಬಾಂಧವರು ಈಗಿನ ನವನಾಗರಿಕ ಕಾಲದಲ್ಲಿಯೂ ತಮ್ಮ ಜನಾಂಗದ ಅಭಿವೃದ್ಧಿಗೆ ವಿದ್ಯಾಭ್ಯಾಸವೇ ಅತಿ ಮುಖ್ಯವೆಂದು ತಿಳಿಯದೆ, ವೃದ್ಧಾಚಾರವನ್ನೇ ಮೂಲವಂತವಾಗಿಟ್ಟುಕೊಂಡು, ಹಟ್ಟಿ ಕುರುಬರಂತೆ ದ್ದಾರೆ ನಮ್ಮ ದಕ್ಷಿಣ ದೇಶದ ಜೈನರು ಈ ಸ್ಥಿತಿಯಲ್ಲಿರುವರೇ ಹೊರತೂ ಉತ್ತರದೇಶೀಯರಾದ ನಮ್ಮ ಸಹೋದರರು ಸಂಪೂರ್ಣ ವಿದ್ವಾಂಸರಾಗಿ ಆಗಾಗ್ಗೆ ಪಂಡಿತರುಗಳನ್ನು ಕೂಡಿಸುತ್ತಾ ಮತಾಭಿವೃದ್ಧಿಗಾಗಿ ತಕ್ಕ ಏರ್ಪಾಡುಗಳನ್ನು ಯೋಚಿಸಿ, ಅವರಂತೆ ನಡೆಯಿಸುತ್ತಲೂ ಇದ್ದಾರೆ ಮೊನ್ನೆ ತಾನೇ ಕೊಲ್ಲಾಪುರದಲ್ಲಿಯೂ, ಅದಕ್ಕೆ ಮುಂಚೆ ಪೂನಾದಲ್ಲೂ ನಡೆದಿರುವ ಜೈನ ಸಭಾ ವಿಚಾರವೇ ದೃಷ್ಟಾಂತವಾಗಿದೆ ಅಲ್ಲಿನ ಮಹಿಳೆಯರಷ್ಟು ಕೂಡ ನಾವು ವಿದ್ಯಾವಂತರಾಗಿರುವದಿಲ್ಲ ಅವರಲ್ಲಿ ಅನೇಕ ವಿದ್ಯಾವತಿಯರಿರುವರು ಅವರೂ ಸಹಾ ಆಗಾಗ್ಗೆ ಸಭೆಗಳನ್ನು ಕೂಡಿಸಿ ಸ್ತ್ರೀ ಸಮಾಜದ ಏಳಿಗೆಗೆ ಕಾರಣಗಳನ್ನು ಕುರಿತು ಯೋಚಿಸುತ್ತಾ ಇದ್ದಾರೆ ಇಲ್ಲಿನ ನಮ್ಮ ಸಹೋದರಿಯರಾದರೋ ವಿದ್ಯೆ ಎಂಬ ಬೆಳಕನ್ನೇ ಅರಿಯದೆ ಮೌಢ್ಯವೆಂಬ ಗಾಢಾಂಧಕಾರದಲ್ಲಿ ಮುಳುಗಿಹೋಗಿರುತ್ತಾರೆ ಅಲ್ಲದೆ ಆಗಿಂದಾಗ್ಗೆ ನಮ್ಮ ನೆರೆಯ ಸಹೋದರರಾದ ವೀರಶೈವರೂ, ವೈಶ್ಯ ಮಹಾಶಯರೂ, ಒಕ್ಕಲಿಗರೂ ವಿದ್ಯೆಯ ಪ್ರಯೋಜನವನ್ನು ಸಂಪೂರ್ಣವಾಗಿ ತಿಳಿದು ಅದೊಂದರಿಂದಲೇ ತಮ್ಮ ಜನಾಂಗದ ಪುರೋಭಿವೃದ್ಧಿಗೆ ಮುಖ್ಯ ಕಾರಣವೆಂದು ಭಾವಿಸಿ, ಐಕಮತ್ಯದಿಂದ ಸಭೆಗಳನ್ನು ಮಾಡಿ ಸಹಾಯಕ ದ್ರವ್ಯಗಳನ್ನು ಕೂಡಿಸುತ್ತಾ, ಅದರಿಂದ ತಮ್ಮ ಮತದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ತಕ್ಕ ಏರ್ಪಾಡುಗಳನ್ನು ಮಾಡುತ್ತಾ ಇರುವದನ್ನು ನೋಡಿ ಎಷ್ಟು ಸಂತೋಷಪಟ್ಟರೂ ತೀರದ್ದಾಗಿದೆ

ಹಾಲಿ ಮೈಸೂರು ರಾಜಧಾನಿಯಲ್ಲಿರುವ ಶ್ರೀಮಂತ ಮೆ|| ಮೋತೀಖಾನೆ ವರ್ಧಮಾನ್ಯೆಯನವರು ವಿದ್ಯೆಯ ಬೆಲೆಯನ್ನು ತಿಳಿದವರಾಗಿಯೂ, ಮತಾಭಿಮಾನಿಗಳಾಗಿಯೂ ಇರೋಣದರಿಂದ ತಮ್ಮ ಜನಾಂಗದವರ ಅಭಿವೃದ್ಧಿಯನ್ನು ಕುರಿತು ಜೈನ ವಿದ್ಯಾರ್ಥಿಗಳಿಗೆ ಪ್ರೌಢ ವಿದ್ಯಾಭ್ಯಾಸದಲ್ಲಿ ರೂಢಿಸಲು ತಮ್ಮ ಮನೆಯಲ್ಲೇ ತಕ್ಕ ಅನುಕೂಲಗಳನ್ನು ಕಲ್ಪಿಸಿದಾರೆ. ಆದರೇನು ? ಆ ಮಹಾಶಯರ ಅಪೇಕ್ಷೆಯಂತೆ ಸಹಾಯ ಹೊಂದುವ ವಿದ್ಯಾರ್ಥಿಗಳೇ ಅತಿ ವಿರಳವಾಗಿರುವರು. ಇದಕ್ಕೆ ನಾನು ಮೇಲೆ ಹೇಳಿರುವ ತಂದೆತಾಯಿಗಳ ಮೌಢ್ಯವಲ್ಲದೆ ಬೇರೆ ಕಾರಣವಿಲ್ಲ. ಮತ್ತು ಮೈಸೂರು ಗೌರ್ನಮೆಂಟ್ ಲಿಪ್ಯನ್ವೇಷಣ ಇಲಾಖಾದಲ್ಲಿರುವ ಮೆ|| ಚಾಮರಾಜನಗರದ ಪದ್ಮರಾಜ ಪಂಡಿತರೆಂಬುವರು ಕೆಲವು ವರ್ಷಗಳ ಹಿಂದೆ ಬೆಂಗಳೂರಲ್ಲಿ ಒಂದು ಅಚ್ಚಿನ ಕಾರ್ಖಾನೆಯನ್ನಿಟ್ಟು ಮತಗ್ರಂಥಗಳನ್ನು ಪ್ರಚಾರ ಮಾಡಲು ಆರಂಭಿಸಿದರು ಆದರೆ ಅವರಿಗೆ ನಮ್ಮ ಜನರು ತಕ್ಕ ಪ್ರೋತ್ಸಾಹ ಕೊಡದ್ದರಿಂದ ಅವರು ತಮ್ಮ ಕಾರ್ಯವನ್ನು ಅಷ್ಟಕ್ಕೇ ಮಾನಸಿಕ ಮಾಡಬೇಕಾಯಿತು ಇವರಂತೆಯೇ ನಮ್ಮ ಮಧ್ಯದ ಜೈನ ಬಾಂಧವರು ಈಗ್ಗೆ ಕೆಲವು ದಿನಗಳಲ್ಲಿ ಒಂದು ಅಚ್ಚಿನ ಕಾರ್ಖಾನೆಯನ್ನು ಸ್ಥಾಪಿಸಿ, ಒಂದು ವಾರಪತ್ರಿಕೆಯನ್ನು ಸಹಾ ಹೊರಡಿಸುತ್ತಾರೆಂಬ ವರ್ತಮಾನ ತಿಳಿದು ತುಂಬಾ ಸಂತೋಷಪಡಬೇಕಾಗಿದೆ. ಆದರೆ "ಆರಂಭಶೂರೋ ಖಲು ದಾಕ್ಷಿಣಾತ್ಯ" ಎಂಬ ಗಾದೆಯನ್ನು ಸಾರ್ಥಕಗೊಳಿಸದಂತೆ ಕಾಪಾಡಿಕೊಳ್ಳತಕ್ಕದ್ದಲ್ಲದೆ ಅದರಿಂದ ನಮ್ಮ ಜನರಿಗೆ ಎಷ್ಟುಮಟ್ಟಿನ ಪ್ರಯೋಜನವಾಗುವದೋ ಎಂದು ಕುತೂಹಲದಿಂದ ನಿರೀಕ್ಷಿಸುತ್ತೇನೆ ಇವರಲ್ಲದೆಯೇ ತುಮಕೂರಿನ ಜೈನ ಸಹೋದರರು ಒಂದು ವಾಚನಾಲಯವನ್ನು ಸ್ಥಾಪಿಸಿರುವರೆಂತಲೂ, ಸಮೀಪದಲ್ಲಿರುವ ಶ್ರೀಮಂದರಗಿರಿ ಕ್ಷೇತ್ರದ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಬೇಕೆಂದೂ ೯೦೦ ರೂಪಾಯಿ ಸಹಾಯಕ ದ್ರವ್ಯದ ಚಂದಾ ಪಟ್ಟಿಯನ್ನು ಅದರ ಟ್ರಸ್ಟಿಗಳು ಹಲವು ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ. ತುಮಕೂರಿನ ಜೈನರು ಮಾಡಿರುವ ವಾಚನಾಲಯವು ಮತಾಭಿಮಾನದ ಚಿಹ್ನೆಮಾತ್ರಕ್ಕೆ ಕಾರಣವಾಗಿದ್ದರೂ ವಿದ್ಯಾಗಂಧವನ್ನೇ ಅರಿಯದ ನಮ್ಮ ತರುಣರಿಗೆ ಇದರಿಂದ ಏನೊಂದು ಪ್ರಯೋಜನವೂ ಆಗಲಾರದು ಸದರಿ ದೇವಸ್ಥಾನದ ಜೀರ್ಣೋದ್ಧಾರವು ನಾನು ಖುದ್ದು ನೋಡಿದ್ದರಲ್ಲಿ ಇವರು ಕೂಡಿಸಿರುವ ಮೊತ್ತವು ಒಂದು ಮೂಲೆಗೂ ಸಾಕಾಗುವದಿಲ್ಲ ಹತ್ತಾರು ಸಾವಿರ ರೂಪಾಯಿಗಳಾದರೆ ಅಲ್ಲಿನ ಸ್ಥಿತಿಯು ಸಮರ್ಪಕವಾದೀತು ಆದರಿಂದ ಈ ವಿಷಯಗಳನ್ನೆಲ್ಲಾ ನಮ್ಮ ಜೈನ ಬಾಂಧವರು ಯೋಚಿಸಿ, ಈಗಿನ ಪದ್ಧತಿಯನ್ನನುಸರಿಸಿ ತಮ್ಮ ಶಕ್ತ್ಯನುಸಾರ ದ್ರವ್ಯ ಸಂಗ್ರಹವನ್ನು ಮಾಡಿ, ತನ್ಮೂಲಕ ಜೈನ ತರುಣರಿಗೆ ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲಪಡಿಸುವದಲ್ಲದೆ ಮತಾಭಿವೃದ್ಧಿಗಾಗಿ ಸಮಾಜಗಳನ್ನು ಕೂಡಿಸಿ ನಮ್ಮ ಜನರ ಮೌಢ್ಯವನ್ನು ಹೋಗಲಾಡಿಸಿದರೆ ಸಹಸ್ರ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿದ ಪುಣ್ಯಕ್ಕೆ ಭಾಗಿಗಳಾಗುವದಿಲ್ಲವೇ ? ಈ ವಿಷಯವನ್ನು ನಮ್ಮ ತುಮಕೂರು ಜೈನ ಬಾಂಧವರು ಗಮನಿಸದೆ ಇರಲಾರರೆಂದು ನಂಬಿದ್ದೇನೆ ಪ್ರಕೃತದ ಕಾರ್ಯಗಳಿಗಾಗಿ ನಮ್ಮಲ್ಲಿ ವಿದ್ಯಾವಂತರಾಗಿರುವ ಚಿತ್ರದುರ್ಗ ಡಿಸ್ಟ್ರಿಕ್ಟ್ ಅ|| ಇಂ|| ಮೆ|| ಜಿ ಪುಟ್ಟಸ್ವಾಮಯ್ಯ ಬಿ ಎ ಯವರನ್ನೂ, ಇತರ ನಮ್ಮ ಜೈನ ಧನಿಕರನ್ನೂ ಕೂಡಿಸಿ, ಇವರ ಸಹಾಯದಿಂದ ಈ ಸತ್ಕಾರ್ಯ ಕಾರ್ಯವನ್ನು ಸಾಂಗಗೊಳಿಸಬೇಕಾಗಿ ಕೇಳಿಕೊಂಡು ಇಲ್ಲಿಗೆ ಈ ಲೇಖನವನ್ನು ನಿಲ್ಲಿಸುತ್ತೇನೆ

ಮಾಗಡಿಗೆರೆ ತಾಲ್ಲೂಕು, ಎ ವೆಂಕಟರಾಯಪ್ಪ,

೨೦ 1 1910 ವಾಕೋನಹಳ್ಳಿ

ಇಂಡಿಯಾ ದೇಶದ ವೃತ್ತಾಂತಗಳು

ಮ್ಯಾಸಿಡೋನಿಯಾ ಎಂಬ ಹಡಗು ಕಳೆದ ವಾರ ಶೀಮೆಯಿಂದ ೬,೧೦ ೦೦೦ ರೂಪಾಯಿನ ಚಿನ್ನವನ್ನು ಬೊಂಬಾಯಿಗೆ ತಂದಿರುತ್ತದೆ

ಕರ್ನಲ್ ಸರ್ ಜೇಂಸ್ ಡನ್‌ಲಾಪ್ ಸ್ಮಿತ್ ಯವರು ಮೆಮೋರಿಯಲ್ ಫಂಡಿಗೆ ಹೈದರಾಬಾದ್ ನೈಜಾಮರವರು ೩,೦೦೦ ರೂಪಾಯಿ ಚಂದಾ ಕೊಟ್ಟಿದ್ದಾರೆ

ಬರ್ಮಾ ಅಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದಲ್ಲಿ ಸುಣ್ಣದ ಒತ್ತಿಗಳು ಭರ್ತಿಯಾಗಿದ್ದ ಕಟ್ಟಡಕ್ಕೆ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ರೂಪಾಯಿನ ಸರಕು ಸುಟ್ಟುಹೋಯಿತು

ಮದರಾಸ್ ಮತ್ತು ದಕ್ಷಿಣ ಮರಾಟಾ ರೈಲ್ ಕಂಪನಿಯ ಗಾಡಿಗಳಲ್ಲಿ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವಂತೆ ಏರ್ಪಾಡು ಮಾಡಬೇಕೆಂದು ರೈಲ್ವೆ ಬೋರ್ಡಿನವರು ಶಿಫಾರಸ್ಸು ಮಾಡಿದ್ದಾರೆ

ಕಲ್ಲೀಕೋಟ ಪ್ರಾಂತ್ಯದಲ್ಲಿ ಚಿನ್ನವನ್ನು ಭೂಮಿಯಲ್ಲಿ ಹುಡುಕಿ ತೆಗೆಯುವುದಕ್ಕೆ ಕಲ್ಕತ್ತೆಯಲ್ಲಿ ಒಂದು ಕಂಪನಿ ಏರ್ಪಾಡಾಗಿದ ಈ ಕಂಪನಿಯವರು ಷೇರುಗಳ ಮೂಲಕ ಎರಡು ಲಕ್ಷ ರೂಪಾಯಿ ಕೂಡಿಸಿ ಅವರು ಈಗ ಗಣಿಗಳ ಇಂಜನಿಯರಾದ ಮೆ|| ಕ್ರಾಸೆಟ್ ಎಂಬಾತನನ್ನು ಶೋಧನಾರ್ಥವಾಗಿ ಅಲ್ಲಿ ಕಳುಹಿಸಿಕೊಟ್ಟಿದ್ದಾರೆ

ಕಸೌಲಿ ಆಸ್ಪತ್ರೆಗೆ ಹುಚ್ಚುನಾಯಿ ಕಡಿದ ದೇಶೀಯ ರೋಗಿಗಳು ಹೋಗಿ ಇಳುಕೊಳ್ಳುವುದಕ್ಕೆ ಅನುಕೂಲಿಸುವಂಥಾ ಒಂದು ಧರ್ಮಶಾಲೆಯನ್ನು ಕಟ್ಟುವುದಕ್ಕೆ ಒಂದು ಫಂಡು ಏರ್ಪಾಡಾಗಿದೆ ಈ ಫಂಡಿಗೆ ಕಪೂರ್ಥಲದ ಮಹಾರಾಜರವರು ೧,೦೦೦ ರೂಪಾಯನ್ನೂ ಸಂಯುಕ್ತ ಅಧಿಪತ್ಯಗಳ ಪ್ರದರ್ಶನದ ಫಂಡಿಗೆ ೭ ೦೦೦ ರೂಪಾಯನ್ನೂ ಚಂದಾ ಕೊಟ್ಟಿದ್ದಾರೆ

ರೈಲ್ವೆ ಟ್ರಾಫಿಕ್ ಸೂಪರಿಂಟೆಂಡೆಂಟರಾದ ಮೆ|| ... ಕಾಕ್ರಾಫ್ಟ್ ಯವರು ಕನ್ನಾನೂರಿನಲ್ಲಿ ಒಟ್ಟಾ ಗಾಡಿಯೊಳಗೆ ಕುಳಿತು ಹೋಗುತ್ತಿದ್ದಾಗ ಸ್ಥಳಾಧಿಕಾರಿಗಳ ಅಜಾಗ್ರತೆಯ ದೆಸೆಯಿಂದ ತಮಗೆ ಏಟು ಆಯಿತೆಂದೂ, ಇದಕ್ಕಾಗಿ ೨,೬೦೦ ರೂಪಾಯಿ ನಷ್ಟವನ್ನು ಕೊಡಿಸಬೇಕೆಂದೂ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮೇಲೆ ದಾವಾ ತಂದಿದ್ದಾರೆ

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೧೦,೪೬೭ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾಗಿರುತ್ತಾರೆ. ಇದರ ಪಂಚಿಕೆ ಹ್ಯಾಗಂದರೆ,—ಸಂಯುಕ್ತ ಅಧಿಪತ್ಯಗಳು ೫,೪೯೨, ಮಧ್ಯ ಪ್ರಾಂತ್ಯಗಳು ೧,೩೯೮, ಬಂಗಾಳಾ ೧,೨೧೨, ಪಂಜಾಬ್ ೧,೧೦೭, ಬೊಂಬಾಯಿ ಅಧಿಪತ್ಯ ೭೧೭, ರಾಜಪುಟಾನಾ ೨೯೧, ಬರ್ಮಾ ೧೦೬, ಮೈಸೂರು ಸಂಸ್ಥಾನ ೪೮, ಮದರಾಸ್ ಅಧಿಪತ್ಯ ೪೫, ಮಧ್ಯ ಇಂಡಿಯಾ ೩೭.

ಗುಜರಾತ್ ದೇಶೀಯ ಸಂಸ್ಥಾನಗಳಲ್ಲಿ ಸಂಚಾರ ಮಾಡುತ್ತಿರುವ ಬೊಂಬಾಯಿ ಗವರ್ನರವರು ಕಳೆದ ವಾರ ರಾಜಕೋಟೆಯಿಂದ ನವಾನಗರಕ್ಕೆ ದಯಮಾಡಿ ಜಾಂ ರಣಜಿತ್ ಸಿಂಗ್‌ಜಿಯವರಿಂದ ಅಪೂರ್ವವಾದ ಸತ್ಕಾರವನ್ನು ಹೊಂದಿದರು. ಅಲ್ಲಿ ಗವರ್ನರವರು ದ್ವಾರಕೆಗೆ ರೈಲ್ ರಸ್ತೆಯನ್ನು ಹಾಕುವುದಕ್ಕೆ ಕಾಮಗಾರಿಯನ್ನು ಪ್ರಾರಂಭಮಾಡಿದ್ದಲ್ಲದೆ ಜೂಬಿಲಿ ಆಸ್ಪತ್ರೆಯ ಒಡಾವಣೆಗೆ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠೆ ಮಾಡಿರುತ್ತಾರೆ.

ಕರಾಚಿ ಪಟ್ಟಣದ ಸೆಷನ್ಸ್ ಜಡ್ಜಾದ ಮೆ|| ಬಾಯಿಡ್ ಯವರು ವೀರಮಾಳ್, ಜೇತುಮಾಲ್, ಗೋವರ್ಧನ ಲಾಲಾ ಎಂಬ ಮೂರು ಜನರನ್ನು ಇವರು ರಾಜದ್ರೋಹ ಮಾಡಿದವರೆಂಬ ಅಪರಾಧಕ್ಕಾಗಿ ದರ್ಯಾಫ್ತು ಮಾಡಿ, ಕಳೆದ ವಾರ ಮೊದಲನೇ ಇಬ್ಬರಿಗೂ ಮೂರು ವರುಷದ ಬಂಕೋಲಾ ಸಜಾ, ೧,೧೦೦ ರೂಪಾಯಿ ಜುಲ್ಮಾನೆಯನ್ನೂ, ಮೂರನೆ ಅಪರಾಧಿಗೆ ಐದು ವರುಷದ ಬಂಕೋಲ್ ಸಜಾ, ೫೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

೧೯೧೧ ನೇ ಇಸವಿಯ ಪ್ರಾರಂಭದಲ್ಲಿ ನಡೆಯುವ ಹಿಂದೂಸ್ಥಾನದ ಸೆನ್ಸಸ್ ಗಣತಿಯ ಕೆಲಸಕ್ಕೆ ಇಂಡಿಯಾ ಗವರ್ನಮೆಂಟಿನವರು ಮೆ|| ಇ ಎ ಗೆಯಿಟ್ ಯವರನ್ನು ಸೆನ್ಸಸ್ ಕಮಿಷನರಾಗಿ ನೇಮಕಮಾಡಿರುತ್ತಾರೆ. ಮದರಾಸ್ ಗವರ್ನಮೆಂಟಿನವರು ಮೆ|| ಜೆ. ಸಿ ಮಲೋನಿಯವರನ್ನು ಮದರಾಸ್ ಅಧಿಪತ್ಯಕ್ಕೆ ಸೂಪರಿಂಟೆಂಡೆಂಟರಾಗಿ ನೇಮಿಸಿ, ಇವರು ಮುಂದಿನ ಏಪ್ರಿಲ್ ತಾ ೧ ರಿಂದ ಸೆನ್ಸಸ್ ಗಣತಿಯ ಕೆಲಸವನ್ನು ಪ್ರಾರಂಭಿಸತಕ್ಕದ್ದೆಂದು ಗೊತ್ತು ಮಾಡಿದ್ದಾರೆ.

ಕಲ್ಕತ್ತಾ ಪಟ್ಟಣದ ಚೋರಬಾಗನ್ ಎಂಬ ಭಾಗದಲ್ಲಿ ಬಾಬು ರಾಮಲಾಲ ಘೋಷ್ ಎಂಬಾತನಿಗೆ ಸೇರಿದ ಉಗ್ರಾಣಕ್ಕೆ ಬೆಂಕಿ ಬಿದ್ದು ಬಹು ವೇಗ ಹರಡಿಕೊಂಡು ಸುತ್ತಮುತ್ತಲೂ ಇದ್ದ ತೊಲೆಗಳ ನಾಲ್ವತ್ತು ಡಿಪೋಗಳು ಉರಿದುಹೋದವು, ಮತ್ತು ಮರದಲೇ ಕಟ್ಟಿದ್ದ ನಾಲ್ವತ್ತು ಮನೆಗಳೂ ಬೂದಿಯಾದವು. ಸಮೀಪದಲ್ಲಿದ್ದ ಒಂದು ಗಾರೇ ಮನೆಯು ಕೂಡ ಉರಿದುಬಿದ್ದಿತು ಮಾಲೀಕರಿಗೆ ಸುಮಾರು ೧೩ ಲಕ್ಷ ರೂಪಾಯಿತನಕ ನಷ್ಟವಾಗಿರುವಂತೆ ತಂತೀ ವರ್ತಮಾನ ಬಂದಿದೆ

ವೈಸ್‌ರಾಯಿಯವರು ಹೊಸ ರೂಲಿನ ಪ್ರಕಾರ ಏರ್ಪಾಡಾದ ತಮ್ಮ ಮಂತ್ರಾಲೋಚನೆಯ ಸಭೆಯನ್ನು ಈ ತಿಂಗಳು ತಾ ೨೫ ನೇ ಮಂಗಳವಾರ ನಡೆಯತಕ್ಕದ್ದೆಂದು ವಿಧಿಸಿರುತ್ತಾರೆ ಆ ದಿನ ಹೊಸ ಮೆಂಬರುಗಳನ್ನು ಪ್ರಮಾಣಮಾಡಿಸಿ ಸಭೆಯಲ್ಲಿ ಕೂಡಿಸಿಕೊಳ್ಳುವರು. ಹೊಸ ಕೌನ್ಸಿಲ್ ಮೆಂಬರುಗಳು ಸಭೆಯಲ್ಲಿ ಚರ್ಚಿಸುವ ಕ್ರಮದ ವಿಷಯದಲ್ಲಿ ಮೆ|| ಸಿನ್ಹಾರವರು ಒಂದು ಮಸೂದೆಕಾನೂನನ್ನು ಸೂಚಿಸುತ್ತಾರೆಂದೂ, ಇದು ಚರ್ಚೆಗೆ ವಿಷಯವಾಗುವುದೆಂದೂ ಪ್ರಕಟವಾಗಿದೆ

ಮಕ್ಕಾ ಮದೀನಾ ಎಂಬ ಪುಣ್ಯ ಸ್ಥಳಗಳಲ್ಲಿ ಯಾತ್ರೆ ಮಾಡಿಕೊಂಡು ಬರುವುದಕ್ಕಾಗಿ ಹೋಗಿದ್ದ ಹಿಂದುಸ್ಥಾನದ ಮಹಮ್ಮದೀಯ ಪ್ರಜೆಗಳು ಸುಮಾರು ಮೂರು ಸಾವಿರ ಜನರು ಕಳೆದ ವಾರ ಮೂರು ಹಡಗುಗಳಲ್ಲಿ ಬೊಂಬಾಯಿಗೆ ಬಂದಿಳಿದರು. ಈ ಪೈಕಿ ೭೭ ಮಂದಿ ರೋಗಾದಿಗಳಲ್ಲಿ ದಾರಿಯಲ್ಲೇ ಮೃತಪಟ್ಟರು ನೂರಾರು ಮಂದಿಗೆ ಸಿಡುಬಿನ ಉಪದ್ರ ತಗಲಿದೆ. ಬೊಂಬಾಯಿನ ಆಸ್ಪತ್ರೆಗಳಲ್ಲಿ ಇವರನ್ನು ಇಟ್ಟು ವಾಸಿಮಾಡುತ್ತಿದ್ದಾರೆ ಇದಲ್ಲದೆ ಇವರಿಂದ ಈ ರೋಗವು ಪಟ್ಟಣಕ್ಕೆ ಹರಡದಂತೆ ಹೆಲ್ತ್ ಆಫೀಸರವರು ಏರ್ಪಾಡುಗಳನ್ನು ಮಾಡಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿ ಲೇಟ್ ಎಕ್ಸೆಲೆನ್ಸಿ ವಿಕ್ಟೋರಿಯಾ ಮಹಾರಾಜ್ಞಿಯವರ ಜ್ಞಾಪಕಾರ್ಥವಾಗಿ ಒಂದು ಶಾಶ್ವತವಾದ ಭಾರೀ ಬಂಗಲೆಯನ್ನು ಕಟ್ಟಬೇಕೆಂದು ಲಾರ್ಡ್ ಕರ್ಜನ್ ಪ್ರಭುಗಳು ವೈಸ್‌ರಾಯರಾಗಿದ್ದಾಗ್ಗೆ ಹಿಂದುಸ್ಥಾನದ ಸಕಲ ಪ್ರಾಂತ್ಯಗಳಲ್ಲೂ ಚಂದಾ ಹಣವನ್ನು ಕೂಡಿಸಿದರಷ್ಟೆ ಆ ಕಟ್ಟಡಕ್ಕೆ ಸ್ಥಳ ಮುಂತಾದದ್ದು ಗೊತ್ತಾಗಿದ್ದರೂ ಕಟ್ಟಡದ ಕಾಮಗಾರಿಯು ಇನ್ನೂ ಪ್ರಾರಂಭವಾಗಲಿಲ್ಲ ಈಗ ಬೇರೆ ಬೇರೆ ಕಂಟ್ರಾಕ್ಟರುಗಳು ದರಖಾಸ್ತುಗಳನ್ನು ಹಾಕಿಕೊಂಡಿದ್ದಾರೆಂದೂ, ಕಮಿಟಿಯವರು ಇಷ್ಟರಲ್ಲೇ ಇದನ್ನು ಇತ್ಯರ್ಥಮಾಡಿ ಬೇಗನೆ ಕಾಮಗಾರಿಯನ್ನು ಆರಂಭಿಸುತ್ತಾರೆಂದೂ ತಿಳಿದು ಬಂದಿದೆ

ಕಲ್ಕತ್ತಾ ಪಟ್ಟಣದಲ್ಲಿ ಗವರ್ನಮೆಂಟಿನವರು ಒಂದು ರಿಜಿಮೆಂಟಿನ ಜಾಟ್ ಎಂಬ ದೇಶೀಯ ಸೈನಿಕರನ್ನು ಇಟ್ಟುಕೊಂಡಿದ್ದಾರೆ ಈ ಸೈನಿಕರಲ್ಲಿ ಕೆಲವರು ಪಟ್ಟಣದೊಳಗೆ ನಡೆಯುವ ಪಬ್ಲಿಕ್ ಸಭೆಗಳಿಗೆ ಆಗಾಗ್ಗೆ ಹೋಗಿ ಬರುತ್ತಲೂ, ಕೆಲವು ಜನರನ್ನು ತಮ್ಮ ಕೂಡ ಸೈನ್ಯದೊಳಕ್ಕೆ ಕರೆದುಕೊಂಡು ಬಂದು ಸತ್ಕರಿಸುತ್ತಲೂ ಇದ್ದರು. ಸೈನ್ಯಾಧಿಪತಿಗಳಿಗೆ ಈ ಸೈನಿಕರ ನಡವಳಿಕೆಯು ತೃಪ್ತಿಕರವಾಗಿಲ್ಲವೆಂದು ಕಂಡು ಬಂದದ್ದರಿಂದ ಆ ಪೈಕಿ ಹತ್ತು ಮಂದಿ ಸೈನಿಕರನ್ನು ದಸ್ತಗಿರಿಮಾಡಿ ಜೈಲಿಗೆ ಕಳುಹಿಸಿದರು. ಅನುಮಾನಾಸ್ಪದರಾದ ಜನರನ್ನು ಅವರು ಅಪ್ಪಣೆ

ಇಲ್ಲದೆ ಸೈನಿಕರ ಮಧ್ಯೆ ಕರೆದು ಕೊಂಡು ಬರುತ್ತಿದ್ದರೆಂದು ಅವರ ಮೇಲೆ ಮೊಕದ್ದಮೆ ಹುಟ್ಟಿ ವಿಚಾರಣೆಯಾಗುತ್ತಿದೆ ಈಗ ಆ ಪೈಕಿ ನಿರಪರಾಧಿಗಳೆಂದು ಕಂಡು ಬಂದ ಮೂರು ಮಂದಿಯನ್ನು ಬಂದೀಖಾನೆಯಿಂದ ಬಿಟ್ಟು ಬಿಟ್ಟರು ಗವರ್ನಮೆಂಟಿನವರು ಈ ವಿಚಾರಗಳನ್ನು ಕುರಿತು ಆಲೋಚನೆ ಮಾಡಿ, ಇನ್ನು ಮುಂದೆ ಸೈನಿಕರಿಗೆ ವಿದ್ಯೆಕಲಿಸುವ ಉಪಾಧ್ಯಾಯರೂ ಕೂಡ ಸೈನಿಕರೇ ಆಗಿರಬೇಕೆಂದು ಹುಕುಂ ಕೊಟ್ಟಿದಾರೆ ರಾಜದ್ರೋಹಿಗಳು ಸೈನಿಕರಿಗೆ ದುರ್ಬೋಧನೆ ಮಾಡಿ ಅವರನ್ನು ಗವರ್ನಮೆಂಟಿನ ಮೇಲೆ ಎತ್ತಿ ಕಟ್ಟಲು ಅವಕಾಶವಿದ್ದದ್ದನ್ನು ತಪ್ಪಿಸಿದ್ದು ಎಷ್ಟೋ ಕ್ಷೇಮವಾಯಿತು

ಅಹಮದ್ ನಗರದಲ್ಲಿದ್ದ ನಾಲ್ಕು ಕಂಪನಿಗಳ ಶಿಪಾಯಿಗಳನ್ನೂ ಎಂಟು ಮಂದಿ ಹುದ್ದೇದಾರರನ್ನೂ ಗವರ್ನಮೆಂಟಿನವರು ಜಹಜಿನ ಮೇಲೆ ಆಫ್ರಿಕಕ್ಕೆ ಸೇರಿದ ಸೋಮಾಲಿ ಲಾಂಡಿಗೆ ಕಳುಹಿಸಿರುತ್ತಾರೆ

ಕರಾಚಿ ನಗರದಲ್ಲಿ ಸರ್ಕಾರಿ ವಿದ್ಯುಚ್ಛಕ್ತಿಯ ಇಲಾಖಾ ನೌಕರನಾದ ಒಬ್ಬ ಪಾರ್ಸಿಯು ಬಂದೂಕನ್ನು ಟಾರ್ಮೋಡಿ ಒಂದು ಗುಳ್ಳೇನರಿಗೆ ಗುರಿಕಟ್ಟಿ ಹೊಡೆದನು. ಅದು ತಪ್ಪಿ ಅಲ್ಲಿ ನಿಂತಿದ್ದ ಒಬ್ಬ ತೋಟಗಾರನಿಗೆ ತಗುಲಿತು. ಅವನು ಮೃತಪಟ್ಟನು

ಬನಾರಸ ಸಂಸ್ಥಾನದ ದಿವಾನರವರ ಸೆಕ್ರೆಟರಿಯಾಗಿದ್ದ ಮೆ॥ ಕೆ ಎಚ್ ವಾಡಿಯಾ ಎಂಬ ಪಾರ್ಸಿ ದೊಡ್ಡ ಮನುಷ್ಯರು ಒಂದು ತಿಂಗಳಿಂದ ಬೊಂಬಾಯಿಗೆ ಬಂದು ವಾಸಮಾಡುತ್ತಿದ್ದು ಕಳೆದ ವಾರ ಯಾವ ಕಾರಣಕ್ಕಾಗಿಯೋ ವಿಷಪಾನ ಮಾಡಿ ಆತ್ಮಹತ್ಯ ಮಾಡಿಕೊಂಡಿದಾರೆ

ಲಾಲಾ ಲಾಜಪತ್ರಾಯಿಯವರು ಲಾಹೋರ್ ಪಟ್ಟಣದಲ್ಲಿ ಕೆಲವು ಮುಖ್ಯ ಸಂಘಗಳಲ್ಲಿ ಪ್ರಮುಖ ಮೆಂಬರಾಗಿ ಸೇರಿಕೊಂಡಿದ್ದರು ಕಳೆದ ವಾರ ಅವರು ಯಾವ ಸಂಘದಲ್ಲೂ ತಾವು ಮೆಂಬರಾಗಿ ಇರುವುದಿಲ್ಲವೆಂದೂ, ತಮ್ಮ ಹೆಸರನ್ನು ವಜಾಮಾಡಬೇಕೆಂದೂ ಅವರಿಗೆಲ್ಲಾ ಬರೆದು ತಿಳಿಸಿದಾರೆ

ಬೊಂಬಾಯಿನ ಬಳಿ ವಾಸಿಂದ್ ಮತ್ತು ವಿದರ್ಲಿ ಎಂಬ ಸ್ಟೇಷನ್ನುಗಳ ಮಧ್ಯೆ ಕಳೆದ ವಾರ ರೈಲ್ ಗಾಡಿಗಳು ಒಡಿದಾಡಿ ಒಬ್ಬ ಗಾರ್ಡು ಮೃತಪಟ್ಟನು. ಮೂರು ದಿನಗಳ ತನಕ ರಸ್ತೆಯು ಕಟ್ಟಿಹೋಗಿತ್ತು ಗಾಡಿಗಳು ಮುರಿದು ನಷ್ಟವಾದದ್ದಲ್ಲದೆ ಭರ್ತಿಯಾಗಿದ್ದ ಸಾಮಾನುಗಳೂ ಹಾಳಾದವು

ಕಾಶಿಯ ಮಹಾರಾಜರವರು ಆ ಪಟ್ಟಣದ ಚೌಕದಲ್ಲಿ ರಾಯಕೃಷ್ಣ ಹಂದರರವರು ಕಟ್ಟಿಸಿದ ಮಾಲತಿ ಶಾರದಾ ಸದನವೆಂಬ ಪುಸ್ತಕಾಲಯವನ್ನು ಪ್ರತಿಷ್ಠೆ ಮಾಡಿದರು. ಅದರಲ್ಲಿ ಅನೇಕ ಅಪೂರ್ವ ಗ್ರಂಥಗಳನ್ನು ಕೂಡಿಸಿಟ್ಟಿದಾರೆ ಪ್ರಜೆಗಳಲ್ಲಿ ಯಾರು ಬೇಕಾದರೂ ಈ ಭಂಡಾರಕ್ಕೆ ಹೋಗಿ ಮುಫತ್ತಾಗಿ ಬೇಕಾದ ಗ್ರಂಥಗಳನ್ನು ಓದಿಕೊಂಡು ಬರಬಹುದಾಗಿದೆ

ಫಾರ್ಸಿ ಖಾರಿಯ ಮೂಲಕ ಮದ್ದು ಗುಂಡನ್ನು ತಂದು ಗುಟ್ಟಾಗಿ ಈ ರಾಷ್ಟ್ರದವರಿಗೂ ಇತರ ಕಡೆಯವರಿಗೂ ಬಿಕರಿ ಮಾಡುವುದನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಕೆಲವು ಹಡಗುಗಳನ್ನು ಅಲ್ಲಿಗೆ ಕಳುಹಿಸಿ ಇಟ್ಟಿರುತ್ತಾರೆ ಈ ಹಡಗಿನ ಸೈನಿಕರು ಕಳೆದ ವಾರ ಒಂದು ಹಡಗನ್ನು ಹಿಡಿದು ಶೋಧನೆಮಾಡಿ ೧,೩೫೦ ಬಂದೂಕುಗಳನ್ನು ೧೦,೦೦೦ ತೋಟಾಗಳನ್ನು ಕಿತ್ತುಕೊಂಡು ಸ್ವಾಧೀನ ಪಡಿಸಿಕೊಂಡಿರುತ್ತಾರೆಂದು ತಂತೀವರ್ತಮಾನ ಬಂದಿರುತ್ತದೆ

ಬೊಂಬಾಯಿ ಗವರ್ನರವರು ಕಳೆದ ಸೋಮವಾರ ಬೆಳಗ್ಗೆ ರಾಜಕೋಟೆಯಲ್ಲಿರುವ ಕನ್ನಾಟ್ ದರ್ಬಾರ್ ಭವನದಲ್ಲಿ ಒಂದು ದಿವ್ಯವಾದ ಸಭೆಯನ್ನು ನಡಿಸಿದರು ಏಳು ಪಂಗಡಗಳಿಗೆ ಸೇರಿದ ೪೪ ಮಂದಿ ರಾಜರುಗಳು ದರ್ಬಾರ್ ದಿರಸಿನಲ್ಲಿ ಹಾಜರಾಗಿದ್ದರು ಗವರ್ನರವರು ಸಭಿಕರಾದ ರಾಜಕುಮಾರರುಗಳನ್ನು ಕುರಿತು ಪೂರ್ವಕಾಲದಲ್ಲಿ ಇಂಗ್ಲೀಷರ ದವಲತ್ತು ಬರುವುದಕ್ಕೆ ಮುಂಚೆ ಇದ್ದ ಸ್ಥಿತಿಗತಿಯನ್ನೂ ಈಗಿನ ಕ್ಷೇಮಾಭ್ಯುದಯಗಳನ್ನೂ ಕುರಿತು ಉಪನ್ಯಾಸಮಾಡಿದರು

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಯೂನಿವರ್ಸಿಟಿ ವಿದ್ಯಾನಿಲಯಕ್ಕೆ ಪ್ರತ್ಯೇಕವಾದ ಬಂಗಲೆ ಇರುವುದಿಲ್ಲ ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ ಈಗ ಒಂದು ಫಂಡು ಕೂಡುತ್ತಲಿದೆ ಅದಕ್ಕೆ ಬೇಕಾಗಿರುವ ೧೦ ಲಕ್ಷ ರೂಪಾಯಿನ ಪೈಕಿ ನಾಲ್ಕು ಲಕ್ಷ ರೂಪಾಯಿ ಕೊರತೆಯಾಗಿರುತ್ತದೆ ತಿಹ್ರಿರಾಜರು ೧೦,೦೦೦, ರಾಯಿಸೂಧಿಮಾಲ್ ಬಹನೂರ್‌ಯವರು ೫೦,೦೦೦, ಮಧ್ಯಪ್ರಾಂತ್ಯಗಳ ಸರ್ಕಾರದವರು ೨೫,೦೦೦, ವಿದ್ಯಾನಿಲಯದಲ್ಲಿರುವ ಮೂಲಧನ ೪೫,೦೦೦ ರೂಪಾಯಿ ಈ ಹಣವನ್ನು ಹೊಸಕಟ್ಟಡಕ್ಕೆ ವಿನಿಯೋಗಿಸುವಂತೆಯೂ, ಇನ್ನೂ ಚಂದಾ ಹಣವನ್ನು ಎತ್ತಬೇಕೆಂತಲೂ ಗೊತ್ತುಮಾಡಿದಾರೆ

ಕಲ್ಕತ್ತಾ ಯೂನಿವರ್ಸಿಟಿ ವಿದ್ಯಾ ಸಂಘದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಬಿರುದುಗಳನ್ನು ಕೊಡುವುದಕ್ಕಾಗಿ ಕಾನ್ವೊಕೇಷನ್ ಎಂಬ ಸಭೆಯು ನಡೆಯುವುದು ಆಗ್ಗೆ ವೈಸ್‌ರಾಯಿ ಪ್ರಭುಗಳೇ ಸಭೆಯ ಅಗ್ರಾಸನವನ್ನು ವಹಿಸಿ, ತೇರ್ಗಡೆ ಹೊಂದಿದವರಿಗೆ ಮುಖ್ಯವಾಗಿಯೂ ಹಿಂದುಸ್ಥಾನದ ಸಕಲ ವಿದ್ಯಾರ್ಥಿಗಳಿಗೂ ಪ್ರಜೆಗಳಿಗೂ ಸಾಮಾನ್ಯವಾಗಿಯೂ ಅನ್ವಯಿಸುವಂಥಾ ಹಿತೋಕ್ತಿಗಳನ್ನು ಉಪನ್ಯಾಸಪೂರ್ವಕವಾಗಿ ಅಪ್ಪಣೆ ಕೊಡಿಸುವವರಾಗಿದಾರೆ ಇತ್ತಲಾಗಿ, ಮದರಾಸ್ ಯೂನಿವರ್ಸಿಟಿ ವಿದ್ಯಾ ಸಂಘದ ಕಾನ್ವೊಕೇಷನ್ ಸಭೆಯು ಮುಂದಿನ ಮಾರ್ಚಿ ತಾ. ೩೧ ರಲ್ಲಿ ನಡೆಯುವುದು ಆಗ್ಗೆ ಸಭೆಯ ಅಗ್ರಸ್ಥಾನವನ್ನು ಯಾರು ವಹಿಸುವರೋ ಇನ್ನೂ ಪ್ರಕಟವಾಗಿಲ್ಲ

ಕಾಶೀ ಪಟ್ಟಣದಲ್ಲಿ ಹಿಂದೂ ಸೆಂಟ್ರಲ್ ಕಾಲೇಜನ್ನು ಸ್ಥಾಪಿಸಿ ಪ್ರಖ್ಯಾತಿಗೆ ಬಂದಿರುವ ಮಿಸೆಸ್ ಬೆಸೆಂಟ್ ಎಂಬಾಕೆಯು ಕಳೆದ ವಾರ ಬೆಂಕಿಪುರದಲ್ಲಿ ಸಾವಿರಾರು ಜನರು ಸೇರಿದ್ದ ಸಭೆಯಲ್ಲಿ ಈಗ ಹಿಂದುಸ್ಥಾನಕ್ಕೆ ಅವಶ್ಯವಾಗಿರುವ ಮುಖ್ಯ ವಿಚಾರಗಳನ್ನು ಕುರಿತು ಉಪನ್ಯಾಸಮಾಡಿದರು ಭಿನ್ನ ಮತಗಳೆಲ್ಲಾ ಏಕವಾಗಬೇಕು, ಜಾತಿಭೇದಗಳು ನಿರ್ಮೂಲವಾಗಬೇಕು, ಅನ್ಯದೇಶ ಸಂಚಾರವು ರೂಢಿಗೆ ಬರಬೇಕು, ಬಾಲ್ಯವಿವಾಹಗಳು ನಿರ್ನಾಮವಾಗಬೇಕು, ದೇಶದಲ್ಲಿ ಕಸಬುಗಳು ಅಭಿವೃದ್ಧಿಗೆ ಬರುವಂತೆ ಸಾಹಸಪಡಬೇಕು ಎಂಬೀ ವಿಚಾರಗಳನ್ನು ಕುರಿತು ಆಕೆ ಉಪನ್ಯಾಸಮಾಡಿ ಸಭಿಕರ ವಂದನೆ ಕೃತಜ್ಞತೆಗಳನ್ನು ಪಡೆದು, ಭಾಗಲ್ಪುರದಲ್ಲಿ ಒಂದು ಪ್ರಾರ್ಥನಾ ಮಂದಿರವನ್ನು ಪ್ರತಿಷ್ಠೆಮಾಡುವುದಕ್ಕಾಗಿ ಪ್ರಯಾಣಮಾಡಿದರು

ಬಾರಕ್ ಪುರದಲ್ಲಿ ಮೆ॥ ಸುರೇಂದ್ರನಾಥ ಬ್ಯಾನರ್ಜಿಯವರು ಒಂದು ದೊಡ್ಡ ಸಭೆಯನ್ನು ನಡಿಸಿ, ರೈಲ್ ಗಾಡಿಗಳಲ್ಲಿ ಹೋಗಿ ಬರತಕ್ಕವರನ್ನು ಗುಂಡು ಕಲ್ಲು ಮುಂತಾದದ್ದರಿಂದ ಹೊಡೆದು ಹಿಂಸಿಸುವುದೂ, ರೈಲನ್ನು ಕೆಡುಹುವದೂ ಯೋಗ್ಯವಾದ ಕೆಲಸವಲ್ಲವೆಂದೂ, ಪ್ರಜೆಗಳ ಮುಖಂಡರೇ ಈ ದುಷ್ಟತನವನ್ನು ನಿಲ್ಲಿಸಬೇಕೆಂದೂ, ಇಲ್ಲವಾದರೆ ಗವರ್ನಮೆಂಟಿನವರು ಕ್ರೂರತರವಾದ ಕಾನೂನುಗಳನ್ನು ಜಾರಿಗೆ ತಂದು ತೀರ್ಘ್ನಾದ ಪೊಲೀಸ್ ಮುಂತಾದದ್ದನ್ನು ಇಡಿಸಬೇಕಾಗುವುದೆಂದೂ ವಿವೇಕವನ್ನು ಹೇಳಿ, ಅನೇಕ ದೇಶೀಯ ದೊಡ್ಡ ಮನುಷ್ಯರನ್ನು ಕೂಡಿಸಿ ಸಂಘಗಳಾಗಿ ಮಾಡಿ, ಇವರು ತಮ್ಮ ಗ್ರಾಮಗಳಲ್ಲಿ ಕ್ರೂರ ಕೃತ್ಯಗಳೇನೂ ನಡೆಯದಂತೆ ರೈಲ್ ರಸ್ತೆಯನ್ನು ಉಸ್ತುವಾರಿ ಮಾಡುವಂತೆ ಏರ್ಪಾಡುಮಾಡಿದರು ಈ ರೀತಿ ದುಷ್ಟತನವನ್ನು ಅಣಗಿಸುವುದಕ್ಕೆ ಪ್ರಜೆಗಳು ಸರ್ಕಾರದವರಿಗೆ ಸಹಾಯಕರಾಗಿ ನಿಲ್ಲುತ್ತಾ ಬಂದರೆ ಈ ರಾಷ್ಟ್ರದಲ್ಲಿ ಕಾಣಿಸಿಕೊಂಡಿರುವ ಕ್ರೂರ ಕೃತ್ಯಗಳೂ ಫಿತೂರಿಗಳೂ ಬೇಗನೆ ಪರಿಹಾರವಾಗಿ ಪ್ರಜಾಕ್ಷೇಮವು ನೆಲೆಗೊಂಡೀತೆನ್ನುವುದಕ್ಕೆ ಸಂಶಯವಿಲ್ಲ

ಪಾಟಿಯಾಲಾ ಸಂಸ್ಥಾನದಲ್ಲಿ ಆರ್ಯಸಮಾಜದ ಕೆಲವು ಮೆಂಬರುಗಳು ಅಂದರೆ ಸುಮಾರು ೬೦-೭೦ ಮಂದಿ ಇಂಗ್ಲಿಷ್ ಗವರ್ನಮೆಂಟನ್ನು ತಲೆಕೆಳಗು ಮಾಡಬೇಕೆಂದು ಫಿತೂರಿ ಮಾಡುತ್ತಿದ್ದಂತೆ ಮೊಕದ್ದಮೆ ಆಗಿ ಅವರೆಲ್ಲಾ ಸ್ಪೆಷಲ್ ಕೋರ್ಟಿನಲ್ಲಿ ದಯಾಪ್ತಿಗೆ ಗುರಿಮಾಡಲ್ಪಟ್ಟಿರುತ್ತಾರಷ್ಟೆ ಈಗ ಈ ಅಪರಾಧಿಗಳು ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ಕೋರ್ಟಿನ ಮೂಲಕ ಮಹಾರಾಜರವರಿಗೆ ಒಪ್ಪಿಸಿರುತ್ತಾರೆ ಅದರಲ್ಲಿ ಇವರು ನಾವು ರಾಜದ್ರೋಹಿಗಳಲ್ಲ, ಕ್ರೂರಕೃತ್ಯಗಳನ್ನು ನಡಿಸಬೇಕೆಂಬವರಲ್ಲ, ಫಿತೂರಿಮಾಡುತ್ತಾ ಇರಲಿಲ್ಲ ಆರ್ಯಸಮಾಜವೆಂಬ ನಮ್ಮ ಕೂಟಗಳಲ್ಲಿ ಇಂಥಾ ವಿಚಾರಗಳನ್ನು ಕುರಿತು ನಾವು ಯಾವಾಗಲೂ ಚರ್ಚಿಸಲೂ ಮಸಲತ್ತು ಮಾಡಲೂ ಇಲ್ಲ ಮಹಾರಾಜರವರ ವಿಷಯದಲ್ಲೂ ಚಕ್ರವರ್ತಿ ಸಾರ್ವಭೌಮರವರ ಮೇಲೆಯೂ ನಾವು ಮನಃಪೂರ್ವಕವಾಗಿ ರಾಜಭಕ್ತಿ ವಿಶ್ವಾಸಗಳನ್ನು ಇಟ್ಟುಕೊಂಡಿರುತ್ತೇವೆ ರಾಜದ್ರೋಹ ವಿಚಾರವನ್ನು ಕುರಿತು ಬರೆದಿರುವ ಪತ್ರಿಕೆಗಳು ನಮ್ಮ ಮನೆಗಳಲ್ಲಿ ಸಿಕ್ಕಿದಾಗ್ಯೂ ನಾವು ಅವುಗಳನ್ನು ಓದಿದವರಲ್ಲ ಆದಕಾರಣ ನಮ್ಮ ಅಪರಾಧವನ್ನು ಕ್ಷಮಿಸಿ ನಮ್ಮನ್ನು ಬಿಟ್ಟುಕೊಡಬೇಕೆಂದು ಬೇಡಿಕೊಳ್ಳುತ್ತೇವೆ ಎಂಬದಾಗಿ ಬರೆದಿರುತ್ತಾರೆ ಈ ವಿಜ್ಞಾಪನಾ ಪತ್ರಿಕೆಯ ವಿಷಯದಲ್ಲಿ ಮಹಾರಾಜರವರು ಇನ್ನೂ ಹುಕುಂ ಮಾಡಲಿಲ್ಲ ಒಡ್ಡಿಯವರು ಮಹಾರಾಜರವರ ಅಪ್ಪಣೆಯನ್ನು ಎದುರು ನೋಡುತ್ತಾ, ಮೊಕದ್ದಮೆಯ ವಿಚಾರಣೆಯನ್ನು ಮುಂದರಿಸದೆ ಕಾದಿರುತ್ತಾರೆ

ವಿದೇಶ ವರ್ತಮಾನಗಳು

ಜರ್ಮನಿ ರಾಜ್ಯದವರು ಮುಂದಿನ ವರುಷ ಭೂಸೈನ್ಯ ಮತ್ತು ಸಮುದ್ರ ಸೈನ್ಯಗಳಿಗೆ ೧೦೫ ಕೋಟಿ ರೂಪಾಯನ್ನು ವಿನಿಯೋಗಿಸುವವರಾಗಿದಾರೆ

ಸ್ಪೆಯಿನ್ ರಾಜ್ಯದ ಪಾರ್ಲಿಮೆಂಟು ಈ ತಿಂಗಳಲ್ಲಿ ಬರಖಾಸ್ತಾಗುವುದು. ಏಪ್ರಿಲ್ ತಿಂಗಳಲ್ಲಿ ಪ್ರಜೆಗಳು ಹೊಸದಾಗಿ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸಿ ಕಳುಹಬೇಕಾಗಿದೆ

ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಸೇರಿದ ಮಾಂಟ್ರೀಲ್ ಎಂಬ ಮಹಾ ಪಟ್ಟಣದಲ್ಲಿ ಬಹು ಕಠಿಣವಾದ ವಿಷಮಶೀತ ಜ್ವರವು ಕಾಣಿಸಿಕೊಂಡಿದೆ ಆಸ್ಪತ್ರೆಗಳೆಲ್ಲಾ ಈ ರೋಗಿಗಳಿಂದಲೇ (ಅಂದರೆ, ೨,೦೦೦ ಮಂದಿ) ತುಂಬಿಹೋಗಿರುವವು

ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕ್ ನಗರದ ಬಳಿ ಫಿಪ್ ಹಿಲ್ ಎಂಬ ಗುಡ್ಡದೊಳಗೆ ಭೂಮ್ಯಂತರ ಮಾರ್ಗದಲ್ಲಿ ಡ್ರಾವಕವು ಹತ್ತಿ ಒಡೆದು ಮಹಾ ಶಬ್ದದೊಡನೆ ಹಾಳು ಅನಾಹುತವಾಯಿತು ಆ ರಸ್ತೆಯನ್ನು ಮಾಡುತ್ತಿದ್ದ ಕೂಲಿಕಾರರ ಪೈಕಿ ಹದಿನೈದು ಮಂದಿ ಮೃತಪಟ್ಟರು

ಫ್ರಾನ್ಸ್ ಸಂಸ್ಥಾನದಲ್ಲಿ ಹರಿಯುವ ಸೀನ್, ರೋನ್, ಮಾರ್ನೆ, ಓಬೆ, ಲ್ವಾರ್, ಮ್ಯೂಸ್ ಎಂಬ ನದಿಗಳಲ್ಲೆಲ್ಲಾ ಕಳೆದ ವಾರ ಅಪೂರ್ವವಾದ ಪ್ರವಾಹಗಳು ಬಂದು ಅನೇಕ ಮನೆಮಠಗಳನ್ನೂ ಜಮೀನುಗಳನ್ನೂ ಮುಳುಗಿಸಿಬಿಟ್ಟವೆ ಪ್ರಜೆಗಳು ಕೆಲವು ಕಡೆ ದೋಣಿಗಳಲ್ಲಿ ವಾಸಮಾಡುತ್ತಿದಾರೆ ಪ್ಯಾರಿಸ್ ಪಟ್ಟಣದ ಬೀದಿಗಳಲ್ಲೆಲ್ಲಾ ಪ್ರವಾಹವು ಹರಿಯುತ್ತಿರುವುದು ಎಂದು ತಂತೀ ವರ್ತಮಾನ ಬಂದಿದೆ

ಅಮೇರಿಕಕ್ಕೆ ಸೇರಿದ ಓಹಿಯೋ ಡಿಸ್ಟ್ರಿಕ್ಟಿನಲ್ಲಿ ವರ್ತಕರು ಏಕವಾಗಿ ಕಟುಕರಿಂದ ಮಾಂಸವನ್ನೆಲ್ಲಾ ಕೊಂಡುಕೊಂಡು, ಅದರ ಧಾರಣೆಯನ್ನು ಹೆಚ್ಚಿಸಿಬಿಟ್ಟರು ಪ್ರಜೆಗಳು ಮಾಂಸವನ್ನು ಕೊಂಡುಕೊಳ್ಳಲೇ ಬಾರದೆಂದು ಬಹಿಷ್ಕಾರ ಹಾಕಿರುತ್ತಾರೆ ಈಗ ಅಮೇರಿಕದಲ್ಲಿ ಸುಮಾರು ಹತ್ತು ಲಕ್ಷ ಜನರು ಇನ್ನು ಒಂದೆರಡು ತಿಂಗಳ ತನಕ ಮಾಂಸವನ್ನು ತಿನ್ನುವುದೇ ಇಲ್ಲವೆಂದು ಶಪಥ ಮಾಡಿಕೊಂಡಿದಾರೆಂದು ತಂತೀ ವರ್ತಮಾನ ಬಂದಿದೆ

ಅಮೇರಿಕದ ಉತ್ತರ ಪಾರ್ಶ್ವದಲ್ಲಿ ಇಂಗ್ಲಿಷ್ ಸ್ವಾಸ್ಥ್ಯವಾದ ಕೆನಡಾ ದೇಶದಲ್ಲಿ ರೈಲ್ ಗಾಡಿಯು ವೆಬ್‌ವುಡ್ ಎಂಬ ಸ್ಟೇಷನ್ ಹತ್ತಿರ ಸೇತುವೆಯ ಮೇಲಿನಿಂದ ೩೫ ಅಡಿ ಕೆಳಗಿರುವ ನದಿಯೊಳಕ್ಕೆ ಮಗುಚಿಕೊಂಡು ಅನಾಹುತವಾಯಿತು ನದಿಯ ಮೇಲೆ ಹಿಮವು ಹಪ್ಪುಕಟ್ಟಿತ್ತು ಕೆಲವು ಗಾಡಿಗಳು ಹೆಪ್ಪನ್ನು ಒಡೆದುಕೊಂಡು ಒಳಕ್ಕೆ ಹೋಗಿರುತ್ತವೆ ಈ ಅನಾಹುತದಲ್ಲಿ ನಾಲ್ವತ್ತೈದು ಪ್ರಯಾಣಸ್ಥರು ಮೃತಪಟ್ಟಿದಾರೆಂದು ಊಹಿಸಲ್ಪಟ್ಟಿದೆ

ಚೀನಾ ಗವರ್ನಮೆಂಟಿನವರು ತಮ್ಮ ಯುದ್ಧದ ಜಹಜುಗಳಲ್ಲಿ ಜರ್ಮನಿಯ ಕ್ರೂಪ್ ಎಂಬ ಪ್ರಸಿದ್ಧ ಕಂಪನಿಯಲ್ಲಿ ತಯಾರಾಗುವಂಥಾ ಫಿರಂಗಿಗಳನ್ನು ಇಡಬೇಕೆಂದು ಗೊತ್ತುಮಾಡಿದಾರೆ ಚೀನಿಯ ಸಮುದ್ರದ ಸೈನ್ಯದಲ್ಲಿ ಅಧಿಕಾರಿಗಳಾಗಿರುವವರ ಪೈಕಿ ಕೆಲವರನ್ನು ಜರ್ಮನಿಗೆ ಕಳುಹಿಸಿ, ಕ್ರೂಪ್ ಎಂಬ ಮೇಲ್ಕಂಡ ಕಾರ್ಖಾನೆಯೊಳಗೆ ಫಿರಂಗಿಗಳ ರಚನೆ ಮುಂತಾದದ್ದನ್ನು ಕಲಿತುಬರುವಂತೆ ಹುಕುಂ ಆಗುವದೆಂದು ಪ್ರಕಟವಾಗಿದೆ

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ನ್ಯೂಸೌತ್ ವೇಲ್ಸ್ ಎಂಬ ವಿಭಾಗದಲ್ಲಿ ಪ್ರವಾಹಗಳು ಅಪಾರವಾಗಿ ಬಂದು, ಅನೇಕ ಮೈಲಿಗಳ ಪ್ರದೇಶವೆಲ್ಲಾ ನೀರಿನಲ್ಲಿ ಮುಳುಗಿ ಹೋಗಿರುತ್ತದೆ ಟಾಂವರ್ತ್ ಎಂಬ ಸ್ಥಳದಲ್ಲಿ ಬೀದಿಗಳೊಳಗೆ ಪ್ರವಾಹವು ಬಹು ರಭಸವಾಗಿ ಹೊರಳುತ್ತಿರುವುದು ನೂರಾರು ಸಂಸಾರಗಳವರು ಎತ್ತರವಾದ ಕಟ್ಟಡಗಳನ್ನು ಹತ್ತಿ ಮಾಳಿಗೆಗಳೊಳಗೆ ಸೇರಿಕೊಂಡು ಆಹಾರವಿಲ್ಲದೆ ಬಹಳ ಕಷ್ಟಪಡುತ್ತಿದಾರೆಂದು ತಂತೀ ವರ್ತಮಾನ ಬಂದಿದೆ

ಕಳೆದ ಡಿಸೆಂಬರ್ ತಿಂಗಳ ಕಡೇ ವಾರದಲ್ಲಿ ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಲ್ಲಿ ಅಪಾರವಾದ ಹಿಮಗಡ್ಡೆಗಳ ಸಹಿತವಾದ ಬಿರುಗಾಳಿಯು ಬೀಸಿ ಎಂಬಾ ಕಷ್ಟ ನಷ್ಟಗಳನ್ನು ಮಾಡಿತೆಂದೂ, ನ್ಯೂ ಇಂಗ್ಲಂಡ್ ಸ್ಟೇಟ್ಸ್ ಎಂಬ ಪ್ರಾಂತ್ಯ ಒಂದರಲ್ಲೇ ಒಂದೂವರೆ ಕೋಟಿ ರೂಪಾಯಿನ ಆಸ್ತಿ ಪಾಸ್ತಿಗಳು ನಷ್ಟವಾದವೆಂದೂ, ಅನೇಕ ಹಡಗುಗಳೂ ದೋಣಿಗಳೂ ಸಮುದ್ರ ತೀರದಿಂದ ಬಡಿದುಕೊಂಡು ಹೋದವೆಂದೂ ಸಮಾಚಾರ ಬಂದಿದೆ

ಸ್ಪೆಯಿನ್ ರಾಜ್ಯಕ್ಕೆ ಸೇರಿದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಕೆಲವು ಕಾಲದಿಂದ ಪ್ರವಾಹಗಳ ದೆಸೆಯಿಂದ ಉಂಟಾದ ನಷ್ಟವು ಒಂದು ನೂರು ವರುಷಗಳಿಂದಲೂ ಸಂಭವಿಸಿರಲಿಲ್ಲವೆಂದು ಪ್ರಕಟವಾಗಿದೆ ಆರು ಸ್ಥಳಗಳಲ್ಲಿ ವಿಸ್ತಾರವಾಗಿ ಬೆಳೆಯಾಗಿದ್ದ ಜಮೀನುಗಳಲ್ಲಿ ನೀರುನಿಂತು ಫಸಲೆಲ್ಲಾ ನಷ್ಟವಾಯಿತು ಪ್ರಜೆಗಳು ಸಾವಿರಾರುಮಂದಿ ಮನೆಗಳಮೇಲೂ ಗಿಡ ಮರಗಳಮೇಲೂ ವಾಸಮಾಡಿದರು ರೈಲ್ ರಸ್ತೆಗಳು ಅನೇಕ ಊರುಗಳಿಗೆ ಹೋಗಿ ಬರದಂತೆ ಕಿತ್ತು ಕೊಚ್ಚಿಹೋದವು ಒಂದು ಭಾರೀ ರೈಲ್ ಸ್ಟೇಷನ್ನು ಕಳಚಿ ಬಿದ್ದು ಹೋಯಿತು

ಫ್ರಾನ್ಸ್ ಸಂಸ್ಥಾನದಲ್ಲಿಯೂ ಸ್ತ್ರೀಯರು ಕೂಟಗಳನ್ನು ಮಾಡಿಕೊಂಡು ಗವರ್ನಮೆಂಟಿನವರು ಸ್ತ್ರೀಯರಿಗೆ ಓಟು ಕೊಡುವ ಅಧಿಕಾರವನ್ನು ವಹಿಸಬೇಕೆಂದೂ, ಮುಂದಿನ ಪಾರ್ಲಿಮೆಂಟಿಗೆ ಸ್ತ್ರೀಯರೂ ಚುನಾವಣೆಯಾಗಿ ಹೋಗುವಂತೆ ರಿಯಾಯತಿ ತೋರಿಸಬೇಕೆಂದೂ ಸಾಹಸ ಪಡುತ್ತಿದಾರೆ ಕೆಲವು ದಿನಗಳ ಹಿಂದೆ ಮುಖಂಡರಾದ ಕೆಲವು ಫ್ರೆಂಚ್ ಸ್ತ್ರೀಯರು ಮಂತ್ರಿಯವರನ್ನು ಕಂಡು ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು ಮಂತ್ರಿಯವರು ಅದನ್ನು ಅಂಗೀಕರಿಸಿ ನಿಧಾನವಾಗಿ ಆಲೋಚನೆ ಮಾಡುತ್ತೇವೆ ಎಂದು ಜವಾಬು ಕೊಟ್ಟು ಕಳುಹಿಸಿದರು

Printed and Published by the Rev H Gulliford, Proprietor and Manager, Wesleyan Mission Press, Mysore 27/1/1910

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು.　　　　ಕ್ರಯ ೧ ದುಡ್ಡು.

ಸಂಪುಟ ೨೩.　　ಮೈಸೂರು—೧೯೧೦ ನೇ ಇಸವಿ ಫೆಬ್ರವರಿ ತಾರೀಖು ೩. ನೇ ಗುರುವಾರ.　　ಸಂಚಿಕೆ ೩೬

ಮೈಸೂರು ಪಟ್ಟಣದ ಪ್ರಜೆಗಳಿಗೆ ನೋಟೀಸು

ಮೈಸೂರು ಸಿಟಿಯಲ್ಲಿರುವ ದನಗಳಲ್ಲಿ ಕಾಲುಬಾಯಿ ಜ್ವರ ಸಾಂಕ್ರಾಮಿಸಿರುತ್ತೆ. ಕಾಯಿಲೆ ಸೋಂಕಿದ ದನಗಳ ಹಾಲು ಕುಡಿಯುವುದರ ಮೂಲಕ ಮನುಷ್ಯರಿಗೆ ಈ ಜಾಡ್ಯ ಬರುವ ಸಂಭವವಿರುವ ಕಾರಣ ಹಾಲನ್ನು ಚನ್ನಾಗಿ ಕಾಯಿಸಿ ಕುಡಿಯುವುದು ಯುಕ್ತವಾಗಿದೆ

ಮೈಸೂರು ಸಿಟಿ　　ವಿ ಎಲ್ ಸ್ಟಾಂಕರ್

20 1 1910　　ಹೆಲ್ತ್ ಆಫೀಸರ್.

ಸುಗಂಧಗಳು.

1 12

ಸ ... ವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೨೧ ... ೧೪-೦ ಬಿಲ್ಲೆಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣಕ್ಕೆ ... ತಾಂಬೂಲ ಪಿಸಾರಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ... ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ ಟಿ ಎಲ್ ಉಪಾಧ್ಯಾಯ, ಮೈಸೂರು

ಸ್ವದೇಶೀ ಬಟ್ಟೆಗಳು!　　ಸ್ವದೇಶೀ ಬಟ್ಟೆಗಳು!!

11 ೧

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ... ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ... ಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ... ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . .. ರೂ ೧—೦—೦

ನೇರ ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಹಾಮ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ವೈದ್ಯಶಾಲಾ ಪ್ರಸಿದ್ಧ ಪತ್ರಿಕೆ.

17-1

ಶ್ರೀರಂಗಪಟ್ಟಣದಲ್ಲಿ ವೇ॥ ಶೇಷಭಟ್ಟರು ಹೊಸದಾದ ಒಂದು ನೇಟಿವ್ ಮೆಡಿಕಲ್ ಹಾಲನ್ನು ಓಪನ್ ಮಾಡಿ ಈಗ್ಗೆ 7-8 ತಿಂಗಳಾದವು. ಇದರಲ್ಲಿ ಶಾಸ್ತ್ರೀಯವಾಗಿಯೂ ಮತ್ತು ಅನುಭವಸಿದ್ಧವಾಗಿಯೂ ಇರುವ ಅನೇಕ ಔಷಧಗಳನ್ನು ತಯಾರುಮಾಡಿ ಸುಲಭ ಕ್ರಯಕ್ಕೆ ದೊರಕುವಂತೆ ಅನುಕೂಲಪಡಿಸಿರುತಾರೆ ಮತ್ತು ಅನೇಕ ಜನಗಳು ಇವರ ಷಾಪಿನಿಂದ ಔಷಧಗಳನ್ನು ಉಪಯೋಗಿಸಿ ಆರೋಗ್ಯಪಡಿಸಿಕೊಂಡು ಇರುತ್ತಾರೆ ದೇಶಾಭಿಮಾನಿಗಳು ತಮಗೆ ಅನುಕೂಲವಾಗುವ ಔಷಧಗಳನ್ನು ಇವರಿಂದ ವಿ ಪಿ ಮೂಲಕ ತರಿಸಿಕೊಳ್ಳುವರೆಂದು ನಂಬಿದ್ದೇನೆ ಈ ಕೆಳಗಿನ ವಿಳಾಸಕ್ಕೆ ರಿಪ್ಲೈ ಕಾರ್ಡು ಬರೆದರೆ ಔಷಧಗಳ ವಿವರ, ಗುಣ, ಮತ್ತು ಕ್ರಯ ಸಹಾ ತಿಳಿಯಬಹುದು (1) ಅವ್ವಲ್ ಕಸ್ತೂರಿ ಮಾತ್ರೆ. (2) ತಾಂಬೂಲ ಮಾತ್ರೆ. (3) ಕಾಲರಾ ಪವುಡರ್ (4) ಶ್ಲೇಷ್ಮಾಪಹಾರಿಣಿ, ಇವೇ ಮೊದಲಾದ ಇನ್ನು ಅನೇಕ ನವೀನ ಔಷಧಗಳು ಇವೆ.

ವಿಳಾಸ :—ವೇ॥ ಪಂಡಿತ ಶೇಷಭಟ್ಟರು,

ನೇ॥ ಮೆಡಿಕಲ್ ಷಾಪ್ ಕೀಪರ್, ಶ್ರೀರಂಗಪಟ್ಟಣ.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ.　　ಕ್ರಯ ಒಂದಾಣೆ.

೧೯೧೦ ನೇ ವರ್ಷದ ಕ್ಯಾಲೆಂಡರು. ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ವೀನ್ ಬರ್ನಾರ್ಡ್ ಡಾಸ್, ಎರ್ ಇ., ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಪುರವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ ಇದೇ ಫೆಬ್ರವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ" ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ — ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡ್ಲೆ ಬರಿಯಿರಿ　ವಿಳಾಸ:-

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಪ್ರಾಕ್ಸಿಮಿಟಿ

2-6

ಹಾಸನ ಟೋಪಿಯ ಸುಪೀರಿಯರ್ ಉಲ್ ದಾರ 1 ಟೋಪಿ ದಾರಕ್ಕೆ 0-8-0 10 ಟೋಪಿಯಾಗುವ ಬಂಡಲ್ 1 ಕ್ಕೆ ರೂ 3 7-0 ಬಣ್ಣದಲ್ಲಿ ಎಣ್ಣೆ ಕೆಂಪು ಕಪ್ಪು ತೇಟಿ ಕೆಂಪು ಹಳದಿ ಗುಲಾಬಿ ಪಚ್ಚೆ ನಿಲಿ ಮತ್ತು ಕಾಫಿ ಬಣ್ಣಗಳಲ್ಲಿ— ಹಾಸನ ಟೋಪಿ ಹೊಲಿಯುವ ಸಂಘಾರಣ ದಪ್ಪದ ಉಲ್ ಪೌಂಡು 1 ಕ್ಕೆ 2 1-0, ಅರೆ 1 ಕ್ಕೆ 0 10-0, ರಂಗಿನಲ್ಲಿ ಎಣ್ಣೆ ಕೆಂಪು ಕಪ್ಪು ಮತ್ತು ತೇಟಿ ಕೆಂಪು ಮಿಶ್ರ ಉಲ್ ಪೌಂಡು 1ಕ್ಕೆ 2-12-0 ಆರು ಟೋಪಿ ಆಗುವದು ಕೊಕ್ಕೆ ಸೂಜಿ 1 ಕ್ಕೆ 0-1-6 ಮತ್ತು 0 3 0 ಹಾಸನ ಟೋಪಿ ಹೊಲಿಯುವ ದಪ್ಪದ ಉಲ್ ಪೌಂಡು 1 ಕ್ಕೆ ರೂ 1-12-0

ಹಾಸನ ಟೋಪಿಗಳು ದರ್ಜನ್ 1 ಕ್ಕೆ 8-0-0 ಮತ್ತು 14-0-0. ತರತರಾರಿನ ರಂಗಿನಲ್ಲಿ ಕಸೂತಿಕೆಲಸದ ಉಲನ್ ದಾರಗಳು ಪೌಂಡು 1 ಕ್ಕೆ ರೂ 3-1-0

ಕೆಪಿಟೋ ಬಾಂಬೆಯಲ್ಲಾ ತರದ ವಾಚಕ್ಕೆ 0-8-0, ದೊಡ್ಡವರ ಕಾಲುಚೀಲಗಳು ಆಣೆ 0-1-0 ರಿಂದ 1-8-0 ಚಿಳ್ಳೆ ಮಕ್ಕಳ ಕಾಲುಚೀಲಗಳು 0-4-0 ಮತ್ತು 0-6 0 ದೊಡ್ಡವರ ಕಾಟನ್ ಬನಿಯನ್ 1 ಕ್ಕೆ 8 ಆಣೆಯಿಂದ 1-0-0 ದೊಡ್ಡವರ ಮುಸುಕಿನ ಟೋಪಿ 1 ಕ್ಕೆ 1-0-0 ಹಣಕಾಸುಗಳು ಹಾಕುವ ಉಲ್‌ದಾರದ ಪಾಕೆಟ್ 1 ಕ್ಕೆ 0-2-0. ಉಲ್‌ದಾರದ ವಾಚ್ ಪಾಕೆಟ್ 1 ಕ್ಕೆ 0-2-0 ಉಲ್ ದಾರದ ಕಮರ್‌ಬಂದ್ 1 ಕ್ಕೆ 10 ಆಣೆಯಿಂದ 1-4-0 ಬಾಚಣಿಗೆಗಳು 1 ಕ್ಕೆ 0-1-0, 0 1-6 ರಿಂದ 0-1-0. ಪುನುಗಿನ ಕಡ್ಡಿ ತೊಲೆ 1 ಕ್ಕೆ 0-2-0 ದಶಾಂಗ ತೊಲೆ 1 ಕ್ಕೆ 0-1-0 ಸಿಕನಾ ದಬ್ಬಿ 1 ಕ್ಕೆ 0.4-0 ವಾಚು ಸರಪಣಿ 1 ಕ್ಕೆ ಆಣೆ 6 ರಿಂದ 0-12-0 ವರೆಗೆ ರಬ್ಬರ್ ಸ್ಟಾಂಪು ಶಾಯಿ ಬಾಟಲ್ 1 ಕ್ಕೆ 0 1-0 ಸ್ಪೆಷಲ್ ತಾಂಬೂಲಮಿತ್ರನು 200 ಮಾತ್ರೆಗಳಿರುವ ಪಾಕೆಟ್ 1 ಕ್ಕೆ 0-3-0 ಮೆಂತ್ಯಾಲ್ ದಬ್ಬಿ 1ಕ್ಕೆ 0-3-0 ಗಡಕರ್ಣದ ಮುಲಾಮು ದಬ್ಬಿ 1 ಕ್ಕೆ 0-5-0 ದೇಶಿ ಕೈವಸ್ತ್ರಗಳು ದರ್ಜನ್ 1 ಕ್ಕೆ 1-0 0 ರಿಸ್ಟ್ ಕೈವಸ್ತ್ರಗಳು ದರ್ಜನ್ 1 ಕ್ಕೆ 1-6-0 ಕಸ್ತೂರಿಮಾತ್ರೆ 200 ರ ಶೀಸೆ 1ಕ್ಕೆ 0-4-0 ಕಾಮಿನಿಯ ತೈಲ್ಯವು ಅನೇಕತರದ ತೈಲ್ಯಗಳಲ್ಲಿ ಪಸಂದಾದದ್ದು ಶೀಸೆ 1ಕ್ಕೆ 1-0-0 ಪರಿಮಳ ಸ್ನೌ ದಬ್ಬಿ 1ಕ್ಕೆ 0-2-0 ದಂತಮಂಜನ ದಬ್ಬಿ 1 ಕ್ಕೆ 0-1 6 ಪೋಮಟ ಶೀಸೆ 1 ಕ್ಕೆ 0-5-0. ದಿಲ್‌ಬಾರ್ ಇದು ಅಮೂಲ್ಯವಾದ ಅತ್ತರ್ ಶೀಸೆ 1 ಕ್ಕೆ 1-8-0 ಕಾಮಿನಿ ಅತ್ತರ್ ಶೀಸೆ 1 ಕ್ಕೆ 1-8 0. ರೋಜ್ ಅತ್ತರ್ ಶೀಸೆ 1 ಕ್ಕೆ 2-0-0 ಇಂಗ್ಲಿಷ್ ಅತ್ತರದ ಪೆಟ್ಟಿಗೆ 1ಕ್ಕೆ 0-10-0 ಯಿಂದ 3-0-0 ಬೆಳೆ ಪೋಸ್ಟ್‌ಕಾರ್ಡುಗಳು 100ಕ್ಕೆ 0-3-0. ರೂಲುಹಾಕಿದ ಲೆಟರ್ ಪೇಪರ್ ಪ್ಯಾಕೆಟ್ 1 ಕ್ಕೆ 0-1-0. ಇದಕ್ಕಾಗುವ ಕವರ್ 100 ಕ್ಕೆ 0-5-0 ಕಾಬೂಲ್ ದೇಶದ ಹಿಂಗು 12 ತೊಲೆ ದಬ್ಬಿ 1 ಕ್ಕೆ 0-14-0 ಕೆಂಪುನೂಲಿನಿಂದ ತಯಾರಿಸಿದ ಕಮರ್‌ಬಂದ್—1-4 0, 0 7 0 ಮತ್ತು 0-9-0 ಸಂಗೀತ ಪಾರಿಜಾತವೆಂಬ ಹಾಡಿನ ಪುಸ್ತಕ 0-4-0.

1910 ನೇ ಡೈರಿ 1 ಕ್ಕೆ 0-3-0 ನಮಗೆ ಅಲ್ಲ ಕಮಿಷನ್ ಕೊಟ್ಟಲ್ಲಿ ಮಂಗಳೂರಲ್ಲಿ ದೊರೆಯುವ ಯಾವ ಸಾಮಾನು ಬೇಕಾದರೂ ಚವಕಿಯಿಂದ ಪಡೆದು ರವಾನಿಸುವೆವು. ವಿ. ಪಿ ಯಿಂದ ತರಿಸುವರು ಟಪಾಲು ಖರ್ಚು ಜಾಸ್ತಿ ಕೊಡಬೇಕಾಗುವದು.

ನಮ್ಮ ವಿಳಾಸ.—ದಿ ಉಲನ್ ಮಾರ್ಟ್,

ನಂ. ೧, ಮಂಗಳೂರು, ದ. ಕ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

4-51



೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆ ಬಾಳುವ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಚಳಿಜ್ವರ ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವೆಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವೆ, ಜ್ವರ, ಪಚ್ಚುಜ್ವರ, ಕೈಪತ್ತಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ.

11 6



ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ ರೂ ೨—೧೨ ೮ , ೧೧ ರೂ. , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು " ಜ್ವರಹರಿ " ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜಿನ್ನಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ :—

ಹನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 97

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ನಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ಆಸ್ಪತ್ರೆಗಳಲ್ಲೂ, ವೈದ್ಯರೂ ಬಳಸುತ್ತಾರೆ ಮುಖ್ಯ ಏಜಂಟರ ವಿಳಾಸ—

ಜೆ ಎಸ್ ಕನ್ನಯಂಚೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಪೀಟರ್ಸ್

೨೭ ವೇಪಾಲಪಳ್ಳಿ ಬೀದಿ ವೇಪೇರಿ ಮದರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರವನ್ನುಂಟುಮಾಡುವ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಲ್ಲಿ ಛಳುಕು ನಿದ್ದೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಲುವಾಗಿಯೋ ಇಳಿಯುವುದು ಬಿಡದ ಬಾಯಾರಿಕೆ ಬಳಲಿಕೆ ಎದೆ ತಲ್ಲಣಿಸುವುದು ತಲೆನೋವು ಗಾಬರಿ ಕಣ್ಣು ಮೊಬ್ಬು ತಲೆ ತಿರುಗುವಿಕೆ ಮೈನೋವು ಕೀಲುನೋವು ಮರವು ನಿತ್ರಾಣ ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಪಿಂಡದ ವಾಯು ಮೈಬಾವು ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರದ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [6 2ು]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨ ೦—೧ ಅಥವಾ ೬ ಬುಡ್ಡಿಗಳಿಗೆ ರೂ ೧೦ ೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ ೨೦ ಪಿ ಓ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [7 19]

ತಲೆನೋವು, ಗಂಟು ಉಬ್ಬುವದು, ವಾತ ಸಂಧಿವಾತ, ಉಳುಕು ಅಬಲು ಗಂಟು, ಗಂಟುನೋವು, ಅರ್ಧಾಂಗವಾಯು ಎದೆಶೀತ, ಘಾಯ, ಜಖಮು, ಇತ್ಯಾದಿ

ಇದರ ಹಿಡುಯಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬ ೦ ೧೨ ಡಬ್ಬಿಗಳಿಗೆ ೪ ೦ ೦

ಆಸ್ಮಾಮಿಶ್ರಣ	೨ ೦ ೦
ಬೀಳುಗಡಕದ ಮದ್ದು	೦ ೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದು ಣಗಳಿಗೆ	೦ ೮ ೦
ಜುಲಾಬು ಮಾತ್ರೆ—ಜುಲಾಬಿಗೆ	೦ ೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦ ४-೦
ಖಜ್ಜಿ ಮುಲಾಮು—ಮಕ್ಕಳ ಖಜ್ಜಿಗೆ	೦ ೩ ೦
ಕೇಶವರ್ಧನೀ ತೈಲ—ತಲೆಯ ಮೆದುಳಿಗೆ	೧ ೦ ೦
ಕಫನಾಶಕ ಚೂರ್ಣ—ಅಸ್ಮಾ ರೋಗಕ್ಕೆ	೦ ೮-೦

ದಯವಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

8 5

ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಪಚ್ಚಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು ಊದಿಕೊಳ್ಳುವುದು ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ ಇದೆಲ್ಲಾ ನಮಗೆ ಯಾವಾಗ ಉಂಟಾಗುತ್ತದೋ ಆಗ್ಗ ನಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಬೇಕೆನೂ ಇಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ವಿಶೇಷ ಭಾರವಾಗಿದೆ

ಸಣ್ಣ ಮಕ್ಕಳು ತೋಳದಂತೆ ಕೆಮ್ಮೆ ಎಟ್ಟಿಗೆ ಒಳಪಡುವಂಥವರಾಗಿದ್ದು ಅಪಾಯಕರ ಕಡವೆ ಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 6 5

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ಪ್ರಯಾಸಕರೋರು ವದು

ಇದು ಸಂತೋಷವೂ ಆನಂದವೂ ಪಡುವ ಹಾಗೆ ಹಾಲಿನಂತೆ ರುಚಿ ಹೊಂದಿ ಸುಖಕರ್ತೆ ತೋರುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧವ್ಯಾಪಾರಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ

ಲಂಡನ್ ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತಪ್ಪದೆ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ ! !

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(195 ಪುಟಗಳು, ಸೊಗಸಾದ ಒಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಇಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10—1]

ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು

ಸಂಜೀವಿನೀ ಔಷಧಾಲಯ, ಮೈಸೂರು.

27 12

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜ್ವರ, ವಾಯುನೋವುಗಳೂ, ಹಳೇ ಜ್ವರ, ಕೃಶತ್ವ ಅಜೀರ್ಣ ತಲೆನೋವು, ನೆತ್ತಿಯುರಿ ತಲೆಭಾರ ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ ಶೋಷಣಾಂತವಾದ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ ಬಲ, ಧೈರ್ಯ ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟವಟಿಕ -ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ನೋವು ಹಡ್ಡುವ ಔಷಧ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಾಚಗಣ್ಣು, ತಲೆನೋವು ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬಳ್ಳಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗೆ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ

ಪ್ರೊಪ್ರೈಟರ್

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದುರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾಗಾ ಕೆಂಪು, ಕಪ್ಪು ಬಿಳಿ ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ४ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೫ ರೂ ೧-೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ , ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಹುಡುಗರ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕಚ್ಚಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

3—12—1909 ರಿಂದ 7—1—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	4	3	0	0
ಮೈಸೂರು	16	14	0	0
ಬೆಂಗಳೂರು ಡಿಸ್ಟ್ರಿಕ್ಟು	6	4	0	0
ಮೈಸೂರು	14	14	66	41
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	2	1	0	0
ಹಾಸನ ,,	2	3	0	0
ಚಿತ್ರದುರ್ಗ ,,	0	0	0	0
ಕಡೂರ್ ,,	4	1	0	0
ಶಿವಮೊಗ್ಗ	12	7	0	0
ಜುಮ್ಲಾ	59	47	66	41

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಪುಷ್ಯ ಬಹುಳ ದಶಮಿ ಶುಕ್ರವಾರದಿಂದ ಪುಷ್ಯ ಬಹುಳ ಅಮಾವಾಸ್ಯೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಡಿ ಮಕರ ಮಾಸ
4	ಶುಕ್ರ	ದಶಮಿ	[illegible]	ಅನು	30 18	23
5	ಶನಿವಾ	ದಶಮಿ	0 16	ಜ್ಯೇ	34 23	24
6	ಭಾನುವಾ *	ಏಕಾದಶಿ	2 55	ಮೂಲ	37 [illegible]	
7	ಸೋಮ §	ದ್ವಾದಶಿ	4 1	ಪೂರ್ವಾಷಾ	39 22	26
8	ಕುಜ ‡	ತ್ರಯೋದಶಿ	4 10	ಉತ್ತರಾಷಾ	40 38	27
9	ಬುಧ †	ಚತುರ್ದಶಿ	3 4	ಶ್ರ	39 39	29
10	ಗುರು	ಅಮಾವಾಸ್ಯೆ	1 12	ಧನಿಷ್ಠ	36 29	29

* ಸರ್ವತ್ರ ಏಕಾದಶಿ ಅಮೃತಯೋಗ § ಉತ್ತರಾಯಣ ಸೋಮಪ್ರದೋಷ ವಾಸವಿಜಯಂತಿ ‡ ಸರ್ವತ್ರ ಅಮಾವಾಸ್ಯೆ ಮಹೋದಯ ಗರುಡ ಜಯಂತಿ ... ಕರ ಚಾತುರ್ಮಾಸ್ಯ ... ಶ್ರಾದ್ಧ ... ಮಾಘಗ್ರಹಣ ...

ಪೇಟೆ ಧಾರಣೆ

ಜಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೨ ೮ ೦	೧೨ ೬ ೦
ಕೆಂಬೂತಿ ಅಕ್ಕಿ ಅವಲ್		೧೨ ೪ ೦	೧೯ ೦ ೦
,, ದುಯ್ಯಂ		೧೨ ೦ ೦	೧೩ ೦ ೦
ಜಾಬ್ರಾಣಿ ಅಕ್ಕಿ		೧೨ ೪ ೦	೧೪ ೦ ೦
ಸಣ್ಣಕ್ಕಿ ಅವಲ್		೧೩ ೮ ೦	೧೬ ೦ ೦
,, ದುಯ್ಯಂ		೧೩ ೦ ೦	೧೪ ೦ ೦
ಕೊಗರೀ ಬೇಳೆ ಪಲ್ಲಾ ೧ಕ್ಕೆ		೧೨ ೮ ೦	೧೪ ೦ ೦
,, ದುಯ್ಯ		೧೨ ೦ ೦	೧೩ ೦ ೦
ಹೈಬ್ರಿ ಬೀಗ ಪಲ್ಲಾ ೧ಕ್ಕೆ		೮ ೦ ೦	೮ ೦ ೦
ರಾಗಿ		೭ ೧೨ ೦	೭ ೧೨ ೦
ಜೋಳ		೭ ೮ ೦	೯ ೦ ೦
ಹುರುಳಿ ಪಲ್ಲಾ ೧ಕ್ಕೆ		೧೧ ೦ ೦	೧೦ ೦ ೦
ಬೇಳೆ ಅವರೆ		೧೧ ೦ ೦	೧೦ ೦ ೦
ಹೆಸರು		೧೧ ೦ ೦	೯ ೪ ೦
ಉದ್ದು		೧೩ ೦ ೦	೧೦ ೦ ೦
ಕಡಲೆ		೧೨ ೮ ೦	೯ ೮ ೦
ಎಳ್ಳು ಸೇರು ೧೨೭ಕ್ಕೆ		೧೭ ೦ ೦	೧೫ ೦ ೦
ಹುರುಳಿ		೮ ೦ ೦	೮ ೬ ೦
ಹರಳು ೧೨೭ ಸೇರಿಗೆ		೧೪ ೦ ೦	೧೨ ೦ ೦
ಸೀಗೇಕಾಯಿ ಮಣ ೧ಕ್ಕೆ		೨ ೦ ೦	೨ ೦ ೦
ಮೆಣಸಿನಕಾಯಿ		೪ ೧೨ ೦	೩ ೪ ೦
,, ದುಯ್ಯಂ		೪ ೮ ೦	೩ ೦ ೦
ಬೆಲ್ಲ ದೊಡ್ಡ ಅಚ್ಚು		೮ ೮ ೦	ಮ ೨ ೪ ೦
ಒಣಗಿದ ಮಣ ೧ಕ್ಕೆ		೫ ೦ ೦	೪ ೮ ೦
ಹರಳೆಣ್ಣೆ ,,		೫ ೮ ೦	೪ ೬ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೧೦ ೦ ೦	೯ ೦ ೦
ಉಪ್ಪು ,,		೬ ೦ ೦	೫ ೮ ೦
ಹುಣಸೇ ಹಣ್ಣು		೨ ೪ ೦	೧ ೧೦ ೦
,, ಹಳೇದು		೨ ೦ ೦	೧ ೮ ೦
ತುಪ್ಪ ಮಣ ೧ಕ್ಕೆ		೧೬ ೮ ೦	೧೪ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೪ ೦	೪ ೨ ೦
ತೆಂಗಿನಕಾಯಿ ೧೦೦ಕ್ಕೆ		೫ ೦ ೦	೫ ೦ ೦
ಅಡಿಕೆಕಾಯಿ ಮಣ ೧ಕ್ಕೆ		೦ ೧೨ ೦	೦ ೧೨ ೦
ಅಂಟುವಾಳದ ಕಾಯಿ ಮಣ ೧ಕ್ಕೆ		೦ ೧೨ ೦	೦ ೧೨ ೦
ಹತ್ತಿ (ಸೌಕಾ) ಕೆಂಪು		೧೫ ೯ ೦	೧೫ ೬ ೦
,, ,, ಪಶಿಮೆ		೧೬ ೦ ೦	೧೫ ೮ ೦
,, ,, ಗಟ್ಟಿ ತೂಕ ೧ಕ್ಕೆ		೨೪ ೮ ೦	೨೪ ೬ ೦
ದಪ್ಪ ಗಟ್ಟಿ ತೂಕ ೧೦೦ಕ್ಕೆ		೬೭ ೪ ೦	೬೪ ೦ ೦

ತಾಲ್ಲೂಕು ವರ್ತಮಾನಗಳು

ಕೊಪ್ಪದ ತಾ|| ಯಡ್ಡಾಡಿ ಗ್ರಾಮ — ಈ ಪ್ರಾಂತ್ಯದಲ್ಲಿ ಪೈರೆಲ್ಲಾ ಕಟಾವಾಗಿ ಧಾನ್ಯವೆಲ್ಲಾ ಒಳಬಿತ್ತು. ಈ ವರ್ಷ ಫೈರು ಪಕ್ವವಾಗುವುದಕ್ಕೆ ಉತ್ತಮ ಸ್ಥಿತಿ ಇಲ್ಲದೆ ದವಸ ಧಾನ್ಯವೆಲ್ಲಾ ಸ್ವಲ್ಪ ಅಗ್ಗವಾಗಿದೆ. ಬಡವರ ಜೀವನಕ್ಕೆ ಸ್ವಲ್ಪ ಅನುಕೂಲವಾಯಿತು. ಈಗ ಸ್ವಲ್ಪ ಮೋಡಮುಚ್ಚಿ ಇದೆ. ಹದವಿರುವ ಗದ್ದೆಗಳನ್ನು ಉಳುತ್ತಾರೆ — ಮೊನ್ನೆ ತಾ ೧೨ ರಲ್ಲಿ ಕಡೂರ್ ಡಿ|| ಡೆಪ್ಯುಟಿ ಕಮಿಷನರ್ ಸಾಹೇಬರವರ ಸವಾರಿಯು ಶೃಂಗೇರಿಗೆ ದಯಮಾಡಿ, ಜವಾಬು ತೀರಿಸಿಕೊಂಡು ಗಂಗಾಮೂಲಕ್ಕೆ ಚಿಕ್ಕಮಗಳೂರು ಮಾರ್ಗವಾಗಿ ಸವಾರಿಯು ದಯಮಾಡಿಸುವ ರಸ್ತೆಯನ್ನು ಈ ಗ್ರಾಮದ ಪಟೇಲರವರು ತೋರಣಗಳಿಂದ ಅಲಂಕರಿಸಿದ್ದರು. ಪಟೇಲರವರು ಗ್ರಾಮಪಾರುಪತ್ಯದ ವಿಷಯಗಳನ್ನು ಅರಿತು ತಮ್ಮ ಗ್ರಾಮಸ್ಥರಿಗೆ ಪ್ರೋತ್ಸಾಹ ಕೊಡುತ್ತಾ ತಮ್ಮ ಕೆಲಸವನ್ನು ಬಹು ಶ್ರದ್ಧೆಯಿಂದ ನೋಡುತ್ತಾರೆ — ಈ ಕಾಲದಲ್ಲಿಯೂ ಬಿಟ್ಟಿಯ ಹಾವಳಿಯು ತಪ್ಪಲಿಲ್ಲವೆಂತಲೂ ಮತ್ತು ಉತ್ಸವ ತಮಾಷೆಗಳನ್ನು ನೋಡುವದಕ್ಕೆ ಊರಿಂದೂರಿಗೆ ಹೋಗುವದು ಕಷ್ಟವೆಂತಲೂ ಮೊನ್ನೆ ನಡೆದ ಒಂದು ಸಂಗತಿಯಿಂದ ಕಾಣುತ್ತದೆ.

ಕೊಪ್ಪ — ಈ ಕೊಪ್ಪದ ಪ್ರಾಂತ್ಯವು ಭಾರಿ ಕಾಡುಗಳಿಂದ ಕೂಡಿದ್ದಾಗಿರುವುದರಿಂದ ಹುಲಿ ಚಿರತೆಗಳು ಸೇರಿಕೊಂಡು ಬಡ ರೈತ ಪ್ರಜೆಗಳ ದನಕರುಗಳನ್ನು ಹಿಡಿದು ಬಹಳವಾಗಿ ನಷ್ಟಪಡಿಸುತ್ತಾ ಇರುತ್ತವೆ. ದೃಷ್ಟಾಂತವಾಗಿ ಕಳೆದ ೧೬ ನೇ ತಾ ಭಾನುವಾರದ ರಾತ್ರಿ ಕುಂಬಾರ ಕೊಪ್ಪದ ಗ್ರಾಮದಲ್ಲಿ ಒಂದು ಮನೆ ಹತ್ತಿರ ಇರುವ ಕೊಟ್ಟಿಗೆಯೊಳಗೆ ಕಟ್ಟಿಹಾಕಿದ್ದ ಒಂದು ಹಸುವನ್ನು ಹುಲಿಯು ಒಳಕ್ಕೆ ನುಗ್ಗಿ ಹಿಡಿಯಲು ಹಸುವು ಅರಚಿಕೊಳ್ಳಲು ಅದನ್ನು ಕೇಳಿ ೧ ನೇ ಮನೆಯವರು ಎದ್ದು ಹುಡುಗನೂ ಧಣಿಯೆಂಬ ಆಳೂ ಕೂಗಿಕೊಂಡಾಗ್ಯೂ ಹಸುವನ್ನು ಹುಲಿಯು ಬಿಡಲಿಲ್ಲ. ಇದನ್ನು ಕಂಡು ಆಳು ಒಂದು ಕೋವಿ ಮದ್ದನ್ನು ಹಾರಿಸಲು ಹುಲಿಯು ಹಸುವನ್ನು ಎತ್ತಿಕೊಂಡು ಕೊಟ್ಟಿಗೆಗೆ ೧ ಗಜಗಳ ದೂರದಲ್ಲಿ ಬಿಟ್ಟು ಓಡಿಹೋಯಿತು. ಮಾರನೇ ದಿನ ೧೦ ಗಂಟೆ ರಾತ್ರಿ ಅದು ಮತ್ತೆ ಬಂದು ಅಲ್ಲಿಯೇ ಬಿದ್ದಿದ್ದ ಹಸುವಿನ ಅರ್ಧ ಭಾಗವನ್ನು ತಿಂದು ಹೋಯಿತು. ಸರ್ಕಾರದವರ ಅಪ್ಪಣೆಯು ಬೇಕಾಗಿದ್ದುದರಿಂದ ಆ ದುಷ್ಟಮೃಗವನ್ನು ಕೊಲ್ಲದೆ ಬಿಟ್ಟು ಬಡ ರೈತರು ನಷ್ಟಪಡಬೇಕಾಗಿದೆ. ಇದು ಮಾತ್ರವಲ್ಲದೆ ಈ ಗ್ರಾಮಕ್ಕೆ ಸೇರಿದ ನಾಲ್ಕೈದು ಗ್ರಾಮಗಳಲ್ಲಿ ವರ್ಷ ವರ್ಷಗಳಿಂದ ಅನೇಕ ದನಕರುಗಳನ್ನು ಕೊಂದು ಸುಮಾರು ೫೦೦ ರೂಪಾಯಿಗಳ ರಾಸುಗಳನ್ನು ನಷ್ಟಪಡಿಸಿರುತ್ತವೆ. ಈ ತೊಂದರೆಯಿಂದ ತಪ್ಪಿಸಿಕೊಳ್ಳಲು ಸಿಕಾರಿ ಲೈಸೆನ್ಸಿಗಾಗಿ ಕಳೆದ ಡಿಸೆಂಬರ್ ತಿಂಗಳಲ್ಲಿಯೇ ಅರ್ಜಿಯನ್ನು ಕೊಟ್ಟಿರುತ್ತಾರೆ. ಆದರೆ ಇದುವರೆವಿಗೂ ಲೈಸೆನ್ಸು ಸಿಕ್ಕಲಿಲ್ಲ. ದಯಾಳುಗಳಾದ ಗವರ್ನಮೆಂಟಿನವರು ಬಡ ರೈತರ ಮೇಲೆ ಅಂತಃಕರುಣವಿಟ್ಟು ಈ ದುಷ್ಟಮೃಗಗಳ ಸಂಹಾರಕ್ಕೆ ಲೈಸೆನ್ಸನ್ನು ಕೊಡಿಸಿ ಕಾಪಾಡುವರೆಂದು ಪ್ರಾರ್ಥಿಸುತ್ತೇವೆ.

ಸೋಮವಾರಪೇಟೆ — ಜನವರಿ ತಾ ೨೫ ನೇ ಮಂಗಳವಾರ ಈ ಸೋಮವಾರಪೇಟೆ ಹೊಸ ಸ್ಕೂಲು ಕಟ್ಟಡದ ಪ್ರವೇಶ ಮಹೋತ್ಸವವು ಅತಿ ವಿಜೃಂಭಣೆಯಿಂದ ಜರುಗಿತು. ಇದಕ್ಕೆ ಸೋಮವಾರಪೇಟೆ ಸಾಹುಕಾರರು ಮೆ|| ಬಿ. ಡಿ. ಚನ್ನಬಸಪ್ಪಶೆಟ್ರು ಐದು ಸಹಸ್ರ ರೂಪಾಯಿ ಉಚಿತವಾಗಿ ಕೊಟ್ಟಿದ್ದರು. ಸುಮಾರು ೪ ಘಂಟೆ ಸಮಯದಲ್ಲಿ ಮ್ಯುನಿಸಿಪಲ್ ಮೆಂಬರುಗಳು ಶೆಟ್ಟಿವರ್ತಕರು, ಸರ್ಕಾರಿ ಉದ್ಯೋಗಸ್ಥರು ಮುಂತಾದವರು ಕದಳೀ ಮಾವಿನ ತಳಿರುಗಳಿಂದ ಅಲಂಕೃತವಾದ ಚಪ್ಪರದೊಳಗೆ ಸೇರಿದರು. ಸಾಯಂಕಾಲ ೫ ೩೦ ಘಂಟೆ ಕಾಲಕ್ಕೆ ಸರಿಯಾಗಿ ಕೊಡಗು ದೇಶದ ಚೀಫ್ ಕಮಿಷನರ್ ಮೆ|| ಎಸ್. ಎಂ. ಫ್ರೇಸರ್ ಸಾಹೇಬರವರು ಕೊಡಗು ದೇಶದ ಕಮಿಷನರ್ ಸಾಹೇಬರವರ ಜೊತೆಗೆ ಸ್ಕೂಲಿಗೆ ದಯಮಾಡಿದರು. ಕೂಡಲೆ ಮೆ|| ಬಿ. ಡಿ. ಚನ್ನಬಸಪ್ಪಶೆಟ್ರು ಅವರನ್ನು ಎದುರುಗೊಂಡು ಉನ್ನತವಾದ ಆಸನದಲ್ಲಿ ಕೂರಿಸಿ ಅಡ್ರೆಸ್ಸನ್ನು ಒಪ್ಪಿಸಿ ಪ್ರವೇಶಮಹೋತ್ಸವ ಆರಭಿಸಬೇಕಾಗಿ ಕೇಳಿಕೊಂಡರು. ಕೂಡಲೆ ಸಾಹೇಬರವರು ಸಾಹುಕಾರರು ತಯಾರಿಸಿದ ಬೆಳ್ಳಿ ಬೀಗದಕ್ಕೆಯಿಂದ ಬಾಗಿಲು ತೆರೆದು ಒಳಗೆ ಪ್ರವೇಶಿಸಿದರು. ಅನಂತರ ಸ್ಕೂಲು ವಿದ್ಯಾರ್ಥಿಗಳು ಇಂಪಾದ ಗಾನವನ್ನು ಹಾಡಿದರು. ಆ ಮೇಲೆ ಹುಡುಗರು ಅಭ್ಯಾಸಮಾಡಿದ ಒಂದು ನಾಟಕ ಆಡಿದರು. ಸ್ಕೂಲು ಸ್ಪೆ|| ಇನ್ಸ್ಪೆಕ್ಟರು ಎದ್ದುನಿಂತು ಕೆಲವು ಮಾತುಗಳನ್ನಾಡಿ ಹುಡುಗರಿಗೆ ಸಾಹೇಬರವರ ಸ್ವಹಸ್ತದಿಂದ ಇನಾಮುಗಳನ್ನು ದಯಪಾಲಿಸಿದರು. ಬಳಿಕ ಸಾಹೇಬರು ಎದ್ದುನಿಂತು ಸಾಹುಕಾರರುಗಳಿಗೆ ಮತ್ತು ಇತರ ದೊಡ್ಡ ಮನುಷ್ಯರಿಗೆ ಜನೋಪಕಾರ ಕಾರ್ಯಗಳ ಮೇಲೆ ನಿರಂತರ ದೃಷ್ಟಿ ಇಡಬೇಕೆಂದು ಹೇಳಿ ಅವರುಗಳಿಗೆ ವಂದನೆಮಾಡಿದರು. ಅಲ್ಲದೆ ಆ ಸಮಯ ಗೈರ್‌ಹಾಜರು ಆಗಿದ್ದ ಹಾಲಿಕಟ್ಟೆ ಮೆ|| ಹನುಮನಮೋತ್ತಿಯವರು ಪಬ್ಲಿಕ್ ಪ್ರಯೋಜನಕ್ಕೆ ಗವರ್ನಮೆಂಟಿನವರ ವಶಕ್ಕೆ ಐದು ಸಹಸ್ರ ರೂಪಾಯಿಗಳನ್ನು ಕೊಟ್ಟದ್ದಕ್ಕಾಗಿ ಅವರನ್ನು ಕೊಂಡಾಡಿದರು. ಮೆ|| ಚನ್ನಬಸಪ್ಪಶೆಟ್ರು ಮೆ|| ಹನುಮನಮೋತ್ತಿಗಳೂ ಮಾಡಿದ ಧರ್ಮಕಾರ್ಯಗಳನ್ನು ಇಲ್ಲಿಯ ಸರ್ವಜನರೂ ಹೊಗಳುತ್ತಾರೆ.

ಪಟಗೇನಹಳ್ಳಿ — ಇಲ್ಲಿನ ಆರೋಗ್ಯಸ್ಥಿತಿಯು ಬಹಳ ಚನ್ನಾಗಿದೆ. ಈ ದೇಶದಲ್ಲಿ ಎಷ್ಟು ಸುಭಿಕ್ಷ ತೋರಿದರೂ ಇಲ್ಲಿನ ದುರ್ಭಿಕ್ಷ ಮಾತ್ರ ಇನ್ನೂ ಊರುಬಿಡಲು ವ್ಯಸನಪಡುತ್ತಿರುವದು. ಅಕ್ಕಿ ರೂಪಾಯಿಗೆ ೬ ಸೇರಿನಂತೆಯೂ, ರಾಗಿ ೧೬ ಸೇರಿನಂತೆಯೂ ಇದೆ — ಊರ ಮುಂದೆ ಕಟ್ಟುತ್ತಿರುವ ಸ್ಕೂಲ್ ಕಟ್ಟಡವು ಇನ್ನೂ ಪೂರೈಸಲಿಲ್ಲ. ಕಂಟ್ರಾಕ್ಟರ್ ಪುಲಿ ಎನ್ನುವವನು ಕೆಲಸವನ್ನು ೬ ತಿಂಗಳಿಂದ ನಿಲ್ಲಿಸಿದ್ದು ೧೦—೧೫ ದಿನಗಳಿಂದೀಚೆಗೆ ಮತ್ತೆ ಶುರು ಮಾಡಿರುತ್ತಾರೆ. ೨-೩ ತಿಂಗಳಲ್ಲಿಯೇ ಕಟ್ಟಡದ ಕೆಲಸ ಪೂರೈಸಿ ಇಲಾಖಾ ಸ್ವಾಧೀನಕ್ಕೆ ಬರಬಹುದೆಂದು ನಿರೀಕ್ಷಿಸುತ್ತೇವೆ — ಈ ಊರಿಗೆ ಸಮೀಪವಾಗಿರುವ ಕಾಚಹಳ್ಳಿಯಲ್ಲಿ ಅಕ್ಕಸಾಲಿ ಯಲ್ಲಪ್ಪನೆಂಬುವನು ಖೋಟಾನಾಣ್ಯಗಳನ್ನು ಮಾಡಿ ಚಲಾಯಿಸುತ್ತಿದ್ದನೆಂತಲೂ, ಪತ್ತೆಮಾಡುವಾಗ್ಗೆ ನಾಣ್ಯಗಳು ಮಾಡುವ ಅಚ್ಚು ಮತ್ತು ಕೆಲವು ನಾಣ್ಯಗಳ ಸಮೇತ ಸಿಕ್ಕಿ ಪೋಲೀಸಿನವರ ವಿಚಾರಣೆಯಲ್ಲಿರುವನೆಂತಲೂ ಕೇಳುತ್ತೇವೆ — ಇಲ್ಲಿನ ಸ್ಕೂಲ್ ಹೆಡ್ ಮಾಸ್ಟರ್ ಮೆ|| ಆರ್. ಶ್ರೀನಿವಾಸರಾಯರು ಮೈಸೂರು ನಾರ್ಮಲ್ ಸ್ಕೂಲ್ ಪಂಡಿತ ಪರೀಕ್ಷೆಗೆ ಚುನಾಯಿಸಲ್ಪಟ್ಟರು. ಇವರ ಬದಲಿಗೆ ಎಚ್. ಕೃಷ್ಣಪ್ಪನವರು ಹೆಡ್ ಮಾಸ್ಟರಾಗಿ ಬದಲಿ ನಿಯಮಿಸಿರುವರು. ತಾ ೨೨ ನೇ ಶುಕ್ರವಾರ ಪ್ರಾರ್ಥಮಿಕ ಸ್ಕೂಲ್ ಕಟ್ಟಡದಲ್ಲಿ ಕಮಿಟಿ ಮೆಂಬರುಗಳು ಮತ್ತು ದೊಡ್ಡ ಮನುಷ್ಯರುಗಳು ಸಹ ಹೆಡ್ ಮಾಸ್ಟರ ಅಧ್ಯಕ್ಷತೆಯಿಂದ ಸಭೆ ಸೇರಿಸಲ್ಪಟ್ಟು, ಅಧ್ಯಕ್ಷರಿಂದ ಸ್ಕೂಲಿನ ಅಭಿವೃದ್ಧಿ ವಿಷಯವಾದ ಉಪನ್ಯಾಸ ಮಾಡಲ್ಪಟ್ಟಿತು. ಪಾರಶಾಲಾಧ್ಯಾಪಕರಾದ ವೇ|| ರಾಮದಾಸಶಾಸ್ತ್ರಿಗಳವರ ಎಚ್. ಕೃಷ್ಣಪ್ಪನವರ ಮತ್ತು ತೋಟದಯ್ಯನವರ ಉಪನ್ಯಾಸಗಳು ನಡೆದವು. ಇವರು ಕೋಲಾರ್ ಪೇಟೆಯಿಂದ ವರ್ಗಪಟ್ಟು ಬಂದು ಸ್ವಲ್ಪದಿನಗಳಾದಾಗ್ಯೂ ಆ ಅಲ್ಪ ಕಾಲದಲ್ಲಿ ಈ ಸ್ಕೂಲಿನಲ್ಲಿ ನೂತನವಾಗಿ ಮಾಡಿರುವ ಏರ್ಪಾಡುಗಳು ಬಹಳ ತೃಪ್ತಿಕರವಾದವುಗಳೆಂದು ಅನೇಕರಿಂದ ಕೊಂಡಾಡಲ್ಪಡುತ್ತಿರುವವು. ೧೬೦ ಕ್ಕೆ ಮೇಲ್ಪಟ್ಟ ವಿದ್ಯಾರ್ಥಿಗಳ ಸಂಖ್ಯೆಯೂ, ೭ ಜನ ಮಾಸ್ಟರುಗಳ ಸಹಾಯವೂ ಉಳ್ಳ ಈ ಸ್ಕೂಲನ್ನು ಗೌರ್ನಮೆಂಟಿನವರು ಗಮನಕ್ಕೆ ತಂದು ಮಿಡಲ್ ಸ್ಕೂಲನ್ನಾಗಿ ಮಾಡಿ ಕಾಪಾಡುವರೆಂದು ಮುಂದಾಗಿ ಕೋರುತ್ತೇವೆ. ಎಂದ ಮೇಲೆ ಸಭೆಯವರಿಂದ ಪ್ರೀತಿಪೂರ್ವಕವಾಗಿ ತೆಗೆಸಲ್ಪಟ್ಟದ್ದ ಒಂದು ಫೋಟೋಗ್ರಾಫಿನ ಕಾಪಿಯೊಂದು ಕೊಡಲ್ಪಟ್ಟಿತು. ಅನಂತರ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು.

ಅರಕಲಗೂಡು — ಈಗ ಈ ಊರಿನ ಹವಾ ಬದಲಾಯಿಸಲ್ಪಟ್ಟಿದೆ. ಕೆಲವು ಮನೆಗಳಲ್ಲಿ ಜನರು ಚಳಿ ಜ್ವರದಿಂದ ಕಾಯಿಲೆಯಾಗಿದ್ದಾರೆ. ಆಸ್ಪತ್ರೆ ವೈದ್ಯರ ಚಿಕಿತ್ಸೆಯು ತೃಪ್ತಿಕರವಾಗಿದೆ — ಇಲ್ಲಿಗೆ ಹೊಸ ಅಮಲ್ದಾರಾದ ಮೆ|| ರಾಜಗೋಪಾಲಚಾರ್ಯರವರು ಬಂದನಂತರ ಪ್ರಜೆಗಳ ಪ್ರಯೋಜನಕ್ಕಾಗಿ ಮಾಡಿರುವ ಏರ್ಪಾಡುಗಳು ಜನರ ಮನಸ್ಸುಗಳಲ್ಲಿ ಸಂತೋಷವನ್ನು ಉಂಟುಮಾಡಿವೆ. ಊರಿನ ಪಾಕೀಜಾ ವಿಷಯ ಚನ್ನಾಗಿದೆ. ಊರು ಸುತ್ತಲೂ ಮತ್ತು ತಾಲ್ಲೂಕಿನಲ್ಲಿ ಅಲ್ಲಲ್ಲಿ ಬೆಳೆದುಕೊಂಡು ಇದ್ದಂಥಾ ಉಣ್ಣೆ ಬೇಲಿಯನ್ನು ೨-೩ ಸಾವಿರ ರೂಪಾಯಿ ಖರ್ಚುಮಾಡಿ ಕಡಿಸಿ ಜನರಿಗೆ ಭೀತಿಯನ್ನುಂಟುಮಾಡತಕ್ಕಂಥ ವಿಷಜಂತುಗಳ ಕಾಟ ದುಷ್ಟಮೃಗಗಳ ಭಯದಿಂದಲೂ ಕಳ್ಳರ ಕಾಟದಿಂದಲೂ ತಪ್ಪಿಸಿದಾರೆ. ನಾಲ್ಕುದಾರಿಗಳ ಪ್ರತಿ ಒಂದು ಗಿಡದ ಬುಡದಲ್ಲಿಯೂ ಸುಣ್ಣಹಚ್ಚಿದ ಒಂದೊಂದು ಕಲ್ಲನ್ನು ನೆಟ್ಟಿಸಿ ನಂಬರು ಹಾಕಿಸಿ ಇದುವರೆವಿಗೂ ಯಾರೂ ಮಾಡದೆ ಇದ್ದ ಕೆಲಸವನ್ನು ಮಾಡಿ ಪೂರೈಸಿ ಸರ್ಕಾರದ ಧರ್ಮವನ್ನು ಕಾಪಾಡುತ್ತಿದಾರೆ. ಇವರ ಕಾಲದಲ್ಲಿ ದೊಡ್ಡ ಮನುಷ್ಯರ ಸಂತೋಷಕ್ಕಾಗಿ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿ ಅನೇಕರ ಮನಸ್ಸುಗಳಿಗೆ ಸಂತೋಷವನ್ನು ಉಂಟುಮಾಡಿರುವದಲ್ಲದೆ ಎ. ವಿ. ಸ್ಕೂಲ್ ಕಾಂಪೌಂಡಿನೊಳಗೆ ಒಂದು ಟೆನ್ನಿಸ್ ಗ್ರೌಂಡನ್ನು ಮಾಡಿಸಿದರೆ. ಇವರು ಯಥಾರ್ಥವಾಗಿಯೂ ಸತ್ಯವಾಗಿಯೂ ತಮ್ಮ ಬಳಿಗೆ ಬರತಕ್ಕ ಫಿರ್ಯಾದಿಗಳಿಗೆ ಒಟ್ಟುಮಟ್ಟಿಯಿಂದ ನ್ಯಾಯವನ್ನು ತೀರಿಸಿ ಅವರ ಮನಸ್ಸುಗಳನ್ನು ಸಂತೋಷಪಡಿಸುತ್ತಾರೆ. ಒಬ್ಬರನ್ನಾದರೂ ಮಾತುಗಳಿಂದ ನೋಯಿಸತಕ್ಕವರಲ್ಲ — ಕಳೆದ ಜನವರಿ ತಾ ೧೮ನೇ ಮಂಗಳವಾರ ಈ ತಾಲ್ಲೂಕಿಗೆ ಸೇರಿದ ರಾಮನಾಥಪುರವೆಂಬ ಗ್ರಾಮದಲ್ಲಿ ಬಹು ಪುರಾತನವಾದ ಸುಬ್ರಮಣ್ಯಸ್ವಾಮಿ ಎಂಬ ವಿಗ್ರಹವನ್ನು ೨೦೦ ರೂಪಾಯಿ ಬಾಳುವ ಒಡವೆ ವಸ್ತುಗಳನ್ನು ಧರಿಸಿ ಅಲಂಕರಿಸಿ ದೇವಸ್ಥಾನದಲ್ಲಿ ಇಟ್ಟಿರುವ ಗರ್ಭಗೃಹ ಬಹು ಆಶ್ಚರ್ಯವಾಗಿ ಒಡವೆ ವಸ್ತುಗಳನ್ನು ಧರಿಸಿದ್ದ ದೇವರನ್ನು ಕಳ್ಳರು ಕದ್ದುಕೊಂಡು ಹೋದರೆಂದು ಜನರಲ್ಲಿ ವರ್ತಮಾನವುಂಟು. ಈ ಕಳುವಿನ ಪತ್ತೆಗೋಸ್ಕರ ಇಲ್ಲಿ ಅಮಲ್ದಾರರವರೂ ಪೋಲಿಸ್ ಇನ್ಸ್‌ಪೆಕ್ಟರವರೂ ತಮ್ಮ ಕಡೆಯ ಪೋಲೀಸ್ ಸಿಬ್ಬಂದಿಯನ್ನೂ ಪರ ಊರಿನ ಪೋಲೀಸನವರನ್ನೂ ಕರೆದುಕೊಂಡು ಹೋಗಿ ಬಹು ಪ್ರಯಾಸದಿಂದ ಪತ್ತೆಮಾಡಿಸುತ್ತಾ ಇದ್ದರೆ ಇನ್ನೂ ಮಾಲುಗಳು ಪತ್ತೆ ಆಗಲಿಲ್ಲವೆಂದು ಜನರು ಹೇಳಿಕೊಳ್ಳುತ್ತಾರೆ. ಪುರಾತನ ಕಾಲದಿಂದಲೂ ಭಕ್ತರ ನಂಬಿಕೆಗೆ ಆಶ್ರಯವಾಗಿದ್ದ ಈ ವಿಗ್ರಹವನ್ನೇ ಕಳ್ಳರು ಹೊತ್ತುಕೊಂಡು ಹೊರಟುಹೋದ ಮೇಲೆ ಮುಂದೆ ಭಕ್ತರ ಪಾಡೇನೋ ವಾಚಕರೇ ತಿಳಿದುಕೊಳ್ಳಲಿ.

ಯಡತೊರೆ — ಕಳೆದ ಗುರುವಾರ ತಾ ೨೦ ನೇ ತಾರೀಖು ಈ ತಾಲ್ಲೂಕು ಹೊಸ ಅಗ್ರಹಾರದ ಹೋಬಳಿ ಕಾಚಿನಕೆರೆ ಎಂಬ ಗ್ರಾಮದಲ್ಲಿ ಸುಮಾರು ರಾತ್ರಿ ೯-೧೦ ಘಂಟೆ ಹೊತ್ತಿನಲ್ಲಿ ಯಾರೋ ಕಾಳೇಗೌಡನ ಮಗ ಪುಟ್ಟೇಗೌಡನ ಮನೆಗೆ ಬೆಂಕಿ ಹಾಕಲು ಮೊದಲು ಸ್ವಲ್ಪ ಸ್ವಲ್ಪವಾಗಿ ಹತ್ತುತ್ತಾ ಕೊನೆಗೆ ಉರಿಯು ಏಳಲು ಒಳಗೆ ಮಲಗಿಕೊಂಡಿದ್ದ ಪುಟ್ಟೇಗೌಡನು ಜಾಗ್ರತೆ ಎದ್ದು ಸಾಮಾನುಗಳ ಸಮೇತವಾಗಿ ಹೆಂಗಸರು ಮಕ್ಕಳುಗಳನ್ನೆಲ್ಲಾ ಎತ್ತಿಕೊಂಡು ಹೊರಕ್ಕೆ ಓಡಿಬಂದು ಗಲಾಟೆಯನ್ನು ಮಾಡಿದನು. ನೆರೆಹೊರೆಯವರೆಲ್ಲಾ ಪ್ರಾಣಭಯದಿಂದ ಎದ್ದು ತಮ್ಮ ತಮ್ಮ ಜಾಗರೂಕತೆಯಲ್ಲಿ ತಾವಿರುವಷ್ಟು ಹೊತ್ತಿಗೇನೇ ಪುಟ್ಟೇಗೌಡನ ಮನೆಯಿಲ್ಲಾ ಬಿದ್ದು ಮಗ್ಗುಲಲ್ಲಿರುವ ಮನೆಗಳಿಗೆ ಉರಿ ಚಾಚಲು ಭುಗಿಲೆದ್ದಿತು. ಆಗ ಅದಕ್ಕೆ ಮಾರಿಗೆ ಎರಡು ಮೂರು ಮನೆಗಳು ಹತ್ತಿಕೊಳ್ಳಲು ಎಲ್ಲರೂ ಬೆಂಕಿಯ ಪಾಲಿಗೆ ಹೆದರಿ ಹಿಮ್ಮೆಟ್ಟಿದರು. ಆಗ ಅದೇ ಗ್ರಾಮದ ಆಸಾಮಿ ಗೌಡ ಮುದಿಗುಪ್ಪೆ ಮಾಕೇಗೌಡ ದೊಡ್ಡ ಹಳ್ಳಿ ಜವರೇಗೌಡ ಈ ೩ ಜನಗಳೂ ಧೈರ್ಯವನ್ನು ತಾಳಿ ಸಮೀಪದಲ್ಲಿ ಹರಿಯುತ್ತಿದ್ದ ನಾಲೆಯೊಳಗೆ ನೀರನ್ನು ಬಹು ಪ್ರಯಾಸದಿಂದ ತಂದು ಸಾಧ್ಯವಾದ ಮಟ್ಟಿಗೂ ಬೆಂಕಿಯನ್ನು ಆರಿಸುತ್ತಾ ಬಂದರು. ಅಷ್ಟು ಹೊತ್ತಿಗೆ ಸುಮಾರು ೮-೧೦ ಮನೆಗಳು ಸುಟ್ಟುಹೋದವು. ಇವರುಗಳು ಆ ದಿವಸ ಅಲ್ಲಿ ಇಲ್ಲದೇ ಇದ್ದರೆ ಊರೆಲ್ಲಾ ಸುಟ್ಟು ಭಸ್ಮವಾಗುತ್ತಿತ್ತು. ಸುಮಾರು ೧ ಮನೆಯಲ್ಲಿ ೩-೪ ಒಕ್ಕಲು ವಾಸವಾಗಿತ್ತು. ಅಂತೂ ೩೫ ಒಕ್ಕಲುಗಳಿಗೆ ಕಷ್ಟವುಂಟಾಯಿತು. ಬಾಗಾಯಿತು ಸರಿಯಾಗಿ ಹೊಟ್ಟೆಗೆ ಅನ್ನವಿಲ್ಲದೆ ನರಳುತ್ತಾ ಈ ಸುಗ್ಗೀ ಕಾಲವನ್ನು ಕಂಡು ಎಷ್ಟೋ ಕಷ್ಟವಾಗಿ ಕೂಲಿಕಾರರೆಲ್ಲಾ ಗದ್ದೆಯ ಕೆಲಸದಿಂದ ೪-೬ ತಿಂಗಳ ಗಂಜಿಯನ್ನು ಕೂಡಿಸಿ ಇಟ್ಟುಕೊಂಡಿದ್ದರು. ಇದೆಲ್ಲಾ ಸುಟ್ಟುಹೋಗಿದೆ. ಆದರೆ ಸುಮಾರು ೧೫೦೦-೨೦೦೦ ರೂಪಾಯಿ ಮಟ್ಟಿಗೆ ನಷ್ಟವಾಗಿಹೋಯಿತು. ಸರ್ಕಾರದವರು ಇವರನ್ನು ಯಾವ ರೀತಿ ಕಾಪಾಡಿಕೊಂಡು ಬರುತ್ತಾರೆಯೋ ನೋಡಬೇಕು. ಈ ವಿಷಯದಲ್ಲಿ ಗೌರ್ನಮೆಂಟಿನವರು ಈ ಅಪರಾಧವನ್ನು ಪರಾಂಬರಿಸಿ ತಕ್ಕ ಬಂದೋಬಸ್ತು ಮಾಡಿದರೆ ಮುಂದೆ ಇಂಥಾ ಅನಾಹುತಗಳು ನಡೆಯುವದಕ್ಕೆ ಆಸ್ಪದವಾಗಲಾರದೆಂದು ಬೇಡಿಕೊಳ್ಳುತ್ತೇನೆ. ಯಾಕೆಂದರೆ ಪ್ರತಿಯೊಂದು ಚಿಕ್ಕ ಚಿಕ್ಕ ಗ್ರಾಮಗಳಲ್ಲೂ ಎರಡು ಪಾರ್ಟಿಯಾಗಿ ಒಂದು ಪಾರ್ಟಿಯವರು ಇನ್ನೊಂದು ಪಾರ್ಟಿಯವರಿಗೆ ನಷ್ಟಪಡಿಸತಕ್ಕದ್ದು ಅನೇಕ ಕಡೆ ನಡೆಯುತ್ತಿರುವದು. ಆದ್ದರಿಂದ ಸರ್ಕಾರದವರು ದುಷ್ಟನಿಗ್ರಹ ಶಿಷ್ಟಪರಿಪಾಲಕರೆಂಬ ಆಚಂದ್ರಾರ್ಕವಾದ ಶ್ರೇಯಸ್ಸನ್ನು ಸಂಪಾದಿಸಿದರೆ ಜನಗಳಿಗೆ ಭಯ ಹುಟ್ಟಿ ಮುಂದೆ ಇಂಥಾ ಕೃತ್ಯಗಳು ನಡೆಯಲಾರವು.

ವನ್ನು ಹುಡುಕುವವರಿಗೂ ಕಷ್ಟದಲ್ಲಿ ಬಿದ್ದು ನರಳುತ್ತಿರುವವರಿಗೂ ಆತನು ಸತ್ಯೋಪದೇಶವನಾದಿ ಸಹಾಯ ಕೊಡುತ್ತಿದ್ದನು. ಇಂಥಾ ಪರಮಗುರುವಿನ ಬೋಧೆಯನ್ನು ಮೈಸೂರುದೇಶೀಯರೆಲ್ಲರೂ ತಿಳಿದು ಆತನ ಮೂಲಕ ಪಾಪವಿಮುಕ್ತರಾಗಿ ದೇವರ ಕೃಪಾಶ್ರಯಕ್ಕೆ ಪಾತ್ರರಾಗಲೆಂದು ವೆಸ್ಲಿಯನ್ ಮಿಷನ್ ಸಂಘದವರು ಹಾರೈಸುತ್ತಾರೆ. ಇಂಥಾ ಉದ್ದೇಶದಿಂದಲೇ ಅವರು ಪಾಠಶಾಲೆಗಳನ್ನೂ ಆಸ್ಪತ್ರೆಗಳನ್ನೂ ಕಟ್ಟಿಸಿ ಸಾವಿರಾರು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಲೂ ಸಾವಿರಾರು ರೋಗಿಗಳಿಗೆ ಔಷಧೋಪಚಾರ ಮಾಡುತ್ತಲೂ ಉಪಯುಕ್ತವಾದ ಪುಸ್ತಕಗಳನ್ನು ರಚಿಸುತ್ತಲೂ ಇನ್ನೂ ಅನೇಕತರವಾದ ಪರೋಪಕಾರಗಳನ್ನು ಮಾಡುತ್ತಲೂ ಬರುವರು. ಮೇಲ್ಕಂಡ ಸಂಘದವರು ಬರೀ ಮಾತುಗಾರರಾಗಿರದೆ ತಮ್ಮ ಸದುದ್ದೇಶಗಳನ್ನು ಕ್ರಿಯಾಪೂರ್ವಕವಾಗಿ ನೆರವೇರಿಸುತ್ತಿರುವರು. ವಾಚಕ ಮಹಾಶಯರೆಲ್ಲರೂ ಈ ಸಂಘಕ್ಕೋಸ್ಕರ ತಮ್ಮ ಕೈಲಾದ ಸಹಾಯಗಳನ್ನು ಮಾಡಿ ಅದರ ಕೆಲಸಗಳಿಂದ ಇನ್ನೂ ಹೆಚ್ಚಾದ ಜಯ ಉಂಟಾಗಲೆಂದು ಶ್ರೀ ಭಗವಂತನನ್ನು ದಿವಾರಾತ್ರ ಪ್ರಾರ್ಥಿಸಲಿ.

ಇಂಗ್ಲಿಷ್ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯು

ಕಳೆದ ತಿಂಗಳ ೨೯ನೇ ತಾರೀಖಿನ ವರೆಗೆ ಎಲಿಾಯತಿಯ ೬೭೨ ಸ್ಥಳಗಳಲ್ಲಿ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಗಳು ನಡೆದವು. ಹೀಗೆ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಯಾವ ಯಾವ ಪಂಗಡಕ್ಕೆ ಸೇರಿದವರೆಂದರೆ: ಲಿಬರಲ್ ಪಕ್ಷದ ಮೆಂಬರುಗಳು ೨೭೩ ಮಂದಿ, ಯೂನಿಯನ್ ಪಕ್ಷದವರು ೩೦೦, ಲೇಬರ್ ಪಕ್ಷದವರು ೪೦, ನಾಶನಲ್ ಪಕ್ಷದವರು ೮೦, ಇನ್ನೂ ಬಾಕಿ ಮಂದಿ ಪ್ರತಿನಿಧಿಗಳು ಈ ವಾರದಲ್ಲಿ ಚುನಾವಣೆಯಾಗಬೇಕಾಗಿದೆ. ಅಂತು ಲಿಬರಲ್ ಪಕ್ಷದವರೇ ರಾಜ್ಯಭಾರ ಕಾರ್ಯಗಳನ್ನು ವಹಿಸುವರು. ಹೊಸ ಪಾರ್ಲಿಮೆಂಟು ಈ ತಿಂಗಳು ತಾ ೧೫ಕ್ಕೆ ಒದಲಾಗಿ ತಾ ೨೧ಕ್ಕೆ ಪ್ರಾರಂಭವಾಗುವುದೆಂದು ತಂತೀ ವರ್ತಮಾನ ಬಂದಿದೆ.

ಒಳದೇಶದ ವೃತ್ತಾಂತಗಳು

ದಿವಾನ್ ಮ॥ ಟಿ ಆನಂದರಾಯರವರು ನಾಳೆ ಶನಿವಾರ ಮಧ್ಯಾಹ್ನ ರಾಜಧಾನಿಯಿಂದ ಚಿಕ್ಕಮಗಳೂರಿಗೆ ಪ್ರಯಾಣಮಾಡುವರೆಂದು ಕೇಳುತ್ತೇವೆ.

* * *

ಮೈಸೂರು ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿರುವ ಪರಸ್ಪರ ಸಹಾಯಕ ಸಂಘಗಳ ಜಮಾ ಖರ್ಚು ಮುಂತಾದ ಲೆಕ್ಕ ಪತ್ರಗಳನ್ನು ತನಿಖೆಮಾಡತಕ್ಕ ಅಧಿಕಾರವನ್ನು ರೆಜಿಸ್ಟ್ರಾರವರು ಮ॥ ಟಿ ವೆಂಕಟರಾಮಯ್ಯನವರಿಗೆ ವಹಿಸಿರುತ್ತಾರೆ.

* * *

ಈ ತಿಂಗಳು ತಾ ೧೪ ನೇ ಸೋಮವಾರ ಬರೋಡಾನಗರದ ಮಹಾರಾಜರವರು ಪರಿವಾರ ಸಮೇತ ಮೈಸೂರಿಗೆ ಬಂದು ಇಲ್ಲಿನ ಜಗನ್ಮೋಹನ ಬಂಗಲೆಯಲ್ಲಿ ನಮ್ಮ ಮಹಾರಾಜರವರ ಅತಿಥಿಗಳಾಗಿದ್ದು, ಬಳಿಕ ಕಾಕನಕೋಟೆ ಪ್ರಾಂತ್ಯಕ್ಕೆ ಹೋಗಿ ಶಿಕಾರಿಮಾಡಿಕೊಂಡು ಬರುತ್ತಾರೆಂದು ತಿಳಿದುಬಂದಿದೆ.

* * *

ಬೆಂಗಳೂರಿನ ಹತ್ತಿರ ಹೆಬ್ಬಾಳದಲ್ಲಿರುವ ಸರ್ಕಾರಿ ಪರೀಕ್ಷಾ ಭೂಮಿಯೊಳಗೆ ಈ ತಿಂಗಳ ೭ ನೇ ತಾ ನಿಂದ ತಾ ೧೧ ರ ವರೆಗೆ ಬೆಲ್ಲ ಮತ್ತು ಸಕ್ಕರೆಯನ್ನು ಹೊಸ ರೀತಿಯಾಗಿ ತಯಾರಿಸುವ ವಿಧಾನವನ್ನು ಪ್ರದರ್ಶನಮಾಡಿ ತೋರಿಸುತ್ತಾರೆ. ಇಷ್ಟವುಳ್ಳ ರೈತರೇ ಮೊದಲಾದ ಪ್ರಜೆಗಳು ಹೋಗಿ ನೋಡಿ ಕಲಿತುಕೊಂಡು ಬರಬಹುದಾಗಿದೆ.

* * *

ತುಮಕೂರು ಡಿಸ್ಟ್ರಿಕ್ಟು ಸೀರ್ಯದ ತಾಲ್ಲೂಕಿಗೆ ಸೇರಿದ ೩೨೪ ಗ್ರಾಮಗಳ ರೀಸರ್ವೆಸೆಟ್ಲ್ಮೆಂಟನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ. ಮೊದಲಿಗಿಂತಲೂ ಈ ಸರ್ವೆಯಿಂದ ಸರ್ಕಾರಿ ಕಂದಾಯದ ಉತ್ಪತ್ತಿಯು ೬,೦೬೭ ರೂಪಾಯಿ ಹೆಚ್ಚಾಗಿರುವುದು. ಈ ಹೊಸ ದರಗಳನ್ನು ೧೯೧೦ ೧೧ನೇ ಸರ್ಕಾರಿ ಸಾಲಿನಿಂದ ಜಾರಿಗೆ ತಂದು ಅದು ೩೦ ವರುಷಗಳ ತನಕ ನಿಗದಿಯಾಗಿರತಕ್ಕದ್ದೆಂದು ಹುಕುಂ ಆಗಿರುತ್ತದೆ.

* * *

ಬೆಂಗಳೂರಿನ ಮ॥ ವಾಟ್ಸನ ಎಂಬೊಬ್ಬ ಸ್ವಸ್ಥಾಧಿಪತಿಯೂ, ಮೈಸೂರಿನಲ್ಲಿರುವ ಮ॥ ತಿಯೊಬಾಲ್ಡ್‌ಯವರೂ ಕಳೆದ ವಾರ ರಾಜಧಾನಿಯ ಬಳಿ ಎರಡು ಚಿರತೆಗಳನ್ನು ಕೊಂದುಹಾಕಿದರು. ಇವು ಸಮೀಪದ ಗ್ರಾಮಾಂತರಗಳ ಕುರುಬರ ಕಾಡಿನಲ್ಲಿ ಸೇರಿಕೊಂಡು ಪ್ರಜಾಕಂಟಕಗಳಾಗಿದ್ದುವು. ಇಂಥಾ ಮೃಗಗಳು ಇನ್ನೂ ಕೆಲವು ಸೇರಿಕೊಂಡಿರುವಂತೆ ಕೇಳುತ್ತೇವೆ.

* * *

ತುಮಕೂರು ಡಿಸ್ಟ್ರಿಕ್ಟಿನ ಸೀರ್ಯ, ಮಾಲ್ಕಾಪುರ, ಗುಮ್ಮನಹಳ್ಳಿ, ಕಳ್ಳಕೋಟೆ, ಕುಸಕುಂಟೆ, ಹಲಕೂರು, ಚನ್ನನಕುಂಟೆ, ತಗ್ಗಿಹಳ್ಳಿ, ಪದ್ಮಪುರ, ಪ್ರೋಜಕುಂಟೆ ಎಂಬೀ ಪ್ರದೇಶದಲ್ಲಿ ತೊಂದುದಿನಗಳಿಗೆ ದುಗುರದ ರುಸುಮನ್ನು ವಸೂಲು ಮಾಡಿದರೂ ಜನಗಳು ತಮ್ಮ ಗೋಕಾಯಿಗಳನ್ನು ಜಮಾನುಗಳ ಮೇಲೆ ಬಿಡದಂತೆ ನೋಡಿಕೊಳ್ಳದೆ ಇರೋದರಿಂದ ಇನ್ನುಮುಂದೆ ಅಂಥಾ ತೊಂಡುದನಗಳ ವಾಲೀಕರನ್ನು ಮ್ಯಾಜಿಸ್ಟ್ರೇಟರ ವಿಚಾರಣೆಗೂ ಶಿಕ್ಷೆಗೂ ಗುರಿಮಾಡಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪಿಕೊಂಡಿದಾರೆ.

* * *

ಜೈನರ ಯಾತ್ರಾಸ್ಥಾನವಾದ ಶ್ರವಣಬೆಳುಗುಳದಲ್ಲಿ ಗೋಮಟೇಶ್ವರ ಸ್ವಾಮಿಯ ಮಹಾಮಸ್ತಕಾಭಿಷೇಕ ಪೂಜೆ ಉತ್ಸವಾದಿಗಳು ಮುಂದಿನ ಮಾರ್ಚ ತಾ ೧೪ರ ಲಾಗಾಯಿತು ಪ್ರಾರಂಭವಾಗಿ ತಾ ೩೦ರಲ್ಲಿ ಪೂರೈಸುವುವೆಂದೂ, ಬಳಿಕ ಅದೇ ಸಮಯದಲ್ಲಿ ಭಾರತವರ್ಷೀಯ ಜೈನದಿಗಂಬರ ಮಹಾ ಸಭೆಯು ನಡೆಯುವುದೆಂದೂ ತಿಳಿದುಬಂದಿದೆ. ಇವಕ್ಕಾಗಿ ಬಹು ದೂರದೇಶಗಳಿಂದ ಜೈನ ಪ್ರತಿನಿಧಿಗಳು ಸಾವಿರಾರು ಮಂದಿ ಬಂದು ಸೇರುವರು. ಇವರಿಗೆಲ್ಲಾ ಸ್ಥಳ ವಸತಿ ಮುಂತಾದದ್ದನ್ನು ಕಲ್ಪಿಸುವುದಕ್ಕೆ ಸ್ಥಳ ಮಹಸ್ಥಳದ ಮುಖಂಡರು ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡಲಾರಂಭಿಸಿದಾರೆ.

* * *

ಶ್ರೀಮನ್ ಮಹಾರಾಜರವರು ಯುವರಾಜರವರ ಸಮೇತ ನಾಳೆ ಬೆಳಿಗ್ಗೆ ೭-೩೦ ಗಂಟೆಗೆ ಮೋಟಾರ್ ಗಾಡಿಗಳಲ್ಲಿ ರಾಜಧಾನಿಯಿಂದ ಹೊರಟು, ಮಧ್ಯಾಹ್ನ ೧೧ ೩೦ ಕ್ಕೆ ಬೆಂಗಳೂರನ್ನು ತಲುಪಿ, ಅಲ್ಲಿಂದ ಸಾಯಂಕಾಲ ೫-೩೦ ಕ್ಕೆ ಗುಂಟಕಲ್ ಮೈಲ್ ಗಾಡಿಯನ್ನು ಹತ್ತಿ ಪ್ರಯಾಣಮಾಡಿ ಭಾನುವಾರ ಬೆಳಿಗ್ಗೆ ೬ ಗಂಟೆಗೆ ಬೊಂಬಾಯಿ ಪಟ್ಟಣದಲ್ಲಿ ಇಳಿಯುವರು. ಅಲ್ಲಿ ಸುಮಾರು ಎರಡು ವಾರಗಳತನಕ ನರೋತ್ತಮದಾಸರೆಂಬ ಸಾಹುಕಾರರ ಆತಿಥ್ಯವನ್ನು ಸ್ವೀಕರಿಸುವರೆಂದೂ, ಬಳಿಕ ಹಿಂತಿರುಗಿ ಬೆಂಗಳೂರಿಗೆ ದಯಮಾಡುವರೆಂದೂ ಕೇಳುತ್ತೇವೆ. ಇವರ ಕೂಡ ಮೂರನೇ ಮಹಾರಾಜಕುಮಾರಿಯರೂ ಬೊಂಬಾಯಿಗೆ ಹೋಗಿ ಬರುವರೆಂದು ವರ್ತಮಾನವಿದೆ.

ಮೈಸೂರು ಟ್ರಸ್ಟ್ ಬೋರ್ಡ್ ಮೀಟಿಂಗು.

ಹಿಂದಿನ ಬುಧವಾರ ಬೆಳಿಗ್ಗೆ ರಾಜಧಾನಿಯ ಪುರಾಭಿವೃದ್ಧಿಗಾಗಿ ಏರ್ಪಟ್ಟ ಟ್ರಸ್ಟ್ ಬೋರ್ಡಿನ ಮೆಂಬರುಗಳು ಇಲ್ಲಿನ ಟೌನ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ಇತ್ಯರ್ಥಮಾಡಿರುವ ಮುಖ್ಯ ವಿಷಯಗಳ್ಯಾವುವೆಂದರೆ,-

ಚಟ್ಟಿಹಳ್ಳಿ ಪ್ರಾಂತ್ಯದಲ್ಲಿ ಟ್ರಸ್ಟ್ ಬೋರ್ಡ್ ಇನ್‌ಜಿನಿಯರವರು ಹೊಸ ರೀತಿಯಾಗಿ ೧೪ ಮನೆಗಳನ್ನು ಕಟ್ಟಿಸಿ, ಕಾಮಗಾರಿಯೆಲ್ಲಾ ಪೂರೈಸಿದೆ ಎಂದೂ, ಈ ಮನೆಗಳನ್ನು ಮ್ಯುನಿಸಿಪಾಲಿಟಿಗೆ ವಹಿಸಬೇಕೆಂದೂ ಬರೆದಿದ್ದರು. ಈ ಮನೆಗಳನ್ನು ಮ್ಯುನಿಸಿಪಲ್ ಪ್ರೆಸಿಡೆಂಟರು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವಂತೆ ಬೋರ್ಡಿನಿಂದ ಅವರಿಗೆ ತಿಳಿಸಬೇಕೆಂದು ತೀರ್ಮಾನವಾಯಿತು.

ದೊಡ್ಡ ಪೇಟೆಯಲ್ಲಿ ನಗಗಳ ವ್ಯಾಪಾರಮಾಡುವ ತಂಕರೈಯನವರು ತಮ್ಮ ಅಂಗಡಿಯ ಮುಂದೆ ಇನ್‌ಜಿನಿಯರಿಂದ ಕಟ್ಟಿಸಲ್ಪಟ್ಟಿರುವ ಚರಂಡಿಯು ತೃಪ್ತಿಕರವಾಗಿಲ್ಲವೆಂದು ಆಕ್ಷೇಪಣೆ ಮಾಡಿದ್ದರು. ಇದರ ವಿಷಯದಲ್ಲಿ ಹೆಲ್ತ್ ಆಫೀಸರವರೂ ಇನ ಜನಿಯರವರೂ ಅನ್ಯೋನ್ಯ ವಿರುದ್ಧವಾದ ಅಭಿಪ್ರಾಯಗಳನ್ನು ಬರೆದಿದ್ದರು. ಮೆಂಬರುಗಳು ಅದನ್ನು ಓದಿಸಿ ಇಟ್ಟುಕೊಂಡಿದಾರೆ.

ದೊಡ್ಡ ಕೆರೆ ಏರಿಯ ಬಳಿ ಫಿರಂಗಿ ಮೈದಾನಿನ ಹತ್ತಿರ ಗ್ರಾಮಸಾರ ಹೋಗುವ ಭಾರೀ ಚರಂಡಿಯನ್ನು ಮಣ್ಣು ಹಾಕಿ ಮುಚ್ಚುವುದಕ್ಕೆ ೯,೮೩೪ ರೂಪಾಯಿ ಆಗುವುದೆಂದು ಇನ ಜನಿಯರವರು ಅಂದಾಜಾ ಪಟ್ಟಿಯನ್ನು ಕಳುಹಿಸಿದ್ದರು. ಈಚೆಗೆ ಕೋಟೆಯೊಳಗೆ ಮನೆಗಳನ್ನು ಕೆಡವಿದ ಮಣ್ಣು ಬಹಳವಾಗಿ ಸಿಕ್ಕಿ ಆ ಚರಂಡಿಯನ್ನು ಮುಚ್ಚುವುದಕ್ಕೆ ಉಪಯೋಗಿಸಲ್ಪಡುತ್ತಿರೋಣದರಿಂದ ಇದಕ್ಕೆ ಹೊಸದಾಗಿ ಹಣ ಖರ್ಚು ಮಾಡಬೇಕಾದ ಅಗತ್ಯವಿಲ್ಲವೆಂದು ತೀರ್ಮಾನ ಮಾಡಿದರು.

ಚಟ್ಟಿಹಳ್ಳಿ ಬಡಾವಣೆಯಲ್ಲಿ ಬಚ್ಚಲುಗಳನ್ನು ಕಟ್ಟುವುದೇ ಮೊದಲಾದ ಕಾಮಗಾರಿಗಳನ್ನು ಮಾಡುವುದಕ್ಕೆ ೭,೪೫೦ ರೂಪಾಯಿ ಬೇಕಾಗುವುದೆಂದು ಇನ್‌ಜನಿಯರವರು ಅಂದಾಜಾ ಪಟ್ಟಿಯನ್ನು ಕಳುಹಿಸಿದ್ದರು. ಮೆಂಬರುಗಳು ಈ ಪಟ್ಟಿಯನ್ನು ತನಿಖೆ ಮತ್ತು ಸ್ಯಾಂಕ್ಷನ್ ಬಗ್ಗೆ ಚೀಫ್ ಇನ್‌ಜನಿಯರವರಿಗೆ ಕಳುಹಿಸುವಂತೆ ಗೊತ್ತುಮಾಡಿದರು.

ಶಿವರಾಂಪೇಟೆಯಲ್ಲಿ ಬಚ್ಚಲುಗಳನ್ನು ಕಟ್ಟುವುದಕ್ಕೂ ಇತರ ಪ್ರಜಾಸೌಕರ್ಯಗಳನ್ನು ಮಾಡುವುದಕ್ಕೂ ೮೨,೮೦೦ ರೂಪಾಯಿ ಖರ್ಚಿನ ಅಂದಾಜಾ ಪಟ್ಟಿಯನ್ನು ಗವರನ್‌ಮೆಂಟಿನವರು ಸ್ಯಾಂಕ್ಷನ ಮಾಡಿದಾರೆ. ಇದನ್ನು ಬೋರ್ಡ ಮೆಂಬರುಗಳು ಓದಿಸಿ ಇಟ್ಟುಕೊಂಡರು.

ಇನ ಜನಿಯರ್ ಮ॥ ಮಾರ್ಕರ್‌ಬಿಯವರು ಟ್ರಸ್ಟ್ ಬೋರ್ಡಿನಲ್ಲಿ ಕೆಲಸ ಮಾಡಿದ ಸರ್ವಿಸನ್ನು ಪೆನ್‌ಷನ್ ಸರ್ವೀಸಿಗೆ ಎಣಿಸಬೇಕೆಂದು ಬರೆದುಕೊಂಡಿದ್ದಂತೆ ಬೋರ್ಡಿನವರು ಶಿಫಾರಸು ಮಾಡಿದ್ದರು. ಗವರನ್‌ಮೆಂಟಿನವರು ಆ ರೀತಿ ಮಾಡಲಾಗದೆಂದು ಹುಕುಂ ಕೊಟ್ಟಿರುತ್ತಾರೆ.

ಪಶ್ಚಿಮಾಭಿವೃದ್ಧಿಯಲ್ಲಿ ಲಕ್ಷ್ಮೀಪುರದ ಬಡಾವಣೆಯಲ್ಲಿ ವಾಣೀವಿಲಾಸ ರಸ್ತೆಯನ್ನು ಬಡಾವಣೆಮಾಡುವುದಕ್ಕೆ ಮಧ್ಯೆ ಇರುವ ರೆವ ಹೆಸ್ಸಾಚೆರಿಯವರ ಬಾಬತು ೬೫೫ ಚದರ ಗಜದ ಖಾಲಿ ಜಮೀನನ್ನು ಟ್ರಸ್ಟ್ ಬೋರ್ಡಿಗೆ ಕೊಂಡುಕೊಳ್ಳಬೇಕೆಂದು ಮೆಂಬರುಗಳು ಸಮ್ಮತಿಪಟ್ಟಿರುತ್ತಾರೆ.

ಮ॥ ರಂಗೈಯಂಗಾರ‍್ರವರು ಸೂಚಿಸಿದ್ದ ಕೆಳಗೆ ಕಂಡ ವಿಷಯಗಳು ಹ್ಯಾಗೆ ತೀರ್ಮಾನವಾದವೆಂದರೆ,—

ಪ್ರಶ್ನೆ. ಮನೆ ಕಟ್ಟುವ ವಿಷಯದಲ್ಲಿ ಟ್ರಸ್ಟ್ ಬೋರ್ಡಿನವರು ಬೈಲಾಗಳನ್ನು ಪಾಸ್ ಮಾಡಿದ ಮೇಲೆ ಎಷ್ಟು ಹೊಸ ಮನೆಗಳು ಪಟ್ಟಣಗಳಲ್ಲಿ ಆಗಿರುತ್ತವೆ. ಈ ಪ್ರತಿ ಮನೆಯೂ ಆ ಬೈಲಾಗಳಿಗೆ ಅನುಸಾರವಾಗಿ ಇರುತ್ತವೆಯೋ?

ಮೆಂಬರುಗಳ ತೀರ್ಮಾನ. ಹೆಲ್ತ್ ಆಫೀಸರವರೂ ಟ್ರಸ್ಟ್ ಬೋರ್ಡ್ ಇನ್‌ಜನಿಯರವರೂ ಅಜಮಾಯಿಷಿಮಾಡಿ ಬೋರ್ಡಿಗೆ ರಿಪೋರ್ಟು ಕೊಡಬೇಕು.

ಪ್ರಶ್ನೆ. ಹೊಸ ಬಡಾವಣೆಗಳೇನಾದರೂ ಮಾಡಬೇಕಾಗಿದೆಯೋ? ಮಾಡಬೇಕಾಗಿದ್ದರೆ ಎಲ್ಲೆಲ್ಲಿ ಸ್ಥಳವಿದೆ?

ತೀರ್ಮಾನ.—ಸದ್ಯ ಪಟ್ಟಣದಲ್ಲಿ ಹೊಸ ಬಡಾವಣೆಗಳೇನೂ ಮಾಡಬೇಕಾದ ಅಗತ್ಯವಿಲ್ಲ.

ಪ್ರಶ್ನೆ. ಮೈಸೂರಿನಲ್ಲಿ ೧೮೯೮ ನೇ ಇಸವಿಯ ಲಾಗಾಯಿತು ಪ್ಲೇಗು ಉಪದ್ರವು ಶುರುವಾದಾರಭ್ಯ ಪ್ರತಿಸಲವೂ ಪ್ಲೇಗ್ ಕಾಯಿಲೆಗಳು ತಪ್ಪದೆ ಸಂಭವಿಸುತ್ತಿರುವಂಥಾ ಮನೆಗಳನ್ನು ಗುರುತುಮಾಡಿದೆಯೋ? ಟ್ರಸ್ಟ್ ಬೋರ್ಡಿನವರು ಆ ಮನೆಗಳ ವಿಷಯದಲ್ಲಿ ಏನು ಮಾಡಬೇಕೆಂದಿದಾರೆ?

ತೀರ್ಮಾನ.—ಹೆಲ್ತ್ ಆಫೀಸರವರು ಅಂಥಾ ಮನೆಗಳ ಪಟ್ಟಿಯನ್ನು ತಯಾರ್ಮಾಡಿ ಬೋರ್ಡಿಗೆ ಕಳುಹಿಸಬೇಕು.

ಪ್ರಶ್ನೆ. ಮನೆಗಳಲ್ಲಿ ನ್ಯಾಯವಾಗಿ ಹಿಡಿಯುವುದಕ್ಕಿಂತಲೂ ಹೆಚ್ಚು ಜನರಾಗಲಿ ಸಂಸಾರಗಳಾಗಲಿ ಇರುವುದನ್ನೂ ಇಲ್ಲದ್ದನ್ನೂ ಯಾವ ಅಧಿಕಾರಿಯಾದರೂ ಅಜಮಾಯಿಷಿ ಮಾಡಿರುತ್ತಾರೆಯೋ?

ತೀರ್ಮಾನ. ಹೆಲ್ತ್ ಆಫೀಸರವರು ಪ್ರತಿ ಮೊಹಲ್ಲಾದಲ್ಲೂ ಬಹಳ ಹೆಚ್ಚು ಜನರಿರುವಂಥಾ ಕೆಲಕೆಲವು ಮನೆಗಳನ್ನು ಆರಿಸಿ ಅಜಮಾಯಿಷಿಮಾಡಿ ಬೋರ್ಡಿಗೆ ರಿಪೋರ್ಟು ಕೊಡಬೇಕು.

ಪ್ರಶ್ನೆ. ಪಟ್ಟಣದೊಳಗಡೆ ಅನೇಕ ಖಾಲೀ ನಿವೇಶನಗಳು ಇರೋಣದರಿಂದ ಜನರು ಹೇಸಿಕೆ ಮುಂತಾದದ್ದು ಮಾಡಿ ನೆರೆಮನೆಗಳವರಿಗೆ ಅನಾರೋಗ್ಯವನ್ನುಂಟುಮಾಡುತ್ತಾರೆ. ಇಂಥಾ ನಿವೇಶನಗಳನ್ನು ಗೊತ್ತುಮಾಡಿ ಅವುಗಳನ್ನು ಚೊಕ್ಕಟವಾದ ಸ್ಥಿತಿಯಲ್ಲಿ ಇಡಿಸಬೇಕು, ಇಲ್ಲವೇ ಅವುಗಳನ್ನು ನೆರೆಯವರಿಗೆ ಬಿಕರಿಮಾಡಿಬಿಡಬೇಕು.

ತೀರ್ಮಾನ. ಈ ವಿಚಾರವನ್ನು ಅಜಮಾಯಿಷಿಮಾಡಿ ಅಭಿಪ್ರಾಯಕೊಡುವುದಕ್ಕಾಗಿ ಮೆಂಬರುಗಳು ಒಂದು ಸಬ್ ಕಮಿಟಿಯನ್ನು ನೇಮಕಮಾಡಿದರು.

ಪ್ರಶ್ನೆ.—ಪಟ್ಟಣದ ಒಳಭಾಗದಲ್ಲಿರುವ ಖಾಲೀ ನಿವೇಶನಗಳನ್ನು ಪ್ಲಾನ್ ಪ್ರಕಾರ ವಿಂಗಡಿಸಿ, ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬಿಕರಿಮಾಡಬೇಕು.

ತೀರ್ಮಾನ. ಮೇಲ್ಕಂಡ ಸಬ್ ಕಮಿಟಿಯವರು ಈ ವಿಚಾರವನ್ನೂ ಚರ್ಚಿಸಿ ರಿಪೋರ್ಟು ಕೊಡಬೇಕು.

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಜಾಗ ಕೊಡಲಾರೆವು. ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿಟರ್

ಕರೆಸ್‌ಪಾಂಡೆನ್ಸ್.

ಪೋಲೀಸ್ ಇಲಾಖೆಯು

ಅಯ್ಯಾ,

ಈಚೆಗೆ ಬರತಕ್ಕ ನ್ಯೂಸ್ ಪೇಪರುಗಳಲ್ಲಿ ನಮ್ಮ ಶ್ರೀಮನ್ ಯುವರಾಜರವರ ಸಾಮಾನ್ ಗಾಡಿಯ ಮೇಲೆ ಕಳ್ಳರು ಬಿದ್ದು ೨,೦೦೦ ರೂಪಾಯಿನ ಮಾಲು ತೆಗೆದುಕೊಂಡು ಹೋದರೆಂತ ಪ್ರಕಟವಾದದ್ದು ನನ್ನ ಮನಸ್ಸಿಗೆ ಕೇವಲ ಸಂಕಟವನ್ನುಂಟುಮಾಡಿದೆ. ಇಂಥಾ ಅಪರಾಧಗಳು ನಡೆಯದಂತೆಯೂ ಅಕಸ್ಮಾತ್ ನಡೆದರೆ ಕೂಡಲೇ ಪತ್ತೆಗೆ ಅನುಕೂಲವಾಗುವಂತೆಯೂ ಬಂದೋಬಸ್ತು ಮಾಡತಕ್ಕ ಪೋಲೀಸ್ ಇಲಾಖೆಯಲ್ಲಿಯೇ ನಾನು ಬಹುಕಾಲ ಸರ್ವೀಸ್ ಮಾಡಿದವನಾದ್ದರಿಂದ ನನ್ನ ಅನುಭವವನ್ನು ಹೇಳುತ್ತೇನೆ.

ಗವರ್ನ್‌ಮೆಂಟಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗಿಂತಲೂ ಪೋಲೀಸ್ ಇಲಾಖೆಯು ದೇಶ ಮತ್ತು ಪ್ರಜೆ ಇವುಗಳ ಸಂರಕ್ಷಣೆಗೆ ಮುಖ್ಯವಾದ ಅಸ್ತ್ರವಾಗಿದೆ. ಈ ಇಲಾಖೆಯನ್ನು ಪ್ರಭುತ್ವ ಮಾಡತಕ್ಕವರಿಗೆ ಪ್ರೀತಿಯುಳ್ಳ ಅರ್ಧ ಮಿಲಿಟರಿ ಇಲಾಖೆಯೆಂತ ಇಂಗ್ಲಿಷ್ ಅಧಿಪತ್ಯದ ಕಾಲದಲ್ಲಿ ಕರೆಯುತ್ತಿದ್ದರು. ಈ ಇಲಾಖೆಯು ತನ್ನ ಕರ್ತವ್ಯವನ್ನು ಸರಿಯಾಗಿ ನೆರವೇರಿಸಬೇಕಾದರೆ ಅದರ ನೌಕರರು ನಿಸ್ಪೃಹರಾಗಿಯೂ, ಪ್ರಜೆಗಳಲ್ಲಿ ನಂಬಿಕೆಯುಳ್ಳವರಾಗಿಯೂ, ತಮ್ಮ ಕಾರ್ಯಭಾಗ ನಡಿಸತಕ್ಕದ್ದರಲ್ಲಿ ಜಾತಿಭೇದಗಳನ್ನೆಣಿಸದೆ ಇರತಕ್ಕವರಾಗಿಯೂ, ಸರ್ವದಾ ತಮ್ಮ ಕರ್ತವ್ಯದಲ್ಲಿ ನಿರತರಾಗಿಯೂ ಇರಬೇಕಾದದ್ದು ಆ ನೌಕರರ ಪ್ರಥಮ ಕರ್ತವ್ಯವಾಗಿದೆ. ಇಂಥಾ ಕೃತ್ಯಗಳನ್ನು ನಡಿಸತಕ್ಕವರು ನಮ್ಮಂತೆ ಮನುಷ್ಯರಾಗಿಯೂ, ನಮ್ಮ ಸರಹದ್ದು ಅಥವಾ ಸ್ವಲ್ಪ ಫಾಸಲೆಯಲ್ಲಿ ಇರತಕ್ಕ ಸ್ಥಳಗಳಲ್ಲಿ ವಾಸಮಾಡತಕ್ಕವರಾಗಿಯೂ ಇರುತ್ತಾರೆಯೇ ಹೊರ್ತು ಅನ್ಯಥಾ ಇಲ್ಲ. ಅಂಥಾ ನಡತೆಯುಳ್ಳ ಜನಗಳ ಮೇಲೆ ಸ್ಥಳದ ಪೋಲೀಸಿನವರು ನಿಗಾ ಇಟ್ಟು ಅವರಿಂದ ಕೆಟ್ಟ ಕೃತ್ಯಗಳು ನಡೆಯದಂತೆ ಮುಂಜಾಗ್ರತೆ ವಹಿಸಲಿಕ್ಕೆ ಬೇಕಾದಷ್ಟು ಅನುಕೂಲಗಳು ಮೊದಲಿಂದಲೂ ಈ ಇಲಾಖೆಯಲ್ಲಿ ಕಲ್ಪಿಸಲ್ಪಟ್ಟು ಇವೆ.

ಅಕೃತ್ಯಗಳನ್ನು ನಡಿಸುವವರ ನಡವಳಿಕೆಗಳು ಪೋಲೀಸರ ನಿಗಾದಲ್ಲಿದ್ದರೆ ಆ ಸ್ಥಳದಲ್ಲಿ ಎಂದಿಗೂ ಇಂಥಾ ಕೃತ್ಯಗಳು ನಡೆಯುವುದಿಲ್ಲ. ಈ ಕೆಲಸಗಳನ್ನು ಮಾಡಲಿಕ್ಕೆ (೧) ತಾಲ್ಲೂಕಿನಲ್ಲಿ ಸರ್ವಾಧಿಕಾರ ಹೊಂದಿರತಕ್ಕ ಅಮಲ್ದಾರರು ಹೆಡ್ ಆಫ್ ದಿ ಪೋಲೀಸ್ ಆಗಿದಾರೆ. (೨) ಅವರ ಸಹಾಯಕ್ಕೆ ಪೋಲೀಸ್ ಇನ್‌ಸ್ಪೆಕ್ಟರು, ಜಮೇದಾರರು, ದಫೇದಾರರು, ೭೦ ೮೦ ಜನ ಕಾನ್‌ಸ್ಟೇಬಲ್‌ಗಳು ಇದಾರೆ. ಪ್ರತಿ ೧೦ ೧೫ ಮೈಲಿ ಫಾಸಲೆಯಲ್ಲಿಯೂ ಒಂದೊಂದು ಪೋಲೀಸ್ ಸ್ಟೇಷನ್ ಇದೆ. ರಾತ್ರಿ ಹಗಲೂ ಕಾನ್‌ಸ್ಟೇಬಲ್‌ರು, ದಫೇದಾರರು ಗಸ್ತುಮಾಡುತ್ತಾರೆ. ಅವರ ಡ್ಯೂಟಿಯ ತನಿಖೆಯನ್ನು ಇನ್‌ಸ್ಪೆಕ್ಟರೂ ಜಮೇದಾರರೂ ನೋಡಿಕೊಳ್ಳುತ್ತಾರೆ. ಒಟ್ಟು ತಾಲ್ಲೂಕಿನಲ್ಲಿ ನಡೆಯತಕ್ಕ ಡ್ಯೂಟಿಗಳ ವಿಷಯದಲ್ಲಿ ಅಮಲ್ದಾರರು ವಿಚಾರಣೆ ಮಾಡುತ್ತಾರೆ. (೩) ಗ್ರಾಮಗಳಲ್ಲಿ ಪ್ರತಿ ಗ್ರಾಮಕ್ಕೂ ಒಬ್ಬ ಪಟೇಲ, ಅವನ ಸಹಾಯಕ್ಕೆ ತಳವಾರ, ಬೇಗಾರ ಯಾನೆ ಚಕ್ರರು ಈ ಕೆಲಸಕ್ಕಾಗಿಯೇ ನೇಮಕಪಟ್ಟವರಾಗಿದಾರೆ. ಅವರ ಗ್ರಾಮ ಸರಹದ್ದಿಗೆ ಗ್ಯಾಂಗು ಕಳ್ಳರು ಬಂದರೆ ಅಥವಾ ತಮ್ಮ ಗ್ರಾಮಸ್ಥರೇ ದುಷ್ಟ ಕೃತ್ಯ ಮಾಡಲಿಕ್ಕೆ ಯತ್ನಿಸಿದರೆ, ಅದನ್ನು ಕಂಡು ಹಿಡಿದು ತಕ್ಷಣ ಸಮೀಪದಲ್ಲಿರತಕ್ಕ ಪೋಲೀಸ್ ಸ್ಟೇಷನ್ನಿಗೆ ತಿಳಿಸಿ, ಅವರು ಬರುವ ವರಿವಿಗೂ ಅಂಥಾ ಅನುಮಾನ ಗ್ರಸ್ತರಾದವರನ್ನು ತಡೆದು ಇಡಲಿಕ್ಕೂ, ಅವರನ್ನು ಜಡ್ತಿ ಮಾಡಿ ಗುಮಾನಾಸ್ಪದವಾದ ಮಾಲ್ ಸಿಕ್ಕಿದರೆ ಅದನ್ನು ಸ್ವಾಧೀನಪಡಿಸಿಕೊಂಡು ಪೋಲೀಸ್ ಆಫೀಸರು ಬಂದ ಕೂಡಲೇ ಅವರಿಗೆ ಮಾಲನ್ನೂ ಇಸಮನ್ನೂ ಒಪ್ಪಿಸಿ ಮುಂದಣ ನಡವಳಿಕೆಯಲ್ಲಿ ಆ ಆಫೀಸರಿಗೆ ಸಹಾಯ ಮಾಡುತ್ತಿರಲಿಕ್ಕೂ ಗ್ರಾಮದ ಪಟೇಲನು ಜವಾಬ್ದಾರನಾಗಿದಾನೆ. (೪) ಪ್ರತಿನಿತ್ಯವೂ ಪೈರೋಡುಗಸ್ತು, ಗ್ರಾಮಗಸ್ತು, ಇವುಗಳನ್ನು ಕಾನ್‌ಸ್ಟೇಬಲರು, ದಫೇದಾರರು, ಉಕ್ಕಡಗಳಲ್ಲಿ ನೇಮಿಸಿರತಕ್ಕ ತೋಟಿಗಳು, ಇವರು ಮಾಡುತ್ತಾರೆ. (೫) ಈ ಪ್ರತಿಒಂದು ವಿಷಯವೂ ತಾಲ್ಲೂಕ್ ಪೋಲೀಸ್ ಆಫೀಸರುಗಳಿಗೆ ತಿಳಿಯಲು ಪ್ರತಿನಿತ್ಯವೂ ಪೋಲೀಸ್‌ನವರಿಗೆ ಡೈರಿ ಇದ್ದೇ ಇದೆ.

ಪ್ರಜೆಗಳ ಮಾನ ಪ್ರಾಣ ಧನಗಳಿಗೆ ಅಪಾಯವಿಲ್ಲದಂತೆ ಬಂದೋಬಸ್ತು ಮಾಡಲಿಕ್ಕೆ ಮೇಲಿನ ವಿಷಯಗಳಲ್ಲದೆ ಇನ್ನೂ ಅನೇಕ ಸಲಕರಣೆಗಳು ಲಾಗಾಯ್ತಿನಿಂದ ಉಂಟಾಗಿವೆ. ಅವುಗಳೆಲ್ಲಾ ಈಗ ನಡವಳಿಕೆಯಲ್ಲಿಯೇ ಇರತಕ್ಕದ್ದಾದ್ದರಿಂದ ಅದನ್ನೆಲ್ಲಾ ಇಲ್ಲಿ ವಿವರಿಸಲಿಲ್ಲ. ಮುಖ್ಯವಾಗಿ ಇಲ್ಲಿ ಹೇಳತಕ್ಕದ್ದೇನೆಂದರೆ, ಸ್ಥಳಾಧಿಕಾರಿಗಳು ಅಂದರೆ ತಾಲ್ಲೂಕಿನ ಪೋಲೀಸ್ ಅಧಿಕಾರಿಗಳು ಉದಾಸೀನರಾದರೆ, ಯಾ ಸ್ವಕಾರ್ಯ ನಿರತರಾದರೆ, ಯಾ ಪಕ್ಷಪಾತಿಗಳಾದರೆ ಅಥವಾ ಸುಳ್ಳು ಕಲ್ಪನೆ ಮಾಡಿ ನಿರಪರಾಧಿಗಳನ್ನು ಶಿಕ್ಷೆ ಮಾಡಿಸುತ್ತಾ ಬಂದರೆ, ಯಾ ಪೋಲೀಸ್ ಆಫೀಸರುಗಳಲ್ಲಿ ಏಕಮತ್ಯ ತಪ್ಪಿದರೆ ಮತ್ತು ಕಾನೂನಿನ ದರ್ಪವು ಇಲ್ಲದೆಹೋದರೆ, ಯಾ ನಿಜವಾಗಿ ಕಷ್ಟಪಟ್ಟು ಕೆಲಸ ಮಾಡತಕ್ಕವರಿಗೆ ಪ್ರೋತ್ಸಾಹಕೊಡದೆ ಸ್ವಜನರನ್ನೂ ಬೆಕಾದವರನ್ನೂ ಅಭಿವೃದ್ಧಿಪಡಿಸುತ್ತಾ ಕಷ್ಟಪಡತಕ್ಕವರಿಗೆ ಉತ್ಸಾಹ ಕಡಮೆ ಮಾಡಿ ಅವರಿಗೆ ಸಂಕಟವನ್ನುಂಟುಮಾಡಿದರೆ ಪೋಲೀಸ್ ಬಂದೋಬಸ್ತು ಕೆಡುವದು. ಈ ಇಲಾಖೆಯು ಕೆಟ್ಟರೆ ದೇಶದ ಬಂದೋಬಸ್ತು ಕೆಡುವದು. ಸ್ಥಳಾಧಿಕಾರಿಗಳು ನಿಯುಕ್ತಿನಿಂದ ಕಷ್ಟಪಟ್ಟು ಕೆಲಸ ಮಾಡಬೇಕು. ಇವರ ನಡವಳಿಕೆಯನ್ನು ತನಿಖೆಮಾಡಿ ತಪ್ಪಿತ ಕಂಡರೆ ಕೂಡಲೇ ಸಂಬಂಧಪಟ್ಟವರನ್ನು ಶಿಕ್ಷಿಸಿ ಸರಿಪಡಿಸತಕ್ಕ ಕೆಲಸವು ಡಿಸ್ಟ್ರಿಕ್ಟ್ ಆಫೀಸರುಗಳದಾಗಿಯೂ ಅವರಿಗೆ ಮೇಲ್ಪಟ್ಟವರದ್ದಾಗಿಯೂ ಇರುತ್ತದೆ. ಈ ಸಂದರ್ಭದಲ್ಲಿ ನಮ್ಮ ಗವರ್ನ್‌ಮೆಂಟಿನವರು ನಿಜತ್ವವನ್ನು ಕಂಡುಹಿಡಿದು ತಪ್ಪಿತಸ್ಥರನ್ನು ಶಿಕ್ಷಿಸಿ ಈ ದೇಶೋದ್ಧಾರಕ್ಕೆ ಕಾರಣವಾದ ಪೋಲೀಸ್ ಇಲಾಖೆಯನ್ನು ಸರಿಪಡಿಸ್ಯಾರಾಗಿ ನನ್ನ ಪ್ರಾರ್ಥನೆಯಾಗಿದೆ. ಮುಖ್ಯ ಈ ಇಲಾಖೆಯಲ್ಲಿ ಸತ್ತವಾಗಿ ಕೆಲಸಗಳು ನಡೆಯಬೇಕೇ ಹೊರ್ತು ಇಸಮುಗಳನ್ನು ಹೆಚ್ಚಿಸುವದೂ ಆಫೀಸರುಗಳಿಗೆ ತಲಬು ಜಾಸ್ತಿ ಮಾಡುವದೂ ಮಾತ್ರವೇ ದೇಶದ ಬಂದೋಬಸ್ತಿಗೆ ಸಹಾಯ ಮಾಡುವದಿಲ್ಲ. ಈಗ ಈ ಇಲಾಖೆಯಲ್ಲಿ ನಡೆಯುತ್ತಿರುವ ನಡವಳಿಕೆಯನ್ನು ಈ ಇಲಾಖೆಯ ಅನುಭವವುಳ್ಳ ದೊಡ್ಡ ಆಫೀಸರರೇ ಒಳಹೊಕ್ಕು ನೋಡಿದರೆ ನಿಜಸ್ಥಿತಿಯು ಗವರ್ನ್‌ಮೆಂಟಿಗೆ ತಾನಾಗಿಯೇ ತಿಳಿಯುತ್ತದೆ.

ಒಬ್ಬ ಪೆನ್‌ಷನ್ ಆಫೀಸರ್

[೨,೦೦೦ ರೂಪಾಯಿನ ಮಾಲು ಹೋಯಿತೆನ್ನುವುದು ನಿಜವಲ್ಲ. ಪೋಲೀಸಿನವರು ಅನುಮಾನದ ಮೇಲೆ ಈಚೆಗೆ ಕೆಲವರನ್ನು ದಸ್ತಗಿರಿ ಮಾಡಿ ತನಿಖೆ ಮಾಡುತ್ತಿದಾರೆಂದು ಕೇಳುತ್ತೇವೆ. —ಎಡಿ]

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಸಮಾಜ

29 I 10 ಶನಿವಾರ — ಈ ಸಮಾಜದ ಮೆಂಬರುಗಳು ಇವರ ಹಿತೈಷಿಗಳಾದ ಅನೇಕರು ಸಭಾ ಮಂಟಪವನ್ನು ಅಲಂಕರಿಸಿದ್ದರು ಸೌಭಾಗ್ಯವತಿ ಆರ್ ಪಿಳ್ಳಮ್ಮನವರು "ಓದುವವರಿಂದ ಉಂಟಾಗತಕ್ಕ ಪ್ರಯೋಜನ" ವನ್ನು ಕುರಿತು ಒಂದು ಬೋಧಯುಕ್ತವಾದ ವ್ಯಾಸವನ್ನು ಓದಿದರು ಅನಂತರ ಶ್ರವಣದಂತ ವಾದ್ಯ ವಿಶೇಷಗಳ ನುಡಿಸುವಿಕೆಯಿಂದಲೂ, ಸುಸ್ವರವಾದ ಹಾಡುಗಳನ್ನು ಹಾಡೋಣದರಿಂದಲೂ, ಕೋಲಾಹಲಧ್ವನಿಯಿಂದಲೂ ಸಭೆಯು ಬರಖಾಸ್ತು ಆಯಿತು

ಬರುವ ಮೀಟಿಂಗು ಫೆಬ್ರವರಿ ೫ನೇ ತಾ ನಡೆಯುವುದಾದ್ದರಿಂದ ಮೆಂಬರುಗಳು ಮತ್ತು ಇತರ ಅಭಿಮಾನಶಾಲಿಗಳೆಲ್ಲರೂ ಬರಬೇಕಾಗಿ ಸೂಚಿಸಲ್ಪಟ್ಟಿರುತ್ತೆ

ಮುಹಮ್ಮದೀಯರ ಸಂಘವು

ಕಳೆದ ತಿಂಗಳು ೨೩ ನೆಯ ತಾರೀಖಿನ ದಿವಸ ಬೆಂಗಳೂರು ಸಿಟಿ ಆರ್ಕಾಟ್ ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ಸಂಘದ ರೀಡಿಂಗ ರೂಂ ಕಟ್ಟಡದಲ್ಲಿ ನಡೆದ ಮೀಟಿಂಗಿನಲ್ಲಿ ಮುಂದೆ ಹೇಳುವ ತೀರ್ಮಾನಗಳು ಮಾಡಲ್ಪಟ್ಟವು

೧ ಸನ್ ೧೯೦೯ ನೆಯ ಇಸವಿ ಡಿಸೆಂಬರು ತಿಂಗಳಿಗೆ ಆಖೈರು ಆದ ಮೂರು ತಿಂಗಳಲ್ಲಿ ರೂ ೪೨೮—೯—೦ ಉತ್ಪತ್ತಿಯಾಯಿತು ರೂ ೬೬೪—೨—೩ ಖರ್ಚಾಯಿತು

೨ ಸಂಘದವರು ಏರ್ಪಡಿಸಿರುವ ರೀಡಿಂಗ ರೂಂ ಮತ್ತು ಲೈಬ್ರರಿಗೆ ೨೮೫೨ ಮಂದಿ ವಾಚಕರು ಬಂದು ಅಲ್ಲಿಟ್ಟಿರುವ ವರ್ತಮಾನ ಪತ್ರಿಕೆಗಳು ಮತ್ತು ಪುಸ್ತಕಗಳನ್ನು ಓದಿಕೊಂಡು ಹೋದರು

೩ ಮುಹಮ್ಮದೀಯ ಬಾಲಕರಿಗೋಸ್ಕರ ಏರ್ಪಡಿಸಿರುವ ಪಾಠಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಯು ಇಂಗ್ಲಿಷ್ ಲೋಯರ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನು ನಮ್ಮ ಸರ್ಕಾರದವರು ಈ ಸ್ಕೂಲಿಗೆ ಮಾಹೆಯಾನ ೭ ರೂಪಾಯಿಗಳನ್ನು ಕೊಡುವಂತೆ ಅಪ್ಪಣೆ ಮಾಡಿರುವುದಕ್ಕಾಗಿ ಸಂಘದವರು ಕೃತಜ್ಞತೆಯನ್ನು ತೋರ್ಪಡಿಸಿದರು

೪ ವಿದ್ಯಾರ್ಥಿನಿಲಯದಲ್ಲಿ ೧೩ ಮಂದಿ ವಿದ್ಯಾರ್ಥಿಗಳು ಇದ್ದಾರೆ ಸ್ಕೂಲುಗಳು ಮತ್ತು ಕಾಲೇಜುಗಳು ತೆರೆದಕೂಡಲೇ ಇನ್ನೂ ಹೆಚ್ಚು ಮಂದಿ ಸೇರುವವರಾಗಿದಾರೆ ಈ ನಿಲಯಕ್ಕೆ ಕುರ್ಚಿ ಮೇಜುಗಳನ್ನು ಕೊಂಡುಕೊಳ್ಳುವದಕ್ಕೋಸ್ಕರ ೭೩ ರೂಪಾಯಿಗಳು ಮುಂಜೂರ್ಮಾಡಲ್ಪಟ್ಟವು

೫ ೧೩ ಮಂದಿ ವಿದ್ಯಾರ್ಥಿಗಳಿಗೆ ರೂ ೮೧ ೮ ೬ ಸ್ಕಾಲರಶಿಪ ಕೊಡಲ್ಪಟ್ಟಿತು ಮುಂದಿನ ೩ ತಿಂಗಳಲ್ಲಿ ಒಬ್ಬ ಬಿ ಎ ವಿದ್ಯಾರ್ಥಿಗೂ, ಒಬ್ಬ ಎಫ್ ಎ ವಿದ್ಯಾರ್ಥಿಗೂ ೮ ಮಂದಿ ಹೈ ಸ್ಕೂಲು ವಿದ್ಯಾರ್ಥಿಗಳಿಗೂ, ೧೨ ಮಂದಿ ಲೋವರ ಸೆಕೆಂಡರಿ ವಿದ್ಯಾರ್ಥಿಗಳಿಗೂ ವೇತನ ಕೊಡುವುದಕ್ಕೋಸ್ಕರ ೧೨೬ ರೂಪಾಯಿಗಳು ಮುಂಜೂರ್ಮಾಡಲ್ಪಟ್ಟವು

೬ ಮುಹಮ್ಮದೀಯ ಮತಸ್ಥರಾಗಿಯೂ, ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರುವ ಮೆ॥ ಅಬ್ದುಲ್ ವಹೀದ ಎಂಬುವರಿಗೆ ಅಸಿಸ್ಟೆಂಟ್ ಕಮಿಷನರ್ ಪದ ವಿಯನ್ನು ಕೊಟ್ಟುದಕ್ಕೋಸ್ಕರ ಮುಸಲ್ಮಾನ್ ಪಂಗಡದವರೆಲ್ಲರೂ ಅತ್ಯಂತ ಕೃತಜ್ಞರಾಗಿದಾರೆಂದು ದಿವಾನ್‌ಸಾಹೇಬರವರಿಗೆ ಕಾಗದವನ್ನು ಬರೆದು ತಿಳಿಸುವಂತೆ ತೀರ್ಮಾನಿಸಿದರು

ಕಲ್ಕತ್ತೆಯಲ್ಲಿ ನಡೆದ ಕ್ರೂರ ಕೃತ್ಯವು

ಒಬ್ಬ ದೇಶೀಯ ಪೋಲೀಸ್ ಇನ್‌ಸ್ಪೆಕ್ಟರನ್ನು ಕೊಲೆ ಮಾಡಿದ್ದು

ಕಲ್ಕತ್ತಾ ಪಟ್ಟಣದಲ್ಲಿ ಕೆಲವರು ಸೇರಿಕೊಂಡು ಮಾಣಿಕ್ತತೋಲಾ ಎಂಬ ಕೋಟದಲ್ಲಿ ಮುಸಲಶ್ತ್ರಗಳನ್ನು ನಡಿಸಿ, ಇಂಗ್ಲಿಷ್ ಗವರನ್‌ಮೆಂಟನ್ನು ಹಿಂದುಸ್ಥಾನದಿಂದ ಓಡಿಸಿಬಿಡಬೇಕೆಂದು ಫಿತೂರಿ ಮಾಡುತ್ತಾ ಅದಕ್ಕಾಗಿ ಗುಟ್ಟಿನಲ್ಲೇ ಮದ್ದು ಗುಂಡುಗಳನ್ನೂ ಸಿಡಿಮದ್ದಿನ ಗುಂಡುಗಳನ್ನೂ ತಯಾರ್ಮಾಡುತ್ತಾ ಇದ್ದರಷ್ಟೆ ಈ ರಾಜದ್ರೋಹಿಗಳ ಗುಂಪನ್ನು ಪೋಲೀಸಿನವರು ಹಿಡಿದು ಹಲವರಿಗೆ ಶಿಕ್ಷೆ ವಿಧಿಸಿದರು ಈ ಮೊಕದ್ದಮೆಯು ಕಲ್ಕತ್ತಾ ಪಟ್ಟಣದ ಹೈ ಕೋರ್ಟಿನಲ್ಲಿ ಅಪೀಲ್ ಆಗಿರುತ್ತದೆ ಕಳೆದ ಜನವರಿ ತಾ. ೨೪ ನೇ ಸೋಮವಾರ ಕಲ್ಕತ್ತೆಯ ಹೈ ಕೋರ್ಟಿನಲ್ಲಿ ಈ ಅಪೀಲು ನಡೆಯುತ್ತಿದ್ದಾಗ್ಗೆ ಅಡ್ವೊಕೇಟ್ ಜನರಲ್ (ಸರ್ಕಾರಿ ತರ್ಫಿನ ವಕೀಲರು) ರವರಿಗೆ ಮೊಕದ್ದಮೆಯ ವಿದ್ಯಮಾನಗಳನ್ನು ತಿಳಿಸುವುದಕ್ಕಾಗಿ ಹೋಗಿ ಅವರ ಬಳಿ ನಿಂತಿದ್ದು, ಆ ದಿನ ಕೋರ್ಟು ಬರಖಾಸ್ತಾದ ಬಳಿಕ ಸುಮಾರು ಸಾಯಂಕಾಲ ೫ ಗ ಟೆ ಹೊತ್ತಿನಲ್ಲಿ ಕೋರ್ಟಿನಿಂದ ಹೊರಗಡೆ ಬಂದು ಮೆಟ್ಟಿಲು ಇಳಿಯುತ್ತಿದ್ದ ಇನ್‌ಸ್ಪೆಕ್ಟರ್ ಸ್ಯಾಂಸುಲ್ ಆಲಂ ಎಂಬ ಮಹಮದೀಯ ಪೋಲೀಸ್ ಅಧಿಕಾರಿಯನ್ನು ವೀರೇಂದ್ರನಾಥದತ್ತಗುಪ್ತನೆಂಬೊಬ್ಬ ೧೮-೧೯ ವಯಸ್ಸಿನ ಬಂಗಾಳಿ ಹುಡುಗನು ಸಮೀಪದಲ್ಲಿ ನಿಂತಿದ್ದು ಗುರಿ ಕಟ್ಟಿ ಪಿಸ್ತೂಲು ಹಾರಿಸಿ ಹೊಡೆದು ಕೊಂದುಬಿಟ್ಟನು ಗೋಲಿಯು ಇನ್‌ಸ್ಪೆಕ್ಟರ ಬೆನ್ನಿನಲ್ಲಿ ನುಗ್ಗಿ ಶ್ವಾಸಕೋಶವನ್ನು ದಾಟಿ ರಕ್ತ ಪ್ರವಾಹವನ್ನು ಹೊರಡಿಸಿ ಪಾರಾಗಿ ಹೋಯಿತು ಕೂಡಲೇ ಇನ್‌ಸ್ಪೆಕ್ಟರು "ಪಕಡೋ, ಪಕಡೋ" ಎಂದು ಕೂಗಿ ಮೆಟ್ಟಿನ ಬಳಿ ಬಿದ್ದುಕೊಂಡರು ವೈದ್ಯರೇ ಮೊದಲಾದವರು ಸೇರಿ ಉಪಚರಿಸುವಷ್ಟರೊಳಗಾಗಿ ಇನ್‌ಸ್ಪೆಕ್ಟರ ಪ್ರಾಣ ಹೋಯಿತು

ದುರಾತ್ಮನಾದ ಗುಪ್ತನು ಪಿಸ್ತೂಲನ್ನು ಹಿಡಿದು ಕೂಡಲೇ ಮೆಟ್ಟಿಲು ಇಳಿದು ಮೈದಾನಿಗೆ ಹೋಗಿ ತಪ್ಪಿಸಿಕೊಂಡು ಓಡಿಹೋಗುತ್ತಿದ್ದನು ಇವನನ್ನು ಹಿಡಿಯಬೇಕೆಂದು ಕೋರ್ಟಿನ ಒಬ್ಬ ಜವಾನನು ಅವನ ಬೆನ್ನು ಹತ್ತಿ ಹೋಗುತ್ತಿರುವಾಗ ಎದುರು ಪಾರ್ಶ್ವದಲ್ಲಿ ಅಲಿ ಅಹಮದ್ ಎಂಬೊಬ್ಬ ಪೋಲೀಸ್ ಸವಾರನು ಬರುತ್ತಿದ್ದನು ಈ ಸವಾರನು ತನ್ನನ್ನು ಹಿಡಿಯುವುದಕ್ಕೆ ಬರುತ್ತಿದಾನೆಂದು ಊಹಿಸಿ ಆ ದುರಾತ್ಮನಾದ ಗುಪ್ತನು ಅದೇ ಪಿಸ್ತೂಲನ್ನು ಎತ್ತಿ ಬಾರ್ಮಾಡಿ ಆ ಸವಾರನಿಗೆ ಗುರಿ ಕಟ್ಟಿ ಹಾರಿಸಿದನು ಗೋಲಿಯು ಅವನಿಗೆ ಬಡಿಯದೆ ತಪ್ಪಿಹೋಯಿತು ಅಷ್ಟರಲ್ಲೇ ಹಿಂದಟ್ಟಿ ಬರುತ್ತಿದ್ದ ಕೋರ್ಟ್ ಜವಾನನು ಕೊಲೆಗೇಡಿಯನ್ನು ಹಿಂದಿನಿಂದಲೇ ಗಟ್ಟಿಯಾಗಿ ತಬ್ಬಿ ಹಿಡಿದುಕೊಂಡು, ಅವನ ಕೈಯಲ್ಲಿದ್ದ ಪಿಸ್ತೂಲನ್ನು ಕಿತ್ತುಕೊಂಡನು ಪೋಲೀಸ್ ಸವಾರನೂ ಇತರರೂ ಸೇರಿ ಅವನನ್ನು ಬಲವಾಗಿ ಹಿಡಿದು ಬಂಧಿಸಿ ಠಾಣಾಕ್ಕೆ ಸಾಗಿಸಿದರು

ಅತ್ತಲಾಗಿ ಹೈಕೋರ್ಟ್ ಮಹಡಿಯ ಮೇಲೆ ಪೋಲೀಸ್ ಇನ್‌ಸ್ಪೆಕ್ಟರು ಗೋಲಿ ಏಟು ತಿಂದು ಸ್ಮೃತಿ ತಪ್ಪಿ ಬಿದ್ದುಕೊಂಡದ್ದನ್ನು ಕೇಳಿದ ಒಡನೆಯೇ ಕೋರ್ಟಿನೊಳಗಿಂದ ಜಡ್ಜಿಗಳೂ ಲಾಯರುಗಳೂ ನೌಕರರೂ ಓಡಿಬಂದು ಆ ಘೋರಕೃತ್ಯವನ್ನೂ ಪೋಲೀಸಿನವರ ಸೆರೆಯಲ್ಲಿದ್ದ ಕೊಲೆಗೇಡಿಯನ್ನೂ ನೋಡಿ ವಿಸ್ಮಯ ಪಟ್ಟರು. ಕೊಲ್ಲಲ್ಪಟ್ಟ ಸ್ಯಾಂಸುಲ್ ಆಲಮನು ಮಾಣಿಕ್ಯತೋಲಾ ತೋಟದ ಫಿತೂರಿ ಗುಂಪಿನವರನ್ನು ಹಿಡಿಯುವುದರಲ್ಲೂ, ಅವರ ಮೇಲೆ ರುಜುವಾತುಗಳನ್ನು ಒದಗಿಸುವುದರಲ್ಲೂ ಪ್ರಾರಂಭದಿಂದಲೂ ಬಹಳ ಸಾಹಸವನ್ನೂ ಚತುರತೆಯನ್ನೂ ತೋರಿಸಿ ಗವರನ್‌ಮೆಂಟಿನವರ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದ್ದನು ಈತನಿಗೆ ಮೊನ್ನೆತಾನೇ ಗವರನ್‌ಮೆಂಟಿನವರು ಖಾನ್ ಬಹದೂರ್ ಎಂಬ ಬಿರುದನ್ನು ದಯ ಪಾಲಿಸಿದ್ದರು ಈತನಿಗೆ ಹೆಂಡತಿ ಮೂವರು ಗಂಡು ಮಕ್ಕಳು ಮೂವರು ಹೆಣ್ಣುಮಕ್ಕಳು ಇರುತ್ತಾರೆ ಹಿರೀ ಮಗನಿಗೆ ಇನ್ನೂ ಹತ್ತುವರುಷವಾಗಿದೆ ಇಂಥಾ ದುಷ್ಟನಿಗ್ರಹ ಮಾಡುವ ನೌಕರನು ಕೊಲ್ಲಲ್ಪಟ್ಟನಲ್ಲಾ ಎಂದು ವೈಸ‌ರಾಯಿ ಲಾರ್ಡ ಮಿಂಟೋ ಪ್ರಭುಗಳೂ, ಬಂಗಾಳಾ ಲೆಫ್ಟಿನೆಂಟ್ ಗವರ್ನರವರೂ ಬಹಳ ಸಂತಾಪಪಟ್ಟು ಆತನ ಪತ್ನಿ ಪುತ್ರ ಪುತ್ರಿಯರಿಗೆ ತಮ್ಮ ದುಃಖವನ್ನು ತಿಳಿಯಪಡಿಸುವಂತೆ ಆಜ್ಞೆಮಾಡಿರುತ್ತಾರೆ

ಕೊಲೆಗೇಡಿಯಾದ ವೀರೇಂದ್ರನಾಥದತ್ತಗುಪ್ತನ ಪೂರ್ವೋತ್ತರವೇನೆಂದರೆ,- ಇವನು ಬಾರಿಸಾಲ್ ಡಿಸ್ಟ್ರಿಕ್ಟಿಗೆ ಸೇರಿದ ನಾಲಚೀರಾ ಎಂಬ ಗ್ರಾಮದವನು, ಅಲ್ಪಸ್ವಲ್ಪ ವಿದ್ಯೆಯನ್ನು ಕಲಿತು ಕಲ್ಕತ್ತೆಗೆ ಬಂದು ಏಳು ವರುಷಗಳಿಂದ ಯಾವ ಉದ್ಯೋಗದಲ್ಲೂ ಖಚಿತವಾಗಿ ನಿಲ್ಲದೆ ಪೋಲಿಯಾಗಿ ಅಲೆಯುತ್ತಾ ಇದ್ದನು ಇವನು ಇವನ ಸಹೋದರನಾದ ಧೀರೇಂದ್ರದತ್ತಗುಪ್ತನ ಕೂಡ ಒಂದು ಹೋಟೇಲಿನಲ್ಲಿ ಇದ್ದರೂ ಒಬ್ಬರನ್ನೊಬ್ಬರು ನೋಡುವುದೇ ಅಪರೂಪವಾಗಿತ್ತು ಧೀರೇಂದ್ರನು ಪೋಲೀಸ್ ಸ್ಟೇಷನ್‌ಗೆ ಹೋಗಿ ಕೊಲೆಗೇಡಿಯಾದ ತನ್ನ ಸಹೋದರನ ಕೂಡ ಮಾತನಾಡುತ್ತಾ, "ನಿನಗೆ ಪಿಸ್ತೂಲನ್ನು ಯಾರು ಕೊಟ್ಟರೋ, ಈ ಕೃತ್ಯವನ್ನು ಮಾಡುವಂತೆ ಯಾರು ಚಿತಾವಣೆಮಾಡಿದರೋ ಹೇಳಿಬಿಡು" ಎಂದು ಬುದ್ಧಿ ಹೇಳಿದನು ಅವನು ಅದನ್ನೆಲ್ಲಾ ಹೇಳುವುದೇ ಇಲ್ಲವೆಂದು ಧಿಕ್ಕಾರಮಾಡಿದನು

ಅಂದಿನಿಂದೀಚೆಗೆ ಪೋಲೀಸಿನವರು ಅವನ ಸಹಪಾಠಿಗಳನ್ನೂ ಚಿತಾವಣೆಕೋರರನ್ನೂ ತಲಾಷ ಮಾಡುತ್ತಲೂ, ಅನುಮಾನದ ಮೇಲೆ ಕೆಲವರನ್ನು ದಸ್ತಗಿರಿ ಮಾಡುತ್ತಲೂ, ಮನೆ ಮಠಾದಿಗಳನ್ನು ಶೋಧನೆಮಾಡಿ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗುತ್ತಲೂ ಬಂದಿದಾರೆ

ಕಳೆದ ಬುಧವಾರ ಮಧ್ಯಾಹ್ನ ಕೊಲೆಗಾರನಾದ ವೀರೇಂದ್ರನಾಥದತ್ತಗುಪ್ತನನ್ನು ಕಲ್ಕತ್ತಾ ಪಟ್ಟಣದ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹಾಜರುಮಾಡಿ, ಫಿರ್ಯಾದಿ (ಸರ್ಕಾರಿ) ತರಫಿನ ಸಾಕ್ಷಿಗಳ ಕೈಫಿಯತ್ತನ್ನು ಬರೆದುಕೊಂಡರು ನಾಲ್ಕಾರು ಮಂದಿ ಸಾಕ್ಷಿಗಳು ಕೃತ್ಯನಡೆದದ್ದನ್ನು ವಿವರಿಸಿದರು ಕಡೆಗೆ ಮ್ಯಾಜಿಸ್ಟ್ರೇಟರು ಅವನನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿದರು ಆ ದಿನ ಕೋರ್ಟಿನಲ್ಲಿ ಜಡ್ಜಿಗಳು, ಲಾಯರುಗಳು ಪೋಲೀಸಿನವರು ವಿನಹಾ ಉಳಿದವರ್‍ಯಾರೂ ಇಲ್ಲದಂತೆ ಎಲ್ಲರನ್ನೂ ಹೊರಗೆ ಕಳುಹಿಸಿದ್ದರು

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು ಕಳೆದ ಡಿಸೆಂಬರ್ ತಿಂಗಳ ಲೆಕ್ಕಗಳನ್ನು ಓದಿಸಿದ್ದರಲ್ಲಿ ರೂ ೧೧,೭೬೨—೩—೭ ಪೈ ಮ್ಯುನಿಸಿಪಾಲಿಟಿಗೆ ಉತ್ಪತ್ತಿಯಾಗಿ ರೂ ೧೧,೦೮೦—೫—೦ ಖರ್ಚಾಯಿತೆಂದೂ? ಜನನ ೮೧ ಮರಣ—ಪ್ಲೇಗ್ ೫೮ ಸಿಡುಬು ೭, ಜ್ವರ ೨೪ ಇತರ ಕಾರಣಗಳಿಂದ ೨೦೩, ಒಟ್ಟು ೩೧೨ ಎಂದೂ ಗೊತ್ತಾಯಿತು ಆಡಿಟರುಗಳು ಜಮಾಖರ್ಚಿನ ಲೆಕ್ಕಗಳನ್ನು ಆಡಿಟ್‌ಮಾಡಿ ಎಲ್ಲಾ ತೃಪ್ತಿಕರವಾಗಿದೆ ಎಂದೂ ಅಬ್ಕಾರಿಯ ಉತ್ಪತ್ತಿ ಕಡಮೆಯಾಗಿದೆ ಎಂದೂ, ಮೊಹತರ್ಫಾ ವಸೂಲಿಗೆ ಎಷ್ಟು ಖರ್ಚು ಹೆಚ್ಚಾಗಿದ್ದರೂ ಹಣದ ವಸೂಲಾತಿ ತೃಪ್ತಿಕರವಾದಷ್ಟು ಹೆಚ್ಚಾಗಿ ಆಗುತ್ತಾ ಇಲ್ಲವೆಂದೂ, ಕೇರಿಮನೆಗಳ ಗೊಬ್ಬರವನ್ನು ಗುಡಿಸುವುದಕ್ಕೆ ಮನೆಯವರಿಂದ ತೆರಿಗೆ ವಸೂಲಾದದ್ದೂ ಇಲ್ಲದ್ದೂ ಲೆಕ್ಕಗಳು ಹೆಲ್ತ್ ಆಫೀಸರಿಂದ ಬಂದಿಲ್ಲವೆಂದೂ, ಈ ತೆರಿಗೆಯನ್ನು ತಿಂಗಳು ತಿಂಗಳಿಗೆ ವಸೂಲ್ಮಾಡದೆ ಬಿಟ್ಟರೆ ಮುಂದೆ ಬಹಳ ಬಾಕಿ ನಿಲ್ಲುವುದಕ್ಕೆ ಅವಕಾಶವಾಗುತ್ತೆಂದೂ ತಿಳಿಸಿದ್ದರು

ಅಬ್ಕಾರಿಯ ಉತ್ಪತ್ತಿ ಕಡಮೆಯಾಗಿದ್ದಕ್ಕೆ ದರೋಗರಿಂದ ಬಂದಿದ್ದ ರಿಪೋರ್ಟನ್ನು ಓದಿಸಿ ರಿಕಾರ್ಡುಮಾಡಿದರು ಹಿತ್ತಲು ಗುಡಿಸದ ತೆರಿಗೆಯ ವಸೂಲಿಗೆ ಸಿಬ್ಬಂದಿ ಸಾಲದೆಂದು ಹೆಲ್ತ್ ಆಫೀಸರು ಹೇಳಿದಾಗ ಕೌನ್ಸಿಲರುಗಳು ಈಗಿರುವ ಇನ್‌ಸ್ಪೆಕ್ಟರ್ ಮತ್ತು ಓವರ್ಸೀಗಳ ಮೂಲಕವೇ ಮಾಡಿಸಬೇಕೆಂದು ಅಭಿಪ್ರಾಯಪಟ್ಟರು ಮೊಹತರ್ಫಾ ಕಂದಾಯಗಳು ತೃಪ್ತಿಕರವಾದಷ್ಟು ಹೆಚ್ಚಾಗಿ ವಸೂಲಾಗುತ್ತಾ ಇಲ್ಲವೆಂಬ ಆಕ್ಷೇಪಣೆಗೆ ಆ ಕೆಲಸದ ಛಾರ್ಜನ್ನು ಪಡೆದಿರುವ ಡೆಪ್ಯುಟಿ ಅಮಲ್ದಾರರು ಜೂಲೈ ೧ ರಲ್ಲಿ ೪೫ ಸಾವಿರ ರೂಪಾಯಿ ಬಾಕಿ ಇತ್ತೆಂತಲೂ, ಈಗ ೨೩ ಸಾವಿರ ರೂಪಾಯಿ ಮಾತ್ರ ಉಳಿದಿದೆ ಎಂತಲೂ, ಲೆಕ್ಕಪತ್ರಗಳನ್ನು ಮೊದಲು ಸರಿಪಡಿಸಿಕೊಂಡು ಬಳಿಕ ವಸೂಲಾತಿ ಮಾಡುತ್ತೇವೆಂತಲೂ, ಬಿಲ್ಲು ನೋಟೀಸು ವಾರಂಟುಗಳನ್ನು ಬರೆದು ಜಾರಿ ಮಾಡುವುದಕ್ಕೆ ಕೆಲವು ಹಂಗಾಮಿ ಶೇಖ್ದಾರರನ್ನು ನೇಮಿಸಿಕೊಡಬೇಕೆಂತಲೂ ತಿಳಿಸಿದರು ಕೌನ್ಸಿಲರುಗಳು ಆ ರೀತಿ ಮಾಡಬಹುದೆಂದು ಒಪ್ಪಿಕೊಂಡರು

ಬಿಸಲುಕಾಲ ಪ್ರಾರಂಭವಾದದ್ದರಿಂದ ರಾಜಧಾನಿಯಲ್ಲಿ ಸಿಡುಬಿನ ಉಪದ್ರ ತಲೆಹಾಕಿದೆ ಆಗಲೇ ಕೆಲವು ಮಕ್ಕಳು ಸಿಡುಬಾಗಿ ತೀರಿಹೋದವು ಹೆಲ್ತ್ ಆಫೀಸರವರು ದೇವೀಸಿಡುಬು ಹಾಕತಕ್ಕವರನ್ನು ಹಂಗಾಮಿಯಾಗಿ ನೇಮಿಸಿಕೊಂಡು, ಅವರನ್ನು ಬೆಳಗ್ಗೆ ಸಹೊತ್ತು ಆಯಾ ಆಸ್ಪತ್ರೆಗಳಲ್ಲಿದ್ದು ಮಕ್ಕಳಿಗೆ ಸಿಡುಬು ಹಾಕುವಂತೆಯೂ, ಮಧ್ಯಾಹ್ನದ ಹೊತ್ತು ಕೇರಿಮನೆಗಳ ಮೇಲೆ ಅವರನ್ನು ಕಳುಹಿಸಿ ತಂದೆತಾಯಿಗಳಿಗೆ ವಿವೇಕ ಹೇಳಿ ಅವರ ಮಕ್ಕಳಿಗೆ ಸಿಡುಬು ಹಾಕುವಂತೆಯೂ ಏರ್ಪಾಡು ಮಾಡಬೇಕೆಂದು ಕೌನ್ಸಿಲರುಗಳು ತೀರ್ಮಾನಮಾಡಿದರು

ನಂಜರಾಜ ಬಹದ್ದೂರವರ ಛತ್ರದ ಬಳಿ ಇರುವ ಖಾಲಿ ನಿವೇಶನವನ್ನು ವಿದ್ಯಾರ್ಥಿಗಳ ನಿಲಯವನ್ನು ಕಟ್ಟಿಸಿಕೊಡುವುದಕ್ಕೆ ಬಿಟ್ಟುಕೊಡಬೇಕೆಂದು ಅಡ್ವೊಕೇಟ್ ಮೆ॥ ಎ ರಾಮಣ್ಣನವರು ಕೇಳಿದ್ದರು ಆ ನಿವೇಶನವನ್ನು ಹಾಗೇ ಖಾಲೀ ಬಿಟ್ಟಿರಬೇಕೆಂದೂ, ಅವರಿಗೆ ಕೊಡಬೇಕಾದದ್ದಿಲ್ಲವೆಂದೂ ಗವರ್ನಮೆಂಟಿನವರು ಹುಕುಂಕೊಟ್ಟಿದಾರೆ

ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯಿಂದ ಗ್ರ್ಯಾಂಟು ಹೊಂದುವ ಪ್ರೈಮರಿ ಪಾಠಶಾಲೆಗಳಲ್ಲಿ ಹೆಸರಿನಪಟ್ಟಿ ಬರೆದಿಡುವುದೇ ಮುಂತಾದದ್ದಕ್ಕೆ ಸ್ವಲ್ಪ ಹಣ ಬೇಕೆಂದು ಸ್ಕೂಲ್ ಮ್ಯಾನೇಜಿಂಗ್ ಕಮಿಟಿಯವರು ಕೇಳಿದ್ದರು ಇದಕ್ಕೆ ಹಣ ಕೊಡಬೇಕಾದದ್ದು ಅವಶ್ಯವೆಂದು ತೀರ್ಮಾನವಾಗಿದೆ

ಕುಕ್ಕರಹಳ್ಳಿ ಕೆರೆ ಕೆಳಗಿರುವ ಸ್ನಾನದ ಕೊಳಗಳಲ್ಲಿ ಹೊಂದು ಮುಂತಾದ ಕೊಳಕನ್ನು ತೆಗೆಸಿ ಒಳ್ಳೇ ಸ್ಥಿತಿಯಲ್ಲಿಡುವುದಕ್ಕೆ ಖರ್ಚು ಎಷ್ಟಾದೀತೆಂದು ಅಂದಾಜುಮಾಡಿಸಬೇಕೆಂದು ಮೆಂಬರುಗಳು ಗೊತ್ತುಮಾಡಿದಾರೆ.

ಬಲಾತ್ಕಾರದಿಂದ ಮಕ್ಕಳಿಗೆ ದೇವೀಸಿಡುಬು ಹಾಕುವ ವಿಷಯದಲ್ಲೂ, ಹೋಟಲು ಅಂಗಡಿಗಳಲ್ಲಿ ತಿಂಡಿಪದಾರ್ಥಗಳನ್ನು ಆರೋಗ್ಯಕರವಾದ ರೀತಿಯಲ್ಲಿ ಮಾಡಿ ಟೊಕ್ಕಟವಾಗಿ ಇಡುವ ವಿಷಯದಲ್ಲೂ ಕೌನ್ಸಿಲರುಗಳು ಹಿಂದೆಯೇ ಕೆಲವು ಬೈಲಾಗಳನ್ನು ಮಾಡಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿ ಐದು ತಿಂಗಳಾದದ್ದರಿಂದ, ಅವುಗಳ ವಿಷಯದಲ್ಲಿ ಆಕ್ಷೇಪಣೆಗಳೇನೂ ಮಾಡಲ್ಪಟ್ಟಿಲ್ಲವಾದದ್ದರಿಂದಲೂ ಈ ಬೈಲಾಗಳನ್ನು ಸ್ಯಾಂಕ್ಷನ್ ಬಗ್ಗೆ ಗವರ್ನಮೆಂಟಿಗೆ ಕಳುಹಿಸಬೇಕೆಂದು ಹೆಲ್ತ್ ಆಫೀಸರವರು ಸೂಚಿಸಿದರು ಕೌನ್ಸಿಲರುಗಳು ಹಾಗೆ ಮಾಡಬಹುದೆಂದು ಒಪ್ಪಿಕೊಂಡಿದಾರೆ

ದೊಡ್ಡಕೆರೆಗೆ ನೀರು ಬರುವ ಕಾಲುವೆಯಿಂದ ಸುಣ್ಣದಕೇರಿಯ ಕಡೆ ಪ್ರಜೆಗಳ ಆರೋಗ್ಯಕ್ಕೆ ಕುಂದಕವಾಗಿರೋಣದರಿಂದ ಈ ಬೇಗೆಯಲ್ಲೇ ಮುಚ್ಚಿಸಬೇಕೆಂದು ಮೆ॥ ಶ್ರೀಕಂಠಯ್ಯನವರು ಸೂಚಿಸಿದರು ಕೌನ್ಸಿಲರುಗಳು ಈ ವಿಚಾರವನ್ನು ಟ್ರಸ್ಟ್ ಬೋರ್ಡಿಗೆ ತಿಳಿಸಬೇಕೆಂದು ತೀರ್ಮಾನಿಸಿದರು

ನಂಜರಾಜ ಬಹದ್ದೂರವರ ಛತ್ರದ ಉತ್ತರಪಾರ್ಶ್ವಕ್ಕೆ ಜೀವಣ್ಣರಾಯರ ಕಟ್ಟೆ ಒಳಗೆಯಲ್ಲಿರುವ ಸುಮಾರು ನಾಲ್ಕು ಎಕರೆ ಖಾಲೀ ಜಮೀನನ್ನು ಮೆ॥ ಕೆ ಶ್ರೀಕಂಠಯ್ಯನವರಿಗೆ ಅಲ್ಲಿ ಭತ್ತ ಕುಟ್ಟುವ ಯಂತ್ರದ ಕಾರ್ಖಾನೆಯನ್ನು ಕಟ್ಟುವುದಕ್ಕೆ ೫೦೦ ರೂಪಾಯಿಗೆ ಕೊಡಬಹುದೆಂದು ಕೌನ್ಸಿಲರುಗಳು ಒಪ್ಪಿರುತ್ತಾರೆ

ಬಹುಮಾನದ ಮೇಲಾಟವು

"ಇಂಗ್ಲಿಷ್ ರಾಜ್ಯಭಾರವೂ ಬ್ರಾಹ್ಮಣೇತರರೂ"

ಮೇಲ್ಕಂಡ ವಿಷಯವನ್ನು ಕುರಿತು ನಮ್ಮ ಬಳಿಗೆ ಬರೆದು ಬಂದಿರುವ ಮೂರು ಲೇಖನಗಳನ್ನು ಪರಿಶೋಧಿಸಿ ನೋಡಿದ್ದರಲ್ಲಿ ಕೆಳಗೆ ಪ್ರಕಟಿಸಿರುವುದೇ ಉತ್ತಮವಾದದ್ದೆಂದು ಕಂಡುಬಂದಿದೆ ಇದನ್ನು ಬರೆದ ಮ॥ ಪಿ ವೆಂಕಟಸುಬ್ಬಯ್ಯ ಸಂತೇಪೇಟೆ, ಮೈಸೂರು, ಇವರಿಗೆ ನಾವು ಬಹುಮಾನವನ್ನು ಕಳುಹಿಸುವೆವು

"ಇಂಗ್ಲಿಷ್ ರಾಜ್ಯಭಾರವು ಇಂಡಿಯಾ ದೇಶದಲ್ಲಿ ನೆಲೆಗೊಂಡ ಲಾಗಾಯ್ತು ಬ್ರಾಹ್ಮಣೇತರರಿಗೆ ಉಂಟಾಗಿರುವ ಮೇಲುಗಳು

ಇಂಗ್ಲಿಷ್ ರಾಜ್ಯಭಾರದಿಂದ ಬ್ರಾಹ್ಮಣೇತರರಿಗೆ ಉಂಟಾಗಿರುವ ಮೇಲುಗಳನ್ನು ತಿಳಿದುಕೊಳ್ಳಬೇಕಾದರೆ ಮೊದಲು ಜಾತಿಭೇದಗಳಿಗೆ ಕಾರಣ ಮತ್ತು ಆ ಕಾಲದಲ್ಲಿ ಅವರು ಇದ್ದ ಸ್ಥಿತಿ ಇವುಗಳನ್ನು ತಿಳಿದುಕೊಂಡರೆ ಈಗ ಬ್ರಾಹ್ಮಣೇತರರು ಅನುಭವಿಸುವ ಮೇಲುಗಳು ಸುಲಭವಾಗಿ ಗ್ರಾಹ್ಯವಾದೀತು

ಜಾತಿಭೇದಗಳಿಗೆ ಕಾರಣ ಆರ್ಯರು ಇಂಡಿಯಾ ದೇಶಕ್ಕೆ ಬಂದು ನೆಲಸಿದಾಗ ಜಾತಿಭೇದಗಳಿರಲಿಲ್ಲ. ಈ ದೇಶದಲ್ಲಿ ನಿಂತ ಮೇಲೆ ಜನರು ಬೇರೆ ಬೇರೆ ವೃತ್ತಿಗಳನ್ನು ಅನುಸರಿಸಿದ ಹಾಗೆಲ್ಲಾ ಬ್ರಹ್ಮಕ್ಷತ್ರಾದಿ ವರ್ಣಚತುಷ್ಟಯಗಳು ಆದವು ಈ ವರ್ಣಗಳಿಗೆ ಹೊರಗಾಗಿದ್ದವರು ಚಂಡಾಲರಾದರು ಅನೇಕ ಕಾಲಗಳ ಪರ್ಯಾಯ ಅವರುಗಳು ಪ್ರತ್ಯೇಕವಾದ ಹಾಗೆಲ್ಲಾ ಒಂದೊಂದು ವ್ಯಾಪಾರದಿಂದ ಜೀವಿಸುತ್ತಿದ್ದವರೆಲ್ಲರೂ ಒಂದೊಂದು ಗುಂಪಾಗಿ ಬೇರೆ ಬೇರೆ ಒಡೆದುದರಿಂದ ನೂರಾರು ಜಾತಿಗಳುಂಟಾದವು. ಕ್ರಮೇಣ ಒಂದು ಜಾತಿಯವರು ಬೇರೊಂದು ಜಾತಿಯವರ ವ್ಯಾಪಾರಗಳನ್ನು ಮಾಡಿ ಜೀವಿಸಕೂಡದು ಅವರ ಸಂಗಡ ಊಟಮಾಡಕೂಡದು, ಅವರಲ್ಲಿ ಹೆಣ್ಣು ತರಕೂಡದು ಈ ಮುಂತಾದ ನಿರ್ಬಂಧಗಳು ಉಂಟಾದವು

ಆ ಕಾಲದಲ್ಲಿ ಜನರ ಸ್ಥಿತಿ ಈ ದೇಶದಲ್ಲಿ ಅನೇಕ ರಾಜರುಗಳು ಸ್ವತಂತ್ರವಾಗಿ ರಾಜ್ಯಭಾರವನ್ನು ನಡೆಸುತ್ತಿದ್ದರು ಅವರುಗಳೆಲ್ಲಾ ಬ್ರಾಹ್ಮಣರುಗಳೇ ಪ್ರಬಲರಾಗುತ್ತಿದ್ದುದರಿಂದ ಅವರ ಹೇಳಿಕೆಯಂತೆಯೇ ರಾಜ್ಯಾದಿಕಾರ್ಯಗಳೆಲ್ಲಾ ನಡೆಸಲ್ಪಡುತ್ತಿದ್ದವು ಕ್ರಿಮಿನಲ ಕೋಡು ಬಹಳ ಕಠಿಣವಾಗಿದ್ದರೂ ಶಿಕ್ಷೆ ಮಾತ್ರ ಜಾತ್ಯನುಸಾರವಾಗಿತ್ತು ಬ್ರಾಹ್ಮಣನಿಗೆ ಸ್ವಲ್ಪ ಶಿಕ್ಷೆಯೂ ಅದೇ ತಪ್ಪಿಗಾಗಿ ಕೆಳಜಾತಿಯವನಿಗೆ ಅತಿ ಕಠಿಣವಾದ ಶಿಕ್ಷೆಯೂ ವಿಧಿಸಲ್ಪಡುತ್ತಿತ್ತು ಬ್ರಾಹ್ಮಣನ ಮೇಲೆ ಇತರ ಜಾತಿಯವರು ಯಾವ ವ್ಯಾಜ್ಯವನ್ನೂ ತರಲು ಆಗುತ್ತಿರಲಿಲ್ಲ ಬ್ರಾಹ್ಮಣೇತರರು ತಾವು ಮಾಡಿದ ಕೂಲಿ ಮೇಲೂ ಮತ್ತು ಜಮೀನಿನ ಮೇಲೂ ಇರುವಷ್ಟು ಹಕ್ಕುಬಾಧ್ಯತೆಗಳೂ ಹೊಂದಿರಲಿಲ್ಲ ತಾವು ಬೆಳೆದ ದವಸವು ಸಂಪಾದಿಸಿದ ಹಣವು ಸರ್ಕಾರಕ್ಕೆ ದಂಡತೆರುವುದರಲ್ಲೇ ಸರಿಯಾಗಿ ಹೊಟ್ಟೆಬಟ್ಟೆಗೆ ಸಾಲದ ಶ್ರಮಪಡುತ್ತಿದ್ದರು ಕಂದಾಯದ ಹಣವು ಮತ್ತು ಇತರ ತೆರಿಗೆಗಳು ಬಹಳ ಹೆಚ್ಚಾಗಿದ್ದವು ಅವರು ರಸ್ತೆ, ಕೆರೆ, ಕಾಲುವೆ ಮುಂತಾದವುಗಳನ್ನು ಮಾಡುವುದಕ್ಕಾಗಿ ಅನೇಕ ತಿಂಗಳು ಮತ್ತು ವರ್ಷಗಟ್ಟಲೆ ಬಿಟ್ಟಿಚಾಕರಿ ಮಾಡಬೇಕಾಗಿತ್ತು ಇದೂ ಅಲ್ಲದೆ ತಾವು ಹುಟ್ಟಿ ಬೆಳೆದ ಊರಿನಿಂದ ಮತ್ತೊಂದೂರಿಗೆ ಹೋಗಿ ವಾಸ ಮಾಡುವುದಕ್ಕೂ ಮತ್ತು ತಮ್ಮ ಕುಲಪದ್ಧತಿಯಾಗಿ ಬಂದ ಕಸುಬನ್ನು ಬಿಟ್ಟು ಬೇರೆ ತಮಗೆ ಇಷ್ಟ ಬಂದ ಕಸುಬಿಗೆ ಸೇರಿಕೊಳ್ಳುವುದಕ್ಕೂ ಅವಕಾಶವಿಲ್ಲದ್ದು ಈ ನಿರ್ಬಂಧಗಳಿಂದಲೂ ಮತ್ತು ಕೂಲಿಯ ದರವು ಬಹಳ ಕಡಮೆಯಾಗಿದ್ದುದರಿಂದಲೂ ಬ್ರಾಹ್ಮಣೇತರರಿಗೆ ಜೀವನ ಸಾಗುವದೇ ಬಹಳ ಕಷ್ಟವಾಗಿತ್ತು ಅವರುಗಳು ಕೆರೆಕಟ್ಟೆಗಳಲ್ಲಿ ನೀರು ಉಪಯೋಗಿಸುವುದಕ್ಕೂ ಬ್ರಾಹ್ಮಣರ ಬೀದಿಗಳಲ್ಲಿ ತಿರುಗಾಡುವುದಕ್ಕೂ ಅಪ್ಪಣೆ ಇರಲಿಲ್ಲ ವಿದ್ಯಾಭ್ಯಾಸ, ಅಧಿಕಾರ ಮತ್ತು ಐಶ್ವರ್ಯಗಳೆಲ್ಲಾ ಬ್ರಾಹ್ಮಣರುಗಳ ಪಾಲೇ ಆಗಿದ್ದವು ಬ್ರಾಹ್ಮಣೇತರರುಗಳು ವಿದ್ಯಾಭ್ಯಾಸಮಾಡಿದರೆ ಶಿಕ್ಷೆಯು ವಿಧಿಸಲ್ಪಡುತ್ತಿತ್ತು

ಈ ಕಾಲದಲ್ಲಿ ಜನರ ಸ್ಥಿತಿ — ಇಂಗ್ಲಿಷ್ ಚಕ್ರಾಧಿಪತ್ಯವು ಇಂಡಿಯಾ ದೇಶದಲ್ಲಿ ನೆಲೆಗೊಂಡ ಮೇಲೆ ಮೇಲ್ಕಂಡ ನ್ಯೂನತೆಗಳೆಲ್ಲಾ ನಿವಾರಣೆಮಾಡಲ್ಪಟ್ಟವೆ. ದೇಶದಲ್ಲೆಲ್ಲಾ ಸಮಾಧಾನವು ನೆಲಗೊಂಡು ನಷ್ಟನುಡಿಗಳಲ್ಲೂ, ವ್ಯವಹಾರದಲ್ಲೂ ವ್ಯಾಪಾರದಲ್ಲೂ ಸಕಲ ಜಾತಿಯವರಿಗೂ ಸಂಪೂರ್ಣ ಸ್ವಾತಂತ್ರ್ಯವಿರುತ್ತೆ ಸರ್ಕಾರದವರ ದಯೆಯು ಒಬ್ಬ ಬ್ರಾಹ್ಮಣನ ಮೇಲಿರುವಂತೆಯೇ ಒಬ್ಬ ಕೀಳುಜಾತಿಯವನ ಮೇಲೂ ಒಂದೇ ರೀತಿಯಾಗಿರುವುದು ತನ್ನ ಮನಬಂದ ಕಡೆಗೆ ಯಾವ ಅಪ್ಪಣೆಯನ್ನೂ ಕೇಳದೆ ಹೋಗಬಹುದು ತನಗೆ ಬೇಕಾದ ಕಸಬನ್ನು ಅವಲಂಬಿಸಬಹುದು ಎಷ್ಟು ಕೂಲಿಯನ್ನು ಬೇಕಾದರೂ ತೆಗೆದುಕೊಂಡು ತನ್ನ ಇಷ್ಟಬಂದವರ ಬಳಿ ಕೆಲಸ ಮಾಡಬಹುದು ಒಬ್ಬನು ಮತ್ತೊಬ್ಬನನ್ನು ತನಗಾಗಿ ಕೆಲಸಮಾಡಲು ಬಲವಂತಪಡಿಸುವಹಾಗಿಲ್ಲ ತಾನು ಬೆಳೆದ ದಿನಸಿಯನ್ನು ತನಗೆ ಬೇಕಾದ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಮಾರಬಹುದು ಜಾತಿಭೇದವಿಲ್ಲದೆ ಸರ್ವರಿಗೂ ಒಂದೇ ವಿಧವಾದ ಕಂದಾಯವು ವಿಧಾಯಕ

ಮಾಡಲ್ಪಟ್ಟರುತ್ತವೆ. ಈಗ ತೆರಿಗೆಗಳೂ ಬಹಳ ಕಡಮೆಯಾಗಿವೆ. ವ್ಯವಸಾಯವು ವೃದ್ಧಿಯಾಗಿ ಕಾಡುಗಳೆಲ್ಲಾ ಟೀ ಮತ್ತು ಕಾಫಿ ತೋಟಗಳಾಗಿ ಪರಿಣಮಿಸಿವೆ. ಕೈಗಾರಿಕೆಯು ಹೆಚ್ಚು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನೇಕ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟು ಗಣಿಗಳಲ್ಲಿ ವಿಶೇಷವಾಗಿ ಕೆಲಸ ನಡೆಯುತ್ತಿವೆ. ಇವುಗಳಲ್ಲಿ ಕೆಲಸ ಹೆಚ್ಚಾಗಿ ದೊರಕುವುದರಿಂದ ಸಾವಿರಾರು ಬ್ರಹ್ಮದೇಶದವರು ಕೆಲಸಮಾಡಿ ತಮ್ಮ ಜೀವನವನ್ನು ಸುಲಭವಾಗಿ ಕಳೆಯುತ್ತಾರೆ. ಕೋರ್ಟು ಕಚೇರಿಗಳಲ್ಲಿ ನ್ಯಾಯವಿಮರ್ಶೆಯು ಜಾತಿಭೇದವಿಲ್ಲದೆ ಸರ್ವರ ವಿಷಯದಲ್ಲೂ ಒಂದೇ ರೀತಿಯಾಗಿರುವುದು. ತಪ್ಪುಮಾಡಿದವರೆಲ್ಲರಿಗೂ ಒಂದೇ ರೀತಿಯಾಗಿ ವಿಚಾರಣೆ ಮಾಡಲ್ಪಟ್ಟು ಶಿಕ್ಷೆಯು ವಿಧಿಸಲ್ಪಡುತ್ತದೆ.

ಈಗ [illegible]ಧಾರಣವಾಗಿ ಪ್ರತಿ ಒಂದು ಗ್ರಾಮದಲ್ಲೂ ಪಾಠಶಾಲೆಗಳು ಸ್ಥಾಪಿಸಲ್ಪಟ್ಟಿವೆ. ಅವುಗಳಲ್ಲಿ ಜಾತಿ ಕುಲ ಭೇದವಿಲ್ಲದೆ ಸರ್ವರಿಗೂ ಉಚಿತವಾಗಿ ವಿದ್ಯೆಯನ್ನು ಹೇಳಿಕೊಡುತ್ತಾರೆ. ಇವುಗಳಲ್ಲದೆ ಕೈಗಾರಿಕೆ ವಿದ್ಯೆಗಳಲ್ಲೂ ಪ್ರವೀಣತೆಯನ್ನು ಸಂಪಾದಿಸಲು ಚಿತ್ರಕಲಾಶಾಲೆಗಳೂ ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿವೆ. ಸಕಲ ಜಾತಿಯವರೂ ತಮ್ಮ ಮಕ್ಕಳನ್ನು ಬೇಕಾದ ಪಾಠಶಾಲೆಗೆ ಕಳುಹಿಸಿ [illegible] ಮಾಡಿಕೊಳ್ಳಬಹುದು. ಪತ್ರಿಕೆ ಬರೆಲು ಯೋಗ್ಯರಲ್ಲವೆ [illegible] ಊರವಾಡಿದ್ದ [illegible] ಜಾತಿಯವರು ಈಗ ಇಂಗ್ಲೀಷ್ ವಿದ್ಯೆಗಳ ವಿ ಉತ್ತಮ[illegible]ಗೆ ತರಲ್ಪಟ್ಟು ವಿದ್ಯಾಭ್ಯಾಸವನ್ನು ಮಾಡಿ ನವನಾಗರೀಕತೆಗಳಲ್ಲಿ ಆಸಕ್ತಿಯನ್ನು ತೋರಿಸುತ್ತಲಿದ್ದಾರೆ. [illegible]ಮರೂ ವಿದ್ಯಾ[illegible] ರನ್ನರೂ ಅವ ಬ್ರಹ್ಮದೇಶದವರಿಗೆ ಸರ್ಕಾರದವರು ಮರ್ಯಾದೆ ತೋರಿಸಿ [illegible] ಅನುಕೂಲಗಳನ್ನೂ ಗೌರವವನ್ನೂ ಕೊಡುತ್ತಾರೆ.

[illegible] ಜಾತಿ ಮತ್ತು ಮತಗಳುಳ್ಳ ರಾಜವನ್ನಾಳತಕ್ಕ ಘಾನೆಯು [illegible] ತಮ್ಮ ಮತ ವಿಷಯದ [illegible] ವಿಸ್ವಾಭಿಪ್ರಾಯವುಳ್ಳ ತನ್ನ ಪ್ರಜೆಗಳ [illegible]ಗೆ ಸೇರಿಸುವುದು ಬಹಳ ಕಷ್ಟ. ಆದಾಗ್ಯೂ ಸಮ್ಮನ್ನಾಳುವ [illegible] [illegible] ಮತ್ತು [illegible] ಇದನ್ನು [illegible]ರ್ಥವಾಗುವ [illegible] ಮಾಡಿರುತ್ತ [illegible] ಗಾಡಿಗಳಲ್ಲಿ ಬ್ರಾಹ್ಮಣರ ಪಕ್ಕದಲ್ಲಿ ಬ್ರಹ್ಮದೇಶದವರು ಕುಳಿತು [illegible] ಭಾವನೆ ವಾಡುತ್ತಾ ಜಾತಿಭೇದವಿಲ್ಲದೆ ಒಬ್ಬರ ಅನುಕೂಲವನ್ನು [illegible] ಪ್ರಯಾಣ ಮಾಡುತ್ತಾರೆ.

[illegible] ಇಂಡಿಯಾ ದೇಶದಲ್ಲಿ [illegible] [illegible] ಕಲ್ಲಿ [illegible] [illegible] ನಿಯಮಗಳ ಭೇದವಿಲ್ಲದೆ ಸಕಲರಿಗೂ ಏಕರೀತಿಯಾಗಿ [illegible] [illegible]

ಇಂಡಿಯಾ ದೇಶದ ವೃತ್ತಾಂತಗಳು.

[illegible] ಮಹಾರಾಜರವರು ರಾಜದ್ರೋಹವನ್ನು [illegible] ವರ್ತಮಾನ ಪತ್ರಿಕೆಗಳನ್ನು ತಮ್ಮ [illegible]ಲ್ಲಿ ಯಾರೂ [illegible]ಂದು [illegible] ಹಾಕಿ [illegible]ರುತ್ತಾರೆ.

• • •

[illegible]ದಲ್ಲಿ ಒಂದು ಶಾಸ್ತ್ರಸಂಸ್ಕೃತ [illegible] ಕಾಲೇಜನ್ನು [illegible] ಸುವದಕ್ಕಾಗಿ ಸರ್ದಾರ್ [illegible]ಯವರ [illegible] ಲಕ್ಷ ರೂಪಾಯಿಗಳನ್ನು [illegible]ವಾಗಿ ಕೊಟ್ಟಿದಾರೆ.

• • •

[illegible] ಪಟ್ಟಣ (ಮ[illegible]ಬಂದರು) ನಗರದಲ್ಲಿ ಶ್ರೀ ಸನಾತನ ಧರ್ಮ [illegible] ಶ್ರೀ ಸಮಾಜವು ಕಳೆದ ವಾರ [illegible]ಗಿತು. [illegible] ಗೌರಮ್ಮನವರೂ [illegible]ಮ್ಮಾಳುಸವರೂ ನೂರಾರು ಮಂ[illegible]ಯರೂ ಸಭೆ[illegible]ಸದಲ್ಲಿ ಆಗ್ರಾಸನವನ್ನು ವಹಿಸಿ [illegible] ಈಗ ನಡೆದಿರುವ ಕಾರ್ಯ[illegible] ಸಕಲರೂ [illegible] ಕೂಡಲೇ [illegible] [illegible] ಈ ರಾತ್ರ [illegible] ಉಪನ್ಯಾಸಮಾಡಿದರು.

• • •

ಗಂಜಾಂ ಡಿಸ್ಟ್ರಿಕ್ಟಿನ (ಮದರಾಸು ಪ್ರಾಂತ) ದಲ್ಲಿ [illegible] ಪರ್ವತದಲ್ಲಿ ಒಂದು ಭಯಂಕರವಾದ ಹುಲಿಯು [illegible]ನನ್ನು ಸಂಹಾರ ಮಾಡುತ್ತದೆಂತಲೂ ಹೀಗ ಮೂರು [illegible]ಗಾಗಿ ೧೯೦ ಮಂದಿ ಅದರ [illegible] ತುತ್ತಾದರೆಂತಲೂ [illegible] ೧೯ ಜಂದ ೩೦ ವರೆಗ [illegible]ಲ್ಲಲ್ಪಟ್ಟರಂತಲೂ ಈ ಹುಲಿಯನ್ನು ಕೊಲ್ಲುವವರಿಗೆ ೧೦೦೦ ರೂಪಾಯಿಗಳ [illegible] ಬಹುಮಾನ ಕೊಡುತ್ತಾರೆಂತಲೂ ತಿಳಿಯಬರುತ್ತದೆ.

• • •

ಕಳೆದ ವಾರ ಒಮ್ಮೆ [illegible] ರಾಜಧಾನಿಯಾದ [illegible] ಪಟ್ಟಣದಿಂದ [illegible] ಎಂಬ ರಾಜದ್ರೋಹಕರವಾದ ವರ್ತಮಾನ ಪತ್ರಿಕೆಗಳ ಒಂದು ಕಟ್ಟು [illegible] ಮೇಲ ಲಾಹೋರ್ ಪಟ್ಟಣದ ಚೀಫ್ ಕೋರ್ಟಿನ ಮತ್ತು ಡಿಸ್ಟ್ರಿಕ್ಟ್ ಕೋರ್ಟಿನ ಲಾಯರುಗಳ ಪುಸ್ತಕ ಭಂಡಾರಗಳಿಗೆ ಬಂದಿರುತ್ತದೆ. ಈ ಪತ್ರಿಕೆಯನ್ನು ಹಿಂದುಸ್ಥಾನಕ್ಕೆ ಯಾರೂ ತರಿಸ ಕೂಡದೆಂದೂ ಶೀಮೆಯ ಟಪ್ಪಾಲ್ ಆಫೀಸಿನಿಂದ ಅದನ್ನು ಸರ್ಕಾರದವರೇ ಮುಡುಕಿ ಸ್ವಾಧೀನ ಪಡಿಸಿಕೊಳ್ಳಬೇಕೆಂದೂ ಹುಕುಂ ಆಗಿರುತ್ತದೆ.

• • •

ಲಾಹೋರ್ ಪಟ್ಟಣದಲ್ಲಿ ಅನೇಕ ಮಂದಿ ಮುಖಂಡರಾದ ಪ್ರಜೆಗಳನ್ನು ರಾಜದ್ರೋಹಿಗಳೆಂದು ದಸ್ತಗಿರಿಮಾಡಲ್ಪಟ್ಟು ದೊಡ್ಡ ಮೊಕದ್ದಮೆ ಒರುವುದೆಂದು ವರ್ತಮಾನ ಹುಟ್ಟಿದೆ. ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಹೋಗಿರುವ ಒಬ್ಬ ವಿದ್ಯಾರ್ಥಿಯು ಭಾಯಿ ಪರಮಾನಂದರಿಗೆ ಒಂದು ಕಾಗದವನ್ನು ಬರೆದು ಅದರಲ್ಲಿ ಲಂಡನ್ ಪಟ್ಟಣದಲ್ಲಿರುವ ಚಕ್ರವರ್ತಿಯವರ ಖಜಾನೆಯನ್ನು ಲೂಟಿಮಾಡುವುದಕ್ಕೆ ನಾನೂ ನನ್ನ ಸಂಗಡಿಗರೂ ಏರ್ಪಾಡುಮಾಡುತ್ತಿದೇವೆ ಎಂದು ಮುಂತಾಗಿ ಹೇಳಿರುತ್ತಾನೆ. ಈ ಕಾಗದವು ಈಗ ಪೋಲೀಸಿನವರ ವಶದಲ್ಲಿರುತ್ತದೆ.

• • •

ನಂದಿಯಾಲದ ಲಕ್ಷ್ಮೀನರಸಮ್ಮನವರು ಕಳೆದ ವಾರ ಗುಂಟೂರಿಗೆ ಹೋಗಿ ಸ್ತ್ರೀವಿದ್ಯಾಭ್ಯಾಸದ ವಿಚಾರವನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಸಾವಿರಾರು ಜನರು ಆ ದಿನ ಸಭೆಯಲ್ಲಿ ಹಾಜರಾಗಿದ್ದರು. ಹಿಂದೂ ಸ್ತ್ರೀಯರು ಈ ರೀತಿ ಸಭೆಯಲ್ಲಿ ನಿಂತು ಸ್ವಾತಂತ್ರ್ಯವಾಗಿ ಉಪನ್ಯಾಸಮಾಡಿದ್ದು ಇದೇ ಮೊದಲೆಂದು ಹೇಳುತ್ತಾರೆ. ಪತಿವಿಯೋಗವನ್ನು ಹೊಂದಿರುವ ಈಕೆಗೆ ಆರು ಭಾಷೆಗಳು ತಿಳಿದಿರುತ್ತವೆ. ಸಬ್ ಜಡ್ಜ್ ಮ|| ಸುಬ್ರಹ್ಮಣ್ಯಯ್ಯನವರು ಸಭೆಯ ಅಗ್ರಾಸನವನ್ನು ವಹಿಸಿ, ಉಪನ್ಯಾಸವಾದ ಬಳಿಕ ಸಭಿಕರ ಆನಂದವನ್ನೂ ಕೃತಜ್ಞತೆಯನ್ನೂ ವಿವರಿಸಿ ಆಕೆಯನ್ನು ಕೊಂಡಾಡಿದರು.

• • •

ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು ಹಿಂದುಸ್ಥಾನದಲ್ಲೂ ಇತರ ದೇಶಗಳಲ್ಲೂ ಪ್ರಜೆಗಳ ಮನಸ್ಸನ್ನು ಕೆಡಿಸುವಂಥಾ ಲೇಖನಗಳನ್ನು ಬರೆದು ಪ್ರಕಟವಾಗುವ ಸುಮಾರು ೩೧೯ ವರ್ತಮಾನ ಪತ್ರಿಕೆಗಳನ್ನು ಗ್ವಾಲಿಯರ್ ಸಂಸ್ಥಾನದ ಪ್ರಜೆಗಳಾರೂ [illegible] ಓದಕೂಡದೆಂದು ಇಷ್ತಿಹಾರನಾಮೆಯನ್ನು ಪ್ರಕಟಿಸಿದ್ದಾರಷ್ಟೆ. ಈಗ ದೇಶದ [illegible]ಗತಿ, ವ್ಯಾಪಾರ [illegible] ಈ [illegible] ಪ್ರಜಾಸಂಸ್ಥೆಯಕ್ಕೆ ಸಹಾಯಕವಾದ ವಿಚಾರಗಳನ್ನು ಕುರಿತು ಬರೆಯತಕ್ಕ ಒಂದು ವರ್ತಮಾನ ಪತ್ರಿಕೆಯನ್ನು ಮಹಾರಾಜರವರು ತಮ್ಮ ಸರ್ಕಾರದಿಂದಲೇ ಸ್ಥಾಪಿಸಿ [illegible] ಹಾಕಿಸಿ, ಪ್ರಜೆಗಳಿಗೆ [illegible]ಸಬೇಕೆಂದು [illegible] ಮಾತ್ರವಾರ [illegible]ದಲ್ಲಿ ಉತ್ತರವಾದ ರಾಜಕೀಯ [illegible]ರಗಳನ್ನೂ ಬರೆದು [illegible]ಸುವರೆಂದು ಪ್ರಕಟವಾಗಿದೆ.

• • •

ಕಲ್ಕತ್ತಾ ಪಟ್ಟಣದಲ್ಲಿ [illegible]ವಾದ ಕರಂಗಿ [illegible] [illegible]ದಲ್ಲಿ [illegible]ಕಾರದವರು [illegible] ಒಂಗಳಯನ್ನು ಕಟ್ಟಿಸಬೇಕೆಂದು ತಳಪಾಯ ತೋಡಿಸಿದರು. [illegible] ಮೂರು ೫೦ ಮಂದಿ ಕೂಲಿಯವರು ಸೇರಿಕೊಂಡು [illegible] ಅಡಿ ಕೆಳಗೆ ತೋಡಿದಾಗ್ಯೂ [illegible] ಸಿಕ್ಕಲಿಲ್ಲ. ಇನ್ನೂ ಸ್ವಲ್ಪ ತೋಡುವಾಗ್ಗೆ ಉಸುಬು ಸಿಕ್ಕಿತು. [illegible] ಒಸಿಯುವಂತೆ ಕಂಡಿತು. [illegible] ನೀರನ್ನು [illegible] ಎಂದರು [illegible] ದೂರ ತೋಡಿ [illegible] ನೋಡಿದರೂ ಉಸುಬು ದರಲೇ [illegible]ರುತ್ತದೆ. ಇದನ್ನು ನೋಡಿ [illegible] ಪಟ್ಟಣದಲ್ಲಿ [illegible] ಮುನಿಸಿಪಾಲಿಟಿಯವರೂ [illegible] [illegible] ಕಟ್ಟಡ [illegible] ಈ [illegible]ಸದಿಂದ [illegible] ಅನಾನುಕೂಲವಾದೀತೋ [illegible]ಯಾಗಿದೆ.

• • •

[illegible] ವಾರ ಮಕ್ಕಾದಿಂದ ಹಿಂತಿರುಗಿದ ೭೦೦ ಮಂದಿ ಮಹಮ್ಮದೀಯ ಯಾತ್ರಾರ್ಥಿಗಳು ಬೊಂಬಾಯಿಗೆ ಬಂದಿಳಿದರು. ಇವರಲ್ಲಿ [illegible] ಕಾಣಿಸಿಕೊಂಡಿದ್ದ ದಾರಿಯಲ್ಲಿ [illegible] [illegible]ಯ ವ್ಯಕ್ತಿ [illegible] ಹೋದರೆಂದೂ [illegible]ದವರೆಲ್ಲಾ ಬೊಂಬಾಯಿನಲ್ಲಿ [illegible]ವಾದ ಒಂದು [illegible] [illegible]ದು ಕೊಂಡು ಹೋಗಿ [illegible] ದಾರೆಂದೂ ತಿಳಿಯುವುದು. ಇದಲ್ಲದ [illegible] ಒಂದ [illegible] ೩೦೦ ಮಂದಿ ಯಾತ್ರಾರ್ಥಿಗಳಿದ್ದರು. ಈ ವ್ಯಕ್ತಿ ಕೆಲವರು [illegible] ಯಂತ್ರಗಳನ್ನು ಮುರಿದು [illegible] ಯಜಮಾನನ [illegible] ಎದ್ದು [illegible] ಹೋಗಿ ದೊಂಬಿ ಮಾಡಿದರು. [illegible] ೧೦೦ [illegible] ಮಹಮ್ಮದೀಯರನ್ನು ಹಿಡಿದು [illegible]ದಲ್ಲಿಟ್ಟರೆಂದು ವರ್ತಮಾನ [illegible].

• • •

ಬೊಂಬಾಯಿನಲ್ಲಿ ಲಕ್ಷ್ಮೀದಾಸ್ ನಾರಾಯಣ [illegible] [illegible] ವರ್ತಕರು [illegible] [illegible] [illegible] [illegible] ಒಂದು [illegible] ಮಾಡುತ್ತಾ [illegible] [illegible] ಗಳನ್ನು ಬೊಂಬಾಯಿ ಬ್ಯಾಂಕಿಗೆ ಆಧಾರಮಾಡಿ [illegible] ಸಾಹುಕಾರನು ಲಕ್ಷ್ಮೀದಾಸನ [illegible] ಬ್ಯಾಂಕಿನ ಮೇಲೂ [illegible] ಕೆಳ ಕೋರ್ಟಿನವರು ಲಕ್ಷ್ಮೀದಾಸನ ಮೇಲೆ ಡಿಕ್ರಿಕೊಟ್ಟ [illegible] ಬ್ಯಾಂಕಿನವರ ಮೇಲೆ ಮೊಕದ್ದಮೆ ವಜಾ ಮಾಡಿದ್ದರು. ಸಾಹುಕಾರನು ಬೊಂಬಾಯಿ ಹೈಕೋರ್ಟಿನಲ್ಲಿ ಅಪೀಲು ಮಾಡಿಕೊಂಡನು. [illegible]ಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ದಯಾಫ್ತು ಮಾಡಿ, ಕೆಳಕೋರ್ಟಿನ ತೀರ್ಮಾನವನ್ನು ರದ್ದು [illegible] ಬ್ಯಾಂಕಿನ ಮೇಲೂ ಡಿಕ್ರಿ ಕೊಟ್ಟಿರುತ್ತಾರೆ.

• • •

ಮದರಾಸ್ ಪಟ್ಟಣದಲ್ಲಿ ಕನ್ನಡಿ ಮತ್ತು ಗಾಜಿನ ಸಾಮಾನುಗಳನ್ನು ತಯಾರುಮಾಡುವುದಕ್ಕೆ ಒಂದು ಕಾರ್ಖಾನೆಯು ಏರ್ಪಾಡಾಗಿದೆ. ಈ ಕಂಪನಿಯ ಮೂಲಧನವಾದ ಎರಡು ಲಕ್ಷ ರೂಪಾಯಿ ಪೈಕಿ ೧,೬೦,೦೦೦ ರೂಪಾಯನ್ನು ಷೇರುಗಳಿಂದ ಕೂಡಿಸಿದಾರ. ಇನ್ನೂ ೪೦,೦೦೦ ರೂಪಾಯಿನ ಷೇರುಗಳು ಬಕರಿ ಆಗಿಲ್ಲ. ಈ ಕಂಪನಿಗೆ ಮೆ|| ಗಣಾದ ಹಾಪಿ ಇಸ್ಮೈಲ್ ಸೇಟರು, ಲೇಡಿಮಾರ್ಟರವರು, ಮಾಣಿಲಾಮಣಿ ಪಿಳ್ಳೆಯವರು, ಜಂಗರ್‌ಯವರು ಡೈರಕ್ಟರುಗಳಾಗಿದಾರ. ಜರ್ಮನಿಯಿಂದ ಕಂಪನಿಯವರು ಆ ಕಸಬುದಾರನಾದ ಮ|| ಮಾಯರ್ ಎಂಬಾತನನ್ನು ಕರಿಸಿ, ಆತನ ಹೇಳಿಕೆಯಂತೆ ಕಾರ್ಖಾನೆಯನ್ನು ಕಟ್ಟಿಸಿರುವರು. ಈ ಕಾರ್ಖಾನೆಯಲ್ಲಿ ಬಿ. ಎ. ಕ್ಲಾಸ್ ಮಾಡಿರುವವರೂ ಕೂಲಿಗಾರರ ಸಂಗಡ ಕಲೆತು ಆ ಕಸಬನ್ನು ಕಲಿಯುವುದರಲ್ಲಿ ಬಹು ಶ್ರದ್ಧೆಯಿಂದ ಕೆಲಸಮಾಡುತ್ತಿದಾರೆ.

• • •

ಕೆಲವು ದಿನಗಳ ಹಿಂದೆ ಅಂಬಾಲಾ ಪಟ್ಟಣದ ಯೂರೋಪಿಯನ್ ಡಪ್ಟಿಕಮಿಷನರವರ ಬಂಗಲೆಯ ಬಾಗಿಲಲ್ಲಿ ಒಂದು ಬಾಂಬಿಯು ಬಿದ್ದಿತ್ತು. ಅದರ ಮೇಲ ಡಪ್ಟಿಕಮಿಷನರವರ ವಿಶ್ವಾಸ ಉತ್ತು ಒಬ್ಬ ಚಾಕರನು ಅದನ್ನು ಎತ್ತಿ ಹಿಡಿದುಕೊಂಡು ನೋಡುತ್ತಿದ್ದಾಗ ಅದು ಅಕಸ್ಮಾತ್ತಾಗಿ ಒಡೆದು ಅವನಿಗೆ ಗಾಯವನ್ನುಂಟುಮಾಡಿತು. ಅವನನ್ನು ಆಸ್ಪತ್ರೆಯಲ್ಲಿಟ್ಟು [illegible] ಲಾಜು ಮಾಡುತ್ತಿದಾರೆ. ಆ ಸಿಡಿಮದ್ದಿನ ಗುಂಡನ್ನು ಡೆಪ್ಯುಟಿ ಕಮಿಷನರವರ ಪ್ರಾಣ ತೆಗೆಯುವುದಕ್ಕೋಸ್ಕರ ಅಲ್ಲಿ ಯಾವ ದುರಾತ್ಮನು ಇಟ್ಟಿದ್ದನೋ ಇನ್ನೂ ಪತ್ತೆ ಆಗಲಿಲ್ಲ. ಕಳೆದ ವಾರ ೮ ಪಟ್ಟಣದ ಹಿಂದು ಮಹಮ್ಮದೀಯ ದೊಡ್ಡ ಮನುಷ್ಯರು ಒಘಾದ್ರಿಯಲ್ಲಿ ಸೇರಿ ದೊಡ್ಡ ಸಭೆಯನ್ನು ನಡಿಸಿ ಅಕೃತ್ಯಮಾಡಿದ ಅಪರಾಧಿಯನ್ನು ಹಿಡಿದು ಸರ್ಕಾರಕ್ಕೆ ಒಪ್ಪಿಸಬೇಕಾದದ್ದು ತಮ್ಮ ಕರ್ತವ್ಯವೆಂದೂ ತಾವೆಲ್ಲಾ ಪೋಲೀಸಿನವರಿಗೆ ಸಹಾಯ ಮಾಡುತ್ತೇವೆಂದೂ ತೀರ್ಮಾನ ಮಾಡಿದ್ದಲ್ಲದೆ ಆ ದುಷ್ಟನನ್ನು ಹಿಡಿದು ಕೊಟ್ಟವರಿಗೆ ಬಹುಮಾನ ಕೊಡುವುದಕ್ಕಾಗಿ ಒಂದು ಫಂಡನ್ನು ಪ್ರಾರಂಭಿಸಿದರು. ಆ ಫಂಡಿಗೆ ಸುಮಾರು [illegible] ರೂಪಾಯಿ ತನಕ ಜಂಬಾ ಕೂಡಿರುತ್ತದೆ.

• • •

ಮಿಸೆಸ್ ಬೆಸೆಂಟ್ ಎಂಬಾಕೆಯು ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಒಂದು ದೊಡ್ಡ ಸಭೆಯಲ್ಲಿ ನಿಂತು, [illegible] ಭಾರತವು [illegible] ಎಂಬ ವಿಚಾರವಾಗಿ ಉಪನ್ಯಾಸ ಮಾಡಿದರು. ಆಕೆ ಆಗ ತಿಳಿಸಿದ ಮುಖ್ಯ ವಿಷಯವೇನಂದರೆ: ಈಗೀಗ ಹಿಂದುಸ್ಥಾನದ ಪ್ರಜೆಗಳಲ್ಲಿ ನೂತನವಾದ ಉದ್ದೇಶಗಳೂ ಅಭಿಪ್ರಾಯಗಳೂ ಹುಟ್ಟುತ್ತಿರುವವು. ಇದರ ಕೂಡ ಈ ರಾಷ್ಟ್ರಕ್ಕೆ ಅಪೂರ್ವವಾದಂಥಾ ಕ್ರೂರಕೃತ್ಯಗಳನ್ನು ನಡಿಸುವ ಅತ್ಯಂತ [illegible] ಪ್ರವೃತ್ತಿಯು ತಲೆಹಾಕಿರುವುದು. ಕೆಲವು ದುರಾತ್ಮರು ಏನೂ ತಿಳಿಯದ ಯೌವನಸ್ಥರನ್ನೂ ಬಾಲಕರನ್ನೂ ಮುಂದ ಬಿಟ್ಟು ಅವರಿಗೆ ದುರ್ಬೋಧನೆ ಮಾಡಿ ಅವರಿಂದ ಕ್ರೂರಕೃತ್ಯಗಳನ್ನು ನಡಿಸಿ ತಾವು ಹಿಂದ ನಿಂತಿರುವರು. ಇದು ಮಹಾ ಹೇಯವಾದ [illegible]ಯಾಗಿದೆ. ಏನೂ ಅರಿಯದ ಹುಡುಗರನ್ನು ಗಲ್ಲಿಗೆ ಹಾಕಿ [illegible] ಅವರ ತಂದೆ ತಾಯಿಗಳಿಗೆ ಅಪಾರವಾದ ದುಃಖವನ್ನುಂಟುಮಾಡುವುದಕ್ಕಿಂತಲೂ ತಾವೇ ಮುಂದಾಳುಗಳಾಗಿ ಬಹಿರಂಗಕ್ಕೆ ಬಂದು ಯಾವ ಕಾರ್ಯವನ್ನಾದರೂ ಮಾಡುವುದು [illegible] [illegible] [illegible] ಸ್ವಭಾವವನ್ನೂ [illegible] [illegible]ದರೂ [illegible] ಈ ಕ್ರೂರಕೃತ್ಯಗಳೆಲ್ಲಾ ಈಗ ಯೂರೋಪು [illegible]ದಲ್ಲಿ ಹೋಗಿ ಸೇರಿಕೊಂಡಿರುವ ಆ ದುರಾತ್ಮನಾದ [illegible] ಕೃಷ್ಣವರ್ಮನೇ ಮೂಲಕಾರಣನಾಗಿರುತ್ತಾನೆ. ಯಾವ ಕಾಲದಲ್ಲಿಯಾಗಲಿ ಯಾವ ರಾಜ್ಯದಲ್ಲಾಗಲಿ ಪ್ರಜೆಗಳು ಕ್ರೂರಕೃತ್ಯಗಳನ್ನು [illegible] ರಾಜ್ಯಭಾರವನ್ನು [illegible] [illegible] ತಾನೇ ಮುಂದೆ ಒಂದು [illegible] ಭರವಸವನ್ನು ಹೊಂದಿ [illegible] ನಷ್ಟಗಳನ್ನು ಸಹಿಸಿರುತ್ತಾರೆ. ಇಂದುಸ್ಥಾನದಲ್ಲಿ ಈಗ ಆಗುತ್ತಿರುವ ಕಪಟವೇನಂದರೆ: ಮುಖಂಡರು ಹೇಡಿಗಳಾಗಿ ಹಿಂದೆ ನಿಂತುಕೊಂಡು ಹುಡುಗರನ್ನು ಬಲಿಕೊಡುತ್ತಿದಾರ. [illegible] ಅಂಥಾ ಹೇಡಿಗಳ ಸಲಹೆಗಳಿಗೆ ಕಿವಿಗೊಡುವಾರದು. [illegible] ತಂದೆ ತಾಯಿಗಳು ಅವರ ಸಹವಾಸಗಳ [illegible] [illegible] [illegible] ಅವರು ದುಷ್ಕರ ಸಹವಾಸಕ್ಕೆ [illegible] ದಂತ [illegible]ಯಾಗಿ ನೋಡಿಕೊಳ್ಳುತ್ತಾ [illegible] ರೀತಿಯಾಗಿ ಆಕೆ ತಿಳಿಸಿದರು.

• • •

ಲಾಹೋರ್ ಪಟ್ಟಣದ ದಯಾನಂದ ಸರಸ್ವತಿ ಕಾಲೇಜಿನಲ್ಲಿ ಮುಖ್ಯೋಪಾಧ್ಯಾಯರಾಗಿರುವ ಭಾಯಿ ಪರಮಾನಂದ ಎಂ. ಎ. ಯವರ ಮನೆಯಲ್ಲಿ ಅವರು ರಾಜದ್ರೋಹಕರವಾದ ಪತ್ರಿಕೆಗಳನ್ನು ಪ್ರಕಟಿಸಿದರೆಂದೂ ಹಿಂದೂಸ್ಥಾನದಲ್ಲಿ ಇಂಗ್ಲೀಷ್ ಗವರ್ನಮೆಂಟನ್ನು ತಲೆಕೆಳಗು ಮಾಡುವುದಕ್ಕೆ ಮಸಲತ್ತುಗಳನ್ನು ಮಾಡಿ ವಿಲಾಯಿತಿಗೆ ಕಾಗದ ಪತ್ರಗಳನ್ನು ನಡಿಸುತ್ತಿದ್ದರೆಂದೂ ಮೊಕದ್ದಮೆ ಹುಟ್ಟಿ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ಹ್ಯಾರಿಸನ್‌ರವರು ದಯಾಫ್ತು ಮಾಡುತ್ತಿದಾರೆ. ಗವರ್ನಮೆಂಟ ಅಡ್ವೋಕೇಟರಾದ ಮೆ|| ಪಟ್‌ಮೇನ್ ಯವರು ಪರಮಾನಂದರ ಮನೆಯಲ್ಲಿ ಪೋಲೀಸಿನವರಿಗೆ ಸಿಕ್ಕಿರುವ ಕಾಗದ ಪತ್ರಗಳನ್ನು ಕೋರ್ಟಿನಲ್ಲಿ ಓದಿ ಹಾಜರು ಮಾಡಿದರು. ಈ ಕಾಗದಗಳಲ್ಲಿ ಪರಮಾನಂದರ ಸಂಗಕ್ಕೆ ಸೇರಿದ ಅಜಿತಸಿಂಗ್ ಅಂಬಾಪ್ರಸಾದ್ ಲಾಜಪತ್‌ರಾಯಿ, ಈ ಮೊದಲಾದವರು ಇಂಗ್ಲೀಷರನ್ನು ಹಿಂದುಸ್ಥಾನದಿಂದ ಓಡಿಸುವುದಕ್ಕೂ ದಂಗೆಯನ್ನೆಬ್ಬಿಸುವುದಕ್ಕೂ ಮಾಡಬೇಕಾದ ಸಲಹೆಗಳನ್ನು ಕುರಿತು ಬರೆದಿರುತ್ತಾರೆ. ಪರಮಾನಂದರೇ ಬರೆದಿರುವ ಒಂದು ಕಾಗದವು ಕೋರ್ಟಿನಲ್ಲಿ ಓದಿದಾಗ ತುಂಬಾ ನಗುವನ್ನು ಹುಟ್ಟಿಸಿತು. ಅದರಲ್ಲಿ ಅವರು ಹಿಂದುಸ್ಥಾನವು ದೇಶಿಯರ ವಶವಾದ ಮೇಲೆ ಆಳ್ವಿಕೆಯ

ಕ್ರಮವನ್ನೂ ಏರ್ಪಾಡುಗಳನ್ನೂ ವಿವರಿಸುವರು ಹ್ಯಾಗಂದರೆ ಕಾಬೂಲ್ ಅಮೀರರಿಗೆ ಸಿಂಧುನದಿಯ ಆಚೆ ಇರುವ ಸೀಮೆಯನ್ನು ವಹಿಸುವದು, ನೇಪಾಳದ ಮಹಾರಾಜರೇ ಹಿಂದುಸ್ಥಾನವನ್ನು ಆಳುವದು, ಹಿಂದುಸ್ಥಾನದ ದೇಶೀಯ ರಾಜರುಗಳೆಲ್ಲಾ ಒಂದು ಸಭೆಯಾಗಿ ಸಿಂಲಾ ಪಟ್ಟಣದಲ್ಲಿ ರಾಜ್ಯಭಾರ ಕ್ರಮಗಳನ್ನು ಕುರಿತು ಚರ್ಚೆಮಾಡುವದು, ಪ್ರಜಾಪ್ರತಿನಿಧಿಗಳ ಸಮಾಜವು ದಿಹಲಿ ಪಟ್ಟಣದಲ್ಲಿ ಸಭೆ ಸೇರುವದು, ಹೀಗೆಲ್ಲಾ ಚಿತ್ರವಿಚಿತ್ರವಾದ ಅನೇಕ ಏರ್ಪಾಡುಗಳು ಮಾಡಲ್ಪಡುವವೆಂದು ಬರೆದಿರುತ್ತಾರೆ ಇನ್ನೂ ಇದೇ ರೀತಿಯಾದ ಹತ್ತಾರು ಕಾಗದ ಪತ್ರಗಳು ಪೋಲೀಸಿನವರಿಗೆ ಸಿಕ್ಕಿ ಕೋರ್ಟಿಗೆ ಹಾಜರಾಗಿರುವವು ವಿಚಾರಣೆ ನಡೆಯುತ್ತಾ ಇದೆ

ವೈಸ್‌ರಾಯಿಯವರ ಹೊಸ ಮಂತ್ರಾಲೋಚನಾ ಸಭೆಯು

ಮೊದಲನೇ ಸಭೆಯ ಕಾರ್ಯಗಳು

ಹಿಂದುಸ್ಥಾನದ ವೈಸ್‌ರಾಯಿಯವರಾದ ಲಾರ್ಡ್ ಮಿಂಟೋ ಪ್ರಭುಗಳು ಹೊಸ ಮಂತ್ರಾಲೋಚನಾ ಸಭೆಯ ಮೊದಲನೇ ಸಭೆಯನ್ನು ಕಳೆದ ಜನವರಿ ತಾ ೨೫ ನೇ ಮಂಗಳವಾರ ಕಲ್ಕತ್ತಾ ಪಟ್ಟಣದ ಗವರನ್‌ಮೆಂಟ್ ಸಭಾಮಂದಿರದಲ್ಲಿ ಪ್ರಾರಂಭಮಾಡಿದರು ಕೌನಸಿಲ ಮೆಂಬರುಗಳಲ್ಲದೆ ಆ ದಿನ ಸಭೆ ಮನೆಯಲ್ಲಿ ವೈಸ್‌ರಾಯಿಯವರ ಪತ್ನೀರವರೂ ಕಲ್ಕತ್ತೆಯಲ್ಲಿರುವ ಬಹುಮಂದಿ ದೊಡ್ಡ ಮನುಷ್ಯರೂ ಹಾಜರಾಗಿದ್ದರು ವೈಸ್‌ರಾಯಿಯವರು ಸಿಂಹಾಸನದಲ್ಲಿ ಕುಳಿತುಕೊಂಡ ಮೇಲೆ ಮಂತ್ರಾಲೋಚನಾ ಸಭೆಗೆ ಪ್ರಜೆಗಳಿಂದಲೂ ಸರ್ಕಾರದಿಂದಲೂ ಚುನಾಯಿಸಿ ನೇಮಕವಾದ ಪ್ರತಿನಿಧಿಗಳು ಒಬ್ಬೊಬ್ಬರಾಗಿ ವೈಸ್‌ರಾಯಿಯವರ ಮುಂದೆ ಹೋಗಿ ನಿಂತುಕೊಂಡು, ಚಕ್ರವರ್ತಿಯವರ ವಿಷಯದಲ್ಲೂ ಅವರ ವಂಶೀಯರಲ್ಲೂ ಅವರ ಗವರನ್‌ಮೆಂಟಿನವರ ವಿಷಯದಲ್ಲೂ ಭಯಭಕ್ತಿಪೂರ್ವಕವಾಗಿ ಗವರನ್‌ಮೆಂಟಿನವರಿಗೆ ಬೆಂಬಲಕೊಟ್ಟು ಸಹಾಯಮಾಡುತ್ತಾ ಬರುತ್ತೇವೆಂಬದಾಗಿ ಭಾಷೆಯನ್ನು ತಟ್ಟಿಕೊಂಡು ತಂತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು

ತರುವಾಯ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಮಂತ್ರಾಲೋಚನಾ ಸಭಿಕರಿಗೆ ಸುಸ್ವಾಗತವನ್ನು ಬಯಸಿ ಹಿಂದುಸ್ಥಾನದ ರಾಜ್ಯಭಾರದ ವಿಷಯದಲ್ಲಿ ಈ ದಿನದಿಂದ ಜಾರಿಗೆ ತರಲ್ಪಡುವ ಆಳ್ವಿಕೆಯ ಹೊಸ ಕ್ರಮವನ್ನೂ ಈಗ ಈ ರಾಷ್ಟ್ರದಲ್ಲಿ ಕಂಡುಬರುತ್ತಿರುವ ನೂತನ ವಿದ್ಯಮಾನಗಳನ್ನೂ ವಿವರಿಸಿ ದಿವ್ಯವಾದ ಮತ್ತು ಚರಿತ್ರಾರ್ಹವಾದ ಭಾಷಣವನ್ನು ಮಾಡಿದರು ಈ ಭಾಷಣದ ಮುಖ್ಯಾಂಶಗಳೇನೆಂದರೆ,

ಕಳೆದ ಶತಮಾನದಲ್ಲಿ ಹಿಂದುಸ್ಥಾನದ ಆಳ್ವಿಕೆಯ ಕ್ರಮಗಳೂ ಪ್ರಜಾಸೌಕರ್ಯಗಳೂ ಕ್ರಮಕ್ರಮವಾಗಿ ಅಭಿವೃದ್ಧಿ ಹೊಂದಿರುವವು ರಾಜಕೀಯ ಬದಲಾವಣೆಗಳು ಪ್ರಜಾಸೌಕರ್ಯಕ್ಕೂ ಏಳಿಗೆಗೂ ದೇಶೋನ್ನತಿಗೂ ಹಿತಕರವಾಗುವಂತೆ ಆಗಿಂದಾಗ್ಗೆ ಬದಲಾವಣೆ ಮಾಡಲ್ಪಟ್ಟಿರುವವು ಕಾಲಕ್ರಮದಲ್ಲಿ ಅವಶ್ಯಕತೆಯು ಕಂಡುಬಂದ ಹಾಗೆಲ್ಲಾ ದೇಶೀಯ ಪ್ರಜೆಗಳಲ್ಲಿ ಮುಖಂಡರಾಗಿಯೂ ಸಮರ್ಥರಾಗಿಯೂ ವಿದ್ಯಾವಿನಯ ಸಂಪನ್ನರಾಗಿಯೂ ಇರುವವರಿಗೆ ಹೆಚ್ಚು ಹೆಚ್ಚಾದ ಸ್ವಾತಂತ್ರ್ಯಗಳನ್ನು ಬ್ರಿಟಿಷ್ ಚಕ್ರಾಧಿಪತ್ಯದವರು ವಹಿಸುತ್ತಾ ಬಂದಿದ್ದಾರೆ ಪ್ರಜೆಗಳು ವಿದ್ಯಾವಂತರಾಗಿ ತಮ್ಮ ಆಚಾರ ವ್ಯವಹಾರಗಳಲ್ಲೂ ಸುಕ್ಷೇಮಕರವಾದ ಅನೇಕ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ದೇಶವಾತ್ಸಲ್ಯ ದೇಶೋನ್ನತಿ ಐಕಮತ್ಯಾದಿಗಳನ್ನು ಸಂಪಾದಿಸಿಕೊಳ್ಳುತ್ತಾ ದಿನೇ ದಿನೇ ರೂಪಾಂತರವನ್ನು ಹೊಂದುತ್ತಿರುವರು ಇದಕ್ಕೆಲ್ಲಾ ಇಂಗ್ಲಿಷ್ ಪ್ರಭುತ್ವವು ಈ ರಾಷ್ಟ್ರಕ್ಕೆ ದೊರಕಿರುವುದೇ ಮುಖ್ಯಕಾರಣವೆಂಬುದನ್ನು ನಾವು ಹೇಳಬೇಕಾಗಿಲ್ಲ

ನಾವು ಕಳೆದ ೧೯೦೫ ನೇ ಇಸವಿಯ ಅಂತ್ಯಭಾಗದಲ್ಲಿ ಬಂದು ಈ ರಾಷ್ಟ್ರದ ಆಳ್ವಿಕೆಯನ್ನು ವಹಿಸಿದಾಗ ಪೂರ್ವದಿಗ್ದೇಶಗಳೊಳಗೆಲ್ಲಾ ಪ್ರಜೆಗಳ ಇಂಗಿತಗಳೂ ಅಭಿಪ್ರಾಯಗಳೂ ಬೇರೊಂದು ರೂಪವನ್ನು ಧರಿಸಿದ್ದವು ಜಪಾನ್‌ನವರು ರಷ್ಯಾದವರ ಮೇಲೆ ಯುದ್ಧಮಾಡಿ ಜಯಪ್ರದಹೊಂದಿದ್ದು ಚೀನಾ ಪರ್ಶಿಯಾ ಈಜಿಪ್ಟ ತುರ್ಕಿ ಮೊದಲಾದ ರಾಜ್ಯಗಳಲ್ಲಿ ಪ್ರಜಾಪಕ್ಷದವರು ರಾಜ್ಯಭಾರದಲ್ಲಿ ತಮಗೆ ಹೆಚ್ಚು ಸ್ವಾತಂತ್ರ್ಯಗಳು ಲಭಿಸಬೇಕೆಂದು ಸಾಹಸಪಡುತ್ತಿದ್ದದ್ದೂ ಹಿಂದುಸ್ಥಾನದ ಪ್ರಜೆಗಳ ಮನಸ್ಸನ್ನು ಹೊಕ್ಕು ಇವರಲ್ಲಿ ನಾನಾಬಗೆಯ ಕಳವಳವನ್ನೂ ಆಶೆಗಳನ್ನೂ ಉಂಟುಮಾಡಿದವು ನಾವು ಈ ವಿದ್ಯಮಾನಗಳನ್ನೆಲ್ಲಾ ಪರಿಗಣಿಸಿ, ಈ ರಾಷ್ಟ್ರದ ಪ್ರಜೆಗಳಿಗೆ ರಾಜಕೀಯ ವಿಷಯದಲ್ಲಿ ತಕ್ಕಮಟ್ಟಿಗೂ ಹೆಚ್ಚಿನ ಸ್ವಾತಂತ್ರ್ಯಗಳನ್ನು ಕಲ್ಪಿಸಿಕೊಡಬೇಕೆಂದು ನಿಶ್ಚಯಿಸಿಕೊಂಡು, ಇಲ್ಲಿಗೆ ಮೂರುವರೆ ವರುಷಗಳ ಹಿಂದೆ ಅಂದರೆ ೧೯೦೬ ನೇ ಆಗಿಷ್ಟು ತಿಂಗಳಲ್ಲಿ ನಮಗೆ ಸಹಾಯಕರಾಗಿರುವ ಉದ್ಯೋಗಿಗಳಿಗೆ ನಾವೇ ತಿಳಿಸಿ ಅವರ ಅಭಿಪ್ರಾಯಗಳನ್ನು ಪಡೆದುಕೊಂಡೆವು ಈ ಸಲಹೆಗಳಿಗೆಲ್ಲಾ ನಾವೇ ಮೂಲಕಾರಣರಾಗಿರುತ್ತೇವೆ ಆದಕಾರಣ ಈಗ ರೂಢಿಗೆ ತರಲ್ಪಟ್ಟಿರುವ ರಾಜಕೀಯ ಬದಲಾವಣೆಗಳಿಂದ ಉಂಟಾಗಬಹುದಾದ ಹಿತಾಹಿತಗಳಿಗೆಲ್ಲಾ ನಾವಲ್ಲದೆ ಇತರರ್‍ಯಾರೂ ಜವಾಬ್ದಾರರಲ್ಲ ಈಚೆಗೆ ಈ ರಾಷ್ಟ್ರದಲ್ಲಿ ಉಂಟಾದ ರಾಜದ್ರೋಹಕಾರ್ಯಗಳನ್ನೂ ಕ್ರೂರಕೃತ್ಯಗಳನ್ನೂ ನಿಲ್ಲಿಸುವದಕ್ಕಾಗಿ ದೇಶೀಯ ಪ್ರಜೆಗಳಿಗೆ ನಾವು ಈ ಹೆಚ್ಚಿನ ಸ್ವಾತಂತ್ರ್ಯಗಳನ್ನು ವಹಿಸಿದೆವು ಎಂಬೀ ಮಾತು ಸಂಪೂರ್ಣವಾಗಿಯೂ ನಿರಾಧಾರವಾದದ್ದೆಂದು ಈ ಸಂದರ್ಭದಲ್ಲಿ ಸಭಿಕರಿಗೆಲ್ಲಾ ಖಚಿತವಾಗಿ ತಿಳಿಸುತ್ತೇವೆ. ಈಗ ಮಾಡಿರುವ ಬದಲಾವಣೆಗಳಲ್ಲಿ ಲೋಪದೋಷಗಳು ಕೆಲವು ಇರಬಹುದಾದರೂ ಕಾಲಕ್ರಮದಲ್ಲಿ ಅದನ್ನೆಲ್ಲಾ ಕ್ರಮಪಡಿಸಿಕೊಳ್ಳಬಹುದಾಗಿದೆ ಅರಾಜಕ ಕೃತ್ಯಗಳು ನಡೆಯುತ್ತಲೇ ಬಂದಿದ್ದಾಗ್ಯೂ ಲಕ್ಷ್ಯಕ್ಕೆ ತಂದುಕೊಳ್ಳದೆ ಪ್ರಜಾಪಾಲನೆಗೆ ಅವಶ್ಯವೆಂದು ಕಂಡುಬರುವಂಥಾ ಬಸ್ತುಗಳನ್ನು ನಾವು ಕಾಲ ದೇಶ ವರ್ತಮಾನಗಳಿಗೆ ಅನುಸಾರವಾಗಿ ಮಾಡುತ್ತಲೇ ಬಂದೇವು

ರಾಜ್ಯಭಾರದ ನಡವಳಿಕೆಗೂ ಪ್ರಜಾನೆಮ್ಮದಿಗೂ ಭಂಗವನ್ನುಂಟುಮಾಡುವಂತೆ ಕಂಡುಬರುತ್ತಿರುವ ರಾಜದ್ರೋಹ ಕೃತ್ಯಗಳನ್ನು ನಾವು ಅತ್ಯಂತ ಕಠಿಣತರವಾಗಿ ಅಡಗಿಸದೆ ಬಿಡಲಾರೆವು ಮತ್ತು ಪ್ರಜೆಗಳಿಗೆ ದುರಭಿಪ್ರಾಯಗಳನ್ನು ಹೇಳಿಕೊಟ್ಟು ದುಷ್ಕಾರ್ಯಗಳಿಗೆ ಪ್ರೋತ್ಸಾಹಪಡಿಸುತ್ತಿರುವ ವರ್ತಮಾನ ಪತ್ರಿಕೆಗಳನ್ನು ಪ್ರಕಟಿಸದಂತೆ ನಿಲ್ಲಿಸಿಬಿಡಬೇಕಾದೀತು ವರ್ತಮಾನ ಪತ್ರಿಕಾ ಕರ್ತರು ಅನೇಕ ಸಂದರ್ಭಗಳಲ್ಲಿ ತಮ್ಮ ಸ್ವಾತಂತ್ರ್ಯವನ್ನು ಉಲ್ಲಂಘಿಸಿ, ಪ್ರಜೆಗಳಲ್ಲಿ ಸರ್ಕಾರದವರ ಮೇಲೆ ಅಪ್ರೀತಿ ಅಪನಂಬಿಕೆ ದ್ವೇಷಾಸೂಯೆಗಳನ್ನು ಹುಟ್ಟಿಸುತ್ತಾ ಬಂದಿದ್ದಾರೆ ಪ್ರಜಾನೆಮ್ಮದಿಯನ್ನೂ ದೇಶೋನ್ನತಿಯನ್ನೂ ಬಯಸಿ, ಇವುಗಳನ್ನು ಕಾಪಾಡಿಕೊಂಡು ಬರಬೇಕಾದದ್ದೇ ಗವರನ್‌ಮೆಂಟಿನವರ ಪ್ರಥಮ ಧರ್ಮವಾಗಿರೋಣದರಿಂದ ಅದಕ್ಕೆ ಕುಂದು ಕೊರತೆಗಳು ಯಾವ ರೂಪದಲ್ಲೂ ಉಂಟಾಗದಂತೆ ನಾವು ನೋಡಿಕೊಳ್ಳುವೆವು. ಅವಶ್ಯವಿದ್ದರೆ ಕಠಿಣತರವಾದ ಏರ್ಪಾಡುಗಳನ್ನು ಮಾಡಿಟ್ಟು ರೂಢಿಸುವೆವು

ಪ್ರಜೆಗಳಿಗೆ ವಿಶೇಷವಾದ ಸ್ವಾತಂತ್ರ್ಯವನ್ನು ವಹಿಸಿ ಅವರ ಪ್ರತಿನಿಧಿಗಳನ್ನು ಈ ಸಭೆಗೆ ಬರಮಾಡಿಕೊಂಡಿರೋಣದರಿಂದ ಈ ಪ್ರತಿನಿಧಿಗಳು ಪ್ರಜೆಗಳ ಕಷ್ಟಸುಖಗಳನ್ನು ನಮಗೆ ಚನ್ನಾಗಿ ತಿಳಿಸುವುದಕ್ಕೂ ನಾವು ಮಾಡತಕ್ಕ ರಾಜ್ಯಭಾರಕಾರ್ಯಗಳಲ್ಲಿ ನಮಗೆ ಸಹಾಯ ಮಾಡುತ್ತಾ ಬರುವುದಕ್ಕೂ ಈಗ ತುಂಬಾ ಅನುಕೂಲವಾಗಿದೆ ಇಂಗ್ಲಿಷ ಮತ್ತು ದೇಶೀಯ ಅಧಿಕಾರಿಗಳು ಏಕೀಭವಿಸಿ ಕಾರ್ಯಗಳನ್ನು ನಡಿಸಿಕೊಂಡು ಬಂದಲ್ಲಿ ಈ ರಾಷ್ಟ್ರವು ನೆಮ್ಮದಿ ಸುಖ ಸಂಪತ್ತುಗಳನ್ನು ಪಡೆದು ಏಳಿಗೆಯಾಗುವುದು ಇಂಥಾ ದೆಸೆಯು ಲಭ್ಯವಾಗಬೇಕೆಂಬುವದೇ ಇಂಗ್ಲಿಷ್ ಸಾರ್ವಭೌಮರವರ ಮುಖ್ಯಾಶಯವಾಗಿರುತ್ತದೆ

ನಮ್ಮ ಈ ಘನತರವಾದ ಅಧಿಕಾರದ ಅವಧಿಯು ಇನ್ನೇನು ಪೂರೈಸುತ್ತಾ ಬಂದಿದೆ ನಾವು ಈ ರಾಷ್ಟ್ರದಲ್ಲಿ ಪ್ರಾರಂಭಿಸಿದ ಕಾರ್ಯಗಳು ಫಲಕಾರಿಗಳಾಗಿ ಮುಕ್ತಾಯವಾದ ವಿಷಯದಲ್ಲಿ ತುಂಬಾ ಕೃತಜ್ಞರಾಗಿರುತ್ತೇವೆ ಇಂಥಾ ಚರಿತ್ರಾರ್ಹವಾದ ಸಮಯದಲ್ಲಿ ನಾವು ಸಾಕ್ಷಾತ್ತಾಗಿ ಇದ್ದದ್ದು ನಮ್ಮ ಭಾಗ್ಯವೆಂದು ಭಾವಿಸಿರುವೆವು

ಈ ರೀತಿ ವೈಸ್‌ರಾಯಿ ಪ್ರಭುಗಳು ಭಾಷಣ ಮಾಡಿ ಮೆಂಬರುಗಳ ವಂದನೆಯನ್ನು ಹೊಂದಿ ಕುಳಿತುಕೊಂಡ ಬಳಿಕ ಎಗ್ಸಿಕ್ಯುಟಿವ್ ಕೌನ್‌ಸಿಲ ಮೆಂಬರಾದ ಮೆ॥ ಸತ್ಯೇಂದ್ರಪ್ರಸನ್ನಸಿಂಹರವರು ಎದ್ದು ಸಭೆಯಲ್ಲಿ ಮೆಂಬರುಗಳು ಚರ್ಚೆ ನಡಿಸತಕ್ಕ ಕ್ರಮದಲ್ಲಿ ಕೆಲವು ಬದಲಾವಣೆಗಳಾಗಬೇಕೆಂದು ಸೂಚಿಸಿದರು ಅಲ್ಲಿಗೆ ಆ ದಿನದ ಮೀಟಿಂಗು ಬರಖಾಸ್ತಾಯಿತು

ಎರಡನೇ ಸಭೆಯು

ಕಳೆದ ೨೮ ನೇ ತಾ ಶುಕ್ರವಾರದ ದಿನ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯು ಸಭಾಮಂದಿರದಲ್ಲಿ ಕೂಡಿತು ವೈಸ್‌ರಾಯಿಯವರು ಸಭಾನಾಯಕರಾಗಿದ್ದರು ಮೆ॥ ಎಸ್ ಪಿ ಸಿಂಹರವರು ಸೂಚಿಸಿದ್ದ ಬದಲಾವಣೆಗಳನ್ನು ಮೆಂಬರುಗಳೆಲ್ಲಾ ಒಪ್ಪಿಕೊಂಡರು ತರುವಾಯ ಮೆ॥ ಮಿಲ್ಲರ್ ಯವರು ಹೊಸ ವಿದ್ಯುಚ್ಛಕ್ತಿಯ ಕಾನೂನಿನ ಮಸೂದೆಯನ್ನು ಸಭೆಯಲ್ಲಿ ಓದಿದರು ಅನಂತರ ಸರ್ ಹರ್ಬರ್ಟ್ ರಿಸ್ಲಿಯವರು ಸೆನಸಸ್ ಬಿಲ್ ಅಂದರೆ ಪ್ರಜಾಗಣತಿಯನ್ನು ಮಾಡುವದಕ್ಕಾಗಿ ಏರ್ಪಟ್ಟ ಕಾನೂನಿನ ಮಸೂದೆಯನ್ನು ಓದಿ ಬಹು ಸ್ವಾರಸ್ಯವಾದ ವಿವರಣೆಯನ್ನು ಮಾಡಿದರು ಸರ್ ಗೈಫ್ಲೀಟ್‌ವುಡ್ ವಿಲ್ಸನರವರು ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ ಚಲಾವಣೆಗೆ ತರಬೇಕೆಂದಿರುವ ಹತ್ತು ರೂಪಾಯಿನ ಕರೆನಸಿ ನೋಟುಗಳ ವಿಚಾರವನ್ನು ಸಭೆಯಲ್ಲಿ ಸೂಚಿಸಿದರು ಇನ್ನು ಕೆಲವು ಸಾಮಾನ್ಯವಾದ ವಿಚಾರಗಳು ಚರ್ಚೆಯಾದ ಬಳಿಕ ಸಭೆಯು ಮುಕ್ತಾಯಮಾಡಲ್ಪಟ್ಟಿತು

ಕೌನಸಿಲ್ ಸಭೆಯು ಮತ್ತೆ ನಾಳೆ ಮಧ್ಯಾಹ್ನ ನಡೆಯುವುದಾಗಿದೆ

ತಾಲ್ಲೂಕು ವರ್ತಮಾನಗಳು

ದೊಡ್ಡಬಳ್ಳಾಪುರ —ಇಲ್ಲಿನ ಹವಾ ಅನುಕೂಲವಾಗಿದೆ ೫-೬ ದಿನಗಳಿಂದ ತಂಪಾದ ಗಾಳಿ ಬೀಸುವದಲ್ಲದೆ ಮೋಡಗಳೂ ಆಡುತ್ತಲಿವೆ ಎಷ್ಟು ಇಷ್ಟರಲ್ಲೇ ಮಳೆಯೂ ಆಗುವಂತೆ ತೋರುತ್ತೆ ಎಲ್ಲಾ ಬೆಳೆಯೂ ಚನ್ನಾಗಿ ಫಲಿಸಿಯದೆ ಕಂದ ರಾಗಿ ರೂಪಾಯಿಗೆ ೧೪।೧೫ ಸೇರು, ಅಕ್ಕಿ ೭ - ಸೇರು, ಅವರೆ ತೊಗರಿ ೧೧॥ ೧೨ ಸೇರು ಮಾರುತ್ತೆ ಈ ಪುಷ್ಯಶುದ್ಧ ಸ[illegible] ಲಾಗಾಯಿತು ಪೌರ್ಣಮಿ ವರಿನಿಗೂ ಘಾಟಿ ಸುಬ್ರಾಯನ ಜಾತ್ರೆಯಲ್ಲಿ ಮಾಮೂಲಿನಂತೆ ರಥೋತ್ಸವವು, ಎತ್ತಿನ ಪರಿಷೆಯೂ ನಡೆಯಿತು ಈ ಸಲ ಮೋಡ ಮಳೆ ವಗೈರೆ ಏನೂ ಇಲ್ಲದ್ದರಿಂದ ಆ ದಿನಗಳೂ ತುಂಬಾ ವ್ಯಾಪಾರವೂ ಸರ್ಕಾರಕ್ಕೆ ವಿಶೇಷ ಹುಟ್ಟುವಳಿಯೂ ಆಗಿ, ಜಾತ್ರೆ ಚನ್ನಾಗಿ ನಡೆಯಿತು ಸುಮಾರು ೩೦।೪೦ ಸಾವಿರದ ವರೆಗೂ ಎತ್ತುಗಳು ಸೇರಿದ್ದವು ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರೂ ಪೋಲೀಸ್ ಸೂಪರಿಂಟೆಂಡೆಂಟರವರೂ ದಯಮಾಡಿ, ಎತ್ತುಗಳ ಪ್ರದರ್ಶನವನ್ನು ನಡಿಸಿ, ಮೇಲಾದ ಎತ್ತುಗಳಿಗೆ ಬಹುಮಾನವನ್ನು ದಯಪಾಲಿಸಿದರು. ನಮ್ಮ ಅಮಲ್ದಾರರವರೂ ಪೊ॥ ಇನ್ಸ್‌ಪೆಕ್ಟರರವರೂ ತುಂಬಾ ಮುತುವರ್ಜಿ ವಹಿಸಿ ಕಳ್ಳತನಗಳೂ, ಜೂಜಾಟವೂ ಇಲ್ಲದಂತೆ ತಕ್ಕ ಬಂದೋಬಸ್ತು ಮಾಡಿದ್ದರು ಇಷ್ಟು ದೊಡ್ಡ ಜಾತ್ರೆಯಲ್ಲಿ ಪ್ರತೀ ವರ್ಷ ನೀರಿಗೆ ತುಂಬಾ ತೊಂದರೆಯಾಗಿ ಜನಗಳೂ, ಜಾನುವಾರುಗಳೂ ಬೊಗ್ಗೆಯದ ನೀರನ್ನು ಕುಡಿಯುವದು ತಪ್ಪಲಿಲ್ಲ ಒಂದು ಕೆರೆ ಕಟ್ಟಿಸಿ ಕೊಡಬೇಕೆಂದು ಅಂದಾಜು ಆಗಿರುತ್ತೆ ಮುಂದಿನ ಸಾಲಿಗಾದರೂ ಕೆರೆ ಏರ್ಪಾಡು ಮಾಡಿಸಿದಲ್ಲಿ ಜಾತ್ರೆಯು ಇನ್ನೂ ದೊಡ್ಡದಾಗಬಹುದು - ಈ ಜಾತ್ರೆ ಕಾಲದಲ್ಲಿಯೇ ನೂತನ ಪಟ್ಟವೂ ಸೇರಿತು ಪೊ॥ ಇನ್ಸ್‌ಪೆಕ್ಟರರವರ ಏರ್ಪಾಡಿನಿಂದ ಗರುಡಿಗಳವರಿಗೂ ಇತರ ವೇಷಧಾರಿಗಳಿಗೂ ಏನೂ ಮಾರಾಮಾರಿ ವಗೈರೆ ನಡೆಯದೆ ಸರಿಯಾಗಿ ನೆರವೇರಿತು ಇಲ್ಲಿನ ಉಪದೇಶಿಗಳಾದ ಮ॥ ಪ್ರೇಮದಾಸಯ್ಯನವರು ೫ ವರ್ಷಗಳಿಂದ ಜನಗಳ ಪ್ರೀತಿಗೆ ಪಾತ್ರರಾಗಿ, ಸದುಪದೇಶವನ್ನು ಮಾಡುತ್ತಾ ಇದ್ದವರು ಈಗ ತುಮಕೂರಿಗೆ ವರ್ಗವಾದದ್ದನ್ನು ಕೇಳಿ ಇಲ್ಲಿನವರೆಲ್ಲಾ ತುಂಬಾ ಪಶ್ಚಾತ್ತಾಪ ಪಡುತ್ತಾರೆ ಇವರಿಗೆ ಬದಲಾಗಿ ಆರಸೀಕೆರೆಯಿಂದ ಮ॥ ಭಕ್ತಿಶಿರೋಮಣಿ ಯವರು ದಯಮಾಡಿಸಿರುತ್ತಾರೆ ಇವರು ಸಹ ಅವರಂತೆಯೇ ಇರುತ್ತಾರೆಂದು ಎಲ್ಲರೂ ಹಾರೈಸುತ್ತಾರೆ

ಚಾಮರಾಜನಗರ. —ಈ ಊರಿಗೆ ಶ್ರೀಮನ್ ಯುವರಾಜರವರ ಸವಾರಿಯು ಜನವರಿ ತಾ ೧೬ ರಲ್ಲಿ ದಯಮಾಡಿಸಿ ಅಟ್ಟುಗುಳೀಪುರದ ಜಂಗಲಿಗೆ ಚಿತ್ತೈಸಿ, ಅಲ್ಲಿ ಮೃಗಯಾವಿನೋದಗಳನ್ನು ತೀರಿಸಿಕೊಂಡು ತಾ ೨೪ನೇ ಮಧ್ಯಾಹ್ನ ೩ ಘಂಟೆಗೆ ಈ ಮಾರ್ಗವಾಗಿಯೇ ಮೈಸೂರಿಗೆ ಚಿತ್ತೈಸಿತು ಆ ಕಾಲದಲ್ಲಿ ಈ ಪುರನಿವಾಸಿಗಳಾದ ಅನೇಕ ದೊಡ್ಡ ಮನುಷ್ಯರು ಪೇಟೆಯ ಬೀದಿಯಲ್ಲಿ ನಾನಾ ವಿಧವಾಗಿ ನೇತ್ರಾನಂದಕರವಾದ ಚಪ್ಪರಗಳನ್ನೂ ಕಮಾನುಗಳನ್ನೂ ತೋರಣಗಳನ್ನೂ ಬಾವುಟಗಳನ್ನೂ ಹಾಕಿಸಿ ಶೃಂಗರಿಸಿದ್ದರು ಇವುಗಳಲ್ಲಿ ರಾಗಿ ಅಂಗಡಿ ಬಾಲಕೃಷ್ಣಾಶೆಟ್ಟಿಪ್ಪನವರು ಮಾಡಿಸಿದ್ದ ಮಂಟಪವು ಬಹು ಶೃಂಗಾರವಾಗಿಯೂ ನೇತ್ರಾನಂದಕರವಾಗಿಯೂ ಇತ್ತು ಈ ಆನಂದವನ್ನು ನೋಡಲು ಸಾವಿರಾರು ಪ್ರಜೆಗಳು ಸೇರಿ ಪೇಟೆಯ ಉದ್ದಕ್ಕೂ ಕಿಕ್ಕಿರಿಯುತ್ತಿದ್ದರು —ಈ ಊರಿನಲ್ಲಿ ೩ ವರ್ಷಗಳಿಂದಲೂ ಅಮಲ್ದಾರರಾಗಿದ್ದ ಮೆ॥ ಎಸ್ ವೆಂಕಟ್ರಮಣಶಾಸ್ತ್ರಿಯವರು ಸಹ ಶ್ರೀಮನ್ ಯುವರಾಜರವರ ಮೃಗಯಾವಿನೋದಗಳಲ್ಲಿ ಬೆರೆತು ತುಂಬಾ ಸಾಹಸಪಟ್ಟರು ಇವರಿಗೆ ಇಷ್ಟು ಸ್ವಲ್ಪ ಕಾಲದಲ್ಲಿಯೇ ವರ್ಗವಾದದ್ದನ್ನು ಕೇಳಿ ಪುರಜನರೆಲ್ಲರೂ ತುಂಬಾ ವಿಷಾದಿಸುತ್ತಿರುವರು ಇವರು ದೊಡ್ಡ ಅಧಿಕಾರಿಗಳಾಗಿದ್ದಾಗ್ಯೂ ತಮ್ಮ ಕೈಕೆಳಗಣ ಚಿಲ್ಲರೆ ನೌಕರರ ಮೇಲೆ ವಿಷಯದಲ್ಲಿ ತುಂಬಾ ಕರುಣೆಯುಳ್ಳವರಾಗಿದ್ದರು ಕೋಪವೆಂಬ ಸರ್ಪದ ಹೆಡೆಯನ್ನು ತುಳಿದಿದ್ದರು ಇಂಥಾ ಮಹನೀಯರು ವರ್ಗವಾಗಿ ಹೋಗುತ್ತಾರೆಂಬುದನ್ನು ತಿಳಿದ ದೊಡ್ಡ ಮನುಷ್ಯರೆಲ್ಲರೂ ೩-೪ ದಿವಸಗಳಿಂದಲೂ ತಮ್ಮ ತಮ್ಮ ಮಂದಿರಗಳಲ್ಲಿ ಔತನ ಮುಂತಾದ ಸಂಭ್ರಮಗಳನ್ನು ಬಹು ಗೌರವದಿಂದ ನಡಿಸಿದರು ೩೦ನೇ ತಾ ಪ್ರಾತಃಕಾಲ ೯ ಕ್ಕೆ ನಗರದ ಬೀದಿಯಲ್ಲಿ ಬ್ಯಾಂಡ್ ವಾದ್ಯದ ಧ್ವನಿಯು ಮನೋಹರವಾಗಿ ಕೇಳಿಸುತ್ತಿರುವಲ್ಲಿ ಮ॥ ಶಾಸ್ತ್ರಿಯವರು ದೇವಸ್ಥಾನವನ್ನು ಪ್ರದಕ್ಷಿಣೆಯಾಗಿ [illegible] ಮೊದಲಾದ ಎಲ್ಲಾ ರಾಜಬೀದಿಗಳನ್ನೂ ಸುತ್ತಿ ದೊಡ್ಡ ಮನುಷ್ಯರು ಅರ್ಪಿಸಿದ ತಾಂಬೂಲ ಫಲಾದಿಗಳನ್ನು ಸ್ವೀಕರಿಸಿ ಸುಮಾರು ೮ ಘಂಟೆಯ ಸಮಯದಲ್ಲಿ ಪ್ರಯಾಣೋನ್ಮುಖರಾದರು ಇವರ ಪ್ರಯಾಣ ಕಾಲದಲ್ಲಿ ಸಮಸ್ತ ಪ್ರಜೆಗಳೂ ಕಟ್ಟಪಳ್ಳದ ತನಕ ಹೋಗಿ ಅವರನ್ನು ಸಾಗಕಳುಹಿಸಿ ಹಿಂತಿರುಗಿದರು ಮುಖ್ಯವಾಗಿ ಇವರು ಗುಣಾಢ್ಯರೆಂದು ಎಷ್ಟು ಹೇಳಿದಾಗ್ಯೂ ಸ್ವಲ್ಪ ನಮ್ಮ ಹೊಸ ಅಮಲ್ದಾರ್ರು ಮ॥ ಜಿ ನಾರಾಯಣರಾಯರು ಆಗಾಗಲೇ ಜನರ ವಿಶ್ವಾಸಕ್ಕೆ ಪಾತ್ರರಾಗಿ ಬಹು ಒಳ್ಳೆಯವರೆನಿಸಿಕೊಂಡಿದ್ದಾರೆ ಇವರು ಉತ್ತರೋತ್ತರ ಇದೇ ರೀತಿ ಇರುವರೆಂದು ಜನಗಳೆಲ್ಲರೂ ಬಹಳವಾಗಿ ನಂಬಿರುವರು

ಚಿತ್ರದುರ್ಗ —ವೆಸ್ಲಿಯನ್ ಮಿಷನಿಗೆ ಸೇರಿದ ರೆವರೆಂಡ್ ಜಿ ವೆಸ್ಲಿಯವರು ಈಗ್ಗೆ ೪ ವರುಷದಿಂದಲೂ ಚಿತ್ರದುರ್ಗದಲ್ಲಿ ಹೆಡ್ ಕ್ವಾರ್ಟರ್ಸ್ ಮಾಡಿಕೊಂಡು ಇದ್ದು ಮುಂದೆ ಹೇಳುವ ಪ್ರಜೋಪಕಾರವನ್ನು ಮಾಡಿದರು ಸ್ವಭಾವವಾಗಿ ಇವರು ಕ್ರೈಸ್ತರು ಇದು ಪ್ರಜಾಕ್ಕೆ ವಿವೇಕವನ್ನು ಬೋಧಿಸ [illegible] ರಲ್ಲೂ ಅವರನ್ನು ಒಳ್ಳೇ ಮಾರ್ಗದಲ್ಲಿ ನಡೆಯುವಂತೆ ಮಾಡಿದ್ದು ಅವರ ನಡವಳಿಕೆ ಅವರ ಜೊತೆಯಲ್ಲಿ ಸೇರತಕ್ಕವರನ್ನು ಸನ್ಮಾರ್ಗಗಾಮಿಗಳನ್ನಾಗಿ ಮಾಡುವಂತೆ ಮಾಡಿತು ಅಶಕ್ತರಾಗಿಯೂ, ಸಹಾಯವಿಲ್ಲದವರಾಗಿಯೂ ಇರತಕ್ಕ ಬಾಲಕರಿಗೆ ತಮ್ಮ ಸ್ವಂತ ಹಣದಲ್ಲಿ ಧರ್ಮಾರ್ಥಕವಾಗಿ ವಿದ್ಯಾ ಹೇಳುತ್ತಿದ್ದರು ಅಸಹಾಯಕರಾದ ಪಟ್ಟರಾಜು ಜಾತಿ ಹುಡುಗರ ವಿದ್ಯಾಭಿವೃದ್ಧಿಗಾಗಿ ಇವರು ಈ ಸ್ಥಳದಲ್ಲಿ ವಾಸಮಾಡತಕ್ಕ ಎಲ್ಲಾ ಜಾತಿಗಳಲ್ಲೂ ಮುಖ್ಯಸ್ಥರಾಗಿರುವವರನ್ನು ತಮ್ಮ ಜತೆಗೆ ಸೇರಿಸಿಕೊಂಡು ಅವರುಗಳ ಸಹಾಯದಿಂದ ಆ ಹುಡುಗರಿಗಾಗಿಯೇ ಒಂದು ಸ್ಟೂಡೆಂಟ್ಸ್ ಹೋಂ ಸ್ಥಾಪಿಸಿದರು ಅದರಲ್ಲಿ ರಡ್ಡೀ ಜನಗಳ ಬಾಲಕರೂ ಇರಬಹುದೆಂತ ಏರ್ಪಾಡು ಮಾಡಿದರು [illegible] ರಾಗಿ ಜನಿಸಿದಾಗ್ಯೂ ಪಶುಗಳಂತೆ ಬಾಳುತ್ತಿದ್ದ ಒಂಗಾರ್ ಜನಗಳ ವಿದ್ಯಾಭಿವೃದ್ಧಿಗಾಗಿ ಹಿರಿಯೂರ್ ತಾಲ್ಲೂಕು ಮರಡಿಹಳ್ಳಿಯಲ್ಲಿ ಇವರು ಒಂದು ಸ್ಕೂಲನ್ನು ಏರ್ಪಡಿಸಿದರು ಅದು ಸರ್ಕಲ್ ಇನ್ಸ್‌ಪೆಕ್ಟರ್ ಮ॥ ಸಿ ಆರ್ ವೆಂಕಟಸ್ವಾಮಿನಾಯ್ಡು ಯವರ ಸಹಾಯದಿಂದ ಗೌರ್ನಮೆಂಟ್ ಸ್ಕೂಲ್ ಆಯಿತು ಇವರ ನಿಜವಾದ ನಡತೆ, ಜಾತಿಭೇದವಿಲ್ಲದೆ ಒಳ್ಳೇ ಕೆಲಸಗಳಲ್ಲಿ ಪ್ರಜೆಗೆ ತಮ್ಮಿಂದಾಗತಕ್ಕ ಸಹಾಯ ಮಾಡುತ್ತಿದ್ದದ್ದು ದುರ್ಮಾರ್ಗಿಗಳನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಿದ್ದ ಸದ್ಬೋಧೆ ಈ ಮೊದಲಾದ ಹಲವು ಉಪಕಾರಗಳು ಈ ದೊಡ್ಡ ಮನುಷ್ಯರಿಂದ ಪ್ರಜೆಗಳಿಗೆ ಉಂಟಾಗುತ್ತಿದ್ದವು [illegible] ದರಲ್ಲಿ ಇವರಿಗೆ ಇಲ್ಲಿಂದ ವರ್ಗವಾಗುತ್ತೆಂಬ ವದಂತಿಯನ್ನು ಕಳೆದ ನವೆಂಬರ್ ತಿಂಗಳಲ್ಲಿ ಸ್ಟೂಡೆಂಟ್ಸ್ ಹೋಮಿನ ಧರ್ಮದರ್ಶಿಗಳೂ ಇತರ ಪ್ರಜೆಗಳೂ ಸಹ ಕೇಳಿ ಇವರಿಂದ ತಮಗಿರತಕ್ಕ ಉತ್ತಮವಾದ ಸಹಾಯ ತಪ್ಪಿತೆ ಎಂದು ಭಯಪಟ್ಟು ಇವರನ್ನು ಈ ಸ್ಥಳದಲ್ಲೇ ಇನ್ನೂ ಕೆಲವು ದಿವಸ ಇಟ್ಟುಕೊಳ್ಳಬೇಕೆಂತಲೂ ಅದು ಸಾಧ್ಯವಿಲ್ಲವಾದರೆ ಇವರ ಬದಲಿಗೆ ಒಬ್ಬ ಯೂರೋಪಿಯನ್ ಪಾದ್ರಿಗಳನ್ನು ಇಲ್ಲಿಗೆ ಕಳುಹಿಸಬೇಕೆಂದೂ ಮಿಷನ್ ಸಂಘದ ಅಧ್ಯಕ್ಷರನ್ನು ಕೇಳಿಕೊಂಡದ್ದಕ್ಕೆ ಯೋಚಿಸುವುದಾಗಿ ಅವರು ಜವಾಬು ಕೊಟ್ಟು ಆ ಬಳಿಗೆ ಅದಾವುದೂ ಫಲಕಾರಿಯಾಗದ ರೆವ್ ಜಿ ವೆಸ್ಲಿಯವರನ್ನು ಇಲ್ಲಿಂದ ಚಿಕ್ಕಮಗಳೂರಿಗೆ ವರ್ಗಾಯಿಸಿದರು ಆದರಿಂದ ಅವರು ವರ್ಗವಾಗಿ ಸ್ಥಳಕ್ಕೆ ಹೋದ ಸಂಭವದಿಂದ ಇಲ್ಲಿನ ಪ್ರಜೆಗಳಿಗೆ ಕೇವಲ ದುಃಖವುಂಟಾಗಿದೆ

ಮೈಸೂರು ಗೆಜೆಟ್ ಸಂಗ್ರಹ

ಹಾಸನ [illegible] ಕ್ಕೆ ಸೇರಿದ [illegible] ಉಪದ್ರವ [illegible]

[illegible]

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಮೆ॥ ಜಿ [illegible] ಯವರಿಗೆ [illegible] ಪ್ರಿವಿಲೇಜ್ ರಜವನ್ನು ಜನವರಿ ತಾ [illegible] ರವರಿಗೆ [illegible]

[illegible] ಜನವರಿ ತಾ ೪ ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಸೀನಿಯರ್ ಅ॥ ಕಮಿಷನರ್ ಮೆ॥ ವಿ ಆರ್ ತ್ಯಾಗರಾಜ ಅಯ್ಯರವರನ್ನು ಮೈಸೂರು ಸೀಮೆಯ ಸೆನ್‌ಸಸ್ ಸೂಪರಿಂಟೆಂಡೆಂಟರಾಗಿ ನೇಮಕ ಮಾಡಿದೆ

ಅ॥ ಕಮಿಷನರ್ ಮೆ॥ ಆರ್ [illegible] ನರಸಿಂಹಯ್ಯನವರನ್ನು ಚಿತ್ರದುರ್ಗ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ

ಅ॥ ಕಮಿಷನರ್ ಮೆ॥ ಟಿ [illegible] ಯವರನ್ನು [illegible] ಸಬ್ ಡಿವಿಷನ್ ಛಾರ್ಜಿಗೆ ವರ್ಗಮಾಡಿದೆ

ಮುಂದೆ ಹೇಳುವ ಅ॥ ಕಮಿಷನರನ್ನು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗಮಾಡಿದೆ:—

ಮೆ॥ ಗುಬ್ಬಿ ಸಿ ವೆಂಕಟರಾಮಯ್ಯ, ಟಿ. ತಿಂಮಶೆಟ್ಟಿಯವರು, ಎ ಕೃಷ್ಣಸ್ವಾಮಿ ಅಯ್ಯಂಗಾರ್ರು, ಮಹಮದ್ ಓಬಿದುಲ್ಲಾಯವರು, ಪಿ ಶ್ರೀ [illegible] ಅಯ್ಯಂಗಾರ್ರು —ಇವರನ್ನು ರೆವಿನ್ಯೂ ಇಲಾಖೆಯಿಂದ ಪೋಲೀಸ್ ಇಲಾಖೆಗೆ ವರ್ಗಮಾಡಿದೆ

ಮೆ॥ ಎಲ್ ಕೃಷ್ಣರಾಯರನ್ನು ಪೋಲೀಸ್ ಇಲಾಖೆಯಿಂದ ರೆವಿನ್ಯೂಗೆ, ಮೆ॥ ಮಹಮದ್ ಜಹಿರುದ್ದೀನ್ ಮೆಕ್ಕಿಯವರನ್ನು ಪೋಲೀಸಿನಿಂದ ಎಕ್ಸೈಜ್ ಇಲಾಖೆಗೂ, ಮೆ॥ [illegible] ರನ್ನು ಎಕ್ಸೈಜಿನಿಂದ ರೆವಿನ್ಯೂ ಇಲಾಖೆಗೂ ವರ್ಗಮಾಡಿದೆ

ಪೋಲೀಸ್ ಇಲಾಖೆಯಲ್ಲಿ ಮುಂದೆ ಹೇಳುವ ಅ॥ ಕಮಿಷನರುಗಳ ವರ್ಗವನ್ನು ಹುಕುಂ ಮಾಡಿದೆ —

ಮೆ॥ ಬಿ ಎಸ್ ರಾಮತೀರ್ಥರಾಯರು ಶಿವಮೊಗ್ಗೆಯಿಂದ ಮೈಸೂರಿಗೆ, ಮೆ॥ ಸಿ ವೆಂಕಟರಾಯರು ಕೋಲಾರಕ್ಕೆ, ಮೆ॥ ಎಸ. ನಾರಾಯಣರಾಯರು ಹಾಸನದಿಂದ ತುಮಕೂರಿಗೆ; ಮೆ॥ ಟಿ ತಿಂಮಶೆಟ್ಟಿಯವರನ್ನು ಬೆಂಗಳೂರಿಗೆ, ಮೆ॥ ಎಂ [illegible] ವಿಶ್ವನಾಥರಾಯರನ್ನು ಕೋಲಾರದಿಂದ ಹಾಸನಕ್ಕೆ; ಮೆ॥ ಮಹಮದ್ ಓಬಿದುಲ್ಲಾಯವರನ್ನು ಕಡೂರಿಗೆ, ಮೆ॥ ಬಿ. ರಾಮಸ್ವಾಮಿ ಅಯ್ಯಂಗಾರರನ್ನು ಚಿತ್ರದುರ್ಗದಿಂದ ಶಿವಮೊಗ್ಗೆಗೆ; ಮೆ॥ ವೈ [illegible] ಕೃಷ್ಣ[illegible]ಯವರನ್ನು ತುಮಕೂರಿನಿಂದ ಚಿತ್ರದುರ್ಗಕ್ಕೆ; ಮೆ॥ ಎ ಕೃಷ್ಣಸ್ವಾಮಿ ಅಯ್ಯಂಗಾರ್ರನ್ನು ಫ್ರೇಜರ್‌ಪೇಟೆಗೆ, ಮೆ॥ ಡಿ ಶ್ರೀನಿವಾಸ ಅಯ್ಯಂಗಾರರು ಮೆ॥ ಅಬ್ದುಲ್ ವಜೀದ್‌ಯವರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸಿಗೆ.

ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ಮೆ॥ ಸಿ ನಾರಾಯಣರಾಯರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೂ ಹನ್ನೆರಡು ದಿನಗಳಿಗೆ ಜಾಸ್ತಿ ಮಾಡಿದೆ

ಅವರ ಗೈರುಹಾಜರಿಯಲ್ಲಿ ಈಗ ಮಾಡಿರುವ ಬದಲೀ ಏರ್ಪಾಡೇ ನಡೆಯತಕ್ಕದ್ದು.

Printed and Published by the Rev H GULLIFORD, Proprietor and Manager, Wesleyan Mission Press Mysore 3/2/1910.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—೧೯೧೦ ನೇ ಇಸವಿ ಫೆಬ್ರವರಿ ತಾರೀಖು ೧೦ ನೇ ಗುರುವಾರ. ಸಂಚಿಕೆ ೩೭

ವೃತ್ತಾಂತ ಪತ್ರಿಕೆ ಚಂದಾ ಸಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರ್ಷಕ್ಕೆ (ಅಡ್ವಾನ್ಸು) ರೂ ೧—೦—೦

ಪರ ಳವರು ಅಂಚೆಯ ಮೇಲೆ ತರಿಸ [illegible] ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ ರೂ ೧—೧೪—೦

" " " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಬಂದಾದಿಂದಿರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸುಗಂಧಗಳು.

113

ಪ್ರಸಿದ್ಧವಾದ ಮೈಸೂರು ಅಗರ್ (ಊದ) ಬತ್ತಿ ೧ ಸೇರಿಗೆ ರೂ ೧೨, [illegible] ಬತ್ತಿಗಳು ೧ ತೊಲೆಗೆ ರೂ ೧ ದರಾಂಗ ಪೊಟ್ಟ [illegible] ಆಣೆ [illegible] ೧ ಶಿಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ ಟಿ ಎಲ್ ಉಪಾಧ್ಯಾಯ, ಮೈಸೂರು.

THE MYSORE CITY MUNICIPALITY

ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಈ ಮ್ಯುನಿಸಿಪಾಲಿಟಿಯಲ್ಲಿ ಮೊಹತರ್ಫಾ ಕಂದಾಯವನ್ನು ಎರಡು ಕಿಸ್ತಿನಲ್ಲಿ ಸಮವಾಗಿ ಜೂಲೈ ಮತ್ತು ಜನವರಿ ತಿಂಗಳುಗಳಲ್ಲಿ ಅಡ್ವಾನ್ಸಾಗಿ ವಸೂಲ್ ಮಾಡಬೇಕೆಂದು ಇದೇ ೧೯೧೦ ನೇ ಇಸವಿ ಜನವರಿ ೨೦ ನೇ ಮುಕಾಂ ೬೦೮೬-೯೭ ಎಂ ಎಲ್ ೧೩೩ [illegible] ನೇ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸು ಅನುಸರಿಸಿ ಜಾರಿಗೆ ತರಲ್ಪಡುತ್ತೆಂಬ ಸಂಗತಿಯನ್ನು ಇದರಿಂದ ತಿಳಿಯಪಡಿಸಿದೆ

M. G. KRISHNASAMI RAO,
Vice-President

ತಾ 4 2 1910

22-1

ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಇತಃಪರ ಅಂದರೆ ೧೯೧೦ ನೇ ಇಸವಿ ಏಪ್ರೆಲ್ ೧ ನೇ ತಾರೀಖಿನ ಲಾಗಾಯಿತು ಈ ಸಿಟಿಯಲ್ಲಿ ಎಲ್ಲಾ ಕಟ್ಟಡಗಳ ರೆಂಟಲ್ ವ್ಯಾಲ್ಯೂ ಮೇಲೆ ಶೇಕಡಾ ೩ ರೂಪಾಯಿನಂತೆ ಜನರಲ್ ವಾಟರ್ ಟ್ಯಾಕ್ಸು ವಸೂಲ್ಮಾಡಬೇಕೆಂತಲೂ ಜನರಲ್ ವಾಟರ್ ಟ್ಯಾಕ್ಸು ದಾಖಲಾಗುವ ತಾರೀಖು ಲಾಗಾಯಿತು ೧೯೦೯ ನೇ ಇಸವಿ ಜೂಲೈ ೭ ನೇ ಮುಕಾಂ ಗೌರ್ನಮೆಂಟ್ ಆರ್ಡರ್ ಮೇರೆಗೆ ದಾಖಲಾಗುತ್ತಾ ಇರುವ ವಾಟರ್ ಟ್ಯಾಕ್ಸು ವಜಾ ಆಗಿರುತ್ತೆಂತಲೂ ೧೯೧೦ ನೇ ಇಸವಿ ಜನವರಿ ೨೦ ನೇ ಮುಕಾಂ ೬೦-೯೭-೯ ಎಂ ಎಲ್ ೧೩೩ [illegible] ನೇ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸು ತಲುಪಿ ಇರುತ್ತೆ ಇದರಂತೆ ಜಾರಿಗೆ ತರಲ್ಪಡುತ್ತೆಂಬ ಸಂಗತಿಯನ್ನು ಇದರಿಂದ ತಿಳಿಯಪಡಿಸಿದೆ

M. G. KRISHNASAMI RAO,
Vice-President.

4 2—1910

ಮೈಸೂರು ಪಟ್ಟಣದ ಪ್ರಜೆಗಳಿಗೆ ನೋಟೀಸು

ಮೈಸೂರು ಸಿಟಿಯಲ್ಲಿರುವ ದನಗಳಲ್ಲಿ ಕಾಲುಬ್ಬರ ಬಾಯಿಜ್ವರ ಸಹ ವ್ಯಾಪಿಸಿರುತ್ತೆ. ಕಾಯಿಲೆ ಸೋಂಕುಳ್ಳ ದನಗಳ ಹಾಲು ಕುಡಿಯುವದರ ಮೂಲಕ ಮನುಷ್ಯರಿಗೆ ಆ ಜಾಡ್ಯ ಬರುವ ಸಂಭವವಿರುವ ಕಾರಣ ಹಾಲನ್ನು ಚನ್ನಾಗಿ ಕಾಯಿಸಿ ಕುಡಿಯುವುದು ಯುಕ್ತವಾಗಿದೆ

ಮೈಸೂರು ಸಿಟಿ, 20 1-1910.

ಪಿ. ಎಸ್. ಮೂಂಕರ್,
ಹೆಲ್ತ್ ಆಫೀಸರ್.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

452



೧ ಸರ್ವರೋಗಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಸುವರ್ಣ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಚಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು, ಕೈಕಾಲು ಸೆಳೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅತಿಸಾರ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುತುಹೂಲಿ, ಮಕ್ಕಳ ಎಳವು, ಜ್ವರ [illegible] ಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತವೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವಿಳಾಸ —ವಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್ ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

54

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಕಾಗಾ ಕೆಂಪು ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜಾಪಡೆ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಹುಡುಗರ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಹುಡುಗರ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕರ್ಚಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ.

೧೯೧೦ ನೇ ವರ್ಷದ ಕ್ಯಾಲೆಂಡರು. ದೊಡ್ಡ ಸೈಜು. ಇದರಲ್ಲಿ ಗತಿಸಿದ ಕ್ವೀನ್ಸ್ ಬ್ರಾಂಡ್ ಜಾನ್, ಲಾರ್ಡ್. [illegible], ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಬಾಗು, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಫೆಬ್ರವರಿ ಒಳಗೆ ಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡಲೆ ಬರೆಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಪ್ರಸಿದ್ಧಿಯನ್ನು [illegible] ಅಮೇರಿಕಾ ಖಂಡದ ವೈದ್ಯರು.

ಪ್ರೊಫೆಸರ್ ಜೇಂಸ್‌ರವರ

ವಿದ್ಯುಚ್ಛಕ್ತಿಯ ಮಾತ್ರೆಗಳು.

ಈ ಮಾತ್ರೆಗಳನ್ನು [illegible] ರೀತಿಯಾಗಿ ಪ್ರತಿ [illegible] ಕೆಲಸವಾಡುವಂತೆ ವಿದ್ಯುಚ್ಛಕ್ತಿಯಿಂದ [illegible] ದೇಹದಲ್ಲಿ ವಿದ್ಯುಚ್ಛಕ್ತಿಯು ಪ್ರಬಲವಾಗಿ [illegible] ರೋಗಗಳೂ [illegible] ಗುವವು ಈ ವಿದ್ಯುಚ್ಛಕ್ತಿಯ ಮಾತ್ರೆಗಳು [illegible] ರಕ್ತವನ್ನು ಶುದ್ಧಮಾಡುವದು, ಹೊಸ ರಕ್ತವನ್ನುಂಟು ಮಾಡುವದು, [illegible] ಯಾಗುವಂತೆ ಮಾಡುವದು [illegible], ಅಜೀರ್ಣ, [illegible] ಆಗದೇ ಇರುವುದೂ [illegible] ಕಟ್ಟಿಕೊಳ್ಳುವದು, ಮನೋವ್ಯಥೆ, ಕೆಲಸ ಮಾಡುವದರಲ್ಲಿ [illegible] ದೇ ಇರುವದು, [illegible] ಯ ನೋವು, ಮುಖಪಾಕವು [illegible] ಹೋಗುವದು, ಇವುಗಳೆಲ್ಲಾ [illegible] ಆರೋಗ್ಯವನ್ನು [illegible] ಸ್ತ್ರೀಯರು ಕಾಲಕ್ಕೆ ಸರಿಯಾಗಿ [illegible] ದೌರ್ಬಲ್ಯ, [illegible], ನಡುವಿನ ನೋವು, [illegible] ಮೊದಲಾದವುಗಳಿಗೆ ಈ ಮಾತ್ರೆಗಳು ಸಿದ್ಧೌಷಧಗಳು, [illegible] ಈ ಮಾತ್ರೆಗಳ ಸೇವನೆಯಿಂದ ಮನಶ್ಶಕ್ತಿಯು ವೃದ್ಧಿಯಾಗಿ [illegible] ಈ ಮಾತ್ರೆಗಳನ್ನು ಸೇವಿಸುವದಕ್ಕೆ ಉಪಕ್ರಮ ಮಾಡಿದ [illegible] ಜೀರ್ಣಶಕ್ತಿ ಹೆಚ್ಚುವದು, [illegible], ಮುಖಕಾಂತಿ ಹೆಚ್ಚುವದು, [illegible] ಕೆಲಸ [illegible] ಬಿಡದೇ [illegible] ಈ ಮಾತ್ರೆಗಳನ್ನು ಸೇವಿಸಿದರೆ ಜನರು ಆರೋಗ್ಯವಂತರಾಗುವರು. ಎಂಟು ದಿವಸವಾದರೂ ಈ ಮಾತ್ರೆಗಳನ್ನು ಸೇವಿಸಬೇಕು

ಕ್ರಯ — ೩೦ ಮಾತ್ರೆಗಳಿಗೆ ರೂಪಾಯಿ ೧-೪-೦, ೬೦ ಮಾತ್ರೆಗಳಿಗೆ ೨ ರೂಪಾಯಿ ವಿ ಪಿ [illegible] ೫ ಆಣೆ.

ಕೆಲವು ಪ್ರಶಂಸಾ ಪತ್ರಗಳ ಮುಖ್ಯ ಅಭಿಪ್ರಾಯಗಳು

ರಾಜಾ ವಿಜಯಚಂದವಿಲಾಸಪುರದ [illegible] ವಿದ್ಯುಚ್ಛಕ್ತಿ ಮಾತ್ರೆಗಳನ್ನು ವಿ ಪಿ ಮೂಲಕ ಕಳುಹಿಸಿ ಕೊಡಬೇಕು

[illegible] ರಾಜ ಖಡ್ಗ —ಇದುವರೆಗೂ ಕಳಿಸಿಕೊಂಡ ವಿದ್ಯುಚ್ಛಕ್ತಿಯ ಮಾತ್ರೆಗಳು [illegible] ಕೆಲಸ ಮಾಡಿವೆ ಕೂಡಲೆ ಇನ್ನು ನಾಲ್ಕು ಡಬ್ಬಿ ಮಾತ್ರೆಗಳನ್ನು ಕಳುಹಿಸಿ ಕೊಡಬೇಕು [27]

ಕೇಶೋದ್ಯಾನ

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ [illegible] ಇದರಿಂದ [illegible], ಸಂದಿವಾತ, ಚರ್ಮ ರೋಗ, [illegible] ಶಿರ [illegible], ಎದೆನೋವು, ಸೊಂಟದ ನೋವು, [illegible] ಈ ಎಲ್ಲಾ ರೋಗಗಳಿಗೆ ಉತ್ತಮ ಎಲ್ಲಾ [illegible] ಇದು ಉತ್ತಮ ಎಂಬುವದಕ್ಕೆ ಸಂದೇಹವಿಲ್ಲ [illegible]

ಬಾಟ್ಲಿ ಒಂದಕ್ಕೆ ೮ ಆಣೆ

ಫಿಲ್‌ಬರ್ ನ್ಯೂರಾಲಿಕ್

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟ [illegible] ವಾದ ಅತ್ತರು ಇದರ ವಾಸನೆಯು [illegible] ಎಲ್ಲಾ ಅತ್ತರುಗಳಿಗಿಂತಲೂ ಇದೇ ಉತ್ತಮವಾದದ್ದು ಬಾಟ್ಲಿ ಒಂದಕ್ಕೆ ರೂ ೧—೮—೦

ಏಜಂಟರು :—ಡಿ. ಉಲ್ಲ ವಾಟರ್, ಮಂಗಳೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 88

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಮಂತ್ರಿಸಿ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆರರ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಟಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್ ಷಿಟಿನರ್,

೩೩, ನೈನಿಯಪ್ಪನಾಯಕನ ಬೀದಿ, ವೇಪೇರಿ, ಮದರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ ಎದೆ ಹಲ್ಲಿಸುವುದು, ತಲೆನೋವು, ಗಾಬರಿ, ಕಣ್ಣುಮಬ್ಬು, ತಲೆ ತಿರುಗುವಿಕೆ ಮೈನೋವು ಕೀಲುನೋವು, ಮರವು ನಿಶ್ಶಕ್ತಿ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಕೋಶವ್ರಣ, ವಾಯು, ಮೈಬಾವು ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [6 24]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ಡಬ್ಬಿ ೨—೩—೦ ಅಥವಾ ೬ ಡಬ್ಬಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೩೦, ಪಿ ಒ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೆ ಮಾತ್ರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಆಶ್ಚರ್ಯವಾದ ಗುಣಕಾರಿಯು [7 50]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ ಉಳುಕು, ಎಲುಬು ನಂಟು ಗಂಟುನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮೈಮೇಲೆ ತಾಗಿಸುವವರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ವಾಸವಾಗುವುವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦ ೬ ೦ ೧೨ ಡಬ್ಬಿಗಳಿಗೆ ೪ ೦ ೦

ಅಶ್ವಾಮೃತ	೨ ೦-೦
ಚೀಲುಗಡಕಿನ ಮದ್ದು	೦ ೮ ೦
ವಜ್ರಗುಳಿಗೆ—ಧಾತುಪುಷ್ಟಿ ರಕ್ತಶುದ್ಧಿ	೧ ೪ ೦
ಸುಂದರೀ ತೈಲ—ಮುದ್ದುಗಾಗಳಿಗೆ	೦ ೮ ೦
ಬಾಬಾಬು ಪತ್ರೆ—ಬಾಲಕಿಯರಿಗೆ	೦-೮ ೦
ಸೌಶ್ರಾಂಜನ—ಮುಂದೆ ಪೆಸ್ಸಿಗೆ	೦ ೪-೦
ಬಿಷ್ಟಿ ಮುಲಾಮು—ಮಕ್ಕಳ ಬಚ್ಚಗೆ	೦ ೩ ೦
ಕೆ ದನಧಾನ್ಯ ತೈಲ—ತಲೆಯ ಮೇಲಣಿಗೆ	೧ ೦-೦
ಕಫನಾಶಕ ಕಷಾಯ—ಆಸ್ತಮಾ ರೋಗಕ್ಕೆ	೦ ೮ ೦

ದಯವಿಟ್ಟು ಪ್ಯಾಟೆಂಟಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



8 6

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿರುವದಿಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು !!

14 6

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಸ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮಖಮಲ್ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಜ್ವರಹರಿ

11 6

ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಷನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡ್ರಾಮಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಮಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ, ೬—೯ ರೂ ರೂ ೨—೧೨ ೮, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಓಮಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವೂ ದರವೂ "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮ ಓಮಂ ಕರ್ಪೂರವನ್ನು ನಾನೂ ನನ್ನ ಜೊತೆಗಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಲ್ಲಿ ಏಕೀಷ —

ಹನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೆ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 6 6

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಈ ಔಷಧವು ಕುರುಹುಗಳನ್ನು ಹೋಗಲಾಡಿಸುವದು

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಿಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-6]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಮೈಸೂರು ಸಂಸ್ಥಾನದಲ್ಲಿ ಪ್ಲೇಗ್, ಕಾಲರಾ ಸ್ಥಿತಿ

14—1—1910 ರಿಂದ 21—1—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	3	0	0
ಮೈಸೂರು ,,	1	4	0	0
ಬೆಂಗಳೂರು ಡಿಸ್ಟ್ರಿಕ್ಟು	37	22	0	0
ಮೈಸೂರು ,,	12	27	64	10
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	4	1	0	0
ಹಾಸನ ,,	4	2	0	0
ಚಿತ್ರದುರ್ಗ ,,	8	7	0	0
ಕಡೂರ್ ,,	3	3	0	0
ಶಿವಮೊಗ್ಗ ,,	9	4	0	0
ಒಟ್ಟು	101	73	64	10

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಮಾಘ ಶುದ್ಧ ಬಿದಿಗೆ ಶುಕ್ರವಾರದಿಂದ ಮಾಘ ಶುದ್ಧ ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ಕುಂಭ ಮಾಸ
11	ಶುಕ್ರ ,,	ಬಿದಿಗೆ	53 12	ಶ	35 45	30
12	ಶನಿವಾ	ತದಿಗೆ	17 16	ಪೂಭಾ	32 36	1
13	ರವಿವಾ	ಚೌತಿ	41 48	ಉಭಾ	29 2	
14	ಚಂದ್ರ §	ಪಂಚಮಿ	16 3	ರೆ	25 5	3
15	ಕುಜ ‡	ಷಷ್ಠಿ	30 3	ಅ	20 58	4
16	ಬುಧ †	ಸಪ್ತಮಿ	24 20	ಭ	16 44	5
17	ಗುರು ,	ಅಷ್ಟಮಿ	18 12	ಕೃ	13 2	6

ತಾವನ್ತ್ರೋತ್ಸವ ವಿಷ್ಣುಪದಪುಣ್ಯಕಾಲ § ಮದನಪಂಚಮಿ ‡ ಮಹಾಷಷ್ಠಿ, ಕುಮಾರಷಷ್ಠೀ ವ್ರತ ಅಮೃತಸಿದ್ಧಿಯೋಗ † ಸಪ್ತಮೀ ತಿಥಿ ರಥಸಪ್ತಮಿ, ಆಕೇಶ್ವರಸ್ವಾಮಿ ರಥ, ಶ್ರೀರಂಗಪಟ್ಟಣದಲ್ಲಿಯೂ ಹೇಮಗಿರಿಯಲ್ಲಿಯೂ ಸಹ ರಥೋತ್ಸವ ರಥ ,, ತಿಥಿದ್ವಯಂ, ಭೀಷ್ಮಾಷ್ಟಮಿ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಪ್ಪು ಅಕ್ಕಿ ಪಲ್ಲಾ ೧ ಕ್ಕೆ ರೂ	೧೨ ೮ ೦	೧೨ ೮ ೦
ಕೆಂಬೂತಿ ಅಕ್ಕಿ ಅವಲ್	೧೨ ೮ ೦	೧೪ ೦ ೦
,, ದುಯ್ಯಂ	೧೨ ೦ ೦	೧೩-೦ ೦
ಜಾಪಾನ್ಯ ಅಕ್ಕಿ	೧೨ ೪ ೦	೧೪ ೦ ೦
ಸಣ್ಣಕ್ಕಿ ಅವಲ್	೧೩ ೮-೦	೧೬-೦ ೦
,, ದುಯ್ಯಂ	೧೩ ೦ ೦	೧೪ ೦ ೦
ಕೊಗರೀ ವಿ ವಿ ಪಲ್ಲಾ ೧ಕ್ಕೆ	೧೨ ೨ ೦	೧೪ ೦ ೦
, ದುಯ್ಯಂ	೧೨ ೦ ೦	೧೩ ೦ ೦
ಕೈರ್ ರಾಗಿ ಪಲ್ಲಾ ೧ಕ್ಕೆ	೮ ೦ ೦	೮ ೦ ೦
ಕಾರ್ರ್ಯಾಗಿ	೬ ೧೨ ೦	೬ ೧೨ ೦
ಜೋಳ	೬ ೮ ೦	೯-೦ ೦
ಹುರುಳಿ ಪಲ್ಲಾ ೧ಕ್ಕೆ	೧೧-೦ ೦	೧೦ ೦-೦
ಬೇಳೆ ಅವರೆ	೧೧-೦ ೦	೧೦ ೦ ೦
ಹೆಸರು	೧೧ ೦-೦	೯ ೪ ೦
ಉದ್ದು	೧೩ ೦ ೦	೧೦ ೦ ೦
ಕಡಲೆ	೧೨ ೮-೦	೯ ೮ ೦
ಎಳ್ಳು ಸೇ ೧೨೬ ಕ್ಕೆ	೧೬ ೦ ೦	೧೫ ೦ ೦
ತೊಗರಿ	೮ ೦ ೦	೮ ೦ ೦
ಹರಳು ೧೨೬ ಸೇರಿಗೆ	೧೪ ೦ ೦	೧೨ ೦ ೦
ಸೀಗೇಕಾಯಿ ಮಣ ೧ಕ್ಕೆ	೨ ೦ ೦	೨ ೦ ೦
ಮೆಣಸಿನಕಾಯಿ	೪ ೧೨ ೦	೩ ೪ ೦
, ದುಯ್ಯಂ	೪ ೮ ೦	೩ ೦ ೦
ಎಲ್ಲ ದೊಡ್ಡ ಅಕ್ಕಿ	೪ ೮ ೦	ಮ ೨ ೪ ೦
ಒಳ್ಳೆ ಮಣ ೧ಕ್ಕೆ	೫ ೦ ೦	೪ ೮ ೦
ಹರಳೆಣ್ಣೆ	೫ ೯ ೦	೪ ೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೧೦ ೦ ೦	೯ ೦ ೦
ಉಪ್ಪು ,	೬ ೦ ೦	೭ ೮ ೦
ಹುಣಸೇ ಹಣ್ಣು	೨ ೪ ೦	೧ ೧೨ ೦
,, ಹಸೀದು	೨ ೨ ೦	೧ ೨ ೦
ಹುಲ್ಲು ಮಣ ೧ಕ್ಕೆ	೧೬ ೨ ೦	೧೪ ೦-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	೫ ೨ ೦	೪ ೨ ೦
ತೆಂಗಿನಕಾಯಿ ೧೦೦ ಕ್ಕೆ	೫ ೦ ೦	೫ ೦ ೦
ಅಡಿಕೆಕಾಯಿ ಮಣ ೧ಕ್ಕೆ	೦ ೧೨ ೦	೦ ೧೨ ೦
ಅಚ್ಚುಳವ ಕಾಯಿ ಮಣ ೧ಕ್ಕೆ	೦ ೧೨ ೦	೦ ೧೨ ೦
ಚಿನ್ನ (ಸಾ) ಕೆಂಪು	೧೫ ೯ ೦	೧೫ ೬ ೧
,, ,, ಪ ನೆ	೧೬ ೦-೦	೧೫ ೮ ೦
,, ,, ಗಟ್ಟಿ ತೊಲ ೧ಕ್ಕೆ	೨೪ ೨ ೦	೨೪ ೬ ೦
ಬೆಳ್ಳಿಗಟ್ಟಿ ತೊಲ ೧೦೦ ಕ್ಕೆ	೬೭ ೪ ೦	೬೪-೨-೦

ಮೈಸೂರು ಸರ್ಕಾರಿ ಹುಕುಮುಗಳು

ಮುಜರಾಯಿ ಇಲಾಖಾ

ಶಿವಮೊಗ್ಗಾ ರೈಲ್ವೆ ಸ್ಟೇಷನ್ ಬಳಿ ಡೆಪ್ಟಿ ಕಮಿಷನರ್ ಮ|| ಎಂ ಎಸ್ ನಾರಾಯಣರಾಯರ ದಾಯಾದಿಯು ಕಟ್ಟಿಸಿರುವ ಶ್ರೀ ಆಕೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜಾದಿಗಳು ಶಾಶ್ವತವಾಗಿ ನಡೆಯುವದಕ್ಕೆ ಶೇಕಡಾ ೩ ರೂಪಾಯಿ ಬಡ್ಡಿಯುಳ್ಳ ಇಂಡಿಯಾ ಗವರ್ನ್‌ಮೆಂಟಿನ ೨,೦೦೦ ರೂಪಾಯಿ ಪತ್ರಗಳನ್ನು ಸರಕಾರಕ್ಕೆ ವಹಿಸಿದ್ದರು ಈಗ ಅವರು ಆ ಪತ್ರಗಳನ್ನು ಈಗಿನ ಮಾರ್ಕೆಟ್ ದರದಂತೆ ವಿಕ್ರಯಮಾಡಬೇಕೆಂತಲೂ, ತಾವು ಆ ಮೂಲಧನವನ್ನು ೪,೦೦೦ ರೂಪಾಯಿಗೆ ಹೆಚ್ಚಿಸಬೇಕೆಂದಿರೋಣದರಿಂದ ಸರ್ಕಾರದವರು ತಮ್ಮಿಂದ ಬಾಕಿ ಮೊಬಲಗನ್ನು ತೆಗೆದುಕೊಂಡು ಒಟ್ಟು ಹಣಕ್ಕೆ ಶೇಕಡಾ ೪ ರೂಪಾಯಿ ನಂತೆ ಬಡಿ ಕೊಡುತ್ತಾ ಬರಬೇಕೆಂತಲೂ, ಸಾಲೀಯಾನಾ ಬರುವ ೧೬೦ ರೂಪಾಯಿ ಬಡ್ಡಿಯಿಂದ ದೇವಸ್ಥಾನದಲ್ಲಿ ತಾವು ನಿಗದಿಮಾಡಿರುವ ಪ್ರಕಾರ ಪೂಜಾಪಟಿತರ ದೀಪಾರಾಧನೆ ಮುಂತಾದದ್ದೂ ಶಾಶ್ವತವಾಗಿ ಸರ್ಕಾರದಿಂದಲೇ ನಡೆಸಿಕೊಂಡು ಬರಬೇಕೆಂತಲೂ ಕೇಳಿಕೊಂಡಿದ್ದರು ಗವರ್ನ್‌ಮೆಂಟಿನವರು ಅವರ ಪ್ರಾರ್ಥನೆಯಂತೆ ನಡಿಸಿಕೊಡಬೇಕೆಂದು ಸ್ಯಾಂಕ್ಷನ್ ಮಾಡಿ, ಬಡ್ಡಿ ಮೊಬಲಗನ್ನು ದೇವಸ್ಥಾನದಲ್ಲಿ ವಿನಿಯೋಗದ ಬಗ್ಗೆ ಶಿವಮೊಗ್ಗಾ ಡೆಪ್ಟಿ ಕಮಿಷನರವರ ವಶಕ್ಕೆ ಪ್ರತಿ ಛಮಾಹಿಯಲ್ಲೂ ಪಾವತಿಮಾಡತಕ್ಕದ್ದೆಂದು ಹುಕುಂ ಮಾಡಿರುತ್ತಾರೆ

ಬೆಂಗಳೂರು ತುಳಸೀ ತೋಟದಲ್ಲಿರುವ ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನವನ್ನು ಪೇಮಾಸ್ಟರ್ ವೆಂಕಟಾಚಾರ್ಯರು ಸ್ಥಾಪಿಸಿದರು ಅವರಿಂದಲೂ ಅವರ ವಂಶೀಕರಿಂದಲೂ ದೇವಸ್ಥಾನದ ಕಾರ್ಯಗಳು ನಡಿಸಲ್ಪಡುತ್ತಾ ಬಂದಿರುತ್ತವೆ ಈಗ ಅದರ ವಿಚಾರಣಾ ಕರ್ತರಾದ ಮ|| ಬಿ ಜಿ ಕೇಶವ ಐಯಂಗಾರ್ಯರು ದೇವಸ್ಥಾನದಲ್ಲಿ ಶಿಬ್ಬಂದಿ ಖರ್ಚು, ಪಡಿತರ ದೀಪಾರಾಧನಗಳು, ಮಾಸ ಸಂವತ್ಸರೋತ್ಸವಗಳು ಕ್ರಮವಾಗಿಯೂ ಶಾಶ್ವತವಾಗಿಯೂ ನಡೆಯುತ್ತಾ ಬರುವದಕ್ಕಾಗಿ ಗವರ್ನ್‌ಮೆಂಟಿನವರ ವಶಕ್ಕೆ ೨೦,೦೦೦ ರೂಪಾಯಿ ಕೊಡುತ್ತೇವೆಂದೂ, ಇದಕ್ಕೆ ಸರ್ಕಾರದವರು ಶೇಕಡಾ ೪ ರೂಪಾಯಿ ಬಡ್ಡಿ ಕೊಡುವಂತೆ ಸ್ಯಾಂಕ್ಷನ್ ಆಗಬೇಕೆಂದೂ, ಈ ಬಡ್ಡಿಯನ್ನು ತಾವು ದೇವಸ್ಥಾನಕ್ಕೆ ವಿನಿಯೋಗಿಸಿ ಕ್ರಮವಾದ ಲೆಕ್ಕಗಳನ್ನು ಸರ್ಕಾರಕ್ಕೆ ಒಪ್ಪಿಸುತ್ತಾ ಬರುತ್ತೇವೆಂದೂ ಅರಿಕೆ ಮಾಡಿದರು ಈ ಫಂಡಿಗೆ ಅವರು ೬,೦೦೦ ರೂಪಾಯಿ ಈಗ ಪಾವತಿ ಮಾಡಿ, ತಮಗೆ ಇತರ ಕಡೆ ಬರಬೇಕಾಗಿರುವ ಹಣಗಳನ್ನೆಲ್ಲಾ ಅಂದರೆ ೨೦,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ವಸೂಲಾದ ಹಾಗೆ ಸರ್ಕಾರಕ್ಕೆ ಕೊಡುತ್ತಾ ಬರುವುದಾಗಿಯೂ ತಿಳಿಸಿದರು ಗವರ್ನ್‌ಮೆಂಟಿನವರು ಅರ್ಜಿ ಪ್ರಕಾರ ಹಣವನ್ನು ತೆಗೆದುಕೊಂಡು, ಶೇಕಡಾ ೪ ರೂಪಾಯಿ ಬಡಿ ಪಾವತಿ ಮಾಡುವುದಾಗಿ ಅಪ್ಪಣೆ ಕೊಟ್ಟಿದಾರ ಮತ್ತು ಒಟ್ಟಿಂದ ೨೫,೦೦೦ ರೂಪಾಯಿಗಿಂತ ಹೆಚ್ಚಾಗಿ ಈ ಫಂಡಿಗೆ ತೆಗೆದುಕೊಳ್ಳಕೂಡದೆಂದು ತಿಳಿಸಿ ದೇವಸ್ಥಾನದ ಜಮಾ ಖರ್ಚನ್ನೆಲ್ಲಾ ಸರ್ಕಾರಿ ಅಧಿಕಾರಿಗಳಿಗೆ ತೋರಿಸುತ್ತಾ ಬರಬೇಕೆಂದೂ, ಸಾಲೀಯಾನಾ ಜಮಾಖರ್ಚು ಲೆಕ್ಕಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದೂ ತಿಳಿಸಿರುತ್ತಾರೆ

ಹೊಳೆ ನರಸೀಪುರದ ಶ್ರೀ ಉತ್ತರಾದಿ ಮಠದ ಮೇಲೆ ಆ ಮಠದ ಶಾನುಭೋಗರೇ ಮೊದಲಾದ ಮಾಜಿ ನೌಕರ ಮಾನೇರುಗಳು ದಾವಾ ಮಾಡಿ ಡಿಕ್ರಿಗಳನ್ನು ಪಡೆದುಕೊಂಡರು ಗವರ್ನ್‌ಮೆಂಟಿನವರು ೧೯೦೭ನೇ ಮಾರ್ಚಿ ತಿಂಗಳ ೯ನೇ ತಾರೀಖಿನ ಹುಕುಮಿನಲ್ಲಿ ಮಠದಿಂದ ಡಿಕ್ರಿದಾರರಿಗೆ ಹಣ ಪಾವತಿ ಮಾಡಬೇಕೆಂದೂ, ಡಿಕ್ರಿ ದಾರೀಖಿನಿಂದೀಚೆಗೂ ಅವರಿಗೆ ಬರತಕ್ಕ ಪರಮಾನಗಳನ್ನು ಸಲ್ಲಿಸಬೇಕೆಂದೂ, ಮಠದ ಸ್ಥಿರಸ್ವತ್ತುಗಳನ್ನೂ ಮಾಜೀವಾರಿ ನಗದೀಯಾದಿನ ಮೊಬಲಗನ್ನೂ ಸರ್ಕಾರದಿಂದ ಜಪ್ತಿಯಾಗಿದ್ದದ್ದನ್ನು ವಜಾ ಮಾಡಿದೆ ಎಂದೂ ಒಪ್ಪಿಗೆ ಕೊಡಿಸಿದ್ದರು ಇದರ ಮೇಲೆ ಸ್ವಾಮಿಗಳವರು ಈ ಹುಕುಮನ್ನು ರದ್ದುಮಾಡಿಕೊಡಬೇಕೆಂದು ಗವರ್ನ್‌ಮೆಂಟಿಗೆ ಬರದುಕೊಂಡರು ಗವರ್ನ್‌ಮೆಂಟಿನವರು ಸಿವಿಲ್ ಕೋರ್ಟಿನ ಡಿಕ್ರಿಯನ್ನು ಜಾರಿ ಮಾಡುವುದು ನ್ಯಾಯವಲ್ಲವೆಂದೂ, ಮಠದ ನಗದೀಯಾದ ಪರಮಾನವು ಸಿವಿಲ್ ಕೋರ್ಟಿನ ಡಿಕ್ರಿಗಾಗಿ ಜಮಾ ಮಾಡುವುದು ಸರಿಯಲ್ಲವೆಂದೂ, ಸರ್ಕಾರದವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವ ಮಠದ ಸ್ಥಿರಸೊತ್ತುಗಳನ್ನೂ ಪಾವತಿ ಮಾಡದೆ ಬಿಡುಬಿಟ್ಟಿರುವ ನಗದೀಯಾದ ಪರಮಾನವನ್ನೂ ಮಠಕ್ಕೆ ಕೊಡಿಸಿಕೊಡಬೇಕೆಂದೂ ಸ್ವಾಮಿಗಳು ಕೇಳಿದರು ಗವರ್ನ್‌ಮೆಂಟಿನವರು ಈ ವಿಚಾರಗಳನ್ನೆಲ್ಲಾ ಕುರಿತು ಪರ್ಯಾಲೋಚನೆ ಮಾಡಿ ಮೇಲ್ಕಂಡ ನೌಕರ ಮಾನೇರುಗಳು ಪಡೆದುಕೊಂಡಿರುವ ಡಿಕ್ರಿಗಳನ್ನು ಜಾರಿ ಮಾಡುವ ವಿಷಯದಲ್ಲೂ ಅವರಿಗೆ ಪರಮಾನಗಳನ್ನು ಸಲ್ಲಿಸುವ ವಿಷಯದಲ್ಲೂ ತಾವು ಮೊದಲು ಕೊಟ್ಟಿದ್ದ ಹುಕುಮನ್ನು ರದ್ದುಮಾಡಿರುತ್ತಾರೆ ಮತ್ತು ಮಠದ ಸ್ಥಿರಸ್ವತ್ತುಗಳನ್ನು ಬಿಟ್ಟುಕೊಡುವ ಬಗ್ಗೆ ಸರ್ಕಾರದವರೇ ವಹಿಸಿಕೊಂಡು ಮುಂದೆ ಸಲ್ಲಬೇಕಾದ ಪರಮಾನ ನಗದೀಯಾದವನ್ನು ಬಿಟ್ಟುಕೊಡುವ ಹುಕುಂ ಆ ಮೊಬಲಗನ್ನು ಸರ್ಕಾರಕ್ಕೆ ಪಾವತಿ ಮಾಡದ ಕಾರಣ ಪರಮಾನದಿಂದಲೂ ಹುಕುಂ ಮಾಡಿದ್ದಾರೆ

ತಾಲ್ಲೂಕು ವರ್ತಮಾನಗಳು

ಶಿವಮೊಗ್ಗ — ಈ ಊರಿನಲ್ಲಿ ಪ್ಲೇಗ್ ಆರಂಭವಾಗಿ ಬಹಳ ದಿವಸಗಳಾಗಿವೆ ಈ ವಾರ ಹೋದ ವಾರಗಳಲ್ಲಿಯೂ ಪ್ಲೇಗಿನಿಂದ ನಾಲ್ಕು ಜನರು ವ್ಯಾಧಿಗ್ರಸ್ತರಾದರು ಮತ್ತು ಇನ್ನೂ ನಾಲ್ಕು ಜನರು ಆಸ್ಪತ್ರೆಯಲ್ಲಿ ನರಳುತ್ತಿದ್ದಾರೆ ಇಷ್ಟು ಮಂದಿಯಲ್ಲಿಯೂ ಈ ಊರಿನ ಬೇರೆ ಬೇರೆ ಭಾಗಗಳಲ್ಲಿಯೂ ಪ್ಲೇಗಿನಿಂದ ಕೆಲಕೆಲವರು ಮೃತಪಟ್ಟರು ಮತ್ತು ಇನ್ನೂ ಅಲ್ಲಲ್ಲಿ ಪ್ಲೇಗ್ ಕಾಯಿಲೆಗಳು ಆಗುತ್ತಲಿವೆ ಈಗ ಹವವೂ ಅಷ್ಟು ಚನ್ನಾಗಿಲ್ಲವೆಂದು ತೋರುತ್ತದೆ — ಕಳೆದ ಶನಿವಾರ ಸಾಯಂಕಾಲ ಈ ಊರಿನ ರೀಡಿಂಗ್ ರೂಮ್ ಸಂಘದವರು ಇಲ್ಲಿನ ಟೌನ್ ಹಾಲಿನಲ್ಲಿ ಸಭೆ ಸೇರಿ ಈ ವರ್ಷದಲ್ಲಿ ನಡೆಯಬೇಕಾಗಿರುವ ಕಾರ್ಯಗಳನ್ನು ಕುರಿತು ಸಂಭಾಷಣೆ ಮಾಡಿದರು ಇದರಲ್ಲಿ ಇಲ್ಲಿನ ಡೆಪ್ಯುಟಿಕಮಿಷನರ್ ಸಾಹೇಬರು ಪ್ರೆಸಿಡೆಂಟರಾಗಿರಬೇಕೆಂತಲೂ ಮೆ|| ಎಸ್ ಆರ್ ಬಾಲಕೃಷ್ಣರಾವ್ ಬಿ ಎ ಬಿ ಎಲ್ ಯವರು ಸೆಕ್ರೆಟರಿಯವರಾಗಿರಬೇಕೆಂತಲೂ ಮೆ|| ಸಿ ಸುಬ್ಬರಾವ್ ಬಿ ಎ ಬಿ ಎಲ್ ಅವರು ಆಡಿಟರಾಗಿರಬೇಕೆಂತಲೂ ನೇಮಕ ಮಾಡಿದರು ಇನ್ನೂ ಅನೇಕರು ಈ ಉಪಯುಕ್ತವಾದ ಸಂಘಕ್ಕೆ ಸೇರಿ ಪ್ರೋತ್ಸಾಹಕೊಡುವರೆಂದು ನಿರೀಕ್ಷಿಸಲ್ಪಟ್ಟಿದೆ — ಈ ಊರಿನ ಕೆಲವು ಕಡೆಗಳಲ್ಲಿ ರಸ್ತೆಗಳು ಸಮವಾಗಿರುವದಿಲ್ಲ ಅಧಿಕಾರಿಗಳು ಇದನ್ನು ನೋಡಿ ಜಾಗ್ರತೆಯಾಗಿ ಸರಿಮಾಡಿಸಬೇಕಾದದ್ದು ಅವಶ್ಯವಾಗಿದೆ

ಕುಣಿಗಲ್ ತಾಲ್ಲೂಕು ಶೆಟ್ಟಿಗರೆ — ಈ ಪ್ರಾಂತ್ಯ ರೈತರು ಕಿರಾಣಿ ಫಸಲನ್ನು ರೇಖೆ ಮಾಡಿ ರಾಗಿ ಹುಲ್ಲನ್ನು ಬಡಿಯಲು ಶುರು ಮಾಡಿರುತ್ತಾರೆ ಇಲ್ಲಿನ ಅನೇಕರು ಕುಣಿಗಲ್ ಸ್ಟಡ್ ಫಾರಮ್ಮಿಗೆ ಹುರುಳಿ ಹುಲ್ಲು ಸಪ್ಲೈ ಮಾಡುತ್ತಿದಾರೆ ಹುರುಳಿ ಪಲ್ಲಾ ೧ಕ್ಕೆ ೬| ೬|| ರೂಪಾಯಿ, ಹುಲ್ಲು ಟನ್ ೧ಕ್ಕೆ ೨೪ ರೂಪಾಯಿ ಎಂದು ವರ್ತಮಾನ ಎತ್ತುಗಳ ವ್ಯಾಪಾರವು ಹುರುಕಾಗಿರುತ್ತದೆ ಗತಸಾಲಿನಲ್ಲಿ ಗೋಕಾಯಿಗಳು ಮೇವು ನೀರಿಗೆ ಮಲೆಯ ವಗ್ಗರೆ ಸ್ಥಳಕ್ಕೆ ಹೋಗಿ ಕಷ್ಟಪಟ್ಟು ಅನೇಕ ದನಗಳು ನಷ್ಟವಾದವು ಈ ಸಾರಿ ವಿಶೇಷ ಮಳೆಯಾಗಿ ಕಾಡಿನಲ್ಲಿ ಕರಡು ಹುಲ್ಲು ಅಪಾರವಾಗಿ ಬೆಳೆದು ಆಕಡೆಯ ಗೋಸಮೂಹವೆಲ್ಲವೂ ಮನದಣಿಯ ಮೇವು ತಿಂದು ಉಲ್ಲಾಸವಾಗಿವೆ ಮುಂದಣ ಸಾಧಾರಣ ಸಂವತ್ಸರಕ್ಕೆ ಪಶುನಾಯಕ ಯಮಧರ್ಮನಾಗುತ್ತಾನೆಂದು ಪಂಚಾಂಗಗಳಲ್ಲಿ ಓದಿ ಜಾನ್ವಾರುಗಳಿಗೆ ಮುಂದೇನು ದುಃಖವು ಪ್ರಾಪ್ತವಾಗುವದೋ ಎಂಬ ಚಿಂತೆಯು ರೈತರುಗಳಿಗೆ ಸಂಭವಿಸಿದೆ [ಈ ಪಂಚಾಂಗದ ಮಾತನ್ನು ಯಾರೂ ನಂಬಿ ಚಿಂತೆಪಡಬೇಕಾದದ್ದಿಲ್ಲ — ಎಡಿ] — ಈ ಸಾರಿ ಮೊಹರಂ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು — ಈಗ ಶೀತಗಾಳಿ ಬೀಸುವದರಿಂದಲೂ ಹಿಮದ ನೀರು ಪಾನಮಾಡುವದರಿಂದಲೂ ಛಳಿ ಜ್ವರ ನೆಗಡಿ ಇತ್ಯಾದಿ ರೋಗಗಳು ಜನರಲ್ಲಿ ವ್ಯಾಪಿಸಿ ಕಂಬಳಿ ಸುತ್ತಿಕೊಂಡು ಕೋಣೆ ಮನೆಯಲ್ಲಿ ಮಲಗಿಕೊಂಡು ಮನೆ ಕಟ್ಟುವ ಅಂದಾಜಾ ಯೋಚಿಸುತ್ತಿದರೆ ನೀರಿನಲ್ಲಿ ರಕ್ತಕ್ರಿಮಿಗಳು ನಾಶವಾಗುವಂತೆ ಕಾಯಿಸಿ ಪಾನಮಾಡಿದರೆ ಇತ್ಯಾದಿ ರೋಗವು ಸಂಭವಿಸಲಾರದು

ಚಿಕ್ಕಮಗಳೂರು — ಈ ಸ್ಥಳವು ಅರ್ಧ ಮಲೆನಾಡು ಎನಿಸಿಕೊಂಡಿದೆ ಆದರೂ ಪಟ್ಟಣವು ತಕ್ಕಮಟ್ಟಿಗೆ ಶುಚಿಯಾಗಿಯೂ ಸಹ್ಯ ಆರೋಗ್ಯಕರವಾಗಿಯೂ ಇದೆ ಮುಖ್ಯವಾಗಿ ಪೇಟೆ ಕೋಟೆಗಳ ಮಧ್ಯೆ ಬಂಗಲೆಗಳೂ ಪಬ್ಲಿಕ್ ಆಫೀಸ್ ಕಟ್ಟಡಗಳೂ ಇರುವ ಪ್ರದೇಶವು ನಿರ್ಮಲವಾಗಿಯೂ ಮನೋಹರವಾಗಿಯೂ ಇದೆ ಇದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಾದ್ದರಿಂದ ಎಲ್ಲಾ ತರದ ಪಬ್ಲಿಕ್ ಆಫೀಸುಗಳೂ ಕೋರ್ಟು ಕಚೇರಿಗಳೂ ಇಲ್ಲಿವೆ ಒಂದು ಹೈಸ್ಕೂಲೂ ಮತ್ತು ಬಾಲ ಬಾಲಕಿಯರ ಪ್ರೈಮರಿ ವಿದ್ಯಾಬೋಧಕ ಶಾಲೆಗಳೂ ಉಂಟು — ಇಲ್ಲಿ ಪ್ರತಿ ಬುಧವಾರ ಸಂತೆ ನಡೆಯುವುದು ಇದು ಬಹು ವಿಸ್ತಾರವಾದ ಸಂತೆ ಎಲ್ಲಾ ಪದಾರ್ಥಗಳೂ ದೊರಕಿದರೂ ಬೇಗ ಹೋಗಬೇಕು ಮುಂಚಾದ ಕಡೆಗಳಿಂದ ಆಮದಾಗುವ ಸರಕುಗಳಿಗೆ ಬಹಳ ಕ್ರಯ ಇಲ್ಲಿ ಇನ್ನೂ ಒಂದೆರಡು ಕೊರತೆಗಳು ಟು ಏನೆಂದರೆ ಇಲ್ಲಿ ದಿನವಹಿ ಹಣ್ಣು ಹಂಪಲು ತರಕಾರಿಗಳನ್ನು ಮಾರುವ ಮಾರ್ಕೆಟ್ಟು ಇಲ್ಲ ಸಂತೆಯ ದಿನ ವಿಶೇಷದ ಕಾಯಿ ಪಲ್ಯ ಕೊಂಡಿಟ್ಟುಕೊಳ್ಳಬೇಕೇ ಹೊರತು ಬಾಕೀ ದಿನಗಳಲ್ಲಿ ಅವು ಸಿಕ್ಕುವುದಿಲ್ಲ ಆ ದಿನ ಹೆಚ್ಚಾಗಿ ಕೊಂಡಿಟ್ಟುಕೊಂಡರೂ ಒಣಗಿಯೋ ಕೊಳೆತೋ ಅನಾರೋಗ್ಯಕರವಾಗುತ್ತವೆ ಇಲ್ಲಿ ಬೇರೆ ಕಡೆಗಳಲ್ಲಿರುವಂತೆ ಮಾರ್ಕೆಟನ್ನು ಯಾಕೆ ಇಡಬಾರದೋ ಗೊತ್ತಿಲ್ಲ ಮ್ಯುನಿಸಿಪಾಲಿಟಿಯವರು ಈ ಏರ್ಪಾಡು ಮಾಡಿದರೆ ಪ್ರಜೆಗಳಿಗೆ ಸುಖವಾಗಿರುವುದು ಇಲ್ಲಿ ಮಾಂಸದ ಮಾರ್ಕೆಟ್ಟು ಇದೆ ಆದರೂ ಮಾಂಸ ಮಾತ್ರ ಬಹಳ ಸಾಮಾನ್ಯವಾದದ್ದು ಅನೇಕ ವೇಳೆ ಅನಾರೋಗ್ಯವಾದದ್ದು ಖರೀದಿಯಿಂತಲೂ ಬಹಳ ಹೆಚ್ಚು ಮ್ಯುನಿಸಿಪಾಲಿಟಿಯವರು ಸ್ವಲ್ಪ ಲಕ್ಷ್ಯವೂ ಇದಕ್ಕೆ ಬೇಕಾಗಿದೆ ಊರ ಸುತ್ತಲೂ ಉಡಿದಾರದ ಹಾಗೆ ಬೆಳೆಯಿಸಿರುವ ಮರಗಳು ನೋಡುವದಕ್ಕೆ ಅಂದವಾಗಿಯೂ ಬಹುಮಟ್ಟಿಗೆ ಗಾಳಿಯನ್ನು ತಡೆಯತಕ್ಕವುಗಳಾಗಿಯೂ ಇವೆ

ಫ್ರೆಂಚ್ ರಾಕ್ಸ್ — ಈಗ ಸುಮಾರು ಒಂದು ವಾರದಿಂದಲೂ ಒಂದು ವಿಧವಾದ ತಂಗಾಳಿಯೂ ಚಳಿಯೂ ಜಾಸ್ತಿಯಾಗಿದೆ ಜನರಿಗೆ ಇನ್ನೂ ಮಾಗಿ ಜ್ವರ ಛಳಿ ತಪ್ಪಲಿಲ್ಲ ರಾಗಿ ಸುಗ್ಗಿಕಾಲವಾಗಿ ಜನರು ಕೆಲ ಮಾಡುತ್ತಿದ್ದಾರೆ ಸಂತೆಯಲ್ಲಿ ಇನ್ನೂ ಧಾರಣೆವಾಸಿಗಳು ಕಡಮೆಯಾಗಿಲ್ಲ ಅಕ್ಕಿ ರೂಪಾಯಿಗೆ ೮ ೯ ಸೇರು, ರಾಗಿ ೧೩ ೧೪ ಸೇರು, ತೊಗರಿಬೇಳೆ ೮ ಸೇರು, ಈ ಪ್ರಕಾರ ಮಾರುತ್ತಾರೆ — ಕಳೆದ ವಾರ ನಮ್ಮ ಮಹಾರಾಜರು, ದಿವಾನರೂ ಮತ್ತು ಅವರ ಪರಿವಾರದವರಲ್ಲಿ ಕೆಲವರು ಮೋಟಾರ್ ಗಾಡಿಗಳಲ್ಲಿ ಇಲ್ಲಿಗೆ ಸುಮಾರು ೫ ಮೈಲಿಗಳ ದೂರದಲ್ಲಿರುವ ಕೊಣ್ಣೂರು ಎಂಬ ಚರಿತ್ರಾರ್ಹವಾದ ತೊಣ್ಣೂರು ಎಂಬ ಸ್ಥಳವನ್ನು ನೋಡಿಕೊಂಡು ಹೋಗುವುದಕ್ಕೆ ಈ ಮಾರ್ಗವಾಗಿ ದಯಮಾಡಿದ್ದರು — ಇಲ್ಲಿ ಸುಮಾರು ಒಂದು ವರ್ಷದಿಂದಲೂ ಅ| ಪೊಲೀಸ್ ಸೂಪರಿಂಟೆಂಡೆಂಟ್ ಮೆ|| ಓಡಾಲ್ಸ್ ರವರನ್ನು ತಮ್ಮ ಖಾಯಂ ನೌಕರಿಯಾದ ಸಿಟಿ ಇನ್ಸ್ಪೆಕ್ಟರ ಕೆಲಸಕ್ಕೆ ವಾಪಸ್ ಕಳುಹಿಸಿದ್ದರಿಂದ ಇಲ್ಲಿನ ಜನಗಳೆಲ್ಲರೂ ವ್ಯಸನಪಡುತ್ತಾರೆ ಮತ್ತು ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಮೆ|| ದೊರೆಸಾಮಿಯ್ಯಂಗಾರ್ಯರಿಗೆ ಚಿತ್ರದುರ್ಗಕ್ಕೆ ವರ್ಗಾವಣೆಯಾಗಿ, ಅಸ್ಸಿಸ್ಟೆಂಟ್ ಮೆ|| ಪಾಪಯ್ಯನಾಯುಡು ರವರಿಗೆ ಕೆಲಸ ವರ್ಗವಾಗಿ ಮತ್ತೊಬ್ಬರು ಬಂದಿಲ್ಲದ ಇನ್ಸ್‌ಪೆಕ್ಟರ್ ಚಾರ್ಜು ವಹಿಸಿ ನಡೆಯುತ್ತಿದೆ ಇಲ್ಲಿ ಯಾರಾದರೆ ಆ ಇಲಾಖೆ ಕೆಲಸಗಳು ಕ್ರಮವಾಗಿ ನಡೆಯುವದಕ್ಕೂ ಇಲ್ಲಿನ ವ್ಯಾಪಾರಿಗಳು ಮುಂತಾದವರಿಗೆ ಅನುಕೂಲ ಉಂಟಾಗುವುದಕ್ಕೂ ಒಳ್ಳೆ ಸಂದರ್ಭವಾಗುವದು — ಇಲ್ಲಿಗೆ ಸುಮಾರು ೨ ಮೈಲಿ ದೂರದಲ್ಲಿರುವ ಕ್ಯಾತನಹಳ್ಳಿಯಲ್ಲೂ ಐದು ಮೈಲಿ ದೂರದಲ್ಲಿರುವ ಗಂಜಾಂ ನಲ್ಲಿಯೂ ಇನ್ನೂ ಈಗಳು ಸಾಯುತ್ತಲೂ ಪ್ಲೇಗ್ ಆಗುತ್ತಲೂ ಇರುವಂತೆ ವರ್ತಮಾನವಿದೆ

ಅಪೂರ್ವ ಗ್ರಂಥವು!!!

21 1

ತುಳಸೀ ದಾಸ್, ಕಬೀರ ಮೊದಲಾದ ೫೧ ವೈಷ್ಣವ ಭಕ್ತರ ಚರಿತ್ರೆಯು [illegible] ಪದ್ಯರೂಪವಾಗಿ ಸುಲಭ ಶೈಲಿಯಲ್ಲಿ ಭಕ್ತಿವಿಜಯವೆಂಬ [illegible] ಕನ್ನಡ ಭಾಷೆಯಲ್ಲಿ ಮುದ್ರಿತವಾಗಿದೆ.

ವಿಳಾಸ.—ಬೋಳಾರ್ ಬಾಬುರಾವ್, ಮಂಗಳೂರು.

ಸಂಗೀತ ಪಾರಿಜಾತ ಕ್ರಯ ೪ ಆಣೆ.

20-1

ಮನೋಹರವಾದ ಹಾಡಿನ ಪುಸ್ತಕ! ೧೦ ಪ್ರತಿಗಳನ್ನು ಒಟ್ಟಾಗಿ ಕರಿಸು [illegible] ೧೨ ಆಣೆ [illegible] ಪ್ರತಿಗಳನ್ನು [illegible] ಕಬೀರ ದಾಸನ ಚರಿತ್ರೆ [illegible] ಪ್ರತಿಗಳನ್ನು ತರಿಸುವವರಿಗೆ ಭಕ್ತ [illegible] ರತ್ನಮಾಲಿಕೆ ಎಂಬ ಪುಸ್ತಕವನ್ನು ಉಚಿತವಾಗಿ ಕೊಡುತ್ತೇವೆ

ದಿ ಮರ್ಕೆಂಟೈಲ್ ಯೂನಿಯನ್, ಮೈಸೂರು.

ವೃತ್ತಾಂತ ಪತ್ರಿಕೆ.

೧೯೧೦ ನೇ ಇಸವಿ ಫೆಬ್ರವರಿ ತಾ ೧೦ ನೇ ಗುರುವಾರ

ಹಿಂದುಸ್ಥಾನದ ಹೊಸ ಪ್ರೆಸ್ ಕಾನೂನು

ಹಿಂದುಸ್ಥಾನದಲ್ಲಿ ಕೆಲವು ವರುಷಗಳಿಂದೀಚೆಗೆ ಬಹು ನವೀನವೂ ಸ್ವಾತಂತ್ರ್ಯವೂ ಆದ ಬದಲಾವಣೆಗಳು ರೂಢಿಗೆ ಬರುತ್ತಿವೆ. ವರ್ತಮಾನ ಪತ್ರಿಕೆಗಳ ಪ್ರಚಾರವೂ ಅಧಿಕವಾಗಿರುವುದು. ಈಗ ಈ ರಾಷ್ಟ್ರದಲ್ಲಿ ನಾನಾ ಬಗೆಯ ಪತ್ರಿಕೆಗಳೂ ಮಾಸಿಕ ಪತ್ರಿಕೆಗಳೂ ಹೇರಳವಾಗಿ ಪ್ರಚುರವಾಗುತ್ತಲೂ ದಿನಕ್ರಮದಲ್ಲಿ ಇನ್ನೂ ಹೆಚ್ಚುತ್ತಲೂ ಇರುವುವು. ಒಂದು ಭಾಗದಲ್ಲಿ ನೋಡಿದರೆ ಇದು ಅತ್ಯಂತ ಹಿತಕರವಾದದ್ದೆಂದು ಹೇಳಬಹುದು. ಇದರಿಂದ ಓದು ಬರಹ ಕಲಿತವರ ಸಂಖ್ಯೆಯು ಬಹಳ ಮಟ್ಟಿಗೆ ಹೆಚ್ಚಿದೆ ಎಂತಲೂ ಪ್ರಜೆಗಳು ಕಾಲದ ವರ್ತಮಾನಗಳನ್ನು ಓದಿ ತಿಳಿಯುವುದರಲ್ಲಿ ವಿಶೇಷ ಉತ್ಸಾಹ ಶೀಲರಾಗುತ್ತಾ ಬಂದಿದ್ದಾರೆಂತಲೂ ಗೊತ್ತಾಗುತ್ತದೆ. ಹೀಗೆ ವರ್ತಮಾನಗಳನ್ನು ಓದೋಣವೆಂಬ ಕುತೂಹಲವು ಬೆಳೆಯುತ್ತಾ ಬರುವಾಗ ಯಾವ ಕೆಡುಕಾಗದೆ ಒಳ್ಳೆಯದಾಗಬೇಕಾಗಿದ್ದಲ್ಲಿ ಪ್ರಕಟಿಸಲ್ಪಡುವ ವರ್ತಮಾನಗಳು ಯಥಾರ್ಥವಾದವುಗಳಾಗಿಯೂ, ನ್ಯಾಯವಾದ ರೀತಿಯಲ್ಲಿ ಬರೆಯಲ್ಪಟ್ಟವುಗಳಾಗಿಯೂ ಇರಬೇಕು.

ಸಾಮಾನ್ಯವಾಗಿ ಹಿಂದುಸ್ಥಾನದಲ್ಲಿ ಪ್ರಕಟವಾಗುತ್ತಿರುವ ವರ್ತಮಾನ ಪತ್ರಿಕೆಗಳನ್ನು, ಅದರಲ್ಲೂ ದೇಶಭಾಷಾ ಪತ್ರಿಕೆಗಳನ್ನು ಓದಿ ನೋಡಿದರೆ ನಮಗೆ ಅವುಗಳಲ್ಲಿ ಸಂಗತಿಗಳನ್ನು ಯಥಾರ್ಥವಾಗಿ ಪ್ರಕಟಿಸುವುದಕ್ಕೆ ಪ್ರತಿಯಾಗಿ ನಾನಾ ಪ್ರಕಾರವಾದ ಸುಳ್ಳುಗಳನ್ನೂ ನಿರಾಧಾರವಾದ ಅಪವಾದಗಳನ್ನೂ ಬರೆಯುತ್ತಾರೆಂಬುದು ಚೆನ್ನಾಗಿ ತಿಳಿದಿರುತ್ತದೆ. ನಿರಕ್ಷರರೂ ಅವಿವೇಕಿಗಳೂ ಅವುಗಳನ್ನು ಓದಿ, ಎಲ್ಲಾ ನಿಜವೆಂದು ಭಾವಿಸಿಕೊಂಡು ವೃಥಾ ತಪ್ಪು ತಿಳುವಳಿಕೆಯುಳ್ಳವರಾಗುತ್ತಾರೆ. ಇದಲ್ಲದೆ ಆ ಪತ್ರಿಕೆಗಳಲ್ಲಿ ಬರೆಯಲ್ಪಡುವ ಆಕ್ಷೇಪಣೆಗಳು ಗಾಂಭೀರ್ಯಯುಕ್ತವಾಗಿಲ್ಲದೆ ಬಹು ಅಲ್ಪವಾಗಿಯೂ ದುರಭಿಪ್ರಾಯವನ್ನುಂಟುಮಾಡುವವುಗಳಾಗಿಯೂ ಇರುವುದರಿಂದ ಯಾವುದನ್ನು ನಂಬಬೇಕೋ ವಾಚಕರಿಗೆ ತಿಳಿಯುವುದಿಲ್ಲ.

ಅನೇಕವೇಳೆ ಇದರಿಂದ ವಿಶೇಷ ಕೆಡುಕೇನೂ ಆಗಲಾರದು. ಫ್ರಾನ್ಸ್, ಜರ್ಮನಿ, ರಷಿಯಾ, ಚೀನಾ ಮೊದಲಾದ ದೂರದೇಶ ಮತ್ತು ಪರರಾಜ್ಯಗಳಿಗೆ ಸಂಬಂಧಪಡುವ ವಿಷಯಗಳನ್ನು ಕುರಿತು ಬರೆಯಲ್ಪಟ್ಟ ದುರಾಕ್ಷೇಪಣೆಗಳಿಂದ ನಮ್ಮವರು ಓದಿದಾಗ್ಯೂ ಅವರಲ್ಲಿ ಅಷ್ಟೇನೂ ವ್ಯತ್ಯಾಸವಾಗುವುದಿಲ್ಲ. ಆದರೆ ನಮ್ಮ ಸಾರ್ವಭೌಮರವರು ಆಳುವ ಗ್ರೇಟ್ ಬ್ರಿಟನ್ ರಾಜ್ಯದ ವಿಷಯದಲ್ಲೂ ಇಂಡಿಯಾ ಗವರ್ನ್‌ಮೆಂಟಿನವರ ಕಾರುಬಾರುಗಳ ವಿಷಯದಲ್ಲೂ ನಿಜವಲ್ಲದ ಬರೀ ಅಪವಾರ್ತೆಯನ್ನೂ ದುರಾಕ್ಷೇಪಣೆಗಳನ್ನೂ ಬರೆದು ಪ್ರಚುರಪಡಿಸಿದಲ್ಲಿ ಇದರಿಂದ ವಿಶೇಷ ಕೆಡುಕಾಗುತ್ತಿರುವುದಕ್ಕೆ ಸಂಶಯವಿಲ್ಲ. ಗವರ್ನ್‌ಮೆಂಟಿನವರ ನಡವಳಿಕೆಗಳ ವಿಷಯದಲ್ಲಿ ಪ್ರಜೆಗಳಿಗೆ ತಪ್ಪಾದ ಅಭಿಪ್ರಾಯಗಳು ಉಂಟಾಗುವವು; ಅವರ ದೃಷ್ಟಿಯಲ್ಲಿ ಗವರ್ನ್‌ಮೆಂಟಿನವರು ಹಿತಚಿಂತಕರೆನಿಸದೆ ಶತ್ರುಗಳಾಗಿ ಕಾಣಿಸುವರು. ಈಗ ನಮ್ಮ ದೇಶದಲ್ಲಿ ಹೀಗಾಗಿದೆ ಎಂಬುದನ್ನು ನಾವೆಲ್ಲಾ ಬಲ್ಲೆವು. ವರ್ತಮಾನ ಪತ್ರಿಕೆಗಳ ದುರ್ಬೋಧನೆಗಳ ವಶದಿಂದ ಅನೇಕ ಬಾಲ್ಯವಯಸ್ಸಿನ ಹುಡುಗರು ವಿಪರೀತವನ್ನು ಮಾಡಿದರು; ಅವರ ಮನಸ್ಸು ಹಾಳಾಯಿತು, ತಮ್ಮನ್ನಾಳುವ ಅಧಿಕಾರಿಗಳನ್ನು ಕೊಂದುಹಾಕಿ ಸೃಷ್ಟಿಕರ್ತನ ಆಜ್ಞೆಗಳನ್ನು ಮೀರಿ ಅತ್ಯಾಚಾರಗಳನ್ನು ನಡಿಸಿದ ಪಕ್ಷದಲ್ಲಿ ತಾವು ದೇಶಸೇವಾ ಧುರೀಣರೆನ್ನಿಸಿಕೊಳ್ಳುತ್ತೇವೆಂತಲೂ, ದೇಶವತ್ಸಲರೆನ್ನಿಸಿಕೊಳ್ಳುವ ಮಾರ್ಗವು ಅನ್ಯಥಾ ಇಲ್ಲವೆಂತಲೂ ತಿಳಿಯುವ ಸ್ಥಿತಿಗೆ ಬಂದಿದ್ದಾರೆ.

ಇಂಥಾ ದುರಭಿಪ್ರಾಯವನ್ನೂ ಇದರಿಂದುಂಟಾಗುವ ಕೆಡುಕನ್ನೂ ನಿರ್ಮೂಲೋತ್ಪಾಟನೆ ಮಾಡಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಪ್ರಯತ್ನಪಟ್ಟು ಪ್ರೆಸ್ಸಿನ ಕಾರ್ಬಾರುಗಳಿಗೆ ಸಂಬಂಧಿಸಿದ ಕಾನೂನನ್ನು ಬದಲಾವಣೆ ಮಾಡುವವರಾಗಿದ್ದಾರೆ. ಈ ಬದಲಾವಣೆಗಳು ಯಾವವೆಂದರೆ,—ಪ್ರತಿಯೊಂದು ಮುದ್ರಾಲಯದ ಮಾಲೀಕನೂ ವರ್ತಮಾನ ಪತ್ರಿಕೆಯನ್ನು ಪ್ರಕಟಿಸುವವನೂ ಮ್ಯಾಜಿಸ್ಟ್ರೇಟರ ಮುಂದೆ ಪ್ರಮಾಣ ಪತ್ರಿಕೆಗೆ ರುಜು ಮಾಡಬೇಕು; ಮತ್ತು ಅವನು ಅದರಲ್ಲಿ ೫೦೦ ರೂಪಾಯಿಗೆ ಕಡಮೆ ಇಲ್ಲದೆ ೫,೦೦೦ ರೂಪಾಯಿಗೆ ಹೆಚ್ಚಿಲ್ಲದೆ ಡಿಪಾಜಿಟ್ಟು ಕಟ್ಟಬೇಕು. ಯಾವ ಮುದ್ರಾಲಯ ಅಥವಾ ವರ್ತಮಾನ ಪತ್ರಿಕೆಯಾಗಲಿ (೧) ಹಿಂಸೆಯನ್ನು ಮೊದಲಾದ ಉಪಕರಣಗಳನ್ನು ಪ್ರಯೋಗಿಸಿ ಕೊಲೆ ಅಥವಾ ಇತರ ಕ್ರೂರಕೃತ್ಯಗಳನ್ನು ನಡಿಸುವಂತೆ ಚಿತಾವಣೆ ಮಾಡಿದರೂ, (೨) ಭೂಸೈನ್ಯ ಅಥವಾ ಸಮುದ್ರ ಸೈನ್ಯದ ರಾಜಭಕ್ತಿಯನ್ನು ಕೆಡಿಸಬೇಕೆಂದು ಪ್ರಯತ್ನ ಮಾಡಿದರೂ, (೩) ಒಂದು ಜಾತಿಯವರನ್ನು ಇನ್ನೊಂದು ಜಾತಿಯವರ ಮೇಲೆಯಾಗಲಿ, ಒಂದು ಮತದವರನ್ನು ಇನ್ನೊಂದು ಮತದವರ ಮೇಲಾಗಲಿ ಎತ್ತಿ ಕಟ್ಟುವಂಥಾ, ಇಲ್ಲವೇ ಪ್ರಜೆಗಳಿಗೆ ಇಂಡಿಯಾ ಗವರ್ನ್‌ಮೆಂಟಿನವರ ಮೇಲಾಗಲಿ, ದೇಶೀಯ ಸಂಸ್ಥಾನಗಳ ಮೇಲಾಗಲಿ ದ್ವೇಷವನ್ನೂ ತುಚ್ಛಾಭಿಪ್ರಾಯವನ್ನೂ ಕಲ್ಪಿಸಿದರೂ; (೪) ಪ್ರಜೆಗಳ ಮೂಲಕ ಅಧಿಕಾರಿಗಳಿಗೆ ಭಯೋತ್ಪಾತವನ್ನುಂಟುಮಾಡಿದರೂ, (೫) ರಾಜಶಾಸನವನ್ನು ರೂಢಿಸಲಾಗದಂತೆ ಅಟಂಕಪಡಿಸಿದರೂ, (೬) ಸರ್ಕಾರದ ಅಧಿಕಾರಿಗಳಿಗೆ ಹಿಂಸೆ ಮರಣಗಳುಂಟಾಗುವವೆಂದು ಭಯಪಡಿಸಿದರೂ ಆ ಮುದ್ರಾಲಯದ ಮಾಲೀಕನೂ ಪತ್ರಿಕೆಯನ್ನು ನಡಿಸುವವನೂ ಡಿಪಾಜಿಟ್ಟು ಕಟ್ಟಿರುವಂಥಾ ಜಾಮೀನು ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವುದು. ಇದಲ್ಲದೆ ಕೇಡುಕಾರಿ ಎಂದು ಕಂಡುಬರುವ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಅಂಚೆಯ ಮೂಲಕ ಊರಿಂದೂರಿಗೆ ಸಾಗಿಸದಂತೆ ಈ ಹೊಸ ಕಾನೂನು ತಡೆಯುವುದಾಗಿದೆ. ಮೇಲ್ಕಂಡಂಥಾ ದುರ್ವಿಷಯಗಳನ್ನು ಕುರಿತು ಬರೆಯಲ್ಪಟ್ಟಿರುವ ಪತ್ರಿಕೆಗಳೂ ಪುಸ್ತಕಗಳೂ ಪ್ರಕಟವಾಗಕೂಡದೆಂದು ಸ್ಥಳೀಯ ಗವರ್ನ್‌ಮೆಂಟಿನವರು ತೀರ್ಮಾನ ಮಾಡಿದ ಪಕ್ಷದಲ್ಲಿ ಎರಡು ತಿಂಗಳೊಳಗಾಗಿ ಅಪೀಲ್ ಮಾಡಿಕೊಳ್ಳಬಹುದು. ಹೈ ಕೋರ್ಟಿನ ಮೂರು ಮಂದಿ ಜಡ್ಜಿಗಳು ಕೂಡಿ, ಆಕ್ಷೇಪಣೆಯಾದ ಪುಸ್ತಕ ಅಥವಾ ಪತ್ರಿಕೆಯ ಯೋಗ್ಯತೆ ವಿಷಯದಲ್ಲಿ ದರ್ಯಾಫ್ತಿಯಿಂದ ಇತ್ಯರ್ಥ ಮಾಡುವರು.

ಈ ಕಾನೂನಿನ ವಿಷಯದಲ್ಲಿ ನಮಗೆ ಸಂಶಯವುಂಟಾಗಿರುವ ಭಾಗವ್ಯಾವುದೆಂದರೆ, ಮುದ್ರಾಲಯವನ್ನಿಡುವವನಿಗೂ, ಪತ್ರಿಕೆಯನ್ನು ನಡಿಸುವವನಿಗೂ ಮೊದಲು ಜಾಮೀನಿನ ಹಣವನ್ನು ಕೋರ್ಟಿಗೆ ಕಟ್ಟುವುದಕ್ಕೆ ಚೈತನ್ಯವಿರಲಾರದು. ಜಾಮೀನಿನ ಹಣವನ್ನು ಒದಗಿಸುವುದು ಅವರಿಗೆ ತುಂಬಾ ಕಷ್ಟವಾಗುತ್ತದೆ; ಆದರೆ ಆ ಮನುಷ್ಯನು ಸತ್ಯವಂತನೆಂದೂ ನಂಬಿಗಸ್ತನೆಂದೂ ಗೊತ್ತಾದ ಪಕ್ಷದಲ್ಲಿ ಮ್ಯಾಜಿಸ್ಟ್ರೇಟರು ಅಂಥವನಿಂದ ಜಾಮೀನು ಹಣವನ್ನು ತೆಗೆದುಕೊಳ್ಳದೆ ಹಾಗೇ ಅಪ್ಪಣೆಯನ್ನು ಕೊಡಬಹುದು. ಸುಳ್ಳು ಸುದ್ದಿಗಳನ್ನೂ ಹೊಟ್ಟೇಕಿಚ್ಚಿನ ಆಕ್ಷೇಪಣೆಗಳನ್ನೂ ಯಾವ ಪ್ರೆಸ್ಸಿನ ಕಾರ್ಖಾನೆಯಲ್ಲೂ ಯಾವ ಪತ್ರಿಕೆಯೂ ಪ್ರಕಟಿಸದಂತೆ ಕಾನೂನು ಆಗಬೇಕಾದದ್ದು ಬಹಳ ಅವಶ್ಯವೆಂದು ನಮಗೆ ತೋರುತ್ತದೆ. ಮತ್ತು ಈಗ ನಿರ್ಮಿಸಲ್ಪಟ್ಟಿರುವ ಹೊಸ ಕಾನೂನಿಂದ ಈ ಉದ್ದೇಶವು ನೆರವೇರುವುದೆಂದು ನಂಬಿ ನಿರೀಕ್ಷಿಸುತ್ತೇವೆ. ಈ ಕಾನೂನು ವರ್ತಮಾನ ಪತ್ರಿಕೆಗಳ ನಿರ್ದುಷ್ಟವಾದ ಸ್ವಾತಂತ್ರ್ಯವನ್ನು ಲೇಶಮಾತ್ರವೂ ಕಡಮೆ ಮಾಡದೆ ದುಷ್ಪ್ರೇರಣೆಗಳನ್ನೂ ಸ್ವೇಚ್ಛಾಪ್ರಲಾಪಗಳನ್ನೂ ತಡೆದು ನಿಲ್ಲಿಸುವುದಾಗಿದೆ.

ಬ್ರಿಟಿಷ್ ಚಕ್ರಾಧಿಪತ್ಯದ ರಾಜತ್ವಕ್ಕೆ ಕಾರಣ

ಗತ ಡಿಸೆಂಬರ್ ಮಾಹೆಯಲ್ಲಿ ವಿಕ್ಟೋರಿಯಾ ಚಕ್ರವರ್ತಿನಿಯವರ ಐವತ್ತು ವರುಷಗಳಿಗೆ ಹೆಚ್ಚಾಗಿ ಬ್ರಿಟಿಷ್ ಚಕ್ರಾಧಿಪತ್ಯವನ್ನು [illegible] ಆಳಿ [illegible] ಅನೇಕ ಜನಾಂಗಗಳನ್ನು [illegible] ಸಮಸ್ತ ಜನಾಂಗಗಳಿಗೆ [illegible] ಅವರ ಪ್ರಭುತ್ವವು ಅಸಾಧಾರಣವಾದದ್ದು. ಈ ಲೋಕದಲ್ಲಿಯೇ ಅತ್ಯಂತ ವಿಸ್ತಾರವಾಗಿಯೂ ಸಮೃದ್ಧವಾಗಿಯೂ ಇರುವ ಚಕ್ರಾಧಿಪತ್ಯದ ಸಿಂಹಾಸನವನ್ನೇರಿ ಅದರ ಕಾರ್ಯಗಳನ್ನು ಅಡಚಣೆಯಿಲ್ಲದೆ ಅತ್ಯಂತ ಜ್ಞಾನದಿಂದಲೂ ಪ್ರೀತಿಯಿಂದಲೂ ಸರ್ವಸಮ್ಮತವಾಗಿ ನಡಿಸುತ್ತ ಆ ಚಕ್ರಾಧಿಪತ್ಯಕ್ಕೆ ಸೇರಿದ ಹಲವು ಜನಾಂಗದವರನ್ನು ಏಕ ಸಮಾನವಾದ ನಿಷ್ಪಕ್ಷಪಾತವಾದ ನೀತಿ ನ್ಯಾಯಗಳಿಂದಲೂ ಸಂರಕ್ಷಿಸಿದರು. ಅವರ ಆಳ್ವಿಕೆಗೆ ಒಳಪಟ್ಟ ಜನಗಳು ಏಕ ಜಾತಿಯವರಲ್ಲ; ಒಂದೇ ಮತಾವಲಂಬಿಗಳಲ್ಲ, ಆದಾಗ್ಯೂ ಅವರೆಲ್ಲರೂ ಏಕಮನಸ್ಸಿನಿಂದ ವಿಕ್ಟೋರಿಯಾ ಮಹಾರಾಣಿಯವರ ಸಮಾಧಾನದ ಆಳ್ವಿಕೆಯಲ್ಲಿ ಪಡೆದ ಉಪಕಾರ ಮೇಲುಗಳನ್ನು ಸ್ಮರಿಸಿ ಆನಂದಬಾಷ್ಪಗಳಿಂದ ಅವರನ್ನು ಕೊಂಡಾಡುತ್ತಿರುತ್ತಾರೆ. ನಾನಾ ಸಾಧಾರಣವಾದ ಜನಗಳ ಸಂಗಡಲೂ ಅಧಿಕಾರಿಗಳ ಸಂಗಡಲೂ ನಿಷ್ಕಪಟವಾಗಿ ವರ್ತಿಸಿದರು. [illegible] ವಿಷಯವಾಗಿ [illegible] ಬಂದಿದ್ದೇವೆ. [illegible] ವ್ಯತ್ಯಾಸವಿಲ್ಲದೆ [illegible] ಅವರ ಜೀವಮಾನ [illegible] ಅದ್ವಿತೀಯವಾದವುಗಳೆಂದು ಹಾರ್ದವಾಗಿ ಹೇಳುತ್ತಿರುವರು.

ಇಂತಹ ಅದ್ವಿತೀಯ [illegible] ರಾಣಿಯು [illegible] ನಾವು ಅವರನ್ನು ಕೇವಲ ಭಕ್ತಿಯಿಂದ [illegible] ಯೋಗ್ಯರಾಗಿದ್ದೇವೆ. ಅವರು [illegible] ನಡೆದ ಒಂದು ವೃತ್ತಾಂತವನ್ನು ಇಲ್ಲಿ ಸೂಚಿಸಿ ನಮ್ಮ ವಾಚಕರ ಲಕ್ಷ್ಯಕ್ಕೆ ತರಬೇಕೆಂದಿದ್ದೇವೆ.

ಆಫ್ರಿಕಾ ಖಂಡದ ಒಬ್ಬ ದೊರೆಯು ವಿಕ್ಟೋರಿಯಾ ಮಹಾರಾಣಿಯವರು ಆಳುವ ಚಕ್ರಾಧಿಪತ್ಯದ [illegible] ಅವರ ಪ್ರಜೆಗಳು [illegible] [illegible] ತಮ್ಮ ರಾಜ್ಯವು ಸ್ಥಾಪಿತವಾಗಿ ಅವರ ಅಧಿಕಾರ [illegible] ನಾನಾ ಬಗೆಯ ಈ ಜನಾಂಗಗಳು [illegible] ಅವರು [illegible] ದೇಶದ [illegible] ಚಕ್ರಾಧಿಪತ್ಯವು [illegible] ಈ ಚಕ್ರಾಧಿಪತ್ಯವನ್ನು ನಡಿಸುವ ಧಾರಾಳ [illegible] ಎಂದು ಕೇಳಿದನು.

ಮಹಾರಾಣಿಯವರು ಈ ಮಾತುಗಳನ್ನು ಕೇಳಿ ಸ್ವಲ್ಪವೂ ಆಶ್ಚರ್ಯಪಡದೆ ತಮ್ಮ [illegible] ಒಂದು ಪ್ರತಿಯನ್ನು ತೆಗೆದು [illegible] ನಮ್ಮ ಸರ್ವಾಭ್ಯುದಯಕ್ಕೂ [illegible] ಪ್ರಜಾ ಸೌಖ್ಯಕ್ಕೂ ಈ ಸತ್ಯವೇದವೇ ಕಾರಣವಾಗಿದೆ. ನೀವು ಇದನ್ನು [illegible] ಗ್ರಹಿಸಿ ಅದರಂತೆ ನಡೆಯುವುದಾದರೆ ನಿಮಗೂ ನಿಮ್ಮ ಪ್ರಜೆಗಳಿಗೂ ಶಾಶ್ವತವಾದ ಸಮಾಧಾನವೂ ದೊರಕುವದೆಂದು ಹೇಳಿ ಆ ಪುಸ್ತಕವನ್ನು ಆ ದೊರೆಗೆ ಬಹುಮಾನ ಮಾಡಿದರು.

ಸ್ವಾಭಿಮಾನಿಗಳು ಈ ಸಂಗತಿಯನ್ನು ಯೋಚಿಸಬೇಕಾದದ್ದು. ಬ್ರಿಟಿಷ್ ಚಕ್ರಾಧಿಪತ್ಯದ ಮಹತ್ವಕ್ಕೆ ನಿಜವಾದ ಕಾರಣವು ಅದರ ಪ್ರಜೆಗಳೂ ಪ್ರಭುಗಳೂ ಚಕ್ರವರ್ತಿಗಳೂ ದೇವರ ವಾಕ್ಯವನ್ನು ನಮಗೆ ತಿಳಿಸುವುದಕ್ಕಾಗಿ ಆತನು ಒಪ್ಪಿಸಿದ ಮಾರ್ಗವನ್ನು ನಮಗೆ ಬೋಧಿಸಿ ನಮ್ಮನ್ನು ಶಿಷ್ಟ ನೀತಿಯ ಪಥದಲ್ಲಿ ನಡಿಸುವುದಕ್ಕೂ ಸತ್ಯವೇದವನ್ನು ಆತನೇ ಪ್ರೇರೇಪಿಸಿ ಬರೆಸಿಕೊಟ್ಟಿದ್ದಾನೆಂದು ನಂಬಿ ಅದನ್ನು ತಮ್ಮ ನಡತೆಗೆ ತಕ್ಕ ಸೂತ್ರದಂತೆ ಪ್ರಯೋಗಿಸುತ್ತಿರುವದೇ ಮೂಲಕಾರಣವಾಗಿದೆ. ಈ ಸತ್ಯವೇದದ ಬೋಧನೆಯನ್ನು ಅವರು ಎಷ್ಟರಮಟ್ಟಿಗೆ ಲಕ್ಷಿಸಿ ಅದು ಹೇಳುವ ಬೋಧನೆಗೆ ಎಷ್ಟರಮಟ್ಟಿಗೆ ವಿಧೇಯರಾಗಿರುವರೋ ಅಷ್ಟು ಮಟ್ಟಿಗೆ ಅವರು ಈ ಚಕ್ರವರ್ತಿಗಳು ತಮ್ಮ ಪ್ರಜೆಗಳನ್ನು ಪಕ್ಷಪಾತವಿಲ್ಲದ ನೀತಿಯಿಂದ ನಡಿಸಿ ಆಳುವದಕ್ಕೆ ಯೋಗ್ಯರಾಗಿರುವರು, ಆ ರಾಜ್ಯದ ಪ್ರಜೆಗಳು ಎಷ್ಟು ಪರ್ಯಂತರ ಅದೇ ಸತ್ಯವೇದದ ಉಪದೇಶವನ್ನು ಲಕ್ಷಿಸಿ ಅದು ಹೇಳುವ ಸೋದರಭಾವವನ್ನೂ ಪರಸ್ಪರ ಪ್ರೀತಿಯನ್ನೂ ನೀತಿ ನ್ಯಾಯವನ್ನೂ ಹೆಚ್ಚಿಸುವರೋ ಅಷ್ಟು ಮಟ್ಟಿಗೆ ಅವರು ಸುಖದಿಂದಲೂ ಸಮಾಧಾನದಿಂದಲೂ ಬದುಕುವರು.

ಮುಖ್ಯವಾಗಿ ಈ ಎಲ್ಲಾ ಸದ್ಗುಣಗಳಿಗೆ ಕಾರಣಭೂತನಾದ ದೇವರು ಎಲ್ಲಾ ಮನುಷ್ಯರಿಗೂ ತಂದೆಯಾಗಿ ಎಲ್ಲರನ್ನೂ ನಿಷ್ಪಕ್ಷಪಾತನಾಗಿ ಪ್ರೀತಿಸುತ್ತಾ ಬರುತ್ತಾನೆಂದು ಆ ಸತ್ಯವೇದವು ಹೇಳುತ್ತದೆ. ನಮ್ಮ ದೇಶವು ಈ ಸುಖ ಸಾಂಬ್ರಾಜ್ಯವನ್ನು ಹೊಂದಬೇಕಾದರೆ ಏನು ಮಾಡಬೇಕು? ನಾವು ಸಹ ಬ್ರಿಟಿಷ್ ಚಕ್ರಾಧಿಪತ್ಯದ ಮಹತ್ವಕ್ಕೆ ಮೂಲಕಾರಣವಾದ ಸತ್ಯವೇದದ ಬೋಧನೆಯನ್ನು ಮನಃಪೂರ್ತಿಯಾಗಿ ಸ್ವೀಕರಿಸಿ ಅದಕ್ಕೆ ವಿಧೇಯರಾಗಿ ನಡೆಯಬೇಕು. ಇದರ ಹೊರತು ಬೇರೆ ಉಪಾಯಗಳು ಪ್ರಯೋಜನಕಾರಿಗಳಲ್ಲವು.

ಒಳದೇಶದ ವೃತ್ತಾಂತಗಳು

ಚಿಕ್ಕಕೆರೆಯಲ್ಲಿ ಒಂದು ಮುಸಾಫರ ಖಾನೆಯನ್ನು ಕಟ್ಟುವುದಕ್ಕೆ ೩,೧೦೦ ರೂಪಾಯಿ ಖರ್ಚಾಗಬಹುದೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪಿ ಗವರ್ನ್‌ಮೆಂಟಿನವರ ಸ್ಯಾಂಕ್ಷನನ್ನು ನಿರೀಕ್ಷಿಸುತ್ತಿದ್ದಾರೆ

ವಿಲಾಯಿತಿಗೆ ಹೋದ ಆಕ್ಸ್‌ಫರ್ಡ್ ವಿದ್ಯಾನಿಲಯದ ಮ॥ ಸೆಟ್ [illegible] ರ್‍ಯಾಕ್ಸ್‌ಫರ್ಡ್ ಯವರನ್ನು ಇಂಡಿಯಾ ಸ್ಟೇಟ್ ಸೆಕ್ರಿಟರಿಯವರು ಮದರಾಸಿ [illegible] ಸ್ಕೂಲಿನ ಹೆಡ್ ಮಾಸ್ಟರ್ ಕೆಲಸಕ್ಕೆ ನೇಮಕ ಮಾಡಿರುತ್ತಾರೆ

ಚಳ್ಳಕೆರೆ ತಾಲ್ಲೂಕು ರಾಣಿಕೆರೆಯಿಂದ [illegible] ನಾಲೆಗಳನ್ನು ತೋಡಿ [illegible] ಜಮೀನುಗಳಿಗೆ ಹಾಯಿಸುವುದಕ್ಕೆ ಎಂಟು ಗ್ರಾಮಗಳಲ್ಲಿ ಕೆಲವು ಜಮೀನುಗಳು ಸರ್ಕಾರಕ್ಕೆ ಬೇಕಾಗಿವೆ ಎಂದು ಇಷ್ತಿಹಾರು ಕೊಟ್ಟಿದ್ದಾರೆ.

ಇಂಡಿಯಾ ಗವರ್ನ್‌ಮೆಂಟಿನವರು ಮ॥ [illegible] ಅವರನ್ನು ಬೆಂಗಳೂರು [illegible] ಕಲೆಕ್ಟರಾಗಿ [illegible] ಗ್ರೇ ಯವರನ್ನು ಬ್ರಿಟಿಷ್ ರೆಸಿಡೆಂಟರವರ ಅಸಿಸ್ಟೆಂಟರಾಗಿಯೂ ನೇಮಕ ಮಾಡಿರುತ್ತಾರೆ

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಮ॥ [illegible] ಯವರ ಮೂರನೆ ಕುಮಾರರಾದ ಮ॥ [illegible] ರವರನ್ನು [illegible] ವರು ಪೋಲೀಸ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ನೇಮಿಸಿ ಕೋಲಾರ ಜಿಲ್ಲೆಯ [illegible] ಗೆ ವರ್ಗಮಾಡಿರುತ್ತಾರೆ

ಪ್ರತಿಷ್ಠ ರೀತಿ [illegible] ಕೋಟೆಯಲ್ಲಿ [illegible] ಕುಕ್ಕರಾಯ [illegible] ಮೋಟಾರ್ ಗಾಡಿಯಲ್ಲಿ ರಾಜಧಾನಿಗೆ ದಯಮಾಡಿ,

...ರಾತ್ರಿಯ ರೈಲ್ ನಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು. ಎರಡುವೇಳೆಯೂ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

ಬೆಂಗಳೂರು ದಂಡಿನಲ್ಲಿ [illegible] ಎಂಬೊಬ್ಬ ಆಗಸನು ಅಲ್ಲಿನ [illegible] ಮೆ|| ಅವಿಸ್ ಎಂಬಾತನಿಗೆ ೧೦ ರೂಪಾಯಿ ಲಂಚ ಕೊಡುವುದಕ್ಕೆ ಪ್ರಯತ್ನಪಟ್ಟನೆಂಬ ಮೊಕದ್ದಮೆಯು ಕಳೆದ ವಾರ ವಿಚಾರಣೆಯಾಗಿ ಆ [illegible] ಒಂದು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

ಕಳೆದ ಬುಧವಾರ ಸಾಯಂಕಾಲ ಅರಮನೆ [illegible] ಬಳಿಯ [illegible] ಒಂದು ಸಾರೋಟು ಕರ್ನಲ್ ಪಾರ್ಕಿನ ಮೂಲಕ ಅರಮನೆಗೆ ಹೋಗುತ್ತಿದ್ದಾಗ ಕುದುರೆಗಳು ಬೆದರಿ [illegible] ಗಾಡಿಯನ್ನು [illegible] ಒಬ್ಬ ಕುದುರೆಯವನಿಗೆ [illegible] ಆಸ್ಪತ್ರೆಗೆ ಕಳುಹಿಸಲ್ಪಟ್ಟನು.

ಬೆಂಗಳೂರು ತಾಲ್ಲೂಕು ಕೃಷ್ಣರಾಜಪುರದ ಹೋಬಳಿ ಹೂಡಿ ಗ್ರಾಮದಲ್ಲಿ [illegible] ಆಗುವಂತೆ ಒಂದು ಕೋ ಆಪರೇಟಿವ್ ಸೊಸೈಟಿಯೂ, [illegible] ತಾಲ್ಲೂಕು [illegible] ರೈತರಿಗೆ ಅನುಕೂಲವಾಗುವಂತೆ ಒಂದು ಸೊಸೈಟಿ ಸ್ಥಾಪಿಸಲ್ಪಟ್ಟು ಇವೆರಡೂ ಕಳೆದ ಜನವರಿಯಲ್ಲಿ ರಿಜಿಸ್ಟರು ಮಾಡಲ್ಪಟ್ಟಿವೆ.

[illegible] ಕಾರ್ಯಗಳನ್ನು ಮಾಡಿ ಪ್ರಜಾವತ್ಸಲರೆನಿಸಿಕೊಂಡಿರುವ [illegible] ಅಕೌಂಟೆಂಟ್ ನಾರಾಯಣಸ್ವಾಮಿ ಮೊದಲಿಯಾರ್ರವರು [illegible] ಕಾಯಿಲೆಯಾಗಿದ್ದಾರೆಂದು ತಿಳಿದು ವಿಷಾದಿಸುತ್ತೇವೆ [illegible] ವರುಷ ವಯಸ್ಸಾಗಿ, ಕೆಲವು ಕಾಲದಿಂದ [illegible].

[illegible] ಕೋಟೆ ಆವರಣದೊಳಗಿರುವ ಮನೆಗಳನ್ನು ಒಡೆದುಹಾಕು [illegible] ಆಗಿದ್ದ ಹಣವೆಲ್ಲ ಪೂರೈಸಿದೆ ಎಂತಲೂ, ಇನ್ನು ಕೆಲವು ಮನೆಗಳನ್ನು [illegible] ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಬೇಕೆಂದು ಟ್ರಸ್ಟ್ ಬೋರ್ಡಿನವರು ಗವರ್ನ್ಮೆಂಟಿಗೆ ಅರಿಕೆ [illegible] ಕೇಳುತ್ತೇವೆ.

[illegible] ಆನೆಗಳ [illegible] ಮಹಾರಾಜರವರು ಆಮೇಲೆ [illegible] ಆನೆಗಳನ್ನು [illegible] ಅಲ್ಲಿಂದ [illegible] ಖೆಡ್ಡಾ ಕ್ಯಾಂಪಿಗೆ ಹೋಗಿರುವರು.

[illegible] ಜೈಲಿನಿಂದ [illegible] ಎಂಬೊಬ್ಬ ಖೈದಿಯು [illegible] ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕರೆದುಕೊಂಡು ಹೋಗುತ್ತಿರುವಲ್ಲಿ [illegible] ತಪ್ಪಿಸಿಕೊಂಡು ಓಡಿಹೋದನು. ಇವನು [illegible] ತಾಲ್ಲೂಕಿಗೆ ಸೇರಿದ [illegible]. ಕಳೆದ ಜನವರಿ [illegible] ತಪ್ಪಿಸಿಕೊಂಡಿರುತ್ತಾನೆಂಬುದೂ ತಿಳಿದು ಬಂದಿದೆ.

[illegible] ಮೆ|| ಹಾಪೇರಕರವರು ತಮ್ಮ ನಾಟಕಿಯನ್ನು [illegible] ಕೊಟ್ಟು [illegible] ವಿವಾಹವಾದನು. ರಾಜಧಾನಿಯಲ್ಲಿರುವ ಎಲ್ಲಾ ಕೋ[illegible] ಅಧಿಕಾರಿಗಳೂ ಹೋಗಿದ್ದು ನೂತನ ದಂಪತಿಗಳನ್ನು ಆಶೀರ್ವದಿಸಿ, ಮೆ|| ಹಾಪೇರಕರವರಿಂದ ಸಮ್ಮಾನಹೊಂದಿ ವಾಪಸುಬಂದರು.

[illegible] ಮೆ|| [illegible] ಸುಮಾರು ಎರಡು ವಾರಗಳ [illegible] ಕೋಲಾರ, ಹಾಸನ ಮತ್ತು ಕಡೂರು [illegible] ಪ್ರಜಾ [illegible] ಮುಂತಾದವನ್ನು [illegible] ಕುರಿತು [illegible] ಈ ತಿಂಗಳು ಮುಂದಿನ ವಾರ [illegible] ಇವರ [illegible] ಮೆ|| ಟಿ [illegible] ಕೃಷ್ಣರಾಯರು [illegible] ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ಪರಿವಾರಸಹಿತ ಮುಂದಿನ ಸೋಮವಾರ [illegible] ರೈಲಿನಲ್ಲಿ ರಾಜಧಾನಿಗೆ ದಯಮಾಡಿ, ಜಗನ್ಮೋಹನ [illegible] ನಂತರ [illegible] ಕಾಡುಗಳಿಗೆ [illegible] ಹೊರಡುವರು. ಅಲ್ಲಿಂದ ಅವರು ಬರುವ ತಿಂಗಳ ಪ್ರಾರಂಭಕ್ಕೆ ಹಿಂತಿರುಗುವರೆಂತಲೂ, ಬಳಿಕ [illegible] ದಿವಸಗಳ [illegible] ರಾಜಧಾನಿಯಲ್ಲಿದ್ದು, ಇಲ್ಲಿಂದ [illegible] ಕೇಳುತ್ತೇವೆ.

ದಿವಾನ್ ಮೆ|| ಟಿ. ಆನಂದರಾಯರವರು ಕಳೆದ ಶುಕ್ರವಾರ ಮಧ್ಯಾಹ್ನ ರೈಲು ಹತ್ತಿ [illegible] ಪ್ರಯಾಣಮಾಡಿದರು. ಇವರು [illegible] ಮಹಾರಾಜರವರನ್ನು [illegible] ಈ ವಾರ ರಾಜಧಾನಿಗೆ ದಯಮಾಡಿ, [illegible] ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಸರ್ಕೀಟು ಮಾಡಿಕೊಂಡು [illegible] ಎರಡು ವಾರಗಳು [illegible] ಕೇಳುತ್ತೇವೆ.

ರಾಜಧಾನಿಯಲ್ಲಿರುವ [illegible] ಬ್ರಿಟಿಷ್ ರೆಸಿಡೆಂಟ್ [illegible] ಮೆ|| [illegible] ಕೆಲವು [illegible] ತಿಳಿಸಲು [illegible] ಆಸ್ಪತ್ರೆಯಲ್ಲಿ [illegible] ಮೆ|| [illegible] ಸಂತಾಪಪಡುವೆವು.

ರಾಜಧಾನಿಯ ಕೆರ್ಸನ್ ಪಾರ್ಕಿನೊಳಗೆ [illegible] ಬಳಿ ದಕ್ಷಿಣ [illegible] ಗಿಡಗಳನ್ನು ಹಾಕಿ ಬೆಳಸು [illegible] ಸ್ಥಳಕ್ಕೆ ಒಂದುವರೆ ಎಕರೆಯಷ್ಟು ಸ್ಥಳವನ್ನು ಕೊಡಬೇಕೆಂದು ಮುನಿಸಿಪಾಲಿಟಿಯವರು ಟ್ರಸ್ಟ್ ಬೋರ್ಡಿನವರು [illegible] ಆ ಸ್ಥಳಕ್ಕೆ ಬೆಲೆ [illegible] ರೂಪಾಯಿ [illegible] ಕೊಡಬಹುದೆಂದು ತೀರ್ಮಾನಮಾಡಿದರು.

ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ಲಾಲ್ ಬಾಗ್ ಎಂಬ ಉದ್ಯಾನವನದಲ್ಲಿ ಫಲಪುಷ್ಪಗಳ ಪ್ರದರ್ಶನವು ಬಹಳ ಸ್ವಾರಸ್ಯಕರವಾಗಿ ನಡೆಯಿತೆಂದು ತಿಳಿದು ಬಂದಿದೆ. ಯೂರೋಪಿಯನ್ ಮತ್ತು ದೇಶೀಯ ಅಧಿಕಾರಿಗಳೂ ಎಲ್ಲಾ ಕೋಮಿನವರೂ [illegible] ಹಾಜರಾಗಿದ್ದು, ಉತ್ಕೃಷ್ಟವಾದ ಫಲಪುಷ್ಪಗಳನ್ನು ನೋಡಿ ಸಂತೋಷಪಟ್ಟರು. ಬ್ರಿಟಿಷ್ ರೆಸಿಡೆಂಟರವರೂ, ಕೌನ್ಸಿಲರ್ ಮೆ|| [illegible] ಬಹುಮಾನ ವಿತರಣೆ ಮಾಡಿದ್ದರು.

[illegible] ಎಂಬೊಬ್ಬ ರೈಲ್ವೆ ನೌಕರನು ಬೌರಿಂಗ್ ಪೇಟೆಯಲ್ಲಿ ರೈಲು ಹತ್ತಿ [illegible] ಹೋಗಿ ರೈಲು ಗಾಡಿಯು ಸ್ಟೇಷನ್ನಿನಲ್ಲಿ ನಿಲ್ಲುವುದಕ್ಕೆ ಮುಂಚೆ ಗಾಡಿಯಿಂದ ಇಳಿಯುತ್ತ ಕಾಲು ತಪ್ಪಿ ಬಿದ್ದು [illegible] ಒಡೆದುಕೊಂಡನು. ಆಸ್ಪತ್ರೆಯಲ್ಲಿ ಚಿಕಿತ್ಸೆ [illegible] ರೈಲು ಗಾಡಿಯು ನಿಲ್ಲುವುದಕ್ಕೆ ಮುಂಚೆ ಪ್ರಯಾಣಿಕರು ಗಾಡಿಯಿಂದ ಇಳಿಯುವುದರಿಂದ ಅಪಾಯವುಂಟಾಗುವದು ಇದರಿಂದ ವಿಶದವಾಗುತ್ತದೆ.

ಕಳೆದ ಶುಕ್ರವಾರ ಬೆಳಿಗ್ಗೆ ಸುಮಾರು ೮ ಘಂಟೆ ಹೊತ್ತಿಗೆ ಶ್ರೀಮನ್ ಮಹಾರಾಜರವರು ಸ್ವತಃ ಮೋಟರ್ ಗಾಡಿಯನ್ನು ನಡೆಸಿಕೊಂಡು ಬೆಂಗಳೂರಿಗೆ ದಯಮಾಡಿದರು. ಅವರ ಕೂಡ ಶ್ರೀಮನ್ ಯುವರಾಜರವರೂ, ಪ್ರೈವೇಟ್ ಸೆಕ್ರೆಟರಿ ಮೆ|| ಆರ್. ಹೆಚ್. ಕ್ಯಾಂಬೆಲ್ ರವರೂ, ಸರ್ದಾರ್ [illegible] ಆಗಮಿಸಿ ಪ್ರಯಾಣ ಮಾಡಿದರು. ಹಿಂದಿನ ಅಂದರೆ ಗುರುವಾರ ರಾತ್ರಿ ಮುಂದೆ ಶ್ರೀಮನ್ ಮಹಾರಾಜರವರ [illegible] ರೈಲು ಹತ್ತಿ ತೆರಳಿದರು. ಅವರ ಜೊತೆ ಹುಜೂರ್ ಸೆಕ್ರೆಟರಿ ಮೆ|| ವಿ. [illegible] ರಾಯರು ಹೋಗುತ್ತಾರೆ. ಶ್ರೀಮನ್ ಮಹಾರಾಜರವರು ಶುಕ್ರವಾರ ೧೧ ಗಂಟೆಗೆ ಬೆಂಗಳೂರು ತಲುಪಿ, ಆ ಸಾಯಂಕಾಲವೇ ಅಲ್ಲಿ ರೈಲು ಹತ್ತಿ [illegible] ತೆರಳಿದರು. ರಾಜಧಾನಿಯಲ್ಲೂ ಬೆಂಗಳೂರಿನಲ್ಲೂ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

ರಾಜಧಾನಿ [illegible] ಮುಸ್ಲಿಂ [illegible] ಮೆ|| [illegible] ಸಾಹೇಬರವರು ಮನೆಯ [illegible] ಸಾಯಂಕಾಲ [illegible] ಉರುಸನ್ನು ನಡೆಸಿದರು. ಸುಮಾರು ೫೦೦ ಜನ [illegible] ಸುಗ್ರಾಸಭೋಜನಮಾಡಿಸಿ, ರಾತ್ರಿ [illegible] ಉಪನ್ಯಾಸಗಳನ್ನು ಮಾಡಿಸಿದರು. ಈ ಸಭೆಗೆ ಹಿಂದೂ ಮಹಮ್ಮದೀಯ ಮೊದಲಾದ ಸಮಸ್ತ ಪ್ರಜೆಗಳೂ [illegible] ಸಂತೋಷಪಟ್ಟರು. [illegible] ಸಾಹೇಬರು [illegible] ಧನ್ಯವಾದಗಳನ್ನು [illegible] ಈ ಉತ್ಸವಕ್ಕೆ [illegible] ಮುಜರಾಯಿ [illegible] ಸಾರ್ಥಕವಾಗುವಂತೆ ಧರ್ಮಕಾರ್ಯಗಳಿಗೆ ಸಹಾಯಮಾಡುತ್ತಾರೆಂದು ತಿಳಿದುಬಂದಿದೆ.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರಕ್ಕೆ ತಾಲ್ಲೂಕು [illegible] ಗ್ರಾಮದಲ್ಲಿ ಪ್ಲೇಗ್ ಉದ್ಭವಿಸಿರುವ ಸ್ಥಳಗಳಿಂದ ಹೋಗುವ ಯಾತ್ರಿಕರಿಗೆ [illegible] ಬಿಡುವಿಲ್ಲ.

ಹಾಸನ ತಾಲ್ಲೂಕು [illegible] ಗ್ರಾಮದಲ್ಲಿ ಪ್ಲೇಗ್ ಉದ್ಭವಿಸಿದೆ ಎಂದು ತಿಳಿಯುತ್ತದೆ.

[illegible] ತಾಲ್ಲೂಕು [illegible] ಮತ್ತು [illegible] ಜಾತ್ರೆ ಉತ್ಸವಗಳಿಗೂ, ಚಿಕ್ಕಬಳ್ಳಾಪುರದ ತಾಲ್ಲೂಕು [illegible] ಮತ್ತು ಜಾತ್ರೆಗಳಿಗೂ ಪ್ಲೇಗ್ ಉದ್ಭವಿಸಿರುವ ಸ್ಥಳಗಳಿಂದ ಹೋಗುವ ಯಾತ್ರಿಕರಿಗೆ [illegible] ಬಿಡುವುದಿಲ್ಲ.

ಬೆಂಗಳೂರು ಸಬ್ ಜಡ್ಜ್ ಮೆ|| ಬಿ. [illegible] ರಜವಿಂದ ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು [illegible] ಇರುವ ರಜವನ್ನು ರದ್ದು ಮಾಡಿದೆ.

ಕೋಲಾರದ [illegible] ಹೆಲ್ತ್ ಆಫೀಸರ್ ಡಾ|| [illegible] ಯವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ದಿನ ಜಾಸ್ತಿ ಮಾಡಿದೆ.

ಅ|| ಕಮಿಷನರ್ ಮೆ|| [illegible] ಯವರಿಗೆ ಫೆಬ್ರವರಿ ತಾ ೧ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಕಮಿಷನರ್ ಮೆ|| ಡಿ. [illegible] ರಾಯರವರು ತಮ್ಮ ಕೆಲಸಗಳೊಂದಿಗೆ [illegible] ಆಫೀಸ್ ಛಾರ್ಜನ್ನು ವಹಿಸಿಕೊಳ್ಳತಕ್ಕದ್ದು.

[illegible] ತಾಲ್ಲೂಕು [illegible] ಮೆ|| ಎಸ್. [illegible] ರಾಯರಿಗೆ ಕೊಟ್ಟಿರುವ ಎರಡು ವಾರ [illegible] ರಜವನ್ನು ಇನ್ನು [illegible] ತಿಂಗಳಿಗೆ ಜಾಸ್ತಿ ಮಾಡಿದೆ.

ಮುಂದೆ ಹೇಳುವ ಅ|| ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ. —ಮೆ|| ಎಲ್. [illegible] ಶಿವಮೊಗ್ಗ ಡಿಸ್ಟ್ರಿಕ್ಟ್ [illegible] ಛಾರ್ಜಿಗೆ, ಮೆ|| [illegible] ಕೋಲಾರ್ ಡಿಸ್ಟ್ರಿಕ್ಟಿನ ಎಕ್ಸ್ಟ್ರಾ ಅ|| ಕಮಿಷನರಿಗೆ, ಮೆ|| [illegible] ಜಾಯಿಂಟ್ [illegible] ಡಿಸ್ಟ್ರಿಕ್ಟ್ [illegible].

ಅ|| ಕಮಿಷನರ್ ಮೆ|| ಟಿ. [illegible] ಕಡವೇ [illegible] ಬಂದು ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಛಾರ್ಜನ್ನು ವಹಿಸಿಕೊಳ್ಳತಕ್ಕದ್ದು.

ಮೆ|| ಕೆ. ವೆಂಕಟರಾಯರು ಬಿ. ಎ. [illegible] ಕಡೂರು ಡಿಸ್ಟ್ರಿಕ್ಟ್ ಸೆಟಲ್ಮೆಂಟ್ ಆಫೀಸರ್ ಕೆಲಸದ ಛಾರ್ಜನ್ನು ವಹಿಸಿ ಕೊಳ್ಳತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ ಮೆಡಿಕಲ್ ಆಫೀಸರ್ ಮೆ|| ಬಿ. ಎಸ್. [illegible] ಯವರಿಗೆ ನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಅ|| ಕಮಿಷನರ್ ಮೆ|| ಎಲ್. ಕೃಷ್ಣರಾಯರಿಗೆ ಎಸ್. [illegible] ಸ್ಪೆಷಲ್ ಆಫೀಸರವನ್ನು, ಕ್ರಿಮಿನಲ್ [illegible] ಸೆಷನ್ಸ್ ವಿಚಾರಣೆಗೆ [illegible] ಅಧಿಕಾರ [illegible].

ಮಡಗಾರು [illegible] ಅ|| ಕಮಿಷನರ್ ಮೆ|| [illegible] ಯವರಿಗೆ ಮೆ|| ಆರ್. [illegible] ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ [illegible].

ಅಫೀಷಿಯೇಟಿಂಗ್ ಅ|| ಕಮಿಷನರ್ ಮೆ|| ಎಂ. ಕೃಷ್ಣಸ್ವಾಮಿ ಅಯ್ಯಂಗಾರ್ಯ ರನ್ನು [illegible] ಛಾರ್ಜಿಗೆ ವರ್ಗಮಾಡಿದೆ.

ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ಮೆ|| ಎಂ. [illegible] ರವರನ್ನು ಅಫೀಷಿಯೇಟಿಂಗ್ ಅ|| ಕಮಿಷನರ್ ರಾಗಿ ನೇಮಿಸಿದೆ. ಇವರು ಚಿಕ್ಕಮಗಳೂರು ಡಿಸ್ಟ್ರಿಕ್ಟ್ [illegible] ಛಾರ್ಜನ್ನು ವಹಿಸಿಕೊಳ್ಳತಕ್ಕದ್ದು.

ಎಗ್ಸಿಕ್ಯುಟಿವ್ ಇಂಜಿನಿಯರ್ ಮೆ|| ಡಿ. [illegible] ಫೆಬ್ರವರಿ ತಾ. ೧ ರಲ್ಲಿ ರಜದಿಂದ ವಾಪಸು ಬಂದದ್ದರಿಂದ ಅವರನ್ನು ಬೆಂಗಳೂರು ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ.

ಜಾತ್ರೆಯಲ್ಲಿ ನೀರಿನ ಕಷ್ಟವು.

ಕೋಲಾರದ ಡಿಸ್ಟ್ರಿಕ್ಟ್ ಮಾಲೂರ್ ತಾಲ್ಲೂಕು ಬೋಡಿ [illegible] ಗ್ರಾಮದಲ್ಲಿ [illegible] ದೇವತೆಯ ಜಾತ್ರೆ [illegible] ಬಹಳ ವೈಭವದಿಂದ ನಡೆಯುತ್ತದೆ. ಈ ಜಾತ್ರೆಗೆ ಸುಮಾರು ೫೦,೦೦೦ ಜನ [illegible]. ಆದರೆ ಜನಗಳಿಗೆ ನೀರಿನ ಬಹಳ ತೊಂದರೆಯಾಗಿದೆ. ಈ ಜಾತ್ರೆ ನಡೆಯುವಲ್ಲಿ ಒಂದು ಕುಂಟೆ ಇದೆ. ಇದರಲ್ಲಿ ಎರಡು ಮೂರು ದಿನಗಳಲ್ಲಿಯೇ ನೀರು ಮುಗಿದುಹೋಗುವುದು. [illegible] ಜನಗಳನ್ನು [illegible] ಸ್ಥಳಗಳಿಂದ ನೀರನ್ನು [illegible] ದಿನಗಳೂ ನೀರು [illegible]. ಆದರೂ ಪರಿಷೆಯಲ್ಲಿ [illegible] ಇಲ್ಲ. [illegible] ಸರ್ಕಾರದವರು ಮನಸ್ಸಿಟ್ಟು [illegible] ಬಾವಿಯನ್ನು [illegible] ಕಟ್ಟಿಸಿದರೆ ಜನಗಳಿಗೆ ಬಹಳ ಅನುಕೂಲವಾಗುವುದು. [illegible] ಸರ್ಕಾರದವರು ತಮ್ಮ [illegible] ಜನಗಳಿಗೆ ತೊಂದರೆ ತಪ್ಪಿಹೋಗಿ, [illegible] ಅನುಕೂಲವಾಗಿ, ಪರಿಷೆಯನ್ನು [illegible] ಎಂದು ನಮಗೆ ತೋರುತ್ತದೆ. ಈ ವಿಚಾರವನ್ನು ಈ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಸಾಹೇಬರವರು ತಮ್ಮ ಆಲೋಚನೆಗೆ ತಂದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ [illegible].

ತಾಲ್ಲೂಕು ವರ್ತಮಾನಗಳು.

ದಾವಣಗೆರೆ —ಈ ಊರಿನಲ್ಲಿ ಸುಮಾರು [illegible] ವರುಷಗಳಿಂದಲೂ ಉಪಾಧ್ಯಾಯರಾಗಿದ್ದ ಮೆ|| [illegible] ಅಯ್ಯನವರು ಭಗವದಾರಾಧನೆಯಲ್ಲಿಯೂ, ಪುರಾಣಗಳಲ್ಲಿಯೂ ಸನ್ಮಾರ್ಗ [illegible] ಸ್ಕೂಲ್ [illegible] ಬಾಲಕಿಯರುಗಳಲ್ಲಿಯೂ [illegible]. ಇವರಿಗೆ [illegible] ಉಪಾಧ್ಯಾಯ [illegible] ಸರ್ಕಾರಿ ನೌಕರಿಯ [illegible] ಸ್ಕೂಲಿನ [illegible] ಈ ಮಹಾ ಸಭೆಯವರ ಇಷ್ಟ ಪ್ರಕಾರ ಇವರನ್ನೇ [illegible] ಮಾಡಿ, ಮೆ|| [illegible] ಹನುಮಂತಪ್ಪನವರ [illegible] ಸಂದರ್ಭ [illegible] ಸುರುತಾಂತ್ಯವೂ [illegible] ಉಪನ್ಯಾಸ [illegible] ಹೂವು, ಗಂಧ, ತಾಂಬೂಲ [illegible] ಬಾಲಕಿಯರುಗಳನ್ನು [illegible] ತೃಪ್ತಿಪಡಿಸಿ [illegible] ಗೃಹಗಳನ್ನು ಸೇರಿದರು.

ಮುಳಬಾಗಿಲು —ಇಲ್ಲಿ ನೂತನವಾಗಿ [illegible] ಜನವರಿ ತಾ. [illegible] ಸ್ಕೂಲಿನಲ್ಲಿ [illegible] ಜರುಗಿತು. [illegible] ಸಭೆಯ ಅಗ್ರಾಸನವನ್ನು [illegible] ಕೋರ್ಟ್ ಇನ್ಸ್‌ಪೆಕ್ಟರ್ [illegible] ಸಾಹೇಬರು [illegible] ಸ್ಕೂಲ್ [illegible] ಬಾಲಕರ ಆರೋಗ್ಯಕ್ಕಾಗಿ ಒಂದು [illegible] ಪ್ರಕಾರ [illegible] ಹುಡುಗರು [illegible] ಈ [illegible] ಇವರಿಂದ ಮೊದಲು [illegible] ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಸಭಾ

ಬೆಂಗಳೂರು ತಾ ೬-೨-೧೦ —ನೆನ್ನೆ ದಿವಸ ಬಹು ಮಂದಿ ನಾರೀಮಣಿಗಳು ಮಂದಿರದ ಪುಸ್ತಕ ಭಂಡಾರವನ್ನು ಅಲಂಕರಿಸಿದ್ದರು ಶ್ರೀಮತಿ ಮಹಾಲಕ್ಷ್ಮಮ್ಮನವರು ಸಿದ್ಧಮಾಡಿಕೊಂಡು ತಂದು ಇದ್ದ ಪ್ರಶ್ನೋತ್ತರ ಪತ್ರವನ್ನು ಓದಿದ ತರುವಾಯ ಸೌಭಾಗ್ಯವತಿ ಕಮಲಾಬಾಯಮ್ಮನವರು ಪರಿಣಾಮ ಎಂಬ ವಿಷಯವನ್ನು ಕುರಿತು ಒಂದು ಉಪನ್ಯಾಸ ಪತ್ರಿಕೆಯನ್ನು ಓದಿದರು ಇದು ಅವರ ಎರಡನೇ ಉಪನ್ಯಾಸವಾಗಿರುತ್ತದೆ ಇದರ ವಿಷಯ ಸ್ವಲ್ಪ ಗೂಢವಾದ್ದರಿಂದ ಇನ್ನೂ ಒಂದೆರಡು ಉಪನ್ಯಾಸಗಳು ಈ ಪರಿಣಾಮದ ವಿಷಯವಾಗಿಯೇ ಹೇಳುವಂತೆ ಸೂಚಿಸಿದರು

ಕಳೆದ ತಿಂಗಳಿನ ಜಮಾ ಖರ್ಚಿನ ಪಟ್ಟಿಯನ್ನು ಕಾರ್ಯದರ್ಶಿಯವರು ಮೆಂಬರುಗಳಿಗೆ ಓದಿ ತಿಳಿಸಿದರು ಮತ್ತು ಕಡೂರು ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಚಿದಂಬರಯ್ಯನವರಿಗೆ ಅವರು ದಯವಿಟ್ಟು ಕಳುಹಿಸಿದ ಪುಸ್ತಕಗಳಿಗಾಗಿ ಸಮಾಜದ ವಂದನೆಗಳನ್ನು ಸೆಕ್ರೆಟರಿಯವರು ಎಲ್ಲರಿಗೂ ತಿಳಿಯುವಂತೆ ಬಹಿರಂಗವಾಗಿ ಪ್ರಕಾಶ ಪಡಿಸಿದರು.

ಬರುವ ಫೆಬ್ರವರಿ ೧೨ ನೇ ತಾ. ಶನಿವಾರ ನಡೆಯುವಂತೆ ತಿಳಿಸಲ್ಪಟ್ಟು ಸಭೆಯು ಮಂಗಳವಾದ್ಯದ ಘೋಷದಿಂದಲೂ, ಕೋಲಾಹಲಧ್ವನಿಯಿಂದಲೂ ಮುಕ್ತಾಯವಾಯಿತು

ಮೆ॥ ಬಾಭಾ ಸಾಹೇಬರವರ ಮೆಮೋರಿಯಲ್ ಫಂಡು

ಎರಡನೇ ಚಂದಾ ಪಟ್ಟಿ

ತ್ಯಾಮಗೊಂಡ್ಲು ಹೆ॥ ಮಾ॥ ನಿರ್ವಾಣಪ್ಪನವರು ರೂ ೧೬ ಸಿರಾ ಹೆ॥ ಮಾ॥ ಕೆ. ಮೂರ್ತಿರಾಯರು, ಹೊಳಲಕೆರೆ ಹೆ॥ ಮಾ॥ ಸಿ ಗೋಪಾಲಕೃಷ್ಣರಾಯರು ತಲಾ ರೂ ೧೦, ಬೆಂಗಳೂರು ಸರ್ವಾರ್ಟ್ಸ್ ಸ್ಕೂಲ್ ಹೆ॥ ಮಾ॥ ಕೆ ರಾಮಣ್ಣನವರು ರೂ ೮ ೯ ೦ ಮುಳಬಾಗಲು ತೆಲುಗು ಸ್ಕೂಲ್ ಹೆ॥ ಮಾ॥ ನಾರಾಯಣಶೆಟ್ಟರು ರೂ ೬ ೬ ೦ ಸಿರಾ ಹಿಂದೂಸ್ತಾನಿ ಸ್ಕೂಲ್ ಹೆ॥ ಮಾ॥ ಸೈಯದ್ ಪೀರ್ ರೂ ೫ ೮ ೦, ರಾಬರ್ಟ್‌ಸನ್ ಪೇಟೆ ಸ್ಕೂಲ್ ಹೆ॥ ಮಾ॥ ಪಿ ಕೃಷ್ಣಯ್ಯ, ಮಾರಿಕಾಂಬೆ ಸ್ಕೂಲ್ ಹೆ॥ ಮಾ॥ ಟಿ ರಾಮಸ್ವಾಮೈಯಂಗಾರ್, ನಂಜನಗೂಡು ತಾಲ್ಲೂಕು ಬೇಗೂರು ಸ್ಕೂಲ್ ಬಿ ನಾಗೇಂದ್ರಯ್ಯ, ತೀರ್ಥಹಳ್ಳಿ ತಾಲ್ಲೂಕು ಆರಗ ಸ್ಕೂಲ್ ಹೆ॥ ಮಾ॥ ಸುಬ್ರಹ್ಮಣ್ಯಶಾಸ್ತ್ರಿ, ತೀರ್ಥಹಳ್ಳಿ ತಾ ಕಾವಡಿ ದುರ್ಗದ ಸ್ಕೂಲ್ ಹೆ॥ ಮಾ॥ ಟಿ ಕೃಷ್ಣಾಚಾರ್, ಶ್ರೀನಿವಾಸಪುರದ ಸ್ಕೂಲ್ ಹೆ॥ ಮಾ॥ ಎಸ್ ರಾಮಾಚಾರ್ಯ—ತಲಾ ರೂ ೫ ಹೊಸನಾಳ ತಾ ದೊಡ್ಡಕ್ರಿನಹಳ್ಳಿ ಗುರುರಾಜಾಚಾರ್, ಗೌರಿಬಿದನೂರು ತಾ. ಮಲ್ಲವೆ ಸೂರ್ಯನಾರಾಯಣಶಾಸ್ತ್ರಿ, ಯಡತೊರೆ ಎಚ್ ವೆಂಕಟರಾವ್, ಅರಸೀಕೆರೆ ತಾ ದೊಡ್ಡ ಬಾಣಾವರದ ಎಚ್ ಸೂರ್ಯನಾರಾಯಣಪ್ಪ—ತಲಾ ರೂ ೪ ಸಾತನೂರಿನ ಗಂಗಪ್ಪ, ಚಾಮರಾಜನಗರದ ಎಂ ಶ್ರೀನಿವಾಸರಾವ್ ತಲಾ ರೂ ೩, ಮದ್ದಗಿರಿ ಯಲ್ ನರಸಿಂಹಯ್ಯ ರೂ ೨ ೧೧ ೦, ಮುಳಬಾಗಲು ಪಿ ನಾಗೇಶರಾವ್, ಕನ್ನಂಬಾಡಿ ಕೆ ಕೃಷ್ಣಶಾಸ್ತ್ರಿ, ಕುಣಿಗಲ್ ವೆಂಕಣ್ಣಯ್ಯ ಮತ್ತು ಶ್ರೀನಿವಾಸರಂಗಾಚಾರ್, ಶ್ಯಾಣಸೂರು ಗುಲಾಂ ಮಹಮದ್, ಮುಳಬಾಗಲು ಕಾಶೀಪತಯ್ಯ ಚಿಕ್ಕಮಗಳೂರು ಗುಲಾಂ ಹುಸೇನ್, ಬೆಂಗಳೂರು ಹೊಸ ಸರ್ವಾರ್ಟ್ಸ್ ಗುಲಾಂ ರಸೂಲ್—ತಲಾ ರೂ ೨, ಮುಳಬಾಗಲು ಬಿ ವೆಂಕಟರಮಣಯ್ಯ, ಸಿ ಸುಬ್ಬರಾವ್, ಕೆ ಶ್ರೀನಿವಾಸರಾವ್, ಎಸ್ ಭೀಮಾಚಾರ್, ಸಿ ಯಸ್ ಸೂರ್ಯನಾರಾಯಣಯ್ಯ, ಪಿ ರಂಗಾಚಾರ್, ಮದ್ದಗಿರಿ ಎಚ್ ರಾಮರಾವ್, ಎಚ್ ಶ್ರೀನಿವಾಸೈಯಂಗಾರ್, ಎಂ ಶ್ರೀನಿವಾಸರಾವ್, ಮದ್ದಗಿರಿ ಕೋದಂಡರಾಮಯ್ಯ, ವೆಂಕಟಗಿರಿಯಪ್ಪ, ಮೂಡಿಗೆರೆ ಅಮಲ್ದಾರ್ ಮೆ॥ ಕೆ ಕೆ ವೆಂಕಟರಾಮಯ್ಯರ್, ರಾಮಚಂದ್ರ ಐಯರ್, ಹೊಸಕೆರೆ ಲಂಕ ಕೃಷ್ಣಪ್ಪ, ಹೊಸೂರು ಸುಬ್ಬರಾಯಪ್ಪ, ಚಿಕ್ಕಬಾಣಾವರದ ಹನುಮಂತಯ್ಯ, ಆಗುಂಬೆ ಲಕ್ಷ್ಮೀನಾರಾಯಣಪ್ಪ, ಹೊನ್ನಾಳಿ ಮಹಮದ್ ಮೊಯಿದ್ದೀನ್ ಅರಕೆರೆ ಕೆ ರಾಮಣ್ಣ ಹೊಳಲಕೆರೆ ಅಬ್ದುಲ್ ಖಾದರ್, ಫ್ರೆಂಚ್‌ರಾಕ್ಸ್ ಸುಬ್ರಹ್ಮಣ್ಯಯ್ಯ, ದೇವರಗುಪ್ಪೆ ಅಣ್ಣಯ್ಯ, ಕಾಂಡಿಕೆರೆ ಎಚ್. ನರಸಿಂಹಯ್ಯ, ಬಸವನಹಳ್ಳಿ ಎಸ್ ಆರ್ ಶ್ರೀನಿವಾಸರಾವ್, ಹೊನ್ನಾಳಿ ಬಿ ಮಲ್ಲಪ್ಪ, ಯಡೆಹಳ್ಳಿ ಅಬ್ದುಲ್‌ನಬಿ, ಕಡೂರು ರಾಜಾರಾವ್, ಶೃಂಗೇರಿ ಶೇಷಶಾಸ್ತ್ರಿ, ಹಿರೀಗೋಣಿಗೆರೆ ಸುಬ್ರಹ್ಮಣ್ಯಯ್ಯ, ಹೊಂಗನೂರು ಶ್ರೀನಿವಾಸೈಯಂಗಾರ್, ಸಾತನವಲ್ಲಿ ಎಚ್ ನಾರಾಯಣಶಾಸ್ತ್ರಿ, ಕೋಲಾರು ಜಿ ವೆಂಗಟರಮಣಯ್ಯ, ಚಾಮರಾಜನಗರದ ವೆಂಕಟಸುಬ್ಬರಾವ್, ನರಸಿಂಹಶಾಸ್ತ್ರಿ, ಕೃಷ್ಣಶಾಸ್ತ್ರಿ, ವೆಂಕಟಾಚಾರ್, ಪುಟ್ಟಣ್ಣಯ್ಯ, ರಂಗಸ್ವಾಮಿ, ಈಶ್ವರ ಪಂಡಿತ್, ಸುಬ್ರಹ್ಮಣ್ಯಯ್ಯ, ಚಿಕ್ಕಮಗಳೂರು ಅಬ್ದುಲ್ ಬೇಗ್, ಮಹಮದ್ ಗೌಸ್, ಅಬ್ದುಲ್ ಲತೀಫ್—ತಲಾ ರೂ ೧, ಒಂದು ರೂಪಾಯಿಗಿಂತ ಕಡಮೆಯಾಗಿ ಚಂದಾ ಹಾಕಿರುವ ಇತರರ ಮೊಬಲಗು ರೂ ೩೬ ೬-೦

ಚಂದಾ ಕೊಡಲು ಅಪೇಕ್ಷಿಸುವ ಇತರರು ದಯವಿಟ್ಟು ಸೆಕ್ರೆಟರಿಗಳಲ್ಲಿಗೆ ಜಾಗ್ರತೆಯಾಗಿ ಕಳುಹಿಸಿದರೆ ಅನುಕೂಲವಾಗಿರುವುದು

ಸಿ ಕೃಷ್ಣರಾವ್, ಸೆಕ್ರೆಟರಿ

ವ್ಯವಸಾಯ ವಿಷಯಗಳು

೧ ಹತ್ತಿಯನ್ನು ಬೆಳೆಯುವುದು

ಮೈಸೂರು ನಾರ್ಮಲ್ ಸ್ಕೂಲ್ ವ್ಯವಸಾಯ ಪಾಠಕರಾದ ಮೆ॥ ಕೆ ನರಸಿಂಹಯ್ಯಂಗಾರ್ಯರವರು ಬರೆಯುತ್ತಾರೇನೆಂದರೆ —" ಮೈಸೂರಿನಲ್ಲಿರುವ ನಾರ್ಮಲ್ ಸ್ಕೂಲಿಗೆ ಸೇರಿದ ವ್ಯವಸಾಯದ ತೋಟದಲ್ಲಿ ಪ್ರಯೋಗದಲ್ಲಿ ಬೆಳೆಯುವ ಅಮೇರಿಕದ ಹತ್ತಿಯನ್ನು ಬೆಳೆಯುವ ಪದ್ಧತಿ ಇದೆ ಇದು ಗೋಡು ಮಣ್ಣುಗಳಲ್ಲಿಯೂ ಮತ್ತು ಗ್ರಾವಲ್ ಮಣ್ಣುಗಳಲ್ಲಿಯೂ ಚೆನ್ನಾಗಿ ಬೆಳೆಯುತ್ತದೆ ಎಂದು ಅನುಭವದಿಂದ ತಿಳಿದುಬಂದಿದೆ ಇದು ಶ್ರೀಘ್ರವಾಗಿ ಹೆಚ್ಚು ಉಪಯುಕ್ತವಾಗಿರುವುದು ಇದಲ್ಲದೆ ಮೂವತ್ತು ಅಂಗುಲಗಳ ಒಳಗೆ ಮಳೆ ಬಿದ್ದರೂ ತಕ್ಕಮಟ್ಟಿಗೆ ಫಸಲನ್ನು ಕೊಡುತ್ತದೆ ಎರಡನೆಯ ವರ್ಷ ಇದನ್ನು ಕೂಳೆ ಬೆಳೆಯಾಗಿ ಬೆಳೆಯಬಹುದು ಆದದ್ದರಿಂದ ಮೈಸೂರು ಡಿಸ್ಟ್ರಿಕ್ಟಿನ ಬೈಲು ಸೀಮೆಗಳಲ್ಲೆಲ್ಲಾ ಇದನ್ನು ಬೆಳೆಯಬಹುದು ಕರಿ ಹತ್ತಿಯ ಹಾಗಲ್ಲದೆ ಇದನ್ನು ಮೇ, ಜೂನ್ ತಿಂಗಳುಗಳಲ್ಲಿ ಬಿತ್ತಬಹುದು ಈ ಹೈದನ್ನು ಬೆಳೆಯಲಪೇಕ್ಷಿಸುವವರು ನಮಗೆ ಬರೆದರೆ ಬೀಜಗಳು ಕಳುಹಲ್ಪಡುತ್ತದೆ, ಮತ್ತು ವ್ಯವಸಾಯ ಮಾಡುವ ಕ್ರಮವೂ ಅವರಿಗೆ ತಿಳಿಸಲ್ಪಡುವುದು " ಎಂಬುದೇ

೨ ಉಳುಮೆಗೂ ಭೂಮಿಯ ತೇವಕ್ಕೂ ಇರುವ ಸಂಬಂಧ.

ಎಲ್ಲಾ ಬೆಳೆಗಳಿಗೂ ನೀರೇ ಮುಖ್ಯಾಧಾರವಾದದ್ದು. ಸಸ್ಯರಾಸಿಗಳಲ್ಲಿ ಜಲಾಂಶವೇ ಹೆಚ್ಚು ಭೂಮಿಯನ್ನು ಉತ್ತು ಬಿತ್ತನೆ ಮಾಡಿದನ ತಕ್ಷಣವೇ ತೇವವಿಲ್ಲದ ಹೊರತು ಬೀಜಗಳು ಮೊಳೆಯುವುದಿಲ್ಲ ಸಾಧಾರಣವಾಗಿ ಒಂದು ಮಣದಷ್ಟು ಪದಾರ್ಥ ಬೆಳೆದರೆ ಪೈರಿನ ಬೆಳವಣಿಗೆಗೆ ಸರಾಸರಿ ೩೦೦ ರಿಂದ ೫೦೦ ಮಣ ನೀರು ಖರ್ಚಾಗಿರುತ್ತದೆ ಇಷ್ಟು ನೀರೂ ಪೈರಿನ ಜಲಾಂಶವಾಗಿ ಪರಿಣಮಿಸುವುದು ಆದರೆ ಪೈರಿನ ಬೆಳವಣಿಗೆಯ ಕಾಲದಲ್ಲಿ ಜಮೀನಿನಿಂದ ನಷ್ಟವಾಗಿಹೋಗತಕ್ಕ ನೀರನ್ನೂ ಗಣನೆಗೆ ತಂದುಕೊಂಡಪಕ್ಷದಲ್ಲಿ ಈ ೩೦೦ ೫೦೦ ಮಣ ನೀರುಮಾತ್ರವೇ ಅಲ್ಲದೆ ಇನ್ನೂ ಹೆಚ್ಚು ನೀರು ಖರ್ಚಾಗಿರುತ್ತದೆ

ಖುಷ್ಕಿ ಪೈರುಗಳ ಬೆಳವಣಿಗೆಗೆ ಭೂಮಿಯಲ್ಲಿನ ತೇವವು (ಅಂದರೆ, ಹಿಂದಿನ ಮಳೆಗಾಲದಲ್ಲಿ ಭೂಮಿಯಲ್ಲಿ ಬಿದ್ದು ನಿಂತಿರುವ ನೀರು) ಮೂಲಾಧಾರವಾಗಿರುತ್ತದೆ ಮಳೆಗಾಲವು ಪೂರೈಸಿದ ಮೇಲೆ ಭೂಮಿಯಲ್ಲಿ ತೇವವು ಹೆಚ್ಚಾಗಿ ಉಳಿದಿರುವಷ್ಟೂ ಅದರಲ್ಲಿ ಫಸಲಿನ ಉತ್ಪತ್ತಿಯು ಜಾಸ್ತಿಯಾಗುತ್ತದೆ ಆದಕಾರಣ ಮುಖ್ಯವಾಗಿ ರೈತನು ಮಳೆಗಾಲದಲ್ಲಿ ಒದಗುವ ನೀರನ್ನು ಭೂಮಿಯಿಂದ ನಷ್ಟವಾಗದಂತೆ ಕಾಪಾಡಿಕೊಳ್ಳುವುದಕ್ಕಾಗಿ ಸರ್ವ ಪ್ರಯತ್ನವನ್ನೂ ಮಾಡಬೇಕು ನಷ್ಟವೆಂದರೆ ಏನು ? ಮತ್ತು ಇದು ಹೇಗೆ ಉಂಟಾಗುತ್ತದೆ ? ಎಂದು ಕೇಳಬಹುದು ಇದು ಎರಡು ವಿಧವಾಗಿ ಸಂಭವಿಸುವುದು ಮೊದಲನೆಯದು—ಬಿದ್ದ ಮಳೆಯೆಲ್ಲಾ ಒಹಳಮಟ್ಟಿಗೆ ಭೂಮಿಯೊಳಗೆ ಪ್ರವೇಶಿಸದೆ ಜಮೀನಿನ ಮೇಲ್ಗಡೆಯೇ ಹರಿದು ಹೋಗುವುದುಂಟು ಇಷ್ಟೇ ಅಲ್ಲದೆ ಜಮೀನುಗಳಲ್ಲಿ ಕೊರಕಲುಗಳನ್ನು ಮಾಡಿ ಮಣ್ಣನ್ನು ಕೊಚ್ಚಿಕೊಂಡು ಹೋಗುತ್ತದೆ. ಇದರಿಂದ ನೀರು ಸಾಗುವಳಿಗೆ ಉಪಯೋಗಪಡದೆ ವ್ಯರ್ಥವಾಗುವುದೊಂದೇ ಅಲ್ಲದೆ ಸಸ್ಯಗಳ ಬೆಳವಣಿಗೆಗೆ ಸಾಧಕವಾದ ಜಮೀನಿನಲ್ಲಿರುವ ಅನೇಕ ಪದಾರ್ಥಗಳು ಕೂಡ ನೀರಿನಲ್ಲಿ ಕೊಚ್ಚಿಹೋಗುವುವು ಇದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇದೆ ಆದ್ದರಿಂದಲೇ ಹೀಗೆ ಮಣ್ಣು ಕೊಚ್ಚಿ ಹೋಗುವುದನ್ನು ತಡೆಯುವುದಕ್ಕೆ ಮಣ್ಣು ದಿಂಡುಗಳನ್ನು ಅಡ್ಡವಾಗಿ ಕಟ್ಟುವುದು ವಾಡಿಕೆ ಎರಡನೆಯದು—ಮಳೆಗಾಲದಲ್ಲಿ ಭೂಮಿಯಲ್ಲಿ ಸೇರುವ ನೀರು ಬೇಸಿಗೆಯಲ್ಲಿ ಆರಿಹೋಗುವುದರಿಂದ ಪೈರುಗಳಿಗೆ ಒದಗದೆ ನಷ್ಟವಾಗುತ್ತದೆ ಈ ನಷ್ಟವನ್ನು ಪೂರ್ತಿಯಾಗಿ ತಪ್ಪಿಸುವುದಕ್ಕೆ ಆಗದಿದ್ದರೂ ಬಹಳ ಮಟ್ಟಿಗೆ ಕಡಮೆ ಮಾಡಬಹುದು ಹೀಗೆ ಉಳುಮೆಯಾದ ಭೂಮಿಯ ಮೇಲೂ ಉಳುಮೆಯಾಗದ ಭೂಮಿಯ ಮೇಲೂ ಮಳೆ ಬಿದ್ದರೆ ವ್ಯತ್ಯಾಸವೇನಾದರೂ ತೋರಿಬರುತ್ತದೆಯೋ ನೋಡೋಣ ಉಳುಮೆಯಾದ ಭೂಮಿಯಲ್ಲಿ ಬಿದ್ದ ನೀರೆಲ್ಲಾ ಹೀರಿಬಿಡುತ್ತದೆ ಜಮೀನು ಕೊರಕಲಾಗುವುದೇ ಆಗಲಿ ಅಥವಾ ಸ್ವಲ್ಪವಾದರೂ ಮಣ್ಣು ಕೊಚ್ಚಿಹೋಗಿರುವುದೇ ಆಗಲಿ ಗೋಚರವಾಗುವುದಿಲ್ಲ ಉಳುಮೆಯಾಗದ ಭೂಮಿಯಲ್ಲಾದರೋ ನೀರು ಮೇಲೆಯೇ ನಿಂತು ಮಳೆ ಜೋರಾದರೆ ಸ್ವಲ್ಪ ಹೊತ್ತಿನ ಮೇಲೆ ಮಣ್ಣನ್ನು ಕೊಚ್ಚಿಕೊಂಡು ಕಾಲುವೆಕಾಲುವೆಯಾಗಿ ಹರಿದುಹೋಗುತ್ತದೆ ಈ ತಾರತಮ್ಯಗಳಿಂದ ಮಳೆ ಶುರುವಾಗುವುದಕ್ಕೆ ಸ್ವಲ್ಪ ಮುಂಚಿತವಾಗಿಯೇ ಜಮೀನನ್ನು ಉಳುವುದು ತುಂಬಾ ಪ್ರಯೋಜನಕರವೆಂದು ತಿಳಿದುಕೊಳ್ಳಬಹುದು ಮಳೆಗಾಲ ಶುರುವಾಗುವುದಕ್ಕೆ ಮೊದಲು ಜಮೀನನ್ನು ಎಷ್ಟು ಕಡಿದಿದ್ದರೆ ಅಷ್ಟು ಅನುಕೂಲ, ಇಳಿಜಾರಾದ ಜಮೀನಿನ ಮೇಲೆ ಬಿದ್ದ ನೀರು ಯಾವ ಕಡೆ ಹರಿಯುತ್ತದೋ ಅದಕ್ಕೆ ಅಡ್ಡಲಾಗಿ ಉತ್ತರೆ ಬಿದ್ದ ನೀರು ಹೊಡೆದುಕೊಂಡು ಹೋಗದೆ ಅಲ್ಲಿಯೇ ನಿಲ್ಲುವುದು

ಭೂಮಿಯಲ್ಲಿನ ತೇವವು ಸಸ್ಯಗಳಿಗೆ ಒದಗುವುದೊಂದಲ್ಲದೆ ಬೇರೆ ವಿಧವಾಗಿ ಭೂಮಿಯಿಂದ ನಷ್ಟವಾಗದಂತೆ ಕಾಪಾಡಬೇಕಾದದ್ದೇ ಮುಖ್ಯ ಕರ್ತವ್ಯವು ಪೈರಿನ ಪುದಕ್ಕಾಗಿ ಸಿದ್ಧಪಡಿಸಿಕೊಂಡಿರುವ ಜಮೀನಿನ ಮೇಲೆ ಒಣಗುವ ಹಾಗೆ ತೋರಿ ಬರುತ್ತ ಬರುವುದು ಆರಂಭವಾದ ಕೂಡಲೇ ಆಗಲೇ ಮಾಡಿದ ಪಟ್ಟೆಗಳನ್ನು ಒಡೆದು ಮೇಲಿನ ಮಣ್ಣನ್ನು ಪುಡಿಪುಡಿಯಾಗಿ ಮಾಡಬೇಕು ಏಕೆಂದರೆ ಭೂಮಿಯೊಳಗಿನ ತೇವವು ಕೆಳಗಿನಿಂದ ಮಣ್ಣಿನ ರೇಣುಗಳ ನಡುವೆ ಇರುವ ಸಂದುಗಳ ಮೂಲಕವಾಗಿಯೇ ಮೇಲಕ್ಕೆ ಬರುತ್ತದೆ ಈ ಮಣ್ಣು ಸೂಕ್ಷ್ಮವಾಗಿದ್ದಷ್ಟೂ ನೀರು ಮೇಲಕ್ಕೆ ಹತ್ತುವುದು ಹೆಚ್ಚು ಮೇಲ್ಗಡೆಯ ತೇವವು ಬಿಸಿಲಿನಲ್ಲಿ ಆರಿದ ಹಾಗೆಲ್ಲಾ ಕೆಳಗಿನಿಂದ ನೀರು ಸಂದುಗಳ ಮೂಲಕ ಮೇಲಕ್ಕೆ ಹತ್ತುವುದು ಇದೂ ಆರಿದರೆ ಪುನಃ ಕೆಳಗಿನ ತೇವವು ಮೇಲಕ್ಕೆ ಬರುವುದು ಹೀಗೆ ಕ್ರಮೇಣ ಭೂಮಿಯೊಳಗಿನ ತೇವವೆಲ್ಲಾ ಒಣಗಿಹೋಗುತ್ತದೆ ತೇವವು ಹೀಗೆ ನಷ್ಟವಾಗದಂತೆ ಮಾಡಬೇಕಾದರೆ ಮಣ್ಣಿನ ಸಂದುಗಳನ್ನು ಮುಚ್ಚಬೇಕು ಉತ್ತು ಹೊಡೆಯುವುದರಿಂದ ಈ ಸಂದುಗಳು ಮುಚ್ಚಿ ಭೂಮಿಯಲ್ಲಿ ನೀರು ಉಳಿಯುವುದಲ್ಲದೆ ತೇವವು ಮೇಲಿನ ಮಣ್ಣಿನ ಕೆಳಗೇ ನಿಂತು ಬಿತ್ತಿದ ಬೀಜಕ್ಕೆ ಸುಲಭವಾಗಿ ಸಿಲುಕುವುದು ಭಾರೀ ಮಳೆ ಬಿದ್ದಾಗ ಜಮೀನಿಗೆ ಒದಗುವ ಮೂರು ಅಂಗುಲ ಪ್ರಮಾಣದ ನೀರು, ಹುಡಿಯಾಗಿರುವ ಮೇಲಿನ ಮಣ್ಣಿನಿಂದ ಸುಲಭವಾಗಿ ಕೆಳಗೇ ಸಿಲುಕುವಂತೆ, ಮಳೆ ಶುರುವಾಗುತ್ತಲೇ ಭೂಮಿಯನ್ನು ಚೆನ್ನಾಗಿ ಉತ್ತುಬಿಡಬೇಕು ಮತ್ತು ಮಳೆ ಜೋರಾಗಿ ಬಿದ್ದು ನಿಂತಲ್ಲಾ ಸಾಧ್ಯವಾದರೆ ಒಂದಾವರ್ತಿ ಜಮೀನನ್ನು ಉತ್ತುಬಿಡುವುದು ಒಳ್ಳೇದು ಇದರಿಂದ ಕಳೆಗಳು ನಾಶವಾಗುವುದಲ್ಲದೆ ಭೂಮಿಯಲ್ಲಿ ಯಥೇಷ್ಟವಾಗಿ ನೀರು ನಿಂತು ಮುಂದಿನ ಪೈರುಗಳಿಗೆ ಒದಗುತ್ತದೆ ಇದೇ ಪ್ರಕಾರ ತೋಟದಲ್ಲಿಯೂ ಗಿಡಗಳ ಪಾತಿಗಳು ಒಣಗಿ ಹೆಪ್ಪು ಕಟ್ಟಿದ್ದರೆ ಮಣ್ಣನ್ನು ಕೈ ಗುದ್ದಲಿಗಳಿಂದ ಸ್ವಲ್ಪ ಕೆದರಿದರೆ ಬಹಳ ಪ್ರಯೋಜನವುಂಟು

ಮುಖ್ಯವಾಗಿ ಮಳೆಗಾಲ ಶುರುವಾಗುವುದಕ್ಕೆ ಮುಂಚೆ ಅಥವಾ ಶುರುವಾದ ತರುವಾಯಲ್ಲಿಯೇ ಜಮೀನನ್ನು ಆಳವಾಗಿ ಉತ್ತು ಮೇಲಿನ ಮಣ್ಣನ್ನು ಹುಡಿಯಾಗಿಟ್ಟದ್ದರೆ ಫಸಲಿನ ಉತ್ಪತ್ತಿಯು ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ

ವೈಸ್‌ರಾಯಿ ಯವರ ಮಂತ್ರಾಲೋಚನಾ ಸಭೆಯು

ಕಳೆದ ತಾ ೪ನೇ ಶುಕ್ರವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದ ಗವರ್ನ್‌ಮೆಂಟ್ ಹೌಸಿನಲ್ಲಿ ಗವರ್ನರ್ ಜನರಲ್ ರವರು ಮಂತ್ರಾಲೋಚನಾ ಸಭೆಯ ಮೆಂಬರುಗಳು ಕೂಡಿದರು ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಸಭಾನಾಯಕರಾಗಿದ್ದರು

ಮೆಂಬರುಗಳ ಪ್ರಶ್ನೆಗಳೂ - ಡಿಪಾರ್ಟ್‌ಮೆಂಟುಗಳ ಉತ್ತರಗಳೂ

ಸಭೆಯ ಕಾರ್ಯಗಳು ಪ್ರಾರಂಭವಾದ ಕೂಡಲೇ ಮೆ॥ ದಾದಾಭಾಯಿ ನೌರೋಜಿ ಯವರು ಗವರ್ನ್‌ಮೆಂಟಿನವರನ್ನು ಕುರಿತು ಜಿ ಐ ಪಿ ಎಂಬ ಉತ್ತರ ದೇಶದ ರೈಲ್ವೆ ಚಾರ್ಜಿನ ದರಗಳನ್ನು ಜಾಸ್ತಿ ಮಾಡಿರುವುದು ನಿಜವೇ ಎಂದು ಪ್ರಶ್ನೆ ಮಾಡಿದ್ದಕ್ಕೆ ಸರ್ಕಾರಿ ಮೆಂಬರಾದ ಸರ್ ವಿನ್ ಯವರು ಹೌದೆಂದು ಒಪ್ಪಿಕೊಂಡು, ಕಂಪನಿಯವರ ಕಂಟ್ರಾಕ್ಟಿನಲ್ಲಿ ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟಿದೆ ಎಂದೂ, ಇತರ ರೈಲ್ವೆಗಳಲ್ಲಿ ಹೆಚ್ಚಿಸಿರುವಷ್ಟು ಈ ಕಂಪನಿಯವರು ಹೆಚ್ಚು ಮಾಡಿಲ್ಲವೆಂದೂ ಹೇಳಿದರು ಮತ್ತು ಅದೇ ಮೆಂಬರು ಬಂಗಾಳಾ ಆಫೀಸುಗಳಲ್ಲಿ ರೆವಿನ್ಯೂ ಅಧಿಕಾರಿಗಳಿಗೆ ಮೊಕದ್ದಮೆಗಳನ್ನು ಹಿಡಿದು ದರ್ಯಾಪ್ತಿ ಮಾಡುವ ಅಧಿಕಾರವನ್ನು ಕೆಲವು ಕಡೆ ತಪ್ಪಿಸಿದೆ ಎಂದೂ, ಎಲ್ಲಾ ಕಡೆಗಳಲ್ಲೂ ಅದೇ ರೀತಿ ಯಾಕೆ ಮಾಡಬಾರದೆಂದೂ ಕೇಳಿದರು ಇದಕ್ಕೆ ಸರ್ ರಿಸ್ಲಿ ಎಂಬ ಸರ್ಕಾರಿ ತರಫಿನ ಮೆಂಬರು ಅನೇಕ ಗವರ್ನ್‌ಮೆಂಟುಗಳಿಂದಲೂ ಈ ವಿಚಾರದಲ್ಲಿ ರಿಪೋರ್ಟುಗಳು ಬಂದಿವೆ ಎಂದೂ, ಆದರ ವಿಷಯದಲ್ಲಿ ಇಂಡಿಯಾ ಗವರ್ನ್‌ಮೆಂಟಿನಿಂದ ಸೆಕ್ರೆಟರಿ ಆಫ್ ಸ್ಟೇಟ್ ಯವರಿಗೆ ಇನ್ನೂ ಬರೆದಿಲ್ಲವೆಂದೂ, ಅನೇಕ ಗವರ್ನ್‌ಮೆಂಟುಗಳಿಂದಲೂ ಬರೆದು ಬಂದಿರುವ ರಿಪೋರ್ಟುಗಳನ್ನು ಪ್ರಕಟಮಾಡಲಾಗುವುದೋ ಇಲ್ಲವೋ ತಿಳಿಯದು ಎಂದೂ ಹೇಳಿದರು ಬಳಿಕ ಹಿಂದುಸ್ಥಾನದಲ್ಲಿ ಪ್ರೈಮರಿ ವಿದ್ಯೆಯನ್ನು ಸಾರ್ವತ್ರಿಕವಾಗಿ ಫೀಜಿಲ್ಲದೆ ನಡಿಸಬೇಕೆಂಬ ವಿಚಾರವೇನಾಯಿತು ಎಂದು ಅದೇ ಮೆಂಬರು ಪ್ರಶ್ನೆ ಮಾಡಿದ್ದಕ್ಕೆ ಸರ್ ರಿಸ್ಲಿ ಯವರು ಹೇಳಿದ್ದೇನೆಂದರೆ—ಒಳದೇಶದ ಎಲ್ಲಾ ಗವರ್ನ್‌ಮೆಂಟುಗಳಿಂದಲೂ ರಿಪೋರ್ಟುಗಳು ಬಂದಿರುತ್ತವೆ ಗವರ್ನ್‌ಮೆಂಟಿನಲ್ಲಿ ಸದ್ಯ ಹಣ ಸಾಲದೆ ಇರೋಣದರಿಂದ ಈ ವಿಚಾರದಲ್ಲಿ ಏನೂ ಮಾಡಲಾಗದು

ಹೊಸ ಪ್ರೆಸ್ ಕಾನೂನು

ಬಳಿಕ ಸರ್ ಹರ್ಬರ್ಟ್ ರಿಸ್ಲಿಯವರು ಛಾಪಖಾನೆಗಳ ಮತ್ತು ವರ್ತಮಾನ ಪತ್ರಿಕೆಗಳ ಕಾನೂನಿನ ಮಸೂದೆಯನ್ನು ಸಭೆಯಲ್ಲಿ ಓದಿ, ಅದರ ಉದ್ದೇಶ ಸ್ಥಾಪನೆ ಫಲಿತಾಂಶಗಳನ್ನು ಮೆಂಬರುಗಳಿಗೆ ವಿವರಿಸಿ, ಕೌನ್ಸಿಲ್ ಮೆಂಬರುಗಳೆಲ್ಲಾ ಅದನ್ನು ಒಪ್ಪಿಕೊಂಡು, ಅದಕ್ಕೆ ಸಮ್ಮತಿ ಹಾಕಬೇಕೆಂದು ಕೇಳಿಕೊಂಡರು ಬ್ರಿಟಿಷ್ ಗವರ್ನ್‌ಮೆಂಟಿನವರ ಆಳ್ವಿಕೆಯು ಈ ರಾಷ್ಟ್ರದಲ್ಲಿ ನೆಲಗೊಂಡಿರುವುದು ಕ್ಷೇಮಕರವೆಂಬುದಾಗಿ ಕಂಡುಬಂದ ಪಕ್ಷದಲ್ಲಿ ಗವರ್ನ್‌ಮೆಂಟಿನವರಿಗೂ ದೇಶೀಯ ವಿದ್ಯಾವಂತರಿಗೂ ಪರಸ್ಪರವಾದ ಪ್ರೀತಿ ವಿಶ್ವಾಸಗಳೂ ಐಕಮತ್ಯವೂ ಇರಬೇಕಾದದ್ದು ಅಗತ್ಯವಾಗಿರುತ್ತದೆ ಆದರೆ ದೇಶೀಯ ವಿದ್ಯಾವಂತರು ನಡಿಸುವ ವರ್ತಮಾನ ಪತ್ರಿಕೆಗಳು ಪ್ರಜೆಗಳಲ್ಲಿ ಅಸಮಾಧಾನ ಮೊದಲಾದ ಭಾವನೆಗಳನ್ನೂ ದ್ವೇಷಾಸೂಯೆಗಳನ್ನೂ ಹುಟ್ಟಿಸುತ್ತಾ ಇದ್ದಲ್ಲಿ ಆ ಐಕಮತ್ಯವೂ ಪ್ರೀತಿ ವಿಶ್ವಾಸಗಳೂ ಶಾಶ್ವತವಾಗಿ ನೆಲಗೊಳ್ಳಲಾರವು ಸರ್ಕಾರಿ ಅಧಿಕಾರಿಗಳನ್ನೂ ನೌಕರವರ್ಗದವರುಗಳನ್ನೂ ಅವರು ನಡಿಸುವ ಕಾರ್ಯಕಲಾಪಗಳಲ್ಲಿ ಅವರಿಗೆ ಯಾವ ತಾಪವೂ ಗಾಬರಿಯೂ ನಷ್ಟವೂ ಉಂಟಾಗದಂತೆ ಕಾಪಾಡಬೇಕಾದದ್ದು ಪರಮಾವಶ್ಯಕವಾಗಿದೆ ಅವರು ರಾಜಭಕ್ತಿಯುಳ್ಳವರಾಗಿ ಪರಿಪಾಲಿಸುವ ಪ್ರಜಾಪ್ರೀತಿಯಿಂದ ಕೆಲಸಗಳನ್ನು ಮಾಡುವರು ಈಗ ಅಧಿಕಾರಿಗಳ ಸ್ವಾರ್ಥಕ್ಕೆ ಅಪಾಯ ಉಂಟಾಗುವ ಸಂಭವ ಪ್ರಾಪ್ತವಾಗಿದೆ ಸಣ್ಣ ವಯಸ್ಸಿನ ಹುಡುಗರು ದುಷ್ಟರ ಚಿತಾವಣೆಗೆ ಸಿಕ್ಕಿ ಕೆಟ್ಟುಹೋಗುತ್ತಿರುವುದನ್ನು ಸರ್ಕಾರದವರು ನೋಡಿ ಸುಮ್ಮನಿರಲಾಗದು ಎಂಬ ರೀತಿ ಹೇಳಿದರು

ಬಳಿಕ ಅವರು ಸೂಚಿಸಿದ ಪ್ರೆಸ್ ಕಾನೂನಿನ ಮಸೂದೆಯನ್ನು ಪರ್ಯಾಲೋಚಿಸಿ ರಿಪೋರ್ಟು ತರುವ ಉದ್ದೇಶದಿಂದ ಒಂದು ಕಮಿಟಿಗೆ ವಹಿಸಿದರು ಈ ಕಮಿಟಿಯ ಮೆಂಬರುಗಳ್ಯಾರೆಂದರೆ ಮ॥ ಎಸ್ ಸಿ ಸಿನ್ಹಾ ಸರ್ ಎಚ್ ರಿಸ್ಲಿ, ಸರ್ ಎಚ್ ಸ್ಟುವರ್ಟ್, ಮೆ॥ ಗೋಪಾಲ ಕೃಷ್ಣ ಗೋಖಲೆ, ಎಚ್ ಒ ಕ್ವಿನ್, ಪಿ ಪ್ಲೇಯರ್, ಗೋಖಲೆ, ಮುಧೋಳ್‌ಕರ್ ಆಲ್ಲಿ ಖಾನ್, ಮಾಧವ ರಾವ್ ಗ್ರಹಾಂ ಪಂಡಿತ ಮದನ ಮೋಹನ ಮಾಳವೀಯ, ಬರ್ದ್ವಾನ್ ಮಹಾರಾಜರವರು ಇವರು ತಾ ೫ನೇ ಮಂಗಳವಾರ ರಿಪೋರ್ಟು ಕೊಡುವಂತೆ ನಿಷ್ಕರ್ಷೆಯಾಯಿತು

೧೯೦೭ನೇ ಇಸವಿಯ ಲಾಗಾಯಿತು ರಾಜದ್ರೋಹವನ್ನೂ ಕ್ರೂರ ಕೃತ್ಯಗಳನ್ನೂ ಅಡಗಿಸುವುದಕ್ಕೆ ಸಾಮಾನ್ಯವಲ್ಲದ ಕಾನೂನುಗಳು ಜಾರಿಯಲ್ಲಿ ಬಂದಿದ್ದರೂ ಆದರೂ ಘಾತುಕ ಕೃತ್ಯಗಳಾಗಲಿ ನಿರ್ಮೂಲವಾಗಲಿ, ಹೊಸ ಪ್ರೇರಣೆಗಳಾಗಲಿ ಇನ್ನೂ ನಿಂತಿಲ್ಲ ವರ್ತಮಾನ ಪತ್ರಿಕೆ, ಪುಸ್ತಕ, ಜಾಹೀರಾತು, ಈ ಮೊದಲಾದವುಗಳ ಮೂಲಕ ಮದ್ಯವರ್ತಿಗಳಾದ ಪ್ರಚೋದಕರು ಸಣ್ಣ ಪ್ರಾಯದ ಹುಡುಗರನ್ನು ಎತ್ತಿಕಟ್ಟಿ ದುಷ್ಕಾರ್ಯಗಳನ್ನು ಮಾಡುವಂತೆ ಪ್ರೋತ್ಸಾಹ ಮಾಡುವುದು ತಪ್ಪಲಿಲ್ಲ ಆದಕಾರಣ ಅಟ್ಟಿನ ಕಾರ್ಯಗಳ ಮೇಲೆ ಸರ್ಕಾರದವರು ಇನ್ನೂ ಕಠಿಣತರವಾದ ನಿರ್ಬಂಧಗಳನ್ನು ಕಲ್ಪಿಸಿ ಅನರ್ಥ ಉಂಟಾಗುತ್ತಿರುವ ಕೇಡುಗಳನ್ನು ತಪ್ಪಿಸಬೇಕೆಂದು ನಿಶ್ಚಯಿಸುತ್ತಾರೆ ಈ ಕಾನೂನಿನ ಮೂರು ಉದ್ದೇಶಗಳು ನೆರವೇರುವವೆಂದು ನಂಬಲಾಗಿದೆ — (೧) ವಾರ್ತಾ ಪತ್ರಗಳ ಮೇಲೆ ಕಠಿಣತರವಾದ ನಿರ್ಬಂಧವನ್ನು ಕಲ್ಪಿಸುವುದು, (೨) ಅಂಚೆ ಕಛೇರಿಯಿಂದಾಗಲಿ ಬಂದರುಗಳ ಮೂಲಕವಾಗಲಿ ಈ ರಾಷ್ಟ್ರಕ್ಕೆ ಹೊರಗಿನಿಂದ ಬರುವ ದುಷ್ಟ ಗ್ರಂಥಗಳನ್ನೂ ಕಾಗದ ಪತ್ರಗಳನ್ನೂ ಹರಿಸದಂತೆ ತಡೆಯುವುದು, (೩) ರಾಜದ್ರೋಹವೇ ಮೊದಲಾದ ದುಷ್ಕಾರ್ಯಗಳನ್ನು ಕುರಿತು ಬರೆದು ಪ್ರಕಟಿಸುವ ವರ್ತಮಾನ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಇತರ ಕಾಗದ ಪತ್ರಗಳನ್ನೂ ಎಲ್ಲಿ ಸಿಕ್ಕಿದರೂ ಸಂಗ್ರಹ ಮಾಡಿ ಅಡಗಿಸಿಬಿಡುವುದು, ಈ ಮೂರು ಉದ್ದೇಶಗಳೂ ಈ ಕಾನೂನಿಂದ ಕೈಗೂಡಬೇಕಾಗಿದೆ

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್ಪಾಂಡೆನ್ಸ್

ಮದರಾಸ್ ಬಂದೋಬಸ್ತಿನ ಆಫೀಸಿನ ಮೇಲೆ ಆಕ್ಷೇಪಣೆ.

ಅಯ್ಯಾ,

೧೯೦೯ನೇ ಡಿಸಂಬರ್ ತಾ ೧೬ ರ ವೃತ್ತಾಂತ ಪತ್ರಿಕೆಯಲ್ಲಿ ಮದರಾಸ್ ಬಂದೋಬಸ್ತಿನ ಆಫೀಸಿನವರು ಕೇಳಿದವರಿಗೆಲ್ಲಾ ಉಚಿತವಾಗಿ ೧೯೧೦ನೇ

ಳಿನಿಯ ಕ್ಯಾಲೆಂಡರನ್ನು ಕಳುಹಿಸುವಂತೆ ಪ್ರಕಟಿಸಿದ್ದರಷ್ಟೆ. ಇದು ತಿಳಿವೆಂದು ಆಶಿಪಟ್ಟು ನಾನು ಎರಡು ಪೋಸ್ಟ್ ಕಾರ್ಡುಗಳಲ್ಲಿ ನನ್ನ ವಿಳಾಸವನ್ನು ಸ್ಪಷ್ಟವಾಗಿ ಬರೆದುಕೊಂಡಿದ್ದು ಈ ಜನವರಿ ೧೫ನೇ ತಾ ವರೆಗೂ ಕ್ಯಾಲೆಂಡರು ಬರುವವೆಂದು ಪೋಸ್ಟಾಫೀಸಿನಲ್ಲಿ ಕಾಯುತ್ತಿದ್ದೆನು ಆದರೆ ಅವರು ನನಗೆ ಕಳುಹಿಸಲಿಲ್ಲವೆಂಬ ಸಂಗತಿಯನ್ನು ನಿಮ್ಮ ವಾಚಕರಿಗೆ ತಿಳಿಸಿ ಅವರೂ ನನ್ನಂತೆ ವ್ಯಥಾ ನಷ್ಟಪಟ್ಟಾರೆಂದು ಎಚ್ಚರಿಸುತ್ತೇನೆ

ಕತ್ತನೂರು ಸುಬ್ಬರಾವ್

ವಿದ್ಯಾಪ್ರೋತ್ಸಾಹವು.

ಅಯ್ಯಾ,

ಅರಸೀಕೆರೆ ತಾಲ್ಲೂಕು ದೊಡ್ಡ ಮೇಟೀಕುರ್ಕೆ ಗ್ರಾಮದಲ್ಲಿ ಸ್ಕೂಲು ಸ್ಥಾಪಿತವಾಗಿ ಸುಮಾರು ನಾಲ್ವತ್ತು ವರುಷವಾಯಿತು ಗ್ರಾಮವು ಚಿಕ್ಕದಾದಾಗ್ಯೂ ಮೆಂಬರುಗಳ ಪ್ರೋತ್ಸಾಹದಿಂದ ಸ್ಕೂಲು ಹೀನಸ್ಥಿತಿಗೆ ಬರಲು ಅವಕಾಶವಾಗಲಿಲ್ಲ ಕಮಿಟಿ ಮೆಂಬರ್ ಮೆ|| ಹರಿಯಪ್ಪನವರು ಸ್ಕೂಲಿನ ಉಪಯೋಗಕ್ಕೋಸ್ಕರ ಒಂದು ಭಾರಿ ಕಟ್ಟಡವನ್ನು ಕಟ್ಟಿಸಿ, ವಿದ್ಯಾ ವಿಚಾರದಲ್ಲಿ ಬಾಲಕರ ತಂದೆತಾಯಿಗಳಿಗೆ ಆಸಕ್ತಿಯನ್ನುಂಟುಮಾಡಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವಂತೆ ಮಾಡಿದರು ವರ್ಗಾಯಿಸಲ್ಪಟ್ಟ ಮೆ|| ಯಂ. ಕೆ ತಿರುಮಲಾಚಾರ್ಯರು ಒಬ್ಬ ಸಹಾಯೋಪಾಧ್ಯಾಯನನ್ನು ಕಳುಹಿಸಿ ಕೊಟ್ಟರು ಪರೀಕ್ಷಾ ತರಗತಿಗಳು ಇಡಲ್ಪಟ್ಟವು ಕಳೆದ ಸಾಲಿನಲ್ಲಿ ಪರೀಕ್ಷೆಗೆ ಹೋಗಿದ್ದ ಏಳು ಮಂದಿ ಬಾಲಕರ ಪೈಕಿ ಮೂವರು ಎರಡನೇ ತರಗತಿಯಲ್ಲೂ ಒಬ್ಬನು ಮೊದಲನೇ ತರಗತಿಯಲ್ಲೂ ಪಾಸಾದರು ಮೆಂಬರ್ ಮತ್ತು ಜವಿನಾನ್ದಾರ್ ಮೆ|| ಹರಿಯಪ್ಪನವರು ಪ್ಯಾಸಾಗಿರತಕ್ಕ ವಿದ್ಯಾರ್ಥಿಗಳಿಗೆ ಮುಂದಿನ ತಿಂಗಳಲ್ಲಿ ಐದು ರೂಪಾಯಿ ಬಹುಮಾನವನ್ನು ಹಂಚುವರು ಮೇಲ್ಕಂಡವರಂತೆ ಆಯಾ ಗ್ರಾಮದ ಕಮಿಟಿ ಮೆಂಬರುಗಳು ಮತ್ತು ಮಾಸ್ಟರುಗಳು ಏಕೀಭವಿಸಿ ಕೆಲಸ ಮಾಡುವುದರಲ್ಲಿ ಬಾಲಕರಿಗೆ ವಿದ್ಯಾಭಿವೃದ್ಧಿಯಾಗಿ ಸರ್ಕಾರದವರ ಸಹಾಯ ಸಂಪತ್ತು ಒದಗುವುದರಲ್ಲಿ ಅಭ್ಯಂತರವಿಲ್ಲ ಹೊಸದಾಗಿ ಬಂದಿರುವ ಡೆಪ್ಯುಟಿ ಇನ್ಸ್ಪೆಕ್ಟರ್ ಮೆ|| ಕೆ ಎನ್ ವೀರಭದ್ರಯ್ಯನವರು ಈ ಗ್ರಾಮದ ಸ್ಕೂಲನ್ನು ಅಭಿವೃದ್ಧಿಗೆ ತರಲು ಹೆಚ್ಚಾದ ಸಹಾಯವನ್ನು ಒದಗಿಸುವರೆಂದು ನಂಬಿದೇನೆ

ವಿದ್ಯಾಭಿಮಾನಿ

ವೈಶ್ಯಾಭಿವೃದ್ಧಿಯು

ಅಯ್ಯಾ,

ಕಳೆದ ಜನವರಿ ತಾ ೧೩ ರಿಂದ ೧೬ ರ ವರೆಗೆ ದಕ್ಷಿಣಕಾಶಿ ಎಂದು ಪ್ರಸಿದ್ಧವಾಗಿರುವ ಶ್ರೀ ಶಿವಗಂಗಾ ಮಹಾಕ್ಷೇತ್ರದಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿಯ ಗಿರಿಜಾ ಕಲ್ಯಾಣ ಮಹೋತ್ಸವಕ್ಕಾಗಿ ದಯಮಾಡಿಸಿದ್ದ ಆರ್ಯವೈಶ್ಯ ಮಹಾಜನಗಳೆಲ್ಲರಿಗೂ ತ್ಯಾಮಗೊಂಡ್ಲು ಮೆ|| ರಾಜಾ ಶೀತಾರಾಮಶೆಟ್ಟರು ಕಟ್ಟಿಸಿರುವ ಛತ್ರದಲ್ಲಿ ಇವರ ಅಣ್ಣಂದಿರಾದ ರಾಜಾ ಸುಬ್ಬಯ್ಯಶೆಟ್ಟರಿಂದ ಭಕ್ಷ್ಯಭೋಜ್ಯಾದಿಗಳೊಡನೆ ಸತ್ಕಾರಗಳು ನಡೆದವು ಹೀಗೆ ವೈಶ್ಯ ಮಹಾಜನಗಳೆಲ್ಲರೂ ನೆರೆದಿದ್ದ ಸಮಯದಲ್ಲಿ ತ್ಯಾಮಗೊಂಡ್ಲು ಗ್ರಾಮದ ಆರ್ಯವೈಶ್ಯ ವರ್ತಕರಾದ ಮಿನಿ ಸಟೆಯವರು ಮೇಲ್ಕಂಡ ಸಮಸ್ತ ಜನಗಳಿಗೂ ತ್ಯಾಗ ವಗೈರೆ ಕೊಟ್ಟು ೧೪ ನೇ ತಾ ಶುಕ್ರವಾರದ ದಿನ ಸಾಯಂಕಾಲ ೫ ಘಂಟೆ ಆರಂಭವಾಯಿತು ೭ ಘಂಟೆ ವರೆಗೆ ಸಭೆಯನ್ನು ಸೇರಿಸಿ ಮೆ|| ಕೋಲಾರದ ಶಿವಬಾಲಯಶೆಟ್ಟರ ಅಧ್ಯಕ್ಷತೆಯಿಂದ ಮೆ || ತ್ಯಾಮಗೊಂಡ್ಲು ಚಿಟ್ಟೂರು ವೆಂಕಟಗಿರಿ ಗುಪ್ತರಿಂದ ವೈಶ್ಯ ಕರ್ತವ್ಯತೆಯ ವಿಷಯವಾಗಿಯೂ, ಬೆಂಗಳೂರು ಬಿ ಎ ಹೊನ್ನಪ್ಪಶೆಟ್ಟರಿಂದ ಉಪನಯನದ ವಿಷಯವಾಗಿಯೂ ಉಪನ್ಯಾಸಗಳು ನಡೆಸಲ್ಪಟ್ಟವು ಪುನಹ ೧೫ ನೇ ತಾ ನಲ್ಲಿಯೂ ಸಾಯಂಕಾಲ ೫ ಘಂಟೆಯಿಂದ ೭ ಘಂಟೆ ವರೆಗೆ ಬಿಟಿಶಾಯವರ ಅಧ್ಯಕ್ಷತೆಯಿಂದಲೇ ಮೆ|| ತ್ಯಾಮಗೊಂಡ್ಲು ಚಿಟ್ಟೂರು ಗೋವಿಂದಗುಪ್ತರಿಂದ ಗಣಪತಿ ಪ್ರಾರ್ಥನೆ ಮಾಡಲ್ಪಟ್ಟ ನಂತರ ಮೆ|| ತ್ಯಾಮಗೊಂಡ್ಲು ಚಿಟ್ಟೂರು ದಾಸಣ್ಣಗುಪ್ತರಿಂದ ಆಂಧ್ರ, ಗೀರ್ವಾಣ ವಿದ್ಯಾಭ್ಯಾಸದ ವಿಷಯವಾಗಿಯೂ ಐಕಮತ್ಯದ ವಿಷಯವಾಗಿಯೂ ಉಪನ್ಯಾಸವು ನಡೆಸಲ್ಪಟ್ಟು ನಂತರ ಸಭಾಜನಗಳೆಲ್ಲರೂ ತಮ್ಮ ಒಪ್ಪಿತವನ್ನು ತಿಳಿಸಿದರು ಅಗ್ರಾಸನಾಧಿಪತಿಗಳು ಅದನ್ನು ಅಂಗೀಕರಿಸಿ ಕೊಂಚ ಭಾಷಣ ಮಾಡಿದ ನಂತರ ಚಿಟ್ಟೂರು ದಾಸಣ್ಣಗುಪ್ತರಿಂದ ಇದಕ್ಕೆಲ್ಲಾ ಮೂಲಕಾರಣರಾದ ಎಂ ಬಾಗಯ್ಯ ಶ್ರೇಷ್ಠಿಗಳ ಶ್ರೇಯಃ ಪ್ರಾರ್ಥನೆಯೂ, ನಮ್ಮನ್ನು ಪಾಲಿಸುತ್ತಿರುವ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್, ಜಿ ಸಿ ಎಸ್ ಐ ಯವರ ಶ್ರೇಯಃ ಪ್ರಾರ್ಥನೆಯೂ, ಅನಂತರ ಬಿ ಎ ಹೊನ್ನಪ್ಪ ಶ್ರೇಷ್ಠಿಗಳಿಂದ ಮೈಸೂರು ಸಂಸ್ಥಾನದ ಆರ್ಯವೈಶ್ಯ ಮಹಾ ಸಭೆಯ ಮತ್ತು ಅವಶ್ಯಕವಟ್ಟ ಬ್ರಾಂಚ್ ಆಫೀಸುಗಳ ಶ್ರೇಯಃ ಪ್ರಾರ್ಥನೆಯೂ ಮಾಡಲ್ಪಟ್ಟು ತರುವಾಯ ಚಿಟ್ಟೂರು ಗೋವಿಂದ ಗುಪ್ತರಿಂದ ಮಂಗಳ ಪ್ರಾರ್ಥನೆಯು ನಡೆಸಲ್ಪಟ್ಟಿತು. ಇದರಂತೆಯೇ ವೈಶ್ಯ ವಿ ಹೋಯುರುಗಳೆಲ್ಲರೂ ಶುಭಾಭಿವೃದ್ಧಿಗಾಗಿ ಈ ರೀತಿ ನಡೆಸಿಕೊಂಡು ಆರ್ಯವೈಶ್ಯ ಮಹಾ ಸಭೆಯ ಕೋರಿಕೆಗಳನ್ನು ಜಾರಿಗೆ ತಂದುಕೊಂಡು ಅಭಿವೃದ್ಧಿ ಪಟ್ಟಾರೆಂದು ಕೋರುತ್ತೇನೆ

ಮಹಾಭಿಮಾನಿ.

ಇಂಡಿಯಾ ದೇಶದ ವೃತ್ತಾಂತಗಳು

ಈವೆನ್ಸ್ ಎಂಬ ಜಹಜು ೩೭|| ಲಕ್ಷ ರೂಪಾಯಿನ ಚಿನ್ನವನ್ನು ಬೊಂಬಾಯಿಗೆ ಕಳೆದ ವಾರ ತಂದಿರುತ್ತದೆ

ಕೋಟಾ ರೂಪಾಯಿಗಳು ಹಿಂದುಸ್ಥಾನಕ್ಕೆ ಚೀಣಾಯಿಂದ ಬಹಳವಾಗಿ ಬರುತ್ತವೆ ಎಂದು ತಂತೀ ವರ್ತಮಾನ ಬಂದಿದೆ

ಸಿಖ್ ಜನರ ಮೂರನೇ ವಿದ್ಯಾಭಿವೃದ್ಧಿಯ ಸಮಾಜವು ಅಮೃತಸಾರ ನಗರದಲ್ಲಿ ಬರುವ ತಿಂಗಳು ನಡೆಯುವುದಾಗಿದೆ

ಬೊಂಬಾಯಿನ ಗವರ್ನರವರು ಬಾಲ್ಗಾಂ ಎಂಬ ಸ್ಥಳದಲ್ಲಿ ಕಳೆದ ವಾರ ವ್ಯವಸಾಯೋಪಕರಣಗಳ ಪ್ರದರ್ಶನವನ್ನು ಪ್ರಾರಂಭಮಾಡಿ ತಾ. ೩ ರಲ್ಲಿ ವಾಪಸು ಬೊಂಬಾಯಿಗೆ ದಯಮಾಡಿದರು.

ವೈಸ್‌ರಾಯಿ ಪ್ರಭುಗಳ ಕುಮಾರ್ತೆಯಾದ ಲೇಡಿ ಎಲೀನ್ ಯಲಿಯಟ್ ಯವರಿಗೆ ದಡಾರವಾಗಿ ಕಾಯಿಲೆಯಾಗಿದಾರೆಂದು ತಂತೀವರ್ತಮಾನ ಬಂದಿದೆ

ವೈಸ್‌ರಾಯಿಯವರ ಪ್ರೈವೆಟ್ ಸೆಕ್ರಿಟರಿ ಕೆಲಸಕ್ಕೆ ನೇಮಕವಾಗಿರುವ ಕರ್ನಲ್ ಪೀಕೋಯವರು ಕಳೆದ ವಾರ ಶೀಮೆಯಿಂದ ಬಂದು ಆ ಅಧಿಕಾರವನ್ನು ವಹಿಸಿಕೊಂಡರು.

ಕಳೆದ ವಾರ ಕಲ್ಕತ್ತಾ ಪಟ್ಟಣದ ಸಮುದ್ರ ತೀರದಲ್ಲಿ ನಿಂತಿದ್ದ ಗ್ರೆಗೊರಿ ಅಪ್ಕಾರ್ ಎಂಬ ಜಹಜಿನಲ್ಲಿ ಬೆಂಕಿ ಹುಟ್ಟಿ ಸುಮಾರು ೫೦ ಸಾವಿರ ರೂಪಾಯಿನ ಸರಕು ನಷ್ಟವಾಗಿರುತ್ತದೆ

ನೀಲಂಬೂರಿನ ಜ್ಯೇಷ್ಠ ರಾಜರು ಕಳೆದ ಬುಧವಾರ ಬೆಳಿಗ್ಗೆ ಕಾಲವಾದರು ಇವರು ವಿಶೇಷ ಭಕ್ತರಾಗಿಯೂ ಧರ್ಮಿಷ್ಠರಾಗಿಯೂ ಇದ್ದರು ಅವರ ಸ್ಥಾನಕ್ಕೆ ಮೆ|| ಮಾನವಿಕ್ರಮರವರು ಎಲಿಯ ರಾಜರಾಗಿ ನೇಮಕವಾಗುವರು

ಬಂಗಾಳಾ ನಾಗಪುರ ರೈಲ್ ಗಾಡಿಗಳ ಪೈಕಿ ದೇಶೀಯ ಜನರು ಕುಳಿತು ಪ್ರಯಾಣ ಮಾಡುವಂಥಾ ಮೂರನೇ ಕ್ಲಾಸ್ ೨೯೧ ಗಾಡಿಗಳೊಳಗೆ ಸ್ನಾನದ ಕೋಣೆಗಳನ್ನು ಕಟ್ಟಿಸಿ ಕೊಡಬೇಕೆಂದು ರೈಲ್ವೆ ಬೋರ್ಡಿನವರು ಸ್ಯಾಂಕ್ಷನ್ ಮಾಡಿದಾರೆ

ಢಕ್ಕಾ ಜಿಲ್ಲೆಗೆ ಸೇರಿದ ಕೆಲವು ಗ್ರಾಮಗಳಲ್ಲಿ ದುಷ್ಟರ ಹಾವಳಿಯನ್ನು ಅಣಗಿಸುವುದಕ್ಕೆ ಸರ್ಕಾರದವರು ಶಿಕ್ಷಾರ್ಥವಾದ ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಿ, ಇವರ ಸಂಬಳವನ್ನು ಆ ಗ್ರಾಮಸ್ಥರಿಂದಲೇ ವಸೂಲ್ಮಾಡಬೇಕೆಂದು ಆಜ್ಞೆ ಮಾಡಿದಾರೆ.

ದಕ್ಷಿಣ ಕನರಾ ಜಿಲ್ಲೆಯ ಉಪ್ಪಿನಂಗಡಿ ತಾಲ್ಲೂಕಿನ ಒಮ್ಮಿಗಿ ದಾರರುಗಳ ಎರಡನೇ ವಾರ್ಷಿಕ ಸಭೆಯು ಈ ತಿಂಗಳು ತಾ ೧೯ ೨೦ ರಲ್ಲಿ ಪುತ್ತೂರಿನಲ್ಲಿ ನಡೆಯುವುದಾಗಿದೆ ಕೊಳ್ಳೆಂಗೋಡು ರಾಜರವರು ಸಭೆಯ ಅಗ್ರಾಸನವನ್ನು ವಹಿಸಿ, ಸಭಾ ಕಾರ್ಯಗಳನ್ನು ಜರುಗಿಸುವರು.

ಕಲ್ಕತ್ತಾ ಪಟ್ಟಣದ ಕಾಳೀಘಾಟಿನ ಪಂಡಿತೋತ್ತಮರಾದ ಗಿರೀಶ ಚಂದ್ರ ಭಟ್ಟಾಚಾರ್ಯರೂ, ಕಾಶೀ ಪಟ್ಟಣದ ಪ್ರಸಿದ್ಧ ಸಂಸ್ಕೃತ ಪಂಡಿತರಾದ ಮಹಾಮಹೋಪಾಧ್ಯಾಯ ಚಂದ್ರಕಾಂತತರ್ಕಾಲಂಕಾರರವರೂ ಕಳೆದ ವಾರ ತೀರಿಹೋದರೆಂದು ತಂತೀವರ್ತಮಾನ ಬಂದಿದೆ.

ಅನಂತಶಯನದಲ್ಲಿರುವ ನಾಯರ್ ಸೈನ್ಯದಲ್ಲಿ ನಾಲ್ವರು ಶಿಪಾಯಿಗಳು ಅಯೋಗ್ಯವಾದ ಕೃತ್ಯಗಳನ್ನು ಮಾಡಿದ್ದರಿಂದ ಸೈನ್ಯದ ಮ್ಯಾಜಿಸ್ಟ್ರೇಟರು ಅವರನ್ನು ದರ್ಯಾಫ್ತು ಮಾಡಿ, ಇಬ್ಬರಿಗೆ ತಲಾ ಏಳು ವರುಷವೂ, ಒಬ್ಬನಿಗೆ ಐದು ವರುಷವೂ, ಇನ್ನೊಬ್ಬನಿಗೆ ಮೂರು ವರುಷವೂ ಕಠಿಣ ಸಜಾ ವಿಧಿಸಿದ್ದಾರೆ

ಪೂರ್ವ ಬಂಗಾಳಾದಲ್ಲಿ ರಂಗಪುರ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದಲ್ಲಿ ಒಂದು ಸಿಡಿಮದ್ದಿನ ಗುಂಡು ಕಳೆದ ವಾರ ಪೊಲೀಸಿನವರಿಗೆ ಸಿಕ್ಕಿದೆ ಲೆಫ್ಟಿನೆಂಟ್ ಗೌರ್ನರವರು ಆ ಪ್ರಾಂತ್ಯ ಸಂಚಾರ ಹೊರಡುವವರಾಗಿರುವುದನ್ನು ಕಂಡು ಕ್ರೂರಾತ್ಮಗಳ್ಯಾರೋ ಅವರನ್ನು ಕೊಲ್ಲುವುದಕ್ಕಾಗಿ ಈ ಸಿಡಿಮದ್ದಿನ ಗುಂಡನ್ನು ತಯಾರುಮಾಡಿದ್ದರೆಂದು ಹೇಳುವರು.

ಮದರಾಸ್ ಪಟ್ಟಣದಲ್ಲಿ ಇಲಿ ಹೆಗ್ಗಣಗಳನ್ನು ಕೊಲ್ಲುವುದಕ್ಕೆ ಆರಂಭಿಸಿದ ಲಾಗಾಯ್ತು ಕಳೆದ ೩ ನೇ ತಾರೀಖಿನ ವರೆಗೆ ಹತ್ತು ಲಕ್ಷವನ್ನು ಕೊಂದಿದ್ದಾಯಿತು ಇದರೂ ಇನ್ನೂ ಅವು ಕಡಮೆಯಾಗದೆ ಏನೇ ಏನೇ ಹೆಚ್ಚುತ್ತಲೇ ಇರುವಂತೆ ಕಾಣುತ್ತದೆ ಯಾಕೆಂದರೆ ಈಗಲೂ ಪ್ರತಿ ವಾರದಲ್ಲೂ ೫೦ ೬೦ ಸಾವಿರದಂತೆ ಹಿಡಿದು ಕೊಲ್ಲುತ್ತಾ ಬಂದಿದಾರೆ

ಸಂಯುಕ್ತ ಅಧಿಸಸ್ಥಗಳಲ್ಲಿ ಮುಖಂಡರಾದ ಸ್ತ್ರೀಯರು ಮುಂದಿನ ತಿಂಗಳಲ್ಲಿ ಕಾಶೀ ಪಟ್ಟಣದಲ್ಲಿ ಸೇರಿ ಮಹಾ ಸಭೆಯನ್ನು ನಡಿಸುವವರಾಗಿದಾರೆ ಕಳೆದ ವಾರ ಈ ಭಾಗದಲ್ಲಿ ಒಂದು ಪ್ರಥಮ ಸಭೆ ನಡೆಯಿತು ಮೀರಾಪೂರ್ ಪಟ್ಟಣದ ಜ್ಯೋತಿಷ್ ಸರೂಪರವರ ಪತ್ನೀರವರು ಸಭಾನಾಯಕಿಯಾಗಿ, ಇನ್ನುಮುಂದೆ ಘೋಷಾ ಪದ್ಧತಿಯನ್ನು ತ್ಯಜಿಸಬೇಕೆಂದು ನಿರ್ಧರ ಮಾಡಿದರು

ಸಿಲೋನ್ (ಲಂಕಾ) ದ್ವೀಪದಿಂದ ಮಾಲ್ಡೀವ್ಸ್ ದ್ವೀಪಕ್ಕೆ ಹೋಗುತ್ತಿದ್ದ ಬೂಧಿಯಾಸಾ ಎಂಬ ಜಹಜು ಸಮುದ್ರ ಮಧ್ಯದಲ್ಲಿಲ್ಲೋ ಸಂಚರ ಗಾಳಿಗೆ ಸಿಕ್ಕಿ ಅದೃಶ್ಯವಾಗಿದೆ ಇದರಲ್ಲಿ ಹತ್ತು ಮಂದಿ ಯೂರೋಪ್ಯರೂ, ಎಪ್ಪತ್ತು ಜನ ದೇಶೀ ಪ್ರಯಾಣಿಕರೂ ಇದ್ದರಂತೆ, ಅದನ್ನು ಹುಡುಕುವುದಕ್ಕೆ ಒಂದು ಜಹಜು ಕಳುಹಲಾಗಿದೆ ಎಂತಲೂ ತಂತೀ ವರ್ತಮಾನ ಬಂದಿದೆ

ಇಂಡಿಯಾ ಗವರ್ನ್‌ಮೆಂಟಿನವರು ಒಂದು ಜಪಾನ್ ಹಡಗಿನ ಮೇಲೆ ಕೆಲವು ಪಟ್ಟೆಗೆಗಳ ತುಂಬಾ ಪಿಸ್ತೂಲುಗಳಿಗೆ ಹಾಕಿ ಜಾಮಾರ್ಡುವಂಥಾ ತೋಟಾಗಳನ್ನು ಕಲ್ಕತ್ತಾ ಪಟ್ಟಣಕ್ಕೆ ತರಿಸಿದರು ಅದನ್ನು ಸಮುದ್ರತೀರದಿಂದ ತೆಗೆಸಿಕೊಂಡು ಹೋಗುವುದಕ್ಕೆ ಒಬ್ಬ ಅಧಿಕಾರಿ ಹೋಗಿ ಅಜಮಾಯಿಷಿ ಮಾಡಿದಾಗ ಆ ಪೈಕಿ ಒಂದು ಪಟ್ಟಿಗೆಯು ಗೈರ್ಹಾಜರಿ ಆಗಿತ್ತು. ಸರ್ಕಾರದವರು ಅದನ್ನು ಪತ್ತೆಮಾಡಬೇಕೆಂದು ಬಹು ಸಾಹಸಪಡುತ್ತಿದಾರೆ.

ಮದರಾಸ್ ಪಟ್ಟಣದಲ್ಲಿ ಕೇರಿಗಳ ಮೇಲೆ ಹೋಗಿ ಮನೆಗಳೊಳಗೂ ಹೊರಪ್ರದೇಶದಲ್ಲೂ ಆರೋಗ್ಯವಿಚಾರಗಳನ್ನು ತನಿಖಿ ಮಾಡುವುದಕ್ಕೂ ಮನೆ ಹೆಂಗಸರಿಗೆ ಮಕ್ಕಳ ಪೋಷಣೆ ಶೌಚಾಚಾರಾದಿಗಳನ್ನು ಕಲಿಸಿಕೊಡುವುದಕ್ಕೂ ಮ್ಯುನಿಸಿಪಾಲಿಟಿಯವರು ವೈದ್ಯವನ್ನು ಕಲಿತಿರುವ ಮೂರು ಮಂದಿ ಸ್ತ್ರೀಯರನ್ನು ಸ್ಯಾನಿಟರಿ ಅಧಿಕಾರಿಗಳನ್ನಾಗಿ ನೇಮಕ ಮಾಡಿರುತ್ತಾರೆ. ಇವರಿಗೆ ತಿಂಗಳಿಗೆ ತಲಾ ೫೦ ರೂಪಾಯಿ ಸಂಬಳವೂ, ೧೫ ರೂಪಾಯಿ ಗಾಡಿ ಖರ್ಚೂ ಸಲ್ಲುತ್ತಿರುವವು

ಪ್ಲೇಗ್ ಉಪದ್ರವು ಹಿಂದುಸ್ಥಾನದಲ್ಲಿ ಈಚೆಗೆ ಹೆಚ್ಚಾಗುತ್ತಾ ಬಂದಿದೆ. ಕಳೆದ ವಾರ ೧೫,೩೬೪ ಪ್ರಜೆಗಳು ಈ ರೋಗದಲ್ಲಿ ಕಾಲವಾದರು. ಇದರ ಹಂಚಿಕೆ ಹ್ಯಾಗಂದರೆ,—ಸಂಯುಕ್ತ ಅಧಿಪತ್ಯಗಳು ೬,೨೧೦, ಪಂಜಾಬ್ ೨,೨೨೨, ಬಂಗಾಳಾ ೧,೪೮೧, ಮಧ್ಯ ಪ್ರಾಂತ್ಯಗಳು ೧,೨೪೯, ಬೊಂಬಾಯಿ ಅಧಿಪತ್ಯ ೬೫೩, ಬರ್ಮಾ ೨೫೧, ಮೈಸೂರು ಸಂಸ್ಥಾನ ೬೪, ಮದರಾಸ್ ಅಧಿಪತ್ಯ ೬೬, ಮಧ್ಯ ಇಂಡಿಯ ೨೧, ಹೈದರಾಬಾದ್ ಸಂಸ್ಥಾನ ೯, ಕಾಶ್ಮೀರ ೮

ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ವಾಲಂಟಿಯರ್ ಸೈನಿಕರು ಎರಡು ಪಕ್ಷಗಳಾಗಿ ಟಗ್ ಆಫ್ ವಾರ್ (ಹಗ್ಗವನ್ನು ಹಿಡಿದು ಸೆಳೆಯುವುದು) ಎಂಬ ಸಂದ್ಯವನ್ನು ಆಡಿದರು ಅಗ್ಗ ಒಂದು ಕಡೆ ಹಗ್ಗವನ್ನು ಹಿಡಿದಿದ್ದವರ ಪೈಕಿ ಲೆಯಿಡ್‌ಲಾ ಎಂಬಾತನಿಗೆ ಹ್ಯಾಗೋ ಆ ಹಗ್ಗವು ಕತ್ತಿಗೂ ಹುಟ್ಟಿಗೂ ಬಿಗಿಯಾಗಿ ಸುತ್ತಿಕೊಂಡಿತು ಅವನು ಉಸಿರುಕಟ್ಟಿ ಸತ್ತುಹೋದನು ಆಟದಲ್ಲಿ ಇಂಥಾ ಮರಣ ಸಂಭವಿಸಿದ್ದನ್ನು ಕೇಳಿ ಎಲ್ಲರೂ ಆಶ್ಚರ್ಯಪಡುತ್ತಾರೆ

ಮೆ|| ಅಲ್ಬರ್ಟ್ ಡಿಸಿಲ್ವಾ ಎಂಬಾತನು ರಂಗೂನ್ ಪಟ್ಟಣದ ಒಂದು ಕ್ರೈಸ್ತ ದೇವಾಲಯದಲ್ಲಿ ಕೆತ್ತಲೆಯೊಳಗೆ ಚಿತ್ರಪಟಗಳನ್ನು ತೋರಿಸುವಾಗ್ಗೆ ಆತನು ಕೆಲವು ದ್ರಾವಕಗಳನ್ನು ಜಾಗರೂಕತೆಯಿಂದ ಪ್ರಯೋಗಿಸದೆ ಹೋದದ್ದರ ನಿಮಿತ್ತ ಆತನ ಕೂಡ ಕೆಲಸ ಮಾಡುತ್ತಿದ್ದ ಪತ್ತರ್ಜಿ, ಷಣ್ಮುಗಂ ಎಂಬುವರಿಬ್ಬರೂ ಮೃತಪಟ್ಟರು ಇದಕ್ಕಾಗಿ ಡಿಸಿಲ್ವನ ಮೇಲೆ ನೋಕದ್ದಮೆ ಆಗಿ ಆತನಿಗೆ ೨೦೦ ರೂಪಾಯಿ ಜುಲ್ಮಾನೆ ಇಲ್ಲವೇ ೪೫ ದಿನಗಳ ಕಠಿಣ ಸಜಾ ಶಿಕ್ಷೆಯು ವಿಧಿಸಲ್ಪಟ್ಟಿತು.

ಝಿಂದ್ ಸಂಸ್ಥಾನದ ರಾಜರವರು ಕಲ್ಕತ್ತಾ, ಲಾಹೋರ್, ಲಕ್ನೋ, ದೆಹಲಿ, ಲೈಯಲ್ ಪುರಗಳಲ್ಲಿ ಪ್ರಕಟವಾಗುವ ಒಂಬತ್ತು ದೇಶೀಯ ವರ್ತಮಾನ ಪತ್ರಿಕೆಗಳನ್ನು ತಮ್ಮ ಪ್ರಜೆಗಳಲ್ಲಿ ಯಾರೂ ತರಿಸಕೂಡದೆಂತಲೂ, ತರಿಸಿದವರನ್ನು ಕಾನೂನ್ ಪ್ರಕಾರ ಶಿಕ್ಷಿಸುತ್ತೇನೆಂತಲೂ, ರಾಜದ್ರೋಹ ಯುಕ್ತವಾದ ಬರವಣಿಗೆಗಳುಳ್ಳ ಪತ್ರಿಕೆಗಳು ಯಾರಿಗಾದರೂ ಅಂಚೆಯ ಮೇಲೆ ತಲುಪಿದರೆ ಅವರು ಕೂಡಲೇ ಅವುಗಳನ್ನು ಪೊಲೀಸ್ ಸೂಪರಿಂಟೆಂಡೆಂಟಿಗೆ ಕಳುಹಿಸಿಕೊಡಬೇಕೆಂತಲೂ, ಅವರು ಅವುಗಳನ್ನು ತಮ್ಮ ತಿಳುವಳಿಕೆಗೆ ತರುವರೆಂತಲೂ ಇಸ್ತಿಹಾರು ಹಾಕಿಸಿರುತ್ತಾರೆ

ನಾಸಿಕ್ ಪಟ್ಟಣದಲ್ಲಿ ಕಲೆಕ್ಟರ್ ಮೆ|| ಜಾಕ್ಸನ್‌ರವರನ್ನು ಕ್ರೂರತನದಿಂದ ಕೊಂದುಹಾಕಿದ ಮೊಕದ್ದಮೆಯಲ್ಲಿ ಪ್ರಥಮ ವಿಚಾರಣೆ ನಡೆದು, ಮ್ಯಾಜಿಸ್ಟ್ರೇಟರು ಅಪರಾಧಿಯಾದ ಅನಂತ ಲಕ್ಷ್ಮಣ ಕಾನರೆಯನ್ನು ಹೈ ಕೋರ್ಟ್ ಸೆಷನ್ಸ್ ವಿಚಾರಣೆಗೆ ಗುರುಮಾಡಿದರು. ಮತ್ತು ಆ ಕೃತ್ಯ ನಡಿಸಿದ್ದರಲ್ಲಿ ಅವನಿಗೆ ಸಹಾಯ ಮಾಡಿದವರೆಂದು ಆರು ಮಂದಿಯನ್ನು ಸೆಷನ್ಸಿಗೆ ಗುರುಪಡಿಸಿರುತ್ತಾರೆ ಈ ಆರು ಮಂದಿ ಯಾರೆಂದರೆ,—ಗೋಪಾಲ ಕೃಷ್ಣಾ ಚಿಕಾನೆ, ವಿನಾಯಕ ನಾರಾಯಣ ದೇಶಪಾಂಡೆ, ಶಂಕರ ರಾಮಚಂದ್ರ, ಸೋಮನಾಥನ ಶಿವಾಜಿ ನಾರಾಯಣ ಜೋಷಿ, ಗಣೇಶ ಬಲವಂತವೈದ್ಯ, ದತ್ತಾತ್ರೇಯ ಪಾಂಡುರಂಗ ಜೋಷಿ

ಘಾತುಕರಿಂದ ಕೊಲ್ಲಲ್ಪಟ್ಟ ನಂದಲಾಲ ಬ್ಯಾನರ್ಜಿ ಎಂಬ ಪೊಲೀಸ್ ಸಬ್ ಇನ್ಸ್‌ಪೆಕ್ಟರ ತಾಯಿಗೆ ಗವರ್ನ್‌ಮೆಂಟಿನವರು ಒಂದು ಜಹಗೀರಿಯನ್ನು ದಯಪಾಲಿಸಿದ್ದರು ಆಕೆ ತೀರಿಹೋದದ್ದರಿಂದ ಆ ಜಹಗೀರಿಯನ್ನು ಸುಬೇದಾರ್ ಏರದ ರಾಯಿ ಸಾಹೇಬ್ ಚಂದ್ರಶೇಖರ್ ಬಹದೂರ್‌ಯವರ ಹೆಸರಿಗೆ ವರ್ಗಮಾಡಿರುತ್ತಾರೆ ಇವರ ಮನೆಯಲ್ಲೇ ನಂದಲಾಲನು ಬೆಳೆದವನು ಜಹಗೀರಿಯು ಬರ್ದವಾನ ಡಿಸ್ಟ್ರಿಕ್ಟಿಗೆ ಸೇರಿದ ಅದಾವಾ ಎಂಬ ಗ್ರಾಮದಲ್ಲಿನ ಅರು ೬೨೦ ಎಕರೆಯುಳ್ಳದ್ದು ಅದರಲ್ಲಿ ವರುಷಕ್ಕೆ ೧,೨೦೦ ರೂಪಾಯಿ ಉತ್ಪತ್ತಿಯಾಗುವುದು ಆತನಿಗೆ ಗಂಡು ಸಂತತಿ ಇಲ್ಲದಿದ್ದಾಗ ಜಹಗೀರಿಯು ವಾಪಸು ಗವರ್ನ್

ಕೊಂಟಿಗೆ ಸೇರಿಹೋಗಬೇಕೆಂದೂ, ಅದನ್ನು ಕ್ರಯಭೋಗ್ಯಾದಿಗಳನ್ನು ಮಾಡಕೂಡದೆಂದೂ ಸನ್ನದು ಬರೆದು ಕೊಡೋಣವಾಗಿದೆ.

ಹಿಂದುಸ್ಥಾನದ ವೈಸ್‌ರಾಯಿ ಪದವಿಗೆ ಸರ್ ಅಂತೋನಿ ಮೆಕ್ಡಾನೆಲ್ಡ್‌ಯವರು ನೇಮಕವಾಗುತ್ತಾರೆಂದು ಕೆಲವು ದಿನಗಳ ಹಿಂದೆ ವರ್ತಮಾನ ಬಂದಿತ್ತು. ಈಗ ಮಿ॥ ವಿನ್ಸ್ಟನ್ ಚರ್ಚಿಲ್ ಇವರು ವೈಸ್‌ರಾಯರಾಗುವರೆಂದು ಒಂದು ತಂತೀ ವರ್ತಮಾನವು ತಿಳಿಸುತ್ತದೆ.

ಈ ವರುಷ ಇಂಗ್ಲಿಷರೂ ಜಪಾನ್‌ನವರೂ ಏಕೀಭವಿಸಿ ಲಂಡನ್ ಪಟ್ಟಣದಲ್ಲಿ ಒಂದು ದೊಡ್ಡ ಪ್ರದರ್ಶನವನ್ನು ಮುಂದಿನ ಮೇ ತಿಂಗಳಿಂದ ನೊವೆಂಬರ್ ತನಕ ನಡಿಸುವವರಾಗಿದಾರೆ. ಈ ಪ್ರದರ್ಶನೋತ್ಸವಕ್ಕೆ ಹಿಂದುಸ್ಥಾನದಿಂದಲೂ ಕೆಲವು ವಸ್ತುಗಳನ್ನು ಕಳುಹಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ತೀರ್ಮಾನಮಾಡಿರುವರು.

ಶ್ರೀ ಶೃಂಗೇರಿ ಸ್ವಾಮಿಗಳು ಮುಂದಿನ ವಾರ ಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಡಿಯನ್ನು ತಲಪುವರು. ಅಲ್ಲೇ ಎಂಬ ಸ್ಥಳದಲ್ಲಿ ಸ್ವಾಮಿಗಳು ಅಗ್ರಾಸನವನ್ನು ವಹಿಸಿ ಒಂದು ಬ್ರಾಹ್ಮಣ ಸಮಾಜವನ್ನು ನಡಿಸುತ್ತಾರೆಂತಲೂ, ಅಗ್ಗೆ ಕೆಲವು ಆಚಾರ ವ್ಯವಹಾರಗಳನ್ನು ಚರ್ಚಿಸಿ ಬದಲಾವಣೆಗಳನ್ನು ಸೂಚಿಸುತ್ತಾರೆಂತಲೂ ತಿಳಿದು ಬರುತ್ತದೆ.

ಮದರಾಸ್ ಗವರ್ನಮೆಂಟಿನವರು ಸೀಮೆಯಲ್ಲಿ ಗಾಜಿನ ಸಾಮಾನುಗಳ ತಯಾರಿ ಮುಂತಾದದ್ದನ್ನು ಕಲಿತುಕೊಂಡು ಬರಬೇಕೆಂದು ಅಪೇಕ್ಷಿಸುವಂಥಾ ಒಬ್ಬ ವಿದ್ಯಾರ್ಥಿಗೆ ವರುಷಕ್ಕೆ ೩,೬೫೦ ರೂಪಾಯಿನಂತೆ ವೇತನವನ್ನು ಸರ್ಕಾರದಿಂದ ಕೊಡುವುದಾಗಿಯೂ, ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು ಅರ್ಜಿ ಬರೆದುಕೊಳ್ಳಬಹುದೆಂತಲೂ ಪ್ರಕಟಮಾಡಿದಾರೆ.

ಕಲ್ಕತ್ತಾ ಪಟ್ಟಣದಲ್ಲಿದ್ದ ಜಾಟ್ ಎಂಬ ದೇಶೀಯ ಸೈನಿಕರಲ್ಲಿ ಕೆಲವರು ಪಿತೂರಿಕೋರರ ಚಿತಾವಣೆಗೂ ದುರ್ಬೋಧನೆಗೂ ಸಿಕ್ಕಿದಾರೆಂದು ಸರ್ಕಾರದವರಿಗೆ ತಿಳಿದುಬಂದದ್ದರಿಂದ ಅವರನ್ನೆಲ್ಲಾ ತನಿಖೆಮಾಡಿ, ಕೆಲವರನ್ನು ಸೈನ್ಯದಿಂದ ವಜಾಮಾಡಿಬಿಟ್ಟರು; ಕೆಲವರನ್ನು ಕಠಿಣಸಜಾ ಶಿಕ್ಷೆಗೆ ಗುರಿಮಾಡಿದರು. ಉಳಿದವರನ್ನೆಲ್ಲಾ ಸೈನ್ಯಾಧಿಪತಿಗಳು ಆ ರಾಜ್ಯದಿಂದ ಸಿಂಧುನದೀ ಪ್ರಾಂತ್ಯಕ್ಕೆ ಹೋಗಬೇಕೆಂದು ವರ್ಗಮಾಡಿಬಿಟ್ಟರು

ವಾಯವ್ಯ ಪ್ರಾಂತ್ಯದ ಸರಹದ್ದಿನ ಬಳಿ ಪೋಲೀಸು ಕಾನ್‌ಸ್ಟೇಬಲ್‌ರಾಗಿದ್ದ ಇಬ್ಬರು ಪಠಾಣರು ಸೈದಾಹಾಮದ್ ಎಂಬ ರೈಲ್ವೆ ಸ್ಟೇಷನ್ನೊಳಕ್ಕೆ ನುಗ್ಗಿ ಲೂಟಿಮಾಡಿ, ಸಿಕ್ಕಿದ ಹಣಕಾಸು, ಟಿಕೆಟ್ಟುಗಳು, ಪೋಲೀಸ್ ದಿರಸುಗಳು, ಮದ್ದು ಗುಂಡು ಮುಂತಾದದ್ದನ್ನೆಲ್ಲಾ ಹೊತ್ತುಕೊಂಡು ಹೋದರು. ಇದಲ್ಲದೆ ಅವರು ಅಲ್ಲಿದ್ದ ಅಂಗಡಿಗಳಲ್ಲೂ ೧,೦೦೦ ರೂಪಾಯಿನ ಸರಕನ್ನೂ ನಾಣ್ಯಗಳನ್ನೂ ದೋಚಿಕೊಂಡು ಹೋಗಿದಾರೆ ಎಂಬದಾಗಿ ಕ್ವೆಟ್ಟಾ ಎಂಬ ಠಾಣ್ಯದಿಂದ ಸಮಾಚಾರ ಬಂದಿದೆ

ಈ ಸಲ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಬಹುಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಲಿಲ್ಲ. ಆ ಪೈಕಿ ಅನೇಕರು ಸೇರಿ ತಮಗೆ ರಿಯಾಯತಿಯನ್ನು ತೋರಿಸಬೇಕೆಂದು ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘಕ್ಕೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದಾರೆ. ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ಇರುವ ಕೆಲವು ವಿದ್ಯಾರ್ಥಿಗಳು ತಮಗೆ ಇನ್ನೊಂದು ಸಲ ಈ ವರುಷದಲ್ಲೇ ಪರೀಕ್ಷೆಯನ್ನು ಇಡಿಸಿಕೊಡಬೇಕೆಂದು ಮದರಾಸ್ ಗವರ್ನರವರಿಗೆ ವಿಜ್ಞಾಪನೆಮಾಡಿಕೊಂಡಿದಾರೆ.

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳಲ್ಲಿರುವ ನಾಡಾರ್ ಎಂಬ ಜಾತಿಯ ಮುಖಂಡರು ಪೊರಿಯಾರ್ ಎಂಬ ಸ್ಥಳದಲ್ಲಿ ಒಂದು ಮಹಾ ಸಭೆಯನ್ನು ಪ್ರಾರಂಭಿಸಿದಾರೆ. ಸುಮಾರು ೩೫೦ ಮಂದಿ ಪ್ರತಿನಿಧಿಗಳು ಎಲ್ಲಾ ಪ್ರಾಂತ್ಯಗಳಿಂದ ಬಂದು ಸೇರಿರುವರು. ರತ್ನಸ್ವಾಮಿನಾಡಾರ್ ಯವರು ಸಭಾನಾಯಕರಾಗಿಯೂ, ಕಲ್ಯಾಣ ಸುಂದರನಾಡಾರ್ ಯವರು ಸೆಕ್ರಿಟರಿಯವರಾಗಿಯೂ ನಿಂತು, ತಮ್ಮ ಜನರು ವಿದ್ಯೆ ವ್ಯಾಪಾರಾದಿಗಳಲ್ಲಿ ಅಭಿವೃದ್ಧಿಗೆ ಬರತಕ್ಕ ಮಾರ್ಗಗಳನ್ನು ಕುರಿತು ಚರ್ಚೆ ಮಾಡುತ್ತಿರುವರು.

ಪೂರ್ವಬಂಗಾಳಾ ಅಧಿಸತ್ಯದಲ್ಲಿ ಚಾಂದಪುರ ಜಿಲ್ಲೆಗೆ ಸೇರಿದ ಸರಸಿಂಗಪುರದಲ್ಲಿ ಮಾತೃಪೂಜಾ ಎಂಬ ಕಾರ್ಯಕ್ಕೆ ಕೆಲವರು ಚಂದಾ ಹಣವನ್ನು ಕೂಡಿಸುತ್ತಾ ಬಂದರು. ನಾಗೇಂದ್ರ ಚಕ್ರವರ್ತಿ, ವಿನಿನದೇವ, ಕೃಷ್ಣಸಾಹ ಎಂಬೀ ಮೂರು ಮಂದಿ ಹುಡುಗರು ಅಲ್ಲಿನ ಪೋಸ್ಟ್ ಆಫೀಸಿಗೆ ಹೋಗಿ ಯಶವಂತ ಕುಮಾರ ದಾಸ್ ಎಂಬ ಪೋಸ್ಟ್ ಮಾಸ್ಟರನ್ನು ಆ ಫಂಡಿಗೆ ಚಂದಾ ಕೊಡಬೇಕೆಂದು ಕೇಳಿ, ಅವರು ಕೊಡದೆ ತಿರಸ್ಕರಿಸಿದಾಗ ಅವರವರಿಗೆ ಕಠಿಣವಾಗಿ ಜಗಳ ನಡೆದು ಮೂವರೂ ಅವರ ಮೇಲೆ ಬಿದ್ದು ಹೊಡೆಯುವುದಕ್ಕೆ ಹೋದರು. ಆ ಪೋಸ್ಟ್ ಮಾಸ್ಟರು ಮೂರು ಮಂದಿಯನ್ನೂ ಹಿಡಿದು ಪೋಲೀಸಿಗೆ ಒಪ್ಪಿಸಿದರು. ಕಳೆದ ವಾರ ಮ್ಯಾಜಿಸ್ಟ್ರೇಟರು ದರ್ಯಾಪ್ತು ಮಾಡಿ ಮೊದಲನೇ ಹುಡುಗನಿಗೆ ೧ ವರುಷ, ಎರಡನೆಯವನಿಗೆ ೯ ತಿಂಗಳು, ಮೂರನೆಯವನಿಗೆ ೬ ತಿಂಗಳು, ಈ ರೀತಿ ಕಠಿಣ ಸಜಾ ವಿಧಿಸಿದರು.

ಕಲ್ಕತ್ತಾ ಪಟ್ಟಣದ ಹೈಕೋರ್ಟಿನಲ್ಲಿ ವೀರೇಂದ್ರ ದತ್ತಗುಪ್ತನೆಂಬ ೧೯ ವಯಸ್ಸಿನ ಹುಡುಗನು ಪೋಲೀಸ್ ಇನ್ಸ್ಪೆಕ್ಟರ್ ಸ್ಯಾಂಸುಲ್ ಆಲಂ ಎಂಬಾತನನ್ನು ಪಿಸ್ತೂಲಿನಿಂದ ಹೊಡೆದು ಕೊಂದು ಹಾಕಿದ ಮೊಕದ್ದಮೆಯನ್ನು ಕಳೆದ ವಾರ ಹೈಕೋರ್ಟ್ ಸೆಷನ್ಸ್ ಜಡ್ಜರು ದರ್ಯಾಪ್ತು ಮಾಡಿ, ಅವನಿಗೆ ಮರಣ ದಂಡನೆಯನ್ನು ವಿಧಿಸಿದರು. ಅತ್ತಲಾಗಿ ಪೋಲೀಸ್ ಕಮಿಷನರವರು ಆ ಕೊಲೆಗೇಡಿಯನ್ನು ಹಿಡಿದು ದಸ್ತಗಿರಿ ಮಾಡಿದಂಥಾ ನಾಲ್ಕು ಮಂದಿಯನ್ನು ಕರೆಸಿಕೊಂಡು, ಸರ್ಕಾರದಿಂದ ಸ್ಯಾಂಕ್ಷನ್ ಆಗಿದ್ದ ೧,೦೦೦ ರೂಪಾಯಿ ಬಹುಮಾನವನ್ನು ಹಂಚಿಕೊಟ್ಟರು. ಹೈ ಕೋರ್ಟ್ ಜವಾನನಾದ ರಾಮಧನಿ ಕಾಹಾರನಿಗೆ ರೂ. ೪೦೦; ಪೋಲೀಸ್ ಸವಾರ್ ಅಹಮದಲ್ಲಿ, ಕಾನ್‌ಸ್ಟೇಬಲ್ ರಾಮಜನಂ ಸಿಂಗ್, ಕಾನ್‌ಸ್ಟೇಬಲ್ ಧರಂ ಸಿಂಗ್, ಈ ಮೂವರಿಗೂ ತಲಾ ೨೦೦ ರೂಪಾಯಿ, ಈ ರೀತಿ ಹಂಚಿ ಅವರು ಮಾಡಿದ ಮಹನತ್ತನ್ನು ಕೊಂಡಾಡಿದರು. ಕೊಲೆಯಾದ ಇನ್ಸ್ಪೆಕ್ಟರ್ ಸ್ಯಾಂಸುಲ್ ಆಲಮನ ಹೆಂಡತಿ ಮಕ್ಕಳ ಜೀವನಕ್ಕಾಗಿ ಗವರ್ನಮೆಂಟಿನವರು ಒಂದು ಜಹಗೀರಿಯನ್ನು ಕೊಡುವಂತೆ ಸ್ಯಾಂಕ್ಷನ್ ಮಾಡಿ, ಅದುವರೆಗೆ ಅವರ ಜೀವನಕ್ಕೆ ೧,೫೦೦ ರೂಪಾಯಿ ಕೊಡತಕ್ಕದ್ದೆಂದು ಹುಕುಂ ಕೊಟ್ಟಿರುತ್ತಾರೆ.

ವಿದೇಶ ವರ್ತಮಾನಗಳು.

ಅಮೇರಿಕಕ್ಕೆ ಸೇರಿದ ಪೆನ್ಸಿಲ್ವೇನಿಯಾ ಡಿಸ್ಟ್ರಿಕ್ಟಿನಲ್ಲಿ ಅರ್ನೆಸ್ಟ್ ಎಂಬ ಕಲ್ಲಿದ್ದಲ ಗಣಿಯೊಳಗೆ ಅನಾಹುತ ಸಂಭವಿಸಿ ಹನ್ನೊಂದು ಮಂದಿ ತೀರಿಹೋದರೆಂದು ತಂತೀ ವರ್ತಮಾನ ಬಂದಿದೆ.

ವಿಲಾಯತಿ ರಾಜ್ಯದ ಚಕ್ರವರ್ತಿ ಸಾರ್ವಭೌಮರವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್‌ಯವರು ಪತ್ನೀ ಪರಿವಾರ ಸಹಿತ ಈಜಿಪ್ಟ್ ದೇಶವನ್ನು ತಲಪಿದರು. ಅಲ್ಲಿ ಪ್ರಜೆಗಳ ಸತ್ಕಾರವನ್ನು ಸ್ವೀಕರಿಸಿ, ದಕ್ಷಿಣ ಆಫ್ರಿಕಕ್ಕೆ ದಯಮಾಡುವವರಾಗಿದಾರೆ.

ಸಿಂಹಾಸನ ಪದ ಭ್ರಷ್ಟರಾದ ತುರ್ಕಿರಾಜ್ಯದ ಮಾಜಿ ಸುಲ್ತಾನ್ ಅಬ್ದುಲ್ ಹಾಮಿದ್‌ಯವರು ಸಾಲೋನಿಕಾದಲ್ಲಿ ಇರುತ್ತಾರಷ್ಟೆ. ಇವರಿಗೆ ಬುದ್ಧಿಭ್ರಮಣೆಯುಂಟಾಗಿದೆ ಎಂದೂ, ಊಟ ಉಪಚಾರಗಳನ್ನು ಒಲ್ಲದೆ ತ್ಯಜಿಸಿರುತ್ತಾರೆಂದೂ ಸಮಾಚಾರ ಬಂದಿದೆ.

ಮಧ್ಯ ತುರ್ಕಿಸ್ಥಾನದಲ್ಲಿರುವ ಬೋಖಾರಾ ಎಂಬ ಸ್ಥಳದಲ್ಲಿ ಜನರು ದಂಗೆಯೆದ್ದಿರುತ್ತಾರೆ. ಸರ್ಕಾರದವರಿಗೂ ದಂಗೇಕೋರರಿಗೂ ಕದನಗಳು ನಡೆದು ಎರಡು ಕಡೆಗಳಲ್ಲೂ ೭೦೦ ಜನರು ಹತರಾದರೆಂತಲೂ, ೭೦೦ ಮಂದಿಗೆ ಗಾಯಗಳಾದವೆಂತಲೂ ತಂತೀ ವರ್ತಮಾನ ಬಂದಿದೆ,

ಉತ್ತರ ಅಮೇರಿಕಕ್ಕೆ ಸೇರಿದ ಕೊಲೊರೇಡೋ ಜಿಲ್ಲೆಯಲ್ಲಿ ಪ್ರೈಮರೋ ಎಂಬ ಸ್ಥಳದಲ್ಲಿರುವ ಭಾರೀ ಕಬ್ಬಿಣದ ಕಾರ್ಖಾನೆಯಲ್ಲಿ ಕಳೆದವಾರ ದೊಡ್ಡ ಅನಾಹುತ ಸಂಭವಿಸಿತು. ೧೪೯ ಜನ ಕೂಲಿ ಆಳುಗಳು ಮೃತಪಟ್ಟರೆಂದೂ, ೭೯ ಶವಗಳು ಸಿಕ್ಕಿರುತ್ತವೆಂದೂ ತಂತೀ ವರ್ತಮಾನ ಬಂದಿದೆ.

ಕೊರಿಯಾ ರಾಜ್ಯಕ್ಕೆ ಸೇರಿದ ಪೋಂಗ್ ಎಂಬ ಸ್ಥಳದಲ್ಲಿ ದೇಶೀಯ ಜನರು ದಂಗೆಯೆದ್ದು, ಅಲ್ಲಿ ವಾಸಮಾಡಿಕೊಂಡಿರುವ ೨೦ ಮಂದಿ ಜಪಾನ್ ಪ್ರಜೆಗಳನ್ನು ಕೊಂದುಬಿಟ್ಟರೆಂತಲೂ, ಅವರಿಗೆ ಜಪಾನ್‌ನವರನ್ನು ಅಲ್ಲಿಂದ ಓಡಿಸಿಬಿಡಬೇಕೆಂಬ ಅಭಿಪ್ರಾಯವುಂಟಾಗಿರುವಂತೆಯೂ ತಂತೀವರ್ತಮಾನ ಬಂದಿದೆ

ಈಜಿಪ್ಟಿನ ಮುಖ್ಯಪಟ್ಟಣವಾದ ಕೈರೋ ನಗರದಲ್ಲಿ ಸಿಂಗರ್ ಎಂಬಾತನು ವಿಮಾನದಲ್ಲಿ ಕುಳಿತು ಹಾರಿಹೋಗುವ ಅಭ್ಯಾಸ ಮಾಡುತ್ತಿದ್ದಾಗ ಅಕಸ್ಮಾತ್ತಾಗಿ ಆಕಾಶದಿಂದ ಬಿದ್ದುಬಟ್ಟನು. ಅವನ ಎರಡು ಕಾಲುಗಳೂ ಒಂದು ಕೈಯೂ ಮುರಿದು ಹೋದದ್ದಲ್ಲದೆ ಅವನ ಎದೆಗೆ ಘೋರಾ ಪೆಟ್ಟು ತಗಲಿದೆ.

ವಿಲಾಯತಿಗೆ ಸೇರಿದ ಬ್ರೈಟನ್ ಪಟ್ಟಣದಲ್ಲಿ ಎಕ್ಸ್‌ಪ್ರೆಸ್ ರೈಲ್ ಗಾಡಿಯು ಗಂಟೆಗೆ ೪೦ ಮೈಲಿಯಂತೆ ರಭಸವಾಗಿ ಓಡುತ್ತಾಹೋಗಿ ಸ್ಟೋಟ್ ನೆಸ್ ಎಂಬಲ್ಲಿ ಸ್ಟೇಷನ್ನೊಳಕ್ಕೆ ನುಗ್ಗಿ ಗೋಡೆಗಳಿಗೆ ಬಡಿದು ಸ್ಟೇಷನ್ನಿನ ಕೆಲವು ಭಾಗ ಕೆಡವಿತು. ಗಾಡಿಗಳಲ್ಲಿ ಪ್ರಯಾಣ ಮಾಡುತ್ತಿದ್ದವರ ಪೈಕಿ ಏಳು ಮಂದಿ ಮೃತಪಟ್ಟರು; ಇಪ್ಪತ್ತಾರು ಜನರಿಗೆ ಗಾಯಗಳಾಗಿವೆ.

ಉತ್ತರ ಅಮೇರಿಕಕ್ಕೆ ಸೇರಿದ ಕೆಂಟಕಿ ಜಿಲ್ಲೆಯೊಳಗೆ ಡ್ರೇಕ್ಸ್‌ಬೊರೊ ಎಂಬ ಕಲ್ಲಿದ್ದಲ ಗಣಿಯಲ್ಲಿ ಹೊಗೆಯು ಹತ್ತಿಕೊಂಡು ಗಣಿಯು ಮಹಾ ಶಬ್ದದೊಡನೆ ಹಾರಿ ಅನಾಹುತವಾಯಿತು. ಆ ಸಮಯದಲ್ಲಿ ಅದರೊಳಗೆ ಕೆಲಸ ಮಾಡುತ್ತಿದ್ದವರ ಪೈಕಿ ಮೂವತ್ತೈದು ಮಂದಿ ಮೃತಪಟ್ಟರು; ಇಪ್ಪತ್ತು ಜನರಿಗೆ ಘೋರಾ ಗಾಯಗಳಾಗಿ ಇವರು ಬದುಕುವುದೂ ಪ್ರಯಾಸವಾಗಿದೆ.

ಆಸ್ಟ್ರಿಯಾದಲ್ಲಿರುವ ಕೊರಿಂಥಿಯಾವಿಗೆ ಸೇರಿದ ರಾಯಬಲ್ ಎಂಬ ಪಟ್ಟಣದಲ್ಲಿ ಜನವರಿ ತಾ. ೮ ರಲ್ಲಿ ಎರಡು ಅಂತಸ್ತಿನ ಭಾರೀ ಆಸ್ಪತ್ರೆಯು ಅನಾಮತ್ತಾಗಿಯೂ ಅಕಸ್ಮಾತ್ತಾಗಿಯೂ ಭೂಮಿಯೊಳಕ್ಕೆ ಕುಸಿದು ಅದೃಶ್ಯವಾಯಿತು. ಅಗ್ಗೆ ಅದರಲ್ಲಿ ೬ ಮಂದಿ ರೋಗಿಗಳಿದ್ದರು. ಅದರ ಕೆಳಗಡೆ ಒಂದು ಗಣಿಯು ಇದ್ದಿತಾದದ್ದರಿಂದ ಈ ಅನಾಹುತ ಸಂಭವಿಸಲು ಕಾರಣವಾಯಿತೆಂದು ಹೇಳುತ್ತಾರೆ.

ಮೆಕ್ಸಿಕೋ ರಾಜ್ಯಕ್ಕೆ ಸೇರಿದ ಲಾಸ್ ಎಸ್ಪರಾನ್ಸಾಸ್ ಎಂಬ ಸ್ಥಳದಲ್ಲಿ ಕಲ್ಲಿದ್ದಲ ಗಣಿಯೊಳಗೆ ಬೆಂಕಿ ಹುಟ್ಟಿ ಭಯಂಕರವಾದ ಶಬ್ದದೊಡನೆ ಹಾರಿ ದೊಡ್ಡ ಅನಾಹುತವಾಯಿತು. ಒಬ್ಬ ಕೂಲಿಕಾರನು ಗಣಿಯೊಳಗೆ ಸಿಗರೆಟ್ಟನ್ನು ಸೇದಿದ್ದೇ ಈ ಅನಾಹುತಕ್ಕೆ ಕಾರಣವೆಂದು ಹೇಳುತ್ತಾರೆ. ಅಂತು ಕೂಲಿಕಾರರಲ್ಲಿ ೬೮ ಜನರು ಮೃತಪಟ್ಟರು; ೫೦ ಮಂದಿಗೆ ಸುಟ್ಟ ಗಾಯಗಳಾಗಿರುತ್ತವೆ.

ವಿಲಾಯತಿಯಲ್ಲಿ ಕಾಲವಾದ ಮಿಸ್ ಲಿಡಿಯಾ ರಾಕ್ಸ್ ಎಂಬಾಕೆಯು ೧॥ ಕೋಟಿ ರೂಪಾಯಿ, ಸರ್ ಜಾರ್ಜ್ ವೈಟ್ ಎಂಬಾತನು ೧೨,೦೦,೦೦೦ ರೂಪಾಯಿ, ಅರ್ಥರ್ ಮಿಲ್ಸ್ ಎಂಬಾತನು ೧,೫೦,೦೦೦ ರೂಪಾಯಿ, ಸರ್ ಅಲ್‌ಫ್ರೆಡ್ ಜೋನ್ಸ್ ಎಂಬಾತನು ೭,೫೦,೦೦೦ ರೂಪಾಯಿ, ಈ ರೀತಿ ತಮ್ಮ ತಮ್ಮ ಆಸ್ತಿಯಿಂದ ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾರೆ.

ಚೀನಾ ರಾಜ್ಯಕ್ಕೆ ಸೇರಿದ ಹ್ಯಾಂಕೋ ಪಟ್ಟಣದಲ್ಲಿ ಚೀನಾ ವಿದ್ಯಾನಿಲಯವನ್ನು ಸ್ಥಾಪನೆ ಮಾಡುವರು. ಇದನ್ನು ಪ್ರಾರಂಭಮಾಡಲು ೭॥ ಲಕ್ಷ ರೂಪಾಯಿ ಬೇಕೆಂದೂ, ಅದು ಶಾಶ್ವತವಾಗಿ ನಡೆಯುವುದಕ್ಕೆ ೩೦ ಲಕ್ಷ ರೂಪಾಯಿ ಮೂಲಧನವಾಗಬೇಕೆಂದೂ ಅಂದಾಜಾ ಮಾಡಲ್ಪಟ್ಟಿದೆ. ಈ ಹಣವನ್ನು ವಿಲಾಯತಿಯಲ್ಲಿ ಚಂದಾ ಮೂಲಕ ಕೂಡಿಸುವವರಾಗಿದಾರೆ. ಇದಕ್ಕೋಸ್ಕರ ಲಂಡನ್ ಪಟ್ಟಣದ ಮ್ಯಾನ್ಷನ್ ಹೌಸ್ ಎಂಬ ಬಂಗಲೆಯಲ್ಲಿ ಪ್ರಮುಖರೆಲ್ಲಾ ಸೇರಿ ಒಂದು ಮಹಾ ಸಭೆಯನ್ನು ನಡಿಸುವವರಾಗಿದಾರೆ.

ಜರ್ಮನಿ ರಾಜ್ಯದಲ್ಲಿ ಅಂತರಿಕ್ಷ ಮಾರ್ಗದಲ್ಲೇ ಊರೂರಿಗೆ ಹೋಗಿ ಬರುವಂಥಾ ವಿಮಾನಗಳ ಕಂಪನಿಯನ್ನು ಪ್ರಾರಂಭಿಸಬೇಕೆಂದು ಕೆಲವರು ಏರ್ಪಾಡು ಮಾಡುತ್ತಿದಾರೆ. ಈ ವಿಮಾನಗಳ ಟಪಾಲು ಮೊದಲು ಡಸಲ್‌ಡಾರ್ಫ್, ಕಲೋನ್, ಸ್ಟಟ್‌ಗಾರ್ಟ್, ಎಸ್ಸನ್, ಎಲ್ಬರ್‌ಫೆಲ್ಡ್, ಮಾನ್‌ಹೀಮ್, ಮ್ಯೂನಿಚ್, ಲೀಪ್‌ಜಿಗ್, ಹ್ಯಾಂಬರ್ಗ್, ಈ ಪಟ್ಟಣಗಳಿಗೆ ಹೋಗಿ ಬರುವಂತೆ ಸ್ಟೇಷನ್ ಮಾಡುತ್ತಾರೆ. ಪ್ರತಿ ಒಂದು ವಿಮಾನದಲ್ಲೂ ೪೦ ಮಂದಿ ಕುಳಿತು ಪ್ರಯಾಣ ಮಾಡಬಹುದು. ಜೆಪ್ಪೆಲಿನ್‌ರವರ ವಿಮಾನಗಳ ಕಾರ್ಖಾನೆಯಲ್ಲಿ ವಿಮಾನಗಳನ್ನು ತಯಾರ್ಮಾಡಿ ಕೊಡುವಂತೆ ಕಂಟ್ರಾಕ್ಟು ವಹಿಸುವವರಾಗಿದಾರೆ

ವಿಲಾಯತಿ ರಾಜ್ಯದಲ್ಲಿ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯು ಪೂರ್ತಿಸಿದ ಹಾಗಾಯಿತು. ಇನ್ನು ೭ ೮ ಸ್ಥಳಗಳಲ್ಲಿ ಮಾತ್ರ ಚುನಾವಣೆಯಾಗಬೇಕಾಗಿದೆ ಇದುವರೆಗೆ ನಡೆದಿರುವ ಚುನಾವಣೆಯಿಂದ ಲಿಬರಲ್ ಪಕ್ಷದ ಮೆಂಬರುಗಳೇ ಹೆಚ್ಚಾಗಿದಾರೆ. ಈ ಪಕ್ಷದ ಮುಖಂಡರೇ ರಾಜ್ಯಭಾರವನ್ನು ಚಲಾಯಿಸುವರು. ಪಾರ್ಲಿಮೆಂಟು ಈ ತಿಂಗಳ ಕಡೇ ವಾರದಲ್ಲಿ ಸಭೆ ಸೇರಿದಾಗ ಲಿಬರಲ್ ಪಕ್ಷದವರು ಮೊದಲು ಬಡ್ಜೆಟ್ಟನ್ನು ಕುರಿತು ಚರ್ಚೆ ಮಾಡುವರೋ, ಇಲ್ಲವೇ ಹೌಸ್ ಆಫ್ ಲಾರ್ಡ್ಸ್ ಎಂಬ ಎರಡನೇ ಸಭೆಯಲ್ಲಿ ಹೊಸ ಬದಲಾವಣೆಗಳಾಗಬೇಕಾಗಿರುವುದನ್ನು ಕುರಿತು ಚರ್ಚೆ ಮಾಡುವರೋ ಇನ್ನೂ ನಿಷ್ಕರ್ಷೆಯಾಗಿಲ್ಲ.

ಫ್ರಾನ್ಸ್ ಸಂಸ್ಥಾನದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಸೀನ್ ಎಂಬ ನದಿಯೊಳಗೆ ಅಪೂರ್ವವಾದ ಪ್ರವಾಹಗಳು ಒಂದು ಎರಡು ವಾರಗಳ ತನಕ ಇಳಿಯಲಿಲ್ಲ. ಅನೇಕ ರಸ್ತೆಗಳಲ್ಲೂ ಕಟ್ಟಡಗಳೊಳಗೂ ನಡುವಿನ ಮಟ್ಟ ನೀರು ಹರಿಯುತ್ತಿತ್ತು. ಉದ್ಯಾನ ವನಗಳೆಲ್ಲಾ ಕೆಟ್ಟುಹೋದವು. ಅನೇಕ ಮನೆಗಳು ಕುಸಿದು ಬಿದ್ದವು. ಸಾವಿರಾರು ಪ್ರಜೆಗಳು ಈ ಪ್ರವಾಹದ ದೆಸೆಯಿಂದ ಬಹಳ ಕಷ್ಟ ನಷ್ಟಗಳನ್ನು ಅನುಭವಿಸಿದರು. ಕೋಟ್ಯಾಂತರ ದ್ರವ್ಯದ ಕಟ್ಟಡಗಳೂ ಸರಕುಗಳೂ ಆಸ್ತಿಪಾಸ್ತಿಗಳೂ ಹಾಳಾದವು. ಬಡಬಗ್ಗರ ಕಷ್ಟಪರಿಹಾರಕ್ಕಾಗಿ ವಿಲಾಯತಿ ರಾಜ್ಯದ ರಾಜಧಾನಿಯಾದ ಲಂಡನ್ ಪಟ್ಟಣದಲ್ಲಿ ಒಂದು ಫಂಡು ಏರ್ಪಾಡಾಗಿದೆ. ಇದುವರೆಗೆ ಕೆಲವು ಲಕ್ಷ ರೂಪಾಯಿ ಚಂದಾ ಕೂಡಿರುವುದು. ಈಗೀಗ ಪ್ರವಾಹಗಳು ಇಳಿದಿರುತ್ತವೆ. ಅಂಟುರೋಗವ್ಯಾಪ್ತಿದಾದರೂ ಪ್ರಾರಂಭವಾಗುವುದೇನೋ ಎಂದು ಸರ್ಕಾರದವರು ಬಹಳ ಗಾಬರಿ ಪಡುತ್ತಿದ್ದರು. ದೇವರ ದಯದಿಂದ ಯಾವ ರೋಗವೂ ಹುಟ್ಟದೆ ಪ್ರಜೆಗಳು ನಾನಾ ಕಷ್ಟಗಳಿಗೆ ಗುರಿಯಾದರೂ ಆರೋಗ್ಯವಾಗಿದಾರೆ. ಸರ್ಕಾರದವರೂ ಇತರರೂ ಬಡಬಗ್ಗರಿಗ ಬೇಕಾದ ಸಹಾಯ ಸಂಪತ್ತನ್ನು ಒದಗಿಸುವುದಕ್ಕೆ ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡುತ್ತಲೂ, ಕಷ್ಟಕಾಲದಲ್ಲಿ ತಮ್ಮ ಪ್ರಜೆಗಳಿಗೆ ದ್ರವ್ಯಸಹಾಯ ಮಾಡಿದ ಇಂಗ್ಲಿಷರೇ ಮೊದಲಾದವರನ್ನು ಕೃತಜ್ಞತೆಯಿಂದ ವಂದಿಸುತ್ತಲೂ ಬಂದಿದಾರೆ.

Printed and Published by the Rev. H GULLIFORD, Proprietor and Manager, Wesleyan Mission Press, Mysore. 10/2/1910.

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೩೩ ಮೈಸೂರು—ಸಕ ೧೯೧೦ ನೇ ಇಸವಿ ಫೆಬ್ರವರಿ ತಾರೀಖು ೧೭ ನೇ ಗುರುವಾರ. ಸಂಚಿಕೆ ೩೮

ಬಂಗಾರದ ಮತ್ತು ಬೆಳ್ಳಿಯ ಪದಕಗಳು ೧೨ ದೊರೆತಿವೆ.

ಡೈಮಂಡ್ ಡೈಮಂಡ್

ಅತ್ತರ್ ಸಾಬೂನುಗಳು ರಂಗಿನ ಸಾಬೂನುಗಳು

ಸುವಾಸನೆ, ಚರ್ಮಕ್ಕೆ ಹಿತ ಸುಲಭ ಕ್ರಯ, ಚೊಕ್ಕ ಖಾತರಿ

24 1

ಅತ್ತರ್ ಸಾಬೂನುಗಳು ಮೈಯಿನ ಕಾಂತಿಗೂ, ಕಾರ್ಬಾಲಿಕ್ ಸಾಬೂನುಗಳು ಚರ್ಮದ ರೋಗನಿವಾರಣೆಗೂ ಅವ ಶ್ಯಕ ಡಯಮಂಡ್ ರಂಗಿನ ಸಾಬೂನುಗಳು ಬಟ್ಟೆ ಮತ್ತು ಇವುಗಳಿಂದ ಎಲ್ಲಾ ತರವೆ ಬಟ್ಟೆಗಳಿಗೂ ಬೇಕಾದ ರಂಗನ್ನು [illegible] ಕೊಡುವುದು ಡಯಮಂಡ್ ಗುಲಾಬಿ ಟೀ —ಇದರ ಕಷಾಯವು ಬಹಳ ರುಚಿಕರವಾಗಿರುವುದರಿಂದ ಈ [illegible] ಇದ್ದಲ್ಲದೆ ಡಯಮಂಡ್ ಕೇಶವರ್ಧಕತೈಲ, ಹಲ್ಲುಪುಡಿ, ಕಾಸ್ಮಿಟಿಕ್, ಪಾಮೇಡ್, ಬಾಂ, ಶೀತನಿವಾರಕ ಕ್ಷಾರ, ಸುವಾಸಿನಿ ವಿಲಾಸ ಮೊದಲಾದ ಅತ್ತರುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ.

ಡಯಮಂಡ್ ಸೋಪ್ ಕಂಪೆನಿ, ಗಿರ್ಗಾಂ, ಮುಂಬಯಿ ಮೈಸೂರು ಸೀಮೆಗೆ ಏಜೆಂಟರು —

ವ್ಯವಹಾರಗಳ ಪತ್ರ ಬೇರೆ ರಾನಡೆ ಕಂಪೆನಿ, ಬೆಂಗಳೂರು ಸಿಟಿ

ಸ್ವದೇಶೀ ಬಟ್ಟೆಗಳು ಸ್ವದೇಶೀ ಬಟ್ಟೆಗಳು !!

117

ನಮ್ಮಲ್ಲಿ ಈಗ ತಯಾರಾಗಿ [illegible] ಬಟ್ಟೆಗಳು [illegible] ಬಹಳ [illegible] ಬರುವಂತವುಗಳಾಗಿವೆ [illegible] ಈ ಬಟ್ಟೆಗಳು [illegible] ಸ್ವದೇಶೀ ಪ್ರಿಯರು ಈ ಬಟ್ಟೆಗಳನ್ನು ತರಿಸಿ [illegible] ನಮ್ಮಲ್ಲಿ ಎಲ್ಲಾ [illegible]

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

[illegible] ಪುಸ್ತಕಗಳ ಕ್ರಯಪಟ್ಟಿಯನ್ನು [illegible] ಮುಫತ್ತಾಗಿ ಕೊಡುತ್ತೇವೆ ಇದನ್ನು [illegible] ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(175 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ [illegible]) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಇಂಗ್ಲೆಂಡಿನ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ [illegible] ವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ [illegible] ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ [illegible] ಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ [illegible] ಶತಮಾನದಲ್ಲಿ ಇಂಗ್ಲೆಂಡ್ ದೇಶದ [illegible] ನಮಗೆ ಸ್ಪಷ್ಟವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(10 ಪೇಜು) ಪ್ರತಿಯೊಂದಕ್ಕೆ 0—0—6

(80 ಪೇಜು) 0—1—0

(110 ಪೇಜು) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ.

[10-7]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಜ್ವರಹರ 117

ಇದು ಸಾಧಾರಣ ಜ್ವರ ಚಳಿ ಜ್ವರ ಮಲೇರಿಜ್ವರ, [illegible] ಜ್ವರ, ವಾತಜ್ವರ, [illegible] ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ [illegible] ಚಳ್ಳಕೆರೆಯಲ್ಲಿರುವ [illegible] ವೆಂಕಟೇಶ ಅಯ್ಯಂಗಾರರು—[illegible] ಕೊಟ್ಟ [illegible] ಈ ಔಷಧದಿಂದ ಅನೇಕ ಮಂದಿ [illegible] ಗುಣ ಹೊಂದಿರುವರು ಇನ್ನೂ ಜನಗಳು [illegible] ಮೂಲಕ [illegible] ಉಪಕಾರವಾಗಿದೆ—ಎಂದೆ ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ , [illegible] ರೂ ೩—೧೨ ೮ ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ತಾಪ್ಪಿಸಲಾಗುವುದು

ಓಮಂಕಪೂರ

[illegible]

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ತಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಪಕ್ವವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು [illegible] ಗೆ ಒಂದಾವರ್ತಿ ಹೊರಗೆ [illegible] ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪಟ್ಟಿ "ಜ್ವರಹರ" ಎಂಬ ಔಷಧ ಎಂತೆಯೇ [illegible] ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ [illegible]—ಹಿಸ್ರಿಯ ಓಮಂ ಕರ್ಪೂರವನ್ನು [illegible] ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ [illegible] ಅಜೀರ್ಣಭೇದಿ, ಅಜೀರ್ಣ ರೋಗಿಸ್ತರಿಗೆ [illegible] ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೆ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಸಿಂದ್ರ ಪಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದೆ ಕೆಳಗಿನ ವಿಳಾಸದಲ್ಲಿ [illegible] —

ಪೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲಿ ಇತರ ಕಡೆಗಳಲ್ಲಿ ನಮ್ಮ ಏಜೆಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . ರೂ ೧—೦—೦

ಬೇರೆ ಕಡೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡರೆ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ ರೂ ೧—೧೪—೦

" " " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಬರೆದಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

6-30

ತಲೆನೋವು, ವಾಯುನೋವು ಸೆಳತ, ಗಂಟಿನೋವು, ಪಾರ್ಶ್ವವಾಯು, [illegible] ಪ್ರಾಣದ ವಾಯುರೋಗಗಳು, [illegible] ಬೆನ್ನುನೋವು, ಕೀಲುಗಳ [illegible] ಹಲ್ಲುನೋವು —ಇವುಗಳಿಗೆ ಈ ತೈಲವನ್ನು [illegible] ಭಾಗಗಳ [illegible] ಎಂದು ಸೋಡಿ [illegible] ಈ ಔಷಧ [illegible] ಈ ಔಷಧವನ್ನು [illegible]

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೧ ಆಣೆ ಆದರೆ ೩ ಅಥವಾ ಹೆಚ್ಚು [illegible] ಪ್ಯಾಕಿಂಗ್ ಚಾರ್ಜು ಮಾಫಿ [illegible] ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಸುತ್ತಾರೆ ಮುಖ್ಯ ಏಜೆಂಟರ ವಿಳಾಸ— ಜಿ ಎಸ್ ಕನ್ನಯ್ಯಸೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್ ಕ್ಲೆಮೆಂಟ್ಸ್,

೩೩, ಪೆದ್ದನಾಯಕನ್ ಪೇಟೆ, ಮದರಾಸ್.

WILLIAM & Co. FORT, BOMBAY

ಅಮೃತಾಂಜನ

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಷಣದ ಗುಣಕಾರಿಯು 1751

ತಲೆನೋವು, ಗಂಟು ಊತ, [illegible] ವಾತ, ಸಂಧಿವಾತ, [illegible] ಗಂಟು, ಗಂಟು ನೋವು [illegible] ಇವೇ ಮೊದಲಾದ [illegible] ಕೊಂಡಾಡುತ್ತಾರೆ [illegible] ಒಂದರ ಕ್ರಯ ೦ ೮ ೦

ಗಜಕರ್ಣದ ಮುಲಾಮು.

[illegible]

ಅಮೃತಾಂಜನ	೦ ೮ ೦
[illegible]	೦ ೮ ೦
[illegible]	೧ ೦ ೦
[illegible]	೦ ೮ ೦
[illegible]	೦ ೮ ೦
[illegible]	೦ ೪ ೦
[illegible]	೦ ೨ ೦
[illegible]	೦ ೦ ೦
[illegible]	೦ ೮ ೦

[illegible] ವಿಳಾಸ

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

ವೃತ್ತಾಂತ ಪತ್ರಿಕೆಯ ಬಂಚಾಂಗಪ್ಪ.

ಸಿದ್ಧವಾಗಿದ   ಕ್ರಯ ಒಂದಾಣೆ.

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ದಾಸ್, ಆರ್ ಇ, ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶ್ರಿಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ನೋಗಸಾಗಿವ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಫೆಬ್ರವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಜೂಡ್ಲೆ ಬರೆಯಿರಿ.   ವಿಳಾಸ —

ಮ್ಯಾನೇಜರ್ ವೃತ್ತಾಂತ ಪತ್ರಿಕೆ ಮೈಸೂರು

ಬೋಮಾರ್ ಪಾಲ್ಲಿ ಮಕ್ಕಳು

[illegible] ಪಾಪವ ರೋಗಬಾಧೆಗಳನ್ನು ಸಹಿಸಿಕೊಂಡು [illegible]

[illegible] ಬಲ [illegible] ಶಕ್ತಿ [illegible] ಔಷಧವನು ಕೊಡುವುದು ಅವಶ್ಯಕ

SCOTT'S EMULSION   6-7

(ಸ್ಕಾಟ್ಸ್ ಇಮಲ್ಷನ್)

[illegible] ಸಮಸ್ತ [illegible] ಬಹು ಉತ್ಕೃಷ್ಟವಾದ ಗುಣಗಳುಂಟು

ವಿನಾಸುಮನುಷ್ಯ ಇರುವ
ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವಿಸ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕ್ರೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ನಿನಗೆ ಸ್ವಸ್ಥವಿಲ್ಲವ್ರೋ ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾ — ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ —" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗೆ ಸುಖವಾಗಿ ಕಾಲುಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು, ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ.—ಪಿತ್ತಕೋಶ ರೋಗ ; ಪಿತ್ತ, ಪಿತ್ತ ಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗ್ಯಾಸ್, ಅಶಕ್ತಿ, ಎದೆಯು ಉರಿಯುವುದು, ತಲೆತಿರುಗುವುದು, ತಲೆನೋವು, ಹೊಟ್ಟೆ ಉಬ್ಬರ, ಹುಳಿತೇಗು ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವೆಲ್ಲಾ ಸುಲಭವಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [6 25]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು ಅಥವಾ, ಡೋನ್ಸ್ ಕಂ, ೬ ಬಾಕ್ಸ್ ೩೦, ಬೊಂಬಾಯಿ —ಇವರಲ್ಲಿ ದೊರೆಯುವುವು

CHAMBERLAIN'S COUGH REMEDY.

ಚೇಂಬರ್ಲೇನ್ ಯವರು ಕಂಡುಹಿಡಿದ ಕಮ್ಮಿನ ಔಷಧವು



ಶೀತದ ಕೆಮ್ಮು, ಗಂಟಲು ಗೊರಗೊರೆನ್ನುವುದು, ಹುಡುಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ಕರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅನಾನುಕೂಲವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ಮಕ್ಕಳಿಗೆ ಕ್ಷೇಮಕಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು   ಸಣ್ಣ ಸೀಸೆಗೆ ೧ ರೂಪಾಯಿ   ದೊಡ್ಡ ಸೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

25 1

ಲೋಕಾಮಯಹರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು ಮೈ ಕೈಕಾಲು ಸೆಳೆತ ಭಾರ) ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ ಹಲ್ಲು ನೋವು, ಕೆಮ್ಮಲು ಕಿಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧವಾದಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ ಚಳ್ಳುಜ್ವರ, ಕ್ಷಯ ಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೩೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನ್ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಕಾಗಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ
೧ ರೂ ೬ ಆ , ೧ ರೂ ೪ ಆ
ಚುಕ್ಕಿಯುಳ್ಳ ಟೋಪಿಗಳು ರೂ. ೧ ೮ , ರೂ ೧ ೧೨
ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨
ವಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ
ಉಸುಕಿನ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈತ್ರಾನ ಚೀಟು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಸುಗಂಧಗಳು.

[illegible] ವಾದ ಮೈಸೂರು ಅಗರ್ ಬತ್ತಿ [illegible] ದಾಗ [illegible] ಪಟ್ಟ [illegible] ಸುಗಂಧ ಪುಷ್ಪಗಳೂ ನಮ್ಮಲ್ಲಿ ದೊರೆಯುವವು [illegible]

ವಿಳಾಸ ಪಿ ಎಲ್ ಉಪಾಧ್ಯಾಯ ಮೈಸೂರು

ಸಂಗೀತ ಪಾರಿಜಾತ ಕ್ರಯ [illegible]

[illegible] ಪುಸ್ತಕ [illegible] ಪ್ರತಿಗಳನ್ನು [illegible] ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ ಬಿ ಮರ್ಕಂಟೈಲ್ ಯೂನಿಯನ್ ಮೈಸೂರು

THE MYSORE CITY MUNICIPALITY

ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ

ಈ ಮ್ಯುನಿಸಿಪಾಲಿಟಿಯಲ್ಲಿ ಮೊಹತರ್ಫಾ ಕಂದಾಯವನ್ನು ಎರಡು ಕಿಸ್ತಿನಲ್ಲಿ ಸಮವಾಗಿ ಜುಲೈ ಮತ್ತು ಜನವರಿ ತಿಂಗಳುಗಳಲ್ಲಿ ಅಡ್ವಾನ್ಸಾಗಿ ವಸೂಲ್ ಮಾಡಬೇಕೆಂದು ಇದೇ ೧೯೧೦ ನೇ ಇಸವಿ ಜನವರಿ ೨೦ ನೇ ಮುಕಾಮ್ ಬೆಂಗಳೂರು ಎಂ ಎಲ್ ೧೨೭ ೮೯ ೭ ನೇ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸು ಅನುಸರಿಸಿ ಜಾರಿಲಿ ತರಲ್ಪಡುತ್ತೆಂಬ ಸಂಗತಿಯನ್ನು ಇದರಿಂದ ತಿಳಿಯಪಡಿಸಿದೆ

M G KRISHNASAMI RAO

ತಾ. 4 2 1910   *Vice President*

ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ

ಇತಃಪರ ಅಂದರೆ ೧೯೧೦ ನೇ ಇಸವಿ ಏಪ್ರಿಲ್ ೧ ನೇ ತಾರೀಖಿನ ಲಾಗಾಯಿತು ಈ ಸಿಟಿಯಲ್ಲಿ ಎಲ್ಲಾ ಕಟ್ಟಡಗಳ ರೆಂಟಲ್ ವ್ಯಾಲ್ಯೂ ಮೇಲೆ ನೇಕಡಾ ೩ ರೂಪಾಯಿನಂತೆ ಜನರಲ್ ವಾಟರ್ ಟ್ಯಾಕ್ಸು ದಾಖಲ್ಮಾಡಿ ವಸೂಲ್ಮಾಡಬೇಕೆಂತಲೂ ಜನರಲ್ ವಾಟರ್ ಟ್ಯಾಕ್ಸು ದಾಖಲಾಗುವ ತಾರೀಖು ಲಾಗಾಯಿತು ೧೮೯೭ ನೇ ಇಸವಿ ಜುಲೈ ೩ ನೇ ಮುಕಾಮ್ ಗೌರ್ನಮೆಂಟ್ ಆರ್ಡರ್ ಮೇರಿಗೆ ದಾಖಲಾಗುತ್ತಾ ಇರುವ ವಾಟರ್ ಟ್ಯಾಕ್ಸು ವಜಾ ಆಗಿರುತ್ತೆಂತಲೂ ೧೯೧೦ ನೇ ಇಸವಿ ಜನವರಿ ೨೦ ನೇ ಮುಕಾಮ್ ಬೆಂಗಳೂರು ಎಂ ಎಲ್ ೧೨೭ ೯೮ ೬ ನೇ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸು ತಲುಪಿ ಇರುತ್ತೆ ಇದರಂತೆ ಜಾರಿಲಿ ತರಲ್ಪಡುತ್ತೆಂಬ ಸಂಗತಿಯನ್ನು ಇದರಿಂದ ತಿಳಿಯಪಡಿಸಿದೆ

M. G. KRISHNASAMI RAO,

ತಾ 4—2—1910   *Vice President*

ಹೊಸ ಪುಸ್ತಕ ! ಹೊಸ ಪುಸ್ತಕ !! ಹೊಸ ಪುಸ್ತಕ !!!

23-1

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol I ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ... ಕನ್ನಡ ಓದುವರಿಗೆ ... ಬೋಧಕರ ... ಅತ್ಯುತ್ತಮ ಪುಸ್ತಕವು

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol I ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ಅಚ್ಚು ಮತ್ತು ಬರವಣಿಗೆಯ ಅಕ್ಷರಗಳನ್ನು ಗುರುತಿಸುವ ಉಪಾಯ, ಸ್ವರ ವ್ಯಂಜನಾಕ್ಷರ ಸಂಕೇತ, ಕಾಗುಣಿತ, ಅಕ್ಷರ ಸಂಯೋಜನಾಭ್ಯಾಸ, ಪ್ರಥಮಾಭ್ಯಾಸಕ್ಕೆ ಗ್ರಾಹ್ಯವಾದ ಪದಗಳ ಸಮುದಾಯ, ಸ್ತ್ರೀಲಿಂಗಗಳು, ವಿವಿಧವಾಕ್ಯ ಸಮುದಾಯ, ವಿಷಯ ಪ್ರತಿಪಾದನ, ಅಚೆಯಲ್ಲಿ ಅಪೂರ್ವವಾದ ಅತ್ಯಂತೋಪಯೋಗವಾದ ರತ್ನಗಳು, ಕೂಷ್ಟಕ, ಗಾದೆ, ತಂತೀವರ್ತಮಾನ, ಸಾಂಕೇತಿಕ ಶಬ್ದಗಳು ಇತ್ಯಾದಿ ಅನೇಕ ಉಪಯುಕ್ತಾಂಶಗಳು ಸೇರಿವೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol I ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷ್ ಭಾಷೆಯ ಪ್ರತಿಶಬ್ದದ ಉಚ್ಚಾರಣೆಯನ್ನೂ ಕನ್ನಡ ಅಕ್ಷರಗಳಿಂದ ಬರೆದು ಅದರ ಅರ್ಥವನ್ನು ಕನ್ನಡಭಾಷೆಯಲ್ಲಿ ಬರೆದಿದೆ ಇಂಗ್ಲಿಷ್ ಭಾಷೆಯನ್ನು ಸ್ವಲ್ಪವೂ ತಿಳಿಯದ ಕನ್ನಡಿಗರು ಅದನ್ನು ಕಲಿಯುವುದಕ್ಕೆ ಈ ಪುಸ್ತಕವು ತಕ್ಕ ಸಹಾಯವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study Vol I ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷ್ ಭಾಷೆಯನ್ನು ಕಲಿತು ಬಳಿಕ ... ಈ ಪುಸ್ತಕವು ಬಹಳ ಉಪಯೋಗವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study Vol I ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ... ಪುಸ್ತಕಗಳು ... ಮುದ್ರಣದ ಪುಸ್ತಕಗಳಲ್ಲಿ ಕೆಲವು ಮಾತ್ರ ಉಳಿದಿವೆ ... ಬೇಗ ... ಉತ್ತಮ ... ಕ್ರಯ ಒಂದು ರೂಪಾಯಿ ಆರು ಆಣೆ ಮಾತ್ರ

ವಿಳಾಸ ಭಾರತಿ ಸಂಪಂಗಿರಾಮು, ಪ್ರೆಸ್ಸು

ಹೊಸಕೋಟೆ ಡಿಸ್ಟ್ರಿಕ್ಟು ಬೆಂಗಳೂರು

ವ್ಯಾಪಾರ ಪಕಟಣೆ

2 8

... ಟೋಪಿಯು ... ಟೋಪಿದ ರಕ್ಕೆ 0 5 0 10 ಟೋ... ಬಟ್ಟೆಯ ... 1 ಕ್ಕೆ ... 1 7 0 ... ಕೆಂಪು ಕಪ್ಪು ... ಹಳದಿ ಗುಲಾಬಿ ... ಮತ್ತು ಕಾಶಿ ಬಣ್ಣಗಳಲ್ಲಿ — ... ಹೊಲಿಯುವ ... ದಪ್ಪದ ಉಲ್ ಪೌಂಡು 1 ಕ್ಕೆ 2 1 ... 1 ಕ್ಕೆ 0 10 0 ರಂಗಿನಲ್ಲಿ ಯೆಣ್ಣೆ ಕೆಂಪು ಕಪ್ಪು ಮತ್ತು ಶ್ವೇತ ಕೆಂಪು ... ಉಲ ಪೌಂಡು 1 ಕ್ಕೆ 2 1 ... ಆರು ಟೋಪಿ ಆಗುವದು ಕೊಕ್ಕೆ ಸೂಜಿ 1 ಕ್ಕೆ 0 1 ... ಮತ್ತು 0 1 0 ... ಟೋಪಿ ಹೊಲಿಯುವ ದಪ್ಪದ ಉಲ್ ಪೌಂಡು 1 ಕ್ಕೆ ರೂ 1 12 0

... ಟೋಪಿಗಳು ದಜನ್ 1 ಕ್ಕೆ ... ಮತ್ತು 1 10 0 ತರಹೇವಾರಿ ರಂಗಿನ ... ಕಸೂತಿಕೆಲಸದ ಉಲ್ ದಾರಗಳ ಪೌಂಡು 1 ಕ್ಕೆ ರೂ 3 1 0

... 1 0 ದೊಡ್ಡವರ ... ಗಳು 0 1 0 ರಿಂದ 1 5 0 ... ಮಕ್ಕಳ ಕಾಲುಚೀಲಗಳು 0 1 0 ಮತ್ತು 0 ... ದೊಡ್ಡವರ ಕಾಟನ್ ಬನಿಯನ್ 1 ಕ್ಕೆ ... ಯಿಂದ 1 0 0 ದೊಡ್ಡವರ ಮುಸುಕಿನ ಟೋಪಿ 1 ಕ್ಕೆ 1 0 0 ... ಹಾಕುವ ಉಲ್ದಾರದ ಪಾಕೆಟ್ 1 ಕ್ಕೆ 0 ... 0 ... ದಾರದ ವಾಚ್ ಪಾಕೆಟ್ 1 ಕ್ಕೆ 0 2 0 ... ದಾರದ ಕಮರ್‌ಬಂದ್ 1 ಕ್ಕೆ 10 ಆಣೆಯಿಂದ 1 ... 0 ಬಾಚಣಿಗೆಗಳು 1 ಕ್ಕೆ 0 1 0 ... ರಿಂದ 0 ... 0 ಪುರಾಣಿಕ ಕಡ್ಡಿ ಪೆಟ್ಟಿಗೆ 1 ಕ್ಕೆ 0 2 0 ದಕಾಂಗ ... 1 ಕ್ಕೆ 0 1 0 ಪಿತನಾ ದಬ್ಬಿ 1 ಕ್ಕೆ 0 1 0 ವಾಚು ಸರಪಣಿ 1 ಕ್ಕೆ ಆಣೆ ... ರಿಂದ 0 12 0 ವರೆಗೆ ರಬ್ಬರ್ ಸ್ಟಾಂಪು ... ಬಾಟಲ್ 1 ಕ್ಕೆ 0 ... 0 ... 300 ಮಾತ್ರೆಗಳಿರುವ ಪಾಕೆಟ್ 1 ಕ್ಕೆ 0 3 0 ಮೆಂತಾಲ್ ದಬ್ಬಿ 1 ಕ್ಕೆ 0 1 0 ಗಜಕರ್ಣದ ಮುಲಾಮು ದಬ್ಬಿ 1 ಕ್ಕೆ 0 5 0 ದೇಶಿ ಕರವಸ್ತ್ರಗಳು ದಜನ್ 1 ಕ್ಕೆ 1 0 0 ಲಿನನ್ ಕೈವಸ್ತ್ರಗಳು ದಜನ್ 1 ಕ್ಕೆ 1 6 0 ... 200 ರ ಶೀಸೆ 1 ಕ್ಕೆ 0 1 0 ಕಾಮಿನಿಯ ತೈಲವು ಅನೇಕ ತರದ ತೈಲಗಳಲ್ಲಿ ಪಸಂದಾದದ್ದು ಶೀಸೆ 1 ಕ್ಕೆ 1 0 0 ಪರಿಮಳ ಸ್ನಫದಬ್ಬಿ 1 ಕ್ಕೆ 0 2 0 ದಂತಮಂಜನ ದಬ್ಬಿ 1 ಕ್ಕೆ 0 1 ... ಪೊಮೇಡ್ ಶೀಸೆ 1 ಕ್ಕೆ 0 ... 0 ದಿಲ್‌ಬಹಾರ್ ಇದು ಅಮೂಲ್ಯವಾದ ಅತ್ತರ್ ಶೀಸೆ 1 ಕ್ಕೆ 1 8 0 ಕಾಮಿನಿ ಅತ್ತರ್ ಶೀಸೆ 1 ಕ್ಕೆ 1 8 0 ರೋಸ್ ಅತ್ತರ್ ಶೀಸೆ 1 ಕ್ಕೆ 2 0 0 ಇಂಗ್ಲಿಷ್ ಅಕ್ಷರದ ಪಟ್ಟಿಗೆ 1 ಕ್ಕೆ 0 10 0 ಯಿಂದ 1 0 ... ಚಿಕ್ಕ ಪೋಸ್ಟು ಕಾರ್ಡುಗಳು 100 ಕ್ಕೆ 0 3 0 ... ಹಾಕಿದ ಲೆಟರ್ ಪೇಪರ್ ಪ್ಯಾಕೆಟ್ 1 ಕ್ಕೆ 0 1 0 ಇದಕ್ಕಾಗುವ ಕವರ್ 100 ಕ್ಕೆ 0 5 0 ಕಾಬೂಲ್ ದೇಶದ ಹಿಂಗು 12 ತೊಲೆ ದಬ್ಬಿ 1 ಕ್ಕೆ 0 14 0 ಕೆಂಪುನೂಲಿನಿಂದ ತಯಾರಿಸಿದ ಕಮರ್‌ಬಂದ್—0 1 0, 0 7 0 ಮತ್ತು 0 9 0 ಸಂಗೀತ ಪಾರಿಜಾತವೆಂಬ ಹಾಡಿನ ಪುಸ್ತಕ 0 1 0

1910 ನೇ ಡೈರಿ 1 ಕ್ಕೆ 0 2 0 ನಮಗೆ ಅಲ್ಪ ಕಮಿಷನ್ ಕೊಟ್ಟಲ್ಲಿ ಮಂಗಳೂರಲ್ಲಿ ದೊರೆಯುವ ಯಾವ ಸಾಮಾನು ಬೇಕಾದರೂ ಚವಕಿಯಿಂದ ಪಡೆದು ಕಳಿಸುವೆವು ವಿ ಪಿ ಯಿಂದ ತರಿಸುವರು ಟಪಾಲು ಖರ್ಚು ಜಾಸ್ತಿ ಕೊಡಬೇಕಾಗುವದು

ನಮ್ಮ ವಿಳಾಸ —ದಿ ಉರ್ಲ ಮಾರ್ಟ್,

ನಂ ೧, ಮಂಗಳೂರು, ದ. ಕ.

ಮೈಸೂರು ಸಂಸ್ಥಾನದಲ್ಲಿ ಪ್ಲೇಗ್ ಕಾಲರಾ ಸ್ಥಿತಿ

೨–೧–೧೯೧೦ ರಿಂದ ೨೯–೧–೧೯೧೦ ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ		5	1	0	0
ಮೈಸೂರು	,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು		18	12	0	0
ಮೈಸೂರು	,,	29	20	84	53
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟು		8	4	6	3
ಹಾಸನ	,,	2	4	0	0
ಚಿತ್ರದುರ್ಗ	,,	2	2	0	0
ಕಡೂರ್	,,	2	2	0	0
ಶಿವಮೊಗ್ಗ	,,	12	8	0	0
	ಜುಮ್ಲಾ	73	55	90	56

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಮಾಘ ಶುದ್ಧ ನವಮಿ ಶುಕ್ರವಾರದಿಂದ ಮಾಘ ಶುದ್ಧ ಪೌರ್ಣಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಷ ಕುಂಭ ಮಾಸ
18	ಶುಕ್ರ ,	ನವಮಿ	13 48	ರೋ	9 40	7
19	ಶನಿ	ದಶಮಿ	9 28	ಮೃ	7 12	8
20	ರವಿ †	ಏಕಾದಶಿ	5 58	ಆ	5 12	9
21	ಚಂದ್ರ §	ದ್ವಾದಶಿ	3 30	ಪು	24 36	10
22	ಕುಜ ‡	ತ್ರಯೋದಶಿ	2 30	ಪು	4 40	11
23	ಬುಧ	ಚತುರ್ದಶಿ	3 5	ಶ್ಲೇ	6 12	1
24	ಗುರು	ಪೌರ್ಣಮಿ	3 23	ಮ	8 58	13

, ಮಾಧ್ವರಾಯರ ಪುಣ್ಯದಿನ, ಮುದುಕತೊರೆ ಮಲ್ಲಿಕಾರ್ಜುನಸ್ವಾಮಿ ರಥ

† ಸರ್ವತ್ರ ಭೈಷ್ಮ್ಯೇಕಾದಶಿ, ಮಾನಾಮುಸಗತೊರವಿ

§ ಸರ್ವತ್ರ ಭೀಷ್ಮದ್ವಾದಶಿ, ಸೋಮಪ್ರದೋಷ

‡ ವರಾಹಕಲ್ಪಾದಿ

ವ್ಯಾಸಪೂರ್ಣಿಮಾ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೩ ೮ ೦	೧೩ ೮ ೦
ಕೆಂಬೂತಿ ಅಕ್ಕಿ ಅವಲ್		೧೩ ೮ ೦	೧೨ ೮ ೦
,, ದುಯಂ		೧೩ ೦ ೦	೧೩ ೦ ೦
ಜಾಪ್ರಾಣಿ ಅಕ್ಕಿ		೧೩ ೪ ೦	೧೩ ೮ ೦
ಸಣ್ಣಕ್ಕಿ ಅವಲ್		೧೩ ೮ ೦	೧೬ ೦ ೦
,, ದುಯಂ		೧೩ ೦ ೦	೧೪ ೦ ೦
ಕೊಗರೀ ಬೀಳ ಪಲ್ಲಾ ೧ ಕ್ಕೆ		೧೩ ೮ ೦	೧೨ ೦ ೦
,, ದುಯಂ		೧೩ ೦ ೦	೧೧ ೦ ೦
ಹೈಬ್ರಿ ರಾಗಿ ಪಲ್ಲಾ ೧ ಕ್ಕೆ		೮ ೦ ೦	೭ ೦ ೦
ಸಜ್ಜೆ		೭ ೧೩ ೦	೬ ೧೩ ೦
ಜೋಳ		೭ ೮ ೦	೯ ೦ ೦
ಹಲಸಂದೆ ಪಲ್ಲಾ ೧ ಕ್ಕೆ		೧೧ ೦ ೦	೧೦ ೦ ೦
ಬೇಳೆ ಅವರೆ		೧೧ ೦ ೦	೧೦ ೦ ೦
ಹೆಸರು		೧೧ ೦ ೦	೯ ೮ ೦
ಉದ್ದು		೧೪ ೦ ೦	೧೦ ೦ ೦
ಕಡಲೆ		೧೩ ೮ ೦	೯ ೮ ೦
ಎಳ್ಳು ಸೇ ೧೨೭ ಕ್ಕೆ		೧೭ ೦ ೦	೧೫ ೦ ೦
ಹುರುಳಿ		೮ ೮ ೦	೮ ೦ ೦
ಹರಳು ೧೨೭ ಸೇರಿಗೆ		೧೪ ೦ ೦	೧೩ ೦ ೦
ಶೀಗೇಕಾಯಿ ಮಣ ೧ ಕ್ಕೆ		೩ ೪ ೦	೧ ೧೩ ೦
ಮೆಣಸಿನಕಾಯಿ		೪ ೧೩ ೦	೩ ೪ ೦
,, ದುಯಂ		೪ ೮ ೦	೩ ೦ ೦
ಬೆಲ್ಲ ದೊಡ್ಡ ಅಚ್ಚು		೮ ೮ ೦	೫ ೩ ೦ ೦
ಒಳ್ಳೆ ಮಣ ೧ ಕ್ಕೆ		೫ ೦ ೦	೪ ೮ ೦
ಸಕ್ಕರೆ		೫ ೮ ೦	೪ ೬ ೦
ಕೊತ್ತುಂಬರಿ ಪಲ್ಲಾ ೧ ಕ್ಕೆ		೧೦ ೮ ೦	೧೦ ೦ ೦
ಉಪ್ಪು ,,		೬ ೦ ೦	೫ ೮ ೦
ಹುಣಸೇ ಹಣ್ಣು		೩ ೦ ೦	೧ ೮ ೦
,, ಹಳೇದು		೧ ೧೩ ೦	೧ ೮ ೦
ತುಪ್ಪ ಮಣ ೧ ಕ್ಕೆ		೧೬ ೮ ೦	೧೪ ೦ ೦
ಶೇಂಗಾ ಬೀಜ ಪೆಟ್ಟಿ ೧ ಕ್ಕೆ		೫ ೪ ೦	೪ ೪ ೦
ತೆಂಗಿನಕಾಯಿ ೧೦೦ ಕ್ಕೆ		೫ ೦ ೦	೬ ೦ ೦
ಅಡಿಕೆಕಾಯಿ ಮಣ ೧ ಕ್ಕೆ		೦ ೧೩ ೦	೦ ೧೩ ೦
ಆಲೂಗಡ್ಡೆ ಕಾಯಿ ಮಣ ೧ ಕ್ಕೆ		೦ ೧೩ ೦	೦ ೧೩ ೦
ಚಿನ್ನ (ಪೌನ್) ಕೆಂಪು		೧೫ ೯ ೦	೧೫ ೪ ೦
,, ,, ಪಸಿಮೆ		೧೬ ೦ ೦	೧೫ ೮ ೦
,, ,, ಗಟ್ಟಿ ತೊಲ ೧ ಕ್ಕೆ		೨೪ ೮ ೦	೨೪ ೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪ ೦	೬೫ ೮ ೦

ಜೈನ ಮಹಾಸಭೆಯು

ಮಹಾಸಭೆಯ ಸ್ವಾಗತ ಕಮಿಟಿಯವರಿಂದ

ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಶ್ರವಣಬೆಳಗೊಳ ಕ್ಷೇತ್ರದಲ್ಲಿ ಬರುವ ಫಾಲ್ಗುಣ ಶುದ್ಧ ೩ (ಮಾರ್ಚಿ ತಾ ೧೩) ಯಿಂದ ... ಸ್ವಾಮಿಯವರ ಮಸ್ತಕಾಭಿಷೇಕ ಮಹೋತ್ಸವವು ಪ್ರಾರಂಭವಾಗುತ್ತದೆ ಅದೇ ಶುದ್ಧ ೧೫ (ಮಾರ್ಚಿ ತಾ ೨೫) ದಿವಸ ... ಬಹಳ ಸಾಧ್ಯವಿಲ್ಲ (ತಾ ೨೬) ಭಾರತವರ್ಷೀಯ ಜೈನ ಮಹಾಸಭೆಯ ಪರಿಷತ್ತು ... (ತಾ ೩೦) ವಿಂಧ್ಯಗಿರಿ ಎಲ್ಲಿ ... ಶ್ರೀ ಗೊಮ್ಮಟಸ್ವಾಮಿಯವರಿಗೆ ಮಹಾ ಮಸ್ತಕಾಭಿಷೇಕವು ನಡೆಯುತ್ತದೆ ಆಗ ಭರತ ಖಂಡದ ಇಂಡಿಯಾ ದೇಶದ ಎಲ್ಲಾ ಭಾಗಗಳಿಂದಲೂ ಲಕ್ಷಾಂತರ ಜೈನ ಮಹಾಜನಗಳು ಬಂದು ಸೇರುವ ಸಂಭವವಿರುತ್ತದೆ

ಆಗ್ಗೆ ಅಲ್ಲಿಗೆ ಬರುವ ಜನಗಳಿಗೆ ಸ್ಥಳ ವಗೈರೆ ತುಂಬಾ ಅನುಕೂಲವಾಗಬೇಕೆಂದು ಸ್ವಾಗತ ಕಮಿಟಿಯವರು ಆಲೋಚಿಸಿ ಊರಿನ ಸಮೀಪದಲ್ಲಿಯೂ, ಮನೋಹರವಾಗಿಯೂ ಇರುವ ಉನ್ನತವಾದ ಸ್ಥಳದಲ್ಲಿ ಚಪ್ಪರಗಳನ್ನು ಕಟ್ಟಿಸಬೇಕೆಂದು ತೀರ್ಮಾನಮಾಡಿದಾರೆ ಈ ಸ್ಥಳಕ್ಕೆ ದೇವರ ಉತ್ಸವಾದಿಗಳು ಬರುವ ಹಾಗೆ ಏರ್ಪಾಡು ಮಾಡಲ್ಪಟ್ಟಿದೆ ಕಳ್ಳಕಾಕರ ಭಯವಿಲ್ಲದಂತೆ ಪೋಲೀಸ್ ಬಂದೋಬಸ್ತು ಏರ್ಪಾಡು ಮಾಡುವುದಕ್ಕೆ ಪ್ರಯತ್ನಪಡಿರುತ್ತೆ ಈ ಸ್ಥಳವು ನೀರಿಗೆ ಬಹಳ ಹತ್ತಿರವಾಗಿದೆ

ಈ ಚಪ್ಪರಗಳ ಪರಿಮಾಣವು ೧೩ × ೮ ಅಡಿಗಳುಳ್ಳದ್ದಾಗಿರುತ್ತೆ ಈ ಪ್ರತಿಯೊಂದು ಚಪ್ಪರವನ್ನು ಕಟ್ಟಲು ಹತ್ತು ರೂಪಾಯಿ ಖರ್ಚಾಗಿದ್ದಾಗ್ಯೂ ಬಡ ಜೈನ ಮಹಾಜನಗಳ ಅನುಕೂಲಕ್ಕೋಸ್ಕರ ಆರು ರೂಪಾಯಿಗಳು ಮಾತ್ರ ಬಾಡಿಗೆ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ ಆ ಕಾಲದಲ್ಲಿ ಈ ಚಪ್ಪರಗಳು ಯಾರಿಗೆ ಬೇಕೋ ಅಂಥವರು ಫೆಬ್ರವರಿ ಆಖೈರು ಒಳಗಾಗಿ ತಮಗೆ ಎಷ್ಟು ಚಪ್ಪರಗಳು ಬೇಕೋ ಅದನ್ನು ಈ ಕೆಳಗೆ ರುಜುಮಾಡಿರುವ ಸೆಕ್ರೆಟರಿಯವರಿಗೆ ಬರೆದು ಕೊಟ್ಟು ಬಾಡಿಗೆ ಹಣವನ್ನು ಮುಂಗಡವಾಗಿ ಕಳುಹಿಸಬೇಕು

ಪೂನಾ ಮುಂಬಯಿ ಕಡೆಯಿಂದ ಬರತಕ್ಕವರು ತಿಪಟೂರು ಸ್ಟೇಷನ್ನಿನಲ್ಲಿ ಇಳಿಯಬೇಕು ಈ ಸ್ಟೇಷನ್ ಶ್ರವಣಬೆಳಗೊಳಕ್ಕೆ ೩೦ ಮೈಲಿ ದೂರದಲ್ಲಿದೆ ಇಲ್ಲಿಂದ ಶ್ರವಣಬೆಳಗೊಳಕ್ಕೆ ಹೋಗಲು ಬೇಕಾದಷ್ಟು ಗಾಡಿಗಳು ಸಿಕ್ಕುತ್ತವೆ ಗುಂತಕಲ ಮತ್ತು ಮದರಾಸ್ ಕಡೆಗಳಿಂದ ಬರತಕ್ಕ ಜನಗಳು ಬೆಂಗಳೂರಲ್ಲಿ ರೈಲು ಹತ್ತಿ ತಿಪಟೂರಿನಲ್ಲಿ ಅಥವಾ ಅರಸೀಕೆರೆ ಸ್ಟೇಷನ್ನಿನಲ್ಲಿ ಇಳಿದು ಅಲ್ಲಿಂದ ಶ್ರವಣಬೆಳಗೊಳಕ್ಕೆ ಹೋಗಬಹುದು ಈ ಎರಡು ಸ್ಟೇಷನ್‌ಗಳೂ ಶ್ರವಣಬೆಳಗೊಳಕ್ಕೆ ... ದೂರವಿರುವುದಲ್ಲದೆ ಬೆಂಗಳೂರಿನಿಂದಲೂ ಒಂದೇ ದೂರವಿರುತ್ತೆ

ಪ್ರಶ್ನೆ ಮತ್ತು ಸಹಿತ ವಿಷಯ ... ಸಂಗತಿ ತಿಳಿಯಬೇಕಾದರೂ ಸೆಕ್ರೆಟರಿಗಳಿಗೆ ಬರೆದು ತಿಳಿದುಕೊಳ್ಳಬಹುದು

ಎಂ ಎಲ್ ವರ್ಧಮಾನ್,

ಸೆಕ್ರೆಟರಿ ಮೈಸೂರು

ತಾಲ್ಲೂಕು ವರ್ತಮಾನಗಳು

ಪವಾಸಣಗರ ಈ ಊರಿನ ... ಪಲ್ಲಾಗಟ್ಟ ಗುರುಸಿದ್ಧಪ್ಪನವರ ... ಉತ್ತರಕೊಂಡೆ ಗುರುಲಿಂಗಪ್ಪನವರೂ ಏರ್ಪಾಡು ಮಾಡಿದ ಮಹೋತ್ಸವದ ಈ ಗ್ರಾಮದ ದುರ್ಗಾದೇವಿ ಜಾತ್ರೆಯು ಈ ಚೈತ್ರ ತಾ ೨೨ ನೇ ಮಂಗಳವಾರ ಪ್ರಾರಂಭವಾಗುವದರಿಂದ ತಾ ೨೬ ನೇ ಗುರುವಾರದ ಲಾಗಾಯತು ಮೂರು ದಿನಗಳಲ್ಲಿ ಮಾಮೂಲು ಪ್ರಕಾರ ಕುಸ್ತಿ ನಡೆಸಲ್ಪಡುತ್ತೆ ಇದರಲ್ಲಿ ಗೆದ್ದವರಿಗೆ ಬಹುಮಾನವಾಗಿ ಕೊಡಲು ಬಂಗಾರದ ಆರು ಕಡೇವುಗಳನ್ನೂ ಬೆಳ್ಳಿ ಮೂವತ್ತೈದು ಕಡೇಗಳನ್ನೂ ವಸ್ತ್ರಗಳನ್ನೂ ಅಯಾಯ ತರಗತಿಯ ಪ್ರಕಾರ ಏರ್ಪಡಿಸಿದೆ ಮತ್ತು ಆಗ್ಗೆ ಬರತಕ್ಕ ಜನಗಳಿಗೆ ಆಯಾಯ ಮತಪದ್ಧತಿ ಪ್ರಕಾರ ಭೋಜನಕ್ಕೆ ತಕ್ಕ ಏರ್ಪಾಡು ಮಾಡಿರುತ್ತೆ ಆದ್ದರಿಂದ ಗರಡಿ ಮಲ್ಲರುಗಳೂ ಜಟ್ಟಿಗಳೂ ನೋಡತಕ್ಕ ಜನಗಳೂ ತಮ್ಮ ತಮ್ಮ ಮಿತ್ರರುಗಳೊಂದಿಗೆ ಬರತಕ್ಕದ್ದು ಮತ್ತು ಬಜಂತ್ರಿಯವರಲ್ಲಿ ಉತ್ತಮವಾದವರಿಗೂ ಬೆಳ್ಳಿಯ ಕಡೆ, ಶಾಲು ವಸ್ತ್ರಾದಿಗಳನ್ನು ಬಹುಮಾನ ಕೊಡುವಂತೆ ಏರ್ಪಾಡಾಗಿದೆ ಈ ಸಲ ಬಹುಜನರು ಇಲ್ಲಿ ಸೇರುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ

ಸೀರ್ಯ——ಸೀರಾ ತಾಲ್ಲೂಕು ಮದಲೂರು ಗ್ರಾಮದಲ್ಲಿ ಈ ವರುಷ ಮೊಹರಂ ಹಬ್ಬವು ತಾ ೨೯ ರ ಲಾಗಾಯತು ಮೂರು ದಿನಗಳು ಸಾಧಾರಣವಾಗಿ ನಡೆಯಿತು ವೇಷಗಳು ಬಹಳ ಕಮ್ಮಿ ಆಗಿ ಇದ್ದವು ಇದನ್ನು ನೋಡುವುದಕ್ಕೆ ಆಸ್‌ಪಾಸ್ ಗ್ರಾಮದ ಜನಗಳು ಬಂದು ಇದ್ದರು —ಈ ಕಾಲದಲ್ಲಿ ಯಾವನೋ ಒಬ್ಬ ದುಷ್ಟನು ದಾಸರ ಕರಿರಂಗಪ್ಪ ಎನ್ನುವವನ ಹುಲ್ಲಿನ ಬಣವೆಗೆ ಬೆಂಕಿಯಿಟ್ಟನು ಅದು ಹತ್ತಿಕೊಂಡು ಹುಲ್ಲು ಎಲ್ಲಾ ಸುಟ್ಟುಹೋಯಿತು ಆತನಿಗೆ ಹುಲ್ಲಿನಿಂದ ಸುಮಾರು ೪೦ ೫೦ ರೂಪಾಯಿ ನಷ್ಟವಾಗಿದೆ —ಈ ಊರಿನ ಕೆರೆಯು ದೊಡ್ಡದು ಈಗ ೮ ೯ ವರುಷದ ಲಾಗಾಯತು ತುಂಬಿರಲಿಲ್ಲ ಈ ವರುಷವೂ ತುಂಬಲಿಲ್ಲ ಇಲ್ಲಿನ ಪ್ರಜೆಗಳಿಗೆ ಬಹಳ ತೊಂದರೆ ಉಂಟಾಗಿರುತ್ತದೆ ಕುಡಿಯುವ ನೀರಿಗೆ ಈಗಲೇ ಬಹಳ ಪೇಚಾಟವಾಗಿದೆ ಗತಿಸಿದ ಅಮಲ್ದಾರ್ ಮೆ|| ಶ್ರೀನಿವಾಸ ಅಯ್ಯಂಗಾರ್ಯ ಜಮಾಬಂದಿಗೆ ಬಂದ ಕಾಲದಲ್ಲಿ ಇಲ್ಲಿನ ಜನಗಳ ಕಷ್ಟವನ್ನು ನೋಡಿ ಮೇಲ್ಪಟ್ಟ ಆಫೀಸರವರಿಂದ ಹುಕುಂ ತರಿಸಿಕೊಂಡು ಕೆರೆಗೆ ಫಸಲು ಇಡುವುದಕ್ಕೆ ಅಪ್ಪಣೆ ದಯಪಾಲಿಸಿದರು ಆಗ ಜನಗಳು ಜೋಳ ಕಡಲೆ ಹಾಕಿದರು ಎಲ್ಲಾ ಹುಟ್ಟುವಳಿ ಆಗುತ್ತಲೂ ಹುಳುಗಳು ಬಿದ್ದು ಫಸಲು ನಷ್ಟಕ್ಕೆ ಕಾರಣವಾಯಿತು ಆದಾಗ್ಯೂ ಇಟ್ಟರತಕ್ಕ ಕಡಲೆ ಜೋಳ ಅರ್ಧ ಫಸಲು ಆಗಬಹುದೆಂದು ಜನಗಳು ಹೇಳುತ್ತಾರೆ —ಈ ಗ್ರಾಮದಲ್ಲಿ ಈಗ ಕಳ್ಳತನಕ್ಕೆ ಪ್ರಾರಂಭವಾಗಿರುತ್ತೆ ಪಾಟೇಲ್ ಶ್ಯಾನುಭೋಗರುಗಳಿಗೆ ಈ ಕಳವಿನ ವಿಷಯಗಳು ತಿಳಿಯಲಿಲ್ಲವೇನೋ ಗೊತ್ತಾಗಲಿಲ್ಲ —ಈಗ ಸ್ಕೂಲಿನಲ್ಲಿ ಬಾಲಕರ ಸಂಖ್ಯೆ ಹೆಚ್ಚಾಗಿರೋದರಿಂದ ವಿದ್ಯಾಭಿವೃದ್ಧಿಯು ಒಳ್ಳೇ ಸ್ಥಿತಿಗೆ ಬರುತ್ತಿರುವದು ಬಹಳ ಸಂತೋಷವಾಗಿದೆ

ಅಪೂರ್ವ ಗ್ರಂಥವು!!!

21 2

ತುಳಸೀದಾಸ್, ಕಬೀರ ಮೊದಲಾದ ೪೧ ವೈಷ್ಣವ ಭಕ್ತರ ಚರಿತ್ರೆಯು ಭಾಮಿನಿ ಷಟ್ಪದಿ ಪದ್ಯರೂಪವಾಗಿ ಸುಲಭ ಶೈಲಿಯಲ್ಲಿ ಭಕ್ತಮಹಿಮೆ ಎಂಬ ಅಭಿಧಾನದಿಂದ ಕನ್ನಡ ಭಾಷೆಯಲ್ಲಿ ಮುದ್ರಿತವಾಗಿದೆ ೧ ಪ್ರತಿಗೆ ೧೨ ಆಣೆ ಅಂಚೆ ವೆಚ್ಚ ಬೇರೆ

ವಿಳಾಸ —ಬೋಳಾರ ಬಾಬುರಾವ್, ಮಂಗಳೂರು

ವೃತ್ತಾಂತ ಪತ್ರಿಕೆ

— ೦ —

ಸನ್ ೧೯೧೦ ನೇ ಇಸವಿ ಫೆಬ್ರವರಿ ತಾ ೧೭ ನೇ ಗುರುವಾರ

ಮೈಸೂರು ಸಂಸ್ಥಾನದ ಪರಸ್ಪರಸಹಾಯಕ ಸಂಘಗಳು

ಮೈಸೂರು ಸಂಸ್ಥಾನದಲ್ಲಿರುವ ಪರಸ್ಪರಸಹಾಯಕ ಸಂಘಗಳ ನಾಲ್ಕನೇ ವಾರ್ಷಿಕ ರಿಪೋರ್ಟನ್ನು ರಿಜಿಸ್ಟ್ರಾರಾದ ಮ॥ ಎಂ. ಹಾಮರಾವ್, ಎಂ. ಎ. ಯವರು ಬರೆದು ಪ್ರಕಟಿಸಿರುತ್ತಾರೆ. ಈ ಸಂಘಗಳ ವಿಚಾರವು ನಮ್ಮ ಜನರಿಗೆ ಹೊಸದಾದ್ದರಿಂದ ಇವರ ಫಲಪ್ರಯೋಜನಾಂಶಗಳು ಪ್ರಜೆಗಳಿಗೆ ಸರಿಯಾಗಿ ಮುಂದಿಟ್ಟಾಗುವುದು ಕಷ್ಟ. ಈ ಸಂಘಗಳು ವಿಕಸನ ಫಲಕಾರಿಗಳಾಗಿರುವವೆಂದು ಹೇಳಲು ನಾಲ್ಕು ವರುಷಗಳು ಸಾಲದು. ಇನ್ನೂ ಕೆಲವು ಸಂವತ್ಸರಗಳು ಕಳೆಯಬೇಕೆಂದು ಕಾಣುತ್ತದೆ. ಆದಾಗ್ಯೂ ಈ ರಿಪೋರ್ಟನ್ನು ಓದಿ ನೋಡಿದ್ದರಲ್ಲಿ ಮ॥ ಹಾಮರಾಯರ ಸಾಹಸವೂ ಪ್ರೋತ್ಸಾಹವೂ ಸಾರ್ಥಕತೆಯನ್ನು ಹೊಂದುತ್ತಿವೆ ಎಂದು ಕಂಡುಬರುವದು. ಇವನ್ನು ಪ್ರಾರಂಭ ಮಾಡಿದಲ್ಲಿರೋಣದಿಂದ ಸಂವತ್ಸರಗಳನ್ನು ಬಟ್ಟು ೨೫೧ ಸಂಘಗಳು ಮಾತ್ರವೇ ರಿಜಿಸ್ಟರಾಗಿರುವವು. ಈ ಸ್ವಲ್ಪ ಕಾಲದಲ್ಲಿ ಪ್ರಾರಂಭವಾದ ಸಂಘಗಳು ೧೫೯ ಈ ರೀತಿ ಸಂಘಗಳು ವರುಷ ವರುಷ ಹೆಚ್ಚುತ್ತಾ ಬಂದಿರುವುದು ತುಂಬಾ ಸಂತೋಷಕರವಾಗಿದೆ.

ಪ್ರಜೆಗಳು ಒಟ್ಟುಗೂಡಿ ಪರಸ್ಪರ ಸಹಾಯಮಾಡುವುದರಿಂದ ಉಂಟಾಗುವಂಥಾ ಪ್ರಯೋಜನಗಳೆಂಬುವನ್ನು ದಿನೇ ದಿನೇ ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳುತ್ತಾ ಬಂದಿದ್ದಾರೆ. ಇಷ್ಟೇ ಅಲ್ಲ, ಒಬ್ಬೊಬ್ಬರು ಸಾಲಕೊಡುವುದು, ಕಸಬು ನಡೆಸುವುದಕ್ಕೆ ಅವಶ್ಯವಾದ ಪದಾರ್ಥಗಳನ್ನು ತರಿಸಿ ಬಿಕರಿ ಮಾಡುವುದು, ದವಸಾದಿಗಳನ್ನು ತರಿಸಿಕೊಡುವುದು, ಇವೇ ಮೊದಲಾದವುಗಳನ್ನು ಹಲವರು ಸೇರಿ ನಡೆಸಿಕೊಂಡು ಬಂದರೆ ಪರಸ್ಪರ ತುಂಬಾ ಸಹಾಯವಾಗುತ್ತದೆ ಎಂಬ ಅಂಶವು ಈಗೀಗ ಜನರಿಗೆ ಗೋಚರಕ್ಕೆ ಬರುತ್ತಿರುವುದು. ಈ ಸಂಘಗಳು ಬಡ್ಡಿಯ ದರವನ್ನು ಕಡಮೆಮಾಡಿ ಮೆಂಬರುಗಳಿಗೆ ಸಾಲಕೊಡುತ್ತಿರುವುದನ್ನು ನೋಡಿ ಕೆಲವು ಸಂದರ್ಭಗಳಲ್ಲಿ ಲೇವಾದೇವಿ ಮಾಡತಕ್ಕವರು ತಮಗೆ ಬರುತ್ತಿದ್ದ ಬಡ್ಡಿ ಕಡಮೆಯಾಯಿತಲ್ಲಾ ಎಂದು ನೊಂದುಕೊಂಡು ಈ ಸಂಘಗಳಿಗೆ ಪ್ರತಿಶಕ್ತಿಗಳಾಗಿ ವಾದಿಸುವರು. ಒಡಬಗ್ಗರನ್ನೂ ರೈತಪ್ರಜೆಗಳನ್ನೂ ಹಣಗಾರರ ಬಳಿಗೆ ಸಿಕ್ಕದಂತೆ ಮಾಡಬೇಕೆಂಬುವುದೇ ಈ ಸಂಘಗಳ ಉದ್ದೇಶವಾಗಿದೆ. ಅನೇಕ ಸಂದರ್ಭಗಳಲ್ಲಿ ವ್ಯವಸಾಯಗಾರರೂ ನೆಯ್ಗೆಯವರೂ ಇತರ ಕಸಬಿನವರೂ ಸಾಮಾನ್ಯ ಜನರೂ ಹಣಗಾರರಿಗೆ ಮಬಾರಿ ಬಡ್ಡಿಯನ್ನು ಪಾವತಿಮಾಡಿ ಕೆಟ್ಟುಹೋಗುತ್ತಾರೆ. ಇಂಥವರು ಒಟ್ಟುಗೂಡಿ ಒಬ್ಬರನ್ನೊಬ್ಬರು ಭರವಸವನ್ನಿಟ್ಟು ಧರ್ಮವಾದ ಬಡ್ಡಿಗೆ ಹಣ ಕೊಡುತ್ತಾ ಬಂದರೆ ಸಾಮುಕಾರರೂ ಕೂಡ ಕಾಲಕ್ರಮದಲ್ಲಿ ತಮ್ಮ ಬಡ್ಡಿಯ ದರವನ್ನು ಕಡಮೆಮಾಡಬೇಕಾಗುವುದು, ಇಲ್ಲವಾದರೆ ಅವರು ತಮ್ಮ ಗಿರಾಕಿಗಳನ್ನೆಲ್ಲಾ ಕಳೆದುಕೊಳ್ಳುತ್ತಾರೆ.

ಪರಸ್ಪರಸಹಾಯಕ ಸಂಘಗಳು ಅಭಿವೃದ್ಧಿಯಾಗಿ ಎಲ್ಲಾ ಕಡೆಗಳಲ್ಲೂ ಹರಡಿಕೊಳ್ಳಬೇಕಾದಲ್ಲಿ ಪ್ರಜೆಗಳು ವಿದ್ಯಾವಂತರಾಗಿ ಅವುಗಳಿಂದಾಗುವ ಪ್ರಯೋಜನಗಳನ್ನು ಗ್ರಹಿಸಿಕೊಳ್ಳಬೇಕು, ಹಾಗಿಲ್ಲದಿದ್ದರೆ ವಿದ್ಯಾವಂತರು ಪರಹಿತವನ್ನು ಬಯಸುವವರಾಗಿ ರೈತರೇ ಮೊದಲಾದ ವಿದ್ಯಾಹೀನರಾದ ಕಸಬುದಾರರಿಗೆ ವಿವೇಕವನ್ನು ಕಲಿಸಿ ಸಹಾಯಮಾಡಬೇಕು. ಈ ಸಂಘಗಳಲ್ಲಿ ಜಮಾಖರ್ಚಿನ ಲೆಕ್ಕಪತ್ರಗಳನ್ನು ಇಟ್ಟು ನಡೆಸುವುದು ಸುಲಭಸಾಧ್ಯವಾಗಿರುತ್ತದೆ. ಆದರೂ ಗ್ರಾಮಾಂತರಗಳಲ್ಲಿ ಇಷ್ಟು ಮಟ್ಟಿನ ಲೆಕ್ಕಾಚಾರಸ್ಥರು ಸಿಕ್ಕುವುದೂ ಕಷ್ಟವಾಗಿದೆ. ಇದಕ್ಕೆ ಸುತ್ತುಮುತ್ತಿನಲ್ಲಿ ವಿದ್ಯಾಭ್ಯಾಸವನ್ನು ಪಡೆದಿರುವಂಥಾ ವಿದ್ಯಾವಂತರಾಗಲಿ ಪೆನ್ಷನದಾರರಾಗಲಿ ದೊರಕುವ ಪಕ್ಷದಲ್ಲಿ ಅವರು ಇಂಥಾ ಸಂಘಗಳು ಏರ್ಪಾಡಾಗುವಂತೆ ಜನರಿಗೆ ವಿವೇಕ ಹೇಳಿ ಸಂಘಗಳನ್ನು ಪ್ರಾರಂಭಿಸಿ ನಡೆಸಿದರೆ ಎಷ್ಟೋ ಉಪಕಾರವಾದೀತು. ಕೆಲವು ಸ್ಥಳಗಳಲ್ಲಿ ಇಂಥಾ ಜನರು ಮುಂದಾಳುಗಳಾಗಿ ನಿಂತು ಇಂಥಾ ಪರಹಿತಕಾರ್ಯಕ್ಕೆ ತಮ್ಮ ಸಮಯವನ್ನು ವಿನಿಯೋಗಿಸಿ ಶ್ರಮಪಡುತ್ತಿದ್ದಾರೆಂದು ತಿಳಿದು ತುಂಬಾ ಸಂತೋಷಪಡುತ್ತೇವೆ.

ಇಂಥಾ ಉತ್ಕೃಷ್ಟವಾದ ಕಾರ್ಯಕ್ಕಾಗಿ ಶ್ರೀಮನ್ಮಹಾರಾಜರವರೇ ತಮ್ಮ ಸ್ವಂತ ಹಣವನ್ನು ದಯಪಾಲಿಸಿರುವುದಲ್ಲದೆ ಮೈಸೂರು ಗವರ್ನಮೆಂಟಿನವರು ತಮ್ಮಿಂದಾಗುವ ಸಹಾಯಸಂಪತ್ತುಗಳನ್ನೆಲ್ಲಾ ಒದಗಿಸಿಕೊಡುವುದರಲ್ಲಿ ಅಭಿಲಾಷೆಯುಳ್ಳವರಾಗಿದ್ದಾರೆ. ಗವರ್ನಮೆಂಟಿನವರು ಪರಸ್ಪರ ಸಹಾಯಕ ಸಂಘಗಳ ಕಟ್ಟುಪಾಡಿಗಾಗಿಯೇ ಒಂದು ಕಾನೂನು ಮಾಡಿ ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಒಬ್ಬ ರಿಜಿಸ್ಟ್ರಾರರವರನ್ನು ಇಬ್ಬರು ಸಮೇತ ನೇಮಕ ಮಾಡಿಕೊಟ್ಟಿರುವರು. ಗಭೀರವಾಗಿಯೂ ತಾಳ್ಮೆಯಿಂದಲೂ ಈ ಏರ್ಪಾಡನ್ನು ಪ್ರೋತ್ಸಾಹಕೊಟ್ಟು ನಡೆಸುತ್ತಾ ಬಂದ ಪಕ್ಷದಲ್ಲಿ ಸಂಘಗಳು ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಹರಡಿಕೊಳ್ಳುತ್ತವೆ. ಆಯಾ ಸಂಘಗಳಲ್ಲಿ ಮುಂದಾಳಾಗಿ ನಿಂತು ಕೆಲಸಮಾಡತಕ್ಕವರು ಆರೋಗ್ಯರೆನಿಯೂ ಪರಹಿತ ಕಾಂಕ್ಷಿಗಳಾಗಿಯೂ ಇರಬೇಕೆಂಬುದು ಅವಶ್ಯಕ. ಹಾಗಾದರೆ ಈ ಸಂಘಗಳಿಗೆ ಜನೋಪಕಾರಿಗಳಿಲ್ಲದ [illegible] ನನ್ನು ತಂದುಕೊಂಡು ಸಹಾಯವಾಗುತ್ತಾ ಬರಬೇಕಾದದ್ದು ಯುಕ್ತವಾಗಿದೆ.

ಈಗ ಸಂಸ್ಥಾನದಲ್ಲಿ ಇರುವ ೨೫೧ ಸಂಘಗಳಲ್ಲಿ ೮೩೫೧ ಮಂದಿ ಮೆಂಬರುಗಳು ಸೇರಿಕೊಂಡಿದ್ದಾರೆ. ಇವುಗಳ ಮೂಲಧನವು ೧೦೦,೧೩೧ ರೂಪಾಯಿ. ಈ ಸಂಘಗಳು ಅಲ್ಪಮಾತ್ರದವುಗಳಾಗಿ ಕಂಡುಬಂದರೂ ಮುಂದೆ ಕಾಲಕ್ರಮದಲ್ಲಿ ಈ ಏರ್ಪಾಡು ವಿಶೇಷವಾಗಿ ಅಭಿವೃದ್ಧಿಗೆ ಬರುತ್ತದೆಂದು ತೋರುತ್ತಿದೆ. ಈ ಪರಸ್ಪರಸಹಾಯಕ ಸಂಘಗಳ ವಿಚಾರವನ್ನು ಕುರಿತು ಸಣ್ಣ ಸಣ್ಣ ಪುಸ್ತಕಗಳನ್ನೂ ಹಸ್ತಪತ್ರಗಳನ್ನೂ ಸುಲಭವಾದ ಕನ್ನಡದಲ್ಲಿ ಬರೆದು ಪ್ರಕಟಿಸಿ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಪ್ರಜೆಗಳಿಗೆ ಹಂಚಿಸಿದರೆ ತುಂಬಾ ಪ್ರಯೋಜನವಾದೀತು. ಯಾಕೆಂದರೆ ಈ ಸಂಘಗಳು ಕಾಲಕ್ರಮದಲ್ಲಿ ಪ್ರಜೆಗಳ ಸ್ವಂತ ಸೇವಿಂಗ್ಸ್ ಬ್ಯಾಂಕುಗಳಾಗಿ, ಪರಿಣಮಿಸಿ ಅವರಲ್ಲಿ ಮಿತವ್ಯಯವನ್ನು ಹುಟ್ಟಿಸಿ ಪ್ರೋತ್ಸಾಹಪಡಿಸತಕ್ಕವುಗಳಾಗಿವೆ.

ದೇವರ ವಿಷಯದಲ್ಲಿ ನಮ್ಮ ಅಭಿಪ್ರಾಯವೇನು ?

ನಮ್ಮ ಯೋಚನೆಯಂತೆ ನಮ್ಮ ಅಭಿಪ್ರಾಯವೂ ಸಹ ಇರುತ್ತದೆ. ದೇವರ ವಿಷಯದಲ್ಲಿ ನಾವು ಹ್ಯಾಗೆ ಯೋಚಿಸುತ್ತೇವೆಯೋ ಹಾಗೆಯೇ ನಮ್ಮ ಅಭಿಪ್ರಾಯವೂ ಸಹ ಇರುತ್ತದೆಂದು ತಿಳಿಯಬೇಕು. ಆತನು ಕ್ರೂರವಾದವನೆಂದು ಯೋಚಿಸಿದರೆ ಆತನಿಗೂ ನಮಗೂ ಇರುವ ಸಂಬಂಧವು ಕ್ರೂರತರವಾಗಿಯೇ ಇರುತ್ತದೆ. ಆತನು ನಮ್ಮ ಕಡೆಗೆ ದೀರ್ಘಶಾಂತನೂ ಅಪಾರ ಪ್ರೀತಿಯುಳ್ಳವನೂ ಆಗಿದ್ದಾನೆಂದು ನಾವು ಯೋಚನೆ ಮಾಡಿದರೆ ಆತನ ಉಪಕಾರಗಳು ನಮ್ಮ ಅಂತರಂಗವನ್ನು ತಟ್ಟುತ್ತವೆ. ಅಥವಾ ಆತನು ಪಾಪಕ್ಕೆ ವಿರೋಧಿಯಲ್ಲವೆಂದು ನಾವು ಯೋಚನೆ ಮಾಡಿದರೆ ಆತನ ಸಹಜವಾದ ದಿವ್ಯ ಸ್ವಭಾವವು ನಮ್ಮ ಮನಸ್ಸಿಗೆ ಹೊಳೆಯಲಾರದು. ಆದುದರಿಂದ ದೇವರ ವಿಷಯದಲ್ಲಿ ನಮ್ಮ ನಿಜವಾದ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾದರೆ ನಾವು ಅವಲಂಬಿಸಿರುವ ಮತಬೋಧನೆಯನ್ನು ಆಧಾರ ಮಾಡಿಕೊಂಡು ಎಂದಿಗೂ ಮಾತನಾಡಬಾರದು. ನಾವು ನಮ್ಮ ಸ್ವಂತ ಹೃದಯಗಳನ್ನೂ ನಮ್ಮ ಅನುಭವಗಳನ್ನೂ ವಿಚಾರಿಸಿದರೆ ಆಗ ನಮ್ಮ ಅಭಿಪ್ರಾಯವೇನೆಂಬುವುದು ಗೊತ್ತಾಗುತ್ತೆ. ಒಂದುವೇಳೆ ನಮ್ಮ ನಿಜವಾದ ಅಭಿಪ್ರಾಯವು ಸತ್ಯಕ್ಕೆ ವಿರುದ್ಧವಾಗಿರಬಹುದು. ಆದರೂ ನಾವು ಯಥಾರ್ಥವಾಗಿರುವುದೇ ಒಳ್ಳೇದು. ನಾವು ಯೋಚನೆ ಮಾಡುವ ರೀತಿಯಲ್ಲಿ ಆಕ್ಷೇಪ ಮಾಡುವುದು ಒಳ್ಳೇದು. ಒಂದು ಮತಬೋಧನೆಗನುಸಾರವಾಗಿ ಮಾತನಾಡುವುದು ಶುದ್ಧ ತಪ್ಪು. ಯಾಕೆಂದರೆ ಮತಬೋಧನೆಯು ಅನೇಕ ಜನರು ಸಮ್ಮತಿಸಿರುವ ಅಭಿಪ್ರಾಯಗಳ ಸಾರಾಂಶವಾಗಿದೆ. ಈ ಬೋಧನಾ ಸಾರಾಂಶವು ಪ್ರತಿ ಒಬ್ಬೊಬ್ಬನ ಮನಸ್ಸಿಗೂ ಸಮಂಜಸವಾಗಿ ತೋರಲಾರದು. ತಾನು ಒಂದು ರೀತಿಯಾಗಿ ಯೋಚನೆ ಮಾಡಿ, ಆಲೋಚನೆಯಂತೆ ನಡೆಯದೆ ಮತಪದ್ಧತಿಗನುಸಾರವಾಗಿ ನಡೆಯುವುದು ಮಹಾ ಅಯೋಗ್ಯವಾದ ಕೆಲಸವಾಗಿದೆ. ತನಗೆ ನ್ಯಾಯವಾಗಿ ತೋರಲಿ, ಅನ್ಯಾಯವಾಗಿ ತೋರಲಿ ಹತ್ತು ಜನರು ಮೆಚ್ಚಿದರೆ ಸಾಕೆಂದು ಯೋಚನೆಮಾಡಿ ಅವರ ತೀರ್ಮಾನದಂತೆ ನಡೆಯುವುದು ಮಹಾ ಅಸಹಾಯಕರವಾಗಿದೆ. ತನ್ನ ಅಭಿಪ್ರಾಯವು ತಪ್ಪಾದರೂ ಸರಿಯೇ ಚಿಂತೆಯಿಲ್ಲ, ಯಥಾರ್ಥವಾಗಿರುವುದು ಒಳ್ಳೇದು. ದೃಷ್ಟಾಂತವಾಗಿ, ದೇವರ ನೀತಿಯುಕ್ತವಾದ ದಿವ್ಯ ಲಕ್ಷಣಗಳನ್ನು ಕುರಿತು ಹೇಳುವ ಮತವು ಆತನು ಅನಂತ ಪ್ರೀತಿಯೂ ಕರುಣೆಯೂ ಉಳ್ಳವನೆಂದು ಬೋಧಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಮಾತನಾಡುವವನು ಶುದ್ಧ ಅಜ್ಞಾನಿಯಾಗಲೀ ಅಥವಾ ಮತಭ್ರಷ್ಟನಾಗಲೀ ಕರೆಯಲ್ಪಡುತ್ತಾನೆ. ಆದರೆ ಆ ಮನುಷ್ಯನು ತನ್ನ ಪಾಪದ ದುರವಸ್ಥೆಯಲ್ಲಿ ಬಿದ್ದವನಾಗಿರುವುದರಿಂದ ದೇವರ ಅಪಾರವಾದ ಪ್ರೀತಿಯೂ ಕರುಣೆಯೂ ಅವನಿಗೆ ಪ್ರಕಟವಾಗದೆ ಹೋದರೆ ಅವನು ಏನು ಮಾಡಬೇಕು ? ತನ್ನ ಮತಸ್ಥರು ಮೆಚ್ಚಬೇಕೆಂದು ಹೇಳಿ, ತನ್ನ ಅನುಭವಕ್ಕೆ ಬಾರದೆ ಇರುವ ಕಾರ್ಯವನ್ನು ಕುರುಡುತನದಿಂದ ಒಪ್ಪಿಕೊಳ್ಳುವುದು ಒಳ್ಳೇದೋ ಅಥವಾ ತನ್ನ ಮನಸ್ಸಿನಲ್ಲಿ ಏನು ಹುಟ್ಟಿದೆಯೋ ಅದನ್ನು ಬಹಿರಂಗವಾಗಿ ಬಿಚ್ಚಿ ತೋರಿಸುವುದು ಉತ್ತಮವೋ ? ಯಥಾರ್ಥನಾಗಿ ಚರ್ಚೆ ಮಾಡುವುದೇ ದೇವರಿಗೆ ಪ್ರೀತಿಕರವಾದದ್ದು. ನಮ್ಮ ಯಥಾರ್ಥವಾದ ಅಭಿಪ್ರಾಯವು ಸರಿಯಾದ ಅಭಿಪ್ರಾಯವಲ್ಲದೆ ಇದ್ದರೂ ಚಿಂತೆಯಿಲ್ಲ. ನಾವು ಯಥಾರ್ಥರಾಗಿದ್ದರೆ ಸತ್ಯವು ನಮಗೆ ಅಂತ್ಯದಲ್ಲಿ ಗೋಚರವಾಗುತ್ತೆ. ಆದರೆ ಯಥಾರ್ಥತ್ವವು ಇಲ್ಲದೆ ಹೋದರೆ ಸತ್ಯವು ನಮ್ಮ ಕೈಗೆ ಎಂದಿಗೂ ಸಿಗಲಾರದು.

ಆದುದರಿಂದ ನಾವು ಮೇಲೆ ಹೇಳಿದ ಹಾಗೆ ದೇವರ ವಿಷಯವಾಗಿ ಒಬ್ಬನ ಅಭಿಪ್ರಾಯ ತಿಳಿಯಬೇಕಾದರೆ ಅವನು ತನ್ನ ಅನುಭವವನ್ನು ವಿಚಾರಿಸಿ ಹೇಳಬೇಕೇ ಹೊರತು ಮತಬೋಧನೆಗನುಸಾರವಾಗಿ ಹೇಳುವುದು ಅನುಚಿತ. ಆ ಅಭಿಪ್ರಾಯ ಸರಿಯಾಗಿರಲೀ ತಪ್ಪಾಗಿರಲೀ ಯಥಾರ್ಥವಾದುದನ್ನು ಅರಿಕೆ ಮಾಡುವುದರಿಂದ ದೇವರಿಗೂ ಅವನಿಗೂ ಇರುವ ನಿಜವಾದ ಸಂಬಂಧವು ವ್ಯಕ್ತವಾಗುತ್ತೆ. ಒಬ್ಬನು ದೇವರ ಪ್ರೀತಿಯನ್ನೂ ಕರುಣೆಯನ್ನೂ ನಿಜವಾಗಿ ಅನುಭವಿಸಿದ್ದರೆ, ಅದಕ್ಕೆ ಅವನ ಅಂತರಾತ್ಮವೇ ಸಾಕ್ಷಿ ಕೊಡುತ್ತದೆ. ಆದರೆ ಆತನ ಕೃಪಾವರಗಳು ಆ ಮನುಷ್ಯನ ಅನುಭವಕ್ಕೆ ಬಾರದೆ ಹೋದರೆ ಅವನ ಮತವು ಎಂಥಾ ಎತ್ತ ಬೋಧನೆಯನ್ನೇ ಮಾಡಲಿ ದೇವರು ಕೃಪಾಸಾಗರನೆಂಬುವುದು ಅವನಿಗೆ ಗೋಚರವಾಗಲಿಕ್ಕಿಲ್ಲ. ಪೂರ್ವಕಾಲದ ಅನೇಕ ದೇವಭಕ್ತರು ದೇವರ ವಿಷಯದಲ್ಲಿ ಯಾವ ಅಭಿಪ್ರಾಯ ಇಟ್ಟರೆಂದು ನಮ್ಮೆಲ್ಲರಿಗೂ ಗೊತ್ತದೆ. ಯೇಸುಸ್ವಾಮಿಯು ದೇವರ ವಿಷಯದಲ್ಲಿ ಏನು ಹೇಳಿದನೆಂಬುದು ಸಹ ನಮಗೆ ಗೊತ್ತಿರುವುದು. ಆದರೆ ಅವರ ಅಭಿಪ್ರಾಯಗಳು ಪ್ರಮಾಣವೂ ಇದೇ [illegible] ನೂ ಇದರ ವಿಷಯ ತನ್ನ ಸ್ವಂತ ತೀರ್ಮಾನವನ್ನು ಮಾಡುವುದು ಒಳ್ಳೆ[illegible] ದೇವರಿಗೂ ತನಗೂ ಯಾವ ಎಡನಾದ ಸಂಬಂಧವಿರಬೇಕಾದರೂ ತನ್ನ [illegible]

[illegible]

ಬೇರೆಕಡೆಯ ವೃತ್ತಾಂತಗಳು

[illegible] ಕೃಷ್ಣಮೂರ್ತಿಯವರು [illegible] ಕೊಡುವ ತೀರ್ಮಾನದ ದು ಕೇಳುತ್ತೇವೆ.

[illegible] ಭಾನುವಾರ ಮಧ್ಯಾಹ್ನ [illegible] ಹಾಲ್ ಎಂಬಲ್ಲಿ ನ್ಯಾಯಾಧಿಪತಿ ಶ್ರೀ ಕೃಷ್ಣರಾವ [illegible] ವಾರ್ಷಿಕ ಸಮಾಜದ ಜನರಲ್ ಮೀಟಿಂಗು ನಡೆಯುತ್ತದೆ.

ರಾಜಧಾನಿಯ ಸರ್ಕಾರಿ ಇಂಜನಿಯರ್ ಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ॥ ಅನಂತನಾರಾಯಣರಾಯರು ಇಂಜನಿಯರ್ ಕೆಲಸಗಳನ್ನು ತೋರಿ ಸುವುದಕ್ಕಾಗಿ ಕೆಲವು ವಿದ್ಯಾರ್ಥಿಗಳನ್ನು ಹಾರಿ ಕೆರೆಯ ಪ್ರಾಂತ್ಯಕ್ಕೆ ಕರೆದುಕೊಂಡು ಹೋಗಿದ್ದಾರೆ.

ಅರ್ಜಿದಾರರೂ ಕಕ್ಷಿಗಾರರೂ ಕೇಳಿದ ಪಕ್ಷದಲ್ಲಿ ಡೆಪ್ಯುಟಿ ಕಮಿಷನರು ಅ॥ ಕಮಿಷನರೂ, ಅಮಲ್ದಾರರೂ ತಮ್ಮ ತೀರ್ಮಾನಗಳನ್ನು ಹುಕುಮುಗಳನ್ನು ಇಂಗ್ಲಿಷಿನಲ್ಲಿ ಬರೆದಿದ್ದರೆ ಕನ್ನಡಕ್ಕೆ ಭಾಷಾಂತರಮಾಡಿ ಕೊಡಬೇಕೆಂದು ರೆವಿನ್ಯೂ ಕಮಿಷನರವರು ಸರ್ಕ್ಯುಲರ್ ಹುಕುಂ ಕೊಟ್ಟಿದ್ದಾರೆ.

ನೆನ್ನೆ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದ ದಿನವಾದದ್ದರಿಂದ ರಾಜಧಾನಿಯಲ್ಲಿ ೨೧ ತೋಪುಗಳು ಹಾರಿಸಲ್ಪಟ್ಟವು. ರಾತ್ರಿ ಅರಮನೆ ಮುಂತಾದ ಕಡೆಗಳಲ್ಲಿ ದೀಪೋತ್ಸವವಾಯಿತು. ದೇವಸ್ಥಾನಗಳಲ್ಲಿ ವಿಶೇಷವಾದ ಅಭಿಷೇಕ ಪ್ರಾರ್ಥನೆ ಉತ್ಸವಗಳು ನಡೆಸಲ್ಪಟ್ಟವು.

ಶ್ರೀರಂಗಪಟ್ಟಣದ ಪ್ಲೀಡರ್ ಮ॥ ಎಸ್. ಸುಬ್ಬರಾಯರ ಎರಡನೇ ಕುಮಾರರಾದ ಮ॥ ಸುಬ್ಬರಾಯರನ್ನು ಸರ್ಕಾರದವರು ಮೈಸೂರು ಕಾಲೇಜಿಗೆ ಚರಿತ್ರ ಬೋಧಕರನ್ನಾಗಿ ನೇಮಕ ಮಾಡಿದರೆಂದು ಪ್ರಕಟವಾಗಿದೆ. ಇವರು ದಾಮೋದರದಾಸ್ ಫಂಡಿನಿಂದ ವೇತನವನ್ನು ಪಡೆದು ಸೀಮೆಗೆ ಹೋಗಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಬಂದಿರುತ್ತಾರೆ.

ಬೇತ್ರರು ಉಪಾಸನಾ ಸಮಾಜದ ಪ್ರೆಸಿಡೆಂಟರು ಬರೆಯುವುದು:— ಇಲ್ಲಿ ಮ॥ ಕರೀಘಟ್ಟ ಗೋವಿಂದಪ್ಪಶೆಟ್ಟರೂ ಸಾಹುಕಾರ [illegible] ಸ್ಥಾಪಿಸಿರುವ ಶ್ರೀ ಮಂಜನಾಥ ಅನಾಥಾಲಯದ ವಾರ್ಷಿಕೋತ್ಸವವು ತಾ ೩೦ ನೇ ಮಂಗಳವಾರ ನಡೆಯುವುದು. ಮ॥ ಎನ್. ವಿ. ರಾಮಸ್ವಾಮಿ ಅಯ್ಯಂಗಾರ್ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಉತ್ಸವಾದಿಗಳನ್ನು ನೆರವೇರಿಸುವರು.

ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿ ಮನೆ ಮುಂತಾದ ಕಟ್ಟಡಗಳಲ್ಲಿ ಪ್ಲೇಗು ಕಾಯಿಲೆಯವರು ಇದ್ದಾರೆಂದು ಮಾಲೀಕರಿಗೆ ತಿಳಿದ ಕೂಡಲೇ ಮ್ಯುನಿಸಿಪಲ್ ಸ್ಯಾನಿಟರಿ ಇನ್ಸ್‌ಪೆಕ್ಟರಿಗೆ ಆ ಸಂಗತಿಯನ್ನು ತಿಳಿಸಬೇಕೆಂತಲೂ ಮ್ಯುನಿಸಿಪಾಲಿಟಿಯವರು ಕಾಯಿಲೆಯವರನ್ನು ಪ್ರತ್ಯೇಕ ಸ್ಥಳಗಳಿಗೆ ಸಾಗಿಸಿ ಸ್ಥಳವನ್ನು ಡಿಸಿನ್‌ಫೆಕ್ಟ್ ಮಾಡಿಸಬೇಕೆಂತಲೂ, ಅನಾರೋಗ್ಯಕರವಾದ ಜೋಪಡಿಗಳನ್ನು ನಾಶಪಡಿಸಬಹುದೆಂತಲೂ ಸರ್ಕಾರದವರು ಅಧಿಕಾರವನ್ನು ವಹಿಸಿ ಹುಕುಂ ಕೊಟ್ಟಿರುತ್ತಾರೆ.

ಇಲ್ಲಿನ ಪೋಲೀಸ್ ಸೂಪರಿಂಟೆಂಡೆಂಟರಾದ ಮ॥ ಜವರಪ್ಪನ್ ಮಕ್ಕಳವರಿಗೆ ಎಕ್ಸೈಸ್ ಇಲಾಖೆಗೆ ವರ್ಗವಾದದ್ದರಿಂದ ರಾಜಧಾನಿಯ ಮುಸಲ್ಮಾನ್ ಸಂಘದವರು ಕಳೆದ ಭಾನುವಾರ ಮಧ್ಯಾಹ್ನವು, ಪೋಲೀಸ್ ಇಲಾಖೆಯವರು ಆ ಸಾಯಂಕಾಲವೂ ಅವರಿಗೆ ಔತಣವನ್ನು ಮಾಡಿ ತಮ್ಮ ಪ್ರೀತಿಸನ್ಮಾನಗಳನ್ನು ಪ್ರಕಾಶಪಡಿಸಿದರು. ಎರಡುವೇಳೆಯೂ ಇಲ್ಲಿನ ಮುಖ್ಯಾಧಿಕಾರಿಗಳು ಹಾಜರಾಗಿ ಸಂತೋಷ ಫಲಾಹಾರಾದಿಗಳಲ್ಲಿ ಸಹಭಾಗಿಗಳಾಗಿದ್ದರು. ಮ॥ ಮೆಕ್ಕೆಯವರು ನಾಳೆ ಸೋಮವಾರ ಮ॥ ಶಾಮೋಜಿರಾಯರಿಗೆ ಡಿಸ್ಟ್ರಿಕ್ಟ್ ಪೋಲೀಸ್ ಚಾರ್ಜನ್ನು ವಹಿಸಿ, ಮೂರು ತಿಂಗಳ ರಜಾ ಉಪಯೋಗಿಸಿಕೊಳ್ಳುವವರಾಗಿದ್ದಾರೆ.

ತಾ ೧೧ ನೇ ಶುಕ್ರವಾರ ರಾತ್ರಿ ರಾಜಧಾನಿಯ ಹಳೇ ಅಗ್ರಹಾರದ ಆ ಗಡಿ ಬೀದಿಯಲ್ಲಿ ಸಂಗ್ಯೆಯ ಚಂಜಾತನ ಅಂಗಡಿಯೊಳಗೆ ಶೀಮೆಯೆಣ್ಣೆಯ ಬುಡ್ಡಿ ಅಕಸ್ಮಾತ್ತಾಗಿ ಹತ್ತಿಕೊಂಡು, ಸುಮಾರು ೩೦ ೪೦ ರೂಪಾಯಿನ ಸರಕು ನಷ್ಟವಾಯಿತು. ಅಂಗಡಿ ಹತ್ತಿಕೊಳ್ಳುವುದೆಂಬ ಗಾಬರಿಯಿಂದ ಸಿಂಗೆಯನು ಅದರೊಳಗೆ ನುಗ್ಗಿ ಹೊಕ್ಕು ಬಂದು ಬಿದ್ದದ್ದರಿಂದ ಆತನಿಗೆ ಸ್ವಲ್ಪ ಸುಟ್ಟ ಗಾಯಗಳಾದವು. ಆತನನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡುತ್ತಿದ್ದಾರೆ. ಗಾಯಗಳು ವಾಸಿಯಾಗುತ್ತಲಿವೆ. ಬೆಂಕಿಯನ್ನು ಆರಿಸುವುದೇ ಮೊದಲಾದ ಕೆಲಸಗಳನ್ನು ಪೋಲೀಸ್ ಹೆಡ್ ಕಾನ್‌ಸ್ಟೇಬಲ್ ಚಂದ್ರಶೇಖರಯ್ಯನವರೂ ಮ್ಯುನಿಸಿಪಲ್ ಓವರ್‌ಸಿಯರ್ ನಂಜಪ್ಪನವರೂ ಬಹಳ ಮುತುವರ್ಜಿಯಿಂದ ಮಾಡದೆ ಹೋಗಿದ್ದರೆ ಆ ಅಂಗಡಿಗೂ ಆ ಮನೆಗಳೂ ಆ ಬೀದಿಯಲ್ಲಿ ಉರಿದು ಅನಾಹುತವಾಗುತ್ತಿತ್ತು.

ಬೆಂಗಳೂರು ಬಸವನಗುಡಿ ಬಡಾವಣೆಯಲ್ಲಿ ಸರ್ಕಾರದವರು ದೊಂಬಾಲಯನ ಮ॥ ತಾತಾಯವರಿಗೆ ಜಮೀನನ್ನು ಕೊಟ್ಟು ಅವರಿಂದ ರೇಷ್ಮೆ ತಯಾರಿಗಾಗಿ ಒಂದು ಫಾರಮನ್ನು ಏರ್ಪಡಿಸಿ ಸುಮಾರು ೧೩ ವರುಷಗಳಾದವು. ಅದರ ಖರ್ಚಿಗೆ ವರುಷ ಸರ್ಕಾರದವರು ಕೊಡುತ್ತಿದ್ದ ೩,೦೦೦ ರೂ ವರುಷಾಶನವನ್ನು ಈಚೆಗೆ ೧೯೦೭ ರಲ್ಲಿ ಮ॥ ತಾತಾಯವರ ಕಡೆಯವರು ಫಾರವನ್ನು ಇಟ್ಟು ನಡೆಸುವುದು ಕಷ್ಟವಾಗಿದೆ ಎಂದು [illegible] ಈಗ ಈ ಫಾರಮನು [illegible] [illegible] ಸರ್ವೋಪಕಾರ ಸಂಘದ [illegible] ವಹಿಸಿಕೊಳ್ಳುವವರಾಗಿದ್ದಾರೂ, ಅದನ್ನು ಅಭಿವೃದ್ಧಿಗೆ ತರುವುದಕ್ಕೆ ಆ ಸಂಘದವರಿಗೆ ಸರ್ಕಾರದವರು [illegible] ವರುಷ ೧,೦೦೦ ರೂಪಾಯಿನಂತೆ ಸಹಾಯದ್ರವ್ಯವನ್ನು ಕೊಡುವುದಾಗಿ [illegible] ಆ ಸಂಘದ ವ್ಯಕ್ತಿ ಒಬ್ಬರು ಆ ಫಾರಮಿಗೆ [illegible] ಕೆಲಸವನ್ನು ಕಲಿಯುವುದಕ್ಕೆ ದೊರೆತಿದೆ ಎಂದು ಪ್ರಕಟವಾಗಿದೆ.

[illegible] ಮ॥ [illegible] ನಾರಾಯಣಸ್ವಾಮಿ [illegible] ಕಳೆದ [illegible] ರಾತ್ರಿ ವೃದ್ಧಾಪ್ಯದ ದೆಸೆಯಿಂದ [illegible] ಇವರು ಚಿಕ್ಕ ವಯಸ್ಸಿನಲ್ಲಿ ಬೆಂಗಳೂರಿಗೆ [illegible] ಕ್ರಮೇಣ ಹಾಗೇ ಹಣವನ್ನು ಕೂಡಿ [illegible] ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿದರು [illegible] ವ್ಯವಹಾರ [illegible] ಸರಿಯಾಗಿ [illegible] ಹಲವು [illegible] ಕಟ್ಟಡಗಳನ್ನು ನಡೆಸಿ [illegible] ಇವರ ಧರ್ಮ ವೃತ್ತಿಯನ್ನು ನೋಡಿ ಮೆಚ್ಚಿಕೊಂಡು [illegible] ಮಹಾರಾಜರವರೂ [illegible] ಇವರಿಗೆ [illegible] ನಾನಾ ಧರ್ಮ ಕಾರ್ಯಗಳು ಇವರ ಹೆಸರನ್ನು ಶಾಶ್ವತ [illegible] ಕಾಲದಲ್ಲಿ ಬ್ರಿಟಿಷ್ [illegible] ಅಧಿಕಾರಿಗಳೂ [illegible] ತಮಗಿದ್ದ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸುವುದು [illegible] ವರುಷವಾಗಿತ್ತೆಂದು ತಿಳಿಯುತ್ತದೆ.

[illegible] ಮಹಾರಾಜರವರು ಮೊನ್ನೆ ಸೋಮವಾರ ಬೆಂಗಳೂರಿಗೆ ಬಂದರು. [illegible] ಮುಂತಾದ ಮೈಸೂರಿನ ಅಧಿಕಾರಿಗಳು ರೈಲ್ವೆ ಸ್ಟೇಷನ್ನಿನಲ್ಲಿ ಅವರನ್ನು ಎದುರುಗೊಂದು ಸನ್ಮಾನಪೂರ್ವಕವಾಗಿ ಅಲ್ಲಿನ [illegible] ಅದೇ ರಾತ್ರಿ ಮಹಾರಾಜರವರು ಬೆಂಗಳೂರಿಂದ ರೈಲು [illegible] ಗಂಟೆಗೆ ರಾಜಧಾನಿಯನ್ನು ತಲುಪಿದರು. [illegible] ಸಮಾರಾ ಮ॥ ಕಾಂತರಾಜ ಅರಸಿನವರು ಪೋಲೀಸ್ ಸೂಪರಿಂಟೆಂಡೆಂಟರವರೂ ಸ್ಟೇಷನ್ನಿನಲ್ಲಿ ಮಹಾರಾಜರನ್ನು ಎದುರುಗೊಂಡು, ಆ ಮನೆಯ ಸಾರೋಟಿನಲ್ಲಿ ಕರೆದುತಂದರು. ಮಹಾರಾಜರವರು ಜಗನ್ಮೋಹನ [illegible] ಅಲ್ಲಿ ಸ್ವಲ್ಪ ಹೊತ್ತು ಇದ್ದು ನಮ್ಮ ಶ್ರೀಮನ್ಮಹಾರಾಜರವರ [illegible] ಮೋಟಾರ್ ಗಾಡಿಗಳನ್ನು ಹತ್ತಿ [illegible] ಗಂಟೆಗೆ [illegible] ಆನೆಗಳ ಖೆಡ್ಡಾ ಕ್ಯಾಂಪಿಗೆ ತೆರಳಿದರು. ಅವರ ಕೂಡ ಅವರ ನಾಯಬ್ ದಿವಾನರವರು, ಸೆಕ್ರೆಟರಿಯವರು, ಡಾಕ್ಟರು, ಸೈನ್ಯದ ಅಧಿಕಾರಿಗಳಲ್ಲದೆ ಸುಮಾರು [illegible] ಮಂದಿ ಪರಿವಾರದವರು ಬಂದಿದ್ದಾರೆ. ಮಹಾರಾಜರವರು ಖೆಡ್ಡಾದಲ್ಲಿ ಆನೆಗಳ ಬಂಧನಗಳನ್ನು ನೋಡಿಕೊಂಡು ಕಾಕನಕೋಟೆ ಮುಂತಾದ ಜಂಗಲುಗಳಿಗೆ ಹೋಗಿ [illegible], ಸುಮಾರು ತಾ [illegible] ಕ್ಕೆ ರಾಜಧಾನಿಗೆ ಬಂದು ಒಂದೆರಡು ದಿನಗಳ ತನಕ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ವಾಪಸು ಪ್ರಯಾಣಮಾಡುವವರಾಗಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ

ಪ್ಲೀಡರ್ ಮ॥ ಎಚ್ ಸುಬ್ಬರಾಯರನ್ನೂ ಮ॥ ಯೋಸೋಲ್ ಸಾರಂಗ್ಯನವರನ್ನೂ ಚಿಕ್ಕಬಳ್ಳಾಪುರದ ಟೌನ್ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಕ ಮಾಡಿದೆ. ಅಲ್ಲಿ ಮ್ಯುನಿಸಿಪಾಲಿಟಿಯು ಖಾಯಂ ಮಾಡಲ್ಪಟ್ಟ ಹೊಸ ಕೌನ್ಸಿಲ್ ಏರ್ಪಾಡಾಗುವ ವರೆಗೆ ಇವರು ಬೋರ್ಡಿನ ಮೆಂಬರಾಗಿರತಕ್ಕದ್ದು.

ಆನೇಕಲ್ ಮ್ಯುನಿಸಿಪಾಲಿಟಿಗೆ ಮುಂದೆ ಹೇಳುವವರು ಮೆಂಬರಾಗಿ ಚುನಾಯಿಸಲ್ಪಟ್ಟಿದ್ದಾರೆ — ಮೆ॥ ಗಳಾದ ಎಲ್ ನಾರಾಯಣರಾಯರು, ಶ್ರೀಕಂಠಭಟ್ಟರು, ರುದ್ರಪ್ಪನವರು, ರಾಮರಾಯರು, ಶಂಕರಪ್ಪನವರು. ಸರ್ಕಾರದಿಂದ ನೇಮಕವಾಗಿರುವ ಮೆಂಬರುಗಳು — ಮೆ॥ ಗಳಾದ ಮರಿಗೆ ಹನುಮಂತಪ್ಪನವರು, ಪಾಳ್ಯಗಾರ್ ವೀರಚಿಕ್ಕರಾಯಪ್ಪರು, ಯಜಮಾನ್ ಚಿಕ್ಕಣ್ಣನವರು, ಮುನ್ಷೀ [illegible] ನವರು, ಚಿಕ್ಕಣ್ಣನವರು.

ಶಿವಮೊಗ್ಗ ಟೌನ್ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಮುಂದೆ ಹೇಳುವವರನ್ನು ಸರ್ಕಾರದವರು ಮೆಂಬರಾಗಿ ನೇಮಕ ಮಾಡಿದ್ದಾರೆ — ರೆವ್ ಎ ಬ್ರೈಕ್ ಹ್ಯಾಂಕ್ ಯವರು, ರೆವ್ ಫಾದರ್ ವೈ ಗೊನಸಾರಿಸ್ ಯವರು, ಮೆ॥ ಗಳಾದ [illegible] ಟಿ ವೆಂಕಟಪ್ಪನವರು, ಹರಿಕೆರೆ ರಾಮಪ್ಪನವರು, ಟಿ ಭೀಮರಾಯರು, ಜಿ ಟಿ ದಸ್ಸನವರು, ಹಾಜಿ ಸೈಯದ್ ಮಹಮದ್ ಸಾಹೇಬರವರು.

ಎಕ್ಸೈಸ್ ಇಲಾಖೆಯಲ್ಲಿ ಕೆಲಸ ಮಾಡುವಂತೆ ವರ್ಗಮಾಡಲ್ಪಟ್ಟ ಅ॥ ಕಮಿಷನರ್ ಮೆ॥ ಜಹಿರುದ್ದೀನ್ ಸೇಕ್ಕೆಯವರಿಗೆ ಅವರು ಛಾರ್ಜು ಕೊಟ್ಟ [illegible] ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ರಜದಿಂದ ವಾಪಸು ಬರುವ ತನಕ ಮೆ॥ ಎನ್ ವಾಧವರಾಯರು ತುಂಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರತಕ್ಕದ್ದು.

ತುಂಕೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ॥ ಸಿ ಕೃಷ್ಣಮನಾಯ್ಡು ಯವರು ರಜದಿಂದ ಬಂದು ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಮೆ॥ ವಿ ಗೋಪಾಲರಾಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತೊಂಬತ್ತು ದಿನಗಳಿಗೆ ಜಾಸ್ತಿ ಮಾಡಿದೆ. ಈಗಿನ ಬದಲಿ ಏರ್ಪಾಡೇ ಮುಂದೆಯೂ ನಡೆಯತಕ್ಕದ್ದು.

ಹಾಸನ್ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ॥ ಎಂ ರಂಗರಾಯರಿಗೆ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚನ್ನರಾಯಪಟ್ಟಣದ ಸಬ್ ಡಿವಿಷನ್ ಅ॥ ಕಮಿಷನರ್ ಮೆ॥ ಸಿ ದೇವರಾಜೇ ಅರಸಿನವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಜಾಸ್ತಿ ಮಾಡಿದೆ.

ಮೆ॥ ಎಸ್ ಎನ್ ಅಪ್ಪಣ್ಣಯ್ಯಂಗಾರ್ಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ॥ ಕಮಿಷನರಾಗಿ ಚನ್ನರಾಯಪಟ್ಟಣದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟ್ ಪ್ರೊ॥ ಅ॥ ಕಮಿಷನರ್ ಮೆ॥ ಎ ವಿ ರಾಮನಾಥನ್ ಯವರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಮೆ॥ ಎಸ್ ಎನ್ ಅಪ್ಪಣ್ಣಯ್ಯಂಗಾರ್ಯರು ಅ॥ ಕಮಿಷನರಾಗಿ ಒದಲಿ ಕೆಲಸ ನೋಡುವ ತನಕ ಅವರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ.

ಮೆ॥ ಎ ಆರ್ ತ್ಯಾಗರಾಜ ಐಯ್ಯರವರನ್ನು ಸೆನ್ಸಸ್ ಸೂಪರಿಂಟೆಂಡೆಂಟರಾಗಿ ನೇಮಕ ಮಾಡಿದ್ದರಿಂದ ಅ॥ ಕಮಿಷನರ್ ಮೆ॥ ಆನಂದರಾವ್ ಸಿಂಧೆ ಯವರನ್ನು ಹಂಗಾಮಿಯಾಗಿ ಬೆಂಗಳೂರು ಸಬ್ ಡಿವಿಜನ್ ಛಾರ್ಜಿಗೆ ವರ್ಗ ಮಾಡಿದೆ. ಇವರು ಮೆ॥ ವೇದಾಂತ ದೇಶಿಗಂ ಐಯ್ಯಂಗಾರ್ರಿಗೆ ಛಾರ್ಜು ಕೊಟ್ಟ ನಂತರ ಹೋಗತಕ್ಕದ್ದು.

ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಅ॥ ಕಮಿಷನರ್ ಮೆ॥ ನರಸಿಂಗರಾವ್ ಪೂರ್ಣಯ್ಯನವರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಕಳೆದ ಜೂನ್ ೧ನೆ ತಾ ಲಾಗಾಯ್ತು ಆರ್ ಶ್ರೀನಿವಾಸರಾಯರನ್ನು ರೆಜಿಸ್ಟ್ರೇಷನ್ ಇಲಾಖೆ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸ್ ಮ್ಯಾನೇಜರಾಗಿಯೂ, ಪಿ ಎನ್ ಕೃಷ್ಣಮೂರ್ತಿಯವರನ್ನು ೩ನೇ ಕ್ಲಾಸ್ ಸಬ್ ರೆಜಿಸ್ಟ್ರಾರಾಗಿಯೂ ಖಾಯಂ ಮಾಡಲಾಗಿದೆ.

ಪ್ರೊ॥ ಅ॥ ಕಮಿಷನರ್ ಮೆ॥ ಎಸ್ ರಾಮಣ್ಣನವರನ್ನು ಲೆಕ್ಕಾಚಾರ ಕಲಿಯುವುದಕ್ಕಾಗಿ ಕಂಟ್ರೋಲರವರ ಆಫೀಸಿಗೆ ವರ್ಗ ಮಾಡಿದೆ.

ಮುಂದೆ ಹೇಳುವ ಬದ್ಲಿಗಳನ್ನು ಕಳೆದ ಜುಲೈ ತಾ ೧೦ ಲಾಗಾಯ್ತು ಹುಕುಂ ಮಾಡಿದೆ — ಮೆ॥ ಗಳಾದ ಜಿ ಕೃಷ್ಣಮೂರ್ತಿನಾಯ್ಡು ಯವರನ್ನೂ ಪಿ ಎಸ್ ಗೋವಿಂದರಾಯರನ್ನೂ ೩ನೇ ಕ್ಲಾಸ್ ಫಾರೆಸ್ಟ್ ಅ॥ ಕನ್ಸರ್ವೇಟರ್ ದರ್ಜೆಗೆ, ಮೆ॥ ಎಲ್ ಪಿ ವಾಸ್ಕರ್‌ಹೌಸ್ ಯವರನ್ನು ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ದರ್ಜೆಗೆ.

ಡೆಪ್ಯುಟಿ ಅಮಲ್ದಾರ್ ಬಿ ಮೊಹಮೀನ್ ಷರೀಫ್ ಯವರನ್ನು ಕುಂಸಿ ಸಬ್ ತಾಲ್ಲೂಕಿಗೆ ವರ್ಗ ಮಾಡಿದೆ.

ವಿದೇಶ ವರ್ತಮಾನಗಳು

ಕಳೆದ ವರುಷ ಪ್ರಪಂಚದ ಎಲ್ಲಾ ಚಿನ್ನದ ಗಣಿಗಳಲ್ಲೂ ೧೩೫ ಕೋಟಿ ರೂಪಾಯಿನ ಚಿನ್ನವನ್ನು ಉತ್ಪತ್ತಿ ಮಾಡಿರುತ್ತಾರೆಂದು ಪ್ರಕಟವಾಗಿದೆ.

ಉತ್ತರ ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಇನ್ನು ಮೇಲೆ ಜಪಾನ್ ಕೂಲಿಯವರನ್ನು ಅಲ್ಲಿಗೆ ಬಾರದಂತೆ ತಡೆಯಬೇಕೆಂದು ಒಂದು ಕಾನೂನ್ ಮಾಡಬೇಕೆಂದು ಚರ್ಚೆಯಾಗುತ್ತಿದೆ.

ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲ್ ಗವರ್ನಮೆಂಟಿನವರು ಅಲ್ಲಿಂದ ೧೧ ಪೌಂಡಿಗಿಂತ ಕಡಮೆಯಾದ ತೂಕವುಳ್ಳ ದಂತಗಳನ್ನು ಯಾರೂ ಅಲ್ಲಿಂದ ರಫ್ತು ಮಾಡಕೂಡದೆಂದೂ, ಹಾಗೆ ಮಾಡಿದವರಿಗೆ ೭೫೦ ರೂಪಾಯಿ ತನಕ ಜುಲ್ಮಾನೆ ವಿಧಿಸಿ ದಂತಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಾಗಿಯೂ ಕಾನೂನ್ ಮಾಡಿದ್ದಾರೆ.

ಜರ್ಮನಿಯ ಮಂತ್ರಿಗಳು ಸಭೆಸೇರಿ ತಮ್ಮ ರಾಜ್ಯದಲ್ಲಿ ತಯಾರಾಗುವ ವಿಶೇಷ ವಸ್ತುಗಳನ್ನು ಹಿಂದುಸ್ಥಾನದಲ್ಲಿ ವಿಕ್ರಯ ಮಾಡುವುದಕ್ಕೆ ಅನುಕೂಲಿಸುವಂತೆ ಕಳುಹಿಸಿಕೊಟ್ಟು, ಅಲಹಾಬಾದ್ ಪಟ್ಟಣದಲ್ಲಿ ನಡೆಯುವ ಪ್ರದರ್ಶನಶಾಲೆಯಲ್ಲಿ ಇಡಬೇಕೆಂದು ತೀರ್ಮಾನ ಮಾಡಿ, ಅದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿದರು.

ಫ್ರಾಂಸಿನ ಯುದ್ಧದ ಇಲಾಖೆಯ ಮಂತ್ರಿಯವರ ಬಳಿಗೆ ಒಬ್ಬ ಕಾರೀಗಾರನು ಒಂದು ಬಂದೂಕನ್ನು ಕಳುಹಿಸಿರುತ್ತಾನೆ. ಅದರಿಂದ ಶಿಪಾಯಿಯು ನಿಮಿಷಕ್ಕೆ ೨೦೦–೩೦೦ ಗುಂಡುಗಳನ್ನು ಹೊಡೆಯಬಹುದೆಂದು ಹೇಳುವರು. ಈ ಬಂದೂಕಿನ ರಚನೆಯು ಗುಟ್ಟಿನಲ್ಲಿರುವುದು. ಅದು ತೂಕದಲ್ಲಿ ೧೭ ಪೌಂಡು ಇದೆ ಎಂದೂ, ಸೈನ್ಯಾಧಿಕಾರಿಗಳು ನೋಡಿ ತುಂಬಾ ಸಂತೋಷಪಟ್ಟರೆಂದೂ ಪ್ರಕಟವಾಗಿದೆ.

ಪೆಸಿಫಿಕ ಸಾಗರದಲ್ಲಿ ಸಂಚಾರಮಾಡುತ್ತಿದ್ದ ಲೀಮಾ ಎಂಬ ಹಡಗು ಮ್ಯಾಜೆಲನ್ ಜಲಸಂಧಿಯಲ್ಲಿ ಹಾಂಬ್ಲಿನ್ ಎಂಬ ರಾಜ್ಯದ ಬಳಿ ಬಂಡೆಗೆ ಬಡಿದು ಅನಾಹುತವಾಯಿತು. ಐವತ್ತೊಂದು ಜನರು ಸಮುದ್ರದ ಪಾಲಾದರು. ಒಂದು ಇಂಗ್ಲಿಷ್ ಹಡಗು ಅಲ್ಲಿಗೆ ಹೋಗಿ ೨೦೫ ಜನರನ್ನು ಬದುಕಿಸಿ ಕರೆದು ತಂದಿತೆಂದೂ ಮುಳುಗಿದ ಹಡಗಿನಲ್ಲಿ ಇದ್ದ ೮೮ ಜನರನ್ನು ಕರೆದುತರಲು ಅಸಾಧ್ಯವಾಯಿತೆಂದೂ ತಂತೀ ವರ್ತಮಾನ ಬಂದಿದೆ.

ಕಳೆದ ವಾರ ಇಂಗ್ಲಿಷ್ ಪ್ರಧಾನ ಮಂತ್ರಿಗಳು ಲಂಡನ್ ಪಟ್ಟಣದಲ್ಲಿ ಒಂದು ಮೀಟಿಂಗು ನಡಿಸಿದಾಗ್ಗೆ ಹಿಂದುಸ್ಥಾನದ ವೈಸ್‌ರಾಯಿ ಪದವಿಗೆ ಯಾರನ್ನು ನೇಮಕಮಾಡಬೇಕೆಂಬದಾಗಿ ವಿಚಾರಮಾಡಿದಂತೆಯೂ, ಹಿಂದುಸ್ಥಾನದಲ್ಲಿ ರಾಜದ್ರೋಹವೂ ಕ್ರೂರಕೃತ್ಯಗಳೂ ನಿಲ್ಲದಹೋದ ಪಕ್ಷದಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೆ ಲಾರ್ಡ್ ಕಿಚ್ನರ್ ಯವರನ್ನೇ ವೈಸ್‌ರಾಯಿಯಾಗಿ ನೇಮಿಸಿ ಕಳುಹಿಸಬೇಕಾಗುವುದೆಂದು ಅಭಿಪ್ರಾಯಪಟ್ಟಹಾಗೂ ತಂತೀವರ್ತಮಾನ ಬಂದಿದೆ.

ವಿಲಾಯತಿಯ ಮಂತ್ರಿಯವರಾದ ಮ॥ ಅಸ್ಕಿತ್ ಯವರು ಲಂಡನ್ ಪಟ್ಟಣಕ್ಕೆ ಬಂದು, ಬ್ರೈಟನ್ ನಗರದಲ್ಲಿ ಚಕ್ರವರ್ತಿ ಸಾರ್ವಭೌಮರವರ ಭೇಟಿ ಮಾಡಿ, ಅವರ ಕೂಡ ಒಂದು ಘಂಟೆಯ ತನಕ ಸಂಭಾಷಣೆ ಮಾಡಿಕೊಂಡು ವಾಪಸು ಹೋದರೆಂದು ತಂತೀವರ್ತಮಾನ ಬಂದಿದೆ. ಇಂಗ್ಲಿಷ್ ಪಾರ್ಲಿಮೆಂಟು ಮುಂದಿನ ಸೋಮವಾರ ಪ್ರಾರಂಭವಾಗುವುದು. ಆಗ್ಗೆ ಚಕ್ರವರ್ತಿಯವರು ತಮ್ಮ ಅಪ್ಪಣೆಯನ್ನು ದಯಪಾಲಿಸುವರು. ಒಳಕ ಮಂತ್ರಿಗಳು ಬಡ್ಜೆಟ್ ವಿಚಾರವನ್ನೂ ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ರೂಢಿಸಬೇಕೆಂದಿರುವ ಹೊಸ ಬಿಲ್ಲುಗಳನ್ನೂ ಮೆಂಬರುಗಳಿಗೆ ತಿಳಿಸುತ್ತಾರೆಂದು ಊಹಿಸಲ್ಪಟ್ಟಿದೆ.

ಜರ್ಮನಿ ರಾಜ್ಯದಲ್ಲಿ ಸಂಚಾರಮಾಡಿಕೊಂಡು ಬಂದಿರುವ ಒಬ್ಬ ಇಂಗ್ಲಿಷ್ ರೈಲ್ವೆ ಇಂಜನಿಯರು ಆ ರಾಜ್ಯದ ಕಾರ್ಖಾನೆಗಳನ್ನೆಲ್ಲಾ ನೋಡಿರುತ್ತೇನೆಂತಲೂ, ಯುದ್ಧದ ಸಾಮಗ್ರಿಗಳಾದ ಬಂದೂಕು, ಮದ್ದು, ಗುಂಡು, ಫಿರಂಗಿ ಮೊದಲಾದವುಗಳನ್ನು ತಯಾರುಮಾಡುವ ಕಾರ್ಖಾನೆಯೊಳಗೆ ಪ್ರತಿ ದಿನವೂ ೨೪ ಗಂಟೆಗಳ ತುಂಬಾ ವಿರಾಮವಿಲ್ಲದೆ ಕೆಲಸ ನಡೆಯುತ್ತಿದೆ ಎಂದೂ, ಕ್ರುಪ್ ಎಂಬ ಒಂದು ಕಾರ್ಖಾನೆಯೊಳಗೇ ೬೬,೦೦೦ ಜನರು ಕೆಲಸ ಮಾಡುತ್ತಿದ್ದಾರೆಂದೂ, ಇದನ್ನೆಲ್ಲಾ ನೋಡಿದರೆ ಜರ್ಮನಿಯವರು ಇಷ್ಟರೊಳಗೇ ಯುದ್ಧಕಾರ್ಯಗಳನ್ನು ಪ್ರಾರಂಭಿಸುವಂತೆ ತೋರುವುದೆಂದೂ ಒಂದು ಕಾಗದದಲ್ಲಿ ಬರೆದಿರುತ್ತಾನೆ.

ಫ್ರಾನ್ಸ್ ಸಂಸ್ಥಾನದಲ್ಲಿ ಕೆಲವು ಕಡೆ ಪ್ರವಾಹಗಳು ಇಳಿಯುತ್ತಾ ಬಂದಿದ್ದರೂ ಇನ್ನು ಕೆಲವು ಸ್ಥಳಗಳಲ್ಲಿ ಅದರ ಕಷ್ಟನಷ್ಟಗಳು ನಿವಾರಣೆಯಾಗಲಿಲ್ಲ. ಸೋನ್ ನದಿಯ ಕಣಿವೆಯೊಳಗಿರುವ ಗ್ರಾಮಗಳೆಲ್ಲಾ ಮುಳುಗಿ ಹೋಗಿರುತ್ತವೆ. ಪ್ರವಾಹದ ದೆಸೆಯಿಂದ ನಷ್ಟಪಟ್ಟ ಸಣ್ಣ ಸಣ್ಣ ಕಸಬುದಾರರಿಗೂ ವ್ಯಾಪಾರಸ್ಥರಿಗೂ ಬಡ್ಡಿಯಿಲ್ಲದೆ ಐದು ವರುಷಗಳವರೆಗೆ ಆರು ಕೋಟಿ ರೂಪಾಯನ್ನು ಸಾಲಕೊಡುವಂತೆ ಅಲ್ಲಿನ ಒಂದು ದೊಡ್ಡ ಬ್ಯಾಂಕು ಒಪ್ಪಿಕೊಂಡಿದೆ. ಇತರ ಬ್ಯಾಂಕುಗಳವರೂ ಹೀಗೇ ಸಹಾಯಮಾಡಲಾರಂಭಿಸಿದ್ದಾರೆ. ಕೆನಡಾ ಎಂಬ ಇಂಗ್ಲಿಷ್ ಸಾಮ್ರಾಜ್ಯದ ಪಾರ್ಲಿಮೆಂಟಿನವರು ಒಂದೂವರೆ ಲಕ್ಷ ರೂಪಾಯಿ ಕಳುಹಿಸಿಕೊಟ್ಟರು. ಫ್ರಾನ್ಸಿನ ಪಾರ್ಲಿಮೆಂಟಿನವರು ಕಷ್ಟನಿವಾರಣೆಗಾಗಿ ೮ ಕೋಟಿ ರೂಪಾಯನ್ನು ಸ್ಯಾಂಕ್ಷನ್ ಮಾಡಿದ್ದಾರೆ.

ಸರ್ವಿಯಾ ರಾಜ್ಯದ ಪ್ರಿನ್ಸ್ ಜಾರ್ಜ್ ಎಂಬ ರಾಜಕುಮಾರನು ಅವೆಂಕ್ಕೆ ಎಂಬೊಬ್ಬ ಪೋಲೀಸ್ ಅಧಿಕಾರಿಯನ್ನು ಅಪಮಾನಪಡಿಸಿದನು. ಆತನು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟನು. ಸರ್ಕಾರದವರು ಅದನ್ನು ಅಂಗೀಕರಿಸದೆ ಆತನಿಗೆ ಸಮಾಧಾನ ಹೇಳಿ ಕಳುಹಿಸಿದರು. ಈಚೆಗೆ ಅದೇ ರಾಜಕುಮಾರನು ಆ ಅಧಿಕಾರಿಯನ್ನು ಕಂಡು ಮತ್ತೆ ಅಪಮಾನಕರವಾದ ಮಾತುಗಳನ್ನಾಡಿ ಬೇಗಿಸಿದನು. ಪೋಲೀಸ್ ಅಧಿಕಾರಿಯು ಅರಮನೆ ಪಹರೆಯನ್ನು ಬಿಟ್ಟು ಹೋಗಿ, ತನ್ನ ಕೆಲಸಕ್ಕೆ ಇನ್ನಾರನ್ನಾದರೂ ನೇಮಿಸಬೇಕೆಂದು ತಿಳಿಸಿದನು. ಮಂತ್ರಿಗಳು ಸಭೆ ಸೇರಿ ಈ ವಿಚಾರವನ್ನು ಚರ್ಚಿಸಿ, ಆ ರಾಜಕುಮಾರನನ್ನು ಕೆಲವು ಕಾಲದ ಮಟ್ಟಿಗೆ ಊರು ಬಿಟ್ಟು ಕಳುಹಿಸಬೇಕೆಂದು ತೀರ್ಮಾನ ಮಾಡಿ, ತಮ್ಮ ಅಭಿಪ್ರಾಯವನ್ನು ದೊರೆಯವರಿಗೆ ಅರಿಕೆಮಾಡಿದರು. ದೊರೆಯು ಸಂಗತಿಗಳನ್ನೆಲ್ಲಾ ತಿಳಿದು ಮಂತ್ರಿಗಳ ತೀರ್ಮಾನವನ್ನೇ ಒಪ್ಪಿಕೊಂಡು ಆ ರಾಜಕುಮಾರನನ್ನು ಸರ್ವಿಯಾದಿಂದ ಕಳುಹಿಸುವ ಏರ್ಪಾಡು ಮಾಡುತ್ತಿದ್ದಾರೆ.

ಚೀನಾ ರಾಜ್ಯದಲ್ಲಿ ಸರ್ಕಾರಿ ಅಧಿಕಾರಗಳೂ ಪ್ರಜೆಗಳ ಮುಖಂಡರೂ ದೇಶ ಸ್ವತಂತ್ರರಾಗುತ್ತಿರುವಂತೆ ಕಂಡು ಬರುತ್ತದೆ. ಕೆಲವು ಮುಖಂಡರೂ ರಾಜಕುಮಾರರೂ ಸಭೆ ಸೇರಿ, ೧೮೯೪–೯೫ ನೇ ಇಸವಿಯ ಯುದ್ಧಕ್ಕಾಗಿಯೂ, ೧೯೦೦ ನೇ ಇಸವಿಯ ಬಾಕ್ಸರ್ ದಂಗೆಗಾಗಿಯೂ ಚೀನಾ ಗವರ್ನಮೆಂಟಿಗೆ ಸಾಲವಾಗಿರುವ ಹಣವನ್ನು ತೀರಿಸಿ ಬಿಡಬೇಕೆಂದು ಆಲೋಚನೆ ಮಾಡಿ ರಾಜ್ಯದಲ್ಲಿ ಎಲ್ಲಾ ವೈಸ್‌ರಾಯಿಗಳೂ ಗವರ್ನರುಗಳೂ ಇತರ ಮುತ್ಸದ್ದಿಗಳೂ ಹಣಗಾರರೂ ಮೂರು ವರುಷಗಳ ತನಕ ತಮ್ಮ ಸಂಬಳದಲ್ಲೂ ವರಮಾನಗಳಲ್ಲೂ ಶೇಕಡಾ ೩೦ ರಂತೆ ಸಾಲದ ಫಂಡಿಗೆ ಕೊಡಬೇಕೆಂತಲೂ, ಇದರಿಂದ ಪರರಾಜ್ಯಗಳ ಸಾಲ ತೀರಿ ಚೀನಾರಾಜ್ಯಕ್ಕೆ ಎಲ್ಲಾ ಭಾಗಗಳಲ್ಲೂ ಕ್ಷೇಮವೂ ಅಭಿವೃದ್ಧಿಯೂ ಉಂಟಾಗುವುದೆಂತಲೂ ಗೊತ್ತು ಮಾಡಿ, ಈ ಅರ್ಥಕ್ಕೆ ಪತ್ರಿಕೆಗಳನ್ನು ಬರೆಸಿ ರಾಜ್ಯದ ಎಲ್ಲಾ ಕಡೆಗಳಲ್ಲೂ ಇರುವ ಅಧಿಕಾರಿಗಳಿಗೂ ವರ್ತಕರೇ ಮುಂತಾದ ಐಶ್ವರ್ಯವಂತರಿಗೂ ಕಳುಹಿಸಿರುತ್ತಾರೆ.

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಸಭೆ

ಬೆಂಗಳೂರು, ೧೨ ೨-೧೦ —ಈ ದಿನದ ಸಮಾಜದಲ್ಲಿ ಅತಿ ವಿಶೇಷವಾಗಿ ನಾರೀಮಣಿಗಳ ಸಮೂಹವು ಸೇರಿತ್ತು. ವೇದಾಂತಸಾರ ಎಂಬ ವಿಷಯವನ್ನು ಕುರಿತು ಮಿಸ್ ಸಿ ಬಿ ಶೇಷಗಿರಿಯಮ್ಮ—ಸಾವಿತ್ರಮ್ಮನವರು ಅತಿ ರಮಣೀಯವಾದ ಒಂದು ಉಪನ್ಯಾಸವನ್ನು ಓದಿದರು. ವಿಷಯವು ಬಹಳ ಕಠಿಣವಾಗಿದ್ದಾಗ್ಯೂ ಅದನ್ನು ಎಲ್ಲರ ತಿಳುವಳಿಕೆಗೆ ಬರುವಂತೆ ಸುಲಭ ಶೈಲಿಯಲ್ಲಿ ಬರೆದು ಇದ್ದರು. ವೇದಕ್ಕೆ ಉಪನಿಷತ್ತುಗಳು ಅಂತ್ಯವಾಗಿರುತ್ತವೆ. ಅವುಗಳ ಸಾರಾಂಶವೇ ವೇದಾಂತವಾಗಿರುವುದು ಎಂದು ಸೂಚಿಸಿ ಒಂದೆರಡು ಉಪನಿಷತ್ತುಗಳ ಮುಖ್ಯ ತಾತ್ಪರ್ಯವನ್ನು ಸಂಗ್ರಹಿಸಿ ಹೇಳಿ, ಅದರ ಅರ್ಥಗಳನ್ನು ಪುರಾಣೇತಿಹಾಸಗಳ ಕಥೆಗಳಿಂದ ಎಲ್ಲರಿಗೂ ತಿಳಿಯುವಂತೆ ದೃಷ್ಟಾಂತ ಪಡಿಸಿ ಉಪನ್ಯಾಸವನ್ನು ಪೂರೈಸಿದರು. ಅನಂತರದಲ್ಲಿ ಮಿಸ್ ಲಕ್ಷ್ಮೀನರಸಮ್ಮ—ಪುಟ್ಟಮ್ಮನವರು ಬಹಳ ಶ್ರಾವ್ಯವಾಗಿ ವೀಣೆಯನ್ನು ನುಡಿಸಿದರು. ತರುವಾಯ ಮಂಗಳಪ್ರದವಾದ ಹಾಡುಗಳಿಂದ ಸಭೆಯು ಮುಕ್ತಾಯ ಮಾಡಲ್ಪಟ್ಟಿತು.

ಬರುವ ಮೀಟಿಂಗು ಇದೇ ತಿಂಗಳು ೧೯ ನೇ ತಾ ಶನಿವಾರ ನಡಿಸಲ್ಪಡುತ್ತದೆ.

ನಮ್ಮ ಪುಸ್ತಕ ಭಂಡಾರವು

ಮನೋರಂಜನಿ

ಚೌರಿಂಗ್‌ಪೆಟೆಯಲ್ಲಿರುವ ಎ ವಿ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರಾದ ಮ॥ ರಾ॥ ಕೆ ರಾಮರಾಯರು ತಾವು ಭಾಷಾಂತರಿಸಿದ ' ಮನೋರಂಜನಿ ' ಎಂಬುವ ಪುಸ್ತಕದ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿದ್ದಾರೆ. ಈ ಪುಸ್ತಕದ ಹೆಸರಿಗೆ ತಕ್ಕಹಾಗೆ ಇದರಲ್ಲಿ ಮನೋಹರವಾದ ಕಥೆಗಳು ಅಡಕವಾಗಿವೆ. ಮ ರಾಮರಾಯರು ಈ ಕಥೆಗಳನ್ನು, ಓದುವವರಿಗೆ ಮನೋಹರವಾಗಿಯೂ ವಿದ್ಯಾರ್ಥಿಗಳಿಗೆ ನೀತಿ ಬೋಧಕಗಳಾಗಿಯೂ ಈ ಕಾಲದ ಧನಿಕರನ್ನೂ ದೇಶೀಯ ಮರ್ಯಾದೆಯನ್ನೂ ಅನುಸರಿಸಿ ರಚಿಸಿರುವುದು ತುಂಬಾ ಶ್ಲಾಘನೀಯವಾಗಿದೆ. ವಿದ್ಯಾರ್ಥಿಗಳಿಗೆ ಭಾಷಾ ಪರಿಜ್ಞಾನ ಉಂಟಾಗುವಂತೆ ಗ್ರಂಥಕಾರರು ಈ ಪುಸ್ತಕವನ್ನು ಒಳ್ಳೆ ಭಾಷಾ ಶೈಲಿಯಲ್ಲಿ ಬರೆದಿರುತ್ತಾರೆ. ಮ॥ ರಾಮರಾಯರು ಇನ್ನೊಂದು ಮುದ್ರಣದಲ್ಲಿ ಈ ಪುಸ್ತಕದಲ್ಲಿರುವ ಒಂದೆರಡು ಆಕ್ಷೇಪನಾದ ಭಾಗಗಳನ್ನು ತೆಗೆದುಹಾಕಿ ಪ್ರಕಟಿಸುವುದು ಉತ್ತಮವೆಂದು ಸಲಹೆ ಕೊಡುತ್ತೇನೆ. ದೃಷ್ಟಾಂತವಾಗಿ ೬೭ ನೆಯ ಪುಟದಲ್ಲಿ ಹೀಗೆ ಬರೆಯಲ್ಪಟ್ಟಿದೆ — ಸುಮಾರು ಇದೇ ನಿದರ್ಶನವನ್ನಿಟ್ಟುಕೊಂಡು ಈಗ ಕೆಲವು ದೊಡ್ಡ ಅಂಗಡಿಗಳಲ್ಲಿ ಸ್ತ್ರೀಯರನ್ನು ಸಂಬಳಕ್ಕೆ ಇಟ್ಟುಕೊಳ್ಳುವುದು ವಾಡಿಕೆಯಾಗಿದೆ." ಇಂಥಾ ವಾಕ್ಯಗಳನ್ನು ಮ॥ ರಾಮರಾಯರು ತಮ್ಮ ಪುಸ್ತಕದಲ್ಲಿ ಉಪಯೋಗಿಸದೆ ಇರುವುದು ಒಳ್ಳೆಯದು. ಈ ಪುಸ್ತಕವು ಸರ್ವಭಾಗಗಳಲ್ಲೂ ತಕ್ಕಮಟ್ಟಿಗೂ ತೃಪ್ತಿಕರವಾಗಿರುವುದರಿಂದ ನಮ್ಮ ದೇಶದ ಸ್ಕೂಲ್ ವಿದ್ಯಾರ್ಥಿಗಳು ಉಪಯೋಗಿಸುವುದರಲ್ಲಿ ಏನೂ ಆಕ್ಷೇಪವಿರುವುದಿಲ್ಲ.

ಚಿತ್ರದುರ್ಗದ ಉಪಾಧ್ಯಾಯ ಸಂಘವು

ಮಾಸ್ಯ ಮೀಟಿಂಗು

ಈ ತಿಂಗಳು ೭ ನೇ ತಾ ಸೋಮವಾರ ಮಧ್ಯಾಹ್ನ ೪½ ಘಂಟೆಗೆ ಚಿತ್ರದುರ್ಗದ ಗರ್ಲ್ಸ್ ಸ್ಕೂಲ್ ಮಂದಿರದಲ್ಲಿ ಎಂದಿನಂತೆ ಸಭೆಯು ಕೂಡಿತ್ತು. ಒಟ್ಟು ೨೩ ಜನ ಉಪಾಧ್ಯಾಯರು ಹಾಜರಿದ್ದರು. ಸಭೆಯ ಪ್ರೆಸಿಡೆಂಟರು ಸರ್ಕಾರಿ ಕೆಲಸದ ನಿಮಿತ್ತ ಬರಲಿಲ್ಲವಾದ್ದರಿಂದ ವೈಸ್ ಪ್ರೆಸಿಡೆಂಟ್ ಮ॥ ವೆಂಕಟರಾವ್, ಬಿ ಎ, ಎಲ್ ಟಿ ಯವರು ಸಭೆಯ ಕಾರ್ಯಗಳನ್ನು ಜರುಗಿಸಲು ಅಧ್ಯಕ್ಷತೆಯನ್ನು ವಹಿಸಿದರು. ಸಭೆಯ ಸೆಕ್ರೆಟರಿಯವರು ಕಳೆದ ಮೀಟಿಂಗಿನಲ್ಲಿ ನಡೆದ ವಿಷಯಗಳನ್ನು ಸೂಕ್ಷ್ಮವಾಗಿ ವಿವರಿಸಿ ಹೇಳಿದರು. ಮುಖ್ಯಾಂಶಗಳನ್ನು ಚರ್ಚಿಸಿ ರಿಕಾರ್ಡು ಮಾಡಿದ್ದಾಯಿತು. ನಾಡಿನ ಗೊತ್ತಾಗಿದ್ದ ಮೇರೆ ಗರ್ಲ್ಸ್ ಸ್ಕೂಲ್ ಉಪಾಧ್ಯಾಯರಲ್ಲಿ ಒಬ್ಬರಾದ ಮತ್ತು ಅಪ್ಪರ್ ಸೆಕೆಂಡರಿ ಟ್ರೈನಿಂಗಿನಲ್ಲಿ ಪ್ಯಾಸಾಗಿರುವ ಮ॥ ಹನುಮಂತರಾಯರವರು ೧೦ ಜನಗಳಿಂದ ಕೂಡಿದ ಒಂದು ಕನ್ನಡ ಎರಡನೇ ತರಗತಿಯನ್ನು ಕರೆದುತಂದು ಸಭೆಯಲ್ಲಿ ಕ್ರಮವಾಗಿ ಪಾಠಹೇಳಲು ಪ್ರಾರಂಭಿಸಿದರು. ಕನ್ನಡ ಎರಡನೇ ರೀಡರಿನಲ್ಲಿ ೧೮ನೇ ಪಾಠವನ್ನು ತಕ್ಕ ಟಿಪ್ಪಣಿ ಮತ್ತು ಸಲಕರಣೆಗಳೊಂದಿಗೆ ಬೋಧಿಸಿದರು. ಸಭಿಕರೆಲ್ಲರೂ ಉತ್ಸಾಹಪರಿತರಾಗಿ ನೋಡುತ್ತಲೂ ನ್ಯೂನತೆಗಳನ್ನು ಗುರ್ತಿಸುತ್ತಲೂ ಇದ್ದರು. ಬಾಲಕರಿಗೆ ಅವಗಾಹನೆಯಾಗುವಂತೆಯೂ, ನಿದರ್ಶನಗಳಿಂದಲೂ, ಪ್ರಶ್ನೆಗಳಿಂದಲೂ ಬೋಧನೆಯು ಸಾಗಿತು.

ತರುವಾಯ ನ್ಯೂನತೆಗಳನ್ನು ಚರ್ಚಿಸಿದ್ದಲ್ಲದೆ ವೈಸ್ ಪ್ರೆಸಿಡೆಂಟರು ಭಾಷಾ ಬೋಧನೆಯನ್ನು ಕುರಿತು ಉಪನ್ಯಾಸಮಾಡಿದರು. ಎಲ್ಲವನ್ನೂ ಇಲ್ಲಿ ವಿವರಿಸಲು ಸಾಧ್ಯವಿಲ್ಲ. ಅವರು ಹೇಳಿದ ಮುಖ್ಯ ಭಾಗಗಳನ್ನು ಸೂಕ್ಷ್ಮವಾಗಿ ವಿವರಿಸಿದೆ.

ಭಾಗಗಳು —೧. ಉಪಾಧ್ಯಾಯರಿಗೆ ಅವಶ್ಯಕತಕ್ಕವುಗಳು—(೧) ಭಾಷಾಭಿಜ್ಞತೆ, ಶಬ್ದಗಳ ಪರ್ಯಾಯ, ಶೋಧಿಸುವಿಕೆ (೨) ಬಾಲಕರ ಯೋಗ್ಯತೆಯನ್ನನುಸರಿಸಿರೋಣ.

೨ ಭಾಷಾ ಬೋಧನಾ ಭಾಗಗಳು—(೧) ಓದುವ ಕ್ರಮ (ರಸಭರಿತವಾಗಿ), (೨) ಅರ್ಥವಿಷಯ, (೩) ಪ್ರಶ್ನೆಗಳ ಮುಖಾಂತರ ಉತ್ತರ ಹೊರಡಿಸುವಿಕೆ, (೪) ಪಠಿಕೆಯಲ್ಲಿ ಚಿತ್ರಗಳ ಮುಖಾಂತರ ಉತ್ಸಾಹವನ್ನು ಹೆಚ್ಚಿಸುವಿಕೆ ಮೊದಲಾದವುಗಳ ವಿವರಣೆ.

ಈ ರೀತಿ ಉಪನ್ಯಾಸವು ಮುಗಿದನಂತರ ಮುಂದಿನ ತಿಂಗಳಲ್ಲಿ ನಡೆಯುವ ಮೀಟಿಂಗಿನಲ್ಲಿ ಪಾಠಬೋಧಕರನ್ನೂ ಉಪನ್ಯಾಸಕೊಡತಕ್ಕವರನ್ನೂ ಗೊತ್ತುಮಾಡಲಾಯಿತು.

ಬಹುಮಂದಿ ಉಪಾಧ್ಯಾಯರು ಕಾರಣಾಂತರಗಳಿಂದ ಮೀಟಿಂಗುಗಳಿಗೆ ಹಾಜರಾಗುತ್ತಿರಲಿಲ್ಲ. ಇಂಥಾ ಅತ್ಯುತ್ತಮವಾದ ಸಂದರ್ಭವು ತಮಗೆ ದೊರೆಯುವದಿಲ್ಲವೆಂದು ಯೋಚಿಸುತ್ತಿದ್ದರು. ಈಚೆಗೆ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ತಿರುಮಲಾಚಾರ್, ಬಿ ಎ ಯವರು ತಕ್ಕ ಅನುಕೂಲವಮಾಡಿ ಪ್ರತಿಯೊಬ್ಬರೂ ಬರಲೇಬೇಕೆಂದು ಸರ್ಕ್ಯುಲರ್ ಕೊಟ್ಟು ತಿಳಿಸಿದ್ದಕ್ಕಾಗಿ ಅವರಿಗೆ ಬಹಳ ಕೃತಜ್ಞರಾಗಿದ್ದೇವೆ. ಮುಂದಿನ ಮೀಟಿಂಗಿನಿಂದ ಹೆಚ್ಚು ಜನ ಉಪಾಧ್ಯಾಯರು ಇದರಿಂದ ಪ್ರಯೋಜನವನ್ನು ಹೊಂದುವರೆಂದು ಹಾರೈಸಿದೆ.

ಕಳೆದ ತಿಂಗಳ ಪ್ರಶ್ನೆಗೆ ಹುಳಿಯಾರಿನ ಎ ವಿ ಸ್ಕೂಲಿನ ಮ॥ ವೆಂಕಟಸ್ವಾಮಯ್ಯನವರು ಬರೆದು ಕಳುಹಿಸಿದ್ದ ಉತ್ತರವನ್ನು ಸಭೆಯಲ್ಲಿ ಓದಿ ರಿಕಾರ್ಡು ಮಾಡಲಾಯಿತು. ಇತರ ಬರವಣಿಗೆಗಳಿಗಿಂತಲೂ ಇದು ಉತ್ತಮವೆಂದು ತಿಳಿಯಬಂತು.

ಬೇರೆ ಉಪಾಧ್ಯಾಯರಿಗೇ ಆಗಲಿ ತಮ್ಮ ಪಾಠಶಾಲೆಯಲ್ಲೇ, ಬೋಧನಾ ಕ್ರಮದಲ್ಲೂ ಅನುಮಾನಗಳೇನಾದರೂ ಉಂಟಾಗಿದ್ದಲ್ಲಿ ಅಂಥಾ ವಿಷಯಗಳನ್ನು ಮೊದಲೇ ಗುರ್ತುಮಾಡಿ ಈ ಸಭೆಗೆ ಕಳುಹಿಸಬಹುದು. ಅದನ್ನು ಈ ಸಭೆಯಲ್ಲಿ ಚರ್ಚಿಸಿ, ಸರಿಯಾದ ಮಾರ್ಗವನ್ನು ಅವರಿಗೆ ತಿಳಿಸಲಾಗುತ್ತದೆ. ಅದು ಸರ್ವತ್ರ ಅವಶ್ಯಕತಕ್ಕದ್ದಾಗಿಯೂ, ಎಲ್ಲರಿಗೂ ಆವಶ್ಯಕವೆಂದೂ ಕಂಡರೆ ಪ್ರತ್ಯೇಕವಾಗಿ ವಿದ್ಯಾದಾಯಿನಿಯೆಂಬ ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಶ್ನೆಗಳು —ಅಂಕಗಣಿತದ ಅಂಕಕರಣ ಅಂಕಬಂಧನವನ್ನು ಹೇಗೆ ಬೋಧಿಸಬೇಕೆಂಬುವದಕ್ಕೆ ತಕ್ಕ ಟಿಪ್ಪಣಿಯನ್ನು ಬರೆಯಲು ಕೊಟ್ಟಿದೆ. ಇದನ್ನು ಯಾವ ಉಪಾಧ್ಯಾಯರಾದರೂ ಸಕಾರಣವಾಗಿ ಬರೆದು ಈ ತಿಂಗಳ ಆಖೈರೊಳಗಾಗಿ ಸೆಕ್ರೆಟರಿಯವರಿಗೆ ತಲುಪುವಂತೆ ಕಳುಹಿಸಿದಲ್ಲಿ ಅದು ಪೂರ್ವಕವಾಗಿ ಅಂಗೀಕರಿಸಲಾಗುವುದು.

೧೨—೨— ೧೯೧೦,	ಸಿ ಹಾಲಪ್ಪ ಪ್ಪ
ಚಿತ್ರದುರ್ಗ	ಸಂಘದ ಸೆಕ್ರೆಟರಿ

ರಾಜಭಕ್ತಿ ಪ್ರೋತ್ಸಾಹಕ ಸಂಘವು

ಮದರಾಸು ಆದಿಪತ್ಯದಲ್ಲಿ ಪ್ರಾರಂಭಿಸಲ್ಪಟ್ಟದ್ದು

ಮದರಾಸ್ ಆಧಿಪತ್ಯದ ಜಮೀನ್‌ದಾರರ ಸಂಘದ ಗೊಖಲೆ ಹಾಲ್ ಎ ಬ ಮಂದಿರದಲ್ಲಿ (ಮದರಾಸ್ ಪಟ್ಟಣದ ಮೌಂಟ್ ರೋಡಿನಲ್ಲಿ) ಮೇಲ್ಕಂಡ ಸಂಘದ ಮೊದಲನೇ ಸಭೆಯು ಕಳೆದ ಗುರುವಾರ ಸಾಯಂಕಾಲ ಸೇರಿತ್ತು. ಬೊಬ್ಬಿಲಿ ಮಹಾರಾಜರವರು ಅಗ್ರಾಸನವನ್ನು ವಹಿಸಿದ್ದರು. ಕೆಲವು ರಾಜರೂ ಜಮೀನ್‌ದಾರರೂ ಸಭೆಯಲ್ಲಿ ಹಾಜರಾಗಿದ್ದರು. ಉಪನ್ಯಾಸಗಳೂ ಚರ್ಚೆಗಳೂ ನಡೆದು ಸಂಘವು ಕ್ರಮವಾಗಿ ಸ್ಥಾಪಿಸಲ್ಪಟ್ಟಿತು. ಈ ಸಂಘದ ಅಧಿಕಾರಿಗಳ್ಯಾರೆಂದರೆ ಪ್ರೆಸಿಡೆಂಟರು ಬೊಬ್ಬಿಲಿ ಮಹಾರಾಜರು, ವೈಸ್ ಪ್ರೆಸಿಡೆಂಟರುಗಳು—ಜಯಪುರದ ಮಹಾರಾಜರವರೂ ಪಿಠಾಪುರದ ರಾಜರವರೂ ಸೆಕ್ರೆಟರಿ—ಮ॥ ಜೆ ವೆಂಕಟನಾರಾಯಣ ಎಂ ಎ ಯವರು ಸಂಘದ ಹಣವನ್ನು ಮದರಾಸ್ ಬ್ಯಾಂಕಿನಲ್ಲಿ ಇಡತಕ್ಕದ್ದೆಂದು ಗೊತ್ತಾಯಿತು. ಬಳಿಕ ಕಾರ್ಯನಿರ್ವಾಹಕರ ಕಮಿಟಿಯು ನೇಮಿಸಲ್ಪಟ್ಟಿತು. ಈ ಕಮಿಟಿಯಲ್ಲಿ ಪ್ರೆಸಿಡೆಂಟರು ವೈಸ್ ಪ್ರೆಸಿಡೆಂಟರು, ಕಾರ್ವೇಟಿನಗರದ ರಾಜರವರು, ಘಂಟಸಾಲೆ ರಾಜರವರು ದೊಡ್ಡಪ್ಪನಾಯಕನೂರು ಜಮೀನ್‌ದಾರರು, ಪುಂಗನೂರಿನ ಗೋಪಾಲಪುರದ ಕಪಿಲೇಶ್ವರಪುರದ ಜಮೀನ್‌ದಾರರುಗಳು ರಾವ್ ವೇಣುಗೋಪಾಲ ಬಹದೂರ್‌ಯವರು, ಶಾಸ್ತ್ರಿಯವರು ಮ ಪಿ ರಾಮರಾಯರವರು ಮೆಂಬರುಗಳಾಗಿ ನೇಮಕವಾಗಿದ್ದಾರೆ. ಈ ಸಂಘದ ಸ್ಥಾಪನಕ್ಕೆ ಬೊಬ್ಬಿಲಿ ಮಹಾರಾಜರವರು ೧,೦೦೦ ರೂಪಾಯಿ ಚಂದಾ ಕೊಟ್ಟಿರುವರು.

ಈ ಸಂಘದ ಉದ್ದೇಶ ಮುಂತಾದದ್ದು

ಆ ದಿನ ಸಭೆಯಲ್ಲಿ ಈ ಸಂಘದ ಉದ್ದೇಶ ಮುಂತಾದವುಗಳನ್ನು ಕುರಿತು ಚರ್ಚೆಮಾಡಿ ಕೆಳಗೆ ಕಂಡ ತೀರ್ಮಾನ ಮಾಡಿರುತ್ತಾರೆ —

೧ ಈ ಸಂಘಕ್ಕೆ ಮದರಾಸ್ ಇಂಪೀರಿಯಲ್ ಲೀಗ್ ಎಂಬ ಹೆಸರಿರತಕ್ಕದ್ದು

೨ ಈ ಸಂಘದ ಉದ್ದೇಶಗಳು ರಾಜಕೀಯ ವಿಚಾರವಾದವುಗಳಾಗಿವೆ. ಹ್ಯಾಗೆಂದರೆ,—(೧) ಹಿಂದೂಸ್ಥಾನದ ಶ್ರೇಯಸ್ಸನ್ನು ಅಭಿವೃದ್ಧಿ ಪಡಿಸುವುದು, (೨) ಪ್ರಜೆಗಳಲ್ಲೆಲ್ಲಾ ಇಂಗ್ಲೀಷ್ ಗವರ್ನಮೆಂಟಿನವರ ವಿಷಯದಲ್ಲಿ ರಾಜಭಕ್ತಿಯನ್ನು ಪ್ರಸಂಗಿಸುವುದು. ಗವರ್ನಮೆಂಟ್ ಅಧಿಕಾರಿಗಳ ವಿಷಯದಲ್ಲಿ ಪ್ರಜೆಗಳಿಗೆ ವಿಧೇಯತೆಯನ್ನು ಉಂಟುಮಾಡುವುದು (೩) ಅರಾಜಕ ಕೃತ್ಯಗಳನ್ನೂ ಸಿಡಿಮದ್ದು ಹಾಕುವ ಮೊದಲಾದ ಕಾನೂನಿಗೆ ವಿರುದ್ಧವಾದ ದುಷ್ಕಾರ್ಯಗಳನ್ನೂ ಅಲ್ಲಗಳೆದು, ಪ್ರಜೆಗಳು ಅಂಥಾ ಕೃತ್ಯಗಳನ್ನು ಅಸಹ್ಯಿಸುವಂತೆ ಮಾಡುವುದು (೪) ಮೇಲ್ಕಂಡ ದುಷ್ಕೃತ್ಯಗಳು ನಡೆಯದಂತೆ ಮಾಡುವುದರಲ್ಲೂ ನಡೆದ ಅಪರಾಧಿಗಳನ್ನು ಪತ್ತೆಮಾಡಿ ಹಿಡಿದುಕೊಡುವುದರಲ್ಲೂ ಸರ್ಕಾರಿ ಅಧಿಕಾರಿಗಳಿಗೆ ಸಹಾಯ ಮಾಡುವಂತೆ ಪ್ರಜೆಗಳನ್ನು ಪ್ರೋತ್ಸಾಹ ಪಡಿಸುವುದು (೫) ಗವರ್ನಮೆಂಟಿನವರು ಆಗಿಂದಾಗ್ಗೆ ಜಾರಿಯಲ್ಲಿ ತರುವಂಥಾ ರೂಲುಸು ಕಾನೂನು ಇಸ್ತಿಹಾರು ಮುಂತಾದವುಗಳನ್ನೂ ಅವುಗಳ ಉದ್ದೇಶ ಅಭಿಪ್ರಾಯಗಳನ್ನೂ ಪ್ರಜೆಗಳಿಗೆ ವಿವರಿಸಿ ಹೇಳುವುದು. ಅವುಗಳ ವಿಷಯದಲ್ಲಿ ಪ್ರಜೆಗಳ ಇಂಗಿತ ಅಭಿಪ್ರಾಯಗಳೇನೆಂಬದನ್ನು ಸಂಗ್ರಹ ಮಾಡಿ ಗವರ್ನಮೆಂಟಿಗೆ ಅರಿಕೆ ಮಾಡುವುದು (೬) ರಾಜದ್ರೋಹಿಗಳೂ ಇತರ ದುರುದ್ದೇಶವುಳ್ಳವರೂ ಗವರ್ನಮೆಂಟಿನವರ ಉದ್ದೇಶ ಮತ್ತು ಕಾರುಬಾರುಗಳಿಗೆ ಅಪಾರ್ಥಮಾಡಿ ಪ್ರಜೆಗಳ ಮನಸ್ಸನ್ನು ದುರ್ಮಾರ್ಗಕ್ಕೆ ತಿರುಗಿಸದಂತೆ ಜನರಿಗೆ ವಿವೇಕವನ್ನು ಹೇಳಿಕೊಟ್ಟು ಅವರನ್ನು ಸನ್ಮಾರ್ಗಕ್ಕೆ ತಿದ್ದುವುದು.

೩ ಈ ಸಂಘದ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಎಲ್ಲಾ ಭಾಷೆಗಳಲ್ಲೂ ಅವಶ್ಯವಾದ ವಿಷಯಗಳನ್ನು ಬರೆದು ಪುಸ್ತಕ ಹಸ್ತಪತ್ರಗಳಲ್ಲಿ ಅಚ್ಚುಹಾಕಿ ಪ್ರಜೆಗಳಿಗೆ ಹಂಚುವುದು. ಯೋಗ್ಯತಾಬುದ್ಧಿಯನ್ನು ಪಡೆದಿರುವವರನ್ನು ಮುಖ್ಯ ಊರುಗಳಿಗೂ ಗ್ರಾಮಗಳಿಗೂ ಆಗಾಗ್ಗೆ ಕಳುಹಿಸಿ ಅವರಿಂದ ಉಪನ್ಯಾಸಗಳನ್ನು ಮಾಡಿಸುವುದು. ದುಷ್ಕಾರ್ಯಗಳಾಗಲಿ ಘೋರಕೃತ್ಯಗಳಾಗಲಿ ನಡೆಯುವಂತೆ ಸಿಗಾ ಇದ್ದರುವುದು ಅಧಿಕಾರಿಗಳಿಗೆ ಅವಶ್ಯವಾದ ಸಂಗತಿಗಳನ್ನು ತಿಳಿಸಿ ಅವರಿಗೆ ಸಹಾಯವಮಾಡುವುದು. ಮೇಲ್ಕಂಡ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಬೇಕಾದ ಕಾರ್ಯಗಳನ್ನು ಏರ್ಪಾಡುಮಾಡುವುದು.

೪ ಈ ಸಂಘಕ್ಕೆ ಮೆಂಬರಾಗತಕ್ಕವರು ೧೮ ವರುಷ ವಯಸ್ಸಿಗಿಂತ ಹೆಚ್ಚಿರಬೇಕು, ಮದರಾಸ್ ಆಧಿಪತ್ಯದಲ್ಲಿ ಜಮೀನ್‌ದಾರರಾಗಿಯೂ ಇರಬೇಕು ಅಥವಾ ಪ್ರಜೆಗಳಲ್ಲಿ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡವರಾಗಿರಬೇಕು. ಪ್ರತಿ ಒಬ್ಬ ಮೆಂಬರೂ ಸಂಘದ ಪ್ರತಿಜ್ಞಾ ಪತ್ರಕ್ಕೆ ರುಜುವಮಾಡಿ ಸಂಘದ ಫಂಡಿಗೆ ವರುಷಕ್ಕೆ ೧೨ ರೂಪಾಯಿಗೆ ಕಡಮೆ ಇಲ್ಲದೆ ಚಂದಾ ಕೊಡಬೇಕು.

೫ ಸಾಮಾನ್ಯವಾಗಿ ಬ್ರಿಟಿಷ್ ಪ್ರಜೆಗಳೇ ಈ ಸಂಘದಲ್ಲಿ ಮೆಂಬರಾಗಿ ಅಂಗೀಕರಿಸಲ್ಪಡುತ್ತಾರೆ. ಆದರೆ ದೇಶೀಯ ರಾಜರು ಇಷ್ಟಪಟ್ಟಲ್ಲಿ ಸಂಘದ ಪೋಷಕರಾಗಿ ಸೇರಬಹುದು. ೧,೦೦೦ ರೂಪಾಯಿ ಕೊಡತಕ್ಕವರನ್ನು ಪೋಷಕರಂತೆ ಎಣಿಸಲಾದೀತು.

ಬಹುಮಾನದ ಮುಲಾಜಿವು

" ಲಾರ್ಡ್ ಮಿಂಟೋ ಪ್ರಭುಗಳೂ, ಹಿಂದೂ ದೇಶವೂ "

ಮೇಲ್ಕಂಡ ವಿಷಯವನ್ನು ಕುರಿತು ನಮ್ಮ ಬೇಗ ಬರೆದು ಬಂದಿರುವ ಲೇಖನಗಳನ್ನು ಪರಿಶೋಧಿಸಿ ನೋಡಿದ್ದರಲ್ಲಿ ಕೆಳಗೆ ಪ್ರಕಟಿಸಿರುವುದೇ ಉತ್ತಮವಾದದ್ದೆಂದು ಕಂಡುಬಂದದರಿಂದ ಅದನ್ನು ಬರೆದ ಮ॥ ಹೆಚ್ ಸಿ ನಂಜುಂಡಯ್ಯ ಕೆತ್ತನಾಡಿಪುರ ಅಗ್ರಹಾರ ದರ್ಬಾರ್ ಸಂಕಯ್ಯ ಅರಸಿನವರ ಬೀದಿ, ಕೃಷ್ಣರಾಜ ಮೊಹಲ್ಲಾ ಮೈಸೂರು ಈ ವಿಳಾಸದಾರರಿಗೆ ಬಹುಮಾನವನ್ನು ಕಳುಹಿಸುವೆವು.

" ಹಿಂದೂ ದೇಶದ ವೈಸರಾಯರುಗಳಾದ ಘನ ಲಾರ್ಡ್ ಮಿಂಟೋ ಪ್ರಭುಗಳಿಂದ ಹಿಂದೂ ದೇಶಕ್ಕೆ ಉಂಟಾಗಿರುವ ಮೇಲುಗಳು ಮತ್ತು ಅವರ ದಿವ್ಯಸುಹೃದಯ "

ಲಾರ್ಡ್ ಕರ್ಜನ್ ಪ್ರಭುಗಳು ತಾವು ನಡೆಸುತ್ತಿದ್ದ ವೈಸರಾಯಿ ಪದವಿಗೆ ೧೯೦೫ ನೇ ಇಸವಿ ನವಂಬರ್ ತಿಂಗಳಲ್ಲಿ ರಾಜೀನಾಮೆಯನ್ನು ಕೊಟ್ಟು ಈ ದೇಶದ ತೀರವನ್ನು ಬಿಟ್ಟು ತೆರಳಿದರು. ಅವರು ವೈಸರಾಯಿಗಳಾಗಿದ್ದಾಗ ಬಂಗಾಳ ದೇಶವನ್ನು ವಿಭಾಗ ಮಾಡಿದುದೂ ಮತ್ತು ಈ ದೇಶದಲ್ಲಿ ಮಾಡಿದ ಅನೇಕ ರಾಜಕೀಯ ಏರ್ಪಾಡುಗಳೂ ಬದಲಾವಣೆಗಳೂ ಈ ದೇಶೀಯರಿಗೆ ಸ್ವಲ್ಪವೂ ಸಮ್ಮತವಾಗಿರಲಿಲ್ಲ. ಅದರಿಂದ ಎಲ್ಲಿ ಲಿ ಅಸಮಾಧಾನವೂ ಅನಾಯಕತ್ವವೂ ಹೆಚ್ಚಿ ಜನರ ನೆಮ್ಮದಿಗೆ ಭಂಗವನ್ನು ಟುಮಾಡುವ ಸ್ಥಿತಿಯಲ್ಲಿತ್ತು. ಇಂಥಾ ಕಾಲದಲ್ಲಿ ದೇಶವನ್ನು ತಹಬಂದಿಗೆ ತಂದು ಶಾಂತಿಯನ್ನೂ ಮತ್ತು ಸಮಾಧಾನವನ್ನೂ ದೇಶದಲ್ಲಿ ನೆಲೆಗೊಳಿಸುವುದಕ್ಕಾಗಿಯೂ ಹಿಂದೂಗಳ ಕಷ್ಟನಷ್ಟಗಳನ್ನು ವಿಚಾರಿಸಿ ಅವರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿ ಕೊಡುವುದಕ್ಕಾಗಿಯೂ ಆದುವರಿವಿಗೂ ಕೆನಡಾ ರಾಜ್ಯದಲ್ಲಿ ವೈಸರಾಯಿಯಾಗಿದ್ದು ಸ್ಥಳ ಕಳಿಸಿ ಒಳ್ಳೇ ಹೆಸರನ್ನು ಪಡೆದಿದ್ದ ಘನ ಲಾರ್ಡ್ ಮಿಂಟೋ ಪ್ರಭುಗಳಿಗೆ ಈ ದೇಶದ ವೈಸರಾಯಿ ಪದವಿಯನ್ನ ಚಕ್ರವರ್ತಿ ಸಾರ್ವಭೌಮರವರು ದಯಪಾಲಿಸಿದರು.

ಈ ಮಹನೀಯರು ತಮ್ಮ ಅಧಿಕಾರವನ್ನು ೧೯೦೫ ನೇ ಇಸವಿ ನವಂಬರು ೧೭ ನೇ ತಾರೀಖಿನಲ್ಲಿ ವಹಿಸಿದರು. ಇವರು ಬಹಳ ಶ್ರಮಪಟ್ಟು ಚಕ್ರವರ್ತಿ ಸಾರ್ವಭೌಮರವರ ಇಷ್ಟಾರ್ಥವನ್ನು ನೆರವೇರಿಸಿ ಅಪಾರವಾದ ಕೀರ್ತಿಯನ್ನು ಸಂಪಾದಿಸಿದರು.

ಲಾರ್ಡ್ ಮಿಂಟೋ ಪ್ರಭುಗಳು ಬಂದು ನಾಲ್ಕು ವರುಷಗಳಾದವು. ಆಗಿನಿಂದಲೂ ಅವರಿಗೆ ಬಹಳ ಶ್ರಮವಾದ ಕೆಲಸವೂ ತೊಂದರೆಗಳೂ ಪ್ರಾಪ್ತವಾದವು. ಆದರೂ ಅವರು ಹಿಂಜರಿಯದೆ ಈ ದೇಶದಲ್ಲಿ ನ್ಯಾಯಪರಿಪಾಲನೆಯೇ ತಮ್ಮ ಮುಖ್ಯ ಧರ್ಮವೆಂದು ತಿಳಿದು ಪಟ್ಟ ಶ್ರಮವು ಈಗ ಸಾರ್ಥಕವಾಗಿದೆ.

ಅವರು ಪ್ರಜೆಗಳಲ್ಲಿ ಅಸಮಾಧಾನಕ್ಕೆ ಕಾರಣವನ್ನು ಅವಲೋಕನ ಮಾಡಿ ವಿಚಾರಿಸಿ ಬ್ರಿಟಿಷ್ ಸರ್ಕಾರದಲ್ಲಿ ದೇಶೀಯರ ಕಷ್ಟನಷ್ಟಗಳನ್ನು ಸರಿಯಾಗಿ ತಿಳಿಯಪಡಿಸುವವರಿಲ್ಲದಿರುವುದೇ ಇದಕ್ಕೆ ಕಾರಣವೆಂದು ನಿರ್ಧರಿಸಿದರು. ಈ ಯೋಚನೆಯನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಮಾರ್ಲೆ ಪ್ರಭುಗಳಿಗೆ ತಿಳಿಸಲು ಅವರು ಈ ಸಲಹೆಗೆ ಸಮ್ಮತಿಸಿ ಅದನ್ನು ರೂಢಿಗೆ ತರಲು ಸ್ವಲ್ಪವೂ ತಾಮಸಮಾಡದೆ ವಿದ್ಯಾವಂತರೂ ಸಮರ್ಥರೂ ಆದ ಇಬ್ಬರು ದೇಶೀಯರನ್ನು ತಮ್ಮ ಕೌನ್ಸಿಲ್ ಮೆಂಬರುಗಳನ್ನಾಗಿ ನೇಮಕ ಮಾಡಿಕೊಂಡರು. ಇವರಲ್ಲೊಬ್ಬರು ಮಹಮ್ಮದೀಯರು ಮತ್ತೊಬ್ಬರು ಹಿಂದೂಗಳು.

ಇಂಡಿಯಾ ಕೌನ್ಸಿಲ್‌ನಲ್ಲಿ ಕೃಪ್ತಿಕರವಾಗಿ ಇತ್ಯರ್ಥವಾಗದ ದೂರುಗಳು (ದೇಶೀಯರ ಪ್ರಿವಿ ಕೌನ್ಸಿಲ್ ಎಂಬ ಮಂತ್ರಾಲೋಚನಾ ಸಭೆಗೆ ಅಪೀಲ್ ಆಗುವುವು. ಆ ವೇಳೆಯಲ್ಲಿ ಹಿಂದೂ ದೇಶೀಯರ ಸ್ಥಿತಿಗತಿಗಳನ್ನರಿತು ಅವರಿಗೆ ಅನುಕೂಲವೂ ಕ್ಷೇಮವೂ ಆಗುವ ರೀತಿಯಲ್ಲಿ ಸಂಗತಿಗಳನ್ನು ಚರ್ಚಿಸುವುದಕ್ಕೆ ದೇಶೀಯನೊಬ್ಬನು ಇರುವುದು ಉತ್ತಮವೆಂದು ತಿಳಿದು ವೈಸರಾಯರವರು ಆಲೋಚಿಸಿ ಲಾರ್ಡ್ ಮಾರ್ಲೆಯವರಿಗೆ ತಿಳಿಸಲು ಅವರು ಪ್ರಿವಿ ಕೌನ್ಸಿಲ್ ಕೆಜಿಸ್ಲೇಟಿವ್ ಕಮಿಟಿಗೆ ಒಬ್ಬ ಮಹಮ್ಮದೀಯ ಮತ್ತು ಹಿಂದೂ ಮನುಷ್ಯರನ್ನು ಮೆಂಬರಾಗಿ ನೇಮಕ ಮಾಡಿರುತ್ತಾರೆ.

ಲಾರ್ಡ್ ಮಿಂಟೋ ಪ್ರಭುಗಳು ಇಷ್ಟಕ್ಕೆ ತೃಪ್ತರಾಗದೆ ಈ ದೇಶದಲ್ಲೂ ದೊಡ್ಡ ದೊಡ್ಡ ಪದವಿಯು ದೇಶೀಯರಿಗೆ ಲಭಿಸಲು ಅನುಕೂಲ ಮಾಡಿಕೊಟ್ಟು ತಾವೇ ಅದನ್ನು ಜಾರಿಯಲ್ಲಿ ತಂದಿರುತ್ತಾರೆ. ಈ ದೇಶೀಯರು ಕಳೆದ ೬೦ ವರುಷಗಳಿಂದಲೂ ಹೋರಾಡುತ್ತಿದ್ದ ಪದವಿಯು ಈಗ ಸುಲಭವಾಗಿ ದೊರಕಿರುತ್ತದೆ. ವೈಸರಾಯರವರು ತಮ್ಮ ಎಕ್ಸಿಕ್ಯೂಟಿವ್ ಕೌನ್ಸಿಲ್ ಎಂಬ ಮಂತ್ರಾಲೋಚನಾ ಸಭೆಗೆ ಒಬ್ಬ ದೇಶೀಯರನ್ನು ಸೇರಿಸಿರುತ್ತಾರೆ. ಇದೇ ರೀತಿಯನ್ನು ಬೊಂಬಾಯಿ ಮದರಾಸ್ ಮೊದಲಾದ ಬ್ರಿಟಿಷ್ ಆದಿಪತ್ಯಗಳಿಗೂ ಕೊಡಲು ನಿಬಂಧನೆ ಮಾಡಿರುವರು.

ಇಂಡಿಯಾ ದೇಶದ ನಾನಾ ಭಾಗಗಳಲ್ಲಿರುವ ವ್ಯಾಯಾವಿಧಾಯಕ ಸಭೆಗಳಿಗೆ ಇದುವರಿವಿಗೂ ಪ್ರಜಾ ಪ್ರತಿನಿಧಿಗಳು ವಿಶೇಷವಾಗಿ ಚುನಾಯಿಸಲ್ಪಡುತ್ತಿರಲಿಲ್ಲ. ಸರ್ಕಾರದ ಪರವಾದ ಅಧಿಕಾರಿಗಳೇ ಹೆಚ್ಚಾಗಿರುತ್ತಿದ್ದರು. ಆದಕಾರಣ ಪ್ರಜೆಗಳ ಅಹವಾಲುಗಳಿಗೆ ವಿಶೇಷ ಗಮನವು ದೊರಕುತ್ತಿರಲಿಲ್ಲ. ಇದನ್ನು ಸಮಾಧಿಸಿ ಮಿಂಟೋ ಪ್ರಭುಗಳು ಮಾಡಿರುವ ಹೊಸ ಏರ್ಪಾಡಿನಲ್ಲಿ ಈ ಸಭೆಗಳಿಗೆ ದೇಶೀಯ ಪ್ರಜಾ ಪ್ರತಿನಿಧಿಗಳೇ ಹೆಚ್ಚಾಗಿರುವಂತೆಯೂ ಸರ್ಕಾರಿ ಪ್ರತಿನಿಧಿಗಳು ಕಡಮೆಯಾಗಿರುವಂತೆಯೂ ಅನುಕೂಲ ಮಾಡಿಕೊಟ್ಟಿದ್ದಾರೆ. ಇದರಿಂದ ಪ್ರಜಾ ಸಮ್ಮತಿಯೇ ಅಧಿಕವಾಗಿರುವುದು. ಈ ಅನುಕೂಲಗಳೆಲ್ಲವೂ ಮಿಂಟೋ ಪ್ರಭುಗಳಲ್ಲದೆ ಮತ್ತ್ಯಾರಾದರೂ ಅವರ ಪದವಿಯಲ್ಲಿದ್ದರೆ ಇಷ್ಟು ಶೀಘ್ರವಾಗಿ ಇಲ್ಲಿನವರಿಗೆ ದೊರಕುತ್ತಿರಲಿಲ್ಲ.

ಇದೂ ಅಲ್ಲದೆ ಇವರು ದೇಶದಲ್ಲಿ ಸಮಾಧಾನವೂ ಪ್ರಜಾಸೌಮ್ಯವೂ ಉಂಟಾಗುವುದಕ್ಕಾಗಿ ಅನೇಕ ನೂತನ ಏರ್ಪಾಡುಗಳನ್ನು ಮಾಡಿರುತ್ತಾರೆ. ಇದಕ್ಕಾಗಿ ಅವರಿಗೆ ಈ ದೇಶೀಯರೆಲ್ಲರೂ ತುಂಬಾ ಕೃತಜ್ಞರಾಗಿರಬೇಕು.

ಮಿಂಟೋ ಪ್ರಭುಗಳು ಈ ದೇಶೀಯರ ವಿದ್ಯೆ ಮತ್ತು ಸಾಮರ್ಥ್ಯವನ್ನು ತಿಳಿದು ಅವರಲ್ಲಿ ತುಂಬಾ ಅಭಿಮಾನವಿಟ್ಟು ದೇಶದ ಏಳಿಗೆಗಾಗಿ ಮಾಡಿದ ಏರ್ಪಾಡುಗಳು ಸಾಂಗವಾಗಿ ನೆರವೇರಿದವು. ಇದರಿಂದ ಅವರ ಉದಾರವಾದ ಮನಸ್ಸು ಪ್ರಕಾಶಗೊಳ್ಳುವುದು. ಇದೂ ಅಲ್ಲದೆ ಅವರು ತಮ್ಮ ದೇಶಸಂಚಾರದಲ್ಲಿ ಮಾಡಿರುವ ದಯಾರಸ ಭರಿತವಾದ ಭಾಷಣಗಳೂ, ಅವರಿಗಾಗಿ ಮಾಡಲ್ಪಟ್ಟ

ಕಾರ್ಯಗಳನ್ನು ಕೇಳಿಯೂ ವರ್ತಮಾನ ನೋಡಿಯೂ ಬಹಳ ತೃಪ್ತಿಕರವಾಗಿದ್ದವೆಂದು ಪಟ್ಟು ಸಂತೋಷದಿಂದ ನಮ್ಮ ಮೈಸೂರು ದೇಶಕ್ಕೆ ಕ್ಷಾಮ ಬರುವುದೆಂಬ ಭೀತಿ ಉಂಟಾಗಿದ್ದ ಕಾಲದಲ್ಲಿ ತಾವು ದಯಮಾಡಿಸಿದರೆ ವಿಶೇಷ ಮಿಟಾರಿಗೆ ಈ ದೇಶಕ್ಕೆ ತೊಂದರೆ ಸಂಭವಿಸುವುದೆಂದು ಅವರು ಆಗ್ರಹಪಡಿಸಿ ಬಿಟ್ಟದ್ದು ಅವರಲ್ಲಿರುವ ಪ್ರಜಾನುರಾಗವನ್ನೂ ದಿವ್ಯ ಸಹೃದಯತ್ವವನ್ನೂ ವ್ಯಕ್ತಪಡಿಸುತ್ತದೆ. ಇಂಥಾ ಮಹನೀಯರೂ ಮಹದುಪಕಾರಿಗಳೂ ಆದ ಘನ ಲಾರ್ಡ್ ಮಿಂಟೋ ಪ್ರಭುಗಳಿಗೂ ಮತ್ತು ಅವರ ಪತ್ನಿಯವರಿಗೂ ಜಗದೀಶನು ಚಿರಕಾಲ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂಬದಾಗಿ ದೇಶೀಯರೆಲ್ಲರೂ ಪ್ರಾರ್ಥಿಸಬೇಕು.

ವೈಸರಾಯಿಯವರ ಮಂತ್ರಾಲೋಚನಾ ಸಭೆಯು

ಹಿಂದುಸ್ಥಾನದ ಹೊಸ ಪ್ರೆಸ್ ಕಾನೂನು.

ಹಿಂದುಸ್ಥಾನದ ವೈಸರಾಯಿಯವರ ಮಂತ್ರಾಲೋಚನಾ ಸಭೆಯು, ಕಳೆದ ೮ನೇ ಮಂಗಳವಾರ ಕೌನ್ಸಿಲ್ ಮಂದಿರದಲ್ಲಿ ಸಭೆ ಸೇರಿ ಕಮಿಟಿ ಮೆಂಬರುಗಳು ಚರ್ಚಿಸಿ ಬದಲಾವಣೆಮಾಡಿ ತಂದಿದ್ದ ಇಂಡಿಯಾ ಪ್ರೆಸ್ ಕಾನೂನಿನ ಮಸೂದೆಯನ್ನು ಮಂಜೂರುಮಾಡಿದರು. ಕಮಿಟಿಯವರು ಸೂಚಿಸಿದ ಬದಲಾವಣೆಗಳ್ಯಾವುವೆಂದರೆ

(೧) ಕೆಳಗಿನ ಪ್ರೆಸ್ ಮೊಕದ್ದಮೆಗಳು ಮದರಾಸ್ ಹೈಕೋರ್ಟಿನಲ್ಲೂ [illegible] ನೇ [illegible] ಮೊಕದ್ದಮೆಗಳು ಸಂಯುಕ್ತ ಆದಿಪತ್ಯಗಳ ಹೈಕೋರ್ಟಿನಲ್ಲಿ [illegible]ಸಲ್ಪಡಬೇಕು (೨) ಹೊಸದಾಗಿ ಮುದ್ರಾಲಯವನ್ನು ಇಡತಕ್ಕವನೂ ವರ್ತಮಾನ ಪತ್ರಿಕೆಯನ್ನು ನಡಸತಕ್ಕವನೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ [illegible] ವರ್ತಮಾನಪತ್ರಿಕೆಯನ್ನು ಒಪ್ಪಿಕೊಡುವಲ್ಲಿ ಮ್ಯಾಜಿಸ್ಟ್ರೇಟರು ಅವ[illegible]ವರೆ ೫೦೦ ರೂಪಾಯಿ ಮೊದಲುಗೊಂಡು ೨೦೦೦ ರೂಪಾಯಿ ವರೆಗೂ [illegible]ಗಾಗಿ ಡಿಪಾಜಿಟ್ಟು ಕಟ್ಟಬೇಕಾಗಿದೆಯಷ್ಟೆ. ಈ ಡಿಪಾಜಿಟ್ಟು ಮೊಬಲಗು [illegible] ಇಳಿಸಲಾಗಿದೆ (೩) 'ಯಾವ ಅಧಿಕಾರಿಯಾದರೂ' ಎಂಬ [illegible]ಗೆ ಪ್ರತಿಯಾಗಿ 'ಯಾವ ನ್ಯಾಯಸ್ಥಾನಕ್ಕಾದರೂ' ಎಂಬ ಪದಗಳನ್ನು [illegible]ವರೆ ಸಾಕಾಗಿದೆ (೪) ಠೇವಣಿ ಕಟ್ಟಬೇಕಾದ ಮೊಬಲಗು ಹಣವಾದರೂ ಸರ್ಕಾರಿ ಸಾಲದ ಪತ್ರಗಳಾದರೂ ಆಗಬಹುದು. (೫) ಹಿಂದುಸ್ಥಾನದ [illegible] ಅಚ್ಚಾಗಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳಿಗೆ ಮಾತ್ರ [illegible] ಬದಲಾವಣೆಯಿದೆ (೬) ಅಂಚೆಯ ಮೂಲಕ ಬರತಕ್ಕ [illegible]ಕಾಗದಪತ್ರಗಳಲ್ಲಿ ಅಂಚೆ ಇಲಾಖೆಯವರು ಒಡೆಯಬಹುದೆಂತು ಅವ[illegible] ಪಡಿಸುವುದು ತರವಲ್ಲ. ಅವರಿಗೆ ಅನುಮಾನ ಕಂಡು ಬರುವ [illegible] ತಪಸೀಲುಗಳನ್ನು ಅವರು ವಿಂಗಡಿಸದಾರ್ಗೆ ಸಾದರಪಡಿಸತಕ್ಕ [illegible]ನಮೆಂಟಿನವರಿಗೆ ಕಳುಹಿಸಬೇಕೆಂದು ಬದಲಾವಣೆಮಾಡಿದೆ (೭) ಪ್ರೆಸ್ ಮೊಕದ್ದಮೆಗಳನ್ನು ವಿಚಾರಣೆಮಾಡುವ ಹೈಕೋರ್ಟ್ ಜಡ್ಜಿಗಳು ಇಬ್ಬರೇ ಇದ್ದು ಇಬ್ಬರ ತೀರ್ಮಾನಗಳೂ ಒಂದಕ್ಕೊಂದು ವಿರೋಧವಾಗುವ ಸಂದರ್ಭದಲ್ಲಿ ಗವರ್ನಮೆಂಟಿನವರು ಕೊಟ್ಟ ಹುಕುಮೇ ಅಖೈರ್ ತೀರ್ಮಾನವಾಗಿರಬೇಕೆಂದು ಗೊತ್ತುಮಾಡಿದೆ. ಈ ಪ್ರಕಾರ ಕಮಿಟಿಯವರು ಮಸೂದೆಯನ್ನು ಬದಲಾವಣೆಮಾಡಿದರು.

ಮೆಂಬರುಗಳ ಆಕ್ಷೇಪಣೆಗಳು

[illegible] ಈ ಕಾನೂನಿನ ವಿಷಯದಲ್ಲಿ ಕೌನ್ಸಿಲ್ ಮೆಂಬರುಗಳು ಚರ್ಚೆಮಾಡಿದರು. ಮೆ|| ಗೋಪಾಲ ಕೃಷ್ಣ ಗೋಖಲೆ ಮತ್ತು ರಾವ್ ಬಹದೂರ್ ಆರ್ ಎನ್ ಮುಧೋಳ್ಕರ್ ಯವರು ಒಂದಾಗಿ ತಮ್ಮ ಅಭಿಮತವನ್ನು ಎರಡು ವೈಸರಾಯಿಯವರಿಗೆ ಓದಿ ಒಪ್ಪಿಸಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ, ಅಶ್ವಾಸನೆ ಕಾಯಾಂನಸೆ ಮತ್ತು ವರ್ತಮಾನ ಪತ್ರಿಕೆಗಳ ದೆಸೆಯಿಂದ ಹುಟ್ಟುವ ಅಪರಾಧಗಳನ್ನು ತನಿಖೆಮಾಡಿ ಶಿಕ್ಷಿಸುವುದಕ್ಕೆ ಈ ಹೊಸ ಕಾನೂನಿನ ಅಗತ್ಯವಿಲ್ಲ. ಈಗಿರುವ ಕಾನೂನುಗಳೇ ಸಾಕಾಗಿರುತ್ತವೆ. ಆದರೂ ಈಗಿನ ಸ್ಥಿತಿಯನ್ನು ನೋಡಿದಲ್ಲಿ ಗವರ್ನಮೆಂಟಿನವರು ವಿಶೇಷವಾದ ಅಧಿಕಾರವನ್ನು ಪಡೆಯಬೇಕಾದದ್ದು ಅವಶ್ಯವೆಂದು ಒಪ್ಪಿಕೊಳ್ಳುತ್ತೇವೆ. ಆದರೆ ನ್ಯಾಯಸ್ಥಾನಕ್ಕೆ ಇರಬೇಕಾದ ಅಧಿಕಾರವನ್ನು ಗವರ್ನಮೆಂಟಿನವರೇ ವಹಿಸಿಕೊಳ್ಳುವುದು ಅನುಚಿತವು. ಆದಕಾರಣ ಈ ಕಾನೂನನ್ನು ಕೆಲವುಕಾಲ ಅಂದರೆ ಮೂರು ವರುಷಗಳ ವರೆಗೆ ಮಾತ್ರ ಜಾರಿಯಲ್ಲಿಡಬೇಕೆಂದು ಸೂಚಿಸುವೆವು. ವರ್ತಮಾನ ಪತ್ರಿಕೆಯನ್ನು ನಡಿಸುವವನೂ ಮುದ್ರಾಲಯದ ಮಾಲೀಕನೂ ಜಾಮೀನ್ ಹಣವನ್ನು ಕಟ್ಟಬೇಕು ಎಂದು ವಿಧಿಸುವುದಕ್ಕಿಂತಲೂ ಮ್ಯಾಜಿಸ್ಟ್ರೇಟರು ಯಾರಿಂದ ಜಾಮೀನು ಕಟ್ಟಿಸಿಕೊಳ್ಳಬೇಕೆಂದು ಅಭಿಪ್ರಾಯಪಡುತ್ತಾರೆಯೋ ಅಂಥವರು ಮಾತ್ರ ಹಣ ಠೇವಣಿ ಇಡಬೇಕೆಂದು ವಿಧಿಸುವುದು ಉತ್ತಮವಾಗಿದೆ. ಮತ್ತು ಹೈಕೋರ್ಟಿನಲ್ಲಿ ಅಪೀಲು ಮಾಡಿ ತೀರ್ಮಾನವಾಗುವ ತನಕ ಗವರ್ನಮೆಂಟಿನವರ ಹುಕುಮು ಜಾಮೀನ್ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತದೆ ಎಂಬ ಹುಕುಮು ಜಾರಿಯಾಗದಂತೆ ಕಾನೂನ ಬದಲಾಯಿಸಿದರೆ ತುಂಬಾ ಉಪಕಾರವಾಗುತ್ತದೆ.

ತರುವಾಯ ಮೆ|| ಮದನಮೋಹನ ಮಾಳವೀಯರವರು ಸಭಿಕರನ್ನು ಕುರಿತು ತಿಳಿಸಿದ ಅಭಿಪ್ರಾಯವೇನೆಂದರೆ: ಕ್ರೂರಕೃತ್ಯಗಳನ್ನೂ ರಾಜದ್ರೋಹದ ಮಾತುಗಳನ್ನೂ ಚಳವಳಿ ಮಾಡುವುದನ್ನೂ ಅಡಗಿಸುವುದಕ್ಕೆ ಈಗಿರುವ ಕಾನೂನುಗಳಲ್ಲಿ ಬೇಕಾದ ಅಧಿಕಾರಗಳುಂಟು. ಆದರೂ ಈಗಿನ ಕಾಲದೇಶ ವರ್ತಮಾನಗಳನ್ನು ನೋಡಿದರೆ ಕ್ರೂರಕೃತ್ಯಗಳೂ ಅರಾಜಕ ಮಾತುಗಳೂ ಕಾರ್ಯಗಳೂ ನಿಲ್ಲಲಿಲ್ಲ. ಆದಕಾರಣ ಮುದ್ರಾಲಯಗಳ ವಿಷಯದಲ್ಲೂ ವರ್ತಮಾನ ಪತ್ರಿಕೆಗಳ ವಿಷಯದಲ್ಲೂ ಗವರ್ನಮೆಂಟಿನವರು ಕಠಿಣತರವಾದ ಕಾನೂನ್ ಮಾಡಿ ಜಾರಿಗೆ ತರಬೇಕಾದದ್ದೇನೋ ಅವಶ್ಯ. ಅಪರಾಧಿಗಳೆಂದು ಕಂಡುಬರುವ ಮುದ್ರಾಲಯಗಳ ಮಾಲೀಕರಿಂದಲೂ ವರ್ತಮಾನ ಪತ್ರಿಕೆಗಳನ್ನು ನಡಿಸುವವರಿಂದಲೂ ಜಾಮೀನ್ ಹಣವನ್ನು ತೆಗೆದುಕೊಳ್ಳಬೇಕು. ಈ ಭಾಗವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನ್ಯಾಯಸ್ಥಾನದಲ್ಲಿ ಇತ್ಯರ್ಥವಾದ ಮೇಲೆ ಶಿಕ್ಷೆ ವಿಧಿಸುವುದನ್ನು ತಪ್ಪಿಸಿ, ಸ್ಥಳೀಯ ಗವರ್ನಮೆಂಟಿನವರೇ ತಮಗೆ ತೋರಿದಂತೆ ಪ್ರೆಸ್ಸನ್ನು ಮುಚ್ಚಿಸುವುದೂ, ಪತ್ರಿಕೆಯನ್ನು ನಿಲ್ಲಿಸುವುದೂ ಧರ್ಮವಾದದ್ದಲ್ಲ. ಜಾಮೀನ್ ಹಣವನ್ನು ಗವರ್ನಮೆಂಟಿನ ಹುಕುಮು ಪ್ರಕಾರ ಸರ್ಕಾರಕ್ಕೆ ಸೇರಿಸಿಕೊಳ್ಳುವುದನ್ನು ತಪ್ಪಿಸಿ, ಮ್ಯಾಜಿಸ್ಟ್ರೇಟರ ವಿಚಾರಣೆಗೂ ತೀರ್ಮಾನಕ್ಕೂ ಒಳಪಡಬೇಕಾಗಿದೆ. ಮೊಕದ್ದಮೆಯನ್ನು ಹಿಡಿದು ದರ್ಯಾಫ್ತು ಮಾಡತಕ್ಕಂಥಾ ಅಧಿಕಾರವನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಬೇಕೆಂದು ನಾವು ಕೇಳಿಕೊಳ್ಳುತ್ತೇವೆ. ಗವರ್ನಮೆಂಟಿನವರು ಅದರಂತೆ ಕೆಲವುಕಡೆ ತಪ್ಪಿಸುತ್ತಲೂ ಇದ್ದಾರೆ. ಹೀಗಿರುವಲ್ಲಿ ಈ ಕಾನೂನು ಈ ಏರ್ಪಾಡಿಗೆ ವಿರೋಧವಾಗುವುದು. ಅರ್ಧ ಶತಮಾನದಿಂದಲೂ ನಡೆದು ಬಂದಿರುವ ಈ ರಾಷ್ಟ್ರದ ರಾಜ್ಯಕ್ರಮವೇ ಈ ಕಾನೂನಿನಿಂದ ಬದಲಾಯಿಸಲ್ಪಟ್ಟಂತಾಗಿದೆ. ರಾಜದ್ರೋಹದ ಬರವಣಿಗೆ ಎಂದು ತೀರ್ಮಾನ ಮಾಡುವ ಜವಾಬ್ದಾರಿಯನ್ನು ನ್ಯಾಯಸ್ಥಾನಕ್ಕೆ ತಪ್ಪಿಸಿ ಗವರ್ನಮೆಂಟಿನವರು ವಹಿಸಿಕೊಳ್ಳುವುದು ಇಂಗ್ಲಿಷ್ ಧರ್ಮಕ್ಕೆ ಅನುಸಾರವಾದದ್ದಲವೆಂದು ಹಲವು ಇಂಗ್ಲಿಷ್ ರಾಜಧರ್ಮ ಪ್ರವೀಣರು ನುಡಿದಿರುತ್ತಾರೆ. ಇತರ ಭಾಗಗಳಲ್ಲೂ ಈ ಕಾನೂನು ಬಹಳ ಕಠಿಣವಾದದ್ದಾಗಿದೆ. ಈ ಕಾನೂನನ್ನು ಹಿಂದುಸ್ಥಾನದ ಎಲ್ಲಾ ಆದಿಪತ್ಯಗಳಲ್ಲೂ ಈಗಲೇ ಚಲಾವಣೆಗೆ ತರದೆ ಯಾವ ಯಾವ ಭಾಗಗಳಲ್ಲಿ ಅರಾಜಕ ಕೃತ್ಯಗಳು ನಡೆಯುತ್ತಿರುವವೋ ಅಲ್ಲಲ್ಲಿಗೆ ಮಾತ್ರ ಜಾರೀ ಮಾಡಬೇಕು. ಮತ್ತು ಇದನ್ನು ಮೂರು ವರುಷದ ಮೇಲೆ ರದ್ದು ಮಾಡಬೇಕು.

ಮೆ|| ಗೋಖಲೆಯವರ ಅಭಿಪ್ರಾಯವು

ಬಳಿಕ ಈ ಕಾನೂನಿನ ವಿಷಯದಲ್ಲಿ ಚರ್ಚೆಗಳು ಪ್ರಾರಂಭವಾಗಲು ಮೆ|| ಗೋಖಲೆಯವರು: ಇಂಗ್ಲಿಷ್ ರಾಜ್ಯಭಾರದಲ್ಲಿ ಪ್ರಜೆಗಳಿಗೆ ಇರುವಂಥಾ ಪತ್ರಿಕಾ ಪ್ರಸಂಗದ ಸ್ವಾತಂತ್ರ್ಯವನ್ನು ಈ ಮೊದಲನೇ ಕೌನ್ಸಿಲ್ ಸಭೆಯಲ್ಲೇ ಕಡಮೆ ಮಾಡಿದ್ದು ವಿಷಾದಕರವಾಗಿದೆ. ಸದ್ಯದಲ್ಲಿ ಹಿಂದುಸ್ಥಾನದ ಮೇಲೆ ಕಷ್ಟ ಮೋಡಗಳು ಆವರಿಸಿಕೊಂಡಿದ್ದಾಗ್ಯೂ ಅವು ಬೇಗನೇ ನಿವಾರಣೆಹೊಂದುವವಾಗಿವೆ. ಇಷ್ಟು ಆತುರದಿಂದ ಈ ಕಾನೂನ್ ಆಗಬೇಕಾದ ಅವಶ್ಯವೇನೂ ಇರುವುದಿಲ್ಲ. ಕೆಲವು ವಾರಗಳ ತನಕ ಇದರ ಪ್ರಚಾರಮಾಡಿ, ಸಾವಧಾನದಿಂದ ಆಲೋಚಿಸಿ, ಪ್ರಜೆಗಳ ಅಭಿಪ್ರಾಯವನ್ನು ಸಂಗ್ರಹಮಾಡಿ, ಬಳಿಕ ಪ್ಯಾಸ್ ಮಾಡಬಹುದಾಗಿದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಆದಾಗ್ಯೂ ಈ ಸಮಯಕ್ಕೆ ಈ ಕಾನೂನು ಅವಶ್ಯವಾಗಿದೆ ಎಂದು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದರು.

ಇತರ ಮೆಂಬರುಗಳು

ಪಂಜಾಬಿನ ಮೆ|| ಬರಾದ ಸರ್ದಾರ್ ಪ್ರತಾಪಸಿಂಹರವರೂ, ಕುಚ ಬಿಹಾರದ ರಾಜರವರೂ, ಬರ್ದವಾನ್ ಮಹಾರಾಜರವರೂ—ಈ ಕಾನೂನಿನ ಅವಶ್ಯಕತೆಯನ್ನು ಕುರಿತು ಉಪನ್ಯಾಸಮಾಡಿ, ಸಮ್ಮತಿಯನ್ನು ಕೊಟ್ಟರು.

ಬೊಂಬಾಯಿನ ಮೆ|| ದಾದಾಭಾಯಿಯವರು ಈ ಕಾನೂನನ್ನು ಕುರಿತು ಕೆಲವು ದೂರ ತರ್ಕ ಆಕ್ಷೇಪಣೆಮಾಡಿ, ಕಡೆಗೆ ಅದು ಅವಶ್ಯವೆಂದು ಸಮ್ಮತಿಪಟ್ಟರು.

ಸರ್ ಹ್ಯಾರಲ್ಡ್ ಸ್ಟುವರ್ಟ್‌ರವರು ಇತರ ಮೆಂಬರುಗಳು ಮಾಡಿದ ಆಕ್ಷೇಪಣೆಗಳಿಗೆ ಪ್ರತಿಯಾಗಿ ತಕ್ಕ ಸಮಾಧಾನಗಳನ್ನು ಹೇಳಿ, ಈ ಕಾನೂನು ಅವಶ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಮೆ|| ಮುಧೋಳ್ಕರ್ ಯವರ ಉಪನ್ಯಾಸವು

ರಾವ್ ಬಹದೂರ್ ಮೆ|| ಆರ್ ಎನ್ ಮುಧೋಳ್ಕರ್ ಯವರು ತಿಳಿಸಿದ ಮುಖ್ಯ ವಿಚಾರವೇನೆಂದರೆ, ಈ ದಿವಸ ಸಭಾಕಾರ್ಯವು ಬಹು ಖೇದವನ್ನೂ ಚಿಂತೆಯನ್ನೂ ಉಂಟು ಮಾಡುವುದಾಗಿದೆ. ಈಚೆಗೆ ಹಿಂದುಸ್ಥಾನದಲ್ಲಿ ನಡೆದಿರುವ ಕೊಲೆಗಳೂ ಕ್ರೂರಕೃತ್ಯಗಳೂ ರಾಜದ್ರೋಹಕಾರ್ಯಗಳೂ ಹಿತಚಿಂತಕರಿಗೂ ಸಕಲ ಪ್ರಜೆಗಳಿಗೂ ಸಂಕಟವನ್ನೂ ಕಳವಳವನ್ನೂ ಉಂಟುಮಾಡಿರುತ್ತವೆ. ರೈಲ್ ಗಾಡಿಯನ್ನು ಕೆಡವುವುದು, ಎಸೆದ ಬಾಂಬ್ ಗುಂಡುಗಳು, ಅರಾಜಕ ಪಡೆಗಳು, ಇವೆಲ್ಲಾ ಹಬ್ಬುತ್ತಲಿರುವುವು. ಇವುಗಳನ್ನು ಕಠಿಣತರವಾದ ರೀತಿಯಿಂದ ಅಡಗಿಸಿ ಬಿಟ್ಟು ನೆಮ್ಮದಿಯನ್ನು ಕಾಪಾಡಬೇಕಾದದ್ದು ಗವರ್ನಮೆಂಟಿನವರ ಪ್ರಥಮ ಕರ್ತವ್ಯವಾಗಿರುತ್ತದೆ. ಯಾವ ಸರ್ಕಾರವೇ ಆಗಲಿ ತನ್ನ ಪ್ರಜೆಗಳು ದಂಗೆಯೇಳುವುದನ್ನು ನೋಡುತ್ತಾ ಸುಮ್ಮನಿರಲಾಗುವುದಿಲ್ಲ. ಯೂರೋಪಿಯನ್ನರೂ ದೇಶೀಯ ಜನರೂ ಪರಿಭವಿಸಿ, ಪ್ರಜಾ ಏಳಿಗೆಗೂ ನೆಮ್ಮದಿಗೂ ಅಧಿಕಾರಿಗಳ ಕಾರುಬಾರುಗಳಿಗೂ ಕಂಟಕವಾಗಿರುವಂಥಾ ಈ ಅರಾಜಕ ಕೃತ್ಯಗಳನ್ನು ಮೂಲೋತ್ಪಾಟನ ಮಾಡಬೇಕಾಗಿದೆ. ಯಾಕೆಂದರೆ ಇಂಗ್ಲಿಷ್ ಪ್ರಭುತ್ವವು ಈ ರಾಷ್ಟ್ರಕ್ಕೆ ಅಭ್ಯುದಯಕರವಾಗಿರುವುದು. ಇಂಥ ಪ್ರಭುಗಳು ಹಿಂದುಸ್ಥಾನವನ್ನು ತ್ಯಜಿಸಿಬಿಟ್ಟಲ್ಲಿ ಎಲ್ಲೆಲ್ಲೂ ಕೊಳ್ಳೆ, ದರೋಡೆ, ರಕ್ತಪ್ರವಾಹ, ಅನಾಯಕತ್ವ ಇವೇ ಮೊದಲಾದ ವಿಪತ್ತುಗಳು ಸಂಭವಿಸಿ ಮನುಷ್ಯರ ಬಾಳೇ ಅಸಾರ್ಥಕವಾಗುವುದು. ಈಗಿನ ಅನಾಯಕಪಾಳ್ಯವನ್ನು ತುಳಿಯಲ್ಪಟ್ಟು ನಿರ್ನಾಮವಾಗದೆ ಹೋದರೆ ಇವರ ದೆಸೆಯಿಂದ ಹಿಂದುಸ್ಥಾನದ ಏಳಿಗೆಗೆ ಬರತಕ್ಕದ್ದು, ದೇಶೀಯ ಜನಸಂಸರ್ಗವೇ ಇಲ್ಲದೆಹೋಗುತ್ತದೆ. ಇದರಲ್ಲಿ ವಿಶೇಷ ಚಿಂತಾಯುಕ್ತವಾದ ವಿಷಯವೇನೆಂದರೆ, ಈ ರಾಷ್ಟ್ರದ ಚಿಕ್ಕಪ್ರಾಯದ ಹುಡುಗರಲ್ಲಿ ಈ ದುರ್ಬುದ್ಧಿಯು ಹರಡಿಕೊಂಡಿದೆ. ಈಗಿನ ಚಕ್ರವರ್ತಿಗಳು ಮುಂದೆ ದೇಶವನ್ನು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಗೆ ತರತಕ್ಕವರಾಗಿರುತ್ತಾರೆ. ಅವರನ್ನು ಸಾಕಲೂ ಅಭಿವೃದ್ಧಿಗೆ ತರುವುದಕ್ಕಾಗಿ ಹಿರಿಯರಾಗಿರುವ ನಾವು ಅನೇಕ ಕಷ್ಟ ಮನೋವ್ಯಥೆಗಳನ್ನು ಅನುಭವಿಸುವೆವು. ಇಂಥಾ ಹುಡುಗರು ದುರ್ಮಾರ್ಗಕ್ಕೆ ಬಿದ್ದು ಕೆಟ್ಟು ಹೋಗುತ್ತಿರುವರೆಂದೂ ಅವರಿಂದ ದೇಶಕ್ಕೆ ಹಾನಿಯುಂಟಾಗುವದೆಂದೂ ವಿಷಾದಪಡುತ್ತೇನೆ. ಸದ್ಯದಲ್ಲಿ ಇಂಥಾ ದುಷ್ಟಪಾತಕರ ಸಂಖ್ಯೆಯು ಹೆಚ್ಚಾಗಿಲ್ಲ, ಅಲ್ಲಲ್ಲಿ ಒಬ್ಬಿಬ್ಬರಂತೆ ಕಾಣಬರುತ್ತಿದ್ದಾರೆ. ಈ ಹುಡುಗರಾದರೋ ಮರ್ಯಾದೆಗಳಾದ ಪ್ರಜೆಗಳ ಮಕ್ಕಳಾಗಿದ್ದಾರೆ. ಈ ಘೋರವಾದ ವಿಷವನ್ನು ಇತರರೂ ಕುಡಿಯದಂತೆ ತಡೆಯಬೇಕಾದದ್ದು ನಮ್ಮ ಮೊದಲನೇ ಕಾರ್ಯವಾಗಿದೆ. ಇಂಗ್ಲಿಷ್ ದೌಲತ್ತು ಕೆಟ್ಟದ್ದೆಂದೂ, ಇಂಗ್ಲಿಷರನ್ನು ದ್ವೇಷಿಸಿ ಕೊಲ್ಲಬೇಕೆಂದೂ ಚಳವಳಿ ಮಾಡುವಂಥಾ ಮತ್ತು ಪ್ರಜೆಗಳ ಮನಸ್ಸನ್ನು ಕೆಡಿಸಿ ರೇಗಿಸುವಂಥಾ ಬರವಣಿಗೆಗಳನ್ನು ನಾಶಮಾಡಬೇಕು. ಹಾಗೆ ಐಕಮತ್ಯವನ್ನು ರಾಜ್ಯದ ರಕ್ಷಣೆಗಾಗಿ ಭಾವಿಸಿ ಅವರನ್ನು ಅಡಗಿಸಬೇಕು. ಗವರ್ನಮೆಂಟಿನವರ ಕಾನೂನುಗಳನ್ನು ದಾಕ್ಷಿಣ್ಯವಿಲ್ಲದೆ ಎಷ್ಟು ಬೇಕಾದರೂ ಆಕ್ಷೇಪಣೆಮಾಡಲಿ. ಅದು ಸಕಲ ಪ್ರಜೆಗಳಿಗೂ ಹಿತಕರವಾಗಿಬೇಕು. ಅದು ಬಿಟ್ಟು ಗವರ್ನಮೆಂಟೇ ಸರಿಯಾಗಿ ನಡೆಯದಂತೆ ಅಡ್ಡಿ ಆತಂಕಗಳನ್ನು ತಂದು ಹಾಕುತ್ತಿರುವವರು ಈಗೀಗ ಹೆಚ್ಚುತ್ತಿದಾರೆ. ಇದರಿಂದ ರಾಜ್ಯಭಾರದ ಬಿಗಿಯೂ, ದರ್ಪವೂ, ಪ್ರಜಾ ಐಕಮತ್ಯವೂ ಕೆಟ್ಟುಹೋಗಿ ತುಂಬಾ ಹಾನಿಯುಂಟಾಗುವದು.

ಆದರೂ ಈ ಕಾನೂನು ವರ್ತಮಾನ ಪತ್ರಿಕೆಗಳ ಸ್ವಾತಂತ್ರ್ಯವನ್ನು ಬಹು ಮಟ್ಟಿಗೆ ಕಡಮೆ ಮಾಡುವುದಾಗಿದೆ. ಸ್ಥಳೀಯ ಗವರ್ನಮೆಂಟಿನವರು ತುಂಬಾ ವಿವೇಕದಿಂದ ಈ ಕಾನೂನನ್ನು ಉಪಯೋಗಿಸುವರೆಂದು ನಂಬುತ್ತೇವೆ. ವರ್ತಮಾನ ಪತ್ರಿಕೆಯನ್ನು ನಡಿಸುವವನು ಪ್ರತಿಫಲವೂ ಹೆದರಿಕೆಯಿಂದ ಬರೆಯುವುದಾದರೆ ಅಂಥಾ ಬರವಣಿಗೆಯಿಂದ ಸರ್ಕಾರಕ್ಕಾಗಲಿ ದೇಶಕ್ಕಾಗಲಿ ಪ್ರಜೆಗಳಿಗಾಗಲಿ ಸ್ವಲ್ಪವೂ ಹಿತವಾಗದು. ಪ್ರಜಾ ಸಾಮಾನ್ಯದ ಹಿತವನ್ನು ಬಯಸಿ ಅವನು ಧಾರಾಳವಾಗಿ ಬರೆಯುವುದಕ್ಕೆ ಕುಂದಕವಿರಬಾರದು. ಮತ್ತು ಈ ಕಾನೂನು ಎಷ್ಟು ಕಾಲ ಅವಶ್ಯವೋ ಅಷ್ಟರವರಿಗೆ ಮಾತ್ರ ಜಾರಿಯಲ್ಲಿಟ್ಟಿರಬೇಕು. ಈಗ ಕಾಣಿಸಿಕೊಂಡಿರುವ ಅರಾಜಕ ಕೃತ್ಯವು ಈ ರಾಷ್ಟ್ರಕ್ಕೆ ಹೊಸದಾದದ್ದರಿಂದ ಇದು ಬಹು ಬೇಗನೆ ನಿವಾರಣೆಯಾದೀತು. ಇಂಥಾ ವಿಶೇಷವಾದ ಸಮಯ ಸಂದರ್ಭಗಳಿಗೆ ವಿಶೇಷವಾದ ಕಾನೂನುಗಳು ಇರಬೇಕಾದದ್ದು ಅವಶ್ಯವಾಗಿದೆ.

ಅನಂತರ ಸರ್ ವಿಟ್ಠಲದಾಸ್ ಥ್ಯಾಕರ್ಸೇಯವರು ಈ ಕಾನೂನ್‌ನಲ್ಲಿ ಕೆಲವು ಬದಲಾವಣೆಗಳಾಗಬೇಕೆಂದು ಸೂಚಿಸಿ, ಕಾನೂನಿಗೆ ಸಮ್ಮತಿಪಟ್ಟರು. ಮೆ|| ಅಬ್ದುಲ್ ಮಜೀದ್ ಯವರೂ ಈ ಕಾನೂನನ್ನು ಒಪ್ಪಿಕೊಂಡರು. ಮೆ|| ಭೂಪೇಂದ್ರನಾಥ ಬಾಸುಯವರು ಈ ಕಾನೂನಿನ ಕೆಲವು ಭಾಗಗಳನ್ನು ಕುರಿತು ಸ್ವಲ್ಪ ದೀರ್ಘವಾಗಿ ಆಕ್ಷೇಪಣೆ ಮಾಡಿ, ಕಳ್ಳರನ್ನು ನಿಗ್ರಹಿಸಬೇಕಾದರೆ ಬಡತನವನ್ನು ನೀಗಿಸಿ ಪ್ರಜೆಗಳಲ್ಲಿ ತೃಪ್ತತೆಯನ್ನುಂಟುಮಾಡಬೇಕೇ ಹೊರತು ಕಠಿಣತರವಾದ ಕಾನೂನ್ ಮಾಡಿಟ್ಟರೆ ಆಗಲಾರದೆಂದೂ, ಈ ಕಾನೂನಿನಿಂದ ಇನ್ನೂ ದೇಶಕ್ಕೆ ಘೋರವಾದ ಕೇಡುಂಟಾಗುವುದೆಂದೂ, ಇಂಥಾದ್ದಕ್ಕೆ ತಾವು ಸಮ್ಮತಿಹಾಕುವುದಿಲ್ಲವೆಂದೂ ವರ್ತಮಾನ ಪತ್ರಿಕೆಗಳು ದುಷ್ಟವಾದ ಅಭಿಪ್ರಾಯಗಳನ್ನು ಪ್ರಕಟಿಸಿದರೆಂದು ಹೇಳುವ ಪಕ್ಷಕ್ಕೆ ಜವಾಬ್ದಾರಿ ವಹಿಸಿದ ಅಧಿಕಾರಿಗಳೂ ನಿರ್ದುಷ್ಟರಾಗಿರಲಿಲ್ಲವೆಂದೂ ಹೇಳಿದರು. ಮೆ|| ಗಣಾದ ಸಿ ಸಿ ಕ್ವೈಯನ್, ಮೌಲ್ವಿ ಸೈಯದ್ ಹುದ, ಮೆ|| ಕೆನ್‌ಟ್ರಿಕ್, ಸರ್ ಎಚ್ ಸ್ಟುವರ್ಟ್, ಮೆ|| ಎಸ್ ಪಿ ಸಿಂಹರವರು ಈ ಕಾನೂನಿನ ಆವಶ್ಯಕತೆ ಬಗ್ಗೆ ಬಹು ಸ್ವಾರಸ್ಯವಾಗಿ ಚರ್ಚೆಮಾಡಿ, ಸಭಿಕರಿಂದ ವಂದಿಸಲ್ಪಟ್ಟರು. ಇತರ ಮೆಂಬರುಗಳೂ ಅದರಂತೆ ಒಪ್ಪಿಕೊಂಡರು.

ಬಳಿಕ ಆ ಕಾನೂನ್‌ನಲ್ಲಿ ಮೆಂಬರುಗಳು ಬದಲಾವಣೆಯಾಗಬೇಕೆಂದು ಸೂಚಿಸಲ್ಪಟ್ಟಿದ್ದ ಕೆಲವು ಭಾಗಗಳನ್ನು ಒಪ್ಪಿಕೊಂಡು, ಉಳಿದವುಗಳನ್ನು ತಿರಸ್ಕರಿಸಿದರು. ಮುದ್ರಾಲಯಕ್ಕಾಗಲಿ ವರ್ತಮಾನ ಪತ್ರಿಕೆಯನ್ನು ನಡಿಸುವುದಕ್ಕಾಗಲಿ ಕೊಟ್ಟಿರುವ ಅಪ್ಪಣೆಯನ್ನು ಸರ್ಕಾರದವರು ಒಂದಾವರ್ತಿ ರದ್ದುಮಾಡಿ, ಜಾಸ್ತಿ ಹಣವನ್ನು ಠೇವಣಿ ಕಟ್ಟಬೇಕೆಂದು ಹುಕುಂ ಕೊಟ್ಟರೆ ಅದಕ್ಕೆ ಹತ್ತು ದಿನಗಳ ವಾಯಿದೆ ಕೊಡಬೇಕೆಂಬುದನ್ನೂ, ವರ್ತಮಾನ ಪತ್ರಿಕೆಯನ್ನು ನಡಿಸುವವನೇ ಮುದ್ರಾಲಯದ ಮಾಲೀಕನೂ ಆಗಿದ್ದರೆ ಒಂದೇ ಜಾಮೀನ್ ಹಣವನ್ನು ಕಟ್ಟಬಹುದು ಎಂಬುವುದನ್ನು ಮೆಂಬರುಗಳು ಒಪ್ಪಿಕೊಂಡರು. ಈ ಕಾನೂನು ಮೂರು ವರುಷಗಳ ತನಕ ಜಾರಿಯಲ್ಲಿರಬೇಕೆಂದು ಮೆ|| ಗೋಖಲೆಯವರೇ ಮೊದಲಾದವರು ಸೂಚಿಸಿದರು. ಗವರ್ನಮೆಂಟಿನವರು ಅದಕ್ಕೆ ಸಮ್ಮತಿಸಲಿಲ್ಲ. ಮೆಂಬರುಗಳ ಓಟುಗಳನ್ನು ಕೇಳಿದರು. ೩ ವರುಷ ಇರಬೇಕೆಂದು ೧೬ ಮಂದಿಯೂ, ೪೨ ಮಂದಿ ಅದಕ್ಕೆ ವಿರೋಧವಾಗಿಯೂ ಓಟುಕೊಟ್ಟದ್ದರಿಂದ ಅದು ತಪ್ಪಿಹೋಯಿತು. ಚರ್ಚೆಯೆಲ್ಲಾ ಪೂರೈಸಿದ್ದರಿಂದ ಆ ಮಸೂದೆಯು ಕಾನೂನಾಗಿ ಪ್ಯಾಸ್‌ಮಾಡಲ್ಪಟ್ಟಿತು.

ವೈಸ್‌ರಾಯಿಯವರ ಭಾಷಣವು

ಕಡೆಯಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಕೌನ್ಸಿಲ್ ಮೆಂಬರುಗಳನ್ನು ಕುರಿತು ಹೇಳಿದ ಮುಖ್ಯಾಭಿಪ್ರಾಯವೇನೆಂದರೆ,

ಹಿಂದುಸ್ಥಾನದ ಹೊಸ ಕೌನ್ಸಿಲ್ ಮಂದಿರದಲ್ಲಿ ಈ ವಿಶೇಷವಾದ ಕಾನೂನು ಪ್ಯಾಸಾದದ್ದೇ ಮೊದಲನೆಯದಾಗಿದೆ. ನೀವುಗಳೆಲ್ಲಾ ಧಾರಾಳವಾಗಿ ಚರ್ಚೆಮಾಡಿ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಕ್ಕಾಗಿ ನಮಗೆ ತುಂಬಾ ಸಂತೋಷವಾಯಿತು. ಸ್ಥಳೀಯ ಗವರ್ನಮೆಂಟಿಗೆ ಹೆಚ್ಚಾದ ಅಧಿಕಾರವನ್ನು ವಹಿಸಿದ ವಿಷಯದಲ್ಲಿ ನೀವು ಆಕ್ಷೇಪಣೆ ಮಾಡಿದಿರಿ. ಇಂಡಿಯಾ ಗವರ್ನಮೆಂಟಿನವರು ಸಮಸ್ತ ಸಂಗಡಿಗರ ಅಭಿಮತಗಳನ್ನೂ ಪಡೆದು ಈ ಕಾನೂನಿನ ಮಸೂದೆಯನ್ನು ರಚಿಸಿರುತ್ತಾರೆ. ಈಗ ಪ್ಯಾಸಾಗಿರುವ ಕಾನೂನ್‌ನಿಂದ ಅನಾವಶ್ಯವಾದ ಮತ್ತು ರೇಗಿಸುವ ಸಂಭವಗಳೇನೂ ಪ್ರಾಪ್ತವಾಗುವುದಿಲ್ಲವೆಂದೂ, ಈಗ ಉಂಟಾಗಿರುವ ಕೆಡಕನ್ನು ಇದು ಅಡಗಿಸಬಲ್ಲದೆಂದೂ ನಂಬುತ್ತೇವೆ. ಈ ಕಾನೂನಿಗೆ ಕಾರಣ ಮುಂತಾದದನ್ನು ನಮ್ಮ ಸಹಪಾಟಿಗಳು ಶುಕ್ರವಾರ ನಿಮಗೆ ತಿಳಿಸಿದರು. ಈ ದಿನ ಮೆ|| ಸಿಂಹರವರೂ ಬಹು ಪರಿಷ್ಕಾರವಾಗಿ ವಿವರಿಸಿರುತ್ತಾರೆ. ಈ ದಿನ ಇಲ್ಲಿ ನಡೆದ ಚರ್ಚೆಗಳಿಂದ ಕಂಡುಬರುವ ರಾಜಕೀಯ ವಿಶೇಷತೆಯನ್ನೂ ಸ್ವಾರಸ್ಯವನ್ನೂ ಕುರಿತು ಸ್ವಲ್ಪ ಸೂಚಿಸುವೆವು. ಹಿಂದುಸ್ಥಾನದ ಬೇರೆ ಬೇರೆ ಕೋಮುಗಳ ಮತ್ತು ಕಸಬುಗಳ ಪ್ರತಿನಿಧಿಗಳಿಂದ ಕೂಡಿದ ಈ ಸಭೆಯು ಕಟಿಬದ್ಧವಾಗಿ ಈ ಕಾನೂನನ್ನು ಒಪ್ಪಿ ಪ್ಯಾಸಮಾಡಿರುತ್ತಾರೆ. ಯಾಕೆಂದರೆ ಇಂಡಿಯಾ ಗವರ್ನಮೆಂಟಿನವರಂತೆಯೇ ಈ ಪ್ರಜಾಪ್ರತಿನಿಧಿಗಳೂ ಇಂಥಾ ಕಾನೂನು ಸದ್ಯದಲ್ಲಿ ಈ ರಾಷ್ಟ್ರದ ನೆಮ್ಮದಿಯನ್ನು ಕಾಪಾಡುವುದಕ್ಕೆ ಅತ್ಯವಶ್ಯವಾದದ್ದೆಂದು ನಂಬುತ್ತಾರೆ. ಇಂಡಿಯಾ ಗವರ್ನಮೆಂಟಿನ ಮಂತ್ರಾಲೋಚನಾ ಸಭೆಯಲ್ಲಿ ದೇಶೀಯ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚುಮಾಡೋಣದರಿಂದ ಬ್ರಿಟಿಷ್ ಪ್ರಭುತ್ವವು ಸಡಿಲವಾಗುವುದಕ್ಕೆ ಪ್ರತಿಯಾಗಿ ಬಹಳಮಟ್ಟಿಗೆ ಬಲಪಡುವುದೆಂದು ನಾವು ನಂಬಿ ನಿರೀಕ್ಷಿಸಿಕೊಂಡಿದ್ದೆವು. ಈ ನಮ್ಮ ನಿರೀಕ್ಷೆಯನ್ನು ಈ ದಿನ ಪ್ರತಿನಿಧಿಗಳು ಪರಿಷ್ಕಾರವಾಗಿ ನೆರವೇರಿಸಿರುತ್ತಾರೆ. ಆದಕಾರಣ ನಾವು ಹಿಂದೆ ಅನೇಕ ಸಂದರ್ಭಗಳಲ್ಲಿ ಸೂಚಿಸಿರುವಂತೆ ಈ ರಾಷ್ಟ್ರದ ರಾಜಕೀಯ ವಿಚಾರಗಳು ನೂತನ ಸ್ವಭಾವವನ್ನು ಹೊಂದಿರುತ್ತವೆ ಎಂದು ನಾವು ಪರಿಷ್ಕಾರವಾಗಿ ತಿಳಿದುಕೊಂಡಿದ್ದೇವೆ. ಮತ್ತು ಹಿಂದುಸ್ಥಾನದಲ್ಲಿ ಪ್ರಜಾ ಹಿತಚಿಂತಕರಾಗಿಯೂ ಮುಖಂಡರಾಗಿಯೂ ಇರುವ ಈ ಕೌನ್ಸಿಲ ಮೆಂಬರುಗಳು ಗವರ್ನಮೆಂಟಿನವರಿಗೆ ಸ್ಥಳೀಯ ಸ್ಥಿತಿಗತಿ ವಿದ್ಯಮಾನಗಳನ್ನು ಅರಿಕೆಮಾಡಲು ತುಂಬಾ ಸಹಾಯವಾದೀತೆಂದು ನಂಬಿ ನಿರೀಕ್ಷಿಸುತ್ತೇವೆ.

ಹಿಂದೆ ನಡೆದ ಸಂಭವಗಳ ದೆಸೆಯಿಂದ ಇಂಡಿಯಾ ಗವರ್ನಮೆಂಟಿನವರು ಆಗತ್ಯವಾಗಿ ರೂಢಿಸಬೇಕಾಗಿ ಬಂದಂಥಾ ಕಾರ್ಯವು ಹಿಂದುಸ್ಥಾನದಲ್ಲಿ ವಿಶೇಷ ಚಿಂತೆಯನ್ನುಂಟುಮಾಡಿತು. ಈ ಚಿಂತೆಯನ್ನು ಗವರ್ನಮೆಂಟಿನವರು ತಮ್ಮಿಂದ ಸಾಧ್ಯವಾಗುವ ಮಟ್ಟಿಗೂ ತೊಡೆದುಬಿಡಬೇಕೆಂದು ನಿಶ್ಚಯಿಸಿರುತ್ತಾರೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇವೆ. ಇಗ್ಗೆ ಹದಿನಾಲ್ಕು ತಿಂಗಳ ಹಿಂದೆ ಹಿಡಿದು ಗಡೀಪಾರುಮಾಡಿ ಬಂಧನದಲ್ಲಿಟ್ಟುಕೊಂಡಿರುವಂಥಾ ಒಂಭತ್ತುಮಂದಿಯನ್ನು ಸೆರೆಯಿಂದ ಬಿಡುಗಡೆಮಾಡಿಬಿಡಬೇಕೆಂದು ತೀರ್ಮಾನಮಾಡಿರುವೆವು. ಯಾಕೆಂದರೆ ಈಗಿನ ರಾಜಕೀಯ ಸ್ಥಿತಿಗತಿಯು ಸಂಪೂರ್ಣವಾಗಿ ರೂಪಾಂತರ ಹೊಂದಿರುತ್ತದೆ. ಆಗ ರಾಜದ್ರೋಹವೆಂಬ ಘೋರವಾದ ಸ್ಥಿತಿಯು ಹುಟ್ಟಿ ಅವರು ಅದಕ್ಕೆ ಮುಖಂಡರಾಗಿ ನಿಂತು, ಅದಕ್ಕೆ ತಕ್ಕ ಮಾತುಗಳನ್ನು ಆಡುವುದರಲ್ಲೂ ಸಲಕರಣೆಗಳನ್ನು ಸಿದ್ಧಪಡಿಸಿಕೊಳ್ಳುವುದರಲ್ಲೂ ಉದ್ಯುಕ್ತರಾಗಿದ್ದರು. ಈಗಲಾದರೋ ಅದು ಕೆಟ್ಟು ಕ್ರೂರಕೃತ್ಯಗಳೂ ಅರಾಜಕ ಕಾರ್ಯಗಳೂ ನಡೆಯುತ್ತಿಬಂದಿವೆ. ಇಂಥಾ ಕೃತ್ಯಗಳು ಆ ಜನರ ಉದ್ದೇಶವಾಗಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದದ್ದರಿಂದಲೇ ನಾವು ಅವರನ್ನು ಸೆರೆಯಿಂದ ಬಿಡುಗಡೆ ಮಾಡಬೇಕೆಂದು ನಿಶ್ಚಯಿಸಿರುತ್ತೇವೆ. ಈಗ ನಡೆಯುತ್ತಿರುವ ದುರಾಗತ ಕಾರ್ಯಗಳು ಬ್ರಿಟಿಷ್ ಪ್ರಭುಗಳ ಮೇಲೆ ಮಾತ್ರವೇ ಅಲ್ಲ, ದೇಶೀಯ ಜನರ ಮೇಲೂ ತಿರುಗಿಸಲ್ಪಟ್ಟವುಗಳಾಗಿವೆ. ಹಿತಶತ್ರುಗಳು ಘೋರಕೃತ್ಯಗಳನ್ನು ನಡಿಸಿ, ಇಂಗ್ಲಿಷರನ್ನೂ ದೇಶೀಯ ಅಧಿಕಾರಿಗಳನ್ನೂ ತಾರತಮ್ಯನೋಡದೆ ಕೊಲ್ಲುವುದರಲ್ಲೂ ಇತರ ಕ್ರೂರಕೃತ್ಯಗಳನ್ನು ನಡಿಸುವುದರಲ್ಲೂ ಆಸಕ್ತರಾಗಿದ್ದಾರೆಂದು ನಮಗೆ ಕಂಡು ಬರುತ್ತಿದೆ. ಆದಕಾರಣ ಗಡೀಪಾರು ಹೊಂದಿದವರನ್ನು ಬಿಡುಗಡೆಮಾಡಿಬಿಟ್ಟಲ್ಲಿ ಇಂಗ್ಲಿಷರೂ ದೇಶೀಯರೂ ಐಕಮತ್ಯ ಹೊಂದಿ, ಸಾಹಸಪಡಲು ತುಂಬಾ ಸಹಾಯವಾಗುವುದೆಂದು ನಂಬುತ್ತೇವೆ. ಪ್ರಜೆಗಳ ಮುಖಂಡರ ಮೇಲೆ ನಾವು ಭರವಸವಿಟ್ಟಿರುತ್ತೇವೆಂಬುವದನ್ನು ಮನಃಪೂರ್ವಕವಾಗಿ ತೋರ್ಪಡಿಸಿ ಅವರು ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸಿ ನಮಗೆ ಸಹಾಯಮಾಡಿಯಾರೆಂದು ನಂಬಿಕೊಂಡಿದ್ದೇವೆ. ಆದಾಗ್ಯೂ, ಇನ್ನೂ ಕೆಲವು ಕಾಲದವರೆಗೆ ಈ ಅರಾಜಕ ಕೃತ್ಯಗಳು ನಡೆಯುತ್ತಾ ಬರುವವೆಂದು ನಮಗೆ ತೋರುವ ಕಾರಣ ಅಂಥಾ ಕೃತ್ಯಗಳನ್ನು ಅಡಗಿಸಿ ನಿರ್ಮೂಲಮಾಡುವುದಕ್ಕೆ ನಮ್ಮಲ್ಲಿರುವ ಸಕಲ ಸಾಧನಗಳನ್ನೂ ಪ್ರಯೋಗಿಸದೆ ಇರಲಾರೆವೆಂದು ಖಂಡಿತಮಾಡಿಕೊಂಡಿದ್ದೇವೆ. ಸದ್ಯದಲ್ಲಿ ಈ ಕೌನ್ಸಿಲ್‌ನವರು ಪ್ಯಾಸ್‌ಮಾಡಿರುವ ಪ್ರೆಸ್ ಕಾನೂನು ಇನ್ನೊಂದು ಕೆಡುಕಿಗೆ ಅವಕಾಶನ್ನುಂಟುಮಾಡುವ ಮೂಲಸ್ಥಾನವನ್ನು ಬಹಳ ತೃಪ್ತಿಕರವಾಗಿ ಹತೋಟಿಗೆ ತಂದುಕೊಳ್ಳುವುದೆಂದು ನಂಬಿ ನಿರೀಕ್ಷಿಸುತ್ತೇವೆ.

ಈ ರೀತಿ ಉಪನ್ಯಾಸವಾದ ಬಳಿಕ ವೈಸ್‌ರಾಯಿಯವರು ಆ ದಿನದ ಕೌನ್ಸಿಲ್ ಸಭೆಯನ್ನು ಮುಕ್ತಾಯಮಾಡಿದರು.

ಈಚೆಗೆ ನಡೆದ ಮೀಟಿಂಗು.

ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯ ಮೆಂಬರುಗಳು ನೆನ್ನೆ ಸಭಾಮಂದಿರದಲ್ಲಿ ಸೇರುವವರಾಗಿದ್ದರು. ಕೆಲವು ಮೆಂಬರುಗಳು ರಾಜಕೀಯ ವಿಷಯಗಳನ್ನು ಕುರಿತು ಕೆಲವು ಪ್ರಶ್ನೆಗಳನ್ನು ಕೇಳುವಂತೆ ತಿಳಿಸಿದ್ದರು ಮುಂದಿನ ಬುಧವಾರವೂ ಮೆಂಬರುಗಳು ಮೀಟಿಂಗು ನಡಿಸುತ್ತಾರೆ. ಆಗ್ಗೆ ಹಿಂದು ಸ್ಥಾನದ ಬಜೆಟ್ಟನ್ನು (ಜಮಾಖರ್ಚಿನ ಲೆಕ್ಕಗಳನ್ನು) ಗವರನ್‌ಮೆಂಟಿನವರು ಸಭೆಯಲ್ಲಿ ಹಾಜರುಮಾಡುವರು. ಮೆಂಬರುಗಳು ಹತ್ತು ದಿನಗಳ ತನಕ ಆ ಲೆಕ್ಕಗಳನ್ನು ನೋಡಿ ಚರ್ಚೆಮಾಡಿಕೊಂಡು, ಮಾರ್ಚಿ ೩೭. ೪ ರಲ್ಲಿ ನಡೆಯುವ ಕೌನ್ಸಿಲ್ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುವವರಾಗಿದಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಅಫ್ಘಾನಿಸ್ಥಾನದಲ್ಲಿ ಮಳೆಯು ವಿಶೇಷವಾಗಿ ಸುರಿದು, ರಸ್ತೆಗಳೂ ಮನೆಮಠಾದಿಗಳೂ ಕೆಟ್ಟು ಬಿದ್ದುಹೋಗಿರುವುದಾಗಿ ವರ್ತಮಾನ ಬಂದಿದೆ

ಪಾಂಡಿಚರಿ (ಪುದುಚೇರಿ)ಯ ಫ್ರೆಂಚ್ ಗವರ್ನರವರು ಕಳೆದ ವಾರ ಕಾಶೀಪಟ್ಟಣಕ್ಕೆ ಹೋಗಿ ಅಲ್ಲಿನ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ.

೧೯೧೦–೧೧ ನೇ ಸಾಲಿನಲ್ಲಿ ಇಂಡಿಯಾ ಗವರ್ನಮೆಂಟಿನವರು ಉತ್ತರ ದೇಶದ ಈಸ್ಟ್ ಇಂಡಿಯಾ ರೈಲ್ವೆ ಬಡಾವಣೆಗಾಗಿ ೧೭೫ ಲಕ್ಷ ರೂಪಾಯಿ ಖರ್ಚುಮಾಡುವವರಾಗಿದಾರೆ.

ಹೋದ ವರುಷ ಹಿಂದುಸ್ಥಾನದಿಂದ ೩,೮೪,೨೪೮ ರೂ. ಕ್ರಯದ ೧೭,೯೦೦ ಗೋಕಾಯಿಗಳನ್ನು ಸಿಲೋನ್ ದ್ವೀಪಕ್ಕೆ ಸಾಗಿಸಿದರು ಹಿಂದಿನ ವರುಷ ೪,೦೩,೧೪೨ ರೂಪಾಯಿನ ೧೯,೮೪೧ ರಾಸುಗಳನ್ನು ಅಲ್ಲಿನವರು ಕೊಂಡುಕೊಂಡಿದ್ದರೆಂದು ತಿಳಿಯುತ್ತದೆ.

ಬೊಂಬಾಯಿ ಯೂನಿವರ್ಸಿಟಿ ವಿದ್ಯಾ ಸಂಘದವರು ನಡಿಸುವ ಮೆಟ್ರಿಕ್ಯುಲೇಷನ್ ಎಂಬ ಪರೀಕ್ಷೆಯನ್ನು ವಜಾಮಾಡಿಬಿಡಬೇಕೆಂದು ಚರ್ಚೆಯಾಯಿತು. ಕೆಲವು ದೇಶೀಯ ಮೆಂಬರುಗಳು ಹಾಗಾಗಕೂಡದೆಂದು ಅಭಿಪ್ರಾಯಪಟ್ಟದ್ದರಿಂದ ಆ ಪರೀಕ್ಷೆಯನ್ನು ವಜಾಮಾಡುವುದಕ್ಕಾಗಲಿಲ್ಲ.

ಮದರಾಸ್ ಗವರ್ನರವರು ಮದರಾಸ್ ಪಟ್ಟಣದಲ್ಲಿ ಪ್ರಾರಂಭಿಸಿರುವ ಸ್ವದೇಶೀ ಗಾಜಿನ ಕಾರ್ಖಾನೆಗೆ ಮೊನ್ನೆ ಚಿತ್ತೈಸಿ ಗಾಜಿನ ಸಾಮಾನುಗಳ ತಯಾರಿಯನ್ನು ಪರಾಂಬರಿಸಿ ಕಾರ್ಖಾನೆಯಲ್ಲಿ ಕೆಲಸಮಾಡತಕ್ಕವರಿಗೆ ಹಿತೋಕ್ತಿಗಳನ್ನು ಹೇಳಿ ತುಂಬಾ ಸಂತೋಷಪಟ್ಟರು

ರಾಜದ್ರೋಹಕ್ಕೆ ಮಸಲತ್ತುಗಳನ್ನು ಮಾಡುತ್ತಿದ್ದರೆಂದು ಹಿಡಿದು ಗಡೀಪಾರು ಮಾಡಲ್ಪಟ್ಟಿದ್ದ ಒಂಬತ್ತು ಮಂದಿ ಬಂಗಾಳಿಗಳನ್ನು ಗವರ್ನಮೆಂಟಿನವರು ಕಳೆದ ಬುಧವಾರ ಸೆರೆಮನೆಗಳಿಂದ ಬಿಡುಗಡೆಮಾಡಿಸಿ, ಅವರುಗಳನ್ನೆಲ್ಲಾ ರೈಲಿನ ಮೇಲೆ ಅವರವರ ಮನೆಗಳಿಗೆ ಕಳುಹಿಸಿಬಿಟ್ಟರು.

ಹಿಂದುಸ್ಥಾನದ ಕ್ಷಾಮನಿವಾರಣಾರ್ಥವಾದ ಧರ್ಮ ಫಂಡಿನಲ್ಲಿ ಈ ವರುಷದ ಪ್ರಾರಂಭದಲ್ಲಿ ೨೮ ಲಕ್ಷದ ೧೦ ಸಾವಿರ ರೂಪಾಯಿ ಉಳಿದಿದೆ ಎಂದು ಪ್ರಕಟವಾಗಿದೆ. ಕಳೆದ ಎರಡು ವರುಷಗಳ ಕ್ಷಾಮನಿವಾರಣೆಗಾಗಿ ತೆಗೆದಿಟ್ಟ ಹಣದ ಪೈಕಿ ಉಳಿದಂಥಾ ೧,೦೭,೯೩೩ ರೂಪಾಯಿ ಆ ಫಂಡಿಗೆ ಸೇರಿಸಲ್ಪಟ್ಟಿತು.

ಕಲ್ಕತ್ತಾ ಪಟ್ಟಣದ ಬಳಿ ಶಾಂತಿಪುರದಲ್ಲಿದ್ದ ಪಂಡಿತ ರಾಮನಾಥ ತಾರಕರತ್ನರವರು ಕಾಲವಾದರೆಂದು ಪ್ರಕಟವಾಗಿದೆ ಇವರು ಸಂಸ್ಕೃತದಲ್ಲಿ ಅದ್ವಿತೀಯ ಪಂಡಿತರೆಂಬ ಹೆಸರು ವಾಸಿ ಪಡೆದಿದ್ದರು. ಪ್ರಿನ್ಸ್ ಆಫ್ ವೇಲ್ಸ್ ರವರು ಕಲ್ಕತ್ತೆಗೆ ದಯಮಾಡಿಸಿದ್ದಾಗ್ಗೆ ಅವರು ಈ ಪಂಡಿತರನ್ನು ಕರೆಸಿಕೊಂಡು ಅವರಿಗೆ ಭೇಟಿ ದಯಪಾಲಿಸಿದ್ದರು.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ರಾಯಪುರವೆಂಬ ಸಂಸ್ಥಾನದಲ್ಲಿ ಮೂಥಾಯಾ ಎಂಬ ಒಬ್ಬರು ದಂಗೆ ಕೃತ್ಯಗಳನ್ನು ನಡಿಸಿ, ಅಂಗಡಿಮುಂಗಟ್ಟುಗಳ ಮೇಲೆ ನುಗ್ಗಿ ಲೂಟಿಮಾಡಿದಂತೆಯೂ, ಪೋಲೀಸ್ ಸೂಪರಿಂಟೆಂಡೆಂಟರಾದ ಡ್ರೂರಿ, ಡ್ಯೂಕ್ ಎಂಬಿವರು ೩೦೦ ಜನ ಪೋಲೀಸಿನವರನ್ನು ಕರೆದುಕೊಂಡು ಕಲ್ಕತ್ತೆಯಿಂದ ಆ ಸಂಸ್ಥಾನಕ್ಕೆ ಹೋಗಿರುವುದಾಗಿಯೂ ತಿಳಿದುಬರುತ್ತದೆ

ಕಳೆದ ಡಿಸೆಂಬರಿನಲ್ಲಿ ಲಾಹೋರ್ ಪಟ್ಟಣದಲ್ಲಿ ಪ್ರಾರಂಭಿಸಲ್ಪಟ್ಟ ಸರ್ವ ವಸ್ತು ಪ್ರದರ್ಶನ ಶಾಲೆಯು ತುಂಬಾ ಪ್ರಸಿದ್ಧಿಯನ್ನು ಹೊಂದಿತು. ಅನೇಕ ಸಹಸ್ರ ಪ್ರಜೆಗಳು ಹೋಗಿ ಪ್ರದರ್ಶನ ವಸ್ತುಗಳನ್ನು ನೋಡಿಬಂದರು. ಪ್ರದರ್ಶನ ಶಾಲೆಯು ಕಳೆದ ವಾರ ಮುಕ್ತಾಯಮಾಡಲ್ಪಟ್ಟಿತು ಖರ್ಚು ಜಾತಾ ೬೦ ಸಾವಿರ ರೂಪಾಯಿ ಹೆಚ್ಚುವರಿ ಆಗಿದೆ ಎಂದು ತಿಳಿದುಬರುವುದು.

ಪಾಟಿಯಾಲಾ ಸಂಸ್ಥಾನದಲ್ಲಿ ಕೆಲವುಕಾಲ ಮ್ಯಾಜಿಸ್ಟ್ರೇಟರಾಗಿದ್ದು ಈಚೆಗ ಪ್ಲೀಡರಾದ ಮೆ|| ಶಾರದಾ ಅಜಿತಸಿಂಹರವರನ್ನು ಅಲ್ಲಿನ ಮಹಾರಾಜರವರು ತಮ್ಮ ಡೆಪ್ಯುಟಿ ಪ್ರೈವೇಟ್ ಸೆಕ್ರಿಟರಿ ಕೆಲಸಕ್ಕೆ ನೇಮಕ ಮಾಡಿಕೊಂಡಿದಾರೆ. ಇವರು ಲಾಹೋರಿನಲ್ಲಿ ನಡೆದ ಸಂಘಪರಿಷ್ಕರಣ ಸಮಾಜದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ, ಪ್ರಜಾಹಿತಚಿಂತಕರೆಂಬುದನ್ನು ಪ್ರಕಾಶಪಡಿಸಿರುತ್ತಾರ

ಪಂಜಾಬ್ ಆಧಿಪತ್ಯಕ್ಕೆ ಸೇರಿದ ತಾಲ್ಲೂಕ್‌ದಾರರೆಲ್ಲಾ ಸೇರಿ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಅಲಹಾಬಾದಿನಲ್ಲಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿಕೊಂಡಿದಾರೆ. ಈ ವಿದ್ಯಾಶಾಲೆಯಲ್ಲಿ ವ್ಯವಸಾಯ ಕ್ರಮಗಳನ್ನು ಬೋಧಿಸುವುದಕ್ಕೆ ಈಗ ಏರ್ಪಾಡಾಗುತ್ತಿರುವುದು. ಇದಕ್ಕೆ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್ ಎಂಬ ಸಂಘದವರು ೫೦,೦೦೦ ರೂಪಾಯನ್ನೂ ಮಹಮದಾಬಾದಿನ ರಾಜರವರು ೫,೦೦೦ ರೂಪಾಯನ್ನೂ ಚಂದಾ ಕೊಟ್ಟಿದಾರೆ.

ಕಾಶ್ಮೀರದ ಮಹಾರಾಜರವರ ಸಹೋದರರಾಗಿದ್ದು ಕಾಲವಾದ ರಾಜಾ ಜನರಲ್ ಸರ್ ಅಮರಸಿಂಹರವರ ಅಸ್ಥಿಗಳನ್ನು ರಾಜಧಾನಿಯಾದ ಜಾಮೂ ನಗರದಿಂದ ಹೋದ ವಾರ ಕಾಶೀಪಟ್ಟಣಕ್ಕೆ ಕಳುಹಿಸಿದರು. ಅದನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೊರಟಾಗ ಗೌರವಾರ್ಥವಾದ ೧೭ ತೋಪುಗಳು ಹಾರಿಸಲ್ಪಟ್ಟವು. ಮೆರವಣಿಗೆಯಲ್ಲಿ ಮಹಾರಾಜರವರೂ ಸಂಸ್ಥಾನದ ಮಂತ್ರಿಗಳೂ ಅಧಿಕಾರಿಗಳೂ ಸೈನ್ಯಗಳೂ ಆನೆ ಕುದುರೆಗಳೊಡನೆ ಪಾದಚಾರಿಗಳಾಗಿ ನಡೆದು ಹೋದರು.

ಲಾಹೋರ್ ಪಟ್ಟಣದಲ್ಲಿ “ಆಕಾಶ” ಎಂಬ ಪತ್ರಿಕೆಯೊಳಗೆ ರಾಜದ್ರೋಹಕರವಾದ ವಾರ್ತೆಯು ಪ್ರಕಟವಾಗುವುದಕ್ಕೆ ಅವಕಾಶ ಕೊಟ್ಟರೆಂದು ಸರ್ಕಾರದವರು ಆ ಪತ್ರಿಕೆಯ ಎಡಿಟರಾದ ಗಣೇಶಲಾಲ್ ಎಂಬಾತನ ಮೇಲೆ ಮೊಕದ್ದಮೆ ಮಾಡಿದ್ದರು. ಆದರೆ ಕಳೆದ ವಾರ ಗಣೇಶಲಾಲನು ತಾನು ಮಾಡಿದ ಅಪರಾಧವನ್ನು ಒಪ್ಪಿಕೊಂಡು ಒಡೆಯರಿಗೆ ಕ್ಷಮಾ ಪತ್ರವನ್ನು ಒಪ್ಪಿಸಿದ್ದರಿಂದ ಒಡೆಯರು ಆತನಿಗೆ ಎಚ್ಚರಿಕೆಯನ್ನು ಹೇಳಿ ಮೊಕದ್ದಮೆಯನ್ನು ವಜಾ ಮಾಡಿಬಿಟ್ಟರು.

ರಾಜಮಂಧ್ರಿ ನಗರದಲ್ಲಿ ಮಾವಿಡಿ ದೇವೇಂದ್ರುಡು ಎಂಬ ಯೌವನಸ್ಥನು ವಿಲಾಯತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ವಾಪಸು ಬಂದನು. ಪೋಲೀಸಿನವರು ಸಮಾನದ ಮೇಲೆ ಆತನ ಮನೆಯನ್ನು ಶೋಧನ ಮಾಡಿದಾಗ ಆತನ ಪೆಟ್ಟಿಗೆಗಳಲ್ಲಿ ಅನುಮಾನಾಸ್ಪದವಾದ ಕಾಗದ ಪತ್ರಗಳಾಗಲಿ ಇತರ ಪದಾರ್ಥಗಳಾಗಲಿ ಸಿಕ್ಕಲಿಲ್ಲ ಆದರ ಆತನ ತಮ್ಮ ೧೪ ವರುಷದ ವೆಂಕಟಾಚಲನ ಪೆಟ್ಟಿಗೆಯೊಳಗ ಧಿಂಗ್ರನ ಮಾತುಗಳು ಎಂಬ ಕೆಲವು ಕಾಗದಗಳೂ ಶಿವಾಜಿ ಮೊದಲಾದವರ ಭಾವಚಿತ್ರಗಳೂ ಸಿಕ್ಕಿದವು

ಮಧುರಾ ಡಿಸ್ಟ್ರಿಕ್ಟಿನಲ್ಲಿ ಕಲೆಕ್ಟರಾದ ಮೆ|| ಬಟರ್‌ವರ್ತ್‌ಯವರು ಕೆಲವು ಗ್ರಾಮಗಳನ್ನು ಸೇರಿಸಿ ಒಂದು ಗ್ರಾಮಪಂಚಾಯತಿ ಕೋರ್ಟನ್ನು ಸ್ಥಾಪಿಸಿರುತ್ತಾರೆ ಇದರಿಂದ ಆ ಗ್ರಾಮಗಳಲ್ಲಿ ಹುಟ್ಟುವ ಸಣ್ಣ ಸಣ್ಣ ಮೊಕದ್ದಮೆಗಳನ್ನು ಈ ಕೋರ್ಟಿನಲ್ಲಿ ಬಹು ಸುಲಭದಲ್ಲಿ ಫೈಸಲು ಮಾಡಿಕೊಳ್ಳಬಹುದಾಗಿದೆ. ಕಕ್ಷಿಗಾರರು ಅಷ್ಟು ವಿಷಯಕ್ಕಾಗಿ ದೂರಸ್ಥಳಗಳಲ್ಲಿರುವ ಕೋರ್ಟಿಗೆ ಅಲೆಯುವುದೂ ಹಣ ಖರ್ಚುಮಾಡುವುದೂ ತಪ್ಪಿತು ಇಂಥಾ ಗ್ರಾಮಾಂತ್ರ ಕೋರ್ಟುಗಳನ್ನು ಇತರ ಕಡೆಗಳಲ್ಲೂ ಏರ್ಪಾಡು ಮಾಡಿದಲ್ಲಿ ಪ್ರಜೆಗಳಿಗೆ ತುಂಬಾ ಹಿತವಾದೀತೆಂದು ನಿರೀಕ್ಷಿಸಲ್ಪಟ್ಟಿದೆ.

ಪ್ಲೇಗು ಉಪದ್ರದ ಹಾವಳಿಯು ವಾರವಾರಕ್ಕೆ ಹೆಚ್ಚುತ್ತಾ ಬಂದಿದೆ. ಕಳದ ವಾರ ಹಿಂದುಸ್ಥಾನದಲ್ಲೆಲ್ಲಾ ೧೪,೧೪೪ ಜನರು ಈ ಉಪದ್ರದಲ್ಲಿ ಕಾಲವಾದರು ಇದರ ಪಂಚಿಕ ಹ್ಯಾಗಂದರೆ,—ಸಂಯುಕ್ತ ಆಧಿಪತ್ಯ ೬,೬೦೧, ಪಂಜಾಬ್ ೩,೭೪೫, ಬಂಗಾಳಾ ೧,೬೨೧, ಮಧ್ಯ ಪ್ರಾಂತ್ಯಗಳು ೧,೨೮೮, ಬೊಂಬಾಯಿ ಆಧಿಪತ್ಯ ೮೮೧, ರಾಜಪುಟಾನಾ ಅಜ್ಮೀರಾ ಮೇವಾರಾ ೭೧೪, ಬರ್ಮಾ ಆಧಿಪತ್ಯ ೨೫೭, ಮೈಸೂರು ಸಂಸ್ಥಾನ ೭೪, ಮಧ್ಯ ಇಂಡಿಯಾ ೬೧, ಮದರಾಸ್ ಆಧಿಪತ್ಯ ೬೦, ಹೈದರಾಬಾದ್ ಸಂಸ್ಥಾನ ೧೭, ಕಾಶ್ಮೀರ ೬, ಈ ರೀತಿ ಮರಣಗಳಾಗಿರುತ್ತವೆ

ಲಕ್ನೋ ಪಟ್ಟಣದಲ್ಲಿ ಗಣೇಂದ್ರನಾಥ ಬೋಬಂದಾರನೆಂಬ ಯೌವನಸ್ಥನು ರಾಜದ್ರೋಹಿಗಳ ಗುಂಪನ್ನು ಪತ್ತೇಮಾಡಿಕೊಡುತ್ತೇನೆಂದು ಪೋಲೀಸಿನವರಿಗ ಭರವಸೆ ಕೊಟ್ಟನು. ಅವನ ಮಾತಿನ ಪ್ರಕಾರ ಪೋಲೀಸಿನವರು ಕೆಲವು ದೊಡ್ಡ ಮನುಷ್ಯರ ಮನೆಗಳನ್ನು ಶೋಧ ಮಾಡಿದರೂ ರುಜುವಾತೇನೂ ಸಿಕ್ಕದೆ ಹೋಯಿತು. ಅವನು ಹೇಳಿದ್ದು ನಿಜವಲ್ಲವೆಂದು ಗೊತ್ತಾದದ್ದರಿಂದ ಸುಳ್ಳುವರ್ತಮಾನ ಕೊಟ್ಟನೆಂದು ಅವನ ಮೇಲೆ ಫಿರ್ಯಾದು ಮಾಡಿದರು ಸೆಷನ್ಸ್ ಜಡ್ಜರು ಅಸೆಸರುಗಳ ಅಭಿಪ್ರಾಯವನ್ನು ಒಪ್ಪಿ ಬೋಬಂದಾರನಿಗೆ ಮೂರು ವರುಷ ಕಠಿಣ ಸಜಾ ವಿಧಿಸಿರುತ್ತಾರೆ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನಾ ಸಭೆಯಲ್ಲಿ ಮೆಂಬರಾಗಿರುವ ಮೆ|| ಕೃಷ್ಣಗೋವಿಂದ ಗುಪ್ತರವರು ಹಿಂದುಸ್ಥಾನಕ್ಕೆ ಬಂದಿರುತ್ತಾರಷ್ಟೆ ಅವರು ನೆನ್ನೆ ಮದರಾಸಿಗೆ ಬರುವವರಾಗಿದ್ದರು ಮದರಾಸ್ ಪಟ್ಟಣದ ಮಹಾಜನ ಸಭೆಯವರು ಅವರನ್ನು ಟಾಕರ್ ಗಾರ್ಡನ್ ಎಂಬ ಉದ್ಯಾನವನದಲ್ಲಿ ವಿಶೇಷ ಉತ್ಸಾಹದಿಂದ ಸತ್ಕರಿಸಬೇಕೆಂದು ಏರ್ಪಾಡು ಮಾಡಿದಾರೆ ಮೆ|| ಗುಪ್ತರವರು ಮತ್ತೆ ವಿಲಾಯತಿಗೆ ಹೋಗುವುದಿಲ್ಲವೆಂದೂ, ಬಂಗಾಳಾ ಗವರ್ನರವರ ಎಗ್ಸಿಕ್ಯೂಟಿವ್ ಕೌನ್ಸಿಲ್ಲಿನಲ್ಲಿ ಇವರಿಗೆ ಮೆಂಬರ ಕೆಲಸವಾಗುವಹಾಗಿದ ಎಂದೂ ಅಲ್ಲಿನ ಪತ್ರಿಕೆಯು ಹೇಳುವುದು.

ಕಳೆದ ಡಿಸೆಂಬರ್ ತಿಂಗಳಿನಲ್ಲಿ ಮದರಾಸ್ ಯೂನಿವರ್ಸಿಟಿ ವಿದ್ಯಾ ಸಂಘದವರು ನಡಿಸಿದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಶೇಕಡ ಸುಮಾರು ೧೧ ಮಂದಿಯಂತೆ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವುದು ಮದರಾಸ್ ಆಧಿಪತ್ಯದ ಎಲ್ಲಾ ಸ್ಕೂಲುಗಳಲ್ಲೂ ಬಾಲಕರ ತಂದೆ ಯಾ ಪೋಷಕರಲ್ಲೂ ಖೇದವನ್ನುಂಟುಮಾಡಿರುವುದು. ಇದನ್ನು ನೋಡಿ ಆ ವಿದ್ಯಾಸಂಘದ ಕೆಲವು ಮೆಂಬರುಗಳು ಹುಡುಗರ ಪರೀಕ್ಷಾ ಫಲಿತಾಂಶಗಳನ್ನು ಮತ್ತೆ ಶೋಧನೆ ಮಾಡಬೇಕೆಂದೂ ಇನ್ನೂ ಕೆಲವು ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಿಸಬೇಕೆಂದೂ ಅಧಿಕಾರಿಗಳಿಗ ತಿಳಿಸಿದಾರೆ. ಇದು ಎಷ್ಟುಮಟ್ಟಿಗೆ ನೆರವೇರುವುದೋ ಮುಂದೆ ನೋಡಬೇಕು.

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ತಮ್ಮ ಕೈಕೆಳಗೆ ಸೆಕ್ರಿಟರಿಗಳಾಗಿ ಕೆಲಸ ಮಾಡುತ್ತಿದ್ದ ಸರ್ ಹರ್ಬರ್ಟ್ ರಿಸ್ಲಿ, ಸರ್ ಜೇಂಸ್ ಡನ್‌ಲಾಪ್ ಸ್ಮಿತ್ ಎಂಬಿವರಿಬ್ಬರೂ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸೀಮೆಗೆ ಹೊರಡುವುದಕ್ಕಿಂತ ಮುಂಚೆ ಕಳೆದ ವಾರ ಅವರಿಬ್ಬರಿಗೂ ಕಲ್ಕತ್ತೆಯಲ್ಲಿ ಔತಣವನ್ನು ಮಾಡಿಸಿದರು ಭೋಜನಾನಂತರ ವೈಸ್‌ರಾಯಿಯವರು ಅವರಿಬ್ಬರ ಸೌಕರಿಯನ್ನೂ ಕುರಿತು ಭಾಷಣ ಮಾಡಿ, ಗವರ್ನಮೆಂಟ್ ಕಾರುಬಾರುಗಳನ್ನು ನಡಿಸುವುದರಲ್ಲಿ ಅವರು ತುಂಬಾ ಸಹಾಯಕರಾಗಿದ್ದರೆಂದೂ ಅವರು ಹೊರಟು ಹೋಗುವುದರಿಂದ ತಮಗೆ ಬಲಗೈ ಬಿದ್ದುಹೋದಂತಾಯಿತೆಂದೂ ಕೊಂಡಾಡಿದರು

ಮುಂದಿನ ವರುಷ ಹಿಂದುಸ್ಥಾನದಲ್ಲೆಲ್ಲಾ ಕ್ರಿಕೆಟ್ ಎಂಬ ಚಂಡಾಟದಲ್ಲಿ ಪ್ರವೀಣರಾಗಿರತಕ್ಕ ಸುಮಾರು ೧೫ ಮಂದಿ ದೇಶೀಯರನ್ನು ಆರಿಸಿ ವಿಲಾಯತಿಗೆ ಕಳುಹಿಸಿ ಅಲ್ಲಿನ ಇಂಗ್ಲಿಷ್ ಆಟಗಾರರ ಮೇಲೆ ಪಂದ್ಯಗಳನ್ನು ಆಡಿಸಬೇಕೆಂದು ಏರ್ಪಾಡಾಗುತ್ತದೆ ಹೀಗ ಹೋಗತಕ್ಕವರ ಪ್ರಯಾಣದ ಖರ್ಚಿಗೂ ಭೋಜನಾದಿಗಳಿಗೂ ಹಣ ಬೇಕಾಗಿರುವುದರಿಂದ ವಿಲಾಯತಿಯವರೂ ಸ್ವಲ್ಪ ದ್ರವ್ಯಸಹಾಯ ಮಾಡುವುದಾಗಿ ವಾಗ್ದಾನ ಮಾಡಿದಾರೆ ಹಿಂದುಸ್ಥಾನದಲ್ಲೂ ಈ ಫಂಡಿಗೆ ಚಂದಾ ಕೊಡುತ್ತಿದೆ. ಹಲವು ಮಹಾರಾಜರುಗಳೂ ರಾಜರುಗಳೂ ಪ್ರಭ್ಯಾಂತರೂ ಇದುವರೆಗೆ ೧೬,೯೭೫ ರೂಪಾಯಿ ಚಂದಾ ಕಳುಹಿಸಿದಾರೆ.

ಚಲಾವಣೆಯಲ್ಲಿರುವ ಕೆಲವು ಬೆಳ್ಳಿಯ ನಾಣ್ಯಗಳನ್ನು ಕೆಲವು ವರ್ತಕರು ಅಂಗೀಕರಿಸದ ಇರುತ್ತಾರೆಂದು ತಿಳಿದು ಬೊಂಬಾಯಿ ಗವರ್ನಮೆಂಟಿನವರು ಒಂದು ಇಸ್ತಿಹಾರನ್ನು ಕೊಟ್ಟಿರುತ್ತಾರೆ. ಅದರ ಮುಖ್ಯಾಭಿಪ್ರಾಯವೇನಂದರೆ, ೧೮೩೫ ನೇ ಇಸವಿಗಿಂತಲೂ ಹಿಂದೆ ಛಾಪಾ ಆಗಿ ಈಸ್ಟ್ ಇಂಡಿಯಾ ಕಂಪನಿಯವರಿಂದ ಚಲಾವಣೆಗ ತರಲ್ಪಟ್ಟಿರುವ ಬೆಳ್ಳಿಯ ನಾಣ್ಯಗಳು ವಿನಹಾ ಇಲ್ಲಿಂದೀಚೆಗ ಛಾಪಾ ಹಾಕಿರುವಂಥಾ ನಾಣ್ಯಗಳನ್ನು ಎಲ್ಲರೂ ಅಂಗೀಕರಿಸಬೇಕು ಆದರೆ ಇವು ಸಮಕಲಾಗಿಯೂ ತೂಕದಲ್ಲಿ ಕಡಮೆಯಾಗದೆಯೂ ಇರಬೇಕು ಇಂಥವುಗಳನ್ನು ಸರಿಯಾದ ನಾಣ್ಯಗಳೆಂದು ತಿಳಿಯತಕ್ಕದ್ದು ಎಂದು ಪ್ರಕಟಿಸಿದಾರೆ.

ಬಂಗಾಳಾದಲ್ಲಿ ಏರ್ಪಾಡಾಗಿರುವ ರಾಜಭಕ್ತಿ ಪ್ರೋತ್ಸಾಹಕವಾದ ಒಂದು ಸಂಘವು ಕಲ್ಕತ್ತಾ ಪಟ್ಟಣದಲ್ಲಿ ಪ್ರಾರಂಭವಾಗಿರುತ್ತದೆ. ಈ ಸಂಘವು ಬಂಗಾಳಾ ಆಧಿಪತ್ಯಕ್ಕೆಲ್ಲಾ ವ್ಯಾಪಿಸತಕ್ಕದ್ದೆಂದು ಏರ್ಪಾಡಾಗಿದೆ. ಬರ್ಡ್ವಾನ್ ಮಹಾರಾಜರವರು ಈ ಸಂಘಕ್ಕೆ ಪ್ರಸಿಡೆಂಟರಾಗಿಯೂ, ಮಹಾರಾಜಾ ಸರ್ ಪ್ರದ್ಯೋತಕುಮಾರ್ ಟಾಗೋರ್ ಯವರು ಸೆಕ್ರಿಟರಿಯಾಗಿಯೂ ನೇಮಕವಾಗಿದಾರೆ ಈ ಸಂಘದವರು ಮಾಡಬೇಕೆಂದಿರುವ ಕಾರ್ಯಗಳೇನೆಂದರೆ—ಪ್ರಜೆಗಳಿಗೂ ಪ್ರಜಾಪಾಲನೆಯನ್ನು ನಡಿಸಿರುವ ಅಧಿಕಾರಿಗಳಿಗೂ ಪರಸ್ಪರವಾದ ಪ್ರೀತಿ ವಿಶ್ವಾಸಗಳನ್ನು ಕಲ್ಪಿಸುವುದು; ಸಕಲ ಸಾಧನ ಪ್ರಯತ್ನಗಳನ್ನೂ ಮಾಡಿ ರಾಜದ್ರೋಹವನ್ನೂ ಕೂರಕೃತ್ಯಗಳನ್ನೂ ನಿರ್ಮೂಲ ಮಾಡುವುದು ಈ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಬಹು ಸಮರ್ಥರೂ ಗಣ್ಯರೂ ಮುಂದಾಳುಗಳೂ ಆದ ಹಲವು ಮಂದಿ ರಾಜರೂ ನವಾಬರೂ ಭಾರೀ ಜಮೀನ್‌ದಾರರೂ ಸಹಾಯಮಾಡುತ್ತೇವೆಂದು ವಾಗ್ದಾನ ಮಾಡಿದಾರೆ.

Printed and Published by the Rev. H GULLIFORD, Proprietor and Manager, Wesleyan Mission Press, Mysore. 17/2/1910.

REGISTERED M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು | ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು | ಕ್ರಯ ೧ ದುಡ್ಡು.

ಸಂಪುಟ ೨೩ | ಮೈಸೂರು—೧೯೧೦ ನೇ ಇಸವಿ ಫೆಬ್ರವರಿ ತಾರೀಖು ೨೪ ನೇ ಗುರುವಾರ | ಸಂಚಿಕೆ ೩೯

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲಿ ಇತರ ಕಡೆಗಳಲ್ಲಿ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—

ಹೊರ ಊರಿನವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡರೆ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸಹ ರೂ ೧—೧೪—

" ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ ಕಾಗದ ಬರೆಯುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ಪತ್ರ ವ್ಯವಹಾರ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜನವರಿ ಪ್ರಜೆಂಟೇಷನ್ ವಾಚ್.

ನಾವು ಇದೇ ಪತ್ರಿಕೆಯಲ್ಲಿ ಹಿಂದೆ ಪ್ರಕಟಿಸಿದ್ದ ಮೇರೆ ರೇಲ್ವೆ ರೆಗ್ಯುಲೇಟರ್ ವಾಚಿನ ಖರೀದಿ ಬಹಳ ಲಭವಾಗಿದ್ದೂ ವಾಚು ಅಂದವಾಗಿದ್ದೂ ಇದ್ದುದರಿಂದ ಹೆಚ್ಚಾಗಿ ಆರ್ಡರುಗಳು ಬಂದು ಇದ್ದ ಸ್ಟಾಕೆಲ್ಲಾ ಮುಗಿದುಹೋಯಿತು ಅನಂತರ ಬಂದ ಆರ್ಡರುಗಳಿಗೆ ರವಾನಿಸಲು ಸ್ಟಾಕು ಇಲ್ಲದ್ದರಿಂದಲೂ ಸೀಮೆಯಿಂದ ಬರುವುದು ತಾಮಸವಾದ್ದರಿಂದಲೂ ಮತ್ತು ಇದೇ ವಾಚುಗಳಿಗೆ ಇನ್ನೂ ಆರ್ಡರುಗಳು ಬರುತ್ತಲೇ ಇರುವದರಿಂದಲೂ ಮತ್ತೆ ತರಿಸುತ್ತೇವೆ ಮೊದಲಿನಂತೆ ಮುಗಿದುಹೋದ ನಂತರ ನಾಲು ಸಿಕ್ಕದೆ ಪೆಚ್ಚಾಗುವದಕ್ಕಿಂತಲೂ ಜಾಗ್ರತೆಯಾಗಿ ಆರ್ಡರು ಕೊಟ್ಟು ತರಿಸಿಕೊಳ್ಳುವದು ಉತ್ತಮ ಸೂಚನೆ—ನಮ್ಮ ಪದಾರ್ಥಗಳನ್ನು ನೀವೇ ಹೊಗಳಿಕೊಳ್ಳುವದು ಅತಿಶಯವಲ್ಲ ಒಂದು ಸಾರಿ ತರಿಸಿ ಪರೀಕ್ಷಿಸಿದಲ್ಲಿ ನಾವು ಕೊಡುವ ಬೆಲೆಗೆ ಎಲ್ಲಿಯೂ ಸಿಕ್ಕುವದಿಲ್ಲವೆಂಬ ಅಂಶವು ನಿಮಗೆ ಗೊತ್ತಾಗುತ್ತೆ ಆರ್ಡರು ಕೊಡತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು



ನಂ	ವಾಚುಗಳ ವಿವರ ವಾಚು 1ಕ್ಕೆ	ಕ್ರಯ	ನಂ	ವಾಚುಗಳ ವಿವರ ವಾಚು 1ಕ್ಕೆ	ಕ್ರಯ
1	ಅಮೇರಿಕನ್ ಲಿವರ್ ವಾಚು	3 12 0	6	24 ಗಂಟೆ ರಾತ್ರಿ ಕತ್ತಲೆಯಲ್ಲಿ ಅಲಾರಂ ಕಾಲು ಘಂಟೆ ಕಾಲ ಕೂಗಿ ಎಚ್ಚರ ಮಾಡುತ್ತೆ	6 0 0
2	ರೈಲ್ವೆ ರೆಗ್ಯುಲೇಟರ್ ವಾಚು (ಹಿಂದೆ ರೈಲ್ವೆ ಮಾರ್ಕು ಇರುತ್ತೆ)	3 4 0	6	ಸಾದಾ ಟೈಂಪೀಸು	1 4 0
3	ಅರ್ಜೆಂಟೈನ್ ವಾಚು	3 8 0	7	ರಹಿಂವಾರ್ ಘಡಿಯಾರದ ಸರಪಣಿಗಳು ಗೋಲ್ಡು ಗಿಲೀಟಿನದು	0 8 0
4	ಮೆ ಎನಮೆಲ್ ಜಡತಕ್ಕ (ಕ್ಯಾರೆಜ್ ಕ್ಲಾಕ್)	4 12			

ಮೇಲ್ಕಂಡ ಸಾಮಾನುಗಳಲ್ಲಿ ಒಂದೇ ಸಾರಿ ಮೂರು ವಾಚ್ ತರಿಸಿಕೊಂಡವರಿಗೆ ಪ್ಯಾಕಿಂಗ್ ಛಾರ್ಜು ಫ್ರೀ ೬ ವಾಚು ತರಿಸುವವರಿಗೆ ಪೋಸ್ಟೇಜು ಫ್ರೀ, ಒಂದು ಡಜನ್ ವಾಚು ತರಿಸಿಕೊಳ್ಳುವವರಿಗೆ 1 ವಾಚು ಇನಾಂ ವಿ ಪಿ ಯಿಂದಲೂ ರವಾನಿಸುತ್ತೇವೆ ಪೋಸ್ಟೇಜು ಅಲಾಯಿದಾ ಬೀಳುತ್ತೆ

ಹೊಸ ಸರಸಿನ ಲ್ಯಾಂಪು ಚಿಮಣಿ ಇಲ್ಲ ಹಾಕಿ ಉರಿಸತಕ್ಕದು ಅಮೇರಿಕನ್ ಕೆರೋಸಿನಾಯಿಲ್ ಮ್ಯಾಂಟಲ್ ಲ್ಯಾಂಪು—ಇದು ಮಿಣುಕದೆ ಬಹಳ ಶುಭ್ರವಾದ ಪ್ರಕಾಶ 100 ಮೇಣದ ಬತ್ತಿಗಳನ್ನು ಒಂದೇ ಸಾರಿ ಹತ್ತಿಸಿದರೆ ಉಂಟಾಗುವ ಪ್ರಕಾಶ ಇದೊಂದು ಲ್ಯಾಂಪಿನಿಂದಲೇ ಉಂಟಾಗುತ್ತೆ ಏನೇನೂ ಬಿಸಿಯಿಲ್ಲ ಅಪಾಯವಿಲ್ಲ ಲ್ಯಾಂಪು ತರಿಸಿ ಪರೀಕ್ಷಿಸಿದರೆ ವ್ಯಕ್ತವಾಗುತ್ತೆ ಹಚ್ಚುವ ವಿಧಾನ ಲ್ಯಾಂಪಿನ ಸಂಗಡಲೇ ಇರುತ್ತೆ ಕ್ರಯ ಫುಲ್ ಸೆಟ್ಟು 1ಕ್ಕೆ ರೂ 9 8 0 ಪೋಸ್ಟೇಜು ವಿ ಪಿ ಚಾರ್ಜು ಅಲಾಯಿದಾ ವಿ ಪಿ ಯಿಂದಲೂ ರವಾನಿಸುತ್ತೇವೆ [26-1]

ಸಮ್ಮ ವಿಳಾಸ ಎಂ ಎಸ್ ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚಂಟ್ಸ್, ಕೃಷ್ಣರಾಜಮೊಹಲ್ಲಾ ಮೈಸೂರು

ಕ್ಲಿಮೆಂಟರ ನ್ಯಾಚುರಲ್ ಬಾಂ ತೈಲವು

5 40

ತಲೆನೋವು ಪಾರ್ಶ್ವ ತಲೆನೋವು, ಕೀಲು ಗಂಟುನೋವು ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು ಬೆನ್ನುನೋವು, ಕೀಲುಗಳ ಸಂದುಗಳ ನೋವು ಚೇಳು ಕಡಿದ ನೋವು ಹಲ್ಲುನೋವು—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ನಿಲುಕದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಹರಿಕ ಮಾಡಿ ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿ ಯೂರೋಪಿನವರು ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದು ಸಾರಿ ತರಿಸಿ ಪರೀಕ್ಷಿಸಿದವರೆಲ್ಲಾ ಇದನ್ನು ಯಾವಾಗಲೂ ಹತ್ತಿರ ಇಟ್ಟುಕೊಂಡಿರುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹುಡುಕಿ ಅದರ ಹಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಅವರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ನ್ಯಾಯವಾದಿಗಳಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟ್ ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವ್ಯವಹಾರ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಜಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಪೀಟರ್ಸ್,

೩೩ ಪೇದನಾಯಕನ್ ಬೀದಿ, ವೇಪೇರಿ, ಮದರಾಸ್

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 17 52

ತಲೆನೋವು, ಗಂಟು ಉಬ್ಬುವದು, ವಾತ ಸಂಧಿವಾತ ಉಳುಕು, ಅಬಲು ಗಂಟು, ಗಂಟ್ಲುನೋವು ಅರ್ಧಾಂಗವಾಯು ಎದೆಶೀತ ಘಾಯ, ಕಜ್ಜಿ, ಇತ್ಯಾದಿ

ಇದರ ವಿಷಯವಾಗಿ ಸರ್ವಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦-೬-೦ ೧೨ ಡಬ್ಬಿಗಳಿಗೆ ೪ ೦-೦

ಆಸ್ಥಮಿಕ್ಯೂರ	೨ ೦ ೦
ಬೇಳುಕಡಿತದ ಮದ್ದು	೦ ೮ ೦
ಮಧ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದಿಜಗಳಿಗೆ	೦ ೮ ೦
ಜುಲಾಬು ವತ್ತಿ—ಜುಲಾಬಿಗೆ	೦ ೮ ೦
ನೇತ್ರಾಂಜನ—ಮಂದದೃಷ್ಟಿಗೆ	೦ ೪-೦
ಬಜ ಮುಲಾಮು—ಮಕ್ಕಳ ಬಜಗೆ	೦ ೩-೦
ಕೇಶವರ್ಧನ ತೈಲ—ತಲೆಯ ಮೆದುಳಿಗೆ	೧-೦ ೦
ಕಫನಾಶಕ ಚೂರ್ಣ—ಆಸ್ತಮಾ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

14 8

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(105 ಪುಟಗಳು, ಸೊಗಸಾದ ಒಟ್ಟೆ ಬೈಂಡು ಕ್ರಯ ಎಂಟು ಕಾಸು) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಇಂಗ್ಲೀಷ್ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಹಾಳು) ಪ್ರತಿಯೊಂದಕ್ಕೆ	0—0—6
(80 ಹಾಳು)	0—1—0
(160 ಹಾಳು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-8]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರು

ಜ್ವರಹರಿ 11 8

ಇದು ಸಾಧಾರಣ ಜ್ವರ ಚಳೀಜ್ವರ ಮರುಕೇಜ್ವರ ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಕ್ಕೇರಿಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ ೯ — ರೂ ರೂ ೨—೧೨ ೮, ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಜಿಂಕಾಪೋರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳಿಯುವದು, ಆಮಶಂಕೆಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯ ಔಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪಾಲಯ್ಯನವರು—ಜಿಂಕಾಪೋರ ಔಷಧವನ್ನು ನಾನೂ ನನ್ನ ಜವಾಬ್ದಾರಿಯೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇವಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಹ್ಯಾರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೧೦ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ, ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಪ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನಮಾಡುವದು, ಇವುಗಳ ಫೋಟೊಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಫೆಬ್ರವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರೆಯಿರಿ ವಿಳಾಸ —

ಮ್ಯಾನೇಜರ್ ವೃತ್ತಾಂತ ಪತ್ರಿಕೆ ಮೈಸೂರು

ಸನ್ ೧೮೭೬ ರಿಂದ ೧೯೦೬ ವರೆಗೆ

ಕಾಲದ ಪರೀಕ್ಷೆ

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6-5

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ವೈದ್ಯರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗಾ ಸ್ವಪ ಚಪಲ್ಲಿಲ್ಲಾ ಈಗ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು ನಾನಾ ತರದ ಕೆಮ್ಮಲು

ಸಕಲವಿಧ ಶೀತ್ಯಗಳು ಮಾಂಸಖಂಡಗಳ ಕ್ಷೀಣತೆ

ಆಹಾರದಲ್ಲಿ ಅರುಚಿ

ಇವಲ್ಲದೆ ತಂದಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಟೊಂಕದಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಎಳುವಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಚಳಲಿಕೆ, ಎದೆ ಹಲ್ಲುಸೆಸುವದು, ತಲೆನೋವು, ಗಾಬರಿ, ಕಣ್ಣು ಚಬ್ಬು, ತಲೆ ತಿರುಗುವಿಕೆ ಮೈನೋವು ಕೀಲುನೋವು, ಮರವು ನಿಶ್ಶಕ್ತಿ ಇವೇ ಮೊದಲಾದವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ ವಾಯು, ಮೈಬಾವು ಅರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವವು [6 24]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ ೨೦, ೩ ೬ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

44



ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು —ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವದು, ಊದಿಕೊಳ್ಳುವದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವದು, ವಿಶ್ರಾಂತಿ ಕೊಡದೆ ಇರುವುದು, ಸದ್ದಿ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸುಗಂಧಗಳು.

1-15

ಪ್ರಸಿದ್ಧವಾದ ಮೈಸೂರು ಅಗರ್ (ಊದ) ಬತ್ತಿ ೧ ಸೇರಿಗೆ ರೂ ೧೨, ೫, ೪, ೨ ೮ ೦ ೧ ೪ ೦ ಬತ್ತಿಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ಮಸಾಲೆ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ಅಪೂರ್ವ ಗ್ರಂಥವು!!.

21 2

ತುಳಸೀ ದಾಸ್ ಕಬೀರ ಮೊದಲಾದ ೫೧ ವೈಷ್ಣವ ಭಕ್ತರ ಚರಿತ್ರೆಯು ಭಾಮಿನಿ ಷಟ್ಪದಿ ಪದ್ಯರೂಪವಾಗಿ ಸುಲಭ ಶೈಲಿಯಲ್ಲಿ ಭಕ್ತಮಾಲಾ ಎಂಬ ನಿಧಾನದಿಂದ ಕನ್ನಡ ಭಾಷೆಯಲ್ಲಿ ಮುದ್ರಿತವಾಗಿದೆ ೧ ಪ್ರತಿಗೆ ೧೨ ಆಣೆ ಅಂಚೆ ವೆಚ್ಚ ಬೇರೆ

ವಿಳಾಸ —ಜೋಳಾರ್ ಬಾಬುರಾವ್, ಮಂಗಳೂರು

ಹೊಸ ಪುಸ್ತಕ! ಹೊಸ ಪುಸ್ತಕ!! ಹೊಸ ಪುಸ್ತಕ!!!

23-2

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತಾಡುವುದಕ್ಕೂ ಬೋಧಕರ ಸಹಾಯವಿಲ್ಲದೆ ತಾನಾಗಿ ಕಲಿಸುವ ಅತ್ಯುತ್ತಮ ಪುಸ್ತಕವಿದು

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಅಚ್ಚು ಮತ್ತು ಬರವಣಿಗೆಯ ಅಕ್ಷರಗಳನ್ನು ಗುರುತಿಸುವ ಉಪಾಯ, ಸ್ವರ ವ್ಯಂಜನಾಕ್ಷರ ಸಂಕೇತ, ಕಾಗುಣಿತ, ಅಕ್ಷರ ಸಂಯೋಜನಾಭ್ಯಾಸ, ಪ್ರಥಮಾಭ್ಯಾಸಯೋಗ್ಯ ಪಾಠಗಳ ಸಮುದಾಯ, ಪ್ರೌಢಪಾಠಗಳು, ವಿವಿಧವಾಕ್ಯ ಸಮುದಾಯ, ಲೇಖನ ಪ್ರತಿಲೇಖನ, ಆಚರಣೆಯಲ್ಲಿ ಅಪೂರ್ವವಾದ ಅತ್ಯಂತೋಪಯೋಗವುಳ್ಳ ಶಬ್ದಗಳು, ಕೋಷ್ಟಕ, ಗಾದೆ, ತಂತೀ ವರ್ತಮಾನ, ಸಾಂಕೇತಿಕ ಶಬ್ದಗಳು, ಇತ್ಯಾದಿಯಾದ ಅನೇಕ ಉಪಯುಕ್ತಾಂಶಗಳು ಸೇರಿವೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷ್ ಭಾಷೆಯ ಪ್ರತಿಶಬ್ದದ ಉಚ್ಚಾರಣೆಯನ್ನೂ ಕನ್ನಡ ಅಕ್ಷರಗಳಿಂದ ಬರೆದು ಅದರ ಅರ್ಥವನ್ನು ಕನ್ನಡಭಾಷೆಯಲ್ಲಿ ಬರೆದಿದೆ ಇಂಗ್ಲಿಷ್ ಭಾಷೆಯನ್ನು ಸ್ವಲ್ಪವೂ ತಿಳಿಯದ ಕನ್ನಡಿಗರು ಅದನ್ನು ಕಲಿಯುವುದಕ್ಕೆ ಈ ಪುಸ್ತಕವು ತಕ್ಕಷ್ಟು ಸಹಾಯವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ. (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಕಲಿತು ಬಗೆಬಗೆಯ ಲಾಭವನ್ನು ಸಂಪಾದಿಸಲಿಚ್ಛಿಸುವ ಯಾವ ತರದ ಜನರಿಗಾದರೂ ಈ ಪುಸ್ತಕವು ತುಂಬಾ ಉಪಯೋಗವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol. 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಮೊದಲನೆಯ ಮತ್ತು ಎರಡನೆಯ ಮುದ್ರಣದ ಪುಸ್ತಕಗಳು ಬಲು ಬೇಗ ಮುಗಿದುಹೋದವು ಮೂರನೆಯ ಮುದ್ರಣದ ಪುಸ್ತಕಗಳಲ್ಲಿ ಕೆಲವು ಮಾತ್ರ ಉಳಿದಿವೆ !!! ನಾಲ್ಕನೆಯ ಮುದ್ರಣಕ್ಕೆ ಅವಕಾಶವಾದೀತು ಬೇಗ ಬೇಗ ಬರೆದು ತರಿಸಿಕೊಳ್ಳುವುದು ಕಾಗದ ಉತ್ತಮ ಅಚ್ಚು ಅಂದ, ಅಟ್ಟೆ ಭದ್ರ ಅಂಚೆ ವೆಚ್ಚ ಸೇರಿ ಕ್ರಯ ಒಂದು ರೂಪಾಯಿ ಆರು ಆಣೆ ಮಾತ್ರ

ವಿಳಾಸ —ಭಾರತಿ ಸಂಪಂಗಿರಾಮು, ಪ್ರೋಪ್ರೈ— ಹೊಸಕೋಟೆ ಡಿಸ್ಟ್ರಿಕ್ಟ್ ಬೆಂಗಳೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

21 2



೧ ಲೋಕಾಮಯಹರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ ಹೊಟ್ಟೆನೋವು, ಸಂದುಗಳ ನೋವು ಮೈ ಕೈಕಾಲು ಕೊಡತ (ಬಾವು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿ ನಷ್ಟ, ಹಲ್ಲುನೋವು, ಕೆಮ್ಮಲು ನೆಗಡಿ ನಿಶ್ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಕುತುಕೂಲೆ, ಮಕ್ಕಳ ಎಳವು, ಜ್ವರ ಚಳ್ಳುಜ್ವರ, ಕೈಕತ್ತಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೬ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

5 4

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನ್ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರಣೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಕಾಗಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ , ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ , ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

THE MYSORE CITY MUNICIPALITY

ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಈ ಮ್ಯುನಿಸಿಪಾಲಿಟಿಯಲ್ಲಿ ಮೊಹತರ್ಫಾ ಕಂದಾಯವನ್ನು ಎರಡು ಕಿಸ್ತಿನಲ್ಲಿ ಸಮವಾಗಿ ಜೂಲೈ ಮತ್ತು ಜನವರಿ ತಿಂಗಳುಗಳಲ್ಲಿ ಅಡ್ವಾನ್ಸಾಗಿ ವಸೂಲ್ ಮಾಡಬೇಕೆಂದು ಇದೇ ೧೯೧೦ ನೇ ಇಸವಿ ಜನವರಿ ೨೦ ನೇ ಮುಕ್ಕಾಂ ೭೦೮೪ ಜೆ ಎಂ ಎಲ್ ೧೩೭ ೦೯ ೭ನೇ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸು ಅನುಸರಿಸಿ ಜಾರೀಲಿ ತರಲ್ಪಡುತ್ತೆಂಬ ಸಂಗತಿಯನ್ನು ಇದರಿಂದ ತಿಳಿಯಪಡಿಸಿದೆ

M G KRISHNASAMI RAO,

4 2—1910 *Vice President*

22-3

ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ

ಇತಃಪರ ಅಂದರೆ ೧೯೧೦ ನೇ ಇಸವಿ ಏಪ್ರಿಲ್ ೧ನೇ ತಾರೀಖಿನಿಂದ ಜಾರಿಗೆ ಬರುವ ಈ ಸಿಟಿಯಲ್ಲಿ ಎಲ್ಲಾ ಕಟ್ಟಡಗಳ ರೆಂಟಲ್ ವ್ಯಾಲ್ಯು ಮೇಲೆ ಸೇಕಡಾ ೩ ರೂಪಾಯಿನಂತೆ ಜನರಲ್ ವಾಟರ್ ಟ್ಯಾಕ್ಸು ದಾಖಲ್ಮಾಡಿ ವಸೂಲ್ಮಾಡಬೇಕೆಂತಲೂ ಜನರಲ್ ವಾಟರ್ ಟ್ಯಾಕ್ಸು ದಾಖಲಾಗುವ ತಾರೀಖು ಜಾರಿಯಾಗು ೧೯೦೪ ನೇ ಇಸವಿ ಜೂಲೈ ೭ನೇ ಮುಕ್ಕಾಂ ಗೌರ್ನಮೆಂಟ್ ಆರ್ಡರ್ ಮೇರೆಗೆ ದಾಖಲಾಗುತ್ತಾ ಇರುವ ವಾಟರ್ ಟ್ಯಾಕ್ಸು ವಜಾ ಆಗಿರುತ್ತೆಂತಲೂ ೧೯೧೦ ನೇ ಇಸವಿ ಜನವರಿ ೨೦ ನೇ ಮುಕ್ಕಾಂ ೬೦ ೪೩ ೯ ಎಂ ಎಲ್ ೧೩೭ ೦೯ ೪ನೇ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸು ತಲುಪಿ ಇರುತ್ತೆ ಇದರಂತೆ ಜಾರೀಲಿ ತರಲ್ಪಡುತ್ತೆಂಬ ಸಂಗತಿಯನ್ನು ಇದರಿಂದ ತಿಳಿಯಪಡಿಸಿದೆ

M G KRISHNASAMI RAO,

ತಾ 4 2 1910 *Vice-President*

ಪ್ರಸಿದ್ಧಿಯನ್ನು ಹೊಂದಿದ ಅಮೇರಿಕಾ ದೇಶದ ಫೋಲಾವ್ರ ಪ್ರೊಫೆಸರ್ ಜೇಮ್ಸ್‌ರವರ

ವಿದ್ಯುಚ್ಛಕ್ತಿಯ ಮಾತ್ರೆಗಳು

ಈ ಮಾತ್ರೆಗಳನ್ನು ಶಾಸ್ತ್ರೋಕ್ತ ರೀತಿಯಾಗಿ ಸ್ವಂ ಘಟಿಸಲ್ಲಿ ಕೆಲಸ ಮಾಡುವ ತೆ ವಿದ್ಯುಚ್ಛಕ್ತಿಯಿಂದ ತುಂಬಲ್ಪಟ್ಟಿರುವವು ಇದರಿಂದ ಮಾನವ ದೇಹದಲ್ಲಿ ವಿದ್ಯುಚ್ಛಕ್ತಿಯು ಪ್ರಬಲವಾಗಿ ಸಕಲ ರೋಗಗಳೂ ನಶಿಸುವಂತೆ ಆಗುವವು ಈ ವಿದ್ಯುಚ್ಛಕ್ತಿಯ ಮಾತ್ರೆಗಳು ಕೆಟ್ಟುಹೋದ ರಕ್ತವನ್ನು ಶುದ್ಧ ಮಾಡುವವು, ಹೊಸ ರಕ್ತವನ್ನುಂಟುಮಾಡುವವು ಕ್ಷಯದಿಂದ ದೇಹವನ್ನು ಪುಷ್ಟಿಯಾಗುವಂತೆ ಮಾಡುವವು ಬಲಹೀನತೆ, ಅಜೀರ್ಣವು, ಅರುಚಿ, ಆಹಾರವು ಅರಗದೆ ಇರುವುದೂ ಕಾಲುಗಳ ಸೆಳತ ತಲೆ ತಿರುಗುವದು ಕಣ್ಣುಗಳು ಕತ್ತಲೆ ಕಟ್ಟಿಕೊಳ್ಳುವುದು, ಮನೋವ್ಯಥೆ ಕೆಲಸ ಮಾಡುವವರಲ್ಲಿ ಎಂದೆ ತೋರದೇ ಇರುವದು, ನರಗಳಲ್ಲಿ ಶಕ್ತಿಯಿಲ್ಲದೇ ಇರುವದರಿಂದ ಶಿರೋವೇದನೆ, ಎದೆಯ ನೋವು ಮುಖದ ಕಾಂತಿ ತಗ್ಗುವದು ಚೈತನ್ಯ ಪಟುತ್ವ ಇಲ್ಲದೇ ಹೋಗುವದು, ಇವುಗಳನ್ನೆಲ್ಲಾ ಪರಿಹರಿಸಿ ಆರೋಗ್ಯವನ್ನುಂಟುಮಾಡುವದು ಸ್ತ್ರೀಯರು ಕಾಲಕ್ಕೆ ಸರಿಯಾಗಿ ಋತುಸ್ನಾನ ಆಗದಿರುವದರಿಂದ ಉಂಟಾಗತಕ್ಕ ದೌರ್ಬಲ್ಯ ಪ್ರಮೋಹ, ನಡುವಿನ ನೋವು, ಹಸಿವಿಲ್ಲದೇ ಹೋಗುವದು, ಇವೇ ಮೊದಲಾದವುಗಳಿಗೆ ಈ ಮಾತ್ರೆಗಳು ಸಿದ್ಧೌಷಧಗಳು ಇದಲ್ಲದೆ ಹಗಲೂ ರಾತ್ರೆ ಈ ಮಾತ್ರೆಗಳ ಸೇವನೆಯಿಂದ ಮನಶ್ಶಕ್ತಿಯು ವೃದ್ಧಿಯಾಗಿ ದೇಹದಾರ್ಢ್ಯ ಹೆಚ್ಚುವದು ಈ ಮಾತ್ರೆಗಳನ್ನು ಸೇವಿಸುವದಕ್ಕೆ ಉಪಕ್ರಮ ಮಾಡಿದ ಲಾಗಾಯ್ತು ಜೀರ್ಣಶಕ್ತಿ ಹೆಚ್ಚುವದು, ಹಸಿವಾಗುವದು ತಿಂದದ್ದು ಜೀರ್ಣಕ್ಕೆ ಬರುವದು, ಮುಖಕಾಂತಿ ಹೆಚ್ಚುವದು, ಬಲಪುಷ್ಟಿ ಉಂಟಾಗುವದು, ಎಷ್ಟು ಕೆಲಸ ಮಾಡಿದರೂ ಬೇಸರು ಉಂಟಾಗುವದಿಲ್ಲ ಬಿಡದೇ ಕೊಂಚಕಾಲ ಈ ಮಾತ್ರೆಗಳನ್ನು ಸೇವಿಸಿದರೆ ಜನರು ಆರೋಗ್ಯದೃಢಕಾಯರಾಗುವರು ಎಂಟು ವಾರಗಳಾದರೂ ಈ ಮಾತ್ರೆಗಳನ್ನು ಸೇವಿಸಬೇಕು

ಕ್ರಯ — ೩೫ ಮಾತ್ರೆಗಳಿಗೆ ರೂಪಾಯಿ ೧ ೪ ೦ ೮೦ ಮಾತ್ರೆಗಳಿಗೆ ೩ ರೂಪಾಯಿ ವಿ ಪಿ ಖರ್ಚು ೧ ಶೀಸೆ ಮೊದಲು ೩ ಶೀಸೆ ವರೆಗೂ ೫ ಆಣೆ

ಕೆಲವು ಪ್ರಶಂಸಾ ಪತ್ರಗ ಮುಖ್ಯ ಅಭಿಪ್ರಾಯಗಳು

ರಾಜಾ ವಿಜಯಚಂದಮಹತಾಬ್ ಮಹಾರಾಜ —ಇನ್ನೂ ಮೂರು ಡಬ್ಬಿ ವಿದ್ಯುಚ್ಛಕ್ತಿ ಮಾತ್ರೆಗಳನ್ನು ವಿ ಪಿ ಮೂಲಕ ಕಳುಹಿಸಿ ಕೊಡಬೇಕು

ರಾಜಶ್ರೀ ವಾಸ ...ಪದಿ ಕರ್ಣಂ ರಾಜಾಪುರಂ ತಾಲ್ಲೋಕು ರಾಜಾಪುರಂ —ಇದುವರೆಗೂ ತರಿಸಿಕೊಂಡ ವಿದ್ಯುಚ್ಛಕ್ತಿಯ ಮಾತ್ರೆಗಳು ತುಂಬಾ ಕೆಲಸ ಮಾಡಿವೆ ಕೂಡಲೆ ಇನ್ನು ನಾಲ್ಕು ಡಬ್ಬಿ ಮಾತ್ರೆಗಳನ್ನು ಕಳುಹಿಸಿ ಕೊಡಬೇಕು [2-9]

ಕೇಶವರ್ಧಿನೀ ಬಾಂ

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಔಷಧಿ ಬಾಂ ಮುಲಾಮು ಇದರಿಂದ ವಾತ, ಸಂಧಿವಾತ ಪಕ್ಷಘಾತ, ಉರಿ, ಶೀತ, ಕೆಮ್ಮು, ಎದೆನೋವು, ಸೊಂಟದ ನೋವು, ಬೆನ್ನು ನೋವು ಪಕ್ಷವಾತ ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಮುಗಳಿಂತಲೂ ಇದು ಉತ್ತಮ ಎಂಬುವದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ

ಬಾಟ್ಲಿ ೧ಕ್ಕೆ ೮ ಆಣೆ

ದಿಲ್‌ಬರ್ ಖುಷ್ಬೂ ಗುಲಬರ್

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟ ಅತೀ ಸುವಾಸಿತವಾದ ಅತ್ತರು ಇದರ ವಾಸನೆಯು ಶಾಂತಕರವಾಗಿಯೂ ಮನೋಹರವಾಗಿಯೂ ಇದೆ ಎಲ್ಲಾ ಅತ್ತರಕ್ಕಿಂತಲೂ ಇದೇ ಉತ್ತಮವಾದದ್ದು ಬಾಟ್ಲಿ ಒಂದಕ್ಕೆ ರೂ ೧—೮—೦

ಏಜಂಟರು —ದಿ ಉರ್ಲ್ ಮಾರ್ಟ್, ಮಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

28—1—1910 ರಿಂದ 4—2—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	2	0	0
ಮೈಸೂರು ,,	1	1	1	1
ಬೆಂಗಳೂರು ಡಿಸ್ಟ್ರಿಕ್ಟು	22	21	0	0
ಮೈಸೂರು ,,	31	20	54	53
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	1	0	0	0
ತುಂಕೂರು ಡಿಸ್ಟ್ರಿಕ್ಟು	8	4	0	1
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	4	1	0	0
ಶಿವಮೊಗ್ಗ ,,	4	4	0	0
ಜುಮ್ಲಾ	70	53	54	55

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಮಾಘ ಬಹುಳ ಪಾಡ್ಯಮಿ ಶುಕ್ರವಾರದಿಂದ ಮಾಘ ಬಹುಳ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಫೆಬ್ರವರಿ ಮತ್ತು ಮಾರ್ಚಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ಕುಂಭ ಮಾಸ
25	ಶುಕ್ರ ,,	ಪಾಡ್ಯಮಿ	5 48	ಪು	12 56	14
26	ಶನಿವಾ ,,	ಬಿದಿಗೆ	9 36	ಉ	18 2	15
27	ರವಿವಾ †	ತದಿಗೆ	14 18	ಹ	12-4	16
28	ಚಂದ್ರ §	ಚೌತಿ	20 16	ಚಿ	30-28	17
1	ಕುಜ ‡	ಪಂಚಮಿ	25 22	ಸ್ವಾ	36 52	18
2	ಬುಧ	ಷಷ್ಠಿ	29 16	ವಿ	42 41	19
3	ಗುರು	ಸಪ್ತಮಿ	34 21	ಅ	48 40	20

,, ವ್ಯತೀಪಾತಯೋಗ

ಉತ್ಪಾತಯೋಗ, ಕರೀಘಟ್ಟದಲ್ಲಿ ಶ್ರೀನಿವಾಸಸ್ವಾಮಿ ರಥ

† ತಡಿಧೀಶತಿಥಿ, ಸಂಕಷ್ಟಚತುರ್ಥಿ, ಮಾರಿಸಾರು ಕುಕ್ಕನಹಳ್ಳಿ ಜಾತ್ರೆ

§ ಮಹಾವ್ಯತಿಪಾತ, ಶೂನ್ಯತಿಥಿ

‡ ವಜ್ರಯೋಗ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ ರೂ	೧೩ ೮ ೦	೧೩ ೮ ೦
ಕೆಂಬೂತಿ ಅಕ್ಕಿ ಅವಲ್	೧೩ ೮ ೦	೧೫ ೮ ೦
,, ದುಯಂ	೧೩ ೦-೦	೧೪ ೦ ೦
ಜಾವ್ರಾಣಿ ಅಕ್ಕಿ	೧೩ ೪ ೦	೧೩-೮ ೦
ಸಣ್ಣಕ್ಕಿ ಅವಲ್	೧೪ ೮ ೦	೧೬ ೦ ೦
,, ದುಯಂ	೧೪ ೦ ೦	೧೪-೦ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩ ೮ ೦	೧೩ ೦ ೦
ದುಯಂ	೧೩ ೦ ೦	೧೧ ೦ ೦
ಹೈಕ್ ರಾಗಿ ಪಲ್ಲಾ ೧ಕ್ಕೆ	೮-೦-೦	೭ ೦ ೦
ಕಾರಾಗಿ	೭-೧೩ ೦	೬ ೧೩ ೦
ಜೋಳ	೭ ೮ ೦	೯-೦ ೦
ಹಲಸಂದೆ ಪಲ್ಲಾ ೧ಕ್ಕೆ	೧೧ ೦-೦	೧೦ ೦ ೦
ಬೇಳೆ ಅವರೆ	೧೧ ೦-೦	೧೦ ೦ ೦
ಹೆಸರು	೧೧-೦ ೦	೯ ೮ ೦
ಉದ್ದು	೧೪ ೦ ೦	೧೦-೦ ೦
ಕಡಲೆ	೧೩ ೮-೦	೯ ೮ ೦
ಎಳ್ಳು ಸೇ ೧೨೭ ಕ್ಕೆ	೧೭ ೦-೦	೧೫ ೦ ೦
ಹುರುಳಿ	೮ ೮-೦	೮ ೦ ೦
ಹರಳು ೧೨೭ ಸೇರಿಗೆ	೧೪ ೦ ೦	೧೩-೦ ೦
ಸೀಗೇಕಾಯಿ ಮಣ ೧ಕ್ಕೆ	೩ ೯-೦	೧ ೧೩ ೦
ಮೆಣಸಿನಕಾಯಿ	೪ ೧೩ ೦	೩ ೪ ೦
,, ದುಯಂ	೪ ೮ ೦	೩-೦ ೦
ಬೆಲ್ಲ ದೊಡ್ಡ ಅಚ್ಚು	೫ ೮-೦	ಮು ೩ ೦ ೦
ಒಳ್ಳೆಣ್ಣೆ ಮಣ ೧ಕ್ಕೆ	೫-೦-೦	೪ ೮ ೦
ಹರಳೆಣ್ಣೆ ,,	೫ ೮ ೦	೪ ೬ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೧೦-೮-೦	೧೦ ೦ ೦
ಉಪ್ಪು ,,	೬ ೦ ೦	೫ ೮-೦
ಹುಣಸೇ ಹಣ್ಣು	೩ ೦-೦	೧ ೮ ೦
,, ಹಳೇದು	೧ ೧೩-೦	೧ ೮ ೦
ತುಪ್ಪ ಮಣ ೧ಕ್ಕೆ	೧೬ ೮-೦	೧೪-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೪-೦	೪-೪-೦
ತೆಂಗಿನಕಾಯಿ ೧೦೦ ಕ್ಕೆ	೫ ೦ ೦	೬-೦ ೦
ಆಲೇಕಾಯಿ ಮಣ ೧ಕ್ಕೆ	೦-೧೩-೦	೦ ೧೩-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೧೩-೦	೦ ೧೩ ೦
ಚಿನ್ನ (ಪೌನ್) ಕೆಂಪು	೧೫ ೯-೦	೧೫-೪ ೦
,, ,, ಪಸಿಮೆ	೧೬-೦ ೦	೧೫ ೮-೦
,, ,, ಗಟ್ಟಿ ತೊಲ ೧ಕ್ಕೆ	೩೪ ೮ ೦	೩೪-೬-೦
ಬೆಳ್ಳಿಗಟ್ಟಿ ತೊಲ ೧೦೦ ಕ್ಕೆ	೬೭-೪-೦	೬೫ ೮-೦

ತಾಲ್ಲೂಕು ವರ್ತಮಾನಗಳು

ಅರಕಲಗೂಡು —ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿ ಸುಬ್ಬರಾಯ ಸ್ವಾಮಿಯನ್ನು ಕಳ್ಳರು ಕದ್ದುಕೊಂಡು ಹೋಗಿದ್ದರಷ್ಟೆ ಪಾರುಪತ್ತೆಗಾರರನ್ನು ಅಮಲ್ದಾರ್ ಮ|| ರಾಜಗೋಪಾಲಚಾರ್ಯರವರು ಮತ್ತು ಶೇಕ್‌ದಾರ್ರು ಪೋಲೀಸಿನವರ ಸಹಾಯದಿಂದ ಬಹಳ ಶ್ರಮಪಟ್ಟು ಹೊಳೆಯಲ್ಲಿ ಬಚ್ಚಿಟ್ಟಿದ್ದ ಚಿನ್ನವನ್ನೂ ಅದರ ಮೇಲಿದ್ದ ಕೆಂಪುಗಳನ್ನೂ ಕಳಚಿಕೊಂಡಿದ್ದಂಥ ಬರೀ ಬೆಳ್ಳಿಯ ವಿಗ್ರಹವನ್ನು ಪತ್ತೆ ಮಾಡಿದರೆಂಬ ವರ್ತಮಾನವು ಜನರಲ್ಲೆಲ್ಲಾ ಹಬ್ಬಿಕೊಂಡಿದೆ —ಪೇಟೆಗೂ ಕೋಟೆಗೂ ಮಧ್ಯೆ ಒಂದು ದೊಡ್ಡ ಕೆರೆ ಉಂಟು ಜನಗಳು ಈ ಕೆರೆಯ ನೀರನ್ನೇ ಕುಡಿಯಲಿಕ್ಕೆ ಉಪಯೋಗಿಸುತ್ತಾರೆ ಇಂಥಾ ನೀರು ನಿರ್ಮಲವಾಗಿರಬೇಕಾದದ್ದು ಆರೋಗ್ಯಕ್ಕೆ ಅನುಕೂಲವಾದದ್ದಾಗಿದೆ ಈಗ ಸರ್ಕಾರದವರು ಕೋಟೆಯ ಕಡೆ ಒಂದು ಭಾಗದಲ್ಲಿ ಮಾತ್ರ ಒಬ್ಬ ಜವಾನನನ್ನು ನೇಮಿಸಿ ಕೆರೆಯ ನೀರು ನಿರ್ಮಲವಾಗಿರುವಂತೆ ನೋಡಿಕೊಳ್ಳುವಂತೆ ಮಾಡಿದಾರೆ ಪೇಟೆಯ ಕಡೆಗೂ ಹೀಗೇ ಒಬ್ಬ ಜವಾನನನ್ನು ನೇಮಿಸಿ ಜನರು ನೀರನ್ನು ಗಲೀಜುಮಾಡದ ಹಾಗೆ ನೋಡಿಕೊಳ್ಳಲು ಏರ್ಪಾಡಿಸಿದರೆ ತುಂಬಾ ಸಹಾಯಕಾರಿಯು ಇದು ಮಾತ್ರವಲ್ಲದೆ ಕೆರೆಯ ಎರಡು ಕಡೆಗಳಲ್ಲಿಯೂ ಎರಡು ಬೋರ್ಡುಗಳನ್ನು ಹಾಕಿಸಿ ಅದರ ಮೂಲಕ ಜನರಿಗೆ ಎಚ್ಚರಿಕೆ ಕೊಡಿಸಿದರೆ ಬಹಳ ಪ್ರಯೋಜನ ಉಂಟಾಗುತ್ತೆ ಸದರಿ ಕೆರೆಯ ಕುಭಯಪಾರ್ಶ್ವಗಳಲ್ಲಿ ಕಟಕಟೆಗಳನ್ನು ಕಟ್ಟಿಸುವುದರಿಂದ ಏರಿಯ ಮೇಲೆ ಸಂಚರಿಸುವಂಥಾ ಜನರಿಗೂ ಗಾಡಿಗಳಿಗೂ ಯಾವ ಅಪಾಯವೂ ಸಂಭವಿಸಲಾರದು ಮೇಲ್ಕಂಡ ಈ ವಿಷಯಗಳನ್ನು ನಮ್ಮ ಅಮಲ್ದಾರರು ಗಮನಕ್ಕೆ ತಂದುಕೊಂಡು ಜನರಿಗೆ ಸಹಾಯ ಮಾಡುತ್ತಾರೆಂದು ನಿರೀಕ್ಷಿಸುತ್ತೇನೆ ಈ ತಾಲ್ಲೂಕಿಗೆ ಸೇರಿದ ಅಲ್ಲಿಯ ವ್ಯಾಪ್ತಿ ಗ್ರಾಮದಲ್ಲಿ ಕಳುವಾಗಿದ್ದ ಕೆಲವು ದನಗಳು ಕೆಲವು ದಿನಗಳ ಕೆಳಗೆ ಹೊಳೆನರಸೀಪುರದ ತಾಲ್ಲೂಕಿನ ಕಳ್ಳಿಕೊಪ್ಪಲ್ಲಿಯಲ್ಲಿ ಅರಕಲಗೂಡು ತಾಲ್ಲೂಕು ಪೋಲೀಸ್ ಜಮಾದಾರ ಮೂಲಕ ಪತ್ತೆ ಆಗಿದೆ ಎಂದು ವರ್ತಮಾನ ಕೇಳುತ್ತೇನೆ

ಅಪ್ಪೂರು —ಇಲ್ಲಿನ ಆರೋಗ್ಯಸ್ಥಿತಿಯು ತಕ್ಕಮಟ್ಟಿಗೂ ಚೆನ್ನಾಗಿದೆ ಜನಗಳ ವ್ಯಾಪಾರ ಗಳು ಇಳಿಯುತ್ತಾ ಬಂದಿವೆ ಇಲ್ಲಿ ಪಿಲ ಸ ವ್ಯಾಪಾರವಾಗುವದರಿಂದ ಬೇರೆ ಬೇರೆ ಕಡೆಗಳ ವರ್ತಕರು ಸೇರುತ್ತಾ ಟಿವರ್ ತುಂಬಾ ಎಷ್ಟಾದರೂ ಬರುವೆ ಇನ್ನೂ ಅಭಿವೃದ್ಧಿಯಾಗುತ್ತದೆ ಎನ್ನುವದಕ್ಕೆ ಸಂದೇಹವಿಲ್ಲ ಈಗ ಸ್ಕೋಟನ ವರಗೂ ಮಳೆಗಳು ರಂಭವಾಗಿದೆ ಮುಂದಕ್ಕೆ ರೈಲ್ವೆ ರಸ್ತೆಯು ಎರಡು ಕಡೆಗೂ ಮಳೆಗಳು ಆಗಬಹುದು ಕಳೆದ ವರುಷ ... ಇಲ್ಲಿನ ... ಬಾವಿಗಳನ್ನು ತೋಡಿಸಿ ಜನಗಳಿಗೆ ತುಂಬಾ ಉಪಕಾರ ಮಾಡಿದರು ಸರ್ಕಾರದವರು ತಾಲ್ಲೂಕ್ ಕಚೇರಿಯ ಹತ್ತಿರ ತೆಗಿಸಿದ ಬಾವಿಯನ್ನು ಕಟ್ಟಿ ಎರಡರಿಂದ ಮುಚ್ಚಿಸಿದೆಯಾಯಿತು ಇಲ್ಲಿನ ವರ್ತಕರಿಂದ ಪ್ರಜೆಗಳ ಗಾಡಿ ... ಸುಮ್ಮನೆ ತಪ್ಪಿತೆಂದು ಸಂತೋಷಪಡುತ್ತಿದೆ ಅದರ ಪೇಟೆ ಆಫೀಸ್ ಪಕ್ಕದ ಮತ್ತು ಆಸ್ಪತ್ರೆ ಪಕ್ಕದ ಜನಗಳಿಗೆ ಈಗಲೂ ತುಂಬಾ ತೊಂದರೆಯುಂಟು ಈ ವಿಷಯವನ್ನು ಸರ್ಕಾರದವರು ಯೋಚಿಸಬೇಕಾಗಿದೆ ಮುಖ್ಯವಾಗಿ ಇಲ್ಲಿನ ಮ|| ದಸ್ತಗಿರಿ ಸಾಹೇಬರವರು ಸುಮಾರು ೩೦೦ ರೂಪಾಯಿ ಬಿಡುಗಡೆ ಮಾಡಿ ತೋಡಿಸಿದ ಬಾವಿಯನ್ನು ಅವರು ಧರ್ಮಕ್ಕಾಗಿ ಕೊಟ್ಟು ಬಾವಿಯ ಕಲ್ಲಿನ ಎಂದು ಕರೆ ಧರ್ಮದ ಸೂಚನೆಯನ್ನು ಕೆತ್ತಿಸಿದಾರೆ ಈ ಬಾವಿಯು ಬಹಳ ಆಳವಾಗಿದೆ ಮತ್ತು ಯಾವಾಗಲೂ ಮೂರು ಆಳುದ್ದ ನೀರು ಇರುತ್ತದೆ ಇವರ ಉದಾರ ಗುಣವನ್ನು ನೋಡಿದವರೆಲ್ಲರೂ ಅವರನ್ನು ಕೊಂಡಾಡುವರು ಕಳೆದ ವರುಷ ಅಲಿಗಡದಲ್ಲಿ ಹಿಂದುಸ್ಥಾನ ಸ್ಕೂಲಿನ ... ಪರೀಕ್ಷೆಗೆ ಹೋಗಿದ್ದವರಲ್ಲಿ ಪ್ರಥಮರಾದ ಇವರಿಗೆ ಮೌಲ್ವಿ ... ದಸ್ತಗಿರಿ ಸಾಹೆಬರು ಮ|| ಹಜರತ್ ಬಾಗ್ ಸಾಹೇಬರು ಸೇರಿ ೧ ರೂಪಾಯಿ ಬಹುಮಾನವನ್ನು ಕೊಟ್ಟಿರು ಈ ವರುಷವೂ ಇಲ್ಲಿನ (ಅಪ್ಪೂರು) ಉರ್ದು ಸ್ಕೂಲಿನಲ್ಲಿ ... ಪರೀಕ್ಷೆಯಲ್ಲಿ ಪ್ಯಾಸಾದವರಿಗೆ ತಲಾ ೨ ರೂಪಾಯಿನಂತೆ ಕೊಡುತ್ತೇನೆಂದು ಈ ಮಹನೀಯರು ವಾಗ್ದಾನ ಮಾಡಿರುವರೆ ಇದರಿಂದ ವಿದ್ಯಾರ್ಥಿಗಳಿಗೆ ತುಂಬಾ ಪ್ರೋತ್ಸಾಹವಾಗಿದೆ ಎಂದು ನನಗೆ ತೋರಿಸುತ್ತಿದೆ

ಚನ್ನರಾಯಪಟ್ಟಣ — ಈ ಮಾಹೆ ೧೭ ನೇ ತಾ ಬುಧವಾರ ನಮ್ಮ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವದ ದಿವಸವಾದ್ದರಿಂದ ನಮ್ಮ ಅಮಲ್ದಾರ್ ಮ|| ಶ್ರೀನಿವಾಸರಾಯರು ತಾಲ್ಲೋಕು ನೌಕರಮಾಲೀಕರುಗಳನ್ನೂ ಚಿಕ್ಕ ವರ್ತಕರನ್ನೂ ಮುಸಲ್ಮಾನರಲ್ಲಿ ಗಣ್ಯರಾದ ದೊಡ್ಡ ಮನುಷ್ಯರನ್ನೂ ಸ್ಕೂಲುಗಳ ಬಾಲಕ ಬಾಲಕಿಯರನ್ನೂ ಆಹ್ವಾನಿಸಿ ಸ್ಕೂಲು ಹೆಡ್ ಮಾಸ್ಟರು ಸಹಾಯೋಪಾಧ್ಯಾಯರ ಸಹಿತವಾಗಿ ಈ ಊರಿನಲ್ಲಿರುವ ದೊಡ್ಡ ಬಂಗಲೆಗೆ ಬರಮಾಡಿಕೊಂಡು ಸ್ಕೂಲ್ ಬಾಲಕರಿಗೆ ಆಟ, ಪಂದ್ಯ ವಗೈರೆಯನ್ನು ಕಲ್ಪಿಸಿ ಗೆದ್ದ ಹುಡುಗರಿಗೆ ಬಹುಮಾನವನ್ನು ಕೊಟ್ಟದ್ದಲ್ಲದೆ ಗ್ರಾಮಸ್ಥರನ್ನೂ, ನೌಕರಸ್ಥರನ್ನೂ ಬಂಗಲೆಯೊಳಕ್ಕೆ ಬರಮಾಡಿಕೊಂಡು ಎತ್ತರವಾದ ಸ್ಥಳದಲ್ಲಿ ನಮ್ಮ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ ಸಿ ಯಸ್ ಐ ರವರ ದಿವ್ಯ ಸಮ್ಮೋಹನ ಛಾಯಾಚಿತ್ರವನ್ನು ಪುಷ್ಪಾದಿಗಳಿಂದ ಅಲಂಕರಿಸಿ ಜನಗಳಿಗೆ ಬಹು ಆನಂದವಾಗುವಂತೆ ಮಾಡಿದ್ದರು ಸರ್ವರೂ ಆ ಛಾಯಾಚಿತ್ರದ ಬಳಿಯಲ್ಲಿ ನಿಂತು ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನೂ ಮತ್ತು ಎಡ್ವರ್ಡ್ ಸಾರ್ವಭೌಮರ ಶ್ರೇಯ ಪ್ರಾರ್ಥನೆಯನ್ನೂ ಮಾಡಿದರು ಮಿಷನ್ ಗರ್ಲ್ಸ್ ಸ್ಕೂಲು ಬಾಲಕೀಯರು ಅವರ ಶ್ರೇಯಃಪ್ರಾರ್ಥನೆಯ ಮತ್ತು ಪದ್ಯಗಳನ್ನು ಮನೋಹರವಾಗಿ ಹಾಡಿದ ನಂತರ ಬಾಲಕ ಬಾಲಕಿಯರಿಗೆ ಮಿಠಾಯಿ ವಗೈರೆ ಹಂಚಿ ಕೊಟ್ಟರು ಆ ಸಭೆಯಲ್ಲಿ ಸೇರಿದ್ದ ಜನಗಳಿಗೆಲ್ಲಾ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸರ್ವರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು ನಮ್ಮ ಅಮಲ್ದಾರರವರು ಹೆಡ್ ಮಾಸ್ಟರವರು, ತಾಲ್ಲೋಕು ಶಿರಸ್ತೆದಾರರು ಮುಂತಾಗಿ ಸರ್ವರು ದೇವಸ್ಥಾನಗಳಿಗೆ ಹೋಗಿ ಅಲ್ಲಿ ದೇವತೆಗಳಿಗೂ ಅರ್ಚನೆ ಮಂಗಳಾರತಿ ಮೊದಲಾದವನ್ನೆಲ್ಲ ಮಾಡಿಸಿ, ಒಳಕಪೇಟೆಯಲ್ಲಿರುವ ಮಸೀದಿಗಳಿಗೆ ಹೋಗಿ ಅಲ್ಲಿ ಆ ಜನರು ರಾಜಭಕ್ತಿ ವಿಶ್ವಾಸದಿಂದ ಅಡ್ರೆಸ್ ಒಪ್ಪಿಸಿದ್ದನ್ನೂ, ಸದರಿ ಮಸೀದಿಯನ್ನು, ಪುಷ್ಪ, ತೋರಣ ದೀಪೋತ್ಸವಗಳಿಂದ ಅಲಂಕರಿಸಿದ್ದನ್ನೂ ನೋಡಿ ಅವರು ತೋರಿಸಿದ ರಾಜಭಕ್ತಿ ವಿಶ್ವಾಸಗಳಿಗೆ ತುಂಬಾ ಸಂತೋಷಪಟ್ಟು ಸರ್ವರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು

ಸಂಗೀತ ಪಾರಿಜಾತ ಕ್ರಯ ೪ ಅಣೆ

——— 20 3

ಮನೋಹರವಾದ ಹಾಡಿನ ಪುಸ್ತಕ! ೧೦ ಪ್ರತಿಗಳನ್ನು ಒಟ್ಟಾಗಿ ತರಿಸುವವರಿಗೆ ೧॥ ಅಣೆ ಕ್ರಯದ ನಿರುಪಮಾ ಎಂಬ ಹೊಸನಾಟಕವನ್ನೂ, ೬ ಪ್ರತಿಗಳನ್ನು ತರಿಸು ವವರಿಗೆ ಕಬೀರ ದಾಸನ ಚರಿತ್ರೆಯನ್ನೂ, ೪ ಪ್ರತಿಗಳನ್ನು ತರಿಸುವರಿಗೆ ಪ್ರಕೃತಿ ಶ್ವರರಕ್ಷಣಾಲಿಕೆ ಎಂಬ ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ—ದಿ ಮರ್ಕಂಟೈಲ್ ಯೂನಿಯನ್, ಮೈಸೂರು

ವೃತ್ತಾಂತ ಪತ್ರಿಕೆ.

೧೯೧೦ ನೇ ಇಸವಿ ಫೆಬ್ರವರಿ ತಾ ೨೪ ನೇ ಗುರುವಾರ

ಮೈಸೂರು ಸೀಮೆಯ ಆರೋಗ್ಯಭಾಗ್ಯವು

೧೯೦೯ ನೇ ಇಸವಿ ಡಿಸೆಂಬರಿಗೆ ಮುಕ್ತಾಯವಾದ ಹನ್ನೆರಡು ತಿಂಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಆರೋಗ್ಯವಿಚಾರವು ಯಾವಸ್ಥಿತಿಯಲ್ಲಿತ್ತೆಂಬುವುದನ್ನು ಸ್ಯಾನಿಟರಿ ಕಮಿಷನರವರು ಬರೆದು ೧೯೦೯ ನೇ ಅಕ್ಟೋಬರ್ ತಾ ೪ ರಲ್ಲಿ ಗವರ್ನಮೆಂಟಿಗೆ ಒಪ್ಪಿಸಿದರು ಇದನ್ನು ಗವರ್ನಮೆಂಟಿನವರು ಪರಾಂಬರಿಸಿ ೧೯೧೦ ನೇ ಜನವರಿ ತಾ ೨೪ ರಲ್ಲಿ ಅದರ ಮೇಲೆ ತಮ್ಮ ಅಭಿಪ್ರಾಯವನ್ನು ಬರೆದಿರುತ್ತಾರೆ ಆದಕಾರಣ ಈ ಹುಕುಮನ್ನು ಕುರಿತು ನಾವು ಪ್ರಸ್ತಾಪ ಮಾಡುವುದನ್ನು ನೋಡಿ ವಾಚಕರು ಪೂರ್ವ ಚರಿತ್ರೆಯನ್ನು ವಿವರಿಸುವೆವೆಂದು ಎಣಿಸುವುದು ಸಹಜವಾಗಿರುತ್ತದೆ ಒಂದು ವರುಷದ ಸ್ಥಿತಿಗತಿಯನ್ನೂ ಕಾರುಬಾರುಗಳನ್ನೂ ಕ್ರೋಢೀಕರಿಸಿ ನಾಲ್ಕಾರು ದಿನಗಳಲ್ಲಿಯೇ ಗೋಷ್ವಾರೆಯನ್ನು ಬರೆದಿರುವುದು ಕಷ್ಟವೆಂದು ನಾವು ಬಲ್ಲೆವು ಆದರೆ ಇಂಥಾ ಗೋಷ್ವಾರೆಯನ್ನು ಬರೆಯುವುದಕ್ಕೆ ಒಂಬತ್ತು ತಿಂಗಳು ಹಿಡಿಯುವುದೂ, ಅದನ್ನು ಓದಿ ಅದರ ಮೇಲೆ ಗವರ್ನಮೆಂಟಿನವರು ತಮ್ಮ ಅಭಿಪ್ರಾಯವನ್ನು ಬರೆಯುವುದಕ್ಕೆ ಸುಮಾರು ನಾಲ್ಕು ತಿಂಗಳು ಬೇಕೆಂದೂ ಹೇಳಿದರೆ ಇಂಥಾ ನಡವಳಿಕೆಯು ನಿರ್ವಾಹವಾದದ್ದೆಂದು ನಮಗೆ ತೋರುತ್ತದೆ ಸರ್ಕಾರದ ಕಾರ್ಯಗಳು ಈ ರೀತಿ ತಾಮಸವಾಗೋಣದರಿಂದ ಕೋಚನೀಯವಾದ ಪರಿಣಾಮಕ್ಕೆ ಆಕರವಾಗುವುದು

ಈ ರಿಪೋರ್ಟಿನಲ್ಲಿ ಕಂಡುಬರುವ ಪ್ರಕಾರ ಜನನ ಮರಣಗಳ ಲೆಕ್ಕಗಳನ್ನು ನಂಬಿಕೊಂಡು ಅವುಗಳ ಮೇಲೆ ಅಭಿಪ್ರಾಯಗಳನ್ನು ಹೇಳುವುದೂ ಕಾರ್ಯಗಳನ್ನು ನಡಿಸುವುದೂ ಯೋಗ್ಯವಾಗಿದ್ದೀತೇ ಎಂದು ನಮಗೆ ಸಂಶಯವುಂಟಾಗಿದೆ ಈ ಲೆಕ್ಕಗಳು ಈ ಸಂಸ್ಥಾನದ ಪ್ರಜೆಗಳಲ್ಲಿ ಪ್ರತಿ ಸಾವಿರಕ್ಕೂ ಜನನವು ೧೯ ಎಂದೂ, ಮರಣವು ೧೬ ಎಂದೂ ತಿಳಿಸುವವು ಈ ಭಾಗವನ್ನು ಚೆನ್ನಾಗಿ ಆಜಮಾಯಿಷಿ ಮಾಡಿ ನೋಡತಕ್ಕವನಿಗೆ ಈ ಲೆಕ್ಕಗಳು ಎಷ್ಟುಮಾತ್ರಕ್ಕೂ ಪ್ರಾಮಾಣಿಕಾ ಅಲ್ಲವೆಂದು ಪರಿಷ್ಕಾರವಾಗಿ ಗೊತ್ತಾಗುತ್ತದೆ ಈ ಲೆಕ್ಕಗಳು ಸರಿಯಾಗಿವೆ ಎಂದು ಹೇಳುವ ಪಕ್ಷಕ್ಕೆ ಮೈಸೂರು ಸೀಮೆಯು ಮಹಾ ಆರೋಗ್ಯಕರವಾದ ಪ್ರದೇಶವೆಂದಹಾಗಾಗುವುದು ಆದರೆ ಈ ಸಂಸ್ಥಾನದಲ್ಲಿ ಆಗುವ ಮರಣಸಂಖ್ಯೆಯು ಮೇಲ್ಕಂಡ ರಿಪೋರ್ಟಿನಲ್ಲಿ ಬರೆದಿರುವುದಕ್ಕಿಂತ ತುಂಬಾ ಹೆಚ್ಚಾಗಿದೆ ಎಂಬುವುದನ್ನು ನಾವು ಬಲ್ಲೆವು ಆದಕಾರಣ ಸಂಸ್ಥಾನದಲ್ಲಿ ಜನನಮರಣದ ರೆಜಿಸ್ಟರುಗಳನ್ನು ಇನ್ನೂ ಬಹಳ ಮುತುವರ್ಜಿಯಿಂದಲೂ ಕ್ರಮವಾಗಿಯೂ ಇಡುವುದಕ್ಕೆ ಏರ್ಪಾಡುಮಾಡದಲ್ಲದೆ ಫಲಿತಾಂಶ ಹೀಗೇ ಸರಿಯೆಂದು ಹೇಳಲಾಗದು ಅನೇಕ ಮರಣಗಳು ಸರ್ಕಾರಿ ಲೆಕ್ಕಕ್ಕೆ ದಾಖಲಾಗುವುದೇ ಇಲ್ಲ ಪ್ರತಿ ಒಂದು ಜನನವನ್ನೂ ಮರಣವನ್ನೂ ಪ್ರಜೆಗಳು ಸರ್ಕಾರಕ್ಕೆ ಖಂಡಿತವಾಗಿ ತಿಳಿಸಬೇಕೆಂದು ಬಲಾತ್ಕಾರ ಮಾಡುವುದು ಇನ್ನೂ ಸಾಧ್ಯವೋ ಅಲ್ಲವೋ ನಮಗೆ ತಿಳಿಯದು ಮತ್ತು ಇಂಥಾ ಬಲಾತ್ಕಾರಪೂರ್ವಕವಾದ ಕಾನೂನನ್ನು ಒಂದು ವೇಳೆ ಸರ್ಕಾರದವರು ಪ್ಯಾಸ್ ಮಾಡಿದಾಗ್ಯೂ ಅದನ್ನು ಸಾರ್ಥಕವಾಗುವಂತೆ ಜಾರಿಮಾಡುವುದು ಸಾಧ್ಯವೇ ಎಂಬದಾಗಿ ನಾವು ಶಂಕೆಪಡುತ್ತೇವೆ

ಈಚೆಗೆ ಗವರ್ನಮೆಂಟಿನವರು ಇನ್ನೊಂದು ಹುಕುಂ ಕೊಟ್ಟಿರುತ್ತಾರೆ ಮೊದಲು ಸಂಸ್ಥಾನವನ್ನು ಮೂರು ಡಿವಿಜನುಗಳಾಗಿ ವಿಭಾಗ ಮಾಡಿ ಪ್ರತಿ ಒಂದು ಡಿವಿಜನ್ನಿಗೂ ಒಬ್ಬೊಬ್ಬ ಸ್ಯಾನಿಟರಿ ಆಫೀಸರನ್ನು ನೇಮಕ ಮಾಡಿದ್ದರು ಈಗ ಹೊರಟಿರುವ ಹುಕುಮು ಈ ಮೂರು ಡಿವಿಜನ್ ಆಫೀಸರುಗಳನ್ನೂ ವಜಾ ಮಾಡಿ, ಪ್ರತಿ ಡಿಸ್ಟ್ರಿಕ್ಟಿಗೂ ಒಬ್ಬ ಸ್ಯಾನಿಟರಿ ಆಫೀಸರು ಇರಬೇಕೆಂದೂ, ಈ ಅಧಿಕಾರಿಯ ಸಂಬಳವನ್ನು ಜಾಸ್ತಿ ಮಾಡಿವೆ ಎಂತಲೂ ತಿಳಿಸುತ್ತದೆ ರೆವಿನ್ಯೂ ಅಧಿಕಾರಿಗಳ ಸಹಾಯವೂ ಆರೋಗ್ಯ ವಿಚಾರಗಳಿಗೆ ಖರ್ಚು ಮಾಡುವುದಕ್ಕೆ ದ್ರವ್ಯಾನುಕೂಲವೂ ಇಲ್ಲದೆ ಹೋದರೆ ಈ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರು ಏನುತಾನೆ ಮಾಡಬಲ್ಲರು ? ಸಂಸ್ಥಾನಾಮಳೆ ಆರೋಗ್ಯವಿಚಾರವಾದ ಕೆಲಸಕಾರ್ಯಗಳಿಗೆ ಗವರ್ನಮೆಂಟಿನವರು ೧೯೦೮ ನೇ ವರುಷದಲ್ಲಿ ಒಟ್ಟು ೩ ೪೧,೪೧೮ ರೂಪಾಯಿ ಖರ್ಚು ಮಾಡಿರುತ್ತೇವೆಂದು ಹೇಳಿರುವರು ಆದರೆ ಯಾವಯಾವ ಕೆಲಸಗಳು ಮಾಡಿಸಲ್ಪಟ್ಟವೋ ಅವುಗಳೊಂದೂ ಈ ಸರ್ಕಾರಿ ಹುಕುಮಿನಲ್ಲಿ ನಮಗೆ ಕಾಣಬರುವುದಿಲ್ಲ

ಸ್ಯಾನಿಟರಿ ಇಲಾಖೆಯಿಂದಲೂ ನೌಕರಮಾರ್ಗದಿಂದಲೂ ಪ್ರಯೋಜನವಾಗುವುದಕ್ಕೆ ಮುಂಚೆ ಪ್ರಜೆಗಳು ಸಾಮಾನ್ಯವಾದ ಆರೋಗ್ಯಸೂತ್ರಗಳನ್ನು ತಿಳಿಯಬೇಕಾಗಿರುತ್ತದೆ ಇಂಥಾ ತಿಳುವಳಿಕೆಯನ್ನು ಜನರಲ್ಲಿ ಉಂಟುಮಾಡುವ ಭಾಗದಲ್ಲಿ ತುಂಬಾ ಸಾಹಸ ಬೇಕು ಹಳ್ಳಿಗಾಡುಗಳಲ್ಲಿರುವಂಥಾ ಮೂಢ ಜನರಿಗೆ ಜ್ವರ, ವಾಂತಿಭೇದಿ, ಪ್ಲೇಗ್ ಮೊದಲಾದ ರೋಗಗಳು ಯಾಕೆ ಬರುವವೋ ಕಾರಣವನ್ನು ತಿಳಿಯರು ನೀರಿನಿಂದಲೂ, ಹೆಗ್ಗಣಗಳ ಮೂಲಕವೂ, ಸೊಳ್ಳೆಗಳಿಂದಲೂ ಈ ರೋಗಗಳು ಉತ್ಪತ್ತಿಯಾಗುವವೆಂದೂ, ಇವುಗಳ ವಿಷಯದಲ್ಲಿ ತಕ್ಕ ಹಾಗೆ ಎಚ್ಚರಿಕೆಯಿಂದಿದ್ದರೆ ಅವು ನಿವಾರಣೆಯಾಗುವವೆಂದೂ ಗ್ರಾಮಾಂತರದವರೂ ಕೂಡ ಪರಿಷ್ಕಾರವಾಗಿ ತಿಳಿದುಕೊಂಡ ಹೊರತು ಸ್ಯಾನಿಟರಿ ಇಲಾಖೆಯವರು ಇಂಥಾ ಕಾಮಗಾರಿಗಳನ್ನು ಮಾಡಿಸಬೇಕೆಂದು ಹೇಳುವುದು ನಿಷ್ಪ್ರಯೋಜಕವಾಗಿರುತ್ತದೆ ಆರೋಗ್ಯ ವಿಚಾರವಾದ ಕೆಲಸಗಳನ್ನು ನಡಿಸುವುದು ತಮ್ಮ ಕ್ಷೇಮಾಭ್ಯುದಯಕ್ಕಾಗಿಯೇ ಎಂಬುದನ್ನು ಪ್ರಜೆಗಳು ತಿಳಿಯುವಂತೆ ಮಾಡಬೇಕಾದದ್ದು ಪರಮಾವಶ್ಯಕ ಆದಕಾರಣ ಈ ವಿಚಾರವಾಗಿ ಜನರಲ್ಲಿ ಪ್ರೀತಿಯನ್ನೂ ಅಭಿಲಾಷೆಯನ್ನೂ ಹುಟ್ಟಿಸುವುದಕ್ಕೆ ಸಾಹಸ ಪಡಬೇಕಾಗಿದೆ ಇಂಥಾ ಕೆಲಸಕ್ಕೆ ಗ್ರಾಮ ಪಾಠಶಾಲೆಯೇ ಮೂಲಸ್ಥಾನವೆಂದು ನಮಗೆ ತೋರುತ್ತದೆ ಮಠದ ಉಪಾಧ್ಯಾಯನೂ, ಸ್ಯಾನಿಟರಿ ಆಫೀಸರೂ, ಗ್ರಾಮಾಧಿಕಾರಿಗಳೂ ಏಕೀಭವಿಸಿ ಪ್ರಜೆಗಳಿಗೆ ಆರೋಗ್ಯವಿಚಾರಗಳನ್ನು ಸ್ವಲ್ಪ ಸ್ವಲ್ಪವಾಗಿ ತಿಳಿಸುತ್ತಾ ಜ್ವರ, ವಾಂತಿಭೇದಿ, ಸಿಡುಬು, ಪ್ಲೇಗ್ ಮೊದಲಾದ ರೋಗಗಳಿಗೆ ತುತ್ತಾಗದಂತೆ ವಿವೇಕವನ್ನು ಕಲಿಸಿಕೊಡುತ್ತಾ ಬಂದಪಕ್ಷದಲ್ಲಿ ಮೈಸೂರು ಸಂಸ್ಥಾನವು ವಿಶೇಷ ಆರೋಗ್ಯಜನಕವಾದ ಸೀಮೆಯಾಗುವುದಕ್ಕೂ ಪ್ರಜೆಗಳು ದೀರ್ಘಾಯುಗಳಾಗುವುದಕ್ಕೂ ಅನುಮಾನವಿಲ್ಲ ಆದಕಾರಣ ಗವರ್ನಮೆಂಟಿನವರು ಪ್ರಜೆಗಳಿಗೆ ಆರೋಗ್ಯಸೂತ್ರಗಳನ್ನು ಪರಿಷ್ಕಾರವಾಗಿ ತಿಳಿಸುವುದಕ್ಕೆ ಇನ್ನೂ ವಿಶೇಷವಾಗಿ ಸಾಹಸಪಟ್ಟಾರೆಂದು ನಿರೀಕ್ಷಿಸುತ್ತೇವೆ

ನಾನೂರು ಭಾಷೆಗಳಲ್ಲಿ ಪ್ರಚುರವಾಗಿರುವ ಗ್ರಂಥವು

ಲೋಕದಲ್ಲಿ ಭಾಷಾಭೇದಗಳು ಸುಮಾರು ಎಷ್ಟಿರುವವು? ಇಷ್ಟೇ ಭಾಷೆಗಳು ವರ್ತಿಸುತ್ತಿವೆಯೆಂದು ನಿಷ್ಕೈಸುವದು ಸುಲಭಸಾಧ್ಯವಲ್ಲ ಆದರೂ ಲೋಕದೊಳಗೆಲ್ಲಾ ಸುಮಾರು ಇನ್ನೂರು ಐವತ್ತು ಭಾಷೆಗಳೇ ಮುಖ್ಯವಾದವುಗಳು ಆಯಾ ಜನಾಂಗಗಳವರಲ್ಲಿ ಜ್ಞಾನಿಗಳೂ ಪಂಡಿತೋತ್ತಮರೂ ಹುಟ್ಟಿ ತಮ್ಮ ತಮ್ಮ ಜನಾಂಗದವರಿಗೆ ಬೇಕಾದ ಗ್ರಂಥಗಳನ್ನು ಬರದು ಪ್ರಕಟಿಸಿರುವರು ಮಸಲಾ ಕನ್ನಡ ಜನಗಳಲ್ಲಿ ಅಥವಾ ತೆಲುಗು ಜನಗಳಲ್ಲಿ ಅನೇಕ ವಿದ್ಯಾವಂತರು ಹುಟ್ಟಿ ತಮ್ಮ ಬುದ್ಧಿಗೆ ಅನುಗುಣವಾದ ವಿಷಯಗಳನ್ನು ಚೆನ್ನಾಗಿ ಪರೀಕ್ಷಿಸಿ ಆಯಾವಿಷಯಗಳಲ್ಲಿ ಇತರ ಜನಗಳಿಗೆ ತಿಳುವಳಿಕೆಯನ್ನು ಕೊಡುವ ಗ್ರಂಥಗಳನ್ನು ಬರೆದಿದ್ದಾರೆ ವಿದ್ಯವಾಣಿಜ್ಯ, ರಸಾಯನ, ಸಂಗೀತ ತರ್ಕ, ವ್ಯಾಕರಣ, ವನೌಷಧಿ ಮುಂತಾದ ವಿಷಯಗಳಲ್ಲಿ ಕೆಲಕೆಲವು ಗ್ರಂಥಗಳು ಸಂಪದ್ರಾಯದವುಗಳಲ್ಲಿಯೂ ಉಂಟು ಇದಲ್ಲದೆ ಕೆಲವು ಸಂದರ್ಭಗಳಲ್ಲಿ ಬೇರೆ ಭಾಷೆಗಳಲ್ಲಿ ಪ್ರಸಿದ್ಧವಾಗಿರುವ ಗ್ರಂಥಗಳನ್ನು ಬುದ್ಧಿವಂತರು ಓದಿ ಇಂತಹ ಉತ್ತಮ ತರದ ಪುಸ್ತಕವು ಸ್ವಭಾಷೆಯಲ್ಲಿಲ್ಲದೇ ಇರುವದು ಅನೇಕರಿಗೆ ಕಣ್ಣು ಕಟ್ಟಿದಂತಿದೆ ಇದನ್ನು ಸ್ವಭಾಷೆಗೆ ತರ್ಜುಮೆ ಮಾಡಿದರೆ ಅನೇಕರು ಈ ಗ್ರಂಥವನ್ನು ಓದಿ ತಿಳುವಳಿಕೆಯನ್ನು ಹೊಂದಿ ಸಂತೋಷಪಡುವದಕ್ಕೆ ಅವಕಾಶವಾಗುವುದೆಂದು ಭಾಷಾಂತರಮಾಡಿದ್ದಾರೆ ರಾಮಾಯಣ ಭಾರತ ಇತ್ಯಾದಿ ಗ್ರಂಥಗಳು ಸಾಮಾನ್ಯ ಜನಗಳಿಗೆ ಅಸಾಧ್ಯವಾದ ಸಂಸ್ಕೃತದಲ್ಲಿದ್ದವು ಅವುಗಳನ್ನು ಬೇರೆ ಬೇರೆ ವಿದ್ವಾಂಸರು ಕನ್ನಡ, ತೆಲುಗು ತಮಿಳು ಮುಂತಾದ ಭಾಷೆಗಳಲ್ಲಿ ರಚಿಸಲೆತ್ನಿಸಿದ್ದು ಸಂಸ್ಕೃತವನ್ನು ತಿಳಿಯದವರಿಗೆ ಪ್ರಯೋಜನಕಾರಿಯಾಯಿತು. ಆದರೆ ಒಂದು ಭಾಷೆಯಲ್ಲಿರುವ ಗ್ರಂಥಗಳನ್ನು ಇನ್ನೊಂದು ಭಾಷೆಗೆ ಎತ್ತಿ ಬರೆಯುವುದು ಅಪರೂಪ ಯಾಕಂದರೆ ಒಂದೊಂದು ಭಾಷೆಯಲ್ಲಿಯೂ ಆ ಭಾಷೆಯನ್ನಾಡುವ ಜನಗಳಿಗೆ ತಕ್ಕ ಗ್ರಂಥಗಳು ದೊರಕೇ ದೊರಕುವವು

ಹೀಗಿರುವಲ್ಲಿ ಯಾವುದಾದರೂ ಒಂದು ಗ್ರಂಥವು ಲೋಕದ ಸಕಲ ಭಾಷೆಗಳಲ್ಲಿಯೂ ಪ್ರಚಾರವಾಗಬೇಕಾದರೆ ಅದಕ್ಕೆ ತಕ್ಕ ಕಾರಣಗಳಿರಬೇಕು ಅನ್ಯಭಾಷೆಯಲ್ಲಿರುವ ಪುಸ್ತಕವನ್ನು ಸ್ವಭಾಷೆಯಲ್ಲಿ ಬರೆಸಿ ಅದನ್ನು ಸಾವಿರಗಟ್ಟಲೆ ಪ್ರತಿಗಳಾಗಿ ಅಚ್ಚುಹಾಕಿಸುವದು ಸುಲಭವಲ್ಲವಷ್ಟೆ ಇಂಥಾ ಕೆಲಸಕ್ಕೆ ಬಹಳ ವಿದ್ಯವೂ, ಶ್ರಮವೂ, ಖರ್ಚು, ಕಾಲವಿಳಂಬವೂ ಬೇಕಾಗಿದ ಯಾರಾದರೂ ಇಷ್ಟೊಂದು ಶ್ರಮಸಾಧ್ಯವಾದಂಥಾ ಕೆಲಸವನ್ನು ನಡಿಸಿದರೆ ಅದೇನೋ ಒಂದು ಉದ್ದೇಶಕ್ಕಾಗಿ ಮಾಡುವರಾದೆಂತ ನಾವು ಭಾವಿಸುವವು ಆ ಪ್ರತಿಗಳನ್ನು ಖರ್ಚು ಮಾಡಿ ಅದರಿಂದ ತಾನು ವ್ಯಯಮಾಡಿದ್ದಕ್ಕಿಂತ ಹೆಚ್ಚು ಲಾಭ ಸಂಪಾದನ ಮಾಡಬೇಕೆಂದು ಒಬ್ಬ ವರ್ತಕನು ಇಂಥಾ ಕೆಲಸಕ್ಕೆ ಕೈಹಾಕಬಹುದು ಆದೂ ಯಾವದಾದರೂ ಒಂದು ಅಥವಾ ಎರಡು ಭಾಷೆಗಳಲ್ಲಿ ಛಾಪಿಸುವದು ಅವನಿಗೆ ಸಾಧ್ಯವಾಗುವದೇ ವಿನಹ ಹತ್ತು ಹನ್ನೆರಡು ಅದವಾ ಇಪ್ಪತ್ತು ಭಾಷೆಗಳಲ್ಲಿ ಛಾಪಿಸುವದು ಅಸಾಧ್ಯವಾದ ಮಾತು ಹಾಗಾದರೆ ನಾನೂರು ಭಾಷೆಗಳಲ್ಲಿ ಪ್ರಚುರವಾಗಿರುವ ಆ ಗ್ರಂಥವ್ಯಾವದು? ಇಷ್ಟೊಂದು ಭಾಷೆಗಳಲ್ಲಿ ಅದನ್ನು ಪ್ರಚುರಪಡಿಸಿದವರ್ಯಾರು? ಯಾವ ಉದ್ದೇಶದಿಂದ ಇಷ್ಟು ಶ್ರಮಸಾಧ್ಯವಾದ ಕೆಲಸವನ್ನು ಅವರು ನಡಿಸುತ್ತಿದ್ದಾರೆ?

ಬ್ರಿಟಿಷ್ ಫಾರಿನ್ ಬೈಬಲ್ ಸೊಸೈಟಿಯೆಂಬ ಒಂದು ದೊಡ್ಡ ಸಮಾಜವು ಇಂಗ್ಲಾಂಡ್ ಸೀಮೆಯಲ್ಲಿ ಬಹು ಪ್ರಬಲವಾದ ಸ್ಥಿತಿಯಲ್ಲಿದೆ ಇದಕ್ಕೆ ಅನೇಕ ದೊರೆಗಳೂ ಪ್ರಭುಗಳೂ ಮುಂದಾಳುಗಳಾಗಿದ್ದಾರೆ ಅಲ್ಲದೆ ಸಾಧಾರಣ ಜನಗಳೂ ಬಹಳ ದ್ರವ್ಯವನ್ನು ಇದರಲ್ಲಿ ಹಾಕಿದ್ದಾರೆ ಈ ಸಮಾಜದ ಶಾಖೆಗಳು ಈ ಭೂಮಂಡಲದ ಸಕಲ ಖಂಡ, ದೇಶ, ದ್ವೀಪಗಳಲ್ಲಿಯೂ ವಿಸ್ತಾರವಾಗಿ ವ್ಯಾಪಿಸಿವೆ ಇವರು ಸಂಗ್ರಹಿಸುವ ಹಣವು ಲಕ್ಷಾಂತರ ರೂಪಾಯಿಗಳಾಗುತ್ತವೆ ಇವರು ಇಂಗ್ಲೆಂಡು ದೇಶದಲ್ಲಿರುವ ತಮ್ಮ ಸಂಘದ ಶಾಖೆಯವರಿಂದ ಆಯಾ ದೇಶದ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿರುವ ವಿದ್ವಾಂಸರನ್ನು ಗೊತ್ತುಮಾಡಿ ಅವರ ಮುಖಾಂತರ ಒಂದೇ ಒಂದು ಪುಸ್ತಕವನ್ನು ಆಯಾ ದೇಶಗಳಲ್ಲಿ ಆಯಾ ಜನಾಂಗಗಳ ಮಾತೃಭಾಷೆಗಳಲ್ಲಿ ಬರಸಿ, ಛಾಪಿಸಿ ಆ ಗ್ರಂಥದ ಪ್ರತಿಗಳನ್ನು ಅತಿ ಸುಲಭವಾದ ಕ್ರಯಕ್ಕೆ ಆ ದೇಶದ ಜನಗಳಿಗೆ ಮಾರುತ್ತಾರೆ ಅದರ ಕ್ರಯ ಬರೇ ನಾಮಮಾತ್ರವಾದದ್ದು ಈ ಗ್ರಂಥವನ್ನು ಛಾಪಿಸುವದಕ್ಕೆ ತಗಲುವಷ್ಟು ಖರ್ಚು ಹಾಕಿ ಛಾಪಿಸಿದ ಒಂದು ಪುಸ್ತಕವನ್ನು ನಾವು ಅಂಗಡಿಯಲ್ಲಿ ಕೊಂಡುಕೊಳ್ಳಬೇಕಾದರೆ ಮೇಲೆ ಹೇಳಿದ ಆ ಗ್ರಂಥಕ್ಕೆ ತಗಲುವ ವೆಚ್ಚಕ್ಕಿಂತಲೂ ಕಡಮೆಯಾಗಿರಲಿಕ್ಕಿಲ್ಲ ಇಂಥಾ ಸಮಾಜದ ಶಾಖೆಗಳು ಲೋಕದ ಸಕಲ ದಿಕ್ಕುಗಳಲ್ಲಿಯೂ ಹರಡಿಕೊಂಡು ಒಂದೇ ಗ್ರಂಥವನ್ನೇ ಸಕಲ ಭಾಷೆಗಳಲ್ಲಿ ಪ್ರಚಾರಪಡಿಸುತ್ತ ಬಂದಿರುವದರಿಂದ ಇದೊಂದೇ ಗ್ರಂಥವನ್ನೇ ಸಕಲ ಭಾಷೆಗಳಲ್ಲಿಯೂ ಪ್ರಚಾರಪಡಿಸುತ್ತ ಬಂದಿರುವದರಿಂದ ಇದೊಂದೇ ಗ್ರಂಥವು ಈಗ ಲೋಕದಲ್ಲಿರುವ ಸಕಲ ಮುಖ್ಯವಾದ ಭಾಷೆಗಳಲ್ಲಿ ಅಂದರೆ ಸುಮಾರು ನಾನೂರು ಭಾಷೆಗಳಲ್ಲಿ ಪ್ರಕಟವಾಗಿದೆ ಈ ಸಮಾಜದ ಒಂದು ಶಾಖೆಯು ನಮ್ಮ ಮೈಸೂರು ಸೀಮೆಯಲ್ಲಿಯೂ ಸ್ಥಾಪನೆಯಾಗಿ ಪಂಚದ್ರಾವಿಡ ಭಾಷೆಗಳಾದ ಕನ್ನಡ, ತಮಿಳು, ತೆಲುಗು, ತುಳು ಮಳಯಾಳ ಭಾಷೆಗಳಲ್ಲಿ ಈ ಗ್ರಂಥವನ್ನೆ ಅನೇಕ ಸಾವಿರ ಪ್ರತಿಗಳಾಗಿ ಅಚ್ಚುಹಾಕಿಸಿ ದೇಶದಲ್ಲೆಲ್ಲಾ ನಾನಾ ಪ್ರಯತ್ನಗಳಿಂದ ಹರಡುತ್ತಿದ್ದಾರೆ

ಇಂತಹ ಗ್ರಂಥವು ಯಾವದೆಂದು ವಾಚಕರು ಅಗತ್ಯ ಊಹಿಸಿರಬಹುದು ಇದೇ ಬೈಬಲೆಂಬ ಸತ್ಯವೇದ

ಈ ಸಮಾಜದವರು ಇಷ್ಟು ಶ್ರಮಸಾಧ್ಯವಾದ ಕೆಲಸವನ್ನು ವಿಶೇಷವಾದ ದ್ರವ್ಯರಾಶಿಗಳನ್ನು ಖರ್ಚುಮಾಡಿ ಯಾಕೆ ಸಾಧಿಸುತ್ತಾರೆ? ಅವರ ಉದ್ದೇಶವೇನು? ಇವರೆಲ್ಲರೂ ಯೇಸು ಕ್ರಿಸ್ತನ ಶಿಷ್ಯರು ಸತ್ಯವೇದದಲ್ಲಿ ಯೇಸು ಕ್ರಿಸ್ತನ ಚರಿತ್ರೆಯೂ ಆತನು ಮಾಡಿದ ಉಪದೇಶವೂ ಬರೆಯಲ್ಪಟ್ಟಿದೆ ಅದರಲ್ಲಿ ಯೇಸು ಕ್ರಿಸ್ತನು ದೇವರ ನಿತ್ಯಕುಮಾರನಾಗಿದ್ದು ನಿಜ ದೇವರನ್ನು ತಿಳಿಯದೆ ಆತನನ್ನು ತ್ಯಜಿಸಿ ಅಂಧಕಾರದಲ್ಲಿಯೂ ಪಾಪದಲ್ಲಿಯೂ ಬಿದ್ದು ಕೆಟ್ಟುಹೋಗಿರುವ ನರಮನುಷ್ಯರನ್ನು ಕರುಣಿಸಿ ಈ ಲೋಕದಲ್ಲಿ ಅವತಾರವೆತ್ತಿ ದೇವರನ್ನು ಅವರಿಗೆ ಪ್ರಕಟಮಾಡಿದ್ದಲ್ಲದೆ ಪಾಪಪರಿಹಾರವನ್ನೂ ರಕ್ಷಣೆಯನ್ನೂ ಆತನು ಕೊಡುತ್ತಾನೆಂದು ಬರೆದಿದೆ ಈ ಸಮಾಜದವರು ಈ ಮಾತುಗಳನ್ನು ನಂಬಿ ಸತ್ಯವೇದವನ್ನು ಓದಿ ತಾವು ಕಳಕೊಂಡಿದ್ದ ದೇವರ ಪ್ರೀತಿಯನ್ನೂ ದಯೆಯನ್ನೂ ಪರಲೋಕ ಭಾಗ್ಯವನ್ನೂ ಪುನಃ ಯೇಸು ಸ್ವಾಮಿಯ ಮುಖಾಂತರ ಸಂಪಾದಿಸಿಕೊಂಡಿದ್ದಾರೆ ಅವರಿಗೆ ದೊರಕಿರುವಂಥ ಈ ಆಸ್ತಿಯು ಬೆಳ್ಳಿ ಬಂಗಾರಕ್ಕಿಂತಲೂ ತಮ್ಮ ಜೀವಕ್ಕಿಂತಲೂ ಪರಮೋತ್ತಮವಾದದ್ದು ಅದನ್ನು ಅವರು ಅನುಭವಿಸುತ್ತ ಬಾಕಿ ಜನಗಳು ಇದಕ್ಕೆ ಬಾಹಿರರಾಗಿರುವದನ್ನು ನೋಡಿ ಅವರೂ ಸಹ ಈ ನಿಧಿಗೆ ಬಾಧ್ಯರಾಗಿ ದೇವರ ಪರಮಾನಂದವನ್ನು ಹೊಂದಬೇಕೆಂಬ ಒಂದೇ ಉದ್ದೇಶದಿಂದ ಈ ಪುಸ್ತಕವನ್ನು ಅವರು ಎಲ್ಲರಿಗೂ ದೇವರು ದಾನವಾಗಿ ಕೊಟ್ಟ ಆತನ ಪ್ರಕಟನೆಯನ್ನು ಲೋಕಕ್ಕೆ ಹಂಚುತ್ತಿದ್ದಾರೆ

ವಾಚಕರೇ, ಈ ಗ್ರಂಥವು ಎಂದಾದರೂ ನಿಮ್ಮ ದೃಷ್ಟಿಗೆ ಗೋಚರವಾಗಿದೆಯೋ? ಈ ಸುವಾರ್ತೆಯನ್ನು ನೀವು ಕೇಳಿಲ್ಲವೋ? ಇದನ್ನು ನಿರ್ಲಕ್ಷ್ಯವಾಗಿ ಎಣಿಸಬೇಡಿರಿ ಯಾಕಂದರೆ ಇಷ್ಟು ದೊಡ್ಡ ರಕ್ಷಣೆಯನ್ನು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳುವದು ಹ್ಯಾಗೆ?

ಒಳದೇಶದ ವೃತ್ತಾಂತಗಳು

ಕಳೆದ ನವೆಂಬರ್ ತಿಂಗಳಲ್ಲಿ ಶ್ರೀರಂಗಪಟ್ಟಣದ ತಾಲ್ಲೂಕು ಕಿರಂಗೂರಿನ ಒಬ್ಬ ಹೆಂಗಸನ್ನು ಇಬ್ಬರು ಕೊಲೆಮಾಡಿದ್ದರಷ್ಟೆ

ಮೊದಲನೇ ಅಪರಾಧಿಗೆ ಮರಣದಂಡನೆಯೂ, ಎರಡನೆಯವನಿಗೆ ಮರಣಾಂತ ಸಜವೂ ವಿಧಿಸಲ್ಪಟ್ಟಿದೆ

ಮೈಸೂರು ಡಿಸ್ಟ್ರಿಕ್ಟಿನ ವ್ಯವಸಾಯ ಸಂಘದ ವಾರ್ಷಿಕ ಮೀಟಿಂಗು ನಾಳೆ ಭಾನುವಾರ ಮಧ್ಯಾಹ್ನ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಜರುಗುವುದಾಗಿದೆ

ಕಳೆದ ವಾರ ಕೋಲಾರ್ ಚಿನ್ನದ ಗಣಿಗಳ ಸ್ಯಾಂಪ್ ಛಾಂಪಿಯನ್ ರೀಫ್ ಎಂಬ ಗಣಿಯೊಳಗೆ ಎರಡು ಅನಾಹುತಗಳು ಸಂಭವಿಸಿ ಇಬ್ಬರು ಕೂಲಿಯವರು ಮೃತಪಟ್ಟರು

ಮೊನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯಲ್ಲಿ ಕೆಲವು ಹನಿ ಮಳೆ ಸುರಿಯಿತು ಈಗೀಗ ಸಾಯಂಕಾಲದ ಹೊತ್ತಿನಲ್ಲಿ ಮೋಡವಾಗುವುದನ್ನೂ ಗುಡುಗುವುದನ್ನೂ ತಂಗಾಳಿ ಬೀಸುವುದನ್ನೂ ನೋಡಿದರೆ ಬೇಗನೆ ದೊಡ್ಡ ಮಳೆಗಳು ಬರಬಹುದೆಂದು ಕಾಣುತ್ತದೆ

ನಂಜನಗೂಡಿನಲ್ಲಿ ಈ ವರುಷ ನಡೆಯುವ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ರಥೋತ್ಸವ ಕಾಲದಲ್ಲಿ (ಅಂದರೆ ೧೯೦೦ ನೇ ಮಾರ್ಚಿ ೨೩, ೨೪ ಮತ್ತು ೨೫ ನೇ ತಾರೀಖುಗಳಲ್ಲಿ) ದನಗಳ ಪ್ರದರ್ಶನವು ನಡೆಯುತ್ತದೆ ಉತ್ತಮವಾದ ದನಗಳಿಗೆ ಬಹುಮಾನಗಳು ದೊರೆಯುವುವು

ಕಳೆದ ರಥಸಪ್ತಮಿಯ ದಿನ ರಾಜಧಾನಿಯಿಂದ ಶ್ರೀರಂಗಪಟ್ಟಣಕ್ಕೆ ಹೋಗಿ ವಾಪಸು ಬರುತ್ತಿದ್ದ ಕೆಲವು ಯಾತ್ರಾರ್ಥಿಗಳನ್ನು ಸಾಯಂಕಾಲ ೫ ಗಂಟೆಯ ಹೊತ್ತಿನಲ್ಲಿ ಕಲಸ್ತವಾಡಿಯ ಬಳಿ ಕೆಲವು ದುಷ್ಟರು ತಡೆದು ತೊಂದರೆಪಡಿಸಿದರೆಂದು ಕೇಳುತ್ತೇವೆ ಇಂಥಾ ಕೃತ್ಯಗಳು ನಡೆಯದಂತೆ ಸರ್ಕಾರದವರು ತಕ್ಕ ಏರ್ಪಾಡು ಮಾಡಬೇಕಾಗಿದೆ

ಮೈಸೂರು ಪಟ್ಟಣದಲ್ಲಿ ಅಂಗಡಿಯವರು ಇಟ್ಟುಕೊಂಡಿರುವ ಅಳತೆ ಸೇರುಗಳಲ್ಲಿ ಬಹು ಕಡಮೆ ಇರುವುದನ್ನು ಪತ್ತೆ ಮಾಡಿ ಶಿಕ್ಷಿಸಬೇಕೆಂದು ಸರ್ಕಾರದಿಂದ ಮುನಿಸಿಪಾಲಿಟಿಗೆ ಹುಕುಂ ಆಗಿದೆ ಅಧಿಕಾರಿ ವರ್ತಕರು ಮೋಸಕರವಾದ ನಡತೆಯನ್ನು ಬಿಟ್ಟು, ಕಷ್ಟನಷ್ಟಗಳಿಗೆ ಗುರಿಯಾಗದಂತೆ ಎಚ್ಚರಿಕೆಯಾಗಿರುವುದು ನ್ಯಾಯವೂ ಧರ್ಮವೂ ಆಗಿದೆ ಎಂದು ಸೂಚಿಸುತ್ತೇವೆ

ಚಾಮರಾಜನಗರದ ದೊಡ್ಡ ಅರಸಿನವರಕಟ್ಟೆ ಹನುಮಂತರಾಯನ ಗುಡಿಯ ದಕ್ಷಿಣ ಪಾರ್ಶ್ವದಲ್ಲಿರುವ ಸುಬ್ರಾಯಭಟ್ಟರ ಮನೆ ಹಿತ್ತಲಿನಲ್ಲಿ ಕಳೆದ ಜನವರಿ ತಾ ೭ ರಲ್ಲಿ ಸುಮಾರು ೩೬೦ ರೂಪಾಯಿನ ನಿಧಿಯು ಸಿಕ್ಕಿದೆ ಎಂದೂ, ಮಾಲೀಕರು ತಕ್ಕ ರುಜುವಾತು ಕೊಡದಿದ್ದರೆ ಅದನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತೇವೆಂದೂ ಡಿಪ್ಟಿ ಕಮೀಷನರ್‌ರವರು ನೋಟಿಸ್ ಮಾಡಿದ್ದಾರೆ

ಕಳೆದ ಶುಕ್ರವಾರ ಸಾಯಂಕಾಲ ಇಲ್ಲಿನ ಪೋಸ್ಟಾಫೀಸಿನ ಹಿಂದೆ ಅಣ್ಣಾಜಯ್ಯಂಗಾರ್ರ ಬಂಗಲೆಯೊಳಗೆ ಒಂದು ಆಕಸ್ಮಾತ್ ಬೆಂಕಿ ಬಿದ್ದು ಕೆಲವು ಸಾಮಾನುಗಳು ಸುಟ್ಟುಹೋದವು ಅಗ್ನಿ ಪೋಸ್ಟ್ ಮಾಸ್ಟರರು ತಮ್ಮ ನೌಕರರನ್ನು ಕರೆದುಕೊಂಡು ಹೋಗಿ ಬೆಂಕಿಯನ್ನು ಆರಿಸುವುದರಲ್ಲಿ ಸಹಾಯಪಟ್ಟರು ಅದೇ ಆವರಣದಲ್ಲಿ ವಾಸವಾಗಿದ್ದ ಒಬ್ಬ ಪೋಸ್ಟ್ ನೌಕರರ ಕೆಲವು ಪದಾರ್ಥಗಳು ಫಲಾಕಾದವೆಂದು ಕೇಳುತ್ತೇವೆ

ಕಳೆದ ೧೭ ನೇ ತಾ ಗುರುವಾರ ದಿವಾನ್ ಮೆ|| ಟಿ ಆನಂದರಾಯರವರು ಪರಿವಾರ ಸಮೇತ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಕಡೆ ಸರ್ಕೀಟು ದಯಮಾಡಿದರು ದಾವಣಗೆರೆ, ಚಿತ್ರದುರ್ಗಗಳಲ್ಲಿ ತಾ ೨೭ ರ ವರೆಗೆ ಸಂಚಾರಮಾಡಿ, ತಾ ೨೮ ರಿಂದ ೨೬ ರ ವರೆಗೆ ಚಳ್ಳಕೆರೆ ಮೊಳಕಾಲ್ಮುರು ಪ್ರಾಂತ್ಯಗಳಿಗೆ ಹೋಗಿ ಬಂದು ತಾ ೨೭, ೨೮ ರಲ್ಲಿ ಹಿರಿಯೂರು ಮಾರಿಕಣಿವೆಗೂ ದಯಮಾಡಿ ನಾಲಾ ಬಡಾವಣೆ ಮುಂತಾದವುಗಳನ್ನು ನೋಡಿಕೊಂಡು, ಮಾರ್ಚಿ ತಾ ೧, ೨ ರಲ್ಲಿ ಸಿರಾದಲ್ಲಿ ತಂಗುವರು ಅಲ್ಲಿಂದ ತಾ ೩ ಕ್ಕೆ ತುಮಕೂರಿಗೆ ಬರುವರೆಂದು ಕೇಳುತ್ತೇವೆ

ಕಾವೇರಿನದಿ ಮತ್ತು ಇದರ ಉಪನದಿಗಳಲ್ಲಿ ನೀರು ಕಡಮೆಯಾಗುತ್ತಾ ಇದ್ದು ಈ ನದಿಗಳ ನಾಲಾಗಳ ಮತ್ತು ಇವುಗಳ ಅಸನೆ ಕೆರೆಗಳ ಕೆಳಗಣ ಜಮೀನುಗಳಲ್ಲಿ ಬೇಸಿಗೆ ಪೈರಿಗೆ ನೀರು ಸರಫರಾಜನ್ನು ಮಿತಪಡಿಸಿ, ಈ ಸಲ ಬೇಸಿಗೆಯಲ್ಲಿ ಶಿವಸಮುದ್ರದ ಪವರ್ ಸ್ಟೇಷನಿಗೆ ಬೇಕಾದ ನೀರಿನ ಸರಬರಾಯಿಯನ್ನು ಒದಗಿಸಬೇಕಾಗಿರುವ ಕಾರಣ ಸದರಿ ಜಮೀನುಗಳಲ್ಲಿ ಮುಂದಿನ ಬೇಸಿಗೆ ಬಿತ್ತನಗಳನ್ನು ಮಾಡಿದಲ್ಲಿ ನೀರಾವರಿ ಕಡಮೆಯಾಗುವುದರಿಂದ ನಷ್ಟಪಟ್ಟಾರೆಂದು ರೈತರನ್ನು ಈಗಲೇ ಎಚ್ಚರಿಸಬೇಕೆಂದು ಚೀಫ್ ಇಂಜನಿಯರವರು ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರವರಿಗೆ ಬರೆದಿರುತ್ತಾರೆ

ಬೆಂಗಳೂರಿನಲ್ಲಿ ಭಾರೀ ಧರ್ಮಸತ್ರವನ್ನು ಕಟ್ಟಿಸಿ ೬೦ ಸಾವಿರ ರೂಪಾಯಿ ಶಸಕೆ ಫಂಡು ಹಾಕಿ ಪರೋಪಕಾರ ಮಾಡಿದ ಮೆ|| ಗುಬ್ಬಿ ತೋಟದಪ್ಪನವರು ಕಳೆದ ಸೋಮವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರ ಮರಣದಿಂದ ಲಿಂಗಾಯಿತ ಪ್ರಜೆಗಳಿಗೆ ಬಹಳ ನಷ್ಟವಾಯಿತು ಇವರ ಧರ್ಮ ವೃತ್ತಿಯನ್ನು ಸಕಲರೂ ಕೊಂಡಾಡುತ್ತಿದ್ದರು ಇವರಿಗೆ ನಮ್ಮ ಮಹಾರಾಜರವರು ಧರ್ಮಪ್ರವರ್ತಕ ಎಂಬ ಬಿರುದನ್ನೂ ಇಂಡಿಯಾ ಗವರ್ನಮೆಂಟಿನವರು ರಾವ್ ಬಹದೂರ್ ಎಂಬ ಬಿರುದನ್ನೂ ದಯಪಾಲಿಸಿದ್ದರು ಇಂಥಾ ಪರೋಪಕಾರಿಯು ತೀರಿಹೋದದ್ದು ಸಕಲರಲ್ಲೂ ವಿಷಾದವನ್ನುಂಟುಮಾಡಿದೆ

ಮೈಸೂರು ಗೆಜೆಟ್ ಸಂಗ್ರಹ

ಫ್ರೇಜರ್‌ಪೇಟೆ ತಾಲೂಕಿನ ಡೆಪ್ಯುಟಿ ಅಮಲ್ದಾರ್ ಮೆ|| ಸಿ ಕಾಶೀನಾಥರಾಯರಿಗೆ ಐದು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮೈಸೂರು ಡೆಪ್ಯುಟಿ ಕಮಿಷನರ ಆಫೀಸ್ ಹೆಡ್ ಅಕೌಂಟೆಂಟ್ ಮೆ|| ಜಿ ಜಿ ನರಸಿಂಹಾಚಾರ್ಯರು ಡೆಪ್ಯುಟಿ ಅಮಲ್ದಾರರಾಗಿ ಬದಲಿ ನೋಡತಕ್ಕದ್ದು

ಹೆಗ್ಗಡದೇವನಕೋಟೆ ಫಾರೆಸ್ಟ್ ಅ|| ಕನ್ಸರ್ವೇಟರ್ ಮೆ|| ಪಿ ಎಸ್ ಗೋವಿಂದರಾಯರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮೆ|| ಎಲ ಪಿ ಮಾಸ್ಕರನ್‌ಹಾಸ್ ಯವರು ಹೆಗ್ಗಡದೇವನಕೋಟೆ ಫಾರೆಸ್ಟ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು

ಹೆಗ್ಗಡದೇವನಕೋಟೆ ತಾಲೂಕು ಅಮಲ್ದಾರ್ ಮೆ|| ಲಿಂಗೋಜಿರಾವ್ ಬಾದಾಮಿಯವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮೈಸೂರು ಡೆಪ್ಯುಟಿ ಕಮಿಷನರ ಆಫೀಸ್ ಜುಡಿಶಲ್ ಹೆಡ್ ಮುನಷಿ ಮೆ|| ಎಂ ಎನ್ ಶ್ರೀನಿವಾಸೈಯಂಗಾರ್ರು ಅಮಲ್ದಾರರಾಗಿ ಬದಲಿ ನೋಡತಕ್ಕದ್ದು

ಎಕ್ಸೈಸ್ ಅ|| ಕಮಿಷನರ್ ಮೆ|| ಹಸನ್ ಅಲಿ ಯವರಿಗೆ ಎರಡು ತಿಂಗಳೂ ಇಪ್ಪತ್ತೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅರಸೀಕೆರೆ ಅಮಲ್ದಾರ್ ಮೆ|| ಸಿ ಆರ್ ನಾರಾಯಣಸ್ವಾಮಿ ಮೊದಲಿಯಾರ್ರು ಕಡೂರು ಎಕ್ಸೈಸ್ ಆಫೀಸರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಕಡೂರು ಡೆಪ್ಯುಟಿ ಕಮಿಷನರ ಆಫೀಸ್ ರೆವಿನ್ಯೂ ಹೆಡ್ ಅಕೌಂಟೆಂಟ್ ಮೆ|| ಬಿ ಭೀಮರಾಯರು ಚಿಕ್ಕಮಗಳೂರು ತಾಲೂಕ್ ಅಮಲ್ದಾರರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಸಬ್ ರೆಜಿಸ್ಟ್ರಾರುಗಳಾದ ಮೆ|| ಮಹಮದ್ ಇಸ್ಮೈಲ ಯವರನ್ನು ಹೊಸಕೋಟೆಗೂ, ಮೆ|| ಎಸ್ ರಾಮಸ್ವಾಮೈಯ್ಯಂಗಾರ್ರನ್ನು ಹೊಳೆನರಸೀಪುರಕ್ಕೂ ವರ್ಗಮಾಡಿದೆ

ಮುಂದೆ ಹೇಳುವ ಮುನಸಿಫರನ್ನು ಆಯಾ ಕ್ಲಾಸಿನಲ್ಲಿ ಖಾಯಂ ಮಾಡಿದೆ ಮೆ|| ಗಳಾದ ಟಿ ಎಸ್ ಎ ಡಿಕ್ರೂಸ ಯವರು ೧ನೇ ಕ್ಲಾಸ್, ಟಿ ಕೃಷ್ಣಯ್ಯಂಗಾರ್ರು ೨ನೇ ಕ್ಲಾಸ, ಡಿ ಕೆ ರಾಮರಾಯರೂ ಬಿ ಶ್ರೀನಿವಾಸರಾಯರವರೂ ೩ ನೇ ಕ್ಲಾಸ, ಬಿ ರಂಗೈಯಂಗಾರ್ರೂ ಕೆ ಎನ್ ನಾರಾಯಣೈಯಂಗಾರ್ರೂ ೪ನೇ ಕ್ಲಾಸ

ಎಗ್ಜಿಕ್ಯುಟಿವ ಇಂಜನಿಯರ್ ಮೆ|| ಬಿ ಸುಬ್ಬರಾಯರು ರಜದಿಂದ ಬಂದ ಮೇಲೆ ಮೈಸೂರಿನಲ್ಲಿ ನಾಲಾ ಕನ್ಸರ್ವೆನ್ಸಿ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು

ತಪ್ಪಿಸಿಕೊಂಡುಹೋದ ಖೈದಿಯು ಸಿಕ್ಕಿದನು

ಯಡತೊರೆ ತಾಲೂಕಿಗೆ ಸೇರಿದ ಅಬ್ಬೂರಿನಲ್ಲಿ ಇಬ್ಬರು ಅಣ್ಣತಮ್ಮಂದಿರು ಸುಮಾರು ಆರು ವರುಷಗಳ ಹಿಂದೆ ಕೊಲೆಯನ್ನು ನಡೆಸಿದರು ಮೈಸೂರು ಸೆಷನ್ಸ್ ಜಡ್ಜಿಯವರು ಈ ಮೊಕದ್ದಮೆಯನ್ನು ವಿಚಾರಿಸಿ ಅವರಿಬ್ಬರಿಗೂ ಫಾಸೀ ಸಜಾ ವಿಧಿಸಿದರು ಖೈದಿಗಳು ಮೈಸೂರು ಬಂದೀಖಾನೆಯಲ್ಲಿ ಮರಣ ದಂಡನೆಯನ್ನು ನಿರೀಕ್ಷಿಸುತ್ತಿದ್ದರು ಚೀಫ್ ಕೋರ್ಟಿನವರು ಸೆಷನ್ಸ್ ಜಡ್ಜರ ತೀರ್ಮಾನವನ್ನು ಖಾಯಂ ಮಾಡುವಷ್ಟರೊಳಗೆ ಈ ಖೈದಿಗಳು ಬಂದೀಖಾನೆಯಲ್ಲಿ ಕಾವಲಿದ್ದ ಕೊಠಡಿಯ ಪಹರೆಯವನನ್ನು ಚತುರತೆ ಮಾಡಿಯೋ ಹ್ಯಾಗೋ ಹೊರಗೆ ಬಂದು ಅದೇ ಪಹರೆಯವನನ್ನು ಕೊಂದುಹಾಕಿ, ಜೈಲಿನ ಗೋಡೆಯನ್ನು ಹತ್ತಿ ಇಳಿದು ತಪ್ಪಿಸಿಕೊಂಡು ಹೋದರು ಇದಾದ ೫–೬ ದಿನಗಳ ಮೇಲೆ ಅವರನ್ನು ಗಲ್ಲಿಗೆ ಹಾಕಬಹುದು ಎಂದು ಚೀಫ್ ಕೋರ್ಟಿನಿಂದ ಹುಕುಂ ಬಂದಿತು ತಪ್ಪಿಸಿಕೊಂಡು ಹೋದ ಈ ಖೈದಿಗಳು ಎಲ್ಲೆಲ್ಲೋ ಅಲೆಯುತ್ತಿದ್ದರು ಆ ವ್ಯಕ್ತಿ ಹಿರಿಯನಾದ ದೊಡ್ಡಕ್ಯಾತನೆಂಬವನು ೩ ೪ ವರುಷಗಳಿಂದೀಚೆ ತನ್ನ ಗ್ರಾಮದ ಲ್ಲೇ ಇದ್ದು ಸಂಸಾರ ಮಾಡುತ್ತಿದ್ದನೆಂದೂ, ಇವನಿಗೆ ಈಚೆಗೆ ಎರಡು ಮಕ್ಕಳಾದವೆಂದೂ ಅವನನ್ನು ಹಿಡಿಯುವುದು ಬಹಳ ಕಷ್ಟವಾಗಿತ್ತೆಂದೂ ಹೇಳುತ್ತಾರೆ

ಹಿಂದಿನ ವಾರ ಆ ತಾಲೂಕಿನ ಪೋಲೀಸ್ ಇನಸ್ಪೆಕ್ಟರೂ ಪೋಲೀಸಿನವರೂ ಸರಿಯಾದ ಏರ್ಪಾಡುಗಳನ್ನು ಮಾಡಿಕೊಂಡು ಹೋಗಿ ಆ ದೊಡ್ಡ ಕ್ಯಾತನೆಂಬವನನ್ನು ಸುತ್ತಿಕೊಂಡರು ಅವನು ತನ್ನ ಬಳಿಯಲ್ಲಿ ಯಾವಾಗಲೂ ಒಂದು ಪಿಸ್ತೂಲನ್ನೂ ಒಂದು ಚೂರಿಕತ್ತಿಯನ್ನೂ, ಒಂದು ದೊಣ್ಣೆಯನ್ನೂ ಇಟ್ಟುಕೊಂಡೇ ತಿರುಗುತ್ತಿದ್ದನೆಂದು ತಿಳಿದು ಬರುತ್ತದೆ ಆ ದಿನ ಇವನಿಗೂ ಪೋಲೀಸಿನವರಿಗೂ ಹೋರಾಟವಾಯಿತು ಅವನು ಅವರನ್ನು ಹೊಡೆಯಲು ಪ್ರಯತ್ನಪಟ್ಟಾಗ ಪೋಲೀಸಿನವರು ಅವನ ಎರಡು ಮುಂಗೈಗಳ ಮೇಲೂ ಹೊಡೆದು ಗಾಯಮಾಡಿದರು, ಆಗಲೂ ಅವನ ಹೋರಾಟವು ನಿಲ್ಲದೆ ತಪ್ಪಿಸಿಕೊಂಡು ಓಡಲಾರಂಭಿಸಿದನು ಪೋಲೀಸ್ ಇನಸ್ಪೆಕ್ಟರು ಗುಂಡುಬಾರ್ಮಾಡಿ ಅವನ ಕಾಲಿಗೆ ಗುರಿ ಕಟ್ಟಿ ಹೊಡೆದರೆಂದೂ, ಗುಂಡಿನೇಟು ಅವನ ತೊಡೆಗೆ ತಗಲಿ ಅವನು ಬಿದ್ದುಕೊಂಡನೆಂದೂ ತಿಳಿಯುತ್ತದೆ ಬಳಿಕ ಅವನನ್ನು ಕಟ್ಟಿ ಯಡತೊರೆ ಆಸ್ಪತ್ರೆಗೆ ಹೊತ್ತುಕೊಂಡು ಹೋಗಿ ಆಸ್ಪತ್ರೆಯಲ್ಲಿ ಅವನ ಗಾಯಗಳಿಗೆ ಔಷಧ ಹಾಕಿಸಿ ಮೈಸೂರಿಗೆ ಸಾಗಿಸಿಕೊಂಡು ಬಂದರು

ಈಗ ಸಿಕ್ಕಿಬಿದ್ದಿರುವ ಈ ಖೈದಿಯ ಪರಿಣಾಮವೇನು ಎಂದು ಒಬ್ಬ ಬಾತ್ಮಿದಾರರು ನಮ್ಮನ್ನು ಕೇಳುತ್ತಾರೆ ಇವನನ್ನು ಜೈಲಿನ ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆಮಾಡುತ್ತಿದ್ದಾರೆ ಡಾಕ್ಟರು ಅವನ ತೊಡೆಯ ಕಟ್ಟನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಒಂದು ಚೂರಿಯನ್ನು ಇಟ್ಟುಕೊಂಡಿದ್ದದ್ದು ಸಿಕ್ಕಿತು, ಗಾಯದೊಳಗೆ ಸೇರಿಕೊಂಡಿದ್ದ ಗುಂಡನ್ನು ತೆಗೆದು ಹಾಕಿ ಇಲಾಜು ಮಾಡುತ್ತಿದ್ದಾರೆ ಇವನು ಜೈಲಿನಿಂದ ತಪ್ಪಿಸಿಕೊಂಡು ಹೋದ ವಿಷಯದಲ್ಲಿ ವಿಚಾರಣೆ ನಡೆಯಬೇಕಂತಲೂ, ಆ ಬಳಿಕ ಅವನನ್ನು ಗಲ್ಲಿಗೆ ಹಾಕಬೇಕಾಗಿದೆ ಎಂತಲೂ, ಆದರೆ ಇನ್ನೂ ಯಾವುದೂ ಇತ್ಯರ್ಥವಾಗಿಲ್ಲವೆಂತಲೂ ಕೇಳುತ್ತೇವೆ

ತಾಲ್ಲೂಕು ವರ್ತಮಾನಗಳು

ಬೆಳಗಾವ — ಈ ಊರಿನಲ್ಲಿ ಕೆಲವು ದಿನಗಳ ಹಿಂದೆ ಈ ಪ್ರಾಂತ್ಯದಲ್ಲಿ ಯೌವನ ವಾಕ್ಪಟುವೆಂದು ಪ್ರಸಿದ್ಧಿಯನ್ನು ಪಡೆದಿರುವ ಮೆ|| ನಾರಾಯಣ ಕೃಷ್ಣ ಮೋಡಕ್ ಎಂಬುವರಿಂದ ದಿ ಸ್ಟೂಡೆಂಟ್ಸ್ ಬ್ರದರ್‌ಹುಡ್ ಎಂಬ ಒಂದು ಸಂಘವು ಸ್ಥಾಪಿಸಲ್ಪಟ್ಟಿತು ಈ ಸಂಘದಲ್ಲಿ ಮೇಲಿಂದ ಮೇಲೆ ಉಪನ್ಯಾಸಗಳೂ, ವಾದವಿವಾದಗಳೂ ನಡೆಯುತ್ತಿರುವವು ರೆವಿನ್ಯೂ ಕಮಿಷನರ್ ಮೆ|| ಗಿಬ್ಸ್ ಸಾಹೇಬರು ಒಂದಾವರ್ತಿ ಈ ಸಂಘಕ್ಕೆ ದಯಮಾಡಿ ಈ ಸಂಘವನ್ನು ನೋಡಿ ಬಹಳ ಸಂತೋಷಪಟ್ಟು ಈ ಸಂಘವನ್ನು ಸ್ಥಾಪಿಸಿದ್ದಕ್ಕಾಗಿ ಮೆ|| ಮೋಡಕ್ ರವರನ್ನು ಬಹಳವಾಗಿ ಕೊಂಡಾಡಿದರು ಈ ಪ್ರಾಂತ್ಯದಲ್ಲಿ ಇಂಥಾ ಸಂಘಗಳ ಸಂಖ್ಯೆಯು ಬಹಳ ಕಡಮೆ ಈ ಸಂಘವು ಪೂರ್ಣ ಏಳಿಗೆಗೆ ಬರಲೆಂದು ಜನಸ್ತೋಮವೆಲ್ಲವೂ ಹಾರೈಸುತ್ತಲಿದೆ — ಪ್ಲೇಗ್ ಉಪದ್ರವು ದಿನೇ ದಿನೇ ಕಡಮೆಯಾಗುತ್ತಲಿರುವುದು ಜನರು ಗುಡಿಸಲುಗಳಿಗೆ ಹೋಗಿದ್ದವರು ತಮ್ಮ ತಮ್ಮ ಮನೆಗಳಿಗೆ ಪುನಃ ಬರಲು ಆರಂಭಿಸಿರುವರು

ಚಿಕ್ಕಮಗಳೂರು — ಈ ವರೆಗೂ ಚಳಿಯು ರಾತ್ರಿವೇಳೆಗಳಲ್ಲಿ ಬಹಳವಾಗಿದ್ದಿತು ಈಗಲೂ ಬೆಳಗ್ಗೆ ಸುಮಾರು ನಾಲ್ಕು ಗಂಟೆಯಿಂದ ಚಳಿಯು ಬಿಡದಿರುವದಾಗಿಯೇ ಇದ್ದಾಗ್ಯೂ ರಾತ್ರಿವೇಳೆ ಚಳಿಯಾಗುವದು ಸ್ವಲ್ಪ ಕಡಮೆ ಹಗಲಲ್ಲಿ ಎಷ್ಟು ಹೊತ್ತಾದರೂ ಬಿಸಿಲಲ್ಲಿ ಇರಬೇಕೆಂಬ ಅಪೇಕ್ಷೆ ತಪ್ಪಿ ಈಗ ಮಧ್ಯಾಹ್ನದ ಬಿಸಿಲೂ ರಾತ್ರಿಯ ಸೆಕೆಯೂ ತಕ್ಕ ಮಟ್ಟಿಗೆ ಜಾಸ್ತಿಯಾಗಿದೆ — ಊರಲ್ಲಿ ಚಳಿ ಜ್ವರ ಮುಂತಾದ ಉಪದ್ರಗಳು ಕಡಮೆಯಾಗಿದ್ದರೂ ಪ್ಲೇಗ್ ರೋಗವು ಪುನಃ ವರುಷಾರಂಭದಲ್ಲಿಯೇ ತಲೆ ಹಾಕಿದೆಯಲ್ಲಾ ಎಂದು ಚಿಂತಿಸಬೇಕಾಗಿದೆ ಹಿರೇಮಗಳೂರು ಇಲ್ಲಿಗೆ ಸುಮಾರು ಒಂದು ಮೈಲು ದೂರವಿದೆ ಈ ಗ್ರಾಮದಲ್ಲಿಯೂ ಹೊಲಗೇರಿಯಲ್ಲಿಯೂ ಕೆಲವರಿಗೆ ಈ ಮಾರಿಕಾ ಉಪದ್ರವು ತಗಲಿ ಮೃತಪಟ್ಟಿದ್ದಲ್ಲದೆ ಇನ್ನೂ ಕೆಲವರು ನರಳುತ್ತಿರುವರು ಗ್ರಾಮವನ್ನು ಅಗಲೇ ಅನೇಕರು ಬಿಟ್ಟು ಹೊರಗಡೆ ತೋಟದ ಪಕ್ಕದಲ್ಲಿಯೂ ತಮಗೆ ಅನುಕೂಲವಾದ ಬೇರೆ ಕಡೆಗಳಲ್ಲಿಯೂ ಷೆಡ್ಡುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿರುವರು ಆದರೂ ಈ ಉಪದ್ರವನ್ನು ಸಂಪೂರ್ಣವಾಗಿ ತಪ್ಪಿಸಲಿಕ್ಕೆ ಊರೆಲ್ಲಾ ಸಂಪೂರ್ಣವಾಗಿ ಬಿಡುವದಾದರೆ ಉತ್ತಮ ಇತ್ತ ಚಿಕ್ಕಮಗಳೂರಲ್ಲಿಯೂ ಜೈಲಿಗೆ ಸಮೀಪವಾಗಿ ಒಂದೆರಡು ಪ್ಲೇಗ್ ಕಾಯಿಲೆಗಳು ಆಗಿರುವವೆಂದು ಗೊತ್ತಾಗಿದೆ ಜನಗಳು ಬೇಗ ಬೇಗ ಇನಾಕ್ಯುಲೇಷನ್ ಮಾಡಿಸಿಕೊಂಡರೆ ಈ ಉಪದ್ರವು ಆಗಿ ಹೋದೀತೆಂಬ ನಿರೀಕ್ಷೆಯುಂಟು — ಈ ಊರಿನ ಗೌಡರಾಗಿಯೂ ಕೆಲವು ಕಾಲ ಅಸಿಸ್ಟೆಂಟ್ ಇಂಜನಿಯರಾಗಿಯೂ ಇದ್ದು ಪೆನ್‌ಷನ್ ಮೇಲೆ ಬಿಟ್ಟಿರುಗಿದ್ದ ಮೆ|| ಹಲಗೆ ಗೌಡರು ಈಗ ಎರಡು ವಾರಗಳಿಗೆ ಮುಂಚೆ ಗತಿಸಿಹೋದದ್ದು ಬಹಳ ವ್ಯಸನಕರವಾಗಿದೆ ಇವರು ಇಲ್ಲಿ ಭಾರಿ ಕುಟುಂಬಕ್ಕೆ ಸೇರಿದವರು, ಸಂಭಾವಿತರು, ಬಹಳ ಆಸ್ತಿಯೂ ಇದೆ ಚಿಕ್ಕ ಮಕ್ಕಳೂ ಪತ್ನಿಯೂ ವಿಯೋಗ ದುಃಖಕ್ಕೆ ಗುರಿಯಾದರಲ್ಲಾ ಎಂದು ಅವರ ಮಿತ್ರರು ಗೋಳಾಡುತ್ತಲಿದ್ದಾರೆ

ಚಿತ್ರದುರ್ಗ — ಛಳಿ ಕಡಮೆಯಾಗಿ ಬಿಸಿಲು ಜಾಸ್ತಿಯಾಗುತ್ತಾ ಬಂದಿದೆ ಇಲ್ಲಿ ರತಕ್ಕೆ ನೀರಿನ ಕಷ್ಟವೂ, ಊರಲ್ಲೇ ಪ್ರಜೆಗಳು ಹೇಸಿಗೆ ಮಾಡತಕ್ಕ ದುರ್ಗಂಧವೂ ಹೇಳಲಿಕ್ಕೆ ಸಾಧ್ಯವಲ್ಲ ಈ ಊರು ಬೆಟ್ಟದ ತಪ್ಪಲಲ್ಲಿರುವದರಿಂದ ಈ ವರುಷ ಬಿಸಿಲುಕಾಲದ ಧಗೆಯನ್ನೂ ನೀರಿನ ಕಷ್ಟವನ್ನೂ ಪ್ರಜೆಗಳು ಸಹಿಸುವದು ಬಹಳ ಕಷ್ಟವಾಗಿದೆ ಸದ್ಯದಲ್ಲೇ ಮಳೆಗಳು ಬಾರದಿದ್ದರೆ ಕಾಲರಾ ಪ್ರಾರಂಭವಾದೀತೆಂದು ತೋರುತ್ತದೆ ದನಗಳಿಗೆ ಜಂಗಲಿನಲ್ಲಿ ಮೇವೂ ಕುಡಿಯುವದಕ್ಕೆ ನೀರೂ ಇಲ್ಲ ಆಹಾರ ಧಾನ್ಯಗಳು ಬೇಕಾದಷ್ಟು ಸಿಕ್ಕುತ್ತವೆ — ಕಳೆದ ತಿಂಗಳು ೨ ನೇ ತಾ ಡೆಪ್ಯುಟಿ ಕಮೀಷನರವರ ಹುಕುಂ ಪ್ರಕಾರ ದಾವಣಗೆರೆ ತಾಲ್ಲೂಕ್ ಟ್ರೆಜರಿಯಿಂದ ಹೊಳಲ್ಕೆರೆ ತಾಲ್ಲೂಕ್ ಟ್ರೆಜರಿಗೆ ೩,೫೦೦ ರೂಪಾಯಿನ ಚಿಲ್ಲರೆ ಕಳುಹಿಸಲಾಯಿತು ಕೊಡತೆ ಶಿರಸ್ತೇದಾರ್ರು ದಾವಣಗೆರೆಯಿಂದ ಖಜಾನೆಯ ಕಡೆ ಬಂದಿದ್ದ ಬಾರ್ ಶಿಪಾಯಿಗಳಿಗೆ ಹಣದ ಪೆಟ್ಟಿಗೆಗಳೂ ಅವುಗಳಿಗೆ ಮಾಡಿದ್ದ ಮೊಹರುಗಳೂ ಸರಿಯಾಗಿವೆ ಎಂದು ರಶೀತಿ ಕೊಟ್ಟು ಕಳುಹಿಸಿ ಅನಂತರ ದಿನಕ್ರಮೇಣ ಆ ಪೆಟ್ಟಿಗೆಗಳಲ್ಲಿದ್ದ ಹಣವನ್ನು ಝುಲ್ತಿಮಾಡಿದ್ದರಲ್ಲಿ ೭೫೦ ರೂಪಾಯಿನ ದೊಡ್ಡಾಣೆಗಳ ಒಂದು ಚೀಲ ಅದರಲ್ಲಿಲ್ಲವೆಂದು ಫಿರ್ಯಾದಾಯಿತು ಕೊಡತಿ ಡೆಪ್ಯುಟಿ ಕಮಿಷನರ್ ಸಾಹೇಬರು ಆ ಹಣವನ್ನು ಶಿರಸ್ತೇದಾರರಿಂದಲೂ ಸರಾಫರಿಂದಲೂ ವಸೂಲ್ಮಾಡಿ ಟ್ರೆಜರಿಗೆ ಜಮಾ ಮಾಡಿದರು ಈ ಹಣವು ಹ್ಯಾಗೆ ಹೋಯಿತೆಂಬುವದನ್ನು ಈಚೆಗೆ ತನಿಖೆ ಮಾಡುತ್ತಿದ್ದಾರೆ — ಭರಮಸಮುದ್ರದ ಭಾರಿ ರೈತನಾದ ತೋಟದ ಸಿದ್ದಪ್ಪನನ್ನು ಖೂನಿ ಮಾಡಿದರೆಂದು ಛಾರ್ಜಾಗಿದ್ದ ಅಪರಾಧಿಗಳನ್ನು ಸೆಷನ್ಸ್ ಕೋರ್ಟಿನವರು ಪಯಖಸ್ತಿಯಿಂ ಖುಲಾಸ್ ಮಾಡಿದರು ತಾಳ್ಯದ ಹನುಮಂತಭಟ್ಟನನ್ನು ಖೂನಿ ಮಾಡಿದರೆಂದು ೬ ಜನರನ್ನು ಮ್ಯಾಜಿಸ್ಟ್ರೇಟರು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದ್ದಾರೆ ಕೊಲೆಗಳ ಭೀತಿ ಈ ಡಿಸ್ಟ್ರಿಕ್ಟಿನಲ್ಲಿ ಬಹಳ ಹೆಚ್ಚಾಗಿದೆ ಆರು ತಿಂಗಳಲ್ಲಿ ೧೧ ಖೂನಿಗಳು ನಡೆದಿರುವವು — ಈ ಸಂಸ್ಥಾನದ ದಿವಾನ್ ಸಾಹೇಬರು ಈ ತಿಂಗಳ ೨೦ನೇ ತಾ ಇಲ್ಲಿಗೆ ದಯಮಾಡಿಸುತ್ತಾರೆಂಬ ಸುದ್ದಿಯು ಊರೆಲ್ಲಾ ಹಬ್ಬಿರುತ್ತದೆ

ಮಧುಗಿರಿ — ಬಡಚೌಡನಹಳ್ಳಿ, ಬ್ಯಾಲ್ಯ, ನಿಟ್ರಹಳ್ಳಿಗಳಲ್ಲಿ ತಂಜಾವೂರಿನ ಸರಜೋಜಿರಾಜರ ಆಸ್ಥಾನ ಕವಿಯಾಗಿದ್ದ ವೇದನಾಯಗಂ ಶಾಸ್ತ್ರಿಗಳ ಕೊಮಾರರಾದ ವೇದಮೂರ್ತಿ ಶಾಸ್ತ್ರಿಗಳವರು ಪಿಟೀಲು, ತಂಬೂರಿ, ಮೃದಂಗ, ತಾಳ, ದಂಡು ವಾದ್ಯಗಳಿಂದ ಸುಶ್ರಾವ್ಯವಾಗಿ ಸಂಗೀತಹಾಡಿ ಪಿಟೀಲು ಬಾರಿಸಿದರು ಪಿಟೀಲು ಬಾರಿಸುವದರಲ್ಲಿ ಸ್ವರ್ಣಪದಕವನ್ನು ಪಡೆದವರೆಂದು ಕೇಳಿದ ಮಹಾಜನಗಳು ಸಂತೋಷಿಸಿದ್ದಲ್ಲದೆ, ದರಾವು ವಾದ್ಯ ಬಾರಿಸುವದರಲ್ಲಿ ನಿಪುಣರೆಂದು ಹೊಗಳಿದರು ಭಜನೆಯ ಮಧ್ಯಕಾಲದಲ್ಲಿ ಭಗವಂತನಕೃಪೆ, ಆತನ ಜ್ಞಾನ, ಪಾಪದ ವಿಷಯವಾಗಿ ಉತ್ತಮವಾದ ದೃಷ್ಟಾಂತರಗಳಿಂದ ಕೇಳುವವರ ಮನಃ ಪ್ರೇರಣೆಯಾಗುವಂತೆ ವಿವರಿಸಿ ನಂತರ ೧—೨ ಸಂಗೀತ ಹಾಡಿ ಕಡೆಯಲ್ಲಿ ಮಂಗಳ ಹಾಡಿ ಮುಕ್ತಾಯ ಮಾಡುವರು ಇವರು ತಂಜಾವೂರಿನವರಾದ್ದರಿಂದ ಅರವ ತಮಿಳುಭಾಷೆಯನ್ನೇ ಬರುವದು ಕನ್ನಡ ಭಾಷೆ ಬಾರದ್ದರಿಂದ ಕನ್ನಡಿಗರಿಗೆ ಅವರ ಅರ್ಥವು ತಿಳಿಯದೇ ಕಾರಣ ವಿಶೇಷ ಸಂತೋಷಕ್ಕೆ ಅವಕಾಶವಾಗಲಿಲ್ಲ, ಅವರು ಅರವ ಪದ್ಯಗಳ ಸಂಗಡ ಕನ್ನಡ, ತೆಲುಗು, ಹಿಂದೂಸ್ಥಾನಿ, ಇಂಗ್ಲೀಷು ಪದ್ಯಗಳನ್ನು ಸಹ ಹಾಡುವರು — ಕೆಲವು ವಾರಗಳ ಕೆಳಗೆ ಕಳ್ಳತನವಾಗಿ ಒಬ್ಬ ಕಸಬಿಗೆ ಅನ್ಯಾಯವಾಗಿತ್ತಷ್ಟೆ ಅಲ್ಲಿಂದೀಚೆಗೆ ಈ ಊರಲ್ಲಿ ಆಗಾಗ್ಗೆ ಕಳ್ಳರ ಸುಳಿವು ಇದ್ದೇ ಇದೆ ಸುಮಾರು 11 ಘಂಟೆ ರಾತ್ರಿ ಬೀದಿಗಳಲ್ಲಿ ಸಂಚರಿಸುವರು ಅವರನ್ನು ಕೂಗಿದರೆ ಮಾತಾಡದೆ, ಸುಮ್ಮನೆ ಹೋಗುವರು ಅವರ ಹಿಂದೆಯೇ ಹೋದರೆ ಎಲ್ಲಿ ತೂರಿಕೊಳ್ಳುವರೋ ಗೊತ್ತಾಗುವದೇ ಇಲ್ಲ ಊರಿನಲ್ಲಿ ಕೆಲವರು ಸೇರಿ ಕಾವಲಿನ ಏರ್ಪಾಡು ಮಾಡಿಕೊಂಡಾಗ ಆ ರಾತ್ರಿ ಯಾರೂ ಬರಲಿಲ್ಲ ಪರಭಾರಿ ಕಳ್ಳರಾದರೆ ಅವರಿಗೆ ಹ್ಯಾಗೆ ಗೊತ್ತು ? ಅವರಾದರೆ ಕದಗಳನ್ನು ಕಟ್ಟುವರೆ ? ಕಲ್ಲುಗಳನ್ನು ತೂರುತ್ತಿರುವರೇ ? ಬಡವರ ಎರಡು ಮನೆಗಳಲ್ಲಿ ಕಳುವಾಯಿತು ಜವಾನರು ಬಂದಿದ್ದರು ಆದರೆ ಪತ್ತೆಯಾಗಲಿಲ್ಲ ಅವರು ಬುದ್ಧಿವಾದಹೇಳಿ ಗ್ರಾಮಸ್ಥರು ಜಾಗರೂಕರಾಗಿ ಕಾವಲು ಕಾಯುವ ಏರ್ಪಾಡು ಮಾಡಿದರು ಕೋರ್ಟಿಗೆ ಚಿನ್ನನ ಮಗ ದಾರಿಗ ನಾಯಕನಾದ ತಳವಾರನನ್ನು ಇಲ್ಲಿ ಕಾವಲಿಗೆ ನೇಮಿಸಿದ ಮೇಲೆ ಈತನು ಪ್ರತಿ ರಾತ್ರಿಯಲ್ಲಿಯೂ ೩—೪ ಸಾರಿ ಗ್ರಾಮ ಗಸ್ತು ಮಾಡಿಕೊಡುವನೆ ಇದಕ್ಕೆ ಮುಂಚೆ ಇದ್ದವನು ಗ್ರಾಮ ಗಸ್ತು ಮಾಡುವಂತೆ ಹೇಳಿದರೂ ಮಾಡುತ್ತಿರಲಿಲ್ಲ ಹಾಲಿ ಈಗ ಇರುವ ತಳವಾರ ನಾಯಕನನ್ನೇ ಕಡೆ ವರೆಗೂ ನೇಮಿಸಿದರೆ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗುವದು ಅಲ್ಲದೆ ಇಂಥಾ ಸಂದರ್ಭಗಳಲ್ಲಿ ಪೋಲೀಸಿನವರೂ ಪಟೇಲರೂ ಆಗಾಗ್ಗೆ ಬಂದು ಗಸ್ತು ಮಾಡಿಕೊಂಡು ಹೋಗುತ್ತಿದ್ದರೆ ಬಹು ಉತ್ತಮವಾಗಿರುವದು

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಶಾಖಾ

೨೦ 19-2 10 —ಈ ದಿನ ಕೆಲ ಪ್ರಸಿದ್ಧ ಕುಟುಂಬದವರೊಡನೆ ಬಹುಜನ ನಾರೀಮಣಿಗಳು ಸಭೆಯನ್ನಲಂಕರಿಸಿದ್ದರು ಶ್ರೀಮತಿ ಮಹಲಕ್ಷ್ಮಮ್ಮನವರು ಕರ್ಮಯೋಗವನ್ನು ಕುರಿತು ಉಪನ್ಯಾಸಮಾಡಿದರು ಕರ್ಮವೆಂದರೆ ಮಾಡತಕ್ಕ ಕರ್ತವ್ಯವೆಂದು ಸೂಚಿಸಿದರು ಈ ಕರ್ತವ್ಯದಲ್ಲಿ ಎರಡು ಮಾರ್ಗಗಳು ಇರುತ್ತವೆ ಒಳ್ಳೇ ಕರ್ತವ್ಯವು, ಕೆಟ್ಟ ಕರ್ತವ್ಯವು ಎಂಬುವು ಗಳೇ ಎರಡು ಮಾರ್ಗಗಳು ಒಳ್ಳೆ ಕರ್ತವ್ಯವು ದೈವಾಜ್ಞೆಗೆ ಒಳಪಟ್ಟು ಮತಕ್ಕೆ ಅನುಗುಣವಾಗಿರುತ್ತದೆ ಕೆಟ್ಟ ಕರ್ತವ್ಯವು ಇದಕ್ಕೆ ವಿರೋಧಿಯಾಗಿರುವದು ಮತಾನುಗುಣ್ಯವಾದ ಕರ್ತವ್ಯವೇ ಶ್ರೇಷ್ಠವಾದದ್ದು ಇದನ್ನು ಮನುಷ್ಯ ಸಜಾತೀಯರಾದವರು ಹಿಂಬಾಲಿಸ ಬೇಕಾದದ್ದು ಇದು ಪುರುಷಾರ್ಥಕ್ಕೆ ಕಾರಣವಾಗುವದು ಇದಕ್ಕೆ ವ್ಯತಿರೇಕವಾದದ್ದು ಬಹಿರಂಗಕ್ಕೆ ಮೋಸಗೊಳಿಸುವದಾಗಿದ್ದಾಗ್ಯೂ ಮೋಸವೆಂದು ತಿಳಿದು ತ್ಯಾಜ್ಯಾರ್ಹವಾಗಿರುತ್ತದೆ ಈ ರೀತಿ ಬಹುದೂರ ವಿಷಯವನ್ನು ಚರ್ಚಿಸಿ ಮನುಷ್ಯನ ಸುಖಕ್ಕೆ ಒಳ್ಳೆಯ ಕರ್ತವ್ಯವೇ ಉಪಾದೇಯವಾದದ್ದೆಂದು ಹೇಳಿ ವ್ಯಾಸವನ್ನು ಪೂರೈಸಿದರು ಸೌ॥ ಕನಕಮ್ಮನವರು ತ್ರಾವ್ಯವಾಗಿ ವೀಣೆಯನ್ನು ನುಡಿಸಿದರು

ಬರುವ ವಿಾಟಿಂಗು ೨೬ ನೇ ತಾ ಶನಿವಾರ ನಡೆಯುವದಾದ್ದರಿಂದ ಎಲ್ಲರೂ ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿರುತ್ತದೆ

ಮೈಸೂರು ಸರ್ಕಾರಿ ಹುಕುಮುಗಳು

ಹುಚ್ಚು ಹಿಡಿದವರನ್ನು ಆಸ್ಪತ್ರೆಗೆ ಕಳುಹಿಸುವುದು

ಹುಚ್ಚು ಹಿಡಿದವರನ್ನು ಪ್ರತ್ಯೇಕವಾಗಿ ಇಟ್ಟು ಚಿಕಿತ್ಸೆ ಮಾಡುವುದಕ್ಕೆ ಮೈಸೂರು ಸರ್ಕಾರದವರು ಬೆಂಗಳೂರಿನಲ್ಲಿ ಒಂದು ಪ್ರತ್ಯೇಕವಾದ ಆಸ್ಪತ್ರೆಯನ್ನು ಇಟ್ಟು ನಡಿಸುತ್ತಿದ್ದಾರೆ ಹುಚ್ಚು ಹಿಡಿದವರನ್ನು ಅವರ ನೆಂಟರಿಷ್ಟರು ಮಾನವಾಗಿಯೂ ಬಹಿರಂಗಕ್ಕೆ ಬಾರದ ರೀತಿಯೂ ಆ ಆಸ್ಪತ್ರೆಗೆ ಕಳುಹಿಸುವಂತೆ ಸರ್ಕಾರದವರು ರೂಲನ್ನು ಬದಲಾವಣೆ ಮಾಡಿಕೊಡಬೇಕೆಂದು ಸೀನಿಯರ್ ಸರ್ಜನ್ ರವರು ಗವರ್ನಮೆಂಟಿಗೆ ಸೂಚಿಸಿದರು ಅದರ ಮೇಲೆ ಹುಕುಂ ಆಗಿರುವುದೇನೆಂದರೆ, ಈ ವಿಷಯದಲ್ಲಿ ಇರತಕ್ಕ ರೂಲನ್ನು ಬದಲಾಯಿಸುವುದು ಸೂಕ್ತವಲ್ಲ ಗೌರವಸ್ಥರಾದವರು ತಮ್ಮ ಅನುಬಂಧಿಗಳಾದ ಹುಚ್ಚರನ್ನು ಗುಟ್ಟಾಗಿ ಆ ಆಸ್ಪತ್ರೆಗೆ ಕಳುಹಿಸಬೇಕೆಂದು ಅಪೇಕ್ಷೆ ಪಟ್ಟರೆ ಮ್ಯಾಜಿಸ್ಟ್ರೇಟರು ಗುಟ್ಟಾಗಿಯೇ ದಸ್ತು ಮಾಡಬಹುದು ಇಲ್ಲವೇ ಅವರು ಹುಚ್ಚರಿರುವ ಮನೆಗಳಿಗೆ ಹೋಗಿ ತೀರುವಮಾಡಿಕೊಂಡು ಬಂದು ಹುಕುಂ ಕೊಡಬಹುದು

ಪ್ರೊಫೆಷನಲ್ ಟ್ಯಾಕ್ಸ್ ಸನ್ನು ಮಾಫಿ ಬಿಡುವುದು

೧೯೦೫ ನೇ ಇಸವಿ ಮೇ ಮಾಹೆ ೬ ನೇ ಹುಕುಂ ಪ್ರೊಸೀಡಿಂಗ್ಸಿನ ಪ್ರಕಾರ ಜಕಾತ್ ಕಂದಾಯವನ್ನು ಮಾಫಿ ಮಾಡಿದಾಗಲೆಲ್ಲಾ ಅದರ ಜೊತೆಗೆ ಲೋಕಲ್ ಸೆಸ್ಸನ್ನೂ ಮಾಫ್ ಮಾಡುತ್ತಿತ್ತು ಆದರೆ ಮದರಾಸ್ ಆಧಿಪತ್ಯದಲ್ಲಿ ಈ ರೀತಿ ಲೋಕಲ್ ಸೆಸ್ಸನ್ನು ಮಾಫ್ ಮಾಡುವ ಪದ್ಧತಿಯಿಲ್ಲ ಈ ಪದ್ಧತಿ ಮೈಸೂರು ಸಂಸ್ಥಾನದಲ್ಲಿಯೂ ಜಾರಿಯಲ್ಲಿ ತರುವ ಭಾಗದಲ್ಲಿ, ಜನಗಳಿಗೆ ಸೌಕರ್ಯಾನುಕೂಲತೆಗಳನ್ನು ಒದಗಿಸಿಕೊಡುವ ಉದ್ದೇಶದಿಂದ ಈ ತೀರ್ವೆಗಳು ವಸೂಲುಮಾಡಿ ವಿನಿಯೋಗಿಸಲ್ಪಡತಕ್ಕದ್ದಾದ್ದರಿಂದ ಕಂದಾಯವನ್ನು ರಿಮಿಷನ್ ಮಾಡಿದ ಮಾತ್ರಕ್ಕೇ ಅದರ ಜೊತೆಗೆ ಲೋಕಲ್ ಸೆಸ್ಸುಗಳನ್ನೂ ರಿಮಿಷನ್ ಮಾಡಬೇಕಾದ ಆವಶ್ಯಕತೆಯಿಲ್ಲವೆಂದು ರೆವಿನ್ಯೂ ಕಮಿಷನರವರು ಶಿಫಾರಸು ಮಾಡಿದ್ದನ್ನು ಗವರ್ನಮೆಂಟಿನವರು ಅಂಗೀಕರಿಸಿ, ಸಂದರ್ಭಾನುಸಾರ ಸೆಸ್ಸುಗಳ ವಸೂಲಿಯನ್ನು ಕೊಂಚಕಾಲ ಸಾವಕಾಶಮಾಡಬಹುದೇ ಹೊರತು ಅನಾಮತ್ತಾಗಿ ರಿಮಿಷನ್ ಮಾಡಕೂಡದೆಂದು ಹುಕುಂ ಮಾಡಿರುತ್ತಾರೆ.

ಮ್ಯುನಿಸಿಪಲ್ ಕಂದಾಯಗಳ ವಸೂಲಿ ಕ್ರಮವು

ಮ್ಯುನಿಸಿಪಲ್ ಕಂದಾಯಗಳ ವಸೂಲಾತಿಯ ಕಿಸ್ತುಗಳನ್ನು ಗವರ್ನಮೆಂಟಿನವರು ಗೊತ್ತು ಮಾಡಿ ಸಂಸ್ಥಾನದಾದ್ಯಂತ ವ್ಯವಹರಿಸುವಂತೆ ಹುಕುಂ ಕೊಟ್ಟಿರುವುದೇನೆಂದರೆ —(೧) ಹೊಸ ಕಾನೂನ್ ಚಲಾವಣೆಗೆ ಬಂದಿರುವ ಮ್ಯುನಿಸಿಪಾಲಿಟಿಗಳಲ್ಲಿ ಎಲ್ಲಾ ತರದ ಮ್ಯುನಿಸಿಪಲ್ ತೆರಿಗೆಗಳನ್ನೂ (ಮನೆ ಮತ್ತು ನಿವೇಶನದ ಕಂದಾಯ, ಗಾಡಿ ದೋಣಿ ಜಾನುವಾರು ನಾಯಿ ಇವುಗಳ ಮೇಲೆ ಹಾಕಿರುವ ಕಂದಾಯ, ಸ್ಯಾನಿಟರಿ ಸೆಸ್ಸು, ನೀರಿನ ತೆರಿಗೆ, ದೀಪದ ತೆರಿಗೆ, ಕಸಬುಗಳ ಮೇಲಣ ತೆರಿಗೆ, ಅಂಗಡಿ ಗಳಾ ಗಾಡಿಗಳ ತೆರಿಗೆ ಇವುಗಳನ್ನು) ಪ್ರತಿ ವರುಷವೂ ಎರಡೇ ಕಿಸ್ತುಗಳಲ್ಲಿ ಅಂದರೆ ಜೂಲೈ ಮತ್ತು ಜನವರಿ ಮಾಹೆಗಳಲ್ಲಿ ಪೂರಾ ವಸೂಲ್ಮಾಡಬೇಕು (೨) ಹೊಸ ಕಾನೂನ್ ಜಾರಿಯಲ್ಲಿ ಇಲ್ಲದೆ ಇರುವಂಥಾ ಮ್ಯುನಿಸಿಪಾಲಿಟಿಗಳಲ್ಲಿ ಮನೆ ಎಕ್ಸ್ ಮೊಹತರ್ಫಾ ಕಂದಾಯಗಳನ್ನು ರೆವಿನ್ಯೂ ರೂಲಿನಲ್ಲಿ ಕಂಡಂತೆ ಕಿಸ್ತುವಾರಾಗಿ ವಸೂಲ್ಮಾಡಬೇಕು ಆದರೆ ಈ ಕಂದಾಯವು ಒಂದು ರೂಪಾಯಿಗೆ ಮೀರದಿದ್ದರೆ ಮೊದಲನೇ ಕಿಸ್ತಿನಲ್ಲಿಯೇ ಅದನ್ನು ವಸೂಲ್ಮಾಡಬೇಕು

ಪಟೇಲರಿಗೆ ಪ್ರೋತ್ಸಾಹಪಡಿಸಿದ್ದು

ಶಿಂಶೆಯ ಆಸ್ಪತ್ರೆ ಅಸಿಸ್ಟೆಂಟರು ಕೆಲವು ಗ್ರಾಮಾಧಿಕಾರಿಗಳು ಪ್ಲೇಗ್ ಶಿಡುಬನ್ನು ಗ್ರಾಮಸ್ಥರಿಗೆ ಹಾಕಿಸುವುದರಲ್ಲಿ ತುಂಬಾ ಸಾಹಸಪಟ್ಟಿದ್ದಾರೆಂದೂ, ಅವರಿಗೆ ಯಾವುದಾದರೂ ಒಂದು ವಿಧವಾಗಿ ಪ್ರೋತ್ಸಾಹ ಪಡಿಸಬೇಕೆಂದೂ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸ್ಯಾನಿಟರಿ ಕಮಿಷನರವರಿಗೆ ಬರೆದುಕೊಂಡರು ಸ್ಯಾನಿಟರಿ ಕಮಿಷನರವರು ಅದನ್ನು ಗೌರ್ನಮೆಂಟಿಗೆ ಶಿಫಾರಸು ಮಾಡಿ ತಿಳಿಸಿದರು ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರವರು ಅತ್ತಿಗನಾಳು ಮತ್ತು ನಂದಿ ಗ್ರಾಮಗಳ ಪಟೇಲರ ವಿಷಯದಲ್ಲಿ ಅವರಿಗೆ ತಕ್ಕ ಬಹುಮಾನಗೆಯನ್ನು ಕೆತ್ತಿಸಿದ ಬೆಳ್ಳಿಯ ಮೆಡಲುಗಳನ್ನು ಕೊಟ್ಟು ಪ್ರೋತ್ಸಾಹಪಡಿಸಬೇಕೆಂದು ಡಿಸೆಂಬರಿನಲ್ಲಿ ಗೌರ್ನಮೆಂಟಿಗೆ ಬರೆದುಕೊಂಡರು ಗವರ್ನಮೆಂಟಿನವರು ಅದರಂತೆ ಸ್ಯಾಂಕ್ಷನ್ ಮಾಡಿ, ಪ್ಲೇಗ್ ಫಂಡಿನಿಂದ ಎರಡು ಬೆಳ್ಳಿ ಮೆಡಲುಗಳನ್ನು ಮಾಡಿಸಿ ಡೆಪ್ಯುಟಿ ಕಮಿಷನರವರು ಯಾವುದಾದರೂ ಒಂದು ವಿಶೇಷ ದಿನದಲ್ಲಿ ಆ ಪಟೇಲರಿಬ್ಬರಿಗೂ ಬಹಿರಂಗದಲ್ಲಿ ಬಹುಮಾನವಾಗಿ ಕೊಡಬೇಕೆಂದು ಸ್ಯಾಂಕ್ಷನ್ ಮಾಡಿ, ಅವೆರಡನ್ನೂ ಮಾಡಿಸುವುದಕ್ಕೆ ಎಷ್ಟು ಖರ್ಚಾಗುವುದೋ ತಿಳಿಸಬೇಕೆಂದು ಸ್ಯಾನಿಟರಿ ಕಮಿಷನರವರನ್ನು ಕೇಳಿರುತ್ತಾರೆ

ಶಾನುಭೋಗರಿಗೆ ಸಾದಿಲ್ವಾರು ಖರ್ಚು ಕೊಡುವುದು

ಸರ್ಕಾರಿ ಗ್ರಾಮಗಳಲ್ಲಿ ರೆವಿನ್ಯೂ ಆಫೀಸರುಗಳಿಗೆ ಕೊಡುವ ಪ್ರಕಾರ ಮ್ಯುನಿಸಿಪಲ್ ಟೌನುಗಳಲ್ಲಿ ಶ್ಯಾನುಭೋಗರಿಗೂ ಪಟೇಲರಿಗೂ ಸಾದಿಲ್ವಾರು ಖರ್ಚನ್ನು ಕೊಡಿಸಬೇಕೆಂದು ೧೯೦೭ ನೇ ಇಸವಿಯ ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಸೂಚಿಸಿ ಚರ್ಚೆ ಮಾಡಿದರು ಗವರ್ನಮೆಂಟಿನವರು ಈ ವಿಷಯವನ್ನು ಡೆಪ್ಯುಟಿ ಕಮಿಷನರುಗಳಿಗೆಲ್ಲಾ ತಿಳಿಸಿ ಅವರಿಂದ ಅಭಿಪ್ರಾಯಗಳನ್ನು ತರಿಸಿಕೊಂಡರು ಚಿತ್ರದುರ್ಗದ ಡೆಪ್ಯುಟಿ ಕಮಿಷನರು ೧೯೦೭ ನೇ ಮಾರ್ಚ್ ತಾ ೧೬ ರಲ್ಲೂ ಕೋಲಾರದ ಡೆಪ್ಯುಟಿ ಕಮಿಷನರು ೧೯೦೯ ನೇ ಏಪ್ರಿಲ್ ತಾ ೩ ರಲ್ಲೂ ಜವಾಬ್ ಕೊಟ್ಟರು ಇವೆರಡು ತಾರೀಖುಗಳ ಮಧ್ಯೆ ಇತರ ಡೆಪ್ಯುಟಿ ಕಮಿಷನರುಗಳು ತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಿರುತ್ತಾರೆ ಗವರ್ನಮೆಂಟಿನವರು ಕಳೆದ ಜನವರಿ ತಾ ೨೧ ರಲ್ಲಿ ಈ ವಿಷಯವನ್ನು ಇತ್ಯರ್ಥಪಡಿಸಿ ಹುಕುಂ ಕೊಟ್ಟಿರುವುದೇನೆಂದರೆ —ಮ್ಯುನಿಸಿಪಲ್ ಟೌನುಗಳಲ್ಲಿ ಮೊಹತರ್ಫಾ ಮುಂತಾದ ಕಂದಾಯಗಳ ವಸೂಲಾತಿಯನ್ನು ಗ್ರಾಮಾಧಿಕಾರಿಗಳಿಗೆ ವಹಿಸಿ ಅವರಿಗೆ ಕಮಿಷನ್ ಕೊಡುತ್ತಿರುವ ಪಕ್ಷದಲ್ಲಿ ಅಂಥಾ ಗ್ರಾಮಾಧಿಕಾರಿಗಳಿಗೆ ವರುಷಕ್ಕೆ ಮೂರು ರೂಪಾಯಿನ ಪ್ರಕಾರ ಸಾದಿಲ್ವಾರು ಖರ್ಚು ಪಾವತಿ ಮಾಡಬೇಕು ಈ ಏರ್ಪಾಡು ಅಖೈರಾಯಿತೆ ತಾರೀಖು ರೂಢಿಸಲ್ಪಡತಕ್ಕದ್ದು

ಹೊಸ ಗ್ರಾಮಪಾಠಶಾಲೆಗಳನ್ನು ಪ್ರಾರಂಭಿಸಿದ್ದು

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಇಪ್ಪತ್ತಮೂರು ಗ್ರಾಮಗಳಲ್ಲಿ ಮಕ್ಕಳಿಗೆ ಬಾಲಪಾಠಗಳನ್ನು ಕಲಿಸುವುದಕ್ಕೆ ಪಾಠಶಾಲೆಗಳನ್ನು ಇಡುವಂತೆ ಸ್ಯಾಂಕ್ಷನ್ ಮಾಡಿಕೊಡಬೇಕೆಂದೂ, ಈ ಪಾಠಶಾಲೆಗಳಿಗೆ ಮಾಹೆಯಾನಾ ೨೮೮ ರೂಪಾಯಿನ (ವರುಷಕ್ಕೆ ೩,೪೫೬ ರೂಪಾಯಿನ) ಶಿಬ್ಬಂದಿ ಖರ್ಚಾಗುವುದೆಂದೂ, ಚಾಲ್ತಿ ಸಾಲಿಗೆ ಸ್ಯಾಂಕ್ಷನ್ ಆಗಿರುವ ಗ್ರಾಮಾಂತರ ಸ್ಕೂಲುಗಳ ಫಂಡಿನ ೫,೦೦೦ ರೂಪಾಯಿನಲ್ಲಿ ಈ ಖರ್ಚನ್ನು ಮಾಡಬಹುದಾಗಿದೆ ಎಂದೂ ಗವರ್ನಮೆಂಟಿಗೆ ಬರೆದುಕೊಂಡರು ಗವರ್ನಮೆಂಟಿನವರು ಅವರ ಶಿಫಾರಸಿನಂತೆ ೨೩ ಸ್ಕೂಲುಗಳನ್ನು ಇಡಬೇಕೆಂದು ಸ್ಯಾಂಕ್ಷನ್ ಮಾಡಿರುತ್ತಾರೆ ಈ ಸ್ಕೂಲುಗಳ ವಿವರ ಹ್ಯಾಗೆಂದರೆ —ಬೆಂಗಳೂರಿನ ಸರ್ಕಲಿನಲ್ಲಿ ೧೨, ಮೈಸೂರು ಸರ್ಕಲಿನಲ್ಲಿ ೧೧ ಬೆಂಗಳೂರು ಸರ್ಕಲಿನಲ್ಲಿ ಹಿಂದುಸ್ಥಾನಿ ಸ್ಕೂಲು ೧, ತೆಲಗು ಸ್ಕೂಲು ೧, ಗಂಡು ಹುಡುಗರ ಸ್ಕೂಲು ೧೦ ಮೈಸೂರು ಸರ್ಕಲಿನಲ್ಲಿ ಗಂಡು ಹುಡುಗರ ಸ್ಕೂಲು ೬, ಕನ್ನಡ ಬಾಲಿಕಾಪಾಠಶಾಲೆ ೩, ಪಂಚಮರ ಸ್ಕೂಲು ೨, ಹಿಂದುಸ್ಥಾನಿ ಗಂಡು ಮಕ್ಕಳ ಸ್ಕೂಲು ೨, ಹಿಂದುಸ್ಥಾನಿ ಹೆಣ್ಣುಮಕ್ಕಳ ಸ್ಕೂಲು ೨ ಈ ೨೩ ಸ್ಥಳಗಳಲ್ಲೂ ಪಾಠಶಾಲೆಗಳನ್ನು ಇಟ್ಟು ನಡಿಸುವುದಕ್ಕೆ ಕಟ್ಟಡಗಳು ಸಿದ್ಧವಾಗಿರುವವು.

ಮೈಸೂರು ಪಟ್ಟಣದಲ್ಲಿ ನೀರಿನ ತೆರಿಗೆಯು

ಮೈಸೂರು ಪಟ್ಟಣದಲ್ಲಿ ಮನೆಗಳಿಗೆ ಒಂದು ಅಂಗುಲ ಅರ್ಧ ಅಂಗುಲ ಪ್ರಮಾಣಗಳುಳ್ಳ ನಲ್ಲಿಗಳನ್ನು ಇಡಿಸಿಕೊಂಡು, ಕುಡಿಯುವ ನೀರನ್ನು ತೆಗೆದುಕೊಳ್ಳುತ್ತಿರುವರು ೧೮೯೯ ನೇ ಜುಲೈ ಲಾಗಾಯಿತು ಮ್ಯುನಿಸಿಪಾಲಿಟಿಗೆ ಸಾಲಿಯಾನ ೨೪ ರೂಪಾಯಿ, ೧೨ ರೂಪಾಯಿನಂತೆ ನೀರಿನ ತೆರಿಗೆಯನ್ನು ಮ್ಯುನಿಸಿಪಾಲಿಟಿಗೆ ಪಾವತಿ ಮಾಡುತ್ತಿದ್ದರು ಇತರ ಪ್ರಜೆಗಳ್ಯಾರೂ ನೀರಿನ ತೆರಿಗೆಯನ್ನು ಕೊಡುತ್ತಿರಲಿಲ್ಲ ಸಕಲ ಪ್ರಜೆಗಳಿಗೂ ತಾರತಮ್ಯವಿಲ್ಲದೆ ನೀರಿನ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕೆಂಬ ವಿಷಯವಾಗಿ ಗವರ್ನಮೆಂಟಿಗೂ ಮ್ಯುನಿಸಿಪಾಲಿಟಿಗೂ ಕೆಲವು ವರುಷಗಳಿಂದಲೂ ಕಾಗದ ಪತ್ರಗಳು ನಡೆಯುತ್ತಾ ಬಂದು ಕಡೆಗೆ ಕಳೆದ ೧೯೦೯ ನೇ ಜುಲೈ ತಿಂಗಳ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಕೌನ್ಸಿಲರುಗಳು ಪಟ್ಟಣದಲ್ಲಿ ಸಕಲ ಪ್ರಜೆಗಳಿಂದಲೂ ಮನೆಗಳ ವರುಷದ ಬಾಡಿಗೆ ದರದ ಮೇಲೆ ಶೇಕಡಾ ಮೂರು ರೂಪಾಯಿನಂತೆ ನೀರಿನ ತೆರಿಗೆಯನ್ನು ಹಾಕಬಹುದು ಎಂಬದಾಗಿ ತೀರ್ಮಾನ ಮಾಡಿ ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡರು ಗವರ್ನಮೆಂಟಿನವರು ಅದರ ಮೇಲೆ ೧೯೧೦ ನೇ ಜನವರಿ ತಾ ೨೦ ರಲ್ಲಿ ಹುಕುಂ ಕೊಟ್ಟಿರುವುದೇನೆಂದರೆ —ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿರುವ ಎಲ್ಲಾ ಮನೆಗಳ ಮತ್ತು ಆವರಣಗಳ ಬಾಡಿಗೆ ದರದ ಮೇಲೆ ೧೯೧೦ ನೇ ಇಸವಿ ಏಪ್ರಿಲ್ ತಾ ೧ ರ ಲಾಗಾಯಿತು ಸರ್ವಸಾಮಾನ್ಯವಾಗಿ ಶೇಕಡಾ ಮೂರು ರೂಪಾಯಿನಂತೆ ನೀರಿನ ತೆರಿಗೆಯನ್ನು ವಿಧಿಸಿ ವಸೂಲ್ಮಾಡಬೇಕು ಇದು ಜಾರಿಗೆ ತರಲ್ಪಡುವ ತಾರೀಖಿನಿಂದ ಹಿಂದೆ ಸ್ಯಾಂಕ್ಷನ್ ಆಗಿ ವಸೂಲಾಗುತ್ತಿದ್ದ ನೀರಿನ ತೆರಿಗೆಯನ್ನು (೨೪ ರೂ ೧೨ ರೂ) ಗವರ್ನಮೆಂಟಿನವರು ವಜಾ ಮಾಡಿರುತ್ತಾರೆ

ಸೆಂಟ್ರಲ್ ನಾಜರ್ ಏರ್ಪಾಡು

ಸರ್ಕಾರದವರು ಸಂಸ್ಥಾನದ ಸಿವಿಲ್ ಕೋರ್ಟುಗಳ ಸಮನ್ಸುಗಳನ್ನು ಜಾರಿ ಮಾಡುವುದಕ್ಕೆ ಚೀಫ್ ಕೋರ್ಟಿನ ಅಭಿಪ್ರಾಯದ ಪ್ರಕಾರ ಕಳೆದ ೧೯೦೫ ನೇ ಇಸವಿ ಜನವರಿಯಲ್ಲಿ ಸೆಂಟ್ರಲ್ ನಾಜರ್ ಎಂಬ ಏರ್ಪಾಡನ್ನು ಮಾಡಿದರು ಆದರೆ ಈ ಏರ್ಪಾಡು ತೃಪ್ತಿಕರವಾಗಿ ನಡೆಯುವುದಿಲ್ಲವೆಂದೂ, ಇದರಿಂದ ಕಕ್ಷಿಗಾರರಿಗೆ ನಷ್ಟವೂ ವ್ಯಾಜ್ಯಗಳ ಫೈಸಲಾತಿಗೆ ಸಾವಕಾಶವೂ ಆಗುತ್ತಿದೆ ಎಂದೂ, ಅದನ್ನು ವಜಾ ಮಾಡಿ ಮೊದಲು ಇದ್ದಂತೆ ಪ್ರತಿ ಒಂದು ಸಿವಿಲ್ ಕೋರ್ಟಿಗೂ ಪ್ರತ್ಯೇಕವಾಗಿ ಸಮನ್ಸ್ ಜಾರಿ ಶಿಬ್ಬಂದಿಯನ್ನು ಇಟ್ಟುಕೊಡಬೇಕೆಂದೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಪ್ರತಿ ವರುಷವೂ ಕೇಳಿಕೊಳ್ಳುತ್ತಾ ಬಂದಿದ್ದರು ಇದನ್ನು ಗವರ್ನಮೆಂಟಿನವರು ಪರ್ಯಾಲೋಚನೆ ಮಾಡಿ ಕಳೆದ ಜನವರಿ ತಿಂಗಳಲ್ಲಿ ಹುಕುಂ ಕೊಟ್ಟಿರುವುದೇನೆಂದರೆ,—ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಇರುವ ಎರಡೆರಡು ಮುನ್ಸಿಫ್ ಕೋರ್ಟುಗಳಿಗೂ ಎರಡೆರಡು ಪ್ರತ್ಯೇಕ ಪ್ರತ್ಯೇಕವಾದ ಸಮನ್ಸ್ ಪ್ಯಾದೆಗಳ ಶಿಬ್ಬಂದಿಯನ್ನು ಇಡಬೇಕು ಈ ಶಿಬ್ಬಂದಿಯು ಆಯಾ ಕೋರ್ಟಿನ ಮುನ್ಸಿಫರ ಅಧಿಕಾರಕ್ಕೇ ಒಳಪಟ್ಟಿರತಕ್ಕದ್ದು ಶಿವಮೊಗ್ಗೆಯಲ್ಲಿರುವ ಈ ಶಿಬ್ಬಂದಿಯೆಲ್ಲಾ ಅಲ್ಲಿನ ಮುನ್ಸಿಫರ ಕೈಕೆಳಗೆ ಕೆಲಸ ಮಾಡುವಂತೆ ವರ್ಗಾಯಿಸಲ್ಪಡಬೇಕು ಡಿಸ್ಟ್ರಿಕ್ಟ್ ಕೋರ್ಟಿನ ಮತ್ತು ಸಬ್ ಜಡ್ಜ್ ಕೋರ್ಟಿನ ಸಮನ್ಸುಗಳನ್ನು ಮೇಲ್ಕಂಡ ಶಿಬ್ಬಂದಿಯಿಂದಲೇ ಜಾರಿಮಾಡಿಸಬೇಕು ಆದರೆ ಯಾವ ಸಬ್ ಜಡ್ಜ್ ಕೋರ್ಟಿನಲ್ಲಿ ಸ್ಮಾಲ್ ಕಾಸ್ ಮೊಕದ್ದಮೆಗಳು ಎಷ್ಟು ಹೆಚ್ಚಾಗಿರುವವೋ ಅಂಥಾ ಕೋರ್ಟಿಗೆ ಅವಶ್ಯ ಕಂಡು ಬಂದರೆ ಪ್ರತ್ಯೇಕವಾದ ಸಮನ್ಸ್ ಪ್ಯಾದೆಗಳ ಶಿಬ್ಬಂದಿಯನ್ನು ನೇಮಿಸಿ ಕೊಡಬಹುದು ಈ ವಿಚಾರದಲ್ಲಿ ಚೀಫ್ ಕೋರ್ಟಿನವರು ಅವಶ್ಯವಾದ ರೂಲ್ಸು ಮುಂತಾದದ್ದನ್ನು ಮಾಡಿ ಗವರ್ನಮೆಂಟಿನ ಸ್ಯಾಂಕ್ಷನ್‌ಬಗ್ಗೆ ಕಳುಹಿಸಿಕೊಡಬೇಕಾಗಿದೆ

ಅಮೃತಮಹಲ್ ಇಲಾಖೆಯೂ, ಬಿಮೋಸಿನ ದರಖಾಸ್ತುಗಳೂ

ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟರವರು ಶಿರೀಶಿರೆ ತಾಲ್ಲೂಕಿನಲ್ಲಿ ಶಿಕಸ್ತಾಗಿರುವ ಪರ್ವತರಾಯನ ಕೆರೆಯ ಒಳಪ್ರದೇಶವನ್ನು ರೆವಿನ್ಯೂ ಇಲಾಖೆಯವರಿಗೆ ತಿಳಿಸದೇನೇ ವ್ಯವಸಾಯಕ್ಕೆ ಕೊಟ್ಟಿರೆಂದೂ, ಹೀಗೆ ಕಾವಲಿನ ಜಮೀನುಗಳನ್ನು ಕೊಡಲು ಅವರಿಗೆ ಅಧಿಕಾರವಿರುತ್ತದೆಯೇ ಎಂದೂ ಕಡೂರು ಡೆಪ್ಯುಟಿ ಕಮಿಷನರವರು ಗವರ್ನಮೆಂಟಿಗೆ ಬರೆದು ಕೇಳಿದರು ಅದರ ಮೇಲೆ ಗವರ್ನಮೆಂಟಿನವರು ಕೊಟ್ಟಿರುವ ಹುಕುಮಿನ ಅಭಿಪ್ರಾಯವೇನೆಂದರೆ — ಅಮೃತಮಹಲ್ ಕಾಲುವೆಗಳಲ್ಲಿ ಜೊಂಡು ಮೊದಲಾದದ್ದು ಬೆಳೆದುಕೊಂಡಿರುವುದನ್ನು ಕತ್ತರಿಸಿ ಚೊಕ್ಕಟ ಮಾಡಿಸುವುದಕ್ಕಾಗಿಯೂ, ಸರ್ಕಾರಿ ದನಗಳ ಮೇವಿಗೆ ಅವಶ್ಯವಾದ ಹುಲ್ಲು ಹುರುಳಿಯನ್ನು ಅಲ್ಪ ಸ್ವಲ್ಪ ಬೆಳೆದುಕೊಳ್ಳುವುದಕ್ಕಾಗಿಯೂ ಕಲ್ಪ ಸ್ವಲ್ಪ ಜಮೀನನ್ನು ಯಾವಾಗಲೂ ವ್ಯವಸಾಯಕ್ಕೆ ಕೊಡುವುದು ಪದ್ಧತಿಯಾಗಿದೆ ಎಂದೂ, ಹಾಗೆ ಮಾಡಿದ ಒಳೆಯ ಕ್ರಯವನ್ನು ಸರ್ಕಾರದ ಹುಕುಮಿನಂತೆ ಗವರ್ನಮೆಂಟ್ ಜಮಾ ಬಾಬಿಗೆ ದಾಖಿಲ್ ಮಾಡುತ್ತಾ ಬಂದಿದೆ ಎಂದೂ ಸೂಪರಿಂಟೆಂಡೆಂಟರವರು ತಿಳಿಸಿರುತ್ತಾರೆ ಈ ಕಾವಲುಗಳನ್ನು ಸರ್ಕಾರಿ ದನಗಳ ಮೇವಿಗೋಸ್ಕರ ಅಮೃತಮಹಲ್ ಇಲಾಖೆಗೆ ವಹಿಸಲಾಗಿದೆ ಈ ಪೈಕಿ ಕೆಲವು ಭಾಗಗಳನ್ನು ದನಗಳ ಪೋಷಣೆಗೂ ಅಭಿವೃದ್ಧಿಗೂ ಅನುಕೂಲಿಸುವಂಥಾ ಪೈರು ಪಚೆ ಬೆಳೆಯುವುದಕ್ಕೆ ವ್ಯವಸಾಯಕ್ಕೆ ಹಂಗಾಮಿಯಾಗಿ ವಿನಿಯೋಗಿಸಿಕೊಳ್ಳುವುದರಲ್ಲಿ ಅಭ್ಯಂತರವೇನೂ ಇರಲಾರದೆಂದು ಗವರ್ನಮೆಂಟಿನವರು ಅಭಿಪ್ರಾಯಪಡುತ್ತಾರೆ ರೆವಿನ್ಯೂ ಇಲಾಖೆಯ ಮೂಲಕ ಈ ಕೆಲಸವನ್ನು ಮಾಡಿಸುವುದಾದರೆ ವ್ಯವಸಾಯ ಕಾಲವು ಮೀರಿ ಬಹಳ ಸಾವಕಾಶವಾಗುತ್ತದೆ ಆದಕಾರಣ ಈ ಜಮೀನುಗಳ ವ್ಯವಸಾಯವನ್ನು ಅಮೃತಮಹಲ್ ಇಲಾಖೆಯವರಿಗೇ ವಹಿಸಲ್ಪಟ್ಟಿದೆ ಆದರೆ ಅಂಥಾ ಜಮೀನುಗಳನ್ನು ಅಮೃತಮಹಲ್ ಇಲಾಖೆಯು ರೀವೆರಗಾರೇ ಮೊದಲಾದ ನೌಕರರೇ ಆಕ್ರಮಿಸಿಕೊಳ್ಳದಂತೆಯೂ, ಜಮೀನಿನ ಸರಿಯಾದ ಪ್ರತಿಫಲ ಬರುವಂತೆಯೂ ಸೂಪರಿಂಟೆಂಡೆಂಟರವರು ನೋಡಿಕೊಳ್ಳಬೇಕು ಜಮೀನುಗಳನ್ನು ವ್ಯವಸಾಯಕ್ಕೆ ಕೊಡಬೇಕಾದ ಸಂದರ್ಭ ಬಿದ್ದರೆ ಆ ಸಂಗತಿಯನ್ನು ಸರಿ ಗ ಇಸ್ತಿಹಾರು ಹಾಕಿಸಬೇಕು

ಉಮೇದ್ವಾರ ಡೆಪ್ಯುಟಿ ಅಮಲ್ದಾರ ಮತ್ತು ಶಾನುಭೋಗರನ್ನು ಸರ್ವೆ ಕೆಲಸದಲ್ಲಿ ತರಪೇತು ಮಾಡುವುದು

ಮೇಲ್ಕಂಡ ವಿಷಯದಲ್ಲಿ ಸರ್ಕಾರದವರು ಸರ್ವೆ ಸೂಪರಿಂಟೆಂಡೆಂಟರವರ ಮತ್ತು ರೆವಿನ್ಯೂ ಕಮಿಷನರವರ ಅಭಿಪ್ರಾಯಗಳನ್ನು ಪರ್ಯಾಲೋಚನೆ ಮಾಡಿ ತೀರ್ಮಾನಿಸಿರುವುದೇನೆಂದರೆ,—

ಏಳು ವರುಷಕ್ಕಿಂತ ಕಮ್ಮಿ ಸರ್ವೀಸ್ ಉಳ್ಳ ಎಲ್ಲಾ ಅಮಲ್ದಾರರುಗಳೂ ಎಲ್ಲಾ ಡೆಪ್ಯುಟಿ ಅಮಲ್ದಾರರುಗಳೂ ಸಹ ಜಮೀನ್ ಹದ್ದುಬಸ್ತಿನ ಬಾಂದು ಕಲ್ಲುಗಳನ್ನು ಸರಿಯಾಗಿ ಅಜಮಾಯಿಷಿ ಮಾಡುವುದಕ್ಕೂ, ಶೇಕದಾರರು ತಯಾರುಮಾಡುವ ಅಕಾರಬಂದು ಇತರ ರೆಕಾರ್ಡುಗಳನ್ನೂ ಮೋಕಾಬಿಲೆಮಾಡಿ ಪರಿಶೋಧನೆಮಾಡುವುದಕ್ಕೂ ಅನುಕೂಲಿಸುವಂತೆ ಜಮೀನ್ ಸರ್ವೆ ಮಾಡುವುದರಲ್ಲಿ ಶಿಕ್ಷಣಹೊಂದಬೇಕು ಈಗ ಸಂಸ್ಥಾನದಲ್ಲಿ ರಿವಿಜನ್ ಸರ್ವೆ ಕೆಲಸ ಮಾತ್ರ ನಡೆಯುತ್ತಾ ಇದೆ ಆ ಕಮಿಷನರುಗಳನ್ನು ಈಗ ಸರ್ವೆ ಕೆಲಸದಲ್ಲಿ ತರಪೇತು ಮಾಡುತ್ತಿರುವ ಕೆ ಇಷ್ಟು ಜಾಸ್ತಿ ಜನ ಆಫೀಸರುಗಳನ್ನು ಸದರಿ ಸರ್ವೆ ಶಿಬ್ಬಂದಿಗೆ ಸೇರಿಸಿ ತರಪೇತು ಮಾಡುವುದಕ್ಕೆ ಏರ್ಪಾಡು ಮಾಡುವುದು ಸಾಧ್ಯವಲ್ಲ ಆದಕಾರಣ ಇವರುಗಳಿಗೆಲ್ಲಾ ಪ್ರತ್ಯೇಕವಾಗಿ ಒಂದು ತರಗತಿಯನ್ನು ೧೯೧೦ ನೇ ಆಗಸ್ಟ್ ಗುರ್ರೆ ಲಾಗಾಯಿತು ಮೂರು ತಿಂಗಳ ವರೆಗೆ ಬೆಂಗಳೂರಿನಲ್ಲಿ ಏರ್ಪಡಿಸಿ ಅದನ್ನು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರ ಮೇಲ್ವಿಚಾರಣೆಯಲ್ಲಿ ಇಡಲಾಗುವುದು

ಪ್ರತಿಯೊಬ್ಬ ಆಫೀಸರೂ ಒಂದು ತಿಂಗಳ ವರೆಗೆ ಶಿಕ್ಷಣವನ್ನು ಹೊಂದಬೇಕು ಸದರಿ ಶಿಕ್ಷಣದಲ್ಲಿ ಮುಖ್ಯವಾಗಿ ಭೂಮಿ ಅಳತೆಯ ಕೆಲಸವನ್ನೂ ಜಮೀನ್ ಬಾಂದುಕಲ್ಲುಗಳ ಅಜಮಾಯಿಷಿ ಕೆಲಸವನ್ನೂ ಮತ್ತು ಗೈರುಹಾಜರಾದ ಬಾಂದುಕಲ್ಲುಗಳನ್ನು ಪುನಃ ಹಾಕಿಸುವ ಕ್ರಮವನ್ನೂ ಸಹ ಕಲಿಸುತ್ತೆ ಶಿಕ್ಷಣಹೊಂದಲು ಲಾಯಖಾದ ಅಮಲ್ದಾರರನ್ನೂ ಡೆಪ್ಯುಟಿ ಅಮಲ್ದಾರರನ್ನೂ ಮೂರು ಗುಂಪುಗಳಾಗಿ ಕಳುಹಿಸಬೇಕೆಂತಲೂ, ಅವರು ಈ ಕೆಲಸವನ್ನು ಕಲಿತುಕೊಳ್ಳಲು ಬಂದಾಗ್ಗೆ ಅವರ ಗೈರ್‌ಹಾಜರಿಯಲ್ಲಿ ತಾಲ್ಲೂಕ್ ಶಿರಸ್ತೆದಾರರುಗಳು ಲಾಯಖಾಗಿದ್ದರೆ ಅವರನ್ನು ತಾಲ್ಲೂಕಿನ ಛಾರ್ಜಿನಲ್ಲಿಡಬೇಕೆಂತಲೂ, ಅಥವಾ ಇತರ ಏರ್ಪಾಡು ಮಾಡಬೇಕಾದದ್ದು ಅವಶ್ಯವಾಗಿದ್ದರೆ ಆ ಬಗ್ಗೆ ಸರ್ಕಾರದವರ ವಿಶೇಷ ಮಂಜೂರಾತಿಯನ್ನು ಪಡೆಯತಕ್ಕದ್ದೆಂತಲೂ ರೆವಿನ್ಯೂ ಕಮಿಷನರವರಿಗೆ ತಿಳಿಸಿದೆ ಈ ವಿಚಾರವಾಗಿ ರೆವಿನ್ಯೂ ಕಮಿಷನರವರು ಮಾಡಬೇಕೆಂದಿರುವ ಏರ್ಪಾಡನ್ನು ಸರ್ಕಾರಕ್ಕೆ ತಿಳಿಸಬೇಕು

ಸರ್ವೆ ಸೂಪರಿಂಟೆಂಡೆಂಟರ ತಾಬೆಯಲ್ಲಿ ಹಾಲಿ ಇರುವ ಶಿಬ್ಬಂದಿಯಿಂದ ಶಿಕ್ಷಕರನ್ನು ಒದಗಿಸಿಕೊಡುವುದು ಸಾಧ್ಯವಿಲ್ಲವೆಂತಲೂ ಮಾಹೆಯಾನಾ ೫೦ ರೂ ಸಂಬಳದಲ್ಲಿ ಒಬ್ಬ ಸರ್ವೇಯರನ್ನೂ, ೩೫ ರೂ ಸಂಬಳದಲ್ಲಿ ಒಬ್ಬ ಮೆಷರ್‌ಮೆಂಟ್ ಅಳತೆಯವರನ್ನು ಇಸಂ ಒಂದಕ್ಕೆ ೬ ರೂ ಮೇರೆ ೧೨ ಮಂದಿ ಚಾಪುಟಾ ಹಿಡಿಯುವವರನ್ನೂ, ಇಸಂ ಒಂದಕ್ಕೆ ೭ ರೂ ಮೇರೆ ೪ ಜನ ಸರಪಣಿಯವರನ್ನೂ, ಇಸಂ ಒಂದಕ್ಕೆ ೮ ರೂ ಮೇರೆ ಇಬ್ಬರು ಜವಾನರನ್ನೂ ಸಹ ಈ ಕೆಲಸಕ್ಕೆ ಹಂಗಾಮಿಯಾಗಿ ನೇಮಿಸಬೇಕಾಗುತ್ತೆಂತಲೂ ಸರ್ವೆ ಸೂಪರಿಂಟೆಂಡೆಂಟರವರು ಸೂಚಿಸುತ್ತಾರೆ ಮಾಹೆಯಾನಾ ೧೫ ರೂ ಸಾದಿಲ್ವಾರು ಖರ್ಚು ಸೇರಿ ಈ ಶಿಬ್ಬಂದಿಯ ಖರ್ಚು ತಿಂಗಳಿಗೆ ೨೧೬ ರೂ ಆಗಬಹುದೆಂದು ಅಂದಾಜಾಗಿದೆ ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರು ಸೂಚಿಸುವ ಪ್ರಕಾರ ಸದರಿ ಶಿಬ್ಬಂದಿಯನ್ನು ಮೂರು ತಿಂಗಳ ವರೆಗೆ ನೇಮಿಸಿಕೊಳ್ಳಬಹುದೆಂದು ಸರ್ಕಾರದವರು ಮಂಜೂರಿ ಮಾಡಿರುತ್ತಾರೆ ಮಳೆಗಾಲದಲ್ಲಿ ಮೋಜಣಿ ಕೆಲಸವನ್ನು ನಿಲ್ಲಿಸಿದಾಗ್ಗೆ ಈ ಪಾಠಶಾಲೆಯನ್ನು ನಡಿಸುವ ಪ್ರಯುಕ್ತ ಸರ್ವೆ ಅಸಿಸ್ಟೆಂಟುಗಳು ಸದರಿ ಮೇರೆಗೆ ಈ ಪಾಠಶಾಲೆಯ ಕೆಲಸವನ್ನು ಮೇಲ್ವಿಚಾರಣೆಮಾಡುವಂತೆ ಸರ್ವೆ ಸೂಪರಿಂಟೆಂಡೆಂಟರವರು ತಕ್ಕ ಏರ್ಪಾಡುಮಾಡತಕ್ಕದ್ದು ಮಾಹೆಯಾನಾ ಬಾಡಿಗೆ ೩೦ ರೂ ಗೆ ಮೀರದಂತೆ

ಒಂದು ಕಟ್ಟಡವನ್ನು ಈ ಪಾಠಶಾಲೆಗೋಸ್ಕರ ಬಾಡಿಗೆಗೆ ತೆಗೆದುಕೊಳ್ಳತಕ್ಕದ್ದು ಸರ್ವೆ ಸೂಪರಿಂಟೆಂಡೆಂಟರವರು ಮುಂದಿನ ವರುಷ ಬಡ್ಜೆಟ್ಟಿನಲ್ಲಿ ಈ ಖರ್ಚಿಗೆ ತಕ್ಕ ಏರ್ಪಾಡು ಮಾಡತಕ್ಕದ್ದು. ಈ ಪಾಠಶಾಲೆಗೆ ಬೇಕಾಗುವ ಕುರ್ಚಿ, ಮೇಜಾ ವಗೈರೆ ಸಾಮಾನುಗಳನ್ನು ಲೋಕಲ್ ಸರ್ವಿಸ್ ಪರೀಕ್ಷೆಯ ಸ್ಟೋರಿನಿಂದ ಒದಗಿಸತಕ್ಕದ್ದು.

ಅಮಲ್ದಾರ್ ಮತ್ತು ಡೆಪ್ಯುಟಿ ಅಮಲ್ದಾರ್ ಕೆಲಸಗಳಿಗೆ ಲಾಯಖಾದ ಜನಗಳ ಪಟ್ಟಿಯಲ್ಲಿ ದಾಖಲಾದವರಿಗೆಲ್ಲರಿಗೂ ಅವಶ್ಯಕವಾದಷ್ಟು ಕಾಲ ಈ ಪಾಠಶಾಲೆಯಲ್ಲಿ ಓದುವ ಬಗ್ಗೆ ಅವರವರಿಗೆ ಹಕ್ಕು ಇರುವಂಥಾ ರಜಾ ಕೊಟ್ಟು, ಈ ಶಿಕ್ಷಣ ಹೊಂದುವಂತೆ ಏರ್ಪಾಡು ಮಾಡತಕ್ಕದ್ದು. ಡೆಪ್ಯುಟಿ ಕಮಿಷನರುಗಳೂ ಆಯಾ ಇಲಾಖೆ ಮೆಜಿಸ್ಟ್ರೇಟರುಗಳೂ ಸರ್ಕಾರಿ ಕೆಲಸಕ್ಕೆ ತೊಂದರೆಯಾಗದಂತೆ ನೌಕರರನ್ನು ವಿಂಗಡಿಸಿ ಕಳುಹಿಸುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಈ ಪಾಠಶಾಲೆಯನ್ನು ಮೂರು ತಿಂಗಳಿಗಿಂತಲೂ ಜಾಸ್ತಿಯಾಗಿ ಇಡಬೇಕೆಂಬ ಉದ್ದೇಶವಿಲ್ಲವಾದದ್ದರಿಂದ ಅಮಲ್ದಾರ್ ಮತ್ತು ಡೆಪ್ಯುಟಿ ಅಮಲ್ದಾರ್ ಕೆಲಸಗಳಿಗೆ ಲಾಯಖಾದ ನೌಕರರ ಪೈಕಿ ಸಾಧ್ಯವಾದಷ್ಟು ಜನಗಳನ್ನು ಈ ಸಂದರ್ಭದಲ್ಲಿ ಸರ್ವೆ ಕೆಲಸದಲ್ಲಿ ತರಪೀತು ಮಾಡಬೇಕೆಂದು ಸರ್ಕಾರದವರು ಅಪೇಕ್ಷಿಸುತ್ತಾರೆ. ಆದಕಾರಣ ಅಮಲ್ದಾರ್ ಮತ್ತು ಡೆಪ್ಯುಟಿ ಅಮಲ್ದಾರ್ ಕೆಲಸಗಳು ಖಾಲಿಯಿದ್ದಾಗ್ಗೆ ಅವುಗಳನ್ನು ಭರ್ತಿಮಾಡುವುದರಲ್ಲಿ ಸರ್ವೆ ಕೆಲಸದಲ್ಲಿ ತೃಪ್ತಿಕರವಾಗಿ ಶಿಕ್ಷಣಹೊಂದಿದವರಿಗೆ ಪ್ರಾಶಸ್ತ್ಯವನ್ನು ತೋರಿಸುತ್ತದೆಂದು ಮೇಲ್ಕಂಡ ಜನಗಳಿಗೆ ತಿಳಿಸತಕ್ಕದ್ದು. ಈ ಶಿಕ್ಷಣಹೊಂದುವ ಅಮಲ್ದಾರರು ಮತ್ತು ಡೆಪ್ಯುಟಿ ಅಮಲ್ದಾರರೆಲ್ಲರಿಗೂ ಶಿಕ್ಷಣ ಕಾಲದಲ್ಲಿ ಪ್ರಯಾಣದ ಭತ್ಯ ಮತ್ತು ಇತರ ಭತ್ಯಗಳಿಗೆ ಬದಲಾಗಿ ೩೦ ರೂಪಾಯಿ ಡೆಪ್ಯುಟೇಷನ್ ಅಲೊವನ್ಸನ್ನು ಕೊಡುತ್ತದೆ.

ರೆವಿನ್ಯೂ ನೌಕರರ ವಿಚಾರದಲ್ಲಿ ಈ ಶಿಕ್ಷಣಹೊಂದಲು ಅಭಿಲಾಷೆಯುಳ್ಳ ರೆವಿನ್ಯೂ ನೌಕರರಿಗೆ ಈ ಬಗ್ಗೆ ಅವಶ್ಯಕವಾದ ಅನುಕೂಲತೆಗಳನ್ನು ಒದಗಿಸಿಕೊಟ್ಟರೆ ಪ್ರಕೃತಕ್ಕೆ ಸಾಕೆಂದು ಸರ್ಕಾರದವರು ಅಭಿಪ್ರಾಯಪಡುತ್ತಾರೆ. ಅಲ್ಲದೆ ಆ ಜನ ರೆವಿನ್ಯೂ ನೌಕರರು ತಮ್ಮ ತಮ್ಮ ಹಾತ್ ಲಾಗವಿನಿಂದ ಸರ್ವೆ ಕೆಲಸ ಕಲಿತುಕೊಳ್ಳುವುದಕ್ಕೆ ಬರುವಪಕ್ಷಕ್ಕೆ ಡಿಸ್ಟ್ರಿಕ್ಟು ಸಭೆಗಳಲ್ಲಿ ಡಿಸ್ಟ್ರಿಕ್ಟ ಸರ್ವೆಯರ್ ಕಚೇರಿಗಳಿಗೆ ಒಂದೊಂದು ಮೋಜಣಿ ತರಗತಿಯನ್ನು ಇಡಲು ಏರ್ಪಾಡು ಮಾಡಬಹುದಾಗಿರುವುದೆಂದೂ, ಅಲ್ಲಿ ಸರಪಣಿ, ಕ್ರಾಸ್‌ಸ್ಟಾಫ್, ಪ್ಲೇನ್‌ಟೇಬಲ್ ವಗೈರೆಗಳ ಸ್ವಭಾವವನ್ನೂ ಅವುಗಳ ಪ್ರಯೋಜನವನ್ನೂ ಮತ್ತು ಸೀಲ್ಡ್ ಪುಸ್ತಕಗಳು, ಗ್ರಾಮ ನಕಾಶೆಗಳು, ಸರ್ವೆ ನಂಬರುಗಳನ್ನು ಅಳೆಯುವುದು ಮತ್ತು ಬಾಂದ ಕಲ್ಲುಗಳನ್ನು ಅಜಮಾಯಿಷಿ ಮಾಡುವುದು ಈ ಕೆಲಸಗಳನ್ನೂ ತಿಳಿಸಲಾಗುವುದೆಂದು ಡೆಪ್ಯುಟಿ ಕಮಿಷನರುಗಳು ರೆವಿನ್ಯೂ ನೌಕರರುಗಳಿಗೆ ತಿಳಿಸತಕ್ಕದ್ದು. ಸಾಕಾದಷ್ಟು ಮಂದಿ ರೆವಿನ್ಯೂ ನೌಕರರು ಸರ್ವೆ ಕೆಲಸವನ್ನು ಕಲಿತುಕೊಳ್ಳುವುದಕ್ಕಾಗಿ ಬಂದರೆ ಅದಕ್ಕಾಗಿ ಪಾಠಶಾಲೆಗಳನ್ನಿಟ್ಟು ಮತ್ತೆ ಅವರ ಬಗ್ಗೆ ಏನು ವಿಚಾರವಷ್ಟು ಮೊಬಲಗನ್ನು ಆ ಬಗ್ಗೆ ಖರ್ಚು ಮಾಡಬಹುದೆಂದು ಡೆಪ್ಯುಟಿ ಕಮಿಷನರಿಗೆ ಅಧಿಕಾರಕೊಟ್ಟಿರುತ್ತದೆ. ಈಗ ತೋರಿಸಿರುವ ರಿಯಾಯಿತಿಯನ್ನು ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಎಷ್ಟೆಷ್ಟು ಮಟ್ಟಿಗೆ ಜನಗಳು ಉಪಯೋಗಿಸಿಕೊಂಡಿರುತ್ತಾರೆಂಬ ಬಗ್ಗೂ, ರೆವಿನ್ಯೂ ನೌಕರರೂ ಸರ್ವೆ ಕೆಲಸವನ್ನು ಕಲಿತುಕೊಳ್ಳಬೇಕೆಂದು ವಿಧಿಸುವುದು ಅವಶ್ಯವೇ ಎಂಬ ಬಗ್ಗೂ ಒಂದು ವರುಷದ ತರುವಾಯ ಸ್ಪೆಷಲ್ ರಿಪೋರ್ಟು ಕಳುಹಿಸತಕ್ಕದ್ದು.

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿಟರ್

ಕರೆಸ್ಪಾಂಡೆನ್ಸ್

ಸಂತೇಮಾಳಕ್ಕೆ ಬಿಸಿಲಿನ ಕಾಟವು

ಅಯ್ಯಾ,

ಹೊಳೆನರಸೀಪುರದ ತಾಲ್ಲೂಕು ದೊಡ್ಡಹಳ್ಳಿ ದಾಖಲೆ ಬೋರೆಯಲ್ಲಿ ಆಗುತ್ತಿದ್ದ ಸಂತೆಯನ್ನು ನೋಡಿ ಹೊಳೆನರಸೀಪುರದ ಮ॥ ಪಾಪಣ್ಣ ಶೆಟ್ರು ವಿಶಾಲವಾದ ಬಿಸಿಲಿನಲ್ಲಿ ಬಳಲುತ್ತಿದ್ದ ಜನಗಳ ಗೋಳುಗಳನ್ನು ತಪ್ಪಿಸುವುದಕ್ಕೋಸ್ಕರ ಸುಮಾರು 20–30 ಮರಗಳನ್ನು ಹಾಕಿಸಿದ್ದರು. ಈಗ ಸುಮಾರು 2–3 ವರ್ಷಗಳಾದರೂ ಮರಗಳು ಮೇಲಕ್ಕೆ ಏಳುವುದಕ್ಕೆ ಮಾರ್ಗವಿಲ್ಲದೆ ಅತಿಸ ಬಾಯಿಗೆ ತುತ್ತಾಗುತ್ತಾ ಇವೆ. ಆದ್ದರಿಂದ ಗೌರ್ನಮೆಂಟಿನವರು ಗ್ರಾಮನೌಕರರಾದ ಪಟೇಲ್ ಶ್ಯಾನುಭೋಗರಿಗೂ ಅವುಗಳನ್ನು ಸಾಕತಕ್ಕಂಥಾ ರೈತರಿಗೂ ತಕ್ಕ ಬಂದೋಬಸ್ತು ಮಾಡಬೇಕೆಂತ ಹುಕುಮನ್ನು ದಯಪಾಲಿಸಿದರೆ ಜ್ವಾಲಾರೂಪವಾಗಿರುವ ಬಿಸಿಲಿನಿಂದ ಬಳಲುತ್ತಿರುವ ಸಹಸ್ರ ಜನಗಳ ಗೋಳನ್ನು ತಪ್ಪಿಸಿದ ಫಲವು ಗೌರ್ನಮೆಂಟಿನವರಿಗೆ ಬರುತ್ತದೆ ಎಂದು ಪ್ರಾರ್ಥಿಸುತ್ತೇನೆ.

ಬಾತ್ಮಿದಾರ್.

ಬೆಂಕಿಯಿಂದಾದ ಕಷ್ಟ ನಷ್ಟಗಳು

ಅಯ್ಯಾ,

ಶಿಕಾರಿಪುರದ ಟವನ್ನಿಗೆ ಸೇರಿದ ಅಗಸರ ಕೇರಿಯಲ್ಲಿ ತಾ ೧೬ನೇ ಬುಧವಾರ ಸಾಯಂಕಾಲ ೫ ಘಂಟೆಯ ಸಮಯದಲ್ಲಿ ಬೆಂಕಿಬಿದ್ದು ಸುಮಾರು ೧೦–೧೫ ಮನೆಗಳ ವರೆಗೂ ಸುಟ್ಟುಹೋದವು. ಈಗ ಒಳ್ಳೆ ಸುಗ್ಗಿಯ ಕಾಲವಾದುದರಿಂದ ವರ್ಷಾವಧಿಯಾಗುವುದಕ್ಕೆ ಕೂಡಿಟ್ಟ ಧಾನ್ಯವೆಲ್ಲಾ ಸುಟ್ಟುಹೋಯಿತು. ಸುಟ್ಟಮನೆ ಅಗಸರದಾದುದರಿಂದ ಒಗೆಯುವುದಕ್ಕೆ ಕೊಟ್ಟ ಪರಗ್ರಾಮಸ್ತರ ಬಟ್ಟೆಗಳೆಲ್ಲಾ ಸುಟ್ಟುಹೋದವು. ಮನೆಯನ್ನು ಕಳೆದುಕೊಂಡವರು ನಿಲ್ಲುವುದಕ್ಕೆ ಸಹ ಸ್ಥಳವಿಲ್ಲದಾಗಿದೆ. ಮನುಷ್ಯ ಪ್ರಯತ್ನದಿಂದ ಸಾಧ್ಯವಾಗತಕ್ಕವುಗಳನ್ನು ಹೇಗಾದರೂ ಸಂಪಾದಿಸಬಹುದು. ಆದರೆ ಬೆಂದುಹೋದ ಕರುಗಳ ಮತ್ತು ಪ್ರಾಣಿಗಳ ಜೀವವನ್ನು ಪಡೆಯುವುದು ಸಾಧ್ಯವೇ? ಈ ಮನೆಗಳು ಸುಟ್ಟ ಸ್ಥಳದ ಸುತ್ತಲೂ ಮೈಲಿ ಫಾಸಲೆಯೊಳಗಾಗಿ ಎಲ್ಲಿಯೂ ನೀರಿರುವುದಿಲ್ಲ. ಇಂತಹ ಹುಲ್ಲು ಜೋಪಡಿಗಳು ಹೆಚ್ಚಾಗಿ ಇರತಕ್ಕ ಸ್ಥಳದ ಸಮೀಪದಲ್ಲಿ ಬಾವಿಗಳು ಇರಬೇಕಾದುದು ಅವಶ್ಯಕ. ಭಾವಿಗಳಿಲ್ಲದುದರಿಂದ ಪದೇ ಪದೇ ಇಂತಹ ತೊಂದರೆಯನ್ನು ಅನುಭವಿಸಬೇಕಾಗುತ್ತಿದೆ. ಈ ಕಷ್ಟವು ಕೇವಲ ಬಡವರಿಗೆ ಪ್ರಾಪ್ತವಾಗತಕ್ಕದಾದುದರಿಂದ ೫೦—೧೦೦ ಮನೆಗಳಿರತಕ್ಕ ಕೇರಿಗೆ ಒಂದು ಭಾವಿಯಾದರೂ ಬೇಡವೇ? ಈ ಊರಿನ ಪೇಟೆಯ ಕೆಲವು ಅನುಕೂಲಸ್ಥರ ಮನೆ ಹೆಂಗಸರು ಮಕ್ಕಳಿಂದ ಬೆರಣಿಗಳನ್ನು ತರಿಸಿ ತಮ್ಮ ವಾಸದ ಹೆಂಚಿನ ಮನೆಯಲ್ಲಿ ಒಟ್ಟಿಕೊಂಡಿರುವುದು ಕಾಲಾನುಸಾರ ಅಪಾಯಕರವಾಗಿದೆ.

ವಾಚಕ

ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವು

ಅಯ್ಯಾ,

ಕೊಪ್ಪದ ಮಠದ ವೆಂಕಟನರಸಿಂಹಾಚಾರ್ಯರು ತಾ ೧೬ ರಲ್ಲಿ ತೀರ್ಥಹಳ್ಳಿ ತಾಲ್ಲೂಕು ಕುಂಟುಕಟ್ಟೆ ಮೊಕ್ಕಾಮಿಗೆ ತೆರಳುವವರು ಘಂಟಗಡಿ ಟವನ್ನಿಗೆ ದಯಮಾಡಿಸುವ ಸಮಯ ನೋಡಿ ನಮ್ಮ ಊರು ಮ॥ ಹಜರತ್ ಇಮಾಂ ಸಾಹೇಬರು ಮುತುವಲ್ಲಿ ಮುನಿ ಮ॥ ಗಳಾದ ಶಿವಲಿಂಗಪ್ಪಶೆಟ್ರು, ಅಂದಾನಪ್ಪಶೆಟ್ರು, ಗ್ರಾಮದ ಪ, ಸುಬ್ಬಯಗೌಡರು, ರಾಮಣ್ಣಗೌಡರು, ಹೂವಣ್ಣಗೌಡರು, ಚಾವಲ್ ಮನೆ ವೆಂಕಟನಾಯ್ಕರು, ಅಂಬುಳ್ಳಿ ಹಾವನಾಯ್ಕರು, ಈ ಮುಂತಾದ ಅನೇಕ ದೊಡ್ಡ ಮನುಷ್ಯರೊಂದಿಗೆ ಹಣ್ಣು ಹಂಪಲು ಗಂಧಪುಷ್ಪ ತಾಂಬೂಲಾದಿಗಳ ಸಹಿತ ಎದುರುಗೊಂಡು ತಾನು ತಯಾರಿಸಿದ ಸ್ಕೂಲ್ ಒಳಕ್ಕೆ ಅವರನ್ನು ಕರೆದುಕೊಂಡು ಹೋಗಿ ಮೇಜು ಎದುರಿಗೆ ಇಟ್ಟಿದ್ದ ಕುರ್ಚಿ ಮೇಲೆ ಕುಳ್ಳಿರಿಸಿ ಸ್ಕೂಲ್ ವಿಷಯದಲ್ಲಿ ಸಹಾಯಮಾಡಿರುವ ಅನೇಕ ಮಹನೀಯರನ್ನು ಹೊಗಳಿದನು. ಸ್ವಾಮಿಯವರು ಪ್ರತಿಯಾಗಿ ಅವರನ್ನು ಕುರಿತು—ನಿಮ್ಮ ಸ್ವಂತ ಅನೇಕ ತೊಂದರೆಗಳನ್ನೆಲ್ಲಾ ಬಿಟ್ಟು ಹಿಂದೂ ಮತದವರ ಮೇಲೆ ಅಭಿಮಾನವಿಟ್ಟು ಈ ವಿದ್ಯಾನಿಲಯ ಇಟ್ಟು ಸುಂದರವಾದ ನಿಮ್ಮ ಬುದ್ಧಿಯಿಂದ ಕಷ್ಟಪಟ್ಟು ತಯಾರಿಸಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ಈ ವಿದ್ಯಾಮಂದಿರಕ್ಕೆ ನಮ್ಮ ಮಠದ ಮೇನೇಜರ್ ಮ॥ ದೇವಂಗಿ ರಾಮಣ್ಣ ಗೌಡರನ್ನು ವಿಚಾರಿಸಿ ನಮ್ಮ ಗೌರವಕ್ಕೆ ತಕ್ಕಷ್ಟು ದ್ರವ್ಯಸಹಾಯ ಮಾಡುತ್ತಾರಾಗಿ ಸಾಗ್ಗನ ಮಾಡಿ ಹಣ್ಣು ಹಂಪಲುಗಳನ್ನು ಸ್ವೀಕರಿಸಿ ಮುಂದಕ್ಕೆ ತೆರಳಿದರು. ಹಜರತ್ ಇಮಾಂ ಸಾಹೇಬರವರು ತನ್ನ ಮಿತ್ರರೊಂದಿಗೆ ಈ ಊರಿಗೆ ಒಂದು ಮೈಲಿ ಸಮೀಪದ ಹ್ಲಿಸ ನದಿಯ ವರೆಗೆ ಹೋಗಿ ಸ್ವಾಮಿಗಳನ್ನು ಮುಂದಕ್ಕೆ ರವಾನೆ ಮಾಡಿ, ಅವರ ಅಪ್ಪಣೆ ಪಡೆದು ಸರ್ವರೂ ವಾಪಸು ಬಂದರು. ಮ॥ ಇಮಾಂ ಸಾಹೇಬರು ಯಾವ ಕೆಲಸದಲ್ಲಿಯೂ ಮುಂದಾಳಾಗಿ ನಿಂತು ಯಶಸ್ಸು ಬರತಕ್ಕಂಥ ಕಾರ್ಯಗಳನ್ನು ನೆರವೇರಿಸುವದು ನೋಡಿ ಅತಿ ಸಂತೋಷಪಡುತ್ತೇನೆ.

ಪ್ರತ್ಯಕ್ಷದರ್ಶಿ

ಮತ್ಸರ ಹಾವಳಿಯು

ಅಯ್ಯಾ,

ಶ್ರೀರಂಗಪಟ್ಟಣದ ತಾಲ್ಲೂಕು ಚಂದಗಾಲದ ಹೋಬಳಿ ಹಂಪಾಪುರದ ಗ್ರಾಮದಲ್ಲಿ ವಾಸವಾಗಿರುವ ಬಲಗೈಜಾತಿ ಮಿಣಕೀ ಮೋಟನ ಮಗ ಲಿಂಗನ ಮನೆಯು ಜನವರಿ ತಾ ೨೨ನೇ ಶನಿವಾರ ಸುಮಾರು ರಾತ್ರಿ ೧೨ ಗಂಟೆ ಸಮಯದಲ್ಲಿ ಎಲ್ಲರೂ ನಿದ್ರೆಮಾಡುವ ಕಾಲದಲ್ಲಿ ಬೆಂಕಿ ಬಿದ್ದು ಸುಮಾರು ಒಂದೂವರೆ ಸಾವಿರ ರೂಪಾಯಿ ಬಾಳತಕ್ಕ ಸಾಮಾನುಗಳು ಅಂದರೆ ದನಗಳೂ, ಎಮ್ಮೆಗಳೂ, ಆಡುಗಳೂ, ಜಮೀನು ಕಂದಾಯ ಪಟ್ಟಿಗಳೂ, ರಶೀತಿಗಳೂ, ಕಾಗದಪತ್ರಗಳೂ, ಚಿನ್ನ, ಬೆಳ್ಳಿ, ದಿನಸಿ, ಮುಂತಾದ ಸಾಮಾನುಗಳೂ ಸ್ವಲ್ಪವೂ ಸಿಕ್ಕದೇ ಬೆಂದು ಹೋಗಿದೆ. ಮನೆಯಲ್ಲಿ ಮಲಗಿದ್ದ ಜನಗಳು ಬೆಂಕಿ ಉರಿಯನ್ನು ತಾಳಲಾರದೆ ದಿಕ್ಕು ತೋಚದೆ ಗಾಬರಿಯಾಗಿ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳುವದೇ ಕಷ್ಟವಾಯಿತು. ಈ ವಿಷಯವನ್ನು ಸರ್ಕಾರದವರು ತಿಳಿದು ವಿಚಾರಣೆ ಬಗ್ಗೆ ಜಮೇದಾರರು ದಫೇದಾರರು ಪೋಲೀಸಿನವರು ಸಹ ಜನವರಿ ತಾ ೩೦ನೇ ಭಾನುವಾರ ವಿಚಾರಣೆ ಮಾಡಲು, ಗುಮಾನಿ ಆಸಾಮಿಯನ್ನು ನೋಡಲು ಪರಾರಿಯಾಗಿದ್ದನು. ಮಾರುದಿನ ಮಧ್ಯಾಹ್ನ ಒಂದುಗಂಟೆ ಸಮಯದಲ್ಲಿ ಪರಾರಿಯಾಗಿದ್ದ ರಾಮನೆಂಬುವನು ಡಿಟೋ ಗ್ರಾಮದಲ್ಲಿ ಮೃತಪಟ್ಟ ಅವರ ಜಾತಿಯ ಹೆಂಗಸನ್ನು ದಫನ್ ಮಾಡುವದಕ್ಕೆ ಅವರ ಜಾತಿಯವರು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿದ್ದರು. ಪರಾರಿಯಾಗಿದ್ದ ರಾಮನು ಸ್ಮಶಾನಕ್ಕೆ ಬಂದಿದ್ದನು. ಅವರೆಲ್ಲರು ಮನೆಗೆ ಬರುವ ಕಾಲದಲ್ಲಿ ಈ ರಾಮನೆಂಬುವನು ಊರಿಗೆ ಬರುವದಿಲ್ಲನೆಂದೂ, ಪರಸ್ಥಳಕ್ಕೆ ಹೋಗುತ್ತೇನೆಂದೂ ಹೇಳಿದನು. ಬಾಕಿಯವರೆಲ್ಲಾ ತಮ್ಮ ತಮ್ಮ ಮನೆಗೆ ಹೋದರು. ಅಷ್ಟರಲ್ಲಿ ಈ ರಾಮನೆಂಬುವನ ಮೇದೆ ರಾಗಿ ಗುಡ್ಡೆಗೆ ಬೆಂಕಿಬಿದ್ದು ಬೇಯುತ್ತಾ ಇತ್ತು. ಜನಗಳೂ ಈ ಉರಿಯನ್ನು ಕಂಡು ಗಾಬರಿಯಾಗಿ ನೋಡಲು ರಾಮನು ಇರಲಿಲ್ಲ. ಅಷ್ಟರಲ್ಲಿಯೇ ತನಿಖೆಯ ಬಗ್ಗೆ ಬಂದಿದ್ದ ಪೋಲೀಸಿನವರು ಗುಮಾನಿ ರಾಮನನ್ನು ನೋಡಲು ಇವನು ಬೇರೆ ದಾರಿಯಲ್ಲಿ ಓಡುತ್ತಾ ಇದ್ದದ್ದನ್ನು ಕಂಡು ಪೋಲೀಸಿನವರು ಹಿಡಿದುತಂದು ಒಂದು ದಿನ ತಮ್ಮ ಸುಪರ್ದು ಇಟ್ಟಿದ್ದು ಬಿಟ್ಟಿರುತ್ತಾರೆ. ಸರ್ಕಾರದವರು ಇಂಥಾ ಕೃತ್ಯಗಳನ್ನು ನಡಿಸಿದ ಜನರನ್ನು ಹಿಡಿದು ಬಂದೋಬಸ್ತು ಮಾಡಬೇಕು ಮತ್ತು ಸದರೀ ಗ್ರಾಮದಲ್ಲಿ ಮನೆಯನ್ನು ಕಳೆದುಕೊಂಡ ಲಿಂಗ, ಚಾಡಿಗ, ಬುಡ್ಡ, ವಗೈರೆ 14–16 ಜನಗಳಿಗೆ ಅನ್ನ ಆಹಾರಗಳೂ ಬಟ್ಟೆಗಳೂ ಇಲ್ಲದೆ ಬಹಳ ಶ್ರಮಪಡುತ್ತಾ ಇದಾರೆ. ಸರ್ಕಾರದವರು ಇದರ ವಿಚಾರಣೆಯನ್ನೂ ಜೀವನಾಂಶಕ್ಕೆ ಆಲೋಚನೆಯನ್ನೂ ಮಾಡಬೇಕಾಗಿದೆ. ಸದರೀ ಗ್ರಾಮಸ್ಥರು ಅವಾಂತ್ರವನ್ನು ಸಹಿಸಲಾರದೆ ತಮ್ಮ ತಮ್ಮ ಸಾಮಾನು ದಿನಸಿ ದನಕರುಗಳನ್ನು ಬೇರೇ ಗ್ರಾಮಗಳಿಗೆ ಸಾಗಿಸಿರುತ್ತಾರೆ. ಈ ಸಾರಿ ಸುಗ್ಗಿ ಶಿವರಾತ್ರಿಯಾದ ನಂತರ ಗ್ರಾಮವನ್ನು ಬಿಡುತ್ತಾರೆಂದು ತಿಳಿದುಬಂದಿದೆ. ಈ ವಿಷಯದಲ್ಲಿ ಸರ್ಕಾರದವರು ಸಿಗಾಕೊಡುತ್ತಾರೆಂದು ನಂಬಿರುತ್ತೇವೆ.

ಗ್ರಾಮವಾಸಿ

ನೀರಿನ ಕಷ್ಟವು ಬಹಳವಾಗಿದೆ.

ಅಯ್ಯಾ,

ಯಡತೊರೆ ತಾಲ್ಲೂಕಿನಲ್ಲಿ ಅಂದರೆ ಹೊಳೇನರಸೀಪುರದ ಕೊನೇ ಸರಹದ್ದಿನಲ್ಲಿ ಈಗಾಗಲೇ ಉಂಟಾಗಿರುವ ನೀರಿನ ಕಷ್ಟವನ್ನು ಹೇಳಲಸಾಧ್ಯವಾಗಿದೆ. ಈಗಲೇ ಇಲ್ಲಿರುವ ಜನಗಳ ಕಷ್ಟವನ್ನು ವಿಜ್ಞಾಪಿಸಿಕೊಳ್ಳುವೆನು. ಗೌರ್ನಮೆಂಟಿನವರು ಈ ಅಹವಾಲನ್ನು ಘನವಾದ ಚಿತ್ತಕ್ಕೆ ತಂದುಕೊಂಡು ಇಲ್ಲಿರುವ ಜನಗಳ ಮತ್ತು ಜಾನುವಾರುಗಳ ಕಷ್ಟವನ್ನು ಯಾವ ಪ್ರಯತ್ನದಿಂದಲಾದರೂ ಹೋಗಲಾಡಿಸಬೇಕೆಂದು ಬೇಡಿಕೊಳ್ಳುವೆನು. ಏನಂದರೆ —

ಇಲ್ಲಿ ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಇಳಿದು ತುಂಬುವ ಭಾವಿ ಇರುವದು. ಇದ್ದರೂ ನೀರಿಗೆ ಗತಿಯಿಲ್ಲ. ಹೆಸರಿಗೆ ಮಾತ್ರ ಇದೆ. ಸುಮಾರು 300–400 ಮನೆಗಳಿರುವ ಮೇಲೂರಿನಲ್ಲಿ ಭಾವಿಗಳೇ ಇಲ್ಲ. ಗ್ರಾಮದವರು ಇದೇ ಗ್ರಾಮಕ್ಕೆ ಸೇರಿ ಕಟ್ಟೆ ಬೆಳೆದುಹೋಗುತ್ತಿರುವ ಕೆರೆಯಲ್ಲಿ ನಿಂತಿರುವ ಸ್ವಲ್ಪ ನೀರಿನಲ್ಲಿ ಜೀವನನ್ನು ಕಾಪಾಡಿಕೊಂಡು ದೇವೇಂದ್ರನ ನಿರೀಕ್ಷಣೆಯಲ್ಲಿಯೇ ಮಗ್ನರಾಗಿ ಕಾಲಹರಣ ಮಾಡುತ್ತಿದ್ದಾರೆಯೇ ಹೊರತು, ಕೆರೆಯಲ್ಲಿ ಸ್ವಲ್ಪವಾಗಿ ನಿಂತು ಇರುವ ನೀರನ್ನು ಚೆನ್ನಾಗಿ ಶೋಧನೆ ಮಾಡಿ ಪಾನಮಾಡದೆ ಛಳಿಜ್ವರಕ್ಕೆ ತುತ್ತಾಗುತ್ತಿದ್ದಾರೆ. ಇದೂ ಅಲ್ಲದೆ ಈ ಸ್ವಲ್ಪ ನೀರಿನಲ್ಲಿಯೇ ಸಮಸ್ತ ಜನಗಳೂ ಮುಖವನ್ನು ತೊಳೆಯುವುದು, ಸ್ನಾನಮಾಡುವುದು, ದನಗಳನ್ನು ತೊಳೆಯುವುದು, ಬಟ್ಟೆಯೊಗೆಯುವುದು, ಇವೇ ಮೊದಲಾದ ಅನೇಕ ಕಾರ್ಯಗಳಿಂದ ನೀರನ್ನು ಕೆಡಿಸಿ ಅದೇ ನೀರನ್ನೇ ಪಾನಮಾಡಿ ಖಾಯಿಲೆಗೆ ಪಾತ್ರರಾಗುತ್ತಾ ಇರುವರು. ಇದೂ ಅಲ್ಲದೆ ಮಾದಿಗುಪ್ಪೆ, ಬಾಚಹಳ್ಳಿ, ಡಿಟೋ ಕೊಪ್ಪಲು, ಸಂಕನಹಳ್ಳಿ, ಮುದ್ದನಹಳ್ಳಿ, ಮರಹಳ್ಳಿ, ಡಿಟೋ ಕೊಪ್ಪಲು, ಇವುಗಳಲ್ಲಂತೂ ಒಂದೊಂದು ಭಾವಿ ಇದ್ದರೂ ಇವು ಮಳೆಗಾಲದ ಭಾವಿಗಳೆಂದು ಪ್ರಸಿದ್ಧವಾಗಿವೆ. ಈಗಲೇ ಈ ಭಾವಿಗಳಲ್ಲಿ ನೀರಿಲ್ಲದೆ ಭಾವಿಯ ಹತ್ತಿರ ಸ್ವಲ್ಪ ಹೊತ್ತು ಕುಳಿತಿದ್ದರೆ ಜಲರೂಪವಾಗಿ ಸ್ವಲ್ಪ ಸ್ವಲ್ಪ ನೀರು ಬಂದಾಗ ಕೊಡಯಲ್ಲೇ ಒಂದು ತಂಬಿಗೆಯನ್ನು ತೆಗೆದುಕೊಂಡುಹೋಗಿ ಅದರಲ್ಲಿ ಸ್ವಲ್ಪ ಸ್ವಲ್ಪವಾಗಿ ನೀರನ್ನು ತೋಡಿಕೊಂಡು ತರುತ್ತಾರೆ. ಅಲ್ಲದೆ ಪ್ರತಿಯೊಂದು ಭಾವಿಯ ನೀರಿನಲ್ಲಿಯೂ ಹುಳುಬಿದ್ದು ಅದೇ ನೀರನ್ನೇ ಕುಡಿಯುತ್ತಾ ಇರುವರು. 10–12 ಜನಗಳಿರುವ ದೊಡ್ಡ ಸಂಸಾರದವರ ಕಷ್ಟವನ್ನು ವರ್ಣಿಸಲೇ ಆಗುವುದಿಲ್ಲ. ಜನಗಳ ಕಷ್ಟ ಹಾಗಿರಲಿ ಪಶುಪ್ರಾಣಿಗಳಿಗೆ ನೀರಿಲ್ಲದೆಯೇ ಅನೇಕ ಜನಗಳು ದನಗಳ ಗೋಳನ್ನು ನೋಡಲಾರದೇನೇ ಕ್ರಯಕ್ಕೆ ಮಾರಿ ಮನೆಯಲ್ಲಿ ಸುಮ್ಮನೆ ಕುಳಿತಿದ್ದರೆ ಇವರು ಆರಂಬ ಕೆಲಸವನ್ನು ಹೇಗೆ ಮಾಡುತ್ತಾರೆಯೋ ನಾನು ಕಾಣೆನು. ಒಂದೊಂದು ಗ್ರಾಮಕ್ಕೆ ಸುಮಾರು 4–5 ಒಕ್ಕಲುಗಳು ಇಲ್ಲಿಯ ಕಷ್ಟವನ್ನು ನೋಡಲಾರದೇನೇ ಕೊಡಗು ಮಲೆಸೀಮೆಗಳನ್ನು ಕುರಿತು ತೆರಳಿದರು. ಈ ವರ್ಷ ಇಷ್ಟು ಮಳೆಯಾಗಿಯೇ ಈ ಕಷ್ಟ. ಮುಂದಕ್ಕಂತೂ ಮಳೆ ಕಮ್ಮಿಯೆಂದು ಜನಗಳ ಬಾಯಿಂದ ಹೊರಡುವ ಮಾತುಗಳಿಂದ ಮುಂದಕ್ಕೆಷ್ಟು ಕಷ್ಟವಾಗುತ್ತದೆಯೋ ನಾನು ಕಾಣೆನು.

ಈ ಮೇಲ್ಕಂಡ ವಿಷಯಗಳನ್ನೆಲ್ಲಾ ಕುರಿತು ಇಲ್ಲಿಯ ಜನಗಳು ಸೇರಿ 1909–1908 ರಲ್ಲಿ ಚೀಫ್ ಇಂಜಿನಿಯರವರ ಸನ್ನಿಧಾನಕ್ಕೂ, ಮೈಸೂರು ಸೀಮೆಯ ರಾಜ್ಯಪರಿಪಾಲನೆ ಮಾಡುತ್ತಿರುವ ಶ್ರೀಮನ್ ಮಹಾರಾಜರವರಿಗೂ, ಮೈಸೂರು ಸೀಮೆಯ ರಾಜ್ಯಾಡಳಿತವನ್ನು ನಡಿಸತಕ್ಕ ದಿವಾನ್ ಸಾಹೇಬರವರ ಸನ್ನಿಧಾನಕ್ಕೂ 2–10–08 ರಲ್ಲಿ ಬರೆದುಕೊಂಡ ಅರ್ಜಿಗಳಿಗೂ ಛೇರ್ಯದ ಕೆರೆಗೆ ನಾಲೆಯನ್ನು ತರಲು ೧೪ ಲಕ್ಷ ರೂಪಾಯಿ ಸಾಕಾಗದೆಂದೂ ನೀರು ಸಪ್ಲೈ ಆಗುವುದು ಕಷ್ಟವಾಗಿದೆಯೆಂದೂ ತಾ 8–1–1909 ರ 1071 ನ ನಂಬರು ಹುಕುಂ ಸನ್ನಿಧಾನದಿಂದ ಬಂದಿರುವುದರಿಂದ ಗೌರ್ನಮೆಂಟಿನವರು ಘನವಾದ ಚಿತ್ತಕ್ಕೆ ಈ ಅಹವಾಲನ್ನು ತಂದುಕೊಂಡು ಯಾವ ಪ್ರಯತ್ನದಿಂದಲಾದರೂ ಮಾತೃಪ್ರಾಯವಾದ ಕಾವೇರಿಯಿಂದ ಕಟ್ಟೆಪುರದ ಹತ್ತಿರ ಕಟ್ಟುವ ಕಟ್ಟೆಯಿಂದ ಕೇರಳಾಪುರದ ಬಳಿ ಬಂದು ನದಿಯನ್ನು ಸೇರುವ ನಾಲೆಯನ್ನು ಮುಂದಕ್ಕೆ ಬಿಡಾಯಿಸಿ ಛೇರ್ಯದ ಕೆರೆಗೆ ತಂದುಬಿಟ್ಟರೆ ಗೌರ್ನಮೆಂಟಿಗೂ ತುಂಬಾ ಉತ್ಪತ್ತಿಯಾಗುವುದಲ್ಲದೆ, ಆಚಂದ್ರಾರ್ಕವಾದ ಶ್ರೇಯಸ್ಸನ್ನು ಸಂಪಾದಿಸುವುದಲ್ಲದೆ ಜನ ಜಾನುವಾರುಗಳಿಗೆ ಉಂಟಾಗಿರುವ ಕಷ್ಟವನ್ನು ತಪ್ಪಿಸಿದ ಫಲವು ನಮ್ಮ ಮಹಾರಾಜರವರ ಸುಖಸಾಮ್ರಾಜ್ಯ ರಾಜ್ಯಭಾರವನ್ನು ಕೊಂಡಾಡುತ್ತದೆ.

ಬಾತ್ಮಿದಾರ

ಇಂಡಿಯಾ ದೇಶದ ವೃತ್ತಾಂತಗಳು.

ಬೇವಿನ ಮತ್ತು ಹತ್ತೀ ಬೀಜದ ಹಿಂಡಿಗಳು ಉರಲಗದ್ದೆಗೆ ಬಹಳ ಒಳ್ಳೇ ಗೊಬ್ಬರವೆಂದು ಕಾನ್‌ಪೂರದಲ್ಲಿ ನಡದ ಅಜಮಾಯಿಷಿಗಳಿಂದ ಗೊತ್ತಾಗುತ್ತದೆ.

* * *

ವೈಸರಾಯಿ ಲಾರ್ಡ್ ಮಿಂಟೋರವರ ಪತ್ನೀ ರವರಿಗೆ ವಿಶೇಷವಾದ ಔತಣವನ್ನು ಮಾಡಿಸ ಬೇಕೆಂದು ಕಲ್ಕತ್ತಾ ಪಟ್ಟಣದಲ್ಲಿರುವ ಕೆಲವು ಮುಖ್ಯ ದೊರೆಸಾನಿಗಳೂ ಸ್ತ್ರೀಯರೂ ಪ್ರಯತ್ನ ಪಡುತ್ತಿದಾರೆ.

* * *

ಲಾಹೋರ್ ಪಟ್ಟಣದ ಜೈಲಖಾನೆಯಲ್ಲಿ ದೀರ್ಘಕಾಲದ ಸಜಾ ಶಿಕ್ಷೆಯನ್ನು ಅನುಭವಿಸಬೇಕಾಗಿದ್ದ ಇಬ್ಬರು ಖೈದಿಗಳು ಕಳೆದ ವಾರ ಜೈಲಿನ ಪೌಳಿಗೋಡೆಯನ್ನು ಹತ್ತಿ ಇಳಿದು ತಪ್ಪಿಸಿಕೊಂಡು ಹೋಗಿದಾರೆ.

* * *

ಬೊಂಬಾಯಿ ಪಟ್ಟಣದ ಕೋಟೆಯೊಳಗೆ ರಾಂಪಾರ್ಟ್ ರೋ ಎಂಬ ಬೀದಿಯಲ್ಲಿ ಸಂಗೀತ ಸಾಧನಗಳನ್ನು ಇಟ್ಟು ಬಿಕರಿ ಮಾಡುತ್ತಿದ್ದ ಒಂದು ಅಂಗಡಿಗೆ ಕಳೆದ ವಾರ ಎಕಾಏಕಿ ಬೆಂಕಿ ಬಿದ್ದು ಸುಮಾರು ೪೦ ಸಾವಿರ ರೂಪಾಯಿನ ಸರಕು ಸುಟ್ಟುಹೋಯಿತು.

* * *

ಬೊಂಬಾಯಿ ಪಟ್ಟಣದ ಅಂಚೆ ಇಲಾಖೆಯ ನೌಕರಮಾನೆಯರೆಲ್ಲಾ ಸೇರಿ ತಮಗೆ ಅಲ್ಲಿ ಕೆಲಸ ಮಾಡುವ ಕಾಲದಲ್ಲಿ ಅಲೋಯನ್ಸು ಖಾಯಮಾಗುವಂತೆ ಸ್ಯಾಂಕ್ಷನ್ ಮಾಡಿ ಕೊಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಂಡಿರುತ್ತಾರೆ.

* * *

ಪೂರ್ವ ಬಂಗಾಳಾ ಮತ್ತು ಅಸ್ಸಾಮಿನ ಲೆಫ್ಟಿನೆಂಟ್ ಗವರ್ನರಾದ ಸರ್ ಲಾನ್‌ಸ್ಲಾಟ್ ಹೇರ್ ಯವರ ಮೇಲೆ ನಿಗಾ ಇಟ್ಟು ಕಾಯುತ್ತಿದ್ದ ದಿನೇಶಚಂದ್ರ ಗುಹಾ ಎಂಬುವನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಮಾಡಿ ನೇಕಚಾಲಿಗೆ ಸಾವಿರ ರೂಪಾಯಿನ ಎರಡು ಜಾಮೀನ್ ತೆಗೆದುಕೊಂಡು ಖುಲಾಸಾ ಮಾಡಿದರು.

* * *

ಕಾನ್‌ಪುರದಲ್ಲಿರುವ ಸಕ್ಕರೆ ಕಾರ್ಖಾನೆಯೇ ಹಿಂದುಸ್ಥಾನದಲ್ಲೆಲ್ಲಾ ಬಹಳ ದೊಡ್ಡದಾಗಿದೆ. ಈ ಕಾರ್ಖಾನೆಯ ಕಂಪನಿಯವರು ಹಿಂದುಸ್ಥಾನದ ಇತರ ಕಡೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳ ಮುಖ್ಯಸ್ಥರನ್ನೆಲ್ಲಾ ಸೇರಿಸಿಕೊಂಡು ಈ ಕಸಬನ್ನು ಅಭಿವೃದ್ಧಿಗೆ ತರುವುದಕ್ಕೆ ಅವಶ್ಯವಾದ ಏರ್ಪಾಡುಗಳನ್ನು ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಿದಾರೆ.

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ದಿಷರ್ ಘಡಚ ಕಲ್ಲಿದ್ದಲಿನ ಗಣಿಯೊಳಗೆ ಕಳೆದ ವಾರ ಬೆಂಕಿ ಹುಟ್ಟಿ ಅನಾಹುತವಾಗಿ ಹನ್ನೊಂದು ಮಂದಿ ಕೂಲಿ ಆಳು

ಗಳು ಮೃತಪಟ್ಟರೆಂದೂ ಗಣಿಗಳ ಇನ್‌ಸ್ಪೆಕ್ಟರವರು ಹೋಗಿ ತನಿಖೆ ಮಾಡುತ್ತಿದ್ದಾರೆಂದೂ, ಗಣಿಯೊಳಗಿದ್ದ ಒಂದು ದೀಪವು ಕೆಟ್ಟುಹೋದದ್ದರಿಂದ ಈ ಅನಾಹುತ ಸಂಭವಿಸಿರಬಹುದೆಂದೂ ಪ್ರಕಟವಾಗಿದೆ

ಲಾರ್ಡ್, ಕಿಚ್ನರ್‌ಯವರ ಮೆಮೋರಿಯಲ್ ಫಂಡಿಗೆ ಹಿಂದುಸ್ಥಾನದಲ್ಲಿ ೬೩,೦೭೩ ರೂಪಾಯಿ ಚಂದಾ ವಸೂಲಾಗಿದೆ

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಕಲ್ಕತ್ತೆಯಿಂದ ಏಪ್ರಿಲ್ ತಿಂಗಳಲ್ಲಿ ಹೊರಟು ಕಾನ್‌ಪುರ, ಆಗ್ರಾ ದೆಹಲಿ ಮುಂತಾದ ಕಡೆ ಸಂಚಾರಮಾಡಿಕೊಂಡು, ಮೇ ತಿಂಗಳ ಪ್ರಾರಂಭದಲ್ಲಿ ಸಿಂಲಾ ಪಟ್ಟಣವನ್ನು ತಲುಪುವವರಾಗಿದಾರೆ

ಹಿಂದುಸ್ಥಾನದ ಎಲ್ಲಾ ಅಧಿಪತ್ಯಗಳಲ್ಲೂ ಏಕಪ್ರಕಾರವಾಗಿ ಚಲಾವಣೆಯಾಗುವಂಥಾ ಹತ್ತು ರೂಪಾಯಿನ ಕರೆನ್ಸಿ ನೋಟುಗಳನ್ನು ಛಾಪಾ ಹಾಕಿ ಜನರಿಗೆ ಹರಡಬೇಕೆಂದೂ, ಇಪ್ಪತ್ತು ರೂಪಾಯಿನ ನೋಟುಗಳನ್ನು ಇನ್ನು ಮುಂದೆ ಛಾಪಾ ಹಾಕುವುದಿಲ್ಲವೆಂದೂ ಇಂಡಿಯಾ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದಾರೆ

ಪಾಟಿಯಾಲಾ ಸಂಸ್ಥಾನದಲ್ಲಿ ಸುಮಾರು ೭೦ ಜನರನ್ನು ರಾಜದ್ರೋಹಿಗಳೆಂದು ಹಿಡಿದು ಅವರ ವಿಚಾರಣೆಗಾಗಿ ಒಂದು ಸ್ಪೆಷಲ್ ಕೋರ್ಟುಮಾಡಿ ದರ್ಯಾಪ್ತು ನಡಿಸುತ್ತಿದ್ದಾರೆಂದೂ, ಈ ಅಪರಾಧಿಗಳು ಮಹಾರಾಜರವರ ಕ್ಷಮಾಪಣೆಯನ್ನು ಬೇಡಿಕೊಂಡಿದಾರೆಂದೂ ತಿಳಿಸಿದ್ದೆವಷ್ಟೆ ಮಹಾರಾಜರವರು ಆ ಜನರನ್ನೆಲ್ಲಾ ಕ್ಷಮಿಸಿ ಬಿಟ್ಟುಬಿಡುವಂತೆ ಹುಕುಂ ಕೊಟ್ಟಿದಾರೆಂದು ಸಂತೋಷವರ್ತಮಾನ ಬಂದಿದೆ.

ಅಫ್ಘಾನಿಸ್ಥಾನದ ಅಮೀರರವರು ಹಿಂದುಸ್ಥಾನಕ್ಕೆ ದಯಮಾಡಿದ್ದಾಗ್ಗೆ ಅವರು ದೆಹಲಿ ಪಟ್ಟಣದ ಜುಮ್ಮಾ ಮಸೀದಿಯಲ್ಲಿ ಕಟ್ಟುವುದಕ್ಕಾಗಿ ಎರಡು ಮದ ಹಳ್ಳಿಯಿಂದ ತಯಾರುಮಾಡಲ್ಪಟ್ಟದ್ದ ಒಂದು ಸುಂದರವಾದ ಕಂದೀಲನ್ನು ಒಪ್ಪಿಸಿದ್ದರಷ್ಟೆ ಈ ಕಂದೀಲು ಮಸೀದಿಯಲ್ಲಿ ಕಳುವಾಗಿರುತ್ತದೆ ಈ ವಿಷಯವು ಅಲ್ಲಿನ ಮಹಮ್ಮದೀಯರಲ್ಲಿ ಚಿಂತೆಯನ್ನುಂಟುಮಾಡಿರುವುದು ಪತ್ತೆ ತರದೂದು ನಡೆಯುತ್ತಿದೆ

ಪೂರ್ವ ಬಂಗಾಳಾಕ್ಕೆ ಸೇರಿದ ಖುಲ್ನಾ ಪಟ್ಟಣದಲ್ಲಿ ರಾಜದ್ರೋಹದ ಬರವಣಿಗೆಯನ್ನು ಬರೆದು 'ಪಲ್ಲಿ ಚಿತ್ರ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ಎಡಿಟರಿಗೆ ಕಳೆದ ವಾರ ಮ್ಯಾಜಿಸ್ಟ್ರೇಟರು ನಾಲ್ಕು ವರುಷ ಕಠಿಣ ಸಜವನ್ನೂ, ಆ ಪತ್ರಿಕೆಯನ್ನು ಮುದ್ರಿಸಿಕೊಟ್ಟವನಿಗೆ ನಾಲ್ಕು ತಿಂಗಳ ಸಜವನ್ನೂ ವಿಧಿಸಿದರು ಈಗ ಇವರಿಬ್ಬರೂ ಕಲ್ಕತ್ತಾ ಪಟ್ಟಣದ ಹೈ ಕೋರ್ಟಿನಲ್ಲಿ ಅಪೀಲು ಮಾಡಿಕೊಂಡಿದಾರೆ.

ಹಿಂದುಸ್ಥಾನದ ವಾಯವ್ಯ ಸರಹದ್ದಿನ ಆಚೆ ಇರುವ ಅಫ್ಘಾನ್ ವಂಶೀಯರು ಇಂಗ್ಲಿಷರ ರಾಜ್ಯಕ್ಕೆ ನುಗ್ಗಿ ಬಂದು ದರೋಡೆ ಲೂಟಿ ಮುಂತಾದ ಅಕೃತ್ಯಗಳನ್ನು ನಡಿಸಿದರಷ್ಟೆ ಇದಕ್ಕೆ ಕಾರಣವೇನೆಂದು ವಿಚಾರಿಸಲಾಗಿ ಅಫ್ಘಾನಿಸ್ಥಾನದ ಅಮೀರರವರು ಆ ವಂಶೀಯರಿಗೆ ಹೆಚ್ಚಾಗಿ ಜುಲ್ಮಾನೆ ವಿಧಿಸಿದರೆಂದೂ, ಇವರು ಆ ಹಣವನ್ನು ಸಂಪಾದಿಸುವುದಕ್ಕೋಸ್ಕರ ಇಂಗ್ಲಿಷ್ ರಾಜ್ಯಗಳಲ್ಲಿ ನುಗ್ಗಿ ಲೂಟಿ ಮಾಡಿದರೆಂದೂ ತಿಳಿಯಿತು

ಅಲಿಪುರದ ಸಿಡಿಗುಂಡಿನ ಗುಂಪಿನ ಮೊಕದ್ದಮೆಯು ಕಳೆದ ವಾರ ಕಲ್ಕತ್ತಾ ಪಟ್ಟಣದ ಹೈ ಕೋರ್ಟಿನಲ್ಲಿ ಇತ್ಯರ್ಥವಾಯಿತು ಐದು ಮಂದಿ ಅಪರಾಧಿಗಳ ವಿಷಯದಲ್ಲಿ ಜಡ್ಜಿಗಳೊಳಗೆ ವಿರುದ್ಧಾಭಿಪ್ರಾಯಗಳುಂಟಾದದ್ದರಿಂದ ಮೂರನೆ ಜಡ್ಜಿಯವರು ಮೊಕದ್ದಮೆಯ ವಿಸ್ತಾರಗಳನ್ನು ಪರಿಶೋಧನೆ ಮಾಡಿ, ಆ ಪೈಕಿ ಮೂವರನ್ನು ಖುಲಾಸ್ ಮಾಡಿದರು ಶೈಲೇಂದ್ರನಾಥಘೋಷನಿಗೆ ಏಳು ವರುಷವೂ ವೀರೇಂದ್ರಚಂದ್ರಸೆನನಿಗೆ ಏಳು ವರುಷವೂ ಕಠಿನ ಸಜಾ ವಿಧಿಸಲ್ಪಟ್ಟಿದೆ

ಪೂರ್ವ ಬಂಗಾಳಾ ಎಂಬ ಹೊಸ ಅಧಿಪತ್ಯಕ್ಕೆ ಸೇರಿದ ಖುಲ್ನಾ ನಗರದಲ್ಲಿ "ಖುಲ್ನಾವಾಸಿ" ಎಂಬ ಪತ್ರಿಕೆಯೊಳಗೆ ರಾಜದ್ರೋಹಕರವಾದ ವಾಕ್ಯವನ್ನು ಪ್ರಕಟಿಸಿದ್ದಕ್ಕಾಗಿ ಆ ಪತ್ರಿಕೆಯ ಎಡಿಟರ ಮೇಲೂ ಪ್ರಿಂಟರ ಮೇಲೂ ಮೊಕದ್ದಮೆ ಹಾಕಲಾಯಿತು ಅವರಿಬ್ಬರೂ ತಾವು ಮಾಡಿದ ಅಪರಾಧವನ್ನು ಕ್ಷಮಿಸಬೇಕೆಂದು ಕೇಳಿಕೊಂಡು ಕ್ಷಮಾ ಪತ್ರವನ್ನು ಒಪ್ಪಿಸಿದರು ಮ್ಯಾಜಿಸ್ಟ್ರೇಟರು ಅವರಿಗೆ ತಲಾ ೧೦೦ ರೂಪಾಯಿನಂತೆ ಜುಲ್ಮಾನೆ ವಿಧಿಸಿ ಬಿಟ್ಟುಬಿಟ್ಟರು

ಪೂರ್ವ ಬಂಗಾಳಾಕ್ಕೆ ಸೇರಿದ ರಾಜಭಾರಿ, ಬೆಲ್ಗೇಷಿಯಾ ಎಂಬೀ ಸ್ಟೇಷನ್‌ಗಳ ನಡುವೆ ಹೋಗುತ್ತಿದ್ದ ರೈಲ್ವೆ ಮೇಯಿಲ್ ಗಾಡಿಯನ್ನು ಕೆಡವಿಬಿಡಬೇಕೆಂದ್ಯು ಒಬ್ಬನು ಕಂಬಿಗಳ ಮೇಲೆ ಒಂದು ಕಬ್ಬಿಣದ ಕುರ್ಚಿಯನ್ನು ಇಡುತ್ತಿದ್ದದ್ದನ್ನು ಗಾಡಿ ನಡಿಸುವವನು ದೂರದಿಂದ ನೋಡಿ ತಕ್ಷಣವೇ ಗಾಡಿಯನ್ನು ನಿಲ್ಲಿಸಿಬಿಟ್ಟು, ಗಾಡಿ ಇಳಿದು ಒಬ್ಬ ಪೋಲೀಸಿಯ ಕೂಡ ಆ ದುಷ್ಟನನ್ನು ಓಡಿಸಿಕೊಂಡು ಹೋಗಿ ಕಸ್ತಗಿರಿ ಮಾಡಿ ಹಿಡಿದು ಪೋಲೀಸಿನವರಿಗೆ ಒಪ್ಪಿಸುತ್ತಾನೆ ಇವನ ಮೂಲಕ ಇನ್ನೂ ಕೆಲವು ಕೇಡಿಗಳು ಸಿಕ್ಕಬಹುದೆಂದು ಊಹಿಸಲ್ಪಟ್ಟಿದೆ

ಕಳೆದ ಬುಧವಾರ ಅಲಹಾಬಾದ್ ಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ "ಸ್ವರಾಜ್ಯ" ವೆಂಬ ಪತ್ರಿಕೆಯ ಮೇಲೆ ರಾಜದ್ರೋಹದ ಮೊಕದ್ದಮೆಯು ದರ್ಯಾಪ್ತಿಯಾಗುತ್ತಿದ್ದಾಗ ೧೪ ವರುಷದ ಕೇಶಚಂದ್ರ ವಿಶ್ವಾಸನೆಂಬವನನ್ನು ಸಾಕ್ಷಿ ನುಡಿಯುವುದಕ್ಕೆ ಕೋರ್ಟಿಗೆ ಹಾಜರು ಮಾಡಿದರು ಆದರೆ ಈ ಹುಡುಗನು ಕೋರ್ಟಿನಲ್ಲಿ ನಿಂತು ಪ್ರಮಾಣ ಮಾಡುವುದಿಲ್ಲವೆಂದೂ ಸಾಕ್ಷಿ ನುಡಿಯುವುದಿಲ್ಲವೆಂದೂ ಹೇಳಿ ತಿರಸ್ಕಾರ ಮಾಡಿಬಿಟ್ಟನು ಅದಕ್ಕಾಗಿ ಅವನನ್ನು ಇನ್ನೊಬ್ಬ ಮ್ಯಾಜಿಸ್ಟ್ರೇಟರು ದರ್ಯಾಪ್ತಿ ಮಾಡಿ, ಅವನಿಗೆ ಮೂರು ತಿಂಗಳ ಸಾದಾ ಸಜಾ ವಿಧಿಸಿದರು

ಗಡೀಪಾರಾಗಿದ್ದು ಬಿಡುಗಡೆ ಹೊಂದಿದ ಒಂಬತ್ತು ಮಂದಿ ಬಂಗಾಳಿಗಳೂ ಕಳೆದ ವಾರ ತಮ್ಮ ತಮ್ಮ ಮನೆಗಳಿಗೆ ಬಂದು ತಲುಪಿದರು ಇವರನ್ನೆಲ್ಲಾ ಪ್ರತ್ಯೇಕ ಪ್ರತ್ಯೇಕವಾದ ಬಂದೀಖಾನೆಗಳಲ್ಲಿ ಇಟ್ಟಿದ್ದರಷ್ಟೆ ಜೈಲುಗಳಲ್ಲಿ ಇವರಿಗೆ ಕಷ್ಟವೇನಾದರೂ ಸಂಭವಿಸಿತೇ ಎಂದೂ ಅಧಿಕಾರಿಗಳೇನಾದರೂ ತೊಂದರೆ ಪಡಿಸಿದರೇ ಎಂದೂ ಕೇಳಿದಾಗ ಆ ಒಂಬತ್ತು ಮಂದಿಯೂ ತಮಗೆ ಬಂದೀಖಾನೆಗಳಲ್ಲಿ ಸ್ವಲ್ಪವೂ ತೊಂದರೆಯಾಗಲಿ ಕಷ್ಟವಾಗಲಿ ಇರಲಿಲ್ಲವೆಂದೂ, ಬಂದೀಖಾನೆಗಳ ಅಧಿಕಾರಿಗಳು ಬಹಳ ಪ್ರೀತಿ ವಿಶ್ವಾಸಗಳನ್ನಿಟ್ಟು ಎಲ್ಲಾ ಸೌಕರ್ಯಗಳನ್ನೂ ತಮಗೆ ಒದಗಿಸಿಕೊಡುತ್ತಿದ್ದರೆಂದೂ ಹೇಳಿದಾರೆ

ಬರ್ಮಾ ಅಧಿಪತ್ಯದ ಸ್ಟಾಂಪ್ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ಮೆ|| ಹಾಲ್‌ವಿಂಚಲ್ ಕ್ಲಾರ್ಕ್ ಯವರು ಸರ್ಕಾರದ ಹಣವನ್ನು ತಿಂದ ಹಾಕಿದರೆಂದ್ಯು ಅವರನ್ನು [illegible] ಕೋರ್ಟಿಗೆ ಕಳುಹಿಸಿ ಜಾಮೀನಿನ ಮೇಲೆ ಖುಲಾಸ್ ಮಾಡಿ ದರ್ಯಾಪ್ತು ಮಾಡುತ್ತಿದ್ದಾರೆ ಮತ್ತು ಅದೇ ಇಲಾಖೆಯ ಮೂರು ಮಂದಿ ನೌಕರರ ಮೇಲೆ ಬಂದಿರುವ ಅದೇ ತರದ ಮೊಕದ್ದಮೆಯು ಸೆಷನ್ಸ್ ಕೋರ್ಟಿನಲ್ಲಿ ೩೫ ದಿನಗಳಿಂದಲೂ ವಿಚಾರಣೆಯಾಗುತ್ತಿದೆ ಈ ಮೊಕದ್ದಮೆಯಲ್ಲಿ ಜೂರಿ ಪಂಚಾಯಿತರಾಗಿರುವವರಿಗೆ ತಲಾ ದಿನಕ್ಕೆ ೧೦ ರೂಪಾಯಿನಂತೆ ರುಸುಂ ಕೊಡಬೇಕೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ

ತ್ರಿಚೂರಿನಲ್ಲಿ ಹತ್ತಿ ಮತ್ತು ಕುಸುಬೆಯ ಬಟ್ಟೆ ಬರೆಗಳು ತಯಾರಾಗುವ ಒಂದು ಕಾರ್ಖಾನೆಯು ಸ್ಥಾಪನೆಯಾಗುವುದು ಈ ಕಂಪನಿಯಲ್ಲಿ ಕೊಚ್ಚಿ ಸಂಸ್ಥಾನದ ೧೧ ನೇ ರಾಜಕುಮಾರರಾದ ರಾಮ ವರ್ಮರವರು ಅಧ್ಯಕ್ಷರಾಗಿದಾರೆ ಷೇರು ೧ ಕ್ಕೆ ೧೦೦ ರೂಪಾಯಿನಂತೆ ೧,೫೦,೦೦೦ ರೂಪಾಯನ್ನು ಕಾರ್ಖಾನೆಯ ಮೂಲ ಧನವಾಗಿ ಕೂಡಿಸಿ, ಕೆಲಸವನ್ನು ಪ್ರಾರಂಭ ಮಾಡುವರು ಈಗ ಮೆ|| ಟಿ ಆರ್ ಅನಂತ ರಾಮ ಅಯ್ಯರವರು ಇಟ್ಟು ನಡಿಸುತ್ತಾ ಇರುವ ಪುಷ್ಪಗಿರಿ ನೇಯ್ಗೆ ಕಾರ್ಖಾನೆಯನ್ನು ಮೇಲ್ಕಂಡ ಹೊಸ ಕಂಪನಿಯವರು ೪೫,೦೦೦ ರೂಪಾಯಿಗೆ ಕೊಂಡುಕೊಂಡು, ಬಡಾವಣೆ ಮಾಡುತ್ತಾರೆಂದು ಪ್ರಕಟವಾಗಿದೆ

ಮದರಾಸ್ ಯೂನಿವರ್ಸಿಟಿ ವಿದ್ಯಾ ಸಂಘದವರು ಕಳೆದ ಡಿಸೆಂಬರ್ ತಿಂಗಳ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ಇರುವ ವಿದ್ಯಾರ್ಥಿಗಳಿಗೆ ಒಂದು ರಿಯಾಯಿತಿಯನ್ನು ತೋರಿಸುವವರಾಗಿದಾರೆ ಅದೇನೆಂದರೆ, ಈ ವಿದ್ಯಾರ್ಥಿಗಳ ಪೈಕಿ ಇಂಗ್ಲಿಷಿನಲ್ಲಲ್ಲದೆ ಇತರ ಮೂರು ಸಬ್‌ಜೆಕ್ಟುಗಳಲ್ಲಿ ತೇರ್ಗಡೆ ಹೊಂದಿ, ಒಟ್ಟು ೧೯೯ ಮಾರ್ಕು (ನಂಬರು) ಗಳನ್ನು ಪಡೆದಿರುವಂಥಾವರನ್ನು ಎಫ್ ಎ ಪರೀಕ್ಷೆಯ ಕ್ಲಾಸುಗಳಿಗೆ ಸೇರಿಸಿಕೊಳ್ಳಬಹುದು ಇಂಥಾ ಯೋಗ್ಯತೆಯುಳ್ಳವರ ಹೆಸರನ್ನು ಆಯಾ ಸ್ಕೂಲಿನ ಹೆಡ್ ಮಾಸ್ಟರಿಗೆ ತಿಳಿಯಪಡಿಸುತ್ತಾ ಬಂದಿದಾರೆ ಈ ವಿಚಾರವು ಮುಂದಿನ ತಿಂಗಳು ೪ ನೇ ತಾ ಶುಕ್ರವಾರ ನಡೆಯುವ ಯೂನಿವರ್ಸಿಟಿ ಸಂಘದ ಮೀಟಿಂಗಿನಲ್ಲಿ ಚರ್ಚೆಯಾಗಿ ಇತ್ಯರ್ಥಪಡುವುದಾಗಿದೆ

ಹಿಮಾಚಲ ಪರ್ವತದ ಉತ್ತರ ಪಾರ್ಶ್ವದಲ್ಲಿರುವ ಟಿಬೆಟ್ ರಾಜ್ಯದೊಳಗೆ ಸ್ಥಳಾಧಿಕಾರಿಗಳಿಗೂ ಪ್ರಜೆಗಳಿಗೂ ಚೀನಿಯರಿಂದ ಕಷ್ಟವುಂಟಾಗುವಹಾಗಿದೆ ಎಂದು ತಿಳಿಯುವುದು. ಮುಖ್ಯಪಟ್ಟಣವಾದ ಲಾಸಾ ನಗರದಲ್ಲಿ ಸಾಧಾರಣವಾಗಿ ಯಾವಾಗಲೂ ೪೦೦ ೫೦೦ ಜನ ಚೀನಾ ಸೈನಿಕರು ಇದ್ದು ಪುರ ರಕ್ಷಣೆಯ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು ಈಚೆಗೆ ಚೀನಾ ಸರ್ಕಾರದವರು ಅಲ್ಲಿಗೆ ೨,೦೦೦ ಸೈನ್ಯವನ್ನು ಕಳುಹಿಸಿದರು ಇವರು ತಮ್ಮ ಆಹಾರ ಮುಂತಾದದ್ದಕ್ಕೆ ಜನರನ್ನೂ ಅಧಿಕಾರಿಗಳನ್ನೂ ನಾನಾ ರೀತಿಯಲ್ಲಿ ಕಷ್ಟ ಪಡಿಸುತ್ತಿದಾರೆಂದೂ, ಪ್ರಜೆಗಳಲ್ಲಿ ತುಂಬಾ ಅಸಮಾಧಾನ ಉಂಟಾಗುತ್ತೆಂದೂ, ಇವರ ಹಾವಳಿಯನ್ನು ತಪ್ಪಿಸಿಕೊಳ್ಳುವದಕ್ಕೆ ಸ್ಥಳಾಧಿಕಾರಿಗಳಿಗಾಗಲಿ ಪ್ರಜೆಗಳಿಗಾಗಲಿ ಸಾಮರ್ಥ್ಯವಿಲ್ಲದೆ ಇದೆ ಎಂದೂ ಪ್ರಕಟವಾಗಿದೆ

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಅಜೀಂಘರ, ಬಳ್ಳಿಯಾ, ಘಾಜಿಪುರ ಡಿಸ್ಟ್ರಿಕ್ಟುಗಳಲ್ಲಿ ಪ್ಲೇಗ ಉಪದ್ರವು ಬಹಳ ಹೆಚ್ಚಾಗಿದೆ ಎಂದೂ, ಅನೇಕ ಗ್ರಾಮಗಳು ಪಾಳು ಬೀಳುತ್ತಿವೆ ಎಂದೂ ತಿಳಿದು ಬಂದಿದೆ ಇದಲ್ಲದೆ ಈಗೀಗ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಈ ಉಪದ್ರದ ಹಾವಳಿಯು ವಿಶೇಷವಾಗುತ್ತಿದೆ ಕಳೆದ ವಾರ ಒಟ್ಟು ೧೧,೨೪೬ ಜನರು ಈ ಉಪದ್ರದಿಂದ ಮೃತಪಟ್ಟರು ಇದರ ವಿವರ ಹ್ಯಾಗೆಂದರೆ ಸಂಯುಕ್ತ ಆಧಿಪತ್ಯ ೬,೭೦೦, ಪಂಜಾಬ್ ೨,೩೧೪, ಬಂಗಾಳಾ ೨,೧೫೦ ಬೊಂಬಾಯಿ ಆಧಿಪತ್ಯ ಮತ್ತು ಸಿಂಧುದೇಶ ೧,೦೧೫, ಮಧ್ಯಪ್ರಾಂತ್ಯಗಳು ಮತ್ತು ಬೀರಾರ ೧,೭೦೬ ರಾಜಪುಟಾನಾ ೯೧೪, ಬರ್ಮಾ ಆಧಿಪತ್ಯ ೨೬೫, ಮಧ್ಯ ಇಂಡಿಯಾ ೭೬, ಹೈದರಾಬಾದು ೭೬, ಮೈಸೂರು ೭೦, ಮದರಾಸ್ ಆಧಿಪತ್ಯ ೩೧, ಕಾಶ್ಮೀರ ೧

ಹಿಂದುಸ್ಥಾನದ ವಾಯವ್ಯ ಸರಹದ್ದಿನಲ್ಲಿರುವ ಪೆಷಾವರ್ ಪಟ್ಟಣದ ಬಳಿಯಲ್ಲಿ ಗೌತಮಬುದ್ಧನ ಹೆಸರಿನ ಮೇಲೆ ಕಟ್ಟಿದ ಪುರಾತನಕಾಲದ ದೇವಾಲಯ ಒಂದರಲ್ಲಿ ಆ ಪುರುಷನ ಅಸ್ಥಿಗಳಿರುವ ಒಂದು ಭರಣಿಯೂ ಸಿಕ್ಕಿ ಇಂಡಿಯಾ ಗವರ್ನ್‌ಮೆಂಟಿನವರ ಸ್ವಾಧೀನದಲ್ಲಿರುತ್ತದೆಯಷ್ಟೆ ಆ ಭರಣಿಯನ್ನು ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೇ ಎಂಬ ಪಟ್ಟಣದಲ್ಲಿ ಬೌದ್ಧರ ದೇವಾಲಯದಲ್ಲಿ ಇಟ್ಟುಕೊಳ್ಳುವಂತೆ ಕಳುಹಿಸಿಕೊಡುವುದಾಗಿ ತೀರ್ಮಾನವಾಗಿದೆ ಆ ಪಟ್ಟಣದ ಬೌದ್ಧ ಪ್ರಜಾ ಮುಖಂಡರು ಇಷ್ಟರಲ್ಲೇ ಕಲ್ಕತ್ತೆಗೆ ಬಂದು ವೈಸ್‌ರಾಯರ ಭೇಟಿಮಾಡಿ ಅವರಿಂದ ಆ ಭರಣಿಯನ್ನು ಪಡೆದುಕೊಂಡು ಹೋಗುವವರಾಗಿದಾರೆ ಇದನ್ನು ಅಲ್ಲಿ ಯಥಾವಿಧಿಯಾಗಿ ಇಟ್ಟು ಪ್ರತಿಷ್ಠೆ ಮಾಡುವುದಕ್ಕೋಸ್ಕರ ಆ ಮತಸ್ಥರು ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡಿಕೊಂಡಿರುವರು

ಬರ್ಮಾ ಅಧಿಪತ್ಯದಲ್ಲಿ ಕ್ಷಯರೋಗವು ದಿನೇ ದಿನೇ ಹೆಚ್ಚುತ್ತಾ ಬಂದಿದೆ ಎಂದು ಅಲ್ಲಿನ ವೈದ್ಯರುಗಳು ಗೊತ್ತುಮಾಡಿ, ಅದರ ನಿವಾರಣೆಗೂ, ಚಿಕಿತ್ಸೆಗೂ ತಕ್ಕ ಏರ್ಪಾಡುಗಳನ್ನು ರೂಢಿಸಬೇಕೆಂದು ತೀರ್ಮಾನ ಮಾಡಿದರು ಪಾಠಶಾಲೆಗಳಲ್ಲಿ ಆರೋಗ್ಯ ಸೂತ್ರಗಳನ್ನು ಮಕ್ಕಳಿಗೆ ಚೆನ್ನಾಗಿ ಕಲಿಸುವುದು, ಬೀದಿಗಳಲ್ಲೂ ಸಿಕ್ಕಿದ ಕಡೆಗಳಲ್ಲೂ ಉಗುಳದಂತೆ ಜನರಿಗೆ ವಿವೇಕ ಹೇಳುವುದು, ಬೆಳಕು ಗಾಳಿ ಧಾರಾಳವಾಗಿ ಸಂಚರಿಸುವಂಥಾ ಮನೆ ಮಠಗಳಲ್ಲಿ ವಾಸಮಾಡುತ್ತಾ ಬರಬೇಕೆಂದು ತಿಳಿಸುವುದು, ಕ್ಷಯರೋಗ ಪೀಡಿತರನ್ನು ಇತರರ ಸಂಸರ್ಗದಲ್ಲಿರದಂತೆ ತಪ್ಪಿಸಿ ಪ್ರತ್ಯೇಕವಾದ ಆಲಯದಲ್ಲಿಟ್ಟು ಚಿಕಿತ್ಸೆ ಅರೈಕೆಗಳನ್ನು ಮಾಡುವುದು, ಇಂಥಾ ಕಾರ್ಯಗಳನ್ನು ಪ್ರಜೆಗಳ ಮುಖಂಡರೂ, ಸರ್ಕಾರದವರೂ ಏಕೀಭವಿಸಿ ಮಾಡುತ್ತಾ ಬರಬೇಕೆಂದೂ, ಅನಾದರಣೆ ಮಾಡಿದರೆ ಈ ಕಟ್ಟ ರೋಗವು ಇನ್ನೂ ಪ್ರಬಲವಾಗುವುದೆಂದೂ ಆ ಪಂಡಿತ ಮಂಡಲಿಯವರು ತೀರ್ಮಾನಮಾಡಿರುತ್ತಾರೆ

ಚಿಂತಾಮಣಿಯಲ್ಲಿ ಸ್ತ್ರೀಯರ ಕೂಟವು

ಚಿಂತಾಮಣಿಯಲ್ಲಿ ಹಿಂದಿನ ಶುಕ್ರವಾರ ಸ್ಥಾಪಿಸಲ್ಪಟ್ಟ ಶ್ರೀ ರಾಘವ ಮಂದಿರದಲ್ಲಿ ಒಂದು ಸ್ತ್ರೀಯರ ಕೂಟವು ನಡೆಯಿತು ಹೊಸದಾಗಿ ದಯಮಾಡಿಸಿರುವ ಅಮಲ್ದಾರ್ರವರ ಕುಟುಂಬದವರು, ತಾಲ್ಲೂಕ್ ಶಿರಸ್ತೆದಾರ್ರವರ ಕುಟುಂಬದವರು, ಇಲ್ಲಿನ ಇನ್ನೂ ಅನೇಕ ಕನ್ಯಕಾಮಣಿಗಳೆಲ್ಲಾ ಸಭೆ ಸೇರಿದ್ದರು ಸಭೆಯಲ್ಲಿ ವಿದ್ಯಾಭಿವೃದ್ಧಿ, ದೇಶೋನ್ನತಿ, ಧರ್ಮಪರಿಪಾಲನೆ, ಈ ಮೊದಲಾದ ವಿಚಾರಗಳನ್ನು ಕುರಿತು ಉಪನ್ಯಾಸಗಳು ಜರುಗಿ, ದೇವರ ಪೂಜೆ ಕುಂಕುಮಾರ್ಚನೆ ಹೂವು ತಾಂಬೂಲಾದಿಗಳ ವಿನಿಯೋಗ ಈ ಮೊದಲಾದದ್ದು ಬಹಳ ವಿಜೃಂಭಣೆಯಿಂದ ನಡೆಯಿತು ಅಲ್ಲಿಗೆ ಅನೇಕಮಂದಿ ಕುರುಡರು, ಕುಂಟರು, ಮೂಕರು ಮುಂತಾದ ಭಿಕ್ಷುಕರು ಬಂದಿದ್ದರು ಇವರಿಗೆಲ್ಲಾ ಅವರವರ ಯೋಗ್ಯತಾನುಸಾರ ಧರ್ಮಗಳು ನಡೆದವು ಬಟ್ಟೆ ಇಲ್ಲದವರಿಗೆ ಬಟ್ಟೆಯನ್ನು ಕೊಡಿಸಿದರು ಸ್ತ್ರೀಯರು ಹೀಗೆಯೇ ಪ್ರತಿ ಶುಕ್ರವಾರವೂ ಸಭೆ ಸೇರುತ್ತಾರೆ ದರ್ಶನ ಮಾಡುವುದು ಮಾತ್ರ ತಿಂಗಳಿಗೆ ಒಂದಾವರ್ತಿಯಾಗಿದೆ. ಆ ದಿನ ಎಲ್ಲಾ ಧರ್ಮಕಾರ್ಯಗಳೂ ಸಾಯಂಕಾಲ ಆರುಗಂಟೆಯವರೆಗೆ ನಡೆದು ಸಭೆ ಬರಖಾಸ್ತಾಯಿತು ಈ ಮೇಲ್ಪಂಕ್ತಿಯನ್ನು ಮೆ|| ಎಫ್ ಎಸ್ ರಾಘವಾಚಾರ್ಯರವರ ಧರ್ಮಪತ್ನಿಯವರು ಹಾಕಿಕೊಟ್ಟು ಸಾಗುತ್ತಾ ಬಂದಿದೆ ಥಿಯಸಾಫಿಕಲ್ ಸೊಸೈಟಿಯವರು ಮತ್ತು ಸನ್ಸ್ ಆಫ್ ಇಂಡಿಯಾ ಸಂಘದವರು ಹೀಗೆ ನಡಿಸುತ್ತಾ ಬರಬಹುದಾಗಿದೆ

ಬಸ್ತಾರ್ ಸಂಸ್ಥಾನದಲ್ಲಿ ಗಲಭೆಯು

ಸೈನ್ಯವನ್ನು ಕಳುಹಿಸಬೇಕಾಯಿತು

ಬಸ್ತಾರ್ ಎಂಬ ಸಂಸ್ಥಾನವು ಮಧ್ಯಪ್ರಾಂತ್ಯಗಳಲ್ಲಿರುವುದು ಇದರ ಒಂದು ಭಾಗವು ಮದರಾಸು ಅಧಿಪತ್ಯಕ್ಕೆ ಸೇರಿದ ವಿಶಾಖಪಟ್ಟಣದ ಜಿಲ್ಲೆಗೆ ಸೇರಿದಾಗಿದೆ ಈ ಸಂಸ್ಥಾನದಲ್ಲಿ ಮೆರಿಯಾ ಎಂಬ ಕಾಡು ಜನರು ದಂಗೆಯೆದ್ದು ಕ್ರೂರಕೃತ್ಯಗಳನ್ನು ನಡಿಸುತ್ತಿದಾರೆಂದು ಅಲ್ಲಿನ ಅಧಿಕಾರಿಗಳು ಅದನ್ನು ಅಡಗಿಸುವುದಕ್ಕೆ ಸಮರ್ಥರಾಗದೆ ಇಂಗ್ಲಿಷ್ ಅಧಿಕಾರಿಗಳಿಗೆ ಬರೆದು ತಿಳಿಸಲು ಇಂಗ್ಲಿಷ್ ಸರ್ಕಾರದವರ ೧೫೦ ಪೋಲೀಸಿನವರಿಗೆ ಆಯುಧಗಳನ್ನು ಕೊಟ್ಟು ಆ ಸ್ಥಳಕ್ಕೆ ಅಂದರೆ ರಾಜಧಾನಿಯಾದ ಜಗದಲ್‌ಪುರಕ್ಕೆ ಕಳುಹಿಸಿದರು ಅಷ್ಟರಲ್ಲಿ ಮೆರಿಯಾ ಜನರು ಕೆಲವು ಸಾವಿರ ತನಕ ಗುಂಪು ಸೇರಿ ಪೋಲೀಸಿನವರ ಮೇಲೆ ಹಲ್ಲೆ ಮಾಡುತ್ತಾ ಬಂದರು ಅದರ ಮೇಲೆ ಗವರ್ನ್‌ಮೆಂಟಿನವರು ಜಬ್ಬಲ್‌ಪುರದಲ್ಲಿರುವ ಪಂಜಾಬಿ ಸೈನಿಕರನ್ನು ಮಾರ್ಗ ಎಂಬ ಖಚ ತೀಕ್ಷ್ಣವಾದ ಬಂದೂಕು ಮದ್ದು ಗುಂಡು ಸಮೇತ ಧಮಾತರಿ ತನಕ ರೈಲಿನ ಮೇಲೆ ಕಳುಹಿಸಿದರು ಅಲ್ಲಿಂದಾಚೆಗೆ ಕಾಡುಸೀಮೆಯೊಳಗೆ ಸೈನಿಕರು ಸುಮಾರು ೧೦೦ ಮೈಲಿ ದೂರ ಪಾದಚಾರಿಗಳಾಗಿ ಹೋಗಿ ಬಸ್ತಾರ್ ರಾಜಧಾನಿಯನ್ನು ತಲುಪಿರುತ್ತಾರೆ ಇದಲ್ಲದೆ ಮದರಾಸಿನಿಂದಲೂ ಅಲ್ಲಿಗೆ ಕೆಲವು ಆಯುಧಪಾಣಿಗಳಾದ ಪೋಲೀಸಿನವರನ್ನು ಕಳುಹಿಸುವ ಏರ್ಪಾಡು ನಡೆಯುತ್ತಲಿದೆ ಛತ್ತೀಸಘಡದ ರೆಸಿಡೆಂಟರಾದ ಮೆ|| ಡೆಬ್ರೆಟ್ ಯವರೂ, ಪೋಲೀಸ ಸೂಪರಿಂಟೆಂಡೆಂಟರಾದ ಮೆ|| ಗೇಯರ್ ರವರೂ ಮೋಟಾರ ಗಾಡಿಗಳಲ್ಲಿ ಅಲ್ಲಿಗೆ ಹೋಗಿ ತಾ ೧೭ ರಲ್ಲಿ ಜಗದಲ್‌ಪುರವನ್ನು ಸೇರಲು ನದಿ ದಾಟುತ್ತಿದ್ದಾಗ ದಂಗೆಕೋರರಾದ ಮೆರಿಯಾ ಜನರು ನದಿಗೆ ಅಡ್ಡ ಹಾಕಿ ಅವರನ್ನು ತಡೆದರು ಅದರ ಮೇಲೆ ಗುಂಡು ಹೊಡೆದು ಐದು ಮಂದಿ ದಂಗೇಕೋರರನ್ನು ಕೊಲ್ಲಬೇಕಾಯಿತು ಈ ಜನರು ಅನೇಕ ಸಾವಿರ ಮಂದಿ ಜಗದಲ್‌ಪುರದ ಸುತ್ತಲೂ ಘೇರಾಯಿಸಿಕೊಂಡಿದಾರೆಂದೂ ಅವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಬರುತ್ತಿದೆ ಎಂದೂ ಪ್ರಕಟವಾಗಿದೆ

ಈ ಸಂಸ್ಥಾನವು ವಿಶೇಷವಾಗಿ ಕಾಡುಗಳಿಂದಲೂ ಬೆಟ್ಟ ಗುಡ್ಡಗಳಿಂದಲೂ ಆವರಿಸಲ್ಪಟ್ಟಿದ್ದಾಗಿದೆ ಈಗ ದಂಗೆ ಎದ್ದಿರುವ ಮೆರಿಯಾ ಜನರು ನಾಗರಿಕತೆಯನ್ನು ಅರಿತವರಲ್ಲ ಅವರು ಬೆಟ್ಟ ಗುಡ್ಡಗಳಲ್ಲೇ ವಾಸಮಾಡಿಕೊಂಡು ಕಾಡುಗಳೊಳಗೆ ಸಂಚಾರಮಾಡತಕ್ಕವರಾಗಿದಾರೆ ಅವರ ದುರ್ಗಗಳನ್ನೂ ವಾಸಸ್ಥಾನಗಳನ್ನೂ ಕಂಡು ಹಿಡಿಯುವುದು ತುಂಬಾ ಪ್ರಯಾಸ ಇವರ ಗುಣಲಕ್ಷಣಾದಿಗಳು ವಿಶಾಖಪಟ್ಟಣದ ಜಿಲ್ಲೆಯ ಪ್ರಜೆಗಳಿಗೆಲ್ಲಾ ಚೆನ್ನಾಗಿ ತಿಳಿದಿದೆ ಅನಾದಿ ವಿಶೇಷ ಕಾಲಗಳಲ್ಲಿ ಅಂದರೆ ಕ್ಷಾಮಡಾಮರಗಳು ರೋಗಾದಿಗಳು ಪ್ರಬಲವಾದಾಗ ಅದರ ನಿವಾರಣೆಗೆ ನರಬಲಿಗಳನ್ನು ಕೊಡತಕ್ಕವರು ಇಂಗ್ಲಿಷ್ ಸರಕಾರದವರು ಬಂದ ಮೇಲೆ ಈ ಜನರ ಇಂಥಾ ಕ್ರೂರಕೃತ್ಯಗಳನ್ನು ಅವರು ಬಹು ಮಟ್ಟಿಗೆ ಅಡಗಿಸಿರುತ್ತಾರಾದರೂ ಆ ಜನರು ಬಲಿಕೊಡುವುದನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟರೆಂದು ಹೇಳಲಿಕ್ಕಾಗದು ಅವರು ನರಬಲಿ ಕೊಡಬೇಕಾದಾಗ ಮಾತ್ರವೇ ಅಲ್ಲ, ಸಾಧಾರಣವಾಗಿ ಯಾವಾಗಲೂ ಪಟ್ಟಣ ಊರು ಗ್ರಾಮಗಳಿಗೆ ಹೋಗಿ ಗಂಡು ಹೆಣ್ಣು ಮಕ್ಕಳನ್ನು ಹಿಡಿದು ಎತ್ತಿಕೊಂಡು ಹೋಗುವುದೂ ಈ ಮಕ್ಕಳನ್ನು ತಮ್ಮ ಬೆಟ್ಟಗುಡ್ಡಗಳೊಳಗೆ ಇಟ್ಟುಕೊಂಡು ಸಾಕುತ್ತಾ ಬರುವುದೂ, ಅವಶ್ಯಬಿದ್ದಾಗ ಆ ಪೈಕಿ ಒಬ್ಬರನ್ನು ಹಿಡಿದು ಬಲಿಕೊಡುವುದೂ ವಾಡಿಕೆಯಾಗಿದೆ ಇವರು ನಾಗರಿಕರ ಕಣ್ಣಿಗೆ ಬೀಳುವುದಿಲ್ಲ ಅವರನ್ನು ನೋಡಿದ ಕೂಡಲೆ ಓಡಿ ಹೋಗಿ ತಮ್ಮ ದುರ್ಗಗಳೊಳಗೆ ಸೇರಿಕೊಳ್ಳುವರು ಹೀಗಾದರೆ ಈ ಥರ ಕಾಡು ಜನರಿಂದ ಕಂದಾಯ ಕಾಣಿಕೆಗಳು ವಸೂಲಾಗುವುದು ಎಂತು ಹ್ಯಾಗೆ ಎಂದು ಪ್ರಶ್ನೆ ಮಾಡಬಹುದು ಸರ್ಕಾರದ ನೌಕರನು ಜಂಗಲಿಗೆ ಪ್ರತಿವರುಷವೂ ಗೊತ್ತಾದ ಕಾಲದಲ್ಲಿ ಹೋಗಿ ಕೊಂಬು ಕಹಳೆ ತಮಟೆಗಳ ಶಬ್ದ ಮಾಡಿ ತಾನು ಬಂದಿದ್ದೇನೆಂಬುವುದನ್ನು ಆ ಜನರಿಗೆ ಸೂಚನೆ ಕೊಡುತ್ತಾನೆ ಆದರೆ ಈ ನೌಕರನು ಅವರ ಕಣ್ಣಿಗೆ ಕಾಣದಂತೆ ಎಲ್ಲೋ ಮರೆಮಾಚಿಕೊಂಡಿರುವನು ಈ ಕಾಡು ಜನರು ಅಧಿಕಾರಿಯು ಬಂದಿದ್ದಾನೆಂದು ಅರಿತು ತಾವು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಕಂದಾಯವನ್ನು ತಂದು ಒಂದು ಕಡೆ ಸುರಿದು ಹೊರಟುಹೋಗುತ್ತಾರೆ ಅವರು ಕೊಡುವ ಕಂದಾಯವು ಹಣವಲ್ಲ, ಅವರು ಬೆಳೆಮಾಡಿದ್ದನ್ನು ತಂದೊಪ್ಪಿಸುವರು

ಇಂಥಾ ಕಾಡು ಜನರು ಸೈನಿಕರ ಮದ್ದುಗುಂಡಿಗೆ ಎದುರು ನಿಂತು ಬದುಕುವುದುಂಟೇ ಅವರು ಅಸ್ತ್ರ ಶಸ್ತ್ರ ವಿದ್ಯೆಯಲ್ಲಿ ಪ್ರವೀಣರೇನೋ ಆಗಿದ್ದರೂ ಆಗಬಹುದು ಈಗ ಅವರ ಮೂರ್ಖತನವು ಅವರಲ್ಲಿ ಅನೇಕರಿಗೆ ವಿನಾಶಕಾಲವನ್ನು ತಂದಿರುತ್ತದೆ ಅನೇಕರು ಮಡಿದುಹೋದ ಮೇಲೆ ಆಗ ಅವರಿಗೆ ವಿವೇಕ ಬರುವುದೆಂದು ಕಾಣುವುದು ಈ ಕಾಡು ಜನರು ಸಂಸ್ಥಾನದ ಅಧಿಕಾರಿಗಳ ಮೇಲೆ ಯಾತಕ್ಕಾಗಿ ತಿರುಗಿಬಿದ್ದರೆಂಬ ಕಾರಣ ಗೊತ್ತಾಗುವುದಿಲ್ಲ ಇವರು ನರಬಲಿಗಳನ್ನು ಕೊಡದಂತೆ ಅಲ್ಲಿನ ರಾಜರು ತಡೆಯಬೇಕೆಂದು ಏರ್ಪಾಡು ಮಾಡಿದ ಹಾಗೂ, ಅದರ ಮೇಲೆ ಆ ಜನರು ತಮ್ಮ ದುಷ್ಕೃತ್ಯಕ್ಕೆ ಅಟಂಕವಾದದ್ದನ್ನು ಈ ರೀತಿ ದಂಗೆಯೆದ್ದು ಪರಿಹರಿಸಿಕೊಳ್ಳಬೇಕೆಂದು ಸಾಹಸಪಡುತ್ತಿರುವ ಹಾಗೂ ತೋರ ಬರುತ್ತದೆ

ಈಚೆಗೆ ಬಂದಿರುವ ವರ್ತಮಾನವೇನೆಂದರೆ,—ಮೆರಿಯಾ ಎಂಬ ದಂಗೆಯೆದ್ದಿರುವ ಜನರು ಜಗದಲ್‌ಪುರದ ಸುತ್ತಲೂ ಮೂರು ಸಾಲು ಕಟ್ಟಿ ದಾಳ್ಯಮಾಡಿಕೊಂಡಿದಾರೆ ಪೌರ್ಣಮಿಯ ದಿನ ಅವರ ಜನರೆಲ್ಲಾ ಸುತ್ತುಗಟ್ಟಿ ಬಂದು ಸೇರಿಕೊಳ್ಳುವರು ಅವರ ಮುಖಂಡರನ್ನು ಪತ್ತೆಮಾಡಿ ಹಿಡಿಯುವುದು ಮೆ|| ಗೇಯರ್ ಯವರಿಗೆ ಸಾಧ್ಯವಾಗಲಿಲ್ಲ ಪೋಲೀಸಿನವರು ಅರೆವಾಸಿ ತಾ ೧೭ ರಲ್ಲಿ ಕಾದಾಟವಿಲ್ಲದೆ ಊರನ್ನು ಪ್ರವೇಶಿಸಿದರು ತಾ. ೧೯ ರಲ್ಲಿ ಉಳಿದ ಅರ್ಧ ಪಾಲು ತಲುಪಿರುತ್ತಾರೆ ಇವರೆಲ್ಲಾ ಒಟ್ಟು ೩೫೦ ಮಂದಿ ಆಗಬಹುದು ೨೦೦ ಜನ ಶಿಪಾಯಿಗಳು ಒಂದು ಫಿರಂಗಿಯ ಸಹಿತ ತಾ ೨೫ ಕ್ಕೆ ಅಲ್ಲಿ ಹೋಗಿ ಸೇರುವರು ಈ ಜನರು ೩೪ ವರ್ಷಗಳ ಹಿಂದೆ ದಂಗೆಯೆದ್ದಿದ್ದರು ಈಗ ಅದಕ್ಕಿಂತಲೂ ಹೆಚ್ಚಾಗಿರುತ್ತಾರೆ ಬಹಳ ಸಭ್ಯರಾಗಿಯೂ ಧೈರ್ಯಸ್ಥರಾಗಿಯೂ ಇರತಕ್ಕ ಈ ಜನರು ಹೀಗೆ ದಂಗೆಯೇಳಬೇಕಾದರೆ ವಿಶೇಷಕಾರಣವಿರಬೇಕೆಂದು ಅವರ ಶೀಲಸ್ವಭಾವವನ್ನು ತಿಳಿದಿರುವವರು ಹೇಳುತ್ತಾರೆ ಹ್ಯಾಗೂ ಈ ಗಲಭೆಯು ದೆಸೆಯಿಂದ ಜಗದಲ್ ಪುರದಲ್ಲಿ ಇನ್ನೂ ಕೆಲವು ಕಾಲದವರೆಗೆ ಪ್ರಜಾನೆಮ್ಮದಿಗೆ ಭಂಗವುಂಟಾಗುತ್ತದೆ

Printed and Published by the Rev H GULLIFORD, Proprietor and Manager, Wesleyan Mission Press, Mysore 24/2/1910

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೧೦ ನೇ ಇಸವಿ ಮಾರ್ಚಿ ತಾರೀಖು ೩ ನೇ ಗುರುವಾರ. ಸಂಚಿಕೆ ೪೦

ಬಂಗಾರದ ಮತ್ತು ಬೆಳ್ಳಿಯ ಪದಕಗಳು ೧೨ ದೊರೆತಿವೆ.

ಡೈಮಂಡ್ ಡೈಮಂಡ್

ಅತ್ತರ್ ಸಾಬೂನುಗಳು ರಂಗಿನ ಸಾಬೂನುಗಳು

ಸುವಾಸನೆ. ಚರ್ಮಕ್ಕೆ ಹಿತ ಸುಲಭ ಕ್ರಯ. ಒಳ್ಳೆ ಖಾತರಿ

21-2

ಅತ್ತರ್ ಸಾಬೂನುಗಳು ಮೈಮನ ಕಾಂತಿಗೂ, ಕಾರ್ಬಾಲಿಕ್ ಸಾಬೂನುಗಳು ಚರ್ಮದ ರೋಗನಿವಾರಣೆಗೂ ಅನುಕೂಲ. ಡೈಮಂಡ್ ರಂಗಿನ ಸಾಬೂನುಗಳು ಬಣ್ಣ ಮಾಸದೆ ವಸ್ತ್ರಗಳಿಂದ ಎಲ್ಲಾ ತರದ ಬಟ್ಟೆಗಳಿಗೂ ಬೇಕಾದ ರಂಗನ್ನು ಸುಲಭವಾಗಿ ಕೊಡುವುದು. ಡೈಮಂಡ್ ಗುಲಾಬಿ ಟೀ — ಇದರ ಕಷಾಯವು ಬಹಳ ರುಚಿಕರವಾಗಿರುವುದರಿಂದ ಈ ಟೀಯ. ಕೇವಲ ದೂಟಿಯಲ್ಲಿಯೆ ಇದಲ್ಲದೆ ಡೈಮಂಡ್ ಕೇಶವರ್ಧಕತೈಲ, ಹಲ್ಲುಪುಡಿ ಕಾಸ್ಮೆಟಿಕ್ ಪಾಮೇಡ್, ಬಾಂ, ಶೀತನಿವಾರಕ ಕ್ಷಾರ, ಸುವಾಸಿಸಿ, ಏಬಾಸ್ ಮೊದಲಾದ ಅತ್ತರುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ

ಡೈಮಂಡ್ ಸೋಪ್ ಕಂಪೆನಿ, ಗಿರ್ಗಾಂ ಮುಂಬಯಿ ಮೈಸೂರು ಸೀಮೆಗೆ ಏಜೆಂಟರು —

ವ್ಯಾಪಾರಿಗಳಿಗೆ ವರ ಬೇರೆ ರಾಮಡು ಕ ಪಸಿ, ಬೆಂಗಳೂರು ಸಿಟಿ

ಸ್ವದೇಶಿ ಬಟ್ಟೆಗಳು ! ಸ್ವದೇಶಿ ಬಟ್ಟೆಗಳು !

11-9

ನಮ್ಮಲ್ಲಿ ಈಗ ಸಿದ್ಧವಾಗಿರುವ ಚಕ್ ಬಟ್ಟೆಗಳು ನಾಬೂಕಾಗಿ ಉಪಯೋಗಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಕ್ರಯ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶಿ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲಿ ಮಾರಲ್ಪಡುತ್ತದೆ ಶಾಲುಗಳು, ಹಾಸಿನ ಜಮಖಾನೆಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪ್ರೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪ್ರೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ ! !

ಜಾನ್ ವೆಸ್ಲಿ ಎಂಬ ಪ್ರಸಿದ್ಧ ಪುರುಷನ ಜೀವಮಾನ ಚರಿತ್ರೆ —(105 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇರುತಿದ್ದನು ಈತನು ಇಂಗ್ಲೀಷ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು.

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(100 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-9]

ಮ್ಯಾನೇಜರ್, ಸಿ. ಎಲ್ ಎಸ್. ಬುಕ್ ಡಿಪ್ರೋ, ಮೈಸೂರು

'ಮನೆ ಕ್ರಯಕ್ಕೆ ಅಥವಾ ಭೋಗ್ಯಕ್ಕೆ'

30-1

ಮೈಸೂರು ಶಿವರಾಮಪೇಟೆಯ ದೊಡ್ಡ ಬೀದಿಯಲ್ಲಿ ಶೇಟು ಅಂಟೆಗುರುಲಿಂಗ ಕೃಷ್ಣಪ್ಪನವರಿಗೆ ಸೇರಿದ್ದು ಹಾಲಿ ಈ ಕೆಳಗೆ ನಮೂದಿಸಿರುವ ವಿಳಾಸದಾರರಿಗೆ ಸೇರಿ ಅವರ ಅನುಭವದಲ್ಲಿರುವ ಸಿಂಹರಾಜ ಮೊಹಲ್ಲಾ ಇಲವಾಲ ರೋಡಿನಲ್ಲಿರುವ ಡೋರ್ ನಂ ೪೧೮ ನೆ ದೊಡ್ಡ ಮನೆ ಬಾಕಿ ವಿಷಯಗಳನ್ನು ಈ ಕೆಳಗೆ ನಮೂದಿಸಿರುವ ವಿಳಾಸದಿಂದ ತಿಳಿದುಕೊಳ್ಳಬಹುದು

ಬಿ ಶ್ರೀಕಂಠಯ್ಯ, ಕಾಲೇಜ್ ಆಫೀಸು, ಮೈಸೂರುಕೋಟೆ

ಗೃಹಕೃತ್ಯದ ನೋಟೀಸ್

28-1

ನಂಜನಗೂಡು ತಾಲ್ಲೂಕು ತಗಡೂರು ಗ್ರಾಮದಲ್ಲಿ ಪಾಂಚಾಳದ ವಾದಾಚಾರಿ, ಚಂದ್ರಶೇಖರಾಚಾರಿ ಎಂಬಿಬ್ಬರು ಅಣ್ಣತಮ್ಮಂದಿರು ಏಕಗೃಹಕೃತ್ಯದಲ್ಲಿದ್ದರು ವಾದಾಚಾರಿಯು ಅಪುತ್ರವಂತನಾಗಿ ಮೃತಪಟ್ಟನು ಚಂದ್ರಶೇಖರಾಚಾರಿಯು ಬಹುಮೂತ್ರರೋಗಸ್ತನಿದ್ದು ಮರಣಕಾಲದಲ್ಲಿ ಗಂಡುಮಕ್ಕಳು ಇಲ್ಲವಾದ್ದರಿಂದ ಮಗಳಾದ ಗೌರಮ್ಮನೆಂಬ ನನಗೂ ಮತ್ತು ನಮ್ಮ ತಂದೆ ಅಣ್ಣನ ಹೆಂಡತಿಯಾದ ಪುಟ್ಟನಂಜಮ್ಮನಿಗೂ ಸಹ ವಾಸಕ್ಕೂ ಮತ್ತು ಜೀವನಕ್ಕೂ ಬರುವ ಆಸ್ತಿ ಕೊಟ್ಟು ಉಯಿಲನ್ನು ಸನ್ ೧೯೦೭ ನೇ ಫೆಬ್ರುವರಿ ೬ ನೇ ತಾ ಬರಸಿ ನಂಜನಗೂಡು ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರು ಮಾಡಿಸಿ ಕಾಲವಾದನು ನಮ್ಮ ದೊಡ್ಡಮ್ಮನಾದ ಪುಟ್ಟನಂಜಮ್ಮನಿಗೆ ವಾಸಕ್ಕೆ ತಗಡೂರಿನಲ್ಲಿ ಮನೆಯೂ, ಜೀವನ ವಗ್ಯೆರೆಗೆ ನಂಜನಗೂಡು ತಾಲ್ಲೂಕು ಬಂಚನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರು ೯೫, ಎಕರೆ ೨ ಗುಂಟೆ ೩೬, ಆಕಾರ ರೂ ೬ ೨ ೦ ಮತ್ತು ಸರ್ವೆ ನಂಬರು ೯೬, ಎಕರೆ ೨, ಗುಂಟೆ ೩೮, ಆಕಾರ ರೂ ೬ ನಂಜನಗೂಡು ತಾ ತಗಡೂರಿನಲ್ಲಿ ಸರ್ವೆ ನಂ॥ ೮೫೬, ಎಕರೆ ೩, ಗುಂಟೆ ೭, ಆಕಾರ ರೂ ೪, ನಂ॥ ೭೭೫, ಎಕರೆ ೪, ಗುಂಟೆ ೨೪, ಆಕಾರ ರೂ ೪ ೮ ೦ ಈ ನಾಲ್ಕು ನಂಬರು ತೋಟ ಮತ್ತು ಮಿಳ್ಳೆ ಸಹ ಮೇಲ್ಕಂಡ ಪುಟ್ಟನಂಜಮ್ಮನು ತನ್ನ ಜೀವಮಾನಪರ್ಯಂತರ ಅನುಭವಿಸಿಕೊಂಡು ಬರುವದೆಂದೂ, ಈ ಸ್ವತ್ತುಗಳನ್ನು ಯಾವ ವಿಧವಾದ ಪರಾಧೀನ ಮಾಡುವದಕ್ಕೂ ಆಕೆಗೆ ಅಧಿಕಾರವಿಲ್ಲವೆಂದೂ ಮತ್ತು ಆಕೆ ಮೃತಪಟ್ಟ ಮೇಲೆ ಸದರಿ ಸ್ವತ್ತುಗಳು ಮಗಳಾದ ಗೌರಮ್ಮನೆಂಬ ನನಗೆ ಸೇರತಕ್ಕದ್ದೆಂದೂ ಉಯಿಲ್‌ನಲ್ಲಿ ಬರೆದಿದ್ದಾನೆ ನಮ್ಮ ದೊಡ್ಡಮ್ಮನಾದ ಪುಟ್ಟನಂಜಮ್ಮನು ಈ ವಿಚಾರವನ್ನು ಚನ್ನಾಗಿ ತಿಳಿದ್ದಾಗ್ಯೂ ಕೆಟ್ಟ ಜನಗಳ ದುರ್ಬೋಧನೆಯಿಂದ ನನಗೆ ಮೋಸವಾದಬೇಕೆಂದು ನನ್ನ ಅನುಮತಿ ಇಲ್ಲದಂತೆ ಮರಮಾಜ ತನ್ನ ಜೀವನಕ್ಕಾಗಿ ಬಿಟ್ಟಿರತಕ್ಕ ಈ ಸ್ವತ್ತುಗಳನ್ನು ಪರಭಾರೆ ಜನಗಳಿಗೆ ಆಧಾರ ಭೋಗ್ಯ ಕ್ರಯ ವಗೈರೆ ಮಾಡುವುದನ್ನು ನಡಿಸಿ ಸ್ವತ್ತುಗಳನ್ನು ಖಿಲ್ ಮಾಡುತ್ತಾಳೆಂದು ಕೇಳುತ್ತೇನೆ ಈ ರೀತಿ ನಡವಳಿಕೆಗೆ ಒಳಪಟ್ಟು ಹಣಕಾಸು ಆಕೆಗೆ ಕೊಟ್ಟವರು ಈ ಸ್ವತ್ತುಗಳನ್ನು ಹೊಂದಲಾರರು ಹಾಗೆ ಮಾಡಿದಲ್ಲಿ ಬರಕೊಟ್ಟವಳಿಂದ ವಿಲೇ ಮಾಡಿಕೊಳ್ಳಬೇಕೇ ಹೊರತು ಈ ಸ್ವತ್ತುಗಳಾಗಲಿ ಅವುಗಳ ಮೇಲಿರುವ ನನ್ನ ಹಕ್ಕುಗಳಿ ಈಡಾಗುವುದಿಲ್ಲ ಮತ್ತು ಅಂಥವರು ನನ್ನ ಎಲ್ಲಾ ಲಕ್ಷಾನುಗಳಿಗೂ ಗುರಿಯಾಗಬೇಕಾದೀತೆಂದು ಈ ಮೂಲಕ ಎಚ್ಚರಿಸಿರುತ್ತೇನೆ

ಚಂದ್ರಶೇಖರಾಚಾರಿ ಮಗಳು ಗೌರಮ್ಮ, ತಗಡೂರು ವಾಸಿ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ ೧—೧೪—೦
" " ೬ " " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಸಾಪ್ತಾಹಿಕ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ.

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗುತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ, ಯವರು ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ ಇದೇ ಮಾರ್ಚಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರೆಯಿರಿ ವಿಳಾಸ·—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ತಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [26-1]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟುನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಚಳಿಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು ೦-೮-೦

ಗಜಕರ್ಣದ ಮುಲಾಮು.

ಮೂರು ನಾಲ್ಕು ತಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦ ೬ ೦ ೧೨ ಡಬ್ಬಿಗಳಿಗೆ ೪-೦-೦

ಅಸ್ತಾಮಿಶ್ರಣ	೨-೦-೦
ಚೇಳುಕಡಿತದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದು ಜನಕ್ಕೆ	೦-೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೪-೦
ಬಿಚ್ಚು ಮುಲಾಮು—ಮಕ್ಕಳ ಬಿಚ್ಚಿಗೆ	೦ ೩ ೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧-೦-೦
ಕಫನಾಶಕ ಚೂರ್ಣ—ಅಸ್ತಮ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗ್ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು :—" ಅಮೃತಾಂಜನ," ಮುಂಬಯಿ.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

6 41

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಚಿವಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದಂ ಹುಟ ನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಬಿ ಎಸ್ ಕನ್ನಯಚೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್ ಪೀಟರ್ಸನ್,

೩೩ ಮೇಡಮಾಪಿಳ್ಳೆ ಬೀದಿ ವೇಪೇರಿ, ಮದರಾಸ್

ಮಕ್ಕಳ ಹಿತಕಾರಿ

ಸ್ಕಾಟ್ಸ

SCOTT'S EMULSION

(ಸ್ಕಾಟ್ಸ್ ಎಮಲ್ಷನ್)

[illegible]

[illegible]

[illegible]

ಕ್ಯಸೋಕದ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಕೆಮಿಸ್ಟ್ ಕಾರ್ಖಾನೆ

ಲಂಡನ್ ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ನಾಯುಗಳ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದುರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡಿಸೆ ಬಾಯಾರಿಕೆ, ಬಳಲಿಕೆ, ಎದೆ ಕಲ್ಲೆನಿಸುವುದು, ತಲೆನೋವು, ಗಾಬರಿ, ಕಣ್ಣುಮಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿಶ್ಶಕ್ತಿ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [6-27]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦ ಪಿ ೬ ಬೊಂಬಾಯಿ ಬಾಕ್ಸ್—ಇವರಲ್ಲಿ ದೊರೆಯುವುದು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

8-9



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷದ

ಕ್ಕೆಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

20

೧ ಲೋಕಾಮಯಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು ನ್ಯೂಮೋನಿಯಾ ಕೆಮ್ಮು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮುಲು ಸೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಕಶೂಲೆ, ಮಕ್ಕಳ ಎಳವು, ಜ್ವರ ಇತ್ಯಾದಿ ಕ್ಲೇಶಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

6 9

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಹಾಗಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಕುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಹೊಸಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಶಕ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರಖಾನೆ, ಹಾಸನ

ಸುಗಂಧಗಳು.

11

ಪ್ರಸಿದ್ಧವಾದ ಮೈಸೂರು ಅತ್ತರ್ (ಊದು) ಬತ್ತಿ ೧ ಸೇರಿಗೆ ರೂ ೧೨ ೧, ೩ ೨ ೮ ೦ ೧೬೦ ಬತ್ತಿಗಳು ೧ ತೊಲೆಗೆ ರೂ ೧ ದವಾಂಗ ಪೆಟ್ಟಿಗೆ ೧ಕ್ಕೆ ೪ ಆಣೆ ತಾಂಬೂಲ ಪೌಡರ್ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ ಟಿ ಎಲ್ ಉಪಾಧ್ಯಾಯ, ಮೈಸೂರು

ಅಪೂರ್ವ ಗ್ರಂಥವು!!!

21

ತುಳಸೀದಾಸ್, ಕಬೀರ ಮೊದಲಾದ ೨೧ ವೈಷ್ಣವ ಭಕ್ತರ ಚರಿತ್ರೆ ಹಿಂದುಸ್ಥಾನಿ ಪಟ್ಟಿನ ಪದ್ಯರೂಪವಾಗಿ ಸುಲಭ ರೀತಿಯಲ್ಲಿ ಛಂದೋಬದ್ಧ ವಿಧವಾದ ಕನ್ನಡ ಭಾಷೆಯಲ್ಲಿ ಮುದ್ರಿತವಾಗಿದೆ ೧ ಪ್ರತಿಗೆ ೧೦ ಆಣೆ, ಅಂಚೆ ವೆಚ್ಚ ಹೀರೆ

ವಿಳಾಸ ಜೋಕಾರ್ ಗೋವಿಂದರಾವ್, ಮಂಗಳೂರು

ಹೊಸ ಪುಸ್ತಕ ಹೊಸ ಪುಸ್ತಕ!! ಹೊಸ ಪುಸ್ತಕ!!!

2 3

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯೂಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತಾಡುವುದಕ್ಕೂ ಬೋಧಕರ ಸಹಾಯವಿಲ್ಲದೆ ತಾನಾಗಿ ಕಲಿಸುವ ಅತ್ಯುತ್ತಮ ಪುಸ್ತಕವಿದು

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯೂಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ. ಅಚ್ಚು ಮತ್ತು ಬರವಣಿಗೆಯ ಅಕ್ಷರಗಳನ್ನು ಗುರುತಿಸುವ ಉಪಾಯ, ಸ್ವರವ್ಯಂಜನಾಕ್ಷರ ಸಂಕೇತ, ಕಾಗುಣಿತ ಅಕ್ಷರ ಸಂಯೋಜನಾಭ್ಯಾಸ ಪ್ರಥಮಾಭ್ಯಾಸಯೋಗ್ಯ ಪಾಠಗಳ ಸಮುದಾಯ, ಶ್ರೇಣೀಪಾಠಗಳು, ವಿವಿಧವಾಕ್ಯ ಸಮುದಾಯ, ಲಿಪಿನ ಪ್ರತಿಲೇಖನ, ಆಚರಣೆಯಲ್ಲಿ ಅಪೂರ್ವವಾದ ಅತ್ಯುಪಯೋಗವುಳ್ಳ ಶಬ್ದಗಳು, ಕೋಷ್ಟಕ, ಗಾದೆ, ತಂತಿ ವರ್ತಮಾನ, ಸಾಂಕೇತಿಕ ಶಬ್ದಗಳು, ಇತ್ಯಾದಿಯಾದ ಅನೇಕ ಉಪಯುಕ್ತಾಂಶಗಳು ಸೇರಿವೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯೂಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷ್ ಭಾಷೆಯ ಪ್ರತಿಶಬ್ದದ ಉಚ್ಚಾರಣೆಯನ್ನೂ ಕನ್ನಡ ಅಕ್ಷರಗಳಿಂದ ಬರೆದು ಅದರ ಅರ್ಥವನ್ನು ಕನ್ನಡಭಾಷೆಯಲ್ಲಿ ಬರೆದಿದೆ ಇಂಗ್ಲಿಷ್ ಭಾಷೆಯನ್ನು ಸ್ವಲ್ಪವೂ ತಿಳಿಯದ ಕನ್ನಡಿಗರು ಅದನ್ನು ಕಲಿಯುವುದಕ್ಕೆ ಈ ಪುಸ್ತಕವು ತಕ್ಕಷ್ಟು ಸಹಾಯವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ. (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯೂಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ. ಇಂಗ್ಲಿಷು ಭಾಷೆಯನ್ನು ಕಲಿತು ಬಗೆಬಗೆಯ ಲಾಭವನ್ನು ಸಂಪಾದಿಸಲಿಚ್ಛಿಸುವ ಯಾವ ತರದ ಜನರಿಗಾದರೂ ಈ ಪುಸ್ತಕವು ತುಂಬಾ ಉಪಯೋಗವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ. (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯೂಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಮೊದಲನೆಯ ಮತ್ತು ಎರಡನೆಯ ಮುದ್ರಣದ ಪುಸ್ತಕಗಳು ಬಲು ಬೇಗ ಮುಗಿದುಹೋದವು ಮೂರನೆಯ ಮುದ್ರಣದ ಪುಸ್ತಕಗಳಲ್ಲಿ ಕೆಲವು ಮಾತ್ರ ಉಳಿದಿವೆ!! ನಾಲ್ಕನೆಯ ಮುದ್ರಣಕ್ಕೆ ಸಾವಕಾಶವಾದೀತು ಬೇಗ ಬೇಗ ಬರೆದು ತರಿಸಿಕೊಳ್ಳುವುದು ಕಾಗದ ಉತ್ತಮ ಅಚ್ಚು ಅಂದ, ಅಟ್ಟೆ ಭದ್ರ ಅಂಚೆವೆಚ್ಚ ಸೇರಿ ಕ್ರಯ ಒಂದು ರೂಪಾಯಿ ಆರು ಆಣೆ ಮಾತ್ರ

ವಿಳಾಸ - ಬಾರತಿ ಸಂಪಂಗಿರಾಮ, ಪ್ರೋಪ್ರೈಟರ್— ಹೊಸಕೋಟೆ ಡಿಸ್ಟ್ರಿಕ್ಟ್ ಬೆಂಗಳೂರು

ಮಧುಗಿರಿ ಮುನಸೀಫ್ ಕೋರ್ಟಿನಲ್ಲಿ

291

1909 1910 ನೇ ಇಸವಿ ಅಸಲ್ ನಂಬರು-274

ವಾದಿಗಳು ...ಮದಕಸಿರಾ ತಾಲ್ಲೂಕು ಮರಗುಂಜ ...ರುವ ನಾಗಲಿಂಗಪ್ಪ ವಗೈರೆ

ಪ್ರತಿವಾದಿಗಳು ...ಸಿರಾ ತಾಲ್ಲೂಕು ...ಕುಂಟೇ...ರುವ ...ರಪ್ಪ ವಗೈರ

...ದಕ್ಕ ಸಂಬಂಧಪಟ್ಟ ...ಸಂಗ ... ಯಹಳಪ್ಪನಾಸಂದರೆ ...ಸಿರಾ ತಾಲ್ಲೂಕು ದೊಡ್ಡ ಮೂ... ಕುಂಟ ... ಬರತಕ್ಕ ...ಲಿಂಗರುವರುಗಳಿಗ ಗೌಡಿಕ ಪಕ್ತಿಗೂ ಮತ್ತು ...ಪದ ಅ... ನಡಿಸುವುದಕ್ಕೂ ಸಹ ತಮ್ಮ ಪಕ್ಷವ್ನು ...ರಿಸಿ ಕೊಡಬೇಕೆಂದು ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುವದರಿಂದ ಮೇಲ್ಕಂಡ ದಾವಯಲ್ಲಿ ಪಕ್ಷಗಾರರಾಗಿ ಸೇರಲು ಅಥವಾ ವಾದಿಗಳ ಪಕ್ಷವ್ನು ತಕರಾರು ಮಾಡ ... ಸ್ವಮುಖ್ ... ಈ ಕೋರ್ಟು ... 1 1 1 1 ನೇ ... 11 ... ಯಾಗಿ ... ಅವರಾ ... ಅಧಿಕಾರವನ್ನು ಹೊಂದಿದ ... ಮೂಲಕವಾಗಿ ಯಾ... ... ಮೂಲಕವಾಗಿ ಯಾಗ ... ದಾ ...

A R Srinivasa Raghavachai

... ...

ಜ್ವರ ಹರಿ 11 ...

... ಈ ಧಾರಣ ಜ್ವರ ಹೇಳಿದರ ಪೆದರೀಜ್ವರ ವಿಷ್ಮಜ್ವರ, ... ವಾತಜ್ವರ ಚಳಿಹಿಡಿಯುವ ... ಎಂಬ ಸಕಲ ವಿಧವಾದ ಜ್ವರಗಳನ್ನು ... ಬೇಗನೆ ಶಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಬಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ಸಿ... ಕೆ... ತಿಂಗಳ ಹಿಂದೆ ಈ ... ಕೊಟ್ಟ ... ಬಿ... ತೀರಿಹೋ... ಇನ್ನು ಸ್ವಲ್ಪ ಕಾಲವಷ್ಟೇ ನನ್ನ ಔಷಧಿ... ಅನೇಕ ಮಂದಿ ... ಜ್ವರ ಪೀಡಿತರು ಚೆನ್ನಾಗಿ ಗು... ಹೊಂದುವರು ಇವನ್ನ ಜನಗಳು ... ಬೇಳುತ್ತಿರುವುದರಿಂದ ದಯಮಾಡಿ ಇನ್ನೊಂದು ... ಬಿ... ಸಿನ ... ವ... ವಿ ... ಮೂಲಕ ಕಳುಹಿದರೆ ಉಪಕಾರವಾಗುತ್ತದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ... ಆಣೆ, ೧ ರೂ (— ... ರೂ ... ೧೨ ಆ ... ೧೧ ರೂ ಹನ್ನೆರಡು ... ಸೆ ತರಿಸಿಕೊಂಡರೆ ಪೋಸ್ಟೇಜು ವಿನಾಯಿತಿಡಲಾಗುವದು

ಓಮಂಕಪೂರ

ಈ ಔಷಧವು ಅಜೀರ್ಣ, ... ತಭೇದಿ, ಸಾಧಾರಣ ಹೊಟ್ಟೆ ನೋಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ... ವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಬಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ‟ ಜ್ವರಹರಿ ” ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಟಪದ ಅಸಿಸ್ಟಂಟ್ ಸರ್ಜನ್ ಗಣಪತಿ ... ವರು—ತನ್ನಿಯ ಓಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೇ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಶೇಷ —

ತನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

1—1—1911 ರಿಂದ 11—2—1911 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	1	1
ಬೆಂಗಳೂರು ಡಿಸ್ಟ್ರಿಕ್ಟು	31	20	0	0
ಮೈಸೂರು ,,	17	16	1	2
ಕೋಲಾರ್ ,,	1	1	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	1	7	3
ಹಾಸನ ,,	3	0	0	0
ಚಿತ್ರದುರ್ಗ ,,	1	3	0	0
ಕಡೂರ್ ,,	17	9	0	0
ಶಿವಮೊಗ್ಗ ,,	1	1	0	0
ಜುಮ್ಲಾ	72	51	9	6

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಮಾಘ ಬಹುಳ ಅಷ್ಟಮಿ ಶುಕ್ರವಾರದಿಂದ ಮಾಘ ಬಹುಳ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಮಾರ್ಚಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ಕುಂಭ ಮಾಸ
4	ಶುಕ್ರ ,,	ಅಷ್ಟಮಿ	37 38	...	51 14	21
5	ಶನಿವಾ	ನವಮಿ	39 ...	ಮೂಲ	56 38	22
6	ರವಿವಾ	ದಶಮಿ	41 11	ಪೂಷಾ	58 38	23
7	ಚಂದ್ರ §	ಏಕಾದಶಿ	40 ...	ಉತ್ತರಾ	60 0	24
8	ಕುಜ	ದ್ವಾದಶಿ	31 10	ಉತ್ತರಾ	0 18	25
9	ಬುಧ †	ತ್ರಯೋದಶಿ	36 8	ಶ್ರ	0 2	26
10	ಗುರು ‡	ಚತುರ್ದಶಿ	31 21	ಧ	51 22	27

ವಜ್ರಯೋಗ

ವಜ್ರಯೋಗ

§ ಸ್ಮಾರ್ತ ಏಕಾದಶಿ ಮತ್ತು ... ಯೋಗ, ದಗ್ಧಯೋಗ, ವಾರಿವಾರು

† ಪ್ರದೋಷ ಮಹಾಶಿವರಾತ್ರಿ ನ ಜನಗಡಿನಲ್ಲಿ ಕೈಲಾಸನಾಥರ

‡ ...ರಂಗಪಟ್ಟಣದಲ್ಲಿ ಗಂಗಾಧರೇಶ್ವರ ರಥ

ಮಾರ್ಕೆಟ್ ಧಾರಣೆ

ಎಸಿ		ಮೈಸೂರು	ಬೆಂಗಳೂರು
...ಕ್ಕಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೨ ೮ ೦	೧೨ ೮ ೦
ಕೆಂ... ಅಕ್ಕಿ ಅವಲ್		೧೨ ೮ ೦	೧೩ ೬ ೦
,, ದುಮುಂ		೧೨ ೦ ೦	೧೩ ೦ ೦
ಜಂಬ್ರಾನೆ ಅಕ್ಕಿ		೧೨ ೪ ೦	೧೯ ೦ ೦
ಸಣ್ಣಕ್ಕಿ ಅವಲ್		೧೩ ೬	೧೬ ೦ ೦
ದುಂಬು		೧೩ ೯ ೦	೧೪ ೦ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೨ ೮ ೦	೧೬ ೮ ೦
,, ದುಂಬು		೧೨ ೦ ೦	೧೧ ೯ ೦
ಹೆಸ್ರು ರಾಗಿ ಪಲ್ಲಾ ೧ಕ್ಕೆ		೮-೦ ೦	೭ ೦ ೦
ಜಾರಾಗಿ		೭ ೧೨ ೬	೬ ೬ ೦
ಜೋಳ		೭ ೮ ೦	೮ ೬ ೦
ಹುಲಸಂದೆ ಪಲ್ಲಾ ೧ಕ್ಕೆ		೧೧ ೦ ೦	೧೦ ೦ ೦
ಬಿಳೀ ಅವರೆ		೧೧ ೦ ೦	೧೦ ೪ ೦
ಹೆಸರು		೧೧ ೦ ೦	೯ ೮ ೦
ಉದು		೧೩ ೦	೧೦ ೮ ೦
ಕಡಲೆ		೧೨ ೬ ೬	೧೧ ೦ ೦
ಎಳ್ಳು ಸೇ ೧೭೭ ಕ್ಕೆ		೧೬ ೦ ೦	೧೫ ೦ ೦
ಹುರುಳಿ		೮ ೮ ೦	೮-೮ ೦
ಹರಳು ೧೭೭ ಸೇರಿಗೆ		೧೯ ೦ ೦	೧೨ ೦ ೦
...ಗೇಕಾಯಿ ಮಣ ೧ಕ್ಕೆ		೨ ೪ ೦	೧ ೧೨ ೦
ಮೆಣಸಿನಕಾಯಿ		೪ ೧೨ ೦	೩ ೪ ೦
,, ದುಂಡು		೪ ೮ ೦	೩ ೦ ೦
ಬೆಲ್ಲ ದೊಡ್ಡ ಅಚ್ಚು		೮ ೮ ೦	ಮ ೨ ೦ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೦ ೦	೪ ೮ ೦
ಹರಳೆಣ್ಣೆ ,,		೫ ೮ ೦	೯ ೬ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೧೦ ೮ ೦	೧೦ ೦ ೦
ಉಪ್ಪು ,,		೬ ೦ ೦	೫ ೧೬ ೦
ಹುಣಸೇ ಹಣ್ಣು		೨ ೦ ೦	೧ ೮ ೦
ಹಳೇದು		೧ ೧೨-೦	೧ ೬ ೦
ತುಪ್ಪ ಮಣ ೧ಕ್ಕೆ		೧೬ ೮ ೦	೧೪ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೪ ೦	೪ ೮ ೦
ತೆಂಗಿನಕಾಯಿ ೧೦೦ ಕ್ಕೆ		೫ ೦ ೦	೬ ೪ ೦
ಅಳಲೇಕಾಯಿ ಮಣ ೧ಕ್ಕೆ		೦ ೧೨ ೦	೦ ೧೨ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೧೨ ೦	೦ ೧೨ ೦
ಚಿನ್ನ (ಪೌನ್) ಕೆಂಪು		೧೫ ೯ ೦	೧೫ ೫ ೦
,, ,, ಪಸಿಮೆ		೧೬-೦ ೦	೧೫ ೭-೦
,, ,, ಗಟ್ಟಿ ತೊಲ ೧ಕ್ಕೆ		೨೪ ೮ ೦	೨೪ ೯-೦
ಬೆಳ್ಳಿಗಟ್ಟಿ ತೊಲ ೧೦೦ ಕ್ಕೆ		೬೭ ೪ ೦	೬೫-೦ ೦

ಹಿಂದುಸ್ಥಾನದ ಬಜೆಟ್ಟು

ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯು

ಕಳೆದ ಶುಕ್ರವಾರ ಮಧ್ಯಾಹ್ನ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಇಂಡಿಯಾ ಗವರ್ನ್ಮೆಂಟಿನ ಖಜಾನಾ ಬಕ್ಷಿಯವರಾದ ಸರ್ ಗೈ ಫ್ಲೀಟ್‌ವುಡ್ ವಿಲ್ಸನ್ ರವರು 1910 11 ನೇ ಸಾಲಿನ ಜಮಾ ಖರ್ಚಿನ ಅಂದಾಜಾ ಪಟ್ಟಿಗಳನ್ನು ಹಾಜರು ಮಾಡಿದರು ಜಮಾ ಖರ್ಚಿನ ಮೊಬಲಗನ್ನು ಪೌಂಡುಗಳಾಗಿ ನಮೂದು ಮಾಡಿರೋಣದರಿಂದ ಪೌಂಡು ಒಂದಕ್ಕೆ 15 ರೂಪಾಯಿನಂತೆ ಇಟ್ಟುಕೊಂಡ ಪಕ್ಷದಲ್ಲಿ ಆದಾಯವೂ ವ್ಯಯವೂ ಎಷ್ಟು ರೂಪಾಯಿ ಆಗಿತೆಂಬುವುದು ಗೊತ್ತಾಗುತ್ತದೆ ಈ ಪಟ್ಟಿಗಳಿಂದ ತಿಳಿದುಬರುವ ಮುಖ್ಯ ವಿಚಾರಗಳೇನೆಂದರೆ,—

1909—10 ನೇ ಸಾಲಿನ ಲೆಕ್ಕಗಳು

1909—10 ನೇ ಸಾಲಿನಲ್ಲಿ 7,47,50,900 ಪೌಂಡು ಹುಟ್ಟುವಳಿ ಆಗಬೇಕೆಂದು ಅಂದಾಜಾ ಕಟ್ಟಿತ್ತು ಈಗ ನೋಡುವಲ್ಲಿ ಅದಕ್ಕಿಂತಲೂ 5,52,800 ಪೌಂಡು ಜಾಸ್ತಿ ಉತ್ಪತ್ತಿಯಾಗುವಂತೆ ಕಾಣುತ್ತದೆ —ಅದೇ ಸಾಲಿನಲ್ಲಿ 7,37,20,500 ಪೌಂಡು ಖರ್ಚಾಗಬೇಕೆಂದು ಅಂದಾಜು ಕಟ್ಟಿದ್ದರು ಆದರೆ ಸೈನ್ಯದ ಇಲಾಖೆಯ ಖರ್ಚು ಮುಂತಾದದ್ದು ಕಡಮೆಯಾದ ಕಾರಣ ಖರ್ಚಿನಲ್ಲಿ ...81,600 ಪೌಂಡು ಕಡಮೆಯಾಗಿರುತ್ತದೆ ಈ ರೀತಿ ಜಮಾ ಖರ್ಚು ನಡೆದು ಸಾಲಾಖೈರಿನಲ್ಲಿ ...,61,...00 ಪೌಂಡು ಗವರ್ನ್ಮೆಂಟಿನಲ್ಲಿ ಶಿಲ್ಕು ಉಳಿಯುವುದೆಂದು ಗೊತ್ತಾಗುವುದು

1910—11 ನೇ ಸಾಲಿನ ಲೆಕ್ಕಗಳು

ಮುಂದಿನ ಏಪ್ರೈಲ್ ತಾ 1 ರ ವೆ ಪ್ರಾರಂಭವಾಗುವ ಸಾಲಿನಲ್ಲಿ 5,0...03,700 ಪೌಂಡು ಉತ್ಪತ್ತಿಯಾಗುವುದೆಂದೂ, ...02,57,900 ಪೌಂಡು ಖರ್ಚಾಗುವುದೆಂದೂ, ಖರ್ಚು ಜಾತಾ ಸಾಲಾಖೈರಿನಲ್ಲಿ 2,47,900 ಪೌಂಡು ಶಿಲ್ಕು ಉಳಿಯುವುದೆಂದೂ ಅಂದಾಜಾ ಕಟ್ಟಿದಾರೆ

ಸುಂಕದ ದರಗಳನ್ನು ಹೆಚ್ಚಿಸುವುದು

ಅಫೀಮಿನ ಬೆಳೆಯೂ ವ್ಯಾಪಾರವೂ ಇನ್ನುಮುಂದೆ ಕಡಮೆಯಾಗುತ್ತಾ ಬರಬೇಕಾಗಿದೆ ಇದರಿಂದ ಗವರ್ನ್ಮೆಂಟಿನ ಹುಟ್ಟುವಳಿಯಲ್ಲಿ 7,18,000 ಪೌಂಡು ಕಡಮೆಯಾಗುತ್ತದೆ ಪೂರ್ವ ಬಂಗಾಳ ಅಸ್ಸಾಂ ಎಂಬ ಹೊಸ ಪ್ರಾಂತ್ಯದ ಖರ್ಚಿಗೋಸ್ಕರ ಇಂಡಿಯಾ ಗವರ್ನ್ಮೆಂಟಿನವರು 1,00,000 ಪೌಂಡು ಬಿಟ್ಟು ಕೊಡಬೇಕಾಗುವುದು ಆದ ... ಕೆಲವು ಸುಂಕದ ದರಗಳನ್ನು ಜಾಸ್ತಿ ಮಾಡಬೇಕೆಂದು ತೀರ್ಮಾನ ಮಾಡಿದೆ ಅನ್ಯದೇಶಗಳಿಂದ ... ನಕ್ಕೆ ಬರುವ ಮದ್ಯಪ್ರತಿಗಳು, ಹೊಗೆಸೊಪ್ಪು ಮತ್ತು ಚುಟ್ಟಾಗಳು, ಬೆಳ್ಳಿ, ಪೆಟ್ರೋಲಿಯಂ ಎಂಬ ... ಇವುಗಳ ಸುಂಕಗಳನ್ನು ಜಾಸ್ತಿ ಮಾಡುವರು ಮತ್ತು ಕೆಲ ತರದ ಪತ್ರಗಳ ಸ್ಟಾಂಪ್ ಫೀಜನ್ನು ಹೆಚ್ಚಿಸುವವರಾಗಿದ್ದಾರೆ ಮದ್ಯಪ್ರತಿಗಳ ಮೇಲೆ ಈಗ ಹಾಕಿರುವ ಸುಂಕವನ್ನು ಶೇಕಡಾ ... ರಿಂದ ... ಕ್ಕೆ ಜಾಸ್ತಿ ಮಾಡುವರು ಹೊಗೆ ಸೊಪ್ಪಿನಿಂದ ಮಾಡಿದ ಚುಟ್ಟಾ ಸಿಗರೆಟ್ಟುಗಳ ಮೇಲೆ ಈಗ ಶೇಕಡಾ ... ರೂಪಾಯಿನಂತೆ ಸುಂಕ ವಸೂಲಾಗುತ್ತಿದೆ ಬರೀ ಹೊಗೆಸೊಪ್ಪಿನ ಮೇಲೆ ಸುಂಕವೇ ಇಲ್ಲ ಇನ್ನು ಮುಂದೆ ಒಂದು ಪೌಂಡು ತೂಕದ ಸಿಗರೆಟುಗಳಿಗೆ ... ರೂ ... ಚುಟ್ಟಾಗಳಿಗೆ ರೂ ... 8 ... ತೆಯೂ ಬರೀ ಹೊಗೆಸೊಪ್ಪಿಗೆ ರೂ ... ಯಂತೆಯೂ ಸುಂಕ ಹಾಕಲ್ಪಡುವುದು ಪೆಟ್ರೋಲ್ ಎಂಬ ಎಣ್ಣೆಗೆ ಗ್ಯಾಲನ್ ಒಂದಕ್ಕೆ ಇರುವ 1 ಆಣೆ ಸುಂಕವನ್ನು ತಪ್ಪಿ... 1 ಆಣೆ 1 ... ಹೆಚ್ಚಿಸಲಾಗುತ್ತದೆ ... ಮೇಲೆ ಈಗ ಶೇಕಡ ... ರೂಪಾಯಿನಂತೆ ವಸೂಲಾಗುವ ಸುಂಕವನ್ನು ವಜಾಮಾಡಿ, ಪ್ರತಿ ಒಂದು ... (ಎರಡೂವರೆ ರೂಪಾಯಿ) ತೂಕದ ಬೆಳ್ಳಿಗೂ ... ಆಣೆ ... ತೆ ... ವನ್ನು ... ಈಗ ... ಮೇಲೂ ... ಗಳ ಮೇಲೂ ಮದ್ಯಗಳ ಮೇಲೂ ಸುಂಕವನ್ನು ... ಮಾಡಿದ ... ಅವುಗಳ ಉಪಯೋಗವು ಈ ರಾಷ್ಟ್ರದಲ್ಲಿ ಕಡಮೆ... ದೂ ಅದಲ್ಲದೆ ... ಟ್ಟುಗಳನ್ನು ... ದುವುದು ... ಈ ರೀತಿ ಸುಂಕಗಳನ್ನು ಜಾಸ್ತಿ ಮಾಡೋಣದರಿಂದ ಮುಂದಿನ ... 11 13,000 ಪೌಂಡು ಹುಟ್ಟುವಳಿ ಆಗಬಹುದೆಂದು ಊಹಿಸಲ್ಪಟ್ಟಿದೆ

ಹಿಂದೂಸ್ಥಾನದ ... ದಕ್ಷಿಣ ಆಫ್ರಿಕ...

ಹಿಂದೂಸ್ಥಾನದ ಪ್ರಜೆಗಳು ... ಆಫ್ರಿಕದ ... ಇಂಗ್ಲಿಷ್ ... ದಲ್ಲಿ ಕೆಲವು ಕಷ್ಟನಷ್ಟಗಳಿಗೆ ಗುರಿಯಾಗಿರುತ್ತಾರೆಂಬುವುದೂ ಇದನ್ನು ತಪ್ಪಿಸುವ ಬಾಗದಲ್ಲಿ ಇಲ್ಲಿನ ವಿಚಾರವಂತರೂ ಇಂಡಿಯಾ ಗವರ್ನ್ಮೆಂಟಿನವರೂ, ದಕ್ಷಿಣ ಆಫ್ರಿಕಕ್ಕೆ ಹೋಗಿರುವ ... ಬಂದ ... ಮುಖಂಡರೂ 1—3 ಸಂವತ್ಸರಗಳಿಂದ ಹೋರಾಡುತ್ತಿರುವುದೂ ಪ್ರಸಿದ್ಧವಾಗಿದೆ ಈ ವಿಷಯದಲ್ಲಿ ವೈಸ್‌ರಾಯಿಯವರ ಮಂತ್ರಾಲೋಚನ ಸಭೆಯಲ್ಲಿ ಕಳೆದ ಶುಕ್ರವಾರ ಮಿ| ಗೋಖಲೆಯವರು ಉಪನ್ಯಾಸ ಮಾಡಿ ಇಂಡಿಯಾ ಗವರ್ನ್ಮೆಂಟಿನವರು ಒಂದು ಸ್ಥಾನದಿಂದ ದಕ್ಷಿಣ ಆಫ್ರಿಕಕ್ಕೆ ... ಕೂಲಿ ... ಕ್ಕೆ ಜನರನ್ನು ... ಕಳುಹಿಸದಂತೆ ... ಮಾಡಬೇಕೆಂದು ಕೇಳಿಕೊಂಡರು ಇತರ ಮುಂಬರುಗಳೂ ಅಂದರೆ ಮಿ| ... ಸುಬ್ಬರಾಯರು, ಮುಧೋಳ್ಕರವರು, ದಾಭಾಯಿಯವರು ... ವಿಸ್‌ಯವರು ... ವರು ಸರ್ ... ಈ ಮೊದಲಾದವರು ಅದೇ ಅರ್ಥಕ್ಕೆ ಉಪನ್ಯಾಸಗಳನ್ನು ಮಾಡಿದರು ಇವರುಗಳ ಅಭಿಮತವನ್ನು ಅನುಮೋದಿಸಿ ಇಂಡಿಯಾ ಗವರ್ನ್ಮೆಂಟಿನವರು ತೀರ್ಮಾನ ... ಇದ್ದೇನೆಂದರೆ,—

ಈ ವಿಚಾರವು ಹಿಂದುಸ್ಥಾನದವರಿಗೆ ತಿಳಿಯುವುದಕ್ಕೆ ಮೊದಲೇ ಇಂಡಿಯಾ ಗವರ್ನ್ಮೆಂಟಿನವರು ಇಂಗ್ಲಿಷ್ ಗವರ್ನ್ಮೆಂಟಿನವರಿಗೆ ಬರೆದು ತೃಪ್ತಿಕರವಾದ ರೀತಿಯಲ್ಲಿ ಫೈಸಲ್ ಮಾಡಬೇಕೆಂದು ಪ್ರಯತ್ನ ಪಡುತ್ತಿದ್ದರು ಅವರ ಪ್ರಯತ್ನವು ಸಂಪೂರ್ಣವಾಗಿ ಸಾರ್ಥಕವಾಗಲಿಲ್ಲ ಅಲ್ಲಿ ಹಿಂದುಸ್ಥಾನದ ಪ್ರಜೆಗಳಿಗೆ ಉಂಟಾಗಿರುವ ಕಷ್ಟನಷ್ಟಗಳೆಲ್ಲಾ 1897 ನೇ ಇಸ್ವಿಯ ಅಲ್ಲಿನ ಮ್ಯುನಿಸಿಪಲ್ ಕಾನೂನಿನಿಂದ ಪ್ರಾಪ್ತವಾಗಿರುತ್ತವೆ ಚಿಲ್ಲರೆಯಾಗಿಯೂ, ಒಟ್ಟಾಗಿಯೂ ವ್ಯಾಪಾರ ಮಾಡತಕ್ಕವರಿಗೆ ಹೊಸದಾಗಿ ಲೈಸೆನ್ಸ್ ಕೊಡಬೇಕಾದರೂ, ಕೊಟ್ಟ ಲೈಸೆನ್ಸನ್ನು ಅನುಗತಿಸಿದ ಮೇಲೆ ಪ್ರಸಕ್ತ ಕೊಡಬೇಕಾದರೂ ಮ್ಯುನಿಸಿಪಾಲಿಟಿಗೆ ಆ ಕಾನೂನಿನಿಂದ ಸರ್ವಾಧಿಕಾರವಿರುತ್ತದೆ ಅವರು ಬೇಕಾದವರಿಗೆ ಲೈಸೆನ್ಸ್ ಕೊಡಬಹುದು, ಇಲ್ಲವೇ ಕಿತ್ತುಕೊಳ್ಳಬಹುದು ಹೀಗಿರುವುದು ತೃಪ್ತಿಕರವಲ್ಲವೆಂದೂ ಆ ಕಾನೂನನ್ನು ಬದಲಾವಣೆ ಮಾಡಬೇಕೆಂದೂ ಇಂಡಿಯಾ ಗವರ್ನ್ಮೆಂಟಿನವರು ಇಂಗ್ಲಿಷ್ ಗವರ್ನ್ಮೆಂಟಿಗೆ ಬರೆಯುತ್ತಿದ್ದರು ಈಚೆಗೆ ಮ್ಯುನಿಸಿಪಲ್ ಬೋರ್ಡಿನವರು ಲೈಸೆನ್ಸ್ ಕೊಡದೆ ಹೋದಲ್ಲಿ ಅದರ ಮೇಲೆ ಅಪೀಲ್ ಮಾಡಿಕೊಳ್ಳಬಹುದೆಂದು ಆ ಕಾನೂನನ್ನು ಬದಲಾವಣೆ ಮಾಡಿರುತ್ತಾರೆ ಅದೂ ಇಂಡಿಯಾ ಗವರ್ನ್ಮೆಂಟಿನವರಿಗೆ ತೃಪ್ತಿಕರವೆಂದು ಕಾಣುವುದಿಲ್ಲ ಆದಕಾರಣ ಹಿಂದುಸ್ಥಾನದಿಂದ ನಟಾಲಿಗೆ ಯಾರೂ ಕಳುಹಲ್ಪಡದಂತೆ ತಡೆಯುವುದಕ್ಕಾಗಿ ಒಂದು ಕಾನೂನ್ ಮಾಡಿಕೊಳ್ಳಬಹುದೆಂದು ಇಂಡಿಯಾ ಗವರ್ನ್ಮೆಂಟಿನವರು ಸ್ಟೇಟ್ ಸೆಕ್ರೆಟರಿಯವರಿಂದ ಅನುಜ್ಞೆಯನ್ನು ಸಂಪಾದಿಸಿಕೊಂಡಿರುವರು ಅವರು ಈ ವಿಷಯಕ್ಕೆ ಒಂದು ಕಾನೂನಿನ ಮಸೂದೆಯನ್ನು ತಯಾರುಮಾಡಿ ಚರ್ಚೆಗೆ ತರಬೇಕೆಂದಿದಾರೆ ಸ್ವಲ್ಪರಲ್ಲೇ ದಕ್ಷಿಣ ಆಫ್ರಿಕಾ ಸರಕಾರದವರು ಸರಿಯಾಗಿ ಕಾನೂನನ್ನು ಬದಲಾಯಿಸಿಕೊಂಡು ಇಂಡಿಯಾ ಗವರ್ನ್ಮೆಂಟಿಗೆ ತಿಳಿಯಪಡಿಸಿದಲ್ಲಿ ಮೇಲ್ಕಂಡ ಮಸೂದೆಯನ್ನು ಚರ್ಚೆಗೆ ತರುವುದಿಲ್ಲ ಹಿಂದುಸ್ಥಾನದ ಪ್ರಜೆಗಳಿಗೆ ದಕ್ಷಿಣ ಆಫ್ರಿಕದಲ್ಲಿ ಯಾವ ವಿಧವಾದ ಕಷ್ಟನಷ್ಟಗಳೂ ಉಂಟಾಗಬಾರದೆಂದು ಇಂಡಿಯಾ ಗವರ್ನ್ಮೆಂಟಿನವರೂ ಅಭಿಪ್ರಾಯ ಪಡುವವರಾಗಿದಾರೆ

ಜಮಾ ಖರ್ಚು ಲೆಕ್ಕಗಳ ವಿಷಯವಾಗಿ ಚರ್ಚೆಗಳು ನಾಳೆಯ ದಿನ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ನಡೆಯುವವು

ಸಂಗೀತ ಪಾರಿಜಾತ ಕ್ರಯ ೪ ಆಣೆ

20 4

ಮನೋಹರವಾದ ಹಾಡಿನ ಪುಸ್ತಕ! ೧೦ ಪ್ರತಿಗಳನ್ನು ಒಟ್ಟಾಗಿ ತರಿಸುವವರಿಗೆ ೧೨ ಆಣೆ ಕ್ರಯದ ನಿರುಪಮಾ ಎಂಬ ಹೊಸನಾಟಕವನ್ನೂ, ೭ ಪ್ರತಿಗಳನ್ನು ತರಿಸುವವರಿಗೆ ಕಬೀರ ದಾಸನ ಚರಿತ್ರೆಯನ್ನೂ, ೪ ಪ್ರತಿಗಳನ್ನು ತರಿಸುವವರಿಗೆ ಪ್ರಶ್ನೋತ್ತರ ರತ್ನಮಾಲಿಕೆ ಎಂಬ ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ—ದಿ ಮರ್ಕೆಂಟೈಲ್ ಯೂನಿಯನ್, ಮೈಸೂರು

ವೃತ್ತಾಂತ ಪತ್ರಿಕೆ

೧೯೧೦ ನೇ ಇಸವಿ ಮಾರ್ಚಿ ತಾ ೩ ನೇ ಗುರುವಾರ

ಮೈಸೂರು ಗವರ್ನಮೆಂಟಿನ ರಿಪೋರ್ಟುಗಳು

(೧) ಅಪರಾಧಗಳ ನಿರ್ಣಯವು

ಈ ಸಂಸ್ಥಾನದಲ್ಲಿ ನಡೆಯುವ ಕ್ರಿಮಿನಲ್ ತಕ್ಸೀರುಗಳ ವಿಷಯದಲ್ಲಿ ತಿಳಿಯಬೇಕೆಂದು ಅಪೇಕ್ಷಿಸುವ ವಿಚಾರಗಳೆಲ್ಲಾ ಈಗ ಗವರ್ನಮೆಂಟಿನವರು ಪ್ರಕಟಮಾಡಿರುವ ರಿಪೋರ್ಟಿನಿಂದ ಗೊತ್ತಾಗುವುದಿಲ್ಲ ಕೋರ್ಟುಗಳಿಗೆ ದಾಖಲ್‌ಮಾಡಲ್ಪಟ್ಟ ಮೊಕದ್ದಮೆಗಳೆಷ್ಟೋ ಅಷ್ಟಲ್ಲದೆ ಸಂಸ್ಥಾನದಾಮಳೆ ನಡೆದ ಅಪರಾಧಗಳೆಲ್ಲಾ ಈ ರಿಪೋರ್ಟಿನಲ್ಲಿ ವಿವರಿಸಲ್ಪಟ್ಟಿಲ್ಲವೆಂದು ನಮಗೆ ತೋರುತ್ತದೆ ಮಸಲಾ ೧೯೦೮–೯ ನೇ ಸಾಲಿನಲ್ಲಿ ಸಂಸ್ಥಾನದೊಳಗೆಲ್ಲಾ ಹನ್ನೊಂದು ಕೊಲೆಗಳು ಮಾತ್ರ ನಡೆದವೆಂದು ಈ ರಿಪೋರ್ಟು ಹೇಳುವುದು ಇದಕ್ಕಿಂತಲೂ ಹೆಚ್ಚು ಕೊಲೆಗಳು ನಡೆದಿರಬೇಕೆಂತಲೂ ಹನ್ನೊಂದು ಮೊಕದ್ದಮೆಗಳು ಮಾತ್ರ ಕೋರ್ಟಿಗೆ ದಾಖಲಾದವೆಂತಲೂ ಉಳಿದ ಕೊಲೆಗಳಲ್ಲಿ ಅಸಾಮಿಗಳು ಸಿಕ್ಕದೆ ಪೋಲೀಸಿನವರು ಕೈಬಿಟ್ಟಿರಬೇಕೆಂತಲೂ ಸಂಶಯುತ್ತೇವೆ

ಸಂಸ್ಥಾನದಲ್ಲಿ ಅಪರಾಧಗಳ ಸಂಖ್ಯೆಯು ೧೩,೧೧೮ ರಿಂದ ೧೮,೪೭೦ ಕ್ಕೆ ಹೆಚ್ಚಿತು ಒಟ್ಟು ೩೧,೬೩೪ ಜನರು ದಸ್ತಗಿರಿ ಮಾಡಲ್ಪಟ್ಟು, ೬,೯೧೪ ಜನರಿಗೆ ಮಾತ್ರ ಶಿಕ್ಷೆಯಾಗಿ ಉಳಿದ ೨೧,೩೬೦ ಜನರು ಬಿಡುಗಡೆಯಾದರು ಯಾರಿಂದಲೋ ವಿಶೇಷ ತಪ್ಪಾಗುತ್ತಿರಬೇಕು ಒಂದುವೇಳೆ ಪೋಲಿಸಿನವರು ಅನೇಕ ನಿರಪರಾಧಿಗಳನ್ನು ಹಿಡಿದು ಕಷ್ಟಕ್ಕೆ ಗುರಿಮಾಡುತ್ತಿರಬೇಕು, ಇಲ್ಲವೆ ಶಿಕ್ಷೆ ರಕ್ಷೆಗಳನ್ನು ವಿಧಿಸುವ ನ್ಯಾಯಾಧೀಶರು ಕರ್ತವ್ಯವಿಮುಖರಾಗಿರಬೇಕು ಈ ವಿಚಾರದಲ್ಲಿ ತಕ್ಕ ಸಮಾಧಾನ ತಿಳಿಯಬೇಕಾದದ್ದು ಅವಶ್ಯವಾಗಿದೆ ೨,೩೧೯ ಜನರನ್ನು ಬಂದೀಖಾನೆಗಳಿಗೆ ಕಳುಹಿಸಿದರು ಹತ್ತುಮಂದಿಗೆ ಫಾಸೀ ಸಜಾ ವಿಧಿಸಲ್ಪಟ್ಟಿತು ಈ ಪೈಕಿ ಏಳು ಜನರನ್ನು ಗಲ್ಲಿಗೆ ಹಾಕಿರುತ್ತಾರೆ

(೨) ಸಿವಿಲ್ ವ್ಯಾಜ್ಯಗಳು

ಮೈಸೂರು ಸಂಸ್ಥಾನವು ಸತ್ಯಸಂಧತೆಯಲ್ಲಿ ದಿನೇ ದಿನೇ ಅಭಿವೃದ್ಧಿಹೊಂದಿತೆಂದು ಕುತೂಹಲಪಡುತ್ತಿರುವವರಿಗೆ ಈ ಸಿವಿಲ್ ವ್ಯಾಜ್ಯಗಳ ರಿಪೋರ್ಟು ಒಷ್ಟೇನೂ ತೃಪ್ತಿಯನ್ನೂ ಸಂತೋಷವನ್ನೂ ಉಂಟುಮಾಡುವುದಾಗಿಲ್ಲ ಕಳೆದ ಸಾಲಿನಲ್ಲಿ ೨೦,೬೫೩ ಸಿವಿಲ್ ವ್ಯಾಜ್ಯಗಳು ದಾಖಲಾದವು ಇಷ್ಟು ಮೊಕದ್ದಮೆಗಳು ಹಿಂದೆ ಯಾವ ವರುಷದಲ್ಲೂ ದಾಖಲಾಗಿದ್ದಿಲ್ಲ ಈ ರಿಪೋರ್ಟಿನ ಅಂಶಗಳು ನಮಗೆ ತಿಳಿದಿರುವಮಟ್ಟಿಗೂ ಯೋಚಿಸಿ ನೋಡಿದರೆ ಜನರು ಯಾಕೆ ಸಿವಿಲ್ ಕೋರ್ಟಿಗೆ ಹೋಗುವರೋ ಎಂದು ನಮಗೆ ಆಶ್ಚರ್ಯವಾಗುತ್ತಿದೆ ಒಂದು ಸ್ಮಾಲ್ ಕಾಜ್ ಮೊಕದ್ದಮೆಯು ಕೋರ್ಟಿನಲ್ಲಿ ಇತ್ಯರ್ಥವಾಗಬೇಕಾದರೆ ಸಾಮಾನ್ಯವಾಗಿ ೯೭ ದಿನಗಳು ಹಿಡಿಯುವವೆಂಬೂ, ಒಂದು ಅಸಲ್ ಮೊಕದ್ದಮೆ ಫೈಸಲಾಗಲು ೧೯೫ ದಿನಗಳು ಬೇಕೆಂದೂ ಈ ರಿಪೋರ್ಟಿನಿಂದ ಹೊರಪಡುವುದು ಹೀಗಾದರೆ ಜನರು ಕೋರ್ಟುಗಳ ವ್ಯವಹರಣೆಯ ವಿಷಯದಲ್ಲಿ ಗುಣಗುಟ್ಟುವುದೇನೂ ಆಶ್ಚರ್ಯವಲ್ಲ

ಜಡ್ಜಿಯು ಡಿಕ್ರಿಯನ್ನು ಕೊಟ್ಟ ಮಾತ್ರಕ್ಕೇ ಡಿಕ್ರಿಯಲ್ಲಿ ಕಂಡ ಮೊಬಲಗು ಪಾವತಿ ಆಯಿತೆಂದು ಹೇಳಲಿಕ್ಕಾಗದು ಯಾಕಂದರೆ ಪ್ರತಿ ೧೦೦ ಜಾರಿ ವಾರಂಟುಗಳಿಗೂ ೭೩ ವಾರಂಟುಗಳು ಜಾರಿಯಾಗದೆ ವಾಪಸು ಕೋರ್ಟಿಗೆ ಬರುತ್ತವೆ ಹೀಗಾದರೆ ಜಾರೀಮಾಡತಕ್ಕ ಇಲಾಖೆಯ ಮೇಲೆ ಕಕ್ಷಿಗಾರರಿಗೆ ಎಂಥಾ ಅಭಿಪ್ರಾಯವಿದ್ದೀತು? ಇದು ತುಂಬಾ ಅತೃಪ್ತಿಕರವಾದದ್ದೆನ್ನುವುದಕ್ಕೆ ಸಂಶಯವಿಲ್ಲ ಶೇಕಡಾ ೭೩ ಮಂದಿ ಸಾಲಗಾರರು ತಪ್ಪಿಸಿಕೊಳ್ಳುವ ಪಕ್ಷಕ್ಕೆ ಅಪ್ರಾಮಾಣಿಕತೆಯು ಹೇರಳವಾಗಿದೆ ಎಂದು ಹೇಳಬಹುದು ಮತ್ತು ಇಂಥಾ ಮೋಸಕೃತ್ಯಗಳನ್ನು ನಡಿಸುವ ನೌಕರರುಗಳನ್ನು ತಕ್ಕಹಾಗೆ ಶಿಕ್ಷಿಸುವುದಕ್ಕೆ ಮೈಸೂರು ಸಂಸ್ಥಾನದ ಅಧಿಕಾರಿಗಳಿಗೆ ಇಷ್ಟವೂ ಸಾಮರ್ಥ್ಯವೂ ಇಲ್ಲವೆಂದು ಊಹಿಸಬೇಕಾಗುತ್ತದೆ

(೩) ವ್ಯವಸಾಯದ ಇಲಾಖೆಯು

ಈ ಇಲಾಖೆಯ ರಿಪೋರ್ಟು ಕಳೆದ ಆಗಸ್ಟ್ ತಾ ೩೧ ರಲ್ಲಿ ಗವರ್ನಮೆಂಟಿಗೆ ಕಳುಹಲಾಯಿತು ಸರ್ಕಾರದವರು ಅದನ್ನು ಪರಾಂಬರಿಸಿ ಫೆಬ್ರವರಿ ತಾ ೩ ರಲ್ಲಿ ತಮ್ಮ ಅಭಿಪ್ರಾಯವನ್ನು ಬರೆದಿರುತ್ತಾರೆ ಇಂಥಾ ತಾಮಸಕ್ಕೆ ಮೂಲಸ್ಥಾನವ್ಯಾವುದೋ ಗೊತ್ತಾಗಲಿಲ್ಲ

ಈ ರಿಪೋರ್ಟನ್ನು ನೋಡುವಲ್ಲಿ ಪರೀಕ್ಷಾರ್ಥವಾದ ಕೆಲಸ ಕಾರ್ಯಗಳೇ ವಿಶೇಷವಾಗಿ ನಡೆಯುತ್ತಿರುವಂತೆಯೂ, ಫಲಿತಾಂಶಗಳು ಇನ್ನೂ ಪ್ರಕಟಿಸುವಮಾಗಿಲ್ಲವೆಂತಲೂ ತಿಳಿಯುವುದು ಹೆಬ್ಬಾಳದ ಪರೀಕ್ಷಾ ಕ್ಷೇತ್ರದೊಳಗೆ ಕಬ್ಬಿನ ರಸದಿಂದ ಸಕ್ಕರೆಯನ್ನು ತಯಾರ್ ಮಾಡಿ ತೋರಿಸಿದ್ದು ಬಹಳ ತೃಪ್ತಿಕರವಾಯಿತು ಭಾರವಿಲ್ಲದಂಥಾ ನೇಗಿಲುಗಳು ಬೇಕೆಂದು ಬಹುಮಂದಿ ರೈತರು ಅಪೇಕ್ಷಿಸುತ್ತಾರೆ ಹೀಗೆ ಕೇಳಿದಷ್ಟನ್ನು ಒದಗಿಸುವುದು ಸಾಧ್ಯವಾಗಲಿಲ್ಲ ಆದರೆ ವ್ಯವಸಾಯಕ್ಕೆ ಹಗುರವೂ ಅನುಕೂಲವೂ ಆಗಿರುವಂಥಾ ನೇಗಿಲುಗಳನ್ನು ತಯಾರುಮಾಡಿಸಿ ಕೊಡುವ ಭಾಗದಲ್ಲಿ ಪ್ರಯಾಸ ಮಾಡುತ್ತಿದ್ದಾರೆ

ಗೊಬ್ಬರಗಳ ವಿಷಯದಲ್ಲಿ ಈಗ ನಡೆಯುತ್ತಿರುವ ಪರೀಕ್ಷೆಗಳಿಂದ ವಿಶೇಷ ಪ್ರಯೋಜನವಾದೀತೆಂದು ಕಾಣುವುದು ರೈತರು ಈಗ ತಮ್ಮ ಜಮೀನಿನಲ್ಲಿ ಬೆಳೆಯುವುದಕ್ಕಿಂತ ಇನ್ನೂ ಹೆಚ್ಚು ಬೆಳೆಯನ್ನು ಮಾಡಿಕೊಳ್ಳುವುದಕ್ಕೆ ಗೊಬ್ಬರಗಳೇ ಮುಖ್ಯ ಕಾರಣವಾದ್ದರಿಂದ ಈಗ ನಡೆಯುವ ಪರೀಕ್ಷೆಗಳು ತುಂಬಾ ಸಫಲವಾಗುವವೆಂದು ನಿರೀಕ್ಷಿಸಬಹುದಾಗಿದೆ

ಕ್ರಿಮಿಕೀಟಾದಿಗಳ ಹಿಂಸೆಯು ವಿಶೇಷವಾಗಿರುವುದರಿಂದ ಅನೇಕ ಪೈರುಗಳು ಕೆಟ್ಟು ನಷ್ಟವಾಗುತ್ತಲಿವೆ ಇದನ್ನು ಸಾಧ್ಯವಾದಷ್ಟೂ ನಿಗ್ರಹಿಸಬಹುದೆಂದು ಮಿ॥ಕೋಲ್‌ಮನ್ನರವರು ನಿದರ್ಶನಪಡಿಸಿರುತ್ತಾರೆ ಅಡಿಕೆಯ ಗೊನೆಗಳಿಗೆ ಹಿಡಿಯುವ ಕೊಳೆರೋಗವನ್ನು ದ್ರಾವಕಾದಿಗಳನ್ನು ಚಿಮುಕಿಸುವ ಮೂಲಕ ಹೋದಮಟ್ಟಿಗೆ ನಿವಾರಣೆ ಮಾಡಿಕೊಳ್ಳಬಹುದಾಗಿದೆ ಅವರು ಮಾಡುತ್ತಿರುವ ಪರೀಕ್ಷೆಗಳು ಇನ್ನೂ ಪೂರೈಸದ ಇದ್ದಾಗ್ಯೂ ಆದರಿಂದ ಈ ರೋಗವನ್ನು ತಡೆಯಬಹುದೆಂತೆಂದು ಕಾಣಬರುತ್ತದೆ

ಮಿ॥ ಕೋಲ್‌ಮನ್ನರವರು ಅಭೂಗಡ್ಡೆಗಳಿಗೆ ಹಿಡಿಯುವ ಉಂಗುರ ರೋಗದ ವಿಚಾರವಾಗಿ ಬಹು ಉತ್ಕೃಷ್ಟವಾದ ವಿವರಣೆಯನ್ನೂ ಪರಿಹಾರವನ್ನೂ ಬರೆದು ಪ್ರಕಟಮಾಡಿರುತ್ತಾರೆ ಇದೇ ರೀತಿ ಈ ಸಂಸ್ಥಾನದಲ್ಲಿ ಆಗುವ ಇತರ ಬೆಳೆಸುಗಳ ವಿಷಯದಲ್ಲೂ ಅವರು ಕ್ರಮವಾಗಿ ಪರಿಶೋಧನೆ ಮಾಡಿ ಫಲಿತಾಂಶಗಳನ್ನು ತಿಳಿಸುವವರಾಗಿದ್ದಾರೆ ಮಿ॥ ಕೋಲ್‌ಮನ್ನರವರ ಕೆಲಸಗಳು ಈ ಸೀಮೆಯ ರೈತಪ್ರಜೆಗಳಿಗೆ ವಿಶೇಷವಾಗಿಯೂ ಪ್ರಜಾಕೋಟಿಗೆ ಸಾಮಾನ್ಯವಾಗಿಯೂ ಹಿತವೂ ಶ್ರೇಯಸ್ಕರವೂ ಆಗೋಣದರಿಂದ ಸರ್ಕಾರದವರೂ ಪ್ರಜೆಗಳೂ ಅವರಿಗೆ ಪ್ರೋತ್ಸಾಹವನ್ನೂ ಸಹಾಯವನ್ನೂ ಮಾಡುತ್ತಾ ಬಂದಾರೆಂದು ನಂಬುತ್ತೇವೆ

(೪) ಫಾರೆಸ್ಟು ಇಲಾಖೆಯು

ಮೈಸೂರು ಸಂಸ್ಥಾನದಲ್ಲಿ ಕಾಡುಗಳ ಪ್ರದೇಶವು ೨,೫೯೯ ಚದರ ಮೈಲಿಯಾಗುವುದು ಈ ಕಾಡುಗಳಿಂದ ಕಳೆದ ಸಾಲಿನಲ್ಲಿ ೧೯,೦೩,೫೯೯ ರೂಪಾಯಿ ಉತ್ಪತ್ತಿಯಾಗಿರುತ್ತದೆ ಈ ಉತ್ಪತ್ತಿಯು ಹಿಂದಿನ ಸಾಲಿಗಿಂತ ಕಡಮೆ ಯಾಕಂದರೆ ಸಂದಲ್ (ಗಂಧದಮರ) ವಿಶೇಷವಾಗಿ ಗಿರಾಕಿಯಾಗಲಿಲ್ಲ

ಕಡೂರು, ಶಿವಮೊಗ್ಗ ಮತ್ತು ಮೈಸೂರು ಡಿಸ್ಟ್ರಿಕ್ಟುಗಳ ಕಾಡುಗಳಲ್ಲಿ ಬೆಂಕಿಯಿಂದ ಬಹಳ ನಷ್ಟವಾಯಿತು ಗೋಕಾಯಿಗಳಿಗೆ ಮೇವು ಸಿಕ್ಕದೆ ಕಷ್ಟವಾದದ್ದನ್ನು ನೋಡಿ ಸರ್ಕಾರದವರು ಫಾರೆಸ್ಟುಗಳನ್ನು ಬಿಡಿಸಿಕೊಟ್ಟರು ಆದರಿಂದ ೧೯೬,೯೯೭ ಗೋಕಾಯಿಗಳೂ, ೨,೧೫೭ ಎಮ್ಮೆಗಳೂ ೧೪,೬೭೩ ಕುರಿಗಳೂ ಕಾಡುಹುಲ್ಲನ್ನು ಮೇದು ಪುಷ್ಟಿಹೊಂದಿದವು ರಾವ್ ಬಹದೂರ್ ಎಂ ಮುತ್ತಣ್ಣನವರು ಫಾರೆಸ್ಟ್ ಇಲಾಖೆಯನ್ನೂ ಕಾಡುಗಳನ್ನೂ ಚೆನ್ನಾಗಿ ನಡಿಸಿ ಕಾಪಾಡಿಕೊಂಡು ಬಂದಿದ್ದಾರೆಂದು ಕಾಣುತ್ತದೆ

ನಾಟ್ಯಗಾತಿಯರೂ ಮೈಸೂರು ದೇವಸ್ಥಾನಗಳೂ

ಮೈಸೂರು ಗವರ್ನಮೆಂಟಿನವರು ತಮ್ಮ ಹುಕುಮನು ಜಾರಿಗೆ ತರುವ ಭಾಗದಲ್ಲಿ ಖಂಡಿತವಾದಿಗಳಾಗಿದ್ದಾರೆಂದು ನೋಡಿ ಸಂತೋಷ ಪಡುತ್ತೇವೆ ಮುಳಬಾಗಿಲಿನಲ್ಲಿ ಒಂದು ಮುಜರಾಯಿ ದೇವಸ್ಥಾನದೊಳಗೆ ಗೆಜ್ಜೆ ಪೂಜೆ ನಡೆಯುವಂತೆ ಕಂಡುಬಂದಿತು, ಅಮಲ್ದಾರರು ಅದು ನಡೆಯಕೂಡದೆಂದು ತಡೆದುಬಿಟ್ಟರು ಆದರೆ ಅಸಿಸ್ಟೆಂಟ್ ಕಮಿಷನರವರು ಗೆಜ್ಜೆ ಪೂಜೆ ಮಾಡಿಕೊಳ್ಳಬಹುದೆಂದು ಅಭಿಪ್ರಾಯಪಟ್ಟರು ಇಂಥಾ ದ್ವಂದ್ವಾಭಿಪ್ರಾಯಗಳನ್ನು ಡಿಪ್ಯುಟಿ ಕಮಿಷನರವರು ಗವರ್ನಮೆಂಟಿಗೆ ತಿಳಿಯಪಡಿಸಿದರು ಆದರ ಮೇಲೆ ಗವರ್ನಮೆಂಟಿ ಹುಕುಂ ಆಗಿರುವುದೇನೆಂದರೆ,—

ದೇವದಾಸಿಯರಾಗಿ ದೆ ಹವಿಕ್ರಯದಿಂದ ಜೀವನ ಮಾಡಿಕೊಳ್ಳುವುದಕ್ಕೂ ಗೆಜ್ಜೆ ಪೂಜೆಗೂ ವಿಶೇಷ ಸಂಬಂಧವಿರುತ್ತದೆ ಇಂಥಾ ಆಚಾರವನ್ನು ಮುಜರಾಯಿ ದೇವಸ್ಥಾನದಲ್ಲಿ ನಡಿಸುವುದಕ್ಕೆ ಗವರ್ನಮೆಂಟಿನವರು ಅವಕಾಶಕೊಡುವುದಿಲ್ಲ ಮುಜರಾಯಿ ಆಗವಾಕರು ಕೂಡ ಅಂಥಾ ಪೂಜೆಯು ದೇವಸ್ಥಾನದಲ್ಲಿ ನಡೆಯದಂತೆ ಅಡ್ಡಿಮಾಡೋಣದರಿಂದ ಯಾವ ಕಷ್ಟವೂ ಉಂಟಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ ಆದಕಾರಣ ಮುಜರಾಯಿ ಇಲಾಖೆಗೆ ಒಳಪಟ್ಟ ಯಾವ ದೇವಸ್ಥಾನದ ಆವರಣದಲ್ಲಿ ಗೆಜ್ಜೆ ಪೂಜೆಯಾಗಲಿ ಅದಕ್ಕೆ ಸಂಬಂಧಪಡುವ ಇನ್ಯಾವ ಆಚರಣೆಯಾಗಲಿ ನಡೆಯಕೂಡದೆಂದು ಗವರ್ನಮೆಂಟಿನವರು ಹುಕುಂ ಮಾಡಿದ್ದಾರೆ

ಯಥಾರ್ಥತ್ವವು

ಮೇಲೆ ಹೇಳಿದ್ದಾಗ ಕಾರಣಭೂತವಾಗಿರುವ ಕರಣಗಳಲ್ಲಿ ಯಥಾರ್ಥತ್ವವು ಪ್ರಮುಖವಾದ ಕರಣವಾಗಿದೆ ಯಥಾರ್ಥತ್ವವು ಇಲ್ಲದೆ ಹೋದರೆ ದೇಶವು ಏಳಿಗೆಗೆ ಬರುವುದಕ್ಕೆ ಬದಲಾಗಿ ಶೀಘ್ರವಾಗಿ ನಶಿಸಿ ಹೋಗುವುದು ರಾಜಕೀಯವಾದ ಕಾರ್ಯಗಳಲ್ಲಿ ಯಥಾರ್ಥತ್ವವು ಎಷ್ಟು ಅವಶ್ಯಕವೋ ಪ್ರಪಂಚಕಾರ್ಯದಲ್ಲಿ ಮತ್ತು ಅವಶ್ಯವೆಂದು ತಿಳಿಯಬೇಕು ಯಾಕೆಂದರೆ ಪ್ರತಿಯೊಂದು ಪ್ರಜೆಯೂ ತನ್ನ ಕಾರ್ಯಗಳಲ್ಲಿ ಯಥಾರ್ಥನಾಗಿ ನಡೆಯದೆ ಹೋದರೆ ಆ ದೇಶ ಯಥಾರ್ಥರಹಿತವಾದ ಪ್ರಜೆಗಳಿಂದ ಕೂಡಿದ ದೇಶವು ಎಷ್ಟು ಸರಸವಾದ ಸ್ಥಿತಿಗೆ ಬರುವುದು ಇಂಗ್ಲಾಂಡ್ ಮುಂತಾದ ನವನಾಗರಿಕತೆಯುಳ್ಳ ಹೊಸ ದೇಶಗಳು ಯಥಾರ್ಥತ್ವಕ್ಕೆ ಹೆಚ್ಚಾದ ಗೌರವ ಕೊಟ್ಟು ಇದರಿಂದ ಆ ರಾಜ್ಯಗಳು ಅತಿ ಉತ್ತಮವಾದ ಸ್ಥಿತಿಗೆ ಬರಲು ಕಾರಣವಾಯಿತು ಅಲ್ಲಿನ ಪ್ರಜೆಗಳು ಬೇರೆ ಬೇರೆ ವಿಷಯಗಳಲ್ಲಿ ತಪ್ಪುಮಾಡುವವರಾಗಿದ್ದಾಗ್ಯೂ ಯಥಾರ್ಥರಾಗಿ ನಡೆಯುವುದಕ್ಕೆ ಪ್ರಯಾಸಪಡುತ್ತಾರೆ

ಯಥಾರ್ಥತ್ವದ ಮೂಲ ಇದು ಏನು, ಇದರಾಗೆಯೇ ಪ್ರಕಟಿಸುವುದು ನಿರ್ದೋಷ ತನ್ನ ತಪ್ಪುಗಳನ್ನು ಮರೆಮಾಡಿದರೆ ಅದು ಕಪಟಕ್ಕೆ ಸೇರಿದ್ದು ಇದು ... ಯಾರ ಕಲ್ಲು ಹೊಡೆದರೂ ... ಅದನ್ನು ಕೈಯಲ್ಲಿ ತೋರಿಸಬೇಕು ಒಬ್ಬ ಯಥಾರ್ಥವಂತನಾಗಿದ್ದು ಹಾಗೆ ಕಲ್ಲು ಕೈಯಲ್ಲಿ ಶರಣಾಗತವಾದರೆ ಅದು ಶುದ್ಧ ಕಾಪಟ್ಯವಾಗುತ್ತದೆ ನಮ್ಮ ದೇಶದಲ್ಲಿ ತಪ್ಪುಮಾಡುವುದು ಮಾತ್ರವಲ್ಲದೆ ಅದನ್ನು ಮರೆಮಾಚಲು ಅನೇಕ ಪ್ರಯಾಸಪಡುವುದುಂಟು ಆದುದರಿಂದಲೇ ಕೋರ್ಟುಗಳಿಗೆ ಬರುವ ಅನೇಕ ಕೇಸುಗಳು ಪತ್ತೆಯಾಗದೆ ಹೋಗುತ್ತವೆ ಹೀಗೆ ದುಷ್ಟಮಗಳು ಪತ್ತೆಯಾಗದೆ ಹೋಗುವುದರಿಂದ ಜನರಲ್ಲಿ ಭೀತಿ ತಪ್ಪಿ ದುಷ್ಕೃತ್ಯ ಹೆಚ್ಚುವುದಕ್ಕೆ ಮಾರ್ಗವಾಯಿತು ಯಥಾರ್ಥತ್ವಕ್ಕೆ ನಮ್ಮ ದೇಶದಲ್ಲಿ ಉಚಿತವಾದ ಗೌರವವಿಲ್ಲದೆ ಇರುವುದನ್ನು ನಮ್ಮ ವ್ಯಾಪಾರ ಕಾರ್ಯಗಳಲ್ಲಿ ಕಾಣಬಹುದು ವ್ಯಾಪಾರ ದ್ರೋಹ ಚಿಂತನೆ ಎಂಬುದಾಗಿ ನಮ್ಮ ದೇಶದ ವರ್ತಕರು ರೂಢಿಯಾಗಿ ಹೇಳುವುದುಂಟು ವ್ಯಾಪಾರದಲ್ಲಿ ಸುಳ್ಳು ಹೇಳದೆ ಹೋದರೆ ಸಫಲವೇ ಆಗುವುದಿಲ್ಲವೆಂಬುದು ನಮ್ಮ ವರ್ತಕರ ಅಭಿಪ್ರಾಯ ಆದರೆ ನಮ್ಮ ದೇಶದ ವ್ಯಾಪಾರವು ಇಷ್ಟು ಕನಿಷ್ಠಸ್ಥಿತಿಗೆ ಬರಲು ಕಾರಣವೇನಾಗಿರಬಹುದೆಂಬುದನ್ನು ನಮ್ಮ ವರ್ತಕ ಮಿತ್ರರು ಯೋಚನೆ ಮಾಡದಿರುವುದು ತುಂಬಾ ಆಶ್ಚರ್ಯವಾಗಿದೆ ಸುಳ್ಳು ಹೇಳುವುದರಿಂದ ಒಂದೆರಡು ಕಾಸಿನ ನಷ್ಟ ತಾತ್ಕಾಲಿಕಕ್ಕೆ ಸಿಕ್ಕಿದರೂ - ವಾಸ್ತವ ಧನ ಸದರಿಗ ಲೋಭಿಯ ದಿನ ಕತ್ತಿಗೆ ಎಂಬುವ ಗಾದೆಗೆ ಸರಿಯಾಗಿ ಸುಳ್ಳು ಗಟಿಯಿಂದ ಸಂಪಾದನೆ ಮಾಡಿದ ಸಂಪತ್ತು ನಶ್ವರವಾಗುವುದು

ಲೌಕಿಕ ಕಾರ್ಯಗಳಲ್ಲಿ ಯಥಾರ್ಥತ್ವವು ಎಷ್ಟು ಅವಶ್ಯಕವೋ ಪಾರಮಾರ್ಥಿಕ ಕಾರ್ಯಗಳಲ್ಲಿ ಮತ್ತಷ್ಟು ಅಧಿಕವಾಗಿ ಇದರ ಆವಶ್ಯಕತೆ ಕಾಣುತ್ತದೆ ಯಾಕಂದರೆ ಭಗವಂತನು ಪ್ರತಿಯೊಬ್ಬನ ಅಂತರಾತ್ಮವನ್ನು ಪರಿಶೋಧಿಸಿ ಆಳುಕೊಳ್ಳುವವನಾಗಿರುತ್ತಾನೆ ಯಥಾರ್ಥತ್ವವಿಲ್ಲದ ಹೃದಯವನ್ನು ಬಹಳವಾಗಿ ಅಸಹ್ಯಿಸುತ್ತಾನೆ ಅನೇಕರು ತಾವು ಮಹಾಭಕ್ತರೆಂದು ಹೊಗಳಿಕೆ ಹೊಂದಬೇಕೆಂಬುವ ಅಭಿಪ್ರಾಯದಿಂದ ಯಾವಾಗಲೂ ದೇವರ ನಾಮೋಚ್ಚಾರಣೆಯನ್ನು ಮಾಡುವುದರಲ್ಲಿ ಆಸಕ್ತರಾಗಿರುತ್ತಾರೆ ಅಂಥವರ ವಿಷಯದಲ್ಲಿ ಶ್ರೀ ಯೇಸುಸ್ವಾಮಿಯವರು “ ನನ್ನನ್ನು ಸ್ವಾಮೀ ಸ್ವಾಮೀ ಅನ್ನುವವನು ಪರಲೋಕ ರಾಜ್ಯದಲ್ಲಿ ಸೇರುವನೆಂದು ನೆನಸಬೇಡಿರಿ ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು ” ಎಂದು ಹೇಳಿದ್ದಾರೆ ಬರೀ ನಾಮೋಚ್ಚಾರಣೆಯು ಕಪಟಾಚರಣೆಯೇ ಹೊರತು ಯಥಾರ್ಥವಾದ ಭಕ್ತಿಯಲ್ಲ ಇಂಥಾ ಭಕ್ತಿಯನ್ನು ತೋರಿಸುವುದಕ್ಕಿಂತಲೂ ತಮ್ಮ ನಿಜಸ್ವಭಾವವನ್ನು ಪ್ರಕಟಿಸುವುದು ಒಳ್ಳೆಯದು ದೇವರಿಗೆ ಇಂಥವರ ಮೇಲೆ ಹೆಚ್ಚು ಕರುಣ ಇರುತ್ತದೆಯೇ ಹೊರತು ಕಪಟ ಭಕ್ತಿ ತೋರಿಸುವವರ ಮೇಲೆ ಕಿಂಚಿನ್ಮಾತ್ರವೂ ಇರಲಾರದು

ಇನ್ನೂ ಅನೇಕರು, ತಮ್ಮ ಸಂಗಡದವರಿಗೆ ಭಯಪಟ್ಟು ತಮ್ಮ ಸ್ವಾಭಾವಿಕವಾದ ಭಕ್ತಿಯನ್ನು ಪ್ರಕಾಶಪಡಿಸುವುದಕ್ಕೆ ಹಿಂಜರಿಯುವುದುಂಟು ತಮ್ಮ ಮನಸ್ಸಾಕ್ಷಿಗೆ ಒಪ್ಪತಕ್ಕ ಕಾರ್ಯವನ್ನು ಇತರರು ಅನುಮೋದಿಸದೆ ಇರುವುದರಿಂದ ಅವರನ್ನು ಮೆಚ್ಚಿಸುವ ಉದ್ದೇಶ್ಯ ತಮ್ಮ ನಂಬಿಕೆಗೆ ಅನರ್ಹವಾದ ಕಾರ್ಯಗಳನ್ನು ಕೂಡ ಮಾಡುತ್ತಾರೆ ದೃಷ್ಟಾಂತವಾಗಿ ಅನೇಕರಿಗೆ ವಿಗ್ರಹಾರಾಧನೆ ತಪ್ಪೆಂತಲೂ ಜಾತಿಭೇದವು ದೋಷವಾದುದೆಂತಲೂ ಬಾಲ್ಯವಿವಾಹವು ಬುದ್ಧಿಹೀನವಾದುದೆಂತಲೂ ತಿಳಿದಿದ್ದರೂ ಕೂಡ ತಮ್ಮ ಸಜಾತಿಯವರ ಭಯದಿಂದಲೋ ಸಂಪ್ರದಾಯದ ಅಭಿಮಾನದಿಂದಲೋ ಆ ಮೋಸ್ತ ಪದ್ಧತಿಗಳನ್ನು ಅನುಸರಿಸುತ್ತಾರೆ ಹೀಗೆ ಮಾಡುವುದು ಯಥಾರ್ಥತ್ವವೆನಿಸಿಕೊಳ್ಳಲಾರದು ಇಂಥಾ ಭಕ್ತಿಯನ್ನು ದೇವರು ಎಂದಿಗೂ ಮೆಚ್ಚಲಾರನು ತನಗೆ ಯಾವುದು ನ್ಯಾಯವೆಂದು ಗೊತ್ತಾಗುತ್ತದೆಯೋ ಅದು ಇತರರಿಗೆ ಪ್ರಿಯವಾಗಲೀ ಅಪ್ರಿಯವಾಗಲೀ, ಲಾಭವಾಗಲೀ ನಷ್ಟವಾಗಲೀ, ಅದನ್ನು ಮಾಡಿಯೇ ತೀರಿಸಬೇಕು ಅಂಥವನೇ ಯಥಾರ್ಥವಂತನೆಂದೆನ್ನಿಸಿಕೊಳ್ಳುವುದಕ್ಕೆ ಯೋಗ್ಯನಾಗಿದ್ದಾನೆ ಹಾಗೆ ತನ್ನ

ಮನಸ್ಸಾಕ್ಷಿಗೆ ಒಪ್ಪುವಂಥಾ ಕೆಲಸವನ್ನು ನೆರವೇರಿಸುವುದಕ್ಕೆ ಧೈರ್ಯವಿಲ್ಲದೆ ಹಿಂದೆಗೆಯುವವನು ಹೇಡಿಯಾಗಿ ಯಾವ ಒಳ್ಳೇದನ್ನಾದರೂ ಮಾಡುವುದಕ್ಕೆ ಬಲವಿಲ್ಲದವನಾಗಿ ವರವುರುಷನಾದರೂ ಶೋಭಿಸದೆ ಇರುವನು ಇಂಥವನಿಂದ ದೇವರಿಗೆ ಪ್ರೀತಿಯೂ ಜನರಿಗೆ ಉಪಕಾರವೂ ದೇಶಕ್ಕೆ ಅಭಿವೃದ್ಧಿಯೂ ಎಂದಿಗೂ ಉಂಟಾಗಲಾರದು ಯಥಾರ್ಥತ್ವವಿಲ್ಲದವನು ಹುಳತಿಂದ ಮರದೋಪಾದಿಯಲ್ಲಿರುತ್ತಾನೆ ಆ ಹುಳವು ಮರದ ಒಳಗಿನ ತಿರುಳನ್ನು ಕ್ರಮೇಣವಾಗಿ ತಿನ್ನುತ್ತಾ ತಿನ್ನುತ್ತಾ ಬರುವುದರಿಂದ ಮರವು ಟೊಳ್ಳಾಗಿ ಸುಡುವುದಕ್ಕೆ ಹೊರತು ಮತ್ತಾವ ಕೆಲಸಕ್ಕೂ ಬರಲಾರದಷ್ಟೆ ಅದೇ ರೀತಿ ಸುಳ್ಳೆಂಬುವ ಕ್ರಿಮಿಯು ಮನುಷ್ಯನ ಸತ್ಯತೆಯೆಂಬುವ ವೃಕ್ಷದ ತಿರುಳನ್ನು ಕ್ರಮೇಣವಾಗಿ ತಿನ್ನುತ್ತಾ ಬಂದು ಕೊನೆಗೆ ಆ ಮನುಷ್ಯನನ್ನು ದುರ್ಬಲನನ್ನಾಗಿ ಮಾಡಿಬಿಡುತ್ತದೆ ಆದ್ದರಿಂದ ಯುಕ್ತ ಯಥಾರ್ಥತ್ವವೇ ಪುರುಷಲಕ್ಷಣಕ್ಕೆ ಮೂಲಾಧಾರವಾಗಿದೆ ತನ್ನ ತಪ್ಪನ್ನು ಹೊರಪಡಿಸಿ ಮೋಸಿಯೆಂದೆನ್ನಿಸಿಕೊಳ್ಳುವುದಕ್ಕೆ ಯಾರಿಗೂ ಇಷ್ಟವಿರುವುದಿಲ್ಲ ಪರಂತು, ಯಥಾರ್ಥವಂತನಾಗಿರುವವನು ತಪ್ಪನ್ನು ಮಾಡದೆ ಇರುವುದಕ್ಕೆ ಎಷ್ಟುಮಟ್ಟಿಗೂ ಪ್ರಯತ್ನಪಡುವನು ಆಕಸ್ಮಾತ್ ತಪ್ಪನ್ನು ಮಾಡಿದರೆ ಅದು ಎಷ್ಟೇ ಲಜ್ಜಾಸ್ಪದವಾದ ಕಾರ್ಯವೇ ಆಗಲಿ ತನ್ನ ನಿಜರೂಪವನ್ನು ತೋರಿಸಿಕೊಂಡಾನು ನಮ್ಮ ಮುಖ್ಯವಾದ ಅಭಿಪ್ರಾಯವೇನೆಂದರೆ ಮನುಷ್ಯನು ಯಥಾರ್ಥವಂತನಾಗಿರಲು ಪ್ರಯಾಸಪಡುವುದಾದರೆ ಅವನು ಸರ್ವವಿಧವಾದ ಸುಖವನ್ನು ಪಡೆಯುವುದಕ್ಕೆ ಶಕ್ತನಾಗುವುದಲ್ಲದೆ ಅವನು ದೇಶೋಪಕಾರಿಯಾದ ವಸ್ತಿಯನೂ ಆಗುವನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ಎನ್ನುವೆವು.

ಒಳದೇಶದ ವೃತ್ತಾಂತಗಳು

ಕ್ಕ ಅಗ್ರಹಾರದ ಅಂಗಡಿಯಲ್ಲಿ ಪಿಂಗ ಬಿದ್ದು ಗಾಯಪಟ್ಟ ವರ್ತಕನು ಕಳೆದ ಶನಿವಾರ ಆಸ್ಪತ್ರೆಯಲ್ಲಿ ಕಾಲವಾದನೆಂದು ತಿಳಿಯುವುದು

* * *

ಬೆಂಗಳೂರು ಜೈಲ್ ಆಫೀಸರಾಗಿದ್ದ ಮೆ|| ಬಿ ಕೃಷ್ಣರಾಯರನ್ನು ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರಾಗಿ ವರ್ಗಮಾಡಿರುತ್ತಾರೆ

* * *

ನಗರ ತಾಲ್ಲೂಕು ಖಜಾನೆಯಿಂದ ಮಾಗಡಿ ತಾಲ್ಲೂಕು ಖಜಾನೆಗೆ ಕಳುಹಲ್ಪಟ್ಟ ಹಣದ ಚೀಲಗಳ ಪೈಕಿ ಒಂದು ಚೀಲವು ಕಳುವಾಗಿತ್ತಷ್ಟೆ – ಕಳುವು ಪತ್ತೆ ಆಯಿತೆಂದು ಕೇಳುತ್ತೇವೆ

* * *

ಬೆಂಗಳೂರಿನಲ್ಲಿರುವ ಪರ್ಸನಲ್ ಡೆಪ್ಯುಟಿ ಕಮೀಷನರ ಮ|| ಎಚ್ ರಾಮಾನುಜಯ್ಯಂಗಾರ್ರವರ ಪತ್ನಿಯವರು ಕ್ಷಯರೋಗ ಪೀಡಿತರಾಗಿ ಕಳೆದ ಬುಧವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ

* * *

ಶ್ರೀಮನ್ ಮಹಾರಾಜರವರೂ ಯುವರಾಜರವರೂ ಪರಿವಾರ ಸಮೇತ ಈ ದಿನ ಮೈಸೂರಿನಿಂದ ಹೊರಟು ಬೆಂಗಳೂರಿಗೆ ದಯಮಾಡುವವರಿದ್ದಾರೆ ಅವರು ಬೆಂಗಳೂರಿನಲ್ಲಿ ಎರಡು ವಾರಗಳ ಪರ್ಯಂತ ಇರುವರೆಂದು ವರ್ತಮಾನವಿದೆ

* * *

ಶ್ರೀ ಶಿವಗಂಗಾ ಸ್ವಾಮಿಗಳವರು ಮದರಾಸ್ ಆಧಿಪತ್ಯದಲ್ಲಿ ದೇಶಾಟನೆ ಮಾಡುವಾಗ್ಗೆ ಅವರು ಲೈಸೆನ್ಸು ಪಡೆದುಕೊಳ್ಳದೆ ೬ ಬಂದೂಕು ೬ ಕತ್ತಿ, ೪ ಪಿಸ್ತೂಲುಗಳನ್ನು ಇಟ್ಟುಕೊಂಡಿರಬಹುದೆಂದು ಮದರಾಸ್ ಗವರ್ನರವರು ರಿಯಾಯಿತಿಯನ್ನು ತೋರಿಸಿರುತ್ತಾರೆ

* * *

ಗೋರಿಪಾಳ್ಯದ ತಾಲ್ಲೂಕು ಅಮಲ್ದಾರ ಮ|| ರ ಹನುಮಂತರಾಯರು ಮೂರು ತಿಂಗಳ ರಜಾ ಪಡೆದುಕೊಂಡಿರೋಣವರಿಂದ ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಇನ್ಸ್‌ಪೆಕ್ಟರ್ ಮೆ|| ಲಕ್ಷ್ಮೀನಾರಾಯಣರು ಆ ತಾಲ್ಲೂಕಿನ ಅಮಲ್ದಾರರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ

* * *

ಈ ವರುಷದಲ್ಲಿ ಮೈಸೂರ್ ಲೋಕಲ್ ಪರೀಕ್ಷೆಗಳು ನಡೆಯುವುದಿಲ್ಲವಂದೂ ಇನ್ನು ಮುಂದಕ್ಕೆ ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಆದ ಎರಡು ವಾರಗಳ ತರುವಾಯ ಅಂದರೆ ಏಪ್ರಿಲ್ ತಿಂಗಳಲ್ಲಿ ನಡೆಸಲ್ಪಡುವವೆಂದೂ ಇನ್ಸ್‌ಪೆಕ್ಟರ್ ಜನರಲ್‌ರವರು ತಿಳಿಸಿರುತ್ತಾರೆ

* * *

ಚನ್ನರಾಯಪಟ್ಟಣದ ತಾಲ್ಲೂಕಿಗೆ ಸೇರಿದ ನೌಲಿ, ಕೆಂಬಾಳ, ಅಣತಿ ಎಂಬ ಮೂರು ಗ್ರಾಮಗಳಲ್ಲೂ ಒಂದೊಂದು ಸಾವಿರದಂತೆ ಪ್ರಜಾ ಸಂಖ್ಯೆ ಇರುವುದರಿಂದ ಪ್ರತಿ ಒಂದು ಗ್ರಾಮದಲ್ಲೂ ಯೂನಿಯನ್ ಪಂಚಾಯಿತಿಯನ್ನು ಏರ್ಪಡಿಸಬೇಕೆಂದು ಗವರ್ನ್‌ಮೆಂಟಿಗೆ ಶಿಫಾರಸು ಹೋಗಿದೆ

* * *

ಕಳೆದ ರವಿವಾರ ಮಧ್ಯಾಹ್ನ ಬರೋಡಾನಗರದ ಮಹಾರಾಜರವರು ಪರಿವಾರ ಸಹಿತ ಹೆಗ್ಗಡದೇವನಕೋಟೆ ಸೀಮೆ ಕ್ಯಾಂಪಿನಿಂದ ವಾಪಸು ರಾಜಧಾನಿಗೆ ಬಂದು ಹಸ್ತಿ ಪಂಜರದಲ್ಲಿ ಇಳುಕೊಂಡಿದ್ದು ಭಾನುವಾರ ಬೆಳಗ್ಗೆ ಹೊಸ ಅರಮನೆ ಖಾಸಾ ತಪಶೀಲು ಮುಂತಾದವುಗಳನ್ನು ನೋಡಿಕೊಂಡು ಮೈಯಿಲ್ ಗಾಡಿಯಲ್ಲಿ ಬೆಂಗಳೂರಿಗೆ ತೆರಳಿದರು ಗೌರವಾರ್ಥವಾದ ೧೧ ತೋಪುಗಳು ಹಾರಿಸಲ್ಪಟ್ಟವು ಒಂದು ಹುಲಿಯು ಅವರ ಗುಂಡಿನ ಏಟು ತಿಂದು ಸತ್ತು ಬಿದ್ದಿತು

* * *

ಶ್ರೀರಂಗಪಟ್ಟಣದ ಮಹಾಂಕಾಳಿಯಲ್ಲಿ ಬೊರೆಯವರ ಸೋಪಾನದ ಬಳಿ ಇರುವ ಕಾವೇರಿನದಿಯ ಕಲ್ಲಿನ ಸೇತುವೆಯು ಹದಿಮೂರು ಅಂಕಣಗಳುಳ್ಳದ್ದು ಇದು ಬಹು ಪುರಾತನ ಕಾಲದ ಕಟ್ಟಡವು ಕಳೆದ ಸೋಮವಾರ ಬೆಳಗ್ಗೆ ಸುಮಾರು ೭ ಗಂಟೆ ಹೊತ್ತಿನಲ್ಲಿ ಈ ಸೇತುವೆಯ ಆರನೇ ಅಂಕಣದ ಮೇಲ್ಭಾಗದ ಕಲ್ಲಿನ ಅಡ್ಡ ತೊಲೆಯು ಅಕಸ್ಮಾತ್ ಎರಡಾಗಿ ಒಡೆದು ಬಿದ್ದು ಹೋಯಿತು ಇದರ ದೆಸೆಯಿಂದ ಎರಡು ಅಂಕಣಗಳ ಸೇತುವೆಯು ಕುಸಿದು ಹೋಗಿವೆ ದೇವರ ದಯದಿಂದ ಯಾವ ವಿಧವಾದ ಕಷ್ಟನಷ್ಟಗಳೂ ಉಂಟಾಗಲಿಲ್ಲ ಈಗ ಸೇತುವೆಯ ಒಂದು ಅಂಚಿನಲ್ಲಿ ಜನರು ತಿರುಗುವುದಕ್ಕೆ ಅವಕಾಶಕೊಟ್ಟಿದ್ದಾರೆ ಗಾಡಿಗಳನ್ನು ಬಿಡುವುದಿಲ್ಲ ಇದರಿಂದ ಜನರಿಗೆ ತುಂಬಾ ತೊಂದರೆಯುಂಟಾಗಿದೆ

* * *

ರಾಜಧಾನಿಯಲ್ಲಿ ಸೌದೆ ಗಾಡಿಗಳ ದಳ್ಳಾಳಿಗಳು ಇಬ್ಬರು ಒಬ್ಬ ಪೆ ತನ ಸೌದೇ ಗಾಡಿಯನ್ನು ಹಿಡಿದುಕೊಂಡು ಹೋಗಿ ಅವನಿಗೆ ಮೋಸ ಮಾಡಲು ಪ್ರಯತ್ನಪಟ್ಟರು ಹೆಡ್ ಕಾನ್ಸ್‌ಟೇಬಲ್ ಚಂದ್ರಶೇಖರಯ್ಯನವರು ಅವರನ್ನು ಹಿಡಿದು ಮೊಕದ್ದಮೆ ಮಾಡಿದ್ದರಲ್ಲಿ ಇಬ್ಬರು ದಳ್ಳಾಳಿಗಳಿಗೂ ಸಿಟಿ ಮ್ಯಾಜಿಸ್ಟ್ರೇಟರು ಜುಲ್ಮಾನೆ ವಿಧಿಸಿದರು ದಿನಸಿ ದಳ್ಳಾಳಿಗಳ ಕಾಟವೂ ಪಟ್ಟಣದಲ್ಲಿ ಹೆಚ್ಚಾಗಿದೆ ಹೀಗೆಯೇ ಅವರಿಗೂ ಎಚ್ಚರಿಕೆಯುಂಟಾದರೆ ಎಷ್ಟೋ ಉಪಕಾರವಾದೀತು ಇತ್ತಲಾಗಿ ಅದೇ ಚಂದ್ರಶೇಖರಯ್ಯನವರು ರಾಜಧಾನಿಯಲ್ಲಿ ಕಳುವಾಗಿದ್ದ ಸುಮಾರು ೬೦೦ ರೂಪಾಯಿನ ಬೆಲೆ ಬಾಳುವ ಒಡವೆ ಗೋಕಾಯಿಗಳನ್ನು ಪತ್ತೆ ಮಾಡಿದರು ಈ ಪೈಕಿ ಎರಡು ಮೊಕದ್ದಮೆಗಳಲ್ಲಿ ಅಪರಾಧಿಗೆ ೧೫ ತಿಂಗಳ ಸಜಾ ಆಗಿರುವುದು

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್ಪಾಂಡೆನ್ಸ್

ಅಜಾಗ್ರತೆಯಿಂದ ನಡೆದ ಭಯಂಕರವಾದ ಮರಣ

ಆರ್ಯರೆ,

ಶಿಡ್ಲಘಟ್ಟದ ತಾಲ್ಲೂಕು ತಲಕಾಯಲಬೆಟ್ಟ (ತಲಕಾಸಿನ) ಕೊಂಡ ಎಂಬ ಸ್ಥಳದಲ್ಲಿ ವೆಂಕಟರಮಣಸ್ವಾಮಿ ಜಾತ್ರೆಯು ನಡೆಯುವದುಂಟಷ್ಟೆ ಈ ಸ್ಥಳವು ಪಾಪಘ್ನಿಯ ತೀರದಲ್ಲಿರುವುದರಿಂದ ಭಕ್ತಾದಿಗಳು ಒಹಳವಾಗಿ ಸೇರುವುದಲ್ಲದೆ ಸುವಿರಾರು ಎತ್ತುಗಳೂ ಸೇರುವುದುಂಟು ಈ ಸಾರಿಯೂ ಇದೇ ಮಾಘಶುದ್ಧ ಪಾಡ್ಯಮಿಯಲ್ಲಿ ಶುರುವಾಗಿ ಬೆಳಗ್ಗೆ ಮಡುಗು ತೇರು ಎಳೆದರು ಸಾಯಂಕಾಲ ಹೂವಿನ ರಥವು ಎಳೆಯಬೇಕಾದ ತೇರು ಸಕಾಲಕ್ಕೆ ಎಳೆಯಲು ಶುರುವು ಮಾಡದೆ ಯಾವದೋ ಕಾರಣದಿಂದ ಕತ್ತಲೆಯಲ್ಲಿ ಶುರುವು ಮಾಡಿದರೆಂತಲೂ, ಇಂತೆಂಬ ವೇಳೆಯಲ್ಲಿ ಬೇಕಾದ ಜನಸಹಾಯವು ಒದಗದ್ದರಿಂದ ತಾಲ್ಲೂಕು ಅಮಲ್ದಾರರೂ ಅವರ ಸೈನ್ಯಾತಿ ಜವಾನರೂ ಜನರನ್ನು ಹೊಡೆದು ಬಡಿದು ಜಾತ್ರೆಯಿಂದ ತೇರಿನ ಬಳಿಗೆ ಓಡಿಸಿಕೊಂಡು ಬಂದಹಾಗೂ, ಹಿಂದುಮುಂದಿನ ಸಂಗತಿ ಏನೆಂದು ಅರಿಯದ ಈ ಜನರು ತೇರಿನ ಹಗ್ಗ ಹಿಡಿದು ಎಳೆದಹಾಗೂ, ಎತ್ತರವಾದ ದಿನ್ನೆಯಮೇಲಿದ್ದ ರಥವು ಅತಿ ವೇಗವಾಗಿ ಓಡಿದಹಾಗೂ, ಇದನ್ನರಿತ ಜನರು ಪ್ರಾಣಭೀತಿಯಿಂದ ದಿಕ್ಕಾಪಾಲಾಗಿ ಓಡಿಹೋದಾಗ್ಯೂ, ಹಾಗೂ ಇಬ್ಬರು ರಥದ ಕೆಳಗೆ ಸಿಕ್ಕಿಬಿದ್ದು, ಒಬ್ಬನು ಬಲಗೈಯ ಬೆರಳನ್ನು ಕಳೆದುಕೊಂಡಿದ್ದಾನೆ ಮತ್ತೊಬ್ಬನು ಪೂರಾ ಗಾಲಿಯ ಕೆಳಗೆ ಸಿಕ್ಕಿ ಎಲುವುಗಳು ನುಚ್ಚುನೂರಾಗಿ, ರಕ್ತಪ್ರವಾಹ ಹರಿದು ಪ್ರಾಣ ಕಳೆಕೊಂಡನೆಂತಲೂ ತಿಳಿಯಬಂತು ಇದರ ನಿಜಾಂಶ ತಿಳಿಯಬೇಕೆಂಬ ಕುತೂಹಲವು ಮನಸ್ಸನ್ನು ಬಾಧಿಸಿದ್ದರಿಂದ ನಾನು ಹೋಗಿ ವಿಚಾರಮಾಡ ತೊಡಗಿದೆನು ಅಷ್ಟರಲ್ಲಿ ರೆವ್ ಹಿಕ್ಲಿಂಗ್ ದೊರೆಯವರೂ ಅಲ್ಲಿಗೆ ಸೇರಿ ಸದರಿ ವರ್ತಮಾನವನ್ನು ವಿಚಾರಮಾಡುತ್ತಿರಲಾಗಿ ಒಬ್ಬ ಗವರ್ನ್‌ಮೆಂಟ್ ನೌಕರನು ಸಾಹೇಬರವರಿಗೆ ಹೇಳಿದ್ದೇನಂದರೆ—ಮೃತಪಟ್ಟ ಆ ಮನುಷ್ಯನು ಚನ್ನಾಗಿ ಕುಡಿದು ಮತ್ತನಾಗಿದ್ದದ್ದರಿಂದ ಈ ಅನಾಹುತಕ್ಕೆ ಕಾರಣವಾಯಿತೆಂದು ದೃಢವಾಗಿ ಹೇಳಿದನು ಈ ಸಂಗತಿಯನ್ನು ಮೃತಪಟ್ಟವನ ಮುದಿತಾಯಿ ಬಂಧುಬಳಗದವರನ್ನೂ ಜಾತ್ರೆಯಲ್ಲಿ ಹಾಜರಿದ್ದವರನ್ನೂ ವಿಚಾರಿಸಲಾಗಿ ಅವನೆಂದೂ ಕುಡುಕನಾಗಿರಲಿಲ್ಲವೆಂಬುದು ಗೊತ್ತಾಯಿತು ಆದರೆ ಈ ಸುಳ್ಳು ಸುದ್ದಿಯು ಯಾತಕ್ಕಾಗಿ ಹುಟ್ಟಿರಬಹುದೆಂಬುದು ವಾಚಕರಿಗೆ ನಾನು ವರ್ಣಿಸಬೇಕೇ? ಅಂಗೈ ಹುಣ್ಣಿಗೆ ಕನ್ನಡಿ ಬೇಕೇ? ಅಷ್ಟರಲ್ಲಿ ಶಿಡ್ಲಘಟ್ಟದ ಮೆಡಿಕಲ್ ಆಫೀಸರರು ದಯಮಾಡಿಸಿ ಅಜವಾಯಿಶಿಯಿಂದ ಹೆಣವನ್ನು ಧಫನ್‌ಗೆ ಕೊಟ್ಟರೆಂದೂ ಕೈ ಬೆರಳು ಹೋದವನನ್ನು ಶಿಡ್ಲಘಟ್ಟಕ್ಕೆ ಸಾಗಿಸಿಕೊಂಡು ಹೋದರೆಂದೂ ಗೊತ್ತಾಯಿತು

ಈ ಭಯಂಕರವಾದ ಮರಣಕ್ಕೆ ಅಧಿಕಾರಿಗಳ ಶಿಸ್ತಿಂದಿರಿಯೂ ಅಧಿಕಾರಿಗಳ ಬತೋದ್ದಂಡಿಯೇ ಕಾರಣವೆಂದು ಜಾತ್ರೆಯ ಜನಗಳು ಹೇಳಿಕೊಳ್ಳುತ್ತಿದ್ದರು ಮತ್ತು ೯ ೯ ಘಂಟೆಯ ರಾತ್ರಿಯಾಗಿದ್ದರೂ ತೇರು ಸ್ವಸ್ಥಳಕ್ಕೆ ಸೇರಲಿಲ್ಲವೆಂದರೆ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಎಷ್ಟು ಶ್ರದ್ಧಾಭಾವದಿಂದ ನಡೆಸಿರುವರೆಂಬುದು ಗೊತ್ತಾಗುತ್ತದೆ ಇದು ಹಾಗಿರಲಿ ಕೆಲಸಕ್ಕೆ ಮೂಲವಾಗಿದ್ದ ಬಲಗೈಯ ಬೆರಳುಗಳನ್ನು ಕಳೆದುಕೊಂಡು ಈಗ ನರಳುತ್ತಿರುವ ಬಡ ಮನುಷ್ಯನ ಮುಂದಿನ ಗತಿಯೂ ಅವನ ಸಂಸಾರ ಮಕ್ಕಳ ಪರಿಣಾಮವೂ ಏನಾಗಬೇಕು? ಮತ್ತು ೨೫ ವರುಷದ ಮಗನನ್ನು ಕಳೆದುಕೊಂಡು ದುಃಖ ಸಾಗರದಲ್ಲಿ ಮುಳುಗಿರುವ ಆ ಮುದಿ ವೇದನೆಯು ಪಾಡೇನು? ಈ ವಿಷಯವಾಗಿ ತೇರು ಎಳೆಸಿದ ಅಧಿಕಾರಿಗಳು ಯಾವ ತೀರ್ಮಾನ ಮಾಡಿರುವರು? ಹಾಗೆ ತೀರ್ಮಾನ ಮಾಡಲಿಕ್ಕೆ ಅವರಿಗೆ ಮನಸ್ಸಿಲ್ಲವಾದರೆ ಮುಜರಾಯಿ ಇಲಾಖೆಯವರೂ ಡೆಪ್ಯುಟಿ ಕಮಿಷನರ್ ಸಾಹೇಬರವರೂ ತಮ್ಮ ವಿಚಾರದೊಂದಿಗೆ ಸಹರಿಯವರಿಗೆ ಜೀವನಾಂಶ ಕಲ್ಪಿಸಿಕೊಟ್ಟು ಕೀರ್ತಿಪಡೆಯುವರೆಂದು ನಂಬುತ್ತೇನೆ. ಅಲ್ಲದೆ ಜಾತ್ರೆಗಳಲ್ಲಿ ತೇರುಗಳನ್ನು ಎಳೆಯುವುದಕ್ಕೆ ರೆವಿನ್ಯೂ ಅಧಿಕಾರಿಗಳಿಗೂ ಪೋಲೀಸಿನವರಿಗೂ ಪ್ರಜೆಗಳನ್ನು ಹಿಡಿದು ಹೊಡೆದು ಜುಲುಮು ನಡೆಸಿರೆಂದು ಘನವಂತರಾದ ನಮ್ಮ ಶ್ರೀಮನ್ ಮಹಾರಾಜರವರ ಸರಕಾರದವರು ಅಪ್ಪಣೆಕೊಟ್ಟಿರುವರೇ? ಹಾಗೆ ಕೊಡದ ಪಕ್ಷಕ್ಕೆ ದಯವಿಟ್ಟು ಗವರ್ನ್‌ಮೆಂಟಿನವರು ಅಧಿಕಾರಿಗಳಿಗೆ ಈ ವಿಚಾರವಾಗಿ ಖಂಡಿತವಾದ ಹುಕುಂ ದಯಪಾಲಿಸಿದರೆ ಬಡವರ ಶ್ರಮೆಯೂ ಪರಸ್ಪರ ಸಾಮ್ರಾಜ್ಯವೂ ತಪ್ಪುವುದಲ್ಲದೆ ಪ್ರತಿಯೊಬ್ಬ ಉಪಕಾರ ಮಾಡಿದ ಪುಣ್ಯವೂ ತಪ್ಪಲಾರದು ಜನಗಳಿಗೆ ಭಕ್ತಿಯಿದ್ದರೆ ಅವರೇ ಬಂದು ತೇರು ಎಳೆಯಲಿ ಎಳೆಯದಿದ್ದರೆ ತೇರು ನಿಂತಲ್ಲಿಯೇ ನಿಂತಿರಲಿ ನಷ್ಟವೇನು? ಆದರೆ ಪ್ರಾಣಗಳು ಕಳೆದು ಹೋಗುವದೆಂದರೆ ಉಳಿದವರಿಗೆ ನಷ್ಟವಲ್ಲವೇ? ಈ ವಿಷಯವಾಗಿ ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದವರು ಸರಿಯಾದ ಏರ್ಪಾಡು ಮಾಡಿಯಾರೆಂದು ನಂಬಿ ಪ್ರಾರ್ಥಿಸುವ

ಪ್ರಜೋಪಕಾರಿ

ತಾಲ್ಲೂಕು ವರ್ತಮಾನಗಳು

ರಾಬರ್ಟ್‌ಸನ್ ಪೇಟೆ —ಕೋಲಾರು ಗೋಲ್ಡ್‌ಫೀಲ್ಡ್ ರಾಬರ್ಟ್‌ಸನ್ ಪೇಟೆಯಲ್ಲಿರುವ ಸಾಹುಕಾರ್ ಮೆ|| ಕೆ ನಾಗಪ್ಪ ನಾಯ್ಡುರವರು, ಮೆ|| ವೆಂಕಟೇಶ ಶೆಟ್ಟಿಯವರು, ಮೆ|| ಜಿ ಎಸ್ ತಿಮ್ಮರಾಯಶೆಟ್ರು, ಮೆ|| ಎಂ ಭೀಷ್ಮಕಾಲು ನಾಯ್ಡುರವರು ಈ ಮಹನೀಯರೆಲ್ಲಾ ಸೇರಿ ಕಳೆದ ಭಾನುವಾರ ದಿನ ಅನಾಥರಿಗಳಾಗಿಯೂ ಪರದೇಶಿಗಳಾಗಿಯೂ ಇರತಕ್ಕ ೩,೦೦೦ ಬಡಜನರಿಗೆ ಬೆಳಗ್ಗೆ ೧೦|| ಘಂಟೆ ಲಾಗಾಯ್ತು ಸಾಯಂಕಾಲ ೫|| ಘಂಟೆ ವರಿವಿಗೂ ತೃಪ್ತಿಕರವಾಗಿಯೂ ಸಂತೋಷಕರವಾಗಿಯೂ ಎರಡು ಟಾಂಟಾಂ ಗಳ ಮೂಲಕ ಕ್ಯಾಂಪುಗಳಿಗೆಲ್ಲಾ ತಿಳಿಯಪಡಿಸಿ, ಬಂದವರಿಗೆಲ್ಲಾ ಮೇಲ್ಕಂಡ ಯಜಮಾನರೇ ಮುಂತಾದವರು ಖುದ್ದು ನಿಂತು ಅನಾಥರಿಗಳ ಕ್ಷುದ್ಬಾಧೆಯನ್ನು ಪರಿಹರಿಸಿ ಸಂತೋಷ ಪಡಿಸಿದರು ಮೇಲ್ಕಂಡ ಮಹನೀಯರು ಇಂಥಾ ಉದಾರ ಗುಣವನ್ನನುಸರಿಸಿ ದೊಡ್ಡ ದೊಡ್ಡವರಿಗೆ ಅಂದರೆ ಸಾಹುಕಾರರಾಗಿರತಕ್ಕ ಭಾಗ್ಯವಂತರಿಗೆ ಮಾತ್ರ ಭಕ್ಷ್ಯಾದಿಗಳಿಂದ ಔತಣವನ್ನು ಮಾಡಿ ಬಹುಮಾನವನ್ನು ಸಂಪಾದಿಸಿಕೊಳ್ಳಬೇಕೆಂಬ ಲೌಕಿಕವಾದ ಆಶೆಯನ್ನು ಪರಿಪೂರ್ಣವಾಗಿ ತ್ಯಜಿಸಿ ಕ್ಷುದ್ಬಾಧೆಯಿಂದ ಪೀಡಿತರಾಗಿರುವವರಿಗೆ ಮಾತ್ರ ಅನ್ನದಾನವನ್ನು ಮಾಡಿದ್ದರಿಂದ ಸರ್ವ ಜನಗಳಿಗೂ ಸಂತೋಷಕರವಾಗಿರುತ್ತದೆ ಈ ಪರೋಪಕಾರಿಗಳು ಆಗಾಗ್ಗೆ ಇಂಥಾ ಅನ್ನದಾನವನ್ನು ಮಾಡಿ ಶ್ರೇಯಸ್ಸನ್ನು ಹೊಂದಲು ಸ್ವಲ್ಪವೂ ಸಂದೇಹವಿಲ್ಲೆಂದು ನಂಬಿದೆ

ಹೇರೂರು —ಶ್ರೀಮಂಜುನಾಥ ಅನಾಥಾಲಯದ ವಾರ್ಷಿಕೋತ್ಸವವು ತಾ ೨೨ ರಲ್ಲಿ ನಡೆಯಿತು ಆಲಯದವರು ಪ್ರಾಪ್ತರಾಗಿದ್ದ ಮಹನೀಯರೊಂದಿಗೆ ಗ್ರಾಮ ಭಜನೆಯನ್ನು ಮಾಡಿಕೊಂಡು ಬಂದು ಮೂಲದೇವರಿಗೆ ಮಂಗಳಾರತಿ ಮುಂತಾದ್ದನ್ನು ನಡೆಸಿದರು ಸರ್ವರೂ ಭೋಜನಾದಿಗಳಿಂದ ತೃಪ್ತಿ ಹೊಂದಿದರು ಎ ವಿ ಸ್ಕೂಲ್ ಕಟ್ಟಡದಲ್ಲಿ ಸಾಯಂಕಾಲ ೪ ಘಂಟೆಗೆ ಸಭೆಯು ಸೇರಿತು ಕಡೂರು ಅಮಲ್ದಾರ್ರವರು ಅಗ್ರಾಸನವನ್ನು ವಹಿಸಲು ಸರ್ಕಾರಿ ಕೆಲಸದ ನಿಮಿತ್ತ ತಮ್ಮ ಅನಾನುಕೂಲಗಳನ್ನು ಸಭೆಯಲ್ಲಿ ತಿಳಿಸಿ ಅಗ್ರಾಸನವನ್ನು ಮ|| ತಂಗಲಿ ನರಸಿಂಹಯ್ಯಂಗಾರ್ಯರಿಗೆ ಸಭೆಯವರ ಅನುಮೋದನಂತೆ ವಹಿಸಿ ತೆರಳಿದರು ಆಲಯದ ವಾರ್ಷಿಕ ರಿಪೋರ್ಟನ್ನು ಆಡಿಟರಾದ ಮ|| ಎಂ ಟಿ ಶೇಷಾದ್ರಿ ಅಯ್ಯಂಗಾರ್ರವರು ಓದಿ ಸಭಿಕರಿಗೆ ತಿಳಿಸಿದರು ಮ|| ಎಚ್ ಸಂಯಮನಾರಣಪ್ಪನವರು ದರ್ಮವೆಂಬ ವಿಷಯವಾಗಿ ಉಪನ್ಯಾಸ ಮಾಡಿದರು ಮ|| ಎಂ ಟಿ ವಲ್ಲಭಯ್ಯಂಗಾರ್ರು ವ್ಯವಹಾರ ವಿಚಾರದಲ್ಲಿರುವ ಗುಣದೋಷಗಳನ್ನು ಒಂದು ಸಂಭಾಷಣೆಯ ಮೂಲಕ ಆಡಿಸಿ ತೋರಿಸಿದರು ಆ ಮೇಲೆ ಅಗ್ರಾಸೀನರು ಹಿತೋಕ್ತಿಗಳನ್ನು ಅನಾಥ ಬಾಲಕರಿಗೆ ತಿಳಿಸುವವರ ಮೂಲಕ ತಮ್ಮ ಅಭಿಪ್ರಾಯವನ್ನು ತಿಳಿಸಿದರು ಅನಂತರ ಗಂಧ, ಪುಷ್ಪ ತಾಂಬೂಲಾದಿಗಳು ಸಭಾಧ್ಯಕ್ಷರಿಗೂ ಸಭಿಕರಿಗೂ ಹಂಚಲ್ಪಟ್ಟವು ಸಭಿಕರು ಈ ಕಾರ್ಯವು ಶಾಶ್ವತವಾಗಿ ನಡೆಯಲೆಂದು ಭಗವಂತನನ್ನು ಪ್ರಾರ್ಥಿಸಿ ತೆರಳಿದರು

ಚಿಕ್ಕಮಗಳೂರು —ಚೀಫ್ ಕೋರ್ಟ್ ಜಡ್ಜರಾದ ಮ|| ಇಸ್ಮಾಯಿಲ್‌ರವರು ಕಳೆದ ವಾರ ಇಲ್ಲಿಗೆ ಬಂದು ಮುನ್ಸಿಫ್ ಕೋರ್ಟು ಸೆಷನ್ ಕೋರ್ಟುಗಳನ್ನು ತನಿಖಿ ಮಾಡಿಕೊಂಡು ಹೋದರು —ಬಿಸಿಲು ದಿನದಿನ ಹೆಚ್ಚುತ್ತಲಿದೆ ಒಂದೆರಡು ದಿನಗಳ ವರೆಗೆ ಮೋಡವಾಡುತ್ತಲೂ ಸಾಯಂಕಾಲಗಳಲ್ಲಿ ಮಿಂಚುತ್ತಲೂ ಇದ್ದದ್ದು ಈಗ ತಾಮಸವಾಗಿದೆ —ಇಲ್ಲಿನ ಮುನ್ಸಿಪಲ್ ಕಾನ್ಸ್‌ಟೇಬಲ್‌ನ ಬಳಿ ನೀರು ತುಂಬುವುದಕ್ಕಾಗಿ ಇಟ್ಟಿದ್ದ ಹಿತ್ತಾಳೆ ಕೊಡವನ್ನು ಯಾರೋ ನಡುಹಗಲಲ್ಲಿ ಹೊತ್ತುಕೊಂಡು ಹೋದರು ಈ ವಿಷಯವನ್ನು ಅದೇ ದಿನ ಅಂದರೆ ಫೆಬ್ರವರಿ ತಾ ೧೭ ರಲ್ಲಿ ಪೋಲೀಸಿಗೆ ತಿಳಿಸಿ ಗುಮಾನಿ ಆಸಾಮಿಗಳನ್ನು ತಿಳಿಸಿದರು ವಿಚಾರಿಸುವುದಾಗಿಯೂ ತರದೂದುಮಾಡುವುದಾಗಿಯೂ ಸತ್ಯವೂ ಹೇಳುವರೇ ಹೊರತು ಈ ವರೆಗೂ ಯಾವ ಪ್ರಯತ್ನವೂ ಮಾಡಿದ್ದು ಕಾಣುವುದಿಲ್ಲ ದಿನಸರಿ ಪೋಲೀಸ್ ಸ್ಟೇಷನ್‌ಗೆ ತಿರುಗಿ ತಿರುಗಿ ಸಾಕಾಗಿದೆ ಇದು ಕೊಡ ಹೋದದ್ದಕ್ಕೆ ಪೋಲೀಸರಿಗೆ ಸಲ್ಲಬೇಕಾದ ಬಕ್ಷೀಸೋ? ಈಚೆಗೆ ಫೆಬ್ರವರಿ ತಾ ೨೪ ರಲ್ಲಿ ಅದೇ ಕಾನ್ಸ್‌ಟೇಬಲ್‌ನ ಗೋಡೆಯನ್ನು ಹತ್ತಿ ಒಳಕ್ಕೆ ಧುಮುಕಿಬಂದವನನ್ನು ಅಟ್ಟಿಕೊಂಡು ಹೋಗಿ ಹಿಡಿದು ಪೋಲೀಸಿಗೆ ಒಪ್ಪಿಸಿದರು ವಿಚಾರಿಸುತ್ತೇವೆಂದು ಹೇಳಿ ಆಸಾಮಿಯನ್ನು ಮನೆಗೆ ಬಿಟ್ಟುಬಿಟ್ಟರು ತಿರುಗಿ ಹೋಗಿ ಕೇಳಿದ್ದಕ್ಕೆ ಗೋಡೆಹತ್ತಿ ಬಂದದ್ದೇನೂ ದೊಡ್ಡ ಅಪರಾಧವಲ್ಲ ಅವನ ಕೈಯಲ್ಲಿ ಮಾಲಿಲ್ಲದೆ ನಾವು ಅವನನ್ನು ಏನೂ ಮಾಡಲಿಕ್ಕಾಗುವುದಿಲ್ಲ ಎಂದು ಸಮಾಧಾನ ಹೇಳುವರು ಸಾಹೇಬರ ಬಂಗಲೆಯ ವಿಷಯದಲ್ಲಿ ಇಷ್ಟು ಅಶ್ರದ್ಧೆಯಾದರೆ ಬಾಕಿಯವರ ಗತಿಯೇನು?

ದೊಡ್ಡಬಳ್ಳಾಪುರ —ಇಲ್ಲಿ ಬಿಸಲು ಹೆಚ್ಚಾಗಿದ್ದರೂ ತಂಪಾದ ಗಾಳಿಯೂ ವಿಸ್ತಾರ ಹವ ಅನುಕೂಲವಾಗಿದೆ ರಾಗಿ ರೂಪಾಯಿಗೆ ೧೬ ೧೭ ಸೇರು, ಅವರೆ ತೊಗರಿ ೧೨ ೧೧ ಸೇರು ಮಾರುತ್ತಾ ಇದೆ – ಆಕ್ಟಿಂಗ್ ಅಮಲ್ದಾರ್ ಮ|| ವೆಂಕಟೇಶಯ್ಯರು ಹೊರಟು ಹೋದರು ಕಾಯಂ ಅಮಲ್ದಾರ್ ಮೆ|| ಕೃಷ್ಣೇ ಅರಸಿನವರು ಬಂದು ತಾಲ್ಲೂಕ್ ಕೆಲಸಗಳನ್ನು ಬಹಳ ಮುತುವರ್ಜಿಯಿಂದ ನೋಡುತ್ತಿದ್ದಾರೆ —ಎಚ್ ಎನ್ ರಾಮುಜಿಯವರ ಕುದುರೆ ಸರ್ಕಸ್ ಆಟದವರು ಅರಳೇಪೇಟೆ ಬಸವೇಶ್ವರನ ದೇವಸ್ಥಾನದಲ್ಲಿ ಮೂರು ರಾತ್ರಿಗಳ ಆಟಗಳನ್ನು ಆಡಿ ಒಳವನಹಳ್ಳಿ ಜಾತ್ರೆಗೆ ಹೊರಟು ಹೋದರು —ರಥಸಪ್ತಮಿ ದಿವಸ ಸ್ನಾನಾರ್ಥವಾಗಿ ದೇವನಹಳ್ಳಿ ತಾ|| ದಿಬ್ಬಗಿರಿಬೆಟ್ಟಕ್ಕೆ ಹೋಗಿದ್ದ ದಾಸಪ್ಪನವರ ಮಗ ವಿದ್ಯಾವಂತನೂ ಗುಣಾಢ್ಯನೂ ಆದ ರಂಗನಾಥಯ್ಯನೆಂಬ ಸುಮಾರು ೨೨ ವರುಷದವನು ಬೆಟ್ಟದ ಮೇಲಿದ್ದ ದೋಣೆಯಲ್ಲಿ ಕಾಲು ಜಾರಿ ಬಿದ್ದು ಮೃತಿಯನ್ನೈದಿದನು —ಇಲ್ಲಿನ ಆಸ್ಪತ್ರೆ ಮಿಡ್ ವೈಫ್ ವೆಂಕಟಮ್ಮನವರ ವಿಷಯದಲ್ಲಿ ಸೀನಿಯರ ಸರ್ಜನ್ ಸಾಹೇಬರವರಿಗೆ ಹಿಂದೆಯೂ ಈಗಲೂ ಸಹ ಅನೇಕರು ದೂರುಗಳನ್ನು ಹಾಕಿ ಅರ್ಜಿ ರವಾನಿಸಿದರೂ ಕೂಡ ಇದುವರೆಗೂ ಅವರು ವಿಚಾರಿಸದೇ ಇರುವದು ಯಾಕೋ ತಿಳಿಯಲಿಲ್ಲ ಈಗಲಾದರೂ ವಿಚಾರಣೆಯಿಂದ ಸರಿಯಾದವರನ್ನು ಇಲ್ಲಿಗೆ ಕಳುಹಿಸಬೇಕಾಗಿ ಬಹು ಜನರು ಪ್ರಾರ್ಥಿಸುವದಾಗಿದೆ —ತಾ ೨೪ನೇ ಗುರುವಾರ ಇಲ್ಲಿನ ಶ್ರೀವೆಂಕಟರಮಣಸ್ವಾಮಿ ರಥೋತ್ಸವವು ಮಾಮೂಲಿನಂತೆ ಅತಿ ವಿಜೃಂಭಣೆಯಿಂದ ನೆರವೇರಿತು

ಪರಮಸಾಗರ ತಾ ೨೦ನೆ ಭಾನುವಾರ ಬೆಳಗ್ಗೆ ನಮ್ಮ ಸಂಸ್ಥಾನದ ದಿವಾನ್ ಸಾಹೇಬರವರಾದ ಮೆ|| ಟಿ ಆನಂದರಾಯರವರ ಸವಾರಿಯು ದಾವಣಗೆರೆಯಿಂದ ಮೋಟಾರ್ ಬಂಡಿಯಲ್ಲಿ ಇಲ್ಲಿಗೆ ಬಿಜಯಮಾಡಿಸೋಣವಾಯಿತು ಈ ಊರಲ್ಲಿರತಕ್ಕ ಬ್ರಹ್ಮಸಮಾಜದ ವೈದಿಕರು ಪಟೇಲರಾದ ವೇ|| ಸುಬ್ಬಾಶಾಸ್ತ್ರಿಗಳು, ಜೋಯಿಸ ಭೀಮಣ್ಣನವರು, ತಮ್ಮಯ್ಯ ಶಾಸ್ತ್ರಿಗಳು, ಇವರುಗಳಿಂದ ಮಂತ್ರ ಪುರಸ್ಸರವಾದ ಆಶೀರ್ವಾದವನ್ನು ದಿವಾನ್‌ರವರು ಸ್ವೀಕರಿಸಿ ಸ್ವಲ್ಪ ಹೊತ್ತು ಮೋಟಾರ್ ಗಾಡಿಯನ್ನು ನಿಲ್ಲಿಸಿ ಇಲ್ಲಿನ ರೈತಸಮಾಜದವರ ಯೋಗಕ್ಷೇಮಗಳನ್ನು ವಿಚಾರಿಸಿ ಈ ಸ್ಥಳಕ್ಕೆ ಮುಖ್ಯಕಾರಣವಾಗಿರುವ ಅನಾರೋಗ್ಯವಾದ ಹವಾಕ್ಕೆ ಯಾವಾಗ್ಯೂ ಜನಗಳು ಕಾಯಿಲೆಯನ್ನೇ ಇರುವದರಿಂದ ಇದಕ್ಕಾಗಿ ಒಂದು ಆಸ್ಪತ್ರೆ ಆಗಲಿ ಅಥವಾ ಒಂದು ನೇಟಿವ್ ವೈದ್ಯಶಾಲೆಯಾಗಲಿ ಕ್ಷಿಪ್ರದಲ್ಲೇ ಏರ್ಪಾಡುಮಾಡಿಸಿಕೊಡಬೇಕೆಂದು ಇಲ್ಲಿಯ ಯೂನಿಯನ್ ಮೆಂಬರುಗಳೇ ಮುಂತಾದವರು ಕೇಳಿಕೊಂಡದ್ದಕ್ಕೆ ಕ್ಷಿಪ್ರದಲ್ಲಿಯೇ ಹುಕುಂ ದಯಪಾಲಿಸುವದಾಗಿ ದಿವಾನ್‌ರವರು ಅಪ್ಪಣೆ ಕೊಡಿಸಿದರು ಅವರ ಈ ವಾಕ್ಕು ಬೇಗನೆ ಸಾಫಲ್ಯವೊಂದೀತೆಂದು ನಿರೀಕ್ಷಿಸುತ್ತೇವೆ ಪರಂತು ಇಲ್ಲಿಯ ಸ್ಕೂಲ್ ಬಾಲಕರು ಹೇಳಿದ ಹಾಡುಗಳಿಂದ ಪರಮಾನಂದ ಭರಿತರಾಗಿ ಬಾಲಕರು ಮಾಡಿದ ಮರ್ಯಾದೆಯನ್ನು ಸ್ವೀಕರಿಸಿದರು ಪ್ರಜೆಗಳು ಹೇಳಿಕೊಳ್ಳತಕ್ಕ ಪ್ರತಿ ಒಂದು ಅಹವಾಲನ್ನೂ ಇವರು ಚನ್ನಾಗಿ ವಿಚಾರಿಸಿ ಸದುತ್ತರವನ್ನು ಇತ್ತು ವಾಪಸ್ ಜಗಳೂರು ಇನ್ಸ್‌ಪೆಕ್ಷನ್ ಮಾಡಿಕೊಂಡು ಮಧ್ಯಾಹ್ನ ೧೦ ೧೧ ಘಂಟೆಗೆ ವಿಶ್ರಾಂತಿಗೂ ಭೋಜನಕ್ಕೆ ದಯಮಾಡಿ ಬಳಿಕ ಎಲ್ಲಾ ವಿಷಯಗಳನ್ನೂ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರಾದ ಮೆ|| ತಂಗ್ಯಯ್ಯಶೆಟ್ಟಿಯವರಿಂದ ತಿಳಿದುಕೊಂಡು ಸಾಯಂಕಾಲ ೫ ಘಂಟೆಗೆ ಚಿತ್ರದುರ್ಗಕ್ಕೆ ತೆರಳಿದರು ಈಗಿನ ಕಾಲದಲ್ಲಿ ಇಂಥಾ ದೊಡ್ಡ ಪದವಿಯಲ್ಲಿದ್ದಾಗ್ಯೂ ಇವರು ಸ್ವಲ್ಪವೂ ಬೇಜಾರು ಇಲ್ಲದೆ ಯಾರ್ಯಾರು ಏನೇನು ಅಹವಾಲು ಹೇಳಿಕೊಂಡಾಗ್ಯೂ ಪ್ರತಿ ಒಂದು ಅಂಶವನ್ನೂ ಚೆನ್ನಾಗಿ ಗ್ರಹಿಸಿ ಪ್ರತಿ ಒಂದು ತಾಲ್ಲೂಕನ್ನೂ ಸಂಚರಿಸಿ, ಅಲ್ಲಿಯ ರೈತರುಗಳ ಕಷ್ಟ ಸೌಖ್ಯಗಳನ್ನು ವಿಚಾರಮಾಡಿ ಸದುತ್ತರವನ್ನಿತ್ತು ಬರುವುದು ಬಹು ಸ್ತೋತ್ರಾರ್ಹವಾಗಿದೆ.

ಮೆ|| ಭಾಭಾ ಸಾಹೇಬರವರ ಮೆಮೋರಿಯಲ್ ಫಂಡು

ಮೂರನೆಯ ಚಂದಾ ಪಟ್ಟಿಯು

ಮೈಸೂರು ಚೀಫ್ ಇಂಜನಿಯರ್ ಮೆ|| ಎಂ ವಿಶ್ವೇಶ್ವರಯ್ಯನವರು ರೂ ೫೦ ಬೆಂಗಳೂರು ಮೆ|| ಡಿ ಕೆ ದಾರಾಷಾಯವರು ರೂ ೪೦, ಬೇಲೂರು ಮೆ|| ಎಂ ಆರ್ ನೀಲಕಂಠರಾಯರು ರೂ ೨೦ ವ ಳವಳ್ಳಿ ಮೆ|| ಎ ನಂಜುಂಡಶಾಸ್ತ್ರಿಗಳು ರೂ ೧೯ ೧೩ ಮೆ|| ಗಳಾದ ಬಕ್ಕಂಬಾಡಿ ಬಿ ವೆಂಕಟರಾಮಯ್ಯ, ಬೆಂಗಳೂರು ಟಿ ಅಬ್ದುಲ್ ಕರೀಂ ಸಾಹೆಬ್, ಶ್ರೀರಂಗಪಟ್ಟಣದ ಡಿ ಎಂ ಜ್ಞಾನಪ್ರಿಯಂ ಪಿಳ್ಳೆ, ಬಿದರಗುಪ್ಪೆ ಸೂರ್ಯನಾರಣಪ, ಕ್ಲೋಸ್ ಪೇಟೆ ಅಬ್ದುಲ್ ಷಾವರ್—ತಲಾ ರೂ ೧೦ ನೋಸ್ಕ್ವೋಟೆ ಮೆ|| ಎಂ ಜಿ ರಾಮಯ್ಯಂಗಾರ್ರು ರೂ ೧೫-೧೯ ಬೆಂಗಳೂರು ಮೆ|| ಜಂಬಾಬ್ರ [illegible] ರೂ ೮ ೧೧ ಸಾಲಿಗ್ರಾಮದ ಮೆ|| ಎಸ್ ಕೃಷ್ಣರಾಯರು ರೂ ೭ ಮೆ|| ಎಚ್ ಸುಬ್ಬರಾಯರು ರೂ ೬ ೪ ರಾಮಸಮುದ್ರದ ಮೆ|| ಸುಬ್ರಹ್ಮಣ್ಯಂ ರೂ ೬ ಮೆ|| ಗಳಾದ ಪಿಂಗಾಲ್ ವೆಂಕಟಸತ್ಯೆಯು ಗೌಡಗೆರೆ ವೆ, ತಿಮ್ಮಪ್ಪಯ್ಯ, ಸೋಲೂರ ವೆಂಕಟರಾಮಯ್ಯ ಚಿಕ್ಕಮಗಳೂರು ಎ ಹಸನಲ್ಲಿ ಸಾಹೆಬ್, ಚಿಕ್ಕಬಳ್ಳಾಪುರದ [illegible] ವೆಂಕಟ ತಲಾ ರೂ ೫ ಮಳಿಯಾರ್ ಮೆ|| [illegible] ರಾಮಯ್ಯ ರೂ ೧೧೦ [illegible] ಪಟ್ಟಣದ ಮೆ|| [illegible] ರೂ ೪ ೮ ವಡಿಗೇನಹಳ್ಳಿ ಮೆ ಆರ್ ಶ್ರೀನಿವಾಸರಾವ್ ರೂ [illegible] ಸಾಲಿಗ್ರಾಮದ ಮೆ ರಾಮಾನುಜಯ್ಯಂಗಾರ್ ರೂ ೩ ೧೬ ಕಂಪಗುಡಿ ಮೆ ಬಿ ನಾಗಾಭಟ್ಟರು, ರೂ ೩ [illegible] ಮೆ ಗಳಾದ ಕೋಟರ್ ಕೆ ಸುಬ್ರಹ್ಮಣ್ಯಶಾಸ್ತ್ರಿ [illegible] ಸಪ್ತರಾಜಪಂಡಿತ್ ಸೋಮನ ಹಳ್ಳಿ ಆರ್ ವೆಂಕೋಬರಾವ ಗೂಡೂರು ಶ್ರೀನಿವಾಸಾಚಾರ್, ಕೆವಸೋಗೆ ಚಿಕ್ಕಮುದ್ದಯ್ಯ ತಲಾ ರೂ ೨ ಮೆ|| ಗಳಾದ ಚಂದ್ರಪಟ್ಟದ [illegible] ಚಿಕ್ಕೋಳದು ವೆಂಕಟರಾಮಯ್ಯ ತಲಕಾಡು ಗೋಪಾಲದೇಶಿಕಾಚಾರ್ ಹಗರದೇವನಕೋಟೆ ಲಿಂಗಭಟ್ಟರು [illegible]

ಸಿ ಕೃಷ್ಣರಾವ್, ಸೆಕ್ರೆಟರಿ

೬ ಎಂ ಕಮಿಟಿ, ಬೆಂಗಳೂರು ಸಿಟಿ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ತಾ ೨೩ನೇ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನ್ನರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಪಟ್ಟಿಯ ವಿಷಯಗಳನ್ನು ನಡಿಸಿದರು ಕಳೆದ ಜನವರಿ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳು ಓದಲ್ಪಟ್ಟವು ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ [illegible] ಖರ್ಚಾಯಿತು ಮತ್ತು ಆ ತಿಂಗಳಲ್ಲಿ ಜನನ [illegible] ಮರಣ—ಪ್ಲೇಗ್ [illegible] ಜ್ವರ [illegible] ಇತರ ಕಾರಣಗಳು [illegible] ಒಟ್ಟು [illegible]

ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆ ಮಾಡಿದ ಆಡಿಟರವರು ಲೆಕ್ಕಗಳು ಸರಿಯಾಗಿರುತ್ತವೆಂದು ರಿಪೋರ್ಟು ಮಾಡಿದ್ದರು ಆದರೆ ಬಾಕಿವಸೂಲಾತಿ ಹುಟ್ಟುವಳಿಯನ್ನು ಹಿಂದಿನಂತೆ ಇರುತ್ತಾರೆಂದೂ, ಆದರ ಸಿಬ್ಬಂದಿ ಖರ್ಚು ಆ ಹುಟ್ಟುವಳಿಗೆ ಬೀಳುತ್ತೆಂದೂ, ಇದಕ್ಕಿಂತ ಆ ಸಿಬ್ಬಂದಿಯನ್ನು ಖಾಯಂ ಮಾಡಿ ಹುಟ್ಟುವಳಿಯನ್ನು ಹೆಚ್ಚಿಸಲ್ಪಟ್ಟು ಇಡದೆ ಮ್ಯುನಿಸಿಪಲ್ ವರಮಾನವಾಗಿ ಎಣಿಸಿದಲ್ಲಿ ಲೆಕ್ಕಗಳು ಸರಿಯಾದೀತೆಂದೂ ಸೂಚಿಸಿದ್ದರು ಈ ವಿಚಾರವನ್ನು ಮ್ಯಾನೇಜಿಂಗ್ ಕಮಿಟಿಯವರು ಚರ್ಚಿಸಬೇಕೆಂದು ಮೆಂಬರುಗಳು ಇಷ್ಟಾರ್ಥ ಮಾಡಿರುತ್ತಾರೆ

ಪಟ್ಟಣದಲ್ಲಿ ಮನೆ ಕಟ್ಟದೆ ನಿವೇಶನಗಳನ್ನು ಖಾಲೀ ಬಿಟ್ಟುಕೊಂಡಿರತಕ್ಕವರ [illegible] ಅವರುಗಳ ಗೋಡೆ ಹಾಕಿಸಬೇಕೆಂದೂ, ಸುತ್ತುಮುತ್ತಿನ ಜನರು ಅಂಥಾ ನಿವೇಶನಗಳಲ್ಲಿ ಗಲೀಜು ಮಾಡಿ ಕೆಡಿಸದಂತೆ ಏರ್ಪಾಡು ಮಾಡಬೇಕೆಂತಲೂ ಮೆ|| ವೆಂಕಟಕೃಷ್ಣಯ್ಯನವರು ಸೂಚಿಸಿದ್ದನ್ನು ಮೆಂಬರುಗಳು ಆ ರೀತಿ ಮಾಡಿಸಬೇಕೆಂದು ಒಪ್ಪಿಕೊಂಡರು

ಖಾಲಿ ಬಿಟ್ಟುಕೊಂಡಿರುವ ಮನೆಗಳ ನಿವೇಶನದ ಮೇಲೆ ಜಾಸ್ತಿ ದರದ ಕಂದಾಯವನ್ನು ದಾಖಿಲ್ ಮಾಡುವ ವಿಷಯದಲ್ಲಿ ಮೆ|| ರಂಗಯ್ಯಂಗಾರ್ರವರು ಇನ್ನೊಂದು ತಿಂಗಳ ನಿಂಟುಗಿನಲ್ಲಿ ಚರ್ಚೆಗೆ ತರುತ್ತೇವೆಂದು ಸೂಚಿಸಿರುತ್ತಾರೆ

ಪಟ್ಟಣದ ಅನೇಕ ಮನೆಗಳಲ್ಲಿ ಇರುವ ಪಾಯಖಾನೆ ಬಾವಿಗಳನ್ನು ಮುಚ್ಚಿಸಬೇಕೆಂದೂ ಕಚರಾ ಸಾಗುವುದಕ್ಕೆ ಗಲ್ಲಿ ಇಲ್ಲದ ಸಂದರ್ಭಗಳನ್ನು ಹೆಲ್ತ್ ಆಫೀಸರವರು ಟ್ರಸ್ಟ್ ಬೋರ್ಡಿಗೆ ತಿಳಿಸಿದಲ್ಲಿ ಅವರು ಮಾಡಿಸಿಕೊಡುತ್ತಾರೆಂದೂ ತೀರ್ಮಾನವಾಯಿತು

ಆಸ್ಪತ್ರೆಯ ದರೋಗನವರ ಅರ್ಜಿಯ ಪ್ರಕಾರ ಅವರಿಗೆ ತಲಬನ್ನು ಒಡ್ಡಿ ಮಾಡಿಕೊಡಬೇಕೆಂದು ಮೆಂಬರುಗಳು ಒಪ್ಪಿಕೊಂಡರು ಪಶ್ಚಿಮದ ಮಾಸ್ಟರ್ ಮಾದಪ್ಪನ ವಿಷಯದಲ್ಲಿ ಸ್ಕೂಲ್ ಕಮಿಟಿ ಪ್ರೆಸಿಡೆಂಟರು ಮಾಡಿರುವ ತೀರ್ಮಾನವೇ ಸರಿಯಾಗಿದೆ ಎಂದು ಸಮ್ಮತಿಸಲಾಯಿತು

ದೊಡ್ಡ ಸೂಳೆಗೇರಿಯಲ್ಲಿ ಮೂರು ಮಂದಿ ತಮ್ಮ ಮನೆಗಳಿಗೆ ಮಾಂಸದ ಅಂಗಡಿಯನ್ನು ಇಟ್ಟುಕೊಂಡಿದ್ದಾರೆಂದೂ ಅದಕ್ಕೆ ಪ್ರತಿಯಾಗಿ ಅಲ್ಲಿ ಮ್ಯುನಿಸಿಪಾಲಿಟಿಯಿಂದ ಬೀಫ್ ಮಾರ್ಕೆಟ್ ಕಟ್ಟದವನ್ನು ಕಟ್ಟಿಸಿಕೊಡುವುದು ಒಳ್ಳೆಯದೆಂದೂ, ಹೆಲ್ತ್ ಆಫೀಸರವರು ಸೂಚಿಸಿದರು ಈ ವಿಚಾರವನ್ನು ಹೆಲ್ತ್ ಕಮಿಟಿಯವರು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕೌನ್ಸಿಲರುಗಳು ತೀರ್ಮಾನಿಸಿರುತ್ತಾರೆ

ಪಡುವಾರಹಳ್ಳಿಯಲ್ಲಿ ಒಂದು ದೊಡ್ಡಿಯನ್ನೂ ಒಂದು ಒಂಟಿ ಮೋರಿಯನ್ನೂ ಕಟ್ಟುವುದಕ್ಕೂ ಒಂದು ಬಾವಿಯನ್ನು ತೆಗೆಯುವುದಕ್ಕೂ [illegible] ಎಂದು ಮೆಂಬರುಗಳು ಒಪ್ಪಿಕೊಂಡಿರುತ್ತಾರೆ

ಜನನ ಮರಣಗಳ [illegible] ಕಲವು ಬದಲಾವಣೆಗಳನ್ನು ಮಾಡಬೇಕಾಗಿದೆ [illegible] ಆಫೀಸರವರು ಸೂಚಿಸಿದರು ಈ ವಿಷಯವನ್ನು ಮೊದಲು [illegible] ಎಂದು ಮೆ [illegible] ಆರ್ ವಿಚಾರ

ಟೌನ್ [illegible] ಸ್ಕೂಲ್ [illegible] ಮೋಟಾರ್ ಕಾರ್ ಈ ಮೊದಲ ಪದಗಳಿಗೆ ಸುಕರವಾಗಿ [illegible] ಮಾಡಬೇಕೆಂದು ಕೌನ್ಸಿಲರುಗಳು ಚರ್ಚೆ ಮಾಡಿದರು

[illegible] ಒಂದು ಮುನಿಸಿಪಲ್ ನಿವೇಶನವನ್ನು ಮ್ಯುನಿಸಿಪಾಲಿಟಿಯಿಂದ [illegible] ಪಡೆದುಕೊಳ್ಳಬೇಕೆಂದು ಅರ್ಜಿ ಬರೆದು ಕೊಟ್ಟಿದ್ದರು ಈ ವಿಚಾರವನ್ನು [illegible] ಮುಂದೆ ಇತ್ಯರ್ಥ ಮಾಡಬೇಕೆಂದು ಮೆಂಬರುಗಳು ತೀರ್ಮಾನಿಸಿದರು

ಆ ಗಡಿಗೆ ತೆರಿಗೆಯನ್ನು ಅಂಗಡಿ ಇಟ್ಟಿರುವವ [illegible] ಮನೆಯ ಮಾಲೀಕರಿಂದ ವಸೂಲು ಮಾಡಬೇಕೋ, ಈ ತೆರಿಗೆಯು ಶಾಸನಕ್ಕೆ ಅನುಸಾರವಾಗಿದೆಯೋ ಎಂಬೀ ವಿಚಾರಗಳನ್ನು ಇತ್ಯರ್ಥ ಮಾಡುವುದಕ್ಕೆ ಒಂದು ಸಬ್ ಕಮಿಟಿಯು ಏರ್ಪಾಡಾಯಿತು

ಟಿಬೆಟ್ಟಿನಲ್ಲಿ ಚೀನೀಯರ ಕಾರ್ಯಗಳು

ದಲಾಯಿ ಲಾಮಾ ಇವರು ಇಂಗ್ಲೀಷರ ಆಶ್ರಯಕ್ಕೆ ಬಂದದ್ದು

ಹಿಂದೆ ಲಾರ್ಡ್ ಕರ್ಜನ್ ಪ್ರಭುಗಳು ಹಿಂದೂಸ್ಥಾನದ ವೈಸ್‌ರಾಯಿ ಪದವಿಯಲ್ಲಿದ್ದಾಗ ಅವರು ಕರ್ನಲ್ ಯಂಗ್‌ಹಸ್ಬೆಂಡ್ ಎಂಬ ಸರದಾರರನ್ನು ಕೆಲವು ಸೈನ್ಯ ಸಹಿತ ಹಿಮಾಚಲ ಪರ್ವತದ ಉತ್ತರ ಪಾರ್ಶ್ವದಲ್ಲಿರುವ ಟಿಬೆಟ್ ರಾಜ್ಯಕ್ಕೆ ಕಳುಹಿಸಿ ಟಿಬೆಟ್ಟಿಗೂ ಹಿಂದೂಸ್ಥಾನಕ್ಕೂ ವ್ಯಾಪಾರ ಸಾಮಗ್ರಿಗಳು ಆಮದು ರಫ್ತಾಗುವಂತೆ ಏರ್ಪಾಡು ಮಾಡಿದರು ಟಿಬೆಟ್ ರಾಜ್ಯದ ಅಧಿಪತಿಯಾದ ದಲಾಯಿ ಲಾಮಾ ಇವರು ಆಗ್ಗೆ ಗಾಬರಿಗೊಂಡು ರಾಜಧಾನಿಯಾದ ಲಾಸಾ ನಗರವನ್ನು ಬಿಟ್ಟು ಇತರ ಕಡೆಗಳಲ್ಲಿ ಸಂಚಾರ ಹೋಗಿದ್ದರು ಟಿಬೆಟ್ ರಾಜ್ಯವು ಚೀನಾ ರಾಜ್ಯಕ್ಕೆ ಅಧೀನವಾದದ್ದೆಂದೂ ರಷ್ಯಾದವರಿಗೂ ಆ ರಾಜ್ಯದಲ್ಲಿ ಕೆಲವು ಸ್ವಾತಂತ್ರ್ಯಗಳಿರುವವೆಂದೂ ಆಗ ಗೊತ್ತಾಯಿತು ಕಲ್ಕತ್ತಾ ಪಟ್ಟಣದಲ್ಲಿ ಇಂಗ್ಲಿಷ್, ಚೀನಾ, ರಷ್ಯಾ ರಾಜ್ಯಗಳ ರಾಯಭಾರಿಗಳು ಸೇರಿ ಟಿಬೆಟ್ಟಿನ ವಿಚಾರವಾಗಿ ಒಂದು ಕರಾರನ್ನು ಮಾಡಿಕೊಂಡರು ಈ ಕರಾರಿನ ಪ್ರಕಾರ ಚೀನಾ ರಾಜ್ಯಕ್ಕೆ ಟಿಬೆಟ್ ದೇಶವು ಅಧೀನವಾಗಿರತಕ್ಕದ್ದೆಂದೂ, ರಷ್ಯಾ ಇಂಗ್ಲಿಷ್ ರಾಜ್ಯಗಳವರು ವ್ಯಾಪಾರ ಮುಂತಾದ ಸಾಮಾನ್ಯ ನಡವಳಿಕೆಗಳನ್ನು ನಡಿಸಬಹುದಲ್ಲದೆ ಅವರಲ್ಲಿ ಯಾರೂ ಆ ದೇಶದಲ್ಲಿ ಸ್ವಾಸ್ಥ್ಯವನ್ನು ಸಂಪಾದನೆ ಮಾಡಿಕೊಳ್ಳಕೂಡದೆಂದೂ ವಿಧಿಸಲ್ಪಟ್ಟಿತು ಈ ಕರಾರಿಗೆ ಮೇಲ್ಕಂಡ ಮೂರು ರಾಜ್ಯಗಳವರೂ ಒಪ್ಪಿ ಸಮ್ಮತಿ ರುಜುಗಳನ್ನು ಹಾಕಿರುತ್ತಾರೆ ಇವೆಲ್ಲಾ ಲಾರ್ಡ್ ಕರ್ಜನ್‌ರವರು ವೈಸ್‌ರಾಯಿ ಪದವಿಯಲ್ಲಿದ್ದಾಗ ನಡೆದಿತ್ತೆಂದು ವಾಚಕರಿಗೆ ಜ್ಞಾಪಕವಿರಬಹುದು

ಕಳೆದ ವಾರ ಟಿಬೆಟ್ ದೇಶದಲ್ಲಿ ಈಚೆಗೆ ಚೀಣೀ ಸೈನಿಕರ ಸಂಖ್ಯೆಯೂ ಅವರ ಹಾವಳಿಯೂ ಹೆಚ್ಚಾಗಿದೆ ಎಂದೂ, ರಾಜಧಾನಿಯಾದ ಲಾಸಾ ನಗರದಲ್ಲೂ ಸುತ್ತುಮುತ್ತಿನಲ್ಲೂ ಟಿಬೆಟ್ ಜನರು ತುಂಬಾ ಕಷ್ಟನಷ್ಟಗಳನ್ನನುಭವಿಸಿದಾಗ್ಯೂ ಆ ಸೈನಿಕರನ್ನು ನಿಗ್ರಹಿಸುವುದಕ್ಕೆ ಅಸಮರ್ಥರಾಗಿದಾರೆಂದೂ ತಿಳಿಸಿದ್ದೆವಷ್ಟೆ ಈಚೆಗೆ ಬಂದಿರುವ ತಂತೀ ವರ್ತಮಾನಗಳನ್ನು ನೋಡಲಾಗಿ ಚೀನೆಯವರು ಟಿಬೆಟ್ಟಿಗೆ ದಂಡೆತ್ತಿ ಬಂದಿರುವುದು ಸ್ಪಷ್ಟವಾಗುತ್ತದೆ ಚೀನಾ ರಾಜ್ಯದವರು ಜರ್ಮನಿ ದೇಶದ ಸೈನ್ಯ [illegible] ೫೦೦೦೦ ಚೀನಾ ಸೈನ್ಯವನ್ನು ಚಿಂಟು ವಾರ್ ಎಂಬ ಪ್ರಾಂತ್ಯದ ಮೂಲಕ ಟಿಬೆಟ್ಟಿಗೆ ಕಳುಹಿಸಿ ಕೊಟ್ಟರು ಚಿಂಟು ಎಂಬ ಚೀನಾ ಮದ್ದಿನ ಕಾರ್ಖಾನೆಗಳಲ್ಲಿ ೬೦೦೦ ಜನರು ರಾತ್ರಿ ಹಗಲೂ ಕೆಲಸ ಮಾಡಿ ಈ ದಂಡಿಗೆ ಅವಶ್ಯವಾದ ಪಿರಂಗಿ ಮದ್ದು ಗುಂಡು ಮುಂತಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಟ್ಟರು ಚೀನಾ ಗವರ್ನ್‌ಮೆಂಟಿನವರು ಜರ್ಮನಿಯ ಕಾರೀಗಾರರನ್ನು ಕರೆಸಿಕೊಂಡು ಜರ್ಮನಿ ಯಂತ್ರ ಮೊದಲಾದ ಮದ್ದುಗಳನ್ನು ತರಿಸಿ ಆ ಕಾರ್ಖಾನೆಗಳನ್ನು ನಡಿಸುತ್ತಿರುವಂತೆ ತಿಳಿದು ಬಂದಿದೆ ಈ ಸೈನಿಕರು ಟಿಬೆಟ್ಟಿಗೆ ಬರುವಲ್ಲಿ ಕೃತ್ಯವನ್ನು ತಡೆಯಲಾರದೆ ಬಹಳ ಕಷ್ಟಪಟ್ಟರು ಒಂದು ಸಂದರ್ಭದಲ್ಲಿ ಟಿಬೆಟ್ಟಿನವರು ಬಾಟಂಗ್ ಎಂಬ ಸ್ಥಳದ ಹತ್ತಿರ ಚೀನಾ ಸೈನಿಕರನ್ನು ಮುತ್ತಿಕೊಂಡು ೪೦೦ ಮಂದಿಯನ್ನು ಕೊಂದು ಹಾಕಿ, ಅವರ ಬಳಿ ಇದ್ದ ಕೆಲವು ಮದ್ದು ಗುಂಡುಗಳನ್ನು ಕಿತ್ತುಕೊಂಡರು

ಲಾಸಾ ಪಟ್ಟಣದಲ್ಲಿ ಚೀನಾ ರಾಜ್ಯ ಪ್ರತಿನಿಧಿಯಾದ ವೈಸ್‌ರಾಯಿಯೂ, ಇಬ್ಬರು ಅಂಬನ್ ಎಂಬ ಚೀನಾ ಅಧಿಕಾರಿಗಳೂ ಇರುತ್ತಾರೆ ಲಾಸಾ ಪಟ್ಟಣದಲ್ಲಿರುವ ಹಿರಿಯರ ಸಭೆಗೆ ಆಳ್ವಿಕೆಯ ಅಧಿಕಾರಗಳುಂಟು ಚೀನಾದವರು ಈ ಸಭೆಯ ಅಧಿಕಾರವನ್ನು ಕಿತ್ತುಕೊಂಡು ಸರ್ವ ಸ್ವಾತಂತ್ರ್ಯವನ್ನೂ ತಾವೇ ವಹಿಸಿಕೊಳ್ಳಬೇಕೆಂದು ಈಚೆಗೆ ಪ್ರಯತ್ನ ಪಟ್ಟರುವಂತೆ ಕಾಣುತ್ತದೆ ಟಿಬೆಟ್ಟಿನಲ್ಲಿ ಲಾಮಾ ಎಂಬುವರು ವೈದಿಕ ಗುರುಗಳಾಗಿದ್ದರೂ ಅವರೇ ಮುಖ್ಯ ಸ್ವಾಧಿಕಾರಿಯಾಗಿರುವರು ಈಗ ಈ ಪದವಿಯಲ್ಲಿರುವ ದಲಾಯಿ ಲಾಮಾರವರು ಚೀನೀ ಸೈನಿಕರ ಆಗುಹೋಗುಗಳನ್ನು ಕೇಳಿ, ತನಗೇನ ಕಷ್ಟ ಪ್ರಾಪ್ತವಾಗುವುದೋ ಎಂದು ಗಾಬರಿ ಪಟ್ಟು, ಮುಖ್ಯ ಪರಿವಾರ ಸಮೇತ ಲಾಸಾ ನಗರವನ್ನು ತ್ಯಜಿಸಿ ಇಂಗ್ಲಿಷರ ಆಶ್ರಯವನ್ನು ಹುಡುಕಿಕೊಂಡು ದಕ್ಷಿಣ ಮುಖವಾಗಿ ಬಂದುಬಿಟ್ಟರು ಇವರನ್ನು ತಡೆದು ಹಿಡಿಯಬೇಕೆಂದು ಚೀನಾ ಸೈನಿಕರು ಒಡನೆ ಬೆನ್ನಟ್ಟಿ ಬಂದರು ದಲಾಯಿ ಲಾಮಾರವರು ಗ್ಯಾಂಟ್ಸೆ ಪಟ್ಟಣ, ಸಿಕ್ಕಿಂ, [illegible] ಈ ಸ್ಥಳಗಳ ಮೂಲಕ ಕಲ್ಕತ್ತಾ ಪಟ್ಟಣಕ್ಕೆ ಬಂದು ಸೇರುವವರಾಗಿದಾರೆ ಅವರ ಸಂಗಡ ೬೦ ಮಂದಿ ಸೇವಕರೂ, ೩೦೦ ಸೈನಿಕರೂ ಇರುವಂತೆ ತಿಳಿಯುವುದು ಸಿಕ್ಕಿಂ ರಾಜ್ಯದ ರೆಸಿಡೆಂಟರವರು ದಲಾಯಿ ಲಾಮಾ ಯವರನ್ನು ಎದುರುಗೊಂಡು ಅವರಿಗೆ ಬೇಕಾದ ಸಹಾಯವನ್ನು ಮಾಡಿ ಕರೆದು ತಂದರು [illegible] ರೂ [illegible] ಗುರುಗಳಿಗೆ [illegible] ರುವ ಕಷ್ಟವನ್ನು ನೋಡಿ [illegible] ದಲಾಯಿ ಲಾಮಾ ಕಲ್ಕತ್ತೆಗೆ ಬಂದು [illegible] ನಗರವನ್ನು ತಲುಪಿ ಅಲ್ಲಿ [illegible]

ಚೀನಾ ರಾಜಧಾನಿ [illegible] ಪಟ್ಟದಿಂದ ಇಳಿಸಲ್ಪಟ್ಟಿರುವರೆಂದೂ [illegible] ವರು ಲಾಸಾ ಪಟ್ಟಣದ [illegible] ಹೋಗಿರುವುದಾಗಿ [illegible] ದವರಿಗೆ [illegible] ಕೆಲವು ಸ್ವಾತಂತ್ರ್ಯಗಳ [illegible] ಈ ಸ್ಥಳಗಳನ್ನು ಪ್ರಕಟಿಸಿ [illegible] ಸ್ವಾಸ್ಥ್ಯಗಳನ್ನು ನಡೆಸುತ್ತ [illegible] ಎಂದು ತಿಳಿಸಿದೆ

ಇಂಡಿಯಾ ಗವರ್ನ್‌ಮೆಂಟ್‌ರವರು ಇಂಗ್ಲಿಷ್ ಸಂಬಳವಿಲ್ಲದೆ [illegible] ವಾರ್ತೆಯನ್ನು ಈ ವಿಚಾರವಾಗಿ ಕಳ್ಸಿದ್ದಾರೆ [illegible] ಈ ರೀತಿ ಆಗುವುದಕ್ಕೆ ಕಾರಣವೇನೆಂದು ನಾವು ಚೀನಾದವರನ್ನು ಕೇಳಿ [illegible] ಕೊಡ [illegible] ಗಳನ್ನು ನಡಿಸುತ್ತಿರುವ ಸದ್ಯಕ್ಕೆ ಹಚ್ಚು ಸಂಗತಿ ತಿಳಿಸಲಾಗದು ಎಂದು ಜನ [illegible]

ಶ್ರೀಕೃಷ್ಣರಾಜ ಕೃಷಿಶಿಲ್ಪ ಬಿವರ್ಧಕ ಸಮಾಜ ಮೈಸೂರು

ಎರಡನೇ ವಾರ್ಷಿಕ ಸಭೆ

ಮೈಸೂರ ಡಿಸ್ಟ್ರಿಕ್ಟಿನ ಮೇಲ್ಕಂಡ ಸಮಾಜದ ಮೆಂಬರುಗಳು ಕಳೆದ ತಾ ೨೩ನೇ ಬುಧವಾರ ಮಧ್ಯಾಹ್ನ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ವಾರ್ಷಿಕ ಕೂಟವನ್ನು ನಡಿಸಿದರು ದಿವಾನ್ ಕಮಿಷನರ ಮೆ|| ವಿ ರಂಗಸ್ವಾಮಯ್ಯಂಗಾರ್ರು ಡಿಸಿ ಕಮಿಷನರ ಮೆ|| [illegible] ಅರಸಿನವರು ಆಸ್ಪತ್ರೆಯ ಸೂಪರಿಂಟೆಂಡೆಂಟ್ ಮೆ|| [illegible] ಅರಸಿನವರು ಪಬ್ಲಿಕ್ ಮೆ|| ಎಂ ಲಿಂಗರಾಜೇ ಅರಸಿನವರು [illegible] ಡಿಸ್ಟ್ರಿಕ್ಟ್ ಜಡ್ಜ್ ಮೆ|| ಬಿ ತಿರುಮಲಾಚಾರ್ರು [illegible] ಅಸಿಸ್ಟೆಂಟ್ ಕಮಿಷನರ ಮೆ|| ಬಿ ಕೃಷ್ಣರಾಯರು ಪೋಲೀಸ್ ಸೂಪರಿಂಟೆಂಡೆಂಟ್ ಮೆ|| [illegible] ಜಾಗೀರ [illegible] ಅ|| ಕಮಿಷನರ ಮೆ|| ಟಿ ಕೆ ಸುಂದರರಾಜಯ್ಯಂಗಾರ್ರು ಅ|| ಕಮಿಷನರ್ ಮೆ|| ಎಂ ಜಿ ಕೃಷ್ಣಸ್ವಾಮಿರಾಯರು ಪ್ರೈ ಅ ಕಮಿಷನರ ಮೆ|| ಎ ವಿ ರಾಮನಾಥನ ಯವರು [illegible] ಅಮಲ್ದಾರ ಮೆ|| ಟಿ ವೆ ಕಟರಾಮಯ್ಯನವರು ಇಂಡಸ್ಟ್ರಿಯಲ್ ಸೂಪರಿಂಟೆಂಡೆಂಟ್ ಮೆ|| ಜಿ ಸುಬ್ಬಸ್ವಾಮಿ ಐಯರವರು ಮೆ|| ಅಂಬಳೆ ಅಣ್ಣಯ್ಯ ಪಂಡಿತರು ಅಡ್ವೊಕೇಟರುಗಳಾದ ಮೆ|| ಎಂ ಸಿ ರಂಗಯ್ಯಂಗಾರ್ರು, ಮೆ|| ಎಚ್ ನರಸಿಂಗರಾಯರು, ಮೆ|| ವಿ ರಾಘವಾಚಾರ್ರು, ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳು ತಾಲ್ಲೂಕುಗಳ ಅಮಲ್ದಾರರು, ರಾಜಧಾನಿಯ ಕೆಲವು ಮ್ಯುನಿಸಿಪಲ ಕೌನ್ಸಿಲರುಗಳು ಸಭೆಯಲ್ಲಿ ಹಾಜರಾಗಿದ್ದರು

ಅಡ್ವೊಕೇಟ ಮೆ|| ಎಂ ಸಿ ರಂಗೈಯಂಗಾರ್ರವರು ಸಭಾಸದರ ಅಭಿಮತವನ್ನು ಕೃತಜ್ಞತಾಪೂರ್ವಕವಾಗಿ ಒಪ್ಪಿ ಸಭೆಯ ಅಗ್ರಾಸನವನ್ನು ಅಲಂಕರಿಸಿ ಸಮಯೋಚಿತವಾದ ಕೆಲವು ವಾಕ್ಯಗಳನ್ನು ನುಡಿದು ಸಭಾಕಾರ್ಯವನ್ನು ಪ್ರಾರಂಭಮಾಡಿದರು

ಸಂಘದ ಸೆಕ್ರೆಟರಿ ಮೆ|| ಎಚ್ ನರಸಿಂಗರಾಯರು ಮೇಲ್ಕಂಡ ಸಮಾಜದ ೧೯೧೦ ನೇ ಫೆಬ್ರವರಿ ಆಖೈರ ವರೆಗಿನ ವಾರ್ಷಿಕ ರಿಪೋರ್ಟನ್ನು ಸಭಿಕರಿಗೆ ಓದಿ ತಿಳಿಸಿದರು ಈ ರಿಪೋರ್ಟಿನಲ್ಲಿ ಕಂಡು ಬರುವ ಕೆಲವು ಭಾಗಗಳನ್ನು ವಾಚಕರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸುತ್ತೇವೆ

ಸಮಾಜದ ಮೆಂಬರುಗಳ ಸಂಖ್ಯೆ ೧೯೧೦ ನೇ ಜನವರಿ ಆಖೈರಿನಲ್ಲಿದ್ದ ೨೦೪ ಜನ ಮೆಂಬರುಗಳ ಪೈಕಿ ೧೬ ಜನ ಬಿಟ್ಟು ೬ ಜನರು ಹೊಸದಾಗಿ ಸೇರಿರುತ್ತಾರಾದದ್ದರಿಂದ ಈಗ ೧೯೪ ಜನ ಮೆಂಬರುಗಳು ಇರುತ್ತಾರೆ

ಜಮಾ ಖರ್ಚು—ಈ ಸಮಾಜಕ್ಕೆ ಎಲ್ಲಾ ಬಾಬುಗಳಿಂದಲೂ ರೂ [illegible] ಜಮಾ ಬಂದು ಈ ಪೈಕಿ ರೂ [illegible] ಖರ್ಚಾಗಿ ೧೬೪೦ [illegible] ನಗದು ಹಾಜರಿ ಉಳಿದಿರುತ್ತದೆ ಹೀಗರು ಬಾಬತು ಲೆಕ್ಕದಲ್ಲಿ ರೂ [illegible] ಪೈ ವಸೂಲ್ ಬಂದು, ರೂ [illegible] ಪೈ ಖರ್ಚಾಗಿ ನಗದು ರೂ [illegible] ಪೈ ಹಾಜರಿ ಇರುತ್ತದೆ ಷೇರ್ ಹಣಗಳಲ್ಲಿ [illegible] ಎಂದರೆ—ನಾಲ್ಕು ಕೊಟ್ಟಿರುವುದು, ಗವರ್ನ್‌ಮೆಂಟ್ ಸೇವಿಂಗ್ಸ್ ಬ್ಯಾಂಕಿನಿಂದ ಮತ್ತು ಈ ವಿಧವಾಗಿ ಬರಬೇಕಾಗಿರುವುದು, ಸಬ್ಸಿಡಿ ಮೊತ್ತ ಕೊಟ್ಟಿರುವುದು, ಇವು ರಾದ ಮತ್ತು [illegible] ಬೆಲೆ, ದಿವಾನ್ [illegible] ರಿಂದ ವಸೂಲಾಗತಕ್ಕದ್ದು, ಈ ಬಾಬುಗಳು ಸೇರಿರುತ್ತವೆ—ಆಸ್ತಿ [illegible] ಲೆಕ್ಕದಲ್ಲಿ ರೂ [illegible] ಪೈ ಜಮಾ ಬಂದು, ರೂ [illegible] ಪೈ ಖರ್ಚಾಗಿ, ನಗದು ರೂ [illegible] ಪೈ ಉಳಿದಿದೆ

ಜಮಾ ಬಾಬಿಗೆ ವಾರ್ಷಿಕ ಚಂದಾ ರೂ ೫೬೫ ೧೩, ಡೊನೇಷನ್ ರೂ ೧೬೭—೮ ಪ್ರವೇಶದರ ರೂ ೪೫ —೧೩, ಭತ್ತ, ಬಟ್ಟೆಗಳು, ನೆಲಗಡಲೆ, ಇವು ಮಾರಿ ಬಂದದ್ದು ರೂ ೧೨೧- ೩—೬, ಗವರನ್‌ಮೆಂಟು ಗ್ರಾಂಟು ರೂ ೧೫೦ ಸೇರಿವೆ ಖರ್ಚು ಬಾಬಿನಲ್ಲಿ ಶಿಬ್ಬಂದಿ ಖರ್ಚು ರೂ ೧೬೯— ೧—೧೦, ಸೇಲಂಗೆ ಕಳುಹಿಸಿದ ನೆಯ್ಗೆಯವನ ಸ್ಕಾಲರ್‌ಷಿಪ್ ರೂ ೬೦ ೮ ಪ್ರಿಂಟಿಂಗ್ ಚಾರ್ಜು ರೂ ೬೭ ೧೫—೬ ಜರ್ನಲ್‌ಗಳು ರೂ ೪—೯, ಪೋಸ್ಟೇಜು ರೂ, ೧೪ ೧೦ ೯ ಭತ್ತ ನೆಲಗಡಲೆ ಮುಂತಾದದ್ದನ್ನು ಕೊಂಡದ್ದು ರೂ ೭೯--೮ ೪ ಪತ್ರಿಗೆ ಮುಂತಾದದ್ದು ರೂ ೭೩— ೧೩—೨ ಸಾವಿಲ್ಲದಿರು ರೂ ೫೫ ೧೯—೧೧ ಸೇರಿರುತ್ತವೆ

ಈ ಸಮಾಜವು ೩೦,೦೦೦ ರೂ ಗೆ ರೆಜಿಸ್ಟರ್ ಆಗಿ ಷೇರು ೧ ಕ್ಕೆ ೧೦ ರೂ ನಂತೆ ೩,೦೦೦ ಷೇರುಗಳಾಗಿ ಮಾಡಿದೆ ಈ ಪೈಕಿ ೧,೧೩೮ ಷೇರುಗಳು ಮಾತ್ರ ಬಿಕರಿಯಾಗಿ, ರೂ ೩ ೩೫೧ ೨--೦ ಮಾತ್ರ ವಸೂಲಾಗಿದೆ ಷೇರು ತೆಗೆದುಕೊಂಡಿರುವ ಮೆಂಬರುಗಳ ಪೈಕಿ ೮೯ ಜನ ತಾವು ಕೊಡತಕ್ಕ ವಾರ್ಷಿಕ ಚಂದಾ ರೂ ೧೫೪ ೯- ೦ ಯನ್ನು ನೋಟೀಸು ಕೊಟ್ಟಾಗ್ಯೂ ಪಾವತಿ ಮಾಡದೆ ಇದ್ದದ್ದರಿಂದ ಸಮಾಜದ ಕೆಲಸಗಳು ನಡೆಯಲು ಹಣ ಸಾಲದೆ ಕಷ್ಟ ವಾದಕಾರಣ ಮೇಲ್ಕಂಡ ಷೇರುದಾರರ ಅನುಮತಿಯನ್ನು ನಿರೀಕ್ಷಿಸಿ ಅವರ ಷೇರು ಮೊಬಲಗಿನಲ್ಲಿ ಅವರುಗಳು ಕೊಡತಕ್ಕ ಚಂದಾವನ್ನು ಜಮಾ ಮಾಡಿ, ಬಾಕಿ ತೇರಿಜುಗಳನ್ನು ಅವರ ಷೇರಿಗೆ ಕೊಟ್ಟು ಚಂದಾ ಮೊಬಲಗನ್ನು ಸಮಾಜದ ಜಮಾಬಾಬಿಗೆ ಜಮಾವಣೆ ಮಾಡಿರುತ್ತೆ ಹೀಗೆ ಮಾಡಿದ್ದು ಸಮಾಜದ ಬೈಲಾಗೆ ವಿರೋಧವಾಗಿಲ್ಲ ಡಿವಿಡೆಂಡ್ಸ್ ಕೊಡುವ ಪಾರುಗಾಗಿ ಷೇರು ಮೊಬಲಗಿನಲ್ಲಿ ರೂ ೧ ೭ ೮ ೫ ಪೈ ಖರ್ಚು ಮಾಡಿ ಹಾರಿಂಸಲ್ಲಿ ಉತ್ಪತ್ತಿಯಾದ ೩೫ ರೂ ೯ ೭ ಲೆಕ್ಕಕ್ಕೆ ಜಮಾ ಹಿಡಿದಿರುತ್ತೆ ಈ ಹಾರಿಂಗಿಂದ ವರುಷೇ ವರುಷ ಕೆಲವು ಲಾಭ ಬರಬಹುದಾದ ಸಂಭವವಿದೆ ಈ ಲಾಭಕ್ಕೆ ಎಲ್ಲಾ ಷೇರ್‌ದಾರರೂ ಭಾಗಸ್ಥರಾಗುವುದರಿಂದ ಷೇರು ಮೊಬಲಗಿನಲ್ಲಿ ಈ ಮೊಬಲಗನ್ನು ಖರ್ಚು ಮಾಡಿದೆ ಕಟ್ಟಿಂಗ್ ಮೆಷಿನ್ ಗೆ ಯಂತ್ರಕ್ಕಾಗಿ ರೂ ೩೪೭ ೧೧೧೦ ಖರ್ಚಾಗಿದೆ ಇದು ಜನಗಳಿಗೆ ತುಂಬಾ ಪ್ರಯೋಜನಕರವಾಗಿರುವುದರಿಂದಲೂ ಇದರಲ್ಲಿ ಆಗುವ ಉತ್ಪತ್ತಿಯಿಂದ ನಾವು ಖರ್ಚು ಮಾಡಿರುವ ಹಣವು ಕ್ರಮೇಣ ವಸೂಲಾಗುವುದಕ್ಕೆ ಅನುಕೂಲವಿರುವುದರಿಂದಲೂ ಷೇರು ಮೊಬಲಗಿನಲ್ಲಿ ಇದರ ಬಾಬ್ತು ಹಣವನ್ನು ಖರ್ಚು ಮಾಡಿದೆ

ಬರ ಬರಬೇಕಾದ ಬಡ್ಡಿ ವಾಬತು ಮೊಬಲಗು ಗವರನ್‌ಮೆಂಟು ಸೇವಿಂಗ್ಸ್ ಬ್ಯಾಂಕಿನಿಂದಲೂ ಇತರ ಕರ್ಜುಗಳಿಂದಲೂ ಬರಬೇಕಾಗಿ ನಿಂತಿರುವುದರಿಂದ ^ ಡಿವಿಡೆಂಡ್ಸ್ ಕೊಡುವ ಪಾರುಗೋಸ್ಕರ ಬಹಳ ಹಣ ಖರ್ಚು ಮಾಡಿ ವಾಪಸು ಬರದ ನಿಂತಿರುವುದರಿಂದಲೂ ಮತ್ತು ಸಮಾಜದ ಕೆಲಸಗಳು ನಡೆಸತಕ್ಕದ್ದಕ್ಕಾಗಿ ಈ ಸಾಲಿನಲ್ಲಿ ಬಹು ಹಣ ಖರ್ಚಾಗಿರುವುದರಿಂದಲೂ ಷೇರುದಾರರಿಗೆ ಸಲ್ಲಬೇಕಾದ ಬಡ್ಡಿಯನ್ನು ಪಾವತಿ ಮಾಡಲು ಅವಕಾಶವಾಗಲಿಲ್ಲ ಮುಂದಿನ ಸಾಲಿನಲ್ಲಾದರೂ ಬರತಕ್ಕ ಮೊಬಲಗುಗಳನ್ನು ವಸೂಲ್ಮಾಡಿ ಬಡ್ಡಿ ಪಾವತಿಗೆ ಸರಿಯಾದ ಏರ್ಪಾಡು ಮಾಡುತ್ತೆ

ಮೀಟಿಂಗುಗಳು ಕಳೆದ ಮಾರ್ಚಿ ತಿಂಗಳಲ್ಲಿ ವ್ಯವಸಾಯ ಮತ್ತು ಕೈಗಾರಿಕೆ ಕಮಿಟಿ ಮೆಂಬರುಗಳು ಸೇರಿ ಮೀಟಿಂಗು ಸೇರಿದ್ದು ಅದರಲ್ಲಿ ತೀರ್ಮಾನವಾದ ವಿಷಯಗಳು ಪ್ರಿಂಟು ಮಾಡಿಸಿ ಮೆಂಬರುಗಳಿಗೆ ಪಾವತಿ ಮಾಡಿರುತ್ತದೆ ಮತ್ತೂ ತೀರ್ಮಾನವಾದ ವಿಷಯಗಳನ್ನು ಬಹಳ ಮಟ್ಟಿಗೆ ಜಾರಿಯಲ್ಲಿ ತಂದಿರುತ್ತದೆ ಮೆ, ೩೧ನೇ ತಾ ಕಮಿಟಿ ಮೀಟಿಂಗು ಅನೇಕರು ಒಂದು ಹೊತ್ತು ಸೇರಿ ನಡೆಸಲು ಆಗಲಿಲ್ಲವಾದ್ದರಿಂದ ಸಮಾಜದ ಕೆಲಸಗಳೆಲ್ಲಾ ಬರಹ ಮೂಲಕ ವ್ಯವಸಾಯ ಕೈಗಾರಿಕೆ ಮತ್ತು ವರ್ತಕರುಗಳ ಕಮಿಟಿ ಮೆಂಬರುಗಳಿಗೆ ತಿಳಿಸಿ ಅವರ ಅನುಮತಿ ಪಡೆದು ನಡೆಸಿರುತ್ತೆ ಇದಕ್ಕೆ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರು ಒಪ್ಪಿದ್ದಾಗ್ಯೂ ಅವರು ನಾವು ಮೀಟಿಂಗ್ ನಡಿಸದೆ ಇರತಕ್ಕದ್ದು ನಮ್ಮ ಬೈಲಾಕ್ಕೆ ವಿರೋಧವೆಂದೂ ಇನ್ಮೇಲೆ ಬೈಲಾ ಪ್ರಕಾರ ೧೯೧೦ ನೆ ... ಒಳಗಾಗಿ ಮೀಟಿಂಗ್ ನಡೆಸದಿದ್ದರೆ ಈ ಸಮಾಜಕ್ಕೆ ಕೋಸ್ಪರೇಟಿವ್ ಸಹಾಯ ಸಂಘದ ಆಕ್ಟಿನ ಪ್ರಕಾರ ಯಾವ ಪ್ರಯೋಜನಗಳೂ ದೊರೆಯಲಾರವೆಂದೂ ನೋಟೀಸು ಕೊಟ್ಟಿರುವುದು ಶೋಚನೀಯವಾಗಿದೆ ಇನ್ಮೇಲೆ ಕಮಿಟಿ ಮೆಂಬರುಗಳು ಮೀಟಿಂಗ ಸೇರತಕ್ಕ ಕಾಲದಲ್ಲಿ ಹಾಜರಾಗಿ ಮೀಟಿಂಗ ನಡೆಯುವುದಕ್ಕೆ ಸಹಾಯ ಮಾಡುವರೆಂದು ಕೋರುತ್ತೇವೆ

ರೀಡಿಂಗ ರೂಮು ಕಳೆದ ಜನರಲ್ ಮೀಟಿಂಗಿನಲ್ಲಿ ತೀರ್ಮಾನವಾದ ಪ್ರಕಾರ ಎಗ್ಸಿಭಿಷನ ಬಿಲ್ಡಿಂಗಿನಲ್ಲಿದ್ದ ರೀಡಿಂಗ ರೂಮನ್ನು ಮೈಸೂರು ವಾಣಿ ವಿಲಾಸ ಬಜಾರಿನ ಮೇಲಿನ ಕೊಠಡಿಯಲ್ಲಿಟ್ಟಿದೆ ಇದಕ್ಕೆ ಮೈಸೂರು ರೆವಿನ್ಯೂ ಅಗ್ರಿಕಲ್ಚರಲ್ ಗೆಜೆಟ್, ದಿ ಇಂಡಿಯನ ಯುನೈಟೆಡ್ ಅಗ್ರಿಕಲ್ಚರಲ್ ಜರ್ನಲ ಆಫ್ ಇಂಡಿಯಾ ಇಂಡಸ್ಟ್ರಿಯಲ ಇಂಡಿಯ ಮದರಾಸು ಸರಕಾರ ಸಹಾಯಕ ಸಂಘದ ಬುಲೆಟಿನ್ ಅಮೆರಿಕಾ ದೇಶದ ವ್ಯವಸಾಯ ಸಂಬಂಧವಾದ ಬುಲೆಟಿನಗಳು ಸಾಧ್ವಿ, ವೃತ್ತಾಂತಪತ್ರಿಕೆ ಇವು ತರಿಸಲ್ಪಡುತ್ತವೆ ಈ ಸಮಾಜಕ್ಕೆ ಬರುವ ಜರ್ನಲ್‌ಗಳು ಬಹಳ ಉಪಯೋಗಕರವಾಗಿದ್ದಾಗ್ಯೂ ಸ್ಥಳದವರೇ ಆಗಲಿ ಅಸ್ಥಳದವರೇ ಆಗಲಿ ಅವುಗಳಿಂದ ಪ್ರಯೋಜನ ಹೊಂದತಕ್ಕ ಇರುವುದಾಗಿ ಕಾಣಬರಲಿಲ್ಲ ಇದು ಶೋಚನೀಯವಾಗಿದೆ

ಮ್ಯೂಜಿಯಂ ಮೈಸೂರು ದಸರಾ ಎಗ್ಸಿಭಿಷನ ಗೆ ಬಂದಿದ್ದ ಧಾನ್ಯಗಳ ಪೈಕಿ ಮುಖ್ಯವಾದವುಗಳನ್ನು ಟಿನ್ ಡಬ್ಬಾಗಳಲ್ಲಿ ಎಲ್ಲರಿಗೂ ಕಾಣುವಂತೆ ಪೆಟ್ಟಿಗೆ ಮೇಲೆ ಇಟ್ಟಿದೆ ಈ ಧಾನ್ಯಗಳ ವಿವರ—ಕಪ್ಪುಭತ್ತ ೧೦ ತರಹ ಕೆಂಬತ್ತ ೩೦ ತರಹ ಬಿಳೀ ಭತ್ತ ೧೦೦ ತರಹ ಹತ್ತಿ ೨೦ ತರಹ ಮತ್ತೂ ರಾಗಿ, ನವಣೆ, ಹುರುಳಿ ಮುಂತಾದ ಕಾಳುಗಳು ಎಲ್ಲಕಕ್ಕ ಸ್ಥಳ ಬೆಳೆ ಮಾಡತಕ್ಕ ವಿಧಾನ, ಇವುಗಳ ವಿವರವನ್ನು ಬರೆದು ಇಡಿಸಿದೆ ಈ ಧಾನ್ಯಗಳನ್ನು ಯಾರು ಅಪೇಕ್ಷಿಸಿದಾಗ್ಯೂ ತರಿಸಿಕೊಡುವುದಕ್ಕೆ ಅನುಕೂಲ ಮಾಡಿದೆ

ವ್ಯವಸಾಯ ಕಳೆದ ವರುಷ ಜೂಲೈ ಮಾಹೆಯಲ್ಲಿ ವ್ಯವಸಾಯ ಪ್ರದರ್ಶನಕ್ಕಾಗಿ ಮೈಸೂರು ಸರ್ಕಾರದವರು ದಯವಿಟ್ಟು ನಮ್ಮ ಸಮಾಜಕ್ಕೆ ಎಗ್ಸಿಭಿಷನ್ ಕಟ್ಟಡದ ದಕ್ಷಿಣ ಭಾಗದಲ್ಲಿರುವ ಸುಮಾರು ೪ ಎಕರೆ ಜಮೀನನ್ನು ಕೊಟ್ಟಿರು ಅಲ್ಲದೆ ಕುಕ್ಕರಹಳ್ಳಿ ಕೆರೆಯಿಂದ ವ್ಯವಸಾಯಕ್ಕೆ ನೀರು ತೆಗೆದುಕೊಳ್ಳಲು ಅಪ್ಪಣೆಯಾಗಿದೆ ಎಗ್ಸಿಭಿಷನ ಕಮಿಟಿಯವರು ದಯವಿಟ್ಟು ಈ ಜಮೀನಿನ ಸುತ್ತಲೂ ಬೇಲಿ ಹಾಕಿಸಿಕೊಟ್ಟರು ಇದು ನಮ್ಮ ಸ್ವಾಧೀನಕ್ಕೆ ಕಳೆದ ಆಗಸ್ಟ ಮಾಹೆಯಲ್ಲಿ ಬಂದಿತು ವ್ಯವಸಾಯಕ್ಕೆ ಕಾಲ ತುಂಬಾ ಮೀರಿದ್ದಾಗ್ಯೂ ನಮ್ಮ ಕಮಿಟಿ ಮೆಂಬರುಗಳಲ್ಲಿ ಮೆ। ಗಳಾದ ಅಂಬಳೆ ಅಣ್ಣಯ್ಯ ಪಂಡಿತರೂ, ಎಚ್ ನಂಜುಂಡರಾಜೆ ಅರಸಿನವರೂ ಬಹಳ ಶ್ರಮಪಟ್ಟು ಭೂಮಿಯನ್ನು ಹಸನು ಮಾಡಿ ಬೀಜಗಳಿಗೆ ಏರ್ಪಾಡು ಮಾಡಿ, ಸರಿಯಾದ ರೈತರನ್ನು ಹೊಂದಿಸಿ ವ್ಯವಸಾಯಕ್ಕೆ ಪ್ರಾರಂಭ ಮಾಡಿಸಿದರು

ಇಷ್ಟು ಸ್ವಲ್ಪ ಕಾಲದಲ್ಲಿ ಹೊಸ ಭೂಮಿಯಲ್ಲಿ ಮೊದಲನೆ ವರುಷವೇ ಅಕಾಲವಾಗಿದ್ದಾಗ್ಯೂ ಮಾಡಿದ ವ್ಯವಸಾಯದ ಫಲ ಪ್ರಯೋಜನವು ಬಹಳ ತೃಪ್ತಿಕರವಾಗಿ ಎಣಿಸಬೇಕು ಇದಕ್ಕೆ ನಮ್ಮ ಜಮೀನು ಸಾಗುವಳಿ ಮಾಡಿದ ರಂಗೇಗೌಡನು ತನಗೆ ಆದ ಶ್ರಮವನ್ನು ಖರ್ಚನ್ನೂ ಗಣನೆಗೆ ತಾರದೆ ಬಹಳ ಶ್ರದ್ಧೆಯಿಂದ ಮಾಡಿದ ಕೆಲಸವೇ ಮುಖ್ಯ ಕಾರಣವಾಗಿದೆ ಈತನಿಗೆ ಎಗ್ಸಿಭಿಷನ್‌ನಲ್ಲಿ ಮೆಡಲ್ ಕೂಡಾ ಬಂದಿರುವುದು ರೆವಿನ್ಯೂ ಕಮಿಷನರ್ ಸಾಹೇಬರವರೂ ತಂಜಾವೂರು ಜಿಲ್ಲಾ ನಾತನೂರು ಮಿರಾಸದಾರ ಮೆ ಸುಂದರಂ ಐಯರವರೂ ಕೆಲವು ಬೀಜವನ್ನು ದಯಮಾಡಿ ಮುಪತ್ತಾಗಿ ಕೊಟ್ಟಿರುತಾರೆ ಇದಕ್ಕಾಗಿ ಸಮಾಜದವರು ಅವರುಗಳಿಗೆ ಕೃತಜ್ಞರಾಗಿರಬೇಕಾಗಿದೆ — ವ್ಯವಸಾಯಕ್ಕೆ ಸಂಬಂಧಪಟ್ಟ ಇಂಗ್ಲೀಷು ಜರ್ನಲ್‌ಗಳಲ್ಲಿರತಕ್ಕ ಮತ್ತೂ ಅನುಭವದಲ್ಲಿರುರ ಕೆಲವು ವಿಷಯಗಳನ್ನು ಸುಲಭವಾದ ಕನ್ನಡ ಭಾಷೆಯಲ್ಲಿ ಎಲ್ಲರಿಗೂ ಗೊತ್ತಾಗುವಂತೆ ವೃತ್ತಾಂತ ಪತ್ರಿಕೆಯಲ್ಲಿ ಛಾಯಿಪ್ ಮಾಡಿರುತ್ತೆ — ೧) ದನವಿನ ಗೊಬ್ಬರವನ್ನು ಕಾಪಾಡಿಕೊಳ್ಳತಕ್ಕ ವಿಧಾನ, ೨) ಮೂಳೆ ಗೊಬ್ಬರ ಪಿಟ್ಟುಪ್ಪು ಇವುಗಳನ್ನು ಜಮೀನಿಗೆ ಉಪಯೋಗಿಸುವ ವಿಧಾನ, (೩) ಅರಿಸಿನ ಮತ್ತು ಶುಂಠಿ (೪) ನೆಲಗಡಲೆಕಾಯಿ ೫) ಕರ್ಪೂರದ ಗಿಡಗಳು, ಗೆಣಸು, ಆಲೂಗಡ್ಡೆ ಬೆಳೆಮಾಡತಕ್ಕ ವಿಧಾನ, (೬) ಗೊಬ್ಬರಗಳ ವಿಷಯದಲ್ಲಿ ಸಂಕ್ಷೇಪ ಸೂಚನೆಗಳು ೭) ಹೊಗೆಸೊಪ್ಪು ಬೆಳೆಯತಕ್ಕ ವಿಧಾನ ೮) ಮುಸುಕಿನಜೋಳ ಮತ್ತೂ ಬದನೇ ಸೊಪ್ಪು ಹಾಕತಕ್ಕ ವಿಧಾನ ಇವನ್ನು ಪ್ರಕಟಿಸಲಾಗಿದೆ.—ಶ್ರೀನಿವಾಸಪುರದಿಂದ ಮುತ್ತುಗದ ಸಣ್ಣ ಎಂಬ ಬಹಳ ಶ್ರೇಷ್ಠವಾದ ಭತ್ತವನ್ನು ೪ ಸೇರು ತರಿಸಿತು ಅಗೆ ಹಾಕಿದ ೧೦೦ ದಿವಸಗಳೊಳಗಾಗಿ ಪೈರು ಬರುತ್ತೆ ಈ ಭತ್ತವನ್ನು ಅನೇಕ ಜನಗಳಿಗೆ ಮಾದರಿಯಾಗಿ ತೋರಿಸಿದ್ದಲ್ಲದೆ ಮೆ॥ ವಿ ರಾಘವಾಚಾರ್ಯರ ಮೂಲಕ ಮುಂಡಗದೊರೆ ಪಟೇಲ ಜವರೇಗೌಡ, ಕಾಜೆಗೌಡ ಮತ್ತೂ ಇನ್ನೊಬ್ಬ ರೈತ ಇವರಿಗೆ ಕೊಟ್ಟು ಗದ್ದೆಗೆ ಹಾಕಿಸಿದ್ದರಲ್ಲಿ ಸೇರು ೧ ಕ್ಕೆ ೪೦ ಸೇರಿನಂತೆ ಉತ್ಪತ್ತಿಯಾಗಿದೆ —ಕೆಂಪು ಜೋಳ ಬಾಗೇಪಲ್ಲಿಯಿಂದ ತರಿಸಲಾಯಿತು ಇದು ನಮ್ಮ ಬಿಳೀ ಜೋಳದಂತೆಯೇ ೧೨೦ ದಿವಸಕ್ಕೆ ಪಸಲು ಆದರೂ ಜೋಳ ಹೆಚ್ಚಾಗಿ ಬೆಳೆಯುವುದಿಲ್ಲ ಹೂಡೆಯು ಬಹಳ ಬಿಗಿಯಾಗಿಯೂ ಹುಲಸಾಗಿಯೂ ಇರುತ್ತೆ ಇದು ಅಲ್ಲಲ್ಲಿ ರೈತರಿಗೆ ಕೊಟ್ಟದ್ದಲ್ಲದೆ ಮೆ ರಾಘವಾಚಾರ್ಯರು ತಮ್ಮ ಸ್ವಂತ ಹೊಲದಲ್ಲಿ ಹಾಕಿ ನೋಡಿದರು ಈ ಜೋಳದಿಂದ ರೊಟ್ಟಿ ಮಗ್ಗಿರೆ ಮಾಡಿದರೆ ಬಹಳ ರುಚಿಯಾಗಿಯೂ ಜೀರ್ಣಕಾರಿಯಾಗಿಯೂ ಇದೆ ಈ ಬೀಜವು ನಮ್ಮಲ್ಲಿ ದೊರೆಯುವುದು — ಮುಸುಕಿನಜೋಳವನ್ನು ಬೆಂಗಳೂರಿನಿಂದ ತರಿಸಿ ಮೈಸೂರಲ್ಲಿ ಹಾಕಿ ನೋಡಿತು ಇದು ಧಾರಾಳವಾಗಿ ಹೊಡೆ ಬಿಟ್ಟು ಪಸಲಾಗುತ್ತದೆ ಸಾಮಾನ್ಯವಾದ ನಮ್ಮ ಬಿಳೀ ಜೋಳಕ್ಕಿಂತ ಜಾಗ್ರತೆಯಾಗಿ ಅಂದರೆ ೩ ತಿಂಗಳೊಳಗಾಗಿ ಪಸಲು ಬರುವುದು ಚಿಕ್ಕಮಗಳೂರು, ಹಾಸನ, ಈ ಪ್ರಾಂತ್ಯಗಳಿಂದ ಅತ್ಯುತ್ತಮವಾದ ಹಲವಹನ್ನಿನ ಬೀಜಗಳನ್ನು ತರಿಸಿ ಸೋಸಿ ಮಾಡಿಸಿ ಅನೇಕ ರೈತರಿಗೆ ಇನಾಮಾಗಿ ಕೊಟ್ಟಿದೆ ಇದರಂತೆಯೇ ಶ್ರೇಷ್ಠವಾದ ಬೀಜದ ಮಾವಿನಹಣ್ಣು ಮದ್ರಾಸಿನಿಂದ ತರಿಸಿ ಅನೇಕ ರೈತರಿಗೆ ಮುಪತ್ತಾಗಿ ಕೊಟ್ಟಿದೆ ಮತ್ತೂ ಹಿಪ್ಪೆ ಸಸಿ ಸಹಾ ಕೊಟ್ಟಿದೆ ನಾಡು ನೆಲಗಡಲೇಕಾಯಿ ಬಹಳವಾಗಿ ಕೆಟ್ಟು ಹೋಗಿದ್ದರಿಂದ ಸ್ಪೈಯಿನ ಮತ್ತೂ ಜಪಾನ ದೇಶಗಳ ನೆಲಗಡಲೆ ಬೀಜವನ್ನು ತರಿಸಿ ರೈತರಿಗೆ ಬೀಜದಬಗ್ಗೆ ಮಾರಿಸಲಾಯಿತು ಅಮೆರಿಕಾ ದೇಶದಲ್ಲಿ ಮಳೆ ಕಡಮೆಯಾದ ಪ್ರಾಂತ್ಯಗಳಲ್ಲಿ ಯಾವ ತರಹಾ ಮಿತ್ರ ವ್ಯವಸಾಯ ನಡಿಸಿ ಉತ್ತಮವಾದ ಬೆಳೆಯನ್ನು ತೆಗೆಯುತ್ತಾರೆಯೋ ಆ ಪದ್ಧತಿಯನ್ನು ಅನುಸರಿಸಿ ಮೆ ರಾಘವಾಚಾರ್ಯರ ಹೊಲದಲ್ಲಿ ಸ್ವಲ್ಪಮಟ್ಟಿಗೆ ವ್ಯವಸಾಯ ಮಾಡಿ ಜೋಳ ಹಾಕಿದ್ದರಲ್ಲಿ ಬಹಳ ಉತ್ಕೃಷ್ಟವಾದ ಬೆಳೆ ಆಗಿದೆ ಅಮೃತಮಹಲ ಹೋರಿಗಳನ್ನು ಬೀಜದಹೋರಿಗಳ ಬಗ್ಗೆ ಮೆ ಎಚ್ ನಂಜುಂಡರಾಜೆ ಅರಸಿನವರನ್ನು ಕೊಡಿಸಬೇಕೆಂದು ಕೇಳಿ ಬರೆದುದಕ್ಕೆ ಅವರು ೭೫ ರೂ ಒಳಗಾಗಿ ಮಾರುವುದಾಗಿ ಅಪ್ಪಣೆಕೊಡಿಸಿದಾರೆ ಮೆಂಬರುಗಳು ಅಪೇಕ್ಷಿಸಿದಲ್ಲಿ ಆ ರೀತಿ ಅವರಿಗೆ ಕೊಡಲು ಸಹಾಯಮಾಡಿದೆ ಭೂಮಿಗೆ ಶಕ್ತಿ ಕೊಡುವ ಡೆಂಚಾ ಎಂಬ ಹೊಸ ತರಹ ಬೀಜವನ್ನು ಕಲ್ಕತ್ತಾದಿಂದ ತರಿಸಿ ಚಿತ್ರನಗರಿ ಕೊಡಲ್ಪಟ್ಟಿತು ವ್ಯವಸಾಯ ವಿಷಯದಲ್ಲಿ ಮೆ। ರಾಘವಾಚಾರ್ಯರೂ ಅ ಬಳೆ ಅಣ್ಣಯ್ಯ ಪಂಡಿತರೂ ಎಚ ನಂಜುಂಡರಾಜೆ ಅರಸಿನವರೂ ಮಾಡಿರುವ ಸಹಾಯಕ್ಕಾಗಿ ಸಮಾಜದವರು ಬಹಳ ವಂದನೆಯನ್ನು ಮಾಡಬೇಕಾಗಿದೆ

[ಸಶೇಷ]

ತಾಲ್ಲೂಕು ವರ್ತಮಾನಗಳು

ಹೊಳೆನರಸೀಪುರ ಈ ವರ್ಷ ಆರೋಗ್ಯಕರವಾಗಿದೆ ಬೇಸಿಗೆ ತಾಪವು ಹೆಚ್ಚುತ್ತಾ ಬರುತ್ತಿದೆ ರೋಗಾದಿಗಳ ಭಯವೇನೂ ಇಲ್ಲ ಧವಸಧಾನ್ಯಗಳು ಸುಭಿಕ್ಷವಾಗಿ ಒದಗುವವು ರಾಗಿ ರೂಪಾಯಿಗೆ ೧೦ ೬೦ ಸೇರು, ಅಕ್ಕಿ ೧೯ ೧೩ ಸೇರು ಮಾರುತ್ತವೆ ಮತ್ತು ಸಂತೆಯಲ್ಲಿ ಜನಗಳು ಸೇರುವುದಕ್ಕೆ ಸ್ಥಳವು ಬಹು ಇಕ್ಕಟ್ಟಾಗಿರುವುದರಿಂದ ನಮ್ಮ ಅಮಲ್ದಾರರು ವರ್ತಕರು ಕುಳಿತುಕೊಳ್ಳುವ ಸ್ಥಳವನ್ನು ವಿಸ್ತಾರವಾಗಿ ಮಾಡುವುದಲ್ಲದೆ ಕೊಳ್ಳುವವರಿಗೂ ಅನುಕೂಲವಾಗಿರುವ ಹಾಗೆ ಮಾಡಿಕೊಟ್ಟರೆ ತುಂಬಾ ಸಹಾಯವಾಯಿತು ದನಗಳ ಸಂತೆಯಲ್ಲಿಯೂ ಜನಗಳು ಸೇರುವುದಕ್ಕೆ ತುಂಬಾ ಅನಾನುಕೂಲ ಆದ್ದರಿಂದ ಸಂತೆಯ ವಿಷಯಕ್ಕೆ ಸರ್ಕಾರದವರು ಗಮನ ಕೊಡುವರು ಅಲ್ಲದೆ ಪೋಲೀಸ್ ಇನ್ಸ್‌ಪೆಕ್ಟರವರು ಸಂತೆಯಲ್ಲಿ ಅಳತೆಯ ಸಾಮಾನುಗಳನ್ನೂ ತೂಕದ ಬೊಟ್ಟುಗಳನ್ನೂ ಪರೀಕ್ಷಿಸಿ ಕಡಮೆಯಾದವುಗಳನ್ನೆಲ್ಲಾ ತೆಗೆದು ಹಾಕಿ ಸರಿಯಾದ ಸೇರು ಬೊಟ್ಟುಗಳನ್ನು ಇಡುವ ಹಾಗೆ ಏರ್ಪಾಡು ಮಾಡಿರುವುದು ತುಂಬಾ ಸಂತೋಷ ಇನ್ನು ಮೇಲೆ ಅವರು ಆಗಾಗ್ಗೆ ನೋಡಿಕೊಳ್ಳುವರೆಂದು ನಿರೀಕ್ಷಿಸಲ್ಪಟ್ಟಿದೆ — ಇಲ್ಲಿ ಹಂದಿಗಳ ಅವಾಂತರವು ನಿಲ್ಲಲಿಲ್ಲ ಸರ್ಕಾರದವರು ಇವುಗಳ ವಿಷಯದಲ್ಲಿ ಯಾಕೆ ಗಮನ ಕೊಡಲಾರದು ಮ್ಯುನಿಸಿಪಾಲಿಟಿಯ ಲಾಂದ್ರಾಗಳು ಚೆನ್ನಾಗಿ ಉರಿಯುವುದೇ ಇಲ್ಲ ಇದು ಪೇಟೆ ರಸ್ತೆಯಲ್ಲಿ ಒಂದು ಕಕ್ಕಸು ಇಲ್ಲದೆ ಇರುವುದು ಹೊಳೆಯ ನೀರು ಕೆಡುವುದಕ್ಕೆ ಕಾರಣವಾಗಿದೆ ಟ್ರೈ ಫೋಲಿಸ್ ಬೀಟು ಕ್ರಮಕ್ಕೆ ಬಂದಿದೆ

ಕಾವಲಕಾವಲು ತಾ॥ ಮುರಳವಾಡಿ —ಈ ಗ್ರಾಮವು ಚಿಕ್ಕದೊಡ್ಡ ಮುರಳವಾಡಿ ಎರಡಾಗಿ ಸುಮಾರು ೫೦೦ ಮನೆಗಳುಳ್ಳ ದೊಡ್ಡ ಗ್ರಾಮವಾಗಿದೆ ಇದುವರೆಗೂ ಈ ಊರಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಇರಲಿಲ್ಲ ಸುಮಾರು ೮೦-೯೦ ಮಹಮದೀಯರ ಮನೆಗಳವೆ ಇವರಲ್ಲಿ ಪ್ರಮುಖರಾದ ಹಜ್ರತ್ ಸೈಯದ ಮಗುಂ ಹುಸೇನಿ ಷಾ ಖಾದ್ರಿ ಸಾಹೇಬರು, ಮಹಮದ್ ಯಾಕೂಬ್ ಸಾಹೇಬರು ಮತ್ತು ಕೋಕನಂದ್ರದ ವಾಸಿಸು ಕೇಟ್‌ಕ್ಲರ್ಕ್ ಮಹಮದ್ ಯುಸೂಫ್ ಸಾಹೇಬರು ಮುಂತಾದವರು ಸೇರಿ ಇಲ್ಲಿ ಒಂದು ಇಂಗ್ಲಿಷ್ ಪ್ರೈಮರಿ ಸ್ಕೂಲನ್ನು ಸ್ಥಾಪಿಸಲು ತುಂಬಾ ಪ್ರೋತ್ಸಾಹ ಕೊಟ್ಟು ಇಂಗ್ಲಿಷು, ಕನ್ನಡ, ಹಿಂದುಸ್ತಾನಿ ಭಾಷೆಗಳನ್ನು ಕಲಿಸುವ ಉಪಾಧ್ಯಾಯರನ್ನು ಕರೆಸಿ ಸ್ಕೂಲನ್ನು ಮಕಾನ್ ಎಂಬಲ್ಲಿ ಇರಿಸಿ ಮಹಮದೀಯರು ಮಾತ್ರವೇ ಅಲ್ಲದೆ ಇತರ ಕೋಮಿನ ಜನಗಳು ಸಹ ಅಲ್ಪ ಫೀಜಿನಿಂದ ತಮ್ಮ ಬಾಲಕರಿಗೆ ವಿದ್ಯಾಭ್ಯಾಸ ಮಾಡಿಸಲು ಏರ್ಪಾಡು ಮಾಡಿರುತ್ತಾರೆ -- ಈ ಗ್ರಾಮವು ಇಷ್ಟು ದೊಡ್ಡದಾಗಿಯೂ ಸುಮಾರು ೨೦ಕ್ಕೆ ಮೇಲ್ಪಟ್ಟ ಅಂಗಡಿಗಳುಳ್ಳದ್ದಾಗಿಯೂ ಮತ್ತು ಹಬ್ಬದ ವ್ಯಾಪಾರ ಸ್ಥಳವಾಗಿಯೂ ಇದ್ದಾಗ್ಯೂ ಟಪ್ಪಾಲು ವಾರಕ್ಕೆ ಎರಡಾವರ್ತಿ ಮಾತ್ರ ಬರುತ್ತೆ ಇದರಿಂದ ಅನೇಕ ವ್ಯಾಪಾರಸ್ಥರಿಗೂ ಇತರರಿಗೂ ತುಂಬಾ ತೊಂದರೆಯಾಗಿರುತ್ತೆ ಪೋಸ್ಟು ಇಲಾಖೆಯವರು ಈ ವಿಷಯಕ್ಕೆ ಗಮನ ಕೊಟ್ಟು ಇಲ್ಲಿ ದಿನವಹಿ ಟಪ್ಪಾಲು ಬರುವಂತೆ ಏರ್ಪಾಡು ಮಾಡಿದರೆ ಉಪಕಾರವಾಗಿರುತ್ತೆ — ಈ ಊರಿಂದ ಹಾರೋಹಳ್ಳಿ ಸ್ಟೇಷನಿಗೆ ಸುಮಾರು ೬ ಮೈಲಾಗುತ್ತೆ ಹಗಲು ರಾತ್ರಿ ತಪ್ಪದೆ ಗಾಡಿಗಳ ಆಮದು ರಫ್ತು ಇವೆ ಇಲ್ಲಿನ ಮತ್ತು ಸುತ್ತುಮುತ್ತಿನ ಗ್ರಾಮಗಳ ಗಾಡಿಗಳು ಬೆಂಗಳೂರಿಗೆ ಭರ್ತಿ ಆಗಿ ಹೋಗಿಬರುತ್ತಾ ಇರುತ್ತವೆ ಇಲ್ಲಿಂದ ಸದರಿ ಹಾರೋಹಳ್ಳಿ ವರಿವಿಗೆ ಮಾರ್ಗವಿಲ್ಲದ ಕಾಡಿನಲ್ಲಿ ಹಳ್ಳಕೊಳ್ಳಗಳಲ್ಲಿ ಗಾಡಿಗಳು ಹೋಗಬೇಕಾಗಿದೆ ಅನೇಕ ಸಲ ಬರ್ತಿ ಗಾಡಿಗಳ ಅಚ್ಚು ಮುಂತಾದದ್ದು ಮುರಿದು ಪ್ರಯಾಣಸ್ಥರಿಗೆ ತುಂಬಾ ನಷ್ಟವುಂಟಾಗಿದೆ ಇದಲ್ಲದೆ ನಡೆದುಹೋಗತಕ್ಕವರಿಗೆ ಮುಳ್ಳುಕಲ್ಲುಗಳ ಬಾಧೆ ವಿಶೇಷ ಆದ್ದರಿಂದ ನಮ್ಮ ತಾಲ್ಲೂಕು ಅಮಲ್ದಾರರು ಇದನ್ನು ತಮ್ಮ ಘನವಾದ ಚಿತ್ತಕ್ಕೆ ತಂದುಕೊಂಡು ಇಲ್ಲಿಂದ ಹಾರೋಹಳ್ಳಿ ವರೆಗೂ ೬ ಮೈಲಿ ರಸ್ತೆ ಹಾಕಿಸುವ ಏರ್ಪಾಡು ಮಾಡಿ ಪ್ರಯಾಣಿಕರ ಮತ್ತು ಬಡ ಜನಗಳ ಕಷ್ಟವನ್ನು ನೀಗಿಸಿ ಕೀರ್ತಿ ಪಡೆವರೆಂದು ನಂಬಿರುತ್ತೇನೆ

ಇಂಡಿಯಾ ದೇಶದ ವೃತ್ತಾಂತಗಳು

ಕಾನ್‌ಪುರದ ಲಾಯರುಗಳ ಸಂಘದ ಪ್ರೆಸಿಡೆಂಟಾಗಿದ್ದ ಪಂಡಿತ ಪೃಥಿವೀನಾಥ ಎಂಬ ಗಣ್ಯರಾದ ವಕೀಲರು ಕಳೆದ ವಾರ ಲಾಯರ ಕೆಲಸವನ್ನೂ ಲೌಕಿಕ ವೃತ್ತಿಯನ್ನೂ ತ್ಯಜಿಸಿ ಸನ್ಯಾಸಾಶ್ರಮವನ್ನು ಸ್ವೀಕರಿಸಿರುತ್ತಾರೆ

ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದ ಪಂಜಾಬಿನ ಒಬ್ಬ ಯೌವನಸ್ಥನ ನಡವಳಿಕೆಯು ತೃಪ್ತಿಕರವಾಗಿಲ್ಲವೆಂದು ಕಂಡು ಬಂದದ್ದರಿಂದ ಈತನಿಗೆ ಕೊಟ್ಟಿದ್ದ ಬ್ಯಾರಿಸ್ಟರ್ ಸರ್ಟಿಫಿಕೇಟನ್ನು ಕಿತ್ತುಕೊಂಡರು

ಕಲ್ಕತ್ತಾ ಪಟ್ಟಣದ ಒಂದು ಭಾರಿ ಹೋಗೇ ಸೊಪ್ಪಿನ ಕಾರ್ಖಾನೆಯಲ್ಲಿ ಮ್ಯಾನೇಜರಾಗಿದ್ದ ಮೆ ಸ್ಟೀಲಿಯೋ ಹೆಂಟ್ರೊ ಫೋಟೋ ಎಂಬಾತನು ಕಂಪನಿಯ ಹಣದಲ್ಲಿ ೭,೭೦೦ ರೂಪಾಯಿಯನ್ನು ತಿಂದುಹಾಕಿದನೆಂದು ಮೊಕದ್ದಮೆ ಆಗಿದೆ

ಪೂನಾ ಬಂಗಾಳ ಸ್ಟೇಟ್ ರೈಲ್ವೆ ಗಾಡಿಗಳನ್ನು ಕೆಡವಿ ಅನಾಹುತವನ್ನುಂಟು ಮಾಡಬೇಕೆಂದು ಕಳೆದ ವಾರ ಕಂಬಿಗಳ ಮೇಲೆ ಎರಡು ಭಾರವಾಗಿದ್ದ ಬೆಂಚುಗಳನ್ನು ಇಟ್ಟಿದ್ದರು ದೇವರ ದಯದಿಂದ ಗಾಡಿ ನಡೆಸುವವನು ಅದನ್ನು ದೂರದಿಂದ ನೋಡಿ ಗಾಡಿ ನಿಲ್ಲಿಸಿ ರೈಲ್ವೆ ನೌಕರರ ಸಹಾಯದಿಂದ ಅವೆರಡನ್ನೂ ಎತ್ತಿಹಾಕಿ ಗಾಡಿ ನಡಿಸಿಕೊಂಡು ಹೋದನು

ಹಿಂದುಸ್ಥಾನದ ೨೫ನೇ ನ್ಯಾಷನಲ್ ಕಾಂಗ್ರೆಸ್ ಮಹಾ ಸಭೆಯು ಈ ವರುಷದ ಅಂತ್ಯಭಾಗದಲ್ಲಿ ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ನಡೆಯುವುದು ಕಳೆದ ವಾರ ಅಲ್ಲಿ ಒಂದು ಸಭೆ ನಡೆದು ಪಂಡಿತ ಸುಂದರಲಾಲರವರು ಸ್ವಾಗತ (ರಿಸೆಪ್ಷನ್) ಕಮಿಟಿಯ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು ಸೆಕ್ರೆಟರಿಗಳನ್ನೂ ಕಮಿಟಿ ಮೆಂಬರುಗಳನ್ನೂ ಗೊತ್ತುಮಾಡಿದರು

ಕೆಲವು ದಿನಗಳ ಹಿಂದೆ ಕಲ್ಕತ್ತಾ ಪಟ್ಟಣದಲ್ಲಿ ಕೆಲವು ಬಾಬೂಗಳು ಹುಗ್ಲಿ ನದಿಯ ಮೇಲೆ ದೋಣಿಯೋಗ ಕುಳಿತು ಸಂಚರಿಸುತ್ತಾ ವಿನೋದಪಡುತ್ತಿರುವಾಗ್ಗೆ ದೋಣಿ ನಡಿಸುತ್ತಿದ್ದ ಐದು ಮಂದಿ ಆ ಬಾಬೂಗಳ ಮೇಲೆ ಬಿದ್ದು ಚೆನ್ನಾಗಿ ಹೊಡೆದು ಅವರ ಬಳಿ ಇದ್ದ ನಗನಾಣ್ಯಗಳನ್ನು ಅಪಹರಿಸಿದರು ಈಗ ಈ ಐದುಮಂದಿಯನ್ನೂ ಹಿಡಿದು ಹೈಕೋರ್ಟಿನಲ್ಲಿ ವಿಚಾರಣೆ ಮಾಡುತ್ತಿದಾರೆ

ಹಿಂದುಸ್ಥಾನದ ಐಶ್ವರ್ಯವು ವರುಷೇವರುಷ ಹೆಚ್ಚುತ್ತಿದೆ ಎನ್ನುವುದಕ್ಕೆ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನ ಲೇವಾದೇವಿಯು ಒಂದು ದೃಷ್ಟಾಂತವಾಗಿರುವುದು ಈ ಬ್ಯಾಂಕುಗಳ ಡಿಪಾಜಿಟ್ ಮೊಬಲಗು ಕಳೆದ ೧೯೦೯ ನೇ ಜನವರಿ ಅಖೈರಿನಲ್ಲಿ ೮ ಕೋಟಿ ೩೪ ಲಕ್ಷ ರೂಪಾಯಿಯಾಗಿದ್ದದ್ದು ಅದೇ ಡಿಸಂಬರ್ ಕಡೆಗೆ ೪ ಕೋಟಿ ೬೯ ಲಕ್ಷಕ್ಕೆ ಇಳಿದಿದ್ದದ್ದು ೧೯೧೦ ನೇ ಜನವರಿ ಆಖೈರಿಗೆ ೯ ಕೋಟಿ ೭೭ ಲಕ್ಷಕ್ಕೆ ಹೆಚ್ಚಿರುತ್ತದೆ

ಆಗ್ರಾ ಪಟ್ಟಣದಲ್ಲಿ ಸೈನಿಕರು ಕವಾಯಿತನ್ನು ಮಾಡಿ ಮದ್ದುಗುಂಡನ್ನು ಹಾರಿಸಿದರು ಹತ್ತದೆ ಇದ್ದ ಎರಡು ಗುಂಡುಗಳು ಹ್ಯಾಗೋ ಹಳ್ಳಿಯವರ ಕೈಗೆ ಸಿಕ್ಕಿ ಅವರದನ್ನು ಒಡೆದು ನೋಡಬೇಕೆಂದು ಕಲ್ಲಿನಿಂದ ಕುಟ್ಟಿದರು ಅವೆರಡೂ ಮಹಾ ಶಬ್ದದೊಡನೆ ಹಾರಿ ಅನಾಹುತವನ್ನುಂಟುಮಾಡಿತು ಆರು ಮಂದಿ ಹಳ್ಳಿಕಾರರು ಮೃತಪಟ್ಟರು ಇನ್ನಾರು ಜನರು ಗಾಯಪಟ್ಟರು ಇವರನ್ನು ಸರ್ಕಾರದವರು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡಿಸುತ್ತಿದಾರೆ

ಪೂನಾ ಪಟ್ಟಣದಲ್ಲಿ ಕೆಲವು ದೊಡ್ಡ ಮನುಷ್ಯರು ಸೇರಿಕೊಂಡು ಸಿವಿಲ್ ಸ್ವಭಾವದ ಮೊಕದ್ದಮೆಗಳನ್ನು ಕೋರ್ಟುಗಳಿಗೆ ಹೋಗದಂತೆ ತಡೆದು ತಾವೇ ಕಕ್ಷಿಗಾರರನ್ನು ಕರೆಸಿಕೊಂಡು ಇತ್ಯರ್ಥ ಮಾಡುತ್ತಿದಾರೆ ಇದನ್ನು ನೋಡಿ ಹೈದರಾಬಾದ್ ಸಂಸ್ಥಾನದಲ್ಲೂ ಇಂಥಾ ಪಂಚಾಯಿತಿ ಕೋರ್ಟನ್ನು ಮಾಡಿಕೊಳ್ಳಬೇಕೆಂತಲೂ, ಸಿಕಂದರಾಬಾದು, ಚದುರಘಾಟು, ಬೊಲಾರಂ ಎಂಬೀ ಸ್ಥಳಗಳಿಂದ ಬರುವ ಮೊಕದ್ದಮೆಗಳನ್ನು ಈ ಪಂಚಾಯಿತಿ ಕೋರ್ಟಿನಲ್ಲಿ ವ್ಯವಸ್ಥೆ ಮಾಡಬೇಕೆಂತಲೂ ಕೆಲವು ಮುಖಂಡರು ತೀರ್ಮಾನ ಮಾಡಿರುತ್ತಾರೆ

ಇಂಡಿಯಾ ಗವರ್ನ್‌ಮೆಂಟಿನವರು ಹೊಸದಾಗಿ ವರ್ತಮಾನ ಪತ್ರಿಕೆಗಳ ಕಾನೂನನ್ನು ರಚಿಸಿ ಪ್ಯಾಸ್ ಮಾಡಿ ಜಾರಿಗೆ ತಂದ ಕೂಡಲೆ "ಹಿಂದುಸ್ಥಾನದ ಸ್ವಾರಾಜ್ಯ" ವೆಂಬ ವರ್ತಮಾನಪತ್ರವು ಎಲ್ಲೋ ಅಚ್ಚಾಗಿ ಅಂಚೆಯ ಮೂಲಕ ಕಳೆದ ವಾರ ಕಲ್ಕತ್ತೆಯಲ್ಲಿ ಅನೇಕರ ಹೆಸರಿಗೆ ತಲಪಿರುತ್ತದೆ ಅದರಲ್ಲಿ ರಾಜದ್ರೋಹಕರವಾದ ವಾರ್ತೆಗಳೇ ವಿಶೇಷವಾಗಿರುವವು ಕೊಲೆಗಾರರಾಗಿ ಘಾತುಕ ಕೃತ್ಯವನ್ನು ನಡಿಸಿ ಗಲ್ಲಿಗೆ ಹಾಕಲ್ಪಟ್ಟ ದೇಶೀಯ ಯೌವನಸ್ಥರನ್ನು ಮಹಾ ದೇಶಭಕ್ತರೆಂದು ಈ ಪತ್ರಿಕೆಯಲ್ಲಿ ಹೊಗಳಿ ಬರೆಯಲ್ಪಟ್ಟಿರುವುದು.

ಪಂಜಾಬ್ ಅಧಿಪತ್ಯದಲ್ಲಿ ಕಬ್ಬಿನ ಬೆಳೆಯು ವರುಷೇವರುಷ ಹೆಚ್ಚುತ್ತಾ ಬಂದಿದೆ ೧೯೦೮ ನೇ ಇಸವಿಯಲ್ಲಿ ೩,೬೫,೭೦೦ ಎಕರೆ ಜಮೀನಿನಲ್ಲಿ ಕಬ್ಬಿನ ಬೆಳೆ ಮಾಡಿದ್ದರು ೧೯೦೯ ನೇ ವರುಷದಲ್ಲಿ ೪,೧೧,೭೦೦ ಎಕರೆ ಜಮೀನಿನೊಳಗೆ ಆ ಫಸಲನ್ನು ಬೆಳೆದಿರುತ್ತಾರೆ

ಕಲ್ಕತ್ತಾ ಕೋಟೆ ಪೋಸ್ಟ್ ಆಫೀಸಿನಲ್ಲಿ ವಿದುಭೂಷಣ ಸಂತ್ರಾ ಎಂಬೊಬ್ಬ ಗುಮಾಸ್ತೆಯು ತನ್ನ ಬಳಿ ಇದ್ದ ಸರ್ಕಾರದ ೧,೦೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ಅಪಹರಿಸಿ ತಲೆ ತಪ್ಪಿಸಿಕೊಂಡು ಹೋಗಿದ್ದನು ಇವನನ್ನು ಕಳೆದ ವಾರ ಪೋಲೀಸಿನವರು ಹಿಡಿದು ಲಾಕಪ್ಪಿನಲ್ಲಿ ಇಟ್ಟುಕೊಂಡಿದ್ದಾರೆ

ಕಳೆದ ವಾರ ಹಿಂದುಸ್ಥಾನದಲ್ಲಿ ೧೯,೦೦೦ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾಗಿರುತ್ತಾರೆ ಈ ಮರಣಗಳ ಪಂಟಿಕೆ ಹ್ಯಾಗಂದರೆ,—ಸಂಯುಕ್ತ ಅಧಿಪತ್ಯಗಳು ೭,೪೩೦, ಪಂಜಾಬ್ ೩,೬೬೩, ಮಧ್ಯಪ್ರಾಂತ್ಯಗಳು ಮತ್ತು ಬೀರಾರ್ ೧,೬೯೩, ರಾಜಪುಟಾನಾ ೩,೪೭೧, ಬಂಗಾಳಾ ೧೯೬೬, ಬೊಂಬಾಯಿ ಅಧಿಪತ್ಯ ೧,೧೧೬, ಬರ್ಮಾ ಅಧಿಪತ್ಯ ೩೯೫, ಮೈಸೂರು ಸಂಸ್ಥಾನ ೪೭, ಹೈದರಾಬಾದ್ ೪೭, ಮಧ್ಯ ಇಂಡಿಯಾ ೫೩ ಮದರಾಸ್ ಅಧಿಪತ್ಯ ೩೦, ಕಾಶ್ಮೀರ ೩

ಅಫ್ಘಾನಿಸ್ಥಾನದ ಅಮೀರರವರು ಹಿಂದುಸ್ಥಾನಕ್ಕೆ ದಯಮಾಡಿದ್ದಾಗ್ಗೆ ಕೆಲವು ಸೇತುವೆ ಕಟ್ಟುವ ಸಾಮಾನುಗಳನ್ನು ಕೊಂಡು ಸಾಗಿಸಿಕೊಂಡು ಹೋಗಿ ಕಾಬೂಲ್ ನದಿಯ ಮೇಲೆ ಡೊರುಂಡಾ ಎಂಬ ಸ್ಥಳದಲ್ಲಿ ಸೇತುವೆ ಕಟ್ಟಿಸಿದರು ಈ ಸೇತುವೆಯಿಂದ ಆಮದು ರಫ್ತಿಗೆ ತುಂಬಾ ಅನುಕೂಲವಾಗಿರುವುದನ್ನು ನೋಡಿ ಅವರು ಈಗ ಅದೇ ನದಿಗೆ ಇನ್ನೊಂದು ಕಡೆಯೂ ಸೇತುವೆ ಕಟ್ಟಿಸಬೇಕೆಂದು ತೀರ್ಮಾನಿಸಿ ಸಾಮಾನುಗಳನ್ನು ತರಿಸಿಕೊಳ್ಳುವ ತರದೂದು ಮಾಡುತ್ತಿದ್ದಾರೆ

ಅಲಹಾಬಾದ್ ಪಟ್ಟಣದಲ್ಲಿ "ಸ್ವರಾಜ್ಯ" ವೆಂಬ ದೇಶಭಾಷಾ ವರ್ತಮಾನ ಪತ್ರಿಕೆಯನ್ನು ಅಚ್ಚುಹಾಕಿ ಪ್ರಕಟಿಸಬೇಕೆಂದು ಒಬ್ಬಾತನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆದು ಕೇಳಿಕೊಂಡನು ಆತನನ್ನು ಮ್ಯಾಜಿಸ್ಟ್ರೇಟರು ಕರೆಸಿ ೧,೦೦೦ ರೂಪಾಯಿ ನಗದಾಗಿ ಡಿಪಾಜಿಟ್ಟು ಕಟ್ಟಿದರೆ ಅಪ್ಪಣೆ ಕೊಡುವುದಾಗಿ ತಿಳಿಸಿದರು ಆತನು ಅಷ್ಟು ಹಣ ಕಟ್ಟಲು ಚೈತನ್ಯವಿಲ್ಲವೆಂದು ಹೇಳಿದನು ಪತ್ರಿಕೆ ಅಚ್ಚಾಗಿ ಹೊರಡುವುದು ನಿಂತುಹೋಯಿತು ಹೊಸ ಪ್ರೆಸ್ ಕಾನೂನನ್ನು ಜಾರಿಗೆ ತಂದದ್ದು ಇದೇ ಮೊದಲಾಗಿದೆ

ಅಲಹಾಬಾದ್ (ಪ್ರಯಾಗ) ಪಟ್ಟಣದಿಂದ ೩೦ ಮೈಲಿ ದೂರದಲ್ಲಿರುವ ಬೆಹಿಂತಾ ಎಂಬ ಗ್ರಾಮದೊಳಗೆ ಎರಡು ತಿಂಗಳಿಂದ ಪ್ರಾಚೀನಲಿಪ್ಯನ್ವೇಷಣ ಇಲಾಖೆಯವರು ಭೂಶೋಧನೆಯನ್ನು ನಡಿಸುತ್ತಿದ್ದಾರೆ ಕ್ರಿಸ್ತ ಶಕೆಗಿಂತ ೨೦೦ ವರುಷಗಳ ಹಿಂದೆ ಅಂದರೆ ಇಲ್ಲಿಗೆ ಸುಮಾರು ೨,೧೧೦ ವರುಷಗಳ ಹಿಂದೆ ಗುಪ್ತರ ಮತ್ತು ಮೌರ್ಯರ ಕಾಲದ ಸ್ಥಳಗಳೂ ಹಲವು ವಸ್ತು ವಿಶೇಷಗಳೂ ದೊರೆಯುತ್ತಲಿವೆ ಇದುವರೆಗೆ ದೊರೆತಿರುವ ಬಾಗಗಳ ವಿಷಯವಾಗಿ ಇಷ್ಟರೊಳಗೇ ಅಧಿಕಾರಿಗಳು ರಿಪೋರ್ಟನ್ನು ಬರೆದು ಪ್ರಕಟಿಸುವವರಾಗಿದ್ದಾರೆ

ಶ್ರೀಮನ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಹೆಸರನ್ನು ಶಾಶ್ವತ ಪಡಿಸುವುದಕ್ಕೆ ಲಾರ್ಡ್ ಕರ್ಜನ್‌ರವರು ವೈಸ್‌ರಾಯರಾಗಿದ್ದಾಗ್ಗೆ ಕಲ್ಕತ್ತಾ ಪಟ್ಟಣದಲ್ಲಿ ಕಟ್ಟಬೇಕೆಂದು ಪ್ರಯತ್ನ ಮಾಡಿದ ಮೆಮೋರಿಯಲ್ ಕಟ್ಟಡದ ವಿಷಯದಲ್ಲಿ ಇದುವರೆಗೆ ಜಿಜ್ಞಾಸೆಗಳು ನಡೆಯುತ್ತಾ ಇದ್ದು ಕಳೆದ ವಾರ ಇತ್ಯರ್ಥವಾಯಿತು ಕಟ್ಟಡದ ಕಂಟ್ರಾಕ್ಟನ್ನು ಆ ಪಟ್ಟಣದಲ್ಲಿರುವ ಮಾರ್ಟಿನ್ ಕಂಪನಿಯವರಿಗೆ ವಹಿಸಿದರು ಇದಕ್ಕೆ ಸುಮಾರು ೬೦ ಲಕ್ಷ ರೂಪಾಯಿನ ತನಕ ಖರ್ಚಾಗುವುದೆಂದೂ, ಕಾಮಗಾರಿಯು ಮುಂದಿನ ತಿಂಗಳಲ್ಲಿ ಪ್ರಾರಂಭವಾದೀತೆಂದೂ ತಿಳಿದು ಬರುತ್ತದೆ

ಮಧ್ಯಪ್ರಾಂತ್ಯಗಳಲ್ಲಿರುವ ಬಸ್ತಾರ್ ಸಂಸ್ಥಾನದಲ್ಲಿ ಮರಿಯಾ ಎಂಬ ಕಾಡು ಜನರು ದಂಗೆಯೆದ್ದು ಜಗದಲ್‌ಪುರವನ್ನು ಆಕ್ರಮಿಸಿಕೊಂಡಿದ್ದಾರೆಂದು ಕಳೆದ ವಾರ ತಿಳಿಸಿದ್ದೆವಷ್ಟೆ ಈಚೆಗೆ ವಿಶಾಖಪಟ್ಟಣದಿಂದ ೧೫೦ ಮಂದಿ ಪೋಲೀಸಿನವರು ತಾ ೨೪ ರಲ್ಲಿ ಅಲ್ಲಿಗೆ ತಲಪಿದರು ಮತ್ತು ಮೇಜರ್ ಬ್ಲಾಯಿಸ್ ಬಾರ್ನ್ಸ್ ಎಂಬ ಹುದ್ದೇದಾರರು ಫಿರಂಗಿಗಳ ಸಹಿತ ೧೭೦ ಮಂದಿ ಪಂಜಾಬೀ ಸೈನಿಕರನ್ನು ನಾಲ್ಕೂವರೆ ದಿನಗಳಲ್ಲಿ ೧೪೦ ಮೈಲಿ ದೂರ ನಡಿಸಿ ಹೋಗಿ ಆ ಪಟ್ಟಣವನ್ನು ಸೇರಿದರು ಈಗ ಅಲ್ಲಿನ ಬ್ರಿಟಿಷ್ ರೆಸಿಡೆಂಟರು ದಂಗೇಕೋರರಿಗೆಲ್ಲಾ ಅವರ ಮುಖಂಡರನ್ನು ಹಿಡಿದು ತಂದು ಒಪ್ಪಿಸಿದರೆ ತುಂಬಾ ಹಿತಕಾಗುವುದೆಂದು ಹೇಳಿ ಕಳುಹಿಸಿದ್ದಾರೆ

ನಾಸಿಕದ ಕಲೆಕ್ಟರ್ ಮಿ॥ ಜಾಕ್ಸನ್‌ರವರನ್ನು ಕೊಂದುಹಾಕಿದ ಮೊಕದ್ದಮೆಯಲ್ಲಿ ಏಳು ಮಂದಿ ಅಪರಾಧಿಗಳು ಬೊಂಬಾಯಿ ಹೈಕೋರ್ಟಿನಲ್ಲಿ ದೆಯಾರ್ಫ್ತಿ ಮಾಡಲ್ಪಡುವರು ಇದಕ್ಕೆ ಫಿರ್ಯಾದಿ ತರಫು ೬೦ ಸಾಕ್ಷಿಗಳು ಇರುತ್ತಾರೆ ಈ ಕೊಲೆಗೆ ಪ್ರೋತ್ಸಾಹಪಡಿಸಿದವರನ್ನೂ, ಅದಕ್ಕೆ ಸಂಬಂಧಪಟ್ಟವರನ್ನೂ ಬೇರೆ ಬೇರೆ ಗುಂಪಾಗಿ ವಿಂಗಡಿಸಿ, ಒಂದೊಂದು ಗುಂಪನ್ನು ಒಂದೊಂದು ಕೋರ್ಟಿನಲ್ಲಿ ದಯಾರ್ಫ್ತಿ ಮಾಡುವಂತೆ ಮೂರು ಸ್ಪೆಷಲ್ ಕೋರ್ಟುಗಳನ್ನು ಏರ್ಪಡಿಸಿರುತ್ತಾರೆ ಈ ಮೊಕದ್ದಮೆಗಳ ವಿಚಾರಣೆಯು ಈ ತಿಂಗಳ ೭ನೇ ತಾ ಪ್ರಾರಂಭವಾಗುತ್ತದೆ ಆಗ್ಗೆ ಕೋರ್ಟಿನ ಒಳಗೂ ಹೊರಭಾಗದಲ್ಲೂ ವಿಶೇಷವಾದ ಪೋಲೀಸ್ ಪಹರೆಯನ್ನು ಇಡುವಂತೆ ಗೊತ್ತಾಗಿದೆ

ಕಳೆದ ೨೧ನೇ ತಾ ಸೋಮವಾರ ಅನಂತಶಯನ ಸಂಸ್ಥಾನದ ಕಾಲಾಡಿ ಎಂಬ ಸ್ಥಳದಲ್ಲಿ ಶ್ರೀಶೃಂಗೇರಿ ಸ್ವಾಮಿಗಳು ಆದಿಶಂಕರಾಚಾರ್ಯರ ಮತ್ತು ಶಾರದಾಂಬೆಯ ವಿಗ್ರಹಗಳನ್ನು ಯಥಾವಿಧಿಯಾಗಿ ಪ್ರತಿಷ್ಠೆ ಮಾಡಿದರು ಆಗ್ಗೆ ಸುಮಾರು ೩೦-೪೦ ಸಾವಿರ ಹಿಂದುಗಳು ಅಲ್ಲಿ ಸೇರಿದ್ದರು ಅಷ್ಟು ಪ್ರಜೆಗಳಿಗೂ ಅಲ್ಲಿ ಭೋಜನಾದಿಗಳು ಬಹು ತೃಪ್ತಿಕರವಾಗಿ ನಡೆದವು ಬಳಿಕ ಸ್ವಾಮಿಗಳು ಒಂದು ಸಭೆಯನ್ನು ನಡಿಸಿದರು ಬೇರೆ ಬೇರೆ ವೈದಿಕ ಸಂಘಗಳ ಪ್ರತಿನಿಧಿಗಳು ಅಡ್ರೆಸ್ಸುಗಳನ್ನೂ ಸ್ತೋತ್ರಪಾಟಗಳನ್ನು ಓದಿ ಸ್ವಾಮಿಗಳಿಗೆ ಒಪ್ಪಿಸಿದರು ಮೈಸೂರು ಸಂಸ್ಥಾನದ ಪೆನ್ಷನ್ ದಿವಾನರಾದ ಮಿ॥ ವಿ ಪಿ ಮಾಧವರಾಯರು ಸಭಿಕರ ಪರವಾಗಿ ತಮಿಳಿನಲ್ಲಿ ಒಂದು ಅಡ್ರೆಸ್ಸನ್ನು ಸ್ವಾಮಿಗಳಿಗೆ ಒಪ್ಪಿಸಿ, ಸನಾತನ ಧರ್ಮವನ್ನು ಕಾಪಾಡಿದ್ದಕ್ಕಾಗಿ ಸ್ವಾಮಿಗಳನ್ನು ಕೊಂಡಾಡಿದರು ಸ್ವಾಮಿಗಳು ತಮಿಳಿನಲ್ಲೇ ಅವರುಗಳಿಗೆಲ್ಲಾ ಪ್ರತ್ಯುತ್ತರವನ್ನಿತ್ತು, ಆ ವಿಶೇಷ ಕಾರ್ಯಕ್ಕೆ ಸಹಾಯ ಮಾಡಿದವರನ್ನು ಬಹು ಸಂತೋಷದಿಂದ ಹರಸಿದರು ದಿವಾನ್ ಬಹದೂರ್ ಎ ರಾಮಚಂದ್ರಯ್ಯರವರೇ ಮೊದಲಾದ ವೈದಿಕ ಲೌಕಿಕ ಮುಖ್ಯಸ್ಥರಿಗೆ ಬಹುಮಾನಗಳನ್ನೂ ಬಿಲ್ಲತ್ತುಗಳನ್ನೂ ಸ್ವಾಮಿಗಳು ಕೊಡಿಸಿದರು ಈ ಪ್ರತಿಷ್ಠಾ ಕಾರ್ಯಕ್ಕೆ ದಕ್ಷಿಣ ದೇಶದವರಲ್ಲದೆ ದರ್ಭಾಂಗದ ಮಹಾರಾಜರವರ ಪ್ರತಿನಿಧಿಗಳೂ ಉತ್ತರ ದೇಶದವರೂ ಪಂಜಾಬಿನವರೂ ಬಂದಿದ್ದರೆಂದು ತಿಳಿಯುತ್ತದೆ

ಕಲ್ಕತ್ತಾ ಪಟ್ಟಣದ ಹೈಕೋರ್ಟಿನಲ್ಲಿ ಶ್ಯಾಂಸುಲ್ ಆಲಂ ಎಂಬ ಪೋಲೀಸ್ ಅಧಿಕಾರಿಯನ್ನು ಕೊಂದುಹಾಕಿದ ವೀರೇಂದ್ರನಾಥ ಗುಪ್ತನಿಗೆ ಮರಣ ದಂಡನೆಯು ವಿಧಿಸಲ್ಪಟ್ಟಿತು ಅಪೀಲ್ ಮಾಯಿದೆಯ ಕಡೇ ದಿನ ಅವನು ವೈಸ್‌ರಾಯರವರಿಗೆ ಅರ್ಜಿ ಬರೆದು ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡನು ಅವನ ಅಪರಾಧವು ಕ್ಷಮಿಸಲ್ಪಡಲಿಲ್ಲ ಅವನನ್ನು ಕಳೆದ ವಾರ ಕಲ್ಕತ್ತೆಯ ಪ್ರೆಸಿಡೆನ್ಸಿ ಜೈಲಿನೊಳಗೆ ಗಲ್ಲಿಗೆ ಹಾಕಿದರು ಅವನು ಸಾಯುವುದಕ್ಕೆ ಮೊದಲು ಜ್ಯೋತೀಂದ್ರನಾಥ ಮುಖರ್ಜಿ ಎಂಬವನು ಆ ಕೃತ್ಯದಲ್ಲಿ ತನಗೆ ಸಹಾಯಕನಾಗಿದ್ದನೆಂದು ಕೈಫಿಯತ್ತು ಕೊಟ್ಟನು ಆ ಸಹಾಯಕನ ರಕ್ತಸಂಬಂಧಿಗಳನ್ನೂ ಅವರ ಕಡೆ ಲಾಯರನ್ನೂ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕರೆಸಿಕೊಂಡು, ಜೈಲಿನಲ್ಲಿ ಕೋರ್ಟು ಮಾಡಿ ವೀರೇಂದ್ರನಾಥ ಗುಪ್ತನ ಕೈಫಿಯತ್ತನ್ನು ಬರೆದುಕೊಂಡರು ಅವನು ಮೇಲ್ಕಂಡ ಮುಖರ್ಜಿಯಲ್ಲದೆ ಇನ್ನೂ ಬೇರೆ ಜನರ ಹೆಸರುಗಳನ್ನೂ ಹೇಳಿ ಅವರೆಲ್ಲಾ ತನಗೆ ಬೆಂಬಲರಾಗಿದ್ದರೆಂದು ಕೈಫಿಯತ್ತು ಕೊಟ್ಟನು ಅವನಿಗೆ ಬೇಕಾದ ಪ್ರಶ್ನೆಗಳನ್ನು ಹಾಕಿ ಕೇಳಬಹುದೆಂದು ಮ್ಯಾಜಿಸ್ಟ್ರೇಟರು ಲಾಯರಿಗೆ ತಿಳಿಸಿದರು ಲಾಯರು ಪ್ರಶ್ನೆಗಳನ್ನು ಹಾಕದೆ ಅವನನ್ನು ಇನ್ನೂ ಕೆಲವು ಕಾಲ ಗಲ್ಲಿಗೆ ಎತ್ತದೆ ತಾಮಸವಾಗಿಡಬೇಕೆಂದು ಲೆಫ್ಟಿನೆಂಟ್ ಗವರ್ನರವರಿಗೆ ಅರ್ಜಿ ಬರೆದುಕೊಂಡರು ಮ್ಯಾಜಿಸ್ಟ್ರೇಟರು ಆ ಅರ್ಜಿಯನ್ನು ಅಂಗೀಕರಿಸಲಿಲ್ಲ ಕೊಲೆಪಾತಕಿಯಾದ ಗುಪ್ತನನ್ನು ಗಲ್ಲಿಗೆ ಎತ್ತಿಸಿಬಿಟ್ಟರು ಜ್ಯೋತೀಂದ್ರನಾಥ ಮುಖರ್ಜಿಯ ಮೇಲೆ ಬಂದಿರುವ ಅಪರಾಧವು ಮುಂದಿನ ತಾ ೭ನೇ ಸೋಮವಾರ ಪರೀಕ್ಷೆಯಾಗುತ್ತದೆ

ಮಿ॥ ಪೊಲ್ಲಾರ್ಡ ಎಂಬಾತನು ಇಪ್ಪತ್ತಾರು ಮಂದಿ ಮಕ್ಕಳಿಗೆ ತರಪೇತು ಮಾಡಿ ಅವರಿಂದ ಆಡಿಸಿ ಹಾಡಿಸಿ ಜನರಿಗೆ ಸಂತೋಷ ಪಡಿಸಿ ದ್ರವ್ಯಸಂಪಾದನೆ ಮಾಡುತ್ತಿದ್ದನು ಈತನು ಆ ಮಕ್ಕಳ ಸಹಿತ ಮದರಾಸಿಗೆ ಬಂದು ಎರಡು ವಾರಗಳಿಂದ ಆಟಗಳಾಡಿಸಿದ್ದ ಹಣವನ್ನು ಸಂಪಾದಿಸಿ ಅಲ್ಲಿಂದ ಸಿಲೋನ್ ದ್ವೀಪಕ್ಕೆ ಹೊರಡುವುದಕ್ಕೆ ಏರ್ಪಾಡು ಮಾಡಿದನು ಹೊರಡುವುದಕ್ಕೆ ಹಿಂದಿನ ದಿವಸ ಮದರಾಸಿನ ಕೆಲವು ದೊಡ್ಡ ಮನುಷ್ಯರು ಮಿ ಪೊಲಾರ್ಡ್ ಎಂಬಾತನ ಎದುರಿನಲ್ಲಿ ಆತನ ಬಳಿ ಇದ್ದ ೨೬ ಮಂದಿ ಮಕ್ಕಳನ್ನೂ 'ನೀವು ಇಲ್ಲೇ ಇರುತ್ತೀರೋ? ಅಥವಾ ಈತನ ಸಂಗಡ ಸಿಲೋನಿಗೆ ಹೋಗುತ್ತೀರೋ?' ಎಂದು ಪ್ರಶ್ನೆ ಮಾಡಿದರು ಆ ಮಕ್ಕಳ ಪೈಕಿ ೧೪ ಮಂದಿ 'ಈತನ ಹಿಂಸೆಯನ್ನು ತಡೆಯಲಾರೆವು ಆತನ ಜೊತೆಯಲ್ಲಿ ಹೋಗುವುದು ನಮಗೆ ಇಷ್ಟವಿಲ್ಲ, ಇಲ್ಲೇ ಇರುತ್ತೇವೆ' ಎಂದು ಹೇಳಿಕೊಂಡರು ೭ ರಿಂದ ೧೬ ರ ವರೆಗೆ ವಯಸ್ಸಾಗಿರುವ ೧೬ ಮಂದಿ ಹೆಣ್ಣು ಮಕ್ಕಳಾಗಿದ್ದಾರೆ ಈಗ ಆತನ ಪ್ರಯಾಣವು ನಿಂತುಹೋಗಿ, ಆ ಮಕ್ಕಳ ಸ್ಥಿತಿಗತಿಗಳ ವಿಷಯದಲ್ಲಿ ವಿಚಾರಣೆ ನಡೆಯುತ್ತಿರುವಂತೆ ತಿಳಿಯುತ್ತೇವೆ ಈ ಕಂಪನಿಯಲ್ಲಿದ್ದ ಸಣ್ಣ ವಯಸ್ಸಿನ (ಮೈನರ) ೧೫ ಮಂದಿ ಹುಡುಗರನ್ನೂ ಹುಡುಗಿಯರನ್ನೂ ಮದರಾಸ ಪಟ್ಟಣದ ಮಿ॥ ಎಚ್ ಬಿ ವಲ್ಲಾರ ಯವರೂ ಮಿ॥ ಎಫ್ ರೋಸ್ ಯವರೂ ಕರೆದುಕೊಂಡು ಹೋಗಿರುತ್ತಾರೆ ಕಂಪನಿಯ ಮ್ಯಾನೇಜರಾದ ಮಿ॥ ಪೊಲ್ಲಾರ್ಡ ಯವರು ಆ ಮಕ್ಕಳು ತನ್ನ ಪೋಷಣೆಯಲ್ಲಿದ್ದವರೆಂದೂ, ಅವರನ್ನು ಮೇಲ್ಕಂಡವರು ಬಲಾತ್ಕಾರದಿಂದ ಕರೆದುಕೊಂಡು ಹೋಗಿದ್ದಾರೆಂದೂ, ಅವರನ್ನು ತಮ್ಮ ವಶಕ್ಕೆ ಕೊಡಿಸಿಕೊಡಬೇಕೆಂದೂ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದಾರೆ

ವಿದೇಶ ವರ್ತಮಾನಗಳು

ಸೊಟೀಮಿಂಡಿಯಾ ಎಂಬ ಹಡಗು ಆಸ್ಟ್ರೇಲಿಯಾದಿಂದ ಮೂವತ್ತು ಲಕ್ಷ ರೂಪಾಯಿನ ಚಿನ್ನವನ್ನು ಬರ್ತಿಮಾಡಿಕೊಂಡು ಬೊಂಬಾಯಿಗೆ ಬರುತ್ತಲಿದೆ

ಇಟಲಿ ರಾಜ್ಯಕ್ಕೆ ಸೇರಿದ ಪೆರೂಗಿಯಾ ಎಂಬ ಪಟ್ಟಣದ ಬಳಿ ಗುಬ್ಬಿಯೋ ಎಂಬ ಸ್ಥಳದಲ್ಲಿದ್ದ ಪುರಾತನಕಾಲದ ದಿವ್ಯವಾದ ಅರಮನೆಯು ಪ್ರವಾಹಗಳ ದೆಸೆಯಿಂದ ಕುಸಿದುಬಿದ್ದು ನಾಶವಾಯಿತು

ಫ್ರಾನ್ಸ್ ಸಂಸ್ಥಾನದಲ್ಲಿ ಸೀನ್ ನದಿಯಲ್ಲಿ ಇನ್ನೂ ಪ್ರವಾಹ ಹೆಚ್ಚುತ್ತಾ ಬಂದಿದೆ ಎಂದೂ, ಪ್ಯಾರಿಸ್ ಪಟ್ಟಣದ ಪೂರ್ವ ಭಾಗಗಳೆಲ್ಲಾ ನೀರಿನಲ್ಲಿ ಮುಳುಗಿ ಹೋಗಿವೆ ಎಂದೂ ತಾ ೨೫ ರಲ್ಲಿ ತಂತೀವರ್ತಮಾನ ಬಂತು

ರಷ್ಯಾರಾಜ್ಯಕ್ಕೆ ಸೇರಿದ ಮಾಸ್ಕೋ ಪಟ್ಟಣ ಹತ್ತಿರ ಬೊಗೋರಾಡ್ಸ್ಕ್ ಎಂಬ ಊರಿನಲ್ಲಿ ೧೧೩ ವರುಷದ ಒಬ್ಬ ವೃದ್ಧ ಸಿಪಾಯಿಯು ಕಾಲವಾದನು ಈತನು ಸೈನ್ಯವನ್ನು ಬಿಟ್ಟಂದಿನಿಂದ ರೈತನಾಗಿ ಜಮೀನು ಸಾಗುವಳಿ ಮಾಡಿಕೊಂಡು ಸುಖವಾಗಿದ್ದನು

ಹಿಂದುಸ್ಥಾನದ ವೈಸ್‌ರಾಯಿ ಕೆಲಸಕ್ಕೆ ಇನ್ನೂ ಯಾರನ್ನೂ ನೇಮಕ ಮಾಡಿಲ್ಲವೆಂದೂ, ಲಾರ್ಡ್ ಕಿಚ್ನರ್ ಯವರಾಗಲಿ ಲಾರ್ಡ್ ಮೆಕ್ಡೊನೆಲ್ ಯವರಾಗಲಿ ವೈಸ್‌ರಾಯರಾಗುತ್ತಾರೆಂಬುವುದು ನಿಜವಲ್ಲವೆಂದೂ ವಿಲಾಯಿತಿಯ ತಂತೀ ವರ್ತಮಾನವು ತಿಳಿಸುತ್ತದೆ

ಉತ್ತರ ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಪಟ್ಟಣದಲ್ಲಿ ಹಿಂದುಸ್ಥಾನದ ಪ್ರಜೆಗಳು ಈಗ ಹತ್ತು ಸಹಸ್ರಮಂದಿ ಇರುತ್ತಾರೆಂದೂ, ಈಗಲೂ ತಿಂಗಳೊಂದಕ್ಕೆ ೩೦೦ ಮಂದಿಯಂತೆ ಅಲ್ಲಿಗೆ ಹೋಗಿ ಇಳಿಯುತ್ತಿದ್ದಾರೆಂದೂ ಅಲ್ಲಿನ ಒಂದು ಸಂಪಾದಕರು ಪ್ರಕಟಿಸಿರುತ್ತಾರೆ

ಏಷ್ಯಾ ಖಂಡದ ಸೈಬೀರಿಯಾ ದೇಶದಲ್ಲಿ ಈಗ ಅಪಾರವಾದ ಚಳಿ ಪ್ರಾಪ್ತವಾಗಿರುವುದು ಅಲ್ಲಿ ಇಷ್ಟೊಂದು ಚಳಿಯ ಹವಾ ಪ್ರಾಪ್ತವಾಗಿ ಇಲ್ಲಿಗೆ ಸುಮಾರು ೧೫೦ ವರುಷವಾಯಿತೆಂದೂ, ಚಳಿ ಆಗಲೂ ಈಗಿನಷ್ಟು ದೀರ್ಘಕಾಲ ಇರಲಿಲ್ಲವೆಂದೂ, ಈ ಚಳಿಯನ್ನು ತಡೆಯಲಾರದೆ ಇರ್ಕಟ್ಸ್ಕ್ ಪ್ರಾಂತ್ಯದಲ್ಲಿ ನೂರಾರು ಜನರು ಪ್ರಾಣಬಿಟ್ಟರೆಂದೂ ವರ್ತಮಾನಬಂದಿದೆ

ನಕ್ಷತ್ರಮಂಡಲದಲ್ಲಿರುವ ಯಾವುದಾದರೊಂದು ಗ್ರಹಕ್ಕೆ ಸಮಾಚಾರವನ್ನು ಕಳುಹಿಸುವ ಇಲ್ಲವೇ ಅವರ ನಿವಾಸವನ್ನು ತಿಳಿಯಲು ಸಾಧ್ಯವಾಗುವ ಉಪಾಯವನ್ನು ಯಾವ ಶಾಸ್ತ್ರಜ್ಞನು ಕಂಡುಹಿಡಿಯುವನೋ ಅಂಥವನಿಗೆ ಏಳೂವರೆ ಲಕ್ಷ ರೂಪಾಯಿ ಬಹುಮಾನ ಕೊಡುತ್ತೇನೆಂದು ಪ್ರಿನ್ಸ್ ಪಿ ಗುಜ್‌ಮಾನ್ ಎಂಬೊಬ್ಬ ಫ್ರೆಂಚನು ಪ್ರಕಟಮಾಡಿರುವನು

ಕಳೆದ ೧೯೦೮ ನೇ ಇಸವಿಯಲ್ಲಿ ರಷ್ಯಾರಾಜ್ಯದೊಳಗೆ ಸರ್ಕಾರದವರು ೮೩೫ ಜನರಿಗೆ ಮರಣದಂಡನೆಯನ್ನು ವಿಧಿಸಿದರು ಹೋದ ವರುಷ ೫೪೩ ಮಂದಿ ಗಲ್ಲಿಗೆ ಎತ್ತಲ್ಪಟ್ಟರು ಇನ್ನು ಮುಂದೆ ಪ್ರಜಾ ಸಾಮಾನ್ಯಕ್ಕಾಗಲಿ ಗವರ್ನಮೆಂಟಿಗಾಗಲಿ ಕಂಟಕ ಪ್ರಾಯರಾದವರನ್ನು ಗಡೀಪಾರು ಮಾಡದೆ ಸಜಾ ಶಿಕ್ಷೆಗೆ ಗುರಿಮಾಡಬೇಕೆಂದು ಅಲ್ಲಿನ ಡ್ಯೂಮಾ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುತ್ತಿದೆ

ಆಫ್ರಿಕಕ್ಕೆ ಸೇರಿದ ಸೋಮಾಲಿ ಲ್ಯಾಂಡ್ ಎಂಬ ಪ್ರದೇಶದಲ್ಲಿ ಮುಲ್ಲಾ ಎಂಬ ಮುಖಂಡನ ಹಿಂಬಾಲಕರು ಈಚೆಗೆ ಅಲ್ಲಿರುವ ಬೇರೆಬೇರೆ ಪಂಗಡದ ಪ್ರಜೆಗಳ ಮೇಲೆ ಬಿದ್ದು ಕೊಲೆ ಮುಂತಾದ ಕ್ರೂರಕೃತ್ಯಗಳನ್ನು ನಡಿಸಲಾರಂಭಿಸಿದಾರೆ ಕಳೆದ ವಾರ ಅವರು ಒಂದು ಕಡೆ ೬೦ ಜನರನ್ನು ಕೊಂದು ಹಾಕಿ, ೩೦,೦೦೦ ಒಂಟೆಗಳನ್ನು ಲೂಟಿಮಾಡಿ ಎತ್ತಿಕೊಂಡು ಹೋಗಿರುವರು ಈ ಜನರ ದಾಂಧಲೆಯನ್ನೂ ಕ್ರೂರಕೃತ್ಯಗಳನ್ನೂ ತಡೆದು ಅಡಗಿಸುವುದಕ್ಕೆ ಇಂಗ್ಲಿಷ್ ಸರ್ಕಾರದವರು ಸೈನ್ಯವನ್ನು ಜೊತೆಮಾಡಿ ಕಳುಹಿಸುವವರಾಗಿದ್ದಾರೆ

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಫಿಲಡೆಲ್ಫಿಯಾ ಪಟ್ಟಣದ ಬೀದಿಗಳಲ್ಲಿ ಸಂಚರಿಸುವ ಟ್ರಾಂ ಎಂಬ ಗಾಡಿಗಳ ನೌಕರರು ತಮ್ಮ ಕೆಲಸಗಳನ್ನು ಮಾಡದೆ ಕಂಪನಿಯವರ ಮೇಲೆ ತಿರುಗಿ ಬಿದ್ದು ೨೯೬ ಗಾಡಿಗಳನ್ನು ಒಡೆದು ಬೆಂಕಿ ಹಾಕಿ ನಾಶಮಾಡಿದರು ಕಂಪನಿಯ ಉದ್ಯೋಗಸ್ಥರನ್ನು ಹೊಡೆದು ಹಿಂಸೆ ಮಾಡಿದರು ಇದುವರೆಗೆ ೧೦೦ ಮಂದಿಯನ್ನು ದಸ್ತಗಿರಿಮಾಡಿದ್ದರೂ ಪೋಲೀಸ್ ಶಿಬ್ಬಂದಿಯು ಸಾಲದೆ ಇನ್ನೂ ೩,೦೦೦ ಮಂದಿಯನ್ನು ಪೋಲೀಸ್ ನೌಕರಿಗೆ ಸೇರಿಸಿಕೊಂಡು ಪ್ರಜಾಶಾಂತಿಯನ್ನು ಕಾಪಾಡುತ್ತಿದ್ದಾರೆಂದು ತಿಳಿದು ಬಂದಿದೆ

ಟರ್ಕೀ ರಾಜ್ಯದ ಮಾಜಿ ಸುಲ್ತಾನ್ ಅಬ್ದುಲ್ ಹಮೀದ್‌ರವರು ಸಂಸಾರ ಸಮೇತ ತುರ್ಕೀ ರಾಜ್ಯವನ್ನು ಬಿಟ್ಟು ಹೋಗಿ ಸ್ಯಾಲೋನಿಕಾ ಎಂಬ ತೀರಪಟ್ಟಣದಲ್ಲಿ ವಾಸಮಾಡುತ್ತಿದ್ದಾರೆ ಕಳೆದ ವಾರ ಇವರು ಕಾಲವಾದರೆಂದು ವರ್ತಮಾನ ಹುಟ್ಟಿತ್ತು ಈಚೆಗೆ ವಿಚಾರಿಸುವಲ್ಲಿ ಅವರ ಕುಮಾರ್ತೆಯರು ವಿವಾಹಮಾಡಿಕೊಳ್ಳಬೇಕೆಂದು ಅಲ್ಲಿಂದ ಹೊರಟು ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ಲಿಗೆ ಬಂದರೆಂದೂ ಈ ಕಾರಣವನ್ನು ತಿಳಿಯದೆ, ಅವರು ವಾಪಸು ಬಾರದ್ದನ್ನು ನೋಡಿ ಅವರ ತಂದೆಯು ಕಾಲವಾಗಿರಬೇಕೆಂದು ಜನರು ಹುಟ್ಟಿಸಿದರೆಂದೂ ಮಾಜಿ ಸುಲ್ತಾನರವರು ಸೌಖ್ಯವಾಗಿದ್ದಾರೆಂದೂ ಗೊತ್ತಾಗುತ್ತದೆ

ಕಳೆದ ವಾರ ವಿಲಾಯಿತಿಯಲ್ಲಿ ನಾಲ್ಕೈದು ದಿನಗಳ ವರೆಗೆ ಬಹು [illegible] ಅಪೂರ್ವವಾದ ಸುಂಟರಗಾಳಿ ಬೀಸಿತು ಅನೇಕ ಕಡೆಗಳಲ್ಲಿ ದೋಣಿಗಳೂ ಹಡಗುಗಳೂ ಒಡೆದು ಒಡೆದು ನಷ್ಟವಾದದ್ದಲ್ಲದೆ ಹಲವರು ಪ್ರಾಣ ಕಳೆದುಕೊಂಡರು [illegible] ಎಂಬ ಇಟಲಿಯ ಜಹಜು ಮುಳುಗಿ ೨೬ ಮಂದಿ ಜನರು ಮೃತಪಟ್ಟರು ಲಂಡನ್ ಪಟ್ಟಣದಲ್ಲಿ ಈ ಸುಂಟರಗಾಳಿಯಿಂದ ಆದ ನಷ್ಟವು ಅಪಾರವಾಗಿರುತ್ತದೆ ಮನೆಗಳ ಮೇಲ್ಛಾವಣಿಗಳು ಕಿತ್ತು ಹಾರಿಹೋದವು ಆ ಗಡಿ ಬಾಗಿಲುಗಳು ಒಡೆದು ಮುರಿದುಬಿದ್ದವು ಉದ್ಯಾನವನಗಳ ಸೌಂದರ್ಯವೆಲ್ಲಾ ಕೆಟ್ಟಿತು ಹಲವು ಭಾರೀ ಕಟ್ಟಡಗಳು ಕೂಡ ಈ ಬಿರುಗಾಳಿಗೆ ಸಿಕ್ಕಿ ಬಹಳ ನಷ್ಟವುಂಟಾಗಿದೆ

ಒಬ್ಬ ಹಿಂದೂ ಯೌವನಸ್ಥನು ಕೆಲವು ದಿನಗಳ ಕೆಳಗೆ ಈಜಿಪ್ಟ್ ರಾಜ್ಯದ ರಾಜಧಾನಿಯಾದ ಕೈರೋ ಪಟ್ಟಣಕ್ಕೆ ಹೋಗಿ ಒಂದು ಹೋಟೆಲಿನಲ್ಲಿ ಇಳಿದುಕೊಂಡು ಡ್ಯೂಕ್ ಆಫ್ ಕನ್ನಾಟ್ ಯವರು ಪತ್ನಿ ಸಹಿತ ಅಲ್ಲಿಗೆ ದಯಮಾಡುವುದನ್ನು ಎದುರು ನೋಡುತ್ತಿದ್ದನು ಸಿಂಗಪುರದ ಪೋಲೀಸಿನವರು ಕೈರೋ ಪೋಲೀಸಿನವರಿಗೆ ಆ ಮನುಷ್ಯನ ಮೇಲೆ ಗುಮಾನಿ ಇಡಬೇಕೆಂದು ಎಚ್ಚರಿಕೆ ಕೊಟ್ಟರು ಅದರಂತೆ ಕೈರೋ ಪೋಲೀಸಿನವರು ಅವನ ಮೇಲೆ ನಿಗಾ ಇಟ್ಟು ಅವನ ನಡವಳಿಕೆಯನ್ನೂ ಚಲನೆಯನ್ನೂ ನೋಡಿಕೊಳ್ಳುತ್ತಿರುವಲ್ಲಿ ಆ ಯೌವನಸ್ಥನು ಇದ್ದಕಿದ್ದ ಹಾಗೆ ಅಲ್ಲಿಂದ ಜಹಜು ಹತ್ತಿ ಇಟಲೀ ರಾಜ್ಯಕ್ಕೆ ಸೇರಿದ ನೇಪಲ್ಸ್ ಪಟ್ಟಣವನ್ನು ಕುರಿತು ಪ್ರಯಾಣ ಮಾಡಿಬಿಟ್ಟನು ಕೆಲವು ದಿನಗಳ ಹಿಂದೆ ಬೊಂಬಾಯಿಗೆ ಲೈಸೆನ್ಸ್ ಇಲ್ಲದೆ ಪಿಸ್ತೂಲುಗಳನ್ನು ತಂದು ಸಿಕ್ಕಿಬಿದ್ದು ಸಜಾ ವಿಧಿಸಲ್ಪಟ್ಟ ಯೌವನಸ್ಥನಿಗೆ ಅವನು ಸಂಗಡಿಗನಾಗಿದ್ದನೆಂದು ಹೇಳುತ್ತಾರೆ

ಈಜಿಪ್ಟ್ ರಾಜ್ಯವನ್ನು ಇಂಗ್ಲಿಷ್ ಗವರ್ನಮೆಂಟಿನವರು ತಮ್ಮ ಸಂರಕ್ಷಣೆಯಲ್ಲಿಟ್ಟುಕೊಂಡು ಪರಿಪಾಲನೆ ಮಾಡುತ್ತಿದ್ದಾರಷ್ಟೆ ಇಂಥಾ ಅಧಿಕಾರಿಗಳನ್ನೆಲ್ಲಾ ಕೊಂದು ಇಲ್ಲವೇ ಕ್ರೂರಕೃತ್ಯಗಳನ್ನು ನಡಿಸಿ ಇಂಗ್ಲಿಷರನ್ನು ಅಲ್ಲಿಂದ ಓಡಿಸಿ ತಾವೇ ಸ್ವತಂತ್ರರಾಗಬೇಕೆಂದು ಕೆಲವು ದೇಶೀಯ ಮುಸಲ್ಮಾನ ಜನರು ಈಗೀಗ ಗುಂಪು ಕಟ್ಟಿ ಮಸಲತ್ತುಗಳನ್ನು ಮಾಡುತ್ತಿದ್ದಾರೆ ಕಳೆದ ವಾರ ಈ ಗುಂಪಿನವರ ಪೈಕಿ ಒಬ್ಬ ಮಹಮದೀಯನು ರಾಜಧಾನಿಯಾದ ಕೈರೋ ಪಟ್ಟಣದಲ್ಲಿ ಬೂತ್ರಾಸ್ ಪಾಷಾ ಎಂಬ ಮಂತ್ರಿಯವರಿಗೆ ಗುರಿಕಟ್ಟಿ ರಿವಾಲ್ವರ್ ಗುಂಡು ಹೊಡೆದನು ಸಮೀಪದಲ್ಲಿದ್ದವರು ಆ ಕೊಲೆಪಾತಕಿಯನ್ನು ಕೂಡಲೇ ದಸ್ತಗಿರಿ ಮಾಡಿ, ಗಾಯಪಟ್ಟ ಪಾಷಾರವರನ್ನು ಆಸ್ಪತ್ರೆಗೆ ಸಾಗಿಸಿದರು ಚಿಕಿತ್ಸೆಯಿಂದ ಪ್ರಯೋಜನವಾಗದೆ ಆ ಮಂತ್ರಿಯು ಮೃತಪಟ್ಟಿರುತ್ತಾರೆ ಸರ್ಕಾರದವರು ಈಚೆಗೆ ಇನ್ನೂ ಅನೇಕ ಮಂದಿಯನ್ನು ದಸ್ತಗಿರಿಮಾಡಿದ್ದಾರೆಂದೂ, ಖೆಡೀವ್ ರಾಜರವರೂ ಸರ್ ಎಲ್ಡನ್ ಗಾಸ್ಟ್ ಎಂಬ ಇಂಗ್ಲಿಷ್ ಸರ್ವಾಧಿಕಾರಿಯೂ ಈ ವರ್ತಮಾನವನ್ನು ಕೇಳಿ ಕೈರೋ ಪಟ್ಟಣಕ್ಕೆ ಬಂದರೆಂದೂ ತಂತೀವರ್ತಮಾನ ಬಂದಿದೆ

Printed and Published by the Rev H Gulliford, Proprietor and Manager, Wesleyan Mission Press, Mysore 3/3/1910

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸರ್ ೧೯೧೦ ನೇ ಇಸವಿ ಮಾರ್ಚಿ ತಾರೀಖು ೧೦ ನೇ ಗುರುವಾರ. ಸಂಚಿಕೆ ೪೧

ನಮ್ಮ ಮಿತ್ರಮಂಡಲಿಗೆ, ವಿನಂತಿ.

32-1



ರೈಲ್ವೆ ರೆಗ್ಯುಲೇಟರ್ ವಾಚಿನ ಮುಂಚಿನ ಕ್ರಯ ೪ ೧೨ ೦ ರೂಪಾಯಿ ಎಂಬುವದು ಸರ್ವರಿಗೂ ತಿಳಿದ ವಿಷಯವೇ ಆಗಿದೆ ಇನ್ನು ಕೆಲವು ದಿವಸಗಳವರೆಗೆ ವ ... ರೂಪಾಯಿಗೆ ಕೊಡುತ್ತೇವೆ ೩ ೭ ... ಪೋಸ್ಟೇಜು ಬಲಾಯಿದಾ

ಮಿತ್ರರೇ ನಾವು ಜನವರೀ ಪ್ರಜೆಕ್ಟೇಷನ್‌ಗಾಗಿ ಇಷ್ಟಿದ್ದ ವಾಚುಗಳ ಪೈಕಿ ರೈಲ್ವೆ ರೆಗ್ಯುಲೇಟರ್ ವಾಚುಗಳು ಪ್ರತಿಪಕ್ಷದಲ್ಲಿಯೂ ಬಹಳ ಮಿಚಾಗಿ ಸ್ಟಾಕ್‌ಮುಗಿ ... ಬಂದಿದೆ ಜಾಗ್ರತೆಯಾಗಿ ಆರ್ಡರ್ ಕಳುಹಲ್ಲಿ ನಿಮಗೂ ಇದೇ ಬೆಲೆಗೆ ಸಿಕ್ಕುತ್ತೆ

ಸ್ಟಾಕ್ ಮುಗಿದನಂತರ ಈ ಬೆಲೆಗೆ ಮಿಂಡಿತ ಸಿಕ್ಕಲಾರದೆಂದು ಈ ಮೂಲಕ ಎಚ್ಚರಿಸಿದೆ ಮತ್ತು ಕ್ಯಾಲೆಂಡರ್ ವಾಚ್ ತಾರೀಖು, ತಿಂಗಳು ಮತ್ತು ವಾರ ಇವೆಲ್ಲಾ ಈ ಒಂದು ವಾಚಿನಿಂದಲೇ ತಿಳಿಯುತ್ತೆ ಕ್ರಯ ೧೬ಕ್ಕೆ ರೂ ೩೦ ೦ ೦ ಗೋಲ್ಡು ಗಿಲ್ಟು ವಾಚ್ ಸರಪಳಿ ೧ಕ್ಕೆ ಕ್ರಯ ರೂ ೦ ೬ ೦

ಸೂಚನೆ —ಮೂರು ವಾಚ್ ಒಂದೇಸಾರಿ ತರಿಸುವರಿಗೆ ಪ್ಯಾಕಿಂಗ್ ಛಾರ್ಜು ವ ... ಒಂದೇಸಾರಿ ಆರು ವಾಚ್ ತರಿಸುವರಿಗೆ ಪೋಸ್ಟೇಜ್ ಫ್ರೀ ಒಂದೇಸಾರಿ ಹತ್ತು ವಾಚ್ ತರಿಸುವರಿಗೆ ಒಂದು ವಾಚ್ ಇನಾಂ ಅಮೇರಿಕನ್ ಕೆರೋಸಿನಾಯಿಲ್ ಪ್ಯಾಂಟಲ್ ಲ್ಯಾಂಪು ... ಕಡಮೆ ಪ್ರಕಾರ (10) ಮೇಣದ ಬತ್ತಿಗಳನ್ನು ಒಂದೇ ಸಾರಿ ಹಚ್ಚಿಸಿದರೆ ಉಂಟಾಗುವ ಪ್ರಕಾಶ ಇದೊಂದು ಲ್ಯಾಂಪಿನಿಂದಲೇ ಉಂಟಾಗುತ್ತೆ ನಿರ್ಮಿಸ ಬರಿಯುವದಕ್ಕೆ ಸ್ಥಳಸಂಕೋಚ ಲ್ಯಾಂಪು ತರಿಸಿ ಪರೀಕ್ಷಿಸಿದರೆ ವ್ಯಕ್ತವಾಗುತ್ತೆ ಪತ್ತಿಸುವ ವಿಧಾನ ಲ್ಯಾಂಪಿನ ಸಂಗಡಲೇ ಇರುತ್ತೆ ಕ್ರಯ ಫುಲ್ ಸೆಟ್ಟು 1ಕ್ಕೆ ರೂ ೩ ೮ ೦ ಪೋಸ್ಟೇಜು ವಿ ಪಿ ಛಾರ್ಜು ಅಲ್ಲದೆ ವಿ ಪಿ ಯಿಂದಲೂ ರವಾನಿಸುತ್ತೇವೆ

ನಮ್ಮ ವಿಳಾಸ —ಎಂ ಎಸ್ ಸಿದ್ದಪ್ಪ ಅಂಡ್ ಬ್ರದರ್ಸ್ ಜನರಲ್ ಮರ್ಚೆಂಟ್ಸ್ ಕೃಷ್ಣರಾಜಪುರಹಲ್ಲಿ ಮೈಸೂರು

ಮನ ಕ್ರಯಕ್ಕೆ ಅಥವಾ ಭೋಗ್ಯಕ್ಕೆ"

31 2

ಮೈಸೂರು ಶಿವರಾಮ ಪೇಟೆಯ ದೊಡ್ಡ ಬೀದಿಯಲ್ಲಿ ... ಗುಮಾಸ್ತ ... ಸೇರಿದ್ದ ... ಈ ಕರ್ ... ವಿಳಾಸ ... ದೇವರಾಜ ಮೊಹಲ್ಲ ... ದೊಡ್ಡ ಮನೆ ... ವಿಷಯಗಳನ್ನು ... ತಿಳಿದುಕೊಳ್ಳಬಹುದು

ಎ ಶ್ರೀಕಂಠಯ್ಯ, ರೇಂಜ್ ಆಫೀಸರು ಪೋಲೀಸ್ ...

ಇಂಗ್ಲೀಷು ಕಲಿಯುವ ಪುಸ್ತಕ

31 1

ಈ ಪುಸ್ತಕದ ಸಹಾಯದಿಂದ ಇಂಗ್ಲೀಷು ಭಾಷೆಯನ್ನು ಓದುವದಕ್ಕೂ ಬರೆಯುವದಕ್ಕೂ ಮಾತನಾಡುವದಕ್ಕೂ ಸಹ ಉಪಾಧ್ಯಾಯರ ಸಹಾಯವಿಲ್ಲದೆ ... ಕಲಿಯಬಹುದು ಇಂಗ್ಲೀಷ್ ... ಕ್ರಯ ೭ ರೂಪಾಯಿ ... ವಿಳಾಸ —

ವಿ ರ ... ಮೈಸೂರು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಹಳ ಉಪಯೋಗಕ್ಕೋಸ್ಕರವೇ ಮತ್ತು ಈಗ ಸಮೀಪಿಸಿರುವ ರೋಗಗಳಿಗೆ ತಕ್ಕಂತ ಗುಣಕಾರಿಯು

26 2

ತಲೆನೋವು, ಗಂಟು ಊದುವದು, ವಾತ ಸಂಧಿವಾತ ಉಳುಕು ಊತ ಗಂಟು, ಗಂಟುನೋವು, ಅರ್ಧಾಂಗವಾಯು ಎದೆನೋವು ಘಾಯ, ಜಡಿಮು, ಇತ್ಯಾದಿ ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ... ಡಬ್ಬಿ ಒಂದರ ಕಿಮ್ಮತ್ತು ೦-೩-೦ ೧೨ ಡಬ್ಬಿಗಳಿಗೆ ೪-೦-೦

ಅಸ್ತಾ ಮಿಶ್ರಣ	೨-೦-೦
ಹೇಳುಕರಡಿಕದ ಮದ್ದು	೦ ೮-೦
ವಜ್ರಗುಟಿಕ—ಧಾತುವೃದ್ಧಿ ರಕ್ತಶುದ್ಧಿ	೧ ೦-೦
ಸುಂದರೀ ತೈಲ—ಮುದ್ದಿ ನಾಗಿಣಿಗೆ	೦ ೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೮-೦
ಕೇತ್ರಾಂಜನ—ಮಂದ ದೃಷ್ಟಿಗೆ	೦-೪-೦
... ಮುಲಾಮು—ಮಕ್ಕಳ ... ಗೆ	೦ ೩ ೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧-೦ ೦
... ಚೂರ್ಣ—... ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಸ್ವದೇಶಿ ಬಟ್ಟೆಗಳು! ಸ್ವದೇಶಿ ಬಟ್ಟೆಗಳು!

14 10

ನಮ್ಮಲ್ಲಿ ಈಗ ವ್ಯಾಪಾರಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಡಿನಲ್ಲಿ ಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂಥವುಗಳಾಗಿವೆ ಬಣ್ಣವು ಹೋಗುವದಿಲ್ಲ ಬೆಲೆಯು ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶಿ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು ಗಜ ಒಂದಕ್ಕೆ ೫ ಆಣೆಯಿಂದ ... ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ -ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ನೇಟ್ಟಿಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(195 ಪುಟಗಳು, ಸೊಗಸಾದ ಒಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇರುತಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕಾ ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಒಳ್ಳೆ ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವದು

ಮೈಸೂರು ಡ್ರಾಯಿಂಗ್ ಪುಸ್ತಕಗಳು.

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಹಾಳೆ) ಪ್ರತಿಯೊಂದಕ್ಕೆ	0—0—6
(80 ಹಾಳೆ)	0—1—0
(160 ಹಾಳೆ)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-10]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ., ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜು ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶ್ರೀಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ ಇದೇ ಮಾರ್ಚಿ ಆಖೈರಿನೊಳಗಾಗಿ 'ವೃತ್ತಾಂತ ಪತ್ರಿಕೆ'ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುರಸತ್ತಿ ಕೊಡುವೆವು ಆನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರೆಯಿರಿ ವಿಳಾಸ:—

ಮ್ಯಾನೇಜರ್ ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ 11 10

ಇದು ಸಾಧಾರಣ ಜ್ವರ ಚಳಿಜ್ವರ, ಮರುಕಜ್ವರ ... ಶೀತಜ್ವರ, ವಾತಜ್ವರ, ... ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಬಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿ ಕೊಟ್ಟ ... ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧಿಯಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ... ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೬ ಆಣೆ, ೧ ರೂ , ... ರೂ ... ೧೧ ರೂ ... ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಡಿಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಆಸಿಸ್ಟೆಂಟ್ ಸರ್ಜನ್ ಗಣಪತಿಯವರು—ತೆನ್ನಿಯ ಓಮಂ ಕರ್ಪೂರವನ್ನು ನಾನೂ ನನ್ನ ಪಾಟೀದಾರರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಚಾರ —

ತೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

... ಮದರಾಸ್.

ಕ್ಲೆವೆಂಟರ ಮ್ಯಾಜಿಕ್ ಬಾಂ ತೈಲವು

5 12

ತಲೆನೋವು ವಾಯುನೋವು ಸೆಳತ, ಗಂಟ್ಲುನೋವು ವಾತರ್ವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು,—ಇವುಗಳಿಗೆ ಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ನಿವಾರಣೆಯಾಗಿ ನಿಶ್ಚಿತವಾಗಿ ವಾಸಿಯಾಗು ತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿ ನೋಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುರು ತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷ ಧದ ಶಕ್ತಿಯು ಅದ್ಭುತವಾದದ್ದು ಅದರಿಂದಲೇ ಅದನ್ನು ಅಷ್ಟು ಹೆಚ್ಚಾಗಿ ಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು ಈ ಔಷಧವನ್ನು ಒಂ ದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತರ ಇಟ್ಟರ ಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನ ವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆವರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿ ಯಾಗುವುದು ವ್ಯಾಪಾರಸ್ತರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ವಿಕರಿಯಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ— ಜಿ ಎಸ್ ಕನ್ನಯಚೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಂ ಪೀಟರ್ಸ್

೩೩ ನಾರಾಯಣಮೊದಲಿ ಬೀದಿ ಪೇಟೆ ಮದರಾಸ್

ಔಷಧ ಆಹಾರ್ಯ ಮತ್ತು ಗೂಡಾಗೂಡುವಕ್ಕೆಂತೆಲೂ

ರಕ್ತ ಕರ್ನಾ ಎನುವ ಉತ್ತಮ

SCOTT'S EMULSION 6 10

(ಸ್ಕಾಟ್ಸ್ ಎಮಲ್ಷನ್)

ಶ್ವಾಸಕೋಶದ ರೋಗಗಳಿಗೂ ಶೀತ ... ಅಜೀರ್ಣ ... ಗಳು ... ಅಧಿಕ ಬಲ ... ಬಲಹೀನ ... ಗಳಿಗೂ ಒಡೆಯುತ್ತದೆ ... ಸ್ಕಾಟ್ಸ್ ಎಮಲ್ಷನನ್ನು ಉಪಯೋಗಿಸುವುದು ... ನ್ನು ಮೀನಿನ ಎಣ್ಣೆಯ ... ಗುಣ ... ಉಂಟು ನಾಮಧೇಯ

ಕ್ರೈನರ್ಕ್ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,

ಔಷಧಗಳ ತಯಾರಕರು

ಲಂಡನ್ ಇಂಗ್ಲೆಂಡ್

ಈ ಚಿಹ್ನೆಯನ್ನುಳ್ಳ ಔಷಧವನ್ನು ಕೊಂಡುಕೊಳ್ಳಿ

ನಿಮಗೆ ಮೈ ಸ್ವಸ್ಥವಿಲ್ಲವೋ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ ನನಗೆ ಯಾವ ನೋವೇ ಉಂಟಾಗಲಿ— ನನಗೆ ವಿನಕ್ಕೆ ಒಂದು ಸುಲಭವಾದರೂ ಕಾಲಪ್ರವೃತ್ತಿಯಾಗುತ್ತದೆಯೋ?' ಎಂದು ನನ್ನನ್ನು ನಾನೇ ಕೇಳಿಕೊಂ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೊಂ ಮಾರನೇ ದಿನ ಬೇಗ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಮೈ

(೧೨ ಆಣೆ ಬುಡ್ಡಿ ಪರಿಮಾಣ)

ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಕೋಶದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಶರೀರವನ್ನು ವಿಷ ಮಾಡುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ ಅಗ್ನಿಮಾಂದ್ಯ, ಗಾಬರಿ ಆಶಕ್ತಿ, ಎದೆಯು ಹೆಚ್ಚಾಗಿ ಹೊಡೆಯುವದು, ತಲೆತಿರುಗುವುದು ತಲೆನೋವು, ಹೊಟ್ಟೆಯುಬ್ಬರ, ಮುಖಕ್ಕೆ ಗಿನ ಹೊಟ್ಟೆನೋವು ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಹುಟ್ಟುತ್ತವೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‍ರವರ ಜೀರ್ಣಕಾರಿಯಾದ ಗುಳಿಗೆಗಳು ನಿಮ್ಮ ಮಲಕೋಶದಲ್ಲಿ ತಡೆಯಲ್ಪಟ್ಟು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ವಿಷಕಾರಿಯಾದ ಶರೀರದಲ್ಲಿರುವ ಮಲವನ್ನೂ ಕೆಟ್ಟವಾದ ವಾಯುವನ್ನೂ ಮಲಕೋಶದಿಂದ ಹೊರಕ್ಕೆ ತಳ್ಳಿ ಪಿತ್ತ ಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗದ ಕ್ರಿಯೆ ಕುಶಲವಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [6-28]

ಚಿಲ್ಲರೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುತ್ತವೆ ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು ಅಥವಾ, ಡೋನ್ಸ್, ಓ. ಪಿ. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುತ್ತವು

CHAMBERLAIN'S COUGH REMEDY.

ಚೇಂಬರ್ಲೇನ್‍ಯವರು ಕಂಡುಹಿಡಿದ ಕಮ್ಮಿನ ಔಷಧವು

8 10

ಶೀತದ ಕೆಮ್ಮು ಗಂಟ್ಲು ಗೊರೆಸುವುದು ಮುಂತಾಗಿ ಎಲ್ಲಾ ತರದ ಶೀತ ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವೆಲ್ಲಕ್ಕೂ ಈ ಔಷಧವು ಬಾಗಿಯಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ಶರೀರವು ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‍ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ಪರಿಹರಿಸುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಲಕ್ಷಣವನ್ನು ನಿರ್ಮೂಲಿಸುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ ಉಸುರು ಸುಲಭವಾಗಿ ಎಳೆಯುವಂತೆ ಮನುಷ್ಯನಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‍ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪ ಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ವನಸ್ಪತಿಗಳ ಕಷಾಯ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲಾ ಬಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಸಂಗೀತ ಪಾರಿಜಾತ ಕ್ರಯ ೩ ಆಣೆ

ಈ ಸಂಗೀತ ಪಾರಿಜಾತ ಪುಸ್ತಕ ... ಗಳನ್ನು ... ಪ್ರಕಾರವಾಗಿ ... ಅತ್ಯಮೂಲ್ಯ ... ಟಿಕೆಟ್ ... ರಿಗೆ ... ಗಳನ್ನು ... ಪ್ರತಿಯೊಬ್ಬ ... ಸಂಗೀತಕ್ಕೆ ... ಪುಸ್ತಕವನ್ನು ... ಕೊಡುತ್ತೇವೆ

ಎಂ ಎಸ್ ... ಮರ್ಕನ್‍ಟೈಲ್ ... ಮೈಸೂರು

ಸಂಗ್ರಹಗಳು.

ಈ ಸ್ಥಳದಲ್ಲಿ ... ಪುಸ್ತಕಗಳು ... ಕೂಡಿ ... ಸ್ತಗಳ ... ಸಿಕ್ಕ ... ಗಳು ... ಮೊದಲಾದ ... ದ್ರವ್ಯಗಳು ... ಹಣವನ್ನು ... ಕಳುಹಿಸಿದರೆ ... ದೊರೆಯುವುದು ...

ಎಸ್ ಟಿ ... ಉಪಾಧ್ಯಾಯ ಮೈಸೂರು

ಹೊಸ ಪುಸ್ತಕ ಹೊಸ ... ಹೊಸ ಪುಸ್ತಕ

33 4

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study Vol 1) ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತಾಡುವುದಕ್ಕೂ ಬೋಧಕರ ಸಹಾಯವಿಲ್ಲದೆ ತಾವಾಗಿ ಕಲಿಯುವ ಅತ್ಯುತ್ತಮ ಪುಸ್ತಕವಿದು

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ಅಚ್ಚು ಮತ್ತು ಬರವಣಿಗೆಯ ಅಕ್ಷರಗಳನ್ನು ಗುರುತಿಸುವ ಉಪಾಯ ಸ್ವರ ವ್ಯಂಜನಾಕ್ಷರ ಸಂಕೇತ, ಕಾಗುಣಿತ, ಅಕ್ಷರ ಸಂಯೋಜನಾಭ್ಯಾಸ ಪ್ರಥಮಾಭ್ಯಾಸಯೋಗ್ಯ ಶಬ್ದಗಳ ಸಮುದಾಯ ಪ್ರಶ್ನೋತ್ತರಗಳು ವಿಧವಾಕ್ಯ ಸಮುದಾಯ ... ದಿನ ಪ್ರತಿದಿನ ಆಚರಣೆಯಲ್ಲಿ ಅವಶ್ಯವಾದ ಅತ್ಯವಶ್ಯಕ ಉಪಯೋಗವುಳ್ಳ ಶಬ್ದಗಳು ಕೋಷ್ಟಕ, ಗಾದೆ ಮಂತ್ರ ವರ್ತಮಾನ ಸಾಂಕೇತಿಕ ಶಬ್ದಗಳು, ಇತ್ಯಾದಿಯಾದ ಅನೇಕ ಉಪಯುಕ್ತಾಂಗಗಳು ಸೇರಿವೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷ್ ಭಾಷೆಯ ಪ್ರತಿ ಶಬ್ದದ ಉಚ್ಚಾರಣೆಯನ್ನೂ ಕನ್ನಡ ಅಕ್ಷರಗಳಿಂದ ಬರೆದು ಅದರ ಅರ್ಥವನ್ನು ಕನ್ನಡಭಾಷೆಯಲ್ಲಿ ಬರೆದಿದೆ ಇಂಗ್ಲಿಷ್ ಭಾಷೆಯನ್ನು ಸ್ವಲ್ಪವೂ ತಿಳಿಯದ ಕನ್ನಡಿಗರು ಅದನ್ನು ಕಲಿಯುವುದಕ್ಕೆ ಈ ಪುಸ್ತಕವು ತಕ್ಕಷ್ಟು ಸಹಾಯವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಕಲಿತು ಬಳಿಗೆಯ ಅಭ್ಯಾಸವನ್ನು ಸಂಪಾದಿಸಲಿಚ್ಛಿಸುವ ಯಾವ ತರದ ಜನರಿಗಾದರೂ ಈ ಪುಸ್ತಕವು ತುಂಬಾ ಉಪಯೋಗವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬ ಆಂಗ್ಲಭಾಷಾ ಪ್ರವೇಶದಾಯಿನಿ ಮೊದಲನೆಯ ಮತ್ತು ಎರಡನೆಯ ಮುದ್ರಣದ ಪುಸ್ತಕಗಳು ಬಲು ಬೇಗ ಮುಗಿದುಹೋದವು ಮೂರನೆಯ ಮುದ್ರಣದ ಪುಸ್ತಕಗಳಲ್ಲಿ ಕೆಲವು ಮಾತ್ರ ಉಳಿದಿವೆ ! ನಾಲ್ಕನೆಯ ಮುದ್ರಣಕ್ಕೆ ಸಾವಕಾಶವಾದೀತು ಬೇಗ ಬೇಗ ಬರೆದು ತರಿಸಿಕೊಳ್ಳುವುದು ಕಾಗದ ಉತ್ತಮ ಅಚ್ಚು ಅಂದ ಅಟ್ಟೆ ಭದ್ರ ಅಂಚೆ ವೆಚ್ಚ ಸೇರಿ ಕ್ರಯ ಒಂದು ರೂಪಾಯಿ ಆರು ಆಣೆ ಮಾತ್ರ

ವಿಳಾಸ —ಭಾರತಿ ಸಂಪಂಗಿರಾಮು, ಪೋಸ್ಟು— ಹೊಸಕೋಟೆ—ಡಿಸ್ಟ್ರಿಕ್ಟು ಬೆಂಗಳೂರು

ವೈದ್ಯರ ವೆಂಕಟಾಚಲ ಪಂಡಿತರ ನಿ ಔಷಧಗಳು

1

೧ ... ನಯನ ಕಸ್ತೂರಿ ... ಈ ಮಾತ್ರೆಗಳನ್ನು ಹರಳದ ಭಸ್ಮ ... ದ ರೇಖು ಉತ್ತಮವಾದ ಕಸ್ತೂರಿ ಮೊದಲಾದ ... ಬೆಲೆಯುಳ್ಳ ಪದಾರ್ಥಗಳು ಮಿಶ್ರಣದಿಂದ ತಯಾರಿಸಿದೆ



ಜ್ವರ ... ಹೊಟ್ಟೆನೋವು ... ನೋವು ... ಕಾಲು ಕೊಡೆತ ... ಡುವ ... ಗಳ ಬಾಧೆ ಅಜೀರ್ಣ ಅಗ್ನಿಮಾಂದ್ಯ ... ಸಿಗದ ... ಅರೋಚಕ ... ಅನೇಕ ರೋಗಗಳಿಗೆ ... ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿ ... ದ್ದರೆ ಬಾಯಿ ಹೊತ್ತು ಸುವಾಸನೆಯಾಗಿರುತ್ತೆ ಎಂತಹ ಅಹಾರವನ್ನಾದರೂ ... ಕೂಡಲೆ ... ಹಾಗಳ ಬಲವಾದದನ್ನು ... ರಕ್ತದಲ್ಲಿ ದೊ ... ತೆಗೆದು ... ವೃದ್ಧಿ ಪಡಿಸು ... ಮಕ್ಕಳ ... ಬುದ್ಧಿ ... ರಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ರ ... ಗಿನ ಸೋಂಕಿನ ... ಆಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವು ಔಷಧ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಬುಡ್ಡಿಗೆ ೪ ಆಣೆ ೫ ಬುಡ್ಡಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಬುಡ್ಡಿವರೆಗೆ ಪೋಸ್ಟೇಜು ೬ ಆಣೆ

ವಿಳಾಸ —ವೈದ್ಯರ ವೆಂಕಟಾಚಲ ಪಂಡಿತ, ಎಸ್ ಎಸ್ ಅರ್ ವೈದ್ಯಶಾಲಾ ಲಕ್ಷ್ಮೀವಿಲಾಸ ರೋಡ್ ಮೈಸೂರು

THE PLACE FOR HASSAN CAPS IS

HASSAN

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

1 10

ಒಳ್ಳೇ ಟೋಪಿಗಳು ಯಾವವು? ಯಾಕೇ ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿತೆಂದರು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಮಾದರಿಯೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಮಾದರಿಯೆಲ್ಲಾ ನೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಬುದ್ಧಿಯಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ತ್ವರಿತನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆಯದಾದ, ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ತಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ನಾನಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೮ ೧ ರೂ ೬ ೮ ೧ ರೂ ೪ ೮

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೩

ಜಾರದ ಟೋಪಿಗಳು ೧ ರೂ ೧೨ ೮ ೧ ರೂ ೮ ೮ ೧ ರೂ ೬ ೮

ಯಾಲಿಕಿನ ಟೋಪಿಗಳು ೧ ರೂ ೮ ೮ ೧ ರೂ ೬ ೮ ,

ಕಳುಹುವ ಟೋಪಿ, ಪೂರ್ಥಿ ಮೇಜೋಡು, ಅರ್ಧ ಮೇಜೋಡು, ಕೃತಕ ಹಟ್ಟು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಬೇಗ ಬರೆಯಿರಿ ! ಬರೆದು ತರಿಸಿರಿ !!

NOTICE.

A WANT LONG FELT FOR NOW REMOVED

31-1

ಬಹಳ ಕಾಲದ

ಕೊರತೆ ! ತೋರದು ! ಹೋಯಿತು ಹೋಯಿತು !!

ಸಚಿತ್ರಕಲಾತರಂಗ.

೧ ನೇ ಭಾಗ

ಕ್ರಯ ಪುಸ್ತಕ ೧ ಕ್ಕೆ ರೂ. ೧—೪— ೦.

ಒಂದನೇ ಅಧ್ಯಾಯ. —ಸಂವತ್ಸರ, ಮಾಸ, ವಾರ, ಇವುಗಳುತ್ಪತ್ತಿಗೆ ಕಾರಣ, ಭೂಮಂಡಲವು, ಚಂದ್ರನು, ಸೂರ್ಯ, ಗ್ರಹಗಳು, ಗ್ರಹಣಗಳು, ಧೂಮಕೇತುಗಳು, ಋತುಭೇದಗಳು, ಗ್ರಹಸಂಚಾರಗಳು ಇವುಗಳ ವಿಷಯ.

ಎರಡನೇ ಅಧ್ಯಾಯ: —ಕಾಂತಿಯ ಪ್ರಭಾವವು (ಶಕ್ತಿಯು), ಎಣ್ಣೆಯಿಲ್ಲದ ದೀಪಗಳು, ಮರೆಯುವದೀಪ, ಬಂಗಿನದೀಪಗಳು, ಸೂರ್ಯರಶ್ಮಿಯಿಂದಾಗುವ ಪ್ರಯೋಜನಗಳು, ಸೂರ್ಯನ ಕಾಂತಿಯಿಂದ ರೋಗಗಳನ್ನು ಗುಣಮಾಡುವಿಕೆ, ನೀಲಿ ಸೀಸಾಯಿಯ ನೀರಿನಿಂದ ಶಾಂತಿಯಾಗುವ ರೋಗಗಳು, ಕೆಂಪು ಕಾಂದ್ರದ ಬೆಳಕು, ಕೆಂಪು ಸೀಸಾಯಿಯ ನೀರು ಇವುಗಳ ಉಪಯೋಗ ಸೂರ್ಯಶಕ್ತಿಯಿಂದ ಅಡಿಗೆ ಮಾಡುವಿಕೆ, ಅಗ್ನಿಪರ್ವತಗಳು, ಕಲ್ಪಿತಸೂರ್ಯರಶ್ಮಿಯು

ಮೂರನೇ ಅಧ್ಯಾಯ: —ನೀರಿನಿಂದ ಘಾಳಿಯನ್ನು ಮಾಡುವುದು, ನೀರಿನಿಂದ ರೋಗಗಳು ಗುಣವಾಗುವಿಕೆ, ಬಾಷ್ಪಸ್ನಾನವು, ಕಟಿಸ್ನಾನವು, ಬೆನ್ನುಸ್ನಾನವು, ಆತಪಸ್ನಾನವು, ಮುಖವೈರಿರೀಚಿಕ್ಯೋ, ನೀರಿನಿಂದ ನಡೆಯುವ ಯಂತ್ರಗಳು, ಎತ್ತರವಾದ ಸ್ಥಳಕ್ಕೆ ನೀರನ್ನು ತರಿಸುವಿಕೆ, ನೀರಿನ ಯಂತ್ರವು

ನಾಲ್ಕನೇ ಅಧ್ಯಾಯ: ರಸೋತ್ಪತ್ತಿ, ಲೋಹೋತ್ಪತ್ತಿಯು, ಕಬ್ಬಿಣ, ಉಕ್ಕು, ತಾಮ್ರ, ಬೆಳ್ಳಿ, ಭಂಗಾರವು, ಅಲ್ಯುಮಿನಂ, ಕ್ಯಾಲ್ಸಿಯಂ, ತವರವು, ಸೀಸ, ಹಿತ್ತಾಳೆ, ಸೀಸವು, ತುತ್ತುನಾಗವು, ಜರ್ಮನ್ ಬೆಳ್ಳಿ, ಪ್ಲಾಟಿನಂ ಲೋಹೋತ್ಪತ್ತಿ, ರಸಸಿಂದೂರವು, ತೈಲೋತ್ಪತ್ತಿ, ಅಭ್ರಕವು, ತೈಲೋತ್ಪತ್ತಿ, ಹವಳಗಳು ಕ್ರಿಮಿಕೀಟಗಳ ಉತ್ಪತ್ತಿ, ಹಿಂಗು, ಅಫೀಮು, ಅರಗು, ಕಪ್ಪು ಅರಗು, ಕರ್ಪೂರ, ಆಯಿಲ್ (ಮೊಯಿಣ್ಣೆ), ರಬ್ಬರು

ಐದನೇ ಅಧ್ಯಾಯ: ವಾಯುವು, ಗಾಳಿಯಂತ್ರವು, ಗಾಳಿಯ ಭಂಡಿಗಳು, ಗಾಳಿಯಿಂದ [illegible] ಹಾರಿಸುವುದು, ಆಕಾಶವಿಮಾನಗಳು ಅಥವಾ ಆಕಾಶಬುಟ್ಟಿಗಳು, [illegible] ಗಾಳಿಯಿಂದಗ್ನಿಯನ್ನುಂಟುಮಾಡುವುದು, ಗಾಳಿಯಿಂದ ನೀರನ್ನುಂಟುಮಾಡುವುದು, ಗಾಳಿಯಿಂದ ಬೆಂಕಿಯನ್ನಾರಿಸುವುದು ಗಾಳಿಯ ಬಿಗಿತ (ಗ್ಯಾಸ್ ಲೈಟ್), ವಾಯುಸ್ಪರ್ಶ .

ಆರನೇ ಅಧ್ಯಾಯ . ರತ್ನಗಳನ್ನು ಪರೀಕ್ಷಿಸುವ ಮಾರ್ಗಗಳು, ಕರ್ಪೂರ ಪರೀಕ್ಷೆಯು, ಜಲಪರೀಕ್ಷೆ, ಅಶ್ವಪರೀಕ್ಷೆ, ಮೂತ್ರಪರೀಕ್ಷೆ, ಔಷಧ ಪರೀಕ್ಷೆಯು, ಸ್ಥಳಪರೀಕ್ಷೆ, ಕ್ಷೀರಪರೀಕ್ಷೆ, ಅತ್ತರುಪರೀಕ್ಷೆ, ಗರಳಪರೀಕ್ಷೆ, ಸುವರ್ಣಪರೀಕ್ಷೆ, ನಾಡಿ ಪರೀಕ್ಷೆಯು, ಉಪ್ಪುಪರೀಕ್ಷೆ, ವಿಷಪರೀಕ್ಷೆಯು

ಏಳನೇ ಅಧ್ಯಾಯ —ಕಾಗದವನ್ನು ಮಾಡುವಿಕೆ, ರೂಲುಹಾಕುವ ಪೆನ್ಸಿಲು ಮಾಡುವ ವಿಧ, ಬೆಂಕಿಕಡ್ಡಿಗಳನ್ನು ಮಾಡುವ ವಿಧವು, ಬೆಂಕಿಪೆಟ್ಟಿಗೆ ಯಿಲ್ಲದ ಕಡ್ಡಿಗಳನ್ನು ಮಾಡುವಕ್ರಮ, ದಾರದ ಬೆಂಕಿಕಡ್ಡಿಗಳು, ಕಾಗದದ ಬೆಂಕಿಕಡ್ಡಿಗಳು ಬೆಂಕಿಪೆಟ್ಟಿಗೆಗಳನ್ನು ಮಾಡುವಿಕೆ, ಹಾಲುಸಕ್ಕರೆ ಮಾಡುವವಿಧ, [illegible] ಗಾಲಿ, ಕಲ್ಲುಸಕ್ಕರೆ ಮಾಡುವ ವಿಧ, [illegible] ಕರ್ಪೂರವುಮಾಡುವಕ್ರಮ, [illegible] [illegible] ಕಾಪಿಯೆಣ್ಣೆ [illegible] [illegible] ಕನ್ನಡಿಯ ಮೇಲೆ ಬರೆಯುವ [illegible] [illegible] ಮಾಡುವಕ್ರಮ, [illegible] ಸುವಾಸನೆಯ [illegible] [illegible] [illegible] ರಬ್ಬರುಸ್ಟ್ಯಾಂಪು [illegible] [illegible] ಮಾಡುವಿಕೆ, [illegible] [illegible] [illegible] ತಾಂಬೂಲಚೂರ್ಣ, ತಾಂಬೂಲಸಿನೋದ ಪಾತ್ರೆಗಳು, [illegible] ಪರಿಮಳಸ್ನಾನಚೂರ್ಣ, ಮಲ್ಲಿಗೆಯೆಣ್ಣೆ, ಸಂಪಿಗೆಯೆಣ್ಣೆ, [illegible] [illegible] ರುಮಾಡುವವಿಧ, ನದಿ ನೀರನ್ನು ಶುಚಿಮಾಡುವ [illegible] [illegible] ಪದವನ್ನು ಕೊಡುವುದು, ಕತ್ತಿ ಮೊದಲಾದವುಗಳಿಗೆ ಹದಪ್ಪ, [illegible] ಗಳಿಗೆ ಹದವು, ಹಲಸಿನಹಣ್ಣನ್ನು ವೃದ್ಧಿಮಾಡುವಿಕೆ, ಚಿತ್ರಲಿ ಹಣ್ಣು [illegible] ಮಾಡುವಿಕೆ, ಮಾವಿನ ಹಣ್ಣು ವೃದ್ಧಿಮಾಡುವಿಕೆ, ಕುಂಬಳ, ಬದನೆ, ಇವೆರಡನ್ನೂ ಸೇರಿಸಿ ಅಂಟುಕಟ್ಟುವವಿಧ, ಗಿಡದಲ್ಲಿನ ಹೂವುಗಳ ಬಣ್ಣಗಳನ್ನು ಬದಲಾಯಿಸುವುದು, ಅಂಟುಕಟ್ಟುವವಿಧ, ದ್ರಾಕ್ಷೆ ಗಿಡಕ್ಕೆ ಕಸಿಮಾಡುವುದು, ಸೌತೆಕಾಯನ್ನು ಹೆಚ್ಚಾಗಿ ಬರುವಂತೆ ಮಾಡುವಿಕೆ, ಹುಳಿಮಾವಿನಹಣ್ಣುಗಳನ್ನು ಸಿಹಿಯಾಗಿ ಮಾಡುವಿಕೆ, ಸಿಹಿಯಾಗಿರುವುದನ್ನು ಹುಳಿಯಾಗಿ ಮಾಡುವಿಕೆ, ಮಾವಿನಹಣ್ಣುಗಳನ್ನು ಬಹಳ ದಿವಸದವರೆಗೆ ಕೆಡದಂತೆ ಮಾಡುವುದು, ನಿಂಬೆಹಣ್ಣುಗಳನ್ನು ಕೆಡದಂತೆ ಇಡುವುದು, ಹಣ್ಣುಗಳಿಗೆ ಹೆಚ್ಚಾಗಿ ಸಿಹಿಯನ್ನುಂಟುಮಾಡುವಿಕೆ, ಪುಷ್ಪಗಳ ಬಣ್ಣವನ್ನು ಬದಲಾಯಿಸುವುದು, ಗಿಡ ಉಬ್ಬಿಯದಂತೆ ಮಾಡುವುದು, ಮಣ್ಣಿನಪಾತ್ರೆಗಳ ರಂಧ್ರವನ್ನು ಮುಚ್ಚುವುದು, ಮಣ್ಣು ಉಪ್ಪುಮಾಡುವಿಕೆ, ಪತ್ರಾರೇಕಿಗೆ ಬಣ್ಣವನ್ನು ಕೊಡುವುದು, ಹಾಗಲಕಾಯಿಯ ಕಹಿಯನ್ನು ಹೋಗಲಾಡಿಸುವುದು, ಸೌತೆಕಾಯಿಯ ಕಹಿಯನ್ನು ತೆಗೆಯುವುದು, ಅಗ್ನಿದರ್ಪಣವು, ಸೂರ್ಯಕಿರಣದಿಂದ ಉರಿಯುವಂತೆ ಮಾಡುವುದು, ಹಗಲಿನಲ್ಲಿ ನಕ್ಷತ್ರವನ್ನು ನೋಡುವುದು, ಬರೆದ ಅಕ್ಷರಗಳನ್ನು ಕಾಣದ ಹಾಗೆ ಮಾಡುವಿಕೆ, ಜಲತರಂಗಿಣಿನಾದವು, ಜಲವಾಯುವೇಗ ಪರೀಕ್ಷೆಯು, ಸೂರ್ಯಕಿರಣದರ್ಶನೋಪಾಯ, ಕಬ್ಬಿಣವನ್ನು ಕರಗಿಸುವುದು, ಬೆಂಕಿಯ ಉರಿಯನ್ನಾರಿಸುವುದು, ಕ್ರಿಮಿಚೂರ್ಣವನ್ನು ಮಾಡುವಕ್ರಮ, ಕುಂಕುಮ ಮಾಡುವ ಪದ್ಧತಿ, ಅರಸಿನ (ಬಣ್ಣದ) ಕ್ರಿಮಿಚೂರ್ಣಮಾಡಿಸುವಿಕೆ, ಕೆಂಗುಕುಂಕುಮವನ್ನು ಮಾಡುವುದು, ರಬ್ಬರುಸ್ಟ್ಯಾಂಪು ಮಾಡುವ ವಿಧವು, ಎಲ್ಲಾ ವಿಧವಾದ ಗಿಲೀಟು ಕೆಲಸಗಳು, ವಿದ್ಯುಚ್ಛಕ್ತಿಯಿಂದ ಗಿಲೀಟುಮಾಡುವಿಕೆ, ಕಬ್ಬಿಣಕ್ಕೂ ಸತ್ತುವಿಗೂ ತಾಂಬ್ರದಗಿಲ್ಟು, ಕೆಂಭಿನಗಿಲೀಟು, ಬೆಳ್ಳಿಯ ಕಲಾಯಿ, ಭಂಗಾರದ ಕಲಾಯಿ, ಕಲಾಯಿಮಾಡುವುದಕ್ಕೆ ಸರಕುಗಳನ್ನು ಶುಭ್ರಪಡಿಸುವುದು, ಹಿತ್ತಾಳೆಯದ್ವಾರಕ ಮಾಡುವರೀತಿ, ಕಬ್ಬಿಣಕ್ಕೆ ಹಿತ್ತಾಳೆ ಕಲಾಯಿ, ಸತ್ತಿನವಸ್ತುವಿಗೆ, ಹಿತ್ತಾಳೆಗಿಲ್ಟು, ಸೀಸದವಸ್ತುಗಳಿಗೆ ಹಿತ್ತಾಳೆ ಗಿಲ್ಟು, ಬೆಳ್ಳಿಗಿಲ್ಟು ಮುಂತಾದುವು ಭಂಗಾರದಗಿಲ್ಟು, ಕಾಗದಗಳಿಗೆ ಗಿಲ್ಟುಮಾಡುವಿಕೆ, ಪಾತ್ರೆಯನ್ನು ಶುದ್ಧಿಮಾಡುವಿಕೆ, ಬೆಳ್ಳಿಕಲಾಯಿ, ಕನ್ನಡಿಗಳಿಗೆ ಗಾಜಿನ ಗ್ಲಾಸಿಗೆ ಗಿಲ್ಟುಮಾಡುವಿಕೆ, ಕಾಗದಗಳಿಗೆ ಮೆರುಗುಕೊಡುವುದು, ಮಣ್ಣಿನ ಪಾತ್ರೆಗಳಲ್ಲಿ ಹುಳುಬೀಳದಂತೆ ಮಾಡುವುದು, ಸೂರಣದಗಡ್ಡೆಯ ತುರಿಕೆ ಹೋಗುವುದು, ನೆಲ್ಲೀಕಾಯಿಯ ಒಗರು ತೆಗೆಯುವುದು, ಜಲಘೂತದರ್ಪಣವು, ಆಳವಾದ ನೀರಿನಲ್ಲಿರುವ ವಸ್ತುವನ್ನು ನೋಡುವಬಗೆ, ತಾರುಬಳಿಯುವವಿಧವು, ಹೆಪ್ಪುಹಾಕುವ ಉಪಾಯವು, ಹೆಚ್ಚಾಗಿ ಬೆಣ್ಣೆ ಗೆಡೆಯುವರೀತಿ, ಕಾಗದಕ್ಕೆಬಿದ್ದ ಜಿಡ್ಡನ್ನು ತೆಗೆಯುವಿಕೆ, ಹಿತ್ತಾಳೆಪಾತ್ರೆಯನ್ನು ಶುದ್ಧಿಮಾಡುವುದು, ಅಲ್ಯುಮಿನಿಯಂ ಪಾತ್ರೆಗಳ ಶುದ್ಧಿ ವಗೈರೆ

ಎಂಟನೇ ಅಧ್ಯಾಯ :—ಭೇದಿಸರಬತ್ತು, ನೆಲ್ಲೀಕಾಯಿಸರಬತ್ತು, ಸೊಗದೇಬೇರಿನಸರಬತ್ತು, ಗುಲಾಬಿಸರಬತ್ತು, ಕ್ಯಾದಿಗೆಮೊತೆ ಸರಬತ್ತು, ನಿಂಬೆಹಣ್ಣಿನಸರಬತ್ತು ಹೇರಳೇಹಣ್ಣಿನ ಸರಬತ್ತು, ತಂಗೇಡಿ (ಆವರಿಕೆ) ಸರಬತ್ತು, ಬಾದಾಮಿ ಸರಬತ್ತು, ದೊಡ್ಡದ್ರಾಕ್ಷಿ ಸರಬತ್ತು, ಎಳನೀರುಹಣ್ಣಿನ ಸರಬತ್ತು, ರಸಪಾಕ. ಮದ್ಯಪಾನದ ದುರಭ್ಯಾಸವನ್ನು ದೂರಮಾಡುವ ರೀತಿ, ಲೆಮನೆಡ್ ಮಾಡುವರೀತಿ, ಜಿಂಜರ್‌ಬೀರ್ ಮಾಡುವರೀತಿ, ಗುಲಾಬೀಹೂವಿನ ಗುಲ್ಕನ್, ಮುಳ್ಳುಸ್ಯಾವಂತಿಗೆಹೂವಿನ ಗುಲ್ಕನ್, ಬೇವಿನಹುವ್ವಿನ ಗುಲ್ಕನ್, ಆವರಿಕೆ ಹೂವಿನ ಗುಲ್ಕನ್, ನೆಲ್ಲಿಕಾಯಿ ಮುರಬ್ಬ, ಮಾದಲದಕಾಯಿ ಮುರಬ್ಬ, ಅಳಲೆಕಾಯಿ ಮುರಬ್ಬ, ಮಾವುಪುಟ್ಟಕಾಯಿಮುರಬ್ಬ, ಬೂದಕುಂಬಳಕಾಯಿ ಮುರಬ್ಬ, ಚಪ್ಪರದ್ರಾಕ್ಷಿಹಣ್ಣಿನ ಮುರಬ್ಬ, ಅಂಜೂರಹಣ್ಣಿನ ಮುರಬ್ಬ, ಕೇಬುಹಣ್ಣಿನ ಮುರಬ್ಬ, ಜೇನಿನಕಾಯಿ ಮುರಬ್ಬ, ಪುಷ್ಪಗಳ ಸತ್ತುತೆಗೆವವಿಧ, ಕರ್ಪೂರಮಾಡುವವಿಧ, ಪಚ್ಚಕರ್ಪೂರಮಾಡುವವಿಧವು

ಸಚಿತ್ರ ಕಲಾತರಂಗಕ್ಕೆ ಬಂದ ಅಭಿಪ್ರಾಯಗಳು.

(೧) ಬೆಂಗಳೂರ್ ಸಿಟಿ ಬಿ ಆರ್ ಗೋವಿಂದರಾಜುಲುಯವರಿಂದ ವಿರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವ ಸಚಿತ್ರವಾದ "ಕಲಾತರಂಗ" ಎಂಬ ಗ್ರಂಥದ ಪ್ರಥಮ ಭಾಗವನ್ನ ಅತ್ಯಾದರದಿಂದ ಸ್ವೀಕರಿಸಿ ಆಮೂಲಾಗ್ರವಾಗಿ ಪರಿಸಿ ನೋಡಿದೆವು ಇದು ೮ ಅಧ್ಯಾಯಗಳಿದ್ದು ಪ್ರತಿಯೊಂದು ಅಧ್ಯಾಯದಲ್ಲಿಯೂ ಹೊಸ ಹೊಸ ವಿಷಯಗಳನ್ನು ತಿಳಿಸತಕ್ಕ ಸಂದರ್ಭಗಳೇ ಅಧಿಕವಾಗಿವೆ. ಅದರಲ್ಲಿಯೂ ೭ ನೆಯ ಮತ್ತು ೮ ನೆಯ ಅಧ್ಯಾಯಗಳಲ್ಲಿ ಕೈಗಾರಿಕೆಯ ವಿಷಯಗಳೂ, ಮತ್ತು ಪಾಕಸಂದರ್ಭದ ವಿಷಯಗಳೂ, ಆಶ್ಚರ್ಯಕರವಾಗುವಂತೆ ವಿವರಿಸಲ್ಪಟ್ಟಿವೆ ಕರ್ನಾಟಕ ಭಾಷೆಯಲ್ಲಿ ಇದುವರೆಗೂ ಅನೇಕ ಕಲೆಗಳನ್ನು ಅಂದರೆ ಪ್ರಾರಂಭಿಕ ಶಾಸ್ತ್ರ, ರಸಾಯನ ಶಾಸ್ತ್ರ, ರಂಜಕ ಶಾಸ್ತ್ರ, ಭೂಗೋಳಶಾಸ್ತ್ರ, ಸಿಗೋಳವಿ ವೈಚಿತ್ರ್ಯಗಳು, ಕೈಗಾರಿಕೆಗಳು ಮೊದಲಾದವುಗಳನ್ನೆಲ್ಲಾ ಬೋಧಿಸುವ ಪುಸ್ತಕಗಳು ಹಲ ಕೆಲವು ಇದ್ದಾಗ್ಯೂ, ಅವೆಲ್ಲವೂ ಇಷ್ಟು ವಿಶದವಾಗಿಯೂ, ಸರ್ವಜ್ಞಯವಾಗಿಯೂ, ಎಲ್ಲವೂ ಒಂದೇ ಪುಸ್ತಕದಲ್ಲಿಯೂ, ಸಮಗ್ರವಾಗಿ ರಚಿಸಿದವುಗಳಲ್ಲ ಕರ್ನಾಟಕ ಭಾಷೆಯಲ್ಲಿನ ಇದೊಂದು ಕೊರತೆಯನ್ನು ಈ ಪುಸ್ತಕ ರಚನೆಯಿಂದ ಈ ಗ್ರಂಥಕರ್ತರು ಹೋಗಲಾಡಿಸುತ್ತಾರೆಂದು ಹೇಳಬಹುದಾಗಿದೆ ಈ ಭಾಷೆಯಲ್ಲಿ ಇದುವರೆಗೂ ಇಂತಹ ಪುಸ್ತಕವೇ ಇರಲಿಲ್ಲವೆಂದು ಹೇಳಿದರೂ ಏನೂ ಅತಿಶಯೋಕ್ತಿಯಾಗಲಾರದು ಇಂಗ್ಲಿಷ್ ಮೊದಲಾದ ಅನ್ಯಭಾಷಾಗ್ರಂಥ ಸಮುದಾಯಗಳಿಂದ ಗ್ರಂಥಕರ್ತರು ವಿವಿಧ ವಿಷಯಗಳನ್ನು ಸಂಗ್ರಹಿಸಿ, ಸೂಚಿಪೊದಲೆಯೇ ವಿಶದವಾಗುವ ಹಾಗೆ ವಿವರಿಸಿದ್ದಾರೆ ಭಾಷಾಶೈಲಿಯೂ, ತಿಳಿಗನ್ನಡದ ಸುಲಭವಾಕ್ಯರಚನೆಯಲ್ಲಿ ರಚಿಸಲ್ಪಟ್ಟದ್ದಾಗಿ ವ್ಯಾಕರಣಶುದ್ಧವಾಗಿದೆ ಮುದ್ರಣವೂ ಮುದ್ದಾಗಿದೆ. ಪುಸ್ತಕದ ಮೌಲ್ಯವೂ ೧ ರೂ ೪ ಆಣೆಗಳಿದ್ದು ಸುಲಭಗ್ರಾಹ್ಯವಾಗಿದೆ ಪಾಠಶಾಲೋಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಈ ಗ್ರಂಥದಿಂದ ಬಹು ಪ್ರಯೋಜನವಿರುವುದರಿಂದ ಭಾಷಾಪೋಷಕರುಗಳು ಈ ಗ್ರಂಥದ ಕಡೆಗೆ ಲಕ್ಷ್ಯಕೊಡಬೇಕೆಂದು ಅದರ ಪೂರ್ವಕವಾಗಿ ಸೂಚಿಸುತ್ತೇವೆ —(ಹಚ ವೆಂಕಟರಾಮಯ್ಯ, ಪಾಠಶಾಲಾ ಮುಖ್ಯೋಪಾಧ್ಯಾಯ, ಬೇಲೂರ, ಗುಬ್ಬಿ ತಾಲ್ಲೂಕು ತುಂಕೂರ್ ಡಿಸ್ಟ್ರಿಕ್ಟ್)

(೨) "ಸಚಿತ್ರಕಲಾತರಂಗ"ವನ್ನು ಆದರಪೂರ್ವಕ ನೋಡಿದೆವು ಪರಭಾಷಾ ಪರಿಚಯವಿಲ್ಲದ ನಮ್ಮ ಕನ್ನಡಿಗರಿಗೆ ಗೂಢವಾದ ಅನೇಕ ಕಲೆಗಳ ಮರ್ಮವನ್ನು ತೋರಿಸಲು ಇದು ಒಂದು ಕನ್ನಡಿಯೇ ಸರಿ ಇದಕ್ಕೆ ಸಂದೇಹವಿಲ್ಲ ಇದುವರೆಗೂ ಕನ್ನಡಿಗರು ಇಂಥ ಪುಸ್ತಕಗಳನ್ನು ಬರೆದಿಲ್ಲವೆಂಬ ಕೊರತೆಯನ್ನು ಇದು ನೀಗಿತು ಇಂಥಾ ಪುಸ್ತಕಗಳು ಕನ್ನಡದಲ್ಲಿ ಹುಟ್ಟಲಿ ಎಂಬುವದೇ ಆಶಯು ಇದಕ್ಕೋಸ್ಕರ ಪಟ್ಟ ಶ್ರಮಕ್ಕೆ ತುಂಬಾ ಕೃತಜ್ಞನಾಗಿದ್ದೇನೆ ಇದಕ್ಕೆ ಸರ್ವರೂ ಹಸ್ತಾವಲಂಬನವಿತ್ತು ಪ್ರೋತ್ಸಾಹ ಕೊಡಲು ಪ್ರಾರ್ಥನಾ. ಸರ್ವರೂ ಇದರಲ್ಲಿ ಉಪೇಕ್ಷೆ ಮಾಡದೆ ಅದರಿಂದ ಸುಲಭಸಾಧ್ಯವಾದ ವಸ್ತುಗಳನ್ನು ಸ್ವತಃ ಮಾಡಿಕೊಂಡು ಸಂತೋಷಪಡಲಿ —(ಜಿ ಎಸ್ ಕಸ್ತೂರಿಂಗಾಚಾರ್ಯ, (,, ಟಿ ಬಿ ಲಕ್ಷ್ಮಯ್ಯನವರು, ಚಿರರಾಜಪೇಟೆ)

(೩) "ಸಚಿತ್ರಕಲಾತರಂಗ" ದ ಪ್ರಥಮಭಾಗವನ್ನೋದಿ ನೋಡಿದೆನು ಈ ಪುಸ್ತಕವು ಪ್ರತಿಯೊಬ್ಬರೂ ಅತ್ಯಗತ್ಯವಾಗಿ ಓದಬೇಕಾದ ನಾನಾ ವಿಷಯಗಳನ್ನೊಳಗೊಂಡಿರುವುದಲ್ಲದೆ ಕನ್ನಡ ನಾಡಿಗರಿಗತ್ಯುಪಯೋಗಕರವಾಗಿರುವುದೆಂಬ ದರಲ್ಲಿ ಸಂದೇಹವಿಲ್ಲಾದದು. ಆಂಗ್ಲಭಾಷಾಭ್ಯಾಸಿಗಳಿಗೆ ಮಾತ್ರ ಸಾಧ್ಯವಾಗುತ್ತಿದ್ದ ಇಂತಹ ಗ್ರಂಥವನ್ನು ಕನ್ನಡವಾಚಕರಿಗಾಗಿ ಸೋದರರಲ್ಲಿ ಪ್ರಚುರಗೊಳಿಸಬೇಕೆಂದ ಗ್ರಂಥಕರ್ತರ ಪ್ರಯತ್ನವು ಸ್ತುತ್ಯವೇ ಸರಿ. (ಯಸ್ ವಿ ದೇಶಿಕಾಚಾರ್, ಲ್ಯಾಂಡ ರಾವ್, ಸೂಳೆ, ಬೆಂಗಳೂರು.)

(೪) "ಸಚಿತ್ರಕಲಾತರಂಗ" ದ ಮೊದಲನೆಯ ಭಾಗವು ಬಂದು ತಲುಪಿತು. ಅದನ್ನೆಲ್ಲಾ ನಾವು ಪರಿಶ್ರಮವಾಡಿ ನೋಡಲು ಮನಸ್ಸಿಗೆ ತುಂಬಾ ತೃಪ್ತಿಕರವಾಗಿತ್ತು ಅಲ್ಲದೆ ಸಂಪೂರ್ಣ ಪಕರಣವಾದ್ದಾಗಿಯೂ ಇತ್ತು. ಆದರೆ ಇಷ್ಟು ಉಪಯೋಗಕರವಾದ ಮತ್ತು ಅಪೂರ್ವವಾದ ಪುಸ್ತಕವು ಇಷ್ಟು ಸುಲಭ ಬೆಲೆಗೆ ಕೊಟ್ಟಿರುವುದರಿಂದ ಬಡಬಗ್ಗರೂ ಸಹಾ ತರಿಸಿ ವಿಷಯದಿಂದ ಅಧಿಕ ಲಾಭವನ್ನು ಹೊಂದಿ ಊರ್ಜಿತ ಸ್ಥಿತಿಗೆ ಬರಬೇಕೆಂಬ ಅಭಿಲಾಷೆಯಿಂದ ಮಾಡಿದ್ದಲ್ಲದೆ ಹಣದಾಸೆಗಲ್ಲವೆಂದು ನಾವು ಧೃಢವಾಗಿ ನಂಬಿದ್ದೇವೆ ಮತ್ತು ಈ ದೇಶದ ಜನರು ಎಲ್ಲರೂ ಸ್ವಯಾರ್ಜಿತರಾಗಿ ಸ್ವಲ್ಪ ಹಣವನ್ನು ಖರ್ಚುಮಾಡಿ ತುಂಬಾ ಲಾಭ ಪಡೆಯಬಹುದಲ್ಲದೆ ಇತರ ಸ್ವಲ್ಪ ಬೆಲೆಯುಳ್ಳ ವಸ್ತುಗಳನ್ನು ಹೆಚ್ಚು ಬೆಲೆಗೆ ಮಾರಿ ಮೋಹಪಾಶಕ್ಕೆ ಸಿಕ್ಕುವಂತೆ ಮಾಡುವವರ ಮೋಸಗಳಿಗೆ ಒಳಗಾಗದೆ ಈ ಪುಸ್ತಕದಿಂದ ತುಂಬಾ ಪ್ರಯೋಜನವನ್ನು ಹೊಂದುವಂತೆ ಮಾಡಲು ಸಹ ಕಾರಿಯಾಗಿರುವುದು ಇದೇ ಎಂದು ನಾವು ತುಂಬಾ ಇದಕ್ಕೆ ಕೃತಜ್ಞರಾಗಿರುವೆವು --(ಜಿ ರಾಘವೇಂದ್ರರಾವ್, ಲ್ಯಾಂಡ್ ಹೋಲ್ಡರ್, ಗುಡಿಬಂಡ)

ಇನ್ನು ಅನೇಕ ಅಭಿಪ್ರಾಯಗಳಿರುವದರಿಂದ ಸ್ಥಳಸಂಕೋಚದಿಂದ ಇಲ್ಲಿ ಸ್ವಲ್ಪ ಮಾತ್ರಗಾದರೂ ಪ್ರಕಟಿಸಲಿಲ್ಲ.

ಕ್ರಯ ಪುಸ್ತಕ ೧ ಕ್ಕೆ ರೂ. ೧—೪—೦. ವಿ. ಪಿ. ಚಾರ್ಜು ಸೇರಿ ರೂ ೧—೬—೦.

(೧) ವಿಳಾಸ —ಮ್ಯಾನೇಜರ್ ಎಸ್. ಜಿ. ಎನ್. ಪ್ರೆಸ್,
೧೭೮ ಅರಳೆಪೇಟೆ, ಬೆಂಗಳೂರು ಸಿಟಿ.

ಅಥವಾ,

(೨) ದಿ ಉಲ್ಫ್ ವರ್ಕ್,
ಸಂ. ೧, ಮಂಗಳೂರು, (ದ ಕ.)

ಪುಸ್ತಕಗಳು ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಕ್ರಯಕ್ಕೆ ದೊರೆಯುವವು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18—2—1910 ರಿಂದ 25—2—1910 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	36	15	0	0
ಮೈಸೂರು ,,	34	26	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	4	1	0	0
ಕಡೂರ್ ,,	3	2	0	0
ಶಿವಮೊಗ್ಗ ,,	0	0	0	0
ಜುಮ್ಲಾ	67	45	0	0

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸೌಮ್ಯನಾಮ ಸಂವತ್ಸರದ ಮಾಘ ಬಹುಳ ಅಮಾವಾಸ್ಯೆ ಶುಕ್ರವಾರದಿಂದ ಫಾಲ್ಗುಣ ಶುದ್ಧ ಷಷ್ಠಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೧೦ ನೇ ಮಾರ್ಚಿ.

ತಾ	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ	ಕೇದಿ ಕುಂಭ ಮಾಸ
11	ಶುಕ್ರ ,,	ಅಮಾವಾಸ್ಯೆ	29-2	ಪೂಭಾ	62-58	28
12	ಶನಿವಾ ;,	ಪಾಡ್ಯಮಿ	31-8	ಪೂಭಾ	19-50	29
13	ರವಿವಾ •	ಬಿದಿಗೆ	18-10	ರೇ	15-58	30
14	ಚಂದ್ರ §	ತದಿಗೆ	12-40	ಅ	41-52	1
15	ಕುಜ .	ಚೌತಿ	6-38	ಭ	37-10	2
16	ಬುಧ †	ಪಂಚಮಿ	2-16	ಕೃತಿ	54 30	3
17	ಗುರು ‡	ಷಷ್ಠಿ	50 20	ರೋ	30-24	4

,, ಸರ್ವತ್ರ ಅನಧ್ಯಾಯ
,, ಚಂದ್ರೋದಯ.
• ಮಹಾವ್ಯತೀಪಾತ, ತಿಥಿದ್ವಯಂ
§ ಚತುರ್ಥಿ ತಿಥಿ, ಷಡಶೀತಿಪುಣ್ಯಕಾಲ.
· ವಿನಾಯಕಚತುರ್ಥಿ
† ಅಮೃತಯೋಗ, ಶುಭಪ್ರಸಂಗಕ್ರೀರವ್ರತ
‡ ಉತ್ಪಾತಯೋಗ

ಪೇಟೇ ಧಾರಣೆ.

ದಿನಸಿ.		ಮೈಸೂರು .	ಬೆಂಗಳೂರು.
ಸಣ್ಣ ಅಕ್ಕಿ ಪಲ್ಲಾ ೧ ಕ್ಕೆ	ರೂ.	೧೨-೮-೦	೧೨ ೮-೦
ಕೆಂಬೂತಿ ಅಕ್ಕಿ ಅವಲ್	...	೧೨-೮-೦	೧೪-೮-೦
,, ದುಯಂ	..	೧೨-೦-೦	೧೪-೦-೦
ಜಾಪಾನ್ಯ ಅಕ್ಕಿ	..	೧೨-೪ ೦	೧೪-೦-೦
ಸಣ್ಣಕ್ಕಿ ಅವಲ್	..	೧೪-೮-೦	೧೬-೦-೦
,, ದುಯಂ	...	೧೪-೦-೦	೧೪-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೧೨-೮-೦	೧೨ ೮-೦
,, ದುಯಂ	...	೧೨-೦-೦	೧೧-೪ ೦
ಹ್ಯಕ್ ರಾಗಿ ಪಲ್ಲಾ ೧ಕ್ಕೆ	...	೮-೦ ೦	೭-೦-೦
ಕಾರ್ದ್ಯಾಗಿ	.	೭-೧೨-೦	೬ ೮-೦
ಜೋಳ	.	೭-೮-೦	೮-೮-೦
ಹಲಸಂದೆ ಪಲ್ಲಾ ೧ಕ್ಕೆ	...	೧೧-೦-೦	೧೦-೦-೦
ಬೇಳೆ ಅವರೆ	...	೧೧-೦-೦	೧೦ ೪ ೦
ಹೆಸರು	...	೧೧-೦-೦	೯-೮-೦
ಉದ್ದು	..	೧೩-೦-೦	೧೦-೮-೦
ಕಡಲೆ	...	೧೨-೮-೦	೧೧ ೦-೦
ಎಳ್ಳು ಸೇ. ೧೨೬ ಕ್ಕೆ	...	೧೭-೦-೦	೧೫-೦-೦
ಹುರುಳಿ	..	೮ ೮-೦	೮-೮-೦
ಹರಳು ೧೨೬ ಸೇರಿಗೆ	.	೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	...	೨-೪-೦	೧-೧೨-೦
ಮೆಣಸಿನಕಾಯಿ	...	೪ ೧೨-೦	೩-೪-೦
,, ದುಯಂ	...	೪-೮-೦	೩-೦-೦
ಬೆಲ್ಲ ದೊಡ್ಡ ಅಚ್ಚು	.	೮-೮-೦	ಮ ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ	...	೫-೦-೦	೪-೮-೦
ಹರಳೆಣ್ಣೆ ,,	..	೫-೮ ೦	೪-೬ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	..	೧೦-೮-೦	೧೦-೦-೦
ಉಪ್ಪು ,,	...	೬ ೦-೦	೫-೧೨-೦
ಹುಣಸೇ ಹಣ್ಣು	...	೨-೦-೦	೧-೮-೦
,, ಹಳೇದು	..	೧-೧೨-೦	೧-೬-೦
ತುಪ್ಪ ಮಣ ೧ಕ್ಕೆ	...	೧೬-೮-೦	೧೪-೦-೦
ಸೀಮೆಯೆಣ್ಣೆ ಪಟ್ಟಿ ೧ಕ್ಕೆ	...	೫-೪-೦	೪-೮-೦
ತೆಂಗಿನಕಾಯಿ ೧೦೦ ಕ್ಕೆ	..	೫-೦-೦	೬-೪-೦
ಅಳಲೇಕಾಯಿ ಮಣ ೧ಕ್ಕೆ	...	೦-೧೨-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೨-೦
ಚಿನ್ನ (ಬಾರ್) ತೊಲ	...	೧೫-೯-೦	೧೫-೫-೦
,, ,, ಪವನು	...	೧೬-೦-೦	೧೫-೭-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೮-೦	೨೪-೮-೦
ಬೆಳ್ಳಿಗಟ್ಟಿ ತೊಲ ೧೦೦ ಕ್ಕೆ	...	೬೭-೪-೦	೬೫ ೦-೦

ಮದ್ದಗಿರಿ ಮುನ್ಸೀಫ್ ಕೋರ್ಟಿನಲ್ಲಿ

29 2

1909–1910 ನೇ ಇಸವಿ ಅಸಲ್ ನಂಬರು–274

ವಾದಿಗಳು —ಮಡಕಶಿರಾ ತಾಲ್ಲೂಕು ಯರಗುಂಟೆ **ಹಳ್ಳೀ**ಲಿರುವ ನಾಗಲಿಂಗಪ್ಪ ವಗೈರೆ

ಪ್ರತಿವಾದಿಗಳು —ಸೀರಾ ತಾಲ್ಲೂಕು ದೊಡ್ಡ ಹೊಲೀ **ಕುಂಟೇ**ಲಿರುವ ವೀರಣ್ಣ ವಗೈರೆ

ಇದಕ್ಕೆ ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನಂದರೆ,—

ಸೀರಾ ತಾಲ್ಲೂಕು ದೊಡ್ಡ ಹೊಲೀ ಕುಂಟೆ ಬಳಿ ಇರತಕ್ಕ **ವೀ**ರಲಿಂಗದೇವರುಗುಡಿಗೆ ಗೌಡಿಕೆ ಹಕ್ಕಿಗೂ ಮತ್ತು ದೇವಸ್ಥಾ**ನದ** ಆಡಳಿತ ನಡಿಸುವುದಕ್ಕೂ ಇವ ತಮ್ಮ ಹಕ್ಕನ್ನು ಸ್ಥಿರಪಡಿಸಿ **ಕೊಡಬೇ**ಕೆಂದು ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವಾ **ದಾಖಲು** ಮಾಡಿರುವದ್ದರಿಂದ ಮೇಲ್ಕಂಡ ದಾವೆಯಲ್ಲಿ ಕಕ್ಷಿಗಾ**ರರಾಗಿ** ಸೇರಲು ಅಥವಾ ವಾದಿಗಳ ಮೇಲೆ ತಕರಾರು ಮಾಡ**ಲು** ಅಪೇಕ್ಷೆಯುಳ್ಳ ಸಮಸ್ತರೂ ಈ ಕೋರ್ಟು ರೂಬರೂಬು **5–4** 1910 ನೇ ಎವಿ 11 ಗಂಟೆಗೆ ಖುದ್ದಾಗಿಯಾಗಲೀ ಅಥವಾ **ಕ್ರಮ**ವಾಗಿ ಅಧಿಕಾರವನ್ನು ಹೊಂದಿದ ಏಜಂಟರ ಮೂಲಕವಾಗಿ **ಯಾ**ಗಲೀ, ಅಥವಾ ಪ್ಲೀಡರ ಮೂಲಕವಾಗಿ ಯಾಗಲೀ ಹಾಜರಾಗತಕ್ಕದ್ದು

A R Srinivasa Raghavachar
Munsiff

ವೃತ್ತಾಂತ ಪತ್ರಿಕೆ

ಸನ್ ೧೯೧೦ ನೇ ಇಸವಿ ಮಾರ್ಚಿ ತಾ ೧೦ ನೇ ಗುರುವಾರ

ಮೈಸೂರು ಸಂಸ್ಥಾನದ ಪೋಲೀಸು

ಪೋಲೀಸಿನವರ ಮೇಲೆ ನಮಗೆ [illegible] ಯಾಕೆಂದರೆ [illegible] ಸ್ವಾಭಿಮಾನ [illegible] ಯಾವುದಾದರೊಂದು [illegible] ಸಾಕ್ಷಿ ಹೇಳುವುದಕ್ಕೆ ಯಾರೂ ಹಿಂದೆಗೆಯುತ್ತಾರೆ ಪೋಲೀಸಿನವನು [illegible] ಅವನ [illegible] ಒಂದು [illegible] ಮಾಡಿರುವ [illegible] ವರುಷದ ಪೋಲೀಸ್ ರಿಪೋರ್ಟು [illegible] ಬರವಸವುಂಟುಮಾಡುವುದಾಗಿ [illegible]

ಈ ಸಂಸ್ಥಾನದ ಪೋಲೀಸ್ ಇಲಾಖೆಯಲ್ಲಿ [illegible] ಮಂದಿ ಉದ್ಯೋಗಸ್ಥರೂ [illegible] ಪೋಲೀಸಿನವರೂ ಇರುತ್ತಾರೆ ಕಳೆದ ವರುಷ ಸರ್ಕಾರದವರು [illegible] ನಡೆಸಿದಂತಾ [illegible] ಜನ ಉದ್ಯೋಗಸ್ಥರನ್ನು [illegible] ಕಾನ್ಸ್ಟೇಬಲ್ಲನ್ನು ಕೆಲಸದಿಂದ ವಜಾಮಾಡಿದರು ಮತ್ತು [illegible] ಜನ ಉದ್ಯೋಗಸ್ಥರಿಗೂ [illegible] ಜನ ಕಾನ್ಸ್ಟೇಬಲುಗಳಿಗೂ ಜುಲ್ಮಾನೆಯಾಗಿರುತ್ತದೆ ಇಂತಹ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಅಧಿಕಾರಿಗಳ ಪೈಕಿ ಅರಿಕ್ಕೆ [illegible] ಕಾನ್ಸ್ [illegible] ನೂರಕ್ಕೆ ಒಬ್ಬನಂತೆಯೂ ಸರ್ಕಾರದವರ ಸಿಂದಗೆ [illegible] ಗುರಿಯಾದ ಹಾಗಾಯಿತು ಇವರು ಮಾಡಿದ ತಪ್ಪುಗಳು ಅಲ್ಪಮಾತ್ರದವುಗಳಾಗಿರಬಹುದು (ಇದರ ವಿವರವು ನಮಗೆ ರಿಪೋರ್ಟಿನಲ್ಲಿ ಸಿಕ್ಕಲಿಲ್ಲ) ಆದರೂ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟುಮಂದಿ ನೌಕರರು ಸರ್ಕಾರದ ದಂಡನೆಗೂ ಆಗ್ರಹಕ್ಕೂ ಗುರಿಯಾದರನ್ನುವುದೇನೋ ಸ್ಪಷ್ಟವಾಗಿ ತಿಳಿಯುತ್ತದೆ

ಮಳೆಬೆಳೆ ತಪ್ಪಿದ್ದರಿಂದ ದುಷ್ಕಾಲವು ಪ್ರಾಪ್ತವಾಯಿತು ಇದರ ದೆಸೆಯಿಂದ ಅಪರಾಧಗಳೂ ಅಕೃತ್ಯಗಳೂ ಕಳೆದ ಸಾಲಿನಲ್ಲಿ ಹೆಚ್ಚಿದವು ಅಂದರೆ ಆಚೇ ವರುಷ [illegible] ಅಪರಾಧಗಳು ನಡೆದವು, ಹೋದ ವರುಷ [illegible] ತಕ್ಸೀರುಗಳು ನಡೆದಿರುತ್ತವೆ ಈ ಪೈಕಿ ಆಸ್ತಿಪಾಸ್ತಿಗಳಿಗೆ ಸಂಬಂಧಪಟ್ಟ ಅಪರಾಧಗಳೇ ಹೆಚ್ಚಾಗಿದ್ದುವು

ಗವರ್ನ‌ಮೆಂಟಿನಲ್ಲಿ ಬೇರೆ ಬೇರೆ ಇಲಾಖೆಗಳಿಂದ ಬರತಕ್ಕ **ರಿಪೋರ್ಟು**ಗಳನ್ನು ಇಟ್ಟುಕೊಂಡು ಒಂದಕ್ಕೊಂದು ಮೊಕಾಬಿಲೆ **ಮಾಡಿ ಹೋಲಿಸಿನೋಡುವುದಕ್ಕೂ** ವ್ಯತ್ಯಾಸಗಳೇನೆಂದು ಪರಿ**ಶೋಧನ** ಮಾಡುವುದಕ್ಕೂ ಯಾವ ಅಧಿಕಾರಿಯಾದರೂ ಇರುತ್ತಾರೋ ಇಲ್ಲವೋ ನಮಗೆ ತಿಳಿಯದು ನಾವು ಕ್ರಿಮಿನಲ್ **ಕೋರ್ಟು**ಗಳ ರಿಪೋರ್ಟನ್ನೂ ಪೋಲೀಸ್ ರಿಪೋರ್ಟನ್ನೂ ಹೋಲಿಸಿ ನೋಡಿದವು ಇವರಡೂ ಒಂದಕ್ಕೊಂದು ಸರಿಹೋಗುವುದಿಲ್ಲವೆಂದು ಕಂಡುಬಂದಿತು ಹ್ಯಾಗೆಂದರೆ ಮೊದಲನೆಯ ರಿಪೋರ್ಟು [illegible] ಜನರ ಮೇಲೆ [illegible] ಕೊಲೆಗಳನ್ನು ನಡಿಸಿದಂತೆ ಮೊಕದ್ದಮೆ ಮಾಡಲಾಯಿತೆಂದು ಹೇಳುವುದು ಎರಡನೆಯ ರಿಪೋರ್ಟನ್ನು ನೋಡಿದರೆ [illegible] ಕೊಲೆಗಳಾದವೆಂದೂ [illegible] ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಲ್ಪಟ್ಟಿತೆಂದೂ ಗೊತ್ತಾಗುತ್ತದೆ ಆದಕಾರಣ ಈ ರೀತಿ ಒಂದು ರಿಪೋರ್ಟಿಗೂ ಇನ್ನೊಂದು ರಿಪೋರ್ಟಿಗೂ ವ್ಯತ್ಯಾಸ ಕಂಡುಬರುವುದು ಯೋಗ್ಯವಲ್ಲ

ಕೊಲೆಗಳ ವಿಚಾರವನ್ನು ಕುರಿತು ಬರೆಯುವಲ್ಲಿ ಮೈಸೂರು, ಹಾಸನ, ಕಡೂರು ಡಿಸ್ಟ್ರಿಕ್ಟುಗಳಲ್ಲೂ ಫ್ರಂಚ್‌ರಾಕ್ಸ್ ಸಬ್ ಡಿವಿಜನಲ್ಲೂ [illegible] ಕೊಲೆಗಳು ನಡೆದವೆಂದೂ, ಈ ಪೈಕಿ ಒಂದಾದರೂ ಪತ್ತೆ ಆಗದೆ ಹೋಯಿತೆಂದೂ ಈ ರಿಪೋರ್ಟು ಹೇಳುವುದು “ಇದು ಆ ಡಿಸ್ಟ್ರಿಕ್ಟುಗಳ ಪೋಲೀಸ್ ಸಿಬ್ಬಂದಿಯವರಿಗೆ ತುಂಬಾ ಆಗೌರವವಾದದ್ದಾಗಿದೆ” ಎಂದು ಸರ್ಕಾರದವರು ಆಕ್ಷೇಪಣೆಮಾಡಿರುವುದು ಸಹಜವಾದದ್ದೆಂದು ಎಲ್ಲರೂ ಒಪ್ಪಿಕೊಳ್ಳುವರು

ಕೆಲವು ತಕ್ಸೀರುಗಳ ವಿಷಯದಲ್ಲಿ ಗ್ರಾಮಾಧಿಕಾರಿಗಳು ಅಪರಾಧಿಗಳಿಗೆ ಸಹಾಯಮಾಡುತ್ತಾರೆ ಈ ರಿಪೋರ್ಟು ಹೇಳುವ ಪ್ರಕಾರ ಒಬ್ಬ ಬ್ರಾಹ್ಮಣ ಹುಡುಗನು ತನ್ನ ಸಹೋದರಿಯ ಸಂಗಡ ಅರಕೆರೆಯಿಂದ ದಾವಣಗೆರೆಗೆ ಹೋಗುತ್ತಿರುವಲ್ಲಿ ಕಳ್ಳರು ಅವರ ಬಳಿ ಇದ್ದದ್ದನ್ನು ಕಸುಕೊಂಡರು ಈ ಮೊಕದ್ದಮೆಯಲ್ಲಿ ಒಬ್ಬನು ಸಿಕ್ಕಿಬಿದ್ದು, ತಾನು ಕಳುವ ಮಾಡಿದ್ದುಂಟೆಂದು ಒಪ್ಪಿಕೊಂಡು ತನ್ನ ಪಾಲಿನ ಕಳವು ಮಾಲನ್ನು ಹಾಜರು ಮಾಡಿದನು ಇವನು ತನ್ನ ಯಜಮಾನನಾದ ಪಟೇಲನೂ ಈ ಕೃತ್ಯಕ್ಕೆ ಸೇರಿದ್ದನೆಂದು ಹೇಳಿದಾಗ್ಯೂ ಅವನನ್ನು ಕಳವು ವಿಷಯಕ್ಕೆ ದಸ್ತಗಿರಿ ಮಾಡಲಿಲ್ಲ ಹಿಡಿದ ಮೇಲೆ ಅವನು ಜಾಮೀನು ಕೊಟ್ಟು ಬಿಡುಗಡೆ ಹೊಂದಿದನು ಪೋಲೀಸಿನವರು ಅವನ ಮೇಲೆ ಮೊಕದ್ದಮೆ ತಾರದೆ ಹಾಗೇ ಬಿಟ್ಟುಕೊಂಡಿದ್ದರು ಕಡೆಗೆ ಮೇಲ್ಪಟ್ಟ ಅಧಿಕಾರಿಯು ಆ ಸ್ಥಳಕ್ಕೆ ಹೋಗಿ ತನಿಖೆ ಮಾಡುವಲ್ಲಿ ಆ ಪಟೇಲನು ತಾನು ಕೃತ್ಯನಡಿಸಿದ್ದುಂಟೆಂದು ಒಪ್ಪಿಕೊಂಡನು ಬಳಿಕ ಅವನಿಬ್ಬರಿಗೂ ಶಿಕ್ಷೆಯಾಯಿತು ಡಿಸ್ಟ್ರಿಕ್ಟು ಜಾತುಗಳಲ್ಲಿ ಈ ರೀತಿಯಾದ ನಡವಳಿಕೆಗಳು ನಡೆಯುತ್ತಿರುವ ಪಕ್ಷಕ್ಕೆ ಪ್ರಜೆಗಳ ಮಾನ ಪ್ರಾಣ ಧನಗಳಿಗೆ ಉಳುವಾಳಿಲ್ಲವೆಂಬುವುದು ಸ್ಪಷ್ಟವಾಗುತ್ತದೆ ಪೋಲೀಸಿನವರೂ ಗ್ರಾಮಾಧಿಕಾರಿಗಳೂ ಒಕ್ಕಟ್ಟಾಗಿ ಪ್ರಯತ್ನವನ್ನು ಮಾಡದೆ ಹೋದರೆ [illegible] ನ್ಯಾಯದೊರಕುವದು ಸಾಧ್ಯವಿಲ್ಲ

ಪೋಲೀಸ್ ಇಲಾಖೆಯಲ್ಲಿ ಸತ ಸಂಬಳವನ್ನು ಹುದ್ದೆಕಿ [illegible] ಬೇಕೆಂದು ಸರ್ಕಾರದವರು [illegible] ಅವರ [illegible] ಉದ್ದೇಶವು [illegible] ಪ್ರಜಾಸಂರಕ್ಷಣಾಕಾರ್ಯವನ್ನು ವಹಿಸಿರುವ ಈ ಪೋಲೀಸ್ ಡಿಪಾರ್ಟ್‌ಮೆಂಟಿನ ನೌಕರರು [illegible] ತಾಲಿಗಳೂ ನೇಮಕವಾದಾರೆಂದೂ [illegible] ಇರುವರೆಂದೂ ನಂಬಿ ಹಾರೈಸುತ್ತೇವೆ

ಮೈಸೂರು ಗವರ್ನ‌ಮೆಂಟ್ ರಿಪೋರ್ಟುಗಳು

ಸ್ಟಾಂಪ್ಸ್ ಇಲಾಖೆ

ಕಳೆದ ಸಾಲಿನಲ್ಲಿ ಈ ಇಲಾಖೆಯಿಂದ ಸರ್ಕಾರಕ್ಕೆ [illegible] [illegible] ರೂ [illegible] ಆಗ [illegible] ಸ್ಟಾಂಪುಗಳು [illegible] ರೂ [illegible] ಸ್ಟಾಂಪುಗಳು [illegible] ಕಾಗದವನ್ನು ಸರ್ಕಾರದವರು ವಜಾ ಮಾಡಿ ೧೯೦೯ ನೇ ಮಾರ್ಚಿ ತಾ ೧ ರಿಂದ ಹೊಸ ತರಹ ಕಾಗದವನ್ನು [illegible] ತಂದರು ಸ್ಟಾಂಪಿನ ಉತ್ಪತ್ತಿಯು ಪ್ರತಿವರುಷ ವೃದ್ಧಿಯಾಗುತ್ತಾ ಬಂದಿದೆ

ರಿಜಿಸ್ಟ್ರೇಷನ್ ಇಲಾಖೆಯು

ಈ ಇಲಾಖೆಯಲ್ಲಿ ಕಾರ್ಯಗಳು ಹೋದ ಸಾಲಿನಲ್ಲಿ [illegible] ವರುಷ [illegible] ದಸ್ತಾವೇಜುಗಳು ರಿಜಿಸ್ಟರಾಗಿದ್ದವು ಹೋದ ವರುಷ [illegible] ದಸ್ತಾವೇಜುಗಳು ರಿಜಿಸ್ಟರಾಗಿರುತ್ತವೆ ಈ ಪತ್ರಗಳಲ್ಲಿ [illegible] ರೂಪಾಯಿನ ಸ್ವತ್ತುಗಳು ಕ್ರಯವಿಲೆವಾರಿಯಾಗಿರುವವು ಈ ಇಲಾಖೆಯ ಖರ್ಚು ಸಹಾ [illegible] ರೂಪಾಯಿಸಿಂದ [illegible] ರೂಪಾಯಿಗೆ ಇಳಿದಿತು ಅಂದರೆ ಗವರ್ನ‌ಮೆಂಟಿಗೆ [illegible] ರೂಪಾಯಿ ಆದಾಯವಾಗಿದೆ ಪ್ರಜೆಗಳು ರಿಜಿಸ್ಟರ್ ಮಾಡಿಸಿಕೊಳ್ಳುವುದರಲ್ಲಿ ಪ್ರಯೋಜನವುಂಟೆಂಬುವುದನ್ನು ತಿಳಿದುಕೊಳ್ಳುತ್ತಾ ಬಂದಿರೋಣದರಿಂದ ವರುಷೇ ವರುಷ ಹೆಚ್ಚು ದಸ್ತಾವೇಜುಗಳು ರಿಜಿಸ್ಟರಾಗುತ್ತಿರುವವೆಂದು ಕಾಣುತ್ತದೆ

ವಿದ್ಯುಲ್ಲತೆಯಿಂದ ಬೆಳಕುಂಟಾಗುವದೊ?

ಬಂಗಳೂರು ಮೈಸೂರು ಪಟ್ಟಣಗಳ ಬೀದಿಗಳಲ್ಲಿಯೂ ದೊಡ್ಡ ದೊಡ್ಡ ಮಹಲು ಶಾಪುಗಳಲ್ಲಿಯೂ ಹಚ್ಚುವ ದೀಪಗಳಿಗೆ ಎಣ್ಣೆ ಬತ್ತಿ, ರಂಜಕದಕಡಿ ಇವುಗಳೊಂದೂ ಬೇಕಿಲ್ಲ ಸಂಕೇತ ಸ್ಥಾನದಲ್ಲಿಟ್ಟಿರುವ ಒಂದು ಗುಂಡು ಅಥವಾ ಬಿರಡೆಯನ್ನು ಮುಟ್ಟಿದರೆ ಎಣ್ಣೆ ಬತ್ತಿಗಳಿಂದಾಗುವ ಪ್ರಕಾಶಕ್ಕಿಂತ ಇಮ್ಮಡಿಯಾದ ಬೆಳಕುಂಟಾಗಿ ಆ ಪ್ರದೇಶವನ್ನೆಲ್ಲಾ ರಮಣೀಯವಾದ ಪ್ರಕಾಶದಿಂದ ಶೋಭಿಸುವಂತೆ ಮಾಡುವದು

ಈಗ ಹಲವು ವರುಷಗಳಿಗೆ ಮುಂಚೆ ನಾವು ಇದರ ವಿಷಯ ಚೆನ್ನಾಗಿ ನೋಡಿ ತಿಳಿದಿರಲಿಲ್ಲ ಕಲವರು ಪುಸ್ತಕಗಳಲ್ಲಿ ಇದನ್ನು ಕುರಿತು ಓದಿದ್ದರು ಇನ್ನು ಕಲವರು ವಿಲಾಯತಿ, ಸಂಯುಕ್ತ ಸಂಸ್ಥಾನಗಳಲ್ಲಿ ಹೀಗೆ ಬೆಳಕನ್ನುಂಟುಮಾಡುತ್ತಾರೆಂದು ಕೇಳಿದರು ಮತ್ತು ಅದು ಹ್ಯಾಗೋ ಏನೋ ಎಂದು ಆಶ್ಚರ್ಯಪಡುತ್ತಿದ್ದರು ಈಗಲಾದರೋ ಇದು ನಮ್ಮ ನಮ್ಮ ಬೀದಿಗಳಲ್ಲಿಯೂ ಮನೆಗಳಲ್ಲಿಯೂ ನಿತ್ಯವೂ ನಡೆಯುತ್ತದೆ ಇದರಲ್ಲಿ ಈಗ ಸಂದೇಹ ಯಾರಿಗೂ ಇಲ್ಲ ಮೊದಲು ಇದೇನೋ ಮಹತ್ತಾದ ಕೌತುಕವೆಂದು ಭಾವಿಸುತ್ತಿದ್ದವು ಈಗಲೂ ಅದು ಹೇಗಾಗುತ್ತದೋ ಅನೇಕರಿಗೆ ಗೊತ್ತಿಲ್ಲ ಆದರೂ ಅದು ಎರಡು ಹೊತ್ತೂ ನಮ್ಮ ಕಣ್ಣು ಮುಂದೆ ನಡೆಯುವದರಿಂದ ಅದು ಸಾಧಾರಣವಾಗಿ ಕಾಣುತ್ತದೆ ಸಾಧಾರಣವಾಗಿ ಎಲ್ಲರಿಗೂ ತಿಳಿದಿರುವದೇನೆಂದರೆ—ಶಿವನ ಸಮುದ್ರದ ಜಲಪಾತದಲ್ಲಿ ವಿದ್ಯುಲ್ಲತೆಯೆಂಬ ಶಕ್ತಿಯು ಉತ್ಪತ್ತಿಯಾಗಿ ಅದು ತಂತಿಗಳ ಮುಖಾಂತರ ಇಲ್ಲಿಯ ವರೆಗೂ ಸಾಗಿಬಂದು ನಮ್ಮ ಬೀದಿಗಳಲ್ಲಿ ಬೆಳಕನ್ನು ಕೊಡುತ್ತದೆ ಎಂಬುವದು ಅಂತೂ ಈಗ ರಾತ್ರಿ ವೇಳೆಗಳಲ್ಲಿ ಬಂಗಳೂರು ಮೈಸೂರು ಪಟ್ಟಣಗಳಲ್ಲಿ ತಿರುಗಾಡುವದು ಸಂತೋಷವಾಗಿಯೂ ಮನಸ್ಸಿಗೆ ರಮಣೀಯವಾಗಿಯೂ ಇದೆ ಯಾಕೆಂದರೆ ಹೊಚ್ಚಾಗಿಯೂ ಹೊಗೆಯಾಡುತ್ತಲೂ ಇದ್ದ ದೀಪಗಳನ್ನು ತೆಗೆದು ಬಹಳ ದೂರದ ವರೆಗೂ ವಿಸ್ತಾರವಾಗಿ ಪ್ರಕಾಶಿಸಿ ಎಲ್ಲರಿಗೂ ಸಾಕಾದಷ್ಟು ಬೆಳಕನ್ನು ಕೊಡುವ ವಿದ್ಯುಲ್ಲತೆಯ ದೀಪಗಳು ಬೀದಿಯ ಒಂದು ಕಡೆಯಿಂದ ಇನ್ನೊಂದು ಕಡೆಯ ವರೆಗೂ ಕಂಗೊಳಿಸುತ್ತಿರುವವು

ಹೀಗೆ ಈ ವಿದ್ಯುಲ್ಲತೆಯು ನಮ್ಮ ಕಣ್ಣುಗಳಿಗೆ ಪ್ರಕಾಶ ಕೊಡುತ್ತದೋ ಹಾಗೆ ಸತ್ಯವೇದವು ನಮ್ಮ ಆತ್ಮಗಳಿಗೆ ಜ್ಞಾನವನ್ನು ಹುಟ್ಟಿಸುತ್ತದೆ ಮತ್ತು ಈ ರಹಸ್ಯವು ಸಕಲರಿಗೂ ಜ್ಞಾತವಾಗಿ ಎಲ್ಲರೂ ಇದರಿಂದ ಧನ್ಯರಾಗಬೇಕೆಂದು ಬೈಬಲ್ ಸಮಾಜದವರು ಈ ಗ್ರಂಥವನ್ನು ಬಿಟ್ಟಿತೀಯವಾದ ರೀತಿ ದ್ರವ್ಯವನ್ನು ವ್ಯಯಮಾಡಿ ನಾನೂರು ಭಾಷೆಗಳಲ್ಲಿ ಟೀಕಿಸಿ ಪ್ರಚುರಪಡಿಸಿದ್ದಾರೆ ಹೀಗಿರುವಲ್ಲಿ ಈ ಪುಸ್ತಕದಲ್ಲಿ ಏನು ರಹಸ್ಯವಿದೆ? ತಿಳಿಯಬೇಡವೆ

ಈ ಪುಸ್ತಕವನ್ನು ನೋಡಿದರೆ ಅದು ಸಾಧಾರಣವಾಗಿ ಇತರ ಪುಸ್ತಕಗಳಂತೆ ಕಾಣುತ್ತದೆ ಇದರೊಳಗೇನೂ ವಿಶೇಷವಿಲ್ಲ ಕ್ರೈಸ್ತರು ಇದನ್ನು ದೇವರ ವಾಕ್ಯವೆಂದು ಭಾವಿಸುತ್ತಾರೆ ಹಾಗಿದ್ದರೆ ಅದು ವಿಶೇಷವೇನು? ಇದರ ಅದಕ್ಕೆ [illegible] ದೇವರನ್ನು ಯಾರೂ ಎಂದೂ ನೋಡಿಲ್ಲ [illegible] ಈ ಗ್ರಂಥವನ್ನು [illegible] ನೋಡಿದರೆ ಇದು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಜನಗಳಿಂದ ಬರೆಯಲ್ಪಟ್ಟು ಸಂಗ್ರಹವಾದ ಪುಸ್ತಕಗಳೆಂದು ಸುಗಮವಾಗಿ ಗೋಚರವಾಗುತ್ತದೆ [illegible] ಪುಸ್ತಕಗಳಿಂದ [illegible] ದ್ದಂದ [illegible] ಶಾಸ್ತ್ರಜ್ಞರೂ ಪಂಡಿತರೂ [illegible] ಗಳ [illegible] ತಮ್ಮ ನಡತೆಗೆ ಸೂತ್ರವೆಂದು [illegible] ಇದಕ್ಕೆ ಅನೇಕ ಕಾರಣಗಳುಂಟು ಆದರೆ [illegible] ಒಂದು ಮುಖ್ಯ ಕಾರಣವನ್ನು ಕುರಿತು ಸಂಕ್ಷೇಪವಾಗಿ [illegible]

[illegible] ಪ್ರಕಾರ ಹುಟ್ಟಿ [illegible] ಜ್ಞಾನವುಂಟಾಗುತ್ತದೆ [illegible] ನೋಡಿದಲ್ಲಿ [illegible] ಗ್ರಂಥಗಳಲ್ಲಿ [illegible] ಅಪಾಯಕ್ಕೆ [illegible] ಹಾವು [illegible] ನಾವ [illegible] ಗಿರುವದಕ್ಕೆ [illegible] ನಮ್ಮ [illegible] ಯಾವ [illegible] ಕೋ [illegible] ಗೊತ್ತಿಲ್ಲ ಇದರ [illegible] ಗುವ ಹಾಯಿಯಲ್ಲಿದ್ದರೆ ಈ ಅಪಾಯಗಳನ್ನು ನಾವು ತಪ್ಪಿಸಿಕೊಳ್ಳಬಹುದು [illegible] ಈ ಸಂಸಾರದಲ್ಲಿ ನಾವ [illegible] ಇಲ್ಲಿಗೆ ಬರಬೇಕೆಂದೂ ಇಲ್ಲಿರುವಷ್ಟು ಕಾಲ [illegible] ಮಾರು [illegible] ಅಪ್ಪಣೆಯಂತೆ [illegible] ಕಾರವು [illegible] ನಮ್ಮನ್ನು ಮುಕ್ತಿಗೊಂಡು [illegible] ವಲ್ಲಿ [illegible] ನಮ್ಮ ಪಾದಕ್ಕೆ ದೀಪವು ನಮ್ಮ [illegible] ಬೇಕೂ ಆಗಿದೆ ನಮ್ಮ ತಂದೆಯಾಗಿರುವ ದೇವರು ಈ ಲೋಕಕ್ಕೆ ನಮ್ಮನ್ನು ಕಳುಹಿಸಿದ್ದಾನೆ ಆತನ ಬಳಿಗೇ ನಾವು ಹೋಗಬೇಕಾಗಿದೆ ಈ ಲೋಕಕ್ಕೆ ನಮ್ಮನ್ನು ಆತನು ಕಳುಹಿಸಿರುವ ಕಾರಣವೇನಂದರೆ ನಾವು ಪರಸ್ಪರ ಪ್ರೀತಿಯುಳ್ಳವರಾಗಿರುವುದಕ್ಕೆ ಕಲಿಯಬೇಕೆಂದಲ್ಲದೆ ದೂರಗಳು [illegible] ಕಾಣಿಕೆ ಕಪ್ಪಗಳನ್ನು ತೆಗೆದುಕೊಳ್ಳುವದು ಸಾಲದು ಅವರನ್ನು ತಮ್ಮ ವಶಕ್ಕೆ ಒಪ್ಪಿಸಿರುವ ಮಕ್ಕಳಂತೆ ಸಂರಕ್ಷಿಸಬೇಕು [illegible] ದರು ಬಡವರನ್ನು ತಿರಸ್ಕರಿಸಿ ಹಿಂಸಿಸದೆ ಅವರನ್ನು ತಮ್ಮ ಸಹೋದರರೆಂದು ಪ್ರೀತಿಸಬೇಕು ವಿದ್ಯಾವಂತರೂ ಜ್ಞಾನಿಗಳೂ ಅವಿದ್ಯಾವಂತರನ್ನೂ ಮೂಢರನ್ನೂ ಕರುಣಿಸಿ ಜ್ಞಾನಬೋಧನ ಮಾಡಬೇಕು ರೋಗಿಗಳನ್ನೂ ಅಂಗಹೀನರನ್ನೂ ಪರಾಮರಿಸುವದು ಆರೋಗ್ಯವಂತರ ಕರ್ತವ್ಯವಾಗಿದೆ ಧನಿಕರು ತಾವು ಬಡವರ ಉಗ್ರಾಣಿಕರೆಂದು ನಿಶ್ಚೈಸಿಕೊಳ್ಳಬೇಕು ಹೀಗೆ ಪರಸ್ಪರ ಪ್ರೀತಿಯ ಜೀವನವನ್ನು ನಡಿಸಿ ಪಾಲಿಸುವಂಥ ಸೂತ್ರವಾಗಿರಬೇಕೆಂದು ಸಂದೇಹವಿಲ್ಲದೆ ಅದು ಅಧಿಕಾರದಿಂದ ಬೋಧಿಸುತ್ತದೆ ಈ ಕರ್ತವ್ಯಜ್ಞಾನವು ಲೋಕದಲ್ಲಿ ಪೂಜ್ಯವಾಗ ದೇವರು ತಾನೇ ಕರ್ತವ್ಯಜ್ಞಾನವನ್ನು ತಿಳಿಸತಕ್ಕ ಈ ಲೋಕಕ್ಕೆ ಒಂದು ದೇವರು ಪ್ರೀತಿಸ್ವರೂಪನಾಗಿರುವದರಿಂದ ಪ್ರೀತಿಯಲ್ಲಿ ನೆಲೆಯಾಗಿರುವವರೇ ಕರ್ತವ್ಯ ಪಾರಾಯಣರೆಂದು ಪ್ರಕಟಿಸಿದನು

ಈ ಪುಸ್ತಕದಲ್ಲಿ ಇಂತಹ ಸುವಾರ್ತೆ ಇರುವದರಿಂದ ಇದು ಯಾವ ಯಾವ ದೇಶಕ್ಕೆ ಹೋಗಿದೆಯೋ ಅಲ್ಲಿ ಹಗೆ ಮತ್ಸರ ಕ್ರೌರ್ಯಾದಿಗಳನ್ನು ತಗ್ಗಿಸಿ, ನೀತಿ ಸತ್ಯ ಕರುಣೆ ಪರೋಪಕಾರಗಳನ್ನು ಕಲಿಸಿದೆ ಇದೀಗ ಇದರಲ್ಲಿರುವ ರಹಸ್ಯ ಈಗ ಸತ್ಯವೇದದಲ್ಲಿರುವ ಬೆಳಕು ಪ್ರೀತಿಯೇ, ಸಕಲ ಭೋಗ ಭಾಗ್ಯಗಳಿಗಿಂತ ಶ್ರೇಷ್ಠವಾದದ್ದೆಂದು ಅದು ಕಲಿಸುತ್ತದೆ ಮಡಗಾಸ್ಕರ್, ಫೀಜಿ ಮುಂತಾದ ದ್ವೀಪಗಳಿವೆ ಎಂದು ವಾಚಕರು ಕೇಳಿರುವರು ಅದರಲ್ಲಿ ವಾಸಿಸುವ ಜನಗಳು ಪಶುಗಳೋಪಾದಿ ಒಬ್ಬರನ್ನೊಬ್ಬರು ಹೊಡೆಯುತ್ತ ಕೊಂದು ತಿನ್ನುತ್ತ ಹುಬ್ಬಲಿಗಳೂ ಕ್ರೂರಚಿತ್ತರಾಗಿದ್ದರು ಇದರ ಆ ದೇಶಗಳಿಗೆ ಸತ್ಯವೇದವು ಪ್ರವೇಶಿಸಿ ದೇವರ ಪ್ರೀತಿಯನ್ನು ಕುರಿತು ಬೋಧಿಸಿದ ಮೇಲೆ ಅವರು ಈಗ ಧರ್ಮಿಷ್ಠರಾಗಿಯೂ ಪರೋಪಕಾರಿಗಳಾಗಿಯೂ ಭಗವದ್ಭಕ್ತರಾಗಿಯೂ ಇದ್ದಾರೆ ಈ ದೇಶದಲ್ಲಿಯೂ ಸತ್ಯವೇದವನ್ನು ಯಾರು ಓದಿ ಅದರಂತೆ ನಡೆಯುತ್ತಾರೋ ಅವರಲ್ಲಿ ಈ ಬೆಳಕು ಪ್ರಜ್ವಲಿಸಿ ಅವರನ್ನು ಸಾಕ್ಷಾತ್ ದೇವರಿಗೆ ಪ್ರೀತಿಪಾತ್ರರಾದ ಮಕ್ಕಳಾಗ ಮಾಡುತ್ತದೆ

ಒಳದೇಶದ ವೃತ್ತಾಂತಗಳು

ಶ್ರೀಮತ್ ಯುವರಾಜರವರು ಮೊನ್ನೆ ಮಂಗಳವಾರ ಬೆಳಗಿನ ರೈಲಿನಲ್ಲಿ ಬೆಂಗಳೂರಿಂದ ರಾಜಧಾನಿಗೆ ದಯಮಾಡಿದರು

ಕನ್ನಡ ಪಂಡಿತ ಪರೀಕ್ಷೆಯೂ, ಮೌಲ್ವಿ ಪರೀಕ್ಷೆಯೂ ೧೯೧೦ನೇ ಇಸವಿಯಲ್ಲಿ ನಡಿಸಲ್ಪಡುವುದಿಲ್ಲವೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ತಿಳಿಸಿರುತ್ತಾರೆ

ಮುಂದಿನ ವರುಷ ಶ್ರೀರಂಗಪಟ್ಟಣ, ಗಂಜಾಮ, ನಂಜನಗೂಡುಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಕಾಮಗಾರಿ ಮುಂತಾದದ್ದನ್ನು ಮಾಡಿಸುತ್ತಾರೆಂದು ಕೇಳಿದೆವು.

ಎರಡು ವಾರಗಳ ಹಿಂದೆ ಯಡತೊರೆ ತಾಲ್ಲೂಕು ಅಟ್ಟೂರಿನಲ್ಲಿ ಸಿಕ್ಕಿಬಿದ್ದ ಕೊಲೆಪಾತಕಿಯಾದ ದೊಡ್ಡ ಹೈದನನ್ನು ಸೆಷನ್ಸ್ ಜಡ್ಜರ ಹುಕುಂ ಪ್ರಕಾರ ಈ ಓನ ಬೆಳಿಗ್ಗೆ ಇಲ್ಲಿನ ಜೈಲ್‌ಖಾನೆಯೊಳಗೆ ಗಲ್ಲಿಗೆ ಹಾಕುವವರಾಗಿದ್ದಾರೆ

ಕಳೆದ ಭಾನುವಾರ ಶ್ರೀಮನ್ಮಹಾರಾಜರವರೂ ಯುವರಾಜರವರೂ ಮಾಮಾ ಸಮೇತ ಬೊಂಬಾಯಿಯಿಂದಲೂ, ದಿವಾನ್‌ರವರು ಚಿತ್ರದುರ್ಗ ಡಿಸ್ಟ್ರಿಕ್ಟಿನ ಸರ್ಕೀಟು ತೀರಿಸಿಕೊಂಡು ತುಮಕೂರಿನಿಂದಲೂ ಬೆಂಗಳೂರಿಗೆ ವಾಪಸ್ ದಯಮಾಡಿದರು

ರಾಜಧಾನಿಯ ಕೋಟೆಯ ಆವರಣದೊಳಗೆ ಟ್ರಸ್ಟ್ ಬೋರ್ಡಿನವರು ಸುಮಾರು ೨೦೦ ಮನೆಗಳನ್ನು ಒಡೆದು ಹಾಕಿದರು ಇನ್ನು ಕೆಲವು ಮನೆಗಳನ್ನು ಕೆಡವುವುದಕ್ಕಾಗಿ ಸರ್ಕಾರದವರು ಕಳೆದ ವಾರ ಇನ್ನೊಂದು ಲಕ್ಷ ರೂಪಾಯಿ ಗ್ರಾಂಟ್ ಮಾಡಿರುತ್ತಾರೆ

ರಾಜಧಾನಿಯಲ್ಲಿ ಪೋಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರಾಗಿರುವ ಮ|| ಕೇಶವಯ್ಯನವರಿಗೆ ಅಮಲ್ದಾರಿ ಆಗಿ, ಗುಂಡ್ಲುಪೇಟೆ ತಾಲ್ಲೂಕಿಗೆ ವರ್ಗವಾಗಿದೆ ಎಂದೂ, ಅಮಲ್ದಾರ್ ಮೆ|| ಎಸ್ ಕೃಷ್ಣ ಅಯ್ಯರವರು ಈ ತಿಂಗಳ ಆಖೈರಿಗೆ ಕೆಲಸದಿಂದ ನಿವೃತ್ತರಾಗುವರೆಂದೂ ತಿಳಿಯುತ್ತದೆ

ಮದರಾಸ ಪಟ್ಟಣದಲ್ಲಿ ಮೆ|| ಟಿ ಆರ್ ದಾಸ್ ಕಂಪನಿಯವರಿಂದ ಪ್ರಕಟವಾಗುತ್ತಿದ್ದ "ವೀರಕೇಸರಿ" ಎಂಬ ಪತ್ರಿಕೆಯು ಚಂದಾದಾರರಲ್ಲಿ ಒಬ್ಬರು ತಮಗೆ ಆ ಪತ್ರಿಕೆಯು ಬರಲಿಲ್ಲವೆಂದೂ, ಕಾಗದಗಳಿಗೆ ಜವಾಬು ಕೊಡದಿರುತ್ತಾರೆಂದೂ, ಆ ಪತ್ರಿಕೆಯು ನಿಂತುಹೋಯಿತೆಂಬುವುದು ಗೊತ್ತಾಗದಿದ್ದ ಎಂದೂ ಆಕ್ಷೇಪಿಸಿ ನಮಗೆ ಬಾತ್ಮಿಗಳನ್ನು ಬರೆದಿರುತ್ತಾರೆ

ಮೈಸೂರು ಹೊಸ ಅರಮನೆಯನ್ನು ಕಟ್ಟುತ್ತಿದ್ದ ಪಬ್ಲಿಕ್ ವರ್ಕ್ ಮೇಲ್ವಿಚಾರಣೆ ಹೊಂದಿದ ಎಕ್ಸಿಕ್ಯುಟಿವ್ ಇಂಜನಿಯರ್ ಮೆ|| ಬಿ ಪಿ ರಾಘವಲು ನಾಯ್ಡುಯವರು ಮದರಾಸ್ ಪಟ್ಟಣದಲ್ಲಿ ರೈಲ್ವೆ ಕಂಪನಿಯ ಆಫೀಸುಗಳನ್ನು ಕಟ್ಟಿಕೊಡುವುದಕ್ಕೆ ಪ್ಲಾನ್ ಮುಂತಾದದ್ದನ್ನು ತಯಾರುಮಾಡಿ ಕೊಟ್ಟು, ಅವರ ಸಂಬಳ ಗಿರಿಯನ್ನು ಕಂಪನಿಯಿಂದ ತಾವೇ ವಹಿಸಿಕೊಂಡಿದ್ದಾರೆಂದು ಕೇಳುತ್ತೇವೆ

ಹೋದ ಮಂಗಳವಾರ ಬೊಂಬಾಯಿ ಪಟ್ಟಣದಲ್ಲಿ ಶ್ರೀಮನ್ಮಹಾರಾಜರವರು ಯುವರಾಜರ ಸಮೇತ ಅಲ್ಲಿನ ಗಾಂಧರ್ವ ಮಹಾ ವಿದ್ಯಾಲಯವೆಂಬ ಒಂದೂ ಬಾಲಿಕಾ ಪಾಠಶಾಲೆಗೆ ದಯಮಾಡಿ, ವಿದ್ಯಾರ್ಥಿನಿಯರ ಹಾಡುಗಾರಿಕೆ ವಿದ್ಯಾಭಿವೃದ್ಧಿ ಪ್ರದರ್ಶನ ಕ್ರಮಾದಿಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟರೆಂದೂ, ವಿದ್ಯಾರ್ಥಿನಿಯರು ಅವರನ್ನು ವಿಶೇಷವಾಗಿ ಸತ್ಕಾರಮಾಡಿದರೆಂದೂ ತಿಳಿದುಬಂದಿದೆ

ಕೋಲಾರದ ಚಿನ್ನದ ಗಣಿ ಪ್ರಾಂತ್ಯದಲ್ಲಿ ಕಳ್ಳರು ಒಂದು ಹಳ್ಳಿಗೆ ಹೋಗಿ ಒಬ್ಬ ಪಟೇಲನ ಮನೆಯನ್ನು ನುಗ್ಗಿ ಜಿಂದಗಿಯನ್ನು ಅಪಹರಿಸಿದ್ದಲ್ಲದೆ, ತೊಟ್ಟಿಲಲ್ಲಿ ಮಲಗಿದ್ದ ೮ ೧೦ ದಿನಗಳ ಪಟೇಲನ ಒಳ್ಳೇ ಗಂಡು ಮಗುವನ್ನು ಎತ್ತಿಕೊಂಡು ಹೋದರೆಂತಲೂ, ಆ ಮಗುವಿನ ಶವವು ಒಂದು ಕುಡಿಯುವ ನೀರಿನ ಭಾವಿಯಲ್ಲಿ ಸಿಕ್ಕಿತೆಂತಲೂ, ಪೋಲೀಸಿನವರು ಪತ್ತೆ ತರದೂದು ನಡಿಸುತ್ತಿರುವುದಾಗಿಯೂ ತಿಳಿದುಬಂದಿದೆ

ಮೈಸೂರು ಮಿಷನ್ ಹೈಸ್ಕೂಲಿನಲ್ಲಿ ಪ್ರಿನ್ಸಿಪಲ್‌ರಾಗಿದ್ದ ರೆವ್ ಬೂಟ್ ಯವರು ಕಳೆದ ಸೋಮವಾರ ಸೀಮೆಗೆ ಪ್ರಯಾಣವಾದರು ಹೈಸ್ಕೂಲಿನ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಹಾರ್ಡ್‌ವಿಕ್ ಸಂಘದ ಮೆಂಬರುಗಳೂ ಅವರನ್ನು ಕರೆಸಿಕೊಂಡು, ನಾನಾ ವಿನೋದಗಳನ್ನು ನಡಿಸಿ, ಅವರಿಂದ ತಾವು ಪಡೆದ ಉಪಕಾರಗಳನ್ನು ವರ್ಣಿಸಿ ಅಡ್ರೆಸ್ಸುಗಳನ್ನು ಒಪ್ಪಿಸಿ, ಅವರಿಗೆ ತಮ್ಮ ಜ್ಞಾಪಕಾರ್ಥವಾಗಿ ಉತ್ಕೃಷ್ಟವಾದ ವಸ್ತುಗಳನ್ನು ಕೊಟ್ಟು ಅವರಲ್ಲಿ ತಮಗಿದ್ದ ಭಕ್ತಿ ಪ್ರೀತಿ ಕೃತಜ್ಞತೆಗಳನ್ನು ಪ್ರಕಟಪಡಿಸಿದರು

ಮೈಸೂರು ಸೀಮೆಯ ಖಜಾನೆಗಳಲ್ಲಿ ಸರ್ಕಾರಕ್ಕೆ ಬರಬೇಕಾದ ಹಣಕ್ಕೆ ಪ್ರತಿಯಾಗಿ ಮದರಾಸ್ ನೋಟುಗಳನ್ನು ಅಂಗೀಕರಿಸಬಹುದೆಂದೂ, ಬೊಂಬಾಯಿ ಕಲ್ಕತ್ತಾ ನೋಟುಗಳನ್ನು ಕೊಟ್ಟರೆ ಅವಕ್ಕೆ ಶೇಕಡಾ ೪ ಆಣೆಯಂತೆ ಜಾಸ್ತಿ ಸೇರಿಸಿಕೊಡಬೇಕೆಂದೂ ಸಂಸ್ಥಾನದ ಕಂಟ್ರೋಲರವರು ತಿಳಿಸಿರುತ್ತಾರೆ ವ್ಯಾಪಾರಕ್ಕಾಗಿ ನೋಟು ಕೊಟ್ಟು ಹಣ ಕೇಳಿದರೆ ಮದರಾಸ್ ನೋಟಾಗಿದ್ದರೆ ಶೇಕಡಾ ೪ ಆಣೆಯಂತೆಯೂ, ಇತರ ಕಡೆ ನೋಟುಗಳಾಗಿದ್ದರೆ ಶೇಕಡಾ ೭ ಆಣೆಯಂತೆಯೂ ವಟ್ಟನ್ನು ತೆಗೆದುಕೊಳ್ಳತಕ್ಕದ್ದೆಂದು ವಿಧಿಸಿರುತ್ತಾರೆ

ಶ್ರೀಶೃಂಗೇರಿ ಸ್ವಾಮಿಗಳು ಇನ್ನೂ ೮ ೧೦ ದಿನಗಳಲ್ಲಿ ಕಾಲಡಿಯಿಂದ ಪರಿವಾರ ಸಹಿತ ಹೊರಟು ಪಾಲ್ಘಾಟು, ತಾಲ್ಯ, ಕೊಯಮುತ್ತೂರು ಮುಂತಾದ ಕಡೆಗಳಲ್ಲಿ ಸಂಚಾರವಾಡಿ, ಭವಾನಿಯಲ್ಲಿ ಚಾತುರ್ಮಾಸ್ಯ ಸಂಕಲ್ಪವನ್ನು ತೀರಿಸಿಕೊಂಡು, ನವರಾತ್ರಿಗೆ ಸ್ವಲ್ಪ ಮುಂಚಿತವಾಗಿ ವಾಪಸು ಶೃಂಗೇರಿಗೆ ದಯಮಾಡುತ್ತಾರೆಂದು ಪ್ರಕಟವಾಗಿದೆ ಕಾಲಡಿಯಲ್ಲಿ ಅವರು ಪ್ರತಿಷ್ಠೆ ಮಾಡಿದ ದೇವಸ್ಥಾನಗಳ ಮೂಲಧನಕ್ಕೆ ದಕ್ಷಿಣ ದೇಶದ ಬಹುಮಂದಿ ಸಾಹುಕಾರರೇ ಮೊದಲಾದವರು ಸುಮಾರು ೨೫,೦೦೦ ರೂಪಾಯಿನ ವರೆಗೆ ಮುದುವಟ್ಟು ಹಾಕಿರುತ್ತಾರೆ ಕೆಲವರು ರತ್ನಖಚಿತವಾದ ಆಭರಣಗಳನ್ನು ಮಾಡಿಸಿ ಒಪ್ಪಿಸಿದರು

ಮೈಸೂರು ಗೆಜೆಟ್ ಸಂಗ್ರಹ

ಚಿಕ್ಕನಾಯಕನಹಳ್ಳಿಯಲ್ಲಿ ಪ್ಲೇಗ್ ಉಪದ್ರವಿದೆ ಎಂದು ಪ್ರಕಟವಾಗಿದೆ

ಕಡೂರ್ ಡಿಸ್ಟ್ರಿಕ್ಟ್ ಆಕ್ಟಿಂಗ್ ಅ|| ಕಮಿಷನರ್ ಮೆ|| ಎಂ ಕೃಷ್ಣಸ್ವಾಮೈಯಂಗಾರ್ರು ದಯಾರಖ್ತು ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು

ಹಾಸನದ ತಾಲ್ಲೂಕ್ ಶಿರಸ್ತೇದಾರ್ ಮೆ|| ಬಿ ರಾಮಣ್ಣನವರು ಜನವರಿ ತಾ ೬ ರಿಂದ ಆ ತಾಲ್ಲೂಕಿನ ಖಜಾನೆಯನ್ನು ವಹಿಸುವಂತೆ ನೇಮಿಸಲ್ಪಟ್ಟಿದ್ದಾರೆ

ಮೆ|| ಎಚ್ ಪಿ ಗಿಬ್ಸ್‌ಯವರು ಫೆಬ್ರವರಿ ತಾ ೧೪ ರಲ್ಲಿ ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ ಆಫೀಸಿನ ಛಾರ್ಜನ್ನು ವಹಿಸಿಕೊಂಡಿದ್ದಾರೆ

ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು.—ಇಲ್ಲಿಗೆ ಸುಮಾರು ಆರು ಮೈಲಿಯಲ್ಲಿರುವ ಮೈಲಿಮನೆ ಎಂಬ ಕಾಫಿ ತೋಟದ ಧೊರೆಯವರಾದ ಮೆ|| ಹಾಲಿಡೇಸ್ ಎಂಬವರು ಈಗ ಸುಮಾರು ೨೦ ದಿನಗಳಿಗೆ ಮುಂಚೆ ಎರಡು ಕುದುರೆಗಳನ್ನು ಕಟ್ಟಿದ ಸಾರೋಟಿನಲ್ಲಿ ರಾತ್ರಿ ಬೆಳದಿಂಗಳಲ್ಲಿ ಬರುತ್ತಾ ಅಪಾಯವಾಗಿ ತಮ್ಮ ತಮ್ಮ ಸಾರೋಟಿಗೆ ಬಿದ್ದು ಗಾಯಪಟ್ಟರು ಕೈಕಾಲುಗಳಿಗೆ ಮಾತ್ರವಲ್ಲದೆ ತಲೆಯಲ್ಲಿನ ಮಿದುಳು ಬಹಳವಾಗಿ ಅದುರಿ ಹೋಯಿತು ಆಸ್ಪತ್ರೆಗೆ ಅವರನ್ನು ಒಡನೆಯೇ ತಂದು ಚಿಕಿತ್ಸೆ ಮಾಡಲಾಯಿತು ಮತ್ತು ಸ್ಯಾನಿಟರಿ ಕಮಿಷನರ್ ಡಾಕ್ಟರ್ ಸ್ಮಿತ್ ಧೊರೆಗಳೂ ಮತ್ತೊಬ್ಬ ಮಿಲಿಟರಿ ಡಾಕ್ಟರವರೂ ಬಂದು ಅಜಮಾಯಿಷಿ ಮಾಡಿ ಆಪರೇಷನ್ ಮಾಡಿದರು ಆದರೂ ಗುಣವಾಗಲಿಲ್ಲ ವಿಶ್ರಾಂತಿಯಿಲ್ಲದೆ ನರಳುತ್ತಿದ್ದು ಇದೇ ತಿಂಗಳು ೬ ನೇ ತಾ ಭಾನುವಾರ ಮಧ್ಯಾಹ್ನ ಮೃತಪಟ್ಟರು ಇವರ ತಮ್ಮಂದಿರೂ ಅಕ್ಕನೂ ಹೇಳಕೊಡದ ದುಃಖದಿಂದ ತುಂಬಿದಾರೆ ಗತಿಸಿದ ಮೆ|| ಹಾಲಿಡೇಸ್ ಯವರು ನಿಷ್ಕಪಟವಂತರಾಗಿಯೂ, ಪರೋಪಕಾರ ಬುದ್ಧಿವಂತರಲ್ಲಿ ಹೆಸರುವಾಸಿಯನ್ನು ಪಡೆದವರಾಗಿಯೂ ಇದ್ದದ್ದರಿಂದ ಅವರನ್ನು ತಿಳಿದಿದ್ದ ಸಕಲ ಜನಗಳೂ ಬಹಳ ಸಂಕಟ ಪಡುವವರಾಗಿದ್ದಾರೆ ದುಃಖಕರವಾದ ಈ ಮರಣವು ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಮಾರ್ಚಿ ತಿಂಗಳ ೬ ನೇ ತಾ ಹಗಲು ೧ ಗಂಟೆಗೆ ಸಂಭವಿಸಿತು

ಸೀರ್ಯ.—ಇಲ್ಲಿಯ ಕೆರೆ ತುಂಬಿ ಎರಡು ಸಲ ಕೋಡಿಬಿದ್ದು ಗ್ರಾಮ ಹಾಳಿ ಇಟ್ಟಿರುವ ತರಿ ಫಸಲಿಗೆ ನೀರು ಸಾಲದೆ ಕಪಿಲೆ ಆಸರೆಯಿಲ್ಲದ ಗದ್ದೆಗಳೂ ಒಣಗಿಹೋಗಬೇಕಾಗಿರುತ್ತೆ ಈ ಸಮಾಚಾರ ಕುರಿತು ಕೆರೆಯ ಬಡಾವಣೆಗೂ ಸ್ವತ ಈ ಮಾರ್ಚಿ ಮಾಹೆ ಗುರ್ಚಿ ತಾ ಮಂಗಳವಾರ ಶ್ರೀಮತ್ ದಿವಾನ್ ಸಾಹೇಬರವರು ಮತ್ತು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿದ ಕಾಲದಲ್ಲಿ ಅಮಲ್ದಾರವರು ಹ ರಾಜರಾಯಿ ಒಪ್ಪಿಸಿದ ಒಳಕ ಡಿಸ್ಟ್ರಿಕ್ಟ್ ಬೋರ್ಡ ನ ತ್ತು ಮುನಿಸಿಪಲ್ ಮೆಂಬರುಗಳೂ ಹಾರ ತುರಾಯಿ ಒಪ್ಪಿಸಿದಲ್ಲದೆ ಡಿಸ್ಟ್ರಿಕ್ಟ್ ಬೋರ್ಡು ಮೆಂಬರ್ ಮೆ|| ಅಗಳಿ ವೆಂಕಟರಾಮೈಯನವರು ಕನ್ನಡದಲ್ಲಿ ಬರೆದಿದ್ದ ಅಡ್ರೆಸ್ ಓದಿ ಒಪ್ಪಿಸಿ ಕೆರೆಯ ಕೋಡಿ ಎತ್ತರಿಸಿಕೊಡತಕ್ಕ ವಿಷಯದಲ್ಲಿ ಹಾಲಿ ಕೆರೆಯ ಹಿಂದೆ ಇರತಕ್ಕ ಫಸಲು ಮತ್ತು ಕೆರೆಯಲ್ಲಿರತಕ್ಕ ನೀರು ರುಜುವಾತು ಪರಾಂಬರಿಸಬೇಕೆಂದು ಅರಿಕೆ ಮಾಡಿಕೊಂಡರು ತಾ ೨ ನೇ ಬುಧವಾರ ಶ್ರೀಮತ್ ದಿವಾನ್ ಸಾಹೇಬರವರು ಇಲ್ಲಿಗೆ ೬ ಮೈಲಿಯಲ್ಲಿರುವ ಹಂದೇನಹಳ್ಳಿ ಗ್ರಾಮಕ್ಕೆ ಹೋಗಿ ಕೆರೆಯನ್ನು ಪರಾಂಬರಿಸಿ ವಾಪಸು ಬಂದು ಸಾಯಂಕಾಲ ೪ ಘಂಟೆಯ ಮೇಲೆ ಇಲ್ಲಿಯ ಎ ವಿ ಸ್ಕೂಲ್ ಮತ್ತು ಕನ್ನಡ ಗರಲ್ಸ್ ಸ್ಕೂಲ್ ಸಹ ಪರಾಂಬರಿಸಿ ಆಕ್ಕ ವರ್ಗದ ಪಾಠಗಳಲ್ಲಿ ಬಾಲಕ ಬಾಲಕಿಯರನ್ನು ಪರೀಕ್ಷಿಸಿಕೊಂಡು ಗೌರ್ನಮೆಂಟ್ ಹಿಂದುಸ್ಥಾನಿ ಸ್ಕೂಲಿಗೆ ದಯಮಾಡಿದರು ಅಲ್ಲಿಯೂ ಪರೀಕ್ಷೆ ಮಾಡಿಕೊಂಡು ಬಾಲಕರು ಹಾಡಿದ ಇಂಪಾದ ಹಾಡುಗಳನ್ನು ಕೇಳಿ ಆ ಸ್ಕೂಲ್ ವಿಷಯದಲ್ಲಿ ಮಹಮ್ಮದೀಯರ ಪರವಾಗಿ ಜವಳಿ ಅಂಗಡಿ ಮಹಮದ್ ಯೂನುಸ್ ಖಾನ್ ಸಾಹೇಬರು ಅಹವಾಲು ಅರಿಕೆ ಮಾಡಿಕೊಂಡದ್ದಲ್ಲದೆ ಪಕ್ಕದಲ್ಲಿ ದೊಡ್ಡ ಮಸೀತಿಯ ಮುಂದೆ ಮುಸಲ್ಮಾನರು ಹಾಕಿದ್ದ ಮಂಟಪದಲ್ಲಿ ಹಾರ ತುರಾಯಿ ಒಪ್ಪಿಸಿ ಸದರಿ ಮೊಹಮ್ಮದ್ ಯೂನುಸ್ ಖಾನ್ ಸಾಹೇಬರು ಹಿಂದುಸ್ಥಾನಿಯಲ್ಲಿ ಬರೆದಿದ್ದ ಅಡ್ರೆಸ್ ಓದಿದರು ಆ ಪತ್ರಿಕೆಯನ್ನು ಶ್ರೀಮತ್ ದಿವಾನ್ ಸಾಹೇಬರು ಬಹಳ ಸಂತೋಷದಿಂದ ತೆಗೆದುಕೊಂಡು ಮೊಹಮ್ಮದ್ ಯೂನುಸ್ ಖಾನ್ ಸಾಹೇಬರ ಕೋರಿಕೆಯ ಮೇರೆ ಇವರು ಸ್ವಂತ ಹಣದಿಂದ ೬೭೦ ರೂಪಾಯಿ ಖರ್ಚು ಮಾಡಿ ಗೌ|| ಹಿಂದುಸ್ಥಾನಿ ಗರಲ್ಸ್ ಸ್ಕೂಲ್ ಇಡಲು ಕಟ್ಟಿಸಿ ಇದರ ಪಕ್ಕದ ಮಸೀತಿಗೆ ಬಿಟ್ಟು ಕೊಟ್ಟಿರುವ ಕಟ್ಟಡವನ್ನು ಪರಾಂಬರಿಸಿ ಈ ಕಟ್ಟಡ ಬಾಡಿಗೆ ಮೊದಲಿಗೂ ಬಹಳ ಕಡಮೆಯಾಗಿರುವದಾಗಿಯೂ, ಈ ಬಾಡಿಗೆ ಮೊದಲಿಗೂ ಮಸೀತಿಯ ಖರ್ಚುವೆಚ್ಚಗಳಿಗೆ ಸಲ್ಲತಕ್ಕದ್ದಾಗಿರುವದರಿಂದಲೂ ಪ್ರಾಮಾಣಿಸತಕ್ಕ ವಿಷಯದಲ್ಲಿ ಗುರುತುಮಾಡಿಕೊಂಡು ತಮಗೆ ಉಂಟಾದ ಸಂತೋಷವನ್ನು ಪುರವಾಸಿಗಳಿಗೆ ತಿಳಿಸಿ ಬಂಗ್ಲೆಗೆ ದಯಮಾಡಿದರು ತಾ ೩ ನೇ ಗುರುವಾರ ಬೆಳಿಗ್ಗೆ ಅವರು ಮೋಟಾರ್ ಗಾಡಿಯಲ್ಲಿ ಹೊರಟು, ಫೆಬ್ರವರಿ ೮ ನೆ ತಾ ಈ ಟವನಿಗೆ ಸೇರಿ ಖರ್ಚ ನಡೆದಿದ್ದ ಒಳಕೋಟೆ ಎಂಬ ಸ್ಥಳವನ್ನು ಪರಾಂಬರಿಸಿ ತುಮಕೂರು ಮಾರ್ಗವಾಗಿ ತೆರಳಿದರು

ಚಿತ್ರದುರ್ಗ.—ಇಲ್ಲಿ ನೀರಿನ ಕಷ್ಟ ವಿವರಿಸಲಿಕ್ಕೆ ಸಾಧ್ಯವಿಲ್ಲ ನೀರು ಬರತಕ್ಕ ನಲ್ಲಿಗಳ ಬಳಿ ನಡೆಯುವ ಗಲಾಟೆ ವಿಶೇಷವಾಗಿದೆ ಕೆಲವು ನಲ್ಲಿಗಳಿಗೆ ರಾತ್ರಿ ೮ ಘಂಟೆಯ ಮೇಲೆ ನೀರು ಬಿಡುತ್ತಾರೆ ಆ ಸ್ಥಳಗಳಲ್ಲಿ ಮ್ಯುನಿಸಿಪಾಲಿಟಿಯವರು ಲಾಂದ್ರಗಳನ್ನು ಇಟ್ಟಿಲ್ಲ ನೀರಿನ ಆತುರಕ್ಕಾಗಿ ಹೆಂಗಸರೂ ಮಕ್ಕಳೂ ಓಡಾಡುತ್ತಾರೆ ಇಂಥಾದ್ದರಲ್ಲಿ ವ್ಯಾಜ್ಯ ನೂಕಾಟಗಳು ಜೋರೆ ಈ ವಿಷಯಕ್ಕೆ ಮ್ಯುನಿಸಿಪಾಲಿಟಿಯವರೂ ಪೋಲೀಸಿನವರೂ ಗಮನಕೊಡದಿದ್ದರೆ ತೊಂದರೆಗೆ ಆಕರವಾಗುತ್ತದೆ —ಬಿಸಿಲಿನ ತಾಪದಿಂದ ಅಲ್ಲಲ್ಲಿ ಸಿಡುಬು ರಕ್ತಭೇದಿ ಶುರುವಾಗಿದೆ ಇಲ್ಲಿನ ಪ್ರಜೆಗಳಿಗೆ ನೀರು ಮತ್ತು ಆರೋಗ್ಯ ಇವೆರಡೂ ಅನನುಕೂಲವು ಇರುವದರಿಂದ ಅನುಕೂಲಸ್ಥರು ಈ ಸ್ಥಳವನ್ನು ಬಿಡಲು ಯತ್ನಿಸುತ್ತಿದ್ದಾರೆ —ದಿವಾನ್ ಸಾಹೇಬರು ಫೆಬ್ರವರಿ ೧೭ ನೇ ತಾ ಈ ಡಿಸ್ಟ್ರಿಕ್ಟಿಗೆ ಬಂದವರು ತಿಂಗಳ ಆಖೈರ್‌ವರೆಗೂ ಈ ಡಿಸ್ಟ್ರಿಕ್ಟಿನಲ್ಲಿ ಸಂಚರಿಸುತ್ತಿದ್ದು ಈ ತಿಂಗಳ ೧ ನೇ ತಾ ತುಮಕೂರು ಡಿಸ್ಟ್ರಿಕ್ಟಿಗೆ ದಯಮಾಡಿಸಿದರು ಈಗ ಕಂಟ್ರೋಲರ್ ಮೆ|| ಚಕ್ರವರ್ತಿಯವರೂ, ಮಿಲಿಟರಿ ಚೀಫ್ ಕಮ್ಯಾಂಡೆಂಟ್ ಕರ್ನಲ್ ದೇಶರಾಜೇ ಅರಸಿನವರೂ ದಯಮಾಡಿಸಿದ್ದಾರೆ —ಈ ಸ್ಥಳದಲ್ಲಿ ತಿಂಗಳಿಗೆ ೩೪ ರೂ ಗ್ರ್ಯಾಂಟ್ ಕೊಟ್ಟು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗೌರ್ನಮೆಂಟಿನವರು ಒಂದು ಸ್ಟೂಡೆಂಟ್ಸ್ ಹೋಮನ್ನು ಸ್ಥಾಪಿಸಿದ್ದಾರೆ ಅದರಲ್ಲಿ ಭೋಜನ ಮಾಡತಕ್ಕ ವಿದ್ಯಾರ್ಥಿಗಳಿಗೆ ಕೆಲವು ಕಾಲ ಅನುಕೂಲ, ಕೆಲವು ಕಾಲ ಅನುಕೂಲ ಈ ರೀತಿ ಆಗುತ್ತಾ ಇದೆ ಕಾರಣವೇನೆಂದರೆ, ಮೊದಲಿನಿಂದ ಈ ಸ್ಟೂಡೆಂಟ್ಸ್ ಹೋಮಿನ ವಿಚಾರಣೆ ಮುಂತಾದದ್ದು ಸರಿಯಾಗಿಲ್ಲದೆ ಇದ್ದುದರಿಂದ ವಿದ್ಯಾರ್ಥಿಗಳಿಗೆ ಭೋಜನದ ರುಚಿ ಕಡಮೆಯಾದರೂ, ಖರ್ಚುಮಾತ್ರ ಒಬ್ಬೊಬ್ಬರಿಗೆ ತಿಂಗಳಿಗೆ ೮-೯ ರೂ ಬೀಳುತ್ತಿತ್ತು ಅವನ್ನು ಸರಿಪಡಿಸಿದಾಗ್ಯೂ ತಿಂಗಳಿಗೆ ೧೭ ರೂ ಸಂಬಳ ಪಡೆಯತಕ್ಕ ಸರ್ವಿಸ್‌ದಾರನಾದ ಅಡಿಗೆ ಮಾಡತಕ್ಕ ಬ್ರಾಹ್ಮಣನ ಉದಾಸೀನದಿಂದ ಒಂದೊಂದು ದಿವಸ ವಿದ್ಯಾರ್ಥಿಗಳಿಗೆ ಅನ್ನವೇ ಅಭಾವವಾಗುತ್ತಿತ್ತು ಇದರಿಂದ ಕೆಲವು ಬಾಲಕರು ಈ ಸ್ಥಳವೇ ಬಿಟ್ಟು ಶಿವಮೊಗ್ಗ, ತುಮಕೂರು, ಈ ಪ್ರಾಂತ್ಯ ಒದಲಿಕ್ಕೆ ಹೋದರು ಈ ವಿಷಯದ ಗಲಾಟೆ ಜಾಸ್ತಿಯಾದದ್ದರಿಂದ ಹೈಸ್ಕೂಲ್ ಹೆಡ್ ಮಾಸ್ಟರು ಕಳೆದ ಡಿಸೆಂಬರ್ ರಾಜೀನಾಮೆಯಿತ್ತು ಈ ಸ್ಟೂಡೆಂಟ್ಸ್ ಹೋಮಿನ ಕಸಬು ನೋಡಲು ತಮ್ಮ ಅಸಿಸ್ಟೆಂಟರಾದ ಮೆ|| ಶಿವರಾಮಕೃಷ್ಣಯ್ಯನವರನ್ನು ನೇಮಿಸಿದರು ಅವರು ಖಂಡಿತವಾದ ಆಡಳಿತ ನಡಿಸಿದ್ದರಲ್ಲಿ ಈಚೆಗೆ ವಿದ್ಯಾರ್ಥಿಗಳಿಗೆ ಸುಖಭೋಜನ ಸಿಕ್ಕುತ್ತಾ, ಖರ್ಚು ತಿಂಗಳೊಂದಕ್ಕೆ ತಲಾ ೪ ರೂ ೧೨ ಆ ಗೆ ಇಳಿಯಿತು ಈ ನಡವಳಿಕೆ ಎಲ್ಲರಿಗೂ ಸಂತೋಷವಾಗಿದ್ದಾಗ್ಯೂ ಹೆಡ್ ಮಾಸ್ಟರವರಿಗೆ ಮಾತ್ರ ಖರ್ಚು ಮತ್ತು ಅಡಿಗೆಯವನ ಸ್ವಾತಂತ್ರ್ಯ ಇವು ಕಡಮೆಯಾದದ್ದು ಇಷ್ಟವಿರಲಿಲ್ಲ ಇದರಿಂದ ಪುನಹ ಮ್ಯಾನೇಜುಮೆಂಟ್ ವಿಷಯದಲ್ಲಿ ಗಲಾಟೆಗೆ ಬಿದ್ದಿದೆ ಎಂದು ತಿಳಿದು ಬರುತ್ತದೆ —ಹೊಳಲ್ಕೆರೆ ಟ್ರೆಜರಿಯಲ್ಲಿ ಹಣಕಳುವಾಗಿದ್ದದ್ದು ಪತ್ತೆ ಆಯಿತೆಂತಲೂ, ಚಿತ್ರದುರ್ಗದಲ್ಲಿ ಕಳೆದ ತಾ ೨೦ ರಲ್ಲಿ ಕಳುವಾದದ್ದು ಇನ್ನೂ ಪತ್ತೆ ಆಗಲಿಲ್ಲವೆಂತಲೂ ತಿಳಿದು ಬರುವದು

ತೀರ್ಥಹಳ್ಳಿ.—ಇಲ್ಲಿ ನಾನಾ ಭಾಷೆಗಳನ್ನು ಆಡುವ, ನಾನಾ ವಿಧವಾದ ಕೈಗಾರಿಕೆ ಕೆಲಸಗಳನ್ನು ಮಾಡುವ ಜನರನ್ನು ನೋಡುವಾಗ ಆಶ್ಚರ್ಯವನ್ನುಂಟುಮಾಡುತ್ತದೆ ಪ್ರತಿ ಮನುಷ್ಯನೂ ಯಾವದಾದರೂ ಒಂದು ಕೆಲಸದಲ್ಲಿ ಹೊತ್ತಾರೆಯಿಂದ ಸಾಯಂಕಾಲದ ವರಿವಿಗೂ ಮಗ್ನನಾಗಿರುತ್ತಾನೆ ಭಿಕ್ಷುಗಾರರನ್ನು ಕಾಣುವದು ಅಪೂರ್ವವಾಗಿರುತ್ತದೆ.—ಈ ಊರಿಗೆ ಎರಡು ನಾಟಕಗಳು ಬಂದು ಜವರಿ ಶುರುವಾಯಿತು ಇದುವರಿವಿಗೂ ಪ್ರತಿ ರಾತ್ರಿಯೂ ನಾನಾ ವಿಧವಾದ ಆಟಗಳನ್ನು ಆಡಿ ಜನರಿಗೆ ಬೇಸರಿಕೆ ಪರಿಹಾರವನ್ನೂ ಮನಸ್ಸಂತೋಷವನ್ನೂ ಉಂಟುಮಾಡಿದವು ಒಂದು ದಿನ ರಾತ್ರಿ ನಾಟಕದಲ್ಲಿ ಒಬ್ಬ ನಾಡಿಗ ಗೌಡರ ೧೫ ೧೬ ವರುಷದ ಹುಡುಗನು ಕ್ರಮದಂತೆ ಕ್ರಯಕೊಟ್ಟು ಅಪ್ಪಣೆ ಚೀಟಿಯನ್ನು ಪಡೆದು ಒಂದು ಸ್ಥಳದಲ್ಲಿ ಕುಳಿತುಕೊಂಡನಂತರ ೨೦-೨೨ ವರುಷದ ಒಬ್ಬ ಬ್ರಾಹ್ಮಣ ಯೌವನಸ್ಥನು ಗೌಡರ ಹುಡುಗನು ಕೂತಿದ್ದ ಜಾಗಕ್ಕೆ ಹೋಗಿ ಸ್ಥಳ ಬಿಡುವಂತೆ ಬಲವಂತ ಮಾಡಿದಹಾಗೂ, ಮೆಲ್ಲಂಡ ಹುಡುಗನು ಜಾಗಾ ಬಿಟ್ಟುಕೊಡದೆ ಮುಷ್ಕರಮಾಡಿದಹಾಗೂ, ಸ್ವಲ್ಪ ಹೊತ್ತಿನ ನಂತರ ಗೌಡರ ಹುಡುಗನ ಕೊಡೆ ಕೆಳಗೆ ಬ್ರಾಹ್ಮಣ ಯೌವನಸ್ಥನ ಒಂದು ರೂಪಾಯಿ ಚಿಲ್ಲರೆ ಇದ್ದ ಒಂದು ಚೀಲವು ಕಳುವಿನ ಮೂಲಕ ಪತ್ತೆಮಾಡಿದಹಾಗೂ ಪೋಲೀಸಿಗೆ ಗುರಿಮಾಡಿದ್ದಾಯಿತು ೫ ೬ ದಿನಗಳವರೆಗೂ ಸಾಕ್ಷಿ ಮುಂತಾದವುಗಳಿಂದ ಮ್ಯಾಜಿಸ್ಟ್ರೇಟರು ವಿಚಾರಿಸಿ ಗೌಡರ ಹುಡುಗನಿಗೆ ೧೦ ರೂ ಜುಲ್ಮಾನೆ ವಿಧಿಸಿದರು ಗೌಡರ ಹುಡುಗನ ಹತ್ತಿರ ತನ್ನ ಸ್ವಂತ ರೂಪಾಯಿ ಇದ್ದವೆಂದು ಗೊತ್ತಾಯಿತು ಈ ವಿಚಾರಣೆಯು ಅನೇಕ ನಾಮಧಾರಿ ಗೌಡರಿಗೆ ತುಂಬಾ ಆಶ್ಚರ್ಯವನ್ನುಂಟುಮಾಡಿರುತ್ತದೆ —ಕಳೆದ ಫೆಬ್ರವರಿ ತಿಂಗಳಲಿ ತೀರ್ಥಹಳ್ಳಿಗೆ ಸಮೀಪದಲ್ಲಿಯೇ ಎರಡು ದುರ್ಮರಣಗಳು ಸಂಭವಿಸಿರುವದನ್ನು ಕೇಳುವದರಲ್ಲಿ ವ್ಯಸನವಾಗದೆ ಇರಲಾರದು —ತೀರ್ಥಹಳ್ಳಿಗೆ ೧೯ ಮೈಲಿ ದೂರದಲ್ಲಿ ಆಗುಂಬೆ ಜಾತ್ರೆಯೊಂದು ನಡೆಯುತ್ತದೆ ಈ ಸಮಾರಾಧನೆ ಕಾಲದಲ್ಲಿ ಒಂದೂ ಕೂಡ ತೇರನ್ನು ನಿಲ್ಲಿಸಿ ರಾಜಬೀದಿಯಲ್ಲಿ ಸರ್ಕಾರದ ಅಧಿಕಾರಿಗಳಾದ ಅಮಲ್ದಾರರೇ ಮುಂತಾದ ದೊಡ್ಡ ಮನುಷ್ಯರು ಬೀದಿಯಲ್ಲಿ ಪಂಚಾನ ಮುಂತಾದವುಗಳ ಮೇಲೆ ಕುಳಿತುಕೊಂಡು ವೇಶ್ಯಾಸ್ತ್ರೀಯರ ನರ್ತನವನ್ನು ನೋಡುವದು ತುಂಬಾ ಆಶ್ಚರ್ಯವಾಗಿರುತ್ತದೆ —ಈ ತಾಲ್ಲೂಕಿಗೆ ಸೇರಿದ ಕಾಡಿನ ಸಮೀಪದಲ್ಲಿಯೇ ಹುಲಿಯ ಗದ್ದಲವು ಅಧಿಕವಾಗಿರುವದು ಆಶ್ಚರ್ಯವಲ್ಲ ಧೈರ್ಯಶಾಲಿಗಳಾದ ಶಿಕಾರಿದಾರರು ಹುಲಿಯ ಗದ್ದಲವನ್ನು ಶೀಘ್ರದಲ್ಲಿಯೇ ನೀಗಿಸಿಬಿಡುವರೆಂಬ ನಿರೀಕ್ಷೆಯುಂಟು —ತೀರ್ಥಹಳ್ಳಿಯಲ್ಲಿ ಒಂದು ಬಾಲಿಕಾಪಾಠಶಾಲೆಯನ್ನು ಸರ್ಕಾರದವರು ಇಡಿಸಿ ನಡಿಸುತ್ತಾ ಬಂದಿರುತ್ತಾರೆ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸದೊಡನೆ ಬುದ್ಧಿ ಕುಶಲತೆಗೆ ಮುಖ್ಯ ಸಹಾಯವಾಗಿರುವ ಸಂಗೀತವಿದ್ಯೆಯೂ, ಬಹು ಪ್ರಯೋಜನಕರವಾಗಿರುವ ಹೊಲಿಗೆ ವಿದ್ಯೆಯೂ ಕಲಿಸುವದು ಬಹು ಅವಶ್ಯ ವಿದ್ಯಾಭ್ಯಾಸದ ಇಲಾಖೆಯವರು ಈ ಕೊರತೆಯ ವಿಷಯದಲ್ಲಿ ಚಿಂತಿಸುವರೆಂದು ನಂಬಿಕೆ ಇರುತ್ತದೆ ಪ್ರತಿ ಒಂದು ತರಗತಿಯಲ್ಲಿದ್ದ ಮಕ್ಕಳು ತೇರ್ಗಡೆ ಹೊಂದುವದರಲ್ಲಿ ಎಲ್ಲಾ ಸಂಗತಿಗಳೂ ಮಕ್ಕಳ ಮನಸ್ಸಿಗೆ ಚೆನ್ನಾಗಿ ಮನದಟ್ಟಾಗುವಂತೆ ಒಂದು ತರಗತಿಯು ಅನುಭವವಿಲ್ಲದೆ ಹೊಸದಾದ ದೊಡ್ಡ ತರಗತಿಯನ್ನು ಏಕಕಾಲದಲ್ಲಿ ಉಂಟುಮಾಡಿ ಬಾಲಕಿಯರಿಗೆ ಹೊಸ ತರಗತಿಯನ್ನು ನೇಮಿಸಿದರೆ ಬಹಳ ಗಲಿಬಿಲಿಯಾಗಿ ಮಕ್ಕಳು ಗಾಬರಿಯಾಗುವರೆಂದು ಕಾಣುತ್ತದೆ —ಈಗ ಒಂದೆರಡು ದಿನಗಳಿಂದ ಸರ್ಕಸ್ ಎಂಬ ಆಟವು ಬಂದು ಪ್ರತಿ ರಾತ್ರಿಯೂ ಆಟ ನಡೆಯುತ್ತದೆ — ಪ್ರಯಾಣಿಕರ ಛತ್ರಕ್ಕೆ ಯಾರಾದರೂ ಬಂದು ಅನಾರೋಗ್ಯಕ್ಕೆ ಗುರಿಯಾದರೆ ಇಲ್ಲಿನ ಡಾಕ್ಟರವರು ಯಾವ ಕಾಲಕ್ಕಾದರೂ ಹೋಗಿ ಔಷಧಗಳನ್ನು ಕೊಟ್ಟು ಬರುವದನ್ನು ಅನೇಕರು ನೋಡಿರುತ್ತಾರೆ ಛತ್ರದಲ್ಲಿ ದಿಕ್ಕಿಲ್ಲದೆ ಬಿದ್ದಿರುವ ಪ್ರಯಾಣಿಕರ ಅನ್ನ ಆಹಾರಗಳಿಗೆ ಯಾವ ಏರ್ಪಾಡನ್ನಾದರೂ ಪುಣ್ಯಾತ್ಮರು ಮಾಡಿದರೂ ಮಾಡುವದು ಬಹು ಧರ್ಮಕಾರ್ಯವೇ ಆಗಿರುತ್ತದೆ —ಆಗುಂಬೆಯಿಂದ ಜಟಕಾ ಗಾಡಿಯಲ್ಲಿ ಕುಳಿತು ಬರುತ್ತಿದ್ದ ಪ್ರಯಾಣಿಕರ ಗಾಡಿಯ ಚಕ್ರವು ಮುರಿದುಬಿಟ್ಟಿತು ಪ್ರಯಾಣಿಕರು ಹಗಲುಹೊತ್ತಿನಲ್ಲಿಯೇ ಬಹು ಗಾಬರಿಯಿಂದ ಧುಮುಕಬೇಕಾಗಿ ಬಂತು ತುಂಬಿದ ಕಾಡಿನಲ್ಲಿ ರಾತ್ರಿವೇಳೆ ಹೆಂಗಸರು ಮಕ್ಕಳು ಪ್ರಯಾಣಮಾಡುವಲ್ಲಿ ಅಂಥಾ ಅನಾನುಕೂಲಗಳು ಸಂಭವಿಸಿದರೆ ಹೇಳತಕ್ಕದ್ದೇನಿದೆ? ಜಟಕಾ ಕಂಪನಿಯ ಅಧಿಕಾರಿಗಳು ಈ ವಿಷಯದಲ್ಲಿ ಹ್ಯಾಗಾದರೂ ಮಾಡಿ ಭದ್ರವಾದ ಗಾಡಿಗಳನ್ನೇ ನೇಮಿಸಿಕೊಳ್ಳುವರೆಂದು ನಂಬಬೇಕಾಗಿರುತ್ತದೆ ಮುಂದಿನ ತಿಂಗಳ ಆರಂಭದಿಂದ ಟಪ್ಪಾಲನ್ನು ಜಟಕಾ ಮೂಲಕ ನಡಿಸುವರೆಂದು ವರ್ತಮಾನವಿರುತ್ತದೆ ಬಡಜನರುಗಳ ಗತಿಯು ವ್ಯಸನಕರವಾಗದಂತೆ ಟಪ್ಪಾಲ್ ಅಧಿಕಾರಿಗಳು ಆಲೋಚನೆಮಾಡಿಯಾರೆಂದು ಭರವಸವುಂಟು —ಇಲ್ಲಿನ ಪೋಸ್ಟ್ ಆಫೀಸಿಗೆ ೫೦ ರೂ ಸಂಬಳದ ಅಧಿಕಾರಿಯನ್ನು ಗೊತ್ತುಮಾಡುವಂತೆ ವರ್ತಮಾನವಿರುತ್ತದೆ ಹಾಲಿ ಇರತಕ್ಕವರಿಗೇನೇ ಆ ಬಡ್ತಿಯು ದೊರೆಯಬಹುದಾದರೆ ಸರ್ವರೂ ಸಂತೋಷಪಡತಕ್ಕವರಾಗಿರುತ್ತಾರೆ

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಸಮಾಜ

ಬೆಂಗಳೂರು, ತಾ ೫ ೩ ೧೦ — ಈ ದಿನ ನಡೆದ ಆರ್ಯ ವನಿತೆಯರ ಸಭೆಯು ಬಹಳ ವಿಶೇಷವಾದದ್ದಾಗಿತ್ತು ಅನೇಕಮಂದಿ ದೊಡ್ಡಮನೆತನದವರು ಬಂದಿದ್ದರು ಹಾರ್ಮೋನಿಯಂ ಜೊತೆಗೆ ವೀಣೆಯು ಸಹ ಅತಿ ರಮ್ಯವಾಗಿ ನುಡಿಸಲ್ಪಟ್ಟಿತು ಡಾಕ್ಟರ್ ಎಸ್ ರಂಗಣ್ಣನವರ ಕುಟುಂಬ ಸೌ|| ಅಮ್ಮಣ್ಣಮ್ಮನವರು ಕಲಿಯುಗವೆಂಬ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಓದಿದರು ಆ ವ್ಯಾಸಕ್ಕೆ ಪರಾಶರರ ಸೂಕ್ತಿಗಳೇ ಆಧಾರವಾಗಿದ್ದುವು ಆ ಸೂಕ್ತಿಗಳಂತೆ ಧರ್ಮ, ಸತ್ಯ, ಆಸ್ತಿಕತೆ, ಆಚಾರ, ವ್ಯವಹಾರ ಮತ್ತು ಭಕ್ತಿ ಇತ್ಯಾದಿಗಳು ಬಹುಮಟ್ಟಿಗೆ ಲೋಕದಲ್ಲಿ ನಶಿಸಿ ಹೋಗಿರುತ್ತವೆ ಈ ವಿಷಯಗಳೇ ಮನುಷ್ಯನ ನೀತಿಗೂ ಮತ್ತು ಏಳಿಗೆಗೂ ಮುಖ್ಯ ಕಾರಣಗಳಾಗಿರುವವು ಇವುಗಳ ಲೋಪದಿಂದ ಆತ್ಮಾಭಿವೃದ್ಧಿಗೂ ಮತ್ತು ಲೋಕಸುಖಕ್ಕೂ ನ್ಯೂನತೆಯುಂಟಾಗುವುದು ಆದದ್ದರಿಂದ ಭ್ರಮೆಗೊಳಿಸುವ ಮಾರ್ಗಗಳನ್ನು ಬಿಟ್ಟು ಸತ್ಯಮಾರ್ಗ ಪ್ರವರ್ತಕರಾದರೆ ಇಹ ಪರಗಳೆರಡೂ ಉಂಟೆಂದು ತಿಳಿಸಿ ವ್ಯಾಸವನ್ನು ಪೂರ್ತಿ ಮಾಡಿದರು ಅನಂತರ ಮಂಗಳಪ್ರದವಾದ ಸಂಗೀತದಿಂದ ಸಭೆಯು ಪೂರ್ತಿ ಮಾಡಲ್ಪಟ್ಟು, ಬರುವ ವಿಜಯಾಟಂಗು ೧೨ ನೇ ತಾ ಶನಿವಾರ ನಡೆಯುವಂತೆ ಸೂಚಿಸಲ್ಪಟ್ಟಿತು ಮತ್ತು ಕಾರ್ಯದರ್ಶಿಯವರು ಫೆಬ್ರವರಿ ತಿಂಗಳ ಜಮಾ ಖರ್ಚನ್ನು ಓದಿದರು

ನಮ್ಮ ಪುಸ್ತಕಭಂಡಾರವು

“ ಋತುಮತೀ ವಿವಾಹ ”

ಈ ಪ್ರಾಮುಖ್ಯವಾದ ವಿಷಯವನ್ನು ಕುರಿತು ಮ|| ವೆಂಕೋಬರಾವ್, ಬಿ ಎ ಯವರು ಒಂದು ಸ್ತೋತ್ರಾರ್ಹವಾದ ಪ್ರಬಂಧವನ್ನು ರಚಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುವರು ಈ ಪ್ರಬಂಧಕ್ಕೆ ಮೈಸೂರು ಗವರ್ನ್‌ಮೆಂಟ್ ಓರಿಯಂಟಲ್ ಲೈಬ್ರರಿ ಕ್ಯೂರೆಟರಾದ ಮ| ಎ ಮಹಾದೇವಶಾಸ್ತ್ರಿ, ಬಿ ಎ ಯವರು ಇಂಗ್ಲೀಷಿನಲ್ಲಿ ಒಂದು ಉತ್ಕೃಷ್ಟವಾದ ಉಪೋದ್ಘಾತವನ್ನು ಬರೆದಿರುತ್ತಾರೆ ಮ|| ವೆಂಕೋಬರಾಯರು ಈ ಪುಸ್ತಕದಲ್ಲಿ ಚರ್ಚಿಸಿರುವ ವಿಷಯವು ಈಕಾಲದಲ್ಲಿ ನಮ್ಮ ದೇಶೀಯರ ಅನುಷ್ಠಾನಕ್ಕೆ ಅವಶ್ಯಕವಾದ ಸಂಗತಿಯಾಗಿದೆ ಮ| ರಾಯರು ತುಂಬಾ ಶ್ರಮಪಟ್ಟು ವೇದಗಳ ಶ್ರುತಿ ಮತ್ತು ಸ್ಮೃತಿಗಳಿಂದ ತಮ್ಮ ವಿಷಯಕ್ಕನುಕೂಲವಾದ ಅನೇಕ ವಾಕ್ಯಗಳನ್ನು ಆರಿಸಿ, ಅವುಗಳ ಮೂಲಕ ಋತುಮತೀ ವಿವಾಹವು ಶಾಸ್ತ್ರಸಮ್ಮತವಾದುದೆಂದು ಸಿದ್ಧಾಂತಪಡಿಸಿರುವರೆ ವಿದ್ವಜ್ಜನರಿಗೆ ಮಾತ್ರವಲ್ಲದೆ ಸಾಧಾರಣ ಜನರಿಗೂ ಗ್ರಾಹ್ಯವಾಗುವಂತೆ, ತಾವು ಉಪಯೋಗಿಸಿರುವ ಸಂಸ್ಕೃತ ವಾಕ್ಯಗಳಿಗೆ ಅರ್ಥ ತಾತ್ಪರ್ಯಗಳನ್ನು ಬರೆದು ತಮ್ಮ ಅಭಿಪ್ರಾಯವನ್ನು ವಿಶದಪಡಿಸಿರುವರೆ ಬಾಲವಿವಾಹಗಳಿಂದುಂಟಾಗುವ ಕೇಡುಗಳಾವವೆಂದು ನಮ್ಮ ದೇಶೀಯರು ಕಣ್ಣಾರ ನೋಡಿ ಅನುಭವಪೂರ್ವಕವಾಗಿ ತಿಳಿದಿದ್ದಾಗ್ಯೂ ಈ ಜನನಾಶಕವಾದ ಪದ್ಧತಿಯನ್ನು ನಿರ್ಮೂಲನಮಾಡುವುದಕ್ಕೆ ಪ್ರಯತ್ನಪಡದೆ ಇದನ್ನು ಶಾಸ್ತ್ರಸಮ್ಮತವಾದುದೆಂಬುವ ಮೂಢಭಾವದಿಂದ ಇನ್ನೂ ಆಚರಣೆಯಲ್ಲಿಟ್ಟುಕೊಂಡಿರುವುದನ್ನು ನೋಡಿ ವಿಷಾದಪಡಬೇಕಾಗಿದೆ ಈ ಗ್ರಂಥವನ್ನು ಸಾವಧಾನವಾಗಿ ಓದಿ ಗ್ರಹಿಸಿಕೊಂಡು ಬಾಲ್ಯವಿವಾಹವನ್ನು ಶೀಘ್ರವಾಗಿ ನಿರ್ಮೂಲನಮಾಡಿಬಿಡುತ್ತಾರೆಂದು ಬಹು ಆಶೆಯಿಂದ ನಿರೀಕ್ಷಿಸುವವರಾಗಿದ್ದೇವೆ

“ ಸೋದರಸುಂದರಿ ”

ಮ|| ಟಿ ರಾಮರಾಜಪ್ಪನವರಿಂದ ರಚಿಸಲ್ಪಟ್ಟ ಈ ಕಾದಂಬರಿಯನ್ನು ಕರ್ನಾಟಕ ಭಾಷಾಭಿಮಾನಿಗಳೆಲ್ಲರಿಗೂ ಪರಿಚಯಮಾಡಿಸುವುದರಲ್ಲಿ ತುಂಬ ಸಂತೋಷಪಡುತ್ತೇವೆ ಗ್ರಂಥರಚನೆಯ ಶೈಲಿಯೂ ಭಾಷಾಶೈಲಿಯೂ ವಾಚಕರ ಮನಸ್ಸನ್ನು ಆಕರ್ಷಿಸದಿರಲಾರದು ಇದು ವಿದ್ಯಾರ್ಥಿಗಳೂ ಅವರ ಮಾತಾಪಿತೃಗಳೂ ಪಡೆದುಕೊಳ್ಳಬೇಕಾದ ನೀತಿಯನ್ನು ಬಹು ಚಮತ್ಕಾರವಾಗಿಯೂ ರಸರೂಪವಾಗಿಯೂ ಬೋಧಿಸುತ್ತದೆ ಬೇರೆ ಭಾಷೆಗಳಲ್ಲಿ ರಚಿತವಾಗಿರುವ ಅನೇಕ ಕಾದಂಬರಿಗಳ ಹಾಗೆ ಇದರಲ್ಲಿ ಅತಿಶಯೋಕ್ತಿಗಳೂ ಅಸಂಭವವಾದ ವಿಷಯಗಳೂ ಯಾವವೂ ಕಾಣಬರುವುದಿಲ್ಲ ಈ ಗ್ರಂಥವು ಇಂಗ್ಲೀಷು ಭಾಷೆಯಲ್ಲಿ ರಚಿತವಾಗಿರುವ ಕಾದಂಬರಿಗಳ ರೀತಿಯನ್ನನುಸರಿಸಿ ಬರೆಯಲ್ಪಟ್ಟದ್ದಾಗ್ಯೂ ಇದು ಸ್ವಯಂಕೃತವಾದ ಗ್ರಂಥವಾಗಿರುವುದರಿಂದ ನಾವು ಸಂತೋಷಪಡಬೇಕಾಗಿದೆ ಮ|| ರಾಮರಾಜಪ್ಪನವರು ಈ ಗ್ರಂಥದಲ್ಲಿ ತೋರಿಸಿರುವ ರಚನಾಶಕ್ತಿಯು ತುಂಬಾ ಶ್ಲಾಘ್ಯವಾಗಿದೆ ಈ ಗ್ರಂಥಕರ್ತರು ಸಕಲ ವಿಷಯಗಳಲ್ಲಿಯೂ ಅಭ್ಯುದಯವನ್ನೇ ಹೊಂದುವವರಾಗಿರುತ್ತೇವೆ

“ ಪ್ರಿಯಂವದೆ ”

ಮೈಸೂರಿನಲ್ಲಿರುವ ಸದ್ವಿದ್ಯಾಶಾಲಾಧ್ಯಕ್ಷರಾದ ಮ| ಗುಂಡಶಾಸ್ತ್ರಿಗಳವರು ರಚಿಸಿರುವ ಈ ಪ್ರಬಂಧವು ನಮ್ಮ ದೇಶದ ಮಹಿಳೆಯರ ಕಾಲಕ್ಷೇಪಕ್ಕೆ ಹಿತಕರವಾದುದಾಗಿದೆ ಈ ಕಥೆಯಿಂದ ಮಹಿಳೆಯರಿಗೆ ಪಾತಿವ್ರತ್ಯದ ವಿಶೇಷತೆಯು ಗೋಚರವಾಗುವುದಲ್ಲದೆ, ಇದು ಅಬಲೆಯರಲ್ಲಿ ನಿಷ್ಕಾರಣವಾಗಿ ದೋಷವನ್ನಾರೋಪಿಸುವ ಪುರುಷರಿಗೆ ಒಳ್ಳೆ ಬುದ್ಧಿವಾದವನ್ನೀಯುವುದರಲ್ಲಿ ಯಾವ ಸಂದೇಹವೂ ಇಲ್ಲ “ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು” ಎಂಬುವ ನೀತಿಯನ್ನುಲ್ಲಂಘಿಸುವುದರ ಪರಿಣಾಮವೇನೆಂಬುವುದು ಕೊನೆಗೊಳ್ಳುವ ಈ ಗ್ರಂಥ ಪಠನದಿಂದ ವೇದ್ಯವಾಗುತ್ತದೆ ಗ್ರಂಥರಚನೆಯೂ, ಭಾಷಾಶೈಲಿಯೂ ಕಥಾ ಸಂದರ್ಭಕ್ಕೆ ಅನುಗುಣವಾಗಿ ಗ್ರಂಥಕರ್ತರ ಪ್ರಯತ್ನವನ್ನು ಸಾರ್ಥಕಗೊಳಿಸುವವು

೧೯೧೦ ನೇ ಇಸವಿಯ “ ಆರೋಗ್ಯ ಪಂಚಾಂಗ ”.

ಮೈಸೂರು ಗವರ್ನ್‌ಮೆಂಟಿನ ಡೆಪ್ಯುಟಿ ಸ್ಯಾನಿಟರಿ ಕಮಿಷನರವರಾದ ಡಾಕ್ಟರ್ ಪಿ ಪಲ್ಪುರವರು ಇದನ್ನು ಕನ್ನಡದಲ್ಲಿಯೂ ಮತ್ತು ಇಂಗ್ಲೀಷಿನಲ್ಲಿಯೂ ರಚಿಸಿ ಬಹು ಸುಂದರವಾಗಿ ಅಚ್ಚುಹಾಕಿಸಿರುತ್ತಾರೆ ಇದು ಸರ್ವರಿಗೂ ಪ್ರಯೋಜನಕರವಾದದ್ದು ಮತ್ತು ಅತ್ಯವಶ್ಯಕವಾದದ್ದು ಇದರಲ್ಲಿ ಶ್ರೀಮನ್ಮಹಾರಾಜರವರ ಫೋಟೋಗಳು, ಹವಾ ಮತ್ತು ಮಳೆಯ ತಖ್ತೆಗಳು, ವರ್ಷದ ಪಂಚಾಂಗ, ಆರೋಗ್ಯ ವಿಷಯವಾದ ಗಾದೆಗಳು, ಸ್ಯಾನಿಟರಿ ವಿಷಯಗಳೂ, ಜನಗಳು, ಮನೆಗಳು, ಹವಾ, ಕಾಲ, ಇವುಗಳ ವಿಷಯಗಳೂ, ಜನನ ಮರಣಗಳು, ರೋಗಗಳು, ಆರೋಗ್ಯದ ಇಲಾಖೆಯ ವಿಷಯಗಳು, ಆರೋಗ್ಯ ಸೂತ್ರಗಳು, ಆರೋಗ್ಯಪುಸ್ತಕಗಳು, ಪ್ಲೇಗ್, ಕಾಲರಾ, ಕರುಳಿನ ರೋಗಗಳು, ಸಿಡುಬು, ಜ್ವರಗಳು, ಜಂತುಹುಳಗಳು, ಇವೇ ಮುಂತಾದ ಸಾಮಾನ್ಯರೋಗಗಳ ಪರಿಹಾರಗಳು, ಬೆಂಕಿ, ಗಾಯ, ನೀರು, ರುಚಿತ್ವ, ಆಹಾರ, ವ್ಯಾಯಾಮ, ವಾಸಸ್ಥಾನ, ಶಿಶುಪೋಷಣೆ, ಆಕಸ್ಮಾತ್ ಸಂಭವಿಸುವ ಸಾಮಾನ್ಯ ಆಪತ್ತುಗಳು ಮತ್ತು ಇವುಗಳಿಗೆ ತಕ್ಷಣವೇ ಮಾಡಬೇಕಾದ ಚಿಕಿತ್ಸೆ, ಇವುಗಳ ವಿಷಯವೂ ಇದರಲ್ಲಿ ಬರೆದಿದೆ ಇಷ್ಟೇ ಅಲ್ಲ ಶ್ರುತಿ ಸ್ಮೃತಿಗಳಿಂದಲೂ ಹಲವು ಪ್ರಾಚೀನ ಗ್ರಂಥಗಳಿಂದಲೂ ಬಹು ಅಮೂಲ್ಯವಾದ ಅನೇಕ ಆರೋಗ್ಯಸೂತ್ರಗಳನ್ನು ಇದರಿಂದ ಓದಿ ತಿಳಿಯಬಹುದು ಇಂಥಾ ಪಂಚಾಂಗವು ಪ್ರತಿ ಮನೆಯಲ್ಲೂ ಇರಬೇಕು ಕ್ರಯ—ಒಂದು ಪ್ರತಿಗೆ ೨ ಆಣೆ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು, ಮ್ಯುನಿಸಿಪಲ್ ಲೋಕಲ್‌ಫಂಡ್ ಮತ್ತು ಯೂನಿಯನ್ ಮೆಂಬರುಗಳು, ಉಪಾಧ್ಯಾಯರು, ಸ್ಯಾನಿಟರಿ ಇನ್ಸ್‌ಪೆಕ್ಟರುಗಳು, ಶೀಕ್ದಾರರು, ವ್ಯಾಕ್ಸಿನೇಟರುಗಳು, ಪಟೇಲರು, ಇತರ ಹುದ್ದೆದಾರರು, ವಿದ್ಯಾವಂತರು, ಇದರ ಪ್ರತಿಗಳನ್ನು ತರಿಸಿಕೊಂಡು ಇತರರಿಗೂ ತಿಳಿಸತಕ್ಕದ್ದು ಇದನ್ನು ಅಪೇಕ್ಷಿಸತಕ್ಕವರು ಬೆಂಗಳೂರು ಗವರ್ನ್‌ಮೆಂಟ್ ಬುಕ್ ಡಿಪೋದಿಂದಲೂ, ಮೈಸೂರು ಸಿ ಎಲ್ ಎಸ್ ಬುಕ್ ಡಿಪೋದಿಂದಲೂ, ಆಯಾ ಅಮಲ್ದಾರರು, ಡಾಕ್ಟರು ಮತ್ತು ಇತರ ಆಫೀಸರುಗಳ ಮೂಲಕವೂ ತರಿಸಿಕೊಳ್ಳಬಹುದು

ಶ್ರೀಕೃಷ್ಣರಾಜ ಕೃಷಿಶಿಲ್ಪಾಭಿವರ್ಧಕ ಸಮಾಜ ಮೈಸೂರು

ಎರಡನೇ ವಾರ್ಷಿಕ ರಿಪೋರ್ಟು

[ಕಳೆದ ವಾರದ ಶೇಷ]

ಕೈಗಾರಿಕೆ.—ಸಮಾಜದಿಂದ ರಾ|| ಎಂ ಎಲ್ ವಾಸುದೇವಯ್ಯನವರ ಮೂಲಕ ಕಲಾವತ್ತು ಅಂಚಿನ ಪೇಟ ೯, ಕೊನಾರದು ಸೀರೆ ೩, ಕಪ್ಪು ಮಡಿಸೀರೆ ೪, ನಾಸಮರ್ಣಿ ಸೀರೆ ೨ ಬಾಬಾ ಅಂಚಿನ ಸೀರೆಗಳು ೫, ರೇಷ್ಮೆ ಕೈವಸ್ತ್ರ ೧೨, ಎಂಟು ಮೊಳದ ಪಂಚೆ ೨, ಕಲಾವತ್ತು ಅಂಚಿನ ಪಂಚೆ ೨, ಇವುಗಳನ್ನು ಮಾಡಿಸಿ ಈ ಸಲದ ಎಗ್ಸಿಭಿಷನ್‌ಗೆ ಕಳುಹಿಸಲಾಯಿತು ಮೇಕ್ರೋಟಿ ಇಂಡಸ್ಟ್ರಿಯಲ್ ಸ್ಕೂಲು ಸೂಪರಿಂಟೆಂಡೆಂಟ್ ಮ| ಎಂ. ಜಿ ರಾಮಯ್ಯಂಗಾರ್ಯರಿಗೆ ೫೦೦ ರೂ ಮತ್ತು ವೀವರ್ಸ್ ಲೈನ್‌ನಲ್ಲಿರುವ ಮ|| ಕೆ ಎಸ ಕೃಷ್ಣಯ್ಯಂಗಾರ್ಯರಿಗೆ ೨೦೦ರೂ ನೇಯ್ಗೆ ಅಭಿವೃದ್ಧಿಪಡಿಸಲು ಸಾಲಾ ಕೊಟ್ಟಿದೆ ಇವರು ಈ ಮೊಬಲಗೆಲ್ಲಾ ನೇಯ್ಗೆಯಲ್ಲಿಯೇ ವಿನಿಯೋಗಿಸಿರುತ್ತಾರೆ ಮ|| ರಾಮಯ್ಯಂಗಾರ್ಯರು ನಾವು ಕೊಟ್ಟಿರುವ ಮೊಬಲಗನ್ನು ನೇಯ್ಗೆಗೆ ಉಪಯೋಗಿಸಿ ತಾವು ತಯಾರುಮಾಡಿಸಿದ ಕಲಾವತ್ತು ಪಂಚೆ ಸೀರೆ, ಚಕ್ಕುಬಟ್ಟೆ ಮುಂತಾದವುಗಳನ್ನು ವಿಲೇವಾರಿಮಾಡಿಸತಕ್ಕ ಎಗ್ಸಿಭಿಷನಿಗೆ ಕೊಟ್ಟಿದ್ದಾರೆ ಅವನ್ನೂ ನಾವು ಮಾಡಿಸಿದವುಗಳನ್ನೂ ಸಮಾಜದ ಮೆಂಬರುಗಳ ತಿಳುವಳಿಕೆ ಬಗ್ಗೆ ಇಟ್ಟಿಡಿಸಿರುತ್ತೇವೆ ಈ ಸಲದ ಎಗ್ಸಿಭಿಷನಲ್ಲಿ ಮ|| ರಾಮಯ್ಯಂಗಾರ್ಯರಿಗೂ, ಮ|| ಕೃಷ್ಣಯ್ಯಂಗಾರ್ಯರಿಗೂ ಬಹುಮಾನ ಬಂದಿರುವುದು ದಂತದ ಕೆಲಸದಲ್ಲಿ ನಿಪುಣರಾದ ಮೆ|| ಎಂ ಜಿ ಮಲ್ಲೆಶಾ ಯವರಿಗೆ ಆ ಕೆಲಸದ ಪ್ರೋತ್ಸಾಹಕ್ಕಾಗಿ ೨೦ ರೂ ಸಾಲ ಕೊಟ್ಟಿತ್ತು ಇವರು ೫೦೦ ರೂ ಬೆಲೆಬಾಳುವ ದಂತದಲ್ಲಿ ಸಮಾಜಕ್ಕಾಗಿ ಮಾಡಿದ ಮರದ ಸಾಮಾನುಗಳನ್ನು ಎಗ್ಸಿಭಿಷನಿಗೆ ಕಳುಹಿದರು ಎಗ್ಸಿಭಿಷನಲ್ಲಿ ಇವರಿಗೆ ಬೆಳ್ಳಿಯ ಮೆಡಲು ಬಂದಿದೆ ಇವರು ಸಮಾಜಕ್ಕೆ ಕೊಡಬೇಕಾದ ಸಾಲದಲ್ಲಿ ಮುಕ್ಕಾಲು ಭಾಗ ವಾಪತಿಮಾಡಿದಾರೆ ನೇಯ್ಗೆಯನ್ನು ಹೊಸ ಮಗ್ಗಗಳ ಮೂಲಕ ರೇಷ್ಮೆ ಕಲಾವತ್ತು ಅಂಚುಳ್ಳ ಬಟ್ಟೆ ನೇಯುವುದನ್ನು ಕಲಿಯುವುದಕ್ಕೋಸ್ಕರ ಈ ಸಮಾಜದಿಂದ ತಿಂಗಳಿಗೆ ೧೦ ರೂ ಸ್ಕಾಲರ್‌ಶಿಪ್ ಕೊಟ್ಟು ಕಳುಹಿಸಿದ್ದನು ೧೦ ನೇ ನಂಬರು ವರೆಗೆ ನೇಯುವುದನ್ನು ಕಲಿತು ವಾಪಸಾಗಿ ಬಂದಿದ್ದಾನೆ ಈ, ರೇಷ್ಮೆ ಕಲಾವತ್ತು ನೇಯಬೇಕಾದರೆ ಬೇಕಾಗುವ ಹಾಗುವ ಬೆಲೆಯ ಮಗ್ಗದಲ್ಲಿ ಈತನು ರೇಷ್ಮೆ ಕಲಾವತ್ತು ಮತ್ತು ಇತರ ವಿಧವಾದ ಪಂಚೆಗಳನ್ನು ನೇಯಬಲ್ಲನು ಈತನ ಮೂಲಕ ಈ ಸ್ಥಳದವರನ್ನು ತಯಾರುಮಾಡುವುದಕ್ಕೆ ತಕ್ಕ ಏರ್ಪಾಡುಮಾಡುತ್ತ ಇದ್ದೇವೆ ಇವನು ಎರಡು ವರುಷ ತನಕ ಮ|| ಕೃಷ್ಣಯ್ಯಂಗಾರ್ಯರ ನೇಯ್ಗೆ ಕಾರ್ಖಾನೆಯಲ್ಲಿ ಕೆಲಸಮಾಡಲು ಒಪ್ಪಿ ಆ ಬಗ್ಗೆ ಕರಾರು ಬರೆದುಕೊಟ್ಟಿದ್ದಾನೆ ಇವನು ವಿದ್ಯಾರ್ಥಿ ಸಮಯದ ಬಾಕಿ ಸ್ಕಾಲರ್‌ಶಿಪ್ ರೂಪಾಯಿ ವಾಪಸುಮಾಡಲು ಸಮಯ ಕೊಟ್ಟಿದೆ.

ವ್ಯವಸಾಯ ಮಹಾರಾಣಿಯವರ ವಿಧವಾನಿಲಯ ಮೇಜೋಡು ಕುಲಾಯಿ ಬನಿಯನ ಮುಂತಾದವುಗಳನ್ನು ಮಾಡುವ ಸ್ಟಾಕಿಂಗ್ ಮೆಷಿನ್ ಎಂಬುವುದನ್ನು ಕಳೆದ ವರುಷ ಸಮಾಜದಿಂದ ಶ್ರೀ ಮಹಾರಾಣಿಯವರ ವಿಧವಾ ನಿಲಯಕ್ಕೆ ಕೊಡಲ್ಪಟ್ಟಿತ್ತು ಮೈಸೂರು ಗವರ್ನ್‌ಮೆಂಟ್ ಇಂಡಸ್ಟ್ರಿಯಲ್ ಸ್ಕೂಲಿನ ಡ್ರಾಯಿಂಗ್ ಮಾಸ್ಟರ್ ಮ|| ಆರ್ ಟಿ ರಾಮಕೃಷ್ಣನ್‌ಯವರು ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ದಯಮಾಡಿ ಮದರಾಸಿಗೆ ಕಳುಹಿಸಿಕೊಟ್ಟು ಡೆಕ್ಕರ ಸಂಜುಂದರಾಯರ ಹೋಂ ಇಂಡಸ್ಟ್ರಿಯಲ್ಲಿ ಮೇಜೋಡ ಮೆಷೀನಿನಿಂದ ಕೆಲಸ ಕಲಿತು ಬರುವಂತೆ ಮಾಡಿಸಿದರು ಮೆ|| ರಾಮಕೃಷ್ಣನವರು ವಿಧವಾನಿಲಯದ ಒಬ್ಬ ವಿಧವೆಗೂ ಒಬ್ಬ ಹುಡುಗನಿಗೂ ಮೇಜೋಡು ತಯಾರುಮಾಡತಕ್ಕ ಕೆಲಸವನ್ನು ಕಲಿಸಿಕೊಟ್ಟಿದ್ದಾರೆ ಇನ್ನೂ ಬನಿಯನ್ ವಗೈರೆ ತಯಾರುಮಾಡತಕ್ಕ ಕೆಲಸವು ಈಗ ಪ್ರಾರಂಭವಾಗಿದೆ ಇದರಿಂದ ತಯಾರಾದ ಮೂರು ಜೊತೆ ಮೇಜೋಡುಗಳು ಎಗ್ಸಿಭಿಷನಿಗೆ ಮಾದರಿಯಾಗಿ ಕಳುಹಿಸಿತ್ತು ಅಲ್ಲದೆ ಸ್ಟಾಕಿಂಗ್ ಮೆಷೀನ ಸಹಾ ಎಗ್ಸಿಭಿಷನಲ್ಲಿಟ್ಟು ಕೆಲಸಮಾಡಿಸಲಾಯಿತು ಇದಕ್ಕಾಗಿ ಬಹುಮಾನವೂ ಬಂದಿರುತ್ತದೆ ಈ ಸ್ಟಾಕಿಂಗು ಮೆಷೀನಿನಿಂದ ಗಂಡಸರ ಸಾದಾ ಮೇಜೋಡು ತಯಾರುಮಾಡುವುದನ್ನು ನಾಲ್ಕು ಜನರು ಕಲಿತಿದ್ದಾರೆ ಹೆಂಗಸರ ಸಾದಾ ಮೇಜೋಡು ಸ್ಟಾಕಿಂಗ್ಸ್ ಮತ್ತೂ ಟೋಪಿ ತಯಾರುಮಾಡುವ ಕೆಲಸ ಇನ್ನೂ ತೋರಿಸಬೇಕಾಗಿರುವುದರಿಂದ ಕನಿಷ್ಠಪಕ್ಷ ೬-೭ ತಿಂಗಳು ಇದರ ಮೆಷೀನ್ ಬೇಕೆಂದೂ ಮತ್ತೂ ಈ ಮೆಷೀನಿನಿಂದ ಮಾಡತಕ್ಕ ಕೆಲಸವು ತುಂಬಾ ಲಾಭಕರವಾದದ್ದೆಂದೂ ಮಹಾರಾಣಿಯವರ ವಿಧವಾ ನಿಲಯದ ಸೆಕ್ರೆಟರಿಯವರು ಸೂಚಿಸಿರುತ್ತಾರೆ ಈ ಕೆಲಸವನ್ನು ಮಾಡುವುದರಲ್ಲಿ ಮನುಷ್ಯನಿಗೆ ಬಹಳ ಹರ್ಷವೂ ಶರೀರಕ್ಕೆ ಪುಷ್ಟಿಯೂ ಉಂಟಾಗುವವು ೧೦-೧೨ ವರುಷದ ಹುಡುಗರು ಸುಲಭವಾಗಿ ಈ ಕೆಲಸವನ್ನು ಮನೆಯಲ್ಲಿಯೇ ಹೋಂ ಇಂಡಸ್ಟ್ರಿಯಾಗಿ ಮಾಡಿಕೊಳ್ಳಬಹುದು ಮೆ|| ರಾಮಕೃಷ್ಣನವರು ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ಸಮಾಜದ ಸಹಾಯಕ್ಕಾಗಿ ಈ ಕೆಲಸವನ್ನು ಜನಗಳಿಗೆ ಕಲಿಸುತ್ತಾ ಇರುವುದರಿಂದ ಇವರಿಗೆ ಸಮಾಜದವರು ಬಹಳವಾಗಿ ಕೃತಜ್ಞರಾಗಿರಬೇಕಾಗಿದೆ— ಮಹಾರಾಣಿಯವರ ವಿಧವಾ ನಿಲಯದಲ್ಲಿ ಗೂಡುಗಳಿಂದ ರೇಷ್ಮೆ ನೂಲು ತೆಗೆಯುವುದನ್ನು ಕಲಿಸಿಕೊಡುವ ಏರ್ಪಾಡಿಗೋಸ್ಕರ ಮೆ|| ಮಹಮದ್ ಜಾಫರ್ ಯವರಿಗೆ ೧೫೦ ರೂ ಸಾಲ ಕೊಟ್ಟಿತ್ತು ಮತ್ತು ಸಮಾಜದಿಂದ ಮಾಹೆಯಾನಾ ೧೨ ರೂ ನ ಕ ಮೂರು ತಿಂಗಳ ಕಾಲ ಒಬ್ಬ ಮಹಮದೀಯ ಉಪಾಧ್ಯಾಯನನ್ನು ಕಳಿಸಿ ರೇಷ್ಮೆ ಕಸಬನ್ನು ವಿಧವಾ ನಿಲಯದವರಿಗೆ ಕಲಿಸಿಕೊಡಲು ಏರ್ಪಾಡು ಮಾಡಲಾಯಿತು ಈ ಕಸಬನ್ನು ಇಬ್ಬರು ವಿಧವೆಯರು ಕಲಿತಿದ್ದಾರೆ ಅಜಮಾಯಿಷಿ ಮಾಡಿದ್ದರಲ್ಲಿ ಈ ಕೆಲಸವು ಗಂಡಸರಿಗೆ ಸಾಧ್ಯವೇ ಹೊರತು ಹೆಂಗಸರಿಗೆ ತುಂಬಾ ಕಷ್ಟವೆಂದು ಗೊತ್ತಾಗಿದೆ —ರೇಷ್ಮೆಯನ್ನು ಬಿಚ್ಚಿ ಅದಕ್ಕೆ ತಿರುವಿ ೧ ಒಣಹಾಕಿಸಿ ಮಾರುವುದು ಬಹಳ ಲಾಭವಿದೆ ಎಂದು ತಿಳಿದದ್ದರ ಮೇಲೆ ರೇಷ್ಮೆಗೆ ಬಣ್ಣಹಾಕುವುದನ್ನು ಈಗ ಪ್ರಾರಂಭಿಸಿರುತ್ತಾರೆ ಬಣ್ಣಹಾಕಿದ ೧೬ ತರಾ ರೇಷ್ಮೆಯನ್ನು ಹೋದ ವರುಷದ ಎಗ್ಸಿಬಿಷನ್‌ಗೆ ಕಳುಹಿಸಿದ್ದರಲ್ಲಿ ಬಹುಮಾನ ಬಂದಿದೆ ಎಂದು ತಿಳಿಸಿರುತ್ತಾರೆ —ಕೈಗಾರಿಕೆ ಕೆಲಸಗಳಿಗೆ ಮೇಲೆ ನಮೂದಿಸಿರುವ ರೀತಿ ಕೆಲಸದವರಿಗೆ ಕೆಲಸಮಾಡುವುದಕ್ಕೋಸ್ಕರ ಸವಲತ್ತುಮಾಡಿಕೊಂಡು ಸುಲಭ ಬಡ್ಡಿಯಲ್ಲಿ ಸರಿಯಾದ ಖಾತರಿ ಮೇಲೆ ಸಾಲಕೊಟ್ಟು ಸಾಲ ತೀರಿಸುವುದಕ್ಕೆ ಅವಕಾಶಕೊಡತಕ್ಕದ್ದು ತುಂಬಾ ಪ್ರಯೋಜನಕರವಾಗಿದೆ

ಪ್ರಾರ್ಥನೆ ಮೈಸೂರು ಗೌರ್ನಮೆಂಟಿನವರು ಹೋದ ವರುಷ ನಮ್ಮ ಸಮಾಜಕ್ಕೆ ೧೫೦ ರೂ ಗ್ರಾಂಟು ಕೊಡಿಸಿದ್ದಕ್ಕಾಗಿ ಈ ಸಮಾಜದವರು ಬಹಳ ಕೃತಜ್ಞರಾಗಿರುತ್ತಾರೆ ಈ ಸಾಲಿನಿಂದ ೧೫೦ ರೂ ಕೈಗಾರಿಕೆ ಕೆಲಸಗಳಿಗೂ ಮತ್ತೂ ೧೫೦ ರೂ ವ್ಯವಸಾಯಾಭಿವೃದ್ಧಿಗೂ ಗ್ರಾಂಟು ದಯವಿಟ್ಟು ಕೊಡಿಸಬೇಕೆಂದು ಗೌರ್ನಮೆಂಟಿನವರನ್ನು ಕೇಳಿಕೊಂಡಿದೇವೆ ಈ ಸಹಾಯವಿಲ್ಲದೆ ಸಮಾಜದ ಕೆಲಸವನ್ನು ತೃಪ್ತಿಯಾಗಿ ನಡೆಸಲು ಸಾಧ್ಯವಿಲ್ಲವಾದದ್ದರಿಂದ ನಮ್ಮ ಕೋರಿಕೆಯಂತೆ ಮೈಸೂರು ಗೌರ್ನಮೆಂಟಿನವರು ದಯವಿಟ್ಟು ನಡಿಸಿಕೊಡುವರೆಂದು ನಂಬಿರುತ್ತೇವೆ

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು ಎಡಿಟರ್

ಕರೆಸ್‌ಪಾಂಡೆನ್ಸ್.

ದಿವಾನ್‌ರವರ ಸಕೀಟೂ, ಸರ್ಕಾರಿ ನೌಕರರ ಬಲಾತ್ಕಾರವೂ

ಅಯ್ಯ,

ನಾನು ಕಾರ್ಯಾರ್ಥವಾಗಿ ಹಿರಿಯೂರಿಗೆ ಹೋಗಿದ್ದೆನು ಕಳೆದ ೨೭ನೇ ತಾ ಬಾನುವಾರ ಬೆಳಗ್ಗೆ ೧೦ ಘಂಟೆಗೆ ದಿವಾನ್‌ರವರ ಸವಾರಿಯು ಅಲ್ಲಿಗೆ ಚಿತ್ತೈಸಿತು ದಿವಾನ್‌ರವರ ಆಗಮನ, ತ್ಯಾರಮಲ್ಲೇಶ್ವರನ ಜಾತ್ರೆ, ಆ ದಿನದ ಸಂತೆ, ಇವುಗಳು ಅನೇಕ ಪರಸ್ಥಳದವರು ಅಲ್ಲಿ ಬಂದು ಸೇರುವದಕ್ಕೆ ಕಾರಣವಾಗಿದ್ದವು ಅದೇ ದಿನ ಸಾಯಂಕಾಲ ನಾನೂ ಇನ್ನೂ ಅನೇಕರೂ ಅಲ್ಲಿಂದ ಹೊರಟುಬರುವದಕ್ಕೆ ಸಂತೆಕೂಡುವ ಮೈದಾನದಲ್ಲಿದ್ದ ಗಾಡಿಗಳನ್ನು ಗೊತ್ತುಮಾಡಿ, ನಮ್ಮ ಸಾಮಾನುಗಳನ್ನು ಗಾಡಿಯಲ್ಲಿಟ್ಟು ಗಾಡಿಕಟ್ಟುವದಕ್ಕಾಗಿ ಕಾದಿದ್ದೆವು ಸುಮಾರು ೬ ಘಂಟೆ ಸಮಯದಲ್ಲಿ ಒಬ್ಬ ಸರ್ಕಾರಿ ನೌಕರನು ಕೆಲವು ಜವಾನರೊಂದಿಗೆ ಅಲ್ಲಿಗೆ ಬಂದು, ಅಲ್ಲಿದ್ದ ೧೦ ಗಾಡಿಗಳನ್ನು ಗಾಡಿಯವರು ಏನು ಹೇಳಿದರೂ ಕೇಳದೆ ದಿವಾನ್‌ರವರಿಗೆ ಬೇಕಾಗಿದೆ ಎಂದು ಹೇಳಿ ಬಲಾತ್ಕಾರದಿಂದ ಹಿಡಿದು ಕಟ್ಟಿಸಿ ನಮ್ಮ ಸಾಮಾನುಗಳನ್ನು ಬಂಗಲೆಯ ಮುಂಭಾಗದಲ್ಲಿರುವ ಮೈದಾನಕ್ಕೆ ಹೊಡೆದುಕೊಂಡುಹೋಗಿ ಇಳಿಸಿದರು [illegible] ಇನ್ನೂ ಕೆಲವು ಗಾಡಿಗಳನ್ನು ಅಲ್ಲಿಗೆ ತಂದು ಸೇರಿಸಿದರು ಏತಕ್ಕೆ ನಮ್ಮನ್ನು ಹೀಗೆ ತೊಂದರೆಪಡಿಸುತ್ತೀರೆಂದು ಕೇಳಲು [illegible] ಪ್ರಯಾಣವನ್ನು ಬೆಳಿಸುವ ವಿಳಂಬವೇಕೆ, ಈ ಗಾಡಿಗಳಲ್ಲಿರುವ ಸಣ್ಣ ಸ್ವಲ್ಪ ಸಾಮಾನುಗಳನ್ನೆಲ್ಲಾ ಕೆಲವು ಗಾಡಿಗಳಿಗೆ ಪೂರಾ ಏರಿಸಿ ನಿಮ್ಮ ಪ್ರಯಾಣಕ್ಕೆ ಅನುಕೂಲಪಡಿಸಿ ಉಳಿದ ಕೆಲವು ಗಾಡಿಗಳನ್ನು ಮಾತ್ರ ನಾವು [illegible] ಕೊಳ್ಳುತ್ತೇವೆ ಎಂದು ಹೇಳಿದರು ಹೀಗಾದರೂ ಮಾಡಿದ್ದರೆ ಉತ್ತಮವಾಗಿತ್ತು ನಾವು [illegible] ಸರಿಯಾದ ವೇಳೆಗೆ [illegible] ಹೊರಡುವ [illegible] ಅಷ್ಟರಲ್ಲಿ [illegible] ಗಾಡಿಗಳನ್ನು [illegible] ಗಾಡಿಗಳನ್ನು ಬಿಡದೆ [illegible] ಸರ್ಕಾರಿ ಉದ್ಯೋಗಸ್ಥರು [illegible] ಸ್ಥಳೀಕರಿಗೆ [illegible] ಇಲ್ಲ [illegible] ಅಂಥಾ ಪ್ರದೇಶದಲ್ಲಿ ಹುಳು ಹಪ್ಪಟೆ ರಾತ್ರಿ ಎಲ್ಲಾ [illegible] ಅಲ್ಲಿನ ಕಳ್ಳರ ಬಾಧೆಯು ಎಷ್ಟೆಂದು ಅನುಭವಿಸಿದವರಿಗೆ ಮಾತ್ರ ಗೊತ್ತು ನಮ್ಮಲ್ಲಿ [illegible] ಪಲ್ಲಕಿಯ [illegible] ಪಾರಿಕ ಬೆಳಗ್ಗೆ ನಾನೂ ಇನ್ನೂ ಕೆಲವರೂ ಒಂದಕ್ಕೆ ಮೂರರಷ್ಟು ಹೆಚ್ಚು ಬಾಡಿಗೆ ಕೊಟ್ಟು ಬೇರೆ ಗಾಡಿಯಲ್ಲಿ ಹೊರಟೆವು ಹೆಚ್ಚು ಬಾಡಿಗೆ ಕೊಡಲಾರದೆ ಕೆಲವರು ನಡೆದುಹೋದರು ದುಡ್ಡಿಗೂ ನಡೆಯುವದಕ್ಕೂ ಯತ್ನವಿಲ್ಲದ ಅನೇಕರು ಅಲ್ಲೇ ನಿಂತರು ಇವರಲ್ಲಿ ಕೆಲವು ಹೆಂಗಸರು ಸಹ ಇದ್ದರು ದುಗಳದ ಸಂತೆಯಲ್ಲಿ ಮಾರುವದಕ್ಕೆ ವರ್ತಕರು ಕೊಂಡಿದ್ದ ತರಕಾರಿ ವಗೈರೆ ಸಾಮಾನುಗಳೆಲ್ಲಾ ಅಲ್ಲೇ ನಿಂತವು ಇವರ ಪಾಡೇನಾಯಿತೋ ತಿಳಿಯಲಿಲ್ಲ ಸರ್ಕಾರಿ ಉದ್ಯೋಗಸ್ಥರು ಮಾತ್ರವೇ ಅಲ್ಲ, ಸಕಲ ಪ್ರಜೆಗಳೂ ದಿವಾನ್‌ರವರ ಪ್ರಯಾಣಕ್ಕೆ ಬೇಕಾದ ಸೌಕರ್ಯವನ್ನು ಒದಗಿಸಿಕೊಡಲು ಬದ್ಧರಾಗಿದ್ದಾರೆಂಬುವದರಲ್ಲಿ ಅನುಮಾನವೇ ಇಲ್ಲ ಆದರೆ ದಿವಾನ್‌ರವರು ಬರುತ್ತಾರೆಂಬ ಸಮಾಚಾರವು ಅಲ್ಲಿನ ಅಮಲ್ದಾರರಿಗೆ ಮೊದಲೇ ತಿಳಿದಿತ್ತು ಅವರಿಗೆ ಬೇಕಾದಷ್ಟು ಗಾಡಿಗಳನ್ನು ಸ್ಥಳದವರಿಂದಲೇ ಒದಗಿಸಿಕೊಡುವದು ಅಮಲ್ದಾರರಿಗೆ ಸುಲಭವಾಗಿತ್ತು ಅವರು ಮುಂಚಿತವಾಗಿ ಇದಕ್ಕೆ ಏರ್ಪಾಡುಮಾಡಿಕೊಂಡಿದ್ದರೆ ಅನೇಕ ಪರಸ್ಥಳದವರನ್ನು ಇಷ್ಟು ಕಷ್ಟಗಳಿಗೆ ಗುರಿಮಾಡುತ್ತಿರಲಿಲ್ಲ ಎಂದು ವಿಷಾದಪಡಬೇಕಾಗಿದೆ ಇದು ದಿವಾನ್‌ರವರ ತಿಳುವಳಿಕೆಗೆ ಬಂದಿದ್ದರೆ ಅವರು ಬಹಳ ವ್ಯಸನಪಟ್ಟಿರುವರೆಂದು ನಂಬುತ್ತೇನೆ ಬೇರೆ ಕಡೆಗಳಲ್ಲಿ ಕೂಡ ಇದೇ ರೀತಿ ನಡೆಯುವದನ್ನು ನಾನು ನೋಡಿದೇನೆ ಸರ್ಕಾರದವರು ಕಾಲವರಿತು ಕಾರ್ಯಗಳನ್ನು ಕ್ರಮವಾಗಿ ನಡಿಸುತ್ತಾ ಬಂದಲ್ಲಿ ಸರ್ವರಿಗೂ ಕ್ಷೇಮವಾಗುವದು

ಪ್ರತ್ಯಕ್ಷದರ್ಶಿ

ಆಳುವವರೂ ನಾನೂ, ಅರಾಜಕ ಪುಂಡುಗಾರರೂ ಈ ಊರಿನ ತುಂಟು ಹುಡುಗರೂ

ಅಯ್ಯಾ.

ನಾನು ಈ ಊರಿಗೆ ೧೮೬೪ ನೇ ವರುಷದಲ್ಲಿ ಬಂದು ೮೦ ನೇ ವರುಷದವರೆಗೆ ಸಾಮಾನ್ಯವಾದ ಒಂದು ಸರ್ಕಾರದ ಕೆಲಸದಲ್ಲಿ ತಕ್ಕಮಟ್ಟಿಗೆ ಗೌರವವಾಗಿಯೇ ಇದ್ದೆನು ಇಲ್ಲಿಗೆ ಕನ್ನಡ ಸ್ಕೂಲು ನಾನು ಬಂದ ಮೇಲೆಯೇ

ಸ್ಥಾಪಿತವಾಯಿತು ನಾನು ಈ ಊರನ್ನು ಬಿಡುವ ವರೆಗೆ ಇಂಗ್ಲೀಷಿನ ಪ್ರಸಕ್ತಿಯೇ ಇರಲಿಲ್ಲ. ನಾನು ಹಿಂದೆ ಇದ್ದ ೧೬ ವರುಷಗಳಲ್ಲಿ ೧೬ ವರುಷಗಳಿಗೆ ಒಳಪಟ್ಟ ಹುಡುಗರು ದೊಡ್ಡವರಲ್ಲಿ ಯಾವ ಗೌರವದಿಂದ ಇರುತ್ತಾ ಇರಬೇಕೋ ಆ ಮೇರೆಗೆ ಇದ್ದರು. ಸಾಮಾನ್ಯವಾದ ಹುಡುಗರ ಚೇಷ್ಟೆಗಳನ್ನು ಮಾತ್ರ ಅವರ ವಯೋಸ್ವಭಾವಿತರಾಗಿ ಮಾಡುತ್ತಿದ್ದರು. ಪುನಃ ೧೯೦೭ ನೇ ವರುಷದಲ್ಲಿ ಯಾವ ಆಚಾರವೂ ಸಂಸ್ಕಾರವೂ ಇಲ್ಲದೆ ಇಲ್ಲಿ ಕಾಲಕಳೆಯಬೇಕೆಂದು ಎಂತೆಂಥ ಈ ಗ್ರಾಮವು ಪ್ರಾಯಶಃ ಎಲ್ಲರಿಗೂ ವಸತಿಯಾಗಿರುವದರಿಂದ ಒಂಟಿಯಾಗಿದ್ದರೂ ಸಾಧಾರಣವಾಗಿ ಸುಖವಾಗಿ ಇದ್ದೇನೆ. ಆದರೆ ಈ ಎರಡನೇ ಆವರ್ತ ನಾನು ಬಂದ ಮೇಲೆ ಹುಡುಗರ ಸ್ವಭಾವ ಆಜಗಜಾಂತರವಾಗಿರುವದನ್ನು ಕಂಡೆನು. ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಕೊಟ್ಟ ಹುಡುಗರಂತೂ ಆ ಪರೀಕ್ಷೆಗಳ ಗಂಧವನ್ನೇ ಅರಿಯದ ತಮ್ಮ ತಂದೆ ತಾತಂದಿರೂ ಸಹ ತಮಗಿಂತಲೂ ಬಹಳ ಕಡಮೆಯಾದವರೆಂದು ಭಾವಿಸುವವರಾಗಿ ತೋರಬಂದರು. ಇಂಗ್ಲೀಷು ಕ್ಲಾಸುಗಳಿಗೆ ಸೇರುವಂತೆ ಆದ ಮೇಲಂತೂ ಇಂಗ್ಲೀಷ್ ತಿಳಿಯದ ದೊಡ್ಡವರು ಅವರ ಕಣ್ಣಿಗೆ ಮೃಗಗಳ ಹಾಗೆ ಕಾಣುವಂತೆ ಇರಬಹುದು ಎಂದು ತೋರುವ ಹಾಗೆ ವರ್ತಿಸುವವರಾಗಿರುವರು. ಪೂರ್ವದಲ್ಲಿ ನಾನು ಇದ್ದಾಗ ಇದ್ದ ಹುಡುಗರ ಸ್ವಭಾವಕ್ಕೂ ಈಗಿನ ಹುಡುಗರ ಸ್ವಭಾವಕ್ಕೂ ಹೋಲಿಸಿದರೆ ಸ್ವರ್ಗನರಕಗಳ ತಾರತಮ್ಯವೇ ಕಾಣುತ್ತಲಿದೆ. ಈಗಿನವರು ಕಾಮನಮ್ಮವ ವಾಕ್ಯಗಳನ್ನು ಹಾಸ್ಯದಲ್ಲೂ ಜಗಳದಲ್ಲೂ ಉಪಯೋಗಿಸುತ್ತಿರುವರು. ವೃದ್ಧರು ಆ[illegible]ಸುವರು, ಮೂಗುಪ್ರಾಣಿಗಳನ್ನು ನಿಷ್ಕಾರಣವಾಗಿ ಹಿಂಸಿಸುವರು, ಪರರ ತೋಟಗಳಲ್ಲಿ ನಾನಾ ತೊಂದರೆಗಳನ್ನು ಕೊಡುವರು. ಕಬ್ಬಿನ ತೋಟಗಳನ್ನು ಕಬ್ಬುಗಳ ಕದೆದು ಅನ್ಯಾಯವಾಗಿ ನಷ್ಟಪಡಿಸುವರು. ಇಂಥಾ ಕೃತಗಳು ಇಷ್ಟೆಂದು ವರ್ಣಿಸಲಾಗದು. ಇಷ್ಟಕ್ಕೂ ವಿದ್ಯಾಭಿವೃದ್ಧಿಯು [illegible] ಮುಂದೆ ಹೋದರೆ ಹುಡುಗರು [illegible] ಇದ್ದರೆ [illegible] ಆ ಮೇಲೆ ವಿದ್ಯಾಭ್ಯಾಸಮಾಡುವವರಿಗೆ [illegible] ತಿಳಿಯದು. ಇದು ಇಷ್ಟಕ್ಕೆ ಇರಲಿ.

[illegible] ಈ ಹುಡುಗರ ನಡತೆಗಳಲ್ಲಿ [illegible] ನಾನು [illegible] ಹುಡುಗರ ನಡತೆಗಳಲ್ಲಿ ಎಷ್ಟು ವ್ಯತ್ಯಾಸವನ್ನು ಕಂಡು [illegible] ಹುಡುಗರು [illegible] ಮಾಡಿದರೆ [illegible] ಏನು [illegible] ಯಾತಕ್ಕೆ [illegible] ಹುಡುಗರ [illegible] ಅವರನ್ನು ಯಾತಕ್ಕೆ [illegible] ಮಾತುಗಳನ್ನು [illegible] ಗಿಸುವದಕ್ಕೆ [illegible] ಇಲ್ಲವೆ [illegible] ಇವು [illegible] ವಿಚಾರಗಳನ್ನು ಕೇಳುತ್ತ [illegible] ಇವಕ್ಕೆ ನಾನು ಪಡೆದ ಉತ್ತರ [illegible] — ನಾನು [illegible] ಎಲ್ಲಾ [illegible] ಉಪಾಧ್ಯಾಯರುಗಳ [illegible] ಹುಡುಗರ [illegible] ನಾಗಿ [illegible] ಮುಂದಾದ [illegible] ಮಾಡುವದಕ್ಕೆ [illegible] ನಡೆಯುತ್ತಾ [illegible] ಆಗ ನಾನು [illegible] ತಪ್ಪು [illegible] ಹುಡುಗರ ಪ್ರಶ್ನೆಗಳಿಗೆ [illegible] ಕಡಮೆಯಾಗುತ್ತ ಈಗ [illegible] ನನ್ನ [illegible] ಆದ [illegible] ಸರಿ [illegible] ತಿಳಿಯಿತು. ಅವರ [illegible] ಹೇತುತ್ವ [illegible] ಇವೆ.

ಈ ನನ್ನ ಅನುಭವದಿಂದ ಪ್ರಚುರಪಡಿಸುವ [illegible] ಒಕ್ಕೆಕ್ಕೆ [illegible] ಎಂದು ಯೋಚಿಸಿ ಯುವಿಗೆ ಇದನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಅಪೇಕ್ಷೆ [illegible] ಇದೆ. ಕೆಲವರು [illegible] ಒಂದೆ ಅಭಿಪ್ರಾಯ [illegible] ಪತ್ರಿಕಾಕರ್ತರಿಗೆ ಕೊಟ್ಟರೆ ಸಾಲದು [illegible] ಯಾವ ಯಾವ ಆಕ್ಷೇಪಣೆಗಳನ್ನು ಮಾಡುತ್ತಾರೋ ಮಾಡಲಿ [illegible] ಯಾವ ರೀತಿಯಲ್ಲಿ ಪ್ರಜೆಗಳಿಗೆ ಅಭಿಪ್ರಾಯ ತಿಳಿಸುತ್ತಾರೋ [illegible] ಬರುವುದೇ [illegible] ಈ ಬ್ರಿಟಿಷ್ ಸರಕಾರದವರು [illegible] ತಕ್ಕ ಉಪಾಯವನ್ನು ಯೋಚಿಸಿ ಜಾರಿಗೆ [illegible] ಎಂದು ಪ್ರಕಟಿಸಲು [illegible] ಕೊಡಲಿ ನನ್ನ [illegible] ಈಗ [illegible] ಜನರನ್ನು [illegible] ಅತ್ಯಂತ ವಿವೇಕವಾದ ಕೆಲಸವಾಗಿ ಇರುತ್ತೆ. ಹುಡುಗರು ಭಗವಂತನಿಂದಲೂ ರಾಜನಿಂದಲೂ ತಮಗೆ ನ್ಯಾಯವಾದ ಶಿಕ್ಷೆಯು ತೋರಿದರೆ ಉಂಟಾಯಿತೆಂದು ತಿಳಿದು [illegible] ನಮ್ಮ ಅಭಿಮತಿಗೆ ಹಾಗೆ ತೋರಿದರೂ ಅವರ ಪರ್ಯವಸಾನವು [illegible] ಆಗಿ ಇರುವದೆಂದು ಏಳಿಸುವರು. ಪ್ರೈವೆಟ್ ಕೆಯಾದ ಶಿಕ್ಷಣವನ್ನು ಕೊಟ್ಟಾಗ ಅವನನ್ನು ಖಂಡಿಸದೆ ನ್ಯಾಯಮಾಡಿದರೆ.

ಮುಖ್ಯವಾಗಿ ಈಗಿನ ನಿಬಂಧನೆಗಳಲ್ಲವನ್ನೂ ತೆಗೆದುಹಾಕಿ ಹಿಂದಕ್ಕಿಂತಲೂ ಎಲ್ಲರಿಗೂ ಹೆಚ್ಚಾಗಿ ಸೌಲಭ್ಯವನ್ನುಂಟುಮಾಡೋಣದರಿಂದ ಸಲವೇ ಹೊರ್ತು ಮತ್ತಲ್ಲವೆಂದು ನನಗೆ ತೋರುವುದು. ತಪ್ಪುಗಳಲ್ಲಕ್ಕೂ ಶಿಕ್ಷಾಸ್ಮೃತಿ ಇದ್ದೇ ಇದೆ. ಇಂಥಾದ್ದರಲ್ಲಿ ಹೊಸ ಕಾನೂನು ಯಾತಕ್ಕೆ ? ಆದರೆ ಒಂದು ಮಾತ್ರ ಅತ್ಯವಶ್ಯಕವಾಗಿ ತೋರುವದು. ಕೆಲವು ದುಷ್ಟರು ಸಣ್ಣ ಹುಡುಗರನ್ನು ಚಿತಾವಣೆ ಮಾಡಿ ಸರ್ಕಾರಕ್ಕೂ ಪ್ರಜೆಗಳಿಗೂ ಬಹಳ ಉಪದ್ರವ ಮಾಡುತ್ತಿರುವ ಒಳ್ಳೇ ನೌಕರರ ಪ್ರಾಣಗಳನ್ನು ತೆಗೆಸುತ್ತಾ ಇರುವದು ಹೆಚ್ಚುತ್ತಾ ಬಂದಿದೆ. ಇದನ್ನು ಅಡ್ಡಿಮಾಡಲು ಈಚೆಗೆ ಉಂಟಾದ ಯಾವ ಕಾನೂನೂ ಸಹಕಾರಿಯಾಗಲಾರದು. ಖೂನಿ ಸೆಕ್ಷನ್ನಿನಲ್ಲಿ ಇನ್ನೊಂದನ್ನು ಸೇರಿಸಿ ಅದಕ್ಕೆ ಶಿಕ್ಷೆ ಕ್ರೂರವಾಗಿ ಇರೋಣವು ಬಹಳ ಅವಶ್ಯಕವಾಗಿರಬಹುದು. ಇದರಲ್ಲಿ ಯಾವನು ಸಣ್ಣ ಹುಡುಗನಾಗಿ ದಗಲಿ ನಡಿಸಿದ ಖೂನಿಯು ಅವನ ಸ್ವಂತ ಪ್ರೇರಣಾಲೋಚನೆಯಿಂದಲ್ಲದೆ ಪರರ ಪ್ರೇರಣೆಯಿಂದ ಖೂನಿ ಮಾಡುತ್ತಾನೆಯೋ ಅಂಥವನನ್ನು ಮೂರು ತಿಂಗಳ ವರೆಗೆ ಅಥವಾ ಅವನು ತನ್ನ ಪ್ರೇರಕನನ್ನು ಹಿಡಿದು ಕೊಡುವವರೆಗೂ ಎಂದೆಂದಿಗೂ ಸೆರೆಮನೆಯಲ್ಲಿ ಇಡಲ್ಪಟ್ಟು, ಪ್ರತಿ ದಿನವೂ ಪ್ರಾತಃಕಾಲ ಸಾಯಂಕಾಲ ೬ ಪೆಟ್ಟುಗಳ ಹೊಡೆಯಲ್ಪಡುತ್ತಲೂ, ಹೊಲೆಯರಿಯ ಪಾಯಿಖಾನೆಯನ್ನು ಗುಡಿಸುವಂತೆ ನೇಮಿಸಲ್ಪಡುತ್ತಲೂ, ಹಾಗೂ ಅವನು ಪ್ರೇರಕನನ್ನು ತೋರಿಸದೆ ಕಾಪಾಡಿದಲ್ಲಿ ಅವನನ್ನು ಗಲ್ಲಿಗೆ ಹಾಕುತ್ತಲೂ, ಅವನ ಆಸ್ತಿಯಲ್ಲ [illegible] ಸ್ವಾಮ್ಯ ತೆಗೆದುಕೊಂಡು ನ್ಯಾಯಾರ್ಣವಾಗಿ ಪ್ರಾಣವನ್ನು ಕಳೆದುಕೊಂಡ ನೌಕರರ ವಾರಸುದಾರರಿಗೆ ಕೊಡುತ್ತಲೂ ಬಂದರೆ ಬಹಳ ಮಟ್ಟಿಗೆ ಕಡಮೆಯಾಗುತ್ತಾ ಈ ಪುಂಡು ನಿಂತೇ ಹೋಗಬಹುದು. ಇದರಿಂದ ಸರ್ಕಾರದಿಂದ ಮೃತಪಟ್ಟವರ ವಾರಸುದಾರರಿಗೆ ಸಹಾಯ ಮಾಡಲು ದ್ರವ್ಯ ನಷ್ಟವೂ ಕಡಮೆಯಾಗಬಹುದು. ಆದರೆ ಚಕ್ರಾಧಿಪತ್ಯವನ್ನು ಮಾಡುವ, ಅವರ ಪ್ರತಿನಿಧಿಗಳ ಮತ್ತೂ ಅನೇಕ ರಾಜಾಧಿರಾಜರ ಯೋಚನೆಗಳಿಗಿಂತಲೂ ವಿಶೇಷವಾದ ಯೋಚನೆಯನ್ನು ನಾನು ಹೇಳಿದವನೆಂದು ಹೊಗಳಿಕೊಳ್ಳುವದಕ್ಕೆ ಇದನ್ನು ನಾನು ಬರೆಯಲಿಲ್ಲ. ಪರಂತು ನನ್ನ ರಾಜಭಕ್ತಿಯು ಮತ್ತು ಅನುತಾಪಗಳ ಪ್ರೇರಣೆಯಿಂದ ಬರೆದು ಇದ್ದೇನೆ. ಹ್ಯಾಗಾದರೂ ಆಗಲಿ, ಭಗವಂತನು ಈ ಅಸಹ್ಯವಾದ ಪುಂಡನ್ನು ಹ್ಯಾಗಾದರೂ ಅಡಗಿಸಿ ನಮ್ಮನ್ನು ಆಳುವವರು ನಿಃಶಂಕರಾಗಿ ಇದ್ದರೆ ಸಾಕಾಗಿರುತ್ತೆ.

ರಾಜಕ್ಷೇಮ ಚಿಂತಕ

ತಾಲ್ಲೂಕು ವರ್ತಮಾನಗಳು

ಚಾಮರಾಜನಗರ — ಕಳೆದ ಫೆಬ್ರವರಿ ತಾ|| ೧೮ ನೇ ಶುಕ್ರವಾರ ಘಸ ಸಾಡೆ ಧೂರೆಗಳೂ ಘನ ಲೂಕಸ ಯನವರೂ ಈ ತಾಲ್ಲೂಕಿಗೆ ಸೇರಿದ ಕಸ್ತೂರಿಗೆ ಬಂದರು. ಶನಿವಾರ ಬೆಳಿಗ್ಗೆ ಚಿಕ್ಕಹೊಮ್ಮ, ದೊಡ್ಡ ಹೊಮ್ಮಗಳಿಗೂ, ಸಾಯಂಕಾಲ ಭೋಗಾಪುರಕ್ಕೂ ಹೋಗಿ ಸುವಾರ್ತೆಯನ್ನು ಸಾರಿದರು. ದೇವದಾಸ್ಯಯನವರ ಹೊಸ ಅಂಗಡಿಯು ಪ್ರತಿಷ್ಠೆ ಮಾಡಲ್ಪಟ್ಟಿತು. ಭಾನುವಾರ ಬೆಳಿಗ್ಗೆ ಕಸ್ತೂರಿನಲ್ಲಿ ಉಪದೇಶಿಯರ ಮನೆಯನ್ನು ಪ್ರತಿಷ್ಠೆ ಮಾಡಿದರು. ಆಗ ಬಹಳ ಮಂದಿ ಚಾಮರಾಜನಗರದಿಂದಲೂ ಇತರ ಕಡೆಗಳಿಂದಲೂ ಬಂದಿದ್ದರು. ಭೋಜನವಾದ ಒಳಕ ದೇವದಾಸಪ್ಪನವರ ಮನೆಯಲ್ಲಿ ಭಜನೆಯ ಕೂಟವು ಜರುಗಿತು. ಈ ಮನೆಯು ಮತ್ತು ಭಾವಿಯು ಕಾಮಗಾರಿಯನ್ನೆಲ್ಲಾ ಕ್ರೈಸ್ತರೇ ಮಾಡಿ ಪೂರೈಸಿರುತ್ತಾರೆ. ಮಂಗಳವಾರ ಧೊರೆಯವರು [illegible] ವಾಪಸು ಮೈಸೂರಿಗೆ ತೆರಳಿದರು.

ಕೃಷ್ಣರಾಜಪೇಟೆ — ಈಗ್ಗೆ ಒಂದು ವಾರದಿಂದಲೂ ಸೆಕೆ ಬಹಳವಾಗಿದ್ದು ಮೂರು ನಾಲ್ಕು ದಿವಸಗಳ ಅಂತರಾಯದಲ್ಲಿ ಸ್ವಲ್ಪ ಮಳೆಯಾಗುತ್ತಲಿದೆ. ಆದಾಗ್ಯೂ ಹಗಲಿನಲ್ಲಿ ಬಿಸಿಲಿನ ತಾಪವು ಹೆಚ್ಚು. ರೈತರೆಲ್ಲರೂ ಸುಗ್ಗಿಯ ಕಾಲದ ಕೆಲಸದಲ್ಲಿ ನಿರತರಾಗಿರುವರು. ಹೋಬಳಿಯಲ್ಲಿ ಮ್ಯುನಿಸಿಪಾಲಿಟಿಯವರು ಅಂದ್ರಕಗಳನ್ನು ಇಟ್ಟು ಕೊಡಬೇಕೆಂದು ಆ ಗ್ರಾಮಸ್ಥರೆಲ್ಲರೂ ಹಿಂದೆ ಮೆ|| ಮ್ಯಾನೇಜರ್ ರಿಪ್ಪನ ರವರಿಗೆ ಅರ್ಜಿ ಒಪ್ಪಿಸಿಕೊಂಡಿದ್ದರು. ಇದು ಬಹಳ ದಿನ ಸವಾದಾಗ್ಯೂ ಯಾವ ಏರ್ಪಾಡೂ ಸಹ ಆಗಲಿಲ್ಲ. ಈಗ ಇರುವ ಅಮಲ್ದಾರ್ ಮೆ|| ವಿ. ಲಿಂಗಣ್ಣನವರು ಈ ವಿಚಾರಕ್ಕೆ ಗಮನ ಕೊಡುತ್ತಾರೆಂದು ನಂಬಿದೇನೆ. — ಇಲ್ಲಿಯ ಗೌರ್ನಮೆಂಟ್ ಹಿಂದುಸ್ಥಾನಿ ಸ್ಕೂಲ್ ಹೆಡ್ ಮಾಸ್ತರ್ ಮೆ|| ಸ್ಯೆಯದ್ ಅಬ್ದುಲ್ ಖಾದರ್ ಸಾಹೇಬರಿಗೆ ಶಿವಮೊಗ್ಗೆಗೆ ವರ್ಗವಾದ ಕಾರಣ ಆ ಸ್ಕೂಲಿನ ಮಹಮ್ಮದೀಯ ವಿದ್ಯಾರ್ಥಿಗಳೂ ಫೆಬ್ರುವರಿ ೨೦ ನೇ ತಾರೀಖು ಸೋಮವಾರ ಸಾಯಂಕಾಲ ಅವರಿಗೆ ತಮ್ಮ ಕೃತಜ್ಞತಾಸ್ಮರಣೆಗಳನ್ನು ತೋರಿಸಿ ಸುವರಕ್ಕೋಸ್ಕರ ಗೌರ್ನಮೆಂಟ್ ಸ್ಕೂಲಿನಲ್ಲಿ ಒಂದು ಸಭೆಯನ್ನು ಏರ್ಪಾಡು ಮಾಡಿದರು. ನಮ್ಮ ಅಮಲ್ದಾರರವರು ಅಗ್ರಾಸನವನ್ನು ವಹಿಸಿದರು. ಸರ್ಕಾರಿ ಉದ್ಯೋಗಸ್ಥರೂ, ಕನ್ನಡ ಇಂಗ್ಲೀಷ್ ಸ್ಕೂಲ್ ಮಾಸ್ತರುಗಳೂ, ವಿದ್ಯಾರ್ಥಿಗಳೂ ಹಾಜರಿದ್ದರು. ಪ್ರಾರಂಭದಲ್ಲಿ ಕೆಲವು ಮಹಮ್ಮದೀಯ ವಿದ್ಯಾರ್ಥಿಗಳು ಹಿಂದೂಸ್ಥಾನಿ ಪದ್ಯಗಳನ್ನು ಹಾಡಿದರು. ಅನಂತರ ಹೆಡ್ ಮಾಸ್ತರು ತಮ್ಮ ಸರ್ವಿಸ್ಸಿನ ವಿವರಣೆಯಾಗಿಯೂ ವಿದ್ಯಾರ್ಥಿಗಳು ಪ್ರೀತಿ ವಿಶ್ವಾಸಗಳನ್ನು ಕುರಿತೂ ಸ್ವಲ್ಪ ಹೊತ್ತು ಭಾಷಣ ಮಾಡಿದರು. ಇದಾದ ಮೇಲೆ ಮಹಮ್ಮದೀಯರು ಪ್ರೀತಿ ಪೂರ್ವಕವಾಗಿ ಹೆಡ್ ಮಾಸ್ತರಿಗೆ ಒಂದು ಉಲ್ಲನ್ನು ಒಪ್ಪಿಸಿದರು. ಹೆಡ್ ಮಾಸ್ತರು ಪ್ರತಿ ಒಬ್ಬ ವಿದ್ಯಾರ್ಥಿಗೂ ಒಂದೊಂದು ವಸ್ತ್ರವನ್ನು ಬಹುಮಾನವಾಗಿ ಕೊಟ್ಟರು. ಕೆಲವು ವಿದ್ಯಾರ್ಥಿಗಳು ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿ ಉದ್ದೇಶ ತಾವು ರಚಿಸಿದ ಕೆಲವು ಹಿಂದೂಸ್ಥಾನಿ ಪದ್ಯಗಳನ್ನು ಹೇಳಿದರು. ಇಂಗ್ಲೀಷ್ ಸ್ಕೂಲ್ ಹೆಡ್ ಮಾಸ್ತರ ಮೆ|| ಸೂರ್ಯನಾರಾಯಣಪ್ಪನವರು ಮುದ್ದು ಮುದ್ದಾಗಿ ಕೆಲವರಿಗೆ ತಿಳಿಸಿ ಹಿಂದುಸ್ಥಾನಿ ಸ್ಕೂಲ್ ಹೆಡ್ ಮಾಸ್ತರ ವಿಚಾರವಾಗಿ ಸ್ವಲ್ಪ ಹೊತ್ತು ಇಂಗ್ಲೀಷಿನಲ್ಲಿ ಮಾತನಾಡಿದರು. ಅನಂತರ ಪಾನ ಪುಷ್ಪಗಳ ವಿತರಣೆಯಾಯಿತು. ಹುಡುಗರು ಹಾರಗಳ ಹಾಕಲ್ಪಟ್ಟು ಪಾನಸುಪಾರಿಯು ಎಲ್ಲರಿಗೂ ಸಲ್ಲಿಸಲ್ಪಟ್ಟಿತು. ವಿದ್ಯಾರ್ಥಿಗಳಿಗೆಲ್ಲಾ ಮಿಠಾಯಿ ಕೊಡಲ್ಪಟ್ಟಿತು. ಒಳ್ಳೆ ಸಂತೋಷವು ಉಂಟಾಯಿತು. ಇವರ ಬದಲಿಗೆ ಮಳವಳ್ಳಿಯಿಂದ ಬೇರೊಬ್ಬರು ಬರುವರೆಂದು ತಿಳಿದಿದೆ.

ಹುಣಸೂರು — ಕಳೆದ ಶನಿವಾರ ಮೈಸೂರು ಸೆಂಟ್ರಲ್ ಡಿವಿಜನ್ ರವರ ಕಮೀಷನರ್ ಮೆ|| ಟಿ ಆನಂದರಾಯರವರು ಪರಿವಾರ ಸಮೇತ ಹುಣಸೂರ್ ಡೆಪ್ಯುಟಿ ಕಮೀಷನರ್ ರಾದ ಮೆ|| ದೊರೆಸ್ವಾಮಿ ಅಯ್ಯಂಗಾರರೊಡನೆ ಬೆಳಿಗ್ಗೆ ೯ ಘಂಟೆಗೆ ಎರಡು ಮೋಟಾರುಗಳಲ್ಲಿ ಕುಳಿತು ಈ ಗಡಿಗೆ ದಯಮಾಡಿಸಿದರು. ಆಗ ಮಿಷನ್ ಸ್ಕೂಲಿನ ಒ ಚಿಕ ಯರು ಸ್ಕೂಲಿನ ವಾರದಲ್ಲಿ ರಸ್ತೆಗೆ ಇರುವಾಗ ಗ್ಯಾಲರಿಯಲ್ಲಿ ಕುಳಿತಿದ್ದು ರಾಜಭಕ್ತಿಯೊಡನೆ ದಿವಾನ್‌ರವರ ದರ್ಶನವನ್ನು ಪಡೆದುಕೊಂಡರು. ಗಾಡಿಯು ನೇಗವಾಗಿ ಹರಿದದ್ದರಿಂದ ದಿವಾನ್‌ರವರು ಗ್ಯಾಲರಿಯ ಬಳಿ [illegible] ಬಾಲಿಕೆಯರ ಗೀತ ನರ್ತನಗಳನ್ನು ಪರಾಂಬರಿಸಲಾಗದೆ ಹೋದಾಗ್ಯೂ ಮುಸಾಫರ್ ಬಂಗ್ಲೆಯನ್ನು ತಲುಪಿದ ಒಡನೆ ಅವರು ವಾಪಸು ಸದರಿ ಸ್ಕೂಲಿಗೆ ದಯಮಾಡಿ, ಉಪಾಧ್ಯಾಯರು ಒಪ್ಪಿಸಿದ ಸಲಪುಷ್ಪಗಳನ್ನು ಸ್ವೀಕರಿಸಿ ಬಾಲಕಿಯರು ಹಾಡಿದ ಗೀತಗಳನ್ನು ಸಾವಧಾನದಿಂದ ಆಲಿಸಿ ಸ್ಕೂಲಿನ ಸ್ಥಾಪನೆ ಸಂಭವ ಕೆಲಸ ವಗ್ಗೆರೆ ಸ್ಥಳೀಯ ಮಿಷನ್ ಏಜಂಟರಿಂದ ಕೇಳಿದುಕೊಂಡು ಮುಂದೆ ಎ. ವಿ. ಸ್ಕೂಲನ್ನು ಕುರಿತು ತೆರಳಿದರು. ಈ ಕಾಲದಲ್ಲಿ ಸ್ಕೂಲಿನ ಮುಂಭಾಗವು ಕದಳಿ ಸ್ತಂಭ ತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಆ ಸ್ಕೂಲಿನ ವಿದ್ಯಮಾನಗಳನ್ನೆಲ್ಲಾ ಹೆಡ್ ಮಾಸ್ತರು ಮತ್ತು ಡೆಪ್ಯುಟಿ ಇನ್‌ಸ್ಪೆಕ್ಟರವರಿಂದ ತಿಳಿದುಕೊಂಡನಂತರ ಆಯುರ್ವೇದಿಕಾ ವಾಠಶಾಲೆಯನ್ನು ಪರಾಂಬರಿಸಿ ಅಲ್ಲಿಂದ ತಾಲ್ಲೂಕ್ ಕಚೇರಿಗೆ ತೆರಳಿ ಖಜಾನೆಯನ್ನು ತನಿಖೆಮಾಡಿ ನಾನಾ ಸು ಹೊರಟ ಬಂಗ್ಲೆಯನ್ನು ಸೇರಿದರು. ಸಾಯಂಕಾಲ ೩ ಘಂಟೆಯ ಮೇಲೆ ಕುಮಾರಿ ಫಾರಮನ್ನು ನೋಡಲು ಹೊರಟ ಕಾಲದಲ್ಲಿ ಕರ್ನಲ್ ಜೋನ್ಸ್ ದೊರೆಯವರು ಆ ಕಾಲಕ್ಕೆ ಬೆಂಗಳೂರಿಂದ ಮೋಟಾರಿನಲ್ಲಿ ಬಂದು ದಿವಾನ್‌ರವರಿಗೆ ಫಾರಮಿನ ವಿದ್ಯಮಾನಗಳನ್ನೆಲ್ಲಾ ತಿಳಿಸಿ ಅದೇ ಸಾಯಂಕಾಲ ಸದರಿ ದೊರೆಯವರು ವಾಪಸ್ ಬೆಂಗಳೂರಿಗೆ ಪ್ರಯಾಣ ಬೆಳಸಿದರು. ಭಾನುವಾರ ಬೆಳಿಗ್ಗೆ ದಿವಾನ್‌ರವರು ಡೆಪ್ಯುಟಿ ಕಮೀಷನರ್ ಮತ್ತು ಪರಿವಾರದೊಡನೆ ಇಲ್ಲಿನ ಆಸ್ಪತ್ರೆಗೆ ದಯಮಾಡಿಸಿ, ತೋಕದಾಗಿ ವಿಕ್ಟೋರಿಯಾ ಆಸ್ಪತ್ರೆಯಿಂದ ವರ್ಗವಾಗಿ ಬಂದಿರುವ ಮೆ|| ಗೋವಿಂದರಾಜುಲು ನಾಯ್ಡು ಯವರ ಶ್ರದ್ಧಾಪೂರಿತವಾದ ಕೆಲಸವನ್ನು ಪರಾಂಬರಿಸಿ ಕಟ್ಟಡದ ಬಡಾವಣೆ ವಿಷಯ ವಿಚಾರ ಮಾಡಿ, ಬೆಳಿಗ್ಗೆ ಸುಮಾರು ೨|| ಘಂಟೆಗೆ ಅಲ್ಲಿಂದ ನೆಟ್ಟಗೆ ಬೆಂಗಳೂರನ್ನು ಕುರಿತು ಚಿತ್ತೈಸಿದರು. — ಬಿಸಲಿನ ತಾಪವು ದಿನೇ ದಿನೇ ಹೆಚ್ಚುತ್ತಿರುವದು. ಸಾಂಕ್ರಾಮಿಕ ಜಾಡ್ಯವು ವ್ಯಾಪಿಸಲು ಇದು ಅನುಕೂಲವಾದ ಕಾಲವಾದ್ದರಿಂದ ಸದರಿ ಜಾಡ್ಯಕ್ಕೆ ಆಸ್ಪದವಿಲ್ಲದಂತೆ ತಕ್ಕ ಏರ್ಪಾಡುಗಳನ್ನು ಮಾಡಲು ಪ್ರಜೆಗಳೂ ಅಧಿಕಾರಿಗಳೂ ಸಾಹಸಪಡಬೇಕಾಗಿದೆ. ಯಾಕಂದರೆ ಒಂದು ತಿಂಗಳಿಗೆ ಮೊದಲೇ ಕಾಲರಾ ಉಪದ್ರವ ೯ ಮೈಲಿ ದೂರದಲ್ಲಿರುವ ಹೊಸಳ್ಳಿ ಗ್ರಾಮಕ್ಕೆ ತಗಲಿ ನಾಲ್ಕೈದು ಜನರು ಮೃತಪಟ್ಟರು. ಆ|| ಅ|| ಮೆ|| ರಾಮಸ್ವಾಮಿ ಐಯಂಗಾರ್ಯ ಡಿ|| ಸರ್ಜನ್ ಮೆ|| ಅಪ್ಪಾ ದೊರೆಯವರೂ ಸದರಿ ಗ್ರಾಮಕ್ಕೆ ದಯಮಾಡಿಸಿ ಚಿಕಿತ್ಸೆ ಮಾಡಿ ಬಂದಿರುತ್ತಾರೆ.

ಫ್ರೆಂಚ್‌ರಾಕ್ಸ್ — ಬಿಸಲಿನ ಧಗೆಯು ಈಗಾಗಲೇ ಜೋರಾಗಿರುವದರಿಂದ ಮುಂದೆ ಇನ್ನೆಷ್ಟು ತೀಕ್ಷ್ಣವಾಗುವದೋ ಎಂಬ ಭಯವಾಗಿದೆ. ಈ ಗ್ರಾಮದಲ್ಲಿ ಈಗಾಗಲೇ ಮೂರು ನಾಲ್ಕು ಕಾಲರಾ ಕೇಸುಗಳು ಆದದ್ದರಿಂದ ಜನರು ತಲ್ಲಣಿಸುತ್ತಿದ್ದಾರೆ. ನಮ್ಮ ಡೆಪ್ಯುಟಿ ಅಮಲ್ದಾರ್ ಮೆ|| ಕಾಶೀನಾಥಯ್ಯನವರು ರಜಾದ ಮೇಲೆ ಹೋಗಿವಾರೆ. ಹೊಸದಾಗಿ ಬಂದ ಅಮಲ್ದಾರರೂ ಒಂದು ವಾರದ ದಿನವೇ ಬಲು ಚುರುಕಾಗಿ ಟವರ್ ಗಸ್ತುಮಾಡಿಕೊಂಡು ಹೋದವರ ಮುಖವನ್ನು ಪುನಃ ನೋಡುವದೇ ದುಸ್ತರವಾಯಿತು. ಈ ಊರಿನಲ್ಲಿ ಕಾಲರಾ ಪ್ರಾರಂಭವಾಗಿರುವದರಿಂದ ಊರಿನ ಗಲ್ಲಿಗಳೂ ಬಚ್ಚಲುಗಳೂ ಯಾರಿ ನಿವೇಶನಗಳೂ ಶುಚಿಯಾಗಿರುವದು ಅತ್ಯವಶ್ಯವಾಗಿದೆ. ಆದದ್ದರಿಂದ ನಮ್ಮ ಅಮಲ್ದಾರರೂ ಡಾಕ್ಟರೂ ಆಗಾಗ್ಗೆ ಊರು ಸಂಚಾರಮಾಡಿ ಮುಖ್ಯ ಭಾಗಗಳನ್ನು ಶುಚಿಮಾಡಿಸುವದಲ್ಲದೆ ಪ್ರಜೆಗಳಿಗೆ ತಕ್ಕ ವಿವೇಕವನ್ನು ಹೇಳಬೇಕಾದದ್ದು ಅವಶ್ಯಕವಾಗಿದೆ. — ಈ ಊರಿನಲ್ಲಿ ಮರಕೆಲಸದ ಕಂಟ್ರಾಕ್ಟು ಕೆಲಸವನ್ನು ಮಾಡುವ ಚಾಮುಂಡಾ ಚಾರಿ ಎಂಬಾತನ ಹಿರೇ ಹೆಂಡತಿಯು ಬಹಳ ದಿನಗಳಿಂದ ಕಾಯಿಲೆಯಲ್ಲಿದ್ದು, ಹಾಸಿಗೆಯನ್ನು ತಡೆಯಲಾರದೆ ಕೆಲವು ದಿನಗಳಿಗೆ ಮುಂಚೆ ಇಲ್ಲಿನ ಪೋಲೀಸ್ ಭಾವಿಯಲ್ಲಿ ಬಿದ್ದು ಪ್ರಾಣಕಳೆದುಕೊಂಡಳು. ಆ ಸಮಯದಲ್ಲಿ ಆಕೆಯ ಗಂಡನು ಊರಲ್ಲಿರಲಿಲ್ಲ. ಈ ಊರಿನಲ್ಲಿ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದ ಆಸ್ಪತ್ರೆ ಅಸಿಸ್ಟೆಂಟರೂ, ಕಾಂಪೌಂಡರೂ, ಸೂಲಗಿತ್ತಿಯೂ ಬಹಳ ದಿವಸದಿಂದ ಒಬ್ಬರ ಮೇಲೊಬ್ಬರು ರಿಪೋರ್ಟುಗಳನ್ನು ಬರೆಯುತ್ತ ಗಲಾಟೆಮಾಡುತ್ತಿದ್ದದ್ದರಿಂದ ಆಸ್ಪತ್ರೆ ಕೆಲಸಗಳೂ ಕೃಪಿಕರವಾಗಿ ನಡೆದು ಜನರಿಗೆ ಸೌಲಭ್ಯ ಅನಾನುಕೂಲವಾಗಿದ್ದದರಿಂದ ಸದರಿಯವರನ್ನು ಬೇರೆ ಬೇರೆ ಸ್ಥಳಗಳಿಗೆ ವರ್ಗಾಯಿಸಿದಾರೆ. ಮುಂದೆ ಇವರುಗಳು ಹೋಗುವ ಸ್ಥಳಗಳಲ್ಲಿ ಇಂಥಾ ಗಲಾಟೆಗಳಿಗೆ ಆಸ್ಪದ ಕೊಡಲಾರರೆಂದು ನಂಬುತ್ತೇವೆ. ಮತ್ತು ಇಲ್ಲಿ ಇನ್ನು ಮೇಲೆ ಆಸ್ಪತ್ರೆಯ ಕೆಲಸಗಳು ತೃಪ್ತಿಕರವಾಗಿ ನಡೆಯುವದಕ್ಕೆ ಅನುಕೂಲವಾಯಿತೆಂದು ಪ್ರಜೆಗಳು ಸಂತೋಷಪಡುತ್ತಾರೆ. — ಈ ಸಾರಿ ಕೆಂಗಟ್ಟದ ಜಾತ್ರೆಗೆ ಸಾಮಾನ್ ವ್ಯಾಪಾರಕ್ಕಾಗಿ ಜನರು ಬರುವದೂ ಕೆಲವು ಬ್ರಾಹ್ಮಣ ಪೋರರು ಬಿಟ್ಟ ಮುಖಂಡರನ್ನು ಇಟ್ಟುಕೊಂಡು ಕ್ರೈಸ್ತ ಉಪದೇಶಕರ ಪ್ರಸಂಗಿಸುವದಕ್ಕೆ ಮುಂಚೆಯೇ ನಾನಾ ಅಲ್ಪ ಮನುಷ್ಯರಿಂದ ನಾನಾ ಗಲಾಟೆಯನ್ನು ಮಾಡಿದ್ದು ಈ ನವನಾಗರಿಕ ಕಾಲಕ್ಕೆ ಅಪಕೀರ್ತಿಯನ್ನುಂಟು ಮಾಡಿದಂತಾಯಿತೆಂದು ತಿಳಿಸಲು ವಿಷಾದಿಸುತ್ತೇವೆ. — ಈ ವಾರದಲ್ಲಿ ಮೈಸೂರು ಮಿಷನ್ ಸೂಪರೆಂಟೆಂಡೆಂಟರಾದ ಘನ ಸಾಹೇಬ ಧೊರೆಯವರು ಈ ಸ್ಥಳಕ್ಕೆ ಬಂದು ನಮ್ಮ ಇಲಾಖೆಯ ಕೆಲಸಗಳನ್ನು ಪರಾಂಬರಿಸಿ ಇಲ್ಲಿನ ಕ್ರೈಸ್ತರಿಗಾಗಿ ದೇವಾರಾಧನೆಯನ್ನು ನಡಿಸಿ ಸ್ವಸ್ಥಳಕ್ಕೆ ತೆರಳಿದರು.

ಚನ್ನಪಟ್ಟಣ ತಾ|| ಮಾದ್ರ ಮೂರು — ಈ ಸ್ಥಳವು ಕಣ್ವನದಿ ತೀರದಲ್ಲಿರುತ್ತೆ. ಇಲ್ಲಿರತಕ್ಕ ಶ್ರೀ ಅಪ್ರಮೇಯ ಸ್ವಾಮಿಗೆ ರಥೋತ್ಸವವು ಪ್ರತಿ ವರುಷವೂ ಏಪ್ರೀಲ್ ತಿಂಗಳಲ್ಲಿ ನಡೆಯುವದು. ಆಗ ಇಲ್ಲಿ ಸಾವಿರಾರು ಜನರು ಸೇರುತ್ತಾರೆ. ಪೂರ್ವದಲ್ಲಿ ಇಲ್ಲಿದ್ದ ಪಾಳ್ಯಗಾರರ ದಿವಸದಲ್ಲಿ ಈ ಸ್ಥಳವು ಅತಿ ಪ್ರಸಿದ್ಧಿಯಾಗಿತ್ತು. ಮತ್ತು ದೇವತಾ ಕಾರ್ಯವು ಅತಿ ವಿಜೃಂಭಣೆಯಿಂದ ನಡೆಯುತ್ತಿತ್ತು. ಈಚೆಗೆ ದೇವಾಲಯದ ತಸ್ತೀಕು ಕಡಮೆಯಾದದ್ದರಿಂದ ಅಲ್ಲಿನ ಕೆಲಸಗಳು ಯಥೋಚಿತ ನಡೆಯುತ್ತವೆ. ಆದರೆ ದೇವಸ್ಥಾನದ ಗೋಪುರ, ದೀಪಾರಾಧನೆಗೆ ಆಗತಕ್ಕ ವೆಚ್ಚಗಳನ್ನು ತಾಲ್ಲೂಕು ಅಧಿಕಾರಿಗಳು ಒಟ್ಟಾಗಿ ದೇವಾಲಯದ ಅಧಿಕಾರಿಗಳ ವಶಕ್ಕೆ ಕೊಟ್ಟುಬಿಡುವದರಿಂದ, ಅವರು ಅದನ್ನು ಅವಸ್ಥಾ ಕಾವರನ್ನು ತೆಗೆದು ಪಡಿತರಕ್ಕಾಗಿ ಕೊಡುತ್ತಾರೆ. ಇದರಿಂದ ದೇವಾಲಯದಲ್ಲಿ ಸಕಾಲದಲ್ಲಿ ಕಾರ್ಯಗಳು ನಡೆಯುವದಿಲ್ಲ. ಅಲ್ಲದೆ ಘಟ್ಟಾಧಿಕರಿಗೆ ವಿಶೇಷ ತೊಂದರೆಯೂ ಉಂಟಾಗಿರುತ್ತೆ. ಇದನ್ನು ತಪ್ಪಿಸಿ ಇತರ ದೇವಾಲಯ ಮಾತ್ರ ತಾಲ್ಲೂಕಿನ ಅಧಿಕಾರಿಗಳೇ ಕಂಟ್ರಾಕ್ಟರ ಮೂಲಕ ತಿಂಗಳಿಗೆ ಆಗಬೇಕಾದ ಸಾಮಾನುಗಳನ್ನು ಕೊಡಿಸಿ, ಮೊಬಲಗನ್ನು ಅವರಿಗೇ ಪಾವತಿ ಮಾಡಿದರೆ ಈ ತೊಂದರೆಯು ಪರಿಹಾರವಾಗಿ ಪಡಿತರ ದೀಪಾರಾಧನೆಗಳು ಸಮರ್ಪಕವಾಗಿ ನಡೆಯುವುದರಲ್ಲಿ ಸಂದೇಹವಿಲ್ಲ. — ಚನ್ನಪಟ್ಟಣದ ಮಿಷನ್ ಆಸ್ಪತ್ರೆಯ ಲೇಡಿಯವರು ಆಗಾಗ್ಗೆ ಇಲ್ಲಿಗೆ ಬಂದು ಇಲ್ಲಿನ ಹೆಂಗಸರು ಮಕ್ಕಳ ಆರೋಗ್ಯವನ್ನು ವಿಚಾರಿಸಿಕೊಂಡು ಹೋಗುತ್ತಿರುವರಲ್ಲದೆ, ರೋಗಿಗಳಿಗೆ ಅತ್ಯಾದರದಿಂದ ಚಿಕಿತ್ಸೆಯನ್ನು ಮಾಡುತ್ತಿರುವುದು ಸ್ತುತ್ಯವಾಗಿದೆ. — ಹೋದ ವರುಷ ಮಳೆ ಇಲ್ಲದೆ ಇಲ್ಲಿನ ಪೈರುಗಳೆಲ್ಲಾ ನಷ್ಟವಾಯಿತು. ಆದರೆ ಈ ಬಾರಿ ಮಳೆಯು ಸಮೃದ್ಧಿಯಾದದರಿಂದ ಕೆರೆಯಲ್ಲಿ ತುಂಬಾ ನೀರಿದೆ. ಆಗಲೇ ರೈತರೆಲ್ಲಾ ಇನ್ನೊಂದು ಬೆಳೆಗೆ ಸಾಧಕಕ್ಕೆ ತುಂಬಾ ಸಂತೋಷದಿಂದ ತಮ್ಮ ತಮ್ಮ ಕಾರ್ಯಗಳಲ್ಲಿ ಆಸಕ್ತರಾಗಿರುತ್ತಾರೆ. — ಪೋಲೀಸಿನವರು ರಾತ್ರಿ ವೇಳೆಗಳಲ್ಲಿ ಗಸ್ತಿಗೆ ಬರುವದೇ ಅಪರೂಪ. ಇದರಿಂದ ಕಳ್ಳ ಕಾಕರಿಗೆ ತುಂಬಾ ಅವಕಾಶ ಉಂಟಾಗಿದೆ. ನಮ್ಮ ಪೋಲೀಸ್ ಇನ್‌ಸ್ಪೆಕ್ಟರರವರು ಈಗಲಾದರೂ ಎಚ್ಚರಿಸಿದರೆ ಉತ್ತಮ. — ಇಲ್ಲಿ ಪರೀಕ್ಷಾ ಎಂಬ ಆಟವು ವಿಶೇಷವಾಗಿ ನಡೆಯುವದರಿಂದ ಹಗಲಿಲ್ಲದೆ ನಡೆಯುತ್ತಾ, ಅನೇಕರು ದಿವಾಳಿ ಎದ್ದಿರುವನ್ನು ಸೇರುತ್ತಾ ಇವರಿ ಅಲ್ಲದೆ ಕೆಲವು ತುಂಟರು ಜಗಳಗಳನ್ನು ಹಿಂಸಿಸಿ ಹಲವು ಕಷ್ಟನಷ್ಟಗಳನ್ನು ಉಂಟುಮಾಡುತ್ತಾರೆ. ಈ ಕಿರಿಯಲ್ಲಿ ಗ್ಯಾಂಬ್ಲಿಂಗ್ ಆಕ್ಟು ಶೀಘ್ರವಾಗಿ ಜಾರಿಯಲ್ಲಿ ಬಂದರೆ ತುಂಬಾ ಪ್ರಯೋಜನ. — ಇಲ್ಲಿನ ದೇವಾಲಯದ ನೌಕರರಿಗೆ ಮಾನ್ಯದ ಭೂಮಿಯನ್ನು ಕೊಟ್ಟಿರುವುದರಿಂದ ಅದನ್ನು ಅವರು ಅನುಭವಿಸಿಕೊಳ್ಳುತ್ತಾರೆ. ಕೆಲಸಕ್ಕೆ ಮಾತ್ರ ಬರುವುದು ಕಷ್ಟ. ಇದನ್ನು ತಪ್ಪಿಸಿ ಆ ಜಮೀನುಗಳನ್ನು ಹರಾಜು ಮೂಲಕ ಸರ್ಕಾರಕ್ಕೆ ಸೇರಿಸಿಕೊಂಡು, ಇವರಿಗೆ ವೇತನಗಳನ್ನು ಕಲ್ಪಿಸಿದರೆ, ಕೆಲಸ ಕಾರ್ಯಗಳು ಸಾಂಗವಾಗಿ ನೆರವೇರುವುದರಲ್ಲಿ ಸಂದೇಹವಿಲ್ಲ.

ಇಂಡಿಯಾ ದೇಶದ ವೃತ್ತಾಂತಗಳು

ಇಂಡಿಯಾ ಎಂಬ ಹಡಗು ೩೦ ಲಕ್ಷ ೬೦ ಸಾವಿರ ರೂಪಾಯಿನ ಚಿನ್ನವನ್ನು ಭರ್ತಿಮಾಡಿಕೊಂಡು ಬೊಂಬಾಯಿಗೆ ಬರುತ್ತಲಿದೆ

ಬಂಗಾಳಾ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರವರ ಪ್ರೈವೇಟ್ ಸೆಕ್ರೆಟರಿಯವರಾದ ಕ್ಯಾಪ್ಟನ್ ಆರ್ಕರ್ ಸನ್ ರವರನ್ನು ಮುತ್ತಾ ಸಂಸ್ಥಾನದ ಬಾಲ್ಯವಯಸ್ಸಿನ ಮಹಾರಾಜರವರ ಗಾರ್ಡಿಯನ್ ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದಾರೆ

ಪಂಜಾಬ್ ಗವರ್ನಮೆಂಟಿನವರು ಆಹಾರಧಾನ್ಯಗಳು ಪ್ರಿಯವಾಗಿ ಜೀವನ ಕಷ್ಟವಾಗಿರುವುದರಿಂದ ಅಲ್ಪಸಂಬಳದ ನೌಕರಮಾನೇರಿಗೆಲ್ಲಾ ಬತ್ತೆ ಮಾಡಿರುತ್ತಾರೆ ಇದಕ್ಕಾಗಿ ಖಜಾನೆಯಲ್ಲಿ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ

ಫ್ರಾನ್ಸಿನಲ್ಲಿ ಪ್ರಕಟವಾಗಿ ಹಿಂದುಸ್ಥಾನಕ್ಕೆ ಬರುವ "ತಲವಾರ್" ಎಂಬ ಪತ್ರಿಕೆಯನ್ನೂ ಹಿಂದುಸ್ಥಾನದೊಳಗೆ ಪ್ರಕಟವಾಗುವ "ಓಂ ವಂದೇ ಮಾತರಂ" ಎಂಬ ಈ ಪತ್ರವನ್ನೂ ಇಂಡಿಯಾ ಗವರ್ನಮೆಂಟಿನವರು ಈ ರಾಷ್ಟ್ರದಲ್ಲಿ ಪ್ರಚಾರವಾಗಕೂಡದೆಂದು ತಡೆದುಬಿಟ್ಟಿದ್ದಾರೆ

ಡಾಕ್ಟರ್ ಅಬ್ದುಲ್ ಘನಿಯವರನ್ನೂ ಅವರ ಸ್ನೇಹಿತರನ್ನೂ ಅಫ್ಘಾನಿಸ್ಥಾನದ ಅಮೀರರವರು ಇನ್ನೂ ಸೆರೆಮನೆಯಲ್ಲಿ ಇಟ್ಟುಕೊಂಡಿದ್ದಾರೆ ಅಮೀರರು ಟರ್ಕಿಯಿಂದ ಜನರನ್ನು ಕರೆಸಿಕೊಂಡು, ತಮ್ಮ ಸೈನ್ಯಗಳನ್ನು ಅವರ ಮೂಲಕ ತರಪೇತು ಮಾಡಿಸುತ್ತಾ ಬಂದಿದ್ದಾರೆಂದು ತಿಳಿಯುತ್ತದೆ

ಅಯೋಧ್ಯಾ ಪ್ರಾಂತ್ಯದಲ್ಲಿ ಹಿಂದಿ ಭಾಷೆಯಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳನ್ನು ಒಳ್ಳೆ ಕ್ರಮದಿಂದಲೂ ದೇಶೋನ್ನತಿಯ ಹಿತಚಿಂತನೆಯಿಂದಲೂ ನಡಿಸುವುದಕ್ಕೂ ನಾಗರಿ ವ್ಯಾಕರಣವನ್ನು ಕ್ರಮಪಡಿಸುವುದಕ್ಕೂ ಅಕ್ಟೋಬರ್ ತಿಂಗಳಲ್ಲಿ ಕಾನ್ಪುರದಲ್ಲಿ ಒಂದು ಸಮಾಜವು ನೆರೆಯುವುದಾಗಿದೆ

ಬರೋಡಾ ಸಂಸ್ಥಾನದ ಮಹಾರಾಜರವರು ಅಲಹಾಬಾದಿಗೆ ದಯಮಾಡಿ ಅಲ್ಲಿ ಪ್ರತಾಪಘಡದ ರಾಣೀಸಾಹೇಬರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ ಇವರು ಇನ್ನು ಕೆಲವು ದಿನಗಳೊಳಗಾಗಿ ತಮ್ಮ ಶರೀರ ಸೌಖ್ಯಕ್ಕೋಸ್ಕರ ಸೀಮೆಗೆ ಹೋಗಿ ಸಮುದ್ರಯಾನ ಮಾಡಿಕೊಂಡು ಬರುವವರಾಗಿದ್ದಾರೆಂದು ಪ್ರಕಟವಾಗಿದೆ

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಎವನೂರಾ ಸೇಹರ್ ಸಂಸ್ಥಾನದ ರಾಜಕುಮಾರರಿಗೆ ನೇಪಾಳ ಸಂಸ್ಥಾನದ ಮಹಾರಾಜಾ ದೇವ ಸೋಂಶೇರ್ ಜಂಗ್ ರಾಣಾ ಬಹದೂರ್ ಯವರ ಕುಮಾರಿಯನ್ನು ಕೊಟ್ಟು ಡೆಹರಾ ಡೂನ್ ಪಟ್ಟಣದಲ್ಲಿ ಕಳೆದ ಶುಕ್ರವಾರ ಬಹು ವಿಜೃಂಭಣೆಯಾಗಿ ವಿವಾಹ ಮಹೋತ್ಸವವನ್ನು ನಡಿಸಿದರು

ಬೊಂಬಾಯಿನಲ್ಲಿ ಒಂದು ಅಚ್ಚಿನ ಕಾರ್ಖಾನೆಯ ಮಾಲೀಕನು ಅದರ ಹೆಸರನ್ನು ಬದಲಾಯಿಸಿ ಬೇರೊಂದು ಹೆಸರಿನಲ್ಲಿ ರಿಜಿಸ್ಟರು ಮಾಡಿಸಿಕೊಡಬೇಕೆಂದು ಅರ್ಜಿಹಾಕಿ ಕೇಳಿಕೊಂಡನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹೊಸ ಪ್ರೆಸ್ ಕಾನೂನ್ ಅನುಸರಿಸಿ ಜಾಮೀನ್ ಹಣ ಕಟ್ಟದಿದ್ದರೆ ರಿಜಿಸ್ಟರ್ ಮಾಡುವುದಿಲ್ಲವೆಂದು ತಿರಸ್ಕರಿಸಿದರು

ಹಾಲೀಸಾ ಕಾಮೆಟ್ ಎಂಬೊಂದು ಬಾಲಚುಕ್ಕಿಯು ಸಾಯಂಕಾಲ ಸೂರ್ಯಾಸ್ತಮಯಕಾಲದಲ್ಲಿ ಪಶ್ಚಿಮದಲ್ಲಿ ದುರ್ಬೀನು ಹಾಕಿ ನೋಡುವವರಿಗೆ ಈಗ ಕಾಣುತ್ತದೆ ಜೂನ್ ವಾರ ಅದು ಬರಿಯಕಣ್ಣಿಗೂ ಕೆಲವು ಕಾಲ ಕಾಣಿಸುತ್ತಿದ್ದು ಅದೃಶ್ಯ ಹೊಂದಿ ಬಳಿಕ ಏಪ್ರೈಲ್ ೧೫ ರ ಅದಿಭಾಗದಲ್ಲಿ ಬೆಳಗಿನ ಝಾವದ ಹೊತ್ತಿನಲ್ಲಿ ಕಾಣುವುದು

ಸಿಲೋನ್ ದ್ವೀಪದ ಕಾಡಿನಲ್ಲಿ ಆನೆ ಬಂಗಡಿಗಳನ್ನು ತಯಾರುಮಾಡಿ ನೂರಾರು ಆನೆಗಳನ್ನು ಕೆಡ್ಡಾದೊಳಕ್ಕೆ ಕೆಡವಿಕೊಂಡಿದ್ದರು ಏನೋ ಒಂದು ಅಚಾತುರ್ಯನಡೆದು ಆ ಆನೆಗಳೆಲ್ಲಾ ಬಂಗಡಿಗಳನ್ನು ಮುರಿದು ಹಾಕಿ ರೋಷಾವೇಶದಿಂದ ಓಡಿಹೋದವು ಈ ಗಲಭೆಯಲ್ಲಿ ನಾಲ್ಕಾರು ಜನರು ಹತರಾದರೆಂದೂ ಕೆಲವರಿಗೆ ಗಾಯಗಳಾದವೆಂದೂ ಪ್ರಕಟವಾಗಿದೆ

ಹಿಂದುಸ್ಥಾನದಲ್ಲಿ ರಾಜದ್ರೋಹವನ್ನೂ ಕ್ರೂರಕೃತ್ಯಗಳನ್ನೂ ಅಡಗಿಸುವುದಕ್ಕೆ ಇಂಡಿಯಾ ಗವರ್ನಮೆಂಟಿಗೆ ಬೇಕಾದ ಸಹಾಯವನ್ನೆಲ್ಲಾ ಮಾಡಲು ಸಿದ್ಧರಾಗುತ್ತೇವೆಂದು ಧಾರ್, ಜಯಪುರ ಅಲ್ವಾರ್ ಸಂಸ್ಥಾನಗಳ ಮಹರಾಜರುಗಳು ವೈಸ್ ರಾಯಿ ಪ್ರಭುಗಳಿಗೆ ಬರೆದಿರುವ ಪ್ರತ್ಯುತ್ತರಗಳು ಕಳೆದ ವಾರದ ಇಂಡಿಯಾ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿರುತ್ತವೆ

ಕಳೆದ ಶುಕ್ರವಾರವೂ ಶನಿವಾರವೂ ವೈಸ್ ರಾಯಿಯವರ ಮಂತ್ರಾಲೋಚನಾ ಸಭೆಯು ಕಲ್ಕತ್ತೆಯಲ್ಲಿ ನಡೆದು ಮೆಂಬರುಗಳು ಹೊಸ ಸುಂಕಗಳ ವಿಚಾರವನ್ನು ಕುರಿತು ತೀಕ್ಷ್ಣವಾಗಿ ಚರ್ಚೆಮಾಡಿದರು ಖಜಾನಾ ಭಕ್ಷಿಯವರಾದ ಸರ್ ಫ್ಲೀಟ್ ವುಡ್ ವಿಲ್ಸನ್ ರವರು ಬಡ್ಜೆಟ್ಟಿನಲ್ಲಿ ಸೂಚಿಸಿದ್ದ ಹೊಸ ಸುಂಕಗಳನ್ನು ಹಾಕಿ ಜಾರಿಯಲ್ಲಿ ತರುವಂತೆ ತೀರ್ಮಾನವಾಯಿತು

ಹಿಂದುಸ್ಥಾನದಲ್ಲೆಲ್ಲಾ ಪ್ರಜೆಗಳ ಮಕ್ಕಳಿಗೆ ಪ್ರೈಮರಿ ವಿದ್ಯೆಯನ್ನು (ಬಾಲಪಾಠಗಳನ್ನು) ಫೀಜು ತೆಗೆದುಕೊಳ್ಳದೆ ಕಲಿಸುವುದಕ್ಕೆ ಏರ್ಪಾಡುಮಾಡಬೇಕೆಂದು ಮೆ|| ಗೋಖಲೆಯವರೂ, ಜಮೀನುಗಳನ್ನು ಹೆಚ್ಚಿನ ತೆರೀ ಫಸಲು ಬರುವವರಿಗೆ ತರಬೇಕೆಂದು ಮೆ|| ದಾದಾಭಾಯಿಯವರೂ ವೈಸ್ ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಸೂಚಿಸಿ ಚರ್ಚೆಗೆ ತರುವವರಾಗಿದ್ದಾರೆ

ಕಲ್ಕತ್ತಾ ಪಟ್ಟಣದ ಬ್ಯಾಂಕ್ ಬೀದಿಯಲ್ಲಿ ಮೆ|| ಎಚ್ ಡಿ ಸರ್ಕಾರ್ ಎಂಬುವ ವರ್ತಕನು ಕುಮಾರರಾಜೇಂದ್ರನಾಥ ಮುಖರ್ಜಿ ಎಂಬುವನಿಗೆ ೬೦ ಟು ಅಕ್ಕಿಯ ಚೀಲವನ್ನು ಸ್ವದೇಶೀ ತಯಾರಿ ಎಂದು ಹೇಳಿ ವಿಕ್ರಯ ಮಾಡಿದನು ತರುವಾಯ ಅದು ವಿದೇಶಿ ಪದಾರ್ಥವೆಂದು ಗೊತ್ತಾಯಿತು ಮುಖರ್ಜಿಯು ಈಗ ಆ ವರ್ತಕನ ಮೇಲೆ ಮೋಸ ಮಾಡಿರುತ್ತಾನೆಂದು ಫಿರ್ಯಾದು ತಂದಿದ್ದಾನೆ

ಮುಂದಿನ ತಿಂಗಳ ಮೊದಲನೇ ವಾರದಲ್ಲಿ ಮದರಾಸ್ ಗವರ್ನರವರ ಮಂತ್ರಾಲೋಚನಾ ಸಭೆಯಲ್ಲಿ ಮೆ|| ಪಿ ಕೇಶವ ಪಿಳ್ಳೆ ಎಂಬ ಮೆಂಬರು ಇನ್ನು ಮೇಲೆ ಸರ್ಕೀಟು ಹೊರಡುವ ಸರ್ಕಾರಿ ಅಧಿಕಾರಿಗಳಿಗೆ ಗ್ರಾಮದ ಪಟೇಲನು ಸಾಮಾನ್ ಸರಬರಾಯಿ ಮಾಡಬೇಕೆಂಬ ನಿರ್ಬಂಧವನ್ನು ತಪ್ಪಿಸಬೇಕೆಂದು ಸೂಚಿಸುವವರಾಗಿದ್ದಾರೆ ಇದು ಎಷ್ಟುಮಟ್ಟಿಗೆ ಸಾಧ್ಯವೋ ನಮಗೆ ತಿಳಿಯದು

ಮದರಾಸ್ ಗವರ್ನರಾದ ಸರ್ ಆರ್ಥರ್ ಲಾಲಿಯವರು ಪತ್ನಿಪುತ್ರಿಯರು ಮತ್ತು ಪರಿವಾರ ಸಹಿತ ತಾ ೨೩ ರಲ್ಲಿ ಮದರಾಸಿನಿಂದ ನೀಲಗಿರಿಗೆ ದಯಮಾಡಿ ಈ ತಿಂಗಳ ಆಖೈರಿಗೆ ವಾಪಸು ಬಂದು ಯೂನಿವರ್ಸಿಟಿ ವಿದ್ಯಾಸಂಘದ ಕಾನ್ವೊಕೇಷನ್ ಎಂಬ ಕೂಟದಲ್ಲಿ ಹಾಜರಾಗಿದ್ದು ಮತ್ತೆ ಏಪ್ರಿಲ್ ತಾ ೪ ನೆಕ್ಕೆ ನೀಲಗಿರಿಗೆ ಬೇಸಿಗೆ ಕಳೆಯುವ ಅದಿಕ್ಕೆ ತೆರಳುವರೆಂದು ಪ್ರಕಟವಾಗಿದೆ

ಲಾಹೋರ್ ಪಟ್ಟಣದ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮೆ|| ಹ್ಯಾರಿಸನ್ ರವರು ರಾಜದ್ರೋಹದ ಎರಡು ಮೊಕದ್ದಮೆಗಳನ್ನು ದರ್ಯಾಪ್ತಿಮಾಡಿ ಕಳೆದ ವಾರ ತೀರ್ಮಾನ ಹೇಳಿದರು ಮುನ್ಶಿ ರಾಂ ಎಂಬ ಅಪರಾಧಿಗೆ ಏಳು ವರುಷದ ಬಂದೀಖಾನೆ ಸಜಾವೂ, ಜಿಯಾ ಉಲ್ ಹಕ್ ಎಂಬಾತನಿಗೆ ಐದು ವರುಷಗಳ ಬಂದೀಖಾನೆ ಸಜಾವೂ ಈಶ್ವರ ಪ್ರಸಾದ್ ಎಂಬಾತನಿಗೆ ಮೂರು ವರುಷ ಕಠಿಣ ಸಜಾವೂ ವಿಧಿಸಲ್ಪಟ್ಟವು

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೌನ್ಸಿಲಿನಲ್ಲಿ ಮೆಂಬರಾಗಿದ್ದ ಮೆ|| ಬಿಲ್ಗ್ರಾಮಿಯವರು ವಿಲಾಯತಿಯ ಹವಾ ತಮ್ಮ ದೇಹಕ್ಕೆ ಒಗ್ಗುವುದಿಲ್ಲವೆಂದು ಹೇಳಿ ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು ಸ್ಟೇಟ್ ಸೆಕ್ರೆಟರಿಯವರು ಕಳೆದ ವಾರ ಜುನಾಘಡ ಸಂಸ್ಥಾನದ ದಿವಾನರಾದ ಮೆ|| ಅಬ್ಬಾಸ್ ಅಲ್ಲಿ ಬೇಗ್ ಯವರನ್ನು ಅವರಿಗೆ ಬದಲಾಗಿ ನೇಮಕಮಾಡಿಕೊಂಡಿದ್ದಾರೆ ಇವರು ಬಹಳ ಸಮರ್ಥರೆಂದೂ ಪೂರ್ಣವಿದ್ಯಾವಂತರೆಂದೂ ತಿಳಿಯಲಾಗಿದೆ

ಪೂರ್ವ ಬಂಗಾಳಾ ಅಧಿಪತ್ಯಕ್ಕೆ ಸೇರಿದ ಖುಲ್ನಾ ಪಟ್ಟಣದಲ್ಲಿ ಪಂಚಾನನ ಘೋಷ್ ಎಂಬಾತನು "ಮುಲ್ಕಾ ಚಾಸಿ" ಎಂಬ ಪ್ರಕಟಣೆಯಲ್ಲಿ ರಾಜದ್ರೋಹಕರವಾದ ವಾಕ್ಯಗಳನ್ನು ಬರೆದು ಪ್ರಕಟಪಡಿಸಿದ್ದಕ್ಕಾಗಿ ಹಿಡಿಯಲ್ಪಟ್ಟು ಮೊಕದ್ದಮೆ ಆಗಿದೆ ಕಳೆದ ವಾರ ವಿಚಾರಣೆಗೆ ಪ್ರಾರಂಭವಾಯಿತು ಈಗ ಅಪರಾಧಿಯು ತಾನು ಬರೆದದ್ದು ತಪ್ಪೆಂದೂ ಹಾಗೆ ಬರೆಯಬಾರದಾಗಿತ್ತೆಂದೂ ಒಪ್ಪಿಕೊಂಡು ಮ್ಯಾಜಿಸ್ಟ್ರೇಟರ ಕ್ಷಮಾಪಣೆಯನ್ನು ಬೇಡಿಕೊಂಡಿರುತ್ತಾನೆ

ಅಲಹಾಬಾದ್ ಹೈಕೋರ್ಟಿನಲ್ಲಿ ಕಳೆದ ವಾರ ಜಡ್ಜಿಯವರು ಒಂದು ಅಪೀಲ್ ಮೊಕದ್ದಮೆಯಲ್ಲಿ ಫೈಸಲಾಗದ ಒಳಕ್ಕೆ ತಮಗೆ ಬಂದಿದ್ದ ಹೆಸರಿಲ್ಲದ ಒಂದು ಕಾಗದವನ್ನು ಕೋರ್ಟಿನಲ್ಲಿ ಓದಿ ತೋರಿಸಿದರು ಪ್ರತಿವಾದಿಯ ತರಫಿನ ಲಾಯರಾದ ಮೆ|| ಮೋತಿಲಾಲ್ ನೆಹರು ರವರು ಮೊಕದ್ದಮೆಯನ್ನು ತಮ್ಮ ಪಕ್ಷ ಫೈಸಲ್ ಮಾಡಿಕೊಡುವುದಕ್ಕೋಸ್ಕರ ಜಡ್ಜಿಯವರಿಗೆ ೨೫ ೦೦೦ ರೂಪಾಯಿ ತೆಗೆದುಕೊಂಡಿದ್ದಾರೆಂದು ಆ ಕಾಗದದಲ್ಲಿ ಬರೆದಿತ್ತು

ಹಿಂದುಸ್ಥಾನದಲ್ಲಿ ಸ್ಥಳೀಯ ಗವರ್ನಮೆಂಟಿನವರಿಗೆ ಸ್ಫೋಟಕ ಮುಂತಾದ ಬಾಣ ಬಿರುಸುಗಳನ್ನು ಪ್ರಜೆಗಳು ಉಪಯೋಗಿಸದಂತೆ ತಡೆಯನ್ನು ಕಲ್ಪಿಸುವುದು ಅವಶ್ಯವೆಂದು ಕಂಡುಬಂದ ಪಕ್ಷದಲ್ಲಿ ಆ ರೀತಿ ತಡೆಯಲು ಅವರಿಗೆ ಅಧಿಕಾರವಿರತಕ್ಕದೆಂಬ ಅರ್ಥಕ್ಕೆ ಒಂದು ಮಸೂದೆ ಕಾನೂನು ತಯಾರಾಗಿ ಪ್ರಜೆಗಳ ಅಭಿಪ್ರಾಯಕ್ಕೋಸ್ಕರ ಪ್ರಕಟವಾಗಿದೆ ಈ ಮಸೂದೆಯ ವಿಷಯವನ್ನು ಇನ್ನು ಎರಡು ತಿಂಗಳ ಮೇಲೆ ಗವರ್ನಮೆಂಟಿನವರು ಚರ್ಚೆ ಮಾಡುವರೆಂದು ಪ್ರಕಟವಾಗಿದೆ

ಭವಾನಿನಗರಕ್ಕೆ ಹೋದ ಇಬ್ಬರು ಹೊಸಬರು ಬಹು ಧಾರಾಳವಾಗಿ ಹಣವನ್ನು ಖರ್ಚುಮಾಡುತ್ತಿದ್ದದ್ದನ್ನು ನೋಡಿ ಪೊಲೀಸಿನವರು ಅನುಮಾನದ ಮೇಲೆ ಹಿಡಿದು, ಅವರ ಮೈಯನ್ನು ಶೋಧನೆ ಮಾಡಿದರು ಸರ್ಕಾರಿ ಕರೆನ್ಸಿ ನೋಟುಗಳೂ ೧,೯೦೦ ರೂಪಾಯಿನಷ್ಟು ಸಿಕ್ಕಿದವು ಶೋಧ ಮಾಡಿದಾಗ ಅವರಿಬ್ಬರೂ ಬೊಂಬಾಯಿನಲ್ಲಿ ಒಬ್ಬ ವರ್ತಕನ ಮನೆಯಲ್ಲಿ ಕಳುವುಮಾಡಿ ತಂದೆವೆಂದು ಒಪ್ಪಿಕೊಂಡರು ಈ ವಿಷಯವನ್ನು ಬೊಂಬಾಯಿ ಪೊಲೀಸಿಗೆ ತಿಳಿಸಿ ಅವರಿಬ್ಬರನ್ನೂ ದಸ್ತಗಿರಿ ಮಾಡಿ ಇಟ್ಟುಕೊಂಡಿದ್ದಾರೆ

ರಂಗೂನ್ ಪಟ್ಟಣದಲ್ಲಿ ಕೆಂಪೋ ಲಿಂಗ್ ಮತ್ತು ಕೆಂಪೋ ಕ್ಯೆಂಗ್ ಎಂಬಿಬ್ಬರು ಒಪ್ಪಾರಿಯರು ಕಳೆದ ವಾರ ಒಬ್ಬ ಭಕ್ತರ ದಲ್ಲಾಳಿಯ ಮನೆಗೆ ಹೋಗಿ ಅವನಿಂದ ೧೦೦ ರೂಪಾಯಿನ ಬಾಬತು ೩೦ ೦೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ಪಡೆದು ಗಾಡಿಯನ್ನು ಹತ್ತಿ ತಮ್ಮ ಮನೆಗೆ ಹೋಗುತ್ತಿರುವಾಗ ಇಬ್ಬರು ತಮ್ಮ ಗಾಡಿಯೊಳಗೆ ಹತ್ತಿಬಂದು, ಪಿಸ್ತೂಲುಗಳನ್ನು ತಮ್ಮ ಎದೆಗೆ ಗುರಿಯಿಟ್ಟು ಗಾಬರಿಪಡಿಸಿ, ತಮ್ಮ ಬಳಿ ಇದ್ದ ಹಣವನ್ನೂ ಇತರ ನಗಗಳನ್ನೂ ಕಿತ್ತುಕೊಂಡು ಹೋದರೆಂದು ಪೊಲೀಸಿಗೆ ತಿಳಿಸಿದರು ಪೊಲೀಸಿನವರು ಆ ಕಳ್ಳರನ್ನು ಪತ್ತೆಮಾಡುತ್ತಿದ್ದಾರೆ

ಸಿಂಧು ದೇಶಕ್ಕೆ ಸೇರಿದ ಥಾರ್ ಮತ್ತು ಪಾರ್ಕರ್ ಡಿಸ್ಟ್ರಿಕ್ಟಿನಲ್ಲಿ ಮಿರ್ಪುರ್ ಖಾಸ್ ಎಂಬ ಸ್ಥಳದಲ್ಲಿ ಬೊಂಬಾಯಿ ಅಧಿಪತ್ಯದ ಪ್ರಾಚೀನ ಲಿಪಿ ಶೋಧನಾ ಇಲಾಖಾ ಸೂಪರಿಂಟೆಂಡೆಂಟರಾದ ಮೆ|| ಹೆನ್ರಿ ಕೌಸೆನ್ಸ್ ಯವರು ಹಾಳು ಗುಡ್ಡಗಳನ್ನು ತೋಡಿಸಿ ಭೂಶೋಧನೆ ಮಾಡಿದಾಗ ಪ್ರಾಚೀನ ಕಾಲದ ಕಟ್ಟಡಗಳೂ ಬೌದ್ಧ ದೇವಾಲಯವೂ ಬುದ್ಧನ ವಿಗ್ರಹವೇ ಮೊದಲಾದ ವಸ್ತುಗಳೂ ಸಿಕ್ಕಿರುತ್ತವೆ ಒಂದು ವಿಗ್ರಹದ ತಳದಲ್ಲಿ ಸಣ್ಣ ತೊಟ್ಟಿಯೊಳಗೆ ಒಂದು ಪೆಟ್ಟಿಗೆ ದೊರಕಿತು ಅದರೊಳಗೆ ಒಂದು ಸಣ್ಣ ಸೀಸೆಯೂ ಅದರಲ್ಲಿ ಸ್ವಲ್ಪ ಬೂದಿಯೂ ಸಿಕ್ಕಿದವು ಆ ಬಳಿ ಇನ್ನೂ ಭೂಶೋಧನಾ ಕೆಲಸಗಳು ನಡೆಯುತ್ತಿವೆ

ನಟಾಲ್ (ಆಫ್ರಿಕಾ) ದ್ವೀಪಕ್ಕೆ ಆರ್ಕಾಟ್ ಜನರು ಕೂಲಿ ಕೆಲಸಕ್ಕೆ ಹೋಗಿ ಅಲ್ಲಿನ ಜನರಿಗೆ ಹಣ ಕೊಡುವ ಸಲ ಕೊಡುತ್ತಾ, ಸಾಲಗಳನ್ನು ಕೊಂಡರೆ ಹೊಡೆಯುತ್ತಾ ಎಂದಿದ್ದಾರೆಂದೂ, ಈ ಜನರನ್ನು ಅಲ್ಲಿಗೆ ಬರಗೊಡಿಸದಂತೆ ಮಾಡಬೇಕೆಂದೂ ಪ್ರಜೆಗಳು ಗವರ್ನಮೆಂಟಿನವರನ್ನು ಕೇಳುತ್ತಿದ್ದಾರೆ ಇದಲ್ಲದೆ ಕೊಚ್ಚಿ ಸಂಸ್ಥಾನದ ಜನರು ಅಲ್ಲಿಗೆ ವಿಶೇಷವಾಗಿ ಹೋಗಿ ಅಲ್ಲಿನ ಜನರಿಗೆ ಕಡಿಮೆ ಕೂಲಿ ದರಗಳನ್ನು ಒಪ್ಪಿಕೊಂಡು ಕೆಲಸ ಮಾಡುತ್ತಿರುವುದರಿಂದ ಅಲ್ಲಿನ ಜನಾ ಜೀವನಕ್ಕೆ ಕಷ್ಟವಾಗಿದೆ ಎಂದೂ, ಅವರನ್ನು ಅಲ್ಲಿಗೆ ಬಾರದಂತೆ ತಡೆಯಬೇಕೆಂದೂ ಒಂದು ಮಹಾಜನ ಸಭೆಯಲ್ಲಿ ತೀರ್ಮಾನಮಾಡಿ ಸರ್ಕಾರಕ್ಕೆ ಅರಿಕೆ ಮಾಡಿಕೊಂಡಿದ್ದಾರೆ

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಫರೀದ್ ಕೋಟೆ ಎಂಬ ಸಿಖ್ ಜನರ ಸಣ್ಣ ದೇಶೀಯ ಸಂಸ್ಥಾನದಲ್ಲಿ ರಾಜರು ಬಾಲ್ಯವಯಸ್ಸಿನವರಾಗಿರೋಣದರಿಂದ ಸಂಸ್ಥಾನವನ್ನು ರೀಜೆನ್ಸಿ ಕೌನ್ಸಿಲ್ ನವರು ಆಳುತ್ತಿದ್ದಾರೆ ಈ ಸಂಸ್ಥಾನದ ಕೋರ್ಟುಗಳಲ್ಲಿ ಇನ್ನು ಮುಂದೆ ಲಾಯರುಗಳು ಕಕ್ಷಿಗಾರರ ಮೊಕದ್ದಮೆಗಳನ್ನು ಹಿಡಿದು ಅವರ ಪರವಾಗಿ ವಾದಿಸಬೇಕಾದದ್ದಿಲ್ಲವೆಂದೂ ಕಕ್ಷಿಗಾರರು ತಾವು ತಾವೇ ನಿಂತು ತಮ್ಮ ಮೊಕದ್ದಮೆಯ ವಿಷಯದಲ್ಲಿ ವಾದಿಸಿಕೊಳ್ಳಬೇಕೆಂದೂ ರೀಜೆನ್ಸಿ ಕೌನ್ಸಿಲ್ ನವರು ಇಸ್ತಿಹಾರು ಹಾಕಿರುತ್ತಾರೆ ಇದರಿಂದ ಆ ಸಂಸ್ಥಾನದಲ್ಲಿ ಪ್ಲೀಡರುಗಳಾಗಿದ್ದವರು ಇನ್ನು ಮೇಲೆ ಬೇರೇ ವಿಧವಾದ ಜೀವನೋಪಾಯವನ್ನು ಹುಡುಕಿಕೊಳ್ಳಬೇಕಾಯಿತು

ಮಂಗಳೂರಿಗೆ ೧೬ ಮೈಲಿ ದೂರದಲ್ಲಿರುವ ಬಂಟ್ವಾಳದ ಶ್ರೀವೆಂಕಟರಮಣಸ್ವಾಮಿ ದೇವಸ್ಥಾನದ ಟ್ರಸ್ಟಿಯಾದ ಆಡಳಿತಗಾರರು ದೇವಸ್ಥಾನದ ಫಂಡಿನಿಂದ ೩,೫೦೦ ರೂಪಾಯಿ ವೆಚ್ಚಿಸಿ ಒಂದು ಬಾಲಶಿಕ್ಷಣದ (ಪ್ರೈಮರಿ) ಪಾಠಶಾಲೆಯನ್ನು ಕಟ್ಟಿಸಿ, ಈ ಪಾಠಶಾಲೆಯು ಶಾಶ್ವತವಾಗಿ ನಡೆಯುವಂತೆ ೮,೦೦೦ ರೂಪಾಯಿ ಫಂಡು ಕೊಟ್ಟಿರುತ್ತಾರೆ ಡಿಸ್ಟ್ರಿಕ್ಟ್ ಕಲೆಕ್ಟರವರು ಖಾನ್ ಬಹದೂರ್ ಎಂ ಅಜಿಜುದ್ದೀನ್ ಸಾಹೆಬ್ ಬಹದೂರ್ ಯವರು ಕಳೆದ ವಾರ ಈ ಪಾಠಶಾಲೆಯನ್ನು ಬಹು ಸಂತೋಷದಿಂದ ಪ್ರತಿಷ್ಠೆ ಮಾಡಿ ಆ ದೇವಸ್ಥಾನದ ವಿಚಾರಣಾಕರ್ತರ ಧರ್ಮಪ್ರವೃತ್ತಿಯನ್ನು ಕೊಂಡಾಡಿ ಇತರ ಕಡೆಗಳಲ್ಲಿ ದೇವಸ್ಥಾನಗಳ ಯಜಮಾನರು ಈ ರೀತಿ ವಿದ್ಯಾಸದನಗಳನ್ನು ಸ್ಥಾಪನೆ ಮಾಡಿ ವಿದ್ಯೆಯ ಪ್ರಚಾರಕ್ಕೆ ಸಹಾಯಮಾಡಿಯಾರೆಂದು ಹಾರೈಸಿದರು

ಹೈದರಾಬಾದಿನಲ್ಲಿ ಭಿಕ್ಷುಕರ ಮತ್ತು ತಿರುಗಾಳಿಗಳ ಕಾಟವು ವಿಶೇಷವಾಗಿರುವುದನ್ನು ನಿಜಾಮರವರು ನೋಡಿ ಕಂಡು ಅದನ್ನು [illegible] ತಕ್ಕ ಪರಿಹಾರಗಳನ್ನು ಕುರಿತು ಆಲೋಚಿಸಿ ರಿಪೋರ್ಟ್ ಮಾಡುವಂತೆ ತಿಳಿಸಿರುತ್ತಾರೆ ಈ ವಿಚಾರಣಾ ಕಮಿಟಿಯಲ್ಲಿ [illegible] ಮೆ|| ಹೈದರಿಯವರೂ [illegible] ಸೆಕ್ರೆಟರಿ [illegible] ರಾಜ್ಯದವರೂ [illegible] ಭಿಕ್ಷುಕರ ಕಾಟವನ್ನು ತಪ್ಪಿಸುವುದಕ್ಕೆ ಅವರು ಮಾಡಬೇಕೆಂದಿರುವ ಏರ್ಪಾಡುಗಳು [illegible] ಅಭಿಪ್ರಾಯವೇನೆಂದರೆ – ನಗರದಲ್ಲಿರುವ [illegible] ಸಿಕಂದರಾಬಾದಿನಲ್ಲಿರುವ ವಿಕ್ಟೋರಿಯಾ ಮೆಮೋರಿಯಲ್ ಅನಾಥ ಶಾಲೆಗೆ ಕಳುಹಿಸುವುದು [illegible] ಕೆಲಸಮಾಡಲು ಶಕ್ತಿಯುಳ್ಳವರು ಭಿಕ್ಷೆ [illegible] ಅವರಿಗೆ [illegible] ಕಸಬನ್ನು ಕಲ್ಪಿಸಿಕೊಡುವುದು ದೊಡ್ಡವರಾಗಿ [illegible] ಆಲಯಗಳನ್ನು ಕಲ್ಪಿಸಿ [illegible] ಇದಕ್ಕೆ ಪ್ರಜೆಗಳು ದ್ರವ್ಯವನ್ನು [illegible] ಕುಷ್ಠರೋಗಿಗಳಿಗೆ [illegible] ಈಗ [illegible] ಧರ್ಮಗಳನ್ನು [illegible] ಅನಾಥಾಲಯಗಳಿಗೆ [illegible] ಧಾನ್ಯಾದಿಗಳನ್ನೂ ಕೊಡುತ್ತಾ ಬರುವುದು ಒಳ್ಳೆಯದೆಂದು ಗವರ್ನಮೆಂಟಿನವರು [illegible] ತ್ತಾರೆ

ಮದರಾಸ್ ಗವರ್ನರವರ ಎಗ್ಜಿಕ್ಯುಟಿವ್ ಕೌನ್ಸಿಲಿಗೆ ಬೊಬ್ಬಿಲಿ ಮಹಾರಾಜರವರನ್ನು ಒಬ್ಬ ಮೆಂಬರಾಗಿ ನೇಮಕ ಮಾಡುತ್ತಾರೆಂದು ಕಳೆದ ವಾರ ಪ್ರಕಟವಾಯಿತು ಇವರಿಗೆ [illegible] ಇನ್ನೂ ತಿಳಿಯಲಿಲ್ಲ ಮಹಾರಾಜರವರು ತಮ್ಮ ಸ್ವಂತ ಜಮೀನ್ದಾರಿಯನ್ನು ಬಹು ಎಚ್ಚರಿಕೆಯಿಂದ ನಡಿಸಿಕೊಂಡು ಬಂದು ಇರುವುದಲ್ಲದೆ ದಕ್ಷಿಣ ದೇಶದ ಭೂಮಿ ಜಮೀನ್ದಾರರುಗಳೆಲ್ಲಾ ಒಗ್ಗಟ್ಟಾಗಿರಬೇಕೆಂಬ ಕಾರ್ಯವನ್ನು ಸಾಧಿಸಿರುವರು ಜಮೀನ್ದಾರರ ಸಂಘದಲ್ಲಿ ಇವರು ವೈಸ್ ಪ್ರೆಸಿಡೆಂಟರು ಮದರಾಸ್ ಗವರ್ನರವರ ಮಂತ್ರಾಲೋಚನಾ ಸಭೆಯಲ್ಲಿ ೧೮೯೩ ರಿಂದ ೧೯೦೫ ರ ವರೆಗೆ ಮೆಂಬರಾಗಿದ್ದುಕೊಂಡು ಅನೇಕ ವಿಷಯಗಳಲ್ಲಿ ತುಂಬಾ ಅನುಭವವನ್ನು ಪಡೆದಿರುವುದಲ್ಲದೆ ಸರ್ಕಾರಿ ಕೆಲಸಗಳಿಗೆ ಬಹಳ ಸಹಾಯ ಮಾಡಿದವರಾಗಿರುತ್ತಾರೆ ಮೊನ್ನೆ ಏರ್ಪಾಡಾದ ರಾಜ ಭಕ್ತರ ಕೂಟದಲ್ಲಿ ಇವರು ಪ್ರೆಸಿಡೆಂಟರ ಕೆಲಸವನ್ನು ವಹಿಸಿದವರು ಈ ಪ್ರಕಾರ ಪ್ರಜೆಗಳಲ್ಲೂ ಗವರ್ನಮೆಂಟಿನವರಲ್ಲೂ ಪ್ರೀತಿ ಸನ್ಮಾನಗಳನ್ನು ಸಂಪಾದಿಸಿಕೊಂಡಿರುವಂಥಾ ಬೆರೋಜುಗಾರರಾದ ಮಹಾರಾಜರವರನ್ನು ಮದರಾಸ್ ಅಧಿಪತ್ಯದ ಸರ್ಕಾರಿ ಕಾರ್ಯನಿರ್ವಾಹಕ ಸಭೆಗೆ ಮೆಂಬರಾಗಿ ನೇಮಕಮಾಡಿದ್ದು ಸಂತೋಷಕರವಾಗಿರುವುದು ಈ ಸಂಸ್ಥಾನದಲ್ಲಿ ಮಹಾರಾಜರವರಿಗೆ ಮಾಹೆಯಾನಾ ೬,೬೬೬ ಚಿಲ್ಲರೆ ರೂಪಾಯಿ ಪ್ರತಿಫಲ ದೊರಕುತ್ತದೆ ಹೋದ ವರುಷ ವೈಸ್ ರಾಯಿಯವರ ಎಗ್ಜಿಕ್ಯುಟಿವ್ ಕೌನ್ಸಿಲ್ಲಿಗೆ ಮೆ|| ಸತ್ಯಪ್ರಸನ್ನಸಿಂಹ ಎಂಬ ಪ್ರಸಿದ್ಧ ಬಂಗಾಳಾ ವಕೀಲರು ನೇಮಕವಾಗಿರುವುದು ವಾಚಕರಿಗೆ ಜ್ಞಾಪಕವಿರಬೇಕು ಹಿಂದುಸ್ಥಾನದ ರಾಜ್ಯಭಾರದಲ್ಲಿ ಹೊಸ ತಿದ್ದುಪಡಿಗಳು ರೂಢಿಗೆ ಬಂದು ದಿನೇ ದಿನೇ ದೇಶೀಯರಿಗೆ ಅಧಿಕಾರಿಯ ಸ್ವಾತಂತ್ರ್ಯಗಳು ಹೆಚ್ಚು ಹೆಚ್ಚಾಗಿ ದೊರಕುತ್ತಾ ಬರುವುದು ಸರ್ವಸಮ್ಮತವಾಗಿರುತ್ತದೆ

Printed and Published by the Rev H Gulliford,
Proprietor and Manager Wesleyan Mission Press
Mysore 10/3/1910

REGISTERED M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—೧೯೧೦ ನೇ ಇಸವಿ ಮಾರ್ಚಿ ತಾರೀಖು ೧೭ ನೇ ಗುರುವಾರ. ಸಂಚಿಕೆ ೪೨

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ, ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಅರ್ಲ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರಸ್ ಅರ್ಪಿಸಿದ ಚಿತ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಮಾರ್ಚಿ ಆಖೈರಿನೊಳಗಾಗಿ 'ವೃತ್ತಾಂತ ಪತ್ರಿಕೆ'ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡಲಾವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರೆಯಿರಿ ವಿಳಾಸ —

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಹರಿ 11 11



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೆಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಒಳಹಿಡಿಯುವವು, ಎಂಬ ಸಕಲ ವಿಧವಾದ ಜ್ವರಗಳನ್ನು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಪುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇನ್ನು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಅಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಇದನ್ನೇ ಬೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೩೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೨—೮ ರೂ ರೂ ೩—೧೨ ೮ , ೧೧ ರೂ , ಡಜ್ಜನ್ ರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಯಾಗುವದು

ಶುಮಂಕಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ನೋಯುವದು ರಕ್ತಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಔಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಯನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದ ಸೀಸೆಗಳಲ್ಲಿ ದೊರಕುವದು

ಕೊಡಗದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಿಮ್ಮಯ ಶುಮಂಕಪೂರವನ್ನು ನಾನೂ ನನ್ನ ಕಾಂಪೌಂಡರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಹಲವು ವರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ —

ಮದರಾಸು ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಬಂಗಾರದ ಮತ್ತು ಬೆಳ್ಳಿಯ ಪದಕಗಳು ೧೨ ದೊರೆತಿವೆ.

ಡಯಮಂಡ್ ಡಯಮಂಡ್

ಅತ್ತರ್ ಸಾಬೂನುಗಳು ರಂಗಿನ ಸಾಬೂನುಗಳು

ಸುವಾಸನೆ, ಚರ್ಮಕ್ಕೆ ಹಿತ. ಸುಲಭ ಕ್ರಯ, ಬಣ್ಣ ಖಾತರಿ

24-3

ಅತ್ತರ್ ಸಾಬೂನುಗಳು ಮೈಯಿನ ಕಾಂತಿಗೂ, ಕಾರ್ಬಾಲಿಕ್ ಸಾಬೂನುಗಳು ಚರ್ಮದ ರೋಗನಿವಾರಣೆಗೂ ಅವಶ್ಯಕ ಡಯಮಂಡ್ ರಂಗಿನ ಸಾಬೂನುಗಳು ಬಣ್ಣ ಖಾತರಿ ಇವುಗಳಿಂದ ಎಲ್ಲಾ ತರವೆ ಬಟ್ಟೆಗಳಿಗೂ ಬೇಕಾದ ರಂಗನ್ನು ಸುಲಭವಾಗಿ ಕೊಡಬಹುದು ಡಯಮಂಡ್ ಗುಲಾಬಿ ಟೀ —ಇದರ ಕಷಾಯವು ಬಹಳ ರುಚಿಕರವಾಗಿರುವುದರಿಂದ ಈ ಟೀಯು ಕೇವಲ ಬೂಢಿಯಲ್ಲಿದೆ ಇದಲ್ಲದೆ ಡಯಮಂಡ್ ಕೇಶವರ್ಧಕತೈಲ, ಹಲ್ಲುಪುಡಿ, ಕಾಸ್ಮೆಟಿಕ್, ಪಾಮೇಡ್, ಬಾಂ, ಶೀತನಿವಾರಕ ಕ್ಷಾರ, ಸುವಾಸಿನಿ, ವಿಲಾಸ್ ಮೊದಲಾದ ಅತ್ತರುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ

ವ್ಯಾಪಾರಿಗಳಿಗೆ ವರ ಬೇರೆ ಡಯಮಂಡ್ ಸೋಪ್ ಕಂಪನಿ, ಗಿರ್ಗಾಂ, ಮುಂಬಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

14 11

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಕ್ರಯ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲಿ ಒಟ್ಟಾಗಿ ಆಗಲಿ ಮಾರಲ್ಪಡುತ್ತದೆ ಶಾಲುಗಳು, ಹಾಸಿಗೆ ಟೋಪಿಗಳು, ಮುಸುಕಿನ ಟೋಪಿಗಳು, ಕವಚಗಳ ಟೊಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(195 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಇಂಗ್ಲೀಷು ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾ ಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು.

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಹಾಳು) ಪ್ರತಿಯೊಂದಕ್ಕೆ	0—0—6
(80 ಹಾಳು)	0—1—0
(160 ಹಾಳು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-11]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಒಳ್ಳೇ ಅಡಿಗೆಯವರು ಬೇಕು.

36-1

ಉತ್ತಮವಾಗಿ ಪದಾರ್ಥಗಳಾವುದನ್ನಾದರೂ ಮಾಡಲು ಬಲ್ಲಂಥಾ ಒಬ್ಬ (ಮಾಧ್ವ) ವೈಷ್ಣವ ಬ್ರಾಹ್ಮಣ ಅಡಿಗೆಯವನು ಹಾಸನಕ್ಕೆ ಬೇಕಾಗಿದೆ ತಿಂಗಳಿಗೆ ೧೨ ರೂಪಾಯಿ ಸಂಬಳ ಇಷ್ಟವುಳ್ಳವರು ಕೂಡಲೇ ಇವರಿಗೆ ತಿಳಿಸಬಹುದು

ವೈ ಬಿ ಶ್ರೀನಿವಾಸರಾವ್, ೭, ದಿವಾನ್‌ರ ಅಗ್ರಹಾರ, ಮೈಸೂರು

ರೈತರೇ, ವ್ಯವಸಾಯವನ್ನು ಅಭಿವೃದ್ಧಿಮಾಡಿಕೊಳ್ಳಿ.

35-1

ನಿಮ್ಮ ಜಮೀನುಗಳನ್ನು ಆಳವಾಗಿ ಉಳಿರಿ ಮಳೆಯ ನೀರನ್ನು ಜಮೀನಿನೊಳಗೇ ಹೀರಿಕೊಳ್ಳುವಂತೆ ಮಾಡಿಕೊಳ್ಳಿ, ಉತ್ತಮವಾದ ಹೆಚ್ಚು ಬೆಳೆಯನ್ನು ಕಟಾವು ಮಾಡಿಕೊಳ್ಳಿ, ಕೋಲಾರದ ನಾರ್ಮಲ್ ಮತ್ತು ಟ್ರೈನಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿರುವ ನೇಗಲುಗಳೂ ಹರಿಕೆ ಹೊಡೆಯುವ ಹಲುಬೆ ಕುಂಟೆ ಕೂರಿಗೆಗಳೂ ನಿಮಗೆ ಬಹಳ ಚೆನ್ನಾಗಿ ಸಹಾಯಮಾಡುತ್ತವೆ ಕ್ರಯದ ಪಟ್ಟಿ ಮುಂತಾದದ್ದು ತಿಳಿಯಬೇಕಾದರೆ ರೆವ್. ಡಬ್ಲಿಯು ಎಚ್. ಹಾಲಿಸ್ಟರ್, ಕೋಲಾರ್ ಇವರಿಗೆ ಬೇಗ ಬರೆದುಕೊಳ್ಳಿ.

ಏಜಂಟರು ಬೇಕು.

34-1

"ಕೇಸರೀ ಕುಟೀರ, ಮದ್ರಾಸ್."

ಇಲ್ಲಿ ಬಹಳ ಪ್ರಶಸ್ತವಾದ ಮತ್ತು ಜಾಕರ ಗುಣಕೊಡತಕ್ಕ ಔಷಧಗಳು ದೊರೆಯುತ್ತವೆ

"ನಾರ್ದರನ್ ಸರ್ಕಾರ್ಸ್ ಲೈಫ್ ಅಶ್ಯುರೆನ್ಸ್ ಕಂಪನಿ: ಲಿಮಿಟೆಡ್, ವಿಶಾಖಪಟ್ಟಣ"

ಇದು ಬಡವರಿಗೆ ನಾನಾ ವಿಧದಲ್ಲಿ ಸಹಾಯಕಾರಿಯಾಗಿದೆ ಪ್ರೀಮಿಯಂ ೧ ರೂ ಅಥವಾ ೮ ಆ

"ಸ್ವದೇಶೀ ಪೇಟೆಂಟೆಡ್ ಲ್ಯಾಂಪು."

ಚಿಮುಣಿ ಇಲ್ಲದೆ ಹೊಗೆಯಾಗದಂತೆ ಶಿಮೆಯೆಣ್ಣೆಯಿಂದ ಉರಿಸಬಹುದಾದ ಲ್ಯಾಂಪುಗಳು ಕ್ರಯ ರೂ ೧—೪—೦ ಮಾತ್ರವೇ

ಅಪೇಕ್ಷೆಯುಳ್ಳವರು ಅರ್ಧಾಣೆ ಸ್ಟಾಂಪು ಇಟ್ಟು ಈ ಕೆಳಗಿನ ವಿಳಾಸದವರಿಗೆ ಬರೆದುಕೊಂಡಲ್ಲಿ ಹೆಚ್ಚು ವಿಷಯಗಳು ತಿಳಿಸಲ್ಪಡುತ್ತವೆ

ಬಿ. ಸಿ. ಗೋಪಾಲಸ್ವಾಮಿ,

೧೨೩೦ ಹಳೇ ಅಗ್ರಹಾರ,

ಜನರಲ್ ಕಮಿಷನ್ ಏಜಂಟ್, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5-43

ತಲೆನೋವು, ವಾಯುನೋವು, ಸೆಳತ, ಗಂಟಿನನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆನಿಲುಕದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಉಪಯೋಗಿಸಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಅದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಅವರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿವನಾಡುತ್ತಾರೆ ಮುಖ್ಯ ಏಜಂಟರ ವಿಳಾಸ— ಕೆ ಎಸ್ ಕನ್ನಯಚೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್ ಪೀಟರ್ಸ್,

೩೭, ವೇಮಮೂಸಿಳ್ಳೆ ಬೀದಿ, ವೇಪೇರಿ, ಮದರಾಸ್

CHAMBERLAIN'S PAIN BALM

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು

8-11



ಬೆನ್ನುಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು—ಅವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಬೇಳದಂತೆ ಕೇಳಿದ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆ ಯುಳ್ಳವರಾಗಿದ್ದರೆಂದು ಕಂಡ ಕೂಡಲೇ

SCOTT'S EMULSION 6-11

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ, ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರುವದು

ಅವು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಪುಷ್ಟತೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧವ್ಯಾಪಾರಿಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನು ನೋವು, ನಿದ್ದೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿಶ್ಶಕ್ತಿ. ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಪ್ರಮೇಹ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [6-29]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦ ; ಅಥವಾ ೬ ಟಬ್ಬಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ಪಿ. ಒ. ೨೦, ಬೊಂಬಾಯಿ. ಬಾಕ್ಸ್—ಇವರಲ್ಲಿ ದೊರೆಯುವುದು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

25-6

೧ ಲೋಕನಾಯಕರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈ ಕಾಲು ಸೆಳತ (ಛಳಿ) ಮೈ ನಡುಕ, ಕೀಲುಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನರಡಿ ನಿಶ್ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ಶರೀರ ಮನಸ್ಸುಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧವಾಗಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಮೈಕೈ ಸ್ವರ್ಪಣಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವನ್ನು ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೧ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೬ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ,

6-11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಮಾಡುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚೆನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ನಾನಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಸಂಗೀತ ಪಾರಿಜಾತ ಕ್ರಯ ೪ ಆಣೆ

20-6

ಮನೋಹರವಾದ ಹಾಡಿನ ಪುಸ್ತಕ! ೧೦ ಪ್ರತಿಗಳನ್ನು ಒಟ್ಟಾಗಿ ತರಿಸುವವರಿಗೆ ೧೨ ಆಣೆಕ್ರಯದ ಸರುಪವೂ ಎಂಬ ಹೊಸನಾಟಕವನ್ನೂ ೬ ಪ್ರತಿಗಳನ್ನು ತರಿಸುವವರಿಗೆ ಕಬೀರ ದಾಸನ ಚರಿತ್ರೆಯನ್ನೂ, ೪ ಪ್ರತಿಗಳನ್ನು ತರಿಸುವವರಿಗೆ ಪ್ರಶ್ನೋತ್ತರ ರತ್ನಮಾಲಿಕೆ ಎಂಬ ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ—ದಿ ಮರ್ಕೆಂಟೈಲ್ ಯೂನಿಯನ್, ಮೈಸೂರು.

ಸುಗಂಧಗಳು.

· 16

ಪ್ರಸಿದ್ಧವಾದ ಮೈಸೂರು ಅಗರ್ (ಊದ) ಬತ್ತಿ ೧ ಸೇರಿಗೆ ರೂ ೧೨, ೬, ೪ ೨ ೫ ೦ ೧ ೪ ೦ ಬತ್ತಿಗಳು ೧ ತೊಲೆಗೆ ರೂ ೧ ದರ್ಬಾರ್ ಪೌಡ್ರು ೧ ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ಹೊಸ ಪುಸ್ತಕ! ಹೊಸ ಪುಸ್ತಕ!! ಹೊಸ ಪುಸ್ತಕ!!!

23-5

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತಾಡುವುದಕ್ಕೂ ಬೋಧಕರ ಸಹಾಯವಿಲ್ಲದೆ ತಾವಾಗಿ ಕಲಿಯುವ ಅತ್ಯುತ್ತಮ ಪುಸ್ತಕವಿದು

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವ್ಯಾಲುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ. ಅಚ್ಚು ಮತ್ತು ಬರವಣಿಗೆಯ ಅಕ್ಷರಗಳನ್ನು ಗುರುತಿಸುವ ಉಪಾಯ, ಸ್ವರ ವ್ಯಂಜನಾಕ್ಷರ ಸಂಕೇತ, ಕಾಗುಣಿತ, ಅಕ್ಷರ ಸಂಯೋಜನಾಭ್ಯಾಸ ಪ್ರಕರಣ, ಮಾಭ್ಯಾಸಯೋಗ್ಯಪಾಠಗಳ ಸಮುದಾಯ, ಪ್ರೌಢಪಂಕ್ತಿಗಳು, ವಿವಿಧವಾಕ್ಯ ಸಮುದಾಯ, ಲೇಖನ ಪ್ರತಿಲೇಖನ, ಆಚರಣೆಯಲ್ಲಿ ಅಪೂರ್ವವಾದ ಅತ್ಯಂತೋಪಯೋಗವುಳ್ಳ ಶಬ್ದಗಳು, ಕೋಷ್ಟಕ, ಗಾದೆ, ಪಂಕ್ತೀ ವರ್ತಮಾನ, ಸಾಂಕೇತಿಕ ಶಬ್ದಗಳು, ಇತ್ಯಾದಿಯಾದ ಅನೇಕ ಉಪಯುಕ್ತಾಂಶಗಳು ಸೇರಿವೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ. (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷ್ ಭಾಷೆಯ ಪ್ರತಿ ಶಬ್ದದ ಉಚ್ಚಾರಣೆಯನ್ನೂ ಕನ್ನಡ ಅಕ್ಷರಗಳಿಂದ ಬರೆದು ಅದರ ಅರ್ಥವನ್ನು ಕನ್ನಡಭಾಷೆಯಲ್ಲಿ ಬರೆದಿದೆ ಇಂಗ್ಲಿಷ್ ಭಾಷೆಯನ್ನು ಸ್ವಲ್ಪವೂ ತಿಳಿಯದ ಕನ್ನಡಿಗರು ಅದನ್ನು ಕಲಿಯುವುದಕ್ಕೆ ಈ ಪುಸ್ತಕವು ತಕ್ಕಷ್ಟು ಸಹಾಯವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol. 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಕಲಿತು ಬಗೆಬಗೆಯ ಲಾಭವನ್ನು ಸಂಪಾದಿಸಲಿಚ್ಛಿಸುವ ಯಾವ ತರದ ಜನರಿಗಾದರೂ ಈ ಪುಸ್ತಕವು ಬಹಳ ಉಪಯೋಗವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ. (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಮೊದಲನೆಯ ಮತ್ತು ಎರಡನೆಯ ಮುದ್ರಣದ ಪುಸ್ತಕಗಳು ಬಲು ಬೇಗ ಮುಗಿದುಹೋದವು ಮೂರನೆಯ ಮುದ್ರಣದ ಪುಸ್ತಕಗಳಲ್ಲಿ ಕೆಲವು ಮಾತ್ರ ಉಳಿದಿವೆ!!! ನಾಲ್ಕನೆಯ ಮುದ್ರಣಕ್ಕೆ ಸಾವಕಾಶವಾದೀತು ಬೇಗ ಬೇಗ ಬರೆದು ತರಿಸಿಕೊಳ್ಳುವುದು ಕಾಗದ ಉತ್ತಮ ಅಚ್ಚು ಅಂದ, ಅಟ್ಟೆ ಭದ್ರ ಅಂಚೆ ವೆಚ್ಚ ಸೇರಿ ಕ್ರಯ ಒಂದು ರೂಪಾಯಿ ಆರು ಆಣೆ ಮಾತ್ರ

ವಿಳಾಸ —ಭಾರತಿ ಸಂಪಂಗಿರಾಮು, ಪೋಸ್ಟು—ಹೊಸಕೋಟೆ—ಡಿಸ್ಟ್ರಿಕ್ಟು, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

25—2—1910 ರಿಂದ 4—3—1910 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	19	12	0	0
ಮೈಸೂರು ,,	3	8	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	*	*	0	0
ಹಾಸನ ,,	0	0	0	0
ಚಿತ್ರದುರ್ಗ ,,	3	4	0	0
ಕಡೂರ್ ,,	6	1	0	0
ಶಿವಮೊಗ್ಗ ,,	0	0	0	0
ಜುಮ್ಲಾ	31	20	0	0

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸೌಮ್ಯನಾಮ ಸಂವತ್ಸರದ ಫಾಲ್ಗುಣ ಶುದ್ಧ ಅಷ್ಟಮಿ ಶುಕ್ರವಾರದಿಂದ ಫಾಲ್ಗುಣ ಶುದ್ಧ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೧೦ ನೇ ಮಾರ್ಚಿ.

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಕೋಡಿ ವಿಮಾನ ಮಾಸ
18	ಶುಕ್ರ ,,	ಅಷ್ಟಮಿ	15 55	ಮೃ	37-36	5
19	ಶನಿ ,,	ನವಮಿ	42-30	ಆ	25-35	6
20	ರವಿ *	ದಶಮಿ	10 2	ಪು	24-31	7
21	ಚಂದ್ರ §	ಏಕಾದಶಿ	38-10	ಷ್ಯ	24-20	8
22	ಕುಜ ·.	ದ್ವಾದಶಿ	38 38	ಶ್ಲೇ	25-60	9
23	ಬುಧ †	ತ್ರಯೋದಶಿ	39-58	ಮ	28-20	10
24	ಗುರು ‡	ಚತುರ್ದಶಿ	12 22	ಪು	33-8	11

ದಗ್ಧಯೋಗ ;; ದಗ್ಧಯೋಗ. * ನಂಜನಗೂಡಿನಲ್ಲಿ ಶ್ರೀಕಂಠಮುಡಿ ಉತ್ಸವ. § ದಗ್ಧಯೋಗ, ಸರ್ವತ್ರ ಏಕಾದಶಿ, ಮೇಲುಕೋಟೆಯಲ್ಲಿ ವೈಮುಡಿ ಉತ್ಸವ. :: ಮೋಹಾಯನ ಗತೋತ್ಸವಿ, ಚಾಮರಾಜೇಶ್ವರ ರಥ, ಚಂದ್ರಪುರದ ಚಂದ್ರಮೌಳೀಶ್ವರ ರಥ † ಪ್ರದೋಷ, ನಂಜನಗೂಡಿನಲ್ಲಿ ಪಂಚ ರಥ, ಶಿವಮೊಗ್ಗದಲ್ಲಿ ಅಗಸ್ತ್ಯೇಶ್ವರ ರಥ ಶಿವಸಮುದ್ರದಲ್ಲಿ ಸೋಮೇಶ್ವರ ರಥ. ‡ ಕಾಮದಹನ, ಮೇಲುಕೋಟೆ ಚೆಲುವರಾಯಸ್ವಾಮಿ ರಥ.

ಪೇಟೇ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು.
ಕಲ್ಲಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೨-೮-೦	೧೨ ೧೨-೦
ಕೆಂಬೂತಿ ಅಕ್ಕಿ ಅವಲ್ ...		೧೨-೮-೦	೧೩-೮-೦
,, ದುಯಂ ...		೧೨-೦-೦	೧೩-೦-೦
ಜಾವಾಣಿ ಅಕ್ಕಿ ...		೧೨-೪-೦	೧೪-೮-೦
ಸಣ್ಣಕ್ಕಿ ಅವಲ್ ...		೧೩-೮-೦	೧೫-೮-೦
,, ದುಯಂ ...		೧೩-೦-೦	೧೪-೦-೦
ಕೊಣಗೀ ಬಿಳೆ ಪಲ್ಲಾ ೧ಕ್ಕೆ		೧೨-೮-೦	೧೨-೮-೦
,, ದುಯಂ		೧೨-೦-೦	೧೧-೪-೦
ಕೈಜ್ ರಾಗಿ ಪಲ್ಲಾ ೧ಕ್ಕೆ ...		೮-೦-೦	೬-೧೨-೦
ಹಾರಾಗಿ ...		೭-೧೨-೦	೬-೪-೦
ಜೋಳ ...		೭-೮-೦	೮-೮-೦
ಹುಳಸಂದೆ ಪಲ್ಲಾ ೧ಕ್ಕೆ ...		೧೧-೦-೦	೧೧-೦-೦
ಹೇ ಅವರೆ ...		೧೧-೦-೦	೧೦-೪-೦
ಹೆಸರು ...		೧೧-೦-೦	೧೦-೨-೦
ಉದ್ದು ...		೧೩-೦-೦	೧೧-೦-೦
ಕಡಲೆ ...		೧೨-೮-೦	೧೦-೧೨-೦
ಎಳ್ಳು ಸೇ ೧೨೭ ಕ್ಕೆ ...		೧೭-೦-೦	೧೫-೦-೦
ಹುರುಳಿ ...		೮-೮-೦	೯-೮-೦
ಹರಳು ೧೨೭ ಸೇರಿಗೆ		೧೪-೦-೦	೧೨-೦-೦
ಶೀಗೇಕಾಯಿ ಮಣ ೧ಕ್ಕೆ ...		೨-೪-೦	೧-೧೨-೦
ಮೆಣಸಿನಕಾಯಿ ...		೪-೧೨-೦	೩-೪-೦
,, ದುಯಂ ...		೪-೮-೦	೩-೦-೦
ಬೆಲ್ಲ ದೊಡ್ಡ ಅಚ್ಚು ...		೮-೮-೦	ಮ ೨-೨-೦
ಅಚ್ಚಿನ ಮಣ ೧ಕ್ಕೆ ...		೫-೦-೦	೪-೮-೦
ಉಂಡೆ ,, ...		೫-೮-೦	೪-೬-೦
ಕೊತ್ತಂಬರಿ ಪಲ್ಲಾ ೧ಕ್ಕೆ ...		೧೦-೮-೦	೧೦-೪-೦
ಮೆಂತ್ಯ ,, ...		೬-೦-೦	೫-೧೨-೦
ಹುಣಿಸೇ ಹಣ್ಣು ...		೨-೦-೦	೧-೬-೦
,, ಹಳೇದು ...		೧-೧೨-೦	೧-೪-೦
ತುಪ್ಪ ಮಣ ೧ಕ್ಕೆ ...		೧೬-೮-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ...		೫-೪-೦	೪-೮-೦
ತೆಂಗಿನಕಾಯಿ ೧೦೦ಕ್ಕೆ ...		೫-೦-೦	೬-೪-೦
ಆಲೇಕಾಯಿ ಮಣ ೧ಕ್ಕೆ ...		೦-೧೨-೦	೦-೧೨-೦
ಹಿಂಡ್ಲಕದ ಕಾಯಿ ಮಣ ೧ಕ್ಕೆ ...		೦-೧೨-೦	೦-೧೨-೦
ಚರ್ಮ (ಕೌ) ಕೆಂಪು ...		೧೫-೯-೦	೧೫ ೫-೦
,, ,, ಹಸಿಮೆ ...		೧೬-೦-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ ...		೨೪-೮-೦	೨೪ ೬-೦
ಚಿನ್ನ ಗಟ್ಟಿ ತೊಲ ೧೦೦ಕ್ಕೆ ...		೬೩-೪-೦	೬೪-೮-೦

ತಾಲ್ಲೂಕು ವರ್ತಮಾನಗಳು.

ಗುಬ್ಬಿ.—ಗುಬ್ಬಿಯಲ್ಲಿ ಶ್ರೀಚನ್ನ ಬಸವೇಶ್ವರಸ್ವಾಮಿಯ ರಥೋತ್ಸವವೂ ಜಾತ್ರೆಯೂ ಮಾರ್ಚಿ ೫. ೨೦ ರಿಂದ ಪ್ರಾರಂಭವಾಗಿ ತಿಂಗಳ ಕೊನೆಯವರಿಗೂ ಜರುಗುತ್ತದೆ. ಅಗ್ನಿ ಯೆತ್ತುಗಳ ಪರಿಷೆಯೂ ಮಾಮೂಲ್ ಪ್ರಕಾರ ನಡೆಯುತ್ತದು. ಈ ಪ್ರಾಂತ್ಯಗಳ ಹಳ್ಳಿಕಾರಜಾತಿಯ ದನಗಳು ವಿಶೇಷವಾಗಿ ಕೂಡುತ್ತವೆ. ಶ್ರೇಷ್ಠವಾದ ರಾಸುಗಳಿಗೆ ಬಹುಮಾನಗಳು ಕೊಡಲಾಗುವವು. ಈಗ ಇಲ್ಲಿ ಜಲಪ್ರವಾಹಗಳ ಸೌಕರ್ಯ ಬಹಳ ಚನ್ನಾಗಿದೆ. ಯಾವ ತರಹಾ ರೋಗಾದಿಗಳ ಸೋಂಕೂ ಇಲ್ಲದೆ ಹವಾ ಅನುಕೂಲವಾಗಿದೆ. ಈ ಜಾತ್ರೆಗೂ ಪ್ರದರ್ಶನಕ್ಕೂ ಬಹು ಜನರು ಬಂದಾರೆಂದು ನಿರೀಕ್ಷಿಸಿದೆ

ನಂಜನಗೂಡು.—ಈ ಊರಿನಲ್ಲಿ ಬಿಸಲಿನ ಝಳವು ಸಹಿಸಲಶಕ್ಯವಾಗಿರುವುದು. ಭಾವಿನಾಸಿಗಳು ಸಾಧಾರಣವಾಗಿರುವುವು. ಕೆಲವು ದಿನಗಳ ಕೆಳಗೆ ಕುರುಬಗೇರಿಯಲ್ಲಿ ಮೂರು ಮನೆಗಳಿಗೆ ಬೆಂಕಿ ಬಿದ್ದು ಒಂದು ಮನೆಯು ಪೂರ್ತಿಯಾಗಿ ಸುಟ್ಟು ಹೋಯಿತು. ಇನ್ನೆರಡು ಮನೆಗಳಿಗೆ ಬೆಂಕಿ ಬೀಳಲು, ದಯಾಳುಗಳಾದ ಅಮಲ್ದಾರರೇ ಮುಂತಾದವರ ಪ್ರಯತ್ನಗಳಿಂದ ಉಳಿದುಕೊಂಡವು. ಇಷ್ಟಾದರೂ ದನಕರುಗಳಿಗೂ ಜನಗಳಿಗೂ ಯಾವ ನಷ್ಟವೂ ಸಂಭವಿಸದೆ ಇದ್ದದ್ದು ಸಂತೋಷಕರವಾಗಿದೆ. ವೈಶಾಖ ಋತುವಾಗಿರುವುದರಿಂದ ಜನರು ತುಂಬಾ ಎಚ್ಚರಿಕೆಯಾಗಿರಬೇಕಾಗಿದೆ.—ರೆವಿನ್ಯೂ ಕಮಿಷನರ್‌ರವರು ಬಂದು ಎಲ್ಲಾ ಇಲಾಖೆಗಳ ಕಾರುಬಾರುಗಳನ್ನೂ ಇನ್‌ಸ್ಪೆಕ್ಟ್ ಮಾಡಿಕೊಂಡು ಹೊರಟುಹೋದರು. ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು ಬಂದು ಎಲ್ಲಾ ಸ್ಕೂಲುಗಳನ್ನೂ ಇನ್‌ಸ್ಪೆಕ್ಟ್ ಮಾಡಿದರು.—ಇಲ್ಲಿನ ಮಿಡ್ಲ್ ಇಂಗ್ಲಿಷ್ ಸ್ಕೂಲಿನಲ್ಲಿ ಇದಕ್ಕೆ ಮುಂಚೆ ಉಪಾಧ್ಯಾಯರುಗಳು ಕನ್ನಡ ಇಂಗ್ಲಿಷ್ ಪಾಠಗಳನ್ನು ವ್ಯಾಸಂಗ ಮಾಡಿಸುವುದು ಅಸಾಧ್ಯವಾಗಿತ್ತು. ಈ ಕಷ್ಟವನ್ನು ಪರಿಹರಿಸಲೋಸ್ಕರ ಆ ಇಲಾಖೆಯ ಮುಖಂಡರಾದ ಘನ ಸಾಹೇಬರವರು ಈ ವರುಷದ ಫೆಬ್ರವರಿ ತಿಂಗಳಿಂದ ಮತ್ತೊಬ್ಬ ಉಪಾಧ್ಯಾಯರನ್ನು ಹೊಸದಾಗಿ ನೇಮಕ ಮಾಡಿ ಕೊಟ್ಟಿರುವುದರಿಂದ ಮುಂದೆ ಕನ್ನಡ ಇಂಗ್ಲಿಷ್ ಪಾಠಗಳನ್ನು ಇಲ್ಲಿಯೇ ಅಭ್ಯಾಸ ಮಾಡಿಸುವುದು ಸಾಧ್ಯವಾಗಿದೆ. ಇಲ್ಲಿನ ವಿದ್ಯಾಭಿಮಾನಿಗಳೆಲ್ಲರೂ ಇನ್ನೂ ಹೆಚ್ಚಾಗಿ ತಮ್ಮ ಬಾಲಕರನ್ನು ಈ ಸ್ಕೂಲಿಗೆ ಕಳುಹಿಸಿ ಇದರ ಸ್ಥಾಪಕರ ಪ್ರಯತ್ನಗಳಿಗೆ ಸಾರ್ಥಕವನ್ನೂ ಉಪಾಧ್ಯಾಯರುಗಳಿಗೆ ಪ್ರೋತ್ಸಾಹವನ್ನೂ ಕೊಡುತ್ತಾರೆಂದು ನಿರೀಕ್ಷಿಸಬೇಕಾಗಿದೆ.

ದೊಡ್ಡ ಬಳ್ಳಾಪುರ.—ಹವಾ ಚನ್ನಾಗಿದೆ. ಮಾಗೀಕಾಲದ ಚಳಿಯಲೆಗಳು ಮುಗಿಯುತ್ತ ಬಂದಿವೆ. ಬಿಸಿಲು ಬರಬರ ಅಧಿಕವಾಗಿ ವಸಂತಋತುವಿನ ಲಕ್ಷಣಗಳು ಮನೋಹರ್ಷ್ಯವಾಗಿವೆ. ಈ ಊರಿನ ಜನಸಂಖ್ಯೆ ಭಾರಿಯಾಗಿಯೂ ಊರು ದೊಡ್ಡದಾಗಿಯೂ ಎಲ್ಲಾ ರಸ್ತೆಗಳೂ ಕಕ್ಕಸುಮಟ್ಟಿಗೂ ಶುಚಿಯಾಗಿಯೂ ಇವೆ. ಆದರೆ ಊರಾಚೆ ಅಲ್ಲಲ್ಲಿ ಪಾಳುನಿವೇಶನಗಳೂ ಲಾಂಟಾನ ಎಂಬ ಕಾಡು ಪೋದೆ ಮುಳ್ಳುಗಿಡಗಳೂ ಬಹು ಪ್ರಬಲವಾಗಿರುವುದು ದೌರ್ಭಾಗ್ಯವಾಗಿದೆ.—ಇಲ್ಲಿ ಸುಮಾರು ೨,೦೦೦ ಮಗ್ಗಗಳುಂಟು. ಸೀರೆಗಳು ಸಾವಿರಗಟ್ಟಲೆ ತಯಾರಾಗಿ ಅನೇಕ ಊರುಗಳಿಗೆ ಹೋಗುತ್ತವೆ. ಇವುಗಳೆಲ್ಲಾ ಅಸ್ಸಲ್ ಬಣ್ಣದಿಂದಲೂ ಅನೇಕ ನಮೂನೆಗಳಿಂದಲೂ ಮಾರಲ್ಪಡುತ್ತವೆ.—ವರ್ತಕರಲ್ಲಿ ಅನೇಕರು ಬಹು ದೊಡ್ಡ ಮನುಷ್ಯರಾಗಿದ್ದಾಗ್ಯೂ ಕೆಲವರಲ್ಲಿ ಕಮ್ಮಿ ಅಳತೆಯ ಗಳು ಕಮ್ಮಿ ತೂಕದ ಬೊಟ್ಟುಗಳೂ ಉಂಟೆಂದು ತಿಳಿಯಬಂದಿದೆ. ಈ ವಾರದಲ್ಲಿ ಅವರು ಎಚ್ಚರಿಕೆ ವಿವೇಕ ತಂದುಕೊಳ್ಳುವುದು ವಾಸಿ. ಇಲ್ಲವಾದರೆ ಮುಂದಿನ ವಾರದಲ್ಲಿ ಅವರುಗಳೂ ಅವರ ಕಮ್ಮಿ ಸೇರುಗಳೂ ಕಮ್ಮಿ ಬೊಟ್ಟುಗಳೂ ಪೋಲೀಸ್ ಆಫೀಸಿನ ಸೇರಬೇಕಾಗುವದು. ಆದ್ದರಿಂದಲೇ ಮುಂಚಿತವಾಗಿ ಎಚ್ಚರಿಸಿದೆ. ಕೆಲವು ವರ್ತಕರು ಹಳ್ಳಿಯವರನ್ನು ದೊಡ್ಡ ಚಿಕ್ಕ ಸೇರುಗಳಿಂದ ಮೋಸಪಡಿಸುವುದು ಸಹ ತಿಳಿಯಬಂದಿದೆ. ಅಮಲ್ದಾರ್ರೂ ಪೋಲೀಸ್ ಇನ್‌ಸ್ಪೆಕ್ಟರವರೂ ದಯವಿಟ್ಟು ಈ ವಿಷಯಗಳನ್ನು ತಮ್ಮ ಡೈರಿಗಳಲ್ಲಿ ಗುರುತುಮಾಡಿಕೊಂಡು ಮುಂದಿನ ವಾರ ಆದ ವಾಯಿದೆ ಬಗ್ಗೆ ದಯಮಾಡುವರೆಂದು ವರ್ತಕರು ಊಹಿಸಬಹುದು.—ಮ್ಯುನಿಸಿಪಾಲಿಟಿಯಿಂದ ಈ ಊರಿಗೆ ನಲ್ಲಿ ನೀರು ಸರಬರಾಜು ಆಗುತ್ತದೆಂಬ ವದಂತಿ ಇದೆ. ಆದರೆ ಯಾವಾಗ ಕೈಗೂಡುವದೋ ಗೊತ್ತಾಗಲಿಲ್ಲ.—ಇಲ್ಲಿನ ಸ್ಕೂಲುಗಳೆಲ್ಲಾ ಅಭಿವೃದ್ಧಿಸ್ಥಿತಿಯಲ್ಲಿವೆ.

ದಾವಣಗೆರೆ, ಹರಿಹರ.—ಈ ಪ್ರಾಂತ್ಯ ದಿನೇ ದಿನೇ ಬಿಸಲು ಹೆಚ್ಚುತ್ತಾ ಬರುತ್ತಿದೆ. ಹೀಗಿದ್ದರೂ ಕೂಡ ದಾವಣಗೆರೆಯಲ್ಲಿ ಪ್ಲೇಗಿನ ಆತಂತ್ರವು ನಿಂತುಹೋಗಲಿಲ್ಲ. ಕಳೆದ ಎರಡು ವಾರಗಳ ವರೆಗೂ ಊರಿನಲ್ಲಿ ವಿಶೇಷ ಗಲಾಟೆಯೇನೂ ಇದ್ದ ಹಾಗೆ ಕಾಣಲಿಲ್ಲ. ಅಲ್ಲಲ್ಲಿ ಇಲಿಗಳು ಮಾತ್ರ ಸಾಯುತ್ತಿದ್ದವು. ಈಗ ಒಂದು ವಾರದಿಂದ ಸೋಂಕು ವ್ಯಾಪಿಸಿ ಕೆಲವರನ್ನು ಕೊಂದುಬಿಟ್ಟಿತು. ಪ್ರಜೆಗಳು ಹೆದರಿ ಈಗಲಾದರೂ ಊರನ್ನು ಬಿಟ್ಟು ಪ್ರಾಣವನ್ನು ಕಾಪಾಡಿಕೊಳ್ಳೋಣವೆಂದು ಯೋಚಿಸುತ್ತಿದ್ದಾರೆ. ಆಗಲೇ ಕೆಲವರು ಹಲವು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ವರ್ತಕ ಮಂಡಲಿಯವರಿಗಂತೂ ಊರನ್ನು ಬಿಟ್ಟು ಹೋಗುವುದು ತುಂಬಾ ಪ್ರಯಾಸಕರವಾಗಿರುವಂತೆ ತೋರುತ್ತದೆ. ಒಂದು ಕಡೆಯಲ್ಲಿ ದಿನಸು, ಮತ್ತೊಂದು ಕಡೆ ಗಂಟು; ಯಾವುದನ್ನು ಬಿಡೋಣ, ಯಾವುದನ್ನು ಬಿಡೋಣ ಎಂಬ ಆಲೋಚನೆಯಲ್ಲಿರುವಂತೆ ಕಾಣುತ್ತದೆ. ಯಾವ ಸಂದುಗೊಂದಿನಲ್ಲಿ ನೋಡಿದರೂ ದುರ್ಗಂಧದ ವಾಸನೆಯಿಂದ ಮೂಗು ಎಲ್ಲಿ ಬಿದ್ದು ಹೋಗುವದೋ ಎಂಬ ಭಯವುಂಟಾಗುವದು. ಚರಂಡಿ ಕಾಗೆಗಳ ಆರ್ಭಟವಂತೂ ನಿವಾರಣವಿಲ್ಲ. ದಾವಣಗೆರೆ ಮ್ಯುನಿಸಿಪಾಲಿಟಿಯವರು ಬಡವರಲ್ಲ. ಆದರೆ ತಮ್ಮ ಹಣವನ್ನು ತುಂಬಾ ಜಾಣತನದಿಂದ ಖರ್ಚು ಮಾಡುವ ಹಾಗೆ ತೋರುತ್ತದೆ.—ಇನ್ನು ೭—೮ ದಿನಗಳೊಳಗಾಗಿ ಈ ಊರಿನಲ್ಲಿ ದುರ್ಗಾ ದೇವತೆಯ ಜಾತ್ರೆಯೊಂದು ಪ್ರಾರಂಭವಾಗುವದು. ಈಗಲೇ ಊರಿನ ಸ್ಥಿತಿ ಹೀಗಿರುವುದಾದರೆ ಜಾತ್ರೆ ಮುಗಿಯುವಷ್ಟರೊಳಗೆ ಏನಾಗುವುದೋ ಹೇಳಲಿಕ್ಕಾಗದು. ನಮ್ಮ ಸಬ್ ಡಿವಿಜನ್ ಸಾಹೇಬರೂ ತಾಲ್ಲೂಕು ಅಮಲ್ದಾರರೂ ಬೇರೆ ಬೇರೆ ಕಡೆಗಳಿಂದ ಜಾತ್ರೆಗೆ ಬರುವ ಜನಗಳನ್ನು ಸೇರಿಸ ಕೂಡದೆಂದು ಹುಕುಂ ಕೊಟ್ಟಿರುವಂತೆಯೂ, ಗ್ರಾಮದ ಮುಖಂಡರಲ್ಲಿ ಒಬ್ಬಿಬ್ಬರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಲ್ಲಿ ಹೇಳಿಕೊಂಡು ಈ ಹುಕುಮನ್ನು ರದ್ದು ಮಾಡಿಸಿಕೊಂಡು ಜಾತ್ರೆಯನ್ನು ಮಾಮೂಲಿನಂತೆ ನಡಿಸಲು ಪ್ರಯತ್ನ ಪಡುತ್ತಿದ್ದಾರೆಂತಲೂ ಕೇಳುತ್ತೇನೆ. ಪ್ರಜಾ ಕ್ಷೇಮ ನೆಮ್ಮದಿಗಳನ್ನು ಕಾಪಾಡುವುದು ಸರ್ಕಾರದವರ ಕರ್ತವ್ಯವಾಗಿರುವದರಿಂದ ಯಾಗಾದರೂ ಅದಕ್ಕೆ ಕುಂದಕ ಬಾರದಂತೆ ನೋಡಿಕೊಂಡಾರೆಂದು ನಿರೀಕ್ಷಿಸಲ್ಪಟ್ಟಿದೆ. ಭಕ್ತಾದಿಗಳು ಜಾತ್ರೆ ಕಾಲದಲ್ಲಿ ಬಡಬಗ್ಗರಿಗೆ ಅನ್ನಾ ಹಾಕುವ ಉದ್ದೇಶದಿಂದ ಬೇಕಾದಷ್ಟು ಸಾಮಗ್ರಿಗಳನ್ನು ಒದಗಿಸಿಕೊಂಡು, ಜನರು ಬಾರದಿದ್ದರೆ ಇಷ್ಟೆಲ್ಲಾ ವ್ಯರ್ಥವಾಗುತ್ತದಲ್ಲಾ ಎಂದು ಚಿಂತಿಸುವವರಾಗಿದ್ದಾರೆ.—ಇಲ್ಲಿ ಮ್ಯುನಿಸಿಪಲ್ ಮೀಟಿಂಗ್ ನಡೆದು ಅದರಲ್ಲಿ ಇನ್ನು ಮೇಲೆ ಬೀದಿಗಳಿಗೆ ವಾಷಿಂಗ್‌ಟನ್ ಎಂಬ ಪ್ರಕಾಶವಾದ ದೀಪಗಳನ್ನು ಹಚ್ಚುವಂತೆಯೂ, ಹಾಲಿ ಹರಿಹರಕ್ಕೆ ಏರ್ಪಡಿಸಿರುವಂತೆಯೇ ದಾವಣಗೆರೆಗೂ ತುಂಗಭದ್ರಾ ಹೊಳೆಯಿಂದ ನೀರಿನ ಸರಬರಾಜು ಮಾಡುವ ವಿಷಯದಲ್ಲಿ ಯೋಚನೆಗಳು ಒಪ್ಪಿರುವುದಾಗಿಯೂ ವರ್ತಮಾನವುಂಟು.—ಹರಿಹರಕ್ಕೆ ಮೇಲ್ಕಂಡ ಏರ್ಪಾಡು ಆಗಿ ಒಂದು ವರುಷವಾಯಿತು. ಇದುವರೆಗೂ ಸುಮ್ಮನಿದ್ದು ಈಗೀಗ ಸರ್ಕಾರದವರು ನೀರಿನ ತೆರಿಗೆಯನ್ನು ಹಾಕುವ ಸಂಗತಿಯು ಅನೇಕರಿಗೆ ಭಯವನ್ನುಂಟುಮಾಡಿದೆ. ಮನೆಗಂದಾಯವೆಷ್ಟೋ ಅಷ್ಟೇ ನೀರಿನ ತೆರಿಗೆಯಂತೆ. ಅಂದರೆ, ಮನೆಗಂದಾಯವೂ ತೆರಿಗೆಯೂ ಸೇರಿ ಮನೆಗಂದಾಯದ ಇಮ್ಮಡಿಯಾಯ್ತು. ಬಡಬಗ್ಗರ ವಿಷಯ ಸರ್ಕಾರದವರು ಯಾವ ರಿಯಾಯಿತಿ ತೋರಿಸುವರೋ ಮುಂದೆ ಗೊತ್ತಾಗಬೇಕು. ಗ್ರಾಮಾಂತರಗಳಲ್ಲಿ ನೀರಿನ ಕುಗ್ಗುವು ಹೆಚ್ಚುತ್ತಾ ಬಂದಿದೆ. ಕೆರೆ ಕಟ್ಟೆ ಹೊಂಡ ಮುಂತಾದವುಗಳಲ್ಲಿ ನೀರು ಬತ್ತಿ ಹೋಗುತ್ತಾ ಬರುತ್ತಿದೆ. ಹರಿಹರಕ್ಕೆ ೧೨ ಮೈಲಿ ದೂರದಲ್ಲಿ ಮಲೆಬೆನ್ನೂರು ಎಂಬ ಗ್ರಾಮ ಒಂದುಂಟು. ಇದರಲ್ಲಿ ಸುಮಾರು ೪೫೦ ಮನೆಗಳಿರಬಹುದು. ೯೦ ಕ್ಕೆ ಕಡಮೆ ಇಲ್ಲದ ಭಾವಿಗಳು ಈ ಗ್ರಾಮದಲ್ಲಿರುತ್ತೆ. ಅಂದರೆ, ೫ ಮನೆಗೆ ೧ ಭಾವಿಯುಂಟಾಯ್ತು. ಆದರೂ ನೀರಿನ ಕ್ಷಾಮವನ್ನು ಹೇಳಲಿಕ್ಕಾಗದು. ಭಾವಿಗಳನ್ನು ನೋಡಿದರೆ ಪಾತಾಳಕ್ಕೆ ಇಳಿದಿರುವ ಹಾಗೆ ಕಾಣುತ್ತೆ. ಗೋಚುವುದಕ್ಕೂ ನೀರು ಸಾಲದು. ಗ್ರಾಮಸ್ಥರು ತಾವು ಇದುವರೆಗೆ ಇಂಥಾ ನೀರಿನ ಕ್ಷಾಮವನ್ನು ಕಾಣಲಿಲ್ಲವೆಂದು ಹೇಳುತ್ತಾರೆ. ಸೂಳೆಕೆರೆ ಹಳ್ಳಕ್ಕೆ ಕಟ್ಟೆ ಕಟ್ಟಿ ದೊಡ್ಡ ಕೆರೆಯನ್ನು ಕಟ್ಟುವ ಏರ್ಪಾಡು ಯಾವ ಕಾರಣದಿಂದಲೋ ತಪ್ಪಿಗಾಯ್ತೆಂದು ಜನರು ಮಾತಾಡಿಕೊಳ್ಳುತ್ತಾರೆ.—ಈ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ. ಈಗ ಇಲ್ಲಿಗೆ ಮೆ॥ ಸ್ವೀವರ್ ಬಸಪ್ಪನವರ ಕುಮಾರರು ಮ॥ ಚನ್ನಪ್ಪ ಶೆಟ್ಟಿಯವರು ವರ್ಗವಾಗಿ ಬಂದಿರುತ್ತಾರೆ. ಇವರ ವಿಷಯ ಜನರು ತುಂಬಾ ಸಂತೋಷಪಡುವವರಾಗಿರುತ್ತಾರೆ.

ತೀರ್ಥಹಳ್ಳಿ.—ಕಳೆದ ಫೆಬ್ರವರಿ ತಿಂಗಳು ಅಗುಂಬಿ ಕಡೆ ಮೂರೆಲೆ ಜೂಜಾಟವನ್ನು ಆಡುತ್ತಿದ್ದ ಹತ್ತು ಮಂದಿ ಜೂಜುಗಾರರನ್ನು ಬಹು ಸಾಹಸದಿಂದ ಪೋಲೀಸ್ ಅಧಿಕಾರಿಗಳು ಪತ್ತೆ ಮಾಡಿ ಹಿಡಿದು ಶಿಕ್ಷೆಗೆ ಗುರಿಮಾಡಿದರು. ಹತ್ತು ಮಂದಿಯಲ್ಲಿ ಒಬ್ಬನು ಬ್ರಾಹ್ಮಣನು, ಒಬ್ಬ ಕೊಂಕಣಿಯು, ಬಾಕಿ ಎಂಟು ಮಂದಿ ಅಗಸಾಲೆಗಳಾಗಿದ್ದರು. ಇಂಥಾ ಜೂಜಾಟವನ್ನು ನಡಿಸಿ ಹಣವನ್ನೆಲ್ಲಾ ವ್ಯರ್ಥವಾಗಿ ಹಾಳುಮಾಡುವಂಥವರಿಗೆ ಪೂರಾ ಶಿಕ್ಷೆಯಾಗುವಂತೆ ಹೊಸದಾಗಿ ಸರ್ಕಾರದವರು ಒಂದು ಆಪ್ಪಣೆ ಕೊಟ್ಟಿರುವುದು ಬಹು ಉತ್ತಮವಾಗಿರುತ್ತದೆ. ದುಂದುಗಾರರಾದ ಯೌವನಸ್ಥರಾದ ಹಣಗಾರರಿಗೆ ಈ ಕಾನೂನು ಸದ್ಯಕ್ಕೆ ವಿರೋಧವಾಗಿ ಕಂಡುಬಂದರೂ ಬಹು ಜನರಿಗೆ ಪ್ರಯೋಜನಕರವಾಗಿರುತ್ತದೆ.—ಕಳೆದ ಫೆಬ್ರವರಿ ಅಂತ್ಯದಲ್ಲಿ ಅಂದರೆ ೨೪-೨೫ ನೇ ತಾರೀಖಿನಲ್ಲಿ ಒಬ್ಬಾನೊಬ್ಬ ಬೈರಾಗಿಯು ತೀರ್ಥಹಳ್ಳಿಯಿಂದ ೬ ಮೈಲು ದೂರದಲ್ಲಿರುವ ಕಲ್ಲುಮನೆ ಎಂಬ ಗ್ರಾಮಕ್ಕೆ ಬಹು ಪ್ರಯಾಸದೊಡನೆ ಪ್ರಯಾಣ ಮಾಡಿಕೊಂಡು ಬಂದು ಪಬ್ಲಿಕ್ ರಸ್ತೆ ಪಕ್ಕದಲ್ಲಿ ಮರದ ಕೆಳಗೆ ಪ್ರಾಣ ಬಿಟ್ಟನು. ಗ್ರಾಮದ ಪಟೇಲರಿಗೆ ವರ್ತಮಾನ ತಲಪಿದ ಕೂಡಲೆ ಪಟೇಲರು ೪—೫ ಮೈಲು ದೂರದಲ್ಲಿದ್ದ ಒಂದು ಪೋಲೀಸ್ ಠಾಣಾಕ್ಕೆ ಹೇಳಿಕಳುಹಿಸಿದರು. ಅನಂತರ ಅಲ್ಲಿದ್ದ ಪೋಲೀಸ್ ಅಧಿಕಾರಿಗಳು ೧೦ ಮೈಲು ದೂರದಲ್ಲಿರುವ ತೀರ್ಥಹಳ್ಳಿ ಹೆಡ್ ಕ್ವಾರ್ಟರ್ ಪೋಲೀಸ್ ಸ್ಟೇಷನ್‌ಗೆ ವರ್ತಮಾನ ಕೊಟ್ಟರು. ಘನಹ ಹೆಡ್ ಕ್ವಾರ್ಟರಿನ ಪೋಲೀಸ್ ಅಧಿಕಾರಿಗಳು ಅಲ್ಲಿಗೇನೇ ವರ್ತಮಾನ ಕೊಟ್ಟರು. ಸಬ್ ಸ್ಟೇಷನ್‌ನಲ್ಲಿದ್ದ ಅಧಿಕಾರಿಗಳು ೬ ಮೈಲು ದೂರದಲ್ಲಿ ನಡೆಯುತ್ತಿದ್ದ ಒಂದು ಜಾತ್ರೆಗೆ ಹೋಗಿದ್ದರು. ಬೇವಾರಸಾದ ಬೈರಾಗಿಯ ಹೆಣವು ಇನ್ನೂ ದಫನ್ ಆಗದೆ ಪೂರಾ ಎರಡು ದಿನಗಳ ತನಕ ರಸ್ತೆಯ ಪಕ್ಕದಲ್ಲಿಯೇ ಬಿದ್ದಿತ್ತು. ಗ್ರಾಮದ ಪಟೇಲರೂ ಒಬ್ಬ ಹೋಲೆಯನೂ ಎರಡು ದಿನಗಳ ವರಿವಿಗೂ ಅದರ ಉಸ್ತುವಾರಿಯನ್ನು ಮಾಡಬೇಕಾಗಿ ಬಂತು. ಅನಂತರ ಮೂರನೇ ದಿನ ಬೈರಾಗಿಯ ದೇಹವನ್ನು ದಫನ್ ಮಾಡುವಂತೆ ಜಾತ್ರೆಯಿಂದ ಅಪ್ಪಣೆ ಬಂತು. ಇಂಥಾ ಬೇವಾರಸು ಹೆಣಗಳನ್ನು ಹಿಂದೆ ೨—೩ ದಫನ್ ಮಾಡಿದ ಹೊಲೆಯರಿಗೆ ಸರ್ಕಾರದಿಂದ ಏನೂ ಪ್ರೋತ್ಸಾಹ ದೊರೆಯದೆ ಹೋದದ್ದನ್ನು ಈ ಸಮಯದಲ್ಲಿ ಹೊಲೆಯರು ಜ್ಞಾಪಕ ಮಾಡಿಕೊಂಡು ಗೊಣಗಾಟ ಮಾಡುವದಕ್ಕೆ ಪ್ರಾರಂಭಿಸಿದರು. ಬೇವಾರಸು ಹೆಣವನ್ನು ದೀರ್ಘಕಾಲ ದಫನ್ ಮಾಡದೆ ಬಿಡುವುದು ತುಂಬಾ ಅನಾರೋಗ್ಯವಾಗಿರುತ್ತೆ.—ತೀರ್ಥಹಳ್ಳಿ ಗ್ರಾಮಕ್ಕೆ ೬ ಮೈಲು ದೂರದಲ್ಲಿ ಅರಗವೆಂಬ ಒಂದು ಸಣ್ಣ ಗ್ರಾಮವಿರುತ್ತದೆ. ಇಲ್ಲಿ ಒಂದು ಪಾಠಶಾಲೆಯೂ, ಒಂದು ಸಬ್ ಪೋಸ್ಟಾಫೀಸೂ ಇರುವವು. ಸ್ಕೂಲ್ ಉಪಾಧ್ಯಾಯರಾದ ಶಾಮಭಟ್ಟರೆಂಬುವರು ಎರಡು ಬಾಬುಗಳ ಕೆಲಸವನ್ನೂ ನೋಡುತ್ತಾ ಇದ್ದರು. ಸುಮಾರು ಕಳೆದ ಡಿಸೆಂಬರ್ ತಿಂಗಳಲ್ಲಿ ಒಬ್ಬ ದೊಡ್ಡ ಮನುಷ್ಯರು ಮದ್ರಾಸ್ ಕಡೆ ಇರತಕ್ಕ ತಮ್ಮ ಸಂಬಂಧಿಗಳಿಗೆ ಒಂದು ನೂರು ರೂಪಾಯಿನ ನೋಟನ್ನು ರೆಜಿಸ್ಟರ್ ಮಾಡುವಂತೆ ಸದರಿ ಗ್ರಾಮದಲ್ಲಿರುವ ಪೋಸ್ಟಾಫೀಸಿಗೆ ತೆಗೆದುಕೊಂಡು ಹೋಗಿ ಶಾಮಭಟ್ಟರ ಕೈಗೆ ಕೊಟ್ಟು, ಇದನ್ನು ರೆಜಿಸ್ಟರ್ ಮಾಡಿರೆಂದು ಎದುರಿನಲ್ಲಿಯೇ ನಂತು ಕ್ರಮದಂತೆ ರೆಜಿಸ್ಟರ್ ಮಾಡಿಸಿ ರಸೀತಿಯನ್ನು ಪಡೆದುಕೊಂಡು ಮನೆಗೆ ಹೋಗಿ ಸಂಬಂಧಿಕರಿಗೆ ಒಂದು ನೂರು ರೂಪಾಯಿ ನೋಟನ್ನು ರೆಜಿಸ್ಟರ್ ಮಾಡಿಸುತ್ತೇನೆಂದು ವರ್ತಮಾನ ಕೊಟ್ಟರು. ನೋಟಿನ ನಂಬರು ಮುಂಚಿತವಾಗಿ ಸ್ಲಿಪ್ಪಲ್ಲಾ ಒಂದು ಕಡೆ ಬರೆದಿಟ್ಟುಕೊಂಡಿದ್ದರು. ಒಂದೆರಡು ದಿನಗಳು ಹೋದ ನಂತರ ಮದ್ರಾಸ್ ಸಂಬಂಧಿಗಳಿಂದ ತಮಗೆ ನೂರು ರೂಪಾಯಿನ ನೋಟು ಒಳೀ ಖಾಲಿ ಕವರು ಮಾತ್ರ ಬಂದಿರುತ್ತೆ ಎಂಬ ಸುದ್ದಿಯು ನೋಟನ್ನು ಕಳುಹಿಸಿದ್ದವರಿಗೆ ಬಂತು. ಅನಂತರ ಹಣ ಕಳುಹಿಸಿದ ಸಾಹುಕಾರರು ಪೋಸ್ಟ್ ಮಾಸ್ಟರಾದ ಶಾಮಭಟ್ಟರಿಗೆ—ನಾನು ನೂರು ರೂಪಾಯಿನ ನೋಟನ್ನು ಕಳೆದ ವಾರ ಮದ್ರಾಸಿಗೆ ಕಳುಹಿಸಿಕೊಟ್ಟೆನಲ್ಲಾ ? ಅದರ ಹಣ ಹೋಗಲಿಲ್ಲವಂತೆ. ಖಾಲಿ ಕವರು ಬಂತೆಂದು ವರ್ತಮಾನ ಬಂದಿರುತ್ತದೆ. ನೋಡಿ ಎಂದು ಕೇಳಿದಾಗ ಶಾಮಭಟ್ಟರು—ನಾನು ಏನುಮಾಡಲಿ ? ನಿಮ್ಮ ಎದುರಿನಲ್ಲಿ ರೆಜಿಸ್ಟರ್ ಮಾಡಿ ಸೀಲು ಮಾಡಿ ರಸೀದಿ ನಿಮ್ಮ ಕೈಗೆ ಕೊಟ್ಟಿರುತ್ತೇನೆ ಅಂದುಬಿಟ್ಟರು. ಮುಂದೆ ಹಣ ಕಳುಹಿಸಿದವರು ನೋಟಿನ ನಂಬರನ್ನು ಸರಕಾರದವರ ಮೂಲಕ ಇಸ್ತಿಹಾರು ಮಾಡಿಸಿದರು. ಶಾಮಭಟ್ಟರು ಕೆಲವು ದಿನ ರಜಾ ಪಡೆದುಕೊಂಡು ಹೋಗಿಬಿಟ್ಟರು. ಕಳೆದು ಹೋಗಿದ್ದ ನಂಬರಿನ ನೋಟನ್ನು ಬದಲಾವಣೆಗೆ ಒಬ್ಬರ ಹತ್ತರಕ್ಕೆ ತೆಗೆದುಕೊಂಡು ಹೋದಾಗ್ಗೆ ಪೋಲೀಸ್ ಅಧಿಕಾರಿಗಳು ಕಂಡು ಹಿಡಿದು ತೀರ್ಥಹಳ್ಳಿ ಲಾಕಪ್ಪಿಗೆ ಸೇರಿಸಿದಾರೆ

ಇಂಗ್ಲೀಷು ಕಲಿಯುವ ಪುಸ್ತಕ.

33-2

ಈ ಪುಸ್ತಕದ ಸಹಾಯದಿಂದ ಇಂಗ್ಲೀಷು ಭಾಷೆಯನ್ನು ಓದುವದಕ್ಕೂ ಬರೆಯುವದಕ್ಕೂ ಮಾತನಾಡುವದಕ್ಕೂ ಸಹ ಉಪಾಧ್ಯಾಯರ ಸಹಾಯವಿಲ್ಲ ದೆಯೇ ಕೆಲವು ತಿಂಗಳುಗಳೊಳಗಾಗಿಯೇ ಚನ್ನಾಗಿ ಕಲಿಯಬಹುದು ಇಂಗ್ಲೀಷು ಭಾಷೆಯನ್ನು ಕಲಿಯಬೇಕೆಂದು ಅಪೇಕ್ಷೆಯುಳ್ಳವರಿಗೆಲ್ಲಾ ಅತ್ಯಂತ ಅವಶ್ಯಕವಾದದ್ದು ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ (೧-೮-೦) ಈ ಕೆಳಗಿನ ವಿಳಾಸದಾರರಿಂದ ತರಿಸಿಕೊಳ್ಳಿ. ವಿಳಾಸ —

ಬಿ ರಾಮಾನುಜಾಚಾರ್ಯ, ನಂ ೫೩೧, ಹಳ್ಳದಕೇರಿ, ಮೈಸೂರು ಸಿಟಿ

ಮದ್ದಗಿರಿ ಮುನ್ಸೀಫ್ ಕೋರ್ಟಿನಲ್ಲಿ

29 3

೧೯೦೯–೧೯೧೦ ನೇ ಇಸವಿ ಅಸಲ್ ನಂಬರು—274.

ವಾದಿಗಳು —ಮಡಕಶಿರಾ ತಾಲ್ಲೂಕು ಯರಗುಂಟೆ ಹಳ್ಳೀಲಿರುವ ನಾಗಲಿಂಗಪ್ಪ ವಗೈರೆ

ಪ್ರತಿವಾದಿಗಳು —ಸೀರಾ ತಾಲ್ಲೂಕು ದೊಡ್ಡ ಹೂಲೀ ಕುಂಟೇಲಿರುವ ವೀರಣ್ಣ ವಗೈರೆ

ಇದಕ್ಕೆ ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನೆಂದರೆ,—

ಸೀರಾ ತಾಲ್ಲೂಕು ದೊಡ್ಡ ಹೂಲೀ ಕುಂಟೆ ಬಳಿ ಇರತಕ್ಕ ವೀರಲಿಂಗದೇವರುಗುಡಿಗೆ ಗೌಡಿಕೆ ಹಕ್ಕಿಗೂ ಮತ್ತೂ ದೇವಸ್ಥಾನದ ಆಡಳಿತ ನಡಿಸುವುದಕ್ಕೂ ಸಹ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಡಬೇಕೆಂದು ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುವದ್ದರಿಂದ ಮೇಲ್ಕಂಡ ದಾವಯಲ್ಲಿ ಕಕ್ಷಿಗಾರರಾಗಿ ಸೇರಲು ಅಥವಾ ವಾದಿಗಳ ಹಕ್ಕನ್ನು ತಕರಾರು ಮಾಡಲು ಅಪೇಕ್ಷೆಯುಳ್ಳ ಸಮಸ್ತರೂ ಈ ಕೋರ್ಟು ರೂಬರೂಬು ೬-೪-೧೯೧೦ ನೇ ದಿವ 11 ಘಂಟೆಗೆ ಖುದ್ದಾಗಿಯಾಗಲೀ, ಆದವಾಕ್ರಮವಾಗಿ ಅಧಿಕಾರವನ್ನು ಹೊಂದಿದ ಏಜೆಂಟರ ಮೂಲಕವಾಗಿಯಾಗಲೀ, ಅಥವಾ ಪ್ಲೀಡರ ಮೂಲಕವಾಗಿ ಯಾಗಲೀ ಹಾಜರಾಗತಕ್ಕದ್ದಿದ

A. R Srinivasa Raghavachar,

Munsiff

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ಸವೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [26 3]

ತಲೆನೋವು, ಗಂಟು ಊದುವದು, ವಾತ, ಉಳುಕು, ಅಬಲು ಗಂಟು, ಗಂಟು ನೋವು, ಅರ್ಧಾಂಗವಾಯು, ಎದೆಶೀತ ವಾಯು, ಜ್ವರವು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು ೦-೮-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಇವುಗಳಾದವು ಗುಣವಾಗುವದು ಇದರಿಂದ ಉರಿಯು ಬರುವದಿಲ್ಲ ಬಟ್ಟೆಗೆ ಕರೆಯಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦-೬-೦ ೧೨ ಡಬ್ಬಿಗಳಿಗೆ ೪ ೦ ೦

ಆಸ್ತಾಮಿರ	೨-೦-೦
ಚೇಳುಕಡಕದಮದ್ದು	೦ ೮ ೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧ ೦-೦
ಸುಂದರೀ ತೈಲ—ಮುದ್ದಿ ದಗಳಿಗೆ	೦ ೮ ೦
ಗುಲಾಬು ವತ್ತಿ—ಜುಲಾಬಿಗೆ	೦ ೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೬-೦
ಬಜ್ಜ ಮುಲಾಮು—ಮಕ್ಕಳ ಹುಣ್ಣಿಗೆ	೦-೪ ೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧ ೦ ೦
ಕಫನಾಶಕ ಚೂರ್ಣ—ಆಸ್ತ್ಮ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು —" ಅಮೃತಾಂಜನ," ಮುಂಬಯಿ.

ವೃತ್ತಾಂತ ಪತ್ರಿಕೆ

೧೯೧೦ ನೇ ಇಸವಿ ಮಾರ್ಚ ತಾ ೧೭ ನೇ ಗುರುವಾರ

ಮೈಸೂರು ಸಂಸ್ಥಾನದ ವ್ಯವಸಾಯದ ಬ್ಯಾಂಕುಗಳು

ಮೈಸೂರು ಸಂಸ್ಥಾನದ ವ್ಯವಸಾಯದ ಬ್ಯಾಂಕುಗಳ ರಿಪೋರ್ಟನ್ನು ನೋಡಿದರೆ ಅವುಗಳ ಸ್ಥಿತಿಗತಿಯು ಅಷ್ಟೇನೂ ಸಂತೋಷಪ್ರದವಾಗಿಲ್ಲವೆಂದು ಕಂಡುಬರುತ್ತದೆ ಕೆಲವು ವರುಷಗಳ ಹಿಂದೆ ಮೈಸೂರು ಗವರ್ನಮೆಂಟಿನವರು ಸಾಲ ಮಾಡಬೇಕೆಂದಿದ್ದ ಕೆಲವು ರೈತರಿಗೆ ಸಹಾಯ ಮಾಡಿದರು. ಇಂಥಾ ಸಹಾಯ ಮಾಡುವುದಕ್ಕೆ ಅವರು ಕೆಲವು ಲಕ್ಷ ರೂಪಾಯಿಗಳನ್ನು ಬಹು ಸುಲಭ ದರದ ಬಡ್ಡಿಗೆ ಕೊಟ್ಟು, ರೈತರು ಆ ಹಣವನ್ನೆಲ್ಲಾ ವ್ಯವಸಾಯಾಭಿವೃದ್ಧಿಯ ಕಾರ್ಯಗಳಿಗೇನೇ ವಿನಿಯೋಗಿಸುವರೆಂದು ನಿರೀಕ್ಷಿಸಿಕೊಂಡಿದ್ದರು ಬ್ಯಾಂಕುಗಳು ಏರ್ಪಾಡಾದವು. ಹಣವಿದ್ದವರು ಆ ಬ್ಯಾಂಕುಗಳಿಗೆ ಹಣ ಹಾಕ ಬಹುದೆಂದು ಪ್ರೋತ್ಸಾಹ ಪಡಿಸಲಾಯಿತು. ಈ ಹಣಕ್ಕೆ ಬಡ್ಡಿಯೂ ಕೊಡುತ್ತಾ ಬಂದರು

ಗವರ್ನಮೆಂಟಿನವರು ಎಷ್ಟು ಹಣವನ್ನು ದಯಪಾಲಿಸಿದರೋ, ಎಷ್ಟು ಬ್ಯಾಂಕುಗಳು ಪ್ರಾರಂಭವಾದವೋ ನಮಗೆ ತಿಳಿಯದು ಈಗ ನೋಡಿದರೆ ೨೦ ಬ್ಯಾಂಕುಗಳಿರುವವೆಂದೂ ಅವುಗಳ ಮೂಲ ಧನವು ೨,೯೭,೩೪೯ ರೂಪಾಯಿಗಳೆಂದೂ ಗೊತ್ತಾಗುತ್ತದೆ ಕಳೆದ ಸಾಲಿನಲ್ಲಿ ಎಂಟು ಬ್ಯಾಂಕುಗಳಲ್ಲಿ ಲೇವಾದೇವಿಗಳು ನಿಂತುಹೋದವು ಉಳಿದವುಗಳ ಪೈಕಿ ಮೂರೇ ಮೂರು ಬ್ಯಾಂಕುಗಳಲ್ಲಿ ಅಂದರೆ, ಹಾಲಹಳ್ಳಿ, ಹಾಲದೊಡ್ಡೇರಿ, ಹೊಂಗೇನಹಳ್ಳಿ, ಈ ಬ್ಯಾಂಕುಗಳಲ್ಲಿ ಮಾತ್ರ ಸರಿಯಾದ ಲೇವಾದೇವಿ ನಡೆಯುತ್ತಿತ್ತು ಬ್ಯಾಂಕುಗಳಿಂದ ಜನರು ದೀರ್ಘಕಾಲದ ವಾಯಿದೆಗೆ ಸಾಲಗಳನ್ನು ಪಡೆದುಕೊಂಡಿದ್ದಾರೆ. ಅವುಗಳಲ್ಲಿ ರೂ ೩೪೩–೧೧–೬ ಪೈ ಮಾತ್ರ ನಗದು ಹಾಜರಿ ಇರುತ್ತದೆ

ಹಣವನ್ನು ಅನಾವಶ್ಯವಾದ ತಿಬ್ಬಂದಿ ಖರ್ಚಿಗೂ ಸಾದಿಲ್ವಾರು ಮುಂತಾದದ್ದಕ್ಕೂ ವೃಥಾ ಖರ್ಚುಮಾಡಿ ಹೋಯಿತು ಈಚೀಚೆಗೆ ಸ್ವಲ್ಪ ಬದಲಾವಣೆ ಕಂಡು ಬಂದಿದೆಯಾದರೂ ಈ ಬ್ಯಾಂಕುಗಳ ವಿಷಯವನ್ನು ಸಮಗ್ರವಾಗಿ ನೋಡಿದರೆ ಎಲ್ಲಾ ಸಂಪೂರ್ಣ ನಿರರ್ಥಕವಾಗಿ ಪರಿಣಮಿಸಿತೆಂದು ಹೇಳಬಹುದು

ಗವರ್ನಮೆಂಟಿನವರು ಸುಲಭವಾಗಿ ಹಣವನ್ನು ಒದಗಿಸಿಕೊಟ್ಟದ್ದು ತಪ್ಪಾಯಿತು ಯಾಕಂದರೆ ಹಣವು ಸುಲಭವಾಗಿ ಸಿಕ್ಕುತ್ತೆಂದು ಗೊತ್ತಾದ ಕೂಡಲೆ ಚೈತನ್ಯವುಳ್ಳವರೂ ಇಲ್ಲದವರೂ ನೂರಾರು ಮಂದಿ ಬಂದು ಸಾಲ ಕೇಳುವರು ಗವರ್ನಮೆಂಟಿನ ಮೂಲಧನದಿಂದ ಬ್ಯಾಂಕನ್ನು ಏರ್ಪಡಿಸುವುದೂ ಅದರಿಂದ ಕೇಳಿದವರಿಗೆ ಸಾಲ ಕೊಡುವುದೂ ಸುಲಭವಾಗಿತ್ತು ಬ್ಯಾಂಕಿನಿಂದ ಹಣವು ಹೊರಕ್ಕೆ ಹೋದ ಬಳಿಕ ಬಿಸ್ತುವಾರಾಗಿ ಅದು ವಸೂಲಾಗುವುದಕ್ಕೂ ಬಡ್ಡಿಯು ಪಾವತಿಗೂ ತೊಂದರೆಗಳು ಸಂಭವಿಸಿದವು ಸಾಲ ತೆಗೆದುಕೊಂಡವರು ಹಾಕಿರುವ ಹಣವನ್ನೋ ಬಹಳ ಸ್ವಲ್ಪ ಅವರಿಗೆ ಬ್ಯಾಂಕುಗಳ ಡೈರೆಕ್ಟರುಗಳ ಮೇಲೆ ಅಷ್ಟೇನೂ ನಂಬಿಕೆ ಇಲ್ಲದ್ದರಿಂದ ತಮ್ಮ ಹಣವನ್ನು ಹಾಕಲಿಲ್ಲವೆಂದು ಕಾಣುವುದು

ಈ ಪ್ರಕಾರ ಮೈಸೂರು ಗವರ್ನಮೆಂಟಿನವರು ಈ ಬ್ಯಾಂಕುಗಳನ್ನು ಪ್ರಾರಂಭಿಸಿ ಅವುಗಳಿಗೆ ಹಣ ಕೊಟ್ಟು ಕಾಲಕ್ರಮದಲ್ಲಿ ಅವುಗಳಿಂದ ರೈತಪ್ರಜೆಗಳು ಅಭಿವೃದ್ಧಿಗೆ ಬಂದಾರೆಂದು ಸಹಾಯಮಾಡಿದ್ದೂ ಪ್ರೋತ್ಸಾಹ ಪಡಿಸಿದ್ದೂ ಅಭಿಲಾಷೆ ಪಟ್ಟದ್ದೂ ಎಲ್ಲಾ ವ್ಯರ್ಥವಾಯಿತಲ್ಲಾ ಎಂದು ವಿಷಾದಿಸುತ್ತೇವೆ ಅದನ್ನು ರೈತರು ಸರಿಯಾಗಿ ನಡಿಸಿಕೊಂಡು ಬಂದಿದ್ದ ಪಕ್ಷದಲ್ಲಿ ಅವರ ಕಷ್ಟಕಾಲಕ್ಕೆ ಧನಸಹಾಯವಾಗುವುದಕ್ಕೂ ಅವರ ಜಮೀನುಗಳು ಅಭಿವೃದ್ಧಿಯಾಗುವುದಕ್ಕೂ ಅನುಮಾನವಿರಲಿಲ್ಲ ರೈತರು ಪಡೆದುಕೊಂಡ ಹಣವನ್ನು ಇಂಥಾ ಕಾರ್ಯಗಳಿಗೆ ಪ್ರತಿಯಾಗಿ ಅನ್ಯತ್ರ ವಿನಿಯೋಗಪಡಿಸಿಬಿಟ್ಟರಾದ ಕಾರಣ ಉಭಯತಾಪಿ ನಷ್ಟವಾಯಿತು ಈ ಬ್ಯಾಂಕುಗಳ ದೆಸೆಯಿಂದ ಗವರ್ನಮೆಂಟಿಗೆ ಎಷ್ಟು ಹಣ ನಷ್ಟವಾಯಿತೋ ತಿಳಿಯಬೇಕೆಂದು ನಾವು ಕುತೂಹಲ ಪಡುತ್ತೇವೆ ಈ ವಿಚಾರವನ್ನು ಮುಂದಿನ ವರುಷದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರ್ಯಾರಾದರೂ ವಿಚಾರಿಸಿ ತಿಳಿಯುವರೆಂದು ನಿರೀಕ್ಷಿಸುವೆವು

ಪ್ರಜೆಗಳು ಸ್ವಸಹಾಯವೆಂಥಾದ್ದೆಂಬುವುದನ್ನು ತಿಳಿದು ಆಚರಣೆಯಲ್ಲಿಟ್ಟುಕೊಳ್ಳುವಂತಾಗಬೇಕು ಪರಸ್ಪರ ಸಹಾಯಕ ಸಂಘಗಳಿಂದ ತುಂಬಾ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ ಗವರ್ನಮೆಂಟಿನವರು ಈ ವಿಧವಾದ ಸಂಘಗಳ ಏರ್ಪಾಡಿಗೂ ನಡವಳಿಕೆಗೂ ವಿಶೇಷವಾಗಿ ಸಹಾಯ ಮಾಡುತ್ತಾ ಬಂದಿದ್ದಾರೆಂದು ಸಂತೋಷ ಪಡುತ್ತೇವೆ ಒಬ್ಬರನ್ನೊಬ್ಬರು ನಂಬುವಂತಾದ ಹೊರತು ಯಾವ ಕೆಲಸವೂ ಫಲಕಾರಿಯಾಗುವುದಿಲ್ಲ ಪ್ರಜೆಗಳಲ್ಲಿ ಪರಸ್ಪರ ಇರಬೇಕಾದ ಭರವಸಕ್ಕೆ ಲೋಪವುಂಟಾದರೆ ಒಬ್ಬರು ಸ್ವಯಾರ್ಜಿತವನ್ನು ಇನ್ನೊಬ್ಬರ ವಶಕ್ಕೆ ಒಪ್ಪಿಸುವುದಿಲ್ಲ ಮತ್ತು ಸಮುದಾಯಕ್ಕೆ ಹಿತಕರವಾದ ಮತ್ತು ಶ್ರೇಯಸ್ಕರವಾದ ಯಾವ ಕಾರ್ಯದಲ್ಲೂ ಅವರು ಏಕೀಭವಿಸುವುದಿಲ್ಲ. ಇದಕಾರಣ ಜನರಲ್ಲಿ ಮೊದಲು ಒಬ್ಬರಮೇಲೊಬ್ಬರಿಗೆ ಭರವಸವುಂಟಾಗಬೇಕು. ಆ ಬಳಿಕ ಎಲ್ಲರೂ ಒಂದಾಗಿ, ಅಭಿವೃದ್ಧಿಗೆ ಬರುವಂಥಾ ಕಾರ್ಯಗಳಲ್ಲಿ ಪ್ರವರ್ತಿಸಬೇಕು. ಈ ಲಕ್ಷಣಗಳು ಪ್ರಜೆಗಳಲ್ಲಿ ಮೆರೆಯುತ್ತಾ ಬರುವವರೆಗೂ ಗವರ್ನಮೆಂಟಿನವರ ಸಹಾಯವಾಗಲಿ ಇತರ ವಿಧವಾದ ಪ್ರೋತ್ಸಾಹವಾಗಲಿ ಎಷ್ಟಿದ್ದರೂ ಪ್ರಯೋಜನವಾಗಲಾರದು ದೇವರು ಪ್ರಜೆಗಳ ಚಿತ್ತವೃತ್ತಿಯನ್ನು ಬದಲಾವಣೆ ಮಾಡಬೇಕು, ಆ ಬಳಿಕ ಅಭಿವೃದ್ಧಿಗೆ ಮಾರ್ಗವುಂಟಾಗುವುದು ದೇವರು ಮನುಷ್ಯರ ಮನೋಧರ್ಮವನ್ನು ಬದಲಾವಣೆ ಮಾಡಬಹುದು, ಅವನ ಅನುಜ್ಞೆಗಳ ಪ್ರಕಾರ ನಡೆಯಬೇಕೆಂಬುವುದನ್ನು ಜನರಿಗೆ ಕಲಿಸಬೇಕಾಗುತ್ತದೆ

ವಿದ್ಯುಲ್ಲತೆಯು ಶಕ್ತಿ ಸಾಧನವಾದದ್ದೋ?

ವಾಚಕರು ಈಚೀಚೆಗ ಮೋಟಾರ್ ಕಾರ್ ಎಂಬ ಗಾಡಿಗಳು ದೊಡ್ಡ ದೊಡ್ಡ ಶಹರುಗಳಲ್ಲಿಯೂ ರಸ್ತೆಗಳಲ್ಲಿಯೂ ವೇಗವಾಗಿ ಓಡ್ತಾಡುತ್ತಿರುವದನ್ನು ನೋಡಿರಬಹುದು ಇವು ರೈಲ್ ಗಾಡಿಗಳಂತೆ ವೇಗವಾಗಿ ಓಡುಗಿದರೂ ರೈಲ್ ಕಂಬಿಗಳ ಮೇಲೆ ನೀರು ಹಂಡೆಗಳಿಂದ ಹುಟ್ಟಿದ ಹಬೆಯ ಸಹಾಯದಿಂದ ನಡೆಯುವದಿಲ್ಲ ಸಂದ ಮೇಲೆ ಯಾವುದೋ ಒಂದು ಬಲದಿಂದ ಬಹು ರಭಸವಾಗಿ ಹೋಗುತ್ತವ ವಿಚಾರಿಸುವಲ್ಲಿ ಆ ಗಾಡಿಯಲ್ಲಿ ಒಂದು ಯಂತ್ರವುಂಟು ಆ ಯಂತ್ರದಲ್ಲಿ ವಿದ್ಯುಲ್ಲತೆಯೆಂಬ ಶಕ್ತಿಯು ಉತ್ಪನ್ನವಾಗಿ ಬಲವಾದ ಕುದುರೆಗಳಿಗಿಂತ ಅತಿ ವೇಗವಾಗಿ ಸಂಚರಿಸುವದಾಗಿ ಮಾಡುತ್ತದೆಯೆಂದು ತಿಳಿದವರು ಹೇಳುತ್ತಾರೆ ಇದೇ ವಿಧವಾದ ಶಕ್ತಿಯು ಶಿವನ ಸಮುದ್ರವೆಂಬ ಕಾವೇರೀ ಜಲಪಾತದಲ್ಲಿ ಹುಟ್ಟಿ ತಾಂಬ್ರದತಂತಿಗಳ ಮುಖಾಂತರ ಕೋಲಾರದ ಚಿನ್ನದ ಗಣಿಗಳಿಗೆ ಹೋಗಿ ಅಲ್ಲಿ ಸಾವಿರಾರು ಕುದುರೆಗಳ ಬಲಕ್ಕೆ ಸಮಾನವಾದ ಶಕ್ತಿಯಿಂದ ಚಿನ್ನ ತೆಗೆಯುವ ಕೆಲಸವನ್ನು ನಡಿಸಲಿಕ್ಕೆ ಸಹಾಯವಾಗಿರುವದೆಂದು ಹೇಳುತ್ತಾರೆ ಹಾಗಾದರೆ ವಿದ್ಯುಲ್ಲತೆಯೆಂಬ ಅಗೋಚರವಾದ ಶಕ್ತಿಯಿಂದ ಪಟ್ಟಣಗಳ ಬೀದಿಗಳಲ್ಲಿ ಪ್ರಕಾಶವನ್ನು ಕೊಡುವ ಉಪಕಾರವು ಮಾತ್ರವೇ ಅಲ್ಲ ಮನುಷ್ಯನ ಶಕ್ತಿಗೆ ಅಸಾಧ್ಯವಾದ ಕಾರ್ಯಗಳನ್ನು ಸುಲಭವಾಗಿ ನೆರವೇರಿಸತಕ್ಕ ಶಕ್ತಿಯನ್ನು ಸಹ ಹುಟ್ಟಿಸುವದಾಗಿದೆ ಇದನ್ನು ಕುರಿತು ವಾಚಕರು ವಿಚಾರಿಸಿ ಈ ಮಹಾ ಶಕ್ತಿಯಿಂದ ನಮ್ಮ ಕೆಲಸ ಕಾರ್ಯಗಳನ್ನು ಸುಲಭ ಮಾಡಿಕೊಳ್ಳುವವರಾಗಲಿ

ಕ್ರೈಸ್ತರು ಸತ್ಯವೇದವೆಂದು ಭಾವಿಸುವ ಬೈಬಲ್ ಪುಸ್ತಕವು ಸಹ ಸಂಬಂಧವಾದ ಮತ್ತು ಆತ್ಮ ಸಂಬಂಧವಾದ ಕಾರ್ಯಗಳಲ್ಲಿ ವಿದ್ಯುಲ್ಲತೆಯ ಶಕ್ತಿಯಂಥ ಅಂದರೆ ಅದು ಬಲಹೀನರ ಬಲವನ್ನು ಬಲಪಡಿಸುವದಾಗಿಯೂ ಹೇಡಿಗಳಿಗೆ ಧೈರ್ಯವನ್ನು ಕಲಿಸುವದಾಗಿಯೂ ಇದೆ ಆ ಪುಸ್ತಕದಲ್ಲಿ ಹೇಳಿರುವ ಯೇಸುಸ್ವಾಮಿಯನ್ನು ಕುರಿತು ಬಾಹೀರರೂ ಜಯಸ್ತರೂ ಆದ ಸ್ತ್ರೀಯರೂ ಹುಡುಗರೂ ಓದಿದರು ಇಂದವರು ಮೊದಲು ಮರ್ಜಿತರಾಗಿಯೂ ಅಸತ್ಯವಂತರಾಗಿಯೂ ಇದ್ದು ಯೇಸುಸ್ವಾಮಿಯ ಮೂಲಕ ನೀತಿವಂತರಾಗಿಯೂ ನಿಷ್ಕಳಂಕರಾಗಿಯೂ ಪವಿತ್ರರಾಗಿಯೂ ನಡೆಯುವದಕ್ಕೆ ಒಂದು ಆಕರ್ಷಣಶಕ್ತಿಯನ್ನು ಹೊಂದಿದರು ಅನಂತರ ಈ ಶಕ್ತಿಯು ಅವರಿಂದ ಬೇರೆಯವರಿಗೂ ವ್ಯಾಪಿಸಿ ಅವರೂ ಕ್ರಿಸ್ತಸ್ವಾಮಿಯ ಭಕ್ತರಾಗಿ ಅದೇ ಬಲವನ್ನು ಹೊಂದಿಕೊಂಡರು. ಹೀಗೆ ಸತ್ಯವಂತರೂ ನೀತಿವಂತರೂ ಸುಬುದ್ಧರೂ ಆಗಿ ನಡೆಯುತ್ತಿರುವವರ ಗುಂಪು ಪ್ರತಿ ದಿನ ಹೆಚ್ಚುತ್ತ ಬರುತ್ತಿರಲು ಇದನ್ನು ಸಹಿಸಲಾರದ ವಿರೋಧಿಗಳು ಅವರನ್ನು ಹಿಂಸಿಸುವದಕ್ಕೆ ತೊಡಗಿದರು ಸಾಧಾರಣವಾಗಿ ನಾವೆಲ್ಲರೂ ನೋವಿಗೆ ಹೆದರುತ್ತೇವಲ್ಲವೇ? ಮತ್ತು ಮರಣವೆಂದರೆ ನಮಗೆ ಎಷ್ಟೋ ಭಯವಾಗುತ್ತದ ಆದರೂ ಅಬಲೆಯರಾದ ಸ್ತ್ರೀಯರೂ ಮಕ್ಕಳೂ ಹೇಡಿಗಳಾಗಿದ್ದ ಪುರುಷರೂ ಆ ದುಷ್ಕರ ಕ್ರೂರಯಾತನೆಗೆ ಹೆದರಲಿಲ್ಲ ದುಷ್ಕರವಾದ ಆ ಕಾಲದಲ್ಲಿ ಬಹಳವಾಗಿ ಇದ್ದದ್ದಲ್ಲದೆ ಅವರಿಗೆ ಅಧಿಕಾರಿಗಳ ಸಹಾಯವೂ ಇದ್ದಿತು ನೈರನು ಎಂಬ ರೋಮ್ ರಾಜ್ಯದ ಚಕ್ರವರ್ತಿಯು ತಾನೇ ಅನೇಕ ವೇಳೆ ಈ ಬಡ ಕ್ರೈಸ್ತರನ್ನು ಹಿಂಸಿಸುವದಕ್ಕೆ ಒಡಂಬಟ್ಟು ಆ ಕೆಲಸಕ್ಕೆ ತನ್ನ ಸೈನಿಕರನ್ನು ನೇಮಿಸಿದನು ಇವರು ನಿರಪರಾಧಿಗಳಾಗಿದ್ದ ಕ್ರೈಸ್ತರಲ್ಲಿ ಅನೇಕರನ್ನು ಕೊಂದರು ಅವರ ಮನೆ, ಸೊತ್ತು, ಆಸ್ತಿಗಳನ್ನು ಸೂರೆ ಮಾಡಿದರು. ಕೆಲವು ಸಾರಿ ಸಿಂಹಗಳನ್ನು ಕೆಲವು ದಿನಗಳ ವರೆಗೂ ಆಹಾರವಿಲ್ಲದೆ ಕೂಡಿದ್ದರು ಅನಂತರ ಕ್ರೈಸ್ತರ ಮೇಲೆ ಅವುಗಳನ್ನು ಬಿಟ್ಟು ಬೇಟೆಯಾಡಿಸಿ ವಿನೋದ ಮಾಡಿದರು ಕೆಲವರ ಮೈ ಮೇಲೆ ಹಳೆಯ ಚಿಂದಿಗಳನ್ನು ಸುತ್ತಿ ಎಣ್ಣೆ ಹೊಯ್ದು ರಾತ್ರಿ ಹೊತ್ತಿನಲ್ಲಿ ಪಂಜುಗಳಂತೆ ಹಚ್ಚಿ ಅವರನ್ನು ಸುಟ್ಟರು ಇದು ಬಹಳ ಕ್ರೂರವಾದದ್ದೆಂದು ಹೇಳುವದಕ್ಕೇನೂ ಸಂದೇಹವಿದೆ? ಇಂಥಾ ಕ್ರೂರ ಕೃತ್ಯಗಳಿಂದ ಈ ಬಡಜನಗಳನ್ನು ಕೊಂದು ಯೇಸುಕ್ರಿಸ್ತನಿಗೆ ಶಿಷ್ಯರಿಲ್ಲದಂತೆ ಆತನ ಮತವನ್ನೇ ಹಾಳುಮಾಡಬೇಕೆಂದು ಪ್ರಯತ್ನಿಸಿದರು.

ಅವರೆ ಯಾವ ಕೃತ್ಯದಿಂದ ಕ್ರಿಸ್ತನ ಮತವನ್ನು ಹಾಳುಮಾಡಬೇಕೆಂದು ಅವರು ಉದ್ದೇಶಿಸಿದರೋ ಅದೇ ಕೃತ್ಯವು ಆ ಮತದವರನ್ನು ಹೆಚ್ಚಿಸಲಿಕ್ಕೆ ಕಾರಣವಾಯಿತು. ಹ್ಯಾಗಂದರೆ, ಈ ಬಡ ಜನಗಳು ಸಾಯುವದನ್ನೂ ಮೃಗಗಳು ಅವರ ರಕ್ತವನ್ನು ಹೀರುವದನ್ನೂ ಪಂಜಿನಂತೆ ಅವರು ಉರಿಯುವದನ್ನೂ ನೋಡಿ ಆನಂದ ಪಡೋಣವೆಂದು ಬಂದಿದ್ದ ಜನಗಳು ಆ ಬಡ ಭಕ್ತರ ಸಾಧುತ್ವವನ್ನು ನೋಡಿ ಬೆರಗಾದರು ಅವರು ಆ ಕ್ರೂರ ಕೃತ್ಯಗಳನ್ನು ನೋಡಿ ವಿನೋದ ಪಡಲಿಕ್ಕೆ ಬದಲಾಗಿ ಅವರಿಗ ವ್ಯಸನವಾಯಿತು

ಇದಲ್ಲದೆ ಆ ಕ್ರೈಸ್ತರು ನಿರಪರಾಧಿಗಳಾಗಿದ್ದರೂ ತಮ್ಮನ್ನು ವಧಿಸುವವರ ಮೇಲೆ ಸ್ವಲ್ಪವೂ ಆಗ್ರಹಗೊಳ್ಳದೆ, ಬೈಯದೆ, ಶಪಿಸದೆ, ದೇವರನ್ನು ಮಾತ್ರ ಧ್ಯಾನಿಸುತ್ತ ತಮಗೆ ಕ್ಷಿಪ್ರದಲ್ಲೇ ಸಂಭವಿಸುವ ಮರಣವನ್ನು ನೆನೆದು ಗಾಬರಿಯಾಗದೆ ಸಂತೋಷ

ರಿಂದ ದೇವರ ನಾಮದ ಸ್ತೋತ್ರಗಳನ್ನೂ ಕೀರ್ತನೆಗಳನ್ನೂ ಹಾಡುತ್ತ ತಮ್ಮ ಶತ್ರುಗಳನ್ನು ಆಶೀರ್ವದಿಸುತ್ತಿರುವದನ್ನು ನೋಡಿ ಭ್ರಮೆಗೊಂಡರು. ಇಂಥ ವಿಪತ್ಕಾಲದಲ್ಲಿ ಇವರಿಗೆ ಈ ಸಂತೋಷವನ್ನು ಕೊಡುವವನು ಯಾರೆಂದು ವಿಚಾರಿಸುವದಕ್ಕೂ ಯೇಸುಸ್ವಾಮಿಯೇ ಇವರಿಗೆ ಇಂಥ ಸದ್ಗುಣವನ್ನೂ ಸಮಾಧಾನವನ್ನೂ ಕೊಡುವವನಾದರೆ, ಆತನ್ಯಾರು? ಆತನ ಶಕ್ತಿ ಇನ್ನೆಂಥಾದ್ದು ಎಂದು ವಿಚಾರಿಸಿ ತಿಳಿಯುವವರಾದರು. ಆದ್ದರಿಂದ ಯೇಸುಸ್ವಾಮಿಯ ಶಕ್ತಿಯು ಅವರಿಗೂ ಪ್ರಕಟವಾಗಿ ಅವರು ಆತನ ಶಿಷ್ಯರಾದರು. ಹೀಗೆ ದಿನ ದಿನ ಯೇಸುಸ್ವಾಮಿಯ ರಾಜ್ಯವು ಪ್ರಬಲವಾಗಿ ಕಡೆಗೆ ಅಧಿಕಾರಿಗಳೂ ಚಕ್ರವರ್ತಿಗಳೂ ಈ ಯೇಸುವಿನ ಮಹತ್ವವೇನೆಂದು ವಿಚಾರಿಸಿ ಆತನ ಭಕ್ತರಾದರು. ವಾಚಕರೇ ಇದು ಆಸದೃಶವಾದ ಶಕ್ತಿಯಲ್ಲವೋ? ಈಗಲೂ ಯೇಸುಸ್ವಾಮಿಯನ್ನು ಯಾರಾದರೂ ನಂಬಿ ಆತನ ಭಕ್ತರಾದರೆ ಅವರು ನೀತಿವಂತರೂ ಪರೋಪಕಾರಿಗಳೂ ಪರಿಶುದ್ಧರೂ ಆಗಿ ನಡೆಯುವ ಬಲವನ್ನು ಹೊಂದುವರು.

ಒಳದೇಶದ ವೃತ್ತಾಂತಗಳು

ಶ್ರೀಮನ್ ಯುವರಾಜರವರು ನೆನ್ನೆ ರಾಜಧಾನಿಯಿಂದ ಮೋಟಾರ್ ಗಾಡಿಯಲ್ಲಿ ನಂಜನಗೂಡು ಮಾರ್ಗವಾಗಿ ನೀಲಗಿರಿ ಬೆಟ್ಟವನ್ನು ಕುರಿತು ತೆರಳುವಂತೆ ಏರ್ಪಾಡಾಗಿತ್ತು.

* * *

ಮೈಸೂರು ಡೆಪ್ಯುಟಿ ಕಮಿಷನರ್ ಮೆ॥ ಕಾಂತರಾಜೇ ಅರಸಿನವರು ತಿರುಗಾಡಲು ನರಸೀಪುರದ ತಾಲ್ಲೂಕಿನ ಪ್ರಾಂತ್ಯ ಸಂಚಾರಕ್ಕೆ ಹೋಗಿದ್ದಾರೆ. ಅವರು ೩೪ ದಿನಗಳಲ್ಲೇ ವಾಪಸು ಬರುವರು.

* * *

ರೆವ್ ಡಬ್ಲಿಯು ಎಚ್ ಟಾಂಲಿನ್ಸನ್‌ರವರು ಶೀಮೆಯಿಂದ ಮೊನ್ನೆ ಮಂಗಳವಾರ ರಾಜಧಾನಿಗೆ ಬಂದು, ಇಲ್ಲಿನ ಮಿಷನ್ ಹೈಸ್ಕೂಲಿನ ಪ್ರಿನ್ಸಿಪಲ್ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

* * *

ಈ ಸಲ ಖೆಡ್ಡಾದಲ್ಲಿ ಹಿಡಿದ ಆನೆಗಳ ಪೈಕಿ ೩೦ ಆನೆಗಳನ್ನು ಸರ್ಕಾರದವರು ಮುಂದಿನ ೧೯೧೦ ನೇ ೧೧ ನೇ ಸೋಮವಾರ ಕಲ್ಯಾಡಿ ಎಂಬ ಸ್ಥಳದಲ್ಲಿ ಹರಾಜು ಮೂಲಕ ವಿಕ್ರಯ ಮಾಡುವವರಾಗಿದ್ದಾರೆ.

* * *

ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟರಿ ಮೆ॥ ಪಿ ರಾಘವೇಂದ್ರ ರಾಯರ ಸಮೇತ ಕಳೆದ ಶನಿವಾರ ಬೆಳಿಗ್ಗೆ ಬೆಂಗಳೂರಿನಿಂದ ಮೋಟಾರ್ ಗಾಡಿಯಲ್ಲಿ ಹೊರಟು ೧೧ ಗಂಟೆಗೆ ರಾಜಧಾನಿಯನ್ನು ತಲುಪಿ, ನಾಲ್ಕು ದಿನಗಳಿಂದ ಇಲ್ಲೇ ಇದ್ದು ನೆನ್ನೆ ಬೆಳಿಗ್ಗೆ ೭ ಗಂಟೆಗೆ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಗೆ ವಾಪಸು ತೆರಳಿದರು.

* * *

ಕೋಲಾರ ಗೋಲ್ಡ್ ಫೀಲ್ಡ್ ಚಿನ್ನದ ಗಣಿಗಳಿಗೆ ಸೇರಿದ ಊರಿನಲ್ಲಿ ಪೋಲೀಸಿನವರು ಒಬ್ಬ ಕೆಲಸದವನ ಮನೆಗೆ ನುಗ್ಗಿ ಶೋಧನೆ ಮಾಡಿದಾಗ ಸುಮಾರು ೪೦೦ ರೂಪಾಯಿನ ಗಟ್ಟಿ ಚಿನ್ನವು ಸಿಕ್ಕಿತು. ಅವನು ಆ ಸಮಯದಲ್ಲಿ ಆ ಚಿನ್ನವನ್ನು ಕರಗಿಸುತ್ತಿದ್ದನು. ಪೋಲೀಸಿನವರು ಅದರ ಸಮೇತ ಅವನನ್ನು ದಸ್ತಗಿರಿ ಮಾಡಿರುತ್ತಾರೆ.

* * *

ಬೆಂಗಳೂರು ತಾಲ್ಲೂಕು ವರ್ತೂರು ನಾಲಾ ಒಡಾವಣೆಗಾಗಿ ಯಶವಂತಪುರದ ಹೋಬಳಿಯಲ್ಲಿ ಸರ್ಕಾರದವರು ಜಮೀನುಗಳನ್ನು ಕೊಂಡುಕೊಂಡರು. ಈಚೆಗೆ ಈ ಕಾಮಗಾರಿಯು ವಜಾ ಮಾಡಲ್ಪಟ್ಟದ್ದರಿಂದ ಆ ಜಮೀನುಗಳನ್ನು ಹರಾಜು ಮೂಲಕ ಪ್ರಜೆಗಳಿಗೆ ಬಿಕರಿ ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ. ಈ ಹರಾಜು ಈ ತಿಂಗಳಲ್ಲೇ ಆಯಾ ಜಮೀನಿನ ಬಳಿ ನಡೆಯುವುದಾಗಿದೆ.

* * *

ಶ್ರೀಮನ್ ಯುವರಾಜರವರ ವಿವಾಹವು ಈ ಸಲ ರಾಜಧಾನಿಯಲ್ಲಿ ನಡೆಯುವಂತೆ ಕಾಣುತ್ತದೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ॥ ದಳವಾಯಿ ದೇವರಾಜೇ ಅರಸಿನವರ ಮೂಲಕ ಈ ವಾರ್ತೆಯನ್ನು ತಂದುಕೊಳ್ಳುವುದಾಗಿ ವರ್ತಮಾನವಿದೆ. ಕಳೆದ ಸೋಮವಾರ ಅರಮನೆಯಲ್ಲಿ ಶ್ರೀಮನ್ಮಹಾರಾಜರವರು ರಾಜಗುರುವಾದ ಪರಕಾಲ ಸ್ವಾಮಿಗಳನ್ನೂ ಮೆ॥ ಡಿ ದೇವರಾಜೇ ಅರಸಿನವರನ್ನೂ ಕರೆಸಿಕೊಂಡು ಆಲೋಚನೆ ಮಾಡಿದರೆಂದು ಕೇಳುತ್ತೇವೆ.

* * *

ರಾಜಧಾನಿಯಲ್ಲಿ ಮಿಷನ್ ಆಸ್ಪತ್ರೆಯ ಲೇಡಿ ಡಾಕ್ಟರುಗಳು ಬೇಸಿಗೆಯನ್ನು ಕಳೆಯುವುದಕ್ಕಾಗಿ ಈ ವಾರ ನೀಲಗಿರಿ ಬೆಟ್ಟಕ್ಕೆ ಪ್ರಯಾಣವಾದರು. ಅವರು ವಾಪಸು ಬರುವ ತನಕ ಮಿಸ್ ಐರಿಸ್, ಎಂ. ಡಿ., ಬಿ. ಎಸ್ (ಲಂಡನ್), ಡಿ. ಪಿ. ಎಚ್. ಎಂಬ ಸಾಮರ್ಥ್ಯವುಳ್ಳ ಲೇಡಿ ಡಾಕ್ಟರವರು ಆಸ್ಪತ್ರೆಯ ಛಾರ್ಜನ್ನು ವಹಿಸಿದ್ದು, ಅಲ್ಲಿಗೆ ಬರುವ ಹೆಂಗಸರು ಮಕ್ಕಳಿಗೆ ಎಂದಿನಂತೆ ಔಷಧಗಳನ್ನು ಕೊಟ್ಟು ಚಿಕಿತ್ಸಾದಿಗಳನ್ನು ನಡಿಸುತ್ತಾ ಬರುತ್ತಾರೆ.

* * *

ಸಂಸ್ಥಾನದ ಎಕ್ಸೈಸ್ ಕಮಿಷನರ್ ಮತ್ತು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮೆ॥ ಎಚ್ ಎಚ್ ಸ್ಪಾರ್ಕ್ಸ್‌ರವರು ಈ ತಿಂಗಳು ೩೧ ಕ್ಕೆ ಪ್ರಾರಂಭವಾಗುವ ಈಸ್ಟರ್ ರಜಾದೊಂದಿಗೆ ೨೩ ದಿನಗಳ ರಜಾ ಪಡೆದುಕೊಳ್ಳುವರೆಂದೂ, ಶಿವಮೊಗ್ಗ ಡೆಪ್ಯುಟಿ ಕಮಿಷನರಾದ ಮೆ॥ ಎಂ ನಾರಾಯಣರಾಯರು ಎಕ್ಸೈಸ್ ಕಮಿಷನರಾಗಿಯೂ, ಸೀನಿಯರ್ ಅ॥ ಕಮಿಷನರ್ ಮೆ॥ ಕೆ ಶ್ರೀನಿವಾಸರಾಯರು ಶಿವಮೊಗ್ಗ ಡೆಪ್ಯುಟಿ ಕಮಿಷನರಾಗಿಯೂ ಬದಲಿ ನೇಮಿಸಲ್ಪಡುವರೆಂದು ಪ್ರಕಟವಾಗಿದೆ.

* * *

ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಸಹಾಯೋಪಾಧ್ಯಾಯರಾಗಿರುವ ಮೆ॥ ಎ. ವೆಂಕಟೇಶಯ್ಯನವರ ಕುಮಾರನಾದ ಸುಮಾರು ೨೩ ವಯಸ್ಸಿನ ಅಂಬಳೆ ವೆಂಕಟಸುಬ್ಬಯ್ಯ ಎಂಬಾತನು ಸಂಸ್ಕೃತದಲ್ಲಿ ಎಂ. ಎ. ಪರೀಕ್ಷೆ ಕೊಟ್ಟು, ಅದೇ ಸಂಸ್ಕೃತ ವಿದ್ಯೆಯಲ್ಲಿ ಪಾರಂಗತನಾಗಿ ಬರಬೇಕೆಂದು ಕುತೂಹಲ ಪಟ್ಟು, ಜರ್ಮನಿ ರಾಜ್ಯಕ್ಕೆ ಕಳೆದ ವಾರ ಪ್ರಯಾಣಮಾಡಿರುತ್ತಾನೆ. ಈತನಿಗೆ ಸರ್ಕಾರದವರು ಅದಕ್ಕಾಗಿ ದಾಮೋದರದಾಸ್ ಧರ್ಮ ಫಂಡಿನಿಂದ ವೇತನವನ್ನು ಸ್ಯಾಂಕ್ಷನ್ ಮಾಡಿರುವರೆಂದು ಕೇಳುತ್ತೇವೆ.

ಮೈಸೂರು ಸರ್ಕಾರಿ ಹುಕುಮುಗಳು

ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವದು

ಸಾಗರ ತಾಲ್ಲೂಕಿನ ಸಾಹುಕಾರ್ ಮು॥ ಕವಲೇ ದೇವಪ್ಪನವರು ೧೯೦೪-೦೫ ನೇ ಸಾಲಿನಲ್ಲಿ ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್‌ರವರ ವಶಕ್ಕೆ ೩,೦೦೦ ರೂಪಾಯಿ ಕೊಟ್ಟು, ಅದರ ಬಡ್ಡಿಯಿಂದ ಸಾಗರದ ಎ. ವಿ. ಸ್ಕೂಲಿನಲ್ಲಿ ಸಂಸ್ಕೃತವನ್ನೂ ಇಂಗ್ಲೀಷನ್ನೂ ತೆಗೆದುಕೊಂಡು ವಿದ್ಯಾಭ್ಯಾಸ ಮಾಡುವಂಥಾ ಬಾಲಕರಿಗೆ ವೇತನಗಳನ್ನು ಕೊಡುತ್ತಾ ಬರಬೇಕೆಂದು ತಿಳಿಸಿದರು. ಈ ಹಣಕ್ಕೆ ಶೇಕಡಾ ವರುಷಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡಿಸಬೇಕೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ಗವರ್ನ್‌ಮೆಂಟಿಗೆ ಬರೆದು ಕೇಳಿದರು. ಗವರ್ನ್‌ಮೆಂಟಿನವರು ಆ ರೀತಿ ಸ್ಯಾಂಕ್ಷನ್ ಮಾಡಿ, ೧೯೧೦ ನೇ ಫೆಬ್ರವರಿ ೩ ರಿಂದ ಬಡ್ಡಿ ಕೊಡಬಹುದೆಂದು ಹುಕುಂ ಕೊಟ್ಟು, ಸಾಹುಕಾರ್ ಕವಲೆ ದೇವಪ್ಪನವರಿಂದ ಸರಿಯಾದ ಪತ್ರವನ್ನು ಬರೆಸಿಕೊಳ್ಳಬೇಕೆಂತಲೂ, ವಿದ್ಯಾಭ್ಯಾಸದ ಇಲಾಖೆಯವರೇ ವಿದ್ಯಾರ್ಥಿಗಳಿಗೆ ಈ ವೇತನಗಳನ್ನು ಗೊತ್ತುಮಾಡಿ ದಾನವನ್ನು ನಡಿಸುತ್ತಾ ಬರಬೇಕೆಂತಲೂ ತಿಳಿಸಿರುತ್ತಾರೆ.

ಬೆಂಗಳೂರು ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿನಿಲಯವು.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಲ್‌ರಾದ ಮೆ॥ ಟೆಯಿಟ್‌ಯವರು ಆ ಕಾಲೇಜಿಗೆ ಸೇರಿದ ವಿದ್ಯಾರ್ಥಿನಿಲಯದ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಪ್ರತ್ಯೇಕವಾದ ಅಧಿಕಾರಿಯು ಅವಶ್ಯವಿಲ್ಲವೆಂದೂ, ಕಾಲೇಜಿನ ಒಬ್ಬ ಸಹಾಯೋಪಾಧ್ಯಾಯರನ್ನು ಗೊತ್ತುಮಾಡಿದರೆ ಸಾಕಾಗಿದೆ ಎಂದೂ, ಪ್ರತಿ ಒಬ್ಬ ವಿದ್ಯಾರ್ಥಿಯೂ ನಿಲಯದಲ್ಲಿ ಭೋಜನಾದಿಗಳಿಗೆ ತಿಂಗಳಿಗೆ ಇಷ್ಟೇ ಕೊಡಬೇಕೆಂದು ವಿಧಿಸ ಪಡಕೂಡದೆಂತಲೂ ಆಯಾ ತಿಂಗಳಲ್ಲಿ ಆಗುವ ಒಟ್ಟು ಖರ್ಚನ್ನು ವಿದ್ಯಾರ್ಥಿಗಳಿಗೆಲ್ಲಾ ಹಂಚಿಹಾಕಿ ದಾಮಾಷಾಯಿ ಪ್ರಕಾರ ವಸೂಲ್ಮಾಡುವುದು ಉತ್ತಮವೆಂದೂ ಗವರ್ನ್‌ಮೆಂಟಿಗೆ ಸೂಚಿಸಿದರು. ಇನ್ಸ್‌ಪೆಕ್ಟರ್ ಜನರಲ್‌ರವರಾದರೋ ಹಿಂದೆ ೧೯೦೧ ನೇ ಇಸವಿಯಲ್ಲಿ ಒಬ್ಬ ಸಹಾಯೋಪಾಧ್ಯಾಯರನ್ನು ಸ್ಟೂಡೆಂಟ್ಸ್ ಹೋಮಿನ ಸೂಪರಿಂಟೆಂಡೆಂಟಾಗಿಯೂ ಕೆಲಸ ನೋಡುವಂತೆ ನೇಮಕವ ಡಿತ್ತೆಂತಲೂ, ಆ ಏರ್ಪಾಡು ತೃಪ್ತಿಕರವಾಗಿ ನಡೆಯಲಿಲ್ಲವೆಂದೂ ಅಭಿಪ್ರಾಯ ಪಟ್ಟರು. ಇದರ ಮೇಲೆ ಗವರ್ನ್‌ಮೆಂಟಿನವರು ತೀರ್ಮಾನಮಾಡಿರುವುದೇನೆಂದರೆ,—ಸಹಾಯೋಪಾಧ್ಯಾಯರಾದ ಮೆ॥ ಎಸ್ ಕೃಷ್ಣಸ್ವಾಮಿಯಯ್ಯಂಗಾರ್ಯರು ಸೂಪರಿಂಟೆಂಡೆಂಟರಿಗಾಗಿ ಕಟ್ಟಿರುವ ಸ್ಟೂಡೆಂಟ್ಸ್ ಹೋಮಿನ ಕಟ್ಟಡದಲ್ಲೇ ಸಂಸಾರ ಸಮೇತ ಬಾಡಿಗೆ ಇಲ್ಲದೆ ವಾಸಮಾಡುತ್ತಾ, ಹೋಮಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕು. ಹೋಮಿಗೆ ಸಾಮಾನು ತಂದು ಜಮಾಖರ್ಚು ಬರೆದಿಟ್ಟು ಚಿಲ್ಲರೆ ಕೆಲಸಗಳನ್ನು ನೋಡಿಕೊಳ್ಳುವುದಕ್ಕೆ ಪ್ರತ್ಯೇಕವಾದ ಸಣ್ಣ ಸಂಬಳದ ಮ್ಯಾನೇಜರನ್ನು ನೇಮಿಸಬಹುದು. ಮೆ॥ ಕೃಷ್ಣಸ್ವಾಮಿಯಯ್ಯಂಗಾರ್ಯರು ವಿದ್ಯಾರ್ಥಿಗಳ ಒಳ್ಳೇ ನಡತೆ, ವಿಧೇಯತೆ, ಸದ್ಗುಣಗಳನ್ನು ಕ್ರಮಪಡಿಸುವ ವಿಷಯದಲ್ಲೂ, ಹೋಮಿನ ಮೇಲ್ವಿಚಾರಣೆ ಮತ್ತು ಲೆಕ್ಕಗಳ ಮೇಲ್ತನಿಖೆ ವಿಷಯದಲ್ಲೂ ನಿಗಾ ಇಟ್ಟು ನಡಿಸುತ್ತಾ ಬರಬೇಕು. ಈಗ ಸೂಪರಿಂಟೆಂಡೆಂಟಾಗಿರುವ ಮೆ॥ ವೆಂಕಟದಾಸಪ್ಪನವರು ಬೇರೆ ಕೆಲಸಕ್ಕೆ ನೇಮಿಸಲ್ಪಡುವ ತನಕ ಅವರಿಂದ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸಿನಲ್ಲಿ ಕೆಲಸ ತೆಗೆದುಕೊಳ್ಳಬೇಕಾಗಿದೆ. ಅವರಿಗೆ ಬೇರೇ ಕೆಲಸವಾದ ಬಳಿಕ ಸ್ಟೂಡೆಂಟ್ಸ್ ಹೋಮಿಗೆ ಒಬ್ಬ ಮ್ಯಾನೇಜರನ್ನು ನೇಮಿಸಬಹುದು.

ಕಸಬುಗಳಿಗೆ ಪ್ರೋತ್ಸಾಹವು

ಚನ್ನಪಟ್ಟಣದ ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲಿನ ಸೂಪರಿಂಟೆಂಡೆಂಟ್ ಮತ್ತು ಸಹಾಯೋಪಾಧ್ಯಾಯರಾದ ಮೆ॥ ಎಂ ಬಾವಾಸಾಹೇಬ್ ವಿಯರ್‌ರವರನ್ನು ಗವರ್ನ್‌ಮೆಂಟಿನವರು ಅಲ್ಲಿನ ಕಸಬನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಉತ್ತರದೇಶದಲ್ಲಿ ಕಸಬು ನಡೆಯುವ ಸ್ಥಳಗಳಿಗೆ ಕಳುಹಿಸಿ ಕೊಟ್ಟರು. ಮೆ॥ ಬಾವ ಸಾಹೇಬರು ಡೀರಾದೂನ್, ಬ್ಯಾರೇಲಿ, ಮಿರ್ಜಾಪುರ, ಬರೋಡಾಸಂಸ್ಥಾನಕ್ಕೆ ಸೇರಿದ ಸಂಖೇಡ, ಬೊಂಬಾಯಿ, ಮಿರಜ್, ಸಾವಂತವಾಡಿ, ಈ ಮುಂತಾದ ಕಡೆಗಳಲ್ಲಿ ಸಂಚಾರಮಾಡಿ, ಆಯಾ ಸ್ಥಳಗಳಲ್ಲಿರುವ ಕಾರ್ಖಾನೆಗಳನ್ನು, ಕೈಗಾರಿಕೆಗಳನ್ನೂ ನೋಡಿ ತಿಳಿದುಕೊಂಡು ಬಂದರು. ಅರಗನ್ನು ತಯಾರುಮಾಡಿ ಶುದ್ಧಿಮಾಡುವುದು, ಮೇಣದ ಬತ್ತಿಗಳನ್ನು ಎಳೆಯುವುದು, ಬತ್ತಿಗಳಿಗೆ ತಾಂಬ್ರದ ಮೆರಗು ಹಾಕುವುದು, ಅರಗಿನಿಂದ ಬಣ್ಣದ ಸಾಮಾನುಗಳನ್ನು ಮಾಡುವುದು, ಅವುಗಳ ಮೇಲೆ ಚಿತ್ರಬಿಡಿಸಿ ಪಾಲಿಷ್ ಹಾಕುವುದು, ಬತ್ತಿಗಳನ್ನು ಎಳೆಯುವುದಕ್ಕಾಗಿ ಉಕ್ಕು, ಕಬ್ಬಿಣ, ಹಿತ್ತಾಳೆ, ಕಂಚುಗಳಲ್ಲಿ ಸಣ್ಣರಂಧ್ರಗಳನ್ನು ಕೊರೆಯುವುದು, ಸೀಸ, ತವರ, ಸತ್ತು, ಅಲ್ಯೂಮಿನಿಯಂ ಮೊದಲಾದ ಮೆತ್ತನೆ ಲೋಹಗಳನ್ನು ಹಿಟ್ಟಿನಂತೆ ಪುಡಿ ಮಾಡುವ ವಿಧಾನ, ಈ ಮೊದಲಾದ ಕಸಬುಗಳನ್ನೆಲ್ಲಾ ಆಯಾ ಕಾರ್ಖಾನೆಗಳಲ್ಲಿ ನೋಡಿ, ಕಲಿತುಕೊಂಡು ಬಂದು, ಅದರ ವಿಷಯದಲ್ಲಿ ಒಂದು ರಿಪೋರ್ಟನ್ನು ಬರೆದು ಗವರ್ನ್‌ಮೆಂಟಿಗೆ ಕಳುಹಿಸಿ, ತಮ್ಮನ್ನು ಚನ್ನಪಟ್ಟಣದ ಇಂಡಸ್ಟ್ರಿಯಲ್ ಸ್ಕೂಲಿನ ಸೂಪರಿಂಟೆಂಡೆಂಟರಾಗಿ ನೇಮಕ ಮಾಡಬೇಕೆಂತಲೂ ಅಲ್ಲಿ ತಾವು ತಿಳಿದುಬಂದಿರುವ ಕಸಬುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ತಮಗೆ ಬೇಕಾದ ಅನುಕೂಲಗಳನ್ನು ಒದಗಿಸಿ ಕೊಡಬೇಕೆಂತಲೂ ಕೇಳಿಕೊಂಡರು. ಇದರ ಮೇಲೆ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ,—ಮು॥ ಬಾವಾಸಾಹೇಬ್ ವಿಯರ್‌ರವರು ಸರ್ಕಾರಿ ವ್ಯವಸಾಯದ ರಸಾಯನ ಶಾಸ್ತ್ರಜ್ಞರಾದ ಅಧಿಕಾರಿಗಳ ಬಳಿಗೆ ಹೋಗಿ, ತಾವು ಕಲಿತು ಬಂದಿರುವ ವಿಷಯಗಳನ್ನು ಅವರಿಗೆ ತಿಳಿಸಿ, ಅರಗಿನ ತಯಾರಿ ವಿಷಯದಲ್ಲಿ ತಾವು ಸರಿಯಾದ ಮಹತ್ತನ್ನು ಪಡೆದಿರುತ್ತಾರೆಂಬ ಭಾಗದಲ್ಲಿ ಅವರಿಂದ ಬರಬೇಕು. ಈಗ ಅವರು ಕಲಿತು ಬಂದಿರುವುದನ್ನು ಪ್ರಕಾಶಪಡಿಸಿ ಚನ್ನಪಟ್ಟಣದಲ್ಲಿ ಬಣ್ಣದ ಸಾಮಾನುಗಳನ್ನೂ ಮೇಣದ ಬತ್ತಿ ಮೊದಲಾದವುಗಳನ್ನೂ ಮಾಡಿಸುತ್ತಾ ಬರಲಿ. ಇದಕ್ಕೆ ದ್ರವ್ಯ ಸಹಾಯವು ವಿಶೇಷವಾಗಿ ಬೇಕಾಗಿಲ್ಲ. ಒಂದು ವರುಷ ಕಳೆದ ಮೇಲೆ ಅವರು ಮಾಡುವ ಕೆಲಸದಿಂದ ಎಷ್ಟುಮಟ್ಟಿಗೆ ಪ್ರಯೋಜನವಾಗಿದೆಯೋ ರಿಪೋರ್ಟು ಕಳುಹಿಸಲಿ. ಆ ತರುವಾಯ ಅವರನ್ನು ಸೂಪರಿಂಟೆಂಡೆಂಟಾಗಿ ನೇಮಕ ಮಾಡುವ ವಿಷಯವು ಯೋಚಿಸಲಾದೀತು. ಅತ್ತಲಾಗಿ ಅರಗನ್ನೂ ಮರದ ದ್ರಾವಕವನ್ನೂ ತಯಾರುಮಾಡುವುದಕ್ಕೆ ಒಂದು ಸಣ್ಣ ಕಾರ್ಖಾನೆಯನ್ನು ಏರ್ಪಾಡು ಮಾಡಲು ಯಾವ ಅನುಕೂಲಗಳಿರುವವೋ ಫಾರೆಸ್ಟ್ ಇಲಾಖೆಯ ಕನ್ಸರ್ವೇಟರವರು ಪರ್ಯಾಲೋಚಿಸಿ ರಿಪೋರ್ಟು ಕೊಡಬೇಕಾಗಿದೆ.

ಪ್ಲೇಗ್ ಉಪದ್ರವದ ವಿಚಾರದ ರಿಪೋರ್ಟು.

ಸಂಸ್ಥಾನದ ಸ್ಯಾನಿಟರಿ ಕಮಿಷನರವರು ೧೯೦೮-೦೯ ನೇ ಸಾಲಿನ ಪ್ಲೇಗ್ ಉಪದ್ರವದ ಸ್ಥಿತಿಗತಿಯ ರಿಪೋರ್ಟನ್ನು ನವಂಬರ್ ಕಡೇ ವಾರದಲ್ಲಿ ಗವರ್ನ್‌ಮೆಂಟಿಗೆ ಬರೆದು ಕಳುಹಿಸಿದರು. ಗವರ್ನ್‌ಮೆಂಟಿನವರು ೧೯೧೦ ನೇ ಜನವರಿ ೩೧ ರಲ್ಲಿ ಅದನ್ನು ಪರಾಂಬರಿಸಿ ತಮ್ಮ ಅಭಿಪ್ರಾಯವನ್ನು ಬರೆದಿದ್ದಾರೆ. ಅದರಲ್ಲಿ ಕಂಡುಬರುವ ಮುಖ್ಯ ವಿಷಯಗಳೇನೆಂದರೆ,—

೧೯೦೭-೦೮ ನೇ ಸಾಲಿನಲ್ಲಿ ಸಂಸ್ಥಾನದೊಳಗೆ ೧೯,೧೭೫ ಪ್ಲೇಗ್ ಕಾಯಿಲೆಗಳಾಗಿ ೧೪,೦೫೯ ಪ್ಲೇಗ್ ಮರಣಗಳೂ, ೧೯೦೮-೦೯ ನೇ ಸಾಲಿನಲ್ಲಿ ೬,೩೪೯ ಕಾಯಿಲೆಗಳಾಗಿ ೪,೪೬೪ ಪ್ಲೇಗ್ ಮರಣಗಳೂ ಸಂಭವಿಸಿರುತ್ತವೆ. ೧೯೦೫-೦೬ ಮತ್ತು ೧೯೦೬-೦೭ ನೇ ಎರಡು ಸಾಲುಗಳು ವಿನಾ ಪ್ಲೇಗ್ ಉಪದ್ರವು ಪ್ರಾರಂಭವಾದ ಲಾಗಾಯಿತು ಕಳೆದ ಸಾಲಿನಲ್ಲಿ ಕಾಯಿಲೆಗಳೂ ಮರಣಗಳೂ ಕಡಮೆಯಾಗಿರುವವು. ಬಹಳ ಹೆಚ್ಚು ಮರಣಗಳೂ ಮೈಸೂರು ಡಿಸ್ಟ್ರಿಕ್ಟಿನಲ್ಲೂ ಬಹಳ ಸ್ವಲ್ಪವಾಗಿ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲೂ ಸಂಭವಿಸಿದವು. ಪ್ಲೇಗ್ ಉಪದ್ರವು ಪ್ರಾರಂಭವಾದ ಲಾಗಾಯಿತು ಕಳೆದ ಸಾಲು ಒಂದರಲ್ಲೇ ಕೋಲಾರ್ ಚಿನ್ನದ ಗಣಿಗಳೊಳಗೆ ಆ ಉಪದ್ರವದ ಹೆಸರು ಇರಲಿಲ್ಲ. ಬೆಂಗಳೂರು ಪಟ್ಟಣದಲ್ಲಿ ೨೪೬ ಕಾಯಿಲೆಗಳೂ ೧೮೫ ಮರಣಗಳೂ, ಮೈಸೂರು ಪಟ್ಟಣದಲ್ಲಿ ೧,೩೨೭ ಕಾಯಿಲೆಗಳೂ ೯೯ ಮರಣಗಳೂ ಸಂಭವಿಸಿದವು. ಇವುಗಳ ಸಂಖ್ಯೆಗಳೂ ಹೋದ ವರುಷಕ್ಕಿಂತ ಕಡಮೆಯಾಗಿರುತ್ತವೆ.—ಕಳೆದ ಸಾಲಿನಲ್ಲಿ ೨॥ ಲಕ್ಷ ಇಲಿ ಹೆಗ್ಗಣಗಳನ್ನು ಕೊಂದುಹಾಕಿದರು. ಇದಕ್ಕೆ ಪ್ರತಿಫಲ ಕೊಟ್ಟದ್ದು ೪॥ ಕಾಸಿನಂತೆ ಬೀಳುವುದು. ಈ ಸಾಲಿನಲ್ಲಿ ೧೦,೩೭೮ ಜನರು ಇನಾಕ್ಯುಲೇಷನ್ ಮಾಡಿಸಿಕೊಂಡರು. ಬಡವರಿಗೆ ತಲಾ ೪,೨ ಆಣೆಯಂತೆ ಇನಾಮು ಕೊಡಲಾಯಿತು.—ಬೆಂಗಳೂರು ಪ್ಲೇಗ್ ಆಸ್ಪತ್ರೆಗೆ ೬೪ ಮಂದಿ ರೋಗಿಗಳೂ ಮೈಸೂರು ಪ್ಲೇಗ್ ಆಸ್ಪತ್ರೆಗೆ ೪೦ ಜನ ಕಾಯಿಲೆಯವರೂ ದಾಖಲಾದರು. ಮೊದಲನೇ ಆಸ್ಪತ್ರೆಯಲ್ಲಿ ಶೇಕಡಾ ೫೪ ರಂತೆಯೂ, ಎರಡನೇದರಲ್ಲಿ ೯೨ ರಂತೆಯೂ ವಾಸಿಯಾಗಿರುತ್ತಾರೆ.—ಪ್ಲೇಗ್ ನಿವಾರಣೆಗಾಗಿ ಮಾಡಿದ ಕಾರ್ಯಗಳಿಗೆಲ್ಲಾ ಕಳೆದ ಸಾಲಿನಲ್ಲಿ ಒಟ್ಟು ೩೭,೦೩೮ ರೂಪಾಯಿ, ಅಂದರೆ ಹಿಂದಿನ ಸಾಲಿಗಿಂತ ೧೯,೧೮೧ ರೂಪಾಯಿ ಕಡಮೆಯಾಗಿ ಖರ್ಚಾಗಿರುತ್ತದೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಕರೆಸ್ಪಾಂಡೆನ್ಸ್.

ರಾಜದ್ರೋಹವೂ ಅದರ ಪರಿಹಾರವೂ.

ಅಯ್ಯಾ,

ರಾಜ್ಯಕ್ಷೇಮಚಿಂತಕ ಎಂಬ ಬಾತ್ಮಿದಾರರು ತಮ್ಮ ಕಳೆದ ವಾರದ ಪೇಪರಿನಲ್ಲಿ ರಾಜದ್ರೋಹಿಗಳ ಕೃತ್ಯಗಳಿಗಾಗಿ ಆಗ್ರಹಪಟ್ಟು ಅಂಥಾವರನ್ನು ಕ್ರೂರವಾಗಿ ಶಿಕ್ಷಿಸಬೇಕೆಂಬ ತಾತ್ಪರ್ಯ ಪಟ್ಟು ಬರೆದಿರತಕ್ಕದ್ದನ್ನು ಓದಿದೆನು. ಅದರಲ್ಲಿ ರಾಜಭಕ್ತಿ, ದುಷ್ಟನಿಗ್ರಹ, ಈ ವಿಷಯವಾಗಿ ಅವರು ಕೊಟ್ಟಿರತಕ್ಕ ಸಲಹೆ ಸಹ ಸ್ತುತ್ಯವಾದವುಗಳೇ ಇವೆ. ಆದರೂ ಈ ವಿಷಯವು ಎಲ್ಲಾ ಪ್ರಜೆಗಳಿಗೂ, ಗೌರ್ನಮೆಂಟಿಗೂ ಸಂಬಂಧಪಟ್ಟದ್ದಾದ್ದರಿಂದ ಈ ವಿಷಯದಲ್ಲಿ ನನ್ನ ತಾತ್ಪರ್ಯವನ್ನು ತಿಳಿಸುತ್ತೇನೆ.

ರಾಜ್ಯ ಕ್ಷೇಮಚಿಂತಕರು ಹೇಳತಕ್ಕ ಕ್ರೂರ ನಡವಳಿಕೆಗೆ ಹೊಸದಾಗಿ ಲಾ ಏರ್ಪಡಿಸಬೇಕಾದದ್ದೇನೂ ಅವಶ್ಯಕವಿಲ್ಲ. ಈಗ ಜಾರೀಲಿರತಕ್ಕ ಲಾಗಳೇ ಅವರು ಹೇಳತಕ್ಕ ಕಠಿಣ ಶಿಕ್ಷೆ ರಾಜದ್ರೋಹಿಗಳಿಗೆ ವಿಧಿಸಲು ಅವಕಾಶಕೊಡುತ್ತೆ. ಆದರೆ ಪ್ರೆಸ್ ಕಾನೂನು ಮಾತ್ರ ರದ್ದು ಮಾಡತಕ್ಕದ್ದು ಯುಕ್ತವಲ್ಲ. ಕಾರಣವೇನೆಂದರೆ,

ಈಗ ಭರತಖಂಡದಲ್ಲಿ ಹುಟ್ಟಿರತಕ್ಕ ಗಲಾಟೆಯು ವಿದ್ಯಾವಂತರ ದುಷ್ಟಶ್ರೇಷ್ಠಿಯಿಂದಲೇ ಉಂಟಾದದ್ದಾಗಿದೆ. ಆ ದುಷ್ಟರಿಗೆ ವಿದ್ಯಾದಾನ ಮಾಡಿದವರು ಇಂಗ್ಲೀಷ್ ಪ್ರಭುಗಳೇ. ಅವರು ಒಳ್ಳೇ ಉದ್ದೇಶದಿಂದ ವಿದ್ಯಾದಾನ ಮಾಡಿದ್ದರ ಫಲ ವಿವೇಕವಿಲ್ಲದ ಅಪಾತ್ರರಾದ ಈ ದುಷ್ಟರನ್ನು ಕೆಟ್ಟ ಮಾರ್ಗಕ್ಕೆ ದೂಡಿದ್ದಿದೆ. ಅಂಥಾ ದುಷ್ಟರಾದರೋ ಒಟ್ಟು ಪ್ರಜಾ ಸಂಖ್ಯೆಯಲ್ಲಿ ಲಕ್ಷಕ್ಕೆ ಒಬ್ಬನಂತೆ ಇದ್ದರೂ ಇರಬಹುದೇ ಹೊರತು ಅದಕ್ಕೆ ಜಾಸ್ತಿಯಾಗಿಲ್ಲ. ಅವರ ವಿನಹ ಬಾಕೀ ಪ್ರಜೆಗಳೆಲ್ಲಾ ರಾಜಭಕ್ತರಾಗಿಯೇ ಇರುತ್ತಾರೆ.

ಸನಾತನದಿಂದ ಜಗತ್ತನ್ನೇ ಆವರಿಸಿಕೊಂಡಿರತಕ್ಕ ಇಂಗ್ಲೀಷ್ ಗವರ್ನ್‌ಮೆಂಟಿನ ನೀತಿ—ಪ್ರಜೆಗಳಿಗೆ ಗೌರ್ನಮೆಂಟು ತಾಯಿಯಂತೆಯೂ, ಉತ್ತಮ ನಡವಳಿಕೆಯಿಂದ ಪ್ರಜೆಗಳು ಗೌರ್ನಮೆಂಟಿಗೆ ಮಕ್ಕಳಂತೆಯೂ ಇರತಕ್ಕದ್ದಾಗಿದೆ. ಈಗಿನ ರಾಜ್ಯಭಾರದ ಸೌಕರ್ಯ, ಪ್ರಜೆಗಳಿಗೆ ಹಿತಕರವಾದ ನಡವಳಿಕೆ, ಇವುಗಳನ್ನು ಯೋಚಿಸಿದರೆ ಕ್ರೂರಿಗಳಾದ ತಂದೆತಾಯಿಗಳಿಗಿಂತಲೂ ಇಂಗ್ಲೀಷ್ ಗೌರ್ನಮೆಂಟಿನ ವಿಷಯದಲ್ಲೇ ಪ್ರಜೆಗಳಿಗೆ ಹೆಚ್ಚು ಅಭಿಮಾನವಿದೆ. ಆದ್ದರಿಂದ ದುಷ್ಟರಾದ ಅಲ್ಪ ಸಂಖ್ಯೆಯುಳ್ಳ ಈ ತನ್ನ ಮಕ್ಕಳನ್ನು ಇಂಗ್ಲೀಷ್ ಗೌರ್ನಮೆಂಟು ಕ್ರೂರವಾಗಿ ಶಿಕ್ಷಿಸಲು ಒಪ್ಪುವದಿಲ್ಲ. ಜನ್ಮತಃ ಕರುಣೆ, ಸಮಾಧಾನ, ಸತ್ಯ, ಈ ಮುಂತಾದ ಸದ್ಗುಣಗಳಿಂದಲೇ ಒಪ್ಪಿರತಕ್ಕ ಇಂಗ್ಲೀಷ್ ಗೌರ್ನಮೆಂಟ್ ಎಂಬ ತಾಯಿಯು ಅವರನ್ನು ಕ್ರೂರವಾಗಿ ದಂಡಿಸುವುದಕ್ಕೆ ಬದಲಾಗಿ ಸ್ಕೂಲಿನಲ್ಲಿ ಬಾಲಕರನ್ನು ಸನ್ಮಾರ್ಗಕ್ಕೆ ತರುವಂತೆ ಈ ದುಷ್ಟರಿಗೂ ದುರ್ಮಾರ್ಗ ತಪ್ಪಿಸಿ ಸನ್ಮಾರ್ಗಕ್ಕೆ ತರಬೇಕೆಂತ ಯೋಚಿಸಿ, ಅದರಂತೆ ನಡವಳಿಕೆ ನಡಿಸುತ್ತಾ ಇದೆ. ಆ ಕಾರ್ಯವು ನೆರವೇರಬೇಕಾದರೆ ಪ್ರಜೆಗಳ ಮತ್ತು ರಾಜ್ಯಭಾರ ನಡೆಯತಕ್ಕದ್ದರಲ್ಲಿ ಒಳ ಆಡಳಿತ ನಡಿಸುತ್ತಿರತಕ್ಕ ಲೋಕಲ್ ಅಧಿಕಾರಿಗಳ ಸಹಾಯಬೇಕು. ಅಂದರೆ, ಪ್ರಜೆಗಳು ಮೇಲಿನಂಥಾ ದುಷ್ಟರ ಕೆಟ್ಟ ಕಾರ್ಯದ ಪ್ರಯತ್ನ ತಮಗೆ ತಿಳಿದಕೂಡಲೇ ಅದನ್ನು ಗೌರ್ನಮೆಂಟಿನವರಿಗೆ ತಿಳಿಸುತ್ತಾ ಬರಬೇಕು. ಲೋಕಲ್ ಅಧಿಕಾರಿಗೆ ಇಂಥಾ ವಿಷಯಗಳು ಕೂಡಲೇ ತಿಳಿಯಲಿಕ್ಕೆ ಬೇಕಾದಷ್ಟು ಅವಕಾಶವಿದೆ. ಆತನು ಈ ವಿಷಯದಲ್ಲಿ ಉದಾಸೀನನಾಗಿರದೆ ಇಂಥಾ ಸಂಗತಿಗಳನ್ನು ನೋಡಿಕೊಂಡಿದ್ದು ದುಷ್ಟರ ಕೆಟ್ಟ ಪ್ರವರ್ತನೆಯನ್ನು ತಿಳಿದ ಕೂಡಲೆ ಆರಂಭದಲ್ಲೇ ಅದನ್ನು ಅಡಗಿಸುತ್ತಾ ಬಂದರೆ ಆ ಅಲ್ಪರ ಪುಂಡು ತನ್ನಷ್ಟಕ್ಕೆ ತಾನೇ ಅಡಗಿಹೋಗುತ್ತದೆ. ಈ ಅಲ್ಪ ವಿಷಯಕ್ಕೆ ಹೆಚ್ಚು ಕ್ರೂರತ್ವ ಯಾಕೆ ಉಪಯೋಗಿಸಬೇಕು? ಇಂಗ್ಲೀಷ್ ಗೌರ್ನಮೆಂಟು ಹೆಚ್ಚು ಈ ಭರತಖಂಡಕ್ಕೆ ಬರುವುದಕ್ಕೆ ಮುಂಚೆ ಈ ಕ್ರೂರಕೃತ್ಯಗಳಿಗೆ ತೌರುಮನೆಯಾಗಿತ್ತು. ಈಗ ಸೌಖ್ಯವಾಗಿದೇವೆ. ಇದೇ ಸೌಖ್ಯವು ಇಂಗ್ಲೀಷ್ ಗೌರ್ನಮೆಂಟಿನೊಡನೆ ಸಹ ನಮಗೆ ಶಾಶ್ವತವಾಗಿರಲಿ! ಜಗಚ್ಚಕ್ಷುವಾದ ಸೂರ್ಯನ ಮೇಲೆ ದ್ವೇಷದಿಂದ ಮಣ್ಣು ಎರಚಿದರೆ ಅದು ಎರಚಿದವನ ಕಣ್ಣಲ್ಲೇ ಬಿದ್ದು ಅವನಿಗೆ ತೊಂದರೆಯಾಗುತ್ತದೇ ಹೊರತು ಸೂರ್ಯನಿಗೇನೂ ಅದರಿಂದ ಬಾಧೆಯಾಗುವುದಿಲ್ಲ.

ಒಬ್ಬ ಶೆರ್ ಹೋಲ್ಡರ್.

ಶಾರದಾ ಆಲಯದ ೫ನೆಯ ವಾರ್ಷಿಕೋತ್ಸವವು

ಈ ಮಾರ್ಚಿ ತಾ ೬ನೇ ಭಾನುವಾರ ರಾತ್ರಿ ೮ ಗಂಟೆಗೆ ಸರಿಯಾಗಿ ಬೆಂಗಳೂರು ದಂಡು ನಾರಾಯಣಪಿಳ್ಳೆ ಬೀದಿಯಲ್ಲಿರುವ ಮ|| ದೊಂತಿ ರಾಮೈಯಶೆಟ್ಟರವರ ಮನೆಯಲ್ಲಿ ಮೇಲ್ಕಂಡ ಸಂಘದ ೫ನೆಯ ವಾರ್ಷಿಕೋತ್ಸವವು ಜರುಗಿತು. ಶ್ರೀರಾಮಕೃಷ್ಣ ಮಠದ ಶ್ರೀಮದ್ಯೋಗೀಶ್ವರಾನಂದ ಸ್ವಾಮಿಗಳವರು ಅಗ್ರಾಸನವನ್ನು ವಹಿಸಿದ್ದರು ಎಲ್ಲಾ ಕಡೆಯಿಂದಲೂ ದೊಡ್ಡ ಮನುಷ್ಯರು ಆಮಂತ್ರಿಸಲ್ಪಟ್ಟಿದ್ದರು ಈ ಸಂಘವು ಹಲವು ಬಡ ವಿದ್ಯಾರ್ಥಿಗಳ ಸಹಕಾರ್ಯತ್ನದಿಂದಲೂ ಮ|| ದೊಂತಿರಾಮೈಯನವರ ಆಶ್ರಯದಿಂದಲೂ ಸ್ಥಾಪಿಸಲ್ಪಟ್ಟದ್ದು ಬಡ ವಿದ್ಯಾರ್ಥಿಗಳಿಗೆ ಅನ್ನ ಬಟ್ಟೆ ವಸತಿಗಳನ್ನಿತ್ತು, ಅವರಿಗೆ ವಿದ್ಯಾಬುದ್ಧಿ ಕಲಿಸಿ, ಅವರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿ, ಮುಂದೆ ಅವರಿಗೇನಾದರೂ ಜೀವನೋಪಾಯಕ್ಕೆ ಮಾರ್ಗವನ್ನು ಕಲ್ಪಿಸಿಕೊಡಬೇಕೆಂಬುದೇ ಈ ಸಂಘದ ಸದುದ್ದೇಶವಾಗಿದೆ ಮೊಟ್ಟಮೊದಲು ಈ ಸಂಘದ ಪೋಷಣೆಯು ಜನಗಳ ಔದಾರ್ಯದಿಂದ ನಡೆಯಬೇಕೆಂದು ವಿಚಾರವಾಗಿದ್ದರೂ, ಜನಗಳಿಂದ ಬರುವ ಚಂದಾಹಣವು ತಿಂಗಳಿಗೆ ೫ ರೂಪಾಯಿಗಿಂತ ಕಡಮೆಯಾಗಿಯೂ, ವೆಚ್ಚವಾದರೋ ೧೦೦ ರೂಪಾಯಿಗಿಂತ ಅಧಿಕವಾಗಿಯೂ ಆದುದರಿಂದ ಸಂಘದ ಪೋಷಣೆಗಾಗಿ ಏನಾದರೂ ವ್ಯಾಪಾರವಮಾಡಬೇಕೆಂದು ಮ|| ರಾಮೈಯಶೆಟ್ಟರು ಬಂಡವಾಳವನ್ನು ಕೊಡಲು, ಸ್ವಾರ್ಥತ್ಯಾಗಿಗಳೂ ವಿದ್ಯಾವಂತರೂ ಆದ ಹಲವರು ಯುವಕರು ಸೇರಿ "ಜೂಬಿಲಿ ಕ್ಯಾಷ್ ಬಜಾರ್" ಮತ್ತು "ಶಾರದಾ ಸರ್ವೀಸರ್" ಎಂಬ ಎರಡು ಅಂಗಡಿಗಳನ್ನು ತೆಗೆದಿರುತ್ತಾರೆ ಈ ವ್ಯಾಪಾರದಲ್ಲಿ ಉತ್ಪತ್ತಿಯಾಗುವ ಹಣದಿಂದಲೇ ಸಂಘದ ಪೋಷಣೆಯು ನಡೆಯುತ್ತಿದೆ ಎಂದು ಮುಂತಾಗಿ ಸಂಘದ ಸೆಕ್ರೆಟರಿಯವರು ರಿಪೋರ್ಟು ಓದಿದರು ಅನಂತರ ಸಂಘದ ಚಿಕ್ಕ ಚಿಕ್ಕ ಬಾಲಕರು ಗಾನವಿನೋದಗಳಿಂದ ಸಭಿಕರನ್ನು ಆನಂದಗೊಳಿಸಿದರು ಅಲೆಗ್ಸಾಂಡರ್ ಮತ್ತು ಚೋರ ಎಂಬ ಸಂವಾದವನ್ನೂ, ಷೇಕ್ಸ್ ಪಿಯರಿನ ಜೂಲಿಯಸ್ ಸೀಜರ್ ಎಂಬ ರೂಪಕವನ್ನೂ ಬಹು ಚೆನ್ನಾಗಿ ಅಭಿನಯಿಸಿ ತೋರಿಸಿದರು ಕೆಲವು ನಕಲಿಗಳು ಮಾಡಲ್ಪಟ್ಟವು ಗ್ರಾಮೊಫೋನ್ ಮತ್ತು ಹಾರ್ಮೋನಿಯಂ ಎಂಬ ವಾದ್ಯಗಳು ಹಾಜರಿದ್ದವು ಅನಂತರದಲ್ಲಿ ಶ್ರೀ ಸ್ವಾಮಿಗಳವರು ಇಂತಹ ಸಂಘಗಳ ಮಹತ್ವವನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು ಎಲ್ಲರಿಗೂ ಹೂವು ಗಂಧಾದಿಗಳು ಹಂಚಲ್ಪಟ್ಟು ರಾತ್ರಿ ೧೧ ಗಂಟೆಗೆ ಸಭೆಯು ಮುಕ್ತಾಯವಾಯಿತು

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು

ಚಿತ್ರದುರ್ಗದ ಮೇಲ್ಕಂಡ ಸಮಾಜದ ಮೆಂಬರುಗಳು ಕಳೆದ ೭ ನೇ ತಾ ಸೋಮವಾರ ಮಧ್ಯಾಹ್ನ ಗೌರ್ನಮೆಂಟ್ ಗರ್ಲ್ಸ್ ಸ್ಕೂಲು ಹಾಲಿನಲ್ಲಿ ಸಭೆಸೇರಿ ತಿಂಗಳಗಟ್ಲೆ ಮೀಟಿಂಗನ್ನು ನಡಿಸಿದರು ವೈಸ್ ಪ್ರೆಸಿಡೆಂಟ್ ಮ|| ವೆಂಕಟಾಚಾರ್, ಬಿ ಎ, ಎಲ್ ಟಿ ಯವರ ಅಗ್ರಾಸನಾಧಿಪತ್ಯದಲ್ಲಿ ಸ ಮಾರು ೬೫ ಜನ ಉಪಾಧ್ಯಾಯರುಗಳು ಹಾಜರಿದ್ದರು ಮ|| ಶಿವಾಜಿರಾಯರೆಂಬುವರು ನಾನಾ ವಿಧವಾದ ಉಪಕರಣಗಳೊಂದಿಗೆ ಕನ್ನಡ ೬ ನೇ ತರಗತಿಯನ್ನು ಕರೆದು ಒಂದು ವಸ್ತುಪಾಠವನ್ನು ಬೋಧಿಸಿದರು ಸಭಿಕರ್ಯಾರೂ ದೋಷಗಳನ್ನು ಕಂಡುಹಿಡಿಯದಂತೆ ಪಾಠವು ಉತ್ತಮವಾಗಿತ್ತು ಅನೇಕ ಹೊಸಪದ್ಧತಿಗಳನ್ನು ತಿಳಿಯಲ್ಪಡುವವಾಯಿತು

ತರುವಾಯ ಸಭೆಯ ಸೆಕ್ರೆಟರಿಯವರು ಕಳೆದ ಮೀಟಿಂಗಿನ ಸಾರಾಂಶವನ್ನು ಸಂಕ್ಷೇಪವಾಗಿ ವಿವರಿಸಿದರು ಮುಖ್ಯವಾದ ಭಾಗಗಳು ರಿಕಾರ್ಡು ಮಾಡಲ್ಪಟ್ಟವು

ಕಳೆದ ತಿಂಗಳುಗಳಲ್ಲಿ ಉಪನ್ಯಾಸ ರೂಪದಲ್ಲಿ ಬರೆದು ಬಂದವುಗಳನ್ನು ಸರಿಪಡಿಸಿ "ಬೋಧಿಸುವುದಕ್ಕೆ ಮೊದಲು ಉಪಾಧ್ಯಾಯರು ಆ ಪಾಠವನ್ನು ಕುರಿತು ಓದಿ ಟಿಪ್ಪಣಿಯೊಂದಿಗೆ ತಯಾರಾಗುವುದು ಉತ್ತಮ" ಎಂಬ ವಿಚಾರವಾಗಿ ವಿವರಿಸಿ ತಿಳಿಸಿದರು ಹೊರಗಿನ ಉಪಾಧ್ಯಾಯರಿಗೂ ತಿಳುವಳಿಕೆಗೆ ಬರುವಂತೆ "ವಿದ್ಯಾದಾಯಿನಿ" ಎಂಬ ಮಾಸಪತ್ರಿಕೆಯಲ್ಲಿ ಪ್ರಿಂಟುಮಾಡಿಸಲು ಏರ್ಪಾಡಾಯಿತು

ಬಳಿಕ ವೈಸ್ ಪ್ರೆಸಿಡೆಂಟರವರು ವಸ್ತುಪಾಠವನ್ನು ಬೋಧಿಸುವುದರಲ್ಲಿ ತಕ್ಕ ಪದ್ಧತಿಗಳನ್ನು ತಿಳಿಸಿದರು ಅಲ್ಲದೆ ಇಂಗ್ಲೆಂಡ್, ಜರ್ಮನಿ, ಈ ಪ್ರಾಂತ್ಯದ ನವೀನ ಪದ್ಧತಿಗಳನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸಕೊಟ್ಟರು ಮುಂದಿನ ಮೀಟಿಂಗಿನಲ್ಲಿ ಕನ್ನಡ ೩ನೇ ತರಗತಿಗೆ ಮಹಜ್ಜ ಸಂಪರ್ಕ ಅಪವನವನ್ನು ಬೋಧಿಸಬೇಕೆಂದು ಏರ್ಪಡಿಸಿದೆ

ಅಂಕಗಣಿತ ಬೋಧಿಸುವ ವಿಚಾರದಲ್ಲಿ ಉಪನ್ಯಾಸ ಕೊಡಲು ಹೈಸ್ಕೂಲು ಟೀಚರು ಮ|| ಶಿವರಾಮಕೃಷ್ಣಯ್ಯನವರು ಒಪ್ಪಿರುತ್ತಾರೆ

ವಿಲೇಜ್ ಎಲಿಮೆಂಟರಿ ಸ್ಕೂಲ್ ಉಪಾಧ್ಯಾಯರುಗಳಿಗೆ ಚಿಕ್ಕದಾದ ಈ ಕೆಳಗೆ ಕಂಡ ಉಪನ್ಯಾಸ ಬರೆಯಲು ಕೊಟ್ಟಿದೆ ಅವರು ತಮ್ಮ ಅನುಭವಪೂರ್ವ ಉತ್ತರವನ್ನು ಬರೆದು ಈ ತಿಂಗಳ ಆಖೈರೊಳಗಾಗಿ ಸೆಕ್ರೆಟರಿಯವರ ವಶಕ್ಕೆ ಕಳುಹಿಸಬೇಕಾಗಿ ಗೊತ್ತಾಗಿದೆ ಪ್ರಶ್ನೆ —ಆರೋಗ್ಯಸೂತ್ರಕ್ಕೆ ಅನುಸಾರವಾಗಿ ಪಾಠಶಾಲೆಯನ್ನು ಹೇಗೆ, ಎಂಥಾ ಸ್ಥಳದಲ್ಲಿ ಕಟ್ಟತಕ್ಕದ್ದು

ಚಿತ್ರದುರ್ಗ, ಸೀಬಾಬಿಷ್ಪಪ್ಪ,
೧೧ ೩ ೧೯೧೦ ಉಪಾಧ್ಯಾಯ ಸಂಘದ ಸೆಕ್ರೆಟರಿ

ಸ್ಕೂಲ್ ಬಹುಮಾನ ಸಭೆಗಳು.

ಮಿತ್ತನಡಕ ಬೋರ್ಡ್ ಸ್ಕೂಲು.

ಕಳೆದ ಫೆಬ್ರವರಿ ತಾ. ೧೬ಕ್ಕೆ ಮಿತ್ತನಡಕ ಬೋರ್ಡು ಎಲಿಮೆಂಟರಿ ಸ್ಕೂಲ್ ಬಾಲಕ ಬಾಲಕಿಯರಿಗೆ ಇನಾಮು ತಂಬೋಣದ ಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಅನೇಕ ಸರಕಾರಿ ಉದ್ಯೋಗಸ್ಥರೂ ಊರ ಮುಖಂಡ ಗೃಹಸ್ಥರೂ ಮಕ್ಕಳ ಹೆತ್ತವರೂ ಅನೇಕ ಶಾಲಾ ಉಪಾಧ್ಯಾಯರುಗಳೂ ೩ ಘಂಟೆಗೆ ಶಾಲೆಯಲ್ಲಿ ಕೂಡಿದರು ಸಭಿಕರ ಅಪೇಕ್ಷೆಯಂತೆ ದಕ್ಷಿಣ ಕನಡಾ ಡಿಸ್ಟ್ರಿಕ್ಟು ಬೋರ್ಡು ಮೆಂಬರಾದ ಮ|| ವಿ ರಂಜಾ ಲಕ್ಷ್ಮೀನಾಥ ಸ್ವಾಮಿರಾಜರುವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು ಬಾಲಕರಿಂದ ದೇವರ ಪ್ರಾರ್ಥನೆಯೂ ಇತರ ಗೀತಗಳೂ ಹಾಡಲಾಗಿ ಹೆಡ್ ಮಾಸ್ಟರ್ ಸುಬ್ಬಣ್ಣಭಟ್ಟರು ಶಾಲೆ ವರ್ಷಾವಧಿ ರಿಪೋರ್ಟಿನ ಮೂಲಕ ಸ್ಕೂಲಿನ ಅಭಿವೃದ್ಧಿ ಸ್ಥಿತಿಯು ಸಮಸ್ತ ಸಭಾಸದರಿಗೂ ವಿಶದವಾಯಿತು ಮಕ್ಕಳಿಂದ ವಾಗ್ವಾದ ಸಂಬಂಧ ಅಭಿನಯ ಮೂಲಕ ಸಂಭಾಷಣೆ ನಡೆಯಿತು ಮತ್ತೆ ಶಾಲಾ ಮಕ್ಕಳಿಂದ ಓಡುವುದು, ನೆಗೆಯುವುದು, ಮೇಜಿನ ಚಕ್ರ ಆಟ, ಹಗ್ಗದ ಎಳೆದಾಟ ವಗೈರೆ ಆಟಗಳು ಬಹಳ ಮನೋಹರವಾಗಿತ್ತು ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟವರಿಗೆ ಪುಸ್ತಕಗಳೂ, ಆಟಗಳಲ್ಲಿ ಗೆದ್ದ ಮಕ್ಕಳಿಗೆ ಇತರ ಸಾಮಾನುಗಳೂ ಅಧ್ಯಕ್ಷರ ಸ್ವಹಸ್ತದಿಂದ ಕೊಡಿಸಲಾಯಿತು ಮತ್ತು ಪಿಟ್ಲಬೋರ್ಟು ಶಾಲೆಯಿಂದ ಬಂದ ನಾಲ್ಕು ಮಂದಿ ಉಪಾಧ್ಯಾಯರೂ ತುಂಬಾ ಸಂತೋಷಪಟ್ಟು, ೪ ಇನಾಮುಗಳನ್ನು ಕೊಟ್ಟರು ಅಲ್ಲದೆ ಪಿಟ್ಲಶಾಲಾ ಮಾಸ್ಟರ್ ಬಿ ವೆಂಕಟ್ರಾಯರು ವಿದ್ಯೆಯ ಮೇಲ್ಮೆ ವಿಷಯ ಚಿಕ್ಕ ಉಪನ್ಯಾಸವನ್ನು ಓದಿ ಸಭಿಕರಿಗೆ ಆನಂದವನ್ನುಂಟುಮಾಡಿದರು ಕೊಡ್ಲ ಮೊಗ್ರು ಪೋಲೀಸ್ ಇನ್ಸ್ಪೆಕ್ಟರ್ ಮಿಸೆಜಸ್ ಯವರು ಮಕ್ಕಳಿಗೆ ಸುಳ್ಳು ವಗೈರೆ ಹೇಳಬಾರದಾಗಿಯೂ, ಹೆತ್ತವರಿಗೆ ಬಾಲರನ್ನು ಕ್ರಮವಂತೆ ಶಾಲೆಗೆ ಕಳುಹಿಸಿಕೊಡಬೇಕೆಂತ ವಗೈರೆ ಭಾಷಣ ಮಾಡಿದರು ಪಿಟ್ಲರೇಂಜ್ ಶಾಲೆಗಳ ಸೂಪರ್ವೈಸರ್ ಮ|| ಗಣೇಶರಾಯರು ಹಳೇ ಬೋಧನಾಕ್ರಮವೂ ಈಗಿನ ಬೋಧನಾಕ್ರಮದ ತಾರತಮ್ಯವೂ, ಅಂಗಸಾಧನೆ ಅಗತ್ಯವೆಂತಲೂ ವಗೈರೆ ಬಹು ವಿಶದವಾಗಿ ಭಾಷಣಮಾಡಿದರು ಅಧ್ಯಕ್ಷರ ಭಾಷಣವಾಗಿ ಅಧ್ಯಕ್ಷರ ಕಡೆಯಿಂದ ಶಾಲೆ ಮಕ್ಕಳಿಗೂ ಇತರ ಮಕ್ಕಳಿಗೂ ಮಿಠಾಯಿ ಉಂಡೆಗಳನ್ನು ಹಂಚಲಾಯಿತು ಸಭಿಕರಿಗೆಲ್ಲಾ ಪನ್ನೀರತ್ತರ್ ಪುಷ್ಪ ಮತ್ತು ತಾಂಬೂಲಗಳನ್ನು ಹಂಚಿ ಬಾಲಕರಿಂದ ಚಕ್ರವರ್ತಿಯವರ ಮೇಲೆ ಮಂಗಳವು ಹಾಡಲ್ಪಟ್ಟು ಸಭೆಯು ಬರಖಾಸ್ತಾಯಿತು ಸುಮಾರು ೩೦೦ ಮಂದಿಗಿಂತಲೂ ಹೆಚ್ಚಾಗಿ ಜನ ಸೇರಿತ್ತು.

ಕಡೂರು ತಾಲ್ಲೂಕು ಕೊಪ್ಪದ ಸ್ಕೂಲು

ಇಲ್ಲಿನ ಸ್ಕೂಲ್ ಬಾಲಕರುಗಳಿಗೆ ಇನಾಂ ಪುಸ್ತಕ ಮುಂತಾದವುಗಳನ್ನು ಹಂಚಿದರು. ಹೆ ಮಾ ಮೆ|| ಗಣೇಶಜೋಯಿಸರ ಕೋರಿಕೆಯಂತೆ ಅಮಲ್ದಾರ್ ಮೆ|| ಮಹಮ್ಮದ್ ಸೈಯದ್ ಷರೀಫ್ ಸಾಹೇಬರವರೂ, ಪೊ ಇನ್ ಮೆ|| ದಸ್ನಿಂಗ್ ಸಾಹೇಬರವರೂ, ಡಾಕ್ಟರ್ ಮೆ|| ನರಸಿಂಗರಾಯರೂ, ಮ್ಯುನಿಸಿಪಲ್ ಮೆಂಬರುಗಳೂ, ಊರಿನ ವರ್ತಕರೂ, ವಿದ್ಯಾರ್ಥಿಗಳ ಪೋಷಕರೂ ಸಾಯಂಕಾಲ ೫|| ಘಂಟೆಗೆ ದಯಮಾಡಿಸಿ ಸಭೆಯನ್ನಲಂಕರಿಸಿದರು ಸಭಿಕರ ಕೋರಿಕೆಯಂತೆ ಅಮಲ್ದಾರರವರು ಅಗ್ರಾಸನವನ್ನು ವಹಿಸಿದರು ಸ್ಕೂಲ್ ಬಾಲಕಿಯರಿಬ್ಬರು ಗಂಭೀರವಾಗಿಯೂ ಇಂಪಾಗಿಯೂ ದೇವತಾ ಸ್ತುತಿಯನ್ನು ಹಾಡಿದರು ಹೆ ಮಾಸ್ಟರಿಂದ ಸ್ಕೂಲ್ ರಿಪೋರ್ಟು ಓದಲ್ಪಟ್ಟಿತು ಗ್ರಾಮಸ್ಥರು ತಮ್ಮ ಬಾಲಕರುಗಳ ವಿದ್ಯಾಭಿವೃದ್ಧಿಯಲ್ಲಿ ಸ್ವಲ್ಪವೂ ಆಸಕ್ತರಾಗದೆ ಬಾಲಕರುಗಳನ್ನು ಕ್ರಮವಾಗಿ ಸ್ಕೂಲಿಗೆ ಕಳುಹಿಸದಿರುವುದೇ ಈ ಸ್ಕೂಲಿನ ದುರದೃಷ್ಟಕ್ಕೆ ಕಾರಣವೆಂದು ಸೂಚಿಸಲ್ಪಟ್ಟಿತು ಈ ಸಾರಿ ಪ್ಯಾಸ್ ಮಾಡಿದ ಶ್ರೀನಿವಾಸಭಟ್ಟನು ವಿದ್ಯಾವಿಷಯವಾಗಿಯೂ, ಸುಬ್ಬಯ್ಯನು ಆರೋಗ್ಯದ ವಿಷಯವಾಗಿಯೂ ಉಪನ್ಯಾಸಗಳನ್ನು ಓದಿದರು ಬಾಲಗಡಿ ಸ್ಕೂಲ್ಮಾಸ್ಟರ್ ನಾರಾಯಣರಾಯರೂ ಕಸಬಾ ಶೇಕ್ದಾರ್ ವೆಂಕಟರಮಣಯ್ಯನವರೂ ಕೊಪ್ಪ ಸ್ಕೂಲಿನಲ್ಲಿ ಅತ್ಯಂತ ಶ್ರಮಪಟ್ಟು ಕೆಲಸಮಾಡಿ ಈ ಸ್ಕೂಲಿಗೆ ಇಂಥಾ ಭಾಗ್ಯವನ್ನು ಕೊಟ್ಟದ್ದರಿಂದ ಸ್ಕೂಲ್ ಮಾಸ್ಟರುಗಳ ಚಾತುರ್ಯವು ಅತ್ಯಂತ ಆನಂದವನ್ನು ಎಲ್ಲರಿಗೂ ಉಂಟುಮಾಡಿತೆಂದೂ, ಸ್ಕೂಲ್ ರಿಪೋರ್ಟಿನಲ್ಲಿ ಹೆಡ್ ಮಾಸ್ಟರವರು ಬರೆದ ರೀತಿ ಗ್ರಾಮಸ್ಥರು ಮಾಡದೆ ಮುಂದಾದರೂ ಕ್ರಮವಾಗಿ ಬಾಲಕರುಗಳನ್ನು ಸ್ಕೂಲಿಗೆ ಕಳುಹಿಸಿದಲ್ಲಿ ಈ ಸ್ಕೂಲು ಅಭಿವೃದ್ಧಿಯ ಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲವೆಂದೂ ಸೂಚಿಸಿದರು ಬಾಲಕರಿಂದ ನಾಟಕ ಆಡಿಸಲ್ಪಟ್ಟಿತು ಇದು ಸಭಿಕರಿಗೆಲ್ಲಾ ಆಶ್ಚರ್ಯವನ್ನೂ ತುಂಬಾ ಆನಂದವನ್ನೂ ಉಂಟುಮಾಡಿತು ಬಾಲಕಿಯರ ಪುನಃ ಸಂಧ್ಯಾಕಾಲದ ದೇವತಾ ಸ್ತುತಿಯನ್ನು ಕರ್ಣಾನಂದವಾಗಿ ಹಾಡಿದರು ತರುವಾಯ ಅಗ್ರಾಸನಾಧಿಪತಿಗಳು ಈ ವರ್ಷದ ಸ್ಕೂಲ್ ರಿಜಲ್ಟು ಆಸ್ಕೃತ್ತಮವಾದದ್ದೆಂತಲೂ, ಎಲ್ಲಾ ಬಾಲಕರೂ ಕ್ರಮವಾಗಿ ವ್ಯಾಸಂಗವ ಮಾಡಿ ತೇರ್ಗಡೆ ಹೊಂದಿ ಬಹುಮಾನಗಳನ್ನು ಪಡೆಯಬೇಕೆಂತಲೂ, ಗ್ರಾಮಸ್ಥರು ವಿದ್ಯಾಪ್ರಯೋಜನಗಳನ್ನು ಚೆನ್ನಾಗಿ ತಿಳಿದು ಬಾಲಕರುಗಳನ್ನು ಕ್ರಮವಾಗಿ ಸ್ಕೂಲಿಗೆ ಕಳುಹಿಸಿ ಮಾಸ್ಟರುಗಳ ಶ್ರಮವನ್ನು ಸಾರ್ಥಕಪಡಿಸಬೇಕೆಂದೂ ಹೇಳಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಾಲಕರಿಗೆ ಗ್ರಾಮಸ್ಥರುಗಳಿಂದ ಉಚಿತವಾಗಿ ಕೊಡಲ್ಪಟ್ಟ ಬಹುಮಾನ ಪುಸ್ತಕಗಳನ್ನೂ, ಸ್ಕೂಲಿಗೆ ಸರ್ಕಾರದವರು ಕಳುಹಿಸಿದ್ದ ಇನಾಂ ಪುಸ್ತಕಗಳನ್ನೂ, ಆಟವಾಡಿದ ಮತ್ತು ಸಂಗೀತಗಳನ್ನು ಹೇಳಿದ ಬಾಲಕ ಬಾಲಕಿಯರುಗಳಿಗೆ ಬಹುಮಾನರೂಪವಾಗಿ ಕೆಲವು ಬೊಂಬೆಗಳನ್ನೂ ದಯಪಾಲಿಸಿದರು ಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ಸ್ತೋತ್ರರೂಪವಾದ ಹಾಡಿನ ಮಂಗಳವೂ ಹೇಳಲ್ಪಟ್ಟವು ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದುಸ್ಥಾನದ ಜನರು ಈಗ ದಕ್ಷಿಣ ಆಫ್ರಿಕದಲ್ಲಿ ಸುಮಾರು ೧,೩೦,೦೦೦ ಮಂದಿ ಇರುತ್ತಾರೆಂದು ಪ್ರಕಟವಾಗಿದೆ

ಕಾಶ್ಮೀರದ ಚೀಫ್ ಜಡ್ಜರಾದ ರಾಯಬಹದ್ದೂರ್ ಪಂಡಿತ ರಾಧಾಕೃಷ್ಣರವರನ್ನು ಜಾಮೂ ಪ್ರಾಂತ್ಯದ ಗವರ್ನರಾಗಿ ನೇಮಿಸಿರುತ್ತಾರೆ

ಬರ್ದ್ವಾನ್ ಮಹಾರಾಜರವರು ಮುಂದಿನ ತಿಂಗಳಲ್ಲಿ ಸಮುದ್ರಯಾನ ಮಾಡಿಕೊಂಡು ಹೋಗಿ ಯೂರೋಪಿಯನ್ ರಾಜ್ಯಗಳಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದ್ದಾರೆ

ಫೈಜಾಬಾದಿನಲ್ಲಿ ಪೋಲೋ ಎಂಬ ಕುದುರೇ ಚಂಡಾಟವನ್ನು ಆಡುತ್ತಿದ್ದಾಗ್ಗೆ ಸ್ಟಾಂಡರ್ ಎಂಬೊಬ್ಬ ಸೈನ್ಯಾಧಿಪತಿಯು ಕುದುರೆಯಿಂದ ಬಿದ್ದು ಪ್ರಾಣ ಕಳೆದುಕೊಂಡನು

ಕಾನ್ಪುರದಲ್ಲಿ ಕೆಲವು ದುಷ್ಟರಾದ ಮಹಮ್ಮದೀಯರು ತಮಗೆ ದ್ವೇಷವಿದ್ದ ಒಬ್ಬನನ್ನು ಹಿಡಿದು ಅವನ ಮೈಮೇಲೆ ಸೀಮೆಯೆಣ್ಣೆ ಸುರಿದು ಬೆಂಕಿಹಚ್ಚಿ ಸುಟ್ಟು ಕೊಂದುಹಾಕಿದರು ಪೋಲೀಸಿನವರು ಅವರನ್ನು ಹಿಡಿದು ತನಿಖೆ ಮಾಡುತ್ತಿದ್ದಾರೆ.

ಜೈಪುರ ಸಂಸ್ಥಾನದ ಅರಸರಾದ ಮಹಾರಾಜ ಸವಾಯಿ ಜಯ್ ಸಿಂಗ್ ರವರು ಶಿಕಾರ್ಪುರದ ವಿದ್ಯಾಲಯಕ್ಕೆ ಕೊಡುತ್ತಿದ್ದ ವರುಷಾಶನವನ್ನು ೫ ರಿಂದ ೧೦ ಸಾವಿರಕ್ಕೆ ಹೆಚ್ಚಿಸಿರುತ್ತಾರೆ

ಪೂರ್ವ ಬಂಗಾಳಕ್ಕೆ ಸೇರಿದ ಖುಲ್ನಾ ಪಟ್ಟಣದಲ್ಲಿ ಪಂಚಾನನಘೋಷ ಎಂಬಾತನು ರಾಜದ್ರೋಹ ಮಾಡಿದವನೆಂದು ಜಡ್ಜರು ತೀರ್ಮಾನಿಸಿ, ಅವನಿಗೆ ಒಂದೂವರೆ ವರುಷ ಕಠಿಣ ಸಜಾ ವಿಧಿಸಿದರು

ಹೈದರಾಬಾದ್ ನೈಜಾಮರವರು ತಮ್ಮ ಸಂಸ್ಥಾನದೊಳಕ್ಕೆ ಯಾರೂ ಅಲಹಾಬಾದಿನ "ಪಂಜಾಬಿ" ಪತ್ರಿಕೆಯನ್ನೂ, ಲಾಹೋರಿನ "ಹಿಂದುಸ್ಥಾನ್" ಪತ್ರಿಕೆಯನ್ನೂ ತರಿಸಿ ಓದಕೂಡದೆಂದು ಇಸ್ತಿಹಾರು ಹಾಕಿಸಿರುತ್ತಾರೆ

ತಿನ್ನವೆಲ್ಲಿ ಜಿಲ್ಲೆಗೆ ಸೇರಿದ ಟುಟಿಕಾರಿನ್ ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಓಡುವಂಥಾ ಟ್ರಾಂ ಗಾಡಿಗಳನ್ನು ಇಟ್ಟು ನಡಿಸಬಹುದೆಂದು ಮ್ಯುನಿಸಿಪಾಲಿಟಿಯವರು ಮೆ|| ಅನಂತರಾಮರಾಯರಿಗೆ ಅಪ್ಪಣೆ ಕೊಟ್ಟಿದ್ದಾರೆ

ಕಲ್ಕತ್ತೆಯ ಬಳಿ ಇರುವ ಚಿತ್ಪುರವೆಂಬ ಸ್ಥಳದಲ್ಲಿ ಸೆಣಬು ನಾರಿನ ಗಟ್ಟಾಗಳು ಭರ್ತಿಯಾಗಿದ್ದ ಕಟ್ಟಡಕ್ಕೆ ಬೆಂಕಿಬಿದ್ದು ೨೦,೦೦೦ ಮಣಗಳ ನಾರು ಸುಟ್ಟುಹೋಗಿ, ಮಾಲೀಕರಿಗೆ ೭೫,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ನಷ್ಟವಾಗಿರುತ್ತದೆ

ಪೂರ್ವಬಂಗಾಳಕ್ಕೆ ಸೇರಿದ ಖುಲ್ನಾ ಡಿಸ್ಟ್ರಿಕ್ಟಿನಲ್ಲಿ ರಾಜದ್ರೋಹಿಗಳ ಪುಂಡನ್ನು ಅಡಗಿಸುವುದಕ್ಕೆ ಗವರ್ನ್ಮೆಂಟಿನವರು ಶಿಕ್ಷಾರ್ಥವಾದ ಪೋಲೀಸನ್ನು ನೇಮಕಮಾಡಿ, ಇವರ ಸಿಬ್ಬಂದಿ ಖರ್ಚನ್ನು ಪ್ರಜೆಗಳಿಂದ ವಸೂಲ್ಮಾಡುವಂತೆ ಹುಕುಂ ಕೊಟ್ಟಿದ್ದಾರೆ.

ಸಿಲೋನ್ ದ್ವೀಪದ ವ್ಯವಸಾಯ ಸಂಘದವರು ಸರ್ಕಾರದಿಂದ ಪಡೆದುಕೊಂಡಿರುವ ಜಮೀನಿನ ಪೈಕಿ ೫೦ ಎಕರೆ ಭೂಮಿಯಲ್ಲಿ ಅಸ್ಸಾಮ ದೇಶದಿಂದ ಹುಲುಸಾಗಿ ಬೆಳೆಯುವಂಥಾ ಉತ್ಕೃಷ್ಟ ಜಾತಿಯ ಹೊಗೆಸೊಪ್ಪನ್ನು ತರಿಸಿ ಹಾಕಿ ಪರೀಕ್ಷೆ ಮಾಡುತ್ತಿದ್ದಾರೆ

ಪೂರ್ವ ಬಂಗಾಳಕ್ಕೆ ಸೇರಿದ ರಾಂಪೂರ್ ಹಾತಿ ಎಂಬ ಸ್ಥಳದಲ್ಲಿ ಒಬ್ಬ ಹಾವಾಡಿಗನು ಹಾವನ್ನು ಒಬ್ಬ ಸೋಟಕನ ಕುತ್ತಿಗೆಗೆ ಕಟ್ಟಿದನು ಅದು ಅವನನ್ನು ಕಡಿದು ಕೊಂದುಹಾಕಿತು ಮ್ಯಾಜಿಸ್ಟ್ರೇಟರು ಆ ಹಾವಾಡಿಗನಿಗೆ ಮೂರು ತಿಂಗಳ ಸಜಾ ವಿಧಿಸಿದರು

ಈ ತಿಂಗಳ ತಾ ೨೫ ಮತ್ತು ೨೬ ರಲ್ಲಿ ಆಗ್ರಾ ಪಟ್ಟಣದಲ್ಲಿ ನಾಗರಿ ಬ್ರಾಹ್ಮಣರ ಮಹಾ ಜನ ಸಭೆಯು ಜರುಗುವುದು ಆಹನ ದ ಬಾದಿನ ರಾಜಾ ಬಹದ್ದೂರ್ ಲಾಲ್ ಶಂಕರ ಉಮಿಯಾಶಂಕರ್ ಯವರು ಸಭೆಯ ಅಗ್ರಸ್ಥಾನವನ್ನು ವಹಿಸುತ್ತಾರೆಂದು ತಿಳಿಯಲ್ಪಡುವುದು

ಪೂರ್ವಬಂಗಾಳಾ ಆಧಿಪತ್ಯಕ್ಕೆ ಸೇರಿದ ರಂಗಪುರದಲ್ಲಿ ಎರಡು ದೇಶೀಯ ಪತ್ರಿಕೆಗಳ ಎಡಿಟರುಗಳ ಮೇಲೆ ರಾಜದ್ರೋಹದ ಮೊಕದ್ದಮೆ ಹೂಡಲಾಯಿತು ಅವರ ಅವರಿಬ್ಬರೂ ಕ್ಷಮಾಪಣೆಯನ್ನು ಬೇಡಿಕೊಂಡರು ಮ್ಯಾಜಿಸ್ಟ್ರೇಟರು ಅವರ ವಿಷಯವನ್ನು ಗವರ್ನ್ಮೆಂಟಿಗೆ ಅರಿಕೆ ಮಾಡಿರುತ್ತಾರೆ

ಬಳ್ಳಾರಿ ಪಟ್ಟಣದಲ್ಲಿರುವ ಆಸ್ಪತ್ರೆಯನ್ನು ಬಹ ಮಣಿ ಮ ಡಿ ರೋಗಿಗಳಿಗೆ ಅನುಕೂಲ ಪಡಿಸುವುದಕ್ಕೆ ಸರ್ಕಾರದವರು ೫೦೦೦೦ ರೂಪಾಯಿ ಕೊಟ್ಟಿದ್ದಾರೆ ಕಳೆದ ವಾರ ಸರ್ಜನ್ ಜನರಲ್ ರಾದ ಡಾಕ್ಟರ್ ಬ್ಯಾನರ್ಮನ್‌ರವರೇ ಮುಂತಾದವರು ಹೋಗಿ ಬೇಕಾದ ಸಲಹೆಗಳನ್ನು ಕೊಟ್ಟು ಬಂದರು

ರೋಹಿಲ್ ಖಂಡದ ಡಿಸ್ಟ್ರಿಕ್ಟಿನಲ್ಲಿರುವ ರಾಮಪುರವೆಂಬ ದೇಶೀಯ ಸಂಸ್ಥಾನದಲ್ಲಿ ನವಾಬರವರು ತಮ್ಮ ಜನಗಳಿಗ್ಯಾರೂ ರಾಜದ್ರೋಹವನ್ನು ಬೋಧಿಸುವ ಕೆಟ್ಟ ಪತ್ರಿಕೆಗಳನ್ನು ತರಿಸಿ ಓದಕೂಡದೆಂದೂ, ಅಂಥವರು ಸಿಕ್ಕಿದರೆ ಅವರಿಗೆ ಕಠಿಣ ತರವಾದ ಶಿಕ್ಷೆ ವಿಧಿಸಲ್ಪಡುವುದೆಂದೂ ಎಚ್ಚರಿಕೆ ಕೊಟ್ಟಿರುತ್ತಾರೆ

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಮಾಲೇರ್ ಕೋಟ್ಲಾ ಎಂಬ ಸಣ್ಣ ದೇಶೀಯ ಸಂಸ್ಥಾನದಲ್ಲಿ ನವಾಬರಾದ ಮಹಮದ್ ಇಬ್ರಾಹಿಂ ಅಲ್ಲಿ ಖಾನ್ ರವರು ಇಂಗ್ಲೀಷನ್ನೂ ದೇಶಭಾಷೆಯನ್ನೂ ಆ ಜಿಲ್ಲೆ ಧರ್ಮಾರ್ಥವಾಗಿ ಮಕ್ಕಳಿಗೆ ಕಲಿಸುವಂಥಾ ಪಾಠಶಾಲೆಗಳನ್ನು ಏರ್ಪಾಡು ಮಾಡಿರುತ್ತಾರೆಂದು ಪ್ರಕಟವಾಗಿದೆ

ಚಿತ್ರಗೊಂದಕ್ಕೆ ಸೇರಿದ ಸೀತಾ ಕುಂಡವೆಂಬ ಮಠದಲ್ಲಿ ಯತೀಂದ್ರ ಮಹಂತರು ವಿವಾಹ ಮಾಡಿಕೊಂಡ ಕಾರಣ ಅವರನ್ನು ಮಹಾಂತರ ಪದವಿಯಿಂದ ತಪ್ಪಿಸಬೇಕೆಂದು ಕೆಲವರು ದಾವಾ ತಂದಿದ್ದರು ಸಬ್ ಜಡ್ಜಿಯವರು ಅದೇ ರೀತಿ ಹುಕುಂ ಮಾಡಿ ಡಿಕ್ರಿ ಕೊಟ್ಟಿರುತ್ತಾರೆ ಮಹಂತರು ಅವರ ಮೇಲೆ ಅಪೀಲ್ ಮಾಡಿಕೊಂಡಿದ್ದಾರೆ

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಲಕ್ನೋ ಡಿಸ್ಟ್ರಿಕ್ಟಿನಲ್ಲಿ ಕುಶಲಪಾಸಿ ಎಂಬೊಬ್ಬ ದರೋಡೆಗಾರನು ಸೇರಿಸಿಕೊಂಡು ಎರಡು ವರ್ಷಗಳಿಂದ ಅನೇಕ ದರೋಡೆಗಳನ್ನೂ ಕಳುವುಗಳನ್ನೂ ನಡಿಸುತ್ತಾ ಸಿಕ್ಕದೆ ತಪ್ಪಿಸಿಕೊಂಡಿರುವುದರಿಂದ ಅವನನ್ನು ಹಿಡಿದು ಕೊಡುವವರಿಗೆ ೧,೦೦೦ ರೂಪಾಯಿ ಇನಾಮು ಸಿಕ್ಕುವುದೆಂದು ಸರ್ಕಾರದವರು ಪ್ರಕಟಮಾಡಿರುತ್ತಾರೆ

ಬೊಂಬಾಯಿ ಪಟ್ಟಣದಲ್ಲಿ ದೇಶೀಯ ಹಿಂದೂ ವೈದ್ಯರನ್ನೂ ಯುನಾನಿ ಹಕೀಮರನ್ನೂ ಸರ್ಕಾರದವರು ಸರಿಯಾಗಿ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳಬೇಕೆಂದು ತೀರ್ಮಾನಿಸಿ, ಅಂಥವರೆಲ್ಲಾ ಕ್ರಮವಾಗಿ ಅರ್ಜಿ ಬರೆದು ರಿಜಿಸ್ಟರು ಮಾಡಿಸಿಕೊಳ್ಳತಕ್ಕದ್ದೆಂದು ವಿಧಿಸಿದರು ಈಗ ಈ ನಿರ್ಬಂಧವನ್ನು ತಪ್ಪಿಸಕೂಡದೆಂದು ವೈದ್ಯರೂ ಹಕೀಮರೂ ಸೇರಿ ಗವರ್ನ್ಮೆಂಟಿಗೆ ಅರ್ಜಿ ಬರೆದುಕೊಂಡಿದ್ದಾರೆ

ರಂಗೂನ ಪಟ್ಟಣದಲ್ಲಿ ಮೆ|| ಹರ್ರಿ ಹ್ಯಾಟಿಸಿಂಗ್ ಎಂಬಾತನು ಕುದುರೆ ಸವಾರಿ ಮಾಡಿಕೊಂಡು ಹೋಗುತ್ತಿದ್ದಾಗ ರಸ್ತೆಯಲ್ಲಿ ಒಂದು ಗುಂಡಿ ಇದ್ದದ್ದನ್ನು ಕಾಣದೆ ಕುದುರೆಯು ಎಡವಿ ಬಿದ್ದುಬಿಟ್ಟಿತು ಸವಾರನೂ ಬಿದ್ದುಕೊಂಡನು ಇದಕ್ಕಾಗಿ ಆತನು ಮ್ಯುನಿಸಿಪಾಲಿಟಿಯವರಿಂದ ೫,೫೦೦ ರೂಪಾಯಿ ಜುರ್ಮಾನಾ ಕೊಡಿಸಬೇಕೆಂದು ಚೀಫ್ ಕೋರ್ಟಿನಲ್ಲಿ ದಾವಾ ತಂದಿರುತ್ತಾನೆ

ಬೊಂಬಾಯಿ ಪಟ್ಟಣದ ಸರ್ ಬಾಲಚಂದ್ರ ಕೃಷ್ಣರವರ ಪತ್ನೀರವರು ಕೆಲವು ಕಾಲದಿಂದ ಕಾಯಿಲೆಯಾಗಿದ್ದು ಕಳೆದ ವಾರ ತೀರಿಹೋದರೆಂದು ಪ್ರಕಟವಾಗಿದೆ ಆ ಪಟ್ಟಣದ ಸ್ತ್ರೀಮಂಡಲಿಯಲ್ಲಿ ಈಕೆ ಬಹು ಪ್ರಮುಖಳಾಗಿದ್ದು, ಹಲವು ಸ್ತ್ರೀ ಕೂಟಗಳನ್ನು ನಡಿಸಿ ಸ್ತ್ರೀ ವಿದ್ಯಾಭಿವೃದ್ಧಿಯಲ್ಲೂ ಅವರ ನಡವಳಿಕೆಗಳನ್ನು ಕ್ರಮಪಡಿಸುವುದರಲ್ಲೂ ತುಂಬಾ ಸಾಹಸಪಡುತ್ತಾ ಹೆಸರುವಾಸಿಯನ್ನು ಪಡೆದಿದ್ದರು

ಕಾಗದ ಮುಂತಾದದ್ದನ್ನು ಅಂಚೆಯ ಮೂಲಕ ರೆಜಿಸ್ಟರ್ ಮಾಡುವುದಕ್ಕೆ ಪ್ರತ್ಯೇಕವಾಗಿ ಎರಡು ಆಣೆ ಚಾರ್ಜು ಕೊಡಬೇಕಷ್ಟೆ ಇದು ವರ್ತಕರಿಗೂ ವ್ಯಾಪಾರಿಗಳಿಗೂ ಸಾಮಾನ್ಯ ಪ್ರಜೆಗಳಿಗೂ ಬಹಳ ದುಬಾರಿಯಾಗಿದೆ ಎಂದೂ ಈ ದರವನ್ನು ಕಡಮೆ ಮಾಡಿಕೊಟ್ಟರೆ ಉತ್ಪತ್ತಿಯು ಇನ್ನೂ ಹೆಚ್ಚುವುದೆಂದೂ ಬೊಂಬಾಯಿನ ದೇಶೀಯ ವರ್ತಕ ಸಂಘದವರು ಇಂಡಿಯಾ ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡಿದಾರೆ

ಮದರಾಸ್ ಯೂನಿವರ್ಸಿಟಿ ವಿದ್ಯಾ ಸಂಘದವರು ನಡಿಸಿದ ಕಳೆದ ವರುಷದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ಇದ್ದ ಸುಮಾರು ೫೦೦ ವಿದ್ಯಾರ್ಥಿಗಳನ್ನು ವಿದ್ಯಾ ಸಂಘದ ತೀರ್ಮಾನದಂತೆ ಎಫ್ ಎ ಪರೀಕ್ಷೆಯ ತರಗತಿಗಳಿಗೆ ಸೇರಿಸಿಕೊಳ್ಳಬಹುದೆಂದು ಪ್ರಕಟಮಾಡಿದರಷ್ಟೆ ಈ ವಿದ್ಯಾರ್ಥಿಗಳಿಗೆಲ್ಲಾ ಮೆಟ್ರಿಕ್ಯುಲೇಷನ್ ಪರೀಕ್ಷೆಯು ಆಗಿದೆ ಎಂದಾಗಿ ಗೊತ್ತುಮಾಡಲ್ಪಟ್ಟು, ಅವರಿಗೆ ಸರಿಯಾದ ಸರ್ಟಿಫಿಕೇಟುಗಳನ್ನು ಕೊಡತಕ್ಕದೆಂದು ತೀರ್ಮಾನವಾಗಿರುತ್ತದೆ

ಲಾಲಾ ಲಾಜಪತ್‌ರಾಯ ಯವರು 'ಇಂಗ್ಲೀಷ್‌ಮನ್' ಎಂಬ ಪತ್ರಿಕೆಯ ಮೇಲೆ ಮಾನನಷ್ಟದ ದಾವಾ ಮಾಡಿದಾಗ ಕಲ್ಕತ್ತೆ ಹೈಕೋರ್ಟ್ ಜಡ್ಜಿಯವರು ಅವರಿಗೆ ೧೫,೦೦೦ ರೂಪಾಯಿ ಡಾಮೇಜು ಕೊಡಬೇಕೆಂದು ತೀರ್ಮಾನಿಸಿದ್ದರು ಈಗ ಆ ಪತ್ರಿಕೆಯವರು ಅಪೀಲ್ ಮಾಡಿಕೊಂಡಿದ್ದರು ಹೈಕೋರ್ಟಿನ ಇಬ್ಬರು ಜಡ್ಜಿಗಳು ವಿಚಾರಣೆಮಾಡಿ, ಲಾಲಾ ಲಾಜಪತ್‌ರಾಯರಿಗೆ ೧,೫೦೦ ರೂಪಾಯಿ ದಾವಾ ಕೊಟ್ಟರೆ ಸಾಕಾಗಿದೆ ಎಂದು ಫೈಸಲ್ ಮಾಡಿದ್ದಾರೆ

ನಾಸಿಕ್ ನಗರದ ನಾಟಕಶಾಲೆಯಲ್ಲಿ ಕಲೆಕ್ಟರ್ ಮೆ|| ಜಾಕ್ಸನ್‌ರವರನ್ನು ಕೊಲೆ ಮಾಡಿದ ಮೊಕದ್ದಮೆಯು ಬೊಂಬಾಯಿ ಹೈಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ ಈ ಮೊಕದ್ದಮೆಯಲ್ಲಿ ಅನಂತ ಲಕ್ಷ್ಮಣ ಕಾನ್ಹೇರೆ, ಕೃಷ್ಣಾಜಿ ಗೋಪಾಲ ಕರ್ವೆ, ವಿನಾಯಕ ನಾರಾಯಣ ದೇಶಪಾಂಡೆ, ಶಂಕರ ರಾಮಚಂದ್ರ ಸೋಮಣ, ವಾಮನ [illegible] ಜೋಶೀ, ಗಣೇಶ ಬಾಲಾಜಿ ವೈದ್ಯ, ದತ್ತಾತ್ರೇಯ ಪಾಂಡುರಂಗ ಜೋಶಿ ಎಂಬ ಏಳುಮಂದಿ ಚಿತ್ಪಾವನ ಬ್ರಾಹ್ಮಣರು ಅಪರಾಧಿಗಳಾಗಿರುತ್ತಾರೆ

ಚೀನಾ [illegible] ತಪ್ಪಿಸಿಕೊಳ್ಳುವುದಕ್ಕಾಗಿ ಇಂಗ್ಲೀಷರ ಆಶ್ರಯವನ್ನು ಹುಡುಕಿಕೊಂಡು [illegible] ಪರಿವಾರ ಸಮೇತ ಹಿಂದುಸ್ಥಾನಕ್ಕೆ ಬಂದಿರುವ ದಲಾಯಿ ಲಾಮಾ ಮಹಾಗುರುವು ಒಂದು ವಾರದಿಂದ ಡಾರ್ಜಿಲಿಂಗ್ ಪಟ್ಟಣದಲ್ಲಿದ್ದು ಕಳೆದ ಭಾನುವಾರ ಕಲ್ಕತ್ತೆಗೆ ಬಂದು ಹೇಸ್ಟಿಂಗ್ಸ್ ಹೌಸ್ ಎಂಬ ಗವರ್ನಮೆಂಟ್ ಬಂಗಲೆಯಲ್ಲಿ ಇಳಿದು, ವೈಸ್‌ರಾಯಿಯವರ ಅತಿಥಿಗಳಾಗಿರುತ್ತಾರೆ ಅವರು ಬುದ್ಧಗಯಾ ಎಂಬ ಬೌದ್ಧರ ಪುಣ್ಯಸ್ಥಳಕ್ಕೆ ಹೋಗಬಹುದಾಗಿದೆಂದು ಪ್ರಕಟವಾಗಿದೆ

ಲಂಡನ್ ಪಟ್ಟಣದ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬ ಕಟ್ಟಡದಲ್ಲಿ ಡಾಕ್ಟರ್ ಲಾಲ್ಕಾಕಾ ಯವರು ಕೊಲ್ಲಲ್ಪಟ್ಟ ಸ್ಥಳದಲ್ಲಿ ಅವರ ಒಂದು ತಸ್ವೀರನ್ನು ಕಟ್ಟಿಸಿ ಅವರ ಹೆಸರನ್ನು ಶಾಶ್ವತಪಡಿಸಬೇಕೆಂದು ತೀರ್ಮಾನವಾಗಿದೆ ಇತ್ತಲಾಗಿ ಬೊಂಬಾಯಿನಲ್ಲಿ ಅವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಏರ್ಪಾಡು ನಡೆಯುತ್ತಿದೆ ಈ ಕೆಲಸಕ್ಕೆ ವಿಲಾಯತಿಯ ಫಂಡಿನಿಂದ ೧೫,೦೦೦ ರೂಪಾಯಿ ಎತ್ತುವುದು ಅವರ ಹೆಸರಿನಲ್ಲಿ ಬೊಂಬಾಯಿನೊಳಗೆ ಬಡ ಸ್ತ್ರೀಯರ ಹೆರಿಗೆ ಆಸ್ಪತ್ರೆಯನ್ನು ಕಟ್ಟಿಸುವ ದೆಂದು ಕಾಣುತ್ತದೆ

ಕೊಚ್ಚಿ ಸಂಸ್ಥಾನದ ರಾಜರವರು ಶ್ರೀ ಶೃಂಗೇರಿಸ್ವಾಮಿಗಳ ದರ್ಶನವನ್ನು ತೆಗೆದುಕೊಳ್ಳುವುದಕ್ಕೆ ಕಾಲಡಿಗೆ ಹೋಗುತ್ತಾರೆಂದೂ, ಭಕ್ತಿ ವಿಚಾರವಾಗಿಯೂ ಸಂಘಪರಿಷ್ಕರಣ ಕಾರ್ಯಗಳ ವಿಚಾರವಾಗಿಯೂ ಸ್ವಾಮಿಗಳ ಕೂಡ ಮಾತನಾಡಿ ಅವರ ಅಭಿಮತವನ್ನು ತಿಳಿಯುವರೆಂದೂ ಪ್ರಕಟವಾಗಿದೆ —ಕೊಚ್ಚಿ ಸಂಸ್ಥಾನದ ದಿವಾನರಾದ ಮೆ|| ಎ ಆರ್ ಬ್ಯಾನರ್ಜೀಯವರು ಮೂರು ತಿಂಗಳ ರಜಾ ಪಡೆದುಕೊಂಡಿರುವರು ದಿವಾನ್‌ಪೇಷ್ಕಾರ್ ಮೆ|| ಎ ಟಿ ಕೃಷ್ಣಮಾಚಾರ್ಯರು ದಿವಾನರಾಗಿ ಕೆಲಸ ನೋಡುವಂತೆ ಬದಲಿ ನೇಮಿಸಲ್ಪಟ್ಟಿದ್ದಾರೆ

ಪೂರ್ವ ಬಂಗಾಳಕ್ಕೆ ಸೇರಿದ ಕೆಲವು ಸ್ಥಳಗಳಲ್ಲಿ ರೈಲ್ ಗಾಡಿಗಳಿಗೆ ದುಷ್ಕರಿಂದ ಅಪಾಯ ಮುಂತಾದದ್ದೇನೂ ಸಂಭವಿಸದಂತೆ ರಸ್ತೆಗಳ ಉದ್ದಕ್ಕೂ ಇರುವ ಗ್ರಾಮಗಳ ಪ್ರಜೆಗಳು ಉಸ್ತುವಾರಿ ಇಟ್ಟು ನೋಡಿಕೊಳ್ಳುತ್ತಾ ಬರುವುದಕ್ಕಾಗಿ ಕಾಸಿಪುರದಲ್ಲಿ ಒಂದು ಮಹಾಜನ ಸಭೆಯು ನಡೆದು, ಒಂದು ಕಮಿಟಿಯು ಏರ್ಪಾಡಾಗಿದೆ ಈ ಕಮಿಟಿಯವರು ರೈಲ್ ರಸ್ತೆಯ ಎರಡು ಕಡೆಗಳಲ್ಲಿ ಇರುವ ಜಂಗಲ್ ಪ್ರದೇಶವನ್ನು ೫೦ ಅಡಿಯ ವರೆಗೆ ಕತ್ತರಿಸಿ ಬೈಲು ಮಾಡಬೇಕೆಂದು ಆಯಾ ಮ್ಯುನಿಸಿಪಾಲಿಟಿಗೆ ತಿಳಿಸಿರುತ್ತಾರೆ

ಪಂಜಾಬ್ ಅಧಿಸತ್ಯಕ್ಕೆ ಸೇರಿದ ಧೋಳ್‌ಪುರದ ಮಹಾರಾಜರವರು ತಮ್ಮ ಸಂಸ್ಥಾನದ ಪ್ರಜೆಗಳ ಪೈಕಿ ಯಾರ ಬಳಿಯಲ್ಲಾದರೂ ಆರ್ಯಸಮಾಜಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳಾಗಲಿ ನೋಟೀಸು ಪುಸ್ತಕಗಳಾಗಲಿ ಸಿಕ್ಕಿದ ಪಕ್ಷದಲ್ಲಿ ಅಂಥವರನ್ನು ತಕ್ಕಹಾಗೆ ಶಿಕ್ಷಿಸುತ್ತೇವೆಂದು ಪ್ರಕಟ ಮಾಡಿದಾರೆ ಇದನ್ನು ಕೇಳಿ ಆರ್ಯ ಸಮಾಜಕ್ಕೆ ಸೇರಿದ್ದ ಅನೇಕ ಪ್ರಜೆಗಳು ಸಂಸಾರ ಸಮೇತ ಆ ಸಂಸ್ಥಾನವನ್ನು ಬಿಟ್ಟು ಹೊರಟು ಹೋಗುತ್ತಿದಾರೆ ಇನ್ನು ಕೆಲವರು ತಮ್ಮ ಬಳಿ ಇದ್ದ ಅಂಥಾ ಕಾಗದಗಳನ್ನು ಇತರ ಕಡೆಗಳಿಗೆ ರವಾನೆಮಾಡಿಬಿಟ್ಟರು.

ರಾಬರ್ಟ್ ಗ್ರೀನಿಂಗ್ ಎಂಬೊಬ್ಬ ವಕೀಲನು ಹದಿನೆಂಟು ವರುಷಗಳಿಂದ ವಕೀಲನಾಗಿದ್ದು ೧೮ ತಿಂಗಳ ಕೆಳಗೆ ರಂಗೂನ್ ಪಟ್ಟಣಕ್ಕೆ ಹೋಗಿ ಮೊಕದ್ದಮೆಗಳನ್ನು ಹಿಡಿದು ವಾದಿಸುತ್ತಿದ್ದನು ಈತನಿಗೆ ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲ್ ಕೋರ್ಟಿನಿಂದ ಹಿಂದೆ ಒಂದಾವರ್ತಿ ಎರಡು ತಿಂಗಳ ಕಠಿಣ ಸಜಾ ಆಗಿತ್ತೆಂದೂ, ೧೨ ತಿಂಗಳು ಸಸ್ಪೆಂಡ್ ಆಗಿತ್ತೆಂದೂ ತಿಳಿದು ಬಂದದ್ದರಿಂದ ರಂಗೂನ್ ಪಟ್ಟಣದ ಚೀಫ್ ಕೋರ್ಟ್ ಜಡ್ಜಿಗಳು ಆತನನ್ನು ಕರೆಸಿಕೊಂಡು ತನಿಖೆಮಾಡಿ ಇನ್ನು ಮುಂದೆ ವಕಾಲತ್ತು ನಡಿಸಕೂಡದೆಂದು ಆತನಿಗೆ ಹುಕುಂ ಕೊಟ್ಟಿದಾರೆ

ಪೂರ್ವ ಬಂಗಾಳಾ ಅಧಿಸತ್ಯದ ಮುಖ್ಯ ಪಟ್ಟಣವಾದ ಢಕ್ಕಾನಗರದಲ್ಲಿ ಪೋಲೀಸಿನವರು ಅನ್ಯಾಯವಾಗಿ ತನ್ನನ್ನು ದಸ್ತಗಿರಿ ಮಾಡಿ ತನಗೆ ವ್ಯಸನವನ್ನೂ ಅಪಮಾನವನ್ನೂ ಪಡಿಸಿದರೆಂದು ಲಕ್ಷ್ಮೀಕಾಂತ ಸರ್ಕಾರ್ ಎಂಬಾತನು ೯,೦೦೦ ರೂಪಾಯಿಗೆ ಗವರ್ನಮೆಂಟಿನ ಮೇಲೆ ಡಾಮೇಜು ದಾವಾ ತಂದನು ಆ ಪಟ್ಟಣದ ಸಬ್ ಜಡ್ಜಿಯವರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿದರು ಗವರ್ನಮೆಂಟಿನವರು ವಾದಿಗೆ ೨,೦೦೦ ರೂಪಾಯಿ ಡಾಮೇಜನ್ನೂ ೬,೦೦೦ ರೂಪಾಯಿ ಕೋರ್ಟ್ ಖರ್ಚನ್ನೂ ಕೊಡುವುದಾಗಿ ತಿಳಿಸಿದ್ದರಿಂದ ಮೊಕದ್ದಮೆಯನ್ನು ವಾದಿಯು ವಾಪಸು ತೆಗೆದುಕೊಂಡು ಇರುತ್ತಾನೆ

ಬೊಂಬಾಯಿ ಅಧಿಸತ್ಯದ ಎಗ್ಜಿಕ್ಯುಟಿವ್ ಕೌನ್ಸಿಲ್‌ನಲ್ಲಿ ಮೆ|| ಮಹದೇವ ಭಾಸ್ಕರ ಚೌಬಾಲ್ ಎಂಬ ದೇಶೀಯ ವಿದ್ಯಾವಂತರನ್ನು ಒಬ್ಬ ಮೆಂಬರಾಗಿ ನೇಮಕ ಮಾಡಿರುತ್ತಾರೆ ಇವರು ಹಿಂದೆ ಕೆಲವು ಕಾಲ ಬೊಂಬಾಯಿ ಹೈಕೋರ್ಟಿನಲ್ಲಿ ಜಡ್ಜರಾಗಿಯೂ, ಬಳಿಕ ಲಾಯರಾಗಿಯೂ, ಈಚೆಗೆ ೧೯೦೬ ನೇ ಇಸವಿಯಿಂದ ಗವರ್ನಮೆಂಟ್ ಪ್ಲೀಡರಾಗಿಯೂ ಇದ್ದು ಸರ್ಕಾರದಲ್ಲೂ ಪ್ರಜೆಗಳಲ್ಲೂ ಒಳ್ಳೇ ಸಮರ್ಥರೆಂಬ ಹೆಸರುವಾಸಿಯನ್ನು ಪಡೆದಿರುತ್ತಾರೆ ಇವರು ಯೂರೋಪ್ ಖಂಡದಲ್ಲಿ ಸಂಚಾರ ಮಾಡಿಕೊಂಡು ವಿಲಾಯತಿಯಿಂದ ವಾಪಸು ಬಂದು ಕೆಲವು ತಿಂಗಳಾಯಿತು ಇವರಿಗೆ ೫೩ ವರುಷ ವಯಸ್ಸಾಗಿರುವುದು

ಲಾಹೋರ್ ಪಟ್ಟಣದಲ್ಲಿ ಸರ್ದಾರ್ ದಯಾಳ್‌ಸಿಂಗ್ ಎಂಬ ಪುಣ್ಯಾತ್ಮನು ಒಂದು ವಿದ್ಯಾಶಾಲೆಯನ್ನು ಪ್ರಾರಂಭಿಸಿ ನಡಿಸುತ್ತಾ ಇದ್ದು, ಅದನ್ನು ಅಭಿವೃದ್ಧಿಪಡಿಸಿ ಅದರಲ್ಲಿ ಸರ್ವಕಲೆಗಳನ್ನೂ ಕಲಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಉದ್ದೇಶಪಟ್ಟು, ಅದಕ್ಕಾಗಿ ೧೫ ಅಥವಾ ೨೦ ಲಕ್ಷ ರೂಪಾಯಿನ ಆಸ್ತಿಯನ್ನು ಬಿಟ್ಟಿರುತ್ತಾನೆ ಈ ಆಸ್ತಿಯ ವಿಷಯದಲ್ಲಿ ವ್ಯಾಜ್ಯಹುಟ್ಟಿ ಕಳೆದ ತಿಂಗಳು ಇತ್ಯರ್ಥವಾಯಿತು ಆ ಧರ್ಮಿಷ್ಠನ ಉದ್ದೇಶವನ್ನು ನೆರವೇರಿಸುವುದಕ್ಕೆ ಒಂದು ಕಮಿಟಿ ಏರ್ಪಾಡಾಗಿರುತ್ತದೆ ಮುಂದಿನ ತಿಂಗಳಿಂದ ಈ ವಿದ್ಯಾಶಾಲೆಯು ಅಭಿವೃದ್ಧಿ ಮಾಡಲ್ಪಟ್ಟು [illegible] ನಡೆಯುವುದಾಗಿದೆ ಬೊಂಬಾಯಿ, ಪಂಜಾಬ್ ಮುಂತಾದ ಕಡೆಗಳಲ್ಲಿ ಪ್ರಸಿದ್ಧ [illegible]ರಾದ ದೇಶೀಯ ವಿದ್ಯಾವಂತರನ್ನು ಈ ವಿದ್ಯಾಶಾಲೆಗೆ ನೇಮಕಮಾಡಿದಾರೆ

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಮ್ಯಾಜಿಸ್ಟ್ರೇಟರು ಒಬ್ಬ ಫಿರ್ಯಾದಿಯ ಅರ್ಜಿಯ ಪ್ರಕಾರ ಅಪರಾಧಿಗಳಾದ ತಂದೆ ಮಕ್ಕಳಿಬ್ಬರಿಗೆ ವಾರಂಟು ಕೊಟ್ಟರು ಮಗನು ಸಿಕ್ಕಿದನು. ಮಗನ ಕಡೆ ಲಾಯರು ಮ್ಯಾಜಿಸ್ಟ್ರೇಟರಿಗೆ ಇವನ ತಂದೆ ಸತ್ತು ನಾಲ್ಕು ವರುಷವಾಯಿತು ಎಂದು ಹೇಳಿದನು ವಾರಂಟು ಜಾರಿ ಮಾಡಿದ ಕೋರ್ಟ್ ಜವಾನನು-ನಾನು ತಂದೆ ಮಕ್ಕಳಿಬ್ಬರಿಗೂ ಮುಖತಃ ಸಮನ್ ಜಾರಿ ಮಾಡಿರುತ್ತೇನೆ ಎಂದು ನುಡಿದನು. ಮ್ಯಾಜಿಸ್ಟ್ರೇಟರು ಸಮನ್ ಜಾರಿಯಾಗಿದ್ದರೂ ತಂದೆಯು ಬಾರದೆ ತಪ್ಪಿದನಲ್ಲಾ ಎಂದು ಕೋಪಿಸಿಕೊಂಡು, ಮತ್ತೊಂದು ವಾರಂಟು ಕೊಟ್ಟು ತರಿಸಿ ತಪ್ಪಿಸಿಕೊಂಡದ್ದಕ್ಕೆ ಶಿಕ್ಷೆ ವಿಧಿಸಬೇಕೆಂದು ಹೇಳಿದರು ಅದನ್ನು ನೋಡಿ ಆ ಮಗನ ಕಡೆಯ ವಕೀಲನು ಮ್ಯಾಜಿಸ್ಟ್ರೇಟರನ್ನು ಕುರಿತು—ಈ ವಾರಂಟನ್ನು ಜಾರಿಮಾಡಿದರೆ ಸತ್ತುಹೋಗಿರುವ ತಂದೆಯನ್ನು ನೋಡಲು ನನ್ನ ಕಕ್ಷಿಗಾರನಿಗೆ ತುಂಬಾ ಸಹಾಯವಾಗುತ್ತದೆ ಎಂದು ಹೇಳಿದನು

ಬೊಂಬಾಯಿ ಪಟ್ಟಣದಲ್ಲಿ [illegible] ವರ್ತಕರಾದ ಸರ್ ಕರೀಂಭಾಯಿ ಇಬ್ರಾಹಿಂ ಎಂಬ ಮಹಮದೀಯ ದೊಡ್ಡ ಮನುಷ್ಯರು ಗವರ್ನರವರ ವಶಕ್ಕೆ ೪,೫೦,೦೦೦ ರೂಪಾಯಿನ್ನು ಕಳುಹಿಸಿಕೊಟ್ಟು, ಈ ಹಣದಿಂದ ಹಿಂದುಸ್ಥಾನದ ಕಸುಬುಗಳ ಅಭಿವೃದ್ಧಿಗೆ ಅವಶ್ಯವಾದ ವಸ್ತುಶಾಸ್ತ್ರ ಶೋಧನಾ ವಿದ್ಯಾ ನಿಲಯವನ್ನು ಇಟ್ಟು ನಡಿಸಬೇಕೆಂದೂ, ಮಹಮದೀಯ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಬೇಕೆಂದೂ ತಿಳಿಸಿದರು ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್ ಯವರು ಆ ಹಣವನ್ನು ಅಂಗೀಕರಿಸಿ ಅವರ ಅಭಿಮತದಂತೆ ನಡಿಸಲು ಏರ್ಪಾಡು ಮಾಡುವುದಾಗಿ ಹೇಳಿ, ಈ ರೀತಿ ಧನ ಸಹಾಯ ಮಾಡಿದ್ದಕ್ಕಾಗಿ ಆ ವರ್ತಕರನ್ನು ಬಹಳವಾಗಿ ವಂದಿಸಿರುತ್ತಾರೆ —ಅದೇ ಪಟ್ಟಣದಲ್ಲಿ ಕಾಲವಾದ ಹಾಜಿ ಇಸ್ಮೈಲ್ ಹಾಜಿ ಅಲ್ಲಾನಾ ಮೇಮನ್ ಎಂಬ ಮುಸಲ್ಮಾನ ವರ್ತಕನು ತನ್ನ ಆಸ್ತಿಯನ್ನೆಲ್ಲಾ, ಅಂದರೆ ಕೆಲವು ಲಕ್ಷ ರೂಪಾಯಿನ್ನು, ನಾನಾ ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿಟ್ಟಿದ್ದಾನೆ

ಪಾಟಿಯಾಲಾ ಸಂಸ್ಥಾನದಲ್ಲಿ ಆರ್ಯ ಸಮಾಜಕ್ಕೆ ಸೇರಿದ ಸುಮಾರು ೬೦ ಜನರು ಬ್ರಿಟಿಷ್ ಗವರ್ನಮೆಂಟನ್ನು ಹಿಂದುಸ್ಥಾನದಿಂದ ಹೊರಡಿಸಿ ಬಿಡಬೇಕೆಂದು ಪ್ರಯತ್ನ ಪಟ್ಟರೆಂತ ಮೊಕದ್ದಮೆ ಆಗಿ, ಕಡೆಗೆ ಅವರೆಲ್ಲಾ ಮಹಾರಾಜರವರ ಕ್ಷಮಾಪಣೆಯನ್ನು ಬೇಡಿಕೊಂಡದ್ದರಿಂದ ಮಹಾರಾಜರವರು ಮೊಕದ್ದಮೆಯನ್ನು ವಜಾಮಾಡಿ, ಅವರನ್ನೆಲ್ಲಾ ಒಂದು ವಾರದೊಳಗಾಗಿ ತಮ್ಮ ಸಂಸ್ಥಾನವನ್ನು ಬಿಟ್ಟು ಹೊರಡಬೇಕೆಂದು ಹುಕುಂ ಮಾಡಿದರಷ್ಟೆ ಇವರು ಸಂಸಾರ ಸಮೇತ ಇತರ ಕಡೆಗಳಿಗೆ ಹೊರಟುಹೋದರು ಇವರ ಬಂಧು ಬಳಗಗಳೂ ಇಷ್ಟ ಮಿತ್ರರೂ ಅವರಿಗೆ ಇಂಥಾ ದುರ್ದೆಸೆ ಪ್ರಾಪ್ತವಾಯಿತೆಂದು ತಾವೂ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಹೊರಟುಹೋದರು ಮಹಾರಾಜರವರು ತಮ್ಮ ಸಂಸ್ಥಾನದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾಗಿದ್ದ ಮೆ|| ವಾರ್ಬರ್ಟನ್‌ರವರಿಗೆ ೧೯,೦೦೦ ರೂಪಾಯಿ ಗ್ರಾಂಟನ್ನೂ ೧,೦೦೦ ರೂಪಾಯಿ ಬಿಲ್ಲತ್ತನ್ನೂ ಕೊಟ್ಟು ಕೆಲಸ ಬಿಡಿಸಿ, ಆ ಕೆಲಸಕ್ಕೆ ಸರ್ದಾರ್ ಭಗವಾನ್‌ಸಿಂಗ್ ಯವರನ್ನು ನೇಮಕ ಮಾಡಿಕೊಂಡಿದಾರೆ.

ಅನಂತಪುರ ಜಿಲ್ಲೆಗೆ ಸೇರಿದ ಕಲ್ಯಾಣ ದುರ್ಗದ ತಾಲ್ಲೂಕಿನಲ್ಲಿ ೫೦ ಪರಸ್ಪರ ಸಹಾಯಕ ಸಂಘಗಳು ಏರ್ಪಾಡಾಗಿ ದಿನೇ ದಿನೇ ಅಭಿವೃದ್ಧಿಯಾಗುತ್ತಿರುವವು ಈ ಸಂಘಗಳ ಮುಖಂಡರೆಲ್ಲಾ ಪ್ರಜೆಗಳಿಂದ ಚಂದಾ ಕೂಡಿಸಿ, ಕಲ್ಯಾಣ ದುರ್ಗದಲ್ಲಿ ಗೋಶಾಲೆಗಳ ಪ್ರದರ್ಶನವನ್ನೂ ಒಂದು ಮಹಾಜನ ಸಭೆಯನ್ನೂ ನಡಿಸಿದರು ಅಲ್ಲಿ ಸೇರಿದ ಸುಮಾರು ೫೦೦ ದನಗಳಲ್ಲಿ ಉತ್ತಮವಾದ ರಾಸುಗಳನ್ನು ರೈತರ ಮುಖಂಡರೇ ಸೇರಿ ಗೊತ್ತುಮಾಡಿ ಬಹುಮಾನಗಳನ್ನು ಹಂಚಿದರು ಸುಮಾರು ೫,೦೦೦ ಬಡಬಗ್ಗರಿಗೆ ಒಂದು ದಿನ ಸುಭೋಜನ ಮಾಡಿಸಿದರು ಬಳಿಕ ಮಹಾಜನ ಸಭೆಯೊಂದು ನಡೆಯಿತು ಆ ತಾಲ್ಲೂಕಿನಲ್ಲಿರುವ ಬಾಲ ಪಾಠಶಾಲೆಗಳನ್ನೆಲ್ಲಾ ಮೇಲ್ವಿಚಾರಣೆ ನೋಡಿಕೊಂಡು ಅಭಿವೃದ್ಧಿಪಡಿಸುವುದಕ್ಕೂ ಹಳ್ಳಿಗಾಡುಗಳಲ್ಲಿ ಹೊಸ ಪಾಠಶಾಲೆಗಳನ್ನು ಇಡಿಸಿ ನಡಿಸುವುದಕ್ಕೂ ಕೆಲವು ಮುಖಂಡ ಪ್ರಜೆಗಳನ್ನು ಚುನಾಯಿಸಿ ಒಂದು ಕಮಿಟಿ ಮಾಡಿದರು ಈ ಮೆಂಬರುಗಳೆಲ್ಲಾ ಪರಸ್ಪರ ಸಹಾಯಕ ಕಂಪನಿಗಳ ಷೇರುದಾರರಾಗಿರುತ್ತಾರೆ ಇದಲ್ಲದೆ ಪ್ರತಿ ಗ್ರಾಮದಲ್ಲೂ ಮುಖ್ಯರಾದ ಮತ್ತು ಗಣ್ಯರಾದ ಪ್ರಜೆಗಳನ್ನು ಚುನಾಯಿಸಿ ಒಂದು ಪಂಚಾಯಿತಿ ಸಭೆಯನ್ನು ಕಲ್ಪಿಸಿ, ಅಲ್ಲಲ್ಲಿ ಹುಟ್ಟುವ ಸಾಮಾನ್ಯ ಸಿವಿಲ್ ವ್ಯಾಜ್ಯಗಳನ್ನು ಈ ಪಂಚಾಯಿತರು ಹಿಡಿದು ಫೈಸಲ್ ಮಾಡಬೇಕೆಂದು ನಿರ್ಧಾರಕವಾಗಿದೆ. ಪರಸ್ಪರ ಸಹಾಯಕ ಕಂಪನಿಗಳ ದೆಸೆಯಿಂದ ಪ್ರಜೆಗಳಲ್ಲಿ ಐಕಮತ್ಯವೂ ಪ್ರೀತಿ ವಿಶ್ವಾಸಗಳೂ ಹುಟ್ಟಿ ಹೆಚ್ಚುವುದಕ್ಕೂ ಈ ಮೂಲಕ ಜನರು ವಿದ್ಯೆ ಬುದ್ಧಿ ವಿವೇಕಗಳಲ್ಲಿ ಅಭಿವೃದ್ಧಿ ಹೊಂದುವುದಕ್ಕೂ ತುಂಬಾ ಸಹಾಯ ಉಂಟಾಗುವುದಕ್ಕೆ ಈ ಕಲ್ಯಾಣ ದುರ್ಗದ ತಾಲ್ಲೂಕಿನ ನಡವಳಿಕೆಗಳು ದೃಷ್ಟಾಂತವಾಗಿವೆ ಎಂದು ತಿಳಿಸಲು ಸಂತೋಷಪಡುತ್ತೇವೆ

ವಿದೇಶ ವರ್ತಮಾನಗಳು

ಫಿನ್‌ಲೆಂಡ್ ರಾಜ್ಯದ ಪಾರ್ಲಿಮೆಂಟಿನಲ್ಲಿ ಕಳೆದ ವರುಷ ೨೫ ಮಂದಿ ಸ್ತ್ರೀಯರು ಪ್ರಜಾ ಪ್ರತಿನಿಧಿಗಳಾಗಿ ಚುನಾವಣೆ ಹೊಂದಿ ಮೆಂಬರುಗಳಾಗಿದ್ದರು

ಹಿಂದುಸ್ಥಾನದಲ್ಲಿ ರೈಲ್ ರಸ್ತೆಗಳ ಬಡಾವಣೆಗೂ ನೀರಾವರಿ ನಾಲಾ ಕಾಮಗಾರಿಗಳಿಗೂ ೩೬|| ಕೋಟಿ ರೂಪಾಯಿನ್ನು ಸಾಲ ಮಾಡಬೇಕಾಗಿದೆ ಎಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಕಳೆದ ವಾರ ವಿಲಾಯತಿ ಪಾರ್ಲಿಮೆಂಟಿನಲ್ಲಿ ತಿಳಿಸಿದರು

ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಬೊಖಾರಾ ಸೀಮೆಯ ಅಮೀರರವರು ವಿಶೇಷ ಹಣವನ್ನು ಖರ್ಚುಮಾಡಿ ಮುಸಲ್ಮಾನ್ ಪ್ರಜೆಗಳಿಗೋಸ್ಕರ ಒಂದು ದೊಡ್ಡ ಮಸೀದಿಯನ್ನು ಕಟ್ಟಿಸಿಕೊಟ್ಟು, ತಾವೇ ನಿಂತು ಅದನ್ನು ಪ್ರತಿಷ್ಠೆ ಮಾಡಿರುತ್ತಾರೆ

ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಸರ್ಕಾರದವರು ಒಂದು ಹೊಸ ಶಾಸನವನ್ನು ಚಲಾವಣೆಗೆ ತಂದದ್ದರಿಂದ ಇದುವರೆಗೆ ಅಲ್ಲಿ ವಾಸಮಾಡಿಕೊಂಡಿದ್ದ ೧,೩೮೫ ಯೆಹೂದ್ಯ ಸಂಸಾರಗಳಿಗೆ ಅಲ್ಲಿ ಇರದಂತೆ ಅಡ್ಡಿಯಾಗಿರುತ್ತದೆ ಎಂದು ತಂತೀ ವರ್ತಮಾನ ಬಂದಿದೆ

ವಿಲಾಯಿತಿಯಲ್ಲಿ ಮೆ|| ಲೀವರ್ ಎಂಬಾತನು ಒಂದು ಮಾನನಷ್ಟದ ಮೊಕದ್ದಮೆಯಲ್ಲಿ ೧೩ ಲಕ್ಷವೂ ೬೫ ಸಾವಿರ ರೂಪಾಯಿ ಡಾಮೇಜನ್ನು ಪ್ರತಿವಾದಿಯಿಂದ ಪಡೆದು, ಅದನ್ನೆಲ್ಲಾ ಲಿವರ್‌ಪೂಲ್ ಪಟ್ಟಣದ ಯೂನಿವರ್ಸಿಟಿ ವಿದ್ಯಾ ಸಂಘದ ಮೂಲಧನಕ್ಕೆ ಧರ್ಮಾರ್ಥವಾಗಿ ಕೊಟ್ಟುಬಿಟ್ಟನು

ಆಫ್ರಿಕದ ಉತ್ತರ ಭಾಗದಲ್ಲಿರುವ ಸೋಮಾಲಿ ಲ್ಯಾಂಡಿನಲ್ಲಿ ಮುಲ್ಲಾ ಎಂಬ ದೇಶೀಯ ಮುಖಂಡನ ಕಡೆಯವರು ಇಂಗ್ಲೀಷರ ಸಂರಕ್ಷಣೆಯಲ್ಲಿರುವ ದೇಶೀಯ ಪ್ರಜೆಗಳ ಗ್ರಾಮದೊಳಕ್ಕೆ ನುಗ್ಗಿ ೬೦ ಜನರನ್ನು ಕೊಂದುಹಾಕಿ ೩೦,೦೦೦ ಒಂಟೆಗಳನ್ನು ಅಪಹರಿಸಿಕೊಂಡು ಹೋಗಿದಾರೆ

ಆಫ್ರಿಕಕ್ಕೆ ಸೇರಿದ ಕಾಂಗೋ ರಾಜ್ಯದಲ್ಲಿ ದೇಶೀಯ ಜನರು ನಿದ್ರಾರೋಗದಲ್ಲಿ ಸಿಕ್ಕಿ ನರಳಿ ಸಾಯುವುದನ್ನು ತಪ್ಪಿಸಬೇಕೆಂದೂ, ಅಂಥಾ ರೋಗಿಗಳಿಗೆ ಆಸ್ಪತ್ರೆ ಮುಂತಾದವುಗಳನ್ನು ಕಟ್ಟಿಸಿಕೊಡಬೇಕೆಂದೂ ಅಭಿಲಾಷೆಪಟ್ಟು ಬೆಲ್ಜಿಯಂ ದೊರೆಯವರು ಅರವತ್ತು ಲಕ್ಷ ರೂಪಾಯಿ ಕಳುಹಿಸಿಕೊಟ್ಟಿದಾರೆ.

ಫ್ರಾನ್ಸ್ ಸಂಸ್ಥಾನದಲ್ಲಿ ಮಠಗಳ ಜಮಾ ಖರ್ಚನ್ನೆಲ್ಲಾ ನೋಡಿಕೊಂಡು ನಡಿಸುತ್ತಿದ್ದ ಡೂಯೆಜ್ ಎಂಬಾತನನ್ನು ಕಳೆದ ವಾರ ಸರ್ಕಾರದವರು ದಸ್ತಗಿರಿ ಮಾಡಿದರು ಈತನು ಮಠಗಳ ಹಣದ ಪೈಕಿ ಅರವತ್ತು ಲಕ್ಷ ರೂಪಾಯಿನ್ನು ದುರುಪಯೋಗಪಡಿಸಿದನೆಂದೂ, ವ್ಯಾಪಾರದಲ್ಲಿ ಹಾಕಿ ಅಷ್ಟು ಹಣವನ್ನೂ ಕಳೆದುಕೊಂಡನೆಂದೂ ತಿಳಿದುಬಂದಿದೆ.

ಕ್ಯಾನಡಾ ಎಂಬ ಇಂಗ್ಲೀಷ್ ಸ್ವಾಸ್ಥ್ಯದಲ್ಲಿ ೧೦೦ ಮಂದಿ ಜಪಾನ್ ಮತ್ತು ಇಟಲಿ ಕೆಲಸಗಾರರು ರೈಲ್ ರಸ್ತೆಯ ಮೇಲೆ ಬಿದ್ದಿದ್ದ ಮಂಜುಗಡ್ಡೆಗಳನ್ನು ತೆಗೆದು ರಸ್ತೆ ಬಿಡಿಸುತ್ತಿದ್ದಾಗ ಅಕಸ್ಮಾತ್ತಾಗಿ ಅಪಾರವಾದ ಮಂಜುಗಡ್ಡೆಗಳು ಅವರ ಮೇಲೆ ಬೆಟ್ಟದಿಂದ ಉರುಳಿಬಂದು ಅವರನ್ನು ಹೂತಬಿಟ್ಟವು ಆ ಪೈಕಿ ೯೩ ಜನರು ಮೃತಪಟ್ಟರೆಂದು ವರ್ತಮಾನ ಬಂದಿದೆ

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಕಾಲನಿಯ ಮುಖ್ಯ ಪಟ್ಟಣವಾದ ಕೇಪ್ ಟೌನ್ ನಗರದಲ್ಲಿ ಜಾನ್ ಹಾಫ್‌ಮೇಯರ್ ಎಂಬ ಹದಿನೈದು ವರುಷದ ಬಾಲಕನು ಅಸಾಧಾರಣವಾದ ಬುದ್ಧಿ ಕುಶಲತೆಯನ್ನು ಪ್ರಕಾಶಪಡಿಸಿ ಬಿ ಎ ಎಂಬ ಕಠಿಣವಾದ ಪರೀಕ್ಷೆಯಲ್ಲಿ ಬಹು ಉತ್ಕೃಷ್ಟವಾಗಿ ತೇರ್ಗಡೆ ಹೊಂದಿರು

ತ್ತಾನೆ ಈ ಬಾಲಕನು ವೇತನವನ್ನು ಪಡೆದು ವಿಲಾಯಿತಿಯಲ್ಲಿ ಓದುವದಕ್ಕೆ ಹೋಗುವನು

ವಿಲಾಯಿತಿಯಲ್ಲಿ ಬ್ಯಾರಿಸ್ಟರ್ ಪರೀಕ್ಷೆಗೆ ತರಪೇತು ಮಾಡುವಂಥಾ ವಿದ್ಯಾಶಾಲೆಗಳ ಮುಖಂಡರು ಇನ್ನು ಮುಂದೆ ಹಿಂದುಸ್ಥಾನದಿಂದ ಕಾನೂನ್ ಓದುವದಕ್ಕಾಗಿ ಬರುವ ವಿದ್ಯಾರ್ಥಿಗಳೆಲ್ಲಾ ಕಲೆಕ್ಟರು, ಡಿಪ್ಟಿ ಕಮಿಷನರು, ಅಥವಾ ಬ್ರಿಟಿಷ್ ರೆಸಿಡೆಂಟರಿಂದ ಸರಿಯಾದ ಯೋಗ್ಯತಾ ಪತ್ರಗಳನ್ನು ತರಬೇಕೆಂದೂ, ಹಾಗೆ ತಾರದಿದ್ದರೆ ಆ ಪಾಠಶಾಲೆಗಳಿಗೆ ಸೇರಿಸಿಕೊಳ್ಳಕೂಡದೆಂದೂ ಕಟ್ಟುಮಾಡಿಕೊಂಡಿದ್ದಾರೆ

ಅಮೇರಿಕಕ್ಕೆ ಸೇರಿದ ಕ್ಯಾನ್ಸಾಸ್ ಸಿಟಿ ಎಂಬ ಪಟ್ಟಣದಲ್ಲಿ ಡಾಕ್ಟರ್ ಹ್ಲೈಡ್ ಎಂಬೊಬ್ಬ ವೈದ್ಯನು ಕೋಟ್ಯಾಧೀಶ್ವರನಾಗಿಯೂ ಮಹಾ ಧನಿಕನೂ ಆಗಿಯೂ ಇದ್ದಂಥಾ ಕರ್ನಲ್ ಸ್ವೋಪ್ ಎಂಬಾತನಿಗೆ ಸ್ಟ್ರಿಕ್ನೈನ್ ಎಂಬ ವಿಷವನ್ನು ಹಾಕಿ ಕೊಂದುಹಾಕಿದನೆಂತಲೂ, ಆತನ ಸಂಸಾರಕ್ಕೆ ಸೇರಿದ ಎಂಟುಮಂದಿಗೆ ವಿಷಮ ಶೀತಜ್ವರದ ಕ್ರಿಮಿಗಳನ್ನು ತಿಂದು ಹಾಕಿದನೆಂತಲೂ ಹಿಡಿಯಲ್ಪಟ್ಟಿರುತ್ತಾನೆ

ವಿಲಾಯಿತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಈ ಸಲ ದಕ್ಷಿಣ ಆಫ್ರಿಕದಲ್ಲಿ ಸಂಚಾರವಾಡಿಕೊಂಡು ಬರುವವರಾಗಿರೋಣದ ರಿಂದ ಅವರ ಪ್ರಯಾಣದ ಖರ್ಚಿಗೆ ಆರು ಲಕ್ಷ ರೂಪಾಯನ್ನೂ, ವಿಲಾಯಿತಿ ರಾಜ್ಯದಲ್ಲಿ ಬಡ ಮುದುಕರಿಗೆ ಜೀವನಾರ್ಥವಾದ ಪೆನ್ಶನ್ ಕೊಡುವುದಕ್ಕೆ ಹದಿಮೂರು ಕೋಟಿ ಎಂಬತ್ತಮೂರು ಲಕ್ಷ ರೂಪಾಯನ್ನೂ ವಿನಿಯೋಗ ಮಾಡಬಹುದೆಂದು ಪಾರ್ಲಿಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

ದಕ್ಷಿಣ ಅಮೇರಿಕದ ಪಶ್ಚಿಮತೀರ ಪ್ರಾಂತ್ಯದಲ್ಲಿರುವ ಈಕ್ವೆಡಾರ್ ಮತ್ತು ಪೆರೂ ಎಂಬೀ ರಾಜ್ಯಗಳಿಗೆ ನಡುವೆ ಇರುವ ಎಲ್ಲೆಕಟ್ಟಿನ ವಿಷಯದಲ್ಲಿ ಪರಸ್ಪರ ಅಭಿಪ್ರಾಯ ವೈಷಮ್ಯಗಳುಂಟಾಗಿರುತ್ತವೆ ಇವೆರಡೂ ಸ್ವತಂತ್ರ ಪ್ರಜಾಪ್ರಭುತ್ವಗಳಾಗಿರೋಣದರಿಂದ ಎರಡು ರಾಜ್ಯಗಳವರೂ ಯುದ್ಧಸನ್ನದ್ಧರಾಗುತ್ತಿದ್ದಾರೆ ಸಂಯುಕ್ತ ಅಧಿಪತ್ಯಗಳ ಗವರ್ನ್‌ಮೆಂಟಿನವರು ಮಧ್ಯಸ್ಥಿಕೆ ವಹಿಸಿ ಸಮಾಧಾನ ಮಾಡದೆ ಹೋದರೆ ಯುದ್ಧ ಪ್ರಾಪ್ತವಾಗುವುದೇ ಖಂಡಿತವೆಂದು ಪ್ರಕಟವಾಗಿದೆ

ವಿಲಾಯಿತಿಗೆ ಸೇರಿದ ವೇಲ್ಸ್ ಎಂಬ ವಿಭಾಗದಲ್ಲಿ ಪ್ರವಾಹದ ದೆಸೆಯಿಂದ ರೋಂಡಾ ಕಣಿವೆಯ ಅಡ್ಡಗಟ್ಟೆಯು ಕಿತ್ತು ಹೋಗಿ, ಪ್ರವಾಹವು ಬ್ಲೇನ್ ಕ್ಲೈಡಾಚ್ ಎಂಬ ಗ್ರಾಮದೊಳಕ್ಕೆ ಅಪಾರವಾಗಿ ನುಗ್ಗಿತು ಹಲವು ಮನೆಗಳು ಹಾಳಾದವು ಆರು ಜನರು ನೀರಿನಲ್ಲಿ ಮುಳುಗಿ ಸತ್ತರು ಒಂದು ಪಾಠಶಾಲೆಯೊಳಗೆ ಅಕಸ್ಮಾತ್ತಾಗಿ ನಾಲ್ಕು ಅಡಿ ನೀರು ನುಗ್ಗಿ ಸುಮಾರು ನೂರು ಮಂದಿ ಮಕ್ಕಳು ಬಹಳ ಶ್ರಮಪಟ್ಟು ಪ್ರಾಣ ಉಳಿಸಿಕೊಂಡರೆಂದು ತಂತೀ ವರ್ತಮಾನ ಬಂದಿದೆ

ವಿಲಾಯಿತಿಗೆ ಸೇರಿದ ಬ್ಲೈಡನ್-ಆನ್ ಟೈನ್ ಪಟ್ಟಣದಲ್ಲಿ ಲೇಟ್ ಟೊಷ್ ಕೇವೆನ್ ಎಂಬಾತನ ಹೆಸರಿನ ಮೇಲೆ ನಿರ್ಮಿಸಲಿರುವ ಪಾಠಶಾಲೆಗೆ ಆತನ ಮಕ್ಕಳು ಒಂದೂವರೆ ಲಕ್ಷ ರೂಪಾಯಿ ಕೊಟ್ಟಿದ್ದಾರೆ —ಗತಿಸಿದ ಮಿ|| ವಿಲ್ಲಿಯಂ ಸ್ಮೈಲ್ಸ್ ಎಂಬಾತನು ಮನಸ್ಸು ಕಳೆದುಹೋಗಿ ಜೀವನವನ್ನು ಸಂಪಾದಿಸಿಕೊಳ್ಳ ಲಾರದೆ ಇರುವಂಥಾ ಬಡಬಗ್ಗರನ್ನು ಒಂದು ಆಲಯದಲ್ಲಿಟ್ಟು ಸಂರಕ್ಷಣೆ ಮಾಡಬೇಕೆಂದು ತನ್ನ ಆಸ್ತಿಯಲ್ಲಿ ಈ ಕಾರ್ಯಕ್ಕೆ ಒಂದುಕೋಟಿ ಐವತ್ತು ಲಕ್ಷ ರೂಪಾಯಿ ಖರ್ಚಾಗಬೇಕೆಂದು ಮರಣಶಾಸನವನ್ನು ಬರೆದಿರುತ್ತಾನೆ ಆತನ ಉದ್ದೇಶಕ್ಕೆ ಅನುಸಾರವಾಗಿ ಈ ಫಂಡನ್ನು ರೂಢಿಸುವುದಕ್ಕೆ ಒಂದು ಕಮಿಟಿಯು ಏರ್ಪಡಾಗಿರುವುದು

ಆಫ್ರಿಕಕ್ಕೂ ಫ್ರೆಂಚರಿಗೆ ಸೇರಿದ ಮಡಗಾಸ್ಕರ್ ದ್ವೀಪಕ್ಕೂ ನಡುವೆ ಇರುವ ಕೊಮೊರೊ ದ್ವೀಪಗಳಲ್ಲಿ ಮುಸಲ್ಮಾನ ಸುಲ್ತಾನರು ಆಳುತ್ತಿದ್ದರು ಈಚೆಗೆ ಫ್ರೆಂಚರು ಈ ದ್ವೀಪಗಳನ್ನು ತಮ್ಮ ಆಳ್ವಿಕೆಗೆ ಸೇರಿಸಿಕೊಂಡು ಸುಲ್ತಾನರಿಗೆ ತಿಂಗಳೊಂದಕ್ಕೆ ೧೨,೦೦೦ ರೂಪಾಯಿಯಂತೆ ಪೆನ್ಶನ್ ಕೊಡುತ್ತಾ ಬರುವುದಾಗಿ ಕರಾರು ಮಾಡಿಕೊಂಡಿದ್ದಾರೆ ಮುಸಲ್ಮಾನ ಪ್ರಜೆಗಳ ಮತ ಪದ್ಧತಿ, ಆಚಾರ ವ್ಯವಹಾರಗಳಲ್ಲಿ ಫ್ರೆಂಚರು ಪ್ರವರ್ತಿಸುವುದಿಲ್ಲವೆಂದೂ, ಸುಲ್ತಾನರ ಸಂಸಾರಕ್ಕೆ ಸೇರಿದವರ್ಯಾರೂ ಯಾವ ವಿಧವಾದ ತೆರಿಗೆ ಸುಂಕಗಳನ್ನೂ ಕೊಡಬೇಕಾದದ್ದಿಲ್ಲವೆಂದೂ, ಸುಲ್ತಾನರು ಮಾತ್ರ ಆ ದ್ವೀಪದಲ್ಲಿ ಇರಕೂಡದೆಂದೂ ಕರಾರುನಾಮೆಯಾಗಿರುತ್ತದೆ

ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ ಒಂದು ಹೋಟೇಲಿನೊಳಗೆ ಕೆಲವು ವಿದ್ಯಾವಂತರು ಸೇರಿ ಭೋಜನಮಾಡಿ ಸಂಭಾಷಣೆಮಾಡುತ್ತಿರುವಲ್ಲಿ ಮಿ|| ಶಿಫ್ ಎಂಬಾತನು ತನ್ನ ಸಹಪಾಠಿಗಳನ್ನು ಕುರಿತು—ಪೂರ್ವದಿಗ್ಭಾಗದಲ್ಲಿ ಮುಂದೆ ಬಹು ಭಯಂಕರವಾದ ಯುದ್ಧವು ಪ್ರಾಪ್ತವಾಗುತ್ತದೆ ಜಪಾನ್, ರಷ್ಯಾ, ವಿಲಾಯಿತಿ ರಾಜ್ಯಗಳವರು ಒಂದಾಗಿ ಚೀನಾ ರಾಜ್ಯವನ್ನು ತಮಗೆ ಅಧೀನವಾಗಿ ಇಟ್ಟುಕೊಂಡಿರಬೇಕೆಂದು ಯೋಚಿಸಿದ್ದಾರೆ ಅವರು ಒಂದಾಗಿರುವುದನ್ನು ಮುರಿದು ಹಾಕದಿದ್ದರೆ ಅಮೇರಿಕದವರೂ ಈ ಯುದ್ಧದಲ್ಲಿ ಸಹಭಾಗಿಗಳಾಗಬೇಕಾಗುತ್ತದೆ ಎಂಬೀ ರೀತಿಯಾಗಿ ತಿಳಿಸಿದರು ಇಂಥಾ ಭೀತಿಗೆ ಕಾರಣವೇನೂ ಇರುವುದಿಲ್ಲ.

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಪಟ್ಟಣದಲ್ಲಿ ಬೇರೆಬೇರೆ ಮನೆ, ಹೊಟೇಲು ಅಂಗಡಿ, ಗಾಡಿ ಕಾರ್ಖಾನೆ, ಕೈಗಾರಿಕೆ ಕಾರ್ಖಾನೆ ಮೊದಲಾದ ಕಡೆಗಳಲ್ಲಿ ಕೂಲಿ ಮಾಡುವ ಜನರು ತಮಗೆ ಕೂಲಿಯ ದರವನ್ನು ಹೆಚ್ಚು ಮಾಡಿಕೊಡದಿದ್ದರೆ ಕೆಲಸಕ್ಕೆ ಬರುವುದಿಲ್ಲವೆಂದು ಹೇಳಿ ಹಟ ಹಿಡಿದು ನಿಂತುಬಿಟ್ಟಿದ್ದರು ಈ ಕೂಲಿ ಆಳುಗಳ ಸಂಘಗಳು ಹಲವು ಇರುವುದರಿಂದ ಅವರೆಲ್ಲಾ ಒಂದಾಗಿ ಸುಮಾರು ಒಂದು ಲಕ್ಷ ಜನರು ನಿಂತುಬಿಟ್ಟರು ಕೆಲಸಕಾರ್ಯಗಳು ಪಟ್ಟಣದಲ್ಲಿ ನಡೆಯುವುದು ನಾಲ್ಕಾರು ದಿನಗಳ ತನಕ ಕಷ್ಟವಾಯಿತು ಈಚೆಗೆ ಎಲ್ಲಾ ಸಮಾಧಾನಕ್ಕೆ ಬಂದಿದೆ ಎಂದೂ, ಆ ಜನರು ತಮ್ಮ ತಮ್ಮ ಕೆಲಸಗಳ ಮೇಲೆ ಹೋಗುತ್ತಿದ್ದಾರೆಂದೂ ತಂತೀ ವರ್ತಮಾನ ಬಂದಿದೆ

ಜಪಾನ್ ರಾಜ್ಯದ ರಾಜಧಾನಿಯಾದ ಟೋಕಿಯೋ ನಗರದ ವಿದ್ಯಾನಿಯದಲ್ಲಿ ಪಂಡಿತನಾಗಿರುವ ಡಾಕ್ಟರ್ ಎಸ್ ವಾಟಾಸೆ ಎಂಬಾತನು ಸುಮಾರು ಆರು ವರ್ಷಗಳಿಂದಲೂ ಹಿಂದುಸ್ಥಾನದಲ್ಲೂ ಸಿಲೋನ್ ದ್ವೀಪದಲ್ಲೂ ಸಂಚಾರಮಾಡಿ ಈಗ ವಾಪಸು ಪ್ರಯಾಣವಾಡುವುದರಲ್ಲಿದ್ದಾನೆ ಈ ಪ್ರಾಂತ್ಯದಿಂದ ಮುಂಗಸಿಗಳನ್ನು ವಿಶೇಷವಾಗಿ ಜಪಾನ್ ರಾಜ್ಯಕ್ಕೆ ಸಾಗಿಸಿಕೊಂಡು ಹೋಗಿ ಅಲ್ಲಿ ಬೆಳೆಯಿಸಬೇಕೆಂದು ಆತನು ಪ್ರಯತ್ನಪಟ್ಟಿರುವನು ಜಪಾನ್ ರಾಜ್ಯಕ್ಕೆ ಸೇರಿದ ರಿಂಕಿನ್ ಎಂಬ ದ್ವೀಪಗಳಲ್ಲಿ ಜಪಾನ್ ಪ್ರಜೆಗಳು ಬಹಳ ಹಣವಾಗಿ ಕಬ್ಬನ್ನೂ ಗೆಣಸುಗಳನ್ನೂ ಬೆಳೆಮಾಡುತ್ತಾರೆ ಆದರೆ ಈ ಬೆಳೆಯನ್ನೆಲ್ಲಾ ಹೆಗ್ಗಣಗಳೂ ಹಾವುಗಳೂ ವಿಶೇಷವಾಗಿ ಹೆಚ್ಚಿ ತಿಂದುಹಾಕಿ ನಾಶಪಡಿಸುತ್ತವೆ ಈ ದುಷ್ಟ ಜಂತುಗಳ ಸಂತತಿಯನ್ನೇ ನಾಶಮಾಡಿಬಿಡುವುದಕ್ಕಾಗಿ ಮುಂಗಸಿಗಳನ್ನು ಸಾಕಬೇಕೆಂದು ಅವರು ಪ್ರಯತ್ನಪಟ್ಟಿದ್ದಾರೆ

ಗಗನಮಂಡಲದಲ್ಲಿರುವ ಮಂಗಳಗ್ರಹ (ಮಾರ್ಸ್) ವೆಂಬ ನಕ್ಷತ್ರಬಿಂಬವನ್ನು ಜ್ಯೋತಿಷಶಾಸ್ತ್ರಜ್ಞರು ಕೆಲವು ಕಾಲದಿಂದ ಪರೀಕ್ಷೆ ಮಾಡುತ್ತಾ, ಅದರಲ್ಲಿ ಪ್ರಾಣಿಗಳೇನಾದರೂ ಉಂಟೋ ಇಲ್ಲವೋ ಎಂಬದನ್ನು ಗೊತ್ತುಮಾಡಬೇಕೆಂದು ಸಾಹಸ ಪಡುತ್ತಿದ್ದಾರೆ ಅಮೇರಿಕಕ್ಕೆ ಸೇರಿದ ಆರಿಜೋನಾ ಪಟ್ಟಣದಲ್ಲಿ ನಕ್ಷತ್ರ ಪರೀಕ್ಷಕನಾದ ಪರ್ಸಿವಲ್ ಲೋವೆಲ್ ಎಂಬ ಪಂಡಿತನು ಈಗ ತಿಳಿಸುವುದೇನೆಂದರೆ,—ಈ ಮಂಗಳ ಗ್ರಹದಲ್ಲಿ ಮನುಷ್ಯರು ಇದ್ದೇ ಇರಬೇಕೆಂಬುವುದು ಸಿದ್ಧಾಂತವಾಗಿದೆ ಹ್ಯಾಗೆಂದರೆ ಅಲ್ಲಿ ಈಗ್ಗೆ ಕೆಲವು ವರುಷಗಳ ಹಿಂದೆ ಬರಿದಾದ ಭೂಮಿ ನಾಲೆಗಳು ತೋಡಿದ್ದದ್ದು ಕಾಣುತ್ತಿತ್ತು ಈಚೆಗೆ ಅದರಲ್ಲಿ ನೀರನ್ನು ಅಪಾರವಾಗಿ ಹಾಯಿಸಿರೋಣದರಿಂದ ಕಾಡುಪ್ರದೇಶವೆಲ್ಲಾ ಸಸ್ಯಾದಿಗಳಿಂದ ತುಂಬಿ ಕಂಗೊಳಿಸುತ್ತಿವೆ ಅಲ್ಲಿರುವ ಜನರು ಮೇ ಮತ್ತು ಸೆಪ್ಟಂಬರು ತಿಂಗಳುಗಳ ಮಧ್ಯಕಾಲದಲ್ಲಿ ಹುಲುಸಾದ ಬೆಳೆಗಳನ್ನು ಮಾಡುವುದು ಕಾಣುತ್ತದೆ ಎಂಬುದೇ

ವಿನಾಯಕ ದಾಮೋದರ ಸವಾರ್ಕರ್ ಎಂಬೊಬ್ಬ ಹಿಂದುಸ್ಥಾನದ ವಿದ್ಯಾರ್ಥಿಯು ವಿಲಾಯಿತಿಯಲ್ಲಿ ಬ್ಯಾರಿಸ್ಟರ್ ಪರೀಕ್ಷೆ ಕೊಟ್ಟಿದ್ದಾಗ್ಯೂ ಆತನು ರಾಜದ್ರೋಹಿಗಳ ಗುಂಪಿಗೆ ಸೇರಿದವನೆಂದು ಗೊತ್ತಾದದ್ದರಿಂದ ಆತನಿಗೆ ಆ ಪರೀಕ್ಷೆಯ ಸರ್ಟಿಫಿಕೇಟನ್ನು ಕೊಡದೆ ತಡೆದುಬಿಟ್ಟರು ಇವನು ಕಳೆದ ಜೂಲೈ ತಿಂಗಳಿಂದ ಫ್ರಾನ್ಸ್ ಸಂಸ್ಥಾನದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲೇ ಇದ್ದನು ಇಂಡಿಯಾ ಗವರ್ನ್‌ಮೆಂಟಿನವರು ಇವನನ್ನು ಹಿಡಿಯಬೇಕೆಂದು ಲಂಡನ್ ಪಟ್ಟಣದ ಪೋಲೀಸಿನವರಿಗೆ ವಾರಂಟನ್ನು ಕಳುಹಿಸಿಕೊಟ್ಟಿದ್ದರು ಇವನು ಪ್ಯಾರಿಸ್ಸಿನಿಂದ ಕಳೆದ ಬುಧವಾರ ಲಂಡನ್ ಪಟ್ಟಣಕ್ಕೆ ಹೋಗಿ ಇಳಿದನು ಅಲ್ಲಿನ ಪೋಲೀಸಿನವರು ಪತ್ತೆಯಲ್ಲಿದ್ದು ಇವನನ್ನು ಕಂಡು ಇವನ ಬಳಿಗೆ ಹೋದರು ಕೂಡಲೇ ಇವನು ತನ್ನನ್ನು ಹಿಡಿಯುವುದಕ್ಕೆ ಆ ಪೋಲೀಸಿನವರು ಬಂದಿದ್ದಾರೆಂದು ತಿಳಿದುಕೊಂಡು, ಹಿಂದಕ್ಕೆ ಸರಿದನು ಆಗ ಅವರು ಇವನನ್ನು ಸುತ್ತಿಕೊಂಡು, ಅವನ ಸಂಗಡ ಬಲವಾಗಿ ಹೋರಾಡಿ ಸ್ವಲ್ಪ ಹೊತ್ತಿನೊಳಗಾಗಿ ಹಿಡಿದುಕೊಂಡರು ಆ ಒಳಿಕ ಖೈದಿಯು ಸುಮ್ಮನಾದನು ಮರುದಿನ ಇವನನ್ನು ಅಲ್ಲಿನ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಿದರು ಇನ್ನು ೨-೩ ವಾರಗಳೊಳಗಾಗಿ ಇವನನ್ನು ಜಹಜಿನ ಮೇಲೆ ಹಿಂದುಸ್ಥಾನಕ್ಕೆ ಕಳುಹಿಸಿ ಕೊಡಬಹುದೆಂದೂ ಹಿಂದುಸ್ಥಾನದಲ್ಲಿ ಮ್ಯಾಜಿಸ್ಟ್ರೇಟರು ಇವನನ್ನು ವಿಚಾರಣೆ ಮಾಡುವರೆಂದೂ ಕೇಳಬರುತ್ತದೆ

ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ "ಕ್ರಿಶ್ಚಿಯನ್ ಹೆರಲ್ಡ್" ಎಂಬ ಪತ್ರಿಕೆಯನ್ನು ನಡಿಸುತ್ತಿದ್ದ ಮಿ|| ಲೂಯಿ ಕ್ಲಾಪ್‌ಷ್ ಎಂಬ ಮಹಾ ಪರೋಪಕಾರಿಯು ಕಾಲವಾದನೆಂದು ತಂತೀ ವರ್ತಮಾನ ಬಂದಿದೆ ಈತನು ಪ್ರಪಂಚದ ಅನೇಕ ಕಡೆಗಳಲ್ಲಿ ಬಡಬಗ್ಗರ ಕ್ಷಾಮನಿವಾರಣೆಗೆ ಬಹಳ ದ್ರವ್ಯವನ್ನೂ ಧಾನ್ಯಾದಿಗಳನ್ನೂ ಕೂಡಿಸಿ ಕಳುಹಿಸುತ್ತಾ ಪ್ರಖ್ಯಾತಿಗೆ ಬಂದಿದ್ದನು ೧೮೯೭ ನೇ ಇಸವಿಯ ಕ್ಷಾಮನಿವಾರಣೆಗೆ ಈತನು ೧೨ ಲಕ್ಷ ರೂಪಾಯಿನ ದವಸವನ್ನೂ ದ್ರವ್ಯವನ್ನೂ ಹಿಂದುಸ್ಥಾನಕ್ಕೆ ಕಳುಹಿಸಿಕೊಟ್ಟನು ಬಳಿಕ ಮೂರು ವರುಷಗಳ ಮೇಲೆ ಅದೇ ಉದ್ದೇಶಕ್ಕಾಗಿ ಅದಕ್ಕಿಂತ ಹೆಚ್ಚು ಹಣವನ್ನು ಕೂಡಿಸಿ ಕಳುಹಿಸಿದನು ಕ್ಷಾಮದ ದೆಸೆಯಿಂದ ಬಿಡಲ್ಪಟ್ಟ ೫,೦೦೦ ಮಕ್ಕಳನ್ನು ಈತನು ಏಳು ವರುಷಗಳ ಕಾಲ ಹಣ ಕಳುಹಿಸಿ ಸಾಕುತ್ತಾ ಬಂದನು ೧೮೯೨ರಲ್ಲಿ ಈತನು ದ್ರವ್ಯವನ್ನು ಕೂಡಿಸಿ ರಷ್ಯಾ ರಾಜ್ಯದ ಕ್ಷಾಮಪೀಡಿತರನ್ನೂ, ಕೆಲವು ಕಾಲದ ಮೇಲೆ ಫಿನ್‌ಲೆಂಡ್ ಮತ್ತು ಸ್ವೀಡನ್ ರಾಜ್ಯಗಳ ಕ್ಷಾಮಪೀಡಿತರನ್ನೂ, ಆ ಬಳಿಕ ಜಪಾನ್ ಚೀನಾ ರಾಜ್ಯಗಳ ಕ್ಷಾಮಪೀಡಿತರನ್ನೂ ಸಂರಕ್ಷಿಸಿದ್ದಿರುತ್ತಾನೆ ಇಷ್ಟೇ ಅಲ್ಲ ಆತನು ಕ್ಯಾಂಟನ್ ಆ ಮಹಾ ಪಟ್ಟಣದೊಳಗೆ ಬಡಬಗ್ಗರ ಮಕ್ಕಳನ್ನು ಸಾಕಿ ಅವರಿಗೆ ವಿದ್ಯಾಬುದ್ಧಿಗಳನ್ನು ಕಲಿಸಲು ಬಹಳ ದ್ರವ್ಯವನ್ನು ಚಂದಾಯೆತ್ತಿ ಬಹು ಸ್ತೋತ್ರಾರ್ಹವಾದ ರೀತಿಯಲ್ಲಿ ವಿನಿಯೋಗಮಾಡಿರುತ್ತಾನೆ ಇಂಥಾ ಭೂತದಯೆ ಪಶ್ಚಾತ್ತಾಪಯುಕ್ತನಾದ ಮಹಾ ಪುರುಷನು ಕಾಲವಾದದ್ದಕ್ಕಾಗಿ ಸಕಲರೂ ವಿಷಾದಿಸಬೇಕಾಗಿದೆ

ತಾಲ್ಲೂಕು ವರ್ತಮಾನಗಳು

ಮಂಡ್ಯ —ಈಚೆಗೆ ಇಲ್ಲಿ ಬಿಸಲು ಜೋರಾಗಿದೆ ತಕೆಯು ಬಹಳವಾಗಿದೆ ಗಾಳಿ ಬೀಸುವದೇ ಅಪರೂಪವಾಯಿತು —ಈಗ್ಗೆ ಎರಡು ವಾರಗಳ ಮುಂಚೆ ಮೈಸೂರಿಂದ ಸ್ಟ್ರೀಟ್ ಮಿಸ್ಸಿಯಮ್ಮನವರು ಸುವಾರ್ತಾ ಸೇವಕಿಯವರಾದ ಮರಿಯಮ್ಮನವರೊಡನೆ ಇಲ್ಲಿಗೆ ಮೆಯಿಲ್ ಗಾಡಿಯಲ್ಲಿ ದಯಮಾಡಿ, ಮೂರು ದಿನಗಳ ವರೆಗೂ ಇದ್ದು ಸುವಾರ್ತೆಯನ್ನು ಗ್ರಾಮಾಂತರಗಳಲ್ಲಿ ಪ್ರಸಂಗಿಸಿ, ಸ್ಕೂಲ್ ಕೆಲಸಗಳನ್ನು ನೋಡಿ ಸಂತೋಷ ಪಟ್ಟವರಾಗಿ ತಮ್ಮ ಸ್ಥಳಕ್ಕೆ ಮರಳಿ ಪ್ರಯಾಣ ಮಾಡಿದರು —ಕಳೆದ ಬುಧವಾರ ಇಲ್ಲಿನ ಸರ್ಕಿಟ್ ಸೂಪರಿಂಟೆಂಡೆಂಟರಾದ ಘನ ಸಾಡೇ ಬೋಧಕರವರು ಮೈಸೂರಿಂದ ಮೆಯಿಲ್ ಗಾಡಿಯಲ್ಲಿ ಇಲ್ಲಿಗೆ ದಯಮಾಡಿ, ಸ್ಕೂಲ್ ಕೆಲಸಗಳನ್ನೆಲ್ಲಾ ಪರಾಂಬರಿಸಿ, ಸಂತೋಷಪಟ್ಟು ಸಭೆಯ ಕಾರ್ಯಗಳನ್ನೆಲ್ಲಾ ವಿಚಾರಿಸಿಕೊಂಡು ಪ್ರಾರ್ಥನೆ ಕೂಟ ನಡಿಸಿ ಸಾಯಂಕಾಲದ ಗೂಡ್ಸ್ ಗಾಡಿಯಲ್ಲಿ ವಾಪಸು ತೆರಳಿದರು

ಶಿವಮೊಗ್ಗಾ ತಾ|| ಹಾರ್ನಹಳ್ಳಿ —ಈ ಊರು ಕೋಟೆಯಲ್ಲಿರುವ ಆನಂದಿರಾಗಣ್ಣನೆಂಬುವನ ವಾಸದ ಮನೆ ಹತ್ತಲಲ್ಲಿದ್ದ ದನವಿನ ಮನೆಗೂ, ಇನ್ನೊಂದು ವಾಸದ ಮನೆಗೂ ಸಹ ಫೆಬ್ರವರಿ ತಾ ೨೧ ನೇ ಸೋಮವಾರ ಸಾಯಂಕಾಲ ೪ ಘಂಟೆ ಸಮಯದಲ್ಲಿ ಅಕಸ್ಮಾತ್ತಾಗಿ ಬೆಂಕಿ ಹತ್ತಿ ಸುಟ್ಟು, ನಗದು ಬಟ್ಟೆಗಳೂ ಒಡವೆಗಳೂ ಬೇಸಾಯದ ಮುಟ್ಟುಗಳೂ ಸಹ ಸೇರಿ ಸುಮಾರು ೩೦೦—೪೦೦ ರೂಪಾಯಿಗಳ ವರೆಗೂ ನಷ್ಟವಾಯಿತು ಆ ಮನೆಗಳಿಗೆ ೧೦ ೧೨ ಮೊಳ ದೂರದಲ್ಲಿದ್ದ ಎರಡು ತೆಂಗಿನ ಮರಗಳ ಮೇಲ್ಭಾಗಕ್ಕೆ ಬೆಂಕಿ ಹತ್ತಿ ಒಣಗಿದ ಗರಿ ಮುಂತಾದುವು ಉರಿದು ಹೋದುವು ಒಂದು ಕೋಳಿ ವಿನಹ ಈ ಸ್ಥಳದ ಪ್ರಾಣಿಗಳೂ ಸಾಯಲಿಲ್ಲ ೬೦೦—೫೦೦ ಜನಗಳ ವರೆಗೆ ಸೇರಿ ಬಹಳ ಸಾಹಸ ಮಾಡಿ ಆಸ್ಪಾಸು ಇದ್ದ ಮನೆಗಳಿಗೆ ಬೆಂಕಿ ಹತ್ತಿಕೊಳ್ಳದ ಹಾಗೆ ಆರಿಸಿದರು ಮುಖ್ಯವಾಗಿ ಗಾಳಿಯು ಆ ಸಮಯದಲ್ಲಿ ತಾಂಕಾರಾದ್ದರಿಂದ ಕೋಟೆಯಲ್ಲಿದ್ದ ಮನೆಗಳೆಲ್ಲಾ ಉಳಿದುವು ಹೊರತು ಇಲ್ಲದಿದ್ದಲ್ಲಿ ಬಹಳ ಅನರ್ಥವು ಸಂಭವಿಸುತ್ತಿತ್ತು ಬೆಂಕಿ ಹತ್ತಿದ ಕಾರಣವು ಸರಿಯಾಗಿ ಗೊತ್ತಾಗಲಿಲ್ಲ

ಗುಬ್ಬಿ —ಕಳೆದ ತಿಂಗಳ ಕೆಳಗೆ ಇದೇ ಗ್ರಾಮದ ಕೋಟೆಮರದ ಉಪಾಧ್ಯಾಯರಾದ ಬಸಲಿಂಗಪ್ಪನವರು ತಮ್ಮ ಬಾಬತು ಭೂಮಿಯನ್ನು ಹೊಸ ಕಟ್ಟಡ ಕಟ್ಟುವುದಕ್ಕಾಗಿ ಶೋಧಿಸುವಾಗ್ಗೆ ಅದರಲ್ಲಿ ಒಂದು ತೋಟಾ ತುಬಾಕಿ ಸೆಂಟ್ರಲ್ ಫೈರ್ ಬಂದೂಕವು ಸಿಕ್ಕಿದ್ದನ್ನು ಪೋಲೀಸ್ ಆಫೀಸರಿಗೆ ತಿಳಿಸಿದ್ದರ ಮೇಲೆ ಮಹಜರು ಮಾಡಿ ಆ ಮಣ್ಣು ಹತ್ತಿದ್ದ ಬಂದೂಕವು ಪೋಲೀಸ್ ಆಫೀಸಿನಲ್ಲಿ ಇಟ್ಟಿರುತ್ತಾರೆ ಇದು ಈಗ್ಗೆ ೫—೬ ವರುಷಗಳಲ್ಲಿ ಒಬ್ಬ ಧೊರೆಯು ಶಿಕಾರಿಗೆ ಬಂದಾಗ್ಗೆ ಮುಸಾಫರಿ ಬಂಗಲೆ ಬಾಗಿಲಲ್ಲಿ ಇಟ್ಟು ಇದುವಾಗ ಕಳುವಾಗಿ ಹೋಗಿ ಇದ್ದಂತೆಯೂ, ಆ ಧೊರೆಯು ಮೊದಲೇ ರಿಪೋರ್ಟು ಕೊಟ್ಟಿದ್ದರ ಮೇಲೆ ಆ ಸಂಗತಿ ಬೆಂಗಳೂರು ಸಿಟಿ ಸ್ಟೇಷನ್‌ಗೆ ಬರೆದು ಇರುತ್ತಾರೆ ಈ ಬಂದೂಕವು ಈಗ ಯಾವ ಪ್ರಯೋಜನಕ್ಕೂ ಬಾರದಂತೆ ಮಣ್ಣಿನಿಂದು ರಂಧ್ರಗಳು ಬಿದ್ದು ಇರುತ್ತೆ —ಇಲ್ಲಿನ ಅಂಗಡಿ ಸೇರುಗಳು ಹೆಚ್ಚು ಕಡಮೆ ಇಟ್ಟು ವ್ಯಾಪಾರ ಮಾಡತಕ್ಕವರಿಗೆ ಬಂದೋಬಸ್ತು ಮಾಡುವ ಅಧಿಕಾರಿಗಳು ಯಾರೂ ಈ ತಾಲ್ಲೂಕಿಗೆ ದಯಮಾಡಿಸದೆ ಇರೋಣದರ ದೆಸೆಯಿಂದಬಡ ಜನರಿಗೆ ತುಂಬಾ ಕಷ್ಟವಾಗಿ ಇರುತ್ತೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಸಾಹೇಬರು ಗಮನಕ್ಕೆ ತಂದರೆ ಕ್ಷೇಮ —ಇದೇ ತಾಲ್ಲೂಕು ನಿಟ್ಟೂರು ಗ್ರಾಮದ ಕೆರೆಯ ಅಂಗಳವನ್ನು ಸಾಗುವಳಿ ಬಗ್ಗೆ ಬೇಕೆಂದು ಲಕ್ಕೇನಹಳ್ಳಿ ಗ್ರಾಮದ ಒಬ್ಬ ದೊಡ್ಡ ಮನುಷ್ಯರು ಆರು ಎಕರೆ ಜಮೀನಿಗೆ ದರಖಾಸ್ತು ಕೊಟ್ಟು ಸುಮಾರು ಐನ್ನೂರು ಎಕರೆ ಜಮೀನು ಸಾಗುವಳಿ ಮಾಡಿದ್ದರಿಂದ ಆ ಜಮೀನಿನಲ್ಲಿ ಆದಷ್ಟು ಹುಲ್ಲು ಸಹಾ ಇದೇ ಗುಬ್ಬಿ ಸಂತೆಯಲ್ಲಿ ಹರಾಜು ಮಾಡಿಸಿದ್ದಲ್ಲದೆ ಆ ಸಮಯದಲ್ಲಿ ಇಲ್ಲಿನ ಕೆಲ್ಲಾರರು ರಿಕಾರ್ಡು ನಡಿಸಿ ಇದ್ದಾಗ್ಯೂ ಕೊದ ಕಸಬಾ ಶೇಕ್ದಾರರನ್ನೂ, ಲಕ್ಕೇನಹಳ್ಳಿ ಪಟೇಲ ಶಾನುಭೋಗರನ್ನೂ ಸಸ್ಪೆಂಡ್ ಮಾಡಿ ಇರುತ್ತಾರೆ ಡೆಪ್ಯುಟಿ ಕಮಿಷನರ್ ಸಾಹೇಬರು ಪರ್ಯಾಲೋಚಿಸಿ ಫೈನಲ್ ಆರ್ಡರ್ ಮಾಡುವ ತನಕ ಇತ್ಯಂಬ ಸಂಗತಿ ಅವರು ಘನವಾದ ಚಿತ್ತಕ್ಕೆ ತಂದು ನ್ಯಾಯ ವಿಮರ್ಶೆಯಿಂದ ಅವರ ಕೆಲಸಗಳನ್ನು ಅವರಿಗೆ ಕೊಡಿಸಲು ಯಾವ ಸಂದೇಹವೂ ಇರುವುದಿಲ್ಲವೆಂದು ನಂಬುತ್ತೇನೆ

ಮೈಸೂರು ಗೆಜೆಟ್ ಸಂಗ್ರಹ

ಮಂಡ್ಯ ತಾಲ್ಲೂಕಿಗೆ ಸೇರಿದ ಮದ್ದೂರಿನಲ್ಲಿರುವ ಮುಜರಾಯಿ ಸಂಸ್ಥೆ ದೇವಸ್ಥಾನಗಳ ಕಾರುಬಾರುಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಮುಂದೆ ಹೆಸರುವವರು ಐದು ವರುಷಗಳ ವರೆಗೆ ಧರ್ಮದರ್ಶಿಗಳಾಗಿ ಇರತಕ್ಕದ್ದು —ಮಿ| ಗಳಾದ ನರಸಿಂಹ ಜೋಯಿಸರು ಭಟ್ಟಾಚಾರ್ಯರು, ಕಾನು ಭೋಗ ಅಪ್ಪಯ್ಯ ಪೋಯಂದವರು, ಪುಟ್ಟ ನರಸಿಂಹಯ್ಯನವರು, ಚಿಕ್ಕ ಮುದ್ದಶೆಟ್ಟರು

ನಂದಿಯ ಶ್ರೀ ಭೋಗನಂದೀಶ್ವರ ಸ್ವಾಮಿ ದೇವಸ್ಥಾನಕ್ಕೆ ಚಿಕ್ಕಬಳ್ಳಾಪುರ ತಾಲ್ಲೂಕು ಕಂದವಾರದ ಮೆ|| ಸಾಹುಕಾರ್ ಕುಕ್ಕಲ ಪೊನ್ನು ಸರ್ವಂತಯ್ಯನವರನ್ನು ಐದು ವರುಷಗಳ ವರೆಗೆ ಧರ್ಮದರ್ಶಿಯಾಗಿ ನೇಮಿಸಿದೆ

ಹೆಲ್ತ್ ಆಫೀಸರ್ ಮೆ|| ಬಿ ಕೃಷ್ಣ ರಾಯರಿಗೆ ಕೊಟ್ಟಿದ್ದ ಒಂಬತ್ತು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೂ ಆರು ದಿನಗಳಿಗೆ ಜಾಸ್ತಿ ಮಾಡಿದೆ

ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅ|| ಕನ್ಸರ್ವೇಟರ್ ಮೆ|| ವಿ ಯತಿರಾಜುಲು ನಾಯುಡು ಯವರಿಗೆ ಐದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು

ಮುಳಬಾಗಲ್ ತಾಲ್ಲೂಕು ಅಮಲ್ದಾರ್ ಮೆ|| ಗುಲಾಂ ಮಹಮದ್ ಮೆಕ್ಕಾಯಿ ಯವರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಟ್ಟಿದೆ

ಮೈಸೂರು ಪೋಲೀಸ್ ಇನ್ಸ್ಪೆಕ್ಟರ್ ಮೆ|| ಎಂ ಕೆ ರಮ್ಯಯನವರನ್ನು ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕಮಾಡಿ ಗುಂಡ್ಲುಪೇಟೆ ತಾಲ್ಲೂಕಿಗೆ ವರ್ಗಮಾಡಿದೆ ಅಮಲ್ದಾರ್ ಮೆ| ಎಸ್ ಕೃಷ್ಣ ಮೂರ್ತರವರು ಮಾರ್ಚಿ ತಾ ೪೭ ರಿಂದ ಪೆನ್ಶನ್ ಪಡೆಯುತ್ತಾರೆ

ಮೆ|| ಟಿ ತಿಮ್ಮಾಬೆಟ್ಟಯವರನ್ನು ಪೋಲೀಸ್ ಇಲಾಖೆಗೆ ವರ್ಗಮಾಡಿರೋಣದರಿಂದ ಅ|| ಕಮಿಷನರ್ ಮೆ|| ಬಿ ಹನುಮಂತರಾಯರು ಶಿವಮೊಗ್ಗಾ ಸಬ್ ಡಿವಿಜನ್ ಚಾರ್ಜನ್ನು ವಹಿಸತಕ್ಕದ್ದು

ಅ|| ಕಮಿಷನರ್ ಮೆ|| ಸಿ ರಂಗನಾಥರಾವ್ ಸಾಹೇಬ್ ರವರನ್ನು ಬೆಂಗಳೂರು ಡಿಸ್ಟ್ರಿಕ್ಟಿಗೆ ಅದೇ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವಂತೆ ವರ್ಗ ಮಾಡಿದೆ

ಮೆ|| ಆನಂದರಾವ್ ನಿಸಿಕಯವರು ಮೆ|| ರಂಗನಾಥರಾಯರಿಗೆ ಛಾರ್ಜು ಕೊಟ್ಟ ಬಳಿಕ ರೆಕಾರ್ಡುಗಳ ಮಿರಿ ಇನ್‌ಸ್ಪೆಕ್ಟರಾಗಿ ವಾಪಸು ಹೋಗತಕ್ಕದ್ದು

ತುಂಕೂರು ಡಿಸ್ಟ್ರಿಕ್ಟ್ ಚಿಕ್ಕನಾಯಕನಹಳ್ಳಿಯಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಪ್ಲೇಗ್ ಮೊದಲಾದ ಸಾಂಕ್ರಾಮಿಕ ರೋಗಗಳು ಹುಟ್ಟಿ ಬಹುದೆಂಬ ಅನುಮಾನ ಇರುವುದರಿಂದ ಕೆಳಗೆ ಕಂಡ ಜಾತ್ರೆ, ಉತ್ಸವ ದಿಗಳಿಗೆ ಪ್ಲೇಗ್ ಇರುವ ಕಡೆಗಳಿಂದ ಹೋಗತಕ್ಕವರನ್ನು ಬಿಡುವುದಿಲ್ಲ —ಚನ್ನರಾಯಪಟ್ಟಣದ ತಾಲ್ಲೂಕು ಶ್ರವಣಬೆಳ್ಗೊಳದ ಮಸ್ತಕಾಭಿಷೇಕಕ್ಕೆ—ಮಾರ್ಚಿ ತಾ ೧೪ ರಿಂದ ಏಪ್ರಿಲ್ ತಾ ೫೮ ವರೆಗೆ ಚಿಕ್ಕಕೆರೆ ತಾಲ್ಲೂಕು ನಾಯಕನಹಟ್ಟಿ ತಿಪ್ಪೇರುದ್ರ ಜಾತ್ರೆಗೆ—ಮಾರ್ಚಿ ತಾ ೨೭ ರಿಂದ ನಾಲ್ಕು ದಿವಸಗಳವರೆಗೆ, ನೆಲಮಂಗಲದ ತಾಲ್ಲೂಕು ಶಿವಗಂಗೆ ಗಂಗಾಧರೇಶ್ವರಸ್ವಾಮಿ ಜಾತ್ರೆಗೆ—ಮಾರ್ಚಿ ತಾ ೨೫ ರಿಂದ ಎರಡು ದಿನ ಚನ್ನಗಿರಿ ತಾಲ್ಲೂಕು ದೇವರಹಳ್ಳಿ ರಂಗನಾಥದೇವರ ಜಾತ್ರೆಗೆ—ಏಪ್ರಿಲ್ ತಾ ೨೫ ರಿಂದ ೩೦ರ ವರೆಗೆ ತೀರ್ಥಹಳ್ಳಿ ತಾಲ್ಲೂಕು ಮಹಿಷಿಯ ಅಶ್ವತ್ಥನಾರಾಯಣ ದೇವರ ರಥೋತ್ಸವಕ್ಕೆ—ಏಪ್ರಿಲ್ ತಾ ೧೪ ರಿಂದ ೨೮ರ ವರೆಗೆ, ನಗರದ ತಾಲ್ಲೂಕು ರಾಮಚಂದ್ರಪುರದ ಉತ್ಸವಕ್ಕೆ ಏಪ್ರಿಲ್ ತಾ ೧೮ ರಿಂದ ೨೪ರ ವರೆಗೆ ಸೊರಬದ ತಾಲ್ಲೂಕು ಚಂದ್ರಗುತ್ತಿ ರಥೋತ್ಸವಕ್ಕೆ ಏಪ್ರಿಲ್ ತಾ ೩೦ ರಿಂದ ಮೇ ತಾ ೬ರ ವರೆಗೆ, ಶಿಕಾರಿಪುರದ ತಾಲ್ಲೂಕು ಬೆಳಗಾವಿ ಜಾತ್ರೆಗೆ—ಮಾರ್ಚಿ ತಾ ೨೬ ರಿಂದ ಏಪ್ರಿಲ್ ತಾ ೧೨ರ ವರೆಗೆ, ಶಿಕಾರಿಪುರದ ಜಾತ್ರೆಗೆ ಏಪ್ರಿಲ್ ತಾ ೧೫ ರಿಂದ ೨೮ರ ವರೆಗೆ

Printed and Published by the Rev H GULLIFORD, Proprietor and Manager, Wesleyan Mission Press, Mysore 17/3/1910

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೧೦ ನೇ ಇಸವಿ ಮಾರ್ಚಿ ತಾರೀಖು ೨೬ ನೇ ಗುರುವಾರ. ಸಂಚಿಕೆ ೪೩

ವೃತ್ತಾಂತ ಪತ್ರಿಕೆಯ ಸಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ, ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ ಶ್ರಿಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಮಾರ್ಚಿ ಆಖೈರನೊಳಗಾಗಿ ವೃತ್ತಾಂತ ಪತ್ರಿಕೆ ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡಲೆ ಬರಿಯಿರಿ ವಿಳಾಸ —

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

40 1

೧ ಲೋಕಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಚಳಿಜ್ವರ ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು ಮೈ ಕೈಕಾಲು ಕೊಡತ (ಭಾರ), ಮೈ ನಡುಕ ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು ನೆಗಡಿ ನಿಶ್ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಪ್ರಾಯಿಗರ ಮತುಶೂಲೆ, ಮಕ್ಕಳ ಎಳವು, ಜ್ವರ, ಪಚ್ಚೆಜ್ವರ ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ರೂ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ಕ್ಷುಧಾಸಾಗರಮಧು

ಮಕ್ಕಳುಗಳಿಗೆ ಇದನ್ನು ಅಮೃತವೆಂದೇ ಹೇಳುವೆವು ಏಕೆಂದರೆ ಮಕ್ಕಳ ಅನ್ನಕೋಶವನ್ನು ಬಲಪಡಿಸಿ ಶ್ವಾಸಸ್ಥಾನವನ್ನು ನಿರ್ಮಲವಾಗಿಟ್ಟು ಕಟ್ಟಿದ ಕಫವನ್ನು ಶುದ್ಧೀಕರಿಸಿ ರಕ್ತಾಭಿಸರಣವು ಧಾರಾಳವಾಗುವ ಹಾಗೆ ಮಾಡುತ್ತದೆ ಇದರಲ್ಲಿ ಅಕ್ಷೇಪಣೆಯವಾದ ಯಾವ ಪದಾರ್ಥವೂ ಸೇರಿಲ್ಲವಾಗಿ ಪ್ರತಿ ಮಕ್ಕಳಿಗೂ ಧೈರ್ಯವಾಗಿ ಕೊಡಬಹುದು

ಇಷ್ಟೇ ಅಲ್ಲ ಮಕ್ಕಳಿಗೆ ಅಜೀರ್ಣದಿಂದಲೋ—ಅಹಾರವ್ಯತ್ಯಾಸದಿಂದಲೋ ಹಲ್ಲುಗಳು ಹುಟ್ಟುವವರಿಂದಲೋ ಆಗುವ ಭೇದಿ—ವಾಂತಿಗಳನ್ನು ನಿಲ್ಲಿಸುತ್ತದೆ ಮಲಬದ್ಧವಿದ್ದರೆ ದಿನಕ್ಕೆ ಒಂದು ವೇಳೆ ಕ್ರಮವಾಗಿ ಆಗುವ ಹಾಗೆ ಮಾಡುತ್ತದೆ ಬಾಲಕರಿಯ ಪಚ್ಚೆ ಜ್ವರ (ಹಳೇ ಜ್ವರ), ಉಷ್ಣ ಅಥವಾ ಶೀತದ ನಾನಾ ಬಗೆಯ ಕೆಮ್ಮಲು—ಹೊಟ್ಟೆ ಕಟ್ಟಿಕೊಂಡಿರುವುದು—ಜಲಕಮ್ಮ—ಹೊಟ್ಟೆಯ ಎಡಭಾಗದ ಗೆಡ್ಡೆ—ಎದ್ದೆ ಬಾರದಿರುವುದು—ಚಂದಿ ಹಿಡಿಯುವುದು—ಬಡವಾಗಿರುವುದು—ಗರ್ಭಕಾರಕದಿಂದ ಒಣಗಿಕೊಂಡಿರುವುದು—ಇವೆಲ್ಲವನ್ನೂ ನಿಸ್ಸಂದೇಹವಾಗಿ ಗುಣಪಡಿಸುತ್ತದೆ ಕೇವಲ ತೀಕ್ಷ್ಣವಾಗಿದ್ದರೂ ಕೇವಲ ಶೀತವಾಗಿದ್ದರೂ ಸಮತ್ವವನ್ನು ಕಲ್ಪಿಸುತ್ತದೆ

ಹೆಚ್ಚು ಏತಕ್ಕೆಂದೇನು—ನಿಮ್ಮ ಮಕ್ಕಳು ಯಾವ ತರದ ಬೇನೆಯೂ ಇಲ್ಲದೆ ಮೈತುಂಬಿಕೊಂಡು ಚಟುವಟಿಕೆಯುಳ್ಳವರೂ—ಬಲವುಳ್ಳವರೂ ಆಗಬೇಕಾದರೆ ಈ ಕ್ಷುಧಾಸಾಗರಮಧು ಒಂದನ್ನೇ ಕೊಡಿ ಬೆಲೆ ರೂ 1—0—0

ಪ್ಯಾಕಿಂಗ್ ಮತ್ತು ಟಪ್ಪಾಲ್ ಖರ್ಚು ೬ ಆಣೆ

ಕಾಸಕೇಸರಿ ಶೀತದ ಮತ್ತು ಉಷ್ಣದ ಕೆಮ್ಮಲುಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ ಡಬ್ಬಿ ೧ ಕ್ಕೆ ರೂ 1 0—0 ಟ ಖ ಪ್ರತ್ಯೇಕ

ಶ್ವಾಸಕಾಲೇಶ್ವರ (ಗೂರಲುಬ್ಬಸಕ್ಕೆ) - ಬೆಲೆ ರೂ 1—8—0

ಟ ಖ ಪ್ರತ್ಯೇಕ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ 11-12

ಇದು ಸಾಧಾರಣ ಜ್ವರ ಚಳಿಜ್ವರ ಮರುಕೋಜ್ವರ ಪಿತ್ತಜ್ವರ ಶೀತಜ್ವರ ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖೆ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ಜ್ವರಹರಿ ಔಷಧವನ್ನು ಪರೀಕ್ಷಿಸಿ ನೋಡಿದೆವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೩೦ ಡಜನ್ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯುತ್ತಾ ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೩೦ ಡಜನ್ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ ೯—೧ ರೂ ೩—೧೨ ಆ, ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮನ್ನಾ ಮಾಡಲಾಗುವದು

ಓಮಂ ಕರ್ಪೂರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು „ ಜ್ವರಹರಿ " ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಜ್ವರ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಜನರಲ್ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಸಿಕ್ಕದೆ ಹೋದರೆ ಕೆಳಗಿನ ವಿಳಾಸದಿಂದ್ರಲ್ಲಿ ವಿಚಾರಿಸಿ —

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಹೊಸ ಪುಸ್ತಕ! ಹೊಸ ಪುಸ್ತಕ!! ಹೊಸ ಪುಸ್ತಕ!!!

23 6

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತಾಡುವುದಕ್ಕೂ ಬೋಧಕರ ಸಹಾಯವಿಲ್ಲದೆ ತಾನಾಗಿ ಕಲಿಸುವ ಅತ್ಯುತ್ತಮ ಪುಸ್ತಕವಿದು

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ. ಅಚ್ಚು ಮತ್ತು ಬರವಣಿಗೆಯ ಅಕ್ಷರಗಳನ್ನು ಗುರುತಿಸುವ ಉಪಾಯ, ಸ್ವರ ವ್ಯಂಜನಾಕ್ಷರ ಸಂಕೇತ, ಕಾಗುಣಿತ, ಅಕ್ಷರ ಸಂಯೋಜನಾಭ್ಯಾಸ, ಪ್ರಥಮಾಧ್ಯಾಸಯೋಗ್ಯಪಾಠಗಳ ಸಮುದಾಯ, ವ್ಯಾಕರಣಗಳು, ವಿವಿಧವಾಕ್ಯ ಸಮುದಾಯ, ಲೇಖನ ಪ್ರಣಾಳಿಕೆ, ಆಚರಣೆಯಲ್ಲಿ ಅಪೂರ್ವವಾದ ಅತ್ಯಂತೋಪಯೋಗವುಳ್ಳ ಶಬ್ದಗಳು, ಕೋಷ್ಟಕ, ಗಾದೆ, ತಂತೀ ವರ್ತಮಾನ, ಸಾಂಕೇತಿಕ ಶಬ್ದಗಳು, ಇತ್ಯಾದಿಯಾದ ಅನೇಕ ಉಪಯುಕ್ತಾಂಶಗಳು ಸೇರಿವೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷ್ ಭಾಷೆಯ ಪ್ರತಿ ಶಬ್ದದ ಉಚ್ಚಾರಣೆಯನ್ನೂ ಕನ್ನಡ ಅಕ್ಷರಗಳಿಂದ ಬರೆದು ಅವರ ಅರ್ಥವನ್ನು ಕನ್ನಡಭಾಷೆಯಲ್ಲಿ ಬರೆದಿದೆ ಇಂಗ್ಲಿಷ್ ಭಾಷೆಯನ್ನು ಸ್ವಲ್ಪವೂ ತಿಳಿಯದ ಕನ್ನಡಿಗರು ಅದನ್ನು ಕಲಿಯುವುದಕ್ಕೆ ಈ ಪುಸ್ತಕವು ತಕ್ಕಷ್ಟು ಸಹಾಯವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಇಂಗ್ಲಿಷು ಭಾಷೆಯನ್ನು ಕಲಿತು ಬಗೆಬಗೆಯ ಲಾಭವನ್ನು ಸಂಪಾದಿಸಲಿಚ್ಛಿಸುವ ಯಾವ ತರದ ಜನರಿಗಾದರೂ ಈ ಪುಸ್ತಕವು ತುಂಬಾ ಉಪಯೋಗವಾಗಿದೆ

ತಾವಾಗಿ ಇಂಗ್ಲಿಷನ್ನು ಕಲಿಯುವ ಮೊದಲನೆಯ ಪುಸ್ತಕ. (The Self English Study, Vol 1 ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಎಂಬೀ ಆಂಗ್ಲಭಾಷಾ ಪ್ರವೇಶದಾಯಿನಿ ಮೊದಲನೆಯ ಮತ್ತು ಎರಡನೆಯ ಮುದ್ರಣದ ಪುಸ್ತಕಗಳು ಬಲು ಬೇಗ ಮುಗಿದುಹೋದವು ಮೂರನೆಯ ಮುದ್ರಣದ ಪುಸ್ತಕಗಳಲ್ಲಿ ಕೆಲವು ಮಾತ್ರ ಉಳಿದಿವೆ !!! ನಾಲ್ಕನೆಯ ಮುದ್ರಣಕ್ಕೆ ಸಾವಕಾಶವಾದೀತು ಬೇಗ ಬೇಗ ಬರೆದು ತರಿಸಿಕೊಳ್ಳುವುದು ಕಾಗದ ಉತ್ತಮ ಅಚ್ಚು ಅಂದ, ಅಟ್ಟೆ ಭದ್ರ ಅಂಚೆ ವೆಚ್ಚ ಸೇರಿ ಕ್ರಯ ಒಂದು ರೂಪಾಯಿ ಆರು ಆಣೆ ಮಾತ್ರ

ವಿಳಾಸ —ಭಾರತಿ ಸಂಪಂಗಿರಾಮ, ಪೋಸ್ಟು—ಹೊಸಕೋಟೆ—ಡಿಸ್ಟ್ರಿಕ್ಟು, ಬೆಂಗಳೂರು

ಸಂಗೀತ ಪಾರಿಜಾತ ಕ್ರಯ ೮ ಆಣೆ

20 7

ಮನೋಹರವಾದ ಹಾಡಿನ ಪುಸ್ತಕ! ೧೦ ಪ್ರತಿಗಳನ್ನು ಒಟ್ಟಾಗಿ ತರಿಸುವವರಿಗೆ ೧೨ ಆಣೆಕ್ರಯದ ಸಿರುಸಮಾಪಣ ಹೊಸನಾಟಕವನ್ನೂ ೬ ಪ್ರತಿಗಳನ್ನು ತರಿಸುವವರಿಗೆ ಕಬೀರ ದಾಸನ ಚರಿತ್ರೆಯನ್ನೂ ೪ ಪ್ರತಿಗಳನ್ನು ತರಿಸುವವರಿಗೆ ಪ್ರಶ್ನೋತ್ತರ ರತ್ನಮಾಲಿಕೆ ಎಂಬ ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ—ದಿ ಮರ್ಕೆಂಟೈಲ್ ಯೂನಿಯನ್, ಮೈಸೂರು

ಸುಗಂಧಗಳು.

1 19

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧೨, ೫, ೩, ೨-೮-೦, ೧ ೪-೦ ಲಿಸ್ಟುಗಳು ೧ ತೊಲೆಗೆ ರೂ ೧ ದಶಾಂಗ ಪುಡಿ ೧ ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಸೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ರೈತರೇ, ವ್ಯವಸಾಯವನ್ನು ಅಭಿವೃದ್ಧಿಮಾಡಿಕೊಳ್ಳಿ.

35 2



ನಿಮ್ಮ ಜಮೀನುಗಳನ್ನು ಆಳವಾಗಿ ಉಳು ಮಳೆಯ ನೀರನ್ನು ಜಮೀನಿನೊಳಗೇ ಹೀರಿಕೊಳ್ಳುವಂತೆ ಮಾಡಿಕೊಳ್ಳಿ ಉತ್ತಮವಾದ ಹೆಚ್ಚು ಬೆಳೆಯನ್ನು ಕಟಾವು ಮಾಡಿಕೊಳ್ಳಿ ಕೋಲಾರದ ನಾರ್ಮಲ್ ಮತ್ತು ಟ್ರೈಯಿನಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿರುವ ನೇಗಲುಗಳೂ ಹರಿತೆ ಹೊಡೆಯುವ ಹಲುಬೆ ಕುಂಟೆ ಕೂರಿಗೆಗಳೂ ನಿಮಗೆ ಬಹಳ ಚೆನ್ನಾಗಿ ಸಹಾಯಮಾಡುತ್ತವೆ ಕ್ರಯದ ಪಟ್ಟಿ ಮುಂತಾದದ್ದು ತಿಳಿಯಬೇಕಾದರೆ ರೆವ್ ಡಬ್ಲಿಯು. ಎಚ್. ಹಾಲಿಸ್ಟರ್, ಕೋಲಾರ್ ಇವರಿಗೆ ಬೇಗ ಬರೆದುಕೊಳ್ಳಿ.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

6 44

ತಲೆನೋವು ವಾಯುನೋವು, ಸಳಕ ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಳಿಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು —ಇವುಗಳಿಗೆ ಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗನುಸಾರವಾಗಿ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಉಪಯೋಗಿಸಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಅವರು ... ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಉಪಟ್ಟನ್ನ ... ತಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ಆಸ್ಪತ್ರೆಗಳೂ, ವೈದ್ಯರೂ ಉಪಯೋಗಿಸುತ್ತಾರೆ ಮುಖ್ಯ ಏಜೆಂಟರ ವಿಳಾಸ— ಕೆ ಎಸ್ ಕನ್ನಯಚೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಪೀಟರ್ಸ್,

೩೭ ವೇದಮಲಟಿಳ್ಳೆ ಬೀದಿ ವೇಪೇರಿ ಮದರಾಸ್

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಒದಗುವುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 6 12

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಈ ಔಷಧವು ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಸಾಮಾನುಗಾರರಲ್ಲೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂಡ್

ಈ ಮೀನುಮನುಷ್ಯ ಇರುವ

ಔಷಧವನ್ನೇ ಕೇಳಿ ಪಡೆಯಿರಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನು ನೋವು ಧಳುಕು ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಳುಬಾಗಿಯೋ ಇಳಿಯುವುದು ಬಡವು ಬಾಯಾರಿಕೆ ಬಳಲಿಕೆ, ಎದೆ ಕಲ್ಲೇಳುವುದು ತಲೆನೋವು ಗಾಬರಿ ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿಶ್ಯಕ್ತಿ ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [6 30]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೮—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಓ. ೨೦ ಬೊಂಬಾಯಿ. ಬಾಕ್ಸ್—ಇವರಲ್ಲಿ ದೊರೆಯುವುದು

CHAMBERLAIN'S COLIC, CHOLERA AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆಕೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

8 12



ಈ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಅನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕವಾದ ಗುಣಕಾರಿಯು [26 4

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಶೀತ, ಕೆಮ್ಮು, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦-೬ ೦ ೧೨ ಡಬ್ಬಿಗಳಿಗೆ ೪ ೦ ೦

ಆಸ್ತ್ಮಾಮಿಶ್ರಣ	೨ ೦ ೦
ಬೇಳುಕಡಿತದ ಮದ್ದು	೦ ೮ ೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦ ೦
ಸುಂದರೀ ತೈಲ—ಮುದ್ದಿ ಜನಗಳಿಗೆ	೦ ೮-೦
ಗುಲಾಬು ವಾತ್ರೆ—ಗುಲಾಬಿಗೆ	೦-೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦ ೪ ೦
ಬಿಜ್ಜ ಮುಲಾಮು—ಮಕ್ಕಳ ಬಿಜ್ಜ ಗ	೦ ೩ ೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧-೦ ೦
ಕಫನಾಶಕ ಚೂರ್ಣ—ಆಸ್ತಾರೋಗಕ್ಕೆ	೦ ೮ ೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —' ಅಮೃತಾಂಜನ " ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

೨ 12

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಯಾರಾವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳುಪು, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮, ರೂ ೧-೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜೆಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ ಕದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
,, ,, ೬ ,, ,,	,, ೨—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ವಾರಕ್ಕೆ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

14 11

ನಮ್ಮಲ್ಲಿ ಈಗ ವಸ್ತ್ರಾದಿಗಳಿಗೆ ಸಿದ್ಧವಾಗಿರುವ ಚೆಕ್ಕು ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ದೊರೆಯುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(196 ಪುಟಗಳು, ಸೊಗಸಾದ ಒಟ್ಟ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾ ಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕಾ ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—0

ಎಕ್ಸರ್ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-11]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

25—3—1910 ರಿಂದ 4—2—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	19	12	0	0
ಮೈಸೂರು ,,	5	8	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	•	•	0	0
ಹಾಸನ ,,	0	•	0	0
ಚಿತ್ರದುರ್ಗ ,,	3	4	0	•
ಕಡೂರ್ ,,	6	1	0	0
ಶಿವಮೊಗ್ಗ ,,	0	0	0	0
ಜುಮ್ಲಾ	31	26	0	0

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸೌಮ್ಯನಾಮ ಸಂವತ್ಸರದ ಫಾಲ್ಗುಣ ಶುದ್ಧ ಪೌರ್ಣಮಿ ಶುಕ್ರವಾರದಿಂದ ಫಾಲ್ಗುಣ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಮಾರ್ಚಿ.

ತಾ	ವಾರ	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ಶೇಧಿ ವಿಷಸ ಮಾಸ
25	ಶುಕ್ರ ,,	ಪೌರ್ಣಮಿ	46-3	ಉ	37-2	12
26	ಶನಿವಾ ,,	ಪಾಡ್ಯಮಿ	50 6	ಹ	42-31	13
27	ರವಿವಾ	ಬಿದಿಗೆ	56-30	ಚಿ	49-2	14
28	ಚಂದ್ರ	ತದಿಗೆ	60-0	ಸ್ವಾ	55-30	15
29	ಕುಜ	ತದಿಗೆ	0-46	ವಿ	60-0	16
30	ಬುಧ	ಚೌತಿ	6-50	ವಿ	1-50	17
31	ಗುರು	ಪಂಚಮಿ	10-8	ಅ	7-40	18

,, ಡೋಲೋತ್ಸವ, ಕಾಮದಹನ, ಪ್ರಸನ್ನನಂಜುಂಡೇಶ್ವರ ರಥ, ನರಸೀಪುರದಲ್ಲಿ ಪ್ರಹ್ಲಾದೋತ್ಸವ. ; ವ್ಯತೀಪಾತಯೋಗ, ನರಸೀಪುರದಲ್ಲಿ ಗುಂಜಾನೃಸಿಂಹಸ್ವಾಮಿ ರಥ. ಸಂಕಷ್ಟಹರಚತುರ್ಥಿ, ವರದರಾಜ ಸ್ವಾಮಿಗಳ ಪುಣ್ಯದಿನ. 1 ವ್ಯಾಸರಾಯಸ್ವಾಮಿಗಳ ಪುಣ್ಯದಿನ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೨-೮-೦	೧೩-೧೩-೦
ಕೆಂಬೂತಿ ಅಕ್ಕಿ ಅವಲ್ ...		೧೨-೮-೦	೧೩-೮-೦
,, ದುಯಂ		೧೨-೦-೦	೧೩-೦-೦
ಜಾವಾಳಿ ಅಕ್ಕಿ		೧೨-೪-೦	೧೪-೮-೦
ಸಣ್ಣಕ್ಕಿ ಅವಲ್		೧೩-೮-೦	೧೫-೮-೦
,, ದುಯಂ ...		೧೩-೦-೦	೧೪-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ ...		೧೨-೮-೦	೧೨-೮-೦
,, ದುಯಂ ...		೧೨-೦-೦	೧೧-೪-೦
ತ್ಸೆ ರಾಗಿ ಪಲ್ಲಾ ೧ಕ್ಕೆ ...		೮-೦-೦	೬-೧೨-೦
ಕಾರ್‍ರಾಗಿ ...		೭-೧೨-೦	೬-೪-೦
ಜೋಳ ...		೭-೮-೦	೮-೮-೦
ಹುಲಸಂದಿ ಪಲ್ಲಾ ೧ಕ್ಕೆ ...		೧೧-೦-೦	೧೧-೦-೦
ಬೇ: ಅವರೆ ...		೧೧-೦-೦	೧೦-೪-೦
ಹೆಸರು ...		೧೧-೦-೦	೧೦-೦-೦
ಉದ್ದು ...		೧೩-೦-೦	೧೧-೦-೦
ಕಡಲೆ ...		೧೨-೮-೦	೧೦-೧೨-೦
ಎಳ್ಳು ಸೇ ೧೨೬ ಕ್ಕೆ ...		೧೬-೦-೦	೧೫-೦-೦
ಹುರುಳಿ ...		೮-೮-೦	೯-೮-೦
ಹರಳು ೧೨೬ ಸೇರಿಗೆ ...		೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ ...		೨-೪-೦	೧-೧೨-೦
ಮೆಣಸಿನಕಾಯಿ ...		೪-೧೨-೦	೩-೪-೦
,, ದುಯಂ ...		೪-೮-೦	೩-೦-೦
ಬೆಲ್ಲ ದೊಡ್ಡ ಅಚ್ಚು ...		೮-೮-೦	ಮ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ ...		೫-೦-೦	೪-೮-೦
ಹರಳೆಣ್ಣೆ ,, ...		೫-೮-೦	೪-೬-೦
ಕೊತ್ತುಂಬರಿ ಪಲ್ಲಾ ೧ಕ್ಕೆ ...		೧೦-೮-೦	೧೦-೪-೦
ಉಪ್ಪು ,, ...		೬-೦-೦	೫-೧೨-೦
ಹುಣಸೇ ಹಣ್ಣು ...		೨-೦-೦	೧-೬-೦
,, ಹಳೇದು ...		೧-೧೨-೦	೧-೪-೦
ಕಪ್ಪು ಮಣ ೧ಕ್ಕೆ ...		೧೬-೮-೦	೧೩-೮-೦
ಸೀಮೆಯಣ್ಣೆ ಪೆಟ್ಟಿ ೧ಕ್ಕೆ ...		೫-೪-೦	೪-೮-೦
ತೆಂಗಿನಕಾಯಿ ೧೦೦ ಕ್ಕೆ ...		೫-೦-೦	೬-೪-೦
ಅಡಲೇಕಾಯಿ ಮಣ ೧ಕ್ಕೆ ...		೦-೧೨-೦	೦-೧೨-೦
ಆಂಟ್ವಾಳದ ಕಾಯಿ ಮಣ ೧ಕ್ಕೆ ...		೦-೧೨-೦	೦-೧೨-೦
ತುಪ್ಪ (ದೇಶ) ಕೆಂಪು ...		೧೫-೯-೦	೧೫-೫-೦
,, ,, ಹಸಿಮ ...		೧೬-೦-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ ...		೨೪-೮-೦	೨೪-೬-೦
ಚಿಪ್ಪು ಗಟ್ಟಿ ತೊಲ ೧೦೦ ಕ್ಕೆ ...		೬೭-೪-೦	೬೪-೮-೦

ಮೆ॥ ಭಾಭಾ ಸಾಹೇಬರವರ ಮೆಮೋರಿಯಲ್ ಫಂಡು.

ನಾಲ್ಕನೆಯ ಚಂದಾ ಪಟ್ಟಿ

ಸಿಕಾರಿಪುರದ ಎ ವಿ ಸ್ಕೂಲಿಗಾಗಿ ಹೆ ಮಾ. ಎಂ. ಶ್ರೀನಿವಾಸರಾವ್ ರೂ ೧೮-೪, ಮಾಲೂರು ಎ ವಿ ಸ್ಕೂಲ್ ವಿದ್ಯಾರ್ಥಿಗಳಿಗಾಗಿ ಜಿ. ವ್ಯಾಸಾಚಾರ್ ರೂ ೭-೧೫, ಚಿಕ್ಕೇರಿ ಹೆ ಮಾ. ರಾಮಕೃಷ್ಣಯ್ಯ ರೂ. ೬ ೧೪, ಗುಡಿಬಂಡೆ ಎ. ವಿ. ಸ್ಕೂಲ್ ಪರವಾಗಿ ಎ. ಕೇಶವಯ್ಯ, ಮುಳಬಾಗಲು ಹಿಂದೂಸ್ಥಾನಿ ಸ್ಕೂಲಿಗಾಗಿ ಮಹಮದ್ ಇಬ್ರಾಹಿಂ—ತಲಾ ರೂ. ೬, ಮಾಗಡಿ ಗರ್ಲ್ ಸ್ಕೂಲ್ ಹೆ. ಮಿ. ಸಂಜೀವಮ್ಮನವರು ರೂ. ೫; ಹೊನ್ನಾಳಿ ಎ. ವಿ. ಸ್ಕೂಲಿಗಾಗಿ ಹೆ ಮಾ. ಹನುಮಂತರಾವ್ ರೂ. ೪-೮; ಲಕ್ಕೂರ್ ವಿ ಇ. ಸ್ಕೂಲಿಗಾಗಿ ಹೆ ಮಾ ಎ ರಾಮಾಚಾರ್, ಕಳಸಿ ಹೆ ಮಾ. ನರಸಿಂಹಾಚಾರ್—ತಲಾ ರೂ ೪, ಮಾಲೂರು ಎ ವಿ ಸ್ಕೂಲ್ ಹೆ. ಮಾ. ಜಿ ವ್ಯಾಸಾಚಾರ್ ರೂ. ೩-೪, ಶಿವಮೊಗ್ಗ ತಾ ಅರಕೆರೆ ಹೆ. ಮತ್ತು ಅ ಮಾ ಅನಂತಾಚಾರ್ ಮತ್ತು ಕೆ. ವೆಂಕಟಗಿರಿರಾವ್ ರೂ. ೩, ಬಸರಾಳ್ ವಿ. ಇ. ಸ್ಕೂ ಮಾ. ವೆಂಕಟಸುಬ್ರಹ್ಮಣ್ಯಯ್ಯ ರೂ. ೩, ಶ್ರೀನಿವಾಸಪುರ ಹಿ. ಸ್ಕೂ ಮಾ ಗಳಿಗಾಗಿ ಸೈಯದ್ ಮೊಹದೀನ್, ಕೋಲಾರ ಕಟಾರಿ ಪಾಳ್ಯ ಬ್ರಾ. ಸ್ಕೂ. ಹೆ. ಮಾ. ಭೋಜರಾವ್—ತಲಾ ರೂ ೨-೮, ಗುಡಿಬಂಡೆ ಗರಲ್ ಸ್ಕೂಲ್ ಪರವಾಗಿ ಎ. ಕೇಶವಯ್ಯ, ಹುಣಸೂರು ತಾ ಮಾಕೋಡು ವಿ ಇ. ಹಿ ಸ್ಕೂಲ್ ಸುಲ್ತಾನ್ ಮಹಮದ್ ಖಾನ್, ಹೆಗ್ಗಡದೇವನಕೋಟೆ ಅಗಸೂರು ವೆಂಕಟರಾಮಪ್ಪ, ತೀರ್ಥಹಳ್ಳಿ ಕುಡೂರು ಕಟ್ಟೆ ಹೆ ಮಾ ಎಂ. ವೆಂಕಟರಾಮಾಜೋಯಿಸ್, ಮಂಡ್ಯ ತಾ. ಕಾಗೋಡು ಅಪ್ರಮೇಯಶಾಸ್ತ್ರಿ, ಕೋಲಾರ್ ತಾ. ಮಾದನಹಳ್ಳಿ ನಂಜುಂಡಶಾಸ್ತ್ರಿ, ಹುಣಸೂರು ಹಿ ಸ್ಕೂ ಹೆ ಮಿ ಜಮಾಲಾ ಬೀ, ಪಾವಗಡ ತಾ ಹೊಸಕೋಟೆ ಮಾ. ಟಿ ಶೀನಯ್ಯ -ತಲಾ ರೂ ೨, ಹೊನ್ನಾಳಿ ತಾ ಅರಭಘಟ್ಟ ಕ ಮಾದ್ರಯ್ಯ, ಚಿಂತಾಮಣಿ ತಾ ಮುರಗಮಲ್ಲ ವೆಂಕಟಾಚಲೈಯ್ಯ, ಶ್ರೀನಿವಾಸಪುರದ ಗರಲ್ ಸ್ಕೂಲ್ ಮಾಸ್ಟರುಗಳಿಗಾಗಿ ಹೆ ಮಾ ಎಸ್ ರಾಮಚಂದ್ರಶಾಸ್ತ್ರಿ, ಗುಬ್ಬಿ ತಾ. ದುಗುಡಿ ವಿ. ಇ ಸ್ಕೂ ಮಾ ಕೆ ನರಸರಾಜು—ತಲಾ ರೂ ೧-೮, ಗುಡಿಬಂಡೆ ಸಂಸ್ಕೃತ ಪಾಠಶಾಲೆ. ಡಿಟೋ ಹಿಂದಿ ಸ್ಕೂಲ್, ಟಿ. ನರಸೀಪುರದ ಎ ವಿ ಸ್ಕೂಲು ಹೆ ಮಾ ರಾಮೈಯಂಗಾರ್, ಡಿಟೋ ಎಂ ಎಂ ವೆಂಕಟನರಸೈಯ ಮುಂತಾದವರು. ಗುಬ್ಬಿ ಹಿ ಸ್ಕೂಲು ಹೆ. ಮಾ ಅಬ್ದುಲ್ ರಜಾಕ್ ಷರೀಫ್. ಡಿಟೋ ಹಿಂ ಗ ಸ್ಕೂಲ್ ದಸ್ತಗಿರಿ ಬೀ, ಡಿಟೋ ಹಿ. ಸ್ಕೂಲ್ ಅ ಮಾ. ಮಹಮದ್ ಹುಸೇನ್, ಗೌರಿಬಿದನೂರು ತಾ, ಕದಿರೇನಹಳ್ಳಿ ಎಸ್ ಕೆ. ವೆಂಕಟರಾವ್. ತೀರ್ಥಹಳ್ಳಿ ತಾ ಕುಡೂರು ಕಟ್ಟೆ ಅ ಮಾ ರಾಮಪ್ಪ, ಬೆಂಗಳೂರು ತಾ ಆಡುಗೋಡಿ ರಾಮೈಯಂಗಾರ್, ಚನ್ನಗಿರಿ ತಾ ಸುಣ್ಣಗೆರೆ ಈಶ್ವರಪ್ಪ. ಶಿಡ್ಲಘಟ್ಟ ತಾ ಜಂಗಂಕೋಟೆ ವೆಂಕಟಕೃಷ್ಣಯ್ಯ, ಮುಳಬಾಗಲ್ ತಾ. ಯಲಗೊಂಡಹಳ್ಳಿ ಅ ಮಾ ವೆಂಕಟಾಚಲೈಯಂಗಾರ್, ಮಾಗಡಿ ತಾ ಹುಲಿಕಲ್ ಅಶ್ವತ್ಥಶಾಸ್ತ್ರಿ, ಸೀತಾರಾಮಯ್ಯ, ರಂಗಪ್ಪ, ಚನ್ನಗಿರಿ ತಾ ಅಜ್ಜಿಹಳ್ಳಿ ಶಂಕರೈಯ, ಶ್ರೀನಿವಾಸಪುರದ ತಾ ಚಲಡಿಗಾನಹಳ್ಳಿ ವಿ ಕೃಷ್ಣಪ್ಪ, ಶಾನುಭೋಗ ಗುರಪ್ಪ, ಟಿ ನರಸೀಪುರದ ತಾ ಮೂಗೂರು ನಾಗಪ್ಪಯ್ಯ, ಚಂದ್ರಪ್ರಭಾಪಂಡಿತ, ಮಾಲೂರ್ ಎ ವಿ ಸ್ಕೂಲ್ ಎ ಸುಬ್ಬರಾವ್, ಎಂ. ಕೆರೋಜಿ ರಾವ್, ಎಂ ಶ್ರೀನಿವಾಸೈಯಂಗಾರ್, ಎಂ. ಗೋಪಾಲರಾವ್, ಕೆ ವೆಂಕಟರಾವ್, ಬಿ ಜಿ ನಾಗಭೂಷಣರಾವ್, ಎಂ ವ್ಯಾಸಾಚಾರ್, ಬೇಲೂರು ಎ ವಿ ಸ್ಕೂಲ್ ಹೆ ಮಾ ಎಂ ನಾರಾಯಣರಾವ್, ಅ ಮಾ ಬಿ ಸುಬ್ಬಣ್ಣಾಚಾರ್ ತಲಾ ರೂ ೧ ಒಂದು ರೂಪಾಯಿಗಿಂತ ಕಡಮೆ ಬಂದಿರುವ ಚಂದಾ ರೂ ೨-೨

ಸಿ. ಕೃಷ್ಣರಾವ್, ಸೆಕ್ರೆಟರಿ,
ಭಾಭಾ ಮೆಮೋರಿಯಲ್ ಕಮಿಟಿ

ತಾಲ್ಲೂಕು ವರ್ತಮಾನಗಳು

ಕೊಪ್ಪ —ಈಗ ಸುಮಾರು ಒಂದೂವರೆ ತಿಂಗಳಿಂದ ಹಗಲು ೧೦ ಘಂಟೆಯ ನೋಡಲುಗೊಂಡು ೪ ಘಂಟೆಯ ತನಕ ಬಿಸಿಲಿನ ತಾಪವೂ ರಾತ್ರಿಕಾಲದಲ್ಲಿ ಮೂರು ಕಂಬಳಿಗಳನ್ನು ಹೊದ್ದುಕೊಂಡರೂ ಸಾಲದೆಂಬುವಹಾಗೆ ಕಾಣಿಸಿಕೊಳ್ಳುವ ಛಳಿಯೂ ಜನಗಳಿಗೆ ಬಹಳ ಕೆಡುಕನ್ನು ಉಂಟುಮಾಡುತ್ತದೆ — ಗ್ರಾಮಾಂತರಗಳಲ್ಲಿ ಛಳಿ ಜ್ವರದ ಅವಾಂತರವೂ ಜಾನುವಾರುಗಳಿಗೆ ಗಂಟಲು ಜಾಡ್ಯವೂ ಉಂಟಾಗಿ ನಷ್ಟಕ್ಕೆ ಗುರಿಯಾಗಿರುವ ರೈತರು ಮುಂದಿನ ವ್ಯವಸಾಯಕ್ಕಾಗಿ. ಕೋಣ, ಎತ್ತುಗಳನ್ನು ಕೊಳ್ಳುವದಕ್ಕೆ ಇಲ್ಲಿಂದ ನಾಲ್ಕಾರು ದಿವಸ ದಾರಿ ಇರುವ ಆಲೂರು ಸಂತೆಗೆ ಹೋಗುತ್ತಿರುವರು — ದಿನಸಿಗಳ ಧಾರಣೆಯು ತಕ್ಕಮಟ್ಟಿಗೆ ಚೆನ್ನಾಗಿದೆ ರೂಪಾಯಿಗೆ ೧೪—೧೫ ಸೇರು ಅಕ್ಕಿಯೂ, ೬॥ ಸೇರು ಗೋಧಿಯೂ ವ್ಯಾಪಾರಸ್ಥರು ಮಾರಾಟ ಮಾಡುವದನ್ನು ನೋಡಿದರೆ ಸುಭಿಕ್ಷಕ್ಕೆ ಈಗ ಕಾಲ ತಿರುಗಿತೆಂದು ಸಂತೋಷ ಪಡುತ್ತಾರೆ.—ಇಲ್ಲಿಯ ಶಿವಮೊಗ್ಗ ಮಿಷನ್ ಸ್ಕೂಲು ಒಳ್ಳೇ ಅಭಿವೃದ್ಧಿ ಸ್ಥಿತಿಯಲ್ಲಿರುತ್ತದೆ ಸುಮಾರು ೪೦ರ ಮಟ್ಟಿಗೆ ಬಾಲಕರು ಈ ಸ್ಕೂಲಿನಲ್ಲಿ ವಿದ್ಯವನ್ನು ಓದುವದಲ್ಲದೆ ಇನ್ನೂ ಹತ್ತಾರು ಮಂದಿ ಬಾಲಕರು ಸ್ಕೂಲಿಗೆ ಸೇರುವಂತೆ ಏರ್ಪಾಡು ಮಾಡುತ್ತಿರುವರು ಇಲ್ಲಿಯ ಹೆಡ್ ಮಾಸ್ಟರ್ ಮೆ॥ ಕೆ ಅನಂತರಾಮರು ಮುತುವರ್ಜಿಯಿಂದಲೂ ಮೆಹನತ್ತಿನಿಂದಲೂ ಕೆಲಸ ಮಾಡುತ್ತಾರೆಂದು ತಿಳಿಸಲು ಸಂತೋಷ ಪಡುತ್ತೇನೆ ಸ್ಕೂಲ್ ರಜಾ ದಿವಸಗಳಲ್ಲಿ ಉಪಾಧ್ಯಾಯರು ಆಸಕ್ತಿಯಿಂದ ಮನೆಯಲ್ಲಿ ಕುಳಿತು ಕೊಳ್ಳದೆ ಗ್ರಾಮಾಂತರಗಳ ಮೇಲೆ ಹೋಗಿ ಬಾಲಕರು ಇರುವ ಮನೆಗಳನ್ನು ವಿಚಾರಿಸಿ ವಿದ್ಯೆಯಿಂದ ಉಂಟಾಗುವ ಪ್ರಯೋಜನವನ್ನು ಬಾಲಕರ ತಂದೆ ತಾಯಿಗಳಿಗೆ ಹೇಳಿ, ಸಾಹಸ ಪಡುತ್ತಿರುವ ಗ್ರಾಮದ ಪಟೇಲ್ ಮೆ॥ ಗಣಪ ಅಣ್ಣಯ್ಯ ನಾಯ್ಕರವರು ಸಾಹುಕಾರ್ ಅ. ರಾಮೈಯ ನಾಯ್ಕರವರು ಎಚ್ ವೀರಪ್ಪ ನಾಯ್ಕರವರು, ಎಚ್ ಸುಬ್ಬಯ್ಯ ನಾಯ್ಕರವರು ಇವರು ಉಪಾಧ್ಯಾಯರ ಮೇಲೆಯೂ ಇರಶಕ್ಕೆ ಪ್ರೀತಿಯನ್ನು ತೋರ್ಪಡಿಸುತ್ತಿರುವರು. ಇವರು ಇನ್ನೂ ಹೆಚ್ಚಾದ ಸಾಹಸವನ್ನು ಪಟ್ಟು ಸ್ಕೂಲನ್ನು ಅಭಿವೃದ್ಧಿ ಸ್ಥಿತಿಗೆ ತಂದು ಬಾಲಕರನ್ನು ಒದಗಿಸಿದರೆ ಇನ್ಸ್ಪೆಕ್ಟರು ಶೀಘ್ರದಲ್ಲಿಯೇ ಇನ್ನೊಬ್ಬ ಉಪಾಧ್ಯಾಯನನ್ನು ಮಂಜೂರು ಮಾಡುವರಾಗಿ ನಂಬಿರುತ್ತೇನೆ.

ಶಿಕಾರಿಪುರ.—ಇಲ್ಲಿ ಸುಮಾರು ಒಂದೂವರೆ ವರುಷದ ಲಾಗಾಯ್ತು ಆಸ್ಪತ್ರೆ ಅಸಿಸ್ಟೆಂಟರಾಗಿದ್ದ ಮೆ॥ ಕೃಷ್ಣಶಿಂಗರವರು ವಿರಾಮವಿಲ್ಲದೆ ಕೆಲಸಮಾಡಿ, ಬಡವರು ಬಲ್ಲಿದರು ಎಂಬ ತಾರತಮ್ಯವಿಡದೆ ರೋಗಿಗಳನ್ನು ಆತ್ಮಾದರದಿಂದ ಚಿಕಿತ್ಸೆಮಾಡಿ, ಸರ್ವರಲ್ಲಿಯೂ ತುಂಬಾ ವಿಶ್ವಾಸ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಇವರಿಗೆ ಕಳೆದ ಡಿಸೆಂಬರು ತಿಂಗಳಲ್ಲಿಯೇ ವರ್ಗವಾಯಿತೆಂಬುವದನ್ನು ಕೇಳಿ ಜನಗಳಿಗೆ ಬಹಳ ವ್ಯಸನವಾಯ್ತು ಆದಾಗ್ಯೂ ಅವರು ಅಲ್ಲಿಯೇ ಇದ್ದದರಿಂದ ಅಷ್ಟು ವ್ಯಥೆಗೆ ಕಾರಣವಾಗಲಿಲ್ಲ. ಇವರಿಗೆ ವರ್ಗವಾಗುವದು ನಿಶ್ಚಯವೆಂಬುವದನ್ನು ತಿಳಿದು ಬಹಳ ವ್ಯಸನಾಕ್ರಾಂತರಾದರು ಆದರೆ ಇವರಿಂದ ನಾವು ಮಹದುಪಕಾರವನ್ನು ಹೊಂದಿರುತ್ತೇವೆ. ಇವರಲ್ಲಿ ನಮಗಿರತಕ್ಕ ಆದರಪೂರ್ವಕವಾದ ಅಭಿಮಾನ ಪ್ರದರ್ಶನಮಾಡಬೇಕೆಂದು ದೊಡ್ಡ ಮನುಷ್ಯರು, ಬಡವರು ಸಹಾ ಏಕೀಭವಿಸಿ ಸುಮಾರು ಒಂದು ನೂರು ರೂಪಾಯಿನ ವರೆಗೂ ಚಂದಾ ಕೂಡಿಸಿಕೊಂಡು, ಡಾಕ್ಟರವರು ಸರ್ಕಾರಿ ನೌಕರರಾದ್ದರಿಂದ ಗವರ್ನ್‌ಮೆಂಟಿನ ಅನುಮತಿಯನ್ನು ಪಡೆದುಕೊಂಡು ಇದೇ ಮಾಹೆ ತಾ. 16 ನೇ ದಿವಸ ಹಳೆ ಕಚೇರಿಯಲ್ಲಿ ತಾಲ್ಲೋಕು ಅಮಲ್ದಾರರು, ಶಿರಸ್ತೇದಾರ್ರು, ಪೊಲೀಸ್ ಇನ್ಸ್‌ಪೆಕ್ಟರವರು, ಎ ವಿ. ಸ್ಕೂಲ್ ಹೆಡ್ ಮಾಸ್ಟರವರು ಮತ್ತು ಬೇರೆ ಇಲಾಖೆಯ ಎಲ್ಲಾ ನೌಕರರು ಮ್ಯುನಿಸಿಪಲ್ ಮೆಂಬರು, ವರ್ತಕರು ಮೊದಲಾದ ಊರಿನ ಜನಗಳು ಸಭೆ ಸೇರಿದ್ದರು ಅಲ್ಲಿ ರಿಟೈರ್ಡ್ ಅಮಲ್ದಾರ್ ಮೆ॥ ಕೃಷ್ಣಪ್ಪನವರು ಅಗ್ರಾಸನವನ್ನು ವಹಿಸಿದ್ದರು ಇವರು ಮೊದಲು ಡಾಕ್ಟರ್ ಕೃಷ್ಣಶಿಂಗ್‌ರವರು ಈ ಊರಿನಲ್ಲಿದ್ದ ಅಲ್ಪಕಾಲದಲ್ಲಿಯೇ ಇಷ್ಟು ಅಪಾರವಾದ ಅಭಿಮಾನ ಗೌರವಗಳನ್ನು ಸಂಪಾದನೆಮಾಡಿಕೊಂಡ ವಿಷಯವನ್ನು ಕುರಿತೂ ಮತ್ತು ಇವರಲ್ಲಿರುವ ಅಭಿಮಾನ ವಾತ್ಸಲ್ಯವನ್ನು ತೋರಿಸುವದಕ್ಕೋಸ್ಕರವಾದ ಚಂದಾವಿವರಣೆಯನ್ನು ಕುರಿತೂ ಸರಸವಾದ ಭಾಷಣವನ್ನು ಮಾಡಿದರು. ಅನಂತರ ಪೊಲೀಸ್ ಇನ್ಸ್‌ಪೆಕ್ಟರವರು ಗ್ರಾಮದವರು ಕೊಡುವ ಬಹುಮಾನದ ಉದ್ದೇಶ ಮತ್ತು ಕಾರಣಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಸಂಭಾಷಣೆಯನ್ನು ಮಾಡಿದರು ಆ ಮೇಲೆ ಅಗ್ರಾಸನಾಧೀಶ್ವರರು ಚೊಕ್ಕಬೆಳ್ಳಿಯಿಂದ ಮಾಡಿರುವ ವಿಚಿತ್ರವಾದ ಕಪ್ ಅಂಡ್ ಸಾಸರ್ ಸಲ್ವಾರ್ ಇವುಗಳನ್ನು ಗ್ರಾಮದವರ ಪರವಾಗಿ ಡಾಕ್ಟರವರಿಗೆ ಒಪ್ಪಿಸಿದರು ಮತ್ತು ನಾವುಗಳು ಹಗಲಿನಲ್ಲಿ ಆನಂದದೊಡನೆ ಸಂಚರಿಸುತ್ತಿರುವ ಚಕ್ರವಾಕ ಪಕ್ಷಿಗಳು ರಾತ್ರಿಯಲ್ಲಿ ಸೂರ್ಯನನ್ನು ಕಳೆದು ಕೊಂಡು ಕಳವಳಿಸುತ್ತಿರುವಂತೆ ಡಾಕ್ಟರ್ ಕೃಷ್ಣಶಿಂಗರವರನ್ನು ಕಳೆದುಕೊಂಡು ಬಳಲುತ್ತಿರುವೆವು ಎಂಬ ವಚನವು ಹೊರಡುವದರೊಳಗಾಗಿಯೇ ಈ ಮೊದಲೇನೆ, ನಮ್ಮ ಗ್ರಾಮಕ್ಕೆ ದಯಮಾಡಿಸಿ ಛಾರ್ಜನ್ನು ವಹಿಸಿಕೊಂಡಿದ್ದ ಹೊಸ ಡಾಕ್ಟರ್ ಅಬ್ದುಲ್ ಅಜೀಜ್ ರವರನ್ನು ಅಂಗೀಕರಿಸಿ ಕೊಂಡೆವು ಮತ್ತು ಇವರ ಒಡನಾಟದಿಂದ ನಮ್ಮಗಳ ಕಷ್ಟಗಳೆಲ್ಲಾ ಹೋಗಿ, ನಾವು ಸುಖಿಗಳಾಗುವೆವು ಎಂದು ನಂಬಿರುತ್ತೇವೆ ಎಂಬುವದೇ ಮೊದಲಾದ ವಿಷಯವನ್ನು ಸೂಚಿಸಿ ಅತಿ ಚತುರತೆಯಿಂದಲೂ ಗಾಂಭೀರ್ಯದಿಂದಲೂ ಸಂಭಾಷಣೆ ಮಾಡಿದರು ಅನಂತರ ಕಂಟ್ರಾಕ್ಟ್‌ದಾರ್ ವೆಂಕಟಾಚಾರ್ರು ಇಂಗ್ಲೀಷಿನಲ್ಲಿ ಸಂಭಾಷಣೆ ಮಾಡಿದ ಬಳಿಕ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸಭೆಯು ಬರಖಾಸ್ತು ಆಯಿತು ಪುನಹ ಅದೇ ಸಭಿಕರ ದೊಡ್ಡ ಗುಂಪೆಲ್ಲಾ ಸೇರಿ ಬಾಜಾ ಬಜಂತ್ರಿ ಬಾಣ ಬಿರಸು ಮೊದಲಾದ ಮಹೋತ್ಸಾಹ ಮೆರವಣಿಗೆಯೊಡನೆ ಡಾಕ್ಟರ್ ಕೃಷ್ಣಶಿಂಗರವರನ್ನು ಸಾಗ ಕಳುಹಿಸಿದರು

ತೀರ್ಥಹಳ್ಳಿ — ಇದೇ ತಾಲ್ಲೂಕಿಗೆ ಸೇರಿದ ದಿಂಡಿಗನಹಳ್ಳಿ ಎಂಬ ಗ್ರಾಮದಲ್ಲಿ ಒಂದು ಕುಟುಂಬದವರು ಊಟ ಉಪಚಾರಗಳನ್ನು ತೀರಿಸಿಕೊಂಡು ನಿದ್ರೆಮಾಡುತ್ತಿದ್ದ ವೇಳೆಯಲ್ಲಿ ಒಬ್ಬ ಕಳ್ಳನು ಮನೆಹೊಕ್ಕು ಸಾಮಾನು ಎತ್ತುವದಕ್ಕೆ ಬಂದಿದ್ದನೆಂತಲೂ. ಮನೆಯ ಯಜಮಾನನು ಎಚ್ಚೆತ್ತು ಕೈಯಲ್ಲಿ ಒಂದು ಮಚ್ಚನ್ನು ತೆಗೆದುಕೊಂಡು ಗದ್ದಲ ಮಾಡುತ್ತಾ ಹೊರಟ ಕೂಡಲೇ ಕಳುವು ಮಾಡುವದಕ್ಕೆ ಬಂದಿದ್ದವನು ಸಿಕ್ಕಿಬೀಳಲು, ಕೋಪದಿಂದ ಎರಡು ಮೊಣಕಾಲುಗಳನ್ನು ಕಡಿದನೆಂತಲೂ, ಮಾರಣೇ ದಿನ ಅಂದರೆ ಮಾರ್ಚಿ ತಾ ೧೨ ರಲ್ಲಿ ಆರಗದ ರಥೋತ್ಸವಕ್ಕಾಗಿ ಹೋಗಿದ್ದ ಅಮಲ್ದಾರರ ವಿಚಾರಣೆಗೆ ಫಿರ್ಯಾದಿಯು ಕಳ್ಳನು, ಅಪರಾಧಿಯನ್ನು ಹಾಜರು ಮಾಡಿ ವಿಚಾರಣೆ ನಡೆಯುತ್ತಿದೆ —ಮಾರ್ಚಿ ತಾ ೧೨ ಲಾಗಾಯಿತು ಎರಡು ಮೂರು ದಿವಸ ಆರಗ ಎಂಬ ಗ್ರಾಮದಲ್ಲಿ ಜಾತ್ರೆಯು ನಡೆಯುವದು ವಾಡಿಕೆ ಇರುತ್ತದೆ ಈ ವರುಷ ದೊಡ್ಡ ತೇರು ನಡೆಯುವದಕ್ಕೆ ತೇರಿನ ಚಕ್ರಗಳು ಕೆಟ್ಟುಹೋಗಿರುವದರಿಂದ ಸಣ್ಣ ಒಂದು ಅಡಿ ಉದ್ದದ ಗಾಲಿಗಳ ಒಂದು ತೇರನ್ನು ಮಾಡಿ ಕೆಲವು ಹುಡುಗರೂ ಕೆಲವು ದೊಡ್ಡವರೂ ಸೇರಿ ರಥವನ್ನು ರಸ್ತೆಯಲ್ಲಿ ಎಳೆದುಕೊಂಡು, ಅಮಲ್ದಾರರು ಮುಂದೆ ಜನರೊಂದಿಗೆ ಮಾತನಾಡುತ್ತಾ ಹೋಗುತ್ತಿರುವಾಗ ತೇರಿನ ಒಂದು ಗಾಲಿಯು ಮುಂದಕ್ಕೆ ಉರುಳದಂತೆ ಕೆಟ್ಟುಹೋದಕಾರಣ ಕೂಡಲೆ ರಿಪೇರಿ ಮಾಡತಕ್ಕ ಒಬ್ಬ ಮರಕೆಲಸದವನನ್ನು ಕರೆದು ತಂದು ಸರಿಮಾಡಿಸಿ ಅರ್ಧಘಂಟೆಯ ಮೇಲೆ ಪುನಃ ತೇರು ಎಳೆಯಲಾಯಿತು —ಆರಗದಲ್ಲಿ ಬಹುಕಾಲದಿಂದ ಶಿಥಿಲವಾಗಿದ್ದ ಒಂದು ಪ್ರತಿಮೆಯನ್ನು ಪುನಃ ಸಂತರ್ಪಣೆ ಮುಂತಾದ ಆಚಾರಗಳಿಂದ ಸರಿಮಾಡಿಸಬೇಕಾಗಿ ಬಂತು ಆದ್ದರಿಂದ ಒಂದು ದೊಡ್ಡ ಚಪ್ಪರವು ಕೂಡಲೆ ಕಟ್ಟಬೇಕಾಯಿತು ಜಾತ್ರೆಗಾಗಿ ಬಂದಿದ್ದ ಮತ್ತು ಗೌಡರ ಕಡೆಯ ಆಳುಗಳನ್ನು ಹಿಡಿದು ಚಪ್ಪರದ ಕೆಲಸವನ್ನು ಬಹು ತರಾತುರಿಯಿಂದ ಮಾಡಿದರೂ ಕೆಲಸಗಾರರು ಸಾಲದೆಹೋಯಿತು. ಕಡೆಗೆ ಹಳ್ಳಿಹಳ್ಳಿಗಳಿಂದ ನೋಟಕ್ಕಾಗಿ ಬಂದಿದ್ದ ಹೊಲೆಯರನ್ನು ಬಲವಂತಮಾಡಿ ಹಿಡಿಯಬೇಕಾಯಿತು ಕೆಲವು ಮಂದಿ ಗಾಡಿಯಲ್ಲಿ ತಪ್ಪಿಸಿಕೊಂಡು ಹೋಗಿಬಿಟ್ಟರು ಇಂಥಾ ಚಪ್ಪರದ ಕೆಲಸ ಬಹು ಅವಸರದೊಡನೆ ಆರಗದ ಜಾತ್ರೆಯಲ್ಲಿ ಸರ್ಕಾರದವರಿಂದ ನಡಿಸಲ್ಪಡುವದೆಂಬ ಸುದ್ದಿಯನ್ನು ಕೇಳಿದ ಅನೇಕ ಮಂದಿ ಈ ಸಲ ಜಾತ್ರೆಗೆ ಹೋಗದೆ ನಿಂತುಬಿಟ್ಟರು ಅಂಗಡಿ ವರ್ತಕರಿಗೆ ಈ ಗದ್ದಲದ ದೆಸೆಯಿಂದ ತಾವು ಬಾಡಿಗೆ ಮಾಡಿ ತೆಗೆದುಕೊಂಡು ಹೋದ ಸಾಮಾನಿನ ಬಾಡಿಗೆ ಕೊಡುವದಕ್ಕೇ ಕಷ್ಟವಾಯಿತಲ್ಲಾ ಎಂಬ ಯೋಚನೆಯಿಂದ ತುಂಬಿದವರಾದರು ಮತ್ತು ತೀರ್ಥಹಳ್ಳಿಯಲ್ಲಿ ಒಂದು ಟೌನ್ ಹಾಲನ್ನು ಮುಂದಕ್ಕೆ ಕಟ್ಟಬೇಕಾಗುತ್ತೆ ಹಾಗಾದರೆ ಊರವರು ಎಷ್ಟೆಷ್ಟು ಹಣ ಕೊಡತಕ್ಕವರೆಂಬ ಪಟ್ಟಿಯನ್ನು ಮಾಡುವಂತೆ ಆದಕ್ಕಾಗಿ ಒಂದು ಸಭೆಯು ಕೂಡುವಂತೆ ಮಾಡಿದ್ದರಿಂದಲೂ ಇನ್ನೂ ಅನೇಕ ಗಡಿಬಿಡಿಗೆ ಭಯವೂ ಸಂಶಯವೂ ಉಂಟಾಯಿತು ಇವುಗಳನ್ನೆಲ್ಲಾ ನೋಡಿದರೆ ಜಾತ್ರೆಗೆ ಬರುವದಕ್ಕಿಂತ ಮನೆಯಲ್ಲಿದ್ದು ಯಾವದಾದರೂ ಕೆಲಸ ಮಾಡುವದು ಒಂದು ದೊಡ್ಡ ಲಾಭಾಯವಾಗಿರುತ್ತದೆ ಎಂದು ಜನರು ಮಾತನಾಡಿಕೊಳ್ಳುತ್ತಾ ಹೋದರು —ತಾ ೧೫ನೇ ಮಂಗಳವಾರ ಮಧ್ಯಾಹ್ನ ೧ ಘಂಟೆಯ ಒಳ್ಳೇ ಬಿಸಿಲು ಹೊತ್ತಿನಲ್ಲಿ ತೀರ್ಥಹಳ್ಳಿ ನಡು ಚೌಕದಲ್ಲಿದ್ದ ಹೋಟೇಲಿನಲ್ಲಿ ಬೆಂಕಿಬಿದ್ದು ಕೂಡಲೆ ಬಹು ಭಯಂಕರವಾಗಿ ವ್ಯಾಪಿಸಿ ನಾಲ್ಕು ದೊಡ್ಡ ಅಂಗಡಿಗಳನ್ನು ಸಂಪೂರ್ಣವಾಗಿ ಧ್ವಂಸ ಮಾಡಿತು ಆ ಕಾಲದಲ್ಲಿ ಅಮಲ್ದಾರರೂ ಊರಿನ ಜನರೂ ಸೇರಿ ಬಹು ಮೆಹನತ್ತಿನಿಂದ ಬೆಂಕಿಹೋದ ಮನೆಗಳ ಹೊರತು ಬಾಕಿ ಸಮೀಪದ ಯಾವ ಮನೆಗಳಿಗಾದರೂ ಬೆಂಕಿಯ ಕಿಡಿಗಳು ಬೀಳದಂತೆ ತಡೆದುಬಿಟ್ಟರು ಸಾವಿರಾರು ರೂಪಾಯಿಗಳ ಮಾಲುಗಳು ನಷ್ಟವಾಗಿರುತ್ತವೆ. ಮನೆ ಕಳೆದುಕೊಂಡವರಿಗೆ ಗಳ ಬೊಂಬು ಮುಂತಾದ ಸಾಮಾನುಗಳನ್ನು ಸಹಾಯ ಮಾಡುವಂತೆ ಸರ್ಕಾರದವರು ಅಪ್ಪಣೆ ಕೊಟ್ಟರು ನೀರಿನ ಸಹಾಯವು ಇನ್ನೂ ಅಧಿಕವಾಗಿದ್ದರೆ ಇಷ್ಟು ನಷ್ಟವಾಗುತ್ತಿರಲಿಲ್ಲ

WANTED

17

An English-Speaking Kanarese Munshi, to teach English

Apply stating terms to—

E. H. YOUNG,
Balehonnur

ಅಡವು ಇಟ್ಟವರಿಗೆ ನೋಟೀಸು

10 1

ಕೋಲಾರದ ಭಂಗಾರದ ಗಣಿ ರಾಬರ್ಟ್‌ಸನ್ ಪೇಟೆಯಲ್ಲಿರುವ ಮಾರವಾಡಿ ಸಾಹುಕಾರ್ ದೀಪ್‌ಚಂದ್ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ನಾನು ಬೆಂಗಳೂರು ಸಿಟಿ ಕಲಾಸಿಪಾಳ್ಯದ ಚೌಕದ ನೇ ನಂಬರು ಅಂಗಡಿಯಲ್ಲಿ ಈಗ್ಗೆ ಸುಮಾರು ಒಂದು ವರುಷದ ಲಾಗಾಯ್ತು ದೀಪ್‌ಚಂದ್ ಕೇವಲ್‌ಚಂದ್ ಎಂಬ ಹೆಸರಿನಿಂದ ನನ್ನ ಪಾಲುದಾರರಾಗಿದ್ದ ಹರ್ಕಸರಾಜು ಎಂಬುವರ ಮೂಲಕ ಮಾರವಾಡಿ ಲೇವಾದೇವಿ ಅಂಗಡಿ ಇಟ್ಟು ವ್ಯಾಪಾರ ನಡಿಸುತ್ತಾ ಇದ್ದು ಈಚೆಗೆ ಸದರಿ ಹರ್ಕಸರಾಜು ಕಾಯಿಲೆ ಸಬಬು ದೇಶಕ್ಕೆ ಹೊರಟುಹೋದದ್ದರಿಂದ ಅದೇ ಸ್ಥಳದಲ್ಲಿ ವ್ಯಾಪಾರ ನಡಿಸಲು ಸಾಧ್ಯವಿಲ್ಲದೆ ಅಂಗಡಿ ವ್ಯಾಪಾರ ಮೋಕೂಫ್ ಮಾಡಿ ಜನಗಳಿಂದ ಅಡವು ಇಡಲ್ಪಟ್ಟ ನಗಗಳು, ಪಾತ್ರೆಗಳು, ಬಟ್ಟೆಗಳು ಮತ್ತು ಇವಕ್ಕೆ ಸಂಬಂಧಪಟ್ಟ ಪತ್ರಗಳು ಸಹಾ ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ ಗಣೇಶಪೇಟೆ ಬಜಾರಿನಲ್ಲಿ ಇರುವ ದೀಪ್‌ಚಂದ್ ಕೇವಲ್‌ಚಂದ್ ಅಂಗಡಿಯಲ್ಲಿ ಇಟ್ಟು ಇದನ್ನು ಇತ್ಯರ್ಥಮಾಡಿಕೊಳ್ಳುವದಕ್ಕೆ ಒಬ್ಬ ಗುಮಾಸ್ತೆಯನ್ನು ನೌಕರಿಮಾಡಿರುತ್ತೆ ಆದದ್ದರಿಂದ ಈ ತಾರೀಖು ಲಾಗಾಯ್ತು ಎರಡು ತಿಂಗಳ ಒಳಗಾಗಿ ಅಡವು ಇಟ್ಟು ಇರುವಂಥಾವರೆಲ್ಲರೂ ಸದರಿ ಗಣೇಶಪೇಟೆಯಲ್ಲಿ ದೀಪ್‌ಚಂದ್ ಕೇವಲ್‌ಚಂದ್ ಅಂಗಡಿಗೆ ಬಂದು ಅವರವರು ಅಡವು ಇಟ್ಟು ಇರುವ ಮಾಲುಗಳನ್ನು ಬಿಡಿಸಿಕೊಳ್ಳಬೇಕು ತಪ್ಪಿದರೆ ನಾಯಿದೆ ಕಳೆದನಂತರ ಅಡವು ಇಟ್ಟಿರುವ ಮಾಲುಗಳು ವಜಾಗಲ್ಪಡುತ್ತವೆ ಇಯುವರ ತಾ ೧೬ ನೇ ಮಾರ್ಚಿ ೧೯೦೦

ಕೋಲಾರದ ಭಂಗಾರದ ಗಣಿ | ದೀಪ್‌ಚಂದ್ ಎಂದು
ರಾಬರ್ಟ್‌ಸನ್ ಪೇಟೆ | ಮಾರವಾಡಿಯಲ್ಲಿ ಸ್ವಹಸ್ತ

ಇವನ್ನು ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ"

—— 38-1

ಸಮಸ್ತರಿಗೂ ಅನುಕೂಲವಾದ,

ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ,

ಕ್ರಯವಿಚಾರ, (ಬೆಳ್ಳಿ, ಭಂಗಾರ, ರತ್ನಗಳ) ಪರಿಶೀಲನ

ಕಟುವಾಯು, ಜ್ವರ, ವಾತಪಿತ್ತ ವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ

ಲಾಭವನ್ನು ಸಂಪಾದಿಸುವಬಗ್ಗೆ ಕಾಗದ, ಸೀಸದಕಡ್ಡಿ, ಇಂಕಿ, ಪೆಂಸಿಲ್ ಮೊದಲಾದ ಅನೇಕ ವಿಷಯಗಳು

ತನುಮನೋಲ್ಲಾಸವನ್ನೀಯುವ ತೈಲ, ಲಿವಂಡರ್, ಸೋಪು, ಅತ್ತರ್, ಪನ್ನೀರು, ಶರಬತ್ ಗುಲ್‌ಕನ್, ಕುಸುಮಗಳ ವಿವೇಚನೆ

ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್, ವಾರ್ನೀಷ್ ಮುಂತಾದ ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ ಆಕಾಶವಿಮಾನ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ರೂ ೧-೪-೦ ವಿ ಪಿ ಮೂಲಕ ೧—೬—೦

(೧) ವಿಳಾಸ —ಮ್ಯಾನೇಜರ್, ಯಸ್ ಜಿ ಯನ್. ಪ್ರೆಸ್,
೧೩೮ ಅರಳೇಪೇಟೆ. ಬೆಂಗಳೂರು ಸಿಟಿ.

ಅಥವಾ

ಏಜಂಟರು – (೨) ದಿ ಉರ್ಸ್ ಮಾರ್ಟ್
ನಂ|| ೧ ಮಂಗಳೂರು, (ದಿ ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ವೃತ್ತಾಂತ ಪತ್ರಿಕೆ

ಸನ್ ೧೯೦೦ ನೇ ಇಸವಿ ಮಾರ್ಚಿ ತಾ ೨೮ ನೇ ಗುರುವಾರ

ಪಶುವೈದ್ಯದ ಇಲಾಖೆಯು.

ಮೈಸೂರು ಗವರ್ನಮೆಂಟಿನ ಪಶುವೈದ್ಯದ ಇಲಾಖೆಯ ಕಾರ್ಯಗಳ ವಿಷಯದಲ್ಲಿ ಇನ್ಸ್‌ಪೆಕ್ಟರ್ ಮೆ|| ಎನ್. ನರಸಿಂಹ ಐಯಂಗಾರ್ಯರು ಬರೆದಿರುವ ವಾರ್ಷಿಕ ರಿಪೋರ್ಟನ್ನು ಓದಿ ತುಂಬಾ ಸಂತೋಷಪಡುತ್ತೇವೆ. ರೈತಪ್ರಜೆಗಳ ಕಾಲ್ನಡೆಗಳನ್ನು ನೋಡಿಕೊಳ್ಳುವುದಕ್ಕೂ, ಅವಕ್ಕೆ ರೋಗಾದಿಗಳು ಪ್ರಾಪ್ತವಾಗದಂತೆ ಮೊದಲೇ ತಕ್ಕ ಏರ್ಪಾಡುಗಳನ್ನು ಸೂಚಿಸಿ ಮಾಡಿಸುವುದಕ್ಕೂ, ರೋಗಪ್ರಾಪ್ತವಾದಾಗ ಪರಿಹಾರಾರ್ಥವಾದ ಚಿಕಿತ್ಸೆಗಳನ್ನು ಹೇಳಿಕೊಡುವುದಕ್ಕೂ ಗವರ್ನಮೆಂಟಿನವರು ಈ ಇಲಾಖೆಯನ್ನು ಪ್ರಾರಂಭಿಸಿ, ತರಪೇತಾಗಿ ಯೋಗ್ಯತಾಸಿದ್ಧಿಯನ್ನು ಪಡೆದಿರುವಂಥಾ ಪಶುವೈದ್ಯರನ್ನು ನೇಮಕಮಾಡಿ ಬಹಳ ಸ್ವಲ್ಪಕಾಲವೇ ಆಗಿದ್ದಾಗ್ಯೂ ಪಶುವೈದ್ಯರು ಇಷ್ಟು ಬೇಗ ರೈತಪ್ರಜೆಗಳ ಭಕ್ತಿ ಪ್ರೀತಿ ಭರವಸೆಗಳನ್ನು ಸಂಪಾದಿಸಿಕೊಂಡು ಅವರಿಗೆ ತುಂಬಾ ಉಪಕಾರವನ್ನೂ ಸಹಾಯವನ್ನೂ ಮಾಡಿರುತ್ತಾರೆಂದು ತಿಳಿದು ಸಂತೋಷಪಡುತ್ತೇವೆ

ಕಳೆದ ಸಾಲು ಬಹಳ ಕಷ್ಟಕರವಾಗಿತ್ತು ಮಳೆ ಬಂದದ್ದು ಬಹಳ ಸ್ವಲ್ಪವೇ ಅದದ್ದರಿಂದ ಗೋಕಾಯಿಗಳ ಮೇವಿಗೂ ನೀರಿಗೂ ಅಭಾವವುಂಟಾಯಿತು ಜಾನುವಾರುಗಳು ಪುಷ್ಟಿಯಾದ ಆಹಾರವಿಲ್ಲದೆ ಕೃಶವಾದದ್ದು ಮಾತ್ರವೇ ಅಲ್ಲ, ದೊಡ್ಡರೋಗ, ಸರಡಿಜಾಡ್ಯ, ಚಪ್ಪೆರೋಗ, ಈ ಮೊದಲಾದ ಹಲವು ಅಂಟುಜಾಡ್ಯಗಳು ಪ್ರಬಲವಾಗಿದ್ದವು ಕಳೆದ ವರುಷ ಸಂಸ್ಥಾನದಲ್ಲಿ ಗೋಕಾಯಿಗಳ ರೋಗಕ್ಕೆ ಚಿಕಿತ್ಸೆ ಮಾಡಿ ಔಷಧ ಕೊಡುವಂಥಾ ಆಸ್ಪತ್ರೆಗಳು ಒಂಬತ್ತಿದ್ದವು ಹತ್ತುಮಂದಿ ಗೋಚಿಕಿತ್ಸಾವೈದ್ಯರು (ಅಥವಾ ಇನ್ಸ್‌ಪೆಕ್ಟರು) ಇದ್ದರು ಇವರು ಹೋದ ಸಾಲಿನಲ್ಲಿ ೬೬,೧೬೬ ಕಾಯಿಲೆಗಳಿಗೆ ಔಷಧ ಕೊಟ್ಟಿರುತ್ತಾರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದುವುದಕ್ಕೆ ಹಿಂದಿನ ಸಾಲಿನಲ್ಲಿ ೧,೨೦೦ ರಾಸುಗಳೂ ಈ ಸಾಲಿನಲ್ಲಿ ೩,೮೦೪ ರಾಸುಗಳೂ ದಾಖಲಾಗಿರುತ್ತವೆ ಇದಲ್ಲದೆ ಹೋದ ವರುಷ ೩,೮೯೩ ರಾಸುಗಳಿಗೆ ಮಾತ್ರ ಸಿಡುಬು ಹಾಕಿದ್ದರು ಈ ವರುಷ ೧೦,೪೮೧ ಗೋಕಾಯಿಗಳಿಗೆ ಸಿಡುಬು ಹಾಕಿರುತ್ತಾರೆ

ಕಳೆದ ಸಾಲಿನಲ್ಲಿ ಪಶುವೈದ್ಯದ ಇಲಾಖಾ ಅಧಿಕಾರಿಗಳು ರೋಗಾದಿಗಳು ಪ್ರಬಲವಾಗಿದ್ದ ಪ್ರದೇಶಗಳಲ್ಲೆಲ್ಲಾ ವಿಶೇಷವಾಗಿ ಸಂಚಾರಮಾಡಿ ದನಗಳನ್ನು ಸಾಕುವ ಪ್ರಜೆಗಳಿಗೆ ನಾನಾ ರೀತಿಯಲ್ಲಿ ಸಹಾಯಮಾಡಿದರೆಂದು ರಿಪೋರ್ಟಿನಲ್ಲಿ ಓದುತ್ತೇವೆ ಇದಕ್ಕೆ ದೃಷ್ಟಾಂತವಾಗಿ ಒಂದು ಕಡೆ ನಡೆದಿರುವ ಸಂಗತಿಯನ್ನು ಇಲ್ಲಿ ಉದಾಹರಿಸುವೆವು ಕಳೆದ ವರುಷ ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಸೇರಿದ ನಾಯಕನಹಟ್ಟಿಯಿಂದ ತೋಟಿರುವ ಹೊಸ ನಾಲೆಗೆ ಒತ್ತಿನ ಕೆಲವು ಗ್ರಾಮಗಳೊಳಗೆ ದನಗಳು ಜೋಗಿಗಳ ಮಟ್ಟಿಲಿದ್ದ ನೀರನ್ನು ಕುಡಿದು ಕಾಯಿಲೆಯಾಗಿ ಸಾಯುತ್ತಾ ಬಂದವು ಪಶುವೈದ್ಯರು ಹೋಗಿ ಸತ್ತ ದನಗಳ ಹೊಟ್ಟೆಯನ್ನು ಒಗೆದು ಪರೀಕ್ಷೆಮಾಡಿದಾಗ ಪಿತ್ತಕೋಶಕ್ಕೆ ರೋಗ ತಗುಲಿತ್ತೆಂದು ಗೊತ್ತಾಯಿತು ಕೂಡಲೆ ಅವರು ಈ ರೋಗವನ್ನು ತಡೆಯುವುದಕ್ಕೆ ಪ್ರತೀಕಾರಗಳನ್ನೂ ಚಿಕಿತ್ಸೆಯನ್ನೂ ಆ ಜನರಿಗೆ ಹೇಳಿಕೊಟ್ಟು ಬಂದರು

ಗೋಕಾಯಿಗಳ ರೋಗಗಳ ವಿಚಾರವಾಗಿ ಇನ್ಸ್‌ಪೆಕ್ಟರುಗಳು ಸಣ್ಣ ಪ್ರಬಂಧಗಳನ್ನು ಬರೆಯಬೇಕೆಂದು ವಿಧಾಯಕವಾಗಿದೆ ಎಂದು ಓದಿ ಸಂತೋಷಪಡುತ್ತೇವೆ ಇಂಥಾ ವಿಷಯಗಳನ್ನು ದೇಶಭಾಷಾ ವರ್ತಮಾನ ಪತ್ರಿಕೆಗಳ ಮೂಲಕ ರೈತಪ್ರಜೆಗಳಿಗೆ ತಿಳಿಯಪಡಿಸುವಂತೆ ಏರ್ಪಾಡುಮಾಡಿಯಾರೆಂದು ನಿರೀಕ್ಷಿಸುವೆವು ಈ ಪತ್ರಿಕೆಗಳು ಸಂಸ್ಥಾನದ ಎಲ್ಲಾ ಗ್ರಾಮಗಳಲ್ಲೂ ಹರಡಿಕೊಂಡಿರೋದರಿಂದ ಅಧಿಕಾರಿಗಳು ಇವುಗಳ ಮೂಲಕ ಇನ್ನೂ ವಿಶೇಷವಾಗಿ ಹಲವು ಸಂಗತಿಗಳನ್ನು ಜನರಿಗೆ ತಿಳಿಸಬಹುದಾಗಿದೆ ಎಂದು ನಮಗೆ ತೋರುತ್ತದೆ

ಜಟ್ಕಾಗಾಡಿಗಳಿಗೆ ಅನೇಕರು ರೋಗವಿರುವ ಅಂಗಹೀನವಾದ ಅಥವಾ ನಿಶ್ಶಕ್ತಿಯಾದ ಕುದುರೆಗಳನ್ನೂ ಟಾಕಣಾಗಳನ್ನೂ ಕಟ್ಟಿ ಬಾಧೆಪಡಿಸುತ್ತಾರೆಂತಲೂ, ಅಂಥಾ ಕುದುರೆ ಟಾಕಣಾಗಳನ್ನು ಪರೀಕ್ಷೆಮಾಡಿ, ಸವಾರಿಗೆ ಯೋಗ್ಯವಾಗಿವೆ ಎಂದು ಲೈಸನ್ಸು ಪಡೆಯದ ಯಾರೂ ಗಾಡಿಗೆ ಕಟ್ಟಕೂಡದೆಂದು ನಿರ್ಬಂಧಪಡಿಸಬೇಕೆಂತಲೂ ಪಶುವೈದ್ಯದ ಇಲಾಖಾ ಇನ್ಸ್‌ಪೆಕ್ಟರುಗಳು ಸೂಚಿಸುತ್ತಾರೆ ಅಂಥಾ ಮೂಗು ಪ್ರಾಣಿಗಳನ್ನು ಗಾಡಿಗೆ ಕಟ್ಟಿ ಹೊಡೆಯುತಕ್ಕವರನ್ನೆಲ್ಲಾ ಈಗ ಪೋಲೀಸಿನವರು ಹಿಡಿದು ಮೊಕದ್ದಮೆ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಡಲ್ಪಟ್ಟಿರುತ್ತದೆಯಾದಕಾರಣ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಈ ವಿಷಯದಲ್ಲಿ ತಮ್ಮ ಇಲಾಖೆಯ ಎಲ್ಲಾ ನೌಕರರಿಗೂ ಸರಿಯಾದ ತಿಳುವಳಿಕೆಯನು ಕಳುಹಿಸಿಕೊಟ್ಟಾರೆಂದು ನಿರೀಕ್ಷಿಸುತ್ತೇವೆ. ಮ್ಯುನಿಸಿಪಾಲಿಟಿಗಳು ಏರ್ಪಡಾಗಿರುವ ಪಟ್ಟಣಗಳಲ್ಲಿ ಮ್ಯುನಿಸಿಪಲ್ ಅಧಿಕಾರಿಗಳು ಒಳ್ಳೇ ರಾಸುಗಳನ್ನು ಇಟ್ಟುಕೊಂಡಿರುವಂಥಾ ಬಾಡಿಗೆ ಗಾಡಿದಾರರಿಗೆ ಮಾತ್ರ ಲೈಸನ್ಸು ಕೊಡುವಂತೆ ನೋಡಿಕೊಳ್ಳಬೇಕಾಗಿರುತ್ತದೆ.

ಈ ಪಶುವೈದ್ಯದ ಇಲಾಖೆಯಿಂದ ಮೈಸೂರು ಸಂಸ್ಥಾನದ ರೈತರಿಗೆ ಇನ್ನೂ ಹೆಚ್ಚಾದ ಸಹಾಯ ಸಂಪತ್ತುಗಳು ದೊರಕುವಂತಾಗಬೇಕು ಗೋಕಾಯಿಗಳಿಗೆ ಪ್ರಾಪ್ತವಾಗುವ ರೋಗೋಪದ್ರಗಳ ಕಾರಣ ಚಿಕಿತ್ಸಾವಿಧಿಗಳು ಪ್ರಜೆಗಳಿಗೆ ಮಂದಟ್ಟಾಗುತ್ತಾ ಬಂದಹಾಗೆಲ್ಲಾ ಅವರು ಪಶುವೈದ್ಯದ ಆಸ್ಪತ್ರೆಗಳಿಗೆ ಇನ್ನೂ ವಿಶೇಷವಾಗಿ ಹೋಗುವರು ಈ ಸೀಮೆಯ ರೈತಪ್ರಜೆಗಳು ಗೋಕಾಯಿ, ಕುದುರೆ, ಎಮ್ಮೆ, ಕುರಿ ಆಡು ಮೊದಲಾದವುಗಳನ್ನು ಆರೋಗ್ಯವಾಗಿಯೂ ಪುಷ್ಟಿಯಾಗಿಯೂ ಸಾಕಿ ಬೆಳಸುವ ವಿಧಾನವನ್ನು ಅರಿತು ಅನುಸರಿಸುತ್ತಾ ಬಂದ ಪಕ್ಷದಲ್ಲಿ ಅವುಗಳ ಮೂಲಕ ಅವರ ಸಂಪಾದನೆಯು ಹೆಚ್ಚಿ ಐಶ್ವರ್ಯವಂತರಾದಾರೆನ್ನುವುದಕ್ಕೆ ಸಂಶಯವಿಲ್ಲ ಇದರಿಂದ ವ್ಯವಸಾಯವೂ ಅಭಿವೃದ್ಧಿಗೆ ಬರುತ್ತದೆ, ಮತ್ತು ದೇಶದಲ್ಲಿ ಸುಭಿಕ್ಷವೇ ಸರ್ವತ್ರ ನೆಲೆಗೊಂಡೀತು

ಈ ಇಲಾಖೆಯ ಕೆಲಸಗಳನ್ನು ಮೆ|| ನರಸಿಂಹ ಐಯಂಗಾರ್ಯರು ಇಷ್ಟು ವಿತರಣೆಯಿಂದಲೂ ಹಿತಕರವಾಗಿಯೂ ನಡಿಸಿದ ವಿಷಯದಲ್ಲಿ ನಾವು ಸಂತೋಷಪಡುತ್ತೇವೆ ಮತ್ತು ಮೈಸೂರು ಗವರ್ನಮೆಂಟಿನವರು ಸಾಧ್ಯವಾಗುವ ಮಟ್ಟಿಗೂ ಅವರಿಗೂ ಈ ಇಲಾಖೆಗೂ ಬೇಕಾದ ಸಹಾಯವನ್ನು ಒದಗಿಸಿಕೊಡುತ್ತಾ ಬರಬೇಕೆಂದು ಹಾರೈಸುತ್ತೇವೆ

ಬಾಲ್ಯ ವಿವಾಹವೂ ಗ್ರಾಮಸ್ಥರ ಕಷ್ಟವೂ

ಮೈಸೂರು ಗವರ್ನಮೆಂಟಿನವರು ಬಾಲ್ಯವಿವಾಹದ ಕಾನೂನುಮಾಡಿ ಜಾರಿಗೆ ತಂದು ಹುಡುಗರಿಗೆ ೧೪ ವರುಷಕ್ಕೆ ಮುಂಚೆಯೂ ಹುಡುಗಿಯರಿಗೆ ೮ ವರುಷಕ್ಕೆ ಮುಂಚೆಯೂ ಯಾರೂ ವಿವಾಹಮಾಡಕೂಡದೆಂದು ವಿಧಿಸಿರುವುದೂ ಅನೇಕ ಸಂದರ್ಭಗಳಲ್ಲಿ ಗಂಡು ಹೆಣ್ಣಿನ ತಂದೆ ಅಥವಾ ಪೋಷಕರನ್ನೂ ಪುರೋಹಿತರನ್ನೂ ಜುಲ್ಮಾನೆಯ ಮೂಲಕ ಶಿಕ್ಷಿಸಿರುವುದೂ ವಾಚಕರಿಗೆ ತಿಳಿದಿದೆ ಗ್ರಾಮಾಂತರಗಳಲ್ಲಿ ಲೆಕ್ಕಗಳು ಕ್ರಮವಾಗಿ ಇಟ್ಟಿಲ್ಲವಾದಕಾರಣ ಹೆಣ್ಣು ಗಂಡುಗಳ ವಯಸ್ಸು ಎಷ್ಟೆಂಬುದು ಗೊತ್ತಾಗುವುದಕ್ಕೆ ಮಾರ್ಗವಿಲ್ಲ ತಿಳುವಳಿಕೆ ಸಾಲದ ಗ್ರಾಮಸ್ಥರು ಇದರ ದೆಸೆಯಿಂದ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ ಪ್ರತಿವರುಷವೂ ಮದುವೆ ಲಗ್ನಕಾಲಗಳು ಪ್ರಾಪ್ತವಾದಾಗ ಹಳ್ಳಿಗಾಡಿನಲ್ಲಿ ಅನೇಕ ಜನರಿಗೆ ತಮ್ಮ ಮಕ್ಕಳು ವಿವಾಹಕ್ಕೆ ತಕ್ಕ ವಯಸ್ಸಿನವರಾಗಿದ್ದಾರೆಯೋ ಇಲ್ಲವೋ ಎಂಬುವುದು ಗೊತ್ತಾಗುವುದಿಲ್ಲ

ಇಂಥಾ ಸಂದರ್ಭವು ಒಂದು ಕಡೆ ನಡೆಯಿತೆಂದು ನಮಗೆ ತಿಳಿದುಬಂದಿದೆ ಇದನ್ನು ನೋಡಿದರೆ ಬಡಬಗ್ಗರಾದ ಗ್ರಾಮಸ್ಥರು ತಮ್ಮ ಮಕ್ಕಳ ವಿವಾಹಕ್ಕೆ ತಕ್ಕಷ್ಟು ವಯಸ್ಸಾಗಿದೆ ಎಂಬುದನ್ನು ದೃಷ್ಟಾಂತಪಡಿಸುವುದಕ್ಕಾಗಿ ಕೆಲವು ವೇಳೆ ಲಂಚ ಕೊಡುವುದಕ್ಕೂ ಹೊರಡುತ್ತಾರೆಂದು ಕಾಣಬರುವುದು ಈ ವಿಚಾರವಾಗಿ ನಮಗೆ ಬಂದಿರುವ ಬಾತ್ಮಿಯನ್ನು ಸ್ಥಳ ಮತ್ತು ಹೆಸರುಗಳನ್ನು ಬಿಟ್ಟು ವಾಚಕರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸುತ್ತೇವೆ

ಹೋಬಳಿ ಹಳ್ಳಿಯಲ್ಲಿ ಇರುವ ಗೌಡನ ಮಗ ಗೌಡನು ತಿಳಿಸಿಕೊಳ್ಳುವದೇನೆಂದರೆ ನಮ್ಮ ಅಕ್ಕನ ಮಗಳು ಎಂಬ ಹುಡುಗಿಗೆ ಮದುವೆ ಕೇಳುವದಕ್ಕೆ ಗಂಡಿನವರು ಬಂದು ಕೇಳಿದರು ಅದಕ್ಕೆ ನಮ್ಮ ಅಕ್ಕನ ಗಂಡನು ಒಪ್ಪಿ ಕೊಡುತ್ತೇನೆಂದು ಹೇಳಿದನು ಊರಿನವರು "ಹೆಣ್ಣು ಚಿಕ್ಕದು ಕಣೋ ಸರಟಿಫಿಕೇಟು ತಂದು ಮಾಡಲಾ ಇಲ್ಲದಿದ್ದರೆ ಮುಂದೆ ತೊಂದರೆ ಬರ್ತದೆ" ಎಂಬದಾಗಿ ಹೇಳಿದರು ಅದರಂತೆ ಗಂಡಿನ ಕಡೆ ನಮ್ಮ ಅಕ್ಕನ ಗಂಡ ಇಬ್ಬರೂ ಹೋಗಿ ಸರಟಿಫಿಕೇಟು ತಂದರು ಆ ತಾ ಮದುವೆಗೆ ಸಾಮಾನು ಸಿದ್ಧಮಾಡಿದರು ಆವಾಗ ಊರು ಪಟೇಲ ಹೋಗಿ "ಚಿಕ್ಕ ಹೆಣ್ಣಿಗೆ ಸರಟೀಪೀಟು ಮಾಡಿಸಿ ಬಂದವರೆ" ಎಂಬದಾಗಿ ರಿಪೋರ್ಟು ಮಾಡಿದ ಆಮೇಲೆ ಪೋಲೀಸಿನವರು ಬಂದು ಇವರ ಇಬ್ಬರು ತಂದೆಗಳನ್ನೂ ಹೆಣ್ಣು ಮಗುವನ್ನೂ ಕರೆದುಕೊಂಡು ಹೋದರು ಆವಾಗ ಶಿರೇದಾರರು "ಹೆಣ್ಣು ಮಗ ಚಿಕ್ಕದಾಗಿ ಅದೆ ಸುಳ್ಳುಮಾನೆ" ಎಂಬದಾಗಿ ಬೈದರು ಅದಕ್ಕೆ ಅವನು– "ಡಿಸ್ಟರಿಂದ ಸರಟೀಪೇಟು ಹತ್ತು ರೂಪಾಯಿ ಕೊಟ್ಟು ಮಾಡಿಸಿದ" ಎಂಬದಾಗಿ ಹೇಳಿದ ಆವಾಗ ಸಾಹೇಬರು ಡಿಸ್ಟರನ್ನು ಕರಸಿ– "ನೀವು ಮಾಡಿಕೊಟ್ಟಿರ" ಎಂಬದಾಗಿ ಕೇಳಿದರು ಅದಕ್ಕೆ ನಮ್ಮ ಅಕ್ಕನ ಗಂಡನು "ಬುದ್ಧಿ, ಇಂದಿಗೆ ಹದಿನೈದು ದಿವಸದಲ್ಲಿ ಹತ್ತು ರೂಪಾಯಿ ಕೊಟ್ಟೆನಲ್ಲ ಬುದ್ಧಿ, ನೀವು ನೋಡಿ, ಬುದ್ಧಿ" ಎಂಬದಾಗಿ ದೊಡ್ಡ ಸಾಹೇಬರಿಗೆ ಕಾಗಜಾ ತೋರಿಸಿದ ಆವಾಗ ಸಾಹೇಬರು ಡಿಸ್ಟರ ಕೂಡ ಇಂಗ್ಲಿಷಿನಲ್ಲಿ ಮಾತಾಡಿಕೊಂಡರು ಆ ಮೇಲೆ ಡಿಸ್ಟರು ನಮ್ಮ ಅಕ್ಕನ ಗಂಡನು— "ಏನೋ, ದೊಡ್ಡ ಮಗಾ ಅಲ್ಲವೇನೋ ನಾನು ಕರದುಕೊಂಡು ಬಂದದ್ದು" ಎಂಬದಾಗಿ ಹೆದರಿಸಿದರು. "ಈಗ ಚಿಕ್ಕಮಗೀಗೆ ಮದುವೆ ಮಾಡೀಯಾ" ಎಂಬದಾಗಿ ಹೆದರಿಸಿದರು ಆ ಮೇಲೆ ಶಿರೇದಾರ್ರು ಕರಕೊಂಡು ಹೋಗಿ "ಏನಲಾ ಬೇಳಿಮಾನೆ, ಇಂಥಾ ಸುಳ್ಳು ಹೇಳುತ್ತೀಯಾ" ಎಂಬದಾಗಿ ಬೈದರು "ಚಿಕ್ಕ ಮಗೀಗೆ ಮದುವೆ ಮಾಡಿದರೆ ಸಜಾ ಆಯಿತದೆ" ಎಂಬದಾಗಿ ಹೆದರಿಸಿದರು ಮೂರು ದಿವಸಕ್ಕೆ ಆಯಿತಾ ಇದ್ದ ಮದುವೆಯ ನಿಲ್ಲಿಸಿಬಿಟ್ಟರು ಡಿಸ್ಟರು ಹತ್ತು ರೂಪಾಯಿ ತಗೊಂಡು– "ಇದಕ್ಕೆ ನಾನು ಕೊಡಲಿಲ್ಲ ಮಗ ದೊಡ್ಡದು ಕರತಂದು ಸುಳ್ಳು ಹೇಳುತ್ತೀಯಾ" ಎಂಬದಾಗಿ ಬೈದರು ಅದಕ್ಕೆ ಶಿರೇದಾರು, ಹದಿನೈದು ರೂಪಾಯಿ ತಕ್ಕೊಂಡರು ಅದ್ದರಿಂದ ಇನ್ನು ಮುಂದೆ ಮಾಡತಕ್ಕ ಗೌಡರುಗಳು ಡಿಸ್ಟರಿಂದ ಸರಟೀಪೇಟು ತೆಗಳ್ಳದೆ ಅಮಲ್‌ದಾರರಿಗೆ ಅರ್ಜಿ ಕೊಟ್ಟು ಅವರ ಬೇಲೆ ಡಿಸ್ಟರಿಂದ ಸರಟೀಪೇಟು ಪಡದರೆ ಒಳ್ಳೇದು ಆಯಿತದೆ ಹಾಗೆ ಇಲ್ಲದಿದ್ದರೆ ನಮ್ಮ ಅಕ್ಕನ ಗಂಡನಿಗೆ ಆದ ಹಂಗೆ ಆಗುತ್ತೆ

ಸಂಗತಿಗಳು ಈ ರೀತಿ ಚಲಾವಣೆಯಲ್ಲಿದ್ದರೆ ಗೌಡನು ತನ್ನ ಮಗಳಿಗೆ ವಿವಾಹದ ವಯಸ್ಸಾಗಿದೆ ಎಂಬುವುದನ್ನು ಹ್ಯಾಗೆತಾನೇ ರುಜುವಾತುಮಾಡಿಯಾನು? ಜನನದ ತಾರೀಖು ಮುಂತಾದದ್ದನ್ನು ಅನುಮಾನವಿಲ್ಲದೆ ತೋರಿಸುವಂಥಾ ಕ್ರಮವಾದ ಲೆಕ್ಕಗಳಿಲ್ಲ. ದೇಹದ ಅಂಗಗಳನ್ನೂ ಕಾಯಪುಷ್ಟಿಯನ್ನೂ ಪರೀಕ್ಷೆಮಾಡಿಸಿ ಡಾಕ್ಟರಿಂದ ಸರ್ಟಿಫಿಕೇಟನ್ನು ತರಬೇಕಾದರೆ ಅವನು ಅದಕ್ಕಾಗಿ ಹಣವನ್ನು ಕೊಡಬೇಕು. ಇದಲ್ಲದೆ ಕೆಲವು ವೇಳೆ ಅವನು ಪೋಲೀಸಿನವರ ತೊಂದರೆಯನ್ನು ತಪ್ಪಿಸಿಕೊಳ್ಳುವುದಕ್ಕೂ ಕೂಡ ಅಲ್ಪಸ್ವಲ್ಪವನ್ನು ಖರ್ಚುಮಾಡಬೇಕಾಗುವುದು. ಜನರು ಇನ್ನೆಂದಿಗೆ ಸತ್ಯವೇ ಪಥ್ಯವೆಂಬುವುದನ್ನು ಗ್ರಹಿಸಿ ನಡೆಸುವರೋ ಎಂದು ವಿಚಾರಿಸಬೇಕಾಗಿದೆ

ಗುಡ್‍ಫ್ರೈಡೇ ಅಂದರೇನು?

ಪ್ರಪಂಚದ ಎಲ್ಲಾ ಭಾಗಗಳಲ್ಲಿರುವ ಕ್ರೈಸ್ತ ಮಂಡಲಿಯವರೆಲ್ಲರೂ ಬರುವ ಶುಕ್ರವಾರ (ತಾ ೨೫) ಒಂದು ಉಪವಾಸ ವ್ರತವನ್ನು ನಡೆಸುವವರಾಗಿರುತ್ತಾರೆ. ಈ ರೀತಿ ಪ್ರತಿ ವರುಷವೂ ವರ್ಷದಲ್ಲಿ ಒಂದು ಶುಕ್ರವಾರವನ್ನು ಸಾಮುಕವಾಗಿ ಕೊಂಡು ಆಚರಿಸುವುದುಂಟು. ಈ ಆಚರಣೆಗೆ ಕಾರಣವೇನು? ಜಗದುದ್ಧಾರಕನಾದ ಯೇಸುಸ್ವಾಮಿಯು ಹತ್ತೊಂಬತ್ತು ಎಂಟುನೂರ ಎಂಬತ್ತು ವರುಷಗಳ ಕೆಳಗೆ ಜೆರೂಸಲೇಮಿನಲ್ಲಿ ಒಂದಾನೊಂದು ಶುಕ್ರವಾರದಲ್ಲಿ ಸರ್ವ ಜನರ ಪಾಪಗಳಿಗಾಗಿ ತನ್ನ ಅಮೂಲ್ಯವಾದ ಪ್ರಾಣವನ್ನೇ ದಾನಮಾಡಿದುದರಿಂದ ಪ್ರತಿ ವರುಷವೂ ಸಾಮುಕವಾಗಿ ಆ ಶುಕ್ರವಾರದಲ್ಲಿ ಕ್ರೈಸ್ತ ಭಕ್ತರಾದವರೆಲ್ಲರೂ ಆತನ ಮರಣವನ್ನು ಕುರಿತು ಧ್ಯಾನಮಾಡಿ ಉಪವಾಸದಿಂದಲೇ ಆ ದಿನವನ್ನು ಕಳೆಯುವವರಾಗಿರುತ್ತಾರೆ. ಈ ಶುಕ್ರವಾರಕ್ಕೆ ಗುಡ್‍ಫ್ರೈಡೇ ಎಂದು ಹೆಸರು. ಗುಡ್‍ಫ್ರೈಡೇ ಅಂದರೆ ಒಳ್ಳೆಯ ಶುಕ್ರವಾರವೆಂದರ್ಥ. ಯೇಸುಸ್ವಾಮಿಯ ಮರಣದ ಮೂಲಕ ಈ ಲೋಕಕ್ಕೆ ಬಹಳ ಒಳ್ಳೇದಾದ್ದರಿಂದ ಆತನ ಮರಣವನ್ನು ಜ್ಞಾಪಕಮಾಡುವ ಈ ದಿನಕ್ಕೆ ಒಳ್ಳೆಯ ಶುಕ್ರವಾರವೆಂಬ ಹೆಸರು ಬಂದಿತು.

ಯೇಸುಸ್ವಾಮಿಯ ಮರಣದ ವೃತ್ತಾಂತವನ್ನು ಆತನ ಚರಿತ್ರೆಯು ಪ್ರಸ್ತಾಪವಾಗಿರುವ ಹೊಸ ಒಡಂಬಡಿಕೆ ಎಂಬ ಸತ್ಯವೇದ ಗ್ರಂಥದಿಂದ ಸವಿಸ್ತಾರವಾಗಿ ತಿಳಿದುಕೊಳ್ಳಬಹುದು. ಆತನು ಸುಮಾರು ಮೂರು ವರುಷಗಳ ಕಾಲ ಜನಗಳಿಗೆ ಬೋಧನೆ ಮಾಡುತ್ತಾ ರೋಗಿಗಳನ್ನು ಸ್ವಸ್ಥಮಾಡುತ್ತಾ ಇನ್ನೂ ಅನೇಕ ಪ್ರಕಾರವಾದ ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಬಂದನು. ಆದರೆ ಯೆಹೂದ್ಯರ ಪ್ರಮುಖರು ಆತನಿಗೆ ವಿರೋಧಿಗಳಾದರು. ... ಆತನ ಬೋಧನೆಯಿಂದಲೂ ಗಲಿಬಿಲಿಯಿಂದ ತುಂಬಿದವರಾದರು. ಯೇಸುಕ್ರಿಸ್ತನು ಅವರು ಮಾಡಿದ ಪಾಪಗಳಿಗಾಗಿ ಅವರನ್ನು ಗದರಿಸಿ ಖಂಡಿಸಿದ ಕೋಪದಿಂದ ... ಅವರು ಯೇಸುವನ್ನು ಹಿಡಿದುಕೊಂಡು ... ಮಾಡಿದರು. ಆತನು ಅವರನ್ನು ಸರ್ಕಾರದವರ ... ಒಪ್ಪಿಸಿ ಆತನೂ ತನ್ನನ್ನೇ ಅರಸನನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುವನೆಂತಲೂ ಚಾಡಿ ಹೇಳಿದರು. ಪಿಲಾತನು ಯೇಸುವನ್ನು ವಿಚಾರಿಸಿದಾಗ ಆತನಲ್ಲಿ ಯಾವ ತಪ್ಪನ್ನೂ ಕಾಣದೆ ಹೋದರೂ ಯೆಹೂದ್ಯರ ಮೆಚ್ಚಿಕೆಯನ್ನು ಬಯಸಿದವನಾಗಿ ಯೇಸುವಿಗೆ ಮರಣದಂಡನೆಯನ್ನು ವಿಧಿಸಿದನು. ಯೆಹೂದ್ಯರು ಯೇಸುಸ್ವಾಮಿಯನ್ನು ಯೆರೂಸಲೇಮ್ ಪಟ್ಟಣದ ಹತ್ತಿರವಿದ್ದ ಒಂದು ಗುಡ್ಡಕ್ಕೆ ಎಳೆದುಕೊಂಡುಹೋಗಿ ಅಲ್ಲಿ ಒಂದು ಮರದ ಶಿಲುಬೆಗೆ ಆತನನ್ನು ಜಡಿದರು. ಆತನು ಆ ಶಿಲುಬೆಯ ಮೇಲೆಯೇ ಇದ್ದುಕೊಂಡು, ತನ್ನ ಪ್ರಾಣವನ್ನು ಬಿಟ್ಟನು. ಇದೇ ಆತನ ಮರಣದ ಸಂಕ್ಷೇಪ ವೃತ್ತಾಂತ.

ಯೇಸುಸ್ವಾಮಿಯು ಈ ಬಗೆಯಾದ ಮರಣವನ್ನು ಅನುಭವಿಸಿದಾಗ್ಯೂ ಆತನು ಎಲ್ಲರಿಗಾಗಿ ತನ್ನ ಪ್ರಾಣವನ್ನು ಕೊಟ್ಟನೆಂದು ತಿಳಿಯಬೇಕಾಗಿದೆ. ಯಾಕೆಂದರೆ ಆತನ ಮರಣದಿಂದ ಸಕಲರಿಗೂ ಮೇಲು ಉಂಟಾಯಿತು. ಇದನ್ನು ನಾವು ಹ್ಯಾಗೆ ತಿಳಿಯಬಹುದು?

ಅಕ್ರಮ ನಡಿಸಿದವನಿಗೆ ಶಿಕ್ಷೆಯಾಗುವುದು ನ್ಯಾಯವಾಗಿದೆ. ಆದರೆ ನಿರಪರಾಧಿಯು ಮರಣ ಹೊಂದುವುದು ಶುದ್ಧ ಅನ್ಯಾಯವಷ್ಟೆ. ಯೇಸುಸ್ವಾಮಿಯ ಚರಿತ್ರೆಯನ್ನು ನಾವು ಪರಿಶೀಲನೆ ಮಾಡಿದರೆ ಆತನು ಸಚ್ಚರಿತ್ರನೂ ಪಾಪರಹಿತನೂ ಆಗಿದ್ದನೆಂದು ತಿಳಿಯುತ್ತದೆ. ಆತನು ಹಿಂಸೆಯನ್ನೂ ಮರಣವನ್ನೂ ಅನುಭವಿಸುವ ಪ್ರಮೇಯವೇನೂ ಇರಲಿಲ್ಲ. ಆ ಕ್ರೂರಶತ್ರುಗಳಿಂದ ತಪ್ಪಿಸಿಕೊಳ್ಳುವುದು ಆತನಿಗೆ ಸಾಧ್ಯವಾಗಿತ್ತು. ಆದರೆ ಪಾಪಿಷ್ಠರು ಅನುಭವಿಸಬೇಕಾಗಿದ್ದ ಮರಣವನ್ನು ತಾನೇ ಅನುಭವಿಸಿದನು. ಲೋಕದಲ್ಲಿರುವ ಎಲ್ಲಾ ಮನುಷ್ಯರು ಪಾಪಿಷ್ಠರಾಗಿ ದೇವರ ಕೋಪಕ್ಕೆ ಪಾತ್ರರಾಗಿದ್ದಾರೆಂಬುದನ್ನು ಪ್ರಪಂಚದ ಸರ್ವ ಮತೀಯರೂ ಬಲ್ಲರು. ದೇವರು ನೀತಿಪರನಾಗಿರುವುದರಿಂದ ಲೋಕದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವು ಆಗಲೇಬೇಕಾಗಿದೆ. ಪಾಪಿಷ್ಠನಾದ ಮನುಷ್ಯನು ಸಾಯುವುದರಿಂದ ಇಂಥಾ ಪ್ರಾಯಶ್ಚಿತ್ತವಾಯಿತೆಂದು ಹೇಳಲಾಗದು. ಯಾಕೆಂದರೆ ಅವನು ಸತ್ತದ್ದು ನ್ಯಾಯವಾಗಿದೆ. ಆದುದರಿಂದ ಪಾಪರಹಿತವಾದ ಯಜ್ಞವೊಂದೇ ದೇವರ ಕೋಪವನ್ನು ಶಾಂತಪಡಿಸುವುದಕ್ಕೆ ಯೋಗ್ಯವಾದುದಾಗಿದೆ. ಇಂಥಾ ಯಜ್ಞವನ್ನೇ ಯೇಸುಸ್ವಾಮಿಯು ಸಮರ್ಪಿಸಿದನು. ಯೇಸುಸ್ವಾಮಿಯು ಮಾಡಿದ ಪ್ರಾಣದಾನವಲ್ಲದ ಬೇರೆ ಯಜ್ಞವು ಪೃಥ್ವಿಯಲ್ಲಿ ಎಲ್ಲಿಯೂ ಇಲ್ಲ. ಈ ಯಜ್ಞದಿಂದ ಪಾಪಿಷ್ಠರಾದ ಮನುಷ್ಯರಿಗೆ ಅಪರಾಧ ನಿರ್ಣಯವು ಇಲ್ಲವೇ ಇಲ್ಲ.

ಯೇಸುಸ್ವಾಮಿಯು ಬೇರೆಯವರಿಗಾಗಿ ಮರಣವನ್ನು ಅನುಭವಿಸುವುದು ಹ್ಯಾಗೆ ಎಂದು ಆಕ್ಷೇಪಿಸಬಹುದು. ಈ ಆಕ್ಷೇಪಣೆಗೆ ಉತ್ತರವನ್ನು ಒಂದು ದೃಷ್ಟಾಂತದ ಮೂಲಕ ವಿಶದಪಡಿಸಬಹುದು. ಒಂದು ಕುಟುಂಬದಲ್ಲಿ ತಂದೆತಾಯಿಗಳೂ ಅಣ್ಣತಮ್ಮಂದಿರೂ ಅಕ್ಕತಂಗಿಯರೂ ಎಲ್ಲರೂ ಕೆಟ್ಟವರಾಗಿದ್ದು ಒಬ್ಬ ಹೆಣ್ಣುಮಗಳು ಮಾತ್ರ ಒಳ್ಳೆಯವಳಾಗಿರುತ್ತಾಳೆಂದು ಊಹಿಸೋಣ. ಆ ಕುಟುಂಬದವರು ನಡಿಸುವ ಅಕ್ರಮದಿಂದ ಯಾರಿಗೆ ಹೆಚ್ಚಾದ ದುಃಖವುಂಟು? ಆ ಹೆಣ್ಣುಮಗಳು ಮಾತ್ರ ದುಃಖಪಡುತ್ತಾಳೆಯೇ ಹೊರತು ಆವಳ ಸಂಬಂಧಿಕರಿಗೆ ಲೇಶಾಂಶವೂ ವ್ಯಸನವಿರುವುದಿಲ್ಲ. ಹೊರಗಿನ ಜನರು ಆ ಕುಟುಂಬದ ವಿಷಯ ಎಷ್ಟು ಕೆಟ್ಟ ಮಾತುಗಳನ್ನು ಹೇಳಿದರೂ ಅವರ ಮನಸ್ಸಿಗೆ ಅಂಟುವುದಿಲ್ಲ. ಅವರು ಯಥಾಪ್ರಕಾರವಾಗಿ ತಮ್ಮ ಅಕ್ರಮದಲ್ಲಿ ನಿರತರಾಗಿರುತ್ತಾರೆ. ಆದರೆ ಇವರ ಅಕ್ರಮವೂ ಹೊರಗಿನ ದೂಷಣೆಯೂ ಆ ಗುಣವಂತೆಯಾದ ಹೆಣ್ಣುಮಗಳಿಗೆ ಅಪಾರವಾದ ವ್ಯಸನವನ್ನೂ ಸಂಕಟವನ್ನೂ ಉಂಟುಮಾಡುವುದು. ಅವರ ಅಕ್ರಮದಿಂದ ಬರುವ ದುರವಸ್ಥೆಗೆಲ್ಲಾ ಇವಳು ತಪ್ಪು ಮಾಡದಿದ್ದರೂ ಗುರಿಯಾಗುವಳಲ್ಲವೇ? ಮದ್ಯಪಾನಿಯಾದ ಗಂಡನು ತನ್ನ ಸಂಪಾದನೆಯನ್ನೆಲ್ಲಾ ತನ್ನ ದುರಭ್ಯಾಸದಲ್ಲಿ ದುರ್ವ್ಯಯ ಮಾಡಿದರೆ ಅವನ ಹೆಂಡತಿ ಒಳ್ಳೆಯವಳಾಗಿದ್ದರೂ ತನ್ನ ಗಂಡನ ದುಷ್ಟತನದಿಂದ ಅವಳಿಗೆ ನಷ್ಟವಾಗುವುದಲ್ಲವೇ? ಅದೇ ಪ್ರಕಾರವಾಗಿ ಸ್ವರ್ಗಲೋಕದ ಪ್ರಭುವಾದ ಯೇಸುಸ್ವಾಮಿಯು ಮಹಾ ಪವಿತ್ರನಾಗಿದ್ದರೂ ಕೂಡ ಪಾಪಿಷ್ಠರಾದ ನರಜನ್ಮದವರಲ್ಲಿ ಅವತರಿಸಿದುದರಿಂದ ಪಾಪದಿಂದ ಬಂದ ದುರವಸ್ಥೆಯನ್ನೆಲ್ಲಾ ಆತನೊಬ್ಬನೇ ಅನುಭವಿಸಬೇಕಾಯಿತು.

ಯೇಸುಸ್ವಾಮಿಯ ಪ್ರಾಯಶ್ಚಿತ್ತದ ಯಜ್ಞದ ಮೂಲಕ ನಮಗೆ ಪಾಪದ ಬಂಧದಿಂದ ಬಿಡುಗಡೆಯಾಯಿತೆಂದು ನಾವು ಹೇಗೆ ತಿಳಿದುಕೊಳ್ಳಬಹುದು? ಯೇಸುಸ್ವಾಮಿಯ ಮರಣವು ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾದುದರಿಂದ ದೇವರ ಕೋಪವು ಶಾಂತವಾಗಿ ಆತನಿಗೂ ಮನುಷ್ಯನಿಗೂ ಸಂಸರ್ಗ ಉಂಟಾಗುವುದಕ್ಕೆ ಮಾರ್ಗವಾಯಿತು. ಆತನ ಪ್ರಾಯಶ್ಚಿತ್ತವಿಲ್ಲದೆ ಇಂಥಾ ಸಂಸರ್ಗ ಆಗುವುದಕ್ಕೆ ಮಾರ್ಗವಿರಲಿಲ್ಲ. ಈ ಸಂಸರ್ಗದಿಂದಲೇ ಮನುಷ್ಯನು ಪಾಪವನ್ನು ಜಯಿಸುವುದಕ್ಕೆ ಶಕ್ತನಾಗುವುದಲ್ಲದೆ ಪಾಪದಿಂದ ಸಂಪೂರ್ಣ ವಿಮುಕ್ತಿಯನ್ನು ಹೊಂದಿ ಹೊಸಬನಾಗಿ ಜೀವಿಸುತ್ತಾನೆ. ಆದುದರಿಂದ ಕ್ರೈಸ್ತ ಭಕ್ತನಾದವನು ಇಂಥಾ ವಿಶೇಷವಾದ ಸೌಲಭ್ಯವನ್ನು ಹೊಂದಿಕೊಂಡಿರುವುದರಿಂದಲೇ ತನ್ನ ಕೃತಜ್ಞತೆಯನ್ನು ಪ್ರಕಾಶಪಡಿಸುವ ಉದ್ದೇಶದಿಂದ ಈ ಉಪವಾಸ ವ್ರತವನ್ನು ನಡೆಸುವವನಾಗಿರುತ್ತಾನೆ. ಯೇಸುಸ್ವಾಮಿಯ ಮರಣದಿಂದ ಇಂಥಾ ಶ್ರೇಯಸ್ಸು ಲೋಕಕ್ಕೆ ಪ್ರಾಪ್ತವಾಗಿರುವುದು ಎಷ್ಟೋ ಸಂತೋಷ. ಮನುಷ್ಯರು ಸಂತೋಷವನ್ನು ಹೊಂದುವುದಕ್ಕಾಗಿ ಯೇಸುಸ್ವಾಮಿಯು ವ್ಯಸನವನ್ನು ಅನುಭವಿಸಿದನು. ನಿಶ್ಚಯವಾಗಿ ಆತನು ನಮ್ಮ ಕಷ್ಟಗಳನ್ನು ಹೊತ್ತುಕೊಂಡನು. ನಮ್ಮ ವ್ಯಸನಗಳನ್ನು ತಾಳಿಕೊಂಡನು. ನಾವು ಆತನನ್ನು ಬಾಧಿಸಲ್ಪಟ್ಟವನೆಂದೂ ದೇವರಿಂದ ಹೊಡೆಯಲ್ಪಟ್ಟವನೆಂದೂ ಕುಂದಿಸಲ್ಪಟ್ಟವನೆಂದೂ ಎಣಿಸಿದೆವು. ಆದರೆ ಆವನು ನಮ್ಮ ದ್ರೋಹಗಳ ನಿಮಿತ್ತ ಗಾಯವಾದನು, ನಮ್ಮ ಅಕ್ರಮಗಳ ನಿಮಿತ್ತ ಜಜ್ಜಲ್ಪಟ್ಟನು. ನಮ್ಮ ಸಮಾಧಾನಕ್ಕೆ ಕಾರಣವಾದ ಶಿಕ್ಷೆ ಅವನ ಮೇಲೆ ಇತ್ತು. ಅವನ ಬಾಸುಂಡೆಗಳಿಂದ ನಮಗೆ ಸ್ವಸ್ಥವಾಯಿತು. ವಾಚಕರೇ ಇಂಥಾ ಚಿಕಿತ್ಸೆಯು ಬೇರೆ ಎಲ್ಲಿಯಾದರೂ ಸಿಕ್ಕುವದೇ?

ಬಳದೇಶದ ವೃತ್ತಾಂತಗಳು

ಕಳೆದ ವಾರ ಮೈಸೂರಿನಿಂದ ನಂಜನಗೂಡಿಗೆ ಹೋಗುತ್ತಿದ್ದ ರೈಲ್ ಗಾಡಿಗೆ ಎಗ್ಝಿಬಿಷನ್ ಕಟ್ಟಡಕ್ಕೆ ಹೋಗುವ ಬಾಗಿಲ ಬಳಿ ಒಬ್ಬ ಹೆಂಗಸು ಅಕಸ್ಮಾತ್ತಾಗಿ ಸಿಕ್ಕಿ ಕಾಲವಾದಳೆಂದು ತಿಳಿದು ಬಂದಿದೆ

* *

ಶ್ರೀಮನ್ಮಹಾರಾಜರವರು ಯುಗಾದಿಯ ಹಬ್ಬಕ್ಕಿಂತ ೧೨ ದಿನ ಮುಂಚಿತವಾಗಿ ಬೆಂಗಳೂರಿಂದ ರಾಜಧಾನಿಗೆ ದಯಮಾಡುವರೆಂತಲೂ, ಅವರು ಈ ಸಲ ನೀಲಗಿರಿ ಬೆಟ್ಟಕ್ಕೆ ಹೊರಡುವಹಾಗಿಲ್ಲವೆಂತಲೂ ಕೇಳುತ್ತೇವೆ

* *

ಹೊಸ ಅರಮನೆಯ ಕಾಮಗಾರಿಯಲ್ಲಿ ಸೇರಿ ಕೆಲಸ ಮಾಡುತ್ತಿದ್ದ ಒಬ್ಬ ಕೂಲಿಯವನು ಕಳೆದ ವಾರ ಕಾಲಾವಧಿಯಿಂದ ಬಿದ್ದು ಗಾಯಪಟ್ಟನು. ಇವನನ್ನು ಆಸ್ಪತ್ರೆಯಲ್ಲಿಟ್ಟು ಇಲಾಜು ಮಾಡುತ್ತಿದ್ದಾರೆ. ಪ್ರಾಣಭಯವೇನೂ ಇಲ್ಲವೆಂದು ತಿಳಿಯುತ್ತದೆ

* *

ಕಳೆದ ಭಾನುವಾರ ಬೆಳಿಗ್ಗೆ ಸುಮಾರು ೨॥ ಗಂಟೆಗೆ ಶ್ರೀಮನ್ ಯುವರಾಜರವರು ಪರಿವಾರ ಸಮೇತ ಮೋಟಾರ್ ಗಾಡಿಯಲ್ಲಿ ನಂಜನಗೂಡು ಮಾರ್ಗವಾಗಿ ನೀಲಗಿರಿ ಬೆಟ್ಟವನ್ನು ಕುರಿತು ತೆರಳಿದರು. ಅವರ ಕೂಡ ಡಾ॥ ಕೃಷ್ಣಸ್ವಾಮಿ ಐಯರವರೂ, ಮ॥ ಶಿಂಗರಾಚಾರ್ಯರೂ ಹೋಗಿರುತ್ತಾರೆ

* *

ಒಬ್ಬ ಬಾತ್ಮಿದಾರನು ಬರೆಯುವುದು: ಮಂಡ್ಯ ತಾಲ್ಲೂಕು ಕೊಪ್ಪದ ಹೋಬಳಿ ಹೊಸಕೆರೆ ಗ್ರಾಮದಲ್ಲಿ ಸಿದ್ದೇಗೌಡನ ಹಸುವು ಈನಾಯಿತು. ಎರಡು ಕರುಗಳ ಕೆಂಪೆ ಹಾಕುತ್ತಿದ್ದು, ಕಳೆದ ತಾ ೧೮ ನೇ ಶುಕ್ರವಾರ ಮೂರು ಹೆಂಗರುಗಳನ್ನೂ, ತಾ ೧೯ ನೇ ಶನಿವಾರ ಎರಡು ಹೋರಿ ಕರುಗಳನ್ನೂ ಕಂಡು ಹಾಕಿತ್ತು. ಇದನ್ನು ಇಲ್ಲಿನವರೆಲ್ಲಾ ನೋಡಿದಾರೆ

ಕಳೆದ ಸೋಮವಾರ ಮಂಗಳವಾರಗಳಲ್ಲಿ ಸಾಯಂಕಾಲದಲ್ಲಿ ಸ್ವಲ್ಪ ಮಳೆ ಹನಿಗಳು ಸುರಿದವು. ಕೆಲವು ಮೊಹಲ್ಲೆಗಳಲ್ಲಿ ಭೇದಿಯು ಹುಟ್ಟಿ ೬-೭ ಜನರು ಕಾಲವಾದರು. ವಾಂತಿಭೇದಿ ಉಪದ್ರವಲ್ಲವೆಂದೂ ಕುಡಿಯುವ ನೀರು ನಿರ್ಮಲವಾಗಿದೆ ಎಂದೂ ಹೆಲ್ತ್ ಆಫೀಸರವರು ತಿಳಿಸುತ್ತಾರೆ. ಹ್ಯಾಗೂ ಪ್ರಜೆಗಳು ನೀರನ್ನು ಕುದಿಸಿ ಕುಡಿಯುವುದೇ ಕ್ಷೇಮ

* *

ಶ್ರೀಮನ್ ಯುವರಾಜರವರ ವಿವಾಹವು ನಿಶ್ಚಯವಾಯಿತು. ಮ॥ ದಳವಾಯಿ ದೇವರಾಜೇ ಅರಸಿನವರು ತಮ್ಮ ಸುಮಾರು ೧೬ ವರುಷದ ನಾಲ್ಕನೇ ಕುಮಾರಿಯನ್ನು ಕೊಡುವುದಾಗಿ ನಿಷ್ಕರ್ಷೆಯಾಗಿದೆ. ವಿವಾಹೋತ್ಸವವು ಜೂನ್ ತಾ ೧೭ ರಲ್ಲಿ ಜಗನ್ಮೋಹನ ಬಂಗಲೆಯಲ್ಲಿ ನಡೆಯುವುದು. ಕಳೆದ ಭಾನುವಾರ ಸಾಯಂಕಾಲ ಖಾಸಾ ಪುರೋಹಿತರು ಸಕಲ ಮಂಗಳವಾದ್ಯಗಳೊಡನೆ ಹೊಸ ಅರಮನೆಯ ಮುಂಭಾಗದಲ್ಲಿ ಚಪ್ಪರಕ್ಕೆ ಕಂಭಮುಹೂರ್ತವನ್ನು ಶಾಸ್ತ್ರೋಕ್ತವಾಗಿ ಮಾಡಿದರು. ಆಗ್ಗೆ ಅರಸುಗಳೆಲ್ಲಾ ಅಲ್ಲಿ ಹಾಜರಾಗಿದ್ದರು. ಅದೇ ಸಮಯದಲ್ಲಿ ಜಗನ್ಮೋಹನ ಬಂಗಲೆಯಲ್ಲೂ ಮಹೂರ್ತಕಂಬವನ್ನು ಹಾಕಿದರು. ಹೊರಗಡೆ ಚಪ್ಪರಗಳನ್ನೂ, ಒಳಭಾಗದಲ್ಲಿ ವಿವಾಹಮಂಟಪಾದಿಗಳನ್ನೂ ಅರಮನೆಯೊಳಗಣ ಅಂಗಳದಲ್ಲಿ ಮೇಲ್ಕಟ್ಟಣೆಯನ್ನೂ ಹಾಕಿ ಕಟ್ಟಿ ಅಲಂಕಾರ ಮಾಡುವುದಕ್ಕೆ ಸದ್ಯಕ್ಕೆ ೫೦ ಸಾವಿರ ರೂಪಾಯಿ ಸ್ಯಾಂಕ್ಷನ್ ಆಗಿರುವುದಾಗಿ ಕೇಳುತ್ತೇವೆ

* *

ಕಳೆದ ಸೋಮವಾರ ಸಾಯಂಕಾಲ ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿ ಪುರಾಭಿವೃದ್ಧಿಯ ವಿಷಯವಾಗಿ ಒಂದು ಸಭೆ ನಡೆಯಿತು. ಟ್ರಸ್ಟ್ ಬೋರ್ಡ್ ಮೆಂಬರುಗಳು, ಮೂರು ಮಂದಿ ಮ್ಯುನಿಸಿಪಲ್ ಕೌನ್ಸಲರುಗಳು, ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರವರು, ಸೀನಿಯರ್ ಸರ್ಜನ್‍ರವರು, ಚೀಫ್ ಇಂಜನಿಯರವರು ಸಭೆಯಲ್ಲಿ ಹಾಜರಾಗಿದ್ದರು. ಮೈಸೂರು ಪಟ್ಟಣವನ್ನು ಅಭಿವೃದ್ಧಿ ಮಾಡುವುದಕ್ಕೆ ಇದುವರೆಗೆ ೨೧ ಲಕ್ಷ ರೂಪಾಯಿ ತನಕ ಖರ್ಚಾಗಿದೆ ಎಂದೂ, ಬಚ್ಚಲು ಮುಂತಾದದ್ದನ್ನು ಕಟ್ಟುವುದಕ್ಕೆ ಸುಮಾರು ೯ ಲಕ್ಷ ರೂಪಾಯಿ ವಿನಿಯೋಗವಾಗಿದೆ ಎಂದೂ, ಗ್ರಾಮಸಾರವು ಸಾಗಿ ಹೋಗುವುದಕ್ಕೆ ಭೂಮಿಯೊಳಭಾಗದಲ್ಲಿ ನಲ್ಲಿಗಳನ್ನು ಹಾಕಿಸುವುದೇ ಕ್ಷೇಮಕರವೆಂದೂ, ಈ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನೆಲ್ಲಾ ಬರೆದುಕಳುಹಿಸುತ್ತೇನೆಂದೂ ಚೀಫ್ ಇಂಜನಿಯರವರು ಟ್ರಸ್ಟ್ ಬೋರ್ಡ್ ಪ್ರೆಸಿಡೆಂಟರಿಗೂ ಮೆಂಬರುಗಳಿಗೂ ತಿಳಿಸಿದರು

* *

ಕಳೆದ ಶನಿವಾರ ಮಧ್ಯಾಹ್ನ ಬೆಂಗಳೂರಿಂದ ಗುಂಟಕಲ್ಲಿನ ಕಡೆ ಪ್ರಯಾಣ ಮಾಡಿದ ರೈಲ್ ಗಾಡಿಯು ಯಲಹಂಕಪುರವನ್ನು ಸುರಕ್ಷಿತವಾಗಿ ಬಿಟ್ಟಿತು, ಅಲ್ಲಿಂದ ಮುಂದಕ್ಕೆ ಯಲಹಂಕ ಸ್ಟೇಷನ್‍ಗೆ ಹೋಗುತ್ತಿರುವಲ್ಲಿ ಒಂದು ತಿರುವು ಸಿಕ್ಕಿತು. ಆರು ಗಾಡಿಗಳು ಕಂಬಿಗಳನ್ನು ಬಿಟ್ಟು ನೆಲದ ಮೇಲೆ ಹರಿದು ಒಂದು ಪಕ್ಕಕ್ಕೆ ಉರುಳಿಕೊಂಡವು. ಗಾಡಿಗಳಿಗೆ ಹಾಕಿದ್ದ ಕೊಂಡಿಗಳು ಬಿಟ್ಟು ಹೋಗದೆ ಬಲವಾಗಿ ಹಿಡಿದಿದ್ದದ್ದರಿಂದ ವಿಶೇಷ ಅನಾಹುತವಾಗಲಿಲ್ಲ. ೧, ೨ನೇ ಕ್ಲಾಸ್ ಗಾಡಿಯಲ್ಲಿ ಪ್ರಯಾಣಿಕರಿರಲಿಲ್ಲ. ಮೂರು ೩ನೇ ಕ್ಲಾಸ್ ಗಾಡಿಗಳಲ್ಲಿ ಸುಮಾರು ೧೫೦ ಮಂದಿ ಪ್ರಯಾಣಿಕರಿದ್ದರೆಂದು ಊಹಿಸಲ್ಪಟ್ಟಿದೆ. ಗಾಡಿಗಳ ಹೊರಪಾರ್ಶ್ವಗಳು ಮುರಿದು ಹೋದವು, ಒಳಪಾರ್ಶ್ವದಲ್ಲಿ ಮುರಿಯಲಿಲ್ಲ. ಉರುಳಿದ ಕೂಡಲೇ ಪ್ರಯಾಣಿಕರೆಲ್ಲಾ ಒಬ್ಬರಮೇಲೊಬ್ಬರಂತೆ ಒಂದೇ ಕಡೆಗೆ ಮಗುಚಿಕೊಂಡರು. ಆಗ ಅವರಿಗೆ ಉಂಟಾದ ಭೀತಿಯು ವಿವರಿಸಲಶಕ್ಯವಾಗಿದೆ. ರಸ್ತೆಯೆಲ್ಲಾ ೧೨೦ ಗಜಗಳ ದೂರ ಕಿತ್ತು ಹಾಳಾಯಿತು, ಇಷ್ಟಾದರೂ ಒಬ್ಬ ಪ್ರಯಾಣಿಕನಾದರೂ ಸಾಯಲಿಲ್ಲವೆಂದು ಸಂತೋಷಪಡಬೇಕಾಗಿದೆ. ಗಾಬರಿ ಬಿದ್ದು ನಾನಾ ಪ್ರಕಾರವಾಗಿ ಅರಚಿಕೊಳ್ಳುತ್ತಿದ್ದ ಪ್ರಯಾಣಿಕರನ್ನೆಲ್ಲಾ ರೈಲ್ವೆ ನೌಕರರು ಸಾಹಸಪಟ್ಟು ಕಿಟಕಿ ಬಾಗಿಲುಗಳ ಮೂಲಕ ಹೊರಕ್ಕೆ ಕರೆದುಕೊಂಡರು. ಅವರನ್ನೆಲ್ಲಾ ಪರೀಕ್ಷಿಸುವಲ್ಲಿ ಹದಿಮೂರು ಮಂದಿಗೆ ಮಾತ್ರ ಗಾಯಗಳಾಗಿದ್ದುವು. ಒಬ್ಬ ಹೆಂಗಸಿನ ಮುಂಗೈ ಮೂಳೆಯು ಮುರಿಯಿತು, ಒಬ್ಬ ಗಂಡಸಿಗೂ ಒಬ್ಬ ಹೆಂಗಸಿಗೂ ಕಿವಿ ಹರಿದುಹೋಯಿತು. ಉಳಿದ ಹತ್ತು ಮಂದಿಗೆ ಸ್ವಲ್ಪ ಗಾಯಗಳಾದವು. ಅವರನ್ನೆಲ್ಲಾ ಆಸ್ಪತ್ರೆಗೆ ಕೂಡಲೇ ಸಾಗಿಸಿದರು. ಈ ವ್ಯಕ್ತಿ ಏಳುಮಂದಿ ಮಾತ್ರ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದಾರೆ. ಉಳಿದವರು ತಮ್ಮ ಮನೆಗಳಿಗೆ ಹೋದರು. ಡೆಪ್ಯುಟಿ ಕಮಿಷನರೂ ಪೋಲೀಸ್ ಸೂಪರಿಂಟೆಂಡೆಂಟರೂ, ರೈಲ್ವೆ ಅಧಿಕಾರಿಗಳೂ ಬೆಂಗಳೂರಿನಿಂದ ಸ್ಪೆಷಲ್ ರೈಲಿನಲ್ಲಿ ಹೋಗಿ ತನಿಖೆಮಾಡಿಕೊಂಡು ಬಂದರು. ಕೆಟ್ಟುಹೋಗಿದ್ದ ರಸ್ತೆಯು ೮-೯ ಗಂಟೆಗಳೊಳಗೆ ದುರಸ್ತಾಯಿತು. ಗಾಯಪಟ್ಟವರ ವ್ಯಕ್ತಿ ಎಂಟುಮಂದಿಯ ಹೆಸರೇನೆಂದರೆ—ಬಾಲಘಾಟಿನ ಮಂಚಯ್ಯ, ಯಲಹಂಕದ ಸರಸ್ವತಿಬಾಯಿ, ತಿರುವಂಗಾಡಿ ಗೋವಿಂದು, ನೀಲಸಂದ್ರದ ವೀರಮ್ಮ, ಯತ್ರಪಾಳ್ಯದ ಅಕ್ಕಮ್ಮ, ಛಾಂಪಿಯನ್ ರೀಫ್ ಸಕ್ಕಿನಾಬಿ, ದೇವನಹಳ್ಳಿ ಕೋದಂಡರಾಮ ಐಯರ್, ದೊಡ್ಡಬಳ್ಳಾಪುರದ ವರದಮ್ಮ.

ತಾಲ್ಲೂಕು ವರ್ತಮಾನ.

ಬೌರಿಂಗ್‍ಪೇಟೆ ತಾ॥ ಬೇತಮಂಗಲ.—ಈ ಊರಿನಲ್ಲಿ ಅನೇಕ ಮಕ್ಕಳು ಸಿಡುಬಿನ ಉಪದ್ರದಿಂದ ನರಳುತ್ತಾ ಇದಾರೆ. ಆದರೆ ಇಂದಿನ ವರೆಗೂ ಮರಣಗಳಿಲ್ಲದೆ ಅನೇಕರು ಗುಣ ಹೊಂದುತ್ತಾ ಇದಾರೆ. ಇದೇ ಗ್ರಾಮಕ್ಕೆ ಸೇರಿದ ರಾಮಸಾಗರದಲ್ಲಿ ಕೆಲವು ಮಂದಿ ಆಕಸ್ಮಿಕವಾದ ಮರಣವನ್ನು ಹೊಂದುತ್ತಾ ಇದ್ದ ಸಂಗತಿಯು ಇಲ್ಲಿನ ಡಾಕ್ಟರ್ ಸಾಹೇಬರಿಗೂ ಮತ್ತು ಅಮಲ್ದಾರ್ ಸಾಹೇಬರಿಗೂ ರಿಪೋರ್ಟ್ ಆಗಿ ಅವರುಗಳು ಹೋಗಿ ವಿಚಾರಿಸಿಕೊಂಡು ಬಂದಿದಾರೆ. ಇನ್ನೂ ಮರಣಗಳು ಆಗುತ್ತಾ ಇವೆ. ಇದಕ್ಕೆ ಕಾರಣ ಪ್ಲೇಗ್ ಉಪದ್ರವಾಗಿರಬಹುದೆಂದು ಅನೇಕರು ಹೇಳುತ್ತಾರೆ. ಆದರೆ ನಿಜಸ್ಥಿತಿಯು ಡಾಕ್ಟರ್ ಸಾಹೇಬರಿಂದ ಹೊರಪಡತಕ್ಕದ್ದಾಗಿದೆ—ಅವರೆ ಪರಿಷಯಲ್ಲಿ ಬೌರಿಂಗ್‍ಪೇಟೆಯಲ್ಲಿ ವಾಸವಾಗಿರುವ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಾದ ರೆವ್ ಬಟ್ಲಿಕ್ ಸಾಹೇಬರವರೂ ಮತ್ತು ಕನಸಪಾಲಕರಾದ ರೆವ್ ನೋಹಯ್ಯನವರೂ ಬೌರಿಂಗ್‍ಪೇಟೆ ಬೇತಮಂಗಲ, ಕಾಮಸಮುದ್ರ ಮತ್ತು ಮುಳುಬಾಗಲು ಈ ಊರುಗಳ ಉಪದೇಶಿಗಳನ್ನು ಕರೆದುಕೊಂಡು ಹೋಗಿ ಬಹು ಆಸಕ್ತಿಯಿಂದ ಪರಿಷೆಯಲ್ಲಿ ವಾಕ್ಯದ ಪಾರಾಯಣವನ್ನು ಮಾಡಿಸಿದರು. ಮತ್ತು ಕೋಲಾರದಲ್ಲಿ ವಾಸವಾಗಿರುವ ಮಾಸ್ಕಲ್ ಅಮ್ಮನವರು ತಮ್ಮ ಕೈಕೆಳಗಿರುವ ಬೈಬಲ್ ಸ್ತ್ರೀಯರನ್ನು ಕರೆದುಕೊಂಡು ಬಂದು ಕರ್ತನ ಜೀವವುಳ್ಳ ವಾಕ್ಯವನ್ನು ಬಹು ಆಸಕ್ತಿಯಿಂದ ಸಾರಿಸಿದರು. ಹೀಗೆ ಸಾರಲ್ಪಟ್ಟ ವಾಕ್ಯವನ್ನು ಅನೇಕ ಸಹೋದರ ಸಹೋದರಿಯರುಗಳು ಬಹು ಆಸಕ್ತಿಯಿಂದ ಕೇಳಿದರು

ನಮ್ಮ ಪುಸ್ತಕಭಂಡಾರವು

“ ಸುದತೀ ಶತಕಂ

ನೀತಿಯುಕ್ತವಾದ ಈ ಕಾವ್ಯವು ಬಾಲೆಯರಿಗೂ, ಯುವತಿಯರಿಗೂ, ಗೃಹಿಣಿಯರಿಗೂ ನೀತಿಗಳನ್ನು ಬೋಧಿಸುವಂತೆ ಕಂದಪದ್ಯರೂಪವಾಗಿ ಸುಲಭವಾದ ಕನ್ನಡದಲ್ಲಿ ಬೆಂಗಳೂರು ಗವರ್ನ್‌ಮೆಂಟ್ ಗರಲ್ಸ್ ಸ್ಕೂಲ್ ಅ|| ಮಾಸ್ಟರ್ ಮ|| ಎಚ್ ನಾಗಪ್ಪನವರು ರಚಿಸಿದಾರೆ ಈ ಶತಕದಲ್ಲಿ ಹಿತವಿಚಾರ ದಿನಚರ್ಯೆ, ಮಾತೃಭಕ್ತಿ, ದಿಷ್ಟಲಕ್ಷಣ, ಸಜ್ಜನರಲಕ್ಷಣ, ಪರೋಪಕಾರ, ಪತಿಭಕ್ತಿ, ಎಂಬೀ ಎಳು ವಿಚಾರಗಳನ್ನು ಕುರಿತು ವರ್ಣಿಸಿರುತ್ತಾರೆ ಕ್ಲಿಷ್ಟಪದಗಳ ಟಿಪ್ಪಣಿಯು ಪುಸ್ತಕದ ಅಂತ್ಯಭಾಗದಲ್ಲಿ ಕೊಡಲ್ಪಟ್ಟಿದೆ ಇದರ ಕ್ರಯ ೨ ಆಣೆ, ಗ್ರಂಥಕರ್ತರಲ್ಲಿಯೂ ಬೇರೆಯವರಲ್ಲಿಯೂ ದೊರೆಯುತ್ತದೆ

“ ಸನಾತನ ಸೂಕ್ಷ್ಮಧರ್ಮ ’

ಈ ಪುಸ್ತಕವು ಸ್ಕೂಲಿನಲ್ಲಿ ಓದುವ ಬಾಲಕ ಬಾಲಕಿಯರಿಗೆ ಉಪಯೋಗವಾದುದು ವಿದ್ಯಾರ್ಥಿಗಳು ಅವಶ್ಯವಾಗಿ ತಿಳಿಯಬೇಕಾದ ಸಾಮಾನ್ಯ ವಿಷಯಗಳನ್ನೆಲ್ಲಾ ಸಂಗ್ರಹಮಾಡಿ ಪುಸ್ತಕರೂಪವಾಗಿ ಮೈಸೂರು ದಳವಾಯಿ ಸ್ಕೂಲ್ ಅ|| ಮಾಸ್ಟರ್ ಮ|| ಎಂ ನರಸಿಂಹಯ್ಯನವರು ರಚಿಸಿದಾರೆ ಇದರ ಕ್ರಯ ೧|| ಆಣೆ ಪುಸ್ತಕ ದೊರೆಯುತಕ್ಕ ಸ್ಥಳ—ಕೆ ನರಸಿಂಹಯ್ಯ ಕಂಪೆನಿ, ಮೈಸೂರು

“ ಸಂಗೀತ ಪಾರಿಜಾತ ’

ಈ ಹಾಡಿನ ಪುಸ್ತಕವನ್ನು ಮೈಸೂರಿನಲ್ಲಿರುವ ಆಸ್ಥಾನ ವಿದ್ವಾನ್ ಮ|| ವೇ ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಆರ್ಯರಮಣಿಯರ ಉಪಯೋಗಕ್ಕಾಗಿ ಹೊಸ ಮಟ್ಟುಗಳನ್ನು ಹಾಕಿ ರಚಿಸಿದಾರೆ ಇದರ ಕ್ರಯ ೪ ಆಣೆ

‘ ವೃದಿಕಮಿತ್ರ

ಇದು ಧರ್ಮಸಂಬಂಧವಾದ ತ್ರೈಮಾಸಿಕ ಪತ್ರಿಕೆ ಇದನ್ನು ಮಂಗಳೂರು ಬಾಸೆಲ್ ಮಿಷನಿನವರು ಪ್ರಸಂಗಿಗಳ ಉಪಯೋಗಾರ್ಥವಾಗಿ ಮೂರು ತಿಂಗಳಿಗೊಂದಾವರ್ತಿ ಕಳೆದ ಜನವರಿ ತಿಂಗಳ ಲಾಗಾಯ್ತು ಪ್ರಚುರ ಪಡಿಸುತ್ತಾ ಬಂದಿದಾರೆ ಇದರ ಚಂದಾ ವಿವರ—ಹಾಸಲು ಇಲ್ಲದೆ ೧ ವರುಷಕ್ಕೆ ೪ ಆಣೆ ಹಾಸಲು ಸಹಿತ ೫ ಆಣೆ

“ಸೂಪಾಕಬೋಧ

ಹೆಣ್ಣುಮಕ್ಕಳು ಪಾಕ ಮಾಡುವ ವಿಧಾನವನ್ನು ಬಹು ಸುಲಭವಾದ ರೀತಿಯಲ್ಲಿ ಗ್ರಹಿಸುವಂತೆ ಮೇಲ್ಕಂಡ ಪುಸ್ತಕವನ್ನು ಮ|| ಜಿ ರಘುಪತ್ಯಾಚಾರ್ಯರವರು ರಚಿಸಿದಾರೆ ಇವರು ಪ್ರಸಿದ್ಧಿಯನ್ನು ಪಡೆದಿದ್ದ ಮಾಜಿ ಪಂಡಿತ ಜಯರಾಯಾಚಾರ್ಯರ ಸುಕರೆಂಬುವುದೊಂದೇ ಇವರು ರಚಿಸಿರುವ ಗ್ರಂಥ ಶ್ಲಾಘ್ಯತರವಾದವುಗಳೆಂಬುವದಕ್ಕೆ ಸಾಕಾದಷ್ಟು ಪ್ರಮಾಣವಾಗಿದೆ ಇದರ ಕ್ರಯ ೩ ಆಣೆ ಇದು ಗ್ರಂಥ ಕರ್ತರಲ್ಲಿಯೂ ಬೇರೆ ಪುಸ್ತಕ ಶಾಲೆಗಳಲ್ಲಿಯೂ ದೊರೆಯುತ್ತದೆ

ಶೂರಸೇನ ಚರಿತ್ರೆ

ಇದು ಪ್ರಸಿದ್ಧ ಇಂಗ್ಲಿಷ್ ಕವಿಯಾಗಿದ್ದ ಷೇಕ್ಸ್‌ಪಿಯರು ರಚಿಸಿದ ನಾಟಕ ಮೈಸೂರು ಶ್ರೀಮನ್ ಮಹಾರಾಜರವರ ಆಸ್ಥಾನಕವಿಗಳಾಗಿದ್ದ ಬಸವಪ್ಪಶಾಸ್ತ್ರಿಗಳೂ, ಶ್ರೀಮನ್ ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಶಾಸ್ತ್ರಬೋಧಕರಾಗಿಯೂ ವಿದ್ಯಾಭ್ಯಾಸದ ಇಲಾಖೆ ಟ್ರಾನ್ಸ್‌ಲೇಟರಾಗಿಯೂ ಇದ್ದ ಸಿ ಸುಬ್ಬರಾವ್, ಬಿ ಎ ಇವರೂ ಏಕೀಭವಿಸಿ ಕನ್ನಡಕ್ಕೆ ಭಾಷಾಂತರ ಮಾಡಿದರು ಇದು ಬಹು ರಸ್ಯವಾದ ಮತ್ತು ರಸಭರಿತವಾದ ನಾಟಕವೆಂಬುವುದನ್ನು ಅನೇಕರು ನೋಡಿ ಸ್ತೋತ್ರಮಾಡಿರುತ್ತಾರೆ ಈ ನಾಟಕ ಗ್ರಂಥದ ಸರ್ವಾಧಿಕಾರವನ್ನೂ ಪಡೆದಿರುವ ಅರಮನೆ ಕಂಟ್ರೋಲರವರ ಆಫೀಸು ಮ್ಯಾನೇಜರ್ ಮ|| ಎ ರಾಮಚಂದ್ರರಾಯರು ಎರಡನೆಯಾವೃತ್ತಿ ಚೆನ್ನಾಗಿ ಪರಿಷ್ಕರಿಸಿ ಅಚ್ಚುಮಾಡಿಸಿರುತ್ತಾರೆ ಈ ಪುಸ್ತಕವನ್ನು ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದವರು ೧೯೧೧ನೇ ಇಸವಿಯ ಎಫ್ ಎ ಪರೀಕ್ಷೆಗೆ ನೇಮಕ ಮಾಡಿರೋಣವರಿಂದಲೇ ಇದು ಬಹು ಉತ್ತಮವಾದ ಮತ್ತು ನೀತಿ ಬೋಧಕವಾದ ನಾಟಕವೆಂದು ಗ್ರಹಿಸಿಕೊಳ್ಳಬಹುದು ಮೈಸೂರು ಗ್ರಾಜುಯೇಟ್ಸ್ ಪ್ರೆಸ್ಸಿನವರು ಇದನ್ನು ಚೆನ್ನಾಗಿ ಅಚ್ಚು ಹಾಕಿರುತ್ತಾರೆ ಇದರ ಕ್ರಯ ಒಂದು ರೂಪಾಯಿ ಪ್ರತಿಗಳು ಮ|| ಎ ರಾಮಚಂದ್ರರಾಯರಲ್ಲಿ ದೊರೆಯುವವು ಕನ್ನಡ ವಿದ್ಯಾಭಿಮಾನಿಗಳು ಇದಕ್ಕೆ ಪ್ರೋತ್ಸಾಹಕೊಡುವರೆಂದು ನಿರೀಕ್ಷಿಸುತ್ತೇವೆ

ಒಳ್ಳೇ ಉಪಾಧ್ಯಾಯರ ವಿಷಯದಲ್ಲಿ ಕೃತಜ್ಞತಾ ಪ್ರದರ್ಶನವು

ಪಿರಿಯಾಪಟ್ಟಣ ತಾಲ್ಲೂಕು ಮರಿಯಪಟ್ಣ

ಈ ಗ್ರಾಮಕ್ಕೆ ಗವರ್ನ್‌ಮೆಂಟ್ ಸ್ಕೂಲ್ ಬಂದು ಇಲ್ಲಿಗೆ ೧೨ ವರುಷಗಳ ಮೇಲ್ಪಟ್ಟು ಆಯಿತು ಆದರೆ ಸ್ಕೂಲು ಬಂದ ೪-೫ ವರುಷಗಳು ಅದು ವೃದ್ಧಿಗೆ ಬಾರದೆ ಕೇವಲ ಹೀನಸ್ಥಿತಿಯಲ್ಲಿತ್ತು ಇದಕ್ಕೆ ಮಾಸ್ಟರುಗಳು ಪ್ರೋತ್ಸಾಹಪೂರ್ವಕ ಶ್ರಮಪಟ್ಟು ಕೆಲಸ ಮಾಡದೇ ಹೋದದ್ದೂ ಪ್ರಜೆಗಳಿಗೆ ವಿದ್ಯೆಯ ಮೇಲೆ ಅಭಿಲಾಷ ಇಲ್ಲದ್ದೂ ಕಾರಣವಾಯ್ತು ಈಚೆಗೆ ಗ್ರಾಮಸ್ಥರು ಈ ಭಾಗವನ್ನು ಸರ್ಕಾರಕ್ಕೆ ಅರಿಕೆ ಮಾಡಿ ಕೊಂಡಿದ್ದರ ಮೇಲೆ ೧೯೦೩ರಲ್ಲಿ ಹಾಲಿ ಈಗ ಮರಡಿಹಳ್ಳಿ ಸ್ಕೂಲಿಗೆ ವರ್ಗವಟ್ಟು ಹೋಗಿರುವ ಮ ನರಸಿಂಗರಾಯರನ್ನು ಈ ಹರಿಯಬ್ಬೆ ಸ್ಕೂಲಿಗೆ ವರ್ಗ ಮಾಡಿದರು ಇವರು ಸ್ಕೂಲು ಛಾರ್ಜನ್ನು ವಹಿಸಿದಾಗ ೬ ಮಂದಿ ಹುಡುಗರು ಮಾತ್ರ ಸ್ಕೂಲಿಗೆ ಬರುತ್ತಾ ಇದ್ದರು ಹೀಗೆಯೇ ೨—೩ ತಿಂಗಳು ಹೀನ ಸ್ಥಿತಿಯಲ್ಲಿಯೇ ಇದ್ದಿತು ತರುವಾಯ ನರಸಿಂಗರಾಯರು ಕಷ್ಟಪಟ್ಟು ಕೆಲಸ ಮಾಡುತ್ತಾ, ತಿಳುವಳಿಕೆ ಇಲ್ಲದ ಪ್ರಜೆಗಳಿಗೆ ವಿದ್ಯೆಯಿಂದಾಗುವ ಪ್ರಯೋಜನವನ್ನು ತಿಳಿಸುತ್ತಾ ಬಂದದ್ದರ ಮೇಲೆ ೬ ತಿಂಗಳೊಳಗಾಗಿ ಡಿ ಇನ್ಸ್ ಮ|| ಕೆ ಎಚ್ ವೀರಭದ್ರಯ್ಯನವರು ದಯಮಾಡಿಸಿ ಪರೀಕ್ಷಿಸುವ ಕಾಲಕ್ಕೆ ೪೫ ಮಂದಿ ವಿದ್ಯಾರ್ಥಿಗಳ ವರಿವಿಗೂ ಜಮಾಯಿಸಿ ಕಳ್ಳಮಟ್ಟಿಗೆ ವೃದ್ಧಿಗೆ ಬಂದಿತ್ತು ಅಲ್ಲಿಂದ ಮಾಸ್ಟರು ಇನ್ನು ಶ್ರಮವಹಿಸಿ ಕೆಲಸ ಮಾಡಿದ್ದರ ಮೇಲೆ ಪುನಹ ಡಿ ಇನ್ಸ್ ಮ|| ಎನ್ ಶ್ಯಾಮರಾಯರು ದಯಮಾಡಿದಾಗ ೬೩ ಮಂದಿ ವಿದ್ಯಾರ್ಥಿಗಳು ಹಾಜರಿದ್ದು, ಸ್ಕೂಲಿನ ಸ್ಥಿತಿಯು ತುಂಬಾ ಚೆನ್ನಾಗಿದ್ದುದರ ಮೇಲೆ ಕೂಡ್ಲೆ ಸ್ಕೂಲಿಗೆ ಬೇಕಾದ ಸಾಮಾನುಗಳೂ ಒಬ್ಬರು ಅ|| ಮಾಸ್ಟರೂ ಕೊಡಲ್ಪಟ್ಟರು ಈಚೆಗೆ ಹೆಡ್ ಮಾಸ್ಟರು ಗ್ರಾಮದ ಜನಗಳಿಗೂ ಆಸ್‌ಪಾಸ್ ಗ್ರಾಮದ ಜನಗಳಿಗೂ ಪ್ರೋತ್ಸಾಹ ಕೊಡುತ್ತಾ ಬಂದದ್ದರ ಮೇಲೆ ೧೩೦ ಮಂದಿ ವಿದ್ಯಾರ್ಥಿಗಳ ವರಿವಿಗೂ ಜಮಾಯಿಸಿ, ಇನ್ನೊಬ್ಬರು ಅ|| ಮಾಸ್ಟರು ಕೊಡಬೇಕೆಂದು ತೀರ್ಮಾನವಾದದ್ದಲ್ಲದೆ ಡಿ ಇನ್ಸ್ ಮ ಶ್ಯಾಮರಾಯರು ಹೆಡ್ ಮಾಸ್ಟರ ಮತ್ತು ಪಟೇಲರ ಕೋರಿಕೆಯ ಪ್ರಕಾರ ಈ ಸ್ಕೂಲಿಗೆ ಲೋವರ್ ಸೆಕಂಡರಿ ಕ್ಲಾಸನ್ನು ಕೊಟ್ಟಿದ್ದಕ್ಕೆ ೧೯೦೫ರಲ್ಲಿ ಇಬ್ಬರೂ, ೧೯೦೬ರಲ್ಲಿ ೫ ಮಂದಿಯೂ ತೇರ್ಗಡೆಯಾಗಿರುವುದು ಈ ಸ್ಕೂಲು ವೃದ್ಧಿಗೆ ಮತ್ತಷ್ಟು ಆಧಾರವಾಯಿತು ಹೆಡ್ ಮಾಸ್ಟರು ಶ್ರದ್ಧೆಯಿಂದ ಕೆಲಸ ಮಾಡುತ್ತಾ, ವಿದ್ಯೆಯ ರುಚಿಯನ್ನರಿಯದ ಮೂಢರಾದ ಪ್ರಜೆಗಳಿಗೆ ಸನ್ಮಾರ್ಗವನ್ನು ಕುರಿತು ಉಪದೇಶ ಮಾಡುತ್ತಾ, ಬಡಬಗ್ಗರಾದ ವಿದ್ಯಾರ್ಥಿಗಳಿಗೆ ತಮ್ಮ ಕೈಯಿಂದ ಬಟ್ಟೆ ಪುಸ್ತಕ ವಗೈರೆ ಕೊಟ್ಟು ಕೆಲವರಿಗೆ ಅನ್ನ ಹಾಕಲು ನಾನಾ ಏರ್ಪಾಡು ಮಾಡಿ ಶ್ರಮಪಟ್ಟದ್ದರಿಂದಲೇ ಕೇವಲ ಹೀನಸ್ಥಿತಿಗೆ ಬಂದಿದ್ದ ಈ ಸ್ಕೂಲು ೬-೭ ವರುಷಗಳಲ್ಲಿ ಇಷ್ಟು ಉತ್ತಮ ಸ್ಥಿತಿಗೆ ಬಂದಿತು ಇವರ ಕೀರ್ತಿಯು ಎಲ್ಲೆಲ್ಲಿಯೂ ಹರಡಿದ್ದರಿಂದ ಆಸ್‌ಪಾಸ್ ಗ್ರಾಮಗಳಿಂದ ಹುಡುಗರು ಸೇರಿದ್ದಲ್ಲದೆ ಚಳ್ಳಕೆರೆ, ಕೀರ್ತಿ ತಾಲ್ಲೂಕುಗಳಿಂದಲೂ ಹುಡುಗರು ಬಂದು ಸೇರಿದರು ಈ ಸ್ಕೂಲಿನಲ್ಲಿ ಪರಸ್ಥಳದ ಹುಡುಗರೇ ೪೦ ಮಂದಿಯ ಮೇಲೆ ಇರುತ್ತಾರೆ ಇವರ ಕಷ್ಟಸುಖಗಳಿಗೆಲ್ಲಾ ಹೆಡ್ ಮಾಸ್ಟರೇ ಬಾಧ್ಯರಾಗಿದ್ದರು ವಿದ್ಯಾರ್ಥಿಗಳಿಗೂ ಗುರುಗಳಿಗೂ ಇರತಕ್ಕ ವಿಶ್ವಾಸವು ಶರೀರಕ್ಕೂ ನೆರಳಿಗೂ ಇರುವ ಹೊಂದಿಕೆಯಂತೆ ರಮ್ಯವಾಗಿತ್ತು ಇವರ ಉಪದೇಶದಿಂದ ಗ್ರಾಮವೆಲ್ಲಾ ಪರಿಶುದ್ಧವಾಯಿತು ಇದನ್ನೆಲ್ಲಾ ನೋಡಿ ತಿಳಿದಿರುವ ತಾಲ್ಲೂಕು ಅಮಲ್ದಾರ್ರುಗಳೂ ಡಿಸ್ಟ್ರಿಕ್ಟು ಅಸಿಸ್ಟೆಂಟು ಸಾಹೇಬರುಗಳೂ, ಡೆಪ್ಯುಟಿ ಕಮಿಷನರ್ ಸಾಹೇಬರುಗಳೂ ಮತ್ತು ಇಲಾಖಾ ಡಿ ಇನ್ಸ್ ಸಾಹೇಬರುಗಳೂ ಸಹಾ ಹೆಡ್ ಮಾಸ್ಟರವರ ಸರಿಯಾದ ಸುಬೋಧನೆಯಿಂದ ವಿದ್ಯಾರ್ಥಿಗಳೆಲ್ಲಾ ಸದ್ನಡತೆಯುಳ್ಳವರಾಗಿರುತ್ತಾರೆಂತಲೂ, ಪ್ರಜೆಗಳೆಲ್ಲಾ ಹೆಡ್ ಮಾಸ್ಟರವರಿಗೆ ತುಂಬಾ ಅನುಕೂಲಸ್ಥರಾಗಿ ಕೇವಲ ತಮ್ಮ ಸ್ಕೂಲನ್ನೇ ಮೇಲಾದದ್ದು ಎನ್ನಿಸಿಕೊಳ್ಳತಕ್ಕವರಾಗಿದಾರೆಂತಲೂ, ಈ ರೀತಿ ಉನ್ನತ ಸ್ಥಿತಿಯಲ್ಲಿರತಕ್ಕ ಸ್ಕೂಲು ಈ ಡಿಸ್ಟ್ರಿಕ್ಟಿನಲ್ಲಿ ಇದೇ ಮೊದಲನೆಯದೆಂತಲೂ, ಹೆಡ್ ಮಾಸ್ಟರಿಗೆ ತಕ್ಕ ಪ್ರತಿಫಲವನ್ನು ಸರ್ಕಾರದವರು ಕೊಡಬೇಕೆಂತಲೂ ತುಂಬಾ ಸಂತೋಷಚಿತ್ತರಾಗಿ ಅಭಿಪ್ರಾಯ ಪಟ್ಟಿರುತ್ತಾರೆ ಇಂಥಾ ಸಮಯದಲ್ಲಿ ಈ ಹೆಡ್ ಮಾಸ್ಟರನ್ನು ಕಳೆದ ಜನವರಿಯಲ್ಲಿ ಮರಡಿಹಳ್ಳಿ ಸ್ಕೂಲಿಗೆ ವರ್ಗಮಾಡಿದರು ಅದರಂತೆ ಹೆಡ್ ಮಾಸ್ಟರು ಛಾರ್ಜ ಕೊಟ್ಟು ಹೊರಟುಹೋದದ್ದು ಅನೇಕ ಮಂದಿ ಬಡ ಜನಗಳಿಗೂ ಪರಸ್ಥಳದ ವಿದ್ಯಾರ್ಥಿಗಳಿಗೂ ಆಸರೆ ತಪ್ಪಿದಂತಾಯಿತು ಇನ್ನು ಮುಂದೆ ಇಂಥಾ ಪರೋಪಕಾರಿಗಳೂ ಸರ್ವಜ್ಞ ಶೀಲರೂ ಎಂದಿಗೆ ದೊರೆಯುವರೋ ಎಂದು ನಿರೀಕ್ಷಿಸಬೇಕಾಗಿದೆ ಇದುವರಿವಿಗೂ ಅಂದರೆ ಎರಡು ತಿಂಗಳಾದಾಗ್ಯೂ ಬೇರೆ ಹೆಡ್ ಮಾಸ್ಟರು ಬರಲಿಲ್ಲ ಇದು ಸ್ಕೂಲಿನ ವೃದ್ಧಿಗೆ ಕುಂದಕವಾಗಿರುತ್ತೆ ಹೆಡ್ ಮಾಸ್ಟರಾದ ನರಸಿಂಗರಾಯರು ಜನವರಿ ತಾ ೨೭ರಲ್ಲಿ ಛಾರ್ಜ ಕೊಟ್ಟರು ಆ ದಿವಸ ಆಸ್‌ಪಾಸ್ ಇರತಕ್ಕ ಗ್ರಾಮಸ್ಥರೂ ಸ್ಥಳದ ಪಟೇಲ್ ಶ್ಯಾನುಭೋಗರೂ ಗ್ರಾಮದ ಮುಖಂಡರೂ ಸೇರಿ ಸ್ಕೂಲಿನಲ್ಲಿ ಸಭಾ ನಡಿಸಿ ಇದುವರಿವಿಗೆ ಇದ್ದ ಸಮಸ್ತ ಭಾಗಗಳನ್ನೂ ಮುಂದೆ ನಡೆಯಬೇಕಾದದ್ದನ್ನೂ ಹೆಡ್ ಮಾಸ್ಟರವರಿಂದ ಹೊಂದಿರತಕ್ಕ ಉಪಕಾರವನ್ನೂ ಈಗ ಅವರಿಗೆ ವರ್ಗವಾದದ್ದರಿಂದ ಅನೇಕ ಜನ ವಿದ್ಯಾರ್ಥಿಗಳಿಗೆ ತುಂಬಾ ಕೊರತೆಗೆ ಅವಕಾಶವಾಗಿ ಅವರ ವಿದ್ಯಾಭ್ಯಾಸಂಗಕ್ಕೆ ವರ್ಗವೇ ಇಲ್ಲವೆಂತಲೂ ಇನ್ನು ಅನೇಕ ಸಂಗತಿ ಕುರಿತು ಮ ಹರಿಯಬ್ಬೆ ಪಟೇಲ್ ಚಿಕ್ಕ ಗುಂಡೇಗೌಡರು ಉಪನ್ಯಾಸ ಮಾಡಿದ್ದಕ್ಕೆ ಹೆಡ್ ಮಾಸ್ಟರ್ ನರಸಿಂಗರಾಯರು ಸದುತ್ತರಗಳನ್ನು ಕೊಟ್ಟದ್ದಲ್ಲದೆ ಮುಂದೆ ತಮಗಿಂತಲೂ ಗುಣಾಢ್ಯರು ಒದುತ್ತಾರೆಂತಲೂ ಗ್ರಾಮಸ್ಥರೆಲ್ಲ ವಿಕರೀತ ಚಿಂತಾಸ್ಪದರಾಗಿರಬೇಕೆಂತಲೂ ತುಂಬಾ ಸಂತೋಷ ಸೂಚಕವಾದ ಸಂಭಾಷಣೆ ನಡೆದ ರುವಾಯ ಹೂವು ಗಂಧ ತಾಂಬೂಲಗಳು ಕೊಡಲ್ಪಟ್ಟು ಸಭಾ ಬರಖಾಸ್ತಾಯಿತು ಮತ್ತು ಆ ರಾತ್ರಿಯೇ ಗ್ರಾಮದಲ್ಲಿ ದೇವತಾ ಸೇವೆಯೂ ಉತ್ಸವವೂ ವಿಜೃಂಭಣೆಯಿಂದ ನಡೆದು ಸೇರಿದ್ದ ಅನೇಕ ಜನಗಳಿಗೂ ಫಲಾಹಾರ ಪದಾರ್ಥಗಳು ಕೊಡಲ್ಪಟ್ಟವು

ಜಿ ಎ

೯ ೩| ಮಾಗಡಿ ತಾಲ್ಲೂಕು ಗೆಜ್ಜಗಾರಗುಪ್ಪೆ

ಈ ಊರಿನಲ್ಲಿ ೧೩ ವರ್ಷಗಳಿಂದಲೂ ಸ್ಕೂಲ್ ಮಾಸ್ಟರಾಗಿದ್ದು ಒಳ್ಳೇ ಹೆಸರನ್ನು ಪಡೆದ ಮ|| ಕೆ ರಂಗಪ್ಪನವರು ಪ್ರಮೋಷನ್ ಹೊಂದಿ ಬೇರೆ ಕಡೆಗೆ ವರ್ಗವಾಗಿ ಹೋಗುವರೆಂಬ ವರ್ತಮಾನವನ್ನು ತಿಳಿಸಲು ಬಹಳ ವ್ಯಸನಪಡುತ್ತೇವೆ ಇವರು ಈ ಗ್ರಾಮಕ್ಕೆ ವರ್ಗವಾಗಿ ಬಂದು ೧೩ ವರ್ಷಗಳಾದವು ಇವರು ಬಂದ ಮೇಲೆ ಈ ಸ್ಕೂಲು ಬಹಳ ಅಭಿವೃದ್ಧಿ ಹೊಂದಿ ಬಹುಮಂದಿ ಹುಡುಗರು ವಿದ್ಯಾವಂತರಾದರು ಇವರು ಇಲ್ಲಿನ ಜನಗಳಲ್ಲಿ ನಂಬಿಕೆ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡು ನಿಷ್ಪಕ್ಷಪಾತದಿಂದ ಕೆಲಸ ಮಾಡುತ್ತಾ ಒಳ್ಳೇ ಹೆಸರನ್ನು ಪಡೆದರು ಇವರ ಸುಗುಣಪೂರ್ಣ ನಡತೆಯೂ ಬಹು ಶ್ಲಾಘ್ಯವಾದವುಗಳು ಇವರು ಈ ಗ್ರಾಮದಲ್ಲೇ ಪೆನ್ಷನ್ ಸರ್ವೀಸು ಮಾಡುವರೆಂದು ನಂಬಿಕೊಂಡಿದ್ದೆವು ಇಷ್ಟರಲ್ಲೇ ಇಂಥಹ ಉತ್ತಮೋತ್ತಮರಾದ ಉಪಾಧ್ಯಾಯರನ್ನು ಬೇರೆ ಕಡೆಗೆ ವರ್ಗಮಾಡಿದ್ದು ನಮ್ಮಗಳ ದೌರ್ಭಾಗ್ಯವೆಂದೇ ಭಾವಿಸಬೇಕಾಗಿದೆ ಈ ವಿಷಯದಲ್ಲಿ ಈ ಗ್ರಾಮದ ಆಬಾಲವೃದ್ಧರೂ ಬಹಳ ವ್ಯಸನಪಡುತ್ತಿದಾರೆ ಪುನಃ ಮ|| ಕೆ ರಂಗಪ್ಪನವರನ್ನೇ ಇಲ್ಲಿನ ಸ್ಕೂಲ್ ಮಾಸ್ಟರ ಕೆಲಸಕ್ಕೆ ಬರಮಾಡಿಕೊಳ್ಳುವ ಶರದೂದು ಮಾಡುತ್ತಿದೇವೆ ಸರ್ಕಾರದವರು ದಯವಿಟ್ಟು ನಮ್ಮಗಳ ಕೋರಿಕೆಯನ್ನು ನಡಿಸಿಕೊಡುವರೆಂದು ನಂಬಿ ಪ್ರಾರ್ಥಿಸುವೆವು

ಪಿ ಸಿ

ಖಾತ್ರಿದಾರರಿಗೆ ನೋಟೀಸ್

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು ಎಡಿಟರ್

ರಾಮದುರ್ಗ, ಮಂಚೇನಹಳ್ಳಿ —ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲ

ಗೋವಿಂದಯ್ಯ ಮೂದ್ಲೂರುಗ್ರಾಮ —ನೀವು ಬೆಂಗಳೂರಿನಲ್ಲಿರುವ ವ್ಯವಸಾಯದ ಇಲಾಖಾ ಅಧಿಕಾರಿಯಾದ ಡಾ॥ ಕೋಲ್ಮನ್‌ರವರಿಗೆ ಬರೆದುಕೊಂಡರೆ ಅವರು ತಿಳಿಸುತ್ತಾರೆ

ಎನ್ ಮೇಲಗಿರಯ್ಯ ಹಂದ್ರಾಳುಗ್ರಾಮ ಬೇರೆ ಪತ್ರಿಕೆ ಮೇಲಿನ ನಿಮ್ಮ ಆಕ್ಷೇಪಣೆಯನ್ನು ಪ್ರಕಟಿಸಲಾರೆವು ಅವರಿಗೇ ಬರೆದು ಕೊಳ್ಳತಕ್ಕದ್ದು ಉತ್ತಮ

ಹಿತೋಪದೇಶಿ, ಮುಳಬಾಗಲು ನೀವು ಬರೆದಿರುವ ಸಂಭಾಷಣೆಯನ್ನು ಪ್ರಕಟಿಸೋಣದರಿಂದ ಪ್ರಯೋಜನವೇನೂ ಕಾಣುವುದಿಲ್ಲ

ಕರೆಸ್ಪಾಂಡೆನ್ಸ್

ತಪ್ಪಿಸಿಕೊಂಡ ಖೈದಿಯನ್ನು ಹಿಡಿದದ್ದು

ಅಯ್ಯಾ

ಯಡತೊರೆ ತಾಲ್ಲೂಕು ಅಟ್ಟೂರಲ್ಲಿ ೧೯೦೫ನೇ ಇಸವಿಯಲ್ಲಿ ಕೆಲವು ಜನರನ್ನು ಕೊಂದು ಮೈಸೂರು ಜೈಲಿನಲ್ಲಿದ್ದು ಚೀಫ್ ಕೋರ್ಟಿನಿಂದ ಆರ್ಡರು ಬರುವದರೊಳಗಾಗಿ ತಾನಿದ್ದ ಜೈಲಿನ ಪಹರೆಯವನನ್ನು ಕೊಂದು ಅಲ್ಲಿಂದ ತಪ್ಪಿಸಿಕೊಂಡು ಬಂದ ದೇವಣ್ಣ ಉರುಫ್ ದೊಡ್ಡ ಹೈದನೆಂಬ ಖೂನಿ ಖೈದಿಯ ವಿಷಯವಾಗಿ ತಾ ೨೪ ೨ ೧೦ ರಲ್ಲಿ ಪ್ರಕಟವಾದ ತಮ್ಮ ಪತ್ರಿಕೆಯಲ್ಲಿ ಯಡತೊರೆ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರವರು ಖೈದಿಯನ್ನು ಹಿಡಿದರೆಂದು ಬರೆದು ಇರುವರು ಈ ಖೈದಿಯನ್ನು ಹಿಡಿದ ದಿವಸ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರವರು ಸರ್ಕಾರಿ ಕಾರ್ಯಾಂತರವಾಗಿ ಮೈಸೂರಿನಲ್ಲಿದ್ದರು

ಜೈಲಿನಿಂದ ತಪ್ಪಿಸಿಕೊಂಡು ಬಂದ ಖೈದಿಯು ೨ ೩ ವರುಷಗಳಿಂದ ಸ್ವಗ್ರಾಮದಲ್ಲೇ ಇದ್ದನು ಇವನನ್ನು ಹಿಡಿಯುವ ಉದ್ದೇಶ ಸಾಲಿಗ್ರಾಮದ ಸರ್ಕಲ್ ಜಮೇದಾರ್ ಮ ತುಳಸೀರಾಮರವರು ಹಿಂದೆ ಈ ಖೈದಿಯನ್ನು ಮಾಸ್ತಿ ಜಂಗಲಿನಲ್ಲಿ ಹಿಡಿದು ಗ್ರೇಡನ್ನು ಹೊಂದಿದ ಧೈರ್ಯದಿಂದ ತಕ್ಕ ಸಲ್ಲಿನ್ಸೊಡನೆ ಅವನಿದ್ದ ಊರಿಗೆ ಹೋಗಿ ಒಂದು ಹಗಲೂ ಒಂದು ರಾತ್ರಿಯೂ ನಿದ್ರಾಹಾರಗಳಿಲ್ಲದೆ ಬಹು ಜಾಗರೂಕರಾಗಿ ಕಾಯುತ್ತಿದ್ದು ಖೈದಿಯನ್ನು ಹಿಡಿದು ಅವನಿಂದ ಏಟುಗಳನ್ನು ತಿಂದರೂ ಕೂಡ ಲಕ್ಷೀಕರಿಸದೆ ಅವನ ಕೈಗಳಲ್ಲಿ ಪೆಟ್ಟುಮಾಡಿ ಅವನ ತಿಂದರೆ ಹೆಚ್ಚಾಗಲು ಗುಂಡಿನಿಂದ ಹೊಡೆದು ಸಾಲಿಗ್ರಾಮದ ಸ್ಟೇಷನ್‌ಗೆ ಕರೆದುತಂದು ಅಲ್ಲಿನ ಆಸ್ಪತ್ರೆ ಡಾಕ್ಟರ್ ಮ ಗ್ರೆಗರಿಯವರಿಂದ ಮೂರು ದಿವಸದ ವರೆಗೂ ಚಿಕಿತ್ಸೆ ಮಾಡಿಸಿ ಅನಂತರ ಯಡತೊರೆ ಮಾರ್ಗವಾಗಿ ಮೈಸೂರಿಗೆ ಕಳುಹಿಸಿ ಕೊಟ್ಟರು ಅಲ್ಲಿ ವಿಚಾರಣೆ ನಡೆದು ಈ ತಿಂಗಳ ೧೯ನೇ ತಾ ಗುರುವಾರ ಪ್ರಾತಃಕಾಲ ೭ ಗಂಟೆಗೆ ಅವನನ್ನು ಗಲ್ಲಿಗೆ ಹಾಕಿದರು ಇದರಲ್ಲಿ ಎಳ್ಳಷ್ಟೂ ಸುಳ್ಳಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ

ಇವನಂತೆಯೇ ಇವನ ತಮ್ಮನೊಬ್ಬನು ಅದೇ ಜೈಲಿನಿಂದ ಏಕಕಾಲದಲ್ಲಿ ತಪ್ಪಿಸಿಕೊಂಡು ಹೋಗಿದ್ದನು ಇವನನ್ನು ಅಟ್ಟೂರು ಬಳಿ ಜಂಗಲಿನಲ್ಲಿ ಹಿಂದೆ ಇವರೇ ಹಿಡಿದಿದ್ದರು ಮುಂದೆಯೂ ಉಳಿದಿರುವ ಇವನೊಬ್ಬನನ್ನೂ ಕಂಡ ಇವರೇ ಹಿಡಿಯುವದಕ್ಕೆ ಸಾಹಸಪಟ್ಟಾರೆಂದು ಹೇಳಬಹುದು

ಸಾಲಿಗ್ರಾಮ — ಯಥಾರ್ಥವಾದಿ

ತಾ ೧೫ ೩ ೧೯೧೧

ಸೊಪ್ಪಿಯನ್ನು ಬೊಗ್ಗಿ ಸುದ್ದರೆ ಮರವಾದ ಮೇಲೆ ಅದು ಬೊಗ್ಗುವುದೇ ’

ಅಯ್ಯಾ

ಒಬ್ಬ ಸಂಸಾರಿಕನ ಮನೆಯ ಹಿತ್ತಲಿನಲ್ಲಿ ಸಣ್ಣದಾದ ಕೆಲವು ಭಂಗಿ ಮೊಳಕೆಗಳು ಹುಟ್ಟಿದರೆ ಅವುಗಳನ್ನು ಕೂಡಲೇ ಬುಡಸಹಿತ ಕಿತ್ತುಹಾಕಿ ಆ ಪ್ರದೇಶದಲ್ಲಿ ಪುನ ಅಂಥಾವು ಬೆಳೆಯದಂತೆ ಮಾಡೋಣ ಯುಕ್ತವೋ, ಇಲ್ಲವೇ ‘ ಇಟ್ಟಿತು ಬಿದ್ದಿರಲಿ ’ ಎಂದು ಉದಾಸೀನ ಮಾಡೋಣ ಯುಕ್ತವೋ ? ಅವು ಸಣ್ಣ ಮೊಳಕೆಗಳೆಂದು ಹಾಗೆಯೇ ಬಿಟ್ಟರೆ ಅವು ಕ್ರಮೇಣ ದೊಡ್ಡವಾಗುತ್ತಾ ಬರುತ್ತವೆ ಯಾರಾದರೂ ಭಂಗಿ ಕುಡಿಯುವವರು ಅವುಗಳನ್ನು ನೋಡಿದರೆ ಸಣ್ಣ ಹುಡುಗರಿಗೆ ಅವುಗಳ ಪ್ರಯೋಜನವನ್ನು ವರ್ಣಿಸುವದರಲ್ಲಿ ಅವರಿಗೆ ಅದರ ಸೇವನೆಯಲ್ಲಿ ಆಸಕ್ತಿಯನು ಹುಟ್ಟಿಸುವರು ಅನೇಕರು ಭಂಗಿಗೆ ‘ ಸಿದ್ಧಪತ್ರೆ ’ ಎಂಬ ಹೆಸರನ್ನಿಟ್ಟುಕೊಂಡು, ಅದನ್ನು ನಾನಾ ವಿಧವಾಗಿ ಕೊಂಡಾಡುತ್ತಿರುವದು ಎಲ್ಲರೂ ಬಲ್ಲರು ಭಂಗಿಸೊಪ್ಪಿನಲ್ಲಿ ಹಾಲು ಸಕ್ಕರೆ ಮತ್ತೂ ಲವಂಗ ಮೊದಲಾದ ಪರಿಮಳದ್ರವ್ಯಗಳನ್ನು ಹಾಕಿ ಅರೆದು ಪಾನಕದಂತೆ ಮಾಡಿ ಅದಕ್ಕೆ ‘ ರಾಮರಸ ’ ಎಂದು ಹೆಸರನ್ನಿಟ್ಟುಕೊಂಡು ಕುಡಿಯುವರು ಯೋಗಿ ಬತ್ತಿಯನ್ನು ಸೇದುವಂತೆ ಸೇದುತ್ತಾ “ ದಂ ಹೊಡೆಯುತ್ತೇವೆ ” ಎನ್ನುವರು ಈ ಸೇವನೆಯಿಂದ ಬುದ್ಧಿಯು ನಿಶ್ಚಂಚಲವಾಗಿ ನಿಲ್ಲುವದೆಂತಲೂ, ಆ ಬುದ್ಧಿಯನ್ನು ಪರಮಾತ್ಮನಲ್ಲಿ ನಿಲ್ಲಿಸಿದರೆ ಸದ್ಗತಿಯುಂಟಾಗುವದೆಂತಲೂ, ಇದರ ವಿನಹಾ ಚಂಚಲವಾದ ಬುದ್ಧಿಯು ಸ್ಥಾಯಿಯಾಗಿ ನಿಲ್ಲುವದಿಲ್ಲವೆಂತಲೂ, ಈ ಕಾರಣದಿಂದಲೇ ಕಾಶೀಕ್ಷೇತ್ರದಲ್ಲಿ ಗಂಗಾತೀರದಲ್ಲಿ ತಪಸ್ಸು ಮಾಡುತ್ತಿರುವ ಎಲ್ಲಾ ಯತಿಗಳೂ ಈ ಸೇವನೆಯನ್ನು ಬಿಡದೇ ಮಾಡುತ್ತಿರುವರೆಂತಲೂ, ಇನ್ನೂ ಅನೇಕ ಗುಣಗಳು ಉಂಟೆಂದೂ ಹೊಗಳುತ್ತಲೂ, ಸಾಮಾನ್ಯ ಜನರಿಗೆ ಈ ಸೇವನೆಯಲ್ಲಿ ಆಸಕ್ತಿಯನ್ನುಂಟುಮಾಡುತ್ತಲೂ ಇರುವರು

ಈ ಮೇರೆಗೆ ಪ್ರೇರಿಸಲ್ಪಟ್ಟವರು ಅನೇಕರು ಸ್ವಲ್ಪಸ್ವಲ್ಪವಾಗಿ ಇದನ್ನು ಅಭ್ಯಾಸಮಾಡುತ್ತಾ ಕಡೆಗೆ ಬಹಳ ಅನರ್ಥಗಳಿಗೆ ಗುರಿಯಾಗುವರಲ್ಲದೆ ಅಕಾಲಮರಣಕ್ಕೆ ತುತ್ತಾಗುವರು ಮತ್ತೂ ಆ ಅಲ್ಪ ಕಾಲದ ಬದುಕುನಿಕೆಯಲ್ಲೂ ಅನೇಕ ದುಷ್ಕೃತ್ಯ ಕೃತ್ಯಗಳನ್ನು ನಡಿಸುವರು ಇಷ್ಟು ಸಂಸಾರಿಯ ಹಿತ್ತಲಿನಲ್ಲಿ ಅಪ್ರಯತ್ನದಿಂದ ಬೆಳೆದ ಭಂಗಿ ಮೊಳಕೆಗಳನ್ನು ನಿರ್ಮೂಲವಾಡದೇ ಹೋದರೆ ಈ ಪಾಪವನ್ನು ಸ್ವಪ್ನದಲ್ಲೂ ಕಾಣದ ಆ ಮನೆಯ ಹುಡುಗರಿಗೆ ಪ್ರಾಪ್ತವಾಗುವದಕ್ಕೆ ಪೂರಾ ಅವಕಾಶವಿರುತ್ತದೆ ಇದರಂತೆ ಸಾಮಾನ್ಯವಾಗಿ ಕಂಡುಬರುವ ಹುಡುಗರ ಅಕೃತ್ಯಗಳೂ, ದುರ್ವ್ಯಸನಗಳೂ, ದೊಡ್ಡವರು ಮಾಡುವದಕ್ಕೆ ಉದ್ಯೋಗವಿಲ್ಲದೆ ಮಾಡುತ್ತಿರುವ ದುಷ್ಕಾಲಕ್ಷೇಪವು ಅರಾಜಕ ಪುಂಡುತನಗಳನ್ನು ಮಾಡುವವರನ್ನಾಗಿ ಮಾಡಲಾರರೆಂದು ಯಾರು ತಾನೇ ಹೇಳುವರು ? ಹುಡುಗರು ಕಚೇರಿ ತೋಟಗಳನ್ನು ಕಲ್ಲುಗಳಿಂದ ಒಡೆದು ನಷ್ಟಪಡಿಸುತ್ತಿರುವದು ನೋಡಿ ಸುಮ್ಮನಿದ್ದರೆ, ಲಾಂದ್ರಗಳನ್ನು ಒಡೆಯುವರು ಬಹು ಪ್ರಯಾಸದಿಂದ ಹಾಕಿರುವ ಗುತರ್ಗಳನ್ನು ಕಿತ್ತುಹಾಕುವರು , ಸಾಧಾರಣ ಜನರ ಬಾಗಲುಗಳನ್ನು ತಟ್ಟುವವರು ಕ್ರಮೇಣ ಕಚೇರಿಯ ಬಾಗಲುಗಳನ್ನೂ ಒಡೆಯುವರು , ಸಾಮಾನ್ಯ ಕೆಡುಕುಗಳನ್ನು ಮಾಡುವವರು ಅರಾಜಕ ಕೃತ್ಯಗಳನ್ನೂ ಮಾಡುವಷ್ಟು ಪ್ರವೀಣರಾಗುವರು

ಬಹು ಕಾಲದಿಂದ ಕರುಣಾಳುಗಳಾದ ಬ್ರಿಟಿಷ್ ಪ್ರಭುಗಳು ಅಂಧಕಾರಮಯವಾದ ಇಂಡಿಯಾವನ್ನು ಬೆಳದಿಂಗಳಿನಿಂದಲೂ, ದ್ವಿಪಾದ ಪಶುಗಳಿಂದ ತುಂಬಿದ್ದ ದೇಶವನ್ನು ಪಂಡಿತರಿಂದಲೂ ನಿಬಿಡೀಕೃತವಾಗುವಂತೆ ಮಾಡಿದರು. ಆದರೆ ಪಲ ದೇಶ ವಿದ್ಯೆಯನ್ನು ಕಲಿಸಿದ ಮಾತ್ರಕ್ಕೇನು ಇಹಪರ ಕರ್ತವ್ಯಗಳನ್ನು ಕಲಿಸಿ ದಂತಾಯಿತೇ? ಮೊದಲಿನಲ್ಲಿ ಜನರ ನಡತೆಯನ್ನು ಸಂಸ್ಕರಿಸಿ ಆ ತರುವಾಯ ವಿದ್ಯಾವಂತರನ್ನು ಮಾಡುತ್ತಾ ಬಂದರೆ ಎಷ್ಟು ಉಪಕಾರವಾಗಿದ್ದೀತು. ಒಬ್ಬ ಚಿತ್ರಗಾರನು ಒಂದು ಬಟ್ಟೆಯ ಬೊಂಬೆಯನ್ನು ಮಾಡಬೇಕಾದರೆ ಮೊದಲು ಶುದ್ಧ ಶಾಯಿಯನ್ನು ಮಾಡಿಯಲ್ಲವೇ ಒಳ್ಳೆ ಹಾಕುವನು. ಒಬ್ಬ ಕಾಫೀ ಪ್ಲಾಂಟರು ಒಂದು ತೋಟವನ್ನು ಮಾಡಬೇಕಾದರೆ ಮೊದಲಿನಲ್ಲಿ ಕಾಡನ್ನು ಸುಡುವನಲ್ಲವೇ. ಒಬ್ಬ ರತ್ನ ಕೆಲಸದವನು ಪಾಕೀಯನ್ನು ಹಾಕದೆ ರತ್ನವನ್ನು ಆಭರಣದಲ್ಲಿ ಜಡುಗುವನೇ? ದೇವರನ್ನು ಪ್ರಾರ್ಥಿಸುವವನು ಮೊದಲಿನಲ್ಲಿ ದೇಹ ಶೌಚವನ್ನು ಗಮನಿಸದೇ ಇರುವನೇ.

ಶ್ಲೋ॥ ವಿದ್ಯಾ ವಿವಾದಾಯ ಧನಂ ಮದಾಯ ಶಕ್ತಿಃ ಪರೇಷಾಂ ಪರಿಪೀಡನಾಯ । ಖಲಸ್ಯ ಸಾಧೋರ್ವಿಪರೀತಮೇತತ್ ಜ್ಞಾನಾಯ ದಾನಾಯ ಚ ಪಾಲನಾಯ ॥

ಈ ರೀತಿ ವಿದ್ಯೆಯು ದುಷ್ಟರಿಗೆ ಇದ್ದರೆ ವಿತಂಡಾವಾದದ ಶಕ್ತಿಯನ್ನುಂಟುಮಾಡುತ್ತದೆ, ಸಜ್ಜನರಿಗೆ ಇದ್ದರೆ ಜ್ಞಾನವನ್ನುಂಟುಮಾಡುತ್ತದೆ. ಆದ್ದರಿಂದ ಬರೀ ವಿದ್ಯೆಗೆ ಪ್ರಾಧಾನ್ಯವಲ್ಲ. ಪಾಸೀಸು ಹ್ಯಾಗೆ ಕಾಡ ಮರವನ್ನು ತ್ಯಾಗದ ಮರವನ್ನಾಗಿ ಮಾಡಲಾರದೋ ಹಾಗೆಯೇ ವಿದ್ಯೆಯೂ ದುಷ್ಟನನ್ನು ಶಿಷ್ಟನನ್ನಾಗಿ ಮಾಡಲಾರದು. ಪರಂತು ಕರೀ ಮರಕ್ಕೆ ಪಾಲೀಸು ಹಾಕಿದರೆ ಆ ಕಪ್ಪಿಗೇನೇ ಕೆಟ್ಟದ ಹೊಳಪು ಹ್ಯಾಗೆ ಉಂಟಾಗುವದೋ ಹಾಗೆಯೇ ದುಷ್ಟನಿಗೆ ವಿದ್ಯೆ ಇದ್ದರೆ ಅವನ ದುಷ್ಟತನಕ್ಕೆ ಸಹ ಏರಿಯಾಗುವದು. ಕಳ್ಳನು ವಿದ್ಯಾವಂತನಾಗಿದ್ದರೆ ಅದರ ಬಲದಿಂದ ಪೋಲೀಸಿನವರಿಗೆ ಸುಲಭವಾಗಿ ಸಿಕ್ಕದೇನೇ ಕದಿಯುತ್ತಿರುವನು.

ಮುಖ್ಯವಾಗಿ, ಹುಡುಗರ ತುಂಟಾಟಗಳನ್ನು ಅವು ಮೊಳಕೆಯಾಗುತ್ತಿರುವಾಗಲೇ ಹೋಗಲಾಡಿಸದೆ ಸುಮ್ಮನಿದ್ದು ಅಕ್ಷರ ರೂಪವಾದ ವಿದ್ಯೆಯನ್ನು ಮಾತ್ರ ಕಲಿಸಿದರೆ ಯಾವ ಪ್ರಯೋಜನವೂ ಇಲ್ಲದೆ ಕಡೆಗೆ ಅನರ್ಥ ಉಂಟಾಗುವದೆಂದು ನನಗೆ ತೋರುತ್ತದೆ. [illegible] ಬಾಲಕರ ಶಿಕ್ಷಣದ ಜೊತೆಗೆ ತಮ್ಮ ಹುಡುಗರನ್ನು ದುಷ್ಟ ಪುಂಡರ [illegible] ಗಳನ್ನು ಉಪಯೋಗಿಸುವ, ಮೋಸ ಮಾಡಿ [illegible] ಗುವ [illegible] ಮತ್ತು [illegible] ಉಪಾಧ್ಯಾಯರುಗಳನ್ನು ತಗದು ಸಜ್ಜನರನ್ನು ನೇಮಿಸುತ್ತಾ ಬರುವ [illegible] ರಾಜ್ಯಾಭಿವೃದ್ಧಿಗೆ [illegible] ನಾನು ಪಡುವ ಅಭಿಪ್ರಾಯವು ತಪ್ಪೆಂದು [illegible] ನನ್ನ [illegible] ಅಧಿಕ ಪ್ರಸಂಗವಾಗಿ ತೋರಿದರೂ ಕ್ಷಮಿಸಬೇಕು.

ಪರಿಣ್ಯಾರಾಪೇಕ್ಷಿ.

ಇಂಡಿಯಾ ದೇಶದ ವೃತ್ತಾಂತಗಳು.

ಪೋಲೀಸಿನವರು ಶೋಧನೆ ಮಾಡಿದಾಗ ಕಲ್ಕತ್ತಾ ಪಟ್ಟಣದ [illegible] ಎಂಬಾತನ ಮನೆಯಲ್ಲಿ [illegible] ಬಂದೂಕೂ [illegible] ಸಿಕ್ಕಿರುತ್ತವೆ.

* * *

[illegible] ಪಟ್ಟಣದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ [illegible] ಕಳೆದ [illegible] ತೀರಿ ಹೋದರು.

* * *

[illegible] ಡಿಸ್ಟ್ರಿಕ್ಟಿಗೆ ಸೇರಿದ [illegible] ಸರ್ಕಾರದವರು ಫಾರೆಸ್ಟ್ ಇಲಾಖೆಯ ಮೂಲಕ [illegible] ಗಿಡ ಮರಗಳನ್ನು ಬೆಳೆಸುವದಕ್ಕೋಸ್ಕರ [illegible] ಎಕರೆ ಜಮೀನನ್ನು [illegible] ಕೊಂಡಿದಾರೆ.

* * *

ಬೊಂಬಾಯಿಗೆ ಮಾರಿಶಸ್ ದ್ವೀಪದಿಂದ ಬರುತ್ತಿದ್ದ ಲೂಥಿಯಾನಾ ಎಂಬ ಹಡಗು ದಾರಿಯಲ್ಲಿ ಏನಾಯಿತೆಂಬುವುದು ತಿಳಿಯಲಿಲ್ಲ. ಅದರಲ್ಲಿ [illegible] ಜನರು ಇದ್ದರು. [illegible] ವಿಚಾರಿಸುತ್ತಿದಾರೆ.

* * *

ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನಗಳು 6,750 ರೂ ನಿಂದ 16,500 ರೂಪಾಯಿ ವರೆಗೆ ಕ್ರಯಕ್ಕೆ ಸಿಕ್ಕುತ್ತವೆಂದೂ, ಅಪೇಕ್ಷೆಯುಳ್ಳವರು ಮದರಾಸಿನಲ್ಲಿರುವ ಆಡ್ಲರ್ ಕಂಪನಿಗೆ ಬರೆದುಕೊಳ್ಳಬಹುದೆಂದೂ ಪ್ರಕಟವಾಗಿದೆ.

* * *

ದೇಹಲಿ ಪಟ್ಟಣದಲ್ಲಿರುವ ಹಿಂದೂ ಕಾಲೇಜು ಎಂಬ ವಿದ್ಯಾಶಾಲೆಯು [illegible] ವಾಗಿ ನಡೆಯುವುದಕ್ಕೆ ಅಲ್ಲಿನ ಸುಲ್ತಾನ್ ಸಿಂಗ್, ರಾಯಬಹದೂರ ಶ್ರೀ ಕೃಷ್ಣದಾಸ್ ಎಂಬ ಐಶ್ವರ್ಯವಂತರು ಬಹಳ ಹಣವನ್ನು ತಂದು ಹಾಕಿರುತ್ತಾರೆಂದು ವರ್ತಮಾನ ಬಂದಿದೆ.

* * *

ಆಗ್ರಾ ಪಟ್ಟಣದಲ್ಲಿ ಕೆಲವು ಕಾಬೂಲೀ ಜನರು ಮೂರ್ಷಿದಾಬಾದಿನೊಳಗೆ ಚಲಾವಣೆಯಾಗುವಂಥಾ ನಾಣ್ಯಗಳನ್ನು ತಯಾರು ಮಾಡುತ್ತಿದ್ದು ಕಳೆದ ವಾರ ಸಿಕ್ಕಿಬಿದ್ದರು. ಪೋಲೀಸಿನವರು ಅವರನ್ನು ನಾಣ್ಯದ ತಯಾರಿಗೆ ಅವರು ಇಟ್ಟುಕೊಂಡಿದ್ದ ಉಪಕರಣಗಳ ಸಮೇತ ದಸ್ತಗಿರಿ ಮಾಡಿದಾರೆ.

* * *

ಅಮೃತ ಸಾರದ ಖಾಲ್ಸಾ ವಿದ್ಯಾಲಯದ ಅಧ್ಯಕ್ಷರಾದ ಮಿ॥ ಎಂ ಏ ಜಿ ಕೋಲ್ ಮನವರನ್ನು ಅಲಹಾಬಾದ್ ಯೂನಿವರ್ಸಿಟಿ ವಿದ್ಯಾಶಾಲೆಯ ರೆಜಿಸ್ಟ್ರಾರ್ ಕೆಲಸಕ್ಕೆ ನೇಮಕ ಮಾಡುತ್ತಾರೆ. ಇವರ ಸಂಬಳವು ೭೦೦ ರಿಂದ ೧೦೦೦ ರೂಪಾಯಿವರೆಗೆ ಬಡ್ತಿ ಆಗುವುದು.

* * *

ಲಾಹೋರ್ ಪಟ್ಟಣದಲ್ಲಿ ಕಳೆದ ವರುಷದ ಅಂತ್ಯಭಾಗದಲ್ಲಿ ನಡೆದ ಪ್ರದರ್ಶನಶಾಲೆಯ ಬಳಿ ಕೋಟೆಯ ಹೊರಪಾರ್ಶ್ವದಲ್ಲಿ ಒಂದು ಉದ್ಯಾನವನವನ್ನು ಬೆಳಸಿ ಅದಕ್ಕೆ ಮಿಂಟೋ ಪಾರ್ಕ್ ಎಂಬ ಹೆಸರನ್ನಿಡಬೇಕೆಂದೂ, ಈ ವನಕ್ಕೆ ೫೦,೦೦೦ ರೂಪಾಯಿ ಖರ್ಚುಮಾಡಬೇಕೆಂದೂ ಗೊತ್ತುಮಾಡಿದಾರೆ.

ಲಾಹೋರಿನಲ್ಲಿ ಆರ್ಯ ಸಮಾಜದ ಪ್ರೆಸಿಡೆಂಟರಾಗಿದ್ದ ಲಾಲಾ ದುರ್ಗಾ ಪ್ರಸಾದರವರು ಆ ಅಧ್ಯಕ್ಷ ಸ್ಥಾನವನ್ನು ಬಿಟ್ಟು ಬಿಟ್ಟರು. ಈಚೆಗೆ ಪಾಟಿಯಾಲಾ ಸಂಸ್ಥಾನದ ರಾಜ ದ್ರೋಹಿಗಳ ಪರವಾಗಿ ವಕೀಲರಾಗಿದ್ದ ಬಾರಿಸ್ಟರ್ ಮಿ॥ ರೋಷನ್ ಲಾಲ್‌ರವರು ಆ ಸಮಾಜದ ಅಧ್ಯಕ್ಷತೆಯನ್ನು ವಹಿಸಿ ಕೊಂಡಿದಾರೆ.

* * *

ಕಾಶ್ಮೀರಸಂಸ್ಥಾನದ ವ್ಯಾಸದಾಸ ಕ್ಷೇಮೇಂದ್ರನೆಂಬೊಬ್ಬ ಪ್ರಾಚೀನ ಕವಿಯು ಹಿಂದೂ ಮತತತ್ವಗಳನ್ನು ನೂರು ಶ್ಲೋಕಗಳಲ್ಲಿ ಬರೆದು, ಪ್ರತಿ ಒಂದಕ್ಕೂ ಸ್ವಾರಸ್ಯವಾದ ಒಂದು ಇತಿಹಾಸವನ್ನು ಸೇರಿಸಿರುವ ಒಂದು ಪ್ರಾಚೀನ ಗ್ರಂಥವು ರಾಯ ಸರತ್ ಚಂದ್ರದಾಸ್ ಬಹದೂರ್, ಸಿ ಐ ಇ. ಯವರಿಗೆ ಸಿಕ್ಕಿರುತ್ತದೆ.

* * *

ಪೂರ್ವಬಂಗಾಳಾ ಆಧಿಪತ್ಯಕ್ಕೆ ಸೇರಿದ ರಾಯಪಾರಾ ಎಂಬ ಪೋಲೀಸ್ ಸ್ಟೇಷನ್ ಸಬ್ ಇನ್ಸ್‌ಪೆಕ್ಟರಾದ ದೇವೇಂದ್ರನಾಥ ಭಟ್ಟಾಚಾರ್ಯನಮೇಲೆ ಆತನು ಇಬ್ಬರು ಹೆಂಗಸರನ್ನು ಹಿಂಸೆಮಾಡಿ ಅವರಿಂದ ೧,೭೦೦ ರೂಪಾಯಿ ಕಿತ್ತುಕೊಂಡನೆಂದು ಕ್ರಿಮಿನಲ್ ಮೊಕದ್ದಮೆ ಬಂದು, ನಾರಾಯಣಗಂಜ ಮ್ಯಾಜಿಸ್ಟ್ರೇಟರು ದರ್ಯಾಫ್ತಿಮಾಡುತ್ತಿದಾರೆ.

* * *

ಲಾಲಾ ಲಜಪತ್ ರಾಯರವರು ಪ್ರಾರಂಭಿಸಿ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಕ್ಷಾಮದ ಫಂಡನ್ನು ಬ್ಯಾರಿಸ್ಟರ್ ದುನಿಚಂದ್ ಯವರಿಗೆ ವಹಿಸಿ ತಮ್ಮ ಎರಡನೇ ಮಗನನ್ನು ನೋಡಿ ಕೊಂಡು ಬರುವುದಕ್ಕಾಗಿ ವಿಲಾಯಿತಿಗೆ ಪ್ರಯಾಣ ಮಾಡಿದರು. ಆ ಮಗನು ಮ್ಯಾಂಚೆಸ್ಟರ್ ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಕಾಯಿಲೆಯಾದನೆಂದು ವರ್ತಮಾನ ಬಂದಿದೆ.

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಭಾವಲ್‌ಪುರ ಸಂಸ್ಥಾನದಲ್ಲಿ ಕಳೆದ ವಾರ ಬಾಲ್ಯ ವಯಸ್ಸಿನ ನವಾಬರವರ ವರುಷ ವರ್ಧಂತಿ ಉತ್ಸವವು ಬಹು ಉತ್ಸಾಹಪೂರ್ವಕವಾಗಿ ನಡೆಸಲ್ಪಟ್ಟಿತು. ಈ ಸಂತೋಷದ ಜ್ಞಾಪಕಾರ್ಥವಾಗಿ ೨೫ ಮಂದಿ ಅಲ್ಪ ವಾಯಿದೆಯ ಬಂದೀವಾಸರನ್ನು ಕ್ಷಮಾಪಣೆ ಕೊಟ್ಟು ಜೈಲಿನಿಂದ ಬಿಡಿಸಿದ್ದಲ್ಲದೆ, ೨೫ ಜನ ಖೈದಿಗಳ ವಾಯಿದೆಯನ್ನು ಕಡಮೆಮಾಡಿರುತ್ತಾರೆ.

* * *

ಸಿತಾಪುರದಲ್ಲಿ "ಹಿತ ಸಮಾಚಾರ" ಎಂಬ ಪತ್ರಿಕೆಯ ಎಡಿಟರು ಕೆಲವು ಪೋಲೀಸ್ ಅಧಿಕಾರಿಗಳ ಮೇಲೂ ಮ್ಯಾಜಿಸ್ಟ್ರೇಟರ ಮೇಲೂ ಅವರು ತನ್ನನ್ನು ಅಕ್ರಮ ಪ್ರೈದು ಮಾಡಿದರೆಂದೂ, ಅವರಿಂದ ತನಗೆ ೩,೦೦೦ ರೂಪಾಯಿ ಮಾನನಷ್ಟವನ್ನು ಕೊಡಿಸಬೇಕೆಂದೂ ದಾವಾ ತಂದನು. ಮೊದಲನೇ ಕೋರ್ಟಿನಲ್ಲೂ ಅಪೀಲ್ ನಲ್ಲೂ ಜಡ್ಜಿಗಳು ಅವನ ದಾವೆಯನ್ನು ವಜಾ ಮಾಡಿರುತ್ತಾರೆ.

* * *

ಬುದ್ಧಗಯೆಯೊಳಗಿರುವ ಬುದ್ಧ ವಿಗ್ರಹವನ್ನು ಛತ್ರದಿಂದ ತೆಗೆದು ಬಿಡಬೇಕೆಂದು ಕೋರ್ಟಿನಲ್ಲಿ ತೀರ್ಮಾನವಾಗಿರುತ್ತದೆ. ಇದು ರಂಗೂನ್ ಪಟ್ಟಣದ ಬೌದ್ಧ ಪ್ರಜೆಗಳಲ್ಲಿ ಖೇದವನ್ನುಂಟುಮಾಡಿರುವುದು. ಅವರು ಕಳೆದ ವಾರ ಒಂದು ಮಹಾಜನ ಸಭೆಯನ್ನು ನಡಿಸಿ, ಆ ಜಡ್ಜ್‌ಮೆಂಟಿನ ನಕಲು ತರಿಸಿ ಕೊಂಡು ಮುಂದಿನ ಏರ್ಪಾಡನ್ನು ಕುರಿತು ಚರ್ಚೆಮಾಡಬೇಕೆಂದು ಗೊತ್ತು ಮಾಡಿರುತ್ತಾರೆ.

* * *

ಚಾಂಸೆಟ್‌ಜಿ ರುಸ್ತುಂಜಿ ಪೋಸ್ಟ್‌ವಾಲಾ ಎಂಬೊಬ್ಬ ಪಾರ್ಸಿ ಡಾಕ್ಟರರು ವಿಲಾಯಿತಿಗೆ ಹೋಗಿ ಒಂದು ಪರೀಕ್ಷೆಗೆ ಓದಿ ಎರಡಾವರ್ತಿ ಡುಮ್ಕಿ ಹೊಡೆದು ತೀಗಡೆ ಕೈಗೂಡದೆ ಖಿನ್ನನಾಗಿ ವಾಪಸು ಬೊಂಬಾಯಿಗೆ ಬಂದು ಕಳೆದ ವಾರ ತನ್ನ ಮನೆಯಲ್ಲಿ ವಿಷ ಕುಡಿದು ಆತ್ಮಹತ್ಯ ಮಾಡಿಕೊಂಡನು. ಇವನಿಗೆ ೩೨ ವರುಷ ವಾಗಿತ್ತು. ತಂದೆಯು ಅವನ ಸ್ಥಿತಿಯನ್ನು ಅರಿತು ಚಿಕಿತ್ಸೆ ನಡಿಸುವ ಪ್ರಯತ್ನದಲ್ಲಿರುವಾಗ ಪ್ರಾಣಹೋಯಿತು.

* * *

ಬೊಂಬಾಯಿ ಪಟ್ಟಣದ ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೂಲೀ ಆಳುಗಳನ್ನು ಸಂಧಿಸಿ ಅವರಿಗೆ ಆಸೆ ಹುಟ್ಟುವಂಥಾ ನಾನಾ ಮಾತು ಗಳನ್ನು ಹೇಳಿ ನಂಬಿಸಿ ಅವರಿಂದ ಹಣಕಾಸನ್ನು ಕಿತ್ತುಕೊಳ್ಳುತ್ತಿದ್ದ ಒಂದು ಗುಂಪಿನ ಮೋಸಗಾರರನ್ನು ಕಳೆದ ವಾರ ಪೋಲೀಸಿನವರು ಹಿಡಿದಿರುತ್ತಾರೆ. ಇವರು ಒಬ್ಬೊಬ್ಬರಿಂದ ನೂರಾರು ರೂಪಾಯಿಗಳನು ವಸೂಲ್ ಮಾಡಿ ಮೋಸ ಪಡಿಸಿರುತ್ತಾರೆಂದು ತಿಳಿದು ಬರುತ್ತದೆ.

* * *

ಲಕ್ನೋ ಪಟ್ಟಣದಲ್ಲಿ ಮುನ್ಷಿ ನಾರಾಯಣ ಎಂಬ ಪುಣ್ಯಾತ್ಮನು ಬಹಳ ಹಣವನ್ನು ಮುಟ್ಟಿಸಿ ಒಂದು ದೇವಸ್ಥಾನ, ಒಂದು ಸ್ನಾನಘಟ್ಟ, ಒಂದು ವಿದ್ಯಾರ್ಥಿನಿಲಯ, ಈ ಮೂರನ್ನೂ ಕಟ್ಟಿಸಬೇಕೆಂದು ತೀರ್ಮಾನ ಮಾಡಿದನು. ಲೆಫ್ಟಿನೆಂಟ್ ಗವರ್ನರ್ ಸರ್ ಜಾನ್ ಹ್ಯೂಯಿಟ್‌ರವರು ಕಳೆದ ವಾರ ಈ ಕಟ್ಟಡಗಳಿಗೆ ಅಸ್ತಿಭಾರ ಶಿಲೆಯನ್ನು ಹಾಕಿ ಕಾಮಗಾರಿಯನ್ನು ಪ್ರಾರಂಭಮಾಡಿ, ಆತನ ಧರ್ಮಪ್ರವೃತ್ತಿಯನ್ನು ಕೊಂಡಾಡಿದರು.

* * *

ಡೇರಾ ಇಸ್ಮೈಲ್ ಖಾನ್ ಡಿಸ್ಟ್ರಿಕ್ಟಿಗೆ ಸೇರಿದ ತಕ್ವಾರಾ ಎಂಬ ಗ್ರಾಮಕ್ಕೆ ಕಳೆದ ವಾರ ಸುಮಾರು ಹದಿನೈದು ಮಂದಿ ವಜೀರೀ ಜನರು ನುಗ್ಗಿ, ಬೋಕೂರಾಂ ಎಂಬೊಬ್ಬ ಸಾಹುಕಾರನ ಮನೆಯನ್ನು ಮುರಿದು ಅವನನ್ನೂ ಅವನ ಹೆಂಡತಿಯನ್ನೂ ಹೊಡೆದು ಗಾಯಮಾಡಿ, ಮನೆಯನ್ನೆಲ್ಲಾ ಶೋಧನೆ ಮಾಡಿ ಸುಮಾರು ೯,೦೦೦ ರೂಪಾಯಿ ನಗ ನಾಣ್ಯಗಳನ್ನು ಎತ್ತಿ ಕೊಂಡು ಹೋದರೆಂದು ತಂತೀವರ್ತಮಾನ ಬಂದಿದೆ.

* * *

ಗಡೀಪಾರಾಗಿದ್ದು ಈಚೆಗೆ ಬಿಡುಗಡೆ ಹೊಂದಿ ಬಂದಿದ್ದ ಬಾಬು ಅರವಿಂದ ಘೋಷ್ ಕಲ್ಕತ್ತಾ ಪಟ್ಟಣದಲ್ಲಿ ತಮ್ಮ ಚಿಕ್ಕಪ್ಪಂದಿರಾದ ಬಾಬು ಕೃಷ್ಣ ಕುಮಾರ ಮಿತ್ರರ ಮನೆಯಲ್ಲಿದ್ದರು. ಅನರು ಗತಿಸಿದ ಪರಮಹಂಸ ರಾಮಕೃಷ್ಣ ಸ್ವಾಮಿಯು ವಾಸಮಾಡುತ್ತಿದ್ದ ದಾಕ್ಷಿಣೇಶ್ವರವೆಂಬ ಸ್ಥಳಕ್ಕೆ ಹೋಗಿದ್ದವರು ಪುನಹ ವಾಪಸು ಬರಲಿಲ್ಲ. ಅಲ್ಲಿಂದ ಎಲ್ಲಿಗೆ ಹೋದರೋ ಅವರ ಬಂಧುಮಿತ್ರಾದಿಗಳಿಗೆ ತಿಳಿಯದೆ ಪೋಲೀಸಿಗೆ ವರ್ತಮಾನ ಕೊಟ್ಟಿದಾರೆ. ಇವರು ಯೋಗಾಭ್ಯಾಸಕ್ಕಾಗಿ ಹಿಮಾಚಲ ಪರ್ವತಕ್ಕೆ ಹೊರಟು ಹೋಗಿರಬೇಕೆಂದು ಕೆಲವರು ಊಹಿಸುವರು.

ಕೊಯಮುತ್ತೂರಿನಲ್ಲಿ ಟೌನ್ ಸಬ್ ಮ್ಯಾಜಿಸ್ಟ್ರೇಟರಾದ ಮಿ॥ ತಿರುಮಲಾಚಾರ್ಯರು ಕಳೆದ ವಾರ ಪೆರುಮಾಳ್ ಮುಪ್ಪನ್ ಎಂಬವನಿಗೆ ಜುಲ್ಮಾನೆ ಹಾಕಿದರು. ಎರಡು ದಿನಗಳ ಮೇಲೆ ಅವನು ಅವರನ್ನು ಕೋರ್ಟಿನ ಹೊರಗೆ ತಡೆದು ಅವರ ಕಿವಿಯನ್ನು ಎರಡಾಗಿ ಹರಿದು ಗಾಯಮಾಡಿ ಓಡಿಹೋದನು. ಕೂಡಲೇ ಪೋಲೀಸಿನವರು ಅವನನ್ನು ಒಂದು ಜೋಳದ ಹೊಲದಲ್ಲಿ ಹಿಡಿದು ತಂದರು. ಮ್ಯಾಜಿಸ್ಟ್ರೇಟರ ಕಿವಿಯ ಗಾಯವು ಆಸ್ಪತ್ರೆ ಚಿಕಿತ್ಸೆಯಿಂದ ವಾಸಿಯಾಗುತ್ತಿದೆ.

* * *

ಪೂರ್ವಬಂಗಾಳಾ ಆಧಿಪತ್ಯದ ಖುಲ್ನಾ ಪಟ್ಟಣದಲ್ಲಿ "ಪಲ್ಲಿ ಚಿತ್ರ" ಎಂಬ ಪತ್ರಿಕೆಯ ಎಡಿಟರು ರಾಜದ್ರೋಹದ ಮೊಕದ್ದಮೆಯಲ್ಲಿ ಸಿಕ್ಕಿ ಎರಡು ವರುಷ ಕಠಿಣಸಜಾ ಅನುಭವಿಸಬೇಕೆಂಬ ಶಿಕ್ಷೆಗೆ ಗುರಿಯಾದನು. ಆ ಪತ್ರಿಕೆಯನ್ನು ಅಚ್ಚುಹಾಕಿಕೊಟ್ಟವನಿಗೆ ಎರಡು ತಿಂಗಳ ಕಠಿಣಸಜಾ ಆಯಿತು. ಇವರಿಬ್ಬರೂ ಈಚೆಗೆ ಅಪೀಲ್ ಮಾಡಿಕೊಂಡಿದ್ದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಪೀಲನ್ನು ವಜಾಮಾಡಿ ಕೆಳಕೋರ್ಟಿನ ಶಿಕ್ಷೆಯನ್ನು ಊರ್ಜಿತಪಡಿಸಿರುತ್ತಾರೆ.

* * *

ಕೋಟಾ ಸಂಸ್ಥಾನದ ಮಹಾರಾಜರವರು ಲಾಹೋರ್ ಪಟ್ಟಣದ ಷಹದಾರಾದಲ್ಲಿರುವ ಜಹಂಗೀರ್ ಚಕ್ರವರ್ತಿಯವರ ಗೋರೀ ಬಂಗಲೆಗೆ ಚಿತ್ರ ಕೆಲಸ ಮಾಡಿದ ಕಂಚಿನ ಲಾಂದ್ರವನ್ನು ಕಳುಹಿಸಿಕೊಟ್ಟರು. ಆ ಮೊಗಲಾಯಿ ಚಕ್ರವರ್ತಿಯವರೇ ಅಪ್ಪಣೆ ಕೊಟ್ಟು ಕೋಟಾ ಸಂಸ್ಥಾನವನ್ನು ನಿರ್ಮಾಣಮಾಡಿ, ಈಗಿನ ಮಹಾರಾಜರವರ ಹಿರಿಯರಿಗೆ ವಹಿಸಿದರು. ಈ ಕೃತಜ್ಞತೆಯನ್ನು ಪ್ರಕಾಶಪಡಿಸುವುದಕ್ಕೆ ಈಗ ಮಹಾರಾಜರವರು ಆ ಲಾಂದ್ರವನ್ನು ಗೋರೀಗೆ ಕಳುಹಿಸಿ ಕೊಟ್ಟರು.

* * *

ಕಲ್ಕತ್ತಾ ಪಟ್ಟಣದಲ್ಲಿ ಹೊಸ ಥಾನು ಬಟ್ಟೆಗಳ ಮೇಲೆ ರಾಜದ್ರೋಹಕರವಾದ ಮಾತುಗಳನ್ನು ಅಚ್ಚು ಹಾಕಿ ಬಿಕರಿಮಾಡುತ್ತಿದಾರೆಂದು ತಿಳಿದುಬಂದದ್ದರಿಂದ ಅಂಥಾ ಬಟ್ಟೆಗಳನ್ನೂ ಥಾನುಗಳನ್ನೂ ಸರ್ಕಾರಕ್ಕೆ ಮುಟ್ಟುಗೋಲು ತೆಗೆದುಕೊಳ್ಳಲಾಗುತ್ತದೆ ಎಂಬದಾಗಿ ಗವರ್ನ್‌ಮೆಂಟಿನವರು ಇಸ್ತಿಹಾರು ಹಾಕಿಸಿದಾರೆ. ಅಲ್ಲಿನ ಪೋಲೀಸಿನವರು ಅಂಥಾ ಮಾತುಗಳಿರುವ ಬಟ್ಟೆಗಳೇನಾದರೂ ಸಿಕ್ಕುವವೋ ಎಂದು ಕೆಲವು ಅಂಗಡಿಗಳನ್ನು ನುಗ್ಗಿ ಶೋಧನೆಮಾಡಿದರು. ಇದುವರೆಗೆ ಒಂದೂ ಸಿಕ್ಕಲಿಲ್ಲವಾದದ್ದರಿಂದ ಅವರು ಯಾರನ್ನೂ ದಸ್ತಗಿರಿ ಮಾಡಿಲ್ಲ.

* * *

ಬೊಂಬಾಯಿ ಪಟ್ಟಣದ ಮಹಮದ್ ಖಾಸಿಂ ಚಿಸ್ತಿ ಎಂಬೊಬ್ಬ ಐಶ್ವರ್ಯವಂತನಾದ ವರ್ತಕನು ಕೆಲವು ಕಾಲದಿಂದ ಪಾರ್ಸಿ ಹೆಣ್ಣು ಮಕ್ಕಳನ್ನು ತಡೆದು ತೊಂದರೆಪಡಿಸುತ್ತಾ ಇದ್ದನು. ಮ್ಯಾಜಿಸ್ಟ್ರೇಟರು ಅವನಿಗೆ ಸಮನ್ ಕಳುಹಿಸಿದರು. ಅವನು ಕೋರ್ಟಿಗೆ ಹಾಜರಾಗಲಿಲ್ಲ. ತರುವಾಯ ವಾರಂಟು ಹುಟ್ಟಿತು. ಅದನ್ನು ಕೇಳಿ ಅವನು ತಾನಾಗಿಯೇ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾದನು. ಅವರು ಅವನನ್ನು ೪೦೦ ರೂಪಾಯಿನ ಎರಡು ಜಾಮೀನ್ ತೆಗೆದು ಕೊಂಡು ಕಳುಹಿಸಿದರು. ಮೊಕದ್ದಮೆಯು ಮೊನ್ನೆ ಸೋಂಗಳವಾರ ವಿಚಾರಣೆಯಾಗುವುದಾಗಿತ್ತು.

* * *

ವೈಸ್‌ರಾಯಿಯವರ ಧರ್ಮಪತ್ನಿಯವರಾದ ಲೇಡಿ ಮಿಂಟೋರವರು ತಮ್ಮ ಈರ್ವರು ಕುಮಾರಿಯರೊಡನೆ ಕಳೆದ ವಾರ ಕಾಶೀ ಪಟ್ಟಣಕ್ಕೆ ದಯಮಾಡಿದರು. ಕಾಶೀ ಮಹಾರಾಜರವರೂ ಕಮಿಷನರವರೂ ಸ್ಟೇಷನ್ನಲ್ಲಿ ಕಾದಿದ್ದು ಸನ್ಮಾನದೊಡನೆ ಎದುರುಗೊಂಡು ಅವರನ್ನು ನಾದೇಶ್ವರ ಬಂಗಲೆಯಲ್ಲಿ ಇಳಿಸಿ ಸತ್ಕಾರಮಾಡಿದರು. ಲೇಡಿ ಮಿಂಟೋರವರು ಅಲ್ಲಿ ಎರಡು ದಿನ ಇದ್ದು ಸ್ನಾನಘಟ್ಟಗಳನ್ನೂ ಇತರ ಮುಖ್ಯಸ್ಥಳಗಳನ್ನೂ ಪರಾಂಬರಿಸಿದ್ದಲ್ಲದೆ ಅನ್ನಪೂರ್ಣ ದೇವಸ್ಥಾನಕ್ಕೂ ವಿಶ್ವನಾಥಸ್ವಾಮಿ ಗುಡಿಗೂ ಹೋಗಿದ್ದರು. ಆಯಾ ಸ್ಥಳಗಳಲ್ಲಿ ಪೂಜೆ ಆರತಿ ಮುಂತಾದವುಗಳು ನಡೆಯುವಂತೆ ಮಹಾರಾಜರವರು ಏರ್ಪಾಡು ಮಾಡಿದ್ದರು. ಲೇಡಿ ಮಿಂಟೋರವರು ಪರಿವಾರ ಸಮೇತ ಮರುದಿನ ಕಲ್ಕತ್ತೆಯನ್ನು ಕುರಿತು ಪ್ರಯಾಣಮಾಡಿದರು.

* * *

ಈಚೆಗೆ ಮಿರಾನ್ಷಾ ನಲ್ ಪ್ರಾಂತ್ಯದ ಮಹಮಂಡ್ ಜನರು ಅಫ್ಘಾನಿಸ್ಥಾನದೊಳಕ್ಕೆ ನುಗ್ಗಿ ಕೆಲವು ಕ್ರೂರ ಕೃತ್ಯಗಳನ್ನು ನಡಿಸಿದ್ದರು. ಅವರ ಪಟಾಟೋಪವನ್ನು ತಗ್ಗಿಸುವುದಕ್ಕಾಗಿ ಅಮೀರರವರು ಎರಡು ರಿಜಿಮೆಂಟು ಸವಾರರನ್ನೂ ನಾಲ್ಕು ರಿಜಿಮೆಂಟು ಕಾಲ್ಬಲವನ್ನೂ ಹನ್ನೆರಡು ಫಿರಂಗಿಗಳ ಸಹಿತ ಅಲ್ಲಿಗೆ ಕಳುಹಿಸಿದರು. ಮಹಮಂಡ್ ಜನರು ತಮ್ಮಲ್ಲಿ ಕ್ರೂರ ಕೃತ್ಯಗಳನ್ನು ನಡಿಸಿದಂಥಾ ಐವತ್ತು ಜನರನ್ನು ಹಿಡಿದು ಆ ಸೈನಿಕರಿಗೆ ಒಪ್ಪಿಸಿದರು. ಸೈನಿಕರು ಇವರಿಗೆ ಸಂಕೋಲೆ ಹಾಕಿ ಜಲಾಲಾಬಾದಿಗೆ ಕಳುಹಿಸಿದರು. ಅಮೀರರು ಹುಕುಂ ಕೊಟ್ಟು ಅವರನ್ನೆಲ್ಲಾ ಗುಂಡು ಹೊಡೆದು ಕೊಂದು ಹಾಕಿರುತ್ತಾರೆ — ಈಚೆಗೆ ಅಮೀರರ ಮೇಲೆ ಗುಂಡು ಹೊಡೆದ ಮನುಷ್ಯನನ್ನು ಇನ್ನೂ ಬಂದೀಖಾನೆಯೊಳಗೇ ಇಟ್ಟು ಕೊಂಡಿದಾರೆ.

* * *

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರವರು ಬಾಕರ್‌ಗಂಜ್, ಫರಿದ್‌ಪೂರ್, ಮೈಮನ್‌ಸಿಂಗ್, ಬಾರಿಸಾಲ್ ಎಂಬೀ ನಾಲ್ಕು ಡಿಸ್ಟ್ರಿಕ್ಟುಗಳಲ್ಲೂ ಪ್ರಜೆಗಳು ಇನ್ನೂ ಆರು ತಿಂಗಳ ತನಕ ಯಾವದೊಂದು ಸಭೆಯನ್ನೂ ಕೂಟವನ್ನೂ ನಡಿಸಕೂಡದೆಂದು ಇಸ್ತಿಹಾರು ಹಾಕಿಸಿರುತ್ತಾರೆ. ಆ ಸ್ಥಳಗಳಲ್ಲಿ ಈ ತಿಂಗಳೊಳಗೆ ಪ್ರಜೆಗಳು ವಾರ್ಷಿಕ ಸಭೆಗಳನ್ನು ನಡಿಸುವುದಕ್ಕೆ ಸನ್ನಾಹಮಾಡುತ್ತಾ ಇದ್ದರು. ಗಡೀಪಾರಾಗಿದ್ದು ಬಿಡುಗಡೆ ಹೊಂದಿ ಬಂದಿರುವ ಮಿ॥ ಕೃಷ್ಣಕುಮಾರರವರೂ, ಮಿ॥ ಅಶ್ವಿನೀ ಕುಮಾರದತ್ತರವರೂ, ಮಿ॥ ಪೃಥ್ವೀಶ ಚಂದ್ರರಾಯಿ ಯವರೂ ಆ ಸಭೆಗಳಲ್ಲಿ ಅಗ್ರಾಸನವನ್ನು ವಹಿಸುವಂತೆ ಗೊತ್ತಾಗಿತ್ತು. ಈಗ ಆ ಸಂಘಗಳ ಮುಖಂಡರುಗಳು ತಮ್ಮ ಸಭೆಗಳನ್ನು ನಡಿಸುವುದಕ್ಕೆ ಅವಕಾಶ ಕೊಡಬೇಕೆಂಬ ವಿಷಯದಲ್ಲಿ ಮ್ಯಾಜಿಸ್ಟ್ರೇಟರಿಗೆ ಕಾಗದಗಳನ್ನು ಬರೆದಿರುತ್ತಾರೆ. ಈ ಕೂಟಗಳಲ್ಲಿ ಯಾವ ಯಾವ ವಿಷಯಗಳನ್ನು ಚರ್ಚಿಸಿ ತೀರ್ಮಾನಗಳನ್ನು ಮಾಡುವಿರಿ ಎಂಬದಾಗಿ ಮ್ಯಾಜಿಸ್ಟ್ರೇಟರು ಅವರುಗಳನ್ನು ಕೇಳಿದಾರೆ.

* * *

ಕರಾಚಿ ಡಿಸ್ಟ್ರಿಕ್ಟಿಗೆ ಸೇರಿದ ಮೀರ್‌ಪೂರ್ ಬಾತೊರಾ ಎಂಬ ಪಟ್ಟಣದಿಂದ ಸುಮಾರು ಎರಡು ಮೈಲಿ ದೂರದಲ್ಲಿರುವ ಒಂದು ಗ್ರಾಮಕ್ಕೆ ಹದಿನೈದು ಮಂದಿ ದರೋಡೆಕೋರರು ನುಗ್ಗಿ, ಖಾದರೋ ಮಹಮದ್ ಸಾಲೆಯಾ ಎಂಬ ದೊಡ್ಡ

ಮಹಮದೀಯ ಜರ್ನಿದಾರನ ಮನೆಯನ್ನು ಪ್ರವೇಶಮಾಡಿ ಸುಮಾರು ೧೬೩೦ ಸಾವಿರ ರೂಪಾಯಿನ ಜಂಡಗಿಯನ್ನು ಎತ್ತಿಕೊಂಡು ಹೋದರು ಈ ದರೋಡೆಕೋರರು ಪಿಸ್ತೂಲುಗಳನ್ನು ತಂದಿದ್ದು ಗುಂಡು ಹೊಡೆದು ಒಬ್ಬ ಗಂಡಸನ್ನೂ ಒಬ್ಬ ಹೆಂಗಸನ್ನೂ ಕೊಂದುಹಾಕಿದರು ಅಷ್ಟರಲ್ಲೇ ಗ್ರಾಮಸ್ಥರು ಸೇರಿ ಆ ಕಳ್ಳರನ್ನು ಹಿಡಿಯಬೇಕೆಂದು ಸಾಹಸಪಟ್ಟರು ಗುದ್ದಾಟದಲ್ಲಿ ಒಬ್ಬ ಕಳ್ಳನಿಗೆ ಸ್ವಲ್ಪ ಗಾಯವಾಯಿತು ಗ್ರಾಮಸ್ಥರು ಕಳ್ಳರ ಪೈಕಿ ಇಬ್ಬರನ್ನು ಹಿಡಿದುಕೊಂಡರು ಗಾಯಪಟ್ಟ ಕಳ್ಳನು ತಪ್ಪಿಸಿಕೊಂಡು ಹೋಗಿದ್ದನು ಇವನನ್ನೂ ದಸ್ತಗಿರಿ ಮಾಡಿರುತ್ತಾರೆ ಈ ವರ್ತಮಾನವನ್ನು ಕೇಳಿ ಕರಾಚಿಯ ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟರು ಅಲ್ಲಿಗೆ ಹೋಗಿದ್ದಾರೆ

* * *

ಕಾಲ್ಕದ ವಿದ್ಯಾಶಾಲೆಯೊಳಗೆ ದಕ್ಷಿಣ ದೇಶದ ಪರಸ್ಪರಸಹಾಯಕ ಸಂಘಗಳ ಅಧಿಕಾರಿಗಳೂ ಪ್ರೋತ್ಸಾಹಕರೂ ಕಳೆದ ಶನಿವಾರ, ಭಾನುವಾರಗಳಲ್ಲಿ ಸಭೆಸೇರಿದ್ದರು ಮದರಾಸ್ ಹೈಕೋರ್ಟಿನ ಜಡ್ಜರಾದ ಮೆ॥ ವಿ ಕೃಷ್ಣಸ್ವಾಮಿ ಅಯ್ಯರವರು ಸಭೆಯ ಅಗ್ರಾಸನವನ್ನು ವಹಿಸಿ ಉಪನ್ಯಾಸಪೂರ್ವಕವಾಗಿ ಕಾರ್ಯಗಳನ್ನು ಪ್ರಾರಂಭಿಸಿದರು ಸಂಘಗಳ ಮೇಲ್ವಿಚಾರಣೆಯನ್ನು ಕುರಿತು ಮದರಾಸಿನ ಮೆ॥ ಆರ್ ರಾಮಚಂದ್ರರಾಯರೂ, ಮನೆಗಳನ್ನು ಕಟ್ಟುವುದಕ್ಕೆ ಸಂಘವನ್ನು ಏರ್ಪಡಿಸಿಕೊಳ್ಳುವದನ್ನು ಕುರಿತು ಮೈಸೂರಿನ ಮೆ॥ ಎಂ ಶಾಮರಾಯರೂ, ನೇಯ್ಗೆಯವರಲ್ಲಿ ಪರಸ್ಪರ ಸಹಾಯವುಂಟಾಗಬೇಕು ಎಂಬ ವಿಚಾರವಾಗಿ ಕಂಚಿಯ ಮೆ॥ ವಿ ರಾಮಚಂದ್ರಶಾಸ್ತ್ರಿಗಳೂ ವ್ಯವಸಾಯಾಭಿವೃದ್ಧಿಯೂ ಪರಸ್ಪರಸಹಾಯವೂ ಎಂಬ ವಿಷಯವನ್ನು ಕುರಿತು ಕೊಯಮುತ್ತೂರಿನ ಮೆ॥ ಸಿ ವಿ ಕೃಷ್ಣಸ್ವಾಮಿ ಅಯ್ಯರವರೂ ಉಪನ್ಯಾಸಗಳನ್ನು ಮಾಡಿದರು ಬಳಿಕ ಸಂಘಗಳ ಪ್ರೋತ್ಸಾಹದ ವಿಷಯದಲ್ಲಿ ಚರ್ಚೆಯೂ ನಡೆಯಿತು ಎರಡನೆಯ ದಿನ ಸಾಯಂಕಾಲ ಆ ದೊಡ್ಡ ಮನುಷ್ಯರಿಗೆಲ್ಲಾ ಕಾಲ್ಕದ ಮೆ॥ ಬಿ ವಿ ನರಸಿಂಹ ಅಯ್ಯರವರು ಔತನವನ್ನು ಮಾಡಿಸಿ, ನಾನಾ ಸಂತೋಷಗಳನು ಕಲ್ಪಿಸಿದ್ದರು

* * *

ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ತಮ್ಮ ಪ್ರಜೆಗಳ ಪೈಕಿ ಕೆಲವು ನೌಕರರೂ ವಕೀಲರೂ ಆರ್ಯಸಮಾಜಕ್ಕೆ ಸೇರಿದವರೂ ರಾಜದ್ರೋಹದ ಮಸಲತ್ತುಗಳನ್ನು ಮಾಡಿದವರೆಂದು ಅವರ ಮೇಲೆ ಮೊಕದ್ದಮೆ ಮಾಡಿಸಿ, ಅವರೆಲ್ಲಾ ಕ್ಷಮಾಪಣೆಯನ್ನು ಬೇಡಿಕೊಂಡಾಗ ಅವರನ್ನು ದಯಾದೃಷ್ಟಿ ಮಾಡಬೇಕಾದ್ದಿಲ್ಲವೆಂದು ಹೇಳಿ ಎಲ್ಲರನ್ನೂ ಖುಲಾಸ್ ಮಾಡಿಸಿ ಅವರೆಲ್ಲಾ ಅಂದರೆ ನಾಲ್ವತ್ತೆರಡೂವರೆ ಮಂದಿ ತಮ್ಮ ಮನೆ ಮಠಗಳನ್ನು ಬಿಟ್ಟು ಪಾಟಿಯಾಲಾ ಸಂಸ್ಥಾನದಿಂದ ಹೊರಟು ಹೋಗಬೇಕೆಂದು ಗಡೀಪಾರು ಶಿಕ್ಷೆಯನ್ನು ವಿಧಿಸಿದರಷ್ಟೆ ಈಚೆಗೆ ಆ ಪೈಕಿ ಐದುಮಂದಿಯನ್ನು ವಾಪಸು ಸಂಸ್ಥಾನಕ್ಕೆ ಬಂದು ತಮ್ಮ ತಮ್ಮ ಉದ್ಯೋಗ ಕಸಬುಗಳನ್ನು ನಡಿಸಿಕೊಳ್ಳಬಹುದೆಂದು ರಿಯಾಯಿತಿ ತೋರಿಸಿರುತ್ತಾರೆ ಇವರ್ಯಾರೆಂದರೆ—ಚಂದೂಲಾಲ್ ನೇಪಾಲ್—ಇವರಿಬ್ಬರೂ ವಕೀಲರು ದಿಲೀಪ್ ಚಂದ್—ಸಾಹುಕಾರ ಭಗವಾನ್‌ದಾಸ್—ಖಜಾಂಚಿ ಶಾಂತರಾಂ—ಪೋಲೀಸ್ ಇನ್ಸ್‌ಪೆಕ್ಟರ್ —ಪಾಟಿಯಾಲಾ ಸಂಸ್ಥಾನದಲ್ಲಿ ರೀಜನ್ಸಿ ಕೌನ್ಸಿಲ್ಲು ಏರ್ಪಡಾಗುವುದೆಂದೂ ಈ ಕೌನ್ಸಿಲ್‌ನವರಿಗೆ ಸಂಸ್ಥಾನದ ಆಳ್ವಿಕೆಯನ್ನು ವಹಿಸಿಬಿಡುತ್ತಾರೆಂದೂ ಒಂದು ಬಲವಾದ ವರ್ತಮಾನ ಹುಟ್ಟಿ ಇದೆ

* * *

ಹಿಂದುಸ್ಥಾನದ ವಾಯುವ್ಯ ಸರಹದ್ದಿನ ಆಚೆ ಇರುವ ಮಾಹೂದ್ ಜನರು ಸುಮಾರು ೩೦ ಮಂದಿ ಮದ್ದು ಗುಂಡುಗಳ ಸಮೇತ ಎಲ್ಲೆಯನ್ನು ದಾಟಿ ದರೋಡೆ ಮಾಡುವುದಕ್ಕಾಗಿ ಶಾಹ ರ್ ಖೇಲ್ ಎಂಬ ಗ್ರಾಮದೊಳಕ್ಕೆ ನುಗ್ಗಿ ಬಂದರು ಎಲ್ಲೆ ಕಟ್ಟನ್ನಲ್ಲಿರುವ ಪೋಲೀಸ್ ಸೈನಿಕರು ಸುಮಾರು ೨೫ ಮಂದಿ ಅವರನ್ನು ಓಡಿಸುವುದಕ್ಕೆ ಪ್ರಯತ್ನಪಟ್ಟಾಗ ಅವರೆಲ್ಲಾ ಒಂದು ಬಲವಾದ ಮಾಳಿಗೆಯೊಳಕ್ಕೆ ಹೋಗಿ ಸೇರಿಕೊಂಡರು ಕತ್ತಲಾದ ಬಳಿಕ ಇಂಗ್ಲೀಷ್ ಸೈನಿಕರು ಮಾಳಿಗೆ ಸುತ್ತಲೂ ಘೇರಾಯಿಸಿಕೊಂಡು ಗುಂಡು ಹೊಡೆದರು ಒಳಗಿದ್ದವರೆಲ್ಲಾ ಏಕಕಾಲದಲ್ಲಿ ಹೊರಕ್ಕೆ ಎಂದು ಒಂದು ಸಣ್ಣ ಯುದ್ಧವಾಯಿತು ಕಡೆಗೆ ಶತ್ರುಗಳು ಸಮೀಪದಲ್ಲಿದ್ದ ಕಾಡಿನೊಳಕ್ಕೆ ಹೋಗಿ ಚದರಿಹೋದರು ಕತ್ತಲಲ್ಲಿ ಅವರ ಸ್ಥಾನವು ಕಾಣದೆ ಹೋಯಿತು ಅವರಲ್ಲಿ ೮ ಮಂದಿ ಕೊಲ್ಲಲ್ಪಟ್ಟರು, ಗಾಯಪಟ್ಟ ಮೂರು ಮಂದಿಯು ಸೈನಿಕರಿಗೆ ಸಿಕ್ಕಿಬಿದ್ದರು ಸೈನಿಕರಲ್ಲೂ ಪೋಲೀಸಿನವರಲ್ಲೂ ಆರುಮಂದಿ ಕೊಲೆಯಾದರು ಕ್ಯಾಪ್ಟನ್ ಸ್ಟರ್ಲಿಂಗ್ ಯವರೂ ಒಬ್ಬರಾಗಿದಾರೆ ಈಚೆಗೆ ಈ ಜನರ ಹಾವಳಿಯನ್ನು ತಡೆಯುವುದಕ್ಕೆ ಗವರ್ನ್‌ಮೆಂಟಿನವರು ಮಾಹೂದ್ ಎಲ್ಲೆಕಟ್ಟಿನಲ್ಲಿ ಬಲವಾದ ಸೈನ್ಯವನ್ನು ಇಟ್ಟಿರಬೇಕೆಂದು ಹುಕುಂ ಕೊಟ್ಟಿದಾರೆ

* * *

ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಹಿಂದಿನ ಶನಿವಾರ ಪಂಡಿತ ಮದನ ಮೋಹನ ಮಾಲವ್ಯರವರೂ, ಮೆ॥ ಭೂಪೇಂದ್ರನಾಥ ಬಾಸುಯವರೂ ವೈಸ್‌ರಾಯಿ ಪ್ರಭುಗಳನ್ನು ಕುರಿತು—ಹಿಂದುಸ್ಥಾನದಲ್ಲಿ ಯೂರೋಪಿಯನ್ನರು ವಿಸ್ತಾರವಾದ ಮತ್ತು ಆರೋಗ್ಯಕರವಾದ ಬಂಗಲೆಗಳಲ್ಲಿ ವಾಸಮಾಡುತ್ತಾರಾದದ್ದರಿಂದ ಅವರಿಗೆ ಪ್ಲೇಗ್ ಉಪದ್ರ ತಗಲುವುದಿಲ್ಲ ಆದರೆ ಗವರ್ನ್‌ಮೆಂಟಿನವರು ಪ್ರಜೆಗಳ ಆರೋಗ್ಯ ವರ್ಧಕ ಕಾರ್ಯಗಳನ್ನು ನಡಿಸದೆ ತಪ್ಪಿರೋಣದರಿಂದ ಅನೇಕಾನೇಕ ಜನರು ಕೊಳಕಿನಲ್ಲಿ ವಾಸಮಾಡುತ್ತಾ ಪ್ಲೇಗಿಗೆ ಸಿಕ್ಕಿ ಮೃತಪಡುತ್ತಿದಾರೆ ಎಂದು ಆರಿಕೆ ಮಾಡಿದರು ಈ ಆಕ್ಷೇಪಣೆಗೆ ಪ್ರತಿಯಾಗಿ ಸರ್ ಜನರಲ್ ಲೂಕಿಸ್ ಯವರು ಜವಾಬು ಕೊಟ್ಟದ್ದೇನೆಂದರೆ,—ನಿರ್ಮಲವೂ ಆರೋಗ್ಯಜನಕವೂ ಆದ ಕಟ್ಟಡಗಳಲ್ಲಿ ವಾಸಮಾಡೋಣದರಿಂದ ಆ ಯೂರೋಪ್ಯಿಯನ್‌ರಿಗೆ ಪ್ಲೇಗ್ ತಗಲುವುದಿಲ್ಲವೆಂದು ಹೇಳುವುದು ಸರಿಯಾದ ಕಾರಣವಲ್ಲ ನೈರ್ಮಲ್ಯದಿಂದಲೂ ಕೊಳಕಿನಿಂದಲೂ ಈ ಉಪದ್ರವು ಹುಟ್ಟತಕ್ಕದ್ದಲ್ಲ ಕಳೆದ ಹದಿಮೂರು ಸಂವತ್ಸರಗಳಿಂದಲೂ ಗವರ್ನ್‌ಮೆಂಟಿನವರು ಈ ಉಪದ್ರವನ್ನು ನಿವಾರಣೆಮಾಡಬೇಕೆಂದು ಬಹಳ ಸಾಹಸಪಟ್ಟು ಅನೇಕ ದ್ರವ್ಯವನ್ನು ವ್ಯಯಮಾಡಿದರು ಈ ಉಪದ್ರವು ಇಲಿ ಹೆಗ್ಗಣಗಳಲ್ಲಿ ಹುಟ್ಟಿ ಚಿಗಟಗಳ ಮೂಲಕ ಮನುಷ್ಯನಿಗೆ ವ್ಯಾಪಿಸಿಯಾಗುತ್ತದೆ ಎಂದು ಸಿದ್ಧಾಂತವಾಗಿದೆ ಜನರು ತಮ್ಮ ಮನೆಗಳಲ್ಲಿ ಇಲಿ ಹೆಗ್ಗಣಗಳು ಸೇರುವುದಕ್ಕೆ ಅವಕಾಶ ಕೊಡದೆ ಹೋದರೆ ಈ ಉಪದ್ರವು ಉತ್ಪತ್ತಿಯಾಗುವುದಿಲ್ಲ. ಮನೆಯ ಒಳಗೂ ಹೊರಗೂ ಕಸಕಡ್ಡಿಗಳಾಗಲಿ ಆಹಾರ ಪದಾರ್ಥಗಳಾಗಲಿ ಸ್ವಲ್ಪವೂ ಬೀಳದಂತೆ ನೋಡಿಕೊಂಡರೆ ಮುಂತು ಸರ್ಕಾರದವರು ಆರೋಗ್ಯ ಜನಕವಾದ ಕಾರ್ಯಗಳನ್ನೇನೋ ಮಾಡಬೇಕಾದದ್ದೇ ಸಹಜ ಆದರೆ ಜನರು ಎಚ್ಚರಿಕೆಯಾಗಿದ್ದು ಮನೆಯೊಳಗೂ ಹೊರಗೂ ಸರಿಯಾದ ಮತ್ತು ನಿರ್ಮಲವಾದ ಏರ್ಪಾಡನ್ನಿಟ್ಟರೆ ಈ ಉಪದ್ರವು ಕಾಣಿಸಿಕೊಳ್ಳಲಾರದು ಎಂಬ ದೇ

* * *

ಟಿಬೆಟ್ ರಾಜ್ಯದಿಂದ ಪರಿವಾರ ಸಹಿತ ಬಂದಿರುವ ದಲಾಯಿ ಲಾಮಾ ಎಂಬ ಬೌದ್ಧ ಮಠಾಧಿಪತಿಯು ಕಳೆದ ವಾರ ಕಲ್ಕತ್ತೆಗೆ ಬಂದು, ಗವರ್ನ್‌ಮೆಂಟ್ ಹೌಸ್ ಎಂಬ ದಿವ್ಯವಾದ ಸರ್ಕಾರಿ ಬಂಗಲೆಯಲ್ಲಿ ಇಳುಕೊಂಡರು ಇಂಗ್ಲಿಷ್ ಗವರ್ನ್‌ಮೆಂಟಿನವರು ಅವರನ್ನು ಸನ್ಮಾನಪೂರ್ವಕವಾಗಿ ಎದುರುಗೊಂಡರು ಅವರನ್ನು ಸತ್ಕರಿಸುತ್ತಿದಾರೆ ಗೌರವಾರ್ಥವಾದ ೧೯ ತೋಪುಗಳು ಹಾರಿಸಲ್ಪಟ್ಟವು ದಲಾಯಿ ಲಾಮಾರವರು ಮರ್ಯಾದೆಗಳೊಡನೆ ವೈಸ್‌ರಾಯಿಯವರ ಭೇಟಿಮಾಡಿಕೊಂಡು ಬಂದರು ವೈಸ್‌ರಾಯಿಯವರು ಹೋಗಿ ಮರುಭೇಟಿಕೊಟ್ಟರು ಈಚೆಗೆ ಸಿಲೋನ್ ಅರಕಾನ್, ಬರ್ಮಾ ಮೊದಲಾದ ಕಡೆಗಳಿಂದ ಬೌದ್ಧ ಶಿಷ್ಯವರ್ಗದವರು ತಂಡತಂಡವಾಗಿ ಹೋಗಿ ಆ ಮಹಾಗುರುವನ್ನು ದರ್ಶನಮಾಡುತ್ತಾ ಅವರಿಗೆ ಕಾಣಿಕೆಗಳನ್ನು ಒಪ್ಪಿಸುತ್ತಾ ಬಂದಿದಾರೆ ಲಾಮಾರವರು ಕಲ್ಕತ್ತಾ ಪಟ್ಟಣದಲ್ಲಿರುವ ಮುಖ್ಯಭಾಗಗಳನ್ನೂ ವಿಶೇಷವಾದ ಆಲಯಗಳನ್ನೂ ಕಾರ್ಖಾನೆಗಳನ್ನೂ ಹೋಗಿ ನೋಡಿಕೊಂಡು ಬಂದರು, ಇದಲ್ಲದೆ ಅವರು ಕಲ್ಕತ್ತೆಯಿಂದ ಹೊರಟು ಕಾಶಿ, ಬುದ್ಧಗಯಾ ಮೊದಲಾದ ಕಡೆಗಳಿಗೆ ಹೋಗಿ ಅಲ್ಲಿನ ಬೌದ್ಧದೇವಸ್ಥಾನ ಮಠಾದಿಗಳನ್ನು ನೋಡಿಬಂದು ದಾರ್ಜಿಲಿಂಗ್ ಪಟ್ಟಣದಲ್ಲೇ ಕೆಲವು ಕಾಲ ವಾಸಮಾಡುವವರಾಗಿದಾರೆಂದು ಪ್ರಕಟವಾಗಿದೆ ಈಚೆಗೆ ಕಳೆದ ಭಾನುವಾರ ಇವರು ಕಲ್ಕತ್ತೆಯಿಂದ ಸ್ಪೆಷಲ್ ರೈಲಿನಲ್ಲಿ ಡಾರ್ಜೀಲಿಂಗ್ ಪಟ್ಟಣಕ್ಕೆ ತೆರಳಿದರೆಂದು ತಂತೀ ವರ್ತಮಾನ ಬಂದಿದೆ

ವಿದೇಶ ವರ್ತಮಾನಗಳು

ಲಂಡನ್ ಪಟ್ಟಣದ ವರ್ತಕರು ಹಿಂದುಸ್ಥಾನಕ್ಕೆ ೩೬ ಲಕ್ಷದ ೧೫ ಸಾವಿರ ರೂಪಾಯಿನ ಚಿನ್ನದ ಗಟ್ಟಿಗಳನ್ನು ಜಹಜಿನ ಮೇಲೆ ರವಾನೆ ಮಾಡಿರುತ್ತಾರೆ

* * *

ಪ್ಯಾರಿಸ್ ಪಟ್ಟಣದಲ್ಲೂ ಸುತ್ತುಮುತ್ತಲಲ್ಲೂ ಪ್ರವಾಹದ ದೆಸೆಯಿಂದ ಸಂಭವಿಸಿದ ಕಷ್ಟದ ನಿವಾರಣೆಗಾಗಿ ಇಂಗ್ಲಿಷ್ ಪ್ರಜೆಗಳು ೯½ ಲಕ್ಷ ರೂಪಾಯನ್ನು ಚಂದಾ ಕೂಡಿಸಿ ಕಳುಹಿಸಿಕೊಟ್ಟರು

* * *

ಟಿಬೆಟ್ ರಾಜ್ಯದ ಕಾರುಬಾರುಗಳನ್ನು ಕುರಿತು ಚರ್ಚೆ ಮಾಡುವುದಕ್ಕಾಗಿ ಚೀನಾ ರಾಜ್ಯದ ಪರವಾಗಿ ಟೂಂಗ್ ಷಾವೋಯೀ ಎಂಬ ಅಧಿಪತಿಯು ಷಾಂಘಾಯಿ ಪಟ್ಟಣದಿಂದ ಹಿಂದುಸ್ಥಾನಕ್ಕೆ ಬರುವನೆಂದು ಪ್ರಕಟವಾಗಿದೆ

* * *

ಜರ್ಮನಿ ರಾಜ್ಯದ ಟಪ್ಪಾಲನ್ನು ತೆಗೆದುಕೊಂಡು ಹೋಗುತ್ತಿದ್ದ ಪ್ರಿನ್ಸ್ ವಿಲ್ಲಿಯಂ ಎಂಬ ಜಹಜು ಸಮುದ್ರದಲ್ಲಿ ಬಂಡೆಗೆ ಬಡಿದು ಒಡೆದುಹೋಯಿತು ಸುಮಾರು ೫೩ ಜನರು ಮೃತಪಟ್ಟರೆಂದು ಊಹಿಸಲ್ಪಟ್ಟಿದೆ

* * *

ಹಿಂದುಸ್ಥಾನದ ಒಳಾಂಯದಲ್ಲಿ ರೈತರೂ ಜಮೀನ್‌ದಾರರೂ ಬೆಳೆಮಾಡುವ ಹೊಗೆಸೊಪ್ಪಿನ ಮೇಲೆ ಸುಂಕವನ್ನು ಹಾಕಿ ವಸೂಲ್ಮಾಡುವುದು ಸದ್ಯ ಆಗಲಾರದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ

* * *

ವಿಲಾಯತಿಯಿಂದ ಸಿಂಗಪುರ, ಪೀನಾಂಗ್ ಲಾಬುವಾನ್ ಎಂಬೀ ಸ್ಥಳಗಳಿಗೆ ತಂತೀವರ್ತಮಾನ ಕೊಡಬೇಕಾದರೆ ಪ್ರತಿ ಮಾತಿಗೂ ಒಂದೊಂದು ರೂಪಾಯಿ ಛಾರ್ಜ ಕೊಡುತ್ತಿದ್ದರು ಈಗ ಗವರ್ನ್‌ಮೆಂಟಿನವರು ೯ ಆಣೆಗೆ ಇಳಿಸಿದಾರೆ

* * *

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಕಳೆದ ವಾರ ಪಾರ್ಲಿಮೆಂಟಿನಲ್ಲಿ ಇಷ್ಟರೊಳಗೇ ಹಿಂದುಸ್ಥಾನದ ಗವರ್ನ್‌ಮೆಂಟಿನವರು ಹೆಚ್ಚಾಗಿ ಬೆಳ್ಳಿಯನ್ನು ಕೊಂಡು, ಟಂಕಸಾಲೆಗಳಲ್ಲಿ ರೂಪಾಯಿಗಳನ್ನು ಛಾಪಾ ಹಾಕುವವರಾಗಿದಾರೆ ಎಂದು ತಿಳಿಸಿದರು

* * *

ಫ್ರಾನ್ಸ್ ಸಂಸ್ಥಾನದ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ನದಿಯೊಳಗೆ ಪ್ರವಾಹ ಬಂದು ಅನಾಹುತವಾಯಿತಷ್ಟೆ ಇದರಿಂದ ಕಳೆದ ಜನವರಿ ತಿಂಗಳಲ್ಲಿ ಮೂರು ಕೋಟಿ ರೂಪಾಯಿನ ಮನೆ ಮಠಗಳೂ ಆಸ್ತಿ ಪಾಸ್ತಿಗಳೂ ನಷ್ಟವಾಗಿರುತ್ತವೆ ಎಂದು ಫೆಬ್ರವರಿ ತಾ ೨೪ ರಲ್ಲಿ ಸರ್ಕಾರದವರು ರಿಪೋರ್ಟನ್ನು ಪ್ರಕಟಿಸಿದಾರೆ

* * *

ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ "ಡೆಯಿಲಿ ಮಯಿಲ್" ಎಂಬ ಪತ್ರಿಕೆಗೆ ಮೆ॥ ಹಾರ್ವರ್ ಎಂಬಾತನು ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆ ವಿಷಯದಲ್ಲಿ ನಿಜವಲ್ಲದ ಬಾತ್ಮಿಯನ್ನು ತಂತೀ ವರ್ತಮಾನದ ಮೂಲಕ ತಿಳಿಸಿ ಪ್ರಕಟವಾಗುವಂತೆ ಮಾಡಿದನು ಮ್ಯಾಜಿಸ್ಟ್ರೇಟರು ಆತನನ್ನು ದಯಾಸ್ತಿ ಮಾಡಿ ಆರು ವಾರಗಳ ಸಜಾ ವಿಧಿಸಿರುತ್ತಾರೆ

* * *

ವಿಲಾಯತಿಗೆ ಸೇರಿದ ಲೂಯಿಸ್ ಪಟ್ಟಣದ ಪಾಠಶಾಲೆಯಲ್ಲಿ ಮೆ॥ ಜಾರ್ಡನ್ ಎಂಬ ಉಪಾಧ್ಯಾಯನು ಒಬ್ಬ ವಿದ್ಯಾರ್ಥಿನಿಯನ್ನು ಅವಳ ದುರ್ನಡತೆಗಾಗಿ ಶಿಕ್ಷಿಸಿದನು ಆ ಹುಡುಗಿಯ ತಾಯಿ ಉಪಾಧ್ಯನನ್ನು ದೂಷಿಸಿ ಅಪಮಾನಪಡಿಸಿದಳು ಇದು ಮೊಕದ್ದಮೆ ಆಗಿ ಜಡ್ಜಿಯವರು ಆ ಹೆಂಗಸಿನಿಂದ ಉಪಾಧ್ಯನಿಗೆ ೨,೫೫೦ ರೂಪಾಯಿ ಡಾಮೇಜು ಕೊಡಿಸಿದರು

* * *

ಲಂಡನ್ ಪಟ್ಟಣದ ಪೋಲೀಸಿನವರು ಹಿಂದುಸ್ಥಾನದ ವಿದ್ಯಾರ್ಥಿಯಾದ ಸವಾರ್ಕರ್ ಎಂಬವನನ್ನು ಪ್ಯಾರಿಸ್ಸಿನಿಂದ ಹೋಗಿ ಇಳಿದ ಕೂಡಲೇ ದಸ್ತಗಿರಿ ಮಾಡಿದರೆಂದು ಕಳೆದ ವಾರ ತಿಳಿಸಿದೆವಷ್ಟೆ ಈ ವಿದ್ಯಾರ್ಥಿಯು ನಾಸಿಕದವನು ಗ್ರೇಸ್ ಇನ್ ಎಂಬ ಲಂಡನ್ ಪಟ್ಟಣದ ವಿದ್ಯಾಶಾಲೆಯಲ್ಲಿ ಓದಿ ಬ್ಯಾರಿಸ್ಟರ್ ಪರೀಕ್ಷೆ ಕೊಟ್ಟಿದ್ದನು ಇವನು ರಾಜದ್ರೋಹಿಗಳ ಗುಂಪಿಗೆ ಸೇರಿದವನೆಂದು ತಿಳಿದುಬಂದದ್ದರಿಂದ ಆ ವಿದ್ಯಾಶಾಲೆಯವರು ಅವನಿಗೆ ಪರೀಕ್ಷೆಯ ಸರ್ಟಿಫಿಕೇಟನ್ನು ಕೊಡದೆ ತಿರಸ್ಕರಿಸಿದರು ಹಿಂದುಸ್ಥಾನದಿಂದ ವಾರಂಟು ಬಂದಿದ್ದರಿಂದ ಈಗ ಇವನು ಹಿಡಿಯಲ್ಪಟ್ಟನು ಅಲ್ಲಿ ಮ್ಯಾಜಿಸ್ಟ್ರೇಟರು ಇವನನ್ನು ಜಾಮೀನಿನ ಮೇಲೆ ಬಿಡುವುದಿಲ್ಲವೆಂದು ಹೇಳಿದರು

* * *

ಸರ್ವಿಯಾ ರಾಜ್ಯದ ದೊರೆಯವರು ಇಬ್ಬರು ಮಂತ್ರಿಗಳ ಸಮೇತ ವೇಷ ಮರೆಸಿಕೊಂಡು ದೇಶಾಟನೆ ಮಾಡುತ್ತಿದಾರೆಂದೂ, ಇಷ್ಟರಲ್ಲೇ ಅವರು ರಷ್ಯಾ ರಾಜಧಾನಿಯನ್ನು ತಲಪುವವರಾಗಿದಾರೆಂದೂ ತಂತೀವರ್ತಮಾನ ಬಂದಿದೆ

* * *

ಹಿಂದುಸ್ಥಾನದಿಂದ ಮಲೆಯಾ ದ್ವೀಪಗಳಿಗೆ ಜೀವನಾರ್ಥವಾಗಿ ಅನೇಕ ಪ್ರಜೆಗಳು ಹೋಗುವುದುಂಟು ಈಚೆಗೆ ಅಲ್ಲಿ ರೋಗಾದಿಗಳು ಹೆಚ್ಚಿ ಹಿಂದುಸ್ಥಾನದ ಪ್ರಜೆಗಳು ಲಯವಾಗಿರುವುದನ್ನು ನೋಡಿ ಇಂಗ್ಲಿಷ್ ಗವರ್ನ್‌ಮೆಂಟಿನವರು ಇನ್ನು ಮೇಲೆ ಹಿಂದುಸ್ಥಾನದ ಜನರನ್ನು ಅಲ್ಲಿಗೆ ಕಳುಹಿಸದಂತೆ ಅಪ್ಪಣೆ ಮಾಡಬೇಕೆಂದು ಇಂಡಿಯಾ ಗವರ್ನ್‌ಮೆಂಟಿಗೆ ಬರೆದಿರುತ್ತಾರೆ

* * *

ಫ್ರಾನ್ಸ್ ಸಂಸ್ಥಾನದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ಒಬ್ಬನು ಒಬ್ಬ ಪೋಲೀಸಿನವನನ್ನು ಕೊಂದುಹಾಕಿದನು ಎಂ ಗಸ್ಟಾವ್ ಹಾರ್ವೆ ಎಂಬಾತನು ತನ್ನ ಪತ್ರಿಕೆಯಲ್ಲಿ ಆ ಕೊಲೆಗೆ ಪ್ರೋತ್ಸಾಹ ಮಾಡಿ ಬರೆದನೆಂದೂ, ಕೊಲೆಯಾದ ಮೇಲೆ ಆ ಕೃತ್ಯವನ್ನು ಹೊಗಳಿ ಬರೆದನೆಂದೂ ಮೊಕದ್ದಮೆ ಆಯಿತು ವಿಚಾರಣೆ ನಡೆದು ಆತನಿಗೆ ೪ ವರುಷ ಸಜಪೂ, ೬೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟವು

* * *

ವಿಲಾಯತಿ ರಾಜ್ಯದ ಕೆಂಟ್ ಡಿಸ್ಟ್ರಿಕ್ಟಿಗೆ ಸೇರಿದ ಚಿಡ್ಡಿಂಗ್‌ಸ್ಟನ್ ಎಂಬ ಊರಿನಲ್ಲಿ ಮಿಸೆಸ್ ಕೊಂಬರ್ ಎಂಬಾಕೆಯು ೧೦೦ ನೇ ವರುಷದ ಹುಟ್ಟಿದ ಹಬ್ಬವನ್ನು ಮಾಡಿಕೊಂಡಳು ಈಕೆಗೆ ೩೦ ಮಂದಿ ಮೊಮ್ಮಕ್ಕಳೂ ೬೦ ಜನ ಮರಿಮಕ್ಕಳೂ ಇಬ್ಬರು ಮೊಮ್ಮಕ್ಕಳ ಮರಿಮಕ್ಕಳೂ ಇರುತ್ತಾರೆ ಆ ಹುಟ್ಟಿದ ಹಬ್ಬದ ದಿನ ಚಕ್ರವರ್ತಿ ಸಾರ್ವಭೌಮರವರು ಆಕೆಗೆ ಶುಭವಾದನವನ್ನು ಹೇಳಿ ಕಳುಹಿಸಿದರು

* * *

ರಷ್ಯಾ ರಾಜ್ಯದ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನ ಹತ್ತಿರ ಐವತ್ತು ಮಂದಿ ಅಂಬಿಗರು ಕುದುರೆ ಗಾಡಿಗಳ ಮೇಲೆ ಕುಳಿತು ಹಿಮ ಗಡ್ಡೆಗಳ ಮೇಲೆ ನಿಂತು ಮೀನು ಹಿಡಿಯುತ್ತಿರುವಲ್ಲಿ ಆ ಹಿಮದ ಗಡ್ಡೆಯು ಕೊಚ್ಚಿಕೊಂಡು ಹೋಯಿತು ಅವರೆಲ್ಲಾ ಸಮುದ್ರದಲ್ಲಿ ಆ ಗಡ್ಡೆಯ ಮೇಲೆ ತೇಲುತ್ತಿದ್ದರು ಈ ಸಮಾಚಾರವು ಇತರರಿಗೆ ತಿಳಿದ ಕೂಡಲೇ ಅವರು ಹೋಗಿ ಆ ಅಂಬಿಗರನ್ನೆಲ್ಲಾ ಬದುಕಿಸಿ ಕರೆತಂದರು

* * *

ರಷ್ಯಾ ರಾಜ್ಯದಲ್ಲಿ ಕೆಲವು ದೊಡ್ಡ ಮನುಷ್ಯರು ಚಂದಾ ಹಾಕಿ ಯುದ್ಧದ ಜಹಜುಗಳನ್ನು ಮಾಡಿಸಿ ಗವರ್ನ್‌ಮೆಂಟಿಗೆ ಒಪ್ಪಿಸುವಂತೆ ಏರ್ಪಾಡಾಗಿದೆ ಇದಲ್ಲದೆ ಅದೇ ದೊಡ್ಡ ಮನುಷ್ಯರು ಚಂದಾ ಫಂಡಿನಲ್ಲಿ ಉಳಿದಿರುವ ೧೩½ ಲಕ್ಷ ರೂಪಾಯಿನ ಜೊತೆಗೆ ಇನ್ನೂ ಹಣವನ್ನು ಎತ್ತಿ ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನಗಳ ಸೈನ್ಯವನ್ನು ಮಾಡಿಸಬೇಕೆಂದು ಗೊತ್ತುಮಾಡಿ, ರಷ್ಯಾ ರಾಜ್ಯದೊಳಗೆಲ್ಲಾ ಚಂದಾ ಎತ್ತಲು ಅನುಮತಿಯನ್ನು ದಯ ಪಾಲಿಸಬೇಕೆಂದು ಜಾರ್ ಚಕ್ರವರ್ತಿಯವರನ್ನು ಕೇಳಿರುತ್ತಾರೆ

* * *

ಎಲ್ಜೀರಿಯ ರಾಜ್ಯಕ್ಕೆ ಸೇರಿದ ರಸ್ಟಚಕ್ ಎಂಬ ಸ್ಥಳದಲ್ಲಿ ಒಬ್ಬ ಬಲ್ಗೇರಿಯಾ ದೇಶೀಯನು ಒಬ್ಬ ಮುಸಲ್ಮಾನರ ಹುಡುಗಿಯನ್ನು ಮದುವೆಯಾದನು ಅವಳ ತಂದೆ ತಾಯಿಗಳು ದಾವಾಮಾಡಿದರು ಕೋರ್ಟಿನಲ್ಲಿ ಜಡ್ಜಿಯವರು ಅವಳು ಸಣ್ಣವಯಸ್ಸಿನವಳಾದ್ದರಿಂದ ಅವಳನ್ನು ತಂದೆ ತಾಯಿಗಳಿಗೆ ಒಪ್ಪಿಸಬೇಕೆಂದು ತೀರ್ಮಾನ ಹೇಳಿದರು ಮದುವೆ ಮಾಡಿಕೊಂಡವನು ಆ ರೀತಿ ಅವಳನ್ನು ಕಳುಹಿಕೊಡಲಿಲ್ಲ ಜಗಳವಾಯಿತು ಎರಡು ಕಡೆಗಳಲ್ಲೂ ನೂರಾರು ಮಂದಿ ಸೇರಿ ಕಾದಾಡಿದರು ಈ ದೊಂಬಿಯನ್ನು ಸರ್ಕಾರದ ಸೈನಿಕರು ಬಂದು ಗುಂಡನ್ನು ಹೊಡೆದು ಚದರಿಸಬೇಕಾಯಿತು ೧೫ ಜನರು ಮೃತಪಟ್ಟರು ೩೦ ಜನರಿಗೆ ಬಹಳ ಗಾಯಗಳಾಗಿವೆ ಎಂದು ತಂತೀವರ್ತಮಾನ ಬಂದಿದೆ

* * *

ಪರ್ಷಿಯಾ ರಾಜ್ಯಕ್ಕೆ ಸೇರಿದ ಟೇಬ್ರಿಸ್ ಪಟ್ಟಣದಲ್ಲಿ ೫೦೦ ಜನ ರಷ್ಯಾ ಸೈನಿಕರು ಇರುತ್ತಾರೆ ಇವರನ್ನು ಅಲ್ಲಿಂದ ರಷ್ಯಾದವರು ವಾಪಸು ಕರೆಸಿಕೊಳ್ಳಲಿಲ್ಲ ಇದು ಅಲ್ಲಿನ ಪರ್ಷಿಯಾ ಪ್ರಜೆಗಳಲ್ಲಿ ಅಸಮಾಧಾನವನ್ನುಂಟುಮಾಡಿರುವುದು ಸುಮಾರು ೩,೦೦೦ ಪರ್ಷಿಯಾ ಜನರು ಆಯುಧಪಾಣಿಗಳಾಗಿ ರಷ್ಯಾ ಸೈನ್ಯವನ್ನು ಅಲ್ಲಿಂದ ಹೊರಡಿಸಬೇಕೆಂದು ಪ್ರಯತ್ನಪಡುತ್ತಿರುವರು ಅತ್ತಲಾಗಿ ರಷ್ಯಾದೇಶದವರು ಪರ್ಷಿಯಾದವರ ಮೇಲೆ ಆಕ್ಷೇಪಣೆ ಮಾಡಿ ಅವರು ಪರರಾಜ್ಯಗಳ ಪ್ರಜೆಗಳ ಕ್ಷೇಮಕ್ಕೆ ಭಂಗವನ್ನುಂಟುಮಾಡುವರೆಂದೂ, ಇದನ್ನು ನಿಲ್ಲಿಸದಿದ್ದರೆ ತಾವು ರಷ್ಯಾದಿಂದ ಇನ್ನೂ ಹೆಚ್ಚು ಸೈನ್ಯವನ್ನು ಕಳುಹಿಸಬೇಕಾಗುವುದೆಂದೂ ಪರ್ಷಿಯಾದವರಿಗೆ ತಿಳಿಸಿದರು ಅಂತು ಪರ್ಷಿಯಾದಲ್ಲಿ ರಷ್ಯಾದವರ ಮೇಲೆ ಸ್ವಲ್ಪಮಟ್ಟಿಗೆ ಅಸಮಾಧಾನವಿರುತ್ತದೆ

* * *

ತುರ್ಕಿ ರಾಜ್ಯದ ಮಾಜಿ ಸುಲ್ತಾನರಾದ ಅಬ್ದುಲ್ ಹಾಮಿದಾ ಯವರು ಸಂಸಾರ ಸಮೇತ ಸಾಲೋನಿಕಾದಲ್ಲಿರುತ್ತಾರೆ ಅವರಿಗೆ ಅಲ್ಲಿ ಇರುವುದಕ್ಕೆ ಇಷ್ಟವಿಲ್ಲ ಈಗಿನ ಸುಲ್ತಾನರವರು ಅವರನ್ನು ಇನ್ನೆಲ್ಲಿಯೂ ಹೋಗದಂತೆ ತಡೆದಿರುವರು ಅವರ ರಕ್ತ ಸಂಬಂಧಿಗಳೂ ಇಷ್ಟಮಿತ್ರರೂ ಅವರ ಕೂಡ ಇರುತ್ತಾರೆ ಅವರ ಮೂವರು ಹೆಣ್ಣು ಮಕ್ಕಳೂ ಅಯೂಬ್ ಪಾಷಾ ಯವರ ಐವರು ಮಂದಿ ಕುಮಾರರನ್ನು ಮದುವೆಮಾಡಿಕೊಳ್ಳುವುದಕ್ಕಾಗಿ ಸಾಲೋನಿಕಾದಿಂದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ಲಿಗೆ ಹೋಗಿರುತ್ತಾರೆ ಮಾಜಿ ಸುಲ್ತಾನರು ತಮ್ಮ ಬಳಿ ಇದ್ದ ಆಸ್ತಿಯನ್ನೆಲ್ಲಾ ಸುಮಾರು ೨½ ಕೋಟಿ ರೂಪಾಯನ್ನು ಈಗಿನ ತುರ್ಕಿ ಗವರ್ನ್‌ಮೆಂಟಿಗೆ ಕಳುಹಿಸಿಕೊಟ್ಟರು ಅವರ ಹತ್ತಿರ ಬಹಳ ಸ್ವಲ್ಪ ಆಸ್ತಿ ಉಳಿದಿರುತ್ತದೆ

Printed and Published by the Rev H GULLIFORD
Proprietor and Manager, Wesleyan Mission Press,
Mysore 24/3/1910

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸರ್ ೧೯೧೦ ನೇ ಇಸವಿ ಮಾರ್ಚಿ ತಾರೀಖು ೩೧ ನೇ ಗುರುವಾರ. ಸಂಚಿಕೆ ೬೪

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ದಾಸ್ ಆರ್ ಇ., ಯವರು ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್ ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೊಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಮಾರ್ಚಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಕ್ಕಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡ್ಲೆ ಬರೆಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ. 11-13

ಇದು ಸಾಧಾರಣ ಜ್ವರ, ಚಳಿಜ್ವರ, ನೆಗಡಿಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ ಬೆಳಿಹಿಡಿಯುವ [illegible] ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್, ಚಳ್ಳಕೆರೆಯಲ್ಲಿರುವ ಮುಜಾಮುಕ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , [illegible] ರೂ ೨—೧೨ ೮ ೧೧ ರೂ , ಮತ್ತೆ ಸೀಸೆ ಕಳುಹಿಸಿದರೆ ಪೋಸ್ಟೇಜು ಮಾಫಿಯಾಗುವದು

ಅಮೃತ ಕರ್ಪೂರ

[illegible] am Ca.p [illegible]

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕೆರೆಯುವದು, ವಾಂತಿಭೇದಿ. ನಾನಾ ತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಅಮೃತ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಅಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ಹಾಫ್ಕಿನ್ಸನ್ ಪ್ರಮುಖ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಬಂಗಾರದ ಮತ್ತು ಬೆಳ್ಳಿಯ ಪದಕಗಳು ೧೨ ದೊರೆತಿವೆ.

ಡೈಮಂಡ್ ಡೈಮಂಡ್

ಅತ್ತರ್ ಸಾಬೂನುಗಳು ರಂಗಿನ ಸಾಬೂನುಗಳು

ಸುವಾಸನ, ಚರ್ಮಕ್ಕೆ ಹಿತ ಸುಲಭ ಕ್ರಯ, ಬಣ್ಣ ಖಾತರಿ. 24 4

ಅತ್ತರ್ ಸಾಬೂನುಗಳು ಮೈಯಿನ ಕಾಂತಿಗೂ, ಕಾರ್ಬಾಲಿಕ್ ಸಾಬೂನುಗಳು ಚರ್ಮದ ರೋಗನಿವಾರಣೆಗೂ ಅವಶ್ಯಕ ಡಯಮಂಡ್ ರಂಗಿನ ಸಾಬೂನುಗಳು ಬಣ್ಣ ಖಾತರಿ ಇವುಗಳಿಂದ ಎಲ್ಲಾ ತರದ ಬಟ್ಟೆಗಳಿಗೂ ಬೇಕಾದ ರಂಗನ್ನು ಸುಲಭವಾಗಿ ಕೊಡಬಹುದು ಡಯಮಂಡ್ ಗುಲಾಬಿ ಟೀ —ಇದರ ಕಷಾಯವು ಬಹಳ ರುಚಿಕರವಾಗಿರುವುದರಿಂದ ಈ ಟೀಯು ಕೇವಲ ಬೂಡಿಯಲ್ಲಿದೆ ಇದಲ್ಲದೆ ಡಯಮಂಡ್ ಕೇಶವರ್ಧಕತೈಲ, ಹಲ್ಲುಪುಡಿ, ಕಾಸ್ಮೆಟಿಕ್, ಪಾಮೇಡ್, ಬಾಂ, ಶೀತನಿವಾರಕ ಕರ್ಪೂರ, ಸುವಾಸಿನಿ, ವಿಲಾಸ್ ಮೊದಲಾದ ಅತ್ತರುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ

ವ್ಯಾಪಾರಿಗಳಿಗೆ ದರ ಕಡಿಮೆ. ಡಯಮಂಡ್ ಸೋಪ್ ಕಂಪೆನಿ, ಗಿರ್ಗಾಂ, ಮುಂಬಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 40-2

೧ ಲೋಕಾಮಯಹರ ಕಸ್ತೂರೀ ಮಾತ್ರೆ——ಈ ಮಾತ್ರೆಗಳನ್ನು ಬಂಗಾರದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು ಶಿರಿಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತದ್ದರೆ ಬಾಯಿ ಹೊತ್ತು ಸುವಾಸನೆಯುಳ್ಳದ್ದಾಗಿರುತ್ತೆ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ಪಚ್ಚುಜ್ವರ, ಕ್ಷಯಕ್ಕಗಳನ್ನು ಬಹು ಬೇಗನೆ ಗುಣಪಡಿಸುತ್ತವೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಜೊತೆಯಲ್ಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ಕ್ಷುಧಾಸಾಗರಮಧು

ಮಕ್ಕಳುಗಳಿಗೆ ಇದನ್ನು ಅಮೃತವೆಂದೇ ಹೇಳುವೆವು, ಏಕೆಂದರೆ [illegible] ಅನ್ನಕೋಶವನ್ನು ಬಲಪಡಿಸಿ ಶ್ಲೇಷ್ಮಸ್ಥಾನವನ್ನು ಸಮಂಜಸವಾಗಿಟ್ಟು ಕಟ್ಟರಕ್ತವನ್ನು ಶುದ್ಧೀಕರಿಸಿ ರಕ್ತಾಭಿಸರಣವು ಧಾರಾಳವಾಗುವ ಹಾಗೆ ಮಾಡುತ್ತದೆ. ಇದರಲ್ಲಿ ಆಕ್ಷೇಪಣೀಯವಾದ ಯಾವ ಪದಾರ್ಥವೂ ಸೇರಿಲ್ಲವಾಗಿ ಪ್ರತಿ ಮಕ್ಕಳಿಗೂ ಧೈರ್ಯವಾಗಿ ಕೊಡಬಹುದು

ಇಷ್ಟೇ ಅಲ್ಲ ಮಕ್ಕಳಿಗೆ ಅಜೀರ್ಣದಿಂದಲೋ—ಅಪಾರಪ್ಯಾಕದಿಂದಲೋ—ಹಲ್ಲುಗಳು ಹುಟ್ಟುವುದರಿಂದಲೋ ಆಗುವ ಭೇದಿ—ವಾಂತಿಗಳನ್ನು ನಿಲ್ಲಿಸುತ್ತದೆ ಮಲಬದ್ಧವಿದ್ದರೆ ದಿನಕ್ಕೆ ಒಂದು ವೇಳೆ ಕ್ರಮವಾಗಿ ಆಗುವ ಹಾಗೆ ಮಾಡುತ್ತದೆ—ಬಾಲಕ್ಷಯ, ಪಚ್ಚು ಜ್ವರ (ಹಳೇ ಜ್ವರ), ಉಷ್ಣ ಅಥವಾ ಶೀತದ ನಾನಾ ಬಗೆಯ ಕೆಮ್ಮಲು—ಹೊಟ್ಟೆ ಕಟ್ಟಿಕೊಂಡಿರುವುದು—ಜಲಕರ್ಮ—ಹೊಟ್ಟೆಯ ಎಡಭಾಗದ ಗೆಡ್ಡೆ—ನಿದ್ರೆ ಬಾರದಿರುವುದು ಚಂಡಿ ಹಿಡಿಯುವುದು—ಬಡವಾಗಿರುವುದು—ಗರ್ಭಕಾರಕದಿಂದ ಒಣಗಿಕೊಂಡಿರುವುದು—ಇವೆಲ್ಲವನ್ನೂ ನಿಸ್ಸಂದೇಹವಾಗಿ ಗುಣಪಡಿಸುತ್ತದೆ ಕೇವಲ ತೀಕ್ಷ್ಣವಾಗಿದ್ದರೂ- ಕೇವಲ ಶೀತವಾಗಿದ್ದರೂ ಸಮತ್ವವನ್ನು ಕಲ್ಪಿಸುತ್ತದೆ

ಹೆಚ್ಚು ವರ್ಣಿಸುವದೇನು—ನಿಮ್ಮ ಮಕ್ಕಳು ಯಾವ ತರದ ಬೇನೆಯೂ ಇಲ್ಲದೆ ಮೈತುಂಬಿಕೊಂಡು ಚಟುವಟಿಕೆಯುಳ್ಳವರೂ—ಒಲವುಳ್ಳವರೂ—ಆಗಬೇಕಾದರೆ ಈ ಕ್ಷುಧಾಸಾಗರಮಧು ಒಂದನ್ನೇ ಕೊಡಿ ಬೆಲೆ ರೂ 1—0—0

ಪ್ಯಾಕಿಂಗ್ ಮತ್ತು ಟಪ್ಪಾಲ್ ಖರ್ಚು 6 ಆಣೆ

ಕಾಸಕೇಸರಿ:— —ಶೀತದ ಮತ್ತು ಉಷ್ಣದ ಕೆಮ್ಮಲುಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ ಡಬ್ಬಿ ೧ ಕ್ಕೆ ರೂ 1—0—0 ಟ ಖ ಪ್ರತ್ಯೇಕ

ಶ್ವಾಸಕಾಲೇಶ್ವರ (ಗುಳಿಗೆ ಪುಡಿ) — ಬೆಲೆ ರೂ. 1—8—0

ಟ ಖ ಪ್ರತ್ಯೇಕ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಅಡವು ಇಟ್ಟವರಿಗೆ ನೋಟೀಸು. 39-3

ಕೋಲಾರದ ಭಂಗಾರದ ಗಣಿ ರಾಬರ್ಟ್‌ಸನ್ ಪೇಟೆಯಲ್ಲಿರುವ ಮಾರವಾಡಿ ಸಾಹುಕಾರ್ ದೀಪ್‌ಚಂದ್ ಇವರಿಂದ ಸಮಸ್ತ ಜನಗಳಿಗೂ ತಿಳಿಸಿಕೊಡುವದೇನೆಂದರೆ,—ನಾನು ಬೆಂಗಳೂರು ಸಿಟಿ ಕಲಾಸಿಪಾಳ್ಯದ ಚೌಕದ. ನೇ ನಂಬರು ಅಂಗಡಿಯಲ್ಲಿ ಈಗ್ಗೆ ಸುಮಾರು ಒಂದು ವರುಷದ ಲಾಗಾಯ್ತು ದೀಪ್‌ಚಂದ್ ಕೇವಲ್‌ಚಂದ್ ಎಂಬ ಹೆಸರಿನಿಂದ ನನ್ನ ಪಾಲುದಾರರಾಗಿದ್ದ ಹನ್ಸರಾಜು ಎಂಬುವರ ಮೂಲಕ ಮಾರವಾಡಿ ಲೇವಾದೇವಿ ಅಂಗಡಿ ಇಟ್ಟು ವ್ಯಾಪಾರ ನಡಿಸುತ್ತಾ ಇದ್ದು ಈಚೆಗೆ ಸದರಿ ಹನ್ಸರಾಜು ಕಾಯಿಲೆ ಸಲುವಾಗಿ ದೇಶಕ್ಕೆ ಹೊರಟುಹೋದದ್ದರಿಂದ ಅದೇ ಸ್ಥಳದಲ್ಲಿ ವ್ಯಾಪಾರ ನಡಿಸಲು ಸಾಧ್ಯವಿಲ್ಲದೆ ಅಂಗಡಿ ವ್ಯಾಪಾರ ಮೋಕೂಫ್ ಮಾಡಿ ಜನಗಳಿಂದ ಅಡವು ಇಡಲ್ಪಟ್ಟ ನಗಗಳು, ಪಾತ್ರೆಗಳು, ಬಟ್ಟೆಗಳು ಮತ್ತು ಇದಕ್ಕೆ ಸಂಬಂಧ ಲೆಖ್ಖಪತ್ರಗಳು ಸಹಾ ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ ಗನ್ ಟುರುಪು ಬಜಾರಿನಲ್ಲಿ ಇರುವ ದೀಪ್‌ಚಂದ್ ಕೇವಲ್‌ಚಂದ್ ಅಂಗಡಿಯಲ್ಲಿ ಇಟ್ಟು ಅದನ್ನು ಇತ್ಯರ್ಥ ಮಾಡಿಕೊಳ್ಳುವದಕ್ಕೆ ಒಬ್ಬ ಗುಮಾಸ್ತೆಯನ್ನು ಮೊಕರರ್ ಮಾಡಿರುತ್ತೆ ಆದದ್ದರಿಂದ ಈ ತಾರೀಖು ಲಾಗಾಯ್ತು ಎರಡು ತಿಂಗಳ ಒಳಗಾಗಿ ಅಡವು ಇಟ್ಟು ಇರುವಂಥಾವರೆಲ್ಲರೂ ಸದರಿ ಗನ್ ಟುರ ಪೇಟೆಯಲ್ಲಿ ದೀಪ್‌ಚಂದ್ ಕೇವಲ್‌ಚಂದ್ ಅಂಗಡಿಗೆ ಬಂದು ಅವರವರು ಅಡವು ಇಟ್ಟು ಇರುವ ಮಾಲುಗಳನ್ನು ಬಿಡಿಸಿಕೊಳ್ಳಬೇಕು ತಪ್ಪಿದರೆ ವಾಯಿದೆ ಕಳೆದನಂತರ ಅಡವು ಇಟ್ಟು ಇರುವ ಮಾಲುಗಳು ಮಾರಲ್ಪಡುತ್ತವೆ [illegible] ತಾ ೧೬ನೇ ಮಾರ್ಚಿ, ೧೯೧೦

ಕೋಲಾರದ ಭಂಗಾರದ ಗಣಿ ರಾಬರ್ಟ್‌ಸನ್ ಪೇಟೆ, ದೀಪ್‌ಚಂದ್ ಎಂದು ಮಾರವಾಡಿಯಲ್ಲಿ ಸೈನಾಗಿದೆ

ರೈತರೇ, ವ್ಯವಸಾಯವನ್ನು ಅಭಿವೃದ್ಧಿಮಾಡಿಕೊಳ್ಳಿ. 35-3



ನಿಮ್ಮ ಜಮೀನುಗಳನ್ನು ಆಳವಾಗಿ ಉಳಿರಿ ಮಳೆಯ ನೀರನ್ನು ಜಮೀನಿನೊಳಗೇ ಹೀರಿಕೊಳ್ಳುವಂತೆ ಮಾಡಿಕೊಳ್ಳಿ ಉತ್ತಮವಾದ ಹೆಚ್ಚು ಬೆಳೆಯನ್ನು ಕಟಾವು ಮಾಡಿಕೊಳ್ಳಿ ಕೋಲಾರದ ನಾರ್ಮಲ್ ಮತ್ತು ಟ್ರೈನಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿರುವ ನೇಗಲುಗಳೂ ಹರೆತೆ ಹೊಡೆಯುವ ಹಲುಬೆ ಕುಂಟೆ ಕೂರಿಗೆಗಳೂ ನಿಮಗೆ ಬಹಳ ಚನ್ನಾಗಿ ಸಹಾಯಮಾಡುತ್ತವೆ ಕ್ರಯದ ಪಟ್ಟಿ ಮುಂತಾದದ್ದು ತಿಳಿಯಬೇಕಾದರೆ ರೆವ್. ಡಬ್ಲಿಯು. ಎಚ್. ಹಾಲಿಸ್ಟರ್, ಕೋಲಾರ್ ಇವರಿಗೆ ಬೇಗ ಬರೆದುಕೊಳ್ಳಿ.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 45

ತಲೆನೋವು, ವಾಯುನೋವು, ಸೆಳತ, ಗಂಟ್ಲನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು —ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣಿವಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹಟ್ಟನ್ನು ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆರರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ— ಟಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಪೀಟರ್ಸ್,

೩೩, ವೇದನಾಚಪಿಳ್ಳೆ ಬೀದಿ ವೇಪೇರಿ ಮದರಾಸ್

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 6-13

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೆ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಮೀನುಮನುಷ್ಯ ಇರುವ ಈ ಔಷಧದ ಗುರುತು

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ ನಿನಗೆ ಯಾವ ನೋವೇ ಉಂಟಾಗಿರಲಿ—' ನನಗೆ ದಿವಸಕ್ಕೆ ಒಂದು ಸಲವಾದರೂ ಕಾಲಶ್ರುವೃತ್ತಿಯಾಗುತ್ತದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತಗೆದುಕೋ ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲುಶ್ರುವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ ; ಪಿತ್ತಜ್ವರ , ಅಜೀರ್ಣ , ಅಗ್ನಿಮಾಂದ್ಯ ಗುಲ್ಮ , ಅಶಕ್ತಿ , ಎದೆಯು ಕಲ್ಲಾಗಿರುವದು ತಲೆತಿರ ಗುವುದು , ತಲೆನೋವು , ಹೊಟ್ಟೆಯುಬ್ಬರ ಹುಳಿತೇಗಿನ ಹೊಟ್ಟೆ ನೋವು , ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ರೋಗವನ್ನು ಪರಿಹರಿಸಿ ಆರೋಗ್ಯವನ್ನುಂಟುಮಾಡುವುವು [6 31]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುವು.

CHAMBERLAIN'S COUGH REMEDY.

ಚೇಂಬರ್ಲೇನಯವರು ಕಂಡುಹಿಡಿದ ಕೆಮ್ಮಿನ ಔಷಧವು

8 13



ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣವ್ರಾಯವಾಗಿದೆ

ಈ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಫವನ್ನು ಸಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

'ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಬೇರೆ ಊರವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
" " ೬ " " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

14 12

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10-12]

ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು.

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 26 5

ತಲೆನೋವು, ಗಂಟು ಉಬ್ಬುವದು ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಚಳುಕು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬ ೦ ೧೨ ಡಬ್ಬಿಗಳಿಗೆ ೪ ೦ ೦

ಆಸ್ತಾಮಿಶ್ರಣ	೨ ೦ ೦
ಬೇಳುಕಡಿತದಮದ್ದು	೦-೮ ೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦ ೦
ಸುಂದರೀ ತೈಲ—ಮುದ್ದಿ ಬಗಳಿಗೆ	೦ ೮ ೦
ಜುಲಾಬು ಮಾತ್ರೆ—ಜುಲಾಬಿಗೆ	೦ ೮ ೦
ನೇತ್ರಾಂಜನ—ಮಂದದೃಷ್ಟಿಗೆ	೦ ೪-೦
ಬಜ್ಜ ಮುಲಾಮು—ಮಕ್ಕಳ ಬಜ್ಜಗೆ	೦ ೩ ೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧ ೦ ೦
ಕಫನಾಶಕ ಚೂರ್ಣ—ಆಸ್ತಾ ರೋಗಕ್ಕೆ	೦ ೮ ೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 11

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

WANTED

37 2

An English-Speaking Kanarese Munshi, to teach English

Apply stating terms to—

E. H. YOUNG,
Balehonnur.

ಸತ್ಯವೂ ಅಗ್ಗವೂ ಆದ ಅಂಗಡಿ.

41-1

ನಮ್ಮ ಸತ್ಯವನ್ನು ಪರಿಕ್ಷಿಸಿನೋಡಿ

೩೦ ಗಂಟೆ ನಡೆಯುವ ೧೦ ವರುಷ ಗ್ಯಾರಂಟಿ ಉಳ್ಳ ಸುಂದರವೂ ಗಟ್ಟಿಯೂ ಅಗ್ಗವೂ ಆದ ಲೀವರ್ ಜೇಬಿನ ಗಡಿಯಾರವನ್ನು ಸೊಗಸಾದ ಸರಪಣಿ ೧೦೦ ಫೋಟೋ ಕಾರ್ಡುಗಳ ಸಮೇತ ಪೋಸ್ಟೇಜು ಸೇರಿ ಮೂರು ರೂಪಾಯಿಗೆ ಕೊಡುತ್ತೇವೆ ಬೇಗ ಬರೆದುಕೊಳ್ಳಿ ಒಪ್ಪದಿದ್ದರೆ ಹಣ ವಾಪಸು ಕೊಡುತ್ತೇವೆ ನಮ್ಮ ವಿಳಾಸ —

ಎಂ. ಎ. ಘಟಾಲಾ ಕಂಪನಿ, ಚಿತ್ತೂರು, ಉ. ಆರ್ಕಾಟ್.

ಸಂಗೀತ ಪಾರಿಜಾತ ಕ್ರಯ ೪ ಆಣೆ.

20-8

ಮನೋಹರವಾದ ಹಾಡಿನ ಪುಸ್ತಕ! ೧೦ ಪ್ರತಿಗಳನ್ನು ಒಟ್ಟಾಗಿ ತರಿಸುವವರಿಗೆ ೧೨ ಆಣೆ ಕ್ರಯದ ನಿರುಪಮಾ ಎಂಬ ಹೊಸನಾಟಕವನ್ನೂ, ೭ ಪ್ರತಿಗಳನ್ನು ತರಿಸುವವನಿಗೆ ಕಬೀರ ದಾಸನ ಚರಿತ್ರೆಯನ್ನೂ, ೪ ಪ್ರತಿಗಳನ್ನು ತರಿಸುವವರಿಗೆ ಪ್ರತ್ಯೋತ್ತರ ರತ್ನಮಾಲಿಕೆ ಎಂಬ ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ—ದಿ ಮರ್ಕೆಂಟೈಲ್ ಯೂನಿಯನ್, ಮೈಸೂರು.

ಸುಗಂಧಗಳು.

1-20

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ. ೧೨, ೫, ೩, ೨-೮-೦, ೧-೪-೦ ಬಿಲ್ಲೆಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ಬಹಾರಿಣಿ ೧ ಶೀಸೆಗೆ ೪ ಆಣೆ. ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ.

ವಿಳಾಸ :—ಟಿ ಎಲ್. ಉಪಾಧ್ಯಾಯ, ಮೈಸೂರು.

ಇದನ್ನು ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ!!

38-2

ಸಮಸ್ತರಿಗೂ ಅನುಕೂಲವಾದ,

ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ,

ಕ್ರಯವಿಚಾರ, (ಬೆಳ್ಳಿ, ಬಂಗಾರ, ರತ್ನಗಳ) ಪರಿಶೀಲನೆ

ಕಟುವಾಯು, ಜ್ವರ, ವಾತಪಿತ್ತ ವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ

ಲಾಭವನ್ನು ಸಂಪಾದಿಸುವಬಗ್ಗೆ ಕಾಗದ, ಸೀಸದಕಡ್ಡಿ, ಇಂಕಿ, ಬೆಂಕಿ ಪೆಟ್ಟಿ ಮೊದಲಾದ ಅನೇಕ ವಿಷಯಗಳು.

ಮನಸ್ಸನ್ನು ತಣಿಸುವ ತೈಲ, ಲವೆಂಡರ್, ಸೋಪು, ಅತ್ತರ್, ಪನ್ನೀರು, ಪರಬತ್, ಗುಲ್‌ಕನ್, ಕುಸುಮಗಳ ವಿವೇಚನೆ

ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್, ವಾರ್ನಿಷ್ ಮುಂತಾದ ಬಣ್ಣದ ವಿಷಯಗಳು

ಗಮನೆಗೆ ಮಿಗಿಲಾದ ಆಕಾಶವಿಮಾನ ಮೊದಲಾದ ಅನೇಕ ವಿಷಯಗಳು ನೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು - "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ ಕ್ರಯ ಪ್ರತಿ ೧ಕ್ಕೆ ರೂ ೧-೪-೦ ವಿ ಪಿ ಮೂಲಕ ೧—೬—೦

(೧) ವಿಳಾಸ —ಮ್ಯಾನೇಜರ್ ಯಸ್ ಜಿ ಯಸ್. ಪ್ರಸ್, ೧೨೬ ಅರಳೇಪೇಟೆ, ಬೆಂಗಳೂರು ಸಿಟಿ.

ಅಥವಾ

ಏಜಂಟರು – (೨) ದಿ ಉರ್ಲ ಮಾರ್ಟ್, ನಂ|| ೧, ಮಂಗಳೂರು, (ದ ಕ.)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—3—1910 ರಿಂದ 11—3—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	12	8	0	0
ಮೈಸೂರು ,,	13	12	3	3
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	6	5	0	0
ಚಿತ್ರದುರ್ಗ ,,	9	8	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
ಜುಮ್ಲಾ	41	33	3	3

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸೌಮ್ಯನಾಮ ಸಂವತ್ಸರದ ಫಾಲ್ಗುಣ ಬಹುಳ ಷಷ್ಠಿ ಶುಕ್ರವಾರದಿಂದ ಫಾಲ್ಗುಣ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೧೦ ನೇ ಏಪ್ರಿಲ್.

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಿ ಮಾನ ಮಾಸ
1	ಶುಕ್ರ ,,	ಷಷ್ಠಿ	13-38	ಜ	12-34	19
2	ಶನಿವಾ	ಸಪ್ತಮಿ	15-46	ಮೂ	16-10	20
3	ರವಿವಾ	ಅಷ್ಟಮಿ	16-46	ಪೂಷಾ	18-38	21
4	ಚಂದ್ರ ;;	ನವಮಿ	16-30	ಉ.ಷಾ	20-22	22
5	ಕುಜ .:	ದಶಮಿ	14-54	ಶ್ರ	19-58	23
6	ಬುಧ †	ಏಕಾದಶಿ	12-20	ಧ	18-59	24
7	ಗುರು *	ದ್ವಾದಶಿ	3-40	ಶ	16-56	25

,, ಬೆಟ್ಟದಲ್ಲಿ ಮಹಾಬಲೇಶ್ವರ ರಥ. ,; ಮೃತ್ಯುಯೋಗ :: ಹಿಮವದ್ಗೋಪಾಲಸ್ವಾಮಿ ರಥ. † ಸರ್ವತ್ರ ಏಕಾದಶಿ. * ಪ್ರದೋಷ

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ ... ರೂ.	೧೨-೮-೦	೧೨ ೧೨-೦
ಕೆಂಬೂತ ಅಕ್ಕಿ ಅವಲ್	೧೨-೮-೦	೧೪-೮-೦
,, ದುಯಂ	೧೨-೦-೦	೧೪-೦-೦
ಜಾಪ್ರಾಣಿ ಅಕ್ಕಿ	೧೨-೪-೦	೧೪-೮-೦
ಸಣ್ಣಕ್ಕಿ ಅವಲ್ .. .	೧೪-೮-೦	೧೫-೮-೦
,, ದುಯಂ	೧೪-೦-೦	೧೪-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೨-೮-೦	೧೨-೮-೦
,, ದುಯಂ	೧೨-೦-೦	೧೧-೪-೦
ಹೈಕ್ ರಾಗಿ ಪಲ್ಲಾ ೧ಕ್ಕೆ	೮-೦-೦	೬-೧೨-೦
ಕಾರ್ರಾಗಿ	೭-೧೨-೦	೬-೪-೦
ಜೋಳ	೭-೮-೦	೮-೮-೦
ಹಲಸಂದೆ ಪಲ್ಲಾ ೧ಕ್ಕೆ	೧೧-೦-೦	೧೧-೦-೦
ಬಿಳೀ ಅವರೆ	೧೧-೦-೦	೧೦-೪-೦
ಹೆಸರು	೧೧-೦-೦	೧೦-೦-೦
ಉದ್ದು	೧೪-೦-೦	೧೧-೦-೦
ಕಡಲೆ	೧೨-೮-೦	೧೦ ೧೨-೦
ಎಳ್ಳು ಸೇ. ೧೨೭ ಕ್ಕೆ	೧೭-೦-೦	೧೫-೦-೦
ಹುರುಳಿ	೮-೮-೦	೯-೮-೦
ಹರಳು ೧೨೭ ಸೇರಿಗೆ ..	೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೧-೧೨-೦
ಮೆಣಸಿನಕಾಯಿ	೪-೧೨-೦	೩-೪-೦
,, ದುಯಂ	೪-೮-೦	೩-೦-೦
ಬೆಲ್ಲ ದೊಡ್ಡ ಅಚ್ಚು	೮-೮-೦	೫ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ	೫-೦-೦	೪-೮-೦
ಹರಳೆಣ್ಣೆ ,, ...	೫-೮-೦	೪-೬-೦
ಕೊಬ್ಬರಿ ಪಲ್ಲಾ ೧ಕ್ಕೆ	೧೦-೮-೦	೧೦ ೪-೦
ಉಪ್ಪು ,, ...	೬-೦-೦	೫-೧೨-೦
ಹುಣಸೇ ಹಣ್ಣು	೨-೦-೦	೧-೬-೦
,, ಹಳೇದು	೧-೧೨-೦	೧-೪-೦
ತುಪ್ಪ ಮಣ ೧ಕ್ಕೆ	೧೬-೮-೦	೧೪-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦	೪-೮-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೬-೪-೦
ಅರಳೀಕಾಯಿ ಮಣ ೧ಕ್ಕೆ ...	೦-೧೨-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ ..	೦-೧೨-೦	೦-೧೨-೦
ಚಿನ್ನ (ಪೌನ್) ಕೆಂಪು	೧೫-೯-೦	೧೫-೫-೦
,, ,, ಪವನು	೧೬-೦-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ ...	೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೭-೪-೦	೭೪-೮-೦

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ತಾ ೨೬ನೇ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್‌ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು ಕಳೆದ ಫೆಬ್ರವರಿ ತಿಂಗಳ ಜಮಾ ಖರ್ಚಿನ ಲೆಕ್ಕಗಳನ್ನು ಆಡಿಟರುಗಳು ತನಿಖೆಮಾಡಿಲ್ಲವಾದದ್ದರಿಂದ ಅವನ್ನು ಮುಂದಿನ ಮೀಟಿಂಗಿನಲ್ಲಿ ಇತ್ಯರ್ಥಮಾಡುವಂತೆ ಗೊತ್ತುಮಾಡಿದರು

ಚಾಮರಾಜ ಮೊಹಲ್ಲಾ ಬಜಾರ್ ಲೈನ್‌ನಲ್ಲಿರುವ ಮೆ|| ನರಸಿಂಗರಾಯರು ತಮ್ಮ ಮನೆಯ ಉತ್ತರಪಾರ್ಶ್ವಕ್ಕೆ ಇರುವ ೪೫೯ ಚದರ ಗಜದ ಖಾಲೀ ನಿವೇಶನವನ್ನು ತಮಗೆ ಕ್ರಯಕ್ಕೆ ಕೊಡಿಸಬೇಕೆಂದೂ ಆ ಪೈಕಿ ೧೨ ಅಡಿಯಷ್ಟನ್ನು ಮಾತ್ರ ಕಟ್ಟಿಕೊಂಡು ಉಳಿದದ್ದನ್ನು ಖಾಲಿಬಿಟ್ಟಿರುತ್ತೇವೆಂದೂ ಕೇಳಿಕೊಂಡಿದ್ದರು ಈ ನಿವೇಶನವನ್ನು ಅವರಿಗೆ ನಾಲ್ಯಾಣೆಯ ಪ್ರಕಾರ ಕ್ರಯಕ್ಕೆ ಕೊಡಬಹುದೆಂದು ಕೌನ್ಸಿಲರುಗಳು ತೀರ್ಮಾನ ಮಾಡಿರುತ್ತಾರೆ.

ರೈಲ್ವೆ ಸ್ಟೇಷನ್ ಬಳಿ ಒಂದು ಹುಲ್ಲಿನ ಕಾಖಾನೆಯನ್ನು ಕಟ್ಟಿ ಕೆಲಸ ನಡಿಸುವುದಕ್ಕೆ ಸ್ಥಳವನ್ನು ಕೊಡಿಸಿಕೊಡಬೇಕೆಂದು ಮೆ|| ನರಸಿಂಹಯ್ಯಂಗಾರ್ರು ಕೇಳಿದ್ದರು ಕೌನ್ಸಿಲರುಗಳು ಈ ವಿಚಾರವನ್ನು ಇನ್ನೊಂದು ಮೀಟಿಂಗಿನಲ್ಲಿ ಇತ್ಯರ್ಥ ಮಾಡೋಣವೆಂದು ತೆಗೆದಿಟ್ಟರು

ಅಂಗಡಿಯವರಿಂದ ವಸೂಲಾಗಬೇಕಾಗಿ ಬಾಕಿ ಉಳಿದಿರುವ ಸುಮಾರು ೨,೪೦೦ ರೂಪಾಯಿ ಕಂದಾಯವನ್ನು ಅಂಗಡಿ ಇಟ್ಟವರಿಂದವಸೂಲ್ಮಾಡಬೇಕೇ, ಅಥವಾ ಮನೆಯವರಿಂದ ವಸೂಲ್ಮಾಡಬೇಕೇ ಎಂದು ಚರ್ಚೆಯಾಯಿತು ಸಾಧ್ಯವಾದ ಕಡೆ ಅಂಗಡಿಯವರಿಂದಲೂ, ಇಲ್ಲದ ಕಡೆ ಮನೆಯವರಿಂದಲೂ ವಸೂಲ್ಮಾಡುವುದೆಂದೂ, ಕಡೆಗೆ ವಸೂಲಾಗದೆ ಉಳಿಯುವ ವಿಚಾರದಲ್ಲಿ ಬೋರ್ಡಿಗೆ ರಿಪೋರ್ಟ್ ಕೊಡತಕ್ಕದ್ದೆಂದೂ ನಿಷ್ಕರ್ಷೆಯಾಗಿದೆ.

ಚಾಮರಾಜ ಮೊಹಲ್ಲೆಯಲ್ಲಿ ವಸೂಲಾಗದೆ ಉಳಿದಿರುವ ರೂ. ೧೪೬೩—೯ ಆಣೆ ಕಂದಾಯಗಳು ರಿಮಿಷನ್ ಆಗಬೇಕೆಂದು ಸೂಚಿಸಲಾಯಿತು. ಮೊದಲು ಟ್ರಸ್ಟ್ ಬೋರ್ಡಿನವರು ಹೊಲಗೇರಿಯ ೭೦ ಮನೆಗಳನ್ನು ಒಡೆಯಿಸಿದರು. ಅವುಗಳಿಂದ ೨೧೦ ರೂಪಾಯಿವರೆಗೆ ಕಂದಾಯ ಮ್ಯುನಿಸಿಪಾಲಿಟಿಗೆ ಬರಬೇಕಾಗಿತ್ತು. ಅವನ್ನು ವಸೂಲ್ಮಾಡಿಕೊಳ್ಳದೆ ಮನೆಯವರಿಗೆ ಕ್ರಯದ ಮೊಬಲಗನ್ನು ಪಾವತಿಮಾಡಿದ್ದರಿಂದ ಈಗ ಅಷ್ಟು ಹಣ ವಸೂಲಾಗುವುದಕ್ಕೆ ಮಾರ್ಗವಿಲ್ಲವೆಂದು ತಿಳಿದುಬಂದು. ಕೌನ್ಸಿಲರುಗಳು ಈ ಕಂದಾಯಗಳನ್ನೆಲ್ಲಾ ರಿಮಿಷನ್ ಮಾಡತಕ್ಕದೆಂದು ಒಪ್ಪಿಕೊಂಡರು.

ಪಟ್ಟಣದ ರೊಚ್ಚು ನೀರನ್ನು ಪ್ರತ್ಯೇಕವಾಗಿ ಹೊರಗಡೆಗೆ ಸಾಗಿಸಿಕೊಂಡು ಹೋಗಿ ಜಲಪುರಿಯಲ್ಲೂ ಚಟ್ಟಹಳ್ಳಿಯಲ್ಲೂ ಎರಡು ಕಡೆ ನಿಲ್ಲಿಸಿಕೊಂಡು ಅದನ್ನು ಶುದ್ಧಮಾಡುವುದಕ್ಕೂ ಆ ನೀರನ್ನು ವ್ಯವಸಾಯದ ಕೈ ತೋಟಗಳಿಗೆ ಉಪಯೋಗಿಸಿಕೊಳ್ಳುವುದಕ್ಕೂ ಅನುಕೂಲ ಮಾಡಿಕೊಡಬೇಕೆಂದು ಹೆಲ್ತ್ ಆಫೀಸರವರು ಸೂಚಿಸಿದರು ಕೌನ್ಸಿಲರುಗಳು ಈ ವಿಚಾರವನ್ನು ಚರ್ಚೆಮಾಡಿ, ಅದಕ್ಕೆ ಎಲ್ಲೆಲ್ಲಿ ಎಷ್ಟೆಷ್ಟು ಸ್ಥಳ ಬೇಕೋ ಎಷ್ಟು ಹಣ ಖರ್ಚಾಗಬಹುದೊ, ಹೆಲ್ತ್ ಆಫೀಸರು ಗೊತ್ತುಮಾಡಿ ಬೋರ್ಡಿಗೆ ತಿಳಿಸಬೇಕೆಂದು ತೀರ್ಮಾನ ಮಾಡಿದರು.

ವೀರನಗೆರೆ ಪ್ಲೇಗ್ ಕ್ಯಾಂಪಿನ ಬಳಿ ಸಾಹೇಬ್ ಟೋಪಿಬೀಬಿಯವರ ಬಾಬತು ಎಂಟು ಎಕರೆ ಜಮೀನನ್ನು ಮ್ಯುನಿಸಿಪಾಲಿಟಿಗಾಗಿ ಕ್ರಯ ಕೊಟ್ಟು ತೆಗೆದುಕೊಳ್ಳಬಹುದೆಂದು ಇತ್ಯರ್ಥವಾಗಿದೆ

ಮ್ಯುನಿಸಿಪಾಲಿಟಿಯಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಖರ್ಚಾಗಬೇಕು, ಇದಕ್ಕಾಗಿ ಯಾವ ಯಾವ ಕಂದಾಯಗಳನ್ನು ಹಾಕಿದರೆ ಎಷ್ಟು ಉತ್ಪತ್ತಿಯಾದೀತು ಎಂಬೀ ವಿಚಾರವನ್ನು ಚನ್ನಾಗಿ ತನಿಖೆಮಾಡಿ ಬೋರ್ಡಿಗೆ ರಿಪೋರ್ಟ್ ಕಳುಹಿಸಬೇಕೆಂದು ತೀರ್ಮಾನವಾಗಿ ಇದಕ್ಕಾಗಿ ಒಂದು ಸಬ್ ಕಮಿಟಿ ನೇಮಕವಾಗಿರುತ್ತದೆ

ಇನ್ನು ಕೆಲವು ವಿಷಯಗಳು ಚರ್ಚೆಯಾಗಬೇಕಾಗಿದ್ದವು. ಹೊತ್ತು ಮೀರಿದ್ದರಿಂದ ಅದನ್ನೆಲ್ಲಾ ಮುಂದಿನ ತಿಂಗಳ ಮೀಟಿಂಗಿನಲ್ಲಿ ತರಬಹುದೆಂದು ಗೊತ್ತುಮಾಡಿದರು

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಕಳೆದ ೨೨ ನೇ ತಾರೀಖಿನ ದಿನ ಈ ಊರಲ್ಲಿ ಸುಮಾರು ೧೦—೧೨ ಸೆಂಟ್ಸ್ ಮಳೆ ಬಂತು ಬಿಸಿಲಿನ ಧಗೆ ಬಹಳ ಜಾಸ್ತಿಯಾಗಿದೆ. ನೀರಿನ ಕಷ್ಟ ಹೇಳಲಿಕ್ಕೇ ಸಾಧ್ಯವಿಲ್ಲ ಹೆಂಗಸರು, ಗಂಡಸರು, ಮಕ್ಕಳು ಸಹ ಹಗಲು ರಾತ್ರಿ ನೀರಿಗಾಗಿಯೇ ಬೀದಿಯಿಂದ ಬೀದಿಗೆ ಓಡಾಡುತಕ್ಕದ್ದರಲ್ಲೇ ದಿನವೆಲ್ಲಾ ಕಳೆಯುತ್ತಿದ್ದಾರೆ. ಅನುಕೂಲವಿರತಕ್ಕವರು ಇಂಥಾ ತೊಂದರೆಯಿಲ್ಲದೆ ಸೌಖ್ಯವಾಗಿಯೇ ಇದ್ದಾರೆ. ಈ ಕಷ್ಟ ಕಾಲದಲ್ಲಿ ಕಾಮನ ಭಾವಿ ನೀರು ಈ ಊರಲ್ಲಿರತಕ್ಕ ಅನುಕೂಲಸ್ಥರಲ್ಲದ ಪ್ರಜೆಗಳನ್ನು ಕಾಪಾಡುತ್ತಾ ಇದೆ. ಗೌರ್ನಮೆಂಟಿನವರು ಸಂತೆ ಹೊಂಡದಲ್ಲಿದ್ದ ಹೂಳನ್ನೆಲ್ಲಾ ೭-೮ ಸಾವಿರ ರೂಪಾಯಿ ಖರ್ಚುಮಾಡಿ ತೆಗಿಸಿದರು ಅದರಲ್ಲಿ ನೀರುಮಾತ್ರ ಬರಲಿಲ್ಲ. ಅದನ್ನು ಹಿಂದಣಕಾಲದವರು ಸೊಗಸಾಗಿ ಕಟ್ಟಿರತಕ್ಕ ಕಲ್ಲಿನ ಕೆಲಸದ ಅಂದವನ್ನು ನೋಡಲಿಕ್ಕೆ ಅನುಕೂಲವಾಯಿತು ಈಚೆಗೆ ಇಲ್ಲಿಗೆ ಬಂದಿದ್ದ ಚೀಫ್ ಇಂಜನಿಯರ್ ಮತ್ತು ದಿವಾನ್ ಸಾಹೇಬರು ಇವರ ಅಪ್ಪಣೆ ಪ್ರಕಾರ ಈ ಟೌನ್‌ಗೆ ೩ ಮೈಲಿ ಫಾಸಲೆಯಲ್ಲಿರತಕ್ಕ ಅಂಕಲಿ ಮಠದ ಬಳಿ ಭಾರೀ ಬಾಗಿಮಡಿನಿಂದ ಒಂದು ತಲವರಿಗೆ ತೋಡುತ್ತಿದ್ದಾರೆ. ಅದರಲ್ಲಿ ಜಲಬರಲಿಕ್ಕೆ ಆರಂಭಿಸಿದೆ ಅದರ ಉಪಯೋಗ ಎಷ್ಟು ಮಟ್ಟಿಗೆ ಪರಿಣಮಿಸುವುದೋ ಮುಂದೆ ನೋಡಬೇಕಾಗಿದೆ. ಊರಲ್ಲಿ ಚಳಿ ಜ್ವರ ಕೆಮ್ಮು ಮೊದಲಾದ ಕಾಯಿಲೆಗಳು ಜಾಸ್ತಿಯಾಗಿ, ಅದರಿಂದ ಮರಣಗಳೂ ಉಂಟಾಗುತ್ತಿವೆ ಊರಲ್ಲಿ ತುಂಟಮ್ಯಾಜಗಳು ಜಾಸ್ತಿಯಾಯಿತು ಅಂತೂ ಎಲ್ಲಾ ವಿಷಯದಲ್ಲೂ ಇದು ಪ್ರಜೆಗಳಿಗೆ ಕಷ್ಟಕಾಲವೇ ಎಂದು ಹೇಳುವಂತಿದೆ —ಈ ಗ್ರಾಮದಲ್ಲಿ ಗೌರ್ನಮೆಂಟಿನಿಂದ ಸರಬರಾಯಿ ಆಗತಕ್ಕ ನಲ್ಲಿನೀರು ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟವರ ಮನೆಗಳಿಗೂ, ಅವರಿಗೆ ಪ್ರೀತಿಯುಳ್ಳವರ ಮನೆಗಳಿಗೂ ಸಲೀಸಾಗಿ ಬಿಡುತ್ತಾರೆ ಬಾಕೀ ನಲ್ಲಿಗಳಿಗೆ ಕ್ಲಿಪ್ತವಾಗಿ ಒಂದು ಘಂಟೆ, ಅರ್ಧ ಘಂಟೆ, ಕಾಲು ಘಂಟೆಯಂತೆ ನೀರು ಬಿಡುತ್ತಾರೆ ಆ ನೀರು ಬರುವ ಕಾಲಕ್ಕೆ ಸರಿಯಾಗಿ ಒಂದೊಂದು ನಲ್ಲಿಯ ಬಳಿ ಕೊಡಗಳ ಸಹಿತ ಬಂದು ನೂರಾರು ಜನ ಸೇರುತ್ತಾರೆ. ಜುಲುಂ ಮಾಡತಕ್ಕವರಿಗೂ, ಗಲಾಟೆ ಮಾಡತಕ್ಕವರಿಗೂ ಮಾತ್ರ ನೀರು ಸಿಕ್ಕುತ್ತದೆಯೇ ಹೊರತು ಸಭ್ಯರಿಗೂ, ಮಾನಿತರಿಗೂ ಸಿಕ್ಕುವದಿಲ್ಲ ಈ ಗ್ರಾಮದಲ್ಲಿ ವಾಸಮಾಡತಕ್ಕ ಪರೋಪಕಾರಿಯಾದ ೮೦ ವರುಷ ವಯಸ್ಸಿನ ನಂಜಸನ್ಯಾಸರ ಜೋಗಿಣಿಯಾದ ಬೂಬು ಎಂಬ ಹೆಂಗಸು ಪ್ರತಿ ನಲ್ಲಿಯ ಬಳಿಗೂ ಹೋಗಿ ಸಭ್ಯರಿಗೆ ಸಹಾಯಮಾಡಿ ಅವರಿಗೂ ನೀರು ಸಿಕ್ಕುವಂತೆ ಮಾಡುತ್ತಿದ್ದಾಳೆ ಸದ್ಯಕ್ಕೆ ಮ್ಯುನಿಸಿಪಾಲಿಟಿಯವರಿಗಿಂತಲೂ ಈಕೆಯ ಸಹಾಯ ಇಲ್ಲಿನ ಪ್ರಜೆಗಳಿಗೆ ಹೆಚ್ಚಾಗಿ ಉಂಟಾಗುತ್ತಿದೆ.—ಒಬ್ಬ ಶ್ರೀವೈಷ್ಣವ ಬ್ರಾಹ್ಮಣ ಯೌವನಸ್ಥರು ಗಡ್ಡಬಿಟ್ಟುಕೊಂಡು ಲೋಕೋದ್ಧಾರಮಾಡುತ್ತೇವೆಂದು ಈ ಊರಿಗೆ ಬಂದು ಬೆಟ್ಟದ ಮೇಲೆ ಒಂದು ಮಂಟಪದಲ್ಲಿ ವಾಸಮಾಡುತ್ತಿರುವದಾಗಿಯೂ, ಅವರು ಜನಗಳಿಗೆಲ್ಲಾ ತತ್ವೋಪದೇಶ ಮಾಡುತ್ತಿದ್ದಾರೆಂತಲೂ, ಅವರ ಅರ್ಚನೆಯ ದೇವರು ಒಂದು ಕಲಶವೂ ಒಂದು ಕತ್ತಿಯೂ ಆಗಿವೆ ಎಂತಲೂ ಇಲ್ಲಿನ ಜನಗಳು ಹೇಳಿಕೊಳ್ಳುತ್ತಿದ್ದಾರೆ. ಮತ್ತು ತಂಡತಂಡವಾಗಿ ಜನಗಳು ಅವರಲ್ಲಿಗೆ ಹೋಗಿಬರುತ್ತಿದ್ದಾರೆ ಕೆಲವರಿಗೆ ಆಗಲೇ ಉಪದೇಶವೂ ಆಯಿತೆಂದು ತಿಳಿಯಬರುತ್ತದೆ

ಚಿಕ್ಕಮಗಳೂರು. —ಇಲ್ಲಿ ಕಳೆದ ಮಾರ್ಚಿ ತಿಂಗಳ ೭೧, ೨೬ ನೇ ತಾರೀಖುಗಳ ರಾತ್ರಿ ಗುಡುಗು ಮಿಂಚುಗಳ ಆರ್ಭಟದೊಡನೆ ವಿಶೇಷವಾದ ಮಳೆ ಸುರಿಯಿತು ಇದರಿಂದ ಬಿಸಿಲಿನ ಧಗೆಯು ತಕ್ಕಮಟ್ಟಿಗೆ ಕಡಮೆಯಾಗುವುದಲ್ಲದೆ ಅಲ್ಪಸ್ವಲ್ಪ ಹುಲ್ಲು ಬಿದ್ದು ಮೃಗಾದಿಗಳಿಗೆಲ್ಲಾ ಪುಷ್ಟಿಯಾಗಿವೆ. ಕುಡಿಯುವ ನೀರಿಗೆ ಆಗಲೇ ಕೊರತೆಯಾದೀತೆಂದು ಶಂಕಿಸುವುದಕ್ಕೆ ಕಾರಣವಿದ್ದಿತು ಈಗ ಲಾದರೋ ಆ ಭಯವು ತಕ್ಕಮಟ್ಟಿಗೆ ದೂರವಾಯಿತು ಇದಲ್ಲದೆ ಕಾಫಿ ತೋಟಗಳಲ್ಲಿ ಈ ಮಳೆ ಸುರಿದಿರುವ ಕಡೆ ಉತ್ಕೃಷ್ಟ ಫಲವಾದೀತೆಂದು ನಿರೀಕ್ಷಿಸಲ್ಪಟ್ಟಿದೆ ಗಬ್ಗಲ್ಲು ಮುಂತಾದ ತೋಟಗಳಲ್ಲಿ ಸುಮಾರು ಒಂದೂಕಾಲು ಇಂಚು ಮಳೆಯಾಯಿತೆಂದು ವರ್ತಮಾನ ಬಂದಿದೆ —ಪ್ಲೇಗ್ ಸಂಪೂರ್ಣವಾಗಿ ನಿಂತುಹೋಗಿರುವುದರಿಂದಲೂ ಬೇರೆ ಸಾಂಕ್ರಾಮಿಕ ಜಾಡ್ಯಗಳು ಸದ್ಯ ಯಾವೂ ಇಲ್ಲದಿರುವುದರಿಂದಲೂ ಪ್ರಜೆ ಸಮೃದ್ಧಿಗೆ ಯಾವ ಭಂಗವೂ ಪ್ರಾಪ್ತವಾಗದೆ ಎಲ್ಲಾ ಸುಖವಾಗಿದೆ —ಸಂತೆಯಲ್ಲಿ ಅಕ್ಕಿ ರಾಗಿ ಮುಂತಾದ ದವಸರಾಶಿಗಳೂ, ಕಡಲೆ ತೊಗರಿಯೂ ಅಲ್ಲದೆ ಕಾಯಿ ಪಲ್ಯಗಳೂ ವಿಶೇಷವಾಗಿ ಬರುತ್ತಿವೆ. ಅಕ್ಕಿ ರೂಪಾಯಿಗೆ ೮ ಸೇರಿನಿಂದ ೯೨ ಸೇರಿನ ವರೆಗೂ ದೊರಕುತ್ತದೆ ರಾಗಿ ಮಾತ್ರ ೧೬ ಸೇರಿಗೆ ಹೆಚ್ಚಿಲ್ಲ ಇದು ವಿಶೇಷ ರಾಗಿ ಬೆಳೆಯುವ ಸೀಮೆಯಲ್ಲ. ಅಂತೂ ಚಿಕ್ಕಮಗಳೂರಿನ ಇವರ ಸುತ್ತಮುತ್ತಣ ಪ್ರಾಂತ್ಯಗಳು ಈ ವರುಷ ತಕ್ಕಮಟ್ಟಿಗೆ ಸಮೃದ್ಧಿಯಾಗಿಯೂ ತೃಪ್ತಿಕರವಾಗಿಯೂ ಇವೆ

ಹತ್ತು ರೂಪಾಯಿ ಬಹುಮಾನ ಸಿಕ್ಕುತ್ತದೆ.

42-1

ಬೆಂಗಳೂರು ಶಿದ್ದಿಕಟ್ಟೆ ೨ನೆ ಬೀದಿ ೧ನೆ ನಂಬರು ಮನೆಯಲ್ಲಿ ಇದ್ದ ೧೫—೧೬ ವರುಷದ ಆಡಿವಪ್ಪನೆಂಬ ಹುಡುಗನು ತಾರೀಖು ೨೭-೧—೧೦ ರಲ್ಲಿ ಮನೆಯಲ್ಲಿ ಇದ್ದ ಬೆಳ್ಳಿಯ ಕಾಲ ಅಂದಿಗೆ ಜೊತೆಯೊಂದಕ್ಕೆ ೮೫ ತೊಲೆ, ೫೦ ತೊಲೆ ಬೊಂಬಾಯಿ ಬೆಳ್ಳಿ, ೪೪ ರೂ ಬಾಳುವ ಚಂದ್ರಮುರಾವು ಜೊತೆ ೧, ಈ ಮೂರು ಒಡವೆಗಳನ್ನು ಯೆತ್ತಿಕೊಂಡು ಹೋಗಿರುತ್ತಾನೆ — ಇವನ ಚಹರಾಪಟ್ಟಿ.—ಎಣಕೆಂಪು ಗಿಡ್ಡ ಶರೀರ, ಎಡಕಂಗಿನ ಕೆಳಗೆ ಗಾಯದ ಕರಿ ಕಲೆಯು ಇವೆ. ತೊಟ್ಟಿಯಲ್ಲಿದ್ದರದ ಗಡ್ಡೆ. ತಿಮಾಚಾರದ ಜಾತಿ ಇವನನ್ನು ಯಾರು ತಲಾಷುಮಾಡಿದಾಗ್ಯೂ ೧೦ ರೂಪಾಯಿ ಬಹುಮಾನ ಕೊಡುತ್ತೇನೆ

ಶಾ|| ವೆಂಕಪ್ಪ

ಚಿಕ್ಕಬಳ್ಳಾಪುರ ಮುನ್ಸಿಫ್ ಕೋರ್ಟು.

43-1

ಅಸಲ್ ನಂಬರು 670 - 1908 09.

ವಾದಿ.

ಚಿಕ್ಕಬಳ್ಳಾಪುರದ ಸುಬ್ರಹ್ಮಣ್ಯೇಶ್ವರ ಸ್ವಾಮಿ ಬ್ಯಾಂಕ್, ಲಿಮಿಟೆಡ್, ಇರಫ್ ವ್ಯಾನೇಜರ್ ಶಿಡ್ಲಘಟ್ಟದ ರಾಮಚಂದ್ರರಾಯರು ವಾಸ ಚಿಕ್ಕಬಳ್ಳಾಪುರ.

ಪ್ರತಿವಾದಿಗಳು

ಚಿಕ್ಕಬಳ್ಳಾಪುರದ ಕಸಬಾ ಟವರ್ [illegible] ವಿವಾದದ ಭಜನೆ ಮನೆಯ ಭಕ್ತಾದಿಗಳಿಗಾಗಿ ಸೇರಿಸಲ್ಪಟ್ಟಿರತಕ್ಕವರು (1) ತೆಲುಗು ಬಣಜಿಗರ ನಲ್ಲಿಗುರಪ್ಪನ ಮಗ ಪಾಪಣ್ಣ, (2) ತೆಲುಗು ಬಣಜಿಗರ [illegible]ನ ಮಗ ವೆಂಕಟಪ್ಪ, (3) ದಾಮರಾತಿ ಚಿಕ್ಕ [illegible] ಮಗ ಶೆಟ್ಟಿಪ್ಪ, (4) ಬಂಡಾರಿ ಕುಂಟೆಪ್ಪನ ಮಗ ಪುಟ್ಟಣ್ಣ, (5) ಕೊಮುರದ ವೆಂಕಟರವಣಪ್ಪನ ಮಗ ಪೆದ್ದಣ್ಣ, (6) ತೆಲುಗು ಬಣಜಿಗರ [illegible]ನ ಮಗ ಗುರಪ್ಪ, (7) ಆಚೇನಹಳ್ಳಿ ವೆಂಕಟಿ ಸುಬ್ಬಣ್ಣನ ಮಗ ವೆಂಕಟ್ರಾವಪ್ಪ, (8) ಪಗಡಾಲ್ ಮುನಿವೆಂಕಟಪ್ಪನ ಮಗ ಲಕ್ಷ್ಮಯ್ಯ, (9) [illegible] ಮಗ ಸೊಣ್ಣಪ್ಪ, (10) ದಾಮರಾತಿ ಅಪ್ಪಣ್ಣನ ಮಗ ವೆಂಕಟಪ್ಪ, (11) [illegible] ಮಗ ಬಾಲಯ್ಯ, (12) ಶ್ರೀರಾಮಮುನಿಪ್ಪನ ಮಗ [illegible], (13) [illegible] ತಿಮ್ಮಯ್ಯನವರ ವೆಂಕಟಪ್ಪನ ಮಗ ರಾಮಣ್ಣ, (14) [illegible]ನ ಮಗ ನರಸಿಂಹ, (15) ಬತ್ತು ಚಿಕ್ಕ [illegible] ಉರುಫ ಪಿಳ್ಳಪ್ಪನ ಮಗ ರಾಮಸ್ವಾಮಿ, (16) ಕದಿರಣ್ಣನವರ [illegible]ನ ಮಗ ದೊಡ್ಡ ನರಸಿಂಹ, (17) ಸೊಣ್ಣ [illegible] ಶೆಟ್ಟಿಪ್ಪನ ಮಗ ನರಸಪ್ಪ, (18) ನಲ್ಲ ತಿಮ್ಮಯ್ಯನ ಮಗ ವೆಂಕಟಸ್ವಾಮಿ, (19) ವೈಕುಂಠದ ನಾರಣಪ್ಪನ ಮಗ ಲಕ್ಷ್ಮಯ್ಯ, (20) ಅಪ್ಪಿಶೆಟ್ಟಿ ಮಗ [illegible], (21) ಪಿನ್ನರಾಮಣ್ಣನವರ ವೆಂಕಟ್ರಮಣಪ್ಪನ ಮಗ [illegible], (22) [illegible] ಶಿವಪ್ಪಣ್ಣನ ಮಗ ತಿಮ್ಮಯ್ಯ, (23) ಬಂಡಾರಿ ಕುಂಟೆಪ್ಪನ ಮಗ ದೊಡ್ಡ ವೆಂಕಟಸ್ವಾಮಿ, (24) ಇವನ ತಮ್ಮ ಚಿಕ್ಕ ವೆಂಕಟಸ್ವಾಮಿ, (25) ವಿವಾದದ ಭಜನೆ ಮನೆಗೆ ಸಂಬಂಧಪಟ್ಟದ್ದೇವೆಂದು ಹೇಳುವ ಇತರ ಭಕ್ತಾದಿಗಳು [illegible].

ಪ್ರತಿವಾದಿಗಳಿಗೆ.

ಪೊಲ್ಲಂಬ [illegible] ಮನ್ನಿ, ನಾವಿಯು ಷಡ್ಯೂಲ್ ನ್ನತ್ತು ಪೈಕಿ ವಿವಾದಾಸ್ಪದವಾದ [illegible] ಕಡೆ ಇರುವ ಸುಮಾರು ಎಂಟು (8) ಅಂಕಣ ವಿಸ್ತೀರ್ಣವುಳ್ಳ ಭಜನೆ ಮನೆ ಮತ್ತು ಇದಕ್ಕೆ ದಕ್ಷಿಣ ಕಡೆ ಇರುವ ಎರಡು (2) ಅಂಕಣಗಳುಳ್ಳ [illegible] ವಾದಿ ಬ್ಯಾಂಕ್ ಹಕ್ಕು ಸ್ಥಿರಪಡಿಸಿ ಆವುಗಳನ್ನು ವಾದಿ [illegible] ನವಡಿಸಬೇಕೆಂತಲೂ, ವಾದಿ ಕೋರ್ಟಿನ ಖರ್ಚುಗಳು [illegible] ಪ್ರತಿವಾದಿಗಳಿಂದ ಕೊಡಿಸಬೇಕೆಂತಲೂ ಕೋರ್ಟಿನವರಿಗೆ ಸೂಕ್ತವೆಂದು ತೋರುವ ಇತರ ಎಲ್ಲಾ ಪರಿಹಾರಗಳು ಪ್ರತಿವಾದಿಗಳಿಂದ ವಾದಿ ಬ್ಯಾಂಕಿಗೆ ಸಲ್ಲುವಂತೆ ಡಿಕ್ರಿ ಕೊಡಿಸಬೇಕೆಂದೂ ದಾವಾ ಮಾಡಿರುತ್ತಾರೆ.

ಆದಕಾರಣ ಸದರಿ ವಾದಿಗೆ ಉತ್ತರವನ್ನು ಕೊಡುವ ಬಗ್ಗೆ ನೀವು ಖುದ್ದು ಆಗಲಿ, ವ್ಯಾಜ್ಯಸಂಬಂಧವಾದ ಸಮಸ್ತ ಮುಖ್ಯ ಸವಾಲ್‌ಗಳಿಗೂ ಜವಾಬ್ ಕೊಡುವಷ್ಟು ಕ್ರಮವಾಗಿ ವಾಕೀಫ್ ಪಡೆದುಕೊಂಡು ಮತ್ತು ಅಧಿಕಾರ ಹೊಂದಿರುವ ಕೋರ್ಟಿನ ಪ್ಲೀಡರ್ ಮೂಲಕವಾಗಿ ಆಗಲಿ, ಅವರು ಅಂಥಾ ಪ್ರಶ್ನೆಗಳಿಗೆಲ್ಲಾ ಜವಾಬ್ ಕೊಡಲಿಕ್ಕೆ ಶಕ್ತಿಯುಳ್ಳಂಥಾ ಮತ್ತೊಬ್ಬರ ಸಮೇತ ಆಗಲಿ, 1910 ನೇ ಏಪ್ರಿಲ್ ಐದೆ (5) ನೇ ತಾರೀಖು 1 ಘಂಟೆಗೆ ಹಾಜರಾಗಲಿಕ್ಕೆ ಸಮನ್ಸ್ ಕೊಡೋಣವಾಗಿದೆ. ಸದರಿ ತಾರೀಖಿನಲ್ಲಿ ಕೋರ್ಟಿಗೆ ಹಾಜರಾಗದೇ ಇದ್ದರೆ ವ್ಯಾಜ್ಯವನ್ನು ನಿಮ್ಮ ಗೈರ್‌ಹಾಜರಿಯಲ್ಲಿ ಕೇಳಿ ಫೈಸಲ್ ಕೊಡೋಣವಾದೀತೆಂದು ಗ್ರಹಿಸತಕ್ಕದ್ದು. ಮತ್ತು ವಾದಿ ನೋಡಬೇಕೆಂದು ಅಪೇಕ್ಷಿಸುವಂಥಾ ದಸ್ತಾವೇಜುಗಳನ್ನೂ ಮತ್ತು ನಿಮ್ಮ ಉತ್ತರವಕ್ಕೆ ಬಲವಾಗಿ ಆಧರಿಸುವಂಥಾ ಯಾವ ದಸ್ತಾವೇಜುಗಳಾಗಲಿ ನಿಮ್ಮ ಸಂಗಡ ತರಬೇಕು, ಯಾ ನಿಮ್ಮ ಪ್ಲೀಡರ್ ಸಂಗಡ ಕಳುಹಿಸಬೇಕು.

1910 ನೇ ಮಾರ್ಚಿ 28 ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಸಹಿ ನಮ್ಮ ದಸ್ತ್ಕತ್ತಿನೊಡನೆ ಕೊಡಲ್ಪಟ್ಟಿದೆ.

T. Venkoba Row,
Munsiff.

ವೃತ್ತಾಂತ ಪತ್ರಿಕೆ.

ಶಕ ೧೮೩೧ ನೇ ಸಾಧಾರಣ ಸಂ. ಮಾರ್ಚಿ ತಾ. ೩೧ ನೇ ಗುರುವಾರ

ಮೈಸೂರು ರೆವಿನ್ಯೂ ಆಡಳಿತದ ರಿಪೋರ್ಟು.

೧೯೦೮—೦೯ನೇ ಸಾಲು ಮೈಸೂರು ಸಂಸ್ಥಾನದ ರೆವಿನ್ಯೂ ಅಧಿಕಾರಿಗಳಿಗೆ ಕಷ್ಟಕರವಾದದ್ದಾಗಿತ್ತು ಆ ಸಾಲಿನಲ್ಲಿ ನಡೆದ ವಿದ್ಯಮಾನಗಳು ಪ್ರಜೆಗಳಿಗೂ ಅನುಭವಸಿದ್ಧವಾಗಿ ಈಗ ಹಳೆದಾಗಿರುತ್ತವೆ. ಮಳೆ ಇಲ್ಲದೆ ದುರ್ಭಿಕ್ಷವು ಸಂಸ್ಥಾನವಲ್ಲೆಲ್ಲಾ ಹರಡಿಕೊಂಡು, ಅದರ ನಿವಾರಣೆಗಾಗಿ ರೆವಿನ್ಯೂ ಕಮಿಷನರವರೂ ಅವರ ಸಹಾಯಕ ಅಧಿಕಾರಿಗಳೂ ಬಹಳ ಶ್ರಮೆ ಪಡಬೇಕಾಯಿತು ಅವರು ನಡಿಸಿದ ಕಾರ್ಯಗಳು ಸಾರ್ಥಕವೂ ಸಮರ್ಪಕವೂ ಆಗಿದ್ದು, ಅಂತ್ಯದಲ್ಲಿ ಬಹು ವಿಶೇಷವಾದ ಮಳೆಗಳು ಸುರಿದು, ಸರ್ವತ್ರ ಸಂತುಷ್ಟಿಯನ್ನುಂಟುಮಾಡಿದವು.

ಈ ರಿಪೋರ್ಟಿನಲ್ಲಿ ನಮೂದಾಗಿರುವ ಲೆಕ್ಕಗಳನ್ನು ನೋಡಲಾಗಿ ದುಷ್ಕಾಲವು ಸಂಸ್ಥಾನದೊಳಗೆ ಎಷ್ಟು ವಿಸ್ತಾರವಾಗಿಯೂ ಕಠಿಣವಾಗಿಯೂ ವ್ಯಾಪನೆಯಾಗಿತ್ತೆಂಬುವುದು ಗೊತ್ತಾಗುತ್ತದೆ. ರೆವಿನ್ಯೂ ಉತ್ಪತ್ತಿಯು ಅಂದಾಜಾ ಕಟ್ಟಿದ್ದದಕ್ಕಿಂತಲೂ ತುಂಬಾ ಕಡಮೆಯಾಯಿತು. ಕಂದಾಯಗಳ ರಿಮಿಷನ್‌ಬಾಬು ಬಹು ವಿಶೇಷವಾಗಿ ಹೆಚ್ಚಿತು, ವಸೂಲಾಗುವುದಕ್ಕೆ ಮಾರ್ಗವಿಲ್ಲದೆ, ನಿಂತುಹೋದ ಕಂದಾಯದ ಬಾಕಿಯೂ ತುಂಬಾ ಹೆಚ್ಚಾಯಿತು; ಮತ್ತು ಅನೇಕಾನೇಕ ಜಮೀನುಗಳು ವರ್ಗಾ ವರ್ಗಿಯಾಗಿರುತ್ತವೆ

ಕೆಲವು ಸಂದರ್ಭಗಳಲ್ಲಿ ಅಸಿಸ್ಟೆಂಟ್ ಕಮಿಷನರುಗಳು ತಮ್ಮ ಕರ್ತವ್ಯಗಳನ್ನು ತೃಪ್ತಿಕರವಾಗಿ ನಡಿಸಲಿಲ್ಲವೆಂದು ಈ ರಿಪೋರ್ಟಿನಿಂದ ತಿಳಿಯುತ್ತೇವೆ ಇದಕ್ಕೆ ಅವರೇ ಮುಖ್ಯ ಕಾರಣರೆಂದು ಹೇಳುವುದಕ್ಕಾಗುವುದಿಲ್ಲ ಈ ಸಾಲಿನಲ್ಲಿ ಕೆಲವು ಸಬ್ ಡಿವಿಜನ್‌ಗಳೊಳಗೆ ನಾಲ್ಕೈದುಮಂದಿಯಂತೆ ಅಸಿಸ್ಟೆಂಟ್ ಕಮಿಷನರುಗಳು ನೇಮಕವಾಗಿದ್ದರೆಂದು ಗೊತ್ತಾಗುತ್ತದೆ ಈ ರೀತಿ ಅಧಿಕಾರಿಗಳನ್ನು ಅಷ್ಟು ಬೇಗ ವರ್ಗಮಾಡುತ್ತಾ ಬಂದ ಪಕ್ಷದಲ್ಲಿ ಅಧಿಕಾರಿಗಳು ಸ್ಥಳವಿಶೇಷಗಳನ್ನೂ ಕೆಲಸಕಾರ್ಯಗಳ ಪ್ರಾಮುಖ್ಯತೆಯನ್ನೂ ಅನುಭವಕ್ಕೆ ತಂದುಕೊಂಡು ತೃಪ್ತಿಕರವಾಗಿ ಕೆಲಸ ಜರುಗಿಸುವುದು ಎಂದಿಗೂ ಸಾಧ್ಯವಲ್ಲ

ಗ್ರಾಮಾಂತರಗಳಲ್ಲಿ ಹಳ್ಳಿ ಠಾಣೆಗಳ [illegible] ಕೆಲಸಗಳು ಕ್ರಮವಾಗಿಯೂ ತೃಪ್ತಿಕರವಾಗಿಯೂ ನಡೆಯುತ್ತಿರುವುದಿಲ್ಲ. ಇದು ದೊಡ್ಡ ತಪ್ಪೇ ಸರಿ ಇದರ ದೆಸೆಯಿಂದ ವ್ಯಾಜ್ಯಗಳು ಅನೇಕವಾಗಿ ಹುಟ್ಟುತ್ತವೆ. ಗ್ರಾಮಗಳನ್ನು ಅಜಮಾಯಿಷಿಮಾಡಿ ಗ್ರಾಮಗಳ ನಕಾಸೆ ಸರಿಯಾಗಿರುವಂತೆ ನೋಡಿಕೊಳ್ಳುತ್ತಾ ಒಂದಪಕ್ಷದಲ್ಲಿ ರೈತರ ಜಗಳಗಳೂ ಹೋರಾಟಗಳೂ ಬಹುಮಟ್ಟಿಗೆ ನಿರ್ನಾಮವಾಗುವವು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಕಳೆದ ವರುಷ ರಾಜಧಾನಿಯಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯ ವಿಚಾರವಾದ ವರದಿಯನ್ನು ಮೈಸೂರು ಗವರ್ನ್‌ಮೆಂಟಿನವರು ಕೂಡಿದ ಮಟ್ಟಿಗೂ ಜಾಗ್ರತೆಯಾಗಿಯೇ ಪ್ರಕಟಿಸಿರುತ್ತಾರೆ. ರಾಜಧಾನಿಯಲ್ಲೂ ಇತರ ಕಡೆಗಳಲ್ಲೂ ಪ್ಲೇಗ್ ಉಪದ್ರವ ಹಾವಳಿಯು ಇದ್ದದ್ದರಿಂದ ಸಾಮಾನ್ಯವಾಗಿ ಬರುತ್ತಿದ್ದಷ್ಟು ಮಂದಿ ಪ್ರತಿನಿಧಿಗಳು ಕಳೆದ ವರುಷದ ಸಭೆಗೆ ಬಾರದೆ ಹೋದರು

ಪ್ರಜಾ ಪ್ರತಿನಿಧಿಗಳು ಸಭೆಯಲ್ಲಿ ಚರ್ಚೆ ಮಾಡಬೇಕೆಂದು ಸೂಚಿಸಿದ್ದ ವಿಷಯಗಳು ಅಪಾರವಾಗಿದ್ದವು ಈ ಪೈಕಿ ಕೆಲವು ತತ್ಕಾಲದಲ್ಲಿ ಜಾರಿಗೆ ತರಲು ಅಸಾಧ್ಯವಾದವುಗಳೆಂದು ಹೇಳಬಹುದಾಗಿದೆ. ಪ್ರಜೆಗಳು ಯೋಗ್ಯತಾ ಸಿದ್ಧಿಯನ್ನು ಸಂಪಾದಿಸಿಕೊಳ್ಳುವ ತನಕ ಇಂಥವುಗಳನ್ನು ರೂಢಿಸಬೇಕೆಂದು ಸೂಚಿಸಿ ಗವರ್ನ್‌ಮೆಂಟಿನವರನ್ನು ಕೇಳಿಕೊಳ್ಳುವುದು ಉಚಿತವಲ್ಲ

ಕಳೆದ ವರುಷದ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಪೈಕಿ ಯಾವ ವಿಷಯಗಳು ವಿಶೇಷ ಪ್ರಾಮುಖ್ಯತೆಯನ್ನೂ ಕುತೂಹಲವನ್ನೂ ಉಂಟುಮಾಡಿದವೋ ಗವರ್ನ್‌ಮೆಂಟಿನವರು ಪ್ರಕಟಿಸಿರುವ ಈ ವರದಿಯಿಂದ ಗೊತ್ತಾಗುವುದಿಲ್ಲ. ಯಾತಕಂದರೆ ಬೇರೆ ಬೇರೆ ವಿಷಯಗಳನ್ನು ಎಷ್ಟೆಷ್ಟು ಮಂದಿ ಮೆಂಬರುಗಳು ಒಪ್ಪಿಕೊಂಡರೋ ಈ ಪ್ರೊಸೀಡಿಂಗ್ಸ್ ಹೇಳುವುದಿಲ್ಲ ಸಾಮಾನ್ಯವಾಗಿ ಈ ಸಭೆಯೊಳಗೆ ಮೆಂಬರುಗಳ ಸಮ್ಮತಿಗಳನ್ನು ಲೆಕ್ಕಮಾಡುವುದು ವಾಡಿಕೆಯಿಲ್ಲವಾದ ಕಾರಣ ಸಭೆಯ ಅಭಿಮತವೇನೆನ್ನುವುದು ಸುಲಭವಾಗಿ ಗೊತ್ತಾಗುವುದಿಲ್ಲ

ಪ್ರತಿನಿಧಿಗಳು ಈ ಸಭೆಯೊಳಗೆ ಸೂಚಿಸಿರುವ ವಿಷಯಗಳ ಪೈಕಿ ಹಲವನ್ನು ಆಯಾ ಸ್ಥಳಾಧಿಕಾರಿಗಳಿಗೂ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೂ ತಿಳಿಸಿದ್ದರೆ ಅವರೇ ನಡಿಸಿಕೊಡಬಹುದಾಗಿರುತ್ತವೆ. ಇಂಥವುಗಳನ್ನು ಈ ಮಹಾ ಸಭೆಗೆ ತಂದು ಚರ್ಚೆಮಾಡಿ ಮೆಂಬರುಗಳು ಸಭೆಯ ಅಮೂಲ್ಯವಾದ ಸಮಯವನ್ನು ವ್ಯರ್ಥಮಾಡಿದರು

ಪ್ರಜಾಪ್ರತಿನಿಧಿಗಳು ಸಭೆಯಲ್ಲಿ ಹೇಳಿ ಚರ್ಚೆ ಮಾಡಿದಂಥಾ ಅನೇಕ ವಿಷಯಗಳಿಗೆ ದಿವಾನರವರು "ಒಳ್ಳೇದು, ಗುರುತು ಮಾಡಿಕೊಂಡಿದ್ದೇವೆ" ಎಂಬದಾಗಿ ಉತ್ತರವನ್ನು ದಯಪಾಲಿಸಿದಂತೆ ಈ ಪ್ರೊಸೀಡಿಂಗ್ಸಿನಿಂದ ತಿಳಿಯುತ್ತೇವೆ. ಮೆಂಬರುಗಳಿಗೆ ತಮ್ಮ ಅಹವಾಲುಗಳನ್ನೂ ಅಭಿಮತವನ್ನೂ ದಿವಾನರವರ ಮುಂದೆ ಅರಿಕೆಮಾಡಿಕೊಳ್ಳುವುದಕ್ಕೆ ಅವಕಾಶವಿದ್ದಿತು. ಇದರಿಂದ ಅವರು ತಮ್ಮನ್ನು ಚುನಾವಣೆಮಾಡಿ ಸಭೆಗೆ ಕಳುಹಿಸಿಕೊಟ್ಟಂಥಾ ಪ್ರಜೆಗಳ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ನೆರವೇರಿಸಿರುತ್ತೇವೆಂದು ತೋರ್ಪಡಿಸಿದ ಹಾಗಾಯಿತು ಬಹುಶಃ ಗವರ್ನ್‌ಮೆಂಟಿನವರು ಅವರ ಸಲಹೆಗಳನ್ನು ನಡಿಸಿಕೊಡುವುದು ಸಾಧ್ಯವಲ್ಲವೆಂದು ತಿಳಿದುಕೊಂಡು, "ಗುರುತುಮಾಡಿಕೊಂಡಿದ್ದೇವೆ" ಎಂಬ ಉತ್ತರವನ್ನು ಕೊಟ್ಟಿರಬೇಕೆಂದು ಊಹಿಸುತ್ತೇವೆ

ಪ್ರಜಾಪ್ರತಿನಿಧಿಗಳು ತಮ್ಮಲ್ಲೇ ಇಬ್ಬರನ್ನು ನ್ಯಾಯವಿಧಾಯಕ ಸಭೆಗೆ ಚುನಾವಣೆ ಮಾಡಿ ತಮ್ಮ ಅಭೀಷ್ಟವನ್ನು ಕಾಣೇರಿಸಿಕೊಂಡರು.

ಈ ಸಭೆಯ ಮೆಂಬರುಗಳು ಚರ್ಚೆಗೆ ತರತಕ್ಕ ವಿಷಯಗಳ ಸಂಖ್ಯೆಯನ್ನು ಕ್ರಮೇಣ ಕಡಮೆ ಮಾಡುತ್ತಾ ಬಂದಾರೆಂತಲೂ ಅತ್ಯಾವಶ್ಯಕವಾದ ಕೆಲವು ಬದಲಾವಣೆಗಳನ್ನು ಮಾತ್ರ [illegible] ಪ್ರತಿ ವರುಷವೂ ಅವುಗಳನ್ನೇ [illegible] ಮುಂದೆ ಅರಿಕೆಮಾಡಿಕೊಳ್ಳುತ್ತಾ [illegible] ಒಂದಾರೆಂತಲೂ ನಂಬಿ ನಿರೀಕ್ಷಿಸುತ್ತೇವೆ ವಿಷಯಗಳು ಸ್ವಲ್ಪವಾಗಿದ್ದ ಪಕ್ಷದಲ್ಲಿ ಸಭೆಯ ಸಮಯವನ್ನೆಲ್ಲಾ ಅವುಗಳ ಚರ್ಚೆಗಾಗಿಯೇ ವಿನಿಯೋಗಿಸಲು ಒಳ್ಳೇ ಅವಕಾಶವಾದೀತೆಂದು ಹೇಳಬಹುದು

ವಜ್ರವಷ್ಟು ಸ್ಥಿರವಾದ ವಸ್ತುವಿನ್ಯಾವದು ?

[illegible] ಕಾಲ ಕಳೆ[illegible] ಸಂಕಲನದ ವಸ್ತುವ್ಯವಹಾರ [illegible] ಕೆಲವು ವಸ್ತುಗಳು ಬೇಗ ಹಾಳಾಗುತ್ತವೆ ಬೇರೆ ಕೆಲವು ವಸ್ತುಗಳು ಕೆಲಕಾಲ ಇದ್ದು ಕಡೆಗೆ ಅವೂ ಅಳಿದುಹೋಗುತ್ತವೆ [illegible] ರವಾದದ್ದಾವದೂ ಇಲ್ಲ ಮಸಲಾ ವೃಕ್ಷಮಾದ [illegible] ಉದುರಿ ಬೀಳ ಬದ್ದ [illegible] ಆದರೆ [illegible] ಮುಂತಾದ ಘಟ್ಟ ವಸ್ತುಗಳು ಸಹ ಕಾಲಗತಿಗೆ ಸಿಕ್ಕಿ [illegible] ಅಳಿದುಹೋಗುತ್ತವೆ ಕಬ್ಬಿಣವು ತುಕ್ಕು ಹಿಡಿದು [illegible] ವದು, ಕಲ್ಲು, ಮಳೆ ಮಂಜು ಗಾಳಿಗಳಿಗೆ ಸಿಕ್ಕಿ ಪುಡಿಯಾಗುವದು ಆದರೆ ವಜ್ರವು ಲೋಕದೊಳಗಿರುವ ಸಮಸ್ತ ವಸ್ತುಗಳಿಗಿಂತ ಅತಿ ಘಟ್ಟಿಯಾದುದೆಂದು ತಿಳಿದುಬಂದಿದೆ ವಜ್ರವನ್ನು ಬೆಂಕಿಯಲ್ಲಿ ಹಾಕಿ ಕಾಯಿಸಿದರೂ ಅದು ತನ್ನ ರೂಪವನ್ನು ಬದಲಾಯಿಸುವದಿಲ್ಲ. ನಾಶವಾಗುವದಿಲ್ಲ ದೊಡ್ಡ ಚಮಟದಿಂದ ಅದನ್ನು ಬಡಿದರೂ ಅದು ಒಡೆಯುವದಿಲ್ಲ ಅತ್ಯಂತ ತೀಕ್ಷ್ಣವಾದ ನೀರಿನಲ್ಲಿ ಅಥವಾ ಕೆಸರಿನಲ್ಲಿ ಅದನ್ನು ಹಾಕಿಟ್ಟರೂ ಅದು ಕುಂದಿಹೋಗದೆ ಹಾಗೇ ಇರುವದು ಆದ್ದರಿಂದ ಈ ವಸ್ತುವನ್ನು ಬಹು [illegible] ಪದಾರ್ಥವೆಂದು [illegible] ವಿಶ್ವದ ಲೋಕದಲ್ಲಿ ಅನೇಕ ವಜ್ರಗಳುಂಟು ಅದರ ವಿಲಾಯತಿಯ ದೊರೆಗಳ ಇಂಡಿಯಾ ದೇಶದ ಚಕ್ರವರ್ತಿಗಳೂ ಆದ ಏಳನೆಯ ಎಡ್ವರ್ಡ್‌ರವರ ಕಿರೀಟದಲ್ಲಿ ಖಚಿತವಾಗಿರುವ ಕೋಹಿನೂರ್‌ಯೆಂಬ ವಜ್ರವು ಬಹು ದೊಡ್ಡದೂ [illegible] ಎಣಿಸಲ್ಪಟ್ಟಿದೆ

ಲೋಕದಲ್ಲಿ ವರುಷ ಒಂದಕ್ಕೆ ಅನೇಕ ಪುಸ್ತಕಗಳು ರಚಿಸಲ್ಪಟ್ಟು ಪ್ರಕಟವಾಗುತ್ತವೆ ಆದರೆ ಎಲೆಗಳು ವಸಂತ ಕಾಲದಲ್ಲಿ ಬಹು ಕೋಮಲವಾಗಿ ಚಿಗುರಿ ಆನಂದಗೊಳಿಸಿದರೂ ಮಾಗೀ ಕಾಲದಲ್ಲಿ ಉದುರಿ ಹೋಗುವಂತೆ ಅನೇಕಾನೇಕ ಪುಸ್ತಕಗಳು ಕೆಲವು ಕಾಲ ಮಾತ್ರ ಸ್ವಲ್ಪ ಸಂತೋಷವನ್ನುಂಟುಮಾಡಿ ಬೇಗನೆ ಅವು ಯಾರಿಗೂ ಅನವಶ್ಯಕಗಳಾಗಿ ಕಂಡು ಬರುವದರಿಂದ ಅವು ಸ್ಥಿರವಾಗಿ ನಿಲ್ಲುವದಿಲ್ಲ ಇನ್ನೂ ಕೆಲವು ಗ್ರಂಥಗಳು ಕಬ್ಬಿಣದಂತೆ ಸ್ವಲ್ಪ ಹೆಚ್ಚು ಕಾಲ ಉಳಿದಿದ್ದು ಅನಂತರ ಅವುಗಳಿಗಿಂತ ಉತ್ತಮತರದ ಪುಸ್ತಕಗಳು ಪ್ರಕಟವಾಗಲು ಅವು ಮರೆಯಾಗಿ ಹೋಗುತ್ತವೆ ಆದರೆ ಒಂದು ಪುಸ್ತಕವಿದೆ ಅದನ್ನು ಜನಗಳು ಸಾವಿರಾರು ವರುಷಗಳಿಂದ ನಿರ್ಮೂಲ ಮಾಡಬೇಕೆಂದು ನಾನಾ ವಿಧಗಳಿಂದ ಯತ್ನಗಳನ್ನು ಪದೇ ಪದೇ ಮಾಡಿದರೂ ಅದು ನಾಶವಾಗದ ಈಗಲೂ ಎಂದಿನಂತೆ ನಿಂತಿರುವದಲ್ಲದೆ ಈಗ ಎಂದಿಗಿಂತ ಹೆಚ್ಚಾಗಿ ವಿದ್ಯಾಂಸರ ಕಣ್ಣುಗಳನ್ನು ಸೆಳೆಯುತ್ತಿದೆ ಇದೇ ಬೈಬಲೆಂಬ ಸತ್ಯವೇದ ಇದು ಮೊದಲಿನಿಂದ ಜನಗಳಿಗೆ ದೇವಭಕ್ತಿಯನ್ನು ಕುರಿತು ಬೋಧಿಸುತ್ತಾ ಅವರನ್ನು ಕರ್ತವ್ಯ ಪರಾಯಣರನ್ನಾಗಿ ಮಾಡುತ್ತಾ ಬಂದಿದೆ ದೇವರು ಅಧಿಕಾರಿಗಳಿಗೂ ವಿದ್ಯಾಯುಕ್ತರಿಗೂ ಮಾತ್ರವಲ್ಲ ಬಡಬಗ್ಗರಿಗೂ ಅನಾಥರಿಗೂ ರೋಗಿಗಳಿಗೂ ಪ್ರಿಯಳ ತಂದೆಯಾಗಿ ಅವರನ್ನು ಪ್ರೀತಿಸುತ್ತಾನೆ ಆದದರಿಂದ ಅವರು ಆತನ ಮಕ್ಕಳಿಗೆ ಯೋಗ್ಯವಾದ ರೀತಿಯಲ್ಲಿ ನಡೆದು ಆತನನ್ನು ಮೆಚ್ಚಿಸಬೇಕೇ ಹೊರತು ಎಂದಿಗೂ ಪಾಪಕೃತ್ಯಗಳನ್ನು ಮಾಡಿ ಆತನನ್ನು ವ್ಯಸನಪಡಿಸಕೂಡದು ಎಂದು ಬೋಧಿಸುವದಲ್ಲದೆ ಅವರು ತಮ್ಮ ಕರ್ತವ್ಯಗಳನ್ನು ನೆರವೇರಿಸಿ ನೀತಿವಂತರೂ ಕೃತಕೃತ್ಯರೂ ಆಗುವಂಥ ದಿವ್ಯ ಶಕ್ತಿಯನ್ನು ಕೊಡತಕ್ಕಂಥಾದ್ದಾಗಿದೆ ಇದರಿಂದುಂಟಾದ ದಿವ್ಯ ಫಲಗಳನ್ನು ನೋಡಿ ಸಹಿಸಲಾರದವರು ಮೊದಲಿನಿಂದಲೂ ಈ ಗ್ರಂಥವನ್ನು ನಿರ್ನಾಮವಾಗಿ ಅಳಿಸಿಬಿಡಬೇಕೆಂದು ಪ್ರತಿ ಯುಗದಲ್ಲೂ [illegible] ದುಡಿದರು ಎಂದರು. ಕೆಲವರು ಇದರಲ್ಲಿ ದೋಷಗಳನ್ನು ಕಂಡು ಹಿಡಿದು ಅದರ ಕೀರ್ತಿಯನ್ನು ಕೆಡಿಸಿ ಇದರಲ್ಲಿ ತಪ್ಪುಗಳವೆಯೆಂದು ಬೋಧಿಸಿದ ಪುಸ್ತಕಗಳನ್ನು ಅಸಂಖ್ಯಾತವಾಗಿ ಬರೆದರು ಇದರಿಂದ ಸತ್ಯವೇದದ [illegible] ಯೂ ಅದರಿಂದ ಲಭಿಸುವ ಶಕ್ತಿಯೂ ಮತ್ತಷ್ಟು ವೃದ್ಧಿಯಾಯಿತಲ್ಲದೆ ಕ್ಷಯಿಸಲಿಲ್ಲ ಇದರ ವಿರೋಧಿಗಳು ಅದರಿಂದ ಪ್ರಜೆಗಳಿಗೆ ಲಭಿಸುವ ಜ್ಞಾನವನ್ನು

ಧ್ವಪಶಕ್ತಿಯನ್ನು ನೋಡಿ ಸಹಿಸಲಾರದೆ ಮಾತ್ಸರ್ಯದಿಂದ ಇಂತಹ ಪುಸ್ತಕಗಳನ್ನು ಬರೆದರೆಂದು ಬಾಕಿಯವರಿಗೆ ಪ್ರತ್ಯಕ್ಷವಾಗಿ ತಿಳಿಯಿತು. ಇಷ್ಟೇ ಅಲ್ಲ. ಜೇನು ತಿಂದು ಅದರ ಸವಿಯನ್ನು ತಿಳಿದವರಿಗೆ ಜೇನು ಪ್ರಾಣಹಾನಿಕರವಾದದ್ದೆಂದು ಎಷ್ಟು ಬಗೆಯಿಂದ ಹೇಳಿದರೂ ಕೇಳುವರೇ - ಸತ್ಯವೇದದ ಬೋಧನೆಯನ್ನು ಓದಿ ತಿಳಿದವರು ಅದರ ಹಗೆಯಾಳಿಗಳು ಅದಕ್ಕೆ ವಿರೋಧವಾಗಿ ಹೇಳಿದ್ದನ್ನು ಕೇಳಿದರೂ ಸತ್ಯವೇದದಿಂದ ತಮಗೆ ಸಿಕ್ಕುವ ದಿವ್ಯ ಜ್ಞಾನವನ್ನೂ ತೃಪ್ತಿಯನ್ನೂ ಸಮ ದಿನ ದಿನ ಅದರ ಆಜ್ಞೆ ಪ್ರಕಾರ ನಡೆಯುವದಕ್ಕೆ ಸ್ಥಿರಸಂಕಲ್ಪವನ್ನು ಮಾಡಿಕೊಂಡರು. ಸತ್ಯವೇದವನ್ನೂ ಅವರ ಸದ್ಬೋಧೆಯನ್ನೂ ಹಗೆ ಮಾಡಿದವರು ಇದನ್ನು ಸಹಿಸದೆ ಬರೆದ ಪುಸ್ತಕಗಳು ಕಸದ ಕುಪ್ಪೆಯಂತೆ ನಾಶವಾದವು. ಕೆಲವು ಕಾಲ ಈ ಹಗೆಯಾಳಿಗಳು ಇನ್ನೊಂದು ಉಪಾಯವನ್ನು ತೆಗೆದು ಸತ್ಯವೇದದ ಪ್ರತಿಗಳನ್ನೆಲ್ಲಾ ಕೂಡಿಸಿ ಸುಡಬೇಕೆಂದು ಅವುಗಳ ಅನೇಕ ರಾಶಿಗಳನ್ನು ದಹಿಸಿಬಿಟ್ಟರು. ಇದರಿಂದಲೂ ಅವರ ದುಷ್ಕೃತ್ಯವು ಫಲಕಾರಿಯಾಗದೆ ಹೋದದ್ದನ್ನು ನೋಡಿ, ಆ ದುರಾತ್ಮರು ಸತ್ಯವೇದವನ್ನು ಓದುವವರನ್ನು ಹಿಡಿದು ಹಿಂಸಿಸಿದರು; ಅನೇಕರನ್ನು ಬೇಡಿಹಾಕಿ ಸೆರೆಮನೆಯಲ್ಲಿಟ್ಟರು. ಅವರ ಮನೆ ಸೊತ್ತು ಒಡವೆ ವಸ್ತುಗಳನ್ನು ಕೊಳ್ಳೆ ಹೊಡೆದರು. ಅನೇಕಾನೇಕರನ್ನು ಶೂಲಕ್ಕೆ ಹಾಕಿ ಕ್ರೂರವಾಗಿ ಕೊಂದರು. ಹೀಗಾದರೂ ಅವರು ಸತ್ಯವೇದವನ್ನೂ ಅದರಲ್ಲಿರುವ ಸದ್ಬೋಧೆಯನ್ನೂ ನಾಶಮಾಡಲಾರದೆ ಹೋದರು. ಹೀಗಲಾದರೂ ಸತ್ಯವೇದದಷ್ಟು ಪ್ರಬಲವಾಗಿರುವ ಪುಸ್ತಕವು ಈ ಲೋಕದಲ್ಲಿ ಇನ್ಯಾವದೂ ಇಲ್ಲ. ಅದು ಲೋಕದಲ್ಲಿ ವರ್ತಿಸುತ್ತಿರುವ ಎಲ್ಲಾ ಭಾಷೆಗಳಲಿ ಬರೆಯಲ್ಪಟ್ಟು ಮುದ್ರಿಸಲ್ಪಟ್ಟಿದೆ.

ಈ ಪುಸ್ತಕವು ಮನುಷ್ಯರಿಗೆ ಅತ್ಯಂತ ಪ್ರಯೋಜನಕಾರಿಯಾಗಿ ಇದೆಯೆಂದು ನಿರ್ಣಯಿಸುವದಕ್ಕೆ ಇದು ಸಾಕ್ಷಿಯಲ್ಲವೋ? ಅದನ್ನು ನಾಶ ಮಾಡಬೇಕೆಂದು ಶತ್ರುಗಳು ಪ್ರಯತ್ನ ಪಟ್ಟಷ್ಟು ಅದು ಹೆಚ್ಚುತ್ತ ಎಲ್ಲರಿಗೂ ಬೇಕಾದದ್ದಾಗಿ ಪರಿಣಮಿಸುತ್ತಿರುವದು. ಅರಸುಗಳಿಗೆ ಪ್ರಜಾಪಾಲನೆಯನ್ನೂ ಪ್ರಜೆಗಳಿಗೆ ಅರಸನಲ್ಲಿ ಭಕ್ತಿಯನ್ನೂ ಇದು ಕಲಿಸಿ, ಕ್ರೂರಿಗಳಿಗೆ ಕರುಣೆಯನ್ನೂ ಅಜ್ಞಾನಿಗಳಿಗೆ ಜ್ಞಾನವನ್ನೂ, ಬಲಹೀನರಾದ ಮಕ್ಕಳಿಗೂ ಸ್ತ್ರೀಯರಿಗೂ ಅಧರ್ಮಕ್ಕೆ ಒಳಪಡುವದಕ್ಕಿಂತ ಸಾಯುವದೇ ಉತ್ತಮವೆಂಬ ಶೌರ್ಯವನ್ನೂ ಕೊಟ್ಟಿದೆ. ದುರ್ನೀತರನ್ನು ನೀತಿವಂತರನ್ನಾಗಿ ಮಾಡಿದೆ. ಐಶ್ವರ್ಯವಂತರು ಬಡವರಿಗೆ ಉಪಕಾರ ಮಾಡುವದರಲ್ಲಿ ಧುರೀಣರಾಗಿರುವಂತೆ ಮಾರ್ಪಡಿಸಿದೆ. ಬಲಿಷ್ಠರು ದುರ್ಬಲರನ್ನು ಕಾಪಾಡುವದಕ್ಕೆ ಬದ್ಧಕಂಕಣರಾಗುವಂತೆ ಮಾಡಿದೆ. ಅಧಮಾಧಮರಾದ ಪಾಪಿಗಳನ್ನು ದೇವರ ಮಕ್ಕಳ ಬಾಧ್ಯತೆಗೆ ಪಾತ್ರರನ್ನಾಗಮಾಡಿದೆ. ಇಂಥ ಪುಸ್ತಕವು ನಾಶವಾಗಕೂಡದು, ನಾಶವಾಗಲಾರದು. ಯಾಕೆಂದರೆ ಸನ್ಮಾರ್ಗಕ್ಕೆ ಇದು ಸಂಜೀವನ ಪ್ರಾಯವಾಗಿದೆ. ವಾಚಕರೇ, ಇಂತಹ ಬಲವು ಈ ಪುಸ್ತಕಕ್ಕೆ ಏಕೆಯೋ ಇಲ್ಲವೋ ಪರೀಕ್ಷಿಸುವ ಕರ್ತವ್ಯವು ನಮ್ಮದಾಗಿದೆ.

ಒಳದೇಶದ ವೃತ್ತಾಂತಗಳು

ನೀಲಗಿರಿಗೆ ಸೇರಿದ ಕೂನೂರಿನಲ್ಲಿ ಕಟ್ಟುವ ಆಸ್ಪತ್ರೆಯ ಖರ್ಚಿಗೆ ನಮ್ಮ ಮಹಾರಾಜರವರು ೫೦೦ ರೂಪಾಯಿ ಚಂದಾ ಕಳುಹಿಸಿರುತ್ತಾರೆ.

ಯುಗಾದಿ ಹಬ್ಬವಾದ ಒಳಕ ಶ್ರೀಮನ್ ಮಹಾರಾಜರವರು ಒಂದೆರಡು ವಾರಗಳ ಮಟ್ಟಿಗೆ ನೀಲಗಿರಿಗೆ ದಯಮಾಡಬಹುದೆಂದು ಊಹಿಸಲ್ಪಟ್ಟಿದೆ.

ನೀಲಾರೋಗ್ಯಕ್ಕೋಸ್ಕರ ಶ್ರೀಮನ್ ಮಹಾರಾಜರವರ ಕೂಡ ಬೊಂಬಾಯಿಗೆ ಹೋಗಿದ್ದ ಮೂರನೇ ಮಹಾರಾಜಕುಮಾರಿಯವರು ಪರಿವಾರ ಸಮೇತ ಕಳೆದ ವಾರ ರಾಜಧಾನಿಗೆ ದಯಮಾಡಿದರು.

ರಾಜಧಾನಿಯಲ್ಲಿರುವ ಆಪ್ಟರ್ ರೆಸಿಡೆನ್ಸಿ ಎಂಬ ದೊಡ್ಡ ಬಂಗಲೆಯಲ್ಲಿ ಶ್ರೀಮನ್ ಯುವರಾಜರವರು ವಾಸಮಾಡುವುದಕ್ಕೆ ಅನುಕೂಲಿಸುವಂತೆ ಒದಗುವ ಮುಂತಾದ ಕಾಮಗಾರಿಗಳು ನಡೆಯುತ್ತಲಿವೆ.

ಶ್ರೀಮನ್ ಯುವರಾಜರವರ ಕೂಡ ಚಾಮರಾಜನಗರದ ಕಾಡಿಗೆ ಶಿಕಾರಿಗಾಗಿ ಹೋಗಿದ್ದ ಸರ್ದಾರರ ಸಾಮಾನುಗಳು ಕಳುವಾಗಿದ್ದದ್ದನ್ನು ಪತ್ತೆ ಮಾಡಿದರು. ಮಾಲುಗಳೆಲ್ಲಾ ಸಿಕ್ಕಿದವು. ಕಳುವುಮಾಡಿದವರನ್ನು ತನಿಖೆಮಾಡುತ್ತಿದಾರೆ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕನ್ನಂಬಾಡಿ ಜಲಾಶಯದ ಕಾಮಗಾರಿ ಮಾಡುವುದಕ್ಕೆ ಅದರ ಖರ್ಚು, ಪ್ರಯೋಜನ ಮುಂತಾದದ್ದನ್ನು ಚನ್ನಾಗಿ ಪರಿಶೋಧನೆ ಮಾಡಿ ನೋಡಬೇಕೆಂದು ಚೀಫ್ ಇಂಜನಿಯರವರು ಹುಕುಂ ಕೊಟ್ಟಿದಾರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಬಿಸಲಿನ ಕಾವು ಹೆಚ್ಚಾಗಿದ್ದರೂ ರಾತ್ರಿ ಬೀಸುವ ತಂಗಾಳಿಯು ಧಗೆಯನ್ನು ಶಕ್ಯಮಟ್ಟಿಗೆ ನಿವಾರಣೆ ಮಾಡುವದು. ಮಳೆ ಬರುವ ಸೂಚನೆಗಳು ಕಾಣಲಿಲ್ಲ. ಧಾರಣೆಮಾಸಿಗಳು ವಾರವಾರಕ್ಕೆ ಹೆಚ್ಚಾಗುತ್ತಿರುವವು. ರೋಗಾದಿಗಳ ಭಯವೇನೂ ಇಲ್ಲದಿರುವದು ಸಂತೋಷಪ್ರದವಾಗಿದೆ.

ರೆವಿನ್ಯೂ ಬಾಬಾನಾಗ ಡೆಪ್ಯುಟಿ ಕಮಿಷನರ್ ಮೆ॥ ಕೇಶರಾಜೇ ಅರಸಿನವರು ನಂಜನಗೂಡಿನಲ್ಲಿ ನಡೆದ ದನಗಳ ಪ್ರದರ್ಶನಕ್ಕೆ ದಯಮಾಡಿದ್ದು, ಉತ್ತಮವಾದ ದನಗಳ ಯಜಮಾನರಿಗೆ ಬಹುಮಾನಗಳನ್ನು ಕೊಟ್ಟದ್ದಲ್ಲದೆ, ದೊಡ್ಡ ಮನುಷ್ಯರಿಗೆಲ್ಲಾ ಶ್ರೇಷ್ಠವಾದ ಔತಣವನ್ನು ಮಾಡಿಸಿದರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಕಳೆದ ಸುಮಾರು ಎಂಟೂ ಹತ್ತು ವರುಷಗಳಿಂದ ಪೋಸ್ಟ್ ಮಾಸ್ಟರಾಗಿರುವ ಮೆ॥ ನಾರಾಯಣರಾಯರಿಗೆ ಇಲ್ಲಿಂದ ಬಿಜಾಪುರಕ್ಕೆ ವರ್ಗವಾಗಿರುತ್ತದೆ. ಇವರು ಇಲ್ಲಿನ ಪ್ರತಿಗಳಿಗೂ ಎಲ್ಲರಿಗೂ ಪೋಸ್ಟ್ ಆಫೀಸಿನಲ್ಲಿ ಸ್ವಲ್ಪವೂ ತೊಂದರೆಯಾಗದಂತೆ ಬಹು ಆಸಕ್ತಿಯಿಂದ ನೋಡಿಕೊಳ್ಳುತ್ತಾ ಬಂದು, ಎಲ್ಲರಿಂದಲೂ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಅವರು ತಮ್ಮ ಬಿಡುವು ಕಾಲಗಳಲ್ಲಿ ಪಟ್ಟಣದ ಎಲ್ಲಾ ಭಾಗಗಳಲ್ಲೂ ಸಂಚರಿಸುತ್ತಾ, ಪೋಸ್ಟ್ ಆಫೀಸಿನ ವಿಷಯದಲ್ಲಿ ಜನರಿಗೆ ಇರುವ ಕಷ್ಟಗಳನ್ನು ತಿಳಿದು ಕೊಳ್ಳುತ್ತಾ ಅವುಗಳನ್ನು ಪರಿಹರಿಸುತ್ತಾ ಇದ್ದರು. ಅಧಿಕಾರ ವರ್ಗಕ್ಕೆ, ದೊಡ್ಡ ಮನುಷ್ಯ, ಅಲ್ಪಮನುಷ್ಯರೆಂಬ ಭೇದವಾಗಲಿ ಪಕ್ಷಪಾತವಾಗಲಿ ಇವರಲ್ಲಿ ಇರಲಿಲ್ಲ. ಅತ್ತಲಾಗಿ ಪೋಸ್ಟ್ ಆಫೀಸಿನ ತಮ್ಮ ಕಾಬೇದಾರರ ವಿಷಯದಲ್ಲಿ ಮೆ॥ ನಾರಾಯಣರಾಯರು ಬಹಳ ಸ್ನೇಹಪರರಾಗಿದ್ದುಕೊಂಡು ಅವರನ್ನು ಸ್ವಲ್ಪವೂ ನೋಯಿಸದೆ ಕೆಲಸ ನಡಿಸುತ್ತಿದ್ದರು. ಇಂಥಾ ಪರೋಪಕಾರಿಗಳಿಗೆ ವರ್ಗವಾಯಿತಲ್ಲಾ ಎಂದು ಪ್ರಜೆಗಳು ವ್ಯಸನಪಟ್ಟು, ಇವರನ್ನು ಇಲ್ಲಿಯೇ ಇಟ್ಟುಕೊಡಬೇಕೆಂದು ಒಂದು ಅರ್ಜಿಯನ್ನು ಬರೆದುಕೊಂಡಿದಾರೆ. ಇವರ ಕೆಲಸಕ್ಕೆ ಮೆ॥ ಜಿ ಕಮೆಂಟ್ಸ್ ಯವರು ನೇಮಕವಾಗಿ ಬರುತ್ತಾರೆಂದು ಕೇಳುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ

ಆಲೂರು ಸಬ್ ತಾಲ್ಲೂಕಿಗೆ ಸೇರಿದ ಕಣತೂರಿನಲ್ಲಿ ಪ್ಲೇಗ್ ಉಪದ್ರವಿದೆ ಎಂತು ತಿಳಿಯತಕ್ಕದ್ದು.

ಮುಂದೆ ಹೇಳುವ ಜಾತ್ರೆಗಳಿಗೆ ಪ್ಲೇಗ್ ಇರುವ ಕಡೆಗಳಿಂದ ಹೋಗತಕ್ಕವರನ್ನು ಬಿಡುವುದಿಲ್ಲವೆಂದು ಪ್ರಕಟಿಸಿದೆ.—ಬೇಲೂರಿನ ರಥೋತ್ಸವಕ್ಕೆ ಏಪ್ರಿಲ್ ತಾ ೧೪ ರಿಂದ ತಾ ೨೪ ರವರೆಗೆ; ಶ್ರೀನಿವಾಸಪುರದ ತಾಲ್ಲೂಕಿಗೆ ಸೇರಿದ ಯಲದೂರು ರಥೋತ್ಸವ ಮತ್ತು ದನಗಳ ಜಾತ್ರೆಗೆ ಏಪ್ರಿಲ್ ತಾ ೨೪ ರಿಂದ ಮೇ ತಾ ೧ ರವರೆಗೆ, ಶ್ರೀನಿವಾಸಪುರದ ತಾಲ್ಲೂಕಿಗೆ ಸೇರಿದ ರೋಣೂರಿನ ರಥೋತ್ಸವ ಮತ್ತು ದನಗಳ ಜಾತ್ರೆಗೆ ಮೇ ತಾ. ೪ ರಿಂದ ತಾ. ೧೧ ರವರೆಗೆ.

ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮೆ॥ ಪಿ ಪಲ್ಲುಯವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನಗಳಿಗೆ ಜಾಸ್ತಿಮಾಡಿದೆ.

ಕೋಲಾರ್ ಚಿನ್ನದಗಣಿಗಳ ಹೆಲ್ತ್ ಆಫೀಸರ್ ಮೆ॥ ಜಾಂಷೀದ್ ಮುನ್ಸಿಫ್ ಯವರಿಗೆ ಫೆಬ್ರವರಿ ತಾ ೧೭ ರಿಂದ ಆರುವಾರಗಳ ಸಂಬಳವಿಲ್ಲದ ರಜಾ ಕೊಟ್ಟಿದೆ. ಮತ್ತೊಂದು ಹುಕುಂ ಕೊಡಲ್ಪಡುವ ತನಕ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮೆ॥ ಟಿ. ಪಿ ಕುಪ್ಪಸಾಮಿ ಮೊದಲಿಯಾರ್ರವರು ಚಿನ್ನದ ಗಣಿಗಳ ಹೆಲ್ತ್ ಆಫೀಸರಾಗಿಯೂ ಇರತಕ್ಕದ್ದು.

ಚೀಫ್ ಕೋರ್ಟ್ ರೆಜಿಸ್ಟ್ರಾರ್ ಮೆ॥ ಎ ಎ ರಾಜಲಿಂಗ ಮೊದಲಿಯಾರ್ರವರಿಗೆ ಮಾರ್ಚಿ ತಾ ೧೨ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ಬರುವ ತನಕ ಡೆಪ್ಯುಟಿ ರೆಜಿಸ್ಟ್ರಾರ್ ಮೆ॥ ಬಿ ಬಸವಾರಾಧ್ಯರವರು ರೆಜಿಸ್ಟ್ರಾರ್ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಕಡೂರ್ ಡಿಸ್ಟ್ರಿಕ್ಟ್ ಆಕ್ಟಿಂಗ್ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಮಹಮದ್ ಓಬೇದುಲ್ಲಾ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಸಿಟಿ ಪೋಲೀಸ್ ಇನ್ಸ್ಪೆಕ್ಟರ್ ಮೆ॥ ಆರ್. ರಾಮರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರ್ ಡಿಸ್ಟ್ರಿಕ್ಟಿನ ಪೋಲೀಸ್ ಸೂಪರಿಂಟೆಂಡೆಂಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮೈಸೂರ್ ಸಿಟಿ ಇಂಪ್ರೂವ್‌ಮೆಂಟ್ ಡಿವಿಜನ್ ಆಕ್ಟಿಂಗ್ ಎಗ್ಸಿಕ್ಯುಟಿವ್ ಇಂಜನಿಯರ್ ಮೆ॥ ಓ ಎಸ್ ಶೇಷಯ್ಯಂಗಾರ್ಯರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಸಬ್ ಡಿವಿಜನ್ ಆಫೀಸರ್ ಮೆ॥ ಎಚ್ ಎಫ್ ಮಾರ್ಕರ್ ಯವರು ಆಫೀಸಿನ ಛಾರ್ಜನ್ನು ವಹಿಸಿದ್ದರು.

ತುಂಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ॥ ಕೆ ಎಸ್. ದೊರಸಾಮಿ ಐಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ವಾಪಸು ಬರುವ ತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಸೀನಿಯರ್ ಅ॥ ಕಮಿಷನರ್ ಮೆ॥ ಕೆ ಜಾಂಡಿಯವರು ತುಂಕೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಡಿ. ರಾಜಾರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತೈದು ದಿನಗಳಿಗೆ ಜಾಸ್ತಿ ಮಾಡಿದೆ.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸಮಾಡುವ ಪ್ರೊ॥ ಅ॥ ಕಮಿಷನರ್ ಮೆ॥ ಕೆ ಸಿ ಅನಂತರಾಮನ್ ಯವರಿಗೆ ಏಪ್ರಿಲ್ ತಾ. ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೆ॥ ಕೆ ಶ್ರೀನಿವಾಸರಾಯರು ಬೇರೆ ಕೆಲಸದ ಮೇಲೆ ಇರುವ ತನಕ ಇಲ್ಲವೇ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಪ್ರೊ॥ ಅ॥ ಕಮಿಷನರ್ ಮೆ॥ ಎನ್ ರಾಘವರಾಯರನ್ನು ತುಂಕೂರು ಡಿಸ್ಟ್ರಿಕ್ಟ್ ಗುಬ್ಬಿ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ.

ಹುಣಸೂರ್ ತಾಲ್ಲೂಕು ಅಮಲ್ದಾರ್ ಮೆ॥ ಸಿ ಮಾಟೈಯನವರನ್ನು ಅ॥ ಕಮಿಷನರಾಗಿ ಬದಲಿ ನೇಮಿಸಿ, ತುಂಕೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ.

ಮುಂದೆ ಹೇಳುವ ಸಬ್ ರೆಜಿಸ್ಟ್ರಾರುಗಳಿಗೂ ತಾಲ್ಲೂಕ್ ಶಿರಸ್ತೆದಾರುಗಳಿಗೂ ಕೊಟ್ಟಿದ್ದ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ರದ್ದುಮಾಡಿದೆ.

ನಾಗಮಂಗಲದ ತಾಲ್ಲೂಕ್ ಶಿರಸ್ತೆದಾರರಾಗಿದ್ದ ಹಾಲಿ ಮೈಸೂರಿನಲ್ಲಿರುವ ಎಚ್ ಶ್ರೀನಿವಾಸ ಐಯಂಗಾರ್ಯರು, ಹಿರಿಯೂರು ತಾಲ್ಲೂಕು ಶಿರಸ್ತೆದಾರರಾಗಿದ್ದು ಹಾಲಿ ಚಳ್ಳಕೆರೆಯಲ್ಲಿರುವ ಬಿ ವೆಂಕಟರಾಯರು, ಚಳ್ಳಕೆರೆ ತಾಲ್ಲೂಕು ಶಿರಸ್ತೆದಾರರಾಗಿದ್ದು ಹಾಲಿ ಜಗಲೂರಿನಲ್ಲಿರುವ ಟಿ ನರಸಿಂಗರಾಯರು, ಜುಡಿಷಿಯಲ್ ಸಬ್ ರೆಜಿಸ್ಟ್ರಾರ್ ಬಿ ಆನಂದರಾಯರು, ಗೋರಿಬಿದನೂರಿಂದ ಈಚೆಗೆ ಚಿತ್ರದುರ್ಗಕ್ಕೆ ವರ್ಗವಾಗಿರುವ ಕೆ ದೊರಸಾಮಿ ಐಯಂಗಾರ್ಯರು, ಚಿಂತಾಮಣಿ ತಾಲ್ಲೂಕು ಸಬ್ ರೆಜಿಸ್ಟ್ರಾರ್ ಎಂ ವೆಂಕೋಬರಾಯರು.

ಅ॥ ಜಿಯಾಲಜಿಸ್ಟ್ ಮೆ॥ ಪಿ ಸಂಪತ್ ಐಯಂಗಾರ್ಯರನ್ನು ಕಳೆದ ಡಿಸೆಂಬರ್ ತಾ ೧೩ ರಿಂದ ೧ ನೇ ಕ್ಲಾಸಿಗೆ ಒಡ್ತಿಮಾಡಿದೆ.

ತಿಪ್ಪಟೂರು ತಾಲ್ಲೂಕು ಅಮಲ್ದಾರ್ ಮೆ॥ ಕೆ ಕೇಶವಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರ ಗೈರುಹಾಜರಿಯಲ್ಲಿ ಶಿರಸ್ತೆದಾರ್ ಎಂ ಕೆ ಶ್ರೀನಿವಾಸಯ್ಯಂಗಾರ್ಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ರೆವ್ ಫಾದರ್ ವೈ ಗೊಸೆಂಡ್ ಯವರನ್ನು ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿ ನೇಮಕವಮಾಡಿದೆ.

ಅರಲಗೂಡು ತಾಲ್ಲೂಕು ಬಸವಾಪಟ್ಟಣದ ಕನ್ನಡ ಸ್ಕೂಲ್ ಹೆಡ್ ಮಾಸ್ಟರನ್ನು ಬಸವಾಪಟ್ಟಣದ ಯೂನಿಯನ್ ಮೆಂಬರಾಗಿ ನೇಮಕಮಾಡಿದೆ.

ಅ॥ ಕಮಿಷನರ್ ಮೆ॥ ಸಿ ವೆಂಕಟರಾಮಯರಿಗೆ ಕೊಟ್ಟಿದ್ದ ರಜವನ್ನು ಮಾರ್ಚಿ ತಾ ೩೧ ರ ವರೆಗೆ ಹೆಚ್ಚು ಮಾಡಿದೆ.

ಮೆ॥ ಎಚ್ ಎಚ್ ಸ್ಪಾರ್ಕ್ಸ್ ಯವರಿಗೆ ಒಂದು ತಿಂಗಳು ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿರೋಣದರಿಂದ ಮೆ॥ ಎಂ. ನಾರಾಯಣರಾಯರು ಎಕ್ಸೈಸ್ ಕಮಿಷನರಾಗಿಯೂ, ಮೆ॥ ಕೆ. ಶ್ರೀನಿವಾಸರಾಯರು ಶಿವಮೊಗ್ಗಾ ಡೆಪ್ಯುಟಿ ಕಮಿಷನರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ.

ಯಡೆಹಳ್ಳಿ ಡೆಪ್ಯುಟಿ ಅಮಲ್ದಾರ್ ಮೆ॥ ಎಸ. ಸುಬ್ಬರಾಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳಿಗೆ ಜಾಸ್ತಿ ಮಾಡಿದೆ.

ಅ॥ ಕಮಿಷನರ್ ಮೆ॥ ಸಿ. ರಾಜಗೋಪಾಲಾಚಾರ್ಯರವರನ್ನು ೨ ರಿಂದ ೧ನೇ ಕ್ಲಾಸಿಗೂ, ಅ॥ ಕಮಿಷನರ್ ಮೆ॥ ಎ ಕೆ. ಸೈಯದ್ ತಾಜ್ ಪೀರಾನ್ ಯವರನ್ನು ೫ ರಿಂದ ೪ ನೇ ಕ್ಲಾಸಿಗೂ ಬಡ್ತಿಮಾಡಿದೆ.

ಬೆಂಗಳೂರು ತಾಲ್ಲೂಕು ಅಮಲ್ದಾರ್ ಮೆ॥ ಎ. ಹೇಸ್‌ಯವರಿಗೆ ಏಪ್ರಿಲ್ ತಾ. ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ತಾಲ್ಲೂಕು ಶಿರಸ್ತೆದಾರ್ ಬಿ. ಕೆ. ಚನ್ನಸ್ವಾಮಿನಾಯುಡು ಯವರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ತಾಲ್ಲೂಕು ವರ್ತಮಾನ.

ನಂಜನಗೂಡು.—ಈ ಟವನಿನಲ್ಲಿ ಇದೇ ಮಾಹೆ ೨೪ ನೇ ತಾರೀಖಿನಂದು ಗಿರಿಜಾಕಲ್ಯಾಣವೆಂಬ ದೊಡ್ಡ ಜಾತ್ರೆಯು ನಡೆಯಿತು. ಪರಸ್ಥಳಗಳಿಂದ ಅನೇಕ ಜನರು ಬಂದಿದ್ದರು. ಸದ್ಯ ಕಾಲರಾ ಇಲ್ಲವೇ ಪ್ಲೇಗ್ ಮುಂತಾದ ಯಾವ ಸಾಂಕ್ರಾಮಿಕ ವ್ಯಾಧಿಗಳೂ ಇಲ್ಲದೆ ಇದ್ದದ್ದು ಬಹು ಸಂತೋಷಪ್ರದವಾಗಿದೆ. ಎಲ್ಲಾ ಕಾರ್ಯಗಳೂ ನಿರ್ವಿಘ್ನವಾಗಿ ಜರುಗಿದವು.—ಈ ಮಧ್ಯೆ ದನಗಳ ಜಾತ್ರೆಯು ಸಹ ಶಕ್ಯಮಟ್ಟಿಗೆ ನಡೆಯಿತು. ಇನ್ನೂ ಅನೇಕರು ತಮ್ಮ ಉತ್ತಮವಾದ ದನಕರುಗಳನ್ನು ಮಾರಾಟಕ್ಕೂ, ಜನಗಳ ನೋಟಕ್ಕೂ ತೆಗೆದುಕೊಂಡು ಬರಬಹುದಾಗಿತ್ತು. ಆದರೆ ನಿರೀಕ್ಷಿಸಿದ್ದಷ್ಟು ದನಗಳ ಜಾತ್ರೆಯು ಸೇರಲಿಲ್ಲ. ಇಲ್ಲಿ ಜಲವಸತಿಯು ಅನುಕೂಲವಾಗಿರುವುದರಿಂದ ಜನಗಳಿಗೂ ದನಕರುಗಳಿಗೂ ತುಂಬಾ ಸಹಾಯವಾಗಿರುತ್ತದೆ. ಮುಂದೆ ಈ ವರುಷಕ್ಕಿಂತಲೂ ಹೆಚ್ಚು ಜನರೂ ದನಕರುಗಳೂ ಸೇರುವದರಲ್ಲಿ ಸಂಶಯವಿರಲಾರದು. ಬಂದ ರಾಸುಗಳನ್ನು ಚುನಾಯಿಸಿ ಉತ್ತಮವಾದವುಗಳಿಗೆ ಇನಾಮು ಕೊಡಲಿಕ್ಕಾಗಿ ಅಮಲ್ದಾರರೂ, ಅಡ್ವೊಕೇಟ್ ಮೆ॥ ವೆಂಕಟಸಾಮಯ್ಯನವರೂ ಮುಂತಾಗಿ ಒಂದು ಕಮಿಟಿ ಸೇರಿದ್ದರು.—ಕ್ರೈಸ್ತ ಮತೋಪದೇಶಕರು ೩,೪ ದಿನಗಳ ಮಟ್ಟಿಗೂ ಅಲ್ಲಲ್ಲಿ ಸುವಾರ್ತೆಯನ್ನು ಪ್ರಸಂಗಿಸಿ ಕೆಲವು ಸುವಾರ್ತೆಗಳನ್ನೂ ಕೈ ಪತ್ರಗಳನ್ನೂ ಕೊಟ್ಟು, ಗುಂಡ್ಲು ಹೊಳೆಯ ಆಚೆ ಭಾಗಕ್ಕೆ ಹೋದರು. ಅಲ್ಲಿ ಒಂದು ಸೋಜಿಗವಾದ ಸಂಗತಿಯನ್ನು ಕಂಡರು. ಅಲ್ಲಿ ಒಂದು ಹಳೇದಾದ ದೊಡ್ಡ ಹುಣಿಸೇ ಮರವಿದೆ. ಅದರಲ್ಲಿ ಒಂದು ಟೊಳ್ಳುಂಟು. ಪೀಡೆ ಪಿಶಾಚಿಗಳೇನಾದರೂ ಹಿಡಿದಿದ್ದವರು ಅದರಲ್ಲಿ ಹತ್ತಿ ನುಗ್ಗಿ ಹೊರಕ್ಕೆ ಬಂದರೆ ಎಲ್ಲಾ ಬಿಟ್ಟು ಹೋಗುತ್ತದಂತೆ. ಮನಸ್ಸಿನಲ್ಲಿ ಏನಾದರೂ ಕಳಂಕವಿದ್ದರೆ ಅದರೊಳಗೆ ನುಗ್ಗಿ ಹೊರಗೆ ಬರುವುದು ಸಾಧ್ಯವಾಗುವುದಿಲ್ಲವಂತೆ. ಇಂಥಾ ಮೂಢಾಭಿಪ್ರಾಯವು ಅನೇಕ ವರುಷಗಳಿಂದ ಅನೇಕ ಹಳ್ಳಿಯವರ ಜನರ ಮನಸ್ಸುಗಳಲ್ಲಿ ನೆಲೆಗೊಂಡಿರುತ್ತದೆ. ಇಂಥಾ ದುಷ್ಪದ್ಧತಿಯನ್ನು ಈ ನವನಾಗರಿಕ ಕಾಲದಲ್ಲಿ ನಿಲ್ಲಿಸುವದು ಸರ್ಕಾರದವರ ಕರ್ತವ್ಯವಾಗಿರುವುದೆಂದು ದಿಟ್ಟವಾಗಿ ಹೇಳಬಹುದು. ಇಂಥಾ ಅಲ್ಪ ವಿಷಯಗಳನ್ನೆಲ್ಲಾ ಸರ್ಕಾರದವರು ಲಕ್ಷ್ಯವಿಡುತ್ತಾರೋ? ಏನೋ ಎಂಬ ಶಂಕೆಯುಂಟು. ಯಾಕೆಂದರೆ ಅಲ್ಲಿ ಯಾವ ಪೋಲೀಸಿನವನಾದರೂ ಇರಲಿಲ್ಲ. ಅನೇಕ ಗಂಡಸರೂ ಅನೇಕ ಹೆಂಗಸರೂ ಆ ಮರದ ಮೇಲೆ ಹತ್ತಿ ಒಬ್ಬರಮೇಲೊಬ್ಬರು ನುಗ್ಗಿ ಹೊರಕ್ಕೆ ಬರುತ್ತಾರೆ. ಆಗ್ಗೆ ಇಬ್ಬರು ಮೂವರು ಗಂಡಸರು ಆ ಮರದ ಪೊಟರೆಯೊಳಗೂ, ಮರದ ಮೇಲ್ಗಡೆಯೂ ಇದ್ದು, ನುಗ್ಗುವ ಹೆಂಗಸರ ಕೈಗಳನ್ನು ಹಿಡಿದು ಮೇಲಕ್ಕೆ ಎಳೆಕೊಳ್ಳುತ್ತಾರೆ. ಒಂದು ವೇಳೆ ಅವರ ದೇಹಗಳು ತೋರವಾಗಿದ್ದರೆ ನುಗ್ಗಿ ಬರುವುದು ಸುಲಭವೂ ಸಾಧ್ಯವೂ ಅಲ್ಲ. ಆದರೆ ಈ ಕಾರಣವನ್ನು ಅವರು ಪ್ರಬಲವಾಗಿಟ್ಟುಕೊಳ್ಳದೆ ಮನಸ್ಸಿನಲ್ಲಿ ಕಳಂಕವಿದೆ ಹರಿಕೆ ಕಟ್ಟಿಕೋ ಎಂದು ಕೆಳಗಿರುವ ಜನರು ಹೇಳುತ್ತಾರೆ. ನಾವು ನೋಡಿದ್ದರಲ್ಲಿ ಒಬ್ಬ ಗಂಡು ಸೇನೋ ೩, ೪ ಸಾರಿ ಪ್ರಯತ್ನ ಮಾಡಿದರೂ ಆಗಲಿಲ್ಲ. ಆತನೇನೋ ವಾಪಸ್ ಬಂದು ಬಿಟ್ಟನು. ಆದರೆ ಒಬ್ಬ ಹೆಂಗಸಿನ ಅವಸ್ಥೆಯನ್ನು ನೋಡಿ ತುಂಬಾ ಸಂತಾಪ ಪಟ್ಟೆವು. ಅವಳು ೩, ೪ ಸಾರಿ ಪ್ರಯತ್ನ ಪಟ್ಟರೂ ಆಗಲೇ ಇಲ್ಲ. ಮನಸ್ಸಿನಲ್ಲಿ ಕಳಂಕವಿದೆ ಹರಿಕೆ ಕಟ್ಟಿಕೋ ಎಂದು ಹೇಳಿದರೂ ಅವಳು ನುಗ್ಗುವದು ಸಾಧ್ಯವಾಗಲೇ ಇಲ್ಲ. ಹಿಂದಕ್ಕೆ ಸರಿಯುವುದಕ್ಕೂ ಮುಂದಕ್ಕೆ ಸಾಗುವದಕ್ಕೂ ಆಗದೆ ಸಂಕಟಪಟ್ಟು ನೋಲುಗಳ್ಳು ಕೀಲುಗಳ್ಳು ಮಾಡುತ್ತಾಳೆ. ನಾವು ಇದೆಲ್ಲಾ ಮೂಢ ಭಕ್ತಿ ಎಂದರೂ ಆ ಜನರ ಅವಗಾಹನೆಗೆ ಬರಲೇ ಇಲ್ಲ. ಆಗಲೇ ಅಲ್ಲಿರುವ ಜನರು—ಓಹೋ, ಒಳ್ಳೇ ಗ್ರಹಚಾರವಾಯಿತಲ್ಲ ಎಂದು ಈ ಕಡೆ ಆ ಕಡೆ ಓಡ್ಯಾಡುತ್ತಾ ತವಕಪಡುತ್ತಾ ಇದ್ದರು. ಸ್ವಾಮಿಯ ಅನುಗ್ರಹದಿಂದ ಆಕೆಗೆ ಏನೂ ಕೇಡಾಗಲಿಲ್ಲ. ಕಷ್ಟ ಪ್ರಯಾಸದಿಂದ ಹೊರಕ್ಕ ಬಂದು ಬಿಟ್ಟಳು. ಒಂದು ವೇಳೆ ಅವಳಿಗೆ ಏನಾದರೂ ಹೆಚ್ಚು ಕಡಿಮೆಯಾಗಿ ಪ್ರಾಣಾಪಾಯವೇನಾದರೂ ಸಂಭವಿಸಿದ್ದರೆ ಆಗ ಸರ್ಕಾರದವರು ಈ ಮರವನ್ನು ಕಡಿಸಿ ಅಲ್ಲಿದ್ದವರನ್ನೆಲ್ಲಾ ಕೈದುಮಾಡುವುದಕ್ಕಾಗಿ ಪೋಲೀಸ್ ಆಫೀಸಿಗೆ ಎಳೆದ ಕೊಂಡು ಹೋಗಬೇಕಾಗಿತ್ತಲ್ಲವೇ? ನಾವು ಮಾತ್ರವಲ್ಲ. ಅಲ್ಲಿದ್ದ ಜನಗಳಲ್ಲಿ ಏನೋ ಒಂದಿಷ್ಟು ಆಲೋಚನೆಯುಳ್ಳವರೂ ಕೂಡ—ಇದೆಂಥಾ ಕೆಲಸ? ಇದನ್ನು ಯಾಕೆ ಮಾಡಬೇಕು - ಎಂದು ಮಾತಾಡಿಕೊಳ್ಳುತ್ತಿದ್ದರು. ಪ್ರಾಯಶಃ ಈ ಸಂಗತಿಯು ಜಾತ್ರೆಯ ಅನೇಕ ಜನರಿಗೂ ಪುರದೇವರಿಗೂ ನೂತನವಾಗಿ ತೋರುವದು. ಅದೇನೋ ಆಶ್ಚರ್ಯವಲ್ಲ. ಏಕೆಂದರೆ ಅವರು ಇದನ್ನು ಸೂಕ್ಷ್ಮವಾಗಿ ನೋಡಲಿಲ್ಲ. ಅವರ ಲಕ್ಷ್ಯಕ್ಕೆ ಇದು ಬೀಳಲೂ ಇಲ್ಲ. ಆದದ್ದರಿಂದ ಇಂಥಾ ಹಾನಿಕರವಾದ, ನಿಷ್ಪ್ರಯೋಜಕವಾದ, ಮೂಢಮತದ ದುಷ್ಪದ್ಧತಿಗಳನ್ನು ಸರ್ಕಾರದವರು ತಾವೇ ಮುದ್ದಾಂ ಗಮನಿಸಿ ನಿಲ್ಲಿಸಬೇಕೆಂಬುವುದೇ ನಮ್ಮ ವಿಜ್ಞಾಪನೆ.

ನಮ್ಮ ಪುಸ್ತಕಭಂಡಾರವು

" ಅಮರಕೋಶಪ್ರಕಾಶವು "

ಸಂಸ್ಕೃತ ಭಾಷೆಯನ್ನು ಕಲಿಯುವವರಿಗೆ ಅಮರ ನಿಘಂಟು ತುಂಬಾ ಉಪಯುಕ್ತವೆಂಬುದನ್ನು ಎಲ್ಲರೂ ಬಲ್ಲರು

ಇಂಥ ಶಬ್ದಕೋಶವು ಸಂಸ್ಕೃತ ಶ್ಲೋಕಮಯವಾಗಿರುವುದರಿಂದ ಉಪಾಧ್ಯಾಯರ ಸಹಾಯವಿಲ್ಲದೆ ವ್ಯುತ್ಪನ್ನರಾದ ವಿದ್ಯಾರ್ಥಿಗಳಿಗೂ ಪ್ರವೇಶವು ಸುಗಮವಲ್ಲವೆಂಬುದನ್ನು ಚಿಂತಿಸಿದ ಅನೇಕರು ಇದನ್ನು ವಿವಿಧವಾಗಿ ಉಪಯೋಗ ಪದ್ಧತಿಗೆ ತಂದಿರುವರು

ಅವರಲ್ಲಿ ಮೈಸೂರಲ್ಲಿರುವ ಆರ್ ವಾಸುದೇವಮೂರ್ತಿ, ಶಾರದಾಸದನ ಎಂಬವರಿಂದ ಪ್ರಕಟಿಸಲ್ಪಟ್ಟ ಅಮರಕೋಶ ಪ್ರಕಾಶವೆಂಬ ಪ್ರಥಮಕಾಂಡ ಪುಸ್ತಕವು ನಮ್ಮಲ್ಲಿಗೆ ಬಂದಿರುವುದು ಇದು ಪದವಿಭಾಗ, ನಾಮ, ಪರ್ಯಾಯ ನಾಮ, ಅಂತ, ಲಿಂಗ, ಸಂಧಿ, ಇತ್ಯಾದಿಗಳನ್ನು ಉಪಯುಕ್ತಸೂತ್ರ ಉದಾಹರಣೆಗಳಿಂದ ಬಿಡಿಸಿ ವ್ಯಕ್ತಪಡಿಸಿ ತೋರಿಸಿಕೊಡುವ ವಿಷಯದಲ್ಲಿ ಸಮರ್ಥವಾಗಿದೆ ಇಂಥ ಕ್ರಮವು ಅಮರಕೋಶದ ದುರ್ಗಮವಾದ ಹೆಚ್ಚು ಪ್ರಯೋಜನವನ್ನು ಯುಕ್ತಿಯುಕ್ತವಾಗಿ ಒದಗಿಸಿಕೊಡತಕ್ಕದಾಗಿರುವುದರಿಂದ ಮೇಲಿನ ಎರಡು ಕಾಂಡಗಳೂ ಹೀಗೆಯೇ ಪ್ರಚಾರಕ್ಕೆ ಬರುವುವಾದರೆ ಗ್ರಂಥಕರ್ತೃಗಳ ಪ್ರಯತ್ನವು ಜನೋಪಕಾರವಾರ್ಗದಲ್ಲಿ ಇನ್ನೂ ಹೆಚ್ಚಾಗಿ ವಿನಿಯೋಗವಾಗುವುದೆಂದು ನಾವು ಭಾವಿಸುವೆವು

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್.

ರಾತ್ರಿ ಪಾಠಶಾಲೆಗಳಿಗೆ ಪ್ರೋತ್ಸಾಹ ಬೇಕು

ಅಯ್ಯಾ,

ಯಡತೊರೆ ತಾಲ್ಲೂಕು ಮುದಿಗುಪ್ಪೆ ಗ್ರಾಮಕ್ಕೆ ಮೈಸೂರು ಡಿಸ್ಟ್ರಿಕ್ಟ್ ಸ್ಕೂಲ್‌ಗಳ ಡೆಪ್ಟಿ ಇನ್ಸ್‌ಪೆಕ್ಟರವರು ೩೦ ೧೫ನೇ ರಾತ್ರಿ ದಯಮಾಡಿಸಿ, ಮುದಿಗುಪ್ಪೆ ಗ್ರಾಮದಲ್ಲಿದ್ದ ಮಾರಿ ದೇವತೆ ಗುಡಿಯೊಳಗೆ ಮೊಕ್ಕಾಂ ಮಾಡಿ ಬೆಳಗ್ಗೆ ಗ್ರಾಮಸ್ಥರ ಸಮೇತ ಈ ಗ್ರಾಮವನ್ನೂ ಕುಪ್ಪಹಳ್ಳಿ ಗ್ರಾಮವನ್ನೂ ತಿರುಗಿಕೊಂಡು ಬಂದು, ಈ ಮುದಿಗುಪ್ಪೆ ಗ್ರಾಮಕ್ಕೂ ಕುಪ್ಪಹಳ್ಳಿ ಗ್ರಾಮಕ್ಕೂ ಮಧ್ಯೆ ಒಂದು ಸ್ಕೂಲ್ ಮನೆಯನ್ನು ಕಟ್ಟಬೇಕೆಂದು ಹುಕುಂ ಮಾಡಿ, ಜನಗಳ ಮನಸ್ಸನ್ನು ಸಂತೋಷಪಡಿಸಿ, ಶನಿವಾರ ಬೆಳಗ್ಗೆ ೯ ಗಂಟೆಗೆ ಗ್ರಾಮದ ಗ್ರಾಂಟ್ ನೈಟ್ ಸ್ಕೂಲಿಗೆ ದಯಮಾಡಿಸಿ, ಹಾಜರಾಗಿದ್ದ ೧೭ ಮಕ್ಕಳನ್ನು ಪರೀಕ್ಷೆ ಮಾಡಿ ಅದರಲ್ಲಿ ಪ್ಯಾಸಾದ ೧೭ ಜನಗಳನ್ನು ಕುರಿತು—ನಮಗೆ ಬಹಳ ಸಂತೋಷವಾಯಿತು ಯಾಕೆಂದರೆ ೨೫ ವರ್ಷದ ಮೇಲೆ ೩೦ ವರ್ಷದ ಕೆಳಗೆ ಇರುವಂಥಾ ಮೂಢ ಮಕ್ಕಳು ಪ್ಯಾಸಾದದ್ದಕ್ಕೆ ತುಂಬಾ ಸಂತೋಷ ಇನ್ನು ಇಂಥಾ ಹುಡುಗರನ್ನೇ ನೀವು ಸೇರಿಸಿ ವಿದ್ಯಾಭ್ಯಾಸವನ್ನು ಮುತುವರ್ಜಿ ವಹಿಸಿ ಮಾಡಿಸಿ ಹಳ್ಳಿ ನಿವಾಸಿಗಳ ಮೂಢ ಬುದ್ಧಿಯನ್ನು ಹೋಗಲಾಡಿಸಿದರೆ, ಗೌರ್ನಮೆಂಟಿನವರು ನಿಮಗೆ ತುಂಬಾ ಮರ್ಯಾದೆ ಮಾಡುತ್ತಾರೆ ಎಂದು ನೈಟ್ ಗ್ರಾಂಟ್ ಸ್ಕೂಲ್ ಮಾಸ್ಟರಾದ ಡಿ ಕೆ ಗುಡ್ಡಪ್ಪನವರನ್ನು ಕೊಂಡಾಡಿದರು ಆ ಮೇಲೆ ಗುಡ್ಡಪ್ಪನವರು ಸಂಗೀತ ಡ್ರಿಲ್‌ಗಳಿಂದ ಸಭೆಯವರ ಮತ್ತು ದಯಮಾಡಿಸಿದ್ದ ಇನ್ಸ್‌ಪೆಕ್ಟರ್ ಸಾಹೇಬರವರ ಮನಸ್ಸನ್ನು ಸಂತೋಷಪಡಿಸಿದರು. ಸಾಯಂಕಾಲ ೪ ಘಂಟೆಗೆ ಡಿ|| ಇನ್ಸ್‌ಪೆಕ್ಟರವರನ್ನು ಗ್ರಾಮಸ್ಥರೆಲ್ಲಾ ಈ ಮುದುಗುಪ್ಪೆ ಗ್ರಾಮದ ಪಟೇಲಗೌಡರ ಹೊಲದ ವರೆವಿಗೂ ಸಾಗಕಳುಹಿಸಿ ಹಿಂತಿರುಗಿ ಬಂದರು

ಆದ್ದರಿಂದ ಗೌರ್ನಮೆಂಟಿನವರು ಇಂಥಾ ಸ್ಕೂಲ್ ಮಕ್ಕಳ ವಿಷಯದಲ್ಲಿ ಪೂರಾ ಗಮನವನ್ನು ಕೊಟ್ಟು ನೈಟ್ ಸ್ಕೂಲ್ ಮಾಸ್ಟರಿಗೆಲ್ಲಾ ಸಹಾಯಮಾಡಿದರೆ ನಮ್ಮ ಮೈಸೂರು ಸೀಮೆಯಲ್ಲಿ ಇಂಥಾ ನೈಟ್ ಸ್ಕೂಲುಗಳು ಅಭಿವೃದ್ಧಿಯಾಗುವುದಕ್ಕೆ ಸಂಶಯವಿಲ್ಲ ಮತ್ತು ಈ ಮುದಿಗುಪ್ಪೆ ಗ್ರಾಮದ ನೈಟ್ ಸ್ಕೂಲಿನಲ್ಲಿ ಕುಪ್ಪಹಳ್ಳಿ ಪುಟ್ಟೇಗೌಡ, ದೊಡ್ಡಹಳ್ಳಿ ಕಾಳೇಗೌಡ ಮುದಿಗುಪ್ಪೆ ದೊಡ್ಡೇಗೌಡ ಎಂಬ ಮೂರು ಜನಗಳು ಫಸ್ಟ್ ಕ್ಲಾಸಿನಲ್ಲಿ ಪ್ಯಾಸಾಗಿ ತುಂಬಾ ಗೌರವವನ್ನು ಪಡೆದರು ಇವರ ವಯಸ್ಸೆಷ್ಟೆಂದರೆ, ಪುಟ್ಟೇಗೌಡನಿಗೆ ೩೨ ವರ್ಷ ಕಾಳೇಗೌಡನಿಗೆ ೨೭ ವರ್ಷ ದೊಡ್ಡೇಗೌಡನಿಗೆ ೨೫ ವರ್ಷ ಈ ಮಕ್ಕಳು ಪ್ಯಾಸಾದದ್ದಕ್ಕೆ ಸಭೆಯವರೆಲ್ಲಾ ತುಂಬಾ ಸಂತೋಷವನ್ನು ಪಟ್ಟರು ಆದರೆ ಸ್ಕೂಲ್ ಮಾಸ್ಟರು ಮಕ್ಕಳಿಗಾಗಿ ಮಾಡಿದ ಮೆಹನತ್ತು ಎಲ್ಲರ ಮನಸ್ಸನ್ನೂ ಸಂತೋಷಪಡಿಸಿತು ಆದಕಾರಣ ಮೈಸೂರು ಸೀಮೆಯಲ್ಲಿರುವ ನೈಟ್ ಸ್ಕೂಲ್ ಮಾಸ್ಟರೆಲ್ಲಾ ಇವರಿಗಿಂತ ಹೆಚ್ಚಾದ ಮುತುವರ್ಜಿ ವಹಿಸಿ ವಿದ್ಯೆಯನ್ನು ಹೇಳಿದರೆ ಇಂಗ್ಲೀಷ್ ಸಾಂಬ್ರಾಜ್ಯವು ಪ್ರಕಾಶಮಾನವಾಗಿ ಶೋಭಿಸುತ್ತದೆ ಎಂಬುವುದರಲ್ಲಿ ಏನೂ ಸಂಶಯವಿರುವುದಿಲ್ಲವು

ಬಾತ್ಮಿದಾರ

ಬೇಲೂರಿನ ಕಷ್ಟಗಳು

ಅಯ್ಯಾ

ಬೇಲೂರು ಹವಾ ಚೆನ್ನಾಗಿಲ್ಲ ಕುಡಿಯಲು ಅನುಕೂಲವಾದ ನೀರಿಲ್ಲ ಇಲ್ಲಿರುವ ದೊಡ್ಡ ಕೆರೆಯಲ್ಲಿ ಜನರು ಬಟ್ಟೆ ಒಗೆಯುವದು ದನಗಳ ಮೈ ತೊಳೆಯುವದು, ಹೆಂಗಸರು ಮುಸುರೆ ಉಜ್ಜುವುದು, ಅಗಸರು ಗಲೀಜು ಬಟ್ಟೆ ವಗೈರೆ ಒಗೆಯುವದು, ಈ ಕೆಲಸಗಳಿಂದ ನೀರೆಲ್ಲಾ ಕೆಟ್ಟುಹೋಗಿ, ಅದನ್ನು ಕುಡಿಯುವ ಪ್ರತಿಯೊಂದು ಮನೆಯಲ್ಲೂ ಒಬ್ಬೊಬ್ಬರು ವಿಷಮ ಶೀತ ಜ್ವರದಿಂದ ನರಳುತ್ತಿದ್ದಾರೆಂದು ಹೇಳಬಹುದು ಹಿಂದಿದ್ದ ಅಮಲ್ದಾರ್ರುಗಳು ಇದಕ್ಕಾಗಿ ಪೋಲೀಸ್ ಕಾವಲು ಇಟ್ಟಿದ್ದ ಕಾರಣ ಮೇಲ್ಕಂಡ ಕೆಲಸಗಳಿಗೆ ಅವಕಾಶವಿರಲಿಲ್ಲ ಈಗ ಅದಿಲ್ಲವೇ ಇಲ್ಲ ಈ ಊರು ಬ್ರಾಹ್ಮಣರಲ್ಲಿ ಹೆಂಗಸರು ಗಂಡಸರು ಆದಿಯಾಗಿ ಎಲ್ಲರೂ, ಇದು ಪುಣ್ಯಕ್ಷೇತ್ರವಾದ್ದರಿಂದ ಕೆರೆಯಲ್ಲೇ ಸ್ನಾನ ಮಾಡುವದು ವಾಡಿಕೆಯಾಗಿದೆ ಲೈಸೆನ್ಸ್ ಇಲ್ಲದೆ ಮೀನು ಹಿಡಿಯಕೂಡದೆಂಬ ಸರ್ಕಾರದವರ ನಿಯಮವು ಪುಸ್ತಕದಲ್ಲಿರುವದೇ ಹೊರತು, ಕೆರೆಯಲ್ಲಿ ಬಟ್ಟೆ ಒಗೆಯುವ ಬ್ರಾಹ್ಮಣ ಹೆಂಗಸರ ಮಧ್ಯದಲ್ಲಿ ಗಾಳಗಳನ್ನು ಹಾಕಿಕೊಂಡು ಕೂಳಿತು, ಅವರ ನೀರು ಹಾರಿದರೆ, ಹೆಂಗಸರ ಮೇಲೆ ಮನಸ್ಸು ಮಾತನಾಡುವ ಈ ಊರು ಮುಸಲ್ಮಾನರೇ ಮೊದಲಾದ ಕೆಲವು ಪುಂಡರ ವಿಷಯದಲ್ಲಿ ಅದು ಜಾರಿಯಲ್ಲಿಲ್ಲದ್ದು ವ್ಯಸನವು

ಕಳೆದ ೩೦ ೧೪ ನೇ ಸೋಮವಾರ ಮಧ್ಯಾಹ್ನ ಸುಮಾರು ೨|| ಗಂಟೆ ಸಮಯದಲ್ಲಿ ಅಬ್ದುಲ್ ಖಾದರ್ ಸಾಬಿಯ ೫ ವರುಷದ ಒಂದು ಮಗುವು ಇನ್ನೆರಡು ಸಣ್ಣ ಮಕ್ಕಳೊಂದಿಗೆ ಮೇಲ್ಕಂಡ ಕೆರೆಯ ದಡದಲ್ಲಿ ಆಡುತ್ತಿದ್ದು, ಅಕಸ್ಮಾತ್ ಅದರ ಟೋಪಿಯು ನೀರಿಗೆ ಬಿದ್ದದ್ದರಿಂದ ಅದನ್ನು ತೆಗೆದುಕೊಳ್ಳಲು ನೀರಿಗಿಳಿದು, ಅಲ್ಲಿ ನೀರು ಆಳವಾಗಿದ್ದುದರಿಂದ, ಆ ಮಗುವು ನೀರಿನಲ್ಲಿ ಮುಳುಗಿ ಮೂರು ನಾಲ್ಕು ಸಾರಿ ಮುಳುಗಿ ಮುಳುಗಿ ಎದ್ದಾಗ್ಗೂ ಹತ್ತಿರದಲ್ಲಿದ್ದವರು ಯಾರೂ ಆ ಮಗುವಿನ ಕಡೆಗೆ ಲಕ್ಷಿಸಲೇ ಇಲ್ಲ ದಡದಲ್ಲಿದ್ದ ಸಣ್ಣ ಮಕ್ಕಳ ಗೋಳು ಕೇಳಿ ಸುಮಾರು ಮುಕ್ಕಾಲು ಮೈಲಿ ದೂರದಲ್ಲಿ ಒಗೆಯುತ್ತಿದ್ದ ಅಗಸರ ಭೀಮನು ಓಡಿಹೋಗಿ ಸಾಹಸಪಟ್ಟು ಮುಳುಗಿದ್ದ ಮಗುವನ್ನು ತೆಗೆದು, ಅದು ಕುಡಿದ ನೀರನ್ನೆಲ್ಲಾ ಹೊರಡಿಸಿ ಶಾಖವನ್ನೂ ಜ್ಞಾನವನ್ನೂ ಉಂಟುಮಾಡಿ ಮನೆಗೆ ತಲುಪಿಸಿದನು ಕೆಲವು ವರುಷಗಳ ಹಿಂದೆ ಇಲ್ಲಿ ಶಿರಸ್ತೇದಾರ್ರಾಗಿದ್ದ ಮೆ|| ಶ್ರೀನಿವಾಸರಾಯರ ಮನೆಯಲ್ಲಿ ಕದ್ದುಕೊಂಡು ಹೋಗಿದ್ದ ಕಳ್ಳನನ್ನು ಮಾಲ್ ಸಮೇತ ಇವನೇ ಹಿಡಿದುಕೊಟ್ಟಿದ್ದನು ಇವನಿಗೆ ಸರ್ಕಾರದವರು ಪ್ರೋತ್ಸಾಹಿಸುವುದಲ್ಲದೆ, ಈ ಕೆರೆಗೆ ಒಂದು ಪೋಲೀಸ್ ಕಾವಲು ಇಟ್ಟಾರೆಂದು ಹಾರೈಸುತ್ತೇನೆ.

ಈ ಊರು ಕಳ್ಳತನಕ್ಕೂ, ಪರೇಲವೆಂಬ ಮೂಠಲೆಯ ಆಟಕ್ಕೂ ತವರು ಮನೆಯಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಇದಕ್ಕಾಗಿ ಇಲ್ಲಿ ಒಂದು ಪಿನ್ಷ ಪೋಲೀಸನ್ನು ಇಡಬೇಕೆಂದು ಬಹುಕಾಲದಿಂದಲೂ ರಿಕಾರ್ಡು ನಡೆದು, ಮೊನ್ನೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಬಂದಿದ್ದಾಗ್ಗೆ ಖಂಡಿತವಾಗಿಯೂ ಇಡಿಸಿಕೊಡುವುದಾಗಿ ವಾಗ್ದಾನ ಸಹಾ ಆಗಿತ್ತು ಇದಕ್ಕೆ ಬದಲಾಗಿ, ಹೆಚ್ಚಾಗಿ ಪ್ಲಾಂಟರಿರುವ ಈ ತಾಲ್ಲೂಕಿನಲ್ಲಿ ಕೆಲವು ಹೋಬಳಿಗಳಿಗೆ ಒಬ್ಬೊಬ್ಬ ಜಮೇದಾರ್ರನ್ನು ಏರ್ಪಡಿಸಿದರೇ ಹೊರತು ಈ ಊರು ಪ್ರಜೆಗಳ ಮಾನಧನವನ್ನು ಕಾಪಾಡಲು ಯಾವದೊಂದೂ ಏರ್ಪಡಿಸಲಿಲ್ಲ ನಾಲ್ಕು ವರುಷಗಳ ಕೆಳಗೆ ಒಂದೇ ಒಂದು ರಾತ್ರಿ ಸುಮಾರು ೨೧ ಮನೆಗಳ ಬೀಗಗಳನ್ನು ಒಡೆದು ಸಾಮಾನುಗಳನ್ನು ದೋಚಿಕೊಂಡು ಹೋಗಿದ್ದುದೂ, ಮೂರು ವರುಷದಲ್ಲಿ ಒಬ್ಬ ದೊಡ್ಡ ಮನುಷ್ಯನ ಮನೆಯಲ್ಲಿದ್ದ ಸರ್ವಸ್ವವನ್ನೂ ಕದ್ದುಕೊಂಡು ಹೋದುದೂ, ೫ ತಿಂಗಳಲ್ಲಿ ಮಗೇಹಳ್ಳಿ ಕಾಫೀಪ್ಲಾಂಟರ್ ಮೆ|| ತಿಮ್ಮೇಗೌಡರ ಮನೆಯಲ್ಲಿ ಸುಮಾರು ೬|| ಸಾವಿರ ರೂಪಾಯಿ ಕಳುವಾದುದೂ, ಒಂದು ತಿಂಗಳಲ್ಲಿ, ಪೇಟೆಯಲ್ಲಿ ಭಾಟಾ ಮಾರ್ಗದಲ್ಲಿರುವ ಬಳ್ಳಾರಿ ರಾಮಶೆಟ್ಟರ ಮನೆಗೆ ಕಳ್ಳರು ನುಗ್ಗಿ ೩೦೦-೪೦೦ ರೂಪಾಯಿ ನಗಗಳನ್ನು ದೋಚಿಕೊಂಡು ಹೋದದ್ದೂ, ಹೋದ ವಾರ ಕೋಟೆಯಲ್ಲಿ ಭಾಟಾ ಮಾರ್ಗದಲ್ಲಿರುವ ವರ್ನಾಕ್ಯುಲರ್ ಸ್ಕೂಲ್ ಮಾಸ್ಟರ್ ಮೆ|| ಕೇಶವಯ್ಯಂಗಾರ್ರ ಮನೆಗೆ, ರೋಡಿನಲ್ಲಿ ತಿರುಗುವವರಿಗೆಲ್ಲಾ ಕಾಣುತ್ತಿರುವ ಸ್ಥಳದಲ್ಲಿ ಕನ್ನಾ ಕೊರೆದು, ನೂರಾರು ರೂಪಾಯಿ ಬಾಳುವ ಸಾಮಾನು ಆಹಾರ ಪದಾರ್ಥಗಳೂ ಕಳುವಾಗಿರುವುದೂ ಪೋಲೀಸಿನವರ ಗಮನಕ್ಕೆ ಬಂದೇ ಇದೆ ಎಲ್ಲಾ ಕಡೆಯಲ್ಲೂ ಪೋಲೀಸಿನವರು, ಈ ಪರೇಲವೆಂಬ ಜೂಜಾಟವನ್ನು ಆಡುವ ಪುಂಡರನ್ನು ಹಿಡಿದು ಶಿಕ್ಷಿಸಿ ಒಳ್ಳೇ ಖ್ಯಾತಿಯನ್ನು ಪಡೆದೂ, ಪಡೆಯುತ್ತಲೂ ಇರುವುದು ವಾಚಕರೆಲ್ಲರೂ ತಿಳಿದಂತವಾಗಿರುವಲ್ಲಿ ಈ ಊರು ಪೋಲೀಸಿನವರು ಆ ಪರೇಲ ಕೋರರನ್ನು ಹಿಡಿಯಲು ತಮಗೆ ಅಧಿಕಾರವಿಲ್ಲವೆಂದು ಹೇಳುವದು ಶೋಚನೀಯವಾಗಿದೆ ಊರಿನ ಮುಖ್ಯಸ್ಥರಾದ ಆಫೀಸರುಗಳು ಊರಾಚೆ ದೂರದಲ್ಲಿ ವಾಸಿಸುತ್ತಿರುವದರಿಂದ ಪೋಲೀಸಿನವರು ನಿರ್ಭಯದಿಂದ ಗ್ರಾಮಗಸ್ತು ಮಾಡದೆ ಮಲಗಿಕೊಳ್ಳುವರೆಂದೂ, ಕಳ್ಳರು ನಿರಾಲೋಚನೆಯಿಂದ ತಮ್ಮ ಕೆಲಸವನ್ನು ನೆರವೇರಿಸಿಕೊಳ್ಳಲು ಅನುಕೂಲವಾಗಿದೆ ಎಂದೂ ಈ ಊರಿನವರು ಗೊಣಗುಟ್ಟುವ ಮಾತಿಗೆ ನಮ್ಮ ಆಫೀಸರುಗಳು ಹೆಚ್ಚು ನಿಗಾ ಕೊಟ್ಟಾರೆಂದು ಕೋರಲ್ಪಟ್ಟಿದೆ

ಪುರನಿವಾಸಿ

ಇಂಡಿಯಾ ದೇಶದ ವೃತ್ತಾಂತಗಳು

ವಿಜಯನಗರದ ಮಹಾರಾಜರವರು ಕಳೆದ ವಾರ ಕಾಶೀ ಪಟ್ಟಣವನ್ನು ತಲಪಿದರು

* * *

ಅಫ್ಘಾನಿಸ್ಥಾನದ ಅಮೀರರವರು ಕಾಬೂಲಿನಲ್ಲಿರುವ ಚರ್ಮದ ಕಾರ್ಖಾನೆಯನ್ನು ಸರಿಯಾಗಿ ನಡಿಸುವುದಕ್ಕೆ ಲಾಹೋರ್ ಪಟ್ಟಣದಿಂದ ಮಾಹರ್ ಖಾದರ್ ಬಕ್ಷ್ ಎಂಬಾತನನ್ನು ಕರೆಸಿ ನೇಮಿಸಿಕೊಂಡಿದ್ದಾರೆ

* * *

ಪುದುಚೇರಿಯಲ್ಲಿ ಪ್ರಕಟವಾಗುವ " ಇಂಡಿಯಾ," ಮತ್ತು " ಸೂರ್ಯೋದಯ " ಎಂಬೀ ಪತ್ರಿಕೆಗಳನ್ನು ಮದರಾಸ್ ಆಧಿಪತ್ಯದಲ್ಲಿ ಯಾರೂ ತರಿಸಕೂಡದೆಂದು ಗವರ್ನರವರು ಇಸ್ತಿಹಾರು ಕೊಟ್ಟಿದ್ದಾರೆ

* * *

ಬರೋಡಾ ಸಂಸ್ಥಾನದಲ್ಲಿ ನೌಕರಿಮಾಡುತ್ತಿರುವ ಖಾನ್ ಬಹದೂರ್ ಯುಸುಫಲ್ಲಿಯವರನ್ನು ಜುನಾಘಡದ ನವಾಬರವರು ತಮ್ಮ ದಿವಾನ್‌ರಾಗಿ ನೇಮಕಮಾಡಿಕೊಳ್ಳುವವರಾಗಿದ್ದಾರೆಂದು ಪ್ರಕಟವಾಗಿದೆ

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಶಿವಪುರದ ನಾರಿನ ಕಾರ್ಖಾನೆಗೆ ಬೆಂಕಿ ಬಿದ್ದು ಕಟ್ಟಡವೂ ಒಳಗಿದ್ದ ಸರಕುಗಳೂ ಎಲ್ಲಾ ಸುಟ್ಟುಹೋಗಿ ಮಾಲೀಕರಿಗೆ ಸುಮಾರು ಒಂದು ಲಕ್ಷ ರೂಪಾಯಿ ನಷ್ಟವಾಗಿರುತ್ತದೆ

* * *

ಬೊಂಬಾಯಿ ಪಟ್ಟಣದಲ್ಲಿ ಬಹು ಐಶ್ವರ್ಯವಂತನಾದ ಹತ್ತಿ ವ್ಯಾಪಾರಿಯೊಬ್ಬನು ದಿವಾಳಿಯಾದನೆಂದೂ ಆತನು ಸುಮಾರು ೫೦ ಲಕ್ಷ ರೂಪಾಯಿ ತನಕ ಸಾಲ ತೀರಿಸಬೇಕಾಗಿದೆ ಎಂದೂ ತಿಳಿದು ಬಂದಿದೆ

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಮರ್ರಿ ಎಂಬ ಪಟ್ಟಣದಲ್ಲಿ ಮೆ|| ಮೆಳ್ಳಿಲಾಕ್ ಎಂಬೊಬ್ಬ ಸೈನಿಕನು ಬೈಸಿಕಲ್ಲಿನ ಮೇಲೆ ಹೋಗುತ್ತಿರುವಾಗ ಒಂದು ತಿರುವಿನಲ್ಲಿ ಎದುರಿಗೆ ಬಂದ ಎತ್ತಿನ ಗಾಡಿಗೆ ಬೈಸಿಕಲ್ ಬಡಿದು ಬಿದ್ದು ಸೈನಿಕನು ಆ ಕ್ಷಣವೇ ಪ್ರಾಣಬಿಟ್ಟನು

* * *

ದಕ್ಷಿಣ ಆಫ್ರಿಕಕ್ಕೆ ಹೋಗಿರುವ ಹಿಂದುಸ್ಥಾನದ ಪ್ರಜೆಗಳ ಕಷ್ಟನಿವಾರಣೆಗಾಗಿ ಈ ರಾಷ್ಟ್ರದಲ್ಲಿ ಒಂದು ಫಂಡು ಏರ್ಪಾಡಾಗಿ ಚಂದಾವಸೂಲಾಗುತ್ತಿದೆಯಷ್ಟೆ ಈ ಫಂಡಿಗೆ ರಂಗೂನ್ ಪಟ್ಟಣ ಒಂದರಲ್ಲೇ ೪೯,೩೫೭ ರೂಪಾಯಿ ವಸೂಲಾಯಿತೆಂದು ಪ್ರಕಟವಾಗಿದೆ

* * *

ಕಳೆದ ವಾರ ವಿಜಯನಗರಕ್ಕೂ ಪಾರ್ವತೀಪುರಕ್ಕೂ ನಡುವೆ ಎರಡು ರೈಲ್ ಗಾಡಿಗಳು ಸಂಧಿಸಿ ಅನಾಹುತವಾಯಿತು ಎರಡು ಎಂಜನ್ನುಗಳೂ ಕೆಲವು ವಾಗನ್ ಛಿದ್ರಗಳೂ ಒಡೆದುಹೋದವು ಮೂರು ಜನರು ಮೃತಪಟ್ಟರು ಒಬ್ಬನಿಗೆ ಪೂರಾ ಗಾಯವಾಗಿದೆ

* * *

ಕಲ್ಕತ್ತಾ ಹೈಕೋರ್ಟಿನಲ್ಲಿ ಘಾತುಕನಿಂದ ಕೊಲ್ಲಲ್ಪಟ್ಟ ಖಾನ್ ಬಹದೂರ್ ಷಾಂಸುಲ್ ಅಲಂ ಎಂಬ ಪೋಲೀಸ್ ಸೂಪರಿಂಟೆಂಡೆಂಟಿನ ಸಂಸಾರದ ಜೀವನಕ್ಕೆ ಗವರ್ನಮೆಂಟಿನವರು ೫೦೦೦ ರೂಪಾಯಿಯ ವರಮಾನವುಳ್ಳ ಜಮೀನನ್ನು ಇನಾಮಾಗಿ ದಯಪಾಲಿಸುವರೆಂದು ಗೊತ್ತಾಗಿದೆ

* * *

ಬರುವ ತಿಂಗಳ ಮೂರನೇ ವಾರದಲ್ಲಿ ಬೊಂಬಾಯಿ ಪಟ್ಟಣದೊಳಗೆ ಪಾರ್ಸಿ ಪ್ರಜಾಪ್ರಮುಖರು ಸೇರಿ ಒಂದು ಮಹಾ ಸಭೆಯನ್ನು ನಡಿಸುವವರಾಗಿದ್ದಾರೆ ಈ ಸಮಾಜಕ್ಕೆ ಹಿಂದುಸ್ಥಾನದ ಎಲ್ಲಾ ಕಡೆಗಳಿಂದಲೂ ಪಾರ್ಸಿ ಪ್ರತಿನಿಧಿಗಳು ಮೆಂಬರುಗಳಾಗಿ ಹೋಗುತ್ತಾರೆಂದು ತಿಳಿದುಬಂದಿದೆ

* * *

ಲಿಂಬ್ಡಿ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದೊಳಗೆ ಮದ್ಯಗಳ ಅಂಗಡಿದಾರರು ೧೮ ವರುಷದೊಳಗಿರುವ ಹುಡುಗರಿಗೆ ಮದ್ಯವನ್ನು ವಿಕರಿ ಮಾಡಕೂಡದೆಂತಲೂ, ವಿಕರಿ ಮಾಡಿದರೆ ಅಂಗಡಿಯವರಿಗೆ ಶಿಕ್ಷೆ ವಿಧಿಸುವುದಾಗಿಯೂ ಇಸ್ತಿಹಾರು ಹಾಕಿಸಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ

* * *

ಬರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ಕಳೆದ ವಾರ ಜಪಾನ್ ರಾಜ್ಯವನ್ನು ಕುರಿತು ಪ್ರಯಾಣ ಮಾಡಿದರು ಮಹಾರಾಜರು ಅಲ್ಲಿಂದ ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೂ, ಬಳಿಕ ಸಂಯುಕ್ತ ಸಂಸ್ಥಾನಗಳಿಗೂ ಹೋಗಿ, ಸುಮಾರು ಆರು ತಿಂಗಳ ತನಕ ಸಂಚಾರ ಮಾಡಿಕೊಂಡು ಬರುವವರಾಗಿದ್ದಾರೆ

* * *

ಮಹಮದೀಯ ಬಾಲಕರು ವಿಲಾಯತಿಗೆ ಹೋಗಿ ವಿದ್ಯಾವ್ಯಾಸಂಗ ಮಾಡುವುದಕ್ಕೆ ಅವರಿಗೆ ವೇತನವನ್ನು ಕೊಡುವುದಕ್ಕಾಗಿ ಬೊಂಬಾಯಿ ಪಟ್ಟಣದ ಮುಸಲ್ಮಾನ ದೊಡ್ಡ ಮನುಷ್ಯರು ಒಂದು ಫಂಡನ್ನು ಕೂಡಿಸುತ್ತಿದ್ದಾರೆ ಅವರಲ್ಲಿ ಮುಖಂಡರಾದ ಆಗಾ ಖಾನ್‌ರವರು ಈ ಫಂಡಿಗೆ ೧೯,೦೦೦ ರೂಪಾಯಿ ಚಂದಾ ಕೊಟ್ಟಿರುವರು

* * *

ರಂಗೂನ್ ಪಟ್ಟಣದಲ್ಲಿ ನದಿಯೊಳಗೆ ಇರುವಂಥಾ ಮೀನುಗಳನ್ನು ಹಿಡಿದು ಆ ಪ್ರಾಂತ್ಯದಲ್ಲೂ ಅನ್ಯದೇಶಗಳಿಗೆ ರಫ್ತು ಮಾಡಿಯೂ ವಿಕರಿ ಮಾಡುವುದಕ್ಕೆ ಒಂದು ಕಂಪನಿ ಏರ್ಪಾಡಾಗಿದೆ ಕಂಪನಿಯ ಮೂಲಧನವಾದ ೩ ಲಕ್ಷ ರೂಪಾಯನ್ನು ಪಾಲು ಒಂದಕ್ಕೆ ೧೦ ರೂಪಾಯಿಯಂತೆ ಹಂಚಿಹಾಕಿ ಕೂಡಿಸಿ, ಈ ವ್ಯಾಪಾರವನ್ನು ನಡಿಸುವವರಾಗಿದ್ದಾರೆ

* * *

ಹಿಂದುಸ್ಥಾನದ ಇತರ ಭಾಗಗಳಿಂದಲೂ ಸೀಮೆಯಿಂದಲೂ ಹನ್ನೆರಡು ಪತ್ರಿಕೆಗಳನ್ನು ಪಂಜಾಬ್ ಆಧಿಪತ್ಯದಲ್ಲಿ ಯಾರೂ ತರಿಸಕೂಡದೆಂದು ಅಲ್ಲಿನ ಸರ್ಕಾರದ ಗೆಜೆಟ್ಟಿನ ಮೂಲಕ ಇಸ್ತಿಹಾರು ಕೊಟ್ಟು, ಆ ಪತ್ರಿಕೆಗಳ ಹೆಸರುಗಳನ್ನು ಪ್ರಕಟಿಸಿದ್ದಾರೆ ವಂದೇಮಾತರಂ, ಯುಗಾಂತರ, ಸ್ವಾರಾಜ್ಯ, ಷಂಷೀರ್, ಸತ್ಸಂಗ ಎಂಬವು ಆ ಪೈಕಿ ಕೆಲವಾಗಿರುತ್ತವೆ

* * *

ಪೂರ್ವ ಬಂಗಾಳಕ್ಕೆ ಸೇರಿದ ಫರಿದ್‌ಪುರದಿಂದ ೧೫ ವರುಷದ ಒಬ್ಬ ಹುಡುಗನು ಢಾಕ್ಕಾ ನಗರಕ್ಕೆ ಹೋಗುತ್ತಿರುವಲ್ಲಿ ಅವನ ಹಾಸಿಗೆಯ ಸುತ್ತು ಬಹಳ ಉದ್ದವಾಗಿದ್ದದ್ದನ್ನು ಕಂಡು ಪೋಲೀಸಿನವರು ಅನುಮಾನದ ಮೇಲೆ ಬಿಚ್ಚಿಸಿ ನೋಡಿದರು ಆ ಸುತ್ತಿನಲ್ಲಿ ನಾಲ್ಕು ಬಂದೂಕುಗಳು ಇದ್ದವು ಆ ಹುಡುಗನನ್ನು ಬಂದೂಕುಗಳ ಸಮೇತ ದಸ್ತಗಿರಿ ಮಾಡಿದ್ದಾರೆ

* * *

ಪೂರ್ವ ಬಂಗಾಳಾ ಆಧಿಪತ್ಯಕ್ಕೆ ಸೇರಿದ ತಂಗೈಲ್ ಎಂಬ ಪಟ್ಟಣದಲ್ಲಿ ರಾಜಕೀಯ ಮತ್ತು ಸಾಮಾಜಿಕ ವಿಚಾರಗಳನ್ನು ಕುರಿತು ಚರ್ಚೆ ಮಾಡುವುದಕ್ಕೆ ಅಲ್ಲಿನ ಪ್ರಜೆಗಳು ಎರಡು ಮಹಾ ಸಭೆಗಳನ್ನು ನಡಿಸಬೇಕೆಂದು ಗೊತ್ತುಮಾಡಿ ಏರ್ಪಾಡುಗಳನ್ನು ಮಾಡಿಕೊಳ್ಳುತ್ತಿದ್ದರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಆ ಸಭೆಗಳನ್ನು ನಡಿಸಕೂಡದೆಂದು ಹುಕುಂ ಕೊಟ್ಟು ತಡೆದಿರುತ್ತಾರೆ

* * *

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಸಿರಮೂರು ಸಂಸ್ಥಾನದ ಮಹಾರಾಜರವರು ತಮ್ಮ ಜ್ಯೇಷ್ಠ ಪುತ್ರರೂ ಯುವರಾಜರೂ ಆದ ಟಿಕ್ಕಾ ಅಮಾರ್ ಸಿಂಗ್ ಯವರಿಗೆ ನೇಪಾಳ ಸಂಸ್ಥಾನದ ಮಹಾ ಮಂತ್ರಿಶ್ರೇಷ್ಠರಾದ ಮಹಾರಾಜಾ ಚಂದ್ರ ಷಂಷೇರ್‌ಜಂಗ್ ರಾಣಾ ಬಹದೂರ್ ಯವರ ಜ್ಯೇಷ್ಠಪುತ್ರಿಯನ್ನು ತಂದುಕೊಂಡು ಡೇರಾಡೂನ್ ಪಟ್ಟಣದಲ್ಲಿ ಬಹು ಅಟ್ಟಹಾಸವಾಗಿ ವಿವಾಹವನ್ನು ಮಾಡಿದರು

* * *

ದಕ್ಷಿಣ ದೇಶದಲ್ಲಿ ರಾಮೇಶ್ವರದಿಂದ ಮಂಟಪಕ್ಕೂ ಅಲ್ಲಿಂದ ಸಿಲೋನ್ (ಲಂಕಾ) ದ್ವೀಪಕ್ಕೂ ಸೇತುವೆ ಕಟ್ಟಿ ರೈಲ್ ಗಾಡಿಗಳೂ [illegible] ಹೋಗಿ ಬರುವಂತೆ ಮಾರ್ಗವನ್ನು ನಿರ್ಮಾಣ ಮಾಡಬೇಕೆಂದು ಕಳೆದ ವರುಷ ತೀರ್ಮಾನವಾಯಿತಷ್ಟೆ ಈ ಕಾಮಗಾರಿಗೆಲ್ಲಾ ೯೫ ಲಕ್ಷ ರೂಪಾಯಿ ಅಂದಾಜು ಆಗಿರುತ್ತವೆ ಈ ಪೈಕಿ ಹಾಲ್ತಿಸಾಲಿನಲ್ಲಿ ೨೦ ಲಕ್ಷ ರೂಪಾಯಿನ ಕಾಮಗಾರಿ ನಡೆಯುವುದು

ಅಲಹಾಬಾದ್ ಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ “ತಲ್ವಾರ್” ಎಂಬ ಪತ್ರಿಕೆಯಲ್ಲಿ ಕೊಲೆ ಕ್ರೂರ ಕೃತ್ಯಾದಿಗಳನ್ನು ನಡಿಸುವುದಕ್ಕೆ ಪ್ರೋತ್ಸಾಹಕವಾದ ವಾಕ್ಯಗಳೂ, ಪ್ರಜೆಗಳಿಗೆ ಗವರ್ನ್‌ಮೆಂಟಿನ ಮೇಲೆ ದ್ವೇಷಾಸೂಯೆಗಳನ್ನು ಹುಟ್ಟಿಸತಕ್ಕಂಥಾ ವಾಕ್ಯಗಳೂ ಬರೆಯಲ್ಪಟ್ಟು ಪ್ರಚಾರವಾಗುತ್ತಿವೆ ಎಂಬ ದಾಗಿ ಆ ಪ್ರಾಂತದ ಲೆಫ್ಟಿನೆಂಟ್ ಗವರ್ನರವರು ಆ ಪತ್ರಿಕೆಯ ಆಫೀಸನ್ನು ಸಾರ್ವತ್ರಿಕವಾಗಿ ಸರ್ಕಾರಕ್ಕೆ ಸೇರಿಸಿಕೊಂಡಿದೆ ಎಂದು ಹುಕುಂಕೊಟ್ಟಿದಾರೆ

* * *

ಮದರಾಸ್ ಪಟ್ಟಣದಲ್ಲಿ ಗಾಜಿನ ಸಾಮಾನುಗಳನ್ನು ತಯಾರುಮಾಡುವುದಕ್ಕೆ ಒಂದು ಕಾರ್ಖಾನೆಯು ಪ್ರಾರಂಭವಾಗಿ ಕೆಲಸ ನಡೆಯುತ್ತಿದೆ. ಆಗಲೇ ಕೆಲವು ಸರಕು ತಯಾರಾಗಿ ವ್ಯಾಪಾರವಾಗುತ್ತಿರುವುದು ಆ ಕಂಪನಿಯವರು ಮೂಲಧನವನ್ನು ಎರಡರಿಂದ ನಾಲ್ಕು ಲಕ್ಷ ರೂಪಾಯಿಗೆ ಹೆಚ್ಚಿಸಿದರು. ಷೇರು ಒಂದಕ್ಕೆ ೧೦೦ ರೂಪಾಯಿಯಂತೆ ೧ ಲಕ್ಷ ೪೮ ಸಾವಿರ ರೂಪಾಯನ್ನು ಕೊಡಿಸಬೇಕೆಂದು ಗೊತ್ತುಮಾಡಿ ಷೇರುಗಳನ್ನು ವಿಕರಿ ಮಾಡಲು ಪ್ರಾರಂಭಿಸಿರುತ್ತಾರೆ

* * *

ಗುಂಟೂರಿನಲ್ಲಿ ಕಳೆದ ತಾ ೨೦ ನೇ ಭಾನುವಾರ ಒಂದು ವಿಧವಾ ವಿವಾಹವು ಜರುಗಿತು ಸುಮಾರು ೨೫ ವರುಷದ ಒಬ್ಬ ಶ್ರೀವೈಷ್ಣವ ಬ್ರಾಹ್ಮಣನು ೨೨ ವರುಷದ ನಿಯೋಗಿ ಬ್ರಾಹ್ಮಣ ವಿತಂತುವನ್ನು ವರಿಸಿ ವೇದೋಕ್ತವಾಗಿ ಪುರೋಹಿತರ ಮುಖೇನ ಮದುವೆ ಮಾಡಿಕೊಂಡನು ನೂತನ ದಂಪತಿಗಳ ಮೆರವಣಿಗೆಯು ಮರು ದಿನ ಬಹು ಸಂತೋಷದಿಂದ ನಡೆಯಿತು ನೂರಾರು ಮಂದಿ ಲೌಕಿಕ ಬ್ರಾಹ್ಮಣ ಸ್ತ್ರೀ ಪುರುಷರು ಸೇರಿ ವಿವಾಹವನ್ನು ನೆರವೇರಿಸಿದರು

* * *

ಉತ್ತರ ದೇಶದಲ್ಲಿ ಪ್ಲೇಗ್ ಉಪದ್ರವ ಹಾವಳಿಯು ಜಾಸ್ತಿಯಾಗುತ್ತಾ ಬಂದಿದೆ ಹಿಂದಿನ ವಾರ ೩೯೬೨೧ ಜನರಿಗೆ ಪ್ಲೇಗ್ ತಗಲಿ ೩೩೬೪೦ ಜನರು ತೀರಿಹೋದರು ಇದರ ವಿವರಣೆ ಹ್ಯಾಗಂದರೆ,—ಪಂಜಾಬ್ ೧೮,೭೮೭. ಸಂಯುಕ್ತ ಆಧಿಪತ್ಯಗಳು ೯,೨೧೮, ಬಂಗಾಳಾ ೩,೨೬೧, ಬೊಂಬಾಯಿ ಆಧಿಪತ್ಯ ೧,೦೩೫, ಮದರಾಸ್ ಆಧಿಪತ್ಯ ೧೬೦, ಬರ್ಮಾ ಆಧಿಪತ್ಯ ೩೩೨, ಮಧ್ಯಪ್ರಾಂತ್ಯಗಳು ೧,೦೬೩, ರಾಜಪುಟಾನಾ ಸಂಸ್ಥಾನಗಳು ೧,೭೭೫

* * *

ಆಸ್ಸಾಂ ಪ್ರಾಂತ್ಯಕ್ಕೆ ಸೇರಿದ ಕಿಷೋರ್‌ಗಂಜ್ ಎಂಬ ಸ್ಥಳದಲ್ಲಿ ಒಂದು ಕೂಟವು ನಡೆದು, ಉಪನ್ಯಾಸಕರು ರಾಜದ್ರೋಹ ಕರವಾದ ಸಂಗತಿಗಳನ್ನು ಕುರಿತು ಚರ್ಚೆ ಮಾಡಿದರು ಒಬ್ಬ ಪೋಲೀಸ್ ನೌಕರನು ಹಾಜರಾಗಿದ್ದು, ಉಪನ್ಯಾಸಕರು ಆಡಿದ ಮಾತುಗಳನ್ನು ಬರೆದುಕೊಂಡು ಹೋಗುತ್ತಿರುವಲ್ಲಿ ಪ್ರಫುಲ್ಲ ಚಂದ್ರಮುಖರ್ಜಿ ಎಂಬುವನು ಆ ಪೋಲೀಸಿನವನ ಕೈಲಿದ್ದ ಆ ಪುಸ್ತಕವನ್ನು ಕಿತ್ತುಕೊಂಡನು ಇದು ಮೊಕದ್ದಮೆ ಆಗಿ ಮುಖರ್ಜಿಗೆ ಒಂದು ತಿಂಗಳ ಸಜಾ ವಿಧಿಸಲ್ಪಟ್ಟಿತು

* * *

ಬೊಂಬಾಯಿ ಪಟ್ಟಣದ ಮಲಬಾರ್ ಗುಡ್ಡದ ಮೇಲೆ ಒಂದು ಬಂಗಲೆಯಲ್ಲಿ ವಾಸಮಾಡಿಕೊಂಡಿದ್ದ ೧೯ ವರುಷದ ಭಾಯಿ ಜಮ್ನಾಭಾಯಿ ಎಂಬೊಬ್ಬ ವಿಧವೆಯನ್ನು ಯಾರೋ ಆಕೆಯ ಕೊರಳಿನಲ್ಲಿ ಕೊಂದುಹಾಕಿದ್ದರು ಈಕೆ ಸುಮಾರು ಐದು ವರುಷದ ಕೆಳಗೆ ಗಂಡನನ್ನು ಕಳೆದುಕೊಂಡು, ಮನೆಯೊಳಗೆ ಇದ್ದಳು ಕೊಲೆಗಾರರ್ಯಾರೆಂಬುವುದು ಇನ್ನೂ ಹೊರಪಡಲಿಲ್ಲ ಪತ್ತೆ ಮಾಡಿಕೊಡುವವರಿಗೆ ೫೦೦ ರೂಪಾಯಿ ಬಹುಮಾನ ಸಿಕ್ಕುವುದೆಂದು ಪೋಲೀಸಿನವರು ಪ್ರಕಟಿಸಿದಾರೆ

* * *

ಕೊಲ್ಹಾಪುರದ ಸಂಸ್ಥಾನದ ದಿವಾನರಾಗಿದ್ದ ರಾವ್ ಬಹದೂರ್ ಸಬ್‌ನಿಸ್ ರವರು ಪೆನ್‌ಷನ್ ಪಡೆದು ಕೆಲಸಬಿಟ್ಟರು ಇವರು ಮಹಾರಾಜರವರಿಗೆ ವಿದ್ಯಾಗುರುವಾಗಿಯೂ, ಹುಜೂರು ಅಧಿಕಾರಿಯಾಗಿಯೂ, ರೆವಿನ್ಯೂ ಅಧಿಕಾರಿಯಾಗಿಯೂ, ಈಚೆಗೆ ದಿವಾನರಾಗಿಯೂ ಬಹು ವಿಶದನೆಯಿಂದಲೂ ತೃಪ್ತಿಕರವಾಗಿಯೂ ನೌಕರಿಮಾಡಿರುತ್ತಾರೆಂದು ಮಹಾರಾಜರವರು ಸಂತೋಷಪಟ್ಟು ಅವರಿಗೆ ವರುಷಕ್ಕೆ ೧,೫೦೦ ರೂಪಾಯಿ ವರಮಾನವುಳ್ಳ ಒಂದು ಗ್ರಾಮವನ್ನು ಇನಾಮಿಯಾಗಿ ದಯಪಾಲಿಸಿರುತ್ತಾರೆ.

* * *

ಪೂನಾ ಪಟ್ಟಣದ ಮೆ॥ ಡಿ ಎಲ್ ಸಹಸ್ರ ಬುದ್ಧೆ ಎಂಬ ವಿದ್ಯಾವಂತರಾದ ಬ್ರಾಹ್ಮಣ ದೊಡ್ಡಮನುಷ್ಯರು ೨೭ ವರುಷದ ಸೋನಾಬಾಯಿ ಎಂಬ ಬ್ರಾಹ್ಮಣ ವಿಧವೆಯನ್ನು ಮದುವೆಮಾಡಿಕೊಂಡರು ಈಕೆಯೂ ಮಾತೃಭಾಷೆಯಲ್ಲೂ ಇಂಗ್ಲಿಷಿನಲ್ಲೂ ಪರಿಶ್ರಮವುಳ್ಳವರಾಗಿರುತ್ತಾಳೆ ವಿವಾಹ ಕಾಲದಲ್ಲಿ ಸುಮಾರು ೫೦೦ ಜನ ದೊಡ್ಡಮನುಷ್ಯರಾದ ಬ್ರಾಹ್ಮಣರೂ, ೧೫೦ ಮಂದಿ ಸ್ತ್ರೀಯರೂ ಹಾಜರಾಗಿದ್ದು, ನೂತನ ದಂಪತಿಗಳಿಗೆ ಉಡುಗರೆ ಮುಂತಾದವುಗಳನ್ನು ಕೊಟ್ಟು ಆಶೀರ್ವಾದಮಾಡಿದರು

* * *

ಲಾಹೋರ್ ಪಟ್ಟಣದಲ್ಲಿ ಬಿ ಎ ಪರೀಕ್ಷೆಯನ್ನು ಕೊಟ್ಟು ಆರ್ಯಸಮಾಜಕ್ಕೆ ಸೇರಿಕೊಂಡು ಧರ್ಮಪಾಲನೆಂಬ ಹೆಸರಿಟ್ಟುಕೊಂಡಿದ್ದ ಒಬ್ಬ ಮಹಮದೀಯನು ದೇಶಭಾಷೆಯಲ್ಲಿ “ಅರ್ಜುನ” ಎಂಬ ಪತ್ರಿಕೆಯನ್ನು ನಡಿಸಬೇಕೆಂದು ಅರ್ಜಿಹಾಕಿದನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆತನಿಂದ ೫೦೦ ರೂಪಾಯಿ ಜಾಮೀನ್ ಹಣವನ್ನು ತೆಗೆದುಕೊಂಡು, ಅಪ್ಪಣೆಕೊಟ್ಟಿರುತ್ತಾರೆ ಹೊಸ ಕಾನೂನ್ ಪ್ರಕಾರ ಪತ್ರಿಕೆಯನ್ನು ನಡಿಸುವುದಕ್ಕೆ ಸರ್ಕಾರದಲ್ಲಿ ಹಣ ಡಿಪಾಜಿಟ್ಟು ಕಟ್ಟಿದ್ದು ಇದೇ ಮೊದಲಾಗಿರುತ್ತದೆ

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಲಾಹೋರ್ ಪಟ್ಟಣದಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮೆ॥ ಫ್ರಾಂಸಿಸ್‌ರವರು ಲಾಲ್ ಚಂದ್ ಎಂಬಾತನಿಗೆ ಮೂರು ವರುಷ ಎಂಟು ತಿಂಗಳ ಕಠಿಣ ಸಜೆಯನ್ನೂ ೫೦೦ ರೂಪಾಯಿ ಜುಲ್ಮಾನೆಯನ್ನೂ, ಕೃಷ್ಣಸಿಂಗ್ ಎಂಬಾತನಿಗೆ ಒಂಬತ್ತು ತಿಂಗಳ ಕಠಿಣ ಸಜೆಯನ್ನೂ ೧೦೦ ರೂಪಾಯಿ ಜುಲ್ಮಾನೆಯನ್ನೂ ಕಳೆದ ವಾರ ವಿಧಿಸಿದರು ಮೊದಲನೇ ಅಪರಾಧಿಯು ರಾಜದ್ರೋಹಕರವಾದ ಕೆಲವು ಪುಸ್ತಕಗಳನ್ನು ಅಚ್ಚುಹಾಕಿ ವಿಕರಿ ಮಾಡಿದನು; ಎರಡನೆಯವನು ಅವುಗಳನ್ನು ಮಾರಾಟ ಮಾಡಿದನು ಈಗ ಇವರಿಗೆ ಆಗಿರುವ ಶಿಕ್ಷೆಯು ಸಾಲದೆಂದೂ ಅದನ್ನು ಇನ್ನೂ ಹೆಚ್ಚು ಮಾಡಬೇಕೆಂದೂ ಗವರ್ನ್‌ಮೆಂಟಿನವರು ಹೈ ಕೋರ್ಟಿನಲ್ಲಿ ಅಪೀಲ್ ಮಾಡುವವರಾಗಿದಾರೆ.

ಸಿಂಲಾ ಪಟ್ಟಣದಲ್ಲಿ ಪ್ರತಿಗಳಿಗೆಲ್ಲಾ ತಲೆಗೆ ೨ ರೂಪಾಯಿಯಂತೆ ವಾಯಿದಾನ ಗುಡಿಸುವ ತೆರಿಗೆಯನ್ನು ಹಾಕಿ ಪ್ರತಿಯೊಬ್ಬ ಗಂಡಸಿನಿಂದಲೂ ವಸೂಲ್ಮಾಡಬೇಕೆಂದು ಮ್ಯುನಿಸಿಪಾಲಿಟಿಯವರು ಗೊತ್ತುಮಾಡಿದಾರೆ. ಇದಲ್ಲದೆ ಅಲ್ಲಿ ನಾಯಿಗಳನ್ನು ಸಾಕುವವರು ೧ ನಾಯಿ ಇದ್ದರೆ ೩ ರೂಪಾಯಿ, ೨ ಕ್ಕೆ ೮ ರೂಪಾಯಿ, ೩ ಕ್ಕೆ ೧೫ ರೂಪಾಯಿ, ಮೂರಕ್ಕಿಂತ ಹೆಚ್ಚಾಗಿದ್ದರೆ ಒಂದೊಂದಕ್ಕೆ ೧೦ ರೂಪಾಯಿ, ಈ ರೀತಿ ತೆರಿಗೆ ಕೊಡಬೇಕೆಂದು ತೀರ್ಮಾನಮಾಡಿರುವರು. ಈ ತೆರಿಗೆಗಳು ೧೯೧೧ ನೇ ಜನವರಿಯಿಂದ ಜಾರಿಗೆ ಬರುತ್ತವೆ

* * *

ಅಲಹಾಬಾದಿನಲ್ಲೂ ಡಿಲ್ಲಿಯಲ್ಲೂ ಯಮುನಾ ನದಿಯ ಮೇಲೆ ರೈಲ್ವೆ ಸೇತುವೆಗಳು ಇರುತ್ತವೆ ಏಕ ಕಾಲದಲ್ಲಿ ಎರಡು ರೈಲ್ ಗಾಡಿಗಳು ಸಂಚರಿಸುವಂತೆ ಆ ಸೇತುವೆಗಳನ್ನು ಇನ್ನೂ ಅಗಲವಾಗಿ ಕಟ್ಟುವುದಕ್ಕೆ ೨೨॥ ಲಕ್ಷ ರೂಪಾಯಿ, ಆ ಪ್ರಾಂತ್ಯದಲ್ಲೇ ಇನ್ನು ಕೆಲವು ಸೇತುವೆಗಳ ಹಳೇ ಕಂಬಗಳನ್ನು ತೆಗೆದು ಹೊಸ ಕಂಬಗಳನ್ನು ಹಾಕುವುದಕ್ಕೆ ೧೮ ಲಕ್ಷ ರೂಪಾಯಿ, ಮಿರ್ಜಾಪುರದಿಂದ ಕಾಚರ್ನಾ ಸ್ಟೇಷನ್ ವರೆಗೆ ಜೋಡಿ ರೈಲ್ ಕಂಬಿಗಳನ್ನು ಹಾಕುವುದಕ್ಕೆ ೧೨ ಲಕ್ಷದ ೬೦ ಸಾವಿರ ರೂಪಾಯಿ ಸ್ಯಾಂಕ್ಷನ್ ಆಗಿದೆ.

* * *

ನಾಸಿಕ್ ಪಟ್ಟಣದಲ್ಲಿ ಮೆ॥ ಜಾಕ್ಸನ್‌ರವರನ್ನು ಕೊಲ್ಲುವುದಕ್ಕೆ ಸಹಾಯ ಮಾಡಿದನೆಂದು ಸಾವರ್ಕರ್ ಎಂಬವನನ್ನು ಲಂಡನ್ ಪಟ್ಟಣದಲ್ಲಿ ಪೋಲೀಸಿನವರು ದಸ್ತಗಿರಿ ಮಾಡಿ ಇಟ್ಟುಕೊಂಡಿದಾರಷ್ಟೆ ಅವನನ್ನು ಅಲ್ಲಿಂದ ಕರೆದುತರುವುದಕ್ಕೆ ಬೊಂಬಾಯಿ ಗವರ್ನ್‌ಮೆಂಟಿನವರು ಒಬ್ಬ ಪೋಲೀಸ್ ಸೂಪರಿಂಟೆಂಡೆಂಟರವರನ್ನೂ ಇಬ್ಬರು ಯೂರೋಪಿಯನ್ ಕಾನ್‌ಸ್ಟೆಬಲ್‌ಗಳನ್ನೂ ಬೊಂಬಾಯಿನಿಂದ ಸೀಮೆಗೆ ಕಳುಹಿಸಿಕೊಟ್ಟಿದಾರೆ ಪೂನಾ ಪಟ್ಟಣದಲ್ಲಿ ಕಳೆದ ವಾರ ಪೋಲೀಸಿನವರು ಈ ಮೊಕದ್ದಮೆಯಲ್ಲಿ ಇನ್ನಿಬ್ಬರನ್ನು ದಸ್ತಗಿರಿ ಮಾಡಿರುವರು

* * *

ವಾಯುವ್ಯ ಪ್ರಾಂತ್ಯಕ್ಕೆ ಸೇರಿದ ಪಿಷಾವರ್ ಪಟ್ಟಣದಲ್ಲೂ ಸುತ್ತುಮುತ್ತಲಲ್ಲೂ ಕಳೆದ ವಾರ ಹಿಂದು ಮುಸಲ್ಮಾನರಿಗೆ ಜಗಳ ಕದನಗಳು ನಡೆದವು ಎರಡು ಕಡೆಗಳಲ್ಲೂ ನಾಲ್ಕಾರು ಜನರು ಕೊಲೆಯಾದರು, ಹತ್ತಾರುಮಂದಿಗೆ ಗಾಯಗಳಾಗಿರುತ್ತವೆ ದಂಗೆಕೋರರು ಗುಂಪು ಸೇರಿ ಅಂಗಡಿ ಬೀದಿಗೆ ನುಗ್ಗಿ ಲೂಟಿ ಮಾಡಿದ್ದಲ್ಲದೆ ಸಾವಿರಾರು ರೂಪಾಯಿನ ಮಾಲುಗಳಿಗೆ ಬೆಂಕಿ ಹಾಕಿ ಸುಟ್ಟುಬಿಟ್ಟರು ಸೈನಿಕರು ಹೋಗಿ ಪಟ್ಟಣದ ಬೀದಿಗಳಲ್ಲೆಲ್ಲಾ ನಿಂತು ದೊಂಬಿಯನ್ನು ನಿಲ್ಲಿಸಿದರು ಪೋಲೀಸಿನವರು ನೂರಾರುಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ

* * *

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ರಾಧನ್‌ಪುರ ಸಂಸ್ಥಾನದ ನವಾಬರವರಿಗೆ ಚಿಕ್ಕ ವಯಸ್ಸಿನಲ್ಲೇ ಪಾರ್ಶ್ವವಾಯು ರೋಗವು ಪ್ರಾಪ್ತವಾಗಿ, ದೇಹಾರೋಗ್ಯವನ್ನು ಕ್ರಮಪಡಿಸಿಕೊಂಡು ಬರಬೇಕೆಂದು ಅವರು ವಿಲಾಯತಿಗೆ ಹೋದರು ಅಲ್ಲಿ ಅವರಿಗೆ ಸ್ವಲ್ಪ ವಾಸಿಯಾಯಿತು ತರುವಾಯ ಅವರು ಜಹಜು ಹತ್ತಿ ವಿಲಾಯತಿಯಿಂದ ಆಸ್ಟ್ರೇಲಿಯಾ ದ್ವೀಪಕ್ಕೆ ಹೋಗಬೇಕೆಂದು ಪ್ರಯಾಣ ಮಾಡುತ್ತಿರುವಲ್ಲಿ ಬುದ್ಧಿಭ್ರಮೆಯುಂಟಾಗಿ ಜಹಜಿನಿಂದ ಸಮುದ್ರಕ್ಕೆ ಹಾರಿಬಿದ್ದು ಸತ್ತುಹೋದರೆಂದು ವರ್ತಮಾನ ಬಂದಿದೆ ನವಾಬರಿಗೆ ಇನ್ನೂ ೨೪ ವರುಷ ವಯಸ್ಸಾಗಿತ್ತು

* * *

ಹಿಂದುಸ್ಥಾನ ಸರ್ವ ಸೇನಾಪತಿಯಾಗಿದ್ದು ಸೀಮೆಗೆ ಹೊರಟುಹೋಗಿರುವ ಲಾರ್ಡ್ ಕಿಚ್ನರ್‌ಯವರ ಹೆಸರನ್ನು ಹಿಂದುಸ್ಥಾನದಲ್ಲಿ ಶಾಶ್ವತಪಡಿಸಬೇಕೆಂದು ಚಂದಾ ಕೊಡಿಸಲ್ಪಟ್ಟದೆಯಷ್ಟೆ ಈ ಫಂಡಿಗೆ ೭೦ ಸಾವಿರ ರೂಪಾಯಿ ತನಕ ವಸೂಲಾಗಿದೆ ಈ ಫಂಡಿನ ಆಡಳಿತವನ್ನು ವಹಿಸಿಕೊಂಡಿರುವ ಕಮಿಟಿಯವರು ಲಾರ್ಡ್ ಕಿಚ್ನರ್‌ಯವರ ಲೋಹ ಪ್ರತಿಮೆಯನ್ನು ಅಶ್ವಾರೂಢರಾಗಿರುವ ಆಕೃತಿಯಲ್ಲಿ ಮಾಡಿಸಿ ತರಿಸಿ ಕಲ್ಕತ್ತಾ ಪಟ್ಟಣದ ಮೈದಾನಿನಲ್ಲಿ ನಿಲ್ಲಿಸಬೇಕೆಂದು ಗೊತ್ತುಮಾಡಿ, ಪ್ರತಿಮೆಯನ್ನು ಚನ್ನಾಗಿ ಎರಕಹೊಯಿದು ತಯಾರುಮಾಡತಕ್ಕ ಕಾರೇಗಾರರನ್ನು ಲಂಡನ್ ಪಟ್ಟಣದಲ್ಲಿ ಹುಡುಕಿಸುತ್ತಿದಾರೆ

* * *

ಅಲಹಾಬಾದ್ ಪಟ್ಟಣದಲ್ಲಿ ಭಗವತರಾಂ ಎಂಬೊಬ್ಬ ಬ್ಯಾರಿಸ್ಟರು ಕಳೆದ ೧೮೮೮ ನೇ ಇಸವಿಯಲ್ಲಿ ಸೀಮೆಯಿಂದ ವಾಪಸು ಬಂದು ಲಾಯರಾಗಿ ಮೊಕದ್ದಮೆಗಳನ್ನು ಹಿಡಿದು ವಾದಿಸುತ್ತಿದ್ದನು ಈಚೆಗೆ ಆತನು ವ್ಯಾಪಾರದಲ್ಲಿ ಬಿದ್ದು ಹನ್ನೆರಡು ವರುಷಗಳಿಂದ ವಕಾಲತ್ತು ನಡಿಸದೆ ಬಿಟ್ಟುಬಿಟ್ಟನು. ಈ ಸಮಾಚಾರವು ಆತನು ಸೀಮೆಯಲ್ಲಿ ಓದಿ ಡಿಗ್ರಿ ಹೊಂದಿದ ನ್ಯಾಯಶಾಸ್ತ್ರ ಬೋಧನಾ ವಿದ್ಯಾಶಾಲೆಯ ಅಧಿಕಾರಿಗಳಿಗೆ ತಿಳಿದು, ಅವರು ಆತನಿಗೆ ಕೊಟ್ಟಿದ್ದ ಸರ್ಟಿಫಿಕೇಟನ್ನು ರದ್ದು ಮಾಡಿದರು ಲಾಹೋರ್ ಮತ್ತು ಅಲಹಾಬಾದ್ ಹೈ ಕೋರ್ಟುಗಳ ಜಡ್ಜಿಗಳು ಆತನ ಹೆಸರನ್ನು ಲಾಯರುಗಳ ಪಟ್ಟಿಯಿಂದ ವಜಾಮಾಡಿಸುತ್ತಾರೆ

* * *

ಬಂಗಾಳಾ ಆಧಿಪತ್ಯದಲ್ಲಿ ರಾಜದ್ರೋಹಿಗಳನ್ನು ಪತ್ತೆಮಾಡುವುದಕ್ಕೆ ಸರ್ಕಾರದವರು ೧೯೦೬-೦೭ನೇ ಸಾಲಿನಲ್ಲಿ ೭೫,೦೦೦ ರೂಪಾಯನ್ನು ಖರ್ಚು ಮಾಡಿದರು ಚಾಲ್ತಿ ಸಾಲಿನಲ್ಲಿ ೨। ಲಕ್ಷ ರೂಪಾಯಿ ಖರ್ಚಾಗಬಹುದು. ಮತ್ತು ಮುಂದಿನ ವರುಷ ೩ ಲಕ್ಷವೂ ೧೯ ಸಾವಿರ ರೂಪಾಯಿ ಆದೀತೆಂದು ಅಂದಾಜು ಕಟ್ಟಿದಾರೆ ಇದಲ್ಲದೆ ಪೋಲೀಸಿನವರಿಗೆ ೧,೭ ಪಿಸ್ತೂಲುಗಳನ್ನು ತರಿಸಿಕೊಡುವುದಕ್ಕೆ ೫,..೦೦ ರೂಪಾಯಿ ಖರ್ಚು ಮಾಡುವರು ಅಪರಾಧಿಗಳನ್ನು ಹಿಡಿದು ಮೊಕದ್ದಮೆ ಮಾಡುವುದಕ್ಕೆ ಸಾವಿರಾರು ರೂಪಾಯಿ ಖರ್ಚಾಗುವುದು ರಾಜದ್ರೋಹಾಪವಾದವು ಈ ರಾಷ್ಟ್ರಕ್ಕೆ ನಿವಾರಣೆಯಾಗುವ ತನಕ ಸರ್ಕಾರದವರು ಈ ರೀತಿ ಹಣವನ್ನು ಖರ್ಚು ಮಾಡಬೇಕಾಗಿದೆ.

* * *

ಸಂಯುಕ್ತ ಆಧಿಪತ್ಯಗಳಲ್ಲಿ ಸಂಚರಿಸುವಂಥಾ ರೈಲುಗಾಡಿಗಳೊಳಗೆ ಪ್ರಯಾಣಿಕರಿಗೆ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಟ್ಟು ಸಹಾಯಮಾಡುವುದಕ್ಕೋಸ್ಕರ ರೈಲ್ ಕಂಪನಿಯವರು ದೇಶೀಯ ಸೈನ್ಯದ ಪೆನ್‌ಷನ್ ಹುದ್ದೆದಾರರನ್ನು ನೇಮಕಮಾಡಲಾರಂಭಿಸಿದಾರೆ ಸ್ಟೇಷನ್‌ಗಳಲ್ಲಿ ಇವರು ಇದ್ದುಕೊಂಡು ಹೆಚ್ಚು ಜನರು ಗಾಡಿಗಳಲ್ಲಿ ತುಂಬಿಕೊಂಡು ತೊಂದರೆಪಡದಂತೆ ನೋಡಿಕೊಳ್ಳುವರು ಪ್ರಯಾಣಿಕರನ್ನು ವಿಚಾರಿಸಿ ಅವರು ಹತ್ತಬೇಕಾದ ರೈಲ್‌ಗಾಡಿಗಳು ಇಂಥವೆಂದು ಹೇಳಿಕೊಡುತ್ತಾರೆ. ರೈಲ್ ಸ್ಟೇಷನ್‌ಗಳಲ್ಲಿ ಪ್ರಯಾಣಿಕರಿಗೆ ಯಾವ ತೊಂದರೆಯೂ, ಅನಾನುಕೂಲವೂ, ನಷ್ಟವೂ ಪ್ರಾಪ್ತವಾಗದಂತೆ ಉಸ್ತುವಾರಿಮಾಡುವರು. ಈ ಹುದ್ದೆದಾರರು ಸೈನ್ಯದ ದಿರಸನ್ನು ಹಾಕಿಕೊಂಡು ಬಿರುದಿನ ಬಿಲ್ಲೆಗಳನ್ನು ಕಟ್ಟಿಕೊಂಡು ಸ್ಟೇಷನ್‌ಗಳಲ್ಲಿ ಕಾದಿರುತ್ತಾರೆ. ಇವರಿಗೆ ತಲಾ ೧೦೫ ರೂಪಾಯಿ ತಲಬು ಸಲ್ಲುವುದು ; ಇಂಥವರು ೨೫ ಮಂದಿ ಇದುವರೆಗೆ ನೇಮಕಮಾಡಿದಾರೆ.

* * *

ಬ್ರಿಟಿಷ್ ಗವರ್ನ್‌ಮೆಂಟಿಗೂ ಹಿಮಾಚಲ ಪರ್ವತದ ತಪ್ಪಲಲ್ಲಿರುವ ಭೂತಾನ್ ಸಂಸ್ಥಾನದ ಮಹಾರಾಜರವರಿಗೂ ಕಳೆದ ೧೯೬೫ನೇ ಇಸವಿ ನವಂಬರ್ ತಾ ೧೧ ರಲ್ಲಿ ನಡೆದಿರುವ ಕರಾರನ್ನು ಕಳೆದ ವಾರ ಬದಲಾವಣೆ ಮಾಡಿದರು. ಬದಲಾವಣೆಯಾಗಿರುವ ಎರಡು ಕಲಮುಗಳ್ಯಾವವೆಂದರೆ,—ಬ್ರಿಟಿಷ್ ಗವರ್ನ್‌ಮೆಂಟಿನವರು ಪ್ರತಿ ವರುಷವೂ ಕೊಡುತ್ತಾ ಬಂದಿರುವ ೫೦,೦೦೦ ರೂಪಾಯಿಗೆ ಪ್ರತಿಯಾಗಿ ೧೯೧೦ನೇ ಜನವರಿ ತಾ. ೧೦ರ ಲಾಗಾಯಿತು ಒಂದು ಲಕ್ಷ ರೂಪಾಯನ್ನು ಭೂತಾನ್ ಮಹಾರಾಜರವರಿಗೆ ಪಾವತಿಮಾಡತಕ್ಕದ್ದು. ಭೂತಾನ್ ಸಂಸ್ಥಾನದ ಸ್ಥಳೀಯ ವಿಚಾರಗಳಲ್ಲಿ ಇಂಗ್ಲಿಷ್ ಗವರ್ನ್‌ಮೆಂಟಿನವರು ಪ್ರವರ್ತಿಸುವುದಿಲ್ಲ, ಮತ್ತು ಭೂತಾನಿಗೂ ಸಿಖಿಂ ಮತ್ತು ಕೂಚ್ ಬೀಹಾರ್ ಸಂಸ್ಥಾನಗಳಿಗೂ ವಿವಾದಗಳೇನಾದರೂ ಹುಟ್ಟಿದರೆ ಇಂಗ್ಲಿಷರೇ ವಿಚಾರಣೆ ಮಾಡಿ ನ್ಯಾಯವಾಗಿ ತೀರ್ಮಾನ ಹೇಳುವುದಕ್ಕೆ ಭೂತಾನ್ ಮಹಾರಾಜರವರು ಒಪ್ಪಿ ಆ ರೀತಿ ನಡೆದುಕೊಳ್ಳಬೇಕು.

* * *

ನಾಯಿ ನರಿ ಮೊದಲಾದ ಪ್ರಾಣಿಗಳು ಕಡಿದರೆ ಚಿಕಿತ್ಸೆ ಮಾಡುವಂಥಾ ಕಸೌಲಿ ಪಟ್ಟಣದ ಆಸ್ಪತ್ರೆಗೆ ದೇಶೀಯ ರೋಗಿಗಳು ಹೋದರೆ ಅಲ್ಲಿ ತಂಗುವುದಕ್ಕೆ ಸರಿಯಾದ ಮನೆಗಳು ಇರುವುದಿಲ್ಲ. ಈ ಲೋಪವನ್ನು ಹೋಗಲಾಡಿಸಿ ಕೆಲವು ವಸತಿಯಾದ ಸಾಲು ಮನೆಗಳನ್ನು ಧರ್ಮಾರ್ಥವಾಗಿ ಕಟ್ಟಿಸಬೇಕೆಂದು ಒಂದು ಫಂಡು ಏರ್ಪಡಾಗಿದೆ ಇದಕ್ಕೆ ಬೇಕಾಗಿರುವ ೫೦ ಸಾವಿರ ರೂಪಾಯಿನ ಪೈಕಿ ೨೭ ಸಾವಿರ ರೂಪಾಯಿ ಚಂದಾ ಕೊಡಿರುವುದು. ಗ್ವಾಲಿಯರ್ ಸಂಸ್ಥಾನದ ಮಹಾರಾಜಾ ಸಿಂಧಿಯಾರವರು ಈ ಫಂಡಿಗೆ ೧೨,೦೦೦ ರೂಪಾಯನ್ನು ಕಳುಹಿಸಿರುತ್ತಾರೆ ಇದಲ್ಲದೆ ಕಲ್ಕತ್ತಾ ಪಟ್ಟಣದ ಬಾಬು ಈಶ್ವರ ಚಂದ್ರಘೋಸ್ ಎಂಬಾತನು ತನ್ನ ಹೆಂಡತಿಯ ಹೆಸರಿನ ಮೇಲೆ ಈ ಆಸ್ಪತ್ರೆಯಲ್ಲಿ ಒಂದು ಮನೆಯನ್ನು ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿರುತ್ತಾನೆ ಬಂಗಾಳದಿಂದ ಕಾಯಿಲೆಯಾಗಿ ಅಲ್ಲಿಗೆ ಹೋಗುವಂಥಾ ಹಿಂದುವಿಗೆ ಆ ಮನೆಯನ್ನು ಇಳುಕೊಳ್ಳುವುದಕ್ಕೆ ಬಿಟ್ಟುಕೊಡಬೇಕೆಂದು ಸಂಕಲ್ಪ ಮಾಡಿರುವನು.

* * *

ಪಿಷಾವರ್ ಪಟ್ಟಣದ ಹೊರಪಾರ್ಶ್ವದಲ್ಲಿ ಡಾಕ್ಟರ್ ಸ್ಪೂನರ್‌ಯವರು ಸುಮಾರು ಎರಡು ವರುಷಗಳಿಂದ ಭೂಮಿಯನ್ನು ಶೋಧನೆಮಾಡಿ, ಎರಡು ಸಾವಿರ ವರುಷಗಳ ಹಿಂದೆ ಚಕ್ರವರ್ತಿ ಕಾನಿಷ್ಕನಿಂದ ಭೂಸ್ಥಾಪನೆಮಾಡಲ್ಪಟ್ಟಿದ್ದ ಬುದ್ಧನ ಅಸ್ತಿಯ ಒಂದು ಅಂಶವನ್ನು ಕಂಡುಹಿಡಿದು ಹೊರಕ್ಕೆ ತಂದರು. ಈ ಅಸ್ತಿಯನ್ನು ಎಲ್ಲಿ ಇಡಬೇಕೆಂಬ ವಿಷಯದಲ್ಲಿ ಕೆಲವು ಕಾಲದಿಂದ ಚರ್ಚೆಯಾಗುತ್ತಿತ್ತು ಹಿಂದುಸ್ಥಾನ, ಸಿಲೋನ್ ದ್ವೀಪ, ಬರ್ಮಾ, ಚೀನಾ, ಜಪಾನ್, ಈ ಮೊದಲಾದ ಕಡೆಗಳಲ್ಲಿರುವ ಬೌದ್ಧ ಮತಸ್ಥರು ಅದನ್ನು ತಮಗೆ ಕೊಡಬೇಕೆಂದು ಕೇಳಿಕೊಂಡರು ಇಂಡಿಯಾ ಗವರ್ನ್‌ಮೆಂಟಿನವರು ಪರ್ಯಾಲೋಚನೆ ಮಾಡಿ ಆ ಅಸ್ತಿಯನ್ನು ಬೌದ್ಧಮತಸ್ಥರು ವಿಶೇಷವಾಗಿರುವಂಥಾ ಬರ್ಮಾ ಆಧಿಪತ್ಯಕ್ಕೆ ವಹಿಸುವುದೇ ಸಹಜವೆಂದು ತೀರ್ಮಾನಮಾಡಿದರು ಆ ಆಧಿಪತ್ಯದ ಬೌದ್ಧಪ್ರಜಾ ಮುಖಂಡರೂ ರಾಜವಂಶೀಯರೂ ಗುರುಕುಲದವರೂ ಲೆಫ್ಟಿನೆಂಟ್ ಗವರ್ನರವರ ಕೂಡ ಕಳೆದ ವಾರ ಕಲ್ಕತ್ತಾ ಪಟ್ಟಣಕ್ಕೆ ಬಂದು, ಗವರ್ನ್‌ಮೆಂಟ್ ಹೌಸ್ ಎಂಬ ಭವನದಲ್ಲಿ ವೈಸ್‌ರಾಯಿ ಪ್ರಭುಗಳ ಭೇಟಿಮಾಡಿ, ಅವರು ದರ್ಬಾರಿನಲ್ಲಿ ಉಪನ್ಯಾಸಪೂರ್ವಕವಾಗಿ ವಹಿಸಿಕೊಟ್ಟ ಆ ಅಸ್ತಿಯುಳ್ಳ ಕೈ ಪೆಟ್ಟಿಗೆಯನ್ನು ತೆಗೆದುಕೊಂಡು, ವೈಸ್‌ರಾಯಿಯವರನ್ನು ಕೃತಜ್ಞತಾಪೂರ್ವಕವಾಗಿ ವಂದಿಸಿ, ಜಹಜು ಹತ್ತಿ ಮಾಂಡಲೇ ಪಟ್ಟಣಕ್ಕೆ ಹಿಂತಿರುಗಿದರು. ಅಲ್ಲಿ ಕಟ್ಟಲ್ಪಡುವ ಬಹು ಅಮೂಲ್ಯವಾದ ಬೌದ್ಧ ಆಲಯದಲ್ಲಿ ಆ ಅಸ್ತಿಯನ್ನಿಟ್ಟು ಪ್ರತಿಷ್ಠೆ ಮಾಡುತ್ತಾರೆಂದು ತಿಳಿಯಬಂದಿದೆ

* * *

ಟಿಬೆಟ್ ದೇಶದ ಬೌದ್ಧ ಮಹಾ ಗುರುವಾದ ದಲಾಯಿ ಲಾಮಾರವರು ಚೀನೆಯವರಿಂದ ತಮ್ಮ ಪದವಿಗೆ ಚ್ಯುತಿಯುಂಟಾಗಿರುವುದನ್ನು ಮಧ್ಯಸ್ಥಿಕೆ ಮಾಡಿ ನಿವಾರಣೆ ಮಾಡಿಕೊಡಬೇಕೆಂದು ಇಂಗ್ಲಿಷ್ ಮತ್ತು ರಷ್ಯಾ ಗವರ್ನ್‌ಮೆಂಟುಗಳಿಗೆ ಬರೆದು ಕೇಳಿದರು ಈ ವಿಚಾರವಾಗಿ ಇಂಗ್ಲಿಷ್ ಗವರ್ನ್‌ಮೆಂಟಿನವರು ಚೀನಾ ಸರ್ಕಾರಕ್ಕೆ ಬರೆದದ್ದರಲ್ಲಿ ಅವರು ಟಿಬೆಟ್ಟಿನ ರಾಜಕೀಯ ವಿಚಾರಗಳನ್ನು ಕ್ರಮಪಡಿಸಿ ತಮ್ಮ ಸಾರ್ವಭೌಮ ಅಧಿಕಾರವನ್ನು ಕಾಪಾಡುವುದಕ್ಕಾಗಿ ಪ್ರಯತ್ನಪಟ್ಟದ್ದಾಗಿಯೂ, ದಲಾಯಿ ಲಾಮಾರವರ ಅಧಿಕಾರವನ್ನಾಗಲಿ ಟಿಬೆಟ್ಟಿನ ಒಳಾಡಳಿತ ಕಾರುಬಾರುಗಳನ್ನಾಗಲಿ ಸ್ವಲ್ಪವೂ ಬದಲಾವಣೆ ಮಾಡಬೇಕೆಂದಿಲ್ಲವೆಂದೂ ಜವಾಬು ಕೊಟ್ಟರು. ರಷ್ಯಾ ಗವರ್ನ್‌ಮೆಂಟಿನವರೂ ಕೂಡ ದಲಾಯಿ ಲಾಮಾರವರ ವಿಷಯದಲ್ಲಿ ಚೀನಾಕ್ಕೆ ಸಾಮಾನ್ಯವಾದ ರೀತಿಯಲ್ಲಿ ಬರೆದಿರುತ್ತಾರೆ ಇಂಗ್ಲಿಷರಾಗಲಿ ರಷ್ಯಾದವರಾಗಲಿ ಲಾಮಾರವರ ಪಕ್ಷವನ್ನು ಹಿಡಿದು ಅವರಿಗೆ ಆ ಪದವಿಯನ್ನು ಕೊಡಿಸಿಕೊಟ್ಟೇ ತೀರುತ್ತೇವೆಂದು ಮಾತು ಕೊಡಲಿಲ್ಲ ಇತ್ತಲಾಗಿ ದಲಾಯಿ ಲಾಮಾರವರು ಪರಿವಾರ ಸಮೇತ ಡಾರ್ಜಿಲಿಂಗ್ ಪಟ್ಟಣದ ಹೋಟೆಲಿನಲ್ಲಿದ್ದುಕೊಂಡು ಇಂಗ್ಲಿಷ್ ಗವರ್ನ್‌ಮೆಂಟಿನವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ ಇವರು ಹೊರಟುಬಂದ ಈಚೆಗೆ ಇವರ ಶಿಷ್ಯವರ್ಗಕ್ಕೆ ಸೇರಿದ ಇನ್ನೂ ಕೆಲವು ಮಂದಿ ಲಾಸಾ ಪಟ್ಟಣದಿಂದ ಭೂತಾನ್ ಸಂಸ್ಥಾನದ ಮೇಲೆ ಹಾಸಿ ಬಕ್ಸಾದುವಾರ್ ಎಂಬ ಇಂಗ್ಲಿಷ್ ಠಾಣ್ಯಕ್ಕೆ ಬಂದುಬಿಟ್ಟರು ಇಂಗ್ಲಿಷ್ ಅಧಿಕಾರಿಗಳು ಇವರನ್ನೆಲ್ಲಾ ಅಲ್ಲಿಂದ ಡಾರ್ಜಿಲಿಂಗ್ ಪಟ್ಟಣಕ್ಕೆ ಲಾಮಾರವರ ಬಳಿಗೆ ಕಳುಹಿಸಿಕೊಟ್ಟಿದಾರೆ. ಅತ್ತಲಾಗಿ ಕರ್ನಲ್ ವಡ್ಡೆಲ್ ಎಂಬೊಬ್ಬ ಪ್ರಾಚೀನ ಲಿಪ್ಯನ್ವೇಷಕನು—ಇಂಗ್ಲಿಷ್ ಗವರ್ನ್‌ಮೆಂಟಿನವರು ದಲಾಯಿ ಲಾಮಾರವರಿಗೆ ಅವರ ಸ್ಥಾನವನ್ನು ಕೊಡಿಸಿಕೊಡಬೇಕಾದದ್ದು ಅಗತ್ಯ. ಚೀಣಿಯವರು ಲಾಮಾರವರನ್ನು ಪದಭ್ರಷ್ಟರನ್ನಾಗಿ ಮಾಡಿದ್ದಾಗ್ಯೂ ಲಾಮಾರವರು ಬೌದ್ಧಮತಸ್ಥರಿಗೆಲ್ಲಾ ಬಹು ವಿಶೇಷವಾದ ಗುರುವಾಗಿರುತ್ತಾರೆ ಬೌದ್ಧರು ಅವರನ್ನು ಸಾಕ್ಷಾತ್ತಾದ ಬುದ್ಧನೆಂದೇ ಭಾವಿಸಿಕೊಂಡಿರೋಣವರಿಂದ ಇಂಗ್ಲಿಷರು ಇಂಥಾ ಮಹಾ ಗುರುವಿನ ಪಕ್ಷವನ್ನು ವಹಿಸಿ ಅವರಿಗೆ ಅವರ ರಾಜ್ಯವನ್ನೂ ಸ್ಥಾನವನ್ನೂ ಕೊಡಿಸಿಕೊಡಬೇಕು ಎಂಬದಾಗಿ ಬರೆದಿರುತ್ತಾನೆ.

ಹಬ್ಬಗಳಿಂದ ಮಾಡುವ ಪುಂಡಾಟಗಳೂ ಕೋತಿ ಚೇಷ್ಟೆಗಳೂ

ಗತಿಸಿದ ಶ್ರೀಮನ್ಮಹಾರಾಜ್ಞೀಯವರ ೧೮೫೭ ನೇ ಇಸವಿಯ ಇಸ್ತಿಹಾರಿನ ಅರ್ಥವನ್ನು ಚನ್ನಾಗಿ ಮಾಡಿಕೊಳ್ಳದೆ ಹಿಂದೂಗಳೂ ಮುಸಲ್ಮಾನರೂ ತಮ್ಮ ಹಬ್ಬಗಳ ಪ್ರಯುಕ್ತವೆಂಬ ನೆಪವನ್ನಿಟ್ಟುಕೊಂಡು ಮಾಡುತ್ತಿರುವ ಪುಂಡಾಟಗಳೂ ಕೋತಿ ಚೇಷ್ಟೆಗಳೂ ಮತಸಂಬಂಧವಾದ ಕೃತ್ಯಗಳೆಂದೆಣಿಸಿ ಆಳುವವರು ಅವುಗಳ ನಿರೋಧಕ್ಕಾಗಿ ಪ್ರವೇಶಿಸದೆ ಇರುತ್ತಾರೆಂದು ಊಹಿಸುವದಕ್ಕೆ ಕಾಮನ ಹಬ್ಬ ಮೊಹರಂ ಹಬ್ಬಗಳಲ್ಲಿ ನಡೆಯುತ್ತಿರುವ ಅಸಹನೀಯವಾದ ಚೇಷ್ಟೆಗಳ ವಿಚಾರದಲ್ಲಿ ಯಾವ ನಿಷೇಧವನ್ನೂ ಎಣಿಸುವದಕ್ಕೆ ಮನಸ್ಸನ್ನು ಕೊಡದೇ ಇರುವದೇ ಕಾರಣವಾಗಿರುತ್ತದೆ ಹಿಂದೂಗಳಲ್ಲಿ ಈ ಹಬ್ಬವನ್ನಾಚರಿಸುವರು ಅಂದರೆ ಹೋಳಿಗೆ ಪಾಯಸವನ್ನು ಮಾಡಿಕೊಂಡು ಬ್ರಾಹ್ಮಣರು ಅಥವಾ ತಮ್ಮ ಜನರನ್ನು ಭೋಜನಕ್ಕೆ ಕರೆದು ಇತರ ಹಬ್ಬಗಳಂತೆ ಆಚರಿಸುವವರು ದೇಶಸ್ಥ ಬ್ರಾಹ್ಮಣರು ಮುಖ್ಯರಾಗಿ ಇದ್ದಾರೆ ಇತರರಲ್ಲಿ ಕೆಲವರು ಮಾತ್ರ ಇದರಂತೆ ನಡೆಯುವರು ದೇಶಸ್ಥರಲ್ಲೂ ಮೊದಲಿನಿಂದ ಬಂದಿರುವ ವಾಡಿಕೆಯು ಮಧ್ಯಾಹ್ನದಲ್ಲಿ ತಮ್ಮ ಮನೆಗಳ ಅಂಗಳಗಳಲ್ಲಿ ಸ್ವಲ್ಪ ಬೆರಣಿಗಳಿಂದ ರಾಶಿಯನ್ನು ಮಾಡಿ ಅದರ ಮೇಲೆ ಒಂದು ಹೋಳಿಗೆಯನ್ನೂ ಕಾಮನ ಭಾವಚಿತ್ರವನ್ನೂ ಇಟ್ಟು ದಹನ ಮಾಡಿ ಬಾಯಿ ಬಡಿದುಕೊಳ್ಳುವದಾಗಿ ಇದೆ ಇದನ್ನೂ ಯಾವ ಆಧಾರದ ಮೇಲೆ ಮಾಡುತ್ತಿರುವರೋ ನನಗೆ ತಿಳಿಯದು ಅದನ್ನು ತಮ್ಮ ಪತ್ರಿಕೆಯ ಮೂಲಕ ಯಾರಾದರೂ ಪ್ರಕಟಪಡಿಸಿದರೆ ನಾನು ಬಹಳ ಕೃತಜ್ಞನಾಗಿರುವೆನು ಆದರೆ ಹಬ್ಬವನ್ನು ಮಾಡುವವರ ಮತ್ತು ಮಾಡದವರ ಮನೆಯ ಹುಡುಗರೂ ಅನೇಕ ಲಜ್ಜಾಹೀನರಾದ ಯೌವನಸ್ಥರೂ ಸಹಾ ಕಾಮನ ಹಬ್ಬಕ್ಕೆ ಎಂಟು ದಿವಸಗಳ ಮುಂಚೆಯಿಂದಲೂ ಕಿವಿಯಲ್ಲಿ ಕೇಳಕೂಡದ ದುರ್ಭಾಷೆಗಳನ್ನು ನಾಚಿಕೆಯಿಲ್ಲದೆ ಮಾನಿತರಾದ ಸ್ತ್ರೀ ಪುರುಷರು ವಾಸಮಾಡುವ ಬೀದಿಗಳಲ್ಲಿ ಘಟ್ಟಿಯಾಗಿ ಪ್ರಯೋಗಿಸುತ್ತಾ ತಿರುಗುತ್ತಾ ಮೊಸರಿನವರೂ ಬೆಣ್ಣೆಯವರೂ ಗೌಡೆಯವರೂ ದಾರಿಯಲ್ಲಿ ಸಂಚರಿಸುವಾಗ ಅವರಿಗೆ ನಾನಾ ವಿಧಗಳಾದ ತೊಂದರೆಗಳನ್ನು ಮಾಡುತ್ತಲೂ ಇರುವದಲ್ಲದೆ ಬದುಕಿ ಇರುವವರನ್ನು ಸಹಾ ಅವರ ಹೆಸರುಗಳನ್ನು ಹೇಳಿ ಅವರು ಸತ್ತರು ಎಂದು ಅವರ ಮೇಲೆ ಬಡ್ಡು ಬಾಯನ್ನು ಬಡಿದುಕೊಳ್ಳುತ್ತಲೂ, ಬದುಕಿ ಇರುವವರನ್ನು ಹೆಣವನ್ನು ಮಲಗಿಸಿದಂತೆ ಚಟ್ಟದ ಮೇಲೆ ಮಲಗಿಸಿಕೊಂಡು ಹೊತ್ತುಕೊಂಡು ಹೋಗುತ್ತಾ ಹಿಂದೆ ಮುಂದೆ ಬಾಯಿ ಬಡಿದುಕೊಳ್ಳುತ್ತಾ ಹೋಗುತ್ತಲೂ, ಕಾಮದಹನದ ದಿವಸ ಅಲ್ಲಲ್ಲಿ ಸಂಸಾರಿಕರು ಮನೆಮಠಗಳನ್ನು ಕಟ್ಟಿಕೊಳ್ಳುವದಕ್ಕೆ ಶೇಖರಿಸಿಕೊಂಡಿರುವ ತೊಲೆ ಜಂತೆ ಗರಿ ಮುಂತಾದವುಗಳನ್ನು ಹೊತ್ತುಕೊಂಡು ಹೋಗಿ ಬೆಂಕಿಯಲ್ಲಿ ಹಾಕುತ್ತಲೂ, ಮಾರನೇ ದಿವಸ ಎಲ್ಲರ ಮೇಲೆ ಬೂದಿಯನ್ನು ಚೆಲ್ಲುತ್ತಲೂ, ಕತ್ತೆಗಳ ಮೇಲೆ ಕುಳಿತು ಸವಾರಿಯನ್ನು ಮಾಡುತ್ತಲೂ, ಆಬಳಿಕ ಕೆಲವು ದಿನಗಳು ಅವರವರ ವಿರಾಮಾನುಸಾರ ಗುಲಾಲು ಆಡುತ್ತೇವೆಂದು ಬೀದಿಯಲ್ಲಿ ಶುಭ್ರವಾದ ಬಟ್ಟೆಗಳನ್ನು ಧರಿಸಿಕೊಂಡು ಹೋಗುತ್ತಿರುವವರ ಮೇಲೆ ಪಿಚಕಾರಿಗಳಿಂದ ಹೊಡೆದು ಆ ಬಟ್ಟೆಗಳನ್ನು ಕೆಡಿಸುತ್ತಲೂ, ತಮ್ಮ ಸಂಗಡ ಅತ್ಯಂತ ಲಜ್ಜಾಸ್ಪದವಾದ ರೀತಿಯಲ್ಲಿ ವರಾಂಗನೆಯರನ್ನು ಕರೆದುಕೊಂಡು ಓಡಾಡುತ್ತಾ ಇರುವರು ಇನ್ನೂ ಇವರು ಮಾಡುವ ಚೇಷ್ಟೆಗಳು ಎಷ್ಟೋ ಇವೆ ಬರೆಯುವದಕ್ಕೆ ನನಗೆ ಬೇಜಾರಾಗುತ್ತದೆ ಮೊಹರಂನಲ್ಲಂತೂ ನಡೆಯುವ ಚೇಷ್ಟೆಗಳು ವರ್ಣಿಸಬೇಕಾದದ್ದೇ ಇಲ್ಲ ಈ ಹಬ್ಬಗಳಲ್ಲಿ ಮುಸಲ್ಮಾನರು ಕುಣಿದಾಡುವದು ಸಾಲದೆ ಹಿಂದೂಗಳು ಲಾಡಿಗಳನ್ನು ಹಾಕಿಕೊಳ್ಳೋಣ, ವೇಷಗಳನ್ನು ಹಾಕಿಕೊಳ್ಳೋಣ ಮತ್ತೂ ಹೆಚ್ಚಾಗಿದೆ ಈ ಎರಡು ಹಬ್ಬಗಳಲ್ಲೂ ಸರಕಾರದವರು ಮಾಡಿರುವ ನಿರ್ಬಂಧವು ಲೈಸೆನ್ಸು ಪಡೆಯಬೇಕೆಂಬುವದು ಮಾತ್ರವೇ ಇದರಿಂದ ಏನಾದ ಹಾಗೆ ಆಯಿತು ? ಪುಂಡಾಟಗಳನ್ನೂ ಕಪಿಚೇಷ್ಟೆಗಳನ್ನೂ ಮಾಡುವ ಸ್ವಾತಂತ್ರ್ಯವನ್ನು ಸರ್ಕಾರದಿಂದ ಕೊಂಡುಕೊಂಡ ಹಾಗ ಆಯಿತು ಹಾಗಾದ ಮೇಲೆ ಪ್ರಜಾನೆಮ್ಮದಿಗೆ ವಿರೋಧವಾದ ಕೃತ್ಯಗಳನ್ನು ಲೈಸೆನ್ಸು ಪಡೆದು ಮಾಡಿದಲ್ಲಿ ಅಪರಾಧವಲ್ಲವೆಂದು ಒಂದು ವಿನಾಯತಿಯನ್ನು ಪೆನಲ್ ಕೋಡಿನಲ್ಲಿ ಸೇರಿಸೋಣ ಉತ್ತಮವಲ್ಲವೇ ? ಸ್ವರ್ಗದಲ್ಲಿ ಸುಖದಲ್ಲಿರುವ ನಮ್ಮ ಶ್ರೀ ಮಹಾರಾಜ್ಞೀಯವರ ಅಭಿಪ್ರಾಯ ಹೀಗೆ ಎಂದಿಗೂ ಇರಲಾರದು ಪ್ರಜೆಗಳಿಗೆ ಅಸಹ್ಯ, ತೊಂದರೆ, ವ್ಯಥೆ ಮುಂತಾದವುಗಳನ್ನು ಯಾವ ಕಾರಣದಿಂದಲಾದರೂ ಯಾರು ಮಾಡಿದರೂ ಅದನ್ನು ಅಟಂಕಪಡಿಸುವದು ಮುಖ್ಯವಾಗಿ ಸರಕಾರದವರ ಕೆಲಸವಾಗಿರುತ್ತೆ ಹಾಗೆ ಮಾಡದೆ ಇದ್ದರೆ ಅನರ್ಥಗಳು ತಪ್ಪಲಾರವು ಈಗಲಾದರೂ ಕಾಮನ ಹಬ್ಬವನ್ನು ಯಾವ ರೀತಿಯಲ್ಲಾದರೂ ತಮ್ಮ ತಮ್ಮ ಮನೆಗಳಲ್ಲಿ ಮಾಡಿಕೊಳ್ಳುವಂತೆಯೂ, ಪಂಜಾಗಳೂ ತಾಬೂತುಗಳೂ ಮುಸಲ್ಮಾನರ ಅಸುರಖಾನೆಗಳಲ್ಲಿ ಇಟ್ಟು ಆರಾಧಿಸಿಕೊಳ್ಳುವಂತೆಯೂ, ಕತಲ್‌ರಾತ್ರಿನ ದಿವಸ ಮತ್ತು ಪುಣ್ಯಗಳ ದಿವಸಗಳಲ್ಲಿ ಮಾತ್ರ ಬೀದಿಯಲ್ಲಿ ಇವು ಲೈಸೆನ್ಸು ಪಡೆದು ಮೆರವಣಿಗೆ ಮಾಡಲ್ಪಡಬಹುದೆಂತಲೂ, ಯಾವ ನೆಪದಿಂದಲೂ ಇತರ ಯಾವ ವಿಧವಾದ ವೇಷಗಳನ್ನೂ ಹಾಕಿಕೊಂಡು ಚೇಷ್ಟೆಗಳನ್ನು ಮಾಡಕೂಡದೆಂತಲೂ ಖಂಡಿತವಾಗಿ ಕಾನೂನ್ ಮಾಡಿ ಜನರ ಮಾನಗಳನ್ನೂ ಸ್ವತ್ತುಗಳನ್ನೂ ಕಾಪಾಡುವ ಭಾರವು ನಮ್ಮ ಅರಸರಿಗೆ ತಪ್ಪಿದ್ದಲ್ಲವೆ

ಅಕಾರ್ಯಾಸಹಿಷ್ಣು

ರೈತರು ಗಮನಿಸಬೇಕಾದ ವಿಷಯಗಳು.

೧ ಬಾಳೆ ಫಸಲು

ಮದ್ರಾಸು ಅಧಿಪತ್ಯದ ದಕ್ಷಿಣಭಾಗದಲ್ಲಿ ತರಿ ಮತ್ತು ಬಾಗಾಯತು ಜಮೀನುಗಳಲ್ಲಿ ಬಾಳೇ ಗಿಡವನ್ನು ವಿಶೇಷವಾಗಿ ಬೆಳೆಯುತ್ತಾರೆ ಹಾಗೆಯೇ ಮೈಸೂರು ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ಬೆಳೆಯುತ್ತಿದ್ದರೂ ಅದರಿಂದ ಮದ್ರಾಸಿನವರಷ್ಟು ಪ್ರಯೋಜನವನ್ನು ಇಲ್ಲಿನವರು ಪಡೆಯುವುದಿಲ್ಲ ಆ ದೇಶದಲ್ಲಿ ಬಾಳೆಯು ಗೊನೆಹಾಕಿ ಕಾಯಿ ಬಿಟ್ಟಕೂಡಲೆ ಹೂವನ್ನು ಕಡಿದು ಹಾಕುವ ವಾಡಿಕೆಯುಂಟು ಹೀಗೆ ಹೂವನ್ನು ಕಡಿದುಹಾಕುವುದರಿಂದ ಕಾಯಿಗಳು ದಪ್ಪನಾಗಿ ಆಗುತ್ತವೆಂದು ಅಲ್ಲಿನವರು ನಂಬುತ್ತಾರೆ ಹೂವು ಕೂಡ ಬಹು ರುಚಿಯಾದ ತರಕಾರಿಯಾಗಿರುವುದು ದೇಹಕ್ಕೂ ಆರೋಗ್ಯಕರವಾದದ್ದು ಆದರೆ ಈ ದೇಶದಲ್ಲಿ ಗೊನೆ ಬಲಿಯುವ ತನಕ ಹೂವನ್ನು ತೆಗೆಯುವುದಿಲ್ಲ ಹೂವನ್ನು ಮೊದಲೇ ಕಡಿದರೆ ಕಾಯಿ ಕೆಟ್ಟುಹೋಗುವುದೆಂದು ಇಲ್ಲಿನವರು ಹೇಳುತ್ತಾರೆ ಮೇಲೆ ಹೇಳಿರುವ ಎರಡು ವಿಷಯಗಳನ್ನೂ ಪರೀಕ್ಷಿಸುವುದು ಅವಶ್ಯವಾಗಿರುತ್ತದೆ

೨ ಗೆಡ್ಡೆ ಗೆಣಸುಗಳು

ಗೆಡ್ಡೆ ಗೆಣಸುಗಳು ನೋಡುವುದಕ್ಕೆ ಗಾತ್ರವಾಗಿದ್ದ ಮಾತ್ರಕ್ಕೇನೇ ಅವು ಒಳ್ಳೇವೆಂದು ಹೇಳಲಿಕ್ಕಾಗುವುದಿಲ್ಲ ಅವುಗಳಲ್ಲಿ ಒಳ್ಳೆ ಬಲಕೊಡತಕ್ಕ ಆಹಾರಾಂಶವೂ ಇರಬೇಕು ಎಷ್ಟೋ ಗೆಡ್ಡೆಗಳು ಗಾತ್ರವಾಗಿಯೂ ಬರೀ ನೀರು ತುಂಬಿಕೊಂಡೂ ಇರುತ್ತವೆಯೇ ಹೊರತು ಇವುಗಳಲ್ಲಿ ಆಹಾರಾಂಶವೇ ಕಡಮೆ ಕೆಲವು ಗೆಡ್ಡೆಗಳು ನೋಟಕ್ಕೆ ಸಣ್ಣವಾಗಿದ್ದರೂ ಬಹಳ ಪುಷ್ಟಿಕರವಾದ ಆಹಾರಾಂಶದಿಂದ ಕೂಡಿಕೊಂಡಿರುತ್ತವೆ ಇಂಗ್ಲೆಂಡಿನಲ್ಲಿ ವ್ಯವಸಾಯದ ಇಲಾಖೆಯವರು ಮೊದಲೇ ಒಂದೊಂದು ಗೆಡ್ಡೆಯ ಜಾತಿಯನ್ನೂ ರಸಾಯನಶಾಸ್ತ್ರ ರೀತ್ಯಾ ಪರೀಕ್ಷಿಸಿ, ಅದರಲ್ಲಿ ಯಾವ ಯಾವ ಅಂಶ (ಅಂದರೆ ಜಲಾಂಶ, ಆಹಾರಾಂಶ, ಸಕ್ಕರೆ ಮುಂತಾದವು) ಎಷ್ಟೆಷ್ಟು ಪ್ರಮಾಣದಲ್ಲಿದೆ ಎಂದು ಗೊತ್ತುಮಾಡಿ, ಪುಷ್ಟಿಕರವಾಗಿಯೂ ಚೆನ್ನಾಗಿ ಫಲಿಸತಕ್ಕದ್ದಾಗಿಯೂ ಇರುವ ಒಳ್ಳೇ ರಕಂ ಗೆಡ್ಡೆಗಳನ್ನೇ ಆರಿಸಿಕೊಂಡು ಅಜಮಾಯಿಷಿ ತರೀಖು ಬೆಳೆದು, ಪುನಹ ಈ ದಿನಸು ಉತ್ಪತ್ತಿಯನ್ನೇ ಮುಂದಿನ ಅಜಮಾಯಿಷಿಗಳಿಗಾಗಿ ಉಪಯೋಗಿಸಿಕೊಳ್ಳುತ್ತಾರೆ ಮುಖ್ಯವಾಗಿ ಈ ಜುತಾವಣೆ ಕ್ರಮದಿಂದ ದೇಶದಲ್ಲಿ ಮೇಲಾದ ರಕಂಗಳ ಬೆಳೆಯನ್ನು ವೃದ್ಧಿಪಡಿಸಬೇಕೆಂಬುವುದೇ ಇಲಾಖೆಯವರ ಉದ್ದೇಶವಾಗಿರುತ್ತದೆ

೩ ದನಗಳ ಮೇಲೆ ಕೂರುವ ಹುಳುಗಳನ್ನು ನಾಶಮಾಡುವ ಕ್ರಮ

ಉಣ್ಣೆ ಮುಂತಾದ ಅನೇಕ ಕ್ರಿಮಿಗಳು ಎತ್ತು, ಕುರಿ, ಆಕಳು, ಕುದುರೆ ಮೊದಲಾದ ಕಾಲ್ನಡೆಗಳ ಮೇಲೆ ಕುಳಿತು ಬಾಧೆಪಡಿಸುವುದು ಸಾಮಾನ್ಯವಾಗಿ ಪ್ರತಿಯೊಬ್ಬ ರೈತನಿಗೂ ತಿಳಿದೇ ಇದೆ ಇವುಗಳು ಮಳೆಗಾಲದಲ್ಲಿಯೂ ಛಳಿಗಾಲದಲ್ಲಿಯೂ ತುಂಬಾ ಹೆಚ್ಚಾಗುತ್ತವೆ ಆದರೆ ಸದಾಕಾಲದಲ್ಲಿಯೂ ಉಣ್ಣೆಯ ಬಾಧೆಯೇನೋ ತಪ್ಪುವುದೇ ಇಲ್ಲ ಇದು ದನಗಳಿಗೆ ನಿರಂತರವಾದ ಶತ್ರುಪ್ರಾಯವಾದ ಇದಕ್ಕಾಗಿಯೇ ಈ ವಿಷಯದಲ್ಲಿ ಜನಗಳಿಗೆ ಅಷ್ಟು ಅಲಕ್ಷ್ಯ ಆದರೆ ಹೀಗೆ ಅಲಕ್ಷ್ಯಮಾಡುವುದರಿಂದಲೇ ಅವುಗಳ ಬಾಧೆಯೂ ಹೆಚ್ಚಾಗುತ್ತದೆ ಈ ಕ್ರಿಮಿಗಳಿಂದ ಅನೇಕ ರೋಗಗಳ ವ್ಯಾಪನೆಗೆ ಅವಕಾಶವೆಂದು ಸ್ಪಷ್ಟವಾಗಿ ನಿರ್ಧರಿಸಲ್ಪಟ್ಟಿದೆ ಇಂಡಿಯಾ ದೇಶದಲ್ಲಿ ಸಾಮಾನ್ಯವಾಗಿ ೨ ಬಗೆಯ ಉಣ್ಣೆಗಳುಂಟು ಒಂದು ಕೆಂಪು ಬಣ್ಣದ್ದು ಇದು ಪ್ರಾಣಿಗಳ ಮೈಮೇಲೆ ಬಹಳ ಕಾಲ ಅಂಟಿಕೊಂಡು ಜೀವಿಸುವುದು ಎರಡನೇದು ನೀಲೀ ಬಣ್ಣದ್ದು ಇದು ಪ್ರಾಣಿಗಳ ಮೈಮೇಲೆ ಸ್ವಲ್ಪಕಾಲ ಮಾತ್ರ ಇದ್ದು ಮಿಕ್ಕ ಕಾಲಗಳಲ್ಲಿ ಗೋಡೆಯ ಬಿರುಕುಗಳಲ್ಲಿ ಅವಿತುಕೊಂಡಿರುತ್ತದೆ ಕೆಂಪು ಉಣ್ಣೆಯಿಂದ ಮಚ್ಚೆರೋಗ, ಲಾಳಸಂಕೋಲೆ ಮುಂತಾದ ಜಾಡ್ಯಗಳೂ, ನೀಲೀ ಉಣ್ಣೆಯಿಂದ ಜ್ವರಗಳೂ ಹರಡುತ್ತವೆ ಉಣ್ಣೆಯು ತಾನು ಇರುವ ಕಡೆಗಳಲ್ಲೆಲ್ಲಾ ಈ ರೋಗಗಳನ್ನು ಹರಡುವುದು ಮಾತ್ರವೇ ಅಲ್ಲದೆ ದನಗಳ ಆರೋಗ್ಯವನ್ನೂ ಬಹಳ ಕೆಡಿಸುತ್ತದೆ ಇದು ದನದ ರಕ್ತವನ್ನು ಕುಡಿದು ಜೀವಿಸುತ್ತದೆಯಾಗಿ ರಕ್ತ ಹೀರುವಾಗ ಮೈಯನ್ನು ಕಚ್ಚಿ ಗಾಯವನ್ನುಂಟುಮಾಡುತ್ತದೆ ಇಷ್ಟೇ ಅಲ್ಲದೆ ಇದು ಕುರಿಗಳ ಮೇಲೆ ಕುಳಿತರೆ ತುಪಟವು ಕೆಟ್ಟುಹೋಗಿ ನೇಯಿಗೆ ಕೆಲಸಕ್ಕೆ ಅನುಕೂಲಪಡುವುದಿಲ್ಲ ಕಂಬಳಿಗಳಲ್ಲಿ ಸಾಧಾರಣವಾಗಿ ಇರುವ ರಂಧ್ರಗಳು ಪ್ರಾಯಶಃ ಉಣ್ಣೆ ಬಿದ್ದ ದನಗಳ ತೊಗಲನ್ನು ಉಪಯೋಗಿಸಿ ತಯಾರು ಮಾಡಿದ್ದರಿಂದಲೇ ಉಂಟಾಗುವವು ಆದಕಾರಣ ಇಷ್ಟು ವಿಧವಾದ ನಷ್ಟಗಳಿಗೂ ಕಾರಣವಾದ ಉಣ್ಣೆಯನ್ನು ಸರ್ವ ಪ್ರಯತ್ನದಿಂದಲೂ ನಿರ್ಮೂಲನಮಾಡುವುದು ಅತ್ಯವಶ್ಯಕವಾದದ್ದು ದನದ ಕೊಟ್ಟಿಗೆಯನ್ನು ಬಹಳ ಚೊಕ್ಕಟವಾಗಿಡುವುದು ಜಿರಾಯತುದಾರರಿಗೆ ಒಂದು ಕೇವಲ ಸಾಮಾನ್ಯೋಪಾಯ ಗೋಡೆಗಳಿಗೆ ಪದೇ ಪದೇ ಸುಣ್ಣ ಪಟ್ಟಿ ನೆಲಕ್ಕೆ ಹೊಸ ಮಣ್ಣು ಹಾಕುತ್ತಿದ್ದರೆ ಉಣ್ಣೆಯ ಕಾಟವು ಬಹಳ ಮಟ್ಟಿಗೆ ಕಡಮೆಯಾಗುವುದು ಪಿಚಕಾರಿ ಹೊಡೆದು ದನಗಳನ್ನು ತೊಳೆಯುವುದು ಸರ್ವೋತ್ತಮವಾದ ಮಾರ್ಗ ಆದರೆ ಇದಕ್ಕೆ ಸ್ವಲ್ಪ ಶ್ರಮವೂ ಖರ್ಚೂ ಹಿಡಿಯುವುದು ಇದಕ್ಕೆ ಉಪಯೋಗಿಸುವ ಒಳ್ಳೇ ಗುಣಕಾರಿಗಳಾದ ಅನೇಕ ಔಷಧಗಳು ವಿಷಪದಾರ್ಥಗಳು ಆದದ್ದರಿಂದ ಈ ಕೆಲಸಕ್ಕೆ ಒಳ್ಳೇ ಅನುಭವಶಾಲಿಗಳನ್ನೇ ಇಟ್ಟುಕೊಳ್ಳಬೇಕು ಇದೂ ಕೂಡ ಭಾರಿ ಖರ್ಚಿನ ಬಾಬೇ ಆದರೆ ಅನೇಕ ರಾಸುಗಳಿಗೆ ಏಕಕಾಲದಲ್ಲಿ ಔಷಧಪ್ರಯೋಗಮಾಡಿದರೆ ಖರ್ಚು ಕಡಮೆಯಾಗುತ್ತದೆ ಒಂದು ಗ್ರಾಮದಲ್ಲಿ ಒಂದೆರಡು ರಾಸುಗಳನ್ನು ಬಿಟ್ಟು ಮಿಕ್ಕವುಗಳಿಗೆ ಚಿಕಿತ್ಸೆಮಾಡಿದಲ್ಲಿ ಈ ಒಂದೆರಡು ದನಗಳಿಂದ ಇತರ ದನಗಳಿಗೆ ಉಣ್ಣೆಗಳು ವ್ಯಾಪಿಸಿ ಪುನಃ ಜಾಡ್ಯಾದಿಗಳಿಗೆ ಅವಕಾಶವಾಗುವುದರಿಂದ ಎಲ್ಲಾ ರಾಸುಗಳಿಗೂ ಒಟ್ಟಿಗೆ ಚಿಕಿತ್ಸೆ ಮಾಡುವುದರಲ್ಲಿ ವಿಶೇಷ ಗುಣವುಂಟು

ವಿದೇಶ ವರ್ತಮಾನಗಳು

ವಿಲಾಯಿತಿ ರಾಜ್ಯಕ್ಕೆ ಸೇರಿದ ಐರ್ಲಾಂಡಿನಲ್ಲಿ ಕಳೆದ ವರುಷ ೨೩ ಲಕ್ಷದ ೫ ಸಾವಿರ ಪೌಂಡುಗಳನ್ನೂ ಸ್ಕಾಟ್‌ಲೆಂಡಿನಲ್ಲಿ ೯ ಲಕ್ಷದ ೭ ಸಾವಿರ ಪೌಂಡುಗಳನ್ನೂ ನಿರ್ಗತಿಕರಾದ ಮುದುಕರಿಗೆ ಸರ್ಕಾರದವರು ಪೆನ್ಷನ್ ಕೊಡಿಸಿರುತ್ತಾರೆ

ಲಂಡನ್ ಪಟ್ಟಣದ ಲಿನ್ನಿಯನ್ ಎಂಬ ಸಂಘದ ಮೆಂಬರಾಗಿರುವ ಮಿಸ್ ಎಲ್ ಗಿಬ್ಸ್ ಎಂಬಾಕೆಯು ಉತ್ತರ ಬೋರ್ನಿಯೋ ದ್ವೀಪಕ್ಕೆ ಹೋಗಿ ಕಿನಾಬುಲು ಎಂಬ ಪರ್ವತವನ್ನು ೧೩,೭೦೦ ಅಡಿ ಮೇಲಕ್ಕೆ ಹತ್ತಿ ಹೋಗಿ ಅಲ್ಲಿ ಹವಾ ಮುಂತಾದದ್ದನ್ನು ತಿಳಿದು ಬಂದಿರುತ್ತಾಳೆ

ಭೂಗೋಳದ ದಕ್ಷಿಣ ಧ್ರುವ ಪ್ರಾಂತ್ಯಕ್ಕೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ತಿಳಿದು ಬರುವುದಕ್ಕೆ ಕ್ಯಾಪ್ಟನ್ ಸ್ಕಾಟ್ ಎಂಬಾತನು ಪ್ರಯತ್ನಪಡುತ್ತಿದ್ದಾನೆ ಈತನಿಗೆ ನ್ಯೂಜೀಲೆಂಡಿನ ಇಂಗ್ಲಿಷ್ ಸ್ವಾಸ್ಥ್ಯದವರು ೧೫,೫೦೦ ರೂಪಾಯಿ ಕಳುಹಿಸುತ್ತೇವೆಂದು ಮಾತು ಕೊಟ್ಟಿದ್ದಾರೆ

ಫ್ರಾನ್ಸ್ ಸಂಸ್ಥಾನದಲ್ಲಿ ನಿರ್ಗತಿಕರಾದ ಮುದುಕರಿಗೆ ಸರ್ಕಾರದಿಂದ ಪೆನ್ಷನ್ ಕೊಡಬೇಕೆಂದು ತೀರ್ಮಾನವಾಗುವುದರಲ್ಲಿದೆ ಸುಮಾರು ೫ ಲಕ್ಷ ಮುದುಕರಿಗೆ ಪೆನ್ಷನ್ ಸಿಕ್ಕುವುದೆಂದೂ, ಇದಕ್ಕಾಗಿ ೨೪ ಕೋಟಿಯ ಲಾಗಾಯಿತು ೯ ಕೋಟಿ ರೂಪಾಯಿ ವರೆಗೆ ಬೇಕಾಗಿ ಬರುವದೆಂದೂ ಪ್ರಕಟವಾಗಿದೆ

ತುರ್ಕೀ ಸುಲ್ತಾನರವರು ತಮ್ಮ ರಾಜ್ಯದಲ್ಲಿ ಯುದ್ಧದ ಹಡಗುಗಳನ್ನು ತಯಾರುಮಾಡಿಸುವುದಕ್ಕೋಸ್ಕರ ಹನ್ನೆರಡು ಕೋಟಿ ರೂಪಾಯಿ ಖರ್ಚುಮಾಡುವವರಾಗಿದ್ದಾರೆ ಈ ಪ್ರಕಾರ ಕೆಲವು ಜಹಜುಗಳನ್ನು ಇಂಗ್ಲಾಂಡಿನ ಕಾರ್ಖಾನೆಯವರು ತಯಾರುಮಾಡಿ ಕೊಡುವುದಕ್ಕೆ ಕಂಟ್ರಾಕ್ಟು ವಹಿಸಿಕೊಂಡಿರುವರು

ವಿಲಾಯತಿಗೆ ಸೇರಿದ ರಾಕ್‌ಡೇಲ್ ಪಟ್ಟಣದಲ್ಲಿ ಕಾಲವಾದ ಎಡ್ವರ್ಡ್ ವ್ಯಾಸಿ ಎಂಬಾತನು ೧೮ ಲಕ್ಷದ ೪೦ ಸಾವಿರ ರೂಪಾಯನ್ನು ಸಂಪಾದನೆ ಮಾಡಿಟ್ಟು, ಅಪುತ್ರವಂತನಾದದ್ದರಿಂದ ಆ ಪೈಕಿ ೧೫ ಲಕ್ಷ ರೂಪಾಯನ್ನು ನಾನಾ ಧರ್ಮಕಾರ್ಯಗಳಿಗೆ ತೆಗೆದುಕೊಳ್ಳಬಹುದೆಂದು ಮರಣಶಾಸನವನ್ನು ಬರೆದಿರುತ್ತಾನೆ

ವಿಲಾಯತಿಗೆ ಸೇರಿದ ಕೇಂಬ್ರಿಡ್ಜ್ ಪಟ್ಟಣದಲ್ಲಿರುವ ಗರ್ಟನ್ ಎಂಬ ವಿದ್ಯಾಲಯದಲ್ಲಿ ಸ್ತ್ರೀಯರಿಗೆ ಪ್ರೌಢ ವಿದ್ಯೆಯನ್ನು ಕಲಿಸುವುದಕ್ಕೆ ಏರ್ಪಾಡು ಮಾಡಲು ೭೫ ಲಕ್ಷ ರೂಪಾಯಿ ಬೇಕಾಗುವುದೆಂದು ಗೊತ್ತಾಯಿತು ಈ ಫಂಡಿಗೆ ಸ್ತ್ರೀ ವಿದ್ಯಾಪ್ರೋತ್ಸಾಹಕರಾದ ಕೆಲವು ಮಂದಿ ಆಗಲೇ ೫ ಲಕ್ಷ ರೂಪಾಯಿ ತನಕ ಚಂದಾ ಕೊಟ್ಟಿದ್ದಾರೆ

ಅಮೇರಿಕಕ್ಕೆ ಸೇರಿದ ರಾಕ್ ಐಲೆಂಡಿನಲ್ಲಿ ರೈಲ್ ಗಾಡಿಯು ಬಹು ವೇಗವಾಗಿ ಹೋಗುತ್ತಾ ಒಂದು ತಿರುವಿನಲ್ಲಿ ಕಂಬಿಗಳನ್ನು ಬಿಟ್ಟು ನೆಲದ ಮೇಲೆ ಹರಿದು ಒಂದು ಚೀರೀ ಗುಡ್ಡಕ್ಕೆ ಬಡಿದು ಥಟ್ಟನೆ ನಿಂತುಕೊಂಡಿತು ಎರಡು ಸವಾರೀ ಗಾಡಿಗಳು ಮುರಿದು ನಾಶವಾದವು ೪೫ ಜನರು ಕೊಲ್ಲಲ್ಪಟ್ಟರು ೩೦ ಮಂದಿಗೆ ಘೋರಾ ಗಾಯಗಳಾಗಿರುತ್ತವೆ

ಅಮೇರಿಕಕ್ಕೆ ಸೇರಿದ ಪಿಟ್ಸ್‌ಬರ್ಗ್ ಡಿಸ್ಟ್ರಿಕ್ಟಿನೋಳಗೆ ನಾಲ್ವತ್ತು ಮಂದಿ ಮ್ಯುನಿಸಿಪಲ್ ಕೌನ್ಸಲರುಗಳು ಲಂಚ ತೆಗೆದುಕೊಂಡರೆಂದು ಮೊಕದ್ದಮೆ ಬಂದಿದೆ ಅವರಲ್ಲಿ ವೈದ್ಯರೂ, ಜಮೀನ್‌ದಾರರೂ, ರಾಜಕೀಯ ವಿಚಾರಗಳಲ್ಲಿ ಹೊಡೆದಾಡುತ್ತಿರುವವರೂ ಸೇರಿಕೊಂಡಿದ್ದಾರೆ ಈ ಪೈಕಿ ಕೆಲವರು ತಮ್ಮ ಅಪರಾಧವನ್ನು ಒಪ್ಪಿಕೊಂಡು ವಿವರಿಸಿರುತ್ತಾರೆ

ಆಫ್ರಿಕದ ಉತ್ತರ ಸಮುದ್ರತೀರದಲ್ಲಿರುವ ಟಾಂಜೀರ್ ನಗರದಲ್ಲಿ ಮಹಮ್ಮದನ ಜನ್ಮದಿನದ ಜ್ಞಾಪಕಾರ್ಥವಾಗಿ ಕಳೆದ ವಾರ ತೋಫುಗಳನ್ನು ಹಾರಿಸಿದರು ಆ ಸಂದರ್ಭದಲ್ಲಿ ಒಂದು ಮದ್ದಿನ ಮನೆಯು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿತು ಎಂಟು ಜನರು ಮೃತಪಟ್ಟರು, ಅನೇಕರಿಗೆ ಗಾಯಗಳಾದವು ಒಂದು ಬ್ಯಾಟರಿಯು ನಾಶವಾಯಿತು, ಹಲವು ಬಂಗಲೆಗಳೂ ಕಟ್ಟಡಗಳೂ ಅಲ್ಲಾಡಿ ಕೆಟ್ಟುಹೋದವು

ಚೀಣಾ ರಾಜ್ಯದ ಯುದ್ಧದ ಇಲಾಖೆಗೆ ಮಂತ್ರಿಯಾಗಿ ನೇಮಿಸಲ್ಪಟ್ಟಿರುವ ಜನರಲ್ ಇನ್‌ಚಾಂಗ್‌ಯವರು ಚೀಣಾ ರಾಜ್ಯದೊಳಗೂ ಎಲ್ಲಾ ವಿದ್ಯಾಶಾಲೆಗಳಲ್ಲೂ ಪ್ರಾಯಸ್ಥರಿಗೆ ಕವಾತು ಮುಂತಾದದ್ದನ್ನು ಕಲಿಸುವಂತೆಯೂ, ರಾಜ್ಯದಲ್ಲಿರುವ ಸಮಸ್ತ ಪುರುಷರೂ ಸೈನಿಕರಾಗಿ ತರಪೇತಾಗುವ ಹಾಗೆ ಕಾನೂನ್ ಮಾಡುವುದಾಗಿಯೂ, ಈ ತಮ್ಮ ಸಲಹೆಗಳನ್ನು ನೆರವೇರಿಸದಿದ್ದರೆ ತಾವು ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟುಬಿಡುತ್ತೇವೆಂತಲೂ ಹೇಳಿದ್ದಾರೆ

ಇಟಲಿ ರಾಜ್ಯದ ದಕ್ಷಿಣಭಾಗದಲ್ಲಿರುವ ಸಿಸಿಲಿ ಎಂಬ ದ್ವೀಪದೊಳಗೆ ಎಟ್ನಾ ಎಂಬ ಅಗ್ನಿಪರ್ವತದಿಂದ ಕಳೆದ ವಾರ ಅಗ್ನಿಯು ವಿಶೇಷವಾಗಿ ಸುಮಾರು ಮುಕ್ಕಾಲು ಮೈಲಿ ಅಗಲಕ್ಕೆ ಹರಿದು ಬರುತ್ತಾ ದಾರಿಯಲ್ಲಿ ಸಿಕ್ಕಿದ ಫಲಭರಿತವಾದ ಜಮೀನುಗಳನ್ನು ನಾಶನಮಾಡಿತು ಒಂದೆರಡು ಗ್ರಾಮಗಳವರು ಗಾಬರಿಬಿದ್ದು ಮನೆ ಮಠಗಳನ್ನು ತ್ಯಜಿಸಿ ಓಡಿಹೋದರು ಆಬಳಿಕ ಈ ಅಗ್ನಿಯ ಪ್ರವಾಹವು ಕಡಮೆಯಾಗುತ್ತಾ ಬರುತ್ತಿದೆ ಎಂದು ತಂತೀವರ್ತಮಾನ ಬಂದಿದೆ

ಕರ್ನಲ್ ಸರ್ ಡೇವಿಡ್ ಬ್ರೂಸ್ ಎಂಬ ಇಂಗ್ಲಿಷ್ ವೈದ್ಯನು ಪತ್ನಿ ಸಹಿತ ಮಧ್ಯ ಆಫ್ರಿಕದಿಂದ ವಿಲಾಯತಿಗೆ ವಾಪಸು ಹೋಗಿರುತ್ತಾನೆ ಈತನು ಕಳೆದ ಎರಡು ವರುಷಗಳಿಂದ ಅಲ್ಲಿ ಪ್ರಬಲವಾಗಿರುವ ನಿದ್ರಾರೋಗವನ್ನು ಪರೀಕ್ಷೆಮಾಡುತ್ತಾ, ರೋಗಿಗಳಿಗೆ ಔಷಧಾದಿಗಳನ್ನು ಕೊಟ್ಟು ಶಮನಮಾಡುವುದರಲ್ಲಿ ಸಾಹಸಪಡುತ್ತಾ ಇದ್ದನು ಈ ಉಪದ್ರದ ದೆಸೆಯಿಂದ ವಿಕ್ಟೋರಿಯಾ ನಯಾಂಜಾ ಎಂಬ ಪ್ರಾಂತ್ಯವು ನಿರ್ಜನಪ್ರದೇಶವಾಗಿರುತ್ತದೆ ಈ ಉಪದ್ರದ ಪೂರ್ವೋತ್ತರ ವೇನೆನ್ನುವುದು ಇನ್ನೂ ಗೊತ್ತಾಗಿರುವುದಿಲ್ಲ ಬೆಲ್ಜಿಯಂ ದೊರೆಯವರು ಈ ರೋಗವನ್ನು ಪರೀಕ್ಷೆ ಮಾಡಬೇಕೆಂದು ೩ ಲಕ್ಷ ರೂಪಾಯನ್ನೂ, ಆಸ್ಪತ್ರೆಗಳನ್ನು ಕಟ್ಟುವುದಕ್ಕೆ ೩ ಲಕ್ಷ ರೂಪಾಯನ್ನೂ, ಈ ಉಪದ್ರಕ್ಕೆ ಸಂಬಂಧಪಡುವಂಥಾ ಆರೋಗ್ಯಕರವಾದ ಕಾರ್ಯಗಳನ್ನು ಮಾಡಿಸುವುದಕ್ಕೆ ೬ ಲಕ್ಷ ರೂಪಾಯನ್ನೂ ಕಳುಹಿಸಿಕೊಟ್ಟರು

ಚಾಮರಾಜನಗರ ಈಗ ಸುಮಾರು ಮಂದಿವರೆ ತಿಂಗಳಿಂದ ಬೆಳಿಗ್ಗೆ ೧೦ ಘಂಟೆಯ ಮೇಲೆ ಮಧ್ಯಾಹ್ನ ೪ ಘಂಟೆಯ ತನಕ ಬಿಸಿಲಿನ ತಾಪವೂ, ರಾತ್ರಿ ಬೆಳಗಿನ ಝಾಮದಲ್ಲಿ ಸ್ವಲ್ಪ ಛಳಿಯೂ ಆಗುತ್ತದೆ ಇಲ್ಲಿ ಸಣ್ಣ ಮಕ್ಕಳಿಗೆ ಮಾರೀ ಹುಣ್ಣು ಏಳಲು ಸುರುವಾಗಿ ಆಗಲೇ ಅದರಲ್ಲಿ ಒಂದೆರಡು ಮಕ್ಕಳು ಸತ್ತವೆಂತಲೂ ವರ್ತಮಾನವಿದೆ ಜನರೂ ಈಗಲಾದರೂ ತಮ್ಮ ಮಕ್ಕಳಿಗೆ ಸಿಡುಬನ್ನು ಹಾಕಿಸುವದು ಬಹಳ ಒಳ್ಳೆಯದೆಂದು ನೆನಸುತ್ತೇವೆ —ಇಲ್ಲಿನ ಮ್ಯುನಿಸಿಪಲ್ ದಫೇದಾರ್ ರಘುನಾಥ ಚಟ್ಟಪ್ಪನವರು ತಮ್ಮ ಕೈಕೆಳಗಿನ ಝಾಡಮಾಲಿಗಳಿಂದ ಗ್ರಾಮದೊಳಗಿರುವ ಸಂದುಗೊಂದುಗಳನ್ನೆಲ್ಲಾ ಬಹಳ ಚನ್ನಾಗಿ ಪಾಕ್ ಮಾಡಿಸುತ್ತಾ ತುಂಬಾ ಶ್ರಮೆ ತೆಗೆದುಕೊಳ್ಳುತ್ತಾರೆ —ಈ ತಾಲ್ಲೂಕಿಗೆ ಸೇರಿದ ತೆಗ್ಗಿನಪುರದಲ್ಲಿ ಕೆಲವು ದಿನಗಳ ಹಿಂದೆ ಟೋಗಾರ್ ಪದ್ಮಣ್ಣನೆಂಬುವನನ್ನು ಯಾರೋ ಕೆಲವು ದುಷ್ಟರು ಕೊಂದರೆಂತಲೂ ಅವರು ಇನ್ನೂ ಪೋಲೀಸಿನವರ ದೃಷ್ಟಿಗೆ ಬೀಳಲಿಲ್ಲವೆಂತಲೂ ವರ್ತಮಾನವಿದೆ

Printed and Published by the Rev H GULLIFORD, Proprietor and Manager, Wesleyan Mission Press, Mysore 31/3/1910

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವುದು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೧೦ ನೇ ಇಸವಿ ಏಪ್ರಿಲ್ ತಾರೀಖು ೭ ನೇ ಗುರುವಾರ. ಸಂಚಿಕೆ ೬೫

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು. ಇದರಲ್ಲಿ ಗತಿಸಿದ ಕಮಿಷನರ್ ಬಸ್ನಾರ್ಡ ದಾಸ್, ಆರ್. ಇ., ಯವರು, ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದೌಲತ್ ಅರಮನೆ, ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ. ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ ಇದೇ ಏಪ್ರಿಲ್ ಆಖೈರಿನೊಳಗಾಗಿ 'ವೃತ್ತಾಂತ ಪತ್ರಿಕೆ'ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರವೆಂದು ಸೂಚಿಸುವೆವು

ಎಚ್ಚರಿಕೆ — ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡಲೆ ಬರೆಯಿರಿ. ವಿಳಾಸ:

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ. 11 14



ಇದು ಸಾಧಾರಣ ಜ್ವರ, ಹಳೇಜ್ವರ, ಮೂರೇಜ್ವರ, ಪಿತ್ತಜ್ವರ, ಶೀತಜ್ವರ ವಾತಜ್ವರ ಮೊದಲಾದ ಎಲ್ಲಾ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖೆ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟರಾಮಯ್ಯರವರು—ನೀವು ಕಳುಹಿಸಿದ ಹಂಗೆ ಔಷಧಿ ಕೊಟ್ಟ ಹಲವು ರೋಗಿಗಳು ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡಜನ್ ಸೀಸೆ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ಡಜ಼ನ್ ರೂ ೪ ... ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾ ಬಿಡಲಾಗುವದು

ಕುಪ್ರೋಸ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು ... ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ವವಾದ ಪರಿಣಾಮ, ಕ್ಷಣದಲ್ಲೇ ಗುಣಕೊಡುವದು ಇದು ... ಒಂದಾವರ್ತಿ ಜೊತೆಗೆ ಇಟ್ಟುಕೊಂಡರೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದ ಸೀಸೆಯ ಸಂಗಡಲೇ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಚೆನ್ನೈ ... ಕಾಹಿಲೆಯನ್ನು ನಾನು ನನ್ನ ತಾಬೇದಾರರ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಮೆಸರ್ಸ್ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಜನವರಿ ಪ್ರಜೆಂಟೇಷನ್ ವಾಚ್.

... ಇದೇ ಪತ್ರಿಕೆಯಲ್ಲಿ ಮೊದಲು ಪ್ರಕಟಿಸಿದ್ದ ಮೋರೆ ಕೇಲ್ಸಿ ರೆಗ್ಯುಲೇಟರ್ ವಾಚಿನ ಮಿಂದಿ ಬಹು ಸುಲಭವಾಗಿಯೂ ನಾಜೂಕಾಗಿಯೂ ಇದೆ ... ಆರ್ಡರುಗಳು ಬಂದು, ಇದ್ದ ಸ್ಟಾಕೆಲ್ಲಾ ಮುಗಿದುಹೋಯಿತು. ಅನಂತರ ಬಂದ ಆರ್ಡರುಗಳಿಗೆ ರವಾನಿಸಲು ಸ್ಟಾಕು ಇಲ್ಲದ್ದರಿಂದಲೂ ಸೀಮೆಯಿಂದ ಬರುವದು ತಡವಾದ್ದರಿಂದಲೂ ಮತ್ತು ಇದೇ ವಾಚುಗಳಿಗೆ ಇನ್ನೂ ಆರ್ಡರುಗಳು ಬರುತ್ತಲೇ ಇರುವದರಿಂದಲೂ ಮತ್ತೆ ತರಿಸಿರುತ್ತೇನೆ. ಮೊದಲಿನಂತೆ ಮುಗಿದುಹೋದ ನಂತರ ಮಾಲು ಸಿಕ್ಕದೆ ಪೆಚ್ಚಾಡುವದಕ್ಕಿಂತಲೂ ಜಾಗ್ರತವಾಗಿ ಆರ್ಡರು ಕೊಟ್ಟು ತರಿಸಿಕೊಳ್ಳುವದು ಉತ್ತಮ ಸೂಚನೆ —ನಮ್ಮ ಪದಾರ್ಥಗಳನ್ನು ನಾವೇ ಹೊಗಳಿಕೊಳ್ಳುವುದು ಅತಿಶಯವಲ್ಲ ಒಂದು ಸಾರಿ ತರಿಸಿ ಪರೀಕ್ಷಿಸಿದಲ್ಲಿ ನಾವು ಕೊಡುವ ಬೆಲೆಗೆ ಎಲ್ಲಿಯೂ ಸಿಕ್ಕುವದಿಲ್ಲ ವಾಚ ಅಂಕವು ನಮಗೆ ಗೊತ್ತಾಗುತ್ತೆ ಆರ್ಡರು ಕೊಡತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.



ನಂ॥	ವಾಚುಗಳ ವಿವರ	ವಾಚು 1ಕ್ಕೆ ಕ್ರಯ	ನಂ॥	ವಾಚುಗಳ ವಿವರ	ವಾಚು 1ಕ್ಕೆ ಕ್ರಯ.
1	ಅಮೇರಿಕನ್ ಲಿವರ್ ವಾಚು	2-12-0	5	ಟೈಂಪೀಸು ಕ್ಯಾಲೆಂಡರಲ್ಲಿ ಅಲಾರಂ ಕಾಲು ಘಂಟೆ ಕಾಲ ಕಿವಿಗೆ ಇಂಪಾಗಿ ಹಾಡುತ್ತಾ ಇರುತ್ತೆ.	5-8-0
2	ಕೆಲ್ಸಿ ರೆಗ್ಯುಲೇಟರ್ ವಾಚು (ಒಂದೆ ರೈಲ್ವೆ ಮಾರ್ಕ್ ಇರುತ್ತೆ)	3-1-0	6	ಸಾದಾ ಟೈಂಪೀಸು	1-4-0
3	ಅಜಂಟಿಕ್ ವಾಚು	1-8-0	7	ರಮಿಂಬಾರ್ ಘಡಿಯಾರದ ಸರಪಣಿಗಳು-ಗೋಲ್ಡ್ ಗಿಲೀಟಿನದು	0-6-0
4	ಮೇಜಿನ ಮೇಲೆ ಇಡತಕ್ಕ (ಕ್ಯಾರೇಜ್ ಕ್ಲಾಕ್)	1-12-0			

ಮೇಲ್ಕಂಡ ಸಾಮಾನುಗಳಲ್ಲಿ ಒಂದೇ ಸಾರಿ ಮೂರು ವಾಚ್ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜ್ ಫ್ರೀ, 6 ವಾಚು ತರಿಸುವವರಿಗೆ ಪೋಸ್ಟೇಜು ಫ್ರೀ ಒಂದು ಡಜ಼ನ್ ವಾಚು ತರಿಸಿಕೊಳ್ಳುವವರಿಗೆ 1 ವಾಚು ಇನಾಂ ವಿ. ಪಿ. ಯಿಂದಲೂ ರವಾನಿಸುತ್ತೇವೆ ಪೋಸ್ಟೇಜು ಅಲಾಯಿದಾ ಬೀಳುತ್ತೆ

ಹೊಸ ನಮೂನೆ ಲ್ಯಾಂಪು ಸೀಮೆಯೆಣ್ಣೆ ಹಾಕಿ ಉರಿಸತಕ್ಕದ್ದು ಅಮೇರಿಕನ್ ಕೆರೋಸಿನಾಯಿಲ್ ಮ್ಯಾಂಟಲ್ ಲ್ಯಾಂಪು:—ಯಣ್ಣೆ ಖರ್ಚು ಬಹಳ ಕಡಮೆ ಪ್ರಕಾಶ 100 ನೆ ಇದ ಒತ್ತಿಗಳನ್ನು ಒಂದೇ ಸಾರಿ ಹತ್ತಿಸಿದರೆ ಉಂಟಾಗುವ ಪ್ರಕಾಶ ಇದೊಂದು ಲ್ಯಾಂಪಿನಿಂದಲೇ ಉಂಟಾಗುತ್ತೆ ವಿಶೇಷ ಬರೆದದ್ದರಿಂದ ಪ್ರಯೋಜನವಿಲ್ಲ ಲ್ಯಾಂಪು ತರಿಸಿ ಪರೀಕ್ಷಿಸಿದರೆ ವ್ಯಕ್ತವಾಗುತ್ತೆ ಹತ್ತಿಸುವ ವಿಧಾನ ಲ್ಯಾಂಪಿನ ಸಂಗಡಲೇ ಇರುತ್ತೆ ಕ್ರಯ ಫುಲ್ ಸೆಟ್ಟು 1 ಕ್ಕೆ ರೂ 9-4-0 ಪೋಸ್ಟೇಜು ವಿ. ಪಿ. ಛಾರ್ಜ್ ಅಲಾಯಿದಾ ವಿ. ಪಿ. ಯಿಂದಲೂ ರವಾನಿಸುತ್ತೇವೆ 49-1

ನಮ್ಮ ವಿಳಾಸ.—ಎಂ. ಎಸ್. ಬಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

40-3

೧ ... ಕಸ್ತೂರೀ ಮಾತ್ರೆ.—ಈ ಮಾತ್ರೆಗಳು ಅವರ ಭಸ್ಮ, ಚಿನ್ನದ ರಜ, ಉತ್ತಮವಾದ ಕಸ್ತೂರಿ ಮೊದಲಾದ ಬಹು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು ಮೈ ಕೈಕಾಲು ಸೆಳತ (ಭಾರ). ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು ಸಿಗಿದ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುವದ್ದನೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ ನಷ್ಟಜ್ವರ, ಕ್ಷಯಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ಕ್ಷೀರಧಾತುವರ್ಧನ ...

ಮಕ್ಕಳುಗಳಿಗೆ ಇದನ್ನು ಅಮೃತವೆಂದೇ ಹೇಳುವೆವು ಏಕೆಂದರೆ ಮಕ್ಕಳ ಅನ್ನಕೋಶವನ್ನು ಬಲಪಡಿಸಿ ಶ್ಲೇಷ್ಮಸ್ಥಾನವನ್ನು ನಿರ್ಮಲವಾಗಿಟ್ಟು ಕೆಟ್ಟರಕ್ತವನ್ನು ಶುದ್ಧೀಕರಿಸಿ ರಕ್ತಾಭಿವರಣವು ಧಾರಾಳವಾಗುವ ಹಾಗೆ ಮಾಡುತ್ತದೆ ಇದರಲ್ಲಿ ಅಳ್ಳೆ ಒಡೆಯುವಾದ ಯಾವ ಪದಾರ್ಥವೂ ಸೇರಿಲ್ಲವಾಗಿ ಪ್ರತಿ ವ ಕ್ಕಳಿಗೂ ಧೈರ್ಯವಾಗಿ ಕೊಡಬಹುದು

ಇಷ್ಟೇ ಅಲ್ಲ ಮಕ್ಕಳಿಗೆ ಅಜೀರ್ಣದಿಂದಲೋ—ಅಪಥ್ಯದಿಂದಲೋ—ಹಲ್ಲುಗಳು ಹುಟ್ಟಿದುದರಿಂದಲೋ ಆಗುವ ಭೇದಿ—ವಾಂತಿಗಳನ್ನು ನಿಲ್ಲಿಸುತ್ತದೆ ಮಲಬದ್ಧವಿದ್ದರೆ ದಿವಕ್ಕೆ ಒಂದು ನೆಳ ಶ್ರಮವಿಲ್ಲದೆ ಆಗುವ ಹಾಗೆ ಮಾಡುತ್ತದೆ—ಬಾಲಕ್ಷಯ, ನಷ್ಟಜ್ವರ (ಹಳೇ ಜ್ವರ), ಉಷ್ಣ ಅಥವಾ ಶೀತದ ಸಹಿತ ಒಣಗು ಕೆಮ್ಮಲು—ಹೊಟ್ಟೆ ಕಟ್ಟಿಕೊಂಡಿರುವುದು—ಜಲಕಾಮಾಲೆ—ಹೊಟ್ಟೆಯ ಎಡಭಾಗದ ಗೆಡ್ಡೆ—ನಿದ್ರೆ ಬಾರದಿರುವುದು—ಬೆಂದಿ ಹಿಡಿಯುವುದು—ಬಡವಾಗಿರುವುದು—ಗರ್ಭಕೋಶದಿಂದ ಒಣಗಿಕೊಂಡಿರುವುದು—ಇವೆಲ್ಲವನ್ನೂ ನಿಸ್ಸಂದೇಹವಾಗಿ ಗುಣಪಡಿಸುತ್ತದೆ. ಕೇವಲ ತೀಕ್ಷ್ಣವಾಗಿದ್ದರೂ ಕೇವಲ ಶೀತವಾಗಿದ್ದರೂ ಸಮತ್ವವನ್ನು ಕಲ್ಪಿಸುತ್ತದೆ

ಹೆಚ್ಚು ಏತಕ್ಕೆಂದರೆ—ನಿಮ್ಮ ಮಕ್ಕಳು ಯಾವ ತರದ ಬೆಳೆಯೂ ಇಲ್ಲದೆ ಮೈತುಂಬಿಕೊಂಡು ಚಟುವಟಿಕೆಯುಳ್ಳವರೂ—ಬಲಪುಷ್ಟರೂ—ಆಗಬೇಕಾದರೆ ಈ ಕ್ಷೀರಧಾತುವರ್ಧನವನ್ನೇ ಕೊಡಿ ಬೆಲೆ ರೂ 1—0—0

ಪ್ಯಾಕಿಂಗ್ ಮತ್ತು ಪೋಸ್ಟೇಜ್ ಖರ್ಚು 5 ಆಣೆ.

ಕಾಸಕೇಸರಿ ಶೀತದ ಮತ್ತು ಉಷ್ಣದ ಕೆಮ್ಮಲುಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ ಡಬ್ಬಿ ೧ ಕ್ಕೆ ರೂ 1—0—0. ಟಿ. ಪಿ. ಪ್ರತ್ಯೇಕ.

ಶ್ವಾಸಕಾಲೇಶ್ವರ (ಗೂರಲುಬ್ಬಸಕ್ಕೆ):— ಬೆಲೆ ರೂ. 1—8—0

ಟಿ. ಪಿ. ಪ್ರತ್ಯೇಕ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

WANTED

37 3

An English-Speaking Kanarese Munshi, to teach Kanarese.

Apply stating terms to—

E. H. YOUNG,
Raichantur.

ಮಾರಾಟಕ್ಕೆ ಸಿದ್ಧವಾಗಿದೆ.

47-1

(1) ಹೊಸ ದೆತ್ತಿನ ಕೊಡುಗಾಡಿ. ಬೆನ್ನಾಮೂರಿನಲ್ಲಿ ತಯಾರಾದದ್ದು. ಮಾರಬೇಕಾಗಿದೆ.

(2) ಹೊಸ ದೆತ್ತಿನ ಟಕರಾಗಾಡಿ (2nd hand) ಇವುಗಳು ಸಬಿಯಲ್ಲಿರುವ ವೆಬ್ ಫ್ರಾಂಜ್ ಮತ್ತು ಸರ್ಕಾರದ ಶಾಪಿನಲ್ಲಿ ಇರುತ್ತವೆ ಮಾರಾಟಕ್ಕೆ ಅಪೇಕ್ಷಿಸತಕ್ಕವರು ಈ ಕೆಳಗಿನ ವಿಳಾಸಕ್ಕೆ ಬರಹ ಮೂಲಕ ತಿಳಿಸಿದಲ್ಲಿ ಮಾರಾಟ ಮಾಡಲಾಗುತ್ತೆ

A. KRISHNA RAO,
Dy Inspr. of Vaccinations, Chikmagalur.

ಸತ್ಯವೂ ಅಗ್ಗವೂ ಆದ ಅಂಗಡಿ.

41-2

ನಮ್ಮ ಸತ್ಯವನ್ನು ಪರೀಕ್ಷಿಸಿನೋಡಿ

೩೦ ಗಂಟೆ ನಡೆಯುವ ೧೨ ವರುಷ ಗ್ಯಾರಂಟಿ ಉಳ್ಳ ಸುಂದರವೂ ಗಟ್ಟಿಯೂ ಅಗ್ಗವೂ ಆದ ಲೀವರ್ ಜೇಬಿನ ಗಡಿಯಾರವನ್ನು ಸೊಗಸಾದ ಸರಪಣಿ, ೧೦೦ ಪೋಸ್ಟ್ ಕಾರ್ಡುಗಳ ಸಮೇತ ಪೋಸ್ಟೇಜು ಸಹಿತ ಮೂರು ರೂಪಾಯಿಗೆ ಕೊಡುತ್ತೇವೆ ಬೇಗ ಬರೆಯಿರಿ. ಒಪ್ಪದಿದ್ದರೆ ಹಣ ವಾಪಸು ಕೊಡುತ್ತೇವೆ. ನಮ್ಮ ವಿಳಾಸ

ಎಂ. ಎ ಘಟಾಲಾ ಕಂಪನಿ, ಚಿತ್ತೂರು, ೫ ಅರ್ಕಾಟ್.

ಸುಗಂಧಗಳು.

1-21

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧೨, ೫, ೩, ೨-೮-೦, ೧-೪-೦. ಬಿಲ್ಲೆಗಳು ೧ ತೊಲೆಗೆ ರೂ ೧ ದಸಂಗ ಪೊಟ್ಟಣ ೧ ಕ್ಕೆ ೪ ಆಣೆ ತಾಂಬೂಲ ವಿಹಾರಿ ೧ ಸೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಾರಿ ತರಿಸಿಕೊಂಡು ನೋಡಿ

ವಿಳಾಸ:—ಟಿ. ಎಲ್. ಉಪಾಧ್ಯಾಯ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 40

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣಿಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ವಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಜೆ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್. ಪೀಟರ್ಸ್,

೩೭, ವೇಪಮುಲಪಿಳ್ಳೆ ಬೀದಿ, ಪೇಟೇರಿ, ಮದರಾಸ್

CHAMBERLAIN'S PAIN BALM.

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು

8 14



ಬೆನ್ನಿಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕೊಯ್ಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ನೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

೧೮೭೬ ರಿಂದ ೧೯೧೦ ವರೆಗೆ

ಕಾಲದ ಪರೀಕ್ಷೆ !

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6-11

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ –

ಶ್ವಾಸಕೋಶದ ಆಕ್ರಮಗಳು , ನಾನಾ ತರದ ಕೆಮ್ಮಲು

ಸಕಲವಿಧ ಕ್ಷಯಗಳು ಮಾಂಸಖಂಡಗಳ ಕ್ಷೀಣತೆ

ಆಹಾರದಲ್ಲಿ ಅರುಚಿ ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಪ್ರತಿದಿನವೂ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು , ನಿದ್ರೆಯಿಲ್ಲದೆ ಇರುವುದು , ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಲವಾಗಿಯೋ ಇಳಿಯುವುದು , ಬಡವೆ ಬಾಯಾರಿಕೆ , ಬಳಲಿಕೆ , ಎದೆ ತಲ್ಲಣಿಸುವುದು , ತಲೆನೋವು , ಗಾಬರಿ , ಕಣ್ಣುಮೊಬ್ಬು , ತಲೆ ತಿರುಗುವಿಕೆ , ಮೈನೋವು ಕೀಲುನೋವು , ಮರವು , ನಿಶ್ರಾಣ , ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರನೀರದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [6-32]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ , ಅಥವಾ ೬ ಬುಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ ೩೦, ಬೊಂಬಾಯಿ ಬಾಕ್ಸ್—ಇವರಲ್ಲಿ ದೊರೆಯುವುದು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೊಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [26 6]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲು ನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಚಳಿಮೂ, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦ ೬ ೦ ೧೨ ಡಬ್ಬಿಗಳಿಗೆ ೪ ೦ ೦

ಆಸ್ತಾ ಮಿಶ್ರಣ	೨-೦ ೦
ಚೇಳುಕಡಿತದಮದ್ದು	೦-೮ ೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದು ಹಾಗಳಿಗೆ	೦ ೮-೦
ಜುಲಾಬು ಮಾತ್ರೆ—ಜುಲಾಬಿಗೆ	೨-೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦ ೪-೦
ಖಜ ಮುಲಾಮು—ಮಕ್ಕಳ ಖಜ್ಜಿಗೆ	೦ ೩-೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧-೦ ೦
ಕವನಾಶಕ ಚೂರ್ಣ—ಆಸ್ತಾ ರೋಗಕ್ಕೆ	೦-೮ ೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು – " ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 14

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ಪಾದವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ , ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಹಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಉಣ್ಣೆಕಿನ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ ೧—೨—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ ೧—೧೪—
" " ೬ " "	" ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

3 1 1

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂಥವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ –ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(19೬ ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—1

ಎಕ್ಸರ್‌ಸೈಜ್ ಪುಸ್ತಕಗಳು

(40 ಹೇಜು) ಪ್ರತಿಯೊಂದಕ್ಕೆ	0—0—6
(80 ಹೇಜು)	0—1—0
(160 ಹೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-13]

ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ತಖಾಬಿಲಾ

೪೧ ೧

ಕೃಷ್ಣಶಿಷ್ಟರ್ಥವಾಗಿ ಸರ್ಕಾರದವರು ಜನಾನುದಾರರಿಗೆ ಕೊಡುವ ಸಾಲಗಳು, ಮಾಡುವ ಇತರ ಸಹಾಯಗಳು ಇವುಗಳ ವಿಷಯಕವಾದ ಆಜ್ಞೆಗಳು ಮತ್ತು ಶಾಸನಗಳ ಸಂಗ್ರಹ ಕ್ರಯ ವಿ ಪಿ ಸೇರಿ 10 ಆಣೆ ಅಪೇಕ್ಷೆಯುಳ್ಳವರು ಬರೆದುಕೊಳ್ಳುವ ವಿಳಾಸ

ಎಂ ಮಲ್ಲಾರಾವ್ ರು, ಫಸ್ಟ್ ಗ್ರೇಡ್ ಪ್ಲೀಡರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ

ರೈತರೇ, ವ್ಯವಸಾಯವನ್ನು ಅಭಿವೃದ್ಧಿಮಾಡಿಕೊಳ್ಳಿ.

35-4

ನಿಮ್ಮ ಜಮೀನುಗಳನ್ನು ಆಳವಾಗಿ ಉಳಲು ಮಳೆಯ ನೀರನ್ನು ಜಮೀನೊಳಗೇ ಹೀರಿಕೊಳ್ಳುವಂತೆ ಮಾಡಿಕೊಳ್ಳಿ ಉತ್ತಮವಾದ ಹೆಚ್ಚು ಬೆಳೆಯನ್ನು ಕಟಾವು ಮಾಡಿಕೊಳ್ಳಿ ಕೋಲಾರದ ಫಾರ್ಮಲ್ ಮತ್ತು ಟ್ರೈನಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿರುವ ನೇಗಲುಗಳೂ ಹರಿತೆ ಹೊಡೆಯುವ ಕುಲುಬೆ ಕುಂಟೆ ಕೂರಿಗೆಗಳೂ ನಿಮಗೆ ಬಹಳ ಚೆನ್ನಾಗಿ ಸಹಾಯಮಾಡುತ್ತವೆ ಕ್ರಯದ ಪಟ್ಟಿ ಮುಂತಾದದ್ದು ತಿಳಿಯಬೇಕಾದರೆ ರೆವ್ ಡಬ್ಲಿಯು ಎಚ್ ಹಾಲಿಸ್ಟರ್ ಕೋಲಾರ್ ಇವರಿಗೆ ಬೇಗ ಬರೆದುಕೊಳ್ಳಿ

ಅಡವು ಇಟ್ಟವರಿಗೆ ನೋಟೀಸು

೨೯ ೧

ಕೋಲಾರದ ಭಂಗಾರದ ಗಣಿ ರಾಬರ್ಟ್‌ಸನ್ ಪೇಟೆಯಲ್ಲಿರುವ ಮಾರವಾಡಿ ಸಾಹುಕಾರ್ ದೀಪ್ಚಂದ್ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,— ನಾನು ಬೆಂಗಳೂರು ಸಿಟಿ ಕಲಾಸಿಪಾಳ್ಯದ ಬೌಸದ ನೇ ನಂ ೩ ಅಂಗಡಿಯಲ್ಲಿ ಈಗ್ಗೆ ಸುಮಾರು ಒಂದು ವರುಷದ ಹಿಂದಾಯ್ತು ದೀಪ್ಚಂದ್ ಕೇವಲ್‌ಚಂದ್ ಎಂಬ ಹೆಸರಿನಿಂದ ನನ್ನ ಪಾಲುದಾರರಾಗಿದ್ದ ಹರ್ಷರಾಜು ಎಂಬುವರ ಮೂಲಕ ಮಾರವಾಡಿ ಲೇವಾದೇವಿ ಅಂಗಡಿ ಇಟ್ಟು ವ್ಯಾಪಾರ ನಡಿಸುತ್ತಾ ಇದ್ದು ಈಚೆಗೆ ಸದರಿ ಹರ್ಷರಾಜು ಕಾಯಿಲೆ ಸಲುವಾಗಿ ದೇಶಕ್ಕೆ ಹೊರಟುಹೋದದ್ದರಿಂದ ಅದೇ ಸ್ಥಳದಲ್ಲಿ ವ್ಯಾಪಾರ ನಡಿಸಲು ಸಾಧ್ಯವಿಲ್ಲದೆ ಅಂಗಡಿ ವ್ಯಾಪಾರ ಮೋಕೂಫ್ ಮಾಡಿ ಜನಗಳಿಂದ ಅಡವು ಇಡಲ್ಪಟ್ಟ ನಗಗಳು ಪಾತ್ರೆಗಳು ಬಟ್ಟೆಗಳು ಮತ್ತು ಅದಕ್ಕೆ ಸಂಬಂಧ ಲೆಖ್ಖಪತ್ರಗಳು ಸಹಾ ಬೆಂಗಳೂರು ಸಿವಿಲ ಮಿಲಿಟರಿ ಸ್ಟೇಷನ್ ಗನ್ ತುರುಪು ಬಜಾರಿನಲ್ಲಿರುವ ದೀಪ್ಚಂದ್ ಕೇವಲ್‌ಚಂದ್ ಅಂಗಡಿಯಲ್ಲಿ ಇಟ್ಟು ಇದನ್ನು ಇತ್ಯರ್ಥ ಮಾಡಿಕೊಳ್ಳುವದಕ್ಕೆ ಒಬ್ಬ ಗುಮಾಸ್ತೆಯನ್ನು ಮೊಕರರ್ ಮಾಡಿರುತ್ತೆ ಆದದ್ದರಿಂದ ಈ ತಾರೀಖು ಲಾಗಾಯತು ಎರಡು ತಿಂಗಳ ಒಳಗಾಗಿ ಅಡವು ಇಟ್ಟಿರುವ ಧಣಿಗಳೆಲ್ಲರೂ ಸದರಿ ಗನ್ ತುರುಪಿನಲ್ಲಿ ದೀಪ್ಚಂದ್ ಕೇವಲ್‌ಚಂದ್ ಅಂಗಡಿಗೆ ಬಂದು ಅವರವರು ಅಡವು ಇಟ್ಟು ಇರುವ ಮಾಲುಗಳನ್ನು ಬಿಡಿಸಿಕೊಳ್ಳಬೇಕು ತಪ್ಪಿದರೆ ವಾಯಿದೆ ಕಳೆದನಂತರ ಅಡವು ಇಟ್ಟು ಇರುವ ಮಾಲುಗಳು ವಜಾಲ್ಲಡುತ್ತವೆ ಶಿಯುವ ತಾ ೧೬ನೇ ಮಾರ್ಚಿ ೧೯೧೦

ಕೋಲಾರದ ಭಂಗಾರದ ಗಣಿ ರಾಬರ್ಟ್‌ಸನ್ ಪೇಟೆ — ದೀಪ್ಚಂದ್ ಎಂದು ಮಾರವಾಡಿಯಲ್ಲಿ ಸ್ವಹಸ್ತ ಸೈನಾಗಿದೆ

ಇದನ್ನು ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ!!

೨೮ ೩

ಸಮಸ್ತರಿಗೂ ಅನುಕೂಲವಾದ,

ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ

ಕ್ರಯವಿಚಾರ, (ಬೆಳ್ಳಿ, ಭಂಗಾರ, ರತ್ನಗಳ) ಪರೀಕ್ಷೆ

ಕಮ್ಮಾಯಿಷಿ ಜ್ವರ, ವಾತಪಿತ್ತ ವಿಚಾರ ನಾಡೀಜ್ಞಾನ ಮತ್ತು ಚಿಕಿತ್ಸೆ

ಲಾಭವನ್ನು ಸಂಪಾದಿಸುವಬಗ್ಗೆ ಕಾಗದ ಸೀಸದಕಡ್ಡಿ, ಇಂಕಿ, ಬೆಂಕಿಪೆಟ್ಟಿ ಮೊದಲಾದ ಅನೇಕ ವಿಷಯಗಳು

ತನುಮನೋಲ್ಲಾಸವನ್ನೀಯುವ ತೈಲ, ಲೆವೆಂಡರ್, ಸೋಪು, ಅತ್ತರ್, ಪನ್ನೀರು, ಪವಡರ್, ಗುಲ್‌ಕಂದ್, ಕುಸುಮಗಳ ವಿವೇಚನೆ

ರಂಜಕವುಳ್ಳ ಕೆಲಸಕ್ಕೆ ಉಪಯೋಗವಾಗುವ ಗಿಲೀಟ್, ಪಾಲಿಷ್, ವಾರ್ನಿಷ್ ಮುಂತಾದ ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ ಆಕಾಶವಿಮಾನ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ ಕ್ರಯ ಪ್ರತಿ ೧ಕ್ಕೆ ರೂ ೧-೪-೦ ವಿ ಪಿ ಮೂಲಕ ೧—೬—೦

(೧) ವಿಳಾಸ ಮ್ಯಾನೇಜರ್, ಯಸ್ ಜಿ ಯಸ್ ಪ್ರೆಸ್,
೧೩೯ ಅರಳೇಪೇಟೆ, ಬೆಂಗಳೂರು ಸಿಟಿ

ಅಥವಾ

ಏಜೆಂಟರು — (೨) ದಿ ಉರ್ಲ್ ಮಾರ್ಟ್,
ನಂ|| ೧, ಮಂಗಳೂರು, (ದ ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

11—3—1910 ರಿಂದ 18—3—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	0	0	1*	1*
ಬೆಂಗಳೂರು ಡಿಸ್ಟ್ರಿಕ್ಟು	10	7	0	0
ಮೈಸೂರು ,,	10	7	7	4
ಕೋಲಾರ್ ,,	0	0	0	0
ಕೋಲಾರ ದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	13	2	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
ಜುಮ್ಲಾ	34	17	8	5

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಫಾಲ್ಗುಣ ಬಹುಳ ತ್ರಯೋದಶಿ ಶುಕ್ರವಾರದಿಂದ ೧೮೩೨ ನೇ ಸಾಧಾರಣನಾಮ ಸಂವತ್ಸರದ ಚೈತ್ರ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕೇಂದ್ರ ಮಿನ ಮಾಸ
8	ಶುಕ್ರ ,,	ತ್ರಯೋದಶಿ	4 3	ಉಷರ	54 44	26
9	ಶನಿವಾ ‡	ಅಮಾವಾಸ್ಯೆ	54 16	ಪೂ	10 45	27
10	ರವಿ §	ಪಾಡ್ಯಮಿ	46 52	ರೇ	6 54	28
11	ಚಂದ್ರ	ಬಿದಿಗೆ	40 40	ಅ	2 48	29
12	ಕುಜ	ತದಿಗೆ	34 54	ಕೃ	54 4	30
13	ಬುಧ †	ಚೌತಿ	29 30	ರೋ	50 46	1
14	ಗುರು •	ಪಂಚಮಿ	24 20	ಮೃ	47 58	2

,, ಮಹಾವ್ಯತೀಪಾತ ಮಾಸಶಿವರಾತ್ರಿ ‡ ಸರ್ವತ್ರ ಅಮಾವಾಸ್ಯೆ § ಚಾಂದ್ರಸಂವತ್ಸರಾರಂಭಃ, ಆರೋಗ್ಯಪ್ರತಿಪತ್ತು, ನಿಂಬದಳಭಕ್ಷಣಂ , ಚಂದ್ರೋದಯ ರಬೀಸಾನಿ ೧ † ಸೌರಸಂವತ್ಸರಾರಂಭ ಚಿತ್ರ ವಿಷುಪುಣ್ಯಕಾಲ • ಮೃತ್ಯುಯೋಗಃ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ ರೂ	೧೩ ೮-೦	೧೪ ೦ ೦
ಕೆಂಬೂತಿ ಅಕ್ಕಿ ಅವಲ್	೧೩ ೮ ೦	೧೪ ೧೨ ೦
,, ದುಮುಂ	೧೨ ೦-೦	೧೪ ೪ ೦
ಜಾಹ್ನವಿ ಅಕ್ಕಿ	೧೨ ೪ ೦	೧೪ ೦ ೦
ಸಣ್ಣಕ್ಕಿ ಅವಲ್	೧೪ ೮ ೦	೧೬ ೮ ೦
,, ದುಯಂ	೧೪ ೦ ೦	೧೪ ೦ ೦
ಕೊಗರಿ ಬೇಳೆ ಪಲ್ಲಾ ೧ಕ್ಕೆ	೧೨ ೮ ೦	೧೪ ೦ ೦
,, ದುಯಂ	೧೨-೦ ೦	೧೨ ೦ ೦
ಹೈದ್ರಾಗಿ ಪಲ್ಲಾ ೧ಕ್ಕೆ	೮-೦-೦	೬-೧೨-೦
ಕಾರಾಗಿ	೭ ೧೨ ೦	೬ ೮ ೦
ಜೋಳ	೭ ೮ ೦	೮-೮ ೦
ಹಲಸಂದೆ ಪಲ್ಲಾ ೧ಕ್ಕೆ	೧೧-೦ ೦	೧೧ ೦ ೦
ಬಳೀ ಅವರೆ	೧೧-೦ ೦	೧೦ ೮ ೦
ಹೆಸರು	೧೧-೦-೦	೧೦ ೪ ೦
ಉದ್ದು	೧೪ ೦ ೦	೧೧ ೦ ೦
ಕಡಲೆ	೧೨-೮-೦	೧೧ ೦ ೦
ಎಳ್ಳು ಸೇ ೧೨೬ ಕ್ಕೆ	೧೭-೦ ೦	೧೪ ೮ ೦
ಹುರುಳಿ	೮ ೮ ೦	೧೦ ೦ ೦
ಹರಳು ೧೨೭ ಸೇರಿಗೆ	೧೪ ೦ ೦	೧೨ ೦ ೦
ಶೇಂಗೇಕಾಯಿ ಮಣ ೧ಕ್ಕೆ	೨ ೪-೦	೧ ೧೦ ೦
ಕೊಬ್ಬರಿಕಾಯಿ	೪ ೧೨-೦	೫ ೧೨ ೦
,, ದುಯಂ	೪ ೮ ೦	೫-೪ ೦
ಬೆಲ್ಲ ದೊಡ್ಡ ಅಚ್ಚು	೮-೮ ೦	೮ ೨-೨ ೦
ಒಳ್ಳೆಣ್ಣೆ ಮಣ ೧ಕ್ಕೆ	೫ ೦ ೦	೪ ೧೦ ೦
ಹರಳೆಣ್ಣೆ ,,	೫ ೮ ೦	೪ ೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೧೦ ೮-೦	೧೨ ೮ ೦
ಉಪ್ಪು ,,	೬ ೦ ೦	೫ ೧೨ ೦
ಹುಣಸೇ ಹಣ್ಣು	೨ ೦ ೦	೧ ೪ ೦
,, ಹಳೇದು	೧ ೧೨-೦	೧-೬ ೦
ತುಪ್ಪ ಮಣ ೧ಕ್ಕೆ	೧೬-೮ ೦	೧೪ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೪-೦	೪-೬ ೦
ತೆಂಗಿನಕಾಯಿ ೧೦೦ ಕ್ಕೆ	೫ ೦ ೦	೭ ೦ ೦
ಅಡಿಕೇಕಾಯಿ ಮಣ ೧ಕ್ಕೆ	೦ ೧೨ ೦	೦ ೧೪-೦
ಅಂಟುವಾಳದ ಕಾಯಿ ಮಣ ೧ಕ್ಕೆ	೦ ೧೨ ೦	೦ ೧೨ ೦
ಚಿನ್ನ (ಪೌನ್) ಕೆಂಪು	೧೫ ೯-೦	೧೫ ೪ ೦
,, ,, ಪಸಿಮೆ	೧೬-೦ ೦	೧೫ ೯-೦
,, ,, ಗಟ್ಟಿ ತೊಲ ೧ಕ್ಕೆ	೨೪-೮ ೦	೨೪-೨-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭-೪-೦	೭೧-೦-೦

ತಾಲ್ಲೂಕು ವರ್ತಮಾನಗಳು

ಶೃಂಗೇರಿ —ಶೃಂಗೇರಿ ಎ ವಿ ಸ್ಕೂಲಿನಲ್ಲಿ ಕಳೆದ ಫೆಬ್ರವರಿ ತಾ ೨೭ ನೇ ಭಾನುವಾರದಲ್ಲಿ ಈ ಸ್ಕೂಲಿನಲ್ಲಿ ವಿದ್ಯಾರ್ಥಿಗಳ ಪುರೋಭಿವೃದ್ಧಿಗಾಗಿ ಎ ವಿ ಸ್ಕೂಲ್ ರೀಡಿಂಗ್ ರೂಂ ಎಂಬ ಹೆಸರಿನಿಂದ ಒಂದು ವಾಚಕ ಮಂದಿರವು ಸದರಿ ಸ್ಕೂಲ್ ಹೆಡ್ ಮಾಸ್ಟರವರಾದ ಮ|| ಕೃಷ್ಣಸ್ವಾಮಿಯಯ್ಯಂಗಾರ್ಯರವರಿಂದಲೂ ಮತ್ತು ಇಲ್ಲಿನ ಮಾಸ್ಟರಿಂದಲೂ ಸ್ಥಾಪಿಸಲ್ಪಟ್ಟಿತು ಈ ವಾಚಕ ಮಂದಿರದ ಮುಖ್ಯೋದ್ದೇಶವು ಶೃಂಗೇರಿ ವಿದ್ಯಾರ್ಥಿಗಳಿಗೆ ವಿಷಯ ಧನವ್ಯಯವಿಲ್ಲದೆ ಲೋಕವ್ಯವಹಾರ ಜ್ಞಾನವನ್ನು ಉಂಟುಮಾಡಿ ವಾಚಾಲತ್ವವನ್ನೂ, ವಾಕ್ಪಟುತ್ವವನ್ನೂ, ಬುದ್ಧಿ ಚಾತುರ್ಯವನ್ನೂ ವೃದ್ಧಿಗೊಳಿಸಲವಕಾಶಮಾಡಿ, ಇದರ ಮೂಲಕ ಅವರ ಜ್ಞಾನವನ್ನು ಅಭಿವೃದ್ಧಿಗೆ ತರಬೇಕೆಂಬುವದೇ ಆಗಿರುತ್ತದೆ ಇದಕ್ಕೆ ಈ ಊರಿನಲ್ಲಿರುವ ವಿದ್ಯಾಭಿಮಾನಿಗಳೆಲ್ಲರೂ ಕೃಪೆಯಿಂದ ಯಥೋಚಿತವಾದ ದ್ರವ್ಯಸಹಾಯವನ್ನು ತಮ್ಮ ಬಾಲಕರಿಗೆ ಇಂಥಾ ವಿಷಯದಲ್ಲಿ ಉತ್ತೇಜನವನ್ನೂ ಕೊಡದಿರಲಾರರೆಂದೂ, ಈ ಊರ ಗರಲ್ಸ್ ಸ್ಕೂಲ್ ಮಾಸ್ಟರುಗಳೂ ಅದರಿಂದ ಪ್ರತಿವಾರವೂ ನಡೆಯುವ ಈ ವಾಚಕ ಮಂದಿರದ ಉಪನ್ಯಾಸಕ್ಕೆ ಹಾಜರಾಗುವುದಲ್ಲದೆ ತಾವೂ ಸಹಾಯಕರಾಗುವರೆಂದು ನಂಬಿದೇವೆ

ಮಂಡ್ಯ —ಇಲ್ಲಿ ಬಿಸಲಿನ ತಾಪವು ದಿನ ದಿನೇ ಹೆಚ್ಚುತ್ತಲಿದೆ ಸಾಯಂಕಾಲದ ಹೊತ್ತಿನಲ್ಲಿ ನೋಡ, ಗುಡುಗು ಉಂಟಾದಾಗ್ಯೂ ೧ ಳಿಯ ದೆಸೆಯಿಂದ ಮಳೆಯು ಬೀಳದೆ ಇರುತ್ತದೆ ಜನರಲ್ಲಿ ಆರೋಗ್ಯವು ತಪ್ಪಿ ಛಳಿ ಜ್ವರ ಕೆಮ್ಮಲು ಮುಂತಾದದ್ದು ಕಾಣಿಸಿಕೊಂಡಿರುತ್ತವೆ ಧಾರಣೆ ವಾಸಿಗಳು ಒಂದೇ ತರವಾಗಿದೆ, ಇನ್ನೂ ಇಳಿತರಕ್ಕೆ ಬಂದಿಲ್ಲ —ಕಳೆದ ಶನಿವಾರ ಸಾಯಂಕಾಲ ಇಲ್ಲಿನ ಕನ್ನಡ ಗೌರ್ನಮೆಂಟ್ ಸ್ಕೂಲಿನಲ್ಲಿ ಮದ್ದೂರಿನಿಂದ ತಲಕಾಡಿಗೆ ವರ್ಗವಾಗಿರುವ ಮೆ|| ಎಸ್ ಶ್ರೀಕಂಠಯ್ಯ ಹೆಡ್ ಮಾಸ್ಟರವರು ನೂತನವಾಗಿ ಪ್ರಾರಂಭಿಸಿರುವ ಕಿಂಡರ್‌ಗಾರ್ಟನ್ ರೀತಿಯನ್ನು ಅನುಸರಿಸಿ ಬಳಗ ಮುಖಾಂತರ ಬಾಲಕರು ಅಕ್ಷರವನ್ನು ಜೋಡಿಸುವ ಅಕ್ಷರಾಭ್ಯಾಸದ ಕ್ರಮವನ್ನು ಎಲ್ಲರಿಗೂ ಪರಿಷ್ಕಾರವಾಗಿ ತಿಳಿಯುವಂತೆ ನಾನಾ ವಿಧವಾದ ದೃಷ್ಟಾಂತಗಳಿಂದಲೂ, ಹಾಡಿನಿಂದಲೂ ಬಳಗಳಿಂದಲೂ ಅಕ್ಷರಗಳನ್ನು ತೋರಿಸಿ ಎರಡು ಘಂಟೆಗಳ ವರೆಗೂ ಉಪನ್ಯಾಸವನ್ನು ಮಾಡಿದರು ಬೋರ್ಡಿನಲ್ಲಿ ಅಕ್ಷರಗಳನ್ನು ಬರೆದು ಒಂದೇ ಅಕ್ಷರದಿಂದ ನಾನಾ ವಿಧವಾದ ಅಕ್ಷರಗಳು ಉಂಟಾಗುತ್ತಿರುವ ರೀತಿ ಯನ್ನು ತೋರಿಸಿ ವಿವರಿಸಿದರು ಇವರು ಬೇರೆ ಬೇರೆ ಕಡೆ ಇದೇ ರೀತಿಯಾಗಿ ಉಪನ್ಯಾಸಗಳನ್ನು ಮಾಡಿರುತ್ತಾರೆ ಮತ್ತು ಅನೇಕ ದೊಡ್ಡದೊಡ್ಡ ಮನುಷ್ಯರುಗಳಿಂದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ಅಕ್ಷರಾಭ್ಯಾಸದ ಕ್ರಮದ ಪುಸ್ತಕವನ್ನೂ ವರ್ಣರೇಖೆಯನ್ನೂ ರಚಿಸಿರುತ್ತಾರೆ ಇವರಿಗೆ ಸಹಾಯವೂ ಪ್ರೋತ್ಸಾಹವೂ ಕಡಮೆಯಾಗಿರುವದರಿಂದ ಅನೇಕರು ಈ ವಿಷಯದಲ್ಲಿ ಸಹಾಯವೂ ಅನುಕೂಲವೂ ಮಾಡಿಕೊಟ್ಟರೆ ಬೇರೆ ಪುಸ್ತಕಗಳನ್ನು ರಚಿಸುವರೆಂದು ತಿಳಿಸಿರುತ್ತಾರೆ ಈ ಉಪನ್ಯಾಸದ ಸಮಯದಲ್ಲಿ ಇಲ್ಲಿನ ಸಬ್ ರಿಜಿಸ್ಟ್ರಾರವರು ಅಗ್ರಾಸನವನ್ನು ವಹಿಸಿದ್ದರು ಸಭಿಕರಲ್ಲಿ ಅನೇಕರು ಸರ್ಕಾರಿ ಉದ್ಯೋಗಸ್ಥರು, ಶಿರಸ್ತೆದಾರ್ರವರು ಕನ್ನಡ ಮತ್ತು ಇಂಗ್ಲೀಷ್ ಸ್ಕೂಲ್ ಹೆಡ್ ಮಾಸ್ಟರುಗಳೂ ಅ|| ಮಾಸ್ಟರುಗಳೂ, ಬಾಲಕರೂ, ಇನ್ಸ್‌ಪೆಕ್ಟರು ಮುಂತಾದವರು ಹಾಜರಾಗಿ ಇದ್ದರು ಉಪನ್ಯಾಸದ ಸಮಯದಲ್ಲಿ ಸಭಿಕರ ಕರತಾಡನಗಳಿಂದ ಉಪನ್ಯಾಸದವರ ಮೇಲೆಯೇ ಆವರಿಸಿಕೊಂಡು, ಎಲ್ಲರಿಗೂ ಕೌತುಹಲ ಉಂಟಾಯಿತು ಅಗ್ರಾಸನರು ಕೃತಜ್ಞತಾಪೂರ್ವಕವಾಗಿ ಒಳಗೆ ಓದಲಿಂಗಿ ತಾತಿಯ ಪದ್ಧತಿಯನ್ನು ವಹಿಸಿಕೊಂಡು ಬಾಲಕರಿಗೆ ತೋರಿಸಿದರೆ ಉತ್ತಮವಾಗಿರುತ್ತೆಂತಲೂ ಗೌರ್ನಮೆಂಟಿನವರು ಇದಕ್ಕೆ ಬಹಳ ಸಹಾಯ ಮಾಡಬೇಕೆಂತಲೂ ತಿಳಿಸಿ, ಸಭೆಯನ್ನು ಮುಕ್ತಾಯಮಾಡಿದರು

ಕಾನಕಾನಹಳ್ಳಿ ತಾ ಮರಳವಾಡಿ ಈ ಗ್ರಾಮವು ಪ್ರಸಿದ್ಧಿಯಾಗಿ ಪ್ರಚಾರವೃದ್ಧಿಯೂ ಹಿಂದೂ ಮಹಮ್ಮದಿ ಮೊದಲಾದ ಮತಸ್ಥರುಳ್ಳದ್ದಾಗಿ ಇದ್ದಾಗ್ಯೂ ವಿದ್ಯಾಹೀನತ್ವದಿಂದ ಧೈರ್ಯವೂ ಧನವೂ ಹೀನವಾಗಿದೆ ಪ್ರತಿ ವರುಷ ಕಾಮನಹಬ್ಬ ಮಾಡುವವರಲ್ಲಿ ಕೇವಲ ಆಸಕ್ತಿಯುಳ್ಳವರಾಗಿ ನೋಟಕ್ಕೆ ಬಂದ ಅನೇಕ ಜನರಿಗೆ ಮತವೈಷಮ್ಯವಿಲ್ಲದೆ ಅನ್ನಹಾಕುವುದಲ್ಲದೆ ಈ ವರುಷ ಈ ಪ್ರಾಂತ್ಯ ದುರ್ಭಿಕ್ಷಸೂಚಕವಾಗಿರೋದರಿಂದ ಹೆಚ್ಚಾಗಿ ಆದರಣೆಯಿಂದ ಹಾಕಿದ್ದು ಕೇವಲ ಶ್ಲಾಘನೀಯವಾಗಿದೆ ಹಿಂದೂಗಳು ವೇಷ ಹಾಕಿಕೊಂಡು ಆಡುವವರಲ್ಲಿ ಒಬ್ಬ ಲಿಂಗಾಯತ್ ಹುಡುಗನು ಹುಲೀ ವೇಷ ಹಾಕಿದನೆಂದು ಕೆಲವರು ದೇಶದ ಪ್ಯಾಟೆಯಲ್ಲಿ ಆಡುತ್ತಿದ್ದವನನ್ನು ಸಡೆಮಾಡಿ ಗಲಾಟೆ ನಡಿಸಿದ್ದರಿಂದ ಅನ್ಯಾರ್ಥಿಗಳಾಗಿ ಬಂದಿದ್ದ ಅನೇಕರು ಹೆದರಿ ಓಡಿಹೋದರು ಇದರ ಉಸ್ತುವಾರಿಗೆ ಬಂದಿದ್ದ ತಾಲ್ಲೋಕು ಪೊಲೀಸ್ ಇನ್‌ಸ್ಪೆಕ್ಟರ ಅಜಮಾಯಿಷಿಯಲ್ಲಿ ಅದು ಹುಲೀವೇಷ ಅಲ್ಲವೆಂದು ವ್ಯಕ್ತವಾಯಿತು ಹುಲಿ ಕರಡಿ ಮೊದಲಾದ ದುಷ್ಟಮೃಗಗಳು ಅರಣ್ಯವಾಸಿಗಳಾಗಿವೆ ಇದರ ಬಾಧ್ಯತೆ ಮನುಷ್ಯರಿಗೆ ಹ್ಯಾಗೆ ಉಂಟಾಗುವದೋ ಕಾರಣ ಯಾವದೋ ಗೊತ್ತಾಗುವದಿಲ್ಲ ಹುಲಿ ಕ್ರೂರ ಸ್ವಭಾವವುಳ್ಳದ್ದಾಗಿ ಮನುಷ್ಯರು ಪಶುಗಳನ್ನು ಘಾತಮಾಡಿ ಕೊಲೆಗೆ ಈಡಾಗುತ್ತದಲ್ಲಾ ಆ ಮೃಗಕ್ಕೆ ಬಾಧ್ಯರು ಹಾಗೆ ಆಗುವರೋ ಹ್ಯಾಗೋ ವಾಚಕರು ಯೋಚಿಸಬೇಕಾಗಿದೆ ಇಷ್ಟರ ಗಲಾಟೆಗೆ ಹಿಂದೂಗಳಾಗಲಿ ಮಹಮ್ಮದೀಯರಾಗಲಿ ವಿದ್ಯಾಹೀನತೆಯೇ ಮುಖ್ಯ ಕಾರಣವಾಗಿದೆ —ಈ ಗ್ರಾಮದಲ್ಲಿ ಜೆ ಪಿ ಗ್ರಾಂಟ್ ಸಾಹೇಬರ ಕಾಲದಲ್ಲಿ ಕನ್ನಡ ಪಾಠಶಾಲೆ ಸ್ಥಾಪಿತವಾಗಿ ಆ ಕಾಲದಿಂದೀಚೆಗೆ ಕೆಲವು ಜನರು ಪೂರಾ ತರಬೇತಾಗುವದರ ಒಳಗಾಗಿ ಮಾಸ್ಟರು ವರ್ಗ ನಡೆಯುತ್ತಾ ಬಂದು, ಈಗ ೨೩ ವರುಷಗಳಿಂದ ಒಬ್ಬರೇ ಹೆಡ್ ಮಾಸ್ಟರಾಗಿ ಇದ್ದಾರೆ ಇವರು ಇಷ್ಟು ದೀರ್ಘಕಾಲ ಕೆಲಸ ಮಾಡಿದ್ದರಲ್ಲಿ ೨ ವಿದ್ಯಾರ್ಥಿಗಳು ತೇರ್ಗಡೆಯಾಗಲಿಲ್ಲ ಮೇಲ್ವಿಚಾರಣೆ ಕರ್ತರಿಗೆ ಸ್ಕೂಲೆಂಬ ಹೆಸರಿರುವದೇ ಸಾಕಲ್ಲದೆ ವಿದ್ಯಾಭಿವೃದ್ಧಿಯಾಗಬೇಕೆಂಬ ಉದ್ದೇಶ ಕಾಣುವದಿಲ್ಲ ಈ ವಿಷಯವಾಗಿ ಆಮಿಲ್ದಾರ್ ಮೆಂಬರುಗಳೂ, ಗ್ರಾಮಸ್ಥರೂ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರಿಗೆ ಅನೇಕಾವರ್ತಿ ತಿಳಿಸಿದಾಗ್ಯೂ ಚಿತ್ತಕ್ಕೆ ತಂದು ಕ್ರಮಪಡಿಸಲಿಲ್ಲ ಇದರಿಂದ ಈಗ ಇರುವ ಬಾಲಕರ ಅಭಿವೃದ್ಧಿಗೆ ಸಂದೇಹವನ್ನು ನಿವಾರಣೆ ಮಾಡಿ ಮೊದಲಿನಂತೆ ೩ ಜನ ಮಾಸ್ಟರನ್ನಿಟ್ಟಲ್ಲಿ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡುವವರಲ್ಲಿ ಈಗಿನ ಅಧಿಕಾರಿಗಳಿಗೆ ಕೇವಲ ಯಶಸ್ಸೂ ಧರ್ಮವೂ ಉಂಟಾಗಿ ಗ್ರಾಮದ ಪ್ರಜೆಗಳು ಒಳ್ಳೇ ನಡತೆಯಿಂದ ಕ್ಷೇಮವಾಗಿ ಯೋಗ್ಯವಂತರಾಗುತ್ತಾರೆ

"ವಿಕಟಪ್ರತಾಪ" ಪತ್ರಿಕೆಯ ಚಂದಾದಾರರಿಗೆ.

41-1

ಮಹಾಶಯರೇ, ಸರ್ಕಾರದವರಿಗೆ ಅರ್ಜಿ ಹಾಕುತ್ತೇವೆ. ಅಪ್ಪಣೆಯು ಈ ವರೆಗೂ ಬರಲಿಲ್ಲ. ಪತ್ರಿಕೆಯು ನಿಧಾನವಾಗಿಯೇ ಹೊರಡುವುದು. ಸಂಶಯಗೊಂಡು ಬರೆಯಬೇಡಿರಿ.

ಪತ್ರಕರ್ತ.

ಸಂಗೀತಪಾರಿಜಾತವೆಂಬ ಹಾಡಿನ ಪುಸ್ತಕ

20-1

ಕ್ರಯ 0-4-0.

ವಿಳಾಸಗಳು—ಮೈಸೂರು, ಮರ್ಕಂಟೈಲ್ ಯೂನಿಯನ್. ಸಿ. ಎಲ್. ಎಸ್. ಬುಕ್ ಡಿಪೋ, ಕುಮಾರಕೂರು ಜಿ. ಎಸ್. ಕನ್ನಯ್ಯಶೆಟ್ಟಿ ಅಂಡ್ ಕೊ. ಮಂಗಳೂರು ಉಡ್ ಮಾರ್ಕೆಟ್; ಬೆಂಗಳೂರು ಸಿಟಿ ಮಿಷನ್ ಬುಕ್ ಡಿಪೋ.

ಯುಗಾದಿಯ ರಿಯಾಯಿತಿ ದರಗಳು

40-1

ನಂಬರ್ ೨ ನೇ ಹಾಸಿಗೆ ಟೋಪಿಗಳು ಇದು ಬಣ್ಣದಲ್ಲಿ ಎಣ್ಣೆಕೆಂಪಾಗಿ ಅತ್ಯುತ್ತಮರೀತಿಯಲ್ಲಿ ಹಾಕಿಸಿ ತಯಾರಿಸಿದ್ದು—ಡಜನ್ 1 ಕ್ಕೆ ರೂ. 6-12-0 ಸ್ವದೇಶಿ ಬ್ಲೇಂಕೆಟ್ 1 ಕ್ಕೆ ರೂ. 1-10-0 ಬೀಡಿ ಟೀಪಾಟ್ ಸೆಟ್ 1 ಕ್ಕೆ 0-12-0 ಮತ್ತು 0-9-0 ಸುತಿಲ್ ವನಾಲಿ ಡಬ್ಬಿ 1 ಕ್ಕೆ 0-3-0 ವಿ. ಪಿ. ಖರ್ಚು ಅಲಾಯಿದಾ.

ವಿಳಾಸ—ದಿ ಉಲ್ಲನ್ ಮಾರ್ಟ್, ಮಂಗಳೂರು

ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ!!

49 (a) 1

ಮಿತ್ರರೇ, ಸರ್ವರೂ ಅಂಗಡಿಗಳಲ್ಲಿಯೂ ಮನೆಗಳಲ್ಲಿಯೂ ಉಪಯೋಗಕ್ಕೆ ಉಪಯುಕ್ತವಾದಂಥಾ ಹೊಸ ನಮೂನೆ ಅಮೇರಿಕನ್ ಕೆರೋಸಿನ್ ಆಯಲ್



ಮ್ಯಾಂಟಲ್ ಲ್ಯಾಂಪು ಫುಲ್ ಸೆಟ್ ೧ ಕ್ಕೆ ಕ್ರಯ ರೂ ೯-೮-೦ ಎಣ್ಣೇ ಖರ್ಚು ಬಹಳ ಕಡಮೆ ೧೦೦ ಮೇಣದಬತ್ತಿಗಳನ್ನು ಏಕಕಾಲದಲ್ಲಿ ಹತ್ತಿಸಿದರೆ ಯಾವ ಪ್ರಕಾಶವಾಗುವದೊ ಆ ಪ್ರಕಾಶ ಈ ಒಂದು ಲ್ಯಾಂಪಿನಿಂದಲೇ ಆಗುತ್ತೆ. ವಿ. ಪಿ. ಯಿಂದಲೂ ರವಾನಿಸುತ್ತೇವೆ. ಫೋಸ್ಟೇಜು ಅಲಾಯಿದಾ ಬೀಳುವುದು.

ಸೂಚನೆ—ನಮಗೆ ಅರ್ಧ ಆಣೆ ಫೋಸ್ಟೇಜು ಸ್ಟ್ಯಾಂಪು ಕಳುಹಿಸುವವರಿಗೆ ಸರ್ವರಿಗೂ ಉಪಯೋಗವಾದ ದೊಡ್ಡ ಸೈಜಿನ ಫೋಸ್ಟು ಕಾರ್ಡು ಒಂದನ್ನು ಮುಫತ್ ರವಾನಿಸುತ್ತೇವೆ.

ನಮ್ಮ ವಿಳಾಸ

ಯಂ. ಯಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಕೃಷ್ಣರಾಜ ಮೊಹಲ್ಲಾ, ಮೈಸೂರು.

ಹಕ್ಕು ಬಾಧ್ಯತೆ ಪಡೆದವರೆಲ್ಲಾ ನೋಡಿ.

48-1

ಮೈಸೂರು ಲಷ್ಕರ್ ಮೊಹಲ್ಲಾ ರವೇ ಬೀದಿಯಲ್ಲಿರುವ ಈ ಕೆಳಗೆ ಷೆಡ್ಯೂಲಿನಲ್ಲಿ ನಮೂದು ಮಾಡುವ ಮರಿಬಸಪ್ಪನವರ ಮಕ್ಕಳು ಮಗ ಎಂ. ಬಸವಲಿಂಗಪ್ಪನವರ ಬಾಬತು ಮನೆಯನ್ನು ಸದರಿಯವರಿಂದ ಈ ಕೆಳಗೆ ನಮೂದು ಮಾಡುವವರು ಕ್ರಯಕ್ಕೆ ತೆಗೆದುಕೊಳ್ಳತಕ್ಕ ಬಗ್ಗೆ ನಿಷ್ಕರ್ಷೆ ಮಾಡಿಕೊಂಡಿದ್ದಾರೆ. ಸದರಿ ಸೊತ್ತಿಗೆ ಸಂಬಂಧಪಟ್ಟ ತಕರಾರ್‌ದಾರರಾಗಲಿ, ಭೋಗ್ಯದಾರರಾಗಲಿ, ಹಕ್ಕುದಾರರಾಗಲಿ ಇದ್ದರೆ ಈ ಲಾಗಾಯಿತು ಒಂದು ತಿಂಗಳೊಳಗಾಗಿ ಈ ಕೆಳಗೆ ನಮೂದು ಮಾಡುವವರಿಗೆ ತಿಳಿಸತಕ್ಕದ್ದು. ಸದರಿ ವಾಯಿದೆಯಲ್ಲಿ ತಿಳಿಸದೆ ಇದ್ದರೆ ಅಂಥಾವರ ಹಕ್ಕು ಬಾಧ್ಯತೆಯು ಷೆಡ್ಯೂಲ್ ಆಸ್ತಿಯನ್ನು ಬದ್ಧಪಡಿಸಲಾರದು.

ಷೆಡ್ಯೂಲ್.—ಮೈಸೂರು ಲಷ್ಕರ್ ಮೊಹಲ್ಲಾ ರವೇ ಬೀದಿಯಲ್ಲಿರುವ ಮುನಿಸಿಪಲ್ ನಂಬರು 1101, 1103, 1103, 1104 ಮತ್ತು 1105. ಇದಕ್ಕೆ ಚಕ್ಕುಬಂದಿ—ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ಸುಬ್ಬರಾಜೇ ಅರಸಿನವರ ಬಂಗಲೆ, ಉತ್ತರಕ್ಕೆ ಗೋವಿಂದಪ್ಪನ ಮನೆ ಮತ್ತು ಬಸವರಾಜೇ ಅರಸಿನವರ ಮನೆ, ದಕ್ಷಿಣಕ್ಕೆ ಹೈ ರೋಡು—ಈ ಮಧ್ಯೆ ಇರುವ ಹೆಂಚಿನ ತೊಟ್ಟಿ ಮನೆ ಮತ್ತು ಇದಕ್ಕೆ ಸೇರಿದ ಭಾವಿ, ಅಂಗಳ ಮತ್ತು ಅಂಗಡಿಗಳು, ಮತ್ತು ಉತ್ತರ ದಿಕ್ಕಿನಲ್ಲಿರುವ ಹಿಂಭಾಗದ ಮನೆ, ಇದಕ್ಕೆ ಸೇರಿದ ಅಂಗಳ ಮತ್ತು ಭಾವಿ ಸಹಾ.

ಕೋಟೆ, ಮೈಸೂರು, ೬—೪—೧೯೧೦. ಮನ್ನಾರ್ ಕೃಷ್ಣಶೆಟ್ಟಿ, ಅರಮನೆ ಹೆಡ್ ಸರಾಫ್.

ವೃತ್ತಾಂತ ಪತ್ರಿಕೆ.

——:o:——

ಸ್ವ ೧೯೧೦ ನೇ ಇಸವಿ ಏಪ್ರಿಲ್ ತಾ ೭ ನೇ ಗುರುವಾರ.

ಹಿಂದುಸ್ಥಾನದಲ್ಲಿ ನೆಮ್ಮದಿಗೆ ಭಂಗವು.

ನಾಸಿಕ್ ಪಟ್ಟಣದ ಕಲೆಕ್ಟರಾಗಿದ್ದ ಮೆ॥ ಜಾಕ್ಸನ್‌ರವರ ಕೊಲೆಪಾತಕಿಯನ್ನೂ ಅವನ ಜೊತೆಗಾರರನ್ನೂ ದಿಯಾಫ್ತಿ ಮಾಡಿದ್ದರಲ್ಲಿ ಅವರೇ ಅಪರಾಧಿಗಳೆಂದು ಸಿದ್ಧಾಂತವಾಯಿತು. ಏಳು ಮಂದಿ ಅಪರಾಧಿಗಳ ಪೈಕಿ ಮೂವರಿಗೆ ಮರಣದಂಡನೆಯನ್ನೂ, ಮೂರು ಮಂದಿಗೆ ಆಮರಣಾಂತವಾದ ಬಂಕೋಲ್ ಶಿಕ್ಷೆಯನ್ನೂ, ಒಬ್ಬನಿಗೆ ಎರಡು ವರುಷದ ಕಠಿಣ ಸಜಾವನ್ನೂ ವಿಧಿಸಿದರು. ಅಲ್ಲಿಗೆ ನ್ಯಾಯವೇನೋ ತೃಪ್ತಿಪಟ್ಟಂತಾಯಿತು; ಆದರೆ ಈ ಮೊಕದ್ದಮೆಯ ವ್ಯವಹಾರಗಳನ್ನು ಆದ್ಯಂತವಾಗಿ ವಿಚಾರಮಾಡಿ ನೋಡುವಲ್ಲಿ ಮನಸ್ಸಿಗೆ ನಾನಾ ವಿಧವಾದ ಸಂಶಯಗಳುಂಟಾಗುತ್ತವೆನ್ನುವುದಕ್ಕೆ ಅಡ್ಡಿಯಿಲ್ಲ. ಒಂದು ಗುಂಪಿನ ಪ್ರಾಯಸ್ಥರು ಕೆಲವರು ಜನ್ಮೂ ಹಸುಳೆಗಳೆಂದು ಹೇಳಬಹುದು ಮಹಾಘೋರವಾದ ಅಪರಾಧವನ್ನು ಅಂದರೆ, ಕೊಲೆಯನ್ನು, ನಡಿಸಿ ಮರಣದಂಡನೆಗೆ ಈಡಾಗಿರುತ್ತಾರೆ. ಅವರು ಈ ರೀತಿ ಮನೋಗತರಾಗುವುದಕ್ಕೆ ಕಾರಣವೇನು ಎಂಬದಾಗಿ ಕೇಳಿದರೆ ಸ್ವದೇಶೀ ವಾತ್ಸಲ್ಯವೆಂಬುವ ಭ್ರಮೆ ಎಂಥಾದ್ದೆಂದು ಅವರಿಗೆ ಸರಿಯಾಗಿ ತಿಳಿಯದೇ ಹೋಯಿತು. ಮತ್ತು ಅವರು ತಮ್ಮ ಸ್ನೇಹಿತನನ್ನು ಮು॥ ಜಾಕ್ಸನ್‌ರವರು ನ್ಯಾಯವಿಮರ್ಶಕರಾಗಿ ಕುಳಿತು ದಿಯಾಫ್ತಿ ಮಾಡಿ ಶಿಕ್ಷಿಸಿದರಲ್ಲಾ ಎಂದು ಹೊಟ್ಟೆಕಿಚ್ಚುಪಟ್ಟು ಹಗೆ ತೀರಿಸಿಕೊಳ್ಳಬೇಕೆಂದು ಹೊರಟರು. ಇವೆರಡು ಕಾರಣಗಳೂ ಈ ಕೊಲೆಯಲ್ಲಿ ಪರಿಣಾಮ ಹೊಂದಿದವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಈ ಸಣ್ಣ ವಯಸ್ಸಿನ ಪ್ರಾಯಸ್ಥರ ನಡೆನುಡಿ ಸ್ಥಿತಿಗತಿ ಆಚಾರ ವ್ಯವಹಾರಗಳು ಬಹುಮಟ್ಟಿಗೆ ಕೆಟ್ಟುಹೋಗಿರಬೇಕೆಂದು ಕಾಣುತ್ತದೆ. ಯಾಕೆಂದರೆ ಅವರ ತಂದೆತಾಯಿಗಳು ಅವರನ್ನು ಸರಿಯಾದ ರೀತಿಯಲ್ಲಿ ಹತೋಟಿಯಲ್ಲಿಟ್ಟುಕೊಂಡು ಬೆಳಸಿದ್ದ ಪಕ್ಷದಲ್ಲಿ ಆ ತಂದೆತಾಯಿಗಳಿಗೆ ತಿಳಿಯದ ರೀತಿಯಲ್ಲಿ ಅವರೆಂದಿಗೂ ಈ ಪ್ರಕಾರ ಪಕ್ಷಪಾತಿಸಿ ದುರ್ಮಾರ್ಗಕ್ಕೆ ಬೀಳುತ್ತಿರಲಿಲ್ಲ. ಒಂದು ವೇಳೆ ಅವರ ತಂದೆಗಳಿಗೆ ತಿಳಿದಿದ್ದು ಅವರೇ ಇದನ್ನು ಪ್ರೋತ್ಸಾಹಪಡಿಸಿದ್ದ ಪಕ್ಷದಲ್ಲಿ ಅವರೂ ತಮ್ಮ ಮಕ್ಕಳಂತೆಯೇ ಅಪರಾಧಿಗಳಾಗಿರುತ್ತಾರೆ. ಹಾಗಲ್ಲದೆ ರಾಜದ್ರೋಹ ವಿಚಾರಗಳನ್ನು ಹಿಡಿದು ಹೋರಾಡುತ್ತಿರುವವರಾಗಲಿ, ಕೆಲವು ವರ್ತಮಾನ ಪತ್ರಿಕೆಗಳ ಬರವಣಿಗೆಗಳಾಗಲಿ ಈ ಯೌವನಸ್ಥರಿಗೆ ಅಂಥಾ ಕ್ರೂರಕೃತ್ಯ ನಡಿಸಲು ಉತ್ತೇಜನ ಕೊಟ್ಟಿದ್ದರೆ ಆ ಹೋರಾಟಗಾರರೂ ಪತ್ರಿಕಾ ಎಡಿಟರುಗಳೂ ಈ ಕೊಲೆಗೆ ಕಾರಣರಾಗಿರುವರು. ಇಂಥವರು ಇನ್ನು ಮುಂದೆ ಆ ರೀತಿ ಉತ್ತೇಜನ ಕೊಡದಂತೆ ಆಗುವುದಕ್ಕೆ ಸರ್ಕಾರದವರು ಕಾನೂನನ್ನು ಅತ್ಯಂತ ಕಠಿಣವಾಗಿ ಮಾಡಬೇಕು. ಆದರೆ ಅಂಥಾ ಕಾನೂನು ಸರ್ವತ್ರ ಅನ್ವಯಿಸತಕ್ಕದ್ದಾಗುವುದರಿಂದ ಕೆಲವು ವೇಳೆ ನಿರಪರಾಧಿಗಳೂ ಅದಕ್ಕೆ ಸಿಕ್ಕಿ ನರಳಬೇಕಾಗುವುದೆಂದು ವಿಷಾದಿಸುವೆವು. ಈ ಹೋರಾಟಗಾರರು ಜನರನ್ನು ಮೋಸಪಡಿಸಿ ಹಾಳುಮಾಡದಂತೆ ತಡೆಯುವುದಕ್ಕಾಗಿ ಪಬ್ಲಿಕ್ ಮೀಟಿಂಗುಗಳನ್ನು ನಡಿಸಕೂಡದೆಂದು ವಿಧಿಸಿದ ಪಕ್ಷದಲ್ಲಿ ಸತ್ಯವಂತರು ಪ್ರಜೆಗಳಿಗೆ ವಿವೇಕವನ್ನು ಕಲಿಸಿ ಸನ್ಮಾರ್ಗವನ್ನು ಅವಲಂಬಿಸುವಂತೆ ಬೋಧಿಸುವುದಕ್ಕಾಗಿ ಸಭೆಗಳನ್ನು ನಡಿಸಲು ಅಡಚಣೆಯಾಗುತ್ತದೆ. ವರ್ತಮಾನ ಪತ್ರಿಕೆಯ ವಿಷಯದಲ್ಲಿ ಕಠಿಣತರವಾದ ಕಾನೂನು ಮಾಡಿ ಜಾರಿಗೆ ತಂದರೆ ರಾಜಭಕ್ತಿ ಪೂರಿತವಾದ ವರ್ತಮಾನ ಪತ್ರಿಕೆಗಳು ಅರಾಜಕ ಪತ್ರಿಕೆಗಳೊಡನೆ ಕಷ್ಟನಷ್ಟಗಳಿಗೆ ಈಡಾಗುವವು. ಪ್ರಜೆಗಳು ಒಟ್ಟುಗೂಡಿ ಬಾಳುವುದರಲ್ಲಿ ಉಂಟಾಗುವ ಪರಿಣಾಮವೆಲ್ಲಾ ಹೀಗೆಯೇ ಸರಿ.

ಈಗ ಹಿಂದುಸ್ಥಾನದಲ್ಲಿ ಗೋಚರವಾಗುತ್ತಿರುವ ಸ್ಥಿತಿಯನ್ನು ಬದಲಾವಣೆ ಮಾಡಲಾಗದೇ ಎಂದು ಪ್ರಶ್ನೆಮಾಡಬಹುದು. ಕೆಲವರು ಈ ಪ್ರಾಯಸ್ಥರು ದೇವರು ಭಕ್ತಿ ಪೂಜ್ಯ ಶಾಸನಗಳ ವಿಷಯದಲ್ಲಿ ಯಾವುದೊಂದು ಬುದ್ಧಿ ಬೋಧನೆಯೂ ಇಲ್ಲದೆ ಬೆಳೆದವರಾದದ್ದರಿಂದ ಅವರು ದುರ್ಮಾರ್ಗಿಗಳಾದರು ಎಂದು ಹೇಳುವರು. ಆದರೆ ಅವರಲ್ಲಿ ಕೆಲವರು ಮತವಿಚಾರವಾದ ಪುಸ್ತಕಗಳನ್ನು ಓದಿ ಬುದ್ಧಿಯನ್ನು ಕೆಡಿಸಿಕೊಂಡು ದುರ್ನೀತರಾಗಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಈಗಿನ ವಿದ್ಯಾಭ್ಯಾಸ ಕ್ರಮವು ಈ ದುಸ್ಥಿತಿಗೆ ಕಾರಣವಾದದ್ದಲ್ಲವೆಂದೂ, ಈ ರಾಷ್ಟ್ರದಲ್ಲಿ ಅರಸನ ಮೇಲೂ ಆಳುವವರ ಮೇಲೂ ತಿರುಗಿ ಬೀಳತಕ್ಕಂಥಾ ದುರಾತ್ಮರು ಬ್ರಾಹ್ಮಣಯತಿನಿಮಿತ್ತವೂ ಇದ್ದೇ ಇರುತ್ತಾರೆಂದೂ ಮತ್ತೆ ಕೆಲವರು ಹೇಳುತ್ತಾರೆ.

ಸ್ವದೇಶಾಭಿಮಾನದ ವಿಷಯದಲ್ಲಿ ಅನೇಕ ಯೌವನಸ್ಥರು ತಪ್ಪಾದ ಅಭಿಪ್ರಾಯಗಳನ್ನಿಟ್ಟುಕೊಂಡು ಆ ದುರಭಿಪ್ರಾಯಗಳ ಪ್ರಕಾರ ನಡೆಯುವುದೇ ತಮ್ಮ ಕರ್ತವ್ಯವೆಂದು ಭಾವಿಸುತ್ತಾರೆ. ಮತ್ತು ಅವರು ಮಾಡುವ ಕೊಲೆ ಮೊದಲಾದ ಕ್ರೂರಕೃತ್ಯಗಳು ಬಹು ಶ್ರೇಷ್ಠವೂ ಪರಾಕ್ರಮಯುಕ್ತವೂ ಆಗಿರುವವೆಂದು ತಿಳಿದಿರುವರೇ ವಿನಹಾ ಕೊಲ್ಲಬೇಕೆಂದು ದೇವರು ನಿರೂಪಿಸಿರುವ ಸರ್ವಸಾಮಾನ್ಯವಾದ ಆಜ್ಞೆಯು ಆ ದುರಾತ್ಮರ ಸ್ಮರಣೆಗೂ ಬರುವುದಿಲ್ಲ. ತಂದೆ ತಾಯಿಗಳೂ, ವಿದ್ಯಾ ಗುರುಗಳೂ, ವರ್ತಮಾನ ಪತ್ರಿಕೆಗಳಲ್ಲಿ ಬರೆಯತಕ್ಕವರೂ ಕೊಲೆ ಮೊದಲಾದ ದುರಾಗತ ಕೃತ್ಯಗಳು ಹೇಯವಾದವುಗಳೆಂದು ಹುಡುಗರಿಗೆ ವಿವೇಕ ಕಲಿಸಬೇಕು; ಅವರು ಪ್ರಜೆಯ ಹಕ್ಕು ಬಾಧ್ಯತೆ, ಅವರ ಕರ್ತವ್ಯಾಂಶಗಳನ್ನೂ ಯಥಾರ್ಥವಾದ ದೇಶಾಭಿಮಾನವೆಂಥಾದ್ದೆಂಬುದನ್ನೂ ಪರಿಷ್ಕಾರವಾಗಿ ವಿವರಿಸಿ ತಿಳಿಸಬೇಕು. ಈ ಭಾಗದಲ್ಲಿ ತಂದೆತಾಯಿಗಳ ಜವಾಬ್ದಾರಿಯೇ ಬಹು ವಿಶೇಷವಾದದ್ದೆಂದು ನಮಗೆ ತೋರುತ್ತದೆ. ಅವರು ತಮ್ಮ ಮಕ್ಕಳು ದುಷ್ಟರ ಮತ್ತು ದುರ್ಗುಣಿಗಳ ಸಹವಾಸಕ್ಕೆ ಬಿದ್ದು ಕೆಟ್ಟು ಹೋಗದಂತೆ ಮೊದಲಿಂದಲೂ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುತ್ತಾ ಬರಬೇಕು. ತಂದೆ ತಾಯಿಗಳು ತಮ್ಮ ನ್ಯಾಯವಾದ ಕರ್ತವ್ಯವನ್ನು ಸರಿಯಾಗಿ ನಡಿಸದೆ ತಪ್ಪಿಬಿಟ್ಟು ತಮ್ಮ ಮಕ್ಕಳು ದುರ್ಮಾರ್ಗದಲ್ಲಿ ಬಿದ್ದು ಪೋಲೀಸಿನವರ ಕೈಗೆ ಸಿಕ್ಕಿ ನರಳುವುದನ್ನು ನೋಡಿ ಆಶ್ಚರ್ಯಪಡಬೇಕಾದದ್ದಿಲ್ಲ. ರಾಜಭಕ್ತಿ ಪೂರಿತರಾದ ಸಮಸ್ತ ಪ್ರಜೆಗಳೂ ಒಂದಾಗಿ, ಐಶ್ವರ್ಯ ಸುಖ ಸಮಾಧಾನಗಳನ್ನೀಯುವ ಗವರ್ನ್‌ಮೆಂಟನ್ನು ನಾಶಮಾಡಬೇಕೆಂಬ ರಾಜಕಂಟಕರನ್ನು ನಿರ್ಮೂಲವಾಗಿ ಅಡಗಿಸಿಬಿಡಬೇಕಾಗಿದೆ.

ನೋವು ಪ್ರಯೋಜನಕಾರಿಯಾದುದೋ?

ಒಬ್ಬ ಚಿಕ್ಕ ಹುಡುಗನು ತನ್ನ ತಾಯಿಯ ಅಣ್ಣನೂ ಆಗಾಗ್ಗೆ ಸದರಿ ಚಾಕನ್ನು ಹಿಡಿದು ಅಡಿಗೆಗೆ ಬೇಕಾದ ಕಾಯಿಪಲ್ಯಗಳನ್ನು ಕತ್ತರಿಸಿಕೊಡುವುದನ್ನೂ ಸಣ್ಣ ಸಣ್ಣ ಕೋಲುಗಳನ್ನು ಒಡೆಯುವುದನ್ನೂ ನೋಡಿ ನಾನು ಯಾವಾಗಲಾದರೂ ಆ ಚಾಕನ್ನು ಹಿಡಿದು ಪ್ರಯೋಗಿಸಬೇಕೆಂದು ಬಯಸಿದನು. ಅವನು ಕೇಳಿದಾಗ ಅದನ್ನು ಅವನಿಗೆ ಎಟುಕದ ಹಾಗೆ ಎತ್ತರ ಸ್ಥಾನದಲ್ಲಿಟ್ಟು ಅದನ್ನು ನೀನು ಮುಟ್ಟಬಾರದೆಂದೂ ಮುಟ್ಟಿದರೆ ಅಪಾಯವಾದೀತೆಂದೂ ಹೇಳುತ್ತಿದ್ದರು. ಆದರೆ ಒಂದು ದಿನ ತಾಯಿಯು ಕಾಯಿಪಲ್ಯಗಳನ್ನು ಹೆಚ್ಚುತ್ತಿದ್ದು ಏನೋ ಅವಸರವಾದ ಕೆಲಸದ ನಿಮಿತ್ತ ಚಾಕನ್ನು ಎತ್ತಿಡದೆ ಹೊರಗೆ ಹೋಗಿ ಸ್ವಲ್ಪ ಕಾಲದವರೆಗೂ ಬರಲಿಲ್ಲ. ಒಂಟಿಯಾಗಿ ಬಿಟ್ಟಿದ್ದ ಹುಡುಗನು ಈಗ ತನ್ನ ಆಶೆಯನ್ನು ಪೂರೈಸಿಕೊಳ್ಳುವದಕ್ಕೆ ತಕ್ಕ ಸಮಯವು ದೊರಕಿತೆಂದು ಆ ಚಾಕನ್ನು ಹಿಡಿದು ಅದು ಥಳಥಳನೆ ಹೊಳೆಯುತ್ತಿರುವುದನ್ನು ನೋಡಿ ಸಂತೋಷಪಡುತ್ತಾ ಎದರಿಗೆ ಸಿಕ್ಕಿದ್ದನ್ನೆಲ್ಲಾ ಕತ್ತರಿಸುತ್ತಾ ತನಗೆ ಸಿಕ್ಕಿದ ಹೊಸ ಕೆಲಸದಲ್ಲಿ ಸಂಭ್ರಮಪಡುತ್ತಿದ್ದನು. ಹಾಗೆ ಅತ್ತಿತ್ತ ಸುಳಿದಾಡುವಾಗ ಅಣ್ಣನ ಸೀಸದಕಡ್ಡಿಯನ್ನು ತೆಗೆದುಕೊಂಡು ಚೂಪುಮಾಡುವದಕ್ಕೆ ಯತ್ನಿಸಲು ಆ ಚಾಕು ಆಕಸ್ಮಿಕವಾಗಿ ಅವನ ಬೆರಳಿಗೆ ತಗಲಿ ರಕ್ತ ಸುರಿಯಲಾರಂಭಿಸಿತು. ಆ ಹುಡುಗನು ಬಟ್ಟನೆ ಚೀರುತ್ತಾ ಗಟ್ಟಿಯಾಗಿ ಅಳಲಾರಂಭಿಸಿದನು. ತಾಯಿ ಅವನಿಗೆ ತಕ್ಕ ಔಷಧ ಮಾಡಿದ್ದರಿಂದ ಅದು ಎರಡು ಮೂರು ದಿನಗಳಲ್ಲೇ ವಾಸಿಯಾಯಿತು. ಆ ಹುಡುಗನು ತಾಯಿಯ ಸಂಗಡ ಕೋಣೆಯಲ್ಲಿ ಕುಳಿತಿರುವಾಗ ತಾಯಿಯನ್ನು ಕುರಿತು—ಅಮ್ಮಾ ನೀವು ಆ ಚಾಕನ್ನು ನಾನು ಮುಟ್ಟಬಾರದೆಂದು ಹೇಳಿದಿರಿ. ಅದನ್ನು ನಾನು ಮುಟ್ಟಿದ್ದರಿಂದ ನನಗೆ ಬಹು ನೋವಾಯಿತು. ಅಂದವಾದ ಚಮತ್ಕಾರವಾದ ವಸ್ತುಗಳನ್ನು ನಾನು ಮುಟ್ಟಬಾರದೇ? ಇವರಿಂದ ನೋವಾಗುವದು ಯಾತಕ್ಕೆ?

ತಾಯಿ—ಮಗನೆ, ಕೆಲವು ವಸ್ತುಗಳು ಅಂದವಾಗಿಯೂ ಚಮತ್ಕಾರವಾಗಿಯೂ ಇದ್ದಾಗ್ಯೂ ಅಪಾಯಕರವಾಗಿವೆ. ಅವುಗಳಿಂದ ನೋವಾಗುವುದೇ ನಿಜ. ಅವುಗಳನ್ನು ನೀನು ಮುಟ್ಟಬಾರದು.

ಮಗ—ದೇವರು ಒಳ್ಳೆಯವನು ಎಂದು ನೀವು ಆಗಾಗ್ಗೆ ಹೇಳುತ್ತೀರಿ. ಆದರೂ ದೇವರು ಇಂಥ ವಸ್ತುಗಳಿಂದ ನಮಗೆ ನೋವುಂಟಾಗುವಂತೆ ಯಾಕೆ ಮಾಡಿದ್ದಾನೆ?

ಹುಡುಗನು ಈ ಪ್ರಶ್ನೆಯನ್ನು ಕೇಳುವಷ್ಟರಲ್ಲಿ ಅವನ ಅಣ್ಣನೂ ಅಕ್ಕನೂ ತಾಯಿಯಿದ್ದ ಕೋಣೆಗೆ ಅಕಸ್ಮಾತ್ ಬಂದರು. ಆಗ ತಾಯಿ ತನ್ನ ಮಕ್ಕಳಿಗೆ ತಕ್ಕ ಬೋಧೆ ಮಾಡುವದಕ್ಕೆ ಇದು ತಕ್ಕ ಸಂದರ್ಭವೆಂದು—ಮಗನೆ ನೋವು ಅನೇಕ ವೇಳೆ ಬಹಳ ಪ್ರಯೋಜನಕರವಾದದ್ದು. ಅಪಾಯಕರವಾದ ಪದಾರ್ಥಗಳಿಂದ ನೋವು ಸಂಭವಿಸದಿದ್ದರೆ ಇನ್ನೂ ಹೆಚ್ಚು ಹಾನಿ ಸಂಭವಿಸುವದು ಅಂದಳು.

ಇದನ್ನು ಕೇಳಿದ ದೊಡ್ಡ ಮಗನು—ಅಮ್ಮಾ, ನೋವಿನಿಂದ ಪ್ರಯೋಜನವಿದೆಯೆಂದು ಕೇಳಿ ನನಗೆ ಸೋಜಿಗವಾಗುತ್ತದೆ. ನಿಮ್ಮ ಅಭಿಪ್ರಾಯವೇನು? ದಯವಿಟ್ಟು ತಿಳಿಸಿರಿ.

ತಾಯಿ—ನೋಡು ಮಗನೆ, ನಿನ್ನ ತಮ್ಮನ ಬೆರಳಿಗೆ ಚಾಕು ತಗಲಿ ನೋವಾದ್ದರಿಂದ ಜೀವವದನ್ನು ತಕ್ಷಣ ಬಿಟ್ಟನು. ರಕ್ತ ಸುರಿಯುವ ನೋವಾಗದಿದ್ದರೆ ಬೆರಳು ಪೂರ್ತಿ ಹರಿದು ತುಂಡಾಗುವವರೆಗೂ ಬಿಡದೆ ಬೆರಳನ್ನು ಕಳೆದುಕೊಳ್ಳುತ್ತಿದ್ದನು. ಇದು ಪ್ರಯೋಜನಕಾರಿಯಲ್ಲವೆ? ಆ ನೋವೆ ಅವನಿಗೆ ಬಿಡು ಬಿಡು ಎಂದು ಬೇಡ. ಹೆಚ್ಚು ಅಪಾಯವಾದೀತೆಂದು ಎಚ್ಚರಿಸಿತಲ್ಲವೆ? ಒಂದು ವೇಳೆ ಈ ಹುಡುಗ ಚಾಕನ್ನು ಹಿಡಿದು ಆಡುತ್ತಿದ್ದ ಹಾಗೆ ಬೆಂಕಿ ಹಿಡಿದು ಆಡುತ್ತಿದ್ದನೆಂದು ಭಾವಿಸೋಣ. ಒಂದು ವೇಳೆ ಬೆಂಕಿ ಅವನ ದೇಹಕ್ಕೆ ತಗಲಿ ಸುಡುತ್ತಿದ್ದರೂ ನೋವಾಗದೇ ಇದ್ದರೆ ದೇಹವೆಲ್ಲಾ ಸುಡುವ ತನಕ ಅವನಿಗೆ ಅರಿವು ಬಾರದೇ ಸುಮ್ಮನಿರುವನು. ಇದರಿಂದ ಬಹಳ ನಷ್ಟವಲ್ಲವೇ? ನೋವಾಗುವುದರಿಂದ ಥಟ್ಟನೆ ಬೆಂಕಿಯನ್ನು ಆರಿಸಿ ತನ್ನನ್ನು ಬದುಕಿಸಿಕೊಳ್ಳಲಿಕ್ಕೆ ಸಹಾಯವಾಯಿತಷ್ಟೆ?

ಮಗ—ನೀವು ಹೇಳುವದು ನನಗೆ ಸ್ವಲ್ಪ ಹೊಸದಾಗಿ ತೋರುತ್ತದೆ. ಆದರೂ ಅದು ನಿಜವೆಂದು ನಂಬಬೇಕು. ಆದರೆ ಹೀಗೆಯೇ ಎಲ್ಲಾ ವಿಷಯಗಳಲ್ಲಿಯೂ ಭಾವಿಸಬೇಕೇ?

ತಾಯಿ—ಹೌದು ಮಕ್ಕಳೇ ಮನುಷ್ಯನು ಒಬ್ಬನು ಆಹಾರವನ್ನು ಮಿತಿಯಿಲ್ಲದೆ ಉಂಡರೆ ಅವನಿಗೆ ಉದರ ಶೂಲೆ ಅಥವಾ ಭೇದಿ ಬರುವದು ಆ ಉದರ ಶೂಲೆ ನೀನು ಇನ್ನು ಹೆಚ್ಚು ಊಟಮಾಡಬೇಡವೆಂಬ ಎಚ್ಚರಿಸುವದು ದೇಹ ಸಂಬಂಧವಾದ ವಿಷಯಗಳಲ್ಲಿ ಹ್ಯಾಗೋ ಹಾಗೆ ನೀತಿಸಂಬಂಧವಾದ ಮತ್ತು ಆತ್ಮ ಸಂಬಂಧವಾದ ವಿಷಯಗಳಲ್ಲೂ ಇರುತ್ತದೆ ಒಬ್ಬ ಹುಡುಗನು ಕೆಟ್ಟ ವರ್ತನೆಯನ್ನು ಮಾಡಿ ಸುಳ್ಳು ಹೇಳಿದರೆ ಅಥವಾ ಮೋಸ ಮಾಡಿದರೆ ಒಂದು ಸಲ ಅವನ ಹಿರಿಯರು ಅಥವಾ ಉಪಾಧ್ಯಾಯರು ಅವನನ್ನು ಎಚ್ಚರಿಸಿ ಶಿಕ್ಷಿಸಿ ಬುದ್ಧಿ ಹೇಳುತ್ತಾರೆ ಆ ಬುದ್ಧಿ ಅವನು ಕೇಳದೆ ಹೋದರೆ ಅವನು ದುಷ್ಟತನದಲ್ಲಿ ಬೆಳೆಯುತ್ತ ಬೆಳೆಯುತ್ತ ಕಡೆಗೆ ಬಹಳ ಕೆಟ್ಟುಹೋದಾನು

ಮಗ—ಆದರೆ ಒಬ್ಬ ಹುಡುಗನು ತಾನು ಮಾಡುವ ಕೆಟ್ಟ ಕೆಲಸವು ಯಾರಿಗೂ ತಿಳಿಯದ ಹಾಗೆ ಮಾಡಿ ಶಿಕ್ಷೆ ತಪ್ಪಿಸಿಕೊಳ್ಳಬಹುದಲ್ಲವೇ?

ತಾಯಿ—ಹೌದು, ಹಾಗೆ ಮಾಡುವದು ಅಸಾಧ್ಯವಲ್ಲ ಆದರೆ ದೇವರು ಒಬ್ಬೊಬ್ಬನ ಮನಸ್ಸಿನಲ್ಲಿ ತನ್ನ ತನ್ನ ದುಷ್ಕೃತ್ಯವನ್ನು ಎಚ್ಚರಿಸುವ, ಗದರಿಸುವ ಒಬ್ಬ ಸೂತ್ರಧಾರಿಯನ್ನು ಇಟ್ಟಿದ್ದಾನೆ ಕಳ್ಳತನ ಮಾಡಿದ್ದು ಪತ್ತೆಯಾಗದಿದ್ದರೂ ಕಳ್ಳನಿಗೆ ಕಳ್ಳತನದ ಯೋಚನೆ ಹುಟ್ಟಿದಾಗಲೆ ಅವನ ಮನಸ್ಸಿನಲ್ಲಿ ಅಧೈರ್ಯವನ್ನೂ ಅಸಮಾಧಾನವನ್ನೂ ದಿಗಿಲನ್ನೂ ಆ ಸೂತ್ರಧಾರಿಯು ಹುಟ್ಟಿಸುತ್ತಾನೆ ಸಂತೋಷಕ್ಕೆ ಬದಲಾಗಿ ಕರಕರೆ, ಅಸಮಾಧಾನಕ್ಕೆ ಬದಲಾಗಿ ಅತೃಪ್ತಿ ಇವು ಪಾಪಮಾಡುವವನ ಮನಸ್ಸಿನಲ್ಲಿ ತಾನಾಗಿ ಹುಟ್ಟುತ್ತವೆ ಇದಕ್ಕೆ ಕೆಲವು ಜನರು ಅಂತಃಸಾಕ್ಷಿಯೆಂತಲೂ ಕೆಲವರು ಮನಸ್ಸಾಕ್ಷಿಯೆಂತಲೂ ಹೇಳುತ್ತಾರೆ ಆದರೆ ಇದು ದೇವರು ಪಾಪಿಷ್ಠನಿಗೆ ಕೊಡುವ ಎಚ್ಚರಿಕೆ ಇದು ಮನಸ್ಸಿನಲ್ಲಿ ಉಂಟಾಗುವ ನೋವು ಇದು ನನ್ನ ದುಷ್ಕೃತ್ಯವನ್ನು ಬಿಡದೆ ಇದ್ದರೆ ಇನ್ನೂ ಹೆಚ್ಚು ಕೆಡಕಿಗೆ ಕಾರಣವಾದೀತು ಎಂದು ಗದರಿಸುವ ದೇವರ ವಾಕ್ಯ ಇದು ನಮ್ಮ ತಂದೆತಾಯಿಗಳಿಗಿಂತ ಗುರುಗಳಿಗಿಂತ ಸಮೀಪವಾಗಿದ್ದು ನಮ್ಮನ್ನು ಸನ್ಮಾರ್ಗದಲ್ಲಿ ನಡಿಸುವ ಸ್ನೇಹಿತನು ಎಂದು ತಿಳಿಯಿರಿ ಬೆಂಕಿ, ಚಾಕುಗಳು ದೇಹಕ್ಕೆ ತಗಲಿ ನೋವನ್ನು ಕೊಟ್ಟು ನಮಗೆ ಸಂಭವಿಸಲಿಕ್ಕಿರುವ ಅಪಾಯವನ್ನು ತಿಳಿಸುವ ಮೇರೆಗೆ ಮನಸ್ಸಾಕ್ಷಿಯು ಪಾಪಮಾಡುವವನ ಮನಸ್ಸಿಗೆ ಪೀಡೆಯನ್ನೂ ಅಸಂತೋಷವನ್ನೂ ಕೊಡುವದರಿಂದ ಅವನನ್ನು ಎಚ್ಚರಿಸುತ್ತದೆ.

ಮಗ—ಆದರೂ ತಪ್ಪು ಮಾಡಿದವರು ಅದನ್ನು ಬಿಡುವದಿಲ್ಲವೆಂದು ತೋರುತ್ತ ಬಾಕಿನಿಂದ ಕೊಯ್ದುಕೊಂಡವನೂ ಬೆಂಕಿಯಿಂದ ಸುಟ್ಟುಕೊಂಡವನೂ ಇನ್ನು ಮೇಲೆ ಅವುಗಳಿಂದ ತನಗೆ ನೋವಾಗದಂತೆ ಎಚ್ಚರವಾಗಿರುತ್ತಾನೆ ಅದರಂತೆ ಮನಸ್ಸಾಕ್ಷಿಯಿಂದ ಎಚ್ಚರ ಹೊಂದಿದವನು ಯಾಕೆ ಪಾಪ ಮಾಡುವದನ್ನು ಬಿಡುವದಿಲ್ಲ

ತಾಯಿ—ಮಗನೇ, ನೀನು ಹೇಳಿದ್ದು ನಿಜ ಅನೇಕ ಮನುಷ್ಯರು ದೇವರ ಎಚ್ಚರಿಕೆಯನ್ನು ತಿರಸ್ಕರಿಸಿ ಪಾಪದ ಪಥದಲ್ಲಿಯೇ ನಡೆದು ಮನಸ್ಸಾಕ್ಷಿಯನ್ನು ತಿರಸ್ಕರಿಸುತ್ತಾರೆ ಅದರಿಂದ ಅವರ ಶಿಕ್ಷೆ ಸ್ವಲ್ಪ ನಿಧಾನವಾದರೂ ತಪ್ಪದೆ ಬರುತ್ತದೆ ಮತ್ತು ಅದು ನಿಧಾನವಾದಷ್ಟು ಹೆಚ್ಚು ಭಯಂಕರವಾಗಿರುವದು

ಒಳದೇಶದ ವೃತ್ತಾಂತಗಳು

ಕೆಲವು ಬಾತ್ಮಿಗಳು ತಾಲೂಕಿನಿಂದ ನಮಗೆ ಕಳುಹಿಸಿದ್ದರಿಂದ ಅವನ್ನು ಈ ವಾರ ಪ್ರಕಟಿಸಲು ಅವಕಾಶವಾಗಲಿಲ್ಲವೆಂದು ವ್ಯಸನಪಡುತ್ತೇವೆ

ಬ್ರಿಟಿಷ್ ರೆಸಿಡೆಂಟರಾದ ಮೆ|| ಎಸ್ ಎಂ. ಫ್ರೇಸರ್‌ರವರು ಇಷ್ಟರಲ್ಲೇ ರಜಾಪಡೆದು ಪತ್ನೀಸಹಿತ ಕೆಲವು ಕಾಲದ ವರೆಗೆ ಸೀಮೆಗೆ ಪ್ರಯಾಣ ಮಾಡುವವರಾಗಿದ್ದಾರೆ

ಕಳೆದ ಶುಕ್ರವಾರ ಬೆಂಗಳೂರು ನಗರ್‌ತರ ಪೇಟೆಯಲ್ಲಿ ಒಂದು ಮನೆ ಛಾವಣಿ ಕುಸಿದು ಬಿದ್ದು ಒಬ್ಬ ಹೆಂಗಸು ಅಕಾಲಮರಣ ಹೊಂದಿದಳೆಂದು ತಿಳಿಯುತ್ತದೆ

ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರು ಕಳೆದ ವಾರ ರಾಜಧಾನಿಗೆ ಬಂದು, ಇಲ್ಲಿನ ಕಾಲೇಜಿನ ಕೆಲವು ವಿದ್ಯಾಸನಗಳನ್ನು ತನಿಖೆಮಾಡಿಕೊಂಡು ವಾಪಸು ಹೋದರು.

ಮೈಸೂರು ಪಟ್ಟಣದ ಕೋ ಆಪರೇಟಿವ್ ಸೊಸೈಟಿಯ ವಾರ್ಷಿಕ ಜನರಲ್ ಮೀಟಿಂಗು ಈ ತಿಂಗಳ ತಾ ೨೪ನೇ ಭಾನುವಾರ ಸಾಯಂಕಾಲ ಸುಮಾರು ೪ ಗಂಟೆಗೆ ಜರುಗತಕ್ಕದ್ದೆಂದು ಆ ಸಂಘದ ಮೇಲ್ವಿಚಾರಣೆಯ ಕಮಿಟಿ ಮೆಂಬರುಗಳು ಗೊತ್ತುಮಾಡಿರುತ್ತಾರೆ

ತುಂಕೂರು, ಗುಬ್ಬಿ ತಾಲ್ಲೂಕು ಮತ್ತು ಕೊರಟಗೆರೆ ಸಬ್ ತಾಲ್ಲೂಕುಗಳಿಗೆ ಸೇರಿದ ೩೬೭ ಗ್ರಾಮಗಳ ರಿವಿಜನ್ ಸರ್ವೆ ಸೆಟ್ಲ್‌ಮೆಂಟು ಪೂರೈಸಿತು. ಸರ್ಕಾರದವರು ೧೯೧೦-೧೧ನೇ ಸಾಲಿನ ಲಾಗಾಯಿತು ೩೦ ವರುಷಗಳ ವರೆಗೆ ಹೊಸ ಕಂದಾಯದ ದರಗಳನ್ನು ಜಾರಿಗೆ ತರತಕ್ಕದ್ದೆಂದು ಹುಕುಂ ಕೊಟ್ಟಿರುತ್ತಾರೆ

ಶ್ರೀಮನ್ ಮಹಾರಾಜರವರು ಪರಿವಾರ ಸಮೇತ ಕಳೆದ ಶನಿವಾರ ಬೆಳಗ್ಗೆ ಸುಮಾರು ೧೦|| ಗಂಟೆಗೆ ಮೋಟಾರ್ ಗಾಡಿಯಲ್ಲಿ ಬೆಂಗಳೂರಿನಿಂದ ರಾಜಧಾನಿಯನ್ನು ಸುರಕ್ಷಿತವಾಗಿ ತಲುಪಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು ಅವರು ಇನ್ನೊಂದು ವಾರದಲ್ಲಿ ಇಲ್ಲಿಂದ ನೀಲಗಿರಿಗೆ ಪ್ರಯಾಣ ಮಾಡುವವರಾಗಿದ್ದಾರೆ.

ಮೈಸೂರು ಪಟ್ಟಣದಲ್ಲಿರುವ ಸಿವಿಲ್ ಕೋರ್ಟುಗಳಿಗೆ ಬೇಸಿಗೆ ರಜವನ್ನು ಇದೇ ಏಪ್ರೆಲ್ ೧೧ನೇ ಲಾಗಾಯಿತು ಕೊಡಬೇಕಾಗಿದ್ದದ್ದನ್ನು ಬದಲಾವಣೆ ಮಾಡಿ, ಕೋರ್ಟುಗಳು ಮೇ ತಿಂಗಳ ತಾ. ೧೯ನೇ ಗುರುವಾರದಿಂದ ಜೂನ್ ಆಖೈರ್ ವರೆಗೆ ಮುಚ್ಚಲ್ಪಡತಕ್ಕದ್ದೆಂದು ಹುಕುಂ ಆಗಿರುತ್ತದೆ ಈ ಬದಲಾವಣೆಯು ಸಂಸ್ಥಾನದ ಇತರ ಸಿವಿಲ್ ಕೋರ್ಟುಗಳಿಗೆ ಅನ್ವಯಿಸುವುದಿಲ್ಲ

ದಾಮೋದರದಾಸ್ ಫಂಡಿನಿಂದ ವಿದ್ಯಾರ್ಥಿವೇತನವನ್ನು ಪಡೆದು ವಿಲಾಯಿತಿಗೆ ಹೋಗಿ ವ್ಯಾಸಂಗಮಾಡಿ ಬಹು ಪ್ರಶಸ್ತವಾಗಿ ತೇರ್ಗಡೆ ಹೊಂದಿ ಬಂದಿರುವ ಮೆ|| ಎನ್. ಎಸ್. ಸುಬ್ಬರಾಯರಿಗೆ ಸರ್ಕಾರದವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ನೌಕರಿಯನ್ನು ಕೊಟ್ಟಿರು. ಇವರು ಮೊನ್ನೆ ರಾಜಧಾನಿಗೆ ಬಂದು ಇಲ್ಲಿನ ಕಾಲೇಜಿನಲ್ಲಿ ಲೆಕ್ಚರರಾಗಿ ಕೆಲಸಮಾಡುತ್ತಿದ್ದಾರೆ.

ನೆನ್ನೆ ಬೆಳಗ್ಗೆ ಶ್ರೀ ಶಿವಗಂಗಾ ಸ್ವಾಮಿಗಳವರು ಪರಿವಾರ ಸಮೇತ ನಂಜನಗೂಡು ಮಾರ್ಗವಾಗಿ ರಾಜಧಾನಿಗೆ ದಯಮಾಡಿದರು. ಅರಮನೆಯ ಮರ್ಯಾದೆಯಿಂದ ಸಲ್ಲತಕ್ಕ ಉಪಚಾರಗಳಿಂದ ಅವರನ್ನು ಮೆರವಣಿಗೆಯಲ್ಲಿ ಕರೆದು ತಂದರು. ಶ್ರೀಮನ್ ಮಹಾರಾಜರವರು ಅರಮನೆಯಲ್ಲಿ ಧೂಳಿ ಪಾದಪೂಜೆಯನ್ನು ಮಾಡಿದ ಒಳಿಕ ಸ್ವಾಮಿಗಳು ಸಂಸ್ಕೃತ ಪಾಠಶಾಲೆಗೆ ದಯಮಾಡಿ ಇಳುಕೊಂಡಿದ್ದಾರೆ. ಈ ದಿನ ಕರೀಕಲ್ಲು ತೊಟ್ಟಿಯಲ್ಲಿ ಸ್ವಾಮಿಗಳಿಗೆ ಅರಮನೆ ಕಟ್ಟಳೆಯ ಪಾದಪೂಜೆಯು ಬೆಳೆಯುವುದು

ರಾಜಧಾನಿಯಲ್ಲಿ ಈಚೆಗೆ ಸಣ್ಣ ದೊಡ್ಡ ಕಳುವುಗಳು ಪ್ರಾರಂಭವಾಗಿರುತ್ತವೆ ಹಳೇ ಅಗ್ರಹಾರದಲ್ಲಿ ಶಾಮಣ್ಣನವರನ್ನು ಹಗಲಿನಲ್ಲೇ ಜಖಂಮಾಡಿ ಸುಮಾರು ೨೦೦ ರೂಪಾಯಿನ ನಗಗಳನ್ನು ಅಪಹರಿಸಿದರು. ನಂಜರಾಜ ಬಹದ್ದೂರರವರ ಅಗ್ರಹಾರದಲ್ಲಿ ನರಸಿಂಗರಾಯರ ಮನೆ ಬೀಗವನ್ನು ಹಗಲಿನಲ್ಲಿ ಮುರಿದು ಸುಮಾರು ೪೦೦ ರೂಪಾಯಿನ ಸೊತ್ತನ್ನು ಹೊತ್ತುಕೊಂಡು ಹೋದರು. ಕೋಟೆಯಲ್ಲೂ ಒಂದೆರಡು ಕಡೆ ಸಣ್ಣ ಪುಟ್ಟ ಕಳುವು ನಡೆದಿದೆ. ಮನೆಗಳಲ್ಲಿ ಗಂಡಸರು ಇಲ್ಲದಾಗ ಮುಷ್ಟರು ಹೋಗಿ ಹೆಂಗಸರನ್ನು ಹೆದರಿಸಿದರೆಂದು ಕೇಳುತ್ತೇವೆ

ಮೈಸೂರು ಗೆಜೆಟು ಸಂಗ್ರಹ.

ದಾವಣಗೆರೆ ಟವನ್ನಲ್ಲಿ ಪ್ಲೇಗ್ ಉಪದ್ರವವೆ ಎಂದು ಪ್ರಕಟವಾಗಿದೆ.

ಟೆಂಪರರಿ ಸಬ್ ಅ|| ಸರ್ಜನ್ ಮೆ|| ಬಿ. ಕೃಷ್ಣಮೂರ್ತಿರಾಯರಿಗೆ ಕೊಟ್ಟಿರುವ ಸಂಬಳವಿಲ್ಲದ ರಜವನ್ನು ಇನ್ನೂ ಇಪ್ಪತ್ತು ದಿನಗಳಿಗೆ ಜಾಸ್ತಿ ಮಾಡಿದೆ

ಮೈಸೂರು ಇಂಪೀರಿಯಲ್ ಟ್ರಾನ್ಸ್‌ಪೋರ್ಟ್ ಕೋರಿನ ಕಾಮಾಂಡಾಂಟರಾದ ಮ || ಜಿ. ಐ. ಟೇಟ್‌ಯವರಿಗೆ ಫೆಬ್ರವರಿ ತಾ. ೫ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಇವರ ಗೈರುಹಾಜರಿಯಲ್ಲಿ ಸೀನಿಯರ್ ಡಿವಿಜನ್ ಕಮಾಂಡರ್ ಮೆ|| ಮಹ್ಮದ್ ಅಬ್ದುಲ್ ಗಫೂರ್‌ಯವರು ಕಾಮಾಂಡಾಂಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಗವರ್ನ್‌ಮೆಂಟ್ ಹೈಸ್ಕೂಲ್ ಹೆಡ್ ಮಾಸ್ಟರ್ ಮೆ|| ಸಿ ಕೃಷ್ಣರಾಯರಿಗೆ ಮಾರ್ಚಿ ತಾ ೨ ರಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಮೆ|| ಸಿ ಆರ್ ಸುಬ್ರಹ್ಮಣ್ಯ ಶಾಸ್ತ್ರಿಯವರು ಹೈಸ್ಕೂಲ್ ಛಾರ್ಜನ್ನು ವಹಿಸಿದ್ದರು

ಅ|| ಕಮೀಷನರ್ ಮೆ|| ಸಿ ವೆಂಕಟರಾಯರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳಿಗೆ ಜಾಸ್ತಿ ಮಾಡಿದೆ.

ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ ಮೆ|| ವಿ ಗೋಪಾಲರಾಯರಿಗೆ ಕೊಟ್ಟಿರುವ ಎರಡು ತಿಂಗಳು ಹತ್ತೊಂಬತ್ತು ದಿನಗಳ ರಜವನ್ನು ಇನ್ನೂ ಮೂರು ತಿಂಗಳು ಹನ್ನೊಂದು ದಿನಗಳಿಗೆ ಜಾಸ್ತಿ ಮಾಡಿದೆ ಈಗ ಮಾಡಿರುವ ಬದಲಿ ಏರ್ಪಾಡೇ ಮುಂದೆಯೂ ನಡೆಯತಕ್ಕದ್ದು

ಕಡೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ್ ಮೆ|| ಬಿ. ಹೀರಾಸಿಂಗ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಫಾರೆಸ್ಟ್ ಅ|| ಕನ್ಸರ್ವೇಟರ್ ಮೆ|| ಬಿ ಎ. ರಾಮ ಐಯಂಗಾರ್ಯರವರು ಕಡೂರ್ ಡಿಸ್ಟ್ರಿಕ್ಟ್ ಛಾರ್ಜನ್ನು ವಹಿಸಿರತಕ್ಕದ್ದು

ನಂಜನಗೂಡು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಎಸ್. ಧರ್ಮರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಆಫೀಸಿನ ೧ ನೇ ಕ್ಲಾರ್ಕ್ ಎನ್. ಮೂರ್ತಿರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ನಂಜನಗೂಡು ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ|| ಸಿ ಕಾಶೀನಾಥರಾಯರಿಗೆ ಕೊಟ್ಟಿರುವ ಐದು ವಾರಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳೂ ಹದಿನೈದು ದಿನಗಳಿಗೆ ಜಾಸ್ತಿ ಮಾಡಿದೆ ಈಗಿನ ಬದಲಿ ಏರ್ಪಾಡುಗಳೇ ಮುಂದೆಯೂ ನಡೆಯತಕ್ಕದ್ದು

ಚಿಂತಾಮಣಿ ತಾಲ್ಲೂಕು ಅಮಲ್ದಾರ್ ಮೆ|| ಎಂ ರಾಮರಾಯರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಟ್ಟಿದೆ.

ಶ್ರೀಮನ್ ಮಹಾರಾಜರವರು ಸಿಕಂದರಾಬಾದ್ ೮೬ ನೇ ಕರ್ನಾಟಿಕ ಇನ್‌ಫೆಂಟ್ರಿ ಸುಬೇದಾರ್ ಮೆ|| ರಘುನಾಯಕರನ್ನು ಮೈಸೂರು ಇನ್‌ಫೆಂಟ್ರಿ ೩ ನೇ ಬಟಾಲಿಯನ್ನಲ್ಲಿ ಸುಬೇದಾರ್ ಮೇಜರ್ ಕೆಲಸಕ್ಕೆ ನೇಮಕ ಮಾಡಿರುತ್ತಾರೆ

ಸಬ್ ಅ|| ಸರ್ಜನ್ ಮೆ|| ಸಿ ರಾಜಗೋಪಾಲಮೊದಲಿಯಾರ್‌ರನ್ನು ಚಿಕ್ಕಮಗಳೂರಿಂದ ಮೂಡಿಗೆರೆಗೂ, ಟೆಂಪರರಿ ಸಬ್ ಅ|| ಸರ್ಜನ್ ಮೆ|| ಬಿ. ಕೃಷ್ಣಮೂರ್ತಿರಾಯರನ್ನು ಮೂಡಿಗೆರೆಯಿಂದ ಚಿಕ್ಕಮಗಳೂರಿಗೂ ವರ್ಗಮಾಡಿದೆ.

ಶಿವಮೊಗ್ಗದಲ್ಲಿ ಅಮಲ್ದಾರರಾಗಿ ಬದಲಿ ನೋಡುತ್ತಿರುವ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ|| ಎ ರಾಜಾರಾಂ ಎರನ್ನು ಡೆಪ್ಯುಟಿ ಅಮಲ್ದಾರರಾಗಿ ಖಾಯಂ ಮಾಡಿದೆ.

ಅ|| ಇಂಜನಿಯರ್ ಮೆ|| ಕೆ ಆರ್. ಶೇಷಾಚಾರ್ಯರನ್ನು ಮಾರೀಕಣಿವೆಯಿಂದ ನಾಲಾ ಕನ್ಸರ್ವೆನ್ಸಿ ಡಿವಿಜನ್‌ಗೆ ವರ್ಗಮಾಡಿದೆ

ಗಣಿಗಳ ಇನ್‌ಸ್ಪೆಕ್ಟರ್ ಮೆ|| ಆರ್ ಬೋಕೀ ಯವರಿಗೆ ಫೆಬ್ರವರಿ ತಾ ೨೨ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ತಾಲ್ಲೂಕ್ ಸರಹದ್ದಿನಲ್ಲಿ ಗ್ರಾಮ ಪಾಠಶಾಲಾ ಶಾಸನಕ್ಕೆ ವಿರೋಧವಾಗಿ ನಡೆದ ಕೃತ್ಯಗಳನ್ನು ಪತ್ತೆಮಾಡಿ ಅಪರಾಧಿಗಳನ್ನು ಹಿಡಿದು ದಂಡನೆ ಮಾಡುವುದಕ್ಕೆ ಮೈಸೂರು ತಾಲ್ಲೂಕ್ ಅಮಲ್ದಾರ್ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ಕೊಡಲ್ಪಟ್ಟಿದೆ.

ತಾಲ್ಲೋಕು ವರ್ತಮಾನಗಳು.

ಬೌರಿಂಗ್‌ಪೇಟೆ ತಾ. ಬೇತಮಂಗಲ.—ಈಗ ಈ ಊರಿನಲ್ಲಿ ಆರೋಗ್ಯವು ತೃಪ್ತಿಕರವಾಗಿಲ್ಲ. ಯಾಕೆಂದರೆ ಅನೇಕ ಮಕ್ಕಳು ಸಿಡುಬಿನ ಉಪದ್ರದಿಂದಲೂ, ಅನೇಕ ದೊಡ್ಡವರು ತಲೆನೋವು ನೆಗಡಿ ಕೆಮ್ಮಲು ಜ್ವರ ಇವುಗಳಿಂದಲೂ ಉಪದ್ರಪಡುತ್ತಾ ಇದ್ದಾರೆ ಆದರೂ ಡಾಕ್ಟರ್ ಸಾಹೇಬರ ಮುತುವರ್ಜಿಯಿಂದ ಮರಣಗಳಾಗದೆ ಕಾಪಾಡಲ್ಪಡುತ್ತಾ ಇದಾರೆ.—ರಾಮಸಾಗರದಲ್ಲಿ ಮರಣಗಳ ಸಂಖ್ಯೆಯು ಕಡಮೆಯಾದದ್ದನ್ನು ನೋಡಿ ಅನೇಕರು ಸಂತೋಷಿಸುತ್ತಾರೆ ಈ ಮರಣಗಳಿಗೆ ಕಾರಣವನ್ನು ಗೊತ್ತುಮಾಡುವ ಹಾಗೆ ಸಿವಿಲ್ ಸರ್ಜನ್ ಸಾಹೇಬರವರೂ ವ್ಯಾಕ್ಸಿನೇಷನ್ ಡೆಪ್ಯುಟಿ ಇನ್‌ಸ್ಪೆಕ್ಟರವರೂ ಈ ದಿನ ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರ ಸಮೇತ ರಾಮಸಾಗರಕ್ಕೆ ಹೋಗಿದಾರೆ. ಇದರ ಫಲಿತಾಂಶವು ಮುಂದೆ ಗೊತ್ತಾಗುವದು ಈ ಪ್ರಾಂತ್ಯದವರುಗಳಿಗಾಗಿಯೇ ಮೈಸೂರು ಆರೋಗ್ಯ ಪಂಚಾಂಗಗಳು ಆಸ್ಪತ್ರೆಗೆ ಬಂದಿವೆ ಬೇಕಾದವರು ಕೊಂಡುಕೊಳ್ಳಬಹುದು.—ಈ ಕೊಪ್ಪದಲ್ಲಿ ವಾಸವಾಗಿರುವ ಸಹೋದರರಾದ ಕೆ. ಸ್ವಾಮಿ ಅಯ್ಯನು ಮತ್ತು ಕೆ ಹೊಸಿಯ ಅಯ್ಯನು ಸೇರಿ ಬೇತಮಂಗಲದ ಇಬ್ಬರು ಪ್ರಸಂಗಿಗಳನ್ನು ಕರೆದುಕೊಂಡು ಮಾರ್ಚಿ ತಾ. ೨೮ ರಲ್ಲಿ ಕಂಗುಂದಿಕೊಪ್ಪಕ್ಕೆ ಸೇರಿದ ಬೂದುಗೂರು ಪರಿಷೆಗೆ ಹೋಗಲು ಪ್ರಯತ್ನಿಸಿದ್ದಾಗ ಅನೇಕರು ಪ್ರಸಂಗಿಗಳು ಅಲ್ಲಿಗೆ ಬರಲೇಕೂಡದೆಂದೂ ಹಾಗೆಯೇ ಹಿಂದಕ್ಕೆ ಹೊರಟುಹೋಗಬೇಕೆಂದೂ ತುಂಬಾ ತೊಂದರೆಮಾಡಿದರು. ಆಗ ದೇವರು ಅವರ ಮನಸ್ಸುಗಳನ್ನು ಕರಗಿಸಿ ಪ್ರಸಂಗಿಗಳಿಗೆ ಉಂಟುಮಾಡಿದ ಜಯವನ್ನು ಕುರಿತು ವರ್ಣಿಸಲಸಾಧ್ಯ. ಹ್ಯಾಗೆಂದರೆ ಅಲ್ಲಿನ ಜಮೀನುದಾರರು ಮೊದಲುಗೊಂಡು ಎಲ್ಲಾ ಸಹೋದರ ಸಹೋದರಿಗಳೂ ಮೂರು ದಿನ ಹಗಲೂ ರಾತ್ರಿ ಪ್ರಸಂಗಿಗಳನ್ನು ಅತ್ಯಂತವಾಗಿ ಪ್ರೀತಿಸಿ ಕರ್ತನ ವಾಕ್ಯವನ್ನು ಬಹು ಆಸಕ್ತಿಯಿಂದ ಕೇಳಿದರು.

ಕೊಪ್ಪ.—ಈಗ ಸುಮಾರು ನಾಲ್ಕಾರು ತಿಂಗಳಿಂದ ಸುತರಾಂ ಬೀಳದ ಮಳೆಯು ಈಚೆಗೆ ಒಂದೆರಡು ದಿನ ಸ್ವಲ್ಪ ಹನಿಗಳು ಸುರಿಯಿತು. ಸಮೀಪದ ಇರುವ ಗ್ರಾಮಗಳಲ್ಲಿ ಒಂದು ಅಂಗುಲದಷ್ಟು ಮಳೆ ಸುರಿಯಿತೆಂದು ತಿಳಿದು ಬರುತ್ತದೆ ಆಕಾಶದಲ್ಲಿ ಮೋಡವು ಓಡಾಡುವುದನ್ನೂ ಮಿಂಚುವುದನ್ನೂ ನೋಡಿದರೆ ಇಂದೋ ನಾಳೆಯೋ ಬಲವಾದ ಮಳೆಯು ಬರಬಹುದೆಂದು ತೋರುತ್ತದೆ.—ಜಿನಸಿನ ಧಾರಣೆಯು ತಕ್ಕ ಮಟ್ಟಿಗೆ ಚೆನ್ನಾಗಿದೆ. ಅಕ್ಕಿ ರೂಪಾಯಿಗೆ ೧೪-೧೫ ಸೇರಿನಂತೆಯೂ, ರಾಗಿ ೧೬ ಸೇರಿನಂತೆಯೂ ದೊರೆಯುತ್ತದೆ— ಇಲ್ಲಿ ಭಾನುವಾರ ಸಂತೆ ನಡೆಯುವುದು ತರಕಾರಿಗಳು ದಿನೇ ದಿನೇ ಹೀನಸ್ಥಿತಿಗೆ ಬರುತ್ತದೆ. ಎಷ್ಟು ಸರಿಯಾದ ಹೂಕ ತೆಗೆದುಕೊಂಡರೂ ಸೇರಿಗೆ ಇಪ್ಪತ್ತೆರಡು ರೂಪಾಯಿ ಹೂಕವೇ ಹೊರತು ಹೆಚ್ಚಿಲ್ಲ ಈ ವಿಚಾರದಲ್ಲಿ ನಮ್ಮ ಅಮಲ್ದಾರರು ತುಂಬಾ ನಿಗಾ ಇಡಿಸುವರೆಂದು ನಂಬುತ್ತೇನೆ—ಇದೇ ಕಳೆದ ತಿಂಗಳ ತಾ ೨೬ನೇ ರವಿವಾರದಿವಸ ಇಲ್ಲಿಗೆ ಎರಡು ಮೈಲಿ ಫಾಸಲೆ ಇರುವ ಅಮ್ಮಡಿಯಲ್ಲಿ ಇಲ್ಲಿನ ಕೆಲವು ದೊಡ್ಡ ಮನುಷ್ಯರುಗಳು ಸೇರಿ ಕನ್ನಡ ಜಿಲ್ಲಾವಿನಿಂದ ಈ ಊರಿಗೆ ಬಂದಿರುವ ದಶಾವತಾರ ಮಂಡಾಳಿಮೇಳದ ಮೀನಾಕ್ಷಿ ಕಲ್ಯಾಣ ಎಂಬ ಆಟವನ್ನು ಪ್ರಸಂಗರೂಪವಾಗಿ ಆಡಿಸಿದರು. ಆಟವನ್ನು ನೋಡುವುದಕ್ಕಾಗಿ ಸುಮಾರು ಹತ್ತು ಮೈಲಿ ಫಾಸಲೆಯಿಂದ ಸಹ ಜನಗಳು ಸೇರಿದ್ದರು ಸುಮಾರು ಸಾವಿರ ಜನಗಳ ಮಟ್ಟಿಗೆ ಸೇರಿದ್ದರು. ಜನರಿಗೆ ಬಹಳ ರಮ್ಯವಾಗಿ ಕಾಣಿಸಿತು. ಆದರೆ ಕೆಲವು ಬಡ ಕೂಲಿ ಆಳುಗಳಿಗೆ ನಿದ್ರೆಯ ದೆಸೆಯಿಂದ ಹೊಟ್ಟೆಗೆ ತಿನ್ನುವುದಕ್ಕಿಲ್ಲದೆ ಉಪವಾಸದಿಂದ ಮಲಗಬೇಕಾಗಿ ಬಂತು.—ಇದೇ ದಿನ ಕುಂಬಾರಕೊಪ್ಪ ಗ್ರಾಮದಲ್ಲಿ ವಾಸಮಾಡಿಕೊಂಡಿರುವ ವಣಿಮಪ್ಪಯ್ಯನ ಮನೆಗೆ ಯಾರೋ ಕಳ್ಳರು ನುಗ್ಗಿ ನೂರಾರು ರೂಪಾಯಿಗಳ ಸಾಮಾನುಗಳನ್ನು ಕಳುವು ಮಾಡಿಕೊಂಡು ಹೋದರೆಂತಲೂ, ಮನೆಯ ಯಜಮಾನನು ಈ ದಿವಸ ಮನೆಯಲ್ಲಿ ಹಾಜರಿಲ್ಲದೆ ಎಲ್ಲಿಗೋ ಹೋಗಿದ್ದನೆಂತಲೂ, ಇವನ ಹೆಣ್ಣು ಮಕ್ಕಳು ಮಾತ್ರ ಮನೆಯಲ್ಲಿ ಇದ್ದರೆಂತಲೂ, ಇವರೆಲ್ಲರೂ ಮನೇ ಬಾಗಿಲಿಗೆ ಬೀಗಹಾಕಿ ಆಟ ನೋಡುವುದಕ್ಕಾಗಿ ಹೋಗಿದ್ದರೆಂತಲೂ, ಗ್ರಾಮದ ಪಟೇಲರು ಸ್ಥಳಕ್ಕೆ ಬಂದು ಫಿರ್ಯಾದಿ ಹೆಣ್ಣುಮಕ್ಕಳ ವಿಚಾರಣೆಯಿಂದ ಪೊಲೀಸ್ ಸ್ಟೇಷನ್‌ಗೆ ರಿಪೋರ್ಟು ಮಾಡಿದಾರೆಂತಲೂ ವರ್ತಮಾನ ಕೇಳುತ್ತೇನೆ

ಅರಸಿಕೆರೆ.—ಕಳೆದ ಡಿಸೆಂಬರ್ ತಿಂಗಳಿನಲ್ಲಿ ಈ ಟವನಿಗೆ ಪ್ಲೇಗ್ ಉಪದ್ರವು ಪ್ರಾರಂಭವಾಗಿತ್ತು. ಜನಗಳು ಗಾಬರಿಪಡುತ್ತಾ ಇರುವಾಗ್ಗೆ ತಾಲ್ಲೋಕು ಅಮಲ್ದಾರರ ಬುದ್ಧಿವಾದಗಳಿಗೆ ಮನಸ್ಸು ಕೊಟ್ಟು ಊರನ್ನು ಬಿಟ್ಟು ಷೆಡ್ಡುಗಳನ್ನು ಹಾಕಿಕೊಂಡು ವಾಸಮಾಡುತ್ತಾ ಇದ್ದರು. ತಾಲ್ಲೋಕ್ ಅಮಲ್ದಾರರು ಊರನ್ನು ಚೆನ್ನಾಗಿ ಶುದ್ಧಿಮಾಡಿಸಿ, ಊರಿನೊಳಗೆ ಜನರು ಹೋಗಬಹುದೆಂದು ಅಪ್ಪಣೆಕೊಡಿಸಿದರು ಜನಗಳು ಈಗ ಊರಿನಲ್ಲಿ ಸೌಖ್ಯವಾಗಿ ಬಂದು ಸೇರಿದರು ಊರನ್ನು ಬಿಡುವಾಗ್ಗೆ ಅನೇಕ ಬಡವರಿಗೆ ಅಮಲ್ದಾರರು ತಕ್ಕ ಸಾಮಗ್ರಿಗಳನ್ನು ಹೊಂದಿಸಿಕೊಟ್ಟು ಒಳ್ಳೇ ಕೀರ್ತಿಯನ್ನು ಪಡೆದುಕೊಂಡರು ಇದು ಮಾತ್ರವಲ್ಲದೆ ಊರಿನ ಆಚೆ ಇರುವಾಗಲೂ ಜನಗಳಿಗೆ ಯಾವ ನಷ್ಟವೂ ಕಷ್ಟಗಳೂ ಸಂಭವಿಸದಂತೆ ಬಹು ಮುತುವರ್ಜಿಯಿಂದ ನೋಡಿಕೊಳ್ಳುತ್ತಾ ಬಂದರು. ಮತ್ತು ಈ ಅಮಲ್ದಾರರು ಈ ತಾಲ್ಲೋಕಿಗೆ ಬಂದ ಮೇಲೆ ರೈತಾಪಿ ಜನರಿಗೆ ಬೇಕಾದಷ್ಟು ಅನುಕೂಲಗಳನ್ನು ಮಾಡಿದ್ದು ಮಾತ್ರವಲ್ಲ, ವಿಶೇಷವಾಗಿ ತಾವೇ ಎಲ್ಲಾ ಕೆಲಸಗಳನ್ನೂ ಖುದ್ದು ತಮ್ಮ ಕಣ್ಣುಗಳಿಂದ ನೋಡುತ್ತಾ ಕೈಗಳಿಂದ ಕೆಲಸಮಾಡುತ್ತಾ ಬಂದಕಾರಣ ಜನಗಳ ಪ್ರೀತಿಗೆ ಅತ್ಯಂತ ವಿಶೇಷವಾಗಿ ಪಾತ್ರರಾದರು. ಮತ್ತು ಕಳೆದ ವರುಷದ ಕ್ಷಾಮದ ಕಾಲದಲ್ಲಿ ಇವರು ತಮ್ಮ ದೇಹದ ಸೌಖ್ಯವನ್ನು ನೋಡದೆ ಜನಗಳ ಕಷ್ಟವನ್ನು ನೋಡಿ ಮರುಗುತ್ತಾ, ಜನಗಳಿಗೂ ಮುಖ್ಯವಾಗಿ ಸಾಯುತ್ತಿದ್ದ ಮೂಗು ಪ್ರಾಣಿಗಳಿಗೂ ತುಂಬಾ ಉಪಕಾರವನ್ನು ಮಾಡಿದರು. ಇಂಥಾ ಮಹನೀಯರಿಗೆ ಈಗ ಕಡೂರು ಡಿಸ್ಟ್ರಿಕ್ಟಿಗೆ ಅಸಿಸ್ಟೆಂಟ್ ಕಮಿಷನರ ಕೆಲಸಕ್ಕೆ ವರ್ಗವಾದವನ್ನು ಕೇಳಿ ಒಂದು ವಿಷಯದಲ್ಲಿ ಜನರಿಗೆ ಆನಂದವಾಗಿದ್ದಾಗ್ಯೂ ಇನ್ನೊಂದು ವಿಷಯದಲ್ಲಿ ತುಂಬಾ ದುಃಖಿಸುತ್ತಾ, ಇಂಥಾ ಮಹನೀಯರನ್ನು ಕಳೆದುಕೊಂಡೆವಲ್ಲಾ ಎಂದು ತುಂಬಾ ವ್ಯಥೆಪಡುತ್ತಾರೆ ಇವರನ್ನು ಸನ್ಮಾನಿಸುವ ವಿಷಯದಲ್ಲಿ ಕಳೆದ ಸೋಮವಾರ ಇದೇ ಅರಸಿಕೆರೆ ಟವನಿನಲ್ಲಿದ್ದ ಕಂಚಿರಾಯರ ಛತ್ರದಲ್ಲಿ ಅರಸಿಕೆರೆಯ ಪ್ರಜೆಗಳೂ ಮತ್ತು ಎಲ್ಲಾ ಗ್ರಾಮದ ರೈತರೂ ಸೇರಿ ದೊಡ್ಡ ಔತಣವನ್ನು ಮಾಡಿಸಿ, ಇವರನ್ನು ತೃಪ್ತಿಪಡಿಸಿದ್ದು ಮಾತ್ರವಲ್ಲದೆ, ಅದೇ ದಿನ ಸಾಯಂಕಾಲ ಮೈಸೂರಿಂದ ಬಂದಿದ್ದ ವೀಣೆ ಕೃಷ್ಣಪ್ಪನವರಿಂದ ಸಂಗೀತವನ್ನು ಮಾಡಿಸಿದರು. ಮತ್ತು ಇವರ ಗುಣಕಥನಗಳನ್ನೂ ಮತ್ತು ಇವರು ಮಾಡಿದ ಕೆಲಸವನ್ನೂ ಹೊಗಳಿ ಕೊಂಡಾಡಿದರು ಬಂದಿದ್ದ ಎಲ್ಲಾ ಜನಗಳಿಗೂ ತಾಂಬೂಲ ಗಂಧ ಪುಷ್ಪಗಳನ್ನು ಕೊಟ್ಟರು ತರುವಾಯ ಸಭೆಯು ಬರಖಾಸ್ತಾಯಿತು. ಇಂಥಾ ಮಹನೀಯರಿಗೆ ಆರ್ಡರ್ ಬಂದು ಒಂದು ತಿಂಗಳಾದಾಗ್ಯೂ ಇನ್ನೂ ಇವರು ಇದೇ ಸ್ಥಳದಲ್ಲಿಯೇ ಇದ್ದಾರೆ, ಶೀಘ್ರದಲ್ಲಿ ಇವರು ತೆರಳುವರೆಂದು ಕಾಣುತ್ತದೆ

ಆರೋಗ್ಯಕರವಾದ ಪಾನಪದಾರ್ಥವು.

ಮೇಲ್ಕಂಡ ವಿಷಯವನ್ನು ದೀರ್ಘವಾಗಿ ಚರ್ಚೆಮಾಡಿ ದೃಷ್ಟಾಂತಗಳ ಪೂರ್ವಕವಾಗಿ ಒಬ್ಬ ಬಾತ್ಮೀದಾರರು ಮಂಗಳೂರಿನ "ಸತ್ಯದೀಪಿಕೆ" ಎಂಬ ಪತ್ರಿಕೆಯಲ್ಲಿ ಬರೆದಿರುವುದನ್ನು ನಮ್ಮ ವಾಚಕರು ಓದಿ ಪ್ರಯೋಜನ ಹೊಂದಲೆಂದು ಇಲ್ಲಿ ಪ್ರಕಟಿಸುತ್ತೇವೆ

ನೀರಿಗಿಂತ ಉತ್ತಮವಾದ ಪಾನಕವು ಬೇರೊಂದಿಲ್ಲ ಆದರೆ ಲೋಕದಲ್ಲಿ ಒಳ್ಳೇ ವಸ್ತುಗಳನ್ನು ಅಂಗೀಕರಿಸುವವರೂ ಒಳ್ಳೇ ನಡವಳಿಕೆಯನ್ನು ಅನುಸರಿಸುವವರೂ ಕೊಂಚ ಜನವೇ ಆಗಿದ್ದು "ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲಾ" ಎಂಬಂತೆ ಆಗಿಹೋಗಿರುವುದರಿಂದ ಪಾಷಾಣಕ್ಕೆ ಒಪ್ಪುವಂಥಾ ಕಾಫಿ, ಟೀ ಈ ಮೊದಲಾದ ಪಾನಕಗಳನ್ನು ತ್ಯಜಿಸಿ, ದೇಹಕ್ಕೆ ಸಂಜೀವನ ದೋಷಾದಿಯಲ್ಲಿರುವ ಬರೀ ನೀರನ್ನೇ ಕುಡಿಯುವವರು ಬಹುಮಂದಿ ಸಿಕ್ಕುವದಿಲ್ಲ ಮತ್ತು "ಚಿಕ್ಕಂದಿನಿಂದ ಕಲಿತ ಅಭ್ಯಾಸವನ್ನು ಬಿಡುವದು ಹ್ಯಾಗೆ?" ಎಂದು ಕೇಳುವವರು ಹೇರಳವಾಗಿ ಇರೋಣದರಿಂದ, ಪೌಷ್ಟಿಕ ಧಾತು ಕಿಂಚಿತ್ತಾದರೂ ಇಲ್ಲದೆ ದೇಹವನ್ನು ಬಾಲ್ಯ, ಯೌವನ, ಕೌಮಾರಗಳಲ್ಲಿ ಕೆಡಿಸಿ ಹಾಳು ಮಾಡುವಂಥಾ ಕಾಫಿ, ಟೀ, ಮದ್ಯ ಮೊದಲಾದ ಪಾನಕಗಳನ್ನು ನಮ್ಮ ದೇಶಬಾಂಧವರು ತ್ಯಾಗಮಾಡಿ ಉಪಯೋಗಿಸಬೇಕೆಂಬ ಉದ್ದೇಶದಿಂದ ಪೌಷ್ಟಿಕ ಆಹಾರವುಳ್ಳ ಇನ್ನೊಂದು ಪಾನಕವನ್ನು ತಿಳಿಸುತ್ತೇನೆ ಅದು ಯಾವದೆಂದರೆ—ಅಕ್ಕಿ, ಗೋಧಿ, ರಾಗಿ, ಎಳ್ಳು, ಹೆಸರು, ಈ ಐದು ಧಾನ್ಯಗಳನ್ನೂ ಸರಿಪಾಲು ತಂದು ಕೆಂಪಗೆ ಹುರಿದು ಕಾಫಿಯಂತೆಯೇ ಪುಡಿಮಾಡಿಟ್ಟುಕೊಂಡು, ಕಾಫಿಗೆ ಬದಲಾಗಿ ಪಾನಮಾಡುತ್ತಾ ಬಂದರೆ ಮಲಬದ್ಧತೆ, ಅದೀಪನ, ಈ ಮೊದಲಾದ ರೋಗಗಳು ನಾಶವಾಗುವವು ಅಲ್ಲದೆ ಈ ಧಾನ್ಯಗಳಲ್ಲಿ ದೇಹದ ಪೋಷಣೆಗೆ ಬೇಕಾಗುವ ಲೋಹ, ಮೇಧಸ್ಸು, ಶರ್ಕರ ಪಿಷ್ಟಾದಿಗಳೂ, ಬಲಕಾರಿಗಳಾದ ಲವಣಗಳೂ ವಿಶೇಷವಾಗಿರೋಣದ್ದರಿಂದ ಮೈಯಲ್ಲಿ ರಕ್ತವೃದ್ಧಿಯಾಗಿ ದಿನಕ್ರಮೇಣ ಧಾತುಪುಷ್ಟಿಯಾಗುತ್ತಿರುತ್ತದೆ ಮತ್ತು ಈ ಐದು ಧಾನ್ಯಗಳೂ ಒಟ್ಟಿಗೆ ಸಮ್ಮಿಳಿತವಾಗುವದರಿಂದ ಒಂದು ತರಹಾ ಸುವಾಸನೆಯು ಅದರಲ್ಲಿ ಉಂಟಾಗಿ, ತಯಾರ್ಮಾಡಿದ ಪಾನಕವು ಕುಡಿಯುವಾಗ ಕಾಫಿಯಂತೆಯೇ ರುಚಿಕರವಾಗಿರುತ್ತೆ ಈ ಧಾನ್ಯಗಳ ಪುಡಿಯು ಪಾನಕಕ್ಕೆ ತಗಲುವ ಖರ್ಚು ಬಹಳ ಕಡಮೆಯಾಗುತ್ತದೆ ಕಾಫಿ ಕುಡಿದು ಮುದುಕರಾದ ತರುಣರ ಮುದುಕರ ಮುದುಕಿಯರ ದೇಹವು ಪುಷ್ಟಿ ಹೊಂದಿ ಕ್ಷೇಮದಿಂದ ಬಾಳುವರು ಈ ಮಾತುಗಳನ್ನು ದೇಶಾಭಿಮಾನಿಗಳು ನಿರ್ಲಕ್ಷ್ಯದಿಂದ ಕಂಡು ಅಸಡ್ಡೆ ಮಾಡದೆ ಹೇಳಿದ ರೀತಿಯಲ್ಲಿ ಮಾಡುವವರಾಗಲಿ ಎಂಬುವದೇ ನನ್ನ ಪ್ರಾರ್ಥನೆಯಾಗಿದೆ

ಮಂಜರಾಬಾದಿನಲ್ಲಿ ಒಂದು ಕೂಟವು

ಸನ್ ೧೯೦೯ನೇ ಇಸವಿ ಡಿಸೆಂಬರ್ ತಾರೀಖು ೨೬ ರಲ್ಲಿ ಮೈಸೂರು ಸೀಮೆ ಮಂಜರಾಬಾದು ತಾಲ್ಲೂಕು ಯಸಳೂರು ಹೋಬಳಿ ಹೊಸೂರು ಗ್ರಾಮದ ಕೊಟೆಕಾಯಿ ಜಾತ್ರೆ ಆಗುವ ಅಂಕಲ್‌ದೇವರ ಕಟ್ಟೆ ಬಳಿ ಕೊಡಗು ಡಿಸ್ಟ್ರಿಕ್ಟು ನಂಜರಾಜ ಪಟ್ಟಣದ ತಾಲ್ಲೂಕು ಪೈಕಿ ನಿಡದ ಹೋಬಳಿ, ಬ್ಯಾಗಡಳ್ಳಿ ಹೋಬಳಿ ಕಸಬಾ ಹೋಬಳಿಯ ಪಟೇಲರೂ ಗ್ರಾಮಸ್ಥರೂ ಸೇರಿ ಕರಾಯಿಸಿದ ಮಹಜರು —ನಾವುಗಳು ನಮ್ಮ ಮತದಲ್ಲಿ ಇರತಕ್ಕ ಕೆಲವು ವ್ಯಾಪಾರಗಳನ್ನು ವಿದ್ಯೆಯ ಮೂಲಕ ಸಂಪಾದಿಸಬೇಕಾಗಿ ಈ ದಿನ ಸೇರಿ ಕೆಳಗೆ ಕಂಡ ಸಂಗತಿಗಳನ್ನು ವಿಮರ್ಶೆ ಪಡಿಸಿದ್ದು ಹ್ಯಾಗೆಂದರೆ —

೧ ನಮ್ಮಲ್ಲಿ ಜನಿಸಿದ ಗಂಡು ಯಾ ಹೆಣ್ಣು ಮಕ್ಕಳನ್ನು ವಿದ್ಯೆಯ ಮೂಲಕ ಸೋಮಾರಿತನವನ್ನು ತಪ್ಪಿಸಬೇಕಾದ ವಿಷಯದಲ್ಲಿ ಈ ದಿನ ನಡೆದ ಚರ್ಚೆಯಲ್ಲಿ ಸಭೆಯವರು ತೀರ್ಮಾನಿಸಿದ ಸಂಗತಿಗಳು ಯಾವವೆಂದರೆ —(೧) ನಮ್ಮಲ್ಲಿ ಜನಿಸಿದ ಗಂಡು ಯಾ ಹೆಣ್ಣು ಮಕ್ಕಳನ್ನು ಗ್ರಾಮದ ಸ್ಕೂಲನ್ನೇರ್ಪಡಿಸಿಕೊಂಡು ವಿದ್ಯೆ ಕಲಿಸಬೇಕಾದ ಸಂಗತಿ ಒಂದು, ಅಂದರೆ, ಸರ್ಕಾರಿ ಸ್ಕೂಲುಗಳಿಲ್ಲದಿರುವ ಗ್ರಾಮಗಳಲ್ಲಿ ೨ ೩ ಸಮೀಪಗ್ರಾಮದವರು ಸೇರಿ ಒಂದು ಫಂಡನ್ನು ಏರ್ಪಡಿಸಿಕೊಂಡು ಖಾಸಗಿ ಸ್ಕೂಲನ್ನು ಏರ್ಪಡಿಸಿಕೊಳ್ಳಬೇಕು (೨) ಸರ್ಕಾರಿ ಸ್ಕೂಲು ಇರುವ ಕಡೆ ಗ್ರಾಮಸ್ಥರು ತಪ್ಪದೆ ಗಂಡು ಯಾ ಹೆಣ್ಣು ಮಕ್ಕಳನ್ನು ೫ ವರುಷದ ಒಳಗಾಯಿತ್ತೆಂದರೆ ಬಿಡದೆ ಸ್ಕೂಲಿಗೆ ಕಳುಹಿಸಬೇಕು. ಮತ್ತು ಆ ಸ್ಕೂಲಿಗೆ ಸಮೀಪ ಇರುವ ಗ್ರಾಮಸ್ಥರೂ ಇದೇ ರೀತಿ ಮಾಡಬೇಕು

೨ ನಮ್ಮಲ್ಲಿ ಜನಿಸುವ ಹೆಣ್ಣು ಮಕ್ಕಳನ್ನು ಲಗ್ನಮಾಡಿಕೊಡುವ ವೇಳೆ ವಿಪರೀತ ದುಡ್ಡು, ದವಸ ತೆಗೆದುಕೊಳ್ಳುವದರಿಂದ ಮತವೇ ನಾಲವಂದಿಗರಾಗುತ್ತಿರುವ ವಿಷಯ ಚರ್ಚೆ ನಡೆದು ಸಭೆಯವರು ತೀರ್ಮಾನಿಸಿದ್ದೇನೆಂದರೆ —(೧) ಖಾನಗಿ ಧರ್ಮ ಲಗ್ನ ಮಾಡಿಕೊಡಲು ಅನನುಕೂಲ ಇರುವವನು ಇರುವವಳು ಎಂಬುದು ಗ್ರಾಮಸ್ಥರಿಗೂ ಗ್ರಾಮದ ಪಟೇಲರಿಗೂ ತಿಳಿದು ಒಳ್ಳೆಯ ವಿಷಯದಲ್ಲಿ ಹೆಣ್ಣಿನ ಊರಲ್ಲಿರುವ ಜನಗಳಿಗೂ ವೀಳ್ಯಕೊಡುವದಕ್ಕೂ ವಗೈರೆ ಮತ್ತು ದಾನ ದಕ್ಷಿಣೆ, ಲಗ್ನದಿವಸ ನಡೆಯುವ ಇತರ ಚಿಲ್ಲರೆ ಖರ್ಚು ವಗೈರೆ ಹಾಕಿಕೊಂಡು ಗಂಡಿನವರು ಲಗ್ನಮಾಡಿಕೊಂಡು ಹೋಗತಕ್ಕದ್ದು. ಮುಖ್ಯವಾಗಿ ಇತರ ಖರ್ಚು ನಲವತ್ತು ರೂಪಾಯಿಗೆ ಮೇಲ್ಪಟ್ಟಿರಕೂಡದು ಹೆಣ್ಣಿನ ಲಗ್ನದಲ್ಲಿ ಖರ್ಚಿಗೆಂದು ಹಣ ತೆಗೆದುಕೊಂಡದ್ದು ಗ್ರಾಮಸ್ಥರಿಗೆ ತಿಳಿದು ಬಂದಲ್ಲಿ ಹಾಗೆ ತೆಗೆದುಕೊಂಡ ಮೊಬಲಗಿನ ಎರಡರಷ್ಟು ದಂಡ ವಿಧಿಸಬೇಕು, ಮತ್ತು ಖಂಡಿತ ವಸೂಲು ಮಾಡಬೇಕು ಈ ಮೊಬಲಗಿನಲ್ಲಿ ಸ್ವಲ್ಪವೂ ವಾಪಸ್ ಬಿಡಕೂಡದು

೪. ಮೇಲ್ಕಂಡ ಸಂಗತಿಗಳನ್ನು ಪ್ರತಿಗ್ರಾಮದ ಪಟೇಲರುಗಳೂ ತಮ್ಮ ತಮ್ಮ ಗ್ರಾಮಸ್ಥರನ್ನು ಸೇರಿಸಿ ಚೆನ್ನಾಗಿ ಬೋಧಿಸಿ ಇದೇ ರೀತಿ ಮಹಜರ್ ಮಾಡಿಸಿ ಇಟ್ಟುಕೊಳ್ಳತಕ್ಕದ್ದು

೫ ಇನ್ನುಮುಂದೆ ಇದೇ ರೀತಿ ಪ್ರತಿ ವರುಷವೂ ಫಲಾನ ಸ್ಥಳವೆಂಬುವದು ಗೊತ್ತುಮಾಡಿಕೊಂಡು ಉನ್ನತ ಭೂದೇವಸ್ತರೆಲ್ಲಾ ಸೇರಿ ಮೀಟಿಂಗ್ ನಡಿಸುತ್ತಾ ಬರಬೇಕು

೬ ಮುಂದಿನ ವರುಷಕ್ಕೆ ಯಾವ್ಯಾವ ಸಂಗತಿ ಚರ್ಚೆಮಾಡಬೇಕು ಯಾರನ್ನು ಮೆಂಬರಾಗಿ ಚುನಾಯಿಸಬೇಕು ಮತ್ತು ಯಾವ ಸ್ಥಳದಲ್ಲಿ ಸೇರಬೇಕು ಎಂಬೀ ವಿಷಯವನ್ನು ಈ ದಿನ ಸೇರಿರುವ ಸರ್ವರೂ ಆಲೋಚಿಸಿ, ಸಭೆಯು ತೀರುವ ಮುಂಚಿತವಾಗಿ ವಿಮರ್ಶೆ ಮಾಡಿ ತಿಳಿಸತಕ್ಕದ್ದು

೬ ಮೇಲ್ಕಂಡ ಸಂಗತಿಗಳನ್ನು ಅಂದರೆ ೧, ೨ ನೇ ಕಲಂಗಳಲ್ಲಿ ನಮೂದಿಸಿರುವದನ್ನು ಯಾರು ಗಣನೆಗೆ ತರದೆ ಇರುತ್ತಾರೋ ಮತ್ತು ಆಗಾಗ್ಗೆ ಸೇರುವ ಸಭೆಗೆ ಬರಬೇಕೆಂದು ತಿಳಿಸಿದರೂ ಯಾರು ಹಾಜರಾಗುವದಿಲ್ಲವೋ ಕಾರಣವಿಲ್ಲದೆ ಸಭೆಯವರು ೫೦ ರೂಪಾಯಿ ಅಥವ ಯುಕ್ತ ತೋರುವ ರೀತಿ ದಂಡ ಹಾಕಬೇಕು ಕೊಡದೆ ತಪ್ಪಿದವರನ್ನು ಜಾತಿಯವರಿಂದ ಬಹಿಷ್ಕಾರ ಇಡಬಹುದು

೭ ಇಂಥಾ ದಂಡದ ಮೊಬಲಗನ್ನು ಮತಾಭಿವೃದ್ಧಿಕರವಾದ ಧರ್ಮ ಕೆಲಸಕ್ಕೆ ಉಪಯೋಗಿಸಿಕೊಳ್ಳಬೇಕು

೮ ಗ್ರಾಮದ ಪಟೇಲರು ಈ ಸಂಗತಿ ಜಾರಿಗೆ ತಂದಿದ್ದಾರೆಂಬುವದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಅವರು ಗ್ರಾಮದಲ್ಲಿ ತಯಾರಿಸಿದ ಮಹಜರನ್ನು ಸಮೀಪ ಇರುವ ನಮ್ಮ ಮತಸ್ಥರಾದ ಮಂಡೆ ಪಟೇಲ್ ಯಾ ನಾಡು ಪಟೇಲರ ಸೈನಿಗೆ ಕಳುಹಿಸಿ ವಾಪಸು ತಂದು ತಾವೇ ಇಟ್ಟುಕೊಳ್ಳಬೇಕು ಹೆಣ್ಣಿಗೆ ಹಣ ತೆಗೆದುಕೊಂಡ ಸಂಗತಿಯನ್ನು ರುಜುವಾತು ಕೊಡುವವರಿಗೆ ದಂಡದ ಹಣದಿಂದ ಹತ್ತು ರೂಪಾಯಿ ಇನಾಂ ಕೊಡಬೇಕು ಇವರ ನಕಲವನ್ನೂ ಸಂಬಂಧಪಟ್ಟ ನಾಡು ಪಟೇಲರು ಗ್ರಾಮಸ್ಥರಿಗೋಸ್ಕರ ಈ ದಿನ ಬಂದಿರುವವರಿಗೂ ಬಾರದೆ ಇರುವವರಿಗೂ ಒಂದೊಂದು ನಕಲನ್ನು ಇಂದಿಗೆ ೮ ದಿವಸದೊಳಗೆ ಬಡಾಯಿಸಿ ಕಳುಹಿಸಿಕೊಡಬೇಕು ಮತ್ತು ಆಗಾಗ್ಗೆ ಸಮೀಪ ಸಮೀಪ ಇರುವ ಗ್ರಾಮದವರೂ ಪಟೇಲರೂ ಸೇರಿ ಉಪಸಂಘಗಳನ್ನು ಮಾಡುತ್ತಾ ಬರಬೇಕು ತಪ್ಪಿದವರಿಗೆ ಜಾತಿ ಪದ್ಧತಿ ಪ್ರಕಾರ ದಂಡ ವಿಧಿಸಬೇಕು

ಈ ಕೆಳಗೆ ಉಭಯ ಸೀಮೆಯವರು ೬೮ ಜನ ಸೈನುಮಾಡಿರುತ್ತಾರೆ

ಬಾಸೇಗೌಡ

ಮೈಸೂರ್ ಟ್ರಸ್ಟ್ ಬೋರ್ಡ್ ಮೀಟಿಂಗು

ಕಳೆದ ಗುರುವಾರ ಬೆಳಗ್ಗೆ ರಾಜಧಾನಿಯ ಪುರಾಭಿವೃದ್ಧಿ ಸಂಘದವರು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸೇರಿ ತಿಂಗಳು ಕಟ್ಟಲೆಯ ಮೀಟಿಂಗನ್ನು ನಡಿಸಿದರು. ಛೇರ್ಮನ್ ಮೆ॥ ಕಾಂತರಾಜೇ ಅರಸಿನವರು, ವೈಸ್‌ಪ್ರೆಸಿಡೆಂಟ್ ಮೆ॥ ಎಂ ಜಿ ಕೃಷ್ಣಸ್ವಾಮಿರಾಯರು ಎಗ್ಜಿಕ್ಯುಟಿವ್ ಇಂಜನಿಯರ್ ಮೆ॥ ಡಿಕ್ರೂಸ್‌ಯವರು, ಹೆಲ್ತ್ ಆಫೀಸರ್ ಮೆ॥ ವಾಂಕರ್‌ಯವರು ಮೆ ಗಸಾದ ಎಂ ವೆಂಕಟಕೃಷ್ಣಯ್ಯನವರು, ಅಡ್ವೊಕೇಟ್ ಎಂ ಸಿ ರಂಗೈಯಂಗಾರ್ಯರು, ಪೆನ್ಷನ್ ಪೊಲೀಸ್ ಸೂಪರಿಂಟೆಂಡೆಂಟ್ ಮಹಮದ್ ಜಾಫರ್ ಯವರು ಹಾಜರಾಗಿದ್ದರು

ಮುಂದಿನ ಸಾಲಿನಲ್ಲಿ ಪಟ್ಟಣದೊಳಗೆ ಚರಂಡಿ ರಸ್ತೆ ಮುಂತಾದುವುಗಳನ್ನು ಹಾಕುವ ಬಾಬಿನಲ್ಲಿ ಸುಮಾರು ೬೦ ಸಾವಿರ ರೂಪಾಯಿ ಉಳಿಯಬಹುದೆಂದು ಗೊತ್ತಾಯಿತು ಚೀಫ್ ಇಂಜನಿಯರವರು ಒಟ್ಟಲುಗಳನ್ನು ಕಟ್ಟುವ ವಿಷಯದಲ್ಲಿ ತಮ್ಮ ಅಭಿಮತವನ್ನು ತಿಳಿಸಿದ ಮೇಲೆ ಕಾಮಗಾರಿ ಮುಂತಾದದ್ದು ಪ್ರಾರಂಭವಾಗಬೇಕಾಗುತ್ತದೆ ಆದಕಾರಣ ಈ ಹಣದಲ್ಲಿ ಸುಮಾರು ೨೦,೦೦೦ ರೂಪಾಯನ್ನು ತೆಗೆದಿಟ್ಟು ಹೊಸದಾಗಿ ಮನೆ ಕಟ್ಟತಕ್ಕವರಿಗೆ ಸಾಲ ಅಡ್ವಾನ್ಸಾಗಿ ಕೊಡಬೇಕೆಂತಲೂ ಉಳಿದ ಹಣದಲ್ಲಿ ಬೆಳ್ಳಿಕಟ್ಟೆಗೆ ಮಿಸಲಿನಲ್ಲೂ ಸುಣ್ಣದಕೇರಿಯಲ್ಲೂ ಕೊಳಕಾಗಿಯೂ ಅನಾರೋಗ್ಯಕರವಾಗಿಯೂ ಇರುವ ಮನೆಗಳನ್ನು ತೆಗೆದು ನಿರ್ಮಲವಾಗಿ ಇಡುವದಕ್ಕೆ ಏರ್ಪಾಡಾಗಬೇಕೆಂತಲೂ ಮೆಂಬರುಗಳು ತೀರ್ಮಾನಮಾಡಿದರು ಮೆ॥ ಡಿಕ್ರೂಸ್ ಯವರು—ಬೊಂಬಾಯಿ ಮತ್ತು ಕಲ್ಕತ್ತಾ ಪಟ್ಟಣಗಳಲ್ಲಿ ಟ್ರಸ್ಟ್ ಬೋರ್ಡಿನವರು ಜನರಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟು ಸುಮಾರು ಇಪ್ಪತ್ತು ವರುಷಗಳವರೆಗೆ ಅವರಿಂದ ಬಾಡಿಗೆ ವಸೂಲ್ಮಾಡಿ, ಆ ಬಳಿಕ ಅವರೇ ಆ ಮನೆಗಳ ಮಾಲೀಕರಾಗುವಂತೆ ಏರ್ಪಾಡು ಮಾಡಿ ರೂಢಿಸುತ್ತಿದ್ದಾರೆಂದೂ ಮೈಸೂರಿನಲ್ಲೂ ಹಾಗೆಯೇ ಏರ್ಪಾಡಾದರೆ ತುಂಬಾ ಉತ್ತಮವಾದೀತೆಂದೂ ತಿಳಿಸಿದರು ಮೆಂಬರುಗಳೆಲ್ಲಾ ಅದೇ ಅಭಿಪ್ರಾಯವನ್ನು ಅನುಮೋದಿಸಿರುತ್ತಾರೆ ಈಗ ಮೈಸೂರಿನಲ್ಲಿ ಹೊಸ ಮನೆ ಕಟ್ಟತಕ್ಕವರ ಪೈಕಿ ಅನೇಕರು ಟ್ರಸ್ಟ್‌ಬೋರ್ಡಿನವರು ಬಡ ಬಗ್ಗರಿಗೆ ಮಾತ್ರ ೧೦ ೨೦ ರೂಪಾಯಿ ನಷ್ಟೇ ಸಾಲ ಕೊಡುತ್ತಾರೆಂದೂ ಇತರರಿಗೆ ಹೆಚ್ಚು ಹಣ ಕೊಡುವುದಿಲ್ಲವೆಂದೂ ತಿಳಿದಿರುತ್ತಾರೆಂತಲೂ, ಈ ಅಭಿಪ್ರಾಯವಿರುವುದರ ದೆಸೆಯಿಂದ ಅನೇಕರು ಟ್ರಸ್ಟ್‌ಬೋರ್ಡಿನಿಂದ ಸಾಲಪಡೆಯುತ್ತಾ ಇಲ್ಲವೆಂತಲೂ, ಹೆಚ್ಚು ಹಣವನ್ನು ಸಾಲವಾಗಿ ಕೊಡುತ್ತಾರೆಂಬುವುದು ಪ್ರಜೆಗಳಿಗೆಲ್ಲಾ ತಿಳಿದು ಬಂದ ಪಕ್ಷದಲ್ಲಿ ಅನೇಕರು ಸಾಲಬೇಕೆಂದು ಅರ್ಜಿ ಬರೆದುಕೊಂಡಾರೆನ್ನುವುದಕ್ಕೆ ಸಂಶಯವಿಲ್ಲವೆಂತಲೂ ಪ್ರೆಸಿಡೆಂಟರೂ ವೈಸ್ ಪ್ರೆಸಿಡೆಂಟರೂ ಮೆಂಬರುಗಳಿಗೆ ತಿಳಿಸಿದರು [ರಾಜಧಾನಿಯಲ್ಲಿ ಈಗ ಹೊಸ ಮನೆ ಕಟ್ಟುತ್ತಿರುವವರೂ, ಮುಂದೆ ಕಟ್ಟಬೇಕೆಂದಿರುವವರೂ ಈ ವಿಚಾರವನ್ನು ತಿಳಿದುಕೊಳ್ಳಬೇಕು ಅನೇಕರು ಸಾಹುಕಾರರ ಬಳಿಯಲ್ಲಿ ದುಬಾರಿ ಬಡ್ಡಿಗೆ ಸಾಲ ಪಡೆದು ಮನೆ ಕಟ್ಟುತ್ತಿರುವರೆಂದು ನಮಗೆ ತಿಳಿದು ಬಂದಿದೆ ಟ್ರಸ್ಟ್‌ಬೋರ್ಡಿನಲ್ಲಿ ಇದಕ್ಕಾಗಿಯೇ ಕೇವಲ ಹಣವನ್ನು ತೆಗೆದಿಟ್ಟಿದ್ದರೂ ಅನೇಕರಿಗೆ ಈ ಸಂಗತಿ ತಿಳಿಯದು ಟ್ರಸ್ಟ್‌ಬೋರ್ಡಿನವರು ಕೊಡುವ ಸಾಲಕ್ಕೆ ಬಡ್ಡಿಯು ಶೇಕಡಾ ವರುಷಕ್ಕೆ ಮೂರು ರೂಪಾಯಿ ಇಷ್ಟು ಸುಲಭವಾದ ಬಡ್ಡಿಗೆ ಹಣವು ಸಾಲ ದೊರಕುತ್ತಿರುವಲ್ಲಿ ಜನರು ಸರ್ಕಾರದವರ ಉಪಕಾರವನ್ನು ಸ್ಮರಿಸಿ ಪ್ರಯೋಜನ ಪಡೆದಾರೆಂದು ಸೂಚಿಸುತ್ತೇವೆ —ಎಡಿ]

ದೊಡ್ಡ ಪೇಟೆ ಜವಳಿ ಅಂಗಡಿ ಪಕ್ಕದಲ್ಲಿರುವ ಖಾಲಿ ನಿವೇಶನವನ್ನು ರಾಜರ ಮನೆಯವರಿಗೆ ವಹಿಸಿಕೊಡಬೇಕೆಂದು ಮೆಂಬರುಗಳು ಒಪ್ಪಿಕೊಂಡರು

ಸಾಹುಕಾರ್ ಪುರುಷೋತ್ತಮಸಂಗಿರಿ ಯವರು ತಮ್ಮ ಹಳ್ಳದಕೇರಿ ಮನೆಯ ಹಿಂದೆ ಕನ್ಸರ್ವೆನ್ಸಿ ಗಲ್ಲಿಯನ್ನು ಹಾಕಿಸಬೇಕೆಂದು ಅರ್ಜಿ ಬರೆದುಕೊಂಡಿದ್ದರು ಇದು ಅವಶ್ಯವಿಲ್ಲವೆಂದು ಗೊತ್ತುಮಾಡಲಾಯಿತು ದೊಡ್ಡಪೇಟೆಯ ಮುಂಭಾಗದಲ್ಲಿರುವ ೬೯ನೇ ಡೋರ್ ನಂಬರುಳ್ಳ ಮನೆಯನ್ನು ಕ್ರಯಕ್ಕೆ ತೆಗೆದುಕೊಂಡು ಪೂರ್ವದಿಂದ ಪಶ್ಚಿಮಕ್ಕೆ ಗಲ್ಲಿ ಹಾಕಿ, ಖಾಲಿ ನಿವೇಶನ ಸಿಕ್ಕುವುದರಲ್ಲಿ ಒಂದು ಭಾಗವನ್ನು ಶೇಷಾದ್ರಿ ಅಯ್ಯಂಗಾರ್ಯರಿಗೂ, ಒಂದು ಭಾಗವನ್ನು ಗೋಸಾಯಿ ಯವರಿಗೂ ವಿಕರಿ ಮಾಡಬಹುದೆಂದು ಮೆಂಬರುಗಳು ಅಭಿಪ್ರಾಯಪಟ್ಟರು

ಮಂಡಿ ಮೊಹಲ್ಲೆಯಲ್ಲಿ ಹುಸೇನ್ ಬಿ, ಸಾದತ್ ಖಾನ್, ಅಬ್ದುಲ್ ಸಾಬ್ ಎಂಬವರ ಮನೆಗಳನ್ನು ಟ್ರಸ್ಟ್ ಬೋರ್ಡಿನವರು ತೆಗೆದುಕೊಂಡು ಒಡೆದುಹಾಕಬೇಕೆಂದು ತೀರ್ಮಾನವಾಗಿರುತ್ತದೆ

ಎಗ್ಜಿಕ್ಯುಟಿವ್ ಇಂಜನಿಯರ್ ಆಫೀಸಿನ ಸಬ್ ಓವರ್‌ಸೀರಾದ ಕೃಷ್ಣರಾಯರಿಗೂ ಕುಪ್ಪುಸ್ವಾಮಿ ಮೊದಲಿಯಾರ್ರಿಗೂ ತಲಾ ೪೫ ರಿಂದ ೮೦ ರೂಪಾಯಿಗೆ ಬಡ್ತಿ ಮಾಡಿ ಕೊಡಬೇಕೆಂದು ಎಗ್ಜಿಕ್ಯುಟಿವ್ ಇಂಜನಿಯರವರು ಶಿಫಾರಸು ಮಾಡಿದ್ದನ್ನು ಮೆಂಬರುಗಳು ಸ್ಯಾಂಕ್ಷನ್ ಮಾಡಬಹುದೆಂದು ಒಪ್ಪಿಕೊಂಡರು

ಕೋಟೆಯ ಆವರಣದೊಳಗೆ ಮನೆಗಳನ್ನು ಒಡೆಯುವುದಕ್ಕೆ ಸರ್ಕಾರದವರು ೬೪೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಇದರ ಜೊತೆಗೆ ಬಾಕಿ ಸಾಲಿನ ಶಿಲ್ಕು ೪೫,೦೦೦ ರೂಪಾಯನ್ನೂ ಉಪಯೋಗಿಸಿಕೊಳ್ಳತಕ್ಕದ್ದೆಂದು ಹುಕುಂ ಕಳುಹಿಸಿದ್ದರು ಮೆಂಬರುಗಳು ಹುಕುಮನ್ನು ರಿಕಾರ್ಡು ಮಾಡಿಕೊಂಡರು

ಸಬ್ ಡಿವಿಜನ್ ಆಫಿಸರ್ ಮೆ॥ ವಾಕರ್ ಯವರಿಗೆ ತಲಾ ೧೫೦ ರಿಂದ ೨೦೦ ರೂಪಾಯಿಗೆ ಬಡ್ತಿ ಕೊಡಬೇಕೆಂದು ಎಗ್ಜಿಕ್ಯುಟಿವ್ ಇಂಜನಿಯರವರು ತಿಳಿಸಿದ್ದರಿಂದ ಮೆಂಬರುಗಳು ಆ ಬಡ್ತಿಯನ್ನು ಕೊಡಬಹುದೆಂದು ಒಪ್ಪಿಕೊಂಡರು

ಕೋಟೆಯಲ್ಲಿ ಮೋತಿಖಾನೆ ಬೀದಿಯೊಳಗೆ ಮೆ॥ ಮುದ್ದುರಾಜೇ ಅರಸಿನವರ ಮನೆಗೆ ಪೂರ್ವದಿಕ್ಕಿಗಿರುವ ತಿಂಥಿಣಿಭಟ್ಟರ ಮನೆಯನ್ನು ಕ್ರಯಕೊಟ್ಟು ಒಡೆದುಹಾಕಬೇಕೆಂದೂ, ಓಲಗದ ಕೇರಿಯಲ್ಲೂ ಕೊಳಕಾದ ಒಂದು ಮನೆಯನ್ನು ತೆಗೆದುಬಿಡಬೇಕೆಂದೂ ತೀರ್ಮಾನವಾಯಿತು

ಮೆ॥ ಗುಂಡಾ ನರಸಿಂಹಯ್ಯನವರೂ ಮೆ॥ ಬನಮ್ಮಯ್ಯನವರೂ ಕುಂಚಿಟಿಗರ ಬಾಲಕರಿಗಾಗಿ ಪ್ರತ್ಯೇಕವಾದ ಧರ್ಮದ ವಿದ್ಯಾಶಾಲೆಯನ್ನು ಕಟ್ಟಿಸುವುದಕ್ಕೆ ಬಸ್ತಿ ಗುಡಿಯ ಹಿಂಭಾಗದಲ್ಲಿರುವ ಶ್ರೀನಿವಾಸ ಕಟ್ಟೆಯ ನಿವೇಶನವನ್ನೂ ಅದರ ದಕ್ಷಿಣಕ್ಕಿರುವ ನಿವೇಶನವನ್ನೂ ಅಂದರೆ ಸುಮಾರು ೪೫೦ × ೫೦೦ ವಿಸ್ತೀರ್ಣವುಳ್ಳಷ್ಟು ಸ್ಥಳವನ್ನು ಕೊಡಿಸಿಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು ಮೆಂಬರುಗಳು ಅಜಮಾಯಿಷಿಮಾಡಿ ನೋಡಿದ್ದರಲ್ಲಿ ಅವರು ಅಪೇಕ್ಷಿಸುವಷ್ಟು ದೊಡ್ಡದಾದ ನಿವೇಶನ ಅಲ್ಲಿ ಸಿಕ್ಕುವುದಿಲ್ಲವೆಂದು ಗೊತ್ತಾಯಿತು ಒಳಕ ಮೆಂಬರುಗಳು ಅವರಿಬ್ಬರನ್ನೂ ಮೀಟಿಂಗಿಗೆ ಕರೆಸಿಕೊಂಡು ಅವರ ಕೂಡ ಆಲೋಚನೆ ಮಾಡಿ, ಸುಬ್ರಾಯನಕಟ್ಟೆ ಏರಿಗೆ ಪೂರ್ವ ದಿಕ್ಕಿನಲ್ಲಿರುವ ವಿಸ್ತಾರವಾದ ಪ್ರದೇಶವನ್ನು ಕೊಡಿಸುವುದಾಗಿ ಹೇಳಿದರು ಸಾಹುಕಾರರಿಬ್ಬರೂ ಆ ಸ್ಥಳವು ಮಕ್ಕಳು ಬಂದು ಹೋಗುವುದಕ್ಕೆ ಸ್ವಲ್ಪ ದೂರಭಾಸಲೆಯಾಗುತ್ತದೆಂದು ಮೊದಲು ಅನುಮಾನ ಪಟ್ಟರು ಆದರೆ ಅಲ್ಲಿ ತಮ್ಮ ಉದ್ದೇಶಕ್ಕೆ ಬೇಕಾಗುವಷ್ಟು ಸ್ಥಳವೂ ವಸತಿಯೂ ದೊರಕುವುದೆಂದು ಗೊತ್ತಾದ ಮೇಲೆ ಆ ಖಾಲಿ ನಿವೇಶನವನ್ನು ಕೊಡಿಸಿದರೂ ಆದೀತು ಎಂದು ಒಪ್ಪಿಕೊಂಡರು ಈ ನಿವೇಶನವನ್ನು ಅವರಿಗೆ ವಹಿಸುವ ವಿಷಯದಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳ ಅಭಿಮತವನ್ನು ಕೇಳಿ ತಿಳಿಯುವದಕ್ಕೋಸ್ಕರ ಪ್ರೆಸಿಡೆಂಟರು ನಿನ್ನೆ ಒಂದು ಸ್ಪೆಷಲ್ ಮ್ಯುನಿಸಿಪಲ್ ಮೀಟಿಂಗನ್ನು ನಡಿಸುವವರಾಗಿದ್ದರು

ಮೆ॥ ಭಾಭಾ ಸಾಹೇಬರವರ ಮೆಮೋರಿಯಲ್ ಫಂಡು

ಐದನೇ ಚಂದಾ ಪಟ್ಟಿ

ಮೈಸೂರು ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ॥ ಎಂ ರಾಮಸ್ವಾಮಯ್ಯನವರ ಮೂಲಕ ರೂ ೪೫, ಹಾಸನದ ಹೈ ಸ್ಕೂಲ್ ಹೆ ಮಾ ಮೆ॥ ಟಿ ರಾಮಯ್ಯನವರ ರೂ ೨೫ ಬೆಂಗಳೂರು ಹಿಂದೂ ಎ ವಿ ಸ್ಕೂಲ್ ಹೆಡ್ ಮಾಸ್ಟರು ರೂ ೨೦ ಶಿಡ್ಲಘಟ್ಟ ಹೆ ಮಾ ಮೆ॥ ಟಿ ಜೀವಣ್ಣರಾಯರು ರೂ ೧೪ ೮ ತುಂಕೂರ್ ತಾ ಬೆಳ್ಳಾವಿ ಮೆ॥ ಟಿ ಕೆ ಸುಬ್ಬರಾಯರು ರೂ ೧೫ ಹಿರಿಯೂರು ಶಿರಸ್ತೇದಾರ್ ಮೆ॥ ಎನ್ ಗುರುರಾಯರು ರೂ ೧೯ ೧೯, ಬಾಗೇಪಲ್ಲಿ ಎ ವಿ ಸ್ಕೂಲ್ ಹೆ ಮಾ ಮೆ॥ ಪಿ ನಾರಾಯಣರಾಯರು ರೂ ೧೮ ೮, ಬೌರಿಂಗಪೇಟೆ ಹೆ ಮಾ ಮೆ॥ ಎಂ ಆರ್ ಶೇಷಗಿರಿರಾಯರು ರೂ ೧೬ ೫ ಕೊಪ್ಪ ಕ ಸ್ಕೂಲ್ ಹೆ ಮಾ ಮೆ॥ ಜಿ ಗಣೇಶರಾವ್, ತುಂಕೂರು ಡೆ ಇನ್ ಮೆ॥ ಎಚ್ ವೆಂಕಟರಮಣಯ್ಯನವರು, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ರೆಸಿಡೆಂಟ್ ಸರ್ಜನ್ ಮೆ॥ ಸಿ ಎ ಸಂಜಪ್ಪನವರು ಬೆಂಗಳೂರು ಫಿಮೇಲ್ ಕನ್ಸರ್ವೇಟರ್ ಮೆ॥ ಎಂ ಮುತ್ತಣ್ಣನವರು, ಕೋಲಾರದ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ॥ ಬಿ ತಿರುವೆಂಗಡಾಚಾರ್ಯರು, ಮತ್ತು ಹೊಳೇನರಸೀಪುರದ ಮೆ॥ ಎಂ ಎ ಸಂಪತ್ತಯ್ಯಂಗಾರ್ಯರು—ತಲಾ ರೂ ೧೦ ಬೆಂಗಳೂರು ಗೌ ಗ ಸ್ಕೂ ಹೆ ಮಿ ಶ್ರೀ ಪುಟ್ಟಸುಬ್ಬಮ್ಮ ರೂ ೯ ೧೨ ಶಿಡ್ಲಘಟ್ಟದ ವಿದ್ಯಾರ್ಥಿಗಳಿಗಾಗಿ ಟಿ ಜೀವಣ್ಣರಾವ್ ರೂ ೯ ೯, ಕಾಡನಹಳ್ಳಿ ಪಾಠಶಾಲೆಮ ದುವಾಡಿ ಅಪ್ಪಾಜಿ ಶಾಸ್ತ್ರಿ ರೂ ೯ ೮ ಚನ್ನಗಿರಿ ಹೆ ಮಾ ಎಚ್ ನಾರಾಯಣರಾವ್ ರೂ ೯-೧, ಶೃಂಗೇರಿ ಎ ವಿ ಸ್ಕೂಲ್ ಎಚ್ ಮಲ್ಲಪ್ಪ ಶಾಸ್ತ್ರಿ, ಸೊರಬ ಹೆ ಮಾ ಟಿ ಅಪ್ಪೂರಾವ್, ಕೆಲ್ಲೀಸ್‌ಪೇಟೆ ಎ ವಿ ಸ್ಕೂಲ್ ಹೆ ಮಾ ಮೂರ್ತಯ್ಯ, ಮತ್ತು ಗೋರಿಬಿದನೂರು ತಾ ಮಂಚೇನಹಳ್ಳಿ ಎಂ ಕೃಷ್ಣರಾವ್—ತಲಾ ರೂ ೮ ತುಂಕೂರ್ ತಾ ಕ್ಯಾತಸಂದ್ರದ ಮಾ ರಾಮೆಯಂಗಾರ್ ರೂ ೧, ಡಿಟೋ ಗ ಗ ಸ್ಕೂಲಿಗಾಗಿ ರೂ ೩, ಡಿಟೋ ಗ ಕ ಮತ್ತು ನೈಟ್ ಸ್ಕೂಲುಗಳಿಗಾಗಿ ರೂ ೬ ೧೨, ಕೊಪ್ಪ ತಾ ಬಾಳಗಡಿ ಎನ್ ನಾರಾಯಣರಾವ್ ರೂ ೬ ೧೨ ಬೆಂಗಳೂರು ಆ ಡೆ ಇನ್ ಟಿ ವಿ ಕೃಷ್ಣರಾವ್ ರೂ ೬, ಶಿವಮೊಗ್ಗ ಎ ವಿ ಸ್ಕೂಲ್ ಹೆ ಮಾ ಎಚ್ ವೆಂಕಟರಾಮಯ್ಯ ರೂ ೫ ೧೩, ಕೊರಟಗೆರೆ ಹೆ ಮಾ ಎಚ್ ಶ್ರೀನಿವಾಸಾಚಾರ್, ಯಲಹಂಕ ಹೆ ಮಾ ಎಂ ಶ್ರೀನಿವಾಸಾಚಾರ್, ಬೆಂಗಳೂರು ಆ ಡೆ ಇನ್ ಪಿ ಅನಂತ ಸುಬ್ಬರಾವ್ ಮೆ॥ ಸುಬ್ಬಸ್ವಾಮಿ ಐಯರ್ (ಮೆ॥ ಎಂ ಶಾಮರಾಯರ ಮೂಲಕ), ಮೆ॥ ಸಿ ಆರ್ ರೆಡ್ಡಿ (ಡಾ ರಾಮಸ್ವಾಮಯ್ಯಂಗಾರ್ಯರ ಮೂಲಕ), ತುಂಕೂರು ಗ ಸ್ಕೂಲ್ ಹೆ ಮಿ ಶ್ರೀ ದೊಡ್ಡಸುಬ್ಬಮ್ಮ ಚಿತ್ರದುರ್ಗ ಆಡ್ವೊ ಮೆ॥ ಚನ್ನಕೇಶವಯ್ಯ, ಕೋಲಾರ್ ತಾ ಮಂಡಿಕಲ್ ಮಾ ಜಿ ಸುಬ್ಬರಾವ್, ಮತ್ತು ಮದ್ದಗಿರಿ ಆ ಡೆ ಇನ್ ಎಂ ಮಾಧವರಾವ್—ತಲಾ ರೂ ೫, ಶೃಂಗೇರಿ ಗ ಸ್ಕೂಲ್ ಶಿಂಗಾರವಯ್ಯಭಟ್ಟು, ಶಿಕಾರಿಪುರ ಓ ಸ್ಕೂಲ್ ಹೆ ಮಾ ಸೈಯದ್ ಹಾಫಿಜ್, ಹೊಸಕೋಟೆ ಮಾ ಕೋದಂಡರಾಮ ಶಾಸ್ತ್ರಿಗಳು ಮತ್ತು ಚಿತ್ರದುರ್ಗ ಆ ಡೆ ಇನ್ ಕೆ ನಾರಾಯಣರಾಯರು—ತಲಾ ರೂ ೪ ತುಂಕೂರು ಹೋಪೇಟೆ ಗ ಸ್ಕೂಲ್ ವೆಂಕಟರಾಮಯ್ಯನವರು ರೂ ೩-೫ ಗೋರಿಬಿದನೂರು ತಾ ಮುದಿಗೆರೆ ಎಂ ಕೇಶವಪ್ಪನವರು, ಚಿಂತಾಮಣಿ ತಾ ಆಲಂಬಗಿರಿ ರಾಮರಾಯರು, ಕೋಲಾರ ಗ ಸ್ಕೂಲ್ ಹೆ ಮಿ ಶ್ರೀ ಅಮ್ಮಣ್ಣಮ್ಮನವರು, ಕೊರಟಗೆರೆ ತಾ ಹೋಳವನ

ಹಳ್ಳಿ ತಾ ಹೆ ಮಾ ಮುದ್ದುಮಾಗಡಿಶೆಟ್ಟರು, ಹೊನ್ನಾಳಿ ರುಸ್ತುಮಲ್ಲಿಖಾನ್ ರವರು, ನಂಜನಗೂಡು ಜೂಬಿಲಿ ಸಂಸ್ಕೃತ ಸ್ಕೂಲ್ ಶ್ರೀಕಂಠಶಾಸ್ತ್ರಿಗಳು, ಹರಿಹರ ತಾ ಬೆಳ್ಳೂಡಿ ಪಿಂಡಾರಿರಾಯರು, ಮೈಸೂರು ಸ್ಟ್ಯಾಂಡ್ ಸೂಪರ್‌ವೈಸರ್ ಎಚ್ ಕೃಷ್ಣಯ್ಯಂಗಾರ್ಯರು ಮತ್ತು ಆ ಆ ಜಗನ್ನಾಥಪಿಳ್ಳೆಯವರು (ಡಾ ಎಸ್ ನಾರಾಯಣರಾಯರ ಮೂಲಕ) ಕಲಾ ರೂ ೩, ಶಿವಮೊಗ್ಗ ಗ ಸ್ಕೂಲ್ ಹೆ ಮ ಮತ್ತು ಅ ಮಾಸ್ಟರ್ ರೂ ೨ ೫, ಶಿಕಾರಿಪುರ ಗ ಸ್ಕೂಲ್ ಹೆ ಮಿ ಕಾಸಿಂಬೀಯವರು, ಅರಸೀಕೆರೆ ತಾ. ಗರುಡನಗಿರಿ ಬಿ ವ ಸುಬ್ಬಯ್ಯನವರು, ಕಾನಕಾನಹಳ್ಳಿ ತಾ ಸಾತನೂರು ಕೆ ಕೃಷ್ಣರಾವ್, ಹೊನ್ನಾಳಿ ತಾ ದಿಡಗೂರು ಡಿ ಕೃಷ್ಣರಾವ್, ಚಿಂತಾಮಣಿ ತಾ ಯುಗವಕೋಟೆ ಆರ್ ರಂಗಪ್ಪನವರು, ಕಾನಕಾನಹಳ್ಳಿ ತಾ ಆಲಹಳ್ಳಿ ಎಚ್ ನಾರಣಪ್ಪನವರು, ಶಿಡ್ಲಘಟ್ಟ ತಾ ತಿಮ್ಮಸಂದ್ರ ಶಾಸ್ತ್ರಿ ನರಸಿಂಹಮೂರ್ತಿಯವರು, ಶಿಡ್ಲಘಟ್ಟ ಗ ಸ್ಕೂಲ್ ಹೆ ಮಿ ರಹಮಾಬೀ, ಗೌರಿಬಿದನೂರು ಹೆ ಮಾ ವೇದವ್ಯಾಸಾಚಾರ್, ಸ್ಕೂಲ್ ಮಾಲೀಕರು ಗಿರಿಮಾಜಿರಾಯರು, ಯಲಹಂಕ ಗ ಸ್ಕೂಲ್ ವೈ ಕೃಷ್ಣಾಚಾರ್, ಬೆಂಗಳೂರು ಚಾಮರಾಜಪೇಟೆ ಗ ಸ್ಕೂಲ್ ಹೆ ಮಿ ಶ್ರೀ ಟಿ ಯಗ್ಗಪ್ಪನವರು, ಮೊಳಕಾಲ್ಮೂರು ತಾ ಗ ಮಾ ಎಂ ರಂಗಪ್ಪನವರು, ಕೋಲಾರ್ ಮಾ ಸುಲೇಮಾನ್ ಖಾನ್ ರವರು, ಸಕಲೇಶಪುರದ ಸಬ್ ರೆಜಿ ಎಂ ಎಸ್ ರಾಮಧುಸಪ್ಪನವರು, ಹೊಳಲ್ಕೆರೆ ತಾ ರಾಮಗಿರಿ ಎ ವಿ ಸ್ಕೂಲ್ ಹೆ ಮಾಸ್ಟರು, ಮತ್ತು ಅರಗ ಹೋಸ್ಕು ಗುಡ್ಡೆಕೊಪ್ಪ ಕೆ ಶೇಷಗಿರಿರಾವ್,—ಕಲಾ ರೂ ೨, ಟಿ ಜೀವಣ್ಣರಾಯರು (ಶಿಡ್ಲಘಟ್ಟ ವಿದ್ಯಾರ್ಥಿಗಳಿಗಾಗಿ) ರೂ ೧೧೫ ಬೇಲೂರು ಹೆ ಮಾ ಎ ನಾರಾಯಣರಾಯರು (ವಿದ್ಯಾರ್ಥಿಗಳಿಗಾಗಿ), ಚಿಂತಾಮಣಿ ತಾ ಪಿಂಡಿಪಾಪನಹಳ್ಳಿ ಮಾ ಡಿ ರಾಮರಾವ್‌ರು, ಹಿರಿಯೂರು ತಾ ಗನ್ನಾಯಕನಹಳ್ಳಿ ಮಾ ಬಿ ವೆಂಕಟರಾಮಯ್ಯನವರು, ಗೌರಿಬಿದನೂರು ಅ ಮಾ ಅಬ್ದುಲ್‌ರಜಾಕ್, ಮತ್ತು ತಿಪ್ಟೂರು ತಾ ಹಿಟನೂರು ಗಂಗಾಧರಯ್ಯನವರು ಕಲಾ ರೂ ೧ ೮ ಬೇಲೂರ್ ಸ್ಕೂಲ್ ಮಾಲೀಕರು ಸುಬ್ರಾಯಶೆಟ್ಟಿ, ಸಿರಾ ತಾ ಮಾಗೋಡು ಎಚ್ ನರಸಿಂಹಯ್ಯ, ದಾವಣಗೆರೆ ತಾ ಕಕ್ಕರಗೊಳ ಕೆ ಹನುಮಂತರಾವ್, ಗೌರಿಬಿದನೂರು ತಾ ರಾಂಪುರದ ಎಂ ಹನುಮಂತಪ್ಪ, ಕೋಲಾರ ತಾ ನಂದಂಬಳ್ಳಿ ಎ ಸುಬ್ಬರಾವ್, ಚಾಮರಾಜನಗರ ತಾ ಬಾಗಲಿ ನಂಜುಂಡಯ್ಯ, ಮಾಗಡಿ ತಾ ಮಾವಿನಕೆರೆಹಳ್ಳಿ ಎ ವೆಂಕಟರಾಮಯ್ಯಂಗಾರ್, ಮಳವಳ್ಳಿ ತಾ ಕುಂದೇರು ಎನ್ ನರಸಿಂಹಯ್ಯ, ಅರುವನಹಳ್ಳಿ ಎನ್ ಸುಬ್ಬರಾವ್, ಸಂಕೇಘಟ್ಟ ಎಚ್ ನರಸಿಂಹಮೂರ್ತಿ, ಕಲಸಾಪುರ ಎಚ್ ಸೂರಪ್ಪ, ಕನ್ನಿರು ಕೆ ಸುಬ್ಬರಾವ್, ಅಕ್ಕಲಘಟ್ಟ ಡಿ ಶ್ರೀನಿವಾಸರಾವ್, ಬೀಕನಹಳ್ಳಿ ಸಿ ಲಿಂಗಣ್ಣಯ್ಯ ಅರವಗೊಳ ಎಚ್ ರಾಮರಾವ್, ರಾತಲ್ಪರ್ ಎನ್ ಭೀಮಣ್ಣ, ಅರಸಾಪುರ ವಿ ಆರ್ ಹಯಾತ್ ಅಲ್ಲಿ, ಕೋಡಿಹಳ್ಳಿ ವೆಂಕಣ್ಣಯ್ಯ, ರಾಂಪುರದ ಕೆ ವೆಂಕಂಭಟ್ಟ, ಹಂ ಸಾ ಮೆಂಬರು ಕೆ ನಾರಾಯಣಾಚಾರ್, ಪಿಂಡಿಪಾಪನಹಳ್ಳಿ ಜಿ ರಾಮಯ್ಯ, ಗೌರಿಬಿದನೂರು ವೆಂಕಟನಾರಣಯ್ಯ, ಕೋಲಾರ ಹನುಮಂತಶಾಸ್ತ್ರಿ, ವಿ ಸುಬ್ಬಾಶಾಸ್ತ್ರಿ, ೧೦ ಲಕ್ಷ್ಮೀನಾರಾಯಣಶಾಸ್ತ್ರಿ, ಅಪ್ಪುರಾವ್, ಶಾಂತರಾವ್, ಅತ್ತಿಗೆರೆ ಹುಸೇನ್ ಕರೀಂ, ಅರಬಲಾಚಿ ರಾಮಣ್ಣ, ಯಲಹಂಕ ಅಚ್ಚಪ್ಪ, ಜಿ ಶೀನಪ್ಪ, ಬೆಂಗಳೂರು ಚಾಮರಾಜಪೇಟೆ ಗ ಸ್ಕೂಲ್ ಅ ಮಿ ಚಿಕ್ಕನರಸಮ್ಮ, ಡಿಟೋ ವಿ ಅಚ್ಚಮ್ಮ, ಕೊರಟಗೆರೆ ಡೆ ಅಮಲ್ದಾರ್ ಮೆ|| ಟಿ ಟಿ ರಾಮಚಂದ್ರರಾವ್ ಸರ್ಜಾಪುರ ಸಭಾಪತಿ ಖಯರ್, ಡಿಟೋ ಗುಂಡಪ್ಪ, ಡಿಟೋ ಅಪ್ಪಾಜಿಶಾಸ್ತ್ರಿ, ಸರ್ಜಾಪುರ ಟಿ ತಿಮ್ಮಣ್ಣ, ಡಿಟೋ ಎಸ್ ಶ್ರೀನಿವಾಸಶಾಸ್ತ್ರಿ, ಪಾವಗಡ ಮಹಮದ್ ಅಬ್ದುಲ್ ರಹೀಂ, ಮಾದಯೂರು ಎಚ್ ಸುಬ್ಬಯ್ಯ, ಊಲಹಂಕ ಕೃಷ್ಣಪ್ಪ, ಡಿಟೋ ವೆಂಕಣ್ಣದಾಸ್ ವ ಇರನಹಳ್ಳಿ ಕೆ ರಾಮಯ್ಯಂಗಾರ್, ಯವೇಹಳ್ಳಿ ಕೆ ನರಸಿಂಹಯ್ಯ, ತಿಪ್ಪಸಂದ್ರದ ಕೃಷ್ಣಪ್ಪ, ಗಂಗವರ ನರಸಪ್ಪ, ಹೋಲಿಪುರ ಡಿ ರಾಮಣ್ಣ, ದೊಡ್ಡೇರಿ ಕೆ ಹನುಮಂತರಾವ್, ದೇವರಾಯಸಮುದ್ರ ಕೆ ರಾಮಯ್ಯಂಗಾರ್, ಕೊರಟಗೆರೆ ಕೆ ಸೀತಾರಾಮಯ್ಯ, ಚನ್ನಗಿರಿ ಜಿ ನಾಗಪ್ಪಶಾಸ್ತ್ರಿ, ತುಂಕೂರು ನರಸಿಂಹಶಾಸ್ತ್ರಿ, ಡಿಟೋ ಮಿಸ್ ಅಲಿಸ್, ಡಿಟೋ ಟಿ ನಾರಾಯಣರಾವ್, ಡಿಟೋ ವ್ಯಾಸಾಚಾರ್, ಡಿಟೋ ಚನ್ನಬಸವಯ್ಯ, ಡಿಟೋ ರಾಮಶಾಸ್ತ್ರಿ, ಡಿಟೋ ಸೀತಾರಾಮಶಾಸ್ತ್ರಿ, ಡಿಟೋ ಬ್ಯಾಟರಾಯದೀಕ್ಷಿತರು, ಡಿಟೋ ಪುಟ್ಟಣ್ಣ, ಡಿಟೋ ರಾಜೋಜಿ, ತುಂಕೂರು ಗ ಗ ಸ್ಕೂಲ್ ಶ್ರೀ ಕಾವೇರಮ್ಮ, ಪುಟ್ಟಮ್ಮ, ಸುಂದರಮ್ಮ, ಚಂದ್ರಮ್ಮ, ಸಾಕಮ್ಮ, ಸಾರ್ವತಮ್ಮ, ಗೌರಮ್ಮ, ಭಾಗೀರಥಮ್ಮ, ಭೋಗನಹಳ್ಳಿ ಶೀನಪ್ಪ, ನರಸಂದ್ರ ಟಿ ಸುಬ್ಬರಾವ್, ಕಟ್ಟೆಹಳ್ಳಿ ಎಸ್ ಸುಂದರಾಚಾರ್, ನಗರ ಕೆ ರವಳಪ್ಪ, ಮತ್ತು ಹಳೆಹಳ್ಳಿ ಕೆ ವೆಂಕಟರಾವ್,—ಕಲಾ ರೂ ೧, ನೆಲಮಂಗಲ ತಾ ಚಿಕ್ಕನಹಳ್ಳಿ ಗುರುಸಿದ್ಧಪ್ಪ, ಕಾನಕಾನಹಳ್ಳಿ ತಾ ಹಲಸೂರು ಪಾಪಯ್ಯ, ಬೆಂಗಳೂರು ತಾ ಜರಗನಹಳ್ಳಿ ಟಿ ಕೇಶವಯ್ಯ, ಮತ್ತು ತುಂಕೂರು ಅ ಮಾ ಹೊನ್ನಪ್ಪ—ಕಲಾ ರೂ ೨ ಬೆಂಗಳೂರು ಸವಾರ್ ಲೈನ್ ಮಾ ಲಕ್ಷ್ಮೀರಾವ್ ರೂ ೧೭, ಒಂದು ರೂಪಾಯಿಗಿಂತ ಕಡಮೆಯಾಗಿ ಕೊಟ್ಟ ರಕಂವರಿಂದ ರೂ ೧೩ ೪

ಸಿ ಕೃಷ್ಣರಾವ್, ಸೆಕ್ರೆಟರಿ,
ಭಾಭಾ ಮೆಮೋರಿಯಲ್ ಕಮಿಟಿ.

ಮೈಸೂರು ಸರ್ಕಾರಿ ಹುಕುಂಗಳು

೧. ವ್ಯವಸಾಯದ ದನಗಳ ಪ್ರದರ್ಶನವು

ಆನೇಕಲ್ಲಿನಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೃಷ್ಣರಾಜೇಂದ್ರ ಅಗ್ರಿಕಲ್ಚರಲ್ ಅಸೋಸಿಯೇಷನ್ನ ವ್ಯವಸಾಯಕ ಮತ್ತು ದನಗಳ ಎರಡನೇ ಪ್ರದರ್ಶನವು ಮುಂದಿನ ಏಪ್ರಿಲ್ ೧೮ ನೇ ತಾರೀಖು ಸೋಮವಾರದ ಲಾಗಾಯ್ತು ನಡಿಸಲ್ಪಡುವುದು ಆ ಕಾಲದಲ್ಲಿ ಪ್ರದರ್ಶನಕ್ಕೆ ಬರುವ ಪದಾರ್ಥಗಳಿಗೆ ೧೦೦ ರೂಪಾಯಿಯೂ, ದನಕರುಗಳಿಗೆ ೫೦ ರೂಪಾಯಿಯೂ ಬಹುಮಾನವಾಗಿ ಹಂಚಲ್ಪಡುವುದಲ್ಲದೆ ಯೋಗ್ಯತಾ ಪತ್ರಿಕೆಗಳೂ ಕೊಡಲ್ಪಡುವವು ಈ ಪ್ರದರ್ಶನವು ಆನೇಕಲ್ಲಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯುವ ಶ್ರೀ ತಿಮ್ಮರಾಯ ಸ್ವಾಮಿಯ ರಥೋತ್ಸವ ಕಾಲದಲ್ಲಿಯೇ ನಡಿಸಲ್ಪಡುವುದರಿಂದ ರಥೋತ್ಸವಕ್ಕೆ ದನಕರುಗಳನ್ನು ತರತಕ್ಕಂಥವರು ಈ ಪ್ರದರ್ಶನದಲ್ಲಿ ತಮ್ಮ ದನಕರುಗಳಿಗೆ ಬಹುಮಾನಗಳನ್ನು ಹೊಂದಬಹುದಾದದ್ದಲ್ಲದೆ ವ್ಯಾಪಾರದಿಂದಲೂ ಲಾಭವನ್ನು ಪಡೆಯಲು ಅನುಕೂಲವಾಗಿರುತ್ತದೆ ಇನ್ನೂ ವಿಶೇಷಸಂಗತಿಗಳನ್ನು ತಿಳಿದುಕೊಳ್ಳಲಪೇಕ್ಷೆಯುಳ್ಳವರು ತಾಲ್ಲೂಕ್ ಅಮಲ್ದಾರ್ರವರಿಗೆ ಬರೆದು ತಿಳಿದುಕೊಳ್ಳಬಹುದು

೨ ಜಿರಾಯತಿನ ಮುಟ್ಟುಗಳ ಡಿಪೋ.

ನಮ್ಮ ಸಂಸ್ಥಾನದಲ್ಲಿ ತಿದ್ದುಪಡಿಯಾದ ನೂತನ ಜಿರಾಯತು ಮುಟ್ಟುಗಳಿಗೆ ಗಿರಾಕಿಯು ದಿನೇ ದಿನೇ ಹೆಚ್ಚುತ್ತಿದ್ದು, ಸಮಯಕ್ಕೆ ಬೇಕಾದಾಗ ಅವು ಸಿಕ್ಕದೆ ರೈತರು ಬಹಳ ತೊಂದರೆಪಡುತ್ತಿದ್ದಾರೆಂತಲೂ, ವರ್ತಕರು ಈ ಯಂತ್ರಗಳಲ್ಲಿ ವ್ಯಾಪಾರಮಾಡುವುದಕ್ಕೆ ತಕ್ಕಷ್ಟು ಗಿರಾಕಿಯು ಇನ್ನೂ ಇಲ್ಲವಾಗಿ ಅವರು ಮುಂದು ಬರುವುದಿಲ್ಲವೆಂತಲೂ, ವ್ಯವಸಾಯಾಭಿವೃದ್ಧಿಗೆ ಮೊದಲು ಮೊದಲು ಶ್ರೇಷ್ಠವಾದ ಮುಟ್ಟುಗಳನ್ನೇ ರೂಢಿಸುವುದು ಆವಶ್ಯವೆಂತಲೂ, ಆದರೆ ಈ ಭಾಗದಲ್ಲಿ ವರ್ತಕರಿಂದ ವಿಶೇಷ ಅನುಕೂಲ ಉಂಟಾಗಲಾರದೆಂತಲೂ, ಆದದ್ದರಿಂದ ಸರ್ಕಾರದ ತರಫಿನಿಂದ ಒಂದು ಕೋಠಿಯನ್ನು ಸ್ಥಾಪಿಸಿ ಚೆನ್ನಾಗಿ ಪರೀಕ್ಷೆಮಾಡಿ ಉತ್ತಮವಾದವೆಂದು ಕಂಡುಬಂದ ಮುಟ್ಟುಗಳನ್ನೇ ತರಿಸಿಟ್ಟು ರೈತರಿಗೆ ಮಾರಬೇಕೆಂತಲೂ ಅಗ್ರಿಕಲ್ಚರಲ್ ಕೆಮಿಸ್ಟ್‌ರವರು ಶಿಫಾರಸು ಮಾಡಿರಲು ಗೌರ್ನಮೆಂಟಿನವರು ಹುಕುಂ ಮಾಡಿರುವುದೇನೆಂದರೆ,—

ಸಂಸ್ಥಾನದ ಸದ್ಯ ಸ್ಥಿತಿಯಲ್ಲಿ ನೂತನ ಜಿರಾಯತು ಮುಟ್ಟುಗಳನ್ನು ನಮ್ಮ ರೈತರಲ್ಲಿ ಹೊಸದಾಗಿ ರೂಢಿಸುವ ಕಾರ್ಯವನ್ನು ಸಾಹುಕಾರಿ ಜನಗಳಿಗೆ ಬಿಡುವುದು ಯೋಗ್ಯವಾಗಿ ಕಾಣುವುದಿಲ್ಲ ವ್ಯವಸಾಯದ ಇಲಾಖೆಯವರು ಖಾಲಿ ಇರುವ ಇಂಥಾ ಯಂತ್ರೋಪಕರಣಗಳನ್ನು ಪ್ರಚಾರಗೊಳಿಸುವುದೇ ಅಲ್ಲದೆ, ರೈತರ ಉಪಯೋಗಕ್ಕೆ ಆವಶ್ಯವಾಗಿ ಕಾಣಬರುವ ಯಂತ್ರಗಳನ್ನು ತರಿಸಿಕೊಡುವುದರಲ್ಲಿಯೂ ಸಹಾಯಮಾಡಬೇಕಾಗಿರುತ್ತದೆ ಇದಕ್ಕಾಗಿ ಇಲಾಖೆಯವರು ಒಂದು ಕೋಠಿಯನ್ನು ಸ್ಥಾಪಿಸಿ, ನೂತನ ವ್ಯವಸಾಯದ ಯಂತ್ರಗಳನ್ನು ತರಿಸಿಟ್ಟು ಬಿಕರಿ ಮಾಡುವ ಏರ್ಪಾಡು ಮಾಡಬಹುದು ಆದರೆ ಪ್ರಕೃತದಲ್ಲಿ ಈ ವ್ಯಾಪಾರವು ಪ್ರಬಲಪಟ್ಟು ವರ್ತಕರ ಹಸ್ತಗತವಾಗುವ ತನಕ ತಿದ್ದುಪಾಟಾದ ಮುಟ್ಟುಗಳಿಗೆ ಗಿರಾಕಿಯನ್ನು ಹೆಚ್ಚಿಸುವುದೇ ಡಿಪೋವಿನ ಮುಖ್ಯೋದ್ದೇಶವಾಗಿರಬೇಕಾಗುವುದರಿಂದ ಚೆನ್ನಾಗಿ ಪರೀಕ್ಷೆಮಾಡಿ ಸಾಮಾನ್ಯ ರೈತರ ಯೋಗ್ಯತೆಗೆ ತಕ್ಕವುಗಳೆಂದು ತೋರಿಬರುವ ಯಂತ್ರಗಳನ್ನು ಮಾತ್ರ ತರಿಸಿಡಬೇಕು ಯಾವ ಯಾವ ಯಂತ್ರಗಳನ್ನು ಪೂರ್ತಿಯಾಗಿಯೋ ಅಥವಾ ಅವುಗಳ ಕೆಲವು ಭಾಗಗಳನ್ನಾದರೂ, ನಮ್ಮ ಸಂಸ್ಥಾನದಲ್ಲಿಯೇ ತಯಾರ್ಮಾಡಬಹುದೆಂದು ತೋರುತ್ತದೋ ಅಂಥವನ್ನು ಸ್ಥಳದಲ್ಲೇ ಮಾಡುವುದಕ್ಕೆ ಸಾಧ್ಯವಾದ ಮಟ್ಟಿಗೂ ಪ್ರೋತ್ಸಾಹಪಡಿಸಬೇಕು

ಈ ಡಿಪೋವು ಕ್ರಮವಾಗಿ ಏರ್ಪಟ್ಟ ನಂತರ ಈ ಸಮಾಚಾರವನ್ನು ಜಿರಾಯತುದಾರರಲ್ಲಿ ಪ್ರಚಾರಪಡಿಸಿ, ಸಮಯದೊರೆತಾಗ ಯಂತ್ರಗಳ ಕೆಲಸವನ್ನೂ ಉಪಯೋಗವನ್ನೂ ಪ್ರತ್ಯಕ್ಷವಾಗಿ ತೋರಿಸುವುದಕ್ಕೆ ಉದ್ಯುಕ್ತರಾಗಬೇಕು ಈ ಯಂತ್ರಗಳನ್ನು ತರಿಸುವುದಕ್ಕೆ ಡೆಪ್ಯುಟಿ ಕಮಿಷನರುಗಳು ಸಾಧ್ಯವಾದ ಮಟ್ಟಿಗೂ ರೈತರಿಗೆ ಸರ್ಕಾರದಿಂದ ಸಾಲವನ್ನು ಕೊಡಿಸಿ ಪ್ರೋತ್ಸಾಹಪಡಿಸತಕ್ಕದ್ದು ಯಂತ್ರಗಳನ್ನು ವ್ಯವಸಾಯದ ಇಲಾಖೆಯವರ ಮುಖಾಂತರವೇ ತರಿಸಿಕೊಳ್ಳಬೇಕು

೩ ವ್ಯವಸಾಯದ ಮುಟ್ಟುಗಳ ನಿದರ್ಶನವು.

ತುಂಕೂರು ಡಿಸ್ಟ್ರಿಕ್ಟು ರೈತಾಪಿ ಜನಗಳಿಗೆ ಫಸಲ್ ರೇಷಿ ಮಾಡುವ ಯಂತ್ರದ ಕೆಲಸ ಮತ್ತು ಉಪಯೋಗವನ್ನು ಪ್ರತ್ಯಕ್ಷವಾಗಿ ತೋರಿಸುವುದಕ್ಕಾಗಿ ಕಳೆದ ಜನವರಿ ೧೬ ನೇ ತಾರೀಖಿನಲ್ಲಿ ತಿಪಟೂರು ತಾಲ್ಲೂಕು ಬಾಣಸಂದ್ರದಲ್ಲಿ ಒಂದು ನಿದರ್ಶನವು ನಡೆಯಿತು ಈ ಯಂತ್ರವನ್ನು ವ್ಯವಸಾಯದ ಇಲಾಖಾ ಛಾರ್ಜಿನಲ್ಲಿರುವ ಡಾಕ್ಟರ್ ಕೋಲ್‌ಮನ್ ಯವರು ಇಲಾಖಾ ಫಾರಂನಿಂದ ಒಬ್ಬ ಪ್ರದರ್ಶಕರ ಛಾರ್ಜಿನಲ್ಲಿ ಕಳುಹಿಸಿದ್ದರು ತಿಪಟೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಿಂದಲೂ ತುರುವೇಕೆರೆ ಸಬ್ ತಾಲ್ಲೂಕಿನಿಂದಲೂ ಮುಖ್ಯವಾದ ರೈತರು, ಜಮೀನುದಾರರು, ತಾಲ್ಲೂಕ್ ಬೋರ್ಡ್ ಮೆಂಬರುಗಳು, ಪಟೇಲರೂ ಸಹ ಸುಮಾರು ೫೦೦ ಜನದ ವರೆಗೆ ಸೇರಿದ್ದರು ನಿದರ್ಶನವನ್ನು ನೋಡಬೇಕೆಂಬ ಉತ್ಸಾಹದಿಂದ ಅನೇಕರು ದೂರದಿಂದ ಭಂಡಿಮಾರ್ಗವಾಗಿಯೂ, ರೈಲಿನ ಮೇಲೂ ಬಂದಿದ್ದರು ಯಂತ್ರದ ಛಾರ್ಜಿನಲ್ಲಿದ್ದ ಪ್ರದರ್ಶಕರು ಕೆಲಸಕ್ಕೆ ಕೂಡಲೆ ಉಪಕ್ರಮಿಸಿ ರಾಗಿ, ಹುರಳಿ, ಹಾರಕ ಮತ್ತು ಭತ್ತ ಸಹಾ ರೇಷಿಮಾಡಿಸಿದರು ನಿದರ್ಶನಕ್ಕೆ ಗುಬ್ಬಿ ಸಬ್ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು ಬಂದಿದ್ದು ಯಂತ್ರದ ಕೆಲಸವನ್ನು ನೋಡುತ್ತಲಿದ್ದವರಿಂದ ಯಂತ್ರದ ಸಾಧಕ ಬಾಧಕಗಳನ್ನು ತಿಳಿದು ಅದಕ್ಕೆ ಪ್ರದರ್ಶಕರು ಹೇಳಿದ ಸಲಹೆ ಸಮಾಧಾನಗಳನ್ನು ನೋಟಕರಿಗೆ ಸ್ಪಷ್ಟವಾಗಿ ತಿಳಿಯ ಹೇಳಿದರು ಸಾಹೇಬರವರು ಯಂತ್ರದ ಭಾಗಗಳನ್ನೂ ಅವು ಕೆಲಸ ಮಾಡುವ ತೆರನ್ನೂ ತೋರಿಸುವಂತೆ ಹೇಳಲು ಪ್ರದರ್ಶಕರು ಆ ಭಾಗಗಳನ್ನೆಲ್ಲಾ ತೋರಿಸಿ ಸಂಗತಿಯನ್ನು ಚೆನ್ನಾಗಿ ವಿವರಿಸಿದರು ಯಂತ್ರವು ಸಾಮಾನ್ಯವಾಗಿ ಎತ್ತುಗಳ ಎಳೆತದಿಂದ ಕೆಲಸ ಮಾಡುತ್ತದೆ ಕಪಿಲೆ ಹೊಡೆದ ಎತ್ತುಗಳಾಗಲಿ ಗಾಣದ ಎತ್ತುಗಳಾಗಲಿ ಸಿಕ್ಕಿದ್ದರೆ ಈ ಕೆಲಸಕ್ಕೆ ಬಹಳ ಅನುಕೂಲ ಎಣ್ಣೆ, ಕಬ್ಬು ಮುಂತಾದ ಗಾಣಗಳಂತೆಯೇ ಯಂತ್ರಕ್ಕೆ ಎತ್ತುಗಳನ್ನು ಕಟ್ಟಿ, ಸುತ್ತಲೂ ತಿರುಗಿಸುವುದರಿಂದ ಕೆಲಸ ನಡೆಯುತ್ತದೆ ಈ ಯಂತ್ರದ ಮುಖ್ಯ ಅನುಕೂಲಗಳು ಯಾವವೆಂದರೆ—(೧) ಕೆಲಸ ಜಾಗ್ರತೆಯಾಗುತ್ತದೆ ಸರಿಯಾಗಿ ಕೆಲಸ ನಡೆದರೆ ಘಂಟೆಗೆ ೩ ಪಲ್ಲ ಧಾನ್ಯ ರೇಷಿಯಾಗುತ್ತದೆ (೨) ಹಾಲಿ ವಾಡಿಕೆಯಲ್ಲಿರುವಂತೆ ತುೂರುವ ಕೆಲಸಕ್ಕೆ ಗಾಳಿ ಒದಗುವ ವರೆಗೂ ಕಾಯುವ ಹಾಗೆ ಈ ಯಂತ್ರದ ಕೆಲಸಕ್ಕೆ ಕಾಯತಕ್ಕ ಅವಶ್ಯಕವಿಲ್ಲ (೩) ಸಣ್ಣ ಒಬ್ಬಲಿನ ಜೊತೆಯಲ್ಲಿ ಬೀಳಬಹುದಾದ ಸಣ್ಣ ತುಂಡುಗಳು ಸಹ ಪುನಃ ಯಂತ್ರಕ್ಕೆ ಕೊಟ್ಟರೆ ರೇಷಿಯಾಗಬಹುದು (೪) ಧಾನ್ಯವು ಬಹಳ ಶುಭ್ರವಾಗಿ ಆಗುತ್ತದೆ (೫) ಅರಿಗಳನ್ನು ಕೊಯ್ದನಂತರ ಮೆದೆಹಾಕತಕ್ಕ ಆವಶ್ಯಕತೆ ಇಲ್ಲ ಕಂತೆ ಕಟ್ಟುವುದಕ್ಕೆ ಮುಂಚೆಯೇ ಒಣಗಿದ ಅರಿಗಳನ್ನು ಯಂತ್ರದಿಂದ ರೇಷಿಮಾಡಿಸಬಹುದು

ಈ ಯಂತ್ರದೊಂದಿಗೆ ಒಂದು ಮೇವು ಕತ್ತರಿಸುವ ಯಂತ್ರವನ್ನೂ ತಂದಿದ್ದರು. ಯಂತ್ರಕ್ಕೆ ಒಂದು ಚಕ್ರವು ಜಂಟಿಸಿರುತ್ತದೆ ಚಕ್ರವನ್ನು ತಿರುಗಿಸಿದರೆ ಯಂತ್ರವು ಕೆಲಸ ಮಾಡುವುದು. ಹುಲ್ಲು, ಕಡ್ಡಿ ಅಥವಾ ಸೊಪ್ಪನ್ನು ಎಷ್ಟು ಸಣ್ಣಗಾನಾದರೂ ಕತ್ತರಿಸುತ್ತದೆ ಸಾಧಾರಣವಾಗಿ ಅವರೆ ಜೋಳ ಮುಂತಾದ ಕಡ್ಡಿಗಳನ್ನು ಹಾಗೆಯೇ ದನಕ್ಕೆ ಹಾಕುವುದರಿಂದ ಅವು ಪೂರ್ತಿಯಾಗಿ ಉಪಯೋಗಿಸಲ್ಪಡದೆ ವಿಶೇಷವಾಗಿ ನಷ್ಟವಾಗುತ್ತವೆ ಆದರೆ ಈ ಯಂತ್ರದಲ್ಲಿ ಕೊಟ್ಟು ಕತ್ತರಿಸಿ ಅನಂತರ ದನಕ್ಕೆ ಹಾಕಿದರೆ ಅನೇಕವಾಗಿ ಎಲ್ಲವೂ ತಿನ್ನಲ್ಪಟ್ಟು ನಷ್ಟವಾಗುವುದು ತಪ್ಪುತ್ತದೆ ಮತ್ತು ಚೀಲಗಳಲ್ಲಿ ಹಾಕಿ ತುಂಬಿಟ್ಟರೆ ಸದರಿ ಮೇವು ದೀರ್ಘಕಾಲ ಉಪಯೋಗಕ್ಕೆ ಬರುತ್ತದೆ. ಅಲ್ಲದೆ ಮೇವು ಇಲ್ಲದ ಸ್ಥಳಕ್ಕೆ ರಫ್ತು ಮಾಡುವುದಕ್ಕೂ ವಿಶೇಷ ಅನುಕೂಲವಾಗುವುದು

ನಿದರ್ಶನಕ್ಕೆ ಬಂದಿದ್ದವರ ಪೈಕಿ ಗುಬ್ಬಿ ತಾಲ್ಲೂಕು ಚೇಲೂರು ಗ್ರಾಮದ ಪಟೇಲರು ಮೆ|| ಹೊನ್ನಲಿಂಗೇಗೌಡರು ಈ ಯಂತ್ರವನ್ನು ತಮ್ಮ ಕಣದಲ್ಲಿಟ್ಟು ೨ ದಿನಗಳು ಕೆಲಸ ಮಾಡಿಸಿ ನೋಡಿ ತೃಪ್ತಿಪಟ್ಟು, ಸ್ವಂತ ಉಪಯೋಗಕ್ಕೆ ಒಂದು ಯಂತ್ರವನ್ನು ತರಿಸುವವರಾಗಿದಾರೆ ಇವರು ಭಾರಿ ಜಿರಾಯ್ತುದಾರರು ಮತ್ತು ಪ್ರಜಾಪ್ರತಿನಿಧಿ ಸಭೆ ಮೆಂಬರ್ ಸಹ ಆಗಿರುವುದರಿಂದ ಇವರ ಪ್ರವರ್ತನದಿಂದ ಯಂತ್ರದ ಕೆಲಸವು ವಿಶೇಷ ಪ್ರಚುರಕ್ಕೆ ಬರುವುದರಲ್ಲಿ ಸಂಶಯವಿಲ್ಲ ಒಂದು ಮೇವು ಕತ್ತರಿಸುವ ಯಂತ್ರವನ್ನು ನಿದರ್ಶನಕ್ಕೆ ಬಂದಿದ್ದ ಗುಬ್ಬಿ ತಾಲ್ಲೂಕು ದಂಡಿನಶಿವರ ಗ್ರಾಮದ ಪಟೇಲ್ ಮೆ|| ಸಿದ್ಧಲಿಂಗೇಗೌಡರು ಖಾಯಿಷ್ ಮಾಡಿರುತ್ತಾರೆ

ಖಾತ್ರಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆದಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್.

ನೀರಿನ ಗಲಾಟೆಗೆ ಸರ್ಕಾರದವರ ನಿಗಾ ಕಡಮೆ.

ಅಯ್ಯಾ,

ಚಿತ್ರದುರ್ಗ ಟೌನಿನಲ್ಲಿ ನೀರಿಗೆ ಬಹಳ ತೊಂದರೆಯುಂಟಾಗಿರುವುದು ಗೌರ್ನಮೆಂಟಿಗೆ ಚೆನ್ನಾಗಿ ಗೊತ್ತೇ ಇದೆ. ಅದರಲ್ಲೂ ಅಕ್ಕಸಾಲಿಗರ ಬೀದಿಯಲ್ಲಿರುವ ಪಂಡಿತ ಕೃಷ್ಣಸಿಂಗರ ಮನೆಯ ಹತ್ತಿರ ಇರುವ ನಲ್ಲಿ ಸಮೀಪದಲ್ಲಿ ಪ್ರತಿನಿತ್ಯವೂ ಗಲಾಟೆ ಇದ್ದೇ ಇರುತ್ತೆ ಮೇಲಾಗಿ ಈ ನಲ್ಲಿಯು ಗೌರ್ನಮೆಂಟಿನ ಖರ್ಚಿಗೆ ಸಂಬಂಧಪಟ್ಟಿದ್ದಲ್ಲ ಮೇಲ್ಕಂಡ ಪಂಡಿತರು ಮುಂದಾಳುಗಳಾಗಿ ನಿಂತು ಮುಕ್ಕಾಲುಪಾಲು ಚಂದಾವನ್ನು ತಮ್ಮ ಕೈಯಿಂದಲೇ ಹಾಕಿ ದೂರದಿಂದ ನೀರು ತರುವ ಜನರಿಗೆ ಹತ್ತಿರವೇ ನೀರು ಸಿಕ್ಕುವ ಉಪಕಾರಮಾಡಿದರು. ಅಲ್ಲದೆ ವೃದ್ಧರಾಗಿರುವ ಇವರು ಪ್ರತಿನಿತ್ಯವೂ ನೀರು ಬರುವ ಹೊತ್ತಿಗೆ ನಲ್ಲಿಯ ಹತ್ತಿರ ನಿಂತು ಎಲ್ಲರಿಗೂ ನೀರನ್ನು ಸರಿಯಾಗಿ ಹಂಚಿಕೊಡುತ್ತಾ ಸಂಬಳವಿಲ್ಲದೆ ಕೆಲಸಮಾಡುತ್ತಿರುವರು ಇಂಥಾವರ ಉಪಕಾರವನ್ನು ನೆನಸದೆ ಇಲ್ಲಿ ಕೆಲವರು ಆಗಾಗ್ಗೆ ಜಗಳವಾಡುವುದುಂಟು ಇದಕ್ಕೆ ಈ ಪೇಟೆಯ ಅಜೂಬಾಜು ಕೆಲವು ಜನರು ವಿದ್ಯಾವಿಹೀನರಾಗಿರುವದೇ ಮುಖ್ಯಕಾರಣವು ಇವರಿಗೆ ಸರ್ಕಾರವೆಂದರೇನೋ, ಬಾಯಿಪೆಗಳೆಂದರೇನೋ ಅದೇ ಗೊತ್ತಿಲ್ಲ ಆಯಾ ಪೇಟೆಯ ನಲ್ಲಿಗಳಲ್ಲಿ ಆಯಾ ನಲ್ಲಿಗೆ ಸಂಬಂಧಪಟ್ಟ ಸರಹದ್ದಿನ ಜನಗಳು ಮಾತ್ರ ನೀರುತುಂಬಬೇಕೇ ಹೊರತು ಒಂದು ಪೇಟೆಯವರು ಇನ್ನೊಂದು ಪೇಟೆಯ ನಲ್ಲಿಯಲ್ಲಿ ನೀರು ತುಂಬಕೂಡದೆಂದು ಕಟ್ಟುಮಾಡಿದಾರೆ ಯಾಕಂದರೆ ಒಂದೊಂದು ನಲ್ಲಿಗೆ ಒಂದೂವರೆ ಗಂಟೆ ಹೊತ್ತು ಮಾತ್ರ ನೀರು ಬಿಡುತ್ತಾರೆ ಇಲ್ಲಿನ ಫಿಟ್ಟರ್ ಬಾದರ್ ಮೊಹದೀನ್ ಸಾಹೇಬರು ಮೇಲ್ಕಂಡ ರೀತಿಯಾಗಿ ಪ್ರತಿ ಒಂದು ನಲ್ಲಿಯ ಹತ್ತಿರವೂ ಎಚ್ಚರ ಕೊಟ್ಟರೂ ಮತಿಹೀನರಾದ ಕೆಲವುಜನರು ತಮ್ಮ ಸರಹದ್ದಿಗೆ ಸಂಬಂಧ ಪಡದ ಬೇರೆ ನಲ್ಲಿಗಳಿಗೆ ನೀರಿಗೆ ಹೋಗುವುದೇ ಮೇಲ್ಕಂಡ ಗಲಾಟೆಗೆ ಕಾರಣವಾಗಿರುತ್ತದೆ ಸರ್ಕಾರಕ್ಕೆ ಸಂಬಂಧಪಟ್ಟ ದಯಾಳುವಾದ ದೊಡ್ಡ ನೌಕರರು ಮೇಲ್ಕಂಡ ಕೆಲವು ಜನರ ಅವಿವೇಕವನ್ನು ಹೋಗಲಾಡಿಸಿ, ವಿವೇಕಿಗಳನ್ನಾಗಿ ಮಾಡ್ಯಾರೆಂದು ನಂಬಿರುತ್ತೇನೆ

ಸತ್ಯವಾದಿ

ಭಾನುವಾರ ಸ್ಕೂಲ್ ಪರೀಕ್ಷೆ ನಡೆಯಬಹುದೋ ?

ಅಯ್ಯಾ,

ಕಳೆದಮಾರ್ಚಿ ತಾ ೨೫ ನೇ ಶುಕ್ರವಾರ ಸಾಯಂಕಾಲ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರಾದ ಮೆ|| ಎನ್ ರಾಮರಾಯರು ತೀರ್ಥಹಳ್ಳಿಗೆ ಶಿವಮೊಗ್ಗೆಯಿಂದ ದಯಮಾಡಿ, ಮುಸಾಫರ್ ಬಂಗಲೆಯಲ್ಲಿ ಮೊಕ್ಕಾಂ ಮಾಡಿಕೊಂಡರು ತಾ ೨೬ ನೇ ಶನಿವಾರ ಬೆಳಗ್ಗೆ ಇಲ್ಲಿನ ಗೌರ್ನಮೆಂಟಿನ ಎ ವಿ ಗಂಡುಮಕ್ಕಳ ಪಾಠಶಾಲೆಯಲ್ಲಿ ಮಕ್ಕಳ ಒಂದು ವರುಷದ ವಿದ್ಯಾಭಿವೃದ್ಧಿಯನ್ನು ಕುರಿತು ಪರೀಕ್ಷಿಸಿದರು ಮಾರನೇದಿನ ಅಂದರೆ ೨೭ ನೇ ತಾರೀಖು ಈಸ್ಟರ್ ಸಂಡೆ ಎಂಬ ಮಹಾ ಲೋಕಪ್ರಸಿದ್ಧವಾದ ಆದಿತ್ಯವಾರದದಿನ ಹೆಣ್ಣು ಮಕ್ಕಳ ಪಾಠಶಾಲೆಯನ್ನು ಪರೀಕ್ಷಿಸುವಂತೆ ಏರ್ಪಡಿಸಿದರು. ಮೇಲ್ಕಂಡ ದಿನದ ಬೆಳಗ್ಗೆ ಹೆಣ್ಣು ಮಕ್ಕಳು ಪಾಠಶಾಲೆಗೆ ಬರುವಂತೆಯೂ, ಇನ್ಸ್‌ಪೆಕ್ಟರವರು ಬಂದು ಬಾಲಕಿಯರನ್ನು ಪರೀಕ್ಷಿಸುತ್ತಾರೆಂಬುವಂತೆಯೂ ಹೆಣ್ಣು ಮಕ್ಕಳ ಉಪಾಧ್ಯಾಯರು ಜವಾನನ ಮೂಲಕ ಮಕ್ಕಳೆಲ್ಲರಿಗೂ ನೋಟೀಸ್ ಕಳುಹಿಸಿದರು ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರವರ ಅಪ್ಪಣೆಯಂತೆ ಭಾನುವಾರ ಸ್ಕೂಲ್ ಪರೀಕ್ಷೆಯು ನಡೆಯಿತು ಆಗ್ಗೆ ಕೆಲವು ಕ್ರೈಸ್ತ ಹೆಣ್ಣುಮಕ್ಕಳು ಹೋಗುವುದಕ್ಕೆ ತಂಬಾ ಹಿಂತೆಗೆದು, ಆ ದಿನ ತಾವು ಪರೀಕ್ಷೆಗೆ ಹೋಗಿ ಪ್ಯಾಸ್ಸು ಸಿಕೊಳ್ಳುವುದಕ್ಕಿಂತ ಸಾಕ್ಷಾತ್ ಭಗವಂತನ ಅಪ್ಪಣೆಯನ್ನು ಇಂಡಿಯಾ ಚಕ್ರವರ್ತಿಗಳ ಮೂಲಕವೂ ಮೈಸೂರು ಮಹಾರಾಜರವರ ಮೂಲಕವೂ ಬಂದಿರುವ ರಜಾ ಪ್ಪಣೆಯಂತೆ ಮನೆಯಲ್ಲಿದ್ದು ಭಗವದಾರಾಧನೆಯನ್ನು ಮಾಡುವುದೇ ಸರ್ವೋತ್ತಮವೆಂದು ನಿಂತುಬಿಟ್ಟರು ಸ್ಕೂಲ್ ಇನ್ಸ್‌ಪೆಕ್ಟರವರು ಸೋಮವಾರ ಕಾಲ ಕೆಯವರಿಗೆ ರಜಾ ಕೊಟ್ಟು, ಗವರ್ನ್‌ಮೆಂಟ್ ಗಂಡು ಹುಡುಗರ ಸ್ಕೂಲಿಗೆ ಸೋಮವಾರ ಪರಿಕ್ಷಾರ್ಥವಾಗಿ ದಯಮಾಡಿದರು.

ಭಾನುವಾರ ಎಲ್ಲಾ ಸ್ಕೂಲುಗಳಿಗೂ ರಜಾ ಇರುವಾಗ ಮತ್ತು ಗುಡ್ ಫ್ರೈಡೆ ಹಾಲಿಡೆ ಇರುವಾಗ ಇದನ್ನು ತಿಳಿದು ಸದರಿ ಇನ್ಸ್‌ಪೆಕ್ಟರವರು ಭಾನುವಾರವೇ ಬಾಲಕಿಯರ ಪಾಠಶಾಲೆಯನ್ನು ಪರೀಕ್ಷಿಸಿದ್ದನ್ನು ನೋಡಿದರೆ ತುಂಬಾ

ಆಶ್ಚರ್ಯವಾಗುತ್ತದೆ ಮತ್ತು ಆ ದಿನ ಬೇಗ್ಗ ಸ್ಕೂಲ ತೆರೆದು ಕೆಲಸಮಾಡು ವದು ಅನೇಕ ಉಪಾಧ್ಯಾಯರಿಗೂ ಮನಸ್ಸಿನಲ್ಲಿ ನಾನಾ ವಿಧವಾದ ಅಭಿಪ್ರಾಯಗಳು ಹುಟ್ಟಿದರೂ ದೊಡ್ಡ ಆಫೀಸರ ಅಪ್ಪಣೆಗೆ ಅಂಜಿ ಕೆಲಸಮಾಡಬೇಕಾಯಿತು ವಿದ್ಯಾ ಇಲಾಖೆಯಲ್ಲಿ ಇಂಥಾ ಅಕ್ರಮವು ಇರುವದಾದರೆ ಮತ್ತೇನು ಹೇಳಬೇಕು ಭಾನುವಾರಗಳಲ್ಲಿ ಸ್ಕೂಲುಗಳನ್ನು ಮುಚ್ಚುವದು ಗವರ್ನ್‌ಮೆಂಟಿನವರ ಅಪ್ಪಣೆಯೋ, ಅಥವಾ ಭಾನುವಾರಗಳಲ್ಲಿ ಸ್ಕೂಲುಗಳಲ್ಲಿ ಕೆಲಸ ನಡಿಸುವದು ಗವರ್ನ್‌ಮೆಂಟಿನವರ ಅಪ್ಪಣೆಯೋ ಇದನ್ನು ನಿಶ್ಚಯಿಸಿ ಮಾಡುವದು ಉತ್ತಮವಾಗಿರುತ್ತೆ ಇನ್‌ಸ್ಪೆಕ್ಟರವರು ಸರ್ವಿಸ್‌ದಾರರೂ ಅನುಭವಿಗಳೂ ಆಗಿದ್ದಾರೆಂಬುವದಕ್ಕೆ ಯಾವ ಸಂದೇಹವಿಲ್ಲ ಭಾನುವಾರ ಸ್ಕೂಲುಗಳನ್ನು ಮುಚ್ಚುವದು ಗವರ್ನ್‌ಮೆಂಟಿನವರ ಮುಂದಿಟ್ಟ ಅಪ್ಪಣೆಯಾಗಿದೆ ಎಂದು ನಂಬಿರುತ್ತೇನೆ.

ಸಿ. ಜಿ

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದಲ್ಲಿದ್ದ ಮಹಾ ಪ್ರಸಿದ್ಧವಾದ ಭುವನೇಶ್ವರ ದೇವಸ್ಥಾನಕ್ಕೆ ಬೆಂಕಿ ಬಿದ್ದು ಸಂಪೂರ್ಣವಾಗಿ ಸುಟ್ಟುಹೋಯಿತು

ಕಾಶ್ಮೀರ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದೊಳಗೆ ಯಾರೂ ಹಸುಗಳನ್ನು ಕೊಲ್ಲಕೂಡದೆಂದು ಇಸ್ತಿಹಾರು ಕೊಟ್ಟಿದಾರೆ

ಇಂದೋರ್ ಸಂಸ್ಥಾನದ ಶ್ರೀಮಂತ ತುಕ್ಕೋಜಿರಾವ್ ಹೋಳ್ಕಾರ್ ರವರು ತಮ್ಮ ಪ್ರೈವೇಟ್ ಸೆಕ್ರೆಟರಿ ಮ॥ ವಿನಾಯಕರಾಯರೊಡನೆ ಕಳೆದ ವಾರ ಬೊಂಬಾಯಿನಲ್ಲಿ ಜಹಜು ಹತ್ತಿ ವಿಲಾಯತಿಗೆ ಪ್ರಯಾಣಮಾಡಿದರು

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಮಹಮ್ಮದೀಯ ವಿದ್ಯಾರ್ಥಿಗಳು ಎಲ್ಲಾ ಸರ್ಕಾರಿ ಸ್ಕೂಲುಗಳಲ್ಲೂ ಅರ್ಧಫೀಜನ್ನು ಮಾತ್ರ ಕೊಡತಕ್ಕದ್ದೆಂದು ಆ ಸರ್ಕಾರದವರು ಹುಕುಂ ಕೊಟ್ಟು ರಿಯಾಯಿತಿ ತೋರಿಸಿರುತ್ತಾರೆ

ಹಿಂದುಗಳ ಯಾತ್ರಾಸ್ಥಾನವಾದ ದ್ವಾರಕಾಪಟ್ಟಣಕ್ಕೆ ರೈಲ್ ಹಾಕಬೇಕೆಂದು ತೀರ್ಮಾನವಾಗಿದೆ ಆ ಸ್ಥಳವಾದರು ಜಾಂಸಾಹೇಬ್‌ಯವರನ್ನು ಗಾಯಿಕ್‌ವಾಡಿ ಮಹಾರಾಜರವರು ಕಂಡು, ಈ ಕಾಮಗಾರಿಗೆ ಬೇಕಾಗುವ ಹಣವನ್ನು ಒದಗಿಸುವುದಾಗಿ ವಾಗ್ದಾನಕೊಟ್ಟಿದಾರೆ

ಬಂಗಾಳಾ ಅಧಿಪತ್ಯದ ದೇಶೀಯ ಸರ್ವಕಲಾ ಪ್ರೋತ್ಸಾಹಕ ಸಂಘದವರು ಈ ವರುಷ ೬೧ ಮಂದಿ ವಿದ್ಯಾರ್ಥಿಗಳನ್ನು ಬೇರೆ ಬೇರೆ ಕಸಬು ಕಲಿತು ಬರುವುದಕ್ಕೋಸ್ಕರ ವೇತನಗಳನ್ನು ಕೊಟ್ಟು ಅಮೇರಿಕ, ವಿಲಾಯತಿ, ಜಪಾನ್ ರಾಜ್ಯಗಳ ವಿದ್ಯಾಶಾಲೆಗಳಿಗೆ ಕಳುಹಿಸುತ್ತಾರೆಂದು ಪ್ರಕಟವಾಗಿದೆ

ಪಂಜಾಬಿನಲ್ಲಿ "ಸ್ವಾರಾಜ್ಯ" ವೆಂಬ ಉರುದೂ ಭಾಷೆಯ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಮೂರು ಬಾತ್ಮಿಗಳನ್ನು ಪ್ರಕಟಿಸಿದ್ದಕ್ಕೋಸ್ಕರ ಎಡಿಟರಾದ ನಂದಗೋಪಾಲನೆಂಬಾತನಿಗೆ ಸೆಷನ್ಸ್ ಜಡ್ಜ್ ಮ॥ ರುಸ್ತುಂಜಿಯವರು ಆಸೆಸರುಗಳ ಅಭಿಪ್ರಾಯವನ್ನು ಒಪ್ಪದೆ ಹತ್ತು ವರುಷದ ಬಂಕೋಲೆ ಸಜವನ್ನು ವಿಧಿಸಿರುತ್ತಾರೆ

ದಿಲ್ಲಿ ಪಟ್ಟಣದ "ಕರ್ಜನ್ ಗೆಜೆಟ್" ಎಂಬ ಪತ್ರಿಕೆಯ ಎಡಿಟರಾದ ಮಿರ್ಜಾ ಹೈರತ್ ಎಂಬ ಮಹಮ್ಮದೀಯನು ಒಂದು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರನಾಗಿದ್ದುಕೊಂಡು ಆ ಕಂಪನಿಯ ಲೆಕ್ಕಗಳನ್ನು ಬದಲಾಯಿಸಿ ಮೋಸಗಾರಿ ಮಾಡಿದ್ದರಿಂದ ಅವನಿಗೆ ೩ ವರುಷ ಕಠಿಣ ಸಜವೂ ೧,೦೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿರುತ್ತದೆ

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಜೆನಿ ಹಾರು ಎಂಬ ಸಂಸ್ಥಾನದಲ್ಲಿ ಯಾವನೊಬ್ಬ ಪ್ರಜೆಯಾಗಲಿ ಯಾವ ವರ್ತಮಾನ ಪತ್ರಿಕೆಗಾಗಲಿ ಚಂದಾ ಕಳುಹಿಸಿ ತರಿಸಬೇಕಾದರೆ ಮೊದಲು ಆ ಪತ್ರಿಕೆಯ ಹೆಸರು ವಿಳಾಸವನ್ನು ಸರ್ಕಾರಕ್ಕೆ ತಿಳಿಸಬೇಕೆಂದೂ, ಸರ್ಕಾರದವರು ಒಪ್ಪಿ ಅಪ್ಪಣೆ ಕೊಟ್ಟರೆ ತರಿಸಬಹುದೆಂದೂ ನವಾಬರವರು ಇಸ್ತಿಹಾರು ಹಾಕಿಸಿರುತ್ತಾರೆ

೧ ನೇ, ೨ ನೇ ತರಗತಿಗಳ ರೈಲ್ ಗಾಡಿಗಳೊಳಗೆ ಕುಳಿತು ಪ್ರಯಾಣಮಾಡುವಂಥಾ ಯೂರೋಪಿಯನ್ ಮತ್ತು ದೇಶೀಯ ದೊಡ್ಡಮನುಷ್ಯರಿಗೆ ಘಾತುಕರ ದೆಸೆಯಿಂದ ಗುಂಡಿನ ಮತ್ತು ಸಿಡಿಮದ್ದಿನ ಅಪಾಯವೇನೂ ಸಂಭವಿಸದಂತೆ ಮಾಡುವುದಕ್ಕಾಗಿ ಎಲ್ಲಾ ತರಗತಿಗಳ ರೈಲ್‌ಗಾಡಿಗಳಿಗೂ ಹೊರಪಾರ್ಶ್ವದಲ್ಲಿ ಒಂದೇ ತರದ ಬಣ್ಣವನ್ನು ಹಾಕಬೇಕೆಂದು ಹುಕುಂ ಆಗಿರುತ್ತದೆ.

ಗಂಜಾಂ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಶಿಕಾರಿದಾರನು ೩೦೦ ಜನರನ್ನು ಕೊಂದು ತಿಂದುಹಾಕಿದ್ದ ಒಂದು ಹುಲಿಯನ್ನು ಹೊಡೆದು ೧,೦೦೦ ರೂಪಾಯಿ ಸರ್ಕಾರದಿಂದ ಬಹುಮಾನ ಪಡೆದನು ಇನ್ನೊಂದು ಹುಲಿಯು ಇದುವರೆಗೆ ೧೦೦ ಜನರನ್ನು ಹಿಡಿದು ತಿಂದು ಸಿಕ್ಕದೆ ಅಲೆಯುತ್ತದೆ ಎಂದೂ, ಅದನ್ನು ಕೊಂದವನಿಗೂ ಸರ್ಕಾರದವರು ಇನಾಂ ಕೊಡುವಂತೆ ಪ್ರಕಟಮಾಡಿದಾರೆಂದೂ ತಿಳಿದುಬಂದಿದೆ

ನಾಭಾ ಸಂಸ್ಥಾನದ ರೀಜನ್ಸಿ ಕೌನ್ಸಿಲ್ ಪ್ರೆಸಿಡೆಂಟರಾಗಿ ಹತ್ತು ವರುಷ ಬಹು ದಕ್ಷತೆಯಿಂದ ರಾಜ್ಯಭಾರವನ್ನು ನಡಿಸುತ್ತಾ ಬಂದು, ಮಹಾರಾಜರವರಿಗೆ ದೌಲತ್ತನ್ನು ವಹಿಸಿದ ಮೇಲೆ ಪೆನ್‌ಷನ್ ಪಡೆದು ಕೆಲಸಬಿಟ್ಟಿದ್ದ ಸರ್ದಾರ್ ಬಹದೂರ್ ಗುರುಮುಖ ಸಿಂಗ ರವರು ಕಾಲವಾದರೆಂದು ಪ್ರಕಟವಾಗಿದೆ. ಇವರಿಗೆ ೬೩ ವರುಷ ವಯಸ್ಸಾಗಿತ್ತು ೫೩ ವರುಷ ಆ ಸಂಸ್ಥಾನದಲ್ಲಿ ನೌಕರಿ ಮಾಡಿದವರು

ಭೋಪಾಲ ಸಂಸ್ಥಾನದಲ್ಲಿ ಆರ್ಯಸಮಾಜಕ್ಕೆ ಸೇರತಕ್ಕವರನ್ನು ಆ ಸಮಾಜದ ಕಾಗದ ಪತ್ರಗಳನ್ನು ಪಡೆದಿರುವವರನ್ನೂ ಆ ಗವರ್ನ್‌ಮೆಂಟಿನವರು ಹಿಡಿದು ಗಡೀಪಾರು ಮಾಡುತ್ತಾರೆಂದೂ, ಅನೇಕ ಆರ್ಯಸಮಾಜದವರು ಆ ಸಂಸ್ಥಾನದಿಂದ ಹೊರಟು ಹೋಗುತ್ತಿದಾರೆಂದೂ ಉತ್ತರ ದೇಶದ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಆ ಸಂಸ್ಥಾನದ ಚೀಫ್ ಸೆಕ್ರೆಟರಿಯವರು ಈ ವರ್ತಮಾನದಲ್ಲಿ ಸ್ವಲ್ಪವೂ ನಿಜವಿಲ್ಲವೆಂದು ತಿಳಿಸಿರುತ್ತಾರೆ.

ನಾಸಿಕದಲ್ಲಿ ಕಲೆಕ್ಟರವರನ್ನು ಕೊಂದು ಹಾಕಿದ ಮೊಕದ್ದಮೆಯಲ್ಲಿ ಮೊದಲನೇ ಗುಂಪಿನ ಏಳು ಮಂದಿ ಅಪರಾಧಿಗಳ ಮೇಲೆ ಹರಲ್ಪಟ್ಟಿದ್ದ ಮೊಕದ್ದಮೆಯು ಕಳೆದ ವಾರ ಮುಕ್ತಾಯವಾಗಿ, ಬೊಂಬಾಯಿನ ಸ್ಪೆಷಲ್ ಜಡ್ಜಿಗಳು ತೀರ್ಮಾನವನ್ನು ಹೇಳಿದರು ಕಾನಾರೆ, ಕರ್ವೆ, ದೇಶಪಾಂಡೆ ಎಂಬೀ ಮೂರು ಮಂದಿಗೆ ಮರಣದಂಡನೆಯೂ, ಸೋಮನ್, ಜೋಶಿ, ವೈದ್ಯ ಎಂಬೀ ಮೂರು ಮಂದಿಗೆ ಆಮರಣಾಂತವಾದ ಬಂಕೋಲೆ ಶಿಕ್ಷೆಯೂ, ದತ್ತಾತ್ರೇಯ ಜೋಶಿ ಎಂಬ ಏಳನೇ ಅಪರಾಧಿಗೆ ಎರಡು ವರುಷ ಕಠಿಣ ಸಜವೂ ವಿಧಿಸಲ್ಪಟ್ಟಿತು ಎರಡನೇ ಮೊಕದ್ದಮೆಯ ದರ್ಯಾಫ್ತಿಯು ಪ್ರಾರಂಭವಾಗಿ ನಡೆಯುತ್ತಾ ಇದೆ

ಮಧ್ಯಪ್ರಾಂತ್ಯಗಳಿಗೆ ಸೇರಿದ ಬಸ್ತಾರ್ ಸಂಸ್ಥಾನದಲ್ಲಿ ಕೆಲವು ಕಾಡುಜನರು ರಾಜಧಾನಿಯಾದ ಜಗದಲ್‌ಪುರವನ್ನು ಮುತ್ತಿಗೆ ಹಾಕಿಕೊಂಡಿದ್ದರೆಂದೂ, ಇಂಗ್ಲಿಷ್ ಸೈನ್ಯಗಳೂ ಆಯುಧಪಾಣಿಗಳಾದ ಪೋಲೀಸಿನವರೂ ಹೋಗಿ ಆ ಜನರ ದಂಗೆಯನ್ನು ಶಮನಮಾಡಿ ಬಂದರೆಂದೂ ತಿಳಿಸಿರುತ್ತೇವಷ್ಟೆ ಈಚೆಗೆ ಕಳೆದ ಮಾರ್ಚಿ ತಾ ೨೬ ರಲ್ಲಿ ಅಲ್ಲಿ ಒಂದು ದೊಡ್ಡ ಯುದ್ಧವಾದಂತೆ ವರ್ತಮಾನ ಬಂದಿದೆ ಕಾಡು ಜನರು ೭೦೦ ಮಂದಿ ಸೇರಿ ಸೈನಿಕರ ಮೇಲೆ ಯುದ್ಧ ಮಾಡಿದರು ೧೫ ಜನರು ಕೊಲ್ಲಲ್ಪಟ್ಟರು, ಅನೇಕರಿಗೆ ಗಾಯಗಳಾಗಿರುತ್ತವೆ ಅತ್ತಲಾಗಿ ಪೋಲೀಸಿನವರ ಪೈಕಿ ೧೧ ಮಂದಿಗೆ ಗಾಯಗಳಾದವು; ಒಬ್ಬನು ಕೊಲ್ಲಲ್ಪಟ್ಟನು

ಮದರಾಸ್ ಪಟ್ಟಣದ ಲೇಟ್ ಮ॥ ಎಸ್ ರಂಗಯ್ಯ ಚೆಟ್ಟಿಯವರ ಕುಮಾರರಾದ ಮ॥ ರಾಮಾನುಜ ಚೆಟ್ಟಿರೂ, ಮ॥ ರಾಜಮನ್ನಾರ ಚೆಟ್ಟಿರೂ ತಮ್ಮ ತಂದೆಯ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಮದರಾಸ್ ಪಟ್ಟಣದಲ್ಲಿರುವ ಕ್ರಿಶ್ಚಿಯನ್ ಕಾಲೇಜ್ ಎಂಬ ಪ್ರಸಿದ್ಧವಾದ ವಿದ್ಯಾಶಾಲೆಗೆ ೨೫,೦೦೦ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟರು. ಈ ಹಣದಲ್ಲಿ ವೈಶ್ಯ ಬಾಲಕರಿಗಾಗಿ ಒಂದು ವಿದ್ಯಾನಿಲಯವನ್ನು ಕಟ್ಟಿಸಿ, ಕೆಲವು ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುವಂತೆ ಏರ್ಪಾಡಾಗುತ್ತದೆ ಆ ವಿದ್ಯಾಶಾಲೆಯ ಮೇಲ್ವಿಚಾರಣಾ ಕರ್ತರು ಆ ಹಣವನ್ನು ಆದರಪೂರ್ವಕವಾಗಿ ಅಂಗೀಕರಿಸಿ, ಆ ಸಾತ್ವಿಕರ ಧರ್ಮಬುದ್ಧಿಯನ್ನು ಕೊಂಡಾಡಿರುತ್ತಾರೆ.

ನಮ್ಮ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ತಮ್ಮ ಅಧಿಕಾರದ ಕಾಲದಲ್ಲಿ ತುಂಬಾ ಸಾಹಸಪಟ್ಟು ಈ ರಾಷ್ಟ್ರದ ರಾಜ್ಯಭಾರ ಕ್ರಮಗಳಲ್ಲಿ ಹೊಸ ತಿದ್ದುಗಳನ್ನು ರೂಢಿಸಿ, ದೇಶೀಯ ಪ್ರಜೆಗಳಿಗೆ ಆಳ್ವಿಕೆಯಲ್ಲಿ ವಿಶೇಷವಾದ ಜವಾಬ್ದಾರಿಯನ್ನು ಕೊಡಿಸಿಕೊಟ್ಟಿದ್ದರ ಜ್ಞಾಪಕಾರ್ಥವಾಗಿ ಅವರ ಹೆಸರನ್ನಿಟ್ಟು ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಒಂದು ಸುಂದರವಾದ ಉದ್ಯಾನವನವನ್ನು ನಿರ್ಮಾಣ ಮಾಡಬೇಕೆಂದು ದೇಶೀಯ ಮಹನೀಯರು ಉದ್ದೇಶಪಟ್ಟು ಚಂದಾ ಕೂಡಿಸಲಾರಂಭಿಸಿದಾರೆ. ಈ ಕಾರ್ಯಕ್ಕೆ ಪಂಡಿತ ಮದನಮೋಹನ ಮಾಲವ್ಯರವರು ಸೆಕ್ರೆಟರಿಯಾಗಿ ನಿಂತಿರುವರು ವೈಸ್‌ರಾಯಿಯವರು ಅದಕ್ಕೆ ತಮ್ಮ ಅನುಜ್ಞೆಯನ್ನು ದಯಪಾಲಿಸಿರುತ್ತಾರೆ

ಕಾಶೀಪಟ್ಟಣದಲ್ಲಿ ಮಿಸೆಸ್ ಬೆಸೆಂಟ್ ಎಂಬಾಕೆಯ ಸಾಹಸಪ್ರಯತ್ನಗಳಿಂದ ವಿಸ್ತಾರವಾಗಿ ನಡೆಯುತ್ತಾ ಬಂದಿರುವ ಸೆಂಟ್ರಲ್ ಹಿಂದೂ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿ ಇದುವರೆಗೆ ಕೀಳುದರ್ಜೆಯ ತರಗತಿಗಳಿಗೆ ಮದುವೆ ಮಾಡಿಕೊಂಡಿರುವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿರಲಿಲ್ಲ ಈಗ ಆ ಕಾಲೇಜಿನ ಪ್ರೌಢವಿದ್ಯಾ ತರಗತಿಗಳಿಗೂ ವಿವಾಹಿತರಾದ ಬಾಲಕರನ್ನು ಸೇರಿಸಿಕೊಳ್ಳುವುದಿಲ್ಲವೆಂದೂ, ಹಾಗೆ ಸೇರಿಸಿಕೊಳ್ಳಬೇಕಾದರೆ ಅಂಥಾ ವಿದ್ಯಾರ್ಥಿಗಳು ಬ್ರಹ್ಮಚಾರಿವಿದ್ಯಾರ್ಥಿಗಳು ಕೊಡುವುದಕ್ಕಿಂತ ಎರಡರಷ್ಟು ಫೀಜನ್ನು ಕೊಡತಕ್ಕದ್ದೆಂದೂ ವಿಧಿಸಿರುತ್ತಾರೆ ಹಿಂದುಗಳಲ್ಲಿ ನಡೆಯುವ ಹಾನಿಕರವಾದ ಬಾಲ್ಯವಿವಾಹಕ್ಕೆ ಈ ವಿಧಿಯು ದೊಡ್ಡ ಮತ್ತು ಕ್ಷೇಮಕರವಾದ ಪ್ರತಿಬಂಧಕವಾಗಿರುತ್ತದೆ ಇಂಥಾ ವಿಧಿಯನ್ನು ಇತರ ಎಲ್ಲಾ ವಿದ್ಯಾಶಾಲೆಗಳಿಗೂ ದಯಮಾಡಿ ತರಲಾದರೆ ಕೆಲವು ವರುಷಗಳೊಳಗೆ ಈ ರಾಷ್ಟ್ರದಲ್ಲಿ ಬಾಲ್ಯವಿವಾಹವು ನಿಂತು ಹೋಗುವದೆಂದು ಹೇಳಬಹುದು

ಜುನಾಘಡ ಸಂಸ್ಥಾನದ ನವಾಬ್ ಸಾಹೇಬ್ ಯವರಿಗೆ ಚಕ್ರವರ್ತಿಯವರು ಜಿ. ಸಿ. ಎಸ್. ಐ. ಎಂಬ ಒಂದು ಪ್ರಶಸ್ತವಾದ ಬಿರುದನ್ನು ದಯಪಾಲಿಸಿದರು. ನವಾಬರವರ ಪ್ರಜೆಗಳು ಸಭೆಯನ್ನು ನಡಿಸಿ, ಅವರನ್ನು ಕರೆಸಿಕೊಂಡು ಅವರಿಗೆ ೪-೬ ಅಡ್ರೆಸ್ಸುಗಳನ್ನು ಒಪ್ಪಿಸಿ ತಮ್ಮ ಆನಂದವನ್ನು ಪ್ರಕಾಶಪಡಿಸಿದರು. ನವಾಬರವರು ಆ ಸಂತೋಷ ಸಮಯದಲ್ಲಿ ತಮ್ಮ ಪ್ರಜೆಗಳಿಗೆ ಕೆಲವು ರಿಯಾಯಿತಿಗಳನ್ನು ದಯಪಾಲಿಸಿರುತ್ತಾರೆ ಯಾವವೆಂದರೆ,—೫,೭೨,೦೦೦ ರೂಪಾಯಿನ ಜರಾಯಿ ಕಂದಾಯವನ್ನು ರೈತರಿಗೆ ರಿಮಿಷನ್ ಮಾಡಿದರು. ಜುನಾಘಡ ಟವನ್ನಿನಲ್ಲಿ ಹೊಸ ಮನೆ ಕಟ್ಟುವುದಕ್ಕೆ ನಿವೇಶನಗಳನ್ನು ಕೊಂಡುಕೊಂಡವರಿಂದ ಬಾಕಿ ವಸೂಲಾಗಬೇಕಾಗಿದ್ದ ೬,೬೫೦ ರೂಪಾಯನ್ನು ಮಾಫ್ ಮಾಡಿಬಿಟ್ಟರು ಗಿರ್ ಫಾರೆಸ್ಟಿನಿಂದ ಬರುತ್ತಿದ್ದ ಸರಕಿನ ಮೇಲೆ ವಸೂಲಾಗುತ್ತಿದ್ದ ಗಿರ್‌ಲೆಯಾ ಎಂಬ ಸುಂಕವು ವಜಾ ಆಯಿತು ಹುಲ್ಲು ಸೌದೆ ಹೊರೆಗಳ ಮೇಲೆ ಹಾಕಿದ್ದ ಸುಂಕವು ಮಾಫಾಯಿತು ಸರ್ಕಾರಿ ನೌಕರರಿಗೆ ಇನ್ನು ಮುಂದೆ ಪೆನ್‌ಷನ್ ಕೊಡುತ್ತೇವೆ ದು ನವಾಬರವರು ಅಪ್ಪಣೆ ಕೊಡಿಸಿದರು. ಜುಲ್ಮಾನೆ ದರಗಳನ್ನು ಕಡಮೆ ಮಾಡಿದರು. ಈ ರಿಯಾಯಿತಿಗಳು ದೊರೆತದ್ದಕ್ಕಾಗಿ ಪ್ರಜೆಗಳು ಆನಂದಪಟ್ಟು ನವಾಬರವರನ್ನು ಕೊಂಡಾಡುತ್ತಿದಾರೆ

ವಿದೇಶ ವರ್ತಮಾನಗಳು.

ಜಮೇಕಾ ದ್ವೀಪದಲ್ಲಿ ಮೈಕೋ ಎಂಬ ದಿವ್ಯವಾದ ವಿದ್ಯಾಶಾಲೆಗೆ ಬೆಂಕಿ ಬಿದ್ದು ಸುಟ್ಟುಹೋಯಿತು ಇದರಿಂದ ೪॥ ಲಕ್ಷ ರೂಪಾಯಿನ ಕಟ್ಟಡವೂ ಆಸ್ತಿಯೂ ನಷ್ಟವಾಗಿರುತ್ತದೆ

ಪರ್ಶಿಯಾ ರಾಜ್ಯದ ಇಬ್ಬರು ಮಂತ್ರಿಗಳು ರಷ್ಯಾಸೈನಿಕರನ್ನು ಆ ರಾಜ್ಯದಿಂದ ವಾಪಸು ಕಳುಹಿಸುವಂತೆ ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾದದ್ದನ್ನು ನೋಡಿ ತಮ್ಮ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟು ಇರುತ್ತಾರೆ

ತುರ್ಕಿ ರಾಜ್ಯಕ್ಕೆ ಸೇರಿದ ಏಡೆನ್ ಎಂಬ ರಾಜ್ಯದಲ್ಲಿ ಅಲ್ಬನಿ ದರೋಡೆ ಗುಂಪಿನವರು ಗುಂಡು ಹೊಡೆದು ಸೈನ್ಯದ ಇಸ್ಮಯಿಲ್ ಹಕ್ಕಿ ಎಂಬ ಅಧಿಪತಿಯನ್ನು ಗಾಯಮಾಡಿದ್ದಲ್ಲದೆ ಆತನ ಬಳಿ ಇದ್ದ ಒಬ್ಬ ಹುದ್ದೆದಾರನನ್ನು ಕೊಂದುಹಾಕಿದರು

ಆಫ್ರಿಕಾಕ್ಕೆ ಸೇರಿದ ಸೋಮಾಲಿ ಲಾಂಡಿನಲ್ಲಿ ಮುಲ್ಲಾನ ಕಡೆಯವರು ಇಂಗ್ಲಿಷರ ಆಶ್ರಯದಲ್ಲಿದ್ದ ಬೇರೆ ಬೇರೆ ವಂಶೀಕರ ಮೇಲೆ ನುಗ್ಗಿ ಕತ್ತಿಗಳನ್ನು ಹಿಡಿದು ೩೦೦೦ ಜನರನ್ನು ಕೊಂದು ಹಾಕಿದರು ಉಳಿದವರೆಲ್ಲಾ ತಮ್ಮ ಮನೆ ಮಠ ಗ್ರಾಮ ಊರುಗಳನ್ನು ಬಿಟ್ಟು ಓಡಿಹೋಗುತ್ತಿದಾರೆ

ಈಜಿಪ್ಟ್ ದೇಶದ ಮುಖ್ಯ ಪಟ್ಟಣವಾದ ಕೈರೋ ನಗರದಲ್ಲಿ ಪೋಲೀಸ್ ಕಮಿಷನರ್ ಹಾರ್ವಿ ಪಾಷಾ ಎಂಬಾತನು ಕಚೇರಿಯೊಳಗಕ್ಕೆ ಹೋಗುವಾಗ ಒಬ್ಬ ಜವಾನನು ಬಂದು ಪಿಸ್ತೂಲು ಹಾರಿಸಿ ಗುಂಡು ಹೊಡೆದನು ದೇವರ ದಯದಿಂದ ಗುಂಡು ಈ ಅಧಿಪತಿಯನ್ನು ಬಡಿಯಲಿಲ್ಲ ಕೂಡಲೇ ಆ ಘಾತುಕನನ್ನು ದಸ್ತಗಿರಿಮಾಡಿರುತ್ತಾರೆ

ಕ್ಯಾನಡಾ ಎಂಬ ಇಂಗ್ಲಿಷ್ ಅಧಿಪತ್ಯಕ್ಕೆ ಸೇರಿದ ಮ॥ ಹಾರ್ಟ್ ಎ ಮ್ಯಾಸಿ ಎಂಬಾತನು ವಿದ್ಯಾರ್ಥಿಗಳ ಅಭಿವೃದ್ಧಿಗೆ ಬರುವುದಕ್ಕೆ ಸಹಕಾರಿಗಳಾದ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ೩೦ ಲಕ್ಷ ರೂಪಾಯಿ ತನ್ನ ಧರ್ಮಮಾಡಿದನು ಈಚೆಗೆ ಅದೇ ಸ್ಥಳದ ಮ॥ ಜಾನ್ ಸಿ. ಈಟನ್ ಎಂಬಾತನು ವಿದ್ಯಾರ್ಥಿಗಳಿಗಾಗಿ ಒಂದು ಹೊಸ ಆಸ್ಪತ್ರೆಯನ್ನು ಕಟ್ಟುವುದಕ್ಕೆ ೭॥ ಲಕ್ಷ ರೂಪಾಯಿ ದಾನಮಾಡಿರುತ್ತಾನೆ

ಮ॥ ಆಂಡ್ರ್ಯು ಕಾರ್ನೆಗಿ ಎಂಬ ಪ್ರಸಿದ್ಧ ಕೋಟ್ಯಾಧಿಪತಿಯು ಅಮೇರಿಕಕ್ಕೆ ಸೇರಿದ ಪಿಟ್ಸ್‌ಬರ್ಗಿನಲ್ಲಿ ತನ್ನ ಹೆಸರಿನ ಮೇಲೆ ಒಂದು ವಿದ್ಯಾಶಾಲೆಯನ್ನು ಇಟ್ಟು ನಡಿಸುತ್ತಿದಾನೆ ಈ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವಂಥಾ ಬಾಲಕರ ಪೈಕಿ ಯಾವನು ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನವನ್ನು ಮೊದಲು ರಚಿಸಿ ಸಿದ್ಧಾಂತಪಡಿಸುತ್ತಾನೋ ಅವನಿಗೆ ತಾನು ೭೫,೦೦೦ ರೂಪಾಯಿ ಬಹುಮಾನ ಕೊಡುತ್ತೇನೆಂದು ತಿಳಿಸಿ ಪ್ರೋತ್ಸಾಹಪಡಿಸಿರುತ್ತಾನೆ

ಜರ್ಮನಿಗೆ ಸೇರಿದ ಸ್ಟೆಟಿನ್ ಪಟ್ಟಣದಲ್ಲಿ ನಾಲ್ವರು ಒಂದು ವಿಮಾನದಲ್ಲಿ ಕುಳಿತು ಸಂಚರಿಸುತ್ತಿದ್ದಾಗ ಅದು ಅಕಸ್ಮಾತ್ತಾಗಿ ಸಮುದ್ರದೊಳಕ್ಕೆ ಬಿದ್ದುಬಿಟ್ಟಿತು. ಇಬ್ಬರು ಸತ್ತುಹೋದರು, ಒಬ್ಬನಿಗೆ ಘೋರಾ ಜಖಂ ಆಗಿದೆ, ನಾಲ್ಕನೆಯವನು ಏನಾದನೋ ಪತ್ತೆ ಇಲ್ಲ —ಸ್ಯಾನ್ ಸೆಬಾಸ್ಟಿಯನ್ ಎಂಬ ಸ್ಥಳದಲ್ಲಿ ಎಂ ಲೆಬ್ಲಾನ್ ಎಂಬ ಸವಾರಿಗಾರನು ತನ್ನ ವಿಮಾನದಲ್ಲಿ ಸಂಚರಿಸುತ್ತಿರುವಾಗ ಅದು ೧೪೦ ಅಡಿ ಎತ್ತರದಿಂದ ಸಮುದ್ರದೊಳಕ್ಕೆ ಬಿದ್ದು, ಆ ಸವಾರಿಗಾರನನ್ನು ಕೊಂದುಬಿಟ್ಟಿತು

ಚೀನಾ ರಾಜ್ಯಕ್ಕೆ ಸೇರಿದ ಪಿಂಗ್‌ಸಿ ಡಿಸ್ಟ್ರಿಕ್ಟಿನ ಮ್ಯಾಜಿಸ್ಟ್ರೇಟರು ರೈತರು ಬೆಳೆದಿದ್ದ ಅಫೀಮು ಗಿಡಗಳನ್ನೆಲ್ಲಾ ಬೇರ ಸಹಿತ ಕಿತ್ತುಹಾಕಬೇಕೆಂದು ಹುಕುಂ ಕೊಟ್ಟರು ರೈತ ಪ್ರಜೆಗಳು ಈ ಹುಕುಮನ್ನು ಸಡಲಿಸಬೇಕೆಂದು ಗುಂಪು ಸೇರಿ ಹೋಗಿ ಆ ಮ್ಯಾಜಿಸ್ಟ್ರೇಟರನ್ನು ಕೋರ್ಟಿನಿಂದ ಹೊರಕ್ಕೆ ಎಳೆದು ಸುತ್ತಿಕೊಂಡು ಗಲಭೆಯೆಬ್ಬಿಸಿದರು ಸೈನಿಕರು ಬಂದು ಮ್ಯಾಜಿಸ್ಟ್ರೇಟರನ್ನು ಬಂಧನದಿಂದ ಬಿಡಿಸಿದರು ಒಳಿತ ಪ್ರಜೆಗಳಿಗೂ ಸೈನಿಕರಿಗೂ ಕಠಿಣವಾದ ಯುದ್ಧ ನಡೆದು ೬೦ ಜನರು ಮೃತಪಟ್ಟರು

ಲಂಡನ್ ಪಟ್ಟಣದ ವಾಕ್ಸಲ್ ಎಂಬ ಭಾಗದಲ್ಲಿ ೭೩ ವರುಷದ ಚಾರ್ಲ್ಸ್ ಫೀಲ್ಡ್ಸ್ ಎಂಬೊಬ್ಬ ವೃದ್ಧನು ಕಾಲವಾದನು. ಈತನಿಗೆ ಮನೆಸತ್ತಿರಲಿಲ್ಲ ಪಾಪಕಾರಣ ಸರ್ಕಾರದವರು ಜೀವನಾಯಿತಿ ಮಾಡಿ ರಕ್ಷಣೆ ಮಾಡಿಸಿದರು ಇವನು ದರಿದ್ರನಾಗಿ ಭಿಕ್ಷುಕನಾಗಿ ಸತ್ತನು ಅದರ ಶವವನ್ನು ದಫನ್‌ಗೆ ಒಪ್ಪಿಸುವುದಕ್ಕೆ ಮುಂಚೆ ದರ್ಯಾಫ್ತಿ ಮಾಡುವ ಸಂದರ್ಭದಲ್ಲಿ ಮೃತಪಟ್ಟ ಆ ಬಡವನ ಹತ್ತಿರ ಸುಮಾರು ೪೩,೦೦೦ ರೂಪಾಯಿನ ಆಸ್ತಿ ಇದೆ ಎಂದು ಅವನ ಬಳಿ ಇದ್ದ ಲೆಕ್ಕದ ಪುಸ್ತಕದಿಂದ ಗೊತ್ತಾಯಿತು ಈ ಬಡವನು ತನ್ನ ಆಸ್ತಿಯನ್ನೆಲ್ಲಾ ಬಡಬಗ್ಗರ ಮಕ್ಕಳನ್ನು ಸಾಕಿ ಬೆಳೆಸುವುದಕ್ಕೆ ವಿನಿಯೋಗಿಸಬೇಕೆಂದು ಆತನ ಪುಸ್ತಕದಲ್ಲಿ ಬರೆದಿದ್ದಾನೆ

ಲಂಡನ್ ಪಟ್ಟಣದಲ್ಲಿದ್ದು ಕಾಲವಾದ ಮಿಸೆಸ್ ಎಮ್ಮ ಬ್ರಾಡ್‌ಶಾ ಎಂಬಾಕೆಯು ತನ್ನ ಆಸ್ತಿಯನ್ನೆಲ್ಲಾ ಅಂದರೆ ಸುಮಾರು ೧೮॥ ಲಕ್ಷ ರೂಪಾಯಿಯನ್ನು, ಮಿಸೆಸ್ ಮಾರಿಸನ್ ಎಂಬಾಕೆಯು ೮। ಲಕ್ಷ ರೂಪಾಯಿಯನ್ನು, ಬ್ರಾಡ್‌ಫರ್ಡ್ ಪಟ್ಟಣದ ಮಿಸ್ ಜೋನ್ಸ್ ಜಾಮಿಸನ್ ಎಂಬಾಕೆಯು ೫। ಲಕ್ಷ ರೂಪಾಯಿಯನ್ನು, ಬ್ರಿಸ್ಟಲ್ ಪಟ್ಟಣದ ಜಾನ್ ಮ್ಯಾಕ್ಡೊನಾಲ್ಡ್ ಎಂಬುವನು ೯ ಲಕ್ಷ ರೂಪಾಯಿಯನ್ನು, ಮಿಸ್ ಟೇಟ್ ವ ಹಾಕಲ್ ಎಂಬುವಳು ೧೯॥ ಲಕ್ಷ ರೂಪಾಯಿಯನ್ನು, ಲಂಡನ್ ಪಟ್ಟಣದ ಆಲನ್ ರಸ್ಸೆಲ್ ಎಂಬುವನು ೫೦ ಸಾವಿರ ರೂಪಾಯಿಯನ್ನೂ ನಾನಾ ಧರ್ಮಕಾರ್ಯಗಳಿಗೂ ಆಸ್ಪತ್ರೆಗಳೇ ಮೊದಲಾದ ಪುಣ್ಯಸ್ಥಳಗಳಿಗೂ ಪರೋಪಕಾರವಾದ ಸಂಘಗಳಿಗೂ ವಿನಿಯೋಗಿಸಬೇಕೆಂದು ಮರಣಶಾಸನಗಳನ್ನು ಬರೆದಿರುತ್ತಾರೆ

ಫ್ರಾನ್ಸ್ ಸಂಸ್ಥಾನದ ಸೀನ್, ಮಾರ್ನ್ ಎಂಬೀ ನದಿಗಳ ಅಪೂರ್ವ ಪ್ರವಾಹಗಳ ದೆಸೆಯಿಂದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲೂ ಸುತ್ತುಮುತ್ತಿನ ಹಲವು ಗ್ರಾಮ ಊರುಗಳಲ್ಲೂ ಕಟ್ಟಡಗಳೂ ಆಸ್ತಿ ಪಾಸ್ತಿಗಳೂ ನಷ್ಟವಾಗಿ ಪ್ರಜೆಗಳಿಗೆ ಬಹಳ ಕಷ್ಟ ಉಂಟಾಯಿತಷ್ಟೆ. ಸುಮಾರು ಹತ್ತುಕೋಟಿ ರೂಪಾಯಿನ ಮಾಲುಗಳು ಹಾಳಾದವು ಕಷ್ಟಕ್ಕೆ ಈಡಾದವರೆಲ್ಲಾ ಒಂದು ಸಭೆ ಸೇರಿ, ತಮ್ಮ ಸಹಾಯಾರ್ಥವಾಗಿ ಫ್ರೆಂಚ್ ಸರ್ಕಾರದವರು ಸ್ಯಾಂಕ್ಷನ್ ಮಾಡಿರುವ ೧೩ ಲಕ್ಷವೂ ೩೦ ಸಾವಿರ ರೂಪಾಯಿ ಸಾಲದೆಂದೂ, ಇನ್ನೂ ೧೫೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿಕೊಟ್ಟಲ್ಲಿ ತಾವು ಮನೆ ಮಠಗಳನ್ನೂ ಅಂಗಡಿ ಮುಂಗಟ್ಟುಗಳನ್ನೂ ಕಟ್ಟಿಕೊಳ್ಳುವುದಕ್ಕೂ ತಮ್ಮ ತಮ್ಮ ಕಸಬುಗಳನ್ನು ನಡಿಸುತ್ತಾ ಜೀವನ ಮಾಡಿಕೊಳ್ಳುವುದಕ್ಕೂ ಸಹಾಯವಾಗುತ್ತದೆಂದೂ, ಪಟ್ಟಣದಲ್ಲಿ ಕಸಬು ಮಾಡತಕ್ಕ ಜನರು ಮೊದಲಿನಂತೆ ನಡೆ ... ಸರ್ಕಾರದವರು ಪ್ರಜೆಗಳಿಂದ ... ತೆರಿಗೆಯನ್ನಾಗಲಿ ... ವಸೂಲ್ಮಾಡದೆ ಮಾಫಿ ಬಿಟ್ಟುಕೊಡಬೇಕೆಂದೂ ಕೇಳಿದರೆಂದು ... ವಿಲಾಯತಿಯಲ್ಲೂ ಫ್ರೆಂಚರಿಗೆ ಆದ ಕಷ್ಟಪರಿಹಾರಕ್ಕಾಗಿ ಧರ್ಮದ ಫಂಡನ್ನು ಪ್ರಾರಂಭಿಸಿ ಚಂದಾ ಎತ್ತಿದರಷ್ಟೆ ಈ ಫಂಡುಗಳಿಗೆ ೩೬ ಲಕ್ಷದ ೭೩ ಸಾವಿರ ರೂಪಾಯಿ ವಸೂಲಾಗಿರುತ್ತದೆ ದಕ್ಷಿಣ ಆಫ್ರಿಕಾ ರಾಜ್ಯದಲ್ಲಿ ನಾಲ್ಕು ಮಂದಿ ಜಪಾನೀಯರು ಸೇರಿ ಚಂದಾ ಹಾಕಿ ಈ ಫಂಡಿಗೆ ೩೦ ರೂಪಾಯಿ ಕೊಡಿಸಿಕೊಟ್ಟಿದಾರೆ

Printed and Published by the Rev H Gulliford, Proprietor and Manager, Wesleyan Mission Press, Mysore 7/4/1910

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ಮದ್ದು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ಮದ್ದು.

ಸಂಪುಟ ೨೩ ಮೈಸೂರು—ಸನ್ ೧೯೧೦ ನೇ ಇಸವಿ ಏಪ್ರಿಲ್ ತಾರೀಖು ೧೪ ನೇ ಗುರುವಾರ. ಸಂಚಿಕೆ ೪೬

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು. ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ, ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಪ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಏಪ್ರಿಲ್ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರೆಯಿರಿ. ವಿಳಾಸ.—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ. 11 15

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ ಬಳಬಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಮದ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೬—೨ ರೂ ರೂ ೨—೧೨ ೮, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾಬಿಡಲಾಗುವದು

ಅಮೃತಾಂಜನ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಲೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಬೇಸಗೆ ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಅಮೃತಾಂಜನ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪಾಲಯ್ಯನವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಜಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಚಿಂಗಾರದ ಮತ್ತು ಬೆಳ್ಳಿಯ ಪದಕಗಳು ೧೨ ದೊರೆತಿವೆ.

ಡೈಮಂಡ್ ಡೈಮಂಡ್

ಅತ್ತರ್ ಸಾಬೂನುಗಳು ರಂಗಿನ ಸಾಬೂನುಗಳು

ಸುವಾಸನೆ, ಚರ್ಮಕ್ಕೆ ಹಿತ ಸುಲಭ ಕ್ರಯ, ಬಣ್ಣ ಖಾತರಿ.

24-5

ಅತ್ತರ್ ಸಾಬೂನುಗಳು ಮೈಯಿನ ಕಾಂತಿಗೂ, ಕಾರ್ಬಾಲಿಕ್ ಸಾಬೂನುಗಳು ಚರ್ಮದ ರೋಗನಿವಾರಣೆಗೂ ಅವಶ್ಯಕ ಡಯಮಂಡ್ ರಂಗಿನ ಸಾಬೂನುಗಳು ಬಣ್ಣ ಖಾತರಿ. ಇವುಗಳಿಂದ ಎಲ್ಲಾ ತರಹೆ ಬಟ್ಟೆಗಳಿಗೂ ಬೇಕಾದ ರಂಗನ್ನು ಸುಲಭವಾಗಿ ಕೊಡಬಹುದು ಡಯಮಂಡ್ ಗುಲಾಬಿ ಟೀ —ಇದರ ಕಷಾಯವು ಬಹಳ ರುಚಿಕರವಾಗಿರುವುದರಿಂದ ಈ ಟೀಯು ಕೇವಲ ರೂಢಿಯಲ್ಲಿದೆ ಇದಲ್ಲದೆ ಡಯಮಂಡ್ ಕೇಶವರ್ಧಕತೈಲ, ಹಲ್ಲುಪುಡಿ, ಕಾಸ್ಮೆಟಿಕ್, ಪಾಮೇಡ್, ಬಾಂ, ಶೀತನಿವಾರಕ ಕ್ಷಾರ, ಸುವಾಸಿನಿ, ವಿಲಾಸ್ ಮೊದಲಾದ ಅತ್ತರುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ

ವ್ಯಾಪಾರಿಗಳಿಗೆ ದರ ಬೇರೆ ಡಯಮಂಡ್ ಸೋಪ್ ಕಂಪನಿ, ಗಿರ್ಗಾಂ, ಮುಂಬಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

40-4

೧. ಚೋಕಾಮಯದ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಜವಾದಿ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈ ಕಾಲು ಸೆಳೆತ (ಧಾರೆ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸಿಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತ ದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುತುಕೂಲೆ, ಮಕ್ಕಳ ಎಳವು, ಜ್ವರ ವಿಷಜ್ವರ, ಕೃಮಿತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ, ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೨ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೨ ಆಣೆ

ಕ್ಷುಧಾಸಾಗರಮಧು

ಮಕ್ಕಳುಗಳಿಗೆ ಇದನ್ನು ಅಮೃತವೆಂತೇ ಹೇಳುವೆವು ಏಕೆಂದರೆ ಮಕ್ಕಳ ಅನ್ನಕೋಶವನ್ನು ಬಲಪಡಿಸಿ ಶ್ಲೇಷ್ಮಸ್ಥಾನವನ್ನು ನಿರ್ಮಲವಾಗಿಟ್ಟು ಕಟ್ಟಿರಕವನ್ನು ಶುದ್ಧೀಕರಿಸಿ ರಕ್ತಾಭಿಸರಣವು ಧಾರಾಳವಾಗುವ ಹಾಗೆ ಮಾಡುತ್ತದೆ ಇದರಲ್ಲಿ ಅಕ್ಷೇಪಣೀಯವಾದ ಯಾವ ಪದಾರ್ಥವೂ ಸೇರಿಲ್ಲವಾಗಿ ಪ್ರತಿ ಮಕ್ಕಳಿಗೂ ಧೈರ್ಯವಾಗಿ ಕೊಡಬಹುದು

ಇಷ್ಟೇ ಅಲ್ಲ ಮಕ್ಕಳಿಗೆ ಅಜೀರ್ಣದಿಂದಲೋ—ಅಹಾರವ್ಯತ್ಯಾಸದಿಂದಲೋ—ಹಲ್ಲುಗಳು ಹುಟ್ಟೋಣದರಿಂದಲೋ ಆಗುವ ಭೇದಿ—ವಾಂತಿಗಳನ್ನು ನಿಲ್ಲಿಸುತ್ತದೆ ಮಲಬದ್ಧವಿದ್ದರೆ ದಿನಕ್ಕೆ ಒಂದು ವೇಳೆ ಕ್ರಮವಾಗಿ ಆಗುವ ಹಾಗೆ ಮಾಡುತ್ತದೆ—ಬಾಲಶೋಷೆ, ಸಚ್ಚೆ ಜ್ವರ (ಹಳೇ ಜ್ವರ), ಉಷ್ಣ ಅಥವಾ ಶೀತದ ನಾನಾ ಒಗೆಯ ಕೆಮ್ಮಲು ಹೊಟ್ಟೆ ಕಟ್ಟಿಕೊಂಡಿರುವುದು—ಜಲೋದರ—ಹೊಟ್ಟೆಯ ಎಡಭಾಗದ ಗೆಡ್ಡೆ—ಸಿದ್ರೆ ಬಾರದಿರುವುದು—ಚಂಡಿ ಹಿಡಿಯುವುದು—ಬಡವಾಗಿರುವುದು—ಗರ್ಭಕಾರಕದಿಂದ ಒಣಗಿಕೊಂಡಿರುವುದು—ಇವೆಲ್ಲವನ್ನೂ ನಿಸ್ಸಂದೇಹವಾಗಿ ಗುಣಪಡಿಸುತ್ತದೆ ಕೇವಲ ಕ್ಷೀಣವಾಗಿದ್ದರೂ ಕೇವಲ ಶೀತವಾಗಿದ್ದರೂ ಸಮತ್ವವನ್ನು ಕಲ್ಪಿಸುತ್ತದೆ

ಹೆಚ್ಚು ವಚನದಿಂದೇನು—ನಿಮ್ಮ ಮಕ್ಕಳು ಯಾವ ತರದ ಬೆನೆಯೂ ಇಲದೆ ಮೈತುಂಬಿಕೊಂಡು ಚಟುವಟಿಕೆಯುಳ್ಳವರೂ ಬಲವುಳ್ಳವರೂ—ಆಗಬೇಕಾದರೆ ಈ ಕ್ಷುಧಾಸಾಗರವನ್ನು ಒಂದನ್ನೇ ಕೊಡಿ ಬೆಲೆ ರೂ 1—0—0

ಪ್ಯಾಕಿಂಗ್ ಮತ್ತು ಟಪ್ಪಾಲ್ ಖರ್ಚು ೯ ಆಣೆ

ಕಾಸಕೇಸರಿ ಶೀತದ ಮತ್ತು ಉಷ್ಣದ ಕೆಮ್ಮಲುಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ ಡಬ್ಬಿ ೧ ಕ್ಕೆ ರೂ 1—0—0 ಟ ಖ ಪ್ರತ್ಯೇಕ.

ಶ್ವಾಸಕಾಲೇಶ್ವರ (ಗೂರಲುಬ್ಬಸಕ್ಕೆ) — ಬೆಲೆ ರೂ 1—8—0

ಟ ಖ ಪ್ರತ್ಯೇಕ.

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಅಡವು ಇಟ್ಟವರಿಗೆ ನೋಟೀಸು.

19 4

ಕೋಲಾರದ ಧಂಗಾರದ ಗನೆ ರಾಬರ್ಟಸನ್ ಪೇಟೆಯಲ್ಲಿರುವ ಮಾರವಾಡಿ ಸಾಹುಕಾರ ದೀಪ್ಪಛಂದ್ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ —ನಾನು ಬೆಂಗಳೂರು ಸಿಟಿ ಕಲಾಸಿಪಾಳ್ಯದ ಚೌಕದ ನಂಬರು ೨ ಅಂಗಡಿಯಲ್ಲಿ ಈಗ್ಗೆ ಸುಮಾರು ಒಂದು ವರುಷದ ಹಿಂದಿನವರೆಗೂ ದೀಪ್ಪಛಂದ್ ಶೇವಾಲ್‌ಛಂದ್ ಎಂಬ ಹೆಸರಿನಿಂದ ನನ್ನ ಪಾಲುದಾರನಾಗಿದ್ದ ಹನ್ಸರಾಜು ಎಂಬುವರ ಮೂಲಕ ಮಾರವಾಡಿ ಲೇವಾದೇವಿ ಅಂಗಡಿ ಇಟ್ಟು ವ್ಯಾಪಾರ ನಡೆಸುತ್ತಾ ಇದ್ದು ಈಚೆಗೆ ಸದರಿ ಹನ್ಸರಾಜು ಕಾಯಿಲೆ ಸಲುವು ದೇಶಕ್ಕೆ ಹೊರಟುಹೋದದ್ದರಿಂದ ಅದೇ ಸ್ಥಳದಲ್ಲಿ ವ್ಯಾಪಾರ ನಡಿಸಲು ಸಾಧ್ಯವಿಲ್ಲದೆ ಅಂಗಡಿ ವ್ಯಾಪಾರ ಮೋಕೂಫ್ ಮಾಡಿ ಜನಗಳಿಂದ ಅಡವು ಇಟ್ಟಿದ್ದ ನಗಗಳು, ಪಾತ್ರೆಗಳು ಬಟ್ಟೆಗಳು ಮತ್ತು ಇದಕ್ಕೆ ಸಂಬಂಧ ಲೆಖ್ಖಪತ್ರಗಳು ಸಹಾ ಬೆಂಗಳೂರು ಸಿಟಿ ಮಿಲಿಟರಿ ಸ್ಪೆಷಲ್ ಗಲ್ಲಿ ಹತ್ತಿರವಿರುವ ಬಜಾರಿನಲ್ಲಿರುವ ದಿ ಸ್ವರೂಪ್ ಛಂದ್ ಕೇವಲ್‌ಛಂದ್ ಅಂಗಡಿಯಲ್ಲಿ ಇಟ್ಟು ಇದನ್ನು ಇತ್ಯರ್ಥ ಮಾಡಿಕೊಳ್ಳುವದಕ್ಕೆ ಒಬ್ಬ ಗುಮಾಸ್ತೆಯನ್ನು ಮೊಕರರ್ ಮಾಡಿರುತ್ತೆ ಆದದರಿಂದ ಈ ತಾರೀಖು ಲಾಗಾಯಿತು ಎರಡು ತಿಂಗಳ ಒಳಗಾಗಿ ಅಡವು ಇಟ್ಟಿರುವಂಥಾವರೆಲ್ಲರೂ ಸದರಿ ಗಲ್ಲಿ ಹತ್ತಿರದ ಛಿಸಲ್ಲಿ ದೀಪ್ಪಛಂದ್ ಕೇವಲ್‌ಛಂದ್ ಅಂಗಡಿಗೆ ಬಂದು ಅವರವರು ಅಡವು ಇಟ್ಟು ಇರುವ ಮಾಲುಗಳನ್ನು ಬಿಡಿಸಿಕೊಳ್ಳಬೇಕು ತಪ್ಪಿದರೆ ವಾಯಿದೆ ಕಳೆದನಂತರ ಅಡವು ಇಟ್ಟು ಇರುವ ಮಾಲುಗಳು ಹರಾಜಾಗುತ್ತವೆ ತಿಳಿಯುವದು ತಾ ೧೬ನೇ ಮಾರ್ಚ್ ೧೯೧೦

ಕೋಲಾರದ ಧಂಗಾರದ ಗನಿ ರಾಬರ್ಟಸನ್ ಪೇಟೆ, ದೀಪ್ಪಛಂದ್ ಎಂದು ಮಾರವಾಡಿಯಲ್ಲಿ ಸೈನಾಗಿದೆ

ಹಕ್ಕು ಬಾಧ್ಯತೆ ಪಡೆದವರೆಲ್ಲಾ ನೋಡಿ.

48-2

ಮೈಸೂರು ಲಷ್ಕರ್ ಮೊಹಲ್ಲಾ ದವೇ ಬೀದಿಯಲ್ಲಿರುವ ಈ ಕೆಳಗೆ ಷೆಡ್ಯೂಲಿನಲ್ಲಿ ನಮೂದು ಮಾಡುವ ಮುನಿಬಸಪ್ಪನವರ ದತ್ತು ಮಗ ಎಂ ಬಸವಲಿಂಗಪ್ಪನವರ ಬಾಬತು ಮನೆಯನ್ನು ಸದರಿಯವರಿಂದ ಈ ಕೆಳಗೆ ಸಹಿ ಮಾಡುವವರು ಕ್ರಯಕ್ಕೆ ತೆಗೆದುಕೊಳ್ಳತಕ್ಕ ಬಗ್ಗೆ ನಿಶ್ಚಯ ಮಾಡಿಕೊಂಡಿದಾರೆ ಸದರಿ ಸೊತ್ತಿಗೆ ಸಂಬಂಧಪಟ್ಟ ತಕರಾರ್‌ದಾರರಾಗಲಿ, ಪೂರ್ವಾಧಿಕಾರರಾಗಲಿ, ಹಕ್ಕುದಾರರಾಗಲಿ ಇದ್ದರೆ ಈ ಲಾಗಾಯಿತು ಒಂದು ತಿಂಗಳೊಳಗಾಗಿ ಈ ಕೆಳಗೆ ನಮೂದು ಮಾಡುವವರಿಗೆ ತಿಳಿಸತಕ್ಕದ್ದು ಸದರಿ ಮಾಯಿದೆಯಲ್ಲಿ ತಿಳಿಸದೆ ಇದ್ದರೆ ಅಂಥಾವರ ಹಕ್ಕು ಬಾಧ್ಯತೆಯು ಷೆಡ್ಯೂಲ್ ಆಸ್ತಿಯನ್ನು ಒಪ್ಪಪಡಿಸಲಾರದು

ಷೆಡ್ಯೂಲ್ —ಮೈಸೂರು ಲಷ್ಕರ್ ಮೊಹಲ್ಲಾ ದವೇ ಬೀದಿಯಲ್ಲಿರುವ ಮುನಿಸಿಪಲ್ ನಂಬರು 1101, 1102, 1103, 1104 ಮತ್ತು 1105 ಇದಕ್ಕೆ ಚೆಕ್ಕುಬಂದಿ—ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ಸುಬ್ಬರಾಜೇ ಅರಸಿನವರ ಬಂಗಲೆ ಉತ್ತರಕ್ಕೆ ಗೋವಿಂದಪ್ಪನ ಮನೆ ಮತ್ತು ಬಸವರಾಜೇ ಅರಸಿನವರ ಮನೆ, ದಕ್ಷಿಣಕ್ಕೆ ಹೈರೋಡು—ಈ ಮಧ್ಯೆ ಇರುವ ಹೆಂಚಿನ ತೊಟ್ಟಿ ಮನೆ ಮತ್ತು ಇದಕ್ಕೆ ಸೇರಿದ ಭೂಮಿ, ಅಂಗಳ ಮತ್ತು ಅಂಗಡಿಗಳು, ಮತ್ತು ಉತ್ತರ ದಿಕ್ಕಿನಲ್ಲಿರುವ ಹಿಂಭಾಗದ ಮನೆ, ಇವಕ್ಕೆ ಸೇರಿದ ಅಂಗಳ ಮತ್ತು ಭೂಮಿ ಸಹಾ

ಕೋಟೆ, ಮೈಸೂರು, ಮನ್ನಾರ್ ಕೃಷ್ಣಶೆಟ್ಟಿ,

೬—೪—೧೯೧೦ ಅರಮನೆ ಹೆಡ್ ಸರಾಫ್.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 17

ತಲೆನೋವು, ವಾಯುನೋವು, ಸಳತ, ಗಂಟಿನೋವು, ಸಾರ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣಿವಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ, ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ— ಜಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು; ಮತ್ತು

ಎಸ್ ಪೀಟರ್ಸ್,

೩೩, ವೇದಮಣಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

8 15



ಶೂಲೆ ಹೊಟ್ಟೆಯ ನೋವು, ಬರೀ ಬೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಪೀಡೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲಿಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಮಕ್ಕಳ ಹಿತಕಾರಿ

ಎಂದು

SCOTT'S EMULSION 8-15

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಕ್ರಿಸೋಟಕದೆ ತಯಾರಾದದ್ದು.

ಎಲ್ಲಾ ಔಷಧವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ನಿಮಗೇನೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ —ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ ; ಪಿತ್ತಜ್ವರ ; ಅಜೀರ್ಣ, ಅಗ್ನಿಮಾಂದ್ಯ ; ಗಾಬರಿ, ಅಶಕ್ತಿ, ಎದೆಯು ಕಲ್ಲಿನಸುಡುದು, ತಲೆತಿರ ಗುವುದು ; ತಲೆನೋವು ; ಹೊಟ್ಟೆಯುಬ್ಬರ, ಹುಳಕೇಗಿನ ಹೊಟ್ಟೆ ಉರಿ, ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು, ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಹೊಟ್ಟೆಯಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [6-33]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೩ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು. ಅಥವಾ, ಡೋನ್ಸ್ ಓ. ಪಿ ಬಾಕ್ಸ್ ೩೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ	೧—೦—೦
ಬೇರೆ ಕಡೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ	೧—೧೪—೦
" " ೬ " " "		೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಳ್ಳುವಾಗಲೂ ತಮಗೆ ವಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

11 14

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ.—(195 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ). ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಒದುಕಿದ್ದನು. ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು.

ಪ್ರತಿಯೊಂದಕ್ಕೆ	0—1—0

ಎಕ್ಸರ್‌ಸೈಜ್ ಪುಸ್ತಕಗಳು

(10 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(100 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-14]

ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಎಷ್ಟು ಉಪಯೋಗಕ್ಕೊಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 12(1 7,

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲ ಗಂಟು, ಗಂಟು ನೋವು, ಅರ್ಧಾಂಗವಾಯು, ಎದೆನೋವು, ಘಾಯ, ಜಖಮು ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತು ೦ ೮-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦ ೬ ೦ ೧೨ ಡಬ್ಬಿಗಳಿಗೆ ೪-೦-೦

ಆಸ್ಥಮಿತ್ರ	೨-೦-೦
ಕೇಳುವದನದಮದ್ದು	೦-೮ ೦
ವಜ್ರಗುಟಿಕ —ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದು ಗಳಿಗೆ	೦-೫-೦
ಬಾಲಾಮ ಮಾತ್ರೆ —ಬಾಲಾಬಿಗೆ	೦-೮-೦
ನೇತ್ರಾಂಜನ—ಮಂದದೃಷ್ಟಿಗೆ	೦ ೪-೦
ಬಿಚ್ಚು ಮುಲಾಮು—ಮಕ್ಕಳ ಬಿಚ್ಚಿಗೆ	೦-೩-೦
ಕೇಶವರ್ಧಿನೀ ತೈಲ —ತಲೆಯ ಮೆದುಳಿಗೆ	೧ ೦ ೦
ಕಫನಾಶಕ ಚೂರ್ಣ —ಆಸ್ತಮ ರೋಗಕ್ಕೆ	೦-೮-೬

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು - " ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3 1..

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ಬಲ್ಲಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾರ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಕಾಗೆ ಕೆಂಪು, ಕಪ್ಪು, ಬಿಂಕ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ; ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ., ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ಥಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಾತವರಿಗೆ ಕಳುಹಿಸುವೆವು ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಮುಂ ಎಮು ರೀವಾತಿ ವರಗಳು

ಸಾಂ ೮ ಕಾ ೯ ಕೊ ಪಿಗಲು ಡು ಕೆಂಗಾಗಿ ಉತ್ತಮರೀತಿಯಲ್ಲಿ ಹಾಕಿಸ ದೊರೆಯುವುದು ಗಜ 1 ಕೆ ರೂ 1 1-0 ಸ್ವದೇಶಿ ಪ್ಲಂಕೆಟ್ 1 ಕ್ಕೆ ರೂ 1 10 ಕಟ್ಟಿ ಉಟ 1 ಕ್ಕೆ 0 1-0 ಮತ್ತು 1 10 ಸುತೀಲದ ಟಿ ಪಟ್ಟಿ 1 ಕ್ಕೆ 0 11 ಕರ್ತು ಅಲಾಯಿದು

ಬಾಸೆಲ್ ಮಿಷನ್ ಫ್ಯಾಕ್ಟರಿ ಮಂಗಳೂರು.

ಸತ್ಯವೂ ಅಗ್ಗವೂ ಆದ ಅಂಗಡಿ

41 3

ನಮ್ಮ ಸತ್ಯವನ್ನು ಪರೀಕ್ಷಿಸಿನೋಡಿ

೩೦ ಗಂಟೆ ನಡೆಯುವ ೧೦ ವರುಷ ಗ್ಯಾರಂಟಿ ಉಳ್ಳ ಸುಂದರವೂ ಗಟ್ಟಿಯೂ ಅಗ್ಗವೂ ಆದ ಲೀವರ್ ಜೇಬಿನ ಗಡಿಯಾರವನ್ನು ಸೊಗಸಾದ ಸರಪಣಿ, ೧೨ ಫೋಟೋ ಕಾರ್ಡುಗಳ ಸಮೇತ ಪೋಸ್ಟೇಜು ಸೇರಿ ಮೂರು ರೂಪಾಯಿಗೆ ಕೊಡುತ್ತೇವೆ ಬೇಗ ಬರೆಯಿಕೊಳ್ಳಿ ಒಪ್ಪದಿದ್ದರೆ ಹಣ ವಾಪಸು ಕೊಡುತ್ತೇವೆ ನಮ್ಮ ವಿಳಾಸ

ಎಂ ಎ ಫಟಾಲಾ ಕಂಪನಿ, ಚಿತ್ತೂರು, ಉ ಆರ್ಕಾಟ್

ಸುಗಂಧಗಳು.

1 21

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧-೨, ೫ ೩, ೨ ೮ ೦ ೧ ೪ ೦ ಬಿಲ್ಲೆಗಳು ೧ ಕೊಳಗೆ ರೂ ೧ ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರ

ಮನೆಯಲ್ಲಿರಬೇಕಾದ ಹೊಲಿಗೆ ಯಂತ್ರ.

51—1

ಮೇ ತಾ ೧೦ ರ ವರೆಗೆ ಕ್ರಯ ಸುಲಭವಾಗಿದೆ

ಎಷ್ಟು ಅಗ್ಗವೂ ಸರ್ವೋತ್ತಮವೂ ಆದದ್ದು ಇಂಥಾ ಸಂಸಾರಕ್ಕೆ ಅನುಕೂಲವಾದ ಹೊಲಿಯುವ ಯಂತ್ರ ಇದುವರೆಗೆ ಮಾರಾಟಕ್ಕೆ ಬಂದದ್ದಿಲ್ಲ ಮಾರಾಟಕ್ಕೆ ಇಟ್ಟ ಒಡನೆಯೇ ಅದರ ಉಪಯೋಗವು ಪ್ರಕಟವಾಗಿ ಅನೇಕಾನೇಕರು ಕೊಂಡುಕೊಳ್ಳಲಾರಂಭಿಸಿದ್ದರಿಂದ ಹೊಸ ಯಂತ್ರಗಳನ್ನು ಮಾಡಿ ಒದಗಿಸುವುದೇ ನಮಗೆ ತುಂಬಾ ಪ್ರಯಾಸವಾಯಿತು ಎರಡನೇ ಸಲ ತರಿಸಿದ್ದರಲ್ಲೂ ಸಾವಿರ ಯಂತ್ರಗಳ ಮೇಲೆ



ವಿಕ್ರಯವಾಗಿಹೋದದ್ದರಿಂದ ಬಹಳ ಸ್ವಲ್ಪವೇ ಉಳಿದಿರುತ್ತವೆ ಬೇಗ ಬರೆಯದ ಹೋದರೆ ಅವೂ ಮುಗಿದುಹೋಗುವವು ಯಂತ್ರದೊಡನೆ ಬೇಕಾದ ಸಾಮುಗ್ರಿಗಳೆಲ್ಲಾ ಕಳುಹಿಸಲಾಗುತ್ತೆ ಅಂಗಿ ಲಂಗ ರವಿಕೆ ಮೊದಲಾದದ್ದೆಲ್ಲಾ ಹೊಲಿದುಕೊಳ್ಳುವ ದಕ್ಕ ಈ ಯಂತ್ರವು ಪ್ರತಿಮನೆಯಲ್ಲೂ ಅತ್ಯಂತ ಪ್ರಯೋಜನಕರವಾಗಿದೆ ಮೊದಲಿನ ಕ್ರಯ ರೂ ೫ ಈಗ ರೂ ೩ ಕ್ಕೆ ಕೊಡುತ್ತೇವೆ ನಮ್ಮ ವಿಳಾಸ

ಲೋಕನಾಥ ಪಾಂಡುರಂಗ್ ಕಂಪನಿ

೩೮ ಕಾಳ್ಬಾದೇವಿ ರೋಡ್ ಬೊಂಬಾಯಿ ೨

ಇದನ್ನು ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ!!

38 4

ಸಮಸ್ತರಿಗೂ ಅನುಕೂಲವಾದ

ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ

ಕ್ರಯುರಿಟು (ಬಿಳಿ ಶೃಂಗಾರ ರಸಗಳ) ಪರಿಶೀಲನೆ

ಕಮಿನ ಯು ಜ್ವರ ವಾತಪಿತ್ತ ವಿಚಾರ ನಾಡೀಜ್ಞಾನ ಮತ್ತು ಚಿಕಿತ್ಸೆ

ಲಾಭತನು ಸಂಪಾದಿಸುವಬಗೆ ಕಾಗದ ಸೀಸದಕಡ್ಡಿ ಇಂಕಿ ಟಂಕೆ ಪೆಟ್ಟಿ ತಯಾರಿ ಅ ಕೆ ವಿಷ ಯಗಳು

ಕತುವು ಶಿಲ ದವ್ನ್ಯುಯುವ ತೈಲ ಲೆವಂಡರ್ ಸೋಪು ಅತ್ತರ್ ಪನೀರು, ತಾಂಬೂಲ ಗುಲ್ಕಂದ್ ಕುಸುಮಗಳ ವಿವೇಚನೆ

ರಂಜಕುತಾ ಸೋಟ ರಿಗೆ ಆನಂದವನ್ನುಂಟುಮಾಡುವ ಗಿಲೀಟ್ ಪಾಲೀಶ್ ವಾರ್ನಿಷ್ ಮು ಕಾದ ಎಣ್ಣದ ವಿಷಯಗ

ಗಣನೆಗೆ ಎಗಿಲಾದ ಆಕಾಶದಿವಾ ಮೊದಲಾದ ಅನೇಕ ವಿಷಯಗಳು ಮೊದಲನೇ ಸಾರದ್ಯುತಿ ವಾಚಕರ ಹಸ್ತಗತವಾಗುತ್ತಿದ್ದಿರುವ ಪುಸ್ತಕನ್ನು ಬಹುದು ಸಚಿತ್ರ ಕಲಾಶರಂಗ ಹಾಗಾದರೆ ಬೇಗನೆ ಬರೆದು ತರಿಸಿಕೊ ಳ್ಳಿರಿ ಕ್ರಯ ಪ್ರತಿ ೧ಕ್ಕೆ ರೂ ೧-೪ ವಿ ಪಿ ಮೂಲಕ ೧ ೬—೦

(೧) ವಿಳಾಸ ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್

೧೨೮ ಅರಳೇಪೇಟೆ ಬೆಂಗಳೂರು ಸಿಟಿ

ಅಥವಾ

ಏಜಂಟರು — (೨) ದಿ ಉಲ್ಫ್ ಮಾರ್ಟ್

ನಂ ೩೧ ಮಂಗಳೂರು (ದ ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ಮೈಸೂರು ಸೀಮೆಯಲ್ಲಿ ಪ್ಲೇಗ್ ಕಾಲರಾ ಸ್ಥಿತಿ

18—3—1910 ರಿಂದ 25—3—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3	2	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	5	5	0	0
ಮೈಸೂರು ,,	7	7	30	22
ಕೋಲಾರ್ ,,	0	0	0	0
ಕೋಲಾರ ದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	2	0	0
ಚಿತ್ರದುರ್ಗ ,,	4	7	0	0
ಕಡೂರ್ ,,	5	2	0	0
ಶಿವಮೊಗ್ಗ ,,	0	0	0	0
ಜುಮ್ಲಾ	25	23	30	22

ಶಾಲಿವಾಹನ ಶಕ ವರುಷಂಗಳು ೧೮೩೩ ನೇ ಸಾಧಾರಣನಾಮ ಸಂವತ್ಸರದ ಚೈತ್ರ ಶುದ್ಧ ಷಷ್ಠಿ ಶುಕ್ರವಾರದಿಂದ ಚೈತ್ರ ಶುದ್ಧ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ಮೇಷ ಮಾಸ
15	ಶುಕ್ರ ,,	ಷಷ್ಠಿ	19 39	ಮೃ	45 16	3
16	ಶನಿವಾ ‡	ಸಪ್ತಮಿ	16 8	ಪು	43 56	4
17	ರವಿವಾ §	ಅಷ್ಟಮಿ	13 39	ಪು	43 39	5
18	ಚಂದ್ರ	ನವಮಿ	12 16	ಶ್ಲೇ	44 32	6
19	ಕುಜ	ದಶಮಿ	12 6	ಮ	46 47	7
20	ಬುಧ †	ಏಕಾದಶಿ	13 14	ಪುಬ್ಬ	50-14	8
21	ಗುರು *	ದ್ವಾದಶಿ	16 38	ಉತ್ತ	56 52	9

ತಿಥಿದ್ವಯಂ ‡ ಅಷ್ಟಮೀತಿಥಿ, ಸಂತಾನಸಪ್ತಮಿ § ಅಶೋಕಾಷ್ಟಮಿ ಸೌರ ಚಾಂದ್ರ ಶ್ರೀರಾಮ ನವಮಿ † ಸರ್ವತ್ರ ೧೧, ಮಂಡ್ಯದ ಜನಾರ್ದನಸ್ವಾಮಿರಥ * ಪ್ರದೋಷ ತ್ರಯೋದಶೀತಿಥಿ, ಮಾಗಡಿ ರಂಗಸ್ವಾಮಿರಥ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೨ ೮-೦	೧೩ ೦ ೦
ಕೆಂಬೂತಿ ಅಕ್ಕಿ ಅವಲ್		೧೨ ೮ ೦	೧೩ ೧೨ ೦
ದುಯಂ		೧೨ ೦ ೦	೧೩ ೪ ೦
ಜಾಪ್ರಾಣಿ ಅಕ್ಕಿ		೧೨ ೪ ೦	೧೪ ೦ ೦
ಸಣ್ಣಕ್ಕಿ ಅವಲ್		೧೩-೮ ೦	೧೬ ೮ ೦
,, ದುಯಂ		೧೩ ೦ ೦	೧೪ ೦ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೨ ೮ ೦	೧೩ ೦ ೦
,, ದುಯಂ		೧೨ ೦ ೦	೧೨ ೦ ೦
[illegible] ರಾಗಿ ಪಲ್ಲಾ ೧ಕ್ಕೆ		೮-೦-೦	೬ ೧೨ ೦
ಕಾರ್‍ರಾಗಿ		೭ ೧೨ ೦	೬ ೮ ೦
ಜೋಳ		೭ ೮ ೦	೮ ೮ ೦
ಹಲಸಂದೆ ಪಲ್ಲಾ ೧ಕ್ಕೆ		೧೧-೦-೦	೧೧ ೦ ೦
ಬೀಳೀ ಅವರೆ		೧೧-೦ ೦	೧೦ ೮ ೦
ಹೆಸರು		೧೧-೦ ೦	೧೦ ೪ ೦
ಉದ್ದು		೧೩ ೦ ೦	೧೧ ೦ ೦
ಕಡಲೆ		೧೨ ೮-೦	೧೧ ೦ ೦
ಎಳ್ಳು ಸೇರು ೧೬ ಕ್ಕೆ		೧೬ ೦ ೦	೧೪ ೮ ೦
ಹುರುಳಿ		೮ ೮ ೦	೧೦ ೦ ೦
ಹರಳು ೧೨೬ ಸೇರಿಗೆ		೧೪ ೦ ೦	೧೨ ೦ ೦
ತೆಂಗಿನಕಾಯಿ ಮಣ ೧ಕ್ಕೆ		೩ ೪ ೦	೧ ೧೦ ೦
ಮೆಣಸಿನಕಾಯಿ		೪ ೧೨ ೦	೩ ೧೨ ೦
ದುಯಂ		೪ ೮ ೦	೩ ೪ ೦
ಪಿಲ್ಲಿ ಮೊದ್ದ ಅಚ್ಚು		೮ ೮ ೦	೫ ೨ ೨ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೦ ೦	೪ ೧೦ ೦
ಹರಳೆಣ್ಣೆ ,,		೫ ೮ ೦	೪ ೮ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೧೦ ೮ ೦	೧೨ ೮ ೦
ಉಪ್ಪು ,,		೬ ೦ ೦	೫ ೧೨ ೦
ಹುಣಸೇ ಹಣ್ಣು		೨ ೦ ೦	೧ ೪ ೦
ಹಳೇದು		೧ ೧೨-೦	೧-೬ ೦
ತುಪ್ಪ ಮಣ ೧ಕ್ಕೆ		೧೬ ೮ ೦	೧೩ ೦-೦
ಮೆಣಸಿನ್ನ ಪಟ್ಟಿ ೧ಕ್ಕೆ		೪ ೪ ೦	೪ ೬
ಕೆಂಗಿನಕಾಯಿ ೧೦೦ ಕ್ಕೆ		೫ ೦-೦	೭ ೦ ೦
ಜೀರಿಗೆಕಾಯಿ ಮಣ ೧ಕ್ಕೆ		೦ ೧೨-೦	೦ ೧೪ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೧೨ ೦	೦ ೧೨ ೦
ಚಿನ್ನ (ಪವನ್) ಕೆಂಪು		೧೫ ೯ ೦	೧೫ ೪
,, ಪಸಿಮೆ		೧೬-೦ ೦	೧೫ ೯ ೦
,, ಗಟ್ಟಿ ತೊಲ ೧ಕ್ಕೆ		೨೪ ೮ ೦	೨೪ ೨ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೬ ೪ ೦	೭೧ ೦ ೦

ಸಂಗೀತ ಪಾರಿಜಾತ ಕ್ರಯ ೮ ಆಣೆ

20 10

ಮನೋಹರವಾದ ಹಾಡಿನ ಪುಸ್ತಕ ೧೦ ಪ್ರತಿಗಳನ್ನು ಒಟ್ಟಾಗಿ ತರಿಸುವವರಿಗೆ ೧೨ ಆಣೆಕ್ರಯದ ನಿರುಪಮಾ ಎಂಬ ಹೊಸನಾಟಕವನ್ನೂ ೬ ಪ್ರತಿಗಳನ್ನು ತರಿಸುವವರಿಗೆ ಕಬೀರ ದಾಸನ ಚರಿತ್ರೆಯು ೪ ಪ್ರತಿಗಳನ್ನು ತರಿಸುವವರಿಗೆ ಪ್ರಕೀರ್ತ ರತ್ನಮಾಲಿಕೆ ಎಂಬ ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ—ದಿ ಮರ್ಕಂಟೈಲ್ ಯೂನಿಯನ್, ಮೈಸೂರು

ತಿಜಾವಿಲಾ

45 2

ಕೃಷ್ಯಭಿವೃದ್ಧ್ಯರ್ಥವಾಗಿ ಸರ್ಕಾರದವರು ಜಮೀನುದಾರರಿಗೆ ಕೊಡುವ ಸಾಲಗಳು ಮಾಡುವ ಇತರ ಸಹಾಯಗಳು ಇವುಗಳ ವಿಷಯಕವಾದ ಲಾಗಳ ಮತ್ತು ಖಾನೂನುಗಳ ಸಂಗ್ರಹ ಕ್ರಯ ವಿ ಪಿ ಸೇರಿ 10 ಆಣೆ ಅಪೇಕ್ಷಕರು ಬರೆಯಕೊಳ್ಳುವ ವಿಳಾಸ —

ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್,

ಚಾಮರಾಜಪೇಟೆ, ಬೆಂಗಳೂರು ಸಿಟಿ

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು

ಮೇಲ್ಕಂಡ ಸಮಾಜದ ಮೆಂಬರುಗಳು ಈ ತಿಂಗಳು ತಾ ೪ ನೇ ಸೋಮವಾರ ಮಧ್ಯಾಹ್ನ ೩॥ ಘಂಟೆಗೆ ಸರಿಯಾಗಿ ಚಿತ್ರದುರ್ಗದ ಗರ್ಲ್ಸ್ ಸ್ಕೂಲ ಹಾಲಿನಲ್ಲಿ ಸೇರಿದರು ಎಲ್ಲಾ ಒಟ್ಟು ೨೬ ಜನ ಉಪಾಧ್ಯಾಯರುಗಳು ಹಾಜರಿದ್ದರು ೧೦ ೧೨ ಮೈಲು ದೂರದಲ್ಲಿರುವ ವಿಲೇಜ್ ಸ್ಕೂಲುಗಳವರೇ ಹಜ್ರಾಗಿದ್ದರು ಟವುನ್ನಲ್ಲಿರುವ ಉಪಾಧ್ಯಾಯರಲ್ಲಿ ಕೆಲವು ಬ್ರಾಂಚ್ ಸ್ಕೂಲು, ಗರ್ಲ್ಸ್ ಸ್ಕೂಲು, ಎ ವಿ ಸ್ಕೂಲುಗಳವರು ಕೊಂಚ ಉದಾಸೀನರಾಗಿದ್ದಂತೆ ತಿಳಿಯಬರುತ್ತದೆ ತಿಂಗಳಿಗೊಂದು ಸಾರಿ ಸಂಭವಿಸುವ ಇಂಥಾ ಅತ್ಯುತ್ತಮವಾದ ಸಂದರ್ಭವನ್ನು ಮುಂದೆ ಕಳೆದುಕೊಳ್ಳಲಾರರಾಗಿ ಕೇಳಿಕೊಳ್ಳುತ್ತೇನೆ

ಸಭೆಯ ಪ್ರೆಸಿಡೆಂಟ್ ಮ॥ ತಿರುಮಲಾಚಾರ್, ಬಿ ಎ ಯವರು ಅಗ್ರಾಸನಾಧಿಪತಿಗಳಾಗಿ ಸಭೆಯ ಕಾರ್ಯವನ್ನು ಜರಗಿಸಲು ಅವಕಾಶವನ್ನು ಕೊಟ್ಟರು ಸಭೆಯ ಸೆಕ್ರಿಟರಿಯವರು ಕಳೆದ ತಿಂಗಳಲ್ಲಿ ನಡೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಎಲ್ಲಾ ಸಭಿಕರಲ್ಲಿ ತಿಳಿಸಿದ ಮೇಲೆ ಅವು ರಿಕಾರ್ಡ್ ಮಾಡಲ್ಪಟ್ಟವು

ತರುವಾಯ ಎ ವಿ ಸ್ಕೂಲು ಅ ಮಾ ಮ॥ ವೆಂಕಟನರಸಯ್ಯ, ಬಿ ಎ ಯವರು ಇಂಗ್ಲಿಷ್ ೧ ನೇ ತರಗತಿಗೆ ತಕ್ಕ ಟೆಕ್ಸ್ಟ್ ಬುಕ್ಕಿನ ಪಾಠಗಳ ಅಪವರ್ತನವನ್ನು ಬೋಧಿಸಿದರು ಕೆಲವು ಹೊಸ ಪದ್ಧತಿಗಳು ವ್ಯಕ್ತವಾದವು

ಉಪಾಧ್ಯಾಯ ಸಂಘದ ಉದ್ದೇಶವು ಅನೇಕ ನವೀನ ಪದ್ಧತಿಗಳನ್ನೂ ಎಲ್ಲಾ ಉಪಾಧ್ಯಾಯರುಗಳೂ ಸೇರಿ ಬೋಧನಾಕ್ರಮದಲ್ಲಿ ತಿದ್ದುಪಾಟುಗಳನ್ನು ಅಂದರೆ ಕ್ರಮವರಿತು ಉತ್ತಮವಾದ ದಾರಿಗಳನ್ನೂ ಕಂಡುಹಿಡಿಯಬೇಕೆಂಬುದೇ ನಿಶ್ಚಯಿಸಿದೆ ಇದಕ್ಕಾಗಿ ಯೋಗ್ಯತಾ ಪತ್ರಿಕೆಗಳನ್ನು ಹೊಂದಿದ ಉಪಾಧ್ಯಾಯರೇ ಈ ಸಭೆಯ ಪ್ರಾಕ್ಟಿಕಲ್ ತರಗತಿಗಳಲ್ಲಿ ವರದಿಗಾಗಿ ಬೋಧಕರನ್ನಾಗಿ ತೆಗೆದುಕೊಳ್ಳಲು ಏರ್ಪಡಿಸಿದೆ ಇತರರ ದೋಷಗಳನ್ನೇ ಕುರಿತು ಚರ್ಚಿಸುವ ಭಾಗದಲ್ಲಿ ಒಳು ಕೊಡಬೇಕಾಗಿರುವುದು ಇದಕ್ಕಾಗಿ ರೆಜಲ್ಯೂಷನ್ ಪ್ಯಾಸು ಮಾಡಿದರು ಮುಂದಕ್ಕೆ ದೋಷಗಳನ್ನು ಎತ್ತಕೂಡದು ಎಂಬುದಾಗಿ ಇತ್ಯರ್ಥವಾಯಿತು

ತರುವಾಯ ಸ್ಕೂಲು ಮಾಥಮಾಟಿಕ್ಸ್ ಪ್ರೊಫೆಸರ್ ಮ॥ ಶಿವರಾಮಕೃಷ್ಣಯ್ಯನವರು ಮಹತ್ತಮ ಮತ್ತು ಲಘುತ್ತಮ ಸಾಮಾನ್ಯ ಅಪವರ್ತನಗಳ ಬೋಧನಾಕ್ರಮಗಳನ್ನು ಒಂದು ಉಪನ್ಯಾಸರೂಪವಾಗಿ ಎಲ್ಲಾ ಉಪಾಧ್ಯಾಯರುಗಳಿಗೂ ತಿಳಿಸಿದರು

ಕಳೆದ ತಿಂಗಳ ಮೀಟಿಂಗಿನಲ್ಲಿ ಕೊಡಲ್ಪಟ್ಟ ಪ್ರಶ್ನೆಗೆ ನಾಲ್ಕು ಜನ ಹೋಬಳಿ ಸ್ಕೂಲು ಮಾಸ್ಟರುಗಳು ಉಪನ್ಯಾಸಗಳನ್ನು ಬರೆದು ಕಳುಹಿಸಿದ್ದರು ಇವುಗಳಲ್ಲಿ ಕೋಟೂರುವನಾಳಿಗೆ ಸ್ಕೂಲು ಮಾಸ್ಟರು ಮ| ಸುಬ್ಬರಾವ್ ರವರು ಬರೆದದ್ದು ಮೊದಲನೇ ದರ್ಜೆಯಾಗಿಯೂ, ಮ॥ ಸೂರಪ್ಪನವರು ಬರೆದದ್ದು ಎರಡನೇದಾಗಿಯೂ ಇತ್ತು ಎಲ್ಲರ ತಿಳುವಳಿಕೆ ಬಗ್ಗೆ ತರಲು ಒಂದು ವಿದ್ಯಾದಾಯಿನಿ ಯಲ್ಲೂ, ಎರಡನೇದನ್ನು ಬೇರೆ ವಾರ ಪತ್ರಿಕೆಯವರು ಅವಕಾಶಕೊಡುವದಾದರೆ ಅಲ್ಲಿಯೂ ಪ್ರಕಟಿಸುವಂತೆ ರಿಕಾರ್ಡ್ ಮಾಡಲ್ಪಟ್ಟಿತು

ಮುಂದಿನ ತಿಂಗಳ ಮೀಟಿಂಗು ಬೇಸಿಗೆ ರಜಾ ಕಾಲದಲ್ಲಿ ಬರುತ್ತಾ ಇದ್ದದ್ದರಿಂದ ಅನೇಕ ಉಪಾಧ್ಯಾಯರು ಗೃಹಕೃತ್ಯಕ್ಕಾಗಿ ದೂರ ಸ್ಥಳಗಳಿಗೆ ಹೋಗುತ್ತಾರಾಗಿ ವಿಶೇಷ ವಿಷಯಗಳನ್ನು ವಿಂಗಡಿಸಲಿಲ್ಲ (೧) ಕಿಂಡರ್‌ಗಾರ್ಟನ್ ಕ್ರಮ ಏನು ಎಂಬುದನ್ನು ಕುರಿತು ಉಪನ್ಯಾಸ ಕೊಡಲು ಡ್ರಾಯಿಂಗ್ ಮಿಸ್ಟರಿ ಪ್ರೊಫೆಸರವರು ಒಪ್ಪಿರುತ್ತಾರೆ (೨) ಪ್ರಾಕ್ಟಿಕಲ್ ಕ್ಲಾಸಿನಲ್ಲಿ ಅದೇ ವಿಷಯದಲ್ಲಿ ಒಂದನ್ನು ಬೋಧಿಸಲು ತಕ್ಕ ಏರ್ಪಾಡು ಮಾಡಿದೆ

ಕಿಂಡರ್‌ಗಾರ್ಟನ್ ಕ್ರಮದಲ್ಲಿ ಕೆಲವು ಕೆಲಸಗಳಿಗೆ (ಕಾರ್ಡ್ ಬೋರ್ಡು, ಡ್ರಾಯಿಂಗ್ ಪೇಪರ್ ಫೋಲ್ಡಿಂಗ್) ಬಾಲಕರ ಉಪಯೋಗಕ್ಕಾಗಿ ಕೆಲವು ಚಿಕ್ಕ ಆಯುಧಗಳು ಬೇಕಾಗುತ್ತವೆ ಅವುಗಳು ಈ ದೇಶದ ಅಂಗಡಿಗಳಲ್ಲಿ ಹೆಚ್ಚು ಬೆಲೆ ಬಾಳುವವು ಇಂಗ್ಲೆಂಡ್ ದೇಶದ ಫೋಲ್ಡ್ ಎ ಬ ಕಂಪೆನಿಯಿಂದ ಒಟ್ಟಾಗಿ ಉತ್ತಮವಾದದ್ದನ್ನು ತರಿಸಿ ಕೊಡುವದಾಗಿ ಸ್ಟಾಂಡರ್ಡ್ ಕಂಪನಿಯವರಿಂದ ಡಾಕೆಟು ಕಳುಹಿಸಿರುತ್ತೆ ಈ ಸಂಘಕ್ಕೆ ಸೇರಿದ ಉಪಾಧ್ಯಾಯರುಗಳು ತಮಗೆ ಬೇಕಾಗಿರುವ ಭಾಗದಲ್ಲಿ ತಮಗೂ ಬೇಕಾದ ಸಾಮಾನುಗಳ ಪಟ್ಟಿ ಬೆಲೆ ಬಗ್ಗೆ ಬರೆದುಕೊಂಡಲ್ಲಿ ಒಟ್ಟಾಗಿ ತರಿಸಿಕೊಡುವ ಸಂಘದ ತಿಂಗಳ ಆಖೈರೊಳಗಾಗಿ ಸೆಕ್ರಿಟರಿಯವರ ಹೆಸರಿಗೆ ಒಂದು ಪಟ್ಟಿಯನ್ನು ಬರೆದು ಕಳುಹಿ ದರೆ ದೊರೆಯುವವು ಕತ್ತರಿ ೫ ಆಣೆ ಫುಟ್‌ರೂಲು ೨ ಆಣೆ ಕಂಪಾಸು ೩ ಆಣೆ

ಚಿತ್ರದುರ್ಗ, ಪಿ ನಾ ಭೀಮಪ್ಪ

೯—೪—೧೯೧೦ ಉಪಾಧ್ಯಾಯ ಸಂಘದ ಸೆಕ್ರಿಟರಿ

ಕೀನ ಟಿ ಎಂಬ ಕಾಲೆಗ ರಮ ಅನ್ಸೈಕ್ಲೋಪೀಡಿಯ ಕೂಡ ಹಾಡದಲ್ಲಿ ಕೂರಿ ಕೊಂಡು ಮೌಂಟ್ ಕಾರ್ಮೆಲ್ಲಿನಲ್ಲಿ ೩ ಗಂಟೆ ೨೦ ನಿಮಿಷದೊಳಗೆ ೧೦೨ ಮೈಲಿ ದೂರ ಅಂತರಿಕ್ಷದಲ್ಲಿ ಸಂಚರಿಸಿಕೊಂಡು ಓಡಿಸು

ಯಕ್ಷಿಣೀ ನೋಟವು.

50
ಮೈಸೂರು ಟೌನ್‌ಹಾಲ್ ಬಂಗಲೆಯಲ್ಲಿ
ತಾರೀಖು ೧೪ ಮತ್ತು ೧೫ ರಲ್ಲಿ ಮಾತ್ರ

ಲಂಡನ್ ಪಟ್ಟಣದ ಆಲ್ವಾರೋ ಜೇಮ್ಸ್‌ನವರು ಬಹು ಅಪೂರ್ವವೂ ಅದ್ಭುತವೂ ಆದ ಜಾದೂ ವಿದ್ಯೆಯನ್ನು ತೋರಿಸುತ್ತಾರೆ. ಅಂತರಿಕ್ಷದಲ್ಲಿ ಪ್ರಾಣಿಗಳೂ ಪದಾರ್ಥಗಳೂ ಕಾಣುವುದು, ಮನಸ್ಸಿನಲ್ಲಿ ಕುರಿತದ್ದನ್ನು ಮಾಡುವುದು. ಹೆಂಗಸು ಸೃಷ್ಟಿಯಾಗಿ ಅದೃಶ್ಯಹೊಂದುವುದು ಮತ್ತು ಅಂತರಿಕ್ಷದಲ್ಲಿ ತೇಲಾಡುವುದು, ಈ ಮೊದಲಾದ ಅನೇಕ ಯಕ್ಷಿಣಿ ಕಾರ್ಯಗಳೂ ತೋರಿಸಲ್ಪಡುತ್ತವೆ.

ದರಗಳು.-ರೂ. ೩. ೧. ೮ ೯, ೭. ೪. ಸ್ತ್ರೀಯರಿಗೆ ರೂ ೧, ೮. ೯, ೮ ೪ ಬಾಗಿಲು ತೆರೆಯುವುದು ರಾತ್ರಿ ೯ ಗಂಟೆ; ಆರಂಭ ೯ ೩೦ ಗಂಟೆ

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

52

1909 10 ನೇ ಇಸವಿ ಒರಿಜಿನಲ್ ನಂಬರ್ ೨೬೨

ವಾದಿ —ಚಿಕ್ಕವಾಪ್ಪೆಯು

ಪ್ರತಿವಾದಿಗಳು 1 ನೇ ಜೋಗಯ್ಯ ೨ ನೇ ಚಿಕ್ಕಪುಟ್ಟಯ್ಯ, ೩ ನೇ ನಂಜುಂಡಯ್ಯ

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30 ನೇ ಸೆಕ್ಷನ್ ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ದಾವೆಯಲ್ಲಿ ವಾದಿಯು ಅದರ ಷೆಡ್ಯೂಲ್‌ನಲ್ಲಿ ನಮೂದಾಗುವ ಮನೆ ಸ್ವಾಧೀನಕ್ಕೂ ಮತ್ತು ಬಾಡಿಗೆಗೂ ದಾವಾ ಮಾಡಿ ಸದರಿ ದಾವೆಯು ಬಾಲ್ತಿ ಇಸವಿ ಏಪ್ರಿಲ್ ತಿಂಗಳು 27 ನೇ ತಾರೀಖಿಗೆ ವಿಚಾರಣೆಗೆ ಇಡಲ್ಪಟ್ಟಿರುತ್ತೆ. ಸದರಿ ಸ್ವತ್ತಿನಲ್ಲಿ ಹಕ್ಕು ಬಾಧ್ಯತೆ ಉಳ್ಳವರೆಲ್ಲಾ ಮೇಲೆ 27 ನೇ ತಾರೀಖಿಗೆ ದಿನ 11 ಗಂಟೆಗೆ ಈ ಕೋರ್ಟಿಗೆ ಖುದ್ದು ಹಾಜರಾಗಿ ತಮಗೆ ಇರತಕ್ಕ ಹಕ್ಕು ಬಾಧ್ಯತೆ ವ ಸಂಬಂಧವನ್ನು ಕೋರ್ಟಿಗೆ ಅರಿಕೆಮಾಡಿಕೊಳ್ಳತಕ್ಕದ್ದು

ಷೆಡ್ಯೂಲ್

ಮೈಸೂರು ಕೃಷ್ಣರಾಜ ಮೊಹಲ್ಲಾ ನಾಲಾ ಬಾಜೂದಲ್ಲಿರುವದು ಪೂರ್ವಕ್ಕೆ ರಸ್ತೆ ಮತ್ತು ನಾಲಾ, ಪಶ್ಚಿಮಕ್ಕೆ ಬಿಸಾಯಿ ತಿಂಗಪ್ಪನ ಮನೆ ಹಿತ್ತಲು, ದಕ್ಷಿಣಕ್ಕೆ ಮುಂದೆ ಕೇರಿಗೆ ಹೋಗುವ ರಸ್ತೆ, ಉತ್ತರಕ್ಕೆ ಪೂರ್ಣಯ್ಯನವರ ಛತ್ರದ ಗೊಲ್ಲರ ಕೇರಿ ವಿನಾಯಿ ಮನೆ —ಈ ಮಧ್ಯೆ ಇರುವ 6 ಅಂಕಣದ 2 ಸೂರಿನ ಹೆಂಚಿನ ಮನೆಯಲ್ಲಿ ದಕ್ಷಿಣದಿಕ್ಕಿನ ಅಪ್ಪರ್‌ನಲ್ಲಿರುವ 1 ಅಂಕಣದ ದೇವರ ಮನೆ ಬಾಕಿ 5 ಅಂಕಣದ ಮನೆ ಮ್ಯುನಿಸಿಪಲ್ ಡೋರ್ ನಂಬರ್ 1191 ಉಳ್ಳ ಪೂರ್ವಪಶ್ಚಿಮಗಜ 7 ದಕ್ಷಿಣೋತ್ತರಗಜ 8 ಉಳ್ಳದ್ದು

ತಾರೀಖು 1 ನೇ ಏಪ್ರಿಲ್ 1910 ನೇ ಇಸವಿ

N. I. GOPALIENGAR,
Principal Munsiff

ವೃತ್ತಾಂತ ಪತ್ರಿಕೆ.

೧೯೧೦ ನೇ ಇಸವಿ ಏಪ್ರಿಲ್ ತಾ ೧೪ ನೇ ಗುರುವಾರ

ಮೈಸೂರು ಸಂಸ್ಥಾನದಲ್ಲಿ ಮದ್ಯ ಪದಾರ್ಥಗಳು

ಮೈಸೂರು ಸಂಸ್ಥಾನದ ಎಕ್ಸೈಸ್ ಕಮಿಷನರವರು ಬರೆದು ಒಪ್ಪಿಸಿದ ವಾರ್ಷಿಕ ರಿಪೋರ್ಟನ್ನು ಗವರ್ನಮೆಂಟಿನವರು ಪರಾಂಬರಿಸಿ ಅದರ ಮೇಲೆ ತಮ್ಮ ಹುಕುಮನ್ನು ಈಗ ತಾನೇ ಪ್ರಕಟಿಸಿರುತ್ತಾರೆ. ಈ ಬಾಬಿನಲ್ಲಿ ರಾಜಾದಾಯವನ್ನೇ ನೋಡಿದಪಕ್ಷದಲ್ಲಿ ಈ ಇಲಾಖೆಯ ಕಾರುಬಾರುಗಳು ಬಹಳ ತೃಪ್ತಿಕರವಾಗಿ ನಡೆದಿರುತ್ತವೆ. ಕಳೆದ ಸಾಲಿನಲ್ಲಿ ಎಕ್ಸೈಸ್ ಇಲಾಖೆಯಿಂದ ಸಂಸ್ಥಾನಕ್ಕೆ ೪೩,೭೦,೯೦೦ ರೂಪಾಯಿ ಹುಟ್ಟುವಳಿ ಆಗಿರುತ್ತದೆ. ಇಷ್ಟು ಹೆಚ್ಚಾದ ಉತ್ಪತ್ತಿಯು ಹಿಂದೆ ಯಾವ ಸಾಲಿನಲ್ಲೂ ಆಗಿರುವುದಿಲ್ಲ. ದುಕಾನುಗಳ ಸಂಖ್ಯೆಯು ಹಿಂದಿನ ಸಾಲಿಗಿಂತ ೨೯ ಕಡಮೆಯಾಗಿದ್ದರೂ ಉತ್ಪತ್ತಿಯು ಜಾಸ್ತಿಯೇ ಆಗಿರುತ್ತದೆ. ಸಾರಾಯಿ ಮತ್ತು ಅನ್ಯದೇಶಗಳಿಂದ ಬರುವ ಮದ್ಯಗಳು ಹೆಚ್ಚಾಗಿ ಬಿಕರಿ ಆದದ್ದರಿಂದ ಹುಟ್ಟುವಳಿಯು ಈ ರೀತಿ ಹೆಚ್ಚಿತೆಂದು ಹೇಳೋಣವೆಂದರೆ ಈ ಎರಡು ಬಾಬುಗಳೂ ಹಿಂದಿನ ಸಾಲಿಗಿಂತ ಕಡಮೆಯಾಗಿರುತ್ತವೆ. ಶೇಂದಿ ವಿಚಾರ ಹ್ಯಾಗೆ ಎಂದು ನೋಡೋಣವೆಂದರೆ ಈ ರಿಪೋರ್ಟಿನಲ್ಲಿ ಅದು ಎಷ್ಟು ಖರ್ಚಾಯಿತೊ ತಿಳಿಯುವುದಿಲ್ಲ. ಶೇಂದಿ ಇಳಿಸಿದ ಮರಗಳ ಸಂಖ್ಯೆಯೇನೋ ಬಹಳ ಹೆಚ್ಚಾಗಿದ್ದವು; ಆದರೆ ದುಷ್ಕಾಲದ ನಿಮಿತ್ತವಾಗಿ ಮದ್ರಾಸುವೃಕ್ಷಗಳನ್ನು ತರಿಸಿದ್ದು ತುಂಬಾ ಕಡಮೆಯಾಯಿತು.

ಶೇಂದಿ ಗಿಡಗಳ ತೆರಿಗೆ ದರವನ್ನು ಜಾಸ್ತಿಮಾಡಿದ್ದರಿಂದಲೂ, ಹೆಚ್ಚು ಗಿಡಗಳಿಂದ ಶೇಂದಿ ಇಳಿಸಿದ್ದರಿಂದಲೂ. ಕಾನೂನಿಗೆ ವಿರುದ್ಧವಾಗಿ ಅಂತರಂಗದಲ್ಲೇ ಸರಾಬು ತಯಾರಾಗುತ್ತಿದ್ದದ್ದನ್ನು ತಕ್ಕ ಮಟ್ಟಿಗೆ ನಿಲ್ಲಿಸಿದ್ದರಿಂದಲೂ ಕಳೆದ ಸಾಲಿನ ಹುಟ್ಟುವಳಿಯು ಹೆಚ್ಚುವುದಕ್ಕೆ ಕಾರಣವಾಯಿತೆಂದು ತಿಳಿಯುತ್ತದೆ. ಇದು ಸಹಜವೂ ತೃಪ್ತಿಕರವೂ ಆದ ಕಾರಣವೆಂದು ತೋರುವುದು. ಸರ್ಕಾರದವರು ಶೇಂದಿ ಮತ್ತು ಸರಾಬುಗಳ ದರಗಳನ್ನು ಹೆಚ್ಚು ಮಾಡಿದ್ದು ಒಳ್ಳೇದಾಯಿತು. ಇದರಿಂದ ಜನರು ಅವುಗಳನ್ನು ಅಷ್ಟು ಸುಲಭವಾಗಿ ಕೊಂಡು ಉಪಯೋಗಿಸದಂತೆ ಅಡ್ಡಿಯಾಗಿರುತ್ತದೆ. ಇಷ್ಟೆಲ್ಲಾ ಗವರ್ನಮೆಂಟಿನವರು ಪ್ರತಿಬಂಧಕಗಳನ್ನು ಕಲ್ಪಿಸಿದ್ದಾಗ್ಯೂ ಮೈಸೂರು ಸಂಸ್ಥಾನದ ಪ್ರಜೆಗಳು ಮದ್ಯಗಳಿಗೂ ಮದ್ಯಪಾನಗಳಿಗೂ ಬಹಳ ಹೆಚ್ಚಾದ ಹಣವನ್ನು ಖರ್ಚುಮಾಡುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಪ್ರಜೆಗಳಲ್ಲಿ ಕುಡುಕುತನವು ಕಡಮೆಯಾಗಬೇಕಾದರೆ ಮೂರು ವಿಷಯಗಳು ಅವಶ್ಯ ರೀತಿಗೆ ಬರಬೇಕು. ಮೊದಲನೆಯದಾಗಿ, ಮದ್ಯಗಳು ಬಿಕರಿ ಆಗುವಂಥಾ ದುಕಾನುಗಳ ಸಂಖ್ಯೆಯನ್ನು ಇನ್ನೂ ಕಡಮೆ ಮಾಡಿ ಬಿಡಬೇಕು. ಎರಡನೆಯದಾಗಿ, ಕುಡಿಯುವುದು ನಿಷ್ಪ್ರಯೋಜಕವಾದದ್ದೆಂತಲೂ, ಅದರಿಂದುಂಟಾಗುವ ಕೇಡುಗಳು ಅಪಾರವಾದವುಗಳೆಂತಲೂ ಮಠಗಳಲ್ಲಿ ಹುಡುಗರಿಗೆ ಚಿಕ್ಕಂದಿನಿಂದಲೂ ಬೋಧಿಸಿ, ಅವರಿಗೆ ಅದರಲ್ಲಿ ಅಸಹ್ಯ ಹುಟ್ಟುವಂತೆ ಮಾಡುತ್ತಾ ಬರಬೇಕು. ಮೂರನೆಯದಾಗಿ ಆಯಾ ಜಾತಿ ಕುಲಗಳ ಮುಖಂಡರು ಮುಂದಾಳುಗಳಾಗಿ ನಿಂತು ತಮ್ಮ ಜನರು ಕುಡುಕರಾಗದಂತೆ ಅವರಿಗೆ ವಿವೇಕವನ್ನು ಕಲಿಸುತ್ತಾ ತಮ್ಮ ಉದ್ದೇಶವು ಸಾರ್ಥಕವಾಗುವಂತೆ ಸಾಹಸಪಡುತ್ತಾ ಬರಬೇಕು. ಈ ರೀತಿ ಸರ್ಕಾರದವರೂ ಪ್ರಜೆಗಳ ಮುಖಂಡರೂ ಏಕೀಭವಿಸಿ ಮೈತ್ರ್ಯದಿಂದ ಪ್ರಜಾವಾತ್ಸಲ್ಯಶೀಲರಾಗಿ ಕಾರ್ಯಗಳನ್ನು ನಡಿಸುತ್ತಾ ಬಂದ ಹೊರತು ಕುಡುಕುತನವು ಈ ಸಂಸ್ಥಾನದಲ್ಲಿ ಕಡಮೆಯಾಗುವುದಿಲ್ಲ.

ಮದ್ಯದ ಅಂಗಡಿಗಳು ಕಣ್ಣು ಮರೆಯಾದರೆ ಜನರು ಹೋಗಿ ಕುಡಿದು ಹಾಳಾಗುವುದಕ್ಕೆ ಮರೆಯಿಲ್ಲದಂತೆ ಮಾಡುತ್ತವೆ. ಆದಕಾರಣ ಅಂಗಡಿಗಳ ಸಂಖ್ಯೆಯನ್ನೇ ಸಾಧ್ಯವಾಗುವ ಮಟ್ಟಿಗೂ ಕಡಮೆ ಮಾಡಿ ಬಿಡಬೇಕು. ಸಂಪೂರ್ಣವಾಗಿ ಅಂಗಡಿಗಳನ್ನೆಲ್ಲಾ ಮುಚ್ಚಿ ಬಿಡಲೂ ಬಾರದು. ಯಾಕೆಂದರೆ ಅಂತರಂಗದಲ್ಲಿ ಮದ್ಯಗಳು ತಯಾರಾಗುವುದು ಹೆಚ್ಚಿಬಿಡುತ್ತದೆ. ಈಗಿರುವ ಸ್ಥಿತಿಗತಿಯನ್ನು ನೋಡುವುದರಲ್ಲಿ ಅನೇಕ ಅಂಗಡಿಗಳನ್ನು ಮುಚ್ಚಿಬಿಡುವುದರಿಂದ ಪ್ರಜೆಗಳಿಗೆ ಎಷ್ಟೋ ಉಪಕಾರವಾದೀತೆಂದು ನಮಗೆ ತೋರುತ್ತದೆ. ದುಕಾನುಗಳ ಸಂಖ್ಯೆ ಕಡಮೆಯಾದಷ್ಟು ಪ್ರಯೋಜನವುಂಟಾದೀತು. ಇವು ಜನಗಳಿಗೆ ಸುಲಭವಾಗಿ ತಲುಪಿ ಮಾಡುವಂಥಾ ಸ್ಥಳಗಳಲ್ಲಿ ಇರಬೇಕೇ ವಿನಹಾ ವಿಶೇಷವಾಗಿ ಜನಸಂಚಾರವಿರುವಂಥಾ ಮತ್ತು ಅವರ ಕಣ್ಣುಗಳನ್ನು ಆಕರ್ಷಿಸುವಂಥಾ ಸ್ಥಳಗಳಲ್ಲಿ ಇರಕೂಡದು.

ಬಾಲಕ ಪಾಠಶಾಲೆಗಳಲ್ಲಿ ಮಕ್ಕಳಿಗೆ ಮದ್ಯಸೇವನೆಯಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದೂ, ಅನೇಕ ಸಂದರ್ಭಗಳಲ್ಲಿ ಅದರಿಂದ ಬಹಳ ಹಾನಿಯುಂಟಾಗುವುದೆಂದೂ ಕಲಿಸುತ್ತಾ ಬರಬೇಕು. ಅನೇಕಾನೇಕ ಜನರು ಮದ್ಯಗಳಿಗೆ ಅನ್ಯಾಯವಾಗಿ ಹಣವನ್ನು ಖರ್ಚುಮಾಡಿ ನಾನಾ ಕೇಡುಗಳಿಗೆ ಗುರಿಯಾಗಿಯೂ, ಗುರಿಯಾಗುತ್ತಲೂ ಇದ್ದಾರೆ. ಇದಲ್ಲದೆ ಅದರಿಂದ ಹಲವು ರೋಗಗಳು ಹುಟ್ಟಿ ಆಯುಸ್ಸೂ ಕಡಮೆಯಾಗುತ್ತದೆ. ಮದ್ಯಪಾನದಿಂದ ಯಾವ ಪ್ರಯೋಜನವೂ ಉಂಟಾಗುವುದಿಲ್ಲ, ಮತ್ತು ಮಿತಿಮೀರಿ ಕುಡಿಯೋಣವದರಿಂದ ಬಹಳ ಕೆಡುಕೇ ಪ್ರಾಪ್ತವಾದೀತು.

ಜಾತಿ ಮತ ಕುಲಗಳ ಮುಖಂಡರೂ ಹಿರಿಯರೂ ಪ್ರಜೆಗಳಿಗೆ ವಿವೇಕವನ್ನು ಕಲಿಸುತ್ತಾ ಬಂದು ಅವರು ಕುಡಿಯದಂತೆ ಮಾಡಿದ ಪಕ್ಷದಲ್ಲಿ ವಿಶೇಷವಾದ ಶ್ರೇಯಸ್ಸುಂಟಾಗುವುದು. ಈ ಭಾಗದಲ್ಲಿ ಒಕ್ಕಲಿಗರ ಸಂಘದವರು ಬಹು ಪ್ರಶಸ್ತವಾದ ಉದ್ದೇಶವನ್ನಿಟ್ಟುಕೊಂಡು ಕಾರ್ಯಾರಂಭ ಮಾಡಿದರು. ಈ ಕಾರ್ಯವು ಈಚೆಗೆ ಎಷ್ಟು ಮಟ್ಟಿಗೆ ನಡೆದು ಅವರ ಉದ್ದೇಶವು ಸಾರ್ಥಕವಾಗುತ್ತಿದೆಯೋ ತಿಳಿದು ಬರಲಿಲ್ಲ. ಆದರೆ ಅವರ ಮುಖಂಡರು ಮದ್ಯಪಾನ ಮಾಡುವ ಒಕ್ಕಲಿಗರನ್ನೂ ರೈತ ಪ್ರಜೆಗಳನ್ನೂ ಆಗಿಂದಾಗ್ಗೆ ಸಂಧಿಸಿ ಈ ದುರಭ್ಯಾಸದಿಂದ ಅವರಿಗೆ ಕೇಡಲ್ಲದೆ ಮೇಲೇನೂ ಉಂಟಾಗುವುದಿಲ್ಲವೆಂಬ ಅಂಶವನ್ನು ಚೆನ್ನಾಗಿ ಹೇಳುತ್ತಾ ಬಂದಿದ್ದಾರೆಂದು ನಿರೀಕ್ಷಿಸುತ್ತೇವೆ.

ಈಗ ಮದ್ಯಪಾನಗಳಿಗೆ ಹಾಕಿ ಹಾಳಾಗುತ್ತಿರುವ ಲಕ್ಷಾಂತರ ರೂಪಾಯಿಗಳನ್ನು ಕಸಬುಗಳಿಗೆ ವಿನಿಯೋಗಿಸಿ ಕಾರ್ಖಾನೆಗಳನ್ನು ಏರ್ಪಾಡು ಮಾಡಿದ ಪಕ್ಷದಲ್ಲಿ ಈ ಸಂಸ್ಥಾನಕ್ಕೂ ಪ್ರಜಾಕೋಟಿಗಳಿಗೂ ಎಷ್ಟೋ ಮೇಲಾಗುವುದು. ಈ ಸೀಮೆಯಲ್ಲಿ ಹಣವೇ ಇಲ್ಲವೆಂದು ಜನರು ಹೇಳುವುದುಂಟು. ಇಲ್ಲಿ ನೋಡಿ, ಮೈಸೂರು ಸಂಸ್ಥಾನದ ಪ್ರಜೆಗಳು ಒಂದು ವರುಷದಲ್ಲಿ ೪೮ ಲಕ್ಷ ರೂಪಾಯನ್ನು ವ್ಯರ್ಥವಾಗಿ ಖರ್ಚು ಮಾಡಿದಾರೆ. ಈ ಅಪಾರವಾದ ಹಣವನ್ನು ಸರಿಯಾಗಿ ವಿನಿಯೋಗಿಸಿದ್ದರೆ ಹಲವು ಕಾರ್ಖಾನೆಗಳನ್ನು ಸ್ಥಾಪಿಸಿ ನಡಿಸಬಹುದಾಗಿತ್ತು. ಅನೇಕ ಸರಕುಗಳು ತಯಾರಾಗಿ ಬಹಳ ಲಾಭ ಉತ್ಪತ್ತಿಯಾಗುತ್ತಿತ್ತು. ಪ್ರಜೆಗಳು ಸಮೃದ್ಧಿ ಸುಖ ಸಂತೋಷಗಳನ್ನು ಅನುಭೋಗಿಸುತ್ತಿದ್ದರು. ಇನ್ನಾದರೂ ಈ ಸೀಮೆಯ ಪ್ರಜೆಗಳು ತಮ್ಮ ಕಷ್ಟಾರ್ಜಿತವನ್ನು ಈ ದುರಭ್ಯಾಸಕ್ಕೆ ಹಾಕಿ ಕಟ್ಟು ಹೋಗದೆ ವಿವೇಕಿಗಳಾಗಬೇಕೆಂದೂ ಕುಡುಕುತನವು ಕಡಮೆಯಾಗುತ್ತಾ ಬಂದೀತೆಂದೂ ನಂಬಿ ನಿರೀಕ್ಷಿಸುತ್ತೇವೆ.

ಅರ್ಪಣೆ

ಊರಿನಲ್ಲಿ ಮಾರಿ ಹಬ್ಬದ ಸಂಭ್ರಮ ಕೇರಿಕೇರಿಗಳಲ್ಲಿ ಗದ್ದಲವೋ ಗದ್ದಲ. ಇಬ್ಬರು ಮೂವರು ತಮಟೆಗಳನ್ನು ಬಾರಿಸುತ್ತ ಕುಣಿಯುತ್ತ ಕೇಕೆ ಹಾಕಿ ಆರ್ಭಟ ಮಾಡುತ್ತ ಬೀದಿಯಲ್ಲಿ ಬರುತ್ತಿದಾರೆ. ಅವರ ಹಿಂದೆ ಮರದ ಗೆ ಜನಗಳು ಒಂದು ಕುರಿಯನ್ನು ಹಿಡಿದು ಕೊರಳಿನ ಸುತ್ತ ಬೇವಿನ ಸೊಪ್ಪು ಕಟ್ಟಿ ನಡೆಸುತ್ತ ಗುಂಪು ಗುಂಪಾಗಿ ಬರುತ್ತಿದಾರೆ. ಅವರ ಹಿಂದೆ ಹುಡುಗರೂ ... ಕೋಲಾಹಲ ಮಾಡುತ್ತ ಬರುತ್ತಿದಾರೆ. ಇದನ್ನು ಕೇಳಿ ಕೊಂಡಿದ್ದ ಉಪಾಧ್ಯಾಯರು ತಮ್ಮ ಮಗನಿಗೆ ಮಗನೇ ಅದೇನು ... ಬೀದಿಯಲ್ಲಿ ಗದ್ದಲ ಎಂದು ಕೇಳಿದರು. ಹುಡುಗನು ಆಚೆ ಹೋಗಿ ನೋಡಿ ... ಬಹು ಜನಗಳ ಗುಂಪು ಒಂದು ಕುರಿಯನ್ನು ಹಿಡಿದುಕೊಂಡು ಬರುತ್ತಿದಾರೆ. ಇದೇನು ಮರವಾಗಿದೆಯೋ ತಿಳಿಯಲಿಲ್ಲ ಎಂದನು.

ತಂದೆ ಮಗನೇ, ಹೌದು, ಮಗನೇ, ಇದು ಮಾರಿಹಬ್ಬ ... ಆ ಕುರಿಯನ್ನು ಕೊಂದು ಬಲಿಯರ್ಪಿಸುವುದಕ್ಕೆ ಅದನ್ನು ತೆಗೆದುಕೊಂಡು ಹೋಗುತ್ತಿದಾರೆ.

ಮಗ ಅಪ್ಪಾ ಈ ಹಬ್ಬಗಳಲ್ಲಿ ಇದೊಂದು ಪದ್ಧತಿ ದೇವರಿಗೆ ಬಲಿ ... ಅದನ್ನು ಸ್ವೀಕರಿಸುತ್ತಾನೋ?

ತಂದೆ ಅವರ ಭಾವನೆ ಇದೆ. ದೇವತೆಯು ತಮ್ಮ ಮೇಲೆ ಕೋಪವಾಗಿದ್ದರೆ ಅದನ್ನು ತೃಪ್ತಿಪಡಿಸುವದಕ್ಕೆ ಈ ಪಶುವನ್ನು ಅವಳಿಗೆ ಬಲಿ ಅರ್ಪಿಸಬೇಕು. ಇಲ್ಲದಿದ್ದರೆ ಅವಳು ಮಗೆ ಅನೇಕ ರೋಗ ರುಜಿನಗಳನ್ನೂ ... ಕೊಡುವಳೆಂದು ಅವರು ಹೆದರುತ್ತಾರೆ.

ಮಗ ಅಪ್ಪಾ ಇದಕ್ಕೆ ಯಾವ ಆಧಾರವಿದೆ? ದೇವರಿಗೆ ಬಲಿ ಅರ್ಪಿಸ ಬೇಕೆ ಎನ್ನುವುದೋ?

ತಂದೆ—ನಾವು ಯಾವ ಜನಾಂಗದ ಮತಗ್ರಂಥಗಳನ್ನೂ ವಾಡಿಕೆಗಳನ್ನೂ ನೋಡಿದರೂ ಅವರು ದೇವರೊಬ್ಬನು ಜನಾಗಿ ಇದ್ದಾನೆ, ಆತನು ತಮ್ಮ ಅಪರಾಧಗಳ ನಿಮಿತ್ತ ಕೋಪವುಳ್ಳವನಾಗಿದ್ದಾನೆ, ಆದದರಿಂದ ಆತನಿಗೆ ಯಾವದಾದರೂ ಒಂದು ವಿಧದಿಂದ ತೃಪ್ತಿಪಡಿಸಿ ಆತನ ದಂಡನೆಗೆ ಪಾತ್ರರಾಗಬೇಕಾದ ... ತಪ್ಪಿಸಿಕೊಂಡರೇ ಸು ಕರ್ತವ್ಯವೆಂದು ... ಜನಗಳ ... ಪೂರ್ವದ ಆಚಾರದ ... ಭ ...

ಮಗ ಲೋಕದಲ್ಲೆಲ್ಲಾ ಹಬ್ಬಿರುವ ಈ ವಾಡಿಕೆಯನ್ನು ನೋಡಿದರೆ ಇದರೊಳಗೆ ಏನೋ ಸತ್ಯವಿರಬೇಕೆಂದು ತೋರುತ್ತೆ. ಈ ವಿಷಯ ... ಅಭಿಪ್ರಾಯವನ್ನು ತಾರತಮ್ಯವಾಗಿ ಹೇಳಿದರೆ ಸಮಾಧಾನವಾದೀತು.

ತಂದೆ—ದೇವರಿಗೆ ಬಲಿಯರ್ಪಿಸಬೇಕೆಂಬ ಯೋಚನೆಯು ಜನರಲ್ಲಿ ಎರಡು ಕಾರಣಗಳಿಂದ ಅಂಕುರಿಸಿದ ಹಾಗೆ ತೋರುತ್ತೆ. (೧) ದೇವರು ನಮ್ಮನ್ನು ಸೃಷ್ಟಿಸಿ ಪರಾಮರಿಸುತ್ತಾನೆ. ನಾವು ಲೋಕದಲ್ಲಿ ಹುಟ್ಟಿ ಒಂದು ಸಂತೋಷವಾಗಿ ಬದುಕುತ್ತಿರುವದು ಆತನ ಉದಾರ ದಯೆಯಿಂದ. ನಾವು ಆತನ ಭೂಮಿಯಲ್ಲಿ ಜೀವಿಸಿ ನಡೆದಾಡುತ್ತಾ ಆತನ ಸಹಾಯದಿಂದ ಬೇಳೆಯನ್ನೂ ಕಾಳನ್ನೂ ಹೊಂದುತ್ತೇವೆ. ನಮ್ಮ ಆರೋಗ್ಯಕ್ಕೆ ಅತ್ಯವಶ್ಯಕವಾದ ಗಾಳಿ ಮಳೆಗಳನ್ನು ನಾವು ದುಡಿದು ಸಂಪಾದಿಸಲಾರೆವು, ಕ್ರಯಕ್ಕೆ ಕೊಂಡುಕೊಳ್ಳಲಾರೆವು. ಹೀಗಿರುವದರಿಂದ ಆತನ ಈ ಉಪಕಾರಗಳಿಗಾಗಿ ನಾವು ಕೃತಜ್ಞತೆಯನ್ನು ತೋರಿಸಬೇಕು. (೨) ಹೀಗೆ ನಾವು ಆತನಿಗೆ ಕೃತಜ್ಞತೆ ... ಬದಲಾಗಿ ಆತನ ಆಜ್ಞೆಗಳನ್ನು ಉಲ್ಲಂಘಿಸಿ ಅಪರಾಧಿಗಳಾಗಿ ... ಮಾಡಿರುವದರಿಂದ ಆತನು ನಮ್ಮ ಮೇಲೆ ಕೋಪವುಳ್ಳವನಾಗಿರುವದು ಸಹಜ. ಇದರಿಂದ ಆತನ ದಂಡನೆ ನಮ್ಮ ಮೇಲೆ ಬರದೇ ಇರಲಾರದು. ನಮ್ಮ ಅಪರಾಧವನ್ನು ಒಪ್ಪಿಕೊಂಡು ನಾವು ಅದಕ್ಕೆ ತಕ್ಕ ದಂಡನೆಯನ್ನು ಹೊಂದುವದಕ್ಕೆ ಬದ್ಧರಾಗಿದ್ದರೂ ದಯವಿಟ್ಟು ನಮ್ಮನ್ನು ದಂಡಿಸದೆ ನಾವು ಅರ್ಪಿಸುವ ಈ ಪಶುಗಳನ್ನೂ ಕಾಣಿಕೆಗಳನ್ನೂ ಸ್ವೀಕರಿಸೆಂದು ದೇವರನ್ನು ಬೇಡುವ ಸೂಚನೆಯಾಗಿ ಈ ಅರ್ಪಣೆಗಳನ್ನು ದೇವರಿಗೆ ಒಪ್ಪಿಸುತ್ತಾರೆ.

ಮಗ— ಹಾಗಾದರೆ ದೇವರಿಗೆ ನಾವು ಬಲಿ ಅರ್ಪಿಸುವದು ನ್ಯಾಯವಾಗಿಯೂ ಅಗತ್ಯವಾಗಿಯೂ ಇದೆ. ದೇವರು ಕುರಿ, ಕೋಳಿ ಕಾಣಿಕೆಗಳನ್ನು ಸ್ವೀಕರಿಸುತ್ತಾನೋ?

ತಂದೆ— ಅಂಥಾ ನಿರ್ದೋಷವಾದ ಮೂಗ ಜೀವಿಗಳನ್ನು ಕೊಂದು ಅವುಗಳ ರಕ್ತವನ್ನು ಸುರಿಸುವದು ದೇವರಿಗೆ ಪ್ರೀತ್ಯರ್ಥವಾಗಿದೆ ಎಂದು ಹೇಳುವದಕ್ಕಾಗುವದಿಲ್ಲ. ಆದರೆ ನಾವು ಆತನಿಗೆ ನಮ್ಮ ಕೃತಜ್ಞತೆ, ವಿಧೇಯತ್ವ, ಭಕ್ತಿ, ಪ್ರೀತಿಗಳನ್ನು ಮಿಂಡಿತವಾಗಿ ಅರ್ಪಿಸಬೇಕು. ನೀನು ಹೋದ ವರುಷ ಇದೇ ಕಾಲದಲ್ಲಿ ವಿಷಮಶೀತ ಜ್ವರದಿಂದ ಅಸ್ವಸ್ಥನಾಗಿ ನರಳುತ್ತಿದ್ದೆ. ಆಗ ಕೆಲವು ವೇಳೆ ನಿನಗೆ ಸ್ಮರಣೆಯೇ ಇರುತ್ತಿರಲಿಲ್ಲ. ಬದುಕುವೆ ಎಂಬ ನಂಬಿಕೆಯೂ ನಮಗೆ ಇಲ್ಲದೆ ಹೋಗಿತ್ತು. ಆಗ ನಿನ್ನನ್ನು ಆದರಿಸಿದವರು ಯಾರೆಂತ ನಿನಗೆ ಗ್ರಹಿಕೆ ಇದೆಯೋ? ನಿನ್ನ ತಾಯಿಯು ರಾತ್ರಿ ಹಗಲೂ ಸದಾ ನಿನ್ನ ಬಳಿಯಲ್ಲಿಯೇ ಇರುತ್ತಿದ್ದಳು. ನಿನಗೆ ಅನುಪಾನ ಪಥ್ಯಗಳನ್ನು ಮಾಡುವದು, ನಿನಗೆ ಆರೈಕೆ ಮಾಡುವದು, ಇದೇ ಆಕೆಯ ಕೆಲಸವಾಗಿದ್ದಿತು. ನಿನಗಾಗಿ ತನ್ನ ಸುಖವನ್ನು ವರ್ಜಿಸಿದಳು, ಆಹಾರ ನಿದ್ದೆಗಳನ್ನು ತೊರೆದಳು, ಔಷಧೋಪಚಾರಕ್ಕಾಗಿ ತಾನು

ಪಟ್ಟು ಸಂಪಾದಿಸಿದ ಆಸ್ತಿಯನ್ನು ವ್ಯಯಮಾಡಿದಳು ದೇವರು ಆಕೆಯ ಪ್ರಾರ್ಥನೆಯನ್ನು ಕೇಳಿ ನಿನ್ನ ರೋಗವನ್ನು ಪರಿಹರಿಸಿದನು ಆದರೇನು, ಪಾಪ ನಿದ್ರೆಗಳಿಲ್ಲದೆ ಕೃಶವಾಗಿದ್ದ ಆಕೆಯನ್ನು ನಿನಗೆ ಬಂದಿದ್ದ ರೋಗವೇ ತನು ಕಡೆಗೆ ಆದರಿಸಿ, ಆಕೆ ಪರಲೋಕಗತಳಾದಳು ನಿನ್ನ ಮೇಲೆ ಆಕೆಗಿದ್ದ ಪ್ರೀತಿಯು ಅನಿರ್ವಚನೀಯ ಬಣ್ಣಿಸುವದು ಯಾರಿಗೆ ತಾನೇ ಸಾಧ್ಯ, ತಾನು ಸಾಯ ಬೇಕಾದರೂ ನಿನ್ನನ್ನು ಉಳಿಸಿಕೊಳ್ಳಬೇಕೆಂತ ಬಹಳ ಶ್ರಮಪಟ್ಟಳು

ಮಗನು ಇದನ್ನು ಕೇಳಿ ಶೋಕಾಕುಲಿತನಾಗಿ ದಳದಳನೆ ಕಣ್ಣೀರು ಸುರಿಸುತ್ತಾ—ತಂದೆಯೇ, ಏನು ನನ್ನ ಉಪಕಾರ ಸ್ಮರಣೆಯನ್ನು ಇನ್ನಾಗ ತೋರಿಸಲಿ? ನನ್ನ ಪ್ರಿಯ ತಾಯಿಯೇ, ಯಾಕೆ ನನ್ನ ಮೇಲೆ ದುಃಖ, ಕಷ್ಟ, ಶ್ರಮವನ್ನು ಪಟ್ಟೆ? ನೀನು ಅತ್ತ ಹೋಗುವೇನು, ನಾನು ಸತ್ತು ಹೋದದ್ದೇನು, ನನ್ನ ಸುಖ ನನ್ನ ಸುಖ, ನನ್ನ ಮರಣ ನನ್ನ ಜೀವ ನಿನ್ನ ಪ್ರೀತಿಗೆ ವಶವಾಗಿ ನಾನು ಏನು ಅರ್ಪಿಸಲಿ? ನಾನು ಎಷ್ಟು ಬದುಕಿದ್ದರೆ ನಿನ್ನ ವಿಧೇಯನಾದ ಸೇವಕನಾಗಿ ನಿನ್ನ ಸೇವೆಯನ್ನು ಮಾಡುತ್ತಿರುವೆನು ಎಂದು ಹಲುಬಿದನು

ತಂದೆಯು ಕಣ್ಣುಗಳಲ್ಲಿ ತನ್ನ ಪ್ರಿಯ ಭಾರ್ಯೆಯ ನಿಮಿತ್ತ ಬಂದ ನೀರನ್ನು ಒರಸಿಕೊಳ್ಳುತ್ತಾ—ಮಗನೇ, ನಿನ್ನ ತಾಯಿಯ ಉಪಕಾರವನ್ನು ಸ್ಮರಿಸುತ್ತಾ, ಪರಲೋಕದಲ್ಲಿ ಸ್ವಾತಂತ್ರ್ಯಳಾಗಿರುವ ಆಕೆಯ ಮನಸ್ಸಿನಂತೆ ನಡೆಯುವದು ನ್ಯಾಯ ಆದರೆ ದೇವರ ಪ್ರೀತಿಯು ನಿನ್ನ ಮೇಲೆ ಇದಕ್ಕಿಂತಲೂ ಅಧಿಕವಾಗಿದ್ದೆ ನಮ್ಮ ತಂದೆಯಾದ ಆತನು ನಮ್ಮ ಕೃತಜ್ಞತೆ, ವಿಧೇಯತೆಗಳಿಗೆ ಸ್ವಾಮಿಯಾಗಿ ಅರ್ಹನಾಗಿರುವಾಗ ನಾವು ಆತನನ್ನು ನಮ್ಮ ಅವಿಧೇಯತೆ ಅಪರಾಧಗಳಿಂದ ನೋಯಿಸಿ ವ್ಯಸನಪಡಿಸಿದೇವೆ ಆದರೂ ಆತನು ತನ್ನ ಮಹಾ ಕೃಪೆಯಿಂದ ನಮ್ಮೊಳಗೆ ಬಂದು ಪಾಪದ ಅಪರಾಧದಿಂದಲೂ ಶಿಕ್ಷೆಯಿಂದಲೂ ನಮ್ಮನ್ನು ಬಿಡಿಸುವವನಾಗಿದ್ದಾನೆ ಇದೇ ಸುವಾರ್ತೆ ಪಾಪದಿಂದ ನಮಗೆ ಕಳೆದುಹೋದ ಆತನ ಮಕ್ಕಳ ಹಕ್ಕನ್ನೂ ಬಾಧ್ಯತೆಯನ್ನೂ ಪುನಹ ಸಂಪಾದಿಸಿಕೊಡುವದಕ್ಕೋಸ್ಕರವೂ ಪಾಪಪರಿಹಾರಕ್ಕೋಸ್ಕರವೂ ತಾನೇ ಮರಣವನ್ನು ಕೂಡ ಹೊಂದಿದನು ಇಂಥಾ ತಂದೆಗೆ ನಮ್ಮ ಸರ್ವಸ್ವವನ್ನೂ ನಮ್ಮನ್ನೂ ಸಹ ಅರ್ಪಿಸುವದು ನ್ಯಾಯವಲ್ಲವೇ

ಬಳದೇಶದ ವೃತ್ತಾಂತಗಳು

ಕಳೆದ ಮಂಗಳವಾರ ಸಾಯಂಕಾಲ ರಾಜಧಾನಿಯಲ್ಲಿ ಸ್ವಲ್ಪ ಮಳೆ ಆಗಿ ಬಿಸಿಲಿನ ಧಗೆಯನ್ನು ಕಡಮೆ ಮಾಡಿದೆ

* * *

ಬ್ರಿಟಿಷ್ ರೆಸಿಡೆಂಟರಾದ ಮೆ|| ಎಸ್ ಎಂ ಫ್ರೇಸರ್‌ರವರು ಕಳೆದ ವಾರ ಬೆಂಗಳೂರಿನಿಂದ ಮಲೆನಾಡು ಪ್ರಾಂತ್ಯ ಸಂಚಾರಕ್ಕೆ ಹೊರಟಿರುತ್ತಾರೆ

* * *

ಮೈಸೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಈ ತಿಂಗಳು ತಾ ೨೯ ರ ಗುರುವಾರ ೩೦,೦೦೦ ರೂ ಬೆಲೆ ತೂಗುವ ೪ ತುಂಡು ದಂತವನ್ನು ಹರಾಜುಹಾಕುತ್ತಾರೆ

* * *

ಇಪ್ಪತ್ತು ರೂಪಾಯಿಯ ಕರೆನ್ಸಿ ನೋಟುಗಳು ಹಳೆ ಸರ್ಕಲಿನವುಗಳಾಗಿದ್ದರೂ ವಟ್ಟ ಮುಂತಾದದ್ದೇನೂ ಇಲ್ಲದೆ ವರ್ಜಾಕರೂ ಸೇರಿಸುವದೂ ಕೊಟ್ಟ ಬಿಡಬಹುದೆಂದು ಕಂಟ್ರೋಲರವರು ತಿಳಿಸುತ್ತಾರೆ

* * *

ಹಾಸನದ ತಾಲ್ಲೂಕು ಕಂದಲಿಯಲ್ಲೂ, ಬೆಂಗಳೂರು ತಾಲ್ಲೂಕು ಗೊಟ್ಟಿಗೆರೆ ಮತ್ತು ಕೆಂಗೇರಿಗಳಲ್ಲೂ ಕಳೆದ ತಿಂಗಳಲ್ಲಿ ಮೂರು ಪರಸ್ಪರ ಸಹಾಯಕ ಸಂಘಗಳು ಸ್ಥಾಪಿಸಲ್ಪಟ್ಟು, ಸರ್ಕಾರದಲ್ಲಿ ರಿಜಿಸ್ಟರಾಗಿರುತ್ತವೆ

* * *

ಬೆಂಗಳೂರು ದಂಡಿನಲ್ಲಿ ನಾಯಿ ಸಾಕುವವರು ಪ್ರತಿ ನಾಯಿಗೂ ಮ್ಯುನಿಸಿಪಾಲಿಟಿಗೆ ವರುಷಕ್ಕೆ ೩ ರು ರೂ ಪಾಯಿ ತೆರಿಗೆ ಕೊಡುತ್ತಿದ್ದರು ಇದನ್ನು ಮೂರು ರೂಪಾಯಿಗೆ ಹೆಚ್ಚಿಸಬೇಕೆಂದು ಕಳೆದ ವಾರ ಮ್ಯುನಿಸಿಪಲ್ ಬೋರ್ಡಿನವರು ತೀರ್ಮಾನಮಾಡಿದ್ದಾರೆ

* * *

ಮೈಸೂರು ಪಟ್ಟಣದಲ್ಲಿ ಸ್ಕೂಲುಗಳಿಗೆ ಬೇಸಿಗೆ ರಜಾ ಮೇ ತಿಂಗಳು ೫ ನೇ ತಾರೀಖಿನಿಂದ ಪ್ರಾರಂಭಿಸುವುದೆಂದೂ, ಜೂನ್ ತಿಂಗಳಲ್ಲಿ ಎರಡು ವಾರ ರಜಾ ಕೊಡಲ್ಪಡುವುದೆಂದೂ, ಆ ತಾರೀಖಿನ್ನು ಮುಂದೆ ಪ್ರಕಟಿಸಲಾಗುವುದೆಂದೂ ಇನ್‌ಸ್ಪೆಕ್ಟರ್ ಜನರಲ್‌ರವರು ಹುಕುಂ ಕೊಟ್ಟಿದ್ದಾರೆ

* * *

ಸಂಸ್ಥಾನದ ಕಂಟ್ರೋಲರವರಿಂದ ಮೆ| ಚಕ್ರವರ್ತಿಯವರ ತಮ್ಮನು ವಿದ್ಯಾವಂತನಾಗಿ ೬ ಗಂ ಎದಲ್ಲಿ ಸರ್ಕಾರಿ ನೌಕರಿ ಎಲ್ಲಿದ್ದನು ಈತನು ತುಗ್ಗಿ ನಡು ರೋಗದ ಅಟ್ಯಾಕ್ ವ್ಯತಿಸಟ್ಟಿದ್ದರಿಂದ ಮೆ|| ಚಕ್ರವರ್ತಿಯವರು ರಜಾ ಪಡೆದು ಕಲ್ಕತ್ತೆಗೆ ಹೋಗಿರುತ್ತಾರೆಂದು ತಿಳಿದುಬಂದಿದೆ

* * *

ಶ್ರೀಮನ್ ಮಹಾರಾಜರವರಿಗಾಗಿ ರಾಜಧಾನಿಯ ಅಷ್ಟರ ರೆಸಿಡೆನ್ಸಿ ಬಂಗಲೆಯನ್ನು ಬಿಡಿಸಿಕೊಂಡು ಕಾಮಗಾರಿ ಮಾಡಿಸುತ್ತಿದ್ದಾರೆ ಹಿಂದಿನ ವಾರ ಅಲ್ಲಿ ಒಂದು ತೊಲೆಯು ಆಕಸ್ಮಾತ್ತಾಗಿ ಬಿದ್ದು ಮೂರು ಮಂದಿಗೆ ಜಖಂ ಆಯಿತೆಂದೂ, ಇವರು ಆಸ್ಪತ್ರೆಗೆ ಸಾಗಿಸಲ್ಪಟ್ಟರೆಂದೂ ಕೇಳಿದೆವು

* * *

ಕಳೆದ ವರುಷ ರಾಜಧಾನಿಯಲ್ಲಿ ನಡೆದ ನವರಾತ್ರಿ ಪ್ರದರ್ಶನಗಳಲ್ಲಿ ವಸ್ತುಗಳಿಗೆ ೧೪ ಚಿನ್ನದ, ೬೦ ಬೆಳ್ಳಿಯ, ೭೮ ಕಂಚಿನ ಮೆಡಲುಗಳನ್ನು ಕೊಟ್ಟಿದ್ದಾರೆ ಇದಲ್ಲದೆ ೧,೫೮೮ ರೂಪಾಯಿ ಬಹುಮಾನಗಳನ್ನೂ ಹಂಚಿರುವರು ಕಸರತ್ತುಗಳಲ್ಲಿ ಗದ್ದೆಯವರಿಗೆ ೧೩೪ ರೂಪಾಯಿ ಇನಾಮು ದೊರಕಿತು

* * *

ಬಾಬಾ ಭಾರತೀ ಸ್ವಾಮಿಗಳು ಅಮೇರಿಕಕ್ಕೆ ಸೇರಿದ ನ್ಯಾಕ್ ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಒಂದು ಕೃಷ್ಣಸ್ವಾಮಿ ಗುಡಿಯನ್ನು ಕಟ್ಟಿಸಬೇಕೆಂದು ಚಂದಾ ಕೊಡುತ್ತಿದ್ದಾರೆ ಈ ಫಂಡಿಗೆ ಮಾಜಿ ದಿವಾನ್ ಸರ್ ಪಿ ಎನ್ ಕೃಷ್ಣಮೂರ್ತಿಯವರೂ, ರಾವ್ ಬಹದೂರ್ ಎ ವ್ಯಂಗಂಡಯ್ಯ ಮೊದಲಿಯಾರೂ ತಲಾ ೧೦೦ ರೂ ಯಂತೆ ಚಂದಾ ಕಳುಹಿಸಿರುವರು

* * *

ಕಳೆದ ವಾರ ರಾಜಧಾನಿಯ ಇಟ್ಟಿಗೆಗೂಡಿನಲ್ಲಿ ನಾರಾಯಣಸ್ವಾಮಿ ಸಂಬಾತನ ಮನೆಯೊಳಗೆ ಸುಮಾರು ೫೦೦ ರೂಪಾಯಿನ ನಗನಾಣ್ಯಗಳು ಕಳುವಾದವು ಪೋಲೀಸಿನವರು ಪರಮಲಿಂಗಂ, ಸುಬ್ಬರಾಯ, ಅಗಸರ ಕೆಂಪ, ಓಲೇಕಾರ ತಾಸ ಎಂಬೀ ನಾಲ್ಕು ಮಂದಿಯನ್ನು ದಸ್ತಗಿರಿಮಾಡಿರುತ್ತಾರೆಂದೂ ಇವರ ಮೂಲಕ ಕೆಲವು ಕಳುವಿನ ಮಾಲುಗಳು ದೊರಕಿದವೆಂದೂ ಕೇಳುತ್ತೇವೆ

* * *

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಲೋಕಲ್ ಪಂಕ್ತಿಗಳ ಕಮಿಟಿಯವರು ಕೆಲವು ದಿನಗಳ ಹಿಂದೆ ಬೆಂಗಳೂರಿನಲ್ಲಿ ಸೇರಿ, ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿರುವ ಗವರ್ನ್‌ಮೆಂಟ್ ಹೈಸ್ಕೂಲ್ ತರಗತಿಗಳಲ್ಲಿ ಪ್ರತಿ ಒಬ್ಬ ವಿದ್ಯಾರ್ಥಿಯೂ ಅಗತ್ಯವಾಗಿ ಸಂಸ್ಕೃತವನ್ನು ಕಲಿತುಕೊಳ್ಳಬೇಕೆಂಬದನ್ನು ವಿಧಿಸಿದರೆಂತಲೂ, ಇದು ಕೂಡಲೇ ಜಾರಿಗೆ ಬರುತ್ತದೆಂತಲೂ ತಿಳಿದು ಬಂದಿದೆ

* * *

ಶ್ರೀ ಶಿವಗಂಗಾ ಸ್ವಾಮಿಗಳು ಕಳೆದ ೬ ನೇ ತಾ ಬುಧವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿದಾಗ ಗೌರವಾರ್ಥವಾದ ೧೧ ತೋಪುಗಳು ಹಾರಿಸಲ್ಪಟ್ಟವು. ಮರುದಿನ ಅರಮನೇ ಕಟ್ಟೆಯ ಪಾದಪೂಜೆಯೂ ಸಮಾರಾಧನೆಯೂ ಜರೆದವು ಬಿಕ್ರವಾರ ಸಾಯಂಕಾಲ ಶ್ರೀ ಸ್ವಾಮಿಗಳು ಕರ್ಮಾಚಾರವನ್ನು ಕುರಿತು ಉಪನ್ಯಾಸಮಾಡಿದರು ಶ್ರೀಮನ್ ಮಹಾರಾಜರವರು ಅರಸುಗಳ ಸಮೇತ ದಯಮಾಡಿಸಿ ಉಪನ್ಯಾಸವನ್ನು ಸಾವಧಾನದಿಂದ ಕೇಳಿ, ಮಂಗಳಾರತಿಯಾದ ಮೇಲೆ ಸ್ವಾಮಿಗಳವರಿಂದ ಆಶೀರ್ವಚನಗಳನ್ನು ಹೊಂದಿ ವಾಪಸು ಬಂದರು ಆಯಾ ಜಾತಿ ಮತಗಳ ಜನರು ತಮತಮಗೆ ವಿಧಿಸಲ್ಪಟ್ಟ ಆಚರಣೆಯಲ್ಲಿ ಬಂದಿರುವ ಭಕ್ತಿಮಾರ್ಗ ಆಚಾರ ವಿಚಾರಗಳನ್ನು ಬಿಡದೆ ಅನುವರ್ತಿಸುತ್ತಾ ಬಂದಲ್ಲಿ ಕೃತಕೃತ್ಯರಾಗುತ್ತಾರೆಂದೂ, ದಕ್ಷಿಣ ದೇಶವು ಕರ್ಮ ಭೂಮಿಯಾಗಿರೋಣದರಿಂದ ಯಾರೂ ಸಮುದ್ರಯಾನ ಮುಂತಾದ ನಿಷಿದ್ಧ ಕಾರ್ಯಗಳನ್ನು ಮಾಡದೆ ಕರ್ಮಾಚರಣೆಯಲ್ಲಿಯೇ ನಿರತರಾಗಿರಬೇಕೆಂದೂ ಸ್ವಾಮಿಗಳವರು ವೇದ, ಗೀತೆ, ಭಾಷ್ಯಾದಿಗಳಿಂದ ಉದಾಹರಣೆಗಳನ್ನು ಕೊಟ್ಟು ಉಪನ್ಯಾಸಮಾಡಿದರು ಶನಿವಾರ ಸಾಯಂಕಾಲ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಟ್ಟು, ವೇದವಿದ್ಯಾ ಪ್ರೋತ್ಸಾಹಕವಾದ ಉಪನ್ಯಾಸವನ್ನು ಮಾಡಿದರು. ಇಲ್ಲಿನ ಕೆಲವು ದೊಡ್ಡ ಮನುಷ್ಯರು ಅವರನ್ನು ಮನೆಗೆ ಕರೆದುಕೊಂಡು ಹೋಗಿ ಪಾದಪೂಜೆ ಮಾಡಿದರು ಸ್ವಾಮಿಗಳು ಇಲ್ಲಿಂದ ಈ ದಿನ ತೆರಳುವವರಾಗಿದ್ದಾರೆಂದು ವರ್ತಮಾನವಿದೆ

ಮೈಸೂರು ಗೆಜೆಟ್ ಸಂಗ್ರಹ.

ದೇವನಹಳ್ಳಿ ತಾಲ್ಲೂಕು ಬಾಗಲೂರು ಯೂನಿಯನ್‌ಗೆ ಮೆ|| ರಾಮಯ್ಯನವರನ್ನೂ, ಅದೇ ತಾಲ್ಲೂಕು ಬೋರ್ಡಿಗೆ ಮೆ|| ಹುಲಿಯಪ್ಪನವರ ಬಾಚಪ್ಪನವರನ್ನೂ, ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಯೂನಿಯನ್‌ಗೆ ಸೋಲೂರು ಹೋಬಳಿ ಶೇಕದಾರರನ್ನೂ ಮೆ|| ನರಸಪ್ಪನವರನ್ನೂ, ತಿಪ್ಟೂರು ಮ್ಯುನಿಸಿಪಲ್ ಬೋರ್ಡಿಗೆ ವರ್ತಕ ಮೆ|| ಬಸವಣ್ಣನವರನ್ನೂ ಮೆಂಬರಾಗಿ ನೇಮಕಮಾಡಿದೆ.

ತೀರ್ಥಹಳ್ಳಿ ತಾಲ್ಲೂಕು ಬೋರ್ಡಿನ ಮೆಂಬರುಗಳು ಚುನಾವಣೆ ಮಾಡಿ ಮೆ|| ಹುಂಚದಕಟ್ಟೆ ರಾಮರಾಯರನ್ನು ತಮ್ಮ ವೈಸ್ ಪ್ರೆಸಿಡೆಂಟರಾಗಿ ನೇಮಿಸಿಕೊಂಡಿದ್ದಾರೆ

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಡಿವಿಜನ್ ಎಗ್ಜಿಕ್ಯುಟಿವ್ ಇಂಜನಿಯರ್ ಮೆ|| ಜೆ ಇ ಎ ಡಿಕೊಸ್ಟಾರವರು ರಜದಿಂದ ವಾಪಸು ಬಂದು ಮಾರ್ಚಿ ತಾ ೧೧ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ

ಯಡತೊರೆ ತಾಲ್ಲೂಕು ಅಮಲ್ದಾರ್ ಮೆ|| ಎನ್ ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಪೊಲೀಸ್ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್ ಮೆ|| ಆರ್ ಎ ನರಸಿಂಹಯ್ಯಂಗಾರ್‌ರವರು ಯಡತೊರೆ ತಾಲ್ಲೂಕು ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಮೈಸೂರು ಗವರ್ನ್‌ಮೆಂಟ್ ಕಂಟ್ರೋಲರವರಾದ ಮೆ|| ಪಿ ಎಸ್ ಚಕ್ರವರ್ತಿಯವರಿಗೆ ಏಪ್ರಿಲ್ ತಾ ೪ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡುವ ತನಕ ಮೆ|| ಎಂ ಎನ್ ಕೃಷ್ಣರಾಯರನ್ನು ಕಂಟ್ರೋಲರಾಗಿ ಬದಲಿ ನೇಮಕಮಾಡಿದೆ

ಮೆ|| ಎಂ ಕಾಂತರಾಜೇ ಅರಸಿನವರು ರಜದ ಮೇಲಿದ್ದಾಗ ಮೆ|| ಎಂ ಪಂಗಯ್ಯಚೆಟ್ಟಿಯವರನ್ನು ಕಳೆದ ಆಗಸ್ಟ್ ತಾ ೧೬ ರಿಂದ ಅಕ್ಟೋಬರ್ ತಾ ೨೦ ರ ವರೆಗೆ ೩ ರಿಂದ ೨ ನೇ ಕ್ಲಾಸ್ ಡೆಪ್ಯುಟಿ ಕಮಿಷನರಾಗಿ ಬಡ್ತಿಮಾಡಿದೆ

ಕೋಲಾರದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ|| ಎ ಕೆ ಸಯ್ಯದ್ ತಾಜ್ ಪಿ ರ್ಜ ರವರಿಗೆ ಮಾರ್ಚಿ ತಾ ೨೪ ರಿಂದ ಒಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆ ಸಮಯದಲ್ಲಿ ಖಜಾನಾ ಅ|| ಕಮಿಷನರು ಎಕ್ಸೈಸ್ ಆಫೀಸ್ ಛಾರ್ಜನ್ನೂ ವಹಿಸಿದ್ದರು

ಅ|| ಕೆಮಿಸ್ಟ್ ಮೆ|| ಎಚ್ ವಿ ಕೃಷ್ಣಯ್ಯನವರಿಗೆ ಮಾರ್ಚಿ ತಾ ೩೧ ರಿಂದ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮೆ|| ವ್ಯ ಸೀತಾರಾಮಯ್ಯನವರಿಗೆ ಮಾರ್ಚಿ ತಾ ೧೫ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರೆವಿನ್ಯೂ ಸರ್ವೇ ಅ|| ಸೂಪರಿಂಟೆಂಡೆಂಟ್ ಮೆ|| ಡಿ ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅ|| ಕಮಿಷನರ್ ಮೆ|| ಟಿ ಧರ್ಮರಾಜ ಚೆಟ್ಟಿಯವರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು

ಬೆಂಗಳೂರು ಡಿಸ್ಟ್ರಿಕ್ಟ್ ಅ|| ಕಮಿಷನರ್ ಮೆ|| ಎನ್ ಮಾಧವರಾಯರಿಗೆ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ವಹಿಸಿದೆ

ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಚಿತ್ರದುರ್ಗದ ತಾಲ್ಲೂಕ್ ಅಮಲ್ದಾರ್ ಮೆ|| ಸಿ ವಿ ಕೃಷ್ಣಸ್ವಾಮಿ ರಾಯರನ್ನು ಕಡೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ನೇಮಕಮಾಡಿದೆ

ಮತ್ತೊಂದು ಹುಕುಂ ಕೊಡುವ ತನಕ ತುರುವೇಕೆರೆ ಡೆಪ್ಯುಟಿ ಅಮಲ್ದಾರ್ ಮೆ|| ಟಿ ಸ್ವಾಮಿನಾಥ ಶಾಸ್ತ್ರಿಗಳನ್ನು ತಿಪ್ಟೂರ್ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ಯಳಂದೂರು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ|| ಎಸ್ ಸುಂದರರಾಜಯ್ಯಂಗಾರ್‌ರವರು ತಂ ಮೇಕೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ|| ಕಂಟ್ರೋಲರ್ ಮೆ|| ಟಿ ಲಕ್ಷ್ಮೀನರಸಿಂಹರಾಯರು ಗವರ್ನ್‌ಮೆಂಟಿನ ಅ|| ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿದ್ದಾರೆ

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳನ್ನು ನೇಮಕಮಾಡಿದೆ —ಮೆ|| ಎಂ ವೆಂಕಟಸುಬ್ಬಯ್ಯನವರು ೧ ನೇ ಗ್ರೇಡ್ ಫಾರೆಸ್ಟ್ ಅ|| ಕನ್ಸರ್ವೇಟರಾಗಿರತಕ್ಕದ್ದು, ಮೆ|| ಎಂ ವೆಂಕಟನರಸಪ್ಪನವರು ಜೂಲೈ ತಾ ೧೫ ರಿಂದ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರಾಗಿರತಕ್ಕದ್ದು

ಡೆಪ್ಯುಟಿ ಜನರಲ್ ಸೆಕ್ರೆಟರಿ ಆಫೀಸಿನ ಕ್ಲಾರ್ಕ್ ಮೆ|| ಬಿ ವೆಂಕಟರಾಯರನ್ನು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗದ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ವೈದ್ಯ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಿದೆ —(೧) ಟೌನ್ ಸಬ್ ಅ|| ಸರ್ಜನ್ ಮೆ|| ಬಿ ಕೃಷ್ಣರಾಯರನ್ನು ಮುಡಿಗೆರೆಯಿಂದ ನಂಜನಗೂಡಿಗೆ, (೨) ಮೆ|| ಕೆ ಕುರುವಿಲ್ಲೆಯವರನ್ನು ನಂಜನಗೂಡಿನಿಂದ ಮುಡಿಗೆರೆಗೆ

ಪ್ರೊ|| ಅ|| ಕಮಿಷನರ್ ಮೆ|| ಎನ್ ಮಾಧವರಾಯರನ್ನು ೫ ನೇ ಕ್ಲಾಸ್ ಅ|| ಕಮಿಷನರಾಗಿ ಖಾಯಂ ಮಾಡಿದೆ.

ಅ|| ಕಮಿಷನರ್ ಮೆ|| ಜಿ ಹನುಮಂತರಾಯರನ್ನು ಜನವರಿ ತಾ ೪ ರಿಂದ ೫ ರಿಂದ ೪ ನೇ ಕ್ಲಾಸಿಗೆ ಬಡ್ತಿಮಾಡಿದೆ.

ಮೈಸೂರಿನಲ್ಲಿ ಇನಾಕ್ಯುಲೇಷನ್ ಡ್ಯೂಟಿಗಾಗಿ ನೇಮಿಸಲ್ಪಟ್ಟಿದ್ದ ಸಬ್ ಅ|| ಸರ್ಜನ್ ಮೆ|| ಕೆ. ಅನಂತರಾಮ ಐಯಂಗಾರ್ಯರನ್ನು ಚನ್ನರಾಯಪಟ್ಟಣದ ತಾಲ್ಲೂಕು ಶ್ರವಣಬೆಳಗುಳಕ್ಕೆ ಸ್ಯಾನಿಟರಿ ಆಫೀಸರಾಗಿ ಮಾರ್ಚಿ ತಾ ೧೪ ರಿಂದ ವರ್ಗಮಾಡಿದೆ.

ಅ|| ಕಮಿಷನರ್ ಮೆ|| ಬಿ ಶ್ರೀನಿವಾಸ ಐಯಂಗಾರ್ಯರನ್ನು ಫೆಬ್ರವರಿ ತಾ ೧ ರಿಂದ ೫ ರಿಂದ ೪ ನೇ ಕ್ಲಾಸಿಗೆ ಬಡ್ತಿಮಾಡಿದೆ.

ತುಮಕೂರ್ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ಡೆಪ್ಯುಟಿ ಕಮಿಷನರ್ ಮೆ|| ಕೆ. ಎಸ್ ದೊರಸ್ವಾಮಿ ಐಯರವರು ಮಾರ್ಚಿ ತಾ ೨೮ ರಲ್ಲಿ ಕೊಟ್ಟಿದ್ದನ್ನು ಮೆ| ಕೆ. ಚಾಂಡಿಯವರು ವಹಿಸಿಕೊಂಡಿದ್ದಾರೆ

ಬೆಂಗಳೂರು ಡಿಸ್ಟ್ರಿಕ್ಟ್ ಅ|| ಕಮಿಷನರ್ ಮೆ|| ಟಿ ರಾಯಲು ಚೆಟ್ಟಿಯವರನ್ನು ಮತ್ತೊಂದು ಹುಕುಂ ಕೊಡಲ್ಪಡುವ ತನಕ ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ

ಎಕ್ಸೈಸ್ ಕಮಿಷನರ್ ಮುಂತಾದ ಕೆಲಸಗಳ ಛಾರ್ಜನ್ನು ಮೆ|| ಎಚ್ ಎಚ್ ಸ್ಪಾರ್ಕ್ಸ್ ರವರು ಮಾರ್ಚಿ ತಾ. ೨೩ ರಲ್ಲಿ ಕೊಟ್ಟಿದ್ದನ್ನು ಮೆ|| ಎಂ ಸಿ ರಾಮಣರಾಯರು ವಹಿಸಿಕೊಂಡಿದ್ದಾರೆ

ಚಿಂತಾಮಣಿ ತಾಲ್ಲೂಕ್ ಶಿರಸ್ತೆದಾರ್ ಮೆ|| ಎಂ ಎಸ್ ನಾರಾಯಣರಾಯರು ಕಳೆದ ಅಕ್ಟೋಬರ್ ತಾ ೧೮ ರಿಂದ ಜನವರಿ ತಾ ೯ ರ ವರೆಗೆ ಆ ತಾಲ್ಲೂಕಿನ ಅಮಲ್ದಾರರಾಗಿ ಬದಲಿ ಕೆಲಸ ನೋಡಿರುತ್ತಾರೆ

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದಲ್ಲಿ ಸಾರಾಘಾಟ್ ಎಂಬ ರೈಲ್ವೆ ಸ್ಟೇಷನ್ ಬಳಿ ಬೆಂಕಿ ಬಿದ್ದು ಕಳೆದ ವಾರ ರೈಲ್ ಕಟ್ಟಡಗಳೂ ಅನೇಕ ಜೋಪಡಿಗಳೂ ಸುಟ್ಟುಹೋದವು.

* * *

ಕಲ್ಕತ್ತಾ ಪಟ್ಟಣದ ಅಂತರಂಗಪೊಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟರಾದ ರಾಯಬಹದೂರ್ ಕುಮಾರ ದತ್ತರವರು ಬಹಳ ಪ್ರಶಸ್ತವಾದ ನೌಕರಿಯನ್ನು ಮಾಡಿದ್ದರಿಂದ ಗವರ್ನ್‌ಮೆಂಟಿನವರು ಮೆಚ್ಚಿ ಅವರಿಗೆ ಒಂದು ಸನ್ನದನ್ನೂ ಬಿರುದಿನ ಕತ್ತಿಯನ್ನೂ ದಯಪಾಲಿಸಿರುತ್ತಾರೆ.

* * *

ರೈಲ್‌ಗಾಡಿಗಳೊಳಗೆ ಪ್ರಯಾಣಿಕರು ಅನೇಕ ದುಷ್ಟವೂ ಲಜ್ಜಾಸ್ಪದವೂ ರಾಜದ್ರೋಹಕರವೂ ಆದ ಮಾತುಗಳನ್ನು ಹಲಗೆಗಳ ಮೇಲೆ ಬರೆಯುತ್ತಾರೆಂದೂ, ರೈಲ್ವೆ ಅಧಿಕಾರಿಗಳು ನಿಗಾ ಇಟ್ಟು ಅಂಥವರನ್ನು ಹಿಡಿದು ಶಿಕ್ಷಿಸಿ ಈ ದುರಭ್ಯಾಸವನ್ನು ತಪ್ಪಿಸುವದು ಅವಶ್ಯಕವೆಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ ಪ್ರಯಾಣಿಕರು ಈ ಭಾಗದಲ್ಲಿ ಎಚ್ಚರಿಕೆಯಾಗಿರುವದು ಉತ್ತಮ

* * *

ಮೆ|| ಎಫ್ ಇಲಿಯಟ್ ಎಂಬವರು ಕಾಲವಾದರೆಂದು ವರ್ತಮಾನ ಬಂದಿದೆ ಇವರು ಈಗಿನ ಬರೋಡಾ ಮಹಾರಾಜರವರ ವಿದ್ಯಾಗುರುವಾಗಿ ಅವರನ್ನು ಶಿಕ್ಷಿತರನ್ನಾಗಿ ಮಾಡಿ ಇಪ್ಪತ್ತು ವರುಷ ಅವರ ಬಳಿ ನೌಕರಿ ಮಾಡುತ್ತಿದ್ದರು ಇದಲ್ಲದೆ ಇವರು ಈಗಿನ ವೈಸ್‌ರಾಯರವರ ದಾಯಾದ್ಯರಾಗಿದ್ದರು ಇವರನ್ನು ಬರೋಡಾ ಸಂಸ್ಥಾನದಲ್ಲಿ ಮಹಾರಾಜರವರೂ ಪ್ರಜೆಗಳೂ ಸ್ಮರಿಸಿಕೊಳ್ಳುತ್ತಾರೆ.

* * *

ಬೊಂಬಾಯಿ ಪಟ್ಟಣದಲ್ಲಿ ಕಳೆದ ವಾರ ನಡೆದ ಉಪಾಧ್ಯಾಯ ಸಂಘದಲ್ಲಿ ಗವರ್ನರವರು ಅಗ್ರಾಸನವನ್ನು ವಹಿಸಿ ಬಹು ಶ್ರೇಷ್ಠವಾದ ಉಪನ್ಯಾಸವನ್ನು ಮಾಡಿ, ಸರ್ಕಾರದವರು ಮತಭಕ್ತಿಯನ್ನು ತಮ್ಮ ವಿದ್ಯಾಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವಂತೆ ಏರ್ಪಾಡುಮಾಡುವುದು ಸಾಧ್ಯವಲ್ಲವೆಂದೂ, ದೇಶೀಯ ವಿದ್ಯಾವಂತರೂ ಉಪಾಧ್ಯಾಯರೂ ಈ ಭಾಗದಲ್ಲಿ ಸಾಹಸಪಟ್ಟು ತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕಾಗಿದೆ ಎಂದೂ ಅಪ್ಪಣೆ ಕೊಡಿಸಿದರು.

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಲಾಹೋರ್ ಪಟ್ಟಣದಲ್ಲಿ ಗಿರಿಧರ ಲಾಲ ನೆಂಬವನು ಜನರಿಗೆ ನೌಕರಿಗಳನ್ನು ದೊರಕಿಸಿ ಕೊಡುವುದಕ್ಕಾಗಿ ಒಂದು ಕಂಪನಿಯನ್ನು ಏರ್ಪಡಿಸಿ ಅನೇಕರನ್ನು ಮೋಸ ಮಾಡಿದನು ಇವನಿಗೆ ಮ್ಯಾಜಿಸ್ಟ್ರೇಟರು ಆರು ವರುಷ ಕಠಿಣ ಸಜವನ್ನೂ ೧೫,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು ಆವನು ಇದರ ಮೇಲೆ ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು ಜಡ್ಜಿಗಳು ತನಿಖೆ ಮಾಡಿ ಸಜವನ್ನು ಮೂರು ವರುಷಕ್ಕೆ ಇಳಿಸಿದರೇ ವಿನಾ ಜುಲ್ಮಾನೆಯನ್ನು ಕಡಮೆ ಮಾಡಲಿಲ್ಲ

* * *

ಗ್ವಾಲಿಯರ್ ಪಟ್ಟಣದಲ್ಲಿ ಮಿಸೆಸ್ ಬೆಸೆಂಟ್ ಎಂಬಾಕೆಯು ಕಳೆದ ವಾರ ಉಪನ್ಯಾಸ ಮಾಡಿದಾಗ ಸಿಂಧಿಯಾ ಮಹಾರಾಜರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಬಳಿಕ ಮಹಾರಾಜರವರು ಅಲ್ಲಿನ ವಿದ್ಯಾಶಾಲೆಯಲ್ಲಿ ಬಹುಮಾನಗಳನ್ನು ಬಾಲಕರಿಗೆ ಹಂಚಿಕೊಟ್ಟು ಅವರನ್ನು ಕುರಿತು—ಕಳೆದ ವರುಷ ಕೆಲವು ವಿದ್ಯಾರ್ಥಿಗಳು ರಾಜದ್ರೋಹ ಕೃತ್ಯಗಳಲ್ಲಿ ಪ್ರವರ್ತಿಸುತ್ತಿದ್ದದ್ದನ್ನು ಕೇಳಿ ತುಂಬಾ ವಿಷಾದಪಟ್ಟೆವು ನಮ್ಮ ಸಂಸ್ಥಾನದ ಸ್ಕೂಲು ಮತ್ತು ಕಾಲೇಜುಗಳಲ್ಲಿ ಬಾಲಕರು ಆ ರೀತಿ ದುರ್ಮಾರ್ಗಕ್ಕೆ ಬೀಳರಾರೆಂದೂ, ನಮ್ಮ ಸಂಸ್ಥಾನಕ್ಕೆ ಈ ಭಾಗದಲ್ಲಿ ಯಾವ ವಿಧವಾದ ಸಂಶಯವೂ ಅಪಖ್ಯಾತಿಯೂ ಪ್ರಾಪ್ತವಾಗದಂತೆ ನೀವುಗಳೆಲ್ಲಾ ಜಾಗರೂಕರಾಗಿರ್ಬೇಕೆಂದೂ ಸೂಚಿಸುತ್ತೇನೆ ಎಂಬದಾಗಿ ಅಪ್ಪಣೆ ಕೊಡಿಸಿದರು

* * *

ಬಳ್ಳಾರಿ ಮತ್ತು ಅನಂತಪುರದ ಜಿಲ್ಲೆಗಳ ಕಕ್ಷಿಗಾರರೂ ವಕೀಲರೂ ಸೇರಿ ಮದರಾಸ್ ಗವರ್ನರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದ್ದಾರೆ ಆ ಜಿಲ್ಲೆಗಳಲ್ಲಿರುವ ಮುನ್‌ಸಿಫ್ ಮತ್ತು ಸಬ್ ಜಡ್ಜ್ ಕೋರ್ಟುಗಳಿಗೆ ಬೇಸಿಗೆ ರಜವನ್ನು ಕೊಟ್ಟು ಕೋರ್ಟುಗಳನ್ನು ಮುಚ್ಚುವುದರಿಂದ ಮೊಕದ್ದಮೆಗಳು ಬೇಗ ಇತ್ಯರ್ಥವಾಗದಂತೆ ಅಡಚಣೆಯುಂಟಾಗಿದೆ ಎಂದೂ, ಬೇಸಿಗೆ ರಜವನ್ನು ಕೋರ್ಟುಗಳಿಗೆ ಕೊಡುವುದು ಜಡ್ಜಿಗಳಿಗೂ ಹೆಚ್ಚಾದ ಪ್ರಯೋಜನವೂ ಆಗಿಲ್ಲವಂದೂ, ಅವರು ಹಿಂದುಗಳೇ ಆಗಿರೋಣದರಿಂದ ಆ ರಜಾ ಕಾಲದಲ್ಲಿ ಮನೆಯೊಳಗೆ ಕೆಲಸವಿಲ್ಲದೆ ವ್ಯರ್ಥಾ ಕಾಲಹರಣ ಮಾಡುತ್ತಾರೆಂದೂ, ಈ ಬೇಸಿಗೆ ರಜವನ್ನು ವಜಾಮಾಡಿ ಜಡ್ಜಿಗಳು ಅಪೇಕ್ಷೆ ಪಟ್ಟಾಗ ಅವರಿಗೆ ವರುಷಕ್ಕೆ ಒಂದು ತಿಂಗಳಂತೆ ಪ್ರಿವಿಲೆಜ್ ರಜಾ ಕೊಡಬಹುದೆಂದೂ ಬರೆದುಕೊಂಡಿದ್ದಾರೆ ಈ ಅಭಿಪ್ರಾಯಕ್ಕೆ ಆ ಜಡ್ಜಿಗಳೂ ಸಮ್ಮತಿ ಪಟ್ಟರುವಂತೆ ಸೂಚಿಸಿರುವರು ಇದು ಸಹಜವಾದ ಪ್ರಾರ್ಥನೆ ಎಂದು ತೋರುತ್ತದೆ ದೇಶೀಯ ಜಡ್ಜಿಗಳು ಯೂರೋಪಿಯನ್ ಜಡ್ಜಿಗಳಂತೆ ಬೇಸಿಗೆ ಕಾಲವನ್ನು ತಂಪಾದ ಸ್ಥಳಗಳಲ್ಲಿ ಕಳೆದುಕೊಂಡು ಬರುವುದಕ್ಕೆ ಹೋಗುವುದಿಲ್ಲ, ವರುಷವೆಲ್ಲಾ ಕೋರ್ಟುಗಳನ್ನು ನಡಿಸಿದರೆ ಮೊಕದ್ದಮೆಗಳು ಬೇಗ ಫೈಸಲಾಗುವುದಕ್ಕೆ ಸಹಾಯವಾದೀತು. ಈ ಭಾಗದಲ್ಲಿ ಮದರಾಸ್ ಗವರ್ನರವರು ಯಾವ ರೀತಿ ಹುಕುಂ ಕೊಡುತ್ತಾರೋ ನೋಡತಕ್ಕದ್ದಾಗಿದೆ

ಹರಿಹರದಲ್ಲಿ ನಡೆಯುವ ಪ್ರದರ್ಶನಗಳು

ಚಿತ್ರದುರ್ಗ ಡಿ|| ಹರಿಹರದ ಟೌನ್‌ನಲ್ಲಿ ಸಂಗಮೇಶ್ವರಸ್ವಾಮಿ ಜಾತ್ರೆ ಕಾಲದಲ್ಲಿ ಅಂದರೆ ೧೯೧೦ ನೇ ಏಪ್ರಿಲ್ ೨೪, ೨೫, ೨೬, ಈ ತಾರೀಖುಗಳಲ್ಲಿ ವ್ಯವಸಾಯಸಂಬಂಧವಾದ ಪದಾರ್ಥಗಳ ಪ್ರದರ್ಶನದೊಡನೆ ಜಾನುವಾರುಗಳ ಪ್ರದರ್ಶನವು ನಡೆಯುವದು. ಜಾನುವಾರುಗಳ ಪ್ರದರ್ಶನಕ್ಕಾಗಿ ದೇವಸ್ಥಾನದ ಮುಂಭಾಗದ ಮೈದಾನವನ್ನೂ ವ್ಯವಸಾಯಸಂಬಂಧವಾದ ಪದಾರ್ಥಗಳ ಪ್ರದರ್ಶನಕ್ಕೆ ಬೇರೆ ಅನುಕೂಲವಾದ ಮತ್ತೊಂದು ಸ್ಥಳವನ್ನೂ ಗೊತ್ತುಮಾಡಿದೆ. ಜಾನುವಾರುಗಳಿಗೂ ವ್ಯವಸಾಯ ಸಂಬಂಧವಾದ ಪದಾರ್ಥಗಳಿಗೂ ಇನಾಮುಗಳನ್ನು ಕೊಡುತ್ತದೆ. ಇನಾಮಿಗೆ ಅರ್ಹವಾದ ವಸ್ತುಗಳು ಇಂಥವೆಂಬುವದು ಜಾತ್ರೆಗೆ ನೆರೆಯುವ ಮುಖಂಡರಾದ ಮತ್ತು ಅನುಭವಶಾಲಿಗಳಾದ ರೈತರ ಪ್ರತಿನಿಧಿಗಳಿಂದ ಓಟಿನ ಮೂಲಕ ನಿಶ್ಚಯಿಸಲ್ಪಡುವದು. ಅವುಗಳ ಮಾಲೀಕರಿಗೆ ಪ್ರದರ್ಶನವು ಮುಗಿದ ಕೂಡಲೆ ಇನಾಮುಗಳು ಕೊಡಲ್ಪಡುವವು. ನಗದು ಇನಾಮುಗಳಲ್ಲದೆ ಪ್ರತಿಯೊಬ್ಬ ಇನಾಂ ಹೊಂದಿದವರಿಗೂ ಒಂದು ಬಹುಮಾನ ಪತ್ರಿಕೆಯು ಕೊಡಲ್ಪಡುವದು. ಗೊತ್ತಾಗಿರುವ ಯಾವದಾದರೊಂದು ತರಗತಿಯ ಇನಾಮನ್ನು ಹೊಂದಲು ಅರ್ಹವಾದ ಜಾನುವಾರು ಯಾ ಪದಾರ್ಥವು ಪ್ರದರ್ಶನಕ್ಕೆ ಬಂದಿಲ್ಲವೆಂದು ತೀರ್ಮಾನವಾಗುವ ಸಂದರ್ಭದಲ್ಲಿ ಅಂಥಾ ಇನಾಮಿನ ಮೌಲ್ಯವು ಇತರ ಯೋಗ್ಯವಾದ ವಸ್ತುಗಳಿಗೆ ಕೊಡಲು ಉಪಯೋಗಿಸಲ್ಪಡುತ್ತೆ. ಪ್ರದರ್ಶನಕ್ಕೆ ಜಾನುವಾರುಗಳನ್ನು ಯಾ ಪದಾರ್ಥಗಳನ್ನು ತರಲು ಅಪೇಕ್ಷೆಯುಳ್ಳವರು ಪ್ರದರ್ಶನಕ್ಕೆ ಒಂದು ದಿನ ಮುಂಚಿತವಾಗಿ ಹರಿಹರದ ಡೆಪ್ಯುಟಿ ಅಮಲ್ದಾರರಲ್ಲಿ ಅಥವಾ ಹರಿಹರದಲ್ಲಿರುವ ಕೃಷಿ ಶಿಲ್ಪಾಭಿವರ್ಧಕ ಸಮಾಜದ ಮೆಂಬರಾದ ಮ|| ಬಾಲಕೃಷ್ಣರಾಯರು ಮತ್ತು ರಂಗಾರೆ ರಾಮಪ್ಪನವರು ಇವರಲ್ಲಿ ಅಪ್ಲಿಕೇಷನ್ ಕೊಟ್ಟು ತಮ್ಮ ಹೆಸರು, ತಾವು ತರುವ ಜಾನುವಾರುಗಳ ಯಾ ಪದಾರ್ಥಗಳ ತಪಶೀಲನ್ನು ಕ್ರಮವಾಗಿ ರೆಜಿಸ್ಟರು ಮಾಡಿಸಬೇಕು. ಜಾನುವಾರುಗಳ ಮಾಲೀಕರು ತಮ್ಮ ಜಾನುವಾರುಗಳ ನಿಗೇವಾನಿಯನ್ನೂ ಅವುಗಳಿಂದ ಇತರರಿಗೆ ಬಾಧಕವಾಗದಂತೆಯೂ ತಾವೇ ನೋಡಿಕೊಳ್ಳಬೇಕು. ಪ್ರದರ್ಶನಕ್ಕೆ ಲಾಯಖೆಂದು ಗಣಿಸಲ್ಪಡುವ ದನಗಳ ಮಟ್ಟಿಗೆ ಸ್ಥಳದಲ್ಲಿ ಮೇವನ್ನು ಖುಷ್ ಖರೀದಿಗೆ ಒದಗಿಸಿಕೊಡಲು ಏರ್ಪಾಡು ಮಾಡಿದೆ. ಆ ರೀತಿ ಒದಗಬಹುದಾದ ಮೇವು ಮಿತವಾಗಿರುತ್ತಾದದ್ದರಿಂದ ಮಾಲೀಕರು ತಮ್ಮ ಜಾನುವಾರುಗಳಿಗೆ ಬೇಕಾಗುವ ಮೇವಿಗೆ ಕೇವಲ ಇದನ್ನೇ ನಂಬಿಕೊಳ್ಳದೆ ತಮ್ಮ ಸ್ವಂತ ಏರ್ಪಾಡನ್ನೂ ಮಾಡಿಕೊಳ್ಳುವದು ಅನುಕೂಲ. ಜಾತ್ರೆಗೆ ವಿಶೇಷವಾಗಿ ಜನಗಳು ಸೇರುವದರಿಂದ ದನ ಮೊದಲಾದವುಗಳ ಮಾರಾಟಕ್ಕೆ ಒಳ್ಳೇ ಗಿರಾಕಿ ಒದಗಬಹುದು. ಹೊಸ ತರಹಾ ಉತ್ತಮವಾದ ಕಬ್ಬಿನ ಗಾಣವನ್ನೂ ಕೆನಡಾ ದೇಶದ ನೇಗಿಲನ್ನೂ ಪ್ರದರ್ಶನಮಾಡಿ, ಅವುಗಳಿಂದ ಮಾಡತಕ್ಕ ಕೆಲಸಗಳನ್ನು ಮಾಡಿ ತೋರಿಸಲು ಏರ್ಪಾಡುಮಾಡಿರುತ್ತೆ. ವ್ಯವಸಾಯ ಸಂಬಂಧವಾದ ಕೆಲವು ವಿಷಯಗಳನ್ನೂ ಜಾನುವಾರುಗಳ ಪೋಷಣೆ ವಗೈರೇ ವಿಷಯಗಳನ್ನೂ ಕುರಿತು ಸಂಕ್ಷೇಪವಾಗಿ ಉಪನ್ಯಾಸಗಳನ್ನು ಕೊಡಲು ಏರ್ಪಾಡು ಮಾಡಲ್ಪಡುತ್ತದೆ.

ಶ್ರವಣಬೆಳ್ಗೊಳದ ಪೂಜಾ ಮತ್ತು ಮಹಾ ಸಭೆಯ ಮಹೋತ್ಸವಗಳು

ಸಾಮಾನ್ಯ ಪೂರ್ವ ಚರಿತ್ರೆಯು.

ಶ್ರವಣ ಬೆಳ್ಗೊಳವು ಪುರಾಣ ಪ್ರಸಿದ್ಧವಾಗಿಯೂ ಇಂದ್ರಗಿರಿ, ಚಂದ್ರಗಿರಿಗಳ ಮಧ್ಯೆ ಸರೋವರ ವನಗಳಿಂದ ಕೂಡಿ ಅತಿ ರಂಜನೀಯವಾಗಿದೆ. ಇಂದ್ರಗಿರಿಯ ಮೇಲೆ ನೆಲೆಗೊಂಡಿರುವ ಶ್ರೀ ಮಹಾ ಗೋಮಟೇಶ್ವರ ಸ್ವಾಮಿಯವರ ವಿಗ್ರಹವು ಬಹಳ ದೊಡ್ಡದಾಗಿ ಸುತ್ತಲೂ ಅನೇಕ ಮೈಲಿಗಳಲ್ಲಿ ಪ್ರಯಾಣ ಮಾಡುವ ಪಥಿಕರ ದೃಷ್ಟಿ ಮನಸ್ಸನ್ನೂ ಎಳೆಯುತ್ತಾ ಶೋಭಾಯಮಾನವಾಗಿದೆ.

ಚಂದ್ರಗಿರಿಯು ಚಂದ್ರಗುಪ್ತ ಮೌರ್ಯ ಚಕ್ರವರ್ತಿಯ ಮೊಮ್ಮಗನಾದ ಭಾಸ್ಕರ ಚಕ್ರವರ್ತಿಯಿಂದಲೂ ಚೋಳ, ಒಲ್ಲಾಳ, ದಕ್ಷಿಣ ಮಧುರಾ ದೇಶಾಧೀಶ್ವರರಿಂದಲೂ ಕಟ್ಟಲ್ಪಟ್ಟ ಅತಿ ವಿಚಿತ್ರವಾಗಿ ಕೆಲಸ ಮಾಡಿರುವ ಅನೇಕ ದೇವಸ್ಥಾನಗಳಿಂದ ಕೂಡಿ ಭರತಖಂಡದ ಜೈನರಿಗೆಲ್ಲರಿಗೂ ಮಹಾ ಪುಣ್ಯಕ್ಷೇತ್ರವಾಗಿದೆ.

ಜನಸ್ತೋಮ—ಪೂಜಾದಿಗಳು

ಈ ಗ್ರಾಮದಲ್ಲಿ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಗಳವರ ಮಠವಿದೆ. ಈ ಮಠಕ್ಕೆ ನಮ್ಮ ಶ್ರೀಮನ್ ಮಹಾರಾಜರವರ ಪೂರ್ವಿಕರಿಂದ ಕೊಡಲ್ಪಟ್ಟ ಅನೇಕ ಸ್ವಾಸ್ತ್ಯಗಳಿವೆ. ಇಲ್ಲಿ ಇಂದ್ರಗಿರಿಯ ಮೇಲೆ ಇರುವ ಶ್ರೀಗೋಮಟೇಶ್ವರ ಸ್ವಾಮಿಯವರಿಗೆ ಪೂಜೆಯು ಪೂರ್ವದ ಮಹಾರಾಜರಿಂದಲೂ ಭಕ್ತವರ್ಗದಿಂದಲೂ ಆಗಿಂದಾಗ್ಗೆ ಮಾಡಲ್ಪಡುತ್ತಿತ್ತು. ಈಗ್ಗೆ ಸುಮಾರು ಇಪ್ಪತ್ತು ಮೂರು ವರ್ಷಗಳ ಹಿಂದೆ ಶ್ರೀ ಕೊಲ್ಹಾಪುರದ ಸ್ವಾಮಿಗಳವರು ಒಂದು ಪೂಜೆಯನ್ನು ನಡಿಸಿದರು. ಅಂದಿನಿಂದ ಅಂಥಾ ಪೂಜೆಗಳಿಗೆಲ್ಲಾ ಜೈನ ಮಂಡಲಿಯವರೆಲ್ಲರೂ ಸೇರಿ ಪೂಜೆ ಎನ್ನು ಪ್ರಾರಂಭಿಸಿದರು. ಈ ಪೂಜೋತ್ಸವಗಳು ಕಳೆದ ತಿಂಗಳು ೧೪ನೇ ತಾ ನಿಂದ ಈ ತಿಂಗಳು ತಾ ೨೮ ವರೆಗೂ ನಡೆದವು. ಈ ಪೂಜೋತ್ಸವಗಳನ್ನು ನಿರ್ವಹಿಸಿ ಆನಂದಪಡುವುದಕ್ಕಾಗಿ ಮೂಡುಬಿದರೆ, ಕೊಲ್ಹಾಪುರ, ಕಂಚಿ, ಕಾರ್ಕಳ ಪಟ್ಟಾಚಾರ್ಯರುಗಳು ತಮ್ಮ ತಮ್ಮ ಶಿಷ್ಯವರ್ಗದೊಡನೆ ಬಂದಿದ್ದರು. ಇಲ್ಲಿಗೆ ಪೂಜಾರ್ಥವಾಗಿಯೂ, ಮಹಾ ಸಭೆಯ ಕಾರ್ಯಾರ್ಥವಾಗಿಯೂ ಬಂದಿದ್ದ ಜೈನ ಮಹಾ ಜನಗಳಿಗೆ ಈ ಭಟ್ಟಾರಕರು ಧರ್ಮೋಪದೇಶವನ್ನು ಮಾಡುತ್ತಿದ್ದರು. ಕಳೆದ ತಿಂಗಳು ತಾ ೩೦ ರಲ್ಲಿ ಇಲ್ಲಿ ಒಂದು ಲಕ್ಷ ಜನಗಳಿಗಿಂತಲೂ ಹೆಚ್ಚಾಗಿ ಸೇರಿರಬಹುದೆಂದು ತೋರುತ್ತದೆ. ಕಲ್ಕತ್ತ, ಡೆಲ್ಲಿ, ಕಾಶ್ಮೀರ, ಲಾಹೋರ್, ಬರೋಡ, ಬೊಂಬಾಯಿ, ಸೋಲಾಪುರ, ಕೊಲ್ಹಾಪುರ, ಮದರಾಸು, ಕಂಚಿ, ಕುಂಬಕೋಣ ಮುಂತಾದ ಹಿಂದುಸ್ಥಾನದ ಎಲ್ಲಾ ಪ್ರಾಂತ್ಯದ ಜೈನ ಸ್ತ್ರೀಪುರುಷರೂ ಈ ಪವಿತ್ರ ಸ್ಥಳದಲ್ಲಿ ಸೇರಿದ್ದರು. ಬೇರೆ ಬೇರೆ ಪ್ರಾಂತ್ಯದ ಜನಗಳನ್ನೂ, ಅವರ ನಡೆನುಡಿ ಉಡುಪು ಆಭರಣಾದಿ ವೈಚಿತ್ರ್ಯಗಳನ್ನೂ ನೋಡುವುದು ಬಹಳ ಆಶ್ಚರ್ಯವನ್ನುಂಟುಮಾಡುತ್ತಿತ್ತು. ಪ್ರಾತಃಕಾಲ ೬ ಘಂಟೆಗೆ ಮೊದಲು ಮಾಡಿ ರಾತ್ರಿ ೮ ಘಂಟೆ ವರೆಗೂ ಬೆಟ್ಟವನ್ನು ಹತ್ತುವ ಈ ಜನಗಳ ಸಾಲು ಎಡೆಬಿಡದೆ ಇರುತ್ತಿತ್ತು. ಚಂದ್ರಗಿರಿಯ ಒಂದು ಗುಡಿಯ ಮೇಲೆ ನಿಂತುಕೊಂಡು ನೋಡಿದರೆ ಊರೆಲ್ಲವೂ ಜನಗಳಿಂದ ನಿಬಿಡೀಕೃತವಾಗಿರುವುದಲ್ಲದೆ ಒಂದು ಸ್ಥಳದಲ್ಲಿ ಪರಸ್ಥಳದ ದೊಡ್ಡ ದೊಡ್ಡ ಮನುಷ್ಯರಿಗಾಗಿ ಹಾಕಲ್ಪಟ್ಟ ಡೇರೆಗಳಿಂದಲೂ ಗುಡಾರಗಳಿಂದಲೂ, ಮತ್ತೊಂದೆಡೆಯಲ್ಲಿ ಪೇಟೆಗಳಂತಿರುವ ಆರೋಗ್ಯ ಶಾಸ್ತ್ರಕ್ಕನುಸಾರವಾಗಿ ಕಟ್ಟಿರುವ ಗುಡಿಸಲುಗಳಿಂದಲೂ ಈ ಮಹಾ ಸ್ಥಳವು ಅಲಂಕರಿತವಾದ ದೊಡ್ಡ ಪಟ್ಟಣದೋಪಾದಿಯಲ್ಲಿ ಕಾಣುತ್ತಿತ್ತು.

ಮಹಾಸಭೆಯು

ಇನ್ನೂ ಜನಗಳು ಬರುವದರಲ್ಲೇ ಇದ್ದರು. ತಿಪಟೂರು ಫ್ರೆಂಚ್‌ರಾಕ್ಸ್ ಕಡೆಗಳಿಂದ ಗಾಡಿಗಳು ಬಿಡತಿಯಿಲ್ಲದೆ ಬರುತ್ತಿದ್ದವು. ಇಷ್ಟು ಜನಸಮುದಾಯವು ಈ ಸ್ಥಳದಲ್ಲಿ ಸೇರಿರುವದರಿಂದ ಜನಗಳಿಗೆಲ್ಲರಿಗೂ ಮಹಾ ಉಪಕಾರವಾಗಬೇಕೆಂದು ಹಿಂದುಸ್ಥಾನದ ಜೈನ ದಿಗಂಬರ ಮಹಾ ಸಭೆಯವರು ಈ ವರ್ಷ ಮಹಾ ಸಭೆಯನ್ನು ಈ ಸ್ಥಳದಲ್ಲಿ ಸೇರಿಸಿದರು. ಈ ಸಭೆಯ ಅಧ್ಯಕ್ಷರು ಬೊಂಬಾಯಿ ಪಟ್ಟಣದ ಪ್ರಖ್ಯಾತ ವರ್ತಕರಾದ ದಾನವೀರ ಜೈನಕುಲ ಭೂಷಣ ಶೇಠ ಮಾಣಿಕ್‌ಚಂದ ಹೀರಾಚಂದ್, ಜೆ. ಪಿ. ಯವರು. ಈ ಸಭೆಯ ರಿಸೆಪ್ಷನ್ ಕಮಿಟಿ ಪ್ರೆಸಿಡೆಂಟರು ಶ್ರೀಮಾನ್ ಮೈಸೂರು ಅನಂತರಾಜೈಯ ಮೋತೀಖಾನೆಯವರು. ಈ ಸಭೆಯ ಕಾರ್ಯನಿರ್ವಾಹಕ್ಕಾಗಿ ನೇಮಿಸಿದ ಸೆಕ್ರೆಟರಿಯವರು ಶಕ್ತರಾದ ಶ್ರೀಮಾನ್ ಮೈಸೂರು ವರ್ಧಮಾನಯ್ಯ ಮೋತೀಖಾನೆಯವರು. ಇವರಲ್ಲದೆ ಈ ಸಭೆಯ ಕಾರ್ಯ ನಿರ್ವಾಹಕ್ಕಾಗಿ ಉತ್ತರ ಹಿಂದುಸ್ಥಾನದ ದೊಡ್ಡ ಮನುಷ್ಯರನೇಕರು ಬಂದಿದ್ದರು. ಬಾಬು ಜಗಮಂದಿರ ಲಾಲ್, ಎಂ. ಎ., ಬಾರ್ ಆಟ್‌ಲಾ ಯವರು, ಅಜಿತಪ್ರಸಾದ್, ಎಂ. ಎ., ಎಲ್. ಎಲ್. ಬಿ. ಯವರು, ಅಪ್ಪಾಸಾಮಿ ಚಕ್ರವರ್ತಿ ಎಂ. ಎ. ಯವರು, ಅಣ್ಣಪ್ಪ ಫಾಗಲೆ, ಬಿ. ಎ., ಎಲ್. ಎಲ್. ಬಿ. ಯವರು, ಪುಟ್ಟಸ್ವಾಮಯ್ಯ, ಬಿ. ಎ., ಎಲ್. ಸಿ. ಇ. ಯವರು, ಅರ್ಜುನ್ ಲಾಲ್, ಬಿ. ಎ. ಯವರು, ಇನ್ನೂ ಅನೇಕ ಇಂಗ್ಲೀಷ್, ಸಂಸ್ಕೃತ ಪಂಡಿತರು, ದೊಡ್ಡ ದೊಡ್ಡ ಸಾಹುಕಾರರುಗಳು ನೆರೆದಿದ್ದರು. ಬೊಂಬಾಯಿ, ಕೊಲ್ಹಾಪುರ, ಸೋಲಾಪುರ, ಹುಬ್ಬಳ್ಳಿ, ಮೈಸೂರು ಮಂಗಳೂರು ಬೋರ್ಡಿಂಗ್ ಹೌಸುಗಳ ವಿದ್ಯಾರ್ಥಿಗಳು ಸುಮಾರು ೧೦೦ ಮಂದಿ ವಾಲಂಟಿಯರುಗಳಾಗಿ ಸಭೆಯ ಕಾರ್ಯವನ್ನು ನೆರವೇರಿಸಲು ಬಹಳ ಮೆಹನತ್ತಿನಿಂದ ಕೆಲಸ ಮಾಡುತ್ತಿದ್ದರು.

ಸಭೆಯು ಮುಖಂಡರನ್ನು ಸತ್ಕರಿಸಿದ್ದು

ಕಳೆದ ತಿಂಗಳು ೨೦ನೇ ತಾ ದಿನ ಈ ಮಹಾ ಸಭೆಯ ರಿಸೆಪ್ಷನ್ ಕಮಿಟಿ ಪ್ರೆಸಿಡೆಂಟರವರು ಈ ಸ್ಥಳಕ್ಕೆ ಬಂದರು. ಅವರನ್ನು ಮಠದವರು ಸನ್ಮಾನಪೂರ್ವಕವಾಗಿ ಬರಮಾಡಿಕೊಂಡು, ಅವರಿಗಾಗಿ ಪ್ರತ್ಯೇಕವಾಗಿ ಏರ್ಪಾಡು ಮಾಡಲ್ಪಟ್ಟ ಸ್ಥಳಕ್ಕೆ ಕರೆದುಕೊಂಡು ಹೋಗಿಬಿಟ್ಟರು. ೨೧ನೇ ತಾ ದಿನ ಈ ಸಭೆಯ ಪ್ರೆಸಿಡೆಂಟರ ಸವಾರಿಯು ದಯಮಾಡಿಸಿತು. ರಿಸೆಪ್ಷನ್ ಕಮಿಟಿ ಪ್ರೆಸಿಡೆಂಟರವರು, ಸೆಕ್ರೆಟರಿಯವರು ಇನ್ನೂ ಇತರ ದೊಡ್ಡ ಮನುಷ್ಯರುಗಳು ಅರಮನೆಯಿಂದ ಕಳುಹಿಸಿದ ಬಿರುದುಗಳೊಡನೆಯೂ, ಮಠದ ಬಿರುದುಗಳೊಡನೆಯೂ, ಮೇಳ ತಾಳಗಳೊಡನೆಯೂ ಪ್ರೆಸಿಡೆಂಟರವರನ್ನು ಎದುರುಗೊಂಡು ದಿವ್ಯವಾಗಿ ಶೃಂಗಾರಮಾಡಿ ಸಿದ್ಧಪಡಿಸಿದ್ದ ಒಂದು ಪಲ್ಲಕ್ಕಿಯಲ್ಲಿ ಕೂಡಿಸಿ, ಬಾವುಟಾಗಳಿಂದಲೂ ಮಕರ ತೋರಣಗಳಿಂದಲೂ ಶೃಂಗಾರ ಮಾಡಿ ಕಳಕಳಿಸುತ್ತಿದ್ದ ಊರಿನ ಬೀದಿಗಳಲ್ಲಿ ಉತ್ಸವದಿಂದ ಕರೆದುಕೊಂಡು ಹೋದರು. ಸುಮಾರು ಸಾವಿರಾರು ಜನಗಳು ಹಿಂದೆಯೂ ಮುಂದೆಯೂ ಹೋಗುತ್ತಿದ್ದರು. ಈ ಉತ್ಸವವು ಮಠದ ಹತ್ತಿರಕ್ಕೆ ಬರುತ್ತಲೇ ಜನಸಮುದಾಯದೊಡನೆ ಕೂಡಿ ಪಲ್ಲಕ್ಕಿಯಲ್ಲಿ ಕುಳಿತಿದ್ದ ಪ್ರೆಸಿಡೆಂಟರವರ ಫೋಟೋಗ್ರಾಫು ತೆಗೆಯಲ್ಪಟ್ಟಿತು. ಅನಂತರ ಇವರನ್ನು ಇವರಿಗಾಗಿ ಪ್ರತ್ಯೇಕ ಏರ್ಪಾಡು ಮಾಡಲ್ಪಟ್ಟ ಡೇರೆಗೆ ಕರೆದುಕೊಂಡು ಹೋಗಿಬಿಟ್ಟರು.

೨೨ನೇ ತಾ ಶ್ರೀ ನೇಮಿನಾಥ ಸ್ವಾಮಿಯವರ ಜನ್ಮಾಭಿಷೇಕ ಕಲ್ಯಾಣ ಮಹೋತ್ಸವವು ನಡೆಯಿತು. ಉತ್ಸವವು ಅತಿ ವಿಜೃಂಭಣೆಯಾಗಿ ನಡೆಯಿತು. ಪ್ರತಿ ನಿತ್ಯವೂ ದಿನಕ್ಕೆ ೨ ಸಾರಿ ದೇವರ ಉತ್ಸವವು ಊರಲ್ಲೆಲ್ಲಾ ಹೊರಡುತ್ತಿತ್ತು. ತಾ ೨೪ ರಲ್ಲಿ ಸುಪ್ರಭಾತ ೧ ಘಂಟೆ ಸಮಯದಲ್ಲಿ ರಥೋತ್ಸವಕ್ಕಾಗಿ ನಾಲ್ಕೂಕಡೆಯ ಜನಗಳೂ ಸೇರಿದ್ದರು. ರಥೋತ್ಸವವು ಬಹಳ ವೈಭವದಿಂದ ಜರುಗಿತು.

ಮಹಾ ಸಭೆಯು

೨೬ನೇ ತಾ ಮಧ್ಯಾಹ್ನ ೨ ಘಂಟೆಗೆ ವಿಸ್ತಾರವಾದ ಸಭಾ ಮಂಟಪದಲ್ಲಿ ಸಭೆಯು ಸೇರಿತು. ಸಭಾ ಮಂಟಪವು ನಾಲ್ಕೈದು ಸಾವಿರ ಜನಗಳನ್ನು ಒಳಗೊಳ್ಳುವಷ್ಟು ವಿಸ್ತಾರವಾಗಿಯೂ ಚಿತ್ರ ವಿಚಿತ್ರವಾದ ಮೇಲ್ಕಟ್ಟು ತೋರಣ ಧ್ವಜಪಟಗಳಿಂದ ವಿರಾಜಮಾನವಾಗಿಯೂ ಕಂಗೊಳಿಸುತ್ತಿತ್ತು. ಕಾಲಕ್ಕೆ ಸರಿಯಾಗಿ ಸಭಾ ಮಂಟಪವು ರಿಸೆಪ್ಷನ್ ಕಮಿಟಿ ಮೆಂಬರುಗಳಿಂದಲೂ, ಡೆಲಿಗೇಟುಗಳಿಂದಲೂ, ಮಹಾ ಸಭೆಯ ಮೆಂಬರುಗಳಿಂದಲೂ ನೋಡುವದಕ್ಕೆ ಬಂದ ದೊಡ್ಡ ದೊಡ್ಡ ಮನುಷ್ಯರುಗಳಿಂದಲೂ, ಜೈನ ಮಹಾ ಜನಗಳಿಂದಲೂ ನಿಬಿಡೀಕೃತವಾಯಿತು. ಮಂಗಳಾಚರಣವಾದನಂತರ ಸ್ವಾಗತ ಕಮಿಟಿ ಪ್ರೆಸಿಡೆಂಟರವರು ಸಭೆಯ ಉದ್ದೇಶವನ್ನು ಕುರಿತು ಸ್ವಲ್ಪ ಮಟ್ಟಿಗೆ ಭಾಷಣ ಮಾಡಿದನಂತರ ಸಭಾಧ್ಯಕ್ಷರು ತಮ್ಮ ಉಪನ್ಯಾಸವನ್ನು ಹಿಂದಿಯಲ್ಲಿ ಹೇಳಿದರು. ಅದನ್ನೇ ನೇಮಿಸಾಗರ ವರ್ಣಿ ಯವರು ಕನ್ನಡದಲ್ಲಿ ಹೇಳಿದರು. ಇದನಂತರ ಹಿಂದಿಯಲ್ಲಿಯೂ ಕನ್ನಡದಲ್ಲಿಯೂ ಅಚ್ಚು ಹಾಕಿಸಿದ ಅವರ ಉಪನ್ಯಾಸದ ಪುಸ್ತಕಗಳು ಸಭೆಯವರೆಲ್ಲರಿಗೂ ಹಂಚಲ್ಪಟ್ಟವು. ಮೆಂಬರುಗಳನ್ನು ಒಂದೆಡೆಯಲ್ಲಿಯೂ, ಡೆಲಿಗೇಟುಗಳನ್ನು ಒಂದೆಡೆಯಲ್ಲಿಯೂ, ದೊಡ್ಡ ಮನುಷ್ಯರುಗಳನ್ನು ಒಂದೆಡೆಯಲ್ಲಿಯೂ, ನೊಡ್ಡ ಮನುಷ್ಯರುಗಳನ್ನು ಒಂದೆಡೆಯಲ್ಲಿಯೂ ಸ್ತ್ರೀಯರನ್ನು ಪ್ರತ್ಯೇಕವಾಗಿಯೂ ಕುಳ್ಳಿರಿಸಿದ್ದರು. ಆ ದಿನ ಸಭೆಯ ಕಾರ್ಯಗಳು ಸಾಂಗವಾಗಿ ಜರುಗಿದವು. ಮಹಾರಾಜಾ ಸರ್ಕಾರದವರು ಶಕ್ತರಾದ ಪೋಲೀಸಿನವರನ್ನು ಕಳುಹಿಸಿ ಜೈನರಿಗೆ ಮಹೋಪಕಾರವನ್ನು ಮಾಡಿದ್ದಕ್ಕಾಗಿ ಸಭೆಯವರು ತಮ್ಮ ಕೃತಜ್ಞತೆಯನ್ನು ಸೂಚಿಸುವ ಒಂದು ಟೆಲಿಗ್ರಾಫನ್ನು ಶ್ರೀಮನ್ ಮಹಾರಾಜರವರಿಗೆ ಕಳುಹಿಸಿದರು. ಅನಂತರ ಸಭೆಯು ಬರಖಾಸ್ತಾಯಿತು.

ಎರಡನೇ ದಿನದ ಸಭೆಯು

೨೭ ನೇ ತಾ. ಮಧ್ಯಾಹ್ನ ೨ ಘಂಟೆಗೆ ಸರಿಯಾಗಿ ಸಭೆ ಸೇರಿತು. ಈ ದಿನ ಸಭೆಯಲ್ಲಿ ನಡೆದ ಕಾರ್ಯಗಳಲ್ಲಿ ಬಹಳ ಮುಖ್ಯವಾದವುಗಳು ಯಾವುವೆಂದರೆ,—

(೧) ಮೈಸೂರು ಮತ್ತು ಈ ದೇಶದ ಸುತ್ತಲೂ ಕೆಲವರು ಸಾದರು ಎನ್ನುವ ಜನಗಳು ಇದ್ದಾರೆ. ಆ ಜನಗಳಲ್ಲಿ ಅನೇಕರು ಜೈನ ಮತಕ್ಕನುಸಾರವಾಗಿ ನಡೆದುಕೊಳ್ಳುತ್ತಿದ್ದಾರೆ. ಅವರ ಪೈಕಿ ಮ|| ಕಲ್ಲೂಡಿ ಸುಬ್ಬಣ್ಣನೇ ಮೊದಲಾದ ಕೆಲವು ಮುಖಂಡರು ಸಭೆಗೆ ಬಂದು ತಾವು ಜೈನ ಮತದಂತೆ ನಡೆದುಕೊಳ್ಳಲು ಸಿದ್ಧರಾಗಿದೇವೆಂತಲೂ, ತಮಗೆ ಜೈನ ಮತದಂತೆ ನಡೆದುಕೊಳ್ಳಲು ಸರಿಯಾದ ಅನುಕೂಲ್ಯಗಳನ್ನು ಕಲ್ಪಿಸಿ ಕೊಡಬೇಕೆಂತಲೂ, ಸಭೆಯವರನ್ನು ಪ್ರಾರ್ಥಿಸಿಕೊಂಡರು. ಸಭೆಯವರು ಅದರಂತೆಯೇ ಅವರಿಗೆ ಸರಿಯಾದ ಅನುಕೂಲ್ಯಗಳನ್ನು ಕಲ್ಪಿಸಿಕೊಡಲು ಯೋಚನೆ ಮಾಡುತ್ತೇವೆಂದು ಹೇಳಿದರು.

(೨) ಶ್ರವಣಬೆಳಗುಳದಲ್ಲಿ ಸಂಸ್ಕೃತ ವಿದ್ಯಾಭ್ಯಾಸಂಗ ಮಾಡುವ ಪರಸ್ಥಳದ ಜೈನ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಗಳಿಗೆ ಅನುಕೂಲ ಪಡಿಸುವದಕ್ಕಾಗಿ ಒಂದು ಜೈನ ಬೋರ್ಡಿಂಗ್ ಹೌಸು ಸ್ಥಾಪನೆಯಾಗಬೇಕೆಂದು ಬ್ರಹ್ಮಚಾರಿ ಶೀತಲಪ್ರಸಾದ್ ಯವರು ಸಭೆಯಲ್ಲಿ ಹೇಳಿದ್ದನ್ನು ಸಭಿಕರೆಲ್ಲರೂ ಅನುಮೋದಿಸಿ ಆ ಬಗ್ಗೆ ೧೦,೦೦೦ ರೂಪಾಯಿಗಳು ತಕ್ಷಣವೇ ಚಂದಾ ರೂಪವಾಗಿ ಕೂಡಿಸಲ್ಪಟ್ಟಿತು. ಈ ಬಗ್ಗೆ ಸರಿಯಾಗಿ ಏರ್ಪಾಡುಗಳು ಜರುಗಲು ಇಷ್ಟರಲ್ಲೇ ಒಂದು ಕಮಿಟಿಯು ಏರ್ಪಾಡು ಮಾಡಲ್ಪಡುತ್ತದೆ.

(೩) ಮ|| ಪೂಜಾ ಸೆಕ್ರೆಟರಿಗಳಾದ ಶ್ರವಣಬೆಳಗುಳದ ಪದ್ಮರಾಜಯ್ಯನವರು ಮದುವೆ ಮೊದಲಾದ ಉತ್ಸವಗಳಲ್ಲಿ ಬಾಣಬಿರುಸು ಮುಂತಾದ ಮದ್ದುಗಳನ್ನು ಹಚ್ಚುವದೂ, ವೇಶ್ಯಾಸ್ತ್ರೀಯರಿಂದ ನರ್ತನ ಮಾಡಿಸುವದೂ ಜೈನ ಮತ ವಿರುದ್ಧವಾಗಿಯೂ, ಮಹಾ ಪಾಪಕಾರ್ಯವಾಗಿಯೂ, ಧನ ನಷ್ಟಕಾರಿಯಾಗಿಯೂ, ಯುವಕರ ಮನಸ್ಸನ್ನು ಕೆಡಿಸುವದಾಗಿಯೂ ಇರುವದರಿಂದ ಇಂಥಾ ಅಲ್ಪಕಾರ್ಯಗಳನ್ನು ಮುಂದೆ ಜೈನ ಮತಸ್ಥರು ವಿರೋಧಿಸಬೇಕೆಂದು ಪ್ರಾರ್ಥಿಸಿದರು. ಬಾಬು ಅಜಿತಪ್ರಸಾದ್, ಎಂ. ಎ., ಎಲ್. ಎಲ್. ಬಿ. ಯವರು—ಇಂಥಾ ಕಾರ್ಯಗಳು ಉತ್ತರ ಹಿಂದುಸ್ಥಾನದಲ್ಲಿ ನಿಲ್ಲಿಸಲ್ಪಟ್ಟವೆ. ದಕ್ಷಿಣ ಹಿಂದುಸ್ಥಾನದ ಜೈನರೂ ಈ ಕಾರ್ಯಗಳನ್ನು ವಿರೋಧಿಸುವದು ಬಹಳ ಅಗತ್ಯವಾಗಿದೆ. ಅದಕ್ಕಾಗಿ [illegible]ವಾಗುವ ಹಣವನ್ನು ವಿದ್ಯಾಭ್ಯಾಸ, ಜೈನ ತತ್ವಬೋಧನೆಗಳ ಪ್ರಚಾರಕ್ಕಾಗಿ ಉಪಯೋಗಿಸಿದರೆ ಜೈನಮತದ ಅಭ್ಯುದಯ ಸ್ಥಿತಿಗೆ ಸಹಾಯವಾಗುತ್ತದೆಂದು ಹೇಳಿದರು. ಅದಕ್ಕೆ ಸಭೆಯವರೆಲ್ಲರೂ ಸಂತೋಷಪಟ್ಟು, ಈ ಕಾರ್ಯವನ್ನು ವಿರೋಧಿಸಲು ಆಯಾಯ ಸ್ಥಳದ ಮುಖಂಡರು ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಗೊತ್ತಾಯಿತು. ಆ ದಿನ ಸಾಯಂಕಾಲವಾದದ್ದರಿಂದ ಸಭೆಯು ಬರಖಾಸ್ತಾಯಿತು.

ಮೂರನೇ ದಿನದ ಸಭೆಯು

೨೮ ನೇ ತಾ ಸಕಾಲಕ್ಕೆ ಸಭೆಯು ಸೇರಿತು. ಅನೇಕ ವಿಷಯಗಳು ಸಭೆಯಲ್ಲಿ ಚರ್ಚಿಸಲ್ಪಟ್ಟವು. ಅವುಗಳಲ್ಲಿ ಮುಖ್ಯವಾದದ್ದು ಶ್ರವಣಬೆಳುಗುಳದ ಶ್ರೀ ಗೋಮಟೇಶ್ವರ ಸ್ವಾಮಿ ವಿಗ್ರಹವನ್ನು ಕಾಪಾಡುವದಕ್ಕಾಗಿ ಒಂದು ಫಂಡನ್ನು ಸೇರಿಸಬೇಕೆಂದು ಸಭೆಯಲ್ಲಿ ನಿಷ್ಕರ್ಷೆಯಾಯಿತು. ಅದಕ್ಕಾಗಿ ಉತ್ತರ ಹಿಂದುಸ್ಥಾನದ ಜೈನ ಮಹನೀಯರು ೨೫,೦೦೦ ರೂಪಾಯಿಗಳನ್ನು ತತ್ಕಾಲದಲ್ಲಿ ಚಂದಾ ರೂಪವಾಗಿ ಕೊಡಲು ಒಪ್ಪಿದರು. ಈ ಹಣವನ್ನು ಶ್ರೀ ಗೋಮಟೇಶ್ವರ ಸ್ವಾಮಿ ವಿಗ್ರಹಕ್ಕೆ ಬಿಸಿಲು ಮಳೆಗಳಿಂದ ಆಗುವ ಅಪಾಯಗಳನ್ನು ತಪ್ಪಿಸುವದಕ್ಕಾಗಿ ಉಪಯೋಗಿಸಬೇಕೆಂದು ನಿಷ್ಕರ್ಷಿಸಲ್ಪಟ್ಟಿತು.

೪ನೇ ದಿನದ ಸಭೆಯು

೨೯ ನೇ ತಾ ಯಥಾಪ್ರಕಾರವಾಗಿ ಸಭೆಯು ಸೇರಿತು. ಈ ದಿನ ಕೌನ್ಸೆಲರ್ ಮ|| ಎಚ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್. ರವರೇ ಮೊದಲಾದ ದೇಶೀಯ ಪ್ರಮುಖ ಅಧಿಕಾರಿಗಳು ಬಂದಿದ್ದರು. ಸಭೆಯ ಕಾರ್ಯಗಳು ಕ್ರಮಪ್ರಕಾರ ಸಾಂಗವಾಗಿ ನಡೆದ ಮೇಲೆ ಸಭೆಯವರು—ಮಹಾರಾಜಾ ಸರ್ಕಾರದವರು ಜೈನ ಜನಗಳಿಗೆ ಈ ಸ್ಥಳದಲ್ಲಿ ಸರ್ಕಾರದಿಂದಾಗುವ ಎಲ್ಲಾ ಸಹಾಯವನ್ನೂ ಬಹಳ ವಿತರಣೆಯಿಂದ ಮಾಡಿಕೊಟ್ಟಿರುವುದರಿಂದಲೂ, ಯೋಗ್ಯರಾದ ಅಧಿಕಾರಿಗಳನ್ನು ಕಳುಹಿಸಿ ಜನಗಳ ಗಲಾಟೆಯನ್ನು ಬಹಳ ತಾಳ್ಮೆಯಿಂದ ಸುಧಾರಿಸಿದ್ದರಿಂದಲೂ ಮಹಾರಾಜರವರಿಗೆ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಯನ್ನು ಅರಿಕೆಮಾಡಬೇಕೆಂದು ಕೌನ್ಸೆಲರವರನ್ನು ಪ್ರಾರ್ಥಿಸಿದರು. ಅದಕ್ಕೆ ಕೌನ್ಸೆಲರವರು—ಈ ದೇಶದಲ್ಲಿ ಜೈನರು ಕೊಂಚವೇ ಇದ್ದಾಗ್ಯೂ ನಮ್ಮ ಶ್ರೀಮನ್ ಮಹಾರಾಜರವರು ಅವರ ಮೇಲೆ ಪೂರ್ಣ ಅಭಿಮಾನವನ್ನು ಇಟ್ಟಿದ್ದಾರೆ. [illegible] ಬಹಳ ವಿಧೇಯರಾಗಿಯೂ ಗಲಾಟೆ ವಗೈರೆಗೆ ಆಸ್ಪದ ಕೊಡದೇನೂ ಇರುವ ಈ ಪ್ರಜೆಗಳಿಗೆ ಉಪಕಾರ ಮಾಡುವದರಲ್ಲಿ ಮಹಾರಾಜರವರು ಸಂತೋಷಪಡುತ್ತಾರೆಂದೂ ನಿಮ್ಮಗಳ ವಂದನೆಯನ್ನು ಮಹಾರಾಜರವರಿಗೆ ಅರಿಕೆ ಮಾಡುತ್ತೇವೆಂದೂ ಹೇಳಿದರು.

ಭಾಷಾ ಭೇದಗಳು

ಈ ಸಭೆಗೆ ನಾನಾ ಕಡೆಯ ಜನಗಳು ಸೇರಿದ್ದದ್ದರಿಂದ ಸಭೆಯ ಭಾಷಣಗಳು ಇಂಗ್ಲೀಷು, ಹಿಂದುಸ್ಥಾನಿ, ಮರಾಟಿ, ಗುಜರಾತಿ, ತಮಿಳು, ಕನ್ನಡ ಮುಂತಾದ ಭಾಷೆಗಳಲ್ಲಿ ಆಯಾಯ ಜನಗಳಿಗೆ ತಿಳಿಯುವ ಹಾಗೆ ನಡೆಸಲ್ಪಟ್ಟವು.

ಸ್ತ್ರೀಯರ ಕೂಟವು

ಕಳೆದ ತಿಂಗಳು ೨೭, ೨೮, ೨೯ ನೇ ತಾರೀಖುಗಳಲ್ಲಿ ಸಾಯಂಕಾಲ ೭ ಘಂಟೆ ಲಾಗಾಯತು ೯ ಘಂಟೆವರಿವಿಗೂ ಸ್ತ್ರೀಯರ ಸಭೆಯು ನಡೆಯುತ್ತಿತ್ತು. ಈ ಸಭೆಗಳಲ್ಲಿ ಸಭಾಧ್ಯಕ್ಷತೆಯನ್ನು ವಹಿಸಿದ್ದ ಶೇಠ ಮಾಣಿಕ ಚಂದರ ಮಗಳಾದ ಶ್ರೀಮತಿ ಮಗನಬಾಯಿ ಮುಂತಾದ ಕೆಲವು ವಿದ್ಯಾವತಿಯರು, ಸ್ತ್ರೀ ವಿದ್ಯಾಭ್ಯಾಸವನ್ನೂ ಮತ್ತು ಜೈನಧರ್ಮ ಮೊದಲಾದ ವಿಷಯಗಳನ್ನೂ ಕುರಿತು ಉಪನ್ಯಾಸ ಮಾಡಿದರು. ಉಪನ್ಯಾಸವಾದನಂತರ ಅಚ್ಚು ಹಾಕಿದ ಆ ಉಪನ್ಯಾಸದ ಪುಸ್ತಕಗಳನ್ನು ಸ್ತ್ರೀ ಸಮೂಹದಲ್ಲಿ ಹಂಚಿದರು.

ಮಸ್ತಕಾಭಿಷೇಕವು

ನಾನಾ ಕಡೆಯ ಜೈನರು ಯಾವ ಕಾರ್ಯಕ್ಕಾಗಿ ಬಂದಿದ್ದರೋ, ಈ ದೇಶದ ಜೈನ ಮತ್ತು ಇತರ ಜನಗಳು ಯಾವ ಉದ್ದೇಶವನ್ನು ಕುರಿತು ಶ್ರವಣಬೆಳುಗುಳದಲ್ಲಿ ನೆರೆದರೋ ಆ ಮಹಾ ಕಾರ್ಯವು ಕಳೆದ ತಿಂಗಳು ೩೦ನೇ ತಾ ಬುಧವಾರದ ದಿನ ನಡೆಯಲು ಆರಂಭವಾಯಿತು. [illegible] ೬೦ ಸಹಸ್ರ ಜನಗಳು ಕೂಡಿದ್ದರು. ಎರಡು ಬೆಟ್ಟಗಳ ಮೇಲೆಯೂ ಮಧ್ಯೆ ಮೈದಾನದಲ್ಲಿಯೂ ಎಲ್ಲಿ ನೋಡಿದರೂ ಜನಗಳೇ ತುಂಬಿ ತುಳುಕುತ್ತಿದ್ದರು. ಮಸ್ತಕಾಭಿಷೇಕ ಪೂಜಾ ಮಹೋತ್ಸವವು ಸುಮಾರು ೨ ಘಂಟೆಗೆ ಪ್ರಾರಂಭವಾಗಿ ಸಾಯಂಕಾಲ ೭ ಘಂಟೆ ವರೆಗೂ ನಡೆಯಿತು. ಜನಗಳಿಗೆ ಪೂಜೋತ್ಸವಗಳನ್ನು ನೋಡುವ ಉತ್ಸಾಹಪೂರ್ವಕವಾದ ಹರ್ಷದಿಂದ ಬಿಸಿಲಿನ ತಾಪವು ಬೆಳದಿಂಗಳಂತೆ ಆಪ್ಯಾಯಮಾನವಾಗಿ ಪರಿಣಮಿಸಿತು. ಈ ದಿನ ಪೋಲೀಸ್ ಅಧಿಕಾರಿಗಳು ಮಾಡಿದ ಸುಧಾರಣೆಯು ಬಹಳ ಶ್ಲಾಘನೀಯವಾದದ್ದಾಗಿದೆ. ಅವರ ತಾಳ್ಮೆಯೂ ಕಾರ್ಯನಿರ್ವಾಹಕ ಶಕ್ತಿಯೂ ಎಷ್ಟು ಹೇಳಿದರೂ ಕೊಂಚವಾಗಿಯೇ ಇದೆ. ಇಂಥಾ

...ಗಳನ್ನು ಸರ್ಕಾರದವರು ಇದರ ಗಣತಿ ಕೆಲಸಗಳಿಗೆ ಕಳುಹಿಸಿದರೆ ಜನರಿಗೆ ಬಹು ಸಹಾಯವಾಗುತ್ತದೆ

ಈ ವಿಷದ ಪೂಜೋತ್ಸವಗಳನ್ನು ಬಂದಿದ್ದ ಎಲ್ಲಾ ಜನಗಳೂ ನೋಡಲು ಸ್ಥಳವಾಗದೆ ಇದ್ದದ್ದರಿಂದ ೧, ೨, ೩ನೇ ತಾರೀಖುಗಳ ದಿನವೂ ಕೂಡ ಬೇರೆ ಬೇರೆ ಪಟ್ಟಾಚಾರ್ಯರುಗಳು ಮಹಾಂಭಿಷೇಕ ಪೂಜೋತ್ಸವಗಳನ್ನು ಮಾಡಿಸಿದ ಕಾರಣ ಅನೇಕ ಜನಗಳೆಲ್ಲರೂ ಪೂಜೆಗಳನು ನೋಡಿ ತೃಪ್ತಿಹೊಂದಿ ತಮ್ಮ ತಮ್ಮ ಸ್ಥಳಗಳಿಗೆ ಹೋಗುತ್ತಿದ್ದಾರೆ. ಸ್ವಾಗತ ಕಮಿಟಿಯ ಮೆಂಬರುಗಳೆಲ್ಲರೂ ಮತ್ತು ಸೆಕ್ರೆಟರಿಯವರೂ ತುಂಬಾ ತಕ್ಕರಾಗಿಯೂ ಕಾರ್ಯನಿರ್ವಾಹಕರಾಗಿಯೂ ಇದ್ದು, ಪೂಜೆ ಮತ್ತು ಸಭೆಯ ಕಾರ್ಯಗಳನ್ನು ಸಕಾಲಗಳಲ್ಲಿ ನಿರ್ವಿಘ್ನವಾಗಿಯೂ ಕ್ರಮಪ್ರಕಾರವಾಗಿಯೂ ನಡಿಸಿದರು. ನೆರೆದಿದ್ದ ಸಮಸ್ತ ಜನರಿಗೂ ಊಟದ ಏರ್ಪಾಟುಗಳನ್ನು ಕಲ್ಪಿಸಿಕೊಟ್ಟಿದ್ದರಿಂದ ಎಲ್ಲರೂ ಸಂತೋಷಪೂರ್ವಕವಾಗಿ ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿದರು.

ವೈ. ಬಿ. ಆರ್.

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವುದಿಲ್ಲವೆಂಬುದನ್ನು ಸಹ ಎಲ್ಲರೂ ತಿಳಿಯತಕ್ಕದ್ದು. — ಎಡಿಟರ್.

ಕರೆಸ್ಪಾಂಡೆನ್ಸ್

ವರ್ತಕರ ಧರ್ಮವು

ಅಯ್ಯಾ,

ಮದ್ರಾಸು ಸಾಹುಕಾರಪೇಟೆ ಯಂಪರರ್ ವಾಚು ಕಂಪನಿಯವರು ಕಳುಹಿಸಿದ ಪ್ರಕಾರ ದರಖಾಸ್ತು ಕಳುಹಿಸಿದೆನು. ನನ್ನ ದರಖಾಸ್ತು ಕೆಲ ಸಾಮಾನುಗಳನ್ನು ಕಳುಹಿಸಿ, ಇನ್ನು ಕೆಲ ಸಾಮಾನುಗಳನ್ನು ಕಳುಹಿಸದೆ, ಎಲ್ಲಾ ಒಟ್ಟು ಸಾಮಾನಿನ ಬೆಲೆ ವಿ. ಪಿ. ಪಡೆದರು. ಆಗ ೨ ೩ ಕಾಗದ ಬರೆದರೂ ಅವರುಗಳು ಯಾವ ಜವಾಬೂ ಇಲ್ಲ, ಹಣವೂ ಇಲ್ಲ, ಸಾಮಾನೂ ಇಲ್ಲ. ಇಂಥಾ ಮೋಸ ಮಾಡುವರು. ಇದೇ ಮದರಾಸು ಸಾಹುಕಾರ್ ಪಾರಲ್ ವಾಚು ಕಂಪನಿಯವರು ಸಹ ಬೆಂಗಳೂರಿನ ಆಫೀಸಿನ ಕಂಪನಿಯವರು ಮಾಡಿ ಮೋಸವನ್ನು ಅನೇಕರು ಪತ್ರಿಕೆಗಳ ಮುಖಾಂತರ ಎಲ್ಲರಿಗೂ ಜ್ಞಾಪಿಸಿದ್ದರೂ ಬರೆದಿದ್ದಾರೆ. ಇನ್ನು ಮುಂದೆ ಬುದ್ಧಿ ಮಾತ್ರರಾಗಿ ವ್ಯವಹಾರ ಮಾಡಿ ಕೊಳ್ಳಬೇಕು ಎಂಬುದಾಗಿ ಕೇಳುತ್ತೇನೆ.

ಸಿರಾ ತಾ|| ಮದಲೂರು. ವೈಶ್ಯರ ವೆಂಕಟ ನಾರಾಯಣಪ್ಪ

ದಾವಣಗೆರೆ ಟೌನ್ ಮುನಿಸಿಪಲ್ ದೀಪಗಳು

ಅಯ್ಯಾ,

ಈ ದಾವಣಗೆರೆ ಟವುನಿನಲ್ಲಿ ಜನಗಳಿಗೆ ಸುಖವಾಗತಕ್ಕ ಬಗ್ಗೆ ವಿಶೇಷವಾಗಿ ಸಂಚರಿಸತಕ್ಕ ಬಗ್ಗೆ ಸರ್ಕಾರದವರು ಯೋಚನೆಮಾಡಿ ಮುನಿಸಿಪಲ್ ಲಾಂದ್ರಗಳನ್ನು ಬೆಳಕಿಗೋಸ್ಕರ ಇಡಿಸಿರುವುದು ಸರಿಯಷ್ಟೆ. ಈ ಮ್ಯುನಿಸಿಪಲ್ ಲಾಂದ್ರಗಳ ಕೆಲಸ ಸರಿಯಾಗಿ ನಡೆಯದೆ ಮತ್ತು ಸರಿಯಾಗಿ ಎಣ್ಣೆ ಹಾಕದೆ ಸಮಯಕ್ಕೆ ಒದಗದೆ ಇರುವದರಿಂದ ಆ ದೀಪಗಳು ರಾತ್ರಿ ೭-೮ ಘಂಟೆ ಒಳಗಾಗಿ ಆರಿ ಹೋಗುತ್ತವೆ. ಒಂದು ವೇಳೆ ಕೆಲ ಕೆಲವು ಕಡೆ ಲಾಂದ್ರಗಳ ಬೆಳಕು ಇದ್ದಾಗ್ಯೂ ಲಾಂದ್ರಗಳನ್ನು ಸರಿಯಾಗಿ ಒರಸದೆ ಇರುವ ಕಾರಣ ಬೆಳಕೇ ಆಗುವದಿಲ್ಲ. ಈ ಊರಲ್ಲಿ ರಾತ್ರಿ ೧೨ ಘಂಟೆ ವರೆಗೂ ಬೆಸ್ತ್ಯ, ಲೇವಾದೇವಿ, ವ್ಯಾಪಾರಗಳು ನಡೆಯುತವೆ. ಈ ಕೆಲಸಗಳನ್ನು ಮಾಡಿಕೊಳ್ಳುವದಕ್ಕೆ ಬಹಳ ಪ್ರತಿಬಂಧಕವಾಗುತ್ತೆ. ಮತ್ತು ಯಾವಾಗಲೂ ಸರ್ಕಾರಿ ಮೇಲಾಫೀಸರುಗಳು ಮೊದಲು ಊರಲ್ಲಿ ಇದ್ದ ಕಾಲದಲ್ಲಿ ಈ ಕೆಲಸಗಳು ಸರಿಯಾಗಿ ನಡೆಯುತ್ತಾ ಇದ್ದವು. ಈಗ ಸರಕಾರಿ ಆಫೀಸರು ಊರ ಹೊರಗೆ ಇರುವದರಿಂದ ಯಾವ ಭಯ ಕಾರಣವೂ ಇಲ್ಲದೆ ಇಂಥಾ ಕೆಲಸಗಳು ನಡೆಯುತ್ತವೆ. ಈ ಲಾಂದ್ರಗಳ ವಿಷಯದಲ್ಲಿ ಸರ್ಕಾರಕ್ಕೆ ಏನು ಖರ್ಚಾಗುವದೂ ಜನಗಳಿಗೆ ಪ್ರತಿಬಂಧವೂ ತಪ್ಪುವ ಹಾಗೆ ಇಲ್ಲ.

ಗುರಪ್ಪ ಶಿಲಗುಂಡದರ
ಮುಂತಾದ ವರ್ತಕರೂ ಸಾಹುಕಾರರೂ

ಮದ್ದಗಿರಿ ಬಸ್ತಿ ದೇವಸ್ಥಾನದ ವಿಷಯ

ಅಯ್ಯಾ,

ಮದ್ದಗಿರಿ ಬಸ್ತಿ ದೇವಸ್ಥಾನದ ಅರ್ಚಕ ಅಪ್ಪಣ್ಣನವರಿರುವ ವರೆಗೂ ಒಳ್ಳೇ ಸ್ಥಿತಿಯಲ್ಲಿತ್ತು. ಅವರ ಕಾಲವಾದ ನಂತರ ಪಾಯಣ್ಣನೆಂಬಾತನು ಪೂಜಿಸುತ್ತಿದ್ದನು. ಆತನು ಕಾರ್ಯಗಳನ್ನು ಸರಿಯಾಗಿ ನಡಿಸುತ್ತಿರಲಿಲ್ಲ. ಆಗ ಮದ್ದಗಿರಿ ವಾ. ಚಿಕ್ಕಣ್ಣಯ್ಯನವರೇ ಮೊದಲಾದ ಶ್ರಾವಕರು ಒಬ್ಬ ಒಳ್ಳೇ ಪೂಜಕನನ್ನು ನೇಮಕ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡರು. ಸರ್ಕಾರದವರು ನೀವುಗಳೇ ಒಬ್ಬ ಯೋಗ್ಯ ಪೂಜಾರಿಯನ್ನು ಗೊತ್ತುಮಾಡಿ ನೇಮಕ ಮಾಡತಕ್ಕದ್ದು ಎಂದು ಹೇಳಿದರು. ಆದೇ ಮೇರೆ ವಾ. ಚಿಕ್ಕಣ್ಣಯ್ಯನವರು ಮತ್ತು ಮದ್ದಗಿರಿ ತಾಲ್ಲೂಕಿಗೆ ಸಂಬಂಧಪಟ್ಟ ಹಳ್ಳಿಗಳಲ್ಲಿರುವ ಶ್ರಾವಕರು ಸಹ ಬ್ರಹ್ಮಸೂರಯ್ಯನೆಂಬ ಪೂಜಾರಿಯನ್ನು ಚುನಾಯಿಸಿದರು. ಅದಕ್ಕೆ ಮದ್ದಗಿರಿಯ ಇತರ ಶ್ರಾವಕರು ಒಪ್ಪದೆ ಆ ಪೂಜಾರಿಯನ್ನು ತಿರಸ್ಕರಿಸಿ, ಪಾಯಣ್ಣನೇ ಇರಬೇಕೆಂದು ಹೇಳಿದರು. ತಾಲ್ಲೂಕು ಆಫೀಸರವರು ಇವರಿಬ್ಬರನ್ನೂ ಪರೀಕ್ಷಿಸಿ ಬ್ರಹ್ಮಸೂರಯ್ಯನೇ ಲಾಯಖೆಂದು ಮೇಲಕ್ಕೆ ಬರೆದರು. ಅದೇ ಮೇರೆ ಬ್ರಹ್ಮಸೂರಯ್ಯನ ಹೆಸರಿಗೆ ನೌಕರಿ ಮಂಜೂರಾಗಿ ಬಂತು. ಆತನು ಪೂಜಾ ಕಾರ್ಯಗಳನ್ನು ಸರಿಯಾಗಿ ನಡಿಸುತ್ತಾ ಇದ್ದದ್ದರಿಂದ ಬಸ್ತಿ ದೇವಸ್ಥಾನವು ಊರ್ಜಿತ ಸ್ಥಿತಿಯಲ್ಲೇ ಇತ್ತು. ಆತನು ಕಾಲವಾದ ನಂತರ ಪಾರ್ಶ್ವನಾಥಯ್ಯನೆಂಬುವರನ್ನು ಸರ್ಕಾರದವರು ನೇಮಕವಾಡಿದಾರೆ. ಇವರೂ ಬ್ರಹ್ಮಸೂರಯ್ಯನವರ ಹಾಗೇ ಕೆಲಸ ಸಾಂಗವಾಗಿ ನಡಿಸುತ್ತಾ ಇರುವುದರಿಂದ ಈ ಬಸ್ತಿಯು ಅನಾಯಕಸ್ಥಿತಿಗೆ ಎಂದಿಗೂ ಬರುವುದಿಲ್ಲವೆಂದು ಹೇಳಬಹುದು. ಈ ಬಸ್ತಿಯು ಈಗ ಇಷ್ಟು ಒಳ್ಳೇ ಸ್ಥಿತಿಯಲ್ಲಿರುವುದಕ್ಕೆ ಕಾರಣವೇನೆಂದರೆ— (೧) ಮ್ಯುನಿಸಿಪಲ್ ಮೆಂಬರ್ ವಾ. ಚಿಕ್ಕಣ್ಣಯ್ಯನವರೇ ಮುಂತಾದವರು ಮುಖಂಡರಾಗಿ ನಿಂತು ಕಾರ್ಯವನ್ನು ನಡಿಸುವದು, (೨) ವಾ. ಚಿಕ್ಕಣ್ಣಯ್ಯ, ನಾಗಪ್ಪಯ್ಯ, ಇವರುಗಳನ್ನು ಧರ್ಮದರ್ಶಿಗಳಾಗಿ ನೇಮಕಮಾಡಿಕೊಂಡಿರುವುದು. ಜೈನಪ್ರಜೆಗಳು ಮದ್ದಗಿರಿ ಬಸ್ತಿಯು ಅನಾಯಕಸ್ಥಿತಿಯಲ್ಲಿತ್ತೆಂದು ತಿಳಿದು ಪೂಜೆ ಮುಂತಾದ ಕಾರ್ಯಗಳನ್ನು ಮಾಡಿಸಿಕೊಳ್ಳಲು ಬರುತ್ತಿರಲಿಲ್ಲ. ಆದರೆ ಈಗ ಬಹಳ ಮಟ್ಟಿಗೆ ಉದ್ಧಾರಸ್ಥಿತಿಯಲ್ಲಿದೆ ಎಂದು ಎಲ್ಲರೂ ತಿಳಿಯತಕ್ಕದ್ದು.

ಸಿ. ಲ.

ಖೂನಿಗಳು

ಅಯ್ಯಾ,

ಮಹಾಶಯರೇ, ಈ ನಮ್ಮ ಮೈಸೂರು ಸಂಸ್ಥಾನದಲ್ಲಿ ಕೆಲವು ವರ್ಷಗಳ ಹಿಂದೆ ಅಕಸ್ಮಾತ್ ಎಲ್ಲಿಯಾದರೂ " ಖೂನು " ನಡೆಯಿತೆಂದರೆ ಈ ವಿಷಯವನ್ನು ಕೇಳಿದ ಸರ್ವರೂ ಬಹು ದಿನದ ವರೆಗೂ ಇದೊಂದು ಭಯಂಕರ ಪಾತಕಾರ್ಯವೆಂದು ಆಡಿಕೊಳ್ಳುತ್ತಾ ಕಂಪಿಸುತ್ತಿದ್ದರು. ಈಗಲಾದರೋ ಇದು ಸರ್ವಸಾಧಾರಣ ವಾಡಿಕೆ ಕಾರ್ಯವೆಂದು ಲಕ್ಷಿಸುವದೇ ಇಲ್ಲ. ಸಹವಾಸ ದೋಷದಿಂದ ಪ್ರಬಲ ಹೆಸಿಗೆಬಂದ ಈ ಕ್ರೂರ ಕೃತ್ಯವು ವರ್ಷವರ್ಷಕ್ಕೂ ಹೆಚ್ಚಿ ಈ ಸಲ ನಮ್ಮ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮಾತ್ರವೇ ಆರು ತಿಂಗಳೊಳಗಾಗಿ ೧೧ ೧೨ ಹತ್ಯಗಳಾಗಿರುತ್ತವೆಂದು ತಿಳಿಸಲು ವಿಷಾದವಾಗುತ್ತಿದೆ. ಹೀಗಾಗುವುದಕ್ಕೆ ಪ್ರಬಲವಾದ ಕಾರಣವೇನೋ ಇರಬೇಕೆಂದು ವಾಚಕರ ಶಂಕೆಸಬಹುದು. ಅದು ಈಗ " ಕುರಿ—ಕೋಳಿ " ಎಂಬ ಕಥೆಯಂತೆ ಪರಿಣಮಿಸಿರುವುದು.

ಮನುಷ್ಯರನ್ನು ಮನುಷ್ಯರು ಕೊಲ್ಲುವುದು ನೋಡಿದರೆ ನರಭಕ್ಷಕರೇ ಅವತರಿಸಿದರೆಂದು ಯಾಕೆ ಹೇಳಬಾರದು ? ಇದಕ್ಕನುಸಾರವಾಗಿ ಈಗೀಗ ನಮ್ಮನ್ನಾಳುವ ಆಂಗ್ಲ ಪ್ರಭುಗಳ ಮೇಲೆ, ಅವರು ಸಾಧುಗಳಾಗಿ ಸರ್ವ ವಿಷಯದಲ್ಲಿಯೂ ಸಮುಪಕಾರ ಮಾಡುತ್ತಿದ್ದರೂ, ನೀಚರು ದುರಾಲೋಚನೆಯಿಂದ ಅವರ ರಾಜ್ಯಾಂಗಗಳಾದ ಅಧಿಕಾರಿಗಳನ್ನು ಕೊಲ್ಲುತ್ತಾ ಕುಚೇಷ್ಟೆಗಳನ್ನು ಮಾಡಿದಕಾರಣ ಆ ಮಹಾ ಪಾತಕಿಗಳನ್ನು ಗಲ್ಲಿಗೆತ್ತಿ, ಕಠೋರತರ ಶಾಸನಗಳನ್ನು ಜಾರಿಯಲ್ಲಿ ದರ್ಪವಾಗಿ ಮಾಡುವರ್ಷ ವಹಿಸಿ ರಕ್ಷಿಸಿದ್ದರಿಂದ ಇತ್ತೀಚೆಗೆ ದುಷ್ಪ್ರವರ್ತನೆಯ ಅಂಕುರಗಳು ಮೂಲೋತ್ಪಾಟನವಾಗುವ ಸೂಚನೆ ತೋರುವುದು. ಉತ್ತರದೇಶದ ರಾಜದ್ರೋಹಿಗಳಂತೆ ನಮ್ಮ ದೇಶದ ಪ್ರಜಾ ದ್ರೋಹಿಗಳನ್ನು ಅತಿ ಕಠಿಣವಾಗಿ ಶಿಕ್ಷಿಸುವುದರಲ್ಲಿ ನಮ್ಮ ದರ್ಮ ಸರ್ಕಾರದವರು ದರ್ಪವನ್ನು ತೋರಿಸಲೇ ಬೇಕಾಗಿರುವುದು. ಯಾಕೆಂದರೆ ಹೀನರಾದ ಅವಿವೇಕಿಗಳು ತಾವು ಮಾಡಿದ ನಿಜವಾದ ತಪ್ಪಿಗೆ ಕಾರಣಾಂತರ ಶಿಕ್ಷೆಯು ತಪ್ಪಿದರೆ ತಮ್ಮ ತಪ್ಪಿಗಾಗಿ ಸರ್ವಾಂತರ್ಯಾಮಿಯಾದ ಭಗವಂತನಲ್ಲಿ ಕ್ಷಮೆಯನ್ನು ಕೇಳಿಕೊಳ್ಳುವುದಕ್ಕೆ ಬದಲಾಗಿ ಜಯವನ್ನು ಹೊಂದಿದೆವೆಂಬ ಅಹಂಕಾರದಿಂದ ಮತ್ತೊಮ್ಮೆ ಅದೇ ಮಾರ್ಗದಲ್ಲಿ ಪ್ರವೇಶಿಸುವುದಲ್ಲದೆ ಅವರ ಹಿಂಬಾಲಕರನ್ನೂ ಅದೇ ಮಾರ್ಗಕ್ಕೆ ಎಳೆಯುವರು. ಯೋಗ್ಯನೂ ಪರೋಪಕಾರಿಯೂ ಆಗಿದ್ದ ಭೀಮಸಮುದ್ರದ ತೋಟದ ಶಿವಪ್ಪನನ್ನು ಕೊಂದದ್ದು ಮೇಲ್ಕಂಡ ಕಥೆಯ ಸಾಮ್ಯವಾಗಿಯೇ ಇರುವುದು. ಆ ಕೊಲೆಪಾತಕಿ ಎಂದು ಅಪಾದಿಸಲಾಗಿದ್ದವನ ಬಿಡುಗಡೆ ಮಾಡಿದ್ದು ಎರಡು ಧರ್ಮಶೀಲರಾದ ಈಗಿನ ನಮ್ಮ ದಿವಾನ್ ಬಹದ್ದೂರರವರು ನ್ಯಾಯವನ್ನು ಕಂಡು ಬಿಡಿದು ಮುಲಾಜಾದ ಅಪರಾಧಿಯನ್ನು ಪುನಹ ಹಿಡಿಯುವಂತೆ ಅಪ್ಪಣೆ ದಯಪಾಲಿಸಿರುವರೆಂದು ಕೇಳಿ ಸಾತ್ವಿಕ ಪ್ರಜೆಗಳೆಲ್ಲರೂ ಮಹದಾನಂದ ಪಡುತ್ತಿರುವರು. ಇದಲ್ಲವೇ ದುಷ್ಟನಿಗ್ರಹ ಶಿಷ್ಟ ಪರಿಪಾಲನವು. ಪ್ರಕೃತ ವಿಚಾರಣೆಗೆ ಗುರಿಯಾಗಿ ಸೆರೆಮನೆಯಲ್ಲಿರುವ ಅಪರಾಧಿಗಳು ಪಂಚಾಕ್ಷರಿ ಪಠನ ಮಾಡುತ್ತಿರಬಹುದು. ಮೊದಲು ದುರ್ಗುಣ ಭರಿತರಾದ ನರದಾನ್ತಕರು ಇಂಗ್ಲೀಷ್ ಯೋಗ್ಯ ಸತ್ಪುರುಷರೂ, ರಾಜಭಕ್ತಿಯುಳ್ಳ, ಪಾಪಭೀತರೂ ಆದ ಸಜ್ಜನರಿಂದ ದೇಶವು ನಿಬಿಡೀಕೃತವಾಗಲಿ ಎಂದು ದೇವರನ್ನು ಪ್ರಾರ್ಥಿಸೋಣ.

ಸಜ್ಜನವಿಧೇಯ

ಕಾಫೀ ಮತ್ತೂ ಟೀ

ಅಯ್ಯಾ,

ತಮ್ಮ ಈ ತಿಂಗಳು ೭ನೇ ತಾ|| ಪತ್ರಿಕೆಯಲ್ಲಿ ಒಬ್ಬಾತನೊಬ್ಬರು ಕಾಫಿ ಮತ್ತೂ ಟೀಗಳ ದೂಷಣೆಯನ್ನು ಮಾಡಿ ಬರೆದಿರುವದನ್ನು ನೋಡಿದೆನು. ಇವರು ಇವುಗಳನ್ನು ಮದ್ಯದ ಗುಂಪಿನಲ್ಲಿ ಸೇರಿಸಿರುವದು ಬಹಳ ದುಃಖಕರವು. ಈ ಸರ್ವೋತ್ಕೃಷ್ಟವಾದ ಪದಾರ್ಥಗಳನ್ನು ದೂಷಿಸೋಣದರಿಂದ ತಾವು ಆಯುರ್ವೇದ ಸಂಪ್ರದಾಯವಾದಿಗಳೆಂದು ಹೊಗಳಿಸಿಕೊಳ್ಳುವ ಅಭಿಪ್ರಾಯದವರೆಂದು ವ್ಯಕ್ತವಾಗುತ್ತೆ. ಅನ್ನವನ್ನು ತಿಂದರೆ ಹೊಟ್ಟೆನೋಯುತ್ತೆಂದು ಅಪಕ್ವವಾದ ಅಥವಾ ಹೊಸ ಅಕ್ಕಿಯಿಂದ ಮಾಡಲ್ಪಟ್ಟ ಅಥವಾ ಹಸಿವಾಗಿ ಕುಟ್ಟಿ ತೌಡು ಮುಂತಾದದ್ದನ್ನು ಬೇರ್ಪಡಿಸದ ಅಕ್ಕಿಯಿಂದ ಮಾಡಲ್ಪಟ್ಟ ಅನ್ನವನ್ನು ತಿಂದವನು ಜರಿದರೆ ಅನ್ನವನ್ನು ಬಿಡಬಹುದೇ ? ನನ್ನ ಅನುಭವವನ್ನು ಟೀ, ಕಾಫಿ ದ್ವೇಷಿಗಳ ಅವಧಾನಕ್ಕಾಗಿ ಅರಿಕೆಮಾಡುವದನ್ನು ಪ್ರಚುರ ಪಡಿಸಬೇಕೆಂದು ಬೇಡುತ್ತೇನೆ. ನಾನು ೧೮೮೦ ನೇ ವರುಷದ ಮಾರ್ಚಿ ಆಖೈರು ವರೆಗೆ ಮೈಸೂರು ಸೀಮೆಯಲ್ಲಿ ಸರಕಾರದ ಕೆಲಸದಲ್ಲಿದ್ದು ಆ ಇಸವಿ ಏಪ್ರಿಲ್ ೧ ರಿಂದ ಕೊಡಗು ದೇಶದ ನೌಕರಿಗೆ ಹೋಗಬೇಕಾಗಿ ಬಂತು. ಆ ವರೆಗೆ ಕಾಫೀ ಗಿಡದ ಸಂಬಂಧವಾದ ಯಾವದನ್ನೂ ನಾನು ಕಣ್ಣಿನಿಂದಲೇ ನೋಡಿರಲಿಲ್ಲ. ಆ ದೇಶದಲ್ಲಿ ಕೆಲಸಮಾಡಲು ಹೋದ ದಿವಸವೇ ಅಲ್ಲಿನವರು ಕಾಫಿಯನ್ನು ಬೇಗ್ಗೆ ಕುಡಿದ ಹೊರತು ಹೊರಗೆ ಹೊರಟಲ್ಲಿ ಖಂಡಿತವಾಗಿಯೂ ಬಹಳ ಕಾಯಿಲೆಯುಂಟಾಗುವದು ಎಂದು ಬಹಳವಾಗಿ ಬೋಧಿಸಿ, ಅವರೇ ಮಾಡಿ ಕುಡಿಸಿ ಕಳುಹಿಸಿದರು. ಆ ದಿವಸ ನನಗೆ ಕೇವಲ ರುಚಿಯಾಗಿ ಇದ್ದಂತೆ ತೋರದೇ ಇದ್ದಾಗ್ಯೂ ಮಧ್ಯಾಹ್ನ ೧೨ ಘಂಟೆಯ ವರೆಗೂ ಸ್ವಲ್ಪವಾದರೂ ಹಸಿವು ಬಳಲಿಕೆಯೂ ಆಗದೆ ಅತ್ಯಾವರ್ತ ಕುದುರೆಯಿಂದ ಇಳಿಯುತ್ತಾ ಹತ್ತುತ್ತಾ ೧೫ ೧೬ ಮೈಲಿ ದೂರ ಉಲ್ಲಾಸದೊಡನೆ ಕೆಲಸಮಾಡಿಕೊಂಡು ಬಂದೆನು. ಈ ಗುಣವನ್ನರಿತ ನಾನು ಆ ದೇಶದಲ್ಲಿರುವ ವರೆಗೂ ಮಾತ್ರವಲ್ಲದೆ ಅಲ್ಲಿ ೬ ೭ ವರುಷಗಳಷ್ಟು ಪುನಹ ಈ ದೇಶಕ್ಕೆ ಬಂದ ಮೇಲೂ ಈ ದಿವಸದ ವರೆಗೂ ಉಪಯೋಗಿಸುತ್ತಾ ಇದ್ದೇನೆ. ಹೀಗೆ ಮುದುಕನವರಲ್ಲಿ ಪ್ರಾತಃಕಾಲ ೭ ಘಂಟೆಯಿಂದ ೧೧ ಘಂಟೆ ವರೆಗೆ ಅವಿಚ್ಛಿನ್ನವಾಗಿ ಬರೆಯುತ್ತಲೋ ಓದುತ್ತಲೋ ಇರುತ್ತೇನೆ. ಕಾರಣಾಂತರದಿಂದ ಯಾವ ದಿವಸ ಈ ಪ್ರಯೋಗವಿಲ್ಲವೋ ಆ ದಿವಸ ನನ್ನ ವಯಸ್ಸಿನ ಇತರ ವೃದ್ಧರಂತೆ ಸುಮ್ಮನೆ ಕುಳಿತುಕೊಂಡು ಇರಬೇಕಾಗುತ್ತೆ. ಈಗಲಂತೂ ಹುಣಸೂರಿನಲ್ಲಿ ತಯಾರಾಗುತ್ತಿರುವ ಮ್ಯಾಥಿಸನ್ ಯವರ ಪುಡಿಯು ಸರ್ವೋತ್ಕೃಷ್ಟವಾದದ್ದು ಸಿಕ್ಕುತ್ತೆ. ಇದನ್ನು ಹದವರಿತು ಮಾಡಿಕೊಂಡು ಕುಡಿದರೆ ವಿಷ ತಿನ್ನುವದಕ್ಕೆ ಬದಲಾಗಿ, ಅಮೃತವೆಂತಲೇ ಹೇಳಬಹುದಾಗಿದೆ. ಕಾಫಿಯನ್ನು ಮಾಡುವ, ಕುಡಿಯುವ, ಇದರ ಅನುಪಾನ, ಕಾಲಗಳನ್ನು ಸರಿಯಾಗಿ ಕ್ಲುಪ್ತಮಾಡಿ ಪ್ರಯೋಗಿಸಿದರೆ ಇದೇ ಸಂಜೀವನವು. ಇದು ಆಲಸ್ಯವೆಂಬ ಅರಳಿಗೆ ಬೆಂಕಿಯು. ಶೈತ್ಯವೆಂಬ ಪರ್ವತಕ್ಕೆ ವಜ್ರವು. ಅಜೀರ್ಣವೆಂಬ ಕಾಡಿಗೆ ಕುಠಾರವು. ಮಲಬದ್ಧವಾದಾಗ ಕುಡಿದರೆ ಪ್ರವರ್ತಿಯಾಗುವದು. ಹೆಚ್ಚಾಗಿ ಪ್ರವರ್ತಿಗಳಾಗುವಾಗ ಕುಡಿದರೆ ನಿಂತುಹೋಗುವದು. ಈಗ ನನಗೆ ೬೭ ವರುಷ ವಯಸ್ಸಾಗಿದೆ. ಈಗ ಸುಮಾರು ೩೧ ವರುಷಗಳಿಂದಲೂ ಕಾಫಿಯನ್ನು ಬಳಸುವದರಲ್ಲಿ ನನಗೆ ಯಾವ ದೋಷವೂ ತೋರಲಿಲ್ಲ. ಗುಣಗಳು ಮಾತ್ರ ಅಗಣಿತ. ಕನ್ನಡಕವಿಲ್ಲದೆ ಎಂಥಾ ಸಣ್ಣ ಇಂಗ್ಲಿಷ್ ಅಕ್ಷರವನ್ನೂ ಮೊಂಬತ್ತಿ ದೀಪವುಳ್ಳ ಕೊಠಡಿಯಲ್ಲಿ ರಾತ್ರೀವೇಳೆಯೂ ಓದುತ್ತಾ ಇದ್ದೇನೆ. ಅತಿ ದೂರದಲ್ಲಿ ಆಡಿದ ಮಾತುಗಳು ಸಹ ಕೇಳುತ್ತವೆ. ಯೌವನಸ್ಥನಾಗಿದ್ದ ವೇಳೆ ಹ್ಯಾಗೆ ಇತ್ತೋ ಈಗಲೂ ಹಾಗೆ ಜೀರ್ಣಶಕ್ತಿ ಇದೆ. ರಾತ್ರಿ ೯ ಘಂಟೆಗೆ ಮಲಗುವಾಗ ಜಲಶಂಕೆಗೆ ಹೋದರೆ ಪುನಹ ಪ್ರಾತಃಕಾಲ ೪ ಘಂಟೆ ವರೆಗೆ ಆ ಶಂಕೆಯೇ ಇಲ್ಲ. ಪ್ರಾತಃಕಾಲ ೨ ಮೈಲಿ, ಸಾಯಂಕಾಲ ೨ ಮೈಲಿ ಸಂಚಾರಹೋಗಿ ಬರುತ್ತೇನೆ. ಟೀ ವಿಚಾರವೂ ಹೀಗೇ ಸರಿ. ಆದರೆ ಕೆಟ್ಟ ಟೀಗಳು ಅನೇಕವಿವೆ. ಅವುಗಳಿಂದ ವಿರೋಧವಾಗುವದರಲ್ಲಿ ಸಂಶಯವೂ ಇಲ್ಲ, ರುಚಿಯೂ ಅಸಹ್ಯವಾದದ್ದೇ. ಹರದೀ ಪೇಪರುಳ್ಳ ಲಿಪ್ಟನ್ ಯವರ ಟೀಯನ್ನು ಹದವರಿತು ಮಾಡಿ ಕಾಲವರಿತು ಕುಡಿದರೆ ರುಚಿಯಲ್ಲಿ ಅಮೃತವು, ಗುಣದಲ್ಲಿ ಸಂಜೀವನವು. ಈ ಕಾಫಿ, ಟೀಗಳ ವಿಷಯದಲ್ಲಿ ಇನ್ನೂ ಬಹಳ ತಿಳಿಸಬಹುದು. ಸದ್ಯ ಇಷ್ಟಕ್ಕೇ ಮಾನಸೀಕ ಮಾಡಿರುತ್ತೇನೆ.

ಗುಣಗ್ರಾಹಿ

ತಾಲ್ಲೂಕು ವರ್ತಮಾನಗಳು.

ಶಿರಾ.—ಈ ತಾಲೂಕಿಗೆ ಸೇರಿದ ಮದಲೂರು ಗ್ರಾಮದಲ್ಲಿ ಈ ವರ್ಷ ಕಾಮನಹಬ್ಬ ಬಹಳ ವಿಜೃಂಭಣೆಯಿಂದ ನಡೆಯಿತು. ಇದಕ್ಕೆಲ್ಲ ಈ ಗ್ರಾಮದ ತಣವಾರ ಕಿತ್ತ ಅಗಳಿ ತಿಮ್ಮನಾಯಕನು ಇದರ ಎಲ್ಲಾ ಖರ್ಚುಗಳನ್ನು ತಾನೇ ವಹಿಸಿ ನಡಿಸಿದನು. ಇದೇ ಈತನ ಔದಾರ್ಯವನ್ನು ನೋಡಿ ಅನೇಕರು ಸಂತೋಷಪಟ್ಟರು.—ಇಲ್ಲಿ ಬಿಸಿಲಿನ ತಾಪವು ಬಹಳ ಹೆಚ್ಚಾಗಿರುತ್ತೆ. ಜನಗಳ ಪಾನಾದಿಗಳಿಗೆ ನೀರಿನ ಕಷ್ಟವನ್ನು ವಿವರಿಸಲಶಕ್ಯವಾಗಿದೆ. ಸಾಧಾರಣವಾಗಿ ೨—೩ ಪಲ್ಲಾಗಿಗಿಂತ ಹೆಚ್ಚಾಗಿ ಯೋಗಿ ತೋಟದ ಭಾವಿಗಳಿಂದ ತರಬೇಕಾಗಿದೆ. ಅದರಲ್ಲಿ ಕೆಲ ಭಾವಿಗಳಲ್ಲಿ ಕಪಿಲೆ ಕಟ್ಟಿದರೆ ಇನ್ನೂ ಮುಂದಕ್ಕೆ ಹೋಗಿ ನೀರನ್ನು ತರಬೇಕು. ಈ ಗ್ರಾಮದಲ್ಲಿ ಇಂಥಾ ನೀರಿನ ಕ್ಷಾಮವೇ ಆಗಲಿ, ಆಹಾರ ಪದಾರ್ಥದ ಕ್ಷಾಮವೇ ಆಗಲಿ, ಗೋಕಾಯಿಗಳ ಕಷ್ಟವೇ ಆಗಲಿ ಯಾವಾಗ್ಯೂ ಈ ರೀತಿ ಇರಲಿಲ್ಲವೆಂತ ಹಿರಿಯರು ಹೇಳುತ್ತಾರೆ. ಈವಾಗಲೇ ಇಷ್ಟು ಕಷ್ಟ ಒದಗಿರುವಾಗ ಮುಂದೆ ಹ್ಯಾಗಾಗುತ್ತೋ ತಿಳಿಯದು.—ಊರಿನ ಸ್ಥಿತಿ ಈ ರೀತಿ ಇರುವಾಗ ಕಂದಾಯದ ಬಾಧೆ ಇಷ್ಟು ಅಷ್ಟು ಎಂದು ಹೇಳುವದೇ ದುರ್ಲಭ. ಪ್ರಜಾಹಿತರಾದ ಗೌಡ ಶ್ಯಾನುಭೋಗರು ಕಾಲ ಸ್ಥಿತಿಯನ್ನು ಅನುಸರಿಸಿ ಕಂದಾಯವನ್ನು ವಸೂಲುಮಾಡುತ್ತಾ ಬಂದರೆ ಬಡವರಿಗೆ ತುಂಬಾ ಉಪಕಾರ ಮಾಡಿದಂತೆ ಆಗುತ್ತೆ.

ಮದ್ದಗಿರಿ.—ಈ ತಾಲ್ಲೂಕಿನ ಪ್ರಜೆಗಳ ಸಮಾನರಾದ ಭಾಗ್ಯವಂತರು ಅಪರೂಪವೆಂದು ಇಲ್ಲಿನ ಸ್ಥಿತಿಯನ್ನು ನೋಡಿದರೆ ಧಾರಾಳವಾಗಿ ಹೇಳಬಹುದಾಗಿದೆ. ಇಲ್ಲಿ ಒಂದು ಡಿವಿಜನ್ ಆಫೀಸು ಇರುವದು, ಇದರ ಅಧಿಕಾರಿಗಳು ಒಬ್ಬ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು. ಈ ಊರಿನಲ್ಲಿ ಈ ಆಫೀಸರೂ, ಆಫೀಸೂ ಇರುವದೇ ಗೊತ್ತಾಗುವದಿಲ್ಲ. ಹಾಗೆಂದ ಮೇಲೆ ಪ್ರಜೆಗಳನ್ನು ಕೇಳುವರೇ ಇಲ್ಲವೆಂದು ಯಾರಾದರೂ ತಿಳಿದಾರು ! ಹಾಗೆ ಎಷ್ಟು ಮಾತ್ರವೂ ಅಲ್ಲ. ಯಾರಿಗೂ ಯಾವ ತೊಂದರೆಯೂ ಇಲ್ಲದೆ ಸಮಾಧಾನದಿಂದ ಕಾರುಬಾರು ನಡೆದು ಹೋಗುತ್ತಾ ಇದೆ. ಕ್ಷುದ್ರ ನದಿಗಳು ಪ್ರವಾಹಕಾಲದಲ್ಲಿ ಭೋರ್ಗರೆಯುತ್ತಿದ್ದ ಮಾತ್ರಕ್ಕೇನೇ ಧ್ವನಿಮಾಡದ ನಿಶ್ಶಬ್ದವುಳ್ಳ ಗಂಭೀರವಾದ ಸಮುದ್ರಕ್ಕಿಂತಲೂ ಶ್ರೇಷ್ಠವಾದವೇ ? ಇಲ್ಲಿ ಕ್ಷತ್ರಿಯ ಅಮಲ್ದಾರರು ಕೆಲವು ವರುಷಗಳು ಇದ್ದರು. ಅವರು ಎಲ್ಲಿದ್ದರೋ ಅದೇ ಗೊತ್ತಿಲ್ಲ. ಈಗ ಎರಡು ಮೂರು ತಿಂಗಳಿಂದಲೂ ಇಲ್ಲಿನ ಸಬ್ ರೆಜಿಸ್ಟ್ರಾರಾಗಿದ್ದ ಒಬ್ಬ ಬ್ರಾಹ್ಮಣರು ಬದಲಿ ನೋಡುತ್ತಾ ಇದ್ದಾರೆ. ಇವರೂ ಹಾಗೆಯೇ ಇರುವರು. ಪೊಲೀಸು ಇಲಾಖೆಯಲ್ಲಿ ಪ್ರಾಯಶಃ ಗದ್ದಲವಿರಬೇಕಷ್ಟೆ ? ಈ ತಾಲೂಕಿನಲ್ಲಿ ಅದೂ ಇಲ್ಲ. ಟವುನ್ನಲ್ಲಿ ಕಳ್ಳತನ ಮುಂತಾದವು ಸ್ವಪ್ನದಲ್ಲೂ ಇಲ್ಲ. ಗ್ರಾಮವು ನಿರ್ಮಲವಾಗಿದೆ. ಇದಕ್ಕೆ ದೃಷ್ಟಾಂತ ಅನೇಕ ವರುಷಗಳಿಂದಲೂ ಪ್ಲೇಗ್ ಕಾಲರಾ ಎಂಬ ಜಾಡ್ಯಗಳ ಸುದ್ದಿಯೇ ಇಲ್ಲ. ಇಷ್ಟಾದರೂ ಮ್ಯುನಿಸಿಪಲ್ ಇಲಾಖೆಯವರು ಎಲ್ಲಿ ಇದಾರೆಯೋ ! ಇತರಂತೆ ಎಕ್ಸೈಜ್, ಫಾರೆಸ್ಟ್, ಎಜ್ಯುಕೇಷನ್, ಮೆಡಿಕಲ್ ಇತರ ವಿಗಳೂ ಇರುತ್ತವೆ. ಮಳೆ ಬಂದ ಕಡೆಗೆ ಹವಾಸೂ ಚನ್ನಾಗಿದೆ. ಜಿನಸಿಗಳ ಧಾರಣೆಯಾಸಿ ಸಾಧಾರಣವಾಗಿದೆ. ಈ ವರೆಗೆ ಜಲಸಮೃದ್ಧಿಯೂ ಇದೆ. ಮೊನ್ನೆ ರಾತ್ರಿ ಇನ್ನು ಹದಿನೈದು ದಿನಗಳಿಗೆ ದಂಡುಮಾರಮ್ಮನ ಜಾತ್ರೆ ನಡಿಸುತ್ತೇವೆ ದು ಗ್ರಾಮಸ್ಥರು ಸಾರಿದರು. ಆಗ ಅನೇಕ ಕೋಣಗಳು ಹತವಾಗುತ್ತವೆಂಬದೊಂದು ವಾಕ್ಯ ಶೋಚನೀಯವು. ಇದನ್ನು ತಪ್ಪಿಸುವದಕ್ಕೆ ದೇವ ಅಧಿಕಾರಿಗಳಿಂದಲೂ ಆಗುವದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಮಾರಿಗಳಿಗೆ ಕೋಣಗಳನ್ನು ಕೊಡುತ್ತೇವೆಂದು ಹರಿಸಿಕೊಂಡಿವರು ತಂದ ಕೋಣಗಳನ್ನು ಹರಾಜು ಮಾಡಿ ಆ ಹಣವನ್ನು ಆ ದೇವತೆಗಳಿಗೆ ಆಭರಣಗಳನ್ನು ಮಾಡಿಸುವದಕ್ಕೆ ವಿನಿಯೋಗಿಸುವರೆಂದು ವರ್ತಮಾನವುಂಟು. ಇದು ನಿಜವಾದರೆ ಇಲ್ಲಿಯೂ ಹಾಗೆಯೇ ಮಾಡಿದರೆ ಬಹಳ ಅನುಕೂಲ ನಿಷ್ಕಾರಣವಾಗಿ ಅಷ್ಟೊಂದು ಭಾರೀ ಘಟಗಳ ವಧೆಯು ತಪ್ಪುವದು. ಮತ್ತು ಅವುಗಳ ರಕ್ತಪ್ರವಾಹದಿಂದ ಒಹಿರಂಗವಾದ ಹೇಗೆಯೂ ಉಂಟಾಗುತ್ತಿರುವ ಹುಳುಕಾರು ಹೆಚ್ಚೆಡಿಸಲ್ಲಿ ಪಾರಿಶುದ್ಧತೆಯನ್ನು ಕಾಪಾಡಿದಂತಾಗುವದು. ಈ ಊರಿನ ಒಳಿಯದ ದು ಮಾರಮ್ಮನಿಗೂ ಕ್ರಮೇಣ ಹೆಚ್ಚಾಗಿ ಆಭರಣಗಳಾಗುವವು.—ಮತ್ತೊಂದು ಅಸಂಗತವು ನಡೆಯುತ್ತಿರುವದು ಒಹುಶಃ ಅಧಿಕಾರಿಗಳ ಅವಧಾನಕ್ಕೆ ಯಾರೂ ತರಲಿಲ್ಲವೆಂದು ತೋರುತ್ತೆ. ಅವರಿಗೆ ಏನಾಗಿದ್ದರೆ ಈ ಮರ್ಯಾದೆ ತಕ್ಕ

ಬಂದೋಬಸ್ತನ್ನು ಮಾಡುತ್ತಿದ್ದರು ಈ ಊರಿನಲ್ಲಿ ಪ್ರತಿ ಬುಧವಾರವು ಸಾಮಾನ್ಯವಾಗಿ ಸಂತೆ ಸೇರುತ್ತೆ ಆ ದಿವಸ ಜಿನಸಿಗಳನ್ನು ಸಂತೆಯಲ್ಲಿ ಮಾರುವದಕ್ಕೆ ಸುತ್ತುಮುತ್ತಲೂ ೧೦—೧೫ ಮೈಲಿಗಳ ದೂರದಲ್ಲಿ ಇರುವ ಗ್ರಾಮಗಳಿಂದ ಜನರು ಬರುತ್ತಾರೆ ಇವರುಗಳಲ್ಲಿ ಹೆಂಗಸರೇ ಹೆಚ್ಚು ಮಂದಿ ಈ ಹೆಂಗಸರಲ್ಲಿಯೂ ಕೇವಲ ಮುದುಕಿಯರೂ, ನಡು ಪ್ರಾಯದವರೂ, ಯುವತಿಗಳೂ ಉಂಟು ಆ ದಿವಸ ಈ ಊರಿನಲ್ಲಿ ಕೆಲವರು ಮುಸಲ್ಮಾನರೂ, ವರ್ತಕರೂ ದೊಡ್ಡ ದೊಡ್ಡ ಸೇರುಗಳನ್ನೂ ತೂಕದ ಬೊಟ್ಟುಗಳನ್ನೂ ತೆಗೆದುಕೊಂಡು ಹೋಗಿ ಈ ಊರಿನ ಆಚೆ ಎಲ್ಲಾ ಪಕ್ಕಗಳಲ್ಲೂ ಕುಳಿತುಕೊಂಡು ಆ ಜಿನಸುಗಳನ್ನು ಮೋಸಕರವಾಗಿ ಕೊಂಡುಕೊಳ್ಳುವದಕ್ಕೆ ಶಕ್ತರಾದ ಗಂಡಸರನ್ನು ಪುಸಲಾಯಿಸಿ ಕರೆಯುವರು ಅವರು ಲಕ್ಷ್ಯಮಾಡದೇ ಹೊರಟು ಹೋದರೆ ಸುಮ್ಮನೇ ಇರುವರು ಮುದುಕಿಯರನ್ನು ಬಲವಂತವಾಗಿ ಹಿಡಿದು ಕೂಡಿಸಿಕೊಂಡು ಅವರ ಜಿನಸಿಗಳನ್ನು ಮನಸ್ಸಿಗೆ ಬಂದಂತೆ ಅಳೆದುಕೊಂಡು ಮನಸ್ಸಿಗೆ ಬಂದಷ್ಟು ಕೊಟ್ಟು ಅಟ್ಟಿಬಿಡುವರು ನಡುಪ್ರಾಯದ ಹೆಂಗಸರ ಮೇಲೆಯೂ ಜುಲುಂ ನಡಿಸುವದು ಅಪರೂಪ ಪ್ರಾಯದ ಹುಡುಗಿಯರನ್ನು ಜಿನಸಿಗಳಿಗೋಸ್ಕರವಲ್ಲ ಯೌವನವಸ್ತರಾದ ತುರುಕರು ಇತರ ವಿಧಗಳಿಂದಲೂ ತೊಂದರೆಪಡಿಸುವರು ಇದನ್ನು ನಿಲ್ಲಿಸುವದಕ್ಕೆ ಸುಲಭವಾದ ಮಾರ್ಗವು ಒಂದಿದೆ ಯಾರೇ ಆಗಲಿ ಸಂತೆಗಳಲ್ಲೂ ಗ್ರಾಮದ ಮಧ್ಯದಲ್ಲೂ ಜಿನಸಿಗಳನ್ನು ಕೊಂಡುಕೊಳ್ಳಬೇಕೇ ಹೊರತು ಮಾರ್ಗಗಳಲ್ಲಿ ಯಾರೇ ಆದು ಈ ರೀತಿಯಲ್ಲಿ ಕೊಂಡುಕೊಳ್ಳಲೇ ಕೂಡದೆಂದು ಆಜ್ಞೆಯನ್ನು ಮಾಡಿದರೆ ಸಾಕಾಗಿದೆ

ಚಿಕ್ಕಮಗಳೂರು.—ಈಚೀಚಿಗೆ ಟವರ್‌ಗೆ ನಲ್ಲಿಯ ಮೂಲಕ ಸರಬರಾಯಿ ಆಗುವ ನೀರು ಮಂಡಾಗಿಯೂ ಕಶ್ಮಲ ಮಿಶ್ರವಾಗಿಯೂ ಇದೆ ಫಿಲ್ಟರ್ ಬೆಡ್ಡಿಗೆ ನಲ್ಲಿ ಮುಖಾಂತರ ಬರುವ ನೀರು ಬಹಳ ಕೆಡಮೆಯಾಗಿರುವದರಿಂದ ಹಳ್ಳದ ನೀರನ್ನು ನೆಟ್ಟಗೆ ಫಿಲ್ಟರ್ ಮಾಡದೇನೆ ಕಾಲುವೆಯಲ್ಲಿ ಊರ ತನಕ ತಂದು ಅಲ್ಲಿಂದ ಅದನ್ನು ನಲ್ಲಿಗಳ ಮುಖಾಂತರ ಬಿಡುತ್ತಾರೆ ಇದು ಫಿಲ್ಟರ್ ಮಾಡಿರುವಷ್ಟು ಶುದ್ಧವಾದ ನೀರಲ್ಲ ಇದೂ ಅಲ್ಲದೆ ಕಾಲುವೆಯಲ್ಲಿ ಬರುವ ನೀರು ಎಮ್ಮೆ ದನ ಮುಂತಾದ ಪಶುಗಳಿಂದಲೂ ಮನುಷ್ಯರಿಂದಲೂ ಕೆಡಿಸಲ್ಪಡುತ್ತದೆ ಕೆಲವು ಮೈಲುಗಳಿಂದ ಇದು ಕಾಲುವೆಯ ಮೂಲಕ ಬರುವದರಲ್ಲಿ ಒಂದೆರಡು ಗ್ರಾಮಗಳ ಸಮೀಪ ಹರಿದು ಬರುತ್ತದೆ ಇಷ್ಟಲ್ಲದೆ ಊರಿನ ಸಮೀಪದಲ್ಲಿ ನೀರು ನಲ್ಲಿಗೆ ಬೀಳುವ ಸ್ಥಳದಲ್ಲಿ ಚರಂಡಿಗಳ ಮೂಲಕ ಬರುವ ನೀರಿನಲ್ಲಿ ಕೆಲವು ಸ್ತ್ರೀಯರು ಕೊಳೆಯ ಬಟ್ಟೆಗಳನ್ನು ಒಗೆಯುತ್ತಿರುವದನ್ನು ಕಣ್ಣಿನಿಂದ ಸಕಲರೂ ನೋಡುವ ರೀತಿ ಮಾಡುತ್ತಿದ್ದರೂ ಅವನ್ನು ಕೇಳುವವರೇ ಇಲ್ಲ ಮ್ಯುನಿಸಿಪಾಲಿಟಿಯು ನಿಗಾ ಇದರ ಮೇಲೆ ಬೀಳಬೇಡವೇ —ಕಳೆದ ೨ನೇ ತಾ ಶುಕ್ರವಾರ ಬೆಳಗ್ಗೆ ಮೈಸೂರು ಶಿಮೊಗ್ಗ ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಮೆ|| ಏಯರ್ ಸಾಹೇಬರವರು ಇಲ್ಲಿಗೆ ದಯಮಾಡಿಸಿ ಇಲ್ಲಿನ ಹೈ ಸ್ಕೂಲ್, ಎ ವಿ ಸ್ಕೂಲ್ ಮತ್ತು ಇತರ ಬಾಲಕ ಬಾಲಕಿಯರ ಸ್ಕೂಲುಗಳನ್ನು ತನಿಖೆ ಮಾಡಿಕೊಂಡು ಹೋದರು —ಈಚೆಗೆ ಬಿಸಲಿನ ಝಳವು ಸಕೆಯೂ ಹೆಚ್ಚಾಗಿದೆ

ಶಿವಮೊಗ್ಗೆ.—ಕಳೆದ ಮಾರ್ಚಿ 30ನೇ ತಾರೀಖಿನಲ್ಲಿ ಮ್ಯುನಿಸಿಪಲ್ ಮೀಟಿಂಗು ನಡೆಯಿತು ಆಕ್ಟಿಂಗ್ ಡೆಪ್ಟಿ ಕಮೀಷನರ್ ಮೆ|| ಕೆ ಶ್ರೀನಿವಾಸರಾಯರು ಅಗ್ರಾಸನರಾಗಿದ್ದರು ಪಶುಪ್ರಾಣಿಗಳ ಚಿಕಿತ್ಸೆಗಾಗಿ ಅವಶ್ಯಕವಾದ ಹಣವನ್ನು ಕೊಡುವಂತೆ ಏರ್ಪಾಡಾಯಿತು ಊರಿನಲ್ಲಿ ಮಕ್ಕಳ ಜನನದ ವಿಷಯದಲ್ಲಿ ಮಾಡಲ್ಪಟ್ಟ ರಿಪೋರ್ಟು ಸಾಲದ್ದಾಗಿಯೂ, ಅತೃಪ್ತಿಕರವಾಗಿಯೂ ಇದೆ ಇವನ್ನು ಕ್ರಮಪಡಿಸುವದಕ್ಕಾಗಿ ಮ್ಯುನಿಸಿಪಲ್ ಬೋರ್ಡಿನ ಮೆಂಬರುಗಳು ತಕ್ಕ ಸಾಮಾನುಗಳನ್ನು ಮಾಡುವದರಲ್ಲಿದ್ದಾರೆ ಇಲ್ಲಿನ ಸ್ಟುಡೆಂಟ್ಸ್ ಹೋಮಿನ ಪಕ್ಕದಲ್ಲಿ ಮತ್ತು ಮೆಯಿನ್ ರಸ್ತೆಯ ಸಮೀಪದಲ್ಲಿ ಅನಾರೋಗ್ಯಕರವಾದ ಸ್ಥಿತಿಯಲ್ಲಿರುವ ಗುಡಿಸಲುಗಳನ್ನು ತೆಗೆದು ಹಾಕುವಂತೆಯೂ, ಆ ಜನರಿಗೆ ತಕ್ಕ ಪರಿಹಾರ ದ್ರವ್ಯವನ್ನು ಕೊಡುವಂತೆಯೂ ಏರ್ಪಾಡಾಗಿದೆ ಊರಿನ ಜನರಿಗೆ ನೀರನ್ನು ಒದಗಿಸುವ ಕೆಲಸವು ಇನ್ನೂ ನಡೆಯುತ್ತಲಿದೆ ರಸ್ತೆಗಳಲ್ಲಿ ನಲ್ಲಿಗಳನ್ನು ಜೋಡಿಸಿ ಕ್ರಮಪಡಿಸುತ್ತಲಿದ್ದಾರೆ ಬೇಸಿಗೆಯು ಹೆಚ್ಚು ನೀರಿನ ಕಷ್ಟವು ಅಧಿಕವಾಗಿರುವದರಿಂದ ಜಾಗ್ರತೆಯಾಗಿ ಈ ಕೆಲಸವನ್ನು ಪೂರೈಸಿ ಇಲ್ಲಿನ ದುರ್ಗಿಗುಡಿಯ ವರೆಗೂ ನೀರನ್ನು ಬಿಡುವದಾದರೆ, ಎಲ್ಲಾ ಪ್ರಜೆಗಳಿಗೂ ಅನುಕೂಲವಾದೀತು ಇದು ಅವಶ್ಯಕವಾದ ವಿಷಯ —ಹೊನ್ನಾಳಿ ಪ್ರಾಂತ್ಯದಲ್ಲಿ ದನಗಳಿಗೆ ಒಂದು ಕೆಟ್ಟ ರೋಗವು ಹುಟ್ಟಿ ಅನೇಕ ಪ್ರಾಣಿಗಳು ತೀರಿಹೋಗಿವೆ ಎಂಬ ವರ್ತಮಾನವಿದೆ —ಮುಂದಗದ್ದೆಯಲ್ಲಿ ಒಂದು ಹೊಸವಾದ ಗಂಡುಮಕ್ಕಳ ಸ್ಕೂಲನ್ನು ಕಟ್ಟಿಸಿದ್ದಾರೆ ಇನ್ನು ಕೆಲವು ದಿವಸಗಳಲ್ಲಿ ಕೆಲಸವೆಲ್ಲಾ ಮುಗಿಯಬಹುದು ಈ ಸ್ಕೂಲಿನ ಸಮೀಪದಲ್ಲಿ ಬಾಲಕರಿಗಾಗಿ ಒಂದು ಭಾವಿಯನ್ನು ತೋಡಿಸುವದು ಅವಶ್ಯಕವಾಗಿದೆ ಯಾಕಂದರೆ ಈ ಸ್ಥಳದಲ್ಲಿ ಕುಡಿಯುವದಕ್ಕೆ ಯೋಗ್ಯವಾದ ನೀರು ದೊರಕುವದಿಲ್ಲ

ಚನ್ನರಾಯ ಪಟ್ಟಣ —ಈಗ ಇಲ್ಲಿನ ಬಿಸಲಿನ ತಾಪವು ಬಹು ತೀಕ್ಷ್ಣವಾಗಿರುತ್ತೆ ಜನರು ಅಲ್ಲಲ್ಲಿ ಜ್ವರ, ತಲೆ ನೋವುಗಳಿಂದ ಪೀಡಿತರಾಗಿರುವರು ಈ ಊರಿನ ಮಧ್ಯಭಾಗದ ಕೆಲವು ಕಡೆಗಳಲ್ಲಿ ಜನರು ಗೊಬ್ಬರದ ಗುಂಡಿಗಳನ್ನು ಮಾಡಿರುವರಲ್ಲದೆ ಮಲಮೂತ್ರಾದಿಗಳಿಂದ ಅಮಂಗಲವು ದುಸ್ತಿರುವದು ಜನರ ಆರೋಗ್ಯಕ್ಕೆ ಹಾನಿಕರವಾಗಿರುತ್ತೆ —ಟವುನಿಗೆ ಬೇಕಾಗುವಷ್ಟು ಲಾಂದ್ರಗಳಿಲ್ಲದ್ದು ಕೃಷ್ಣಪಕ್ಷದಲ್ಲಿ ಜನರ ತಿರುಗಾಟಕ್ಕೆ ಅನಾನುಕೂಲವಾಗಿ ತೋರುತ್ತೆ ವಿ ಟಿ ಯ ವಿಷಯ ಆಗಾಗ್ಗೆ ಕಳ್ಳತನಗಳು ನಡೆಯುತ್ತವೆ ಈ ವಿಚಾರದಲ್ಲಿ ನಮ್ಮ ಅಮಲ್ದಾರರು ಗಮನ ಕೊಟ್ಟರೆ ಉತ್ತಮ —ಇಲ್ಲಿಗೆ ೬ ಮೈಲುಗಳ ದೂರದಲ್ಲಿರುವ ಶ್ರವಣ ಬೆಳಗುಳವೆಂಬ ಗ್ರಾಮದಲ್ಲಿ ಕಳೆದ ತಿಂಗಳು ತಾ ೧೪ ರಿಂದ ಆರಂಭಿಸಿ ೩೧ ರ ವರೆಗೂ ಜೈನ ಮತದ ಜಿನ್ನೇ ದೇವರ ಮಹಾ ಜಾತ್ರೆಯು ನಡೆಯಿತು ಮೈಸೂರು, ಕೊಲ್ಲಾಪುರ, ಧಾರವಾಡ, ಮೂಡಬಿದರೆ ಮೊದಲಾದ ಹಲವು ಕಡೆಗಳಿಂದ ಸುಮಾರು ೩೦ ಸಾವಿರ ಪ್ರಜೆಗಳು ಸೇರಿ ಬಂದಿದ್ದರು ಈ ಸಮಯದಲ್ಲಿ ನಮ್ಮ ಅಮಲ್ದಾರ್ ಮೆ|| ಶ್ರೀನಿವಾಸರಾಯರವರು, ತುಂಬಾ ಮುತುವರ್ಜಿಯನ್ನು ವಹಿಸಿ, ಜಾತ್ರೇ ಜನಗಳಿಗೆ ಬೇಕಾಗುವ ಸಕಲ ಸಲಕರಣೆಗಳನ್ನು ಅನುಕೂಲ ಮಾಡಿಸಿದ್ದು ಅಲ್ಲದೆ, ಜಾತ್ರೆಯ ಪ್ರಾರಂಭದಿಂದ ಅಂತ್ಯದ ವರೆಗೂ ಅಲ್ಲೇ ಇದ್ದು ಜನರಿಗೆ ಯಾವ ಈತಿಬಾಧೆಗಳೂ ಉಂಟಾಗದಂತೆ ಕಾಪಾಡಿದರು ಬೆಂಗಳೂರು ಮತ್ತು ಹಾಸನದಿಂದ ಪೋಲೀಸಿನವರೂ ರಿಸರ್ವ್ ಪೋಲೀಸ್ ಶಿಬ್ಬಂದಿಯೂ ತರಲ್ಪಟ್ಟಿತು ಸ್ಪೆಷಲ್ಲಾಗಿ ಒಂದು ವೈದ್ಯಶಾಲೆಯು ನೇಮಕವಾಗಿದ್ದದ್ದಲ್ಲದೆ, ಡಿಸ್ಟ್ರಿಕ್ಟ್ ಸರ್ಜನ್‌ರವರು ಮುದ್ದು ಅಲ್ಲೇ ಇದ್ದು ಜನರು ಕುಡಿಯಬಹುದಾದ ಕೆರೆ ಭಾವಿಗಳ ಜಲವನ್ನು ದ್ರಾವಕಗಳಿಂದ ಶುದ್ಧಿಗೊಳಿಸಿ, ಯಾವ ರೋಗಕ್ಕೂ ಆಸ್ಪದವಿಲ್ಲದಂತೆ ಮಾಡುತ್ತಲಿದ್ದರು ಡೆಪ್ಟಿ ಕಮೀಷನರು, ಪೋಲೀಸ್ ಸೂಪರೇಂಟರೇ ಮೊದಲಾದ ಅಧಿಕಾರಿಗಳ ಉಸ್ತುವಾರಿಯು ತುಂಬಾ ಚಟುವಟಿಕೆಯಾಗಿದ್ದದ್ದರಿಂದ ಕಳ್ಳಕಾಕರ ಭಯಕ್ಕೂ ಮತ್ತಾವ ಗಲಾಟೆಗಳಿಗೂ ಆಸ್ಪದವಿರಲಿಲ್ಲ ಕ್ರಿಸ್ತಮತ ಬೋಧಕರೂ ಉಪದೇಶಕರೂ ಹತ್ತೆಂಟು ದಿನಗಳ ಮಟ್ಟಿಗೆ ಅಲ್ಲಿದ್ದು ತಮ್ಮ ಮತಧರ್ಮಗಳನ್ನು ತಿಳಿಸುತ್ತಾ ಬಂದರು ಜಾತ್ರೆಯಲ್ಲೂ ಸುತ್ತು ಮುತ್ತಲ ಗ್ರಾಮಗಳಲ್ಲೂ ಇವರ ಕೆಲಸವು ಸಾಂಗೋಪಾಂಗವಾಗಿ ನಡೆಯುವದಾಯಿತು ಅನೇಕಾನೇಕ ಧರ್ಮ ಶಾಸ್ತ್ರದ ಪ್ರತಿಗಳು ವಿಕ್ರಯಿಸಲ್ಪಟ್ಟವು ಜಾತ್ರೆಯ ಕೆಲವು ಸಂದರ್ಭದಲ್ಲಿ ಕೆಲವು ತುಂಟ ಬಾಲಕರು ಕ್ರೈಸ್ತರ ಮಾತುಗಳನ್ನು ಕೇಳಬಾರದೆಂದು ಜನರನ್ನು ಬಲಾತ್ಕಾರದಿಂದ ಚದರಿಸಲು ಪ್ರಯತ್ನಿಸಿದರು ಆದರೆ ಸಭ್ಯರಾದ ಅನೇಕ ಜನರು ಆ ಪೋರರನ್ನು ಪ್ರತಿಪಾದಿಸಿ ನಿಂತು,—ಕ್ರೈಸ್ತರು ಒಳ್ಳೇದನ್ನು ಹೇಳುತ್ತಾರೆ ಅವರು ಹೇಳುವದಕ್ಕಿಂತಲೂ ಉತ್ತಮವಾದದ್ದನ್ನು ನೀವು ನಮಗೆ ಹೇಳಬಲ್ಲಿರಾ? ಎಂಬದಾಗಿ ವಾದಿಸುತ್ತಲಿದ್ದರು —ತಾ ೩೦ ಕ್ಕೆ ಶ್ರವಣಪ್ಪನ ಮೊದಲನೇ ಪೂಜೆಯು ನೆರವೇರಿಸಲ್ಪಟ್ಟಿತು ಅಲ್ಲಿಂದೀಚೆಗೆ ದೂರದ ಜನರು ತಂತಮ್ಮ ದೇಶಕ್ಕೆ ಹಿಂದಿರುಗಲುಪಕ್ರಮಿಸಿದರು ಜೈನ ಮಹಾ ಸಭೆಯ ಪ್ರೆಸಿಡೆಂಟರು ಶ್ರವಣಪ್ಪ ವಿಗ್ರಹದ ತಲೆಯ ಮೇಲೆ ಉಕ್ಕಿನ ಛತ್ರಿಯನ್ನಿ ನಿಲ್ಲಿಸಲೂ ವಿಗ್ರಹಕ್ಕೆ ವಸ್ತ್ರಧಾರಣ ಮಾಡಿಸಲೂ ತಮ್ಮ ಆಲೋಚನೆ ಕೊಟ್ಟಂತೆಯೂ, ಅದಕ್ಕೆ ಕೆಲವು ಮೆಂಬರುಗಳು ಸಮ್ಮತಿಸಿದ ಹಾಗೂ, ಅನೇಕರು— ಆದಾಗದು ಯುಗಯುಗದಿಂದ ಇದ್ದ ರೀತಿಯನ್ನು ಮಾರ್ಪಡಿಸೋಣದರಿಂದ ಅನರ್ಥಗಳೇನಾದರೂ ಸಂಭವಿಸ್ಯಾವೆಂದು ಹೇಳಿದರೆಂತಲೂ ಜನರು ಮಾತನಾಡಿಕೊಳ್ಳುತ್ತಿದ್ದಾರೆ

ದೊಡ್ಡಬಳ್ಳಾಪುರ —ಈ ಊರಲ್ಲಿ ಪೋಲೀ ನಾಯಿಗಳ ತೊಂದರೆ ಅಧಿಕವಾಗಿದೆ ಹಿಟ್ಟಿಗಿಲ್ಲದ ನಾಯಿಗಳೆಲ್ಲಾ ಬೀದಿಗಳಲ್ಲೂ ಸಂದು ಗೊಂದುಗಳಲ್ಲೂ ತಿರುಗಾಡುವ ಜನರ ಮೇಲೆ ಬೀಳಲಾರಂಭಿಸಿ ವ್ಯರ್ಥವಾಗಿ ಜನರನ್ನು ಕಚ್ಚುವಂಥ ತೀಕ್ಷ್ಣವಾದ ಹುಚ್ಚು ಹಿಡಿದಂತಿರುವ ಪೋಲೀ ನಾಯಿಗಳು ಬಹಳ ಹೆಚ್ಚಿವೆ ಇವುಗಳಿಗೆ ವಾರಸುದಾರರೇ ಇಲ್ಲದ್ದರಿಂದ ಅಮಲ್ದಾರರವರು ಈ ನಾಯಿಗಳನ್ನು ಹೊಡಿಸುವಂತೆ ಹುಕುಂ ಮಾಡಿದರೆ ತುಂಬಾ ಉಪಕಾರವಾಗುವದು ಮತ್ತು ಜನರು ರಾತ್ರಿ ಕಾಲದಲ್ಲಿ ಸಂದುಗಳ ರಸ್ತೆಗಳಲ್ಲೂ ಕೆಲವು ಮುಸಲ್ಮಾನರ ಬೀದಿಗಳಲ್ಲೂ ತಿರುಗುವದು ತುಂಬಾ ಅಪಾಯಕರವಾಗಿದೆ ಜನರು ನಾಯಿಗಳಿಂದ ಕಚ್ಚಲ್ಪಟ್ಟು ಕೂನೂರಿಗೆ ಹೋಗುವದಕ್ಕಿಂತ ಅನುಲ್ದಾರರು ಈ ಪೋಲೀ ನಾಯಿಗಳನ್ನು ಮರ್ದನ ಮಾಡಿಸುವದು ಉತ್ತಮವಾಗಿದೆ ಕಳೆದ ವರುಷ ಅರಸಿಕೆರೆಯಲ್ಲಿ ಕೆಲವರು ನಾಯಿಗಳ ಕಡಿತಕ್ಕೆ ತುತ್ತಾದರು ಕೂಡಲೆ ಅಲ್ಲಿನ ಅಮಲ್ದಾರ್ ಮೆ|| ನಾರಾಯಣಸ್ವಾಮಿ ಮೊದಲಿಯಾರ್ ಅಲ್ಲಿನ ನಾಯಿಗಳನ್ನೆಲ್ಲಾ ಹತವ ಡಿಸಿದ್ದರಿಂದ ಜನರಿಗೆ ಕಷ್ಟ ತಪ್ಪಿತು ಅದರಂತೆ ಇಲ್ಲಿನ ಅಮಲ್ದಾರರು ತುಂಬಾ ದಯವಿಟ್ಟು ಕೂಡಲೇ ಪೋಲೀ ನಾಯಿಗಳನ್ನು ಹೊಡಿಸುವಂತೆ ಅಪ್ಪಣೆ ಮಾಡುವರೆಂದು ನಿರೀಕ್ಷಿಸಬೇಕಾಗಿದೆ —ಮೈಸೂರು ಸರ್ಕಾರದವರು ತುಂಬಾ ಕರುಣವಿಟ್ಟು ಪಂಚಮರಿಗೋಸ್ಕರ ಈ ಊರಲ್ಲಿ ಎರಡು ಪಾಠಶಾಲೆಗಳನ್ನು ಇಡಿಸಿ, ಅಲ್ಲಿನ ಉಪಾಧ್ಯಾಯರುಗಳಿಗೆ ಸಹ ೧೦ ರೂಪಾಯಿ ಸಂಬಳ ಮಾಡಿದ್ದಾರೆ ಆದರೆ ಈ ಪಂಚಮರ ಪಾಠಶಾಲೆಗಳನ್ನು ಯಾರೇ ಆಗಲಿ ಯಾವಾಗಲಾದರೂ ಪರೀಕ್ಷಿಸಲು ಹೋದರೆ ಉಪಾಧ್ಯಾಯರೇ ಹಾಜರಿರುವದಿಲ್ಲವಂತೆ ಮುಖ್ಯವಾಗಿ ಮಾದಿಗರ ಸ್ಕೂಲ್ ನಡೆಯುವದೇ ಇಲ್ಲವೆಂದು ಅಲ್ಲಿನ ಜನರೆಲ್ಲಾ ತುಂಬಾ ವ್ಯಸನಪಡುತ್ತಾರೆ ಉಪಾಧ್ಯಾಯನು ತಿಂಗಳಿಗೆ ಎರಡು ಮೂರು ದಿವಸ ಮಾತ್ರ ಬರುವಂತೆ ಅಲ್ಲಿನ ಜನರು ಹೇಳುವದರಿಂದ ಹುಡುಗರು ತಾಯಿತಂದೆಗಳಿಗೆ ಅವರ ಕೆಲಸಗಳಲ್ಲಿ ಸಹಾಯ ಮಾಡಲಿಕ್ಕೆ ಹೋಗುತ್ತಾರೆ ವಿದ್ಯೆ ಕಲಿಸಲಿಕ್ಕೆ ಅವರಿಗೆ ತುಂಬಾ ಆಶೆಯಿದ್ದರೂ ಉಪಾಧ್ಯಾಯನು ಸರಿಯಾಗಿ ಕೆಲಸ ಮಾಡುವದಿಲ್ಲವೆಂದು ತೋರುತ್ತೆ ಈ ವಿಷಯವನ್ನು ಅಲ್ಲಾಯಿದಾ ಇಲ್ಲಿನ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮೆ|| ಕೋಗಾಡಿಯಪ್ಪನವರಿಗೂ ಮೊಯ್ಯಾ ಅಲ್ಲಿನ ಜನರೆಲ್ಲಾ ತಿಳಿಸಿರುತ್ತಾರೆಂತ ಕೇಳಲಾಗಿದೆ ಆದಾಗ್ಯೂ ಅನೇಕ ತಿಂಗಳಿಂದಲೂ ಈ ರೀತಿ ಹೊಲಗೇರಿ ಶಾಲೆಯ ಮಾದಿಗರ ಶಾಲೆಯೂ ಉಪಾಧ್ಯಾಯರ ಕೆಲಸ ಅಶ್ರದ್ಧೆಯಿಂದ ತೀರಾ ಕೆಟ್ಟು ಹೋಗಿರುವದರಿಂದ ಅವರಿಗಾಗಿ ವೆಚ್ಚಮಾಡುವ ಹಣವೆಲ್ಲಾ ವ್ಯರ್ಥವಾಗಿ ಪರಿಣಮಿಸಿದೆ ಸರ್ಕಾರದವರು ದಯವಿಟ್ಟು ಕೂಡಲೇ ಈ ಉಪಾಧ್ಯಾಯರನ್ನು ತಪ್ಪಿಸಿ ತಕ್ಕವರನ್ನು ಕಳುಹಿಸಿಕೊಟ್ಟರೆ ಹೊರತು ಪಾಠಶಾಲೆಗಳನ್ನು ಮುಚ್ಚುವದು ಉತ್ತಮವೆಂದು ಕಾಣುತ್ತದೆ ಈ ಎರಡು ಪಾಠಶಾಲೆಗಳನ್ನು ಮ್ಯುನಿಸಿಪಲ್ ಮೆಂಬರುಗಳು ಆಗಾಗ್ಗೆ ದಯವಿಟ್ಟು ನೋಡಿಕೊಂಡರೆ ವಾಸಿ ವಿದ್ಯಾಭ್ಯಾಸಕ್ಕಾಗಿ ಮಾಡುವ ಖರ್ಚು ಸಾರ್ಥಕವಾಗದಿದ್ದರೆ ಜನರಿಗೆ ಪ್ರಯೋಜನವಾಗುವದೂ, ಉಪಾಧ್ಯಾಯರು ಕೆಲಸ ಮಾಡದೆ ಸಂಬಳ ಪಡೆಯುವದೂ ನ್ಯಾಯವಾಗಿ ತೋರಿಯುದಿಲ್ಲ —ಕೆಲವು ದಿನಗಳ ಹಿಂದೆ ಅಂದರೆ ಕಳೆದ ಶಿವರಾತ್ರಿ ದಿನ ರಾತ್ರಿ ಸಂದರ್ಭದಲ್ಲಿ ನಾಟಕವಾಡುತ್ತಿದ್ದವರಲ್ಲಿ ಕೆಲವರು ಅರ್ಕಾವತಿಗೆ ಜನರೆಂತಲೂ ಅವರು ಕೆಲ ಹಿಂದೆ ಕಬ್ಬು ಕಳ್ಳತನ ಮಾಡಿದ ಹಾಗೂ ಪೋಲೀಸಿಗೆ ರಿಪೋರ್ಟಾಗಿ, ನಂತರ ಒಳಸಂಗತಿಗಳು ಏನೇನು ಇದ್ದವೊ ಅವುಗಳೆಲ್ಲಾ ಸರಿಯಾದ ತನಿಖೆ ನಡೆದು, ಪಟೇಲ ಶಿಯನಾದಿ ಮೊದಲ್ಗೊಂಡ ಪಿರ್ಯಾದಿ ನಡೆದು ಎಲ್ಲ ಪುಂಡರಿಗೂ ಪೋಲೀಸಿನವರು ತಕ್ಕ ಶಿಕ್ಷೆ ಮಾಡಿಸುವದು ಈ ವರೆಗೂ ಪ್ರಕಟವಾಗಿಲ್ಲ ಆದರೆ ಎಲ್ಲರಿಗೂ ವಾರ್ತೆಯ ಮೂಲಕವೋ ಪತ್ರಿಕೆಯ ರೀತಿಯಿಂದಲೋ ತುಂಬಾ ಎಚ್ಚರಿಕೆ ಕೊಟ್ಟಂತೆ ಕೇಳಲಾಗಿದೆ, ಏನಾದರೂ ಈ ಜನಗಳು ಸನ್ಮಾರ್ಗದಲ್ಲಿ ನಡೆಯಬಹುದಾದರೆ ವಾಸಿ —ಧರ್ಮಶಾಲೆ [illegible] ಪ್ರಕಾರ ಇವೆ ಪಿಚ್ಚೀಸ ಪುಣ್ಯವೂ ಕಮ್ಮಿ ಬೊಟ್ಟುಗಳೂ ಈ ವರೆಗೂ ಪೋಲೀಸ್ ಬಂದಿಲ್ಲ ಅಮಲ್ದಾರರು ಕೊಂಚ ಮಾತ್ರ ದಯವಿಟ್ಟು ಮತುವರ್ಜಿ ವಹಿಸಿದರೆ ಕ್ಷೇಮ ಅನೇಕ ಅಮಲ್ದಾರರುಗಳು ವರ್ಗವಾದರೂ ಪಿಚ್ಚೀಸ ರಿಗೂ ಕಮ್ಮಿ ಬೊಟ್ಟುಗಳಿಗೂ ವರ್ಗವಾಗಲಿಲ್ಲವಲ್ಲಾ ಎಂದು ವ್ಯಸನಪಡಬೇಕಾಗಿದೆ ಪೋಲೀಸಿನವರು ದಯವಿಟ್ಟು ತಕ್ಕ ತಲಾಷು ಮಾಡಿದರೆ ಇವುಗಳು ಸಿಕ್ಕುವದೇನೂ ಕಷ್ಟವಲ್ಲ — ಮ್ಯುನಿಸಿಪಲ್ ಲಾಂದ್ರಗಳ ಬೆಳಕು ಸರಿಯಾಗಿಲ್ಲ ಮ್ಯುನಿಸಿಪಲ್ ಮೆಂಬರುಗಳು ದಯವಿಟ್ಟು ಬೋರ್ಡಿನಲ್ಲಿ ಈ ವಿಷಯವನ್ನು ಕುರಿತು ಮಾತನಾಡಬೇಕಾಗಿದೆ ಕೆಲವು ಲಾಂದ್ರಗಳಿಗೆ ಬೀಗ ಇಲ್ಲ ಮುಖ್ಯ ಸ್ಥಳಗಳಲ್ಲಿರುವ ಲಾಂದ್ರಗಳಿಗೂ ಸಂದುಗೊಂದುಗಳಲ್ಲಿರುವವುಗಳಿಗೂ ತುಂಬಾ ವ್ಯತ್ಯಾಸವುಂಟು

ವಿದೇಶ ವರ್ತಮಾನಗಳು

ಸಿಲೋನ್ (ಲಂಕಾ) ದ್ವೀಪದಲ್ಲಿ ಅಕ್ಕಿಯ ಮೇಲೆ ಶಿರಿಗೆ ವಸೂಲಾಗುತ್ತಿರುವದು ಇನ್ನೂ ಜಾರಿಯಲ್ಲಿದೆಯೋ ಎಂದು ಒಬ್ಬ ಮೆಂಬರು ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಮಾಡಿದ್ದಕ್ಕೆ ಸೆಕ್ರೆಟರಿಯವರು ಪ್ರತ್ಯುತ್ತರವಾಗಿ— ಕಾಲಕ್ರಮದಲ್ಲಿ ಆಹಾರ ದಿನಸಿಗಳ ಮೇಲೆ ಇರುವ ಕಂದಾಯಗಳನ್ನೆಲ್ಲಾ ವಜಾಮಾಡಬೇಕೆಂಬುವದೇ ಗವರ್ನ್‌ಮೆಂಟಿನವರ ನಿರೀಕ್ಷೆಯಾಗಿದೆ ಎಂದು ಹೇಳಿದರು

* * *

ವಿಲಾಯತಿಯ ದಕ್ಷಿಣ ಸಮುದ್ರ ತೀರದಲ್ಲಿ ಕೆ ಓ ಫ ಮಸ್ ಎಂಬೊಂದು ಹಡಗು ಇನ್ನೊಂದಕ್ಕೆ ಒಡೆದು ೧೦ ನಿಮಿಷಗಳಲ್ಲಿ ಮುಳುಗಿ ಹೋಯಿತು ಹದಿನೆಂಟು ಮಂದಿ ನೀರಿನ ಪಾಲಾದರು ಒಬ್ಬನು ಮಾತ್ರ ಬದುಕಿ ಬಂದಿರುತ್ತಾನೆ

* * *

ಚೀನಾ ಗವರ್ನ್‌ಮೆಂಟಿನವರು ನ್ಯಾನ್‌ಕಿಂಗ್ ಮತ್ತು ಹ್ಯಾಂಕೋ ಆಧಿಪತ್ಯಗಳ ವೈಸ್‌ರಾಯರುಗಳನ್ನೂ, ಅನ್‌ಹೂಯಿ ಮತ್ತು ಕಿಯಾಂಗ್ಸಿ ಡಿಸ್ಟ್ರಿಕ್ಟುಗಳ ಗವರ್ನರುಗಳನ್ನೂ ಮತ್ತೆ ಡಿಯರ್ಮಿಷಿ ಮಾಡಬೇಕೆಂದು ಹುಕುಂ ಕೊಟ್ಟದ್ದಾರೆ

* * *

ಅಮೇರಿಕಕ್ಕೆ ಸೇರಿದ ಮಸಾಚುಸೆಟ್ಸ್ ನಗರದ ಜನರಲ್ ಆಸ್ಪತ್ರೆಯ ಮುಖ್ಯ ವೈದ್ಯರಾದ ಸಿ ಜಿ ವೈಟ್ ಯವರು ಸ್ತ್ರೀಯರು ವಿಶೇಷವಾಗಿ ಮೋಟಾರ್ ಗಾಡಿಗಳಲ್ಲಿ ಸಂಚರಿಸೋಣದರಿಂದ ಅವರ ತಲೆ ಕೂದಲು ಬೇಗನೆ ಉದುರಿಹೋಗಲು ಕಾರಣವಾಗುತ್ತದೆ ಎಂದು ಅಭಿಪ್ರಾಯ ಪಟ್ಟದ್ದಾರೆ

* * *

ವಿಲಾಯತಿ ರಾಜ್ಯದ ಹೌಸ್ ಆಫ್ ಕಾಮನ್ಸ್ ಸಭಿಕರು ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಹಣ ಕಾಸುಗಳ ಕಾನೂನುಗಳನ್ನು ಒಪ್ಪಿಕೊಂಡ ಮೇಲೆ ಅವುಗಳನ್ನು ಹೌಸ್ ಆಫ್ ಲಾರ್ಡ್ಸ್ ಎಂಬ ಸಭಿಕರು ತಿರಸ್ಕರಿಸಲೂ ಬದಲಾವಣೆ ಮಾಡಲೂ ಅವರಿಗೆ ಅಧಿಕಾರವಿಲ್ಲ ಎಂಬದಾಗಿ ತೀರ್ಮಾನ ಮಾಡಿರುತ್ತಾರೆ

* * *

ಅಮೇರಿಕದಲ್ಲಿ ಫ್ರಾನ್ಸ್ ಹಾಲ್ಸ್ ಎಂಬ ಪ್ರಸಿದ್ಧ ಚಿತ್ರಗಾರನು ಬರೆದಿದ್ದ ಒಂದು ತಸ್ವೀರು ಕರ್ನಲ್ ವಾರ್ಡೆ ಎಂಬಾತನಿಂದ ಒಬ್ಬ ಅಧಿಕಾರಿಯು ಎರಡೂವರೆ ಲಕ್ಷ ರೂಪಾಯಿಗೆ ಕೊಂಡುಕೊಂಡಿದ್ದನು ಕೆಲವು ದಿನಗಳ ಹಿಂದೆ ಈ ಚಿತ್ರಪಟವು ಮಾರಾಟಕ್ಕೆ ಬಂತು ನ್ಯೂಯಾರ್ಕ್ ನಗರದ ಟೇಪ್ಲಿನ್ ಕಾರ್ನ್ ಎಂಬೊಬ್ಬ ಐಶ್ವರ್ಯವಂತನು ಅದಕ್ಕೆ ೧೫ ಲಕ್ಷ ರೂಪಾಯಿ ಕೊಟ್ಟು ತೆಗೆದುಕೊಂಡಿರುತ್ತಾನೆ ಇಷ್ಟು ಹಣ ಒಂದು ತಸ್ವೀರಿಗೆ ಇದುವರೆಗೆ ಯಾರೂ ಕೊಟ್ಟಿರುವದಿಲ್ಲ ಅದು ೬೫ ಅಂಗುಲ ಎತ್ತರವಾಗಿಯೂ ೧೧೨ ಅಂಗುಲ ಅಗಲವಾಗಿಯೂ ಇರುವದು

* * *

ಆಫ್ರಿಕದ ದಕ್ಷಿಣ ಪ್ರಾಂತ್ಯದಲ್ಲಿರುವ ಕೇಪ್ ಟೌನ್ ನಗರದಿಂದ ಉತ್ತರಕ್ಕೆ ಕೈರೋ ನಗರದ ವರೆಗೆ ರೈಲ್ ರಸ್ತೆಯನ್ನು ಹಾಕುತ್ತಿದ್ದಾರಷ್ಟೆ ಇದು ವರೆಗೆ ೨,೧೮೭ ಮೈಲಿ ದೂರ ರಸ್ತೆ ತಯಾರಾಗಿ ಗಾಡಿಗಳು ಸಂಚರಿಸುತ್ತಲಿವೆ ಮುಂದೆ ೬೦ ಮೈಲಿ ದೂರ ಮಟ್ಟಿಗೆ ತಯಾರಿ ಆಯಿತು ಈಗ ಕೇಪ್ ಟೌನ್ ನಗರದಿಂದ ವಿಕ್ಟೋರಿಯಾ ಜಲಪಾತದ ವರೆಗೂ ಇಲ್ಲಿಂದ ಬ್ರೋಕನ್ ಹಿಲ್ ಎಂಬ ಗುಡ್ಡದ ವರೆಗೂ ರೈಲ್ ಗಾಡಿಗಳು ಹೋಗಿ ಬರುತ್ತಿರುವವು ಇನ್ನೂ ೪೦ ಮೈಲಿ ದೂರ ಬಿಚಾವಣೆಯಾದರೆ ಕಾಂಗೋ ದೇಶವು ಸಿಕ್ಕುವದು

* * *

ಜರ್ಮನಿ ರಾಜ್ಯದಲ್ಲೆಲ್ಲಾ ಬಹು ಪುರಾತನ ಪಟ್ಟಣವೆನಿಸಿಕೊಂಡಿರುವ ಟ್ರೀವ್ಸ್ ನಗರದಲ್ಲಿ ಹರ್ ಆಂಟನ್ ಬಾಡರ್ ಎಂಬೊಬ್ಬ ಕಾರೇಗಾರನು ಒಂದು ಭಾರೀ ವಿಮಾನವನ್ನು ರಚಿಸುತ್ತಾನೆ ಅದನ್ನು ಅಂತರಿಕ್ಷದಲ್ಲಿ ಓಡಿಸುವದಕ್ಕೆ ೪೮೦ ಕುದುರೆ ಬಲವುಳ್ಳ ೫ ಮೋಟರುಗಳನ್ನ ಅದರಲ್ಲಿ ಇಡುತ್ತಾನೆ ಈ ವಿಮಾನವು ವಿ ಎಲದಲ್ಲಿ ೫೦ ೬ ಜನರನ್ನು ಕರೆದುಕೊಂಡು ಗಂಟೆಗೆ ೪೪ ರಿಂದ ೫೦ ಮೈಲಿಯ ವರೆಗೂ ವೇಗವಾಗಿ ಸಂಚಾರಮಾಡಬಲ್ಲದೆಂದೂ ಅದು ಇನ್ನೆರಡು ತಿಂಗಳಲ್ಲಿ ಸಿದ್ಧವಾಗುವದೆಂದೂ ಪ್ರಕಟವಾಗಿದೆ

* * *

ಲಂಡನ್ ಪಟ್ಟಣದ ವೈದ್ಯ ವಿದ್ಯಾನಿಲಯದ ಪ್ರದರ್ಶನ ಶಾಲೆಯೊಳಗೆ ರಾನೇಫರ್ ಎಂಬೊಬ್ಬ ಅಧಿಕಾರಿಯ ಶವವನ್ನು ಇಟ್ಟದ್ದಾರೆ ಈ ಶವವು ಸ್ವಲ್ಪವೂ ಕೆಡಲಿಲ್ಲ ಆ ಅಧಿಕಾರಿಯು ಐಗುಪ್ತ ರಾಜ್ಯದಲ್ಲಿ ಸುಮಾರು ೫,೦೦೦ ವರುಷಗಳ ಹಿಂದೆ ಸನಫರ್ ಎಂಬ ದೊರೆಯ ಆಸ್ಥಾನದಲ್ಲಿದ್ದವನು ಈತನ ಶವವನ್ನು ಡಾ|| ಪೆಟ್ರಿಸ್ ಎಂಬಾತನು ೧೮೯೧ನೇ ಇಸವಿಯಲ್ಲಿ ಒಂದು ಸಮಾಧಿಯೊಳಗಿಂದ ತೆಗೆದು ಅಲ್ಲಿಂದ ಲಂಡನ್ ಪಟ್ಟಣಕ್ಕೆ ಕಳುಹಿಸಿದನು ಐಗುಪ್ತದೇಶೀಯರು ಪ್ರಾಚೀನ ಕಾಲದಲ್ಲಿ ಶವಗಳು ಕೆಡದಂತೆ ಸುಗಂಧಾದಿ ದ್ರವ್ಯಗಳನ್ನು ಲೇಪಿಸಿ ಮಣಿ ದಿವ್ಯವಾದ ಸಮಾಧಿಯೊಳಗೆ ಇಡುತ್ತಿದ್ದರು ಮೇಲ್ಕಂಡ ಶವವು ಬಹು ಪುರಾತನ ಕಾಲದ್ದೆಂದು ಎಲ್ಲಿಯಟ್ ಸ್ಮಿತ್ ಎಂಬ ಪಂಡಿತನು ಪರೀಕ್ಷಿಸಿ ತಿಳಿಸುತ್ತಾನೆ

* * *

ವಿಲಾಯತಿಗೆ ಸೇರಿದ ಬ್ರೈಟನ್ ಪಟ್ಟಣದಲ್ಲಿ ಕಾಲವಾದ ಮಿಸೆಸ್ ಜೇನ್ ಕರ್ಟಿಸ್ ವಾಷರ್ಮಲ್ ಎಂಬಾಕೆಯು ತನ್ನ ಆಸ್ತಿಯಲ್ಲಿ ೪ ಲಕ್ಷವೂ ೮೦ ಸಾವಿರ ರೂಪಾಯಿ ಸಿಲ್ವರ್‌ಟನ್ ಪಟ್ಟಣದ ಮಿಸೆಸ್ ಸಾರಾ ಪಿಟರ್ಸ್ ಎಂಬಾಕೆಯು ೧೫ ಸಾವಿರ ರೂಪಾಯಿ, ಡೋವರ್ ಪಟ್ಟಣದ ಮಿಸ್ ಬಟ್ಲರ್ ಎಂಬಾಕೆಯು ೬೦ ಸಾವಿರ ರೂಪಾಯಿ, ಡಗ್ಲಸ್ ಪಟ್ಟಣದ ಮಿಸೆಸ್ ಮೇರಿ ಹಿಲ್ ಎಂಬಾಕೆಯು ೯೫,೦೦೦ ರೂಪಾಯಿ, ಲಂಡನ್ ಪಟ್ಟಣದ ಪಿ ಆರ್ ರಾಸ್ವೆಲ್ ಎಂಬಾತನು ೧,೫೭,೫೦೦ ರೂಪಾಯಿಯನ್ನೂ ಕಾರ್ಡಿಫ್ ಪಟ್ಟಣದ ಮೆ|| ಜಾರ್ಜ್ ಕೋರಿ ಎಂಬಾತನು ೧೨ ಲಕ್ಷದ ೫ ಸಾವಿರ ರೂಪಾಯಿಯನ್ನೂ, ವೆ ರ್ಟ್ ೧ ಲಿಟ್ಲರ್ ಎಂಬಾತನು ೩೦ ಸಾವಿರ ರೂಪಾಯಿಯನ್ನೂ ತಮ್ಮ ಆಸ್ತಿಯಿಂದ ದರ್ಮ ಸಂಸ್ಥೆಗಳಿಗೆ ವಿನಿಯೊಗಿಸಬೇಕೆಂದು ಮರಣಶಾಸನಗಳನ್ನು ಬರೆದಿರುತ್ತಾರೆ

* * *

ತುರ್ಕಿ ರಾಜ್ಯಕ್ಕೆ ಸೇರಿದ ಅಲ್ಬೇನಿಯ ಪ್ರಾಂತ್ಯದಲ್ಲಿ ಸಶಸ್ತ್ರರಾದವರು ಈಚೆಗೆ ಕೆಲವು ತೆರಿಗೆಗಳನ್ನು ಹಾಕಿದರು ಅಲ್ಬೇನಿಯ ಜನರು ಪ್ರತಿಭಟಿಸಿ ಕಳೆದ ೪ನೇ ತಾರೀಖಿನಿಂದ ದಂಡು ಕಟ್ಟಿ ಯುದ್ಧ ಮಾಡಿದರು ಪ್ರಿಸ್ಟಿನಾ ಎಂಬಲ್ಲಿ ೩೬ ಗಂಟೆಗಳ ಹೊತ್ತು ಅಲ್ಬೇನಿಯವರಿಗೂ ಸರ್ಕಾರಿ ಸೈನಿಕರಿಗೂ ಬಹು ಕಠಿಣವಾದ ಯುದ್ಧ ನಡೆಯಿತು ಎರಡು ಪಟಾಲಂ ಸ್ವಾರರು ೧೮ ಪಿರಂಗಿಗಳನ್ನು ಇಟ್ಟುಕೊಂಡು ದಂಗೆಕೋರರ ಮೇಲೆ ಯುದ್ಧ ಮಾಡುವಲ್ಲಿ ದಂಗೆಕೋರರ ಹೊಡೆತವೇ ಜೋರಾಗಿ ಸೈನಿಕರೆಲ್ಲಾ ಸಿಕ್ಕಿಬಿದ್ದು ದುಸ್ಥಿತಿಗೆ ಒಂದರು ಇಷ್ಟರೊಳಗೆ ಗವರ್ನ್‌ಮೆಂಟಿಗೆ ವರ್ತಮಾನ ತಿಳಿದು ಆರು ಪಟಾಲಂ ಸೈನ್ಯವು ರವಾನೆ ಮಾಡಲ್ಪಟ್ಟಿತು ಇವರು ದಂಗೆಕೋರರ ಹಾವಳಿಯನ್ನೂ ಪಟಾಟೋಪವನ್ನೂ ತಡೆದು ಇರುತ್ತಾರೆ ಮಾರನೇ ದಿನವು ಯುದ್ಧ ನಡೆಯಿತು ದಂಗೆಕೋರರು ತಮ್ಮ ಸಹಾಯಕರನ್ನು ನಿರೀಕ್ಷಿಸಿಕೊಂಡು ಯುದ್ಧವನ್ನು ನಿಲ್ಲಿಸಿರುತ್ತಾರೆ ಗಾಯಪಟ್ಟವರನ್ನು ಪ್ರಿಸ್ಟಿನಾ ಸ್ಥಳಕ್ಕೆ ಸಾಗಿಸುತ್ತಿರುವರು

Printed and Published by the Rev H GULLIFORD, Proprietor and Manager, Wesleyan Mission Press, Mysore 14/4/1910

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—೧೯೧೦ ನೇ ಇಸವಿ ಏಪ್ರಿಲ್ ತಾರೀಖು ೨೧ ನೇ ಗುರುವಾರ. ಸಂಚಿಕೆ ೪೨

ವೃತ್ತಾಂತ ಪತ್ರಿಕೆಯ ಕ್ಯಾಲೆಂಡರು

ಸಿದ್ಧವಾಗಿದೆ ಕ್ರಯ ಒಂದಾಣೆ

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ಟ್ರಾಂಡ್ ದಾಸ್ ಆರ್ ಇ, ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್ ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪ್ರಜೆಗಳು ಅಡ್ರೆಸ್ ಅರ್ಪಿಸಿದ ಚಿತ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ ಇದೇ ಏಪ್ರಿಲ್ ಒಳಗಾಗಿ ವೃತ್ತಾಂತ ಪತ್ರಿಕೆಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಆನಂತರ ಬಂದವರಿಗೆ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರೆಯಿರಿ ವಿಳಾಸ:-

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಹರಿ

11 16

ಇದು ಸಾಧಾರಣ ಜ್ವರ ಚಳಿಜ್ವರ ಸನ್ನಿಜ್ವರ [illegible] ಜ್ವರ ವಾತಜ್ವರ, ಬಳಲಿಸುವ [illegible] ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ [illegible] ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪ್ಪ ಅಯ್ಯರವರು—ನನಗೆ [illegible] ತಿಂಗಳಿಂದ ಚಳಿಜ್ವರ [illegible] ಸೇವಿಸಿದರೂ [illegible] ಯಿತು ಇನ್ನು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ [illegible] ಚೆನ್ನಾಗಿ ಗುಣ ಹೊಂದುವರು ಇನ್ನೂ [illegible] ದಯವಿಟ್ಟು ಇನ್ನೊಂದು [illegible] ಉಪಕಾರವಾಗಿದೆ ಎಂದೆ ಬರೆದಿದಾರೆ

ಕ್ರಯ [illegible] ೧ ಕ್ಕೆ [illegible] ರೂ [illegible] ತರಿಸಿಕೊಂಡರೆ [illegible] ವಾಪ್ಪಡಿಸಲಾಗುವದು.

ಜಿ ಮು ೦ ಕ ಪ್ರು ೯ ರ

ಈ ಔಷಧವು ಅಜೀರ್ಣ ಶೀತಭೇದಿ ಸಾಧಾರಣ ಹೊಟ್ಟೆ ನೋಯುವದು ರಕ್ತಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ ಕೂಡಲೆ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವೆ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ [illegible]—ಜ್ವರಹರಿಯ ಔಷಧವನ್ನು ನಾನೂ ನನ್ನ ಕಾಟೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು [illegible] ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, [illegible] ದಾಖಲೆಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

[illegible]ಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

[illegible] ವೆಂಕಟಾಚಲ ಪಂಡಿತರ ದಿವ್ಯೌಷಧಗಳು

40-6

ಕ್ಷುಧಾಸಾಗರವು: ಮಕ್ಕಳುಗಳಿಗೆ ಇದನ್ನು ಅಮೃತವೆಂದೇ ಹೇಳುವೆವು ಏಕೆಂದರೆ ಮಕ್ಕಳ ಅನ್ನಕೋಶವನ್ನು ಬಲಪಡಿಸಿ ಶ್ಲೇಷ್ಮಸ್ಥಾನವನ್ನು ನಿರ್ಮಲವಾಗಿಟ್ಟು ಕೆಟ್ಟ ರಕ್ತವನ್ನು ಶುದ್ಧೀಕರಿಸಿ ರಕ್ತಾಭಿಸರಣವು ಧಾರಾಳವಾಗುವ ಹಾಗೆ ಮಾಡುತ್ತದೆ ಇವರಲ್ಲಿ ಆಕ್ಷೇಪಣೀಯವಾದ ಯಾವ ಪದಾರ್ಥವೂ ಸೇರಿಲ್ಲವಾಗಿ ಪ್ರತಿ ಮಕ್ಕಳಿಗೂ ಧೈರ್ಯವಾಗಿ ಕೊಡಬಹುದು

[illegible] ಇಲ್ಲ ಮಕ್ಕಳಿಗೆ ಅಜೀರ್ಣದಿಂದಲೋ [illegible]ದಿಂದಲೋ—ಹಲ್ಲುಗಳು ಹುಟ್ಟುವುದರಿಂದಲೋ ಆಗುವ ಭೇದಿ—ವಾಂತಿಗಳನ್ನು ನಿಲ್ಲಿಸುತ್ತದೆ ಮಲಬದ್ಧವಿದ್ದರೆ ದಿನಕ್ಕೆ ಒಂದು [illegible] ಆಗುವ ಹಾಗೆ ಮಾಡುತ್ತದೆ-ಬಾಲಕ್ಷಯ ಸಣ್ಣ ಜ್ವರ (ಹಳೇ ಜ್ವರ), ಉಷ್ಣ ಅಥವಾ ಶೀತದ [illegible] ಬಿಸಿಯ ಕೆಮ್ಮಲು—ಹೊಟ್ಟೆ ಕಟ್ಟಿಕೊಂಡಿರುವುದು ಜಲಕುರ್ಮ—ಹೊಟ್ಟೆಯ ಎಡಭಾಗದ ಗಡ್ಡೆ [illegible] ಬರದಿರುವುದು—ಚಂಡಿ ಹಿಡಿಯುವುದು ಬಡವಾಗಿರುವುದು ಗರ್ಭಕಾರಕದಿಂದ ಬೀಗಿಕೊಂಡಿರುವುದು -ಇವೆಲ್ಲವನ್ನೂ ನಿಸ್ಸಂದೇಹವಾಗಿ ಗುಣಪಡಿಸುತ್ತದೆ ಕೇವಲ ತೀಕ್ಷ್ಣವಾಗಿದ್ದರೂ—ಕೇವಲ ಶೀತವಾಗಿದ್ದರೂ ಸಮತ್ವವನ್ನು ಕಲಿಸುತ್ತದೆ

ಹೆಚ್ಚು ಮಾತಿನಿಂದೇನು ನಿಮ್ಮ ಮಕ್ಕಳು ಯಾವ ತರದ ಬೇನೆಯೂ ಇಲ್ಲದೆ ಮೈತುಂಬಿಕೊಂಡು ಚಟುವಟಿಕೆಯುಳ್ಳವರೂ ಬಲವುಳ್ಳವರೂ ಆಗಬೇಕಾದರೆ ಈ ಕ್ಷುಧಾಸಾಗರವುದು ಒಂದಸಲ ಕೊಡಿ ಬೆಲೆ ರೂ ೧ ೦ ೦

ಪ್ಯಾಕಿಂಗ್ ಮತ್ತು ಟಪ್ಪಾಲ್ ಚಾರ್ಜು ೫ ಆಣೆ

ಕಾಸಕೇಸರಿ: ಶೀತದ ಮತ್ತು ಉಷ್ಣದ ಕೆಮ್ಮಲುಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ ಡಬ್ಬಿ ೧ ಕ್ಕೆ ರೂ ೧ ೦—೦ ಟಪಾಲು ಖರ್ಚು ಪ್ರತ್ಯೇಕ

ಶ್ವಾಸಕಾಲೇಶ್ವರ (ಗೂರಲುಬ್ಬಸಕ್ಕೆ):—ಬೆಲೆ ರೂ ೧—೮—೦ ಟಪಾಲು ಖರ್ಚು ಪ್ರತ್ಯೇಕ

ಕನಕ್ಷ್ಮಾಸನಮಾತ್ರೆ:—ಸೀಸೆ ೧ ಕ್ಕೆ ರೂ ೦-೪—೦ ಐದು ಸೀಸೆಗೆ ೧ ಹೆಚ್ಚು

ನಮ್ಮ ವಿಳಾಸ:—ಎಸ್ ಎಸ್ [illegible] ವೈದ್ಯಶಾಲೆ, ಮೈಸೂರು.

ಸಂಗೀತಪಾರಿಜಾತವೆಂಬ ಹಾಡಿನ ಪುಸ್ತಕ

70 31

ಕ್ರಯ 0 4 0

[illegible] ಮೈಸೂರು [illegible] ಯೂನಿಯನ್ [illegible] ಎಸ್ ಬುಕ್ ಡಿಪೋ [illegible] ಜಿ ಎಸ್ ಕನ್ನಯ್ಯಶೆಟ್ಟಿ ಅಂಡ್ ಕೊ. ಮಂಗಳೂರು [illegible] ಬೆಂಗಳೂರು ಸಿಟಿ ಮಿಷನ್ ಬುಕ್ ಡಿಪೋ

ತಯಾರಿದೆ

45 3

ಕೃಷ್ಣಭಿವೃದ್ಧ್ಯರ್ಥವಾಗಿ ಸರ್ಕಾರದವರು ಜಮೀನುದಾರರಿಗೆ ಕೊಡುವ ಸಾಲಗಳು, ಮಾಡುವ ಇತರ ಸಹಾಯಗಳು, ಇವುಗಳ [illegible] ಮತ್ತು ಶಾಸನಗಳ ಸಂಗ್ರಹ ಕ್ರಯ [illegible] 10 ಆಣೆ [illegible] ಕೆಳಕಂಡ ವಿಳಾಸ -

[illegible] ಮಲ್ಲಾರಾಧ್ಯರು ಫಸ್ಟ್ ಗ್ರೇಡ್ ಪ್ಲೀಡರ್

[illegible]ಪೇಟೆ, ಬೆಂಗಳೂರು ಸಿಟಿ

ಯುಗಾದಿಯ [illegible] ದರಗಳು

46 [illegible]

[illegible] ಟೋಪಿಗಳು ಇದು ಬಣ್ಣದಲ್ಲಿ ಎಷ್ಟೋ [illegible] ಉತ್ತಮವಾಗಿ [illegible] — ಡಜನ್ 1 ಕ್ಕೆ ರೂ 6 12-0 [illegible] 1 ಕ್ಕೆ ರೂ 1 10 0 [illegible] ಸೆಟ್ 1 ಕ್ಕೆ 0 12-0 ಮತ್ತು 0 9 0 [illegible] ಡಬ್ಬಿ 1 ಕ್ಕೆ 0-3-0 [illegible] ಕಟು [illegible]

ವಿಳಾಸ [illegible] ಮಾರ್ಟ್, ಮಂಗಳೂರು

ಸುಗಂಧಗಳು.

[illegible]-22

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧[illegible] [illegible] ೧ ೪-೦ ಬತ್ತಿಗಳು ೧ ತೊಲೆಗೆ ರೂ ೧ ದೊಡ್ಡ ಫೊಟ್ಟ ೧ ಕ್ಕೆ ೮ ಆಣೆ ಶ್ರೀಗಂಧದ ಎಣ್ಣೆ ೧ ಸೀಸೆಗೆ ೪ ಆಣೆ ಇತರ ವಿವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ಸತ್ಯವೂ ಅಗ್ಗವೂ ಆದ ಅಂಗಡಿ

41-4

ನಮ್ಮ ಸತ್ಯವನ್ನು ಪರೀಕ್ಷಿಸಿನೋಡಿ

೩೦ ಗಂಟೆ ನಡೆಯುವ ೧೨ ವರುಷ ಗ್ಯಾರಂಟಿ ಉಳ್ಳ ಸುಂದರವೂ ಗಟ್ಟಿಯೂ ಅಗ್ಗವೂ ಆದ ಲೀವರ್ ಜೇಬಿನ ಗಡಿಯಾರವನ್ನು ಸೊಗಸಾದ ಸರಪಣಿ, ೧೦೦ ಫೋಸ್ಟ್ ಕಾರ್ಡುಗಳ ಸಮೇತ ಪೋಸ್ಟೇಜು ಸೇರಿ ಮೂರು ರೂಪಾಯಿಗೆ ಕೊಡುತ್ತೇವೆ ಬೇಗ ಬರೆದುಕೊಳ್ಳಿ ಒಪ್ಪದಿದ್ದರೆ ಹಣ ವಾಪಸು ಕೊಡುತ್ತೇವೆ ನಮ್ಮ ವಿಳಾಸ —

[illegible] ಫಟಾಲಾ ಕಂಪನಿ, ಚಿತ್ತೂರು, [illegible]

ಪ್ರಸಿದ್ಧ ಪತ್ರಿಕೆ.

53-[illegible]

ನಾವು ಈಗ [illegible] ಕೆಂಪು ಯಷ್ಟೆ ಕೆಂಪು, ಮುಂದಕೆಂಪು, ಕಪ್ಪು, ಕಪ್ಪು ಕೆಂಪು [illegible] ಒಳ್ಳೆ [illegible] ಉಲ್ಲನ್ನನ್ನು ತರಿಸಿದ್ದೇವೆ [illegible] ರೂ 1 [illegible] 0 2—[illegible]—0 2—8—0, 3—0—0, 3 8 0, [illegible] 0 [illegible] ಉಲ್ಲನ್ನಲ್ಲಿ ತಯಾರ್ ಆದ ಟೋಪಿಗಳು 1 ಕ್ಕೆ ರೂ 0—6—0 0—10—0, 0—12—0, 0—14 0 [illegible] 0 0 1 2—0, 1—4—0, 1—6—0, 1—8—0 [illegible] 1 ಕ್ಕೆ ರೂ 1—12—0 2—0 0 ಡಜನ್‌ಗಟ್ಲೆ ತರಿಸಿಕೊಂಡರೆ [illegible] 6¼ ರೂಪಾಯಿ ಡಿಸ್ಕೌಂಟು ನಮ್ಮ ಕಂಪನಿ ಕ್ಯಾಟ್ಲಾಗು ಬರೆದು ತರಿಸಿಕೊಳ್ಳಿರಿ

ಬಿ ಎಸ್ ಕಣ್ಣಯ್ಯಶೆಟ್ಟಿ,

[illegible] ಮ್ಯಾನೇಜರ್, ತುಂಕೂರು

ಮನೆಗೆ ಬೇಕಾದ ಹೊಲಿಗೆ ಯಂತ್ರ.

51- 2

[illegible] ೧೦ ರ ವರೆಗೆ ಕ್ರಯ ಸುಲಭವಾಗಿದೆ

ಬಹಳ ಅಗ್ಗವೂ ಸರ್ವೋತ್ತಮವೂ ಆದದ್ದು, ಇಂಥಾ ಸಂಸಾರಕ್ಕೆ ಅನುಕೂಲವಾದ ಹೊಲಿಯುವ ಯಂತ್ರ ಇದುವರೆಗೆ ಮಾರಾಟಕ್ಕೆ ಬಂದದ್ದಿಲ್ಲ ಮಾರಾಟಕ್ಕೆ ಇಟ್ಟ ಒಡನೆಯೇ ಅದರ ಉಪಯೋಗವು ಪ್ರಕಟವಾಗಿ ಅನೇಕಾನೇಕರು ಕೊಂಡುಕೊಳ್ಳಲಾರಂಭಿಸಿದ್ದರಿಂದ ಹೊಸ ಯಂತ್ರಗಳನ್ನು ಮಾಡಿ ಒದಗಿಸುವುದೇ ನಮಗೆ ತುಂಬಾ ಪ್ರಯಾಸವಾಯಿತು ಎರಡನೇ ಸಲ ತರಿಸಿದ್ದರಲ್ಲೂ ಸಾವಿರ ಯಂತ್ರಗಳ ಮೇಲೆ



ಯೇ ಬಿಕರಿಯಾಗಿರೋದರಿಂದ ಬಹಳ ಸ್ವಲ್ಪವೇ ಉಳಿದಿರುತ್ತವೆ ಬೇಗ ಬರೆಯದ ಹೋದರೆ ಇವೂ ಮುಗಿದುಹೋಗುವವು. ಯಂತ್ರದೊಡನೆ ಬೇಕಾದ ಸಾಮಗ್ರಿಗಳೆಲ್ಲಾ ಕಳುಹಿಸಲಾಗುತ್ತೆ. ಅಂಗಿ, ಲಂಗ, ರವಿಕೆ ಮೊದಲಾದದ್ದೆಲ್ಲಾ ಹೊಲಿದುಕೊಳ್ಳುವುದಕ್ಕೆ ಈ ಯಂತ್ರವು ಪ್ರತಿಮನೆಯಲ್ಲೂ ಅತ್ಯಂತ ಪ್ರಯೋಜನಕರವಾಗಿದೆ, ಮೊದಲಿನ ಕ್ರಯ ರೂ ೫. ಈಗ ರೂ. ೩ ೧೪ ಕ್ಕೆ ಇಳಿಸಿದೇವೆ ನಮ್ಮ ವಿಳಾಸ —

ಲೋಕನಾಥ ಪಾಂಡುರಂಗ್ ಕಂಪನಿ,

೩೯, ಕಾಳ್ಬಾದೇವಿ ರೋಡ್, ಬೊಂಬಾಯಿ.

ಕ್ಲಮೆಂಟರ ಮ್ಯಾಜಿಕ್ ಎಣ್ಣೆ ತೈಲವು

೨ 48

ತಲೆನೋವು, ವಾಯುನೋವು, ಸೆಳತ, ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು ಹ[illegible]ನೋವು — ಇವುಗಳಿಗೆ ಲ್ಲಾ ಈ ತೈಲವನ್ನು ಹಚ್ಚುವದೆ ಯುಕ್ತಿ[illegible] ಮಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸುವಿರಾರು ಜನರು ಪರೀಕ್ಷೆ ಮಾಡಿ, ಮಂಡಿತವಾಗಿಯೂ ಬೇಗನೆ ಗುಣಕೊಡುತ್ತದೆ ಎಂ ಒಪ್ಪಿ [illegible] ಕ್ಕಾರೆ. ಮೇಲ್ಕಂಡ ಎಲ್ಲಾ ವ್ಯಾಧಿಗಳನ್ನೂ ಎದು ಶೀಘ್ರವಾಗಿ[illegible] ಈ ಔಷಧದ ಶಕ್ತಿಯು ಅದ್ಭುತವಾದದ್ದು. ಅದನ್ನು [illegible] ಅದನ್ನು ಅನ್ನು ಹೆಚ್ಚಾಗಿ ಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು. ಈ ಔಷಧವನ್ನು ಬಾ[illegible] ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು [illegible] ಹತ್ತರ ಇಟ್ಟಿರಬೇಕೆಂದು ಹೇಳುವರು. ಈ ಅನೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿ ಯಾಗುವುದು. [illegible] ಮತ್ತು [illegible] ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ [illegible] ವಿಕ್ರಯಿಸುತ್ತಾರೆ. ಮುಖ್ಯ ಏಜಂಟರ ವಿಳಾಸ— ಜೆ. ಎಂ. [illegible]

[illegible]

೩೭ ಪೇಟೆ[illegible] ಮದ್ರಾಸ್.

ವಿವಿಧ ರೋಗಗಳಿಗೆ [illegible]

[illegible]

SCOTT'S EMULSION. 6 16

(ಸ್ಕಾಟ್ಸ್ ಇಮಲ್ಷನ್)

[illegible]

ಕ್ಷಯರೋಗ [illegible]

ಎಲ್ಲಾ ಔಷಧಿ ವ್ಯಾಪಾರಿಗಳಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್

ಔಷಧಗಳ ಕಾರ್ಖಾನೆ

ಲಂಡನ್ ಇಂಗ್ಲೆಂಡ್

ಈ ಮಾನುಷ್ಯನು[illegible] ಇರುವ [illegible]

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದುರ್ಬಲತ್ವದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದುರ್ಬಲತ್ವಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನು ನೋವು, ಕೀಲುಗಳು ಕಡೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬರುವುದಾಗಲಿ ಇರುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ಕಲ್ಲಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ಕಲೆ ತಿರುಗುವಿಕೆ, ಮೈನೋವು ಕೀಲುನೋವು ಮುಂತಾದವು. ನಿದ್ರಾಭಂಗ, ಇವೇ ಮೊದಲಾದುವು ಲಕ್ಷಣಗಳು. ಮೂತ್ರಕೋಶದ ಮೂತ್ರಕ್ರಿಚ್ಛ್ರ, ವಾಯು, ಮೈಬಾವು, ಅಲ್ಪಮೂತ್ರ, ಮೂತ್ರಕೋಶದ ಕಲ್ಲು ಇವುಗಳೂ, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಹೇಳಲಾಗುವ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಶುದ್ಧಿ ಮಾಡಿ, ರಕ್ತದಲ್ಲಿ ಇರುವ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [6 34]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ಶೀಸೆ ೧—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೧—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಫಾಸ್ಟರ್ ಮ್ಯಾಕ್ಲೆಲನ್ ಕಂ, ಪೆ. ಬಾ. ೩೧೦, ಮುಂಬಯಿ ಬಾಕ್ಸ್—ಇವರಲ್ಲಿ ದೊರೆಯುವುವು.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು



೬ 13

[illegible] ಗಂಟಲು ಗೊರಗೊರಪು, ಉಬ್ಬಸ, [illegible] ಎಲ್ಲಾ ಬಗೆಯ ಕೆಮ್ಮುಗಳಿಗೂ [illegible] ಈ ಔಷಧವು ಬಹುಪ್ರಸಿದ್ಧವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ [illegible] ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಶ್ವಾಸಕೋಶದಲ್ಲಿ ರಕ್ತ [illegible] ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ [illegible] ಶ್ಲೇಷ್ಮ [illegible] ತವಾಗಿ [illegible] ಅದನ್ನು ಕೂಡಲೆ ಪರಿಹರಿಸುತ್ತದೆ. ಆಗ ಸುಲಭವಾದ [illegible] ಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ನಿವಾರಿಸಿ, [illegible] ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು [illegible]

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲಲ್ಲೂ ವಿಕ್ರಯವಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಹಿರ್ ಉಪಯೋಗಕ್ಕೋಸ್ಕರವೇ ಮುತ್ತು [illegible] ರೋಗಗಳಿಗೆ ತಕ್ಕುದಾದ [illegible] 26 9

ತಲೆನೋವು, ಗಂಟು ಊದುವದು [illegible] ಸಂಧಿವಾತ [illegible] ಗಂಟು [illegible]

[illegible] ಸಾವಿರಾರು ಜನರು ಕೊಂಡುಕೊಳ್ಳುತ್ತಾರೆ. ಬಾಟ್ಲು [illegible] ೦ ೮ ೦

ದ್ರಾಕ್ಷಾರಸದ ಮೊಲಾಮು.

[illegible] ಗಾಯಗಳಿಗೆ [illegible]

[illegible]	೦–೮ ೦
ದೇಹಪುಷ್ಟಿಕರ [illegible]	೦ ೮ ೦
[illegible]—ವಾಯುಶೂಲ, ರಕ್ತಗುಲ್ಮ	೧ ೦ ೦
[illegible]—ಮಂದಿ ಆಗಳಿಗೆ	೦ ೮ ೦
[illegible]—ಜ್ವರಕ್ಕೆ	೦–೮ ೦
[illegible]	೦ ೪ ೦
[illegible]—ಮಕ್ಕಳ [illegible]	೦ ೩ ೦
[illegible]—ಕೆಮ್ಮು ಮೊದಲಾದ	೧ ೦ ೦
[illegible]—ಆಸ್ತಮಾ ರೋಗಕ್ಕೆ	೦–೮ ೦

ಮಾದರಿಗಾಗಿ ೧ ಟಪಾಲಿಗೆ ವಿಂಡಿಯಿಂ [illegible] ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್ ಮುಂಬಯಿ

ಟೆಲಿಗ್ರಾಫ್ ವಿಳಾಸ — "ಅಮೃತಾಂಜನ" ಮುಂಬಯಿ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

[illegible] ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೋ ! 3 16

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನ್ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಮಂಡಿತವಾಗಿಯೂ ಹಾಸನದಿಂದಲೇ ಎಂದು ಬಲ್ಲಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ದಾರಿಯಲ್ಲಾ ಬೀಳಬೇಡಿ. ಅವೆ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ಎಲ್ಲಾ ನೆಟ್ಟಗೆ [illegible] (೨) ಟೋಪಿಗಳನ್ನು ಮುದ್ದಾಗಿ [illegible] ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿ [illegible] ಹಾಕಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದವರು ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

[illegible] ಜರಿಕೆ, [illegible] ಟೋಪಿಗಳು ೧ ರೂ ೮ ೫ ೦ ೧೦ ೬ ೪ ೦ ರೂ ೪ ೪

ಹುಕ್ಕಯುಳ್ಳ ಟೋಪಿಗಳು ರೂ ೧ ೩, ರೂ ೧ ೧೨

[illegible] ಟೋಪಿಗಳು ರೂ ೨ ೩

[illegible] ೧ ರೂ ೧೨ ೧ ೮ ೦ ರೂ ೮ ೪, ೧ ರೂ ೬ ೪

[illegible] ಟೋಪಿಗಳು ರೂ ೧ ೮ ೦ ೧೦ ೮ ೪

ಕಪ್ಪು [illegible] ಟೋಪಿ ಪೂರ್ತಿ ಟೋಪಿಗಳು ಅರ್ಧ ಟೋಪಿಗಳು, ಕತ್ತಿನ [illegible] ಇವುಗಳ ಆ ಮಾದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸಿ ಕೊಡುವೆವು. ನಮ್ಮ ವಿಳಾಸ —

[illegible] ಹಾಸನದ ಟೋಪಿ ಕಾರ್ಖಾನೆ ಹಾಸನ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ವರ್ಷಕ್ಕೆ ೧ ವರುಷಕ್ಕೆ [illegible]

(ಅಡ್ವಾನ್ಸು) [illegible]

ಏನು ಕಡವರು [illegible] ಮೇಲೆ ಹಂ[illegible]

ಕಳಂದಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಕಲ್ ಸೇರಿ ರೂ [illegible]

[illegible]

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಒಂದು ಕಟ್ಟು ಹಾಗಲೂ ವಾಗೆ ಸಾದ್ಯ ಆಗುವ ಪತ್ರಿಕೆಯ ವಿಳಾಸದಲ್ಲಿ ಎಷ್ಟ[illegible] ತಿಳಿಸಿರುವಂಥ ರಿಜಿಸ್ಟರ್ ನಂಬರನ್ನು ಮರೆಯದೆ ನಮೂದಿಸತಕ್ಕದ್ದು.

ನಮ್ಮ ವಿಳಾಸ — ಮ್ಯಾನೇಜರ್ ವೃತ್ತಾಂತ ಪತ್ರಿಕೆ ಮೈಸೂರು

ಸ್ವದೇಶೀ ಬಟ್ಟೆಗಳು ಸ್ವದೇಶೀ ಬಟ್ಟೆಗಳು "

1. 1

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ಸಾಸೂ ಕಾಗಿ ತಂ ರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಎಹಳ ಕಡಮೆ. ಈ ಬಟ್ಟೆಗಳು ಕೊಳಾಬಂದಲ್ಲ [illegible] ವಸ್ತುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ [illegible] ಆ [illegible] ಯೋಜನವು ನಿಮಗೆ ಗೊತ್ತಾಗುವುದು. ಗಜ ಒ ರಕ್ಕೆ [illegible] ಚಿಲ್ಲರೆಯಾಗಿ ಅಗಲ ಬಟ್ಟಾಗಿ ಅಗಲ ವ ರವ್ವಿಸುತ್ತವೆ. ಕಾಲುಗಳು ಹಾಸನದ ಟೋಪಿಗಳು ಮುಖ್ಯ[illegible] ಟೋಪಿಗಳು ಇವೇ ಮೊದಲಾದ ಟೋಪಿ ಇವೆಲ್ಲಾ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್

ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(176 ಪುಟಗಳು ಸೊಗಸಾದ ಬಟ್ಟೆ ಬೈಂಡು ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಒದುಕಿದ್ದನು. ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾ ಪುರುಷನ ಹಿಂಬಾಲಕರು ಈಗ್ಗ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ 0—0—6

(80 ಪೇಜು) 0—1—0

(160 ಪೇಜು) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10–15]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು.

ಮೈಸೂರು ... ಮಕ್ಕಳಲ್ಲಿ ... [illegible]

—೧—೧೦ ರಿಂದ —೧೯೧೦ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1			0
ಮೈಸೂರು		0	0	0
ಬೆಂಗಳೂರು ಡಿಸ್ಟ್ರಿಕ್ಟು	1	1	1	0
ಮೈಸೂರು "	32	[illegible]4	6	5
ಕೋಲಾರ್	0	)	14	11
ಕೋಲಾರ ... ದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	1	1	0	0
ಹಾಸನ	0	(	0	0
ಚಿತ್ರದುರ್ಗ	.	)	0	)
ಕಡೂರ್	4	3	0	0
ಶಿವಮೊಗ್ಗ	0	)	0	0
ಜುಮ್ಲಾ	40	35	[illegible]	18

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸಾಧಾರಣನಾಮ ಸಂವತ್ಸರದ ಚೈತ್ರ ಶುದ್ಧ ತ್ರಯೋದಶಿ ಶುಕ್ರವಾರದಿಂದ ಚೈತ್ರ ಬಹುಳ ಚೌತಿ ಗುರುವಾರದ ವರೆಗೆ ಒಂದು ವಾರದ ಪಂಚಾಂಗ

೧೯೧೦ ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಮೇಷ ಮಾಸ
[illegible]	ಶುಕ್ರ	ತ್ರಯೋದಶಿ	19 ೨	ಹಸ್ತ	61 0	10
[illegible]	ಶನಿವಾ	ಚತುರ್ದಶಿ	21 31	ಚಿ	0 51	11
[illegible]	ರವಿವಾ	ಪೂರ್ಣಿಮಾ	38 14	ಸ್ವಾ	6 9	12
[illegible]	ಚಂದ್ರ	ಪಾಡ್ಯ	73 17	ವಿಶಾ	13 32	13
	ಕುಜ	ಬಿದಿಗೆ	38 16	ಅ	20 9	14
[illegible]	ಬುಧ	ತದಿಗೆ	43 4	ಜ್ಯೇ	26 6	15
[illegible]	ಗುರು	ಚೌತಿ	46 18	ಮೂ	31 13	16

ಹನ್ನೆರಡಿ ಅನಂಗ ೧೩, ಮೇಲೂರು ಅಪ್ರಮೇಯಸ್ವಾಮಿ ರಥ, ತೊ ... ನಾರಾಯಣಸ್ವಾಮಿ ರಥ ... ಚಿತ್ರಾಪೂರ್ಣಿಮಾ ಬೇಗೂರಿನ ... ಸ್ವಾಮಿ ರಥ ಸಂಕಟಹರಚತುರ್ಥಿ

ಪೇಟೇ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಪ್ಪು ಅಕ್ಕಿ ಪಲ್ಲಾ ೧ಕ್ಕೆ	ರೂ	೧೩ ೮ ೦	೧೪ ೦ ೮
ಕೆಂಪು ... ಅಕ್ಕಿ ಅವಲ್		೧೩ ೮ ೦	೧೪ ೧೩
ದುಯಂ		೧೩ ೦ ೦	೧೪ ೪ ೦
ಜಾವಾಗ್ರಿ ಅಕ್ಕಿ		೧೩ ೬ ೦	೧೪ ೦ ೦
ಸಣ್ಣಕ್ಕಿ ಅವಲ್		೧೪ ೮	೧೬ ೮ ೦
ದುಯಂ		೧೪ ೦ ೦	೧೪ ೦ ೦
ಕೊಗಾ ವೀಳೆ ಪಲ್ಲಾ ೧ಕ್ಕೆ		೧೩ ೮ ೦	೧೪ ೦ ೦
ದುಯಂ		೧೩ ೦ ೦	೧೩ ೦ ೦
ಹೈಕ್ ರಾಗಿ ಪಲ್ಲಾ ೧ಕ್ಕೆ		೮ ೦-೦	೬ ೧೩
ಕಂದ್ರಾಗಿ		೭ ೧೩ ೦	೬ ೮ ೦
ಜೋಳ		೭ ೮ ೦	೮ ೮ ೦
ಹುರುಳಿ ಪಲ್ಲಾ ೧ಕ್ಕೆ		೧೧ ೦ ೦	೧೧ ೦ ೦
ಬಿಳಿ ಅವರೆ		೧೧ ೦ ೦	೧೦ ೮ ೦
ಹೆಸರು		೧೧ ೦ ೦	೧೦ ೪ ೦
ಉದ್ದು		೧೪ ೦ ೦	೧೧ ೦ ೦
ಕಡಲೆ		೧೩ ೦	೧೧ ೦ ೦
ಎಳ್ಳು ಸೇರು ೧ಕ್ಕೆ		೧೭ ೦	೧೪ ೮ ೦
ತೊಗರಿ		೮ ೮ ೦	೧೨ ೦ ೦
ತವಡು ೧ಕ್ಕೆ ಸೇರಿಗೆ		೧೪ ೦ ೦	೧೩ ೦ ೦
... ಕಾಯಿ ಮಣ ೧ಕ್ಕೆ		೩ ೪ ೦	೧ ೧೦ ೦
ಮೆಣಸಿನಕಾಯಿ		೬ ೧೩ ೦	೪ ೧೩ ೦
ದುಯಂ		೪ ೮ ೦	೪ ೪ ೦
ಬೆಲ್ಲ ದೊಡ್ಡ ಅಚ್ಚು		೮ ೮ ೦	೩ ೩ ೦
ಒಳ್ಳೆಣ್ಣೆ ಮಣ ೧ಕ್ಕೆ		೭ ೦ ೦	೪ ೧೦ ೦
ಹರಳೆಣ್ಣೆ		೫ ೮ ೦	೪ ೮ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೧೦ ೮ ೦	೧೩ ೮ ೦
ಉಪ್ಪು		೬ ೦ ೦	೫ ೧೩ ೦
ಹುಣಸೇ ಹಣ್ಣು		೨ ೦ ೦	೧ ೪ ೦
ಹಳೇದು		೧ ೧೩ ೦	೧ ೬ ೦
ತುಪ್ಪ ಮಣ ೧ಕ್ಕೆ		೧೬ ೦ ೦	೧೪ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೭ ೪ ೦	೪ ೬ ೦
ತೆಂಗಿನಕಾಯಿ ೧೦೦ ಕ್ಕೆ		೫ ೦ ೦	೭ ೦ ೦
ಅಡಿಕೆಕಾಯಿ ಮಣ ೧ಕ್ಕೆ		೦ ೧೩ ೦	೦ ೧೪ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೧೩ ೪	೦ ೧೩ ೦
ಚಿನ್ನ (ಪೌನ್) ಕೆಂಪು		೧೫ ೯ ೦	೧೫ ೯ ೦
" " ಪವನು		೧೬ ೦ ೦	೧೫ ೯ ೦
ಗಟ್ಟಿ ತೊಲ ೧ಕ್ಕೆ		೨೪ ೮ ೦	೨೪ ೩ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೬ ೪ ೦	೬೧ ೦ ೦

ಹಕ್ಕು ಬಾಧ್ಯತೆ ಇರುವವರು ... ನೋಟೀಸು.

೧೯೨

ಮೈಸೂರು ಲಷ್ಕರ್ ಮೊಹಲ್ಲಾ ... ಬೀದಿ ... ಹೆಡ್ಡ್ ... ನವರ ... ಮನೆ ... ಪೆಡ್ಡ್ ... ವರು ಕ್ರಯಕ್ಕೆ ತೆಗೆದುಕೊಳ್ಳಬೇಕೆಂದು ಒಪ್ಪಿ ... ದಿ ಕೊಂಡಿದ್ದಾರೆ ಸದರಿ ಸ್ವತ್ತಿಗೆ ಸಂಬಂಧಪಟ್ಟ ಶರಾರ್ದಾರರಾಗಲಿ ಪ್ರ ... ದ ವರಗಲಿ ಹಕ್ಕುಳ್ಳವರಾಗಲಿ ಇದ್ದರೆ ಈ ಜಾಹಿರಾಯಿತು ಒಂದು ತಿಂಗಳ ಒಳಗಾಗಿ ಈ ಕೆಳಗೆ ಸಹಿ ಮಾಡುವವರಿಗೆ ತಿಳಿಸತಕ್ಕದ್ದು ಸದರಿ ಮಿಯಾದಿಯಲ್ಲಿ ತಿಳಿಸದೆ ಇದ್ದರೆ ಅಂಥಾವರ ಹಕ್ಕು ಬಾಧ್ಯತೆಯು ಷೆಡ್ಯೂಲ್ ಆಸ್ತಿಯನ್ನು ಬದ್ಧಪಡಿಸಲಾರದು

ಷೆಡ್ಯೂಲ್ — ಮೈಸೂರು ಲಷ್ಕರ್ ಮೊಹಲ್ಲಾ ... ಬೀದಿಯಲ್ಲಿರುವ ಮ್ಯುನಿಸಿಪಲ್ ನಂಬರು 1101 110[illegible] 110[illegible] 1101 ಮತ್ತು 110[illegible] ಇದಕ್ಕೆ ಚಕ್ಕುಬಂದಿ—ಪೂರ್ವಕ್ಕೆ ಗಲ್ಲಿ ಪಶ್ಚಿಮಕ್ಕೆ ... ಬಾಗಿಲು ಉತ್ತರಕ್ಕೆ ಗೋವಿಂದಪ್ಪನ ... ಮತ್ತು ... ರವರ ಮನೆ ದಕ್ಷಿಣಕ್ಕೆ ಹೈರೋಡು—ಈ ಮಧ್ಯೆ ಇರುವ ... ಮನೆ ಮತ್ತು ಇದಕ್ಕೆ ಸೇರಿದ ಭಾವಿ ... ಮತ್ತು ... ಮತ್ತು ಉತ್ತರ ದಿಕ್ಕಿನಲ್ಲಿರುವ ಹಿಂಭಾಗದ ಮನೆ ಇದಕ್ಕೆ ಸೇರಿದ ... ವ ... ಭಾವಿ ಸಹಾ

ಕೋರ್ಟು ಮೈಸೂರು — ಮನ್ನಾರ್ ಕೃಷ್ಣಶೆಟ್ಟಿ

೬—೪—೧೯೧೦ — ಅರಮನೆ ಹೆಡ್ ಸರಾಫ್

ನಮ್ಮ ಪುಸ್ತಕಭಂಡಾರವು

ಶ್ರೀ ಸಿದ್ಧಾಂತಬಿಂದುಪ್ರಕಾಶ

ಈ ಅದ್ವೈತ ಸಿದ್ಧಾಂತ ಗ್ರಂಥವು ಆದಿಶಂಕರಾಚಾರ್ಯರಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟಿರುವದು ಇದನ್ನು ಮೈಸೂರು ಪಟ್ಟಣದಲ್ಲಿರುವ ಶ್ರೀ ಶಿವಾನಂದ ಬ್ರಹ್ಮಚಾರಿಗಳು ಕನ್ನಡಕ್ಕೆ ಭಾಷಾಂತರಮಾಡಿರುತ್ತಾರೆ ಶ್ರೀ ಶಿವಾನಂದರವರು ಈ ಗ್ರಂಥವನ್ನು ೧೦೨ ಪ್ರಕರಣಗಳಾಗಿ ವಿಂಗಡಿಸಿ ... ಸಮಾಧಾನಗಳ ಮತ್ತು ಅನೇಕ ಆಚಾರ್ಯರುಗಳ ಮತಗಳ ಸಹಿತವಾಗಿಯೂ ... ಎಂಬ ವಾಕ್ಯಾರ್ಥ ವಿಸ್ತಾರ ಸಹಿತವಾಗಿಯೂ ರಚಿಸಿರುತ್ತಾರೆ ... ಸಿದ್ಧಾಂತಗಳನ್ನು ಸುಲಭವಾಗಿ ತಿಳಿದುಕೊಳ್ಳುವಂತೆ ಈ ಪುಸ್ತಕದ ಅಂತ್ಯಭಾಗದಲ್ಲಿ ಒಂದು ವಿವರಣಾ ಪತ್ರಿಕೆಯೂ ... ತನ್ನ ಬಳಿಗೆ ಬಂದ ಸನ್ಯಾಸಿಗಳಿಗೆ ಉಪದೇಶಮಾಡಿದಂಥಾ ಪರಮಾತ್ಮ ಸ್ತುತಿಯೂ ಸೇರಿಸಲ್ಪಟ್ಟಿರುವವು ಸಾಮಾನ್ಯವಾಗಿ ಕನ್ನಡವನ್ನು ತಿಳಿದಿರುವವರಿಗೂ ಕೂಡ ಸುಲಭವಾಗಿ ಅರ್ಥವಾಗುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ ಈ ಪುಸ್ತಕವನ್ನು ಅಚ್ಚುಹಾಕಿಸುವದಕ್ಕೆ ಮ॥ ಅಳಿಯಂದಿರ ಚಿಕ್ಕದೇವರಾಜೇ ಅರಸಿನವರು ಸಂಪೂರ್ಣಸಹಾಯವನ್ನು ಕೊಟ್ಟಿರುತ್ತಾರೆ ಮೈಸೂರು ... ಪ್ರೆಸ್ಸಿನಲ್ಲಿ ಈ ಪುಸ್ತಕವು ಒಳ್ಳೇ ಕಾಗದದ ಮೇಲೆ ದೊಡ್ಡ ಅಕ್ಷರಗಳಿಂದ ಬಹಳ ಚನ್ನಾಗಿ ಛಾಪಿಸಲ್ಪಟ್ಟು ... ಒಟ್ಟಿಯಿಂದ ಬೈಂಡುಮಾಡಲ್ಪಟ್ಟಿರುವದು ಇದರ ಕ್ರಯ ಒಂದು ರೂಪಾಯಿ ಅದ್ವೈತ ... ಸಿದ್ಧಾಂತವನ್ನು ಕನ್ನಡದಲ್ಲಿ ಇಷ್ಟು ವಿವರವಾಗಿಯೂ ಸುಲಭವಾಗಿಯೂ ಇನ್ನಾವ ಇದುವರೆಗೆ ಪ್ರಕಟಿಸಿರುವಂತೆ ನಮಗೆ ತೋರಲಿಲ್ಲ

ಪದ್ಮಾವತಿ ಕಥೆ

ಈ ಕಥೆಯನ್ನು ತರೀಕೆರೆ ಸಬ್ ರೆಜಿಸ್ಟ್ರಾರ್ ಮ॥ ಬಿ ಜೆ ... ಲಿಂಗಪ್ಪನವರು ನಾಟಕರೂಪವಾಗಿ ಕನ್ನಡದಲ್ಲಿ ರಚಿಸಿ ಮೈಸೂರು ಸ್ಟಾರ್ ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ ... ಕ್ರಯವಿಟ್ಟು ಪ್ರಕಟಿಸಿರುತ್ತಾರೆ ಅಕ್ಷರವೂ ಅಚ್ಚೂ ಕಾಗದವೂ ಬೈಂಡೂ ತೃಪ್ತಿಕರವಾಗಿರುತ್ತವೆ ಗ್ರಂಥಕರ್ತರು ಈ ಕಥೆಯನ್ನು ... ರಸ್ಯವಾಗಿ ಬರೆದಿರುತ್ತಾರೆ ಇದರಲ್ಲಿ ಅವರು ಸೂಚಿಸುವಂತೆ ... ರುವ ಕೆಲವು ಸಂಶಯಾಸ್ಪದವಾದ ವ್ಯವಹಾರಗಳನ್ನು ಕ್ರಮವಡಿಸಿ ಕೊಳ್ಳಬೇಕೆಂಬ ಭಾವನೆಯು ನಿರೂಪಿಸಲ್ಪಟ್ಟಿದೆ ಆದಿಯಲ್ಲಿ ವೀರಶೈವರಿಗೂ ಜೈನರಿಗೂ ಇದ್ದ ... ಲಹದ ವಿಚಾರವೂ ಈ ಗ್ರಂಥದಿಂದ ಹೊರಬೀಳುವುದು ಇದಲ್ಲದೆ ಈ ಕಥೆಯು ... ದ ಪಲವು ಯೋಗ್ಯನಡವಳಿಕೆಗಳು ಸೂಚಿತ ... ಗವೆ ... ಈ ಕಥೆಯನ್ನು ಓದಿ ಪ್ರಯೋಜನಹೊಂದಲು ಸಹಾಯವಾಗುವುದು ಐದು ಅಂಕಗಳುಳ್ಳ ಈ ಕಥೆಯು ಬಹು ಲಲಿತವಾದ ಮತ್ತು ಗಂಭೀರವಾದ ಪದಕಟ್ಟುಗಳಿಂದ ರಚಿಸಿಯಾಗಿ ಒಳ್ಳೆ ವಿಷಯ ಗರ್ಭಿತವಾದದ್ದಾಗಿರುವುದು

ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವುದರ ಪ್ರಯೋಜನ

ಕಟ್ಟು ಪಟ್ಟಣ ಸೇರು ಎಂಬ ಗಾದೆಯಂತೆ ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವುದರಿಂದ ಅನೇಕ ಪ್ರಯೋಜನಗಳಾಗುತ್ತವೆ ಕಲ್ಕತ್ತ ಬೊಂಬಾಯಿ ಮದ್ರಾಸು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವುದರಿಂದಾಗುವ ಪ್ರಯೋಜನಗಳು ಮುಖ್ಯವಾಗಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟವು ಹಳ್ಳಿಗಳಲ್ಲಿ ಚಿಕ್ಕ ಶಾಲೆಗಳೇ ಹೊರತು ಕಾಲೇಜುಗಳಿರುವುದಿಲ್ಲ ದೊಡ್ಡ ಪಟ್ಟಣಗಳಲ್ಲಿ ಆಯಾ ವಿದ್ಯಾವಿಷಯಗಳಲ್ಲಿ ಪ್ರವೀಣರಾದ ಉಪಾಧ್ಯಾಯರುಳ್ಳ ಅನೇಕ ಶಾಲೆಗಳೂ ಕಾಲೇಜುಗಳೂ ಇರುವವು ನ್ಯಾಯವಿಚಾರವನ್ನು ತಿಳಿಯಬೇಕಾದರೆ ಲಾ ಕಾಲೇಜಿನಲ್ಲಿ ಓದಬಹುದು ವೈದ್ಯಶಾಸ್ತ್ರ ಶಿಲ್ಪಶಾಸ್ತ್ರ ಇಂಜನಿಯರಿಂಗ್ ಮೊದಲಾದ ನಾನಾ ವಿಧವಾದ ಶಾಸ್ತ್ರವನ್ನಾಗಲಿ ಆಯಾ ಕಾಲೇಜುಗಳಲ್ಲಿ ಅಭ್ಯಾಸಮಾಡಬಹುದು ಈ ಕಾಲೇಜುಗಳಲ್ಲಿ ಕಷ್ಟಪಟ್ಟು ಓದುವ ಕೆಲವರಿಗೆ ವಿದ್ಯಾರ್ಥಿ ವೇತನಗಳು ದೊರೆಯುವುದರಿಂದ ಬಡ ವಿದ್ಯಾರ್ಥಿಗಳು ಓದಲು ತುಂಬಾ ಪ್ರೋತ್ಸಾಹವುಂಟು ದೊಡ್ಡ ಪಟ್ಟಣಗಳಲ್ಲಿ ಶಾಲೆಗಳನ್ನೂ ಕಾಲೇಜುಗಳನ್ನೂ ಸೇರುವುದರಿಂದುಂಟಾಗುವ ಉಪಯೋಗಗಳನ್ನು ಪಡೆಯಬಹುದಲ್ಲದೆ ದೊಡ್ಡ ದೊಡ್ಡ ಪುಸ್ತಕಭಂಡಾರಗಳಿಗೆ ಹೋಗಿ ಉತ್ತಮವಾದ ನಾನಾ ಗ್ರಂಥಗಳನ್ನು ಓದಿ ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳಬಹುದು ಮತ್ತು ಲೋಕದಲ್ಲಿ ನಡೆದ ಅನೇಕ ವಿಷಯಗಳನ್ನು ವೃತ್ತಾಂತ ಪತ್ರಿಕೆಗಳ ಮೂಲಕ ಓದಿ ತಿಳಿಯಬಹುದು

ವಿದ್ಯಾಭ್ಯಾಸವೆಂದರೆ ಪುಸ್ತಕಗಳನ್ನೋದುವುದೊಂದರ್ಥವಲ್ಲ ... ಗಳಲ್ಲಿಯೂ ಕಾಲೇಜುಗಳಲ್ಲಿಯೂ ಪುಸ್ತಕಭಂಡಾರಗಳಲ್ಲಿಯೂ ಪಡೆದ ಜ್ಞಾನದಿಂದಲೇ ನಮ್ಮ ವಿದ್ಯಾಭ್ಯಾಸವು ಸಂಪೂರ್ಣವಾಯಿತೆಂದು ತಿಳಿಯಕೂಡದು ಈ ಜ್ಞಾನವನ್ನು ಪ್ರಪಂಚದ ಅಪೂರ್ವ ವಸ್ತುಗಳನ್ನು ಪರೀಕ್ಷಿಸುವುದರಿಂದಲೂ ವಿದ್ವಾಂಸರ ಸಹವಾಸದಿಂದಲೂ ವೃದ್ಧಿಪಡಿಸಬೇಕು ಇಂಥಾ ಜ್ಞಾನಾಭಿವೃದ್ಧಿಗೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ತುಂಬಾ ಅವಕಾಶವುಂಟು ನಾಗರಿಕತೆಯು ಮೊದಲು ನಗರಗಳಲ್ಲಿ ನೆಲೆಗೊಂಡು ಅಲ್ಲಿಂದ ಎಲ್ಲಾ ಕಡೆಗೂ ಹಬ್ಬುವುದು ನೋಡಲಿಕ್ಕೆ ಆಶ್ಚರ್ಯಕರವಾದ ಕಟ್ಟಡಗಳೂ ವಸ್ತುಗಳೂ, ಸಕಲ ಶಾಸ್ತ್ರಗಳಲ್ಲಿಯೂ ಪಾರಂಗತರಾದ ವಿದ್ವಾಂಸರೂ ದೊಡ್ಡ ಪಟ್ಟಣಗಳಲ್ಲಿರುವರು ಘನ ಪಂಡಿತರಾದವರಿಗೂ ಪಟ್ಟಣ ವಾಸವು ಉಚಿತವು ಇವರು ದೊಡ್ಡ ಪಟ್ಟಣಗಳಲ್ಲಿದ್ದರೆ ಸಮಾನರ ಸಹವಾಸದಿಂದ ಆನಂದವೂ ಪ್ರಯೋಜನವೂ ಆಗುವುವಲ್ಲದೆ, ಇವರ ಹೆಸರು ಮುಂದಕ್ಕೆ ಬರುವುದು ಹಳ್ಳಿಗಳಲ್ಲಿಯೇ ಇದ್ದರೆ ಕೇಳುವವರಿಲ್ಲದೆ ಇವರು ಕೂಪಕೂರ್ಮಕ್ಕೆ ಸಮಾನರಾಗುವರು

ನಮ್ಮ ದೇಶದಲ್ಲಿ ಈಗಿನ ಅನೇಕ ವಿದ್ಯಾರ್ಥಿಗಳು ಈ ವಿಷಯವನ್ನರಿಯದೆ ... ಪುಸ್ತಕಗಳನ್ನು ... ಹೊರತು ತಾವು ವಾಸಿಸುತ್ತಿರುವ ಪಟ್ಟಣದ ನೋಡತಕ್ಕ ವಸ್ತುಗಳನ್ನು ನೋಡುವುದಾಗಲಿ ಕೇಳತಕ್ಕ ಸಂಗತಿಗಳನ್ನು ಕೇಳುವುದಾಗಲಿ ಪ್ರಯತ್ನಿಸುವುದಿಲ್ಲ ... ವಿದ್ಯಾರ್ಥಿಗಳು ದೊಡ್ಡ ದೊಡ್ಡ ಕಟ್ಟಡ ... ಆಶ್ಚರ್ಯಕರವಾದ ... ಹಡಗು ರೈಲು ಮೊದಲಾದವುಗಳಿಗೆ ಹೋಗಿ ತಮ್ಮ ಬುದ್ಧಿಬಲದಿಂದ ಚೆನ್ನಾಗಿ ಪರಿಶೀಲಿಸಿ ನೋಡಬೇಕು ಅನೇಕ ... ದೊಡ್ಡ ಪಟ್ಟಣಗಳಲ್ಲಿ ... ಅಲ್ಲಿನ ವಿಶೇಷ ವಿಷಯಗಳನ್ನು ಹಳ್ಳಿಯವರಿಗಿಂತ ಸ್ವಲ್ಪವೂ ಹೆಚ್ಚಾಗಿ ಅರಿಯದೆ ಅನೇಕ ಪ್ರಯೋಜನಗಳನ್ನು ಹಾಳುಮಾಡಿಕೊಳ್ಳುವರು ಆದರೆ ಹಳ್ಳಿಗಳಿಂದ ಒಂದು ಪಟ್ಟಣಗಳಲ್ಲಿ ಓದುವವರು ಪಟ್ಟಣವಾಸಿಗಳಲ್ಲಿರುವ ದುರಭ್ಯಾಸಗಳಿಗೆ ಒಳಗಾಗದೆ ರಜಾ ದಿವಸ ಬಂದಾಗ ಹಳ್ಳಿಗಳಲ್ಲಿ ವಾಸಿಸುತ್ತಿದ್ದರೆ ಆ ವಿದ್ಯಾರ್ಥಿಗಳಿಗೆ ಪಟ್ಟಣವಾಸದಿಂದುಂಟಾಗುವ ಪ್ರಯೋಜನಗಳು ದೊರೆಯುವುವಲ್ಲದೆ ಅವರ ಆರೋಗ್ಯವೂ ಸೌಖ್ಯವೂ ಹೆಚ್ಚುವುವು

ಮೈಸೂರು ಸರ್ಕಾರಿ ಹುಕುಮುಗಳು

ಗೋಕಾಯಿಲೆಗಳ ಮರಣ ಮುಂತಾದದ್ದು

ಕಳೆದ ೧೯೦೯ನೇ ಇಸವಿ ಸೆಪ್ಟಂಬರ್ ೩೦ಕ್ಕೆ ಆಖೈರಾದ ಮೂರು ತಿಂಗಳಲ್ಲಿ ಸಂಸ್ಥಾನದಲ್ಲಿ ಮೃತಪಟ್ಟ ರೋಗಾಯಿಗಳ ಸಂಖ್ಯೆಯನ್ನು ಸರ್ಕಾರದವರು ಈಗ ಪ್ರಕಟಿಸಿರುತ್ತಾರೆ ಆ ಮೂರು ತಿಂಗಳಲ್ಲಿ ... ಪ್ರಾಣಿಗಳು ಲಯವಾದವು ಆದರೆ ... ೧೩ ... ರಾಸುಗಳು, ಆಕ್ಸಿಡೆಂಟ್ ಸಂಭವಿಸಿದ ಕಾರಣಗಳಿಂದ ... ಪ್ರಾಣಿಗಳೂ ಕಾಡ ಮೃಗಗಳ ಕಾಟದಿಂದ ... ಪಶುಗಳೂ ಮರಿಹೋದವು ಇವರಲ್ಲಿ ... ಪಶುಗಳ ಎಷ್ಟೆಷ್ಟು ಸೇರಿವೆ ಅಂದರೆ — ಹಸುಗಳು ... ಎತ್ತುಗಳು ... ಕೋಣಗಳು ... ಎಮ್ಮೆಗಳು ... ಕುರಿ ಮತ್ತು ಆಡುಗಳು ... ಕುದುರೆಗಳು ... ಕತ್ತೆಗಳು ... ಮೇಲ್ಕಂಡ ಮೂರು ತಿಂಗಳಲ್ಲಿ ಸರ್ಕಾರಿ ಪಶುವೈದ್ಯರು ರೋಗ ... ಸಂಸ್ಥಾನದಲ್ಲಿ ... ರಾಸುಗಳಿಗೆ ಔಷಧ ... ಇವರ ವಿವರ ... ಬೆಂಗಳೂರು ... ಕೋಲಾರ ... ಮೈಸೂರು ... ಹಾಸನ ... ಶಿವಮೊಗ್ಗ ... ಕಡೂರು ...

ಮೈಸೂರು ಸೈನ್ಯದ ... ವೆಚ್ಚ

ಮೈಸೂರು ಸಂಸ್ಥಾನದ ಮಿಲಿಟರಿ ಇಲಾಖೆ ... ರಿಪೋರ್ಟು ಪ್ರಕಟವಾಗಿದೆ ... ಸರ್ಕಾರದವರು ... ರೂಪಾಯಿ ... ೧೯೦೮—೦೯ನೇ ಸಾಲಿನಲ್ಲಿ ... ರೂಪಾಯಿಗಳನ್ನು ... ಕುದುರೆ ಸೈನ್ಯ ಇಂಪೀರಿಯಲ್ ಸರ್ವಿಸ್ ಸೈನ್ಯ ಟ್ರಾನ್ಸ್‌ಪೋರ್ಟ್ ಕೋರ್ ಎಂಬದಾಗಿ ಮೈಸೂರು ಸೈನ್ಯದಲ್ಲಿ ನಾಲ್ಕು ಭಾಗಗಳುಂಟು ಇವುಗಳೆಲ್ಲಾ ಬಹಳ ಚನ್ನಾಗಿ ತರಪೇತಾಗಿ ಒಳ್ಳೇ ಸ್ಥಿತಿಯಲ್ಲಿರುವಂತೆ ... ಇಂಪೀರಿಯಲ್ ಸರ್ವಿಸ್ ಸೈನ್ಯದ ಕೆಲವು ಸೈನಿಕರು ... ಹೊರಗಿನಲ್ಲಿ ... ಕವಾಯತು ... ಬರುವ ... ಕೆಟ್ಟ ಜ್ವರವು ಪ್ರಸರಿಸಿತು ಆದರೆ ... ಚನ್ನಾಗಿ ... ಸತ್ತುಹೋಗಿ ಉಳಿದವರೆಲ್ಲಾ ... ೧೬ ಮಂದಿ ಸವಾರರನ್ನು ಶಿವಮೊಗ್ಗೆ ... ಮತ್ತು ಚನ್ನಪಟ್ಟಣ ... ಇಂಪೀರಿಯಲ್ ಸರ್ವಿಸ್ ಕುದುರೆ ಸೈನ್ಯಕ್ಕೆ ಮ॥ ... ಅರಸಿನವರೂ ... ಕುದುರೆ ಸೈನ್ಯಕ್ಕೆ ಮ॥ ... ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿಗೆ ಮ॥ ... ಮೈಸೂರು ಸಿಪಾಯಿ ಸೈನ್ಯದಲ್ಲಿ ... ಸಿಪಾಯಿಗಳೂ ಅಧಿಕಾರಿಗಳೂ ಇರುವರು ಈ ಇಲಾಖೆಯಲ್ಲಿ ... ಖರ್ಚಾಗಿರುವ ಹಣ ಎಷ್ಟೆಂದರೆ

ಹೆಡ್ ಕ್ವಾರ್ಟರ್ ...	ರೂ	೪೦ ೮೩೫
ಇಂಪೀರಿಯಲ್ ಸರ್ವಿಸ್ ಸೈನ್ಯ		೩ ೮೫,೭೩೭
ಲೋಕಲ್ ಸರ್ವಿಸ್ ರೆಜಿಮೆಂಟು		೧ ೭೦ ೮೮೦
ಸಿಪಾಯಿಗಳ ರೆಜಿಮೆಂಟು		೨ ೧೬ ೨೧೩
ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರ್		೨ ೩೧ ೩೧೯
ಮಿಲಿಟರಿ ಸ್ಟೋರ್		೯,೧೬೭
ಪೆನ್‌ಷನ್ ಮುಂತಾದದ್ದು		೮೫,೩೯೩
ಅರಮನೆ ಮಿಲಿಟರಿ		೧ ೦೦ ೦೦೦
	ಜುಮ್ಲಾ ರೂ	೧೨,೩೯,೫೩೪

ಕಳೆದ ಮಂಗಳವಾರ ರಾತ್ರಿ ಹಿಮಾಚಲ ಪರ್ವತದ ತಪ್ಪಲಲ್ಲಿರುವ ಡಾರ್ಜಿಲಿಂಗ್ ಪಟ್ಟಣದಲ್ಲೂ ಸುತ್ತುಮುತ್ತಲೂ ಅಪಾರವಾದ ಮತ್ತು ರಭಸವಾದ ಮಳೆ ಸುರಿದು ಆನೆಕಲ್ಲು ಬಿದ್ದು ಅನೇಕ ತೋಟ ಮತ್ತು ಉದ್ಯಾನವನಗಳಲ್ಲಿ ಫಲಪುಷ್ಪ ಮೊದಲಾದವನ್ನು ನಾಶಪಡಿಸಿತು

ಅರ್ಧ ಕ್ರಯಕ್ಕೆ ಸಿಕ್ಕುತ್ತೆ

54

ಕಡೇ ಗಳಿಗೆ—ಕೆಲವು ಸಾಮಾನು ಮಾತ್ರ—ಜಾಗ್ರತೆ ಮಾಡಿ

(೧) ಬಲವಾದ ಮಾತಾಡುವ ಯಂತ್ರ—೧೬ ರೆಕಾರ್ಡ್, ೧,೦೦೦ ಪಿನ್ ಸಹಿತ ಕ್ರಯ ರೂ ೬೦, ಈಗ ರೂ ೩೦

(೨) ಒಂದು ದಿನದ ಬಲವಾದ ಟೈಂಪೀಸ್ ಕ್ರಯ ರೂ ೪ ಈಗ ರೂ ೧-೮

(೩) **ಆಟೋ** ಚಲಿಸುವ ತಸ್ವೀರುಳ್ಳದ್ದು ಕ್ರಯ ರೂ ೫ ಈಗ ರೂ ೨-೮.

(೪) ಬಲವಾದ ಅಲಾರಂ ಟೈಂಪೀಸು ಕ್ರಯ ರೂ ೪ ೮ ಈಗ ರೂ ೨-೪.

(೫) **ಸ್ಟೀರಿಯೋಸ್ಕೋಪ್**—ಇದರಲ್ಲಿ ಸಜೀವವಾದ ಪಟಗಳನ್ನು ನೋಡಬಹುದು, ಸ್ವಲ್ಪವೂ ವ್ಯತ್ಯಾಸವಿಲ್ಲ, ಬಹಳ ಸುಂದರವಾಗಿಯೂ ಅದ್ಭುತವಾಗಿಯೂ ಇವೆ, ಯಂತ್ರವೂ ೧೨ ತಸ್ವೀರು ಸಹ ಕ್ರಯ ರೂ ೨, ಈಗ ರೂ ೧

(೬) **ಅದ್ಭುತವೂ ಅಪೂರ್ವವೂ ಆದ** ಲೇಯಿನ್—ಇದನ್ನು ಹಿಡಿದು ಬರೆಯುವದಕ್ಕೆ ಪ್ರಾರಂಭಿಸಿದರೆ ಅದು ಹಾರುತ್ತಾ ಇರುವದು. ಹಿಡಿದಿರುವವರಿಗೆ ಅತ್ಯಂತ ಆಶ್ಚರ್ಯವನ್ನುಂಟು ಮಾಡುತ್ತದೆ ಕ್ರಯ ರೂ. ೨ ೪ ಈಗ ರೂ ೧-೪-೦

(೭) ತಾನಾಗಿಯೇ ಬೀಸುತ್ತಿರುವ ಬೀಸಣಿಗೆ—ಹೆಬ್ಬೆಟ್ಟು ಒತ್ತಿದರೆ ಬೀಸಲಾರಂಭಿಸುತ್ತೆ, ವಿದ್ಯುಚ್ಛಕ್ತಿಯ ಬೀಸಣಿಗೆಯಂತಿವೆ. ಬಹು ಹಿತಕರವಾದದ್ದು ಕ್ರಯ ರೂ ೨೦; ಈಗ ರೂ ೧೦

(೮) **ಎಕ್ಸೆಲ್ಸರ್ ಪ್ರಿಂಟರ್**—೩ ಎ ಫಾ ಪ ರಬ್ಬರ್ ಅಕ್ಷರ, ಇಂಕಿನ ಪ್ಯಾಡ್, ಎ ೧ ಲೈನ್, ಸ್ಪೇಸ್‌ಗಳು, ಒಂದು ಜೊತೆ ಉಕ್ಕಿನ ಟ್ವೀಜರ್ ಸಹಿತ ಕ್ರಯ ರೂ ೧ ೮, ಈಗ ಆಣೆ ೧—

(೯) ವಿದ್ಯುಚ್ಛಕ್ತಿಯ ಪಿನ್ ಮತ್ತು ಬ್ರೂಚ್—ಬ್ಯಾಟರಿ ಸಹಿತ ಬ್ಯಾಟರಿಯನ್ನು ಜೇಬಿನಲ್ಲಿಟ್ಟು, ಪಿನ್ ಅಥವಾ ಬ್ರೂಚನ್ನು ಕತ್ತಿನಪಟ್ಟಿಗೆ ಅಥವಾ ಕೋಟಿಗೆ ಹಾಕಿ, ಬಟನ್ ಒತ್ತಿದರೆ ಪ್ರಕಾಶಮಾನವಾಗುವದು ಈ ಅದ್ಭುತವನ್ನು ನೋಡಿದವರೆಲ್ಲಾ ಆಶ್ಚರ್ಯಪಟ್ಟರು ಕ್ರಯ ರೂ ೭ ಈಗ ರೂ ೩-೮

(೧೦) ವಿದ್ಯುಚ್ಛಕ್ತಿಯ ಲಾಂಪು ಬ್ಯಾಟರಿ ಸಹಿತ ಎಲ್ಲಾ ಜೇಬಿನಲ್ಲಿ ಇಟ್ಟುಕೊಂಡಿದ್ದು ಬೇಕಾದಾಗ ದೀಪ ಹಚ್ಚಬಹುದು ಕ್ರಯ ರೂ ೭, ಈಗ ರೂ ೩-೮

ನೋಟ್ ಅರ್ಧ ಹಣವನ್ನು ಅಡ್ವಾನ್ಸ್ ಕಳಿಸಬೇಕು ಉಳಿದದ್ದನ್ನು ವಿ. ಪಿ ಯಿಂದ ತಗೆದುಕೊಳ್ಳುತ್ತೇವೆ

ಬೇಗ ಈ ವಿಳಾಸಕ್ಕೆ ಬರಿಯಿರಿ —

ಎಂ ಎ ಸುಲ್ತಾನ ಮತ್ತು ಕಂಪನಿ,

ಚಿತ್ತೂರ್ ಉತ್ತರ ಅರ್ಕಾಟು

ವೃತ್ತಾಂತ ಪತ್ರಿಕೆ

೧೯೧೦ನೇ ಇಸವಿ ಏಪ್ರಿಲ್ ತಾ ೨೧ನೇ ಗುರುವಾರ

ಬಾಲವುಳ್ಳ ನಕ್ಷತ್ರವು (ಧೂಮಕೇತುವಿನ ಬಾಲಚುಕ್ಕೆಯು)

ಗಗನ ಮಂಡಲದಲ್ಲಿ ನಾನಾ ತರದ ಅನೇಕ ಪ್ರಪಂಚಗಳಿರುತ್ತವೆ ಈ ಪೈಕಿ ಹಲವನ್ನು ಅಂದರೆ ಸೂರ್ಯ ಚಂದ್ರ, ನಕ್ಷತ್ರ, ಗ್ರಹಾದಿಗಳನ್ನು ನಾವು ದಿನವೂ ನೋಡುತ್ತಲೇ ಇರುವೆವು. ಇನ್ನು ಕೆಲವು ಕಾಲಾನುಗುಣ್ಯವಾಗಿ ಕಾಣಿಸಿಕೊಳ್ಳುವವು. ಈ ಪೈಕಿ ಬಾಲಚುಕ್ಕೆಗಳೂ ಧೂಮಕೇತನ ನಕ್ಷತ್ರಗಳೂ ಕೆಲವಾಗಿರುತ್ತವೆ. ಸೂರ್ಯ, ಚಂದ್ರ, ಗ್ರಹ, ನಕ್ಷತ್ರಗಳ ವಿಷಯದಲ್ಲಿ ಅವುಗಳ ಸ್ಥಿತಿಗತಿ ಚಲನೆ ಮುಂತಾದ ಸಂಗತಿಗಳು ಪಂಡಿತೋತ್ತಮರಿಗೆ ಚನ್ನಾಗಿ ತಿಳಿದಿರುವವು. ಅವರು ಹೇಳುವ ಪ್ರಕಾರ ನಾವು ತಿಳಿದು ನೋಡಬೇಕಾಗಿದೆ ಆದರೆ ಧೂಮಕೇತನವಾಗುವಂಥಾ ನಕ್ಷತ್ರಗಳ ವಿಚಾರದಲ್ಲಿ ಮಾತ್ರ ಅವರು ಕೂಡ ವಿಶೇಷವಾದದ್ದನ್ನು ಹೇಳಲಾರರು. ಬಾಲಚುಕ್ಕೆಗಳ ಚಲನೆ ಮುಂತಾದ ವಿಷಯದಲ್ಲಾದರೋ ಜ್ಯೋತಿಶ್ಶಾಸ್ತ್ರ ಪಂಡಿತರು ನಮಗೆ ಕೆಲವು ಸಂಗತಿಗಳನ್ನು ತಿಳಿಯಪಡಿಸುವಷ್ಟು ಸಮರ್ಥರಾಗಿರುತ್ತಾರೆ.

ಪ್ರಾಚೀನಕಾಲದಿಂದಲೂ ಜನರು ಧೂಮಕೇತನವಾಗುವ ನಕ್ಷತ್ರಗಳನ್ನೂ ಬಾಲಚುಕ್ಕೆಗಳನ್ನೂ ನೋಡಿ ಅವುಗಳ ದೆಸೆಯಿಂದ ಏನೇನೋ ಉತ್ಪಾತಗಳು ಸಂಭವಿಸುತ್ತವೆಂದು ಹೇಳುತ್ತಾ ಬಂದಿರುವುದುಂಟು. ಇವು ಕಾಣಿಸಿಕೊಂಡರೆ ಆ ವರುಷ ನಾನಾ ಕೇಡುಗಳೂ ರಾಜ್ಯಕ್ಷೋಭೆಯೂ ಮುಖ್ಯ ಪುರುಷರ ಲಯವೂ ಪ್ರಾಪ್ತವಾಗುವವೆಂದು ತಿಳಿದುಕೊಳ್ಳುವರು. ಇಂಥಾ ಅಭಿಪ್ರಾಯಕ್ಕೆ ಕಾರಣವೇನೂ ಇರುವುದಿಲ್ಲ; ಯಾಕಂದರೆ ಈ ಬಾಲಚುಕ್ಕೆಗಳ ಸ್ಥಿತಿಗತಿಯನ್ನೂ ಅವುಗಳ ಸಂಚಾರವನ್ನೂ ನಕ್ಷತ್ರಮಂಡಲ ಪರೀಕ್ಷಕರು ತಿಳಿದುಕೊಂಡು ಪ್ರಕಟಮಾಡುತ್ತಾ ಬಂದಿದ್ದಾರೆ. ಕೆಲವು ಬಾಲಚುಕ್ಕೆಗಳು ಕೆಲವು ಕಾಲಮಾತ್ರ ನಮಗೆ ಕಾಣಿಸಿಕೊಳ್ಳುತ್ತಿದ್ದು ಅದೃಶ್ಯವಾಗುತ್ತವೆ. ಇವು ಸೂರ್ಯನಲ್ಲಿರುವ ಆಕರ್ಷಣಾ ಶಕ್ತಿಗಿಂತ ದೂರದ ದೂರಪ್ರದೇಶಕ್ಕೆ ಹೋದಾಗ ನಮ್ಮ ದೃಷ್ಟಿಪಥಕ್ಕೆ ಬೀಳುವುದಿಲ್ಲ ಇನ್ನು ಕೆಲವು ಅಂದರೆ ಹ್ಯಾಲಿಯುವರ ಬಾಲಚುಕ್ಕೆ ಮುಂತಾದವುಗಳು ಎಷ್ಟೆಷ್ಟು ವರುಷಕ್ಕೊಂದಾವರ್ತಿ ಕಾಣಿಸಿಕೊಳ್ಳುತ್ತವೆಂದು ಗೊತ್ತುಮಾಡಿ ಹೇಳಬಹುದಾಗಿದೆ ಈ ಬಾಲಚುಕ್ಕೆಯು ಎಪ್ಪತ್ತು ವರುಷಗಳಿಗೊಂದಾವರ್ತಿ ಕಾಣಿಸಿಕೊಳ್ಳುತ್ತಿರುವದಾಗಿದೆ ಇದು ಕೆಲ ಕಾಲ ಕೆಲ ಕೆಲವು ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತದೆ ಇದರ ಬಾಲವು ಬಹು ದೀರ್ಘವೂ ಪುಕವೂ ಆಗಲವೂ ಆಗಿರೋಣದರಿಂದ ಅಂತರಿಕ್ಷದಲ್ಲಿ ಇದನ್ನು ನೋಡುವುದೇ ಒಂದು ಆಶ್ಚರ್ಯಕರವಾದ ನೋಟವಾಗಿದೆ ಮುಂದಿನ ಮೇ ತಿಂಗಳ ತಾ ೧೯ನೇ ಬುಧವಾರ ಈ ಬಾಲಚುಕ್ಕೆಯು ಸೂರ್ಯಬಿಂಬವನ್ನು ದಾಟುವುದೆಂದೂ ಅದು ಮದರಾಸ್ ಪಟ್ಟಣದಲ್ಲಿ ಜನರಿಗೆ ಬೆಳಿಗ್ಗೆ ೮ ರ ಮೇಲೆ ೯ ಗಂಟೆಯೊಳಗೆ ಕಾಣಿಸಿಕೊಳ್ಳುವುದೆಂದೂ, ಹಾಗೆ ದಾಟಲು ಅದಕ್ಕೆ ಒಂದು ಗಂಟೆಯ ಹೊತ್ತು ಹಿಡಿಯುವುದೆಂದೂ ಊಹಿಸಲ್ಪಟ್ಟಿದೆ ಆಗಲೋ ಅಥವಾ ಒಂದೆರಡು ದಿನಗಳು ಕಳೆದ ಬಳಿಕವೋ ಅದು ನಮಗೆ ಮೊದಲು ಪ್ರಾತಃಕಾಲಗಳಲ್ಲೂ ಆ ಮೇಲೆ ಸೂರ್ಯಬಿಂಬವನ್ನು ದಾಟಿದ ಮೇಲೆ ಸಾಯಂಕಾಲಗಳಲ್ಲೂ ಕೆಲವು ದಿನಗಳವರೆಗೆ ಈ ಪ್ರದೇಶಗಳಲ್ಲೂ ಕಾಣುವುದೆಂದು ತೋರುತ್ತದೆ ಅದರ ಬಾಲವು ಎಷ್ಟು ಉದ್ದವಾಗಿರಬಹುದೆಂದು ಈಗಲೇ ಹೇಳುವುದು ಸಾಧ್ಯವಿಲ್ಲ ಬಹುಶಾ ಅದರ ಬಾಲದ ತುದಿಯು ನಮ್ಮ ಭೂಮಿಯನ್ನು ಮುಟ್ಟಿದರೂ ಮುಟ್ಟಬಹುದು ಅದರ ಅದರ ತುದಿಯು ಬಹಳ ಸೂಕ್ಷ್ಮವಾದ್ದಾಗಿರೋಣವರಿಂದ ಅದು ಸೋಕಿದ ಕಡೆಯ ಭೂಭಾಗಕ್ಕಾಗಲಿ ಅಲ್ಲಿರುವ ಜನರಿಗಾಗಲಿ ಯಾವದೊಂದು ತೊಂದರೆಯಾಗಲಿ ಸಂಭವಿಸಲಾರದು. ಹಿಂದೆ ಹೀಗೆಯೇ ಅನೇಕ ಸಾರಿ ಈ ನಮ್ಮ ಭೂಮಿಯ ಮೇಲೆ ಅನೇಕ ಬಾಲಚುಕ್ಕೆಗಳು ತಗಲಿಕೊಂಡು ಹೋಗಿರುವವು ಈ ವಿಚಾರವು ಪಂಡಿತೋತ್ತಮರಿಗಲ್ಲದೆ ಇತರರಿಗೆ ತಿಳಿಯುವುದಿಲ್ಲ

ಆದಕಾರಣ ಇನ್ನು ಕೆಲವು ದಿನಗಳಲ್ಲಿ ನಮಗೆಲ್ಲಾ ಕಾಣಬರುವಂಥಾ ಈ ಬಾಲಚುಕ್ಕೆಯಿಂದ ಯಾವ ವಿಧವಾದ ಕೇಡಾದರೂ ಉಂಟಾಗುತ್ತದೆಂದು ಊಹಿಸುವುದೂ, ಗಾಬರಿಬಿದ್ದು ಕಳವಳಪಡುವುದೂ ಸಹಜವಾದದ್ದಲ್ಲ. ಈ ಬಾಲಚುಕ್ಕೆಯು ಮಾನುಷದೃಷ್ಟಿಪಥಕ್ಕೆ ಗೋಚರವಾಗುವುದೆಂದು ಕೆಲವು ವರುಷಗಳ ಹಿಂದೆಯೇ ಗೊತ್ತೇ ಇತ್ತು ಅದು ಕಾಲಕ್ರಮವನ್ನನುಸರಿಸಿ ಸಿದ್ಧಾಂತಿಗಳ ನಿರೀಕ್ಷಣೆಗೆ ಅನುಗುಣವಾಗಿ ಪ್ರಪಂಚಕ್ಕೆ ಕಾಣಿಸಿಕೊಳ್ಳುತ್ತದೆ

ಇಂಥಾ ಧೂಮಕೇತುಗಳೂ ಬಾಲಚುಕ್ಕೆಗಳೂ ಕಾಣಿಸಿಕೊಂಡರೆ ಆ ಒಳಿಕ ಅನೇಕ ಹಾನಿಗಳು ಪ್ರಾಪ್ತವಾಗುವವೆಂದು ಕೆಲವರು ಯೋಚಿಸುವುದುಂಟು ಬಾಲಚುಕ್ಕೆಗಳಿಗೂ ಹಾನಿಗಳಿಗೂ ಯಾವದೊಂದು ಸಂಬಂಧವೂ ಇರುವುದಿಲ್ಲ ಹಾನಿಗಳೂ ಅನಾವೃತಗಳೂ ಕ್ಷಾಮಡಾಮರಗಳೂ ಬಾಲಚುಕ್ಕೆ ಕಾಣಿಸಿಕೊಂಡರೂ ಇಲ್ಲದಿದ್ದರೂ ಆಗಿಂದಾಗ್ಗೆ ವರುಷೇ ವರುಷವೂ ಪ್ರಾಪ್ತವಾಗುತ್ತಲೇ ಇವೆ ಈ ವರುಷ ಯಾವುದಾದರೊಂದು ಕೇಡು ಸಂಭವಿಸಿದ ಪಕ್ಷದಲ್ಲಿ ಅದಕ್ಕೂ ಈ ಬಾಲಚುಕ್ಕೆಗೂ ಸಂಬಂಧವೇನೂ ಇರುವುದಿಲ್ಲ ಅದು ಕಾಣಿಸಿಕೊಳ್ಳದೆ ಹೋಗಿದ್ದರೂ ಆ ಕೇಡು ಸಂಭವಿಸುತ್ತಲೇ ಇದ್ದೀತೆಂದು ತಿಳಿಯಬೇಕು

ಧೂಮಕೇತುಗಳನ್ನೂ ಬಾಲಚುಕ್ಕೆಗಳನ್ನೂ ನೋಡಿ ಅವುಗಳಿಂದ ಹಾನಿಸಂಭವಿಸುತ್ತದೆಂದು ಹೇಳುವವರು ವೃಥಾ ಕಳವಳಪಟ್ಟು ಗಾಬರಿಬೀಳುವರೇ ಹೊರತು ಮತ್ತೇನೂ ಇಲ್ಲ ಅವೆರಡೂ ಒಂದಕ್ಕೊಂದು ಏನೇನೂ ಸಂಬಂಧವಿಲ್ಲದವುಗಳಾಗಿವೆ ಪ್ರಪಂಚವನ್ನು ನಿರ್ಮಾಣಮಾಡಿ ನಡಿಸುತ್ತಿರುವ ದೇವರು ಈ ತಾರಾಮಂಡಲದಲ್ಲಿ ಗೋಚರವಾಗುವ ಗ್ರಹಾದಿಗಳನ್ನು ತಾನು ಮಾಡಿಟ್ಟಿರುವ ವಿಧಿಗಳಿಗನುಸಾರವಾಗಿ ಚಲನೆಮಾಡಿಸುತ್ತಾನೆ ನಮಗೆ ಯಾವದೊಂದು ನಿರರ್ಥಕವಾದ ಭಯವೂ ಚಿಂತೆಯೂ ಇಲ್ಲದೆ ಬದುಕಬೇಕಾದರೆ ದೇವರೇ ನಮ್ಮ ಪರಲೋಕದ ತಂದೆಯೆಂದು ನಾವು ಅರಿತುಕೊಂಡು ಆತನಲ್ಲಿ ಸಂಪೂರ್ಣವಾದ ಭರವಸೆಯನ್ನಿಟ್ಟರಬೇಕು ನಾವು ಆತನ ಮೇಲೆ ಭಾರವನ್ನು ಹಾಕಿ ನಡೆದುಕೊಂಡ ಪಕ್ಷದಲ್ಲಿ ಆತನು ಗಗನಮಂಡಲದಲ್ಲಿ ನಮ್ಮ ಕಣ್ಣಿಗೆ ಗೋಚರವಾಗುವಂಥಾ ಗ್ರಹಾದಿಗಳನ್ನು ಹ್ಯಾಗೆ ನಡಿಸಿಕೊಂಡು ಬರುತ್ತಿದ್ದಾನೆಯೋ ಹಾಗೆಯೇ ನಮ್ಮನ್ನೂ ನಡಿಸಿ ಕಾಪಾಡುತ್ತಾ ಬರುವನು ನಮಗೆ ದೇವರ ಮೇಲೆ ಅಚಂಚಲವಾದ ಭರವಸವೂ ಆತನ ವಿಷಯದಲ್ಲಿ ಪರಿಪೂರ್ಣವಾದ ವಿಶ್ವಾಸವೂ ಇದ್ದ ಪಕ್ಷದಲ್ಲಿ ಅಂತರಿಕ್ಷರಾಶಿಗಳು ಸುಟ್ಟುಹೋಗಲಿ, ಪ್ರಪಂಚವೇ ಅದೃಶ್ಯವಾಗಲಿ, ನಾವು ಕಿಂಚಿತ್ತಾದರೂ ಭಯಪಡಬೇಕಾದ ಅಗತ್ಯವಿಲ್ಲ ಆ ಪರಾತ್ಪರನಾದ ದೇವರ ಕೃಪಾಪೋಷಣೆಯಲ್ಲಿ ನಾವು ನೆಮ್ಮದಿಯಾಗಿದ್ದೇವೆ

ಕರುಣೆ

ಲೋಕದಲ್ಲಿ ಎಲ್ಲಿ ನೋಡಿದರೂ ಕೊರತೆ ದುಃಖ ಕಷ್ಟ ರೋಗಗಳನ್ನು ಅನುಭವಿಸುವ ಜನಗಳು ತುಂಬಿದ್ದಾರೆ ದೇವರು ಒಳ್ಳೆಯವನೂ ಕರುಣಾಶಾಲಿಯೂ ಆಗಿದ್ದಾನೆ ಹೀಗಿರುವಲ್ಲಿ ಇಂಥಾ ಒಳ್ಳೆಯವನೂ ದಯಾಪರನೂ ಆಗಿರುವ ದೇವರು ಸೃಷ್ಟಿಮಾಡಿ ಕಾಪಾಡುತ್ತ ಬರುವ ಈ ಲೋಕದಲ್ಲಿ ಕೊರತೆ, ದುಃಖ, ಕಷ್ಟಗಳು [illegible] ಏಕೆ ಎಂದು ಬುದ್ಧಿವಂತರು ವಿಚಾರಿಸಿದ ಆದರೂ ಇದಕ್ಕೆ ಎಷ್ಟು ವಿಚಾರಿಸಿದರೂ ತೃಪ್ತಿಕರವಾದ ಉತ್ತರಗಳನ್ನು ಹೇಳುವುದು ಕಷ್ಟವಾಗಿರುವದು ಇಲ್ಲಿ ಒಂದು ಸಂಗತಿಯನ್ನು ಮಾತ್ರ ಸಂಕ್ಷೇಪವಾಗಿ ಹೇಳಬೇಕು.

ಈ ಸಂಸಾರದಲ್ಲಿ ಬರುವ ನೋವು ದುಃಖಗಳಿಗೆಲ್ಲಾ ಊಟ ಉಪಚಾರ ತತ್ವಗಳ ಅನುಕೂಲತೆಗಳು ಕಾರಣವೆಂದು ಕೆಲವರು ಹೇಳುವರು [illegible] ಕೆಲವರು [illegible] ಕೆಲವರು [illegible] ನಮ್ಮ ಬುದ್ಧಿಗೆ [illegible] ಹೀಗೆ ಹುಡುಕುವುದು ಅನೇಕ ಸಾರಿ ಕಷ್ಟವಾಗುವದು. ಒಂದು ದಿನ ಒಬ್ಬ ಕುರುಡನು ಬೀದಿಯಲ್ಲಿ ಕುಳಿತುಕೊಂಡು ಭಿಕ್ಷೆ ಬೇಡುತ್ತಿದ್ದ ಒಬ್ಬ ಕುರುಡನ ಕೈಗೆ ಒಬ್ಬ ಹುಡುಗನು [illegible] [illegible] ಅವನು [illegible] ಆ ಕುರುಡನ [illegible] ಲಾಠಿ [illegible] ಜೀವಿಸುತ್ತಿದ್ದನು [illegible] ಕಾಸನ್ನು ಕೊಡುವರು [illegible] ಕುರುಡನು [illegible] ಷೇಕ್ಸ್‌ಪಿಯರ್ ಮಹಾಕವಿಯು ಹೇಳಿದ್ದನ್ನು [illegible] ಅದರ ತಾತ್ಪರ್ಯವೇನೆಂದರೆ ಕರುಣೆಯು [illegible] ಗುಣವಾದ ದನ್ನ ಕೊಡುವವನಿಗೂ ತಕ್ಕೊಳ್ಳುವವನಿಗೂ [illegible] ಆದರೆ [illegible] ಸ್ವಭಾವಿಕವಾಗಿ ನಾವು [illegible] ಮಾಡುವವನು ತನ್ನಲ್ಲಿರುವ ದುಡ್ಡೋ ಕಾಸೋ ಒಬ್ಬರಿಗೆ [illegible] ಅವನು ಕೊಟ್ಟಷ್ಟು ಕಳೆ [illegible] ಆದರೆ ಈ ನಾವು ನೋಟಕ್ಕೆ [illegible] ಕಂಡುಬರುವುದು [illegible]

ಕರುಣೆ ಕೊಡುವವನಿಂದ ತೆಗೆದುಕೊಳ್ಳುವವನಿಗೆ ಸಂತೋಷ ಉಂಟಾಗುವದಲ್ಲದೆ [illegible] ಕರುಣೆಯು [illegible] ನಮಗೆ [illegible] ದೇವರು ಕರುಣಾಶಾಲಿಯು ಆತನ [illegible] ನಾವೆಲ್ಲರೂ ಹೋಗಬೇಕು ಆದರೆ [illegible] ನಮ್ಮ [illegible] ದೇವರ [illegible] ಕುರುಡರಿಗೂ [illegible] ರೋಗಿಗಳನ್ನೂ ಈ ಲೋಕದಲ್ಲಿರುವ [illegible] ಸ್ವಲ್ಪ ಸಹಾಯ [illegible] ಅವರನ್ನು ನೋಡಿ ನಮ್ಮ ಕಠಿಣ ಮನಸ್ಸು ಕರಗಿ ಕರುಣೆಯನ್ನು ಅಭ್ಯಾಸಿಸಬೇಕೆಂಬ [illegible] ಹುಡುಗರಿಗೆ [illegible] ಹಿತವಾಗಿ [illegible] ಬಾಲಿಕೆಯ ಬಡ [illegible] ಅವರಿಗೆ ಕೊಡುವ [illegible] ಅವರ ಮನಸ್ಸು ಕರಗಿ [illegible] ಸಂತೋಷಪಡುವ [illegible] ಹಿತಕರವಾಗಿದೆ [illegible] ರೋಗಿಗಳನ್ನು ನೋಡಿ ಅವರಿಗೆ [illegible] ಕರುಣೆಯು [illegible] ನಮಗೆ ಇನ್ನಷ್ಟು ಹಿತಕರವಾಗಿರಬೇಕು.

[illegible] ದೇವರು ಕರುಣೆ [illegible] ಕರುಣೆ [illegible] ನಮ್ಮ [illegible] ಕರುಣೆ ಪಡೆಯಬೇಕಾದ [illegible] ಆದರೆ [illegible] ನಾವು [illegible] ದೇವರು [illegible] ಪ್ರಾರ್ಥನೆಯನ್ನು ಆತನು [illegible] ಆತನು ನಮಗೆ [illegible] ನಮ್ಮ [illegible] ಈಗ [illegible] ಅದನ್ನು [illegible] ಹೆಚ್ಚಾದ ಕರುಣೆ

ಒಳದೇಶದ ವೃತ್ತಾಂತಗಳು

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ|| ಡಿ ದೇವರಾಜ್ ಅರಸಿನವರು ಇಪ್ಪತ್ತೆರಡು ತಿಂಗಳ ರಜಾ ಪಡಮುಕೊಳ್ಳುತ್ತಾರೆಂದೂ, ಅವರ ಕೆಲಸಕ್ಕೆ ಈಗ ರಜದ ಮೇಲಿರುವ ಮೆ|| ಕೆ. ಎಸ್ ದೊರೆಸಾಮಿ ಐಯರವರನ್ನು ಕರೆಸಿ ನೇಮಕ ಮಾಡುತ್ತಾರೆಂದೂ ಬೆಂಗಳೂರಿನ ಪತ್ರಿಕೆಯು ಹೇಳುವುದು

ಕಳೆದ ವಾರ ದಿವಾನ್ ಮ|| ಟಿ. ಆನಂದರಾಯರವರು ಪರಿವಾರ ಸಮೇತ ರಾಜಧಾನಿಗೆ ದಯಮಾಡಿದರು ಈ ತಿಂಗಳ ಒಪ್ಪರ್ ವರೆಗೆ ಅವರು ಇಲ್ಲೇ ಇರುತ್ತಾರೆಂದು ವರ್ತಮಾನವಿದೆ.

* * *

ಶ್ರೀಮನ್ ಮಹಾರಾಜರವರು ಈ ತಿಂಗಳ ಕಡೇ ಭಾಗದಲ್ಲಿ ರಾಜಧಾನಿಯಿಂದ ಅನಂತಪುರಕ್ಕೆ ದಯಮಾಡಿ, ಕಾಲಡಿಯಲ್ಲಿರುವ ಶ್ರೀ ಶೃಂಗೇರಿ ಸ್ವಾಮಿಗಳನ್ನು ಕಂಡು ಬರುವವರಾಗಿದಾರೆಂದು ಕೇಳುತ್ತೇವೆ

* * *

ಕಳೆದ ವಾರ ಎರಡು ದಿನ ರಾಜಧಾನಿಯಲ್ಲಿ ಒಳ್ಳೇ ಮಳೆಗಳಾದವು. ಸಾಯಂಕಾಲದ ಹೊತ್ತು ಮೋಡ ಹಾಕುತ್ತಿದೆ. ಇನ್ನೂ ಮಳೆಗಳು ಬಂದಲ್ಲದೆ ಈಗಿರುವ ಬಿಸಿಲಿನ ಧಗೆಯು ಕಡಮೆಯಾಗಲಾರದು.

* * *

ಕಳೆದ ಶುಕ್ರವಾರ ಬೆಳಿಗ್ಗೆ ಶ್ರೀ ಶಿವಗಂಗಾ ಸ್ವಾಮಿಗಳವರು ಪರಿವಾರ ಸಮೇತ ಅರಮನೆಯ ಖಾಸಾ ಮರ್ಯಾದೆಗಳೊಡನೆ ರಾಜಧಾನಿಯಿಂದ ನರಸೀಪುರದ ಕಡೆ ಪ್ರಯಾಣ ಮಾಡಿದರು ಗೌರವಾರ್ಥವಾದ ೧೧ ತೋಪುಗಳು ಹಾರಿಸಲ್ಪಟ್ಟವು

* * *

ಈ ಸಂಸ್ಥಾನದ ಚೀಫ್ ಜಡ್ಜ್ ಮ|| ಇಸ್ಮಾಯಿಲ್ ಮೊನ್ನೆ ಮಂಗಳವಾರದಿಂದ ರಾಜಧಾನಿಗೆ ಬಂದು ಇಲ್ಲಿನ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನು ತನಿಖೆ ಮಾಡುತ್ತಿದಾರೆ. ಅವರು ಇಲ್ಲಿಂದ ಹೊಳೇನರಸೀಪುರಕ್ಕೆ ಹೋಗಬಹುದೆಂದು ಕಾಣುತ್ತದೆ

* * *

ಬೆಂಗಳೂರು ಇಂಪೀರಿಯಲ್ ಸರ್ವಿಸ್ ಕೋರಿನ ಜಮಾದಾರ್ ಸೈಯದ್ ಅಬ್ದುಲ್ ರಜಾಕ್ ಯವರು ಕಳೆದ ಬುಧವಾರ ಅಲ್ಲಿನ ಮೈದಾನಿನಲ್ಲಿ ಕುದುರೆಯ ಮೇಲೆ ಕುಳಿತು ಪೋಲೋ ಎಂಬ ಚೆಂಡಿನಾಟವನ್ನು ಆಡುತ್ತಿರುವಲ್ಲಿ ಕುದುರೆಯಿಂದ ತಲೆ ಕೆಳಗಾಗಿ ಬಿದ್ದು ೪ ೬ ಗಂಟೆ ಹೊತ್ತಿನಲ್ಲೇ ತೀರಿಹೋದರು

* * *

ಹೊಸ ಶ್ರೀರಾಮನವಮಿಯ ದಿನ ಅರಮನೆ ಆಫೀಸರಾದ ಮ|| ಬಿ. ರಾಮಕೃಷ್ಣರಾಯರು ಇಲ್ಲಿನ ಮಹಾರಾಜರವರ ಸಂಸ್ಕೃತ ಪಾಠಶಾಲೆಯೊಳಗೆ ಆ ಹಬ್ಬದ ಪ್ರಾಶಸ್ತ್ಯವನ್ನು ಕುರಿತು ಬಹು ವಿಸ್ತಾರವಾಗಿ ಅನೇಕ ಉದಾಹರಣೆಗಳ ಸಹಿತ ಉಪನ್ಯಾಸಮಾಡಿದರು ದಿವಾನ್ ರಾದ ಮ|| ಟಿ ಆನಂದ ರಾಯರು ಅಗ್ರಾಸನವನ್ನು ವಹಿಸಿದ್ದರು

* * *

ಬೆಂಗಳೂರು ದಂಡಿನಲ್ಲಿ ಕಳೆದ ಶನಿವಾರ ಸಾಯಂಕಾಲ ಕೆಲವು ಮುಖಂಡರಾದ ಪ್ರಜೆಗಳೂ ಅಧಿಕಾರಿಗಳೂ ಮೇಯೋ ಹಾಲ್ ಎಂಬ ಕಟ್ಟಡದಲ್ಲಿ ಸಭೆ ಸೇರಿ, ದಂಡಿನಲ್ಲಿ ಮಕ್ಕಳ ಸಾವು ವಿಶೇಷವಾಗುತ್ತಿರುವುದನ್ನು ತಪ್ಪಿಸಬೇಕೆಂದು ಆಲೋಚನೆ ಮಾಡಿದರು. ಈ ವಿಚಾರವನ್ನು ತನಿಖೆ ಮಾಡಿ ರಿಪೋರ್ಟು ಬರೆಯಬೇಕೆಂದು ಒಂದು ಕಮಿಟಿ ನಿರ್ಮಾಣವಾಗಿರುತ್ತದೆ

* * *

ಶ್ರೀ ಶಿವಗಂಗಾ ಸ್ವಾಮಿಗಳು ರಾಜಧಾನಿಗೆ ದಯಮಾಡಿದ್ದಾಗ್ಗೆ ಅವರು ಇಲ್ಲಿನ ನೂರಾರು ಮಂದಿ ಶ್ರೀಮತಸ್ಥ ವೈದಿಕ ವಿದ್ವಾಂಸರಿಗೆ ಶಾಲುಜೋಡಿ ಮೊದಲಾದ ಉಡುಗೊರೆಗಳನ್ನು ಕೊಟ್ಟದ್ದಲ್ಲದೆ ಸಂಗೀತ ವಿದ್ವಾನ್ ಮ|| ಬಿ ಕೃಷ್ಣಪ್ಪನವರ ಹಾಡುಗಾರಿಕೆಯನ್ನು ಕೇಳಿ ತುಂಬಾ ಸಂತೋಷಪಟ್ಟು ಅವರಿಗೆ ಒಂದು ಜಾಲೀ ಚಿನ್ನದ ಪದಕವನ್ನು ದಯಪಾಲಿಸಿದರು

* * *

ರಾಜಧಾನಿಯ ಕೋಟೆಯೊಳಗಿದ್ದ ಪೆನ್ಷನ್ ಅಮಲ್ದಾರ್ ಮ|| ಲಕ್ಷ್ಮೀನಾರಣಪ್ಪನವರು ಮೊನ್ನೆ ಮಂಗಳವಾರ ರಾತ್ರಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವಸಾನಕಾಲದಲ್ಲಿ ಅವರಿಗೆ ಎಪ್ಪತ್ತು ವರುಷವಾಗಿತ್ತು. ಸುಮಾರು ಎರಡು ತಿಂಗಳ ಹಿಂದೆ ಅವರ ಪತ್ನೀರವರು ಕಾಲವಾದರು. ಗತಿಸಿದ ಈ ವೃದ್ಧ ದಂಪತಿಗಳಿಗೆ ಚಿಕ್ಕ ವಯಸ್ಸಿನ ಇಬ್ಬರು ಗಂಡು ಮಕ್ಕಳೂ ಮೂರು ಮಂದಿ ಹಿರಿಯ ಹೆಣ್ಣು ಮಕ್ಕಳೂ ಇರುತ್ತಾರೆ

* * *

ಶ್ರೀ ವಿದ್ಯಾನಂದ ಸ್ವಾಮಿಗಳವರು ಈ ರಾಜಧಾನಿಗೆ ದಯಮಾಡಿಸಿದರು. ಬರೋಡಾ ಸಂಸ್ಥಾನದಲ್ಲಿ ಆರ್ಯಮಹಾಸಭೆಯು ಈ ತಿಂಗಳು ೧೬ ಕ್ಕೆ ಸೇರುವುದೆಂಬದಾಗಿಯೂ, ಸದರೀ ಸಭೆಯ ಕೆಲಸಗಳನ್ನು ನಡಿಸುವದಕ್ಕೆ ಬರಬೇಕೆಂಬದಾಗಿಯೂ ತಂತೀ ವರ್ತಮಾನವು ಬಂದದ್ದರಿಂದ ಇವರು ಈ ತಿಂಗಳು ೧೩ ರಲ್ಲಿ ಬರೋಡಾಯಿಗೆ ವಾಪಸು ಪ್ರಯಾಣಮಾಡಿದರು ಸದರೀ ಮಹಾಸಭೆಯ ಕೆಲಸಗಳನ್ನು ತೀರಿಸಿಕೊಂಡು ಈ ಸ್ವಾಮಿಗಳು ಪುನಃ ಇಲ್ಲಿಗೆ ಬರುವವರಾಗಿರುವರು

* * *

ಕೆಲವು ದಿನಗಳ ಹಿಂದೆ ಬೌರಿಂಗ್ ಪೇಟೆಯೊಳಗೆ ಹಿಂದುಗಳ ಉತ್ಸವವು ಮುಸಲ್ಮಾನರ ಮಸೀತಿಯ ಮುಂದೆ ವಾದ್ಯ ಮಾಡಿಕೊಂಡು ಹೋಗುತ್ತಿದ್ದಾಗ ಮಹಮಡೀಯರು ಗುಂಪು ಸೇರಿ ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನಪಟ್ಟರು. ಆದರೆ ಪೋಲೀಸ್ ಸೂಪರಿಂಟೆಂಡೆಂಟರು ಖುದ್ದಾಗಿ ಮೆರವಣಿಗೆಯಲ್ಲಿ ಹಾಜರಾಗಿದ್ದು ಯಾರಿಗೂ ದೊಂಬಿಗೂ ಅವಕಾಶಕೊಡಲಿಲ್ಲ. ಮುಸಲ್ಮಾನರು ಆ ಮಸೀತಿಯನ್ನು ಕಟ್ಟಿದಾಗ ಅವರ ಮುಖಂಡರು ಉತ್ಸವಾದಿಗಳಿಗೆ ಅಡ್ಡಿಮಾಡುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆಂದೂ, ಆದರೂ ಈಗ ಅವರು ಈ ವಿಷಯದಲ್ಲಿ ಮೊಕದ್ದಮೆ ನಡಿಸುವವರಾಗಿದಾರೆಂದೂ ಕೇಳುತ್ತೇವೆ.

* * *

ಇಂಡಿಯಾ ಗವರ್ನಮೆಂಟಿನವರು ಶ್ರೀ ಶಿವಗಂಗಾ ಸ್ವಾಮಿಗಳವರಿಗೆ ಅವರು ಬ್ರಿಟಿಷ್ ಇಂಡಿಯಾದಲ್ಲಿ ಎಲ್ಲಿ ಸಂಚಾರ ಮಾಡಿದಾಗ್ಯೂ ಒಂದು ಪೋಲೀಸ್ ಕಂಪನಿಯು ಅವರ ತೈನಾತಿಯಲ್ಲಿರುವಂತೆ ಏರ್ಪಾಡುಮಾಡಿದಾರೆ. ಇತರ ಸ್ವಾಮಿಗಳಿಂದ ಖರ್ಚನ್ನು ತೆಗೆದುಕೊಂಡು ಪೋಲೀಸ್ ಸಹಾಯವನ್ನು ಮಾಡುವುದುಂಟು. ಇವರಿಗೆ ಖರ್ಚನ್ನು ತೆಗೆದುಕೊಳ್ಳದೇ ಮರ್ಯಾದೆಗೋಸ್ಕರ ಈ ಏರ್ಪಾಡನ್ನು ಮಾಡಿರುವಂತೆ ತಿಳಿಯಬರುತ್ತದೆ. ಇದೂ ಅಲ್ಲದೆ ಬಂದೂಕು ವಗೈರೆಗಳನ್ನು ಲೈಸೆನ್ಸಿಲ್ಲದೆ ಇಟ್ಟುಕೊಳ್ಳುವ ಅಧಿಕಾರವನ್ನೂ ಈ ಸ್ವಾಮಿಗಳಿಗೆ ಕೊಟ್ಟಿರುತ್ತಾರೆ

* * *

ಬೆಂಗಳೂರು ಯಜಮಾನ್ ದೊಡ್ಡವೀರಶೆಟ್ಟರ ಕುಮಾರರಾದ ಮ|| ಜಿ ರುದ್ರಪ್ಪನವರು ವಿಲಾಯತಿಯಲ್ಲಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರೆಂದು ವರ್ತಮಾನ ಬಂದಿದೆ. ಈ ಸಂಸ್ಥಾನದ ಲಿಂಗಾಯತ ಪ್ರಜೆಗಳಲ್ಲಿ ಈ ಪರೀಕ್ಷೆಯನ್ನು ಕೊಟ್ಟವರು ಇವರೇ ಮೊದಲನೆಯವರಾಗಿರುತ್ತಾರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಇವರು ಬೆಂಗಳೂರಿನಲ್ಲಿರುವ ವೆಸ್ಲಿಯನ್ ಹೈ ಸ್ಕೂಲು, ಸೆಂಟ್ ಜೋಸೆಫ್ ಕಾಲೇಜ್, ಸೆಂಟ್ರಲ್ ಕಾಲೇಜ್ ಎಂಬೀ ವಿದ್ಯಾಶಾಲೆಗಳಲ್ಲಿ ಓದಿ, ೧೯೦೬ ನೇ ಇಸವಿಯಲ್ಲಿ ಸೀಮೆಗೆ ತೆರಳಿದರು. ಅಲ್ಲಿ ಮ|| ರುದ್ರಪ್ಪನವರು ಗ್ರೇಸ್ ಇನ್, ಆಕ್ಸ್‌ಫರ್ಡ್ ಎಂಬೀ ವಿದ್ಯಾನಿಲಯಗಳಲ್ಲಿ ವಿದ್ಯಾಭ್ಯಾಸಮಾಡಿರುತ್ತಾರೆ. ಅವರು ಈ ವರುಷದ ಅಂತ್ಯಭಾಗದಲ್ಲಿ ವಾಪಸು ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಮೈಸೂರು ಗೆಜೆಟ್ ಸಂಗ್ರಹ

ಶಿವಮೊಗ್ಗಾ ಸಿವಿಲ್ ಆಸ್ಪತ್ರೆ ಅ|| ಸರ್ಜನ್ ಮೆ|| ಎಸ್ ಕೆ. ಹನುಮಂತರಾಯರಿಗೆ ಮಾರ್ಚಿ ತಾ ೪ ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು ಸಬ ಅ|| ಸರ್ಜನ್ ಮೆ|| ಎನ್ ಎಸ್ ನಂಜುಂಡೈಯನವರನ್ನು ಶಿವಮೊಗ್ಗಾ ಆಸ್ಪತ್ರೆಗೆ ವರ್ಗಮಾಡಿತ್ತು

ಮೈಸೂರು ತಾಲ್ಲೂಕ್ ಅಮಲ್ದಾರ್ ಮೆ|| ಸೈಯದ್ ಯಾಕೂಬ್ ಯವರಿಗೆ ಏಪ್ರಿಲ್ ತಾ ೨ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮೈಸೂರು ಪ್ರಾಸಿಕ್ಯೂಟಿಂಗ್ ಪೋಲೀಸ್ ಇನ್ಸ್‌ಪೆಕ್ಟರ್ ಮೆ|| ಆರ್ ಎ ನರಸಿಂಹೈಯಂಗಾರ್ಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರು ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಕೊರಟಗೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಮಹಮದ್ ಸೈಯದ್ ಷರೀಫ್ ಯವರಿಗೆ ಏಪ್ರಿಲ್ ತಾ ೧೫ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಐದು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮುದ್ದೇಹಳ್ಳಿ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ|| ಎಸ್ ಸುಬ್ಬರಾಯರು ತಮ್ಮ ಇತರ ಕೆಲಸಗಳೊಂದಿಗೆ ಕೊರಟಗೆರೆ ತಾಲ್ಲೂಕಿನ ಅಮಲ್ದಾರರಾಗಿಯೂ ಬದಲೀ ನೇಮಿಸಲ್ಪಟ್ಟಿದಾರೆ

ಕಡೂರ್ ಡಿಸ್ಟ್ರಿಕ್ಟ್ ಖಜಾನಾ ಆಕ್ಟಿಂಗ್ ಅ|| ಕಮಿಷನರ್ ಮೆ|| ಎಸ್ ಚಕ್ರಪಾಣಿ ಐಯಂಗಾರ್ಯರಿಗೆ ಏಪ್ರಿಲ್ ತಾ ೧೫ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಕಡೂರ್ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಆಕ್ಟಿಂಗ್ ಅ|| ಕಮಿಷನರ್ ಮೆ|| ಎಂ ಕೃಷ್ಣಸ್ವಾಮಿ ಐಯಂಗಾರ್ಯರು ತಮ್ಮ ಇತರ ಕೆಲಸಗಳೊಂದಿಗೆ ಕಡೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸತಕ್ಕದ್ದು

ಹಿರಿಯೂರ್ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಕೆ ನರಸಿಂಹೈಯಂಗಾರ್ಯರಿಗೆ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ.

ಮೆ|| ಎನ್. ಶ್ರೀನಿವಾಸರಾಯರು ರಜದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಮೆ|| ಎಂ ಎನ್ ಶ್ರೀನಿವಾಸೈಯಂಗಾರ್ಯರು ಯಡತೊರೆ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಚನ್ನಪಟ್ಟಣದ ಆಕ್ಟಿಂಗ್ ಅಮಲ್ದಾರ್ ಮೆ|| ಎನ್ ಗೋಪಾಲೈಯಂಗಾರ್ಯರೂ, ಕ್ಲೋಸ್ ಪೇಟೆ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ|| ಬಿ ಲಿಂಗಯ್ಯನವರೂ ಫಾರೆಸ್ಟ್ ಕಾನೂನಿನ ಮೊಕದ್ದಮೆಗಳನ್ನು ದರ್ಯಾಫ್ತು ಮಾಡಲು ಅಧಿಕಾರ ವಹಿಸಲ್ಪಟ್ಟಿದಾರೆ

ಮೈಸೂರ್ ಇನ್‌ಫೆಂಟ್ರಿ ೩ ನೇ ಬೆಟಾಲಿಯನ್ ರಜಿಮೆಂಟಲ್ ಹವಿಲ್ದಾರ್ ಮೇಜರ್ ರಾಮಚಂದ್ರರಾಯರನ್ನು ಶ್ರೀಮನ್ ಮಹಾರಾಜರವರು ೩ ನೇ ಗ್ರೇಡ್ ಜಮೇದಾರಿಗೆ ಬಡ್ತಿ ಮಾಡಿರುತ್ತಾರೆ

ವಾಟರ್ ಸಪ್ಲೈ ಮತ್ತು ಸ್ಟೋರ್ ಇಲಾಖೆಯ ಎಗ್ಸಿಕ್ಯೂಟಿವ್ ಇಂಜನಿಯರ್ ಮೆ|| ಬಿ ರಂಗಸ್ವಾಮಿ ಐಯಂಗಾರ್ಯರಿಗೆ ಏಪ್ರಿಲ್ ತಾ. ೧೫ ರಿಂದ ಅಥವಾ ಬಿಡುಗಡೆ ಹೊಂದಿದ ತಾರೀಖಿನಿಂದ ಒಂದು ತಿಂಗಳೂ ಎಂಟು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಅ|| ಇಂಜನಿಯರ್ ಮೆ|| ಕೆ ಶ್ರೀನಿವಾಸೈಯಂಗಾರ್ಯರು ವಾಟರ್ ಸಪ್ಲೈ ಮತ್ತು ಸ್ಟೋರ್ ಇಲಾಖೆಯ ಎಗ್ಸಿಕ್ಯೂಟಿವ್ ಇಂಜನಿಯರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ತಾಲ್ಲೂಕು ವರ್ತಮಾನಗಳು

ಶ್ರವಣಬೆಳಗುಳ.—ಶ್ರೀಶ್ರವಣಬೆಳುಗುಳ ಕ್ಷೇತ್ರದಲ್ಲಿ ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಭಾರತ ವರ್ಷೀಯ ದಿಗಂಬರ ಜೈನ ಮಹಾ ಸಭೆಯಲ್ಲಿ ಠರಾವಾಗಿದ್ದ ಮೇರೆಗೆ ರಿಸೆಪ್ಷನ್ ಕಮಿಟಿಯ ಸೆಕ್ರೆಟರಿಯವರಾಗಿದ್ದ ಮೈಸೂರು ಮೋ ವ|| ವರ್ಧಮಾನಯ್ಯನವರ ಅಸಾಧಾರಣ ಪ್ರಯತ್ನಗಳಿಂದ ಇದೇ ಚೈತ್ರ ಶುದ್ಧ ೫ ಗುರುವಾರದ ದಿನ ದೇವಮಾನ್ಯ ದೇವಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಇಲ್ಲಿ ದಿಗಂಬರ ಜೈನ ಸಂಸ್ಕೃತ ವಿದ್ಯಾರ್ಥಿಗಳ ನಿಲಯವನ್ನು ಸ್ಥಾಪಿಸಿದರು. ಮ|| ಭೂ ಪ. ಪೊಮ್ಮಯ್ಯನವರು ಬಹಳ ಉದಾರ ಮನಸ್ಸಿನಿಂದ ಅವರ ಸ್ವಂತ ಮನೆಯನ್ನು ಎರಡು ವರ್ಷಗಳ ಪರ್ಯಂತರ ಬಾಡಿಗೆಯಿಲ್ಲದೆ ವಿದ್ಯಾರ್ಥಿಗಳ ಉಪಯೋಗಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಈ ರೀತಿಯಾಗಿ ವಿದ್ಯಾಭಿವೃದ್ಧಿಯೇ ತಮ್ಮ ವೃದ್ಧಿಯೆಂದು ತಿಳಿದಿರುವವರು ಸ್ಥಳೀ ಪರಸ್ಥಳಗಳಲ್ಲಿ ಅನೇಕರಿರುತ್ತಾರೆಂದು ನಿಸ್ಸಂದೇಹವಾಗಿ ಹೇಳಬಹುದು. ಇವರೆಲ್ಲರೂ ಈ ಸಮಯದಲ್ಲಿ ತಾವಾಗಿಯೇ ಮುಂದೆ ಬಂದು ತಮ್ಮ ಉದಾರ ಸಹಾಯವನ್ನು ಮಾಡುವದಾದರೆ ನಿಲಯವು ಶೀಘ್ರದಲ್ಲಿಯೇ ಒಹಳ ಉಚ್ಛ್ರಾಯ ಸ್ಥಿತಿಗೆ ಬರುವದರಲ್ಲಿ ಸಂಶಯವಿಲ್ಲ. ಈ ನಿಲಯದಲ್ಲಿ ಈಗ ೧೧ ಜೈನ ಬಾಲಕರಿರುತ್ತಾರೆ. ಇನ್ನು ಕೆಲವರು ಶೀಘ್ರದಲ್ಲಿಯೇ ಬಂದು ಸೇರುವವರಾಗಿದಾರೆ ವಿದ್ಯಾರ್ಥಿಗಳಿಗೆ ಅಶನ, ವಸನ, ಪುಸ್ತಕಾದಿ ಸಹಾಯಗಳೆಲ್ಲವೂ ದೊರಕುತ್ತವೆ ಇಷ್ಟು ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುವ ಈ ನಿಲಯಕ್ಕೆ ಜೈನ ಬಾಲಕರು ವಿಶೇಷವಾಗಿ ಬಂದು ಸಂಸ್ಕೃತ ವಿದ್ಯಾಭ್ಯಾಸ ಮಾಡಿ ತನ್ಮೂಲಕವಾಗಿ ಉಂಟಾಗುವ ಪ್ರಯೋಜನವನ್ನು ಹೊಂದುತ್ತಾರೆಂದೂ, ಹಿರಿಯರಾದ ಮಾತಾಪಿತೃಗಳು ತಮ್ಮ ಮಕ್ಕಳನ್ನು ಕಳುಹಿಸಿಕೊಡುವದಕ್ಕೆ ಹಿಂದೆಗೆಯಲಾರರೆಂಧೂ ನಂಬಿರುತ್ತೇನೆ ಈ ನಿಲಯಕ್ಕೆ ಮ|| ಮೋ. ವರ್ಧಮಾನಯ್ಯನವರೇ ಸೆಕ್ರೆಟರಿ ಮತ್ತು ಟ್ರೆಷರರಾಗಿಯೂ, ಮ|| ಗೌ ಪ. ಧರಣಯ್ಯನವರು ಜಾಯಿಂಟ್ ಸೆಕ್ರೆಟರಿಗಳಾಗಿಯೂ, ಮ|| ಶೆಟ್ರು ಧರಣಯ್ಯನವರು ಸೂಪರಿಂಟೆಂಡೆಂಟರವರಾಗಿಯೂ, ಮ|| ವೈ. ಪೊಮ್ಮಯ್ಯನವರು ಮ್ಯಾನೇಜರಾಗಿಯೂ, ಮ|| ಚೆ. ಚಂ. ಧರಣಯ್ಯನವರು ಸೂಪರ್ವೈಜರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಶ್ರೀ ದೇವರ ಅನುಗ್ರಹದಿಂದ ಈ ನಿಲಯವು ಶೀಘ್ರದಲ್ಲಿಯೇ ಅಭಿವೃದ್ಧಿಗೆ ಬರಬೇಕೆಂದು ಹಾರೈಸುತ್ತೇನೆ

ನಂಜನಗೂಡು.—ಈ ಊರಲ್ಲಿ ಹಗಲು ವೇಳೆ ಬಿಸಲಿನ ಝಳವು ಸಹಿಸಲಶಕ್ಯವಾಗಿರುವುದು. ಕಳೆದ ವಾರವೆಲ್ಲಾ ಸ್ವಲ್ಪ ಮೋಡ ಹಾಕಿಕೊಂಡು ಒಂದೆರಡು ಸಲ ಮಳೆಯೂ ಬಂತು —ಇಲ್ಲಿ ಮುಂಚೆ ಇದ್ದ ಆಕ್ಟಿಂಗ್ ಅಮಲ್ದಾರ್ ಮೆ|| ಎಸ್. ಧರ್ಮರಾಯರು ತಮ್ಮ ಉದ್ಯೋಗದ ಜವಾಬ್ದಾರಿಯನ್ನು ಹೆಡ್ ಕ್ಲಾರ್ಕ್ ಮೆ|| ಮೂರ್ತಿರಾಯರಿಗೆ ವಹಿಸಿ ಎರಡು ತಿಂಗಳು ರಜದ ಮೇಲ ಹೊರಟುಹೋದರು.—ಇಲ್ಲಿ ಕೆಲವು ದಿನಗಳಿಂದ ಕಪಿನೀ ಹೊಳೆಯ ದಡದಲ್ಲಿದ್ದ ತೋಪಿನಲ್ಲಿ ಅನೇಕ ಆನೆಗಳನ್ನು ಕಟ್ಟಿಹಾಕಿದ್ದರು ಇವುಗಳ ಪೈಕಿ ಒಂದು ದೊಡ್ಡದಾದ ಹೆಣ್ಣು ಆನೆಯು ಕಳೆದ ವಾರ ಸತ್ತುಹೋಯಿತು. ಈ ದೊಡ್ಡ ಪ್ರಾಣಿಯನ್ನು ಬೇರೆ ೫ ದೊಡ್ಡ ಆನೆಗಳ ಮೂಲಕ ಎಳೆಯಿಸಿಕೊಂಡು ಬಂದು ಹೊಳೆಯ ತಡಿಯಲ್ಲಿ ಒಂದೆರಡು ದಿನ ಬಿಟ್ಟಿದ್ದು ತರುವಾಯ ಒಂದು ಗುಂಡಿಗೆ ಹಾಕಿ ಮುಚ್ಚಿಸಿದರು ಆದರೆ ಸರಿಯಾಗಿ ಮುಚ್ಚಲಿಲ್ಲ ತಲೆಯೂ, ಕಾಲೂ ಮೇಲೆ ಕಾಣಿಸುತ್ತಿರುವಂತೆ ಹೂತಿರುತ್ತಾರೆ. ಹೊಳೆಯ ಆ ಪ್ರಾಂತ್ಯದಲ್ಲಿ ದುರ್ಗಂಧವಂತೂ ಸಹಿಸಲಶಕ್ಯವಾಗಿದೆ ಅದರಲ್ಲೂ ಜನಗಳ ಲದ್ದಿಯನ್ನು ನೀರಿನಲ್ಲಿ ಬೀಳಿಸುವುದೂ, ಇರತಕ್ಕ ಕೊಂಚ ನೀರಲ್ಲಿ ಅವುಗಳನ್ನು ತೊಳೆಯುವುದೂ ತುಂಬಾ ಅನಾರೋಗ್ಯಕರವಾದುದು ಈ ಊರಲ್ಲಿ ಮುಖ್ಯ ಭಾಗದ ಜನಗಳಿಗೆ ಸ್ನಾನ, ಪಾನಾದಿಗಳಿಗೆ ಈ ಹೊಳೆಯ ನೀರೇ ಆಶ್ರಯವಾಗಿರುತ್ತದೆ ಇಲ್ಲಿ ಕಾಲರಾ, ಪ್ಲೇಗ್ ಮುಂತಾದ ಸಾಂಕ್ರಾಮಿಕ ಬಾಧೆಗಳು ಆಗಿಂದಾಗ್ಗೆ ಹಾವಳಿಯನ್ನು ಮಾಡುತ್ತಿರುವುದು ಸರ್ವರಿಗೂ ಗೊತ್ತೇ ಇರುವುದು ಅವರಲ್ಲಿ ಇಂತಹ ಗಲೀಜಾದರೆ ಇನ್ನೂ ಹೆಚ್ಚು ಅಸ್ವಸ್ಥವಾಗಿರುವುದು ಸರ್ಕಾರದವರು ಈ ವಿಷಯಕ್ಕೆ ಗಮನ ಕೊಡಬೇಕು — ಇಲ್ಲಿ ಕಳೆದ ಎರಡು ವರುಷಗಳಿಂದ ಲೋ ಫ|| ಅ|| ಸರ್ಜನರಾಗಿದ್ದ ಮೆ|| ಕೆ ಕುರುವಿಲ್ಲಾ ಯವರಿಗೆ ಮೂಡಿಗೆರೆಗೆ ವರ್ಗವಾಗಿ ಅಲ್ಲಿನ ಅದೇ ದರ್ಜೆಯ ಮೆ|| ಕೃಷ್ಣಮೂರ್ತಿರಾಯರಿಗೆ ನಂಜನಗೂಡಿಗೆ ವರ್ಗವಾಗಿದೆ ಎಂಬ ವಾರ್ತೆಯು ಇಲ್ಲಿನ ಅನೇಕ ಪ್ರಜೆಗಳಲ್ಲಿ ತುಂಬಾ ವ್ಯಸನವನ್ನುಂಟುಮಾಡಿರುವುದು ಯಾಕೆಂದರೆ ಇವರು ಇಲ್ಲಿದ್ದಷ್ಟು ಕಾಲ ಬಡವರು ಬಲ್ಲಿದರು ಎಂಬ ವ್ಯತ್ಯಾಸ ನೋಡದೆ ತುಂಬಾ ಕನಿಕರದಿಂದಲೂ, ಮುತುವರ್ಜಿಯಾಗಿಯೂ ಔಷಧಾದಿಗಳನ್ನು ಕೊಡುತ್ತಾ ಇದ್ದದ್ದು ಮಾತ್ರವಲ್ಲದೆ ತುಂಬಾ ಸಮರ್ಥರಾಗಿಯೂ ಇದ್ದರು ಅನೇಕರ ಪ್ರೀತಿಗೂ ಗೌರವಕ್ಕೂ ಪಾತ್ರರಾಗಿದ್ದರು ಇಂತಹ ಗುಣಸ್ಥರನ್ನೂ, ಸಮರ್ಥರನ್ನೂ, ನಿಷ್ಪಕ್ಷಪಾತಿಗಳನ್ನೂ ಕಳೆದುಕೊಳ್ಳುವುದರಲ್ಲಿ ಸ್ವಭಾವವಾಗಿ ಅನೇಕ ಪ್ರಜೆಗಳಿಗೆ ತುಂಬಾ ವಿಷಾದಕರವಾಗಿರುವುದು —ಇದೇ ಮಾಹೆ ೧೭ ನೇ ತಾ ಭಾನುವಾರ ಶ್ರೀಮನ್ ಮಹಾರಾಜರವರು ಮೋಟಾರ್ ಗಾಡಿಯಲ್ಲಿ ಇಲ್ಲಿಗೆ ೫ ೬ ಮೈಲುಗಳ ದೂರದಲ್ಲಿರುವ ಚಿನ್ನದಗುಡಿ ಹುಂಡಿಯ ವರಿವಿಗೆ ಸವಾರಿ ಚಿತ್ತೈಸಿ ಅಲ್ಲಿ ಕಟ್ಟಿಹಾಕಿದ್ದ ಆನೆಗಳನ್ನು ಪರಾಂಬರಿಸಿಕೊಂಡು ವಾಪಸ್ ಮೈಸೂರಿಗೆ ದಯಮಾಡಿಸಿದರು.

ಗುಬ್ಬಿ.—ಗುಬ್ಬಿತಾಲ್ಲೂಕು ನಾಗಸಂದ್ರದ ಗ್ರಾಮದಲ್ಲಿ ಕೆಲವು ದಿನಗಳಿಂದಲೂ ಪಾರ್ಟಿಗಳಾಗಿ ಇದ್ದ ಒಕ್ಕಲಿಗರ ಜಾತಿ ಲಕ್ಕಣ್ಣ, ಇವರ ಮಕ್ಕಳು ತಿಮ್ಮವೆಂಕಟನವರು ಮತ್ತು ಕೆಂಪಣ್ಣನೆಂಬವರು ಒಬ್ಬರಿಗೊಬ್ಬರ ಪಾರ್ಟಿಗಳದ್ದು, ಅಂತರಂಗದಲ್ಲಿಯೇ ಕೆಡಕು ಎಸೆಸಬೇಕೆಂಬ ಯತ್ನಮಾಡಿ ಕಳೆದ ಮಾರ್ಚಿ ೨೨ ನೇ ತಾರೀಖು ಮಂಗಳವಾರದ ದಿವಸ ಸದರಿ ನಾಗಸಂದ್ರದ ಗ್ರಾಮದ ದೇವತೆ ಹಬ್ಬ ಮಾಡಬೇಕೆಂದು ಪ್ರಾರಂಭಿಸಿ ಸರ್ಕಾರಕ್ಕೂ ಸಹಾ ತಿಳಿಸದೆ ದೇವರಪೂಜೆ ವಗೈರೆ ಮಾಡಿಸಿ ಕೋಣನನ್ನು ಕಂಭಕ್ಕೆ ಕಟ್ಟಿಹಾಕಿ ಆರತಿಗಳು ತಂದು ಒಪ್ಪಿಸುವಾಗ್ಗೆ ಮಾಮೂಲು ಅನುಸರಿಸಬೇಕು. ನಮ್ಮ ಆರತಿಗಳು ಮುಂದಾಗಿ ಬೆಳಗಬೇಕೆಂತಲೂ ನಮ್ಮವುಗಳು ಮುಂದಾಗಬೇಕೆಂದೂ ಒಬ್ಬರಿಗೊಬ್ಬರು ಕಲಹಕ್ಕೆ ಪ್ರಾರಂಭಿಸಲು ಲಕ್ಕಣ್ಣರ ಕಡೆಯವರು ದೊಣ್ಣೆಗಳನ್ನು ತಂದು ಗಲಭೆಗೆ ಶುರುಮಾಡಿ ಒಬ್ಬರಿಗೊಬ್ಬರು ಹೊಡೆದಾಟಗಳು ನಡೆದು ಕೆಲವರಿಗೆ ಪೂರಾ ಜಖಂಗಳಾಗಿ ಇರುತ್ತೆ ಈ ಮಧ್ಯೆ ಆರತಿಗಳೆಲ್ಲಾ ಹಾರಿ ಎದ್ದು ಹಾಳಾದವು ಈ ಗಲಭೆಯನ್ನು ನೋಡಿದ ಪೂಜಾರಿಯು ಹೊರಗೆ ಬರಲು ಅವಕಾಶವಿಲ್ಲದೆ ದೇವರ ಬಳಿ ನಿಂತಿದ್ದ ಹಾಗೆಯೇ ವಿಸ್ಮೃತಿಯೊಂದಿದನು ತಾ ೨೩ ರಲ್ಲಿ ಫಿರಿಯಾದು ನಡೆದು ಈ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರ್ ಮೆ|| ಮಹಮ್ಮದ್ ಹೈದರ್ ಸಾಹೇಬರವರು ನಿಷ್ಪಕ್ಷಪಾತವಾಗಿ ಈ ಮೊಕದ್ದಮೆ ಪೂರಾ ಮೊಹನತ್ತಿನಿಂದ ಪತ್ತೆಮಾಡಿ ಘಾಯಪಟ್ಟವರನ್ನು ಆಸ್ಪತ್ರೆಗೆ ದಾಖಲ್ ಮಾಡಿಸಿ ಉಭಯಪಾರ್ಟಿಯವರಲ್ಲೂ ೨೨ ಜನಗಳನ್ನು ದಸ್ತಗಿರಿಮಾಡಿ ತಾಲ್ಲೂಕು ಮ್ಯಾಜಿಸ್ಟ್ರೇಟರವರ ಕೋರ್ಟಿಗೆ ದಾಖಲಾಮಾಡಿಸಿ ಇರುತ್ತಾರೆ —ಗುಬ್ಬಿ ಗ್ರಾಮದ ದೊಡ್ಡಕೆರೆ ಹಿಂದೆ ತರಿ ಸಾಗುವಳಿ ಆಗಿರುತ್ತವೆ ಈ ವಾರ ಫಸಲು ಹೊಡೆಯಾಗಿರುತ್ತೆ. ಕೆರೆಯಲ್ಲಿ ನೀರು ಕೊಂಚವಾಗಿ ಇರುವದರಿಂದ ಫಸಲು ಆಗಲು ನಂಬಿಕೆಯೇ ಇಲ್ಲ. ದೇವರ ದಯೆಯಿಂದ ಮಳೆ ಆದರೆ ರೈತರು ಉಳಿದುಕೊಳ್ಳುತ್ತಾರೆ ಮೂರು ವರುಷಗಳಿಂದಲೂ ಫಲವಿಲ್ಲದೆ ಬಾಯಿಬಿಡುತ್ತಾ ಇದ್ದರು ಕೈಗೆ ಬಂದದ್ದು ಬಾಯಿಗೆ ಬರಲಿಲ್ಲದಂತಾಯಿತು. ಇದಕ್ಕೆ ಕಾರಣವೇನೆಂದರೆ ಈ ಕೆರೆ ಕೋಡಿಯು ತುಂಬಾ ತಗ್ಗಾಗಿ ಇರೋಣದರಿಂದ ನೀರೆಲ್ಲಾ ಹೋಗುತ್ತೆ ಅಧಿಕಾರಿಗಳಿಗೆ ಎಷ್ಟು ದಫೆ ಹೇಳಿಕೊಂಡಾಗ್ಯೂ ಇನ್ನೂ ಗಮನಕ್ಕೆ ಬರಲಿಲ್ಲ —೨ ನೇ ಮಾರ್ಚಿಯಲ್ಲಿ ಈ ಕೆರೆಯಲ್ಲಿ ಮೀನುಗಳನ್ನು ಕದ್ದು ಹಿಡಿಯುತ್ತಿದ್ದ ಈ ಗ್ರಾಮದ ಬೆಸ್ತರು ನೀರುಗಂಟಿಗಳಿಗೆ ಪೋಲೀಸಿನವರು ಹಿಡಿದು, ಅಮಲ್ದಾರ್ರವರಲ್ಲಿ ನಿಲ್ಲಿಸಿ ವಿಚಾರಣೆಮಾಡಿಸಿ ಜುಲ್ಮಾನೆ ಆಯಿತು. ಹಿಡಿದಿದ್ದ ಮೀನುಗಳು ಹರಾಜುಮಾಡಿಸಿದರು ಆದಾಗ್ಯೂ ರಾತ್ರೀ ಕಾಲದಲ್ಲಿ ಪ್ರಾರಂಭಿಸಿ ಇರುತ್ತಾರೆ ಬೆಸ್ತರನ್ನು ಪೂರಾ ಬಂದೋಬಸ್ತು ಮಾಡಿದ ಹೊರತು ನೀರು ಚೆನ್ನಾಗಿ ಇರುವದಿಲ್ಲವೆಂದು ನಂಬಬೇಕಾಗಿದೆ ಅಧಿಕಾರಿಗಳು ಗಮನಕ್ಕೆ ತರಬೇಕು —ಈ ಊರು ಪಟೇಗಾರರ ಜೋಳ್ಕೆಯನ ರಾಗಿ ಸಮೇತ ಇದ್ದ ಬಣವೆ ಬೆಂಕಿ ಇಟ್ಟು ಇದರ ಮೂಲಕ ಸುಮಾರು ನೂರು ರೂಪಾಯಿ ನಷ್ಟಪಡಿಸಿದರೆಂದು ಸದರಿ ಜೋಳ್ಕೆಯನು ಇದೇ ಗ್ರಾಮದ ಒಕ್ಕಲಿಗರ ಸಿದ್ಧರಾಮಿ ಎಂಬುವನ ಮೇಲೆ ಫಿರಿಯಾದು ಕೊಟ್ಟು ಇರುತ್ತಾನೆ

ಚನ್ನಪಟ್ಟಣದ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನವು.

ಮೈಸೂರು ಸಂಸ್ಥಾನದಲ್ಲಿ ಪೂರ್ವದಿಂದಲೂ ನಾಯಕನಹಟ್ಟಿ, ಸುಬ್ರಹ್ಮಣ್ಯದ ಘಾಟಿ, ಚುಂಚನಕಟ್ಟೆ ಮುಂತಾದ ಸ್ಥಳಗಳಲ್ಲಿ ಜಾತ್ರೆ ನಡದು ಆ ಕಾಲದಲ್ಲಿ ಅನೇಕ ದನಗಳು ಸೇರಿ ವ್ಯಾಪಾರ ನಡೆಯುತ್ತಿದೆಯಷ್ಟೆ. ಈಚೆಗೆ ಗೋಪ್ರದರ್ಶನ, ಕೈಗಾರಿಕೆಗಳ ಪ್ರದರ್ಶನ, ಈ ಮುಂತಾದ ನೂತನ ಏರ್ಪಾಟುಗಳು ಅಲ್ಲಲ್ಲಿ ಉಂಟಾಗಿ, ಈ ವಿಷಯಗಳಲ್ಲಿ ಜನರ ತಿಳುವಳಿಕೆಗೂ ವ್ಯಾಪಾರಕ್ಕೂ ಅನುಕೂಲ ಉಂಟಾಗಿದೆ. ಮೈಸೂರಲ್ಲಿ ದಸರಾ ಕಾಲದೊಳಗೆ ಈಚೆಗೆ ಸರ್ಕಾರದವರು ಅತಿವಿಜೃಂಭಣೆಯಿಂದ ನಡಿಸುತ್ತಾ ಇರುವ ಪ್ರದರ್ಶನವು ಸಂಸ್ಥಾನಾವಳಿ ಉಪಯೋಗಕರವಾಗಿದ್ದರೂ ವರುಷಕ್ಕೊಂದಾವರ್ತಿ ಮಾತ್ರ ನಡೆಯುವಕಾರಣದಿಂದಲೂ, ಗ್ರಾಮಾಂತರಗಳಲ್ಲಿರುವ ಅನೇಕ ಜನರು ಆ ಪ್ರದರ್ಶನಕ್ಕೆ ಹೋಗಿ ನೋಡಿಕೊಂಡು ಬರಲು ಚೈತನ್ಯವಿಲ್ಲದವರಾಗಿ ಇರುವುದರಿಂದಲೂ, ಅಲ್ಲಲ್ಲಿ ಚಿಕ್ಕ ಚಿಕ್ಕ ಪ್ರದರ್ಶನಗಳನ್ನು ನಡಿಸುವದು ಅವಶ್ಯಕವೆಂದು ತೋರಿಬರಲಾಗಿ ಆನೇಕಲ್, ಮಾಗಡಿ, ಹೊಸಕೋಟೆ ಮುಂತಾದ ಸ್ಥಳಗಳಲ್ಲಿ ಹೊಸದಾಗಿ ಪ್ರದರ್ಶನಗಳು ಏರ್ಪಟ್ಟವೆ. ಆ ರೀತಿಯಲ್ಲಿ ಚನ್ನಪಟ್ಟಣದ ಪ್ರಾಂತ್ಯದಲ್ಲಿ ಅಂದರೆ ಮಳವಳ್ಳಿ, ಮಂಡ್ಯ, ಕ್ಲೋಸ್‌ಪೇಟೆ, ಕುಣಿಗಲು ಬೆಂಗಳೂರು, ಕಾರ್ಕಾನಹಳ್ಳಿ, ಈ ತಾಲ್ಲೂಕುಗಳಲ್ಲಿ ಯಾವ ಪ್ರದರ್ಶನವೂ ಇದುವರಿವಿಗೂ ಏರ್ಪಟ್ಟಿಲ್ಲವಾದಕಾರಣ ಮಧ್ಯರಾಷ್ಟ್ರವಾಗಿಯೂ ಸಂಸ್ಥಾನದಲ್ಲಿ ಪ್ರಜಾಸಂಖ್ಯೆ ವಿಷಯದಲ್ಲಿ ೩ನೇ ಪಟ್ಟಣವಾಗಿಯೂ ಇರುವ ಈ ಚನ್ನಪಟ್ಟಣದಲ್ಲಿ ಒಂದು ಪ್ರದರ್ಶನವನ್ನು ನಡಿಸಬೇಕೆಂದು ಹೋದ ವರುಷ ತೀರ್ಮಾನವಾಗಿ ಆ ಬಗ್ಗೆ ಸರ್ಕಾರದ ಅಪ್ಪಣೆಯನ್ನು ಪಡೆಯಲಾಯಿತು ಆದರೆ ಆತಾತ್ ದಿನಗಳಿಗೆ ರೋಗ ಪ್ರಾಪ್ತವಾದದ್ದರಿಂದ ಪ್ರದರ್ಶನವನ್ನು ನಡಿಸಲು ಅನುಕೂಲವಾಗದೆ ನಿಂತುಹೋಯಿತು ಈ ವರುಷ ಆ ವಿಧವಾದ ಕುಂದಕವೇನೂ ಇಲ್ಲದಕಾರಣ ಮೇಲ್ಕಂಡ ಪ್ರದರ್ಶನವನ್ನು ನಡಿಸಬೇಕೆಂದು ಉದ್ದೇಶಿಸಿದೆ. ಪ್ರದರ್ಶನವು ಚನ್ನಪಟ್ಟಣಕ್ಕೆ ೧॥ ಮೈಲಿ ದೂರದಲ್ಲಿರುವ ಮಹದೇಶ್ವರನದೊಡ್ಡಿ ಬಳಿ ನಡೆಯುತ್ತದೆ ಶ್ರೀಮಹದೇಶ್ವರ ಸ್ವಾಮಿಯವರ ರಥೋತ್ಸವವು ಇದೇ ಮಾಹೆ ೨೪ ನೇ ತಾ ಭಾನುವಾರ ಸಮಗ್ರವಾಗಿ ನಡೆದ ಮಾರನೇ ದಿನ ಈ ಪ್ರದರ್ಶನವು ಪ್ರಾರಂಭವಾಗಿ ಮೂರು ದಿನಗಳು ನಡೆಯತಕ್ಕದ್ದೆಂದು ತೀರ್ಮಾನಿಸಿರುತ್ತೆ

ಪ್ರದರ್ಶನದ ನಿಬಂಧನೆಗಳೇನೆಂದರೆ,—(1) ಈ ಪ್ರದರ್ಶನಕ್ಕೆ ಪದಾರ್ಥಗಳನ್ನು ಕಳುಹಿಸಲು ಇಷ್ಟವುಳ್ಳವರು ತಾವು ಕಳುಹಿಸುವ ಪದಾರ್ಥಗಳ ವಿವರವನ್ನು ಏಪ್ರೆಲ್ ೧೮ ನೇ ತಾ ಒಳಗಾಗಿ ಸೆಕ್ರೆಟರಿಯವರಿಗೆ ತಲಪುವಂತೆ ಕಳುಹಿಸಿಕೊಡಬೇಕು (2) ಪ್ರದರ್ಶನಕ್ಕಾಗಿ ತರಲ್ಪಡಬಹುದಾದ ಪದಾರ್ಥಗಳಿಗೆ ಸುಂಕ ಕೊಡಬೇಕಾದ ಅವಶ್ಯಕವಿಲ್ಲ (3) ಪ್ರದರ್ಶನಕ್ಕಾಗಿ ಬರತಕ್ಕ ದನಕರುಗಳನ್ನು ವಿನಾ ಮಿಕ್ಕ ಎಲ್ಲಾ ಪದಾರ್ಥಗಳನ್ನೂ ಏಪ್ರೆಲ್ ೧೮ ನೇ ತಾ ಒಳಗಾಗಿ ತಲಪಿಸಿರಬೇಕು (4) ಪ್ರದರ್ಶನವು ಮುಗಿದ ೩ ದಿನಗಳೊಳಗಾಗಿ ಪದಾರ್ಥಗಳನ್ನೆಲ್ಲಾ ವಾಪಸು ತಗೆದುಕೊಂಡು ಹೋಗಬೇಕು (5) ಪ್ರದರ್ಶನಕ್ಕೆ ತರತಕ್ಕ ದನಕರುಗಳು ಏಪ್ರೆಲ್ ೨೪ ನೇ ತಾ ಸಾಯಂಕಾಲದೊಳಗಾಗಿ ಪ್ರದರ್ಶನಶಾಲೆಯ ಬಳಿ ಹಾಜರಿರಬೇಕು (6) ಪ್ರದರ್ಶನದ ಪ್ರಥಮ ದಿನದಲ್ಲಿಯೇ ಬಹುಮಾನವು ಹಂಚಲ್ಪಡುವದು ಮತ್ತು ಕಮಿಟಿಯವರ ಛಾಯಿಸಿನಂತ ಯೋಗ್ಯತಾ ಪತ್ರಗಳು ಸಹಾ ಕೊಡಲ್ಪಡುವವು

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಬಿ ಪಿ ಎನ್ ಸ ದೊಡ್ಡಬಳ್ಳಾಪುರ ಬಾತ್ಮಿದಾರ್—ಹೊಸೂರು ಪ್ರಜಾಹಿತೈಷಿ ಸಂಘದ ಏಜಂಟ್—ಚಿತ್ರದುರ್ಗ ದೇಶಾಭಿಮಾನಿ ದಾವಣಗೆರೆ, ನಿಷ್ಪಕ್ಷಪಾತಿ—ಮೈಸೂರು ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ಕರೆಸ್‌ಪಾಂಡೆನ್ಸ್.

ಜವಳಿ ವರ್ತಕರ ಮೋಸ

ಅಯ್ಯಾ,

ಅರಕಲಗೂಡು ಪೇಟೆಯೊಳಗೆ ಒಂದು ಜವಳಿ ಅಂಗಡಿಯಲ್ಲಿ ಛಾಪಾ ಹಾಕಿಸದೆ ಇದ್ದ ಅನೇಕ ಜವಳಿ ಪಿಂಡಿಗಳು ಗುಟ್ಟಿನಲ್ಲಿಯೇ ಬಿಕರಿಯಾಗುತ್ತಲೇ ಇತ್ತು ತಾ ೧೬ ರಲ್ಲಿ ಒಬ ಮುನಸಿಪಲ್ ಬಡನೌಕರನು ಛಾಪಾ ಹಾಕದೆ ಇದ್ದ ನಾಲ್ಕು ಸನಗುಗಳನ್ನು ಹಿಡಿದದ್ದು ಅಮಲ್ದಾರ್ರವರಿಗೆ ತಿಳಿದಿತು ಕೆಲವು ನೌಕರರನ್ನು ಕಳುಹಿಸಿದರೂ ಎಲ್ಲಾ ಮುಗಿದ ಬೀಸದಂತೆ ಚಟಿಸ್ಥವಾಗಿದೆ ನಮ್ಮ ಅಮಲ್ದಾರ್ರವರು ಇದನ್ನು ಬಹುಶಃ ವಿಚಾರಣೆಮಾಡಬಹುದೆಂದು ತೋರುತ್ತದೆ ಈ ಊರಲ್ಲಿ ಇದೇ ರೀತಿ ಸಾವಿರಾರ ರೂಪಾಯಿಗಳ ಮಾಲುಗಳು ಸರ್ಕಾರದ ಗಮನಕ್ಕೆ ಬಂದೋ, ಅಥವಾ ಬಾರದೆಯೋ ಬಿಕರಿಯಾಗಿ ಸರ್ಕಾರಕ್ಕೆ ಲುಕ್ಸಾನು ಆಗುತ್ತಿರುವದನ್ನು ನಮ್ಮ ಅಮಲ್ದಾರ್ರವರು ಗಮನಕ್ಕೆ ತಂದು ಸರಿಪಡಿಸುತ್ತಾರೆಂದು ನಂಬಿರುವ

ಪ್ರತ್ಯಕ್ಷದರ್ಶಿ

ಮಿರ್ಲೆಗೆ ಒಂದು ವೈದ್ಯಶಾಲೆ ಬೇಕು.

ಅಯ್ಯಾ,

ಯಡತೊರೆ ತಾಲ್ಲೂಕಿಗೆ ಸೇರಿದ ಮಿರ್ಲೆ ಗ್ರಾಮದ ಬಡಪ್ರಜೆಗಳ ಸೌಕರ್ಯಕ್ಕಾಗಿ ಒಬ್ಬರು ಯುನಾನಿ ವೈದ್ಯರನ್ನಾದರೂ ಏರ್ಪಾಡುಮಾಡಿಕೊಡಬೇಕೆಂದು ಅರ್ಜಿಯ ಮೂಲಕವೂ, ಪ್ರತಿ ಯೂನಿಯನ್ ಮೀಟಿಂಗುಗಳಲ್ಲಿಯೂ, ವೃತ್ತಾಂತಪತ್ರಿಕೆಯ ಮೂಲಕವೂ, ನಮ್ಮ ತಾಲ್ಲೂಕು ವೈಸ್ ಪ್ರೆಸಿಡೆಂಟರವರು ಅಮಲ್ದಾರ್ ಮೆ॥ ಎನ್. ಶ್ರೀನಿವಾಸರಾಯರವರ ಮೂಲಕವೂ ಇಲ್ಲಿಯ ಪ್ರಜೆಗಳ ಕಷ್ಟಗಳನ್ನು ನಮ್ಮ ಘನಹೊಂದಿದ ಸರ್ಕಾರಕ್ಕೆ ಬಿನ್ನವಿಸಿಕೊಂಡು ಇದ್ದವು. ಈಚೆಗೆ ತಾ. ೪-೧೨-೧೯೦೦ ರಲ್ಲಿ ಬಡಪ್ರಜೆಗಳ ಅಹವಾಲನ್ನು ಚಿತ್ತಕ್ಕೆ ತಂದುಕೊಂಡು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಚರ್ಚೆ ನಡೆದು ಕೂಡಲೇ ಕೊಡಬೇಕೆಂದು ತೀರ್ಮಾನವಾಗಿರುತ್ತದೆ ಈ ಸಂದರ್ಭದಲ್ಲಿ ನಮ್ಮ ಘನಹೊಂದಿದ ದಯಾಳು ಸರ್ಕಾರವು ಇಲ್ಲಿನ ಅನಾರೋಗ್ಯ ದೆಸೆಯಿಂದ ಅಕಾಲದಲ್ಲಿ ಮೃತ್ಯುವಶವನ್ನು ಹೊಂದುತ್ತಲಿರುವ ಬಡಪ್ರಜೆಗಳ ಮೇಲೆ ಸಂಪೂರ್ಣ ದೆಯಿಯಿಟ್ಟು ಡಿಸ್ಟ್ರಿಕ್ಟ್ ಬೋರ್ಡಿನವರು ಮಂಜೂರ್ ಮಾಡಿರತಕ್ಕದ್ದನ್ನು ಅನುಮೋದಿಸಿ ಸ್ಯಾಂಕ್ಷನ್ ಮಾಡಿ, ರಾಜಭಕ್ತಿನಿರತರಾದ ಇಲ್ಲಿನ ಬಡಪ್ರಜೆಗಳು ಪ್ರತ್ಯಹವೂ ಮಾಡುವ ಶ್ರೇಯಃಪ್ರಾರ್ಥನೆಗೆ ಭಾಗಿಗಳಾಗಬೇಕೆಂದು ಸವಿನಯ ಪ್ರಾರ್ಥಿಸುತ್ತೇವೆ.

ಮಿರ್ಲೆ ನಿವಾಸಿ

ಶ್ರೀರಂಗಪಟ್ಟಣ ಮತ್ತು ಗಂಜಾಮ.

ಅಯ್ಯಾ,

ಶ್ರೀರಂಗಪಟ್ಟಣ ಮತ್ತು ಗಂಜಾಮುಗಳು ಜಾಯಿಲೆ ಸ್ಥಳಗಳಲ್ಲಿ ಪ್ರಸಿದ್ಧವಾದವುಗಳಾಗಿವೆ ಇಂಥಾ ಸ್ಥಳದಲ್ಲಿ ಸಾಂಕ್ರಾಮಿಕ ರೋಗಗಳು ಬರಲು ಅವಕಾಶಕೊಡದ ಊರುಗಳನ್ನು ಪಾಕಿಜಾದಲ್ಲಿ ಇಟ್ಟುಕೊಂಡಿರತಕ್ಕದ್ದು ಮ್ಯುನಿಸಿಪಾಲಿಟಿಯವರ ಕರ್ತವ್ಯವಾಗಿದ್ದಾಗ್ಯೂ ಯರೂ ಗಮನಕೊಡುವಂತೆ ತೋರುವುದಿಲ್ಲ. ನನಗೆ ತಿಳಿದಮಟ್ಟಿಗೆ ವೈಸ್ ಪ್ರೆಸಿಡೆಂಟರು ಮ್ಯುನಿಸಿಪಾಲಿಟಿ ವಿಚಾರದಲ್ಲಿ ವಿಶೇಷವಾದ ಶ್ರದ್ಧೆಯನ್ನು ತೋರಿಸುತ್ತಾ ಇಲ್ಲ ಇದರಿಂದ ಸಣ್ಣ ನೌಕರರು ಅಶ್ರದ್ಧೆಯನ್ನು ತೋರಿಸುತ್ತಾ ಗ್ರಾಮ ಪಾಕೀಜಿಲ್ಲದೆ ದುರ್ವಾಸನೆ ಹೆಚ್ಚುತ್ತಾ ಇದೆ ಮೇಲ್ವಿಚಾರಣೆಯು ಕಮ್ಮಿಯಾಗುತ್ತಾ ಬಂದ ಹಾಗೆಲ್ಲಾ ಮ್ಯುನಿಸಿಪಲ್ ಉತ್ಪತ್ತಿಯು ಕ್ಷಯವಾಗುತ್ತಿರುವದಾಗಿ ತಿಳಿಯಬರುತ್ತೆ

ಶ್ರೀರಂಗಪಟ್ಟಣದಲ್ಲಿ ಮುಜರೈ ಬಾಬಿನ ಕೆಲಸ ಮುಖ್ಯವಾಗಿರುತ್ತೆ. ಯಾಕೆಂದರೆ ಶ್ರೀರಂಗಪಟ್ಟಣವೆಂಬ ನಾಮಧೇಯವು ಶ್ರೀರಂಗನಾಥಸ್ವಾಮಿಯಿಂದ ಬಂದದ್ದಾಗಿದೆ ಈ ದೇವಸ್ಥಾನವಲ್ಲದೆ ಶ್ರೀರಂಗಪಟ್ಟಣದಲ್ಲಿ ಶ್ರೀಗಂಗಾಧರೇಶ್ವರ ಸ್ವಾಮಿಯ ದೇವಸ್ಥಾನ. ಸರ್ಕಾರಿ ಅನ್ನಛತ್ರ, ಶ್ರೀಚಾಮರಾಜೇಂದ್ರ ಮೆಮೋರಿಯಲ್ ಹಾಲ್ ಮತ್ತು ಘಾಟ್ ಮೊದಲಾದವುಗಳು ಮುಜರೈ ಆಡಳಿತಕ್ಕೆ ಒಳಪಟ್ಟದ್ದಾಗಿರುತ್ತವೆ ಶ್ರೀರಂಗನಾಥಸ್ವಾಮಿಯವರ ದೇವಸ್ಥಾನದ ಜೀರ್ಣೋದ್ಧಾರ ಕಾಲವಾಗಿ ಸುಮಾರು ಆರು ತಿಂಗಳಾಗುತ್ತಾ ಬಂತು ಇನ್ನೂ ಹೊಸ ಪೇಷ್ಕಾರರು ನೇಮಕವಾಗಲಿಲ್ಲ ಆ ಲಾಗಾಯ್ತು ಅಲ್ಲಿನ ಕಾರುಬಾರುಗಳು ತೃಪ್ತಿಕರವಾಗಿ ನಡೆಯುತ್ತಾ ಇಲ್ಲ ಸ್ವಲ್ಪ ಸಂಬಳದ ಅನೇಕ ಬಡನೌಕರರು ಬಹಳಮಟ್ಟಿಗೆ ಬೇಜಾರಾಗಿರುತ್ತಾರೆ ರಾಮಾನುಜಕೂಟವೂ ತೃಪ್ತಿಕರವಾಗಿ ನಡೆಯುತ್ತಾ ಇಲ್ಲ

ನಮ್ಮ ಆಳಿದ ಮಹಾಸ್ವಾಮಿಯವರ ಹೆಸರಿನಲ್ಲಿ ಕಟ್ಟಿಸಿರತಕ್ಕ ಶ್ರೀಚಾಮರಾಜೇಂದ್ರ ಮೆಮೋರಿಯಲ್ ಹಾಲ್ ಮತ್ತು ಸ್ನಾನಘಟ್ಟ ಸಹಾ ಸರಿಯಾದ ಸ್ಥಿತಿಯಲ್ಲಿಲ್ಲ ಮೆಮೋರಿಯಲ್ ಹಾಲಿನಲ್ಲಿ ಬಹು ದ್ರವ್ಯ ವ್ಯಯಮಾಡಿ ಹೇರಳವಾದ ಪಾತ್ರೆಗಳು. ಕುರ್ಚಿ ಮಂಚಗಳು, ಜಮಖಾನಗಳು ಕೊಟ್ಟಿರುತ್ತಾರೆ ಇವುಗಳೆಲ್ಲಾ ಅಲ್ಲಿನ ಉಪಯೋಗದಲ್ಲೇ ಇರುತ್ತವೆಂದು ಹೇಳುವದು ಅಸಾಧ್ಯ.

ಮುಖ್ಯವಾಗಿ ಇವುಗಳನ್ನೆಲ್ಲಾ ನಮ್ಮ ಅಮಲ್ದಾರ್ರವರು ಚನ್ನಾಗಿ ತನಿಖೆ ಮಾಡಿ ತಕ್ಕ ಏರ್ಪಾಡು ಕ್ಷಿಪ್ರದಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಸ್ವಕಾಭಿಮಾನಿ

ಬಲಾತ್ಕಾರದಿಂದ ವಿದ್ಯಾ ಕಲಿಸತಕ್ಕದ್ದು.

ಅಯ್ಯಾ,

ಈಚೆಗೆ ಬರತಕ್ಕ ನ್ಯೂಸ್ ಪೇಪರುಗಳಲ್ಲಿ ನಮ್ಮ ಮೈಸೂರು ಗೌರ್ನಮೆಂಟಿನವರು ನಮ್ಮ ದೇಶದಲ್ಲಿ ವಾಸವಾದತಕ್ಕ ಪ್ರಜೆಗಳ ಮಕ್ಕಳನ್ನು ಬಲಾತ್ಕಾರದಿಂದಲಾದರೂ ವಿದ್ಯಾವಂತರನ್ನಾಗಿ ಮಾಡಬೇಕೆಂತ ಪ್ರಯತ್ನ ಪಟ್ಟಿರುವುದಾಗಿ ಸಮೂದಾಗುತ್ತಾ ಇದೆ ಈ ಪ್ರಯತ್ನ ಸರಿಯಾಗಿ ನೆರವೇರಿದರೆ ಅದು ದೇಶವನ್ನೇ ಉದ್ಧಾರಮಾಡತಕ್ಕದ್ದಾಗಿದೆ ಮತ್ತು ಇಂಥಾ ಸದುದ್ದೇಶವು ನಮ್ಮ ಗೌರ್ನಮೆಂಟಿನವರಿಗೆ ಹುಟ್ಟಿ ಅದಕ್ಕಾಗಿ ಅವರು ಕೃಷಿಮಾಡುತ್ತಿರುವುದ ಕ್ಕೋಸ್ಕರ ನಮ್ಮ ಮೈಸೂರು ದೇಶದ ಪ್ರಜೆಗಳೆಲ್ಲಾ ಸಂತೋಷಪಟ್ಟು ನಮ್ಮ ಗೌರ್ನಮೆಂಟನ್ನು ವಂದಿಸುತ್ತಿದ್ದಾರೆ ಆದರೆ ಈ ಕಾರ್ಯವನ್ನು ನೆರವೇರಿಸುವದರಲ್ಲಿ ನಮ್ಮ ಗೌರ್ನಮೆಂಟಿನವರು ಈ ಕೆಳಗಿನ ವಿಷಯಗಳನ್ನು ಯೋಚಿಸಬೇಕಾಗಿ ಪ್ರಾರ್ಥಿಸುತ್ತೇನೆ

ಇಂಗ್ಲಿಷ್ ಗೌರ್ನಮೆಂಟು ಬಂದಾಗ ಮೈಸೂರು ದೇಶಕ್ಕೆ ಬಂತೋ ಆಗಿನಿಂದಲೇ ಪ್ರಜೆಗಳು ವಿದ್ಯಾವಂತರಾಗಬೇಕೆಂಬ ತಾತ್ಪರ್ಯವು ಗೌರ್ನಮೆಂಟಿಗೆ ಹುಟ್ಟಿ ಅವರೇ ಈ ದೇಶದಲ್ಲಿ ವಿದ್ಯಾ ಇಲಾಖೆಯನ್ನು ಏರ್ಪಡಿಸಿದರು ಈಗಲೂ ಅವರು ಹಾಕಿದ ಹಿಂತಿಕೆಯೇ ಜಾರೀಲಿದೆ

ಈಗಲೂ ವಿದ್ಯಾ ಇಲಾಖೆಗೆ ವರುಷಕ್ಕೆ ೧೪ ೧೫ ಲಕ್ಷ ರೂಪಾಯಿ ಖರ್ಚಾಗುತ್ತಾ ಇದೆ ದೇಶದಲ್ಲೆಲ್ಲಾ ಕಾಲೇಜುಗಳು, ಹೈ ಸ್ಕೂಲುಗಳು. ಎ ವಿ ಸ್ಕೂಲುಗಳು, ಹಳ್ಳೀ ಸ್ಕೂಲುಗಳು ಏರ್ಪಟ್ಟಿವೆ ಈ ಸ್ಕೂಲುಗಳಲ್ಲೆಲ್ಲಾ ಬಾಲಕರು ಓದುತ್ತಲೂ ಇದ್ದಾರೆ ಇದರ ಫಲಸ್ಥಿತಿ ಯೋಚಿಸಿದರೆ ಮೊದಲಿನಿಂದ ಈ ದೇಶದಲ್ಲಿ ವಿದ್ಯಾವಂತರಾಗಿದ್ದ ವಂಶದವರೇ ಈಗಲೂ ವಿದ್ಯಾವಂತರಾಗಿ, ಅವರು ಗೌರ್ನಮೆಂಟ್ ಸರ್ವೀಸಿಗೆ ಸೇರತಕ್ಕದ್ದು. ಲೀಡರುಗಳಾಗತಕ್ಕದ್ದು, ಈ ಕೆಲಸಗಳಲ್ಲೇ ನಿಂತುಬಿಟ್ಟಿದ್ದಾರೆ ಬಾಕಿಯವರೆಲ್ಲಾ ಮೊದಲಿಗಿಂತಲೂ ಹೆಚ್ಚಾದ ಮೌಢ್ಯ ಸ್ಥಿತಿಯಲ್ಲೇ ಇದ್ದಾರೆ ವಿದ್ಯಾವಂತರು ಮಾಡುತ್ತಿರತಕ್ಕ ಈ ಎರಡು ಕಸಬುಗಳು ವಿದ್ಯೆಯಿಂದ ಹಿಂದೆ ಬಿದ್ದಿರತಕ್ಕ ರೈತರು ವಗೈರೆ ಬ್ರಾಹ್ಮಣೇತರರನ್ನು ಸನ್ಮಾರ್ಗಕ್ಕೆ ತರತಕ್ಕವುಗಳಾಗಿಲ್ಲ ; ಸ್ವಭಾವವಾಗಿ ಅವರನ್ನು ಕೆಡಿಸತಕ್ಕವುಗಳಾಗಿಯೇ ಇವೆ.

ನಮ್ಮ ದೇಶದಲ್ಲಾದರೋ ೧೮೦ ಜಾತಿಯವರು ವಾಸವಾಗಿರುತ್ತಾ ಮತ ಸಂಬಂಧವಾದ ಪರಸ್ಪರ ವಿರೋಧಗಳೂ ಅದರಿಂದ ಉಂಟಾಗತಕ್ಕ ಕೆಡಕೂ ಪ್ರತ್ಯಕ್ಷವಾಗಿವೆ. ಅದನ್ನು ಇಲ್ಲಿ ವಿವರಿಸುವುದಿಲ್ಲ. ಒಟ್ಟಾಗಿ ಈಗಿನ ವಿದ್ಯಾಭಿವೃದ್ಧಿಯ ಫಲವು ದೇಶದಲ್ಲಿ ಚನ್ನಾಗಿ ಬಾಳಬೇಕಾದ ರೈತರು, ವರ್ತಕರು, ಇವರಲ್ಲಿ ದ್ವೇಷಗಳು ಹುಟ್ಟಿಸಿ ಅವರು ಸದಾ ಸಿವಿಲ್, ಕ್ರಿಮಿನಲ್ ಕೋರ್ಟುಗಳಲ್ಲಿರುವಂತೆ ಮಾಡಿ, ದಿನೇ ದಿನೇ ಅವರನ್ನು ಕ್ಷೀಣದೆಸೆಗೆ ತರುತ್ತಾ, ಅದರ ಸಂಬಂಧವಾದ ರೋಷಾವೇಶಗಳ ವೃದ್ಧಿಯಾಗಿ, ಅದರಿಂದ ಪ್ರಜೆಗಳಲ್ಲಿ ನೆಮ್ಮದಿಗೆ ಭಂಗವನ್ನುಂಟುಮಾಡಿಯೂ ಮಾಡುತ್ತಲೂ ಇದೆ ಇಂಥಾ ಅನನುಕೂಲಗಳು ಇನ್ನೂ ಬೇಕಾದಷ್ಟು ಇವೆ ಅವನ್ನೆಲ್ಲಾ ಇಲ್ಲಿ ವಿವರಿಸಲು ಸಾಧ್ಯವಿಲ್ಲ. ಮುಖ್ಯವಾಗಿ ದೇಶವು ಭಾಗ್ಯದಿಂದಲೂ, ಸಮಾಧಾನದಿಂದಲೂ ಅಭಿವೃದ್ಧಿ ಹೊಂದಬೇಕಾದರೆ ಕೃಷಿ, ವಾಣಿಜ್ಯಾದಿ ಕಸಬುಗಳನ್ನೇ ತಮ್ಮ ಮುಖ್ಯ ವೃತ್ತಿಯಾಗಿಟ್ಟುಕೊಂಡಿರತಕ್ಕ ಒಕ್ಕಲಿಗರು ಮುಂತಾದವರು ವಿದ್ಯಾವಂತರಾಗಿ ಅವರು ಮಾನುಷ ಕರ್ತವ್ಯವನ್ನು ಇಂಥಾದ್ದೆಂದು ತಿಳಿದು ಶಾಸ್ತ್ರೀಯವಾಗಿ ತಮ್ಮ ಕಸಬುಗಳನ್ನು ಅಭಿವೃದ್ಧಿ ಪಡಿಸುವಂತಾಗ ಬೇಕು ಆಗ್ಗೆ ಪ್ರಜೆಗಳಿಗೂ ಜೀವನಕ್ಕೆ ಸುಗಮವಾಗುತ್ತೆ ಮತ್ತು ಪರಸ್ಪರ ವೈಮನಸ್ಯಗಳು ತಗ್ಗುವವು ಈ ಒಳ್ಳೇ ಉದ್ದೇಶವು ನೆರವೇರಬೇಕಾದರೆ ವಿದ್ಯೆಯಿಲ್ಲದೆ ಹಿಂದೆ ಬಿದ್ದಿರತಕ್ಕವರಿಗೆ ಬಲಾತ್ಕಾರದಿಂದ ವಿದ್ಯೆ ಹೇಳಿಸ ತಕ್ಕದ್ದೇ ಈ ಸತ್ಕಾರ್ಯಕ್ಕೆ ಬಲಿಯವಾದ ಅಸ್ತ್ರವಾಗಿದೆ ಇದಕ್ಕೆ ಹಿಂದೆ ಈ ಪ್ರಯತ್ನವು ನಮ್ಮ ಗೌರ್ನಮೆಂಟಿಗೆ ಇರಲಿಲ್ಲವೋ ಹ್ಯಾಗೆಂತ ಯೋಚಿಸಿದರೆ ಈ ಒಳ್ಳೇ ಉದ್ದೇಶ್ಯ ಮೊದಲಿನಿಂದಲೂ ಇದ್ದದ್ದರಿಂದಲೇ ಅವರು ದೇಶದಲ್ಲಿ ಬೇಕಾದಷ್ಟು ಸ್ಕೂಲುಗಳನ್ನು ಏರ್ಪಡಿಸಿದ್ದು. ಆದರೆ ಆ ಸ್ಕೂಲುಗಳಲ್ಲಿ ವಿದ್ಯಾಭಿವೃದ್ಧಿಯು ನಡೆಯುತಕ್ಕ ಒಳ ಆಡಳಿತದಲ್ಲಿ ಮೊದಲಿನಿಂದ ವಿದ್ಯಾವಂತರಾಗಿದ್ದವರೇ ಸೇರಿಕೊಂಡು ಅದರ ಒಳ್ಳೇ ಫಲವೆಲ್ಲಾ ತಮ್ಮವರಿಗೇನೇ ಕೊಡಿಸುತ್ತಾ ಬಂದದ್ದರಿಂದಲೂ, ಜಾತಿಮಾತ್ಸರ್ಯದಿಂದ ಇತರರನ್ನು ಉಪಾಯವಾಗಿ ಹಿಂದಕ್ಕೆ ದೊಬ್ಬುತ್ತಾ ಬಂದದ್ದರಿಂದಲೂ ಗೌರ್ನಮೆಂಟಿನವರ ಉದ್ದೇಶವು ಭಿನ್ನಿಸಿ, ಒಂದೇ ಗುಂಪಿನವರು ವಿದ್ಯಾವಂತರಾಗಲಿಕ್ಕೂ ಅವರ ಜೀವನಕ್ಕಾಗಿ ಸ್ಕೂಲ್ ಮಾಸ್ಟರ್ ಕೆಲಸಗಳು ಏರ್ಪಡಿಸಿದಂತೆಯೂ ಪರಿಣಮಿಸಿತು. ಅವರ ನಿಜತ್ವವು ಈಚೆಗೆ ಎಲ್ಲರಿಗೂ ತಿಳಿದದ್ದರಿಂದಲೇ ಪ್ರತಿ ಒಂದು ಜಾತಿಯವರೂ ತಮ್ಮ ತಮ್ಮ ಅಭಿವೃದ್ಧಿಗಾಗಿ ಅವರವರಲ್ಲೇ ಪ್ರತ್ಯೇಕ ಪ್ರತ್ಯೇಕ ಸಂಘಗಳನ್ನು ಮಾಡಿಕೊಳ್ಳುತ್ತಾ ಬಂದರು ಆ ನಡವಳಿಕೆಯು ಹಿತವಾಗಿ ಕಂಡದ್ದರಿಂದ ನಮ್ಮ ಪ್ರಭುಗಳು ಒಕ್ಕಲಿಗರ ಸಂಘಕ್ಕೆ ಪೋಷಕರಾಗಿ ನಿಂತರು ಇದರ ಫಲ ಅನುಭವಿಸಲಿಕ್ಕೆ ಬ್ರಾಹ್ಮಣೇತರರೇ ಅರ್ಹರು ಇವರಿಗೆ ಬಲಾತ್ಕಾರದಿಂದ ವಿದ್ಯಾಭ್ಯಾಸ ಮಾಡಿಸಬೇಕಾದರೆ ಅವರ ಹಿತಚಿಂತಕರಾದ ಬ್ರಾಹ್ಮಣೇತರರೇ ಅವರಿಗೆ ಮಾಸ್ಟರೂ, ಮೇಲ್ ತನಿಖೇದಾರರೂ ಆಗಬೇಕಾಗಿದೆ ಅದಿಲ್ಲವಾದರೆ ಈ ಪ್ರಯತ್ನವು ಹಿಂದಲ ನಡವಳಿಕೆಯ ತೆಯೇ ಪರಿಣಮಿಸುತ್ತೆ ಇದಕ್ಕೆ ಈ ಕೆಳಗೆ ಎರಡು ದೃಷ್ಟಾಂತಗಳನ್ನು ಹೇಳುತ್ತೇನೆ

(೧) ಮೆ॥ ಕೆ ಎನ್ ವೀರಭದ್ರಯ್ಯನವರು ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರಾಗಿದ್ದಾಗ್ಗೆ ಕೇವಲ ದುರ್ವೃತ್ತಿಯಲ್ಲಿದ್ದ ಜಗಲೂರು ತಾಲ್ಲೂಕು ವರೇಸಹಳ್ಳಿ ಲಂಬಾಣಿಗರ ವಿದ್ಯಾಭಿವೃದ್ಧಿಗಾಗಿ ಅವರ ತಾಂಡೆಯ ಬಳಿಯಲ್ಲಿಯೇ ಒಂದು ಸ್ಕೂಲನ್ನು ಸ್ಥಾಪಿಸಿ ಅದಕ್ಕೆ ಟೀಚರಾಗಿ ಬ್ರಾಹ್ಮಣೇತರನಾದ ಭಟ್ಟರಾಜು ಜಾತಿಯ ಹನುಮಂತರಾಜು ಎಂಬುವರನ್ನು ನೇಮಿಸಿದರು ಆ ಮಾಸ್ಟರ ಶಿಕ್ಷೆಯಿಂದ ಈಗ ಲಂಬಾಣಿಗರು ಅವರಲಿದ್ದ ದುಷ್ಟ ಕೃತ್ಯಗಳನ್ನು ಬಹುಮಟ್ಟಿಗೆ ಬಿಟ್ಟು ಜಿರಾಯಿತಿ ಮುಂತಾದ ಕಸಬುಗಳನ್ನು ಅವಲಂಬಿಸಿಕೊಂಡು ಯೋಗ್ಯರೈತರಾಗಿ ಜೀವನ ಮಾಡುತ್ತಿದ್ದಾರೆ (೨) ಕಡೂರು ತಾಲ್ಲೂಕು ಬೊಮ್ಮೇನಹಳ್ಳಿ ಗ್ರಾಮದಲ್ಲಿ ಬಲೇ ಕೊರಚರೇ ಸೇರಿಕೊಂಡು ದೇಶವನ್ನೆಲ್ಲಾ ಲೂಟಿ ಮಾಡುತ್ತಿದ್ದರು ಅವರ ದುಷ್ಕೃತ್ಯವನ್ನು ಅಡಗಿಸುವುದಕ್ಕಾಗಿ ವೆಸ್ಲಿಯನ್ ಮಿಷನ್‌ನವರು ಆ ಸ್ಥಳದಲ್ಲಿ ಒಂದು ಸ್ಕೂಲನ್ನು ಸ್ಥಾಪಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡುತ್ತಾ ಬಂದರು ಈಗ ಆ ಕೊರಚರು ದುರ್ವೃತ್ತಿಗಳನ್ನು ಬಿಟ್ಟು ಸನ್ಮಾರ್ಗದಲ್ಲಿ ನಡೆಯುತ್ತಾ ರೈತರಾಗಿಯೂ ವರ್ತಕರಾಗಿಯೂ, ಗೌರ್ನಮೆಂಟ ಅಧಿಕಾರಿಗಳಾಗಿಯೂ, ಪೋಲೀಸ್ ಸಿಪಾಯಿಗಳಾಗಿಯೂ ಬಾಳುತ್ತಿದ್ದಾರೆ ಈ ಕಾರಣಗಳಿಂದ ಈಗಿನ ಸ್ಥಿತಿಯಲ್ಲಿ ಒಂದು ಪಂಗಡದವರನ್ನು ವಿದ್ಯಾವಂತರನ್ನಾಗಿ ಮಾಡಬೇಕಾದರೆ ಅವರ ಹಿತಚಿಂತಕರಾದ ಅದೇ ಜಾತಿ ವಿದ್ಯಾವಂತರನ್ನು ಅವರಿಗೆ ಮಾಸ್ಟರಾಗಿಯೂ. ಮೇಲ್ ತನಿಖೇದಾರರಾಗಿಯೂ ನೇಮಿಸಿದರೆ ಗೌರ್ನಮೆಂಟಿನ ಒಳ್ಳೇ ಉದ್ದೇಶವು ನೆರವೇರೀತೇ ಹೊರತು ಬೇರೇ ಮತಸ್ಥರನ್ನು ನೇಮಿಸಿದರೆ ಹಿಂದಲ ನಡವಳಿಕೆಯಂತೆಯೇ ಈಗಲೂ ಪರಿಣಮಿಸುತ್ತೆ ಆದ್ದರಿಂದ ಎಲ್ಲಾ ಡಿಸ್ಟ್ರಿಕ್ಟುಗಳಿಗಿಂತಲೂ ಹೆಚ್ಚಾಗಿ ಮೌಢ್ಯವಿದ್ದು ವಿದ್ಯೆಯಲ್ಲಿ ಹಿಂಗುಳಿದಿರತಕ್ಕ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಪ್ರಥಮತಃ ಇದರ ಅಜಮಾಯಿಷಿ ಸ್ಕೂಲುಗಳನ್ನು ಸ್ಥಾಪಿಸಿ ಅದಕ್ಕೆ ಬ್ರಾಹ್ಮಣೇತರರಾದ ಮಾಸ್ಟರುಗಳನ್ನು ನೇಮಿಸಬೇಕಲ್ಲದೆ, ಅವುಗಳ ತನಿಖೆಯನ್ನು ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರೂ ಸರ್ಕಲ್ ಇನ್ಸ್‌ಪೆಕ್ಟರ್ ಮೆ॥ ಆರ್ ವೆಂಕಟನಾರಾಯಣಯ್ಯನವರೂ ಮುದ್ದಾಂ ನಡಸಿಕೊಳ್ಳುತ್ತಾ, ಈ ಬಾಲಕರ ಪೋಷಣೆಯ ಹೊಣೆಯನ್ನು ಒಕ್ಕಲಿಗರ ಸಂಘಕ್ಕೆ ವಹಿಸಿದರೆ ಈ ಉದ್ದೇಶವು ಚನ್ನಾಗಿ ನೆರವೇರಿ ನಮ್ಮ ಗೌರ್ನಮೆಂಟಿಗೂ ಕೀರ್ತಿ ಬರುತ್ತದೆ

ಒಬ್ಬ ಪೆನ್ಷನ್ ಆಫೀಸರ್

ತಾಲ್ಲೂಕು ವರ್ತಮಾನಗಳು.

ಯಡತೊರೆ ತಾ ಸನಸೋಗೆ. ಬಿಸಿಲಿನ ಝಳವನ್ನು ಸಹಿಸುವದು ತುಂಬಾ ಕಷ್ಟ ಹೋದ ವರುಷ ಸರೀ ಫಸಲೇ ಆಗದ ಹೋದದ್ದರಿಂದ ದನಕರುಗಳಿಗೆ ಮೇವು ಸಿಗುವುದು ದುರ್ಲಭವಾಗಿದೆ —ಇದು ಕಾವೇರಿ ನದಿಯ ದಡದಲ್ಲಿರುವ ಊರಾಗಿದ್ದರೂ ಯಾವ ಭಾವಿಯಲ್ಲೂ ನೀರೇ ಇಲ್ಲದೆ ಜನಗಳಿಗೆ ತುಂಬಾ ಕಷ್ಟವಾಗಿರುತ್ತೆ. ಪೂರ್ವದಲ್ಲಿ ನದಿಗೆ ಕಟ್ಟಿಸಿದ್ದ ಸೋಪಾನವು ಚನ್ನಾಗಿರಲಿಲ್ಲ ಮ॥ ರಾಮಣ್ಣನವರು ೫೦೦-೬೦೦ ರೂಪಾಯಿ ನಗದ ವೆಚ್ಚಮಾಡಿ ಸ್ನಾನಪಾನಾದಿಗಳಿಗೆ ಅನುಕೂಲವಾಗಿರುವಂತೆ ಚನ್ನಾಗಿ ಸೋಪಾನವನ್ನು ಕಟ್ಟಿಸುತ್ತಾರೆ ಇದಲ್ಲದೆ ಸಾಹುಕಾರ್ ವೆಂಕಟಾಚಲಯ್ಯನವರ ಮಕ್ಕಳು ಮ॥ ಮರಿಯಪ್ಪನವರು ಸಾವಿರಾರು ರೂಪಾಯಿ ಮುಟ್ಟಿಸಿ ಕಲ್ಲು ಕಂಬದಿಂದಲೂ ಇಟ್ಟಿಗೆ ಗಾರೆಯಿಂದಲೂ ಪರಸ್ಥಳದ ಜನರು ಅಡಿಗೆ ಊಟಮಾಡುವದಕ್ಕೆ ಅನುಕೂಲವಾಗಿರುವಂತೆ ಮಂಟಪವನ್ನು ಕಟ್ಟಿಸಿರುತ್ತಾರೆ ಇವರುಗಳು ಮಾಡಿರತಕ್ಕ ಧರ್ಮವು ಆಚಂದ್ರಾರ್ಕವಾಗಿರತಕ್ಕದ್ದಾಗಿದೆ.—ಈ ಊರಲ್ಲಿದ್ದ ಛತ್ರವನ್ನು ಚುಂಚನಕಟ್ಟೆಗೆ ವರ್ಗಾಯಿಸಿಬಿಟ್ಟರು. ಛತ್ರವಿದ್ದ ಕಟ್ಟಡವು ಮುರಿದು ಬಿದ್ದುಹೋಗಿರುತ್ತದೆ ಇದನ್ನು ರಿಪೇರಿಮಾಡಿಸುವದಕ್ಕೆ ನಮ್ಮ ದಯಾಳುವಾದ ಸರ್ಕಾರದವರು ಅಂದಾಜುಮಾಡಿಸಿರುವಂತೆ ತಿಳಿಯಬರುತ್ತದೆ ಇದು ರಸ್ತೆ ಸ್ಥಳವಾದದ್ದರಿಂದ ಅನೇಕ ಪ್ರಯಾಣಿಕರು ಇಳಿಯುವದಕ್ಕೆ ಸ್ಥಳವಿಲ್ಲದೆ ತುಂಬಾ ಅನಾನುಕೂಲವಾಗಿದೆ ಜಾಗ್ರತ ರಿಪೇರಿಯಾದರೆ ಪರಸ್ಥಳದ ಜನಗಳಿಗೆ ತುಂಬಾ ಅನುಕೂಲವಾದೀತು — ಈ ಊರಿನ ಸ್ಕೂಲು ೮-೯ ವರುಷಗಳಿಂದಲೂ ಹೆಡ್. ಮಾ ಕೃಷ್ಣಪ್ಪನವರು, ರಂಗಾಚಾರ್ಯರವರು

ಮುಂತಾದವರ ಕಾಲದಲ್ಲಿ ಪ್ರತಿ ವರುಷವೂ ೬-೫ ಜನ ಬಾಲಕರಂತೆ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾ ಅಭಿವೃದ್ಧಿಗೆ ಬಂದು ಶ್ರೀಮತ್ ಮಹಾರಾಜಾ ಸಾಹೇಬ್ ಬಹದ್ದೂರವರ ಪರಾಂಬರಿಕೆಗೆ ಒಳಪಟ್ಟಿತ್ತು. ಇಂಥಾ ಸ್ಕೂಲು ಈಗ ೧-೨ ವರುಷದಿಂದ ಲೋವರ ಸೆಕೆಂಡರಿ ಪಾಠಕ್ಕೆ ೧-೨ ಬಾಲಕರು ಅಪ್ಲಿಕೇಷನ್ ಕಳುಹಿಸುವದೇ ವಿಸ್ಮಯಯುಕ್ತವಾಗಿದೆ. ನಮ್ಮ ಡೆಪ್ಯುಟಿ ಕಮೀಷನರ್ ಮ|| ಕಾಂತರಾಜೇ ಅರಸಿನವರು ಸರ್ಕೀಟು ದಯಮಾಡಿಸಿದ್ದಾಗ್ಗೆ ಈ ಸ್ಕೂಲನ್ನು ಇನ್‌ಸ್ಪೆಕ್ಷನ್ ಮಾಡಿ ಇದರ ಆಡಳಿತವು ಚನ್ನಾಗಿಲ್ಲವೆಂದು ಬರೆದಿರುವದಾಗಿ ತಿಳಿದುಬಂದಿದೆ. ಆ ಇಲಾಖೆಯವರು ಈ ವಿಷಯವನ್ನು ಅನುಸರಿಸುವ ರೀತಿ ತೃಪ್ತಿಕರವಾದ ಏರ್ಪಾಡು ಮಾಡಿಕೊಟ್ಟರೆ ಪೂರ್ವದಂತೆ ಸ್ಕೂಲು ಅಭಿವೃದ್ಧಿಗೆ ಬರುವದರಲ್ಲಿ ಸಂದೇಹವಿರುವದಿಲ್ಲ.

ಹೊಳೆನರಸೀಪುರ. ಬಿಸಲಿನ ಝಳವು ಹೆಚ್ಚಾಗಿರುವದರಿಂದ ಇದರಿಂದ ಜನರಿಗೆ ಅಲ್ಲಲ್ಲಿ ಚಳಿ ಜ್ವರವುಂಟು. ಕೆಲವು ದಿನಗಳಿಂದ ಸಾಯಂಕಾಲದಲ್ಲಿ ಮಳೆ ತೋರಿದರೂ, ಗುಡುಗೂ ಇದ್ದರೂ ಮಳೆ ಬರಲಿಲ್ಲ. ಮ್ಯುನಿಸಿಪಲ್ ಲಾಂದ್ರಗಳು ಕ್ರಮವಾಗಿ ಉರಿಯುವದಿಲ್ಲ. ಕೆಲವು ಲಾಂದ್ರಗಳು ೮-೯ ಗಂಟೆಗೆ ಆರಿಹೋಗುತ್ತವೆ. ಕತ್ತಲೆಯಲ್ಲಿ ತಿರುಗಾಡುವ ಜನರಿಗೆ ಬಹು ತೊಂದರೆಯುಂಟು. ಈ ವಿಷಯದಲ್ಲಿ ವೈಸ್ ಪ್ರೆಸಿಡೆಂಟರು ಗಮನಕ್ಕೆ ತರಬೇಕು. ಯಾವಾಗಲಾದರೂ ಊರು ಗಸ್ತು ಮಾಡುವದಾದರೆ ಪ್ರಜೆಗಳ ಅನಾನುಕೂಲಗಳೆಲ್ಲಾ ಗೋಚರಕ್ಕೆ ಬರಬಹುದು. ಪೋಲೀಸ್ ಏರ್ಪಾಡುಗಳು ಸದ್ಯಕ್ಕೆ ಅನುಕೂಲವಾಗಿವೆ. ಪೋಲೀಸ್ ಇನ್‌ಸ್ಪೆಕ್ಟರವರು ಮಧ್ಯ ರಾತ್ರಿಯಲ್ಲಿ ಬಿ ದಿನಗಳಲ್ಲಿ ಒಂಟಿಯಾಗಿ ಸಂಚರಿಸುತ್ತಾರೆಂಬ ಸುದ್ದಿ ಜನರಲ್ಲಿ ಹಬ್ಬಿಕೊಂಡಿದೆ. ಇವರು ಈ ರೀತಿ ಮಾಡುವದರಿಂದ ಕಳ್ಳಕಾಕರ ಭೀತಿ ಜನರಿಗೆ ತಪ್ಪುವದು ಮಾತ್ರವಲ್ಲದೆ, ಪೋಲೀಸಿನವರ ಜಾಗ್ರತೆಗೂ, ಎಚ್ಚರಿಕೆಗೂ ಕಾರಣವಾಗುತ್ತೆ. ಆಸ್ಪತ್ರೆ ಅಸಿಸ್ಟೆಂಟ್ ಸರ್ಜನ್ ಮ|| ಟಿ. ರಾಮಚಂದ್ರರು ಎರಿಗೆ ವರ್ಗವಾಯಿತೆಂಬ ಸಮಾಚಾರವನ್ನು ಜನರು ಕೇಳಿ ಬಹಳ ವಿಷಾದಿಸುತ್ತಿದ್ದರು. ಆದರೆ ಇವರ ಹಾಯಿಯವರ ಕಾಯಿಲೆ ದೆಸೆಯಿಂದ ಇಲ್ಲಿಯೇ ಇರುತ್ತಾರೆಂಬ ಇನ್ನೊಂದು ವರ್ತಮಾನವನ್ನು ಕೇಳಿ ಬಹಳ ಸಂತೋಷಪಡುತ್ತಾರೆ. ಇವರು ಬಡವರ ಆಧಾರಿಗಳಾಗಿರುತ್ತಾರೆ. ಇವರಿಂದ ಚಿಕಿತ್ಸೆ ಹೊಂದಿದವರೆಲ್ಲಾ ಇವರನ್ನು ಶ್ಲಾಘಿಸುತ್ತಿರುತ್ತಾರೆ. ತಮ್ಮ ಕೈಕೆಳಗಿನ ನೌಕರರನ್ನು ಪ್ರೀತಿಯಿಂದ ನಡಿಸುತ್ತಾ ಬರುತ್ತಾರೆ. ಸಾಲಿಗ್ರಾಮದ ಒಬ್ಬ ಕುಟುಂಬಿಕಳಿಗೆ ಗರ್ಭಕೋಶ ರೋಗ ಬಂದು ಆದರಿಂದ ಆಕೆಗೆ ಸನ್ನಿ ಬಂದು ಬಾಯಿ ಬಿಡದಂತಾದಾಗ ಇವರೇ ಸ್ವತಃ ಹೋಗಿ ೮ ದಿನಗಳು ಅವರ ಮನೆಯಲ್ಲಿ ರಾತ್ರಿವೇಳೆ ಮಲಗಿದ್ದು ತಕ್ಕ ಚಿಕಿತ್ಸೆಯಿಂದ ಗುಣಪಡಿಸಿದರು. ಎಂಬ ಸಮಾಚಾರ ಜನರಲ್ಲಿದೆ. ಇಲ್ಲಿನ ಮಿಡ್‌ವೈಫ್ ಎಮಿಲ್ಲಾ ಎಂಬುವಳು ಅನೇಕ ದಿನಗಳಿಂದ ಇಲ್ಲಿನ ಜನರಲ್ಲಿ ಅನೇಕ ಹೆರಿಗೆಗಳನ್ನು ಮಾಡಿ ಜನರಿಂದ ಒಳ್ಳೆ ಹೆಸರನ್ನು ಪಡೆದುಕೊಂಡಿರುತ್ತಾಳೆ. ಈಕೆಗೆ ಬಿಡ್ಡಗಟ್ಟಕ್ಕೆ ವರ್ಗವಾಗಿದೆ. ಮುಂದೆ ಈಕೆಗೆ ಬದಲಾಗಿ ಬರತಕ್ಕವರು ಸಹ ಇವರಂತೆ ತಮ್ಮ ಕೆಲಸದಲ್ಲಿ ಜಾಗ್ರತೆಯುಳ್ಳವರಾಗಿದ್ದು, ಒಳ್ಳೇ ಹೆಸರನ್ನು ಜನರಿಂದ ಸಂಪಾದಿಸುವರೆಂದು ನಿರೀಕ್ಷಿಸಲ್ಪಟ್ಟಿದೆ. ಜೂಜುಕೋರರ ವಿಷಯದಲ್ಲಿ ಹೊಸ ಕಾನೂನು ಜಾರಿಗೆ ಬಂದಿದ್ದರೂ ಜೂಜು ಆಡುವ ಸ್ಥಳಗಳೂ ಸಂಖ್ಯೆಯೂ ಕಡಿಮೆಯಾಗಲಿಲ್ಲ. ಇಂಥವರ ಮೇಲೆ ಪೋಲೀಸಿನವರ ನಿಂದಿತವಾದ ಗಮನ ಬೀಳುವ ತನಕ ಇದು ನಿಲ್ಲಲಾರದು.

ಚಿತ್ರದುರ್ಗ. ಈ ಬೇಸಿಗೆ ಕಾಲದ ಬಿಸಲನ್ನು ಇಲ್ಲಿ ಸಹಿಸುವದೇ ಕಷ್ಟವಾಗಿದೆ. ೨೦ದೆ ೫೦ ವರುಷವೂ ಇಂಥಾ ಧಗೆ ಇರಲಿಲ್ಲವೆಂದು ಅನೇಕರು ಹೇಳುತ್ತಾರೆ. ಪ್ರಜೆಗಳ ಬಿಸಿಲಿನ ತಾಪವನ್ನು ಸಹಿಸಲಾರದೆ ಎಷ್ಟು ಹೊತ್ತಿಗೆ ರಾತ್ರಿ ಬಂದೀತೋ ಎಂದು ಹಂಬಲಿಸುತ್ತಾರೆ. ರಾತ್ರಿಯಲ್ಲಿ ಗಾಳಿ ಜೋರಾಗಿರುವದರಿಂದ ಎಷ್ಟೋ ಅಂಶ ಪರಿಹಾರ. ಕೆಲವು ದಿನಗಳಿಂದ ಮಳೆಯ ಮೋಡಗಳೇನೋ ಆಡುತ್ತಾ ಇದ್ದರೂ ಮಳೆ ಮಾತ್ರ ಬರಲಿಲ್ಲ. ಬೆಳಿಗ್ಗೆ ಬಿಡುಬಿಟ್ಟು ಮಂಜಾದರೆ ಸ್ಥಳಗಳ ಎಲ್ಲಾ ಕಡೆಗಳಲ್ಲಿ ದೆಸೆ ಕಾಣುತ್ತವೆ. ಇಲ್ಲಿನ ನೀರಿನ ಕಷ್ಟಕ್ಕೆ ಡೆಪ್ಯುಟಿ ಕಮೀಷನರವರು ಸಿಗಾಕೊಟ್ಟು ಕೆಲವು ದಿನಗಳಿಂದೀಚೆಗೆ ಎರಡು ಕಡೆಗಳಿಂದ ನೀರು ಎತ್ತಿ ಸರಬರಾಯಿ ಮಾಡುವಂತೆ ಏರ್ಪಾಡುಮಾಡಿದಾರೆ. ಆ ಲಾಗಾಯಿತು ನೀರಿನ ಕಷ್ಟ ಬಹುಮಟ್ಟಿಗೆ ಕಡಮೆಯಾಗಿದೆ. ಮುಂಚೆ ಒಂದು ಫಂಟೆಯೂ ಕೂಡ ನೀರು ಸಿಗದೆ ಇದ್ದ ಕೆಲವು ನಲ್ಲಿಗಳಲ್ಲಿ ಈಗ ಕೆಲವು ಸಮಯ ಎರಡು ಫಂಟೆಗಳಲ್ಲೂ ಹೆಚ್ಚಾದ ಕಾಲ ನೀರು ಧಾರಾಳವಾಗಿ ಸಿಕ್ಕುತ್ತವೆ. ಬೇಸಿಗೆ ಕಳೆಯುವ ವರೆಗೂ ಇಷ್ಟು ಮಟ್ಟಿಗಾದರೂ ಕ್ರಮವಾಗಿ ನೀರು ಸಿಕ್ಕಿದರೆ ಎಷ್ಟೋ ಉಪಕಾರವಾದೀತು. ಇಷ್ಟಾದರೂ ನಲ್ಲಿಗಳ ಬಳಿ ನಡೆಯುವ ಗಲಾಟೆಗಳು ಮಾತ್ರ ತಪ್ಪಲಿಲ್ಲ. ನಲ್ಲಿಯ ಸಮೀಪದ ಮನೆಗಳಲ್ಲಿರುವ ಕೆಲವರು ತಮಗೆ ಮಾತ್ರ ನಲ್ಲಿಯ ಮೇಲೆ ಹಕ್ಕು ಇರುವದೆಂಬ ದುರಭಿಮಾನ ಇಟ್ಟುಕೊಂಡು ದೂರದಿಂದ ನೀರಿಗೆ ಬರುವವರನ್ನು ಅಡ್ಡಿಮಾಡುತ್ತಾರೆ.—ಕಳೆದ ೧೫ನೇ ತಾ|| ಸಾಯಂಕಾಲ ಇಲ್ಲಿ ಎಂಜಿನಿಯರ್ ಸ್ಟೂಡೆಂಟ್ಸ್ ಹಾಸ್ಟಲಿಗಾಗಿ ನಿರ್ಮಿಸಿಕೊಂಡಿರುವ ಹೊಸ ನಿವೇಶನದ ಬೀದಿಗೆ ಪ್ಯಾಗೋ ಬೆಂಕಿ ಬಿದ್ದು ಉರಿಯುತ್ತಿತ್ತು. ಬಹಳ ಅಷ್ಟರಲ್ಲೇ ಅನೇಕ ವಿದ್ಯಾರ್ಥಿಗಳು ಓಡಿಹೋಗಿ ಬೆಂಕಿಯನ್ನು ಆರಿಸಿದ್ದರಿಂದ ಹೆಚ್ಚು ನಷ್ಟಕ್ಕೆ ಅವಕಾಶವಾಗಲಿಲ್ಲ. ಅಲ್ಲಿ ಬೆಂಕಿ ಹುಟ್ಟುವದಕ್ಕೆ ಯಾವ ಕಾರಣವೂ ಇರಲಿಲ್ಲ. ಯಾರೋ ದುಷ್ಟರು ಬೇಕಾಗಿ ಮಾಡಿರಬೇಕು.—ಈಚೆಗೆ ಊರಲ್ಲಿ ಕಳ್ಳ ನಷ್ಟ ಹೆಚ್ಚುತ್ತಾ ಬರುತ್ತವೆ. ಸಿರುಮ್ಯೂಗಗಳಾಗಿ ತಿರುಗಾಡುತ್ತಿರುವ ಕೆಲವು ಯೌವನಸ್ಥರ ಮೇಲೆ ಪೋಲೀಸಿನವರು ಒಂದು ಕಣ್ಣು ಇಟ್ಟದ್ದರೆ ಕ್ಷೇಮವಾದೀತು. ಇಲ್ಲಿನ ಎ ವಿ ಸ್ಕೂಲು ಮುಂದಿನ ಒಂದು ವರುಷದ ಲಾಗಾಯಿತು ಹೈಸ್ಕೂಲಿಗೆ ಬರುತ್ತಾ ಇವೆ ಎಂದೂ, ಅದು ಈಗಿರುವ ಸ್ಥಿತಿಯಲ್ಲೇ ಇದ್ದರೆ ತಮ್ಮ ಮಕ್ಕಳು ಈ ವರುಷವೂ ಕೂಡ ತಕ್ಕಷ್ಟು ವಿದ್ಯಾಭಿವೃದ್ಧಿಯನ್ನು ಹೊಂದದೆ ತೀರಾ ವ್ಯರ್ಥವಾಗಿ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗಿ ಬರುತ್ತದೆ ಎಂದೂ ಇಲ್ಲಿನ ಮಹಮದೀಯ ಜನಗಳೆಲ್ಲರೂ ಗೋಳಾಡುತ್ತಿದ್ದಾರೆ. ಈ ವಿಷಯವಾಗಿ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಒಂದು ಅರ್ಜಿಯ ಮೂಲಕ ಇಲ್ಲಿನ ನಡವಳಿಕೆಯನ್ನೆಲ್ಲಾ ಅವರು ಪರಿಷ್ಕಾರವಾಗಿ ತಿಳಿಸಿ ಕನಿಷ್ಠಪಕ್ಷ ಮೆಟ್ರಿಕ್ಯುಲೇಷನ್ ಪ್ಯಾಸ್ ಮಾಡಿರುವ ಸಮರ್ಥನಾದ ಒಬ್ಬ ಹೆಡ್‌ಮಾಸ್ಟರನ್ನಾದರೂ ತಮಗೆ ಕಳುಹಿಸಿ ಕೊಡಬೇಕೆಂದು ಅರಿಕೆ ಮಾಡಿಕೊಂಡಿದಾರೆ. ವಿದ್ಯಾಭ್ಯಾಸದ ಇಲಾಖೆಯವರು ಈ ವಿಷಯಕ್ಕೆ ಗಮನಕೊಟ್ಟು ಇವರ ಕೋರಿಕೆಯನ್ನು ಶೀಘ್ರದಲ್ಲೇ ನೆರವೇರಿಸಿ ಕೀರ್ತಿಪಡೆದಾರೆಂದು ನಂಬಿದೇನೆ.

ತೀರ್ಥಹಳ್ಳಿ. ಇದೇ ತಿಂಗಳು ತಾ|| ೧೩ರಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಸಾಹೇಬರು ತೀರ್ಥಹಳ್ಳಿಗೆ ದಯಮಾಡಿಸಿದರು. ಬೆಳಿಗ್ಗೆ ಅವರನ್ನು ಎದುರುಗೊಳ್ಳುವುದಕ್ಕೆ ಊರಿನ ದೊಡ್ಡ ಮನುಷ್ಯರೂ ಸಾಹುಕಾರರೂ ಹೋಯಿಸರೂ ಸ್ಕೂಲ್ ಮಾಸ್ಟರುಗಳೇ ಮುಂತಾದವರೆಲ್ಲಾ ಮಿ. ಸಾಫರಿ ಬಂಗಲೆಗೆ ಹೋಗತಕ್ಕ ರಸ್ತೆಯಲ್ಲಿ ಪುಷ್ಪ ಹಾರ ತುರಾಯಿಗಳೊಡನೆ ವಾದ್ಯಗಳ ಸಮೇತ ಕಾದು ಕಾದು ಹಸಿವೆಯಿಂದ ತವಕಪಡುತ್ತಿರುವಷ್ಟರಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರವರ ದರ್ಶನಸೂಚನೆ ಕಾಣಿಸಿತು. ಎಲ್ಲರ ಮನಸ್ಸಿಗೆ ತೃಪ್ತಿ ಸಂತೋಷಗಳುಂಟಾಗಿ ಉಲ್ಲಾಸಗೊಂಡರು. ತಂದಿದ್ದ ಹಾರಾ ತುರಾಯಿಗಳನ್ನು ಸಮರ್ಪಿಸಿದ್ದನ್ನು ಸಾಹೇಬರು ಸಂತೋಷದೊಡನೆ ಸ್ವೀಕರಿಸಿ ೧೧||| ಘಂಟೆಯಾದದ್ದರಿಂದ ಒಡನೇ ಭೋಜನಕ್ಕೆ ಬಂಗಲೆಗೆ ದಯಮಾಡಿಸಿದರು. ದರ್ಶನಾರ್ಥವಾಗಿ ಬಂದಿದ್ದವರಿಗೆ ಊಟದ ವೇಳೆ ಮೀರಿತಲ್ಲಾ ಎಂದು ಹೊರಟುಹೋಗುವ ಚಿಂತೆ ತುಂಬಿಕೊಂಡಿತು. ಮಾರನೇ ದಿನ ಬೆಳಿಗ್ಗೆ ಡೆಪ್ಯುಟಿ ಕಮಿಷನರ್ ಸಾಹೇಬರು ಊರಿನ ಪರೀಕ್ಷಾರ್ಥವಾಗಿ ದಯಮಾಡಿಸಿ ಮಿಷನ್ ಹೌಸಿನ ಪಕ್ಕದಲ್ಲಿರುವ ಆಸ್ಪತ್ರೆಯೊಳಕ್ಕೆ ಹೋಗಿ ನೋಡತಕ್ಕ ಬಾಬುಗಳನ್ನೆಲ್ಲಾ ಪರಾಂಬರಿಸಿ, ಗಂಡದ ಕೋಠಿಯನ್ನು ಇನ್‌ಸ್ಪೆಕ್ಷನ್ ಮಾಡಿ, ಮಲನಾಡಿನ ಕಡೆ ವಿಶೇಷವಾಗಿ ತಯಾರಾಗುವಂಥಾ, ಬಿಸಿಲು ಕಾಲದಲ್ಲಿ ತಂಪಾಗಿಯೂ ಅಮಲೇರುವಂಥಾದ್ದಾಗಿಯೂ ಇರುವಂಥಾ ಅಕ್ಕಿ ಭೋಜ್ಯವೆಂಬ ನಿಷಾ ಪದಾರ್ಥವೆಂಬ ಗಂಜಿಯನ್ನು ದೀರ್ಘಕಾಲ ಪರೀಕ್ಷಿಸಿ, ಅದರ ವಿಷಯದಲ್ಲಿ ಅದು ತಯಾರಾಗುವ ಎಲ್ಲಾ ವಿವರಗಳನ್ನೂ ವಿಚಾರಿಸಿಕೊಂಡು ಕೋರ್ಟಿನ ಕಡೆ ದಯಮಾಡಿಸಿದರು. ಈ ಮಲನಾಡಿನಲ್ಲಿ ಬಹು ಜನ ಪ್ರಜೆಗಳು ನಿಷಾ ಪದಾರ್ಥಗಳ ಸೇವನೆಯಿಂದ ತಮ್ಮ ಕಷ್ಟಾರ್ಜಿತವಾದ ದ್ರವ್ಯವನ್ನು ಸೂರೆಮಾಡಿ ಹಾಳುಮಾಡುತ್ತಿರುವರೆಂದು ವ್ಯಸನದಿಂದ ಹೇಳುವದಕ್ಕೆ ಬಹಳ ಕಾರಣವಿರುತ್ತದೆ.—ಬಾಲಕಿಯರ ಹಿತೈಷಿಗಳೂ ತುಂಬಾ ಪರೋಪಕಾರಿಗಳೂ ಆಗಿರುವ ಸಾಹುಕಾರ್ ಮ|| ವಾಸುದೇವರಾಯರು ಅವರ ಸಹೋದರರಾದ ಮ|| ಅನಂತಪ್ಪನೆಂಬುವರು ಗತಿಸಿದ ತಮ್ಮ ಪ್ರಿಯ ತಾಯಿಯವರ ಜ್ಞಾಪಕಾರ್ಥವಾಗಿ ತೀರ್ಥಹಳ್ಳಿಯಲ್ಲಿರತಕ್ಕ ಎಲ್ಲಾ ಬಾಲಕಿಯರ ವಿದ್ಯಾರ್ಜನೆಗಾಗಿ ಒಂದು ಅನುಕೂಲವಾದ ನಿವೇಶನವನ್ನು ಕೊಂಡು ೩-೪ ಸಾವಿರ ರೂಪಾಯಿ ಮುಟ್ಟಿಸಿ ಬಲವಾದ ಕಲ್ಲು ಮರಗಳಿಂದ ಕಟ್ಟುತ್ತಿರುವ ಕಟ್ಟಡವನ್ನು ಸಾಹೇಬರು ಪರಾಂಬರಿಸಿ, ಇಂಥಾ ಔದಾರ್ಯವೆಂಬ ಉತ್ತಮವಾದ ಮೇಲ್ಪಂಕ್ತಿ ಹಾಕಿದ ಸಾಹುಕಾರರನ್ನು ಪ್ರೋತ್ಸಾಹಗೊಳಿಸಿರುವರೆಂಬುವದಕ್ಕೆ ಯಾವ ಸಂದೇಹವಿಲ್ಲ.—ಸಾಹೇಬರು ಇದ್ದ ಒಂದುವರೆ ದಿನದಲ್ಲಿ ಜಮಾಬಂದಿ ಕೆಲಸದ ಗಲಾಟೆ ಅಧಿಕವಾಗಿತ್ತೆಂದು ಹೇಳುವದರಲ್ಲಿ ಅನುಮಾನವಿಲ್ಲ. ಅನೇಕ ಬಾಬುಗಳ ಅರ್ಜಿಗಳು ಅನೇಕವಾಗಿ ಬರುತ್ತಿದ್ದವೆಂದು ವರ್ತಮಾನವಿರುತ್ತೆ.—ಈ ತೀರ್ಥಹಳ್ಳಿಗೆ ಬಹು ಕಾಲದಿಂದ ಅನೇಕ ದೇವಸ್ಥಾನಗಳು ಸೇರಿರುತ್ತವೆ. ನದಿಯ ಉಭಯ ಪಾರ್ಶ್ವಗಳಲ್ಲಿ ಗುಡ್ಡ ಬೆಟ್ಟ ಸಂದುಗಳಲ್ಲೂ ಸಣ್ಣ ಗ್ರಾಮಗಳಲ್ಲೂ ಬಹು ಕಾಲದ ದೇವಸ್ಥಾನಗಳು ಇದ್ದ ಸ್ಥಳಗಳೇ ಗುರುತು ಹಿಡಿಯುವದಕ್ಕಾದರೂ ಹೋಗಿ ನೋಡಿಲಿಕ್ಕೆ ಸರಿಯಾದ ದಸ್ತೆ ಕಂಡುಹಿಡಿಯುವದಕ್ಕೂ ಬಹು ಪ್ರಯಾಸವಾಗಿತ್ತು. ಮತ್ತು ಅನೇಕ ಜೀರ್ಣಾವಸ್ಥೆಯನ್ನು ತಾಳಿದ್ದವು. ಕೆಲವು ಸ್ಥಳಗಳಲ್ಲಿ ಪ್ರತಿಮೆಗಳೇ ನಿದರ್ಶನಗಳಾಗಿದ್ದವು. ದೇವಸ್ಥಾನಕ್ಕೆಂದು ಬರತಕ್ಕ ಆದಾಯ ಮುಂತಾದವು ಉತ್ತಮವಾದ ಕಮದ ಸ್ಥಿತಿಯಲ್ಲಿ ಇದ್ದಿರಲಿಲ್ಲ. ಈಚೆಗೆ ಬಂದ ತೀರ್ಥಹಳ್ಳಿ ಅಮಲ್ದಾರರು ಮೇಲ್ಕಂಡ ದೇವಸ್ಥಾನಗಳ ಜೀರ್ಣಾವಸ್ಥೆಯ ಕಡೆಗೆ [illegible] ಸೇರಿಸುವದರಿಂದ ಎಲ್ಲಾ ಕಾರ್ಯಗಳೂ ಕ್ರಮವಾಗಿ ನಡೆದು ಪ್ರಜೆಗಳಿಗೂ ಸುಖವೂ ಸಂತೋಷವೂ ಉಂಟಾಗುವದೆಂದು ಯೋಚಿಸಿ, ಅದರಂತೆ ಅನೇಕ ದೇವಸ್ಥಾನಗಳನ್ನು ಮುಜರಾಯಿಗೆ ಸೇರಿಸಲು ಪ್ರಯತ್ನಪಡುವದನ್ನು ನೋಡಿ ಅನೇಕರು ಆ ವಿಷಯದಲ್ಲಿ ತೃಪ್ತಿ ಇಲ್ಲದವರಾಗಿ ಅನೇಕ ಅರ್ಜಿಗಳನ್ನು ಡೆಪ್ಯುಟಿ ಕಮಿಷನರ್ ಸಾಹೇಬರಿಗೆ ತಂದು ಒಪ್ಪಿಸಿದ ಹಾಗೂ ಸಾಹೇಬರು ಯೋಚಿಸತಕ್ಕ ಉತ್ತರಗಳನ್ನು ಕೊಡುವ ಹಾಗೂ ಅರ್ಜಿದಾರರಿಗೆ ಅಪ್ಪಣೆ ಕೊಡಿಸಿದ್ದಾಯಿತು.—ಇದೇ ಮೇಲಿನ ಸಾಹೇಬರು ಗರ್ಲ್ಸ್ ಮೇಟನ ಬಾಲಕಿಯರ ಪಾಠಶಾಲೆಗೆ ದಯಮಾಡಿಸಿ, ಹಳೇ ಕಟ್ಟಡದ ವಿಷಯದಲ್ಲಿ ಒಂದೆರಡು ಮಾತುಗಳನ್ನು ತಿಳಿಸಿ ೧೫ನೇ ತಾ|| ಬೆಳಿಗ್ಗೆ ಶಿವಮೊಗ್ಗೆಗೆ ವಾಪಸು ದಯಮಾಡಿಸಿದರು.

ಇಂಡಿಯಾ ದೇಶದ ವೃತ್ತಾಂತಗಳು.

ನಭಾ ಸಂಸ್ಥಾನದ ರಾಜರವರ ಕುಮಾರರು ಸರ್ದಾರ್ ಜಾನ್ ಸಿಂಗ್ ಎಂಬವರ ಕೂಡ ವಿಲಾಯತಿಗೆ ಹೋಗಿ ಆರು ತಿಂಗಳ ತನಕ ಅಲ್ಲಿ ಇದ್ದು ಬರುವವರಾಗಿದಾರೆ.

* * *

ಮದರಾಸ್ ಪಟ್ಟಣದಲ್ಲಿ ದಿವಾಳಿ ಆದ ಅರ್ಬತ್‌ನಾಟ್ ಕಂಪನಿಯ ಕಟ್ಟಡವು ಕಳೆದ ಶುಕ್ರವಾರ ಹರಾಜಾಯಿತು. ಮ|| ಆಗಾ ಮಹಮದ್ ಖಲೀಲ್ ಎಂಬೊಬ್ಬ ವರ್ತಕನು ಅದನ್ನು ೧,೧೮,೦೦೦ ರೂಪಾಯಿಗೆ ಕೊಂಡುಕೊಂಡನು.

* * *

ಬೊಂಬಾಯಿ ಪಟ್ಟಣದ ರಾಜಾ ಸರಿಂಗಜ ಎಂಬೊಬ್ಬ ಸಾಹುಕಾರನು ಸ್ಟೈಯರ್ಡ್ ಸರ್ದಾರ್ ಅಲ್ಲಿ ಎಂಬಾತನಿಂದ ತನಗೆ ಬರಬೇಕಾಗಿದ್ದ ೧೩ ಲಕ್ಷ ರೂಪಾಯಿ ಸಾಲಕ್ಕೆ ಡಿಕ್ರಿಪಡೆದು ಆತನ ಬಾಬತು ವಾಟ್ಸನ್ ಹೋಟೇಲ್ ಎಂಬ ಭಾರೀ ಬಂಗಲೆಯನ್ನು ಹರಾಜು ಹಾಕಿ ಎರಡು ಲಕ್ಷ ರೂಪಾಯಿಗೆ ತಾನೇ ವಹಿಸಿಕೊಂಡನು.

* * *

ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದೊಳಗೆ ಮದ್ಯಗಳ ಅಂಗಡಿಯಲ್ಲಿ ಯಾವ ವರ್ತಕನೂ ೧೮ ವಯಸ್ಸಿಗಿಂತ ಕಡಿಮೆಯಾಗಿರುವ ಹುಡುಗರಿಗೆ ಮದ್ಯ ಪದಾರ್ಥವನ್ನು ಬಿಕರಿಮಾಡಕೂಡದೆಂದೂ, ಹಾಗೆ ಬಿಕರಿಮಾಡಿದ್ದು ಸರ್ಕಾರಕ್ಕೆ ತಿಳಿದುಬಂದರೆ ವರ್ತಕನಿಗೆ ಮೊದಲು ಜುಲ್ಮಾನೆ, ಬಳಿಕ ಸಜಾ ವಿಧಿಸಲ್ಪಡುತ್ತೆಂದೂ ಹುಕುಂ ಕೊಟ್ಟಿದೆ.

* * *

ಬೊಂಬಾಯಿ ಪಟ್ಟಣದಲ್ಲಿ ಕೆಲವು ಮ್ಯುನಿಸಿಪಲ್ ಚುನಾವಣೆಗಳು ತೃಪ್ತಿಕರವಾಗಿ ನಡೆಯಲಿಲ್ಲವೆಂದೂ ಮೋಸವಾಗಿದೆ ಎಂದೂ ಲಾಲ್‌ಜಿ ಎಂಬೊಬ್ಬ ದೊಡ್ಡ ಮನುಷ್ಯನು ದಾವಾ ಮಾಡಿದನು. ಚೀಫ್ ಜಡ್ಜರು ದೀರ್ಘವಾಗಿ ವಿಚಾರಣೆ ಮಾಡಿ, ಇಬ್ಬರು ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯನ್ನು ರದ್ದುಪಡಿಸಿ, ಹೊಸದಾಗಿ ಚುನಾವಣೆಯು ಕ್ರಮವಾಗಿ ಜರುಗಬೇಕೆಂದು ತೀರ್ಮಾನ ಮಾಡಿರುತ್ತಾರೆ.

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ರಾಜಧಾನಿಗೆ ಹೊರಗಡೆ ಇರುವ ಉಟ್ಟುಪಾರಗಳೆಂಬ ಸರ್ಕಾರಿ ಧರ್ಮದ ಅನ್ನಸತ್ರಗಳಲ್ಲಿ ಮಿರ್ಜ ಬಾಬುಗಳನ್ನು ಬಹಳಮಟ್ಟಿಗೆ ಕಡಮೆಮಾಡಿದರು. ಇದರಿಂದ ಚಾಲ್ತಿ ಸಾಲಿನಲ್ಲಿ ಎರಡು ಲಕ್ಷ ರೂಪಾಯಿ ಮಿಗುತ್ತೆಂದು ಹೇಳುತ್ತಾರೆ.—ಈಗ ದಿವಾನರವರಿಗೆ ಸಲ್ಲುತ್ತಿರುವ ೩,೦೦೦ ರೂಪಾಯಿ ಸಂಬಳ ಸಾಲದೆಂದು ಅದನ್ನು ಹೆಚ್ಚುಮಾಡುವ ಯೋಚನೆಯುಂಟಾಗಿದೆ.

* * *

ಕಲ್ಕತ್ತಾ ಪಟ್ಟಣದ ಕೆಲವು ಚೌಕಗಳಲ್ಲೂ ಮೈದಾನುಗಳಲ್ಲೂ ಸುತ್ತುಮುತ್ತಲಿನ ಕೆಲವು ಪ್ರದೇಶಗಳಲ್ಲೂ ಸಾಯಂಕಾಲವಾದ ಮೇಲೆ ಯಾರೂ ಯಾವ ವಿಧವಾದ ಕೂಟಗಳನ್ನಾಗಲಿ ಸಭೆಗಳನ್ನಾಗಲಿ ನಡಿಸಲೂ, ಅವುಗಳಲ್ಲಿ ಹಾಜರಾಗಿರಲೂ ಕೂಡದೆಂದು ಬಂಗಾಳಾ ಗವರ್ನಮೆಂಟಿನವರು ವಿಧಿಸಿ ಒಂದು ವರುಷ ಪೂರೈಸಿತು. ಈಗ ಇನ್ನೊಂದು ವರುಷದ ತನಕ ಈ ವಿಧಿಯು ಜಾರಿಯಲ್ಲಿರತಕ್ಕದ್ದೆಂದು ಕಳೆದ ವಾರ ಹುಕುಂ ಕೊಟ್ಟಿರುತ್ತಾರೆ.

* * *

ಪೂನಾ ಪಟ್ಟಣದಲ್ಲಿ ಹನ್ನೆರಡು ಮಂದಿ ಮುಲ್ತಾನಿ ಮಹಮದೀಯರನ್ನೂ ಹಿಂದುಗಳನ್ನೂ ದರೋಡೆ ನಡಿಸುತ್ತಿದ್ದರೆಂದು ರೈಲ್ವೆ ಪೋಲೀಸಿನವರು ದಸ್ತಗಿರಿ ಮಾಡಿದ್ದರಷ್ಟೆ. ಸೆಷನ್ಸ್ ಜಡ್ಜರು ೪೦ ದಿನಗಳಿಂದ ಇದೊಂದು ಮೊಕದ್ದಮೆಯನ್ನೇ ದರ್ಯಾಪ್ತಿ ಮಾಡಿದರು. ೧೫೦ ಜನ ಸಾಕ್ಷಿಗಳ ಶೈಫಿಯತ್ತು ನಡೆಯಿತು. ಜೂರಿ ಪಂಚಾಯಿತರು ಅಪರಾಧವು ರುಜುವಾತಾಗಿದೆ ಎಂದು ಅಭಿಪ್ರಾಯವನ್ನು ಹೇಳಿದರು. ಜಡ್ಜರು ಕಳೆದ ಶನಿವಾರ ಅಪರಾಧಿಗಳಿಗೆಲ್ಲಾ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ.

* * *

ತಿರುನೆಲ್ವೆಲ್ಲಿ ಜಿಲ್ಲಾ ನಂಗುನೇರಿ ತಾಲೂಕಿಗೆ ಸೇರಿದ ಕುರಕಾಡು ಬೆಟ್ಟಪ್ರಾಂತ್ಯದ ಸರ್ಕಾರಿ ಜಂಗಲಿಗೆ ಬೆಂಕಿ ಬಿದ್ದು ಸುಮಾರು ಮೂರು ವಾರಗಳಿಂದ ಆಗಾಗ ಸುಡುತ್ತಾ, ಸುತ್ತುಮುತ್ತಲೂ ಪತ್ತಿರು ಮೈಲುಗಳ ದೂರದವರೆಗೆ ಆ ಉರಿಯ ಪ್ರಕಾಶವು ರಾತ್ರಿ ಹೊತ್ತು ಕಾಂತಿಯುಕ್ತವಾಗಿರುವುದು. ಗ್ರಾಮಾಂತರಗಳ ಸಮೀಪದಲ್ಲಿರುವ ರೈತ ಪ್ರಜೆಗಳನ್ನೂ ಪೋಲೀಸಿನವರನ್ನೂ ಬಹಳವಾಗಿ ಸೇರಿಸಿಕೊಂಡು ಆ ಪ್ರಾಂತ್ಯ ಹೋಗಿ ಬೆಂಕಿಯನ್ನು ಆರಿಸುವ ಪ್ರಯತ್ನ ಮಾಡುತ್ತಿರುವರೆಂದು ತಂತಿ ವರ್ತಮಾನ ಬಂದಿದೆ.

* * *

ಗೌತಮಬುದ್ಧನ ಅಸ್ಥಿಯನ್ನು ಬರ್ಮಾ ಅಧಿಪತ್ಯದ ಬೌದ್ಧಮತ ಪ್ರತಿನಿಧಿಗಳು ವೈಸ್‌ರಾಯಿಯವರಿಂದ ಪಡೆದು ತೆಗೆದುಕೊಂಡು ಹೋಗಿ ಮಾಂಡಲೇ ನಗರದ ಕಿಂಗ್ ಯಿನ್ ವಿಹಾರಾಯ ಎಂಬೊಬ್ಬ ದೊಡ್ಡ ಮನುಷ್ಯನ ವಿಸ್ತಾರವಾದ ಬಂಗಲೆಯಲ್ಲಿಟ್ಟು ಪ್ರದರ್ಶನ ಮಾಡುತ್ತಿದಾರೆ. ಸಾವಿರಾರು ಮಂದಿ ಬೌದ್ಧ ಭಕ್ತಾದಿಗಳು ಹೋಗಿ ಆ ಅಸ್ಥಿಯನ್ನು ದರ್ಶನಮಾಡುತ್ತಿರುವರು. ಅದನ್ನು ಇಷ್ಟರಲ್ಲೇ ಅಲ್ಲಿಂದ ಅರಕಾನ್ ನಲ್ಲಿರುವ ಭಾರೀ ಬೌದ್ಧ ದೇವಸ್ಥಾನಕ್ಕೆ ಸಾಗಿಸಿ ಅಲ್ಲಿ ಪ್ರತಿಷ್ಠೆ ಮಾಡಿಸುತ್ತಾರೆಂದು ಪ್ರಕಟವಾಗಿದೆ.

* * *

ಅಜ್ಮೀರ, ಡೆಲ್ಲಿ, ಆಗ್ರಾ ಮೊದಲಾದ ಪಟ್ಟಣಗಳಲ್ಲೆಲ್ಲಾ ಇದ್ದುಕೊಂಡು ದರೋಡೆ ಮೊದಲಾದ ನಾನಾ ಕೃತ್ಯಗಳನ್ನು ನಡಿಸುತ್ತಿದ್ದ [illegible] ಕಳ್ಳರನ್ನು ಬೊಂಬಾಯಿ ಪೋಲೀಸಿನವರು ಕಳೆದ ವಾರ ಹಿಡಿದರು. ಆಹಮದಾಬಾದಿನಲ್ಲಿ ೫ ಮಂದಿ ಸಿಕ್ಕಿದರು. ಇವರು ಕೆಲವು ಚಿನ್ನ ಬೆಳ್ಳಿ ನಗಗಳನ್ನು ಬಿಕರಿ ಮಾಡುವಾಗ್ಗೆ ಪೋಲೀಸಿನವರು ಅನುಮಾನದ ಮೇಲೆ ಹಿಡಿದು ತನಿಖೆ ಮಾಡಿದಾಗ ಅವರ ಸಹಾಯಕರಾಗಿ ಬೇರೆ ೧೯ ಜನರಿದಾರೆಂದು ತಿಳಿಯಿತು. ಈ ಪೈಕಿ ೧೬ ಮಂದಿಯನ್ನು ಕಳೆದ ವಾರ ದಸ್ತಗಿರಿ ಮಾಡಿರುತ್ತಾರೆ.

* * *

ಶ್ರೀ ಶೃಂಗೇರಿ ಸ್ವಾಮಿಗಳು ಕಾಲಡಿಯಲ್ಲಿ ಪ್ರತಿಷ್ಠಾ ಕಾರ್ಯಗಳನ್ನೂ, ಪಂಡಿತಸಭೆಯನ್ನೂ ತೀರಿಸಿಕೊಂಡು ಕಳೆದ ವಾರ ಅಲ್ಲಿಂದ ಶೃಂಗಗಿರಿಯನ್ನು ಕುರಿತು ಹಿಂತಿರುಗಿದರು. ಸ್ವಾಮಿಗಳು ಅಲ್ಲಿದ್ದಾಗ್ಗೆ ಕೊಚ್ಚಿ ರಾಜರವರು ಅವರ ದರ್ಶನಕ್ಕಾಗಿ ಹೋಗಿ ಮೂರು ದಿನಗಳ ತನಕ ಇದ್ದು, ಆ ಪ್ರಾಂತ್ಯದ ಕೆಲವು ಬ್ರಾಹ್ಮಣರಿಗೆ ಕೊಟ್ಟಿದ್ದ ಬಹಿಷ್ಕಾರ ಪತ್ರಿಕೆಯನ್ನು ರದ್ದುಮಾಡಿ, ಶುದ್ಧ ಪತ್ರಿಕೆಯನ್ನು ಕೊಡಿಸಬೇಕೆಂದು ಸ್ವಾಮಿಗಳಲ್ಲೂ ತುಂಬಾ ವಾಗ್ವಾದ ನಡಿದಂತೆಯೂ ಆ ಬ್ರಾಹ್ಮಣರು ಸ್ವಾಮಿಗಳ ಅನುಜ್ಞೆಯ ಪ್ರಕಾರ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಒಪ್ಪಿಕೊಂಡಾಗ್ಯೂ, ರಾಜರವರು ಅದಕ್ಕೆ ಸಮ್ಮತಿಸಲಿಲ್ಲವೆಂದೂ, ಈ ಚರ್ಚಾಸದ ಪರಿಣಾಮವೇನಾಯಿತೋ ತಿಳಿಯಲಿಲ್ಲವೆಂದೂ ಪ್ರಕಟವಾಗಿದೆ.

* * *

ಉತ್ತರ ದೇಶಕ್ಕೆ ಸೇರಿದ ಬಸ್ತಾರ್ ಸಂಸ್ಥಾನದಲ್ಲಿ ಮಾಮಲೇಟು ಕಾಡು ಜನರು ದಂಗೆ ಎದ್ದು ದಾಂಧಳೆ ಮಾಡಿದರಷ್ಟೆ. ಈ ರೀತಿ ಅವರು ದಂಗೆ ಏಳಲು ಅರಮನೆಯೊಳಗಿನ ಕಾರುಕರ್ದಿಗಳೇ ಕಾರಣವೆಂದು [illegible] ಎಂಬ ಪತ್ರಿಕೆಯು ಹೇಳುವುದು. ಆ ಸಂಸ್ಥಾನದ ರಾಜರಿಗೆ ಇಬ್ಬರು ರಾಣಿಯರೂ, ಒಬ್ಬ ರಕ್ತಸಂಬಂಧಿಯೂ ಇರುತ್ತಾರೆ. ರಾಜರಲ್ಲದೆ ಆ ರಕ್ತಸಂಬಂಧಿಯೂ ಹಿರಿಯ ರಾಣಿಯೂ ಕೂಡ ಸಂಸ್ಥಾನದ ಕಾರುಕರ್ದಿಗಳನ್ನು ನಡಿಸುತ್ತಿದ್ದರು. ಈಚೆಗೆ ರಾಜರು ಸಮರ್ಥರಾದ ಒಬ್ಬ ದಿವಾನರನ್ನು ನೇಮಕಮಾಡಿಕೊಂಡು ರಾಜ್ಯಾಡಳಿತವನ್ನು ದಿವಾನರ ಮೂಲಕ ನಡಿಸುತ್ತಾ ಬಂದರು. ಇದು ಹಿರಿಯ ರಾಣಿಗೂ ಆ ರಕ್ತಸಂಬಂಧಿಗೂ ಸಮ್ಮತವಾಗಲಿಲ್ಲ. ಇದಲ್ಲದೆ ಕಿರಿಯ ರಾಣಿಯು ಗರ್ಭಿಣಿಯಾಗಿರುತ್ತಾಳೆಂಬದೂ, ಯುವರಾಜನು ಜನಿಸಬಹುದೆಂಬ ಕಾಲಬಂತು. ಈ ವಿಚಾರವೂ ಅವರಿಬ್ಬರಲ್ಲಿ ಅಸಮಾಧಾನವನ್ನೂ ವೈಷಮ್ಯವನ್ನೂ ಉಂಟುಮಾಡಿತು. ಆ ದಂಗೆಕೋರ ಮಾಡವರ ಕೂಡ ಅರಮನೆಯ ಕೆಲವು ಸೇವಕರೂ ಸೇರಿಕೊಂಡಿದ್ದರೆಂದು ಗೊತ್ತಾಯಿತು. ಈ ದಂಗೆಕೋರರು ದಿವಾನರವರನ್ನು ಸಮಾಪ್ತಿ ಮಾಡಬೇಕೆಂದು ಪ್ರಯತ್ನಪಟ್ಟಾಗ ಅವರು ಸ್ಥಳಾಂತರಕ್ಕೆ [illegible] ರು. ಈ ದಂಗೆಕೋರರು ವಿಶೇಷವಾಗಿ ವಿದ್ಯಾಶಾಲೆಗಳನ್ನು ಬೆಂಕಿಹಾಕಿ ಸುಡುತ್ತಾ ಬಂದರು. ಅವರಿಗೆ ಆ ಇಲಾಖೆಯ ಮೇಲೆ [illegible] ವಿದ್ಯೆಯ ಮೇಲೆಯೂ ಅಭಿರುಚಿ ಇರುವಂತೆ ಕಾಣುವುದಿಲ್ಲ. ಆದರೂ ಈ ಅಲ್ಪಕಾರಣಕ್ಕಾಗಿ ಆ ಜನರು ಅಷ್ಟು ಭಾರೀ ದಂಗೆಯನ್ನು ಎಬ್ಬಿಸಬಹುದೇ ಎಂದು ಹಲವರು ಸಂಶಯಪಡುತ್ತಾರೆ. ಬೇಸಿಗೆಯ ಇಲಾಖೆಯ [illegible] ಗಳು ಆ ಜನರಿಗೆ ವಿಶೇಷವಾಗಿದ್ದವೆಂದೂ ಬಹಳ ಕಷ್ಟನಷ್ಟಗಳನ್ನನುಭವಿಸುತ್ತಿದ್ದರೆಂದೂ ತಿಳಿದುಬರುತ್ತದೆ. ಈ ದಂಗೆಯ ದೆಸೆಯಿಂದ ದಿವಾನರವರು ಪದಭ್ರಷ್ಟರಾದರೂ ಆಗಬಹುದೆಂದು ಅನುಮಾನವುಂಟಾಗಿದೆ.

ಮ॥ ಇ ಎ ವುಡ್‌ಹೌಸ್ ಎಂಬೊಬ್ಬ ಇಂಗ್ಲಿಷ್ ಪಂಡಿತನು ಕಾಶೀಪಟ್ಟಣದಲ್ಲಿರುವ ಹಿಂದೂ ಕಾಲೇಜಿನಲ್ಲಿ ಬೋಧಕನಾಗಿರುವುದಕ್ಕೆ ಒಪ್ಪಿ ತನಗೆ ಸಂಬಳ ಅವಶ್ಯವಿಲ್ಲವೆಂದು ತಿಳಿಸಿರುತ್ತಾನೆ ಈತನು ಮೊದಲು ಬೊಂಬಾಯಿ ಮತ್ತು ಪೂನಾ ವಿದ್ಯಾಶಾಲೆಗಳಲ್ಲಿ ಉಪಾಧ್ಯಾಯ ಕೆಲಸವನ್ನು ಮಾಡಿ ಒಳ್ಳೇ ಹೆಸರು ಪಡೆದಿರುವನು.

• • •

ಬೊಂಬಾಯಿ ಆಧಿಪತ್ಯದಲ್ಲಿ ಅಣಿ ತಾಲ್ಲೂಕಿಕ್ಕೆ ಸೇರಿದ ಷೇದ್‌ಬಾಳ್ ಎಂಬ ಸ್ಥಳದಲ್ಲಿ ಮೆಯಿಲ್ ಟಾಂಗಾ ಗಾಡಿಗೆ ಕಳೆದ ವಾರ ಕಳ್ಳರುಬಿದ್ದು ಗಾಡಿಯೊಳಗಿದ್ದವರನ್ನು ಚನ್ನಾಗಿ ಹೊಡೆದು ಅವರ ಬಳಿ ಇದ್ದ ಹಣ ಕಾಸನ್ನೂ, ಅಂಚೆ ಬಸ್ತುಗಳನ್ನೂ ಕಾಗದ ಪತ್ರಗಳನ್ನೂ ಭಾಂಗಿಗಳನ್ನೂ ಒಡೆದು ಅವುಗಳಲ್ಲಿ ಸಿಕ್ಕಿದ್ದನ್ನೂ ಅಪಹರಿಸಿಕೊಂಡು ಹೋಗಿದ್ದಾರೆ.

• • •

ಹಿಂದುಸ್ಥಾನದ ರೈಲ್ವೆ ಇಲಾಖೆಯ ಉತ್ಪತ್ತಿಯು ಇಂಡಿಯಾ ಗವರ್ನ್‌ಮೆಂಟಿನ ಖಜಾನಾ ಛಕ್ಷಿಯವರು ಅಂದಾಜು ಕಟ್ಟಿದ್ದದ್ದಕ್ಕಿಂತಲೂ ವಿಶೇಷವಾಗಿ ಹೆಚ್ಚಿರುತ್ತದೆ ಕಳೆದ ಮಾರ್ಚಿ ಆಖೈರಿಗೆ ಮುಕ್ತಾಯವಾದ ವರುಷದಲ್ಲಿ ೪೩ ಕೋಟಿಯೂ ೩೬ ಲಕ್ಷ ರೂಪಾಯಿ ಹುಟ್ಟುವಳಿ ಆಗಿರುವುದೆಂದೂ, ಇಷ್ಟು ಹೆಚ್ಚಾಗಿ ಹಿಂದೆ ಯಾವ ವರುಷವೂ ಆಗಿಲ್ಲವೆಂದೂ ತಿಳಿದು ಬರುವುದು

• • •

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೨೩,೯೨೮ ಜನರು ಪ್ಲೇಗ್ ಉಪದ್ರದಲ್ಲಿ ತೀರಿಹೋಗಿರುತ್ತಾರೆ. ಇದರ ಹಂಚಿಕೆ ಹ್ಯಾಗಂದರೆ—ಪಂಜಾಬ್ ಆಧಿಪತ್ಯ ೧೦,೯೦೦, ಸಂಯುಕ್ತ ಆಧಿಪತ್ಯಗಳು ೬,೮೯೩, ಬಂಗಾಳಾ ೨,೩೭೩, ರಾಜಪುತಾನಾ ೨,೧೧೦, ಬೊಂಬಾಯಿ ೭೭೯, ಬರ್ಮಾ ಆಧಿಪತ್ಯ ೪,೬೨ ಮಧ್ಯಪ್ರಾಂತ್ಯಗಳು ಮತ್ತು ಬೀರಾರ ೩೨೨, ಮಧ್ಯ ಇಂಡಿಯಾ ೧೩೪, ಮೈಸೂರು ಸಂಸ್ಥಾನ ೪೦, ಮದರಾಸ್ ಆಧಿಪತ್ಯ ೯

• • •

ಲಂಡನ್ ಪಟ್ಟಣದ ಮ್ಯಾನ್‌ಷನ್ ಹೌಸ್ ಫಂಡಿಗೆ ಲಾರ್ಡ್ ಮೇಯರೆಂಬ ಅಧಿಪತಿಯು ೧೯೭೭ನೇ ಇಸವಿಯ ಲಾಗಾಯಿತು ಹಿಂದುಸ್ಥಾನದ ಕ್ಷಾಮ ನಿವಾರಣೆಗೋಸ್ಕರ ಧರ್ಮಾರ್ಥ ಫಂಡನ್ನು ಕೂಡಿಸಿ ಕಳುಹಿಸಿರುತ್ತಾರಷ್ಟೆ ಇದು ಒಟ್ಟು ಸುಮಾರು ಎರಡೂವರೆ ಕೋಟಿ ರೂಪಾಯಿ ಆಗುವುದು ಹ್ಯಾಗಂದರೆ ೧೮೭೭ನೇ ಇಸವಿಯಲ್ಲಿ ೧೭೯ ಸಾವಿರ ಪೌಂಡನ್ನೂ, ೧೮೭೭ರಲ್ಲಿ ೫೧೫ ಸಾವಿರ ಪೌಂಡನ್ನೂ, ೧೮೯೭ರಲ್ಲಿ ೫೫೦ ಸಾವಿರ ಪೌಂಡನ್ನೂ, ೧೯೦೦ರಲ್ಲಿ ೩೯೪ ಸಾವಿರ ಪೌಂಡನ್ನೂ ಚಂದಾ ಕೂಡಿಸಿ ಹಿಂದುಸ್ಥಾನಕ್ಕೆ ಕಳುಹಿಸಿದಂತೆ ಗೊತ್ತಾಗುತ್ತದೆ

• • •

ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿರುವ ಪೆಷಾವರ್ ಪಟ್ಟಣದಲ್ಲಿ ಒಬ್ಬ ಪೋಲೀಸಿನವನ ಮನೆಯವರೆಲ್ಲಾ ಏಕಕಾಲದಲ್ಲಿ ಸತ್ತು ಹೋದರು ಇದಕ್ಕೆ ಕಾರಣವೇನೆಂದು ತನಿಖೆಮಾಡಿದಾಗ ಗೊತ್ತಾದದ್ದೇನೆಂದರೆ, —ಆ ಪೋಲೀಸಿನವನು ಅಲ್ಲಿನ ರೈಲ್ವೆ ಸ್ಟೇಷನ್‌ನಲ್ಲಿ ಪ್ರಯಾಣಿಕರೆಲ್ಲಾ ಗಾಡಿಯಿಂದಿಳಿದು ಹೊರಟು ಹೋದ ಬಳಿಕ ಗಾಡಿಗಳನ್ನು ಆಜಮಾಯಿಷಿ ಮಾಡಿದಾಗ ಅವನಿಗೆ ಒಂದು ತಟ್ಟೆಯ ತುಂಬಾ ಹಲ್ವಾ ಸಿಕ್ಕಿತು ಅದನ್ನು ಪ್ರಯಾಣಸ್ಥರ್‍ಯಾರೋ ಬಿಟ್ಟು ಮರೆತು ಹೋಗಿ ಬಿಟ್ಟರು ಎಂದು ಊಹಿಸಿ ಆ ಪೋಲೀಸಿನವನು ಅದನ್ನು ತನ್ನ ಮನೆಗೆ ತೆಗೆದುಕೊಂಡು ಹೋಗಿ ತಾನೂ ತನ್ನ ಸಂಸಾರಕ್ಕೆ ಸೇರಿದವರೂ ಎಲ್ಲಾ ತಿಂದು ಹಾಕಿದರು ಬೆಳಗಾಗುವ ಹೊತ್ತಿಗೆ ಅವನೂ ಅವನ ಇಬ್ಬರು ಮಕ್ಕಳೂ ಸತ್ತರು ಅವನ ಹೆಂಡತಿಯು ಮರುದಿನ ಮೃತಿಹೊಂದಿದಳು

• • •

ಆನೆಗಳು ಕಾಯಿ ಎಲೆ ಹಣ್ಣು ಮುಂತಾದದ್ದನ್ನು ತಿಂದು ಜೀವಿಸುವ ಪ್ರಾಣಿಗಳೆಂಬದಾಗಿ ಎಲ್ಲರೂ ತಿಳಿದಿದ್ದರು ಈಚೆಗೆ ಇವು ಮಾಂಸಾಹಾರಿಗಳೆಂಬುವದಕ್ಕೆ ಒಂದು ದೃಷ್ಟಾಂತ ಕಂಡು ಬಂದಿದೆ ಮಲಬಾರ್ ಪ್ರಾಂತ್ಯದಲ್ಲಿ ಒಬ್ಬ ಭಾರಿ ದೇಶೀಯ ಬೌಬೀನೇ ಪರ್ತಕನು ಕಾಡಿನಿಂದ ತೊಲೆಗಳನ್ನು ಸಾಗಿಸಿಕೊಂಡು ಬರುತ್ತದಕ್ಕೆ ಕೆಲವು ಆನೆಗಳನ್ನು ಇಟ್ಟುಕೊಂಡು, ಅವುಗಳಿಗೆ ಕೋಳಿ ಮೊಟ್ಟೆಗಳನ್ನೂ ಕುರಿಯ ಮಾಂಸವನ್ನೂ ರಾತ್ರಿ ಕೊಡುತ್ತಾ ಬಂದಿದ್ದಾನೆ ಎಂದು ತಿಳಿಯುತ್ತದೆ ಪ್ರತಿ ಒಂದು ಆನೆಗೂ ತಿಂಗಳಿಗೆ ೩೦-೪೦ ಕೋಳೀ ಮೊಟ್ಟೆಗಳನ್ನೂ ಎರಡು ಕುರಿಗಳ ಮಾಂಸವನ್ನೂ ನಾಲ್ಕು ತಿಂಗಳ ತನಕ ಬೇಸಿಗೆಯಲ್ಲಿ ಮಾತ್ರ ತಿನ್ನಿಸುತ್ತಾನೆ ಆಗ ಅವು ಕೆಲಸ ಮಾಡದೆ ಸುಮ್ಮನಿರುವವು ಬೇಸಿಗೆ ಕಳೆದ ಬಳಿಕ ಅವು ಬಹಳ ಚನ್ನಾಗಿಯೂ ಚಟುವಟಿಕೆಯಿಂದಲೂ ಕೆಲಸ ಮಾಡುತ್ತವೆಂದೂ, ಅವುಗಳಿಗೆ ರೋಗಾದಿಗಳ್ಯಾವೂ ಪ್ರಾಪ್ತವಾಗದೆ ಚನ್ನಾಗಿರುತ್ತವೆಂದೂ ಹೇಳುವರು ಆನೆಗಳು ಈ ರೀತಿ ಮಾಂಸಾಹಾರವನ್ನು ಮಾಡುವುದು ಅಪೂರ್ವವಾಗಿದೆ

ವಿದೇಶ ವರ್ತಮಾನಗಳು

ಜಪಾನ್ ರಾಜ್ಯದ ೧೪ ಮಂದಿ ಪಾರ್ಲಿಮೆಂಟ್ ಮೆಂಬರುಗಳೂ ಪ್ರೊಫೆಸರ್ ... ಮತ್ತು ಬ್ಯಾರನ್ ಸವಾಸಾಯನರೂ ವಿಲಾಯಿತಿಗೆ ಪ್ರಯಾಣ ಮಾಡುತ್ತಿದ್ದಾರೆ

• • •

ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಆಧಿಪತ್ಯಗಳ ಪ್ರಜಾಸಂಖ್ಯೆಯು ೧೯೦೦ ನೇ ಇಸವಿಯ ಗಣತಿಯಲ್ಲಿ ೭,೬೩,೦೦,೦೦೦ ಇದ್ದದ್ದು ಈಗ ೯ ಕೋಟಿಯಾಗಿರುತ್ತದೆ

• • •

ಕಸಬುಗಳಲ್ಲೂ ವ್ಯಾಪಾರದಲ್ಲೂ ನಿಪುಣರಾಗಿರುವ ಸುಮಾರು ೫೦ ಮಂದಿ ಜಪಾನ್‌ನವರು ಯೂರೋಪ್ ಖಂಡದ ರಾಜ್ಯಗಳಲ್ಲಿ ಸಂಚಾರಮಾಡಿ ತಮ್ಮ ಕಸಬುಗಳನ್ನು ಅಭಿವೃದ್ಧಿಪಡಿಸಿಕೊಂಡು ಬರುವುದಕ್ಕಾಗಿ ಹೊರಟಿದ್ದಾರೆ

• • •

ಆಫ್ರಿಕಾಖಂಡದ ಐವರಿ ಕೋಸ್ಟ್ ಎಂಬ ಭಾಗದಲ್ಲಿ ದೇಶೀಯ ಜನರು ಫ್ರೆಂಚರ ಠಾಣೆಯ ಮನೆಮಠಗಳನ್ನು ನುಗ್ಗಿ ೩೦ ಮಂದಿ ಫ್ರೆಂಚರನ್ನು ಕೊಂದುಹಾಕಿದ್ದಲ್ಲದೆ ಒಬ್ಬನ ಶವವನ್ನು ತಿಂದುಬಿಟ್ಟರೆಂದು ಪ್ರಕಟವಾಗಿದೆ.

ಸ್ಯಾಕ್ಸನಿ ರಾಜ್ಯಕ್ಕೆ ಸೇರಿದ ಬಿಟರ್‌ಫೆಲ್ಡ್ ಎಂಬ ಪಟ್ಟಣದಲ್ಲಿ ಕಳೆದ ವಾರ ಒಂದು ವಿಮಾನವು ಅಂತರಿಕ್ಷದಲ್ಲಿ ಸಂಚಾರಮಾಡುತ್ತಿದ್ದಾಗ ಅದಕ್ಕೆ ಸಿಡಿಲು ಬಡಿದು ಅನಾಮತ್ತಾಗಿ ಬಿದ್ದು ಬಿಟ್ಟಿತು ಅದರೊಳಗೆ ಕೂತಿದ್ದ ನಾಲ್ವರೂ ಮೃತಪಟ್ಟರು

• • •

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ವಿಕ್ಟೋರಿಯಾ ಎಂಬ ವಿಭಾಗದಲ್ಲಿ ಗವರ್ನ್‌ಮೆಂಟಿನವರೇ ಸ್ವತಂತ್ರಿಸಿ ಕಲ್ಲಿದ್ದಲ ಗಣಿಗಳಲ್ಲಿ ಕಲ್ಲಿದ್ದಲನ್ನು ತೆಗಿಸಿ, ಪ್ರಜೆಗಳಿಗೂ ಕಾರ್ಖಾನೆಗಳಿಗೂ ಅಸಲ್ ಖರೀದಿಗೆ ಬಳಕೆ ಮಾಡಿಸಬೇಕೆಂದು ತೀರ್ಮಾನಮಾಡಿದ್ದಾರೆ ಈ ರೀತಿ ಸರ್ಕಾರದವರೇ ವ್ಯಾಪಾರ ಮಾಡಲಾರಂಭಿಸಿದ್ದಕ್ಕೆ ಕಾರಣವೇನೋ ಪ್ರಕಟವಾಗಲಿಲ್ಲ

• • •

ಲೀವರಾಯಿನ್ ಎಂಬೊಬ್ಬ ಮೋಸಗಾರನು ವಜ್ರಗಳನ್ನು ತಯಾರ್ಮಾಡಿ ಕೊಡುತ್ತೇನೆಂದು ನಂಬಿಕೆ ಹುಟ್ಟಿಸಿ ಸರ್ ಜೂಲಿಯಸ್ ವರ್ನರ್ ಎಂಬ ಸಾಹುಕಾರನಿಂದ ೯,೩೦,೦೦೦ ರೂಪಾಯನ್ನೂ ತೆಗೆದುಕೊಂಡನು ಲಂಡನ್ ಪಟ್ಟಣದ ಮ್ಯಾಜಿಸ್ಟ್ರೇಟರು ಆ ಮೋಸಗಾರನನ್ನು ದರ್ಯಾಫ್ತು ಮಾಡಿ ಅವನಿಗೆ ಆರು ವರುಷ ಸಜಾ, ೧,೫೦೦ ರೂಪಾಯಿ ಜುಲ್ಮಾನೆ, ಬಳಿಕ ಐದು ವರುಷ ಗಡೀಪಾರು ಶಿಕ್ಷೆಯನ್ನು ವಿಧಿಸಿರುತ್ತಾರೆ

• • •

ಚೀನಾ ರಾಜ್ಯಕ್ಕೆ ಸೇರಿದ ಹ್ಯಾಂಕೋ ಪಟ್ಟಣದಲ್ಲಿ ಸರ್ಕಾರಿ ನೌಕರರು ಅಕ್ಕಿಯನ್ನು ವಿಶೇಷವಾಗಿ ಕೊಂಡು ಪರದೇಶಗಳಿಗೆ ರಫ್ತುಮಾಡುತ್ತಿರುವುದನ್ನು ಅಲ್ಲಿನ ಪ್ರಜೆಗಳು ಸೋಡಿ ಸೈರಿಸದೆ ಕಳೆದ ವಾರ ದಂಗೆಯೆದ್ದು ಕ್ರೂರಕೃತ್ಯಗಳನ್ನು ನಡಿಸಿದರು ಆ ಆಧಿಪತ್ಯದಲ್ಲಿರುವ ಹಲವು ಕಟ್ಟಡಗಳನ್ನು ಸುಟ್ಟು ಹಾಕಿ ಹಾಳುಮಾಡಿದರು ನೌಕರರೂ ಪರದೇಶೀಯರೂ ತಮ್ಮ ಮನೆ ಮಠಗಳನ್ನು ತ್ಯಜಿಸಿ ಓಡಿಹೋಗಿ ಹಡಗುಗಳಲ್ಲಿ ಸೇರಿಕೊಂಡಿದ್ದಾರೆ

• • •

ವಿಲಾಯಿತಿಗೆ ಸೇರಿದ ನ್ಯೂರಿ ಪಟ್ಟಣದಲ್ಲಿದ್ದು ಕಾಲವಾದ ಮೆ॥ ಪ್ಯಾಟ್ರಿಕ್ ಮರ್ಫಿ ಎಂಬಾತನು ೩ ಲಕ್ಷ ರೂಪಾಯನ್ನೂ, ಲಂಡನ್ ಪಟ್ಟಣದ ವರ್ತಕನಾದ ಮೆ॥ ಹೆನ್ರಿ ಜೋನ್ಸ್ ಲಬಕ್ ಎಂಬಾತನು ೩೦ ಸಾವಿರ ರೂಪಾಯನ್ನೂ, ಮೆ॥ ಮ್ಯಾಥ್ಯು ಫಿಲಿಪ್ ಕ್ರಿಸ್ತಿ ಎಂಬಾತನು ೪೫ ಸಾವಿರ ರೂಪಾಯನ್ನೂ, ಮಿಡ್‌ಲೋಥಿಯನ್ ಡಿಸ್ಟ್ರಿಕ್ಟಿಗೆ ಸೇರಿದ ಲ್ಯಾಸ್‌ವೇಡ್ ಪಟ್ಟಣದ ಮೆ॥ ಜೋನ್ಸ್ ಪ್ಯಾಟರ್ಸನ್ ಎಂಬಾತನು ೧೫ ಲಕ್ಷ ರೂಪಾಯನ್ನೂ ತಮ್ಮ ತಮ್ಮ ಆಸ್ತಿಗಳಿಂದ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನಗಳನ್ನು ಬರೆದಿರುತ್ತಾರೆ

• • •

ಕೊರಿಯಾ ರಾಜ್ಯದ ಒಂದಾನೊಂದು ರೈಲ್ವೆ ಸ್ಟೇಷನ್‌ನಲ್ಲಿ ಜಪಾನ್ ಮಂತ್ರಿಯಾದ ಮಾರ್ಕ್ವಿಸ್ ಇಟೋರವರನ್ನು ಜಪಾನ್‌ನವರಂತೆ ದುಸ್ತು ಹಾಕಿಕೊಂಡು ಹೋಗಿ ಗುಂಡುಹೊಡೆದು ಕೊಂದು ಹಾಕಿದ ಕೊರಿಯಾ ಪ್ರಜೆಯನ್ನು [illegible] ಸಿಂದ ಕೊಲೆಗಾರರ ಗುಂಪು ಒಂದು ಏರ್ಪಾಟಾಗಿದೆ ಯೆಂದೂ, ಅವನೂ ಅದಕ್ಕೆ ಸೇರಿದ್ದನೆಂದೂ ಗೊತ್ತಾಯಿತು ಜಪಾನ್ ಪೋಲೀಸಿನವರು ಈಚೆಗೆ ಈ ಗುಂಪಿನ ಸುಮಾರು ಹುವತ್ತೈದು ಮಂದಿಯನ್ನು ಹಿಡಿದಿರುತ್ತಾರೆ ಈ ಗುಂಪಿನ ದುಷ್ಟರು ಕೊರಿಯಾ ರಾಜಧಾನಿ ಯಾದ ಸಿಯೋಲ್‌ನಲ್ಲೂ, ವ್ಲಾಡಿವೊಸ್ಟಾಕ್ ಪಟ್ಟಣದಲ್ಲೂ, ಅಮೇರಿಕಕ್ಕೆ ಸೇರಿದ ಸ್ಯಾನ್ ಫ್ರಾನ್ಸಿಸ್ಕೋದಲ್ಲೂ ಸಂಘಗಳನ್ನು ಏರ್ಪಡಿಸಿಕೊಂಡಿರುವಂತೆಯೂ, ಜಪಾನ್ ಅಧಿಕಾರಿಗಳನ್ನೂ ಅವರಿಗೆ ಸಹಾಯಕರಾಗಿರುವ ಕೊರಿಯಾ ಪ್ರಜೆಗಳನ್ನೂ ಕೊಂದು ಹಾಕಬೇಕೆಂಬುದೇ ಈ ಗುಂಪಿನವರ ಉದ್ದೇಶವಾಗಿದೆ ಎಂತಲೂ ಪ್ರಕಟವಾಗಿದೆ

• • •

ವಿಲಾಯಿತಿಗೆ ಸೇರಿದ ಲೀಸ್ಟರ್ ಷೈರ್ ಡಿಸ್ಟ್ರಿಕ್ಟಿನಲ್ಲಿ ಮಿಸೆಸ್ ಜಾರೊ ಎಂಬ ಹೆಂಗಸು ಕಳೆದ ಮಾರ್ಚಿ ತಾ ೧೩ರಲ್ಲಿ ೧೦೦ ನೇ ವರುಷ ತುಂಬಿದ ಹಬ್ಬವನ್ನು ಮಾಡಿ ಸಂತೋಷಪಟ್ಟಳು ಈಗಲೂ ಈಕೆ ಆರೋಗ ದೃಢಕಾಯಳಾಗಿ ಎಲ್ಲಾ ಇಂದ್ರಿಯ ಪಾಟವಗಳನ್ನೂ ಒಳ್ಳೇ ಸ್ಥಿತಿಯಲ್ಲಿ ಪಡೆದಿರುತ್ತಾಳೆ ಯೋಗ್ಯತೆ ಸೇರುವುದರಲ್ಲಿ ಈಕೆ ನಿಸ್ಸೀಮಳೆನಿಸಿಕೊಂಡಿದ್ದಳೆ ಜೀವನಕ್ಕೆ ಗತಿಯಿಲ್ಲದ ಈಕೆ ೧೧ ವರುಷಗಳಿಂದ ಧರ್ಮದ ಕಾರ್ಖಾನೆಯೊಳಗೆ ಸೇರಿಕೊಂಡಿದ್ದಾಳೆ. ಈಕೆಗೆ ೧೮ ನೇ ವಯಸ್ಸಿನಲ್ಲಿ ಮದುವೆಯಾಯಿತು ೧೧ ಮಕ್ಕಳನ್ನು ಪಡೆದಿದ್ದಾಳೆ ಈಕೆಯ ಸಂತಾನದಲ್ಲಿ ಹುಟ್ಟಿದವರ ಪೈಕಿ ೧೯೮ ಮಂದಿ ಬದುಕಿರುತ್ತಾರೆ ಈ ಪೈಕಿ ಮೊಮ್ಮಕ್ಕಳ ಮಕ್ಕಳು ೧೦೯ ಮಂದಿ ಎಂದೂ, ಮೊಮ್ಮಕ್ಕಳ ಮೊಮ್ಮಕ್ಕಳು ೮ ಮಂದಿ ಎಂದೂ ಗೊತ್ತಾಗುತ್ತದೆ ಅತ್ತಲಾಗಿ ವಾರ್ನ್ ಹಂ ಎಂಬ ಊರಿನ ಮಿಸೆಸ್ ಸಾರಾ ಬಿಷಪ್ ಎಂಬಾಕೆಯು ಮಾರ್ಚಿ ತಾ ೧೬ರಲ್ಲಿ ತನ್ನ ೧೦೦ನೇ ವರುಷದ ಹುಟ್ಟಿದ ಹಬ್ಬವನ್ನು ಮಾಡಿಕೊಂಡಳು ಈಕೆಯೂ ಆರೋಗ್ಯವಾಗಿಯೂ ವಯಸ್ಸಿಗೆ ಅನುಗುಣವಾದಷ್ಟು ಚಟುವಟಿಕೆಯುಳ್ಳವಳಾಗಿಯೂ ಇರುತ್ತಾಳೆ ವಿರ್‌ಷೈರ್ ಡಿಸ್ಟ್ರಿಕ್ಟಿನಲ್ಲಿ ೧೦೧ ವರುಷ ಬದುಕಿದ್ದ ಮಿಸೆಸ್ ಜೋನ್ಸ್ ಫಿಷರ್ ಎಂಬಾಕೆಯು ಈಗ ತಾನೇ ಕಾಲವಾಗಿರುತ್ತಾಳೆ

ಆತ್ಮಾವಲಂಬನೆಯೇ ಗೌರವ

ನಮ್ಮ ದೇಶದ ಅನೇಕ ಭಾಗಗಳ ಫಲವತ್ತಾದ ಪ್ರದೇಶಗಳಲ್ಲಿ ಜಮೀನು ಸಿಕ್ಕುವುದು ಇಂಥಾ ಜಮೀನುಗಳಲ್ಲಿ ಸಾಗುವಳೀ ಇಲ್ಲದೆ ಪಾಳುಬಿದ್ದಿರತಕ್ಕ ಭಾಗಗಳು ಎಷ್ಟೋ ಇರುವವು ಈ ಭಾಗಗಳಿಗೆಲ್ಲಾ ರಸ್ತೆಗಳಿಲ್ಲದೆ ಇರುವುದರಿಂದ ವ್ಯವಸಾಯಕ್ಕೆ ಅವಕಾಶವಿಲ್ಲದೆ ಇರುವುವು ಸಾಗುವಳಿಯಿಂದ ಜೀವನ ಮಾಡತಕ್ಕವರು ಸಂಘಗಳನ್ನೇರ್ಪಡಿಸಿಕೊಂಡು, ಪರಸ್ಪರ ಸಹಾಯದ ಏರ್ಪಾಡುಗಳಿಂದ ಬಂಡವಾಳವನ್ನು ಕಲ್ಪಿಸಿಕೊಂಡು, ಇಂಥಾ ಜಮೀನುಗಳನ್ನು ಸಾಗುವಳಿಗೆ ತೆಗೆದುಕೊಂಡು, ರಸ್ತೆ ವಗೈರೆಗಳಿಗೆ ಏರ್ಪಾಡುಮಾಡಿಸಿ, ತರೀ, ಖುಷ್ಕಿ, ಬಾಗಾಯಿತು ವ್ಯವಸಾಯವನ್ನು ನಡಿಸಿದರೆ, ದೇಶದ ಸಂಪತ್ತುಗಳನ್ನು ಹೆಚ್ಚಿಸುವುದಲ್ಲದೆ, ತಮ್ಮ ಶ್ರಮಕ್ಕೆ ಅನುರೂಪವಾದ ಫಲವನ್ನೂ ಹೊಂದಬಹುದು ನಮ್ಮ ರೈತರುಗಳಿಗೆ ಈ ವಿಧವಾದ ಉತ್ಸಾಹವು ಹುಟ್ಟಬೇಕು ಆದರೆ ಅವರಲ್ಲಿ ಅನೇಕರು ವಿದ್ಯಾವಿಹೀನರಾಗಿರುವುದರಿಂದಲೂ, ಲೋಕವ್ಯವಹಾರಜ್ಞಾನ ಉಂಟಾಗುವುದಕ್ಕೆ ಸಾಧಕವಾದ ಪತ್ರಿಕೆಗಳನ್ನು ಅವಲೋಕಿಸುವ ಶಕ್ತಿಯು ಇಲ್ಲದೇ ಇರುವುದರಿಂದಲೂ ಅಂಥ ಅವಲೋಕನಕ್ಕೆ ಅರ್ಹವಾದ ಪತ್ರಿಕೆಗಳೂ ಕೂಡ ದೇಶಭಾಷೆಯಲ್ಲಿ ವಿರಳವಾಗಿರುವುದರಿಂದಲೂ ನಮ್ಮ ದೇಶೀಯರಲ್ಲಿ ಅನೇಕರು ಕಷಕನ್ಯ...ಯನ್ನು ಬಿಟ್ಟು, ವ್ಯತ್ಯಂತರಗಳಲ್ಲಿ ಆಸಕ್ತರಾಗಿರುವುದರಿಂದಲೂ ಪೇಪನ್ನ ಅತ್ಯಂತ ... ಅಮೇರಿಕಾಖಂಡದಲ್ಲಿ ಸಕಲ ವಿದ್ಯಾವಿಶಾರದರಾದವರು ಕೃಷಿಯನ್ನು ಮಾಡುವುದಕ್ಕೆ ಪ್ರವರ್ತಿಸುವರು ಅತ್ಯಂತ ದೊಡ್ಡ ಪರೀಕ್ಷೆಗಳನ್ನು ಕೊಟ್ಟು ಸಕಲ ಶಾಸ್ತ್ರವಿಶಾರದರಾಗಿ ತರುವಾಯ, ಜನರು ವ್ಯವಸಾಯಕ್ಕೆ ಸೇರುವುದರಿಂದ ಆ ದೇಶದ ವ್ಯವಸಾಯವು ಅತ್ಯಂತ ಅಭಿವೃದ್ಧಿಗೆ ಬರುತ್ತಲಿರುವುದು ವ್ಯವಸಾಯಕ್ಕೆ ಸಂಬಂಧಪಟ್ಟ ಕೈಗಾರಿಕೆಗಳೂ ಕೂಡ ಅದೇ ರೀತಿಯಲ್ಲಿ ಅಭಿವೃದ್ಧಿಗೆ ಬರುತ್ತಲಿರುವವು ಅಮೇರಿಕಾ ಖಂಡದ ಸಂಯುಕ್ತ ಸಂಸ್ಥಾನಗಳ ಪ್ರತಿನಿಧಿ ಸಭೆಯ ಪ್ರೆಸಿಡೆಂಟರಾಗಿದ್ದ ಜಾರ್ಜ್ ವಾಷಿಂಗ್‌ಟನ್‌ರವರೂ ಕೂಡ ಚಕ್ರವರ್ತಿ ಪದವಿಯಲ್ಲಿದ್ದು, ದೇಶಹಿತವನ್ನು ಮಾಡಿ, ಅದರಿಂದ ಸ್ವಪ್ರಯೋಜನವನ್ನು ಹೊಂದದೆ ಜೀವನಕ್ಕೆಷ್ಟೋ ಅಷ್ಟನ್ನು ಪಡೆಯುತ್ತಿದ್ದು, ಕೆಲಸದಿಂದ ನಿವೃತ್ತರಾದಕೂಡಲೇ ಕೃತಜ್ಞರಾದ ಜನಗಳು ಆ ದೇಶದ ಪ್ರಭುತ್ವವನ್ನು ಕೊಡುತ್ತೇವೆಂದು ಹೇಳಿದಾಗ್ಯೂ, ಅದನ್ನು ತಿರಸ್ಕರಿಸಿ, ೫ ಎಕರೇ ಜಮೀನನ್ನೂ, ಒಂದು ನೇಗಿಲನ್ನೂ, ಒಂದು ಜೋಡಿ ಎತ್ತನ್ನೂ ಇನಾಮಾಗಿ ಹೊಂದಿ, ವ್ಯವಸಾಯ ಮಾಡುತ್ತಾ ಅದರಿಂದ ಜೀವನ ಮಾಡಿಕೊಂಡು ಎಂಥಾ ಸಂಪತ್ತಿದ್ದಾಗ್ಯೂ, ದಿಗಂತವಿಶ್ರಾಂತವಾದ ಕೀರ್ತಿಯೂ ಇದ್ದಾಗ್ಯೂ ತನ್ನ ಭುಜಬಲದಿಂದ ಕೆಲಸ ಮಾಡಿ ಜೀವನಮಾಡತಕ್ಕದ್ದು ಪುರುಷಲಕ್ಷಣವೆಂಬುದಕ್ಕೆ ಮೇಲುಪಙ್ಕ್ತಿಯನ್ನು ಹಾಕಿದರು ನಮ್ಮ ದೇಶದ ರೈತರು ಪ್ರಾಯಕವಾಗಿ ವಿದ್ಯಾವಂತರಲ್ಲ ಲೋಕವ್ಯವಹಾರ ಜ್ಞಾನವೂ ಇವರಿಗೆ ವಿಶೇಷವಾಗಿರುವುದಿಲ್ಲ ವಿದ್ಯಾಭ್ಯಾಸ ಮಾಡಿದರೆ ಕೃಷಿಯನ್ನು ಮಾಡುವುದಕ್ಕೆ ಅನರ್ಹವೆಂದು ತಿಳಿದುಕೊಂಡಿರುತ್ತಾರೆ. ಈ ಬಾಬುಗಳೆಲ್ಲಾ ಸಮರ್ಪಕವಾದ ತಿಳುವಳಿಕೆಯು ನಮ್ಮ ಜನಗಳಿಗೆ ಉಂಟಾಗಬೇಕು

ಆಚಾರ ವಿಚಾರಗಳ ಮಹಾ ಸಭೆಯು

ಕಾಶೀ ಪಟ್ಟಣದಲ್ಲಿ ಮೇಲ್ಕಂಡ ಮಹಾ ಸಭೆಯು ಜರುಗಿ ಅಲ್ಲಿ ತೀರ್ಮಾನವಾಗಿರುವ ವಿಚಾರಗಳ್ಯಾವವಂದರೆ—

ಸ್ತ್ರೀಯರಿಗೆ ಲೋಕವ್ಯವಹಾರಜ್ಞಾನ ಉಂಟಾಗುವಂತೆ ಮಾಡುವುದು ಅತ್ಯಾವಶ್ಯಕ ಇಂಥಾ ಜ್ಞಾನಕ್ಕೆ ವಿದ್ಯಾಭ್ಯಾಸವೇ ಮುಖ್ಯವಾದ ಸಾಧಕ ಅದಕ್ಕೋಸ್ಕರ ಎಲ್ಲಾ ಪ್ರದೇಶದಲ್ಲಿಯೂ ಸ್ತ್ರೀ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕು

ವಿದ್ಯಾಭ್ಯಾಸಕ್ಕೆ ಬಾಲ್ಯವೇ ಅತ್ಯಂತ ಸಾಧಕವಾದದ್ದು ಪುರುಷರಿಗೆ ಹೇಗೋ ಹಾಗೆ ಸ್ತ್ರೀಯರಿಗೂ ಬ್ರಹ್ಮಚರ್ಯವು ಆವಶ್ಯಕವಾದದ್ದು ಗಂಡಸರಿಗೆ ೨೫ ವರುಷದ ವರೆಗೂ ಹೆಂಗಸರಿಗೆ ೧೬ ವರುಷದ ವರೆಗೂ ವಿವಾಹವು ಮಾಡಲ್ಪಡಕೂಡದು

ಘೋಷಾ ಏರ್ಪಾಡಿನಿಂದ ನಮ್ಮ ಸ್ತ್ರೀಯರಿಗೆ ಬಿಸಿಲೂ ಗಾಳಿಯೂ ಕೂಡಾ ದೊರೆಯುವುದು ಕಷ್ಟವಾಗುತ್ತದೆ ಒಂದಾನೊಂದು ಕಾಲದಲ್ಲಿ ಈ ಏರ್ಪಾಡಿಗೆ ಕಾರಣವಿತ್ತು ಬ್ರಿಟಿಷ್ ಪ್ರಭುತ್ವದಲ್ಲಿ ಈ ಕಾರಣವು ಇರುವುದಿಲ್ಲ ಘೋಷಾ ನಿರ್ಬಂಧವನ್ನು ಸಡಲಿಸಿ, ಕ್ರಮಕ್ರಮವಾಗಿ ಇದನ್ನು ಸಂಪೂರ್ಣವಾಗಿ ತೆಗೆದು ಹಾಕುವುದು ಉತ್ತಮ

ನಮ್ಮ ದೇಶದಲ್ಲಿ ಕನ್ಯಾಶುಲ್ಕ ವಿವಾಹವು ಹೆಚ್ಚುತ್ತಲಿದೆ ಇದರಿಂದ ಅನೇಕ ಕುಟುಂಬಗಳು ನಾಶವಾಗುತ್ತಲಿವೆ ಇದನ್ನು ತಪ್ಪಿಸುವದಕ್ಕೋಸ್ಕರ ... ಏರ್ಪಾಡುಗಳು ಸರ್ವರ ಸಹಾಯಕ್ಕೂ ಅರ್ಹವಾದವುಗಳು

ವಿವಾಹಗಳೇ ಮೊದಲಾದ ಶುಭಕಾರ್ಯಗಳಲ್ಲಿಯೂ ಹಬ್ಬಗಳಲ್ಲಿಯೂ, ಮತಸಂಬಂಧವಾದ ಮಹೋತ್ಸವಗಳಲ್ಲಿಯೂ ... ನಾಟ್ಯ ಮೊದಲಾದವುಗಳಿಗೆ ಅವಕಾಶಕೊಡುವುದರಿಂದ ನಮ್ಮ ಜನಗಳ ಪವಿತ್ರವಾದ ಸ್ಥಿತಿಗೆ ಬಾಧಕವಾಗುವುದು ಇದನ್ನು ತಪ್ಪಿಸುವುದು ಅವಶ್ಯಕ ಕಾಮ ... ದಲ್ಲಿ ಉಚ್ಚರಿಸುವುದಕ್ಕೆ ಅನರ್ಹವಾದ ಅಪಶಬ್ದವಾದ ಬೈಗಳನ್ನು ಉಪಯೋಗಿಸುತ್ತಾರೆ ಮತ್ತು ಅಪಶಬ್ದವಾದ ಹಾಡುಗಳನ್ನು ಹಾಡುತ್ತಾರೆ ಇವುಗಳನ್ನು ತಪ್ಪಿಸುವುದು ಆವಶ್ಯಕ

ವಯಸ್ಸಿನಲ್ಲಿ ವಿಶೇಷ ತಾರತಮ್ಯವಿರತಕ್ಕ ಸ್ತ್ರೀಪುರುಷರಿಗೆ ವಿವಾಹವನ್ನು ನಿರ್ಬಂಧಮಾಡಬೇಕು ವಿವಾಹಕ್ಕೋಸ್ಕರ ... ಏರ್ಪಾಡು ಮಾಡಬೇಕು ಕನ್ಯೆಗಳನ್ನೂ ವಧೂವರರ ವರದಕ್ಷಿಣೆಗಳನ್ನೂ ತಪ್ಪಿಸಬೇಕು

ದೇಶಾಟನಕ್ಕೆ ಇರತಕ್ಕ ಪ್ರತಿಬಂಧಕಗಳನ್ನು ತಪ್ಪಿಸಲ್ಪಡಬೇಕು ದೇಶಾಟನ ಮಾಡಿಕೊಂಡ ವಾಪಸು ಬಂದವನನ್ನು ಸಹಪಂಕ್ತಿಗೆ ಸೇರಿಸಿಕೊಳ್ಳುವುದಿಲ್ಲವೆಂಬ ನಿರ್ಬಂಧಗಳು ಪರಿಹರಿಸಲ್ಪಡಬೇಕು

ಚಾತುರ್ವರ್ಣ್ಯಗಳಲ್ಲಿ ಪ್ರತಿಯೊಂದರಲ್ಲಿಯೂ ಅನೇಕ ಉಪಭೇದಗಳಿರುತ್ತವೆ ಈ ಭೇದಗಳನ್ನು ನಿವಾರಿಸಿ ಉಪಭೇದಕ್ಕೆ ಸೇರಿದವರೆಲ್ಲರೂ ಒಂದೇ ವರ್ಣಕ್ಕೆ ಸೇರಿದವರಾದುದರಿಂದ ಭೋಜನ ಪ್ರತಿಭೋಜನಗಳ ಮೂಲಕವಾಗಿಯೂ, ಕೊಡುವುದು ತರುವುದನ್ನು ಆಚರಣೆಗೆ ತರುವುದರ ಮೂಲಕವಾಗಿಯೂ, ಪರಸ್ಪರ ಸೌಹಾರ್ದವನ್ನೂ ಐಕಮತ್ಯವನ್ನೂ ಕಲ್ಪಿಸಿಕೊಳ್ಳಬೇಕು

ಕನಿಷ್ಠ ವರ್ಣಾಶ್ರಮಕ್ಕೆ ಸೇರಿದ ಜನಗಳು ಬಹಳ ಹೀನಸ್ಥಿತಿಯಲ್ಲಿರುತ್ತಾರೆ ಅವರನ್ನು ಉದ್ಧರಿಸುವ ಏರ್ಪಾಡು ಮಾಡಲ್ಪಡಬೇಕು ಸತ್ರಗಳಲ್ಲಿಯೂ, ದೇವಸ್ಥಾನಗಳಲ್ಲಿಯೂ, ಮಠಗಳಲ್ಲಿಯೂ ನಡೆಯತಕ್ಕ ಧರ್ಮಗಳಿಗೆ ಲೋಪವು ಬರುತ್ತಲಿದೆ ಅಂಥಾ ಲೋಪಗಳಿಗೆ ಅವಕಾಶವಿಲ್ಲದಂತೆ ಏರ್ಪಾಡು ಮಾಡಲ್ಪಡಬೇಕು

ಬಾಲವಿಧವೆಗಳ ಅವಸ್ಥೆಯು ಶೋಚನೀಯವಾಗಿ ಪರಿಣಮಿಸುತ್ತಲಿದೆ ಇದರಿಂದ ನಮ್ಮ ವೇದಶಾಸ್ತ್ರಪುರಾಣೇತಿಹಾಸಗಳನ್ನು ರಚಿಸಿದ ಮಹಾ ಋಷಿಗಳು ದೀರ್ಘದರ್ಶಿಗಳಲ್ಲವೆಂಬದಾಗಿಯೂ, ಧರ್ಮಜ್ಞರಲ್ಲವೆಂಬದಾಗಿಯೂ, ಭೂತದಯೆಯುಳ್ಳವರಲ್ಲವೆಂಬದಾಗಿಯೂ ನಿಂದೆಯು ಉಂಟಾಗುವದಕ್ಕೆ ಉಪಕ್ರಮವಾಗಿ ಇವೆ. ಇದು ಪರಿಹಾರ ಮಾಡಲ್ಪಡಬೇಕು

Printed and Published by the Rev. H. GULLIFORD, Proprietor and Manager Wesleyan Mission Press, Mysore. 21/4/1910

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸರ್ ೧೯೧೦ ನೇ ಇಸವಿ ಏಪ್ರಿಲ್ ತಾರೀಖು ೨೮ ನೇ ಗುರುವಾರ. ಸಂಚಿಕೆ ೪೮

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ.

೧೯೧೦ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ, ಯವರು, ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಕಾಲೇಜ್, ಶ್ರೀರಂಗಪಟ್ಟಣದ ದರಿಯಾದವಲತ್ ಅರಮನೆ, ಲಾರ್ಡ್ ಮಿಂಟೊ ಪ್ರಭುಗಳಿಗೆ ಮೈಸೂರು ಪುರನಿವಾಸಿಗಳು ಅಡ್ರೆಸ್ ಅರ್ಪಿಸಿದ ಚಪ್ರ, ಶೃಂಗೇರಿಯಲ್ಲಿ ಬ್ರಾಹ್ಮಣರು ಸ್ನಾನ ಮಾಡುವುದು, ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ- ಇದೇ ಏಪ್ರಿಲ್ ಆಖೈರಿನೊಳಗಾಗಿ 'ವೃತ್ತಾಂತ ಪತ್ರಿಕೆ''ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲ ಬರೆಯಿರಿ ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಹರಿ. 11-16



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿಬಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ ೧ ರೂ ೧—೮ ರೂ ರೂ ೩—೧೨ ೮, ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾಬಿಡಲಾಗುವದು

ಹಿಮಂಕಹರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಹಿಮಂಕಹರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಚಿನ್ನಾರದ ಮತ್ತು ಬೆಳ್ಳಿಯ ಪದಕಗಳು ೧೨ ದೊರೆತಿವೆ.

ಡೈಯಮಂಡ್ **ಡೈಯಮಂಡ್**

ಅತ್ತರ್ ಸಾಬೂನುಗಳು ರಂಗಿನ ಸಾಬೂನುಗಳು

ಸುವಾಸನೆ, ಚರ್ಮಕ್ಕೆ ಹಿತ ಸುಲಭ ಕ್ರಯ, ಬಣ್ಣ ಖಾತರಿ

24-6

ಅತ್ತರ್ ಸಾಬೂನುಗಳು ಮೈಯಿನ ಕಾಂತಿಗೂ, ಕಾರ್ಬಾಲಿಕ್ ಸಾಬೂನುಗಳು ಚರ್ಮದ ರೋಗನಿವಾರಣೆಗೂ ಅವಶ್ಯಕ ಡಯಮಂಡ್ ರಂಗಿನ ಸಾಬೂನುಗಳು ಬಣ್ಣ ಖಾತರಿ ಇವುಗಳಿಂದ ಎಲ್ಲಾ ತರಹ ಬಟ್ಟೆಗಳಿಗೂ ಬೇಕಾದ ರಂಗನ್ನು ಸುಲಭವಾಗಿ ಕೊಡಬಹುದು ಡಯಮಂಡ್ ಗುಲಾಬಿ ಟೀ —ಇದರ ಕಷಾಯವು ಬಹಳ ರುಚಿಕರವಾಗಿರುವುದರಿಂದ ಈ ಟೀಯು ಕೇವಲ ರೂಢಿಯಲ್ಲಿದೆ. ಇದಲ್ಲದೆ ಡಯಮಂಡ್ ಕೇಶವರ್ಧಕತೈಲ, ಹಲ್ಲುಪುಡಿ, ಕಾಸ್ಮೆಟಿಕ್, ಪಾಮೇಡ್, ಬಾಂ, ಶೀತನಿವಾರಕ ಕ್ಷಾರ, ಸುವಾಸಿನಿ, ವಿಲಾಸ್ ಮೊದಲಾದ ಅತ್ತರುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ

ವ್ಯಾಪಾರಿಗಳಿಗೆ ದರ ಬೇರೆ ಡಯಮಂಡ್ ಸೋಪ್ ಕಂಪೆನಿ, ಗಿರ್ಗಾಂ, ಮುಂಬಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

40-7

ಶೋಕಮಯಹರ ಕಸ್ತೂರಿಮಾತ್ರೆ

ಹೊಸ ತರಹಾ! ವಾಸನೆಯಲ್ಲಿ ಹೆಚ್ಚು!! ಗುಣದಲ್ಲಿ ಅಧಿಕ!!!



ಈ ಮಾತ್ರೆಗಳನ್ನು ಹವಳಭಸ್ಮ—ಚಿನ್ನದರೇಖು—ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥ ಮಿಶ್ರದಿಂದ ತಯಾರಿಸಿದೆ ಚಳಿಜ್ವರ—ಹೊಟ್ಟೆಉಬ್ಬರ—ಸಂದುಗಳ ನೋವು—ನ್ಮ ಕೈಕಾಲು ಬಿಡಿತ (ಭಾರ), ಮೈಮರಸುಕ ಶೀತವಾತಗಳ ಬಾಧೆ, ಅಜೀರ್ಣ—ಅಗ್ನಿಮಾಂದ್ಯ ಹಲ್ಲುನೋವು—ಕೆಮ್ಮಲು, ನೆಗಡಿ—ನಿಶ್ಶಕ್ತಿ—ಅರೋಚಿಕೆ—ಮೊದಲಾದುವೆಲ್ಲಾ ಖಂಡಿತ ಗುಣವಾಗುತ್ತದೆ

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತಿದ್ದರೆ ಬಹಳ ಕೊತ್ತು ಸುವಾಸನೆಯಾಗಿರುತ್ತಾ ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ ಯವನ ಪ್ರಾಯದಲ್ಲಿರುವಂತೆ ಮಾಡಿಕೊಡುವ—ನರಗಳ ಬಲಹೀನತೆಯನ್ನು ಸರಿಪಡಿಸಿ ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧವಾಗಿ ವೃದ್ಧಿ ಪಡಿಸುತ್ತದೆ

ಪ್ರತಿನಿತ್ಯವೂ ರಾತ್ರಿ ಮಲಗುವಾಗ ೨ ೩ ಮಾತ್ರೆಗಳನ್ನು ಸೇವಿಸುತ್ತಾ ಬಂದಲ್ಲಿ ಸುಖವಾಗಿ ಪ್ರಾತಃಕಾಲದಲ್ಲಿ ಕಾಲಪ್ರವೃತ್ತಿಯಾಗುತ್ತದೆ ಸ್ತ್ರೀಯರ ಸೂತಕಶೂಲೆ—ಮಕ್ಕಳ ಯಳವು—ಜ್ವರ—ಸಣ್ಣ ಜ್ವರ—ಕೈಕಾಲ್ನಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಕೇವಲ ನಂಬಿಕೆಗೋಸ್ಕರ ಯೋಗ್ಯತಾಪತ್ರಗಳಲ್ಲಿ ಕೆಲವನ್ನು ಮಾತ್ರ ವಿವರಿಸುತ್ತೇವೆ ಎಷ್ಟೋ ದಿನಗಳು ಇರಿಸಿದಾಗ್ಯೂ ಮಾತ್ರೆಗಳು ಸ್ವಲ್ಪವೂ ಕೆಡುವದಿಲ್ಲವೆಂಬುದನ್ನು ನೆನಪಿನಲ್ಲಿಡಿ

ಯೋಗ್ಯತಾಪತ್ರ —

ಅನೇಕರು ತಮ್ಮ ಔಷಧ ಧ್ಯಾನದಲ್ಲೇ ಇರುತ್ತಾರೆ ತಾವು ಮಾಡತಕ್ಕ ಪರೋಪಕಾರಕ್ಕೆ ಎಷ್ಟು ಸಹಸ್ರ ವರವನ್ನು ಬೆಲೆಕಟ್ಟಿದರೂ ಅದಕ್ಕೆ ಸಮಾನವಾಗುವದಿಲ್ಲ ತಮ್ಮ ಔಷಧಕ್ಕೆ ಸಂಜೀವಿನಿಯೆಂತಲೂ ಮೃತ್ಯುಕುಠಾರವೆಂದು ಹೆಸರಿಟ್ಟರೂ ಮತ್ತು ಅದರ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೆ ನಾನು ಅನೇಕರಿಗೆ ತಮ್ಮ ಔಷಧವನ್ನು ಕೊಟ್ಟಿರುತ್ತೇನೆ ಅನೇಕರಿಗೆ ಗುಣವಾಗಿದೆ ಮತ್ತು ತಮ್ಮ ಔಷಧಯಿಂದತಕ್ಕ ಕಡೆ ವ್ಯಾಧಿ ಬರುವದೆಯಿಲ್ಲವೆಂದು ಹೇಳಬಹುದು ತುರ್ತು ವಿ ಪಿ ಮೂಲಕ ೩೦ ಸೀಸೆ ಕಸ್ತೂರಿಮಾತ್ರೆ ೩೦ ಶ್ರೀನಿವಾಸತೈಲ ಡಬ್ಬಿ, ಲಕ್ಷ್ಮೀವಿಳಾಸರಸ ೩ ಸೀಸೆ ಜರೂರು ರವಾನಿಸಬೇಕು

(Signed) T Shamanna
Post Master, Madhuvanahalli,
Kollegal Taluk

೨೫೦ ಮಾತ್ರೆಯುಳ್ಳ ಕುಪ್ಪಿ ಅನುಪಾನ ಪತ್ರಸಹಿತ ೮ ಆಣೆ ಐದು ಕುಪ್ಪಿಗೆ ಒಂದು ಹೆಚ್ಚು ೧ ೦೦ ೧೨ರ ವರೆಗೆ ಟಿ ಮ ೪ ಆಣೆ

ವಿಳಾಸ— ಶ್ರೀ ಶ್ರೀತಾರಾಘವ ವೈದ್ಯಶಾಲಾ ಮೈಸೂರು

ಸಂಗೀತ ಪಾರಿಜಾತ ಕ್ರಯ ೪ ಆಣೆ

20 12

ಮನೋಹರವಾದ ಹಾಡಿನ ಪುಸ್ತಕ! ೧೦ ಪ್ರತಿಗಳನ್ನು ಒಟ್ಟಾಗಿ ತರಿಸುವವರಿಗೆ ೧೨ ಆಣೆ ಕ್ರಯದ ನಿರುಪಮಾ ಎಂಬ ಹೊಸನಾಟಕವನ್ನೂ, ೬ ಪ್ರತಿಗಳನ್ನು ತರಿಸುವವರಿಗೆ ಕಬೀರ ದಾಸನ ಚರಿತ್ರೆಯನ್ನೂ ೩ ಪ್ರತಿಗಳನ್ನು ತರಿಸುವವರಿಗೆ ಶ್ರೀಕೃಷ್ಣ ರತ್ನಮಾಲಿಕೆ ಎಂಬ ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ—ದಿ ಮರ್ಕೆಂಟೈಲ್ ಯೂನಿಯನ್, ಮೈಸೂರು.

ನಾಯಿ ಸಾಕುವವರಿಗೆ ನೋಟೀಸು

೨೬ 1

ಪೋಲೀ ಮತ್ತು ಬಾಯಿಕಟ್ಟದೆ ಇರುವ ನಾಯಿಗಳನ್ನು ಈ ತಿಂಗಳು ೩೦ರ ಲಾಗಾಯಿತು ನಾಯಿಕೊಲ್ಲಲು ಏರ್ಪಾಡು ಮಾಡಿ ಇರುವುದರಿಂದ ನಾಯಿಗಳ ಸ್ವಂತಗಾರರು ತಮ್ಮ ತಮ್ಮ ನಾಯಿಗಳನ್ನು ಸರಿಯಾದ ಪಹರೆಯಲ್ಲಿಟ್ಟುಕೊಳ್ಳಲು ಮುಂಜಾಗ್ರತರಾಗಿರಬೇಕೆಂತ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸಿದೆ

23 ನೇ ಏಪ್ರಿಲ್, 1910, ಮೈಸೂರು ಸಿಟಿ

ವಿ ಎಲ್ ಮರ್ಕರ್,
ವೈಸ್ ಪ್ರೆಸಿಡೆಂಟ್, ಸ್ಯಾನಿಟರಿ ಇಲಾಖಾ

ಬೇಗ ಬರೆಯಿರಿ! ಬಹಳ ಕೊಂಚ ಪ್ರತಿಗಳೇ ಉಳಿದಿವೆ!!

ಸಾವಕಾಶ ಮಾಡಿದರೆ ಅನಂತರ ಸಿಕ್ಕಲಾರದು!!!

ಸಚಿತ್ರ ಕಲಾತರಂಗ

55-1

೧ನೇಯ ಭಾಗ

ಇದುವರೆಗೆ ಕನ್ನಡದಲ್ಲಿ ಇಂತಹ ಗ್ರಂಥವಿಲ್ಲ ಇದರಲ್ಲಿ ೮ ಭಾಗಗಳಿವೆ ವರ್ತಮಾನ ಕಾಲದ ವಿವಿಧ ವ್ಯಾಪಾರಗಳ ಮಾಹಿತಿಯನ್ನೂ, ಅಂತರಿಕ್ಷದ ವಿಶೇಷಗಳನ್ನೂ, ಯಂತ್ರ ಸಾಮಗ್ರಿಯ ಪ್ರಯೋಜನಗಳನ್ನೂ, ಲೋಹ ತೈಲಗಳ ಉತ್ಪತ್ತಿಯನ್ನೂ, ರತ್ನ ಪರೀಕ್ಷೆ, ವೈದ್ಯಶಾಸ್ತ್ರ ಮೊದಲಾದ ಆಶ್ಚರ್ಯಕರ ವಿಷಯಗಳನ್ನೂ, ಕೇಳಿದವರಿಗೆ ಸುಲಭವಾಗಿ ಹೇಳುತ್ತದೆ. ಕನ್ನಡಿಗರಿಗೆ ಕೈಪಿಡಿ. ಬೆಲೆ ರೂ ೧—೪—೦ ವಿ ಪಿ ಮೂಲಕ ೧—೬—೦

ವಿಳಾಸ —(೧) ಮ್ಯಾನೇಜರ್ ಎಸ್ ಜಿ ಎ ಪ್ರೆಸ್,
೧೨೮ ಅರಳೆಪೇಟೆ, ಬೆಂಗಳೂರು ಸಿಟಿ.

ಅಥವಾ

(೨) ದಿ ಉಲನ್ ಮಾರ್ಟ್,
ನಂ|| ೧, ಮಂಗಳೂರು. (ದ ಕ.)

ಮೇಲ್ಕಂಡ ೩ ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತ

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 19

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿನಿರ್ಣಯದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರಿಕ್ಷೆಮಾಡಿ ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿದ್ದಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಿಸುವದರಲ್ಲಿ ಈ ಔಷಧದ ಶಕ್ತಿಯು ಅತ್ಯುತ್ತಮವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟುಕೊಂಡಿರುವರು ಈ ಅನೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಅವರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಟಿ ಎಸ್ ಕಿನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು ಮುತ್ತು

ಎಸ್ ಪೀಟರ್ಸ್

೩೭, ಪೇದಮುಲಪಿಳ್ಳೆ ಬೀದಿ ವೇಪೇರಿ, ಮದರಾಸ್

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹಾಳಿದಂತೆ ಕಾಳದೆ ಎಟ್ಟಿಗೆ ಒಳನಡುತ ಥವರಾಗದು

ಆಹಾರರುಚಿ ಕಡನೆಯುಳ್ಳವರಾಗಿಖಾರೆಂದು ಕಂಡ ಕೂಡಲೇ

SCOTT'S EMULSION. 6 17

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೀವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕಲುವ ತುಟ್ಟು ಬೆರೆಸಿ ಕೊಟ್ಟ ಕೂಡಲೇ ದೊಡ್ಡ ಪ ಕ್ಯಾಸತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಗುಣಚಿಹ್ನೆ ತೋರಿಸುವದು

ಕ್ಯೆಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,

ಔಷಧಗಳ ಕಾರ್ಖಾನೆ

ಲಂಡನ್ ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ನಿನಗೆಮ್ಯೆ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—' ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ? ' ಎಂದು ನಿನನ್ನು ನೀನೇ ಕೇಳಿಕೋ ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ಪಿತ್ತ , ಪಿತ್ತಜ್ವರ , ಅಜೀರ್ಣ , ಅಗ್ನಿಮಾಂದ್ಯ , ಗಾಬರಿ ಅಶಕ್ತಿ , ಎದೆಯು ಕಲ್ಲಿಸುವುದು , ತಲೆತಿರುಗುವುದು , ತಲೆನೋವು , ಹೊಟ್ಟೆಯುಬ್ಬರ , ಹುಳಿತೇಗಿನ ಹೊಟ್ಟೆನೋವು , ಹೆಂಗುಸರ ವ್ಯಾಧಿಗಳು , ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲಿರುವ ಮಲವನ್ನೂ ಕೆಟ್ಟವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯನ್ನಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [6-35]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ಪಿ. ಓ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುವು

CHAMBERLAIN'S PAIN BALM.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು



8 17

ಬೆನ್ನುಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಪಾದ್ದಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು ಕಠಿಣವಾಗಿ ಕೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ಯೆಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [269]

ತಲೆನೋವು ಗಂಟು ಉಬ್ಬುವದು ವಾತ ಸಂಧಿವಾತ ಉಳುಕು ಅಬಲು ಗಂಟು, ಗಂಟ್ಲುನೋವು ಅರ್ಧಾಂಗವಾಯು ಏದೆಶೀತ ಘಾಯ ಜಡಿಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬಿ ಒಂದರ ಕಿಮ್ಮತು ೦ ೬ ೦ ೨ ಡಬ್ಬಿಗಳಿಗೆ ೪-೦-೦

ಆಸ್ಮಾ ನಿಶ್ರಾ	೨-೦ ೦
ಚೇಳುಕಡಿತದಮದ್ದು	೦ ೮ ೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದಿ ಜಗಳಿಗೆ	೦ ೮-೦
ಜುಲಾಬು ಮಾತ್ರೆ—ಜುಲಾಬಿಗೆ	೦ ೮ ೦
ನೇತ್ರಾಂಜನ—ಮಂದ ದೃಷ್ಟಿಗೆ	೦ ೪ ೦
ಖಜ್ಜಿ ಮುಲಾಮು—ಮಕ್ಕಳ ಖಜ್ಜಿಗೆ	೦ ೩ ೦
ಕೇಶವರ್ಧಿನೀ ತೈಲ—ತಲೆಯ ಮಿದುಳಿಗೆ	೧ ೦ ೦
ಕಫನಾಶಕ ಚೂರ್ಣ—ಆಸ್ಮಾ ರೋಗಕ್ಕೆ	೦-೮-೦

ದಯವಿಟ್ಟು ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —' ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 17

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಪಾಂವಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ನಾನಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ , ೧ ರೂ ೬ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ , ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂತವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ ೧—೦—೦
ಪರಸ ಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ ೧—೧೪—೦
,, ೬ ,, ,,	,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

14 16

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್

ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಸಿ ಎಲ್ ಎಸ್ ಬುಕ್ ಡಿಪ್ರೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(196 ಪುಟಗಳು, ಸೊಗಸಾದ ಒಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಒದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕಾ ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-16]

ಮ್ಯಾನೇಜರ್, ಸಿ. ಎಲ್ ಎಸ್. ಬುಕ್ ಡಿಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

1—4—1910 ರಿಂದ 8—4—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	1	1	0	0
ಮೈಸೂರ್ ,,	12	21	6	5
ಕೋಲಾರ್ ,,	0	0	14	13
ಕೋಲಾರ ದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	1	1	0	0
ಹಾಸನ ,,	0	0	0	0
ಚಿತ್ರದುರ್ಗ ,,	6	5	0	0
ಕಡೂರ್ ,,	4	3	0	0
ಶಿವಮೊಗ್ಗ ,,	0	0	0	0
ಜುಮ್ಲಾ	45	35	20	18

ಶಾಲಿವಾಹನ ಶಕ ವರುಷಂಗಳು ೧೮೩೩ ನೇ ಸಾಧಾರಣನಾಮ ಸಂವತ್ಸರದ ಚೈತ್ರ ಬಹುಳ ಪಂಚಮಿ ಶುಕ್ರವಾರದಿಂದ ಚೈತ್ರ ಬಹುಳ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಸೌರ ಮೇಷ ಮಾಸ
29	ಶುಕ್ರ ,,	ಪಂಚಮಿ	48 50	ಮೂ	36-17	17
30	ಶನಿವಾ ,,	ಷಷ್ಠಿ	49-19	ಪೂಷಾ	38 11	18
1	ರವಿವಾ	ಸಪ್ತಮಿ	49-40	ಉಷಾ	39-45	19
2	ಚಂದ್ರ	ಅಷ್ಟಮಿ	47 46	ಶ್ರ	39- 1	20
3	ಕುಜ §	ನವಮಿ	45- 1	ಧ	39-13	21
4	ಬುಧ	ದಶಮಿ	41- 5	ಶ	37-25	22
5	ಗುರು *	ಏಕಾದಶಿ	36-20	ಪೂಭಾ	34-39	23

,, ಮತ್ಸ್ಯಜಯಂತಿ

ಮಧ್ವೂರು ನೃಸಿಂಹಸ್ವಾಮಿ ರಥ

§ ಅಗ್ನಿನಕ್ಷತ್ರಪ್ರವೇಶ

* ಸರ್ವತ್ರ ೧೧, ಶ್ರೀ ಶ್ವೇತವರಾಹಸ್ವಾಮಿ ರಥ.

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೨-೮-೦	೧೩-೮-೦
ಕೆಂಬೂತಿ ಅಕ್ಕಿ ಅವಲ್ ...	..	೧೨-೮-೦	೧೪-೦-೦
,, ದುಯಂ ...	..	೧೨-೦-೦	೧೩-೮-೦
ಜಾವಾಣಿ ಅಕ್ಕಿ .	..	೧೨-೪-೦	೧೪-೦-೦
ಸಣ್ಣಕ್ಕಿ ಅವಲ್ ...	..	೧೩-೮-೦	೧೬-೦-೦
,, ದುಯಂ ..	...	೧೩-೦-೦	೧೪-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ ...	..	೧೨-೮-೦	೧೩-೦-೦
,, ದುಯಂ	..	೧೨-೦-೦	೧೨-೦-೦
ಹೈಟ್ ರಾಗಿ ಪಲ್ಲಾ ೧ಕ್ಕೆ ...	..	೮-೦-೦	೬-೧೨-೦
ಕಾರ್ರಾಗಿ	.	೭-೧೨-೦	೬-೮-೦
ಜೋಳ	..	೭-೮-೦	೯-೦-೦
ಹುಲಸಂದೆ ಪಲ್ಲಾ ೧ಕ್ಕೆ ...	..	೧೧-೦-೦	೧೧-೦-೦
ಮೀ ಅವರೆ	..	೧೧-೦-೦	೧೦-೮-೦
ಹೆಸರು .. .	.	೧೧-೦-೦	೧೦-೪-೦
ಉದ್ದು	.	೧೩-೦-೦	೧೧-೦-೦
ಕಡಲೆ	...	೧೨-೮-೦	೧೧-೦-೦
ಎಳ್ಳು ಸೇ ೧೭೭ ಕ್ಕೆ ...	..	೧೭-೦-೦	೧೪-೮-೦
ಹುರುಳಿ	...	೮-೮-೦	೯-೦-೦
ಹರಳು ೧೨೭ ಸೇರಿಗೆ .	...	೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	..	೨-೪-೦	೧-೧೦-೦
ಮೆಣಸಿನಕಾಯಿ	...	೪-೧೨-೧	೪-೦-೦
,, ದುಯಂ ..	...	೪-೮-೦	೩-೮-೦
ಬೆಲ್ಲ ದೊಡ್ಡ ಅಚ್ಚು ..	...	೮-೮-೦	ಮ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ ...	...	೫-೦-೦	೪-೧೦-೦
ಹರಳೆಣ್ಣೆ ,, ...	..	೫-೮-೦	೪-೬-೦
ಕೊಬ್ಬರಿ ಪಲ್ಲಾ ೧ಕ್ಕೆ ...	..	೧೦-೮-೦	೧೩-೦-೦
ಉಪ್ಪು ,, ...	...	೬-೦-೦	೫-೧೨-೦
ಹುಣಸೇ ಹಣ್ಣು	..	೨-೦-೦	೧-೪-೦
,, ಹಳೇದು ...	...	೧-೧೨-೦	೧-೨-೦
ತುಪ್ಪ ಮಣ ೧ಕ್ಕೆ ...	...	೧೬-೮-೦	೧೩-೯-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ...	...	೫-೪-೦	೪-೪-೦
ತೆಂಗಿನಕಾಯಿ ೧೦೦ ಕ್ಕೆ ...	...	೫-೦-೦	೭-೮-೦
ಅಡಕೇಕಾಯಿ ಮಣ ೧ಕ್ಕೆ ...	...	೦-೧೨-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	೦-೧೨-೦	೦-೧೨-೦
ಹತ್ತಿ (ಶಾಕ್) ಕೆಂಪು ...	...	೧೫-೯-೦	೧೫-೬-೦
,, ,, ಬಿಳುಪು ...	...	೧೬-೦-೦	೧೬-೦-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೮-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ...	...	೬೭-೪-೦	೭೫-೦-೦

ತಖಾವಿಲಾ.

45-4

ಕೃಷ್ಯಭಿವೃದ್ಧ್ಯರ್ಥವಾಗಿ ಸರ್ಕಾರದವರು ಜಮಾನುದಾರರಿಗೆ ಕೊಡುವ ಸಾಲಗಳು, ಮಾಡುವ ಇತರ ಸಹಾಯಗಳು, ಇವುಗಳ ವಿಷಯಕವಾದ ಆಜ್ಞೆಗಳ ಮತ್ತು ಮಾಸೂನುಗಳ ಸಂಗ್ರಹ ಕ್ರಯ ವಿ. ಪಿ. ಸೇರಿ 10 ಆಣೆ ಅಪೇಕ್ಷಕರು ಬರೆಸಿಕೊಳ್ಳುವ ವಿಳಾಸ —

ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ

ಯುಗಾದಿಯ ರಿಯಾಯಿತಿ ದರಗಳು.

46-4

ನಂಬರ್ 2 ನೇ ಹಾಸಕ್ ಟೋಪಿಗಳು ಇದು ಬಣ್ಣದಲ್ಲಿ ಎಲ್ಲ ಕೆಂಪಾಗಿ ಉತ್ತಮರೀತಿಯಲ್ಲಿ ಹಾಕಿಸಿ ತಯಾರಿಸಿದ್ದು—ಡಜನ್ 1 ಕ್ಕೆ ರೂ. 6-12-0 ಸ್ವದೇಶಿ ಬ್ಲಾಂಕೆಟ್ 1 ಕ್ಕೆ ರೂ 1-10-0. ದೇಶಿ ಶರಟ್‌ಬಟನ್ ಸೆಟ್ 1 ಕ್ಕೆ 0-12-0 ಮತ್ತು 0-9-0 ಸುಕೀಲವಾಲಿಕ ಡಬ್ಬಿ 1 ಕ್ಕೆ 0-3-0 ವಿ. ಪಿ. ಕರ್ಚು ಅಲಾಯಿದಾ.

ವಿಳಾಸ —ದಿ ಉಲನ್ ಮಾರ್ಟ್, ಮಂಗಳೂರು

ಪ್ರಸಿದ್ಧ ಪತ್ರಿಕೆ.

53-2

ನಾವು ಈಗತಾನೇ ಸೀಮೆಯಿಂದ ಕೆಂಪು, ಯೆಣ್ಣೆ ಕೆಂಪು, ಮಂದಕೆಂಪು, ಕಪ್ಪು, ಕಪ್ಪು ಕೆಂಪು ಮಿಶ್ರದ ಮಿಕ್ಸೆಡ್, ಖಾಕೀ ಬಣ್ಣದ ಉಲ್ಲನ್‌ನನ್ನು ತರಿಸಿದ್ದೇವೆ ಪೌಂಡ್ 1 ಕ್ಕೆ ರೂ. 1—10—0, 2—0—0, 2—8—0, 3—0—0, 3—8—0, 4—0—0 ಮೇಲ್ಕಂಡ ಉಲ್ಲನ್‌ನಲ್ಲಿ ತಯಾರ್ ಆದ ಟೋಪಿಗಳು 1 ಕ್ಕೆ ರೂ 0—9—0, 0—10—0, 0—12—0, 0—14—0, 1—0—0, 1—2—0, 1—4—0, 1—6—0. 1—8—0 ರೇಷ್ಮೆ ಚುಕ್ಕೆ ಟೋಪಿ 1 ಕ್ಕೆ ರೂ 1—12—0 2—0—0 ಡಜನ್‌ಗಟ್ಲೆ ತರಿಸಿಕೊಂಡರೆ ಶೇಕಡಾ 6¼ ರೂಪಾಯಿ ಡಿಸ್ಕೌಂಟು ನಮ್ಮ ಕಂಪನಿ ಕ್ಯಾಟ್ಲಾಗು ಬರೆದು ತರಿಸಿಕೊಳ್ಳಿರಿ

ಜೆ ಯಸ್ ಕಣ್ಣಯ್ಯಶೆಟ್ಟಿ,
ಉಲ್ಲನ್ ಕ್ಯಾಪ್ ಮ್ಯಾನೇಜರ್, ತುಂಕೂರು.

ಹಕ್ಕು ಬಾಧ್ಯತೆ ಪಡೆದವರೆಲ್ಲಾ ನೋಡಿ.

48-4

ಮೈಸೂರು ಲಷ್ಕರ್ ಮೊಹಲ್ಲಾ ರವೇ ಬೀದಿಯಲ್ಲಿರುವ ಈ ಕೆಳಗೆ ಷೆಡ್ಯೂಲಿನಲ್ಲಿ ನಮೂದು ಮಾಡುವ ಮರಿಬಸಪ್ಪನವರ ದತ್ತು ಮಗ ಎಂ ಬಸವಲಿಂಗಪ್ಪನವರ ಬಾಬತು ಮನೆಯನ್ನು ಸದರಿಯವರಿಂದ ಈ ಕೆಳಗೆ ನಮೂದು ಮಾಡುವವರು ಕ್ರಯಕ್ಕೆ ತೆಗೆದುಕೊಳ್ಳತಕ್ಕ ಬಗ್ಗೆ ನಿಶ್ಚಯ ಮಾಡಿಕೊಂಡಿದಾರೆ. ಸದರಿ ಸೊತ್ತಿಗೆ ಸಂಬಂಧಪಟ್ಟ ತಕರಾರುದಾರರಾಗಲಿ, ಪೂರ್ವಾದಿದಾರರಾಗಲಿ, ಹಕ್ಕುದಾರರಾಗಲಿ ಇದ್ದರೆ ಈ ಅಖಾಯಿತು ಒಂದು ತಿಂಗಳೊಳಗಾಗಿ ಈ ಕೆಳಗೆ ನಮೂದು ಮಾಡುವವರಿಗೆ ತಿಳಿಸತಕ್ಕದ್ದು ಸದರಿ ಮಾಯಿದೆಯಲ್ಲಿ ತಿಳಿಸದೆ ಇದ್ದರೆ ಅಂಥಾವರ ಹಕ್ಕು ಬಾಧ್ಯತೆಯು ಷೆಡ್ಯೂಲ್ ಆಸ್ತಿಯನ್ನು ಬದ್ಧ ಪಡಿಸಲಾರದು

ಷೆಡ್ಯೂಲ್ —ಮೈಸೂರು ಲಷ್ಕರ್ ಮೊಹಲ್ಲಾ ರವೇ ಬೀದಿಯಲ್ಲಿರುವ ಮುನ್ಸಿಪಲ್ ನಂಬರು 1101, 1102, 1103, 1104 ಮತ್ತು 1105 ಇದಕ್ಕೆ ಚೌಕಪೂ—ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ಸುಬ್ಬರಾಜೇ ಅರಸಿನವರ ಬಂಗಲೆ, ಉತ್ತರಕ್ಕೆ ಗೋವಿಂದಪ್ಪನ ಮನೆ ಮತ್ತು ಬಸವರಾಜೇ ಅರಸಿನವರ ಮನೆ, ದಕ್ಷಿಣಕ್ಕೆ ಹೈ ರೋಡು—ಈ ಮಧ್ಯೆ ಇರುವ ಹೆಂಚಿನ ಕೊಟ್ಟ ಮನೆ ಮತ್ತು ಇದಕ್ಕೆ ಸೇರಿದ ಭಾವಿ, ಅಂಗಳ ಮತ್ತು ಅಂಗಡಿಗಳು, ಮತ್ತು ಉತ್ತರ ದಿಕ್ಕಿನಲ್ಲಿರುವ ಹಿಂಭಾಗದ ಮನೆ, ಇದಕ್ಕೆ ಸೇರಿದ ಅಂಗಳ ಮತ್ತು ಭಾವಿ ಸಹಾ,

ಕೋಟೆ, ಮೈಸೂರು, ಮನ್ನಾರ್ ಕೃಷ್ಣ ಶೆಟ್ಟಿ,
೬—೪—೧೯೧೦ ಅರಮನೆ ಹೆಡ್ ಸರಾಫ್.

ಅರಮನೆ ಹೆಡ್ ಸರಾಫ್ ಮನ್ನಾರಕೃಷ್ಣಶೆಟ್ಟರಿಗೂ, ಇತರರಿಗೂ.

56-1

ಮೈಸೂರು ಲಷ್ಕರ್ ಮೊಹಲ್ಲಾ ರವೇಬೀದಿಯಲ್ಲಿರುವ ಮ್ಯುನಿಸಿಪಲ್ ನಂ 1101 1102, 1103, 1104. 1105 ಮತ್ತು ಈ ನಂಬರ್ ಮನೆ ಮಾಲೀಕರಾದ ಛಿಕ್ಕ ಮರಿಬಸಪ್ಪನವರ ದತ್ತು ಮಕ್ಕಳು ಯಂ ಬಸವಲಿಂಗಪ್ಪನವರು ಮೇಲ್ಕಂಡ ಮನೆ ಮತ್ತು ಇನ್ನೂ ಇತರ ಸ್ವತ್ತುಗಳ ಮೇಲೆ ಮೈಸೂರು ಸಬ್ ಜಡ್ಜಿ ರವರ ಕೋರ್ಟಿನಲ್ಲಿ 1905-1906 ನೇ ಇಸವಿ ಅಸಲ್ ನಂ 3 ರಲ್ಲಿ ಸದರಿ ಸ್ವತ್ತುಗಳ ರಿಜಿಸ್ಟರ್ ಆಧಾರಪತ್ರದ ಮೇಲೆ ಡಿಕ್ರಿ ಆಗಿ ಸದರಿ ಸ್ವತ್ತುಗಳು ಡಿಕ್ರಿಗೆ ಜಪ್ತಿ ಆಗಿ ಹರಾಜಿಗೂ ಬಂದಿತ್ತು ಸದರಿ ಸಿದ್ಧಣ್ಣನವರು ಪವತಿ ಸಬಬು ಹರಾಜು ನಿಂತಿತ್ತು ಈಗ ಮೈಸೂರು ಹೊಸ ಅಗ್ರಹಾರದಲ್ಲಿರುವ ಕರಿಶೆಟ್ರ ಮಗ ಗಿರಿಶೆಟ್ಟಿಗೆ ಏಲ್ ಮೂಲಕ ಬಂದು ಸದರಿ ಡಿಕ್ರಿಗೆ ಮೈಸೂರು ಸಬ್ ಜಡ್ಜಿ ರವರ ಕೋರ್ಟಿನಲ್ಲಿ 1909-1910 ನೇ ಇಸವಿ ಎಕ್ಸ್ ನಂ 106 ರ ಸರ್ಟಿಫಿಕೇಟು ಪಡೆದು ಸದರಿ ಕೋರ್ಟಿನಲ್ಲಿ 1909-1910 ನೇ ಇಸವಿ ಜಾರಿ ನಂಬರ್ 346 ರಲ್ಲಿ ಹರಾಜಿಗೆ ಕೊಟ್ಟಿದೆ ಆದ್ದರಿಂದ ಮೇಲ್ಕಂಡ ಡಿಕ್ರಿ ಬಾಬತು ಸುಮಾರು 6800 ರೂಪಾಯಿ ಮತ್ತು ಗಂಜಾಮದಲ್ಲಿರುವ ಮ॥ ಚನ್ನಣ್ಣ ಮೊದಲಿಯಾರ್ರ ಹೆಂಡತಿ ತಾಯಮ್ಮನವರಿಗೆ ಪೂರ್ವಾದಿ ಬಾಬತು ಬರಬೇಕಾದದ್ದು 1000 ರೂಪಾಯಿ ಮತ್ತು ಡಿಟೋ ಸ್ವತ್ತುಗಳ ಮೇಲೆ ಸರ್ಕಾರದವರಿಗೆ ಗೌರ್ನಮೆಂಟ್ ಸ್ಟಾಂಪು ಚೀಫ್ ಕೋರ್ಟು ಬಾಬತು ಸುಮಾರು 300 ರೂಪಾಯಿ ಸಹಾ ಮೇಲ್ಕಂಡ ಮೊಬಲಗನ್ನೆಲ್ಲಾ ಪಾವತಿಮಾಡಿ ಸದರಿ ಮನೆಯನ್ನು ಕ್ರಯಕ್ಕೆ ಪಡೆದುಕೊಂಡರೆ ಕ್ರಯವು ಊರ್ಜಿತವಾಗುತ್ತದೆ. ಇಲ್ಲದ ಪಕ್ಷಕ್ಕೆ ಯಾರು ಬರೆಸಿಕೊಂಡಾಗ್ಯೂ, ಅಂಥಾ ಕ್ರಯವು ಊರ್ಜಿತವಾಗುವದಿಲ್ಲಾ ಖಂಡಿತ ತಿಳಿಯುವದು.

ಹೊಸ ಅಗ್ರಹಾರ, ಮೈಸೂರು. ಕರಿಶೆಟ್ರ ಮಗ
೧೯-೪—೧೯೧೦. ಗಿರಿಶೆಟ್ಟಿ.

ಸುಗಂಧಗಳು.

1-23

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ. ೧೨, ೫, ೩, ೨-೮-೦, ೧-೪-೦. ಬತ್ತಿಗಳು ೧ ಕೋಲಿಗೆ ರೂ ೧ ದಶಾಂಗ ಪೌಡ್ಲು ೧ ಕ್ಕೆ ೪ ಆಣೆ. ತಾಂಬೂಲ ವಿಹಾರಿಣಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು. ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ :—ಟಿ. ಎಲ್. ಉಪಾಧ್ಯಾಯ, ಮೈಸೂರು.

WANTED.

59-1

Vacancy for female student compounder, who must be able to read and write English. Scholarship 6 Rs increasing. Candidate, who must not be less than 17 years of age, must apply in her own handwriting to

DR. ELSIE T. WATTS,
Wesleyan Mission Hospital,
Mysore City.

ಉಕ್ಕಿನ ತೊಲೆ ಮತ್ತು ಜಂತಿಗಳು.

57-1

ಪ್ರಸಿದ್ಧಿಯಾದ ಮೆಸ್ಸರ್ಸ್ ದೋರ್ಮನ್ ಲಾಂಗ್ ಕಂಪನಿಯವರಲ್ಲಿ ತಯಾರಾದ ಉಕ್ಕಿನ ತೊಲೆಗಳೂ ಜಂತಿಗಳೂ ಮೈಸೂರು ಪಟ್ಟಣದಲ್ಲಿ ಮೂರನೇ ಮಹಾರಾಜಕುಮಾರ್ತಿಯವರ ವರ್ಕ್‌ಷಾಪ್ ಕಟ್ಟಡದ ಬಳಿ ಬಿಕರಿಗೆ ಇಡಲ್ಪಟ್ಟಿವೆ. ಕ್ರಯದ ದರಗಳು ಹಂಡ್ರೆಡ್ ವೇಟ್ ತೂಕಕ್ಕೆ ೬ ರೂಪಾಯಿ ಲಾಗಾಯಿತು ೬—೪—೦ ರೂಪಾಯಿ ವರೆಗೆ ಇಳಿಸಿದೆ. ಇಷ್ಟವುಳ್ಳವರು ಆ ಕಟ್ಟಡದ ಸೂಪರಿಂಟೆಂಡೆಂಟರವರನ್ನು ಕಂಡು ಎಲ್ಲಾ ವಿಷಯಗಳನ್ನೂ ತಿಳಿದು ಕೊಳ್ಳಬಹುದು.

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯಪಡುವದು.

54-2

ದೊಡ್ಡ ಮನುಷ್ಯರೇ ಹಿಂದುಸ್ಥಾನದಲ್ಲಿ ಪ್ರಕಟನೆಗಳ ಮಯವಾಗಿದೆ ಕೆಲವು ಕಂಪನಿಯವರು ಮೋಸ ಮಾಡೋಣದರಿಂದ ಪ್ರಕಟನೆಯನ್ನೂ ಕೂಡ ನಂಬುವದು ಕಷ್ಟ ಯಥಾರ್ಥವುಳ್ಳ ಕಂಪನಿಯ ನೋಟೀಸುಗಳನ್ನು ಸಹ ಸನ್ನರ ಔಷಧಿ ಕಟ್ಟುವುದಕ್ಕೆ ಕೊಟ್ಟು ಬಿಡುವರು ಆದರೆ ಮಹನೀಯರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು ನಾವು ೩೦ ಘಂಟೆ ನಡೆಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ೫೦೪ ಬಹುಮಾನ ವಸ್ತುಗಳೊಡನೆ ಕಳುಹಿಸುತ್ತೇವೆ ಇದರಲ್ಲಿ ಸತ್ಯವಾದ ಕಂಪನಿಯ ಕೀರ್ತಿ ಹೆಚ್ಚಬೇಕೆಂಬುವದೊಂದೇ ನಮ್ಮ ಮುಖ್ಯ ಉದ್ದೇಶ ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ— ಒಂದು ಗಡಿಯಾರ, ಬಲವಾದದ್ದು, ೩೦ ಗಂಟೆ ನಡೆಯುವದು, ಹಿಂದೆ ಎರಡು ಮುಚ್ಚಳ, ಪರೀಕ್ಷೆಯಿಂದ ಸರಿಮಾಡಿದ್ದು, ಒಂದು ಸೊಗಸಾದ ಪೆಟ್ಟಿಗೆಯಲ್ಲಿ, ಐದು ವರುಷದ ಜಾಮೀನ್ ಉಳ್ಳದ್ದು ಒಂದು ಸೊಗಸಾದ ಗಡಿಯಾರದ ಸರಪಣಿ, ಅರೆಬೀಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಖಜಾನೆ ಪೆಟ್ಟಿಗೆ ಒಂದು ದೊಡ್ಡ ಪರಾಯಿ ಒಂದು ದೊಡ್ಡ ಬುಟ್ಟಿ ಒಂದಾನೆಯು ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರಹಾ ಲಾಂಪು ಒಂದಾವರ್ತಿ ಕಾಯಿ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟನ್ ಲೇಖಣಿ ಒಂದು ಜೊತೆ ದೊಡ್ಡ ಕಾಲುಚೀಲ ಬಲವಾದ ದಂತದ ಹಿಡಿಯುಳ್ಳ ಚಾಕು ಒಂದು ದೊಡ್ಡ ಕತ್ತರಿ. ಒಂದು ದೊಡ್ಡ ಚರ್ಮದ ಮುದ್ದುಹಾಕಿರುವ ಚೀಲ ಒಳ್ಳೇ ಬಾಚಣಿಗೆ ದಂತದ ಕನ್ನಡಿ ಕೂದಲು ಬಾಚಿಕೊಳ್ಳುವ ಬುರುಸು ತರಹದ ಒಂದು ಸೆಟ್ ಗುಂಡಿಗಳು ಒಂದು ಸೊಗಸಾದ ಕನ್ನಡಕ ಒಂದು ಸಾಬೂನು ಬಿಲ್ಲೆ ಒಂದು ಸಾಬೂನ್‌ದಬ್ಬಾ ಒಂದು ಕೈವಸ್ತ್ರ ಎಂದಿಗೂ ಹೋಗದ ಕೆಡದ ಚವಡ ಒಂದು ರಬ್ಬರು ಸುಂದರವಾದ ದೊಡ್ಡ ಶಾಯಿಬುಡಿಕೆ ಒಂದು ಪೆನ್ಸಿಲ್ ಬರೆಯುವದು ೧೨ ಲೇಖನಿ ಕಡ್ಡಿಗಳು ೬ ಕಪ್ಪು ಪೆನ್ಸಿಲುಗಳು ೧೫೦ ಲಕೋಟೆಗಳು ೧೫೦ ಲೆಟರ್ ಪೇಪರ ಗಳು ಪೋಸ್ಟ್ ರೂಲಸಿಗನುಸಾರವಾದ ೧೦೦ ಪೋಸ್ಟ್ ಕಾರ್ಡುಗಳು ೭೩ ಸ್ಟೀಲ್ ಮುಳ್ಳುಗಳು

ಇಷ್ಟಕ್ಕೆಲ್ಲಾ ಕ್ರಯ ರೂ, ೨—೮—೦ ಮಾತ್ರವೇ.

ಅರ್ಧ ಹಣ ಅಡ್ವಾನ್ಸ್ ಮನೀಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ ಪಿ ಮಾಡುತ್ತೇವೆ. ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು.

ಈ ವಿಳಾಸಕ್ಕೆ ಬೇಗ ಬರೆಯಿರಿ —

ಎಂ. ಎ ಘಟಾಲಾ ಮತ್ತು ಕಂಪನಿ,
ಚಿತ್ತೂರು, ಉತ್ತರ ಅರ್ಕಾಟು

ವಿಲಾಯತಿಯಲ್ಲಿ ಇಂಜನಿಯರಾಗಿದ್ದು ಕಾಲವಾದ ಕರ್ನಲ್ ಜಾರ್ಜ್ ಛರ್ಚ್ ಎಂಬೊಬ್ಬ ಇಂಜನಿಯರು ಭೂಪರಿಶೋಧನಾಕಾರ್ಯದ ಸಂಘದ ಫಂಡಿಗೆ ತನ್ನ ಆಸ್ತಿಯಲ್ಲಿ ೩ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾನೆ ಕಾರ್ಡಿಫ್ ಪಟ್ಟಣದ ಮ್ಯಾ॥ ಜಾನ್‌ಕೋರಿ ಎಂಬಾತನು ೧೮ ಲಕ್ಷವೂ ೭೫ ಸಾವಿರ ರೂಪಾಯಿಯನ್ನೂ, ಬ್ರಾಡ್‌ಫರ್ಡ್ ಪಟ್ಟಣದ ಕಾರ್ಖಾನೆ ಮಾಲೀಕನಾದ ಮ್ಯಾ॥ ಜಾನ್‌ಫಾಸ್ಟರ್ ಎಂಬಾತನು ೪೫ ಸಾವಿರ ರೂಪಾಯಿಯನ್ನೂ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣ ಶಾಸನವನ್ನು ಬರೆದಿರುತ್ತಾರೆ.

ವೃತ್ತಾಂತ ಪತ್ರಿಕೆ

-:೦:-

ಸನ್ ೧೯೧೦ ನೇ ಇಸವಿ ಏಪ್ರಿಲ್ ತಾ ೨೮ ನೇ ಗುರುವಾರ

ಕೆರೆಗಳ ಪಂಚಾಯತಿ ಕಾನೂನು.

ಮೈಸೂರು ಗವರ್ನಮೆಂಟಿನವರು ಪ್ರಜೆಗಳಗೆ ಕೆಲವು ಸ್ವತಂತ್ರಾಧಿಕಾರಗಳನ್ನು ವಹಿಸಿಕೊಡುವುದರಲ್ಲಿ ಅಭಿಲಾಷೆ ಯುಳ್ಳವರಾಗಿದಾರೆಂದು ತಿಳದು ಸಂತೋಷಪಡುತ್ತೇವೆ. ಕೆರೆಗಳ ಪಂಚಾಯತಿ ಬಿಲ್ಲಿನ ದೆಸೆಯಿಂದ ಒಂದು ಗ್ರಾಮದ ಅಥವಾ ಕೆಲವು ಗ್ರಾಮಗಳ ಕೆರೆಗಳ ಮೇಲ್ವಿಚಾರಣೆಯ ಆಡಳಿತಗಳನ್ನು ಗ್ರಾಮದ ಮುಖಂಡರಿಗೆ ವಹಿಸಿಕೊಡುವುದಾಗಿದೆ.

ಕೆರೆಗಳ ನೀರನ್ನು ಪೋಲಾಗದಂತೆ ನೋಡಿಕೊಳ್ಳುವುದೂ ಅದನ್ನು ಕ್ರಮವಾಗಿ ಜಮೀನುಗಳಿಗೆ ವ್ಯವಸಾಯಕ್ಕೆ ಹಾಯಿಸಿಕೊಡುವುದೂ ಬಹಳ ಮುಖ್ಯವಾದ ಸಂಗತಿಯೆಂದು ಈ ಸೀಮೆಯ ಸಕಲ ಪ್ರಜೆಗಳೂ ತಿಳದುಕೊಂಡಿರುತ್ತಾರೆ. ಕೆರೆಗಳು ಆಗಾಗ್ಗೆ ದುರಸ್ತಾಗದೆ ಕೆಡುವುದಕ್ಕೆ ಬಿಟ್ಟರೆ ಅದರಿಂದ ರೈತ ಪ್ರಜೆಗಳಿಗೂ ಗವರ್ನಮೆಂಟಿಗೂ ನಷ್ಟವಾದೀತೆಂದು ಹೇಳಬೇಕಾದದ್ದಿಲ್ಲ. ಜಮೀನುಗಳಿಗೂ ತೋಟತುಡಿಕೆಗಳಿಗೂ ಸಾಕಾಗುವಷ್ಟು ನೀರು ಶೇಖರವಾಗುವಂತೆ ಕೆರೆಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕಾಗಿರುತ್ತದೆ.

ಈಗ ರವಾನಾಗಿರುವ ಕೆರೆಗಳ ಪಂಚಾಯತಿ ಬಿಲ್ಲನ್ನು ನ್ಯಾಯವಿಧಾಯಕ ಸಭೆಯ ಸೆಲೆಕ್ಟ್ ಕಮಿಟಿಯ ಮೆಂಬರುಗಳು ಚೆನ್ನಾಗಿ ಪರಿಶೋಧಿಸಿ, ಅದರಲ್ಲಿ ಕಂಡುಬಂದ ಲೋಪದೋಷಗಳನ್ನು ಸರಿಪಡಿಸಿ ಅವಶ್ಯವಾದ ಹೊಸ ಭಾಗಗಳನ್ನು ಕೂಡಿಸಿ ರಚಿಸಿರುತ್ತಾರೆ. ಹೀಗೆ ತಿದ್ದಲ್ಪಟ್ಟ ಬಿಲ್ಲು ತೃಪ್ತಿಕರವಾಗಿದೆ ಎಂದು ನಮಗೆ ತೋರುತ್ತದೆ. ಈ ಕಾನೂನ ಪ್ರಕಾರ ಸ್ವಾತಂತ್ರ್ಯಗಳನ್ನು ವಹಿಸಿಕೊಂಡು ಕಾರ್ಯಗಳನ್ನು ನಡಿಸತಕ್ಕವರು ವಿಶೇಷವಾಗಿ ರೈತರೇ ಆಗಿರುತ್ತಾರೆ. ಅವರು ಒಂದಾಗಿ ಸೇರಿ ತಮ್ಮಲ್ಲಿ ಕೆಲವರನ್ನು ಪಂಚಾಯತರನ್ನಾಗಿ ಚುನಾವಣೆ ಮಾಡಿಕೊಳ್ಳುವರು. ಈ ಪಂಚಾಯತಿಯೊಳಗೆ ಪಟೇಲ, ಶ್ಯಾನುಭೋಗ, ರೈತರಿಂದ ಚುನಾವಣೆಯಾದ ಮೂವರು ಇಲ್ಲವೇ ಹೆಚ್ಚು ಮಂದಿ ಪ್ರತಿನಿಧಿಗಳು ಮೆಂಬರುಗಳಾಗಿರುತ್ತಾರೆ. ಇವರ ಅವಧಿಯು ಮೂರು ವರುಷ ಕಾಲವಾಗಿದೆ. ಗ್ರಾಮದಲ್ಲಿರುವ ಎಲ್ಲಾ ತರಗತಿಯ ರೈತ ಪ್ರಜೆಗಳೂ ಸೇರಿ ಈ ಚುನಾವಣೆ ಮಾಡುವಂತೆ ಈ ಕಾನೂನಿನಲ್ಲಿ ಅವಕಾಶವನ್ನು ಕಲ್ಪಿಸಿದೆ. ಗ್ರಾಮದಲ್ಲಿ ತರೀ ಜಮೀನು ಪಡೆದಿರುವ ರೈತರ ಪ್ರತಿನಿಧಿಗಳು ಪಂಚಾಯತಿಯಲ್ಲಿ ಆರೆವಾಸಿ ಮೆಂಬರುಗಳಾಗಿ ಇರುವರು. ಈ ಪಂಚಾಯತಿಗೆ ಪಟೇಲನೇ ಮುಖಂಡನಾಗಿದ್ದುಕೊಂಡು ಎಲ್ಲಾ ಕೆಲಸಗಳನ್ನೂ ಮಾಡುತ್ತಾ ಕಾಗದ ಪತ್ರಗಳನ್ನು ನಡಿಸುತ್ತಾ ಬರತಕ್ಕವನಾಗಿರುತ್ತಾನೆ.

ಕೆರೆಯ ದುರಸ್ತಿಗೆ ಸ್ಯಾಂಕ್ಷನ್ ಆದ ಹಣ ಕಾಸುಗಳೆಲ್ಲಾ ಈ ಪಂಚಾಯತರೇ ವಹಿಸಿ ಇಟ್ಟುಕೊಳ್ಳುವರು. ಈ ಪಂಚಾಯತಿ ಫಂಡಿಗೆ ಸೇರುವ ಅಂಶಗಳ್ಯಾವವೆಂದರೆ, ಒಳಗೆರೆಯಲ್ಲೂ ಏರಿಯ ಮೇಲೂ ಆಗುವ ಉತ್ಪತ್ತಿ, ಮೀನು ಹಿಡಿಯುವುದರ ಉತ್ಪತ್ತಿ, ಮತ್ತು ಗವರ್ನಮೆಂಟಿನವರು ನೀರಾವರಿ ಬಾಬಿನಿಂದಲೂ ಇತರ ಬಾಬುಗಳಿಂದಲೂ ಸ್ಯಾಂಕ್ಷನ್ ಮಾಡಿಕೊಡುವ ಗ್ರಾಂಟುಗಳು, ಇವೇ. ಕಲ್ಲು ಕಾಮಗಾರಿ ವಿನಹಾ ಉಳದ ಎಲ್ಲಾ ತರದ ರಿಪೇರಿ ಕೆಲಸಗಳನ್ನೂ ಪಂಚಾಯತಿದಾರರೇ ಮಾಡಿಸಿ, ಆಯಾ ರೈತರಿಗೆ ಕೆಲಸವನ್ನು ಹಂಚಿಹಾಕಿ ಅವರಿಂದ ಮಾಡಿಸಿಕೊಳ್ಳುವುದಕ್ಕೆ ಅಧಿಕಾರ ಪಡೆದಿರುತ್ತಾರೆ. ಇದಲ್ಲದೆ ಕೆರೆಯ ನೀರನ್ನು ಜಮೀನುಗಳಿಗೆ ಹಂಚಿಕೊಡುವುದೂ ಪಂಚಾಯತರಿಗೇ ಸೇರಿದ್ದಾಗಿರುತ್ತದೆ.

ಈ ರೀತಿಯಾಗಿ ಈ ಕಾನೂನಿನಿಂದ ರೈತ ಪ್ರಜೆಗಳಿಗೂ ಪಂಚಾಯತಿದಾರರಿಗೂ ವಿಶೇಷವಾದ ಸ್ವಾತಂತ್ರ್ಯವನ್ನು ವಹಿಸಿಕೊಡಬೇಕೆಂದು ಸರ್ಕಾರದವರು ಉದ್ದೇಶಪಟ್ಟಿರುತ್ತಾರೆ. ಇದು ನ್ಯಾಯವಿಧಾಯಕ ಸಭೆಯಲ್ಲಿ ಪ್ಯಾಸಾಗಿ ಕಾನೂನ್ ಆಗಿ ಜಾರೀಗೆ ಬಂದೀತೆಂದು ನಿರೀಕ್ಷಿಸುತ್ತೇವೆ. ಈ ಪಂಚಾಯತಿಗೆ ಪಟೇಲನೇ ಮುಖ್ಯಸ್ಥನಾಗಿರೋಣದರಿಂದ ಆತನ ಜವಾಬ್ದಾರಿಯು ವಿಶೇಷವಾಗಿರುತ್ತದೆ. ಆತನಿಂದಲೇ ಎಲ್ಲಾ ಕಾರ್ಯಗಳೂ ಜರುಗಬೇಕಾಗಿರುವವು. ಇಂಥಾ ಪಟೇಲನು ಸಮರ್ಥನಾಗಿಯೂ ನಿಷ್ಪಕ್ಷಪಾತತೆಯಿಂದಲೂ ಕಾರ್ಯಗಳನ್ನು ನಡಿಸುತ್ತಾ ಬಂದ ಪಕ್ಷದಲ್ಲಿ ಗ್ರಾಮದ ಸಮಸ್ತ ರೈತರಿಗೂ ಹಿತಕರವಾದೀತು. ರೈತರು ಇದರಿಂದ ಅಭಿವೃದ್ಧಿಗೆ ಬಂದಾರೆನ್ನುವುದಕ್ಕೆ ಸಂಶಯವಿಲ್ಲ. ಅನೇಕ ಗ್ರಾಮಗಳಲ್ಲಿ ಪಕ್ಷ ಪರಪಕ್ಷಗಳೂ ಕಕ್ಷಿಗಳೂ ವ್ಯಾಜ್ಯಗಳೂ ಹುಟ್ಟಿ ಬಹಳ ಕೆಡುಕನ್ನುಂಟುಮಾಡಿರುತ್ತವೆ. ಅಂಥಾ ಸಂದರ್ಭಗಳಲ್ಲಿ ಕಡೆ ಎಲ್ಲರೂ ಏಕೀಭವಿಸಿ ಸರ್ವತ್ರ ಹಿತಕರವಾದಂಥಾ ಕಾರ್ಯಗಳನ್ನು ನಡಿಸುತ್ತಾರೆನ್ನುವುದು ಸಾಧ್ಯವಲ್ಲ. ಪಟೇಲನು ಪಕ್ಷಪಾತವನ್ನು ಬಿಟ್ಟು ಕಕ್ಷಿಗಳಲ್ಲಿ ಸೇರದೆ ಎಲ್ಲರ ಶ್ರೇಯಸ್ಸನ್ನೂ ಏಕರೀತಿಯಾಗಿ ಬಯಸತಕ್ಕವನಾಗಿಯೂ ಕಕ್ಷಿಗಳದ್ದಾಗ್ಯೂ ಅವುಗಳನ್ನೆಲ್ಲಾ ಜಾಣತನದಿಂದಲೂ ಸಾಮರ್ಥ್ಯದಿಂದಲೂ ಹೋಗಲಾಡಿಸಿ, ಅವರನ್ನೆಲ್ಲಾ ಒಂದುಮಾಡಿ ತನ್ನ ಗ್ರಾಮಕ್ಕೂ ಆ ಮೂಲಕ ಸಂಸ್ಥಾನಕ್ಕೂ ಹಿತವಾಗುವಂತೆ ಕಾರ್ಯಗಳನ್ನು ನಡಿಸಿಕೊಂಡು ಬರತಕ್ಕವನಾಗಿಯೂ ಆದಾನೆಂದೂ, ಹೀಗೆಯೇ ದಿನೇ ದಿನೇ ಹೆಚ್ಚು ಹೆಚ್ಚಾದ ಸ್ವಾತಂತ್ರ್ಯಗಳನ್ನು ಗವರ್ನಮೆಂಟಿನಿಂದ ಪಡೆಯುವಹಾಗಾದೀತೆಂದೂ ನಂಬಿ ಹಾರೈಸುತ್ತೇವೆ.

ಪ್ರಾರ್ಥನೆಮಾಡುವದು ಅಗತ್ಯವೋ ?

ದೇವರು ಸರ್ವಜ್ಞನು. ನಾವು ಪ್ರಾರ್ಥನೆ ಮಾಡದೇ ಹೋದರೂ ಆತನಿಗೆ ನಮ್ಮ ಕೊರತೆಗಳೆಲ್ಲಾ ಗೊತ್ತಾಗುತ್ತವೆ. ನಾವು ಪ್ರಾರ್ಥನೆಮಾಡುವದು ಅಗತ್ಯವಾಗಿದೆಯೋ ? ಆತನು ಮನಸ್ಸಿದ್ದರೆ ಆತನೇ ನಮಗೇನು ಬೇಕೆಂತ ತನ್ನ ಸರ್ವಜ್ಞತ್ವದಿಂದ ತಿಳಿದು ನಮಗೆ ಕೊಡುವನಲ್ಲವೇ ? ಹೀಗಿರಲಾಗಿ ನಾವು ನಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಒಂದುಕಡೆ ಕೂತುಕೊಂಡು ದೇವರಿಗೆ ನಮ್ಮ ವಿಜ್ಞಾಪನೆಗಳನ್ನು ಅರ್ಪಿಸುತ್ತೇನೆಂತ ಭಾವಿಸುವದು ನಿಷ್ಪ್ರಯೋಜನವಾದ ಕಾಲಹರಣವಲ್ಲವೇ ? ಎಂತ ಅನೇಕರು ಕೇಳುತ್ತಾರೆ. ಇದಲ್ಲದೆ ನಮ್ಮ ದೇಶದಲ್ಲಿ ಇನ್ನೊಂದು ವಾಡಿಕೆಯುಂಟು. ಅದೇನಂದರೆ, ಒಬ್ಬ ಅಧಿಕಾರಿ ಅಥವಾ ಐಶ್ವರ್ಯವಂತನ ಬಳಿಗೆ ನಾವು ಹೋಗಿ ಒಂದು ಚಾಕರಿಯನ್ನಾಗಲಿ ಸ್ವಲ್ಪ ದ್ರವ್ಯಸಹಾಯವನ್ನಾಗಲಿ ಪಡೆಯಬೇಕೆಂದು ಅಪೇಕ್ಷಿಸುತ್ತೇವೆಂತ ಭಾವಿಸೋಣ. ಆ ಅಧಿಕಾರಿಯ ಬಳಿಯಲ್ಲಿ ಯಾವ ಚಾಕರಿಯೂ ಸದ್ಯ ಖಾಲಿ ಇಲ್ಲ. ಒಂದು ವೇಳೆ ಇದ್ದರೂ ನಾವು ಅದಕ್ಕೆ ಯೋಗ್ಯರೆಂತ ತಿಳಿದೋ, ಅಥವಾ ತನ್ನ ನಂಟರಿಷ್ಟರಲ್ಲಿ ಯಾರಿಗಾದರೂ ಆ ಚಾಕರಿಯನ್ನು ಕೊಡಬೇಕೆಂತ ನಿಶ್ಚೈಸಿಕೊಂಡಿರುವದರಿಂದಲೋ ಅದನ್ನು ನಮಗೆ ಕೊಡುವದಿಲ್ಲವೆಂದು ಹೇಳುತ್ತಾನೆ. ನಾವು ಹಾಗಿದ್ದರೂ ನಿರ್ಬಂಧಮಾಡಿ ನಮ್ಮ ಕಷ್ಟನಷ್ಟಗಳನ್ನೂ ಬಡತನವನ್ನೂ ಹೇಳಿಕೊಂಡು ಆತನನ್ನು ಬಿಡದೆ ಪೀಡಿಸಿ ತಗಾದೆಕೊಡುವದರಿಂದ ಹ್ಯಾಗಾದರೂ ನಮ್ಮ ಕಾಟವನ್ನು ತಪ್ಪಿಸಿಕೊಳ್ಳುವದಕ್ಕಾದರೂ ಆ ಅಧಿಕಾರಿಯು ಜಿಗುಪ್ಸೆಯಿಂದ ಒಳ್ಳೇದು ನೋಡೋಣ ಕೊಟ್ಟೇನು ಎಂದು ಹೇಳುತ್ತಾನೆ. ಹಾಗೆಯೇ ನಮಗೆ ಯಾವದೋ ಒಂದು ವರವನ್ನು ಬೇಡಿ ದೇವರಿಗೆ ಅದನ್ನು ಕೊಡಲಿಕ್ಕೆ ಮನಸ್ಸಿಲ್ಲದಿದ್ದರೂ ಆತನನ್ನು ಪೀಡಿಸಿ ಪೀಡಿಸಿ ಕಾಟಕೊಟ್ಟು ಆತನಿಂದ ಪಡೆಯಲಿಕ್ಕೆ ಆಗದೇ ? ಅದು ಅಸಾಧ್ಯ. ಯಾಕಂದರೆ ದೇವರು ತನ್ನ ಕಟ್ಟಳೆಗಳನ್ನು ಬದಲಾಯಿಸುವವನಲ್ಲ. ಈ ಲೋಕವನ್ನು ಆತನು ಕೆಲವು ನಾಯವಾದ ನಿಯಮಗಳಿಂದ ಪರಾಮರಿಸುತ್ತ ಬರುತ್ತಾನೆ. ಹೀಗಿರುವಲ್ಲಿ ನಾವು ಆತನನ್ನು ಎಷ್ಟು ಬೇಡಿದರೂ ಆತನು ತನ್ನ ನಿಯಮಗಳನ್ನು ನಮಗೋಸ್ಕರ ಬದಲಾಯಿಸುವವನಲ್ಲ. ಆದ್ದರಿಂದ ನಾವು ಆತನಿಗೆ ಪ್ರಾರ್ಥನೆಮಾಡುವದು ಪ್ರಯೋಜನವಿಲ್ಲವೆಂದು ಅನೇಕರು ಭಾವಿಸುತ್ತಾರೆ.

ಆದರೆ ಪ್ರಾರ್ಥನೆಯಂದರೇನು ? ಇದನ್ನು ಕುರಿತು ನಾವು ಚನ್ನಾಗಿ ತಿಳಿದರೆ ಇಂಥಾ ಆಕ್ಷೇಪಣೆಗಳನ್ನು ಮಾಡುವದು ವ್ಯರ್ಥವೆಂತ ತಿಳಿಯುವದು. ನೋಡಿರಿ ನಮಗೆ ದೇಹಗಳುಂಟಷ್ಟೆ. ದೇಹವು ಆರೋಗ್ಯವಾಗಿದ್ದು ಬೆಳೆಯಬೇಕಾದರೆ ಅದನ್ನು ಪೋಷಿಸತಕ್ಕ ಅನ್ನ, ಪಾನ, ಕಾಯಿ, ಪಲ್ಯ, ಹಣ್ಣು ಮುಂತಾದ ಪದಾರ್ಥಗಳನ್ನು ಸೇವಿಸುತ್ತೇವೆ. ಆದರೆ ಆ ಪದಾರ್ಥಗಳಿಗೂ ನಮ್ಮ ದೇಹಕ್ಕೂ ನಿರಾತಂಕವಾದ ಸಂಬಂಧವು ಸದಾ ಇರಬೇಕು. ಈ ಸಂಬಂಧ ತಪ್ಪಿದರೆ ದೇಹವು ಕೆಟ್ಟು ಕಡೆಗೆ ಮರಣವೇ ಪ್ರಾಪ್ತವಾದೀತು. ಇದು ಎಲ್ಲರಿಗೂ ಗೊತ್ತಾದ ವಿಷಯವೇ. ಇದಲ್ಲದೆ ಆ ಪದಾರ್ಥಗಳಲ್ಲಿ ನಮ್ಮ ಹಸಿವೆಯನ್ನು ತೃಪ್ತಿಪಡಿಸುವ ಸಾಮರ್ಥ್ಯವೂ ನಾಲಿಗೆಗೆ ಸವಿಯನ್ನು ಕೊಡುವ ರುಚಿಯೂ ಇರುವದರಿಂದ ನಮ್ಮ ದೇಹಕ್ಕೆ ಅವು ಬೇಕೋ ಅಥವಾ ಬೇಡವೋ ಎಂತ ವಿಚಾರಿಸದೆ ಅವುಗಳನ್ನು ಬೆಳಸುತ್ತೇವೆಯಷ್ಟೆ. ಈ ಸಂಬಂಧವು ನಮ್ಮ ಹಾಗೆ ದೇಹವನ್ನು ಪಡೆದಿರುವ ಸಕಲ ಪ್ರಾಣಿಗಳಿಗೂ ಬೇಕಾಗಿದೆ.

ಇದಲ್ಲದೆ ಮನುಷ್ಯನಿಗೆ ಮೃಗಗಳಿಗಿಂತ ವಿಶೇಷ ಬುದ್ಧಿಯು ಇರುವದರಿಂದ ವಿದ್ಯವನ್ನಾಕಾಂಕ್ಷಿಸುವವನಾಗಿದ್ದಾನೆ. ನಮಗಿಂತ ಹಿಂದೆ ಬದುಕಿದ್ದ ಹಿರಿಯರು ಪರೀಕ್ಷಿಸಿ ಬರೆದಿರುವ ಗ್ರಂಥಗಳನ್ನು ಓದುವದರಿಂದಲೂ ನಾವೇ ಹೊಸದಾಗಿ ಪರೀಕ್ಷಿಸಿ ಪದಾರ್ಥಜ್ಞಾನವನ್ನು ಪಡೆಯುವದರಿಂದಲೂ ನಮ್ಮ ಮನಸ್ಸು ಬೆಳೆದು ದೃಢವಾಗುತ್ತದೆ. ಮತ್ತು ನಾವು ಸಾಂಸರ್ಗಿಕ ಸ್ವಭಾವವುಳ್ಳವರಾಗಿರುವದರಿಂದ ಪತ್ನೀಪುತ್ರರನ್ನೂ ಬಂಧುಮಿತ್ರರನ್ನೂ ಸ್ನೇಹಿತರನ್ನೂ ಬಯಸುತ್ತೇವೆ. ಅವರ ಸಂಗಡ ಬೆರೆತು ಮಾತನಾಡುವದರಿಂದಲೂ ಕೆಲಸಮಾಡುವದರಿಂದಲೂ ನಮ್ಮ ಸುಖವೂ ಸಂತೋಷವೂ ಹೆಚ್ಚುತ್ತದೆ. ಅದರೊಳಗಾಗಿ ನಮ್ಮ ಪ್ರಿಯರೂ ಸ್ನೇಹಿತರೂ ಎಷ್ಟು ಬುದ್ಧಿವಂತರಾಗಿಯೂ ಶಕ್ತರಾಗಿಯೂ ಇರುತ್ತಾರೋ ಅಷ್ಟು ಅವರ ಸಂಗಡ ಸ್ನೇಹವು ಹೆಚ್ಚಿ ಅದಕ್ಕೆ ಸಮಾನವಾಗಿ ನಮ್ಮ ಅಭಿವೃದ್ಧಿಯೂ ಹೆಚ್ಚುವದು.

ಇಷ್ಟಲ್ಲದೆ ತ್ವಕ್ಕು ಮೊದಲಾದ ಪಂಚೇಂದ್ರಿಯಗಳಿಗೆ ಗೋಚರವಾಗದೆ ಇರುವ ಆತ್ಮವು ನಮಗಿದೆ. ಇದು ಸಹ ಬೆಳೆದು ವೃದ್ಧಿಹೊಂದಬೇಕು. ಇದೇ ಮನುಷ್ಯನಿಗೂ ಇತರ ಪಶುಪಕ್ಷ್ಯಾದಿಗಳಿಗೂ ಇರುವ ಭೇದ. ದೇಹವು ಆಹಾರದಿಂದ ಪೋಷಣೆಹೊಂದುವಂತೆ ಇದು ಸಹ ಪೋಷಣೆಯೊಂದಬೇಕು. ಆದರೆ ಅನ್ನ ಪಾನ ಮುಂತಾದ ಪದಾರ್ಥಗಳು ಇದನ್ನು ಪೋಷಣೆಮಾಡಲಾರವು. ಇದನ್ನು ಪೋಷಣೆಮಾಡುವ ಪದಾರ್ಥವು ಈ ಜಗತ್ತಿನಲ್ಲೇ ಇಲ್ಲ. ಇದನ್ನು ಪೋಷಣೆ ಮಾಡುವವನು ಪರಾತ್ಪರನಾದ ದೇವರೇ. ಆತನಿಗೂ ನಮ್ಮ ಆತ್ಮಕ್ಕೂ ಎಷ್ಟು ಸಂಬಂಧವನ್ನು ನಾವು ಬೆಳಸುತ್ತೇವೋ ಅಷ್ಟು ಮಟ್ಟಿಗೆ ಅದು ಬೆಳೆಯುತ್ತದೆ. ಈ ಸಂಬಂಧವೇ ಪ್ರಾರ್ಥನೆ. ಪ್ರಾರ್ಥನೆಯ ಮುಖಾಂತರವೇ ಈ ಸಂಬಂಧವು ನಡೆಯಬೇಕು.

ಹೀಗಿರಲಾಗಿ ಒಬ್ಬನು ತನ್ನ ದೇಹವನ್ನು ಆಹಾರಪಾನಗಳಿಂದ ಚನ್ನಾಗಿ ಪೋಷಿಸುತ್ತಾ ತನ್ನ ಆತ್ಮಕ್ಕೆ ದೇವರ ಸಂಬಂಧವೆಂಬ ಆಹಾರವನ್ನು ಕೊಡದೆ ಅದನ್ನು ಉಪವಾಸದಿಂದ ಸಾಯಿಸಿದರೆ ಧರಣಿಯನ್ನು ಬಿಟ್ಟು ಬೇಳೆಯಿಂದ ಕಾಪಾಡಿ ಅದರೊಳಗಿರುವ ರತ್ನವನ್ನು ತಿರಸ್ಕರಿಸಿದಹಾಗಾಯಿತಲ್ಲವೇ ? ವಾಚಕರೇ ನಿಮ್ಮ ಆತ್ಮಕ್ಕೆ ಪಾಪಪರಿಹಾರವೂ ಪರಿಶುದ್ಧತ್ವವೂ ನಿತ್ಯಜೀವವೂ ಬೇಕೋ ? ನೀವು ನೀತಿವಂತರೂ ಸತ್ವವಂತರೂ ಪರೋಪಕಾರಿಗಳೂ ಆಗಬೇಕೆಂತ ಇಷ್ಟಪಡುತ್ತೀರೋ ? ಇಷ್ಟಪಟ್ಟರೆ ನಿಮ್ಮ ಆತ್ಮಗಳ ತಂದೆಯಾದ ಆ ಪರಮಾತ್ಮನನ್ನು ಪ್ರಾರ್ಥಿಸಿರಿ. ಆತನು ಬೇಡುವವರಿಗೆ ಕೊಡುತ್ತಾನೆ.

ಬಹುದೇಶದ ವೃತ್ತಾಂತಗಳು.

ಬೇತಮಂಗಲದ ವಾಟರ್ ವರ್ಕ್ಸಿನ ಪಂಪಿಂಗ್ ಹೌಸ್ ಎಂಬ ಕಟ್ಟಡಕ್ಕೆ ಕಳ್ಳರು ಬಿದ್ದು, ಒಬ್ಬ ನೌಕರನ ಬಾಬತು ೧,೨೦೦ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರೆಂದು ಪ್ರಕಟವಾಗಿದೆ.

* * *

ಸುಮಾರು ೧೦ ದಿನಗಳಿಂದ ರಾಜಧಾನಿಯಲ್ಲಿದ್ದ ಸಂಸ್ಥಾನದ ದಿವಾನ್‌ರಾದ ಮ್ಮ|| ಟಿ. ಆನಂದರಾಯರವರು ಮೊನ್ನೆ ಮಂಗಳವಾರ ಮೆಯಿಲ್ ಗಾಡಿಯಲ್ಲಿ ಪರಿವಾರ ಸಮೇತ ಬೆಂಗಳೂರಿಗೆ ಪ್ರಯಾಣಮಾಡಿದರು.

* * *

ಮೈಸೂರು ಪಟ್ಟಣದಲ್ಲಿ ಬೆಂಚ್ ಮ್ಯಾಜಿಸ್ಟ್ರೇಟರು ದರ್ಯಾಪ್ತು ಮಾಡುವ ಮೊಕದ್ದಮೆಗಳಲ್ಲಿ ಒಡ್ಡಮಂಟನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ನೇಮಕವಾಗುವ ಒಬ್ಬ ನೌಕರನ ಸಹಾಯದಿಂದ ಬರೆಯಬಹುದೆಂದು ಗವರ್ನಮೆಂಟಿನವರು ದಯಾಯತಿಯನ್ನು ತೋರಿಸಿರುತ್ತಾರೆ.

* * *

ಸರ್ಕಾರದ ವೃದ್ಧರು ಸರ್ಕಾರಿ ನೌಕರರ ಮತ್ತು ಅಧಿಕಾರಿಗಳ ಕಾಯಿಲೆ ಮುಂತಾದದ್ದನ್ನು ಅಜಮಾಯಿಷಿ ಮಾಡಿ ಅವರಿಗೆ ಚಿಕಿತ್ಸಾದಿಗಳನ್ನು ಮಾಡುವುದಕ್ಕೂ ಅವರಿಂದ ಪ್ರಮಾಣವನ್ನು ಹೊಂದುವುದಕ್ಕೂ ಗವರ್ನಮೆಂಟಿನವರು ಕೆಲವು ನಿಬಂಧನೆಗಳನ್ನು ಮಾಡಿ ಈ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ.

* * *

ಮೈಸೂರು ಸಂಸ್ಥಾನದ ಚೀಫ್ ಕೋರ್ಟನ್ನು ಬೆಂಗಳೂರಿಂದ ತಪ್ಪಿಸಿ ಮೈಸೂರು ಪಟ್ಟಣದಲ್ಲಿ ಮಾಡಬೇಕೆಂದು ಸರ್ಕಾರದವರು ಯೋಚಿಸಿರುತ್ತಾರೆ. ಈ ಭಾಗದಲ್ಲಿ ಚೀಫ್ ಕೋರ್ಟ್ ರೆಜಿಸ್ಟ್ರಾರವರು ಇಲ್ಲಿನ ಲಾಯರ್ ಸಂಘಕ್ಕೆ ಒಂದು ಕಾಗದವನ್ನು ಬರೆದು, ಅವರ ಅಭಿಮತವನ್ನು ಕೇಳಿರುವರು. ಇಲ್ಲಿನ ಲಾಯರುಗಳು ಅದನ್ನು ಅನುಮೋದಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

* * *

ಕಳೆದ ವಾರದ "ಒಕ್ಕಲಿಗರ ಪತ್ರಿಕೆ" ಯ ಸಂಗಡ ಸಾಧಾರಣ ಸಂವತ್ಸರದ ಒಂದು ಪಂಚಾಂಗವು ಕಳುಹಲ್ಪಟ್ಟಿದೆ. ಇದರಲ್ಲಿ ತಿಂಗಳು ತಿಥಿ ವಾರ ವಿಶೇಷ ದಿನಗಳೂ ಒಕ್ಕಲಿಗರ ಸಂಘದ ವಾರ್ಷಿಕೋತ್ಸವಗಳೂ ಅಲ್ಲದೆ ಶ್ರೀಮನ್ ಮಹಾರಾಜರವರ, ಲೇಟ್ ಟಿ. ಬ್ಯಯಣ್ಣನವರ, ಮ್ಮ|| ಬಿ. ಎಸ್. ಮಾದಪ್ಪನವರ, ಮ್ಮ|| ಬಿ. ನಾಗಪ್ಪನವರ ಮತ್ತು ಮ್ಮ|| ಸಿ. ರಂಗೇಗೌಡರವರ ಭಾವಚಿತ್ರಗಳನ್ನು ಬಹು ರಮಣೀಯವಾಗಿ ಅಚ್ಚುಹಾಕಿರುತ್ತಾರೆ. ಇಂಥಾ ಸುಂದರವಾದ ಪಂಚಾಂಗವನ್ನು ಬಹು ಸಂತೋಷದಿಂದ ಅಂಗೀಕರಿಸಿರುವೆವು.

* * *

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸುಮಾರು ೧೪ ವರುಷಗಳ ವರೆಗೆ ಸಹಾಯೋಪಾಧ್ಯಾಯರಾಗಿದ್ದು ಈಗ ತಾನೇ ಬೆಂಗಳೂರು ಡಿಸ್ಟ್ರಿಕ್ಟಿನ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ ಕೆಲಸಕ್ಕೆ ಬಡ್ತಿ ಹೊಂದಿ ಹೋಗಿರುವ ಮ್ಮ|| ಬಿ. ದಾಸಪ್ಪನವರಿಗೆ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳು ಕಳೆದ ಶನಿವಾರ ಸಾಯಂಕಾಲ ಕಾಲೇಜ್ ಕಟ್ಟಡದಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿ ತಮ್ಮ ಕೃತಜ್ಞತೆ ಭಕ್ತಿ ವಿಶ್ವಾಸಾದಿಗಳನ್ನು ಪ್ರಕಾಶಪಡಿಸಿದರು. ಆಗ್ಗೆ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮ್ಮ|| ಕ್ಯಾಂಬೆಲ್ ಯವರೇ ಮೊದಲಾದ ರಾಜಧಾನಿಯಲ್ಲಿರುವ ಯೂರೋಪ್ಯಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರನೇಕರು ಸಭೆಯಲ್ಲಿ ಹಾಜರಾಗಿದ್ದರು. ಸಭೆಯಲ್ಲಿ ಸಂಗೀತ,

ನಾಟಕವೇ ಮೊದಲಾದ ಸಮಯೋಚಿತ ವಿನೋದಗಳು ತೃಪ್ತಿಕರವಾಗಿ ಒದಗಿ ಸಭಿಕರಿಗೆ ಆಹ್ಲಾದವನ್ನುಂಟುಮಾಡಿದವು ಮ|| ದಾಸಪ್ಪನವರು ಉಪಾಧ್ಯಾಯರಾಗಿದ್ದಾಗ್ಗ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸುವುದಲ್ಲದೆ ಇತರ ಕಾಲಗಳಲ್ಲಿ ಅವರ ಕೂಡ ಸಹಪಾಟಿಗಳಂತೆ ಆಟಪಾಟ ವಿನೋದಗಳಲ್ಲಿ ಬೆರೆಯುತ್ತ ತಮ್ಮ ಸದ್ಗುಣ ಸಂಪತ್ತುಗಳನ್ನು ಅವರಿಗೆ ಮೇಲ್ಪಂಕ್ತಿ ಹಾಕಿ ಕೊಡುತ್ತಿದ್ದರು ಮ|| ಕ್ಯಾಂಬೆಲ್ ಯವರು ವಿದ್ಯಾರ್ಥಿಗಳ ಪರವಾಗಿ ಅಡ್ರೆಸ್ಸನ್ನು ಚಿತ್ರ ಕೆಲಸ ಮಾಡಿದ ದಿವ್ಯವಾದ ಗಂಧದ ಕೈಪಟ್ಟಿಗೆಯಲ್ಲಿಟ್ಟು ಮ|| ದಾಸಪ್ಪನವರಿಗೆ ಒಪ್ಪಿಸಿ, ಅವರ ಕೀರ್ತಿಯನ್ನು ಕೊಂಡಾಡಿದರು

* * *

ರಾಜಧಾನಿಯಲ್ಲಿರುವ ಅಡ್ವೊಕೇಟ ಇನಾಂದಾರ್ ಮತ್ತು ನ್ಯಾಯವಿಧಾಯಕ ಸಭೆಯ ಕೌನ್ಸಿಲ್ ಮೆಂಬರ್ ಆದ ಮ|| ಎ ರಾಮಣ್ಣನವರು ತಮ್ಮ ಮಗನಿಗೂ ತಮ್ಮನ ಮಗನಿಗೂ ಅಲ್ಲದೆ ಬೇರೆ ೧೧ ಉಪನಯನಗಳನ್ನೂ ನಾಲ್ಕು ವಿವಾಹಗಳನ್ನೂ ತಮ್ಮ ಸ್ವಂತ ಹಣವನ್ನು ವಿನಿಯೋಗಮಾಡಿ ಧರ್ಮಕ್ಕಾಗಿ ತಮ್ಮ ಸ್ವಗೃಹದಲ್ಲಿ ಮಾಡಿಸಿದರು ಹೋದ ವರುಷವೂ ಇದೇ ರೀತಿ ಅನೇಕ ಧರ್ಮದ ಉಪನಯನಗಳನ್ನು ಮಾಡಿಸಿರುತ್ತಾರೆ ಈ ಉಪನಯನ ವಿವಾಹಾದಿಗಳನ್ನು ಇಲ್ಲಿನ ಅನೇಕ ದೊಡ್ಡ ಮನುಷ್ಯರು ಹೋಗಿ ನೋಡಿ ಸಂತೋಷಪಟ್ಟು ಅವರ ಉದಾರ ಗುಣವನ್ನು ಕೊಂಡಾಡುತ್ತಿದಾರೆ

* * *

ಶ್ರೀಮನ್ ಮಹಾರಾಜರವರು ನಿನ್ನೆ ಬೆಳಿಗ್ಗೆ ೭ ಗಂಟೆಗೆ ಪರಿವಾರ ಸಮೇತ ಸ್ಪೇಷಲ್ ಗಾಡಿಗಳಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ತೆರಳಿದರು ಅರಸು ಮಕ್ಕಳೂ ದೊಡ್ಡ ಅಧಿಕಾರಿಗಳೂ ರೈಲ್ವೇ ತೊಟ್ಟಿಯಲ್ಲಿ ಕಾದಿದ್ದು ಶ್ರೀಮನ್ ಮಹಾರಾಜರವರಿಗೆ ಶುಭಪ್ರಯಾಣವನ್ನು ಬಯಸಿ ಸಾಗಕಳುಹಿಸಿದರು ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು ಅವರ ಸಂಗಡ ಹುಜೂರ್ ಸೆಕ್ರೆಟರಿ ಮ|| ವಿ ರಾಘವೇಂದ್ರರಾಯರೂ ಪ್ರೈವೇಟ ಸೆಕ್ರೆಟರಿ ಮ|| ಆರ್ ಎಚ್ ಕ್ಯಾಂಬೆಲ್ ಯವರೂ ಹೋಗಿರುತ್ತಾರೆ ಮಹಾರಾಜರವರು ಬೆಂಗಳೂರಿನಿಂದ ವಸಂತ ವಿಹಾರಕ್ಕೆ ನೀಲಗಿರಿಗೆ ದಯಮಾಡಿ ಅಲ್ಲಿ ಶ್ರೀಷ್ಮಋತುವಿನ ದಿನಗಳನ್ನು ಕಳೆದು ಒಂದು ದಿನ ಅವರ ... ಬೆಂಗಳೂರಿಗೆ ದಯಮಾಡಿಸಿ ಅಲ್ಲಿಂದ ಹಿಂತಿರುಗಿ ನೀಲಗಿರಿಗೆ ಪ್ರಯಾಣಮಾಡುವರು ಅವರು ನೀಲಗಿರಿಯಿಂದ ಮುಂದಿನ ತಿಂಗಳು ಸುಮಾರು ತಾ ೨೦ಕ್ಕೆ ವಾಪಸು ರಾಜಧಾನಿಗೆ ಚಿತ್ತೈಸಬಹುದೆಂದು ನಿರೀಕ್ಷಿಸಲ್ಪಟ್ಟಿದೆ

* * *

ಮ|| ಜಿ ವಿಯರ್ ಸಾಹೇಬರವರು ಸುಮಾರು ಇಪ್ಪತ್ತು ವರುಷಗಳಿಂದ ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲ್ ರಾಗಿದ್ದು, ಈ ವರುಷ ಸಂಸ್ಥಾನದ ವಿದ್ಯಾ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ರಾಗಿ ಹೊಸ ಕೆಲಸಕ್ಕೆ ನೇಮಿಸಲ್ಪಟ್ಟರು ಅವರ ಕೈಕೆಳಗೆ ವಿದ್ಯಾಭ್ಯಾಸ ಮಾಡಿದಂಥಾ ವಿದ್ಯಾರ್ಥಿಗಳೆಲ್ಲಾ ನಿನ್ನೆ ಸಾಯಂಕಾಲ ಅವರನ್ನು ರಾಜಧಾನಿಗೆ ಕರೆಸಿಕೊಂಡು ಮಹಾರಾಜಾ ಕಾಲೇಜಿನಲ್ಲಿ ಅವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸುವವರಾಗಿದ್ದರು ಈ ಸಂತೋಷ ಸಭೆಯಲ್ಲಿ ಮೈಸೂರು ಡೆಪ್ಯುಟಿ ಕಮಿಷನರ್ ರಾದ ಸರ್ದಾರ್ ಮ|| ಎಂ ಕಾಂತರಾಜ ಅರಸಿನವರು ಅಧ್ಯಕ್ಷರಾಗಿರುವುದಕ್ಕೆ ಒಪ್ಪಿದ್ದರು ಸಂಗೀತ ವಸಿಟೇಷನ್ ಜಲತರಂಗ ಹಾಡುಗಾರಿಕೆ ವಾದ್ಯಘೋಷ ಈ ಮೊದಲಾದ ವಿನೋದಗಳು ನಡೆಯುವಂತೆ ಏರ್ಪಾಡಾಗಿತ್ತು ಮ|| ಎಂ ಎನ್ ಬಾಲರಾಜೇ ಅರಸಿನವರೂ ಮ|| ಎ ರಾಮಸ್ವಾಮಯ್ಯನವರೂ ಸೆಕ್ರೆಟರಿಗಳಾಗಿದರು ವಿದ್ಯಾರ್ಥಿಗಳ ಪರವಾದ ಅಡ್ರೆಸ್ಸನ್ನು ಮ|| ಬಾಲರಾಜೇ ಅರಸಿನವರು ಓದಿ ದಿವ್ಯವಾದ ಕೈಪಟ್ಟಿಗೆಯಲ್ಲಿಟ್ಟು ಮ|| ವಿಯರ್ ಯವರಿಗೆ ಒಪ್ಪಿಸುವಂತೆ ಏರ್ಪಾಡಾಗಿತ್ತು

ಮೈಸೂರು ಗೆಜೆಟ್ ಸಂಗ್ರಹ

ಮುಳಬಾಗಲ ಶ್ರೀ ಸೋಮೇಶ್ವರ ಸ್ವಾಮಿ ರಥೋತ್ಸವಕ್ಕೆ ಮೇ ತಾ ೮ರಿಂದ ೧೮ರ ವರೆಗೂ, ಬೌರಿಂಗ್ ಪೇಟ ಶ್ರೀ ಕೋದಂಡರಾಮಸ್ವಾಮಿ ರಥೋತ್ಸವಕ್ಕೆ ಮೇ ತಾ ೧೮ ರಿಂದ ೩೧ರ ವರೆಗೂ ಪ್ಲೇಗ್ ಉಪದ್ರವಿರುವ ಸ್ಥಳಗಳಿಂದ ಹೋಗತಕ್ಕ ಯಾತ್ರಾರ್ಥಿಗಳೇ ಮುಂತಾದವರನ್ನು ಬಿಡುವುದಿಲ್ಲವೆಂದು ತಿಳಿಯತಕ್ಕದ್ದು

ಮ|| ಸಾಹುಕಾರ್ ಭೀಮಣ್ಣನವರನ್ನು ಚಿಕ್ಕನಾಯಕನಹಳ್ಳಿ ... ತಾಲ್ಲೂಕು ಬ್ಯಾಲ್ಕದ ಯೂನಿಯನ್ ಪಂಚಾಯತಿ ಮೆಂಬರಾಗಿ ನೇಮಕಮಾಡಿದೆ

ಚಾಲಫೋರ್ಟ್ ಗಣಿಗಳ ಸೂಪರಿಂಟೆಂಡೆಂಟ್ ಮ|| ಎಚ್ ಎಂ ಎ ಕುಕ್ ಯವರನ್ನು ಕೋಲಾರ್ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡ್ ಮೆಂಬರಾಗಿ ನೇಮಿಸಿರುವುದನ್ನು ಮಂಜೂರು ಮಾಡಿದೆ

ಕೋಲಾರ್ ಚಿನ್ನದ ಗಣಿಗಳ ಮೆಡಿಕಲ್ ಹೆಲ್ತ್ ಆಫೀಸರ್ ಡಾ|| ಜೆ ಮರ್ಚಿಸನ್ ಯವರು ರಜದಿಂದ ಬಂದು ಮಾರ್ಚಿ ತಾ ೨೧ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಅ|| ಸರ್ಜನ್ ಮ|| ಎಸ್ ಕೆ ಹನುಮಂತರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತು ದಿನಗಳಿಗೆ ಜಾಸ್ತಿ ಮಾಡಿದೆ

ಅ|| ಸರ್ಜನ್ ಮ|| ಎಂ ಜಗನ್ನಾಥಂ ಪಿಳ್ಳೆಯವರಿಗೆ ಮಾರ್ಚಿ ತಾ ೬ ರಿಂದ ಇಪ್ಪತ್ತನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುವ ಅ|| ಕಮಿಷನರ್ ಮ|| ಯಲ್ಲೋಜಿ ಶ್ರೀನಿವಾಸ ರಾಯರು ರಜದಿಂದ ಬಂದು ಮಾರ್ಚಿ ತಾ ೩೧ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡಿರುವುದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಅ|| ಕಮಿಷನರ್ ಮ|| ಎಸ್ ಪಿ ರಾಜಗೋಪಾಲಾಚಾರಿಯವರಿಗೆ ಏಪ್ರೆಲ್ ತಾ ೨೦ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಾಸನ್ ತಾಲ್ಲೂಕು ಅಮಲ್ದಾರ್ ಮ|| ಎಸ್ ಎನ್ ಅಪ್ಪಣ್ಣೈಯಂಗಾರ್ಯರು ಅ|| ಕಮಿಷನರಾಗಿ ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು

ಮಾಲೂರ್ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಅ|| ಕಮಿಷನರ್ ಮ|| ಟಿ ಇ ಜಯರಾಮ ಅಯ್ಯರವರಿಗೆ ಮಾರ್ಚಿ ತಾ ೧೯ ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಅವರು ರಜದ ಮೇಲೆ ಇದ್ದಾಗ ಕೋಲಾರ್ ಡಿಸ್ಟ್ರಿಕ್ಟ್ ಖಜಾನಾ ಅ|| ಕಮಿಷನರ್ ಮ|| ಎ ವೇದಾಂತ ದೇಶಿಗಂ ಅಯ್ಯಂಗಾರ್ಯರು ತಮ್ಮ ಕೆಲಸಗಳೊಂದಿಗೆ ಮಾಲೂರ್ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿದ್ದರು

ಪ್ರೊ|| ಅ|| ಕಮಿಷನರ್ ಮ|| ಎಸ್ ತಿಮ್ಮಣ್ಣನವರಿಗೆ ಏಪ್ರೆಲ್ ತಾ ೨೮ ರಿಂದ ಇಪ್ಪತ್ತೆರಡು ದಿನಗಳ ಪ್ರಿವಿಲೆಜ್ ರಜವನ್ನೂ ಬಳಿಕ ಎರಡು ದಿನ ಪರೀಕ್ಷೆಗಾಗಿ ಕೊಡಲ್ಪಡುವ ರಜವನ್ನೂ ಕೊಟ್ಟಿದೆ

ಕಂಟ್ರೋಲರ್ ಮ|| ಜಿ ಎಸ್ ಚಕ್ರವರ್ತಿಯವರಿಂದ ಅ|| ಸೆಕ್ರೆಟರಿ ಮ|| ಎಂ ಎನ್ ಕೃಷ್ಣರಾಯರವರು ಏಪ್ರೆಲ್ ತಾ ೪ ರಲ್ಲಿ ಕಂಟ್ರೋಲರ್ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ಮೈಸೂರು ಗವರ್ನ್‌ಮೆಂಟಿನ ಚೀಫ್ ವಿದ್ಯುಚ್ಛಕ್ತಿಯ ಇಂಜನಿಯರ್ ಮ|| ಎಚ್ ಪಿ ಗಿಬ್ಸ್‌ಯವರಿಗೆ ಏಪ್ರಿಲ್ ತಾ ೧೨ ರಿಂದ ಸಂಬಳವಿಲ್ಲದ ಹದಿನಾಲ್ಕು ದಿನಗಳ ರಜಾ ಕೊಟ್ಟಿದೆ

ಅ|| ಇಂಜನಿಯರ್ ಮ|| ಎಂ ಎ ಆನಂದಾಳ್ವಾರ್‌ಯವರಿಗೆ ಕೊಟ್ಟಿರುವ ಆರು ತಿಂಗಳ ಕಾಯಿಲೇ ರಜವನ್ನು ಇನ್ನೂ ಮೂರು ತಿಂಗಳಿಗೆ ಜಾಸ್ತಿ ಮಾಡಿದೆ

ಮೈಸೂರು ಕೋ ಆಪರೇಟಿವ್ ಸೊಸೈಟಿ

ವಾರ್ಷಿಕೋತ್ಸವವು

ಕಳೆದ ಭಾನುವಾರ ಸಾಯಂಕಾಲ ಮೈಸೂರು ಸಿಟಿ ಕೋ ಆಪರೇಟಿವ್ ಸಂಘದ ವಾರ್ಷಿಕ ಸಭೆಯು ಇಲ್ಲಿನ ಸದ್ವಿದ್ಯಾಶಾಲೆಯ ಮಂದಿರದಲ್ಲಿ ಜರುಗಿಸಲ್ಪಟ್ಟಿತು ಸಂಘದ ಮೆಂಬರುಗಳು ವಿಶೇಷವಾಗಿ ಹಾಜರಾಗಿದ್ದರು ವೈಸ್ ಪ್ರೆಸಿಡೆಂಟರಾದ ಅಡ್ವೊಕೇಟ್ ಎತ್ತು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ್ ಮ|| ಎಂ ಎ ರಂಗೈಯಂಗಾರ್ಯರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಸೆಕ್ರೆಟರಿ ಮ|| ಬಿ ಸುಬ್ಬರಾಯರವರು ಆಡಿಟರ ರಿಪೋರ್ಟನ್ನೂ ಸಂಘದ ವಾರ್ಷಿಕ ರಿಪೋರ್ಟನ್ನೂ ಓದಿದ ಬಳಿಕ ಮೆಂಬರುಗಳಿಗೆಲ್ಲಾ ಫಲಾಹಾರ ವಿನಿಯೋಗ ಮಾಡಲ್ಪಟ್ಟಿತು ಅನಂತರ ಸಂಘದ ಪುರೋಭಿವೃದ್ಧಿಯ ವಿಷಯದಲ್ಲಿ ಹಲವು ಬಾಬುಗಳನ್ನು ಮೆಂಬರುಗಳು ಸೂಚಿಸಿ ಚರ್ಚೆಮಾಡಿ ಇತ್ಯರ್ಥಪಡಿಸಿದರು ಕಡೆಯಲ್ಲಿ ಚಾಲ್ತಿ ಸಾಲಿಗೆ ಹೊಸ ಮೆಂಬರುಗಳ ಚುನಾವಣೆಯು ಆಗಿ ಆ ದಿನದ ಸಭೆಯು ಮುಕ್ತಾಯಮಾಡಲ್ಪಟ್ಟಿತು ಈ ಸಂಘದ ಸ್ಥಿತಿಗತಿಯ ವಿಷಯದಲ್ಲಿ ಸೆಕ್ರೆಟರಿಯವರು ತಿಳಿಸಿದ ಸಂಗತಿಗಳ ಪೈಕಿ ಮುಖ್ಯವಾದ ಬಾಬುಗಳನ್ನು ಇಲ್ಲಿ ಪ್ರಕಟಿಸಲು ಸಂತೋಷಪಡುತ್ತೇವೆ

ಈ ಸೊಸೈಟಿಯು 1901 ನೇ ಜೂನ್ ತಿಂಗಳಲ್ಲಿ ಶ್ರೀಮನ್ ಮಹಾರಾಜರವರ ವರ್ಧಂತಿ ಮಹೋತ್ಸವದ ದಿವಸ ಸ್ಥಾಪಿತವಾಯಿತು ತದಾರಭ್ಯ ಶ್ರೀಮನ್ ಮಹಾರಾಜಾ ಸರ್ಕಾರದವರ ಪ್ರೋತ್ಸಾಹದಿಂದಲೂ ರೆಜಿಸ್ಟ್ರಾರ್ ಮ|| ಶಾಮರಾಯರವರ ಸಮಯೋಚಿತ ಸಲಹೆಯಿಂದಲೂ ಮತ್ತು ಸೊಸೈಟಿಯ ಮೆಂಬರುಗಳ ಉದಾರಭಾವವೂ ಐಕ್ಯಮತ್ಯದಿಂದಲೂ ಇದು ಏಳಿಗೆಯನ್ನೇ ಹೊಂದುತ್ತಿರುವುದೆಂದು ತಿಳಿಸಲು ತುಂಬಾ ಸಂತೋಷಿಸುತ್ತೇವೆ

ಮೆಂಬರುಗಳು —ಈ ಸೊಸೈಟಿಯ ಮೊದಲನೆಯ ಜನರಲ್ ಮೀಟಿಂಗ್ ಕಾಲದಲ್ಲಿ 201 ಮಂದಿ ಮೆಂಬರುಗಳು, ಎರಡನೇ ಮೀಟಿಂಗ್ ಕಾಲದಲ್ಲಿ 294 ಮಂದಿ ಮೆಂಬರುಗಳು ಈ ಸಾಲಿನಲ್ಲಿ 412 ಮಂದಿ ಮೆಂಬರುಗಳು ಇರುವರು ಇವರುಗಳಲ್ಲಿ ಕಾರಣಾಂತರಗಳಿಂದ ಸೊಸೈಟಿಯನ್ನು ಬಿಟ್ಟವರ ಸಂಖ್ಯೆಯು 21 ಗತಿಸಿದವರ ಸಂಖ್ಯೆಯು 6 ಇವುಗಳು ಕಳೆಯಲಾಗಿ ಹಾಲಿ ರೆಜಿಸ್ಟರಿನಲ್ಲಿ ಇರುವವರ ಸಂಖ್ಯೆಯು 315 ಹೊಸದಾಗಿ ಸೇರಬೇಕೆಂದು ಅಪ್ಲಿಕೇಷನ್ ಗಳು ದಿನವೂ ಬರುತ್ತಿರುವವು ಇದನ್ನು ನೋಡುವಲ್ಲಿ ಈ ತರನಾದ ಸೊಸೈಟಿಯಿಂದ ಸ್ವಲ್ಪಮಟ್ಟಿಗಾದರೂ ಮೆಂಬರುಗಳಿಗೆ ಪ್ರಯೋಜನವಿರುವುದೆಂದು ತೋರಿಬರುವುದು

ಸೊಸೈಟಿಗೆ ಸೇರಿರುವ ಮೆಂಬರುಗಳಲ್ಲಿ 16 ಮಂದಿ ವರ್ತಕರೂ, 14 ಮಂದಿ ಅಡ್ವೊಕೇಟರೂ, 6 ಮಂದಿ ಕೈಗಾರಿಕೆಯವರೂ, ಸರಕಾರದ ನೌಕರರು ಮತ್ತು ಇತರರು 279 ಮಂದಿಯೂ ಇರುವರು ಕೈಗಾರಿಕೆಯವರಲ್ಲಿ ನೇಯಿಗೆ, ದಂತ ಕೆಲಸ, ಮರಗೆಲಸ, ಕಬ್ಬಿಣದ ಕೆಲಸವೇ ಮುಂತಾದುದನ್ನು ಮಾಡತಕ್ಕವರಾಗಿಯೂ ಇರುವರು ಸಣ್ಣ ಸಣ್ಣ ವ್ಯಾಪಾರಿಗಳು ಸೊಸೈಟಿಯ ಮೂಲಕ ಚಿಲ್ಲರೆ ವ್ಯಾಪಾರಕ್ಕೆ ಸಾಮಾನುಗಳನ್ನು ತರಿಸಿಕೊಂಡು ಲಾಭವನ್ನು ಪಡೆಯಬಹುದೆಂದು ನಾವು ಹಿಂದೆ ಕೊಟ್ಟಿದ್ದ ಅವಕಾಶದಿಂದ, ಅವರುಗಳು ಈ ಸಾಲಿನಲ್ಲಿ ಆ ರಿಯಾಯಿತಿಯನ್ನು ಪಡೆದಿರುವರೆಂದು ತಿಳಿಸಲು ಸಂತೋಷಿಸುತ್ತೇವೆ ನೇಯಿಗೆಯು ಮತ್ತು ದಂತದ ಕೆಲಸದವರು ತಮ್ಮ ಸರಕುಗಳನ್ನು ತಂದಿಟ್ಟು ಅಡ್ವಾನ್ಸ್ ಪಡೆದು ಕೆಲಸವನ್ನು ಮಾಡುತ್ತಿರುವರು ಕಾಲಕ್ರಮೇಣ ಈ ಸೊಸೈಟಿಯು ಹೊರಗಿನ ಸರಕಿಗೂ, ಸ್ಥಳದಲ್ಲಿ ತಯಾರಾದ ಸರಕಿಗೂ ಒಂದು ದೊಡ್ಡ ಕೋಠಿಯಾಗಿ ಪರಿಣಮಿಸುವ ಸಂಭವವಿರುತ್ತದೆ

ಷೇರು ಮೊಬಲಗು —ಮೊದಲನೆಯ ಜನರಲ್ ಮೀಟಿಂಗ್ ಕಾಲದಲ್ಲಿ ಸಂದಾಯವಾದದ್ದು ರೂ 6,717 4 0 ಎರಡನೇ ಮೀಟಿಂಗ್ ಕಾಲದಲ್ಲಿ ರೂ 15,881 4 0, 1909 ನೇ ಸೆಪ್ಟೆಂಬರ್ ಆಖೈರ್ ವರೆಗೂ ಸಂದಾಯವಾಗಿರುವುದು ಒಟ್ಟು ರೂ 24,868 ಸಂದಾಯವಾದ ಈ ಷೇರು ಮೊಬಲಗಿನ ಪೈಕಿ ದೀರ್ಘ ಕಾಲ ಸಾಲದಲ್ಲಿ ರೂ 6,598, ಮುಖಬದ್ದಾ ಸಾಲದಲ್ಲಿ ರೂ 4,976, ಸೊಸೈಟಿಯ ಸಾಮಾನುಗಳ ಮೇಲೆ ಇರುವುದು ರೂ 626 4 7, ಸರಕಿನ ಮೇಲೆ ರೂ 15,856-15 6 ನಿಂತಿರುವುದು

ಲೇವಾದೇವಿ —ಈ ಸಾಲಿನಲ್ಲಿ ಮುಖಬದ್ದಾ ಸಾಲ 52,034 ರೂ ವರೆಗೂ ದೀರ್ಘಕಾಲ ಸಾಲ 9,091 0 0 ರೂ ವರೆಗೂ ಕೊಟ್ಟಿರುವುದೆಂದು ಗೊತ್ತಾಗುವುದು ಈ ಸಾಲಕ್ಕಾಗಿ ಒಟ್ಟು 20,000 ಮೇಲೆ ಅಂದಾಜು ಬರುವ ಆಸ್ತಿಗಳು ಸೊಸೈಟಿಗೆ ಈಡಾಗಿವೆ ಆಸ್ತಿಗಳನ್ನು ವಿಶೇಷಜ್ಞರಾದ ಅನುಭವಶಾಲಿಗಳಾದ ಇಂಜಿನಿಯರ್ ಮೆಂಬರುಗಳಿಂದ ಅಜಮಾಯಿಷಿ ಮಾಡಿಸಿ, ಅಂದಾಜು ಕಟ್ಟಿಸಿರುತ್ತೇವೆ ಇದುವರೆಗೆ ಈ ಸಾಲಗಳ ವಸೂಲಾತಿ ವಿಷಯದಲ್ಲಿ ಸೊಸೈಟಿಗೆ ಯಾವ ತೊಂದರೆಯೂ ಉಂಟಾಗಿಲ್ಲ ಮೆಂಬರುಗಳು ತೆಗೆದುಕೊಂಡಿರುವ ಮುಖಬದ್ದಾ ಮತ್ತು ದೀರ್ಘಕಾಲ ಸಾಲದ ಮೊಬಲಗನ್ನು ನೋಡಿದರೆ ಲೇವಾದೇವಿಯು ಸಮರ್ಪಕವಾಗಿ ನಡೆದಿರುವುದೆಂದು ಧಾರಾಳವಾಗಿ ಹೇಳಬಹುದು ದೀರ್ಘಕಾಲದ ಸಾಲವನ್ನು ಪಡೆದ ಮೆಂಬರುಗಳು ಒಬ್ಬರು ಜಮೀನನ್ನು ತೆಗೆದುಕೊಳ್ಳುವುದಕ್ಕೂ, ಐದುಮಂದಿ ಮನೆಯನ್ನು ಕಟ್ಟುವುದಕ್ಕೂ, ನಾಲ್ಕುಮಂದಿ ಹೆಚ್ಚಾದ ಬಡ್ಡಿಯಿಂದ ಮಾಡಿದ್ದ ಸಾಲವನ್ನು ತೀರಿಸುವುದಕ್ಕೂ, ಇಬ್ಬರು ವ್ಯಾಪಾರಕ್ಕೂ, ಇಬ್ಬರು ಮದುವೆಗೂ, ಒಬ್ಬರು ದೇಶ ಸಂಚಾರಕ್ಕೂ, ಇಬ್ಬರು ಇತರ ಕಾರಣಗಳಿಗೂ ಉಪಯೋಗಿಸಿರುವರು ತಿಂಗಳಿಗೆ ಒಂದಾವರ್ತಿ ಬಡ್ಡಿಯನ್ನು ಕೊಡುವುದೂ, ಅಸಲು ಮೊಬಲಗು 500 ರೂ ಯಾದರೂ ಅಸಲಿಗೋಸ್ಕರ ಒಂದು ರೂಪಾಯಿಯನ್ನು ಕೊಟ್ಟರೂ ತೆಗೆದುಕೊಳ್ಳುವುದು, ಈ ವಿಧವಾದ ಸೌಲಭ್ಯವೇ ಸೊಸೈಟಿಯಲ್ಲಿ ಲೇವಾದೇವಿಯು ಬೆಳೆಯುವುದಕ್ಕೆ ಮುಖ್ಯ ಕಾರಣವಾಗಿರುವುದು

ವ್ಯಾಪಾರ —ಈ ಸಾಲಿನಲ್ಲಿ ಒಟ್ಟು ರೂ 27,812-9 1 ನಗದು ವ್ಯಾಪಾರವಾಗಿರುತ್ತದೆ ಇದರಲ್ಲಿ ಸೊಸೈಟಿಯ ಮೆಂಬರುಗಳು ರೂ 16,249-7-9 ವ್ಯಾಪಾರ ಮಾಡಿರುತ್ತಾರೆ ಮೆಂಬರಲ್ಲದವರನ್ನು ವಿಜಿಟರ್ಸ್ ಎಂದು ಪರಿಗಣಿಸುವುದು ಸುಲಭ ಬೆಲೆಯುಳ್ಳ ನೂಲಂಚಿನ ಸೀರೆ, ಕಿರಿಗ, ಕೋಲಾರ ಮೈಸೂರು ಚಕ್ಕು, ಹೊಳೇನರಸೀಪುರ, ಮೇಲುಕೋಟೆಯ ಚೌಕ, ಮುಗ್ಗುಲ ಹಾಸಿಗೆ, ಕಾಫಿ, ಸಕ್ಕರೆ, ಅಡಿಕೆ, ಇವುಗಳೇ ಹೆಚ್ಚಾಗಿ ಖರ್ಚಾಗತಕ್ಕ ಸಾಮಾನುಗಳು ಇವುಗಳೊಡನೆ ಫ್ಲಾನಲ್ ಮುಂತಾದವುಗಳೂ ಖರ್ಚಾಗಿರುವವು

ಸಾಮಾನ್ಯವಾಗಿ ಎಲ್ಲರಿಗೂ ಬೇಕಾದ ಬೇಳೆ, ಉಪ್ಪು, ಹುಣಸೇಹಣ್ಣು, ಬೆಲ್ಲ, ಇವೇ ಮುಂತಾದ ಪದಾರ್ಥಗಳನ್ನು ಸೊಸೈಟಿಯಲ್ಲಿಟ್ಟು ಮಾರದಿದ್ದರೆ ಸೊಸೈಟಿಯ ವ್ಯಾಪಾರದಿಂದ ಮೆಂಬರುಗಳನೇಕರಿಗೆ ಅಷ್ಟು ಪ್ರಯೋಜನ ದೊರೆಯಲಾರದೆಂದು ತಿಳಿಸುವರು ಸುಗ್ಗಿಯ ಕಾಲದಲ್ಲಿ ಅಗ್ಗವಾಗಿ ಕೊಂಡಿಟ್ಟು ಮೆಂಬರುಗಳಿಗೆ ವರ್ಷಾವಧಿ ಒಂದೇ ಸಮನಾದ ಧಾರಣೆಯಲ್ಲಿ ಮಾರುವುದು ಮೇಲೆಂದು ಕೆಲವರೂ, ಸುಗ್ಗಿಯಲ್ಲಿ ಸಾಮಾನನ್ನು ಶೇಖರಿಸಿ ಪೇಟೆ ಧಾರಣೆಯಂತೆ ಮಾರುತ್ತಾ ಬಂದು ಇದರಿಂದ ಬಂದ ಲಾಭವನ್ನು ಮೆಂಬರುಗಳಲ್ಲಿ ಹಂಚಬೇಕೆಂದು ಕೆಲವರೂ ಅಭಿಪ್ರಾಯಪಡುವರು ಇವುಗಳಲ್ಲಿ ಮೊದಲನೆಯದನ್ನು ಸಾಧಿಸುವುದು ಸುಲಭವಲ್ಲ ಎರಡನೆಯದು ಸಹಜವಾದ ಸಲಹೆಯಾಗಿರುತ್ತದೆ ಆದರೆ ಹೆಚ್ಚಾಗಲೀ ಕಡಮೆಯಾಗಲೀ ಮೆಂಬರುಗಳು ಸೊಸೈಟಿಯಲ್ಲಿಯೇ ತೆಗೆದುಕೊಳ್ಳುವೆವು ಎಂಬ ಶಪಥವನ್ನು ಮಾಡಿದರೆ ಇದು ಸಾಧ್ಯವಾಗುವುದೇ ಹೊರತು ಅನ್ಯಥಾ ಆಗುವುದಿಲ್ಲ ಅಜಮಾಯಿಷಿ ತರೀಕು ಜಿನಸಿಗಳನ್ನು ಮಾತ್ರ ಮಾರಲು ಒಂದು ಬ್ರಾಂಚನ್ನು ಅನುಕೂಲವಾದೆಡೆ ಎಲ್ಲಿ ತೆರೆಯಬಹುದು ಅದನ್ನು ನಿರ್ವಹಿಸಲು ಈ ಮಹಾಸಭೆಯಲ್ಲಿ ಹತ್ತುಮಂದಿಯನ್ನು ಚುನಾಯಿಸಿ ಅವರಿಗೆ ಈ ಕಾರ್ಯವನ್ನು ಒಪ್ಪಿಸಬಹುದಾಗಿರುತ್ತದೆ ಮೆಂಬರುಗಳಿಗೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಟ್ಟ ವಿಚಾರದಲ್ಲಿ ಒಂದು ವಿಶೇಷ ವಿಷಯವನ್ನು ಇಲ್ಲಿ ಸೂಚಿಸುವೆವು ನಮ್ಮ ಮೆಂಬರುಗಳಲ್ಲಿ ಕೆಲವುಮಂದಿ ಮನೆಯನ್ನು ಕಟ್ಟುತ್ತಿದ್ದುದರಿಂದ ಅವರಿಗೆ ಬೇಕಾದ ಕಬ್ಬಿಣದ ಸಾಮಾನು ಸಿಮೆಂಟು ಮುಂತಾದವುಗಳನ್ನು ಸೊಸೈಟಿಯ ಮೂಲಕವೇ ತರಿಸಿಕೊಂಡು ತಮ್ಮ ಪ್ರಯೋಜನದೊಂದಿಗೆ ಸೊಸೈಟಿಯ ವ್ಯಾಪಾರಾಭಿವೃದ್ಧಿಗೂ ಪ್ರೋತ್ಸಾಹವನ್ನುಂಟುಮಾಡಿದರು ಹೀಗೆಯೇ ಮೆಂಬರುಗಳು ತಮಗೆ ಬೇಕಾದ ಸಾಮಾನುಗಳನ್ನು ಮುಂದಾಗಿ ತಿಳಿಸಿ ಸೊಸೈಟಿಯ ಮೂಲಕ ತರಿಸಿಕೊಳ್ಳುವುದರಲ್ಲಿ ತಾವೂ ಸೊಸೈಟಿಯೂ ಪ್ರಯೋಜನವನ್ನು ಪಡೆಯಬಹುದಾಗಿರುತ್ತದೆ

ಕೈಗಾರಿಕೆಯ ಅಭಿವೃದ್ಧಿಗೆ ಪ್ರೋತ್ಸಾಹ —ನೇಯ್ದು ತಂದು ಸೊಸೈಟಿಯಲ್ಲಿ ಮಾರಲಿಕ್ಕಿಟ್ಟ ಬಟ್ಟೆಯ ಮೇಲೂ, ತಯಾರಾಗಿದ ಇತರ ಸರಕಿನ ಮೇಲೂ, ಕೆಲಸಗಾರರ ಅನುಕೂಲತೆಗೆ ಮುಂಗಡವಾಗಿ ಶೇಕಡ 25 ರಂತೆ ಮೊಬಲಗನ್ನು ಕೊಟ್ಟು ಆ ಪದಾರ್ಥಗಳನ್ನು ಮಾರಿ, ಬಂದ ಹಣದಲ್ಲಿ ಮುಂಗಡವನ್ನು ಕಳೆಯಿಸಿಕೊಂಡು ಉಳಿದುದನ್ನು ಕೆಲಸಗಾರರಿಗೆ ಕೊಡುತ್ತಿರುವೆವು ಇದರಿಂದ ಸ್ವಲ್ಪಮಟ್ಟಿಗೆ ಕೆಲಸಗಾರರಿಗೆ ಸಹಾಯವಾಗುತ್ತಿರುವುದು.

ಮೆಂಬರುಗಳು ಬಡ್ಡಿಯಿಲ್ಲದೆ ಸೊಸೈಟಿಯಲ್ಲಿ ಡಿಪಾಜಿಟ್ಟು ಇಡುತ್ತಿರುವುದನ್ನು ನೋಡಿದಲ್ಲಿ ಸೊಸೈಟಿಯು ಮೆಂಬರುಗಳ ನಂಬಿಕೆಗೆ ಪಾತ್ರವಾಗಿದೆ ಎಂದು ತಿಳಿಸಲು ತುಂಬಾ ತೃಪ್ತಿಕರವಾಗಿದೆ

ಆಯವ್ಯಯದ ಪಟ್ಟಿಯಿಂದ ವ್ಯಕ್ತವಾಗುವ ನಫೆಯಲ್ಲಿ ನಾಲ್ಕನೇ ಒಂದು ಭಾಗ 1,015 ರೂ ರಿಸರ್ವ್ ಫಂಡನ್ನೂ, ಷೇರ್ ಮೊಬಲಗಿನ ಮೇಲೆ ಶೇಕಡಾ ರೂ 6¾ ರಂತೆ ಬಡ್ಡಿಯೂ, ವ್ಯಾಪಾರದ ಮೊಬಲಗಿನ ಮೇಲೆ ಶೇಕಡಾ ರೂ 3—3—0 ಯಂತೆ ಸೊಸೈಟಿಯಲ್ಲಿ ವ್ಯಾಪಾರ ಮಾಡಿದ ಮೆಂಬರುಗಳಿಗೆ ಕೊಡಬೇಕೆಂದೂ ನಿಶ್ಚಯಿಸಿರುತ್ತದೆ ಲೆಕ್ಕ ಶೋಧಿಸುವ ಡೆಪ್ಯುಟಿ ಅಕೌಂಟೆಂಟ್ ಮ|| ರಾಘವೇಂದ್ರ ರಾಯರಿಗೆ 100 ರೂಪಾಯಿ ಆನರೇರಿಯಂ ಕೊಡಬೇಕೆಂದೂ, ಅವರೇ ಈ ಸಂವತ್ಸರವೂ ಲೆಕ್ಕ ಸರಿನೋಡಿ ಲೆಕ್ಕದ ಕೆಲವು ನಮೂನೆಗಳನ್ನು ಅವಶ್ಯ ಬದಲಾಯಿಸಬೇಕಾದದ್ದನ್ನು ಬದಲಾಯಿಸಿ ಆದರಂತೆ ಲೆಕ್ಕ ತಯಾರುಮಾಡಿಸಲು ಆಡಿಟರ್ ಆಗಿರಬೇಕೆಂದೂ ಗೊತ್ತುಮಾಡಿರುತ್ತೇವೆ ಮುಂದಾಗಿಯೇ ಒಬ್ಬರನ್ನು ಗೊತ್ತುಮಾಡುವುದರಿಂದ ಜನರಲ್ ಮೀಟಿಂಗು ಕಾಲಕ್ಕೆ ಸರಿಯಾಗಿ ಆಗಲು ಸಾಧಾರಣವಾಗಿ ಅನನುಕೂಲಗಳು ಕಾಣಬರಲಾರವು.

ಸೊಸೈಟಿಯ ನೌಕರವರ್ಗದವರು ಬಹು ಮಿತವರ್ತನೆಯನ್ನು ವಹಿಸಿ ಸೊಸೈಟಿಯ ಆಸ್ತಿಯು ಪೋಲಾಗದೆ ನಿಗಾವಣೆಯಿಂದಲೂ ಜವಾಬ್ದಾರಿಯಿಂದಲೂ ಕೆಲಸ ನಿರ್ವಹಿಸಿದುದರಿಂದ ಅವರಿಗೆ 250 ರೂ ಹಂಚಬೇಕೆಂದು ಗೊತ್ತಾಗಿದೆ ಮ್ಯಾನೇಜಿಂಗ್ ಕಮಿಟಿಯವರು ಈ ಸಾಲಿನಲ್ಲಿ ಒಟ್ಟು 9 ಆವರ್ತಿ ಸೇರಿದ್ದರಲ್ಲಿ 2 ಆವರ್ತಿ ಮಾತ್ರ ಕೋರಂ ಇಲ್ಲದೆ ಮೀಟಿಂಗ್ ಅಡ್ಜರ್ನ್ ಆಯಿತು

ಈ ಸೊಸೈಟಿಗೆ ಸೇರಿದ ಪ್ರತಿಗಳಿಂದ ಸ್ವಲ್ಪಸ್ವಲ್ಪವಾಗಿ ಶೇಖರಿಸಲ್ಪಟ್ಟ ಹಣಕ್ಕೆ ಲೆಕ್ಕಪತ್ರದ ಸಮಜಾಯಿಷಿಯು ಸಮರ್ಪಕವಾಗಿರುವುದೆಂಬುವದನ್ನು ನಿಶ್ಚಯಿಸುವುದಕ್ಕಾಗಿ ಕೋ ಆಪರೇಟಿವ್ ಸೊಸೈಟಿಯ ರೆಜಿಸ್ಟ್ರಾರ್‌ರವರು ತಮ್ಮ ಹೆಡ್ ಕ್ಲಾರ್ಕರವರನ್ನು ಮೂರು ಆವರ್ತಿ ಕಳುಹಿಸಿ ಲೆಕ್ಕನೋಡಿಸಿರುವರು ಪ್ರಜೆಗಳ ಪುರೋಭಿವೃದ್ಧಿಗಾಗಿ ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸಿ ಒಂದು ಕಾನೂನನ್ನು ಮಾಡಿ ಅನೇಕ ರಿಯಾಯತಿಗಳನ್ನು ಕಲ್ಪಿಸಿರುವುದಕ್ಕೆ ಶ್ರೀಮನ್ ಮಹಾರಾಜರವರಿಗೂ ಅವರ ಸರಕಾರಕ್ಕೂ ನಾವು ತುಂಬಾ ಕೃತಜ್ಞರಾಗಿರುತ್ತೇವೆ

ಒಬ್ಬ ಜೈನ ದೊಡ್ಡ ಮನುಷ್ಯರ ಚರಿತ್ರೆಯು

ಬೊಂಬಾಯಿನಗರ ನಿವಾಸಿಗಳಾದ ದಾನವೀರ ಜೈನ ಕುಲಭೂಷಣ ಶೇಟ್ ಮಾಣಿಕಚಂದ್‌ರವರು ಸೂರತನಗರದಲ್ಲಿ ಅಫೀಮು ವ್ಯಾಪಾರದಿಂದ ಜೀವಿಸುತ್ತಿದ್ದ ಗುಮಂಜಿರವರ ಮಕ್ಕಳು ಹೀರಾಚಂದ್‌ರವರ ತೃತೀಯ ಪುತ್ರರು ಇವರಿಗೆ ಮೋತಿಚಂದ್, ಪಾನಾಚಂದ್ ಮತ್ತು ನವಲ್‌ಚಂದ್ ಎಂಬ ಮೂವರು ಸಹೋದರರಿದ್ದರು. ಮೋತಿಚಂದ್ ಮತ್ತು ಪಾನಾಚಂದರವರು ಗತಿಸಿಹೋದರು ಮಾಣಿಕಚಂದ್ ಶೇಟರು ವಿಕ್ರಮಶಕ ೧೯೦೮ನೆಯ ಕಾರ್ತೀಕಮಾಸದ ಕೃಷ್ಣಪಕ್ಷದ ೧೪ನೆಯ ದಿನ ಸೂರತ್ ನಗರದಲ್ಲಿ ಜನಿಸಿದರು ಇವರಿಗೆ ೧೨ ವರ್ಷವಾಗುವ ವರಿವಿಗೂ ಗುಜರಾತಿ ಭಾಷೆಯಲ್ಲಿ ತಕ್ಕಮಟ್ಟಿಗೆ ಶಿಕ್ಷಣವಾಯಿತು ಸೂರತಿನಲ್ಲಿ ಸರಿಯಾಗಿ ಜೀವನವು ಜರುಗದಿರಲು ಇವರ ತಂದೆಯು ಸಂಸಾರದೊಡನೆ ಬೊಂಬಾಯಿ ನಗರವನ್ನು ವಿ ಶ ೧೯೨೦ರಲ್ಲಿ ಸೇರಿದರು ಅಲ್ಲಿ ೬-೭ ವರ್ಷಗಳ ವರೆಗೂ ಮಾಣಿಕಚಂದಜೀಯವರು ಮುತ್ತಿನ ವ್ಯಾಪಾರದಲ್ಲಿ ಸಾಕಾದಷ್ಟು ಪರಿಶ್ರಮವನ್ನು ಹೊಂದಿದರು

ಬುದ್ಧಿಕುಶಲತೆಯು ಅತಿ ವಿದ್ಯಾವಂತರಿಗೇ ಆಗಲಿ, ಬಹು ಐಶ್ವರ್ಯವಂತರಿಗೇ ಆಗಲೀ ಕಟ್ಟುಬಿದ್ದಿಲ್ಲ ಸಾಧಾರಣವಾಗಿ ಬಡಸ್ಥಿತಿಯಲ್ಲಿದ್ದ ನಮ್ಮ ಶೇಟ್‌ಜೀಯವರು ಬಾಲ್ಯ ವಯಸ್ಸಿನಲ್ಲೇ ತಮಗೆ ವ್ಯಾಪಾರದಲ್ಲಿದ್ದ ನೈಪುಣ್ಯವನ್ನು ಸಾರ್ಥಕಗೊಳಿಸಬೇಕೆಂಬ ಕುತೂಹಲದಿಂದ ವಿ ಶ ೧೯೨೫ರಲ್ಲಿ ಬೊಂಬಾಯಿ ನಗರದಲ್ಲಿ "ಮಾಣಿಕಚಂದ್ ಪಾನಾಚಂದ್ ಕಂಪೆನಿ" ಎಂಬ ಹೆಸರಿನಲ್ಲಿ ಒಂದು ಅಂಗಡಿಯನ್ನು ಪ್ರಾರಂಭಿಸಿ, ಮುತ್ತಿನ ವ್ಯಾಪಾರ ಮಾಡುತ್ತಾ ಬಂದರು ಕೆಲವು ವರ್ಷಗಳಲ್ಲಿ ಇವರು ಸ್ವಸಾಮರ್ಥ್ಯದಿಂದಲೇ ಕೊಂಚ ಬಂಡವಾಳಸ್ಥರಾದರು ಇದನ್ನು ವೃದ್ಧಿಪಡಿಸಬೇಕೆಂಬ ಕುತೂಹಲವು ಸೇಟ್‌ಜೀಯವರ ಮನಸ್ಸಿನಲ್ಲಿ ಚೆನ್ನಾಗಿ ನಾಟಿತು ಸ್ವದೇಶೀಯರಲ್ಲಿ ವ್ಯಾಪಾರ ಮಾಡುವದಕ್ಕಿಂತಲೂ ವಿದೇಶೀಯರಲ್ಲಿ ವ್ಯಾಪಾರ ಮಾಡುವದು ತುಂಬಾ ಲಾಭಕರವೆಂದು ತಿಳಿದು ೧೯೩೪ರಲ್ಲಿ ಯೂರೋಪ್ ಖಂಡದ ವರ್ತಕರೊಡನೆ ಮುತ್ತಿನ ವ್ಯಾಪಾರ ಮಾಡಲಾರಂಭಿಸಿದರು ನಾಲ್ಕಾರು ವರ್ಷಗಳಲ್ಲಿಯೇ ಇವರಿಗೆ ಲಕ್ಷಾಂತರ ರೂಪಾಯಿ ಸಂಪಾದನೆಯಾಯಿತು ಇಷ್ಟರಲ್ಲಿ ಇವರು ಬೊಂಬಾಯಿಯನ್ನೇ ಸ್ಥಳವನ್ನಾಗಿ ಮಾಡಿಕೊಂಡು ಅಲ್ಲಿ ಕೆಲವು ಆಸ್ತಿಗಳನ್ನು ಸಂಪಾದಿಸಿದರು ಬಾಲ್ಯದಿಂದಲೂ ದೇವರಲ್ಲಿ ಸಹಜಭಕ್ತಿಯನ್ನಿಟ್ಟುಕೊಂಡು ಪ್ರತಿ ದಿನವೂ ತಮ್ಮ ತಂದೆಯವರೊಡನೆ ಭಗವಂತನ ಪೂಜೆಯನ್ನು ಪ್ರೀತಿಪೂರ್ವಕವಾಗಿ ಮಾಡುತ್ತಿದ್ದರು ಇಷ್ಟೇ ಅಲ್ಲ, ಬೊಂಬಾಯಿ ನಗರದಲ್ಲಿ ಆಗಾಗ್ಗೆ ನಡೆಯುತ್ತಿದ್ದ ಮತಸಂಬಂಧವಾದ ಸಮಸ್ತ ಸಭೆಗಳಿಗೂ ತಪ್ಪದೆ ಇವರು ಹೋಗುತ್ತಿದ್ದರು ಇವರ ಮನಸ್ಸು ದ್ರವ್ಯಾರ್ಜನೆ ಮತ್ತು ಪುಣ್ಯಾರ್ಜನೆ ಇವೆರಡರಲ್ಲಿಯೇ ಮಗ್ನವಾಗಿದ್ದುದರಿಂದ ಐಶ್ವರ್ಯವು ಹೆಚ್ಚಿದಹಾಗೆಲ್ಲಾ ತಮ್ಮ ಮತ ಸೇವೆಯನ್ನು ಮಾಡಬೇಕೆಂಬ ಅಭಿಲಾಷೆಯೂ ಹೆಚ್ಚಿತು ಪೂರ್ವದಲ್ಲಿ ಅತ್ಯುನ್ನತ ಸ್ಥಿತಿಯಲ್ಲಿದ್ದು ಈಗ ಅತಿ ಹೀನಸ್ಥಿತಿಯಲ್ಲಿರುವ ಜೈನ ಮತವನ್ನು ಉದ್ಧಾರ ಮಾಡಬೇಕೆಂಬದಾಗಿ ಕಂಕಣಬದ್ಧರಾದರು ೧೯೪೯ರಲ್ಲಿ ಬೊಂಬಾಯಿ ನಗರದಲ್ಲಿ ಇವರು ಬೊಂಬಾಯಿ ಪ್ರಾಂತಿಕ ಸಭೆಯ ಕಾರ್ಯದರ್ಶಿಗಳಾಗಿ ಗೊತ್ತುಮಾಡಲ್ಪಟ್ಟರು

ಇವರಿಗೆ ೨೬ನೇ ವರ್ಷದಲ್ಲಿ ದಕ್ಷಿಣ ಮಹಾರಾಷ್ಟ್ರ ದೇಶದ ಶ್ರೀಮತಿ ಚತುರ್ಬಾಯಿ ಎಂಬುವ ಕನ್ಯಾರತ್ನದೊಡನೆ ವಿವಾಹವು ಜರುಗಿತು ಈಕೆಯ ಪತಿಭಕ್ತಿಯು ಸ್ತೋತ್ರಾರ್ಹವಾಗಿರುತ್ತದೆ ಈ ದಂಪತಿಗಳಿಗೆ ನಾಲ್ವರು ಪುತ್ರರೂ ಮೂರು ಮಂದಿ ಪುತ್ರಿಯರೂ ಜನಿಸಿದರು ಆದರೆ ದೈವಭಕ್ತರೂ ಮತ್ತು ಪುಣ್ಯಶಾಲಿಗಳೂ ಆದ ನಮ್ಮ ಶೇಟ್‌ಜೀಯವರಿಗೆ ವ್ಯಸನವು ತಪ್ಪಲಿಲ್ಲ ಅವರ ಮೂವರು ಪುತ್ರರೂ, ಒಬ್ಬ ಪುತ್ರಿಯೂ ಪರಲೋಕಗಾಮಿಗಳಾದರು ಇವರ ವ್ಯಸನವು ಇಷ್ಟಕ್ಕೆ ಪೂರೈಸಲಿಲ್ಲ ಇವರ ಧರ್ಮಪತ್ನಿಯಾದ ಚತುರ್ಬಾಯಿಯವರೂ ಕೂಡ ೧೯೫೭ರಲ್ಲಿ ಸ್ವರ್ಗಸ್ಥರಾದರು ಮಗನ್‌ಬಾಯಿಯೆಂಬ ಪುತ್ರಿಯಾದರೋ ಬಾಲ್ಯದಲ್ಲೇ ವೈಧವ್ಯವನ್ನು ಪಡೆದಳು ಅವಿವಾಹಿತಳಾದ ಕನಿಷ್ಠ ಪುತ್ರಿಗೆ ಈಗ ೧೪ ವರ್ಷ ವಯಸ್ಸಾಗಿದೆ ಬಳಿಕ ಪಲದಾನದ ಶ್ರೀಮತಿ ನವೀಬಾಯಿ ಎಂಬುವ ಕನ್ಯೆಯೊಡನೆ ಶೇಟರಿಗೆ ದ್ವಿತೀಯ ವಿವಾಹ ಬೆಳೆಯಿತು ಈಕೆಯೂ ಪತಿಪರಾಯಣೆಯಾಗಿ ಈಗ ಮೂರು ತಿಂಗಳ ಪುತ್ರರತ್ನವನ್ನು ಪಡೆದಿರುತ್ತಾಳೆ

ಮಾಣಿಕಚಂದ್ ಶೇಟರವರು ಚಿಕ್ಕಂದಿನಿಂದಲೂ ವಿದ್ಯೆಯಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದು ಬಾಲ್ಯದಲ್ಲೇ ವೈಧವ್ಯವನ್ನು ಪಡೆದು ವ್ಯಸನದಲ್ಲಿ ಮುಳುಗಿದ್ದ ತಮ್ಮ ಪುತ್ರಿಯಾದ ಮಗನಬಾಯಿಗೆ ಸಂಸ್ಕೃತ ವಿದ್ಯಾಭ್ಯಾಸವನ್ನು ಚೆನ್ನಾಗಿ ಮಾಡಿಸಿದ್ದಲ್ಲದೆ ಆಕೆಯ ಮನಸ್ಸೆಲ್ಲವೂ ಸರ್ವದಾ ಧರ್ಮಾಚರಣೆಯಲ್ಲಿಯೇ ಇರುವದಕ್ಕೆ ಸಾಕಾದ ಸಲಕರಣೆಗಳನ್ನು ಕಲ್ಪಿಸಿಕೊಟ್ಟಿರುತ್ತಾರೆ ತನ್ನ ತಂದೆಯ ಮೇಲ್ಪಂಕ್ತಿಯನ್ನು ಅನುಸರಿಸಿ ಈಕೆಯು ವಿದ್ಯಾಹೀನೆಯರಾಗಿ ಮೌಢ್ಯದಲ್ಲಿ ನರಳುತ್ತಿರುವ ತನ್ನ ಸಮಸ್ತ ಜೈನ ಸಹೋದರಿಯರಿಗೂ ವಿದ್ಯೆಯಿಂದುಂಟಾಗಬಹುದಾದ ಪ್ರಯೋಜನಗಳನ್ನು ವಿಶದವಾಗಿ ತಿಳಿಯಪಡಿಸುತ್ತಾ, ತಾನು ಹೋಗುವ ಪ್ರದೇಶಗಳಲ್ಲೆಲ್ಲಾ ಸ್ತ್ರೀವಿದ್ಯಾಭ್ಯಾಸವನ್ನು ಪ್ರಚಾರಮಾಡುತ್ತಾ, ಸಾಧ್ಯವಾದಷ್ಟು ದ್ರವ್ಯಸಹಾಯ ಮಾಡುತ್ತಾ ತನ್ನ ಜೀವಮಾನವೆಲ್ಲವೂ ಸ್ತ್ರೀ ವಿದ್ಯಾಭ್ಯಾಸದ ಪ್ರೋತ್ಸಾಹದಲ್ಲಿಯೂ ದೇವರ ಸೇವೆಯಲ್ಲಿಯೂ ಕಳೆಯಬೇಕೆಂದು ಪ್ರತಿಜ್ಞೆಯುಳ್ಳವಳಾಗಿರುತ್ತಾಳೆ

ಖಿಲವಾಗುತ್ತಿರುವ ಯಾವ ಜೈನ ತೀರ್ಥಕ್ಷೇತ್ರಗಳನ್ನು ಉತ್ತಮಸ್ಥಿತಿಗೆ ತರುವದಕ್ಕಾಗಿ ಸೇಟ್‌ಜೀಯವರು ಇಂಡಿಯಾದೇಶದ ಸಮಸ್ತ ಪ್ರಾಂತ್ಯಗಳಲ್ಲಿಯೂ ಸಂಚರಿಸುತ್ತಾ ಈ ಕಾರ್ಯದಲ್ಲಿ ತಮ್ಮ ಸರ್ವಸಾಹಸವನ್ನೂ ಖರ್ಚು ಮಾಡುತ್ತಿದ್ದಾರೆ ಇವರು ತಮ್ಮ ಸಕಲ ಸಹೋದರರ ಸಂಗಡ ಏಕಗೃಹಕೃತ್ಯದಲ್ಲಿಯೇ ವಾಸಮಾಡುತ್ತಾ, ಇದುವರೆಗೆ ತಮ್ಮ ಕಷ್ಟಾರ್ಜಿತವಾದ ದ್ರವ್ಯದಲ್ಲಿ ಐದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ನಾನಾ ಧರ್ಮಕಾರ್ಯಗಳಿಗೆ ವಿನಿಯೋಗಪಡಿಸಿರುತ್ತಾರೆ ಈಚೀಚೆಗೆ ಈ ಮಹನೀಯರು ದ್ರವ್ಯಾರ್ಜನಾ ಕಾರ್ಯದಿಂದ ನಿವೃತ್ತರಾಗಿ ಮತಸಂಬಂಧವಾದ ಮತ್ತು ಇತರ ಧಾರ್ಮಿಕಕಾರ್ಯಗಳಲ್ಲಿಯೇ ತಮ್ಮ ಕಾಲಕ್ಷೇಪವನ್ನು ಮಾಡುತ್ತಾ ಇರುತ್ತಾರೆ

ಈ ಧರ್ಮಿಷ್ಠರೇ ಈಗಿನ ದಿಗಂಬರ ಜೈನರಲ್ಲೆಲ್ಲಾ ಅದ್ವಿತೀಯರೆಂದು ನಿಸ್ಸಂದೇಹವಾಗಿ ಹೇಳಬಹುದು ಇವರ ಸತ್ ಸ್ವಭಾವವನ್ನೂ, ಉದಾರಗುಣವನ್ನೂ, ನಿಷ್ಕೃಷ್ಟತ್ವವನ್ನೂ, ಪರೋಪಕಾರವೇ ಮೊದಲಾದ ಸದ್ಗುಣಗಳನ್ನೂ ಬೊಂಬಾಯಿ ಸರ್ಕಾರದವರು ಪರಿಗಣಿಸಿ ಈ ಮಹಾನುಭಾವರಿಗೆ "ಜಸ್ಟಿಸ್ ಆಫ್ ದಿ ಪೀಸ್" ಎಂಬ ಅತಿ ಅಮೋಘವಾದ ಬಿರುದನ್ನು ದಯಪಾಲಿಸಿರುತ್ತಾರೆ ದಕ್ಷಿಣ ಮಹಾರಾಷ್ಟ್ರ ಜೈನ ಸಭೆಯವರು ಇವರಿಗೆ—"ದಾನವೀರ" ರೆಂಬ ಬಿರುದನ್ನೂ, ಭಾರತವರ್ಷೀಯ ದಿಗಂಬರ ಜೈನ ಮಹಾ ಸಭೆಯವರು "ಜೈನ ಕುಲ ಭೂಷಣ" ರೆಂಬ ಬಿರುದನ್ನೂ ಕೊಟ್ಟಿರುತ್ತಾರೆ ಇವರು ಭಾರತವರ್ಷೀಯ ದಿಗಂಬರ ಜೈನ ಮಹಾ ಸಭೆಗೆ ಅನೇಕ ವೇಳೆ ಅಧ್ಯಕ್ಷರಾಗಿರುತ್ತಾರೆ

ಟಿ ಜಿ ಆರ್

ವ್ಯವಸಾಯ ಮತ್ತು ಕೈಗಾರಿಗೆ ವಿಚಾರಗಳು

೧ ಕೈ ಮಗ್ಗಗಳ ಪ್ರಾಶಸ್ತ್ಯವು

ಭಾರಿ ಭಾರೀ ಕಾರ್ಖಾನೆಗಳಲ್ಲಿ ಯಂತ್ರಗಳಿಂದ ನಡೆಯುವ ಮಗ್ಗಗಳ ಕೆಲಸವನ್ನೂ ಸಾಧಾರಣವಾದ ದೇಶೀಯ ಕೈ ಮಗ್ಗಗಳ ಕೆಲಸವನ್ನೂ ಹೋಲಿಸಿ ನೋಡಿದರೆ, ಯಂತ್ರ ಮಗ್ಗಗಳಲ್ಲಿ ಇಲ್ಲದಿರುವ ಕೆಲವು ಸೌಕರ್ಯಾನುಕೂಲತೆಗಳು ನಮ್ಮ ಕೈ ಮಗ್ಗಗಳಲ್ಲಿ ಉಂಟು ಅವು ಯಾವವೆಂದರೆ—(೧) ಕೈ ಮಗ್ಗಗಳಿಗೆ ತಾನೆ ಬಂಡವಾಳ ಬೇಕಿಲ್ಲ, ಮತ್ತು ಇವು ಅನೇಕ ವರುಷ ಬಾಳಿಕೆ ಬರುತ್ತವೆ, (೨) ಇಲ್ಲಿನ ಜನರು ಸಾಧಾರಣವಾಗಿ ಉಪಯೋಗಿಸುವಂಥಾ ಚಿತ್ರ ವಿಚಿತ್ರವಾದ ನಾನಾ ಮಾದರಿ ಬಟ್ಟೆಬರೆಗಳ ನೇಗೆಯು ಕೈ ಮಗ್ಗಗಳಲ್ಲಿ ಸಾಧ್ಯವಾಗುವ ಹಾಗೆ ಯಂತ್ರಗಳಲ್ಲಿ ಸಾಧ್ಯವಾಗುವುದಿಲ್ಲ (೩) ಕೈ ಮಗ್ಗದಲ್ಲಿ ತಯಾರಾಗುವ ಒರಟು ಬಟ್ಟೆಗಳು ಬಹಳ ದಿನ ಬಾಳಿಕೆ ಬರುವುದಾಗಿಯೂ ದಡವಾಗಿಯೂ ಇರುತ್ತವೆಯಾದದ್ದರಿಂದ ರೈತರ ಒರಟು ಉಪಯೋಗಕ್ಕೆ ಇವು ತಕ್ಕವಾಗಿರುತ್ತವೆ ಮತ್ತು (೪) ಕೈಮಗ್ಗದ ನೇಗೆಯವನ ಗೃಹಕೃತ್ಯಕ್ಕೆ ತಾನೆ ಖರ್ಚು ಹಿಡಿಯುವುದಿಲ್ಲ, ಮತ್ತು ಇವನು ಪರಂಪರೆಯಾಗಿ ನಾಜೋಕಾದ ಬಟ್ಟೆಬರೆಗಳನ್ನೇ ನೇದು ನೇದು ಇವನಿಗೆ ಕೆಲಸದಲ್ಲಿ ಕೈ ಬಹಳ ಸಲೀಸಾಗಿ ಓಡುತ್ತದೆ ಅಲ್ಲದೆ ಇವನು ಬರೀ ನೇಗೇ ಕಸಬಿನಿಂದಲೇ ಜೀವನ ಮಾಡುವುದಿಲ್ಲ ಆದರ ಜೊತೆಗೆ ವ್ಯವಸಾಯವನ್ನೂ ಇಟ್ಟುಕೊಂಡಿರುವುದರಿಂದ ಒಂದು ವೇಳೆ ಹತ್ತೀ ವ್ಯಾಪಾರದಲ್ಲಿ ಹೆಚ್ಚು ಕಡಮೆಗಳು ಬಂದು ನೇಗೇ ಕಸಬಿಗೆ ತೊಂದರೆಯುಂಟಾದರೂ ಸುಧಾರಿಸಿಕೊಳ್ಳಬಲ್ಲನು

೨ ಜಿರಾಯಿತು ಮುಟ್ಟುಗಳೂ ಯಂತ್ರಗಳೂ

ಹೋದ ವರುಷ ಸಂಸ್ಥಾನದಲ್ಲಿ ಕೋಲಾರದ ಮಿಷನ್‌ನವರು ಮಾಡಿಸುವ ಹಗುರವಾದ ನೇಗಿಲುಗಳಿಗೆ ಗಿರಾಕಿಯು ವಿಶೇಷವಾಗಿದ್ದು, ಬೇಕಾದಷ್ಟನ್ನು ಸಕಾಲಕ್ಕೆ ಒದಗಿಸಿಕೊಡುವುದಕ್ಕಾಗಲಿಲ್ಲ ಮುಂಗಡವಾಗಿ ಇಲಾಖೆಯವರಲ್ಲಿ ಹಣ ಡಿಪಾಜಟ್ಟು ಇಟ್ಟಿದ್ದವರಿಗೇನೇ ನೇಗಿಲು ದೊರೆಯಲಿಲ್ಲ ಮಿಷನ್ನಿನ ಅಧ್ಯಕ್ಷರಾದ ರೆವ್ ಹಾಲಿಸ್ಟರ್ ಯವರು ಈ ಸಲ ಇನ್ನೂ ಹೆಚ್ಚಾಗಿ ನೇಗಿಲುಗಳನ್ನು ತರಿಸುವವರಾಗಿರುತ್ತಾರಾದದ್ದರಿಂದ ಮುಂದಿನ ಉಳುಮೆಯ ಹೊತ್ತಿಗೆ ಬೇಕಾದಷ್ಟು ದೊರಕುವವೆಂದು ನಂಬಿದೆ ಸರ್ಕಾರೀ ವ್ಯವಸಾಯದ ಇಲಾಖೆಯಲ್ಲಿ ನೇಗಿಲು ಗುಳಗಳನ್ನು ಮಾತ್ರ ಕೆಲವರು ಖಾಯಿಷು ಮಾಡಿದರು ಇವೂ ಕೂಡ ಇರಲಿಲ್ಲವಾಗಿ ಸ್ಥಳದ ಕಮ್ಮಾರರಿಂದ ಕೆಲವನ್ನು ಮಾಡಿಸಿ ಗುಳ ಒಂದಕ್ಕೆ ೮ ಆಣೆಯಿಂದ ೧೨ ಆಣೆ ವರೆಗೂ ಖರೀದಿಗೆ ಕೊಟ್ಟದ್ದಾಯಿತು ಜಿರಾಯಿತು ಮುಟ್ಟುಗಳಿಗೆ ವ್ಯಾಪಾರಿಗಳು ಮನಸ್ಸಿಗೆ ಬಂದಹಾಗೆಲ್ಲಾ ಧಾರಣೆ ಹಾಕುವುದರಿಂದ ಈ ಮುಟ್ಟುಗಳ ವ್ಯಾಪಾರವೇ ಬಹಳ ಮಟ್ಟಿಗೆ ಕಡಮೆಯಾಗಲು ಕಾರಣವಾಗುತ್ತದೆ ಷುರುವಿನಲ್ಲಿ ಇಂಥಾ ಪ್ರತಿಕೂಲವನ್ನು ತಪ್ಪಿಸಬೇಕಾದರೆ ಈ ಮುಟ್ಟುಗಳನ್ನು ತಯಾರ್ಮಾಡಿ ನಿರ್ಬಾದ ಖರೀದಿಗೆ ಕೊಡುವಂತೆ ಸ್ಥಳದ ಅಥವಾ ಪರಸ್ಥಳದ ವ್ಯಾಪಾರಿಗಳೊಂದಿಗೆ ಇಲಾಖೆಯವರು ಒಂದು ಏರ್ಪಾಡು ಮಾಡಿಕೊಳ್ಳುವುದು ಒಳ್ಳೇದು ಅವರು ಈ ವರುಷ ನೇಗಿಲು ಗುಳಗಳನ್ನೇನೋ ಈ ರೀತಿ ಮಾಡಬೇಕೆಂದಿದ್ದಾರೆ ಗುಳಗಳನ್ನು ಇಲ್ಲೇ ತಯಾರ್ಮಾಡಿಸಿ ಹೊರಗಿನಿಂದ ಬರುವ ಸರಕಿಗಿಂತಲೂ ಕಡಮೆ ಖರೀದಿಗೆ ಮಾರಿದರೆ ಲಾಭ ಪಡೆಯಬಹುದೆಂಬುವದರಲ್ಲಿ ಸಂಶಯವೇನೇನೂ ಇರುವುದಿಲ್ಲ

ಈಗ ಮೂರು ವರುಷದ ಕೆಳಗೆ ಡಾಕ್ಟರ್ ಲೇಮ್ಯಾನ್ ಯವರು ತರಿಸಿದ ಫಸಲು ರೇಜಿಮಾಡುವ ಯಂತ್ರವು ದಿನೇ ದಿನೇ ಹೆಚ್ಚಾಗಿ ರೂಢಿಯಲ್ಲಿ ಬರುತ್ತಿದೆ ಅನೇಕರು ಅದನ್ನು ಎರವಲಾಗಿ ಕೇಳಿದರು ಆದರೆ ಸ್ವಂತವಾಗಿ ಯಂತ್ರವನ್ನು ಕೊಂಡುಕೊಳ್ಳಲು ಇಷ್ಟಪಟ್ಟವರಿಗೇನೇ ಎರವಲು ಕೊಟ್ಟದ್ದಾಯಿತು ಯಂತ್ರದ ಸವಕಳಿ ಮತ್ತು ನಡಿಸೋಣದರ ಖರ್ಚಿಗಾಗಿ ದಿನಕ್ಕೆ ೨ ರೂಪಾಯಿನಂತೆ ಬಾಡಿಗೆ ವಸೂಲು ಮಾಡಲಾಯಿತು ಆಗಲೇ ಎರಡು ಯಂತ್ರಗಳಿಗೋಸ್ಕರ ಬರೆಸಿರುತ್ತಾರೆ ಮತ್ತು ಮುಂದಿನ ಫಸಲು ರೇಜೀ ಕಾಲದೊಳಗಾಗಿ ಇನ್ನೂ ಕೆಲವನ್ನು ತರಿಸಬೇಕಾಗುವ ಸಂಭವ ಉಂಟಾದೀತು ಇದಲ್ಲದೆ ಮೇವು ಕತ್ತರಿಸುವ ಯಂತ್ರಕ್ಕೂ ಕ್ರಮೇಣ ಗಿರಾಕಿ ಹೆಚ್ಚುತ್ತಿದೆ ಹೋದ ವರುಷ ಜಮಿನಾನುದಾರರಿಗೋಸ್ಕರವಾಗಿ ೩ ಯಂತ್ರಗಳನ್ನು ತರಿಸಿರುತ್ತಾರೆ

ಮೇಲ್ಕಂಡವು ಅಲ್ಲದೆ ಅರಮನೆ ಕರೋಹಳ್ಳೀ ಇಲಾಖೆಗಾಗಿ ಫಸಲು ಕಟಾವಿನ ಯಂತ್ರ ಒಂದು, ಹುಲ್ಲು ಕೊಯ್ಯುವ ಯಂತ್ರ ಒಂದು, ಆವಿಯ ಬಲದಿಂದ ನಡೆಯುವ ಮೇವು ಕತ್ತರಿಸುವ ಯಂತ್ರ ಒಂದು ಮತ್ತು ಆವಿಯ ಬಲದಿಂದ ನಡೆಯುವ ತೂರುವ ಯಂತ್ರ ಒಂದು, ಈ ನಾಲ್ಕನ್ನು ಕ್ಯಾನಡಾ ದೇಶದಿಂದ ತರಿಸುವವರಾಗಿದ್ದಾರೆ ಮತ್ತು ಅದೇ ಇಲಾಖೆಗಾಗಿ ಆವಿಯ ಬಲದಿಂದ ಕೆಲಸ ಮಾಡುವ ಒಂದು ಬೀಸುವ ಯಂತ್ರವನ್ನೂ ತರಿಸುವದರಲ್ಲಿದ್ದಾರೆ

ವ್ಯವಸಾಯದ ಇಲಾಖೆಗಾಗಿ ಒಂದು, ಮತ್ತು ಡೆಪ್ಯುಟಿ ಅಸಿಸ್ಟೆಂಟ್ ಕಮಿಷನರ್ ಮೆ|| ಬಾದಾಮಿ ಕೃಷ್ಣರಾಯರಿಗೋಸ್ಕರ ಒಂದು, ಅಂತು ೨ ಸಕ್ಕರೆ ತಯಾರು ಮಾಡುವ ಯಂತ್ರಗಳಿಗಾಗಿ ಬರೆಸಿರುತ್ತೆಯಲ್ಲದೆ ಮೆ|| ಕೃಷ್ಣರಾಯರಿಗೋಸ್ಕರವಾಗಿಯೇ ಪಂಜಾಬು ನಾಹನ್ ಕಾರ್ಖಾನೆಯಿಂದ ಎರಡು ಕಬ್ಬಿನ ಗಾಣಗಳು ತರಿಸಲ್ಪಟ್ಟವು

೩ ಬೆಂಗಳೂರಲ್ಲಿ ತಾತಾಯವರ ರೇಷ್ಮೇ ಫಾರಂ

ಬೊಂಬಾಯಿ ಕೋಟ್ಯಧೀಶ್ವರರಾದ ತಾತಾಯವರು ಬೆಂಗಳೂರು ಸಮೀಪದಲ್ಲಿ ಒಂದು ರೇಷ್ಮೇ ಫಾರಮನ್ನು ಸ್ಥಾಪಿಸಿರುವದು ಸರಿಯಷ್ಟೆ ಫಾರಂನಲ್ಲಿ ಹುಳುಗಳನ್ನು ಸಾಕುವುದರಲ್ಲಿಯೂ, ಹಿಪ್ಪನೇರಳೆ ಸೊಪ್ಪಿನ ವ್ಯವಸಾಯದಲ್ಲಿಯೂ ಹೊಸ ಹೊಸ ಕ್ರಮಗಳನ್ನೇ ಸಾಧಾರಣವಾಗಿ ಅನುಸರಿಸುತ್ತಾರೆ ಮತ್ತು ನಮ್ಮ ಸೀಮೆಯ ರೇಷ್ಮೇ ಕಸಬುದಾರರಿಗೂ ನೂತನ ವಿಧಾನಗಳನ್ನು ಕಲಿಸುವ ಉದ್ದೇಶದಿಂದ ರೇಷ್ಮೆ ಕಸಬು ವಿಶೇಷವಾಗಿ ನೆಲೆಗೊಂಡಿರುವ ಕಡೆಗಳಲ್ಲಿನ ಕೆಲವು ಸ್ಕೂಲು ಮಾಸ್ತರುಗಳನ್ನು ಫಾರಂನಲ್ಲಿ ತರಬೇತು ಮಾಡಿ ಇವರ ಮೂಲಕ ಗ್ರಾಮಾಂತರಗಳಲ್ಲಿನ ಕಸಬುದಾರರಿಗೆ ಕಲಿಸಿಕೊಡುವ ಏರ್ಪಾಡನ್ನು ಸರ್ಕಾರದವರು ಮಾಡಿರುವದು ನಮ್ಮ ವಾಚಕರಿಗೆ ಗೊತ್ತೇ ಇದೆ ಮತ್ತು ಈ ಉದ್ದೇಶದಿಂದಲೇನೇ ಗೌರ್ನಮೆಂಟಿನವರು ಫಾರಂ ನಿವೇಶನವನ್ನು ಕಂದಾಯ ವಗೈರೆ ತಿರ್ವೆಗಳೇನೂ ಇಲ್ಲದೆ ಮುಫತ್ತಾಗಿ ಬಿಟ್ಟುಕೊಟ್ಟಿರುವದಲ್ಲದೆ ಫಾರಮಿನ ಖರ್ಚಿನ ದೆಸೆಯಿಂದ ಸಾಲೀಯಾನಾ ೩,೦೦೦ ರೂಪಾಯಿ ಗ್ರಾಂಟನ್ನೂ ಕೊಡುತ್ತಿರುವರು

ಫಾರಮಿನ ಆಡಳಿತವನ್ನೆಲ್ಲಾ ಇದುವರೆಗೂ ತಾತಾ ಕಂಪೆನಿಯವರು ತಮ್ಮ ಕೈಯಲ್ಲೇ ಇಟ್ಟುಕೊಂಡಿದ್ದರು ಈಗ ಇದನ್ನು ಸಾಲ್ವೇಷನ್ ಆರ್ಮಿಯವರು ವಹಿಸಿಕೊಳ್ಳಬೇಕೆಂತ ತಾತಾ ಕಂಪೆನಿಯವರು ಇಷ್ಟಪಡುವದರಿಂದ ಫಾರಮು ತಮ್ಮ ವಶಕ್ಕೆ ಬಂದ ನಂತರ ಮೇಲ್ಕಂಡ ರಿಯಾಯತಿಗಳನ್ನು ಈಗಿನಂತೆಯೇ ತಮಗೂ ನಡೆಸಿಕೊಡಬೇಕೆಂದು ಸದರಿ ಆರ್ಮಿಯವರು ಸರ್ಕಾರದವರನ್ನು ಕೇಳಿಕೊಂಡರು

ಫಾರಮು ಸಾಲ್ವೇಷನ್ ಆರ್ಮಿಯವರ ಕೈಕೆಳಗೆ ಬರುವದು ಈ ಸೀಮೆಯ ನೇಗೆಯವರಿಗೆ ತಾನೇ ಫಾಯಿದೆಕರವಾಗಿರುವುದರಿಂದ ಆರ್ಮಿಯವರಿಗೆ ಸರ್ಕಾರದಿಂದ ಸಹಾಯ ಮಾಡುವದು ಮುನಾಸಬು ತೋರಿ ಗೌರ್ನಮೆಂಟಿನವರು ಫಾರಮಿಗೆ ಸೇರಿದ ಜಮೀನನ್ನು ಕಂದಾಯವಿಲ್ಲದೆ ಮುಫತ್ತಾಗಿ ಕೊಟ್ಟು ಇದರ ಜೊತೆಗೆ ಸಾಲೀಯಾನಾ ೩,೦೦೦ ರೂಪಾಯಿ ಗ್ರಾಂಟನ್ನೂ ಮಂಜೂರು ಮಾಡಿ, ಫಾರಮನ್ನು ಆರ್ಮಿಯವರು ತಮ್ಮ ಮತಸಂಬಂಧ ಕಾರ್ಯಗಳಿಗೆ ಮಾತ್ರ ಈಷತ್ತೂ ಸಹಕಾರಿಯಾಗಿ ಖಂಡಿತವಾಗಿ ಇಟ್ಟುಕೊಳ್ಳಕೂಡದೆಂತಲೂ ಈಗ ಸ್ಯಾಂಕ್ಷನ್ ಮಾಡಿರುವ ಏರ್ಪಾಟುಗಳು ಸಧ್ಯಕ್ಕೆ ಅಜಮಾಯಿಷಿ ತರೀಖು ಮೂರು ವರುಷಗಳು ಮಾತ್ರ ಜಾರಿಯಲ್ಲಿರತಕ್ಕದ್ದೆಂದೂ ಹುಕುಂ ದಯಪಾಲಿಸಿರುತ್ತಾರೆ

ಇನ್ನು ಮುಂದೆ ಫಾರಮಿನಲ್ಲಿ ಬಗೆ ಬಗೆಯ ರೇಷ್ಮೇ ಹುಳಗಳನ್ನು ಸಾಕುವದು, ಉತ್ತಮ ತರಹೆ ಹಿಪ್ಪನೇರಳೆಸೊಪ್ಪು ಮತ್ತು ಈ ಹುಳುಗಳು ತಿನ್ನುವ ಇನ್ನೂ ಇತರ ಚಾರಾಗಳ ವ್ಯವಸಾಯ, ವಗೈರೆ ರೇಷ್ಮೇ ಸಂಬಂಧವಾದ ವಿಶಿಷ್ಟ ಅಜಮಾಯಿಷಿಗಳೂ ನಡೆಯುವದರ ಜೊತೆಗೆ ರೇಷ್ಮೆ ಬಟ್ಟೆಬರೆಗಳನ್ನೂ ನೇಯುವ ಕೆಲಸವೂ ಕೂಡ ಈಗ ಹೊಸದಾಗಿ ಏರ್ಪಟ್ಟಿರುತ್ತದೆ ಇಷ್ಟೇ ಅಲ್ಲದೆ ಸಮಸ್ತ ಕ್ರಮಗಳನ್ನೂ ಜನರಿಗೆ ಪ್ರತ್ಯಕ್ಷವಾಗಿ ಕೆಲಸ ಮಾಡಿ ತೋರಿಸುವದಕ್ಕಾಗಿ ಸಮಯೋಚಿತವಾಗಿ ಆಗಾಗ್ಗೆ ನಿದರ್ಶನಗಳನ್ನು ಏರ್ಪಡಿಸುವದೂ ಮತ್ತು ಈ ಕೈಗಾರಿಕೆಯ ಮರ್ಮಗಳನ್ನೆಲ್ಲಾ ಕಸಬುದಾರ ಜನರಿಗೆ ಕಲಿಸಿಕೊಡುವದೂ ಆರ್ಮಿಯವರ ಮುಖ್ಯ ಉದ್ದೇಶಗಳಾಗಿರುತ್ತವೆ

ಬೋಧಾಕ್ರಮದಲ್ಲಿಯೂ ಬರೀ ಪುಸ್ತಕಗಳಲ್ಲಿ ಮಾತ್ರ ಕಲಿಸಿ ಜನಗಳನ್ನು ಪುಸ್ತಕಪಂಡಿತರನ್ನಾಗಿ ಮಾಡುವದಿಲ್ಲ ಸ್ವತಹಾ ಕೆಲಸ ಮಾಡುವದಕ್ಕೆ ಹಚ್ಚಿ ಪ್ರತ್ಯಕ್ಷ ಅನುಭವ ಕೊಡುತ್ತಾರೆ ರೇಷ್ಮೆ ಕಸಬುದಾರರಾದರೆ ಫೀ ವಗೈರೆ ತೆಗೆದುಕೊಳ್ಳದೆ ಮುಫತ್ತಾಗಿ ಹೇಳಿಕೊಡುತ್ತಾರೆ ಇತರರಾದರೆ ಫೀ ಕೊಡಬೇಕಾಗಿರುತ್ತದೆ

ಕೆಲಸ ಕಲಿಯುತ್ತಿರುವಾಗಲೂ ಕೂಡ ಜನಗಳಿಗೆ ಮೆಹನತ್ತಿಗೆ ತಕ್ಕಂತೆ ಕೂಲಿ ಕೊಡುವದೂ ಉಂಟು ಮತ್ತೊಂದು ವಿಶೇಷವೇನೆಂದರೆ, ಆರ್ಮಿಯವರ ಹೆಂಗಸರಿಗೂ ಈ ಕಸಬಿನಲ್ಲಿ ಅನುಭವ ಕೊಡುತ್ತಾರೆ ಇದಕ್ಕಾಗಿ ಪ್ರತ್ಯೇಕವಾದ ಜನಾನಾ ಮಿಷನ್ ಏರ್ಪಡಿಸಲಾಗುವದು

ಈ ಆರ್ಮಿಯವರ ಮುಖ್ಯ ಉದ್ದೇಶವೇನೋ ತಮ್ಮ ಮತಾಭಿವೃದ್ಧಿಯೇ ಆಗಿದ್ದರೂ ಈ ಫಾರಂ ಕಾರ್ಯಗಳಲ್ಲಿ ಅದನ್ನು ತೋರ್ಪಡಿಸುವದಿಲ್ಲ ಈ ವಿಷಯದಲ್ಲಿ ಯಾರನ್ನೂ ಕಿಂಚಿತ್ತಾದರೂ ನಿರ್ಬಂಧಪಡಿಸುವದಿಲ್ಲವಾಗಿ ಯಾವ ಮತಸ್ಥರಾದರೂ ಸರಿಯೇ ನಿರ್ಭಯವಾಗಿ ಫಾರಂನಲ್ಲಿ ಕೆಲಸ ಕಲಿತುಕೊಂಡು ಹೋಗಬಹುದೆಂದು ಆರ್ಮಿಯವರು ಭರವಸೆ ಕೊಟ್ಟಿರುತ್ತಾರೆ

ನಮ್ಮ ಸೀಮೆಯ ಕಾರೇಗಾರರು ಇಂಥಾ ಒಳ್ಳೇ ಸಮಯ ಒದಗಿರುವಾಗ ಕಾಲಹರಣ ಮಾಡದೆ ಸಾಲ್ವೇಷನ್ ಆರ್ಮಿಯವರು ಪರೋಪಕಾರ ಬುದ್ಧಿಯಿಂದ ಕಲ್ಪಿಸಿಕೊಟ್ಟಿರುವ ಸೌಕರ್ಯಗಳನ್ನು ತಮ್ಮ ಪುರೋವೃದ್ಧಿಗೆ ಅನುಕೂಲವಾಗುವ ರೀತಿಯಲ್ಲಿ ಸದುಪಯೋಗಪಡಿಸಿಕೊಂಡು ತನ್ಮೂಲಕ ತಮ್ಮ ಸುಖಸಂಪತ್ತುಗಳನ್ನು ಹೆಚ್ಚಿಸಿಕೊಳ್ಳುವರೆಂದು ನಂಬಿದೆ

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲಗೆ ಬರತಕ್ಕ ಬಾತ್ಮಿಗಳಿಗೆ ನಾವು ಎಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಒರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವ್ ಎಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕೆ ರಾಮಚಂದ್ರಯ್ಯ ಮೋಬಾನ್ಪುರ —(೧) ಕಂಪನಿಯ ವಿಷಯವಾಗಿ ನೀವು ಮತ್ತೆ ಅವರಿಗೇ ಬರೆದುಕೊಳ್ಳಬೇಕು ಇಲ್ಲವಾದರೆ ಪೋಲೀಸ್ ಇಲಾಖೆಗೆ ತಿಳಿಸಬೇಕು ಪತ್ರಿಕೆಯಲ್ಲಿ ನಿಮ್ಮ ಬಾತ್ಮಿ ಪ್ರಕಟಿಸೋಣದರಿಂದ ಫಲ ಕಾಣುವುದಿಲ್ಲ (೨) ವಿವಾಹ ವಿಚಾರವು ಸ್ವವಿಷಯವಾದದ್ದರಿಂದ ಅದರ ಪ್ರಕಟನೆಗೆ ಧಾರ್ಯ ಕೊಡಬೇಕು

ಬೆಂಗಳೂರು ಸಿಟಿ ಸುಲ್ತಾನ್ ಪೇಟೆಯ ಹಿ ದೂ ಎ ವಿ ಸ್ಕೂಲಿನ ಕಾರುಬಾರುಗಳು ತೃಪ್ತಿಕರವಾಗಿಲ್ಲವೆಂದು ಮುಂತಾಗಿ "ಯಥಾರ್ಥವಾದಿ" ಎಂಬೊಬ್ಬ ಬಾತ್ಮೀದಾರರು ಕೆಲವಾಕ್ಷೇಪಣೆಗಳನ್ನು ಬರೆದಿರುತ್ತಾರೆ ಈ ವಿಚಾರವನ್ನು ಅವರು ಮೊದಲು ಸ್ಕೂಲಿನ ಮ್ಯಾನೇಜರುಗಳಿಗೆ ತಿಳಿಸಬೇಕು ಅವರು ಕ್ರಮಪಡಿಸುತ್ತಾರೆಂದು ನಿರೀಕ್ಷಿಸುವೆವು

ವೆಂಕಟರಾಯಪ್ಪ, ಬದರಳ್ಳಿ —ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವು

—ಎಡಿಟರ್ ।

ಕರೆಸ್ಪಾಂಡೆನ್ಸ್

ಕಾಫೀ ಮತ್ತು ಟೀ ಪಾನಗಳು

ಅಯ್ಯಾ,

ತಮ್ಮ ಪತ್ರಿಕೆಯ ಈ ಏಪ್ರಿಲ್ ೧೪ನೇ ತಾ ಸಂಚಿಕೆಯಲ್ಲಿ ಕಾಫೀ ಮತ್ತು ಟೀ ಎಲೆಯ ಪಾನದ ವಿಷಯವಾಗಿ "ಗುಣಗ್ರಾಹಿ" ಯವರು ವಿವರಿಸಿದ ಮಜ್ಕೂರು ನಿಜವಾಗಿದೆ ಇದಲ್ಲದೆ ಈ ಏಪ್ರಿಲ್ ತಾ ೭ನೇ ಪತ್ರಿಕೆಯ ಸಂಚಿಕೆಯಲ್ಲಿ ಕಾಫೀ ಮತ್ತು ಟೀ ಎಲೆಯ ವಿಷಯವಾಗಿ ದೂಷಿಸಿದ್ದು ಕೂಡ

...ಣಿಜನಾಗಿರುತ್ತದೆ. ಗುಣಗ್ರಾಹಿಗಳು ವಿವರಿಸಿದ್ದು ವ್ಯಕ್ತಿ ವಿಷಯಕವಾಗಿಯೂ (ಒಬ್ಬರಿಗೆ ಮಾತ್ರ ದೊರೆತ ಅನುಭವವು) ಆಗಿರುತ್ತಿದ್ದು, ದೂಷಣೆ ಕೊಟ್ಟವರ ಮಜಕೂರು ಸಾರ್ವಜನಿಕ ಆರೋಗ್ಯದ ಸಂಗತಿಯಾಗಿಯೂ ಇರುತ್ತದೆ. ಕಾಫೀ ಮತ್ತು ಟೀ ಎಲೆಯ ಪಾನದ ವಿಷಯವಾಗಿ ಒಂದೇ ಮಾತಿನಿಂದ ತಿಳಿಸುವದೇನೆಂದರೆ, [illegible]ಒರೇ ಧಾನ್ಯಾಹಾರಿಗಳಲ್ಲಿ ಮತ್ತು ಕೂತಲ್ಲೇ ಕೂತುಕೊಂಡು ಜೀವಿಸುವ ವ್ಯವಸಾಯಕ ಜನರಲ್ಲಿ ೧೦೦ಕ್ಕೆ ೬೫ ಜನರಿಗೆ ಕಾಫೀ ಮತ್ತು ಟೀ ಎಲೆಯ ಪಾನದಿಂದ ಕಾಲಾಂತರದಲ್ಲಿ ನರಗಳ ದೌರ್ಬಲ್ಯವೂ ಅಗ್ನಿ ಮಾಂದ್ಯವೂ ಶರೀರ ಕ್ಷೀಣತೆಯೂ ಮಧು ಮೂತ್ರ ಬಹುಮೂತ್ರ ಮುಂತಾದ ಅನೇಕ ಬಾಧ್ಯಗಳಿಗೆ ಗುರಿಯಾಗಬೇಕಾಗುತ್ತದೆ. ಆದರೆ ಮಿಶ್ರ (ಧಾನ್ಯ ಮತ್ತು ಮಾಂಸ) ಆಹಾರಿಗಳಲ್ಲಿ ಮತ್ತು ಯಾವಾಗಲೂ ಕಾಯಕಷ್ಟ ಚನ್ನಾಗಿ ನಡಿಸುವಂಥಾ ವ್ಯವಸಾಯಕರಿಗೆ ಕಾಫೀ ಮತ್ತು ಟೀ ಎಲೆಯ ಪಾನದಿಂದ ಕಾಲಾಂತರದಲ್ಲಿ ಶರೀರಾರೋಗ್ಯವು ವೃದ್ಧಿಯಾಗುತ್ತಾ ಹೋಗುತ್ತದೆ. ಇದು ಕಾಫೀ ಮತ್ತು ಟೀ ಎಲೆಯ ಗುಣದೋಷವಲ್ಲ. ಜನರ ಆಹಾರದ ಮತ್ತು ವ್ಯವಸಾಯದ ಜಾತಿಗಳ ಗುಣದೋಷವಾಗಿರುತ್ತದೆ. ಕಾಫೀ ಮತ್ತು ಟೀ ಎಲೆ ಇವನ್ನು ಎಂದೂ ಉಪಯೋಗ ಮಾಡದೆ ಇದ್ದ ಕೋಟ್ಯಾವಧಿ ಜನರು ಬೇಸಾಯದ ಉದ್ಯೋಗದಿಂದ ಕಾಯಕಷ್ಟ ಚನ್ನಾಗಿ ನಡಿಸುವ ಅಭ್ಯಾಸ ಉಳ್ಳವರು ತುಂಬಾ ದೀರ್ಘಾಯುಷಿಗಳಾಗಿ ಬಾಳುತ್ತಿರುವದನ್ನು ನಾವು ನೋಡುತ್ತಿರುತ್ತೇವೆ. ಆದರೆ ಕಾಯಕಷ್ಟ ನಡಿಸುವ ಅಭ್ಯಾಸವಿಲ್ಲದ ಅಂದರೆ ಕೂತಲ್ಲೇ ಕೂತುಕೊಂಡು ಜೀವಿಸುವ ವ್ಯವಸಾಯಕರಿಗೆ ಶರೀರ ಸಂಪತ್ತು ಕಡಮೆಯಾಗಿರುವ ಸಂದರ್ಭದಲ್ಲಿ ಕಾಫೀ ಮತ್ತು ಟೀ ಎಲೆಯ ಉಪಯೋಗದಿಂದ ಮೇಲೆ ವಿವರಿಸಿದ ಬಾಧ್ಯಗಳು ಸಂಭವಿಸಿದಲ್ಲಿ ಆಶ್ಚರ್ಯವಲ್ಲವು. ಕಾರಣ ಕಾಫೀ ಅಥವಾ ಟೀ ಎಲೆಯ ಪಾನ ನಡಿಸುವವರು ಯಾವಾಗಲೂ ತಮ್ಮ ದೇಹ ಪ್ರಕೃತಿಯ ಕಡೆಗೆ ಲಕ್ಷ್ಯ ಕೊಟ್ಟಿರತಕ್ಕದ್ದು ಆವಶ್ಯವಾಗಿದೆ. ಈ ಪಾನಗಳು ಬಾಧಿಸಲಿಕ್ಕೆ ಹತ್ತಿದರೆ ಕೂಡಲೆ ಇವನ್ನು ತ್ಯಜಿಸಿ ಬೇರೆ ಯಾವದಾದರೂ ಹೊಸ ಪಾನವನ್ನು ಹುಡುಕಿಕೊಳ್ಳಲಿ ಎಂತ ಸೂಚಿಸುತ್ತೇವೆ. ಕಾಫೀ ಮತ್ತು ಟೀ ಎಲೆಗಿಂತ "ಕೋಕೋ" ಅಥವಾ "ಚೊಕೋಲೇಟ" ಎಂಬ ಬೀಜದ ಹುಡಿಯ ಪಾನವು ಅತ್ಯಂತ ನಿರ್ದೋಷವಾದದ್ದು ಮತ್ತು ಆಬಾಲವೃದ್ಧರಿಗೆ ಆರೋಗ್ಯಕರವೂ ಆಗಿದೆ.

ತಮ್ಮ ಚಂದಾದಾರರಲ್ಲಿ ಒಬ್ಬ ವೈದ್ಯನು

ತಾಲ್ಲೋಕು ವರ್ತಮಾನಗಳು

ಸುಂ[illegible] — ಇಲ್ಲಿ ಬಿಸಲು ಇನ್ನೂ ಪಮಾಸಕ್ಕೆ ಬಂದಿಲ್ಲ. ಕಳೆದ ಶನಿವಾರ ಸಾಯಂಕಾಲ ಮೋಡ ಗುಡುಗುಗಳು ಒತ್ತಾಯು ಹಾದಾಗ್ಯೂ ಸ್ವಲ್ಪ ಹನಿ ಮಾತ್ರ ಬಿದ್ದವು.— ಮ[illegible]ಕ್ಕೆ ಸೇರಿದ ೨ ಮೈಲಿ ದೂರದಲ್ಲಿರುವ ಹನಂಬಾಡಿ ಗ್ರಾಮದಲ್ಲಿ ಅಕಸ್ಮಾತ್ತಾಗಿ ೫ ಮನೆಗಳಿಗೆ ಬೆಂಕಿ ಬಿದ್ದು ಸುಟ್ಟು ಹೋಯಿತು. ಮನೆಗಳಲ್ಲಿ ಇಟ್ಟಿದ್ದ ಪದಾರ್ಥಗಳೆಲ್ಲಾ ನಷ್ಟವಾದವು. ಕಳೆದ ಮೂರು ವರ್ಷಗಳಿಂದ ಇಲ್ಲಿ ರೈಲ್ವೆ ಸ್ಟೇಷನ್ ಮಾಸ್ಟರಾಗಿದ್ದ ಮ॥ ವಿ ರಾಮಾನುಜುಲು ನಾಯುಡುಯವರು ಹಿಂದೂಪುರಕ್ಕೆ ಸೇರಿದ ರೈಲ್ ಮಾರ್ಗದಲ್ಲಿರುವ ಪೆನಗೊಂಡೆ ತಾಲೂಕು ಮಕ್ಕಾಜಿಪಲ್ಲಿಗೆ ವರ್ಗವಾಗಿ ಬೃಹಸ್ಪತಿವಾರ ರಾತ್ರಿ ಪ್ರಯಾಣಮಾಡಿದರು. ಇವರು ಇಲ್ಲಿನ ಎಲ್ಲಾ ದೊಡ್ಡ ಮನುಷ್ಯರಲ್ಲೂ ವ್ಯಾಪಾರಸ್ಥರಲ್ಲೂ ವಿಶ್ವಾಸಪಾತ್ರರಾಗಿ ಎಲ್ಲರಲ್ಲಿಯೂ ಪ್ರೀತಿ ಗೌರವಗಳನ್ನೂ ಸಹನವನ್ನೂ ಸಂಪಾದಿಸಿಕೊಂಡಿದ್ದರು. ಇವರಿಗೆ ವರ್ಗವಾದದ್ದರಿಂದ ಇಲ್ಲಿನ ಪ್ರಜೆಗಳಿಗೆ ವ್ಯಸನ ಉಂಟಾದಾಗ್ಯೂ ಇವರ ಬದಲಾಗಿ ಮಕ್ಕಾಜಿಪಲ್ಲಿಯಿಂದ ಬಂದಿರುವ ಮ॥ ಬಿ ಸಿದ್ದಪ್ಪನಾಯುಡುಯವರು ಇವರ ಮೇಲ್ಪಂಕ್ತಿಯನ್ನು ಅನುಸರಿಸುವರೆಂದು ಬಹುಮಾಗಿ ಕೋರುತ್ತೇವೆ.— ಕಳೆದ ಬುಧವಾರ ರಾತ್ರಿ ಟ್ರೈನಿನಲ್ಲಿ ಮುಂದ್ಯಕ್ಕೆ ಬರಬೇಕಾಗಿದ್ದ ವೃತ್ತಾಂತ ಪತ್ರಿಕೆಯು ರೈಲ್ವೆ ನ ಕರರ ಅಜಾಗರೂಕತೆಯಿಂದ ಬೇರೆ ಸ್ಟೇಷನ್‌ಗೆ ಹೋಗಿರುತ್ತದೆ. ಈ ಪಾರ್ಸಲ್ ಇನ್ನೂ ಸಿಕ್ಕದೆ ಇಲ್ಲಿನ ಸ್ಟೇಷನ್ ಮಾಸ್ಟರು ಹುಡುಕುತ್ತಲಿದಾರೆ.

ಚಿಕ್ಕಮಗಳೂರು — ಇಲ್ಲಿಗೆ 13 ನೇ ತಾ ಬುಧವಾರ ತಂಜಾವೂರಿನಲ್ಲಿ ಪ್ರಸಿದ್ಧಿ ಹೊಂದಿ ಆಸ್ಥಾನ ಕವಿಗಳಾಗಿದ್ದ ವೇದನಾಯಕ ಶಾಸ್ತ್ರಿಯವರ ಮೊಮ್ಮಕ್ಕಳಾದ ವೇದಾವನ ಶಾಸ್ತ್ರಿಗಳವರು ಕ ಟೌಂಟ [illegible] ಬಂದರು. ಇವರು ಸಂಗೀತ ಹಾಡುವದರಲ್ಲಿಯೂ ಪಿಟೀಲು ಮುಂತಾದ ವಾದ್ಯಗಳನ್ನು ನುಡಿಸುವದರಲ್ಲಿಯೂ ಪ್ರವೀಣರಾಗಿರುವದಲ್ಲದೆ ನೀತಿ ಸಂಬಂಧವಾದ ಮತ್ತು ಮತ ಸಂಬಂಧವಾದ ಉಪನ್ಯಾಸಗಳನ್ನು ಮಾಡುವದರಲ್ಲೇ ತಮ್ಮ ಕಾಲವನ್ನೂ ಬುದ್ಧಿಯನ್ನೂ ವ್ಯಯಮಾಡಿರುವದರಿಂದ ಸತ್ಕೀರ್ತಿಯುಳ್ಳ ಅನುಭವಶಾಲಿಗಳಾಗಿದಾರೆ. ಇವರು ಇಲ್ಲಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿಯೂ ಅನಂತರ ಹಿಂದಿನ ಭಾನುವಾರ 17 ನೇ ತಾ ಇಲ್ಲಿ ಹೈಸ್ಕೂಲಿನಲ್ಲಿಯೂ ಮಾರನೇ ದಿವಸ ಸೋಮವಾರ ವೆಸ್ಲಿಯನ್ ಮಿಷನ್ ದೇವಾಲಯದಲ್ಲಿಯೂ ಮತ್ತು 21 ನೇ ತಾ ಯೂ ಉಪನ್ಯಾಸಗಳನ್ನು ನಡಿಸಿ ವಾದ್ಯಗಳ ಸಮೇತ ಹೃದಯಂಗಮವಾಗಿ ಸಂಗೀತವನ್ನು ಹಾಡಿ ಎಲ್ಲಾ ಸಭಿಕರನ್ನೂ ಪ್ರತಿ ಸರ್ತಿಯೂ ಸಂತೋಷಪಡಿಸಿದರು. ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರೂ, ಸಿವಿಲ್ ಸರ್ಜನ್‌ರವರೂ, ಹೈಸ್ಕೂಲ್ ಹೆಡ್ ಮಾಸ್ಟರವರೂ ದಯಮಾಡಿ ಸಭೆಯನ್ನಲಂಕರಿಸಿದ್ದರು. ಪ್ರತಿ ಸರ್ತಿಯೂ ಮಂದಿರಗಳು ತುಂಬಿ ಸ್ಥಳ ಸಾಲದೆ ಅನೇಕ ಜನರು ಹೊರಗೆ ನಿಂತಿರಬೇಕಾಯಿತು.— 21 ನೇ ತಾ ಭಾನುವಾರ ಮಧ್ಯಾಹ್ನ ಸುಮಾರು ೧ ಘಂಟೆಗೆ ಇದ್ದಕ್ಕಿದ್ದ ಹಾಗೆಯೇ ನೋಡಮೇರಿ ಗುಡುಗು ಸಿಡಿಲು ಕಲ್ಲುಳಿಗಳ ಸಮೇತವಾದ ಬಿರುಗಾಳಿ ಸಂಭವಿಸಿತು. ಈಗ ೯—10 ದಿನಗಳಿಂದ ಇದ್ದ ಧಗೆಯು ಕಡಮೆಯಾಗಿ ಹವಾ ತಂಪಾಗಿದೆ.

ದೊಡ್ಡಬಳ್ಳಾಪುರ — ಈಗ ಇಲ್ಲಿ ಬಿಸಲಿನ ತಾಪವು ತೀಕ್ಷ್ಣವಾಗಿದೆ. ಜನರು ಅಲ್ಲಲ್ಲಿ ಜ್ವರ ಕೆಮ್ಮು ನೆಗಡಿಯಿಂದಲೂ, ಮಕ್ಕಳು ಸಿಡುಬಿನ ಉಪದ್ರದಿಂದಲೂ ನರಳುತ್ತಾ ಇದ್ದಾರೆ. ಡಾಕ್ಟರ್ ರಂಗ ರಾಮಾನುಜ ನಾಯ್ಡುಯವರಿಗೆ ಮೈಸೂರಿಗೆ ವರ್ಗವಾದ ಸಮಾಚಾರ ಕೇಳಿ ಇಲ್ಲಿನ ಬಹು ಜನರು ಪರಿತಾಪ ಪಡುತ್ತಲಿದ್ದರು. ಆದರೆ ಅವರು ಇನ್ನೂ ೧೨ ತಿಂಗಳು ಇಲ್ಲೇ ಇರುತ್ತಾರೆಂದು ಕೇಳಿ ಬಹು ಸಂತೋಷಪಟ್ಟರು. ಇವರ ಬದಲಿಗೆ ಹಿಂದೆ ಇದ್ದ ಮ॥ ಚಂಗಲ್ ನಾಯ್ಡುಯವರೇ ಬರುವಂತೆ ವದಂತಿ ಇದೆ.— ಷಹಾ ಒಯಿ ಸ್ಕ್ರೀವ್ ಪಿಕ್ಚರಾ ಕಂಪನಿಯವರು ಒಂದು ೮೯ ದಿನಗಳಿಂದ ಮಾರ್ಕೆಟ್ಟು ಬಳಿ ಡೇರಾ ಹಾಕಿ ಆಟ ಆಡುತ್ತಲಿದ್ದು ಈ ದಿನ ಹಿಂದೂಪುರದ ಕಡೆ ಹೊರಟು ಹೋದರು.— ಪೋಲೀಸ್ ಸ್ಟೇಷನ್ ಎದುರು ಗಲ್ಲಿ ತೊಟ್ಟಿ ಚರಂಡಿ ಕಾಮಗಾರಿ ಶುರು ಆಗಿ ೧೨ ವರ್ಷಗಳಾಗುತ್ತಾ ಬಂತು. ತಹಲ್ ವರಿವಿಗೂ ಕೆಲಸ ಪೂರೈಸಲಿಲ್ಲ. ರಾತ್ರಿ ಕಾಲದಲ್ಲಿ ಅಲ್ಲಿ ತಿರುಗಾಡುವ ಜನರಿಗೆ ತುಂಬಾ ಅಪಾಯಕರವಾಗಿದೆ. ಸುಮಾರು ೨೫ ದಿನಗಳ ಕೆಳಗೆ ಒಂದು ಎಮ್ಮೆ ಚರಂಡಿಯಲ್ಲಿ ಬಿದ್ದು ಸಿಕ್ಕಿಕೊಂಡು ಮೇಲಕ್ಕೆ ಏಳುವದಕ್ಕೆ ಯತ್ನ ತಪ್ಪಿ ೬-೭ ಜನಗಳು ಸಹಾಯ ಮಾಡಿ ಮೇಲಕ್ಕೆ ಎತ್ತಿದರು. ಇಂಥಾ ತೊಂದರೆಗಳು ಆಗಾಗ್ಗೆ ಸಂಭವಿಸುತ್ತಲಿವೆ. ದಯಾಳುಗಳಾದ ನಮ್ಮ ಅಮಲ್ದಾರ್ರು ಮುಚ್ಚಿಗೆ ಕಲ್ಲು ಹಾಕಿಸದೆ ಇರುವ ಕಡೆ ಕೊಡ್ಲೆ ಮುಚ್ಚಿಗೆ ಹಾಕಿಸಿದರೆ ಕ್ಷೇಮಕರವಾಗಿದೆ.— ಸ್ಪೆಷಲ್ ಡ್ಯೂಟಿಗಾಗಿ ಶ್ರವಣಬೆಳಗೊಳಕ್ಕೆ ಹೋಗಿದ್ದ ಪೊ॥ ಇನ್॥ ಮ॥ ಕೆ ರಾಜಾರಾಮ ರಾಯರವರು ವಾಪಸು ಬಂದು ಛಾರ್ಜು ವಹಿಸಿಕೊಂಡಿರುತ್ತಾರೆ.— ಸೌದೆಗಾಡಿಗಳ ಬಳಿ ಫಕೀರರ ಪಸಿಗೆ ಹಾವಳಿ ಜೋರಾಗಿದೆ. ಗಾಡಿಯವರಿಗೂ ಫಕೀರರಿಗೂ ಆಗಾಗ್ಗೆ ದೊಂಬಿ ಕಲಹಗಳು ನಡೆಯುತ್ತಲಿವೆ. ಪೊಲೀಸ್ ಇನ್ಸ್‌ಪೆಕ್ಟರವರು ಈ ವಿಷಯಕ್ಕೆ ನಿಗಾ ಕೊಡಬೇಕಾಗಿದೆ.

ಫ್ರಂಚ್‌ರಾಕ್ಸ್ — ಇಲ್ಲಿ ಕೆಲವು ದಿನಗಳಿಂದ ಮೋಡವಾಗುತ್ತಲೂ ಸಾಯಂಕಾಲಗಳಲ್ಲಿ ಗಾಳಿ ಪ್ರಾರಂಭವಾಗಿ ಸದರಿ ಮೋಡಗಳು ಅದೃಶ್ಯವಾಗುತ್ತಲೂ ಇತ್ತು. ಜನರು ಮಳೆ ಬರಲಿಲ್ಲವೆಂದು ಚಿಂತಾಕ್ರಾಂತರಾಗಿರಲು ದೇವರ ಕೃಪೆಯಿಂದ ಕಳೆದ ಶನಿವಾರ ಸಾಯಂಕಾಲ ಒಂದು ಹದ ಒಳ್ಳೇ ಮಳೆಯಾದದ್ದರಿಂದ ಜನರು ಹಸನು ಬೆಳೆಗಳಿಗೆ ಉಳುವುದಕ್ಕೆ ಪ್ರಾರಂಭಿಸಿದಾರೆ. ಇನ್ನೂ ಮಳೆ ಬರುವ ಸೂಚನೆಗಳು ಕಂಡುಬರುತವೆ.— ಈ ಊರಿನಲ್ಲಿ ಸುಮಾರು ಹತ್ತು ಹನ್ನೆರಡು ಮ್ಯುನಿಸಿಪಲ್ ಲ್ಯಾಂಪುಗಳು ಮಾತ್ರ ಇರುವಂತೆ ಕಂಡುಬರುತ್ತವೆ. ಅವುಗಳಲ್ಲೂ ಹಚ್ಚುವವುಗಳು ಕೆಲವಾಗಿದ್ದರೂ ಪ್ರಾತಃಕಾಲದ ವರೆಗೂ ಉರಿಯುವ ಲ್ಯಾಂಪುಗಳನ್ನು ಕಾಣುವದು ದುರ್ಲಭವಾಗಿದೆ. ಮ್ಯುನಿಸಿಪಲ್ ಮೇಲ್ವಿಚಾರಣೆಯು ಅಷ್ಟು ತೃಪ್ತಿಕರವಾಗಿಲ್ಲವೆಂದು ತಿಳಿದುಬರುತ್ತದೆ.— ನಮ್ಮ ಹೊಸ ಅಮಲ್ದಾರರು ಈ ಊರಿನಲ್ಲಿ ನಡೆಯುವ ಸಂತೆಗೆ ತಮ್ಮ ದರ್ಶನವನ್ನೇ ಕೊಡದಂತೆ ಕಾಣುತ್ತದೆ. ಕಮ್ಮಿ ಸೇರು ತಕ್ಕಡಿಗಳ ಚಲಾವಣೆಯು ನಿರ್ಬಾಧಕವಾಗಿ ನಡೆಯುತ್ತದೆ. ವರ್ತಕರೊಳಗಿದ್ದ ಭಯವು ಅಮಲ್ದಾರ್ ಮ॥ ಲಿಂಗಣ್ಣನವರೊಂದಿಗೇನೇ ಹೊರಟು ಹೋದಂತೆ ಕಾಣುತ್ತದೆ. ಆದ್ದರಿಂದ ನಮ್ಮ ಅಮಲ್ದಾರರಾಗಲೀ ಸಬ್ ಇನ್ಸ್‌ಪೆಕ್ಟರಾಗಲೀ ಆಗಾಗ್ಗೆ ಸಂತೆಯಲ್ಲಿ ಬಂದು ಸೇರು ತಕ್ಕಡಿಗಳನ್ನು ಅಜಮಾಯಿಷಿ ಮಾಡಿ ವರ್ತಕರಿಗೆ ತಕ್ಕ ವಿವೇಕಾದಿಗಳನ್ನುಂಟು ಮಾಡುವರೆಂದು ನಂಬುತ್ತೇವೆ. ಈ ವರುಷ ಧಾರಣೆಮಾಸಿಗಳು ಸುಮಾರಾಗಿ ಇಳಿದು ಬಡ ಜನಗಳಿಗೆ ತಕ್ಕಷ್ಟು ಸೌಲಭ್ಯವಾಗುವದೆಂದು ನಿರೀಕ್ಷಿಸಿದ್ದರೂ ರಾಗಿ ರೂಪಾಯಿಗೆ ೧೪ ಸೇರು ಅಕ್ಕಿ ೭ ೮ ಸೇರು, ಬೇಳೆ ೭ ೮ ಸೇರು ಮಾತ್ರ ಮಾರುತ್ತಾರೆ. ಬೇರೆ ಕಡೆಗಳಲ್ಲಿ ಧಾರಣೆಮಾಸಿಗಳು ಸುಮಾರು ಇದ್ದರೂ ಇಲ್ಲಿ ಇನ್ನೂ ಇಷ್ಟು ತುಟ್ಟಿಯಾಗಿ ಮಾರುವದು ಯಾಕೋ ಆಶ್ಚರ್ಯವಾಗಿದೆ — ಇಲ್ಲಿಗೆ ಸುಮಾರು ೪ ಮೈಲಿ ದೂರದಲ್ಲಿರುವ ಇಂಗಲಕುಪ್ಪೆ ಮುಂತಾದ ಅಜೂಬಾಜೂ ಗ್ರಾಮಗಳಲ್ಲಿ ಕಾಲರಾ ಪ್ರಾರಂಭವಾಗಿ ಆಗಲೇ ಸುಮಾರು ೧೫ ೨೦ ಜನಗಳ ವರೆಗೂ ಕಾಲವಾದಂತೆ ಕೇಳುತ್ತೇವೆ. ನಮ್ಮ ಹೊಸ ಆಸ್ಪತ್ರೆ ಅಸಿಸ್ಟೆಂಟರಾದ ಮ॥ ಚಂದೂಲಾಲ್ ಪಿಳ್ಳೆಯವರು ತುಂಬಾ ಮುತುವರ್ಜಿ ವಹಿಸಿ ಸದರಿ ಗ್ರಾಮಗಳಿಗೆ ಆಗಾಗ್ಗೆ ಹೋಗಿ ತಕ್ಕ ಏರ್ಪಾಡು ಮಾಡುತ್ತಿರುವದಲ್ಲದೆ ಜನಗಳಿಗೆ ಔಷಧೋಪಚಾರಗಳನ್ನು ನಡಿಸುತ್ತಿರುವಂತೆ ಕೇಳುತ್ತೇವೆ.

ಚಿತ್ರದುರ್ಗ — ಚಿತ್ರದುರ್ಗದಲ್ಲಿ ಟವನ್ ಪೋಲೀಸ್ ಸ್ಟೇಷನ್‌ನಲ್ಲಿ ಸಾವಿರಾರು ರೂಪಾಯಿನ ಹೊಸ ಜವಳಿ ಹಾಕಿಕೊಂಡಿದಾರೆ. ಆ ವಿಷಯವೇನೆಂದು ವಿಚಾರಿಸಿದರೆ ಒಬ್ಬ ಪೂಜ್ಯರಾದ ಶ್ರೀವೈಷ್ಣವ ಗುರುಗಳ ವಂಶಸ್ಥನಾದ ಒಬ್ಬ ಆಚಾರ್ಯನು ಈಗ್ಗೆ ೬ ೭ ತಿಂಗಳಿಂದ ಚಿತ್ರದುರ್ಗದ ಮಾರ್ವಾಡಿ ಅಂಗಡಿಗಳ ಬಳಿ ವಾಸವಾಗಿದ್ದು ಈಗ್ಗೆ ಕೆಲವು ದಿವಸಗಳ ಕೆಳಗೆ ಹಾಲಿ ಪೋಲೀಸ್ ಸ್ಟೇಷನ್‌ನಲ್ಲಿ ಹಾಜರಿರತಕ್ಕ ಜವಳಿಯನ್ನು ತುಂಕೂರು ಡಿಸ್ಟ್ರಿಕ್ಟ್ ಪಾವಗಡದಲ್ಲಿ ಮಾರಲಿಕ್ಕೆ ಹೋಗಿದ್ದನೆಂತಲೂ, ಅಲ್ಲಿನ ಪೋಲೀಸಿನವರು ಗುಮಾನಿಯ ಮೇಲೆ ಈ ಮಾಲನ್ನು ಹಿಡಿದು ಚಿತ್ರದುರ್ಗಕ್ಕೆ ಕಳುಹಿಸಿದರೆಂತಲೂ, ಇಲ್ಲಿನ ಟವನ್ ಪೋಲೀಸ್ ದಫೇದಾರ್ ಲಕ್ಷ್ಮೀಪತಯ್ಯನವರು ವಿಚಾರಣೆ ನಡಿಸಿದ್ದರಲ್ಲಿ ಈ ಮಾಲು ಚಿತ್ರದುರ್ಗದ ಮಾರ್ವಾಡಿ ಪುಸಾಚಂದ್ ವಗೈರೆಯವರ ಅಂಗಡಿಗಳಿಂದ ಕಳುವಾಗಿ ಹೋದದ್ದೆಂತ ಆ ವರ್ತಕರು ಗುರುತು ಹಿಡಿದಿದಾರೆಂತಲೂ, ಈ ಮಾಲನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದ ಆಚಾರಿಯು ಕಾಯಿಲೆಯಾಗಿ ಪಾವಗಡದ ಆಸ್ಪತ್ರೆಯೊಳಗೆ ಔಷಧ ತೆಗೆದುಕೊಳ್ಳುತ್ತಿದಾನೆಂತಲೂ ತಿಳಿದುಬಂತು — ಚಿತ್ರದುರ್ಗದ ಪೋಸ್ಟ್ ಮಾಸ್ಟರ ಮನೆಯಲ್ಲಿ ೩೫೦ ರೂಪಾಯಿನ ಮಾಲುಗಳು ಅಲ್ಲಿನ ನೌಕರರೇ ಕಳುವು ಮಾಡಿದ್ದರೆಂಬ ವಿಷಯ ಇನ್ನೂ ಪತ್ತೆ ಆಗಿಲ್ಲ — ಮೊಳಕಾಲ್‌ಕೆರೆ ಟ್ರೆಜರಿಯಲ್ಲಿ ೭೦೦ ಚಿಲ್ಲರೆ ರೂಪಾಯಿನ ದೊಡ್ಡಾಣೆ ಕದ್ದಿದ್ದ ಮುಸಲ್ಮಾನ್ ಬಾರ್ ಶಿಪಾಯಿಗೆ ದಾವಣಗೆರೆ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಾಲ್ಕು ವರುಷ ಕಠಿಣ ಸಜಾ ೬೦ ರೂಪಾಯಿ ಜುಲ್ಮಾನೆ ಅದು ಕೊಡದೆ ಇದ್ದರೆ ಜಾಸ್ತಿ ೬ ತಿಂಗಳ ಕಠಿಣ ಸಜಾ ಅನುಭವಿಸಬೇಕೆಂತ ಶಿಕ್ಷೆ ಆಯಿತು.— ಇಲ್ಲಿ ರೋಗಾದಿಗಳು ಹೆಚ್ಚುತ್ತಾ ಬರುತ್ತವೆ. ಮಕ್ಕಳಿಗೆ ಎಲ್ಲಿ ನೋಡಿದರೂ ಶೀತಳ ಸಿಡುಬು, ದಡಾರ ಎದ್ದು ನರಳುತ್ತಿದಾರೆ. ಥಳಿಜ್ವರವು ಅನೇಕರನ್ನು ಬಾಧಿಸುತ್ತಾ ಇದೆ. ರಂಗಯ್ಯನ ಬಾಗಲು, ಕರುವಿನ ಕಟ್ಟೆ, ಈ ಬೀದಿಗಳಲ್ಲಿ ನಾರುಹುಣ್ಣಿನ ಉಪದ್ರವು ಜಾಸ್ತಿಯಾಗಿದೆ. ಆ ಜನಗಳು ವಿಶೇಷವಾಗಿ ಗಡಂಗಿನ ಭಾವಿಯ ನೀರನ್ನು ಕುಡಿಯುತ್ತಿರುವುದರಿಂದ ಈ ರೋಗ ಹುಟ್ಟಿತೆಂದು ಅನೇಕರು ಹೇಳಿಕೊಳ್ಳುತ್ತಾರೆ. ಸರಕಾರದವರು ದಯವಿಟ್ಟು ಆ ನೀರನ್ನು ಪರೀಕ್ಷಿಸಿ ಅದು ಕುಡಿಯುವದಕ್ಕೆ ಯೋಗ್ಯವಾದದ್ದೋ ಅಲ್ಲವೋ ಜನಗಳಿಗೆ ತಿಳುವಳಿಕೆಕೊಟ್ಟರೆ ಎಷ್ಟೋ ಉಪಕಾರವಾದೀತು.

ಮಧುಗಿರಿ — ಈ ವರೆಗೆ ಮಳೆ ಇಲ್ಲ, ಬಿಸಿಲಿನ ತಾಪವು ಅಸಹನೀಯವು. ೭ ೮ ದಿವಸಗಳಿಂದಲೂ ಸಾಯಂಕಾಲಗಳಲ್ಲಿ ಅತಿವೃಷ್ಟಿಯಾಗುವಂತೆ ಮೋಡಗಳು ಏಳುತ್ತಿವೆಯೇ ಹೊರ್ತು ಫಲವೇನೂ ಇಲ್ಲ. ಘಾಳಿಯೂ ವಿಪರೀತ. ಹಗಲೂ ರಾತ್ರಿಗಳಲ್ಲಿ ಸೆಖೆಯು ಬಹು ಹೆಚ್ಚು. ಬೆಳಗಿನ ಝಾಮದಲ್ಲಿ ಸ್ವಲ್ಪ ಶಮನವಾಗುತ್ತೆ. ಎಲ್ಲರೂ ಆಕಾಶವನ್ನು ನೋಡುತ್ತಿರುವರು. ಕಪಿಲೆಯನ್ನು ಹೊಡೆಯುತ್ತಿರುವ ಜನರ ಮತ್ತೂ ಎಳೆಯುವ ಪ್ರಾಣಿಗಳ ಸಂಕಟವನ್ನು ವರ್ಣಿಸಲಾಗದು — ಈ ದಿವಸ ಶ್ರೀರಾಮನವಮಿ ಪಂಚಾಂಗಗಳಲ್ಲಿ ನಿನ್ನೆ ಸ್ಮಾರ್ತರಿಗೆಂತಲೂ ಈ ಹೊತ್ತು ವೈಷ್ಣವರಿಗೆಂತಲೂ ಇದ್ದಾಗ್ಯೂ ಇಲ್ಲಿನ ಸ್ಥಳ ಪಂಚಾಂಗದ ಬ್ರಂ॥ ಶ್ರೀ॥ ಗಳಾದ ಸೋಮೇಶ್ವರ ಭಟ್ಟರೂ, ಲಕ್ಷ್ಮೀಶ್ವರದ ಜೋಡಿದಾರರು ವೆಂಕಟಾದ್ರಿ ಶಾಸ್ತ್ರಿಗಳು ಪ್ಲೀಡರು ಮ॥ ನರಸಿಂಹಶಾಸ್ತ್ರಿಗಳೂ ಪರಿಶೀಲನೆಯನ್ನು ಮಾಡಿ ನಿರ್ಧರಿಸಿದ ಮೇರೆ ಎಲ್ಲರೂ ಈ ದಿವಸ ಆಚರಿಸುತ್ತಾ ಇದಾರೆ.— ಇದೇ ದಿವಸ ಪ್ರಾತಃಕಾಲ ೬ ಘಂಟೆಗೆ ಈ ಊರಿನಲ್ಲಿ ಪ್ರಸಿದ್ಧವಂತರಾಗಿಯೂ ದೊಡ್ಡ ವಂಶಸ್ಥರಾಗಿಯೂ ಇದ್ದ ಗಂಡೂರು ವೆಂಕಟೇಶಯ್ಯನವರೆಂಬವರು ತೀರಿಹೋದರು — ಇಲ್ಲಿ ಸಿಡುಬಿನ ಅವಾಂತ್ರ ಬಹಳವಾಗಿ ಕೆಲವರು ಮಕ್ಕಳು ಹೋಗಿಯೂ ಬಿಟ್ಟರು, ಈಗ ಶಮನವಾಗಿದೆ. ಬೇವಿನ ಮರಗಳೆಲ್ಲಾ ಛತ್ರಿಯಾದದ್ದು ಒಂದು ವಿಶೇಷ. ನಾಳೇ ಸರುಹೊತ್ತಿಗೆ ಈಗ ಮೆರವಣಿಗೆಯಲ್ಲಿರುವ ಕೋಣನಿಗೆ ಆಯುಸ್ಸು ತುಂಬುತ್ತೆ, ಇದು ಪ್ರಾಯದ್ದಾಗಿಇದೆ. ೧೦॥ ರೂಪಾಯಿ ಕೊಟ್ಟು ಗ್ರಾಮಸ್ಥರು ಕೊಂಡರಂತೆ — ಈ ಊರಿನಲ್ಲಿ ೪ ಛತ್ರಗಳಿವೆ, ಇವುಗಳಲ್ಲಿ ಎರಡು ವಿಧವಾದ ವಿಶೇಷಗಳುಂಟು, ತುಮಕೂರಿಂದ ಬರುವಾಗ್ಗೆ ಮೊದಲು ಸಿಕ್ಕುವ ತಿಪ್ಪಾಪುರದ ಸುಬ್ಬಸೆಟ್ಟರ ಛತ್ರ ಒಳ್ಳೇ ಮಜಬೂತಾಗಿ ಕಟ್ಟಲ್ಪಟ್ಟಿದೆ. ಪ್ರಯಾಣಿಕರಿಗೆ ಎಲ್ಲಾ ಅನುಕೂಲಗಳೂ ಇವೆ. ಸಂತೇಬೀದಿಯಲ್ಲಿ ಇರುವ ಭೀಮಸೇನ ರಾಯರ ಛತ್ರ ಕಟ್ಟಿಸಿ ೧೨ ವರುಷವಾಯಿತು. ಆಲಾಗಾಯಿತು ದೈವ ಯೋಗದಿಂದ ಹೆಚ್ಚಾದ ಮಳೆಗಳೇ ಆಗಲಿಲ್ಲ. ಅದಕ್ಕೆ ಹಾಕಿರುವ ಸಾಮಾನ್, ಕಟ್ಟಿರುವ ರೀತಿಯನ್ನೂ ನೋಡಿದರೂ ಹಾಗೆ ಕಾಣುತ್ತೆ. ಇವರಲ್ಲಿ ವಿಶೇಷವೇನಂದರೆ ಈ ಛತ್ರದ ಭಾಗಗಳನ್ನು ಐದಾರು ಒಕ್ಕಲಿಗೆ ಬಾಡಿಗೆ ಕೊಟ್ಟು ಇರುತ್ತಾರೆ. ಮಾರ್ಗಸ್ಥರಿಗೆ ಅವಕಾಶವೇ ಇಲ್ಲ. ಮ್ಯುನಿಸಿಪಲ್‌ಕರಿಗೆ ಉಂಟೋ ಇಲ್ಲವೋ ತಿಳಿಯಲಿಲ್ಲ.

ಆನೇಕಲ್ಲು — ಈ ಆನೇಕಲ್ ಕಸಬಿಯಲ್ಲಿ ಈ ಮಾಹೆ ೧೭ ನೇ ತಾ ಭಾನುವಾರ ಮ್ಯುನಿಸಿಪಲ್ ಉದ್ಯಾನವನದಲ್ಲಿ ನೂತನವಾಗಿ ಏರ್ಪಡಿಸಲ್ಪಟ್ಟಿದ್ದ ಕಟ್ಟಡದಲ್ಲಿ ಶ್ರೀ ಕೃಷ್ಣರಾಜೇಂದ್ರ ಅಗ್ರಿಕಲ್‌ಚುರಲ್ ಅಸೋಸಿಯೇಷನಿನ ವಸ್ತು ಮತ್ತು ದನಗಳ ೬ ನೇ ಪ್ರದರ್ಶನವು ನಡಿಸಲ್ಪಟ್ಟಿತು. ಡೆಪ್ಯುಟಿ ಕಮಿಷನರ್ ಮ॥ ಕುಮಾರಸ್ವಾಮಿನಾಯಕರ್ ಯವರು ಅಗ್ರಾಸನವನ್ನು ಅಲಂಕರಿಸಿದ್ದರು. ವಿಶಿಷ್ಟ ಸರ್ಕಾರಿ ನೌಕರರೂ ಪಟೇಲ್ ಶಾನುಭೋಗರೇ ಮೊದಲಾದ ಎಲ್ಲಾ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಅಮಲ್ದಾರ್ ಮ॥ ನಾರಾಯಣಸ್ವಾಮಯ್ಯಂಗಾರ್ಯರವರು ಈ ಅಸೋಸಿಯೇಷನಿನ ರಿಪೋರ್ಟನ್ನು ಇಂಗ್ಲಿಷ್ ಭಾಷೆಯಲ್ಲಿ ಓದಿದ ತರುವಾಯ ಅಗ್ರಾಸನಾಧಿಪತಿಗಳು ಈ ಅಗ್ರಿಕಲ್‌ಚುರಲ್ ಅಸೋಸಿಯೇಷನ್ ಏರ್ಪಡಿಸಿರುವ ಉದ್ದೇಶವನ್ನೂ ಇದರಿಂದ ಜನರಿಗೆ ಉಂಟಾಗುವ ಸೌಕರ್ಯವನ್ನೂ ಇಂಗ್ಲಿಷ್ ಭಾಷೆಯಲ್ಲಿ ಉಪನ್ಯಾಸ ಮಾಡಿ, ಅನಂತರ ಕನ್ನಡ ಭಾಷೆಯಲ್ಲಿ ತದಭಿಪ್ರಾಯವನ್ನೇ ವಿಸ್ತಾರವಾಗಿ ಉಪನ್ಯಾಸ ಮಾಡಿ ಸಭಿಕರ ಮನಸ್ಸಿಗೆ ಆನಂದವನ್ನೂ ತಿಳುವಳಿಕೆಯನ್ನೂ ಉಂಟು ಮಾಡಿದರು. ಪರ್ಯವಸಾನದಲ್ಲಿ ವೇ॥ ಸುಬ್ಬರಾಯಶಾಸ್ತ್ರಿಗಳವರು ಅಗ್ರಾಸನಾಧಿಪತಿಗಳಿಗೆ ಆಯುರಾರೋಗ್ಯಾಭಿವೃದ್ಧಿಯುಂಟಾಗದಂತೆ ಭಗವಂತನನ್ನು ಪ್ರಾರ್ಥಿಸಲು ಸಭಿಕರೆಲ್ಲರೂ ಸ್ವಚ್ಛಂದನಾದಿಗಳಿಂದ ಬಹುಮಾನಿತರಾಗಿ ತೆರಳಿದರು — ಈ ಪ್ರದರ್ಶನಕ್ಕೆ ವಿಶೇಷವಾದ ಧಾನ್ಯವಗೈರೆ ಪದಾರ್ಥಗಳೂ ನೂರಾರು ಜೋಡಿ ಎತ್ತುಗಳೂ ಸೇರಿ ಇದ್ದವು. ಅದೇ ದಿನ ಮಧ್ಯಾಹ್ನ ೩ ರ ಡೆಪ್ಯುಟಿ ಕಮಿಷನರ್ ಸಾಹೇಬರವರೇ ಖುದ್ದಾಗಿ ದಯಮಾಡಿ ಉತ್ಕೃಷ್ಟವಾದ ಎತ್ತಿನ ಜೋಡಿಗಳಿಗೆ ಬಹುಮಾನವನ್ನು ದಯಪಾಲಿಸಿದರು. ಈ ಕಾಲಕ್ಕೆ ಸರಿಯಾಗಿ ಶ್ರೀ ತಿಮ್ಮರಾಯಸ್ವಾಮಿ ದೇವರ ರಥೋತ್ಸವವು ಸಂಧಿಸಿದ ಕಾರಣ ದನಗಳ ಪ್ರದರ್ಶನಕ್ಕೆ ವಿಶೇಷವಾದ ಜನರು ಸೇರುವುದಕ್ಕೂ ಕಾರಣವಾಯ್ತು — ಎರಡನೇ ದಿನ ಡೆಪ್ಯುಟಿ ಕಮಿಷನರ್ ಸಾಹೇಬರವರು ಬೆಂಗಳೂರಿಗೆ ದಯಮಾಡಿಸಿದ ಕಾರಣ ಅಮಲ್ದಾರ್ರವರೇ ವಸ್ತುಗಳಿಗೆ ಬಹುಮಾನವನ್ನು ದಯಪಾಲಿಸಿದರು. ಸ್ಕೂಲಿನ ಬಾಲಕ ಬಾಲಕಿಯರೆಲ್ಲರೂ ಮೂರನೇ ದಿನ ಬೆಳಗ್ಗೆ ಈ ಪ್ರದರ್ಶನಾಲಯಕ್ಕೆ ಹೋಗಿ ನೋಡಿಕೊಂಡು ಬಂದರು. ಈ ರೀತಿಯಾಗಿ ಪ್ರದರ್ಶನಮಹೋತ್ಸವವು ೪ ದಿನಗಳ ವರಿವಿಗೂ ಬಹು ಸಮರ್ಪಕವಾಗಿ ನಡಿಸಲ್ಪಟ್ಟಿತು.

ಹಗ್ಗದದೇವನಕೋಟೆ — ಈ ಹೊಸ ವರುಷವಾದ ಸಾಧಾರಣ ಸಂವತ್ಸರದ ಚೈತ್ರಶುದ್ಧ ನವಮಿಗೆ ಸರಿಯಾದ ತಾ ೧೮ನೇ ಸೋಮವಾರ ಈ ಊರಿನ ಗ॥ ಎ ವಿ ಸ್ಕೂಲಿನಲ್ಲಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಬಾಲಕರಿಗೆ ಬಹುಮಾನವು ಹಂಚಲ್ಪಟ್ಟಿತು. ನಮ್ಮ ಅಮಲ್ದಾರ್ ಮ॥ ಕೆ ಲಿಂಗೋಪಂತ್ ಬಾದಾಮಿಯವರು ಸಭಾಧ್ಯಕ್ಷರಾಗಿದ್ದರು. ಸಬ್ ರೆಜಿಸ್ಟ್ರಾರ್ರು, ಡಾಕ್ಟರು, ಪೊ॥ ಇನ್ಸ್‌ಪೆಕ್ಟರು, ಪೋಸ್ಟ್ ಮಾಸ್ಟರು, ಮ್ಯುನಿಸಿಪಲ್ ಮೆಂಬರುಗಳೇ ಮುಂತಾದವರುಗಳು ಸಭಾ ಮಂದಿರದಲ್ಲಿ ಹಾಜರಾಗಿದ್ದರು. ಬಾಲಕರು ಗದ್ಯಪದ್ಯ ರೂಪಗಳಿಂದ ಸಭಿಕರನ್ನು ಸಂತೋಷಪಡಿಸಿದರು. ಇಂಗ್ಲೀಷ್ ೫ನೇ ಕ್ಲಾಸ್ ವಿದ್ಯಾರ್ಥಿ ರಾಮಚಂದ್ರಯ್ಯನು ನೀತಿ ವಿಷಯವಾಗಿ ಒಂದು ಸಣ್ಣ ಉಪನ್ಯಾಸವನ್ನು ಮಾಡಿದನು. ಆ॥ ಹೆಡ್ ಮಾಸ್ಟರ್ ಮ॥ ತಿಂಗಳಭಟ್ಟರು ಸ್ಕೂಲಿನ ವಾರ್ಷಿಕ ರಿಪೋರ್ಟನ್ನು ಓದಿ ಹೇಳಿದರು. ಅನಂತರ ಅಮಲ್ದಾರ್ರವರು ಸ್ವಹಸ್ತದಿಂದ ಬಾಲಕರಿಗೆ ಪುಸ್ತಕಗಳನ್ನು ಬಹುಮಾನವಾಗಿ ಹಂಚಿಕೊಟ್ಟು ತಮ್ಮ ಸ್ಥಾನದಿಂದ ಸ್ವಾರಸ್ಯವಾಗಿಯೂ ನೀತಿಬೋಧಕವಾಗಿಯೂ ಇದ್ದ ಒಂದು ಉಪನ್ಯಾಸ ಮಾಡಿದರು. ಕೋ ಆಪರೇಟಿವ್ ಮತ್ತು ಡಿಬೇಟಿಂಗ್ ಸೊಸೈಟಿ ವಿಷಯವಾಗಿಯೂ ಉಪನ್ಯಾಸಗಳು ಕೊಡಲ್ಪಟ್ಟವು. ಸಭಿಕರಿಗೆ ಗಂಧ ಪುಷ್ಪ ಪಾನ್ ಸುಪಾರಿ ಹಂಚಿದ ತರುವಾಯ ಆ ದಿನದ ಸಭೆಯು ಬರಖಾಸ್ತಾಯಿತು — ಇಲ್ಲಿಗೆ ಸ್ವಲ್ಪ ದಿವಸಗಳ ಕೆಳಗೆ ಸ್ಕೂಲ್ ಇನ್ಸ್‌ಪೆಕ್ಷನ್‌ಗಾಗಿ ದಯಮಾಡಿದ್ದ ಡಿ॥ ಇನ್ಸ್‌ಪೆಕ್ಟರು ಸ್ಕೂಲಿನ ಕೆಲವು ಭಾಗಗಳನ್ನು ಖುದ್ದು ಪರಾಂಬರಿಸಿ ರಿಪೇರಿ ಮಾಡಿಸುವದಕ್ಕೆ ಸದ್ಯದಲ್ಲೇ ಹಣ ಸ್ಯಾಂಕ್ಷನ್ ಮಾಡುವದಾಗಿಯೂ, ಅದರಂತೆ ಮಾಡಿಸುವದಾಗಿಯೂ ವರ್ತಮಾನ ಕೇಳುತ್ತೇನೆ. ಮಳೆಗಾಲ ಸಮೀಪಿಸುತ್ತಿದೆ. ಈಗ ಜಾಗ್ರತೆಯಾಗಿ ರಿಪೇರಿ ಮಾಡಿಸದೇ ಇದ್ದ ಪಕ್ಷದಲ್ಲಿ ಬಾಲಕರು ತುಂಬಾ ಕಷ್ಟಕ್ಕೆ ಒಳಗಾಗುತ್ತಾರೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆದದ್ದರಿಂದ ಜಾಗ್ರತೆಯಲ್ಲಿಯೇ ಕೆಲಸಕ್ಕೆ ಪ್ರಾರಂಭಿಸುವರೆಂತ ನಂಬಿದ್ದೇನೆ.— ಇಲ್ಲಿಗೆ ಸುಮಾರು ೭ ಮೈಲಿ ದೂರದಲ್ಲಿರುವ ಚಿಕ್ಕದೇವಮ್ಮನವರ ಬೆಟ್ಟದ ಸರಹದ್ದಿನಲ್ಲಿ ಕೆಲವು ಜಾತಿ ಜನರು ಅಂದರೆ ಹೊಲೆಯರು, ಒಡ್ಡರು, ಕಾಡುಕುರುಬರು ಮುಂತಾದವರುಗಳು ಸುಮಾರು ೧೦—೧೨ ಜನಗಳು ಸೇರಿಕೊಂಡು ಅಧೋಮಾರ್ಗವಾಗಿ ಸಂತೆಗೆ ಹೋಗಿ ಬರುವಂಥಾ ವ್ಯಾಪಾರಸ್ಥರನ್ನೂ, ಪ್ರಯಾಣಿಕರನ್ನೂ ಹೊಡೆದು ಅವರಲ್ಲಿದ್ದ ನಗ ನಾಣ್ಯ ಮತ್ತು ದಿನಸುಗಳನ್ನು ಕಿತ್ತುಕೊಂಡು ಪರಾರಿಯಾಗಿರುವುದು ಇಲ್ಲಿನ ಪೋಲೀಸಿಗೆ ರಿಪೋರ್ಟಾಗಿ, ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಮ॥ ಕೆ ಪಿ ಪೆಮ್ಮಯ್ಯನವರೂ, ಜಮಾದಾರ್ರೂ, ಕಸಬಾ ದಫೇದಾರ್ರೂ, ಕೆಲವು ಕಾನ್ಸ್‌ಟೇಬಲುಗಳೊಡನೆ ಹೋಗಿ ಬಹು ಸಾಹಸದಿಂದ ಕೆಲವು ಗುಮಾನಿ ಆಸಾಮಿಗಳನ್ನು ಅಂದರೆ ಬೊಮ್ಮ, ಬೆಳ್ಳ ವಗೈರೆಯನ್ನು ಚ[illegible]ಗಿರಿ ಮಾಡಿ ಮೈಸೂರಿಗೆ ಕಳುಹಿಸಿರುವದಾಗಿಯೂ, ಅವರ ಬಳಿಯಲ್ಲಿ ಕೆಲವು

ಮೋಲುಗಳು ಸಿಕ್ಕಿರುವದಾಗಿಯೂ ವರ್ತಮಾನವಿದೆ. ಇನ್‌ಸ್ಪೆಕ್ಟರು ಬಂದು ಸ್ವಲ್ಪ ದಿವಸವಾಗಿದ್ದರೂ ತಮ್ಮ ಇಲಾಖಾ ನೌಕರವರ್ಗದ ಮತ್ತು ಗ್ರಾಮಸ್ಥರ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ —ಇಲ್ಲಿ ಮ್ಯುನಿಸಿಪಾಲಿಟಿ ವಿಷಯ ಏಕರೀತಿಯಾಗಿದೆ. ನಮ್ಮ ಹೊಸ ಅಮಲ್ದಾರ್ರವರು ಬಂದಾಗ್ಗೆ ಊರನ್ನು ಕ್ರಮವಾದ ಸ್ಥಿತಿಯಲ್ಲಿ ಇಡುವರೆಂತ ನಿರೀಕ್ಷಣೆಯುಳ್ಳದ್ದೆವು ಆದರೂ ಶ್ರದ್ಧೆಯನ್ನು ವಹಿಸಿ ಸ್ವಲ್ಪ ಮಟ್ಟಿಗೆ ಕ್ರಮಕ್ಕೆ ತಂದಿದ್ದರು. ಆದರೆ ಕಡ್ತಾ ಗಲಾಟೆ ಒದಗಿದ್ದರಿಂದಲೂ, ಆಮೇಲೆ ಸ್ವಲ್ಪ ಕಾಲದ ಮೇಲೆ ಅವರು ರಜಾದ ಮೇಲೆ ದಯಮಾಡಿದ್ದರಿಂದಲೂ ಅವಕಾಶವಾಗಲಿಲ್ಲ ಈಗ ಛಾರ್ಜನ್ನು ವಹಿಸಿರುತ್ತಾರೆ ಈಗಲಾದರೂ ಮುಂಚಿನಂತೆ ಶ್ರದ್ಧೆಯನ್ನು ವಹಿಸಿ ಊರನ್ನು ಆರೋಗ್ಯಕರವಾದ ಸ್ಥಿತಿಗೆ ತರುವರೆಂತ ನಂಬಿದೇನೆ —ಇಲ್ಲಿನ ನದಿಯಲ್ಲಿ ಬೇಸಿಗೆ ಕಾಲದಲ್ಲಿ ನೀರು ನಿಲ್ಲುವುದಿಲ್ಲ. ಇದ್ದ ನೀರು ದನಕರುಗಳನ್ನು ತೊಳೆಯುವದರಿಂದಲೂ, ಸೊಪ್ಪುಸೊದೆ ಮುಂತಾದ್ದನ್ನು ತೊಳೆಯುವದರಿಂದಲೂ, ಹೇಸಿಕೆ ಬಟ್ಟೆಗಳನ್ನು ಒಗೆಯುವದರಿಂದಲೂ ಕೆಟ್ಟುಹೋಗುತ್ತದೆ. ಮ್ಯುನಿಸಿಪಾಲಿಟಿಯವರ ನಿಗಾ ಇದರ ಮೇಲೆ ಇರಬೇಡವೇ? ಅಲ್ಲದೆ ಇಲ್ಲಿನ ಕೆಲವು ಬೀದಿಗಳಲ್ಲಿ ಗೊಬ್ಬರದ ಗುಂಡಿಗಳೇ ಇಲ್ಲ. ಇದ್ದರೂ ಅದರೊಳಕ್ಕೆ ಎಂಜಲೆಲೆ, ಗೊಬ್ಬರ ಮುಂತಾದದ್ದನ್ನು ಹಾಕದೆ ಮನೆಯ ಮುಂದೆಯೇ ಹಾಕುತ್ತಾರೆ ಮತ್ತು ಬೀದಿಗಳಲ್ಲಿ ತಿರುಗುವುದಕ್ಕೂ ಸಹ ಅಸಹ್ಯವಾಗುತ್ತೆ ಆದದ್ದರಿಂದ ಈ ಮೇಲೆ ಕಂಡ ಅಂಶಗಳಿಗೆ ಗಮನ ಕೊಟ್ಟರೆ ಉತ್ತಮ —ಈಗ ೨ ೩ ದಿವಸಗಳಿಂದ ಮೋಡವಾಗುವದೂ, ಒಂದೆರಡು ಹನಿಗಳೂ ಬೀಳುವುದೂ ಆಗಿದೆ ಮಧ್ಯಾಹ್ನದ ಹೊತ್ತು ಬಿಸಿಲಿನ ಧಗೆಯು ಸಹಿಸಲಾರದ್ದಾಗಿದೆ ದಿನಸಿ ಧಾರಣೆ ಇಳಿತರಕ್ಕೆ ಬಂದಿರುವದು

ದೇವನಹಳ್ಳಿ —ಈ ಊರಿನಲ್ಲಿ ಸಾಯಂಕಾಲ ೬ ಘಂಟೆ ಪರ್ಯಂತವೂ ಬಿಸಿಲು ಏರುತ್ತಾ ತಡೆಯಲು ಅಸಾಧ್ಯವಾಗಿರುತ್ತೆ ರಾತ್ರಿಕಾಲದಲ್ಲಿ ಸೆಕೆಯೂ ಧಗೆಯೂ ದಿನೇ ದಿನೇ ಹೆಚ್ಚುತ್ತಾ ಬೆಳಗಿನ ಝಾವದಲ್ಲಿ ಮಾತ್ರ ಕಣ್ಣಿಗೆ ತಣ್ಣವು ಹತ್ತಿ ನಿದ್ರೆ ಬರುವದು ಮಳೆ ಕಹಲ್ ವರಿವಿಗೂ ಬಾರದೆ ಕೆಲವು ಭಾವಿಗಳಲ್ಲಿ ಈಗಲೇ ಸುತರಾಂ ನೀರು ಇಲ್ಲದೆ ಇರುತ್ತೆ —ಧಾರಣೆವಾಸಿಗಳಿಗೆ ಸುಗ್ಗಿ ಕಾಲವಾದದ್ದರಿಂದ ಅಗ್ಗವಾಗಿರತಕ್ಕದ್ದು ತಗ್ಗಾಗಿಯೇ ಇರುತ್ತೆ ಈ ಮಳೆ ವ್ಯಾಪಾರಸ್ಥರು ಇಂಥಾ ದುರ್ಭಿಕ್ಷದಲ್ಲೇ ಕಮ್ಮಿ ಸೇರುಗಳು, ಅಳತೆ ಬಟ್ಟುಗಳು ಉಪಯೋಗಿಸಿ ಜನರಿಗೆ ಮೋಸಪಡಿಸಿ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ ತಾಲ್ಲೂಕ್ ಅಧಿಕಾರಿಗಳು ಗಮನಕೊಟ್ಟು ತಕ್ಕ ಬಂದೋಬಸ್ತು ಮಾಡಿಸಿದರೆ ಬಡವರಿಗೆ ಬಹಳ ಉಪಕಾರ ಮಾಡಿದಂತೆ ಆಗುತ್ತೆಂತ ನಂಬುತ್ತೇನೆ —ಅಲ್ಲದೆ ಈಗ ೩ ತಿಂಗಳ ಲಾಗಾಯಿತು ಈ ಗ್ರಾಮದಲ್ಲಿ ಎಲ್ಲಿ ನೋಡಿದರೂ ಸಿಡುಬಿನ ಉಪದ್ರವು ಪ್ರಬಲವಾಗಿ ಇದುವರೆಗೆ ೧೦೦-೧೫೦ ಮಕ್ಕಳು ತೀರಿಹೋದರು ಇನ್ನೂ ಅಲ್ಲಲ್ಲೇ ಹರಡಿಕೊಂಡಿದೆಯೇ ಶಿವಾಯಿ ಸ್ವಲ್ಪವೂ ನಿಂತುಹೋಗಲಿಲ್ಲ ಇಂಥಾದ್ದರಲ್ಲಿ ಆಸ್ಪತ್ರೆ ಅಸಿಸ್ಟಂಟ್ ಮೆ॥ ಅಬ್ದುಲ್ ಅಜೀಜ್ ಸಾಹೇಬರವರು ಗಮನಕ್ಕೆ ತಂದುಕೊಂಡು ಬಡಪಾಯಿಗಳು ಸಾಯುತ್ತಿರುವದನ್ನು ನೋಡಿ ಕನಿಕರಪಟ್ಟು ಸಾಧ್ಯವಾದ ಮಟ್ಟಿಗೂ ಆ ಜನಗಳಿಗೆ ವಿವೇಕವನ್ನು ಹೇಳಿ ಶಿಡುಬು ಹಾಕುತ್ತಾ ಇದ್ದಾರೆ —ಗ್ರಾಮ ನೌಕರನು ಸಂತೆಯಲ್ಲಿ ಯಳೆ ವ್ಯಾಪಾರ ಮಾಡತಕ್ಕ ಜನಗಳಲ್ಲಿ ಒಳಲಂಚ ತೆಗೆದುಕೊಂಡು ಈ ಚಿಗೆ ಪಶಿಗೆ ಎತ್ತುವದನ್ನು ನಿಲ್ಲಿಸಿರುತ್ತಾನೆಂತ ಕೇಳುತ್ತೇನೆ ಈತನು ಈ ಊರಿಗೆ ಹಳಬನಾಗಿ ಆಬ್ಕಾರಿ ಇಲಾಖೆಯ ಕೆಲಸವನ್ನು ನೋಡುತ್ತಾ ಇದ್ದೂ ಸಹಾ ಮ್ಯುನಿಸಿಪಲ್ ಮೆಂಬರುಗಳಲ್ಲಿ ಒಬ್ಬ ಮೆಂಬರಂತೆ ಹೊಸದಾಗಿ ಚುನಾಯಿಸಿ ಹಳೇ ಮೆಂಬರುಗಳನ್ನೆಲ್ಲಾ ವಜಾ ಮಾಡಿ ಹೊಸ ಮೆಂಬರುಗಳನ್ನು ಚುನಾಯಿಸಿರುತ್ತಾರೆಂತ ಕೇಳುತ್ತೇನೆ ಈ ವಿಚಾರವನ್ನು ಮೇಲಿನ ಅಧಿಕಾರಿಗಳು ಚನ್ನಾಗಿ ಆಲೋಚಿಸಬೇಕು ಒಬ್ಬರಿಗೆ ಎರಡು ಅಧಿಕಾರವನ್ನು ಕೊಡತಕ್ಕದ್ದು ಯುಕ್ತವೇ?—ಈ ಟರ್ವ್‌ಗೆ ಸೇರಿದ ಕನ್ನಮಂಗಲಪಾಳ್ಯವೆಂಬ ಗ್ರಾಮದಲ್ಲಿ ೨೦ನೇ ತಾ ಬುಧವಾರ ಮಧ್ಯಾಹ್ನ ೩ ಘಂಟೆ ಸಮಯದಲ್ಲಿ ಆಕಸ್ಮಾತ್ ಗುಡುಗಿನೊಡನೆ ಮಳೆ ಬಂದು ಮಹಾ ಶಬ್ದದೊಡನೆ ಸ್ವಲ್ಪ ಹೊತ್ತಿನಲ್ಲಿ ಸಿಡಿಲು ಹೊಡೆದು ೬ ಕುರಿಗಳೂ ೨೦ ಮೇಕೆಗಳೂ ಸತ್ತುಹೋದವು ಮತ್ತು ಕುರಿ ಕಾಯುವ ಒಬ್ಬ ಹುಡುಗನೂ ಹುಡುಗಿಯೂ ಸಹಾ ಆ ಪ್ರಚಂಡ ಜ್ವಾಲೆಯು ಸೋಕಿ ಬದುಕುವದೇ ಕಷ್ಟವೆಂತ ಹೇಳಿಕೊಳ್ಳುತ್ತಾರೆ ಅಲ್ಲದೆ ಒಂದು ಹಳೇ ಹಲಸಿನ ಮರವೂ ಸುಟ್ಟುಹೋಯಿತು —ಇದೇ ತಿಂಗಳು ೨೦ನೇ ತಾ ಬುಧವಾರ ಪ್ರಾತಃಕಾಲ ಚಿಕ್ಕಬಳ್ಳಾಪುರದ ಕಡೆಯಿಂದ ಡಿಸ್ಟ್ರಿಕ್ಟ್ ಕೌನ್ಸೆಲರ್ ಮೆ॥ ಎಚ್ ವಿ ನಂಜುಂಡಯ್ಯನವರು ದಯಮಾಡಿ, ಬಾಲಕ ಬಾಲಕಿಯರ ಪಾಠಶಾಲೆಗಳನ್ನೂ ತಾಲ್ಲೂಕ್ ಆಫೀಸು, ನೇಟಿವ್ ವೈದ್ಯಶಾಲಾ ವಗೈರೆಗಳನ್ನೂ ಪರಾಂಬರಿಸಿ ಗುರುವಾರ ಪ್ರಾತಃಕಾಲ ಬೆಂಗಳೂರಿಗೆ ತೆರಳಿದರು —ಕೋಟೆಯ ಕೆರೆಯಲ್ಲಿ ಕುಡಿಯುವ ನೀರು ಕಮ್ಮಿಯಾಗಿರುವದರಿಂದ ರಾತ್ರಿವೇಳೆ ಬೆಸ್ತರು ಪ್ರವೇಶಿಸಿ ಮೀನುಗಳನ್ನು ಹಿಡಿದು ನೀರು ಬಗ್ಗಡ ಮಾಡುತ್ತಾರೆ ಈ ವಿಷಯವನ್ನು ತಾಲ್ಲೂಕ್ ಅಧಿಕಾರಿಗಳು ಗಮನಕೊಟ್ಟು ತಕ್ಕ ಏರ್ಪಾಟು ಮಾಡುವರೆಂಬ ನಂಬುತ್ತೇನೆ —ಗ್ರಾಮ ಪಾಠಶಾಲಾ ತಕ್ಕಮಟ್ಟಿಗೆ ಚನ್ನಾಗಿರುತ್ತೆ ಈಗ ೨ ತಿಂಗಳ ಲಾಗಾಯಿತು ಶಿಡ್ಲಘಟ್ಟದ ತಾಲ್ಲೂಕ್ ಕುಂದಲಗುರ್ಕಿಯಿಂದ ಒಬ್ಬ ಶಾಸ್ತ್ರಿಗಳು ಬಂದು ರಾತ್ರಿವೇಳೆ ರಾಮಾಯಣವನ್ನು ಬಹಳ ಚಮತ್ಕಾರದಿಂದ ಓದಿ ಎಲ್ಲರಿಗೂ ತಿಳಿಯುವಂತೆ ಅರ್ಥ ಹೇಳುತ್ತಾ ಇದ್ದಾರೆ ಇದನ್ನು ಕೇಳಲು ನೂರಾರು ಜನಗಳು ಬರುತ್ತಾರೆ

ವ್ಯರ್ಥ ಕಾಲಯಾಪನೆಯು.

ಅನೇಕರು ಕಾಲವನ್ನು ಅತಿ ತುಚ್ಛವಾದದ್ದನ್ನಾಗಿ ಎಣಿಸುತ್ತಾ, ವ್ಯರ್ಥವಾಗಿ ಕಳೆಯುತ್ತಾರೆ ಇವರೇ ಒಂದು ಕಾಸನ್ನು ಕಳೆಯುವದಕ್ಕೆ ಅತ್ಯಂತ ವ್ಯಥೆಪಡುವವರಾದರೂ ದಿವಸಗಳನ್ನೂ, ವಾರಗಳನ್ನೂ, ತಿಂಗಳುಗಳನ್ನೂ ಕಡೆಗೆ ವರುಷಗಳನ್ನೂ ವ್ಯರ್ಥವಾಗಿ ಕಳೆಯುವದರಲ್ಲಿ ಬಹಳ ಸಂತೋಷವುಳ್ಳವರಾಗಿರುತ್ತಾರೆ. ಇವರು ಹಸುಗಳಿಗಿಂತಲೂ ಒಂದು ಗುಲಗಂಜಿಯ ತೂಕ ಜಾಸ್ತಿಯಾಗಿ ಬುದ್ಧಿ ಇದ್ದರೆ ಹೀಗೆ ಇರುತ್ತಿರಲಿಲ್ಲ ಪ್ರಮಾದವಶಾತ್ ಒಬ್ಬನಲ್ಲಿದ್ದ ಒಂದು ಸಾವಿರ ವರಹಗಳು ಒಂದೇ ನಿಮಿಷದಲ್ಲಿ ನಷ್ಟವಾದರೂ ದೇವರ ದಯದಿಂದ ಅದರೆರಡರಷ್ಟು ಲಾಭವು ಒಂದೇ ನಿಮಿಷದಲ್ಲಿ ಉಂಟಾಗಬಹುದು ಕಳೆದುಹೋದ ಕಾಲವು ಯಾವ ಪ್ರಯತ್ನದಿಂದಲಾದರೂ ಪುನಃ ಲಭಿಸೀತೇ ಎಷ್ಟುಮಾತ್ರವೂ ಇಲ್ಲ. ಹೀಗಿದ್ದಾಗ್ಯೂ ಕಾಲವನ್ನು ಸದುಪಯೋಗಮಾಡಲು ಸನ್ನಾಹವನ್ನು ಮಾಡುವದಕ್ಕೆ ಬದಲಾಗಿ ದುರುಪಯೋಗ ಮಾಡಲು ಬಹಳ ವಿಧಗಳನ್ನು ನಿರ್ಮಿಸಿಕೊಂಡು ಆನಂದದಿಂದ ಕಳೆಯುತ್ತಿರುವರು ಕಾಲವನ್ನು ಭಗವಂತನು ಪ್ರಾಣಿಗಳಿಗೆ ಇಹಲೋಕ ವ್ಯಾಪಾರಕ್ಕೂ ಪರಲೋಕ ಸಾಧನೆಗೂ ಬಂಡವಾಳವನ್ನಾಗಿ ದಯಪಾಲಿಸಿರುತ್ತಾನೆ ಈ ಬಂಡವಾಳವನ್ನು ವ್ಯರ್ಥ ಕಳೆಯುವ ಮನುಷ್ಯನಿಗೂ, ಮಗನು ಸುಖವಾಗಿ ಜೀವಿಸಲಿ ಎಂದು ತಂದೆಯು ಹೆಚ್ಚಾದ ಆಸ್ತಿಯನ್ನು ಬಿಟ್ಟುಹೋದರೆ ಆ ಮಗನು ಆಸ್ತಿಯುಳ್ಳ ಪೆಟ್ಟಿಗೆಯನ್ನು ಬೀದಿಯ ಜಗುಲಿಯ ಮೇಲಿಟ್ಟುಕೊಂಡು ಒಂದೊಂದು ಹಿಡಿಯಾಗಿ ತೆಗೆದು ದಿಕ್ಕುದಿಕ್ಕಿಗೂ ಚೆಲ್ಲುವ ಹುಚ್ಚನಿಗೂ ಬೇಧವೇನು? ಮನುಷ್ಯನಿಗೂ ತಿರ್ಯಗ್ಜಂತುಗಳಿಗೂ ಪ್ರಾಣ, ಹಸಿವು, ಬಾಯಾರಿಕೆ, ನಿದ್ರೆ, ವ್ಯಾಧಿ ಮುಂತಾದವುಗಳು ಸಮಾನವಾಗಿರುವಲ್ಲಿ ಮನುಷ್ಯನು ಶ್ರೇಷ್ಠನಾತಕ್ಕೆ ಅದನು? ಮೃಗಗಳಿಗೆ ಕರ್ತವ್ಯಜ್ಞಾನವಿಲ್ಲದ್ದರಿಂದಲೂ ಇವನಿಗೆ ಇರುವದರಿಂದಲೂ ಅಲ್ಲವೇ? ವ್ಯರ್ಥಕಾಲಯಾಪಕರಿಗೆ ಈ ಜ್ಞಾನವಿದ್ದಂತಾಯಿತೇ? ಇಲ್ಲದೆ ಮೇಲೆ ಅವನು ಪಶುಸಮಾನನೇ ಅಲ್ಲವೇ? ನಮ್ಮ ಜನರು ತಮಗೂ ತಮ್ಮ ಹೆಂಡರಿಗೂ ಮಕ್ಕಳಿಗೂ ಅನ್ನಕ್ಕೂ ಬಟ್ಟೆಗೂ ಮಾರ್ಗವಿಲ್ಲದೇ ಇದ್ದಾಗ್ಯೂ ಸಹಿಸಿಕೊಂಡು ಆನಂದವಾಗಿ ವ್ಯರ್ಥಕಾಲಕ್ಷೇಪ ಮಾಡುವದಕ್ಕೆ ಉಂಟುಮಾಡಿಕೊಂಡಿರುವ ಉಪಾಯಗಳಾದ ಅನೇಕ ಸಾಮಗ್ರಿಗಳಲ್ಲಿ ನನಗೆ ಜ್ಞಾಪಕಬಂದ ಕೆಲವನ್ನು ಮಾತ್ರ ಇಲ್ಲಿ ಅರಿಕೆಮಾಡುತ್ತೇನೆ ಯಾವವೆಂದರೆ—

ಏನುಸ್ವಾಮಿ, ಎಳೋಣವಾಯಿತೇ? ಎಲ್ಲಿ ಹೊರಡೋಣವಾಯಿತು? ಏನು ಕೂತುಕೊಳ್ಳೋಣವಾಯಿತು? ಸ್ವಲ್ಪ ನಶ್ಯಕ್ಕೆ ಅಪ್ಪಣೆಯಾದೀತೇ? ಕೂಡ್ರಿ, ಮಾಡಿ ಹಾಕಿಕೊಳ್ಳೋಣ, ಹಾಳು ಸಂಸಾರಕ್ಕೆ ಒದ್ದಾಡೋಣವು ಇದ್ದೇ ಇದೆ ಎಲ್ಲಿ ತಂದಿರಿ ಈ ನಶ್ಯವನ್ನು? ಏನೂ ಸ್ವಾರಸ್ಯವಿಲ್ಲವಲ್ಲ ನಶ್ಯವೆಂದರೆ ಚಿಟ್ಟದ ಪುರದ ಹೊಗೆ ಸೊಪ್ಪಿನ ನಶ್ಯವೇ ನಶ್ಯವು ಯಾಕೆ ಸ್ವಾಮಿ, ತಿಂಗಳೂರಿನಲ್ಲಿ ಅದರ ತಲೆಮಟ್ಟೆ ಹಾರುವಂಥಾ ಸೊಪ್ಪು ಆಗುತ್ತೆ ಎಷ್ಟೇ ಇರಲಿ ಚಾತಿಲಕ್ಷಣ ತಪ್ಪೀತೇ? ನಾಯಿ ನಾಯಿಯೇ, ಸಿಂಹವು ಸಿಂಹವೇ ಇನ್ನೇನು ಹೋಗೋಣ, ವಿನೋದವಾಗಿ ಕಾಲಾ ಕಳೆಯೋಣವೆಂದರೆ ಇಲ್ಲಿ ಘಟಾಶೀರಿಸಿ ಬರುವದಕ್ಕೆ ಕಚೇರಿಗೆ ಹೋಗಬೇಕಲ್ಲ? ಇದ್ದ ಮಾತನ್ನು ಹೇಳುತ್ತೇನೆ, ಸ್ವಾಮಿ ಸಂಬಳದ ಆಶೆಗೆ ನಾನು ಕಚೇರಿಗೆ ಹೋಗುತ್ತೇನೆಯೇ ಹೊರತು ಶರೀರ ಮಾತ್ರ ಅಲ್ಲಿ ಇರುತ್ತೆ ಮನಸ್ಸು ಹೊರಗೇ ಸಂಚರಿಸುತ್ತದೆ ಅಷ್ಟಲ್ಲದೇ ಏನು ಸ್ವಾಮಿ, ಸರ್ಕಾರವನ್ನು ಬದುಕಿಸುವವರ್‍ಯಾರು? ಒಳ್ಳೇದು, ದಯಮಾಡಿ, ನಾನೂ ಹೋಗುತ್ತೇನೆ ಈ ಹೊತ್ತು ಹಾಳಾದ ನಮ್ಮಪ್ಪನ ತಿಥಿ ಬೇರೆ ಬಂದಿದೆ ಕೈಲಿ ಒಂದು ಕಾಸೂ ಇಲ್ಲ, ಯಾವನಿಗಾದರೂ ಬರೇ ಒಡ್ಡಿ ಬ್ರಾಹ್ಮರ ಮುಂದಾಮೋಚಿಸ ಬೇಕಲ್ಲ? ಏನು ಸ್ವಾಮಿ, ಭೋಜನವಾಯಿತೇ? ಆಯಿತು ಸ್ವಾಮಿ, ತಮ್ಮ ದಯದಿಂದ ನೀವೇ ಪುಣ್ಯವಂತರು ಸ್ವಾಮಿ, ತಲೆ ಮೇಲೆ ತಲೆ ಬಿದ್ದರೂ ೧೦ ಘಂಟೆಗೆ ಊಟಮಾಡಿಬಿಡುತ್ತೀರಿ

ಮೇಲ್ಕಂಡಂಥಾ ವ್ಯರ್ಥಾಲಾಪಗಳು ಸಾವಿರಾರು ಇವೆ ಅವುಗಳಲ್ಲಿ ನೂರಾರು ಜ್ಞಾಪಕವೂ ಇವೆ ಸಾದರಿಗಾಗಿ ಈಗ ಬರದಿರುವದೇ ಸಾಕೆಂದು ನಿಲ್ಲಿಸಿ ಇದೇನೆ

ಅನುತಾಪಿ

ಇಂಡಿಯಾ ದೇಶದ ವೃತ್ತಾಂತಗಳು

ಬಪರ್ಹಾದ ಪಾಠಶಾಲೆಗಳಲ್ಲಿ ಮತ ವಿಷಯವಾಗಿ ಬೋಧಿಸಲು ಹೊಸದಾಗಿ ಗವರ್ನ್‌ಮೆಂಟಿನವರು ಜಾರಿಯಲ್ಲಿ ತಂದಿರುವರು

ಕಳೆದ ಗುರುವಾರ ರಾತ್ರಿ ಸುಮಾರು ೧೨—೫೦ ಕ್ಕೆ ಕಾಂಗ್ರಾ ಕಣಿವೆಯಲ್ಲಿರುವ ಬಜೌರ ಎಂಬಲ್ಲಿ ಭಯಂಕರವಾದ ಭೂಕಂಪನವು ಕಾಣಿಸಿತು

ಈ ದಿನ ವೈಸರಾಯಿಯವರು ಮೋಟಾರ್ ಗಾಡಿಯಲ್ಲಿ ಪ್ರಯಾಣ ಬೆಳಸಿ, ಸಿಂಲಾ ಪಟ್ಟಣಕ್ಕೆ ಮಧ್ಯಾಹ್ನ ಒಂದು ಗಂಟೆಗೆ ಸೇರುವರೆಂದು ಪ್ರಕಟಿಸಲ್ಪಟ್ಟಿದೆ

ಬರ್ಮಾ ದೇಶಕ್ಕೆ ಸೇರಿದ ಮಾಂಡಲೆ ಪಟ್ಟದಲ್ಲಿ ಅಗ್ನಿ ನಷ್ಟದಿಂದಸಂಧವಿಸುತ್ತಿರುವ ಜನಗಳಿಗೆ ರಂಗೂನಿನವರು ೧೧,೯೬೨ ರೂ ಚಂದಾ ಕೊಡಿಸಿರುವರು

ಅಲಹಾಬಾದ್‌ನಲ್ಲಿ ಪ್ರಕಟವಾಗುವ ಸ್ವರಾಜ್ಯವೆಂಬ ಪತ್ರಿಕೆಯ ಎಡಿಟರು ರಾಧಾರಾಮ ಎಂಬುವರು ರಾಜದ್ರೋಹ ವಾಕ್ಯಗಳನ್ನು ಬರೆದುದಕ್ಕಾಗಿ ವಿಚಾರಣೆಯಲ್ಲಿರುವರು

ಸರ್ ಫಿರೋಜಷಾ ಮೆಹಾತಾವರು ತಮ್ಮ ಪತ್ನಿಯರೊಡನೆ ಶೀಮೆ, ಪ್ರಯಾಣ ಮಾಡಿದರು ಅದೇ ಹಡಗಿನಲ್ಲಿ ಹೋಳ್ಕರ ಮಹಾರಾಜರವರೂ ಪ್ರಯಾಣ ಮಾಡಿರುತ್ತಾರೆ

ಪೆಷಾವರಿನಲ್ಲಿರುವ ಹಿಂದುಗಳು ತಮ್ಮ ಆಸ್ತಿಪಾಸ್ತಿಗಳನ್ನು ಜೋಪಾನವಾಗಿ ಕಾಪಾಡಲು ಏರ್ಪಾಡು ಮಾಡುವಂತೆ ಸರ್ಕಾರಕ್ಕೆ ಅರ್ಜಿ ಬರೆದುಕೊಂಡಿರುತ್ತಾರೆ ಈ ಅರ್ಜಿಗೆ ಸುಮಾರು ೨೦೦ ಜನರು ರುಜು ಹಾಕಿರುವರು

ಕೆಲವು ದಿವಸಗಳ ಕೆಳಗೆ ಆಗ್ರಾದಲ್ಲಿ ನಡೆದ ಇಂಡಿಯನ್ ಕ್ರಿಶ್ಚಿಯನ್ ಎಂಡೇವರ್ ಕನ್ವೆನ್ಷನ್‌ಗೆ ಬಂದಿದ್ದ ಸುಮಾರು ೬೫೦ ಅಮೇರಿಕಾ ಪ್ರತಿನಿಧಿಗಳು ಜಹಜು ಹತ್ತಿ ತಾ ೨೩ ರಲ್ಲಿ ಬೊಂಬಾಯಿಗೆ ಬಂದು ಇಳಿದರು ಇವರು ಅಲ್ಲಿ ಕೆಲವು ದಿನಗಳಿದ್ದು ಈಜಿಪ್ಟ್ ದೇಶಕ್ಕೆ ಹೋಗುವರು

ಚಿನ್ನ ಬೆಳ್ಳಿ ಕೆಲಸ ಮಾಡತಕ್ಕ ಅಕ್ಕಸಾಲಿಗರು ಮಾಡುವ ಮೋಸಕೃತ್ಯಗಳನ್ನು ವಿವರಿಸಿ ಇವುಗಳನ್ನು ನಿವಾರಣೆಮಾಡಿಕೊಡಬೇಕೆಂದು ಉತ್ತರ ದೇಶದ ವರ್ತಕ ಸಂಘದವರು ಇಂಡಿಯಾ ಗವರ್ನ್‌ಮೆಂಟಿಗೆ ಬರೆದುಕೊಂಡಿದ್ದರು ಈ ವಿಷಯವಾಗಿ ತಾವು ಏನೂ ಮಾಡಲಾಗದೆಂದು ಉತ್ತರ ಕೊಟ್ಟಿರುತ್ತಾರೆ

ಕೊಯಮುತ್ತೂರಿನಲ್ಲಿ ಕಳೆದ ಗುರುವಾರ ರಾತ್ರಿ ಆವಣಾಶಿ ಉತ್ಸವದ ರಥವು ಮೂರನೆಯ ಬೀದಿಯಲ್ಲಿ ಹೋಗುತ್ತಿರುವಾಗ್ಗೆ ಅಚ್ಚು ಮುರಿದುಹೋದುದರಿಂದ ರಥವು ಕೆಳಗೆಬಿದ್ದು, ಮೂವರಿಗೆ ಪ್ರಾಣನಷ್ಟವೂ ಅನೇಕರಿಗೆ ಜಖಮೂ ಆಯಿತು ಜಖಂ ಆದವರ ಪೈಕಿ ಇಬ್ಬರು ಪ್ರಾಣಗಂಡಾಂತರದಲ್ಲಿದ್ದಾರೆ ಸತ್ತವರ ಪೈಕಿ ಒಬ್ಬನನ್ನು ವಾರಣೆಯ ದಿನದ ಹೊತ್ತಾರೆಯ ವರೆಗೂ ರಥದ ಕೆಳಗಿನಿಂದ ತೆಗೆಯಲೇ ಇಲ್ಲ

ತಾ ೧೫ ರಲ್ಲಿ ಬೊಂಬಾಯಿನಿಂದ ವೀರಂಗಾಮಿಗೆ ಕಳುಹಿಸಲ್ಪಟ್ಟ ೨೬೦೦ ರೂ ಗಳಿಗೆ ಇನ್‌ಷೂರ್ ಮಾಡಿದ ಎರಡು ಪಾರ್ಸಲ್‌ಗಳು ಅಹಮದಾಬಾದಿನಲ್ಲಿ ಕಳೆದುಹೋಗಿತ್ತು ಪೋಲೀಸಿನವರು ಮೇಲ್ ಸಾರ್ಟರನ್ನು ದಸ್ತಗಿರಿ ಮಾಡುವಲ್ಲಿ ತನ್ನ ಕಳುವನ್ನು ಒಪ್ಪಿಕೊಂಡು ಪಾರ್ಸಲ್‌ಗಳನ್ನು ಹೂತಿಟ್ಟಿದ್ದ ಸ್ಥಳವನ್ನು ತೋರಿಸಿದನು

ಇಂಡಿಯಾವಿಗೂ ಅಫ್ಘಾನಿಸ್ಥಾನಿಗೂ ಮಧ್ಯೆ ಇರುವ ಸರಹದ್ದುಗಳಲ್ಲಿ ವಾಸಮಾಡುವ ಜನಗಳ ಪಂಗಡಗಳು ಒಬ್ಬರಿಗೊಬ್ಬರು ಜಗಳವಾಗಿ ಕೊಲ್ಲ ಹೊಡೆಯುತ್ತಿರುವದನ್ನು ನಿಲ್ಲಿಸುವದಕ್ಕಾಗಿ ಮೆ॥ ಡೊನಾಲ್ಡ್ ಸಿ ಐ ಇ ಯವರು ಬ್ರಿಟಿಷರ ಪರವಾಗಿಯೂ ಸರ್ದಾರ್ ಅಬ್ದುಲ್ ಮಹಾಬ್ ಖಾನ್ ಯವರು ಅಮೀರರ ಪರವಾಗಿಯೂ ಒಂದು ಕಮಿಷನ್ ಏರ್ಪಟ್ಟಿರುವುದು.

ಹಾಲುದ್ವಾರಿ ದರೋಡೆಗೆ ಸೇರಿದ ಶೈಲೇಂದ್ರ ಕೃಷ್ಣದಾಸಗೆ ಏಳು ವರುಷಗಳ ಕಠಿಣ ಸಜವೂ, ಶೈಲೇಂದ್ರನಾಥ ಚಟರ್ಜೀ, ಉಪೇಂದ್ರ ಕೃಷ್ಣದೇವ, ಅತುಲಚಂದ್ರ ಮುಖರ್ಜೀ, ಗಣೇಶಚಂದ್ರದಾಸ, ಕೃಷ್ಣಚಂದ್ರರಾಯ ಇವರುಗಳಿಗೆ ಎಂಟು ವರುಷಗಳ ಕಠಿಣ ಸಜವೂ ವಿಧಿಸಲ್ಪಟ್ಟು ಮನ್ಮಥನಾಥವಿಶ್ವ, ವಿಧುಭೂಷಣವಿಶ್ವ ಇವರುಗಳು ತಪ್ಪಿತಸ್ಥರಲ್ಲವೆಂದು ಬಿಡುಗಡೆ ಮಾಡಲ್ಪಟ್ಟರು

ಕಳೆದ ವಾರ ಇಂಡಿಯಾದೇಶದಲ್ಲಿ ಪ್ಲೇಗಿನಿಂದ ೨೦,೩೬೫ ಮಂದಿ ಮೃತಪಟ್ಟಿದ್ದಾರೆ ಈ ಪೈಕಿ ಪಂಜಾಬಿನಲ್ಲಿ ೧೨,೯೧೬, ಸಂಯುಕ್ತ ಆಧಿಪತ್ಯಗಳಲ್ಲಿ ೪,೬೫೩, ರಾಜಪುತಾನ ಅಜ್ಮೀರ್ ಮೇರ್‌ವಾರಾಗಳಲ್ಲಿ ೧೮೮೦, ಬಂಗಾಳದಲ್ಲಿ ೧೪೩೯, ಬೊಂಬಾಯಿನಲ್ಲಿ ೬೦೯, ಬರ್ಮಾದಲ್ಲಿ ೨೯೩, ಮಧ್ಯ ಇಂಡಿಯಾದಲ್ಲಿ ೧೯೮, ಮಧ್ಯಪ್ರಾಂತ್ಯದಲ್ಲಿ ೬೧, ಕಾಶ್ಮೀರ್‌ನಲ್ಲಿ ೫೧, ಮೈಸೂರಿನಲ್ಲಿ ೧೯, ಮದ್ರಾಸ್ ಆಧಿಪತ್ಯದಲ್ಲಿ ೧೦, ಹೈದರಾಬಾದಿನಲ್ಲಿ ೯, ಬೆಲೂಚಿಸ್ತಾನ್‌ನಲ್ಲಿ ೮, ಈ ರೀತಿ ಮೃತಪಟ್ಟಿದ್ದಾರೆ

ನಾಸಿಕದಲ್ಲಿ ಕಲೆಕ್ಟರ್ ಮೆ॥ ಜಾಕ್ಸನ್ ಯವರನ್ನು ಕೊಂದುಹಾಕಿದ ಅನಂತ ಲಕ್ಷ್ಮಣ ಕನ್ಹಾರೆಯನ್ನೂ, ಅವನ ಸಹಪಾಠಿಗಳಾದ ಕೃಷ್ಣಾಜಿ ಗೋಪಾಲ ಕಾರ್ವೆ ಮತ್ತು ವಿನಾಯಕನಾರಾಯಣ ದೇಶಪಾಂಡೆ ಎಂಬುವರನ್ನೂ ಕಳೆದ ಮಂಗಳವಾರ ಬೆಳಗ್ಗೆ ಥಾಣಾ ಜೈಲ್‌ಖಾನೆಯೊಳಗೆ ಬದ್ಧರ ತೀರ್ಮಾನದಂತೆ ಗಲ್ಲಿಗೆ ಹಾಕಿದರು, ಇನ್ನೂ ಚಿಕ್ಕ ವಯಸ್ಸಿನ ಈ ಮೂವರು ಬ್ರಾಹ್ಮಣ ಹುಡುಗರೂ ದುರ್ಮಾರ್ಗಕ್ಕೆ ಬಿದ್ದು ಕ್ರೂರಕೃತ್ಯಗಳನ್ನು ನಡಿಸಿ ಮರಣ ಶಿಕ್ಷೆಯನ್ನು ಅನುಭವಿಸಿದರಲ್ಲಾ ಎಂದು ವಿಷಾದಿಸಬೇಕಾಗಿದೆ

ಹಾಲೀಯವರ ಧೂಮಕೇತುವು ಪ್ರಾತಃಕಾಲ ಅಂದರೆ ಸೂರ್ಯೋದಯಕ್ಕೆ ಒಂದೂವರೆ ಗಂಟೆ ಮುಂಚೆವಾಗಿ ಆಕಾಶದಲ್ಲಿ ಕಾಣಿಸಿಕೊಳ್ಳುವುದೆಂದೂ, ಅದರ ಬಾಲವು ೩೫೦ ಮೈಲಿ ಉದ್ದವಾಗಿರುವುದೆಂದೂ ಕೊಡೇಕನಾಲ್ ನಕ್ಷತ್ರಮಂಡಲ ಪರೀಕ್ಷಕರಾದ ಮೆ॥ ಎ ಎಂ ಸ್ಮಿತ್‌ಯವರು ತಿಳಿಸಿರುತ್ತಾರೆ ಅದು ಮಾರ್ಚಿ ತಾ ೧ ರಲ್ಲಿ ಭೂಮಿಯಿಂದ ೧೭ ಕೋಟಿ ೬೦ ಲಕ್ಷ ಮೈಲಿ ದೂರದಲ್ಲಿತ್ತೆಂತಲೂ, ಬಹು ರಭಸವಾಗಿ ಸಂಚಾರಮಾಡುವುದರಿಂದ ಅದು ಮೇ ತಿಂಗಳ ತಾ ೨೦ ಕ್ಕೆ ೧ ಕೋಟಿ ೪೩ ಲಕ್ಷ ಮೈಲಿ ದೂರಕ್ಕೆ ಸಮೀಪಿಸಿ ಬರುವುದೆಂತಲೂ ಹೇಳಿರುವರು ಅದು ಭೂಮಿಯನ್ನು ಸೋಕಿದಾಗ್ಯೂ ಯಾವುದೊಂದು ಅಪಾಯವೂ ಸಂಭವಿಸುವುದಿಲ್ಲವೆಂಬದಾಗಿ ಈ ಪರೀಕ್ಷಕರು ಹೇಳುತ್ತಾರೆ

ಕಳೆದ ಶುಕ್ರವಾರ ರಾತ್ರಿ ಕಲ್ಕತ್ತಾ ಪಟ್ಟಣದಲ್ಲಿ ಹೌರಾ ಸೇತುವೆಯ ಸಮೀಪದಲ್ಲಿರುವ ಕಟ್ಟಡಗಳಿಗೆ ಬೆಂಕಿ ಬಿದ್ದುದರಿಂದ ಆ ಸೇತುವೆ ಉಸ್ತುವಾರಿ ನೋಡುವ ಅಧಿಕಾರಿಗಳು ಈ ಬೆಂಕಿಯಿಂದ ಸೇತುವೆ ಬಳ್ವಾರದ ಗೋಡೆಗಳಿಗೆ ಏನಾದರೂ ಅಪಾಯ ಸಂಭವಿಸಬಹುದೆಂಬುವ ಭಯದಿಂದ ಒಳಗಡೆಯಿಂದ ಮೇಲ್ಭಾಗಕ್ಕೆ ಜಾಮೀನುಗಳನ್ನು ಕೊಡುತ್ತಿದ್ದಾರೆ ಆ ಸೇತುವೆಯ ಮೇಲೆ ಗಾಡಿಗಳ ಸಂಚಾರವು ಸಂಪೂರ್ಣವಾಗಿ ನಿಂತುಹೋಗಿದೆ ಬೆಂಕಿಬಿದ್ದುದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ ಬೆಂಕಿಬಿದ್ದ ಮನೆಗಳೊಳಗೆ ವಿದ್ಯುಚ್ಛಕ್ತಿಯ ತಂತಿಗಳು ಹೋಗಿರುವುದರಿಂದ ಆ ತಂತಿಗಳು ಒಡೆದು ಈ ರೀತಿಯಲ್ಲಿ ಅಸಾಹುತವಾಗಿರಬಹುದೆಂದು ಊಹಿಸಲ್ಪಟ್ಟಿದೆ ಪ್ರಾಣಿಗಳಿಗೆ ಯಾವ ಅಪಾಯವಾದರೂ ನಷ್ಟವಾದರೂ ಆಗಲಿಲ್ಲ

ವಿದೇಶ ವರ್ತಮಾನಗಳು

ತುರ್ಕಿ ಸುಲ್ತಾನರು ದಡಾರವೆದ್ದು ನರಳುತ್ತಿದ್ದಾರೆಂದೂ, ಆದರೆ ಅದು ಅಷ್ಟು ಕಠಿಣವಾಗಿಲ್ಲವೆಂದೂ ತಿಳಿಯಬರುತ್ತದೆ

ಪ್ರಿನ್ಸ ಆಫ್ ವೆಲ್ಸ್ ರವರೂ, ಇವರ ಪತ್ನಿಯವರೂ ಲಂಡನ್ ಪಟ್ಟಣದಲ್ಲಿ ನಡೆಯುವ ಜಪಾನ್ ವಸ್ತುಗಳ ಪ್ರದರ್ಶನಾಲಯವನ್ನು ಮುಂದಿನ ತಿಂಗಳು ಮೇ ಹನ್ನೆರಡರಲ್ಲಿ ತೆರೆಯುವವರಾಗಿರುವರು

ವಿಮಾನವನ್ನು ಕಟ್ಟಿಕೊಂಡು ಹಾರುವುದರಲ್ಲಿ ಸಮರ್ಥರೆನಿಸಿಕೊಂಡ ಮೆ॥ ಗ್ರೇಹಾಮ್ ವೈಟ್ ಎಂಬುವರು ಕಳೆದ ತಿಂಗಳು ೨೩ನೆಯ ತಾರೀಖಿನ ಹೊತ್ತಾರೆ ಲಂಡನ್ ಪಟ್ಟಣದಿಂದ ಮ್ಯಾಂಚೆಸ್ಟರ್ ಪಟ್ಟಣಕ್ಕೆ ಹಾರುವದಕ್ಕೆ ಪ್ರಯತ್ನಮಾಡಿದರೆಂದು ವರ್ತಮಾನ ಬಂದಿದೆ

ಲಂಡನ್ ಪಟ್ಟಣದ ಕಾಡರಿ ಎಂಬೊಂದು ಕಂಪನಿಯು ದಿವಾಳಿಯಾಗಿ, ೫೫ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಷೇರುದಾರರಿಗೆ ನಷ್ಟವಾಗಿರುತ್ತದೆ ಈ ಕಂಪನಿಯ ಶಾಖೆಗಳು ಬರ್ಮಾ ಅಧಿಪತ್ಯಕ್ಕೆ ಸೇರಿದ ಮೌಲ್ಮೀನ್ ಮತ್ತು ರಂಗೂನ್ ಪಟ್ಟಣಗಳಲ್ಲಿ ಇದ್ದು ವ್ಯಾಪಾರಾದಿಗಳು ನಡೆಯುತ್ತಿದ್ದವು

ಕಳೆದ ಹದಿನೈದು ದಿನಗಳಲ್ಲಿ ಜರ್ಮನಿ ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ವಿಮಾನಗಳ ಎಂಟು ಅನಾಹುತಗಳು ನಡೆದವಂತಲೂ, ಇನ್ನು ಮುಂದೆ ಇದನ್ನು ತಪ್ಪಿಸುವುದಕ್ಕೆ ಕೆಲವು ನಿಬಂಧನೆಗಳನ್ನು ಮಾಡುವವರಾಗಿದ್ದಾರೆಂತಲೂ ತಂತಿ ವರ್ತಮಾನ ಬಂದಿದೆ —ಬಿಟರ್ ಫೀಲ್ಡ್ ಎಂಬ ಸ್ಥಳದಲ್ಲಿ ವಿಮಾನಕ್ಕೆ ಸಿಡಿಲು ಬಡಿಯಿತೆಂದು ಕಳೆದ ವಾರ ತಿಳಿಸಿದ್ದೆವಷ್ಟೆ ಆ ವಿಮಾನವು ಭೂಮಿಯಿಂದ ೮,೦೦೦ ಅಡಿ ಎತ್ತರಕ್ಕೆ ಅಂತರಿಕ್ಷದಲ್ಲಿ ಹೋಗಿ ಸಂಚರಿಸುವಾಗ್ಗೆ ವಾಯುವಿನ ವೇಗದಿಂದ ಅದು ತಲೆಕೆಳಗಾಗಿ ಬಹು ರಭಸದಿಂದ ನೆಲಕ್ಕೆ ಬಿದ್ದಿತೆಂದೂ, ಒಳಗೆ ಕುಳಿತಿದ್ದವರು ಅಪ್ಪಚ್ಚಿಯಾಗಿ ಮೃತಪಟ್ಟರೆಂದೂ, ಸಿಡಿಲು ಬಡಿಯಲಿಲ್ಲವೆಂದೂ ಈಚೆಗೆ ತಿಳಿದುಬಂದಿದೆ

Printed and Published by the Rev H GULLIFORD,
Proprietor and Manager, Wesleyan Mission Press,
Mysore 28/4/1910

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸೆ೯ ೧೯೧೦ ನೇ ಇಸವಿ ಮೇ ತಾರೀಖು ೫ ನೇ ಗುರುವಾರ. ಸಂಚಿಕೆ ೬೯

ಸುಗಂಧಗಳು.

1-24

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧೨, ೫, ೩, ೨-೮-೦, ೧-೪-೦. ಬಿಲ್ಲೆಗಳು ೧ ತೊಲೆಗೆ ರೂ. ೧. ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ.

ವಿಳಾಸ :—ಟಿ. ಎಲ್. ಉಪಾಧ್ಯಾಯ, ಮೈಸೂರು.

WANTED.

59-2

Vacancy for female student compounder, who must be able to read and write English. Scholarship 6 Rs. increasing Candidate, who must not be less than 17 years of age, must apply in her own handwriting to

DR. ELSIE T. WATTS,
Wesleyan Mission Hospital,
Mysore City.

ಪ್ರಸಿದ್ಧ ಪತ್ರಿಕೆ.

53-3

ನಾವು ಈಗತಾನೇ ಸೀಮೆಯಿಂದ ಕೆಂಪು, ಯಣ್ಣೆ ಕೆಂಪು, ಮಂದಕೆಂಪು, ಕಪ್ಪು, ಕಪ್ಪು ಕೆಂಪು ಮಿಶ್ರದ ಮಿಕ್ಸ್ಚರ್, ಕಾಫೀ ಬಣ್ಣದ ಉಲ್ಲನ್ನನ್ನು ತರಿಸಿದ್ದೇವೆ ಪೌಂಡ್ 1 ಕ್ಕೆ ರೂ 1—10—0, 3—0—0, 2—8—0, 4—0—0, 4—8—0, ,—0 0. ಮೇಲ್ಕಂಡ ಉಲ್ಲನ್ನಲ್ಲಿ ತಯಾರ್ ಆದ ಟೋಪಿಗಳು 1 ಕ್ಕೆ ರೂ 0—9—0. 0—10—0, 0—12—0, 0—14—0, 1—0—0, 1—2—0, 1—1—0, 1—6—0, 1—8—0 ರೇಷ್ಮೆ ಚುಕ್ಕೆ ಟೋಪಿ 1 ಕ್ಕೆ ರೂ 1—12—0 2—0—0 ಡಜನ್‌ಗಟ್ಟಲೆ ತರಿಸಿಕೊಂಡರೆ ಶೇಕಡಾ 6¼ ರೂಪಾಯಿ ಡಿಸ್ಕೌಂಟು ನಮ್ಮ ಕಂಪನಿ ಕ್ಯಾಟ್ಲಾಕು ಬರೆದು ತರಿಸಿಕೊಳ್ಳಿರಿ

ಬಿ. ಯಸ್ ಕಣ್ಣಯ್ಯಶೆಟ್ಟಿ,
ಉಲ್ಲನ್ ಕ್ಯಾಪ್ ಮ್ಯಾನೇಜರ್, ತುಮಕೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

5 18

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿರಸೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೯ ಆ, ೧ ರೂ. ೬ ಆ. ; ೧ ರೂ ೪ ಆ.

ಚುಕ್ಕೆಯುಳ್ಳ ಟೋಪಿಗಳು ರೂ. ೧-೮ , ರೂ ೧-೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ಸಾದ ಟೋಪಿಗಳು ೧ ರೂ. ೧೨ ಆ , ೧ ರೂ. ೮ ಆ ; ೧ ರೂ. ೬ ಆ.

ಕಾಟುಕಿನ ಟೋಪಿಗಳು ೧ ರೂ ೮ ಆ. , ೧ ರೂ ೬ ಆ .

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ರತ್ನಗಂಬಳಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

40-8

ಲೋಕಮಯಹರ ಕಸ್ತೂರಿಮಾತ್ರೆ.

ಹೊಸ ತರಹಾ! ವಾಸನೆಯಲ್ಲಿ ಹೆಚ್ಚು!! ಗುಣದಲ್ಲಿ ಅಧಿಕ!!!

ಈ ಮಾತ್ರೆಗಳನ್ನು ಚಿನ್ನವರೇಖು—ಹವಳದಭಸ್ಮ—ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಕೇವಲ ಗುಣಕಾರಿಗಳೂ—ದೋಷರಹಿತಗಳೂ ಆದ ಬಹು ಪದಾರ್ಥಗಳ ಮಿಶ್ರದಿಂದ ಮೊದಲಿಗಿಂತ ಸುವಾಸನೆ— ರುಚಿ—ಗುಣಗಳು ಬಹಳವಾಗಿರುವಂತೆಯೂ—ಬಾಯಿಯಲ್ಲಿ ತಾನಾಗಿ ಕರಗುವಂತೆಯೂ—ಎಷ್ಟು ದಿನಗಳಿಟ್ಟರೂ ಕೆಡದಂತೆಯೂ ತಯಾರಿಸಿರುತ್ತೆವೆ

ನೀಳೆಯಿದೆಲೆಯೊಡನೆ ಅಥವಾ ಹಾಗೇ ಉಪಯೋಗಿಸುತ್ತಾ ಬಂದರೆ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಬರಬಹುದಾದ ನಾನಾ ರೋಗಗಳನ್ನು ಬಾರದಂತೆ ಮಾಡುತ್ತದೆ—ಮತ್ತು ಗುಣಪಡಿಸುತ್ತವೆ

ಕಾಯು, ಸಂದುಗಳ ನೋವು—ಶೀತವಾತ—ಹೊಟ್ಟೆನೋವು ಅಗ್ನಿನಷ್ಟ— ಮೈನಡುಕ—ಮೈಭಾರ—ಕೈಕಾಲುಗಳ ಆಲಸ—ಹೊಟ್ಟೆ ಉರಿ—ಜ್ವರ—ಚಳಿಜ್ವರ—ನೆಗಡಿ, ಕೆಮ್ಮಲು—ಹಲ್ಲುನೋವು—ಬಲಹೀನತೆ—ಅರೋಚಕ—ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ವಾಸಿಮಾಡುತ್ತದೆ.

ತಾಂಬೂಲದೊಡನೆ ಸೇವಿಸುತ್ತಾ ಬಂದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಯೆಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಮಲಬದ್ಧ ವಿದ್ದರೆ ದಿನಕ್ಕೆ ಒಂದು ವೇಳೆ ಆಗುವಂತೆ ಮಾಡಿ ನೀಡು ಹವಾಗಳ ಏವಲಾವಣೆಗಳನ್ನು ಸರಿಪಡಿಸಿ ಕಾಡು ಮಲೆನಾಡುಗಳಲ್ಲಾ ವರಿಸಿ ಯಾವ ಬಾಯಿಕೆಗೂ ದಾರಿಗೊಡದೆ ರಕ್ತದಲ್ಲಿರುವ ದೋಷಗಳನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿ ವರ್ಧಕವಾಗಿದೆ

೨೨೦ ಮಾತ್ರೆಯುಳ್ಳ ಕುಪ್ಪಿ ಬೆಲೆ ! ಆಣೆ—ಐದು ಕುಪ್ಪಿಗೆ 1 ಹೆಚ್ಚು 10ರಿಂದ 12ರ ವರೆಗೆ ಟ ಖ ! ಆಣಾ—

ಯೋಗ್ಯತಾಪತ್ರ . —

ತಮ್ಮ ಲೋಕಾಮಯ ಹರ ಕಸ್ತೂರಿ ಮಾತ್ರೆಗಳಲ್ಲಿ ಗುಣವೂ ನಂಬಿಕೆಯೂ ಕಂಡು ಬಂದ ಕಾರಣ ಆಗಾಗ್ಗೆ ತಮ್ಮ ಕಡೆಯಿಂದ ತರಿಸಿಕೊಳ್ಳಲು ಪ್ರೋತ್ಸಾಹ ಉಂಟಾಗಿದೆ. ಈಗ ಸದರಿ 18 ಕುಪ್ಪಿ ವಿ ಪಿ ಮಾಡಬೇಕು ಶ್ರೀ. ಶಿ ದೊಡ್ಡಪ್ಪನವರು, ಚಿಕ್ಕೋಡು ಮಠ, ಬೇಲೂರು.

ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳು ನಮಗೆ ಬಹಳ ಗುಣವಾಗಿವೆ ಆರು ಶೀಸೆ ಬೇಗ ಕಳುಹಿಸಿ—ತಡಮಾಡಕೂಡದು —ಬಸನಗೌಡರು, ಗಾವಠಿ ಸ್ಕೂಲ್ ಮಾಸ್ಟರ್, ಕಡೂರು ಗ್ರಾಮ.

ವಿಳಾಸವನ್ನು ತಿಳಿಯುವ ಹಾಗೆ ಬರೆಯಿರಿ—

ವಿಳಾಸ.— ಶ್ರೀ. ಶ್ರೀನಿವಾಸರಾಘವ ವೈದ್ಯಶಾಲಾ, ಮೈಸೂರು.

ಜ್ವರಹರಿ.

11-18

ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು. ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್, ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ. ; ೧—೯ ರೂ ; ರೂ ೨—೧೨ ಆ ೧೧ ರೂ. ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಓಮಂಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ. ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ .—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಉಕ್ಕಿನ ತೊಲೆ ಮತ್ತು ಜಂತಿಗಳು.

57-2

ಪ್ರಸಿದ್ಧಿಯಾದ ಮೆಸ್ಸರ್ಸ್ ದೋರ್ಮನ್ ಲಾಂಗ್ ಕಂಪೆನಿಯವರಲ್ಲಿ ತಯಾರಾದ ಉಕ್ಕಿನ ತೊಲೆಗಳೂ ಜಂತಿಗಳೂ ಮೈಸೂರು ಪಟ್ಟಣದಲ್ಲಿ ಮೂರನೇ ಮಹಾರಾಜ ಕುಮಾರ್ತಿಯವರ ಮ್ಯಾನ್ಷನ್ ಕಟ್ಟಡದ ಬಳಿ ಬಿಕರಿಗೆ ಇಡಲ್ಪಟ್ಟಿವೆ. ಕ್ರಯದ ದರಗಳು ಹಂಡ್ರೆಡ್ ವೇಟ್ ತೂಕಕ್ಕೆ ೬ ರೂಪಾಯಿ ಲಾಗಾಯಿತು ೬—೮—೦ ರೂಪಾಯಿ ವರೆಗೆ ಇಳಿಸಿದೆ. ಇಷ್ಟವುಳ್ಳವರು ಆ ಕಟ್ಟಡದ ಸೂಪರಿಂಟೆಂಡೆಂಟರವರನ್ನು ಕಂಡು ಎಲ್ಲಾ ವಿಷಯಗಳನ್ನೂ ತಿಳಿದು ಕೊಳ್ಳಬಹುದು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು. [26-10]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟುನೋವು, ಅರ್ಧಾಂಗವಾಯು, ಎದೆಶೀತ, ಘಾಯ, ದಬುವು, ಇತ್ಯಾದಿ.

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ. ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ಬಾರಿ ತಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಆಸ್ತಾಮಿಶ್ರಣ	೨-೦-೦
ಜೀರ್ಣಕಡಕದಮದ್ದು	೦-೫-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದು ಜಗಳಿಗೆ	೦-೮-೦
ಗುಲಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಖಜ್ಜ ಮುಲಾಮು—ಮಕ್ಕಳ ಖಜ್ಜಿಗೆ	೦-೩-೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧-೦-೦
ಕಫನಾಶಕ ಚೂರ್ಣ—ಆಸ್ತಾ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ. ವಿಳಾಸ .—

ವಿಲಿಯಂ ಮತ್ತು ಕಂಪೆನಿ, ಫ್ರೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —" ಅಮೃತಾಂಜನ," ಮುಂಬಯಿ.

ಸಂಗೀತ ಪಾರಿಜಾತ ಕ್ರಯ ೪ ಆಣೆ

20-13

ಮನೋಹರವಾದ ಹಾಡಿನ ಪುಸ್ತಕ ! ೧೦ ಪ್ರತಿಗಳನ್ನು ಒಟ್ಟಾಗಿ ತರಿಸುವವರಿಗೆ ೧೨ ಆಣೆಕ್ರಯದ ನಿರುಪಮಾ ಎಂಬ ಹೊಸನಾಟಕವನ್ನೂ, ೬ ಪ್ರತಿಗಳನ್ನು ತರಿಸುವವರಿಗೆ ಕಬೀರ ದಾಸನ ಚರಿತ್ರೆಯನ್ನೂ, ೪ ಪ್ರತಿಗಳನ್ನು ತರಿಸುವವರಿಗೆ ಪ್ರಶ್ನೋತ್ತರ ರತ್ನಮಾಲಿಕೆ ಎಂಬ ಪುಸ್ತಕವನ್ನೂ ಉಚಿತವಾಗಿ ಕೊಡುತ್ತೇವೆ

ವಿಳಾಸ—ದಿ ಮರ್ಕೆಂಟೈಲ್ ಯೂನಿಯನ್, ಮೈಸೂರು

ಬೇಗ ಬರೆಯಿರಿ ! ಬಹಳ ಕೊಂಚ ಪ್ರತಿಗಳೇ ಉಳಿದಿವೆ !!

ಸಾವಕಾಶ ಮಾಡಿದರೆ ಆನಂತರ ಸಿಕ್ಕಲಾರದು !!!

ಸಚಿತ್ರ ಕಲಾತರಂಗ

55 2

೧ನೇಯ ಭಾಗ

ಇದುವರೆಗೆ ಕನ್ನಡದಲ್ಲಿ ಇಂತಹ ಗ್ರಂಥವಿಲ್ಲ ಇದರಲ್ಲಿ ೮ ಭಾಗಗಳಿವೆ ವರ್ತಮಾನ ಕಾಲದ ವಿವಿಧ ವ್ಯಾಪಾರಗಳ ಮಾಹಿತಿಯನ್ನೂ, ಅಂತರಿಕ್ಷದ ವಿಶೇಷಗಳನ್ನೂ, ಯಂತ್ರ ಸಾಮಗ್ರಿಯ ಪ್ರಯೋಜನಗಳನ್ನೂ, ಲೋಹ ತೈಲಗಳ ಉತ್ಪತ್ತಿಯನ್ನೂ, ರತ್ನ ಪರೀಕ್ಷೆ, ವೈದ್ಯಶಾಸ್ತ್ರ ಮೊದಲಾದ ಆಶ್ಚರ್ಯಕರ ವಿಷಯಗಳನ್ನೂ, ಕೇಳಿದವರಿಗೆ ಸುಲಭವಾಗಿ ಹೇಳುತ್ತದೆ ಕನ್ನಡಿಗರಿಗೆ ಕೈಪಿಡಿ ಬೆಲೆ ರೂ ೧—೪—೦ ವಿ ಪಿ ಮೂಲಕ ೧—೬—೦

ವಿಳಾಸ —(೧) ಮ್ಯಾನೇಜರ್ ಎಸ್ ಜಿ ಎನ್ ಪ್ರೆಸ್,

೧೨೪ ಅರಳೆಪೇಟೆ, ಬೆಂಗಳೂರು ಸಿಟಿ

ಅಥವಾ

(೨) ದಿ ಉಲ್ಲನ್ ಮಾರ್ಟ್

ನಂ ೧ ಮಂಗಳೂರು (ದ ಕ)

ಮೇಲ್ಕಂಡ ೨ ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 80

ತಲೆನೋವು, ವಾಯುನೋವು, ಸೆಳತ, ಗಂಟಲನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ವೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿದ್ದಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ— ಟಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್ ಪೀಟರ್ಸನ್,

೩೭ ಮೌದನಮುಲಪಿಳ್ಳೆ ಬೀದಿ ವೇಪೇರಿ, ಮದರಾಸ್.

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರುವದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು !

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 6-18

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಈ ಔಷಧವುಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

CHAMBERLAIN'S COUGH REMEDY.



ಚೇಂಬರ್ಲೈನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

8 19

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲೂ, ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಹುಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

ಅಡ್ವಾನ್ಸು)	ರೂ ೧—೦—೦
ಏಜಂಟರುಗಳ ಅನುಕೂಲವಿಲ್ಲದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
,, ,, ೬ ,, ,,	,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

11 17

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕು ಬಟ್ಟೆಗಳು ನಾಲಾಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಕ್ರಯವು ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬|| ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(195 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10–17]

ಮ್ಯಾನೇಜರ್, ಸಿ. ಎಲ್ ಎಸ್. ಬುಕ್ ಡಿಪೋ, ಮೈಸೂರು

ಲಾ ಪುಸ್ತಕಗಳು

45-5

(1) ವ್ಯವಹಾರನಿರ್ಣಯ ಕ್ರ 1 ರೂ 12 ಆ ಸಮಸ್ತವ್ಯವಹಾರಗಳೂ, ನಮೂನೆಗಳೂ ಉಳ್ಳ ಲಾ ಪುಸ್ತಕ (2) ಕಾನೂನಿಲಾ ಕ್ರ 10 ಆ ಕೃಷ್ಯಭಿವೃದ್ಧಿಗಾದ ಲಾ (3) ಕನ್ನಡ ಲಾ ರಿಪೋರ್ಟರ್ ವರ್ಷದ ಚಂದಾ 1ರೂ 8ಆ ಕೋರ್ಟು ಫೈಸಲುಗಳ ಮಾಸಪತ್ರಿಕೆ ಅಪೇಕ್ಷಕರು , ಪ್ಲೀಡರ ಎಂ ಮಲ್ಲಾರಾದರು, ಚಾಮರಾಜಪೇಟೆ ಬೆಂಗಳೂರು ಸಿಟಿ ಇವರಿಗೆ ಬರೆಯುವುದು

ಸತ್ಯವೂ ಅಗ್ಗವೂ ಆದ ಅಂಗಡಿ

41 5

ರೂ ೩ ಎಂಟು — ೧೨ ೧೧ ಇಸವಿ

೩೦ ಗಂಟೆ ನಡೆಯುವ ೧೦ ವರುಷದ ಗ್ಯಾರಂಟಿ ಉಳ್ಳ ಸುಂದರವೂ ಗಟ್ಟಿಯೂ ಆಗ ಪೂ ಆದ ಲಿವರ್ ಜೇಬು ಗಡಿಯಾರವನ್ನು ಸೊಗಸಾದ ಸರಪಣಿ, ೧೦೦ ಪೋಸ್ಟು ಕಾರ್ಡುಗಳ ಸಮೇತ ಪೋಸ್ಟೇಜು ಸೇರಿ ೩ ರೂ ಗೆ ಮಾರುತ್ತಿದ್ದದ್ದನ್ನು ಕೆಲವು ಕಾಲ ಮಾತ್ರ ರೂ ೨ ೧೨ ಗೆ ಕೊಡುತ್ತೇವೆ ಬೇಗ ಬರೆದುಕೊಳ್ಳಿ ಒಪ್ಪದಿದ್ದರೆ ಹಣ ವಾಪಸು ಕೊಡುತ್ತೇವೆ ನಮ್ಮ ವಿಳಾಸ —

ಎಂ ಎ ಸಾಟಿಲಾಲು ಕಂಪನಿ, ಚಿತ್ತೂರು, ಉ ಆರ್ಕಾಟು

ಇತ್ತ ಲಕ್ಷ್ಯಕೊಡಿರಿ

41 1

ಸುಮಾರು ಅನೇಕ ಕಾಲಗಳಿಂದ ನಮ್ಮ ಗ್ರಾಹಕರು ಘಡಿಯಾರಗಳನ್ನು ಕೇಳುವದರಿಂದ ಈಗ ಸೀಮೆಯಿಂದ ಕೆಲವು ವಾಚುಗಳನ್ನು ತರಿಸಿ ಬಿಕರಿಗೆ ಇಟ್ಟಿದ್ದೇವೆ

ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಸೇಲ್ಸ್ ಲಿವರ್ ಘಡಿಯಾರವು ಸರಪಣಿ ಪಟ್ಟಿಗೆ ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ಕ್ರಯ ೩ ೦ ೦ ಮೂರು ರೂಪಾಯಿ ಎಂದು ಆಣೆ ಈ ಗಡಿಯಾರಗಳು ಗುಣದಲ್ಲಿಯೂ ಕಟ್ಟಡಿಯಲ್ಲಿಯೂ ಮಜಬೂತಿನಲ್ಲಿಯೂ ಶ್ರೇಷ್ಠವಾದವೆಂದು ದೃಢವಾಗಿ ಹೇಳುತ್ತೇವೆ

ವಿಳಾಸ —ದಿ ಉಲ್ಲನ್ ಮಾರ್ಟ್

ಮಂಗಳೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಲ್ಲಿ ಛಳುಕು , ನಿದ್ದೆಯಿಲ್ಲದೆ ಇರುವುದು , ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು , ಬಿಡದೆ ಬಾಯಾರಿಕೆ , ಬಳಲಿಕೆ , ಎದೆ ಕಲ್ಲೆನಿಸುವುದು , ತಲೆನೋವು ಗಾಬರಿ , ಕಣ್ಣುಮೊಬ್ಬು , ತಲೆ ತಿರುಗುವಿಕೆ ಮೈನೋವು ಕೀಲುನೋವು , ಮರವು , ನಿಶ್ಶಾಣ , ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [6-36]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ , ಅಥವಾ ೬ ಬುಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಫೋಸ್ಟರ್ ಪಿ ಒ ೨೦, ಬೊಂಬಾಯಿ ಬಾಕ್ಸ್—ಇವರಲ್ಲಿ ದೊರೆಯುವುದು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೮—1—1910 ರಿಂದ 15—4—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	1	1	2	2
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	1	1	0	0
ಕೋಲಾರ್ ,,	0	0	71	58
ಕೋಲಾರ ,ದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	1	1	0	0
ಹಾಸನ ,,	0	0	0	0
ಚಿತ್ರದುರ್ಗ ,,	4	2	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
ಜುಮ್ಲಾ	7	5	73	60

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸಾಧಾರಣನಾಮ ಸಂವತ್ಸರದ ಚೈತ್ರ ಬಹುಳ ದ್ವಾದಶಿ ಶುಕ್ರವಾರದಿಂದ ವೈಶಾಖ ಶುದ್ಧ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಮೇ.

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಸೌರಮಾನ ಮೇಷ ಮಾಸ
6	ಶುಕ್ರ ,,	ದ್ವಾದಶಿ	31-5	ಉತ್ತರಾಭಾ	31-15	24
7	ಶನಿವಾ ;,	ತ್ರಯೋ	25-23	ರೇ	27-26	25
8	ರವಿವಾ §	ಚತುರ್ದಶಿ	19-12	ಅಶ್ವಿ	23-19	26
9	ಚಂದ್ರ	ಅಮಾವಾ	13-4	ಭ	19-7	27
10	ಕುಜ	ಪಾಡ್ಯಮಿ	7-3	ಕೃ	15-4	28
11	ಬುಧ ‡	ಬಿದಿಗೆ	1-21	ಉಪರಿ	51-29	29
12	ಗುರು *	ಚೌತಿ	51-17	ಮೃ	8-16	30

,, ಪ್ರದೋಷ.

, ಶ್ರೀ ಶ್ವೇತವರಾಹ ಜಯಂತಿ, ಶ್ರೀರಂಗದ ರಂಗನಾಥಸ್ವಾಮಿ ರಥ

§ ಶಶ್ರಾಂತಿಥಿವ್ರಯಂ, ಸರ್ವತ್ರ ಕರಗ ಅಮಾವಾಸ್ಯೆ

‡ ಪಾತಾಳಗೌರೀ ವ್ರತ, ಬಲರಾಮಜಯಂತಿ.

* ಸರ್ವತ್ರ ೧೧, ಶ್ರೀ ಶ್ವೇತವರಾಹಸ್ವಾಮಿ ರಥ

ಪೇಟೆ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು.
ತಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ.	೧೨-೮-೦	೧೩-೮-೦
ಕೆಂಬೂತಿ ಅಕ್ಕಿ ಅವಲ್	...	೧೨-೮-೦	೧೪-೦-೦
,, ದುಯಂ	..	೧೨-೦-೦	೧೩-೮-೦
ಚಾವಾಣಿ ಅಕ್ಕಿ	..	೧೨-೪-೦	೧೪-೦-೦
ಸಣ್ಣಕ್ಕಿ ಅವಲ್	...	೧೩-೮-೦	೧೬-೦-೦
,, ದುಯಂ	...	೧೩-೦-೦	೧೪-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ	...	೧೨-೮-೦	೧೩-೦-೦
,, ದುಯಂ	...	೧೨-೦-೦	೧೨-೦-೦
ಹ್ಯೆಣ್ ರಾಗಿ ಪಲ್ಲಾ ೧ಕ್ಕೆ	...	೮-೦-೦	೬-೧೨-೦
ಕಾರ್ರಾಗಿ	...	೭-೧೨-೦	೬-೮-೦
ಜೋಳ	..	೭-೮-೦	೯-೦-೦
ಹಲಸಂದೆ ಪಲ್ಲಾ ೧ಕ್ಕೆ	..	೧೧-೦-೦	೧೧-೦-೦
ಟೀ ಅವರೆ	...	೧೧-೦-೦	೧೦-೮-೦
ಹೆಸರು	..	೧೧-೦-೦	೧೦-೪-೦
ಉದ್ದು	...	೧೩-೦-೦	೧೧-೦-೦
ಕಡಲೆ	...	೧೨-೮-೦	೧೧-೦-೦
ಎಳ್ಳು ಸೇ ೧೨೬ ಕ್ಕೆ	...	೧೫-೦-೦	೧೪-೮-೦
ಹುರಳಿ	...	೮-೮-೦	೯-೦-೦
ಹರಳು ೧೨೭ ಸೇರಿಗೆ	...	೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	...	೨-೪-೦	೧-೧೦-೦
ಮೆಣಸಿನಕಾಯಿ	..	೪-೧೨-೦	೪-೦-೦
,, ದುಯಂ	...	೪-೮-೦	೩-೮-೦
ಬೆಲ್ಲ ದೊಡ್ಡ ಅಚ್ಚು	...	೫-೮-೦	ಮ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ	...	೫-೦-೦	೪-೧೦-೦
ಹರಳೆಣ್ಣೆ ,,	...	೫-೮-೦	೪-೬-೦
ಕೊತ್ತಂಬರಿ ಪಲ್ಲಾ ೧ಕ್ಕೆ	...	೧೦-೮-೦	೧೩-೦-೦
ಉಪ್ಪು ,,	...	೬-೦-೦	೫-೧೨-೦
ಹುಣಸೇ ಹಣ್ಣು	...	೨-೦-೦	೧-೪-೦
,, ಹಳೇದು	...	೧-೧೨-೦	೧-೨-೦
ತುಪ್ಪ ಮಣ ೧ಕ್ಕೆ	...	೧೬-೮-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	...	೫-೪-೦	೪-೪-೦
ತೆಂಗಿನಕಾಯಿ ೧೦೦ ಕ್ಕೆ	...	೫-೦-೦	೭-೮-೦
ಅರಳೀಕಾಯಿ ಮಣ ೧ಕ್ಕೆ	...	೬-೧೨-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	೦-೧೨-೦	೦-೧೨-೦
ಚಿನ್ನ (ಪೌನ್) ಕೆಂಪು	...	೧೫-೯-೦	೧೫-೬-೦
,, ,, ಪಸಿಮೆ	...	೧೬-೦-೦	೧೬-೦-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೮-೦	೨೪-೦-೦
ಬೆಳ್ಳಿ, ಗಟ್ಟಿ, ತೊಲ ೧೦೦ ಕ್ಕೆ	...	೬೭-೪-೦	೭೫-೦-೦

ಜೋಕು ಜಾಗ್ರತೆಮಾಡಿ !!

60-1

ಅರೆಸ್ಟೇನಿಯಂ ಅಭ್ಯಾಸವನಾದಿರತಕ್ಕ ಮತ್ತು ಸಂಗೀತ ಬಲ ಪರು ತಿಂಗಳಿಗೆ ೨೦ ರೂ ತಲುಪು ಮೇ ಆಖೈರಿನೊಳಗೆ ಕೆಳಗಿನವರಿಗೆ ಬರೆದುಕೊಳ್ಳಬಹುದು.

N. B. ಯೋಗ್ಯತಾಪತ್ರದ ಮೇಲೆ ತಲುಪು ಜಾಸ್ತಿಯಾಗುತ್ತೆ

ಅಡ್ರೆಸ್—ಕೆ ಪಿ. ಪದ್ಮನಾಭಯ್ಯ, ಶ್ರವಣಬೆಳಗುಳ.

ಶ್ರೀಮದ್ವೀಯರ್ ಸಾಹೇಬರ ವಿಷಯವಾದ ಮಂಗಳ ಪದ್ಯಗಳು.

೧. ಆವಂಸ್ಥಾವರ ಜಂಗಮಾತ್ಮಕ ಜಗತ್ಸಂದೋಹಮಂಪುಟ್ಟಿಸು |
ತ್ತೋವುತ್ತುಂಮರೆಗೈವುತಂಮರೆವನಾವಂಭಕ್ತಬೃಂದಕ್ಕೆಸ ||
ದ್ಭಾವಂಕ್ಕಮಿಗೆನೀಡುಗುಂಬಯಕೆಯಂಕಾರುಣ್ಯದಿಂದಾಮಹಾ |
ದೇವಂತಾಂಸಕುಟುಂಬನಂಪೊರೆಗೆಯಿಯುವರ್ಷಮಳಸ್ವಾಮಿಯಂ ||

೨ ಯೂರೋಪ್‌ಖಂಡಮುದಿತ್ತಮೆತ್ತಮಹಾಕಳಣಾಟದೇಶಂಮಹೋ |
ದಾರಂಚಾರುವಿಚಾರಶೀಲನಮಲಂವೀಯರ್‌ಬುಧಾಗ್ರೇಸರಂ ||
ಧೀರಂಕಾಸೊಲವಿಂದೆಬಂದಸಿದುವೀದೇಶಿಯವಿದ್ಯಾರ್ಥಿಗ |
ಳ್ಗೀರಂತೊಪ್ಪುವಭಾಗ್ಯಮೆಂದುತಿಳಿಯಲ್ಕೀನೊಂದುಸಂದೇಹಮೇ ||

೩ ಕಂ|| ಇಷ್ಟತ್ತುವತ್ಸರಂಗಳ್
ತಪ್ಪದೆ ಕಾಲೇಜಿನಲ್ಲಿ ಪ್ರಿನ್ಸಿಪಲೆನಿಸು ||
ತೊಪ್ಪಿದ ವೀಯರ್ಪ್ರಭುಗೆಣೆ
ಯಪ್ಪರದಾರ್ನಡೆಬಗೆವೊಡೀವಸುಮತಿಯೋಳ್ ||

೪. ಮೊದಲೀ ವಿದ್ಯಾಲಯಂ ಸಂವೆರಡನೆಯ ಘನಸ್ಥಾನದಲ್ಲಿದ್ದುರ್ದಿನ್ನ
ಗ್ಗದಶಾಲಕ್ಕೇದುರ್ದುದ್ಯತ್ಸಫಮಪದಮನಕ್ಲೇದಿಂವಿದ್ಯಮೇಣ ||
ಭ್ಯುದಯಂಗೊಂಡತ್ತು ಸಾನೂರ್ಜನದವರೆಗಮುಂಬೀಯೆಯೊಳ್ಳೀ ಣರಾದರ್ |
ಪುದುವಿಂಪೆಚ್ಚತ್ತು ವಿದ್ಯಾಲಯಮೆಂದೆಡೆಯೊಳ್ಕಟ್ಟಿದಂಸೀಕಿದುರ್ವ್ಯಾ ||

೫ ತಂದೆಗಳೆಂತು ಬಾಲಕರಪೋಷಣರಕ್ಷಣಕಾರ್ಯದಲ್ಲಿಯೋ
ರಂದದಿನೆಚ್ಚರಂತಳಿದುವತ್ತಿಪಪಂತುಸಮಂತುಜಸತ್ವದಿಂ
ಕುಂದದೆವಿಷ್ಟೆಯಂಕಲಿಪರೊಳ್ಪಯಮಂನರಿಪುಟ್ಟಸುತ್ತೆನೀ
ನೊಂದಿದಕೀವವತ್ಸಲತೆಯಂಮತಿಪ್ಪದ್ಧಿಯನೊಲ್ದುದರ್ಚಿದ್ಯೆ ||

೬ ವಿದ್ಯಾರ್ಥಿವ್ರಜ್ಞದೊಳಲಂಬರೊಲವಿಂದಂರಾಜಕೀಯಾಧಿಕಾ
ರೋದ್ಯೋಗಂಗಳನೊಂದಿದಕೇಲರುಪಾಧ್ಯಾಯರ್ಕಳಾಗಿರ್ಪರ್ಪೈ ||
ನದ್ಯಾಧಾರಮೆಮಿಂಗಳಬ್ಧಿಯನೆ ಸೇರ್ವಂತೈದೆ ನ್ನಾಶ್ರಯ
ಪ್ರೋದ್ಯಚ್ಛಕ್ತಿಯನುತ್ತಮಸ್ಥಿತಿಯಸಾಂತಿಪ್ಪರ್ಕರ್ ಲಂಬಗರ್ದಾ ||

೭. ಜನಮಂ ಮೆಚ್ಚಿಸಲಾರೆಸಬುಧರ್ವಿಯೋಳೆಂತುಂ ಸರ್ವರಾತ್ಮಪ್ರಿಯೋ ||
ಜನವಾಂಛಾಭರದಿಂದಮೇ ಅದುವು ಲೋಕಾಧೀಶನಂ ಮೆಚ್ಚಿಸಲ್ |
ಮನಮೌತ್ಸುಕ್ಯ ಮನುಷ್ಯಗೆಯ್ಯೆನುಬುದಿಂ ನೈಜಾಧಿಕಾರೋದ್ಯಮ ||
ಕ್ಕನುಸಾರಂ ನಡೆವಸ್ವಭಾವ ಮುರೆನೀಯುಗ್ರಾರ್ಧಗಂರಂಜಿಕುಂ ||

೮. ಮನಮೊಳ್ಪಾತಿಸೊಳಂ ನಿಜಕ್ರಿಯೆಯೊಳಾದಂಭೇದಮುಂತೋರುವಾ |
ಮನುಜಕೋಟ್ಯಸುಕೋಟಿಯುಷ್ಟರಿಳೆಯೊಳ್ಕಾರ್ಯಚಿತ್ತಂಗಳೋಳ್ ||
ಇನಿಸುಂ ಭೇದಮುದಿಲ್ಲದೊಂದೆ ತೆರದಿಂವರ್ತಿಪ್ಪರಾರ್ನಿನ್ನಪೋಲ್
ವಿನುತೋದ್ದಾಮಗುಣಾಭಿರಾಮ ಧೀರೇಯೂರೋಪ್ಯವಂಶೋತ್ತಮಾ ||

೯ ನ್ಯಾಯಸಾಧಾರಣ ಪಾರಸಾರಕರು ಪ ಕೂಪಾವನಪ್ರೋರ್ಜಿತೋ
ಪಾಯಂ ಸದ್ಗುಣಗೇಯನಪ್ರತಿಮಬುದ್ಧಿಪ್ರಾಯನುದ್ಯದ್ಭರ ||
ಶ್ರೇಯೋಸರ್ಜಿತಪೂರ್ಣ ಚಂದ್ರನಿಮಿಕಾಸಂ ದೀರ್ಘಸಾಂದ್ರಂವಲಂ |
ವೀಯರ್ನಾಮಕನಾಯಕಂ ಮೆರೆಗೆ ಸಚ್ಚಂ ಮೆಚ್ಚುಗೊಂಡೊಚ್ಚತಂ ||

೧೦ ಸಸಿನಕ್ಷತ್ರಂಗಳಂ ಕಾನುಳಿವತೆರದೆ ನೀನಮು ನೋರಂತೆಬಿಟ್ಟು |
ವ್ಯಸನಂ ಮನ್ಮಾನ ಸಾಬ್ಧಕ್ಕರೆ ಕೊರಗಿತೆಯಂ ಪುಟ್ಟಿಸಿತ್ತಿದೊಡಂ ಸಂ ||
ತಸಮೇ ಮೋಲಾಯಿತು ನೀನಂತಧಿಕಪದವಿಯಂ ಪೊಂದಿದಾಮೊಸರಿಂದಂ |
ನಿಸದಂಕಾಲೀಜಗನ್ಮುನ್ನತಿ ಸಮನಿಪುದೆಂದೆಯ್ದೆ ನಂಬಿರ್ಪವಯ್ಯಾ ||

೧೧. ಮಂಗಳಮಕ್ಕೆಮಳ್ಕಸ್ಲನ್ನ |
ಪಂಗಬೀಳಕ್ಕೆ ಮಂಗಳಂ ವೀಯರ್ಗಂ ||
ಸಂಗಳಗ ಮಂಗಳಂಬುದ |
ಪುಂಗವ ವಿದ್ಯಾರ್ಥಿವರ್ಗಕಂ ಪ್ರಜೆಗಳ್ಗಂ

೧೨ ಕರ್ನಾಟ ಪಂಡಿತಂಕವಿ
ಕರ್ಣಾಲಂಕಾರ ಮುಪ್ಪತೆರದಿಂಗುಣಸಂ |
ಪೂರ್ಣ ನವೀಯ ಪ್ರಭುವಿನ |
ವರ್ಣನಮಂಗೆಯ್ದು ನಿಂತು ಕರಿಬಸವಾಂಕಂ ||

ನೆಲಗಡ್ಲೇಕಾಯಿ,

ಅಮೆರಿಕಾ ದೇಶದಲ್ಲಿ ಇದನ್ನು ಬೆಳೆಯುವ ವಿಧಾನ.

೧. ಅಮೆರಿಕಾ ದೇಶದಲ್ಲಿ ಸುಮಾರು ೧೨,೦೦೦,೦೦೦ ರೂಪಾಯಿ ಕ್ರಯ ಬಾಳುವಷ್ಟು ನೆಲಗಡ್ಲೇಕಾಯಿಯನ್ನು ಸಾಲಿಯಾನಾ ಮಾಡುತ್ತಾರೆ. ಇದರ ಕಾಳು ಎಣ್ಣೇ ತೆಗೆಯುವುದಕ್ಕೂ, ಹಿಂಡಿಯು ದನಗಳ ಆಹಾರಕ್ಕೂ ಮತ್ತು ಗೊಬ್ಬರಕ್ಕೂ, ಇದರ ಗಿಡದ ಸೊಪ್ಪು ಸಹ ದನಗಳ ಮೇವಿಗೂ ಬಹಳ ಉಪಯೋಗವಾದ್ದರಿಂದ ಇದನ್ನು ಬಹಳ ಶ್ರದ್ಧೆಯಿಂದ ಬೆಳೆಯುತ್ತಾರೆ

೨ ಜಮೀನು ಮತ್ತು ಹವಾ —ನೆಲಗಡ್ಲೇಕಾಯಿಯು ಮರಳು, ಮರಳುಗೋಡು ಜಮೀನಿನಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ ಮಣ್ಣು ಕರಿಯದಕ್ಕಿಂತಲೂ ಸ್ವಲ್ಪ ಬೂದಿಬಣ್ಣವಾಗಿದ್ದರೆ ಒಳ್ಳೆಯದು ಆದರೆ ಎಲ್ಲಾ ಭೂಮಿಯಲ್ಲಿಯೂ ಬೆಳೆಯುತ್ತದೆ (ಪ್ರನ) ಜೇಡಿ ಮಣ್ಣಿನಲ್ಲಿ ಮಾತ್ರ ಚೆನ್ನಾಗಿ ಆಗುವುದಿಲ್ಲ. ಜಮೀನಿನಲ್ಲಿ ವಸ್ತಿ ನಿಲ್ಲಕೂಡದು ಕಬ್ಬಿಣದ ಅದರು ಇರುವ ಭೂಮಿಯಲ್ಲಿ ಕಾಯಿ ಕಪ್ಪಾಗುತ್ತದೆ. ಕಪ್ಪು ಕಾಯಿಗೆ ಒಳ್ಳೆಯ ಬೆಲೆ ಬರುವದಿಲ್ಲ. ಸುಣ್ಣಜೇಡಿ ಇರುವ ಮರಳುಗೋಡು ಭೂಮಿಯು ಉತ್ಕೃಷ್ಟವಾದದ್ದು ಈ ಪೈರಿಗೆ ಮಂಜು, ಛಳಿ, ಹವಾ ಆಗುವುದಿಲ್ಲ. ಪೈರು ಬೆಳೆಯುತ್ತಾ ಇರುವಾಗ ದೊಡ್ಡ ಮಳೆ ಬರಕೂಡದು ಬಿಸಿಲೂ ಮತ್ತು ಉಷ್ಣತೆ ವಿಶೇಷವಾಗಿ ಇರಬೇಕು. ಸರಿಯಾದ ವ್ಯವಸಾಯದಲ್ಲಿ ಸ್ಪೇನ್ ದೇಶದ ನೆಲಗಡ್ಲೇಕಾಯಿಯು ೯೦ ದಿವಸದಲ್ಲಿ ಫಸಲು ಆಗುತ್ತದೆ ಆದರೆ ೧೧೦—೧೨೦ ದಿವಸಗಳವರಿವಿಗೂ ಕಟಾವು ಮಾಡದೇ ಇರುವದು ಒಳ್ಳೆಯದು ದೊಡ್ಡ ಕಾಯಿ ಜಾತಿಗಳಿಗೆ ಜಾಸ್ತಿ ದಿವಸಗಳು ಹಿಡಿಯುತ್ತದೆ.

೩ ಉಳುಮೆ—ಇತರ ಪೈರು ಬೆಳೆಯದೇ ಇದ್ದ ಜಮೀನನ್ನು ಹೆಚ್ಚೆಕಟ್ಟು ಬಂಜರಿನಲ್ಲಿರುವ ಜಮೀನನ್ನು ಹಿಂದಲ ಛಳಿಗಾಲದಲ್ಲಿ ಉತ್ತು ಸಿದ್ಧಮಾಡಿಟ್ಟುಕೊಂಡು ಇರಬೇಕು. ಸಾಗುವಳಿಯಲ್ಲಿರತಕ್ಕ ಜಮೀನನ್ನು ಬೀಜವೇದಾಪನೆ ಮೊದಲು ಉತ್ತು ಸಿದ್ಧಪಡಿಸಿಕೊಳ್ಳಬೇಕು ಎಷ್ಟು ಆಳದ ವರಿವಿಗೆ ಉಳಬೇಕೆಂಬುದು ಆಯಾಯ ಜಮೀನಿನ ಮೇಲ್ಭಾಗದ ಮಣ್ಣಿನ ಆಳದ ಮೇಲೆ ಗೊತ್ತು ಮಾಡಬೇಕಾಗುತ್ತದೆ. ಮೇಲ್ಭಾಗ ಮರಳಾಗಿದ್ದು, ಕೀಳು ಮಣ್ಣು ಜೇಡಿಯಾಗಿದ್ದರೆ ಆಳವಾಗಿ ಉತ್ತು, ಜೇಡಿಮಣ್ಣು ಮೇಲೆ ಬರುವಂತೆ ಮಾಡಕೂಡದು. ಮೇಲ್ಭಾಗದ ಮಣ್ಣು ಆಳವಾಗಿಲ್ಲದ ಪಕ್ಷದಲ್ಲಿ ಕೀಳು ಮಣ್ಣನ್ನು ವರ್ಷ ವರ್ಷ ಸ್ವಲ್ಪ ಸ್ವಲ್ಪ ಉತ್ತು ಬೆರಕೆಮಾಡಿ ಆಳಪಡಿಸಿಕೊಳ್ಳಬೇಕು ಧಾನ್ಯಗಳಿಗೆ ಉಳಬೇಕಾದಷ್ಟು ಆಳ ಈ ಪೈರಿಗೆ ಅವಶ್ಯಕವಿಲ್ಲ ೫—೬ ಅಂಗುಲವಿದ್ದರೆ ಎಲ್ಲಾ ಜಾತಿಯ ನೆಲಗಡ್ಲೇಕಾಯಿಯನ್ನು ಬೆಳೆಯಬಹುದು. ವಸ್ತಿ ನಿಲ್ಲುವ ಭೂಮಿಗಳಲ್ಲಿ ಕೀಳಮಣ್ಣು ಮೇಲೆ ಬೆರಿಯುವಂತೆ ಉಳುವದು ಒಳ್ಳೆಯದು. ಬಿತ್ತುವದಕ್ಕೆ ಮೊದಲು ಚೆನ್ನಾಗಿ ಉತ್ತು, ಉಣ್ಣನ ತಂಪು ಹೋಗದಂತೆ ಮೇಲೆ ಹಲುಬೇ ಹೊಡೆಯಬೇಕು ಮರಳು ಭೂಮಿಗಳಲ್ಲಿ ಕಳೇ ಮತ್ತು ಹುಲ್ಲು ಇಲ್ಲದ ಪಕ್ಷದಲ್ಲಿ ಬಹಳ ಉಳತಕ್ಕ ಅವಶ್ಯಕವಿಲ್ಲ. ಹಲುಬೇ ಹೊಡೆದು ಬಿಡಿಸಿದರೆ ಸಾಕಾಗಿರುತ್ತದೆ ಸಾಧಾರಣವಾಗಿ ನೆಲಗಡ್ಲೇ ಕಾಯಿಯನ್ನು ಮಟ್ಟವಾದ ಭೂಮಿಯಲ್ಲೇ ಬಿತ್ತುತ್ತಾರೆ ನೀರು ನಿಲ್ಲತಕ್ಕ ಜಮೀನಾದರೆ (ಬೋ) ದಗಳನ್ನು ಮಾಡಿ ಅವುಗಳ ಬೀಜ ನೆಡುತ್ತಾರೆ, ಮಳೆಗಾಲಗಳಲ್ಲಿ (ಬೋ) ದಗಳ ಮೇಲೆ ನೆಡುವುದೇ ಒಳ್ಳೆಯದು ಸ್ವಲ್ಪವೂ ಕಳೆಗಳು ಇಲ್ಲದಂತೆ ಜಮೀನನು ಸಾಫುಮಾಡಿ ಇರಬೇಕು

೪ ಗೊಬ್ಬರ —ನೆಲಗಡ್ಲೇಕಾಯಿ ಒಂದನ್ನೇ ಒಂದು ಜಮೀನಿನಲ್ಲಿ ಬೆಳೆಯುವದಕ್ಕಿಂತಲೂ ಇತರ ಧಾನ್ಯಗಳು ಬೆಳೆಯುವ ಜಮೀನಿನಲ್ಲಿ ಬಾರೀ ಮೇಲೆ ಬೆಳೆಯುವದು ಒಳ್ಳೇದು ಒಂದು ಭೂಮಿಯಲ್ಲಿ ಒಂದು (ಸಾಲಿನಲ್ಲಿ) ಈ ಪೈರನ್ನೂ ಮತ್ತೆ ಮೂರು ಸಾಲುಗಳಲ್ಲಿಯೂ ಇತರ ಪೈರುಗಳನ್ನು ಬೆಳೆಯುವದು ಒಳ್ಳೆಯದು ಒಂದು ವರುಷ ಮುಸುಕಿನಜೋಳ ಅಥವಾ ಹತ್ತಿ ಎರಡನೇ ವರುಷ ತೊಗರಿಯೂ ಹಾಕಿ ಅದನ್ನು ಆ ಭೂಮಿಯಲ್ಲೇ ಉತ್ತು ಅದರಲ್ಲಿ ನೆಲಗಡ್ಲೇಕಾಯಿ ಹಾಕಿದರೆ ಒಳ್ಳೇ ಪೈರಾಗುತ್ತದೆ ನಂತರ ನೆಲಗಡ್ಲೇ ಕಾಯಿ ರೇಜೇ ಆದ ಕೂಡಲೇ ಉತ್ತು. ಕೂಡಲೇ 'ರೈ' ಎಂಬುವ ಪೈರು ಚೆಲ್ಲಿದರೆ ಛಳಿಗಾಲಕ್ಕೆ ದನಗಳಿಗೆ ಮೇವಾಗುತ್ತದೆ ಆಲೂಗೆಡ್ಡೆ ಮತ್ತು ಗೆಣಸು ಹಾಕಿದ ಭೂಮಿಯಲ್ಲಿ ನೆಲಗಡ್ಲೇ ಹಾಕಿದರೂ ಚೆನ್ನಾಗಿ ಪೈರಾಗುತ್ತದೆ. ಈ ಮರೇ ಗೊಬ್ಬರವನ್ನು ಹಿಂದಲ ಸಾಲಿನಲ್ಲಿ ಬೆಳೆದ ಪೈರಿಗೆ ಹಾಕಿ ಆ ಪೈರು ಕಟಾವಾದ ಭೂಮಿಯಲ್ಲಿ ನೆಲಗಡ್ಲೇಕಾಯಿ ಹಾಕುವದೇ ಒಳ್ಳೆಯದೇ ಹೊರತು ನೆಲಗಡ್ಲೇ ಹಾಕುವ ವರ್ಷವೇ ಅವಶ್ಯಾಗಿಯೂ ಕುಮುರೇ ಗೊಬ್ಬರವನ್ನು ಹಾಕಕೂಡದು. ಹಾಗೆ ಹಾಕಿದರೆ ಕಳೆಯು ಜಾಸ್ತಿಯಾಗಿ ಬೆಳೆದು ಪೈರು ಕೆಟ್ಟು ಹೋಗುತ್ತದೆ ನೆಲಗಡ್ಲೇಕಾಯಿ ಬೆಳೆಯುವ ಭೂಮಿಯಲ್ಲಿ ನೈಟ್ರೋಜನ್ ಬಹಳವಾಗಿ ಜಮಾಯಿಸಲ್ಪಡುವಪ್ಪರಿಂದ ಫಸಲಿಯೂ ಸಾರವತ್ತಾಗುತ್ತದೆ ಸೇಕಡಾ ೨ ರಿಂದ ೪ ರ ವರೆಗೆ ನೈಟ್ರೋಜನ್ ಮತ್ತು ೫ ರಿಂದ ೭ರ ವರೆಗೆ ಫಾಸ್ಫಾರಿಕ್ ಆಸಿಡ್ ೬ ರಿಂದ ೧೦ರ ವರೆಗೆ ಪೊಟ್ಯಾಷ್ ಇರುವ ಗೊಬ್ಬರ ಒಳ್ಳೇದು. ಇಂತಹುದನ್ನು ಎಕರೆ ಒಂದಕ್ಕೆ ೨೦೦ ರಿಂದ ೧೦೦೦ ಪೌಂಡಿನ ವರಿಗೂ ಹಾಕಬೇಕು ಗೊಬ್ಬರವನ್ನು ಸಾಲಿನಲ್ಲಿ ಮಾತ್ರ ಹಾಕುವದಕ್ಕಿಂತಲೂ ಎಲ್ಲಾ ಕಡೆಯಲ್ಲೂ ಚೆಲ್ಲುವದು ಒಳ್ಳೇದು ನೆಲಗಡ್ಲೇ ಕಾಯಿಯೂ ಚೆನ್ನಾಗಿ ಬೆಳೆದು ತುಂಬಾ ಕಾಯಿ ಆಗುವದಕ್ಕೆ ಆ ಭೂಮಿಯಲ್ಲಿ ಅವಶ್ಯಕವಾಗಿ ಸುಣ್ಣವಿರಬೇಕು ಜಮೀನಿನಲ್ಲಿ ಸಾಧಾರಣವಾಗಿ ಸುಣ್ಣಕಲ್ಲು ಕಪ್ಪೆಚಿಪ್ಪು ಹೆರಳವಾಗಿ ಇದ್ದರೆ ಸುಣ್ಣ ಹಾಕತಕ್ಕ ಅವಶ್ಯಕವಿಲ್ಲ ಅದು ಇಲ್ಲದ ಭೂಮಿಗಳಲ್ಲಿ ೪ ಅಥವಾ ೫ ವರುಷಕ್ಕೆ ಒಂದಾವರ್ತಿ ೧೦೦೦ ಅಥವಾ ೨೦೦೦ ಪೌಂಡು ಸುಣ್ಣದ ಹುಡಿಯನ್ನು ಉಳುವಾಗ ಹಾಕಬೇಕು ಬೂದೀಗೊಬ್ಬರವೂ ಒಳ್ಳೆಯದು. ೧೦೦೦—೨೦೦೦ ಪೌಂಡು ಒಂದು ಎಕರೆಗೆ ಹಾಕುತ್ತಾರೆ

೪ ಬೀಜ.—ಒಳ್ಳೇ ಬೀಜವನ್ನು ಹಾಕತಕ್ಕದ್ದು ಮುಖ್ಯ ಕೆಲಸವಾಗಿರುತ್ತದೆ ಚೆನ್ನಾಗಿ ಹುಲಿಸಿನಂತೆ ಬೆಳೆದು ದುಂಡಾಗಿ ಪುಷ್ಟಿಯಾಗಿ, ಅಂದವಾದ ಆಕಾರವುಳ್ಳ ಬೀಜವನ್ನೇ ಬಿತ್ತಬೇಕು ಬೀಜದ ಕಾಯಿಯನ್ನು ಛಳಿಗಾಲದಲ್ಲಿ ತಾಮಿವಾದ ಜಾಗದಲ್ಲಿ ಇಟ್ಟಿರಬೇಕು ಒಳ್ಳೇ ಬೀಜ ಹಾಕಿದರೆ ಒಳ್ಳೇ ಒಂದೇ ಸಮನಾದ ಪೈರಾಗಿ ಉತ್ಪತ್ತಿಯೂ ಜಾಸ್ತಿಯಾಗುತ್ತದೆ. ಯಾವ ಗಿಡದ ಕೆಳಗೆ ಒಳ್ಳೇ ಕಾಯಿಗಳು ಜಾಸ್ತಿಯಾಗಿ ಕಚ್ಚಿ ಇರುತ್ತವೋ ಅಂಥಾ ಗಿಡದ ಕಾಯಿಗಳೇ ಬೀಜಕ್ಕೆ ತೆಗೆದು ಜಮಾಯಿಸಬೇಕು ಈ ರೀತಿ ಮಾಡುತ್ತಾ ಬಂದಲ್ಲಿ ಎಕರೆ ಒಂದಕ್ಕೆ ಈಗ ಆಗುವ ೧೫೩೦ ಪೌಂಡ್ ಹುಟ್ಟುವಳಿ ಜಾಗಾದಲ್ಲಿ ೨೫೦೦ ಅಥವಾ ೭೭೦೦ ಪೌಂಡು ಬೀಜ ಆಗುವದಕ್ಕೆ ಸಂದೇಹವಿಲ್ಲ. ಇದೇ ನೆಲಗಡ್ಲೇಕಾಯಿ ಪೇರಾವ ಮಾಡುವದಕ್ಕಿಂತಲೂ ಆದನ್ನು ಸುಲಿದು ಪೇರಾವ ಮಾಡುವದೇ ಒಳ್ಳೆಯದು

೫. ಬಿತ್ತನೇ ಕಾಲ ಮತ್ತು ಬಿತ್ತುವ ವಿಧಾನ.—ಸ್ಪೇನ್ ದೇಶದ ಕಾಯಿಯೆಂದೂ, ವರಜೀನಿಯಾ ಕಾಯಿಯೆಂದೂ ಎರಡು ವಿಧವಾದ ಕಾಯಿಯನ್ನು ಬೆಳೆಯುತ್ತಾರೆ ವರಜೀನಿಯಾ ಜಾತಿಗಿಂತಲೂ ಸ್ಪೇನ್ ಜಾತಿ ಕಾಯಿ ಜಾಗ್ರತೆಯಾಗಿ ಬೆಳೆಯುತ್ತದೆ ಸಾಧಾರಣವಾಗಿ ಸಾಲುಗಳು ೩೬ ಅಂಗುಲದ ಅಂತರದಲ್ಲಿ ಇರಬೇಕು. ಒಳ್ಳೇ ವರಜೀನಿಯಾ ಕಾಳು ೩೬ ಅಂಗುಲ ದೂರದ ಸಾಲಿನಲ್ಲಿ ಹಾಕಬೇಕು ಕಾಳುಕಾಳಿಗೆ ೧೨ ಅಂಗುಲ ಅಂತರವಿರಬೇಕು ಸ್ಪೇನ್ ಜಾತಿ ಕಾಯಿಗಳು ೨೮ ರಿಂದ ೩೬ ಅಂಗುಲ ಅಂತರದ ಸಾಲಿನಲ್ಲಿಯೂ, ೬ ರಿಂದ ೯ ಅಂಗುಲ ದೂರದಲ್ಲಿಯೂ ಬಿತ್ತಬೇಕು. ಒಂದು ಎಕರೆಗೆ ೨೩—೨೪ ಪೌಂಡು ವರಜೀನಿಯಾ ಬೀಜ ಬಿತ್ತತಕ್ಕದ್ದು. ಸ್ಪೇನ್ ಕಾಯಿ ಬಿತ್ತುವದಕ್ಕೆ ಎಕರೆ ಒಂದಕ್ಕೆ ೪೦ ಪೌಂಡು ಬೇಕಾಗುತ್ತೆ ಬೀಜವನ್ನು ಜಿಗಟು ಮಣ್ಣುಗಳಲ್ಲಿ ನೆಲಮಟ್ಟಕ್ಕೆ ಕೆಳಗೆ ಮುಕ್ಕಾಲ್‌ರಿಂದ ಒಂದು ಕಾಲು ಅಂಗುಲದ ಕೆಳಗೂ ಮರಳು ಭೂಮಿಗಳಲ್ಲಿ ಒಂದುವರೆ ಯಿಂದ ೨ ಅಂಗುಲದ ಕೆಳಗೂ ಬಿತ್ತಬೇಕು.

ಕಂಚಿಟ್ರ ಮಗ ಗಿರಿಕಟ್ರಿಗೆ ಜವಾಬು.

ಪತ್ರಿಕೆಯಲ್ಲಿ ೨೮-೪ ೧೯೧೦ ನೆ ಮುಕ್ಕಂ ೪೮ ನೆ ಸಂಚಿಕೆ ೩ ನೇ ಪೇಜು ೨ನೆ ಕಾಲಂನಲ್ಲಿ ಹೊಸ ಅಗ್ರಹಾರದ ಕಂಚಿಟ್ರ ಮಗ ಗಿರಿಕಟ್ರಿಯೆಂಬುವನು ಪ್ರಸಿದ್ಧಪಡಿಸುವ ಮೇರೆ ಪವತಿ ಶಿದ್ದಣ್ಣನವರಿಗೆ ಯಾವ ವಿಧವಾದ ಹಕ್ಕುದಾರನೂ ಅಲ್ಲಾ ಮತ್ತು ವಿಲ್ ಮೂಲಕ ತನಗೆ ಹಕ್ಕು ಬಂದು ಇರುತ್ತೆಂಬುವದು ಮೋಸ ಕೋಟಿ ಮರಿ ಪಂಡಿತರ ಮಗ ಸುಬ್ಬಣ್ಣ ವಗೈರೆರು ಸೇರಿಕೊಂಡು ಮೋಸ ಮತ್ತು ತಗಲೂಪಿ ವಿಲ್ ಮಾಡಿ ಇರುತ್ತಾರೆ – ಈ ವಿಷಯದಲ್ಲಿ ಕೋರ್ಟ್ನಲ್ಲಿ ನಡವಳಿಕೆ ನಡಿಯುತ್ತಾ ಇದೆ–೫೮೦೦ ರೂ ಬರಬೇಕೆಂಬುವದು ತಪ್ಪು ಪವತೀ ಶಿದ್ದಣ್ಣನವರಿಗೂ ನನಗೂ ನಡೆದು ಕರಾರಿನ ಪ್ರಕಾರ ನಾಲ್ಕು ಸಾವಿರ ಚಿಲ್ಲರೆ ರೂಪಾಯಿ ಕೊಡಬೇಕಾಗಿ ಇರುತ್ತೆ ಪವತೀ ಸಬಬು ಹರಾಜು ನಿಂತು ಹೋಯಿತೆಂಬದಾಗಿ ಬರದು ಇರುವ ಬರವಣಿಗೆ ಮೋಸಕರವಾದದ್ದು ವ ಸ್ತು ಸುಳ್ಳು ಮತ್ತು ಪವತಿ ಶಿದ್ದಣ್ಣನವರಿಗೆ ಹಕ್ಕುದಾರರು ಇರುತ್ತಾರೆ ತಿಳಿಯ್ಬುವದು

ಎಂ ಬಸವಲಿಂಗಪ್ಪ,
ಲಷ್ಕರಮೊಹಲ್ಲಾ, ಮೈಸೂರು

ವೃತ್ತಾಂತ ಪತ್ರಿಕೆ.

೧೯೧೦ ನೇ ಇಸವಿ ಮೇ ತಾ ೫ ನೇ ಗುರುವಾರ

ಹೊಸದಾಗಿ ನೇಮಕವಾದ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಕೆಲಸ

ಉಭಯ ಪಕ್ಷದವರೂ ಸಮನಾಗಿರುವ್ರದರಿಂದ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯು ಏನು ಮಾಡುತ್ತದೆಂದು ಹೇಳುವುದು ಸಂಶಯವಾಗಿದೆ ಸರ್ಕಾರವನ್ನು ತಲೆಕೆಳಗು ಮಾಡುವ ಅದಿಕಾರವು ಐರಿಷ್ ಪಂಗಡದವರಲ್ಲಿ ಅಡಗಿದೆ ಆದರೆ ಅವರು ಜಮಾ ಖರ್ಚಿನ ಅಂದಾಜಿನ ಪಟ್ಟಿಯ ವಿಷಯದಲ್ಲಿ ಯಾವ ರೀತಿ ತಮ್ಮ ಸಮ್ಮತಿಯನ್ನು ಕೊಡುವರೆಂದು ಯಾರಿಂದಲೂ ಹೇಳುವುದಕ್ಕಾಗುವುದಿಲ್ಲ ಈಗ ಇದು ಎಲ್ಲಾ ತೀರ್ಮಾನವಾಗಿದೆ ಪಾರ್ಲಿಮೆಂಟ್ ಸಭೆಯವರು ಹೌಸ್ ಆಫ್ ಲಾರ್ಡ್ಸ್ ಎಂಬ ಸಭೆಗೆ ಹಣಸಂಬಂದವಾದ ಕಾರ್ಯಗಳಲ್ಲಿ ಪ್ರವೇಶ ಮಾಡಲು ಯಾವ ಅದಿಕಾರವೂ ಇಲ್ಲವೆಂದು ಹೇಳಿ ಅಪಕ್ಷಾನುಗುಣವಾದ ಕೆಲವು ತೀರ್ಮಾನಗಳನ್ನು ಮೊದಲು ಮಾಡಿದರು ಇದನ್ನನುಸರಿಸಿ ಒಂದು ಕಾಯಿದೆಯ ಮಸೂದೆಯನ್ನು ತಯಾರು ಮಾಡಬೇಕಾಗಿದೆ ಈ ಮಸೂದೆ ಕಾನೂನನ್ನು ಹೌಸ್ ಆಫ್ ಕಾಮನ್ಸ್ ಎಂಬ ಸಭೆಯವರೇನೋ ಒಪ್ಪಿಕೊಳ್ಳಬಹುದು ಆದರೆ ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಇದರ ಪರಿಣಾಮವು ಬೇರೆ ರೀತಿಯಲ್ಲಿ ಆಗುತ್ತದೆ ಪ್ರಾಯಶಃ ಆ ಸಭೆಯವರು ಅದನ್ನು ಬದಲಾವಣೆ ಮಾಡಬಹುದು ಇಲ್ಲವಾದರೆ ಅದನ್ನು ಸಂಪೂರ್ಣವಾಗಿ ವಜಾಮಾಡಿಬಿಡಬಹುದು

ಕಳೆದ ಚುನಾವಣೆಯಲ್ಲಿ ಹೆಚ್ಚು ಕಲಹಕ್ಕೆ ಆಸ್ಪದವಾಗಿದ್ದ ಜಮಾ ಖರ್ಚಿನ ಅಂದಾಜಿನ ಪಟ್ಟಿಯನ್ನು ಐರಿಷ್ ಪಂಗಡದವರು ಅದರ ಪರವಾಗಿ ತಮ್ಮ ಸಮ್ಮತಿಯನ್ನು ಕೊಟ್ಟಾಗ್ಗೂ ಹೌಸ್ ಆಫ್ ಕಾಮನ್ಸ್ ಸಭೆಯವರು ಮಂಜೂರು ಮಾಡಿದರು ಐರಿಷ್ ಪಂಗಡದವರು ಆ ಅಂದಾಜು ಪಟ್ಟಿಯನ್ನು ಒಪ್ಪಿಕೊಂಡದ್ದರಿಂದ ತಮ್ಮ ಸಮ್ಮತಿಯನ್ನು ಕೊಟ್ಟರೆಂತಲ್ಲ ಆದರೆ ಹೌಸ್ ಆಫ್ ಲಾರ್ಡ್ಸ್ ಸಭೆಯವರ ಹಕ್ಕುಗಳು ತೀರ್ಮಾನವಾಗುವ ವರೆಗೂ ಈಗಿನ ಸರ್ಕಾರವು ಅಧಿಕಾರದಲ್ಲಿರಬೇಕೆಂಬುವ ಉದ್ದೇಶದಿಂದ ತಮ್ಮ ಸಮ್ಮತಿಯನ್ನು ಕೊಟ್ಟರು ಐರಿಷ್ ಪಂಗಡದವರು ತಮ್ಮ ಮನಸ್ಸಿಗೆ ತೋರಿದ ಹಾಗೆ ಮಾಡುವುದಕ್ಕೆ ಅನುಕೂಲವಿದ್ದ ಪಕ್ಷದಲ್ಲಿ ಅವರು ಖಂಡಿತವಾಗಿಯೂ ಅಂದಾಜಿನ ಪಟ್ಟಿಯನ್ನು ಬದಲಾಯಿಸುತ್ತಿದ್ದರು ಹೌಸ್ ಆಫ್ ಕಾಮನ್ಸ್ ಸಭೆಯು ಅಂದಾಜಿನ ಪಟ್ಟಿಯನ್ನು ಮಂಜೂರು ಮಾಡಿದುದರಿಂದ ಹೌಸ್ ಆಫ್ ಲಾರ್ಡ್ಸ್ ಸಭೆಯು ನಿರ್ವಾಹವಿಲ್ಲದೆ ಅದನ್ನು ಮಂಜೂರು ಮಾಡಬೇಕಾಯಿತು ಅವರು ಮೊದಲು ಇದರ ವಿಷಯದಲ್ಲಿ ಜನರ ಆಲೋಚನೆಯನ್ನು ಕೇಳಬೇಕೆಂದು ಹೇಳಿದರು ಆದರೆ ಜನರು ಅಂದಾಜಿನ ಪಟ್ಟಿ ಇರಬೇಕೆಂದು ಹೇಳಿದಾಗ ಅವರ ತೀರ್ಮಾನವನ್ನು ಹೌಸ್ ಆಫ್ ಲಾರ್ಡ್ಸ್ ಸಭೆಯವರು ಅಂಗೀಕಾರ ಮಾಡಿಕೊಂಡರು

ಇನ್ನು ಕೆಲವು ತಿಂಗಳುಗಳೊಳಗಾಗಿ ಏನಾಗುತ್ತದೆಂದು ಈಗಲೇ ಹೇಳುವುದು ಸುಲಭ ಸಾಧ್ಯವಾದ ಕಾರ್ಯವಲ್ಲ ಇದುವರೆಗೂ ಐರಿಷ್ ಪಂಗಡದವರು ಸರಕಾರದವರೊಂದಿಗೆ ತುಂಬಾ ರಾಜಭಕ್ತಿಯಿಂದ ಕೆಲಸಮಾಡಿ ಅವರ ಕಾನೂನುಗಳು ಜಾರಿಗೆ ಬರುವಂತೆ ಸಹಕಾರಿಗಳಾಗಿದ್ದರು ಆದರೆ ಯಾವ ಗಳಿಗೆಯಲ್ಲಿಯಾದರೂ ಅವರು ತಪ್ಪಿಸಿಕೊಳ್ಳಬಹುದು ಆಗ ವಿಶೇಷ ತೊಂದರೆಗಳು ಪ್ರಾಪ್ತವಾಗುತ್ತವೆ

ಇದಲ್ಲದ ಹೌಸ್ ಆಫ್ ಲಾರ್ಡ್ಸ್ ಸಭೆಯವರು ತಮ್ಮ ಅಧಿಕಾರವನ್ನು ನಾಶ ಪಡಿಸುವ ಮಸೂದೆಯನ್ನು ವ್ಯಾವಹಾರದ ಎಂದಿಗೂ ಒಪ್ಪಿಕೊಳ್ಳಲಾರರು, ಅವರು ಸರ್ಕಾರದವರೊಂದಿಗೆ ರಾಜಿ ಮಾಡಿಕೊಳ್ಳಬಹುದಾಗಿದೆ ಆದರೆ ಹಾಗೆ ಮಾಡಿಕೊಳ್ಳುವುದು ನಿಶ್ಚಯವೆಂದು ಹೇಳುವುದಕ್ಕಾಗುವುದಿಲ್ಲ ಅವರು ಮಸೂದೆಯನ್ನು ಬದಲಾಯಿಸಬಹುದು ಇಲ್ಲವೇ ಅದನ್ನು ವಜಾ ಮಾಡಬಹುದು ಇದರಿಂದ ಪಾರ್ಲಿಮೆಂಟ್ ಸಭೆಯು ಒಡೆದು ಹೋಗಿ ಹೊಸ ಚುನಾವಣೆ ಮಾಡಬೇಕಾಗುತ್ತದೆ ಇದರ ಫಲಿತಾಂಶವು ಏನಾಗುವುದೆಂದು ಯಾರಿಂದಲೂ ಖಂಡಿತವಾಗಿ ಮುಂತಿಳಿಸುವುದಕ್ಕಾಗುವುದಿಲ್ಲ

ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಈ ಮಸೂದೆಯು ಮಂಜೂರಾಗುವಂತೆ ಇನ್ನೂ ಹೆಚ್ಚಾದ ಜನಗಳನ್ನು ಪ್ರಭುಗಳ ದರ್ಜೆಗೆ ತರುವಂತೆ ಇಂಗ್ಲಾಂಡ್ ದೇಶದ ಅರಸನಿಗೆ ಒಪ್ಪಿಸಲು ಮಾಡಿಕೊಳ್ಳಬಹುದು ಆದರೆ ಜನರ ಅಭಿಪ್ರಾಯವು ಏನೆಂದು ತಿಳಿಯುವ ತನಕ ಇದು ಸಾಧ್ಯವಾಗಲಾರದೆಂದು ಹೇಳಬೇಕಾಗಿದೆ

ಇದರ ಫಲಿತಾಂಶವಾಗಿ ದೇಶದ ಕೆಲಸವನ್ನು ನಡಿಸುವುದಕ್ಕೆ ಯಾವ ಕಾನೂನು ಆವಶ್ಯವೋ ಅದು ಮಾತ್ರ ಜಾರಿಗೆ ಬಂದಿದೆ ಅದಕ್ಕಿಂತ ಹೆಚ್ಚಿನ ಕಾನೂನು ಮಾಡಲಿಲ್ಲವು ಅಲ್ಲದೆ ಈಗಿನ ಗಲಭೆಯು ನಿಲ್ಲುವವರೆಗೂ ಯಾವ ಹೆಚ್ಚಿನ ಕಾನೂನು ಜಾರಿಗೆ ಬರಲಾರದು ಇನ್ನು ಎರಡು ತಿಂಗಳೊಳಗಾಗಿ ಹೊಸ ಚುನಾವಣೆ ಆಗುತ್ತದೋ ಇಲ್ಲವೋ ಎಂಬುವ ಸಂಗತಿ ಗೊತ್ತಾಗುತ್ತದೆ

ದೇವರನ್ನು ಕುರಿತು

ಶಿಷ್ಯ —ಸ್ವಾಮಿ! ಲೋಕದಲ್ಲಿ ಅನೇಕ ಮತಗಳು ಪ್ರಚಾರವಾಗಿವೆ ಹಿಂದೂ, ಮಹಮದಿ ಬೌದ್ಧ, ಕ್ರೈಸ್ತ ಮುಂತಾದ ವಿವಿಧ ಮತಗಳು ಒಬ್ಬನೇ ದೇವರ ಸಾನಿಧ್ಯವನ್ನು ಹೊಂದಲಿಕ್ಕೆ ಏರ್ಪಡಿಸಿದ ಹಲವು ಮಾರ್ಗಗಳಾಗಿವೆ ವಂಗಳೂರಿಗೆ ಹೋಗಲಿಕ್ಕೆ ರೈಲು ಮಾರ್ಗ, ರಾಜಬೀದಿ, ಸಣ್ಣಹಾದಿ ಈ ತರದ ಅನೇಕ ಮಾರ್ಗಗಳಿವೆ ಆದರೂ ಅವುಗಳೆಲ್ಲಾ ಬೆಂಗಳೂರೆಂಬ ಒಂದೇ ಪಟ್ಟಣವನ್ನು ಸೇರುತ್ತವೆ ಹಾಗೆಯೇ ಬೇರೆ ಬೇರೆ ಮತಗಳು ಒಬ್ಬನೇ ದೇವರನ್ನು ಸೇರುವ ಹಲವು ದಾರಿಗಳಾಗಿರುತ್ತವೆ ಹೀಗಿರುವಲ್ಲಿ ಯಾವ ಮತವನ್ನನುಸರಿಸಿದರೂ ಬಾಧಕವಿಲ್ಲವಷ್ಟೆ ಬೇರೆ ಬೇರೆ ಮತದವರ ತಮ್ಮ ತಮ್ಮ ಮತವೇ ಶ್ರೇಷ್ಠವೆಂದು ಸ್ಥಾಪಿಸುತ್ತಾರೆ ಹಾಗೆ ಸ್ಥಾಪಿಸುವದು ಸಹಜವಾಗಿಯೇ ಇದೆ ಆದರೆ ಯಾವ ಮತವಾದರೇನು? ಎಲ್ಲಾ ಒಂದೇ ಗುಂಗ ಮುಟ್ಟುತ್ತವಲ್ಲವೋ? ಹೆಸರು ವಿತಾಸವಾಗಿದ್ದರೇನು ವಸ್ತು ಒಂದೇಯಲ್ಲವೇ?

ಗುರು — ಶಿಷ್ಯನೇ ಈ ವಿಪರೀತ ಬುದ್ಧಿಯು ನಿನ್ನಲ್ಲಿ ಹಾಗೆ ಅಂಕುರಿಸಿತು? ಒಂದೇ ಪದಾರ್ಥವನ್ನು ಬೇರೆ ಬೇರೆ ಹೆಸರುಗಳಿಂದ ಕರೆದರೂ ಆ ಪದಾರ್ಥದ ಸ್ವಭಾವ ಗುಣಲಕ್ಷಣಗಳು ಬದಲಾಗದೆ ಇರುವುದರಿಂದ ಅದರಲ್ಲಿ ವ್ಯತ್ಯಾಸವಿರಲ್ಲ ಮತ ವಿಚಾರ ಹಾಗಲ್ಲ ಆಯಾ ಮತಗಳಿಗೆ ಪ್ರತ್ಯೇಕವಾದ ಹೆಸರುಗಳಿರುವುದಲ್ಲದೆ ಅವುಗಳ ಸ್ವಭಾವವೂ ಬೇರೆಯಾಗಿರುತ್ತವೆ ಆದುದರಿಂದ ಬೇರೆ ಬೇರೆ ಮತಗಳು ಹೆಸರಿನಲ್ಲಿ ವ್ಯತ್ಯಾಸವುಳ್ಳವುಗಳಾಗಿದ್ದರೂ ಸ್ವಭಾವ ಗುರಿಗಳಲ್ಲಿ ಒಂದೇಯಾಗಿವೆಯೆಂತ ಊಹಿಸುವುದು ತಪ್ಪು ಮಸಲಾ ಮಹಮದೀ ಮತ್ತು ಕ್ರೈಸ್ತ ಮತಗಳು ದೇವರು ಒಬ್ಬನೇಯೆಂದು ಬೋಧಿಸುತ್ತಿರಲಾಗಿ ಹಿಂದೂ ಮತವು ಮೂವತ್ತುಮೂರು ಕೋಟಿ ದೇವರುಗಳುಂಟೆಂದು ಹೇಳುತ್ತದೆ ಬೌದ್ಧಮತವು ದೇವರೇ ಇಲ್ಲವೆಂದು ಹೇಳುತ್ತದೆ ಕನ್ಫೂಸಿಯಸನ ಮತವು ಪಿತೃಪೂಜೆಯನ್ನು ಬೋಧಿಸುತ್ತದೆ ಹೀಗಿರುವಲ್ಲಿ ಎಲ್ಲಾ ಮತಗಳೂ ಒಬ್ಬನೇ ದೇವರ ಸನ್ನಿಧಾನಕ್ಕೆ ನಮ್ಮನ್ನು ಒಯ್ಯುವ ಮಾರ್ಗಗಳೆಂತ ಹೇಳುವದು ಅಸಂಬದ್ಧವಲ್ಲವೇ? ದೇವರೇ ಇಲ್ಲವೆಂದು ಹೇಳುವ ಮತವು ದೇವರ ಬಳಿಗೆ ನಮ್ಮನ್ನು ಸೇರಿಸುವದು ಹ್ಯಾಗೆ? ಬಹು ದೇವರುಗಳಿವೆಯೆಂದು ಬೋಧಿಸುವ ಮತವು ಆ ಬಹು ದೇವರುಗಳ ಪೈಕಿ ಯಾವ ದೇವರ ಬಳಿಗೆ ನಮ್ಮನ್ನು ಕರೆದೊಯ್ಯುವುದೋ?

ಶಿಷ್ಯ —ಗುರುಗಳೇ ತಾವು ಒಂದೇ ಸಾರಿ ನಾಲ್ಕೈದು ಮತಗಳನ್ನು ಕುರಿತು ಪ್ರಸ್ತಾಪಮಾಡುವುದಾದರೆ ಒಂದಕ್ಕೊಂದು ಮಿಶ್ರವಾಗಿ ನನ್ನ ಬುದ್ಧಿಗೆ ಗೋಚರವಾಗದು ಮೊದಲು ನನ್ನ ಅಲ್ಪಬುದ್ಧಿಗೆ ತಿಳಿಯುವಹಾಗೆ ಎರಡೇ ಮತಗಳನ್ನು ಕುರಿತು ಪ್ರಸ್ತಾಪಿಸಿ ಒಂದಕ್ಕೊಂದನ್ನು ಹೋಲಿಸಿ ಅದಕ್ಕೆ ಇರುವ ಸಂಬಂಧ ವ್ಯತ್ಯಾಸಗಳನ್ನು ಪರಿಷ್ಕರಿಸಿದರೆ ಬಹಳ ಉಪಕಾರವಾದೀತು? ನಮ್ಮ ದೇಶದಲ್ಲಿ ಹಿಂದೂ ಮತವೇ ಆರ್ಷೇಯದಿಂದ ಬಂದು ಸನಾತನ ದರ್ಮವೆಂದು ಖ್ಯಾತಿಹೊಂದಿದೆ ಇಂತಪ ಮತವನ್ನು ತಾವು ಬಹುದೇವ ಮತವೆಂದು ಜರಿಯುತ್ತೀರಿ "ಏಕಂಬ್ರಹ್ಮಂದ್ವಿತೀಯನಾಸ್ತಿ" ಯೆಂಬ ಪ್ರಬಲ ಪ್ರತಿವಾಕ್ಯವನ್ನು ತಾವು ಮರೆತುಬಿಟ್ಟಂತೆ ಕಾಣುತ್ತದೆ

ಗುರು ನೀನು ಹೇಳುವುದು ಸರಿ ಹಾದರೂ ಯಾವುದಾದರೂ ಎರಡನೇ ಮತಗಳನ್ನು ಹೋಲಿಸಿ ಸಂಬಂಧ ವ್ಯತ್ಯಾಸಗಳನ್ನು ತಿಳಿಯುವುದು ಒಳ್ಳೇದು ಕ್ರೈಸ್ತಮತವನ್ನೂ ಹಿಂದೂ ಮತವನ್ನೂ ಕುರಿತು ಮಾತ್ರ ಈಗ ಸಂಭಾಷಣೆ ಮಾಡೋಣ. ಹಿಂದೂ ಮತವು ಬಹುದೇವ ಮತವನ್ನು ಕುರಿತು ಹೇಳುತ್ತದೆಂದು ನಾನು ಹೇಳಿದ್ದು ಸುಳ್ಳಲ್ಲ ವೇದಗಳಲ್ಲಿಯೂ ಇಂದ್ರ, ಅಗ್ನಿ, ಯಮ, ವರುಣ ಬೃಹಸ್ಪತಿ ಮುಂತಾದ ದೇವರುಗಳನ್ನು ಅನೇಕ ಋಕ್ಕುಗಳು ಉಪ್ಯೋಗಿಸುತ್ತಿವೆ ಇವರೆಲ್ಲರೂ ಒಬ್ಬರಿಗೊಬ್ಬರು ಸಮಾನರೋ ಅಥವಾ ಇವರೆಲ್ಲರಿಗೂ ಶ್ರೇಷ್ಠನೊಬ್ಬನೇ ಇದಾನೋ ಹೇಳುವುದು ಅಸಾಧ್ಯ ಅಂತೂ ಆಯಾ ಋಕ್ಕುಗಳಲ್ಲಿ ಯಾವ ದೇವನನ್ನು ಕುರಿತು ಹೇಳಿದಯೋ ಅಲ್ಲಿ ಅವನೇ ಸರ್ವ ಶ್ರೇಷ್ಠನೆಂಬ ಭಾವನೆ ಬರುತ್ತದೆ ಅಂತೂ ವೇದಗಳಲ್ಲಿ ಬಹುದೇವ ಮತವೇ ಹೊರತು ನಿಜದೇವ ಮತವು ಹೇಳಿರುವುದಿಲ್ಲ ಇವುಗಳ ತರುವಾಯ ಬಂದ ಷಡ್ದರ್ಶನಗಳು ವಿಪರೀತ ಬೋಧನೆಯನ್ನು ಹೇಳುತ್ತವೆ ಸಾಂಖ್ಯಮತವು ನಾಸ್ತಿಕವಾದವನ್ನು ನ್ಯಾಯ ಸೂತ್ರ ಆದರೆ ಇವುಗಳೆಲ್ಲದರಲ್ಲಿ ಬಹು ಖ್ಯಾತಿಯನ್ನು ಹೊಂದಿ ಬಹು ಜನರಂಜಿತವಾಗಿರುವ ವೇದಾಂತಗಳಿಗಿಂದ [illegible] ವಾಕ್ಯವನ್ನು ನೀನು [illegible] ಹೇಳಿ [illegible] ಏಕತ್ವವನ್ನು [illegible] ಬೇರೆ ದೇವರುಗಳಿಲ್ಲ [illegible] ಅದರ ಅರ್ಥವೇನೆಂದರೆ ಬ್ರಹ್ಮನು [illegible] ಇನ್ನು [illegible] ದೇವನೊಬ್ಬನೇ [illegible] ಈ ವಾಕ್ಯಕ್ಕೆ ಸಾಧಾರಣವಾಗಿ ಅರ್ಥ ಮಾಡುತ್ತಾರೆ [illegible] ಈ [illegible] ಒಂದೇ ವಸ್ತು [illegible] ವಸ್ತುವೇ ಇಲ್ಲವೆಂದು ತಾತ್ಪರ್ಯ [illegible] ಕ್ರೈಸ್ತಮತದಲ್ಲಿ ದೇವರನ್ನು ಕುರಿತು [illegible] ವೇದಾಂತಕ್ಕೂ [illegible] ಸಂಬಂಧ [illegible] ಒಂದು ವಸ್ತುವಲ್ಲ [illegible] ಪುರುಷನಲ್ಲ [illegible] ಈ ಶ್ಲೋಕದಲ್ಲಿಯೂ ಇದರಂತಾ ಬೇರೆ ಶ್ಲೋಕಗಳಲ್ಲಿಯೂ ನಪುಂಸಕಲಿಂಗವನ್ನು [illegible] ಉಪಯೋಗಿಸಿದರೆ [illegible] ಆದುದರಿಂದ ಬ್ರಹ್ಮವು [illegible] ವಾದ [illegible] ವಸ್ತುವಂತ [illegible] ಸಿದ್ಧಾಂತವಾಯಿತು

[illegible] ಬ್ರಹ್ಮವು ಸಪ್ರಪಂಚವಾದರೆ [illegible] ತ್ತಿಸಬೇಕಾದರೂ [illegible] ದೇವರು [illegible] ಸಂದೇಹವಾಗಿದೆ ಕ್ರೈಸ್ತಮತವು ದೇವರನ್ನು ಕುರಿತು ಹ್ಯಾಗೆ ಬೋಧಿಸುತ್ತದೆ

ಗುರು ಕ್ರೈಸ್ತಮತವು ದೇವರು ಪರಮಪುರುಷನು [illegible] ಸರ್ವಸಮರ್ಥನು [illegible] ಪ್ರತ್ಯೇಕನಾದವನು [illegible] ತಿಳಿಯಬಾರದು [illegible] ಆಗಬಾರದು [illegible] ಉತ್ಪತ್ತಿ [illegible] ವೇದಾಂತ [illegible] ಈ ದೇವರುಗೂ ಬ್ರಹ್ಮಕ್ಕೂ ಇರುವ [illegible] ವನ್ನು ಸದಾ ಜ್ಞಾಪಕದಲ್ಲಿಡಬೇಕು

ಒಳದೇಶದ ವೃತ್ತಾಂತಗಳು

[illegible] ಕೌನ್ಸಿಲ್ [illegible] ವಿವಾಹದ [illegible] ವಿಶ್ರಾಂತಿಯನ್ನು ಹೊಂದಬೇಕೆಂದು [illegible] ಮಾಡಿಕೊಂಡಿದ್ದಾರೆ

* *

ಶರೀಕರಾದ [illegible] ಯವರು [illegible] ಸರಹದ್ದಿನಲ್ಲಿ [illegible] ವಾಗಿ [illegible] ಹಾಕಿಸುವುದಕ್ಕೆ ಉಪಕ್ರಮಿಸಿದ್ದಾರೆ

* *

ಹಾಲೆಯವರ [illegible] ಚುಕ್ಕೆಯು ಬೆಳಿಗ್ಗೆ ೪ ರಿಂದ ೫ ರ ವರೆಗೂ ಉದಯ ನಕ್ಷತ್ರದ ಬಲಪಾರ್ಶ್ವದಲ್ಲಿ ಕಂಡಿತೆಂದು ಕೆಲವರು ಹೇಳುತ್ತಿದ್ದಾರೆ

* *

ಇಂಡಿಯಾ ಗವರ್ನಮೆಂಟಿನವರು ಸ್ವದೇಶಿ ಕಾಗದ ಸ್ವದೇಶೀಪೇನಾ, ಸ್ವದೇಶೀಪತ್ರಿಗಳು ಇವುಗಳಿಗೆ ಪ್ರೋತ್ಸಾಹವನ್ನುಂಟು ಮಾಡಬೇಕೆಂದು ಹುಕುಂ ಕೊಟ್ಟಿರುವರು

* *

ಶ್ರೀಮದ್ ಯುವರಾಜರಿಗೆ ಅವರ ವಿವಾಹ ಮಹೋತ್ಸವ ಕಾಲದಲ್ಲಿ ಎಲ್ಲಾ ಪ್ರಜಾವರ್ಗದವರೂ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಬೇಕೆಂದಿರುವುದಾಗಿ ಕೇಳುತ್ತೇವೆ

* *

ಕಳೆದ ಸೋಮವಾರದ ದಿವಸ ದಾವಣಗೆರೆ ತಾಲ್ಲೂಕು ಚಿಕ್ಕಬಾಜೂರು ಬಳಿ ಕುರಿಯನ್ನು ಮೇಯಿಸುತ್ತಿದ್ದ ೧೮ ವರುಷದ ಹುಡುಗನಿಗೆ ಸಿಡಿಲು ಬಡಿದು ಮೃತಪಟ್ಟನು

* *

ರಾಜಧಾನಿಯ ಅಡ್ವೋಕೇಟರೂ ಮತ್ತೂ ನಿಯಮನಿರ್ಮಾಣಸಭಾಸಭ್ಯರರೂ ಆದ ಮೆ॥ ಎಂ ಸಿ ರಂಗಯ್ಯಂಗಾರ್ಯರ ೩ ನೇ ಮಕ್ಕಳು ಸೀಮೆಗೆ ಹೋಗಿ ಬ್ಯಾರಿಸ್ಟರ್ ಪರೀಕ್ಷೆಗೆ ಓದುತ್ತಿರುವರಷ್ಟೆ ಇವರು ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ ಕಾನ್ಸ್ಟಿಟ್ಯೂಷನಲ್ ಲಾ ಮತ್ತೂ ಲೀಗಲ್ ಹಿಸ್ಟರಿ ಎಂಬ ಭಾಗಗಳಲ್ಲಿ ೨ ನೇ ತರಗತಿಯಲ್ಲಿ ಮೊದಲನೆಯವರಾಗಿ ಉತ್ತೀರ್ಣರಾಗಿರುತ್ತಾರೆಂದು ಕೇಳಲು ಹರ್ಷವಾಗುತ್ತದೆ

ಬೆಂಗಳೂರು ಕಂಟೋನ್ಮೆಂಟಿನಲ್ಲಿ ಇನಾಕ್ಯುಲೇಷನ್ ಮಾಡುವುದಕ್ಕೆ ಉಪಕ್ರಮಿಸಿದ್ದಾರೆ ಇನಾಕ್ಯುಲೇಷನ್ ಮಾಡಿಸಿಕೊಳ್ಳತಕ್ಕವರಿಗೆ ತಿಂಡಿತೀರ್ಥಗಳನ್ನು ಕೊಡುತ್ತಾರೆ

ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಸಂಬಂಧವಾಗಿ ನಡೆಯುವ ಕುದುರೆಯ ಪಂದ್ಯವು ಬರುವ ತಾ॥ ೨೯ ೨೫ ಮತ್ತು ೬೦ರಲ್ಲಿ ನಡೆಯುವುದಾಗಿ ಗೊತ್ತಾಗಿರುವುದು

ಬೆಂಗಳೂರು ಪಟ್ಟಣದಲ್ಲಿ ಸಾಕಲ್ಪಡುವ ನಾಯಿಗಳಿಗೆ ವರುಷಕ್ಕೆ ಮೂರು ರೂಪಾಯಿ ಕಂದಾಯವನ್ನು ಹಾಕಬೇಕೆಂದು ಬೆಂಗಳೂರು ಮ್ಯುನಿಸಿಪಲ್ ಬೋರ್ಡಿನವರು ತೀರ್ಮಾನ ಮಾಡಿರುತ್ತಾರೆ

ರಾಜಧಾನಿಯಲ್ಲಿ ಈಗ ನಾಲ್ಕಾರು ದಿನಗಳಿಂದ ಮಳೆಯಾಗುತ್ತಲಿದೆ ಮೊನ್ನೆ ಭಾನುವಾರದ ಸಾಯಂಕಾಲ ಒಂದು ಒಳ್ಳೇ ಹದ ಮಳೆಯು ಆಯಿತು ಆದರೂ ದಾರಣೆವಾಸಿಗಳು ಜಡಾವಾಗಿಯೇ ಇವೆ

...ಗಿರಿ ತಾಲ್ಲೂಕು ಮುದಗೆರೆ ಗ್ರಾಮದ ಪಟೇಲರ ಹೆಂಡತಿಯವರು ತಾರೀಖು ೨೫ ೧೦ ರಲ್ಲಿ ಮೂರು ಗಂಡು ಶಿಶುಗಳನ್ನು ಪ್ರಸವಿಸಿರುತ್ತಾರೆ ಇದು ಒಂದು ಆಶ್ಚರ್ಯವಲ್ಲವೇ ಎಂದು ಒಬ್ಬ ವಾತ್ಮಿದಾರರು ಬರೆಯುತ್ತಾರೆ

ಬೆಂಗಳೂರು ಕಂಟೋನ್ಮೆಂಟು ಸ್ಕೂಲ್ನಲ್ಲಿ ಉಪಾಧ್ಯಾಯರಾಗಿರುವ ಮ॥ ಸಿ ಎನ್ ಸೂರ್ಯನಾರಾಯಣರಾಯರ ಮಗನಾದ ಮ॥ ಎ ಎನ್ ಭಾಸ್ಕರರಾಯರು ಬ್ಯಾರಿಸ್ಟರ್ ಪರೀಕ್ಷೆಗೆ ವ್ಯಾಸಂಗ ಮಾಡುವುದಕ್ಕೋಸ್ಕರ ವಿಲಾಯತಿಗೆ ದಯಮಾಡಿರುತ್ತಾರೆ

ಶಿಂಷಾಪುರದ ಎರ್ನಾಕುಡದೂರಿ ಚರ್ ರಘುನಾಥ ... ಯವರು ... ಸಾವಿರ ರೂ ಗಳ ... ಕಟ್ಟುವ ಸತ್ರಕ್ಕೆ ಶಂಕು ಸ್ಥಾಪನವನ್ನು (...) ಬೆಂಗಳೂರು ... ಸರ್ಕಾರದವರು ... ರುತ್ತಾರೆ

ಮೈಸೂರು ಸಿಟಿ ಮ್ಯುನಿಸಿಪಲ್ ಮೀಟಿಂಗು ಕಳೆದ ತಿಂಗಳು ... ನೇ ತಾರೀಖಿನಲ್ಲಿ ನಡೆಯಿತು ಎಲ್ಲಾ ವಿಷಯಗಳೂ ... ಯುವುದಕ್ಕೆ ಅವಕಾಶವಿಲ್ಲದೆ ಮೀಟಿಂಗು ... ತಾರೀಖಿಗೆ ... ಯಿತು ಈ ವಿಷಯಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸುತ್ತೇವೆ

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸ್ ಗುಮಾಸ್ತೆಯಾದ ... ಎಂಬಾತನು ತಾನು ವಸೂಲು ಮಾಡಿದ ಕಂದಾಯದ ಹಣದಲ್ಲಿ ೬೫೧ ರೂಪಾಯಿಗಳನ್ನು ಉಪಯೋಗಪಡಿಸಿಕೊಂಡುದರಿಂದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತಾನೆ

ಶ್ರೀಮನ್ಮಹಾರಾಜರವರ ... ಮಹೋತ್ಸವಕ್ಕೋಸ್ಕರ ಕರ್ನಾಟಕ ಸಂಗೀತ ವಾದ್ಯಗಳನ್ನು ಕೊಡುವುದಕ್ಕೋಸ್ಕರ ಅರಮನೆ ಬ್ಯಾಂಡ್ ಮಾಸ್ಟರ್ ದರ್ಬಾರ್ ಭಕ್ಷಿಯವರೂ ನಿಯಮಿಸಲ್ಪಟ್ಟಿರುವರು ... ಹಾಸನ ಡಿ॥ ಎಕ್ಸೈಜ್ ಆಫೀಸರ್ ರಂಗರಾಯರು ಸ್ಪೆಷಲ್ ಡ್ಯೂಟಿಗೆ ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ

ಕಳೆದ ತಿಂಗಳು ೨೮ ನೇ ತಾರೀಖಿನಲ್ಲಿ ... ದ ೧॥ ... ದ ಮ॥ ವೀರನಾಯಕರವರು ಅನಾಥ ಬಾಲಿಕಾ ಶ್ರಮದ ಇನ್ಸ್‌ಪೆಕ್ಷನ್‌ಗೋಸ್ಕರ ದಯಮಾಡಿಸಿ ಅಲ್ಲಿನ ವಿದ್ಯಾಭ್ಯಾಸದ ಕ್ರಮವನ್ನು ನೋಡಿದರು ಶ್ರೀಮನ್ಮಹಾರಾಜರವರು ಮೈಸೂರು ಅನಾಥ ಬಾಲಿಕಾಶ್ರಮದ ಖರ್ಚಿಗಾಗಿ ೧,೦೦೦ ರೂಪಾಯಿಯನ್ನು ಕೊಟ್ಟಿರುವರು

ಮೈಸೂರು ಸೀಮೆಯಿಂದ ಇಂಗ್ಲಾಂಡಿಗೆ ವೈದ್ಯವಿದ್ಯಾಭ್ಯಾಸವನ್ನು ಮಾಡಲು ಹೋಗಿರುವ ಅಡ್ವೊಕೇಟ್ ಮೆ॥ ಡಿ ವೆಂಕಟರಾಮಯ್ಯನವರ ... ಮ॥ ಡಿ ವೆಂಕಟಗಿರಯ್ಯನವರಿಗೂ, ಮ॥ ಬಿ ಟಿ ಶ್ರೀನಿವಾಸಾಚಾರ್ ಬಿ ಎ ಯವರಿಗೂ ಒಬ್ಬೊಬ್ಬರಿಗೆ ವರುಷ ೧ಕ್ಕೆ ೨೦೦೦ ರೂ ಗಳ ವೇತನವನ್ನು ಕೊಡಲು ಸರ್ಕಾರದಪ್ಪಣೆಯಾಗಿರುತ್ತದೆ

ಈ ಸಂಸ್ಥಾನದ ಹೈಸ್ಕೂಲುಗಳೆಲ್ಲಾ ಮೇ ೨೩ ನೇ ತಾರೀಖಿನಲ್ಲಿ ತೆರೆಯಲ್ಪಡುವುವು ಕಾಲೇಜುಗಳು ಜೂನ್ ೧ ನೆ ತಾರೀಖಿಗೆ ತೆರೆಯಲ್ಪಡುವುವು ಜೂನ್ ೧೬ ರಿಂದ ಜುಲೈ ೧೬ ವರೆಗೂ ಮೈಸೂರು ರಾಜಧಾನಿಯ ಕಾಲೇಜುಗಳು ಮುಚ್ಚಲ್ಪಡುವುವು ಸಿವಿಲ್ ಕೋರ್ಟುಗಳು ಈ ರಾಜಧಾನಿಯಲ್ಲಿ ಮೇ ೧೯ ರಿಂದ ಜುಲೈ ೧ನೇ ತಾರೀಖು ವರೆಗೂ ಮುಚ್ಚಲ್ಪಡುವುವು

ಈಗ ಕಟ್ಟಲ್ಪಟ್ಟಿರುವ ಹೊಸ ಅರಮನೆಯ ಕಟ್ಟಡಕ್ಕೆ ಶಿಸ್ತಿಭಾರ ಮೊದಲ್ಗೊಂಡು ಮುಕ್ಕಾಲು ಮೂರುವೀಸಪಾಲು ಕೆಲಸವು ಪೂರೈಸುವವರೆಗೂ ಅದರ ಮೇಲ್ವಿಚಾರಣೆಯಲ್ಲಿದ್ದು ಬಹುಶ್ರದ್ಧೆಯಿಂದಲೂ ಸಾಹಸದಿಂದಲೂ ಕೆಲಸವನ್ನು ಮಾಡಿ, ೧॥ ವರ್ಷದ ಹಿಂದೆ ಉದ್ಯೋಗದಿಂದ ನಿವೃತ್ತಿಯನ್ನು ಹೊಂದಿದ ಎಕ್ಸಿಕ್ಯು ಟೀವ್ ಇಂಜಿನೀರ್ ಮ॥ ಬಿ ಪಿ ರಾಘುವಲನಾಯಿಡುಯವರು ಮದರಾಸಿನಲ್ಲಿ ಸ್ವಗೃಹದಲ್ಲಿ ಕಳೆದ ಸೋಮವಾರ ಹೃದಯದ ರಕ್ತಚಲನೆಯು ನಿಂತು ಹೋಗಿ (ಹಾರ್ಟ್ ಡಿಸೀಜಿನಿಂದ) ಕಾಲವಾದರೆಂದು ತಿಳುಹಲು ವಿಷಾದವಾಗುತ್ತದೆ

ಚನ್ನಪಟ್ಟದಲ್ಲಿ ಮೆಂಬರ್ ಮೆ॥ ರಡ್ಡೀ ರಾಮಸಂಜೀವಯ್ಯನವರು ಪ್ರತಿ ನಿತ್ಯವೂ ಬರತಕ್ಕ ಗೋಸಾಯಿಗಳಿಗೆ ಸದಾಭರತ್ ಅಂದರ ಕೀ ಇಸಂ ೧ಕ್ಕೆ ಅರ್ಧ ಸೇರು ಅಕ್ಕಿಯೂ ಮೂರು ಕಾಸೂ ಕೊಡುತ್ತಿದ್ದಾರೆ. ಇವರು ಸ್ವಲ್ಪ ಹಣಗಾರರಾಗಿ ಇಂಥಾ ಧರ್ಮ ಕಾರ್ಯ ನಡಿಸುತ್ತಿರುವುದು ತುಂಬಾ ಸ್ತೋತ್ರಾರ್ಹವಾದುದು ಎಂದು ಒಬ್ಬ ವಾತ್ಮಿದಾರರು ಬರೆದಿರುತ್ತಾರೆ

ಈ ತಿಂಗಳು ೨೫ ನೆಯ ತಾರೀಖಿನ ದಿವಸ ಹರಿಹರದಲ್ಲಿ ವ್ಯವಸಾಯಸಂಬಂಧವಾದ ಪ್ರದರ್ಶನವು ನಡಯಿತು ಪ್ರದರ್ಶನಕ್ಕೆ ಅನೇಕ ಗೋಕಾಯಿಗಳು ಬಂದಿದ್ದುವು ಬೆಳಗಾಂ ಡಿಸ್ಟ್ರಿಕ್ಟಿನ ಹಂಗೋಲೆ ಗ್ರಾಮದ ಗಂಗಯ್ಯನೆಂಬಾತನು ಒಂದು ಭಾರಿ ಎಮ್ಮೆಯನ್ನು ತಂದಿದ್ದನು ಇದು ಒಂದು ಚಿಕ್ಕ ಆನೆಯೋಪಾದಿಯಲ್ಲಿ ಕಾಣುತ್ತಾ ನೋಟಕರಗೆಲ್ಲಾ ವಿಸ್ಮಯವನ್ನುಂಟು ಮಾಡುತ್ತಿಟ್ಟಿತು

ಕಳೆದ ಬುಧವಾರ ಮದ್ದೂರಿನ ಸಮೀಪದಲ್ಲಿ ಕರಯ ಕೋಡಿಯ ನೀರು ಬರುವ ಹಳ್ಳದ ಸೇತುವೆಯ ಸಮೀಪದಲ್ಲಿ ಇಬ್ಬರು ಮಹಮ್ಮದೀಯ ಹುಡುಗರು ಈಜುವುದನ್ನು ಕಲಿಯುತ್ತಿರುವಾಗ್ಗೆ ಒಬ್ಬನು ನೀರಿನೊಳಗೆ ಮುಳುಗಿಹೋಗಲು ಮತ್ತೊಬ್ಬನು ಕೂಡಲೇ ಅವನನ್ನು ಹಿಡಿದುಕೊಳ್ಳುವುದಕ್ಕೆ ಹೋದಾಗ ಮುಳುಗಿಹೋದವನು ಇವನನ್ನು ಬಾಚಿ ತಪ್ಪಿಕೊಂಡನು ಇದರಿಂದ ಇಬ್ಬರೂ ನೀರಿನೊಳಗೆ ಮುಳುಗಿ ಸತ್ತು ಹೋದರು

ಮೈಸೂರು ಸಿಟಿ ಕ್ರಿಕೆಟ್ ಕ್ಲಬ್ಬಿನವರು ... ಯಲ್ಲಿರುವ ... ಟೀಮಿನವರೊಡನೆ ಕ್ರಿಕೆಟ್ ಆಡುವುದಕ್ಕೆ ಒಪ್ಪಿಕೊಂಡಿರುತ್ತಾರೆ ಮೇ ೧೧, ೧೨ ನೇ ತಾರೀಖುಗಳಲ್ಲಿ ಈ ಆಟವು ನಡಯಬೇಕಾಗಿರುವುದು ಮೈಸೂರು ಸಿಟಿ ಕ್ಲಬ್ ಪಕ್ಷವಾಗಿ ನಮ್ಮ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗಳಾದ ಮ॥ ಆರ್ ಹೆಚ್ ಕ್ಯಾಂಬೆಲ್ ರವರೂ ಮತ್ತು ಮಹಾರಾಜರ ಕಾಲೇಜು ಇಂಗ್ಲೀಷ್ ಪ್ರೊಫೆಸರಾದ ಮ॥ ಮೆಕ್ಕೋಂಬರವರೂ ಆಡುವರೆಂದು ತಿಳಿಯಬರುತ್ತದೆ

ಏಪ್ರಿಲ್ ತಾರೀಖು ೨೮ ನೇ ಗುರುವಾರ ಸಾಯಂಕಾಲ ಸುಮಾರು ೭ ಗಂಟೆ ಸಮಯದಲ್ಲಿ ತುಮಕೂರು ಲೈನ್‌ನಲ್ಲಿ ಅರಸೀಕೆರೆಯಿಂದ ಬೆಂಗಳೂರಿಗೆ ಪ್ಯಾಸಂಜರ್ ಟ್ರೈನ್ ಬರುವಾಗ ತಿಪಟೂರಿಗೂ ಕರಡಿಗೂ ಮಧ್ಯದಲ್ಲಿ ಲೈನ್ ಮೇಲೆ ೮ ೯ ದನಗಳು ನಿಂತಿದ್ದವಂತಲೂ ಡ್ರೈವರ್ ಎಷ್ಟು ಪ್ರಯತ್ನ ಮಾಡಿದಾಗ್ಯೂ ಒಂದು ಹಸುವಿನ ಕರುವು ಹೋಗದ ಅಲ್ಲಿಯೇ ನಿಂತಿತ್ತೆಂತಲೂ ಅದರ ಮೇಲೆ ಟ್ರೈನ್ ಹರಿದು ಎರಡು ತುಂಡಾಗಿ ಸತ್ತಿತೆಂತಲೂ ಕೂಡಲೇ ಟ್ರೈನ್ ನಿಲ್ಲಿಸಿ ಸತ್ತ ಕರುವಿನ ಶವವನ್ನು ಲೈನಿನಿಂದ ಹೊರಗೆಗೆ ತಗದುಹಾಕಿದರಂತಲೂ ರೈಲ್ವೇ ರೋಡಿನಲ್ಲಿ ಈ ರೀತಿ ಪ್ರಾಣಿಗಳನ್ನು ನೋಡಿಕೊಳ್ಳುವುದು ತಪ್ಪೆಂತಲೂ ನಮ್ಮ ವಾತ್ಮಿದಾರರೊಬ್ಬರು ಬರೆದಿರುತ್ತಾರೆ

ಮೆಡಿಕಲ್ ಡಿಪಾರ್ಟ್‌ಮೆಂಟಿಗೆ ಸೇರಿದ ಆಫೀಸರುಗಳು ಪ್ರೈವೇಟ್ ಪ್ರಾಕ್ಟೀಸನ್ನು ಮಾಡಿಕೊಳ್ಳ... ಬಹುದಾಗಿಯೂ ... ಎಕ್ಸ್‌ಕ್ಯೂಟಿವ್ ... ಮೆಡಿಕಲ್ ಆಫೀಸರ್ ... ಹೆಲ್ತ್ ಆಫೀಸರುಗಳೂ, ಮೈ ಸ್ಯಾನಿಟರಿ ಕಮಿಷನರವರೂ ಇವರುಗಳು ಪ್ರೈವೇಟ್ ಪ್ರಾಕ್ಟೀಸನ್ನು ಮಾಡಕೂಡದೆಂದು ಏರ್ಪಡಿಸಲ್ಪಟ್ಟಿದಾರೆ ಆದರ ಈ ಇಬ್ಬರು ಅಧಿಕಾರಿಗಳಿಗೂ ಕನ್ಸಲ್ಟೇಷನ್ ಅಂದರ ಅಭಿಪ್ರಾಯವನ್ನು ಕೊಡತಕ್ಕ ಅಧಿಕಾರಕ್ಕೆ ಯಾವ ಪ್ರತಿ ಬಂಧಕವನ್ನೂ ಮಾಡಿಲ್ಲ ಸರಕಾರದ ಉದ್ಯೋಗಸ್ಥರಿಗೆ ಇವರು ಚಿಕಿತ್ಸೆಯನ್ನು ಮಾಡಿದರ ಅದಕ್ಕೆ ರುಸುಮನ್ನು ತಗದುಕೊಳ್ಳಕೂಡದು ಅಂಥಾ ಅಧಿಕಾರಿಗಳ ಕುಟುಂಬದಲ್ಲಿ ಯಾರಿಗಾದರೂ ಚಿಕಿತ್ಸೆಯನ್ನು ಮಾಡಿದರೆ ಕೆಲವರಿಂದ ರುಸುಮನ್ನು ತಗೆದುಕೊಳ್ಳಬಹುದು ತಾವು ಕೊಡತಕ್ಕ ಪ್ರಿಸ್ಕ್ರಿಪ್ಷನ್‌ಗಳಿಗೆ ಪ್ರೈವೇಟ್ ಫರ್ಮ್‌ಗಳಿಂದ ಕಮಿಷನನ್ನು ಹೊಂದಕೂಡದು ಮೆಡಿಕಲ್ ಆಫೀಸರುಗಳು ತಮಗೆ ಬರಬೇಕಾದ ರುಸುಂ ವಿಷಯದಲ್ಲಿ ದಾವಾ ಹೂಡಬೇಕಾದರೆ ಸೀನಿಯರ್ ಸರ್ಜನ್ ರವರ ಅಪ್ಪಣೆಯನ್ನು ಪಡೆದು ಮಾಡಬೇಕು

ಮೈಸೂರು ಗೆಜಿಟ್ ಸಂಗ್ರಹ

ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೭ ನೆಯ ಆರ್ಟಿಕಲನ್ನು ಅನುಸರಿಸಿ ಚಿತ್ರದುರ್ಗದ ಡಿಸ್ಟ್ರಿಕ್ಟು ಪಾಠಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರಾದ ಮೆ॥ ಎಂ ಕೆ ತಿರುಮಲಾಚಾರ್ಯರ ಬಿ ಎ ಯವರಿಗೆ ಮೇ ಗುರ್ರೇ ಲಾಗಾಯತು ೧೫ ದಿವಸಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ

ಮೇಲಿನ ರೆಗ್ಯುಲೇಷನ್ ಅನುಸರಿಸಿ ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಸೂಪರಿಂಟೆಂಡಾದ ಮೆ॥ ಎಸ್ ಎಂ ಪ್ರಿಚರ್ಡ್ ಸಾಹೇಬರಿಗೆ ಬದಲಿಯವರು ಬಂದನಂತರ ಮೇ ತಾ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೆ॥ ಪ್ರಿಚರ್ಡ್ ಸಾಹೇಬರು ಕೆಲಸದ ಮೇಲೆ ಹಾಜರಾಗುವ ವರೆಗೂ ಅಥವಾ ಮತ್ತೊಂದು ಹುಕ್ಕುಂ ಕೊಡಲ್ಪಡುವ ತನಕ ಕೋಲಾರ್ ಡಿ॥ ಅ॥ ಕಮಿಷನರ್ ಮೆ॥ ಡಿ ಶ್ರೀನಿವಾಸಯ್ಯಂಗಾರ್ಯರವರು ಕೋಲಾರ್ ಚಿನ್ನದ ಗಣಿಗಳಲ್ಲಿ ಪೋಲೀಸ್ ಸೂಪರಿಂಟೆಂಡರಾಗಿರತಕ್ಕದ್ದು

ಕಡೂರ್ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಆಕ್ಟಿಂಗ್ ಅ॥ ಕ॥ ಮೆ॥ ಎಂ ಕೃಷ್ಣಸ್ವಾಮಿ ಐಯಂಗಾರ್ ಬಿ. ಎ. ಯವರಿಗೆ ಏಪ್ರಿಲ್ ತಾ ೨೮ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧೫ ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೆ॥ ಎಂ ಕೃಷ್ಣಸ್ವಾಮಿ ಐಯಂಗಾರ್ಯರವರು ರಜಾದ ಮೇಲಿರುವ ವರೆಗೂ ಅಥವಾ ಮತ್ತೊಂದು ಹುಕ್ಕುಂ ಕೊಡುವ ತನಕ ಕಡೂರ್ ಡಿ॥ ಟ್ರೆಜರಿ ಛಾರ್ಜನ್ನು ವಹಿಸಿರುವ ಆಕ್ಟಿಂಗ್ ಅ॥ ಕಮಿಷನರ್ ಮೆ॥ ಎಸ್ ಚಕ್ರಪಾಣಿ ಅಯ್ಯಂಗಾರ್ ಬಿ ಎ , ಬಿ ಎಲ್ ಯವರು ತಮ್ಮ ಕೆಲಸಗಳೊಂದಿಗೆ ಕಡೂರ್ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿಕೊಳ್ಳುವರು

ಮೈಸೂರ್ ಸರ್ವಿಸ್ ರೆಗ್ಯುಲೇಷನ್ನನುಸರಿಸಿ ಕಡೂರ್ ಡಿ॥ ಡೆಪ್ಯುಟಿ ಕಮಿಷನರ್ ಮೆ॥ ಕೆ ಆರ್ ಶ್ರೀನಿವಾಸಯ್ಯಂಗಾರ್ ಎಂ ಎ ಯವರು ಮೇ ತಾ ೧೦ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಪ್ರಿವಿಲೆಜ್ ರಜಾ ಕೊಟ್ಟಿದೆ

ಕೋಲಾರ್ ಡಿ॥ ಎಕ್ಸೈಸ್ ಆಫಿಸರ್ ಮೆ॥ ಎ ಕೆ ಸೈಯದ್ ಶಾಜ್ ಪೀರನ್ ಸಾಹೇಬರಿಗೆ ಕೊಡಲ್ಪಟ್ಟ ೯ ದಿವಸಗಳ ಪ್ರಿವಿಲೆಜ್ ರಜವನ್ನು ಇನ್ನು ೩ ದಿವಸಗಳು ಜಾಸ್ತಿ ಮಾಡಿದೆ

ಮೈಸೂರ್ ಸರ್ವಿಸ್ ರೆಗ್ಯುಲೇಷನ್ನನುಸರಿಸಿ ಎಕ್ಸೈಸ್ ಇಲಾಖೆಯ ಅ॥ ಕಮಿಷನರ್ ಮೆ॥ ಬಿ ಶಿವಮಣ್ಣ ಬಿ ಎ , ಎಲ್ ಸಿ ಇ ಯವರಿಗೆ ಮೇ ಗುರ್ರೇ ಲಾಗಾಯ್ತು ೨ ತಿಂಗಳು ೨೩ ದಿವಸ ಪ್ರಿವಿಲೆಜ್ ರಜಾ ಕೊಟ್ಟಿದೆ

ಸಾಗರ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಬಿ ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ

ಶಿವಮೊಗ್ಗ ಡಿ॥ ಕೋರ್ಟಿನ ಹೆಡ್ ಮುನ್ಸಿಯವರಾದ ಮೆ॥ ಇ ಹೆಚ್ ಥಾಂಸನ್ ಸಾಹೇಬರು ಮೆ॥ ಬಿ ಕೃಷ್ಣರಾಯರು ರಜಾದ ಮೇಲಿರುವ ವರೆಗೂ ಅಥವಾ ಮತ್ತೊಂದು ಹುಕ್ಕುಂ ಕೊಡಲ್ಪಡುವ ತನಕ ಸಾಗರದ ತಾಲ್ಲೂಕ್ ಅಮಲ್ದಾರರಾಗಿಯೂ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಇರತಕ್ಕದ್ದು

ಮೆ॥ ಎಂ ರಂಗರಾವ್ ಬಿ ಎ ಯವರು ಸ್ಪೆಷಲ್ ಡ್ಯೂಟಿ ಮೇಲೆ ಅರಮನೆಯಲ್ಲಿರುವ ತನಕ ಅರಸಿಕೆರೆ ಅಮಲ್ದಾರರಾದ ಮೆ॥ ಸಿ ಆರ್ ನಾರಾಯಣಸ್ವಾಮಿ ಮೊದಲಿಯಾರ್ಯರವರು ಹಾಸನದ ಡಿ॥ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ಕೂಡಲೇ ಛಾರ್ಜನ್ನು ವಹಿಸತಕ್ಕದ್ದು

ಕೆಳಗೆ ನಮೂದಾಗುವ ಆಫೀಸರುಗಳು ಶ್ರೀಮನ್ ಯುವರಾಜರ ವಿವಾಹ ಸಂಬಂಧವಾದ ಕಾರ್ಯಗಳಲ್ಲಿ ಸ್ಪೆಷಲ್ ಡ್ಯೂಟಿ ಮೇಲೆ ನೇಮಕವಾಡಲ್ಪಟ್ಟಿದ್ದಾರೆ —

೧ ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾದ ಮೆ॥ ಎಂ ರಂಗರಾವ್ ಬಿ ಎ ಯವರು

೨ ನಂಜನಗೂಡು ತಾಲ್ಲೂಕು ಆಕ್ಟಿಂಗ್ ಅಮಲ್ದಾರರಾದ, ಪ್ರಿವಿಲೆಜ್ ರಜಾದಿಂದ ವಾಪಸು ಕರೆಸಿಕೊಳ್ಳಲ್ಪಟ್ಟ ಎಸ್ ಧರ್ಮರಾಯರು

ಬೆಂಗಳೂರು ಡಿವಿಜನ್‌ಗೆ ಸೇರಿದ ಅ॥ ಇಂಜನಿಯರ್ ಮೆ॥ ಕೆ ಅನಂತಾಚಾರ್ ಎಲ್ ಸಿ ಇ ಯವರನ್ನು ತುಮಕೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರಾಗಿ ಕೆಲಸಮಾಡಲು ನೇಮಕಮಾಡಿದೆ

ಸಬ್ ಅಸಿಸ್ಟೆಂಟ್ ಇಂಜನಿಯರ್ ಮೆ॥ ಎನ್ ಅನಂದಾಳ್ವಾರ್ ಬಿ ಎ ಯವರು ನಾಲಾ ಕನ್ಸರ್ವೆನ್ಸಿ ಡಿವಿಜನ್ನಿಂದ ಅರಮನೆ ಡಿವಿಜನ್‌ಗೆ ವರ್ಗಾಯಿಸಲ್ಪಟ್ಟಿದ್ದಾರೆ

ತಾಲ್ಲೂಕು ವರ್ತಮಾನ

ಚಿಂತಾಮಣಿ — ಹಾಲಿ ಚಿಂತಾಮಣಿ ಟೌನ್‌ನಲ್ಲಿ ನಲ್ಲಿಗಳಿಗೆ ಏಲಕನಂಕುಂಟೆಯಿಂದ ನೀರು ಸಪ್ಲೈ ಆಗುತ್ತಿರುವದು ಸರಿಯಷ್ಟೆ ಸದರಿ ಕೆರೆಯಲ್ಲಿ ನೀರು ಬಿಸಿಲಿನ ವೆಸೆಯಿಂದ ಕಮ್ಮಿಯಾಗುತ್ತ ಬಂದಿದೆ, ಕ್ರಮೇಣ ದಪ್ಪನಾದ ಗಲೀಜು ನೀರು ಬರುವುದರಲ್ಲಿ ಸಂದೇಹವಿಲ್ಲಾ ಅಂಥ ನೀರನ್ನು ಸ್ನಾನಪಾನಾದಿಗಳಿಗೆ ಉಪಯೋಗಿಸಿದಲ್ಲಿ ಸಾಂಕ್ರಾಮಿಕ ಜಾಡ್ಯಗಳು ಸಂಭವಿಸುತ್ತವೆ ಅಂಥವುಗಳಿಗೆ ಆಸ್ಪದ ಕೊಡದಂತೆ ಮುನಿಸಿಪಾಲಿಟಿ ಹಣದಿಂದ ಫಿಲ್ಟರ್ ಎಂಬ ಶೋಧಿಸುವ ಯಂತ್ರದಿಂದ ನೀರನ್ನು ಶೋಧಿಸುವದಕ್ಕೆ ದಯಾಳುವಾದ ಗೌರ್ನಮೆಂಟಿನವರು ಏರ್ಪಾಡು ಮಾಡಿಸಬೇಕೆಂದು ಪ್ರಾರ್ಥನೆ ಇದೇ ವಿಚಾರದಲ್ಲಿ ಚಿಂತಾಮಣಿ ಟೌನ್ ಮುನಿಸಿಪಾಲಿಟಿ ಮೆಂಬರುಗಳೂ ಸಹ ಮೀಟಿಂಗುಗಳಲ್ಲಿ ಈ ವಿಷಯವನ್ನು ಚರ್ಚೆಗೆ ತಂದು ಟೌನ್ ನಿವಾಸಿಗಳ ಮೇಲೆ ದೃಷ್ಟಿ ಇಟ್ಟು ಈ ರೀತಿ ಅನುಕೂಲ ಪಡಿಸಬೇಕಾಗಿ ಪ್ರಾರ್ಥಿಸುತ್ತೇನೆ

ಗತಿಸಿದ ಮೆ॥ ರಾಘವಲು ನಾಯುಡುಯವರು.

ನಮ್ಮ ಮೈಸೂರು ಸರ್ಕಾರದಲ್ಲಿ ಕಳೆದ ಮೂವತ್ತು ವರ್ಷಗಳಿಂದಲೂ ಮರಾಮತ್ತು ಇಲಾಖೆಯಲ್ಲಿ ಕೆಲಸ ಮಾಡಿ ಎಕ್ಸಿಕ್ಯೂಟಿವ್ ಇಂಜನಿಯರವರ ಪದವಿಯನ್ನು ಅಲಂಕರಿಸಿದ್ದು ಕಳೆದ ವರ್ಷ ಕೆಲಸದಿಂದ ನಿವೃತ್ತರಾದ ಮೆ॥ ಬಿ ಪಿ ರಾಘವಲುನಾಯುಡುಯವರು ಏಪ್ರಿಲ್ ತಿಂಗಳು ೨೫ ನೇ ತಾರೀಖಿನ ದಿವಸ ಮದರಾಸು ಪಟ್ಟಣದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಕಟ್ಟಡಗಳನ್ನು ಅಂದವಾಗಿ ಕಟ್ಟುವುದರಲ್ಲಿ ಬಹು ಸಮರ್ಥರೆಂದು ಹೆಸರುಗೊಂಡಿದ್ದರು ಸೊಗಸಾದ ಪ್ಲಾನುಗಳನ್ನು ಬರಯುವುದರಲ್ಲಿ ಕೇವಲ ನಿಪುಣರಾಗಿದ್ದರು ಮೈಸೂರು ಪಟ್ಟಣದಲ್ಲಿ ಈಗ ಹೊಸದಾಗಿ ಕಟ್ಟಲ್ಪಡುತ್ತಿರುವ ಅರಮನೆಯಲ್ಲಿ ನಮೂನೆಯ ಕೆಲಸಗಳು ಇವರ ಸೂಚನೆಯ ಪ್ರಕಾರ ಮಾಡಲ್ಪಟ್ಟಿರುವವು ಜಗನ್ಮೋಹನ ಬಂಗಲೆಯಲ್ಲಿ ಕಟ್ಟಲ್ಪಟ್ಟಿರುವ ವಿವಾಹ ಮಂಟಪವು ಇವರಿಂದ ರಚಿಸಲ್ಪಟ್ಟದು ನಮ್ಮ ಶ್ರೀಮನ್ಮಹಾರಾಜರವರು ಇವರ ಬುದ್ಧಿ ಕುಶಲತೆಗೆ ಮೆಚ್ಚಿ ತಮ್ಮ ಸಂತೋಷವನ್ನು ಅನೇಕ ಬಹುಮಾನಗಳನ್ನು ಕೊಟ್ಟು ತೋರ್ಪಡಿಸಿದರು ಇವರು ಮೊದಲು ಅಸಿಸ್ಟೆಂಟ್ ಇಂಜನಿಯರಾಗಿ ಸರ್ಕಾರದಲ್ಲಿ ಸೇರಿ ಬುದ್ಧಿ ನಿಪುಣತೆಯಿಂದಲೂ, ಸಾಹಸದಿಂದಲೂ ಕೆಲಸ ಮಾಡಿ ಕ್ರಮೇಣ ವೃದ್ಧಿಗೆ ಬಂದು ಎಕ್ಸಿಕ್ಯೂಟಿವ್ ಇಂಜನಿಯರಾಗಿ ಕಳೆದ ವರ್ಷ ಪೆನ್ಷನ್ ಪಡೆದು ಮದರಾಸಿನಲ್ಲಿ ವಾಸಮಾಡುತ್ತಿದ್ದರು ಇವರು ಸುಂದರವಾದ ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ಸಮರ್ಥರೆಂದುತಿಳಿದು ಸದರನ್ ಮಹಾರಾಷ್ಟ್ರ ಕಂಪೆನಿಯವರು ತಮ್ಮ ಕಂಪೆನಿಯಲ್ಲಿ ಆರ್ಕಿಟೆಕ್ಟ್ (ಕಟ್ಟಡಗಳ ನಮೂನೆಗಳನ್ನು ತಯಾರು ಮಾಡುವವರನ್ನಾಗಿ, ನೇಮಿಸಿಕೊಂಡಿದ್ದರು ಇವರು ಪೆನ್ಷನ್ ಪಡೆದ ಮೇಲೆ ಮದರಾಸಿನಲ್ಲಿ ವಾಸವಾಗಿದ್ದು ಅಲ್ಲಿರುವ ಶ್ರೀ ರಾಮಕೃಷ್ಣ ಬಾಲಿಕಾ ಪಾಠಶಾಲೆಯ ಡೈರೆಕ್ಟರು ಪದವಿಯನ್ನು ಪಡೆದುಕೊಂಡು ಹಿಂದೂ ಬಾಲಕಿಯರಿಗೆ ವಿದ್ಯೆಯು ಲಭಿಸಿ ಅವರು ಅಭಿವೃದ್ಧಿಗೆ ಬರುವ ಕಾರ್ಯದಲ್ಲಿ ತುಂಬಾ ಶ್ರದ್ಧೆಯುಳ್ಳವರಾಗಿದ್ದರು ಇವರು ನಾಯುಡು ಜನರ ಅಭಿವೃದ್ಧಿಗೋಸ್ಕರ ಒಂದು ಸಂಘವನ್ನು ಏರ್ಪಡಿಸಬೇಕೆಂದು ಪ್ರಯತ್ನಪಡುತ್ತಿದ್ದರು ಇವರಿಗೆ ಇಬ್ಬರು ಗಂಡುಮಕ್ಕಳಿರುವರು ಇವರಲ್ಲೊಬ್ಬರು ಮೈಸೂರು ಸರ್ಕಾರದಿಂದ ವೇತನವನ್ನು ಪಡೆದು ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರು ಪರೀಕ್ಷೆಗೆ ಓದುತ್ತಿದಾರೆ ಇವರು ಇಷ್ಟು ಶೀಘ್ರವಾಗಿ ಅಸ್ತಮಿಸುತ್ತಿದ್ದುದಕ್ಕೆ ಗುರಿಯಾದುದು ಬಹಳ ಶೋಚನೀಯವಾಗಿರುತ್ತದೆ

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಜಾಗ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್

ಸುಳ್ಳು ಬಾತ್ಮಿ

ಅಯ್ಯಾ,

ತಮ್ಮ ಇದೇ ಮಾಹೆ ೭ನೇ ತಾರೀಖು ಪತ್ರಿಕೆಯಲ್ಲಿ ಇದೇ ಕಾನಕಾನಹಳ್ಳಿ ತಾಲ್ಲೂಕು ಮರಲವಾಡಿಯಲ್ಲಿ ಕಳೆದ ಕಾಮನ ಹಬ್ಬದಲ್ಲಿ ನೂರಾರು ಜನರಿಗೆ ಸಿದ್ಧವಾಗಿದ್ದ ಊಟ ಇದೇ ಊರು ವೀರಭದ್ರಯ್ಯನವರ ಮಗ ನಂಜುಂಡಪ್ಪ ಎಂಬುವವನು ಹುಲಿವೇಷ ಹಾಕಿದ್ದಕ್ಕೆ ಮುಸಲ್ಮಾನರು ಗಲಾಟೆ ಮಾಡಿದ್ದರಿಂದ ಹೋಟಲಿನವರೆಲ್ಲರೂ ಊಟ ಸಹ ಮಾಡದೆ ಹೊರಟುಹೋದ್ದರಿಂದ ತುಂಬಾ ನಷ್ಟವುಂಟಾಯಿತೆಂಬುವ ಬಾತ್ಮಿಯನ್ನು ನೋಡಿ ತುಂಬಾ ಆಶ್ಚರ್ಯಪಡಬೇಕಾಗಿದೆ ಆ ದಿನ ಇಲ್ಲಿ ತಯಾರಾಗಿದ್ದ ಊಟ ಮನೆ ಮನೆಗೂ ರಾಗಿ ಎತ್ತಿದ ಹಿಟ್ಟು ಮತ್ತು ಅವರೆಕಾಳು ಹಲಸಿನಕಾಯಿ ಸಾರು ಆಗಿತ್ತು ಮಾತ್ರವಲ್ಲದೆ ಆ ಊಟವು ರಾತ್ರಿ ೯ ೧೦ ಘಂಟೆಗೆ ಬಡಿಸಲ್ಪಡುವುದಾಗಿತ್ತು ಸಾಧಾರಣವಾಗಿ ತಮಾಷೆ ನೋಡಬರತಕ್ಕವರು ಪುಣ್ಯವಂತರೇ ಹೊರತು ಬಡವರು ಅಲ್ಲ ಸ್ವಲ್ಪ ತಮಾಷೆನಂತರ ಪುಣ್ಯವಂತರೂ ಮತ್ತು ದೂರದ ಹಳ್ಳಿಗಳವರೂ ಹೊರಟುಹೋದರು ಉಳಿದ ಬಡವರು ಮಾತ್ರ ಊಟಕ್ಕೆ ಕಾದಿದ್ದರು ಕಡೆಯಲ್ಲಿ ಅನೇಕ ಬಡ ಹೊಟ್ಟೆ ಮಾದಿಗರಿಗೆ ಹಿಟ್ಟು ಸಾಲದೆ ಸಿಟ್ಟಿನಿಂದ ಗೊಣಗಿಕೊಂಡು ಹೊರಟುಹೋದರು ಆ ದಿನ ತಾಲ್ಲೂಕು ಪೋಲೀಸು ಇನ್‌ಸ್ಪೆಕ್ಟರ್‌ರವರು ಜಮಾದಾರರು ಇತರ ಪೋಲೀಸು ಸಿಬ್ಬಂದಿಯೊಡನೆ ಇಲ್ಲಿ ಹಾಜರಿದ್ದರು ಮೇಲ್ಕಂಡ ಹುಲಿ ವೇಷ ಹೊರಟಾಗ ಮುಸಲ್ಮಾನರು ಪೋಲೀಸಿಗೆ ರಿಪೋರ್ಟು ಕೊಟ್ಟರೇ ಹೊರತು ಯಾವ ವಿಧವಾದ ಗಲಾಟೆ ಮಾಡಲಿಲ್ಲ ಗಲಾಟೆಯಿಂದ ಜನರು ಹೊರಟುಹೋದರೆಂಬುವ ಮಾತು ಶುದ್ಧ ಸುಳ್ಳಾಗಿದೆ ಇಲ್ಲಿನ ಸ್ಕೂಲಿನಲ್ಲಿ ಅನೇಕ ವರ್ಷಗಳಿಂದ ಒಬ್ಬರೇ ಉಪಾಧ್ಯಾಯರಿರುತ್ತಾರೆಂತಲೂ ಒಬ್ಬರಿಬ್ಬರು ಸಹಾ ಪಾಸಾಗಲಿಲ್ಲವೆಂದು ಬರೆದಿರುತ್ತಾರೆ ಇಲ್ಲಿಗೆ ಸ್ಕೂಲು ಇನ್‌ಸ್ಪೆಕ್ಟರುಗಳು ಬಂದು ಒಂದು ಒಳ್ಳೆ ಕಟ್ಟಡ ಕಟ್ಟಿಸಿಕೊಟ್ಟರೆ ಇನ್ನೂ ಮೇಷ್ಟರುಗಳನ್ನು ಜಾಸ್ತಿಮಾಡಿ ಹೆಚ್ಚು ಪ್ರೋತ್ಸಾಹ ಕೊಡುವುದಾಗಿ ಹೇಳಿದರು ಅನೇಕ ದೊಡ್ಡ ಮನುಷ್ಯರು ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿ ಪುನಃ ಗಮನಕ್ಕೆ ತೆಗೆದುಕೊಳ್ಳದೆ ಬೇಕೋಬಿಟ್ಟಿಯಾಗಿರುತ್ತಾರೆ ಮತ್ತು ಸ್ಕೂಲು ಮೆಂಬರುಗಳು ಒಗ್ಗಟ್ಟಾಗಿಲ್ಲ ಶಾಲೆ ಗೌರ್ನಮೆಂಟ್ ಸ್ಕೂಲು ಶಿಳ್ಳ್ಯಾರಿ ಗುಡಿಯಲ್ಲಿರುತ್ತದೆ ಇವರಿಗೆ ವಿದ್ಯಾಭ್ಯಾಸ ಅವಶ್ಯವಾಗಿದ್ದರೆ ಈ ರೀತಿ ಎಂದಿಗೂ ಉದಾಸೀನವಾಗಿರಲಾರರೆಂಬುವುದು ವಾಚಕರೇ ಊಹಿಸಬಹುದು ಹೀಗಿರುವಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ಉದಾಸೀನವಾಗಿರುತ್ತಾರೆಂದು ಸರ್ಕಾರಿ ನೌಕರರ ಮೇಲೆ ಸುಳ್ಳು ಅಪವಾದ ಹುಟ್ಟಿಸಿ ದೂಷಿಸುವುದು ಯಾವ ಧರ್ಮ ಇಂಥಾ ಸುಳ್ಳು ಬಾತ್ಮಿಗಳನ್ನು ಇನ್ನು ಮುಂದಕ್ಕೆ ಆ ಬಾತ್ಮಿದಾರರು ಕೊಡಲಾರರೆಂದು ನಂಬಿರುತ್ತೇನೆ

ಚಂದಾದಾರ್

ಸ್ತ್ರೀ ವಿದ್ಯಾಭ್ಯಾಸ

ಅಯ್ಯಾ

ಸ್ತ್ರೀ ವಿದ್ಯಾಭ್ಯಾಸಕ್ಕೆ ಭರತಖಂಡದಲ್ಲಿ ನಮ್ಮ ಮೈಸೂರು ದೇಶವೇ ಹೆಚ್ಚು ಶ್ಲಾಘನೀಯವಾದದ್ದಾಗಿದೆ ಅಂದರೆ ಪ್ರತಿ ವರುಷವೂ ನಮ್ಮ ಹೆಣ್ಣು ಮಕ್ಕಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅವರವರೇ ಸಂಘಗಳನ್ನ ಮಾಡಿಕೊಂಡು ಲೋಕವ್ಯವಹಾರಗಳನ್ನು ಕುರಿತು ಮಾತನಾಡಿಕೊಳ್ಳುತ್ತಿರತಕ್ಕ ಪ್ರ... ವಗೈರಾ ನ್ಯೂಸ್ ಪೇಪರುಗಳಲ್ಲಿ ಪಬ್ಲಿಷ್ ಆಗುತ್ತಿರತಕ್ಕದ್ದು, ಇವುಗಳನ್ನು ಓದಿ ಎಲ್ಲಾ ಪ್ರಜೆಗಳೂ ಸಂತೋಷವುಳ್ಳವರಾಗಿ ಇದ್ದಾರೆ ನಡವಳಿಕೆಯಿಂದ ನಮ್ಮವರ ವಿದ್ಯೆಯ ಅನುಭವ ಪರೀಕ್ಷಿಸಿದರೆ ವಿದ್ಯಾವಂತರಾದ ಗಂಡ ಹುಡುಗರಿಗಿಂತಲೂ ಹೆಣ್ಣುಮಕ್ಕಳ ವಿದ್ಯೆಯ ಫಲ ಜಗತ್ತಿಗೆ ಉಪಯೋಗವಾದೀತೆಂತ ತೋರುತ್ತದೆ ಕಾರಣವೇನೆಂದರೆ ವಿದ್ಯೆ ಎಂಬುವುದರ ಅರ್ಥ ಸರ್ವಸಮ್ಮತವಾದ ಜ್ಞಾನವೆಂಬ ಎಲ್ಲರಿಗೂ ತಿಳಿದದ್ದಾಗಿಯೇ ಇದೆ ಮೌಢ್ಯ ನಡವಳಿಕೆಯಿಂದ ತುಂಬಿರತಕ್ಕ ನಮ್ಮ ದೇಶದಲ್ಲಿ ವಿದ್ಯಾಭಿವೃದ್ಧಿ ಆದರೆ ನಮ್ಮ ಹಿಂದುಗಳನ್ನು ಇತರರಲ್ಲಿ ಸ್ವಲ್ಪ ಕೆಡಿಸುತ್ತಿರತಕ್ಕ ಮೌಢ್ಯ ಆಚಾರಗಳು, ಮತಸಂಬಂಧವಾದ ಅಸೂಯೆ ಅದರಿಂದ ಪ್ರಜೆಗಳಿಗೂ, ಗೌರ್ನಮೆಂಟಿಗೂ, ಸಂಭವಿಸುತ್ತಿರತಕ್ಕ ತೊಂದರೆ ಇವುಗಳೆಲ್ಲಾ ನಿರ್ನಾಮವಾಗುತ್ತೆಂಬ ಇರಾದೆಯಿಂದಲೇ ನಮ್ಮ ಗೌರ್ನಮೆಂಟಿನವರು ವಿದ್ಯೆಕ್ಕಾಗಿಯೇ ವಿಶೇಷ ಹಣ ಖರ್ಚುಮಾಡಿರತಕ್ಕದ್ದು ಗೌವರ್ನಮೆಂಟಿನ ಸದುದ್ದೇಶ ಈ ಕೆಳಗಿನ ಅನುಭವದಿಂದ ಹೆಂಗಸರಿಂದಲೇ ಸಾರ್ಥಕವಾದೀತಾಗಿ ತೋರುತ್ತದೆ

೧ ಬೆಂಗಳೂರು ಶ್ರೀನಿವಾಸಮಂದಿರದಲ್ಲಿ ನಡೆಯತಕ್ಕ ಆರ್ಯ ಮಹಿಳೆಯರ ಸಮಾಜದಲ್ಲಿ ಈಗ್ಗೆ ಕೆಲವು ದಿವಸದ ಕೆಳಗೆ ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ ಸುಪ್ರಸಿದ್ಧ ಮೆ॥ ಕೆ ಎಚ್. ರಾಮಯ್ಯ ಬಿ ಎ ಯವರ ಸಹೋದರಿ ಶ್ರೀಮತಿ ಮಹಲಕ್ಷ್ಮಿ ಅಮ್ಮಣ್ಣಿಯವರು ತಾವು ಮಾಡಿದ ತೀರ್ಥಾದಿ ಪುಣ್ಯಸ್ಥಳಗಳ ದರ್ಶನ ಇತ್ಯಾದಿಗಳನ್ನು ಕುರಿತು ಉಪನ್ಯಾಸ ಮಾಡಿರತಕ್ಕದ್ದರಲ್ಲಿ, ಆ ಸ್ಥಳಗಳಲ್ಲಿ ಕಾಣತಕ್ಕ ವಿಶೇಷಗಳು ಅಲ್ಲೀ ಜನಗಳ ನಡವಳಿಕೆ—ಇವುಗಳನ್ನು, ಅನ್ಯಸ್ಥಳಗಳಲ್ಲಿ ಸಂಚರಿಸತಕ್ಕ, ಹೊಸ ಹೊಸ ಜನಗಳನ್ನ ಸಂಧಿಸತಕ್ಕದ್ದರಲ್ಲಿ ಉಂಟಾಗತಕ್ಕ ದೇಹಾರೋಗ್ಯ, ತಿಳುವಳಿಕೆ—ಇವುಗಳನ್ನು ಸಹ ಬಹಳ ಚೆನ್ನಾಗಿ ವರ್ಣಿಸಿದ್ದಾರೆ ಇವರ ಉಪನ್ಯಾಸ ಸಮಸ್ತ ಪ್ರಜೆಗಳಿಗೂ ನಿಜತ್ವವನ್ನ ತಿಳಿಸತಕ್ಕದ್ದಾಗಿದೆ

೨ ಈಗ್ಗೆ ಕೆಲವು ದಿವಸದ ಹಿಂದೆ ಬೌರಿಂಗ್‌ಪೇಟೆಯಲ್ಲಿ ನಡೆದ ಆರ್ಯಮಹಿಳೆಯರ ಸಮಾಜದಲ್ಲಿ ಸೌ॥ ಸುಂದರಮ್ಮ ಎಂಬುವರು ಹಿಂದೂ ಸ್ತ್ರೀಯರ ವಿದ್ಯಾಭಿವೃದ್ಧಿ ವಿಷಯದಲ್ಲಿ ಇರತಕ್ಕ ಅನಾನುಕೂಲಗಳನ್ನ ಸ್ಪಷ್ಟವಾಗಿ ವಿವರಿಸಿದ್ದಾರೆ. ಇದು ನಿಜವಾದ ವಿಷಯವಾಗಿದೆ

ಪ್ರಜೆಗಳಲ್ಲಿ ವಿದ್ಯಾವಂತರಾದಹಾಗೆಲ್ಲಾ ಅವರ ತಿಳುವಳಿಕೆ ನಿಜತ್ವದಲ್ಲಿ ಕೃಷಿಮಾಡಲಿಕ್ಕೆ ಆರಂಭಿಸುತ್ತಾ ಬಂದರೆ, ದೇಶವೆಲ್ಲಾ ಒಳ್ಳೇ ಸ್ಥಿತಿಗೆ ಬರಲು ಕಾರಣವಾಗುತ್ತೆ ಜಗತ್ಕರ್ತನಾದ ಭಗವಂತನು ನಾನು ಮೇಲೆ ಹೇಳಿರತಕ್ಕ ನನ್ನ ಉಭಯ ಸಹೋದರಿಯರಿಗೂ, ಭೂಲೋಕದಲ್ಲಿ ನಿಜತ್ವವನ್ನೇ ಸ್ಥಾಪಿಸಿ ಲೋಕೋದ್ಧಾರ ಮಾಡುವುದಕ್ಕಾಗಿಯೇ ಜನ್ಮಿಸಿದಂತೆ ಅವರ ನಡವಳಿಕೆಯಿಂದ ಕಾಣುತ್ತಿರತಕ್ಕ ಮೆ॥ ಮಹದೇವ ಶಾಸ್ತ್ರಿ ಬಿ ಎ ಯವರಿಗೂ, ಮೆ॥ ಸಿ ರಾಮಲಿಂಗಾರೆಡ್ಡಿ ಎಮ್ ಎ ಯವರಿಗೂ ದೀರ್ಘಾಯುಸ್ಸು ಸಮಸ್ತ ಅನುಕೂಲಗಳು ಕೊಟ್ಟು ರಕ್ಷಿಸಲಿ

ಒಬ್ಬ ಪೆನ್ಷನ್ ಆಫೀಸರ್

ದೇವರು

ಅಯ್ಯಾ,

ವಾಚಕಮಹಾಶಯರೇ, ನೀವು ಒಂದಾನೊಂದು ಚಿತ್ರಚಮತ್ಕಾರವಾದ ನೂತನ ವಸ್ತುವನ್ನು ನೋಡಿದಾಗ ಆಶ್ಚರ್ಯಚಕಿತರಾಗಿ ಆಹಾ ! ಈ ಮಹತ್ಕಾರ್ಯವನ್ನು ಮಾಡಿದ ಮಹನೀಯನಾರಿರಬಹುದು ? ಆತನ ಬುದ್ಧಿ ಚಾತುರ್ಯ ಎಂಥಹ ಮೇಧಾಶಕ್ತಿಯುಳ್ಳದೋ ಆ ಪುಣ್ಯಪುರುಷನ ದರ್ಶನವು ನಮಗೊಂದು ಸಲವಾದರೂ ದೊರೆತರೆ ಕೃತಕೃತ್ಯರಾಗಬಹುದೆಂದು ಮನಸ್ಸು ಆತನ ದರ್ಶನಕಾಂಕ್ಷಿಯಾಗಿರುವುದಲ್ಲವೆ ? ಮನುಷ್ಯನಂತೆ ಮಾತನಾಡುವ ಫೋನೋಗ್ರಾಫ್ ಅಥವಾ ಗ್ರಾಮಫೋನ್, ಎಂಬ ಯಂತ್ರವನ್ನು ನೋಡಿದಾಗ ಇದನ್ನು ಮಾಡಿದ ಮಹನೀಯನು ಸ್ತೋತ್ರಾರ್ಹನೆಂದು ಅನೇಕ ಜನಗಳು ಅಂದುಕೊಳ್ಳುವುದನ್ನು ನೀವೆಲ್ಲರೂ ಪ್ರಾಯಶಃ ನೋಡದಿರಲಾರಿರಿ ಅಸ್ಥಿರವಾದ ವಸ್ತುಗಳನ್ನು ಆಥಾರಪೂರ್ವಕವಾಗಿ ನಿರ್ಮಿಸಿದ ಮನುಷ್ಯಮಾತ್ರರಲ್ಲಿ ನಮಗೀರೀತಿಯಾದ ಭಕ್ತಿಪೂರಿತಕಾಂಕ್ಷೆಯು ಜನಿಸುವಲ್ಲಿ ಅಗಾಧವಾದ ಈ ಪೃಥ್ವಿಯನ್ನೂ, ತೇಜಃಪುಂಜನಾಗಿ ನೋಡಲಸಾಧ್ಯನಾಗಿರುವ ಸೂರ್ಯನನ್ನೂ, ಶೀತಕಿರಣನಾದ ಚಂದ್ರನನ್ನೂ ಪ್ರಾಣಾಧಾರನಾದ ವಾಯು, ಜಲ, ಅಗ್ನಿ ಮೊದಲಾದ ಇನ್ನೂ ಅನೇಕಾನೇಕ ವಸ್ತುಗಳನ್ನೂ, ಮನುಷ್ಯರೇ ಮೊದಲಾದ ಜೀವರಾಸಿಗಳನ್ನೂ ಸೃಷ್ಟಿಸಿದ ಸೂತ್ರಧಾರಿಯನ್ನು ಮಾತ್ರ ಅತಿ ವಿಧೇಯತೆಯಿಂದ ನೋಡದಿರುವುದು ಎಷ್ಟು ಶೋಚನೀಯವೆಂಬುದು ನೀವೇ ಯೋಚಿಸಬೇಕಾಗಿರುವುದು

ಮಿತ್ರರೇ, ಆ ಮಹನೀಯನಾರೆಂಬ ಪ್ರಶ್ನೆಗೆ ಉತ್ತರವು ತಿರೋಹಿತವಾಗಿರುವುದಲ್ಲವೆ ? (ದೇವರು) ಆತನ ಮಹಾತ್ಮೆಗಾಗಿ ನಮ್ಮ ಸಂಪೂರ್ಣ ನಮಸ್ಕಾರವನ್ನು ಯಾವಾಗಲೂ ಅರ್ಪಿಸುವ ಆದರೆ ದೇವರು ದೇವರು ಎನ್ನುತ್ತೀರಲ್ಲಾ ' ದೇವರು ಎಲ್ಲಿರುವನು ? ಇರುವುದಾದರೆ ನಮಗೇಕೆ ಕಾಣುವುದಿಲ್ಲ ' ಎಂದು ಮೊದಲಾಗಿ ಅನೇಕ ಜನರು ಆಡಿಕೊಳ್ಳುವರು ಇದಕ್ಕಾಗಿ ಒಂದು ಕಥೆಯನ್ನು ನಿಮ್ಮ ಮುಂದಿಡುವೆನು –

‘ಒಬ್ಬಾನೊಬ್ಬ ನಾಸ್ತಿಕನು ಓರ್ವ ಸದ್ಭಕ್ತನಲ್ಲಿಗೆ ಹೋಗಿ ಸ್ವಾಮಿ, ನಾನು ತಮ್ಮಲ್ಲಿ ಮೂರು ಪ್ರಶ್ನೆ ಮಾಡಲು ನಿಶ್ಚಯಮಾಡಿಕೊಂಡಿರುವೆನು ತಾವು ದಯವಿಟ್ಟು ನನ್ನ ಪ್ರಶ್ನೆಗಳಿಗುತ್ತರವನ್ನು ಅನುಗ್ರಹಿಸಬೇಕೆಂದು ಕೇಳಿಕೊಳ್ಳಲಾಗಿ ಆ ಭಕ್ತವರನು ಒಪ್ಪಿಕೊಂಡನು ಆಗಲಾ ನಾಸ್ತಿಕನು, ಮರ್ಖ, ಅನೇಕ ಜನಗಳೂ ಭಗವಂತನಿರುವನೆಂದು ಹೇಳುವರು ಭಗವಂತನಿರುವುದಾದರೆ ನಮಗೇಕೆ ಕಾಣಿಸುವುದಿಲ್ಲ ? ಆತನನ್ನು ನನಗೆ ತೋರಿಸಿರಿ ೨ನೆಯದು ದೇವ ಸಹಾಯವಿಲ್ಲದೆ ಯಾವ ಕಾರ್ಯವೂ ಸಾಫಲ್ಯವಾಗಲಾರದಲ್ಲವೆ ? ಆದರೆ ಮನುಷ್ಯನು ಮಾಡುವ ಪುಣ್ಯಪಾಪಕಾರ್ಯಗಳೆಲ್ಲವೂ ಭಗವದಾಜ್ಞೆಯಿಂದಲೇ ಜರುಗುತ್ತಿರಲಾಗಿ ಅನಂತರ ಮನುಷ್ಯನು ಮಾಡಿದ ಪಾಪಕಾರ್ಯಕ್ಕಾಗಿ ಭಗವಂತನೇಕೆ ದಂಡಿಸುವನು ? ಹಾಗೆ ದಂಡಿಸುವುದರಿಂದ ಭಗವಂತನ ನ್ಯಾಯಕ್ಕೆ ಲೋಪವುಂಟಾಗುವುದಲ್ಲವೆ ೩ನೆಯದು ಭಗವಂತನು ಪಾಪಿಗಳಾದ ಜೀವಿಗಳೆಲ್ಲರನ್ನೂ ನರಕಾಗ್ನಿಯಿಂದ ಬಾಧಿಸುವನೆಂದು ಹೇಳುವರು ಜೀವನು ಪಂಚಭೂತಗಳಲ್ಲೊಂದಾದ ಅಗ್ನಿಯಿಂದ ಸೃಷ್ಟಿಸಲ್ಪಟ್ಟಿರುವುದರಿಂದ ಅಗ್ನಿಯನ್ನು ಅಗ್ನಿ ಹೇಗೆ ಬಾಧಿಸುತ್ತದೆ ? ಆದ್ದರಿಂದ ಈ ಮೂರು ಪ್ರಶ್ನೆಗಳು ನನಗೆ ಅತಿ ವಿಚಿತ್ರವಾಗಿ ಕಂಡು ನಂಬಿಗೆಗನರ್ಹವಾಗಿರುವುವು ಇದಕ್ಕೆ ನಿಮ್ಮುತ್ತರವಂ ನಿರೀಕ್ಷಿಸುವೆನೆಂದು ಹೇಳಲು, ಆ ಭಕ್ತನು ಸ್ವಲ್ಪ ಯೋಚಿಸಿ ಏನೂ ಮಾತನಾಡದೆ ಅಲ್ಲಿ ಒಂದು ಮಣ್ಣಿನ ಉಂಡೆಯನ್ನು ತೆಗೆದುಕೊಂಡು ನಾಸ್ತಿಕನ ಶಿರದಮೇಲೆ ಬಲವಾಗಿ ಹೊಡೆದನು ಆ ಪೆಟ್ಟನ್ನು ತಾಳಲಾರದೆ ನಾಸ್ತಿಕನು ನ್ಯಾಯಾಧಿಪತಿಯ ಬಳಿ ದೂರಿಕೊಂಡನು ನ್ಯಾಯಾಧಿಪತಿಯು ಭಕ್ತನನ್ನು ಕರೆಸಿ ಇವನನ್ನು ಹೊಡೆಯಲು ಕಾರಣವೇನೆಂದು ಕೇಳಲು ಭಕ್ತನು ಅಯ್ಯಾ, ನ್ಯಾಯಾಧೀಶಾ, ಈತನು ಕೇಳಿದ ಮೂರು ಪ್ರಶ್ನೆಗಳಿಗುತ್ತರವಾಗಿ ಹೀಗೆ ಹೊಡೆದೆನಲ್ಲದೆ ಬೇರೆಇಲ್ಲ ಹೇಗೆಂದರೆ — ಈತನು ತನ್ನ ಶಿರಕ್ಕೆ ಪೆಟ್ಟುತಗಲಿದ್ದರಿಂದ ನೋವಾಗಿರುವುದೆಂದು ಹೇಳುವನು ಹಾಗಾದರೆ ಆ ನೋವನ್ನು ನನಗೆ ತೋರಿಸಲಿ ನಾನವನ ದೇವರನ್ನು ತೋರಿಸುವೆನು ೨ನೆಯದು ಮನುಷ್ಯರು ಮಾಡಿದ ಪಾಪಪುಣ್ಯಗಳೆಲ್ಲಾ ಭಗವದಾಜ್ಞೆಯಿಂದಲೇ ನಡೆಯುತ್ತಿರಲಾಗಿ ಭಗವಂತನು ಅವರವರ ಪಾಪಪುಣ್ಯಗಳಿಗೆ ತಕ್ಕಂತೆ ಮನುಷ್ಯರನ್ನೇಕೆ ದಂಡಿಸುವನು ಎಂದು ಕೇಳಿರುವನು ಆದರೆ ಈಗ ನಾನೂ ಸಹಾ ಭಗವಂತನ ಆಜ್ಞೆಯಂತೆಯೇ ಈತನ ತಲೆಯಮೇಲೆ ಮಣ್ಣಿನ ಮುದ್ದೆಯಿಂದ ಹೊಡೆದೆನು ಅದಕ್ಕವನೇಕೆ ನನ್ನನ್ನು ನಿಂದಿಸಬೇಕು ? ೩ನೆಯದು ಜೀವಿಗಳಗ್ನಿಯಿಂದ ಮಾಡಿರುವುದು ನಿಜ ಅಂಥಾ ಜೀವಿಗಳನ್ನು ಪರಾತ್ಪರನು ನರಕಾಗ್ನಿಯಿಂದ ಬಾಧಿಸುವನೆಂದು ಹೇಳುವರಲ್ಲಾ ಹಾಗಾದರೆ ಅಗ್ನಿಯನ್ನು ಅಗ್ನಿಯು ಏನು ಮಾಡುವುದೆಂದು ಕೇಳಿರುವನು ಆದರೆ ಮಾನವ ಶರೀರವು ಮಣ್ಣಿನಿಂದಲೇ ಮಾಡಿರುವುದು ನಾನೀತನ ಮೇಲೆ ಮಣ್ಣಿನುಂಡೆಯನ್ನೇ ಹಾಕಿರುವೆನು ಮಣ್ಣನ್ನು ಮಣ್ಣೇನುಮಾಡಬಲ್ಲದು ಇವನು ನಾನು ಹೊಡೆದದ್ದರಿಂದ ಗಾಯವಾಗಿದೆ ಎಂದು ದೂರಿಕೊಳ್ಳುವುದು ಯಾವ ನ್ಯಾಯವೆಂದು ಭಕ್ತನು ಕೇಳಲಾಗಿ ನಾಸ್ತಿಕನು ನಾಚಿ ತಲೆ ಬಗ್ಗಿಸಿಕೊಂಡನು ಆಗಲಾ ಭಕ್ತನು ಆ ನಾಸ್ತಿಕನಿಗೆ ದೇವರ ನಿಜವಾದ ವಿಷಯವನ್ನು ಬೋಧಿಸಿ ಸಮಾಧಾನ ಪಡಿಸಿ ಕಳುಹಿಸಿರುವನು ಮಿತ್ರರೆ ನೋಡಿ ! ಈಗಿನ ನಮ್ಮ ನವನಾಗರಿಕ ಕಾಲದಲ್ಲಿಯೂ ಅನೇಕ ಮಹಾಶಯರು ಹೀಗೆಯೇ ವಾದಿಸುತ್ತಾ ಮತಭೇದಗಳಿಗನುಸಾರವಾಗಿ ಏಕೋ ದೇವನನ್ನು ಭಿನ್ನ ಭಿನ್ನವಾಗಿ ಭಾವಿಸಿ ನಮ್ಮ ದೇವರು, ನಮ್ಮ ದೇವರು ನಮ್ಮಮ್ಮ ನಿಮ್ಮಮ್ಮ ಆ ದೇವರು ದೊಡ್ಡವನು ಈ ದೇವರು ಚಿಕ್ಕವನು ಎಂದು ಕಡೆಗೆ ಇದೇ ಕಾರಣವಾಗಿ ವ್ಯಾಜ್ಯಗಳು ಕೂಡಾ ಮಾಡುತ್ತಿರುವರು ಇದನ್ನು ನಾಗರೀಕರು ನೋಡಿ ನಗುವದಂತಿರಲಿ ನಿಜವಾದ ಏಕೋ ದೇವನು ಇವರ ತಿಳಿಗೇಡಿತನಕ್ಕೆ ನಗದಿರಲಾರನಲ್ಲವೇ ?

ಮಹಾಶಯರೇ, ನೂರಾರು ದೇವರುಗಳನ್ನು ಪೂಜಿಸುವುದು ಬಿಟ್ಟು ಒಬ್ಬ ದೇವನನ್ನು ನಾವು ಪೂಜಿಸುವುದಾದರೆ ಆ ದಿನವೇ ಎಲ್ಲಾ ಭಾರತಪುತ್ರರೂ ಸಹೋದರರಾಗಬಹುದು ಇಂಥಾ ಕಾಲವು ಕ್ಷಿಪ್ರಸನ್ನಿಹಿತವಾಗಲೆಂದು ನಾವೆಲ್ಲರೂ ದೇವರನ್ನು ಆರಾಧಿಸೋಣ

ಶ್ರೀ ವಾಣೀವಿಲಾಸ ವಾಚಕಶಾಲ
ಅಣ್ಣೆಹಾಳು ಚಿತ್ರದುರ್ಗ ತಾಲ್ಲೂಕು
೨೬—೪—೧೦

ಬಿ ಭೀಮರಾಜು, ಸೆಕ್ರೆಟರಿ

ತಾಲ್ಲೋಕು ವರ್ತಮಾನಗಳು

ದೊಡ್ಡಬಳ್ಳಾಪುರ —ಬಿಸಿಲು ಅಧಿಕವಾಗಿದ್ದರೂ ಸಾಯಂಕಾಲದ ತಂಗಾಳಿ ಜನರಿಗೆ ಸುಖವನ್ನುಂಟುಮಾಡುತ್ತಿದೆ ಸೋಮವಾರ ತಕ್ಕ ಮಟ್ಟಿಗೆ ಭೂಮಿ ತಂಪಾಗುವಂಥ ಮಳೆಬಿದ್ದಿತ್ತು —ಈ ಊರಿನ ಸೀರೆಗಳಿಗೆ ಈ ವರ್ಷ ಬಹಳ ಗಿರಾಕಿ ಇರುವದರಿಂದ ಗಂಡಸರೊಂದಿಗೆ ಮನೆ ಹೆಂಗಸರೆಲ್ಲಾ ದುಡಿದರೂ ಹೊಟ್ಟೆ ತುಂಬಾ ಕೂಲಿ ಸಿಕ್ಕುವದಿಲ್ಲ ಅಸಲ್ ಸೀರೆಗಳಿಗೆ ಮಾತ್ರ ಒಳ್ಳೇ ಕೂಲಿ ಉಂಟು ಈಚೆಗೆ ಪಂಚಮಶಾಲೆಗಳು ಸ್ವಲ್ಪ ಮಟ್ಟಿಗೂ ಕ್ರಮವಾಗಿ ಕೆಲಸಮಾಡುವಂತೆ ತೋರುತ್ತವೆ ಆದರೆ ಬಿಸಿಲ್ ತೊರೆಗಳಂತಿರ ಕಡಿದದು ಈ ಊರಿಗೆ ಕಳೆದ ವಾರ ನ್ಯೂಆಲ್‌ಫ್ರೆಡ್ ಬಯಸ್ಕೋಪ್ ಕಂಪೆನಿಯವರು ಆಶ್ಚರ್ಯಕರವಾದ ಜೀವದಿಂದ ಸಂಚರಿಸುತ್ತವೋ ಎಂಬ ಮ್ಯಾಜಿಕ್ ಲ್ಯಾಂಟ್ರನ್ ಪಟಗಳನ್ನು ತೋರಿಸಿದರು ಇದೇನು ಕೆಟ್ಟ ನೋಟವಲ್ಲ ಸರ್ವರೂ ನೋಡಬೇಕಾದದ್ದೇ ಸರಿ ಆದ್ದರಿಂದ ಡೆ ಕ ಟಾಹೆಬರೂ ಅಮಲ್ದಾರ್ರು ಮುಂತಾಗಿ ಅನೇಕರು ನೋಡಿದರು ಚಾರ್ಜು ಸುಲಭ ವಿಲಾಯಿತಿ, ಅಮೆರಿಕ, ಢಿಲ್ಲಿ ದರ್ಬಾರ್, ಶ್ರೀಮ ... ಚಕ್ರವರ್ತಿಗಳ ಪಟ್ಟಾಭಿಷೇಕಗಳೆಲ್ಲಾ ಹ್ಯಾಗೆ ಕಣ್ಣಿಂದ ನೋಡಬೇಕಾಗಿತ್ತೋ ಅದೇರೀತಿ ಚಲನೆಗಳೂ ಮನುಷ್ಯರ ಚೈತನ್ಯಗಳೂ ಪಟಗಳಲ್ಲಿ ತೋರಿಬರುತ್ತವೆ

ತಿಪಟೂರು —ಬಿಸಿಲಿನ ಝಳವು ವಿಪರೀತವಾಗಿ ಇರುತ್ತದೆ ತಾ ೨೪ನೇ ಭಾನುವಾರ ದಿವಸ ಪೂರ್ಣವಾಗಿ ಒಂದು ಹದ ಮಳೆಯಾಯಿತು ಕೆರೆಗೆ ಮಾತ್ರ ನೀರುಬರಲಿಲ್ಲ ಸದ್ಯದಲ್ಲಿ ಕೊಂಚನೀರು ಇವೆ ಈ ನೀರು ಬಟ್ಟೆ ಒಗೆಯುವುದಕ್ಕೂ ಮುಸುರೆಯನ್ನು ತಿಕ್ಕುವುದಕ್ಕೂ ಅನುಕೂಲವಾಗಿ ಇದೆ ಇನ್ನೂ ಒಂದು ತಿಂಗಳು ನೀರು ಇರಬಹುದೆಂದು ತೋರುತ್ತದೆ ಈಗ್ಗೆ ಸುಮಾರು ೨ ತಿಂಗಳಿಂದಲೂ ರೈಲ್ ಒಳೆ ಎಲ್ಲಿ ಇರತಕ್ಕವರು ನೀರಿಗಾಗಿ ಬಹಳ ತೊಂದರೆಪಡುತ್ತಿದ್ದಾರೆ ಗೌರ್ನಮೆಂಟಿನಿಂದ ಒಂದು ಬಾವಿಯನ್ನು ತೆಗೆದರೆ ಬಹಳ ಅನುಕೂಲವಾಗುತ್ತೆ ರೈಲ್ ಸ್ಟೇಷನ್ ಬಳಿಯಲ್ಲಿಯೂ ಮತ್ತು ಸರಾಫರ ಕಾಂಪೌಂಡಿನ ಬಳಿಯಲ್ಲಿಯೂ ಇರತಕ್ಕ ಭಾವಿಗಳಿಗೂ ಪುರುಸತ್ತೇ ಇರುವುದಿಲ್ಲ —ಈಗ ೨ ವರ್ಷಗಳ ಹಿಂದೆ ಪವತಿ ನಂಜುಂಡಯ್ಯನವರ ಹೆಂಡತಿ ರಂಗಮ್ಮನವರು ತಮ್ಮ ಭಾವನಾರಾದ ಗ್ರಂಧಿಗೆ ಪುಟ್ಟರಾಮಯ್ಯನವರು ಕಟ್ಟಿಸಿರುವ ಶಿವಾಲಯಕ್ಕೆ ಕೆಲಸ ಕಾರ್ಯಗಳು ನಡೆಯುವಂತೆ (೮,೦೦೦) ಎಂಟು ಸಾವಿರ ರೂಪಾಯಿಗಳನ್ನು ಕೊಟ್ಟಿರು ಆ ರೂಪಾಯಿಗಳಿಗೆ ಇದುವರಿವಿಗೂ ಆಗಿರುವ ೨ ಸಾವಿರ ರೂಪಾಯಿ ಬಡ್ಡಿಯನ್ನೂ ತನ್ನ ಸ್ವಂತ ೫ ಸಾವಿರ ರೂಪಾಯಿಗಳನ್ನೂ ಜುಮ್ಲಾ ೧೫ ಸಾವಿರ ರೂಪಾಯಿಗಳ ನ್ನ ಸೇವಿಂಗ್ಸಿನಲ್ಲಿ ಹಾಕಿ ಅದರ ಬಡ್ಡಿಯಿಂದ ಕೆಲಸಗಳನ್ನು ನಡೆಯಿಸುವಂತೆ ಯೋಚನೆ ಮಾಡಿರುವರೆಂದು ತಿಳಿಯಲಾಯಿತು

ಮಗ್ಗದದೇವನಹೋಬಳಿ ತಾಲ್ಲೂಕಾ ... ಹವ ಬಹಳ ಮಟ್ಟಿಗೆ ಕೆಟ್ಟು ಹೋಗಿದೆ ಮಳೆ ಸ್ವಲ್ಪವಾದರೂ ಹೊಯ್ಯುತ್ತಿದೆ ಆದಾಗ್ಯೂ ಹಗಲು ವೇಳೆಯಲ್ಲಿ ಬಿಸಲಿನ ತಾಪವು ಬಹಳ ಜಾಸ್ತಿಯಾಗಿದೆ ಯಾವ ಕಡೆ ನೋಡಿದರೂ ರೈತರು ಹೊಲ ಗದ್ದೆಗಳನ್ನು ಉತ್ತು ಬಿತ್ತುತ್ತಿದ್ದಾರೆ ದನಕರುಗಳಿಗೆ ಮೇವು ಸಮೃದ್ಧಿಯಾಗಿದೆ ಇದೇ ಊರಿನ ಪಶ್ಚಿಮ ಭಾಗದಲ್ಲಿ ಸುಮಾರು ೩ ಪರ್ಲಾಂಗ್ ದೂರದಲ್ಲಿ ಕಾವೇರಿ ನದಿಯು ಹರಿಯುತ್ತಿದೆ ಇದರಿಂದ ಪ್ರಜೆಗಳಿಗೆ ಯಾವ ವಿಷಯದಲ್ಲಿ ಕೊರತೆಯಾಗಿದ್ದರೂ ನೀರಿನ ವಿಷಯದಲ್ಲಿ ಮಾತ್ರ ಸಂತೋಷವಾಗಿದೆ ಇದೇ ಊರಿಗೆ ತಾ ... ರಲ್ಲಿ ಮೆ॥ ಅಮಲ್‌ದಾರ್ರವರು ಸ್ಯಾನಿಟರಿ ಇನ್‌ಸ್ಪೆಕ್ಟರವರೂ ದಯಮಾಡಿಸಿದ್ದರು ಇವರುಗಳನ್ನು ನೋಡುವದಕ್ಕಾಗಿ ಈ ಪ್ರಾಂತ್ಯದ ಪ್ರಜೆಗಳೆಲ್ಲರು ಈ ಗ್ರಾಮದ ಬಳಿ ಇರುವ ಅರಳಿ ಕಟ್ಟೆಯ ಹತ್ತಿರ ಬಂದು ಸೇರಿದರು ಆಗ್ಗೆ ಮೆ॥ ಅಮಲ್‌ದಾರ್ರವರು ಪ್ರಜೆಗಳಿಗೆ ಅನೇಕ ವಿಧವಾದ ಹಿತೋಕ್ತಿಗಳಿಂದ ಉಪಚರಿಸಿ ಕಳುಹಿಸಿದರು ಅನಂತರ ಮಧ್ಯಾನ್ಹ ೩ ಗಂಟೆಯ ಮೇಲೆ ಹೊರಟು ಗ್ರಾಮ ಪಾಕೀಜು ನೋಡುವ ಉದ್ದೇಶ ಪ್ರತಿ ಒಂದು ಬೀದಿಯನ್ನೂ ಸಹಾ ನೋಡಿಕೊಂಡು ವಾಪಸ್ಸು ಬಂದು ಅಮಲ್‌ದಾರ್ರವರು ಗ್ರಾಮದ ಪಟೇಲ್ ಶ್ಯಾನುಭೋಗ ಮತ್ತು ಮುಖ್ಯಸ್ಥರಿಗೂ ಸಹಾ ಗ್ರಾಮದಲ್ಲಿ ತುಂಬಾ ಕಚಡ ಇರುವದರಿಂದ ಹವ ಕೆಟ್ಟಿದೆ ಆದ್ದರಿಂದ ಈ ಕಚಡ ವಗೈರೆಗಳನ್ನೆಲ್ಲಾ ದೂರ ಸಾಗಲಿ ಸಾಗಿಸಿ ಗ್ರಾಮ ಪಾಕೀಜು ವಿಷಯದಲ್ಲಿ ತುಂಬಾ ಗಮನ ಇಡಬೇಕೆಂಬದಾಗಿ ತಿಳಿಸಿದರು

ಹೂಳಿಗೆರೆ —ಈ ಟರ್ಮಿಗೆ ಅಶ್ವಿನಿ ಮಳೆ ಒಂದು ಹದ ಬಂದದ್ದರಿಂದ ಅನೇಕ ಜನಗಳು ಜಮೀನ್ ಉಳ್ಮೆ ಮಾಡಲೂ ಅನುಕೂಲವಾಯಿತು ಭರಣಿ ಮಳೆ ಬರಲಿಲ್ಲ ಮಿಂಚು ಮೋಡ ಮುಂತಾದ ಚಿಹ್ನೆಗಳು ತೋರುತ್ತಲಿವೆಯೇ ಹೊರತು ಹನಿ ಮಾತ್ರ ನೆಲಕ್ಕೆ ಬೀಳಲಿಲ್ಲ —ಜಮೀನ್‌ದಾರ್ರೆಲ್ಲಾ ಭೂಮಿಗೆ ಗೊಬ್ಬರ ಹೊಡೆಯುತ್ತಾ ಇದ್ದಾರೆ ಬಿಸಿಲು ತಾಪ ಜಾಸ್ತಿಯಾಗಿದೆ ೩ ಕೆರೆಗಳಲ್ಲೂ ನೀರು ಇಲ್ಲ ತೋಟಗಳಿಗೆ ಕಪಿಲೆ ಹೊಡೆಯುತ್ತಾ ಇದ್ದಾರೆ — ಈ ಊರಿನ ಪಶ್ಚಿಮದಿಕ್ಕಿನ ಊರು ಬಾಗಲು ಬಹಳ ಕೆಳವರಲು ಬಿದ್ದಿರುವದ್ದರಿಂದ ಬಂಡಿಗಳು ತಿರುಗಾಡದಂತೆ ಆಗಿದೆ ಮೆ| ತಾಲ್ಲೂಕ್ ಅಮಲ್ದಾರ್ರವರು ಕಾಮಗಾರಿ ಆಗುವಂತೆ ಹುಕುಂ ಮಾಡಿದ್ದಾರೆ ಕಂಟ್ರಾಕ್ಟುದಾರನ ಗುತ್ತಿಗೆಯಲ್ಲಿ ಜನಗಳಿಗೆ ತುಂಬಾ ಕೊರತೆಯಾಗಿದೆ —ಹರಿಹರದ ಸಂಗಮೇಶ್ವರ ದೇವರ ಮನೆಯಲ್ಲಿ ವಸ್ತುಗಳ ಪ್ರದರ್ಶನ ನಡೆಸಬೇಕೆಂತ ದೆ| ಕ॥ ಸಾಹೇಬರವರು ಮಾಡಿದ ಪ್ರಯತ್ನವು ಸಫಲವಾಗಿ ಶ್ಲಾಘನೆಗೆ ಅರ್ಹವಾಯಿತು ಇಲ್ಲಿಂದ ಬಹಳ ಜನಗಳು ಹೋಗಿದ್ದರು ಪಟೇಲ ಶಾನುಭೋಗರ ರಿಪೋರ್ಟಾಗಿ ೧೭ ವರುಷವಾಯಿತು ರಿವಿಜನ್ ಸರ್ವೆಯಾಗಿ ೫ ವರುಷವಾಯಿತು ಅದಾಗ್ಯೂ ಸದರೀ ಸ್ಕೇಲು ಪ್ರಕಾರ ಪೋಟ್ಟು ಹೆಚ್ಚಾಗಲಿಲ್ಲ ಇವರು ಮಾಡತಕ್ಕ ಕೆಲಸಗಳು ಹೆಚ್ಚಾದವೇ ಹೊರತು ವೇತನ ಜಾಸ್ತಿ ಆಗಲಿಲ್ಲ ಕೃಪಾಸಾಗರರಾದ ಗೌರ್ನಮೆಂಟಿನವರು ಈ ವಿಷಯಕ್ಕೆ ಜಾಗ್ರತೆ ಹುಕುಂ ದಯಪಾಲಿಸಿದರೆ ಬಡ ನೌಕರರು ಬದುಕಿಕೊಳ್ಳುತ್ತಾರೆ, ಗ್ರಾಮ ನವಕರಗಳ ರೆಗ್ಯುಲೇಷನ್ ಜಾರಿಗೆ ಬಂದಾಗ್ಯೂ ಅದರಂತ ಆದ ನಿಬಂಧನೆಗಳು ಜಾರಿಗೆ ಬಾರದೆ ಹೋದ್ದರಿಂದ ಚಿಲ್ಲರೆನೌಕರರಾದ

...ಕೋಟುಗಳ ವೇತನಗಳೂ ದೊಡ್ಡ ಕೆಲಸಗಳೂ ಗೊತ್ತಿಲ್ಲದಂತೆ ಆಗಿದೆ, ...ಯುವ ಘನವೆತ್ತ ಗೌರ್ನ್ಮೆಂಟಿನವರ ಪರಾಂಬರಿಕೆಗೆ ಬರಬೇಕಾಗಿದೆ — ...ಕ್ ಖಜಾನೆಯಲ್ಲಿ ೭೦೦ ರೂಪಾಯಿಗಳ ದೊಡ್ಡ ನೋಟುಗಳನ್ನು ಕದ್ದ ...ಬಾಯಿ ೩ ಶಿಕ್ಷೆ ಪ್ರಕಾರ ಬಾಜುಕ ಶಿಕ್ಷೆ ೧ಕ್ಕೆ ೩ ವರುಷಗಳಂತೆ ...ಆಗಿರುತ್ತದೆ ಇದು ಬಹಳ ಒಳ್ಳೇದಾಯಿತು — ಈ ಕಾಲದ ಕಿನಲ್ಲಿ ಬಂಚ ...ರ್ಗಳಿಗೆ ವಸ್ತುಗಳು ವಿಶೇಷವಾಗಿ ಬರುತ್ತಾ ಇವೆ ಗೋವಾದ ...ರ್ಗಳನ್ನು ನಿರ್ದಿಷ್ಟವಾಗಿ ಸಾಗುವಳಿಗೆ ಕೊಡದಂತೆ ಹುಕುಂ ಆದರೆ ಈ ...ಕ್ ಜನಗಳು ಬದುಕಿಕೊಳ್ಳುತ್ತಾರೆ ಮೆಣಸಿನ ಕಾಯಿ ಧಾರಣೆಯು ೧೦ಕ್ಕೆ ೩ ರೂಪಾಯಿ ವರೆಗೂ ಇರುತ್ತದೆ ಯಾವ ಶೀಮೆಯಿಂದಲಾದರೂ ...ನೋಳಿ ಬಂದರೆ ಹೂರತು ತಗ್ಗುವಂತೆಯಿಲ್ಲ

ಕೊಪ್ಪ ಈಗ ಕೆಲವು ದಿವಸಗಳಿಂದ ಬಿಸಿಲಿನ ಝಳವು ದಿನೆದಿನೆ ಅಭಿವೃದ್ಧಿ ಸ್ಥಿತಿಗೆ ಎಂದು ಟವರ್ಗಳಲ್ಲಿಯೂ ಗ್ರಾಮಗಳಲ್ಲಿಯೂ ವಾಸವಾಗಿರುವ ಜನಗಳನ್ನು ರೋಗಪೀಡಿತರನ್ನಾಗಿ ಮಾಡುತ್ತದೆ ಮುಖ್ಯವಾಗಿ ...ಜ್ವರದ ಬಾಧೆಯಿಂದ ನರಳುತ್ತಿರುವರು ಇಷ್ಟರಲ್ಲೇ ಒಂದೆರಡು ...ಬಂದಿರುವುದರಿಂದ ಜಾನುವಾರುಗಳ ಮೇವಿಗೂ ಕುಡಿಯುವ ನೀರಿಗೂ ...ದೊಂದು ಕೊರತೆ ಕಂಡು ಬರುವುದಿಲ್ಲ ಈಚೆಗೆ ಮಳೆ ಬರಲಿಲ್ಲ ದಿನ ...ಧಾರಣೆಯು ಏಕರೀತಿಯಲ್ಲಿದೆ — ಇಲ್ಲಿನ ಆಸ್ಪತ್ರೆಯ ಮಿಡ್‌ವೈಫ್ (ಸೂಲಗಿತ್ತಿ) ಅಮ್ಮನವರನ್ನು ಈ ಆಸ್ಪತ್ರೆಯಿಂದ ಗುಂಡ್ಲುಪೇಟೆಗೆ ವರ್ಗಾಯಿಸುವುದನ್ನು ಕೇಳಿ ತುಂಬಾ ವ್ಯಾಕುಲಕ್ಕೆ ಕಾರಣವಾಯಿತು ಇವರ ಚಟುವಟಿಕೆಯನ್ನೂ ಸರಕಾರಿ ಕೆಲಸದ ಮೆಹನತ್ತನ್ನೂ ತಿಳಿದುಕೊಂಡಿರುವ ಈ ...ನ ಮುನಿಸಿಪಲ್ ಮೆಂಬರುಗಳೂ ವರ್ತಕರೂ ಸೇರಿ ಈ ಮಿಡ್‌ವೈಫ್ ಅಮ್ಮನವರನ್ನು ಈ ಆಸ್ಪತ್ರೆಯಲ್ಲಿಯೇ ಇರಗೊಡಿಸಬೇಕೆಂದು ಅಧಿಕಾರಪಟ್ಟ ...ಯರ್ ಸರ್ಜನ್ ಸಾಹೇಬರವರಿಗೆ ತಂತಿಮುಖಾಂತರ ಅರಿಕೆ ಮಾಡಿಕೊಂಡಲ್ಲಿ ...ಲವಾಗದೆ ವರ್ಗಾಯಿಸಿದ ಸ್ಥಳಕ್ಕೆ ಮಿಡ್‌ವೈಫ್ ಅಮ್ಮನವರು ತೆರಳಬೇಕಾಗಿ ...ತು — ಇದೇ ಬರುವ ವೈಶಾಖ ಶುದ್ಧ ನವಮಿ ಮಂಗಳವಾರ ಇಲ್ಲಿನ ...ಪುರ ಗ್ರಾಮದಲ್ಲಿ ಶ್ರೀ ದುರ್ಗಮ್ಮನವರ ರಥೋತ್ಸವ ನಡೆಯುವುದು ...ಗೊತ್ತಾಗಿದೆ ಈ ಜಾತ್ರೆಗೆ ಸುಮಾರು ಸಾವಿರಾರು ಜನರು ಸೇರುತ್ತಾರಾದ್ದರಿಂದ ಪೋಲೀಸ್ ಅಧಿಕಾರಿಗಳು ಈ ಸ್ಥಳಕ್ಕೆ ಒಂದು ಗಲಾಟೆಯು ...ದಂತೆ ಏಗಾ ಇರಿಸುವರೆಂದು ನಂಬುತ್ತೇನೆ — ಮಲೆನಾಡು ...ದ ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ವಿಶೇಷವಾಗಿ ತಯಾರಾಗು...ಥ ಬೀಲು ಕಾಲದಲ್ಲಿ ತಂಪಾಗಿಯೂ ಅಮಲೇರುವಂಥದ್ದಾಗಿಯೂ ಇರುವ ...ಜೋಡ್ಯವೆಂಬ ಸಾರಾ ಪದಾರ್ಥವನ್ನು ಮಾರುವುದರಲ್ಲಿ ಜನಗಳು ಸಾಹಸ ...ತ್ತಿರುವುದೂ ಸರಕಾರದವರು ...ನನು ಶಿವಾಯಿ ಕಾಲ ಆಳುಗಳಿಗೆ ...ವಾಡುತ್ತಿರುವುದೂ ಇದಾಗ ಅಧಿಕಾರಿಗಳ ದೃಷ್ಟಿಗೆ ಬೀಳದೆ ...ವನ್ನು ತಾವು ಕೇಳಬೇಕಾದಾಗಿದೆ ಮುಂದಾದರೂ ಈ ವಿಚಾರದಲ್ಲಿ ...ಬಾಸಗಾ ಇಟು ಗ್ರಾಮಗಳಲ್ಲೇ ಆಗಲಿ ಇತರರ ಮನೆಗಳಲ್ಲಿಯೇ ಆಗಲಿ ...ಕಾರದವರ ಅಪ್ಪಣೆ ಚೀಟಿ ಶಿವಾಯಿ ಇಂಥಾ ದುರ್ಮಾರ್ಗಕ್ಕೆ ಕೈ ಹಾಕಲು ...ವಕಾಶಕೊಡಲಾರರೆಂದು ನಂಬುವೆನು — ನಮ್ಮ ಇಲ್ಲಿನ ಅಮಲ್ದಾರರವರು ...ದು ವಾರಗಳ ರಜಾ ಮೇಲೆ ಇವರ ಸ್ವಕಾರ್ಯಕ್ಕೆ ತೆರಳುವರೆಂದೂ ಇವರ ...ಜಾಗಕ್ಕೆ ಎಷ್ಟು ಅಮಲ್ದಾರರವರು ಬರುವರೆಂದೂ ವದಂತಿ ಕೇಳುತ್ತೇನೆ — ಮೇಲ್ಕಂಡ ಒಕ್ಕಲಿಗರ ಜಾತ್ರೆಯಲ್ಲಿ ಸಾವಿರಾರು ಜನಗಳು ಸೇರುತ್ತಾರಾದ್ದರಿಂದ ಕ್ರಿಸ್ತಮತೋಪದೇಶಕರು ಈ ಸ್ಥಳಕ್ಕೆ ಬಂದು ಕೆಲವು ಸುವಾರ್ತೆಯನ್ನು ಹೇಳಿ ಜನಗಳಲ್ಲಿ ಇರತಕ್ಕ ಮೂಢತ್ವವನ್ನು ಹೋಗಲಾಡಿಸಿ ಸನ್ಮಾರ್ಗಕ್ಕೆ ಬರುವಂತೆ ಮಾಡುವರೆಂದು ಹಾರೈಸುತ್ತೇನೆ

ಇಂಡಿಯಾ ದೇಶದ ವೃತ್ತಾಂತಗಳು

ಹುಬ್ಬಳ್ಳಿಯಲ್ಲಿ ಕಳೆದ ವಾರ ಒಂದು ಭಾರಿ ಹತ್ತಿಯ ಕಾರ್ಖಾನೆಗೆ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ರೂಪಾಯಿ ನಷ್ಟವಾಯಿತೆಂದು ತಿಳಿದು ಬಂದಿದೆ

* * *

ನಾರಾಯಣಗಂಜ್ ರೈಲ್ವೆ ಸ್ಟೇಷನ್‌ನಲ್ಲಿ ಅಮೂಲ್ಯ ಕೃಷ್ಣದತ್ತನೆಂಬುವನು ತನ್ನ ಹಾಸಿಗೆ ಸುತ್ತಿನಲ್ಲಿ ಬಂದೂಕುಗಳನ್ನು ಬಚ್ಚಿಟ್ಟುಕೊಂಡಿದ್ದು ಸಿಕ್ಕಿಬಿದ್ದನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಅವನಿಗೆ ೧೮ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ

* * *

ಢಕ್ಕಾನಗರದಲ್ಲಿ ಲಾಲಾ ರಾಜೇಂದ್ರಪ್ರಸಾದ್ ಎಂಬೊಬ್ಬ ಭಾರೀ ಜಮೀನ್ದಾರನು ಒಬ್ಬ ನಾಯಕಸಾನಿಯನ್ನು ತನ್ನ ಮನೆಯೊಳಗೆ ಸೇರಿಸಿಕೊಂಡು ಕತ್ತಿಯಿಂದ ಹೊಡೆದು ಗಾಯಪಡಿಸಿರುತ್ತಾನೆಂದು ಮೊಕದ್ದಮೆ ಆಗಿ ಜಾಮೀನ್ ಮೇಲೆ ಬಿಡುಗಡೆ ಮಾಡಿರುತ್ತಾರೆ

* * *

ಕಳೆದ ಮಂಗಳವಾರ ಸಾಯಂಕಾಲ ಬೊಂಬಾಯಿ ಪಟ್ಟಣದ ಬತ್ತಿ ಮುಖರ್ಜಿ ಎಂಬ ನೆಯಿಗೆ ಕಾರ್ಖಾನೆಯಲ್ಲಿ ಬೆಂಕಿ ಬಿದ್ದು ಎರಡು ಗಂಟೆ ಹೊತ್ತಿನೊಳಗಾಗಿ ೩೪,೦೦೦ ರೂಪಾಯಿ ನಷ್ಟವಾಗಿರುತ್ತದೆ ಅಷ್ಟರಲ್ಲಿ ಜನರೂ ಪೋಲೀಸಿನವರೂ ಸೇರಿ ಬೆಂಕಿಯನ್ನು ಆರಿಸಿದರು

* * *

ಕೊಚ್ಚಿ ಸಂಸ್ಥಾನದ ಚೀಫ್ ಜಡ್ಜರಾದ ಮಿ ಎಸ್ ಪೊನ್ನುಸಾಮಿಯವರು ಹಿಂದಿನ ವಾರ ಕಾಲವಾದರೆಂದು ಪ್ರಕಟವಾಗಿದೆ ಇವರಿಗೆ ಮರಣ ಕಾಲದಲ್ಲಿ ೫೩ ವರುಷ ವಯಸ್ಸಾಗಿತ್ತು ಇವರು ಸಕಲರಿಂದಲೂ ಪ್ರೀತಿ ವಿಶ್ವಾಸವನ್ನು ಸಂಪಾದಿಸಿಕೊಂಡು, ತುಂಬಾ ಸತ್ಯವಂತರಾಗಿದ್ದರು

* * *

ಅಮೇರಿಕದಿಂದಲೂ ಜರ್ಮನಿಯಿಂದಲೂ ಅಗ್ಗದ ಸಿಗರೆಟ್ಟುಗಳು ಅಪಾರವಾಗಿ ಬಂದು ಬೊಂಬಾಯಿ, ಕರಾಚಿ ಮೊದಲಾದ ತೀರಪಟ್ಟಣಗಳಲ್ಲಿ ಸುಂಕದವರ ಕಟ್ಟೆಗಳೊಳಗೆ ಬಿದ್ದಿರುತ್ತವೆ ಇಂಡಿಯಾ ಗವರ್ನ್‌ಮೆಂಟಿನವರು ಹೊಸದಾಗಿ ಹಾಕಿರುವ ಸುಂಕದ ದೆಸೆಯಿಂದ ಅವು ಮಾರಾಟಕ್ಕೆ ಬಾರದೆ ತಡೆಯಾಗಿರುವುದು ಇದನ್ನು ತರಿಸಿರುವ ಏಜಂಟರುಗಳು ಅದು ಇಲ್ಲಿ ಬಿಕರಿ ಆಗುವುದಿಲ್ಲವೆಂದೂ, ಅದನ್ನೆಲ್ಲಾ ಸುಟ್ಟುಬಿಡುವುದಾಗಿಯೂ ಇಲ್ಲವೇ ವಾಪಸು ಆಯಾ ಸ್ಥಳಗಳಿಗೆ ಕಳುಹಿಸಿಬಿಡುವುದಾಗಿಯೂ ಹೇಳುತ್ತಿದ್ದಾರೆ

ನಾಲ್ಕನೇ ಕೇರಳ ದೇಶೀಯ ನಾಯರ್ ಸಮಾಜವು ಅನಂತಶಯನದಲ್ಲಿ ಇದೇ ಮೇ ತಿಂಗಳ ತಾ ೧೪ ಮತ್ತು ೧೫ ಶನಿವಾರ ಭಾನುವಾರ ನಡೆಯುವುದೆಂದೂ, ನ್ಯಾಯಾಧೀಶರಾದ ಮೆ|| ಸಿ ಶಂಕರನ್ ನಾಯರ್‌ಯವರು ಅಧ್ಯಕ್ಷರಾಗಿ ನಿಂತು ಸಭೆಯನ್ನು ಜರುಗಿಸುವುದಕ್ಕೆ ಒಪ್ಪಿಕೊಂಡಿದ್ದಾರೆಂದೂ ಪ್ರಕಟವಾಗಿದೆ

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಜಿಂಡ್ ಸಂಸ್ಥಾನದ ರಾಜರು ತಮ್ಮ ಶೀಮೆಯಲ್ಲಿಯೂ ಅಚ್ಚಿನ ಕಾರ್ಖಾನೆಯನ್ನಿಡತಕ್ಕವರು ವರ್ತಮಾನ ಪತ್ರಿಕೆಗಳನ್ನು ನಡಿಸತಕ್ಕವರೂ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆದುಕೊಂಡು ದೇವನಾಗರಿಯನ್ನು ಕಟ್ಟಿ ಲೈಸೆನ್ಸು ಪಡೆಯಬೇಕೆಂಬದಾಗಿ ಇಸ್ತಿಹಾರು ಹಾಕಿಸಿರುತ್ತಾರೆ

* * *

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಖಾಂಡೇಶ್ ಡಿಸ್ಟ್ರಿಕ್ಟಿನ ಪೋಲೀಸಿನವರು ವಾರಂಟಿನ ಸಮೇತ ಪೂನಾ ಪಟ್ಟಣಕ್ಕೆ ಹೋಗಿ ಕೇಶವನಾರಾಯಣ ಧಾಮಲೇ ಎಂಬೊಬ್ಬ ಬ್ರಾಹ್ಮಣ ದೊಡ್ಡ ಮನುಷ್ಯನನ್ನು ರಾಜದ್ರೋಹಾಪರಾಧ ಮಾಡಿದವನೆಂದು ದಸ್ತಗಿರಿ ಮಾಡಿ ವಿಚಾರಣೆಗಾಗಿ ಧೂಲಿಯಾ ಪಟ್ಟಣಕ್ಕೆ ಸಾಗಿಸಿಕೊಂಡು ಹೋದರು

* * *

ಇಂಡಿಯಾ ಗವರ್ನ್‌ಮೆಂಟಿನವರು ಈ ರಾಷ್ಟ್ರದ ಪೋಸ್ಟ್ ಆಫೀಸುಗಳಲ್ಲಿ ಪ್ರಜೆಗಳ ಪ್ರಯೋಜನಾರ್ಥವಾಗಿ ಸೇವಿಂಗ್ಸ್ ಬ್ಯಾಂಕುಗಳನ್ನು ಏರ್ಪಡಿಸಿರುತ್ತಾರಷ್ಟೆ ಈ ರಾಷ್ಟ್ರದ ಪ್ರಜೆಗಳು ಈ ಬ್ಯಾಂಕುಗಳಲ್ಲೆಲ್ಲಾ ಕಳೆದ ಮಾರ್ಚಿ ಆಖೈರು ವರೆಗಿನ ಸಂವತ್ಸರದಲ್ಲಿ ೭೭ ಲಕ್ಷ ರೂಪಾಯಿಗಳನ್ನು ಹಾಕಿದ್ದಾರೆಂದು ತಿಳಿದು ಬಂದಿದೆ

* * *

ಪೂರ್ವ ಬಂಗಾಳಕ್ಕೆ ಸೇರಿದ ಢಕ್ಕಾನಗರದಲ್ಲಿ ಕಮಾಖ್ಯನಾಗಾ ಎಂಬವನು ಪೋಲೀಸ್‌ಸುದ್ದೇದಾರನಂತೆ ವೇಷ ಹಾಕಿಕೊಂಡು ಅರಿಯದ ಪ್ರಜೆಗಳಿಂದ ಹಣಕಾಸು ಕಿತ್ತು ತಿನ್ನುತ್ತಿದ್ದನು ಸರ್ಕಾರದವರು ಅವನನ್ನು ಹಿಡಿದು ದರ್ಯಾಪ್ತಿ ಮಾಡಿದ್ದರಲ್ಲಿ ಅವನು ಮಾಡಿದ ಅಪರಾಧವು ರುಜುವಾತಾದದ್ದರಿಂದ ಅವನಿಗೆ ಎರಡು ತಿಂಗಳ ಕಠಿಣ ಸಜಾ ವಿಧಿಸಿದರು

* * *

ಪೂರ್ವ ಬಂಗಾಳಕ್ಕೆ ಸೇರಿದ ಮಿದ್ನಾಪುರದಲ್ಲಿ ಕಳೆದ ಬುಧವಾರ ಮೂರು ಮೈಲಿ ವಿಸ್ತಾರವಾದ ಪ್ರದೇಶದಲ್ಲಿ ಭಯಂಕರವಾದ ಮಳೆಯೂ ಅಪಾರವಾದ ಸುಂಟರಗಾಳಿಯೂ ವ್ಯಾಪ್ತವಾದುವು ಅನೇಕ ಮನೆಗಳೂ ಭಾರೀ ಕಟ್ಟಡಗಳೂ ಅಂಗಡಿ ಮುಂಗಟ್ಟುಗಳೂ ಗಿಡಮರಗಳೂ ಕೊಚ್ಚಿ ಬಿದ್ದುಕೊಂಡವು ನೂರಾರು ಪ್ರಜೆಗಳು ನಿಲ್ಲುವುದಕ್ಕೆ ನೆರಳಿಲ್ಲದೆ ಕಷ್ಟಪಡುವ ಹಾಗಾಯಿತು

* * *

ಪೂರ್ವ ಬಂಗಾಳಕ್ಕೆ ಸೇರಿದ ಮದುಪಾಣಿ ಎಂಬ ಗ್ರಾಮದಲ್ಲಿ ಒಬ್ಬ ಮುಸಲ್ಮಾನರವನು ಒಬ್ಬ ಬ್ರಾಹ್ಮಣ ಸ್ತ್ರೀಯನ್ನು ಮದುವೆ ಮಾಡಿಕೊಂಡನು ಹಿಂದುಗಳಿಗೆ ಮಹಮದೀಯರ ಮೇಲೆ ಅದಕ್ಕಾಗಿ ಕೋಪವುಂಟಾಗಿ ಅನೇಕ ಮಹಮದೀಯರ ಮನೆ ಮಠಗಳನ್ನು ಲೂಟಿ ಮಾಡಿದ್ದಲ್ಲದೆ ಸುಟ್ಟು ಹಾಕಿದರು ದೊಂಬಿ ಈಗ ಹಬ್ಬಿ ವ್ಯಾಪ್ತವಾಯಿತೆಂದು ತಂತಿ ವರ್ತಮಾನ ಬಂದಿದೆ

* * *

ಕರಾಚಿ ಪಟ್ಟಣದಲ್ಲಿರುವ ಒಬ್ಬ ಪಂಜಾಬಿ ವರ್ತಕನು ಜರ್ಮನಿ ದೇಶದಿಂದ ಜಹಜಿನ ಮೇಲೆ ಕೊಕೇನ್ ಎಂಬ ಮದ್ಯವನ್ನು ಗುಟ್ಟಾಗಿ ಬೇರೇ ಚೀಟಿ ಅಂಟಿಸಿದ ಶೀಸೆಗಳಲ್ಲಿ ತರಿಸಿದನು ಅದೆಲ್ಲಾ ಒಟ್ಟು ಸುಮಾರು ೩೦,೦೦೦ ರೂಪಾಯಿ ಬೆಲೆಯಾಗುವಷ್ಟಿತ್ತು ಕರಾಚಿ ಪಟ್ಟಣದ ಸುಂಕದ ಕಟ್ಟೆಯವರು ಅದನ್ನು ಸ್ವಾಧೀನಪಡಿಸಿಕೊಂಡು, ಅವನನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ

* * *

ಕಲ್ಲಿಕೋಟೆಯ ಹತ್ತಿರ ಪರಪನಂಗಡಿ ಎಂಬ ಗ್ರಾಮದಲ್ಲಿ ಕುಂಞಹಾಜಿ ಎಂಬೊಬ್ಬ ಮಾಪಿಳ್ಳೆಯು ಕೋರ್ಟಿನ ವಾಜ್ಯಗಳಲ್ಲಿ ಹೊಡೆದಾಡುತ್ತಿದ್ದು ಒಂದು ಹೋಟೇಲಿನ ಜಗಲಿಯ ಮೇಲೆ ಮಲಗಿ ನಿದ್ದೆ ಮಾಡುತ್ತಿರುವಾಗ ಕೆಲವು ಜನ ದ್ವೇಷಿಗಳು ಅವನ ಬಾಯಿ ತುರುಕಿ ಅವನ ಎರಡು ಕಣ್ಣುಗಳನ್ನೂ ಚುಚ್ಚಿ ಕುರುಡು ಮಾಡಿಬಿಟ್ಟರು ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ

* * *

ಬರೋಡಾ ಸಂಸ್ಥಾನದ ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ವಸ್ತು ಶಾಸ್ತ್ರ ಶೋಧನಾ ವಿದ್ಯಾ ಶಾಲೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳನ್ನು ತರಪೇತು ಮಾಡಬೇಕೆಂದು ಗಾಯಕವಾಡಿ ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರೆ ಈ ವಿದ್ಯಾನಿಲಯವನ್ನು ಕಟ್ಟುವುದಕ್ಕೆ ಮೂರು ಲಕ್ಷ ರೂಪಾಯಿ ಅಂದಾಜು ಮಾಡಲ್ಪಟ್ಟಿದೆ ಶಾಸ್ತ್ರ ಶೋಧನೆಯಲ್ಲಿ ಪ್ರಸಿದ್ಧರಾದ ಪಂಡಿತರು ಸೇರಿ ಏರ್ಪಾಡು ಮಾಡುತ್ತಿದ್ದಾರೆ

* * *

ಟಿಬೆಟ್ಟಿನ ರಾಜಕೀಯ ವಿಚಾರಗಳನ್ನು ಕುರಿತು ಇಂಗ್ಲಿಷ್ ಮತ್ತು ಚೀನಾ ಗವರ್ನ್‌ಮೆಂಟುಗಳವರು ಪರಸ್ಪರ ಕಾಗದ ಪತ್ರಗಳನ್ನು ಬೆಳೆಸುತ್ತಾ ಚರ್ಚೆ ನಡಿಸುತ್ತಾ ಬಂದಿದ್ದಾರೆ ಟಿಬೆಟ್ಟನ್ನು ತ್ಯಜಿಸಿ ಹೊರಟುಬಂದು ಡಾರ್ಜೀಲಿಂಗಿನಲ್ಲಿ ನೆಲಸಿರುವ ದಲಾಯಿಲಾಮಾ ಎಂಬ ಬೌದ್ಧ ಗುರುವು ಅಲ್ಲಿಂದ ಹೊರಡುವಹಾಗಿಲ್ಲವೆಂದೂ, ಅತ್ಲೀ ಶಾಶ್ವತವಾಗಿ ಇದ್ದುಬಿಡುವಂತೆ ಕಾಣುತ್ತಿದೆ ಎಂದೂ ಪ್ರಕಟವಾಗಿದೆ

* * *

ಕಲ್ಕತ್ತಾ ಪಟ್ಟಣದಲ್ಲಿ ಹೋದ ಭಾನುವಾರದ ದಿನ ಬಹು ಭಯಂಕರವೂ ಅಪೂರ್ವವೂ ಆದ ಬಿರುಗಾಳಿ ಮಳೆ ಕಲ್ಮಳೆಗಳು ವ್ಯಾಪ್ತವಾದವು ಇಂಥಾ ಕಲ್ಮಳೆಯನ್ನು ೪೦ ವರುಷಗಳಿಂದ ಅಲ್ಲಿ ಯಾರು ನೋಡಿರಲಿಲ್ಲ ಆನೆಕಲ್ಲು ಸುಮಾರಾಗಿ ಕೋಳಿ ಮೊಟ್ಟೆಗಳ ಗಾತ್ರವಿದ್ದು ಸುಮಾರು ಒಂದುವರೆ ಗಂಟೆ ಹೊತ್ತು ಬಿಡದೆ ಸುರಿಯಿತು ಅಪಾರವಾಗಿ ಗುಡಿಗಿದರೂ ಅರ್ಧ ಅಂಗುಲದಷ್ಟು ಮಾತ್ರ ಮಳೆ ಆಗಿರುತ್ತದೆ

* * *

ಹಿಂದಿನ ಭಾನುವಾರ ಕಲ್ಕತ್ತಾ ಪಟ್ಟಣದ ಸ್ಮಾಲ್ ಕಾಜ್ ಕೋರ್ಟಿನ ಆವರಣದೊಳಗೆ ಬಿದ್ದಿದ್ದ ಸಕ್ಕರೆ ಕಡ್ಡಿಯನ್ನು ತಿಂಡಿ ಪದಾರ್ಥವೆಂದು ಊಹಿಸಿ ಒಬ್ಬನು ಎತ್ತಿ ಬಾಯಲ್ಲಿ ಹಾಕಿಕೊಂಡು ತಿಂದುಬಿಟ್ಟನು ಇನ್ನೊಬ್ಬನು ರುಚಿ ನೋಡಿ ಉಗಿದುಬಿಟ್ಟನು ಇಬ್ಬರಿಗೂ ಹೊಟ್ಟೆನೋವು ಪ್ರಾಪ್ತವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು ಮೊದಲನೆಯವನು ಮೃತಪಟ್ಟನು ಅವರು ತಿಂದ ಪದಾರ್ಥದಲ್ಲಿ ವಿಷವಿತ್ತೆಂದು ಗೊತ್ತಾಯಿತು

* * *

ಪೂರ್ವ ಬಂಗಾಳಕ್ಕೆ ಸೇರಿದ ಲಕ್ಷ್ಮೀಪುರ ಮತ್ತು ಕಿಸೋರ್‌ಗಂಜ್ ಎಂಬೀ ದೊಡ್ಡ ಪಟ್ಟಣಗಳಲ್ಲಿ ಕಳೆದವಾರ ಅಪೂರ್ವವಾದ ಸುಂಟರಗಾಳಿಯೂ ಮಳೆಯೂ ಆನೆಕಲ್ಲೂ ಬಿದ್ದು ಮಧ್ಯಾಹ್ನ ಹೊತ್ತು ಅನೇಕ ಮನೆಗಳೂ ಮಠಗಳೂ ಸರ್ಕಾರಿ ಕಟ್ಟಡಗಳೂ ಬಿದ್ದು ಹೋದವು ಒಂದು ಮಠದಲ್ಲಿ ಏಳು ಮಂದಿ ಮಕ್ಕಳಿಗೆ ಜಖಂ ಆಗಿರುತ್ತದೆ ಒಂದು ಪಟ್ಟಣದಲ್ಲಿ ಹತ್ತು ಸಾವಿರ ರೂಪಾಯಿನ ಮಾಲುಗಳು ನಷ್ಟವಾದವು.

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಲಾಹೋರ್ ಪಟ್ಟಣದಲ್ಲಿ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರೂ ಒಬ್ಬ ಜಮಾದಾರನೂ ಸೇರಿ ಷಾದಿ ಎಂಬವನನ್ನು ಲಾಕಪ್ಪಿನಲ್ಲಿ ಒದ್ದು ಹಿಂಸೆ ಮಾಡಿದ್ದರಿಂದ ಅವನು ಸತ್ತುಹೋದನು ಇದು ಮೊಕದ್ದಮೆ ಆದಾಗಲೇ ಪೋಲೀಸ್ ಅಧಿಕಾರಿಗಳು ಮೃತಪಟ್ಟವನು ಮೆಟ್ಲಿನಿಂದ ಇಳಿಯುವಾಗ್ಗೆ ಬಿದ್ದು ಸತ್ತುಹೋದನೆಂದು ಸಮಾಧಾನ ಹೇಳಿದರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೊದಲನೇ ಅಪರಾಧಿಗೆ ಐದು ವರುಷವೂ ಎರಡನೇ ಅಪರಾಧಿಗೆ ನಾಲ್ಕು ವರುಷವೂ ಕಠಿಣ ಸಜಾ ವಿಧಿಸಿರುತ್ತಾರೆ

* * *

ಹಿಂದಿನ ಭಾನುವಾರ ನಡುಮಧ್ಯಾಹ್ನ ಬೊಂಬಾಯಿನಿಂದ ಸುಮಾರು ೫೦ ಮೈಲಿ ದೂರದಲ್ಲಿ ಸಾಮಾನ್ ಭರ್ತಿಯಾಗಿದ್ದ ರೈಲ್ ಗಾಡಿಯು ಸೋಳಾಪುರದಿಂದ ವಾಲ್ತಾರಿಗೆ ಹೋಗುತ್ತಿದ್ದಾಗ ಬಂಡಿಗಳೊಳಗೆ ದ್ರಾವಕಾದಿಗಳು ಹತ್ತಿಕೊಂಡು ಉರಿಯುತ್ತಿದ್ದುವು ಗಾಡಿಗಳನ್ನು ನಿಲ್ಲಿಸಿ ನೋಡಿದಾಗ ಆರು ಸಾಮಾನ್ ಬಂಡಿಗಳು ಸಂಪೂರ್ಣವಾಗಿ ಉರಿದು ಬೂದಿಯಾದುವು ಎರಡು ಗಾಡಿಗಳು ಮಾತ್ರ ಅರ್ಧ ಉರಿದು ಉಳುಕೊಂಡವು ಅದರ ದೆಸೆಯಿಂದ ಎರಡು ದಿನಗಳ ತನಕ ಆ ಕಂಬಿಗಳ ಮೇಲೆ ರೈಲ್ ಗಾಡಿಗಳ ಸಂಚಾರವು ನಿಂತು ಹೋಗಿತ್ತು

* * *

ಹೋದ ವರುಷ ಮದರಾಸ್ ಆಧಿಪತ್ಯದಲ್ಲೆಲ್ಲಾ ಹುಲಿಗಳ ದೆಸೆಯಿಂದ ೨೪೧ ಜನರೂ, ಚಿರ್ತೆಕಿರುಬಗಳಿಂದ ೯೧ ಜನರೂ, ಇತರ ಕಾಡುಮೃಗಗಳಿಂದ ೪೮೦ ಜನರೂ, ಸರ್ಪಗಳೂ ಹಾವುಗಳೂ ಕಚ್ಚಿ ೨,೬೮೩ ಜನರೂ ಮೃತಪಟ್ಟಿರುತ್ತಾರೆ ಮತ್ತು ೧೩,೯೬೪ ಗೋಕಾಯಿಗಳು ಮೃಗಗಳ ಕಾಟದಿಂದ ಅಕಾಲ ಮರಣವನ್ನು ಹೊಂದಿದವು, ಸರ್ಪಗಳು ಕಡಿದು ೧,೫೯೯ ರಾಸುಗಳು ಲಯವಾಗಿರುತ್ತವೆ ಅತ್ತಲಾಗಿ ಹೋದ ವರುಷ ೧೬,೨೫೬ ಕಾಡು ಮೃಗಗಳನ್ನು ಶಿಕಾರಿ ಮಾಡಿ ಕೊಂದು ಹಾಕಿದ್ದಕ್ಕೆ ಸರ್ಕಾರದಿಂದ ಇನಾಮುಗಳು ಸಂದಿರುತ್ತವೆ

* * *

ಕೊಯಮುತ್ತೂರಿನಿಂದ ೫ ಮೈಲಿ ಫಾಸಲೆಯಲ್ಲಿರುವ ಪರೂರು ಪೆಟ್ಟಿ ಪಾಳ್ಯದ ಹತ್ತಿರ ಒಂದು ತೋಪಿನೊಳಗೆ ನೂರಾರು ಜನರು ಸೇರಿ ಜೂಜಾಡುತ್ತಿದ್ದರು ಪೋಲೀಸ್ ಇನ್ಸ್‌ಪೆಕ್ಟರ್ ಅರ್ಪುದಸ್ವಾಮಿ ಪಿಳ್ಳೆಯವರು ಆಯುಧಪಾಣಿಗಳಾದ ಪೋಲೀಸಿನವರ ಸಂಗಡ ಗುಟ್ಟಾಗಿ ಹೋಗಿ ಆ ತೋಪಿನ ಸುತ್ತಲೂ ಪೇರಾಯಿಸಿಕೊಂಡು ಪರಿಕ್ಷೆ ಮಾಡುವಲ್ಲಿ ೬೦ ಜನರು ಜೂಜಾಡುತ್ತಿದ್ದು ಸಿಕ್ಕಿ ಬಿದ್ದರು ಆ ಪೈಕಿ ಕೆಲವರು ತಪ್ಪಿಸಿಕೊಂಡು ಓಡಿಹೋದರು ಮೂವತ್ತು ಮಂದಿಯನ್ನು ಅವರ ಬಳಿ ಸಿಕ್ಕಿದ ಸುಮಾರು ೩೦ ಚಿಲ್ಲರೆ ರೂಪಾಯಿ ಸಮೇತ ದಸ್ತಗಿರಿ ಮಾಡಿರುತ್ತಾರೆ

* * *

ಸಿಲ್‌ಹಟ್ ಪ್ರಾಂತ್ಯಕ್ಕೆ ಸೇರಿದ ಜಯಚಂದ್ ಎಂಬ ಊರಿನಲ್ಲಿ ಮನಮೋಹನ ಸರ್ಕಾರ್ ಮತ್ತು ಸನಾತನ ಚಂದ್ರದತ್ತ ಎಂಬಿಬ್ಬರು ಬಂಗಾಳೀ ಪ್ರತಿವಾದಿಗಳು ಒಬ್ಬ ವರ್ತಕನನ್ನು ಮೋಸಪಡಿಸಿ ೧೫೮ ೭೦೦ ರೂಪಾಯನ್ನು ಅವನಿಂದ ವಸೂಲ್ಮಾಡಿಕೊಂಡರು ಪೋಲೀಸಿನವರು ಮನಮೋಹನನನ್ನು ಹಿಡಿದು ಅವನ ಮನೆಯನ್ನು ಶೋಧನೆಮಾಡಿದಾಗ ೧೩,೦೦೦ ರೂಪಾಯಿ ಸಿಕ್ಕಿತು ಮ್ಯಾಜಿಸ್ಟ್ರೇಟರು ಅವನಿಗೆ ಎರಡು ವರುಷ ಕಠಿಣಸಜವನ್ನೂ ೧೦೦ ರೂಪಾಯಿ ಜುಲ್ಮಾನೆಯನ್ನೂ ಜುಲ್ಮಾನೆ ಪಾವತಿ ಆಗದಿದ್ದರೆ ಇನ್ನಾರು ತಿಂಗಳ ಕಠಿಣ ಸಜವನ್ನೂ ವಿಧಿಸಿರುತ್ತಾರೆ ಎರಡನೇ ಅಪರಾಧಿಯು ಇನ್ನೂ ಸಿಕ್ಕಿ ಇಲ್ಲ.

* * *

ಲಾಹೋರ್ ಮ್ಯುನಿಸಿಪಾಲಿಟಿಯವರು ಆ ಪಟ್ಟಣದ ಕಸಬು ಕಲಾಕೌಶಲ್ಯಗಳನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಪ್ರತಿ ವರುಷವೂ ಆ ಪಟ್ಟಣದಲ್ಲಿ ಒಂದು ಪ್ರದರ್ಶನವನ್ನು ನಡಿಸಬೇಕೆಂದೂ ಅದಕ್ಕಾಗಿ ೩,೪೦೦ ರೂಪಾಯಿ ಪ್ರಕಾರ ಖರ್ಚು ಮಾಡಬೇಕೆಂದೂ ತೀರ್ಮಾನ ಮಾಡಿರುತ್ತಾರೆ ಈ ಪ್ರದರ್ಶನದ ಕಮಿಟಿಗೆ ಖಾನ್ ಬಹದ್ದೂರ್ ಸರ್ದಾರ್ ಮಹಮದ್ ಆಲಿಯವರು ಪ್ರೆಸಿಡೆಂಟರಾಗಿಯೂ, ಬ್ಯಾರಿಸ್ಟರ್ ಮೆ|| ದುನೀಚಂದರವರು ಸೆಕ್ರೆಟರಿಯಾಗಿಯೂ ಚುನಾಯಿಸಲ್ಪಟ್ಟಿರುವರು ಈ ಪ್ರದರ್ಶನವನ್ನು ಮಾಡುವುದಕ್ಕೆ ತಲಾ ಮೂರು ಕಾಸಿನಂತೆ ಫೀಜು ವಸೂಲ್ಮಾಡಬೇಕೆಂದೂ, ಉತ್ಕೃಷ್ಟವಾದ ವಸ್ತುಗಳಿಗೆ ಬಹುಮಾನಗಳನ್ನು ಕೊಡಬೇಕೆಂದೂ ಗೊತ್ತುಮಾಡಲ್ಪಟ್ಟಿದೆ.

* * *

ನಾಗೂರು ನಾಗಪಟ್ಟಣದಲ್ಲಿ ಭಾರೀ ಉಪ್ಪಿನ ವರ್ತಕನಾಗಿದ್ದು ಕಾಲವಾದ ಸುಬ್ರಹ್ಮಣ್ಯಪಿಳ್ಳೆ ಎಂಬಾತನು ತನ್ನ ಆಸ್ತಿಯಲ್ಲಿ ೧೩,೫೫೦ ರೂಪಾಯನ್ನು ಯಾವುದಾದರೊಂದು ಧರ್ಮ ಕಾರ್ಯಕ್ಕೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿದ್ದನು ಆತನ ಮಕ್ಕಳು ಆ ಪಟ್ಟಣದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸುವುದಾಗಿ ಒಪ್ಪಿಕೊಂಡರು ಅದಕ್ಕೆ ಮ್ಯುನಿಸಿಪಾಲಿಟಿಯವರು ೮೫೦ ರೂಪಾಯಿ ಬಾಳುವ ನಿವೇಶನವನ್ನು ಕೊಂಡುಕೊಟ್ಟರು ಆ ಜಮೀನಿನ ಮೇಲೆ ಸುಮಾರು ೪,೦೦೦ ರೂಪಾಯಿ ಖರ್ಚಿಸಿ ಒಂದು ಆಸ್ಪತ್ರೆಯು ಕಟ್ಟಿ ಸಿದ್ಧವಾಯಿತು ತಂಜಾವೂರಿನ ಕಲೆಕ್ಟರಾದ ಮೆ|| ಬೆಡ್‌ಫರ್ಡ್‌ಯವರು ಕಳೆದವಾರ ಆ ಆಸ್ಪತ್ರೆಯನ್ನು ಪ್ರತಿಷ್ಠೆ ಮಾಡಿ, ಅವರ ಧರ್ಮಬುದ್ಧಿಯನ್ನು ಕೊಂಡಾಡಿದರು

* * *

ಇಂಡಿಯಾ ಗವರ್ನ್‌ಮೆಂಟಿನ ೧೯೧೦ನೇ ಇಸವಿಯ ಮೂರನೇ ನಂಬರ್ ಕಾನೂನ್ ಪ್ರಕಾರ ಕಳೆದ ೧೯೦೮ನೇ ಇಸವಿ ಜೂಲೈ ತಾ ೧೪ ರಲ್ಲಿ ಗವರ್ನ್

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್.

ಸುಳ್ಳು ಬಾತ್ಮಿ

ಅಯ್ಯಾ,

ತಮ್ಮ ಇದೇ ಮಾಹೆ ೭ ನೇ ತಾರೀಖು ಪತ್ರಿಕೆಯಲ್ಲಿ ಇದೇ ಕಾನಕಾನಹಳ್ಳಿ ತಾಲ್ಲೂಕು ಮರಲವಾಡಿಯಲ್ಲಿ ಕಳೆದ ಕಾಮನ ಹಬ್ಬದಲ್ಲಿ ನೂರಾರು ಜನರಿಗೆ ಸಿದ್ಧವಾಗಿದ್ದ ಊಟ ಇದೇ ಊರು ವೀರಭದ್ರಯ್ಯನವರ ಮಗ ನಂಜುಂಡಪ್ಪ ಎಂಬುವವನು ಹುಲಿವೇಷ ಹಾಕಿದ್ದಕ್ಕೆ ಮುಸಲ್ಮಾನರು ಗಲಾಟೆ ಮಾಡಿದ್ದರಿಂದ ನೋಟಕರೆಲ್ಲರೂ ಊಟ ಸಹ ಮಾಡದೆ ಹೊರಟುಹೋದ್ದರಿಂದ ತುಂಬಾ ನಷ್ಟವುಂಟಾಯಿತೆಂಬುವ ಬಾತ್ಮಿಯನ್ನು ನೋಡಿ ತುಂಬಾ ಆಶ್ಚರ್ಯಪಡಬೇಕಾಗಿದೆ ಆ ದಿನ ಇಲ್ಲಿ ತಯಾರಾಗಿದ್ದ ಊಟ ಮನೆ ಮನೆಗೂ ರಾಗಿ ಎತ್ತಿದ ಹಿಟ್ಟು ಮತ್ತು ಅವರೆಕಾಳು ಹಲಸಿನಕಾಯಿ ಸಾರು ಆಗಿತ್ತು ಮಾತ್ರವಲ್ಲದೆ ಆ ಊಟವು ರಾತ್ರಿ ೯ ೧೦ ಘಂಟೆಗೆ ಬಡಿಸಲ್ಪಡುವುದಾಗಿತ್ತು ಸಾಧಾರಣವಾಗಿ ತಮಾಷೆ ನೋಡಬರತಕ್ಕವರು ಪುಣ್ಯವಂತರೇ ಹೊರತು ಬಡವರು ಅಲ್ಪಸ್ವಲ್ಪ. ತಮಾಷೆನಂತರ ಪುಣ್ಯವಂತರೂ ಮತ್ತು ದೂರದ ಹಳ್ಳಿಗಳವರೂ ಹೊರಟುಹೋದರು ಉಳಿದ ಬಡವರು ಮಾತ್ರ ಊಟಕ್ಕೆ ಕಾದಿದ್ದರು ಕಡೆಯಲ್ಲಿ ಅನೇಕ ಬಡ ಹೊಟೆ, ಮಾದಿಗರಿಗೆ ಹಿಟ್ಟು ಸಾಲದೆ ನಿಟ್ಟುಸಿರಿನಿಂದ ಗೊಣಗಿಕೊಂಡು ಹೊರಟುಹೋದರು ಆ ದಿನ ತಾಲ್ಲೂಕು ಪೊಲೀಸು ಇನ್ಸ್‌ಪೆಕ್ಟರ್‌ರವರು ಜಮಾದಾರರು ಇತರ ಪೊಲೀಸು ಸಿಬ್ಬಂದಿಯೊಡನೆ ಇಲ್ಲಿ ಹಾಜರಿದ್ದರು ಮೇಲ್ಕಂಡ ಹುಲಿ ವೇಷ ಹೊರಟಾಗ ಮುಸಲ್ಮಾನರು ಪೊಲೀಸಿಗೆ ರಿಪೋರ್ಟು ಕೊಟ್ಟರೇ ಹೊರತು ಯಾವ ವಿಧವಾದ ಗಲಾಟೆ ಮಾಡಲಿಲ್ಲ ಗಲಾಟೆಯಿಂದ ಜನರು ಹೊರಟುಹೋದರೆಂಬುವ ಮಾತು ಶುದ್ಧ ಸುಳ್ಳಾಗಿದೆ ಇಲ್ಲಿನ ಸ್ಕೂಲಿನಲ್ಲಿ ಅನೇಕ ವರ್ಷಗಳಿಂದ ಒಬ್ಬರೇ ಉಪಾಧ್ಯಾಯರಿರುತ್ತಾರೆಂತಲೂ ಒಬ್ಬರಿಬ್ಬರು ಸಹಾ ಪ್ಯಾಸಾಗಲಿಲ್ಲವೆಂದು ಬರೆದಿರುತ್ತಾರೆ ಇಲ್ಲಿಗೆ ಸ್ಕೂಲು ಇನ್ಸ್‌ಪೆಕ್ಟರುಗಳು ಬಂದು ಒಂದು ಒಳ್ಳೆ ಕಟ್ಟಡ ಕಟ್ಟಿಸಿಕೊಟ್ಟರೆ ಇನ್ನೂ ಮೇಷ್ಟರುಗಳನ್ನು ಜಾಸ್ತಿಮಾಡಿ ಹೆಚ್ಚು ಪ್ರೋತ್ಸಾಹ ಕೊಡುವುದಾಗಿ ಹೇಳಿದರು ಆನೇಕ ದೊಡ್ಡ ಮನುಷ್ಯರು ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿ ಪುನಃ ಗಮನಕ್ಕೆ ತೆಗೆದುಕೊಳ್ಳದೆ ಬೇಕೋಬಿಟ್ಟಿಯಾಗಿರುತ್ತಾರೆ ಮತ್ತು ಸ್ಕೂಲು ಮೆಂಬರುಗಳು ಒಗ್ಗಟ್ಟಾಗಿಲ್ಲ ಹಾಲಿ ಗೌರ್ನಮೆಂಟ್ ಸ್ಕೂಲು ಪಿಳ್ಳಾರಿ ಗುಡಿಯಲ್ಲಿ ನಡೆಯುತ್ತದೆ ಇವರಿಗೆ ವಿದ್ಯಾಭ್ಯಾಸ ಅವಶ್ಯವಾಗಿದ್ದರೆ ಈ ರೀತಿ ಎಂದಿಗೂ ಉದಾಸೀನವಾಗಿರಲಾರರೆಂಬುವದು ವಾಚಕರೇ ಊಹಿಸಬಹುದು ಹೀಗಿರುವಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ಉದಾಸೀನವಾಗಿರುತ್ತಾರೆಂದು ಸರ್ಕಾರಿ ನೌಕರರ ಮೇಲೆ ಸುಳ್ಳು ಅಪವಾದ ಹುಟ್ಟಿಸಿ ದೂಷಿಸುವುದು ಯಾವ ಧರ್ಮ? ಇಂಥಾ ಸುಳ್ಳು ಬಾತ್ಮಿಗಳನ್ನು ಇನ್ನು ಮುಂದಕ್ಕೆ ಆ ಬಾತ್ಮಿದಾರರು ಕೊಡಲಾರರೆಂದು ನಂಬಿರುತ್ತೇನೆ

ಚಂದಾದಾರ್

ಸ್ತ್ರೀ ವಿದ್ಯಾಭ್ಯಾಸ

ಅಯ್ಯಾ,

ಸ್ತ್ರೀ ವಿದ್ಯಾಭ್ಯಾಸಕ್ಕೆ ಭರತಖಂಡದಲ್ಲಿ ನಮ್ಮ ಮೈಸೂರು ದೇಶವೇ ಹೆಚ್ಚು ಶ್ಲಾಘನೀಯವಾದದ್ದಾಗಿದೆ ಅಂದರೆ ಪ್ರತಿ ವರುಷವೂ ನಮ್ಮ ಹೆಣ್ಣುಮಕ್ಕಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅವರವರೇ ಸಂಘಗಳನ್ನ ಮಾಡಿಕೊಂಡು ಲೋಕ ವ್ಯವಹಾರಗಳನ್ನು ಕುರಿತು ಮಾತನಾಡಿಕೊಳ್ಳುತ್ತಿರತಕ್ಕ ವೃತ್ತಾಂತಗಳು ವಗೈರಾ ನ್ಯೂಸ್ ಪೇಪರುಗಳಲ್ಲಿ ಪಬ್ಲಿಷ್ ಆಗುತ್ತಿರತಕ್ಕದ್ದು, ಇವುಗಳನ್ನು ಓದಿ ಎಲ್ಲಾ ಪ್ರಜೆಗಳೂ ಸಂತೋಷವುಳ್ಳವರಾಗಿ ಇದ್ದಾರೆ ನಡವಳಿಕೆಯಿಂದ ನಮ್ಮವರ ವಿದ್ಯೆಯ ಅನುಭವ ಪರೀಕ್ಷಿಸಿದರೆ ವಿದ್ಯಾವಂತರಾದ ಗಂಡುಹುಡುಗರಿಗಿಂತಲೂ ಹೆಣ್ಣುಮಕ್ಕಳ ವಿದ್ಯೆಯ ಫಲ ಜಗತ್ತಿಗೆ ಉಪಯೋಗವಾದೀತೆಂತ ತೋರುತ್ತದೆ ಕಾರಣವೇನೆಂದರೆ ವಿದ್ಯೆ ಎಂಬುವುದರ ಅರ್ಥ ಸರ್ವಸಮ್ಮತವಾದ ಜ್ಞಾನವೆಂತ ಎಲ್ಲರಿಗೂ ತಿಳಿದದ್ದಾಗಿಯೇ ಇದೆ ಮೌಢ್ಯ ನಡವಳಿಕೆಯಿಂದ ತುಂಬಿರತಕ್ಕ ನಮ್ಮ ದೇಶದಲ್ಲಿ ವಿದ್ಯಾಭಿವೃದ್ಧಿ ಆದರೆ ನಮ್ಮ ಹಿಂದುಗಳನ್ನು ಇಹಪರಗಳಲ್ಲಿ ಸಹಾ ಕೆಡಿಸುತ್ತಿರತಕ್ಕ ಮೌಢ್ಯ ಆಚಾರಗಳು, ಮತಸಂಬಂಧವಾದ ಅಸೂಯೆ ಇದರಿಂದ ಪ್ರಜೆಗಳಿಗೂ, ಗೌರ್ನಮೆಂಟಿಗೂ, ಸಂಭವಿಸುತ್ತಿರತಕ್ಕ ತೊಂದರೆ ಇವುಗಳೆಲ್ಲಾ ನಿರ್ನಾಮವಾಗುತ್ತೆಂಬ ಇರಾದೆಯಿಂದಲೇ ನಮ್ಮ ಗೌರ್ನಮೆಂಟಿನವರು ವಿದ್ಯೆಕ್ಕಾಗಿಯೇ ವಿಶೇಷ ಹಣ ಖರ್ಚುಮಾಡಿರತಕ್ಕದ್ದು ಗೌವರ್ನಮೆಂಟಿನ ಸದುದ್ದೇಶ್ಯ ಈ ಕೆಳಗಿನ ಅನುಭವದಿಂದ ಹೆಂಗಸರಿಂದಲೇ ಸಾರ್ಥಕವಾದೀತಾಗಿ ತೋರುತ್ತದೆ

೧ ಬೆಂಗಳೂರು ಶ್ರೀನಿವಾಸಮಂದಿರದಲ್ಲಿ ನಡೆಯುತಕ್ಕ ಆರ್ಯ ಮಹಿಳೆಯರ ಸಮಾಜದಲ್ಲಿ ಈಗ್ಗೆ ಕೆಲವು ದಿವಸದ ಕೆಳಗೆ ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ ಸುಪ್ರಸಿದ್ಧ ಮೆ॥ ಕೆ ಎಚ್. ರಾಮಯ್ಯ ಬಿ ಎ ಯವರ ಸಹೋದರಿ ಶ್ರೀಮತಿ ಮಹಲಕ್ಷ್ಮಿ ಅಮ್ಮಣ್ಣಿಯವರು ತಾವು ಮಾಡಿದ ತೀರ್ಥಾದಿ ಪುಣ್ಯಸ್ಥಳಗಳ ದರ್ಶನ ಇವುಗಳನ್ನ ಕುರಿತು ಉಪನ್ಯಾಸ ಮಾಡಿರತಕ್ಕದ್ದರಲ್ಲಿ, ಆ ಸ್ಥಳಗಳಲ್ಲಿ ಕಾಣತಕ್ಕ ವಿಶೇಷಗಳು ಅಲ್ಲೀ ಜನಗಳ ನಡವಳಿಕೆ—ಇವುಗಳನ್ನು, ಅನ್ಯಸ್ಥಳಗಳಲ್ಲಿ ಸಂಚರಿಸತಕ್ಕ, ಹೊಸ ಹೊಸ ಜನಗಳನ್ನ ಸಂಧಿಸತಕ್ಕದ್ದರಲ್ಲಿ ಉಂಟಾಗತಕ್ಕ ವ್ಯವಹಾರಜ್ಞತೆ, ತಿಳುವಳಿಕೆ—ಇವುಗಳನ್ನು ಸಹ ಬಹಳ ಚೆನ್ನಾಗಿ ವರ್ಣಿಸಿದ್ದಾರೆ ಇವರ ಉಪನ್ಯಾಸ ಸಮಸ್ತ ಪ್ರಜೆಗಳಿಗೂ ನಿಜತ್ವವನ್ನ ತಿಳಿಸತಕ್ಕದ್ದಾಗಿದೆ

೨. ಈಗ್ಗೆ ಕೆಲವು ದಿವಸದ ಹಿಂದೆ ಚೌರಿಂಗ್‌ಪೇಟೆಯಲ್ಲಿ ನಡೆದ ಆರ್ಯಮಹಿಳೆಯರ ಸಮಾಜದಲ್ಲಿ ಸೌ॥ ಸುಂದರಮ್ಮ ಎಂಬುವರು ಹಿಂದೂ ಸ್ತ್ರೀಯರ ವಿದ್ಯಾಭಿವೃದ್ಧಿ ವಿಷಯದಲ್ಲಿ ಇರತಕ್ಕ ಅನಾನುಕೂಲಗಳನ್ನ ಸ್ಪಷ್ಟವಾಗಿ ವಿವರಿಸಿದ್ದಾರೆ. ಇದು ನಿಜವಾದ ವಿಷಯವಾಗಿದೆ

ಪ್ರಜೆಗಳಲ್ಲಿ ವಿದ್ಯಾವಂತರಾದಹಾಗೆಲ್ಲಾ ಅವರ ತಿಳುವಳಿಕೆ ನಿಜತ್ವದಲ್ಲಿ ಕೃಷಿಮಾಡಲಿಕ್ಕೆ ಆರಂಭಿಸುತ್ತಾ ಬಂದರೆ, ದೇಶವೆಲ್ಲಾ ಒಳ್ಳೇ ಸ್ಥಿತಿಗೆ ಬರಲು ಕಾರಣವಾಗುತ್ತೆ ಜಗತ್ಕರ್ತನಾದ ಭಗವಂತನು ನಾನು ಮೇಲೆ ಹೇಳಿರತಕ್ಕ ನನ್ನ ಉಭಯ ಸಹೋದರಿಯರಿಗೂ, ಭೂಲೋಕದಲ್ಲಿ ನಿಜತ್ವವನ್ನೇ ಸ್ಥಾಪಿಸಿ ಲೋಕೋದ್ಧಾರ ಮಾಡುವುದಕ್ಕಾಗಿಯೇ ಜನ್ಮಿಸಿದಂತೆ ಅವರ ನಡವಳಿಕೆಯಿಂದ ಕಾಣುತ್ತಿರತಕ್ಕ ಮೆ॥ ಮಹದೇವ ಶಾಸ್ತ್ರಿ ಬಿ ಎ ಯವರಿಗೂ, ಮೆ॥ ಸಿ ರಾಮಲಿಂಗಾರೆಡ್ಡಿ ಎಮ್ ಎ ಯವರಿಗೂ ದೀರ್ಘಾಯುಸ್ಸು ಸಮಸ್ತ ಅನುಕೂಲಗಳು ಕೊಟ್ಟು ರಕ್ಷಿಸಲಿ

ಒಬ್ಬ ರಿಟೈರ್ಡ್ ಆಫೀಸರ್

ದೇವರು

ಅಯ್ಯಾ,

ವಾಚಕಮಹಾಶಯರೇ, ನೀವು ಒಂದಾನೊಂದು ಚಿತ್ರಚಮತ್ಕಾರವಾದ ನೂತನ ವಸ್ತುವನ್ನು ನೋಡಿದಾಗ ಆಶ್ಚರ್ಯಚಕಿತರಾಗಿ ಆಹಾ ಈ ಮಹತ್ಕಾರ್ಯವನ್ನು ಮಾಡಿದ ಮಹನೀಯನಾರಿರಬಹುದು? ಆತನ ಬುದ್ಧಿ ಚಾತುರಿಯು ಎಂಥಹ ಮೇಧಾಶಕ್ತಿಯುಳ್ಳದೋ ಆ ಪುಣ್ಯಪುರುಷನ ದರ್ಶನವು ನಮಗೊಂದು ಸಲವಾದರೂ ದೊರೆತರೆ ಕೃತಕೃತ್ಯರಾಗಬಹುದೆಂದು ಮನಸ್ಸು ಆತನ ದರ್ಶನಕಾಂಕ್ಷಿಯಾಗಿರುವುದಲ್ಲವೆ? ಮನುಷ್ಯನಂತೆ ಮಾತನಾಡುವ ಫೋನೋಗ್ರಾಫ್ ಅಥವಾ ಗ್ರಾಮಫೋನ್, ಎಂಬ ಯಂತ್ರವನ್ನು ನೋಡಿದಾಗ ಇದನ್ನು ಮಾಡಿದ ಮಹನೀಯನು ಸ್ತೋತ್ರಾರ್ಹನೆಂದು ಅನೇಕ ಜನಗಳು ಅಂದುಕೊಳ್ಳುವುದನ್ನು ನೀವೆಲ್ಲರೂ ಪ್ರಾಯಶಃ ನೋಡದಿರಲಾರಿರಿ ಅಸ್ಥಿರವಾದ ವಸ್ತುಗಳನ್ನು ಆಧಾರಪೂರ್ವಕವಾಗಿ ನಿರ್ಮಿಸಿದ ಮನುಷ್ಯಮಾತ್ರರಲ್ಲಿ ನಮಗೀರೀತಿಯಾದ ಭಕ್ತಿಪೂರಿತಕಾಂಕ್ಷೆಯು ಜನಿಸುವಲ್ಲಿ ಅಗಾಧವಾದ ಈ ಪೃಥ್ವಿಯನ್ನೂ, ತೇಜಃಪುಂಜನಾಗಿ ನೋಡಲಸಾಧ್ಯನಾಗಿರುವ ಸೂರ್ಯನನ್ನೂ, ಶೀತಕಿರಣನಾದ ಚಂದ್ರನನ್ನೂ ಪ್ರಾಣಾಧಾರನಾದ ವಾಯು, ಜಲ, ಅಗ್ನಿ ಮೊದಲಾದ ಇನ್ನೂ ಅನೇಕಾನೇಕ ವಸ್ತುಗಳನ್ನೂ, ಮನುಷ್ಯರೇ ಮೊದಲಾದ ಜೀವರಾಸಿಗಳನ್ನೂ ಸೃಷ್ಟಿಸಿದ ಸೂತ್ರಧಾರಿಯನ್ನು ಮಾತ್ರ ಅತಿ ವಿಧೇಯತೆಯಿಂದ ನೋಡದಿರುವುದು ಎಷ್ಟು ಶೋಚನೀಯವೋ ನೀವೇ ಯೋಚಿಸಬೇಕಾಗಿರುವುದು

ಮಿತ್ರರೇ, ಆ ಮಹನೀಯನಾರೆಂಬ ಪ್ರಶ್ನೆಗೆ ಉತ್ತರವು ಶಿರೋಧೀಯಿನನಾಗಿರುವುದಲ್ಲವೆ? (ದೇವರು) ಆತನ ಮಹಾತ್ಮೆಗಾಗಿ ನಮ್ಮ ಸಂಪೂರ್ಣ ನಮಸ್ಕಾರವನ್ನು ಯಾವಾಗಲೂ ಅರ್ಪಿಸುವ ಆದರೆ ದೇವರು ದೇವರು ಎನ್ನುತ್ತಾರಲ್ಲಾ? ದೇವರು ಎಲ್ಲಿರುವನು? ಇರುವುದಾದರೆ ನಮಗೇಕೆ ಕಾಣುವುದಿಲ್ಲ? ಎಂದು ಮೊದಲಾಗಿ ಅನೇಕ ಜನರು ಆಡಿಕೊಳ್ಳುವರು ಇದಕ್ಕಾಗಿ ಒಂದು ಕಥೆಯನ್ನು ನಿಮ್ಮ ಮುಂದಿರಿಸುವೆನು —

“ಒಬ್ಬಾನೊಬ್ಬ ನಾಸ್ತಿಕನು ಓರ್ವ ಭಕ್ತನಲ್ಲಿಗೆ ಹೋಗಿ ಸ್ವಾಮಿ, ನಾನು ತಮ್ಮಲ್ಲಿ ಮೂರು ಪ್ರಶ್ನೆ ಮಾಡಲು ನಿಶ್ಚಯಮಾಡಿಕೊಂಡಿರುವೆನು ತಾವು ದಯವಿಟ್ಟು ನನ್ನ ಪ್ರಶ್ನೆಗಳಿಗುತ್ತರವನ್ನು ಅನುಗ್ರಹಿಸಬೇಕೆಂದು ಕೇಳಿಕೊಳ್ಳಲಾಗಿ ಆ ಭಕ್ತವರನು ಒಪ್ಪಿಕೊಂಡನು ಆಗಲಾನಾಸ್ತಿಕನು, ಮಹಾತ್ಮ, ಅನೇಕ ಜನಗಳೂ ಭಗವಂತನಿರುವನೆಂದು ಹೇಳುವರು ಭಗವಂತನಿರುವುದಾದರೆ ನಮಗೇಕೆ ಕಾಣಿಸುವುದಿಲ್ಲ? ಆತನನ್ನು ನನಗೆ ತೋರಿಸಿರಿ ೨ ನೆಯದು ದೇವಸಹಾಯವಿಲ್ಲದೆ ಯಾವ ಕಾರ್ಯವೂ ಸಾಫಲ್ಯನಾಗಲಾರದಲ್ಲವೆ? ಆದರೆ ಮನುಷ್ಯನು ಮಾಡುವ ಪುಣ್ಯಪಾಪಕಾರ್ಯಗಳೆಲ್ಲವೂ ಭಗವದಾಜ್ಞೆಯಿಂದಲೇ ಜರುಗುತ್ತಿರಲಾಗಿ ಅನಂತರ ಮನುಷ್ಯನು ಮಾಡಿದ ಪಾಪಕಾರ್ಯಕ್ಕಾಗಿ ಭಗವಂತನೇಕೆ ದಂಡಿಸುವನು? ಹಾಗೆ ದಂಡಿಸುವುದರಿಂದ ಭಗವಂತನ ನ್ಯಾಯಕ್ಕೆ ಲೋಪವುಂಟಾಗುವುದಲ್ಲವೇ ೩ ನೆಯದು ಭಗವಂತನು ಪಾಪಿಗಳಾದ ಜೀವಿಗಳೆಲ್ಲರನ್ನೂ ನರಕಾಗ್ನಿಯಿಂದ ಬಾಧಿಸುವನೆಂದು ಹೇಳುವರು ಜೀವನು ಪಂಚಭೂತಗಳಲ್ಲೊಂದಾದ ಅಗ್ನಿಯಿಂದ ಸೃಷ್ಟಿಸಲ್ಪಟ್ಟಿರುವುದರಿಂದ ಅಗ್ನಿಯನ್ನು ಅಗ್ನಿ ಹೇಗೆ ಬಾಧಿಸುತ್ತದೆ? ಆದ್ದರಿಂದ ಈ ಮೂರು ಪ್ರಶ್ನೆಗಳು ನನಗೆ ಅತಿ ವಿಚಿತ್ರವಾಗಿ ಕಂಡು ನಂಬಿಗೆನರ್ಹವಾಗಿರುವುವು ಇದಕ್ಕೆ ನಿಮ್ಮುತ್ತರವಂ ಪರೀಕ್ಷಿಸುವೆನೆಂದು ಹೇಳಲು, ಆ ಭಕ್ತನು ಸ್ವಲ್ಪ ಯೋಚಿಸಿ ಏನೂ ಮಾತನಾಡದೆ ಅಲ್ಲಿ ಒಂದು ಮಣ್ಣಿನ ಉಂಡೆಯನ್ನು ತೆಗೆದುಕೊಂಡು ನಾಸ್ತಿಕನ ಶಿರದಮೇಲೆ ಬಲವಾಗಿ ಹೊಡೆದನು ಆ ಪೆಟ್ಟನ್ನು ತಾಳಲಾರದೆ ನಾಸ್ತಿಕನು ನ್ಯಾಯಾಧಿಪತಿಯ ಬಳಿ ದೂರಿಕೊಂಡನು ನ್ಯಾಯಾಧಿಪತಿಯು ಭಕ್ತನನ್ನು ಕರೆಸಿ ಇವನನ್ನು ಹೊಡೆಯಲು ಕಾರಣವೇನೆಂದು ಕೇಳಲು ಭಕ್ತನು ಅಯ್ಯಾ, ನ್ಯಾಯಾಧೀಶ, ಈತನು ಕೇಳಿದ ಮೂರು ಪ್ರಶ್ನೆಗಳಿಗುತ್ತರವಾಗಿ ಹೀಗೆ ಹೊಡೆದೆನಲ್ಲದೆ ಬೇರೆಇಲ್ಲ ಹೇಗೆಂದರೆ — ಈತನು ತನ್ನ ಶಿರಕ್ಕೆ ಪೆಟ್ಟುಬಿದ್ದರಿಂದ ನೋವಾಗಿರುವುದೆಂದು ಹೇಳುವನು ಹಾಗಾದರೆ ಆ ನೋವನ್ನು ನನಗೆ ತೋರಿಸಲಿ ನಾನವನಿಗೆ ದೇವರನ್ನು ತೋರಿಸುವೆನು ೨ ನೆಯದು ಮನುಷ್ಯರು ಮಾಡಿದ ಪಾಪಪುಣ್ಯಗಳೆಲ್ಲಾ ಭಗವದಾಜ್ಞೆಯಿಂದಲೇ ನಡೆಯುತ್ತಿರಲಾಗಿ ಭಗವಂತನು ಅವರವರ ಪಾಪಪುಣ್ಯಗಳಿಗೆ ತಕ್ಕಂತೆ ಮನುಷ್ಯರನ್ನೇಕೆ ದಂಡಿಸುವನು ಎಂದು ಕೇಳಿರುವನು ಆದರೆ ಈಗ ನಾನೂ ಸಹಾ ಭಗವಂತನ ಆಜ್ಞೆಯಂತೆಯೇ ಈತನ ತಲೆಯಮೇಲೆ ಮಣ್ಣಿನ ಮುದ್ದೆಯಿಂದ ಹೊಡೆದೆನು ಅದಕ್ಕವನೇಕೆ ನನ್ನನ್ನು ನಿಂದಿಸಬೇಕು? ೩ ನೆಯದು ಜೀವಿಗಳಗ್ನಿಯಿಂದ ಮಾಡಿರುವುದು ನಿಜ ಅಂಥಾ ಜೀವಿಗಳನ್ನು ಪರಮಾತ್ಮನು ನರಕಾಗ್ನಿಯಿಂದ ಬಾಧಿಸುವನೆಂದು ಹೇಳುವನಲ್ಲಾ ಹಾಗಾದರೆ ಅಗ್ನಿಯನ್ನು ಅಗ್ನಿಯು ಏನು ಮಾಡುವುದೆಂದು ಕೇಳಿದನು ಆದರೆ ಮಾನವ ಶರೀರವು ಮಣ್ಣಿನಿಂದಲೇ ಮಾಡಿರುವುದು ನಾನೀತನ ಮೇಲೆ ಮಣ್ಣಿನುಂಡೆಯನ್ನೇ ಹಾಕಿರುವೆನು ಮಣ್ಣನ್ನು ಮಣ್ಣೇನುಮಾಡಬಲ್ಲದು ಇವನು ನಾನು ಹೊಡೆದದ್ದರಿಂದ ಗಾಯವಾಗಿದೆ ಎಂದು ದೂರಿಕೊಳ್ಳುವುದು ಯಾವ ನ್ಯಾಯವೆಂದು ಭಕ್ತನು ಕೇಳಲಾಗಿ ನಾಸ್ತಿಕನು ನಾಚಿ ತಲೆ ಬಗ್ಗಿಸಿಕೊಂಡನು ಆಗಲಾಭಕ್ತನು ಆ ನಾಸ್ತಿಕನಿಗೆ ದೇವರ ನಿಜವಾದ ವಿಷಯವನ್ನು ಬೋಧಿಸಿ ಸಮಾಧಾನ ಪಡಿಸಿ ಕಳುಹಿಸಿರುವನು ಮಿತ್ರರೇ, ನೋಡಿ! ಈಗಿನ ನಮ್ಮ ನವನಾಗರಿಕ ಕಾಲದಲ್ಲಿಯೂ ಅನೇಕ ಮಹಾಶಯರು ಹೀಗೆಯೇ ವಾದಿಸುತ್ತಾ ಮತಭೇದಗಳಿಗನುಸಾರವಾಗಿ ಏಕೋ ದೇವನನ್ನು ಭಿನ್ನ ಭಿನ್ನವಾಗಿ ಭಾವಿಸಿ ನಮ್ಮ ದೇವರು, ನಿಮ್ಮ ದೇವರು ನಮ್ಮಮ್ಮ ನಿಮ್ಮಮ್ಮ ಆ ದೇವರು ದೊಡ್ಡವನು, ಈ ದೇವರು ಚಿಕ್ಕವನು ಎಂದು ಕಡೆಗೆ ಇದೇ ಕಾರಣವಾಗಿ ಜಗಳಗಳು ಕೂಡಾ ಮಾಡುತ್ತಿರುವರು ಇದನ್ನು ನಾಗರೀಕರು ನೋಡಿ ನಗುವದಂತಿರಲಿ ನಿಜವಾದ ಏಕೋ ದೇವನು ಇವರ ತಿಳಿಗೇಡಿತನಕ್ಕೆ ನಗದಿರಲಾರನಲ್ಲವೇ?

ಮಹಾಶಯರೇ, ನೂರಾರು ದೇವರುಗಳನ್ನು ಪೂಜಿಸುವುದು ಬಿಟ್ಟು ಒಬ್ಬ ದೇವನನ್ನು ನಾವು ಪೂಜಿಸುವುದಾದರೆ ಆ ದಿನವೇ ಎಲ್ಲಾ ಭಾರತಪುತ್ರರೂ ಸಹೋದರರಾಗಬಹುದು ಇಂಥಾ ಕಾಲವು ಕ್ಷಿಪ್ರಸನ್ನಿಹಿತವಾಗಲೆಂದು ನಾವೆಲ್ಲರೂ ದೇವರನ್ನು ಆರಾಧಿಸೋಣ

ಶ್ರೀ ವಾಣೀವಿಲಾಸ ವಾಚಕಶಾಲ
ಅಣ್ಣೆಹಾಳು ಚಿತ್ರದುರ್ಗ ತಾಲ್ಲೂಕು ಬಿ ಭೀಮರಾಜು, ಸೆಕ್ರೆಟರಿ
೨೭—೪—೧೦

ತಾಲ್ಲೋಕು ವರ್ತಮಾನಗಳು

ದೊಡ್ಡಬಳ್ಳಾಪುರ —ಬಿಸಿಲು ಅಧಿಕವಾಗಿದ್ದರೂ ಸಾಯಂಕಾಲದ ತಂಗಾಳಿ ಜನರಿಗೆ ಸುಖವನ್ನುಂಟುಮಾಡುತ್ತದೆ ಸೋಮವಾರ ತಕ್ಕ ಮಟ್ಟಿಗೆ ಭೂಮಿ ತಂಪಾಗುವಂಥ ಮಳೆಬಿದ್ದಿತ್ತು —ಈ ಊರಿನ ಸೀರೆಗಳಿಗೆ ಈ ವರ್ಷ ಬಹಳ ಗಿರಾಕಿ ಇರುವದರಿಂದ ಗಂಡಸರೊಂದಿಗೆ ಮನೆ ಹೆಂಗಸರೆಲ್ಲಾ ದುಡಿದರೂ ಹೊಟ್ಟೆ ತುಂಬಾ ಕೂಲಿ ಸಿಕ್ಕುವದಿಲ್ಲ ಅವಲ್ ಸೀರೆಗಳಿಗೆ ಮಾತ್ರ ಒಳ್ಳೇ ಕೂಲಿ ಉಂಟು ಈಚೆಗೆ ಪಂಚಮಶಾಲೆಗಳು ಸ್ವಲ್ಪ ಮಟ್ಟಿಗೂ ಕ್ರಮವಾಗಿ ಕೆಲಸಮಾಡುವಂತೆ ತೋರುತ್ತದೆ ಆದರೆ ಬಿಸಿಲ್ ತೂರೆಗಳಂತಿರ ಕೂಡದು ಈ ಊರಿಗೆ ಕಳೆದ ವಾರ ನ್ಯೂಆಲ್‌ಫ್ರೆಡ್ ಒಯಸ್‌ಕೋಪ್ ಕಂಪೆನಿಯವರು ಆಶ್ಚರ್ಯಕರವಾದ ಜೀವವಿಂದ ಸಂಚರಿಸುತ್ತವೋ ಎಂಬ ಮ್ಯಾಜಿಕ್ ಲ್ಯಾಂಟರ್ನ್ ಪಟಗಳನ್ನು ತೋರಿಸಿದರು ಇವೇನು ಕೆಟ್ಟ ನೋಟವಲ್ಲ ಸರ್ವರೂ ನೋಡಬೇಕಾದದ್ದೇ ಸರಿ ಆದ್ದರಿಂದ ದೊಡ್ಡ ಸಾಹೇಬರೂ ಅಮಲ್ದಾರ್ರೂ ಮುಂತಾಗಿ ಅನೇಕರು ನೋಡಿದರು ಚಾರ್ಜು ಸುಲಭ ವಿಲಾಯಿತಿ, ಅಮೆರಿಕ, ಡಿಲ್ಲಿ ದರ್ಬಾರ್, ಶ್ರೀಮನ್ ಚಕ್ರವರ್ತಿಗಳ ಪಟ್ಟಾಭಿಷೇಕಗಳೆಲ್ಲಾ ಹ್ಯಾಗೆ ಕಣ್ಣಿನಿಂದೆ ನೋಡಬೇಕಾಗಿತ್ತೋ ಅದೇರೀತಿ ಚಲನೆಗಳೂ ಮನುಷ್ಯರ ಚೈತನ್ಯಗಳೂ ಪಟಗಳಲ್ಲಿ ತೋರಿಬರುತ್ತದೆ

ತಿಪಟೂರು —ಬಿಸಲಿನ ಝಳವು ವಿಪರೀತವಾಗಿ ಇರುತ್ತದೆ ಈ ೨೪ನೇ ಭಾನುವಾರ ದಿವಸ ಪೂರ್ಣವಾಗಿ ಒಂದು ಹದ ಮಳೆಯಾಯಿತು ಕೆರೆಗೆ ಮಾತ್ರ ನೀರುಬರಲಿಲ್ಲ ಸದ್ಯದಲ್ಲಿ ಕೊಂಚನೀರು ಇದೆ ಈ ನೀರು ಬಟ್ಟೆ ಒಗೆಯುವುದಕ್ಕೂ ಮುಸುರೆಯನ್ನು ತಿಕ್ಕುವುದಕ್ಕೂ ಅನುಕೂಲವಾಗಿ ಇದೆ ಇನ್ನೂ ಒಂದು ತಿಂಗಳು ನೀರು ಇರಬಹುದೆಂದು ತೋರುತ್ತದೆ ಈಗ್ಗೆ ಸುಮಾರು ೨ ತಿಂಗಳಿಂದಲೂ ರೈಲ್ ಒಳಗಲ್ಲಿ ಇರತಕ್ಕವರು ನೀರಿಗಾಗಿ ಬಹಳ ತೊಂದರೆಪಡುತ್ತಿದ್ದಾರೆ ಗೌರ್ನಮೆಂಟಿನಿಂದ ಒಂದು ಭಾವಿಯನ್ನು ತೆಗೆಸಿದರೆ ಬಹಳ ಅನುಕೂಲವಾಗುತ್ತೆ ರೈಲ್ ಸ್ಟೇಷನ್ ಬಳಿಯಲ್ಲಿ ಯೂ ಮತ್ತು ಸರಾಪರ ಕಾಂಪೌಂಡಿನ ಬಳಿಯಲ್ಲಿಯೂ ಇರತಕ್ಕ ಬಾವಿಗಳಿಗೂ ಪುರುಸತ್ತೇ ಇರುವುದಿಲ್ಲ — ಈಗ ೨ ವರ್ಷಗಳ ಹಿಂದೆ ಪಟೇಲ್ ನಂಜುಂಡಪ್ಪನವರ ಹೆಂಡತಿ ರಂಗಮ್ಮನವರು ತಮ್ಮ ಭಾವನವರಾದ ಗ್ರಾಂಧಿಗೆ ಪುಟ್ಟತಾಯಮ್ಮನವರು ಕಟ್ಟಿಸಿರುವ ಶಿವಾಲಯಕ್ಕೆ ಕೆಲಸ ಕಾರ್ಯಗಳು ನಡೆಯುವಂತೆ (೮೦೦೦) ಎಂಟು ಸಾವಿರ ರೂಪಾಯಿಗಳನ್ನು ಕೊಟ್ಟಿರು ಆ ರೂಪಾಯಿಗಳಿಗೆ ಇದುವರೆವಿಗೂ ಬಂದಿರುವ ೨ ಸಾವಿರ ರೂಪಾಯಿ ಬಡ್ಡಿಯನ್ನೂ, ತನ್ನ ಸ್ವಂತ ೫ ಸಾವಿರ ರೂಪಾಯಿಗಳನ್ನೂ ಜಮಾ ೧೫ ಸಾವಿರ ರೂಪಾಯಿಗಳ ಪ್ರಾಮಿಸರಿನೋಟಿನಲ್ಲಿ ಹಾಕಿ ಅದರ ಬಡ್ಡಿಯಿಂದ ಕೆಲಸಗಳನ್ನು ನಡೆಯಿಸುವಂತೆ ಯೋಚನೆ ಮಾಡಿರುವರೆಂದು ತಿಳಿಯಲಾಯಿತು

ಮಗ್ಗದ ಮೇಪನಕೋಟೆ ತಾಲ್ಲೂಕಾ ಸುಗ್ಗೆ ಹವ ಬಹಳ ಮಟ್ಟಿಗೆ ಕೆಟ್ಟುಹೋಗಿದೆ ಮಳೆ ಪ್ರತೀತಿಯೂ ಹೋಯ್ತಿದೆ ಆದಾಗ್ಯೂ ಹಗಲುವೇಳೆಯಲ್ಲಿ ಬಿಸಲಿನ ತಾಪವು ಬಹಳ ಜಾಸ್ತಿಯಾಗಿದೆ ಯಾವ ಕಡೆ ನೋಡಿದರೂ ರೈತರು ಹೊಲ ಗದ್ದೆಗಳನ್ನು ಉತ್ತಿ ಬಿತ್ತುತ್ತಿದ್ದಾರೆ ದನಕರುಗಳಿಗೆ ಮೇವು ಸಮೃದ್ಧಿಯಾಗಿದೆ ಇದೇ ಊರಿನ ಪಶ್ಚಿಮ ಭಾಗದಲ್ಲಿ ಸುಮಾರು ೨ ಫರ್ಲಾಂಗ್ ದೂರದಲ್ಲಿ ಕಪಿಲಾ ನದಿಯು ಹರಿಯುತ್ತದೆ ಇದರಿಂದ ಪ್ರಜೆಗಳಿಗೆ ಯಾವ ವಿಷಯದಲ್ಲಿ ಕೊರತೆಯಾಗಿದ್ದರೂ ನೀರಿನ ವಿಷಯದಲ್ಲಿ ಮಾತ್ರ ಸಂತೋಷವಾಗಿದೆ ಇದೇ ಊರಿಗೆ ತಾ ೨೪ ರಲ್ಲಿ ಮೆ॥ ಅಮಲ್‌ದಾರ್‌ರವರು ಸ್ಯಾನಿಟರಿ ಇನ್ಸ್‌ಪೆಕ್ಟರವರೂ ದಯಮಾಡಿಸಿದ್ದರು ಇವರುಗಳನ್ನು ನೋಡುವದಕ್ಕಾಗಿ ಈ ಪ್ರಾಂತ್ಯದ ಪ್ರಜೆಗಳೆಲ್ಲರು ಈ ಗ್ರಾಮದ ಬಳಿ ಇರುವ ಅರಳಿ ಕಟ್ಟೆಯ ಹತ್ತರ ಬಂದು ಸೇರಿದರು ಆಗ್ಗೆ ಮೆ॥ ಅಮಲ್‌ದಾರ್‌ರವರು ಪ್ರಜೆಗಳಿಗೆ ಅನೇಕ ವಿಧವಾದ ಹಿತೋಕ್ತಿಗಳಿಂದ ಉಪಚರಿಸಿ ಕಳುಹಿಸಿದರು ಅನಂತರ ಮಧ್ಯಾಹ್ನ ೩ ಗಂಟೆಯ ಮೇಲೆ ಹೊರಟು ಗ್ರಾಮ ಪಾಕೀಜು ನೋಡುವ ಉದ್ದೇಶ ಪ್ರತಿ ಒಂದು ಬೀದಿಯನ್ನೂ ಸಹಾ ನೋಡಿಕೊಂಡು ವಾಪಸ್ಸು ಬಂದು ಅಮಲ್‌ದಾರ್ರವರು ಗ್ರಾಮದ ಪಟೇಲ್ ಶಾನುಭೋಗ ಮತ್ತು ಮುಖ್ಯಸ್ಥರಿಗೂ ಸಹಾ ಗ್ರಾಮದಲ್ಲಿ ತುಂಬಾ ಕಚಡ ಇರುವದರಿಂದ ಹವ ಕೆಟ್ಟಿದೆ ಆದ್ದರಿಂದ ಈ ಕಚಡ ವಗೈರೆಗಳನ್ನೆಲ್ಲಾ ದೂರ ಹಾಕಲಿ ನಾಗಿನ ಗ್ರಾಮ ಪಾಕೀಜು ವಿಷಯದಲ್ಲಿ ತುಂಬಾ ನಿಗಾ ಇಡಬೇಕೆಂಬದಾಗಿ ತಿಳಿಸಿದರು

ಹೊಳಲ್ಕೆರೆ —ಈ ಟರ್ನ್‌ಗೆ ಅಶ್ವಿನಿ ಮಳೆ ಒಂದು ಹದ ಬಂದದ್ದರಿಂದ ಅನೇಕ ಜನಗಳು ಜವಾರ್ ಉಕ್ಕೆ ಮಾಡಲೂ ಅನುಕೂಲವಾಯಿತು ಭರಣಿ ಮಳೆ ಬರಲಿಲ್ಲ ಮಿಂಚು ಮೋಡಾ ಮುಂತಾದ ಚಿನ್ನೆಗಳು ತೋರುತ್ತಲಿವೆಯೇ ಹೊರತು ಹನಿ ಮಾತ್ರ ನೆಲಕ್ಕೆ ಬೀಳಲಿಲ್ಲ —ಜವಾರ್‌ದಾರ್ರೆಲ್ಲಾ ಭೂಮಿಗೆ ಗೊಬ್ಬರ ಹೊಡೆಯುತ್ತಾ ಇದ್ದಾರೆ ಬಿಸಿಲು ತಾಪ ಜಾಸ್ತಿಯಾಗಿದೆ ೩ ಕೆರೆಗಳಲ್ಲೂ ನೀರು ಇಲ್ಲ ತೋಟಗಳಿಗೆ ಕಪಿಲೆ ಹೊಡೆಯುತ್ತಾ ಇದ್ದಾರೆ ಈ ಊರಿನ ಪಶ್ಚಿಮದಿಕ್ಕಿನ ಊರು ಬಾಗಿಲು ಬಹಳ ಕೊರಕಲು ಬಿದ್ದಿರುವದ್ದರಿಂದ ಬಂಡಿಗಳು ತಿರುಗಾಡದಂತೆ ಆಗಿದೆ ಮೆ॥ ತಾಲ್ಲೂಕ್ ಅಮಲ್ದಾರ್ರವರು ಕಾಮಗಾರಿ ಆಗುವಂತೆ ಹುಕುಂ ಮಾಡಿದ್ದಾರೆ ಕಂಟ್ರಾಕ್ಟುದಾರನ ಗುತ್ತಿಗೆಯಲ್ಲಿ ಜಗಗಳಿಗೆ ತುಂಬಾ ಕೊರತೆಯಾಗಿದೆ —ಹರಿಹರದ ಸಂಗಮೇಶ್ವರ ದೇವರ ಮನೆಯಲ್ಲಿ ವಸ್ತುಗಳ ಪ್ರದರ್ಶನ ನಡೆಯಬೇಕೆಂತ ಡೆ ಕ॥ ಸಾಹೇಬರವರು ಮಾಡಿದ ಪ್ರಯತ್ನವು ಸಫಲವಾಗಿ ಶ್ಲಾಘನೆಗೆ ಅರ್ಹವಾಯಿತು ಇಲ್ಲಿಂದ ಬಹಳ ಜನಗಳು ಹೋಗಿದ್ದರು ಪಟೇಲ ಶಾನುಭೋಗರ ರಿಪೋರ್ಟಿಗಾಗಿ ೧೨ ವರುಷವಾಯಿತು ರಿವಿಜನ್ ಸರ್ವೆಯಾಗಿ ೫ ವರುಷವಾಯಿತು ಆದಾಗ್ಯೂ ಸಮರೀ ಸ್ಕೇಲು ಪ್ರಕಾರ ಪೋಟ್ಗಿ ಹೆಚ್ಚಾಗಲಿಲ್ಲ ಇವರು ಮಾಡತಕ್ಕ ಕೆಲಸಗಳು ಹೆಚ್ಚಾದವೇ ಹೊರತು ವೇತನ ಜಾಸ್ತಿ ಆಗಲಿಲ್ಲ ಕೃಪಾಸಾಗರರಾದ ಗೌರ್ನಮೆಂಟಿನವರು ಈ ವಿಷಯಕ್ಕೆ ಶೀಘ್ರತೆ ಹುಕುಂ ದಯಪಾಲಿಸಿದರೆ ಬಡ ನೌಕರರು ಬದುಕಿಕೊಳ್ಳುತ್ತಾರೆ, ಗ್ರಾಮ ನವುಕರಿಗಳ ರೆಗ್ಯುಲೇಷನ್ ಜಾರಿಗೆ ಬಂದಾಗ್ಯೂ ಅದರಂತೆ ಆದ ನಿಬಂಧನೆಗಳು ಜಾರಿಗೆ ಬಾರದೆ ಹೋದ್ದರಿಂದ ಚಿಲ್ರೆನೌಕರರಾದ

...ಪುರ ತೋಟಗಳ ವೇತನಗಳೂ ಮಾಡತಕ್ಕ ಕೆಲಸಗಳೂ ಗೊತ್ತಿಲ್ಲದಂತೆ ಆಗಿದೆ, ಈ ವಿಷಯವು ಘನವುಳ್ಳ ಗೌರ್ನಮೆಂಟಿನವರ ಪರಾಂಬರಿಕೆಗೆ ಬರಬೇಕಾಗಿದೆ — ಈ ತಾಲ್ಲೂಕ್ ಖಜಾನೆಯಲ್ಲಿ ೭೦೦ ರೂಪಾಯಿಗಳ ದೊಡ್ಡ ನೋಟುಗಳನ್ನು ಕದ್ದ ...ರ್ ಶಿಪಾಯಿ ೩ ಶೆಕ್ಷನ್ ಪ್ರಕಾರ ಬಾಂಬೆ ಶೆಕ್ಷನ್ ೧೪ ೩ ವರುಷಗಳಂತೆ ...ಕ್ಷೆ ಆಗಿರುತ್ತವೆ ಇದು ಬಹಳ ಒಳ್ಳೇದಾಯಿತು — ಈ ತಾಲೂಕಿನಲ್ಲಿ ಬಂಡ ...ವದಾರ್ ಗಳಿಗೆ ದವಸ ವಸ್ತುಗಳು ವಿಶೇಷವಾಗಿ ಬರುತ್ತಾ ಇವೆ ಗೋಮಾಳ ...ದಾರ್ ಗಳನ್ನು ಖಂಡಿತವಾಗಿ ಸಾಗುವಳಿಗೆ ಕೊಡದಂತೆ ಹುಕುಂ ಆದರೆ ಈ ತಾಲ್ಲೂಕ್ ಜನಗಳು ಬದುಕಿಕೊಳ್ಳುತ್ತಾರೆ ಮೆಣಸಿನ ಕಾಯಿ ಧಾರಣೆಯು ...ಣ ೧ ಕ್ಕೆ ೪ ರೂಪಾಯಿ ವರೆಗೂ ಇರುತ್ತದೆ. ಯಾವ ಶೀಮೆಯಿಂದಲಾದರೂ ರೈಲ್ ಮೇಲೆ ಎಂದರೆ ಹೊರಕು ತಗ್ಗುವಂತೆಯಿಲ್ಲ

ಕೊಪ್ಪ — ಈಗ ಕೆಲವು ದಿವಸಗಳಿಂದ ಬಿಸಿಲಿನ ಝಳವು ದಿನದಿನಕ್ಕೆ ಅಭಿವೃದ್ಧಿ ಸ್ಥಿತಿಗೆ ಬಂದು ಟವುನ್ ಗಳಲ್ಲಿಯೂ ಗ್ರಾಮಗಳಲ್ಲಿಯೂ ವಾಸಮಾಡಿಕೊಂಡಿರುವ ಜನಗಳನ್ನು ರೋಗಪೀಡಿತರನ್ನಾಗಿ ಮಾಡುತ್ತಿದೆ ಮುಖ್ಯವಾಗಿ ಜನಗಳು ಜ್ವರದ ತಾಪದಿಂದ ನರಳುತ್ತಿರುವರು ಇಷ್ಟರಲ್ಲೇ ಒಂದೆರಡು ಮಳೆ ಬಂದಿರುವುದರಿಂದ ಜಾನುವಾರುಗಳ ಮೇವಿಗೂ ಕುಡಿಯುವುದಕ್ಕೆ ನೀರಿಗೂ ಯಾವುದೊಂದು ಕೊರತೆ ಕಂಡು ಬರುವುದಿಲ್ಲ ಈಚೆಗೆ ಮಳೆ ಬರಲಿಲ್ಲ ದಿನಸಿನ ಧಾರಣೆಯು ಏಕರೀತಿಯಲ್ಲಿದೆ — ಇಲ್ಲಿನ ಆಸ್ಪತ್ರೆಯ ಮಿಡ್‌ವೈಫ್ (ಸೂಲಗಿತ್ತಿ) ಅಮ್ಮನವರನ್ನು ಈ ಆಸ್ಪತ್ರೆಯಿಂದ ಗುಂಡ್ಲುಪೇಟೆಗೆ ವರ್ಗಾಯಿಸಿರುವುದನ್ನು ಕೇಳಿ ತುಂಬಾ ವ್ಯಾಕುಲಕ್ಕೆ ಕಾರಣವಾಯಿತು ಇವರ ಚಟುವಟಿಕೆಯನ್ನೂ ಸರಕಾರಿ ಕೆಲಸದ ಮಹತ್ವವನ್ನೂ ತಿಳಿದುಕೊಂಡಿರುವ ಈ ಊರಿನ ಮುನಿಸಿಪಲ್ ಮೆಂಬರುಗಳೂ ವರ್ತಕರೂ ಸೇರಿ ಈ ಮಿಡ್‌ವೈಫ್ ಅಮ್ಮನವರನ್ನು ಈ ಆಸ್ಪತ್ರೆಯಲ್ಲಿಯೇ ಇರಗೊಡಿಸಬೇಕೆಂದು ಅಧಿಕಾರಪಟ್ಟ ಸೀನಿಯರ್ ಸರ್ಜನ್ ಸಾಹೇಬರವರಿಗೆ ತಂತಿಮೂಲಕ ಅರಿಕೆ ಮಾಡಿಕೊಂಡಲ್ಲಿ ಸಫಲವಾಗದೆ ವರ್ಗಾಯಿಸಿದ ಸ್ಥಳಕ್ಕೆ ಮಿಡ್‌ವೈಫ್ ಅಮ್ಮನವರು ತೆರಳಬೇಕಾಗಿ ಬಂತು — ಇದೇ ಬರುವ ವೈಶಾಖ ಶುದ್ಧ ನವಮಿ ಮಂಗಳವಾರ ಇಲ್ಲಿನ ಬಂಬ್ಳಾಪುರ ಗ್ರಾಮದಲ್ಲಿ ಶ್ರೀ ಮಾರಮ್ಮನವರ ರಥೋತ್ಸವ ನಡೆಯುವುದೆಂದು ಗೊತ್ತಾಗಿದೆ ಈ ಜಾತ್ರೆಗೆ ಸುಮಾರು ಸಾವಿರಾರು ಜನರು ಸೇರುತ್ತಾರಾದಕಾರಣ ಪೋಲೀಸ್ ಅಧಿಕಾರಿಗಳು ಈ ಸ್ಥಳಕ್ಕೆ ಬಂದು ಗಲಾಟೆಯು ತೊಂದರೆಯು ಆಗದಂತೆ ಏರ್ಪಾಡು ಮಾಡುವರೆಂದು ನಂಬುತ್ತೇನೆ — ಇದು ಬೇಸಾಯದ ಕಾಲ ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ವಿಶೇಷವಾಗಿ ತಲೆದೋರುತ್ತಿರುವ ಇಂಥ ಬೇಸಾಯದ ಕಾಲದಲ್ಲಿ ತಂಪಾಗಿಯೂ ಆಮೋದವಾಗಿಯೂ ಇರುವ ... ಜನಗಳು ಸಾಹಸ ಮಾಡುತ್ತಿರುವುದೂ ಸರಕಾರದವರು ... ಕೂಲಿ ಜನಗಳಿಗೆ ಬಹಳ ... ಅಧಿಕಾರದ ... ತೋರುವುದು ತುಂಬಾ ಶೋಚನೀಯವಾಗಿದೆ ಮುಂದಾದರೂ ಈ ವಿಚಾರದಲ್ಲಿ ಕುಂಬಾರರಿಗೆ ಇಟ್ಟಿ ಗ್ರಾಮಗಳಲ್ಲಿಯೇ ಆಗಲಿ ಇತರರ ಮನೆಗಳಲ್ಲಿಯೇ ಆಗಲಿ ಸರಕಾರದವರ ಅಪ್ಪಣೆ ಚೀಟಿ ಶಿವಾಯಿ ಇಂಥಾ ದುರ್ಮಾರ್ಗಕ್ಕೆ ಕೈ ಹಾಕಲು ಅವಕಾಶಕೊಡಲಾರರೆಂದು ನಂಬಿರುವೆನು — ನಮ್ಮ ಇಲ್ಲಿನ ಅಮಲ್ದಾರರವರು ಐದು ದಿವಸಗಳ ರಜಾ ಮೇಲೆ ಇವರ ಸ್ವಕಾರ್ಯಕ್ಕೆ ತೆರಳುವರೆಂದೂ ಇವರ ಜಾಗಕ್ಕೆ ಎಡೆಹಳ್ಳಿ ಅಮಲ್ದಾರರವರು ಬರುವರೆಂದೂ ವದಂತಿ ಕೇಳುತ್ತಿದೆ — ಮೇಲ್ಕಂಡ ಬಂಬ್ಳಾಪುರ ಜಾತ್ರೆಯಲ್ಲಿ ಸಾವಿರಾರು ಜನಗಳು ಸೇರತಕ್ಕ ಸ್ಥಳವಾದ್ದರಿಂದ ಕ್ರೈಸ್ತಮತೋಪದೇಶಕರು ಈ ಸ್ಥಳಕ್ಕೆ ಬಂದು ಕೆಲವು ಸುವಾರ್ತೆಯನ್ನು ಹೇಳಿ ಜನಗಳಲ್ಲಿ ಇರತಕ್ಕ ಮೂಢತ್ವವನ್ನು ಹೋಗಲಾಡಿಸಿ ಸನ್ಮಾರ್ಗಕ್ಕೆ ಬರುವಂತೆ ಮಾಡುವರೆಂದು ಹಾರೈಸುತ್ತೇನೆ

ಇಂಡಿಯಾ ದೇಶದ ವೃತ್ತಾಂತಗಳು

ಹುಬ್ಬಳ್ಳಿಯಲ್ಲಿ ಕಳೆದ ವಾರ ಒಂದು ಭಾರೀ ಹತ್ತಿ ಕಾರ್ಖಾನೆಗೆ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ರೂಪಾಯಿ ನಷ್ಟವಾಯಿತೆಂದು ತಿಳಿದು ಬಂದಿದೆ

* * *

ನಾರಾಯಣಗಂಜ್ ರೈಲ್ವೆ ಸ್ಟೇಷನ್ನಿನಲ್ಲಿ ಅಮೂಲ್ಯ ಕೃಷ್ಣದತ್ತನೆಂಬವನು ತನ್ನ ಸೊಂಟದ ಸುತ್ತಿನಲ್ಲಿ ಬಂದೂಕುಗಳನ್ನು ಕಟ್ಟಿಕೊಂಡಿದ್ದು ಸಿಕ್ಕಿಬಿದ್ದನಷ್ಟೆ ಮ್ಯಾಜಿಸ್ಟ್ರೇಟರಾದ ಮೆ॥ ಹಿಟ್ಸನ್‌ರವರು ಅವನಿಗೆ ೧೮ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ

* * *

ಢಕ್ಕಾನಗರದಲ್ಲಿ ಲಾಲಾ ರಾಜೇಂದ್ರಪ್ರಸಾದ್ ಎಂಬೊಬ್ಬ ಭಾರೀ ಜಮೀನ್‌ದಾರನು ಒಬ್ಬ ನಾಯಕಸಾನಿ ಎನ್ನು ತನ್ನ ಮನೆಯೊಳಗೆ ಸೇರಿಸಿಕೊಂಡು ಕತ್ತಿಯಿಂದ ಹೊಡೆದು ಗಾಯಪಡಿಸಿರುತ್ತಾನೆಂದು ಮೊಕದ್ದಮೆ ಆಗಿ ಜಾಮೀನ್ ಮೇಲೆ ಬಿಡುಗಡೆ ಮಾಡಿರುತ್ತಾರೆ

* * *

ಕಳೆದ ಮಂಗಳವಾರ ಸಾಯಂಕಾಲ ಬೊಂಬಾಯಿ ಪಟ್ಟಣದ ಬ್ಯಾಕ್ ಬಜಾರ್ ಎಂಬ ಸ್ಥಳದ ಕಾರ್ಖಾನೆಯಲ್ಲಿ ಬೆಂಕಿ ಬಿದ್ದು ಎರಡು ಗಂಟೆ ಹೊತ್ತಿನೊಳಗಾಗಿ ೭೫,೦೦೦ ರೂಪಾಯಿ ನಷ್ಟವಾಗಿರುತ್ತದೆ ಅಷ್ಟರಲ್ಲೇ ಜನರೂ ಪೋಲೀಸಿನವರೂ ಸೇರಿ ಬೆಂಕಿಯನ್ನು ಆರಿಸಿದರು

* * *

ಕೊಚ್ಚಿ ಸಂಸ್ಥಾನದ ಚೀಫ್ ಜಡ್ಜರಾದ ಮೆ॥ ಎಂ. ದೊರೆಸ್ವಾಮಿಯವರು ಹಿಂದಿನ ವಾರ ಕಾಲವಾದರೆಂದು ಪ್ರಕಟವಾಗಿದೆ ಇವರಿಗೆ ಮರಣ ಕಾಲದಲ್ಲಿ ೫೭ ವರುಷ ವಯಸ್ಸಾಗಿತ್ತು ಇವರು ಸಕಲರಲ್ಲೂ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡು, ತುಂಬಾ ಸತ್ಯವಂತರಾಗಿದ್ದರು

* * *

ಅಮೇರಿಕದಿಂದಲೂ ಜರ್ಮನಿಯಿಂದಲೂ ಆಗ ೫ ಸಿಗರೆಟ್ಟುಗಳು ಅಪಾರವಾಗಿ ಬಂದು ಬೊಂಬಾಯಿ, ಕರಾಚಿ ಮೊದಲಾದ ತೀರಪಟ್ಟಣಗಳಲ್ಲಿ ಸುಂಕದ ಕಟ್ಟೆಗಳೊಳಗೆ ಬಿದ್ದಿರುತ್ತವೆ ಇಂಡಿಯಾ ಗವರ್ನ್‌ಮೆಂಟಿನವರು ಹೊಸದಾಗಿ ಹಾಕಿರುವ ಸುಂಕದ ದೆಸೆಯಿಂದ ಅವು ಮಾರಾಟಕ್ಕೆ ಬಾರದೆ ತಡೆಯಾಗಿರುವುದು ಅದನ್ನು ತರಿಸಿರುವ ಏಜಂಟರುಗಳು ಅದು ಇಲ್ಲಿ ಬಿಕರಿ ಆಗುವುದಿಲ್ಲವೆಂದೂ, ಅವನ್ನೆಲ್ಲಾ ಸುಟ್ಟುಬಿಡುವುದಾಗಿಯೂ ಇಲ್ಲವೇ ವಾಪಸು ಆಯಾ ಸ್ಥಳಗಳಿಗೆ ಕಳುಹಿಸಿಬಿಡುವುದಾಗಿಯೂ ಹೇಳುತ್ತಿದ್ದಾರೆ

ನಾಲ್ಕನೇ ಕೇರಳ ದೇಶೀಯ ನಾಯರ್ ಸಮಾಜವು ಅನಂತಶಯನದಲ್ಲಿ ಇದೇ ಮೇ ತಿಂಗಳ ತಾ ೧೪ ಮತ್ತು ೧೫ ಶನಿವಾರ ಭಾನುವಾರ ನಡೆಯುವುದೆಂದೂ, ನ್ಯಾಯಾಧೀಶರಾದ ಮೆ॥ ಸಿ. ಶಂಕರನ್ ನಾಯರ್‌ಯವರು ಅಧ್ಯಕ್ಷರಾಗಿ ನಿಂತು ಸಭೆಯನ್ನು ಜರುಗಿಸುವುದಕ್ಕೆ ಒಪ್ಪಿಕೊಂಡಿದ್ದಾರೆಂದೂ ಪ್ರಕಟವಾಗಿದೆ

* * *

ಪಂಜಾಬ ಅಧಿಪತ್ಯಕ್ಕೆ ಸೇರಿದ ಜಿಂಡ್ ಸಂಸ್ಥಾನದ ರಾಜರು ತಮ್ಮ ಶೀಮೆಯಲ್ಲಿಯೂ ಅಚ್ಚಿನ ಕಾರ್ಖಾನೆಯನ್ನಿಡತಕ್ಕವರು ವರ್ತಮಾನ ಪತ್ರಿಕೆಗಳನ್ನು ನಡಿಸತಕ್ಕವರೂ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆದುಕೊಂಡು ಜಾಮೀನನ್ನು ಕಟ್ಟಿ ಲೈಸನ್ಸು ಪಡೆಯಬೇಕೆಂಬದಾಗಿ ಇಸ್ತಿಹಾರು ಹಾಕಿಸಿರುತ್ತಾರೆ

* * *

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಖಾಂಡೇಷ್ ಡಿಸ್ಟ್ರಿಕ್ಟಿನ ಪೋಲೀಸಿನವರು ವಾರಂಟಿನ ಸಮೇತ ಪೂನಾ ಪಟ್ಟಣಕ್ಕೆ ಹೋಗಿ ಕೇಶವನಾರಾಯಣ ಥಾವಳೇ ಎಂಬೊಬ್ಬ ಬ್ರಾಹ್ಮಣ ದೊಡ್ಡ ಮನುಷ್ಯನನ್ನು ರಾಜದ್ರೋಹಾಪರಾಧ ಮಾಡಿದವನೆಂದು ದಸ್ತಗಿರಿ ಮಾಡಿ ವಿಚಾರಣೆಗಾಗಿ ಧೂಲಿಯಾ ಪಟ್ಟಣಕ್ಕೆ ಸಾಗಿಸಿಕೊಂಡು ಹೋದರು

* * *

ಇಂಡಿಯಾ ಗವರ್ನ್‌ಮೆಂಟಿನವರು ಈ ರಾಷ್ಟ್ರದ ಪೋಸ್ಟ್ ಆಫೀಸುಗಳಲ್ಲಿ ಪ್ರಜೆಗಳ ಪ್ರಯೋಜನಾರ್ಥವಾಗಿ ಸೇವಿಂಗ್ಸ್ ಬ್ಯಾಂಕುಗಳನ್ನು ಏರ್ಪಡಿಸಿರುತ್ತಾರಷ್ಟೆ ಈ ರಾಷ್ಟ್ರದ ಪ್ರಜೆಗಳು ಈ ಬ್ಯಾಂಕುಗಳಲ್ಲೆಲ್ಲಾ ಕಳೆದ ಮಾರ್ಚಿ ಆಖೈರು ವರೆಗಿನ ಸಂವತ್ಸರದಲ್ಲಿ ೬೭ ಲಕ್ಷ ರೂಪಾಯಿಗಳನ್ನು ಹಾಕಿದ್ದರೆಂದು ತಿಳಿದು ಬಂದಿದೆ

* * *

ಪೂರ್ವ ಬಂಗಾಳಕ್ಕೆ ಸೇರಿದ ಢಕ್ಕಾನಗರದಲ್ಲಿ ಕವಿಮೋಹನ ಎಂಬುವನು ಪೋಲೀಸ್‌ಹುದ್ದೇದಾರನಂತೆ ವೇಷ ಹಾಕಿಕೊಂಡು ಅರಿಯದ ಪ್ರಜೆಗಳಿಂದ ಹಣಕಾಸು ಕಿತ್ತು ತಿನ್ನುತ್ತಿದ್ದನು ಸರ್ಕಾರದವರು ಅವನನ್ನು ಹಿಡಿದು ದರ್ಯಾಫ್ತಿ ಮಾಡಿದ್ದರಲ್ಲಿ ಅವನು ಮಾಡಿದ ಅಪರಾಧವು ರುಜುವಾತಾದದ್ದರಿಂದ ಅವನಿಗೆ ಎರಡು ತಿಂಗಳ ಕಠಿಣ ಸಜಾ ವಿಧಿಸಿದರು

* * *

ಪೂರ್ವ ಬಂಗಾಳಕ್ಕೆ ಸೇರಿದ ಮಿಡ್ನಪುರದಲ್ಲಿ ಕಳೆದ ಬುಧವಾರ ಮೂರು ಮೈಲಿ ವಿಸ್ತಾರವಾದ ಪ್ರದೇಶದಲ್ಲಿ ಭಯಂಕರವಾದ ಮಳೆಯೂ ಅಪಾರವಾದ ಸುಂಟರಗಾಳಿಯೂ ಪ್ರಾಪ್ತವಾದುವು ಅನೇಕ ಮನೆಗಳೂ ಭಾರೀ ಕಟ್ಟಡಗಳೂ ಅಂಗಡಿ ಮುಂಗಟ್ಟುಗಳೂ ಗಿಡಮರಗಳೂ ಕೊಚ್ಚಿ ಬಿದ್ದು ಕೊಂಡವು ನೂರಾರು ಪ್ರಜೆಗಳು ನಿಲ್ಲುವುದಕ್ಕೆ ನೆರಳಿಲ್ಲದೆ ಕಷ್ಟಪಡುವ ಹಾಗಾಯಿತು

* * *

ಪೂರ್ವ ಬಂಗಾಳಕ್ಕೆ ಸೇರಿದ ಮಧುವಾಣಿ ಎಂಬ ಗ್ರಾಮದಲ್ಲಿ ಒಬ್ಬ ಮುಸಲ್ಮಾನನವನು ಒಬ್ಬ ಬ್ರಾಹ್ಮಣ ಸ್ತ್ರೀಯನ್ನು ಮದುವೆ ಮಾಡಿಕೊಂಡನು ಹಿಂದೂಗಳಿಗೆ ಮಹಮ್ಮದೀಯರ ಮೇಲೆ ಅದಕ್ಕಾಗಿ ಕೋಪವುಂಟಾಗಿ ಅನೇಕ ಮಹಮ್ಮದೀಯರ ಮನೆ ಮಠಗಳನ್ನು ಲೂಟಿ ಮಾಡಿದ್ದಲ್ಲದೆ ಸುಟ್ಟು ಹಾಕಿದರು ಹೊಂಪಿ ಕಲಹವು ಪ್ರಾಪ್ತವಾಯಿತೆಂದು ತಂತೀ ವರ್ತಮಾನ ಬಂದಿದೆ

* * *

ಕರಾಚಿ ಪಟ್ಟಣದಲ್ಲಿರುವ ಒಬ್ಬ ಪಂಜಾಬಿ ವರ್ತಕನು ಜರ್ಮನಿ ದೇಶದಿಂದ ಜಹಜಿನ ಮೇಲೆ ಕೊಕೈನ್ ಎಂಬ ಮದ್ಯವನ್ನು ಗುಟ್ಟಾಗಿ ಬೇರೇ ಚೀಟಿ ಅಂಟಿಸಿದ ಪೆಟ್ಟಿಗೆಗಳಲ್ಲಿ ತರಿಸಿದನು ಅದೆಲ್ಲಾ ಒಟ್ಟು ಸುಮಾರು ೨೦,೦೦೦ ರೂಪಾಯಿ ಬೆಲೆಯಾಗುವಷ್ಟಿತ್ತು ಕರಾಚಿ ಪಟ್ಟಣದ ಸುಂಕದ ಕಟ್ಟೆಯವರು ಅದನ್ನು ಸ್ವಾಧೀನಪಡಿಸಿಕೊಂಡು, ಅವನನ್ನು ದಸ್ತಗಿರಿಮಾಡಿ, ವಿಚಾರಣೆಗೆ ಗುರಿಪಡಿಸಿರುತ್ತಾರೆ

* * *

ಕಲ್ಲಿಕೋಟೆಯ ಹತ್ತಿರ ಪರಪನಂಗಡಿ ಎಂಬ ಗ್ರಾಮದಲ್ಲಿ ಕುರ್ಷಾಬಿಡ್ ಎಂಬೊಬ್ಬ ಮಾಪ್ಪಿಳ್ಳೆಯು ಕೋರ್ಟಿನ ಸಾಕ್ಷ್ಯಗಳಲ್ಲಿ ಹೊಡೆದಾಡುತ್ತಿದ್ದು ಒಂದು ಹೋಟೆಲಿನ ಜಗಲಿಯ ಮೇಲೆ ಮಲಗಿ ನಿದ್ದೆಮಾಡುತ್ತಿರುವಾಗ ಕೆಲವು ಜನ ದ್ವೇಷಿಗಳು ಅವನ ಬಾಯಿ ತುರುಕಿ ಅವನ ಎರಡು ಕಣ್ಣುಗಳನ್ನೂ ಚುಚ್ಚಿ ಕುರುಡು ಮಾಡಿಬಿಟ್ಟರು ಆಸ್ಪತ್ರೆಯಲ್ಲಿ ಚಿಕಿತ್ಸೆ ನಡಿಸಿದರೂ ಪ್ರಯೋಜನವಾಗಲಿಲ್ಲ

* * *

ಬರೋಡಾ ಸಂಸ್ಥಾನದ ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ವಸ್ತು ಶಾಸ್ತ್ರ ಶೋಧನಾ ವಿದ್ಯಾ ಶಾಲೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳನ್ನು ತರಪೇತು ಮಾಡಬೇಕೆಂದು ಗಾಯಕವಾಡಿ ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರೆ ಈ ವಿದ್ಯಾಲಯವನ್ನು ಕಟ್ಟುವುದಕ್ಕೆ ಮೂರು ಲಕ್ಷ ರೂಪಾಯಿ ಅಂದಾಜು ಮಾಡಲ್ಪಟ್ಟಿದೆ ಶಾಸ್ತ್ರ ಶೋಧನೆಯಲ್ಲಿ ಪ್ರಸಿದ್ಧರಾದ ಪಂಡಿತರು ಸೇರಿ ಏರ್ಪಾಡು ಮಾಡುತ್ತಿದ್ದಾರೆ

* * *

ಟಿಬೆಟ್ಟಿನ ರಾಜಕೀಯ ವಿಚಾರಗಳನ್ನು ಕುರಿತು ಇಂಗ್ಲೀಷ್ ಮತ್ತು ಚೀನಾ ಗವರ್ನ್‌ಮೆಂಟುಗಳವರು ಪರಸ್ಪರ ಕಾಗದ ಪತ್ರಗಳನ್ನು ಬೆಳಸುತ್ತಾ ಚರ್ಚೆ ನಡಿಸುತ್ತಾ ಬಂದಿದ್ದಾರೆ ಟಿಬೆಟ್ಟನ್ನು ತ್ಯಜಿಸಿ ಹೊರಟುಬಂದು ಡಾರ್ಜೀಲಿಂಗಿನಲ್ಲಿ ನೆಲಸಿರುವ ದಳಾಯಿಲಾಮಾ ಎಂಬ ಬೌದ್ಧ ಗುರುವು ಅಲ್ಲಿಂದ ಹೊರಡುವಹಾಗಿಲ್ಲವೆಂದೂ, ಇಲ್ಲೇ ಶಾಶ್ವತವಾಗಿ ಇದ್ದುಬಿಡುವಂತೆ ಕಾಣುತ್ತಿದೆ ಎಂದೂ ಪ್ರಕಟವಾಗಿದೆ

* * *

ಕಲ್ಕತ್ತಾ ಪಟ್ಟಣದಲ್ಲಿ ಹೋದ ಭಾನುವಾರದ ದಿನ ಬಹು ಭಯಂಕರವೂ ಅಪೂರ್ವವೂ ಆದ ಬಿರುಗಾಳಿ ಮಳೆ ಕಲ್ಮಳೆಗಳು ಪ್ರಾಪ್ತವಾದವು ಇಂಥಾ ಕಲ್ಮಳೆಯನ್ನು ೪೦ ವರುಷಗಳಿಂದ ಅಲ್ಲಿ ಯಾರು ನೋಡಿರಲಿಲ್ಲ ಆನೆಕಲ್ಲು ಸುಮಾರಾಗಿ ಕೋಳಿ ಮೊಟ್ಟೆಗಳ ಗಾತ್ರವಿದ್ದು ಸುಮಾರು ಒಂದುವರೆ ಗಂಟೆ ಹೊತ್ತು ಬಿಡದೆ ಸುರಿಯಿತು ಅಪಾರವಾಗಿ ಗುಡುಗಿದರೂ ಅರ್ಧ ಅಂಗುಲದಷ್ಟು ಮಾತ್ರ ಮಳೆ ಆಗಿರುತ್ತದೆ

* * *

ಹಿಂದಿನ ಭಾನುವಾರ ಕಲ್ಕತ್ತಾ ಪಟ್ಟಣದ ಸ್ಮಾಲ್ ಕಾಜ್ ಕೋರ್ಟಿನ ಆವರಣದೊಳಗೆ ಬಿದ್ದಿದ್ದ ಸಕ್ಕರೆ ಕಡ್ಡಿಯನ್ನು ತಿಂಡಿ ಪದಾರ್ಥವೆಂದು ಊಹಿಸಿ ಒಬ್ಬನು ಎತ್ತಿ ಬಾಯಲ್ಲಿ ಹಾಕಿಕೊಂಡು ತಿಂದುಬಿಟ್ಟನು ಇನ್ನೊಬ್ಬನು ರುಚಿ ನೋಡಿ ಉಗಿದುಬಿಟ್ಟನು ಇಬ್ಬರಿಗೂ ಹೊಟ್ಟೆನೋವು ಪ್ರಾಪ್ತವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು ಮೊದಲನೆಯವನು ಮೃತಪಟ್ಟನು ಅವರು ತಿಂದ ಪದಾರ್ಥದಲ್ಲಿ ವಿಷವಿತ್ತೆಂದು ಗೊತ್ತಾಯಿತು

* * *

ಪೂರ್ವ ಬಂಗಾಳಕ್ಕೆ ಸೇರಿದ ಲಕ್ಷ್ಮೀಪುರ ಮತ್ತು ಕಿಷೋರ್‌ಗಂಜ್ ಎಂಬೀ ದೊಡ್ಡ ಪಟ್ಟಣಗಳಲ್ಲಿ ಕಳೆದವಾರ ಅಪೂರ್ವವಾದ ಸುಂಟರಗಾಳಿಯೂ ಮಳೆಯೂ ಆನೆಕಲ್ಲೂ ಬಿದ್ದು ಮಧ್ಯಾಹ್ನ ಹೊತ್ತು ಅನೇಕ ಮನೆಗಳೂ ಮಠಗಳೂ ಸರ್ಕಾರಿ ಕಟ್ಟಡಗಳೂ ಬಿದ್ದು ಹೋದವು ಒಂದು ಮಠದಲ್ಲಿ ಐದು ಮಂದಿ ಮಕ್ಕಳಿಗೆ ಜಖಂ ಆಗಿರುತ್ತದೆ ಒಂದು ಪಟ್ಟಣದಲ್ಲಿ ಹತ್ತು ಸಾವಿರ ರೂಪಾಯಿನ ಮಾಲುಗಳು ನಷ್ಟವಾದವು

* * *

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಲಾಹೋರ್ ಪಟ್ಟಣದಲ್ಲಿ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರೂ ಒಬ್ಬ ಜಿಲ್ಲಾದಾರನೂ ಸೇರಿ ಷಾದಿ ಎಂಬವನನ್ನು ಠಾಣ್ಯದಲ್ಲಿ ಬಹಳ ಹಿಂಸೆ ಮಾಡಿದ್ದರಿಂದ ಅವನು ಸತ್ತುಹೋದನು ಇದು ಮೊಕದ್ದಮೆ ಆದಾಗಲೇ ಪೋಲೀಸ್ ಅಧಿಕಾರಿಗಳು ಮೃತಪಟ್ಟವನು ಮೆಟ್ಟಿಲಿಂದ ಇಳಿಯುವಾಗ್ಗೆ ಬಿದ್ದು ಸತ್ತುಹೋದನೆಂದು ಸಮಾಧಾನ ಹೇಳಿದರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೊದಲನೇ ಅಪರಾಧಿಗೆ ಐದು ವರುಷವೂ ಎರಡನೇ ಅಪರಾಧಿಗೆ ನಾಲ್ಕು ವರುಷವೂ ಕಠಿಣ ಸಜಾ ವಿಧಿಸಿರುತ್ತಾರೆ.

* * *

ಹಿಂದಿನ ಭಾನುವಾರ ನಡುಮಧ್ಯಾಹ್ನ ಬೊಂಬಾಯಿನಿಂದ ಸುಮಾರು ೫೦ ಮೈಲಿ ದೂರದಲ್ಲಿ ಸಾಮಾನ್ ತುಂಬಿದ್ದ ರೈಲ್ ಗಾಡಿಯು ಸೋಲಾಪುರದಿಂದ ಪಾಲ್ಘರಿಗೆ ಹೋಗುತ್ತಿದ್ದಾಗ ಬಂಡಿಗಳೊಳಗೆ ದ್ರವ್ಯಪದಾರ್ಥಗಳು ಹತ್ತಿಕೊಂಡು ಉರಿಯುತ್ತಿದ್ದುವು ಗಾಡಿಗಳನ್ನು ನಿಲ್ಲಿಸಿ ನೋಡಿದಾಗ ಆರು ಸಾಮಾನ್ ಬಂಡಿಗಳು ಸಂಪೂರ್ಣವಾಗಿ ಉರಿದು ಬೂದಿಯಾದುವು ಎರಡು ಗಾಡಿಗಳು ಮಾತ್ರ ಅರ್ಧ ಉರಿದು ಉಳಿದುಕೊಂಡವು ಅದರ ದೆಸೆಯಿಂದ ಎರಡು ದಿನಗಳ ತನಕ ಆ ಕಂಬಿಗಳ ಮೇಲೆ ರೈಲ್ ಗಾಡಿಗಳ ಸಂಚಾರವು ನಿಂತು ಹೋಗಿತ್ತು

* * *

ಹೋದ ವರುಷ ಮದರಾಸ್ ಅಧಿಪತ್ಯದಲ್ಲೆಲ್ಲಾ ಹುಲಿಗಳ ದೆಸೆಯಿಂದ ೨೯೧ ಜನರೂ, ಕತ್ತೆಕಿರುಬಗಳಿಂದ ೯೧ ಜನರೂ, ಇತರ ಕಾಡುಮೃಗಗಳಿಂದ ೪೮೦ ಜನರೂ, ಸರ್ಪಗಳೂ ಹಾವುಗಳೂ ಕಚ್ಚಿ ೧,೬೮೨ ಜನರೂ ಮೃತಪಟ್ಟಿರುತ್ತಾರೆ ಮತ್ತು ೧೩,೯೬೮ ಗೋಕಾಯಿಗಳು ಮೃಗಗಳ ಕಾಟದಿಂದ ಅಕಾಲ ಮರಣವನ್ನು ಹೊಂದಿದವು, ಸರ್ಪಗಳು ಕಡಿದು ೧,೫೪೯ ರಾಸುಗಳು ಲಯವಾಗಿರುತ್ತವೆ ಅತ್ತಲಾಗಿ ಹೋದ ವರುಷ ೧೬,೨೫೪ ಕಾಡುಮೃಗಗಳನ್ನು ಶಿಕಾರಿ ಮಾಡಿ ಕೊಂದು ಹಾಕಿದ್ದಕ್ಕೆ ಸರ್ಕಾರದಿಂದ ಇನಾಮುಗಳು ಸಂದಿರುತ್ತವೆ

* * *

ಕೊಯಮುತ್ತೂರಿನಿಂದ ೫ ಮೈಲಿ ಫಾಸಲೆಯಲ್ಲಿರುವ ಪರೂರು ಶೆಟ್ಟಿಪಾಳ್ಯದ ಹತ್ತಿರ ಒಂದು ತೋಪಿನೊಳಗೆ ನೂರಾರು ಜನರು ಸೇರಿ ಜೂಜಾಡುತ್ತಿದ್ದರು ಪೋಲೀಸ್ ಇನ್ಸ್‌ಪೆಕ್ಟರ್ ಅಪ್ಪಾದಸ್ವಾಮಿ ಪಿಳ್ಳೆಯವರು ಆಯುಧಪಾಣಿಗಳಾದ ಪೋಲೀಸಿನವರ ಸಂಗಡ ಗುಟ್ಟಾಗಿ ಹೋಗಿ ಆ ತೋಪಿನ ಸುತ್ತಲೂ ಘೇರಾಯಿಸಿಕೊಂಡು ಪರೀಕ್ಷೆ ಮಾಡುವಲ್ಲಿ ೬೦ ಜನರು ಜೂಜಾಡುತ್ತಿದ್ದು ಸಿಕ್ಕಿಬಿದ್ದರು ಆ ಪೈಕಿ ಕೆಲವರು ತಪ್ಪಿಸಿಕೊಂಡು ಓಡಿಹೋದರು ಮಿಕ್ಕ ೫೦ ಮಂದಿಯನ್ನು ಅವರ ಬಳಿ ಸಿಕ್ಕಿದ ಸುಮಾರು ೪೦೦ ಚಿಲ್ಲರೆ ರೂಪಾಯಿ ಸಮೇತ ದಸ್ತಗಿರಿ ಮಾಡಿರುತ್ತಾರೆ

* * *

ಸಿಲ್‌ಹಟ್ ಪ್ರಾಂತ್ಯಕ್ಕೆ ಸೇರಿದ ಜಜುಟಂಡ್ ಎಂಬ ಊರಿನಲ್ಲಿ ಮದನಮೋಹನ ಸರ್ಕಾರ್ ಮತ್ತು ಸಿವಾರಣ ಚಂದ್ರದತ್ತ ಎಂಬಿಬ್ಬರು ಬಂಗಾಳೀ ಯೌವನಸ್ಥರು ಒಬ್ಬ ಮಾರ್ವಾಡಿಯನ್ನು ನೋಯಪಡಿಸಿ ೧೮೭೦ ರೂಪಾಯನ್ನು ಅವನಿಂದ ವಸೂಲ್ಮಾಡಿಕೊಂಡರು ಪೋಲೀಸಿನವರು ಮದನಮೋಹನನನ್ನು ಹಿಡಿದು ಅವನ ಮನೆಯನ್ನು ಶೋಧನೆಮಾಡಿದಾಗ ೧೩,೦೦೦ ರೂಪಾಯಿ ಸಿಕ್ಕಿತು ಮ್ಯಾಜಿಸ್ಟ್ರೇಟರು ಅವನಿಗೆ ಎರಡು ವರುಷ ಕಠಿಣಸಜವನ್ನೂ ೧೦೦ ರೂಪಾಯಿ ಜುಲ್ಮಾನೆಯನ್ನೂ ಜುಲ್ಮಾನೆ ಸಾವತಿ ಆಗದಿದ್ದರೆ ಇನ್ನಾರು ತಿಂಗಳ ಕಠಿಣ ಸಜವನ್ನೂ ವಿಧಿಸಿರುತ್ತಾರೆ ಎರಡನೇ ಅಪರಾಧಿಯು ಇನ್ನೂ ಸಿಕ್ಕಿ ಇಲ್ಲ.

* * *

ಲಾಹೋರ್ ಮ್ಯುನಿಸಿಪಾಲಿಟಿಯವರು ಆ ಪಟ್ಟಣದ ಕಸಬು ಕಲಾಕೌಶಲ್ಯಗಳನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಪ್ರತಿ ವರುಷವೂ ಆ ಪಟ್ಟಣದಲ್ಲಿ ಒಂದು ಪ್ರದರ್ಶನವನ್ನು ನಡಿಸಬೇಕೆಂದೂ ಅದಕ್ಕಾಗಿ ೩,೪೦೦ ರೂಪಾಯಿ ಪ್ರಕಾರ ಖರ್ಚು ಮಾಡಬೇಕೆಂದೂ ತೀರ್ಮಾನ ಮಾಡಿರುತ್ತಾರೆ ಈ ಪ್ರದರ್ಶನದ ಕಮಿಟಿಗೆ ಖಾನ್ ಬಹದ್ದೂರ್ ಸರ್ದಾರ್ ಮಹಮದ್ ಅಲಿಯವರು ಪ್ರೆಸಿಡೆಂಟರಾಗಿಯೂ, ಬ್ಯಾರಿಸ್ಟರ್ ಮೆ॥ ದುನೀಚಂದರವರು ಸೆಕ್ರೆಟರಿಯಾಗಿಯೂ ಚುನಾಯಿಸಲ್ಪಟ್ಟಿರುವರು ಈ ಪ್ರದರ್ಶನವನ್ನು ನೋಡುವುದಕ್ಕೆ ತಲಾ ಮೂರು ಕಾಸಿನಂತೆ ಫೀಜು ವಸೂಲ್ಮಾಡಬೇಕೆಂದೂ, ಉತ್ಕೃಷ್ಟವಾದ ವಸ್ತುಗಳಿಗೆ ಬಹುಮಾನಗಳನ್ನು ಕೊಡಬೇಕೆಂದೂ ಗೊತ್ತುಮಾಡಲ್ಪಟ್ಟಿದೆ.

* * *

ನಾಗೂರು ನಾಗಪಟ್ಟಣದಲ್ಲಿ ಭಾರೀ ಉಪ್ಪಿನ ವರ್ತಕನಾಗಿದ್ದು ಕಾಲವಾದ ಸುಬ್ರಹ್ಮಣ್ಯಪಿಳ್ಳೆ ಎಂಬಾತನು ತನ್ನ ಆಸ್ತಿಯಲ್ಲಿ ೧೩,೩೫೦ ರೂಪಾಯನ್ನು ಯಾವುದಾದರೊಂದು ಧರ್ಮ ಕಾರ್ಯಕ್ಕೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿದ್ದನು ಆತನ ಮಕ್ಕಳು ಆ ಪಟ್ಟಣದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸುವುದಾಗಿ ಒಪ್ಪಿಕೊಂಡರು ಅದಕ್ಕೆ ಮ್ಯುನಿಸಿಪಾಲಿಟಿಯವರು ೮೫೦ ರೂಪಾಯಿ ಬಾಳುವ ನಿವೇಶನವನ್ನು ಕೊಂಡುಕೊಟ್ಟರು. ಆ ಜಮೀನಿನ ಮೇಲೆ ಸುಮಾರು ೪,೦೦೦ ರೂಪಾಯಿ ಮುಟ್ಟಿಸಿ ಒಂದು ಆಸ್ಪತ್ರೆಯು ಕಟ್ಟಿ ಸಿದ್ಧವಾಯಿತು ತಂಜಾವೂರಿನ ಕಲೆಕ್ಟರಾದ ಮೆ॥ ಬೆಡ್‌ಫರ್ಡ್‌ಯವರು ಕಳೆದವಾರ ಆ ಆಸ್ಪತ್ರೆಯನ್ನು ಪ್ರತಿಷ್ಠೆಮಾಡಿ, ಆತನ ಧರ್ಮಬುದ್ಧಿಯನ್ನು ಕೊಂಡಾಡಿದರು

* * *

ಇಂಡಿಯಾ ಗವರ್ನ್‌ಮೆಂಟಿನ ೧೮೧೮ನೇ ಇಸವಿಯ ಮೂರನೇ ನಂಬರ್ ಕಾನೂನ್ ಪ್ರಕಾರ ಕಳೆದ ೧೮೦೮ನೇ ಇಸವಿ ಜೂಲೈ ತಾ ೧೮ ರಲ್ಲಿ ಗವರ್ನ್

ಮೆಂಟಿನವರು ಬರ್ಮಾ ಅಧಿಪತ್ಯಕ್ಕೆ ಸೇರಿದ ಚೀನ ಜನರ ಸಿರ್ಯ ಸಂಗಡದ ಮುಖಂಡರಾದ ಟಿ ಏ ಶಾಂ ಎಂಬವರನ್ನು ಗಡೀಪಾರು ಮಾಡಿ, ಪೋರ್ಟ್ ಬ್ಲೇರ್ ಎಂಬ ದ್ವೀಪದಲ್ಲಿ ಇಟ್ಟಿದ್ದರು ಅವರು ೧೬ ವರುಷಗಳಿಂದ ಈ ಗಡೀಪಾರು ಶಿಕ್ಷೆಯನ್ನನುಭವಿಸಿ, ಕಳೆದ ವಾರ ವೈಸ್‌ರಾಯಿಯವರ ಅನುಜ್ಞೆಯ ಪ್ರಕಾರ ಬಂಧನದಿಂದ ಬಿಡುಗಡೆ ಮಾಡಲ್ಪಟ್ಟಿರುತ್ತಾರೆ ಸರ್ಕಾರದವರು ಅವರನ್ನು ಅಲ್ಲಿಂದ ಮಹಾರಾಜಾ ಎಂಬ ಹಡಗಿನಲ್ಲಿ ಕೂರಿಸಿ ವಾಪಸು ಕರೆದು ತಂದು ಮಾಂಡಲೇ ಪಟ್ಟಣದಲ್ಲಿ ಬಿಟ್ಟರು ಅಲ್ಲಿ ಅವರ ಕಡೆಯವರು ಬಂದು ಅವರನ್ನು ಸ್ವಗೃಹಕ್ಕೆ ಕರೆದುಕೊಂಡು ಹೋದರು

* * *

ಪಿಷಾವರ್ ಪಟ್ಟಣದಲ್ಲಿ ಈಸಲ ರಾಮನ ಹಬ್ಬದ ದಿನವೂ ಮಾರನೆಯ ದಿನವೂ ಹಿಂದೂ ಮುಸಲ್ಮಾನ ಪ್ರಜೆಗಳಿಗೆ ದೊಂಬಿ ಕಲಹವಾಯಿತು ಮಹಮದೀಯರು ಹಿಂದೂಗಳ ಅಂಗಡಿಗಳನ್ನೂ ಮನೆಮಠಾದಿಗಳನ್ನೂ ನುಗ್ಗಿ ಲೂಟಿಮಾಡಿದರು ಈ ಕಲಹದಲ್ಲಿ ಸುಮಾರು ೩೦ ಮಂದಿಯು ಕನಿಕ ಹಿಂದುಗಳು ಮೃತಪಟ್ಟರಂತೆ ಪೋಲೀಸಿನವರು ಹಿಂದುಗಳಿಗೆ ಸಹಾಯ ಮಾಡದೆ ತಟಸ್ಥರಾಗಿದ್ದರೆಂದೂ, ಅಧಿಕಾರಿಗಳು ಆ ದಿನವೇ ಶಹರ ಕಡೆಗಳಿಗೆ ಹೊರಟುಹೋದರೆಂದೂ, ಲೂಟಿಮಾಡಿದ ಅಪರಾಧಿಗಳನ್ನು ಹಿಡಿದು ಶಿಕ್ಷಿಸದೆ ಅವರಿಗೆಲ್ಲಾ ಕ್ಷಮಾಪಣೆ ಮಾಡುತ್ತೇವೆಂದು ಇಸ್ತಿಹಾರು ಹಾಕಿಸಿದರೆಂದೂ, ಹಿಂದುಗಳ ಬಾಬತು ಸುಮಾರು ಅರ್ಧ ಕೋಟಿ ರೂಪಾಯಿನ ಸ್ವತ್ತುಗಳು ಲೂಟಿಯಾದವೆಂದೂ, ಈಗಲಾದರೂ ಸರ್ಕಾರದವರು ಈ ದುರ್ನ್ಯಾಯದ ಪೂರ್ವೋತ್ತರವನ್ನು ತನಿಖೆಮಾಡಿ ಹಿಂದುಗಳಿಗಾದ ಕಷ್ಟನಷ್ಟಗಳನ್ನು ಪರಿಹರಿಸಿಕೊಡಬೇಕೆಂದೂ ಹಿಂದುಗಳ ಮುಖಂಡರು ಲೆಫ್ಟಿನೆಂಟ್ ಗವರ್ನರವರಿಗೆ ವಿಜ್ಞಾಪನೆ ಮಾಡಿಕೊಂಡಿರುತ್ತಾರೆ

* * *

ಕಾನ್‌ಪುರ ಡಿಸ್ಟ್ರಿಕ್ಟಿಗೆ ಸೇರಿದ ಜಗನ್ನಾಥದ ಹಿಂದೂ ದೇವಸ್ಥಾನದಿಂದ ಸರ್ಕಾರದವರು ಪೂಜಾ ವಿಗ್ರಹಗಳನ್ನು ಲಕ್ನೋ ಪಟ್ಟಣದ ಕಚೇರಿ ಬಂಗಲೆಗೆ ಸಾಗಿಸುವುದು ನಿಜವೇ ಎಂದು ಸಂಯುಕ್ತ ಅಧಿಪತ್ಯಗಳ ಮಂತ್ರಾಲೋಚನಾ ಸಭೆಯಲ್ಲಿ ಕೆಲವು ಮೆಂಬರುಗಳು ಲೆಫ್ಟಿನೆಂಟ್ ಗವರ್ನರವರನ್ನು ಪ್ರಶ್ನೆಮಾಡಿ ಕೇಳಿದರು ಗವರ್ನ್‌ಮೆಂಟಿನವರು ಪ್ರತ್ಯುತ್ತರ ಹೇಳಿದ್ದೇನೆಂದರೆ —ಪೂಜೆಯಾಗುತ್ತಿದ್ದ ವಿಗ್ರಹವ್ಯಾವುದನ್ನೂ ಹಾಗೆ ದೇವಸ್ಥಾನದಿಂದ ಸಾಗಿಸಿರುವುದಿಲ್ಲ ಪ್ರಾಚೀನ ಲಿಪ್ಯನ್ವೇಷಣ ಇಲಾಖಾ ಅಧಿಕಾರಿಯು ಆ ದೇವಸ್ಥಾನದ ಹೊರಪ್ರಾಕಾರದಲ್ಲಿ ಪೂಜೆಯಿಲ್ಲದೆ ಬಿದ್ದಿದ್ದ ಕೆಲವು ಬಹು ಸುಂದರವಾಗಿ ಕೆಲಸ ಮಾಡಿದ ಪ್ರತಿಮೆಗಳನ್ನು ಸಾಗಿಸಬೇಕೆಂದು ಅಭಿಪ್ರಾಯಪಟ್ಟಿದ್ದನ್ನು ಅಲ್ಲಿದ್ದ ಪೂಜಾರಿಗಳೇ ಮುಂತಾದವರು ಸಮ್ಮತಿಪಟ್ಟದ್ದರಿಂದ ಸಾಗಿಸಲಾಯಿತು ಈಗಲೂ ಹಾಗೆ ಸಾಗಿಸಿದ್ದು ಸಹಜವಲ್ಲವೆಂದು ರುಜುವಾತು ಕೊಟ್ಟ ಪಕ್ಷದಲ್ಲಿ ಆ ವಿಗ್ರಹಗಳನ್ನು ವಾಪಸು ತರಿಸಿ ಇಡಿಸುತ್ತೇವೆ ಎಂಬೀ ರೀತಿ ಹೇಳಿ ಸಮಾಧಾನಪಡಿಸಿದರು

ವಿದೇಶ ವರ್ತಮಾನಗಳು

ತುರ್ಕಿ ಸುಲ್ತಾನರು ದರ್ಬಾರವೆದ್ದು ಸರಳುತ್ತಿದ್ದಾರೆಂದೂ, ಆದರೆ ಅದು ಅಷ್ಟು ಕಠಿಣವಾಗಿಲ್ಲವೆಂದೂ ತಿಳಿಯಬರುತ್ತದೆ

* * *

ಉತ್ತರ ಆಲ್ಬೇನಿಯ ಪ್ರಜೆಗಳೆಲ್ಲರೂ ತುರ್ಕಿ ರಾಜ್ಯದವರ ಮೇಲೆ ದಂಗೆ ಎದ್ದಿದ್ದಾರೆಂದು ಕಾನ್‌ಸ್ಟಾಂಟಿನೋಪಲಿನಿಂದ ತಂತೀವರ್ತಮಾನ ಬಂದಿದೆ

* * *

ಪ್ರಿನ್ಸ ಆಫ್ ವೇಲ್ಸ್‌ರವರೂ, ಇವರ ಪತ್ನಿಯರೂ ಲಂಡನ್ ಪಟ್ಟಣದಲ್ಲಿ ನಡೆಯುವ ಪರ್ಷಿಯನ್ ವಸ್ತುಗಳ ಪ್ರದರ್ಶನಾಲಯವನ್ನು ಇದೇ ತಿಂಗಳು ಹನ್ನೆರಡರಲ್ಲಿ ತೆರೆಯುವವರಾಗಿರುವರು

* * *

ಇಂಡಿಯಾ ದೇಶದಲ್ಲಿ ಸರ್ವ ಸೈನ್ಯಾಧಿಪತಿಯಾಗಿದ್ದ ಲಾರ್ಡ್ ಕಿಚ್ನರ್ ಪ್ರಭುಗಳನ್ನು ಕಳೆದ ಏಪ್ರಿಲ್ ೨೭ ನೇ ತಾ ಸೌಥಾಂಪ್ಟನ್ ಎಂಬಲ್ಲಿ ಆಸಕ್ತಪೂರಿತರಾದ ಪ್ರಜೆಗಳು ಲಂಡನ್ ಪಟ್ಟದ ಪುರರಕ್ಷಣಾಧಿಕಾರಿಗಳೂ ಬಹು ಪ್ರೀತಿಪುರಸ್ಸರವಾಗಿ ಅಂಗೀಕಾರ ಮಾಡಿಕೊಂಡರು

* * *

ಪೂರೆನ್ ಎಂಬ ಹೆಸರುಳ್ಳ ಒಬ್ಬ ಮುಷ್ಟಿ ಯುದ್ಧ ಮಾಡುವ ಇಂಗ್ಲಿಷಿನವನು ಮೆಕಾರ್ತಿ ಎಂಬೊಬ್ಬ ಅಮೇರಿಕದವನನ್ನು ದವಡೆಯ ಮೇಲೆ ಹೊಡೆದು ಮಲಗಿಸಿದನು ಕೂಡಲೇ ಮೆಕಾರ್ತಿ ಎಂಬವನು ಸ್ಮರಣೆ ತಪ್ಪಿದವನಾಗಿ ಕೆಳಗೆ ಬಿದ್ದು ಸ್ವಲ್ಪ ಹೊತ್ತಿನ ಮೇಲೆ ಮೃತಪಟ್ಟನು

* * *

ಲಂಡನ್ ಪಟ್ಟಣದ ಕಾಡಂ ಎಂಬೊಂದು ಕಂಪನಿಯು ದಿವಾಳಿಯಾಗಿ ೫೫ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಷೇರುದಾರರಿಗೆ ನಷ್ಟವಾಗಿರುತ್ತದೆ ಈ ಕಂಪನಿಯವರು ಬರ್ಮಾ ಅಧಿಪತ್ಯಕ್ಕೆ ಸೇರಿದ ಮೌಲ್ಮೀನ್ ಮತ್ತು ರಂಗೂನ್ ಪಟ್ಟಣಗಳನ್ನು ಇದ್ದು ವ್ಯಾಪಾರಗಳು ನಡಿಸುತ್ತಿದ್ದರು

* * *

ಕೈರೋ ಪಟ್ಟಣದಿಂದ ಬಂದ ತಂತೀ ವರ್ತಮಾನದಿಂದ ಅರಬ್ಬೀ ಭಾಷೆಯಲ್ಲಿ ಪ್ರಚುರವಾಗುತ್ತಿದ್ದ ಹಾಸ್ಯಲಹರಿಯುಳ್ಳ ಒಂದು ವಾರಪತ್ರಿಕೆಯು ಮಾಜಿ ಮಂತ್ರಿಗಳಾದ ಬೌಟ್ರೋಸ್ ಪಾಷಾ ಎಂಬವರನ್ನು ಅವಮಾನಪಡಿಸುದದಕ್ಕಾಗಿ ಸರ್ಕಾರದವರು ಆ ಪತ್ರಿಕೆಯನ್ನು ರದ್ದುಮಾಡಿದರೆಂದು ತಿಳಿಯಬರುತ್ತದೆ

* * *

ಕಾಟನಿಕ್ ಕಣಿವೆಯು ಆಲ್ಬೇನಿಯನ್ ಜನಗಳ ತೊಂದರೆಯಿಂದ ನಿವೃತ್ತಿ ಹೊಂದಿದೆಯೆಂತಲೂ ರೈಲ್‌ರಸ್ತೆ ನಷ್ಟಹೊಂದಿಲ್ಲವೆಂತಲೂ ಕಾನ್‌ಸ್ಟಾಂಟಿನೋಪಲ್‌ನಲ್ಲಿ ಇಸ್ತಿಹಾರಾ ಮೂಲಕ ತಿಳಿಯಪಡಿಸಿದೆ ಕಣಿವೆಯ ದಾರಿಯಲ್ಲಿ ಹಾಕಿದ್ದ ಬಂಡೆಗಳನ್ನೂ ಕಲ್ಲುಗಳನ್ನೂ ತೆಗೆದುಹಾಕಿ ವ್ಯಾಪಾರ ನಡೆಯುವುದಕ್ಕೆ ಸರಾಗಮಾಡಿದ್ದಾರೆ ಈ ಜಗಳದಲ್ಲಿ ಉಂಟಾದ ನಷ್ಟವು ಇನ್ನೂ ಗೊತ್ತಾಗಲಿಲ್ಲ

* * *

ನೈಟ್‌ಯಾನ್ಸ್ ಕಂಪೆನಿಯವರು ದಿವಾಳಿಗಳಾದುದು ಸರಿಯಷ್ಟೆ ಇವರದಿವಾಳಿತನದಿಂದುಂಟಾದ ನಷ್ಟವನ್ನು ಅರಳೆ ವ್ಯಾಪಾರ ಸಂಘದವರು ಮತ್ತು ಬ್ಯಾಂಕಿನವರು ಸಹಿಸಬೇಕಾಗುವರೆಂಬ ನಿರೀಕ್ಷಣೆಯ ಭಾವವು ಲಿವರ್‌ಪೂಲ್ ಪಟ್ಟಣದಲ್ಲಿ ಅಂಕುರಿಸಿದೆ ೨೫ ಅಥವಾ ೩೦ ಲಿವರ್‌ಪೂಲಿನ ಅಂಗಡಿಗಳು ಈ ನಷ್ಟದಲ್ಲಿ ಭಾಗಿಗಳಾಗಿವೆ ಸುಮಾರು ೧೮,೦೦೦ ದಿಂದ ೧೦,೮೦,೦೦೦ ಪೌಂಡುಗಳ ವರೆಗೂ ನಷ್ಟವಾಗಿದೆಯೆಂದು ತಿಳಿದುಬಂದಿದೆ

* * *

ಎಕ್ಸ್ ಎಂಬ ಸ್ಥಳದಲ್ಲಿ ಜರಗಿದ ಶಿಲ್ಪವಸ್ತು ಪ್ರದರ್ಶನದಲ್ಲಿ ಸೇರಿದ ವಸ್ತುಗಳು ನ್ಯೂಯಾರ್ಕ ಪಟ್ಟಣದಲ್ಲಿ ಹರಾಜು ಹಾಕಲ್ಪಟ್ಟಿತು ಆ ವಸ್ತುಗಳೆಲ್ಲವೂ ೬,೧೦೩,೩೫೦ ರೂಪಾಯಿಗಳಿಗೆ ವಿಕರಿಯಾಯಿತು ಅದರ ಪೈಕಿ ಒಂದು ರೋಮ್ ದೇಶೀಯನ ಚಿತ್ರಪಟವು ೪,೧೧,೦೦೦ ರೂಪಾಯಿಗೆ ಮಾರಲ್ಪಟ್ಟಿತು ಪಾರಸೀದೇಶದ ಎರಡು ಮೇಜುಗಳು ೧,೮೭,೫೦೦ ರೂಪಾಯಿಗಳಿಗೆ ಮಾರಲ್ಪಟ್ಟವು

* * *

ವಿಮಾನ ಸಂಚಾರಿಯಾದ ಪಾಲ್‌ಹಾನ್ ಎಂಬವನ ಮರ್ಯಾದಾರ್ಥವಾಗಿ ಏಪ್ರಿಲ್ ತಾ ೩೦ ರಲ್ಲು ಲಂಡನ್ ಪಟ್ಟಣದ ಸೇವಾಯಿ ಹೊಟೇಲಿನಲ್ಲಿ ಒಂದು ಸೊಗಸಾದ ಟೀ ಪಾರ್ಟಿ ಇಡಿಸಿದ್ದರು "ಡೆಯಿಲಿ ಮೆಯಿಲ್" ಎಂಬ ಪತ್ರಿಕೆಯ ಎಡಿಟರಾದ ಮೆ|| ಮಾರ್‌ಲೊ ಯವರು ಆತನಿಗೆ ೧೦,೦೦೦ ಪೌಂಡು ಚೆಕ್ಕನ್ನು ಬಹುಮಾನವಾಗಿ ಕೊಟ್ಟರು ಅಲ್ಲದೆ ಲಂಡನ್ ಪಟ್ಟಣದಿಂದ ಎಡಿನ್‌ಬರ್ಗ್ ಪಟ್ಟಣಕ್ಕೆ ವಿಮಾನದಲ್ಲಿ ಹೋಗಿ ಹಿಂತಿರಿಗಿ ಬರುವವರಿಗೆ "ಡೆಯಿಲಿ ಮೇಯಿಲ್" ಎಂಬ ಪತ್ರಿಕೆಯು ೧೦೦೦೦ ಪೌಂಡು ಬಹುಮಾನ ಕೊಡುವುದಾಗಿ ತಿಳಿಸಿದರು

* * *

ಮೊನ್ನೆ ಸೋಮವಾರ ಲಂಡನ್ ಪಟ್ಟಣದಲ್ಲಿ ಕೂಲಿ ಜನಗಳ ಉತ್ಸವ ನಡಿಸಲ್ಪಟ್ಟಿತು ಆ ದಿನಕ್ಕೆ ಕೂಲಿ ಜನಗಳ ದಿನವೆಂದು ಹೆಸರು ಆ ದಿನದಲ್ಲಿ ೧೫,೦೦೦ ಜನರು (ಇದರಲ್ಲಿ ಸಬ್ಬತ್ತಿನ ಪಾಠಶಾಲೆಗೆ ಸೇರಿದ ೩,೦೦೦ ಮಂದಿ ಮಕ್ಕಳು ಸಹ ಸೇರಿದ್ದರು) ಹೈಡ್‌ಪಾರ್ಕ ಎಂಬಲ್ಲಿಗೆ ಮೆರವಣಿಯಾಗಿ ಹೊರಟು ಆ ಸ್ಥಳವನ್ನು ಸೇರಿದರು ಅಲ್ಲಿ ಸುಮಾರು ೪೦,೦೦೦ ಜನಗಳ ವರೆಗೂ ಸಭೆ ಸೇರಿತ್ತು ಬೇರೆ ಬೇರೆ ಉಪನ್ಯಾಸಗಳು ಮಾಡಲ್ಪಟ್ಟವು ಅಲ್ಲದೆ ಕೆಲವು ಕ್ರಮಗಳನ್ನು ಸಹ ಏರ್ಪಾಡು ಮಾಡಿದರು ಎಲ್ಲಾ ಕಾರ್ಯಗಳೂ ಬಹು ಕ್ರಮದಿಂದ ಜರುಗಿದವು

* * *

ಎಂ ಪಾಲ್‌ಹಾನ್ ಎಂಬ ವಿಮಾನ ಸಂಚಾರಿಯು ಮ್ಯಾಂಚೆಸ್ಟರ್ ಪಟ್ಟಣದಲ್ಲಿ ಇಳಿದ ಕೂಡಲೇ ಅಲ್ಲಿ ಆತನಿಗಾಗಿ ಕಾದಿದ್ದ ಸಾವಿರಾರು ಜನರು ಬಹು ಉಲ್ಲಾಸದಿಂದ ಆತನನ್ನು ಅಂಗೀಕರಿಸಿದರು ಆತನು ಮ್ಯಾಂಚೆಸ್ಟರಿಗೆ ಹಾರಿ ಬರುವಾಗ್ಗೆ ಗಾಳಿ ವಿಪರೀತವಾಗಿ ಎದ್ದು ಆಕಾಶದಲ್ಲಿ ಮೋಡಗಳು ಪ್ರಬಲವಾಗಿದ್ದುವು ಆದಾಗ್ಯೂ ಆತನು ಗಂಟೆ ೧ಕ್ಕೆ ೫೦ ಮೈಲುಗಳಂತೆ ಪ್ರಯಾಣ ಮಾಡಿದನೆಂದು ಗೊತ್ತಾಗುತ್ತದೆ ಜನರು ಸಂಚಾರ ಮಾಡದೆ ಇರುವ ಒಂದು ಬೈಲಿನಲ್ಲಿ ಏನೊಂದೂ ಅಪಾಯವಿಲ್ಲದೆ ಇಳಿದನು ಆತನಿಗೆ ಬಹಳ ಆಯಾಸವಾಗಿದ್ದಿತು ದೇಹವೆಲ್ಲಾ ಜೋಮು ಹಿಡಿದ ಹಾಗೆ ಇದ್ದಿತು ಬಹಳ ಛಳಿ ಸಹಾ ಗೂ ಸಂತೋಷವಾಗಿದ್ದೇನೆಂದು ಆತನು ಹೇಳಿದನು

* * *

ಕಾಟನಿಕ್ ಕಣಿವೆಯಲ್ಲಿ ಹೊಗೆ ಗಾಡಿಯು ಹೋಗುತ್ತಿರುವಾಗ್ಗೆ ಆಲ್ಬೇನಿಯರಾದವರು ಕೆಂಪು ಬಾವುಟಾ ತೋರಿಸಿ ಗಾಡಿಯನ್ನು ನಿಲ್ಲಿಸಿದರು ಅವರು ಪ್ರತಿಯೊಂದು ಗಾಡಿಯನ್ನೂ ಪರಿಶೋಧನೆ ಮಾಡಿ ಸೈನ್ಯಕ್ಕೆ ಸೇರಿದವುಗಳನ್ನೆಲ್ಲಾ ಕಿತ್ತುಕೊಂಡರು ಪ್ರಯಾಣಿಕರು ತುಂಬಾ ಗಾಬರಿಯಾಗಿ ಹೆಂಗಸರು ಮೂರ್ಛೆ ಹೊಂದಿದರು ಆದರೆ ಆಲ್ಬೇನಿಯಾ ಜನರು ಪ್ರಯಾಣಿಕರನ್ನು ಸಮಾಧಾನಪಡಿಸಿ ಅವರಿಗೆ ಸೇದುವುದಕ್ಕೆ ಸಿಗರೇಟುಗಳನ್ನು ಕೊಟ್ಟು, ಆಯುಧಪಾಣಿಗಳಾಗಿದ್ದ ಸಿಪಾಯಿಗಳನ್ನೆಲ್ಲಾ ನಿರಾಯುಧರನ್ನಾಗಿ ಮಾಡಿದ ಮೇಲೆ, ಗಾಡಿಯನ್ನು ಮುಂದಕ್ಕೆ ಬಿಟ್ಟರು ಈಚೆಗೆ ಬಂದ ವರ್ತಮಾನದಿಂದ ಆ ಕಣಿವೆಯ ಉಭಯ ದ್ವಾರಗಳನ್ನು ಆಲ್ಬೇನಿಯಾ ಜನರು ಸ್ವಾಧೀನಪಡಿಸಿಕೊಂಡಿರುವಂತೆ ಗೊತ್ತಾಗುತ್ತದೆ

* * *

ಟೆಲಿಫೋನಿನ ಮುಖಾಂತ್ರ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿರುವುದು ವಾಚಕ ಮಹಾಶಯರಿಗೆ ತಿಳಿದೇ ಇದೆಯಷ್ಟೆ ಈಚೆಗೆ ನವೀನವಾಗಿ ಒಂದು ವಿಧ ಟೈಪ್ ರೈಟರ್ ಎಂಬ ಯಂತ್ರವನ್ನು ಅದಕ್ಕೆ ಅನುಕೂಲಿಸುವಂತೆ ತಯಾರು ಮಾಡಿಸಿರುತ್ತಾರೆ ಈ ಯಂತ್ರವು ವಿದ್ಯುಚ್ಛಕ್ತಿಯಿಂದ ನಡೆಯಬೇಕಾಗಿರುತ್ತವೆ ಈ ಯಂತ್ರವು ಟೆಲಿಫೋನಿನಲ್ಲಿ ಬಂದ ಸಮಾಚಾರವೆಲ್ಲವನ್ನೂ ಲಿಖಿತ ಮುಖಾಂತ್ರವಾಗಿ ಬರೆದುಕೊಳ್ಳುತ್ತದೆ ಈ ಯಂತ್ರಕ್ಕೆ "ಟೈಕೋಲಿಟೆ" ಎಂದು ಹೆಸರು ಈ ಯಂತ್ರವನ್ನು ನಮ್ಮ ಸಾಧಾರಣ ಟೆಲಿಫೋನಿಗೂ ಸಹ ಉಪಯೋಗಿಸಬಹುದಾಗಿರುತ್ತದೆ ಅದರಿಂದ ಲಿಖಿತ ಮುಖಾಂತ್ರವಾಗಲಿ ಯಾ ವಾಚಾಳತದಿಂದಾಗಲಿ ಮನಸ್ಸು ಬಂದಾಗ ಉಪಯೋಗಿಸಿಕೊಳ್ಳುವುದಕ್ಕೆ ಯೋಗ್ಯವಾಗಿರುತ್ತದೆ

ಮೈಸೂರು ಮರಹಮತ್ ಇಲಾಖಾ

ಈ ಇಲಾಖೆಯ ರಿಪೋರ್ಟು ಈಗ ತಾನೆ ಪ್ರಕಟವಾಗಿದೆ ಒಟ್ಟು ಖರ್ಚಿಗಾಗಿ ಗೊತ್ತುಮಾಡಿದ್ದ ೩೭,೯೭,೭೩೪ ರೂ ಗಳಲ್ಲಿ ೩೬,೨೮ ೧೫೯ ರೂ ಗಳು ಖರ್ಚುಮಾಡಲ್ಪಟ್ಟವು ಹಾಗೂ ಕೆಳಗೆ ನಮೂದಿಸುವ ಬಾಬುಗಳಿಗೆ ವಿನಿಯೋಗಿಸಲ್ಪಟ್ಟವೆ

ಮಾರಿಕಣಿವೆ ಕೆರೆಗೆ	ರೂ	೧,೭೫,೮೪೪
ಬಾರಿಂಗಪೇಟೆ ರಾಮಸಾಗರ ಕೆರೆಗೆ		೭,೧೭೫
ಡಿಟೊ ಕೆರೆಯ ನಾಲೆಗಳಿಗೆ		೧೬ ೮೪೯
ಯೊನ್ನಾಳ ರೌಳಂಗದ ಕೆರೆಗೆ		೧೩,೭೯೮
ಮೈಸೂರು ಚಾಮರಾಜ ಇಂಡಸ್ಟ್ರಿಯಲ್ ಕಟ್ಟಡಕ್ಕೆ		೧೭ ೪೯೧
ಕೋಲಾರ್ ಗೋಲ್ಡ್ ಫೀಲ್ಡ್‌ನಲ್ಲಿ ಮ್ಯಾಜಿಸ್ಟ್ರೇಟರ ಆಫೀಸಿಗೆ		೧೦ ೬೫೭
ಮೈಸೂರು ಅರಮನೆಯ ಕಟ್ಟಡಕ್ಕೆ		೨,೭೨,೪೩೨
ಸಾಮಾನು ವಗೈರೆಗಳಿಗೆ		೪೭,೫೦೦
ಬೆಂಕಿ ಆರಿಸುವ ಯಂತ್ರಗಳಿಗೆ		೧೨,೫೫೨
ಬೆಂಗಳೂರು ಬಸವನ ಗುಡಿ ಬಡಾವಣೆಗೆ		೧೦,೧೯೯
ಶಿವಮೊಗ್ಗ ಪಟ್ಟಣದ ಬಡಾವಣೆಗೆ		೫ ೯೬೭
ಯಶವಂತಪುರದಲ್ಲಿ ನೀರು ಶೋಧನೆಯ ಯಂತ್ರಗಳಿಗೆ	ರೂ	೧,೦೫ ೬,೭೮
ಹರಿಹರದಲ್ಲಿ ನೀರು ಸರಬರಾಯಿಗೆ	,	೬ ೩೨೯
ಶಿವಮೊಗ್ಗ ಪಟ್ಟಣದಲ್ಲಿ	,	೨೦,೦೯೫
ಬೆಂಗಳೂರು ಪಟ್ಟಣದ ಚರಂಡಿಗಳಿಗೆ	,,	೩೦,೯೮೭
ಕಲ್ಕತ್ತಾದಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರವರ ಮೆಮೋರಿಯಲ್ ಕಟ್ಟಡಕ್ಕೆ	,,	೧೬,೬೮೧
ಮೈಸೂರಿನಲ್ಲಿ ಚೀಟಿ ಮಹಾರಾಜರವರ ಪ್ರತಿಮೆಗೆ	,,	೬ ೮೪೨

ಮೇಲೆ ಹೇಳಿದ ಕೆಲಸಗಳಲ್ಲಿ ಕೆಲವು ಆಗಲೇ ಪೂರೈಸುತ್ತಾ ಬಂದಿವೆ

ಕಾವೇರಿ ವಿದ್ಯುಚ್ಛಕ್ತಿಗೋಸ್ಕರ೧೫,೭೩,೦೪೦ ರೂಪಾಯಿಗಳು ಖರ್ಚಾಗಿವೆ ೧೧,೨೭ ೬೮೫ ರೂಪಾಯಿಗಳು ಡಿಪ್ರೀಸಿಯೇಷನ್ ಫಂಡಿಗಾಗಿ ಪ್ರತ್ಯೇಕಿಸಲ್ಪಟ್ಟಿದೆ

ಇನ್ನು ಮುಂದಕ್ಕೆ ಈ ಇಲಾಖೆಯ ಜಮಾ ಖರ್ಚಿನ ಅಂದಾಜಿನ ಪಟ್ಟಿಯು ೨೯ ಲಕ್ಷ ರೂಪಾಯಿಗಳಿಗೆ ವಿಸ್ತರಿಸಕೂಡದೆಂದು ಗೊತ್ತುಮಾಡಿದೆ

ಸರ್ಕಾರಿ ಹುಕುಂ

ಮರಾಮತ್ ಇಲಾಖೆಯ ರಿಪೋರ್ಟು

ಈ ಇಲಾಖೆಯಲ್ಲಿ ಖರ್ಚು ಕಮ್ಮಿಮಾಡುವ ಉದ್ದೇಶದಿಂದ ವರ್ಷವರ್ಷಕ್ಕೂ ಈ ಇಲಾಖೆಗೆ ೨೫ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹಣವು ಮಂಜೂರು ಮಾಡಲ್ಪಡಕೂಡದೆಂತಲೂ ಮತ್ತು ಇಲಾಖೆಯ ಶಿಬ್ಬಂದಿಯ ಖರ್ಚು ಒಂದು ಲಕ್ಷದ ಮೂವತ್ತುಮೂರು ಸಾವಿರ ರೂಪಾಯಿಗಳಷ್ಟು ಕಮ್ಮಿಮಾಡಬೇಕೆಂತಲೂ ಆರ್ಡರು ಮಾಡಲ್ಪಟ್ಟಿತು

ಮಾರಿಕಣಿವೆಯ ಡಿವಿಜನ್ ಮೊದಲು ಚಿತ್ರದುರ್ಗದ ಡಿವಿಜನ್ ಜೊತೆಗೆ ಸೇರಿಸಲ್ಪಟ್ಟಿತ್ತು ಆದರೆ ಒಬ್ಬ ಅಧಿಕಾರಿಗೆ ಈ ಎರಡು ಡಿವಿಜನ್‌ಗಳನ್ನು ಸೇರಿಸಿದುದರಿಂದ ಕೆಲಸವು ಜಾಸ್ತಿಯಾದಕಾರಣ ಅದನ್ನು ಪುನಃ ಪ್ರತ್ಯೇಕವಾದ ಡಿವಿಜನ್ ಆಗಿ ಮಾಡಲ್ಪಟ್ಟಿತು

ಬೇಸಿಗೆ ಕಾಲದಲ್ಲಿ ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದು ಕಡಿಮೆಯಾಗದೆ ಇರುವುದಕ್ಕೋಸ್ಕರ ಕಾವೇರಿ ಮತ್ತು ಕಪಿಲ ನದಿಗಳಲ್ಲಿ ನೀರನ್ನು ಸರಬರಾಯಿ ಮಾಡುವ ವಿಷಯದಲ್ಲಿ ಎಚ್ಚರಿಕೆಯನ್ನು ತೆಗೆದುಕೊಳ್ಳುವುದಕ್ಕೋಸ್ಕರ 'ಛಾನಲ್ ಡಿವಿಜನ್' ಎಂಬ ಬೇರೆ ಡಿವಿಜನ್ ಮಾಡಲ್ಪಟ್ಟಿತು

ಈ ಇಲಾಖೆಯಲ್ಲಿ ಗತಸಾಲಿನಲ್ಲಿ ಒಟ್ಟು ೩೭ ೩೭,೮೨೧ ರೂಪಾಯಿಗಳು ಖರ್ಚಾಯಿತು ಕಳೆದ ವರ್ಷ ಕೈಗೊಂಡ ಹೊಸ ಕೆಲಸಗಳಲ್ಲಿ ಮಾರಿಕಣಿವೆಯ ತಲಾವು ಮೊದಲನೆಯದು ಈ ಕೆಲಸವು ಸಮರ್ಪಕವಾಗಿ ನೆರವೇರಿದುದಲ್ಲದೆ ಸಾಗುವಳಿಗೋಸ್ಕರ ತಲಾವಿನ ದ ತೆಗೆಯಲ್ಪಟ್ಟಿರುವ ಎರಡು ಕಾಲುವೆಗಳಲ್ಲಿಯೂ ನೀರು ೧೬ ಮೈಲುಗಳವರಿವಿಗೆ ಬಿಡಲ್ಪಟ್ಟಿತು ತಲಾವಿನ ಕೆಳಗೆ ಫಸಲಿಗಿಟ್ಟಿರುವ ಜಮೀನಿನ ವಿಸ್ತೀರ್ಣವು ಹೆಚ್ಚುತ್ತಿರುವುದು ಆಚೆವರ್ಷ ೩ ೨೫ ಎಕರೆಗಳಿದ್ದುದು ಗತಸಾಲಿನಲ್ಲಿ ೬ ೪೬೫ ಎಕರೆಗಳಿಗೆ ಹೆಚ್ಚಿತು ಇದರಿಂದ ಒಟ್ಟು ೧೯ ೫೭೦ ರೂಪಾಯಿಗಳು ಕಂದಾಯವು ವಸೂಲಾಗುತ್ತಿರುವುದು

ಎರಡನೆಯ ಕಟ್ಟಡವು ಮೈಸೂರಿನಲ್ಲಿ ಕಟ್ಟಬೇಕೆಂದಿರುವ ಚಾಮರಾಜೇಂದ್ರ ಕಸುಬಿನ ಪಾಠಶಾಲೆಯು ಇದಕ್ಕೆ ೧೭,೯೯೧ ರೂಪಾಯಿಗಳು ಕಂಪೆನ್‌ಸೇಷನ್ ಕೊಟ್ಟು ಜಮೀನು ಸ್ವಾಧೀನಪಡಿಸಿಕೊಳ್ಳಲ್ಪಟ್ಟಿತು

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗಿಯಾಗಿ ಚಿಕಿತ್ಸೆಗೆ ಬರುವ ಯೂರೋಪ್ ಅಧಿಕಾರಿಗಳಿಗೋಸ್ಕರ ಒಂದು ಪ್ರತ್ಯೇಕವಾದ ಕಟ್ಟಡವು ಕಟ್ಟಲ್ಪಟ್ಟಿತು

ಶಿವಮೊಗ್ಗ ಟೌನ್ ಬಡಾವಣೆಗೂ ಮತ್ತು ಆ ಊರಿಗೆ ಕುಡಿಯುವ ನೀರು ಸರಬರಾಯಿಗೂ ಸಹ ೬ ೧೫೦ ರೂಪಾಯಿಗಳು ಮತ್ತು ೩೭,೫೯೨ ರೂಪಾಯಿಗಳು ಖರ್ಚುಮಾಡಲ್ಪಟ್ಟಿತು ಈ ಕೆಲಸವು ಸಲ್ಪಮಟ್ಟಿಗೆ ಸಾಗಿತ್ತು

ಬೆಂಗಳೂರು ಚಾಮರಾಜಪೇಟೆಗೂ ಬಸವನಗುಡಿಗೂ ಮಧ್ಯದಲ್ಲಿ ಒಂದು ಹೊಸ ಬಡಾವಣೆಯು ಏರ್ಪಡಿಸಲ್ಪಟ್ಟಿತು ಮೈಸೂರು ಪಟ್ಟಣಕ್ಕೆ ನೀರು ಸರಬರಾಯಿ ಆಗುವ ವಾಣೀವಿಲಾಸ ನೀರು ಕಾರ್ಖಾನೆಗೆ ವಿದ್ಯುಚ್ಛಕ್ತಿಯ ಸಹಾಯವು ಕೊಡಲ್ಪಟ್ಟಿತು ಮತ್ತು ಮೈಸೂರು ಪಟ್ಟಣದಲ್ಲಿ ಮೂರನೆ ಮಹಾರಾಜ ಕುಮಾರಿಯವರ ಅರಮನೆಯ ಕಾಮಗಾರಿಯು ಕೈಗೊಳ್ಳಲ್ಪಟ್ಟಿತು

೯೬೩ ಮಂದಿ ಕೆರೆಗಳು ದುರಸ್ತು ಮಾಡಲ್ಪಟ್ಟವು ರೈತರು ೯೭ ೪೩೦ ರೂಪಾಯಿಗಳನ್ನು ಮುಟ್ಟಿ ಕಾಮಗಾರಿಯನ್ನು ಮಾಡಿಸಿದರು ಮತ್ತು ಸರ್ಕಾರದವರು ೧,೨೧ ೧೫೨ ರೂಪಾಯಿಗಳಷ್ಟು ಕೆಲ್ಲು ಮತ್ತು ಗಾರೆಕೆಲಸವನ್ನು ಮಾಡಿಸಿದರು

ಈ ಇಲಾಖೆಯ ಸಿಬ್ಬಂದಿಗೋಸ್ಕರ ೭ ೨೩,೧೬೯ ರೂಪಾಯಿಗಳು ಖರ್ಚಾಯಿತು

ಕಾವೇರಿ ವಿದ್ಯುಚ್ಛಕ್ತಿ ಇಲಾಖೆಯ ಲೆಕ್ಕಗಳನ್ನು ಕಲ್ಕತ್ತಾ ಪಟ್ಟಣದ ಲವ್‌ಲಾಕ್ ಮತ್ತು ಲೆವಿಸ್ ಎಂಬ ಲೆಕ್ಕಪರಿಶೋಧಕರು ಪರೀಕ್ಷಿಸಿದರು ಅವರ ಸಲಹೆಯ ಪ್ರಕಾರ ೨೩ ಗಳು ಬೇರೆ ನಮೂನೆಯಲ್ಲಿ ಬರೆಯಲ್ಪಡುತ್ತವೆ ಈ ಇಲಾಖೆಯಲ್ಲಿ ೧೭,೪೫,೨೧೫ ರೂಪಾಯಿಗಳು ಉತ್ಪತ್ತಿಯಾಯಿತು ಮತ್ತು ೨ ೯೭ ೯೦೦ ರೂಪಾಯಿಗಳು ಖರ್ಚಾಯಿತು ಈ ಇಲಾಖೆಯು ಏರ್ಪಾಡಾದಾಗಿನಿಂದ ಇದಕ್ಕೆ ೬೯ ೯೭ ೨೩೪ ರೂಪಾಯಿಗಳು ಖರ್ಚಾಗಿರುವುದು ಇದರಲ್ಲಿ ಆಗಲೇ ೫೬ ೧೧ ೬೯೭ ರೂಪಾಯಿಗಳು ಬಟ್ಟುವಳಿಯಾಗಿರುವುದು

ವಿದ್ಯುಚ್ಛಕ್ತಿಯನ್ನು ಒಯ್ಯುವ ತಂತಿಗಳ ಮೇಲೆ ಕಡ್ಡಿಗಳನ್ನು ಹಾಕುವುದು ಕಂಬಗಳ ಮೇಲಿರುವ ಗಾಜುಗಳನ್ನು ಒಡೆಯುವುದು ಮುಂತಾದ ತುಂಟತನವನ್ನು ಹಳ್ಳಿಯವರು ಮಾಡುತ್ತಾರೆಂದು ಛೀಫ್ ಇಂಜಿನಿಯರವರು ತಿಳಿಸುತ್ತಾರೆ ಇದು ಪ್ರಾಣಾಪಾಯಕರವಾದುದೆಂತಲೂ, ಇದನ್ನು ಮಾಡುವವರು ಕಠಿಣ ಶಿಕ್ಷೆಗೆ ಗುರಿಯಾಗುವರೆಂತಲೂ ಆ ಗ್ರಾಮಸ್ಥರಿಗೆ ಬೆಂಗಳೂರು, ಮೈಸೂರು ಮತ್ತು ಕೋಲಾರದ ಡೆಪ್ಯುಟಿ ಕಮಿಷನರುಗಳು ತಿಳುವಳಿಕೆಯನ್ನು ಕೊಡಬೇಕಾಗಿದೆ

Printed and Published by the Rev H GULLIFORD, Proprietor and Manager Wesleyan Mission Press, Mysore 5/5/1911

REGISTERED
M.20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ | ಮೈಸೂರು—ಸೆ ೧೯೧೦ ನೇ ಇಸವಿ ಮೇ ತಾರೀಖು ೧೨ ನೇ ಗುರುವಾರ. | ಸಂಚಿಕೆ ೫೦

ಸುಗಂಧಗಳು.

1 25

ಪ್ರಖ್ಯಾತ ವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧೨ ೩, ೪ ೨-೮ ೦ ೧ ೪ ೦ ಬತ್ತಿಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ವಿಹಾರಿದ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ಸತ್ಯವೂ ಅಗ್ಗವೂ ಆದ ಅಂಗಡಿ

41 6

ರೂ ೩ ರಿಂದ ೨ ೧೨ ೦ ಗೆ ಇಳಿಸಿದ

೩೦ ಗಂಟೆ ನಡೆಯುವ ೧೦ ವರುಷದ ಗ್ಯಾರಂಟಿ ಉಳ್ಳ ಸುಂದರವೂ ಗಟ್ಟಿಯೂ ಆಗ ವೂ ಆದ ಲೀವರ್ ಜೇಬಿನ ಗಡಿಯಾರವನ್ನು ಸೊಗಸಾದ ಸರಪಣಿ, ೧೦೦ ಪೋಸ್ಟ್ ಕಾರ್ಡುಗಳ ಸಮೇತ ಪೋಸ್ಟೇಜು ಸೇರಿ ೩ ರೂ ಗೆ ಪಾರುತ್ತಿದ್ದದ್ದನ್ನು ಕೆಲವು ಕಾಲ ಮಾತ್ರ ರೂ ೨ ೧೨ ಗೆ ಕೊಡುತ್ತೇವೆ ಬೇಗ ಬರೆದುಕೊಳ್ಳಿ ಒಪ್ಪದಿದ್ದರೆ ಹಣ ವಾಪಸು ಕೊಡುತ್ತೇವೆ ನಮ್ಮ ವಿಳಾಸ —

೨೦ ೬ ಘಟಾಣಾ ಕಂಪನಿ, ಚಿತ್ತೂರು ಉ ಆರ್ಕಾಟ್

ಉಕ್ಕಿನ ತೊಲೆ ಮತ್ತು ಜಂತಿಗಳು

57 3

ಪ್ರಸಿದ್ಧಿಯಾದ ಮೆಸ್ಸರ್ಸ್ ದೋರ್ಮ್ಯಾನ್ ಲಾಂಗ್ ಕಂಪನಿಯವರಲ್ಲಿ ತಯಾರಾದ ಉಕ್ಕಿನ ತೊಲೆಗಳೂ ಜಂತಿಗಳೂ ಮೈಸೂರು ಪಟ್ಟಣದಲ್ಲಿ ಮೂರನೇ ಮಹಾರಾಜ ಕುಮಾರ್ತಿಯವರ ಮ್ಯಾನ್ಷನ್ ಕಟ್ಟಡದ ಬಳಿ ಬಿಕರಿಗೆ ಇಡಲ್ಪಟ್ಟಿವೆ ಕ್ರಯದ ದರಗಳು ಹಂಡ್ರೆಡ್ ವೇಟ್ ಒಂದಕ್ಕೆ ೬ ರೂಪಾಯಿ ಲಾಗಾಯಿತು ೬-೮-೦ ರೂಪಾಯಿ ವರೆಗೆ ಇಳಿಸಿದೆ ಇಷ್ಟವುಳ್ಳವರು ಆ ಕಟ್ಟಡದ ಸೂಪರಿಂಟೆಂಡೆಂಟರವರನ್ನು ಕಂಡು ಎಲ್ಲಾ ವಿಷಯಗಳನ್ನೂ ತಿಳಿದು ಕೊಳ್ಳಬಹುದು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

5 14

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲಿ ತಯಾರಾದವು? ಎಲ್ಲಿಂದ ಇತರ ಕಡೆಗೆಲ್ಲಾ ಹರಡಿಕೊಂಡವು? ನಿಂದಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಮಾದರಿಯೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಮಾದರಿಯಲ್ಲಾ ಸಿಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಮಿಷಿನಿನಿಂದ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿ ಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೪, ೧ ರೂ ೬ ೪, ೧ ರೂ ೪ ೪

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨, ೧ ರೂ ೮ ೪, ೧ ರೂ ೬ ೪

ಜಾದರ ಟೋಪಿಗಳು ೧ ರೂ ೧೨ ೪ ೧ ರೂ ೬ ೪

ಆಕುಚಿನ ಟೋಪಿಗಳು ೧ ರೂ ೮ ೪ ೧ ರೂ ೬ ೪

ಕಡುಗೆಂಪು ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಬಂಗಾರದ ಮತ್ತು ಬೆಳ್ಳಿಯ ಪದಕಗಳು ೧೨ ದೊರೆತಿವೆ.

ಡಯಮಂಡ್ | ಡಯಮಂಡ್

ಅತ್ತರ್ ಸಾಬೂನುಗಳು | ರಂಗಿನ ಸಾಬೂನುಗಳು

ಸುವಾಸನೆ, ಚರ್ಮಕ್ಕೆ ಹಿತ | ಸುಲಭ ಕ್ರಯ, ಬಣ್ಣ ಖಾತರಿ

24-7

ಅತ್ತರ್ ಸಾಬೂನುಗಳು ಮೈಯಿನ ಕಾಂತಿಗೂ, ಕಾರ್ಬಾಲಿಕ್ ಸಾಬೂನುಗಳು ಚರ್ಮದ ರೋಗನಿವಾರಣೆಗೂ ಅವಶ್ಯಕ ಡಯಮಂಡ್ ರಂಗಿನ ಸಾಬೂನುಗಳು ಬಣ್ಣ ಖಾತರಿ ಇವುಗಳಿಂದ ಎಲ್ಲಾ ತರಹೆ ಬಟ್ಟೆಗಳಿಗೂ ಬೇಕಾದ ರಂಗನ್ನು ಸುಲಭವಾಗಿ ಕೊಡಬಹುದು ಡಯಮಂಡ್ ಗುಲಾಬಿ ಟೀ —ಇದರ ಕಷಾಯವು ಬಹಳ ರುಚಿಕರವಾಗಿರುವುದರಿಂದ ಈ ಟೀಯು ಕೇವಲ ರೂಢಿಯಲ್ಲಿದೆ ಇದಲ್ಲದೆ ಡಯಮಂಡ್ ಕೇಶವರ್ಧಕತೈಲ, ಹಲ್ಲುಪುಡಿ, ಕಾಸ್ಮೆಟಿಕ್, ಪಾಮೇಡ್, ಬಾಂ, ಶೀತನಿವಾರಕ ಕ್ಷಾರ, ಸುವಾಸಿನಿ, ವಿಲಾಸ್ ಮೊದಲಾದ ಅತ್ತರುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ

ವ್ಯಾಪಾರಿಗಳಿಗೆ ವರ ಚೀಟಿ | ಡಯಮಂಡ್ ಸೋಪ್ ಕಂಪನಿ, ಗಿರ್ಗಾಂ, ಮುಂಬಯಿ

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

40 9

ಶೋಕಮಯಹರ ಕಸ್ತೂರಿಮಾತ್ರೆ

ಹೊಸ ತರಹಾ! | ವಾಸನೆಯಲ್ಲಿ ಹೆಚ್ಚು!! | ಗುಣದಲ್ಲಿ ಅಧಿಕ!!!

ಈ ಮಾತ್ರೆಗಳನ್ನು ಚನ್ನದರೇಖು—ಹವಳದಭಸ್ಮ—ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಕೇವಲ ಗುಣಕಾರಿಗಳೂ—ದೋಷರಹಿತಗಳೂ ಆದ ಬಹು ಪದಾರ್ಥಗಳ ಮಿಶ್ರದಿಂದ ಮೊದಲಿಗಿಂತ ಸುವಾಸನೆ—ರುಚಿ—ಗುಣಗಳು ಬಹಳವಾಗಿರುವಂತೆಯೂ—ಬಾಯಿಯಲ್ಲಿ ತಾನಾಗಿ ಕರಗುವಂತೆಯೂ—ಎಷ್ಟು ದಿನಗಳಿಟ್ಟರೂ ಕೆಡದಂತೆಯೂ ತಯಾರಿಸಿರುತ್ತೇವೆ

ವೇಳೆಯದೆಲೆಯೊಡನೆ ಅಥವಾ ಹಾಗೇ ಉಪಯೋಗಿಸುತ್ತಾ ಬಂದರೆ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಬರಬಹುದಾದ ನಾನಾ ರೋಗಗಳನ್ನು ಬಾರದಂತೆ ಮಾಡುತ್ತದೆ—ಮತ್ತು ಗುಣಪಡಿಸುತ್ತದೆ

ವಾಯು, ಸಂದುಗಳ ನೋವು—ಶೀತವಾತ— ಹೊಟ್ಟೆನೋವು ಅಗ್ನಿಮಾಂದ್ಯ— ಮೈನಡುಕ—ಮೈಭಾರ—ಕೈಕಾಲುಗಳ ಆರಿತ—ಹೊಟ್ಟೆ ಉರಿ—ಜ್ವರ—ಚಳಿಜ್ವರ—ನೆಗಡಿ, ಕೆಮ್ಮಲು—ಹಲ್ಲುನೋವು—ಬಲಹೀನತೆ—ಅರೋಚಕ—ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಂದಿತವಾಗಿ ವಾಸಿಮಾಡುತ್ತದೆ

ತಾಂಬೂಲದೊಡನೆ ಸೇವಿಸುತ್ತಾ ಬಂದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಯಂಥ ಆಹಾರವನ್ನಾದರೂ ಜೀರ್ಣಗೊಳಿಸಿ ಮಲಬದ್ಧ ವಿದ್ದರೆ ದಿನಕ್ಕೆ ಒಂದು ವೇಳೆ ಆಗುವಂತೆ ಮಾಡಿ ನೀರು ಹವಾಗಳ ಒದಲಾವಣೆಗಳನ್ನು ಸರಿಪಡಿಸಿ ಕಾಡು ಮಲೆನಾಡುಗಳಲ್ಲಾದರೂ ಯಾವ ಆಯಿಲೆಗೂದಾರಿಗೊಡದೆ ರಕ್ತದಲ್ಲಿರುವ ದೋಷಗಳನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿ ವರ್ಧಕವಾಗಿದೆ

೩೦ ಮಾತ್ರೆಯುಳ್ಳ ಕುಪ್ಪಿ ಬೆಲೆ 4 ಆಣೆ—ಐದು ಕುಪ್ಪಿಗೆ 1 ಹೆಚ್ಚು 10ರಿಂದ 12ರ ವರೆಗೆ ಟ ಖ 4 ಆಣಾ—

ಯೋಗ್ಯತಾಪತ್ರ —

ತಮ್ಮ ಶೋಕಾಮಯ ಹರ ಕಸ್ತೂರಿ ಮಾತ್ರೆಗಳಲ್ಲಿ ಗುಣವೂ ನಂಬಿಕೆಯೂ ಕಂಡು ಬಂದ ಕಾರಣ ಆಗಾಗ್ಗೆ ತಮ್ಮ ಕಡೆಯಿಂದ ತರಿಸಿಕೊಳ್ಳಲು ಪ್ರೋತ್ಸಾಹ ಉಂಟಾಗಿದೆ ಈಗ ಸದರಿ 18 ಕುಪ್ಪಿ ವಿ ಪಿ ಮಾಡಬೇಕು ಶ್ರಿ ೩ ದೊಡ್ಡಪ್ಪನವರು, ಬಿಕ್ಕೋಡು ಮಳ, ಬೇಲೂರು

ನಮ್ಮ ಶೋಕಾಮಯಹರ ಕಸ್ತೂರಿ ಮಾತ್ರೆಗಳು ನಮಗೆ ಬಹಳ ಗುಣವಾಗಿವೆ ಆರು ತಿಣ ಬೇಗ ಕಳುಹಿಸಿ—ತಡಮಾಡಕೂಡದು —ಬಸನಗೌಡರು, ಗಾವಠಿ ಸ್ಕೂಲ್ ಮಾಸ್ಟರ್, ಕಡೂರು ಗ್ರಾಮ

ವಿಳಾಸವನ್ನು ತಿಳಿಯುವ ಹಾಗೆ ಬರೆಯಿರಿ—

ವಿಳಾಸ — ಶ್ರೀ ಶ್ರೀರಾಘವ ವೈದ್ಯಶಾಲಾ, ಮೈಸೂರು

ಸುಗೀತಪಾರಿಜಾತವೆಂಬ ಹಾಡಿನ ಪುಸ್ತಕ

20 14

ಕ್ರಯ 0-4-0

ವಿಳಾಸಗಳು—ಮೈಸೂರು ಮರ್ಕೆಂಟೈಲ್ ಯೂನಿಯನ್ ಸಿ ಎಲ್ ಎಸ್ ಬುಕ್ ಡಿಪೋ ತುಮಕೂರು ಜಿ ಎಸ್ ಕನ್ನಯ್ಯಶೆಟ್ಟಿ ಅಂಡ್ ಕೊ ಮಂಗಳೂರು ಬಾಸೆಲ್ ಮಿಷನ್ ಬೆಂಗಳೂರು ಸಿಟಿ ಮಿಷನ್ ಬುಕ್ ಡಿಪೋ

ಪ್ರಸಿದ್ಧ ಪತ್ರಿಕೆ.

53 4

ನಾವು ಈಗ ಬಹಳ ಸೀಮೆಯಿಂದ ಕೆಂಪು, ಗುಲಾಬಿ ಕೆಂಪು, ಮಂದ ಕೆಂಪು, ಕಪ್ಪು, ಕಪ್ಪು ಕೆಂಪು ಮಿಶ್ರದ ಮಕ್ಮಲ್, ಕಾಫಿ ಬಣ್ಣದ ಉಲನ್ನನ್ನು ತರಿಸಿ ದೇವೆ ೫೦೦ ೧ ಕ್ಕೆ ೧—೦—೦ ರ ಲಾಗಾಯಿತು ೪—೦—೦ ರ ವರೆಗೆ ಮತ್ತು ೧ ಕ್ಕೆ ೧—೦—೦ ರ ಉಲನ್‌ನಲ್ಲಿ ತಯಾರಾದ ಟೋಪಿಗಳು ೧ ಕ್ಕೆ ೦—೯—೦ ರ ವರೆಗೆ ರೇಷ್ಮೆ ಚುಕ್ಕೆ ಟೋಪಿ ೧ ಕ್ಕೆ ಲಾಗಾಯಿತು ೧ —೮—೦ ರ ವರೆಗೆ ರೇಷ್ಮೆ ಚುಕ್ಕೆ ಟೋಪಿ ೧ ಕ್ಕೆ ೦—೭—೦ ೨—೦—೦, ಡಜನ್ ಗಟ್ಟಲೆ ತರಿಸಿಕೊಂಡರೆ ಶೇಕಡ ೬ ಡಿಸ್ಕೌಂಟ್ ಸಿಕ್ಕುತ್ತೆ ನಮ್ಮ ಕಂಪೆನಿಯ ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿ

ಜಿ ಯಸ್ ಕಣ್ಣಯ್ಯಶೆಟ್ಟಿ,

ಜುಬಿಲಿ ಕ್ಯಾಪ್ ಮ್ಯಾನೇಜರ್, ತುಂಕೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 51

ತಲೆನೋವು ವಾಯುನೋವು, ಸೆಳತ, ಗಂಟುನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಿಂದ ಮಾಡಿದಂತೆ ನಿಂದಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಬಹಳ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ— ಜಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್ ಕ್ಲೆಮೆಂಟ್ಸ್,

೩೭, ವೇದಮಲೆಪಿಳ್ಳೆ ಬೀದಿ ವೇಪೇರಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

22—1—1910 ರಿಂದ 29—4—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	1	0	0	0
ಮೈಸೂರ್ ,,	6	4	18	11
ಕೋಲಾರ್ ,,	0	0	22	11
ಕೋಲಾರ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	3	0	0	0
ಹಾಸನ ,,	0	0	0	0
ಚಿತ್ರದುರ್ಗ ,,	3	3	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
ಜುಮ್ಲಾ	10	7	40	[illegible]

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸಾಧಾರಣನಾಮ ಸಂವತ್ಸರದ ವೈಶಾಖ ಶುದ್ಧ ಪಂಚಮಿ ಶುಕ್ರವಾರದಿಂದ ವೈಶಾಖ ಶುದ್ಧ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಷಿದ ವ ಪಥ ಮಾಸ
13	ಶುಕ್ರ ,,	ಪಂಚಮಿ	17-10	ಮೃ	1-52	1
14	ಶನಿವಾ	ಷಷ್ಠಿ	[illegible]	ಆರ್ದ್ರಾ	1-12	
15	ರವಿವಾ	ಸಪ್ತಮಿ	[illegible]	ಪು	[illegible]	
16	ಚಂದ್ರ	ಅಷ್ಟಮಿ	11-18	ಪು	[illegible]	
17	ಕುಜ	ನವಮಿ	[illegible]	[illegible]	[illegible]	
18	ಬುಧ	ದಶಮಿ	11-47	[illegible]	9-19	
19	ಗುರು	ಏಕಾದಶಿ	[illegible]	[illegible]	11-1	6

ಶಂಕರಜಯಂತಿ
ವಿಷ್ಣುಪದಪುಣ್ಯಕಾಲ
ಭಾನುಸಪ್ತಮಿ
ಸ್ಮಾರ್ತ ಏಕಾದಶಿ

ಸಚಿತ್ರ ಕಲಾತರಂಗ.

(೧ ನೆಯ ವಿಭಾಗ)

ಇದುವರೆಗೆ ಕನ್ನಡದಲ್ಲಿ ಇಂತಹ ಗ್ರಂಥವಿಲ್ಲ. ಇದರಲ್ಲಿ ೮ ಭಾಗಗಳಿವೆ ದೇಶದ ಏಳಿಗೆಗೆ ಕೈಗಾರಿಕೆಯು ಮುಖ್ಯವೆಂಬುದು ಅನೇಕರ ಮನಸ್ಸಿಗೆ ಗೋಚರವಾಗಿದೆಯಷ್ಟೆ. ವಿದೇಶೀಯರು ಮುಖ್ಯವಾಗಿ ಜಪಾನೀಯರು ಸಹ ಈ ಕೈಗಾರಿಕೆಯ ವಿಸ್ತಾರದ ಮೇಲಿಂದ ದಿಗಂತ ವಿಶ್ರಾಂತವಾದ ಸಂಪತ್ತನ್ನು ಅನುಭವಿಸುತ್ತಿರುವರು. ಇಂಥ ಕೈಗಾರಿಕೆಗೆ ಅನುಕೂಲವಾದ ಪುಸ್ತಕಗಳಿಲ್ಲದ

ಅನೇಕರು ಸುಮ್ಮನಿರುವರು ವಿಶೇಷ ಖರ್ಚಿಲ್ಲದೆಯೂ, ಶ್ರಮವಿಲ್ಲದೆಯೂ, ಬಹು ಸ್ವಲ್ಪ ಕಾಲಕ್ಕೆ ಸೂರ್ಮಡಿಯಷ್ಟು ಲಾಭವನ್ನು ಕೊಡುವ ಇಂಥ ಕೈಗಾರಿಕೆಯ ವಿಷಯದಲ್ಲಿ ಯಾರುತಾನೇ ಗಮನಕೊಡದೆ ಇದ್ದಾರು. ಕೈಗಾರಿಕೆಯನ್ನು ಸ್ವತಂತ್ರವಾಗಿ ತಿಳಿಯುವುದಕ್ಕೆ ಮೇಲ್ಪಂಡ ಪುಸ್ತಕವು ಮುಖ್ಯವಾದುದರಲ್ಲಿ ಗ್ರಹಗಳ ವಿಷಯ, ಗಾಳಿ, ನೀರು, ಲೋಹಗಳುತ್ಪತ್ತಿ, ಪದರುಪ್ಪು, ಗುಲೇಕ್, ಮುರಬ್ಬಾ ಮಾಡುವ ವಿಧಗಳು, ನೀಸದ ಕಡ್ಡಿ, ಕಾಗದ, ಇಂಕಿ ಬೆಂಕಿ ಪೆಟ್ಟಿಗೆ, ಗಿಲೀಟು, ವಾರ್ನಿಸ್, ಲೆವೆಂಡರ್, ವೈದ್ಯಶಾಸ್ತ್ರ ಮುಂತಾದ ಅನೇಕ ವಿಷಯಗಳ ಕ್ರಮವನ್ನು ವಿವರಿಸಿರುತ್ತೆ. ಕನ್ನಡಿಗರಿಗೆ ಕೈಪಿಡಿ. ಬೆಲೆ ರೂ ೧—೮—೦ ವಿ. ಪಿ ಮೂಲಕ ರೂ ೧—೧—೦

ವಿಳಾಸ—(೧) ಮ್ಯಾನೇಜರ್ ಎಸ್. ಜಿ. ಎಫ್. ಪ್ರೆಸ್, ೧೫೪ ಅರಳೇಪೇಟೆ, ಬೆಂಗಳೂರು ಸಿಟಿ.

ಅಥವಾ

(೨) ವಿ ಉಲ್ಲ ನೋರ್ಟ್, ನಂ|| ೧, ಮಂಗಳೂರು (ದ. ಕ.)

ಮೇಲ್ಕಂಡ ೨ ಸ್ಥಳಗಳಲ್ಲಿಯೂ ಈ ಪುಸ್ತಕವು ಕ್ರಯಕ್ಕೆ ದೊರೆಯುತ್ತದೆ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



31ಎ

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಕಾಲರಾ, ಕೀಲುಗಳ ನೋವು, ಹೊಟ್ಟೆಯ ನಾನಾ ತರದಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ತರಹ ಉಪಯುಕ್ತವಾದ ಔಷಧವು ಜನರನ್ನು ಬಹು ಕಿಸಿರುವುದು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು — ಸಣ್ಣ ಸೀಸೆಗೆ ೧ ರೂಪಾಯಿ — ದೊಡ್ಡ ಸೀಸೆಗೆ ೨ ರೂಪಾಯಿ

ಅಪೂರ್ವಪುಸ್ತಕಗಳು

45-6

೧ ವ್ಯವಹಾರದರ್ಪಣವು ಕ್ರ ೧ ರೂ ೧—೮ ಸಮಸ್ತವ್ಯವಹಾರಗಳೂ, ನಮೂನೆಗಳು [illegible] ಈ ಪುಸ್ತಕ ೨ ತುಕಾರಾಮ ಕ್ರ ೧ [illegible] ಕಸ್ತೂರಿ [illegible] ಕನ್ನಡ ಲಾ ರಿಪೋರ್ಟರ್ ವರ್ಷದ ಚಂದಾ ೩ ರೂ ೮ ಕೋರ್ಟು ವ್ಯವಹಾರಗಳ ವಾಸಪತ್ರಿಕೆ ಅಪೇಕ್ಷಕರು ಪ್ರಕಾಶಕರ ಎಂ ಮಲ್ಲಾರಾಧ್ಯರು [illegible] ಮೈಸೂರು ಸಿಟಿ ಇವರಿಗೆ ಬರೆಯುವುದು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ತಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಒಂದು ಉಪಯೋಗಕ್ಕೆ ಗುಣವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಶಕ್ತವಾದ ಗುಣಕಾರಿಯು [26 11]

ತಲೆನೋವು, ಗಂಟು ಹುಟ್ಟುವದು, ನಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟಿನೋವು, ಅರ್ಧಾಂಗವಾಯು, ಎದೆನೋವು, ಘಾಯ, ಜಜ್ಜು, ಇತ್ಯಾದಿ

ಇದರ ವಿಷಯವಾಗಿ ಸರ್ವರೂ ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ದೊಡ್ಡ ದುರಿ ಹಾಗಿರುವವರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಅಸ್ತಮಕ್ಕೆ	೨-೦-೦
ಬೇಳೂಕಡೆತದಮದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದಿ ಹಗಳಿಗೆ	೦-೮-೦
ಜುಲಾಬು ವಾತ್ರೆ—ಚಿಲಾಬಿಗೆ	೦-೬-೦
ನೇತ್ರಾಂಜನ—ಮಂದದೃಷ್ಟಿಗೆ	೦ ४-೦
ಬಾಲ ವರ್ಧಿನೀ—ಮಕ್ಕಳ ಜಜಗೆ	೦-೩-೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧-೦ ೦
ಕರ್ಣನಾಶಕ ಚೂರ್ಣ—ಅಸ್ತ್ರ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರಿಯಿರಿ — ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

ಹಿಂದುಸ್ತಾನದಲ್ಲಿ ಮಕ್ಕಳು

ಬಹಳ ಉಷ್ಣಪ್ರದೇಶವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 6-19

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಮೀನುಮನುಷ್ಯ ಇರುವ ಈ ಔಷಧದ ಗುರುತು.

ಮನೆ ಕ್ರಯಕ್ಕೆ ಬಂದಿದೆ

62 1

For Sale — For Sale

ಮೈಸೂರು ನಗರ ಮೊಹಲ್ಲಾ ೩ನೇ ಡಿವಿಷನ್ ಬೀದಿ ಹಳ್ಳದಕೇರಿಯಲ್ಲಿ ಮಿಡ್ಲ್ ಸ್ಕೂಲ್ ನಂಬರಿನ ಮಹಡಿ ಮನೆಯು ವಿಕರಿಯಾಗಲಿದ್ದು ಇದನ್ನು ಕೊಳ್ಳುವವರು ಈ ಕೆಳಗಿನ ವಿಳಾಸದವರನ್ನು ಕಂಡು ಎಲ್ಲಾ ವಿಷಯಗಳನ್ನೂ ತಿಳಿದುಕೊಳ್ಳಬಹುದು ವಿಳಾಸ —

ಕೆ ಸುಬ್ರಹ್ಮಣ್ಯ ಅಯ್ಯರ್ ೩೭ ದಿವಾನರ ರಸ್ತೆ, ಮೈಸೂರು.

ಇತ್ತ ಲಕ್ಷ್ಯಕೊಡಿರಿ

ಸ್ವಾಮಿ ಅನೇಕ ಕಾಲಗಳಿಂದ ನಮ್ಮ ಗ್ರಾಹಕರು ಛತ್ರಿಯಾಗದಂತೆ ಕಾಪಾಡುವದರಿಂದ ಈಗ ನಾವು ಹೊಸದಾದ ಕೆಲವು ವಾಚುಗಳನ್ನು ತರಿಸಿ ವಿಕರಿಗೆ ಇಟ್ಟದ್ದೇವೆ

ಓಪನ್ [illegible] ನಿಕ್ಕಲ್ ಸಿಲ್ವರ್ ರಾಸ್ಕೋಪ್ ಲೀವರ್ ವಾಚ್ ಸ್ಪ್ರಿಂಗ್ ಸಹಿತ ಕ್ರಯ ರೂ [illegible] ಮೂರು ರೂಪಾಯಿ ಒಂದು ಆಣೆ ಈ ಗಡಿಯಾರಗಳು ಗುಣದಲ್ಲಿಯೂ ಕೀರ್ತಿಯಲ್ಲಿಯೂ ಇಂಗ್ಲೀಷಿನಲ್ಲಿಯೂ ಶ್ರೇಷ್ಠವಾದವೆಂದು ಸ್ಪಷ್ಟವಾಗಿ ಹೇಳುತ್ತೇವೆ

ಮ್ಯಾನೇಜರ್ ವಿ ಉಲ್ಲ ನೋರ್ಟ್

ಮಂಗಳೂರು

ಪೇಟೆ ಧಾರಣೆ.

ವಿನ.		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೨ ೮-೦	೧೩ ೮-೦
ಕೆಂಬೂತ ಅಕ್ಕಿ ಅವಲ್	..	೧೩-೮-೮	೧೪-೭ ೦
,, ದುಯ್ಯಂ	..	೧೨-೮-೮	೧೩-೦ ೦
ಜಾವಾಣಿ ಅಕ್ಕಿ	..	೧೨-೪ ೦	೧೪-೭ ೦
ಸಣ್ಣಕ್ಕಿ ಅವಲ್	..	೧೬-೦-೦	೧೬-೮-೦
,, ದುಯ್ಯಂ	..	೧೩-೦-೦	೧೪ ೦ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ	.	೧೨ ೮-೦	೧೩-೦-೦
,, ದುಯ್ಯಂ	..	೧೨-೦-೦	೧೨ ೦-೦
ಹೈಕ ರಾಗಿ ಪಲ್ಲಾ ೧ಕ್ಕೆ	..	೬-೮ ೦	೬-೧೨-೦
ಕಾಡ್ರಾಗಿ	.	೭-೪ ೦	೬-೮ ೦
ಜೋಳ	..	೭-೮-೦	೯-೦ ೦
ಹಲಸಂದೆ ಪಲ್ಲಾ ೧ಕ್ಕೆ	..	೧೧ ೦-೦	೧೧ ೦-೦
ಬೀನ್ ಅವರೆ	..	೧೧ ೦-೦	೧೦ ೨-೦
ಹೆಸರು	.	೧೧-೦-೦	೧೦ ४-೦
ಉದ್ದು	.	೧೩-೦ ೦	೧೧-೦ ೦
ಕಡಲೆ	.	೧೨-೮-೦	೧೧-೦ ೦
ಎಳ್ಳು ಸೇರು ೧೭೭ ಕ್ಕೆ	..	೨೦-೦-೦	೧೪ ೮-೦
ಹುರುಳಿ	...	೯ ೨-೦	೯ ೦-೦
ಹರಳು ೧೭೭ ಸೇರಿಗೆ	...	೧೬-೦-೦	೧೨-೦-೦
ನೀರ್ಗೀಕಾಯಿ ಮಣ ೧ಕ್ಕೆ	...	೨-४-೦	೧-೧೦-೦
ಮೆಣಸಿನಕಾಯಿ	...	೫-೮-೦	४-೦-೦
,, ದುಯ್ಯಂ	...	೫-೦-೦	೩-೮-೦
ಬೆಲ್ಲ ದೊಡ್ಡ ಅಚ್ಚು	...	೮ ೮-೦	ಮ ೨-೨-೦
ಒಳ್ಳೆನ್ನೆ ಮಣ ೧ಕ್ಕೆ	...	೫-೭-೦	४-೧೦-೦
ಹರಳೆಣ್ಣೆ ,,	...	೫-೮ ೦	४-೬-೦
ಕೊತ್ತುಂಬರಿ ಪಲ್ಲಾ ೧ಕ್ಕೆ	...	೧४-೨-೦	೧೩-೦-೦
ಉಪ್ಪು ,,	...	೫ ೮-೦	೫-೧೭-೦
ಹುಣಸೇ ಹಣ್ಣು	...	೧-೧೨-೦	೧-४ ೦
,, ಹಳೇದು	...	೧-೮-೦	೧-೭-೦
ತುಪ್ಪ ಮಣ ೧ಕ್ಕೆ	...	೧೬-೧೨ ೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	...	೯-४-೦	४ ४-೦
ತೆಂಗಿನಕಾಯಿ ೧೦೦ ಕ್ಕೆ	...	೫-೦-೦	೭-೮-೦
ಅಡಕೇಕಾಯಿ ಮಣ ೧ಕ್ಕೆ	...	೦ ೧೨-೦	೦-೧४-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	೦-೧೨-೦	೦-೧೨-೦
ಚಿನ್ನ (ಪವನ್) ತೊಲ	...	೧೫-೭-೦	೧೫ ೬-೦
,, ,, ಪಸಿಮೆ	...	೧೬-೦-೦	೧೬-೦-೦
,, ,, ಗಟ್ಟಿ ತೊಲ ೧ಕ್ಕೆ	...	೨४ ೮-೦	೨४ ೦ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	೭३-೦-೦	೭೫-೦-೦

ನಿಮಗೆಮೈ ಸ್ವಸ್ಥವಿಲ್ಲವ್ರೋ?

ನಿಮಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿಮಗೆ ಯಾವ ರೋಗವೂ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತದೆಯೋ?" ಎಂದು ನೀವು ನಿಮ್ಮನ್ನು ನೀವೇ ಕೇಳಿಕೊಳ್ಳಿ. ಹಾಗೆ ಆಗದಿದ್ದರೆ ಡೋನರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊಳ್ಳಿ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಶೌಚ ಪ್ರವೃತ್ತಿಯಾಗಿ ನಿಮಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ.)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಳೆ ಉಂಟಾಗುವುವೆಂಬುದನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ.—ಪಿತ್ತಕೋಶ ರೋಗ ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ; ಅಶಕ್ತಿ; ಎದೆಯುಬ್ಬುಸುವುದು; ತಲೆತಿರುಗುವುದು; ತಲೆನೋವು, ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೆ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲಿ ದುಃಸ್ಥುಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗಾಂಗಗಳೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [6-37]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವವಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು. ಅಥವಾ, ಡೋನ್ಸ್ ಒ. ಸಿ. ಬಾಕ್ಸ್ ೨೦, ಬೊಂಬಾಯಿ,—ಇವರಲ್ಲಿ ದೊರೆಯುವುವು

ಮೈಸೂರು ಟ್ರಸ್ಟ್ ಬೋರ್ಡು ಮೀಟಿಂಗು

ಮೈಸೂರು ಪಟ್ಟಣದ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು ಮೆಂಬರುಗಳು ಕಳೆದ ಗುರುವಾರ ಬೆಳಿಗ್ಗೆ ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಡೆಯ ಮೀಟಿಂಗನ್ನು ನಡಿಸಿದರು ಛೇರ್ಮನ್ ಮ ಕಾಂತರಾಜೇ ಅರಸಿನವರು, ಆಕ್ಟಿಂಗ್ ಆಫೀಸರ್ ಮ ಎಂ ಜಿ ಕೃಷ್ಣಸ್ವಾಮಿರಾಯರು, ಎಗ್ಸಿಕ್ಯುಟಿವ್ ಇಂಜನಿಯರ್ ಮ ಜೆ ಇ ಎ ಡಿಕ್ರೂಜ್‌ರವರು, ಹೆಲ್ತ್ ಆಫೀಸರ್ ಡಾ|| ವಿ ಎಲ್ ಮಾಂಕರ್‌ರವರು. ಮ ವೆಂಕಟಕೃಷ್ಣಯ್ಯನವರು ಮ ಮಹಮ್ಮದ್ ಜಾಫರ್‌ರವರು ಹಾಜರಾಗಿದ್ದರು.

ಟ್ರಸ್ಟ್ ಬೋರ್ಡಿನ ಮುಂದಿನ ಸಾಲಿನ ಜಮಾಖರ್ಚು ಲೆಕ್ಕಗಳನ್ನು ಇನ್ನೊಂದು ಮೀಟಿಂಗಿನಲ್ಲಿ ಇತ್ಯರ್ಥ ಮಾಡಬೇಕೆಂದು ತಗೆದಿಟ್ಟರು.

ಕುರುಬಗೇರಿಯಲ್ಲಿ ಮೆಂಬರುಗಳು ನೋಡಿಕೊಂಡು ಬಂದಿದ್ದ ಕೆಲವು ನಿವೇಶನಗಳನ್ನೂ ಮನೆಗಳನ್ನೂ ಟ್ರಸ್ಟ್ ಬೋರ್ಡಿನಿಂದ ಕ್ರಯಕ್ಕೆ ಪಡೆದುಕೊಂಡು ಪ್ರಜಾ ಆರೋಗ್ಯಕ್ಕೆ ಅನುಕೂಲ ಮಾಡಿಕೊಡಬೇಕೆಂದು ತೀರ್ಮಾನವಾಯಿತು.

ಮ|| ಖಾನ್‌ಸಾಹೇಬ್ ಮುದ್ದೀನ್ ಅಲ್ಲಿಖಾನ್ ರವರು ತಮ್ಮ ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ೩,೦೦೦ ರೂಪಾಯಿ ಸಾಲಕೊಡಿಸಬೇಕೆಂದು ಕೇಳಿದ್ದರು ಸರ್ಕಾರಿ ನೌಕರರಲ್ಲದವರಿಗೂ ಬಡಬಗ್ಗರಿಗೂ ಹೊಸ ಮನೆ ಕಟ್ಟಿಕೊಳ್ಳುವುದಕ್ಕೆ ಅವಶ್ಯಕ ಸಾಲ ಕೊಡಬಹುದಲ್ಲದೆ ಇವರಿಗೆ ಕೊಡಕೂಡದೆಂದು ಮೆಂಬರುಗಳು ತೀರ್ಮಾನ ಮಾಡಿದರು

ಟ್ರಸ್ಟ್ ಬೋರ್ಡ್ ಆಫೀಸಿನ ಅಕೌಂಟೆಂಟರು ಮ| ಜಿ ರಾಮಸ್ವಾಮಿಯವರು ತಮ್ಮ ಸಂಬಳವನ್ನು ಇಜಾಫೆ ಮಾಡಿಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು ಇವರು ಬಹಳ ಚಟುವಟಿಕೆಯಾಗಿಯೂ ನಂಬಿಕೆಯಿಂದಲೂ ಕೆಲಸಮಾಡುತ್ತಿದ್ದಾರೆಂತಲೂ, ಇವರಿಗೆ ಈಗ ಸಲ್ಲುವ ಸಂಬಳ ೬೫ ರೂಪಾಯನ್ನು ೭೫ಕ್ಕೆ ಬಡ್ತಿಮಾಡಿ, ಪ್ರತಿ ವರುಷವೂ ೫ ರೂಪಾಯಿನಂತೆ ೯೦ ರೂಪಾಯಿ ತನಕ ಬಡ್ತಿ ಕೊಟ್ಟುಕೊಂಡು ಬರಬೇಕೆಂತಲೂ, ಇವರನ್ನು ಆಫೀಸಿನ ಮ್ಯಾನೇಜರಾಗಿ ನೇಮಿಸಬೇಕೆಂತಲೂ ಆಕ್ಟಿಂಗ್ ಆಫೀಸರವರು ಶಿಫಾರಸು ಮಾಡಿದ್ದರು ಛೇರ್ಮನ್ ರವರೂ ಅವರ ಕೆಲಸವು ಸಮಾಧಾನಕರವಾಗಿದೆ ಎಂದೂ ನಾಲ್ಕು ವರುಷದಿಂದ ಅವರಿಗೆ ಬಡ್ತಿ ದೊರಕಲಿಲ್ಲವೆಂದೂ ಅಭಿಪ್ರಾಯಪಟ್ಟರು ಇತರ ಮೆಂಬರುಗಳೂ ಅದೇ ರೀತಿ ಅನುಮೋದಿಸಿದ್ದರಿಂದ ಆಕ್ಟಿಂಗ್ ಆಫೀಸರವರ ಶಿಫಾರಸಿನಂತೆ ಅವರಿಗೆ ಬಡ್ತಿ ಕೊಡಬಹುದೆಂದು ತೀರ್ಮಾನ ಮಾಡಲಾಯಿತು.

ಶಿಕ್ಕರ್ ರಸ್ತೆಯಲ್ಲಿ ಬಸ್ತಿಗುಡಿಯ ಹತ್ತಿರ ಇರುವ ತೋಟದ ಸಾಹುಕಾರರ ಮನೆಗಳನ್ನು ಅಂದರೆ ಸುಮಾರು ೩೩ ಸ್ವತ್ತುಗಳನ್ನು ಟ್ರಸ್ಟ್ ಬೋರ್ಡಿನವರು ಕೊಂಡುಕೊಂಡು ಒಂದು ಪಾರ್ಕ್ ಮಾಡಬೇಕೆಂಬ ವಿಷಯವು ಚರ್ಚೆಯಾಯಿತು ಇದಕ್ಕೆಲ್ಲಾ ಸುಮಾರು ೫೦—೬೫ ಸಾವಿರ ರೂಪಾಯಿ ತನಕ ಬೇಕಾಗುವುದೆಂದು ಅಂದಾಜು ಕಂಡು ಬಂದದ್ದರಿಂದ ಸದ್ಯಕ್ಕೆ ಆ ಸೈಕಿ ನಾಲ್ಕು ಸ್ವತ್ತುಗಳನ್ನು ಮಾತ್ರ ತೆಗೆದುಕೊಳ್ಳಲು ಏರ್ಪಾಡಿಕೆಂದು ಆ ಪಾರ್ಕು ಮಾಡಬೇಕೆಂಬುದಾಗಿ ತೀರ್ಮಾನ ಮಾಡಿರುತ್ತಾರೆ

ಹಳ್ಳದ ಕೇರಿಯಲ್ಲಿ ರೆವಿನ್ಯೂ ಶಿರಸ್ತೇದಾರರು ತಮ್ಮ ಮನೆಯ ಪಕ್ಕದಲ್ಲಿ ಒಂದು ಅಡಿಯಷ್ಟು ಸ್ಥಳಬಿಡದೆ ಇಂಜನಿಯರ್ ಇಲಾಖೆಯವರು ಚರಂಡಿಯನ್ನು ಕಟ್ಟಿರೋದರಿಂದ ತಮ್ಮ ಮನೆಗೋಡೆಗೆ ನಷ್ಟವುಂಟಾಗಿದೆಯೆಂದೂ, ಇದಕ್ಕಾಗಿ ಬೋರ್ಡಿನಿಂದ ತಮಗೆ ಪರಿಹಾರ ದ್ರವ್ಯವನ್ನು ಕೊಡಬೇಕೆಂದೂ ಅರ್ಜಿ ಬರೆದುಕೊಂಡಿದ್ದರು ಮೆಂಬರುಗಳು ಈ ವಿಷಯವನ್ನು ಚರ್ಚೆಮಾಡಿ ಆ ಚರಂಡಿಯಿಂದ ಅವರ ಮನೆಗೆ ಯಾವ ನಷ್ಟವೂ ಉಂಟಾಗಿಲ್ಲವಾದ ಕಾರಣ ಪರಿಹಾರ ದ್ರವ್ಯವೇನೂ ಕೊಡಲಾಗದು ಎಂದೂ ತೀರ್ಮಾನ ಮಾಡಿದರು.

ಪಂಡಿತ ಶೇಷಗಿರಿ ರಾಯರು ಟ್ರಸ್ಟ್ ಬೋರ್ಡಿನಿಂದ ಕೊಂಡುಕೊಂಡಿರುವ ಖಾಲಿ ನಿವೇಶನದ ಮೇಲೆ ೧,೦೦೦ ರೂಪಾಯಿನ ಮನೆಯನ್ನು ಕಟ್ಟಿಕೊಳ್ಳುತ್ತೇವೆಂದೂ, ಅದರ ಖರ್ಚಿಗೆ ಬೋರ್ಡಿನಿಂದ ೪೦೦ ರೂಪಾಯಿ ಸಾಲ ಕೊಡಿಸಬೇಕೆಂದೂ ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಈ ಅರ್ಜಿಯನ್ನು ಒಪ್ಪಿಕೊಂಡು ಅವರಿಗೆ ನಾಲ್ಕು ಕಿಸ್ತುಗಳಲ್ಲಿ ಕಟ್ಟಡ ಕಟ್ಟಿದ ಹಾಗೆಲ್ಲಾ ಒಂದು ಕಿಸ್ತಿಗೆ ೧೦೦ ರೂಪಾಯಿನಂತೆ ೪೦೦ ರೂಪಾಯಿ ಸಾಲ ಕೊಡಬಹುದೆಂದು ತೀರ್ಮಾನ ಮಾಡಿರುತ್ತಾರೆ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಏಪ್ರೆಲ್ ತಾ. ೩೦ನೇ ಶನಿವಾರ.

ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಡೆಯ ಮೀಟಿಂಗನ್ನು ನಡಿಸಿದರು

ಕಳೆದ ತಿಂಗಳ ವಿಷಯಗಳ ಶೇಷವು.

ಮ|| ನರಸಿಂಹನ್ ಬ್ರದರ್ಸ್ ಕಂಪನಿಯವರು ಮೈಸೂರು ರೈಲ್ವೆ ಸ್ಟೇಷನ್ ಬಳಿ ಹುಲ್ಲು ಮುಂತಾದ ದಾಣಿಯನ್ನು ಕತ್ತರಿಸಿ ಹಿಂಡಿ ಕಟ್ಟಿ ಬಿಕರಿಗೆ ಸಿದ್ಧಪಡಿಸುವಂಥಾ ಕಾರ್ಖಾನೆಯನ್ನು ಕಟ್ಟಬೇಕೆಂದು ಉದ್ದೇಶಪಟ್ಟು ಅಲ್ಲಿರುವ ನಿವೇಶನವನ್ನು ತಮಗೆ ಕ್ರಯಕ್ಕೆ ಕೊಡಿಸಬೇಕೆಂದೂ, ಇಲ್ಲವಾದರೆ ಅದನ್ನು ತಮಗೆ ಕೆಲವು ವರುಷಗಳ ವರೆಗೆ ಬಾಡಿಗೆಗೆ ಕೊಡಿಸಬೇಕೆಂದೂ ಕೇಳಿಕೊಂಡಿದ್ದರು. ಈ ವಿಚಾರವನ್ನು ಮೆಂಬರುಗಳು ಚರ್ಚೆಮಾಡಿ, ಆ ನಿವೇಶನವನ್ನು ಕಾರ್ಖಾನೆಗೋಸ್ಕರ ಆ ಕಂಪನಿಯವರಿಗೆ ೯೯ ವರುಷಗಳ ವಾಯಿದೆ ಕಂಡು ಕಂದಾಯ ತೆಗೆದುಕೊಂಡು ಕೊಡಬಹುದೆಂದೂ, ವಾಯಿದೆ ಕಳೆದ ನಂತರ ಕಟ್ಟಡ ಮುಂತಾದದ್ದಕ್ಕೆ ಪ್ರತಿಫಲವನ್ನಪೇಕ್ಷಿಸದೆ ಮ್ಯುನಿಸಿಪಾಲಿಟಿಯವರು ಅಪೇಕ್ಷಿಸಿದರೆ ಬಿಟ್ಟುಕೊಡಬೇಕೆಂಬ ಕರಾರು ಮಾಡಿಕೊಳ್ಳಬೇಕೆಂದೂ ತೀರ್ಮಾನ ಮಾಡಿದರು.

ಮ್ಯುನಿಸಿಪಲ್ ಕಂದಾಯದ ವಸೂಲಿಗಾಗಿ ನೇಮಕವಾಗಿರುವ ಅಮಲ್ದಾರರು ಹೊಸದಾಗಿ ಗವರ್ನ್‌ಮೆಂಟಿನಿಂದ ಸ್ಯಾಂಕ್ಷನ್ ಆಗಿ ಬಂದಿರುವ ನೀರಿನ ತೆರಿಗೆಯನ್ನು ಸರ್ವತ್ರ ಹಾಕಿ ವಸೂಲ್ಮಾಡಬೇಕೇ ವಿನಾಯತಿಗಳೇನಾದರೂ ಉಂಟೇ ಎಂಬದಾಗಿ ಕೇಳಿದರು. ಛತ್ರ, ದೇವಸ್ಥಾನ, ಮಠ, ಈ ಮೊದಲಾದ ಧರ್ಮ ಕಟ್ಟಡಗಳನ್ನೂ, ವರುಷಕ್ಕೆ ೧೪ ರೂಪಾಯಿನೊಳಗೆ ಬಾಡಿಗೆ ಅಂದಾಜು ಉಳ್ಳ ಬಡಬಗ್ಗರ ಮನೆಗಳನ್ನೂ ಸದ್ಯ ಬಿಟ್ಟು, ಇತರ ಎಲ್ಲಾ ಮನೆಗಳಿಗೂ ಕಟ್ಟಡಗಳಿಗೂ ನೀರಿನ ತೆರಿಗೆಯನ್ನು ಅವುಗಳ ಬಾಡಿಗೆ ಅಂದಾಜು ಪ್ರಕಾರ ಹಾಕಿ ವಸೂಲ್ಮಾಡಬೇಕೆಂದು ಮೆಂಬರುಗಳು ತೀರ್ಮಾನಮಾಡಿ, ಯಾವಯಾವುದಕ್ಕೆ ನೀರಿನ ತೆರಿಗೆ ಮಾಫ್ ಮಾಡಬೇಕೆಂಬುವುದನ್ನು ಇತ್ಯರ್ಥಪಡಿಸುವುದಕ್ಕೆ ಒಂದು ಸಬ್ ಕಮಿಟಿಯನ್ನು ನೇಮಿಸಿರುತ್ತಾರೆ.

ಮ|| ಶ್ರೀಕಂಠಯ್ಯನವರೂ ಜಹಗೀರ್ದಾರ್ ಮಾದಪ್ಪನವರೂ ಸೂಚಿಸಿದ ವಿಷಯಗಳು ಚರ್ಚಿಸಲ್ಪಟ್ಟವು (೧) ಹೊಸದಾಗಿ ಮನೆ ಕಟ್ಟುವುದನ್ನು ಬಿಟ್ಟು ಹಳೇ ಮನೆಗೆ ರಿಪೇರಿ ಮಾಡಿಕೊಳ್ಳುವುದಕ್ಕೆ ಲೈಸೆನ್ಸುಗಳನ್ನು ಕೊಡಬೇಕು. (೨) ಕಟ್ಟುವುದಕ್ಕೆ ಲೈಸೆನ್ಸು ಕೊಡದೇ ಇರುವ ಖಾಲೀ ನಿವೇಶನಗಳಿಗೆ ಮ್ಯುನಿಸಿಪಲ್ ಕಂದಾಯವನ್ನು ವಸೂಲ್ಮಾಡಕೂಡದು, ಮತ್ತು ಅಂಥಾ ನಿವೇಶನಗಳನ್ನು ಮಾಲೀಕರು ಶುಚಿಯಾಗಿಟ್ಟುಕೊಳ್ಳುವಂತೆ ನೋಡಿಕೊಳ್ಳಬೇಕು (೩) ಮ್ಯುನಿಸಿಪಾಲಿಟಿಗೆ ಸೇರಿರುವ ಖಾಲಿ ನಿವೇಶನಗಳೂ ಕಟ್ಟಡಗಳೂ ಒಂದು ರಿಜಿಸ್ಟರಿನಲ್ಲಿ ಬರೆಸಲ್ಪಡಬೇಕು ಆ ಸ್ಥಳದ ಹತ್ತಿರ ಅದು ಮ್ಯುನಿಸಿಪಾಲಿಟಿಗೆ ಸೇರಿದ್ದೆಂದು ತೋರಿಸುವುದಕ್ಕೆ ಕಲ್ಲಿನಲ್ಲಿ ಕೆತ್ತಿಸಿ ಹಾಕಿಸಬೇಕು ಮತ್ತು ನೆರೆಹೊರೆಯವರ ಉಪಯೋಗಕ್ಕೆಂದು ಕೊಟ್ಟಿರುವ ನಿವೇಶನಗಳ ವಿಷಯದಲ್ಲಿ ಅವರಿಂದ ಹೊಸದಾಗಿ ಕ್ರಮವಾದ ಮುಚ್ಚಳಿಕೆಗಳನ್ನು ಬರೆಸಬೇಕು ಎಂಬೀ ರೀತಿಯಾಗಿ ಇತ್ಯರ್ಥವಾದವು.

ತಿಂಡಿ ಮಾಡಿ ಮಾರುವ ಹೋಟೇಲು, ರೊಟ್ಟಿ ಗಡಂಗು, ಸೋಡಾವಾಟರ್ ಗಡಂಗು, ಈ ಮೊದಲಾದ ದುಕಾನ್‌ದಾರರು ಮ್ಯುನಿಸಿಪಾಲಿಟಿಯಿಂದ ಲೈಸೆನ್ಸು ಪಡೆದುಕೊಳ್ಳಬೇಕಾದ ಅಗತ್ಯವಿಲ್ಲವೆಂದು ಮುಂತಾಗಿ ಗವರ್ನ್‌ಮೆಂಟಿನಿಂದ ಬಂದಿದ್ದ ಕಾಗದವನ್ನು ಹೆಲ್ತ್ ಕಮಿಟಿಯವರು ಓದಿಕೊಂಡು ತಮ್ಮ ತೀರ್ಮಾನವನ್ನು ಮ್ಯುನಿಸಿಪಲ್ ಕೌನ್ಸಿಲ್ಲಿಗೆ ತಿಳಿಸಬೇಕೆಂದು ಗೊತ್ತುಮಾಡಿದರು

ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ನಲ್ಲಿಗಳನ್ನು ಹಾಕಿ ಕೊಳಾಯಿಗಳನ್ನು ಕಟ್ಟಿಸುವುದಕ್ಕೆ ೪,೪೫೫ ರೂಪಾಯಿನ ಅಂದಾಜು ಪಟ್ಟಿಯನ್ನು ಚೀಫ್ ಇಂಜನಿಯರವರು ಸ್ಯಾಂಕ್ಷನ್ ಮಾಡಿದ್ದರು ಕೌನ್ಸಲರುಗಳು ಇದನ್ನು ರಿಕಾರ್ಡು ಮಾಡಿಕೊಂಡರು.

ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಈಗ ಮ್ಯುನಿಸಿಪಾಲಿಟಿಯಿಂದ ದಾನವಾಗುತ್ತಿರುವ ಗ್ರಾಂಟನ್ನು ತಪ್ಪಿಸಿದರೆ ಮ್ಯುನಿಸಿಪಾಲಿಟಿಯವರು ಪ್ರೈಮರಿ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣವನ್ನು ಖರ್ಚುಮಾಡುವರೇ ಎಂದು ಗವರ್ನ್‌ಮೆಂಟಿನವರು ಪ್ರಶ್ನೆಮಾಡಿದ್ದರು ಈ ವಿಚಾರವನ್ನು ಮ್ಯುನಿಸಿಪಲ್ ಸ್ಕೂಲ್ ಕಮಿಟಿಯವರು ಚರ್ಚೆಮಾಡಿ ಬೋರ್ಡಿಗೆ ತಮ್ಮ ಅಭಿಮತವನ್ನು ರಿಪೋರ್ಟು ಮಾಡಬೇಕೆಂದು ತೀರ್ಮಾನ ಮಾಡಿದರು

ಹಾಲ್ತಿ ತಿಂಗಳ ವಿಷಯಗಳು

ಹೆಲ್ತ್ ಕಮಿಟಿಯವರ ಕರ್ತವ್ಯಗಳೇನೆಂಬದನ್ನು ಗೊತ್ತುಮಾಡುವುದು ಉತ್ತಮವೆಂದು ರಾವ್ ಬಹದ್ದೂರ್ ಗಿಲ್ಡ್‌ಫೋರ್ಡ್ ಮ| ಎಂ ಎ. ರಂಗಯ್ಯಂಗಾರ್ಯರವರುಗಳು ಸೂಚಿಸಿದ್ದರು ಇದನ್ನು ಚರ್ಚೆಮಾಡಿ ಹೆಲ್ತ್ ಕಮಿಟಿಗೆ ಮ|| ಗಳಾದ ಗಿಲ್ಡ್‌ಫೋರ್ಡ್ ರಂಗಯ್ಯಂಗಾರ್ಯರುಗಳನ್ನು ಮ|| ಗಳಾದ ಅಂಬಳೆ ಪಂಡಿತರಿಗೂ ವೆಂಕಟಸ್ವಾಮಿ ಅವರಿಗೂ ಪ್ರತಿಯಾಗಿ ಮೆಂಬರಾಗಿ ನೇಮಕಮಾಡಿದರು

ಶ್ರೀವಣ್ಣರಾಯರ ಕೆರೆ ಒಳಪಾರ್ಶ್ವದಲ್ಲಿ ಬತ್ತ ಕುಟ್ಟುವ ಯಂತ್ರದ ಕಾರ್ಖಾನೆಯನ್ನು ಕಟ್ಟುವುದಕ್ಕೆ ೩ ಎಕರೆ ೬½ ಗುಂಟೆ ಸ್ಥಳವನ್ನು ೫೦೦ ರೂಪಾಯಿಗೆ ಮ| ಶ್ರೀಕಂಠಯ್ಯನವರಿಗೆ ಬಿಕರಿ ಮಾಡಬಹುದೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ ಮತ್ತು ಮೋಟಾರ್ ಗಾಡಿಗಳೂ ಮೋಟಾರ್ ಬೈಸಿಕಲ್‌ಗಳೂ ಟೋಲ್ ಗೇಟಿನ ಮೂಲಕ ಮೈಸೂರಿನೊಳಕ್ಕೆ ಬರುವಾಗ ಸುಂಕ ಕೊಡಬೇಕೆಂದು ಮ್ಯುನಿಸಿಪಾಲಿಟಿಯವರು ತೀರ್ಮಾನಿಸಿದ್ದನ್ನು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದರು

ಮ|| ರಹಿಮತ್ ಉಲ್ಲಾ ಅಹಮದ್ ಸೇಟ್ ರವರಿಗೆ ಸಕ್ಕರೆ ತಯಾರು ಮಾಡುವ ವಿಷಯದಲ್ಲಿ ರಿಯಾಯಿತಿ ತೋರಿಸಿರುವುದನ್ನು ಇನ್ನೂ ಐದು ವರುಷ ನಡಿಸಿಕೊಂಡು ಬರಬೇಕೆಂದು ಅವರ ಅರ್ಜಿಯ ಮೇಲೆ ಮೆಂಬರುಗಳು ಸಮ್ಮತಿ ಪಟ್ಟಿರುತ್ತಾರೆ.

ಸ್ಯಾನಿಟರಿ ಕಮಿಷನರವರು ಪಟ್ಟಣದ ಕೊಳಕು ನೀರು ಸಾಗಿಹೋಗುವ ಚರಂಡಿ ಮುಂತಾದವುಗಳನ್ನು ಆಜಮಾಯಿಷಿ ಮಾಡಿ, ಕೆಲವು ಲೋಪಗಳನ್ನು ಕಂಡು ಅವುಗಳ ಪರಿಹಾರಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ತಿಳಿಯಪಡಿಸಿದರು. ಇದು ತೃಪ್ತಿಕರವಾಗಿರಬೇಕಾದರೆ ಶಿಬ್ಬಂದಿ ಹೆಚ್ಚಾಗಿ ಬೇಕೆಂದೂ ನೀರು ಹೆಚ್ಚಾಗಿ ಒದಗಬೇಕೆಂದೂ ಗೊತ್ತಾಯಿತು. ಮೆಂಬರುಗಳು ಇದರ ಇತ್ಯರ್ಥದ ಬಗ್ಗೆ ವೈಸ್ ಪ್ರೆಸಿಡೆಂಟರೂ ಹೆಲ್ತ್ ಆಫೀಸರವರೂ ಮ|| ಡಿಕ್ರೂಸ್‌ರವರೂ ಸೇರಿ ಆಲೋಚನೆ ಮಾಡಿ ಪರಿಹಾರವನ್ನು ಸೂಚಿಸುವಂತೆ ತೀರ್ಮಾನ ಮಾಡಿರುತ್ತಾರೆ.

ಕುಂಚಿಟಿಗರ ಸ್ಕೂಲ್ ಪ್ರೆಸಿಡೆಂಟರು ಆ ಸ್ಕೂಲಿಗೆ ಮ್ಯುನಿಸಿಪಾಲಿಟಿಯಿಂದ ತಿಂಗಳಿಗೆ ೫೦ ರೂಪಾಯಿ ಗ್ರಾಂಟನ್ನು ಕೊಡಿಸಬೇಕೆಂದು ಬರೆದುಕೊಂಡಿದ್ದರು. ಮೆಂಬರುಗಳು ಈ ಸ್ಕೂಲಿಗೆ ಗ್ರಾಂಟು ಕೊಡುವುದು ಅಪೇಕ್ಷಣೀಯವಾಗಿದ್ದಾಗ್ಯೂ ಸದ್ಯ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲವಾದದ್ದರಿಂದ ಅವರ ಅರ್ಜಿಯನ್ನು ಪರ್ಯಾಲೋಚಿಸಲು ಅವಕಾಶವಿಲ್ಲವೆಂದು ತೀರ್ಮಾನ ಮಾಡಿದರು.

ಮ|| ರಹಿಮತ್ ಉಲ್ಲಾ ಅಹಮದ್ ಸೇಟ್‌ರವರು ಮನೆಗಳನ್ನು ಕಟ್ಟುವುದಕ್ಕಾಗಿ ಕೊಡುವ ಲೈಸೆನ್ಸ್ ಅರ್ಜಿ ವಿಚಾರದಲ್ಲಿ ಕೆಲವು ಆಕ್ಷೇಪಣೆಗಳನ್ನು ಮಾಡಿದ್ದರಿಂದ ಇನ್ನು ಮುಂದೆ ಲೈಸೆನ್ಸ್ ಅರ್ಜಿಯನ್ನು ಮ್ಯುನಿಸಿಪಲ್ ಕೌನ್ಸಲರುಗಳ ಅಭಿಪ್ರಾಯಕ್ಕಾಗಿ ಕಳುಹಿಸಬೇಕಾಗಿಲ್ಲವೆಂದೂ, ತಂಗೆಗಳನ್ನು ರಿವೇಜ್ ಮಾಡುವಾಗಲೂ ಮ್ಯುನಿಸಿಪಲ್ ಕೌನ್ಸಲರುಗಳನ್ನು ಕರೆದುಕೊಂಡು ಹೋಗಬೇಕಾದದ್ದಿಲ್ಲವೆಂದೂ ಮೆಂಬರುಗಳು ತೀರ್ಮಾನ ಮಾಡಿದರು.

ಕೃಷ್ಣರಾಜ ಮೊಹಲ್ಲಾ ವಾಣೀ ವಿಲಾಸ್ ರಸ್ತೆಯ ಹಿಂಭಾಗದಲ್ಲಿ ಸಾಲಾಬೀದಿಯೊಳಗೆ ಬಚ್ಚಲು ಚರಂಡಿಗಳನ್ನು ಸರಿಯಾಗಿ ಕಟ್ಟಿಸಬೇಕೆಂದು ಹೆಲ್ತ್ ಕಮಿಟಿಯವರು ಶಿಫಾರಸು ಮಾಡಿದ್ದದ್ದನ್ನು ಮೆಂಬರುಗಳು ಟ್ರಸ್ಟ್ ಬೋರ್ಡಿಗೆ ತಿಳಿಸುವಂತೆ ಇತ್ಯರ್ಥ ಮಾಡಿದರು.

ದೊಡ್ಡ ಹೊಲಗೇರಿಯಲ್ಲಿ ಮಾಂಸದ ಅಂಗಡಿಗಳನ್ನು ಕಟ್ಟಿಸಿಕೊಡಬೇಕೆಂದು ಹೆಲ್ತ್ ಕಮಿಟಿಯವರು ಶಿಫಾರಸು ಮಾಡಿದ್ದರು. ಮೆಂಬರುಗಳು ಆ ಅಂಗಡಿ ಇಡುವಂಥಾ ಮಾದಿಗರು ನಿವೇಶನವನ್ನು ಕೊಡುವುದಾಗಿಯೂ ಅವರೇ ಅಂಗಡಿ ಕಟ್ಟಿಕೊಂಡು ತೆರಿಗೆ ಕೊಡುತ್ತಾ ಬರಬಹುದೆಂದೂ ಅಭಿಪ್ರಾಯಪಟ್ಟರು

ಮೇ ತಾ. ೭ನೇ ಶನಿವಾರ.

ಮ|| ವೆಂಕಟಕೃಷ್ಣಯ್ಯನವರು ಸೂಚಿಸಿದ ವಿಷಯಗಳು ಹ್ಯಾಗೆ ತೀರ್ಮಾನವಾಯಿತೆಂದರೆ.. (೧) ಪಟ್ಟಣದ ಎಲ್ಲಾ ಮೊಹಲ್ಲೆಗಳಲ್ಲೂ ಮ್ಯುನಿಸಿಪಾಲಿಟಿಯವರೇ ಮನೆಗಳ ಹಿತ್ತಲನ್ನು ಶುಚಿಮಾಡಿಸಿ ಗೊಬ್ಬರವನ್ನು ಒಂದೆರಡು ಸ್ಥಳಗಳಲ್ಲಿ ಶೇಖರ ಮಾಡಿಟ್ಟು ಕಾಲವರಿತು ಹರಾಜು ಹಾಕಿಸಿದರೆ ಮ್ಯುನಿಸಿಪಾಲಿಟಿಗೆ ಆದಾಯವಾಗುತ್ತದೆ ಎಂಬೀ ವಿಷಯವು ಚರ್ಚೆಯಾಯಿತು ಈ ಏರ್ಪಾಟಿಗೆ ಬಹಳ ಹಣ ಬೇಕಾಗಿರುವದರಿಂದ ಇದನ್ನು ಸದ್ಯ ಮಾಡುವುದು ಸಾಧ್ಯವಲ್ಲವೆಂದು ತೀರ್ಮಾನ ಮಾಡಿದರು (೨) ಪ್ರತಿ ಮನೆಗೂ ಒಂದೊಂದು ಕಕ್ಕಸು ಇರುವಂತೆ ಮಾಡಬೇಕು ಮತ್ತು ಜನರು ವಾಸಮಾಡುವ ಮನೆಗಳ ಒತ್ತಿನಲ್ಲಿರುವ ಪಬ್ಲಿಕ್ ಕಕ್ಕಸುಗಳನ್ನು ತೆಗೆದು ಹಾಕಬೇಕು ಇವರಡರಲ್ಲಿ ಮೊದಲನೆಯದನ್ನು ಮ್ಯುನಿಸಿಪಾಲಿಟಿಯವರು ಸಾಧ್ಯವಾದ ಮಟ್ಟಿಗೂ ಮಾಡಬೇಕೆಂದೂ, ಎರಡನೇ ವಿಷಯದಲ್ಲಿ ಅಂಥಾ ಮನೆಗಳ ಜನರು ಪಬ್ಲಿಕ್ ಕಕ್ಕಸನ್ನು ಮುಚ್ಚಬೇಕೆಂದೂ ಇಲ್ಲವಾದರೆ ತಮಗೆಲ್ಲಾ ಅನಾರೋಗ್ಯವಾಗುವುದೆಂದೂ ಅರ್ಜಿ ಬರೆದುಕೊಂಡರೆ ಮ್ಯುನಿಸಿಪಾಲಿಟಿಯವರು ಅದನ್ನು ಮುಚ್ಚುವುದಕ್ಕೆ ಏರ್ಪಾಡು ಮಾಡಬಹುದೆಂದೂ ಮೆಂಬರುಗಳು ತೀರ್ಮಾನ ಮಾಡಿದರು. (೩) ಕುಡಿಯುವ ನೀರಿನ ಕೊಳಾಯಿಗಳು ಇಲ್ಲದ ಪ್ರದೇಶಗಳಿಗೆ ತೊಂದರೆಯುಂಟಾಗಿರುವ ಸ್ಥಳಗಳಲ್ಲಿ ಕೊಳಾಯಿಗಳನ್ನು ಕಟ್ಟಿಸಬೇಕೆಂದು ತೀರ್ಮಾನವಾಯಿತು (೪) ಮನೆಯಲ್ಲಿ ನೀರಿನ ನಲ್ಲಿ ಇಡಿಸಿಕೊಂಡಿರುವವರು ತಿಂಗಳಿಗೆ ೩,೦೦೦ ಗ್ಯಾಲನ್ ನೀರನ್ನು ಮಾಫಿಯಾಗಿ ಉಪಯೋಗಿಸಿಕೊಳ್ಳಬಹುದೆಂದೂ, ವರುಷಕ್ಕೆ ಪ್ರತಿ ೧ ರೂಪಾಯಿ ಕಂದಾಯಕ್ಕೂ ೧೬೦ ಗ್ಯಾಲನ್ ಪ್ರಕಾರ ನೀರು ಕೊಡಲಾಗುವುದೆಂದೂ. ಜಾಸ್ತಿ ನೀರು ಉಪಯೋಗಿಸಿದ ಪಕ್ಷದಲ್ಲಿ ೧,೦೦೦ ಗ್ಯಾಲನ್‌ಗೆ ೧೨ ಆಣೆಯಂತೆ ರುಸುಂ ಕೊಡಬೇಕೆಂದೂ ಸರ್ಕಾರದಿಂದ ರೂಲುಸು ಹ್ಯಾಗಾಗಿ ಬಂದಿದೆ. ಇದರಂತೆ ತೆರಿಗೆಯನ್ನು ಕೊಡಲು ಜನರಿಗೆ ಜುಂಯಾ ಕಷ್ಟವಾಗುವುದೆಂದು ಮೆಂಬರುಗಳು ಚರ್ಚೆ ಮಾಡಿ ತೀರ್ಮಾನ ಮಾಡಿರುವುದೇನೆಂದರೆ, ನಲ್ಲಿ ಇಡಿಸಿಕೊಂಡಿರುವವರಿಗೆ ೫,೦೦೦ ಗ್ಯಾಲನ್ ನೀರು ಮಾಫಿ ಕೊಡಬೇಕು ವರುಷಕ್ಕೆ ಪ್ರತಿ ೧ ರೂಪಾಯಿ ಮನೆ ಕಂದಾಯಕ್ಕೂ ೩೦೦ ಗ್ಯಾಲನ್ ಪ್ರಕಾರ ನೀರು ಹೆಚ್ಚು ಕೊಡಬೇಕು. ಜಾಸ್ತಿ ನೀರು ಉಪಯೋಗಿಸಿಕೊಂಡರೆ ೧,೦೦೦ ಗ್ಯಾಲನ್‌ಗೆ ೮ ಆಣೆಯಂತೆ ತೆರಿಗೆ ತೆಗೆದುಕೊಳ್ಳಬೇಕು. ಈ ರೀತಿ ಮೆಂಬರುಗಳು ಹಿಂದೆಯೇ ತೀರ್ಮಾನಮಾಡಿ ಗವರ್ನ್‌ಮೆಂಟಿಗೆ ಅರಿಕೆ ಮಾಡಿಕೊಂಡಿದಾರೆ ಅವರು ಅದರಂತೆ ಬೇಗನೆ ರುಸುಂ ದಯಪಾಲಿಸುವಂತೆ ಮತ್ತೆ ಕೇಳಿಕೊಂಡಿದಾರೆ.

ಸ್ಯಾನಿಟರಿ ಕಮಿಷನರವರು ಮೈಸೂರಿನಲ್ಲಿರುವ ಕಸಾಯಿ ಖಾನೆಗಳ ವಿಷಯದಲ್ಲಿ ಕಟುಗರು ಆರೋಗ್ಯವಾದ ದನುಗಳನ್ನು ಕೊಯ್ಯುವುದಿಲ್ಲವೆಂದೂ ದನುಗಳ ಆರೋಗ್ಯಸ್ಥಿತಿಯನ್ನು ಗೊತ್ತು ಮಾಡುವುದಕ್ಕೆ ಒಬ್ಬ ಅಧಿಕಾರಿಯನ್ನು ಗೊತ್ತು ಮಾಡಬೇಕೆಂದೂ, ಒಂದೇ ಸ್ಥಳದಲ್ಲಿ ಕುರಿಗಳನ್ನೂ ದನಗಳನ್ನೂ ಕೊಂದು ಮಾಂಸ ತರುವಂತೆ ಏರ್ಪಾಡಾಗಬೇಕೆಂದೂ ಸೂಚಿಸಿದರು ಮೆಂಬರುಗಳು ಈ ವಿಷಯದಲ್ಲಿ ಹೆಲ್ತ್ ಕಮಿಟಿಯವರ ಅಭಿಪ್ರಾಯವನ್ನು ತರಿಸಿಕೊಳ್ಳಬೇಕೆಂದು ಗೊತ್ತು ಮಾಡಿದರು

ಮೈಸೂರು ಪಟ್ಟಣದಲ್ಲಿ ಜನನದ ಸಂಖ್ಯೆ ಸರಿಯಾಗಿ ತಿಳಿಯುವುದಿಲ್ಲವಾದದ್ದರಿಂದ ಅದನ್ನು ಆಯಾ ಮನೆಯವರು ತಿಳಿಸುವಂತೆ ನಿರ್ಬಂಧ ಪಡಿಸಬೇಕೆಂದು ವಿಧಿಸಲ್ಪಟ್ಟಿದೆ ಮರಣವಾದ ಸಂಗತಿಯನ್ನು ಸರ್ಕಾರಕ್ಕೆ ತಿಳಿಸುವ ವಿಷಯದಲ್ಲಿ ಈಗಿನಂತೆ ಮನೆಯವರು ಡಾಕ್ಟರಿಂದ ಸರ್ಟಿಫಿಕೇಟನ್ನು ಪಡೆಯುತ್ತಾ ಬರಬೇಕೆಂದೂ, ಸರ್ಟಿಫಿಕೇಟ್ ಪಡೆಯದೆ ತಪ್ಪಿದವರಿಗೆ ೧೦ ರೂಪಾಯಿ ಜುಲ್ಮಾನೆ ವಿಧಿಸಬೇಕೆಂದೂ. ಜನನ ಮರಣದ ಸರ್ಟಿಫಿಕೇಟಿನ ನಕಲು ಬೇಕಾದರೆ ಅವರು ೮ ಆಣೆ ಸ್ಟಾಂಪು ಸಹಿತ ಅರ್ಜಿಯನ್ನು ಬರೆದುಕೊಳ್ಳಬೇಕೆಂದೂ ವಿಧಿಸುತ್ತಾರೆ. ಈ ವಿಚಾರಗಳನ್ನೆಲ್ಲಾ ಕನ್ನಡದಲ್ಲಿ ಅಚ್ಚು ಹಾಕಿಸಿ ಹೆಲ್ತ್ ಆಫೀಸರು ಪ್ರತಿ ಒಂದು ಮನೆಯವರಿಗೂ ಹಂಚಿಕೆ ಮಾಡಿ ಎಲ್ಲರಿಗೂ ತಿಳಿಸಿದ ಮೇಲೆ ಈ ರೂಲನ್ನು ಜಾರಿಗೆ ತರಬೇಕೆಂದು ಮೆಂಬರುಗಳು ತೀರ್ಮಾನ ಮಾಡಿದಾರೆ

ರಾಜಧಾನಿಯಲ್ಲಿ ಕುಂಚಿಟಿಗರ ಮಕ್ಕಳಿಗಾಗಿ ಕಟ್ಟಲ್ಪಡುವ ದರ್ಮಾದ ಸ್ಕೂಲಿಗೆ ಸಾಗುವಾಣಿ ಮುಂತಾದ ಮರ ಬೇಕಾಗಿರುವುದರಿಂದ ಈ ಮರಕ್ಕೆ ಆಕ್ಟ್ರಾಯಿ ಸುಂಕವನ್ನು ಮಾಫ್‌ಮಾಡಿಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಅದೇ ರೀತಿ ಒಪ್ಪಿಕೊಂಡಿರುತ್ತಾರೆ.

೧೯೧೦—೧೧ನೇ ಸಾಲಿನ ಮ್ಯುನಿಸಿಪಲ್ ಜಮಾಖರ್ಚು ಅಂದಾಜು ಪಟ್ಟಿಗಳು ತಯಾರಾಗಿದ್ದವು. ಅವನ್ನೆಲ್ಲಾ ಓದಿಸಿ ಮೆಂಬರುಗಳು ಅದರಂತೆ ಒಪ್ಪಿಕೊಂಡರು.

WANTED.

59-3

Vacancy for female student compounder, who must be able to read and write English. Scholarship 6 Rs increasing. Candidate, who must not be less than 17 years of age, must apply in her own hand-writing to

DR. ELSIE T. WATTS,
Wesleyan Mission Hospital,
Mysore City.

ವೃತ್ತಾಂತ ಪತ್ರಿಕೆ.

ಸಿ ೧೯೧೦ ನೇ ಇಸವಿ ಮೇ ತಾ ೧೨ ನೇ ಗುರುವಾರ.

ಚಕ್ರವರ್ತಿಸಾರ್ವಭೌಮರವರಾದ ಏಳನೇ ಎಡ್ವರ್ಡ್ ಪ್ರಭುಗಳ ಮರಣವು

ಕಳೆದ ಶನಿವಾರ ಎಡ್ವರ್ಡ್ ದೊರೆಯವರ ಮರಣವಾರ್ತೆಯು ತಂತಿಯ ಮೂಲಕ ತಿಳಿದುಬಂದುದನ್ನು ಕೇಳಿ ಹಿಂದುಸ್ಥಾನದಲ್ಲೂ ಪ್ರಪಂಚದ ಎಲ್ಲಾ ಭಾಗಗಳಲ್ಲೂ ವಿಸ್ಮಯವೂ ಮಹತ್ತಾದ ವ್ಯಸನವೂ ಉಂಟಾದವು. ಈಗತಾನೇ ಅವರಿಗೆ ಉಬ್ಬುಸರೋಗ ಪ್ರಾಪ್ತವಾಗಿದೆ ಎಂಬ ಸುದ್ದಿಬಂದಿತ್ತು. ಆದರೆ ಅಷ್ಟುಬೇಗ ಅವರಿಗೆ ಮರಣವಾಗುವುದೆಂದು ಯಾರೂ ಊಹಿಸಿರಲಿಲ್ಲ. ಚಕ್ರವರ್ತಿಸಾರ್ವಭೌಮರವರು ಫ್ರಾನ್ಸಿಗೆ ಸೇರಿದ ಬಿಸ್ಕೆ ಕೊಲ್ಲಿಯ ಬಳಿ ಇರುವ ಬಿಯಾರಿಟ್ಸ್ ಎಂಬ ಪಟ್ಟಣಕ್ಕೆ ದಯಮಾಡಿದ್ದು ೮ ದಿನಗಳ ಹಿಂದೆ ವಾಪಸು ಬಂದಿದ್ದರು ಇಲ್ಲಿ ಅವರಿಗೆ ಸ್ವಲ್ಪ ಶೀತವಾಗಿತ್ತೆಂದು ಗೊತ್ತಾಯಿತು. ಆದರೆ ಈ ನೆಗಡಿಯು ಅಷ್ಟು ವಿಶೇಷವಾದದ್ದೆಂದು ಎಣಿಸಿರಲಿಲ್ಲ. ಗುರುವಾರದ ದಿನ ಈ ನೆಗಡಿಯು ಶ್ವಾಸಕೋಶವನ್ನು ಬಲವಾಗಿ ಹಿಡಿದು ಉಬ್ಬುಸರೋಗಕ್ಕೆ ತಿರುಗಿಕೊಂಡಿತು. ಅದರ ಮೇಲೆ ಎಷ್ಟೆಷ್ಟು ಚಿಕಿತ್ಸೆಗಳನ್ನು ಮಾಡಿದರೂ ರೋಗವು ಇಳಿಮುಖವಾಗದೆ ದೊರೆಯವರು ಶುಕ್ರವಾರ ರಾತ್ರಿ ೧೧|| ಗಂಟೆಗೆ ಶಾಂತವಾಗಿ ಇಹಲೋಕವ್ಯಾಪಾರವನ್ನು ಬಿಟ್ಟರು. ಮಹಾರಾಜ್ಞೀರವರೂ ರಾಜವರ್ಗಕ್ಕೆ ಸೇರಿದ ಸಕಲ ರಕ್ತಸಂಬಂಧಿಗಳೂ ಆಗ್ಗ ಅವರ ಬಳಿಯಲ್ಲೇ ಇದ್ದರು

ಎಡ್ವರ್ಡ್ ದೊರೆಯವರು ಅಪಾರವಾದ ಕೀರ್ತಿಯನ್ನು ಸಂಪಾದಿಸಿ ಕಾಲವಾದರು. ತನ್ನ ರಾಜ್ಯದಲ್ಲೂ ರಾಜ್ಯಾಂಗಗಳಲ್ಲೂ ಸ್ವಾಸ್ಥ್ಯಗಳಲ್ಲೂ ಮಾತ್ರವೇ ಅಲ್ಲ, ಯೂರೋಪ್ ಖಂಡದ ಸಮಸ್ತ ರಾಜ್ಯಗಳಲ್ಲೂ, ಇತರ ರಾಜ್ಯಗಳಲ್ಲೂ ಇವರಷ್ಟು ವಿಶೇಷವಾದ ಪ್ರಜಾವಾತ್ಸಲ್ಯವನ್ನೂ ಪ್ರಜೆಗಳ ಭಕ್ತಿ ಪ್ರೀತಿಗಳನ್ನೂ ಸಂಪಾದಿಸಿಕೊಂಡಿದ್ದ ದೊರೆಯು ಇನ್ಯಾರೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಕಳೆದ ೧೮೭೫—೭೬ ನೇ ಇಸವಿಯಲ್ಲಿ ಚಕ್ರವರ್ತಿಯವರು ಯುವರಾಜರ ಪದವಿಯಲ್ಲಿದ್ದಾಗ್ಗೆ ಹಿಂದುಸ್ಥಾನಕ್ಕೆ ದಯಮಾಡಿ ಈ ರಾಷ್ಟ್ರದ ಸಾಮಂತರಾಜರುಗಳ ಮತ್ತು ಪ್ರಜಾಕೋಟಿಗಳ ಭಕ್ತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡರು. ಅವರಿಗೆ ಈ ರಾಷ್ಟ್ರದ ಮೇಲೆ ವಿಶೇಷವಾದ ಪ್ರೀತಿ ಇತ್ತೆಂಬುವುದನ್ನು ಅನೇಕ ಸಂದರ್ಭಗಳಲ್ಲಿ ಕಾರ್ಯತಃ ದೃಷ್ಟಾಂತಪಡಿಸಿರುತ್ತಾರೆ. ಅವರಲ್ಲಿ ಸ್ವಭಾವ ಸಿದ್ಧವಾದಗಿದ್ದ ದಯಾರಸವೂ ನಯವಿನಯವೂ ಸೌಶೀಲ್ಯವೂ, ಅವರ ವಿವೇಕಜ್ಞಾನವೂ ಪ್ರಾಪಂಚಿಕ ವ್ಯವಹಾರ ಪರಿಶ್ರಮವೂ ಅವರನ್ನು ಸಕಲರೂ ಹೊಗಳುವಂತೆ ಮಾಡಿದ್ದವು. ಈ ಸದ್ಗುಣಗಳ ದೆಸೆಯಿಂದ ಅವರು ಪ್ರಪಂಚದಲ್ಲಿ ನೆಮ್ಮದಿಯನ್ನೂ ಸಮಾಧಾನವನ್ನೂ ಕಾಪಾಡಿಕೊಂಡು ಬರತಕ್ಕವರೆಂಬ ಯಶಸ್ಸನ್ನು ಸಂಪಾದಿಸಿಕೊಂಡಿದ್ದರು. ಅದಕಾರಣ ಚರಿತ್ರೆಯಲ್ಲಿ ಎಡ್ವರ್ಡ್ ದೊರೆಯವರ ಹೆಸರು ಶಾಂತಿಪ್ರಿಯರೆಂಬದಾಗಿ ಹೊಗಳಲ್ಪಡುತ್ತದೆ.

ಎಡ್ವರ್ಡ್ ದೊರೆಯವರು ೧೮೪೧ ನೇ ಇಸವಿ ನವೆಂಬರ್ ತಾ. ೯ ರಲ್ಲಿ ಜನಿಸಿ ಅವಸಾನಕಾಲದಲ್ಲಿ ಸುಮಾರು ೬೯ ವಯಸ್ಸಿನವರಾಗಿದ್ದರು. ಅವರು ಡೇನ್ಮಾರ್ಕ್ ರಾಜ್ಯದ ಮಾಜಿ ದೊರೆಯವರ ಸುಪುತ್ರಿಯಾದ ಪ್ರಿನ್ಸೆಸ್ ಅಲೆಗ್ಜಾಂಡ್ರಾಯವರನ್ನು ವರಿಸಿ ೧೮೬೩ ನೇ ಮಾರ್ಚಿ ತಾ. ೧೦ ರಲ್ಲಿ ವಿವಾಹ ಮಾಡಿಕೊಂಡರು. ಅವರ ಮಾತೃಶ್ರೀಯವರೂ ಲೋಕವಿಖ್ಯಾತರೂ ಆಗಿದ್ದ ಮಹಾರಾಜ್ಞೀ ವಿಕ್ಟೋರಿಯಾರವರು ಗತಿಸಿದ ಬಳಿಕ ಅವರಿಗೆ ೧೯೦೧ ನೇ ಜನವರಿ ತಾ ೨೨ ರಲ್ಲಿ ಪಟ್ಟವಾಯಿತು ಅದಕಾರಣ ಚಕ್ರವರ್ತಿಯವರು ಒಂಬತ್ತು ವರ್ಷಗಳಿಗಿಂತ ಸ್ವಲ್ಪ ಹೆಚ್ಚಾಗಿ ರಾಜ್ಯಭಾರವನ್ನು ನಡೆಸಿದರು. ಈ ಒಂಬತ್ತು ವರುಷಗಳಲ್ಲಿ ಬಹು ವಿಶೇಷವಾದ ಸಂಗತಿಗಳು ನಡೆದಿರುತ್ತವೆ ಆದರೂ ಅವರ ಶಕ್ತಿಸಾಮರ್ಥ್ಯಗಳ ದೆಸೆಯಿಂದ ರಾಜ್ಯದ ಅಂಗಾಂಗಗಳ ಸಂಬಂಧವೂ ಪರಸ್ಪರಾನುರಾಗವೂ ವಿಶೇಷವಾಗಿ ವೃದ್ಧಿಹೊಂದುತ್ತಾ ಬಂದಿರೋಣದರಿಂದ ಅಂಥಾ ಚಕ್ರವರ್ತಿ ಸಾರ್ವಭೌಮರವರು ಕಾಲವಾದ ವಿಷಯದಲ್ಲಿ ಸಕಲ ವಿಭಾಗಗಳ ಪ್ರಜೆಗಳೂ ದುಃಖಪಡುತ್ತಿರುವುದೇನೂ ಅತಿಶಯವಲ್ಲ

ಮೈಸೂರು ಪಟ್ಟಣದಲ್ಲಿ ಕೋಟೆ ಕೊತ್ತಳದಿಂದ ಹಾರಿದ ೬೯ ಮಿನಿಟ್ ತೋಪುಗಳು ಚಕ್ರವರ್ತಿಸಾರ್ವಭೌಮರವರ ಮರಣವನ್ನು ಪ್ರಕಟಿಸಿಮಾಡಿದವು. ಆ ದಿನ ಅಂತರಿಕ್ಷವೂ ಈ ದುಃಖವಾರ್ತೆಯನ್ನು ಸೂಚಿಸುವಂತೆ ಮೋಡಮುಚ್ಚಿಕೊಂಡು, ಗುಡುಗು ಮಿಂಚಿನ ಅರ್ಭಟ ಹುಟ್ಟಿ, ಫಿರಂಗಿಯ ಶಬ್ದದೊಡನೆ ಅದೂ ವ್ಯಥೆಯನ್ನು ಉಲ್ಬಣಮಾಡುವಂತಿದ್ದಿತು. ಈ ಮಹತ್ತರವಾದ ದುಃಖದಲ್ಲಿ ಇಂಗ್ಲೆಂಡ್ರಾಣಿಯವರ ಮತ್ತು ರಾಜವರ್ಗದವರ ಕೂಡ ಸಕಲ ಪ್ರಜೆಗಳೂ ಸಹಭಾಗಿಗಳಾಗಿ ಶೋಕಿಸುತ್ತಾ, ದುಃಖಪರಿಹಾರಕನಾದ ಆ ಸರ್ವಾತ್ಮಸ್ವರೂಪನು ಅವರುಗಳನ್ನು ಸಂತೈಸಿ ಅವರ ಮನೋವ್ಯಥೆಯನ್ನು ನಿವಾರಣೆಮಾಡಲೆಂದು ಪ್ರಾರ್ಥಿಸುತ್ತಿದಾರೆ

ಮೈಸೂರು ಗವರ್ನ್‌ಮೆಂಟಿನವರು ಪ್ರಕಟಿಸಿರುವ ಇಸ್ತಿಹಾರ್‌ನಾಮೆಯು

ಶ್ರೀಮದಿಂಡಿಯಾ ಚಕ್ರವರ್ತಿಯವರಾದ ಅತ್ಯಂತ ಘನವೊಂದಿದ ೭ ನೇ ಎಡ್ವರ್ಡ್‌ರವರು ಮೃತಪಟ್ಟರೆಂಬ ಮಹಾದುಃಖಕರವಾದ ವರ್ತಮಾನವನ್ನು ಕೇಳಿ ಶ್ರೀಮನ್ ಮಹಾರಾಜಾ ರಾಜಾಸಾಹೇಬ್ ಬಹದ್ದೂರ್‌ರವರು ಅತ್ಯಂತವಾಗಿ ವಿಷಾದಿಸುತ್ತಾರೆ. ಈ ರೀತಿ ರಾಜ್ಯಕ್ಕೆ ಮಹತ್ತಾದ ದುರ್ದೆಸೆಯು ಪ್ರಾಪ್ತವಾಗಿರುವುದನ್ನು ಈ ಸಂಸ್ಥಾನದ ಪ್ರಜೆಗಳಿಗೆ ತಿಳಿಸುವುದರಲ್ಲಿ ಶ್ರೀಮನ್ ಮಹಾರಾಜಾ ರಾಜಾಸಾಹೇಬ್ ಬಹದ್ದೂರ್‌ರವರು ಸಂಸ್ಥಾನದ ದರೋಬಸ್ತ್ ಕಚೇರಿಗಳೂ, ಕೋರ್ಟುಗಳೂ, ಸ್ಕೂಲುಗಳೂ ಸಹ ಈ ೭ ನೇ ತಾರೀಖು ಲಾಗಾಯ್ತು ಐದು ದಿನಗಳ ವರೆಗೆ ಬರಖಾಸ್ತು ಮಾಡಲ್ಪಡತಕ್ಕದ್ದೆಂದು ಆಜ್ಞಾಪಿಸಿರುತ್ತಾರೆ ಇನ್ನೊಂದು ಹುಕುಂ ಸಾದರಾಗುವ ಪರ್ಯಂತರ ತಮಾಂ ಧ್ವಜಗಳೂ ಅರ್ಧೋನ್ನತಕ್ಕೆ ಇಳಿಸಲ್ಪಡತಕ್ಕದ್ದು, ಮತ್ತು ಮೈಸೂರು ಮತ್ತು ಬೆಂಗಳೂರಲ್ಲಿನ ಅರಮನೆಗಳಲ್ಲಿ ಸಂತಾಪಸೂಚಕವಾದ ೬೮ ತೋಪುಗಳು ಉಡಾಯಿಸಲ್ಪಡತಕ್ಕದ್ದು

ಟಿ. ಆನಂದರಾವ್,

ಮೈಸೂರು ಸಂಸ್ಥಾನದ ದಿವಾನರವರು

ಹಿಂದುಸ್ಥಾನದ ಚಕ್ರವರ್ತಿ ಸಾರ್ವಭೌಮರಾದ ಐದನೆಯ ಜಾರ್ಜ್ ದೊರೆಯವರು.

'ದೊರೆಯು ಕಾಲವಾದನು, ದೊರೆಯು ದೀರ್ಘಾಯುವಾಗಿರಲಿ' ಮರಣವು ಅರಸನನ್ನು ಕರೆದುಕೊಂಡ ಒಡನೆಯೇ ಅರಸನ ಸ್ಥಾನಕ್ಕೆ ಇನ್ನೊಬ್ಬನು ಬಂದು ನಿಲ್ಲುವನು. ಈ ರೀತಿಯಾಗಿ ವಿಲಾಯತಿ ರಾಜ್ಯದ ದೊರೆತನಕ್ಕೆ ಚ್ಯುತಿಯೇ ಇರುವುದಿಲ್ಲ. ಜಾರ್ಜ್ ದೊರೆಯವರು ತಮ್ಮ ತಂದೆಯನ್ನು ಕಳೆದುಕೊಂಡು ತಾವು ದೊರೆತನ ನಡೆಸಬೇಕಾಯಿತಲ್ಲಾ ಎಂದು ದುಃಖಪಡುವಷ್ಟು ಇತರರ್ಯಾರೂ ವ್ಯಸನಪಡಲಾರರು. ಸಂಪೂರ್ಣವಾದ ರಾಜಭಕ್ತಿಯೊಡನೆ ನಾವು ಹೊಸ ದೊರೆಯವರಿಗೆ ಶುಭವಾದವನ್ನು ಕೋರುತ್ತೇವೆ ಅವರು ಜ್ಞಾನದಲ್ಲೂ ವಿವೇಕದಲ್ಲೂ ವೃದ್ಧಿಹೊಂದಿ ರಾಜ್ಯವನ್ನು ನೀತಿಯುಕ್ತವಾಗಿಯೂ ಸತ್ಯತೆಯಿಂದಲೂ ಸರ್ವೋತ್ತಮವಾಗಿಯೂ ಆಳುವಂತೆ ಸರ್ವಾಂತರ್ಯಾಮಿಯಾದ ಭಗವಂತನು ತನ್ನ ಶ್ರೇಷ್ಠವಾದ ವರವನ್ನು ದಯಪಾಲಿಸಲೆಂದು ಪ್ರಾರ್ಥಿಸುವೆವು. ಇವರ ರಾಜ್ಯಭಾರವು ಇವರ ತಂದೆಯವರ ಮತ್ತು ಅಜ್ಜಿಯವರ ಆಳ್ವಿಕೆಗಳಿಗಿಂತಲೂ ವಿಖ್ಯಾತವಾಗಿ ಜರುಗಲಿ ಎಂದು ಹಾರೈಸುತ್ತೇವೆ.

ಚಕ್ರವರ್ತಿ ಸಾರ್ವಭೌಮರವರಾದ ಜಾರ್ಜ್ ಫ್ರೆಡರಿಕ್ ಅರ್ನೆಸ್ಟ್ ಆಲ್ಬರ್ಟ್‌ಯವರು ೧೮೬೫ ನೇ ಇಸವಿ ಜೂನ್ ತಾ. ೩ ರಲ್ಲಿ ಜನಿಸಿ, ಈಗ ಸುಮಾರು ೪೫ ವರುಷದವರಾಗಿರುತ್ತಾರೆ. ಇವರು ವಹಿಸಿರುವ ಬಹು ಜವಾಬ್ದಾರಿಯುಳ್ಳ ದೊರೆತನಕ್ಕೆ ಅವಶ್ಯವಾದ ಯೋಗ್ಯತಾಸಿದ್ಧಿಯನ್ನು ಸಂಪಾದಿಸಿಕೊಂಡಿರುವರು. ಅವರು ಸರ್ವ ವಿದ್ಯಾಶಾಲೆಗಳಲ್ಲಿ ವ್ಯಾಸಂಗ ಮಾಡಿ, ಹಡಗುಗಳ ಸೈನ್ಯದ ಇಲಾಖೆಯನ್ನು ಪ್ರವೇಶಿಸಿ ನಾವಿಕನ ವಿದ್ಯೆಯನ್ನೂ ಕಲಿತಿರುವರು. ಇದಲ್ಲದೆ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ಎಲ್ಲಾ ವಿಭಾಗಗಳಲ್ಲೂ ಸಂಚಾರ ಮಾಡಿರುತ್ತಾರೆ. ನಮ್ಮ ಮೈಸೂರು ಸಂಸ್ಥಾನದ ಪ್ರಜೆಗಳು ೧೯೦೫-೦೬ ನೇ ವರುಷದಲ್ಲಿ ಅವರು ಈ ಪ್ರಾಂತ್ಯ ದಯಮಾಡಿದ್ದಾಗ್ಗೆ ಅವರ ಭೇಟಿ ಮಾಡಿದ್ದನ್ನು ಜ್ಞಾಪಕದಲ್ಲಿಟ್ಟುಕೊಂಡಿದಾರೆ. ಜಾರ್ಜ್ ದೊರೆಯವರು ಹಿಂದುಸ್ಥಾನವನ್ನು ಚೆನ್ನಾಗಿ ತಿಳಿದಿರುವರು. ಅವರು ಉತ್ತಮೋತ್ತಮವಾಗಿ ರಾಜ್ಯಭಾರ ಮಾಡಿಯಾರೆನ್ನುವುದಕ್ಕೆ ಸಂಶಯವಿಲ್ಲ. ಹಿಂದುಸ್ಥಾನವು ಅವರ ವಿಷಯದಲ್ಲಿ ರಾಜಭಕ್ತಿಪೂರಿತವಾಗಿಯೇ ಇದ್ದುಕೊಂಡು, ದೇವರು ಈ ದೊರೆಯವರಿಗೆ ಸಕಲವಿಧವಾದ ಆಶೀರ್ವಾದಗಳನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತಾ ಬರುವುದು

ವಿಲಾಯತಿ ರಾಜ್ಯದೊಳಗೆ ರಾಜಕೀಯ ವಿಚಾರಗಳಲ್ಲಿ ಹೋರಾಟ ಉಂಟಾಗಿರುವಂಥಾ ಈ ಕಷ್ಟಕಾಲದಲ್ಲಿ ಜಾರ್ಜ್ ಚಕ್ರವರ್ತಿಯವರು ದೊರೆಯಾಗಿ ಬಂದಿರುವರು. ಆದರೆ ಪಕ್ಷಪರಗಳ ಮುಖಂಡರು ಲೇಟ್ ದೊರೆಯವರು ಕಾಲವಾದ ವಿಷಯದಲ್ಲಿ ವ್ಯಸನಾಕ್ರಾಂತರಾಗಿರೋಣದರಿಂದ ಇದು ಅವರ ಹೋರಾಟಗಳನ್ನು ಶಾಂತಮಾಡೀತೆಂದು ನಿರೀಕ್ಷಿಸಬಹುದಾಗಿದೆ. ರಾಜ್ಯದಲ್ಲಿ ಕ್ಷೇಮಾಭಿವೃದ್ಧಿಗಳು ನೆಲೆಗೊಳ್ಳಲೆಂದು ಕಾತರಪಡುವವರೆಲ್ಲಾ ದೊರೆಯವರ ವಿಷಯದಲ್ಲಿ ಪೂರ್ಣಭಕ್ತಿಯುತರಾಗಿರುವರು ದೇವರು ದೊರೆಯನ್ನು ರಕ್ಷಿಸಲಿ.

ಮೈಸೂರು ಗವರ್ನ್‌ಮೆಂಟಿನವರು ಪ್ರಕಟಿಸಿರುವ ಇಸ್ತಿಹಾರ್‌ನಾಮೆಯು.

ಅತ್ಯಂತ ಘನವೊಂದಿದ ಐದನೆ ಜಾರ್ಜರವರು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಸಂಯುಕ್ತಸಂಸ್ಥಾನಕ್ಕೂ ಮತ್ತು ಸಮುದ್ರದ ಆಚೆ ಇರುವ ಬ್ರಿಟಿಷ್ ಸ್ವಾಸ್ಥ್ಯಗಳಿಗೂ ದೊರೆಗಳಾಗಿಯೂ, ಮತೋದ್ಧಾರಕರಾಗಿಯೂ, ಇಂಡಿಯಾ ದೇಶದ ಚಕ್ರವರ್ತಿಗಳಾಗಿಯೂ ಪ್ರಕಟಿಸಲ್ಪಟ್ಟಿದ್ದಾರೆಂದು ಘನವೊಂದಿದ ವೈಸ್‌ರಾಯ್ ಮತ್ತು ಮಂತ್ರಾಲೋಚನ ಸಭಾ ಸಮೇತರಾದ ಗವರ್ನರ್ ಜನರಲ್‌ರವರು ಸಿಮ್ಲಾದಿಂದ ೧೯೧೦ ನೇ ಮೇ ೭ ನೇ ಮಹಜರ್ ೧೧೦೭ ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ತಿಳಿಯಪಡಿಸಿರುತ್ತಾರೆ

ಈ ದಿನ ಸಾಯಂಕಾಲ ೫ ಘಂಟೆಗೆ ಧ್ವಜಗಳು ಪೂರ್ಣೋನ್ನತಕ್ಕೆ ಏರಿಸಲ್ಪಡತಕ್ಕದ್ದಲ್ಲದೆ ಘನವೊಂದಿದ ೫ ನೇ ಜಾರ್ಜರವರು ರಾಜ್ಯಾಧಿಪತ್ಯವನ್ನು ವಹಿಸಿದ್ದರ ಮರ್ಯಾದಾರ್ಥವಾಗಿ ೧೦೧ ತೋಪುಗಳು ಉಡಾಯಿಸಲ್ಪಡತಕ್ಕದ್ದು. ಧ್ವಜಗಳು ಸಾಯಂಕಾಲದ ವರೆಗೂ ಪೂರ್ಣೋನ್ನತಿಯಲ್ಲಿ ಇಡಲ್ಪಟ್ಟು ನಾಳೆಯ ಪ್ರಾತಃಕಾಲದಿಂದ ಪುನಃ ಅರ್ಧೋನ್ನತಕ್ಕೆ ಇಳಿಸಲ್ಪಟ್ಟು ಇನ್ನೊಂದು ಹುಕುಂ ಸಾದರಾಗುವ ಪರ್ಯಂತ ಅದೇ ರೀತಿ ಇಡತಕ್ಕದ್ದು

ಟಿ ಆನಂದರಾವ್.

ಮೈಸೂರು ಸಂಸ್ಥಾನದ ದಿವಾನರವರು

ಹ್ಯಾಲಿಯವರ ಬಾಲಚುಕ್ಕಿಯು

ಎರಡು ವಾರಗಳ ಹಿಂದೆ ನಾವು ಈ ಬಾಲಚುಕ್ಕಿಯ ವಿಷಯವಾಗಿ ಪ್ರಸ್ತಾಪಮಾಡಿದೆವು. ಈ ವಾರ ಅದೇ ವಿಷಯದಲ್ಲಿ ಇನ್ನು ಕೆಲವು ವಿಚಾರಗಳನ್ನು ತಿಳಿಸಲಪೇಕ್ಷಿಸುತ್ತೇವೆ. ಈ ಬಾಲಚುಕ್ಕಿಯು ಈಗಲೂ ಪ್ರತಿ ದಿನವೂ ಬೆಳಗಿನ ಝಾಮದಲ್ಲಿ ೪ ರಿಂದ ೫ ಗಂಟೆಯ ವರೆಗೆ ಕಾಣುತ್ತಿದೆ. ಆದರೆ ಇನ್ನು ಕೆಲವು ದಿನಗಳೊಳಗಾಗಿ ಅದು ಅದೃಶ್ಯವಾಗುವುದು. ಯಾಕೆಂದರೆ ಅದು ಸೂರ್ಯನಿಗೂ ಭೂಮಿಗೂ ನಡುವೆ ಹಾದುಹೋಗುತ್ತದೆ. ಆ ಸಮಯದಲ್ಲಿ ಅದು ಕಾಣಿಸುವುದಿಲ್ಲ ಅಂದರೆ ಇದೇ ಮೇ ತಿಂಗಳ ತಾ ೧೯ ನೇ ಗುರುವಾರ ಬೆಳಿಗ್ಗೆ ಸುಮಾರು ೮ ಗಂಟೆಗೆ ಈ ಬಾಲಚುಕ್ಕಿಯು ಭೂಮಿಗೂ ಸೂರ್ಯನಿಗೂ ನಡುವೆ ಬರುತ್ತದೆ. ಬರೀ ಕಣ್ಣಿನಿಂದ ನೋಡುವವರಿಗೆ ಅದು ಕಾಣುವುದಿಲ್ಲ. ಯಾಕೆಂದರೆ ಬಾಲಚುಕ್ಕಿಗಳು ಘನೀಭೂತವಾದ ವಸ್ತುವಲ್ಲ ಅದು ಆಗ ಸೂರ್ಯನಿಗಿಂತಲೂ ಭೂಮಿಗೇ ಬಹಳ ಸಮೀಪವಾಗಿ ಬರೋಣದರಿಂದ ಅದು ಸೂರ್ಯನಿಗಿಂತಲೂ ದೊಡ್ಡದಾಗಿ ಕಾಣಿಸಿಕೊಳ್ಳುತ್ತದೆ ಅದು ಸೂರ್ಯನನ್ನು ದಾಟಿಕೊಂಡು ಹೋದಾಗ್ಯೂ ಆಗ ಸೂರ್ಯನ ಕಾಂತಿಯು ಕಡಮೆಯಾಯಿತೆಂದು ನಮಗೆ ಗೊತ್ತಾಗುವುದೇ ಇಲ್ಲ. ಸೂರ್ಯಗ್ರಹಣದಲ್ಲಿ ಕಾಣುವಂತೆ ಕಪ್ಪುಛಾಯೆಯೇನೂ ಕಾಣಬರುವುದಿಲ್ಲ

ಈ ಬಾಲಚುಕ್ಕಿಯು ಕಾಣಿಸಿಕೊಂಡದ್ದರಿಂದ ಭೂಮಿಯ ಮೇಲೆ ಏನೇನೋ ಅನಾಹುತಗಳು ಪ್ರಾಪ್ತವಾಗುವವೆಂದು ದಿಕ್ಕಾಪಾಲಾಗಿ ಜನರು ಅಂಜಿಕೊಳ್ಳುವರು. ನಮ್ಮ ವಾಚಕರು ಈ ವಿಷಯದಲ್ಲಿ ಸ್ವಲ್ಪವೂ ಅನುಮಾನಪಡಬೇಕಾದದ್ದಿಲ್ಲ. ಅದು ಭೂಮಿಯನ್ನು ಸೋಕುವಾಗ ಅದು ಸೋಕಿತೆಂಬುವುದನ್ನು ನಾವು ನೋಡಲಾರೆವು, ನಮಗೆ ಅದರ ಸ್ಪರ್ಶಜ್ಞಾನವೂ ಉಂಟಾಗುವುದಿಲ್ಲ

ಮೇ ತಿಂಗಳ ೧೯ ನೇ ತಾ. ಕಳೆದ ಮೇಲೆ, ಈ ಬಾಲಚುಕ್ಕಿಯು ಸೂರ್ಯಾಸ್ತಮಾನವಾದ ಬಳಿಕ ಸಾಯಂಕಾಲದ ಹೊತ್ತಿನಲ್ಲಿ ಕಾಣಿಸಿಕೊಳ್ಳುತ್ತದೆ ತಾ. ೨೦ ಅಥವಾ ೨೧ ರಲ್ಲಿ ಅದು ಕಾಣಬಹುದು. ಆದರೆ ಮುಳುಗುವ ಸೂರ್ಯನಿಗೆ ಬಹಳ ಸಮೀಪದಲ್ಲೇ ಕಾಣಿಸಿಕೊಳ್ಳುವುದರಿಂದ ಅಸ್ತಮಾನವಾಗುವುದಕ್ಕೆ ಮುಂಚೆ ಸೂರ್ಯಕಾಂತಿಯ ದೆಸೆಯಿಂದ ಬಾಲಚುಕ್ಕಿಯು ಕಾಣಬರಲಾರದು. ಆ ತರುವಾಯ ಮೇ ತಿಂಗಳಲ್ಲೂ ಜೂನ್ ತಿಂಗಳಲ್ಲಿ ಕೆಲವು ದಿನಗಳವರೆಗೂ ಅದು ಕಾಣುತ್ತಿದ್ದು ಕ್ರಮೇಣ ಅದು ಸೂರ್ಯನ ಸುತ್ತಲೂ ಹೋಗುವುದಾದ್ದರಿಂದ ಅಸ್ತವಾಗುತ್ತದೆ. ಅಲ್ಲಿಂಬಾಚೆಗೆ ಈ ಬಾಲಚುಕ್ಕಿಯು ಸುಮಾರು ೭೫ ವರುಷಗಳ ವರೆಗೆ ಕಾಣಿಸುವುದಿಲ್ಲ. ತದನಂತರ ಉದಯವಾಗುವುದು.

ಪ್ರತಿ ಒಬ್ಬರೂ ಈ ಧೂಮಕೇತುವನ್ನು ಚನ್ನಾಗಿ ನೋಡಿ ಅದರ ರಚನೆಯನ್ನು ಮನದಟ್ಟುಮಾಡಿಕೊಳ್ಳಬೇಕು. ಅದರ ತಲೆಯು ಪವನ ನಕ್ಷತ್ರದಂಥಾ ವಸ್ತು ಸಹಿತವಾದದ್ದು, ಅದರ ಬಾಲವಾದರೋ ಪವನಗಳ ಸಂಯೋಗದಿಂದ ಮಾಡಲ್ಪಟ್ಟು ವಿದ್ಯುಚ್ಛಕ್ತಿ ಅಥವಾ ಸೂರ್ಯ ಕಿರಣದಿಂದ ಪ್ರಕಾಶಮಾನವಾಗಿ ಬೆಳಗುತ್ತಿವೆ

ಜ್ಯೋತಿಷ ಶಾಸ್ತ್ರ ಪಂಡಿತರು ಗ್ರಹಗಳು ಸಂಚಾರಮಾಡುವ ಮಾರ್ಗವನ್ನು ಹ್ಯಾಗೆ ನಿದರ್ಶನಮಾಡಿಕೊಟ್ಟಿದಾರೆಯೋ ಅದೇ ರೀತಿ ಈ ಧೂಮಕೇತುಗಳ ಪಥವನ್ನೂ ಗೊತ್ತುಮಾಡಿ ಹೇಳಬಲ್ಲರು ನಭೋಮಂಡಲವು ಸೃಷ್ಟಿ ಕರ್ತನ ಅಪಾರವಾದ ಮಹಿಮೆಯನ್ನು ತೋರಿಸಿ ಕೊಂಡಾಡುತ್ತಲಿದೆ ಆತನ ಸೃಷ್ಟಿಕೃತಕಾರ್ಯಗಳನ್ನು ನಾವು ಹೆಚ್ಚು ಹೆಚ್ಚಾಗಿ ತಿಳಿಯುತ್ತಾ ಒಂದಹಾಗೆಲ್ಲಾ ಆತನ ಮಹತ್ವವನ್ನೂ ಮಹಿಮಾತಿಶಯವನ್ನೂ ಅರಿತು ವಿಸ್ಮಯಗೊಂಡುದಲ್ಲದೆ ಆತನ ಮುಂದ ಅಡ್ಡಬಿದ್ದು ನಮ್ಮ ಅಲ್ಪಮತಿಯನ್ನು ಅಂಕೆ ಮಾಡಿ ಆತನಿಗೆ ಸ್ತೋತ್ರಗಳನ್ನು ಸಮರ್ಪಿಸುತ್ತಾ ಬರುತ್ತೇವೆ ಧೂಮಕೇತುಗಳಿಂದ ಅನಾಹುತಗಳುಂಟಾಗುವವೆಂದು ಹೇಳುವುದೂ ನಂಬುವುದೂ ಮೂಢಭಕ್ತಿಯಾಗಿರುವುದು. ಆ ಸಮಯದಲ್ಲಿ ದೊರೆಗಳೇ ಮರಣವನ್ನೈದಬಹುದು ಆದರ ದೊರೆಯ ಮರಣಕ್ಕೂ ಧೂಮಕೇತುವಿನ ಉದಯಕ್ಕೂ ಯಾವ ಸಂಬಂಧವೂ ಇರುವುದಿಲ್ಲ ಇವೆರಡು ಸಂಭವಗಳಿಗೂ ಸರ್ವ ನಿರ್ವಾಣಕರ್ತನಾದ ದೇವರೇ ಕಾರಣನಾಗಿರುತ್ತಾನ ವಿವೇಕಿಗಳೂ ಜ್ಞಾನಿಗಳೂ ದೇವರ ವಿಷಯದಲ್ಲಿ ಭಯ ಭಕ್ತಿಯುತರಾಗಿ ಆತನ ಆಜ್ಞಾಧಾರಕರಾಗಿ ನಡೆದುಕೊಳ್ಳುವರು

ಆ ಸಮಯದಲ್ಲಿ ಧೂಮಕೇತುವಿನ ತೋಕೆಯು ಭೂಮಿಯನ್ನು ಸೋಕಬಹುದೆಂದು ತೋರುತ್ತದೆ. ಯಾಕೆಂದರೆ ಅದು ಭೂಮಿಯಿಂದ ಆಗ ೧ ಕೋಟಿಯೂ ೪೩ ಲಕ್ಷ ಮೈಲಿ ದೂರದಲ್ಲಿರುವುದು ಇದರಿಂದ ಈ ಧೂಮಕೇತುವಿನ ತೋಕೆಯು ಎಷ್ಟೊಂದು ಉದ್ದವಾಗಿದೆ ಎಂಬುವುದೂ, ಅಂತರಿಕ್ಷದಲ್ಲಿರುವ ಗ್ರಹಗಳೂ ನಕ್ಷತ್ರಗಳೂ ನಮ್ಮಿಂದ ಎಷ್ಟು ದೂರದಲ್ಲಿವೆ ಎಂಬುವುದೂ ಊಹಿಸಿಕೊಳ್ಳಬಹುದಾಗಿದೆ ಯಾಕೆಂದರೆ ಆ ಸಮಯದಲ್ಲಿ ಸಮಸ್ತ ನಕ್ಷತ್ರ ಗ್ರಹಗಳಿಗಿಂತಲೂ ಈ ಧೂಮಕೇತುವು ಭೂಮಿಗೆ ತುಂಬಾ ಸಮೀಪದಲ್ಲಿರುತ್ತದೆ ಆದರೂ ಈ ಧೂಮಕೇತುವಿನಿಂದ ನಮ್ಮ ಭೂಮಿಗೆ ಯಾವ ವಿಧವಾದ ಕೇಡೂ ಉಂಟಾಗಲಾರದೆಂದು ನಾವು ತಿಳಿದಿರಬೇಕು ಟೆಲಿಸ್ಕೋಪ್ ಎಂಬ ದೂರದರ್ಶಕ ಕನ್ನಡಿಯ ಮೂಲಕ ಬಹಳ ಜಾಗರೂಕತೆಯಿಂದ ನೋಡುತ್ತಿರುವವರಿಗೆ ಮಾತ್ರ ಅದು ಸೂರ್ಯನನ್ನು ದಾಟಿಕೊಂಡು ಹೋಗುವುದೂ ಅದರ ಬಾಲವು ಭೂಮಿಗೆ ಸೋಕುವುದೂ ಕಂಡುಬಂದೀತು

ಒಳದೇಶದ ವೃತ್ತಾಂತಗಳು

ನಾಲ್ಕೂ ಕಡೆ ಪ್ರಾಂತ್ಯಗಳಿಂದ ಬಂದಿರುವ ವರ್ತಮಾನಗಳನ್ನು ಈ ವಾರ ಪ್ರಕಟಿಸಲು ಸ್ಥಳ ಸಂಕೋಚವಾಯಿತೆಂದು ಕ್ಷಮಿಸಬೇಕೆಂದು ವಿಜ್ಞಾಪಿಸುತ್ತೇವೆ.

⁂

ಶ್ರೀಮನ್ಮಹಾರಾಜರವರು ಪರಿವಾರ ಸಮೇತ ನೀಲಗಿರಿಯಿಂದ ಸುಮಾರು ತಾ ೨೦ ಕ್ಕೆ ರಾಜಧಾನಿಗೆ ದಯಮಾಡುವರೆಂದು ವರ್ತಮಾನವಿದೆ

⁂

ಚಾಮರಾಜನಗರದ ಬಳಿ ಮ|| ಮಾರಿಸ್‌ಯವರ ತೋಟಕ್ಕೆ ಬೆಂಕಿ ಬಿದ್ದಿತೆಂದು ತಿಳಿದದ್ದರಿಂದ ಅವರ ತನಿಖೆಗಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಅಲ್ಲಿಗೆ ಪ್ರಯಾಣಮಾಡಿದಾರೆ

⁂

ಕಳೆದ ಬುಧವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ಸುಮಾರು ೧೬ ವರುಷದ ಒಬ್ಬ ಮಹಮದೀಯ ಹುಡುಗಿಯು ಒಂದು ಜಟಕಾ ಗಾಡೀ ಕೆಳಕ್ಕೆ ಸಿಕ್ಕಿ ತೀರಿಹೋದಳು ಜಟಕಾ ಗಾಡಿಯವನನ್ನು ಪೋಲೀಸಿನವರು ಹಿಡಿದು ಮೊಕದ್ದಮೆ ತಂದಿದಾರೆ.

⁂

ಮೈಸೂರು ಗವರ್ನ್‌ಮೆಂಟಿನವರು "ಹಿಂ ಬಂಡಿ ಮಾತರಂ," ಜೇಂಸ್ "ಸಾಕರಾ" ಎಂಬೀ ಎರಡು ಪತ್ರಿಕೆಗಳನ್ನೂ ರದ್ದು ಮಾಡಿದೆ ಎಂದೂ, ಅವನ್ನು ಯಾರೂ ತರಿಸಿ ಓದಕೂಡದೆಂದೂ ಇಸ್ತಿಹಾರು ಕೊಟ್ಟಿರುತ್ತಾರೆ

⁂

ಬೆಂಗಳೂರು ದಂಡಿನ ಸೈನ್ಯದಲ್ಲಿರುವ ಪ್ರೈವೆಟ್ ಟ್ಯಾಪ್ಲಿ ಎಂಬೊಬ್ಬ ಸಿಪಾಯಿಯು ಹಿಂದೂಪುರ ಸ್ಟೇಷನ್ನಲ್ಲಿ ರೈಲ್ವೆ ನೌಕರರಾದ ಇಬ್ಬರನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟನೆಂದು ಪೋಲೀಸಿನವರು ಅವನನ್ನು ಹಿಡಿದು ಬೆಂಗಳೂರಿಗೆ ತಂದಿರುತ್ತಾರೆ.

⁂

ಏಳನೇ ಎಡ್ವರ್ಡ್ ಚಕ್ರವರ್ತಿ ಸಾರ್ವಭೌಮರವರು ಕಾಲವಾದದ್ದಕ್ಕಾಗಿ ಕಳೆದ ಶನಿವಾರ ರಾಜಧಾನಿಯಲ್ಲಿ ೬೯ ಮಿನೀಟ್ ತೋಪುಗಳೂ, ಐದನೇ ಜಾರ್ಜ್‌ಯವರಿಗೆ ವಿಲಾಯತಿ ರಾಜ್ಯದ ಪಟ್ಟವಾದದ್ದಕ್ಕಾಗಿ ಮೊನ್ನೆ ಮಂಗಳವಾರ ೧೦೧ ಕುಶಾಲ್ ಪಿರಂಗಿಗಳೂ ಹಾರಿಸಲ್ಪಟ್ಟವು

⁂

ಫ್ರೆಂಚ್‌ರಾಕ್ಸ್ ರೈಲ್ವೆ ಸ್ಟೇಷನ್ನಿಂದ ಪ್ರಸಿದ್ಧ ಯಾತ್ರಾಸ್ಥಾನವಾದ ಮೇಲ್ಕೋಟೆಗೆ ಟ್ರಾಂವೇ ಎಂಬ ಸಣ್ಣ ರೈಲನ್ನು ಹಾಕುವುದಕ್ಕೆ ಸಾಲಭ್ಯಗಳನ್ನು ಕಲ್ಪಿಸಿಕೊಟ್ಟು ಸಹಾಯ ಮಾಡಬೇಕೆಂದು ಮ|| ಶಾಮೈಯಂಗಾರ್ರೆಂಬವರು ಗವರ್ನ್‌ಮೆಂಟಿನವರನ್ನು ಕೇಳಿಕೊಂಡಿದಾರೆಂದು ವರ್ತಮಾನವಿದೆ.

ಮೈಸೂರು ಗವರ್ನ್‌ಮೆಂಟಿನವರು ಈ ವರುಷ ಇಬ್ಬರಿಗೆ ದಾಮೋದರದಾಸ್ ಫಂಡಿನಿಂದ ವೇತನಗಳನ್ನು ಕೊಟ್ಟು, ಕಸುಬು ಯಾನೆ ಕುಶಲವಿದ್ಯೆಗಳನ್ನು ಕಲಿತು ಬರಲು ಸೀಮೆಗೆ ಕಳುಹಿಸುವುದಾಗಿಯೂ, ವೇತನವು ವರುಷಕ್ಕೆ ೩,೦೦೦ ರೂಪಾಯಿನಂತೆ ಕೊಡಲ್ಪಡುವುದೆಂತಲೂ ಪ್ರಕಟಿಸಿದಾರೆ.

⁂

ಬೆಂಗಳೂರಿನಲ್ಲಿ ಜನೋಪಕಾರಿ ಮ|| ದೊಡ್ಡಣ್ಣನವರ ಸ್ಕೂಲಿನಲ್ಲಿ ಉತ್ತರದೇಶದಿಂದ ಬಂದಿರುವ ಮಿಸೆಸ್ ಬೆಸೆಂಟ್ ಎಂಬಾಕೆಯು ನಾಳೆ ಉಪನ್ಯಾಸಮಾಡುವರೆಂದೂ, ಮಾಜಿ ದಿವಾನ್‌ರಾದ ಸರ್ ವಿ. ಪಿ. ಕೃಷ್ಣಮೂರ್ತಿಯವರು ಸಭೆಯ ಅಗ್ರಾಸನವನ್ನು ವಹಿಸುವರೆಂದೂ ಪ್ರಕಟವಾಗಿದೆ.

⁂

ಶ್ರೀಮನ್ಮಹಾರಾಜರವರು ಮೊನ್ನೆ ಅನಂತಶಯನಕ್ಕೆ ಸೇರಿದ ಕಾಲಡಿಗೆ ದಯಮಾಡಿದ್ದಾಗ್ಗೆ ಅಲ್ಲಿ ಶ್ರೀಶೃಂಗೇರಿ ಸ್ವಾಮಿಗಳು ಅವರಿಗೆ "ಧರ್ಮಪಾಲಕ" ಎಂಬ ಬಿರುದನ್ನು ದಯಪಾಲಿಸಿದರೆಂದೂ, ಶ್ರೀಮನ್ಮಹಾರಾಜರವರು ಶಾರದಾಂಬಾ ವಿಗ್ರಹಕ್ಕೆ ವಜ್ರದ ಕಂಠೀಸರವನ್ನು ಒಪ್ಪಿಸಿದರೆಂದೂ ಪ್ರಕಟವಾಗಿದೆ.

⁂

ಇಲ್ಲಿನ ಪಡವಾರಹಳ್ಳಿ ಕಾಳೈಯನೆಂಬವನ ಎಮ್ಮೆಯು ತಪ್ಪಿಸಿಕೊಂಡು ಬಂದದ್ದನ್ನು ಲಕ್ಷ್ಮಯ್ಯನೆಂಬ ಪೋಲೀಸಿನವನು ಮನೆಯಲ್ಲಿ ಕಟ್ಟಿಕೊಂಡು ಸುಮಾರು ವರುಷದಿಂದ ಹಾಲು ಕರೆದುಕೊಳ್ಳುತ್ತಿದ್ದನೆಂದು ಮಾಲೀಕನು ಫಿರ್ಯಾದು ತಂದದ್ದರ ಮೇಲೆ ಅವನಿಗೆ ಟೌನ್ ಮ್ಯಾಜಿಸ್ಟ್ರೇಟರು ಮೂರು ತಿಂಗಳ ಸಜಾ ವಿಧಿಸಿದರೆಂದು ಕೇಳುತ್ತೇವೆ

⁂

ಶ್ರೀಮನ್ಯುವರಾಜರವರ ವಿವಾಹೋತ್ಸವಕ್ಕಾಗಿ ರಾಜಧಾನಿಯ ಮ್ಯುನಿಸಿಪಾಲಿಟಿಯವರು ೧೦,೦೦೦ ರೂಪಾಯಿ ಖರ್ಚು ಮಾಡಬೇಕೆಂದು ಒಪ್ಪಿಕೊಂಡಿರುತ್ತಾರೆ ಗವರ್ನ್‌ಮೆಂಟಿನವರು ಸಲ್ಯಂಕ್ಷನ್ ಮಾಡಿದ ಮೇಲೆ ಆ ಹಣದಲ್ಲಿ ಅಡ್ರಸ್ ಒಪ್ಪಿಸುವುದಕ್ಕೂ, ದೀಪೋತ್ಸವಗಳಿಗೂ, ಕನ್‌ಸರ್ವೆನ್ಸಿ ಏರ್ಪಾಡಿಗೂ ಹಂಚಿಕೆ ಮಾಡುವರೆಂದು ತಿಳಿಯುವುದು

⁂

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಅಲ್ಲಿ ಮನೆಗಳ ತೆರಿಗೆ ಮೊದಲಾದ ಕಂದಾಯಗಳನ್ನು ವರುಷಕ್ಕೆ ಎರಡು ಕಿಸ್ತಿನಲ್ಲಿ ವಸೂಲ್ಮಾಡ ಒಹುದಾದರೂ ಅಡ್ವಾನಸಾಗಿ ತೆಗದುಕೊಳ್ಳುವುದರಿಂದ ಪ್ರಜೆಗಳಿಗೆ ಕಷ್ಟವಾಗುವುದೆಂದೂ, ಮ್ಯುನಿಸಿಪಾಲಿಟಿಯ ಕಸರಾ ಗುಡಿಸುವವರ ವಾಸಕ್ಕಾಗಿ ಸದ್ಯದಲ್ಲಿ ೩೦ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದೂ ಗವರ್ನ್‌ಮೆಂಟಿಗೆ ಬರೆದುಕೊಂಡಿದಾರೆ

⁂

ರಾಜಧಾನಿಯಲ್ಲಿ ಮುಖ್ಯರಾದ ಕೆಲವು ದೊಡ್ಡ ಮನುಷ್ಯರು ನೆನ್ನೆ ಸಾಯಂಕಾಲ ಪುರಜನರನ್ನೆಲ್ಲಾ ಕರೆಸಿಕೊಂಡು ಇಲ್ಲಿನ ಟೌನ್ ಹಾಲ್ ಮಂದಿರದಲ್ಲಿ ಒಂದು ಮಹಾ ಜನ ಸಭೆಯನ್ನು ನಡಿಸಿ, ಘನತೆಯನ್ನು ಹೊಂದಿದ ಇಂಡಿಯಾ ಚಕ್ರವರ್ತಿಗಳು ಸ್ವರ್ಗಸ್ಥರಾದ ವಿಷಯದಲ್ಲಿ ಪ್ರಜೆಗಳಿಗೆ ಉಂಟಾಗಿರುವ ಅಪಾರವಾದ ವ್ಯಸನವನ್ನು ತಿಳಿಸಿ ಚಕ್ರವರ್ತಿಯವರಿಗೆ ಪ್ರಜೆಗಳ ಅನುತಾಪ ಪೂರ್ವಕವಾದ ಒಂದು ತಂತೀವರ್ತಮಾನವನ್ನು ಕಳುಹಿಸುವವರಾಗಿದ್ದರು

⁂

ಕೋಲಾರ ಚಿನ್ನದ ಗಣಿಗಳಲ್ಲಿ ರಂಗಸ್ವಾಮಿಮೊದಲಿಯಾರಿ ಎಂಬವನು ನಾಲ್ಕು ವರುಷಗಳಿಂದ ಒಬ್ಬ ಕಂಟ್ರಾಕ್ಟರ ಬಳಿ ಗುಮಾಸ್ತೆಯಾಗಿದ್ದು ಕೆಲಸಬಿಟ್ಟು ಹೋದ ಮೇಲೆ ಅವನಿಟ್ಟಿದ್ದ ಲೆಕ್ಕಗಳನ್ನು ಅಜಮಾಯಿಷಿಮಾಡಿ ನೋಡಿದಾಗ ಅವನು ಸುಮಾರು ೧,೨೫೦ ರೂಪಾಯಿ ತಿಂದುಹಾಕಿದ್ದನೆಂದು ಗೊತ್ತಾಯಿತು ಅವನ ಮೇಲೆ ಮೊಕದ್ದಮೆ ಆಯಿತು ಸೆಷನ್ಸ್ ಜಡ್ಜರು ಅವನಿಗೆ ಎರಡು ವರುಷ ಕಠಿಣಸಜವನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

⁂

ಕಳೆದ ಗುರುವಾರ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳು ಸಭೆ ಸೇರಿ ಶ್ರೀಮನ್ಯುವರಾಜರಿಗೆ ಅವರ ವಿವಾಹದ ಜ್ಞಾಪಕಾರ್ಥವಾಗಿ ಒಂದು ಅಡ್ರೆಸ್ಸನ್ನು ಶ್ರೇಷ್ಠವಾದ ಕೈ ಪೆಟ್ಟಿಗೆಯಲ್ಲಿಟ್ಟು ಡಿಸ್ಟ್ರಿಕ್ಟ್ ಪ್ರಜೆಗಳ ಪರವಾಗಿ ಒಪ್ಪಿಸಬೇಕೆಂದು ತೀರ್ಮಾನಮಾಡಿದರು. ಮ|| ಬಿ ನರಸಿಂಗರಾಯರು ಸೂಚಿಸಿದ ಪ್ರಕಾರ ಮೆಂಬರುಗಳೆಲ್ಲಾ ಅದಕ್ಕಾಗಿ ಚಂದಾ ಹಾಕಿದರು. ಸುಮಾರು ೬೦೦ ರೂಪಾಯಿ ತನಕ ಚಂದಾ ಕೂಡುವುದೆಂದು ಗೊತ್ತಾಯಿತು ಮ|| ನರಸಿಂಗರಾಯರನ್ನು ಕಮಿಟಿಯ ಸೆಕ್ರೆಟರಿ ಮತ್ತು ಟ್ರೆಜರರಾಗಿ ನೇಮಿಸಿರುತ್ತಾರ.

⁂

ಶ್ರೀ ಶಿವಗಂಗಾ ಸ್ವಾಮಿಗಳು ಸಂಚಾರ ಮಾಡಿಕೊಂಡು ಕಳೆದ ಶುಕ್ರವಾರ ಬೆಳಿಗ್ಗೆ ಬೆಂಗಳೂರು ಪಟ್ಟಣವನ್ನು ತಲುಪಿ ಪೂರ್ಣಯ್ಯನವರ ಛತ್ರದಲ್ಲಿ ಬಿಡಾರ ಮಾಡಿಕೊಂಡಿದಾರೆ ಡೆಪ್ಯುಟಿ ಕಮಿಷನರವರು ಸಕಲ ಮರ್ಯಾದೆಗಳನ್ನೂ ಸಿದ್ಧಪಡಿಸಿದ್ದರು. ಕೌನ್ಸಿಲರುಗಳಾದ ಮ|| ಪುಟ್ಟಣ್ಣಶೆಟ್ಟರವರು, ಮ|| ನಂಜುಂಡೈಯನವರೇ ಮೊದಲಾದ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಶೆಟ್ಟಿವರ್ತಕರೂ ಸ್ವಾಮಿಗಳ ಮೆರವಣಿಗೆಯಲ್ಲಿ ಹಾಜರಾಗಿದ್ದರು ಶ್ರೀ ಶೃಂಗೇರಿಸ್ವಾಮಿಗಳು ಪರಿವಾರ ಸಮೇತ ಜೂಲೈ ತಾ. ೧ ರಲ್ಲಿ ಬೆಂಗಳೂರಿಗೆ ದಯಮಾಡುವವರಾಗಿದಾರೆಂದು ಕೇಳುತ್ತೇವೆ

⁂

ಒಬ್ಬ ಬಾತ್ಮಿದಾರರು ಬರೆಯುವುದು —"ಬೆಂಗಳೂರು ಶಹರಿನಲ್ಲಿ ಮ್ಯುನಿಸಿಪಲ್ ಕೌನ್ಸಿಲರೂ, ಆನರರಿ ಬೆಂಚ್ ಮ್ಯಾಜಿಸ್ಟ್ರೇಟರೂ ಆಗಿ ಪ್ರಖ್ಯಾತಿ ಹೊಂದಿರುವ ಭಾರಿ ಜವಳಿ ವ್ಯಾಪಾರಿಗಳಾದ ಸಾಹುಕಾರ್ ಡಿ ಆದೆಪ್ಪನವರು ಈ ಬುಧವಾರದ ಲಾಗಾಯಿತು ಇಂಗ್ಲಿಷ್ ಭಾಷೆಯಲ್ಲಿ ತಕ್ಕಮಟ್ಟಿನ ಪರಿಶ್ರಮವನ್ನು ಪಡೆದಿರುವ ತಮ್ಮ ಕುಮಾರರನ್ನು ಜತೆಗೆ ಸೇರಿಸಿಕೊಂಡು 'ಡಿ ಆದೆಪ್ಪ ಅಂಡ್ ಸನ್ಸ್' ಎಂಬ ಹೆಸರಿನಿಂದ ವ್ಯಾಪಾರ ನಡಿಸುತ್ತಾ ಬಂದಿರುತ್ತಾರೆ ಇವರ ಸೌಮ್ಯತೆ, ಪ್ರಾಮಾಣಿಕತನ, ಭೂತದಯ ಪಶ್ಚಾತ್ತಾಪ ಮೊದಲಾದ ಸದ್ಗುಣಗಳಿಂದ ಇವರಿಗೆ ನಮ್ಮ ಮೈಸೂರು ಸೀಮೆಯಲ್ಲಿ ಮಾತ್ರವೇ ಅಲ್ಲದೆ ಕೊಡಗು, ಮದರಾಸ್, ಬೊಂಬಾಯಿ ಅಧಿಪತ್ಯಗಳು ಮುಂತಾದ ಭಾಗಗಳಲ್ಲಿಯೂ ಅನೇಕ ಮಂದಿ ಗಿರಾಕಿಗಳು ದೊರೆತಿದ್ದಾರೆ ನೇಯಿಗೆ ಕಸಬಿನಿಂದ ಜೀವನ ಮಾಡುವ ಎಷ್ಟೋ ಜನ ಬಡವರಿಗೆ ಇವರು ಆಧಾರ ಭೂತರಾಗಿಯೂ ಉಪಕಾರಿಗಳಾಗಿಯೂ ಇದ್ದಾರೆ. ಆದಕಾರಣ ಇಂಥಾ ದೊಡ್ಡ ಮನುಷ್ಯರ ವ್ಯಾಪಾರವು ಇನ್ನೂ ಅತಿಶಯವಾಗಿ ಅಭಿವೃದ್ಧಿ ಹೊಂದಲೆಂದು ಇವರೆಲ್ಲರೂ ಹಾರೈಸುತ್ತಿರುವರು"

ವಿದೇಶ ವರ್ತಮಾನಗಳು.

ಮಧ್ಯ ಅಮೇರಿಕಾ ಖಂಡದ ಕೋಸ್ಟರೀಕ ಎಂಬ ರಾಜ್ಯದಲ್ಲಿ ಭೂಕಂಪವುಂಟಾಗಿ ಕಾರ್ಟಗೋ ಎಂಬ ಪಟ್ಟಣವು ಸಂಪೂರ್ಣವಾಗಿ ಹಾಳಾಯಿತು ಐನೂರು ಜನದ ವರೆಗೂ ಮೃತಪಟ್ಟರು. ಕೋರ್ಟ್ಯಾಧೀಶ್ವರನಾದ ಕಾರ್ನೆಗಿಯು ಕಟ್ಟಿದ್ದ ಅರಮನೆಯೂ ನೆಲಸಮವಾಯಿತು

⁂

ಈ ವರುಷದ ಮೊದಲು ಮೂರು ತಿಂಗಳಲ್ಲಿ ವಿಲಾಯತಿಯ ೪೩,೦೦೦ ಪ್ರಜೆಗಳು ತಮ್ಮ ದೇಶವನ್ನು ಬಿಟ್ಟು ಉತ್ತರ ಅಮೇರಿಕದ ಕೆನಡಾ ರಾಜ್ಯದಲ್ಲಿ ವಾಸಮಾಡುವದಕ್ಕಾಗಿ ಹೊರಟು ಹೋಗಿರುತ್ತಾರೆ. ಕಳೆದ ವರುಷ ಈ ದಿನದಲ್ಲಿ ೨೩,೦೦೦ ಜನರು ಅದೇ ಪ್ರಾಂತ್ಯದಲ್ಲಿ ವಾಸಿಸುವದಕ್ಕೆ ಹೋಗಿರುವರು.

⁂

ದಲಾಯಲಾಮರ ಅಪರಾಧವನ್ನು ಕ್ಷಮಿಸುತ್ತೇವೆಂತಲೂ ಅವರು ಟಿಬೆಟ್ಟಿಗೆ ಹಿಂತಿರುಗಿ ಬಂದರೆ ಅವರ ವಿಷಯದಲ್ಲಿ ಸರಿಯಾದ ಜಾಗರೂಕತೆಯನ್ನು ತೆಗೆದುಕೊಂಡು ಅವರನ್ನು ಪ್ರಾಟಾಯಿ ಪೆಟ್ಟಕ್ಕೆ ಕಳುಹಿಸಿ ಕೊಡುವವಾಗಿಯೂ ಟಿಬೆಟ್ಟಿನ ರೆಸಿಡೆಂಟರಾದ ಲೀನಾಯು ರವರಿಗೆ ಚೀನಾದಿಂದ ತಂತೀ ವರ್ತಮಾನ ಬಂದಿದೆ

⁂

ಅಮೇರಿಕಾ ಖಂಡದ ಹಾರ್ವರ್ಡ್ ವಿದ್ಯಾನಿಲಯದಲ್ಲಿ ಪ್ರೊಫೆಸರಾದ ಲ್ಯಾನ್ಮನ್ ಎಂಬಾತನು ವಿಶುದ್ಧಿಮಾರ್ಗ ಎಂಬ ಪಾಳೀ ಭಾಷೆಯ ಗ್ರಂಥವನ್ನು ಇಂಗ್ಲೀಷಿಗೆ ಭಾಷಾಂತರ ಮಾಡುತ್ತಿರುವನು ಈತನ ಸಹಾಯಕ್ಕಾಗಿ ಹಿಂದೂಸ್ಥಾನದ ಪಾಳೀ ಭಾಷೆಯ ಪಂಡಿತನಾದ ಧರ್ಮಾನಂದಕೋಸಾಂಬಿ ಎಂಬುವನು ಅಮೆರಿಕಾಕ್ಕೆ ಹೋಗಿ ಇನ್ನು ಮೂರು ವರುಷದ ವರೆಗೂ ಅಲ್ಲಿರುತ್ತಾನೆಂದು ತಿಳಿದುಬಂದಿದೆ

⁂

ನ್ಯೂಕ್ಯಾಸಲ್ ಪಟ್ಟಣದಲ್ಲಿ ಲಾಯರಾಗಿದ್ದ ಪಿಷ್ಲೇ ಎಂಬಾತನು ತಾನು ಸತ್ತ ನಂತರ ತನ್ನ ವಸ್ತ್ರದಲ್ಲಿದ್ದ ೧,೫೦೦ ಚಿತ್ರಗಳನ್ನೂ ಅವುಗಳನ್ನು ಇರಿಸುವ ಕಟ್ಟಡ ಕಟ್ಟುವದಕ್ಕೆ ನಾಲ್ಕೂವರೆ ರೂಪಾಯಿಗಳನ್ನೂ ತನ್ನ ಪಟ್ಟಣದ ಕೌನ್ಸಿಲಿಗೆ ಕೊಟ್ಟುಬಿಡಬೇಕೆಂದು ಮರಣ ಶಾಸನವನ್ನು ಬರೆದನು ಅವರು ಈ ತಸ್ವೀರುಗಳು ಅತ್ಯುತ್ತಮವಾಗಿಲ್ಲವೆಂದು ಅವುಗಳನ್ನು ನಿರಾಕರಿಸಿದರು. ಹಣವನ್ನು ಸಾಗ್ರಿ ಧರ್ಮದ ಫಂಡಿಗೆ ಸೇರಿಸಿದರು.

⁂

ಈಚೆಗೆ ತುರ್ಕಿಯವರಿಗೂ ಅಲ್ಬೇನಿಯನರಿಗೂ ಡಿಯಕೋವ ಎಂಬಲ್ಲಿ ಭಯಂಕರವಾದ ಜಗಳವು ನಡೆಯಿತು. ದಂಗೇಕೋರರು ಆ ಪಟ್ಟಣವನ್ನು ಆಕ್ರಮಿಸಿಕೊಂಡು ಐಪಕ್ ಪಟ್ಟಣದಿಂದ ಡಿಯಕೋವ ಪಟ್ಟಣಕ್ಕೆ ಬರುತ್ತಿದ್ದ ಸೈನ್ಯವನ್ನು ಎದುರಿಸಿ ಅವರನ್ನು ಹಿಂತಿರುಗುವ ಹಾಗೆ ಮಾಡಿರುತ್ತಾರೆ. ಅಲ್ಬೇನಿಯನರು ಈಗ ಪರಿಜೊವಿಜ್ ಮತ್ತು ಕಚಾನಿಕ್ ಎಂಬ ಸ್ಥಳಗಳಿಗೆ ಪಶ್ಚಿಮದಲ್ಲಿರುವ ಬೆಟ್ಟ ಸೀಮೆಯನ್ನು ಸ್ವಾಧೀನ ಪಡಿಸಿಕೊಂಡಿರುವರು.

⁂

ಅಲ್ಬೇನಿಯಾ ಜನರು ದಂಗೆಯೆದ್ದು ತುರ್ಕಿಯವರ ಮೇಲೆ ಯುದ್ಧಮಾಡುತ್ತಿರುವರು. ಕಳೆದ ಏಪ್ರಿಲ್ ೨೩ನೇ ತಾರೀಖಿನ ದಿನ ನಡೆದ ಕದನದಲ್ಲಿ ತುರ್ಕಿಯವರ ಕಡೆ ಹನ್ನೆರಡು ಮಂದಿಯೂ ಅಲ್ಬೇನಿಯದವರ ಕಡೆ ೨೫೦ ಮಂದಿಯೂ ಮೃತಪಟ್ಟರು. ಕಚಾನಿಕ್ ಕಣಿವೆಯಲ್ಲಿ ನಡೆದ ಯುದ್ಧದಲ್ಲಿ ತುರ್ಕಿಯವರ ಕಡೆ ೧೨೨ ಮಂದಿಯೂ ಅಲ್ಬೇನಿಯಾದವರಲ್ಲಿ ಐನೂರು ಮಂದಿಯೂ ಸತ್ತುಹೋದರು ಇನ್ನೂ ಕದನಗಳು ನಡೆಯುತ್ತಲೇ ಇವೆ.

⁂

ಬರ್ಲಿನ್ ಪಟ್ಟಣದಲ್ಲಿ ಒಂದು ಸೈನ್ಯದ ಮೊಕದ್ದಮೆಯನ್ನು ವಿಚಾರಣೆ ಮಾಡುವಾಗ್ಗೆ ಕೋರ್ಟ್ಯಾಧೀಶ್ವರನಾಗಿ ಕೋಪಿಷ್ಠನಾಗಿ ಅನೇಕ ಪುಸ್ತಕಗಳನ್ನು ಬರೆದು ಜರ್ಮನಿ ರಾಜ್ಯದಲೆಲ್ಲಾ ಪ್ರಸಿದ್ಧ ಪುರುಷನಾಗಿರುವ ಕಾರಲ್‌ಮೆ ಎಂಬಾತನೂ ಅಪರಾಧಿಗಳಲ್ಲಿ ಒಬ್ಬನಾಗಿ ತಿಳಿದು ಬಂತು ತನ್ನ ತಪ್ಪು ರುಜುವಾತಾದ ಒಡನೆಯೇ ಅವನು ಮೂರ್ಛೆ ಬಿದ್ದನು. ಆತ್ಮಹತ್ಯ ಮಾಡಿ ಕೊಂಡಾನೆಂಬ ಹೆದರಿಕೆಯಿಂದ ಅವನನ್ನು ಕಾವಲಿನಲ್ಲಿಟ್ಟಿರುತ್ತಾರೆ

ನೆಲಗಡ್ಲೇಕಾಯಿ

[ಕಳೆದ ವಾರದ ಶೇಷ]

೬ ವ್ಯವಸಾಯ —ಗಿಡಗಳು ಹರಡಿಕೊಂಡು ಒಂದಕ್ಕೊಂದು ಸುತ್ತಿಕೊಳ್ಳುವವರೆಗೂ ಸಾಗುವಳಿ (ಮಧ್ಯೆ) ವ್ಯವಸಾಯ ಮಾಡುತ್ತಿರಬೇಕು ಜಮೀನಿನ ತೇವ ಹೋಗದಂತೆ ಆಗಾಗ್ಗೆ ಹಲುಬೇ ಹೊಡೆಯುತ್ತಿರಬೇಕು ದೊಡ್ಡ ಮಳೆ ಬಂದು ಹದವಾದ ಕೂಡಲೇ ಹಲುಬೇ ಹೊಡೆಯಬೇಕು ಎರಡನೇ ಸಲ ಹಲುಬೇ ಹೊಡೆಯುವಾಗ ಗಿಡದ ಬುಡದಲ್ಲಿ ಮಣ್ಣು ಏರುಹಾಕಿಕೊಳ್ಳುವಂತೆ ಹೊಡೆಯಬೇಕು ಗಿಡಗಳಲ್ಲಿ ಕಾಯಿ ಕಟ್ಟಲಿಕ್ಕೆ ಆರಂಭವಾದ ನಂತರ (ಮಧ್ಯೆ) ವ್ಯವಸಾಯ ಮಾಡಕೂಡದು ಕಡೇ ವ್ಯವಸಾಯದಲ್ಲಿ ಪೈರುಗಳ ಸಾಲಿನ ಮಧ್ಯೆ ಜಾಸ್ತಿ ಮಳೇ ನೀರು ನಿಲ್ಲದೇ ಕೊಚ್ಚಿಕೊಂಡು ಹೋಗುವಂತೆ ಆಳವಾಗಿ ಹಲುಬೆ ಹೊಡೆಯಬೇಕು

7. ಕೊಯಿಲು ಮಾಡುವದು —ಪೈರೆಲ್ಲಾ ಹಳದೀ ಛಾಯವಾದ ಕೂಡಲೆ ಕೆಳಗೆ ಕಾಳು ಬಲಿತಿರುವದೆಂದು ತಿಳಿಯಬೇಕು ಆಗ ಅಗದು ಪೈರು ತೆಗೆಯಬೇಕು ಸಾವಕಾಶ ಮಾಡಿದಲ್ಲಿ ನೆಲದಲ್ಲಿ ಬಲಿತ ಕಾಯಿಗಳು ಮೊಳಕೆ ಒಡೆಯುತ್ತವೆ ಪೈರು ಅಗೆಯುವದಕ್ಕಾಗಿಯೇ ಮಾಡಿ ಇರುವ ಒಂದು ವಿಧವಾದ ನೇಗಿಲಿನಿಂದ ಉತ್ತು ಕಾಯಿ ತೆಗೆಯುತ್ತಾರೆ ದಿನಕ್ಕೆ ೧೨ ಎಕರೆ ಪೈರು ಅಗೆದು ಫಸಲು ಬಿಡಿಸುವಂಥಾ ಒಂದು ಯಂತ್ರವುಂಟು ಅಗೆದು ತೆಗೆದ ನಂತರ ೩—೪ ಘಂಟೆ ಹೊತ್ತು ಅದೇ ಮೇಲೆ ಬಿಟ್ಟು ಇದ್ದ ನಂತರ ಎತ್ತಿ ತಂದು ಕಾಯಿ ಒಳಗೆ ಬರುವಂತೆ ಸಣ್ಣ ಸಣ್ಣ ಮೆದೆ ಹಾಕಬೇಕು ಮಧ್ಯೆ ಒಂದು ಕಂಭವನ್ನು ನೆಟ್ಟಿರಬೇಕು ಅದು ೩—೪ ಅಂಗುಲ ಸುತ್ತಳತೆಯುಳ್ಳದ್ದಾಗಿಯೂ, ೭ ಅಡಿ ಎತ್ತರವಾದ್ದಾಗಿಯೂ ಇರಬೇಕು ೧೨ ರಿಂದ ೧೮ ಅಂಗುಲದವರೆಗೆ ನೆಲದಲ್ಲಿ ಹೂಳಬೇಕು ಬುಡದಲ್ಲಿ ೨ ಅಡಿ ಪಟ್ಟಿ ಹಾಕಬೇಕು ಈ ರೀತಿ ನೆಟ್ಟ ಕಂಭದ ಸುತ್ತಲೂ ಕಾಯಿಗಳು ಒಳಗಡೆ ಬರುವಂತೆ ಮೆದೆ ೬ ಅಡೀ ಎತ್ತರ ಹಾಕಬೇಕು ಇವು ೩—೪ ವಾರದ ವರೆಗೂ ಬಿಟ್ಟು ಇದ್ದು ಆ ಮೇಲೆ ತೆಗೆದು, ಕಾಯಿ ಬಿಡಿಸಬೇಕು ಕಾಯಿ ಬಿಡಿಸುವ ಯಂತ್ರಗಳು ಉಂಟು. ಅವುಗಳಿಂದ ದಿನಕ್ಕೆ ೨೨,೫೦೦ ಪೌಂಡ್ ಕಾಯಿ ಬಿಡಿಸಬಹುದು ಕಾಯಿಗಳು ಒಂದೇ ಕಡೆ ಗುತ್ತಿ ಗುತ್ತಿಯಾಗಿ ಬಿಡುವ ಜಾತಿ ನೆಲಗಡ್ಲೆಯು ವಿಶೇಷವಾಗಿ ಬೆಳೆಯುತ್ತಾರೆ ಇವುಗಳು ಹತ್ತಿರ ಹತ್ತಿರ ಬೆಳೆಯುವದರಿಂದಲೂ, ಮಧ್ಯೆ ಸಾಗುವಳಿಗೆ ಅನುಕೂಲವಾಗಿ ಇರುವದರಿಂದಲೂ ಕೊಯಿಲು ಮಾಡುವುದಕ್ಕೆ ಸುಲಭವಾಗಿ ಇರುವದರಿಂದಲೂ ಇವನ್ನೇ ಬೆಳೆಯುತ್ತಾರೆ

೮ ವರಜೀನಿಯಾ ಜಾತೀ ಕಾಯಿಗಳು ದೊಡ್ಡವಾಗಿಯೂ, ಗಿಡಗಳು ಚಿಕ್ಕವಾಗಿಯೂ, ಕಡ್ಡಿ ಎಲೆಗಳು ನೆಟ್ಟಗೆ ನಿಲ್ಲುವವುಗಳಾಗಿಯೂ, ಕಾಯಿಗಳೆಲ್ಲಾ ಗಿಡದ ಬುಡದ ಸಮೀಪದಲ್ಲಿ ಸೇರಿ ಒಂದೊಂದು ಕಾಯಿಗಳಲ್ಲಿ ೨ ಕಾಳುಗಳುಳ್ಳವುಗಳಾಗಿಯೂ, ಒಳ್ಳೆ ಬಿತ್ತವುಳ್ಳವುಗಳಾಗಿಯೂ ಅಗೆಯುವಾಗ ಕಾಯಿಗಳು ಗಿಡದಿಂದ ಉದುರದೇಲೂ ಇರುತ್ತವೆ

೯ ಸ್ಪೇನಾಜಾತಿ ಕಾಯಿ ಸಣ್ಣವಾಗಿಯೂ, ಹೆಚ್ಚು ಕಾಯಿ ಬಿಡುವುವಾಗಿಯೂ, ಕಡ್ಡಿ ಎಲೆಗಳು ಜಾಸ್ತಿ ಬೆಳೆಯುವವಾಗಿಯೂ, ಕಾಯಿಗಳು ಗಿಡದ ಬುಡದಲ್ಲೇ ಗುಂಪು ಗುಂಪಾಗಿ ಬೆಳೆಯುವಂಥಾವುಗಳಾಗಿಯೂ, ಒಂದೊಂದು ಕಾಯಿಯಲ್ಲಿ ಒಂದು ಎರಡು ಕಾಳುಗಳು ಕಾಯಿ ತುಂಬಾ ತುಂಬಿ ಬೆಳೆದಿರುವಂಥಾವುಗಳಾಗಿಯೂ, ಕಾಯಿಗಳು ಗಿಡದಿಂದ ಉದುರದೆಯೂ ಇರುತ್ತವೆ ಈ ಜಾತಿಯೂ ಸಾಧಾರಣವಾಗಿ ಒಂದು ಎಕರೆಗೆ 1160 ಪೌಂಡ್ ಕಾಯಿ ಆಗುತ್ತದೆ ಸ್ಪೇನಾಜಾತೀ ಕಾಯಿಗಳು ಬಹಳ ಜಾಗ್ರತೆಯಾಗಿ ಬೆಳೆಯುವದರಿಂದಲೂ, ಕಡ್ಡಿ ಸೊಪ್ಪು ವಿಶೇಷವಾಗಿ ಬೆಳೆದು ದನಗಳಿಗೆ ಮೇವಾಗುವದರಿಂದಲೂ ಇದನ್ನು ಬಹಳವಾಗಿ ಸಾಗುವಳೀ ಮಾಡುತ್ತಾರೆ

10 ನೆಲಗಡ್ಲೇಕಾಯಿಯನ್ನು ಅನೇಕ ವಿಧವಾಗಿ ಉಪಯೋಗಿಸುತ್ತಾರೆ ಕಾಳನ್ನು ಮನುಷ್ಯರು ಆಹಾರಗಳಿಗೂ, ದನಗಳ ಆಹಾರಗಳಿಗೂ ಕೋಳಿ ಮುಂತಾದುವುಗಳ ಆಹಾರಗಳಿಗೂ, ಕರುವಿನ ಹಸುಗಳ ಆಹಾರಕ್ಕಾಗಿಯೂ, ಉಪಯೋಗಿಸುವದಲ್ಲದೆ ಅದರ ಕಡ್ಡಿ ಸೊಪ್ಪುಗಳನ್ನು ಸಹ ದನಗಳ ಮೇವಾಗಿಯೂ ಉತ್ಕೃಷ್ಟವಾದ ಗೊಬ್ಬರವಾಗಿಯೂ ಉಪಯೋಗಿಸುತ್ತಾರೆ ನೆಲಗಡ್ಲೇಕಾಯಿ ಬೀಜವನ್ನು ಸ್ವಲ್ಪ ಹುರಿದು ಯಂತ್ರದಲ್ಲಿ ನುಣ್ಣಗೆ ರುಬ್ಬಿ ಒಂದು ವಿಧವಾದ ಬೆಣ್ಣೆಯಂತೆ ಮಾಡಿ ಅದನ್ನು ಊಟದಲ್ಲಿ ಉಪಯೋಗಿಸುತ್ತಾರೆ

11 ನೆಲಗಡ್ಲೇಕಾಯಿ ಬೀಜವನ್ನು ತುಪ್ಪದಲ್ಲಿ ಹುರಿದು ಉಪ್ಪುಹಾಕಿ ಅಥವಾ ಸಕ್ಕರೇ ಬೆರಸಿ ತಿನ್ನುತ್ತಾರೆ ಬೀಜವನ್ನು ಪಾಕದಲ್ಲಿ ಹಾಕಿ ಮಿಠಾಯಿಯಂತೆಯೂ ಮಾಡುತ್ತಾರೆ ಅದು ಹ್ಯಾಗಂದರೆ—2 ಪೌಂಡ್ ಸಕ್ಕರೆಗೆ ಒಂದು ಬಟ್ಟಲು ನೀರು ಹಾಕಿ ಒಂದು ಚಂಚಾದಷ್ಟು ನಿಂಬೇಹಣ್ಣಿನ ರಸ ಹಾಕಿ ಘಟ್ಟಿಯಾಗಿ ಪರಬತ್ತು ಪಾಕಮಾಡಿ ಅದು ಕುದಿಯುವಾಗ ಎರಡು ಪೌಂಡು ಬಿಡಿಸಿ ಆರಿಸಿ ಬೆಳ್ಳಗಿರುವ ನೆಲಗಡ್ಲೇಕಾಳನ್ನು ಅದರಲ್ಲಿ ಹಾಕಿ ಅದು ಮೆತ್ತಗಾಗುವವರೆಗೂ ಪಾಕ ಅಂದರೆ ಘಟ್ಟಿಯಾಗಿ ಒಡೆಯುವಂತಾಗುವವರೆಗೂ ಬೇಯಿಸಿ, ಕಲ್ಲಿನ ಮೇಲೆ ಚೆಲ್ಲಿ ಸವರಿ ಅದರ ಮೇಲೆ ಸುರಿದು ತಟ್ಟಿ ಆರಿಸಿ ಸಣ್ಣ ಸಣ್ಣದಾಗಿ ಕೊಯಿದು ತೆಗೆದು ತಂಪಾದ ಜಾಗದಲ್ಲಿ ಇಟ್ಟು ತಿನ್ನುತ್ತಾರೆ ನೆಲಗಡ್ಲೇ ಕಾಯಿಯನ್ನು ಒಣಗಿಸಿ ಸಿಪ್ಪೆ ತೆಗೆದು ಬಳ್ಳಗೆ ಮಾಡಿ ಕುಟ್ಟಿ ಪುಡಿಮಾಡಿ ಇತರ ವಿಧವಾದ ಮಿಠಾಯಿಗಳು ಅಂದರೆ ಬಾದಾಮಿ ಮಿಠಾಯಿ ಹಲವಾದಂತೆ ಮಾಡುತ್ತಾರೆ ಬಹಳ ರುಚಿಕರವಾಗಿಯಿರುತ್ತದೆ ಇದರ ಎಣ್ಣೆಯನ್ನು ಊಟಕ್ಕೆ ಉಪಯೋಗಿಸುವದುಂಟು

12 ನೆಲಗಡ್ಲೇಕಾಯಿಯ ಮೇಲಿನ ಕೆಂಪುಹೊಟ್ಟು ಗೋಧಿ ಹೊಟ್ಟಿನಷ್ಟು ದನಗಳಿಗೆ ಪುಷ್ಟಿಕರವಾದದ್ದು ಇದರ ಹೊಟ್ಟು ಸಿಪ್ಪೆ ನುಚ್ಚು ಸಹಾ ಹಂದಿಗಳಿಗೆ ಬಹಳ ಒಳ್ಳೇ ಆಹಾರವಾಗುತ್ತೆ ನೆಲಗಡ್ಲೇ ಕಾಯಿಯಲ್ಲಿ ಶೇಕಡಾ 45 ರಷ್ಟು ಎಣ್ಣೇ ಇದ್ದರೂ ಸಾಧಾರಣ ಯಂತ್ರಗಳಿಂದ ಶೇಕಡಾ 29 ಕ್ಕಿಂತ ಹೆಚ್ಚಾಗಿ ಎಣ್ಣೆಯನ್ನು ತೆಗೆಯುವದಕ್ಕಾಗುವದಿಲ್ಲ 29 ಪೌಂಡ್ ಕಾಳಿಗೆ ಒಂದು ಗ್ಯಾಲನ್ ಎಣ್ಣೆ ಬರುತ್ತೆ 20 ಪೌಂಡ್ ಹಿಂಡೀ ಆಗುತ್ತೆ ಅದಕ್ಕೆ ಹತ್ತೀಬೀಜದ ಎಣ್ಣೆ ತೆಗೆಯುವಂತೆ ಇದರ ಎಣ್ಣೆಯನ್ನೂ ತೆಗೆಯುತ್ತಾರೆ ಫ್ರಾನ್ಸ್ ದೇಶದಲ್ಲಿ ವಿಶೇಷವಾಗಿ ತೆಗೆಯುತ್ತಾರೆ

13 ನೆಲಗಡ್ಲೇ ಕಾಯನ್ನು 24 30 ಅಂಗುಲ ಅಂತರದಲ್ಲಿ ಸಾಲುಗಳಾಗಿಯೂ, ಸಾಲುಗಳಲ್ಲಿ ಬೀಜಗಳು ಬಹಳ ಸಮೀಪಕವಾಗಿಯೂ ಹಾಕಿ ಬೇಸಿದರೆ ಒಂದು ಎಕರೆಗೆ 1—2 ಟನ್ ಮೇವಾಗಿ ಪೈರು ಬೆಳೆಯಬಹುದು ಮೇವು ಕೊಯಿದನಂತರ ನೆಲದಲ್ಲಿ ಬಿಟ್ಟ ಕಾಯಿಯನ್ನು ಕಿತ್ತು ದನಗಳ ತಿಂಡಿಗೆ ಉಪಯೋಗಿಸಬಹುದು ಹಂದಿಗಳಿಗೆ ಹಾಕಿದರೆ ಮೈಹಿಡಿದು ಚನ್ನಾಗಿ ಕೊಬ್ಬುತ್ತವೆ.

14 ನೆಲಗಡ್ಲೇಕಾಯಿ ಪೈರಿಗೆ ಪ್ರಾಯಶಃ ಯಾವ ರೋಗವೂ ಬರುವದಿಲ್ಲ ಕೆಲವು ಗಿಡಗಳ ಬೇರಿನಲ್ಲಿ ಮಾತ್ರ ಬೆಳ್ಳಗೆ ಬೂರುಸು ಹಿಡಿದಂತೆ ಒಂದು ತರಹ ಹುಳುಗಳು ಆಗುತ್ತೆ ಪೈರು ಬದಲಾಯಿಸಿ ಹಾಕಿದರೆ ಇದು ಹೋಗಿಬಿಡುತ್ತೆ ಇವುಗಳಿಗೆ ಎಲೆಯ ಮೇಲೆ ಕಗ್ಗಿ ಚುಕ್ಕಿ ಚುಕ್ಕಿಯಾಗುವದು ಒಂದು ರೋಗ ಇದು ಹಳ್ಳ ಸರಹದ್ದಿನಲ್ಲಿ ವಸ್ತಿಗಿಂತ ಭೂಮಿಯಲ್ಲಿ ಇರುವ ಪೈರಿಗೆ ಬರುತ್ತೆ ಬೋರಡಿಯಾ ಮಿಕ್ಸ್ಚರ್ ಎಂಬ ದ್ರಾವಕವನ್ನು ಪೈರಿನ ಮೇಲೆ ಎರಚಿದರೆ ಹೋಗಿಬಿಡುತ್ತೆ

15 ನೆಲಗಡ್ಲೇಕಾಯಿಗೆ ಎಲ್ಲಾ ಕಡೆಯಲ್ಲಿಯೂ ಗಿರಾಕಿ ಹೆಚ್ಚುತ್ತಾ ಇದೆ ಇದು ಬೆಳೆಯುವುದಕ್ಕೆ ಬೇಕಾದಂಥಾ ಭೂಮಿ ನಮ್ಮಲ್ಲಿ ಯಥೇಚ್ಛವಾಗಿ ಇರುತ್ತೆ ಸಾಗುವಳಿ ಬಹಳ ಸುಲಭ ಗೊಬ್ಬರವೆ ಹಾಕತಕ್ಕದ್ದಿಲ್ಲ ಸ್ವಲ್ಪ ದಿವಸದಲ್ಲೇ ಅಂದರೆ ಮೂರೂವರೆ ತಿಂಗಳಿಗೇನೇ ಪೈರು ಕೈಗೆ ಬರುತ್ತೆ ಬೆಳೆಯತಕ್ಕ ಲಾಗವದು ಬಹಳ ಕಡಮೆ ಹುಟ್ಟುವಳಿ, ನಫೇ, ಮತ್ತು ಉಪಯೋಗ ಜಾಸ್ತಿ ಈ ಪೈರು ಬೆಳೆಯುವದರಿಂದ ಭೂಮಿಯ ಸಾರ ಹೆಚ್ಚಾಗುತ್ತದೆ ಸಾಧಾರಣವಾಗಿ ಎಕರೇ ಒಂದಕ್ಕೆ ಸುಮಾರು 912 ಪೌಂಡ್ ಲಾಗಾಯಿತು 1,680 ಪೌಂಡ್ ವರೆಗೂ ಆಗುತ್ತೆ ಸ್ಪೇನಾಜಾತಿ ಕಾಯಿ ಎಕರೆ 1ಕ್ಕೆ 1,180 ಪೌಂಡ್ ವರೆಗೂ ಕಾಯಿ ಆಗಿ ಇರುವುದುಂಟು ದನಗಳಿಗೆ ಮೇವಾಗುವ ಸೊಪ್ಪು ಎಕರೆ ಒಂದೂವರೆ ಲಾಗಾಯಿತು ಎರಡು ಟನ್ ವರೆಗೂ ಆಗುತ್ತೆ ಇದರ ಮರೀದಿಯಲ್ಲಿ ಸಾಗುವಳಿ ಒಟ್ಟು ಲಾಗುವದು ಹುಟ್ಟುತ್ತೆ ಆದ್ದರಿಂದ ರೈತನು ಈ ಪೈರನ್ನು ಅಗತ್ಯವಾಗಿ ತನ್ನ ಭೂಮಿಯಲ್ಲಿ ಒಂದು ಭಾಗದಲ್ಲಿಯಾದರೂ ಬೆಳೆಯಬೇಕು ಈ ಬೀಜ ಮೈಸೂರಲ್ಲಿರುವ ಶ್ರೀ ಕೃಷ್ಣರಾಜ ಕೃಷಿಕಿಲ್ಪಾಭಿವರ್ಧಕ ಸಮಾಜದಲ್ಲಿ ದೊರೆಯುತ್ತೆ ಬೇಕಾದವರು ಸಮಾಜದ ಸೆಕ್ರೆಟರಿಯವರಿಗೆ ಬರೆದು ತರಿಸಿಕೊಳ್ಳಬಹುದು.

ಗತಿಸಿದ ಏಳನೇ ಎಡ್ವರ್ಡ್ ಪ್ರಭುಗಳ ಸಂಕ್ಷೇಪ ಜೀವ ಚರಿತ್ರೆಯು

ಜನನವು

ಏಳನೇ ಎಡ್ವರ್ಡ್ ಪ್ರಭುಗಳು ಲಂಡನ್ ಪಟ್ಟಣದಲ್ಲಿ ಪ್ರಖ್ಯಾತವಾದ ಬಕಿಂಗ್ಹಾಂ ರಾಜಭವನದಲ್ಲಿ ೧೮೪೧ನೇ ಇಸವಿ ನವಂಬರ್ ತಾ ೯ರಲ್ಲಿ ಬೆಳಗ್ಗೆ ೧೦ ಗಂಟೆಗೆ ಜನಿಸಿದರು ಯುವರಾಜರವರು ಜನಿಸಿದ್ದನ್ನು ಕೇಳಿ ಅವರ ಮಾತಾಪಿತೃಗಳಾದ ವಿಕ್ಟೋರಿಯಾ ಮಹಾರಾಜ್ಞೀ ರವರಿಗೂ ಪ್ರಿನ್ಸ್ ಆಲ್ಬರ್ಟ್ ಯವರಿಗೂ ಅನೇಕಾನೇಕ ರಾಜರುಗಳೂ ದಿಕ್ಕುದಿಕ್ಕಿನ ಪ್ರಜೆಗಳೂ ತಮ್ಮ ಸಂತೋಷವನ್ನು ತಂತಿಯ ಮೂಲಕ ತಿಳಿಯಪಡಿಸಿದರು ಎಳೇ ಮಗುವಿಗೆ ಎರಡು ತಿಂಗಳಾದ ಮೇಲೆ ನಾಮಕರಣವಾಯಿತು ತಂದೆಯ ಹೆಸರಾದ ಆಲ್ಬರ್ಟ್ ಮತ್ತು ತಾತನ ಹೆಸರಾದ ಎಡ್ವರ್ಡ್ ಎಂಬುವುಗಳನ್ನು ಸೇರಿಸಿ ಪ್ರಿನ್ಸ್ ಆಲ್ಬರ್ಟ್ ಎಡ್ವರ್ಡ್ ಎಂಬ ಹೆಸರನ್ನಿಟ್ಟರು ಮಗುವಿನ ಪಾಲನೆಗೆ ಮಹಾರಾಜ್ಞೀರವರು ಅನೇಕ ಸೇವಕಿಯರುಗಳನ್ನು ಏರ್ಪಾಡುಗಳನ್ನು ಮಾಡಿಟ್ಟು ಬಹು ಪ್ರೀತಿಯಿಂದ ನೋಡಿಕೊಳ್ಳುತ್ತಾ ಬಂದರು

ವಿದ್ಯಾಭ್ಯಾಸವು

ನಾಲ್ಕು ವರುಷಗಳು ತುಂಬುತ್ತಲೇ ಮಹಾರಾಜ್ಞೀರವರು ಯುವರಾಜರಿಗೆ ವಿದ್ಯಾಭ್ಯಾಸಂಗ ಮಾಡಿಸಲಾರಂಭಿಸಿದರು ಬಹು ಗಟ್ಟಿಗರೆಂದು ಹೆಸರು ಪಡೆದಿದ್ದ ಪುರುಷ ಮತ್ತು ಸ್ತ್ರೀ ಶಿಕ್ಷಕರನ್ನು ನೇಮಿಸಿದರು ರಾಜಕುಮಾರಿಯರನ್ನೂ ಕುಮಾರರನ್ನೂ ಆಸ್ಬೋರ್ನ್ ಅರಮನೆಯ ಉದ್ಯಾನವನದಲ್ಲಿ ಕೈತೋಟ ಮುಂತಾದ ಕೃಷಿಯನ್ನು ಮಾಡುವುದಕ್ಕೆ ಗೊತ್ತು ಮಾಡಿದರು ತಂದೆಯವರು ಹೋಗಿ ಎಲ್ಲಾ ಪರಿಕ್ಷೆ ಮಾಡಿ ಅವರವರು ಮಾಡಿದ ತೋಟದ ಕೆಲಸಕ್ಕಾಗಿ ಕೆಲಸದ ಯೋಗ್ಯತೆಯ ಪ್ರಕಾರ ತಾವೇ ಅವರಿಗೆ ಕೂಲಿಯನ್ನು ಕೊಡುತ್ತಿದ್ದರು ನಾಟಕಾದಿ ವಿನೋದಗಳಲ್ಲೂ ಅವರನ್ನು ತರಪೇತುಮಾಡಿದರು ೧೨ ವರುಷದ ಯುವರಾಜರು ನಾಟಕದಲ್ಲಿ ಒಂದು ಪಾತ್ರವನ್ನು ನಟಿಸಿರುತ್ತಾರೆ ಪ್ರಿನ್ಸ್ ಆಫ್ ವೇಲ್ಸ್ ರವರು ಚಿತ್ರಪಟಗಳನ್ನು ಬರೆಯುವುದರಲ್ಲೂ ಪರಿಶ್ರಮವನ್ನು ಪಡೆದರು ಅವರು ಕ್ರಿಮಿಯಾ ಯುದ್ಧದ ವಿಷಯದಲ್ಲಿ ಬರೆದ ಒಂದು ಚಿತ್ರವು ೮೭೩ ರೂಪಾಯಿಗೆ ಬಿಕರಿ ಆಯಿತು

ಯುವರಾಜರವರು ೧೭ ವರುಷ ತುಂಬುವಷ್ಟರೊಳಗೇ ಯೂರೋಪಿಯನ್ ರಾಷ್ಟ್ರಗಳಿಗೆ ಸೇರಿದ ಕೆಲವು ಮಹಾ ಪಟ್ಟಣಗಳಿಗೆ ಹೋಗಿ ಸಂಚಾರಮಾಡಿಕೊಂಡು ಬಂದರು ಆ ತರುವಾಯ ವಿಲಾಯಿತಿಯಲ್ಲಿರುವ ಪ್ರಸಿದ್ಧ ವಿದ್ಯಾಶಾಲೆಗಳಲ್ಲಿ ಸೇರಿ ವ್ಯಾಸಂಗಮಾಡಿದರು ಅವರಿಗೆ ಪುಸ್ತಕ ಜ್ಞಾನಕ್ಕಿಂತಲೂ ದೊಡ್ಡ ಮನುಷ್ಯರ ಮತ್ತು ಶಾಸ್ತ್ರಜ್ಞರ ಸಮಾಗಮ ಸಹವಾಸದಿಂದಲೂ ದೇಶಾಟನದಿಂದಲೂ ಬುದ್ಧಿಯೂ ವಿವೇಕವೂ ತುಂಬಾ ಪ್ರಚುರ ಹೊಂದಿದವು

ಪ್ರಿನ್ಸ್ ಆಲ್ಬರ್ಟ್ ಎಡ್ವರ್ಡ್ ಯವರು ೧೮೬೦ನೇ ಇಸವಿಯಲ್ಲಿ ಪರಿವಾರ ಸಮೇತ ವಿಲಾಯಿತಿಯಿಂದ ಹೊರಟು ಅಮೆರಿಕ ಖಂಡದ ಉತ್ತರ ಪಾರ್ಶ್ವದಲ್ಲಿರುವ ಇಂಗ್ಲಿಷ್ ರಾಜ್ಯಾಂಗವಾದ ಕ್ಯಾನಡಾ ಸೀಮೆಗೆ ದಯಮಾಡಿದರು ಅಲ್ಲಿ ಅವರಿಗೆ ನಡೆದ ಆತಿಥ್ಯಗಳು ಬಹು ಸಂಭ್ರಮಯುಕ್ತವಾಗಿದ್ದವು ಆ ಬಳಿಕ ಅವರು ಸಂಯುಕ್ತ ಸಂಸ್ಥಾನಗಳಲ್ಲಿ ಸಂಚಾರಮಾಡಿ ನಯಾಗರ ಎಂಬ ಮಹಾ ಜಲಪಾತವನ್ನು ನೋಡಿದ್ದಲ್ಲದೆ ಚಿಕಾಗೋ, ವಾಷಿಂಗ್ಟನ್ ಫಿಲಡೆಲ್ಫಿಯಾ, ನ್ಯೂಯಾರ್ಕ್, ಅಲ್ಬನಿ, ಬೋಸ್ಟನ್ ಮೊದಲಾದ ನಗರಗಳಲ್ಲಿ ಸಂಚರಿಸಿ, ಅಮೆರಿಕದವರ ಅತಿ ವಿಶೇಷವಾದ ಆತಿಥ್ಯವನ್ನು ಸ್ವೀಕರಿಸಿ ವಾಪಸು ವಿಲಾಯಿತಿಗೆ ಬಂದರು

೧೮೬೧ ನೇ ಇಸವಿಯ ಸೆಪ್ಟಂಬರ್ ತಿಂಗಳ ಕಡೇವಾರದಲ್ಲಿ ಯುವರಾಜರವರು ಡೆನ್ಮಾರ್ಕಿಗೆ ಪ್ರಯಾಣಮಾಡಿ ಅಲ್ಲಿನ ರಾಜಕುಮಾರಿಯಾದ ಅಲೆಗ್ಸಾಂಡ್ರಾಯವರನ್ನು ನೋಡಿ ಅವರನ್ನು ವರಿಸಿ ಮದುವೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡರು ಆದರೆ ಅದೇ ವರುಷದ ನವಂಬರಿನಲ್ಲಿ ಅವರು ತಮ್ಮ ತಂದೆಯಾದ ಪ್ರಿನ್ಸ್ ಆಲ್ಬರ್ಟ್ ಯವರನ್ನು ಕಳೆದುಕೊಂಡು ಬಹು ವಾದ ವ್ಯಸನದಲ್ಲಿ ಬಿದ್ದರು ಬಳಿಕ ಉತ್ತರ ಕ್ರಿಯಾದಿಗಳು ನಡಿಸಲ್ಪಟ್ಟವು ವ್ಯಸನದಲ್ಲಿ ಬಿದ್ದಿದ್ದ ಪ್ರಿನ್ಸ್ ಆಫ್ ವೇಲ್ಸ್ ಯವರಿಗೆ ಮನಸ್ಸಂತೋಷವನ್ನುಂಟುಮಾಡಬೇಕೆಂದು ಅವರನ್ನು ಪುಣ್ಯಭೂಮಿಯಾದ ಪಾಲಸ್ತೀನ್ ದೇಶಕ್ಕೆ ಕಳುಹಿಸಿದರು

ಮಾರನೇ ವರುಷ ಪ್ರಿನ್ಸ್ ಆಫ್ ವೇಲ್ಸ್ ರವರು ಪರಿವಾರ ಸಮೇತ ವಿಲಾಯಿತಿಯಿಂದ ಪುಣ್ಯಭೂಮಿಯನ್ನು ಕುರಿತು ತೆರಳಿದರು ಈಜಿಪ್ಟಿನಲ್ಲೂ ಅನೇಕ ಪ್ರಾಂತ್ಯಗಳನ್ನು ಪರಾಂಬರಿಸಿದರು ಪಾಲಸ್ತೀನ್ ಸೀಮೆಗೆ ಸೇರಿದ ಮುಖ್ಯ ಮುಖ್ಯ ಸ್ಥಳಗಳಿಗೆ ಹೋಗಿ ಅಲ್ಲಿ ಅದುವರೆಗೆ ಯಾರಿಗೂ ನೋಡಲು ಅಸಾಧ್ಯವಾಗಿದ್ದ ಅಪೂರ್ವ ಪ್ರದೇಶಗಳನ್ನೆಲ್ಲಾ ನೋಡಿ ಮನೋಲ್ಲಾಸ ಹೊಂದಿ ವಾಪಸು ಬಂದರು

೧೮೬೨ನೆ ಸೆಪ್ಟಂಬರ್ ತಾ ೯ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಯವರಿಗೆ ಪ್ರಿನ್ಸೆಸ್ ಅಲೆಕ್ಸಾಂಡ್ರಾಯವರನ್ನು ತಂದುಕೊಳ್ಳುವುದು ನಿಶ್ಚಯವಾಯಿತು ಆ ಬಳಿಕ ಉಭಯ ವಂಶಗಳು ಆಗಿಂದಾಗ ಪರಸ್ಪರ ಕಲೆಯುತ್ತಾ ಅನುರಾಗವನ್ನು ಬೆಳಸುತ್ತಾ ಬಂದರು ಈ ವಿವಾಹವು ೧೮೬೩ನೇ ಮಾರ್ಚ್ ತಾ ೧೦ರಲ್ಲಿ ವಿಲಾಯಿತಿಯೊಳಗೆ ಮಹಾ ವೈಭವಗಳೊಡನೆ ನೆರವೇರಿತು

ವಿವಾಹ ಬೆಳೆದನಂತರ ಪ್ರಿನ್ಸ್ ಎಡ್ವರ್ಡ್‌ಯವರು ರಾಜಕೀಯ ವಿಚಾರಗಳನ್ನು ತಿಳಿದುಕೊಳ್ಳುತ್ತಾ, ಹೌಸ್ ಆಫ್ ಲಾರ್ಡ್ಸ್, ಹೌಸ್ ಆಫ್ ಕಾಮನ್ಸ್ ಎಂಬೀ ಪಾರ್ಲಿಮೆಂಟ್ ಸಭೆ ಮನೆಗಳಿಗೆ ಹೋಗಿ ಅಲ್ಲಿ ನಡೆಯುವ ವಿಧಾನಗಳನ್ನೂ ಚರ್ಚೆಗಳನ್ನೂ ಗ್ರಹಿಸಿಕೊಳ್ಳುತ್ತಾ, ಪ್ರಜಾಬಾಹುಳ್ಯದಲ್ಲಿ ಬೆರೆಯುತ್ತಾ, ಅವರ ಅದ್ವಿತೀಯವಾದ ಪ್ರೀತಿ ಸನ್ಮಾನಗಳನ್ನು ಸಂಪಾದಿಸಿಕೊಳ್ಳುತ್ತಾ ಬಂದರು ಸಂಸಾರದಲ್ಲಿ ಅವರಿಗೆ ಸಕಲ ಸಂತೋಷಗಳೂ ಒದಗಿದವು ಆದರೆ ಅವರ ಹಿರಿಯ ಕುಮಾರರಾದ ಪ್ರಿನ್ಸ್ ಆಲ್ಬರ್ಟ್ ವಿಕ್ಟರ್ ಯವರು ಹಿಂದುಸ್ಥಾನಕ್ಕೆ ದಯಮಾಡಿ ವಾಪಸು ಹೋಗಿ ಕಾಯಿಲೆ ಸಂಭವಿಸಿ ಕಾಲವಾದ ಸಂಗತಿಯು ಮಾತಾ ಪಿತೃಗಳಿಗೂ ಸಾಂಬ್ರಾಜ್ಯದ ಸಕಲ ಪ್ರಜೆಗಳಿಗೂ ಅಪಾರವಾದ ದುಃಖವನ್ನುಂಟುಮಾಡಿತು ಈಗ ದೊರೆಯ ಪದವಿಗೆ ಬಂದಿರುವ ಪ್ರಿನ್ಸ್ ಜಾರ್ಜ್‌ಯವರು ೧೮೬೫ ನೇ ಇಸವಿಯಲ್ಲಿ ಜನಿಸಿದರು ಆ ತರುವಾಯ ಪ್ರಿನ್ಸ್ ಆಫ್ ವೇಲ್ಸ್ ಯವರು ಅನೇಕಾವರ್ತಿ ಯೂರೋಪಿಯನ್ ರಾಜ್ಯಗಳಿಗೂ ಈಜಿಪ್ಟ್ ಮುಂತಾದ ದೇಶಗಳಿಗೂ ಹೋಗಿ ದೇಶಾಟನೆ ಮಾಡಿಕೊಂಡು ಬಂದರು

ಯುವರಾಜರಿಗೆ ಅತ್ಯಲ್ಲಿ ವಿಷಮಶೀತ ಜ್ವರವು ಪ್ರಾಪ್ತವಾಗಿ ೩ ೪ ತಿಂಗಳ ತನಕ ಪ್ರಜೆಗಳ ಮನಸ್ಸನ್ನೆಲ್ಲಾ ಕೆಡಿಸಿ ಬಿಟ್ಟಿತು ದೇವರ ದಯದಿಂದ ಈ ವಿಪತ್ತು ನಿವಾರಣೆಯಾಯಿತು

ಹಿಂದುಸ್ಥಾನದಲ್ಲಿ ಸಂಚರಿಸಿದ್ದು

ವಿಕ್ಟೋರಿಯಾ ಮಹಾರಾಜ್ಞೀರವರು ಯುವರಾಜರವರನ್ನು ಹಿಂದುಸ್ಥಾನಕ್ಕೆ ಕಳುಹಿಸಿಕೊಡಬೇಕೆಂದು ೧೮೭೫ ನೇ ಮಾರ್ಚಿ ತಾ ೨೦ ರಲ್ಲಿ ಹುಕುಂ ದಯಪಾಲಿಸಿ ಅವರ ಪ್ರಯಾಣಕ್ಕೆ ಬೇಕಾದ ಸನ್ನಾಹಗಳನ್ನು ಮಾಡಿಸಿದರು ಪ್ರಿನ್ಸ್ ಆಫ್ ವೇಲ್ಸ್ ರವರು ಹಿಂದುಸ್ಥಾನದ ದೇಶೀಯ ಸಾಮಂತ ರಾಜರುಗಳಿಗೆ ಬಹುಮಾನ ಕೊಡುವ ಉದ್ದೇಶ ೬ ಲಕ್ಷ ರೂಪಾಯಿನ ಅಪೂರ್ವ ವಸ್ತುಗಳನ್ನು ತೆಗೆದುಕೊಂಡು ಬಂದರು ದೇಶೀಯ ಮಹಾರಾಜರೂ ರಾಜರೂ ಪ್ರಜೆಗಳೂ ಅವರನ್ನು ಎಷ್ಟು ಪ್ರೀತಿವಿಶ್ವಾಸಗಳಿಂದಲೂ ಮರ್ಯಾದೆಯಿಂದಲೂ ಅಟಿ ಪಾಸಯುಕ್ತವಾಗಿಯೂ ಸತ್ಕರಿಸಿದರೋ ಅದು ಈಗಲೂ ಅನೇಕರ ಜ್ಞಾಪಕದಲ್ಲಿರುತ್ತದೆ ರಾಜರುಗಳು ಯುವರಾಜರವರಿಗೆ ಸುಮಾರು ೭೫ ಲಕ್ಷ ರೂಪಾಯಿನ ಬಹುಮಾನಗಳನ್ನು ಒಪ್ಪಿಸಿದರು ಪ್ರಿನ್ಸ್ ಆಫ್ ವೇಲ್ಸ್ ರವರು ಹಿಂದುಸ್ಥಾನಕ್ಕೆ ದಯಮಾಡಿದ್ದರಿಂದ ಇಲ್ಲಿನ ಸಾಮಂತರಾಜರಿಗೂ ಪ್ರಜೆಗಳಿಗೂ ವಿಲಾಯಿತಿ ರಾಜ್ಯದ ಅರಸರುಗಳ ಮೇಲೆ ಅದ್ವಿತೀಯವಾದ ಪ್ರೀತಿಯೂ ರಾಜಭಕ್ತಿಯೂ ಹುಟ್ಟಿ ಬೆಳೆಯಲು ತುಂಬಾ ಸಹಾಯವಾಯಿತೆನ್ನುವುದಕ್ಕೆ ಸಂಶಯವಿಲ್ಲ.

ಅವರು ವಿಲಾಯಿತಿಯಲ್ಲಿ ನಡಿಸಿದ ಕಾರ್ಯಗಳು

ಪ್ರಿನ್ಸ್ ಆಫ್ ವೇಲ್ಸ್ ರವರು ಹಿಂದುಸ್ಥಾನದಿಂದ ವಾಪಸು ಹೋದ ಮೇಲೆ ವಿಲಾಯಿತಿಯಲ್ಲಿ ಅನೇಕ ಪಬ್ಲಿಕ್ ಕಾರ್ಯಗಳಲ್ಲಿ ಮುಂದಾಳುಗಳಾಗಿ ನಿಂತು ನಡೆಸುತ್ತಿದ್ದರು ಲಂಡನ್ ಪಟ್ಟಣದಲ್ಲಿ ಬಡ ಜನರಿಗೆ ಸುಖವಸತಿಗಳನ್ನು ಕಲ್ಪಿಸುವದಕ್ಕೆ ಅವರು ಬಹಳ ಪ್ರಯಾಸಪಟ್ಟರು ಕೆಲವು ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನಗಳನ್ನು ನಡಿಸುವುದರಲ್ಲಿ ಮುಖ್ಯರಾಗಿ ನಿಂತು ನಡಸಿ ಪ್ರಜಾಹಿತ ಚಿಂತಕರೆಂಬ ಯಶಸ್ಸನ್ನು ಸಂಪಾದಿಸಿಕೊಂಡರು. ಜ್ಯೂಬಿಲಿ ಉತ್ಸವಗಳಲ್ಲಿ ಅವರು ಸಹಭಾಗಿಗಳಾಗಿ ಬಹು ಉತ್ಸಾಹದ ಕಾರ್ಯಗಳನ್ನು ನಡಿಸಿದರು.

ಘಾತುಕನ ಕೈಯಿಂದ ವಿಮುಕ್ತರಾದದ್ದು

ಪ್ರಿನ್ಸ್ ಆಫ್ ವೇಲ್ಸ್ ರವರು ೧೯೦೦ ನೇ ಇಸವಿಯಲ್ಲಿ ಪತ್ನಿ ಸಮೇತ ಡೆನ್ಮಾರ್ಕ ರಾಜಕ್ಕೆ ಪ್ರಯಾಣ ಮಾಡುತ್ತಿದ್ದಾಗ ಬ್ರಸೆಲ್ಸ್ ಪಟ್ಟಣದಲ್ಲಿ ಅವರು ರೈಲ್ವೆ ಗಾಡಿಯೊಳಗೆ ಕುಳಿತಿರುವಾಗ್ಗೆ ಸಿಪಿಡೋ ಎಂಬುವ ಘಾತುಕನು ಅವರ ಗಾಡಿಯನ್ನು ಹತ್ತಿ ಅವರಿಗೆ ಗುರಿ ಕಟ್ಟಿ ಎರಡಾವರ್ತಿ ಪಿಸ್ತೂಲನ್ನು ಹೊಡೆದನು ದೇವರ ದಯದಿಂದ ಅವರವು ಗುಂಡುಗಳೂ ಯುವರಾಜರವರಿಗೆ ತಗಲದೆ ಗುರಿ ತಪ್ಪಿ ಹೋಯಿತು ಆ ಘಾತುಕನನ್ನು ಕೂಡಲೇ ದಸ್ತಗಿರಿ ಮಾಡಿದರು ... ದಕ್ಷಿಣ ಆಫ್ರಿಕದಲ್ಲಿ ಅನೇಕರು ಪ್ರಾಣ ಕಳೆದುಕೊಂಡದ್ದಕ್ಕೆ ಅವರ ... ಇವರನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟನು ಎಂದು ಹೇಳಿದನು ಈ ಘೋರ ಕೃತ್ಯವು ಪ್ರಪಂಚದ ಎಲ್ಲಾ ದೇಶಗಳಿಗೂ ತಪ್ಪಿ ಯುವರಾಜರವರ ಯೋಗಕ್ಷೇಮದ ವಿಷಯದಲ್ಲಿ ಅಪಾರವಾದ ಚಿಂತೆ ಮನಸ್ತಾಪವನ್ನೂ ಹುಟ್ಟಿಸಿದ್ದು ಅನೇಕರ ಜ್ಞಾಪಕದಲ್ಲಿದೆ

ಪಟ್ಟಾಭಿಷಿಕ್ತರಾದದ್ದು

ವಯೋವೃದ್ಧರೂ ಮಹಾ ಕೀರ್ತಿಪ್ರದರೂ ಆಗಿದ್ದ ವಿಕ್ಟೋರಿಯಾ ಮಹಾರಾಜ್ಞೀರವರು ೧೯೦೧ ನೇ ಜನವರಿ ತಾ ೨೨ ರಲ್ಲಿ ಕಾಲಗತಿಯನ್ನೈದಿದ ಬಳಿಕ ಪ್ರತಿಭಾವಾತ್ಸಲ್ಯಪೂರಿತರಾದ ಯುವರಾಜರವರು ಏಳನೇ ಎಡ್ವರ್ಡ್ ಎಂಬ ಹೆಸರನ್ನು ಇಟ್ಟುಕೊಂಡು ವಿಲಾಯಿತಿ ರಾಜ್ಯಾಧಿಕಾರವನ್ನು ವಹಿಸಿಕೊಂಡರು ಆ ಕಾಲದಲ್ಲಿ ಲಂಡನ್ ಪಟ್ಟಣದೊಳಗೆ ನಡೆದ ವಿವವಗಳು ಅಪೂರ್ವವಾಗಿದ್ದವು ಜರ್ಮನಿ, ಗ್ರೀಸ್ ಬೆಲ್ಜಿಯಂ, ಪೋರ್ಚುಗಲ್ ಮೊದಲಾದ ರಾಜ್ಯಗಳ ದೊರೆಗಳು ಹಾಜರಾಗಿದ್ದು, ಗತಿಸಿದ ಮಹಾರಾಜ್ಞೀರವರ ಕಳೇಬರವನ್ನು ಫ್ರಾಗ್‌ಮೋರ್ ಎಂಬ ಸ್ಥಳದಲ್ಲಿ ಇಟ್ಟು ಉತ್ತರಕ್ರಿಯಾದಿಗಳು ನಡೆದವು ಆ ದಿನ ಅಂದರೆ ಫೆಬ್ರವರಿ ತಾ ೪ ರಲ್ಲಿ ಹೊಸದಾಗಿ ಸಿಂಹಾಸನವನ್ನು ಹತ್ತಿದ ದೊರೆಯವರು ನನ್ನ ಪ್ರಜೆಗಳಿಗೆ, "ಸಮುದ್ರದ ಆಚೆ ಇರುವ ನನ್ನ ಪ್ರಜೆಗಳಿಗೆ" "ಹಿಂದುಸ್ಥಾನದಲ್ಲಿರುವ ಸಾಮಂತರಾಜರಿಗೂ ನನ್ನ ಪ್ರಜೆಗಳಿಗೂ ಎಂಬೀ ರೀತಿಯಾಗಿ ದಯಪಾಲಿಸಿದ ಮೂರು ಸರ್ವಶ್ರೇಷ್ಠವಾದ ಅಪ್ಪಣೆಗಳನ್ನು ಇನ್ನೂ ಅನೇಕರು ಮರೆತಿಲ್ಲ ಅಂದಿನಿಂದ ಸಕಲ ಪ್ರಜೆಗಳಲ್ಲೂ ದೊರೆಯವರ ವಿಷಯದಲ್ಲಿ ಬಹು ವಿಶೇಷವಾದ ಭಕ್ತಿಪ್ರೀತಿಗಳು ಉಂಟಾದವೆನ್ನುವುದಕ್ಕೆ ಸಂಶಯವಿಲ್ಲ ಎಡ್ವರ್ಡ್ ದೊರೆಯವರು ರಾಜಕೀಯ ವಿಷಯಗಳಲ್ಲಿ ಅಧಿ

ವರೆಗೆ ಪಂಪ್ರಮವಿಲ್ಲದೆ ಹೋದರೂ ಆ ಬಳಿಕ ಅವರು ರಾಜತಂತ್ರದಲ್ಲಿ ಅದ್ವಿತೀಯರೋ ಎಂಬಂತೆ ಕಾರ್ಯಗಳನ್ನು ನಡಿಸುತ್ತಾ ಬಂದರು ಮಂತ್ರಿಗಳೂ ಪ್ರಜೆಗಳೂ ಅವರಲ್ಲಿ ಸಂಪೂರ್ಣವಾದ ಭರವಸೆಯನ್ನು ಇಟ್ಟುಕೊಂಡರು ಇವರು ಸಿಂಹಾಸನವನ್ನು ಹತ್ತಿದ ಒಡನೆಯೇ ಬೋಅರ್ ಯುದ್ಧವು ಮುಕ್ತಾಯವಾಗುತ್ತಾ ಬಂದು ೧೯ ತಿಂಗಳ ಮೇಲೆ ವಿರೀನಿಗಿಂಗ್‌ನಲ್ಲಿ ಕರಾರು ನಡೆಯಿತು ಇದಲ್ಲಾಗಿ ದೊರೆಯವರು ನಡಿಸಿದ ಸಂಧಾನಗಳು ಬಹು ಸ್ತೋತ್ರಾರ್ಹವಾಗಿರುತ್ತವೆ ಬಳಿಕ ಚಕ್ರವರ್ತಿಯವರು ತಮ್ಮ ಕುಮಾರರಾದ ಯುವರಾಜರವರನ್ನು ಪತ್ನಿ ಪರಿವಾರ ಸಹಿತ ವಿಲಾಯಿತಿಯ ರಾಜ್ಯಾಂಗಗಳಿಗೆ ಕಳುಹಿಕೊಟ್ಟು ಪರಸ್ಪರಾನುರಾಗವನ್ನು ವೃದ್ಧಿ ಪಡಿಸಿದರು.

ಕಿರೀಟಧಾರಣೆಯು

೧೯೦೨ ನೇ ಇಸವಿಯ ವಿದ್ಯಮಾನಗಳು ಸಕಲ ಪ್ರಜೆಗಳಲ್ಲೂ ಇನ್ನೂ ಚನ್ನಾಗಿ ನಾಟಿಕೊಂಡಿರುತ್ತವೆ ಜೂನ್ ತಾ ೨೬ರಲ್ಲಿ ಚಕ್ರವರ್ತಿಯವರಿಗೆ ಲಂಡನ್‌ಪಟ್ಟಣದಲ್ಲಿ ಕಿರೀಟಧಾರಣೆಯೂ ಅದಕ್ಕೆ ಸಂಬಂಧಪಟ್ಟ ಉತ್ಸವಾದಿಗಳೂ ನಡೆಯುವಂತೆ ನಿಷ್ಕರ್ಷೆಯಾಯಿತು ೨೪ ನೇ ತಾ ದೊರೆಯವರಿಗೆ ಅಪಾರವಾದ ಕಾಯಿಲೆಯು ಪ್ರಾಪ್ತವಾದದ್ದೂ, ಯಶೋವಂತರಾದ ವೈದ್ಯರು ಆ ಹುಣ್ಣಿಗೆ ಶಸ್ತ್ರಪ್ರಯೋಗಮಾಡಿ ಗಂಡಾಂತರವನ್ನು ನಿವಾರಣೆ ಮಾಡಿದ್ದೂ ಯಾರೂ ಮರೆತಿಲ್ಲ ದೇವರೇ ತನ್ನ ಸಂಪೂರ್ಣವಾದ ದಯಾರಸವನ್ನು ತೋರಿ ಅವರ ಆಯುಸ್ಸನ್ನು ಕಾಪಾಡಿದನೆನ್ನುವುದಕ್ಕೆ ಸಂಶಯವಿಲ್ಲ ಅವರಿಗೆ ವಾಸಿಯಾಗುವ ತನಕ ಬ್ರಿಟಿಷ್ ಸಾಮ್ರಾಜ್ಯದ ಸಕಲ ಪ್ರಜೆಗಳೂ ಎಷ್ಟು ಸಂತಾಪ ಪಡುತ್ತಿದ್ದರೋ ಆರೋಗ್ಯ ವಾಗಲೆಂದು ಎಷ್ಟಾಗಿ ಪ್ರಾರ್ಥಿಸುತ್ತಿದ್ದರೋ ವಿವರಿಸತೀರದಾಗಿದೆ

ಕಿರೀಟ ಧಾರಣೆಯೂ ಉತ್ಸವಾದಿಗಳೂ ಆದೇ ಆಗಸ್ಟ ತಾ ೯ರಲ್ಲಿ ಕ್ಷೇಮವಾಗಿಯೂ ಅಟ್ಟಹಾಸವಾಗಿಯೂ ನೆರವೇರಿತು ಈ ಉತ್ಸವಗಳು ಸಕಲ ವಿಗ್ರಹಗಳ ಪ್ರಜೆಗಳೂ ಸಹಭಾಗಿಗಳಾಗಿ ಆನಂದಪಟ್ಟರು

ಬಳಿಕ ದೊರೆಯವರು ಪರರಾಜ್ಯಗಳಲ್ಲಿ ಆಗ ದಾಗ ಸಂಚಾರ ಮಾಡುತ್ತಾ ಫ್ರಾನ್ಸ್ ಜರ್ಮನಿ ರಷ್ಯಾ ರಾಜ್ಯಗಳ ರಾಜಕುಟುಂಬದ ಕೂಡ ಕಲೆತು ಪ್ರಸಂಗದಲ್ಲಿ ಇನ್ನು ಮುಂದೆ ಯುದ್ಧ ಸಂಭವವು ಪ್ರಾಪ್ತವಾಗದ ತೆರದ ಸಖ್ಯವೂ ಸೌಜನ್ಯವೂ ಆದ ಸಲಹೆಗಳನ್ನು ಕೊಡುತ್ತಾ ರಾಜ ರಾಜ್ಯಗಳ ಗಿರಬಹುದಾದ ಅಸಮಾಧಾನವನ್ನು ನಿವಾರಣ ಮಾಡುತ್ತಾ ಶಾಂತಿಪ್ರಿಯರೆಂಬ ಅತಿ ಶ್ರೇಯವಾದ ಬಿರುದನ್ನು ಸಂಪಾದಿಸಿಕೊಂಡರು ಇವರ ಅರ್ಧಾಂಗಿನಿಯಾದ ಅಲೆಗ್ಸಾಂಡ್ರಾ ಮಹಾರಾಜ್ಞೀಯವರು ಸಾಮಾನ್ಯರಳಷ್ಟು ಎಲ್ಲಾಪರ ಅವರು ಮಾಡುವ ಕಾರ್ಯಗಳಲ್ಲಿ ಅವರಿಗೆ ಸಹಾಯವಾಗುತ್ತಾ, ಸಕಲ ಸ್ತ್ರೀಮಂಡಲಿಯಲ್ಲೂ ಪರಮ ಪವಿತ್ರವಾದ ಕೀರ್ತಿಯನ್ನು ಪಡೆದುಕೊಂಡರು ಆಕೆಯವರು ಬಡವರ ವಿಷಯದಲ್ಲಿ ಪಡುತ್ತಿರುವ ಅನುತಾಪವೂ ಅವರ ಸಂತೋಷಕ್ಕಾಗಿ ಮಾಡುತ್ತಿದ್ದ ಕಾರ್ಯಗಳೂ ವಿವರಿಸಲಶಕ್ಯವಾಗಿದೆ ಇಂಥ ಶಿಲಶಸ್ವಾಮಿನಿಯಾದ ಕನ್ಯಾಮಣಿಯವರಿಗೆ ಅಪರವಯಸಿನಲ್ಲಿ ಪತಿವಿಯೋಗ ದುಃಖವು ಪ್ರಾಪ್ತವಾದುದಕ್ಕಾಗಿ ಸಕಲ ಪ್ರಜೆಗಳೂ ಅಪಾರವಾಗಿ ಮರುಗುತ್ತಿದ್ದಾರೆ

ಏಳನೇ ಎಡ್ವರ್ಡ್ ಚಕ್ರವರ್ತಿ ಸಾರ್ವಭೌಮರವರ ಮರಣವು.

ಅವರ ಕಾಯಿಲೆಯ ವೃತ್ತಾಂತವು.

ತಂತಿ ವರ್ತಮಾನಗಳ ಸಾರವು

ಲಂಡನ್, ಮೇ। ತಾ ೫ನೇ ಗುರುವಾರ —ಎಡ್ವರ್ಡ ದೊರೆಯವರಿಗೆ ಕಠಿಣತರವಾದ ಶ್ವಾಸ ರೋಗವು ಪ್ರಾಪ್ತವಾಗಿ ತಮ್ಮ ಕೊಠಡಿಯಲ್ಲೇ ಇರುತ್ತಾರೆ. ಅವರ ದೇಹಸ್ಥಿತಿಯ ವಿಷಯದಲ್ಲಿ ಮೂರು ಮಂದಿ ಡಾಕ್ಟರುಗಳು ಈ ದಿವಸ ಸಾಯಂಕಾಲ ಪ್ರಕಟಿಸಿದ್ದೇನೆಂದರೆ,—"ದೊರೆಯವರಿಗೆ ಶ್ವಾಸರೋಗ ಪ್ರಾಪ್ತವಾಗಿದೆ ಅವರ ಸ್ಥಿತಿಯು ಸ್ವಲ್ಪ ಕಳವಳವನ್ನುಂಟುಮಾಡುವುದು"

ದೇಶಾಟನವನ್ನು ತೀರಿಸಿಕೊಂಡು ಬಂದ ಮಹಾರಾಜ್ಞೀಯವರೂ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರೂ ಈ ದಿನ ಚಕ್ರವರ್ತಿಯವರನ್ನು ಹೋಗಿ ನೋಡಿದರು

ಚಕ್ರವರ್ತಿಯವರಿಗೆ ಬ್ಯಿಯಾರಿಟ್ಸ್‌ನಲ್ಲಿ ಪ್ರಾಪ್ತವಾದ ಶೀತವು ನಿವಾರಣೆಯಾಗಲಿಲ್ಲ ಎರಡು ದಿನದಿಂದ ಅವರು ತಮ್ಮ ಕೊಠಡಿಯನ್ನು ಬಿಟ್ಟು ಹೊರಡಲಿಲ್ಲ. ಆದರೂ ಅವರು ಬರುವವರಿಗೆ ಭೇಟಿ ಕೊಡುತ್ತಾ ಸರ್ಕಾರಿ ಕೆಲಸಗಳನ್ನೂ ನಡಿಸುತ್ತಾ ಇದ್ದಾರೆ

ಲಂಡನ್ ಮೇ॥ ತಾ ೬ನೇ ಶುಕ್ರವಾರ —ದೊರೆಯವರ ಕಾಯಿಲೆಯು ಲಂಡನ ಪಟ್ಟಣದಲ್ಲೆಲ್ಲಾ ಕಳವಳವನ್ನುಂಟುಮಾಡಿದೆ. ಮಹಾರಾಜ್ಞೀಯವರು ದೇಶಾಟನವನ್ನು ಮುಗಿಸಿಕೊಂಡು ವಾಪಸು ಬಂದಾಗ್ಗೆ ದೊರೆಯವರು ಆಕೆಯವರನ್ನು ಎದುರುಗೊಳ್ಳಲು ಹೋಗದೆ ಇದ್ದದ್ದು ಪ್ರಜೆಗಳಲ್ಲಿ ಗಾಬರಿಯನ್ನುಂಟುಮಾಡಿತು.

ನೆನ್ನೆ ರಾತ್ರಿ ಸ್ವಲ್ಪ ಹೊತ್ತಾದ ಮೇಲೆ ಅವರ ದೇಹಸ್ಥಿತಿಯ ವಿಷಯದಲ್ಲಿ ಡಾಕ್ಟರುಗಳು ಪ್ರಕಟಿಸಿದ ಸುದ್ದಿಯು ಅವರು ತುಹಾರಾಗಿದಾರೆಂದೂ ಸುಖನಿಂದ್ರೆ ವಿಶ್ರಾಂತಿ ಹೊಂದುತ್ತಿದ್ದಾರೆಂದೂ ತಿಳಿಸಿತು.

ಸಾರ್ವಭೌಮರವರ ದೇಹಸ್ಥಿತಿಯು ಬಹಳ ಗಾಬರಿಯನ್ನುಂಟುಮಾಡುತ್ತಿದೆ ಎಂದು ಡಾಕ್ಟರುಗಳು ತಿಳಿಸಿದರು. ರಾತ್ರಿ ಅವರು ಸುಮಾರಾಗಿ ನೆಮ್ಮದಿಯಾಗಿದ್ದರು ರೋಗದ ಚಿನ್ಹೆಗಳು ಕಡಮೆಯಾಗಲಿಲ್ಲ.

ಚಕ್ರವರ್ತಿಯವರು ನೆನ್ನೆ ತಮ್ಮ ಸ್ನೇಹಿತರ ಸಂಗಡ ಮಾತನಾಡುತ್ತಾ ಒಂದು ವಾಟಲ ಶಾಲೆಯಲ್ಲಿ ತಮಗೆ ಛಳಿ ಹಿಡಿಯಿತೆಂದೂ, ಬ್ಯಿಯಾರಿಟ್ಸಿನಲ್ಲಿ ಪ್ರಾಪ್ತವಾದ ಉಬ್ಬಸರೋಗವು ಮತ್ತೆ ಕಾಣಿಸಿಕೊಂಡಿದೆ ಎಂದೂ ಅಪ್ಪಣೆ ಕೊಡಿಸಿದರು.

ಡಾಕ್ಟರುಗಳು ಪರೀಕ್ಷೆಮಾಡುವಲ್ಲಿ ಚಕ್ರವರ್ತಿಯವರ ಶ್ವಾಸಕೋಶದ ನಾಳಗಳು ಸರಿಯಾದ ಸ್ಥಿತಿಯಲ್ಲಿ ಇರಲಿಲ್ಲ. ಆದ್ದರಿಂದಲೇ ಅವರು ಗಾಬರಿಯಾಗಿದೆ ಎಂದು ಹೇಳಿದರು.

ಬಕಿಂಗ್ಹಾಂ ಎಂಬ ರಾಜಭವನದ ಆಜೂಬಾಜುಗಳಲ್ಲಿ ಸುತ್ತಮುತ್ತಲೂ ಲಕ್ಷಾಂತರ ಪ್ರಜೆಗಳು ಕಳವಳಪಡುತ್ತಾ ದೊರೆಯವರ ಆರೋಗ್ಯಸ್ಥಿತಿಯನ್ನು ಕೇಳಬೇಕೆಂದು ಕಾದಿದ್ದರು. ಅನೇಕಾನೇಕ ದೊಡ್ಡಮನುಷ್ಯರು ಆ ಭವನದ ಒಳಪಾರ್ಶ್ವದಲ್ಲಿ ಆತುರರಾಗಿ ಸೇರಿದ್ದರು

ಕಷ್ಟಸ್ಥಿತಿಯು.

ಈ ದಿನ ಸಾಯಂಕಾಲ ೬ ಗಂಟೆಗೆ ಡಾಕ್ಟರುಗಳು ಪ್ರಕಟಿಸಿದ ಸುದ್ದಿಯಲಿ ದೊರೆಯವರ ದೇಹಸ್ಥಿತಿಯು ಚನ್ನಾಗಿಲ್ಲವೆಂದೂ, ಕಡೇ ಗಳಿಗೆಯು ಪ್ರಾಪ್ತವಾಗುವಂತಿದೆ ಎಂದೂ ಗೊತ್ತಾಯಿತು ರಾಜವರ್ಗಕ್ಕೆ ಸೇರಿದವರಿಗೆಲ್ಲಾ ವರ್ತಮಾನ ಕೊಟ್ಟು, ಅರಮನೆಗೆ ಬರಮಾಡಿಕೊಂಡರು ರಾತ್ರಿ ೯॥ ಗಂಟೆಯಲ್ಲಿ ಚಕ್ರವರ್ತಿಯವರ ದೇಹಸ್ಥಿತಿಯು ಬಹಳ ಗಾಬರಿಯನ್ನುಂಟುಮಾಡಿತು ಅವರು ಬದುಕುತ್ತಾರೆಂಬ ಭರವಸೆ ತಪ್ಪಿಹೋಯಿತು

ಚಕ್ರವರ್ತಿಯವರ ಮರಣವು

ಲಂಡನ್, ಮೇ ತಾ ೭ನೇ ಶನಿವಾರ —ನಾಲ್ಕು ಜನ ಡಾಕ್ಟರುಗಳಿಂದ ರುಜುಮಾಡಲ್ಪಟ್ಟು ಪ್ರಕಟವಾದ ಸುದ್ದಿ ಏನೆಂದರೆ ಚಕ್ರವರ್ತಿ ಸಾರ್ವಭೌಮರಾದ ಎಡ್ವರ್ಡ ಪ್ರಭುಗಳು ನೆನ್ನೆ ರಾತ್ರಿ ೧೧—೪೫ಕ್ಕೆ ನೆಮ್ಮದಿಯಾಗಿ ದೀರ್ಘನಿದ್ರೆಯನ್ನು ಮಾಡಿದರು ಆಗ್ಗೆ ರಾಜವರ್ಗದವರೆಲ್ಲಾ ಅವರ ಹಾಸಿಗೆಯ ಬಳಿ ಹಾಜರಾಗಿದ್ದರು

ಸಾಯಂಕಾಲವೆಲ್ಲಾ ದೊರೆಯವರಿಗೆ ಜ್ಞಾನವೇ ಇರಲಿಲ್ಲ ಆದರೆ ರಾತ್ರಿ ೯ರಿಂದ ೧೦ ಗಂಟೆ ವರೆಗೆ ಅವರಿಗೆ ಸ್ವಲ್ಪ ಸ್ಮೃತಿಯುಂಟಾಯಿತು ಆ ಬಳಿಕ ಸಂಪೂರ್ಣವಾಗಿ ಜ್ಞಾನ ತಪ್ಪಿ ಹಾಗೇ ಕಾಲಗತಿಯನ್ನು ಹೊಂದಿದರು.

ರಾತ್ರಿ ೧೨। ಗಂಟೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಭವನವನ್ನು ಬಿಟ್ಟು ಹೊರಕ್ಕೆ ಬಂದಾಗಲೇ ಮರಣವಾರ್ತೆಯು ಹೊರಗೆ ಮಳೆಯಲ್ಲೇ ನಿಂತಿದ್ದ ಪ್ರಜಾಕೋಟಿಗಳಿಗೆ ತಿಳಿದು ಬಂತು

ಅವಸಾನಕಾಲದಲ್ಲಿ ರಾಜವರ್ಗದವರೆಲ್ಲಾ ದೊರೆಯವರ ಬಳಿ ಹಾಜರಾಗಿದ್ದರು ಅವರ ಸಹೋದರರಾದ ಡ್ಯೂಕ್ ಆಫ್ ಕಾನಾಟ್ ಯವರು ಮಾತ್ರ ಆಫ್ರಿಕದ ಬಳಿ ಸೂಯಸ್ ಕಡಲು ಕಾಲುವೆಯ ಸಮೀಪದಲ್ಲಿದ್ದು ಹಿಂತಿರುಗಿ ಪ್ರಯಾಣ ಮಾಡಿಕೊಂಡು ಬರುತ್ತಿದ್ದಾರೆ ರಾಜ್ಯಭಾರ ಕಾರ್ಯಗಳನ್ನು ವಹಿಸಿಕೊಂಡಿರುವ ಪ್ರಧಾನ ಮಂತ್ರಿಯೇ ಮೊದಲಾದ ಅಧಿಕಾರಿಗಳು ದೇಶಾಂತರ ಸಂಚಾರ ಮಾಡುತ್ತಿದ್ದು ಆತುರದಿಂದ ವಾಪಸು ಬರುತ್ತಿರುವರು

ಸುದ್ದಿಯನ್ನು ಪ್ರಕಟಮಾಡಿದು

ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಲಂಡನ್ ಪಟ್ಟಣದ ಪುರಮುಖ್ಯರಾದ ಲಾರ್ಡ ಮೇಯರವರಿಗೆ 'ನಮ್ಮ ಪ್ರಿಯ ತಂದೆಯವರು ೧೧-೪೫ ಗಂಟೆಯಲ್ಲಿ ಕಾಲಗತಿಯನ್ನೈದಿದರೆಂದು ತಿಳಿಸಲು ಬಹಳವಾಗಿ ದುಃಖಿಸುತ್ತೇನೆ ಎಂಬದಾಗಿ ತಂತಿವರ್ತಮಾನವನ್ನು ಕೊಟ್ಟರು ಇದಕ್ಕೆ ಲಾರ್ಡ ಮೇಯರವರು ಪ್ರಿನ್ಸ್ ಆಫ್ ವೇಲ್ಸ್‌ರವರಿಗೂ ಅಲೆಕ್ಸಾಂಡ್ರಾ ಮಹಾರಾಜ್ಞೀಯವರಿಗೂ ಕರುಣಾಸಮುದ್ರನಾದ ದೇವರು ನಿಮ್ಮಗಳಿಗೂ ನಿಮ್ಮ ರಕ್ತಸಂಬಂಧಿಗಳಿಗೂ ಉಂಟಾಗಿರುವ ಅಪಾರವಾದ ದುಃಖವನ್ನು ನಿವಾರಣೆಮಾಡಲಿ ಈ ಬಾಗದಲ್ಲಿ ಸರ್ವಜನಾಂಗವೂ ನಿಮಗಾಗಿ ಪ್ರಾರ್ಥಿಸುತ್ತಿದೆ ನಿಮ್ಮ ದುಃಖದಲ್ಲಿ ನಾವೆಲ್ಲಾ ಸಹಭಾಗಿಗಳಾಗಿರುತ್ತೇವೆ ' ಎಂಬದಾಗಿ ಜವಾಬು ಕಳುಹಿಸಿದರು

ಕಾಯಿಲೆಯ ವೃತ್ತಾಂತವು

ನೆನ್ನೆ ಬೆಳಗ್ಗೆ ದೊರೆಯವರು ಹಾಸಿಗೆಯ ಮೇಲೆ ಮಲಗಿರುವುದಕ್ಕೆ ಒಪ್ಪದೆ ತಮ್ಮ ಪ್ರೈವೆಟ ಸೆಕ್ರಿಟರಿಯವರ ಕೂಡ ರಾಜಕೀಯ ಕೆಲಸಗಳನ್ನು ನಡಿಸುತ್ತಿದ್ದರು ಕಾಯಿಲೆಗಾಗಿ ಅವರು ಸ್ವಲ್ಪವೂ ಅಧೈರ್ಯಪಟ್ಟುಕೊಳ್ಳಲಿಲ್ಲ ಕೆಮ್ಮುತ್ತಲೇ ಮಾತಾಡುತ್ತಿದ್ದರು ಮಧ್ಯಾಹ್ನ ಉಬ್ಬಸವು ಹೆಚ್ಚಿತು ಸಾಯಂಕಾಲವಾಗುವಾಗ್ಗೆ ಶ್ವಾಸವಾಡುವುದು ಕಷ್ಟವಾಗಿ ದೊರೆಯವರಿಗೆ ಜ್ಞಾನತಪ್ಪಿತು ಎಂದು 'ಟೈಂಸ್' ಪತ್ರಿಕೆಯು ಹೇಳುವುದು

ಅತ್ತಲಾಗಿ 'ಡೆಯಿಲಿ ಎಕ್ಸ್‌ಪ್ರೆಸ್' ಎಂಬ ಪತ್ರಿಕೆಯು ತಿಳಿಸುವುದೇನೆಂದರೆ, ಚಕ್ರವರ್ತಿಯವರಿಗೆ ಮುಖ್ಯವಾಗಿ ಉಬ್ಬಸ ರೋಗವೇ ಉಲ್ಬಣವಾಯಿತು ಗಂಟಲಿನಲ್ಲಿ ಏನಾದರೂ ಆಟಂಕ ಉಂಟಾಗಿದೆಯೋ ಎಂದು ಡಾಕ್ಟರಗಳು ಪರೀಕ್ಷೆಮಾಡಿ ನೋಡಿದ್ದರಲ್ಲಿ ಶಸ್ತ್ರಚಿಕಿತ್ಸೆ ಮಾಡಬೇಕಾದೀತೆಂಬ ಅನುಮಾನ ಕಂಡುಬಂತು ಥಾಂಸನ ಎಂಬ ಪಂಡಿತರನ್ನು ಕರೆಸಿದರು ಅವರು ಪರೀಕ್ಷೆ ಮಾಡಿ ಶಸ್ತ್ರಚಿಕಿತ್ಸೆ ಅವಶ್ಯವಿಲ್ಲವೆಂದು ಹೇಳಿಬಿಟ್ಟರು ಆಗಾಗ್ಗೆ ಜ್ಞಾನ ತಪ್ಪಿ ಮೂರ್ಛೆ ಬರುತ್ತಿತ್ತು ಆಗ ಸಮೀಪದಲ್ಲಿದ್ದವರಿಗೆಲ್ಲಾ ಅಪಾರವಾದ ಗಾಬರಿಯುಂಟಾಯಿತು ಇತರವೇಳೆ ಚಕ್ರವರ್ತಿಯವರು ಜ್ಞಾನವಾಗಿದ್ದು ಸರ್ಕಾರಿ ಕೆಲಸವನ್ನು ಮಾಡಬೇಕೆಂದು ಹೋಗುತ್ತಿದ್ದರು. ಮಧ್ಯೆ ಅವರು ಜಪಾನ್ ರಾಜಕುಮಾರರಾದ ಪ್ರಿನ್ಸ್ ಫೂಸಾಮಿಯವರ ಆತಿಥ್ಯ ವಿಷಯದಲ್ಲೂ ಜಪಾನ್ ಪ್ರದರ್ಶನದ ಏರ್ಪಾಡುಗಳ ವಿಷಯದಲ್ಲೂ ತನಿಖೆ ಮಾಡಿ, ಕೆಲವು ಹೊಸ ಏರ್ಪಾಡುಗಳನ್ನು ಸೂಚಿಸಿ ಆ ರೀತಿ ನಡಿಸಬೇಕೆಂದು ಆಜ್ಞೆಮಾಡಿದರು

ಸಾಯಂಕಾಲವಾಗುತ್ತಾ, ಕೆಮ್ಮಲು ವಿರಾಮ ಕೊಡದೆಹೋಯಿತು ಉಸಿರು ಬಿಟ್ಟು ಸೇದಿಕೊಳ್ಳುವುದೂ ಕಷ್ಟವಾಯಿತು ಹೃದಯದ ಎಡಪಾರ್ಶ್ವವು ಕೆಲಸಮಾಡದೆ ನಿಂತುಹೋಯಿತು ಆಕ್ಸಿಜನ ಎಂಬ ಪ್ರಾಣವಾಯುವನ್ನು ಯಂತ್ರಗಳ ಮೂಲಕ ಹೊಯಿದರೂ ಸಫಲವಾಗಲಿಲ್ಲ

ಈ ದಿವಸ ದುಃಖಭರಿತವಾದದ್ದು ಸಮಸ್ತ ಕೆಲಸಕಾರ್ಯಗಳೂ ಅಂಗಡಿ ಮುಂಗಟ್ಟುಗಳೂ ಸಂತೋಷಕೂಟಗಳೂ ರಾಜಕೀಯ ಕೆಲಸಗಳೂ ಮುಕ್ತಿಯಲ್ಲಿ ನಿಲ್ಲಿಸಲ್ಪಟ್ಟುವು ಜಡಿಗಳು ಕೋರ್ಟುಗಳನ್ನು ಮುಚ್ಚಿದರು ನಾಟಕಶಾಲೆಗಳು ನಿಂತುಹೋದವು ಅಂಗಡಿಗಳ ಮೇಜಾಗದಲ್ಲಿ ದುಃಖಸೂಚಕವಾದ ಕುರುಹುಗಳನ್ನು ಪ್ರಕಟಿಸಿದಾರೆ. ಸಕಲ ಪ್ರಜೆಗಳೂ ಕರಿಯುಡುವು ಬಟ್ಟೆಗಳನ್ನು ಧರಿಸಿಕೊಂಡು ತಮ್ಮ ಅಂತರ್ಯ ವ್ಯಸನವನ್ನು ಪ್ರಕಾಶಪಡಿಸುತ್ತಾರೆ ಸರ್ಕಾರಿ ಬಾವುಟಗಳನ್ನು ಎಲ್ಲೆಲ್ಲೂ ಅರೆಮಾಸಿ ಇಳಿಸಿಬಿಟ್ಟರು ಕಸರತು ಆಟಪಾಟ ವಿನೋದಾದಿಗಳೆಲ್ಲಾ ನಿಲ್ಲಿಸಲ್ಪಟ್ಟವು

ಮಹಾರಾಜ್ಞೀಯವರ ವ್ಯಥೆಯು ಪರಿತಾಪಕರವಾದದ್ದಾಗಿದೆ ಬೆಳಗಿನ ಜಾಮದಿಂದಲೂ ಆಕೆಯವರು ಅರಮನೆ ಕೊಠಡಿಯ ಒಳಕ್ಕೂ ಹೊರಕ್ಕೂ ತಿರುಗಾಡುವುದೇ ಆಗಿತ್ತು ಎಷ್ಟು ಸಮಾಧಾನಪಡಿಸಿದರೂ ಆಕೆಯವರ ದುಃಖವು ಶಮನವಾಗದೆ ಇದೆ

ರಾಜಮನೆತನಕ್ಕೆ ಸೇರಿದವರು ಈ ದಿನ ಮಧ್ಯಾಹ್ನ ಮರಣದ ಕೊಠಡಿಯೊಳಕ್ಕೆ ಹೋಗಿ ಹಾಸಿಗೆಯ ಮೇಲೆ ಮಲಗಿದ್ದ ಲೇಟ್ ಚಕ್ರವರ್ತಿಯವರ ಕಳೇಬರವನ್ನು ನೋಡಿ ಬಂದರು ಕಳೇಬರದ ಮುಖವು ಸ್ವಲ್ಪವೂ ವ್ಯತ್ಯಾಸ ಹೊಂದದೆ ಶಾಂತವಾಗಿಯೂ ಗಂಭೀರವಾಗಿಯೂ ಕಾಣುತ್ತಿದೆ

ಶವ ಸಂಸ್ಕಾರವು ಫ್ರಾಗ್‌ಮೋರ್‌ನಲ್ಲಿ ತಾ ೨೧ ಕ್ಕೆ ನಡೆಯಬಹುದೆಂದು ಕಾಣುತ್ತದೆ ಆಗ್ಗೆ ಜರ್ಮನಿ, ಪೋರ್ಚುಗಲ್, ಫ್ರಾನ್ಸ್, ಬೆಲಿಯಂ, ನಾರ್ವೆ, ಈ ಮೊದಲಾದ ರಾಜ್ಯಗಳ ದೊರೆಗಳು ಲಂಡನ್ ಪಟ್ಟಣಕ್ಕೆ ಬರುವರೆಂಬ ಸುದ್ದಿ ಇದೆ

ಯೂರೋಪ್ ಖಂಡದ ಪ್ರತಿ ಒಂದು ರಾಜಧಾನಿಯಿಂದಲೂ ಅಮೇರಿಕದಿಂದಲೂ ಇಂಗ್ಲೀಷ್ ರಾಜ್ಯಭಾರದ ಎಲ್ಲಾ ಸ್ವಾಸ್ಥ್ಯಗಳಿಂದಲೂ ವಿಶೇಷವಾಗಿ ಜರ್ಮನಿಯಿಂದಲೂ ಸಂತಾಪ ಸೂಚಕವಾದ ವರ್ತಮಾನಗಳು ರಾಜಭವನವನ್ನು ತಲಪುತ್ತಲಿವೆ.

ಇಂಡಿಯಾ ದೇಶದ ವೃತ್ತಾಂತಗಳು.

ರಾಜಪುಟಾನಾ ಮಾಲ್ವಾ ರೈಲ್ವೆಯ ಮೇಲಿರುವ ಛಾಲಿ ಎಂಬ ಪಟ್ಟಣದಲ್ಲಿ ನಾಲ್ಕು ಜನ ಕೂಲಿಯವರು ಒಂದು ಗಾಡಿಗೆ ಸಾಮಾನನ್ನು ಭರ್ತಿಮಾಡುತ್ತಿದ್ದಾಗ ರೈಲು ಬಂದು ಆ ನಾಲ್ಕು ಜನಗಳೂ ಮೃತಪಟ್ಟರು.

* * *

ಪೂನಾ ಪಟ್ಟಣದಲ್ಲಿ ಪ್ರಕಟವಾಗುವ 'ವಂದೇಮಾತರಂ' ಎಂಬ ದೇಶೀಯ ಪತ್ರಿಕೆಯ ಎಡಿಟರಾದ ಹರಿ ರಘುನಾಥ ಭಗವತ ಎಂಬವರು ರಾಜದ್ರೋಹಕರವಾದ ವರ್ತಮಾನವನ್ನು ಬರೆದರೆಂಬದಾಗಿ ಅವರನ್ನು ಕಳೆದ ಭಾನುವಾರ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ

* * *

ಲೀಂಬ್ಡಿ ಸಂಸ್ಥಾನದ ಯುವರಾಜರಿಗೆ ಇದಾರ್ ಮಹಾರಾಜರವರಿಗೆ ಸಂಬಂಧಪಟ್ಟ ಒಬ್ಬ ರಾಜ ಕುಮಾರಿಯನ್ನು ಕೊಟ್ಟೂ, ಧ್ರಾಂಗಂಧ ಸಂಸ್ಥಾನದ ಯುವರಾಜರಿಗೆ ರಾಜಪುಟಾನದ ಒಬ್ಬ ರಾಜ ಕುಮಾರಿಯನ್ನು ಕೊಟ್ಟೂ ವಿವಾಹ ನಡೆಯುವುದಾಗಿ ತಿಳಿದುಬಂದಿದೆ

* * *

ಕಲ್ಕತ್ತಾ ಪಟ್ಟಣದ ಹತ್ತಿರ ಇರುವ ವೈದ್ಯವತಿ ಎಂಬಲ್ಲಿ ಇದ್ದ ಡಾಲ್ ಹೌಸಿ ನಾರಿನ ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು ಸುಮಾರು ೧೬,೦೦೦ ಮಣದಷ್ಟು ನಾರು ಸುಟ್ಟುಹೋಯಿತು. ಆ ಕಾರ್ಖಾನೆಯವರು ಇನ್‌ಷೂರ್ ಮಾಡಿದ್ದದ್ದರಿಂದ ಇವರ ನಷ್ಟವೆಲ್ಲಾ ಕೊಡಲ್ಪಟ್ಟಿತು

* * *

ನಾಸಿಕದ ಫಿತೂರಿ ಮೊಕದ್ದಮೆಯಲ್ಲಿ ಕಳೆದ ವಾರವೂ ಸಾಕ್ಷಿಗಳ ವಿಚಾರಣೆಯು ಮಾಡಲ್ಪಟ್ಟಿತು ಇದುವರೆಗೆ ಸುಮಾರು ೧೭೬ ಜನ ಸಾಕ್ಷಿಗಳು ಸಾಕ್ಷಿ ಹೇಳುತ್ತು ಕೊಟ್ಟಿದಾರೆ ಮತ್ತು ೭ ಜನ ಅಪರಾಧಿಗಳು ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದಾರೆ ಈ ವಾರ ಈ ಮೊಕದ್ದಮೆಯು ತೀರ್ಮಾನಹೊಂದುವದು.

* * *

ಇಂದೋರಿನ ಹತ್ತಿ ಮಾರ್ಕೆಟ್ಟಿಗೆ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ರೂಪಾಯಿನಷ್ಟು ಹತ್ತಿಯು ಸುಟ್ಟುಹೋಯಿತೆಂತಲೂ ನಷ್ಟವು ಸಂಪೂರ್ಣವಾಗಿ ಇನ್‌ಷೂರೆನ್ಸ್ ಕಂಪನಿಯವರಿಂದ ಕೊಡಲ್ಪಟ್ಟಿತೆಂತಲೂ ಬೆಂಕಿಗೆ ಕಾರಣವು ಇನ್ನೂ ಗೊತ್ತಾಗಲಿಲ್ಲವೆಂತಲೂ ಬೊಂಬಾಯಿಗೆ ತಂತಿವರ್ತಮಾನ ಬಂದಿದೆ

* * *

ಕಾಶೀ ಪಟ್ಟಣದ ಹತ್ತಿರವಿರುವ ಒಂದಾನೊಂದು ಹಳ್ಳಿಯಲ್ಲಿ ೪೮ ಗಂಟೆಯೊಳಗಾಗಿ ೨೮ ಜನರು ಒಂದು ಭಾವಿಯ ನೀರನ್ನು ಕುಡಿದು ಮೃತಪಟ್ಟರು ಆ ಹಳ್ಳಿಯ ಯಜಮಾನನನ್ನು ವಿಚಾರಿಸುವಾಗ್ಗೆ ಜನರಿಗೆ ವಾಯಿಲೆ ಬಾರದಂತೆ ನೀರನ್ನು ಶುದ್ಧಿಪಡಿಸುವುದಕ್ಕೆ ಅವನು ಏನೋ ಒಂದು ಔಷಧಿಯನ್ನು ಆ ಬಾವಿಗೆ ಹಾಕಿದಂತೆ ಹೇಳಿದನು. ಈ ವಿಷಯವನ್ನು ಸರ್ಕಾರದವರು ವಿಚಾರಣೆ ಮಾಡುತ್ತಿದ್ದಾರೆ

* * *

ಪಂಜಾಬಿನ ವಿದ್ಯಾನಿಲಯದ ಖರ್ಚಿಗಾಗಿ ೧೦,೦೦೦ ರೂ ಗಳನ್ನೂ ಕಾಲೇಜುಗಳ ಖರ್ಚಿಗಾಗಿ ೩೦,೫೦೦ ರೂ ಗಳನ್ನೂ ಹಿಂದುಸ್ಥಾನದ ಸರ್ಕಾರದವರು ಕೆಲವು ವರ್ಷಗಳಿಂದ ಕೊಡುತ್ತಿದ್ದರಷ್ಟೆ ಈಗ ಹಿಂದುಸ್ಥಾನದ ಸೆಕ್ರೆಟರಿಯವರ ಅನುಮತಿಯ ಮೇರೆಗೆ ಈ ಗ್ರಾಂಟನ್ನು ಇನ್ನು ಮುಂದಕ್ಕೆ ಮೂರು ವರ್ಷಗಳ ವರೆಗೂ ಕೊಡಬಹುದೆಂದು ತೀರ್ಮಾನಿಸಿರುತ್ತಾರೆ ಈ ಖರ್ಚಿಗಾಗಿ ಪಂಜಾಬ್ ಗವರ್ನಮೆಂಟಿನವರ ವಶಕ್ಕೆ ೪೦,೫೦೦ ರೂ ಕೊಲ್ಪಟ್ಟಿದೆ

* * *

ಡೇರಾ ಇಸ್ಮೇಲ ಪಟ್ಟಣದಲ್ಲಿ ಪ್ರಕಟವಾಗುವ ಫ್ರಾಂಟಿಯರ್ ಅಡ್ವೋಕೇಟ ಎಂಬ ದೇಶೀಯ ವರ್ತಮಾನ ಪತ್ರಿಕೆಯ ಎಡಿಟರಾದ ತಾರಾಚಂದ ಎಂಬವರು ಪ್ರೆಸ ಕಾನೂನಿಗನುಸಾರವಾಗಿ ತಮ್ಮ ಅಚ್ಚಿನ ಕಾರ್ಖಾನೆಯ ಮತ್ತು ಪತ್ರಿಕೆಯ ಜಾಮೀನಿಗಾಗಿ ೮ ೦೦೦ ರೂ ಗಳನ್ನು ಕೊಡಬೇಕೆಂದು ಸರ್ಕಾರದವರು ಆರ್ಡರ್ ಮಾಡಿರುತ್ತಾರೆ ಪಿಸಾವರಿನಲ್ಲಿ ಈಚೆಗೆ ನಡೆದ ಬೊಂಬಿಯ ವಿಷಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ದೀರ್ಘವಾದ ವೃತ್ತಾಂತವೇ ಇದಕ್ಕೆ ಕಾರಣವಾಗಿರಬಹುದು

* * *

ಪಾಟಿಯಾಲಾ ಸಂಸ್ಥಾನದ ಮಹಾರಾಜರು ಬಂಗಾಳದಲ್ಲಿ ಪ್ರಕಟವಾಗುವ ೧೧ ಪತ್ರಿಕೆಗಳನ್ನೂ, ಬೊಂಬಾಯಿನಲ್ಲಿ ಪ್ರಚುರವಾಗುವ ೫ ವರ್ತಮಾನಪತ್ರಿಕೆಗಳನ್ನೂ, ಮದರಾಸಿನಲ್ಲಿ ಪ್ರಕಟವಾಗುವ ೪ ಪತ್ರಿಕೆಗಳನ್ನೂ, ಪಂಜಾಬಿನಿಂದ ಹೊರಡುವ ೨ ಪತ್ರಿಕೆಗಳನ್ನೂ, ಇನ್ನೂ ಇತರ ೧೬ ಪತ್ರಿಕೆಗಳನ್ನೂ ತಮ್ಮ ಸಂಸ್ಥಾನಕ್ಕೆ ತರಿಸಕೂಡದೆಂದೂ ಮತ್ತು ಓದಕೂಡದೆಂದೂ ದಾಗೆ ತರಿಸಿದ ಪಕ್ಷದಲ್ಲಿ ಆ ದೇಶದ ಕಾನೂನಿಗನುಸಾರವಾಗಿ ಶಿಕ್ಷೆಗೆ ಗುರಿಯಾಗುತ್ತಾರೆಂತಲೂ ಪ್ರಸಿದ್ಧಪತ್ರಿಕೆಯ ಮೂಲಕ ತಿಳಿಯಪಡಿಸಿರುತ್ತಾರೆ.

* * *

ಭಾರತ ಧರ್ಮ ಮಹಾ ಮಂಡಲ ಸಭೆಯ ಬೋಧಕರಾದ ಪಂಡಿತ ದೀನ ದಯಾಳರವರು ಕಳೆದ ಸೋಮವಾರ ಲಾಹೋರ್ ಪಟ್ಟಣದಲ್ಲಿ ರಾಜಭಕ್ತಿಯ ವಿಷಯವಾಗಿ ಒಂದು ಉಪನ್ಯಾಸವನ್ನು ಕೊಟ್ಟರು. ಠಕ್ಕರ್ ಜಿರವರು ಸಭಾನಾಯಕರಾಗಿದ್ದರು. ದೊರೆಗಳು ದೇವರ ಅಂಶವುಳ್ಳವರೆಂದು ಶಾಸ್ತ್ರಗಳಲ್ಲಿ ಹೇಳಿರುವದಾಗಿ ತಿಳಿಸಿ ಬ್ರಿಟಿಷರ ಆಧಿಪತ್ಯದಿಂದ ಎಂದರೆ ಮುಖ್ಯವಾಗಿ ಮಹಾರಾಜ್ಞೀ ವಿಕ್ಟೋರಿಯಾ ರವರಿಂದಲೂ ಅವರ ವಂಶೀಕರಿಂದಲೂ ಈ ದೇಶೀಯರಿಗೆ ಉಂಟಾಗಿರುವ ಉಪಕಾರಗಳನ್ನು ಸಭಾಸದರಿಗೆ ವಿವರಿಸಿ ಹಿಂದೂಗಳೂ ಮತ್ತು ಮುಸಲ್ಮಾನರೂ ಐಕಮತ್ಯಪಡುವದರಿಂದ ಬಹಳ ಪ್ರಯೋಜನ ಉಂಟೆಂಬು ಉಪನ್ಯಾಸಕರು ಹೇಳಿದರು.

* * *

ಕಳೆದ ವಾರ ಲಾಹೋರ ಪಟ್ಟಣದಲ್ಲಿ ಸರ್ದಾರ್ ದಯಾಳ್‌ಸಿಂಗ ಎಂಬುವರ ಹೆಸರಿನಿಂದ ಒಂದು ಕಾಲೇಜು ಸ್ಥಾಪಿಸಲ್ಪಟ್ಟಿತು. ಪಂಜಾಬಿನ ಲೆಫ್ಟಿನೆಂಟ್ ಗವರ್ನರವರು ಅಗ್ರಾಸನವನ್ನು ವಹಿಸಿದ್ದರು, ಅನರರಿ ಸೆಕ್ರೆಟರಿಯವರು ಕಾಲೇಜಿನ ಮೇಲ್ವಿಚಾರಣಾ ಸಭೆಯವರು ನಡೆಸಿದ ಕಾರ್ಯಗಳನ್ನೂ ಲೇಟ್ ಸರ್ದಾರ್ ದಯಾಳ್‌ಸಿಂಗರವರ ಚರಿತ್ರೆಯನ್ನೂ ತಿಳಿಸಿದರು. ಈ ಕಾಲೇಜಿಗೆ ವರುಷ ಒಂದಕ್ಕೆ ಖರ್ಚು ಕಳೆದು ೨೪,೦೦೦ ರೂ ಆದಾಯವಿರುವುದು, ಸರ್ ಲೂಯಿ ಡೇನ್ ರವರ ಹೆಸರಿನಲ್ಲೂ ಅವರ ಪತ್ನಿಯವರ ಹೆಸರಿನಲ್ಲೂ ಒಂದೊಂದು ವಿದ್ಯಾರ್ಥಿ ವೇತನವು ಕೊಡಲ್ಪಡುವದು ಬ್ರಹ್ಮಸಮಾಜದ ಸಹಾಯಕರಾದ ದಾದಾಭಾಯಿ ನವರೋಜಿ, ಸುರೇಂದ್ರನಾಥ ಬಾನರ್ಜಿ, ಗೋಖಲೆ ಇವರೇ ಮೊದಲಾದವರು ತಮ್ಮ ಸಂತೋಷಸೂಚಕಾರ್ಥವಾಗಿ ತಂತಿ ಮೂಲಕ ವರ್ತಮಾನಗಳನ್ನು ಕಳುಹಿಸಿರುತ್ತಾರೆ

ಕಳೆದ ವಾರ ಹಿಂದುಸ್ಥಾನದಿಂದ ಹದಿಮೂರು ಮಂದಿ ಯುವಕರು ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ (ಲಾಯರ್) ಪರೀಕ್ಷೆಗೆ ವ್ಯಾಸಂಗಮಾಡುವದಕ್ಕಾಗಿ ಹೋಗಿ ಅಲ್ಲಿನ ಪ್ರಸಿದ್ಧವಾದ ಮೂರು ವಿದ್ಯಾಶಾಲೆಗಳಿಗೆ ಸೇರಿರುತ್ತಾರೆ.

* * *

೧೯೦೯ನೇ ಏಪ್ರೆಲ್ ತಾ. ೧ರಿಂದ ೧೯೧೦ನೇ ಮಾರ್ಚ ತಾ. ೩೧ರ ವರೆಗೆ ಒಂದು ಸಾಲಿನಲ್ಲಿ ಹಿಂದುಸ್ಥಾನದ ರೈಲ್ವೆ ಉತ್ಪತ್ತಿಯು ೪೩ ಕೋಟಿಯೂ ೯೩ ಲಕ್ಷ ರೂಪಾಯಿ ಆಗಿದೆ ಎಂದೂ, ಇದು ಹಿಂದಿನ ವರುಷದ ಉತ್ಪತ್ತಿಗಿಂತ ೩೧೧ ಲಕ್ಷ ರೂಪಾಯಿ ಹೆಚ್ಚಾಗಿರುವುದೆಂದೂ ಪ್ರಕಟವಾಗಿದೆ

* * *

ಢಕ್ಕಾ ಪಟ್ಟಣದ ತೋಟಗಿರುವ ಗೌರ್ನಮೆಂಟು ಹೌಸಿನ ಸುತ್ತು ಮುತ್ತ ಎರಡು ಹುಲಿಗಳು ಹಾವಳಿಮಾಡುತ್ತಿವೆ ದನಕರುಗಳಲ್ಲದೆ ಒಬ್ಬ ಮನುಷ್ಯನೂ ಈ ಮೃಗಗಳಿಗೆ ತುತ್ತಾದನು ನವಾಬರ ಮನೆಯವರು ಕೆಲವರು ಅವುಗಳನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದರು, ಆದರೆ ಅವರ ಶ್ರಮವು ಸಾರ್ಥಕವಾಗಲಿಲ್ಲ

* * *

ಅತ್ಯುನ್ನತವಾದ ಪರ್ವತ ಶಿಖರಗಳನ್ನು ಹತ್ತುವುದಕ್ಕಾಗಿ ಆಲ್ಪೈನ್‌ಕ್ಲಬ್ ಎಂಬ ಸಂಘವನ್ನು ಏರ್ಪಡಿಸಿರುವರಷ್ಟೆ, ಆ ಸಂಘದ ಮೆಂಬರಾದ ವಿಡ್ ಎಂಬುವರು ಇಬ್ಬರು ಸ್ವೀಡನ್ ದೇಶದ ದಾರಿ ತೋರಿಸುವವರೊಡನೆ ನಾನಿಟಾಲ್ ಪಟ್ಟಣದಿಂದ ಹೊರಟು ಹಿಮಾಲಯಪರ್ವತದಲ್ಲಿ ಕೆಲವು ಎತ್ತರವಾದ ಶಿಖರಗಳನ್ನು ಹತ್ತುವರಾಗಿ ವರ್ತಮಾನವಿದೆ.

* * *

ಡಿಂಡಿಗಲ್ ಪಟ್ಟಣದಲ್ಲಿ ಪರಸ್ಥಳದವರು ಕೆಲವರು ಪ್ಲೇಗಿನಿಂದ ಮೃತಪಟ್ಟರು. ಮಧುರಾ ಡಿಸ್ಟ್ರಿಕ್ಟಿನ ಕಲೆಕ್ಟರವರೂ ಸ್ಯಾನಿಟರಿ ಕಮೀಷನರೂ ಈ ರೋಗದ ಹಾವಳಿ ತಪ್ಪಿಸುವ ಏರ್ಪಾಡುಗಳನ್ನು ಮಾಡುತ್ತಿರುವರು. ಮಧುರೆಯಲ್ಲಿ ಪ್ರಯಾಣಿಕರನ್ನು ಪರೀಕ್ಷಿಸಬೇಕೆಂದು ಗೊತ್ತುಮಾಡಿದಾರೆ. ಪ್ಲೇಗ್ ವಿಚಾರಕ್ಕಾಗಿ ಒಂದು ಹೊಸ ಇಲಾಖೆಯನ್ನೂ ಏರ್ಪಡಿಸಿರುತ್ತಾರೆ.

* * *

ದರ್ಭಾಂಗದ ಮಹಾರಾಜರವರು ಭೂಮಿಹರ ಬ್ರಾಹ್ಮಣ ಕಾಲೇಜಿಗೆ ೫೦,೦೦೦ ರೂ. ಗಳನ್ನು ಧರ್ಮಾರ್ಥವಾಗಿ ಕಳುಹಿಸಿರುತ್ತಾರೆ ಆ ಕಾಲೇಜಿನ ಮೇಲ್ವಿಚಾರಣಾಕರ್ತರು ಆ ಪಾಠಶಾಲೆಗೆ ಟಿರ್‌ಹುಟ್ ಅಥವಾ ಮಿಥಿಲಾ ಕಾಲೇಜೆಂಬದಾಗಿ ಹೆಸರಿಟ್ಟರೆ ಇನ್ನೂ ೭೦,೦೦೦ ರೂ. ಯನ್ನು ಕೊಡುವುದಾಗಿ ದರ್ಭಾಂಗದ ಮಹಾರಾಜರವರು ವಾಗ್ದಾನಮಾಡಿರುತ್ತಾರೆ.

* * *

ಕಳೆದ ವಾರ ಬೊಂಬಾಯಿನಲ್ಲಿ ಯಮುನಾಬಾಯಿ ಎಂಬ ಭಾಟಿಯಾ ಸ್ತ್ರೀಯನ್ನು ಕೊಲೆ ಮಾಡಿದರಷ್ಟೆ. ಆ ಪೈಕಿ ೫ ಜನ ಅಪರಾಧಿಗಳು ಸಿಕ್ಕಿಬಿದ್ದರು. ಮತ್ತೊಬ್ಬ ಅಪರಾಧಿಯು ಈಚೆಗೆ ಸಿಕ್ಕಿರುತ್ತಾನೆ. ಎಲ್ಲರೂ ತಾವು ಈ ಕೃತ್ಯವನ್ನು ಮಾಡಿದ್ದುಂಟೆಂದು ಒಪ್ಪಿಕೊಂಡರು. ಕಳುವಾಗಿದ್ದ ಹಣವೂ ಸಾಮಾನೂ ಸಿಕ್ಕಿದವು. ಆ ಆರು ಜನರನ್ನೂ ಪೋಲೀಸಿನವರು ಖೈದಿನಲ್ಲಿರಿಸಿರುತ್ತಾರೆ

* * *

ಆಲಿಪುರದ ಸಿಡಿಮದ್ದಿನ ಮೊಕದ್ದಮೆಯಲ್ಲಿ ಅಪರಾಧಿಯಾಗಿ ಇದುವರೆಗೂ ತಲೆತಪ್ಪಿಸಿಕೊಂಡು ತಿರುಗುತ್ತಿದ್ದ ಚಾರು ಚೌಧುರಿ ಎಂಬುವನು ಕಳೆದ ವಾರ ಕಾಶಿಯಲ್ಲಿ ಸಿಕ್ಕಿಬಿದ್ದನು. ಅವನನ್ನು ವಿಚಾರಣೆ ಮಾಡುವುದಕ್ಕೆ ಐದು ಜನ ಬಂಗಾಳಿಗಳೂ ಇಬ್ಬರು ಯೂರೋಪಿಯನ್‌ರೂ ಪಂಚಾಯತದಾರರಾಗಿ ನಿಯಮಿಸಲ್ಪಟ್ಟಿರುತ್ತಾರೆ ವಿಚಾರಣೆಯು ಆಗಲೇ ಪ್ರಾರಂಭವಾಗಿರುತ್ತದೆ.

* * *

ಕಳೆದ ವರುಷ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ತಿರುವಾಂಕೂರಿನ (ಅನಂತಶಯನದ) ನಾಯರ್ ಸಂಗಡಕ್ಕೆ ಸೇರಿದ ಶ್ರೀಮತಿ ಜಿ ಪಾರುಕುಟ್ಟಿಯಮ್ಮ ಎಂಬಾಕೆಯನ್ನು ಮದರಾಸಿನಲ್ಲಿ ಪ್ರಕಟವಾಗುವ ಸ್ಟಾಂಡರ್ಡ ಪತ್ರಿಕೆಯ ಎಡಿಟರಾದ ರಾಮನ್‌ಪಿಳ್ಳೆಯವರು ವಿವಾಹಮಾಡಿಕೊಳ್ಳುವುದಾಗಿ ಗೊತ್ತು ಮಾಡಿದರು. ಮೊನ್ನೆ ಭಾನುವಾರ ಈ ಮದುವೆಯು ತೀಷವುಂಗಲದಲ್ಲಿ ನಡೆಯಿತೆಂದು ಸಮಾಚಾರ ಬಂದಿದೆ

* * *

ಕಲ್ಕತ್ತೆಯಲ್ಲಿರುವ ಕರೆಯುವ ಹಸುಗಳಿಗೆ ಸೌಖ್ಯವಾಗಿರುವ ಮತ್ತು ಆರೋಗ್ಯಕರವಾಗಿರುವ ಕೊಟ್ಟಿಗೆಗಳನ್ನು ಕಟ್ಟಿಸಬೇಕೆಂದು ಹರಾನಂದವರ್ಮ ಎಂಬವರು ಪ್ರಯತ್ನಿಸಿರುವರು ಇದಕ್ಕೆ ಕಲ್ಕತ್ತೆಯ ಶ್ರೀ ಕೃಷ್ಣ ಗೋಶಾಲೆ ಎಂದು ಹೆಸರು. ಇದನ್ನು ಕಟ್ಟುವದಕ್ಕಾಗಿ ಕುಮಾರರಾಜೇಂದ್ರನಾಥ ಮುಖರ್ಜಿಯವರು ೨೫,೦೦೦ ರೂಪಾಯನ್ನು ಕೊಟ್ಟಿರುವರು. ಲಾಯರ್ ಪ್ರಿಯನಾಥ ಸೇನರವರು ೫೦ ಎಕರೆ ಜಮೀನನ್ನು ಕೊಟ್ಟಿರುತ್ತಾರೆ.

* * *

ಮೆಹಲಿಯ ರೈಲ್ವೆ ಸ್ಟೇಷನ್ನಿನೊಳಗೆ ಹೋಗುವುದಕ್ಕೆ ವಿಧಿಸಿರುವ ಅರ್ಧ ಆಣೆಯ ಟಿಕೇಟು ನ್ಯಾಯವಾದದ್ದಲ್ಲವೆಂತಲೂ ತಾನು ಕೊಟ್ಟಿರುವ ಅರ್ಧಾಣೆಯನ್ನು ವಾಪಸು ಕೊಡಬೇಕೆಂತಲೂ ಮೋತಿ ಲಾಲ್ ಎಂಬ ಪ್ಲೀಡರು ಈಸ್ಟ್ ಇಂಡಿಯನ ರೈಲ್ವೆ ಕಂಪನಿಯ ಏಜಂಟರ ಮೇಲೆ ದಾವಾಮಾಡಿರುತ್ತಾನೆ. ತಾನು ಟಿಕೇಟನ್ನು ಕೊಂಡುಕೊಳ್ಳುವುದಕ್ಕೆ ಬಲಾತ್ಕರಿಸಲ್ಪಟ್ಟನೆಂಬುವುದೂ ಯೂರೋಪಿಯನ್ ಜನರು ಈ ಟಿಕೇಟನ್ನು ಕೊಂಡುಕೊಳ್ಳುವ ಅಗತ್ಯವಿಲ್ಲವೆಂಬುವುದೂ ಈ ದಾವಾಕ್ಕೆ ಕಾರಣವಾಗಿರುತ್ತದೆ

* * *

ಅಲ್ಲಹಾಬಾದಿನಲ್ಲಿ (ಪ್ರಯಾಗ) ಡೇವಿಸ್ ಮತ್ತು ಜಫ್ರಿ ಎಂಬ ಇಬ್ಬರು ಸೋಜರುಗಳು ಒಂದು ಬೈಸಿಕಲ್ ಷಾಪಿಗೆ ಹೋಗಿ ತಾವು ರೈಲ್ವೆ ಇಲಾಖೆಯಲ್ಲಿ ಕೆಲಸಮಾಡುವವರೆಂದು ಸುಳ್ಳುಹೇಳಿ ಒಂದು ಬೈಸಿಕಲ್ ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡು ಬಂದರು. ಮಾರನೇ ದಿನ ಆ ಗಾಡಿಯನ್ನು ಒಬ್ಬ ದೇಶೀಯನಿಗೆ ಮಾರಿದರು. ಈ ಸಮಾಚಾರವು ತಿಳಿದುಬಂದು ಪೋಲೀಸಿನವರು ಅವರಿಬ್ಬರನ್ನೂ ದಸ್ತಗಿರಿ ಮಾಡಿದರು. ವಿಚಾರಣೆಯಾದನಂತರ ಒಬ್ಬನಿಗೆ ಮೂರು ತಿಂಗಳೂ ಮತೊಬ್ಬನಿಗೆ ಎರಡು ತಿಂಗಳೂ ಕಠಿಣಸಜ ವಿಧಿಸಲ್ಪಟ್ಟಿತು.

* * *

ನಾಸಿಕದ ಸಿಡಿಮದ್ದಿನ ಮೊಕದ್ದಮೆಯಲ್ಲಿ ಅಪರಾಧಿಗಳ ಪೈಕಿ ಗಣೇಶವೈದ್ಯ, ವಾಮನಜೋಷಿ, ಶಂಕರಸೋಮನ್ ಎಂಬ ಮೂವರಿಗೆ ಜೀವಮಾನವಿರುವ ವರೆಗೂ ದ್ವೀಪಾಂತರವಾಸವನ್ನು ವಿಧಿಸಿದ್ದರು. ಈಗ ಅವರ ಶಿಕ್ಷೆಯನ್ನು ಸದ್ಯಕ್ಕೆ ತೆಗೆದುಹಾಕಿರುತ್ತಾರೆ. ಮತ್ತು ದತ್ತ ಜೋಷಿ, ಕಾಶೀನಾಥ ಅಂಕುಶೀಕರ್, ಚತುರ್ಭುಜ ಚಾವರ್‌ಭಾಯಿ ಎಂಬ ಮೂವರು ಈ ಮೊಕದ್ದಮೆಯ ವಿಷಯವಾಗಿ ತಮಗೆ ತಿಳಿದದ್ದನ್ನೆಲ್ಲಾ ಹೇಳಿ ಕ್ಷಮಾಪಣೆಯನ್ನು ಕೇಳಿಕೊಂಡಲ್ಲಿ ಅವರನ್ನು ಕ್ಷಮಿಸುವದಾಗಿ ಕೋರ್ಟಿನವರು ತಿಳಿಯಪಡಿಸಿರುತ್ತಾರೆ.

* * *

ನಾರಾಯಣಗಂಜಿನ ಸೈಯದ್ ದಿವಾನ್ ಬಾದರ್ ಎಂಬ ಒಬ್ಬ ಫಕೀರನನ್ನೂ ಅವನ ಹಿಂಬಾಲಕರಲ್ಲಿ ಕೆಲವರನ್ನೂ ಪೋಲೀಸಿನವರು ದಸ್ತಗಿರಿಮಾಡಿರುತ್ತಾರೆ. ಆ ಫಕೀರನು ಹಿಂದುಸ್ಥಾನದ ಚಕ್ರವರ್ತಿ ಎಂದು ಹೆಸರಿಟ್ಟುಕೊಂಡು ಬ್ರಿಟಿಷರ ಗವರ್ನಮೆಂಟಿಗೆ ವಿರೋಧವಾಗಿ ಅನೇಕ ಮೀಟಿಂಗುಗಳನ್ನು ನಡೆಸಿ, ಹಿಂದೂ ಜಮೀನ್‌ದಾರರಿಗೂ ಮತ್ತು ಸರ್ಕಾರದವರಿಗೂ ಕಂದಾಯವನ್ನು ಕೊಡದಂತೆ ಜನರಿಗೆ ಬೋಧಿಸುತ್ತಾ ಬಂದನು. ಅದೂ ಅಲ್ಲದೆ ಬ್ರಿಟಿಷರ ಮೇಲೆ ಯುದ್ಧಮಾಡುವುದಕ್ಕಾಗಿ ಸುಮಾರು ಇನ್ನೂರು ಜನ ಮುಸಲ್ಮಾನರನ್ನು ಕೂಡಿಹಾಕಿದನು. ಅವನು ಆಯುಧ ಸಮೇತ ಕೈಸೆರೆ ಹಿಡಿಯಲ್ಪಟ್ಟು ಈಗ ಬಂಧನದಲ್ಲಿರುತ್ತಾರೆ.

* * *

ಬೊಂಬಾಯಿನಲ್ಲಿ ಕಾರ್ಖಾನೆಯನ್ನಿಟ್ಟು ನಡೆಸುತ್ತಿದ್ದ ಲೇಟ್ ದಾಮೋದರದಾಸ್ ಗೋಕುಲದಾಸ್ ಖಿಂಜಿ ಎಂಬಾತನ ಹೆಂಡತಿ ಬಾಯಿ ಯಮುನಾಬಾಯಿಯನ್ನು ಕೊಂದುಹಾಕಿದರೆಂಬದಾಗಿ ಕೆಲವುಜನ ಪ್ರಯಾಣಿಕರನ್ನು ಪೋಲೀಸಿನವರು ಹಿಡಿದಿರುತ್ತಾರೆ. ಕಳೆದ ಮಾರ್ಚ ತಿಂಗಳು ೨೧ ನೇ ತಾರೀಖಿನ ದಿನ ಅವಳು ತನ್ನ ಕೊಠಡಿಯಲ್ಲಿ ಸತ್ತು ಮಲಗಿದ್ದಳು ಮತ್ತು ಕೊಠಡಿಯಲ್ಲಿನ ಸಾಮಾನು ಕೆದರಿದ್ದವು. ಈ ಘೋರಕೃತ್ಯವನ್ನು ಮಾಡಿದವರು ಯಾರೋ ತಿಳಿಯಲಿಲ್ಲ. ಪೋಲೀಸ್ ಕಮಿಷನರವರು ಸರಿಯಾದ ಸಮಾಚಾರವನ್ನು ತಿಳಿಸಿದವರಿಗೆ ೨,೦೦೦ ರೂ. ಇನಾಮು ಕೊಡುವುದಾಗಿ ಪ್ರಕಟಿಸಿದರು. ಅನುಮಾನದ ಮೇಲೆ ರಾಮದಯಾಳ್ ಮೋಹನಲಾಲ್‌ನನ್ನು ದಸ್ತಗಿರಿಮಾಡಿದರು. ಇನ್ನೂ ಕೆಲವು ಜನರನ್ನು ಹಿಡಿದನಂತರ ಕಳುವಾಗಿದ್ದ ಸಾಮಾನು ಪತ್ತೆಯಾಯಿತು.

* * *

ಕಲ್ಕತ್ತಾ ಪಟ್ಟಣದಲ್ಲಿ ಕಾಲೇಜುಗಳಿಗೆ ಸಂಬಂಧಪಟ್ಟ ವಿದ್ಯಾರ್ಥಿ ಭೋಜನಾಲಯಗಳಿಗೆ ಇದುವರೆಗೂ ಸರ್ಕಾರದಿಂದ ಕೊಡುತ್ತಿದ್ದ ಗ್ರಾಂಟನ್ನು ಕಡಮೆಮಾಡಿ ಇನ್ನು ಮೂರು ವರುಷಗಳೊಳಗಾಗಿ ಕೊಡುವದನ್ನೇ ನಿಲ್ಲಿಸಿಬಿಡುವುದಾಗಿ ಪ್ರಕಟವಾಗಿರುವ ಸರ್ಕಾರದ ತೀರ್ಮಾನವನ್ನು ಕೇಳಿ ಜನರೆಲ್ಲಾ ಬಹಳ ವಿಷಾದಿಸುತ್ತಾರೆ. ಇದುವರೆಗೆ ವಿಧಿಸಿದ್ದ ಫೀಜನ್ನೇ ಕೊಡಲು ವಿದ್ಯಾರ್ಥಿಗಳು ಬಹಳ ಶ್ರಮಪಡುತ್ತಿದ್ದಾರೆಂದು ಕಾಲೇಜುಗಳ ಪ್ರಿನ್‌ಸಿಪಲ್‌ರವರು ಅಭಿಪ್ರಾಯಪಡುತ್ತಾರೆ. ಈ ಮಧ್ಯೆ ಸರ್ಕಾರದವರ ಪೋಷಣೆಯೂ ತಪ್ಪಿದಲ್ಲಿ ಭೋಜನಶಾಲೆಗಳು ಮುಚ್ಚಲ್ಪಟ್ಟು ವಿದ್ಯಾರ್ಥಿಗಳು ಇತರ ಕಡೆಗಳಿಗೆ ಊಟಕ್ಕೆ ಹೋಗುವರು ಇದರಿಂದ ಹುಡುಗರ ಸಹವಾಸವು ಕೆಡುವುದೆಂದೂ, ಈ ಮೂಲಕ ಅನೇಕ ತೊಂದರೆಗಳು ಸಂಭವಿಸಬಹುದೆಂದೂ ಹೇಳುವುದಕ್ಕೆ ಸಂದೇಹವಿಲ್ಲ. ಈ ವಿಷಯದಲ್ಲಿ ಗವರ್ನಮೆಂಟಿನವರ ಅಭಿಪ್ರಾಯವನ್ನು ಪ್ರತಿಭಟಿಸಲು ಅನೇಕ ಕಾಲೇಜುಗಳ ಪ್ರಿನ್‌ಸಿಪಾಲ್‌ರವರು ಸೇರಿ ಒಂದು ಮೀಟಿಂಗನ್ನು ಮಾಡಬೇಕೆಂದಿರುತ್ತಾರೆ.

* * *

ಪಾರ್ಸಿ ಜನರು ತಾವು ಮೊದಲು ಹಿಂದುಸ್ಥಾನಕ್ಕೆ ಬಂದ ದಿವಸದ ಜ್ಞಾಪಕಾರ್ಥವಾಗಿ ಏನಾದರೂ ಒಂದು ಶಾಶ್ವತವಾದ ಕೆಲಸವನ್ನು ಮಾಡಬೇಕೆಂದು ಯೋಚಿಸಿರುತ್ತಾರೆ. ಇವರು ಈ ಸೀಮೆಗೆ ಬಂದು ಸಾವಿರ ವರುಷಗಳ ಮೇಲಾಯಿತು ಯಾವ ಸ್ಥಳದಲ್ಲಿ ಮೊದಲು ಇಳಿದರೋ ಅದು ಗೊತ್ತಿಲ್ಲ. ಆದರೆ ಪರ್ಷಿಯಾ ರಾಜ್ಯವು ಕ್ಷೀಣದೆಸೆಗೆ ಬಂದು ಅರಬ್ಬೀ ಜನರು ಪಾರ್ಸಿ ಜನರನ್ನು ಹಿಂಸೆಪಡಿಸಿದಾಗ ಬೊಂಬಾಯಿಗೆ ಸುಮಾರು ನೂರು ಮೈಲಿ ಉತ್ತರದಲ್ಲಿರುವ ಸಾಂಜನ ಎಂಬ ಸ್ಥಳದಲ್ಲಿ ಮೊದಲು ಪಾರ್ಸಿಯವರು ಬಂದು ಇಳಿದರೆಂದು ಊಹಿಸಲ್ಪಟ್ಟಿದೆ. ಆ ಕಾಲದಲ್ಲಿ ಬೊಂಬಾಯನ್ನು ಒಬ್ಬ ಹಿಂದೂ ರಾಜನು ಆಳುತ್ತಿದ್ದುದರಿಂದ ಆತನು ಈ ಜನರಿಗೆ ತನ್ನ ರಾಜ್ಯದಲ್ಲಿ ವಾಸಿಸುವುದಕ್ಕೆ ಅಪ್ಪಣೆಕೊಟ್ಟನು ಈಗ ಸಾಂಜನದಲ್ಲಿ ಒಂದು ಶಾಶ್ವತವಾದ ಕಟ್ಟಡವನ್ನು ಕಟ್ಟುವುದಕ್ಕಾಗಿ ಪಾರ್ಸಿ ಪಂಚಾಯತಿಯವರು ಒಂದು ಸಂಘವನ್ನು ಏರ್ಪಡಿಸಿರುತ್ತಾರೆ ಈ ಸಂಘದವರು ಈ ಘನ ಉದ್ದೇಶಕ್ಕಾಗಿ ಚಂದಾ ವಸೂಲ್ಮಾಡುವರು.

* * *

ದಕ್ಷಿಣ ದೇಶಕ್ಕೆ ಸೇರಿದ ಒಂದಾನೊಂದು ಗ್ರಾಮದಲ್ಲಿ ಮುಂದೆ ಹೇಳುವ ಬಹು ದುಃಖಕರವಾದ ಆಶ್ಚರ್ಯವು ನಡೆಯಿತೆಂದು ಮದರಾಸ್ ಪಟ್ಟಣದ ಪತ್ರಿಕೆಗೆ ಒಬ್ಬ ಬಾತ್ಮೀದಾರನು ಬರೆದಿರುತ್ತಾರೆ ಅದೇನೆಂದರೆ,—ಒಂದು ಗ್ರಾಮದ ಮುಸಲ್ಮಾನ್ ಸ್ತ್ರೀಯರು ತಮ್ಮ ಸ್ಥಳದಲ್ಲಿ ನೀರಿಗೆ ಅಭಾವವಾದ್ದರಿಂದ ನೆರೆಯ ಗ್ರಾಮಕ್ಕೆ ನೀರುತರಲು ಹೋದರು. ಆ ಗ್ರಾಮದಲ್ಲೂ ಒಂದೇ ಭಾವಿಯೊಳಗೆ ನೀರು ಇದ್ದಿತು ಅವರು ಅದರ ಬಳಿಗೆ ಹೋದರು. ನೀರು ಸೇದಿಕೊಂಡು ಬಿಂದಿಗೆಗಳನ್ನು ಕಟ್ಟೆಯ ಸುತ್ತಾ ಉಗುಳಿ ಇತರರು ಬಾರದಂತೆ ಅಡ್ಡಿ ಮಾಡಿದರು. ನೀರಿಗಾಗಿ ಹೋಗಿದ್ದ ಹಿಂದೂ ಹೆಂಗಸರು ಈ ಕೃತ್ಯವನ್ನು ನೋಡಿ ಕೋಪಿಸಿಕೊಂಡು ಮುಸಲ್ಮಾನ ಸ್ತ್ರೀಯರನ್ನು ಬೈದರು. ಮಹಮದೀಯ ಹೆಂಗಸರು ತಮ್ಮ ಬಳೆಗಳನ್ನು ತಾವೇ ಒಡೆದು ಚೂರುಮಾಡಿ, ತಮ್ಮ ಮೈಯನ್ನೆಲ್ಲಾ ತಾವೇ ಪರಚಿ ಗಾಯ ಮಾಡಿಕೊಂಡು ಹೋಗಿ ತಮ್ಮ ಮನೆಗಳ ಗಂಡಸರಿಗೆ ದೂರು ಹೇಳಿದರು ಆಗ ಮಹಮದೀಯರು ಗುಂಪು ಸೇರಿ ಆ ಗ್ರಾಮಕ್ಕೆ ಹೋಗಿ ಹಗಲು ಹೊತ್ತಿನಲ್ಲೇ ಗ್ರಾಮವನ್ನೆಲ್ಲಾ ಸುತ್ತಿಕೊಂಡು, ಪ್ರತಿ ಒಂದು ಮನೆಗೂ ನುಗ್ಗಿ ಹಂಚು ಕಿತ್ತು ಹಂಜರ ಮುರಿದು ಹೆಂಗಸರ ಮೇಲೆ ಬಹು ಕ್ರೂರವಾದ ಕೃತ್ಯಗಳನ್ನು ನಡಿಸಿ, ಹೆಂಗಸರನ್ನು ಬೆತ್ತಲೆ ಮಾಡಿ ಒಬೊಬ್ಬನು ಒಬೊಬ್ಬಳನ್ನು ಕಟ್ಟಿಹಾಕಿ, ಇನ್ನೊಂದು ಸ್ಥಳಕ್ಕೆ ಸಾಗಿಸಿಕೊಂಡು ಹೋಗಿ ದಸ್ತಗಿರಿ ಮಾಡಿಸಿದರು ನ್ಯಾಯಾಧಿಪತಿನು ಅವರನ್ನು ತನಿಖೆ ಮಾಡಿ ಪ್ರತಿ ಒಬ್ಬ ಹಿಂದುವಿನಿಂದಲೂ ಜುಲ್ಮಾನೆಯನ್ನು ವಸೂಲ್ಮಾಡಿಸಿದನು ಎಂಬುದೇ

ಮೈಸೂರು ಗೆಜೆಟ್ ಸಂಗ್ರಹ.

ಚೆಂದೂರು ಗ್ರಾಮದ ಶ್ಯಾನುಭೋಗ್ ಮೆ॥ ಗುರುಲಿಂಗಯ್ಯನವರನ್ನು ನಂಜನಗೂಡು ತಾಲ್ಲೂಕ್ ಬೋರ್ಡಿನ ಮೆಂಬರಾಗಿಯೂ, ಸಬ್ಬೀನ ಪಳ್ಳಿ ಎಸ್ಟೇಟಿನ ಮೆ॥ ಫ್ರಾನ್ಸಿಸ್ ಎಂ. ಹಾಮಿಲ್ಟನ್ ಯವರನ್ನು ಮೂಡಿಗೆರೆ ತಾಲ್ಲೂಕ್ ಬೋರ್ಡಿನ ಮೆಂಬರಾಗಿಯೂ ನೇಮಕಮಾಡಿದೆ

ಅ॥ ಕಮಿಷನರ್ ಮೆ॥ ಸಿ. ವೆಂಕಟರಾಯರನ್ನು ಕೋಲಾರದ ಚಿನ್ನದಗಣಿಗಳ ಪೋಲೀಸ್ ಸೂಪರಿಂಟೆಂಡೆಂಟರಾಗಿ ಬದಲಿ ನೇಮಕ ಮಾಡಿದೆ ಇವರು ಬಂದು ಕೆಲಸದ ಛಾರ್ಜನ್ನು ಪಡೆದುಕೊಳ್ಳುವ ತನಕ ಮ॥ ಶ್ರೀನಿವಾಸಯ್ಯಂಗಾರ್ಯರು ಕೋಲಾರ್ ಡಿಸ್ಟ್ರಿಕ್ಟ್ ಹೆಡ್ ಛಾರ್ಜನ್ನು ವಹಿಸತಕ್ಕದ್ದು.

ಸಬ್ ಅ॥ ಸರ್ಜನ್ ಮೆ॥ ಸಿ. ಕುಪ್ಪುಸಾಮಿ ಪಿಳ್ಳೆಯವರಿಗೆ ಅವರ ಮಾರಿಕಣಿವೆಯಲ್ಲಿ ಕೆಲಸದ ಛಾರ್ಜನ್ನು ವಹಿಸಿದ ಬಳಿಕ ಎರಡು ತಿಂಗಳು ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಡೂರ್ ತಾಲ್ಲೂಕ್ ಅಮಲ್ದಾರ್ ಮೆ॥ ಎಂ. ಎಸ್. ರಾಮಚಂದ್ರರಾಯರಿಗೆ ಕೊಟ್ಟಿರುವ ಮೂರು ತಿಂಗಳು ಎರಡು ದಿನಗಳ ಸಂಬಳವಿಲ್ಲದ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ ಈಗಿನ ಬದಲಿ ಏರ್ಪಾಡೇ ಮುಂದೆಯೂ ನಡೆಯತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟ್ ಅ॥ ಕನ್‌ಸರ್ವೆಟರ್ ಮೆ॥ ವೈ. ಸೀತಾರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರು ಉಪಯೋಗಿಸಿಕೊಳ್ಳದಿರುವ ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ರದ್ದುಮಾಡಿದೆ

ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ ಕೋರಿನ ಕಮಾಂಡಾಂಟರಾದ ಮೆ॥ ಜೆ. ಆ. ಟೇಟ್‌ಯವರನ್ನು ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಶ್ರೀಮನ್‌ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರಿಗೆ ಅಸಿಸ್ಟೆಂಟರಾಗಿ ನೇಮಕಮಾಡಿದೆ.

ಚಳ್ಳಕೆರೆ ಸಬ್ ಡಿವೀಜನ್ ಛಾರ್ಜನ್ನು ವಹಿಸಿರುವ ಅ॥ ಕಮಿಷನರ್ ಮೆ॥ ಎ. ಮೃತ್ಯುಂಜಯ್ಯನವರನ್ನು ಸೆನ್‌ಸಸ್ ಸೂಪರಿನ್‌ಟೆಂಡೆಂಟರವರ ಅಸಿಸ್ಟೆಂಟರಾಗಿ ನೇಮಕಮಾಡಿದೆ.

ಅ॥ ಕಮಿಷನರ್ ಮೆ॥ ಟಿ. ರಾಮಲಿಂಗಚೆಟ್ಟಿಯವರನ್ನು ದೊಡ್ಡಬಳ್ಳಾಪುರದ ಸಬ್ ಡಿವೀಜನಿನಿಂದ ಚಳ್ಳಕೆರೆ ಸಬ್ ಡಿವೀಜನ್ ಛಾರ್ಜಿಗೆ ವರ್ಗಮಾಡಿದೆ.

ಬೆಂಗಳೂರು ತಾಲ್ಲೂಕು ಅಮಲ್ದಾರ್ ಮೆ॥ ಎ ಹೇಸ್ ಯವರನ್ನು ಅ॥ ಕಮಿಷನರಾಗಿ ನೇಮಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ಸಿವಿಲ್ ಆಫೀಸರಾಗಿಯೂ ದೊಡ್ಡ ಬಳ್ಳಾಪುರದ ಸಬ್ ಡಿವಿಜನ್ ಆಫೀಸರಾಗಿಯೂ ಮೊಕರರ್ ಮಾಡಿದೆ.

ಮೆ॥ ರಾಬರ್ಟ ಮೆಕಿಂಜಿ ಯವರು ಮೈಸೂರು ಮಹಾರಾಜಾ ಕಾಲೇಜಿನ ಇಂಗ್ಲಿಷ್ ಬೋಧಕರಾಗಿ ಕಳೆದ ಸೆಪ್ಟಂಬರ್ ತಾ. ೨೯ ರಲ್ಲಿ ದಾಖಲಾದರು

ಮೆ॥ ಎನ್. ಎಸ್ ಸುಬ್ಬರಾಯರವರನ್ನು ಮೈಸೂರು ಮಹಾರಾಜಾ ಕಾಲೇಜಿನ ಇಂಗ್ಲಿಷ್ ಮತ್ತು ಚರಿತ್ರ ಬೋಧಕರಾಗಿ ಪರೀಕ್ಷಾರ್ಥವಾಗಿ ಎರಡು ವರುಷಗಳ ವರೆಗೆ ನೇಮಕಮಾಡಿದೆ.

ಚನ್ನಪಟ್ಟಣದ ಸಬ್ ರೆಜಿಸ್ಟ್ರಾರ್ ಮೆ॥ ಎನ್. ಟಿ. ನರಸಿಂಹಯ್ಯಂಗಾರ್ಯರನ್ನು ಬೆಂಗಳೂರು ತಾಲ್ಲೂಕ್ ಅಮಲ್ದಾರರಾಗಿಯೂ, ಎಕ್ಸೈಸ್ ಕಮಿಷನರವರ ಆಫೀಸ್ ಹೆಡ್ ಕ್ಲಾರ್ಕ ಮೆ॥ ಆರ್. ತಿರುನಾರಣಯ್ಯಂಗಾರ್ಯರನ್ನು ಅರಸೀಕೆರೆ ತಾಲ್ಲೂಕ್ ಅಮಲ್ದಾರರಾಗಿಯೂ ಹಂಗಾಮಿಯಾಗಿ ನೇಮಕಮಾಡಿದೆ.

ಮುನ್‌ಸೀಫ್ ಮೆ॥ ಎನ್. ನರಸಿಂಹಯ್ಯಂಗಾರ್ಯರನ್ನು ಹಾಸನದಿಂದ ಮಧುಗಿರಿಗೂ, ಮೆ॥ ಎ. ಕೆ. ಶ್ರೀನಿವಾಸರಾಘವಾಚಾರ್ಯರನ್ನು ಮಧುಗಿರಿಯಿಂದ ಹಾಸನಕ್ಕೂ ವರ್ಗಮಾಡಿದೆ.

ವೈದ್ಯ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಮಾಡಲಾಗಿದೆ:—ಮೆ॥ ಗಳಾದ ಸಿ. ಜೆ. ಹನುಮಾನ್‌ಸಿಂಗ್‌ಯವರನ್ನು ಚಿತ್ರದುರ್ಗಕ್ಕೆ, ಡಬ್ಲ್ಯು. ಶ್ರೀನಿವಾಸಯ್ಯಂಗಾರ್ಯರನ್ನು ಕೋಲಾರಕ್ಕೆ, ಎ. ಮುತ್ತುಸಾಮಿದಾಸ್ ಯವರನ್ನು ಬೆಂಗಳೂರಿಗೆ, ಜೆ. ಎಸ್. ದೇವದ್‌ಯವರನ್ನು ಕಡೂರಿಗೆ.

ಚಳ್ಳಕೆರೆ ತಾಲ್ಲೂಕ್ ಅಮಲ್ದಾರ್ ಮೆ॥ ಎಂ. ಎಸ್. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಕ್ರವರ್ತಿ ಸಾರ್ವಭೌಮರಾದ ಐದನೇ ಜಾರ್ಜಿಯವರ ಸಿಂಹಾಸನಾರೋಹಣವು.

ತಂತೀ ವರ್ತಮಾನಸಾರವು.

ಲಂಡನ್, ಮೇ ತಾ ೭ನೇ ಶನಿವಾರ —ಪ್ರಿವಿ ಕೌನ್‌ಸಿಲ್ ಎಂಬ ಮಂತ್ರಿಗಳ ಸಭೆಯು ಸೆಂಟ್ ಜೇಂಸ್ ಎಂಬ ರಾಜಭವನದಲ್ಲಿ ಕೂಡಿತು. ಜಾರ್ಜ್ ದೊರೆಯವರು ಸಭಾಮಂದಿರಕ್ಕೆ ದಯಮಾಡಿದರು. ರಾಜ್ಯದ ಕೌನ್‌ಸಿಲ್ ಮೆಂಬರುಗಳು ಅವರನ್ನು ದೊರೆಯೆಂದು ಶಾಸನಮಾಡಿದರು. ಚಕ್ರವರ್ತಿಯವರು ಇಸ್ತಿಹಾರನ್ನು ಪ್ರಕಟಿಸಿ ಪಾರ್ಲಿಮೆಂಟಿನವರ ಸಹಾಯವನ್ನು ಪಡೆದು ಕಾನೂನ್ ಅನುಸರಿಸಿ ರಾಜ್ಯಭಾರವನ್ನು ನಡಿಸುತ್ತೇವೆಂದೂ, ರಾಜ್ಯದ ಅಧಿಕಾರಿಗಳು ಅವರವರ ಕೆಲಸಗಳನ್ನು ಎಂದಿನಂತೆ ನಡಿಸಿಕೊಂಡು ಬರತಕ್ಕದ್ದೆಂದೂ ಅಪ್ಪಣೆಕೊಡಿಸಿದರು. ತತ್‌ಕ್ಷಣವೇ ಅರಮನೆಯ ಭಟರಾಜರುಗಳು ಅರಮನೆಯ ಮೆಟ್ಟಿಲುಗಳ ಮೇಲೆ ನಿಂತು, ದೊರೆಯವರಿಗೆ ಸಿಂಹಾಸನಾರೋಹಣವಾಯಿತೆಂದು ಘೋಷಿಸಿದರು. ಕೂಡಲೇ ಲೇಟ್ ದೊರೆಯವರ ವಯಸ್ಸಿಗೆ ಅನುಗುಣವಾಗಿ ೬೮ ತೋಪುಗಳು ಸೆಂಟ್ ಜೇಂಸ ಪಾರ್ಕಿನಲ್ಲೂ ಟವರ್‌ನಿಂದಲೂ ಏಕಕಾಲದಲ್ಲಿ ಹಾರಿಸಲ್ಪಟ್ಟವು. ಅದೇ ಸಮಯದಲ್ಲಿ ಇಸ್ತಿಹಾರುಗಳು ರಾಯಲ್ ಎಕ್ಸ್‌ಛೇಂಜ್, ಚಾರಿಂಗ್‌ಕ್ರಾಸ್, ಟೆಂಪಲ ಬಾರ್ ಎಂಬೀ ಪ್ರಮುಖ ಸ್ಥಳಗಳಲ್ಲಿ ಸಾರಲ್ಪಟ್ಟವು.

ಶ್ರೀ ಜಾರ್ಜ ದೊರೆಯವರು ನಾವೆಯ ಅಧಿಪತಿಯ ದಿರಸನ್ನು ಧರಿಸಿಕೊಂಡು ಸೆಂಟ್ ಜೇಂಸ ಅರಮನೆಗೆ ಸಾರೋಟಿನಲ್ಲಿ ಚಿತ್ತೈಸುವಾಗ್ಗೆ ಅನೇಕ ಸಹಸ್ರ ಪ್ರಜೆಗಳು ಸನ್ಮಾನಪೂರ್ವಕವಾಗಿ ಸಲಾಂಮಾಡಿದರು ಅವರ ಹಿಂದೆ ಮೆ॥ ವಿನ್‌ಸ್ಟನ್ ಚರ್ಚಿಲ್‌ಯವರೂ ಮಠದ ಗುರುಗಳೂ ಹೋದರು.

ಕೌನ್‌ಸಿಲನಲ್ಲಿ ಅನೇಕ ಮಹನೀಯರು ದರ್ಬಾರ್ ದಿರಸಿನಲ್ಲಿ ಕಾದಿದ್ದರು, ಸಭೆಯು ಒಂದು ಗಂಟೆಯ ಹೊತ್ತು ಜರುಗಿತು.

ದೊರೆಯವರು ಜಾರ್ಜ್‌ಯವರು ಕೌನ್‌ಸಿಲ್ ಸಭಿಕರನ್ನು ಕುರಿತು ನನ್ನ ದುಃಖವು ಅಪಾರವಾಗಿರೋಣದರಿಂದ ಬಹಳ ಹೆಚ್ಚಾಗಿ ಮಾತನಾಡಲಾರೆನು ಎಂದು ಹೇಳಿ, ತಮ್ಮ ತಂದೆಯವರಾಡಿದ್ದ ಮಾತನ್ನು ಜ್ಞಾಪಕಕ್ಕೆ ತಂದುಕೊಂಡು, ನನ್ನಲ್ಲಿ ಶ್ವಾಸವಾಡುವುದು ನಿಲ್ಲುವ ತನಕ ಪ್ರಜಾಹಿತವನ್ನು ವೃದ್ಧಿಪಡಿಸುವುದಕ್ಕೆ ಸಾಹಸ ಪಡುತ್ತಾ ಬರುವೆನು. ಈ ವಾಗ್ದಾನವನ್ನು ನಮ್ಮ ತಂದೆಯವರು ನೆರವೇರಿಸಲು ತಮ್ಮ ಸರ್ವ ಶಕ್ತಿಯನ್ನೂ ವಿನಿಯೋಗಿಸಿರುತ್ತಾರೆ ದೇವರ ಕೃಪೆಯಿಂದ ನಾನೂ ಈ ಭಾಗದಲ್ಲಿ ನಮ್ಮ ತಂದೆಯವರ ಜಾಡಿನಲ್ಲಿಯೇ ಕಾರ್ಯಗಳನ್ನು ನಡಿಸಲು ಮನಃಪೂರ್ವಕವಾಗಿ ಪ್ರಯತ್ನಪಡುವೆನು. ನನಗೆ ದೊರೆಯೂ ತಂದೆಯೂ ಹಿತಚಿಂತಕನೂ ಆಗಿದ್ದಂಥಾ ಆ ಮಹಾನುಭಾವನನ್ನು ಕಳೆದುಕೊಂಡೆನಾದದ್ದರಿಂದ ನನಗುಂಟಾದ ನಷ್ಟವನ್ನು ಇಷ್ಟಿಷ್ಟೆಂದು ವಿವರಿಸಲಾರೆನು ಎಂಬೀ ರೀತಿಯಾಗಿ ಅಪ್ಪಣೆಕೊಡಿಸಿದರು. ಕಡೆಯಲ್ಲಿ ಚಕ್ರವರ್ತಿ ಸಾರ್ವಭೌಮರವರು ರಾಜ್ಯಭಾರದ ಸಮಸ್ತ ದಿಗ್ದೆಸೆಗಳಿಂದಲೂ ಪ್ರಜೆಗಳು ಅನುತಾಪಪಟ್ಟು ವರ್ತಮಾನ ಕಳುಹಿಸಿರುವುದನ್ನು ಸೂಚಿಸಿ, ರಾಜ್ಯದ ಕಾಯಿದೆ ಕಾನೂನುಗಳ ಪ್ರಕಾರ ಕಾರ್ಯಗಳನ್ನು ನಡಿಸಿಕೊಂಡು ಬರುವುದರಲ್ಲಿ ನಿರತನಾಗಿರುತ್ತೇನೆಂದು ಹೇಳಿ ಮುಕ್ತಾಯಮಾಡಿದರು.

ಅಂತರಿಕ್ಷದಲ್ಲಿ ಸಂಚರಿಸುವ ವಿಮಾನವನ್ನು ನಡೆಸುವದರಲ್ಲಿ ಅತ್ಯಂತ ಪ್ರಸಿದ್ಧನಾದ ಪಾಲ್ಹನ್ ಎಂಬವನಿಗೆ ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ ಡೆಯಿಲಿ ಮೆಯಿಲ್ ಎಂಬ ವರ್ತಮಾನಪತ್ರಿಕೆಯ ಎಡಿಟರವರು ಒಂದೂವರೆ ಲಕ್ಷ ರೂಪಾಯನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ. ಅದೂ ಅಲ್ಲದೆ ಲಂಡನ್ ಪಟ್ಟಣದಿಂದ ಎಡಿನ್‌ಬರ್ಗ್ ಪಟ್ಟಣಕ್ಕೆ ಹೋಗಿ ಪುನಹ ಲಂಡನ್ ಪಟ್ಟಣಕ್ಕೆ ವಾಪಸು ಬಂದರೆ ಇನ್ನೂ ಒಂದೂವರೆ ಲಕ್ಷ ರೂಪಾಯಿ ಕೊಡುವದಾಗಿ ಪ್ರಕಟಿಸಿರುತ್ತಾರೆ.

Printed and Published by the Rev. H. GULLIFORD
Proprietor and Manager, Wesleyan Mission Press,
Mysore. 12/5/1910.

REGISTERED
M.20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೧೦ ನೇ ಇಸವಿ ಮೇ ತಾರೀಖು ೧೯ ನೇ ಗುರುವಾರ. ಸಂಚಿಕೆ ೫೧

ಲಾ ಪುಸ್ತಕಗಳು

45-7

(1) ವ್ಯವಹಾರನಿರ್ಣಯ ಕ್ರ 1 ರೂ. 12 ಆ ಸಮಸ್ತ ವ್ಯವಹಾರಗಳೂ, ನಮೂನೆಗಳೂ ಉಳ್ಳ ಲಾ ಪುಸ್ತಕ. (2) ತಜಾವಿಜಾ. ಕ್ರ 10 ಆ. ಕೃಷ್ಯಭಿವೃದ್ಧ್ಯರ್ಥವಾದ ಲಾ (3) ಕನ್ನಡ ಲಾ ರಿಪೋರ್ಟು ವರ್ಷದ ಚಂದಾ 1 ರೂ 3 ಆ. ಕೋರ್ಟು ಫೈಸಲುಗಳ ವಾಸಪತ್ರಿಕೆ ಅಪೇಕ್ಷಕರು ಪ್ಲೀಡರ ಎಂ ಮಲ್ಲಾರಾಧ್ಯರು, ಚಾಮರಾಜಪೇಟೆ, ಬೆಂಗಳೂರು ಸಿಟಿ ಇವರಿಗೆ ಬರೆಯುವುದು

ಸಂಗೀತಪಾರಿಜಾತವೆಂಬ ಹಾಡಿನ ಪುಸ್ತಕ.

20 15

ಕ್ರಯ 0—4—0.

ವಿಳಾಸಗಳು—ಮೈಸೂರು, ಮರ್ಕಂಟೈಲ್ ಯೂನಿಯನ್, ಸಿ ಎಲ್ ಎಸ್ ಬುಕ್ ಡಿಪೋ, ತುಮಕೂರು ಜಿ ಎಸ್ ಕನ್ನಯ್ಯಶೆಟ್ಟಿ ಅಂಡ್ ಕೊ, ಮಂಗಳೂರು ಉಲ್ಫ್ ವಾಟ್ಸ್ ಬೆಂಗಳೂರು ಸಿಟಿ ಮಿಷನ್ ಬುಕ್ ಡಿಪೊ

ಸುಗಂಧಗಳು.

1-26

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧೨, ೫, ೩, ೨-೮ ೦, ೧ ೪ ೦ ಬತ್ತಿಗಳು ೧ ತೊಲೆಗೆ ರೂ ೧ ದೊಡ್ಡ ಪೊಟ್ಟಣ ೧ ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ. ಎಲ್ ಉಪಾಧ್ಯಾಯ, ಮೈಸೂರು.

ಸತ್ಯವೂ ಅಗ್ಗವೂ ಆದ ಅಂಗಡಿ

41-7

ರೂ ೩ ರಿಂದ ೨ ೧೫-0 ಗೆ ಇಳಿಸಿದೆ

೩೦ ಗಂಟೆ ನಡೆಯುವ ೧೦ ವರುಷದ ಗ್ಯಾರಂಟಿ ಉಳ್ಳ ಸುಂದರವೂ ಗಟ್ಟಿಯೂ ಅಗ್ಗವೂ ಆದ ಲೀವರ್ ಜೇಬಿನ ಗಡಿಯಾರವನ್ನು ಸೊಗಸಾದ ಸರಪಣಿ, ೧೦೦ ಪೋಸ್ಟ್ ಕಾರ್ಡುಗಳ ಸಮೇತ ಪೋಸ್ಟೇಜು ಸೇರಿ ೩ ರೂ ಗೆ ಮಾರುತ್ತಿದ್ದದ್ದನ್ನು ಕೆಲವು ಕಾಲ ಮಾತ್ರ ರೂ ೨-೧೫ ಗೆ ಕೊಡುತ್ತೇವೆ ಬೇಗ ಬರೆದುಕೊಳ್ಳಿ ಒಪ್ಪದಿದ್ದರೆ ಹಣ ವಾಪಸು ಕೊಡುತ್ತೇವೆ ನಮ್ಮ ವಿಳಾಸ —

ಎಂ ಎ. ಫಟಾಲಾಲ್ ಕಂಪನಿ, ಚಿತ್ತೂರು. ನ. ಆರ್ಕಾಟು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3 20

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ತೂಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ನಾನಾ ಕೆಂಪು, ಕಪ್ಪು, ಜಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ. ೬ ಆ , ೧ ರೂ ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೩

ದಾರದ ಟೋಪಿಗಳು ೧ ರೂ ೧೨ ಆ. , ೧ ರೂ. ೮ ಆ ; ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

40-10

ಶೋಕಮಯಹರ ಕಸ್ತೂರಿಮಾತ್ರೆ.

ಹೊಸ ತರಹಾ! ವಾಸನೆಯಲ್ಲಿ ಹೆಚ್ಚು!! ಗುಣದಲ್ಲಿ ಅಧಿಕ!!!

ಈ ಮಾತ್ರೆಗಳನ್ನು ಚಿನ್ನದರೇಖು—ಹವಳದಭಸ್ಮ—ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಕೇವಲ ಗುಣಕಾರಿಗಳೂ—ದೋಷರಹಿತಗಳೂ ಆದ ಬಹು ಪದಾರ್ಥಗಳ ಮಿಶ್ರದಿಂದ ಮೊದಲಿಗಿಂತ ಸುವಾಸನೆ— ರುಚಿ—ಗುಣಗಳು ಬಹಳವಾಗಿರುವಂತೆಯೂ—ಬಾಯಿಯಲ್ಲಿ ಶಾನಾಗಿ ಕರಗುವಂತೆಯೂ—ಎಷ್ಟು ದಿನಗಳಿಟ್ಟರೂ ಕೆಡದಂತೆಯೂ ತಯಾರಿಸಿರುತ್ತೇವೆ

ವೀಳೆಯದೆಲೆಯೊಡನೆ ಅಥವಾ ಹಾಗೇ ಉಪಯೋಗಿಸುತ್ತಾ ಬಂದರೆ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಬರಬಹುದಾದ ನಾನಾ ರೋಗಗಳನ್ನು ಬಾರದಂತೆ ಮಾಡುತ್ತದೆ—ಮತ್ತು ಗುಣಪಡಿಸುತ್ತದೆ

ವಾಯು, ಸಂದುಗಳ ನೋವು—ಶೀತವಾತ—ಹೊಟ್ಟೆನೋವು ಅಗ್ನಿನಷ್ಟ—ಮೈನಡುಕ—ಮೈಭಾರ—ಕೈಕಾಲುಗಳ ಉರಿತ—ಹೊಟ್ಟೆ ಉರಿ—ಜ್ವರ—ಚಳಿಜ್ವರ—ನೆಗಡಿ, ಕೆಮ್ಮಲು—ಹಲ್ಲುನೋವು—ಬಲಹೀನತೆ—ಅರೋಚಕ—ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ವಾಸಿಮಾಡುತ್ತದೆ

ತಾಂಬೂಲದೊಡನೆ ಸೇವಿಸುತ್ತಾ ಬಂದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಯೆಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ ಮಲಬದ್ಧವಿದ್ದರೆ ದಿನಕ್ಕೆ ಒಂದು ವೇಳೆ ಆಗುವಂತೆ ಮಾಡಿ ನೀರು ಹವಾಗಳ ಬದಲಾವಣೆಗಳನ್ನು ಸರಿಪಡಿಸಿ ಕಾಡು ಮಲೆನಾಡುಗಳಲ್ಲಾದರೂ ಯಾವ ಹಾಯಿಲೆಗೂ ದಾರಿಗೊಡದೆ ರಕ್ತದಲ್ಲಿರುವ ದೋಷಗಳನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

೩೦ ಮಾತ್ರೆಯುಳ್ಳ ಕುಪ್ಪಿ ಬೆಲೆ 4 ಆಣೆ—ಐದು ಕುಪ್ಪಿಗೆ 1 ಹೆಚ್ಚು 10 ರಿಂದ 12 ರ ವರೆಗೆ ಟ ಮ 1 ಆಣಾ—

ಯೋಗ್ಯತಾಪತ್ರ —

"ತಮ್ಮ ಶೋ ಕಸ್ತೂರಿ ಮಾತ್ರೆಗಳಿಂದ ಬಹಳ ಮಂದಿಗೆ ಗುಣವಾಯಿತು. ಅದರ ಉಪಯೋಗವನ್ನು ಈ ಚಿಕ್ಕ ಕಾರ್ಡಿನಲ್ಲಿ ಬರೆಯಲು ಸಾಧ್ಯವಲ್ಲ"

ಹೆಚ್ ಭೀಮಯ್ಯನವರು, ಹಾರ‍್ನಹಳ್ಳಿ,
ಅರಸೀಕೆರೆ ತಾಲ್ಲೂಕು

"ಶೋ ಕಸ್ತೂರೀ ಮಾತ್ರೆಗಳಿಂದ ಇಲ್ಲಿ ಬಹಳ ಜನಗಳಿಗೆ ಜ್ವರ ಮತ್ತು ಅಜೀರ್ಣಾದಿಗಳು ಗುಣವಾಗಿವೆ ಪುನಃ ೬ ಕುಪ್ಪಿಗಳನ್ನು ಕಳಿಸಿಕೊಡಿ"

ಹೆಚ್ ರಾಘವೇಂದ್ರರಾವ್ ಅವರು, ಹೆಡ್ಮಾಸ್ಟರ್,
ಗೊಡಬನಹಾಲ್ ಚಿತ್ರದುರ್ಗ

ವಿಳಾಸವನ್ನು ತಿಳಿಯುವ ಹಾಗೆ ಬರೆಯಿರಿ—

ವಿಳಾಸ— ಶ್ರೀ. ಶ್ರೀತಾರಾಘವ ವೈದ್ಯಶಾಲಾ, ಮೈಸೂರು.

ಈ ಪುಸ್ತಕವನ್ನು ನೋಡಿರುವಿರಾ!

ಗತಿಸಿದ ಎಡ್ವರ್ಡ್ ಸಾರ್ವಭೌಮರ ಜೀವಮಾನದ ಚರಿತ್ರೆ

63—1

ಈ ಪುಸ್ತಕದಲ್ಲಿ ಗತಿಸಿದ ಸಾರ್ವಭೌಮರ, ದುಃಖಸಾಗರದಲ್ಲಿ ಮುಳುಗಿರುವ ಅವರ ಪತ್ನಿಯವರಾದ ಅಲೆಕ್ಸಾಂಡ್ರಾ ಮಹಾರಾಣಿಯವರ, ಲಂಡನ್ ಮಹಾನಗರದಲ್ಲಿ ಅವರು ವಾಸಮಾಡುತ್ತಿದ್ದ ಬಕಿಂಗ್ಹಮ್ ಅರಮನೆಯ (ಈ ಅರಮನೆಯಲ್ಲಿ ಚಕ್ರವರ್ತಿಗಳು ಕಾಲವಾದರು), ಐಲ್ ಆವ್ ವೈಟ್ ದ್ವೀಪದಲ್ಲಿ ಕಟ್ಟಿರುವ ಆಸ್ಬರ್ನ್ ಅರಮನೆಯ (ಈ ಅರಮನೆಯಲ್ಲಿ ಚಕ್ರವರ್ತಿಗಳು ತಮ್ಮ ಬಾಲ್ಯವನ್ನು ಕಳೆದರು) ಸ್ಕಾಟ್ಲಾಂಡಿನಲ್ಲಿರುವ ಬಾಲ್ಮೊರಲ್ ಅರಮನೆಯ (ಈ ಅರಮನೆಯಲ್ಲಿ ಚಕ್ರವರ್ತಿಗಳು ಬೇಸಿಗೆ ಕಾಲವನ್ನು ಕಳೆಯುತ್ತಿದ್ದರು), ಪುರಾತನ ಕಾಲದಿಂದಲೂ ಲೋಕಪ್ರಸಿದ್ಧವಾಗಿರುವ ವಿಂಡ್ಸರ್ ರಾಜಭವನದ (ಬ್ರಿಟಿಷ್ ಚಕ್ರಾಧಿಪತ್ಯದ ಅರಸರು ಅನೇಕ ಶತಮಾನಗಳಿಂದಲೂ ಈ ಅರಮನೆಯಲ್ಲಿ ವಾಸಮಾಡಿಕೊಂಡು ಬಂದಿರುತ್ತಾರೆ ಈ ಅರಮನೆಯ ಉದ್ಯಾನವನದಲ್ಲಿರುವ ಫ್ರಾಗ್ಮೋರ್ ಎಂಬ ಶೃಂಗಾರವಾದ ಸಮಾಧಿಯಲ್ಲಿ ಗತಿಸಿದ ಚಕ್ರವರ್ತಿಗಳನ್ನು ಭೂಸ್ಥಾಪನೆ ಮಾಡುವರು), ಈಗ ಚಕ್ರವರ್ತಿಗಳಾಗಿರುವ ಜಾರ್ಜ್ ಸಾರ್ವಭೌಮರ ಮತ್ತು ಅವರ ಪತ್ನಿಯವರ, ಸ್ಯಾಂಡ್ರಿಂಗ್ಹಮ್ ಅರಮನೆಯ, (ಈ ರಾಜಭವನದಲ್ಲಿ ಗತಿಸಿದ ಚಕ್ರವರ್ತಿಗಳು ವ್ಯವಸಾಯ ಪಶುಪಾಲನೆ ಮೊದಲಾದ ಉದ್ಯೋಗಗಳಲ್ಲಿ ಆಸಕ್ತರಾಗಿದ್ದರು) ಮಾರ್ಲ್ ಬರೋ ಅರಮನೆಯ, ಇಂಗ್ಲಾಂಡ್ ದೇಶದ ರಾಜರು ಅನೇಕ ಶತಮಾನಗಳಿಂದಲೂ ಪಟ್ಟಾಭಿಷೇಕ ಕಾಲದಲ್ಲಿ ಉಪಯೋಗಿಸುತ್ತಾ ಬಂದಿರುವ ಪುರಾತನವಾದ ಕುರ್ಚಿಯ ಪಟಗಳು ಸುಂದರವಾಗಿ ಅಚ್ಚು ಹಾಕಲ್ಪಟ್ಟಿವೆ ಈ ಪುಸ್ತಕದಲ್ಲಿ ಗತಿಸಿದ ಚಕ್ರವರ್ತಿಗಳ ಜನನ, ಬಾಲ್ಯ, ವಿದ್ಯಾಭ್ಯಾಸ, ವಿವಾಹ, ದೇಶಸಂಚಾರ, ವ್ಯವಸಾಯ ಮೊದಲಾದ ಕಸಬುಗಳಲ್ಲಿ ಅವರಿಗಿದ್ದ ಅಪಾರವಾದ ಆಸಕ್ತಿ, ಇವೇ ಮೊದಲಾದ ಅನೇಕ ಸಂಗತಿಗಳು ಬಹು ಪರಿಷ್ಕಾರವಾಗಿಯೂ ರಸಿಕವಾಗಿಯೂ ಬರೆಯಲ್ಪಟ್ಟಿವೆ. ಅತ್ಯುತ್ತಮವಾದ ಗ್ಲೇಜ್ ಕಾಗದದ ಮೇಲೆ ನೇತ್ರಾನಂದಕರವಾದ ಅಕ್ಷರಗಳಿಂದ ಅಚ್ಚು ಹಾಕಲ್ಪಟ್ಟಿರುವುದು. ದೊಡ್ಡ ಸೈಜು. ಪ್ರತಿಗಳು ಮುಗಿದು ಹೋಗಬಹುದಾದ್ದರಿಂದ ವಾಚಕ ಮಹಾಶಯರು ಜಾಗ್ರತೆಯಲ್ಲಿಯೇ ಬರೆದು ತರಿಸಿಕೊಳ್ಳಿ. ಪುಸ್ತಕದ ಕ್ರಯ ನಾಲ್ಕು ಆಣೆ ಮಾತ್ರ. ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ಆರು ಆಣೆ ಆಗುತ್ತದೆ.

ವಿಳಾಸ —ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

5 52

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣವನಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮುಕ್ತಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಜೆ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಪೀಟರ್ಸನ್,

೩೭ ವೇದಮಲಪಿಳ್ಳೆ ಬೀದಿ, ವೇಪೇರಿ, ಮದರಾಸ್

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

8 20



ಎನ್ನೆಲುವಿನ ನೋವು ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು ತಲೆನೋವು, ಬಚ್ಚಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೆ ನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಂಟುವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದ ನಿದ್ದೆ ಹತ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲಿಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಹು ಉಪಯೋಗಕ್ಕೊಸ್ಕರವೇ ಮತ್ತು ಕೆಳಗೆ ನಮೂದಿಸುವ ರೋಗಗಳಿಗೆ ತಕ್ಕದಾದ ಗುಣಕಾರಿಯು [26 12

ತಲೆನೋವು ಗಂಟು ಉಬ್ಬುವದು ವಾತ ಸಂಧಿವಾತ ಉಳುಕು ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು ವಿಶೇಷ ಘಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಂಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦ ೬ ೦ ೭ ಡಬ್ಬಿಗಳಿಗೆ ೪ ೦ ೦

ಅಸ್ತಾಮಿಶ್ರಣ	೨ ೦ ೦
ಚೇಳುಕಡಿತದಮದ್ದು	೦ ೮ ೦
ಪ್ರವ್ಯಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದಿಗಳಿಗೆ	೦ ೮ ೦
ಜುಲಾಬು ಮಾತ್ರೆ—ಜುಲಾಬಿಗೆ	೦ ೮ ೦
ನೇತ್ರಾಂಜನ—ಮಂದ ದೃಷ್ಟಿಗೆ	೦ ೪ ೦
ಮಜ್ಜ ಮುಲಾಮು—ಮಕ್ಕಳ ಖಜ್ಜಿಗೆ	೦ ೩ ೦
ಕೇಶವರ್ಧನಿ ತೈಲ—ತಲೆಯ ಮೆದುಳಿಗೆ	೧ ೦ ೦
ಕಫನಾಶಕ ಚೂರ್ಣ—ಅಸ್ತಮ ರೋಗಕ್ಕೆ	೦ ೮ ೨

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫ್ರೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — "ಅಮೃತಾಂಜನ," ಮುಂಬಯಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು ಎದೆನೋವು ಬಾಯಾರಿಕೆ, ಬಳಲಿಕೆ ಎಚ್ಚರ ತಪ್ಪುವುದು ತಲೆನೋವು ತಲೆ ಕಣ್ಣುಮೊಬ್ಬು ತಲೆ ತಿರುಗುವಿಕೆ ಮೈನೋವು ಕೀಲುನೋವು ಮರವು ನಿಶ್ಶಕ್ತಿ ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ ವಾಯು ಮೈಬಾವು ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳಿಂದ ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರದ್ರಿಯಗಳನ್ನು ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [6 38

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ ಪಿ ಒ ೨೦, ಬೊಂಬಾಯಿ ಬಾಕ್ಸ್—ಇವರಲ್ಲಿ ದೊರೆಯುವುದು

WANTED.

59 4

Vacancy for female student compounder who must be able to read and write English Scholarship 6 Rs increasing Candidate who must not be less than 17 years of age, must apply in her own hand writing to

DR ELSIE T WATTS,
Wesleyan Mission Hospital
Mysore City

ಇತ್ತ ಲಕ್ಷ್ಯಕೊಡಿರಿ

ಸುಮಾರು ಅನೇಕ ಕಾಲಗಳಿಂದ ನಮ್ಮ ಗೃಹಸ್ಥರು ಘಡಿಯಾರಗಳನ್ನು ಕೇಳುವದರಿಂದ ಈಗ ಸೀಮೆಯಿಂದ ಕೆಲವು ವಾಚುಗಳನ್ನು ತರಿಸಿ ಬಿಕರಿಗೆ ಇಟ್ಟಿದ್ದೇವೆ

ಓವನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಲಿವರ್ ಘಡಿಯಾರವು ಸರಪಣಿ ಪೆಟಿಗೆ ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ಕ್ರಯ ೩ ೨ ೦ ಮೂರು ರೂಪಾಯಿ ಎರಡು ಆಣೆ ಈ ಗಡಿಯಾರಗಳು ಗುಣದಲ್ಲಿಯೂ ಕರಾರಿನಲ್ಲಿಯೂ ಮಜಬೂತಿನಲ್ಲಿಯೂ ಶ್ರೇಷ್ಠವಾದವೆಂದು ದೃಢವಾಗಿ ಹೇಳುತ್ತೇವೆ

ವಿಳಾಸ—ದಿ ಉಲನ್ ಮಾರ್ಟ್

ಮಂಗಳೂರು

ಪ್ರಸಿದ್ಧ ಪತ್ರಿಕೆ.

53 5

ನಾವು ಈಗತಾನೇ ಸೀಮೆಯಿಂದ ಕೆಂಪು, ಯಣ್ಣೆ ಕೆಂಪು, ಮಂದ ಕೆಂಪು ಕಪ್ಪು, ಕಪ್ಪು ಕೆಂಪು ಮಿಶ್ರದ ಮಿಕ್ಸೆಡ್ ಶಾಪಿ ಬಣ್ಣದ ಉಲನ್ನನ್ನು ತರಿಸಿದೇವೆ ಪೌನ್ ೧ ಕ್ಕೆ ೨—೧೦—೦ ರ ಲಾಗಾಯಿತು ೪—೦—೦ ರ ವರಿಗೆ ಮೇಲ್ಕಂಡ ಉಲನ್ನಲ್ಲಿ ತಯಾರಾದ ಟೋಪಿಗಳು ೧ ಕ್ಕೆ ೦—೯—೦ ಲಾಗಾಯಿತು ೧—೮—೦ ರ ವರಿವಿಗ ರೇಷ್ಮೆ ಚುಕ್ಕೆ ಟೋಪಿ ೧ ಕ್ಕೆ ೧—೧೨—೦ ೨—೦—೦ ಡಜನ್ ಗಟ್ಲೆ ತರಿಸಿಕೊಂಡರೆ ಶೇಕಡಾ ೬ ಡಿಸ್ಕೌಂಟು ಸಿಕ್ಕುತ್ತೆ ನಮ್ಮ ಕಂಪೆನಿಯ ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿ

ಜಿ ಯಸ್ ಕಣ್ಣಯ್ಯಶೆಟ್ಟಿ

ಉಲ್ಲನ್ ಕ್ಯಾಪ್ ಮ್ಯಾನೇಜರ್, ತುಂಕೂರು

ಸನ್ ೧೮೭೬ ರಿಂದ ೧೯೦೬ ವರೆಗೆ

ಕಾಲದ ಪರೀಕ್ಷೆ !

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6-20

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು ನಾನಾ ತರದ ಕೆಮ್ಮಲು

ಸಕಲವಿಧ ಕೈತ್ಯಗಳು ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

'ವೃತ್ತಾಂತ ಪತ್ರಿಕೆ' ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೨—೦
ಪರಸ್ಥಳದವರು ಅಫೀಸಿನಿಂದ ಅಂಚೆಯ ಮೇಲ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಟ್ ಸೇರಿ	ರೂ ೧—೧೪—೦
" " ೬ " "	" ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

14 18

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇದ್ದುಕೊಂಡಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕಾ ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು)	ಪ್ರತಿಯೊಂದಕ್ಕೆ	0—0—6
(80 ಪೇಜು)		0—1—0
(160 ಪೇಜು)		0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10–18]

ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

22—4—1910 ರಿಂದ 29—4—1910 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	1	0	0	0
ಮೈಸೂರ್ ,,	6	4	18	11
ಕೋಲಾರ್ ,,	0	0	22	14
ಕೋಲಾರ ... ದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	3	3	0	0
ಕಡೂರ್ ,,	0	0	0	0
ಶಿವಮೊಗ್ಗಾ ,,	0	0	0	0
ಜುಮ್ಲಾ	10	7	40	25

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸಾಧಾರಣನಾಮ ಸಂವತ್ಸರದ ವೈಶಾಖ ಶುದ್ಧ ದ್ವಾದಶಿ ಶುಕ್ರವಾರದಿಂದ ವೈಶಾಖ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಧ ವೃಷಭ ಮಾಸ
20	ಶುಕ್ರ ,,	ದ್ವಾದಶಿ	47 35	ಹಸ್ತ	5 52	7
21	ಶನಿವಾ	ತ್ರಯೋದಶಿ	45 0	ಚಿತ್ತ	1 32	8
22	ರವಿವಾ §	ಚತುರ್ದಶಿ	43 31	ಸ್ವಾ	3 54	9
23	ಚಂದ್ರ	ಚತುರ್ದಶಿ	43 18	ವಿಶಾ	4-36	10
24	ಕುಜ *	ಪೌರ್ಣಮಿ	44 16	ಅನು	6-53	11
25	ಬುಧ	ಪಾಡ್ಯ	46 37	ಜ್ಯೇಷ್ಠ	9-38	12
26	ಗುರು	ಬಿದಿಗೆ	50 0	ಮೂಲ	14 1	13

, ವರದರಾಜ ಜಯಂತಿ, ಶಂಕರಾಚಾರ್ಯರ ಪುಣ್ಯದಿನ

ಶನಿಪ್ರದೋಷ

§ ಸೌರಚಾಂದ್ರ ಶ್ರೀನೃಸಿಂಹಜಯಂತಿ

* ವ್ಯಾಸಪೂರ್ಣಿಮಾ, ಅರ್ಧನಾರೀಶ್ವರವ್ರತ ಕಾಚಾಂ ಗರುಡೋತ್ಸವ, ಶ್ರೀ ಲಕ್ಷ್ಮೀರಮಣಸ್ವಾಮಿ ರಥ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ ರೂ	೧೩ ೮-೦	೧೪ ೮ ೦
ಕೆಂಬೂತಿ ಅಕ್ಕಿ ಅವಲ್	೧೪-೪-೦	೧೪ ೮ ೦
,, ದುಯಂ	೧೩ ೮-೦	೧೪-೦ ೦
ಜಾಬ್ರಾಣಿ ಅಕ್ಕಿ	೧೨ ६ ೦	೧೫ ೮ ೦
ಸಣ್ಣಕ್ಕಿ ಅವಲ್	೧೫-೮-೦	೧೬-೪ ೦
,, ದುಯಂ	೧೪-೦ ೦	೧೬-೦ ೦
ತೊಗರೀ ಬೇಳೆ ಪಲ್ಲಾ ೧ ಕ್ಕೆ	೧೨ ೮ ೦	೧೪ ೮-೦
,, ದುಯಂ	೧೨ ೦-೦	೧೪ ೦-೦
ಹೈಕ್ ರಾಗಿ ಪಲ್ಲಾ ೧ ಕ್ಕೆ	೭ ೮-೦	೬-೮-೦
ಸಾಧಾರಿ	೭ ೪ ೦	೬-೦ ೦
ಜೋಳ	೭ ೮ ೦	೮-೪ ೦
ಹಲಸಂದೆ ಪಲ್ಲಾ ೧ ಕ್ಕೆ	೧೧ ೦-೦	೧೨ ೮ ೦
ಬಿಳೀ ಅವರೆ	೧೧-೦ ೦	೧೧ ೦-೦
ಹೆಸರು	೧೧ ೪-೦	೧೧ ೦ ೦
ಉದ್ದು	೧೪ ೦-೦	೧೨-೦ ೦
ಕಡಲೆ	೧೨-೮ ೦	೧೦ ೦ ೦
ಎಳ್ಳು ಸೇ ೧೭೭ ಕ್ಕೆ	೨೦-೦ ೦	೨೦-೦-೦
ಹುರುಳಿ	೮-೨ ೦	೯-೪ ೦
ಹರಳು ೧೨೭ ಸೇರಿಗೆ	೧೪ ೦ ೦	೧೧-೦-೦
ಸೀಗೇಕಾಯಿ ಮಣ ೧ ಕ್ಕೆ	೨-೪-೦	೨ ೦-೦
ಮೆಣಸಿನಕಾಯಿ	೫ ೮-೦	೪-೧೨-೦
,, ದುಯಂ	೫ ೦ ೦	೩ ೧೨ ೦
ಬೆಲ್ಲ ದೊಡ್ಡ ಅಚ್ಚು	೮-೦-೦	೫ ೨ ೪ ೦
ಒಳ್ಳೆಣ್ಣೆ ಮಣ ೧ ಕ್ಕೆ	೫ ೪ ೦	೫-೪ ೦
ಹರಳೆಣ್ಣೆ ,,	೫ ೮ ೦	೫-೦ ೦
ಕೊತ್ತುಂಬರಿ ಪಲ್ಲಾ ೧ ಕ್ಕೆ	೧೪-೦ ೦	೧೨ ೮ ೦
ಉಪ್ಪು ,,	೫ ೮-೦	೫-೨-೦
ಹುಣಸೇ ಹಣ್ಣು	೧ ೧೨-೦	೧-೫ ೦
,, ಹಳೇದು	೧ ೮-೦	೧-೬-೦
ತುಪ್ಪ ಮಣ ೧ ಕ್ಕೆ	೧೭ ೧೨ ೦	೧೪ ೦ ೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	೫ ६ ೦	೪-೧೨ ೦
ತೆಂಗಿನಕಾಯಿ ೧೦೦ ಕ್ಕೆ	೫ ೦-೦	೫-೦-೦
ಅರಶಿನಕಾಯಿ ಮಣ ೧ ಕ್ಕೆ	೦ ೧೨ ೦	೦ ೧೪-೦
ಅಂಟ್ವಾಳದ ಕಾಯಿ ಮಣ ೧ ಕ್ಕೆ	೦-೧೨-೦	೦-೧೫ ೦
ಚಿನ್ನ (ಪೌನ್) ಕೆಂಪು	೧೫-೭-೦	೧೫-೬ ೦
,, ,, ಪಸಿಮೆ	೧೬-೦ ೦	೧೬-೦ ೦
,, ,, ಗಟ್ಟಿ ತೊಲ ೧ ಕ್ಕೆ	೨೪-೮-೦	೨೪-೪-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೭೩-೦ ೦	೭೩-೦-೦

ಹಂಪೆಯು

ಪೂರ್ವದಲ್ಲಿ ಹಿಂದುಸ್ಥಾನದಲ್ಲಿ ಬಹಳೇ ಪ್ರಖ್ಯಾತಿಯನ್ನು ಪಡೆದ ವಿಜಯನಗರ ರಾಜ್ಯದಲ್ಲಿ ಹಂಪೆ ಎಂಬುದೊಂದು ಕ್ಷೇತ್ರ ಇರುವದು ಇದು ಬೆಂಗಳೂರು ಗುಂತಕಲ್ ರೇಲ್ವೇ ಮಾರ್ಗದಲ್ಲಿ ಇರುವ ಹೊಸಪೇಟೆ ಎಂಬ ರೇಲ್ವೇ ಸ್ಟೇಶನ್ನಿಂದ ಸುಮಾರು ಐದು ಮೈಲಿಗಳ ಅಂತರದಲ್ಲಿರುವದು ಹೊಸಪೇಟೆಯಿಂದ ಹಂಪೆಗೆ ಹೋಗಲು ಜಟಕಾ ಎಂಬ ಒಂದು ಕುದುರೆಯ ಗಾಡಿಗಳೂ, ಒಂಟೆತ್ತಿನ ಬಂಡಿಗಳೂ ಸಿಕ್ಕುವವು. ಹೊಸಪೇಟೆಯಿಂದ ನಾಲ್ಕು ಮೈಲುಗಳ ವರೆಗೆ ರಸ್ತೆಯು ಪ್ರವಾಸಕ್ಕೆ ಬಹಳ ಅನುಕೂಲವಾಗಿರುವದು ಮುಂದೆ ಗಾಡಿಯ ಪ್ರಯಾಣಕ್ಕಿಂತ ನಡೆದು ಹೋಗುವದೇ ಬಹಳ ಹಿತಕರವು ಹೊಸಪೇಟೆಯಿಂದ ಹಂಪೆಯ ವರಿವಿಗೂ ನಾಶವಾಗದೇ ಇರುವ ಪುರಾತನ ಕಟ್ಟಡಗಳ ಕೆಲವು ಭಾಗಗಳು ದೃಗ್ಗೋಚರಕ್ಕೆ ಬರುವವು ಇವುಗಳನ್ನು ನೋಡಿ ನಮ್ಮ ಪೂರ್ವಜರು ಕಟ್ಟಡಗಳನ್ನು ಕಟ್ಟುವದರಲ್ಲಿಯೂ, ಕಲ್ಲು ಕೆತ್ತನೇ ಕೆಲಸದಲ್ಲಿಯೂ ಹೊಂದಿದ್ದ ಪರಿಪೂರ್ಣತೆಯನ್ನು ನೋಡಿ ಮನಸ್ಸು ಆನಂದದಿಂದ ತುಂಬಿ ತುಳುಕುವದು ಹಂಪೆಯಲ್ಲಿ ನೋಡುವದಕ್ಕೆ ಅರ್ಹವಾದ ಸ್ಥಳಗಳು— ವಿರೂಪಾಕ್ಷ ದೇವಾಲಯ, ರಾಮದೇವಾಲಯ, ಹಂಪಾ ಸರೋವರ, ಇವೇ ಮೊದಲಾದವುಗಳು ಇಲ್ಲಿ ಸುತ್ತುಮುತ್ತಲೂ ಶೋಧಿಸಿ ತೆಗೆದರೆ ಅನೇಕ ಶಿಲಾ ಲೇಖನಗಳು ದೊರೆಯುವವು ಮೊಗಲಾಯ ರಾಜ್ಯವು ಇದುವರೆಗೂ ಆಳುತ್ತಾ ಬಂದಿದ್ದರೆ ನಮ್ಮ ಹಿಂದೂ ಜನರ ದೇವಾಲಯಗಳು ನಾಮಶೇಷವಾಗುತ್ತಿದ್ದವೆಂಬುವದರಲ್ಲಿ ಏನೂ ಸಂದೇಹವಿಲ್ಲವೆಂಬುವದು ಈ ಸ್ಥಳವನ್ನು ನೋಡಿದರೆ ಚನ್ನಾಗಿ ಗೊತ್ತಾಗುವದು ಇದನ್ನು ನೋಡಿ ನಾವು ನಮ್ಮ ದಯಾಪೂರ್ಣವಾದ ಇಂಗ್ಲೀಷ್ ರಾಜ್ಯಭಾರಕ್ಕೆ ಎಷ್ಟು ಕೃತಜ್ಞತೆ ಉಳ್ಳವರಾಗಿದ್ದರೂ ಅದು ಕೊಂಚವೇ ಆಗಿರುತ್ತದೆ ಇತಿಹಾಸಾಭಿರುಚಿಯುಳ್ಳವರೂ, ಇತಿಹಾಸ ಶೋಧಕರೂ ಅವಶ್ಯವಾಗಿ ಈ ಸ್ಥಳಕ್ಕೆ ಒಂದಾವರ್ತಿಯಾದರೂ ಹೋಗಿ ನೋಡಿಕೊಂಡು ಬರಬೇಕೆಂದು ನಾನು ಅತಿ ಆಗ್ರಹದಿಂದ ಬೇಡುತ್ತೇನೆ

ನಾರಾಯಣ ಕೃಷ್ಣ ಸೋದಕ

ಶ್ರೀಮದ್ ಯುವರಾಜರವರ ವಿವಾಹವು

ಶ್ರೀಮದ್ ಯುವರಾಜರಾದ ಶ್ರೀ ಕಂಠೀರವ ನೃಸಿಂಹರಾಜ ಒಡೆಯರ್ ಬಹದ್ದೂರವರ

ವಿವಾಹಮಹೋತ್ಸವ ಕ್ರಮಪ್ರದರ್ಶನ ಪತ್ರಿಕೆ

ಸನ ೧೯೧೦ ನೆಯ ಜೂನ ತಾ ೧೫ ನೆಯ ಬುಧವಾರ ಸಾಧಾರಣ ಸಂ ಜ್ಯೇಷ್ಠ ಶುದ್ಧ ೮ —ಈ ಶುಭದಿವಸ ಪ್ರಾತಃಕಾಲ ೮ ಗಂಟೆಯೊಳಗೆ ಬುಧಚಂದ್ರ ಕಾಲಹೋರೆ ಎಣ್ಣೆ ಶಾಸ್ತ್ರ, ಮಂಗಳಸ್ನಾನ ಬೆಳೆದ ನಂತರ ದೇವರುಗಳಿಗೆ ವಿಾಸಲು ಕಟ್ಟಿ ಸುವಾಸಿನೀಪೂಜೆ, ದಂಪತೀಪೂಜೆ ಬೆಳೆಯತಕ್ಕದ್ದು ಇದೇ ದಿವಸ ಪ್ರಾತಃಕಾಲ ೯ ಘಂಟೆಯ ಮೇಲೆ ೧೦ ಘಂಟೆಯೊಳಗೆ ಗುರುಕಾಲಹೋರೆಯಲ್ಲಿ ಶಕುನವನುಸೋಜಯು, ಕಡಗಬಳೆಅಳತೆ ಸ್ತಂಭಮುಹೂರ್ತ ಈ ಮೂರು ಶಾಸ್ತ್ರಗಳಿಗೂ ನಾಲ್ಕುಬೀದಿಗಳಲ್ಲಿ ಜಿಲ್ಲೋವಗೈರೆ ಮರ್ಯಾದೆಗಳೊಡನೆ ಮೆರವಣಿಗೆಯೂ ಗುತ್ತ ಶಕುನವನುಸೋಜಯಕ್ಕೆ ಜಗನ್ಮೋಹನ ಬಂಗಲೆಯಲ್ಲಿ ಅಕ್ಷತೆ ಬೆಳೆಯುತ್ತೆ ಅನಂತರ ಬಳೆ ಮಲಾರಪೂಜೆ, ಗೋಧಿಕಲ್ಲುಶಾಸ್ತ್ರ, ಒಂದಕ್ಕಿ ಒಂದು ಛತ್ರದ ಶಾಸ್ತ್ರಗಳು ಆದನಂತರ ಮದವಣಿಗಶಾಸ್ತ್ರವೂ ಅಕ್ಷತೆಯೂ ಬೆಳೆಯುತ್ತವೆ ನಂತರ ಶ್ರೀಪರಕಾಲಸ್ವಾಮಿಗಳವರ ಪಾದಪೂಜೆ, ದೀಕ್ಷಾವಸ್ತ್ರಧಾರಣೆ ಕಂಕಣಧಾರಣೆಗಳು ಆದ ಮೇಲೆ ಅಷ್ಟವರ್ಗಗಳದ್ರವ್ಯಸಮೇತ ವಿವಾಹ ಮಂಟಪಕ್ಕೆ ಚಿತ್ತೈಸಿ ಸಂಭಾವನೆ ಸಭಾನುಜ್ಞೆ, ಪುಣ್ಯಾಹ, ಮಹಾಮಾತೃಶ್ರೀಯರ ಪಾದಪೂಜೆ ಮಾತಾಪಾದಪೂಜೆ, ನಾಂದೀ ಗ್ರಹಯಜ್ಞ, ಮಾತೃಕಾಪೂಜೆಗಳು ಮೊದಲಾದವು ಬೆಳೆಯುತ್ತವೆ ಈ ಕಾಲದಲ್ಲಿ ಹೆಣ್ಣಿನ ಮನೆಯಲ್ಲೂ ಮೇಲ್ಕಂಡ ಮೇರೆ ಎಣ್ಣೆಶಾಸ್ತ್ರ ಮೊದಲಾದವು ಬೆಳೆಯುತ್ತವೆ ಇದೇ ದಿವಸ ರಾತ್ರಿ ೭ ಘಂಟೆಯ ಮೇಲೆ ೯ ಘಂಟೆಯೊಳಗೆ ಶುಕ್ರಬುಧ ಕಾಲಹೋರೆಯಲ್ಲಿ ವರಪೂಜೆ ನಡೆಯುತ್ತೆ ಅನಂತರ ತಾಂಬೂಲ ಒಪ್ಪಿಸಿಕೊಳ್ಳುವದು ಆದನಂತರ ಉದಕಶಾಂತಿ, ಅಂಕುರ ಪ್ರತಿಷ್ಠೆ ಅಕ್ಷತೆ ಬೆಳೆದನಂತರ ರಾತ್ರಿ ೯ ಘಂಟೆಯ ಮೇಲೆ ೧೦ ಘಂಟೆಯೊಳಗೆ ಚಂದ್ರಕಾಲಹೋರೆಯಲ್ಲಿ ಕೆರೆಯಿಂದ ಸಮಸ್ತ ಮರ್ಯಾದೆಗಳೊಡನೆ ದೇವರನ್ನು ತರತಕ್ಕದ್ದು

ತಾ ೧೬ ನೆಯ ಗುರುವಾರ (೯) —ಈ ಶುಭದಿವಸ ಪ್ರಾತಃಕಾಲ ೯ ಘಂಟೆಯ ಮೇಲೆ ೧೧ ಘಂಟೆಯೊಳಗೆ ಶುಕ್ರಬುಧಕಾಲಹೋರೆಯಲ್ಲಿ ಚೌಲ ಮುಂಜಿ ಬೆಳೆದ ನಂತರ ೧೪॥ ಘಳಿಗೆಯ ಮೇಲೆ ೧೫॥ ಘಳಿಗೆಯೊಳಗೆ ಸಿಂಹಲಗ್ನದಲ್ಲಿ ಉಪನಯನ ಗಾಯತ್ರೀ ಉಪದೇಶ ಬೆಳೆಯತಕ್ಕದ್ದು ಇದೇ ದಿವಸ ಮಧ್ಯಾಹ್ನ ೪ ಘಂಟೆಯಮೇಲೆ ೬ ಘಂಟೆಯೊಳಗೆ ಶುಕ್ರಬುಧಕಾಲಹೋರೆಯಲ್ಲಿ ಸಮಸ್ತ ಮರ್ಯಾದೆಗಳೊಡನೆ ನಾಲ್ಕು ಬೀದಿಯಲ್ಲೂ ಕಾಶಿಯಾತ್ರೆ ಬೆಳೆಯುತ್ತೆ ಅರಮನೆಯ ಆನೆ ಬಾಗಿಲ ಮುಂದೆ ಫಲ ಒಪ್ಪಿಸುವುದು

ತಾ ೧೭ ನೆಯ ಶುಕ್ರವಾರ (೧೦) —ಈ ಶುಭದಿವಸ ಪ್ರಾತಃಕಾಲ ೧೦ ಘಂಟೆಯ ಮೇಲೆ ೧೧ ಘಂಟೆಯೊಳಗೆ ಗುರುಕಾಲಹೋರೆಯಲ್ಲಿ ಮದವಣಿಗರನ್ನು ಮೆರವಣಿಗೆಯಿಂದ ಧಾರೆಗೆ ಕರೆತರುವುದು ನಂತರ ೧೬॥ ಘಳಿಗೆಯ ಮೇಲೆ ೨೦॥ ಘಳಿಗೆಯೊಳಗೆ ಕನ್ಯಾಲಗ್ನದಲ್ಲಿ ಧಾರಾಮುಹೂರ್ತ ಬೆಳೆಯುತ್ತೆ ಈ ಕಾಲದಲ್ಲಿ ಮಧುಪರ್ಕ, ಕನ್ಯಾನಿರೀಕ್ಷಣೆ ಮಹಾಸಂಕಲ್ಪ, ಕನ್ಯಾದಾನ, ಕಂಕಣಧಾರಣೆ ಮಾಂಗಲ್ಯಧಾರಣೆ, ಅಗ್ನಿಮುಖ ಪ್ರಧಾನಹೋಮ, ಅಶ್ಮಾರೋಹಣ, ಸಪ್ತಪದಿಯೇ ಮೊದಲಾದವು ಬೆಳೆಯುತ್ತವೆ ನಂತರ ಬಿಲ್ಲೆತ್ತುಗಳು ಒಪ್ಪಿಸಲ್ಪಡುವವು ಈ ರಾತ್ರಿ ಔಪಾಸನ ಪ್ರಾರಂಭಾನಂತರ ಪ್ರವೇಶಹೋಮ ಅರುಂಧತೀಧ್ರುವದರ್ಶನವಾದ ಮೇಲೆ ಅಕ್ಷತೆ ಬೆಳೆಯುತ್ತೆ

ತಾ ೧೮ ನೆಯ ಸ್ಥಿರವಾರ (೧೧), ತಾ ೧೯ ನೆಯ ಭಾನುವಾರ (೧೨), ತಾ ೨೦ ನೆಯ ಸೋಮವಾರ (೧೩) ಈ ಶುಭದಿವಸಗಳಲ್ಲಿ ಪ್ರಾತಃಕಾಲದಲ್ಲಿ ದಂಪತಿಗಳು ಚಿತ್ತೈಸಿ ಔಪಾಸನ ಅಕ್ಷತೆಗಳು ಬೆಳೆಯುತ್ತವೆ ರಾತ್ರಿ ಔಪಾಸನ ಪ್ರಾರಂಭಾನಂತರ ಉರಟಣೆ ಅಕ್ಷತೆಗಳು ಬೆಳೆಯುತ್ತವೆ ಈ ದಿನ (ಅಂದರೆ ತಾ ೨೦ ನೇ ಸೋಮವಾರ) ಯೂರೋಪಿಯನ ರವರು ಅಕ್ಷತೆ ನೋಡುವದಕ್ಕೆ ಬರುವರು

ತಾ ೨೧ ನೆಯ ಮಂಗಳವಾರ (೧೪) —ಈ ಶುಭದಿವಸ ಪ್ರಾತಃಕಾಲ ಎಣ್ಣೆಶಾಸ್ತ್ರ ಬೆಳೆದನಂತರ ೮ ಘಂಟೆಯ ಮೇಲೆ ೧೧ ಘಂಟೆಯೊಳಗೆ ಶುಕ್ರಬುಧಚಂದ್ರ ಕಾಲಹೋರೆಗಳಲ್ಲಿ ನಾಗಬಲಿಮಹೋತ್ಸವ, ಚೆಂಡುಶಾಸ್ತ್ರ, ಪುಣ್ಯಾಹ, ವಸಂತಮಾಧವಪೂಜೆ, ಅಕ್ಷತೆ ಮೊದಲಾದವು ಬೆಳೆಯುತ್ತವೆ ಆರೋಗಣೆ ಬೆಳಸಿಕೊಂಡು ೩ ಘಂಟೆಯ ಮೇಲೆ ೬ ಘಂಟೆಯೊಳಗೆ ಶುಕ್ರಬುಧಚಂದ್ರಕಾಲ ಹೋರೆಗಳಲ್ಲಿ ದಂಪತಿಗಳು ದಯಮಾಡಿಸಿ ಸ್ತಂಭಪೂಜೆ ಮಂಟಪಪೂಜೆ, ಮಾಡಿಕೊಂಡು ಕಂಕಣವಿಸರ್ಜನೆಗಾಗಿ ದೇವರ ಮನೆಗೆ ಚಿತ್ತೈಸುವರು ಅನಂತರ ದೇವರನ್ನು ಕೆರೆಗೆ ಬಿಜಮಾಡಿಸುವದು ಇದೇ ದಿವಸ ರಾತ್ರಿ ೭ ಘಂಟೆಯ ಮೇಲೆ ೮ ಘಂಟೆ ಯೊಳಗೆ ಗುರುಕಾಲಹೋರೆಯಲ್ಲಿ ವಧೂಪ್ರವೇಶ ಬೆಳೆಯತಕ್ಕದ್ದು

ತಾ ೨೫ ನೆಯ ಸ್ಥಿರವಾರ (ಬ ೩) —ರಾತ್ರಿ ೯ ಘಂಟೆಗೆ ರಾಜಧಾನಿಯಲ್ಲಿ ಮೆರವಣಿಗೆ ಬೆಳೆಯುತ್ತೆ

ವ್ಯವಸಾಯ ವಿಚಾರಗಳು

೧ ವ್ಯವಸಾಯದ ಯಂತ್ರಗಳನ್ನು ನಡಿಸುವುದನ್ನು ಕಲಿಸುವ ಏರ್ಪಾಡು

ಈಚೆಗೆ ಕೆಲವು ಕಾಲದಿಂದ ಕೈಗಾರಿಕೆ ಕೆಲಸಗಳಲ್ಲಿ ಅನೇಕ ವಿಧವಾದ ಯಂತ್ರಗಳು ವಿಶೇಷವಾಗಿ ಉಪಯೋಗದಲ್ಲಿ ಬರುತ್ತಿವೆ ಈ ಯಂತ್ರಗಳ ಬಳಕೆಯನ್ನು ಸರಿಯಾಗಿ ತಿಳಿದು, ಅವುಗಳಿಂದ ಕೆಲಸಮಾಡುವ ಜನರೇ ಅತಿ ವಿರಳ, ಅಲ್ಲದೆ ನೀರು ಹಾಯಿಸುವುದಕ್ಕಾಗಿ ಅನೇಕ ಸ್ಥಳಗಳಲ್ಲಿ ರೈತರಿಗೆ ಆಯಿಲ್ (ಎಣ್ಣೆ) ಇಂಜನ್‌ಗಳನ್ನು ನಡಿಸುವುದಕ್ಕಾಗಿ ಸರಿಯಾದ ಕೆಲಸಗಾರರೂ ಸಿಕ್ಕುವುದಿಲ್ಲ ಆದಕಾರಣ ಇಂಥಾ ಕೆಲಸಗಾರರನ್ನು ತರಬೇತು ಮಾಡುವುದಕ್ಕೋಸ್ಕರ ಮದರಾಸ್ ಗೌರ್ನಮೆಂಟಿನವರು ಕೆಲವು ಏರ್ಪಾಡುಗಳನ್ನು ಮಾಡಿರುತ್ತಾರೆ ಮದರಾಸಿನಲ್ಲಿ ಮೆ॥ ಪಿ ಟಿ ಚೆಂಗಲ್ವರಾಯನಾಯಕರವರು ಧರ್ಮಕ್ಕಾಗಿ ತೆಗೆದಿಟ್ಟಿರುವ ಹಣದಿಂದ ತಾಯಿತಂದೆಗಳಿಲ್ಲದ ಅನಾಥ ಹುಡುಗರಿಗೆ ಕಬ್ಬಿಣದ ಕೆಲಸ, ಮರಗೆಲಸ, ಮುಂತಾದ ಕೈಗಾರಿಕೆಗಳನ್ನು ಹೇಳಿಕೊಡುವುದಕ್ಕಾಗಿ ಒಂದು ಪಾಠಶಾಲೆಯು ಏರ್ಪಡಿಸಲ್ಪಟ್ಟಿರುತ್ತದೆ ಸರ್ಕಾರದವರು ಈ ಪಾಠಶಾಲೆಗೆ ಸ್ವಲ್ಪ ದ್ರವ್ಯ ಸಹಾಯವನ್ನು ಮಾಡಿ, ಅಲ್ಲಿ ಯಂತ್ರಗಳನ್ನು ನಡಿಸುವ ಕ್ರಮವನ್ನು ಕೆಲಸಗಾರರಿಗೆ ಹೇಳಿಕೊಟ್ಟು ತರಬೇತು ಮಾಡುವುದಕ್ಕಾಗಿ ಅನುಕೂಲ ಪಡಿಸಿರುತ್ತಾರೆ

ಆಯಿಲ್ ಇಂಜನ್‌ಗಳನ್ನು ನಡಿಸುವುದಕ್ಕೆ ಡ್ರೈವರುಗಳನ್ನು ಕೊಯಮುತ್ತೂರು ವ್ಯವಸಾಯದ ಕಾಲೇಜಿನಲ್ಲಿ ಏಕೆ ತರಬೇತು ಮಾಡಕೂಡದೆಂಬ ವಿಚಾರವು ಸರ್ಕಾರದವರ ಆಲೋಚನೆಯಲ್ಲಿರುತ್ತದೆ

೨ ತಗ್ಗು ಜಮೀನುಗಳಲ್ಲಿ ಬತ್ತದ ವ್ಯವಸಾಯ

ದಕ್ಷಿಣ ಬರ್ಮಾ ದೇಶದಲ್ಲಿ ತಗ್ಗುಭೂಮಿ ವಿಶೇಷವಾಗಿರುತ್ತದೆ. ಅಲ್ಲಿ ಮಳೆಗಾಲದ ಅಂತ್ಯಭಾಗದಲ್ಲಿ ಅಂದರೆ ಆಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಭಾರೀ ಮಳೆಯಾಗುವುದರಿಂದ ಆ ಪ್ರದೇಶವೆಲ್ಲಾ ನೀರು ಮುಳುಗಡೆಯಾಗುತ್ತದೆ ಕೆಲವು ಕಡೆಗಳಲ್ಲಿ ಭೂಮಿಯ ಮೇಲೆ ಸುಮಾರು ೪ ೫ ಅಡಿ ನೀರು ನಿಲ್ಲುವುದೂ ಉಂಟು ಆ ಸೀಮೆಯಲ್ಲಿ ಮಳೆಗಾಲ ಪ್ರಾರಂಭವಾದ ಕೆಲವು ದಿನಗಳ ಮೇಲೆ ಬೇಸಾಯದ ಕೆಲಸವನ್ನು ಶುರುಮಾಡುತ್ತಾರೆ ಮಳೆ ಬೀಳುತ್ತಿದ್ದು ಜಮೀನು ಒದ್ದೆಯಾಗಿರುವಾಗ ಉಳುಮೆಯ ಕೆಲಸವು ಸಾಗುತ್ತದೆ ಪ್ರಾಯಶಃ ಜೂಲೈ ತಿಂಗಳಲ್ಲಿ ಬಿತ್ತನೆ ಮಾಡುತ್ತಾರೆ ಇದೇ ಆ ಪ್ರಾಂತ್ಯದಲ್ಲಿ ವಾಡಿಕೆಯಾಗಿರುವ ಆರಂಭ ಕಾಲ ಈ ಕ್ರಮವನ್ನನುಸರಿಸಿ ಮೇಲೆ ಹೇಳಿದ ತಗ್ಗು ಪ್ರದೇಶಗಳಲ್ಲಿ ಜೂಲೈ ಮಾಹೆಯಲ್ಲಿ ಪೈರು ಇಟ್ಟರೆ ಮುಂದೆ ಆಗಸ್ಟಿನಲ್ಲಿ ಭಾರೀ ಮಳೆಯಾಗುವುದರಿಂದ ಆಗ್ಗೆ ಸುಮಾರು ೨ ಅಡಿ ಮಾತ್ರ ಬೆಳೆದಿರುವ ಎಳೇ ಸಸಿಗಳ ಮೇಲೆ ನೀರು ನಿಂತು, ಪೈರು ಪೂರ್ಣವಾಗಿ ಕೆಟ್ಟುಹೋಗುತ್ತದೆ ನೀರೆಲ್ಲಾ ಇಳಿದ ನಂತರವಾದರೋ, ಆ ಹೊತ್ತಿಗೆ ಮಳೆಗಾಲವೇ ಮುಗಿದು ಹೋಗಿರುತ್ತದೆ ಮಳೆ ಆಗುವುದೇ ಇಲ್ಲ ಆದಕಾರಣ ಆಗ್ಗೆ ಉಳುಮೆ, ಬಿತ್ತನೆ ಯಾವುದೂ ಸಾಧ್ಯವಿಲ್ಲ ಕಡೆಗೆ ಕಾರು ಪಸಲಾದರೂ ಇಡಬಹುದೆಂದರೆ ಈ ಕಾಲದಲ್ಲಿ ಮಳೆಯ ಸಹಾಯೇ ಇರುವುದಿಲ್ಲವಾಗಿ, ಇದೂ ಕೂಡ ಅನುಕೂಲಿಸುವುದಿಲ್ಲ ಈ ಪ್ರತಿಕೂಲಗಳಿಂದ ಅಲ್ಲಿನ ತಗ್ಗು ಪ್ರದೇಶಗಳು ಸಾಗುವಳಿ ಮಾಡದೇನೆ ವಿಶಿಷ್ಟವೂ ಪಾಳು ಬಿದ್ದಿರುತ್ತದೆ

ಆದರೆ ಇಷ್ಟು ಭಾರಿ ವಿಸ್ತೀರ್ಣದ ಜಮೀನನ್ನು ವೃಥಾ ಪಾಳುಬಿಡುವುದಕ್ಕಿಂತಲೂ ಉಳುಮೆ ಮತ್ತು ಬಿತ್ತನೆ ಕಾಲಗಳನ್ನು ಸ್ವಲ್ಪ ಹಿಂಚು ಮುಂಚು ಮಾಡಿಕೊಂಡು ಒಂದು ವೇಳೆ ಈ ಭೂಮಿಯನ್ನು ಸಾಗುವಳಿಯಲ್ಲಿ ತರುವುದಕ್ಕೆ ಪ್ರಯತ್ನಪಟ್ಟರೆ ಅನುಕೂಲವಾದೀತೋ ಏನೋ ಅಜಮಾಯಿಷಿ ಮಾಡಿ ನೋಡಬೇಕೆಂದು ಮೌಲ್ಮೀನ್ ಪಟ್ಟಣದ ಒಬ್ಬ ಭಾರಿ ಜಮೀನ್ದಾರರು ಉಳುಮೆ ಕೆಲಸವನ್ನು ಸಾಮಾನ್ಯವಾಗಿ ವಾಡಿಕೆಯಲ್ಲಿರುವ ಪ್ರಕಾರ ಮಳೆ ಶುರುವಾದ ನಂತರ ಮಾಡುವುದಕ್ಕೆ ಬದಲಾಗಿ ಸ್ವಲ್ಪ ಮುಂದಾಗಿಯೇ ಜನವರಿಯಲ್ಲಿ ಮಾಡಿಸಿದರು ಆದರೆ ಆಗ್ಗೆ ಜಮೀನು ಒಣಗಿ ಬಹಳ ಬಿರುಸಾಗಿದ್ದುದರಿಂದ ನಾಡು ನೇಗಲಿನಿಂದ ಕೆಲಸ ಸಾಗುವುದಿಲ್ಲವೆಂದು ಕಂಡು, ಸೀಮೆಯ ನೇಗಿಲನ್ನು ಉಪಯೋಗಿಸಿದರು ಈ ನೇಗಿಲನ್ನು ಹಿಡಿದು ಕೆಲಸಮಾಡುವುದು ರೈತರಿಗೆ ಗೊತ್ತಿಲ್ಲದೆ ಮೊದಲು ೩—೪ ದಿನ ಬಹಳ ಪ್ರಯಾಸಪಟ್ಟರು ಈಚೆಗೆ ಇದರ ಮೇಲ್ಮೆಯನ್ನು ಕಂಡು ರೈತರು ನಾಡು ನೇಗಿಲನ್ನು ಬಿಟ್ಟು, ಸೀಮೆ ನೇಗಿಲನ್ನೇ ಅಪೇಕ್ಷಿಸಲಾರಂಭಿಸಿರುತ್ತಾರೆ

ಹೀಗೆ ಉಳುಮೆಯಾದ ತರುವಾಯ ಬಿತ್ತನೆ ಮಾಡಲಾಯಿತು ಬಿತ್ತನೆ ಮಾಡುವುದರಲ್ಲಿಯೂ ಕೂಡ ರೂಢಿಯಲ್ಲಿರುವ ಪ್ರಕಾರ ಮೊದಲು ಬೀಜದ ಧಾನ್ಯವನ್ನು ೨ ೩ ದಿನಗಳು ನೀರಿನಲ್ಲಿ ನೆನೆಹಾಕಿ ಮೊಳಕೆಗಳೆಟ್ಟ ತರುವಾಯ ಗದ್ದೆಗೆ ಚೆಲ್ಲುವುದಕ್ಕೆ ಬದಲಾಗಿ ಬಿತ್ತವನ್ನು ಹಾಗೆಯೇ ಒಣಗಿದ್ದಾಗಲೇ ಚೆಲ್ಲಿ ಮೇಲೆ ಮಣ್ಣು ಮುಚ್ಚುವುದಕ್ಕೋಸ್ಕರ ಮೇಲಮೇಲೆಯೇ ಉಸಾಯುವಾಗಿ ನೇಗಿಲು ಆಡಿಸಿದರು ಇದಲ್ಲದೆ ಮಳೆ ಪ್ರಾರಂಭವಾಗುವುದಕ್ಕೆ ಮೊದಲೇ ಅಗೆಯಲ್ಲಿ ಸಸಿಗಳನ್ನು ತಯಾರುಮಾಡಿಕೊಂಡು ಮಳೆ ಶುರುವಾದ ಕೂಡಲೇ ನಾಟಿ ಮಾಡುವ ರೀತಿ ಮತ್ತೊಂದು ಅಜಮಾಯಿಷಿಯನ್ನೂ ಮಾಡಿದರು ಇವೆರಡು ಕ್ರಮಗಳಲ್ಲೂ ಪೈರು ಬಹಳ ಸೊಂಪಾಗಿ ಬಂತು ಆಗಸ್ಟ್ ತಿಂಗಳ ಹೊತ್ತಿಗೆ ಪೈರು ೬ ಅಡಿ ಎತ್ತರಕ್ಕೆ ಬೆಳೆದಿತ್ತಾದಕಾರಣ ಆಗ್ಗೆ ಭಾರೀ ಮಳೆ ಬಂದು ಗದ್ದೆಯಲ್ಲಿ ಸುಮಾರು ೫ ಅಡಿ ನೀರು ನಿಂತರೂ ಪಸಲು ನೀರುಮುಳುಗಡೆಯಾಗದೆ ತಡೆದು ನಿಂತು ಬದುಕಿಕೊಂಡಿತು ಅಲ್ಲದೆ ಬಿತ್ತನೆಯನ್ನು ಮುಂದಾಗಿ ಮಾಡಿದ್ದರೂ ಕೂಡ ಫಸಲೇನೋ ಯಾವ ಪ್ರಕಾರ ಹಿಂದಾಗಿ ಬಿತ್ತನೆಯಾದ ಪೈರುಗಳು ಕಟಾವಿಗೆ ಬರುವಾಗಲೇ ರೀತಿಗೆ ಬಂತು

ಹೀಗೆ ಮೂರು ವರುಷಗಳು ಪರೀಕ್ಷೆಮಾಡಿ ನೋಡುವಲ್ಲಿ ಮೂರು ವರುಷವೂ ಏಕಪ್ರಕಾರವಾಗಿ ಫಲಿತಾಂಶವು ಬಹಳ ಅನುಕೂಲವಾಗಿಯೇ ಕಂಡು ಬಂದಿರುತ್ತದೆ

ಇಂಥಾ ನೀರುಮುಳುಗಡೆಯಾಗುವ ತಗ್ಗಾದ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಕ್ರಮಗಳನ್ನನುಸರಿಸಿ ಒಳ್ಳೇ ಬತ್ತವನ್ನು ಬೆಳೆಯುವುದಕ್ಕೆ ಸಾಧ್ಯವಾಗದಿದ್ದರೂ ಕೂಡ, ಸಾಗುವಳಿಯನ್ನು ಸ್ವಲ್ಪ ಮುಂದಾಗಿಯೇ ಪ್ರಾರಂಭಿಸುವ ಪಕ್ಷದಲ್ಲಿ ಇದು ಸಾಧ್ಯವಾಗುತ್ತದೆಯಲ್ಲದೆ ಭೂಮಿಯ ಫಸಲುತ್ಪತ್ತಿಯೂ ಕೂಡ ಹೆಚ್ಚುತ್ತದೆಂಬ ಅಂಶಗಳು ಮೇಲಿನ ಅಜಮಾಯಿಷಿಯಿಂದ ವ್ಯಕ್ತಪಡುತ್ತದೆ.

ಗೃಹಕೃತ್ಯದ ನೋಟೀಸ್

ಚಿತ್ರದುರ್ಗದ ಮೈಸೂರು ಸ್ಟೋರ್ ಬೀದಿ ಕುಳ್ಳ ವೆಂಕಟಾಚಾರಿಯವರ ಸ್ಥಿರ ಸೊತ್ತಿಗೆ ಅವರ ದತ್ತು ಮಗ ನಾಗಪ್ಪಚಾರಿಯು ಹಕ್ಕುದಾರನಾಗಿರುವದರಿಂದ ಅವರ ಅನುಮತಿಯಿಲ್ಲದೆ ಯಾರಾದರೂ ಕೊಂಡುಕೊಳ್ಳಲೂ ಗಿರವಿ ಬೋಗ್ಯಾದಿಗಳಿಗೆ ತೆಗೆದುಕೊಳ್ಳಲೂ ಕೂಡದು ಹಾಗೇನಾದರೂ ಮಾಡಿದರೆ ಅವರ ಹಣವು ವಾಪಸು ಕೊಡಲ್ಪಡಲಾರದು ಆಗುವ ನಷ್ಟಕ್ಕೆ ತಾವೇ ಗುರಿಯಾಗಬೇಕು

ಮೈಸೂರು ಸ್ಟೋರ್ ಬೀದಿ, ನಾಗಪ್ಪಚಾರಿ

ನಮ್ಮ ಏಜಂಟರಿಗೆ ನೋಟೀಸ್

ಇದೇ ಮೇ ತಿಂಗಳ ಆಖೈರಿಗೆ "ವೃತ್ತಾಂತ ಪತ್ರಿಕೆ"ಯ ಸಂವತ್ಸರವು ಪೂರೈಸುತ್ತದೆ ನಮ್ಮ ಏಜಂಟರುಗಳು ವರುಷದ ಲೆಕ್ಕಗಳನ್ನೆಲ್ಲಾ ಚುಕ್ತಾಮಾಡಿ, ಆಖೈರ್ ಪಟ್ಟಿಗಳನ್ನು ಕಳುಹಿಸಬೇಕು ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಆದ ಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಲಾಗದು ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೧ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗ ಪಾವತಿ ಮಾಡಬೇಕೆಂದೂ, ಅವರಿಂದ ಆ ಬಗ್ಗೆ ಕ್ರಮವಾಗಿ ಪ್ರಿಂಟಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ಕೃತಪಡಿಸುತ್ತೇವೆ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು

ದಕ್ಷಿಣಾ ಇಂಡಿಯಾ ಕಸಬುಗಳ ಕೆಂಪನಿ, ಸಿಟಿ ಇಟ್ಟಿಗೆಗಳ ಮತ್ತು ಹೆಂಚುಗಳ ಕಾರ್ಖಾನೆಯು, ಬೆಂಗಳೂರು

64-1

ಟೆರಕಾಟಾ ಎಂಬ ಹೊಸ ತರಹಾ

ಮೇಲ್ಛಾವಣಿ ಹಂಚು	ಗಟ್ಟಿ, ತುಂಬಾ ಬಾಳಿಕೆ
,, ಹಾಸುವ ಚಪ್ಪಡಿಬಿಲ್ಲೆ	ನಾನಾ ಚಿತ್ರಗಳುಳ್ಳದ್ದು
,, ಚನ್ನುಹಂಚು	೧ ಅಡಿ ೬ ಅಂಗುಲ ಉದ್ದ, ಅಲಂಕಾರ ಮತ್ತು ಸಾಮಾನ್ಯ
ನೆಲಕ್ಕೆ ಹಾಸುವ ಚಪ್ಪಡಿಬಿಲ್ಲೆ	೯×೯ ೬×೬ ಅಂ ಅಲಂ., ಮತ್ತು ಸಾಮಾನ್ಯ ಗಟ್ಟಿಯಾಗಿ ಸುಟ್ಟದ್ದು

ಗಾಳಿ ಹಂಚು, ಬೆಂಕಿ ಇಟ್ಟಿಗೆ, ಬೆಂಕಿ ಜೇಡಿ ಸಾಮಾನು—ಎಲ್ಲಾ ಉತ್ಕೃಷ್ಟವಾಗಿವೆ

ಕಾರ್ಖಾನೆ ಮತ್ತು ಆಫೀಸ್—ಕೆಂಗೇರಿ ರೋಡ್,

ಬೆಂಗಳೂರು ಸಿಟಿ

ಡಿಪೋ ಇರುವ ಸ್ಥಳ.—ಮೈಸೂರು, ಗದಗ್, ದಾವಣಗೆರೆ, ಪೂನಾ. ಶಿವಮೊಗ್ಗಾ, ತರೀಕೆರೆ, ಮುಂತಾದವು.

ಸತ್ಯವೂ ಅಗ್ಗವೂ ಆದ ಅಂಗಡಿ

67-1

ಕ್ರಯ ಬಹಳ ಇಳಿಸಿದೆ ಬೇಗ ನೋಡಿ ತರಿಸಿಕೊಳ್ಳಿ

೧ ಮ್ಯಾಜಿಕ್ ಲಾಂಟ್ರನ್‌ಗಳು —ಇದನ್ನು ಬ್ಲಾಕ್ ಟಿನ್ನಲ್ಲಿ ಜರ್ಮನ್ ಬಾಡಿಯಲ್ಲಿ ಮಾಡಿದೆ ಎರಡು ಲೆನ್ಸುಗಳಿವೆ ಚಿಮ್ನಿ ಮತ್ತು ಲಾಂಪ್ ಸಹಿತ ಚಿತ್ರಗಳು ಬಹಳ ಸ್ಪಷ್ಟವಾಗಿ ತುಂಬಾ ದೊಡ್ಡದಾಗಿ ಕಾಣುವವು ಮಕ್ಕಳನ್ನು ಸಂತೋಷಪಡಿಸುವದಕ್ಕೆ ಇದು ಸರ್ವೋತ್ಕೃಷ್ಟವಾಗಿರುತ್ತದೆ ಒಂದು ಡಜನ್ ಪಟಗಳ ಸಹಿತ ಕ್ರಯ ರೂ ೨—೮—೦

೨ ಅದ್ಭುತವಾದ ನೋಟಗಳ ಯಂತ್ರ. —ರಿಯಾಲಿಟ್ ಸ್ಕೋಪಿನ ಎರಡು ಸ್ಪೆಷಲ್ ಲೆನ್ಸುಗಳ ಮೂಲಕ ನೋಡಿದರೆ ನಾನಾ ಸ್ಥಳಗಳನ್ನು ಯಕ್ಷಿಣಿಯಲ್ಲಿ ಕಂಡಂತೆ ಯಥಾರ್ಥವಾಗಿ ನೋಡಿ ಪರಮಾನಂದಪಡಬಹುದು ಒಂದು ಡಜನ್ ಪಟಗಳ ಸಹಿತವಾದ ಈ ಯಂತ್ರಕ್ಕೆ ಕ್ರಯ ರೂ ೨—೮—೦, ಹೆಚ್ಚು ಪಟಗಳಿಗೆ ರೂ ೧—೪—೦

೩. ಮ್ಯಾಗ್ನೆಟಿಕ್ ಆಟದ ಸಾಮಾನುಗಳು —ಮ್ಯಾಗ್ನೆಟ್ ಸಹಿತವಾಗಿ ಮೀನು, ಬಾತು, ದೋಣಿ ಮೊದಲಾದವುಗಳಿಂದ ಕೂಡಿದ ಪೆಟ್ಟಿಗೆ ಇವನ್ನು ನೀರಿನ ಮೇಲೆ ಬಿಟ್ಟರೆ ಮ್ಯಾಗ್ನೆಟನ್ನು ಹಿಡಿದು ಯಾವ ಕಡೆಗೆ ತಿರುಗಿಸಿದರೂ ಆ ಕಡೆಯಲ್ಲಿ ಅವು ಸಾಕ್ಷಾತ್ತಾಗಿ ಸಂಚಾರ ಮಾಡುವವು ಕ್ರಯ ರೂಪಾಯಿ ೧ ೨—೦

೪ ಫೇರೋ ಸರ್ಪದ ಮೊಟ್ಟೆಗಳು.—ಇದನ್ನು ಬೆಂಕಿಗೆ ತೋರಿಸಿದ ಒಡನೆಯೇ ನಿಜವಾದ ಸರ್ಪದಂತೆ ಬೆಳೆಯುತ್ತದೆ ಸುಮಾರು ಎರಡು ಡಜನ್ ಮೊಟ್ಟೆಗಳುಳ್ಳ ಒಂದು ಪೆಟ್ಟಿಗೆಯ ಕ್ರಯ ೮ ಆಣೆ

೫. ಟ್ರಾನ್ಸ್‌ಫರ್ ತಸ್ವೀರುಗಳು —೧೦ ಅಂಗುಲ ೭॥ ಅಂಗುಲ ಪ್ರಮಾಣದ ಉತ್ತಮವಾದ ಕಾಗದದ ಮೇಲೆ ೫ ರಿಂದ ೪೦ ತಸ್ವೀರುಗಳವರೆಗೂ ಬರೆದಿರುವದು ಕ್ರಯ ೧ ಕ್ಕೆ ೨ ಆಣೆ, ಡಜನ್‌ಗೆ ರೂ. ೧—೫—೦

೬ ಸುಂದರವೂ ಅದ್ಭುತವೂ ಆದ ಗಾನ ಪಕ್ಷಿ.—ಒಂದು ಮಡಕೆಯ ಮೇಲೆ ಈ ಪಕ್ಷಿ ನಿಂತಿದೆ ಮಡಕೆಯಲ್ಲಿರುವ ರಬ್ಬರ್ ಕೊಳವೆಯಲ್ಲಿ ನೀರು ಹಾಕಿ ಒತ್ತಿದರೆ ಈ ಹಕ್ಕಿಯು ಮನೋಹರವಾಗಿ ಹಾಡುವದು. ಚಿಕ್ಕವರಿಗೂ ದೊಡ್ಡವರಿಗೂ ಆಶ್ಚರ್ಯವನ್ನುಂಟುಮಾಡುತ್ತದೆ ಕ್ರಯ ರೂ. ೧—೦—೦.

ಅರ್ಧ ಹಣ ಅಡ್ವಾನ್ಸ್ ಬರಬೇಕು. ಇನ್ನರ್ಧ ವಿ. ಪಿ. ಯಿಂದ ತೆಗೆದುಕೊಳ್ಳುತ್ತೇವೆ. ನಮ್ಮ ವಿಳಾಸ:—

ಎಂ ಎ ಘಟವಾಲಾ ಮತ್ತು ಕಂಪನಿ,

ಚಿತ್ರಾಪುರ, ಉತ್ತರ ಅರ್ಕಾಟ್.

ಲೇಖನ ಪ್ರಕಾಶಿಕಾ.

65-1

ಪತ್ರಗಳನ್ನು ಬರೆಯುವವರಿಗೂ, ಲೇವಾದೇವಿ ಮಾಡುವವರಿಗೂ ರೆಜಿಸ್ಟ್ರೇಷನ್ ಆಫೀಸಿಗೆ ಹೋಗುವವರಿಗೂ, ಅತ್ಯವಶ್ಯಕವಾದ ಇಂಥಾ ಪುಸ್ತಕವು ಮತ್ತೆಲ್ಲಿಯೂ ದೊರೆಯಲಾರದು ಪತ್ರಿಕಾ ಪ್ರಸಂಗವಲ್ಲ, ತರಿಸಿ ನೋಡಿ ಒಡನೆ ಬರೆದುಕೊಂಡವರಿಗೆ ಖರ್ಚು ಸಹ 1—8—0 ನಂತರ 1—10—0

ವಿಳಾಸ —ಎಂ ಕೃಷ್ಣಮೂರ್ತಿರಾವ್,

ರೆಜಿಸ್ಟ್ರೇಷನ್ ಕ್ಲಾರ್ಕ್, ಹೊನ್ನಾಳಿ

ವೃತ್ತಾಂತ ಪತ್ರಿಕೆ

— — ೦

ಸನ್ ೧೯೧೦ ನೇ ಇಸವಿ ಮೇ ತಾ ೧೯ ನೇ ಗುರುವಾರ

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸವು

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದ ೧೯೦೮—೦೯ ನೇ ಸಾಲಿನ ವಿದ್ಯಾಭ್ಯಾಸದ ಇಲಾಖಾ ರಿಪೋರ್ಟನ್ನು ಪ್ರಕಟಿಸಿರುತ್ತಾರೆ ಇಪ್ಪತ್ತು ವರುಷಗಳಿಂದ ಈ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದ ಮೆ॥ ಎಚ್ ಜೆ ಬಾಭಾಯವರು ಈ ಸಾಲಿನಲ್ಲಿ ಕೆಲಸದಿಂದ ನಿವೃತ್ತರಾದರು ಆ ಸಮಯದಲ್ಲಿ ಗವರ್ನಮೆಂಟಿನವರು ಅವರ ಅಧಿಕಾರಾವಧಿಯಲ್ಲಿ ನಡೆದ ವಿದ್ಯಾಭಿವೃದ್ಧಿಯನ್ನು ವಿವರಿಸಿ ಅವರ ಸಾಹಸಪೂರ್ವಕವಾದ ಕಾರ್ಯಗಳನ್ನು ಮೆಚ್ಚಿಕೊಂಡು ಒಂದು ಹುಕುಮನ್ನು ಪ್ರಕಟಿಸಿದರು ಇದಲ್ಲದೆ ಶ್ರೀಮನ್ಮಹಾರಾಜರವರು ಅವರ ಮೆಚ್ಚಿಕೆಯಾದ ಸರ್ವೀಸನ್ನು ಗಣನೆಗೆ ತಂದುಕೊಂಡು ಅವರಿಗೆ ೧೯೦೯ ನೇ ಇಸವಿಯ ದಸರಾ ದರ್ಬಾರಿನಲ್ಲಿ ಮುಷೀರ್ ಉಲ್ ತಾಲಿಂ ಎಂಬ ಬಿರುದನ್ನೂ ಯೋಗ್ಯವಾದ ಖಿಲ್ಲತುಗಳ ಸಮೇತ ದಯಪಾಲಿಸಿರುತ್ತಾರೆ

ಕಳೆದ ಸಾಲಿನಲ್ಲಿ ಪಾಠಶಾಲೆಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿ ವಿದ್ಯಾಭ್ಯಾಸವು ಅಭಿವೃದ್ಧಿಹೊಂದಿರುತ್ತದೆ ಇನ್ಸ್‌ಪೆಕ್ಟರ್ ಜನರಲ್‌ರವರು ತಿಳಿಸುವ ಪ್ರಕಾರ ಹಿಂದುಸ್ಥಾನದ ಇತರ ಪ್ರಾಂತ್ಯಗಳಿಗಿಂತ ಮೈಸೂರು ಸಂಸ್ಥಾನದ ವಿದ್ಯಾಭಿವೃದ್ಧಿಯು ಪ್ರಥಮ ಸ್ಥಾನವನ್ನು ಪಡೆದಿರುತ್ತದೆಂದು ಪಾಠಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳಿಂದ ಗೊತ್ತಾಗುತ್ತದೆ

ಕಳೆದ ಸಾಲಿನಲ್ಲಿ ಸಂಸ್ಥಾನದ ವಿದ್ಯಾಭ್ಯಾಸದ ಕ್ರಮಗಳಲ್ಲಿ ಕೆಲವು ಹೊಸ ಬದಲಾವಣೆಗಳು ರೂಢಿಸಲ್ಪಟ್ಟವು ಸಮಸ್ತ ಸರ್ಕಾರಿ ಪಾಠಶಾಲೆಗಳೊಳಗೂ ಪ್ರೈಮರಿ (ಬಾಲಶಿಕ್ಷೆ) ವಿದ್ಯಾಭ್ಯಾಸಕ್ಕೆ ಮಕ್ಕಳಿಂದ ಫೀಜು ವಸೂಲ್ಮಾಡಕೂಡದೆಂದು ಹುಕುಂ ಮಾಡಲಾಯಿತು ಸ್ಕೂಲ್ ಮಾಸ್ಟರುಗಳ ಸಂಬಳವನ್ನು ೧೦ ರೂಪಾಯಿಗೆ ಹೆಚ್ಚುಮಾಡಿದರು ಎಲ್ಲಾ ಸ್ಕೂಲುಗಳಲ್ಲೂ ಮಕ್ಕಳಿಗೆ ಭಕ್ತಿ ಮತ್ತು ನೀತಿ ವಿಚಾರವಾದ ಬೋಧನೆಗಳನ್ನು ಮಾಡಬೇಕೆಂದು ಹುಕುಂ ಮಾಡಿ ಜಾರಿಗೆತಂದರು ಭಕ್ತಿ ನೀತಿಗಳ ಬೋಧನಾ ಕ್ರಮವು ಇನ್ನೂ ಪ್ರಾರಂಭದೆಸೆಯಲ್ಲಿರುವುದರಿಂದ ಇನ್ನುಮುಂದೆ ಅನುಭವ ಬಂದಹಾಗೆ ಬದಲಾವಣೆಗಳನ್ನು ರೂಢಿಸತಕ್ಕದ್ದಾಗಿದೆ ಎಂದು ಗವರ್ನಮೆಂಟಿನವರು ಅಭಿಪ್ರಾಯಪಡುತ್ತಾರೆ ಹಿಂದಿನ ಸಾಲಿನಲ್ಲಿ ಜಾರಿಗೆ ತರಲ್ಪಟ್ಟ ಕಿಂಡರ್‌ಗಾರ್ಟೆನ್ ಮತ್ತು ಮ್ಯಾನ್ಯುಯಲ್ ಟ್ರೇನಿಂಗ್ ಎಂಬ ಹೊಸ ಶಿಕ್ಷಣಾಕ್ರಮಗಳು ಈ ವರುಷ ಚನ್ನಾಗಿ ರೂಢಿಸಲ್ಪಟ್ಟವು

ವಿದ್ಯಾಭ್ಯಾಸಕ್ಕಾಗಿ ಮೈಸೂರು ಸರ್ಕಾರದವರು ಕಳೆದ ಸಾಲಿನಲ್ಲಿ ೧೬,೧೩,೩೭೦ ರೂಪಾಯಿ, ಅಂದರೆ ಹಿಂದಿನ ಸಾಲಿಗಿಂತ ೧,೪೭೦,೫೦೬ ರೂಪಾಯಿ ಹೆಚ್ಚಾಗಿ ಖರ್ಚುಮಾಡಿರುತ್ತಾರೆ ಅದರಲ್ಲಿ ೯,೩೭೦,೬೫೦ ರೂಪಾಯಿ ಅಥವಾ ಶೇಡಕಾ ೪೯ ರಷ್ಟು ರಾಜಾದಾಯದಿಂದ ಕೊಡೋಣವಾಯಿತು ಗವರ್ನಮೆಂಟಿನ ಒಟ್ಟು ಹುಟ್ಟುವಳಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಶೇಕಡಾ ೪ ರೂಪಾಯಿನಷ್ಟು ಮಾತ್ರ ಖರ್ಚುಮಾಡಿದರೆಂದು ಗೊತ್ತಾಗುತ್ತದೆ. ಆದರೆ ಈ ಹಣವು ವಿದ್ಯಾಭಿವೃದ್ಧಿಗೆ ಸಾಲದೆಂದು ನಾವು ಹೇಳಬೇಕಾಗಿಲ್ಲ. ಮುಂದೆ ಗವರ್ನಮೆಂಟಿನವರು ಸಂಸ್ಥಾನದ ಉತ್ಪತ್ತಿಯಲ್ಲಿ ಇನ್ನೂ ಸ್ವಲ್ಪ ಹೆಚ್ಚು ಮೊಬಲಗನ್ನು ಈ ಇಲಾಖೆಗೆ ವಿನಿಯೋಗಿಸುವರೆಂದು ನಿರೀಕ್ಷಿಸುತ್ತೇವೆ

ಪ್ರೌಢ ವಿದ್ಯಾಭ್ಯಾಸವು ತೃಪ್ತಿಕರವಾಗಿ ಅಭಿವೃದ್ಧಿಹೊಂದುತ್ತಿದೆ ಸೆಕೆಂಡರಿ ಪಾಠಶಾಲೆಗಳ ಸಂಖ್ಯೆಯು ೨೪೪ ರಿಂದ ೨೨೦ ಕ್ಕೆ ಇಳಿಯಿತು, ಅಂದರೆ ೩೪ ಪಾಠಶಾಲೆಗಳು ಕಳೆದ ಸಾಲಿನಲ್ಲಿ ಕಡಮೆಯಾದವು ಆದರೂ ವಿದ್ಯಾರ್ಥಿಗಳ ಸಂಖ್ಯೆಯು ೧೨,೨೩೦ ರಿಂದ ೧೩,೬೩೪ ಕ್ಕೆ ಹೆಚ್ಚಿರುತ್ತದೆ

ಪ್ರೈಮರಿ ವಿದ್ಯಾಭ್ಯಾಸವು ಕಳೆದ ಸಾಲಿನಲ್ಲಿ ತುಂಬಾ ಅಭಿವೃದ್ಧಿಯಾಯಿತೆಂದು ಗವರ್ನಮೆಂಟಿನವರ ಕೂಡ ನಾವೂ ಸಂತೋಷಪಡುವೆವು ಗಂಡುಮಕ್ಕಳ ಪಾಠಶಾಲೆಗಳು ೧,೩೩೩ ರಿಂದ ೧,೮೦೧ ಕ್ಕೂ ವಿದ್ಯಾರ್ಥಿಗಳ ಸಂಖ್ಯೆಯು ೫೬,೮೫೧ ರಿಂದ ೬೩,೮೯೮ ಕ್ಕೂ ಹೆಚ್ಚಿರುವುದು. ಸ್ಕೂಲ್ ಮಾಸ್ಟರುಗಳ ಸಂಬಳವನ್ನು ೧೦ ರೂಪಾಯಿಗೆ ಏರ್ಪಡಿಸಿದ್ದರಿಂದ ಪಾಠಪ್ರವಚನಗಳು ಚನ್ನಾಗಿ ನಡೆಯುವುದಕ್ಕೂ ಸ್ಕೂಲ್ ಫೀಜನ್ನು ವಜಾಮಾಡಿದ್ದರಿಂದ ಬಾಲಕರ ಸಂಖ್ಯೆ ಹೆಚ್ಚುವುದಕ್ಕೂ ಸಹಾಯವಾಯಿತೆಂದು ತಿಳಿದುಬರುತ್ತದೆ

ಸ್ತ್ರೀ ವಿದ್ಯಾಭ್ಯಾಸವು ಜನರಲ್ಲಿ ಹರಡುತ್ತಾ ಅಭಿವೃದ್ಧಿ ಹೊಂದುತ್ತಾ ಬಂದಿದೆ ಎಂದು ಈ ರಿಪೋರ್ಟಿನಿಂದ ತಿಳಿದು ಸಂತೋಷಪಡುವೆವು ಸ್ತ್ರೀ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಕಳೆದ ಸಾಲಿನಲ್ಲಿ ೨,೦೦,೮೫೦ ರೂಪಾಯಿ, ಅಂದರೆ ಹೋದ ಸಾಲಿಗಿಂತ ೨೨,೮೫೫ ರೂಪಾಯಿ ಹೆಚ್ಚಾಗಿ ಖರ್ಚುಮಾಡಿರುವರು

ಮಹಮ್ಮದೀಯ ಬಾಲಕರ ವಿದ್ಯಾಭ್ಯಾಸವೂ ಅಭಿವೃದ್ಧಿಯಾಗುತ್ತಿದೆ ಎಂದು ಗೊತ್ತಾಗುವದು ಕಳೆದ ಸಾಲಿನಲ್ಲಿ ಆ ವಿದ್ಯಾರ್ಥಿಗಳ ಸಂಖ್ಯೆಯು ೧೫,೩೮೧ ರಿಂದ ೧೭,೯೮೩ ಕ್ಕೆ ಹೆಚ್ಚಿತು

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರೂ ಅವರ ಕೈಕೆಳಗಿನ ಅಧಿಕಾರಿಗಳೂ ಕೆಲಸಕಾರ್ಯಗಳನ್ನು ತಕ್ಕಮಟ್ಟಿಗೆ ತೃಪ್ತಿಕರವಾಗಿ ನೆರವೇರಿಸಿರುತ್ತಾರೆಂದು ತಿಳಿದು ಸಂತೋಷಪಡುತ್ತೇವೆ

ದೇವರ ಲಕ್ಷಣಗಳನ್ನು ಕುರಿತು

—:—

ಶಿಷ್ಯ — ದೇವರ ಸ್ವಭಾವದ ವಿಷಯದಲ್ಲಿ ಹಿಂದೂ ಕ್ರಿಸ್ತ ಮತಗಳ ತಾತ್ಪರ್ಯಗಳು ಹೀಗೆ ವ್ಯತ್ಯಾಸವಾಗಿರುವದನ್ನು ನೋಡಿದರೆ ಆತನ ಗುಣಲಕ್ಷಣಗಳನ್ನು ಕುರಿತು ಸಹ ಈ ಎರಡು ಮತಗಳು ಭಿನ್ನಾಭಿಪ್ರಾಯಗಳುಳ್ಳವುಗಳಾಗಿರಬೇಕೆಂದು ತೋರುತ್ತ

ಗುರು — ಸಂದೇಹವಿಲ್ಲ ದೇವರು ನಿರ್ಗುಣನೂ ನಿಸ್ಸ್ವತ್ವನೂ ಪುರುಷತ್ವರಹಿತನೂ ಆಗಿದ್ದಲ್ಲಿ ಆತನು ನಿರ್ಗುಣನು ಎಂದು ಹಿಂದೂ ಮತವು ಹೇಳುವದು ಆಶ್ಚರ್ಯವಲ್ಲ

ಶಿಷ್ಯ — ಗುರುಗಳೇ, "ನಿರ್ಗುಣ" "ಸಗುಣ" ಎಂಬ ಶಬ್ದಗಳನ್ನು ಆಗಾಗ್ಗೆ ಕೇಳುತ್ತಿರುತ್ತೇನೆ ಈ ಮಾತುಗಳ ಅಭಿಪ್ರಾಯವೇನು ? ದೇವರಿಗೆ ಈ ಲಕ್ಷಣಗಳು ಹ್ಯಾಗೆ ಸಂಬಂಧಪಡುತ್ತವೆ

ಗುರು —ನಿರ್ಗುಣನೆಂದರೆ ಗುಣರಹಿತನು, ಅಥವಾ ಪಾಶಬದ್ಧನಲ್ಲದವನು ಎಂಬರ್ಥ ಬ್ರಹ್ಮದ ಸಹಜಸ್ವಭಾವವು ಇದೇ ಬ್ರಹ್ಮವು ಇಂತಹ ಲಕ್ಷಣವುಳ್ಳದ್ದಾಗಿರುವದರಿಂದ ಅದಕ್ಕೆ ಇದು ಒಳ್ಳೇದು, ಅದು ಕೆಟ್ಟದ್ದು, ಇದು ಪಾಪ, ಅದು ಪುಣ್ಯ ಎಂಬ ಭೇದವಿಲ್ಲ ಅದಕ್ಕೆ ಪಾಪ ಪುಣ್ಯ, ಒಳ್ಳೇದು ಕೆಟ್ಟದ್ದು, ಮೋಕ್ಷ ನರಕ, ಇವುಗಳ ಗೊಡವೆಯೇ ಇಲ್ಲ ಬ್ರಹ್ಮವು ನಿತ್ಯಾಂತೆಯುಳ್ಳದ್ದು, ನಿರುಪಾಧಿಕವಾದದ್ದು

ಶಿಷ್ಯ — ವೇದಾಂತ ದರ್ಶನದ ಪ್ರಕಾರ ಸಮಸ್ತ ಚರಾಚರ ಸೃಷ್ಟಿಗಳೂ ಈ ವಿಶ್ವವೂ ದೇವರ ಅಂಶವಲ್ಲವೇ ? ಸೋಹಂ, ತತ್ವಮಸಿ ಎಂಬ ವೇದಾಂತ ವಾಕ್ಯಗಳು ವಿಶ್ವಕ್ಕೂ ಬ್ರಹ್ಮಕ್ಕೂ ಇರುವ ಸಂಬಂಧವನ್ನೂ, ಮನುಷ್ಯನಿಗೂ ಬ್ರಹ್ಮಕ್ಕೂ ಇರುವ ಸಂಬಂಧವನ್ನೂ ಪ್ರಕಟಿಸುತ್ತವಲ್ಲವೇ

ಗುರು —ಈಗಲೀಗ ಸಗುಣ ಬ್ರಹ್ಮದ ವಿಷಯವಾಗಿ ಪ್ರಸ್ತಾಪಿಸಬೇಕಾದ ಆವಶ್ಯಕತೆಯು ಒಂದೊದಗಿತು ನಿರ್ಗುಣ ಬ್ರಹ್ಮದ ವಿಷಯವಾಗಿ ಸ್ವಲ್ಪ ಪ್ರಸ್ತಾಪ ಮಾಡಿದೆವಷ್ಟೆ ಈ ನಿರ್ಗುಣ ಬ್ರಹ್ಮವು ಏನೋ ಒಂದು ಲೀಲೆಯಿಂದ ಉಪಾಧಿಗ ಸಿಕ್ಕಿತು, ಅಥವಾ ಮಾಯಾಧೀನವಾಗಿ ಪಾಶ ಬದ್ಧವಾಯಿತು ಹೀಗಿರುವದರಿಂದ ಅದು ಸಗುಣ ಬ್ರಹ್ಮವೆನಿಸಿ, ಅವನೆ ಮುಂದಿನಂತರ ಈ ವಿಶ್ವವೂ ಸಕಲ ಚರಾಚರ ವಸ್ತುಗಳೂ ಮನುಷ್ಯನೂ ವಿವಿಧ ನಾಮರೂಪ ಭೇದಗಳುಳ್ಳವುಗಳಾಗಿ ಕಾಣಬರುತ್ತವೆ ಹೀಗೆ ಕಾಣಬರಲಿಕ್ಕೆ ಮಾಯೆ ಎಂಬ ಉಪಾಧಿಯೇ ಕಾರಣ ಈ ಸಕಲ ವಸ್ತುಗಳೂ ಬೇರೆಬೇರೆ ರೂಪನಾಮಗಳನ್ನು ಹೊಂದಿಕೊಂಡಿರುವದು ಮಾಯೆಯಿಂದಲೇ ಈ ಮಾಯೆಯು ಅಥವಾ ಉಪಾಧಿಯು ಯಾ ಅಜ್ಞಾನವು ತೊಲಗಿಹೋಗಲು ಎಲ್ಲಾ ವಸ್ತುಗಳೂ ಬ್ರಹ್ಮದಲ್ಲಿ ಬೆರತುಹೋಗುವವು ಆದ್ದರಿಂದ ನಿಜವಾಗಿ ಜ್ಞಾನಿಯಾಗಿ ಬ್ರಹ್ಮದ ನಿಜ ಸ್ವಭಾವವನ್ನು ತಿಳಿದವನು ಸೋಹಂ, ತತ್ವಮಸಿ ಅಥವಾ ಬ್ರಹ್ಮವೇ ನಾನಾಗಿದ್ದೇನೆ ಎಂದು ಭಾವಿಸುವನು. ಇಂಥವನು ಒಂದು ಹನಿ ನೀರು ಸಮುದ್ರದಲ್ಲಿ ಬೆರೆತುಹೋಗುವಂತೆ ಬ್ರಹ್ಮದಲ್ಲಿ ಬೆರೆತುಹೋಗುವನು ವೇದಾಂತ ಬೋಧನೆಯು ಜಗತ್ತಿನ ಮತ್ತು ಮನುಷ್ಯನ ಉತ್ಪತ್ತಿಲಯಗಳ ವಿಷಯದಲ್ಲಿ ಹೀಗೆ ಹೇಳುತ್ತದೆ. ಆದರೆ ಇವರಲ್ಲಿ ಕೇಳತಕ್ಕ ಒಂದು ಪ್ರಶ್ನೆಯುಂಟು ನಿರ್ಗುಣ ಬ್ರಹ್ಮಕ್ಕೆ ಲೀಲ

ಯಾಡಬೇಕೆಂಬ ಇಚ್ಛೆ ಹ್ಯಾಗೆ ಉತ್ಪತ್ತಿಯಾಯಿತು? ಅದಕ್ಕೆ ಒಬ್ಬೊಂದರ ಗೊಡವೆಯೂ ಸಂಬಂಧವೂ ಇಚ್ಛೆ ಆಶೆಗಳೂ ಇಲ್ಲವಷ್ಟೆ ಅದೊಂದು ಲೀಲೆಯಿಂದ ಸಿಃ ಬ್ರಹ್ಮಕ್ಕೆ ಇಷ್ಟೊಂದು ವಿಕಾರಗಳು ಉಂಟಾಗಲಾಯಿತಷ್ಟೆ ಆ ಲೀಲಾ ಪೇಕ್ಷೆಯು ನಿರ್ಗುಣನೂ ನಿಶ್ಚಿಂತನೂ ಪಾಪ ಪುಣ್ಯ, ಶುದ್ಧಾಶುದ್ಧ, ಇವುಗಳ ಭೇದವೂ ಇಲ್ಲದ ಬ್ರಹ್ಮದಲ್ಲಿ ಈ ಲೀಲಾಪೇಕ್ಷೆಯು ಹ್ಯಾಗ ಅಂಕುರಿಸಿತೋ ಗೋಚರವಾಗುವದಿಲ್ಲ

ಶಿಷ್ಯ ಸ್ವಾಮೀ, ಬ್ರಹ್ಮಕ್ಕೆ ಶುದ್ಧಾಶುದ್ಧ, ಪಾಪ ಪುಣ್ಯ, ಕೆಟ್ಟದ್ದು ಒಳ್ಳೇದು, ಈ ತಾರತಮ್ಯವೇ ಇಲ್ಲವಂತ ತಾವು ಹೇಳಿದ್ದು ನನಗೆ ಬಹಳ ಆಶ್ಚರ್ಯವನ್ನುಂಟುಮಾಡುತ್ತದೆ ಇದು ನಿಜವಾದರೆ ಲೋಕ ಹ್ಯಾಗೆ ನಡೆಯುವದು? ಮನುಷ್ಯನು ಪರಿಶುದ್ಧನೂ ಪಾಪಭೀತನೂ ಆಗಿ ಯಾಕೆ ನಡೆಯಬೇಕು?

ಗುರು — ಈ ಲೋಕದ ಗುರುವೆ ಬ್ರಹ್ಮಕ್ಕೆ ಏನೂ ಇಲ್ಲವೆಂದು ವೇದಾಂತಿಗಳು ಹೇಳುವದನ್ನು ಮರೆಯಕೂಡದು ಮನುಷ್ಯರೆಲ್ಲರೂ ಶುದ್ಧರಾಗಿ, ಒಳ್ಳೇದನ್ನು ಮಾಡುತ್ತಾ, ಪಾಪವನ್ನು ವಿಸರ್ಜಿಸುತ್ತಾ, ಪರೋಪಕಾರಿಗಳಾಗಿ ನಡೆಯಬೇಕೆಂದು ದೇವರು ಏರ್ಪಡಿಸಿದ್ದರೆ ತನ್ನ ಆಜ್ಞೆಗಳನ್ನು ನಿರಾಕರಿಸಿದವರಿಗೆ ದಂಡನೆಯನ್ನೂ, ಕೈಕೊಂಡವರಿಗೆ ರಕ್ಷಣೆಯನ್ನೂ ನಿಯಮಿಸುವದಕ್ಕೆ ತಕ್ಕ ನ್ಯಾಯವಿಚಾರಣೆ ಉಂಟಾಗಿರುವದು ಇದರ ಬ್ರಹ್ಮಕ್ಕೆ ಅದೇನೂ ಬೇಕಿಲ್ಲ ಸದ್ವರ್ತನೆಯಾದರೂ ಮನುಷ್ಯನನ್ನು ಒಂದು ವಿದವಾದ ಪದಕ್ಕೆ ಸಿಕ್ಕಿಸಿ ನಿರ್ಗುಣ ಬ್ರಹ್ಮದಿಂದ ಅವನನ್ನು ಪ್ರತ್ಯೇಕಿಸಿ ತನ್ನ ಕರ್ಮಗಳ ಫಲವನ್ನು ಅನುಭವಿಸುವಂತೆ ಮಾಡುವದೇ ಹೊರತು ಅವನನ್ನು ಮುಕ್ತನನ್ನಾಗಿ ಬ್ರಹ್ಮದೊಳಗೆ ಐಕ್ಯಮಾಡದು ದುಷ್ಕರ್ಮ ಮಾಡಿದವನೂ ಅದರ ಫಲವನ್ನು ಅನುಭೋಗಿಸಲಿಕ್ಕಾಗಿ ಜನ್ಮಗಳನ್ನು ಎತ್ತಬೇಕು ಸತ್ಕರ್ಮಗಳನ್ನು ಮಾಡಿದವನು ಸಹ ಜೀವಸ್ತುವನ್ನು ನಾನಾ ಜನ್ಮಗಳಲ್ಲಿ ಓಡ್ಯಾಡುತ್ತಿರಬೇಕು ಇದು ಕರ್ಮ ಸವೆಯುವವರೆಗೂ ನಡೆಯುತ್ತಲೇ ಇರುವದು ಇದರ ಯಾವಾತನು ಸತ್ಕರ್ಮ ದುಷ್ಕರ್ಮಗಳೆರಡಕ್ಕೂ ಎಡೆಕೊಡದ ಅನ್ನಗಳನ್ನು ತ್ಯಜಿಸಿ ಜ್ಞಾನದಿಂದ ಸೋಹಂ ಎಂದು ತಿಳಿಯುತ್ತಾನೋ ಅತನೇ ಮುಕ್ತನು

ಶಿಷ್ಯ ಈ ಲೋಕವನ್ನು ಸವ ನೀತಿ ಪರಿಶುದ್ಧತ್ವ ಪರೋಪಕಾರಗಳೆಂಬ ರಮಣೀಯವಾದ ಪುಷ್ಪಗಳಿಂದ ಅಲಂಕರಿಸುವದಕ್ಕೆ ತಕ್ಕ ಬೋಧೆಯಲ್ಲವೆಂದು ಸುಲಭವಾಗಿ ಗೊತ್ತಾಗುತ್ತದೆ ದೇವರ ಲಕ್ಷಣಗಳನ್ನು ಕುರಿತು ಕ್ರೈಸ್ತಮತವು ಏನು ಬೋಧಿಸುತ್ತದೆ?

ಗುರು — ಈ ವಿಷಯದಲ್ಲಿ ಕ್ರಿಸ್ತಮತ ಬೋಧೆಯನ್ನು ಕೇಳು ದೇವರು ತನ್ನ ಜ್ಞಾನದಿಂದಲೂ ಶಕ್ತಿಯಿಂದಲೂ ಈ ವಿಶ್ವವನ್ನೂ ಅದರಲ್ಲಿರುವ ಚರಾಚರ ವಸ್ತುಗಳೆಲ್ಲವನ್ನೂ ತನ್ನ ಚಿತ್ತಾನುಸಾರವಾಗಿ ನಿರ್ಮಾಣ ಮಾಡಿದಾನ ಮತ್ತು ಸಕಲವನ್ನೂ ತನ್ನ ಸ್ಥಿರವಾದ ನಿಯಮಗಳಿಗನುಸಾರವಾಗಿ ಪರಾಮರಿಸುತ್ತಾ ಬರುತ್ತಿದಾನೆ ಮನುಷ್ಯನನ್ನು ತನ್ನ ಹೋಲಿಕೆಯಲ್ಲಿ ನಿರ್ಮಿಸಿದಾನೆ ಅಂದರೆ ಜ್ಞಾನ, ಚಿತ್ತ, ಸ್ವತಂತ್ರಗಳನ್ನುಳ್ಳ ಕರ್ತೃವಾಗಿ ಮನುಷ್ಯನನ್ನು ನಿರ್ಮಿಸಿದಾನೆ ಆತನು ಲೋಕವನ್ನು ಪಾಲಿಸುವ ನಿಯಮಗಳು ನೀತಿಯುಕ್ತವಾದವುಗಳು ಮನುಷ್ಯನು ತನ್ನಹಾಗೆ ನೀತಿಯನ್ನು ಮಾಡುವವನೂ ಪಾಪವನ್ನು ದ್ವೇಷಿಸುವವನೂ ಪವಿತ್ರತ್ವವನ್ನು ಪ್ರೀತಿಮಾಡಿ ಅವನ್ನೇ ಸಾಧಿಸತಕ್ಕವನೂ ಆಗಿರಬೇಕು ಇದಲ್ಲದೆ ಆತನು ಕಡೆಯಲ್ಲಿ ಸಕಲ ಮನುಷ್ಯರನ್ನೂ ನ್ಯಾಯವಿಚಾರಣೆ ಮಾಡಿ, ಅವರಿಗೆ ಅವರವರ ಕ್ರಿಯೆಗಳ ಪ್ರಕಾರ ಫಲಾಫಲಗಳನ್ನು ವಿಧಿಸುವವನಾಗಿಯೂ ಇದಾನೆ ಹೀಗಿರುವದರಿಂದ ಮನುಷ್ಯನು ಪಾಪವನ್ನು ತ್ಯಜಿಸಿ, ಪರಿಶುದ್ಧವಾದ ನಡತೆಯಿಂದ ಆತನನ್ನು ಮೆಚ್ಚಿಸುವದಕ್ಕೆ ಬದ್ಧನಾಗಿದಾನೆ ಯಾಕಂದರೆ ದೇವರು ಅವನ ನಿರ್ಮಾಣಕರ್ತನೂ ಪರಾಮರಿಕೆಯ ಕರ್ತನೂ ಆಗಿರುವದಲ್ಲದೆ, ಮುಂದೆ ಅವನ ನಡತೆಯನ್ನು ಕುರಿತು ವಿಚಾರಿಸಿ, ಶಿಕ್ಷಾರಕ್ಷೆಗಳನ್ನು ನೇಮಿಸುವವನಾಗಿದಾನೆ ಇದನ್ನು ನೋಡಿ ಮನುಷ್ಯನು ಕೃತಜ್ಞತೆ ಉಪಕಾರ ಸ್ಮರಣೆಯಿಂದಲೂ ಮುಂದಿನ ಸದ್ಗತಿಯ ನಿರೀಕ್ಷೆಯಿಂದಲೂ ಸದಾಚಾರ ಸಂಪನ್ನನಾಗಿ ನಡೆಯುವದಕ್ಕೆ ತಕ್ಕ ಹೇತು ಉಂಟಾಗಿದಾನೆ

ಒಳದೇಶದ ವೃತ್ತಾಂತಗಳು

ಈ ಪತ್ರಿಕೆಯ ಒಸ ಪುಟದ ಮೊದಲನೇ ಕಾಲಮಿನ ಎರಡನೇ ವಿಷಯದ ಶಿರನಾಮೆಯಲ್ಲಿ "೫ನೇ ಎಡ್ವರ್ಡ್" ಎಂಬದನ್ನು "೫ನೇ ಜಾರ್ಜ್" ಎಂಬದಾಗಿ ಓದಿಕೊಳ್ಳಬೇಕು

⁂

ಮೈಸೂರು ಡೆಪ್ಟಿ ಕಮಿಷನರ್ ಮ|| ಎಂ ಕಾಂತರಾಜ್ ಅರಸಿನವರು ನೆನ್ನೆ ಹುಣಸೂರು ಪ್ರಾಂತ್ಯ ಸರ್ಕೀಟು ದಯಮಾಡಿದರು ಅವರು ೪ ೫ ದಿವಸಗಳಲ್ಲಿ ವಾಪಸು ಬಂದಾರೆಂದು ಕಾಣುತ್ತದೆ

⁂

ಇಲ್ಲಿನ ಸುಬ್ಬರಾಯನ ಕೆರೆ ಅಂಗಳದಲ್ಲಿ ಕಳೆದ ವಾರ ಕೆಲವು ಪೆಟ್ಟಿಗೆಗಳು ಒಡೆದು ಸಾಮಾನುಗಳು ಚಲ್ಲಾಡಿ ಬಿದ್ದಿದ್ದವು ಅದು ಯಾರ ಮನೆಯದೋ, ಯಾವಾಗ ಕಳುವಾಯಿತೋ ಪೋಲೀಸಿನವರು ತನಿಖೆ ಮಾಡುತ್ತಿದಾರೆ

⁂

ಕಳೆದ ವಾರ ನೀಲಗಿರಿಯಿಂದ ಬ್ರಿಟಿಷ್ ರೆಸಿಡೆಂಟರವರೂ ದಿವಾನರವರೂ ಬೆಂಗಳೂರಿಗೂ, ಮಹಾರಾಜರವರ ಪ್ರೈವೇಟ್ ಸೆಕ್ರಿಟರಿಯವರೂ ಮಿಲಿಟರಿ ಸೆಕ್ರಿಟರಿಯವರೂ ಮೈಸೂರಿಗೂ ವಾಪಸು ಬಂದಿರುತ್ತಾರೆ ಶ್ರೀಮನ್ ಮಹಾರಾಜರವರು ಮುಂದಿನ ವಾರ ದಯಮಾಡುವಂತೆ ಕಾಣುತ್ತದೆ.

ತಾ ೨೬ ನೇ ಗುರುವಾರ ಸಾಯಂಕಾಲ ೫ ಗಂಟೆಗೆ ಬೆಂಗಳೂರು ದಂಡಿನ ಪೆರೇಡ್ ಮೈದಾನಿನಲ್ಲಿ ಸಮಸ್ತ ಸೈನಿಕರೂ ಸೇರಿ ಲೇಟ್ ಚಕ್ರವರ್ತಿಯವರ ಜ್ಞಾಪಕಾರ್ಥವಾಗಿ ಪ್ರಾರ್ಥನೆ ಮುಂತಾದದ್ದನ್ನು ನಡಿಸುವಂತೆ ಏರ್ಪಾಡು ಮಾಡುತ್ತಿದಾರೆ

⁂

ರಾಜಧಾನಿಗೆ ಸುಮಾರು ೧೫ ಮೈಲಿ ದೂರದಲ್ಲಿರುವ ಸಿದ್ದನ ಹಳ್ಳಿಯ ಬಳಿ ಇಲ್ಲಿನ ಮ|| ತಿಯೊಬಾಲ್ಡ್ ಯವರು ಹೋಗಿ ಕಳೆದ ವಾರ ಒಂದು ಭಾರೀ ಚಿರತೆಯನ್ನು ಶಿಕಾರಿಮಾಡಿ ತೆಗೆದುಕೊಂಡು ಬಂದರು ಅದು ೭೬|| ಅಂಗುಲ ಉದ್ದ ಇತ್ತು

⁂

ರಾಜಧಾನಿಯಲ್ಲಿ ಕೆಲವು ವೈದಿಕರೂ ಲೌಕಿಕರೂ ಸೇರಿ ಒಂದು ಅದ್ವೈತ ಸಂಘವನ್ನು ಮಾಡಿಕೊಂಡಿದಾರೆ ಅದ್ವೈತ ಮತ ಗ್ರಂಥಗಳನ್ನು ಓದಿ ಪರೀಕ್ಷೆ ಕೊಟ್ಟ ಸುಮಾರು ೩೦ ಮಂದಿ ಬಾಲಕರಿಗೆ ಕಳೆದ ಭಾನುವಾರ ಸಾಯಂಕಾಲ ಬಹುಮಾನಗಳನ್ನು ಕೊಡಿಸಿದರು ಇದರಂತೆ ಅವರ ಪ್ರತಿ ವರುಷವೂ ಶಂಕರ ಜಯಂತಿಯಲ್ಲಿ ನಡಿಸಬೇಕೆಂದು ಏರ್ಪಾಡು ಮಾಡಿರುತ್ತಾರೆ

⁂

ಹೊಸಕೋಟೆ ತಾಲ್ಲೂಕು ದೊಡ್ಡ ಬಾಣಹಳ್ಳಿಯಲ್ಲಿ ಒಂದು ಮನೆಯ ನಿವೇಶನದೊಳಗೆ ಗೂಗತವಾದ ನಿಧಿಯು ಸಿಕ್ಕಿರುತ್ತದೆ ಅದರಲ್ಲಿ ೫೭೩ ಚಿನ್ನದ ನಾಣ್ಯಗಳು, ೫೩ ರೂಪಾಯಿ ಒಂದು ಜೊತೆ ಸಿಂಹಲಲಾಟದ ಮುರುವು, ಒಂದು ತುಂಡು ಗಟ್ಟಿ ಚಿನ್ನ, ಒಂದು ಯಾಲಿ ಮುರುವು ಮತ್ತು ಕೆಲವು ಚಿನ್ನದ ಮುರುಕುಗಳು ಇವೆಲ್ಲಾ ದೊರಕಿ ಸರ್ಕಾರದವರ ವಶದಲ್ಲಿರುತ್ತವೆ

⁂

ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯವರು ಪೋಲೀ ನಾಯಿಗಳ ಕಾಟವನ್ನು ತಪ್ಪಿಸುವುದಕ್ಕೆ ನಾಯಿಗಳಿಗಾಗಿ ಒಂದು ದೊಡ್ಡಿಯನ್ನು ಮಾಡಬೇಕೆಂದು ಯೋಚಿಸಿರುತ್ತಾರೆ ಈ ದೊಡ್ಡಿಗೆ ಬೇವಾರಸಾದ ನಾಯಿಗಳನ್ನು ಹಿಡಿದು ತಂದು ಕೂಡಿದವರಿಗೆ ಗಂಡುನಾಯಿಗೆ ೨ ಆಣೆ, ಹೆಣ್ಣುನಾಯಿಗೆ ೪ ಆಣೆಯಂತೆ ಇನಾಂ ಕೊಡುವರು ದೊಡ್ಡಿಗೆ ದಾಖಲಾದ ಮೂರು ದಿನಗಳೊಳಗಾಗಿ ಮಾಲೀಕರು ಬಂದು ನಾಯಿಗೆ ೧ ರೂಪಾಯಿನಂತೆ ದೊಡ್ಡಿಯ ರುಸುಂ ಕೊಟ್ಟು ಬಿಡಿಸಿಕೊಂಡು ಹೋಗಬಹುದು ಇಲ್ಲವಾದರೆ ಆ ಬಳಿಕ ನಾಯನ್ನು ಕೊಂದುಬಿಡುವರು

⁂

ಕಳೆದ ಬುಧವಾರ ಸಾಯಂಕಾಲ ಇಲ್ಲಿನ ದೊಡ್ಡಮನುಷ್ಯರೂ ಅಧಿಕಾರಿಗಳೂ ಮಹಾಜನರೂ ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ ಲೇಟ್ ಚಕ್ರವರ್ತಿಯವರ ಗುಣ ಕಥನವನ್ನು ಮಾಡಿ ಪುರಜನರ ಸಂತಾಪವನ್ನು ಶ್ರೀಮನ್ ಮಹಾರಾಜರವರ ಮೂಲಕ ಚಕ್ರವರ್ತಿಯವರಿಗೆ ಅರಿಕೆ ಮಾಡಬೇಕೆಂದು ತೀರ್ಮಾನ ಮಾಡಿದರು ಸರದಾರ್ ಮ|| ಎಂ ಕಾಂತರಾಜೇ ಅರಸಿನವರು ಸಭೆಯ ಅಗ್ರಸ್ಥಾನವನ್ನು ವಹಿಸಿ, ಗತಿಸಿದ ಚಕ್ರವರ್ತಿಯವರ ಆಳ್ವಿಕೆಯ ವಿವರಣೆಯನ್ನೂ ಅವರ ಸದ್ಗುಣ ಸಚ್ಚರಿತ್ರೆಗಳನ್ನೂ ವಿವರಿಸಿದರು. ಮೆ|| ಗಳಾದ ಎಂ ವೆಂಕಟಕೃಷ್ಣಯ್ಯನವರು, ಮೌಲ್ವಿ ದರ್ವೇಷ್ ಪೀರ್‌ಯವರು, ಅಂಬಳ ಅಣ್ಣಾಯ್ಯ ಪಂಡಿತರು, ಅಡ್ವೊಕೇಟ್ ಎಂ ಸಿ ರಂಗಯ್ಯಂಗಾರ್ಯರು ಎಡ್ವರ್ಡ್ ಪ್ರಭುಗಳು ಕಾಲವಾದದ್ದರಿಂದ ಸಾಮಾನ್ಯವಾಗಿ ಪ್ರಪಂಚಕ್ಕೂ ಹಿಂದುಸ್ಥಾನಕ್ಕೆ ವಿಶೇಷವಾಗಿಯೂ ಉಂಟಾಗಿರುವ ನಷ್ಟ ಮುಂತಾದದ್ದನ್ನು ಕುರಿತು ವಿವರಿಸಿ ಸಭಿಕರ ವ್ಯಸನವನ್ನು ಪ್ರಕಾಶಪಡಿಸಿದರು

⁂

ಗತಿಸಿದ ಏಳನೇ ಎಡ್ವರ್ಡ್ ಚಕ್ರವರ್ತಿಯವರ ಶವಸಂಸ್ಕಾರವು ನಾಳೆಯ ದಿನ ಲಂಡನ್ ಪಟ್ಟಣದಲ್ಲಿ ಜರುಗುವುದಾದ್ದರಿಂದ ಹಿಂದುಸ್ಥಾನದ ಸಮಸ್ತ ಸರ್ಕಾರಿ ಕೋರ್ಟು ಕಚೇರಿಗಳನ್ನೂ ಮುಚ್ಚಿ ರಜಾ ಕೊಡಬೇಕೆಂದೂ, ಚಕ್ರವರ್ತಿಯವರ ಸಕಲ ಪ್ರಜೆಗಳೂ ಸಾಧ್ಯವಾದ ಮಟ್ಟಿಗೂ ನಾಳೆ ವ್ಯಾಪಾರಾದಿ ಪ್ರಾಪಂಚಿಕ ಕಾರ್ಯಗಳನ್ನು ನಿಲ್ಲಿಸಬೇಕೆಂದೂ ವೈಸ್‌ರಾಯಿಯವರು ಇಂಡಿಯಾ ಸರ್ಕಾರೀ ಗಜೆಟ್ಟಿನ ವಿಶೇಷ ಪತ್ರಿಕೆಯನ್ನು ಪ್ರಕಟಿಸಿರುತ್ತಾರೆ ಇತ್ತಲಾಗಿ ನಮ್ಮ ಮೈಸೂರು ಗವರ್ನ್‌ಮೆಂಟಿನವರು ಪ್ರಕಟಮಾಡಿರುವ ವಿಶೇಷ ಪತ್ರಿಕೆಯ ಮುಖ್ಯಾಭಿಪ್ರಾಯವೇನಂದರೆ—ಮೇ ತಾ ೨೦ನೇ ಶುಕ್ರವಾರ ಸಂಸ್ಥಾನದ ಸಮಸ್ತ ಕೋರ್ಟು ಕಚೇರಿ ಸ್ಕೂಲುಗಳಿಗೂ ರಜಾ ಕೊಟ್ಟಿದೆ ಪ್ರಜೆಗಳು ಸಾಧ್ಯವಾದ ಮಟ್ಟಿಗೂ ವ್ಯಾಪಾರಾದಿ ಕೆಲಸಕಾರ್ಯಗಳನ್ನು ನಿಲ್ಲಿಸಬೇಕು ಮುಜರಾಯಿ ದೇವಸ್ಥಾನ, ಮಸೀತಿ ಮೊದಲಾದ ಸ್ಥಳಗಳಲ್ಲಿ ಲೇಟ್ ಚಕ್ರವರ್ತಿಯವರ ಆತ್ಮಸಾದ್ಗುಣ್ಯಾರ್ಥವಾದ ವಿಶೇಷ ಅಭಿಷೇಕ ಪ್ರಾರ್ಥನಾದಿಗಳನ್ನು ನಡಿಸತಕ್ಕದ್ದು ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಬಡ ಬಗ್ಗರಿಗೆ ಭೂರಿ ದಕ್ಷಿಣೆಗಳನ್ನು ಕೊಡಬೇಕು ಲೇಟ್ ಚಕ್ರವರ್ತಿಯವರ ವಯಸ್ಸಿಗೆ ಅನುಸಾರವಾದ ೬೮ ಮಿನಿಟ್ ತೋಪುಗಳನ್ನು ಸೂರ್ಯಾಸ್ತಮಾನಕ್ಕೆ ಸರಿಯಾಗಿ ಮುಗಿಯುವಂತೆ ಹಾರಿಸತಕ್ಕದ್ದು ಎಂಬುದೇ

ವಿದೇಶ ವರ್ತಮಾನಗಳು

ಇದುವರೆಗೆ ಬರ್ಮಾದ ಲೆಫ್ಟಿನೆಂಟ್ ಗವರ್ನರಾಗಿದ್ದ ಸರ್ ಹರ್ಬರ್ಟ್ ವೈಟ್‌ರವರು ತಮ್ಮ ಕೆಲಸದ ಛಾರ್ಜನ್ನು ಹೊಸದಾಗಿ ಬಂದಿರುವ ಸರ್ ಹಾರ್ವೀ ಆಡಂಸನ್ ರವರಿಗೆ ವಹಿಸಿ ನಾಳೆಯ ದಿನ ಅಲ್ಲಿಂದ ಹೊರಟು ಸೀಮೆಗೆ ಹೋಗುವವರಾಗಿದಾರೆ

⁂

ಇಂಗ್ಲಾಂಡಿನಲ್ಲಿ ಮೋಟಾರ್ ಗಾಡಿಗಳ ಸಂಖ್ಯೆಯು ಬಹು ಬೇಗನೆ ಬಹಳವಾಗಿ ಹೆಚ್ಚುತ್ತಾ ಬಂದಿದೆ ೧೯೦೦ನೇ ಇಸವಿಯಲ್ಲಿ ೧,೦೦೦ ಮೋಟಾರ್ ಗಾಡಿಗಳೂ ಪೂರಾ ಇರಲಿಲ್ಲ ಹತ್ತು ವರುಷಗಳ ಈಚೆಗೆ ಅಂದರೆ ಈಗ ೧೪೦,೦೦೦ ಮೋಟಾರ್ ಗಾಡಿಗಳಿರುವವು

⁂

ಚೀನಾ ಚಕ್ರಾಧಿಪತ್ಯದಲ್ಲಿ ಮುಂದಿನ ಅಕ್ಟೋಬರ್ ತಿಂಗಳು ಮೂರನೇ ತಾರೀಖಿನ ದಿನ ಒಂದು ಪಾರ್ಲಿಮೆಂಟ್ ಸಭೆಯನ್ನು ಸ್ಥಾಪಿಸಬೇಕೆಂದು ರಾಜಧಾನಿಯಾದ ಪೀಕಿನ್ ಪಟ್ಟಣದಿಂದ ಒಂದು ಇಸ್ತಿಹಾರು ಹೊರಟಿರುತ್ತದೆ, ಈ ಸಭೆಗೆ ೯೮ ಜನ ಮೆಂಬರುಗಳನ್ನು ಚಕ್ರವರ್ತಿಯವರೇ ನೇಮಕ ಮಾಡಬೇಕೆಂದು ಗೊತ್ತಾಗಿದೆ

⁂

ವಿಲಾಯಿತಿ ರಾಜ್ಯಕ್ಕೆ ಸೇರಿದ ಕೇಂಬ್ರಿಡ್ಜ್ ನಗರದಲ್ಲಿ ವ್ಯವಸಾಯ ಶಾಸ್ತ್ರ ಬೋಧನಾ ವಿದ್ಯಾಶಾಲೆಯನ್ನು ೩ ಲಕ್ಷ ರೂಪಾಯಿ ವೆಚ್ಚಿಸಿ ಸ್ಥಾಪಿಸುವವರಾಗಿದಾರೆ ಈ ವಿದ್ಯಾಶಾಲೆಯನ್ನು ಡ್ಯೂಕ್ ಆಫ್ ಡೆವನ್‌ಷೈರ್ ಎಂಬ ದೊಡ್ಡ ಮನುಷ್ಯರು ಪ್ರಾರಂಭಮಾಡಿದರು ಅದರಲ್ಲಿ ೧೦೦ ಮಂದಿ ವಿದ್ಯಾರ್ಥಿಗಳು ಸೇರಿ ವ್ಯವಸಾಯವನ್ನು ಶಾಸ್ತ್ರವತ್ತಾಗಿ ಕಲಿಯುತ್ತಿದಾರೆ

⁂

ರಂಗೂನ್ ಪಟ್ಟಣದ ಹತ್ತಿರ ಇರುವ ಅಹಲೋನ್ ಎಂಬಲ್ಲಿ ಕಳೆದ ಗುರುವಾರ ಬೆಂಕಿ ಹುಟ್ಟಿ ಸುಮಾರು ೧೨೦ ಮನೆ ಮಠಗಳು ಸುಟ್ಟುಹೋದವು. ಅನೇಕ ಜನರು ಮನೆ ಇಲ್ಲದೆ ಅಲೆಯುತ್ತಿದಾರೆ ಟೆಲಿಫೋನ್ ತಂತಿಗಳೆಲ್ಲಾ ನಾಶವಾದವು ಈ ಬೆಂಕಿಯಿಂದ ಸುಮಾರು ಒಂದು ಲಕ್ಷ ರೂಪಾಯಿನಷ್ಟು ಪದಾರ್ಥಗಳು ನಷ್ಟವಾಯಿತೆಂದು ತಿಳಿದುಬಂದಿದೆ

⁂

ಕಳೆದ ಫೆಬ್ರವರಿ ತಿಂಗಳಲ್ಲಿ ಈಜಿಪ್ಟಿನ ಮುಖ್ಯ ಮಂತ್ರಿಯಾದ ಬೋಟ್ರಸ್ ಪಾಷ ಎಂಬಾತನ ಮೇಲೆ ವಾರ್ಡನಿ ಎಂಬ ಒಬ್ಬ ಮಹಮ್ಮದೀಯ ವಿದ್ಯಾರ್ಥಿಯು ಐದು ಸಲ ಗುಂಡು ಹಾರಿಸಿ ಆತನನ್ನು ಗಾಯ ಪಡಿಸಿದನು ಈಗ ಆ ವಿದ್ಯಾರ್ಥಿಯ ಶಿರವನ್ನು ಅಚ್ಚು ಹಾಕಿಸಿ ಅದನ್ನು ಮಾರಿದ್ದಕ್ಕಾಗಿ ಕೈರೋ ಪಟ್ಟಣದಲ್ಲಿ ಒಬ್ಬನನ್ನು ವಿಚಾರಣೆಗೆ ಗುರಿ ಮಾಡಿರುತ್ತಾರೆ

⁂

ದಕ್ಷಿಣ ಆಫ್ರಿಕಕ್ಕೆ ಸೇರಿದ ಡಾನಿಜಾನಾ ಎಂಬೊಬ್ಬ ಜೂಲೂ ಜನರ ರಾಜನು ಕಳೆದ ೧೯೦೮ ನೇ ಇಸವಿ ನವಂಬರಿನಲ್ಲಿ ರಾಜದ್ರೋಹಮಾಡಿದ ಅಪರಾಧಕ್ಕೆ ಸಿಕ್ಕಿ ಹಿಡಿಯಲ್ಪಟ್ಟು ಏಳು ವರುಷಗಳ ಕಠಿಣ ಸಜಾ ವಿಧಿಸಲ್ಪಟ್ಟಿದ್ದನು ಬಂದೀಖಾನೆಯಲ್ಲಿ ಈತನ ನಡತೆಯು ಸರ್ವೋತ್ತಮವಾಗಿದ್ದದ್ದನ್ನು ಕೇಳಿ ಗವರನ್‌ಮೆಂಟಿನವರು ಅವನನ್ನು ಜೈಲಿನಿಂದ ಬಿಡುಗಡೆಮಾಡಿಸಿರುತ್ತಾರೆ

⁂

ಟ್ರಾನ್ಸ್‌ವಾಲ್ ಸೀಮೆಯ ಮುಖ್ಯ ಪಟ್ಟಣವಾದ ಪ್ರಿಟೋರಿಯಾ ನಗರದಲ್ಲಿ ದಕ್ಷಿಣ ಆಫ್ರಿಕಾ ಗವರನ್‌ಮೆಂಟಿನವರು ವ್ಯವಸಾಯ ಶಾಸ್ತ್ರವನ್ನು ಈಗಿನ ಕಾಲಕ್ಕೆ ತಕ್ಕಂತೆ ಕಲಿಸುವಂಥಾ ಒಂದು ಭಾರೀ ವಿದ್ಯಾಶಾಲೆಯನ್ನು ಸ್ಥಾಪಿಸಿ ನಡಿಸುವವರಾಗಿದಾರೆ ಮೆ|| ಬೋಥಾಯವರು ಸರ್ಕಾರದಿಂದ ಮೊದಲನೇ ಖರ್ಚಿಗಾಗಿ ೧೫ ಲಕ್ಷ ರೂಪಾಯಿ ಕೊಡುವುದಾಗಿಯೂ, ಟೌನ್ ಕೌನ್ಸಿಲ ನವರು ೩,೭೦೦ ಎಕರೆ ಜಮೀನನ್ನು ಬಿಟ್ಟುಕೊಡುವುದಾಗಿಯೂ ತೀರ್ಮಾನಮಾಡಿದರು

⁂

ಮಾಂಡಲೆ ಪಟ್ಟಣದಲ್ಲಿ ಬೆಂಕಿಯಿಂದ ಅನೇಕ ಮನೆಗಳು ಸುಟ್ಟುಹೋಗಿ ಬಡ ಜನರು ಹೊಟ್ಟೆಗಿಲ್ಲದೆ ಬಹಳ ಶ್ರಮ ಪಡುತ್ತಿದ್ದರು ಆಗ ರಂಗೂನ್ ಪಟ್ಟಣದಲ್ಲಿ ಪ್ರಕಟವಾಗುವ ಟೈಂಸ್ ಎಂಬ ಪತ್ರಿಕೆಯ ಎಡಿಟರವರೂ ಇತರರೂ ಸೇರಿ ಸುಮಾರು ೧೧ ಸಾವಿರ ರೂ ಚಂದಾ ಎತ್ತಿ ಕಷ್ಟ ಪಡುತ್ತಿದ್ದ ಜನರಿಗೆ ಸಹಾಯಮಾಡಿದರು ಇವರಿಂದ ಅನೇಕರು ಆಹಾರವಿಲ್ಲದೆ ಸಾಯುವದು ತಪ್ಪಿತು ಇನ್ನು ಕೆಲವರು ಗುಡಿಸಲುಗಳನ್ನು ಕಟ್ಟಿಕೊಂಡರು ಮತ್ತು ೫೦೦೦ ಜನರ ವರೆಗೂ ನಿತ್ಯವೂ ಧರ್ಮಾರ್ಥವಾಗಿ ಊಟವನ್ನು ಪಡೆಯುತ್ತಿರುವರು

⁂

ಲಂಡನ ಪಟ್ಟಣದ ಪೋಲೀಸಿನವರು ದಸ್ತಗಿರಿಮಾಡಿದ್ದ ಸವಾರ್ಕರನೆಂಬ ಹಿಂದುಸ್ಥಾನದ ವಿದ್ಯಾರ್ಥಿಯ ಮೇಲೆ ಅವನು ರಾಜದ್ರೋಹಕ್ಕೆ ಸಹಾಯಮಾಡುತ್ತಿದ್ದನೆಂದು ಅಪವಾದ ಉಂಟಾಗಿದೆಯಷ್ಟೆ ಇವನನ್ನು ಲಂಡನ್ ಪಟ್ಟಣದ ಮ್ಯಾಜಿಸ್ಟ್ರೇಟರು ತನಿಖೆ ಮಾಡಿ, ಹಿಂದುಸ್ಥಾನದಿಂದ ಅವನನ್ನು ಹಿಡಿದು ತರ ಬೇಕಾಗಿ ಹೋಗಿರುವ ವಾರಂಟನ್ನು ಅವನ ಮೇಲೆ ಜಾರಿಮಾಡಬಹುದೆಂದೂ, ಅವನನ್ನು ಹಿಂದುಸ್ಥಾನಕ್ಕೆ ವಿಚಾರಣೆಗಾಗಿ ಕರೆದುಕೊಂಡು ಹೋಗಬಹುದೆಂದೂ ತೀರ್ಮಾನಮಾಡಿದರು ಈಗ ಸವಾರ್ಕರನು ಅದರ ಮೇಲೆ ಅಲ್ಲಿನ ಹೈ ಕೋರ್ಟಿನಲ್ಲಿ ಅಪೀಲು ಮಾಡಿಕೊಂಡಿರುತ್ತಾನೆ

⁂

ಈಜಿಪ್ಟ್ ದೇಶದಲ್ಲಿ ಇಂಗ್ಲಿಷರು ರಾಜ್ಯಭಾರ ಮಾಡುತ್ತಾ, ಅಲ್ಲಿನ ಉತ್ಪತ್ತಿಯನ್ನು ಅಭಿವೃದ್ಧಿಪಡಿಸುತ್ತಾ ಪ್ರಜಾಸಮೃದ್ಧಿ ಕ್ಷೇಮಾಭ್ಯುದಯಗಳನ್ನು ಕಾಪಾಡುತ್ತಾ ಬಂದಿದಾರಷ್ಟೆ ಅಲ್ಲಿನ ದೇಶೀಯ ಪ್ರಜೆಗಳಲ್ಲಿ ಈಗ ಒಂದು ವೈಪರೀತ್ಯವುಂಟಾಗಿ ಕೆಲವರು ರಾಜ್ಯಭಾರದಲ್ಲಿ ತಮಗೆ ಹೆಚ್ಚು ಅಧಿಕಾರಗಳು ದೊರಕಬೇಕೆಂದು ಮುಂತಾಗಿ ಹೊಡೆದಾಡುತ್ತಾ ಬಂದಿರುವುದಲ್ಲದೆ ವರ್ತಮಾನ ಪತ್ರಿಕೆಗಳಲ್ಲಿ ಕಠಿಣವಾಗಿ ಅಧಿಕಾರಗಳನ್ನು ಜರಿಯುತ್ತಾ ಕ್ರೂರಕೃತ್ಯಗಳನ್ನು ನಡಿಸಲು ಪ್ರೋತ್ಸಾಹವನ್ನುಂಟುಮಾಡುತ್ತಾ ಬಂದಿದಾರೆ ಈಚೆಗೆ ಒಬ್ಬ ದುಷ್ಟನು ಅಲ್ಲಿನ ಭಾರೀ ಹುದ್ದೇದಾರನೊಬ್ಬನನ್ನು ಗುಂಡಿನಿಂದ ಹೊಡೆದು ಕೊಂದು ಹಾಕಿದನು ಈಗ ಗವರನ್‌ಮೆಂಟಿನವರು ವರ್ತಮಾನ ಪತ್ರಿಕೆಗಳ ಕಾನೂನನ್ನು ಕಠಿಣತರವಾಗಿ ಮಾಡಿಟ್ಟು ಪ್ರಜೆಗಳ ನೆಮ್ಮದಿಗೂ ಅಧಿಕಾರಿಗಳ ಪ್ರಾಣಕ್ಕೂ ಅಪಾಯವುಂಟಾಗದಂತೆ ಎಚ್ಚರಿಕೆಯ ಏರ್ಪಾಡುಗಳನ್ನು ಮಾಡುತ್ತಾ ಬಂದಿದಾರೆ ಈ ಭಾಗದಲ್ಲಿ ಹಿಂದುಸ್ಥಾನದ ಸ್ಥಿತಿಯೂ ಈಜಿಪ್ಟಿನ ಸ್ಥಿತಿಯೂ ಒಂದೇ ರೀತಿಯಾಗಿದೆ ಎಂದು ಹೇಳಬಹುದು

⁂

ವಿಲಾಯಿತಿ ರಾಜ್ಯದಲ್ಲಿ ಐರಿಷ್ ಸಮುದ್ರದ ಬಳಿ ಇರುವ ವೈಟ್‌ಹೇವನ್ ಎಂಬ ಸ್ಥಳದಲ್ಲಿ ಭಾರೀ ಕಲ್ಲಿದ್ದಲ ಗಣಿ ಇದೆ ಇದು ಸಮುದ್ರದ ತಳದಿಂದ ಕೆಳಗೆ ಐದು ಮೈಲಿ ಆಳದಲ್ಲಿರುವುದು ಈಗ ಗಣಿಯೊಳಗೆ ಕಳೆದ ಬುಧವಾರ ಸಾಯಂಕಾಲ ಬೆಂಕಿ ಹುಟ್ಟಿ ಬಹು ದುಃಖಕರವಾದ ಅನಾಹುತ ಸಂಭವಿಸಿತೆಂದು ತಂತೀ ವರ್ತಮಾನ ಬಂದಿದೆ ಅದರೊಳಗೆ ಆ ಸಮಯದಲ್ಲಿ ೧೩೬ ಜನರು ಸೇರಿ ಕೆಲಸಮಾಡುತ್ತಿದ್ದರು. ಅವರನ್ನು ಬದುಕಿಸಬೇಕೆಂದು ಕೆಲವರು ರಾತ್ರಿಯೆಲ್ಲಾ ಸಾಹಸಪಟ್ಟರು ನಾಲ್ಕು ಮಂದಿಯನ್ನು ಮಾತ್ರ ಮೇಲಕ್ಕೆ ತಂದು ಬದುಕಿಸಿದರು ಹೊಗೆಯೂ ಬೆಂಕಿಯ ಜ್ವಾಲೆಗಳೂ ಅಪಾರವಾಗಿದ್ದದ್ದರಿಂದ ಉಳಿದವರನ್ನು ಬದುಕಿಸುವುದು ಅಸಾಧ್ಯವಾಯಿತು ಅವರೆಲ್ಲಾ ಗಣಿಯೊಳಗೇ ಹತರಾಗಿ ಹೋದರು ಅವರ ಸಂಸಾರಕ್ಕೆ ಸೇರಿದವರು ಗಣಿಯ ದ್ವಾರದ ಬಳಿ ಸೇರಿ ಬಹು ಪರಿತಾಪಕರವಾಗಿ ಗೋಳಾಡುತ್ತಿದ್ದರು ಜಾರ್ಜ್ ಚಕ್ರವರ್ತಿಯವರು ಈ ಸುದ್ದಿಯನ್ನು ಕೇಳಿ ತುಂಬಾ ವ್ಯಸನಪಟ್ಟು, ಅವರನ್ನೆಲ್ಲಾ ಆದರಿಸುವಂತೆ ತಂತೀ ವರ್ತಮಾನ ಕಳುಹಿಸಿರುತ್ತಾರೆ ಈಗ ಆ ಗಣಿಯ ದ್ವಾರದ ಸುತ್ತಲೂ ಯಾರೂ ಹೋಗದಂತೆ ಎತ್ತರವಾದ ಇಟ್ಟಿಗೆ ಗೋಡೆಗಳನ್ನು ಹಾಕಿಸಿರುವರು

ಚಿತ್ರದುರ್ಗದ ಉಪಾಧ್ಯಾಯ ಸಂಘವು

ತಿಂಗಳು ಕಟ್ಲೆಯ ಮೀಟಿಂಗು

ಮೇಲ್ಕಂಡ ಉಪಾಧ್ಯಾಯ ಸಂಘವು ಈ ತಿಂಗಳು ತಾ ೨ ನೇ ಸೋಮವಾರ ಕೂಡಿತ್ತು ಚಿತ್ರದುರ್ಗದ ಗರ್ಲ್ ಸ್ಕೂಲು ಮಂದಿರದಲ್ಲಿ ತಿಂಗಳ ಗಟ್ಲೆ ಮೀಟಿಂಗನ್ನು ನಡಿಸಿದರು ಈ ಮೀಟಿಂಗಿಗೆ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರೂ, ಟವರ್ ಸ್ಕೂಲಿನ ಉಪಾಧ್ಯಾಯರಲ್ಲಿ ಕೆಲವರೂ ಬಂದು ಸೇರಲು ಸಾಧ್ಯವಾಗಲಿಲ್ಲ ಇದಕ್ಕೆಲ್ಲಾ ಬೇಸಿಗೆ ರಜವೇ ಕಾರಣವಾಗಿದೆ ವಿಲ್ಲೇಜ್ ಎಲಿಮೆಂಟರಿ ಸ್ಕೂಲಿನಿಂದ ಮಾತ್ರ ೩೨ ಜನ ಉಪಾಧ್ಯಾಯರುಗಳು ಹಾಜರಿದ್ದರು. ಎಂದಿನಂತೆ ಈ ಮೀಟಿಂಗಿನಲ್ಲಿ ಉಪನ್ಯಾಸವೂ, ಪ್ರಾಕ್ಟಿಕಲ್ ಕ್ಲಾಸೂ ನಡಿಸಲು ಅವಕಾಶವಿಲ್ಲದೆಹೋದದ್ದಕ್ಕಾಗಿ ವಿಷಾದಿಸಬೇಕಾಗಿದೆ

ಪ್ರೆಸಿಡೆಂಟರವರ ಉದ್ದೇಶದ ಪ್ರಕಾರ ಉಪಾಧ್ಯಾಯರಲ್ಲಿ ಕೋ ಆಪರೇಟಿವ್ ಸಂಘವನ್ನು ಏರ್ಪಡಿಸಬೇಕೆಂದೂ ಚರ್ಚೆ ನಡೆಯಿತು ಸೆಕ್ರೆಟರಿ ಮ॥ ವೆಂಕಟರಾಯರು ಕೋ ಆಪರೇಟಿವ್ ಎಂಬ ಸಂಘದ ಪ್ರಯೋಜನವನ್ನು ಕುರಿತು ಒಂದು ಸ್ವಾರಸ್ಯವಾದ ಉಪನ್ಯಾಸಕೊಟ್ಟರು ಅನೇಕ ಜನ ಉಪಾಧ್ಯಾಯರು ಒಪ್ಪಿದರು ಇನ್ನು ಕೆಲವರು ಅವರ ಸಾಧಕ ಬಾಧಕಗಳನ್ನು ಕುರಿತು ಆಲೋಚಿಸಿ ಈ ಸಂಘದಿಂದ ಉಪಾಧ್ಯಾಯರಾದ ನಮಗೆ ಎಷ್ಟು ಪ್ರಯೋಜನವಾಗುವುದೆಂಬ ಬಗ್ಗೆ ನಿದರ್ಶಿಸಿ ಮುಂದಿನ ಮೀಟಿಂಗಿನಲ್ಲಿ ತಿಳಿಸುವುದಾಗಿ ಹೇಳಿದರು ಅಷ್ಟರಲ್ಲೇ ಸಾಯಂಕಾಲವಾದದ್ದರಿಂದ ಸಭೆಯು ಮುಕ್ತಾಯವಾಯಿತು

ಚಿತ್ರದುರ್ಗ, ವೀರಾ ಬಸಪ್ಪ

ತಾ ೭-೫-೧೦ ಉಪಾಧ್ಯಾಯ ಸಂಘದ ಸೆಕ್ರೆಟರಿ

ಚಕ್ರವರ್ತಿ ಸಾರ್ವಭೌಮರಾದ ೫ ನೇ ಎಡ್ವರ್ಡ್ ಪ್ರಭುಗಳ ಪಟ್ಟಾಭಿಷೇಕವು

ತಂತೀ ವರ್ತಮಾನಗಳ ಸಾರವು

ಲಂಡನ್, ಮೇ ತಾ ೯ ನೇ ಸೋಮವಾರ —ಈ ದಿನ ಐದನೇ ಜಾರ್ಜ್ ಯವರಿಗೆ ಪಟ್ಟಾಭಿಷೇಕವಾಯಿತೆಂದು ಇಸ್ತಿಹಾರು ಪ್ರಕಟಿಸಲ್ಪಟ್ಟಿತು ಆಕಾಶವು ಮೋಡ ಕವಿದುಕೊಂಡು ಮಳೆ ಸುರಿಯುತ್ತಿತ್ತು ಲಂಡನ್ ಪಟ್ಟಣದಲ್ಲಿ ಜನ ಸಂಚಾರವೂ ಗಾಡಿಗಳ ಓಡಾಟವೂ ಆಮದುರಪ್ತು ಎಲ್ಲಾ ನಿಂತುಹೋಗಿತ್ತು ಚಕ್ರವರ್ತಿಯವರಿಗೆ ದೊರೆತನವಾಯಿತೆಂಬ ಇಸ್ತಿಹಾರ್ನಾಮೆಯನ್ನು ಕೇಳಲು ಪ್ರಜೆಗಳು ಲಕ್ಷ ಕಟ್ಟಿ ಕಿಕ್ಕಿರಿಯುತ್ತಾ ನಿಂತಿದ್ದರು ಇಸ್ತಿಹಾರನು ಕೇಳಿದ ಒಡನೆ ಪ್ರಜೆಗಳು ಏಕಮುಖವಾಗಿ - ದೇವರು ದೊರೆಯನ್ನು ರಕ್ಷಿಸಲಿ - ಎಂಬ ಸಲಾಂಬಾಜಾ ಪದವನ್ನು ಉದ್ಘೋಷಿಸಿ, ಅಪರಿಮಿತವಾದ ಜಯಘೋಷವನ್ನು ಮಾಡಿದರು

ಸಲಾಂಬಾಜಾ ಧ್ವನಿಯು ಸೆಂಟ್ ಜೇಂಸ್ ರ ಭವನದಿಂದ ಪಟ್ಟಣದ ತನಕ ಉದ್ಘೋಷಿಸಲ್ಪಟ್ಟಿತು ಬಾವುಟಗಳು ಧ್ವಜಸ್ತಂಭಗಳ ನೆತ್ತಿಗೆ ಏರಿಸಲ್ಪಟ್ಟವು ೧೦೧ ಕುಶಾಲ್ ಪಿರಂಗಿಗಳು ಹಾರುತ್ತಿರುವಲ್ಲಿ ಆಕಾಶವು ಮೋಡಗಳಿಂದ ಬಿಡುಗಡೆ ಹೊಂದಿ ಆಹ್ಲಾದಕರವಾಗಿ ನಿರ್ಮಲವಾಯಿತು

ಜಾರ್ಜ್ ದೊರೆಯವರೂ ಮಹಾರಾಜ್ಞಿ ಮೇರಿಯವರೂ ಬಕಿಂಗ್ಹಂ ರಾಜಭವನದ ಗವಾಕ್ಷಿಗಳಲ್ಲಿ ನಿಂತು, ಸೆಂಟ್ ಜೇಂಸ್ ರಾಜಭವನದಲ್ಲಿ ಪ್ರಕಟಿಸಲ್ಪಟ್ಟ ಇಸ್ತಿಹಾರ್ನಾಮೆಯನ್ನು ಕೇಳುತ್ತಿದ್ದರು ಅವರ ಮಕ್ಕಳು ಉದ್ಯಾನವನದಲ್ಲಿ ಪಿರಂಗಿ ಹಾರುವುದನ್ನು ನೋಡುತ್ತಿದ್ದರು

ಇಸ್ತಿಹಾರ್ನಾಮೆಯು ಯಥಾ ವಿಧಿಯಾಗಿಯೂ ಸಕಲ ಮರ್ಯಾದೆಗಳೊಡನೆಯೂ ವಿಲಾಯಿತಿಯ ಎಲ್ಲಾ ಅಧಿಪತ್ಯಗಳಲ್ಲೂ ಇಂಗ್ಲಿಷ್ ರಾಜ್ಯಭಾರಕ್ಕೆ ಸೇರಿ ಸಕಲ ಅಂಗಗಳಲ್ಲೂ ಸಾರಲ್ಪಟ್ಟಿತು

ಪ್ರಜೆಗಳಿಗೆ ತೊಂದರೆಯಾಗಲಿ ಅನನುಕೂಲವಾಗಲಿ ಉಂಟಾಗದಿರಬೇಕೆಂದು ಜಾರ್ಜ್ ದೊರೆಯವರು ನಾಟಕ ಶಾಲೆಗಳನ್ನಾಗಲಿ ಸಂತೋಷಕೂಟಗಳನ್ನಾಗಲಿ ನಿಲ್ಲಿಸಬೇಕಾದದ್ದಿಲ್ಲವೆಂದು ಅಪ್ಪಣೆ ಕೊಡಿಸಿರುತ್ತಾರೆ

ಲಂಡನ್, ಮೇ ತಾ ೧೦ ನೇ ಮಂಗಳವಾರ —ಜಾರ್ಜ್ ದೊರೆಯವರಿಗೆ ಜನ್ಮಸ್ಥಳವಾದ ವಿಲಾಯಿತಿಗಿಂತಲೂ ರಾಜ್ಯಾಂಗಗಳೆಲ್ಲಾ ಬಹಳ ಚೆನ್ನಾಗಿ ತಿಳಿದಿದೆ ಎಂದು ಲಂಡನ್ ಪತ್ರಿಕೆಗಳು ಬರೆಯುತ್ತವೆ

ದೊರೆಯವರು ಹಡಗಿನ ಸೈನ್ಯಾಧಿಪತಿಗಳಿಗೂ, ಭೂ ಸೈನ್ಯಾಧಿಪತಿಗಳಿಗೂ ಅವರ ಪರಾಕ್ರಮವನ್ನೂ ಅವರ ರಾಜಭಕ್ತಿ ಪ್ರೀತಿಗಳನ್ನೂ ವಿವರಿಸಿ, ಎಂದೆಂದಿಗೂ ಅವರು ಅದೇ ರೀತಿ ನಡೆದುಕೊಂಡು ಬಂದಾರೆಂದು ಭರವಸೆ ಪಡೆದಿರುತ್ತೇವೆಂದು ಅಪ್ಪಣೆ ಕೊಟ್ಟಿದ್ದಾರೆ

ಜಾರ್ಜ್ ಚಕ್ರವರ್ತಿ ಸಾರ್ವಭೌಮರವರು ಇಂಗ್ಲಿಷ್ ಮತ್ತು ಜಪಾನೀಯರ ಪ್ರದರ್ಶನೋತ್ಸವವನ್ನು ಪ್ರಾರಂಭ ಮಾಡುವುದು ಮುಂದಕ್ಕೆ ಹಾಕದೆ ತಾ ೧೪ಕ್ಕೇ ಶುರು ಮಾಡಬೇಕೆಂದು ಹುಕುಂ ಮಾಡಿದಾರೆ

ಏಳನೇ ಎಡ್ವರ್ಡ್ ದೊರೆಯವರ ಮರಣವು.

ತಂತೀ ವರ್ತಮಾನಗಳ ಸಾರವು

ಲಂಡನ್, ಮೇ ತಾ. ೮ ನೇ ಭಾನುವಾರ —ಲೇಟ್ ದೊರೆಯವರ ಕಳೇಬರವನ್ನು ತಾ ೨೦ ನೇ ಶುಕ್ರವಾರ ಸಂಸ್ಕಾರಮಾಡುವಂತೆ ತೀರ್ಮಾನವಾಗಿದೆ ಆ ಕಾಲಕ್ಕೆ (ಹೋದ ವಾರ ತಿಳಿಸಿದ ದೊರೆಗಳಲ್ಲದೆ) ಡೆನ್ಮಾರ್ಕ್ ಪೋರ್ಚುಗಲ್ ದೊರೆಗಳೂ, ರಷ್ಯಾ ಚಕ್ರಾಧಿಪತ್ಯದ ವೃದ್ಧ ಚಕ್ರವರ್ತಿನಿಯವರೂ, ಗ್ರ್ಯಾಂಡ್ ಡ್ಯೂಕ್ ಮಿಕೇಲ್ ಯವರೂ, ತುರ್ಕಿ ರಾಜ್ಯದ ಯುವರಾಜರವರೂ, ರಾಯಭಾರಿಗಳೂ, ಅಮೇರಿಕದ ಮಾಜಿ ಪ್ರೆಸಿಡೆಂಟರಾದ ಮ॥ ರೂಸ್ವೆಲ್ಟ್ ಯವರೂ ಲಂಡನ್ ಪಟ್ಟಣಕ್ಕೆ ಬರುವವರಾಗಿದಾರೆ

ಲಂಡನ್, ಮೇ ತಾ ೯ ನೇ ಸೋಮವಾರ —ಲೇಟ್ ಚಕ್ರವರ್ತಿಯವರ ಕಳೇಬರವನ್ನು ತಾ ೧೭ ನೇ ಮಂಗಳವಾರ ವೆಸ್ಟ್ ಮಿನಿಸ್ಟರ್ ಹಾಲ್ ಎಂಬ ಭವನಕ್ಕೆ ಸಾಗಿಸಿ, ಮಂಗಳವಾರ ಬುಧವಾರ ಗುರುವಾರದ ತನಕ ರಾಜಮರ್ಯಾದೆಗಳೊಡನೆ ಅಲ್ಲಿ ಇಡಲ್ಪಟ್ಟಿರತಕ್ಕದ್ದೆಂದು ಹುಕುಂ ಆಗಿದೆ

ದೊರೆಯವರ ಕಳೇಬರವನ್ನು ತಾ ೨೧ ರಲ್ಲಿ ಸಂಸ್ಕಾರಮಾಡುವುದಕ್ಕೋಸ್ಕರ ವಿಂಡ್ಸರ್ ಭವನಕ್ಕೆ ಸಾಗಿಸುವಂತೆ ಗೊತ್ತಾಗಿದೆ

ಕಾಯಿಲೆಯ ವಿಚಾರವು

ಲಂಡನ್, ಮೇ ತಾ ೧೦ ನೇ ಮಂಗಳವಾರ —ಬಯಾರಿಟ್ಜ್ ನಲ್ಲಿದ್ದಾಗ್ಗೆ ಸಾರ್ವಭೌಮರವರು ಕಾಯಿಲೆಯಾಗಿ ಕೆಲವು ದಿನಗಳ ತನಕ ಹಾಸಿಗೆ ಬಿಟ್ಟೇಳುತ್ತಿರಲಿಲ್ಲ ಆಗ ಅವರನ್ನು ಯಾವ ಕೆಲಸವನ್ನೂ ಮಾಡಕೂಡದೆಂದೂ, ಯಾರಿಗೂ ಭೇಟಿ ಕೊಡಕೂಡದೆಂದೂ, ಸ್ವಸ್ಥವಾಗಿ ಹಾಸಿಗೆಯ ಮೇಲೆ ಮಲಗಿರಬೇಕೆಂದೂ ಎಷ್ಟು ಬಲತ್ಕಾರಮಾಡಿ ಅರಿಕೆ ಮಾಡಿಕೊಂಡಾಗ್ಯೂ ಅವರು ಹುಸಿ ನಗು ನಗುತ್ತಾ ,, ಹಾಗೆ ಮಾಡಲಾರೆನು ಒರಗಿಕೊಂಡಾದರೂ ಕುಳಿತು ನಾನು ಮಾಡಬೇಕಾದ ಕಾರ್ಯಗಳನ್ನು ಮಾಡುತ್ತಲೇ ಬಂದೇನು " ಎಂದು ಅಪ್ಪಣೆ ಕೊಡಿಸಿದರು ಈಚೆಗೆ ಅದೇ ರೀತಿ ಬುಧವಾರ ಗುರುವಾರಗಳಲ್ಲಿ ಅವರನ್ನು ಬೇಡಿಕೊಂಡದ್ದಾಯಿತು ಅವರು ಆ ಅರಿಕೆಗಳನ್ನು ಲಕ್ಷ್ಯಮಾಡಲಿಲ್ಲ ಕೆಲಸ ಮಾಡಿಯೇ ತೀರಬೇಕೆಂದು ಹೇಳುತ್ತಾ ಬಂದರು ಕೆಮ್ಮಿನಲ್ಲಿ ಹಿಂಸೆ ಪಡುತ್ತಿದ್ದಾಗ್ಯೂ ಅವರು ಎದ್ದು ದಿರಸು ಹಾಕಿಕೊಂಡು ಶ್ವಾಸಕೋಶವು ಬಹಳ ಬಾಧೆಪಡಿಸುತ್ತಿದ್ದರೂ ಕೆಲಸಮಾಡುತ್ತಾ ಬಂದರು, ಸರ್ಕಾರಿ ಅಧಿಕಾರಿಗಳಿಗೆ ಭೇಟಿ ಕೊಟ್ಟರು, ಕಾಗದ ಪತ್ರಗಳನ್ನು ತರಿಸಿಕೊಂಡು ರುಜು ಹಾಕಿ ಕೊಡುತ್ತಿದ್ದರು ಅವರು ರೋಗಕ್ಕೆ ಸ್ವಲ್ಪವಾದರೂ ಜಗ್ಗಲಿಲ್ಲ, ಲಕ್ಷ್ಯಮಾಡಲೂ ಇಲ್ಲ ಶುಕ್ರವಾರ (ಮರಣದ ದಿನ) ಅವರು ಎದ್ದು ದಿರಸು ಹಾಕಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ ಆದರೂ ಅವರು ಗೌನ್ ಹೊದ್ದುಕೊಂಡೇ ಹಾಸಿಗೆಯ ಮೇಲೆ ಕುಳಿತು ಕೆಲಸ ಮಾಡಿದರು ಕುಳಿತುಕೊಂಡಿದ್ದಾಗ ಮಾತ್ರ ಅವರ ಶ್ವಾಸವು ಸರಿಯಾಗಿ ಆಡುತ್ತಿತ್ತು ಜ್ಞಾನ ತಪ್ಪುವುದಕ್ಕೆ ಮುಂಚೆ ಅವರು ಆಡಿದ ಕಡೇ ವಾಕ್ಯಗಳೇನೆಂದರೆ,—,, ನಾನು ಎಷ್ಟು ಮಾತ್ರಕ್ಕೂ ಧೈರ್ಯ ಬಿಟ್ಟು ರೋಗಕ್ಕೆ ಜಗ್ಗಾಗುವುದಿಲ್ಲ ಕಡೆಯ ತನಕ ನಾನು ಕೆಲಸ ಮಾಡುತ್ತಲೇ ಇರುವೆನು " ಈ ಪ್ರಕಾರ ನುಡಿದ ಒಡನೆಯೇ ಅವರಿಗೆ ಜ್ಞಾನ ತಪ್ಪಿಹೋಯಿತು

ಮಹಾರಾಜ್ಞಿ ಅಲೆಗ್ಸಾಂಡ್ರಾ ಯವರು

ಕರುಣಾಕರಪೂರಿತವಾದ ಕಾಗದವು

ಲಂಡನ್, ಮೇ ತಾ ೧೧ ನೇ ಬುಧವಾರ —ಅಲೆಗ್ಸಾಂಡ್ರಾ ಮಹಾರಾಣಿಯವರು ಸಮಸ್ತ ಜನಾಂಗಕ್ಕೂ ಬರೆದು ತಿಳಿಯಪಡಿಸಿರುವದೇನೆಂದರೆ,—,, ನನಗೆ ಪ್ರಾಪ್ತವಾಗಿರುವ ಅಪಾರವಾದ ಮತ್ತು ವಿವರಿಸಲಶಕ್ಯವಾದ ಮನೋವ್ಯಥೆಯ ವಿಷಯದಲ್ಲಿ ಸಮಸ್ತ ಜನಾಂಗದವರೂ ಎಲ್ಲಾ ತರಗತಿಗಳವರೂ ನಮ್ಮ ವಿಶೇಷ ಪ್ರೀತಿಗೆ ಪಾತ್ರರಾದ ನಮ್ಮ ಪ್ರಿಯ ಜನರೂ ಬಹು ಆದರ ಪೂರ್ವಕವಾಗಿ ಸಂತಾಪ ಪಡುತ್ತಿರುವುದಕ್ಕಾಗಿ ಅವರನ್ನೆಲ್ಲಾ ನನ್ನ ಬಹು ದುಃಖಪೀಡಿತವಾದ ಹೃದಯಪೂರ್ವಕವಾಗಿ ವಂದಿಸುತ್ತೇನೆ ನನ್ನ ಪ್ರೇಮಪಾತ್ರರಾದ ಪತಿಯಲ್ಲಿ ನಾನು ಪಡೆದಿದ್ದ ಸರ್ವಸ್ವವನ್ನೂ ಕಳೆದುಕೊಂಡವಳು ನಾನೊಬ್ಬಳೇ ಅಲ್ಲ ಅವರು ಆಕಸ್ಮಿಕವಾಗಿ ಗತಿಸಿದ್ದರಿಂದ ಸಮಸ್ತ ಜನಾಂಗವೂ ತಾನು ಪಡೆದಿದ್ದ ಉತ್ತಮೋತ್ತಮನಾದ ಸ್ನೇಹಿತನನ್ನೂ ತಂದೆಯನ್ನೂ ಪರಿಪಾಲಕನನ್ನೂ ಕಳೆದುಕೊಂಡು ಅಪ್ರತಿಮವಾದ ನಷ್ಟವನ್ನು ಅನುಭವಿಸುತ್ತದೆ ಈ ಕಷ್ಟಗಳಲ್ಲಿ ಅತ್ಯಂತ ಭಾರಸಹಿತವಾದದ್ದು ಇಂಥಾ ಭಾರವನ್ನು ನಮ್ಮ ಮೇಲೆ ಹೊರಿಸುವುದು ಸಹಜವಾಗಿರುತ್ತದೆಂದು ಸರ್ವ ನಿರ್ವಾಹಕರ್ತನಿಗೆ ಕಂಡುಬಂದಿದೆ ಆ ದಯಾಸಾಗರನೂ ಭಾರನಿವಾರಕನೂ ಆದ ಪರಮಾತ್ಮನು ತನ್ನ ದಿವ್ಯಸಹಾಯವನ್ನು ನಮಗೆ ದಯಪಾಲಿಸಿ ನಾವು ಈ ಭಾರವನ್ನು ಹೊರಲು ಸಮರ್ಥರಾಗುವಂತೆ ಮಾಡಲಿ ಆತನ ಚಿತ್ತವೇ ನೆರವೇರಲಿ ನೀವುಗಳು ಅರ್ಪಿಸುವ ಪ್ರಾರ್ಥನೆಗಳಲ್ಲಿ ನನ್ನ ವಿಷಯವನ್ನೂ ಜ್ಞಾಪಿಸಿಕೊಳ್ಳಿ ಇದರಿಂದ ನನ್ನ ವ್ಯಥೆಯು ಶಮನವಾಗುವುದು, ನಾನು ಮುಂದೆ ಮಾಡಬೇಕಾಗಿರುವ ಕೆಲಸ ಕಾರ್ಯಗಳಿಗೆ ನನಗೆ ಧೈರ್ಯವೂ ಸಹಾಯವೂ ಉಂಟಾಗುವವು —ನನ್ನ ಪ್ರಿಯ ಕುಮಾರನನ್ನು ನಿಮ್ಮ ವಶಕ್ಕೆ ಒಪ್ಪಿಸಿರುತ್ತೇನೆ ಆತನು ತನ್ನ ಪ್ರಿಯ ತಂದೆಯವರ ಜಾಡಿನಲ್ಲೇ ನಡೆದುಕೊಳ್ಳುತ್ತಾನೆಂದು ಹೇಳಬಲ್ಲೆನು ನೀವುಗಳು ಆತನ ತಂದೆಯವರ ವಿಷಯದಲ್ಲಿ ಯಾವ ಭಕ್ತಿ ವಿಶ್ವಾಸಗಳನ್ನಿಟ್ಟುಕೊಂಡಿದ್ದಿರೋ ಆತನ ವಿಷಯದಲ್ಲೂ ಅದೇ ಭಕ್ತಿ ವಿಶ್ವಾಸಗಳನ್ನು ತೋರಿಸುತ್ತಾ ಬರಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ ಆ ನಿಮ್ಮ ಭಕ್ತಿ ವಿಶ್ವಾಸಗಳನ್ನು ನನ್ನ ಪ್ರಿಯ ಕುಮಾರನೂ ಕೊನೆಯವರೆಗೂ ಕಾಪಾಡಿಕೊಂಡು ಬರುತ್ತಾನೆಂದು ನಾನು ನಂಬಿರುತ್ತೇನೆ " ಎಂಬುದೇ

ಲಂಡನ್, ಮೇ ತಾ ೧೨ ನೇ ಗುರುವಾರ —ಅಲೆಗ್ಸಾಂಡ್ರಾ ಮಹಾರಾಣಿಯವರು ತಾವು ಸಮಸ್ತ ಜನಾಂಗಕ್ಕೂ ಬರೆದು ತಿಳಿಸಿರುವ ಕಾಗದವನ್ನು ಅಚ್ಚು ಹಾಕಿಸಿ ಬಿಕರಿಮಾಡಿ ಉತ್ಪತ್ತಿಯಾಗುವ ದ್ರವ್ಯವನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಬಹುದು ಎಂದು ಅಪ್ಪಣೆಕೊಡಿಸಿದಾರೆ

ಚಕ್ರವರ್ತಿಯವರೂ ಹಿಂದುಸ್ಥಾನವೂ

ಲೇಟ್ ಚಕ್ರವರ್ತಿಯವರು ಕಾಲವಾದ ವಿಷಯದಲ್ಲಿ ಹಿಂದುಸ್ಥಾನದ ಸಾಮಂತರಾಜರುಗಳೂ ಪ್ರಜಾ ಕೋಟಿಗಳೂ ಬಹಳವಾಗಿ ದುಃಖಪಟ್ಟು ತಮ್ಮ ಸಂತಾಪವನ್ನು ಚಕ್ರವರ್ತಿಯವರಿಗೆ ಅರಿಕೆ ಮಾಡಬೇಕೆಂದು ವೈಸ್ ರಾಯಿ ಮತ್ತು ಗೌವರ್ನರ್ ಜನರಲ್ ರವರಿಗೆ ವಿಜ್ಞಾಪನೆ ಮಾಡಿಕೊಂಡರು ಅದನ್ನೆಲ್ಲಾ ಅವರ ಮೂಲಕ ತಿಳಿದು ಕೊಂಡು ಅದಕ್ಕೆ ಪ್ರತಿಯಾಗಿ ಚಕ್ರವರ್ತಿಯವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮೂಲಕ ಒಂದು ಇಸ್ತಿಹಾರ್ನಾಮೆಯನ್ನು ದಯ ಪಾಲಿಸಿರುತ್ತಾರೆ ಇಂಡಿಯಾ ಗವರ್ನ್ಮೆಂಟಿನವರು ಆ ಇಸ್ತಿಹಾರನ್ನು ಸರ್ಕಾರಿ ಗೆಜೆಟ್ಟಿನ ವಿಶೇಷ ಪತ್ರಿಕೆಯಾಗಿ ಪ್ರಕಟಮಾಡಿರುವರು ಅವರ ಮುಖ್ಯಾಭಿಪ್ರಾಯವೇನೆಂದರೆ,—

,, ಹಿಂದುಸ್ಥಾನದ ನಮ್ಮ ಸಾಮಂತ ರಾಜರುಗಳ ಮತ್ತು ನಮ್ಮ ಪ್ರಜಾಕೋಟಿಗಳ ಸಂತಾಪ ಸೂಚಕವಾದ ವರ್ತಮಾನಗಳು ನನಗೆ ಸ್ವೀಕೃತವಾದಲ್ಲಿಟ್ಟವು ನಮ್ಮ ತಂದೆಯವರು ಕಾಲವಾದ ವಿಷಯದಲ್ಲಿ ನೀವುಗಳು ಪಟ್ಟ ದುಃಖವು ಅಪಾರವಾದದ್ದೆಂದೂ ಮನಃ ಪೂರ್ವಕವಾದದ್ದೆಂದೂ ಒಪ್ಪಿಕೊಳ್ಳುತ್ತೇವೆ ನೀವುಗಳು ರಾಜ ಭಕ್ತಿ ಪೂರಿತರಾಗಿರುತ್ತೀರಿ ನಮ್ಮ ತಂದೆಯವರು ಹಿಂದುಸ್ಥಾನದಲ್ಲಿ ಸಂಚಾರಮಾಡಿಕೊಂಡು ಬಂದದ್ದನ್ನು ಬಹಳ ಪ್ರೀತಿಯಿಂದಲೂ ಸಂತೋಷವಾಗಿಯೂ ಜ್ಞಾಪಿಸಿ ಕೊಳ್ಳುತ್ತಿದ್ದರು ಮತ್ತು ಹಿಂದುಸ್ಥಾನದ ಕ್ಷೇಮಾಭ್ಯುದಯವನ್ನೇ ಅವರು ಸರ್ವದಾ ಬಯಸುತ್ತಿದ್ದರು

ಹಿಂದುಸ್ಥಾನದ ಸಾಮಂತ ಅರಸರೂ ಪ್ರಜೆಗಳೂ ನನ್ನ ಸಿಂಹಾಸನದ ವಿಷಯದಲ್ಲಿ ಸಂಪೂರ್ಣವಾದ ರಾಜಭಕ್ತಿಯನ್ನು ಪಡೆದವರಾಗಿರುತ್ತಾರೆಂಬುದನ್ನು ನಾನು ನನ್ನ ಸ್ವಂತ ಅನುಭವದಿಂದ ತಿಳಿದುಕೊಂಡಿರುತ್ತೇನೆ ನನಗೆ ಪಟ್ಟಾಭಿಷೇಕವಾದ ವಿಷಯದಲ್ಲಿ ಅವರೆಲ್ಲಾ ನನಗೆ ಅರ್ಪಿಸಿದ ರಾಜ ಭಕ್ತಿಪೂರಿತವಾದ ವಿಜ್ಞಾಪನೆಗಳನ್ನು ನಾನು ಸಾದರದಿಂದ ಅಂಗೀಕರಿಸಿರುತ್ತೇನೆಂಬದಾಗಿ ಅವರಿಗೆಲ್ಲಾ ತಿಳಿಯಪಡಿಸಬೇಕು

ಹಿಂದುಸ್ಥಾನದ ಪ್ರಜೆಗಳ ಐಶ್ವರ್ಯ ಸುಖ ಸಮಾಧಾನಗಳು ಏಳಿಗೆಯಾಗಬೇಕೆಂಬುವುದು ಲೇಟ್ ಮಹಾರಾಜಾ ಚಕ್ರವರ್ತಿಯವರಲ್ಲೂ ಅವರ ಹಿಂದೆ ಮಹಾರಾಜ್ಞಿ ಚಕ್ರವರ್ತಿನಿ ಯವ ಲ್ಲೂ ಹ್ಯಾಗೆ ಕುತೂಹಲವನ್ನೂ ಚಿಂತೆಯನ್ನೂ ಉಂಟುಮಾಡಿದ್ದವೋ ಹಾಗೆ ನಾನೂ ಆ ಭಾಗದಲ್ಲಿ ಕುತೂಹಲ ಚಿಂತೆಗಳಿಂದ ಕೂಡಿದವನಾಗಿರುತ್ತೇನೆ ಎಂಬುದೇ

ಸಮಾಧಿಮಾಡುವ ಏರ್ಪಾಡುಗಳು

ಲಂಡನ್, ಮೇ ತಾ ೧೩ ನೇ ಶುಕ್ರವಾರ – ತಾ ೨೦ ನೇ ಶುಕ್ರವಾರ ಲೇಟ್ ಚಕ್ರವರ್ತಿಯವರ ಶವಸಂಸ್ಕಾರವಾಗುತ್ತದೆ ಅದಕ್ಕೆ ಮುಂಚೆ ನಡೆಯುವ ಮೆರವಣಿಗೆಯಲ್ಲಿ ಹಿಂದುಸ್ಥಾನದ ಪರವಾಗಿ ಇಂಡಿಯಾ ಸೈನ್ಯದ ಹುದ್ದೇದಾರರ ಪೈಕಿ ೩೦ ಮಂದಿಯೂ ಚಕ್ರವರ್ತಿಯವರ ಅಂಗರಕ್ಷರಾದ ಹಿಂದುಸ್ಥಾನದ ಆರ್ಡರ್ಲೀಯವರೂ ಬಿಕಾನೀರ್ ಮತ್ತು ಭರತಪುರ ಸಂಸ್ಥಾನಗಳ ಮಹಾರಾಜರುಗಳೂ, ಘನವನ್ನೈದಿದ ಆಗಾ ಖಾನ್ ರವರೂ ಹಾಜರಾಗಿರುತ್ತಾರೆ ಗುರುವಾರ ಸಾವಿರಾರು ಸೈನಿಕರು ಲಂಡನ್ ಪಟ್ಟಣಕ್ಕೆ ಹೋಗುವರು

ಲೇಟ್ ಚಕ್ರವರ್ತಿಯವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್ ಯವರು ಪತ್ನಿ ಸಹಿತ ವಿಲಾಯಿತಿಯನ್ನು ತಲುಪಿ, ಚಕ್ರವರ್ತಿಯವರ ಕಳೇಬರವನ್ನು ನೋಡಿ ಆದ ಮೇಲೆ ಆ ಕಳೇಬರವಿದ್ದ ಪೆಟ್ಟಿಗೆಯ ಬಾಗಿಲನ್ನು ಮುಚ್ಚಿ ಮುದ್ರೆ ಮಾಡಿಬಿಟ್ಟರು

ಶವ ಸಂಸ್ಕಾರವಾಗುವ ದಿನ ಲೆಕ್ಕೋಪಲಕ್ಷ ಪ್ರಜೆಗಳೂ ಪರರಾಜ್ಯಗಳ ೩೦ ಮಂದಿ ದೊರೆಗಳೂ ರಾಣೀರುಗಳೂ ಮೆರವಣಿಗೆಯಲ್ಲಿ ಹಾಜರಾಗಿರುತ್ತಾರೆಂದು ಗೊತ್ತಾಗಿದೆ

ಪರರಾಜ್ಯಗಳ ದೊರೆಗಳು ಸಮಾಧಿಯನ್ನಲಂಕರಿಸುವುದಕ್ಕೆ ಸರ್ವೋತ್ಕೃಷ್ಟವಾದ ಅನೇಕ ಪುಷ್ಪಗುಚ್ಛಗಳನ್ನೂ ಹಾರಗಳನ್ನೂ ಕಳುಹಿಸಿ ಕೊಟ್ಟಿದಾರೆ ಆ ಪೈಕಿ ಕೆಲವಕ್ಕೆ ೩,೨೫೦ ರೂಪಾಯಿ ಕ್ರಯವಾಗುತ್ತವೆ

ಘನವನ್ನೈದಿದ ಆಗಾ ಖಾನ್ ರವರು ಕಳುಹಿಸಿರುವ ಪುಷ್ಪಮಾಲಿಕೆಯು ಉತ್ತಮೋತ್ತಮವಾದದ್ದಾಗಿದೆ ಇಷ್ಟು ಬೆಲೆಯುಳ್ಳ ಹೂಮಾಲೆಯು [illegible] ವುದು ಬಹಳ ಅಪರೂಪವೆಂದು ಹೇಳುವರು

ತಾಲ್ಲೂಕು ವರ್ತಮಾನ

ಊಡಿ ಜೋಳ ... ೨ ಸೇರು

ಸುವರ್ಣ ಒಲುಕಸ್ತನ್ನಾ ... ೩೦ಲಿಲ್ಲ

ವೆಂದು ಆನೇಕಲು ಹೇ ... ಗುಬಾಂದೆ

ರಾತ್ರಿ ಯಾವಾಗ [illegible] ವೆ, ಬೆಮರಿಕೆಯಿಂದ ನಿದ್ರೆಯೇ ಇಲ್ಲ ಬೆಳಗಿನ ಸಮಯದಲ್ಲಿ ಮಾತ್ರ ಸ್ವಲ್ಪ ನಿದ್ದೆ ಬೀಳುತ್ತದೆ —ಕುಡಿಯುವುದಕ್ಕೆ ನೀರಿಲ್ಲದೆ ಬಹು ತೊಂದರೆಯಾಗಿದೆ ಕೆಲವು ದಿನಗಳಿಂದ ಮಳೆಯ ಮೋಡಗಳೇನೋ ಆಡುತ್ತಲಿದ್ದರೂ ಮಳೆ ಮಾತ್ರ ಬಂದಿಲ್ಲ ಪೇಟೆಯಲ್ಲಿ ಒಂದೆರಡು ಕೊಳವೆ ಬಾವಿಯಲ್ಲಿ ನೀರಿದ್ದರೂ ಆಜೂ ಬಾಜೂ ಜನರಿಗೆ ನೀರು ಕೊಡುವುದು ಕಷ್ಟವಾಗಿದೆ ರೋಮನ್ ಕಥೋಲಿಕ್ ಇಗರ್ಜಿಯ ಬಾವಿಯಲ್ಲಿ ತಕ್ಕಷ್ಟು ನೀರಿದೆ ಇದ್ದ ನೀರನ್ನು ಆಜೂ ಬಾಜೂ ಜನರು ಕೊಂಡುಹೋಗುತ್ತಾರೆ ಆದರೆ ಪೂರಾ ಜನರಿಗೆ ಸಾಲುವದಿಲ್ಲ

ಹೊಂಗಾನೂರು ತಾಲ್ಲೂಕು ಚೆನ್ನಪಟ್ಟಣ ಈ ಊರಿನಲ್ಲಿ ಸಿಡುಬು ಜಾಡ್ಯವು ಇನ್ನೂ ನಿಲ್ಲಲಿಲ್ಲ ಕಳೆದ ವಾರ ೭ ವರುಷದ ಒಬ್ಬ ಹುಡುಗನು ದೊಡಮ್ಮನೆಂಬ ವ್ಯಾಧಿಗೆ ಸಿಕ್ಕಿ ಸತ್ತನು —೪ ನೇ ತಾ ಮಧ್ಯಾಹ್ನ ೧ ಘಂಟೆಯಲ್ಲಿ ಕ್ರಿಸ್ತಮತಾವಲಂಬಿಯಾದ ಮುನಿಗಿಡ್ಡಪ್ಪನ ೧೪ ವರುಷದ ಮಗಳು ಬಟ್ಟೆ ಒಗೆಯಲಿಕ್ಕೆ ಹೋಗಿ ಕಾಲು ಜಾರಿ ಬಾವಿಯಲ್ಲಿ ಬಿದ್ದು ಮೃತಪಟ್ಟಳು ೧೪ ನೇ ತಾ ದಫೇದಾರು ಮಹಜರು ಮಾಡಿಸಿ ಏನೂ ಅನುಮಾನವಿಲ್ಲದ್ದರಿಂದ ದಫನ್ನಿಗೆ ಅಪ್ಪಣೆ ಕೊಟ್ಟರು ೫ ನೇ ತಾ ಸಾಯಂಕಾಲ ಅಲ್ಪ ಮಳೆಯೊಡನೆ ಕೂಡಿದ ವಿಪರೀತ ಗಾಳಿಯು ಪ್ರಾರಂಭವಾಗಿ ೧೦ ನಿಮಿಷಗಳಲ್ಲಿ ಅನೇಕ ಮನೆಗಳ ಚಾವಣಿಯನ್ನು ನಷ್ಟಪಡಿಸಿ, ೩ ಮರಗಳನ್ನು ಮುರಿದು ಹಾಕಿದ್ದಲ್ಲದೆ ಇಲ್ಲಿನ ಪ್ಲೇಗಿಂಗ್ ಸ್ಟೇಷನ್ನಲ್ಲಿ ತೋಟಕ್ಕೆ ನೀರು ಹಾಕುವ ಮುನಿಯಪ್ಪನ ತಲೆಯ ಮೇಲೆ ಮಂಗಳೂರು ಹೆಂಚುಗಳು ಬಿದ್ದು ತುಂಬಾ ಗಾಯವಾಗುವ ಹಾಗೆ ಮಾಡಿತು ಡಾಕ್ಟರ್ ಸಾಹೇಬರವರ ಮುತುವರ್ಜಿಯಾದ ಚಿಕಿತ್ಸೆಯಿಂದ ಆತ ಗುಣ ಹೊಂದುತ್ತಾ ಇದ್ದಾನೆ —ನಮ್ಮ ಚಕ್ರವರ್ತಿಗಳಾಗಿದ್ದ ೭ ನೇ ಎಡ್ವರ್ಡ್ ಪ್ರಭುಗಳ ಮರಣವನ್ನು ಕೇಳಿ ತುಂಬಾ ದುಃಖಿಸುತ್ತೇವೆ ಆದದ್ದರಿಂದ ಈ ದುಃಖಸೂಚಕವನ್ನು ತಮ್ಮ ಪತ್ರಿಕೆಯಲ್ಲಿ ಪ್ರಚುರಪಡಿಸಬೇಕೆಂದು ಇಲ್ಲಿನ ಪ್ರಜೆಗಳಾದ ನಾವೆಲ್ಲಾ ಬೇಡಿಕೊಳ್ಳುತ್ತೇವೆ

ಯಳಹಂಕ —ಇಲ್ಲಿನ ಹವಾ ಸುಮಾರಾಗಿ ಚೆನ್ನಾಗಿದೆ ಬಿಸಿಲು ಮಾತ್ರ ಜೋರಾಗಿ ಕಾಯುತ್ತದೆ ಸೋಮವಾರ ಮಂಗಳವಾರ ಎರಡು ಮುಟ್ಟಿಗೆ ಒಳ್ಳೇ ಮಳೆಗಳಾದವು ಯಾವ ಕಡೆ ನೋಡಿದರೂ ರೈತರು ಹಸನ್ಮುಖಿಗಳಾಗಿ ಹೊಲ ಗದ್ದೆಗಳನ್ನು ಉತ್ತು ಬಿತ್ತುತ್ತಿದಾರೆ—ಈ ಊರಿನ ರೈಲ್ವೇ ಸ್ಟೇಷನ್ನಲ್ಲಿ ಪ್ರತಿ ನಿತ್ಯವೂ ಜನಗಳು ನಾನಾ ಕಡೆಗೆ ಹೋಗುವುದಕ್ಕೆ ತುಂಬಿರುತ್ತಾರೆ ಮತ್ತು ವಿಪರೀತ ಗಲಾಟೆಯಾಗಿರುತ್ತೆ ಇಲ್ಲಿನ ರೈಲ್ವೆ ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರು ಇಲ್ಲಿಗೆ ಬಂದು ೧ ವರುಷವಾಯಿತು ಇವರು ತಮ್ಮ ಕೆಲಸಗಳನ್ನು ಬಹು ಮುತುವರ್ಜಿಯಿಂದಲೂ ಪ್ರೀತಿಯಿಂದಲೂ ಮಾಡುತ್ತಾ ಜನರ ಪ್ರೀತಿಗೆ ಪಾತ್ರರಾಗಿರುತ್ತಾರೆ ಬಂದ ಜನರಿಗೆ ಅವರು ಬಹಳ ಸಂತೋಷದಿಂದ ಟಿಕೆಟ್ ಗಳನ್ನು ಕೊಟ್ಟು ಸ್ಥಳ ಸಾಲದವರಿಗೆ ಸ್ಥಳ ತೋರಿಸಿ ಕಳುಹಿಸುತ್ತಾರೆ ಇವರನ್ನು ರೈಲ್ವೆ ಕಂಪನಿಯವರು ಇಲ್ಲೇ ಇಟ್ಟಿರಬೇಕೆಂದು ಇಲ್ಲಿಯವರೆಲ್ಲಾ ಹಾರೈಸುತ್ತಿದಾರೆ —ಇಲ್ಲಿನ ಆಸ್ಪತ್ರೆಯಲ್ಲಿ ದೊಡ್ಡಬಳ್ಳಾಪುರದಲ್ಲಿ ಬರುವಷ್ಟು ಜನಗಳು ಬರುವುದಿಲ್ಲ ದೊಡ್ಡಬಳ್ಳಾಪುರದಲ್ಲಿರುವ ಡಾಕ್ಟರ್ ರಂಗರಾಮಾನುಜಲು ನಾಯ್ಡು ಎಂಬುವರು ತುಂಬಾ ಉಪಕಾರಿಗಳಾಗಿಯೂ ಜನಗಳನ್ನು ಕಂಡರೆ ದಯಾಪರರಾಗಿಯೂ ಇರುತ್ತಾರೆ ಆದದ್ದರಿಂದ ಬಹಳ ಜನಗಳು ಇವರಲ್ಲಿ ಚಿಕಿತ್ಸೆ ಹೊಂದುತ್ತಾರೆ

ಚಿಕ್ಕಮಗಳೂರು —ಈ ಸೀಮೆಯ ಕೆಲವು ಕಡೆ ಇನ್ನೂ ಮಳೆ ಇಲ್ಲದೆ ಕುಡಿಯುವ ನೀರಿಗೆ ಸಹ ಕುಗ್ಗಾನುವಂತ ಒದಗುತ್ತೇವೆ ಇಲ್ಲಿಯಾದರೋ ಆಗಾಗ್ಗೆ ಒಳ್ಳೇ ಬಿರುಸಾದ ಮಳೆಗಳು ಬರುತ್ತಲೇ ಇರುವದರಿಂದ ನೀರಿನ

ಕ್ಷಾಮವೇ ಕಾಣಬರುವದಿಲ್ಲ ಎಲ್ಲಿ ನೋಡಿದರೂ ಹಸರು ಹುಲ್ಲು ಬೆಳೆದು ಎಲ್ಲಾ ಮನೋಹರವಾಗಿದೆ ರೈತರು ಮೊದಲಿನ ಮಳೆಗಳಲ್ಲಿ ಹೊಲಗಳನ್ನು ಹಸನುಮಾಡಿಕೊಂಡಿದ್ದು ನೆನ್ನೆ ವಾರ ಬಂದ ಮಳೆಗೆ ತಕ್ಕ ಹದ ನೋಡಿ ಬಿತ್ತಿದರು ಇನ್ನು ಬಿತ್ತನೆಯ ಕಾರ್ಯವು ಜರಗುತ್ತ ಇದೆ —ಈ ಊರು ಯಾವಾಗಲೂ ನಾಟಕದವರಿಗೆ ಆಕರವಾಗಿದೆ ವರುಷದ ಮೊದಲಲ್ಲಿ ಎತ್ತಿ ನಿಲ್ಲಿಸಿದ ಡೇರಾಗಳು ನಿಂತೇ ಇವೆ ವಾರಕ್ಕೆ ಎರಡು ಮೂರು ನಾಟಕಗಳಾದರೂ ಆಗದಿರುವದು ಅಪರೂಪ ತಕ್ಕ ಸಂಪಾದನೆ ಆಗುತ್ತಿರುವದರಿಂದ ಇದು ನಿಲ್ಲದೆ ಜರುಗುತ್ತಿರುವದು ಆದರೆ ಇದರಿಂದ ಪ್ರಜೆಗಳಿಗೆ ಯಾವ ಪ್ರಯೋಜನವೂ ನಾವರಿಯೆವು ದುಡ್ಡು ಕೊಟ್ಟು ರಾತ್ರಿಯೆಲ್ಲಾ ನಿದ್ದೆಗೆಟ್ಟು ಬೆಳಗ್ಗೆ ತಕ್ಕ ಕೆಲಸ ಮಾಡಲಿಕ್ಕಾಗದಂತೆ ಆರೋಗ್ಯವನ್ನು ಕೆಡಿಸಿಕೊಳ್ಳುವದೇ ಫಲ ಯಾವದಾದರೂ ಅತಿಯಾಗಬಾರದಷ್ಟೆ ಇಲ್ಲಿಂದ ಕಡೂರಿಗೆ ರಾಮೋತ್ಸವಕ್ಕೆ ಹೋಗಿದ್ದ ಇಬ್ಬರು ಬ್ರಾಹ್ಮಣರು ಪ್ರಾಯಶಃ ಅಲ್ಲಿ ಕಾಲರಾ ರೋಗಕ್ಕೆ ಸಿಕ್ಕಿ ಬಂದು ಇಲ್ಲಿ ಮೃತಪಟ್ಟರು ಆದರೆ ಈ ಮಾರಿರೋಗವು ಊರಲ್ಲಿ ವ್ಯಾಪಿಸದೆ ಅಷ್ಟಕ್ಕೇ ಶಾಂತಿಯಾಗಿರುವದು ಬಹಳ ಸಂತೋಷಕರವಾಗಿದೆ

ಮಗ್ಗದಮನಕೋಟೆ ತಾ|| ಮಗ್ಗ —ಹವಾ ಬಹಳ ಮಟ್ಟಿಗೆ ಕೆಟ್ಟು ಹೋಗಿರುತ್ತೆ ಇದಕ್ಕೆ ಗ್ರಾಮದ ಸಮೀಪದಲ್ಲಿ ಗೊಬ್ಬರ ಮೈಗೆ ಕಚರಾ ಇರುವದೇ ಮುಖ್ಯ ಕಾರಣ ಮಳೆಯು ಆಡಿಗಡಿಗೆ ಬೀಳುತ್ತಾ ಇದೆ ಕಪಿಲಾ ನದಿಯ ಪ್ರವಾಹವು ದಿನೇ ದಿನೇ ಹೆಚ್ಚುತ್ತಾ ಇದೆ —ಈ ಊರಲ್ಲಿ ಸರ್ಕಾರದವರು ಇತರ ಉಪಯೋಗಾರ್ಥವಾಗಿ ಒಂದು ಭಾವಿಯನ್ನು ತೆಗಿಸಿರುತ್ತಾರೆ ಇದರಲ್ಲಿ ನೀರು ಸುಮಾರು ಹನ್ನೆರಡು ಅಡಿ ಪರಿಮಾಣದ ವರೆಗೂ ಇರುತ್ತೆ ಈ ಭಾವಿಯ ಹೊರ ಭಾಗದಿಂದ ಪಕ್ಷಿಗಳು ಒಳಕ್ಕೆ ಹೋಗುವದಕ್ಕೆ ಅವಕಾಶವಿಲ್ಲದಂತೆ ಬಾಗಿಲು ಮಾಡಿ ಅದಕ್ಕೆ ಸಣ್ಣ ತಂತಿಯಿಂದ ಹೆಣೆಸಿದ್ದರು ಈಗ ಅದನ್ನು ಯಾರೋ ದುಗರು ಕಿತ್ತು ನಾಶಪಡಿಸಿರುತ್ತಾರೆ ಇದರಿಂದ ಹಕ್ಕಿ ಪಕ್ಷಿಗಳು ಭಾವಿಯೊಳಕ್ಕೆ ಹೋಗಿ ಅಕಸ್ಮಾತ ನೀರಿಗೆ ಬಿದ್ದು ಪ್ರಾಣ ಬಿಡುವದರಿಂದ ಭಾವಿಯ ನೀರು ಕೆಟ್ಟಿರುತ್ತೆ ಈ ಊರಿನಲ್ಲಿ ನಾಯಿಗಳ ಕಾಟ ಬಹಳವಾಗಿದೆ ಅವು ಕರುಗಳನ್ನೂ, ಕತ್ತೆಯ ಮರಿಗಳನ್ನೂ, ಕುರಿಮರಿಗಳನ್ನೂ ತಿಂದುಬಿಡುತ್ತವೆ ನೆನ್ನೆ ಅಮಲ್ದಾರರು ಊರಿಗೆ ದಯಮಾಡಿಸಿದ್ದಾಗ್ಗೆ ೪ ೫ ನಾಯಿಗಳು ಸೇರಿಕೊಂಡು ಒಬ್ಬ ಬಡ ಗೌಡನ ಕುರಿಮರಿಯನ್ನು ಕೊಂದು ತಿಂದುಬಿಟ್ಟವು ಇದನ್ನು ಮಹಜರ ನಿವಿ ಅಂತರದಂತೆ ಸ್ವೀಕರಿಸಿ ರವಾನೆ ಸುಮಾರು ದಲ್ಲಿ ಅಮಲ್ದಾರರು ಎರೆಕುರಿಹುಂಡಿಯಿಂದ ಮಗ್ಗಕ್ಕೆ ಬರುತ್ತಾ ಇರುವಷ್ಟರಲ್ಲೇ ಸದರಿ ಗೌಡನು ತನ್ನ ಸಂಗತಿಯನ್ನು ಅವರಿಗೆ ಹೇಳಿಕೊಂಡನು ನಂತರ ಅಮಲ್ದಾರರು ಮಹಜರ ನಿವಿ ಮಾಲನ್ನು ಸೆ ಷನ್ಸಿಗೆ ಹಾಜರುಮಾಡುವಂತೆ ಪಟೇಲನಿಗೆ ಹುಕುಂ ಕೊಟ್ಟು ಬಂಕವಾಡಿ ಪ್ರಾಂತ್ಯಕ್ಕೆ ದಯಮಾಡಿದರು ಪಟೇಲನು ಆ ಬಡರೈತನ ವಿಷಯವನ್ನು ಗಣನೆಗೆ ತಾರದೆ ಇರುವುದು ವ್ಯಾಕುಲವಾಗುತ್ತೆ ಇಂಥಾ ವಿಷಯಕ್ಕೆ ಅಮಲ್ದಾರರು ತುಂಬಾ ನಿಗಾ ಕೊಡುತ್ತಾರೆಂತ ನಂಬಿರುತ್ತೇನೆ

ಚೌಲಿಂಗಾಪೇಟ ಈ ಊರಿನ ಎಡರ್ಡ್ ಹಾಲಿನಲ್ಲಿ ಮೇ ತಾ ೨ರಲ್ಲು ಅನೇಕ ದೊಡ್ಡ ಮನುಷ್ಯರೂ ಲಾಯರುಗಳೂ ಕೂಡಿ ಅಂಗಸಾಧನೆ ಮತ್ತು ಕತ್ತಿ ಸಾಧನೆಗಳಲ್ಲಿ ಪ್ರವೀಣರಾಗಿ ಪ್ರಿನ್ಸ್ ಆಫ್ ವೇಲ್ಸರಿಂದಲೂ ಇನ್ನೂ ಅನೇಕ ದೊಡ್ಡ ಮನುಷ್ಯರಿಂದಲೂ ಭಂಗಾರದ ತೋಡ ಮತ್ತು ಮೆಡಲುಗಳನ್ನು ಹೊಂದಿರುವ ಪ್ರೊಫೆಸರ್ ಎಸ್ ನರಸಿಂಹಾಚಾರ್ಯರಿಗೆ ತಮ್ಮ ಚಮತ್ಕಾರದ ವಿದ್ಯೆಗಳನ್ನು ವ್ಯಕ್ತ ಪಡಿಸಲು ಅವಕಾಶವನ್ನು ಕೊಟ್ಟಿದ್ದರು ಮೆ|| ನರಸಿಂಹಾಚಾರ್ರು ನೀರು ತುಂಬಿದ ತಪಲೆಯನ್ನು ಬೋಳ ತಲೆಯ ಮೇಲಿಟ್ಟುಕೊಂಡು ಕೈಯಿಂದ ಅದನ್ನು ಹಿಡಿಯದೆ ನಾನಾ ತರದ ಅಂಗಸಾಧನೆಯನ್ನು ಮಾಡಿದರು ಅಲ್ಲದೆ ಪಟ್ಟಾವರಸ ಮಾಡುತ್ತಾ ನಿಂಬೇ ಹಣ್ಣುಗಳನ್ನು ದಾರದಲ್ಲಿ ಪೋಣಿಸಿ ದಾರ ಹರಿಯುವಂತೆಯೂ ಕೈ ವಸ್ತ್ರದಲ್ಲಿ ನಿಂಬೇ ಹಣ್ಣು ಇಟ್ಟು ವಸ್ತ್ರ ಮತ್ತು ದಾರಹರಿಯದಂತೆಯೂ ನಿಂಬೇಹಣ್ಣನ್ನು ದಾರದಲ್ಲಿ ಪೋಣಿಸಿ ಅದನ್ನು ಕೈ ವಸ್ತ್ರದಲ್ಲಿಟ್ಟು ವಸ್ತ್ರ ಮತ್ತು ದಾರ ಹರಿಯದಂತೆ ನಿಂಬೆ ಹಣ್ಣನ್ನು ತುಂಡು ಮಾಡಿದ್ದು ಎಲ್ಲರಿಗೂ ಪರಮಾಶ್ಚರ್ಯವನ್ನುಂಟುಮಾಡಿತು ಅಲ್ಲದೆ ತೆಂಗಿನಕಾಯಿ, ಗೆಣಸು, ಸಾಬೂನಿನ ಕಾಲು, ಬಾಳೆ ಮರ ಮುಂತಾದವುಗಳನ್ನು ಸಹ ಕತ್ತಿ ಸಾಧನ ಮಾಡುತ್ತಾ ತುಂಡುಮಾಡಿದ್ದು ಅವರ ಪ್ರವೀಣತೆಯನ್ನು ವ್ಯಕ್ತಪಡಿಸಿತು ಇವರು ಅಂಗಸಾಧನೆಯನ್ನು ಬಹಳ ಚನ್ನಾಗಿ ಅಭ್ಯಾಸ ಮಾಡಿರುತ್ತಾರೆ ಯಾವದೊಂದು ವಿದ್ಯೆಯೂ ವರ್ಣವನ್ನು ಅನುಸರಿಸದೆ ಅಭ್ಯಾಸಿಸುವವನಿಗೆ ಲಭಿಸುವಂಥದ್ದಾಗಿರುತ್ತೆಂಬುದು ಇದರಿಂದ ವ್ಯಕ್ತವಾಗುತ್ತೆ ವಿದ್ಯಾವಂತರಿಗೆ ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ಮಾನ ಉಂಟು "ಸ್ವದೇಶೇ ಪೂಜ್ಯತೇ ರಾಜ, ವಿದ್ವಾನ್ ಸರ್ವತ್ರ ಪೂಜ್ಯತೇ"

ಬಿಂತಾಮಣಿ ಈಗ್ಗೆ ಸುಮಾರು ೪ ೫ ದಿನಗಳಿಂದ ಮೋಡವಾಗಿದ್ದು ಆಗಾಗ್ಗೆ ಸ್ವಲ್ಪ ಮಳೆ ಬೀಳುತ್ತಾ ಇದೆ ಟವನ್ ಜನಗಳಿಗೋಸ್ಕರ ನಲ್ಲಿಗಳ ಮೂಲಕ ನೀರು ಕ್ರಮವಾಗಿ ಬರುತ್ತಾ ಇದೆ ಈ ನೀರು ಹೊಸದಾಗಿ ಬಿದ್ದ ಮಳೆ ನೀರಿನೊಡನೆ ಸೇರಿ ಸ್ವಲ್ಪ ದಪ್ಪವಾಗಿದೆ ಸಾಂಕ್ರಾಮಿಕ ಜಾಡ್ಯಗಳಿಗೆ ನೀರೇ ಕಾರಣವಾಗಿರುವದರಿಂದ ನೀರನ್ನು ಅವಶ್ಯವಾಗಿ ಶೋಧಿಸಿ ಕುಡಿಯಬೇಕಾಗಿದೆ ಅನೇಕ ಸ್ಥಳಗಳಲ್ಲಿ ಒಂದು ನೀರನ್ನು ಕುಡಿಯುತ್ತಾ ಇರುವದರಿಂದ ಕೆಲರು ವಗೈರೆ ಉಪದ್ರವಗಳು ಉತ್ಪತ್ತಿಯಾಗಿ ಜನಗಳು ತೊಂದರೆ ಪಡುತ್ತಾ ಇರುವರು ಮೇಲ್ಕಂಡ ಕೆಟ್ಟ ನೀರಿನಿಂದಲೇ ಹುಟ್ಟುವ ಅಂಟು ರೋಗಗಳಿಗೆ ಆಸ್ಪದವಿಲ್ಲದಂತೆ ನೀರನ್ನು ಶುದ್ಧಿ ಮಾಡಿಸುವದಕ್ಕೆ ಪ್ರಯತ್ನ ಪಡಬೇಕಾಗಿದೆ ಆದ್ದರಿಂದ ಮ್ಯುನಿಸಿಪಾಲಿಟಿಯಿಂದ ಹಣವನ್ನು ಮಂಜೂರು ಮಾಡಿಸಿ ಈ ಸಾರ್ಥಕವಾದ ಕೆಲಸವನ್ನು ಸಾವಕಾಶವಿಲ್ಲದಂತೆ ದಯಾಳುವಾದ ಗವರ್ನ್ಮೆಂಟಿನವರು ಮಾಡಿಸುತ್ತಾರೆಂದು ನಂಬುತ್ತೇನೆ ಇದು ಅಲ್ಲದೆ ಈಗ ಮಳೆಗಾಲ ಪ್ರಾರಂಭವಾಗಿದೆ ಸದರಿ ಟವನ್ ಉಪಯೋಗಕ್ಕಾಗಿಯೇ ಕನಂಕುಂಟೆ ಕೆರೆಯನ್ನು ಕಟ್ಟಿಸಿದ್ದಾಗ್ಯೂ ಕೂಡ ನೀರು ಬಹಳವಾಗಿ ಹರಿದು ಬಂದು ನಿಲ್ಲುವದಕ್ಕಿಲ್ಲ ಆದಕಾರಣ ಈ ಕೆರೆಗೆ ಮೇಲ್ಭಾಗದಲ್ಲಿರುವ ಮೈಲಾಪುರವೆಂಬ ಹಳ್ಳಿಯ ಕೆರೆಯ ನೀರನ್ನೂ ಅಂಬಾಜೀ ದುರ್ಗದಿಂದ ಹರಿಯುವ ಒಂದು ದೊಡ್ಡ ಪ್ರವಾಹವನ್ನೂ ತಿರುಗಿಸಿ ಈ ಕೆರೆಗೆ ಬರುವಂತೆ ಏರ್ಪಾಡು ಮಾಡಿದಲ್ಲಿ ಒಂದು ಸಲ ಕೆರೆ ತುಂಬಿದರೆ ಎರಡು ವರ್ಷದ ನೀರು ನಿಲ್ಲುತ್ತದೆ ಈ ಕೆರೆಗೆ ಮತ್ತು ನಲ್ಲಿಗಳಿಗೆ ಸುಮಾರು ೩೦ ೪೦ ಸಾವಿರ ರೂಪಾಯಿ ಖರ್ಚುಮಾಡಿ ಕಟ್ಟಿಸಿದಕ್ಕೆ ಮೇಲೆ ಕಂಡಂತೆ ನೀರನ್ನು ಶೋಧಿಸುವ ಫಿಲ್ಟರ ಎಂಬ ಯಂತ್ರವನ್ನು ಇಡಿಸುವದು ಅಲ್ಲದೆ ಕೆರೆಗೆ ಹೆಚ್ಚಾಗಿ ನೀರು ಬರುವಂತೆ ಏರ್ಪಾಡು ಮಾಡಿಸುವದು ಸಾರ್ಥಕವಾಗಿರುವದು ನಮ್ಮ ತಾಲ್ಲೂಕು ಮ್ಯುನಿಸಿಪಾಲಿಟಿ ಮೆಂಬರುಗಳ ಗಮನಕ್ಕೆ ಇದುವರೆಗೂ ಬಾರದಿರುವದು ಟವನ್ ಜನಗಳ ದುರಾದೃಷ್ಟವಾಗಿದೆ ಇನ್ನು ಮೇಲಾದರೂ ಈ ವಿಷಯವನ್ನು ಅಕ್ಕರೆಯಿಂದ ಚರ್ಚಿಸುತ್ತಾರೆಂದು ನಂಬುತ್ತೇನೆ

ಚನ್ನಗಿರಿ —ಚನ್ನಗಿರಿ ತಾಲ್ಲೋಕ್ ಸೋಮ್ಲಾಪುರದ ಗ್ರಾಮದಲ್ಲಿ ಹೋದ ವರುಷ ಮಳೆ ಇಲ್ಲದೆ ಪೈರು ಬಿದ್ಧಾಂಗ ಇಲ್ಲದೆ ಜನಗಳಿಗೆ ಬಹಳ ತೊಂದರೆ ಆಗಿತ್ತು ಅಲ್ಲದೆ ನಮ್ಮ ಊರಿನ ಹೊಂಡದಲ್ಲಿ ಸಹ ನೀರಿಲ್ಲದೆ ಸೂಳೆಕೆರೆ ಅಂಗಳದಲ್ಲಿ ಭಾವಿ ತೆಗೆದು ಅದರಲ್ಲಿ ನೀರನ್ನು ಮೊಗೆದುಕೊಂಡು ಬರುತ್ತಾ ಇದ್ದರು ಈ ಗ್ರಾಮದ ಹೊಂಡವನ್ನು ಪಟೇಲರು, ಶ್ಯಾನುಭೋಗರೂ ಮತ್ತು ಸಾಹುಕಾರ್ ವೀರಣ್ಣನವರು ಅಕ್ಕಸಾಲೆ ಕಲ್ಲೇರಪ್ಪನವರು ಸೇರಿ ಸ್ವಂತ ಬಾಗೊಂಡಿನಿಂದ ೮೦೦ ರೂಪಾಯಿ ಮುಟ್ಟಿಸಿ ಕಟ್ಟಿಸಿದರು ಈಚೆಗೆ ಸ್ವಲ್ಪ ಹೂತುಹೋಯಿತು ಹೋದ ವರುಷ ಕ್ಷಾಮ ನಿವಾರಣೆಗಾಗಿ ನಮ್ಮ ಹೊಂಡಕ್ಕೆ ೨೦೦ ರೂಪಾಯನ್ನು ಸರ್ಕಾರದವರು ಮುಂಜೂರು ಮಾಡಿದರು ಅದರಲ್ಲಿ ೯೦ ರೂಪಾಯಿ ಮಾತ್ರ ಖರ್ಚಾಯಿತು ಬಾಕಿ ೧೧೦ ರೂಪಾಯನ್ನು ಕಲ್ಲು ಕಟ್ಟಡಕ್ಕೆ ಕೊಡಿರಿ ಎಂತ ಸರ್ಕಾರದವರನ್ನು ಕೇಳಿದ್ದಕ್ಕೆ ಕಲ್ಲು ಕಟ್ಟಡಕ್ಕೆ ಕೊಡುವದಿಲ್ಲವೆಂತ ಹೇಳಿದರು —ಈ ಊರ ಹೊಂಡವನ್ನು ಹೊಸದಾಗಿ ಕಟ್ಟಿ ೩೦ ವರುಷವಾಯಿತು ಆ ಲಾಗಾಯ್ತು ಜನಗಳೇ ಆಗಲಿ, ದನಗಳೇ ಆಗಲಿ ಒಂದೂ ಮೃತಪಟ್ಟಿರಲಿಲ್ಲ ತಾ ೧೦ರಲ್ಲಿ ಅಕ ಸ್ಮಾತ್ ಒಬ್ಬನು ಅದರಲ್ಲಿ ಬಿದ್ದು ಮೃತನಾದನು ಕೂಡಲೆ ಪಟೇಲರೂ ಶ್ಯಾನುಭೋಗರೂ ಸೇರಿ ರಿಪೋರ್ಟ್ ಮಾಡಿ, ಆ ರಾತ್ರಿ ಮಾದಿಗರು ಅಲ್ಲಿ ಹೆಣ ಕಾಯುತ್ತಾ ಇರಬೇಕೆಂತ ಹೇಳಿದರು ಅದಕ್ಕೆ ಮಾದಿಗರು ಈ ಗ್ರಾಮದಲ್ಲಿ ನಮಗೆ ಸತ್ತ ದನಗಳನ್ನು ಕೊಟ್ಟರೆ ಅದಕ್ಕೆ ಮೆಟ್ಟುಗಳನ್ನು ಅಗ್ಗ ಕೊಡಿರಿ ಎಂತ ನಮ್ಮನ್ನು ರೈತರು ಹಿಂಸೆ ಪಡಿಸುತ್ತಾರೆ ಆದದ್ದರಿಂದ ನಾವು ಹೇಗೆ ಹೋಗೋಣವೆಂತ ಸ್ವಲ್ಪ ಹೊತ್ತು ಅಂದುಕೊಳ್ಳುತ್ತಾ, ಆದರೆ ನಮಗೆ ಬಿಟ್ಟಿದ್ದಲ್ಲಿ ನಾವು ಹೋಗಲೇ ಬೇಕು ನಾವು ಹೋಗದಿದ್ದರೆ ಸರ್ಕಾರ ನಮ್ಮನ್ನು ಏನು ಮಾಡೀತೋ ಎಂತ ಗೊಣಗುಟ್ಟುತ್ತಾ ಹೋಗಿ ರಾತ್ರಿಯೆಲ್ಲಾ ಕಾದು ಬೆಳಗ್ಗೆ ಜಮೇದಾರ್ರು ಬಂದು ಹೇಳಿಕೆಗಳು ನಡೆದ ನಂತರ ಬೇವಾರಸು ಹೆಣವನ್ನು ದಫನ್ ಮಾಡಿದರು —ನಮ್ಮ ಚನ್ನಗಿರಿ ತಾಲ್ಲೋಕಿಗೆ ಬಂದ ಅಮಲ್ದಾರ್ ಮೆ|| ರಾಮಸ್ವಾಮೈಯಂಗಾರ್ರವರು ಬಹು ಒಳ್ಳೇವರಾಗಿ ಇದ್ದಾರೆ ಇವರಿಗೆ ನಾಳೆ ಜೂನ್ ಆಖೈರಿಗೆ ಪೆನ್ಷನ್ ಆಗುತ್ತೆ ಎಂಬುದನ್ನು ಕೇಳಿ ಬಹಳ ಜನ ಇಲ್ಲಿನವರು ವ್ಯಸನಪಡುತ್ತಾರೆ —ಈ ವರುಷ ಪೈರು ಇಲ್ಲಿ ಚೆನ್ನಾಗಿ ಬೆಳೆದು ಇದೆ ಹೊಂಡದಲ್ಲಿ ನೀರು ಇದೆ

ಹೂಳಕ್ಕೆರೆ —ಶ್ರೀಮದಿಂಡಿಯಾ ಎಡ್ವರ್ಡ್ ಪ್ರಭುಗಳವರು ಸ್ವರ್ಗಸ್ಥರಾದರೆಂಬ ಸಂಗತಿ ನೆನ್ನೆ ಸಾಯಂಕಾಲ ಈ ಟವನ್ ಪ್ರಜೆಗಳೆಲ್ಲಾ ಕೇಳಿ ಬಹಳ ದುಃಖಿತರಾದರು ಕಿರೀಟಧಾರಣೆಯಾದ ಸ್ವಲ್ಪ ವರ್ಷಗಳಲ್ಲೇ ಅವರು ದೈವಾಧೀನರಾದದ್ದು ಈ ಇಂಡ್ಯಾ ಪ್ರಜೆಗಳ ದುರಾದೃಷ್ಟವಾಗಿದೆ ದೈವಯತ್ನಕ್ಕೆ ಉಪಾಯವಿಲ್ಲ ಈಗ ಕೆಲವು ದಿವಸಗಳಿಂದ ಬೆಳಗಿನ ಝಾಮದಲ್ಲಿ ಬಾಲಚುಕ್ಕೆ ಮೂಡಿದ್ದು ಇದಕ್ಕೋಸ್ಕರವೇ ಇರಬಹುದೆಂತ ಕೆಲವು ಜನಗಳು ಅಂದುಕೊಳ್ಳುತ್ತಾರೆ —ಬಿಸಲಿನ ತಾಪವು ದಿನೇದಿನೇ ಹೆಚ್ಚುತ್ತಾ ಇದೆ ಮಳೆ ಇಲ್ಲದೆ ಜನಗಳೆಲ್ಲಾ ಆಕಾಶವನ್ನೇ ನೋಡುತ್ತಾ ಇದ್ದಾರೆ ಭಾವಿಗಳಲ್ಲಿ ಕೂಡ ಜಲ ಕಡಮೆಯಾಗುತ್ತಾ ಬಂದಿದೆ ಜಿನಸಿ ದರಣೆಯು ಏರುತ್ತಾ ಬರುತ್ತದೆ ಜಾಗ್ರತೆ ಮಳೆ ಬಂದರೆ ಜನಗಳ ಹಾಹಾಕಾರ ತಪ್ಪುತ್ತೆ ಹೊಳೆ ದೇವಪುರದಲ್ಲಿ ಒಂದು ಖೂನಿ ನಡೆದಂತೆ ವರ್ತಮಾನ ಬಂದಿದೆ ಏನೋ ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಗಂಡನೇ ಕೊಂದಿರುವಂತೆ ವರ್ತಮಾನವಾಗಿರುತ್ತೆ ಇದರ ನಿಜತ್ವ ಮುಂದೆ ತಿಳಿಯಬೇಕು —ಶ್ರೀಮನ್ ಯುವರಾಜರವರ ವಿವಾಹಮಹೋತ್ಸವಕ್ಕೆ ದಸರಾ ಮೆಂಬರುಗಳಾದ ತಮಗೆ ಲಗ್ನಪತ್ರಿಕೆ ಬರುತ್ತೆ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಾದ ತಮಗ ಪತ್ರಿಕೆ ಬರುತ್ತೆ, ತಾಲ್ಲೂಕ್ ಬೋರ್ಡ್ ಮೆಂಬರುಗಳಾದ ತಮಗೆ ಪತ್ರಿಕೆ ಬರುತ್ತೆ ಮುನಿಸಿಪಲ್ ಕಮಿಷನರ್‌ರಾದ ತಮಗೆ ಪತ್ರಿಕೆ ಬರುತ್ತೆ, ಮಾಮೂಲ್‌ಪ್ರಕಾರ ಅರಮನೆಯಿಂದ ಗೌರವಹೊಂದಿ ಹಿಂದೆ ಲಗ್ನಪತ್ರಿಕೆ ಪಡೆದ ತನಗೆ ಪತ್ರಿಕೆ ಬರುತ್ತೆ ಎಂತ ಜನಗಳು ಮಾತಾಡಿಕೊಳ್ಳುತ್ತಾರೆ ಯಾವ ಯಾವ ಗೌರವಸ್ಥರಿಗೆ ಪತ್ರಿಕೆ ಬರುತ್ತೋ ಯಾರ ಯಾರು ಮನಸ್ಸು ಚಿಕ್ಕದುಮಾಡಿಕೊಳ್ಳುತ್ತಾರೋ ಪತ್ರಿಕೆಗಳು ಬಂದನಂತರ ನೋಡಬೇಕಾಗಿದೆ ಏನಂತೆ ಪತ್ರಿಕಾಗಳು ತಮಗೆ ಬಾರದ ಇದ್ದಾಗ್ಯೂ ವಿವಾಹಮಹೋತ್ಸವವನ್ನು ಕೇಳಿ ಸಂತೋಷಪಡತಕ್ಕದ್ದೇ ಯುಕ್ತವಾಗಿರುತ್ತೆ ಶ್ರೀಮನ್ ಯುವರಾಜರವರ ವಿವಾಹಮಹೋತ್ಸವಕಾಲದಲ್ಲಿ ಅಡ್ರಸ್ ಪಟ್ಟಿಗೆ ಒಪ್ಪಿಸಲು ಗೌರವಸ್ಥರಾದ ಜನಗಳೆಲ್ಲಾ ಭಕ್ತಿ ವಿಶ್ವಾಸಗಳಿಂದಲೂ ಉತ್ಸಾಹದಿಂದಲೂ ಚಂದಾ ಹಣ ಕೊಡುತ್ತಾ ಇದ್ದಾರೆ ಆದ್ದರಿಂದ ಎಲ್ಲಾ ಬಾಬಿನ ಮೆಂಬರುಗಳಿಗೂ ಹಿಂದೆ ಮೆಂಬರಾಗಿದ್ದವರಿಗೂ ಹಿಂದೆ ಲಗ್ನಪತ್ರಿಕೆ ಪಡೆದಿದ್ದವರಿಗೂ ಸಹ ಘನವಾದ ಗೌರ್ನ್ಮೆಂಟಿನವರು ಈಗ ಲಗ್ನಪತ್ರಿಕೆಗಳನ್ನು ಅನುಗ್ರಹಿಸುವಂತೆ ಮಾಡಿಸಿದರೆ ಮೇಲ್ಕಂಡ ದೊಡ್ಡ ಮನುಷ್ಯರಿಗೆಲ್ಲಾ ಪನತೆ ಮತ್ತು ಪ್ರೋತ್ಸಾಹವನ್ನೂ ಅಧಿಕವಾದ ಸಂತೋಷವನ್ನೂ ಉಂಟುಮಾಡಿದಂತೆ ಆಗುತ್ತೆ ಮಹಾ ಸಂತೋಷಕಾಲದಲ್ಲಿ ಪ್ರಜೆಗಳಿಗೆಲ್ಲಾ ಸಂತೋಷ ಮತ್ತು ಪ್ರೀತಿ ತೋರಿಸತಕ್ಕದ್ದೇ ಗೌರ್ನ್ಮೆಂಟಿನವರ ಧರ್ಮವಾಗಿರುತ್ತೆ

ಅರಕಲಗೂಡು —ಒಂದು ವಾರದಿಂದಲೂ ಈ ಸ್ಥಳದಲ್ಲಿಯೂ ಇದರ ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿಯೂ ಸಂಧ್ಯಾಕಾಲದಲ್ಲಿ ಆಕಾಶವು ಕಾರ್ಮುಗಿಲುಗಳಿಂದ ಕೂಡಿ ಪಥಿಕರಿಗೆ ದಿಗ್ಭ್ರಮೆಯನ್ನುಂಟುಮಾಡುತ್ತಲಿದೆ ಈ ಮಧ್ಯೆ ಅನೇಕ ಕಡೆಗಳಲ್ಲಿ ವರ್ಷವೃಷ್ಟಿಯಾದುದರಿಂದ ಕೃಷೀಕರೆಲ್ಲರೂ ಹಸನ್ಮುಖಿಗಳಾಗಿ ತಮ್ಮ ಕಾರ್ಯಗಳಲ್ಲಿ ನಿರತಾಸಕ್ತರಾಗಿದ್ದಾರೆ ಧಾರಣೆವಾಸಿಗಳು ಕೂಡಿದಮಟ್ಟಿಗೂ ಇಳಿತರವಾಗಿವೆ —ಇಲ್ಲಿನ ಕೆರೆಯ ನೀರನ್ನು ಹಲವು ವಿಧಗಳಿಂದ ಕೆಡಿಸಬಾರದೆಂಬುದನ್ನು ಸೂಚಿಸುವ ಒಂದು ಲಿಖಿತ ಬೋರ್ಡನ್ನು ಸದರಿ ಕೆರೆಯ ಹಿಂದೆ ಭೋಗತವಾಗಿದ್ದ ಒಂದು ಕೇಳವನ್ನು ತಮ್ಮ ಸಪ್ರಯತ್ನದಿಂದ ತೆಗಿಸಿ ಶುಚಿಮಾಡಿಸಿ ಇಲ್ಲಿನವರಿಗೆ ಬಟ್ಟೆಬರೆಗಳನ್ನು ಒಗೆಯುವದಕ್ಕೆ ತಕ್ಕ ಅನುಕೂಲವನ್ನುಂಟುಮಾಡಿದಂಥಾ ನಮ್ಮ ಅಮಲ್ದಾರರನ್ನು ಸಕಲರೂ ಹೊಗಳುತ್ತಿರುವದು ಸಹಜವಾಗಿದೆ ಸಂತೆಯಲ್ಲಿ ಪೋಲೀಸ್ ಬಂದೋಬಸ್ತು ಚಟುವಟಿಕೆಯಾಗಿ ನಡೆಯುವದರಿಂದ ಅನೇಕ ಅನ್ಯಾಯಗಳು ನಿಂತುಹೋಗಿವೆ ಮತ್ತು ಪೋಲೀಸ್ ಇನ್ಸ್ಪೆಕ್ಟರು ರಾತ್ರಿಕಾಲಗಳಲ್ಲಿ ಗುಟ್ಟಾಗಿ ತಮ್ಮ ಕಡೆಯವರನ್ನು ಪರೀಕ್ಷಿಸುತ್ತಿರುವದರಿಂದ ಪುರದ ಗಸ್ತು ಚೆನ್ನಾಗಿದೆ ಎಂದು ಕೇಳುತ್ತೇನೆ ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರು ಶ್ರೀನಿವಾಸಪುರಕ್ಕೂ ಪೋಸ್ಟ್ ಮಾಸ್ಟರು ಚನ್ನರಾಯಪಟ್ಟಣಕ್ಕೂ ವರ್ಗವಾಗಿ ಇವರ ಬದಲಿಗೆ ಬಂದಿರುವ ಈವರು ಚಟುವಟಿಕೆಯಿಂದ ತಮ್ಮ ಕರ್ತವ್ಯಗಳನ್ನು ನಡೆಸುತ್ತಿರುವದರಿಂದ ಈಗಾಗಲೇ ಇಲ್ಲಿನ ಪ್ರಜೆಗಳ ಅನುರಾಗಕ್ಕೆ ಪಾತ್ರರಾಗಿರುತ್ತಾರೆ —ಇದೇ ತಾಲ್ಲೂಕಿಗೆ ಸೇರಿದ ಅಕ್ಕಿ ಹೆಬ್ಬಾಳಿಗೆ ಘನ ಸ್ಪೆನ್ಸರ್ ಧೊರೆಯವರೂ ಉಪದೇಶಿ ಮೆ|| ಸತ್ಯವಾಯ್ಯನವರೂ ಕೆಲವು ವಾರಗಳ ಹಿಂದೆ ಬಂದು ಇಲ್ಲಿ ೪ ದಿನಗಳಿದ್ದು ಹಗಲಿನಲ್ಲಿ ಉಪನ್ಯಾಸಗಳ ಮೂಲಕ ಅನೇಕ ಹಳ್ಳಿಗಳನ್ನು ಸಂಧಿಸುತ್ತಲೂ ರಾತ್ರಿ ಕಾಲಗಳಲ್ಲಿ ಭೂತಕನ್ನಡಿಯ ಮೂಲಕ ಶ್ರೀ ಕ್ರಿಸ್ತಸ್ವಾಮಿಯವರ ಜೀವನವೃತ್ತಾಂತವನ್ನು ೪ ಭಾಗವಾಗಿ ಭಾಗಿಸಿ ಅವುಗಳಲ್ಲಿ ೩ ಭಾಗಗಳನ್ನು ತಿಳಿಸಿ ಉಳಿದ ಒಂದು ಭಾಗ (ಸ್ವಾಮಿಯವರ ಮರಣದ ವಿಷಯವನ್ನು) ತಿಳಿಸಬೇಕೆಂದು ಯೋಚಿಸಿಕೊಂಡಿರುವಷ್ಟರಲ್ಲಿಯೇ ಆ ಧೊರೆಯವರಿಗೆ ಆಕಸ್ಮಿಕವಾಗಿ ಸಂಭವಿಸಿದ ಖಾಯಿಲೆಯು ದೆಸೆಯಿಂದ ಆ ಕೂಡಲೆ ಹಾಸನಕ್ಕೆ ಹೋಗಬೇಕಾಗಿ ಬಂದುದರಿಂದ ನಾವೆಲ್ಲರೂ ಅಧಿಕವಾಗಿ ವಿಷಾದಿಸುತ್ತೇವೆ - ಸದರಿ ಗ್ರಾಮದಲ್ಲಿ ಪಂಚಮರಿಗೋಸ್ಕರ ಸುಮಾರು ೧೨೦೦ ರೂಪಾಯಿ ಮುಟ್ಟಿಸಿ ಕಟ್ಟಿಸಿರುವಂಥಾ ಪಾಠಶಾಲೆಯು ಆ ಗ್ರಾಮಕ್ಕೆ ಒಂದು ದಿವ್ಯವಾದ ಕಟ್ಟಡದಂತಿದೆ ಎಂದು ಅನೇಕರು ಮಾತನಾಡಿಕೊಳ್ಳುತ್ತಲಿದ್ದಾರೆ —ಇದೇ ತಿಂಗಳು ೭ನೇ ತಾ ನಮ್ಮ ಸರ್ಕಲ್ ಇನ್ಸ್ಪೆಕ್ಟರವರೂ ಈ ಕಡೆ ದಯಮಾಡಿ ಅನೇಕ ಪಾಠಶಾಲೆಗಳನ್ನು ಪರೀಕ್ಷೆ ಮಾಡಿದರು

ವಿದುರಾಶ್ವತ್ಥ —ಮೈಸೂರು ಸಂಸ್ಥಾನದಲ್ಲಿ ಮೈತ್ರೇಯಾಶ್ರಮವೆಂದು ಪ್ರಸಿದ್ಧಿಹೊಂದಿದ ವಿದುರಾಶ್ವತ್ಥದಲ್ಲಿ ಪ್ರತಿ ಸಂವತ್ಸರದಲ್ಲೂ ನಡೆಯುವಂತೆ ಈ ವರುಷವೂ ರಥೋತ್ಸವವು ನಡೆಯಿತು ನಾನಾ ಗ್ರಾಮದಿಂದ ಸುಮಾರು ೧೦-೧೫ ಸಾವಿರ ಜನರು ಸೇರಿದ್ದರು ಇಲ್ಲಿಗೆ ಸದಾ ಕಾಲದಲ್ಲಿಯೂ ಬರುವ ಮಹಾ ಜನಗಳಿಗೆ ಸಹಾಯವಾಗಿರುವಂತೆ ಚಿಕ್ಕಬಳ್ಳಾಪುರದ ವೈಶ್ಯರಾದ ಮೆ|| ಚಿಟ್ಲೂರು ರಾಜಯ್ಯ ಶ್ರೇಷ್ಠಿಗಳು ಧರ್ಮ ಛತ್ರವನ್ನು ಕಟ್ಟಿಸಿರುವರು ಸದರಿ ಛತ್ರದಲ್ಲಿ ಬ್ರಹ್ಮೋತ್ಸವಕ್ಕಾಗಿ ಬರುವ ಸಾವಿರಾರು ಜನ ವೈಶ್ಯ ಮಹನೀಯರಿಗೆ ಅತ್ಯಂತ ವಿಶ್ವಾಸದಿಂದ ಇಡುಗೂರು ಗ್ರಾಮದ ವೈಶ್ಯ ಬೃಂದದವರು ಅಶೇಷ ವೈಶ್ಯರ ಸಹಾಯದಿಂದ ಮೂರು ದಿನ ಸಂತರ್ಪಣೆ ಮಾಡಿದರು —ಇದಲ್ಲದೆ ಸದರಿ ಧರ್ಮ ಛತ್ರದಲ್ಲಿ ಇಡುಗೂರು ವೈಶ್ಯ ಧರ್ಮ ಪ್ರವರ್ಧನಿ ಸಭೆಯವರು ಮೀಟಿಂಗು ನಡಿಸಿದರು ಸಾವಿರಾರು ಜನ ವೈಶ್ಯ ಬೃಂದದವರು ಸೇರಿದ್ದರು ಆ ಸಭೆಯಲ್ಲಿ ತಿಪಟೂರು ಗ್ರಾಮದ ಮೆ|| ಗ್ರಂಥಿಗೆ ಕೃಷ್ಣಯ್ಯ ಶ್ರೇಷ್ಠಿಗಳವರು ಅಗ್ರಾಸನವನ್ನು ವಹಿಸಿದರು ಬೆಂಗಳೂರಿನ ಮೆ|| ಬಿ ವಿ ಹೊನ್ನಪ್ಪ ಶ್ರೇಷ್ಠಿಗಳವರು ದ್ವಿತೀಯ ಕಾನ್ಫರೆನ್ಸಿನ ತೀರ್ಮಾನಗಳನ್ನು ಅನುಸರಿಸಿ, ವೈಶ್ಯ ಉತ್ಪತ್ತಿ, ವೈಶ್ಯ ಧರ್ಮ, ವೇದವಿಚಾರ, ಉಪನಯ ಕ್ರಮ, ವಿದ್ಯಾಭ್ಯಾಸ ಮುಂತಾದ ವಿಷಯಗಳನ್ನು ಕುರಿತು ಬಹು ಸರಸವಾಗಿ ಸರ್ವರಿಗೂ ತಿಳಿಯುವಂತೆ ಶ್ರುತಿ, ಸ್ಮೃತಿ, ಧರ್ಮಶಾಸ್ತ್ರ ಪ್ರಮಾಣಗಳಿಂದ ಉಪನ್ಯಾಸಮಾಡಿದರು ಹಿಂದೂಪುರದ ಮೆ ದಾಸರಿ ಆದಿನಾರಾಯಣ ಶ್ರೇಷ್ಠಿಗಳವರು ಸಂಸ್ಕೃತ ವಿದ್ಯಾಭ್ಯಾಸವನ್ನೂ ಸ್ತ್ರೀ ವಿದ್ಯಾಭ್ಯಾಸವನ್ನೂ ಕುರಿತು ಸರಸವಾದ ಭಾಷಣ ಮಾಡಿದರು ಅನಂತರ ಮೆ|| ತಾತ ಪದ್ಮನಾಭ ಶ್ರೇಷ್ಠಿಗಳವರು ಆಚಾರ ಧರ್ಮಗಳನ್ನು ಕುರಿತು ಸಂಭಾಷಿಸಿದರು ಒಳಿಕೆ ಮೆ ಎಂ ಸುಬ್ಬಯ್ಯ ಶ್ರೇಷ್ಠಿಗಳವರು ಉಪನಯನಾದಿ ಕರ್ಮಗಳನ್ನು ಕುರಿತು ಮಾತನಾಡಿದರು ಸಭಾಧ್ಯಕ್ಷರು ಗಂಭೀರವಾದ ವಾಕ್ಯಗಳಿಂದ ಬಾಲಕರಿಗೆ ಸಂಸ್ಕೃತ ಆಂಗ್ಲೇಯಾದಿ ವಿದ್ಯೆಗಳನ್ನು ತಪ್ಪದೆ ಕಲಿಸದೊಡೆ ಶಾಸ್ತ್ರವೂ ಮತ ಧರ್ಮಗಳು ತಿಳಿಯಲು ಅನುಕೂಲವಾಗಿ ಬಾಲಕರು ಅಭಿವೃದ್ಧಿಗೆ ಬರುತ್ತಾರೆಂತಲೂ ತಮ್ಮ ಬಾಲಕರಿಗೆ ಸಕಾಲದಲ್ಲಿ ಶಾಸ್ತ್ರೋಕ್ತವಾಗಿ ೧೨ ನೇ ವರ್ಷದಲ್ಲಿಯೇ ಉಪನಯನಾದಿ ಕರ್ಮಗಳನ್ನು ನಡಿಸಬೇಕೆಂದೂ ಹೇಳಿದರು ಅನಂತರ ಇಡುಗೂರು ಆರ್ಯ ವೈಶ್ಯ ಸಂಘದವರು ಈ ಎರಡು ದಿನಗಳಿಂದಲೂ ನಮ್ಮ ಮತ ಧರ್ಮಗಳನ್ನು ಕುರಿತು ಉಪನ್ಯಾಸಮಾಡಿ ತಿಳಿಯದ ಸಂಗತಿಗಳನ್ನು ತಿಳಿಯಪಡಿಸಿದ್ದರಿಂದ ನಮ್ಮಗಳಿಗೆ ಆನಂದವುಂಟಾಗಿರುತ್ತೆ ಆದ್ದರಿಂದ ಮೆ ಬಿ ವಿ ಹೊನ್ನಪ್ಪ ಶ್ರೇಷ್ಠಿಗಳವರಿಗೆ ಒಂದು ಮೆಡಲನ್ನು ಬಹುಮಾನವಾಗಿ ಕೊಡಲು ವಾಗ್ದಾನ ಮಾಡಿದರು ತಿಪಟೂರು ಗ್ರಾಮದ ಮೆ|| ಎಸ್ ವೆಂಕಟಕೃಷ್ಣಯ್ಯ ಶ್ರೇಷ್ಠಿಗಳವರು ಈ ವಿಷಯವನ್ನು ಶ್ರೀಮಾನ್ ಚಂಗಯ್ಯ ಶ್ರೇಷ್ಠಿಗಳವರಿಗೂ ಮೈಸೂರು ಹೆಡ್ ಆಫೀಸಿಗೂ ತಿಳಿಯಪಡಿಸಬೇಕೆಂದು ಸೂಚಿಸಿದರು ಮೆ ಬಿ ವಿ ಹೊನ್ನಪ್ಪ ಶ್ರೇಷ್ಠಿಗಳವರು ಸಭಿಕರಿಗೂ, ಸಭೆ ಸೇರಲು ಧರ್ಮ ಛತ್ರವನ್ನು ಕಟ್ಟಿಸಿದ ಮೆ|| ಚಿ ರಾಜಯ್ಯ ಶ್ರೇಷ್ಠಿಗಳವರಿಗೂ ಇಡಗೂರು ವೈಶ್ಯಬೃಂದದವರಿಗೂ ಸಭೆಗೆ ಕಾರಣವಾದ ಮೆ ಎಂ ಚಂಗಯ್ಯ ಶ್ರೇಷ್ಠಿಯವರಿಗೂ, ನಮ್ಮ ಪ್ರಭುಗಳಾದ ಶ್ರೀಮನ್ ಮಹಾರಾಜರವರಿಗೂ ವೈಶ್ಯಬೃಂದದ ಪರವಾಗಿ ವಂದನೆಗಳನ್ನು ಸಮರ್ಪಿಸಿ, ಅವರುಗಳ ಶ್ರೇಯಃ ಪ್ರಾರ್ಥನೆಯ ಮಾಡಿಸಿದರು ಬಳಿಕ "ವಂದೇ ಲಕ್ಷ್ಮೀನಾರಾಯಣಂ" ಎಂಬ ಜಯಜಯ ಧ್ವನಿಗಳಿಂದ ಸಭೆಯು ಬರಖಾಸ್ತು ಮಾಡಲ್ಪಟ್ಟಿತು

ಮಾಗಡಿ —ಮಾಗಡಿ ಬಳಿ ತಿರುಮಲೆ ಶ್ರೀರಂಗನಾಥಸ್ವಾಮಿಯವರ ಜಾತ್ರೆಯು ಕಳೆದ ಏಪ್ರೆಲ್ ೨೧ರಲ್ಲಿ ನಡೆಯಿತು ರಥೋತ್ಸವ ೨೧ನೇ ತಾ ಆದರೂ ಹಿಂದೆ ೮ ದಿವಸಗಳು ಮುಂದೆ ೮ ದಿವಸಗಳು ಒಟ್ಟು ೧೬ ದಿವಸದ ಜಾತ್ರೆಯು ಬಹಳ ವಿಜೃಂಭಣೆಯಿಂದ ನಡೆಯಿತು ಈ ಜಾತ್ರೆಯಲ್ಲಿ ಮಾಮೂಲಿನಂತೆ ಎತ್ತಿನ ಪರಿಷೆಯು ನಡೆಯಿತು ಸುಮಾರು ೭ ೮ ಸಾವಿರ ಎತ್ತುಗಳು ಮಾರಿ ಸೇರಿತ್ತು ವ್ಯಾಪಾರವೂ ಬಹಳ ಜೋರಾಗಿಯೇ ನಡೆಯಿತೆನ್ನುವದಕ್ಕೆ ಯಾವ ಅಭ್ಯಂತರವೂ ಇರುವದಿಲ್ಲ ಇದಲ್ಲದೆ ಈ ವರ್ಷ ಮಾಗಡಿ ಬಳಿ ಕಣ್ವನದಿ ಉತ್ಪತ್ತಿ ಸ್ಥಾನವಾದ ಕರರೇಕರ ಭಾವಿ ಬಳಿ ಬೆಂಗಳೂರಲ್ಲಿರುವ ವೇ ಭವಾನಿಶಂಕರಶಾಸ್ತ್ರಿಗಳೆಂಬವರು ಅಗ್ನಿಷ್ಟೋಮವೆಂಬ ಕ್ರತುವನ್ನು ಏಪ್ರೇಲ್ ತಾ ೨೦ ರಿಂದ ೨೬ ರ ವರೆಗೂ ನಡಿಸಿದರು ಈ ಯಜ್ಞ ನಡೆಸಲು ಮಾಗಡಿ ಗ್ರಾಮದ ಸಭಿಕರಲ್ಲಿ ಕೆಲವು ಶಕ್ತಿಗಳಾಗಿದ್ದರೂ ಯಾರ ಸಹಾಯವನ್ನೂ ಅಪೇಕ್ಷಿಸದೆ ಮಾಗಡಿ ಕರಣೀಕರು ಮೆ|| ಕೃಷ್ಣಮೂರ್ತಿರಾಯರು ಎಲ್ಲಾ ಭಾಗದಲ್ಲೂ ಬಹಳ ವಿಜೃಂಭಣೆಯಿಂದ ನಡಿಸಿದರು ಪ್ರತಿ ದಿವಸವೂ ಸಾವಿರಾರು ಜನಗಳಿಗೆ ೧೨ ಘಂಟೆಗೆ ಸರಿಯಾಗಿ ಭೋಜನ ಮಾಡಿಸುತ್ತಿದ್ದರು ಇವರು ಮಾಡಿದ ಸಂತರ್ಪಣೆ ಖರ್ಚು ವಿಶೇಷವೂ ತಾವೇ ವಹಿಸಿ, ಕೊಂಚವೂ ಲೋಪವಿಲ್ಲದಂತೆ ನಡಿಸಿದ್ದು ಬಹಳ ಸ್ತೋತ್ರಾರ್ಹವೇ ಸರಿ ವಿಶಾಲವಾದ ಚಪ್ಪರವೂ ಹಾಕಿಸಿ ಸಂತರ್ಪಣೆ ಮಾಡಿಸಿದ್ದಲ್ಲದೆ ನೇಮಸ್ಥರಾಗಿ ಅಡಿಗೆಮಾಡಿಕೊಳ್ಳತಕ್ಕ ಎಲ್ಲಾ ಪಂಗಡದ ಜನಗಳಿಗೂ ಬವಾಜವಾ ಕೊಡುತ್ತಿದ್ದರು ಇಂಥಾ ಧಾರಾಳವಾದ ಬುದ್ಧಿಯೂ ಸಹನೆಯೂ ಇರತಕ್ಕದ್ದು ಬಹಳ ಅಪೂರ್ವ ಪರಿಷೆಗಾಗಿ ಬಂದಿದ್ದವರೆಲ್ಲಾ ಇವರ ಗುಣಗಳನ್ನು ಸ್ತೋತ್ರಮಾಡಿಕೊಂಡು ಬಹಳ ಆನಂದದಿಂದ ಹೊರಟು ಹೋದರು ಈ ಯಜ್ಞಕ್ಕಾಗಿ ಅನೇಕ ಕಡೆಗಳಿಂದ ಅಂದರೆ ಮಧುರೆ ವಗೈರೆ ದಕ್ಷಿಣ ದೇಶಗಳಿಂದ ವಿದ್ವಾಂಸರುಗಳು ಬಂದಿದ್ದರು ಬಹಳ ಅಟ್ಟಹಾಸದಿಂದ ನೆರವೇರಿತು ಈ ಯಜ್ಞದ ಮಧ್ಯೆ ಅಂದರೆ ೨೩ನೇ ತಾ ರಾತ್ರಿ ೯ ಘಂಟೆ ಹೊತ್ತಿನಲ್ಲಿ ಅಲ್ಲಿ ನಡೆದ ಸಂತರ್ಪಣೆಗೆ ಊಟಕ್ಕೆ ಹೋಗುತ್ತಾ ಇದ್ದ ಯಲಿಯೂರು ನಾರಣಭಟ್ಟರ ಮಗಳು ಸುಮಾರು ೮-೯ ವರುಷದ ಹುಡುಗಿಯು ನಿದ್ರೆಗಣ್ಣಿನಿಂದ ಭಾವಿ ಒಳಕ್ಕೆ ಮುಗ್ಗರಿಸಿ ನೀರಿನೊಳಕ್ಕೆ ಮೇಲಿನಿಂದ ಬಿದ್ದದ್ದನ್ನು ಮೆ|| ಕರಣೀಕರು ಕೃಷ್ಣಮೂರ್ತಿ ರಾಯರು ದೂರದಿಂದ ನೋಡಿ ಓಡಿಬಂದು ಆ ಮಗುವಿಗೆ ಸ್ವಲ್ಪವೂ ಅಪಾಯವಾಗದಂತೆ ಎತ್ತಿದು ಹಾಕಿ

ದರು ಮುಖದ ಮೇಲೆ ಕೊಂಚ ಗಾಯವಾದದ್ದೇ ವಿನಹಾ ಯಾವ ಅಪಾಯವೂ ಆಗಲಿಲ್ಲ ಇಷ್ಟೇ ಅಲ್ಲ ಈ ಕರಣೀಕರು ಈ ರಥೋತ್ಸವದಲ್ಲಿ ಪೂರ್ವದಿಂದಲೂ ಅವರ ಹಿರಿಯರು ನಡಿಸುತ್ತಿದ್ದ ಹಿಟ್ಟಿನ ಅರವಟ್ಟಿಗೆಯನ್ನು ಈಚೆಗೆ ಬಹಳ ಅಭಿವೃದ್ಧಿ ಮಾಡಿ, ಲಿಂಗಾಯತರಿಗೆ ಒಂದು ಭಾಗದಲ್ಲಿಯೂ, ಇತರ ಜನಗಳಿಗೆ ಒಂದು ಭಾಗದಲ್ಲಿಯೂ ಸಹ ಸಾವಿರಾರು ಜನಗಳು ಬಂದರೂ ಮಧ್ಯಾಹ್ನ ೧೨ ಘಂಟೆಯಿಂದ ರಾತ್ರಿ ತನಕ ಹಿಟ್ಟು ಕಾಳು ಯೆಸರು ವಗೈರೆ ಬಹಳ ವಿತರಣೆಯಿಂದ ಹಾಕಲು ಏರ್ಪಾಡು ಮಾಡಿ ನಡಿಸುತ್ತಿದ್ದಾರೆ, ಹೋದ ವರ್ಷ ಮತ್ತು ಈ ವರ್ಷ ಸಬ್ ಡಿವಿಜನ್ ಸಾಹೇಬರು, ಅಮಲ್ದಾರ್ರು, ಇತರ ದೊಡ್ಡ ಮನುಷ್ಯರು ಬಂದು ನೋಡಿ ಇಂಥಾ ಏರ್ಪಾಡು ಇನ್ನೆಲ್ಲೂ ಇಲ್ಲವೆಂದು ಬಹಳ ಒಳ್ಳೇ ಏರ್ಪಾಡೆಂದೂ ಸಂತೋಷಪಟ್ಟುಕೊಂಡು ಹೋದರು ಯಜ್ಞದಲ್ಲಿ ಕಡೇ ದಿವಸ ಲಾಡು ಸಂತರ್ಪಣೆ ನಡಿಸಿ ಬಂದ ಜನಗಳನ್ನು ತೃಪ್ತಿಪಡಿಸಿದರು ಸೋಮಯಾಜಿಗಳಿಗೆ ಮಕರ ಕುಂಡಲಿಯನ್ನು ಕರಣೀಕರು ಮಾಡಿಸಿ ಕೊಟ್ಟರು ಮತ್ತು ಜಾತ್ರೆಕಾಲದಲ್ಲಿ ಶೂದ್ರಾದಿಗಳಿಗೆಲ್ಲಾ ಬಹಳ ವಿಶ್ವಾಸದಿಂದ ಅನ್ನದಾನ ಮಾಡುತ್ತಾ ಬಂದಿದ್ದಾರೆ ಇದಲ್ಲದೆ ಈ ಕರಣೀಕರು ಈ ಜಾತ್ರೆಗೆ ಕೆಲವು ನೀರಿನ ಪಂಪುಗಳನ್ನೂ, ಬೀಸುವ ಯಂತ್ರ, ಒಡೆಯುವ ಯಂತ್ರ ವಗೈರೆಗಳನ್ನೂ ಅನೇಕವಾಗಿ ತಂದು ಹಾಕಿ ಕೆಲಸ ಮಾಡಿಸಿ ಪ್ರತಿ ಒಬ್ಬರಿಗೂ ಅದರ ಅನುಭವ ತೋರಿಸಿಕೊಟ್ಟರು ರೈತರಿಗೆ ಇಷ್ಟರ ಮಟ್ಟಿಗೆ ಹೇಳತಕ್ಕವರ್‍ಯಾರು ? ವ್ಯವಸಾಯದಲ್ಲಿ ಇವರಿಗಿರುವ ಶ್ರದ್ಧೆಯನ್ನು ಜನಗಳು ಬಹಳವಾಗಿ ಕೊಂಡಾಡಿದರು

ಇಂಡಿಯಾ ದೇಶದ ವೃತ್ತಾಂತಗಳು

ಎಂಬಿಾ ಪಟ್ಟಣದಲ್ಲಿ ಇಟ್ಟಿರುವ ಭೂಕಂಪನವನ್ನು ಗೊತ್ತುಮಾಡುವ ಯಂತ್ರವು ಅಲ್ಲಿಂದ ಸುಮಾರು ೩೯೦ ಮೈಲಿ ಫಾಸಲೆಯೊಳಗೆ ಎಂಟ್ಲೀ ಕಳೆದ ಬುಧವಾರ ಭೂಕಂಪವಾದಂತೆ ಸೂಚಿಸಿಕೊಟ್ಟಿತು

* * *

ಹಿಂದುಸ್ಥಾನದಲ್ಲಿಯೂ ಲಂಡನ್ ಪಟ್ಟಣದಲ್ಲಿಯೂ ಜನೀವಾದಲ್ಲಿಯೂ ಪ್ರಕಟವಾಗುವ ೨೪ ವರ್ತಮಾನಪತ್ರಿಕೆಗಳಲ್ಲಿ ಯಾವದನ್ನು ತರಿಸಿ ಓದಕೂಡದೆಂತಲೂ ಹಾಗೆ ಓದಿದರೆ ಶಿಕ್ಷೆಯಾಗುವದೆಂತಲೂ ಮಂಡಿ ಸಂಸ್ಥಾನದ ರಾಜರವರು ತಮ್ಮ ಪ್ರಜೆಗಳಿಗೆ ತಿಳಿಯಪಡಿಸಿರುತ್ತಾರೆ

* * *

ನೀಲಗಿರಿ ಜಿಲ್ಲೆಯ ಮೊದಲನೆ ಕಲೆಕ್ಟರವರ ಆಫೀಸ್ ಬಂಗಲೆಯನ್ನು ಉದ್ಧಾರಮಾಡಬೇಕಾದ ಅಗತ್ಯ ಕಂಡುಬಂದದ್ದರಿಂದ ಮದರಾಸ್ ಗವರನ್‌ಮೆಂಟಿನವರು ಅದಕ್ಕಾಗಿ ೩೫,೦೦೦ ರೂಪಾಯಿ ಸಾಂಕ್ಷನ್ ಮಾಡಿದರು ಕಾಮಗಾರಿಯು ಪ್ರಾರಂಭವಾಗಿ ಜಾಗ್ರತೆಯಾಗಿ ನಡೆಯುತ್ತಿದೆ

* * *

ವಿಲಾಯತಿ ಗೆ ಪ್ರೇಕ್ಷಣೆಗಾಗಿ ಹೋಗಿರುವ ಕೊಲ್ಹಾಪುರ ಮಹಾರಾಜರವರು ಲಂಡನ್ ಪಟ್ಟಣದಲ್ಲಿರುವ ಇಂಡಿಯಾ ಆಫೀಸಿಗೆ ಹೋಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಮಾರ್ಲೆಯವರನ್ನು ಕಳೆದ ಶುಕ್ರವಾರ ಕಂಡು ಅವರ ಕೂಡ ಅಂತರಂಗದಲ್ಲಿ ಮಾತನಾಡಿಕೊಂಡು ಬಂದರು

* * *

ಗತಿಸಿದ ಚಕ್ರವರ್ತಿ ಎಡ್ವರ್ಡ್ ಸಾರ್ವಭೌಮರವರ ಹೆಸರನ್ನು ಶಾಶ್ವತ ಪಡಿಸುವುದಕ್ಕೆ ಹಿಂದುಸ್ಥಾನದಲ್ಲಿ ಆಗಲೇ ಪ್ರಾರಂಭವಾಗಿರುತ್ತದೆ ಪಾಟಿಯಾಲಾ ಸಂಸ್ಥಾನದಲ್ಲಿ ಪ್ರಭುಗಳ ಒಂದು ಪ್ರತಿಮೆಯನ್ನು ಮಾಡಿಸಿ ನಿಲ್ಲಿಸುವುದಕ್ಕೆ ಆ ಮಹಾರಾಜರವರು ೨೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

* * *

ಕಲ್ಕತ್ತೆಯ ಹತ್ತಿರ ಇರುವ ಅಸನಸೋಲ್ ಎಂಬಲ್ಲಿ ಕೆಲಸಮಾಡುವ ಸೋಮಾರಿಯಾದ ಒಬ್ಬನು ತನ್ನ ಹೆಂಡತಿಯನ್ನು ಕೆಲಸ ಮಾಡುವ ಸ್ಥಳಕ್ಕೆ ಬರಹೇಳಿ ಅಲ್ಲಿ ಅವಳನ್ನು ಗುಂಡು ಹೊಡೆದು ಕೊಂದುಹಾಕಿದನು ಸ್ವಲ್ಪ ಹೊತ್ತಿನ ಮೇಲೆ ತಾನೂ ಆತ್ಮಹತ್ಯಮಾಡಿಕೊಂಡನು ಅವನಿಗೆ ಬುದ್ಧಿ ಸ್ವಾಧೀನವಿರಲಿಲ್ಲವೆಂದು ತಿಳಿದುಬಂದಿದೆ

* * *

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಪ್ಲೇಗ್ ಉಪದ್ರವದಿಂದ ೧೩,೦೭೬ ಜನರು ಮೃತಪಟ್ಟರು ಇದರ ಪಂಚಿಕೆ ಹಾಗೆಂದರೆ — ಪಂಜಾಬ್ ೭,೩೫೦, ರಾಜಪುತಾನಾ ೨,೭೯೮, ಸಂಯುಕ್ತ ಅಧಿಪತ್ಯಗಳು ೧,೨೫೦, ಬೊಂಬಾಯಿ ೪೭೪ ಬಂಗಾಳಾ ೩೧೭, ಬರ್ಮಾ ೧೫೦ ಮಧ್ಯಪ್ರಾಂತ್ಯಗಳು ೨೧, ಕಾಶ್ಮೀರ ೩೯, ಮದರಾಸ್ ಅಧಿಪತ್ಯ ೧, ಮೈಸೂರು ೯, ಹೈದರಾಬಾದ್ ೨

* * *

ಬೊಂಬಾಯಿ ಪಟ್ಟಣದಲ್ಲಿ ಪಸ್ ಅಂಡ್ ಮುಕ್ತಾಸ್ ಎಂಬುವರು ಸೇರಿಕೊಂಡು ಸುಳ್ಳು ಕಂಪೆನಿ ೧೨೦ ಜನರ ಬಳಿ ಹಣ ಸೆಳೆದುಕೊಂಡರು ಅವರಿಗೆ ತಿಂಗಳೊಂದಕ್ಕೆ ತಲಾ ೬೦ ರೂಪಾಯಿ ಸಂಬಳ ಕೊಡುವುದಾಗಿ ಪ್ರಕಟಿಸಿ ೬೨ ಮಂದಿ ಪಠಾಣರಿಂದ ೩೦ ರೂಪಾಯಿ ತೆಗೆದುಕೊಂಡು ಮೋಸಮಾಡಿದ್ದು ಮೊಕದ್ದಮೆ ಆಯಿತು ಮ್ಯಾಜಿಸ್ಟ್ರೇಟರು ಮೊದಲನೇ ಅಪರಾಧಿಗೆ ೧೮ ತಿಂಗಳ ಕಠಿಣಶಿಕ್ಷೆಯನ್ನೂ ೨೦೦ ರೂಪಾಯಿ ಜುಲ್ಮಾನೆಯನ್ನೂ, ಎರಡನೇ ಅಪರಾಧಿಗೆ ೬ ತಿಂಗಳ ಕಠಿಣಶಿಕ್ಷೆಯನ್ನೂ ೩೫೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು

* * *

ನಾಸಿಕ್ ಪಟ್ಟಣದಲ್ಲಿ ಕಲೆಕ್ಟರ್ ಜಾಕ್ಸನ್ ರವರನ್ನು ಕೊಂದ ಮೊಕದ್ದಮೆಯಲ್ಲಿ ಸರ್ಕಾರದವರು ೩೭ ಮಂದಿ ಅಪರಾಧಿಗಳನ್ನು ಹಿಡಿದರು ಈ ಪೈಕಿ ೩ ಮಂದಿಗೆ ಫಾಸೀ ಸಜಾ ಆಯಿತು ೫ ಮಂದಿಯನ್ನು ಬಂಕೋಲಿ ಶಿಕ್ಷೆಗೆ ಗುರಿಮಾಡಿದರು ೪ ಜನರಿಗೆ ಕ್ಷಮಾಪಣೆ ದೊರಕಿತು ಒಬ್ಬನು ಮೃತಪಟ್ಟನು ಮೂರು ಮಂದಿಯನ್ನು ಬಿಟ್ಟುಬಿಟ್ಟರು ಇನ್ನು ಜನ ಅಪರಾಧಿಗಳನ್ನು ಬೇರೊಂದು ಮೊಕದ್ದಮೆಯಲ್ಲಿ ದಸ್ತಗಿರಿ ಮಾಡುತ್ತಾರೆ ಉಳಿದ ೩೨ ಮಂದಿಯನ್ನು ಅವರ ಮೇಲೆ ರಾಜದ್ರೋಹಾಪರಾಧ ರುಜುವಾತಾದ್ದರಿಂದ ಸೆಷನ್ಸ್ ವಿಚಾರಣೆಗೆ ಗುರಿಮಾಡಿರುತ್ತಾರೆ

* * *

ಪೂರ್ವಬಂಗಾಳಾ ಅಧಿಪತ್ಯಕ್ಕೆ ಸೇರಿದ ಮೈಮನ್‌ಸಿಂಗ್ ಡಿಸ್ಟ್ರಿಕ್ಟಿನಲ್ಲಿ ಕಳೆದ ಶುಕ್ರವಾರ ಬೆಳಗಿನ ಝಾಮ ೫ ಗಂಟೆಯಲ್ಲಿ ಅಪಾರವಾದ ಮಳೆಯೂ ಸುಂಟರಗಾಳಿಯೂ ಪ್ರಾಪ್ತವಾಗಿ ಕೃಷ್ಣಪುರ, ಜಾನ್‌ಪುರ, ಸೋಲಪುರ, ಈ ಸುತ್ತುಮುತ್ತಿನ ಗ್ರಾಮಗಳಲ್ಲಿ ಬಹಳ ಕಷ್ಟನಷ್ಟಗಳುಂಟಾದವೆಂದು ತಂತೀವರ್ತಮಾನಬಂದಿದೆ ಟಿನ್ ಮನೆಗಳು ಅನೇಕ ನೆಲಸಮನಾದವು. ಮರಗಳು ಬುಡಸಹಿತ ಕಿತ್ತು ಉರುಳಿಕೊಂಡವು ಜೋಪಡಿ ಮನೆಗಳು ಕಿತ್ತು ಹಾರಿಹೋಗಿ ಗ್ರಾಮಾಂತರಗಳಲ್ಲಿ ಬಿದ್ದವು ತಂತೀಕಂಬಗಳು ಉರುಳಿಹೋದವು ಮನೆಗಳು ಬಿದ್ದು ಕೆಲವು ಜನರು ಪ್ರಾಣಕಳೆದುಕೊಂಡರೆಂದೂ ಹೇಳುವರು

ಪೂರ್ವ ಬಂಗಾಳದ ದಿಲದ್ವಾರವೆಂಬ ಪಟ್ಟಣದಲ್ಲಿ ಅನುಮಾನ ಕಂಡುಬಂದದ್ದರಿಂದ ಪೋಲೀಸಿನವರು ಇಬ್ಬರು ಮೌಲ್ವಿಗಳ ಮನೆಯನ್ನು ಹುಡುಕಿದರು ಅಲ್ಲಿ ಬಂದೂಕಗಳೂ ತೋಟಾಗಳೂ ಸಿಕ್ಕಿದ್ದರಿಂದ ಅವರಿಬ್ಬರನ್ನೂ ಸೆರೆಯಲ್ಲಿಟ್ಟು ವಿಚಾರಣೆಗೆ ಗುರಿ ಮಾಡಿರುತ್ತಾರೆ

* * *

ಸೈದಾಪೇಟೆಯ ರೈಲ್ವೆ ಸ್ಟೇಷನ್‌ದಲ್ಲಿ ಒಬ್ಬ ನೌಕರನು ತನ್ನ ಗಡಿಯಾರವನ್ನು ಸ್ಟೇಷನ್ ಪೋಲೀಸಿನವನು ತೆಗೆದುಕೊಂಡನೆಂದು ಅವನ ಕೂಡ ಜಗಳವಾಡಿದನು ತನಿಖೆ ಮಾಡುವಾಗ ಗಡಿಯಾರವು ಆ ಪೋಲೀಸಿನವನ ಮನೆಯಲ್ಲಿ ಸಿಕ್ಕಿತು ಬಳಿಕ ಆ ಪೋಲೀಸಿನವನು ಆ ನೌಕರನನ್ನು ಗುಂಡಿನಿಂದ ಹೊಡೆದು ಕೊಂದದ್ದಲ್ಲದೆ ತಾನೂ ಹೊಡೆದುಕೊಂಡು ಆತ್ಮಹತ್ಯಮಾಡಿಕೊಂಡನು

* * *

ನಾಸಿಕದ ಕಲೆಕ್ಟರ್ ಜಾಕ್ಸನ್ ರವರು ಮೃತಪಟ್ಟ ಸಂದರ್ಭವನ್ನು ಸರಿಯಾಗಿ ವಿಚಾರಣೆ ಮಾಡಿ ಹಿಂದುಸ್ಥಾನದ ಸಿವಿಲ್ ಪೆನಷನ ಕಾನೂನು ಮೇರೆಗೆ ಜಾಕ್ಸನ ರವರ ಪತ್ನಿಯರಿಗೆ ಸಲ್ಲಬೇಕಾದ ೪೫೦೦ ರೂ ಪೆನಷನ ಅಲ್ಲದೆ ವರುಷ ಒಂದಕ್ಕೆ ಇನ್ನೂ ೨,೭೦೦ ರೂಪಾಯಿಗಳನ್ನು ಕೊಡಬೇಕೆಂದೂ ಅವರ ತಾಯಿಗೆ ೩೩೦ ರೂ ಪೆನಷನ ಕೊಡಬೇಕೆಂದೂ ಹಿಂದುಸ್ಥಾನದ ಸೆಕ್ರೆಟರಿಯವರು ತೀರ್ಮಾನಿಸಿರುತ್ತಾರೆ

* * *

ಕರೂರಿನ ಸಬ ಮ್ಯಾಜಿಸ್ಟ್ರೇಟ ವ್ಯಾಸರಾಯರು ಎರಡು ವರುಷಗಳ ಹಿಂದೆ ತಮ್ಮ ಕಕ್ಷಿಗಳಾದ ಇಬ್ಬರು ಅಪರಾಧಿಗಳನ್ನು ಸೆಷನ್ಸ್ ಕೋರ್ಟಿನ ವಿಚಾರಣೆಗೆ ಗುರಿ ಮಾಡದಿರುವದಕ್ಕಾಗಿ ಅವರಿಂದ ಇನ್ನೂರು ರೂಪಾಯಿ ಲಂಚ ತೆಗೆದುಕೊಂಡರೆಂದು ವಿಚಾರಣೆ ನಡೆಯುತ್ತಿತ್ತು ಲಂಚ ತೆಗೆದುಕೊಂಡದ್ದಕ್ಕೆ ಸರಿಯಾದ ರುಜುವಾತು ಸಿಕ್ಕಲಿಲ್ಲವಾದ್ದರಿಂದ ವ್ಯಾಸರಾಯರನ್ನು ಬಿಡುಗಡೆ ಮಾಡಿರುತ್ತಾರೆ

* * *

ವಾಯುವ್ಯ ಸರಹದ್ದಿನ ಪ್ರಾಂತ್ಯದಲ್ಲಿ ಹಿಂದುಸ್ಥಾನದ ಎಲ್ಲೆಕಟ್ಟಿನ ಬಳಿ ಮಾಸೂದ್‌ವಂಶೀಕರು ಕಳೆದ ವಾರ ಸುಳಿಸ್ಟಿ ಮಿಲಿಟರಿ ಮುಖಂಡನ ೨೦೦ ಒಂಟೆಗಳನ್ನು ಅಪಹರಿಸಿಕೊಂಡು ಹೋದರು ಅವರು ಕಳ್ಳರನ್ನು ಹಿಂಬಾಲಿಸಿಕೊಂಡುಹೋದರೂ ಒಂಟೆಗಳನ್ನು ಬಿಡಿಸಿಕೊಂಡು ಬರಲು ಸಾಧ್ಯವಾಗಲಿಲ್ಲ ಬಳಿಕ ಒಂದು ಚಿಕ್ಕ ಕದನವಾಯಿತು ಕಳ್ಳರಲ್ಲಿ ಒಬ್ಬನು ಮೃತಪಟ್ಟನು ಮೂವರಿಗೆ ಗಾಯಗಳಾದವು

* * *

ಬೊಂಬಾಯಿನಲ್ಲಿ ಕಳೆದ ವರುಷ ನಡೆದ ವೈದ್ಯ ಮಹಾ ಸಭೆಯಲ್ಲಿ ಹಾವು ಕಡಿದದ್ದಕ್ಕೆ ಸರಿಯಾದ ಔಷಧಿಯನ್ನು ಲಿಖಿತ ಮೂಲಕ ಓದಿ ತಿಳಿಸಿದರು ಅದರಿಗೆ ಪೈಕಿ ಪರ್ಮಾಂಗನೇಟ್ ಆಫ್ ಪೊಟ್ಯಾಸಿಯಂ ಎಂಬುದನ್ನು ರಕ್ತನಾಳ ಮೂಲಕ ರಕ್ತಕ್ಕೆ ಸೇರಿಸಿದರೆ ಹಾವಿನ ವಿಷವು ನಾಶವಾಗುವದೆಂದು ಒಬ್ಬರು ಸೂಚಿಸಿದರು ಆದರೆ ಬೊಂಬಾಯಿನ ಔಷಧ ಶಾಲೆಯಲ್ಲಿ ಇದನ್ನು ಪರಿಕ್ಷಿಸಿನೋಡುವಲ್ಲಿ ಈ ಔಷಧದಿಂದ ಬಹಳ ಅಪಾಯ ಸಂಭವಿಸುವದೆಂದು ತಿಳಿದು ಬಂತು ಆದ್ದರಿಂದ ಅದನ್ನು ಯಾರೂ ಉಪಯೋಗಿಸಬಾರದೆಂದು ಹಿಂದುಸ್ಥಾನದ ಗವರ್ನಮೆಂಟಿನವರು ಪ್ರಕಟಿಸಿರುತ್ತಾರೆ

* * *

ತಂಜಾವೂರಿನ ನಾಯುಡು ಎಂಬವನು ತನ್ನ ಊರಿನಲ್ಲಿ ಆಸ್ಪತ್ರೆಯನ್ನು ಕಟ್ಟುವ ಚಂದಾ ಮೊಬಲಗು ೩,೦೦೦ ರೂ ಎನ್ನು ಕೊಟ್ಟಿದ್ದನು ಈಚೆಗೆ ಕಟ್ಟಡವೆಲ್ಲಾ ಪೂರೈಸಿದ ಮೇಲೆ ಅದಕ್ಕೆ ತನ್ನ ತಾಯಿಯ ಹೆಸರನ್ನು ಇಡಲಿಲ್ಲವೆಂಬದಾಗಿ ತಾನು ಕೊಟ್ಟಿದ್ದ ಹಣವನ್ನೂ ಅದರ ಬಡ್ಡಿಯನ್ನೂ ವಾಪಸು ಕೊಡಬೇಕೆಂದು ಕೇಳಿದನು ಈ ಆಸ್ಪತ್ರೆಯ ಕಟ್ಟಡವು ಒಟ್ಟು ೯,೦೦೦ ರೂ ಬಾಳುವದು ಇವನ ಮಾತಿನಂತೆ ನಡೆಯಲು ಯಾರೂ ಸಮ್ಮತಿಸದಿದ್ದರಿಂದ ಇವನ ಹಣವನ್ನು ವಾಪಸು ಕೊಡಲು ನಿಶ್ಚಯಿಸಿರುತ್ತಾರೆ — ಈ ಮನುಷ್ಯನ ಚಿಕ್ಕಬುದ್ಧಿಗೆ ಮುಂದಿನ ಜನಗಳು ಮೂಗಿನ ಮೇಲೆ ಬೆರಳಿಡುವ ಪಟ್ಟೀತೆಂದು ತೋರುತ್ತದೆ

* * *

ಪಂಜಾಬ ಅಧಿಪತ್ಯಕ್ಕೆ ಸೇರಿದ ಡೆರಾಜ್ ಡಿಸ್ಟ್ರಿಕ್ಟಿನಲ್ಲಿ ಖಾಜುಸಾರವೆಂಬ ಗ್ರಾಮದೊಳಗೆ ಕಳೆದ ವಾರ ಬಹು ದುಃಖಕರವಾದ ಅನಾಹುತ ಸಂಭವಿಸಿತು ಹಿಮವತ್ಪರ್ವತದ ಶಿಖರದಿಂದ ಅಪಾರವಾದ ಹಿಮಗಡ್ಡೆಗಳು ಪ್ರವಾಹದ ಹಾಗೆ ಅಕಸ್ಮಾತ್ತಾಗಿ ಹರಿದು ಬಂದು ಆ ಗ್ರಾಮವನ್ನು ಮುಳುಗಿಬಿಟ್ಟಿತು. ಇಪ್ಪತ್ತಾರು ಜನರೂ ಹಲವು ಗೋವುಗಳೂ ಆ ಪ್ರವಾಹದೊಳಗೆ ಸಿಕ್ಕಿಕೊಂಡರು ಹಿಮವನ್ನು ಬಿಡಿಸಿದರಲ್ಲಿ ಆ ಪೈಕಿ ಒಂಬತ್ತು ಜನರು ಮಾತ್ರ ಬದುಕಿ ಉಳಿದರು ಉಳಿದವರೆಲ್ಲಾ ಮೃತರಾದರು ಅವರ ಶವಗಳು ಇನ್ನೂ ಸಿಕ್ಕಲಿಲ್ಲ ಜಮೀನಿನ ಮೇಲೆ ಹಿಮವು ತುಂಬಿಕೊಂಡಿರುವದರಿಂದ ಈ ವರುಷ ವ್ಯವಸಾಯದ ಕೆಲಸಗಳ್ಯಾವವೂ ನಡೆಯುವದಿಲ್ಲ

* * *

ದಕ್ಷಿಣ ತಿರುವಾಂಕೂರಿನ ನಾಗರಕಾಯಿಲ್ ಎಂಬ ಪಟ್ಟಣದಲ್ಲಿ ಕೆಲವು ದಿನಗಳ ಹಿಂದೆ ಸುಂಟರ ಗಾಳಿಯು ಬೀಸಿ ಕೆಲವು ಆಶ್ಚರ್ಯಗಳು ನಡೆದವು ಮಧ್ಯಾಹ್ನದಲ್ಲಿ ಗಾಳಿಯು ಬೀಸ ಹತ್ತಿದ್ದಕ್ಕೆ ಮೊದಲಾಗಿ ಹಂದರಗಳೂ ಹುಲ್ಲಿನ ಮೆದೆಗಳೂ ಅಂತರಿಕ್ಷದಲ್ಲಿ ತೇಲಾಡಿದವು ಗಿಡಬಳ್ಳಿಗಳು ಬೇರು ಸಹಿತ ಕಿತ್ತು ಬಿದ್ದವು ಮೇಲಕ್ಕೆ ಹಾರಿಹೋದ ಒಂದಾನೊಂದು ಪೊದೆಯಲ್ಲಿ ಒಂದು ನರಿಯು ನಿದ್ರೆಮಾಡುತ್ತಿತ್ತು ಆ ಪೊದೆಯು ಸುಮಾರು ಒಂದು ಮೈಲಿಯ ವರೆಗೆ ಮೇಲಕ್ಕೆ ಹೋದ ಮೇಲೆ ಅದರಲ್ಲಿದ್ದ ನರಿಯು ಕೆಳಗೆ ಬಿದ್ದು ಮೃತಪಟ್ಟಿತು ಬೀದಿಯಲ್ಲಿ ಹೋಗುತ್ತಿದ್ದ ಒಬ್ಬ ಅಗಸನೂ ಗಾಳಿಯಿಂದ ಅರ್ಧ ಮೈಲಿ ಮೇಲಕ್ಕೆ ಒಯ್ಯಲ್ಪಟ್ಟು ನಂತರ ಕೆಳಗೆ ಬಿದ್ದು ಮಾರನೇ ದಿನ ಸತ್ತುಹೋದನು ಗಾಳಿಯು ನಿಂತುಹೋದ ಮೇಲೆ ಬಹಳ ರಭಸವಾದ ಮಳೆಯು ಒಂದು ಗಂಟೆ ಹೊತ್ತು ಸುರಿಯಿತು ದರಿದ್ರರಾದ ಅನೇಕ ಪ್ರಜೆಗಳು ಮನೆಗಳನ್ನು ಕಳೆದುಕೊಂಡು ದ್ರವ್ಯ ಸಹಾಯವಿಲ್ಲದೆ ಬಹಳ ಶ್ರಮ ಪಡುತ್ತಿರುವರೆಂದು ವರ್ತಮಾನ ಬಂದಿದೆ

* * *

ಹಿಂದುಸ್ಥಾನದ ಎಲ್ಲಾ ಅಧಿಪತ್ಯಗಳಲ್ಲಿ ಸಹಕಾರ ಸಾಲದ ಸಂಘಗಳೂ ಸಂಘಗಳೂ ಬಹಳವಾಗಿ ಹೆಚ್ಚಿ ಅಭಿವೃದ್ಧಿ ಹೊಂದುತ್ತಾ ಬರುತ್ತಿರುವವು ಈ ಸಂಘಗಳು ೧೯೦೭—೦೮ ನೇ ಸಾಲಿನಲ್ಲಿ ೯೦,೦೦೦ ಇದ್ದವು ೧೯೦೮—೦೯ ನೇ ಸಾಲಿನಲ್ಲಿ ೧,೪೪,೦೦೦ ಕ್ಕೆ ಏರ್ಪಟ್ಟಿರುತ್ತವೆ ಮತ್ತು ಅವುಗಳ ಮೂಲಧನ ಮೊದಲು ೨೩ ಲಕ್ಷ ರೂಪಾಯಿಗಳಿತ್ತು ಎರಡನೇ ಸಾಲಿನಲ್ಲಿ ೮೦ ಲಕ್ಷ ರೂಪಾಯಿಗೆ ಹೆಚ್ಚಿತು ಖರ್ಚಾದರೋ ೨೮ ಲಕ್ಷದಿಂದ ೪೪ ಲಕ್ಷವಾಗಿರುತ್ತದೆ ಅನೇಕ ಕಡೆಗಳಲ್ಲಿ ಈ ಸಂಘಗಳನ್ನು ಸ್ಥಾಪಿಸಿಕೊಡಬೇಕೆಂದು ಪ್ರಜೆಗಳು ಅರ್ಜಿಗಳನ್ನು ಬರೆದುಕೊಂಡಿರುತ್ತಾರೆ ಇಂಡಿಯಾ ಗವರನ್‌ಮೆಂಟಿನವರು ಈ ಸಂಘಗಳ ಅಭಿವೃದ್ಧಿಯನ್ನು ಅಪಾರವಾಗಿ ಮೆಚ್ಚಿಕೊಂಡು ಮುಂದೆ ಅವುಗಳ ಅಭಿವೃದ್ಧಿಗೂ ಮೇಲ್ವಿಚಾರಣೆಗೂ ತಕ್ಕ ಏರ್ಪಾಡನ್ನು ಮಾಡಬೇಕೆಂದೂ, ಬಡವರ ಯೋಗ್ಯ ಮನುಷ್ಯರೇ ಸಂಘಗಳ ಲೆಕ್ಕ ಪತ್ರಗಳನ್ನು ತನಿಖೆ ಮಾಡತಕ್ಕದಾಗಿದ್ದರೆ ಉತ್ತಮವೆಂದೂ ಅಭಿಪ್ರಾಯಪಟ್ಟು ದಾಖಲೆ ಈ ಸಂಘಗಳು ದೇಶದ ಏಳಿಗೆಯನ್ನುಂಟುಮಾಡಿಕೊಳ್ಳುತ್ತಿರುವದನ್ನು ನೋಡಿದರೆ ಪ್ರಜೆಗಳಿಗೆ ಅದರ ಪ್ರಯೋಜನ ಚೆನ್ನಾಗಿ ಮನದಟ್ಟಾಗಿ ಎಂದು ತೋರುತ್ತದೆ

* * *

ಉತ್ತರ ಹಿಂದುಸ್ಥಾನದಲ್ಲಿ ಕಣ್ಣು ಸರಿ ಕಾಣದ ರೋಗಗಳ ಚಿಕಿತ್ಸೆಗಾಗಿ ಶಹಾಪುರ ಪಟ್ಟಣದಲ್ಲಿ ಒಂದು ಸ್ಪೆಷಲ್ ಆಸ್ಪತ್ರೆಯನ್ನು ಮಾಡಿ ನಡಿಸುತ್ತಿದ್ದಾರಷ್ಟೆ ಈ ಆಸ್ಪತ್ರೆಯನ್ನು ಉದ್ಧಾರ ಮಾಡಬೇಕಾಗಿ ಬಂದಿದೆ ಅಲ್ಲದೆ ಅಲ್ಲಿಗೆ ಹೋಗುವ ರೋಗಿಗಳಿಗೆ ಇಳುಕೊಳ್ಳುವುದಕ್ಕೆ ವಸತಿಯ ಅನುಕೂಲವಾದ ಮತ್ತು ಪ್ರತ್ಯೇಕವಾದ ಕಟ್ಟಡಗಳು ಸಾಲವು ಇಲ್ಲ ಈ ರೋಗಗಳನ್ನು ಹೋಗಲಾಡಿಸುವ ವಿಷಯವಾಗಿ ಆ ಆಸ್ಪತ್ರೆಯ ಅಧಿಕಾರಿಗಳು ಮೈಸೂರು ಯವರನ್ನು ಈ ಸಂಗತಿ ವಿಷಯದಲ್ಲಿ ಅಲ್ಲಿಗೆ ಕರೆದುಕೊಂಡು ಹೋಗಿ ಎಲ್ಲಾ ತೋರಿಸಿ ಕೇಳಿಕೊಂಡಾಗ ಮೈಸೂರು ಮಹಾರಾಜರವರು ಪ್ರಜೆಗಳಿಂದಲೂ ಪಬ್ಲಿಕ್ ಸಂಘಗಳಿಂದಲೂ ಚಂದಾ ಎತ್ತಬೇಕೆಂದು ಅಪ್ಪಣೆ ಕೊಡಿಸಿದರು ಈ ಚಂದಾ ಪಟ್ಟಿಗೆ ಇದುವರೆಗೆ ೬೬,೦೦೦ ರೂ ಬಂದು ಸೇರಿರುತ್ತದೆ ಗ್ವಾಲಿಯರ ಮಹಾರಾಜರವರು ೧೨,೦೦೦ ಕಾಶ್ಮೀರ ಮಹಾರಾಜರವರು ೧೦,೦೦೦, ಪಾಟಿಯಾಲಾ ಮಹಾರಾಜರವರು ೫,೦೦೦ ಫಂಡಿಗೆ ಕೊಟ್ಟರು ಬಂಗಾಳ, ಕೂಚ್ ಬೇಹಾರ್, ಪಾಟಿಯಾಲಾ ಈ ಸಂಸ್ಥಾನಗಳ ರಾಜರು ತಲಾ ೬೦೦, ಕಪೂರಥಲಾ ಮಹಾರಾಜರವರು ೧,೦೦೦, ಈ ರೀತಿ ದ್ರವ್ಯ ಸಹಾಯಮಾಡಿದರು ಅನೇಕ ಸಂಘಗಳವರೂ ದೊಡ್ಡ ಮನುಷ್ಯರೂ ಚಂದಾವನ್ನು ವರುಷಕ್ಕನವನ್ನು ಕೊಡುವದಾಗಿ ತಿಳಿಸಿದ್ದಾರೆ ಅಹಮದಾಬಾದಿನ ಪ್ರಜೆಗಳು ೨೫೦ ರೂಪಾಯಿ ಕಳುಹಿಸಿ ಹಿಂದೂಗಳಿಗಾಗಿ ಒಂದು ಭೋಜನಶಾಲೆಯನ್ನು ಕಟ್ಟಬೇಕೆಂದೂ, ಬಾಂಬೆ ಈಶನ ಡೆಪ್ಯುಟಿ ಪ್ರೆಸಿಡೆಂಟರವರು ತಮ್ಮ ಪತ್ನಿಯ ಸ್ಮರಣೆಗಾಗಿ ೫,೦೦೦ ರೂಪಾಯಿ ಕಳುಹಿಸಿ, ಬಡರೋಗಿಗಳಿಗಾಗಿ ಒಂದು ಧರ್ಮಶಾಲೆಯನ್ನು ಕಟ್ಟಿಸಬೇಕೆಂದೂ ಕೇಳಿಕೊಂಡಿದ್ದಾರೆ ಈಗ ಆಸ್ಪತ್ರೆಯ ಬದಲಾವಣೆ ಮತ್ತು ಕಟ್ಟಡ ಕಾಮಗಾರಿಗಳನ್ನು ಪ್ರಾರಂಭ ಮಾಡಿರುವರು ಕಳೆದ ವರುಷ ಈ ಆಸ್ಪತ್ರೆಯಲ್ಲಿ ೧೯೨೭ ರೋಗಿಗಳು ಚಿಕಿತ್ಸೆ ಪಡೆದಿದ್ದರು ಇದು ಹಿಂದಿನ ವರುಷಕ್ಕಿಂತ ೫೨೦ ಮಂದಿ ಜಾಸ್ತಿಯಾಗಿರುತ್ತದೆ

ಮೈಸೂರು ಗೆಜೆಟ್ ಸಂಗ್ರಹ

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೆ ಒಳಪಟ್ಟ ಸರಹದ್ದಿನಲ್ಲಿ ೧೯೧೦ ನೇ ಜೂಲೈ ತಾ ೧ ರಿಂದ ಇನ್ನೆರಡು ವರುಷಗಳ ತನಕ ದೇವೀ ತಿಡುಬನ್ನು ಬಲಾತ್ಕಾರದಿ ಹಾಕುವ ರೂಲಸು ಜಾರಿಯಲ್ಲಿರತಕ್ಕದ್ದು

ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ ಕೋರಿನ ಕಾಮಂಡಾಂಟರಾದ ಮ|| ಜಿ ಇ ಟೀಟಿಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತೆರಡು ದಿನಗಳಿಗೆ ಜಾಸ್ತಿಮಾಡಿದೆ

ಯಡತೊರೆ ತಾಲ್ಲೂಕು ಅಮಲ್ದಾರ ಮ|| ಎಸ್ ಶ್ರೀನಿವಾಸರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ ರಜವನ್ನು ಇನ್ನೂ ಮೂರು ವಾರಗಳಿಗೆ ಜಾಸ್ತಿಮಾಡಿದೆ

ಮುಂದೆ ಹೇಳುವ ಸಬ ರೆಜಿಸ್ಟ್ರಾರುಗಳನ್ನು ವರ್ಗಾವರ್ಗಿ ಮಾಡಿದೆ — (೧) ಎಸ್ ನರಸುಂಹೈಯಂಗಾರ್ಯರನ್ನು ಶ್ರೀರಂಗಪಟ್ಟಣದಿಂದ ನಾಗಮಂಗಲಕ್ಕೆ (೨) ಬಿ ನರಸುಂಹೈಯಂಗಾರ್ಯರನ್ನು ನಾಗಮಂಗಲದಿಂದ ಶ್ರೀರಂಗಪಟ್ಟಣಕ್ಕೆ

ಅರಮನೆಯ ಡಿವಿಜನಲ್ಲಿ ಕೆಲಸಮಾಡುವ ಅ|| ಇಂಜನಿಯರ ಮ|| ವೆಂಕಟರಾವ್ ನಿಜಗಲಯವರನ್ನು ಅ| ಎಗ್ಸಿಕ್ಯುಟಿವ ಇನ್‌ಜನಿಯರಾಗಿ ನೇಮಿಸಿ ಹಂಗಾಮಿಯಾಗಿ ಬೆಂಗಳೂರು ಡಿವಿಜನ ಗೆ ವರ್ಗಮಾಡಿದೆ

ಪಾವಗಡ ತಾಲ್ಲೂಕ ಆಕ್ಟಿಂಗ ಅಮಲ್ದಾರ ಮ|| ಸ್ವಾಮಿನ ರಾವಿನಯವರಿಗೆ ಮೇ ತಾ ೯ ರಿಂದ ಹದಿನೈದು ದಿನಗಳ ಪ್ರಿವಿಲಿಜ ರಜಾ ಕೊಟ್ಟಿದೆ

ಶಿರಸ್ತೇದಾರ್ ಬಿ ಎಸ್ ತಿರುಮಲಾಚಾರ್ಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು

ಸಂತಾಪ ಸೂಚನೆ

ನಮ್ಮ ಪ್ರತ್ಯಕ್ಷ ದೇವತಾ ಸ್ವರೂಪರವರು ಪರಲೋಕ ಯಾತ್ರೆಯಂ ಮಾಡಿದ ವಿಷಯವಂ ಕೇಳಿ ನಮ್ಮ ಚಿತ್ರದುರ್ಗದ ತಾಲ್ಲೂಕು ಅಣ್ಣೇಹಾಳು ಗ್ರಾಮದ ರೀಡಿಂಗ್ ರೂಮಿನಲ್ಲಿ ಸಭೆ ಸೇರಿ ಸಂತಾಪ ಸೂಚಕ ಮೀಟಿಂಗ್ ನಡಿಸಿ ಪಾಚಕ ಮಹಾಶಯರ ಅವಗಾಹನೆಗಾಗಿ ನಮ್ಮ ರಾಜಭಕ್ತಿಯನ್ನು ಪ್ರಜೆಗಳೊಡನೆ ಸೂಚಿಸಲಾಗಿದೆ ಈ ಘನವಿಷಯವಾದ ಐದು ಕಂದಪದ್ಯಗಳಿಗೆ ನಮ್ಮ ಲೋಕಮಾನ್ಯ ಪತ್ರಿಕೆಯಲ್ಲಿ ಸ್ಥಳವಿತ್ತು ಪ್ರದರ್ಶಿಸಲು ಬೇಡುತ್ತೇನೆ

ಪರಮೋತ್ಕೃಷ್ಟಂ ಬಡೆದೀ |
ಭರತ ಮಹಾದರೆಯ ಸಿರಿಯ ಧರಿಸಿ ತಲೆಯೊಳಾ ||
ದರದಿ ಮೆರೆಯುತ್ತಲಿರ್ದ ಸು |
ಕರುಣಾಕರ ಸಾರ್ವಭೌಮರಳಿದ ನಾಡೋಳ್ ||

ಪಗಲೇ ಕತ್ತಲೆ ಮುಸುಕಿತು |
ಜಗರಾಗದು ಜಗದ್ವಿಮಲನೇತ್ರಂ ತಾ |
ನಗಲಿದ ಕಾರಣದಿಂದಂ |
ಮಿಗಿಲಿದು ದುರ್ದಿನದೊಳೆಣಿಸಲಕ್ಕುಂ ನ್ಯಾಯಂ ||

ಸಚ್ಚರಿತಾ ಗಪ್ರಭುವರ |
ರಚ್ಯುತ ಯೆಸರಾಗಿ ಲೋಕಪಾಲನೆಯಿಂ ಮೇ ||
ಉಚ್ಚಸ್ಥಾನದೊಳಿಂ ಸಹ |
ನಿಚ್ಚಂ ಪ್ರತಿಬಿಂಬಿಸಿರ್ಪ ರಾತ್ಮಪ್ರಭೆಯೊಳ್ ||

ಪರಕೈದಿದ ಎಡ್ವರ್ಡರ |
ಪರಮಾತ್ಮಕ್ಕನಿತ ಮುಖಿಲ ಸುಖ ಸಂಪದಮಂ ||
ಕರುಣಿಸಿ ಸಂಸಾರಕ್ಕರು |
ಶರಮೆನಿಪಾಕಲೋಗ್ಯ ವಿನಾಯಲೀಶನು ಮುದದಿಂ ||

ಯುವಸಾರ್ವಭೌಮರೀಗ |
ಳ್ಭುವನವ ಪೊತ್ತಿರ್ಪ ರೈದನೇ ಜಾರ್ಜೆಂಬೀ ||
ನವನಾಮಧೇಯದಿಂದಂ |
ತವೆ ರಾಜಿಸುತಿರಲಿ ಸಂತತಂ ಸುಖವಾಂತುಂ ||

ಬಿ ಭೀಮರಾಜು

Printed and Published by the Rev H GULLIFORD Proprietor and Manager, Wesleyan Mission Press, Mysore 19/5/1910

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—೧೯೧೦ ನೇ ಇಸವಿ ಮೇ ತಾರೀಖು ೨೬ ನೇ ಗುರುವಾರ. ಸಂಚಿಕೆ ೫೨

ಲಾ ಪುಸ್ತಕಗಳು

45-8

(1) ವ್ಯವಹಾರನಿರ್ಣಯ ಕ್ರ 1 ರೂ 12 ಆ ಸಮಸ್ತವ್ಯವಹಾರಗಳೂ, ನಮೂನೆಗಳೂ ಉಳ್ಳ ೮೦ ಪುಸ್ತಕ (2) ಕಮಾವಿಲಾ ಕ್ರ 10 ಆ ಕೃಷ್ಣಭಿವೃದ್ಧ್ಯರ್ಥವಾದ ಲಾ (3) ಕನ್ನಡ ಲಾ ರಿಪೋರ್ಟು ವರ್ಷದ ಚಂದಾ 1 ರೂ 8 ಆ ಕೋರ್ಟು ಫೈಸಲುಗಳ ಮಾಸಪತ್ರಿಕೆ ಅಪೇಕ್ಷಕರು ಪ್ಲೀಡರ ಎಂ ಮಲ್ಲಾರಾಧ್ಯರು, ಚಾಮರಾಜಪೇಟೆ ಬೆಂಗಳೂರು ಸಿಟಿ ಇವರಿಗೆ ಬರೆಯುವುದು

ಸಂಗೀತಪಾರಿಜಾತವೆಂಬ ಹಾಡಿನ ಪುಸ್ತಕ

20-16

ಕ್ರಯ 0-4-0

ವಿಳಾಸಗಳು—ಮೈಸೂರು, ಮರ್ಕಂಟೈಲ್ ಯೂನಿಯನ್ ಸಿ ಎಲ್ ಎಸ್ ಬುಕ್ ಡಿಪೋ ತುಮಕೂರು ಬಿ ಎಸ್ ಕನ್ನಯ್ಯಶೆಟ್ಟಿ ಅಂಡ್ ಕೊ ಮಂಗಳೂರು ಉರ್ಲ್ ವಾಟ್ ಬೆಂಗಳೂರು ಸಿಟಿ ಮಿಷನ್ ಬುಕ್ ಡಿಪೊ

ಮನೆ ಕ್ರಯಕ್ಕೆ ಬಂದಿದೆ

62 2

For Sale! For Sale!!

ಮೈಸೂರು ಲಷ್ಕರ್ ಮೊಹಲ್ಲಾ ೩ ನೇ ಡಿವಿಜನ್ ಬೀದಿ ಹಳ್ಳದಕೇರಿಯಲ್ಲಿರುವ ೨೮೫೬ ನೇ ಡೋರ್ ನಂಬರಿನ ಮಹಡಿ ಮನೆಯು ಬಿಕರಿಯಾಗಲ್ಪಡುತ್ತದೆ ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರನ್ನು ಕಂಡು ಎಲ್ಲಾ ವಿಷಯಗಳನ್ನೂ ತಿಳಿದುಕೊಳ್ಳಬಹುದು ವಿಳಾಸ

ಕೆ ಸುಬ್ರಹ್ಮಣ್ಯ ಐಯರ್, ೩೦ ದಿವಾನರ ಬೀದಿ, ಮೈಸೂರು

ಸತ್ಯವೂ ಅಗ್ಗವೂ ಆದ ಅಂಗಡಿ

41 8

ರೂ ೫ ಎಂದ ೨ ೧೨ 0 ಗೆ ಇಳಿಸಿದ

೩ ಗಂಟೆ ನಡೆಯುವ ೧೮ ವರುಷದ ಗ್ಯಾರಂಟಿ ಉಳ್ಳ ಸುಂದರವೂ ಗಟ್ಟಿಯೂ ಅಗ್ಗವೂ ಆದ ಲೀವರ್ ಜೇಬಿನ ಗಡಿಯಾರವನ್ನು ಸೊಗಸಾದ ಸರಪಣಿ, ೧೦೦ ಪೋಸ್ಟ್ ಕಾರ್ಡುಗಳ ಸಮೇತ ಪೋಸ್ಟೇಜು ಸೇರಿ ೩ ರೂ ಗೆ ಮಾರುತ್ತಿದ್ದದ್ದನ್ನು ಕೆಲವು ಕಾಲ ಮಾತ್ರ ರೂ ೨ ೧೨ ಗೆ ಕೊಡುತ್ತೇವೆ ಬೇಗ ಬರೆದುಕೊಳ್ಳಿ ಒಪ್ಪದಿದ್ದರೆ ಹಣ ವಾಪಸು ಕೊಡುತ್ತೇವೆ ನಮ್ಮ ವಿಳಾಸ —

ಬಿ ಎ ಸ್ಟಾಂಡರ್ಡ್ ಕಂಪನಿ, ಬತ್ತೂರು ಉ ಆರ್ಕಾಟ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

21

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಆಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ತರಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ

೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಕುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

40-11

ಲೋಕಮಯಹರ ಕಸ್ತೂರಿಮಾತ್ರೆ

ಹೊಸ ತರಹಾ! ವಾಸನೆಯಲ್ಲಿ ಹೆಚ್ಚು!! ಗುಣದಲ್ಲಿ ಅಧಿಕ!!!



ಈ ಮಾತ್ರೆಗಳನ್ನು ಚಿನ್ನದರೇಕು—ಹವಳದಭಸ್ಮ—ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಕೇವಲ ಗುಣಕಾರಿಗಳೂ—ದೋಷರಹಿತಗಳೂ ಆದ ಬಹು ಪದಾರ್ಥಗಳ ಮಿಶ್ರದಿಂದ ಮೊದಲಿಗಿಂತ ಸುವಾಸನೆ—ರುಚಿ—ಗುಣಗಳು ಒಹಳವಾಗಿರುವಂತೆಯೂ—ಬಾಯಲ್ಲಿ ಹಾಕಿದ ಕೂಡಲೆ ಕರಗುವಂತೆಯೂ—ಎಷ್ಟು ದಿನಗಳಿಟ್ಟರೂ ಕೆಡದಂತೆಯೂ ತಯಾರಿಸಿರುತ್ತವೆ.

ವೀಳೆಯದೆಲೆಯೊಡನೆ ಅಥವಾ ಹಾಗೇ ಉಪಯೋಗಿಸುತ್ತಾ ಬಂದರೆ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಬರಬಹುದಾದ ನಾನಾ ರೋಗಗಳನ್ನು ಬಾರದಂತೆ ಮಾಡುತ್ತದೆ—ಮತ್ತು ಗುಣಪಡಿಸುತ್ತದೆ

ವಾಯು ಸಂದುಗಳ ನೋವು—ಶೀತವಾತ—ಹೊಟ್ಟೆನೋವು ಅಗ್ನಿನಷ್ಟ—ಮೈನಡುಕ—ಮೈಭಾರ—ಕೈಕಾಲುಗಳ ಉರಿ—ಹೊಟ್ಟೆ ಉರಿ—ಜ್ವರ—ಚಳಿಜ್ವರ—ನೆಗಡಿ, ಕೆಮ್ಮಲು—ಹಲ್ಲುನೋವು—ಬಲಹೀನತೆ—ಅರೋಚಕ—ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ವಾಸಿಮಾಡುತ್ತದೆ

ತಾಂಬೂಲದೊಡನೆ ಸೇವಿಸುತ್ತಾ ಬಂದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಯೆಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಮಲಬದ್ಧವಿದ್ದರೆ ದಿನಕ್ಕೆ ಒಂದು ವೇಳೆ ಆಗುವಂತೆ ಮಾಡಿ ನೀರು ಹವಾಗಳ ಬದಲಾವಣೆಗಳನ್ನು ಸರಿಪಡಿಸಿ ಕಾಡು ಮಲೆನಾಡ ಗಳಲ್ಲಾದರೂ ಯಾವ ಖಾಯಿಲೆಗೂ ದಾರಿಗೊಡದೆ ರಕ್ತದಲ್ಲಿರುವ ದೋಷಗಳನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

೨೦ ಮಾತ್ರೆಯುಳ್ಳ ಕುಪ್ಪಿ ಬೆಲೆ 1 ಆಣೆ—ಐದು ಕುಪ್ಪಿಗೆ] ಹೆಚ್ಚು 10ರಿಂದ 12ರ ವರೆಗೆ ಟ ಖ 1 ಆಣಾ—

ಯೋಗ್ಯತಾಪತ್ರ —

"ತಮ್ಮ ಈ ಕಸ್ತೂರೀ ಮಾತ್ರೆಗಳಿಂದ ಬಹಳ ಮಂದಿಗೆ ಗುಣವಾಯಿತು, ಅದರ ಉಪಯೋಗವನ್ನು ಈ ಚಿಕ್ಕ ಕಾಗದದಲ್ಲಿ ಬರೆಯಲು ಸಾಧ್ಯವಲ್ಲ"

ಶೆಟ್ ಭೀಮಯ್ಯನವರು ಹಾರ್ನಹಳ್ಳಿ,
ಅರಸೀಕೆರೆ ತಾಲ್ಲೂಕು

"ಲೋಕ ಕಸ್ತೂರೀ ಮಾತ್ರೆಗಳಿಂದ ಇಲ್ಲಿ ಬಹಳ ಜನಗಳಿಗೆ ಜ್ವರ ಮತ್ತು ಅಜೀರ್ಣಾದಿಗಳು ಗುಣವಾಗಿವೆ ಪುನಃ ೬ ಕುಪ್ಪಿಗಳನ್ನು ಕಳುಹಿಸಿಕೊಡಿ-

ಶೆಟ್ ರಾಘವೇಂದ್ರರಾವ್ ಅವರು ಹೆಡ್ಮಾಸ್ಟರ್,
ಗೊಡಬನಹಾಳ್ ಚಿತ್ರದುರ್ಗ

ವಿಳಾಸವನ್ನು ತಿಳಿಯುವ ಹಾಗೆ ಬರೆಯಿರಿ—

ವಿಳಾಸ — ಶ್ರೀ ಶ್ರೀರಾಘವ ವೈದ್ಯಶಾಲಾ, ಮೈಸೂರು.

ಈ ಪುಸ್ತಕವನ್ನು ನೋಡಿರುವಿರಾ!

ಗತಿಸಿದ ಎಡ್ವರ್ಡ್ ಸಾರ್ವಭೌಮರ ಜೀವಮಾನದ ಚರಿತ್ರೆ

63—2

ಈ ಪುಸ್ತಕದಲ್ಲಿ ಗತಿಸಿದ ಸಾರ್ವಭೌಮರ, ದುಃಖಸಾಗರದಲ್ಲಿ ಮುಳುಗಿರುವ ಅವರ ಪತ್ನಿಯವರಾದ ಅಲೆಕ್ಸಾಂಡ್ರಾ ಮಹಾರಾಣಿಯವರ ಲಂಡನ್ ಮಹಾನಗರದಲ್ಲಿ ಅವರು ವಾಸಮಾಡುತ್ತಿದ್ದ ಬಕಿಂಗ್ಹಾಮ್ ಅರಮನೆಯ (ಈ ಅರಮನೆಯಲ್ಲಿ ಚಕ್ರವರ್ತಿಗಳು ಕಾಲವಾದರು), ಐಲ್ ಆವ್ ವೈಟ್ ದ್ವೀಪದಲ್ಲಿ ಕಟ್ಟಿರುವ ಆಸ್ಬರ್ನ್ ಅರಮನೆಯ (ಈ ಅರಮನೆಯಲ್ಲಿ ಚಕ್ರವರ್ತಿಗಳು ತಮ್ಮ ಬಾಲ್ಯವನ್ನು ಕಳೆದರು) ಸ್ಕಾಟ್ಲಂಡಿನಲ್ಲಿರುವ ಬಾಲ್ಮೋರಲ್ ಅರಮನೆಯ (ಈ ಅರಮನೆಯಲ್ಲಿ ಚಕ್ರವರ್ತಿಗಳು ಬೇಸಿಗೆ ಕಾಲವನ್ನು ಕಳೆಯುತ್ತಿದ್ದರು), ಪುರಾತನ ಕಾಲದಿಂದಲೂ ಲೋಕಪ್ರಸಿದ್ಧವಾಗಿರುವ ವಿಂಡ್ಸರ್ ರಾಜಭವನದ (ಬ್ರಿಟಿಷ್ ಚಕ್ರಾಧಿಪತ್ಯದ ಅರಸರು ಅನೇಕ ಶತಮಾನಗಳಿಂದಲೂ ಈ ಅರಮನೆಯಲ್ಲಿ ವಾಸಮಾಡಿಕೊಂಡು ಬಂದಿರುತ್ತಾರೆ ಈ ಅರಮನೆಯ ಉದ್ಯಾನವನದಲ್ಲಿರುವ ಫ್ರಾಗ್ಮೋರ್ ಎಂಬ ಶೃಂಗಾರವಾದ ಸಮಾಧಿಯಲ್ಲಿ ಗತಿಸಿದ ಚಕ್ರವರ್ತಿಗಳನ್ನು ಭೂಸ್ಥಾಪನೆ ಮಾಡುವರು), ಈಗ ಚಕ್ರವರ್ತಿಗಳಾಗಿರುವ ಜಾರ್ಜ್ ಸಾರ್ವಭೌಮರ ಮತ್ತು ಅವರ ಪತ್ನಿಯವರ, ಸ್ಯಾಂಡ್ರಿಂಗ್ಹಮ್ ಅರಮನೆಯ (ಈ ರಾಜಭವನದಲ್ಲಿ ಗತಿಸಿದ ಚಕ್ರವರ್ತಿಗಳು ವ್ಯವಸಾಯ ಪಶುಪಾಲನೆ ಮೊದಲಾದ ಉದ್ಯೋಗಗಳಲ್ಲಿ ಆಸಕ್ತರಾಗಿದ್ದರು) ಮಾರ್ಲ್ಬರೊ ಅರಮನೆಯ, ಇಂಗ್ಲಾಂಡ್ ದೇಶದ ರಾಜರು ಅನೇಕ ಶತಮಾನಗಳಿಂದಲೂ ಪಟ್ಟಾಭಿಷೇಕ ಕಾಲದಲ್ಲಿ ಉಪಯೋಗಿಸುತ್ತಾ ಬಂದಿರುವ ಪುರಾತನವಾದ ಕುರ್ಚಿಯ ಪಟಗಳು ಸುಂದರವಾಗಿ ಅಚ್ಚುಹಾಕಲ್ಪಟ್ಟಿವೆ ಈ ಪುಸ್ತಕದಲ್ಲಿ ಗತಿಸಿದ ಚಕ್ರವರ್ತಿಗಳ ಜನನ, ಬಾಲ್ಯ ವಿದ್ಯಾಭ್ಯಾಸ, ವಿವಾಹ, ದೇಶಸಂಚಾರ, ವ್ಯವಸಾಯ ಮೊದಲಾದ ಕಸಬುಗಳಲ್ಲಿ ಅವರಿಗಿದ್ದ ಅಪಾರವಾದ ಆಸಕ್ತಿ, ಇವೇ ಮೊದಲಾದ ಅನೇಕ ಸಂಗತಿಗಳು ಬಹು ಪರಿಷ್ಕಾರವಾಗಿಯೂ ರಸಿಕವಾಗಿಯೂ ಬರೆಯಲ್ಪಟ್ಟಿವೆ ಅತ್ಯುತ್ತಮವಾದ ಗ್ಲೇಜ್ ಕಾಗದದ ಮೇಲೆ ನೇತ್ರಾನಂದಕರವಾದ ಅಕ್ಷರಗಳಿಂದ ಅಚ್ಚುಹಾಕಲ್ಪಟ್ಟಿರುವುದು ದೊಡ್ಡ ಸೈಜು ಪ್ರತಿಗಳು ಮುಗಿದು ಹೋಗಬಹುದಾದ್ದರಿಂದ ವಾಚಕ ಮಹಾಶಯರು ಜಾಗ್ರತೆಯಲ್ಲಿಯೇ ಬರೆದು ತರಿಸಿಕೊಳ್ಳಿ ಪುಸ್ತಕದ ಕ್ರಯ ನಾಲ್ಕು ಆಣೆ ಮಾತ್ರ ವಿ ಪಿ ಪಿ ಮೂಲಕ ತರಿಸಿಕೊಂಡರೆ ಆರು ಆಣೆ ಆಗುತ್ತದೆ

ವಿಳಾಸ —ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

68-1

ತಲೆನೋವು, ವಾಯುನೋವು ಸೆಳತ, ಗಂಟಲನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು —ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆರು ೬ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಪೀಟರ್ಸ್

೩೨, ವೇದಮುತ್ತುಪಿಳ್ಳೆ ಬೀದಿ, ವೇಪೇರಿ ಮದರಾಸ್

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 26 13

ತಲೆನೋವು ಗಂಟು ಉಬ್ಬುವದು, ವಾತ ಸಂಧಿವಾತ ಉಳುಕು ಆಟಲು ಗಂಟು ಗಂಟು ನೋವು, ಅರ್ಧಾಂಗವಾಯು ಎದೆಶೀತ, ಘಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಕುವದರೊಳಗೆ ಗಜಕರ್ಣ, ತುರಿ ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦—೮ ೧೨ ಡಬ್ಬಿಗಳಿಗೆ ೪ ೦ ೦

ಆಸ್ತಾ ಮಿಶ್ರಣ	೨ ೦ ೦
ಚೇಳುಕಡತದಮದ್ದು	೦ ೮ ೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದು ಜನಗಳಿಗೆ	೦ ೮ ೧
ಜುಲಾಬು ಮಾತ್ರೆ—ಜುಲಾಬಿಗೆ	೦ ೮ ೦
ನೇತ್ರಾಂಜನ—ಮಂದದೃಷ್ಟಿಗೆ	೦ ೪ ೦
ಜಿಚ್ಚಿ ಮುಲಾಮು—ಮಕ್ಕಳ ಜಿಚ್ಚಿಗೆ	೦-೩ ೦
ಕೇಶವರ್ಧಿನೀ ತೈಲ—ಕೂದಲು ಬೆಳೆಯುವುದಕ್ಕೆ	೧ ೦ ೦
ಕಫನಾಶಕ ಚೂರ್ಣ—ಉಬ್ಬಸ ರೋಗಕ್ಕೆ	೦ ೮ ೦

ದಯಮಾಡಿ ಕ್ಯಾಟಲಾಗಿಗೆ ಬರಿಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —' ಅಮೃತಾಂಜನ," ಮುಂಬಯಿ.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳುಹಿಸುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನು ಛಳುಕು ನಿದ್ದೆಯಿಲ್ಲದೆ ಇರುವದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಡವೆ ಬಾಯಾರಿಕೆ, ಬಳಲಿಕೆ ಎದೆ ತಲ್ಲಣಿಸುವುದು ತಲೆನೋವು ಗಾಬರಿ ಕಣ್ಣುಮೊಬ್ಬು ತಲೆ ತಿರುಗುವಿಕೆ ಮೈನೋವು ಕೀಲುನೋವು ಮರವು ನಿಶ್ಶಕ್ತಿ ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ ವಾಯು ಮೈಬಾವು ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ಕಳುಹುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [6 39]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಓ. ೨೦, ಬೊಂಬಾಯಿ ಬಾಕ್ಸ್—ಇವರಲ್ಲಿ ದೊರೆಯುವುದು

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

8 21

ಶೀತದ ಕೆಮ್ಮು, ಗಂಟಲು ಗಾರೆನ್ನುವುದು ಹುಡಿಗೆಮ್ಮು ನಾಯಿಗೆಮ್ಮು ಎಲ್ಲಾ ತರದ ಶೀತ ಗಂಟಲನಲ್ಲೂ ಎದೆಯಲ್ಲೂ, ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತವೆ ಎದೆ ಒಡಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

WANTED.

59 2

Vacancy for female student compounder who must be able to read and write English Scholarship 6 Rs increasing Candidate who must not be less than 17 years of age must apply in her own hand writing to

DR ELSIE T WATTS,
Wesleyan Mission Hospital,
Mysore City

ಇತ್ತ ಲಕ್ಷ್ಯಕೊಡಿರಿ

41

ಸುಮಾರು ಅನೇಕ ಕಾಲಗಳಿಂದ ನಮ್ಮ ಗೃಹಸ್ಥರು ಘಡಿಯಾರಗಳನ್ನು ಕೇಳುವದರಿಂದ ಈಗತಾನೇ ಸೀಮೆಯಿಂದ ಕೆಲವು ವಾಚುಗಳನ್ನು ತರಿಸಿ ಬಿಕರಿಗೆ ಇಟ್ಟಿದ್ದೇವೆ

ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಲಿವರ್ ಘಡಿಯಾರವು ಸರಪಣಿ ಪೆಟ್ಟಿಗೆ ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ಕ್ರಯ ೩ ೨ ೦ ಮೂರು ರೂಪಾಯಿ ಎರಡು ಆಣೆ ಈ ಗಡಿಯಾರಗಳು ಗುಣದಲ್ಲಿಯೂ ಕಠೀದಿಯಲ್ಲಿಯೂ ಮಜಬೂತಿನಲ್ಲಿಯೂ ಶ್ರೇಷ್ಠವಾದವೆಂದು ದೃಢವಾಗಿ ಹೇಳುತ್ತೇವೆ

ವಿಳಾಸ—ದಿ ಜುಬಿಲಿ ಮಾರ್ಟ್,

ಮಂಗಳೂರು

ಪ್ರಸಿದ್ಧ ಪತ್ರಿಕೆ

53 6

ನಾವು ಈಗತಾನೇ ಸೀಮೆಯಿಂದ ಕೆಂಪು ದುಗ್ಗ ಕೆಂಪು ಮಂದ ಕೆಂಪು, ಕಪ್ಪು, ಕಪ್ಪು ಕೆಂಪು ಮಿಶ್ರದ ಮಿಕ್ಸೆಡ್ ಕಾಪಿ ಬಣ್ಣದ ಉಲನ್ನನ್ನು ತರಿಸಿದೆವೆ ಯಾರ್ಡ ೧ಕ್ಕೆ ೧—೧೦—೦ ರ ಲಾಗಾಯಿತು ೪—೦—೦ ರ ವರಿಗೆ ಮೆಲ್ಟಂಡ ಉಲನ್ನಲ್ಲಿ ತಯಾರಾದ ಟೋಪಿಗಳು ೧ಕ್ಕೆ ೦—೯—೦ ಲಾಗಾಯಿತು ೧—೮—೦ ರ ವರಿವಿಗ ರೇಷ್ಮೆ ಚುಕ್ಕೆ ಟೋಪಿ ೧ಕ್ಕೆ ೧—೧೨—೦, ೨—೮—೦, ಡಜನ್ ಗಟ್ಲೆ ತರಿಸಿಕೊಂಡರೆ ಕೇಕಡಾ ೬ ಡಿಸ್ಕೌಂಟು ಸಿಕ್ಕುತ್ತ ನಮ್ಮ ಕಂಪೆನಿಯ ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿ

ಜಿ ಯನ್ ಕಣ್ಣಯ್ಯಶೆಟ್ಟಿ,

ಉಲ್ಲನ್ ಕ್ಯಾಪ್ ಮ್ಯಾನೇಜರ್ ತುಮಕೂರು

ಮಕ್ಕಳ ಹಿತಕಾರಿ

ಎಂದು

SCOTT'S EMULSION 6 21

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಕ್ಕೆ ಕೋಟ್ಯಂತರ ತಂದೆತಾಯಿಗಳು ಮೆಚ್ಚಿದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವನ್ನಾಗಿ ಮಾಡುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
,, ,, ೬ ,, ,,	,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಬತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸ್ವದೇಶೀ ಬಟ್ಟೆಗಳು ಸ್ವದೇಶೀ ಬಟ್ಟೆಗಳು !!

14 19

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10-19]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೨೯—೪—೧೯೧೦ ರಿಂದ ೬—೫—೧೯೧೦ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	1	1
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	0	0	71	45
ಕೋಲಾರ್ ,,	0	0	10	7
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	1	1	0	0
ಕಡೂರ್ ,,	5	2	2	0
ಶಿವಮೊಗ್ಗ ,,	0	0	0	0
ಜುಮ್ಲಾ	6	3	84	53

ಶಾಲಿವಾಹನ ಶಕ ವರುಷಂಗಳು ೧೮೩೨ ನೇ ಸಾಧಾರಣನಾಮ ಸಂವತ್ಸರದ ವೈಶಾಖ ಬಹುಳ ತದಿಗೆ ಶುಕ್ರವಾರದಿಂದ ವೈಶಾಖ ಬಹುಳ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೧೦ ನೇ ಮೇ ಮತ್ತು ಜೂನ್.

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಶೇಡಿ ಮೇಷ ಮಾಸ
27	ಶುಕ್ರ ,,	ತದಿಗೆ	19-19	ಪೂಷಾ	57-47	14
28	ಶನಿವಾ ,,	ಚೌತಿ	20-10	ಉತ್ತಷಾ	58-25	15
29	ರವಿವಾ	ಪಂಚಮಿ	19-50	ಶ್ರ	60-0	16
30	ಚಂದ್ರ	ಷಷ್ಠಿ	18-12	ಧ	59 38	17
31	ಕುಜ *	ಸಪ್ತಮಿ	15-28	ಶ	57-59	18
1	ಬುಧ §	ಅಷ್ಟಮಿ	11-37	ಪೂಭಾ	55-22	19
2	ಗುರು †	ನವಮಿ	6-58	ಉತ್ತಭಾ	52-6	20

,, ಪಾತಾಭಾವ, ಚತುರ್ಥೀತಿಥಿ, ಸಂಕಷ್ಟಚತುರ್ಥಿ, ಕಂಚಿ ವರದರಾಜಸ್ವಾಮಿ ರಥ, ಮಾರನಹಳ್ಳಿ ನೃಸಿಂಹಸ್ವಾಮಿ ರಥ

;; ಪಂಚಮೀ ತಿಥಿ.

* ಅಗ್ನಿನಕ್ಷತ್ರನಿವೃತ್ತಿ.

§ ಪ್ರಾಗುದಯಂ ಬುಧ.

† ದತ್ತಾತ್ರೇಯ ಜಯಂತಿ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೨-೮-೦	೧೪-೮-೦
ಕೆಂಬೂತಿ ಅಕ್ಕಿ ಅವಲ್ ...	...	೧೪-೪-೦	೧೪-೮-೦
,, ದುಯಂ ...	...	೧೨-೮-೦	೧೪-೦-೦
ಜಾಬ್ರಾಣಿ ಅಕ್ಕಿ ...	...	೧೨-೪-೦	೧೫-೮-೦
ಸಣ್ಣಕ್ಕಿ ಅವಲ್ ...	...	೧೫-೮-೦	೧೬-೪-೦
,, ದುಯಂ ...	...	೧೪-೦-೦	೧೬-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ ...	...	೧೨-೮-೦	೧೪-೮-೦
,, ದುಯಂ ...	...	೧೨-೦-೦	೧೪-೦-೦
ಹೈಕ್ ರಾಗಿ ಪಲ್ಲಾ ೧ಕ್ಕೆ ...	...	೭-೮-೦	೬-೮-೦
ಕಾರ್‍ರಾಗಿ	...	೭-೪-೦	೬-೦-೦
ಜೋಳ	...	೭-೮-೦	೮-೪-೦
ಹಲಸಂದೆ ಪಲ್ಲಾ ೧ಕ್ಕೆ ...	..	೧೧-೦-೦	೧೨-೮-೦
ಬಿಳೀ ಅವರೆ	...	೧೧-೦-೦	೧೧-೦-೦
ಹೆಸರು	...	೧೧-೪-೦	೧೧-೦-೦
ಉದ್ದು	...	೧೪-೦-೦	೧೨-೦-೦
ಕಡಲೆ	...	೧೨-೮-೦	೧೦ ೦ ೦
ಎಳ್ಳು ಸೇ. ೧೨೭ ಕ್ಕೆ ...	...	೨೦-೦-೦	೨೦-೦-೦
ಹುರುಳಿ	...	೮-೨-೦	೯-೪-೦
ಹರಳು ೧೨೭ ಸೇರಿಗೆ ...	...	೧೪-೦-೦	೧೧-೦-೦
ಸೀಗೇಕಾಯಿ ಮಣ ೧ಕ್ಕೆ ...	...	೨-೪-೦	೨-೧-೦
ಮೆಣಸಿನಕಾಯಿ	...	೫-೮-೦	೪-೧೨-೦
,, ದುಯಂ ...	...	೫-೦-೦	೪-೧೨-೦
ಬೆಲ್ಲ ದೊಡ್ಡ ಅಚ್ಚು ...	...	೮-೦-೦	ವ: ೨ ೪-೦
ಒಳ್ಳೆಣ್ಣೆ ಮಣ ೧ಕ್ಕೆ ...	...	೫-೪-೦	೫-೪-೦
ಹರಳೆಣ್ಣೆ ,, ...	...	೫-೩-೦	೫-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ ...	...	೧೪-೦-೦	೧೨-೮-೦
ಉಪ್ಪು ,, ...	...	೫-೫-೦	೫-೨-೦
ಹುಣಸೇ ಹಣ್ಣು	...	೧-೧೨-೦	೧-೫-೦
,, ಹಳೇದು ...	...	೧-೮-೦	೧-೬-೦
ತುಪ್ಪ ಮಣ ೧ಕ್ಕೆ ...	...	೧೭-೧೨-೦	೧೪-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ...	...	೫-೪-೦	೪-೧೨-೦
ತೆಂಗಿನಕಾಯಿ ೧೦೦ ಕ್ಕೆ ...	...	೫-೦-೦	೫-೦-೦
ಅಡಕೇಕಾಯಿ ಮಣ ೧ಕ್ಕೆ ...	...	೦-೧೨-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	೦-೧೨-೦	೦-೧೨-೦
ಚಿನ್ನ (ಪೌನ್) ಕೆಂಪು ...	...	೧೫-೭-೦	೧೫-೬-೦
,, ,, ಪವನು ...	...	೧೬-೦-೦	೧೬-೦-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೮-೦	೨೪-೪-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ...	...	೭೪-೦-೦	೭೪-೦-೦

ನಮ್ಮ ಏಜಂಟರಿಗೆ ನೋಟೀಸ್.

ಇದೇ ಮೇ ತಿಂಗಳ ಅಖೈರಿಗೆ "ವೃತ್ತಾಂತ ಪತ್ರಿಕೆ"ಯ ಸಂವತ್ಸರವು ಪೂರೈಸುತ್ತದೆ. ನಮ್ಮ ಏಜಂಟರುಗಳು ವರುಷದ ಲೆಕ್ಕಗಳನ್ನೆಲ್ಲಾ ಪೈದುಮಾಡಿ, ಅಖೈರ್ ಪಟ್ಟಿಗಳನ್ನು ಕಳುಹಿಸಬೇಕು. ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಆದ ಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಲಾಗದು. ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೧ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಪಾವತಿ ಮಾಡಬೇಕೆಂದೂ, ಅವರಿಂದ ಆ ಬಗ್ಗೆ ಕ್ರಮವಾಗಿ ಪ್ರಿಂಟಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ಕೃತಪಡಿಸುತ್ತೇವೆ.

ಮ್ಯಾನೇಜರ್, 'ವೃತ್ತಾಂತ ಪತ್ರಿಕೆ,' ಮೈಸೂರು.

ಯಾವ ತರವಾದ ಮೋಸವೂ ಇಲ್ಲ — ದರಗಳು ಬಹಳ ಸುಲಭ.
ವಿಪರೀತವಾಗಿ ವ್ಯಾಪಾರವಾಗುತ್ತಿವೆ. — ಜಾಗ್ರತೆ ನೋಡಿ

ಲೋಕದಲ್ಲೆಲ್ಲಾ ಅತ್ಯಂತ ಆಶ್ಚರ್ಯವಾದುದು.

69-1

ಬಹು ಸೊಗಸಾದ ಮತ್ತು ಮೇಜಿನ ಮೇಲಿಡುವುದಕ್ಕೆ ಉಪಯುಕ್ತವಾದ ದೊಡ್ಡ ಗಡಿಯಾರ ಮತ್ತು ಜೇಬಿನಲ್ಲಿಡುವುದಕ್ಕೆ ಯೋಗ್ಯವಾದ ವಾಚ್ ಗಡಿಯಾರ. ಎರಡು ಗಡಿಯಾರಗಳು ಸಿಕ್ಕುತ್ತವೆ

ಮಹನೀಯರುಗಳೇ,

ನಮ್ಮ ಹಿಂದೂ ದೇಶದ ವರ್ತಕರನೇಕರು ತಾವು ಮಾರುವ ಪದಾರ್ಥಗಳ ವಿಷಯ ವಿಪರೀತವಾಗಿ ಹೊಗಳಿ, ಸುಳ್ಳು ಸಂಗತಿಗಳನ್ನು ಪ್ರಕಟಿಸುವವರಾಗಿದ್ದಾರೆ ಅಂಥಾ ವರ್ಣನೆಯನ್ನು ಓದುವವರು ಪದಾರ್ಥಗಳನ್ನು ಕೊಂಡ ಮೇಲೆ ಮೋಸ ಹೋಗುವರು. ಅದರಿಂದಲೇ ಜನರು ಕ್ರಯದ ಪಟ್ಟಿಗಳನ್ನು ಓದುವುದಿಲ್ಲ ಆದರೆ ನೀವೆಂದಿಗೂ ನಮ್ಮ ಅಂಗಡಿಯ ವಿಷಯ ಯಾವ ಸಂಶಯವನ್ನೂ ಇಡಬಾರದು. ನಮ್ಮ ಅಂಗಡಿಯಲ್ಲಿ ನೀವು ಒಂದಾವರ್ತಿ ವ್ಯಾಪಾರ ಮಾಡಿದರೆ ಇನ್ನೆಂದಿಗೂ ನಮ್ಮನ್ನು ಬಿಟ್ಟು ಬೇರೆ ಅಂಗಡಿಗಳಿಗೆ ಹೋಗಲಾರಿರಿ ನೋಡಿರಿ ಜೇಬಿನಲ್ಲಿ ಇಡುವ ಒಂದು ಸೊಗಸಾದ ಗಡಿಯಾರವನ್ನು ಕೊಂಡರೆ ಅದರ ಜೊತೆಯಲ್ಲಿ ೫೧ ಪದಾರ್ಥಗಳನ್ನು ಕಳುಹಿಸುತ್ತೇವೆ ಗಡಿಯಾರಕ್ಕೆ ಒಂದಾವರ್ತಿ ಬೀಗ ಕೊಟ್ಟರೆ ೩೦ ಗಂಟೆಗಳ ಕಾಲ ನಡೆಯುವುದು. ಸೊಗಸಾದ ಮುಳ್ಳುಗಳು, ಬಿಳೀ ಗಾಜಿನ ಮೇಲೆ ಬರೆಯಲ್ಪಟ್ಟ ಗಂಟೆಗಳ ಅಂಕೆಗಳು ಇವುಗಳು ಅದರಲ್ಲಿರುತ್ತವೆ ಇದಕ್ಕೆ ಐದು ವರ್ಷಗಳು ಗ್ಯಾರಂಟಿ ಕೊಡುತ್ತೇವೆ ಈ ಗಡಿಯಾರವನ್ನು ಕಳುಹಿಸುವುದಕ್ಕೆ ಮೊದಲು ಅದನ್ನು ನಾವು ಚೆನ್ನಾಗಿ ಪರೀಕ್ಷೆಮಾಡಿಯೇ ಕಳುಹಿಸುವೆವು. ಅದರ ಜೊತೆಯಲ್ಲಿ ಕೆಳಗೆ ಕಂಡ ಪದಾರ್ಥಗಳನ್ನು ಕಳುಹಿಸುವೆವು ಒಂದು ಸೊಗಸಾದ ಗಡಿಯಾರದ ಸರಪಣಿ, ಮೇಜಿನ ಮೇಲೆ ಇಡುವ ದೊಡ್ಡ ಗಡಿಯಾರ ಒಂದು, ವಿಲಾಯತಿಯಲ್ಲಿ ಮಾಡಿದ ದುಡ್ಡಿನ ಪೆಟ್ಟಿಗೆಯೊಂದು, ಇದಕ್ಕೆ ಅರಗೂ ಬೀಗದ ಕೈಗಳೂ ಇರುವವು. ಒಂದು ಉತ್ಕೃಷ್ಟವಾದ ಜುಬ್ಬ, ತಿಂಗಳಿಗೆಲ್ಲಾ ಒಂದೇ ಆಣೆಯ ಎಣ್ಣೆ ಕುಡಿಯುವ ಸೊಗಸಾದ ಲ್ಯಾಂಪ್ ದೀಪ, ಒಂದು ಸೊಗಸಾದ ಫೌಂಟೆನ್ ಪೇನಾ, ಒಂದು ಜೊತೆ ಬಾಳಿಕೆ ಬರುವ ಮೇಜೋಡು, ದಂತದ ಹಿಡಿಯಿರುವ ಒಂದು ಚಾಕು, ಒಂದು ಬಲವಾದ ಚರ್ಮದಿಂದ ಮಾಡಿದ ದುಡ್ಡು ಹಾಕುವ ಚೀಲ, ಒಂದು ಸೊಗಸಾದ ಬಾಚಣಿಗೆ, ಒಂದು ದರ್ಪಣ (ಕನ್ನಡಿ), ಸೊಗಸಾದ ಕತ್ತರಿ, ರಾತ್ರಿಯಲ್ಲಿ ಹಾಕಿಕೊಳ್ಳುವ ಕಂಬಳಿ ಟೋಪಿ, ಷರ್ಟು ಜುಬ್ಬಕ್ಕೆ ಉಪಯೋಗವಾದ ಸೊಗಸಾದ ಗುಂಡಿಗಳು, ಒಂದು ಕನ್ನಡಕ, ಒಂದು ಸೊಗಸಾದ ಪೆಟ್ಟಿಗೆಯಲ್ಲಿ ಸೋಪು, ಒಂದು ಉತ್ಕೃಷ್ಟವಾದ ಕ್ಯಾನ್ವಸ್ಸು, ಥಳಥಳಿಸುವ ಸೌಟು, ರಬ್ಬರು, ಸೊಗಸಾದ ಮಸೀಕುಡಿಕೆ, ಸೀಸದ ಕಡ್ಡಿ ಹೆರೆಯುವ ಯಂತ್ರ, ಹನ್ನೆರಡು ಪೇನಾ ಕಡ್ಡಿಗಳು, ಆರು ಸೀಸದ ಕಡ್ಡಿಗಳು, ನೂರೈವತ್ತು ಸೊಗಸಾದ ಎನ್‌ವೆಲೋಪುಗಳು (ಲಕೋಟೆಗಳು) ನೂರೈವತ್ತು ಲೆಟರ್ ಕಾಗದಗಳು, ನೂರು ಪೋಸ್ಟ್ ಕಾರ್ಡುಗಳು, ಎಪ್ಪತ್ತು ಮೂರು ಪೇನಾ ಮುಳ್ಳುಗಳು, ಇವೆಲ್ಲವುಗಳಿಗೆ ಏಳು ರೂಪಾಯಿ ಎಂಟೇ ಆಣೆ (ರೂ. ೭-೮-೦) ಅಪೇಕ್ಷಿಸತಕ್ಕವರು ಅರ್ಧ ಮೊಬಲಗನ್ನು ಮುಂಗಡವಾಗಿ ಮನಿಯಾರ್ಡರ್ ಮೂಲಕ ರವಾನಿಸಬೇಕು.

ಎಂ. ಎ. ಪಟೌಲಾ ಅಂಡ್ ಕಂಪೆನಿ,
(ಉತ್ತರ ಆರ್ಕಾಟು) ಚಿತ್ತೂರು
ಎಂಬ ವಿಳಾಸಕ್ಕೆ ಬರೆದುಕೊಳ್ಳಿ.

(ಪದಾರ್ಥಗಳನ್ನು ಕೊಂಡ ಮೇಲೆ ಅವುಗಳನ್ನು ನೀವು ಅಪೇಕ್ಷಿಸದಿದ್ದರೆ ನಿಮ್ಮ ದುಡ್ಡನ್ನು ವಾಪಸು ಕಳುಹಿಸುತ್ತೇವೆ.)

ಆರ್ಡರ್ ಫಾರಂ.

ಅಯ್ಯಾ,

ದಯಮಾಡಿ ಮಮುಟಪಾಲಿನಲ್ಲಿಯೇ ಜೇಬಿನಲ್ಲಿಡುವ ಒಂದು ಗಡಿಯಾರವನ್ನೂ ಮೇಜಿನ ಮೇಲಿಡುವದಕ್ಕೆ ಒಂದು ಸೊಗಸಾದ ದೊಡ್ಡ ಗಡಿಯಾರವನ್ನೂ ಇವುಗಳ ಸಂಗಡ ೫೧ ಬಹುಮಾನಗಳನ್ನೂ ಕಳುಹಿಸಿಕೊಡಿರಿ ಅದಕ್ಕಾಗುವ ಖರ್ಚು ೭-೦-೦ (ರೂ ೭-೦-೦) ಯಲ್ಲಿ ಅರ್ಧ ಮೊಬಲಗನ್ನು ಅಂದರೆ ೩-೧೨-೦ ನ್ನು ಮನಿಯಾರ್ಡರ್ ಮೂಲಕ ರವಾನಿಸುತ್ತೇನೆ. ಬಾಕಿ ಮೊಬಲಗನ್ನು ನೀವು ದಯವಿಟ್ಟು ವಿ. ಪಿ. ಪಿ ಮೂಲಕ ತೆಗೆದುಕೊಳ್ಳಿ

ಹೆಸರು .. ..
ವಿಳಾಸ, ...
ಪೋಸ್ಟ್ ಆಫೀಸ್... .. ..
ಹತ್ತಿರದಲ್ಲಿರುವ ರೈಲ್ವೆ ಸ್ಟೇಷನ್. . ...

ಇಂತಿ.

.. . .

ಗಮನವಿಟ್ಟು ನೋಡಿ.—ಮೇಲೆ ಹೇಳುವ ಗಡಿಯಾರವನ್ನಪೇಕ್ಷಿಸುವವರು ಈ ಕೂಪನ್‌ನಲ್ಲಿ ಬರೆದು ಕತ್ತರಿಸಿ, ಮುಂದಿನ ಜೂನ್ ೧೦ ನೇ ತಾರೀಖಿನೊಳಗೆ ನಮಗೆ ರವಾನೆ ಮಾಡಿ, ಅದರ ಕೂಡ ಅರ್ಧ ಹಣವನ್ನು ಅಡ್ವಾನ್ಸು ಕಳುಹಿಸಿದಲ್ಲಿ ಅವರಿಗೆ ರೂ. ೭-೮-೦ ಕ್ಕೆ ಬದಲು ರೂ ೭ ಕ್ಕೆ ಕೊಡಲ್ಪಡುವದು.

ಲೀಖಿನ್ ಪ್ರಕಾಶಿಕಾ.

65-2

ಪತ್ರಗಳನ್ನು ಬರೆಯುವವರಿಗೂ, ಲೇವಾದೇವಿ ಮಾಡುವವರಿಗೂ, ರೆಜಿಸ್ಟ್ರೇಷನ್ ಆಫೀಸಿಗೆ ಹೋಗುವವರಿಗೂ, ಅತ್ಯವಶ್ಯಕವಾದ ಇಂಥಾ ಪುಸ್ತಕವು ಮತ್ತೆಲ್ಲಿಯೂ ದೊರೆಯಲಾರದು ಪತ್ರಿಕಾ ಪ್ರಸಂಗವಲ್ಲ, ತರಿಸಿ ನೋಡಿ. ಈಗಲೇ ಬರೆದುಕೊಂಡವರಿಗೆ ಖರ್ಚು ಸೇರಿ 1—2—0 ನಂತರ 1—10—0.

ವಿಳಾಸ:—ಎಂ. ಕೃಷ್ಣಮೂರ್ತಿರಾವ್,
ರೆಜಿಸ್ಟ್ರೇಷನ್ ಕ್ಲಾರ್ಕ್, ಹೊನ್ನಾಳಿ.

ಮದರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿ.

70-1

ಬೆಂಗಳೂರಿನಿಂದ ಪೂನಾಕ್ಕೆ ಹೋಗಿ ಬರುವ ಫ್ಯಾಸ್ಟ್ ಪ್ಯಾಸೆಂಜರ್ ಟ್ರೈನ್‌ಗಳಲ್ಲಿ ತಿಂಡಿ ಪದಾರ್ಥಗಳು ಬಿಕರಿ ಆಗುವ ಗಾಡಿಗಳ ಏರ್ಪಾಡು.

೧೯೧೦ ನೇ ಇಸವಿ ಮೇ ತಾ. ೩೧ ರಿಂದ ಬೆಂಗಳೂರು ಸಿಟಿ, ಹುಬ್ಬಳ್ಳಿ, ಬೆಳ್ಗಾವ ಮತ್ತು ಪೂನಾ ಪಟ್ಟಣಗಳ ವರೆಗೆ ಹೋಗಿ ಬರುತ್ತಿರುವ ೩ನೇ ನಂಬರ್ ಅಪ್ ಮತ್ತು ೪ನೇ ನಂ. ಡೌನ್ ಫ್ಯಾಸ್ಟ್ ಪ್ಯಾಸೆಂಜರ್ ಟ್ರೈನ್‌ಗಳಲ್ಲಿ ಯಾವಾಗಲೂ ಒಂದು ಸ್ಪೆಷಲ್ ಗಾಡಿಯು ಜಂಟಿಸಲ್ಪಟ್ಟಿರುತ್ತದೆ. ಈ ಸ್ಪೆಷಲ್ ಗಾಡಿಯಲ್ಲಿ ದೇಶೀಯ ಪ್ರಯಾಣಿಕರಿಗೋಸ್ಕರ ತಿಂಡಿ ಪದಾರ್ಥಗಳು ಅಂದರೆ,—ಮಿಠಾಯಿ, ಸಾರ್‌ರೊಟ್ಟಿ, ಬಿಸ್ಕತ್ತು, ಟೀ, ಕಾಫಿ ಮುಂತಾದವುಗಳು ಶ್ರೇಷ್ಠರಾದ ಹೆಸರುವಾಸಿ ಪಡೆದಂಥಾ ಬ್ರಾಹ್ಮಣರಿಂದಲೇ ತಯಾರ್ಮಾಡಲ್ಪಟ್ಟು ಸುಲಭವಾದ ಕ್ರಯಕ್ಕೆ ಬಿಕರಿಗೆ ಸಿದ್ಧವಾಗಿರುತ್ತವೆ.

ಕ್ರಯ ಮುಂತಾದ ವಿಷಯಗಳನ್ನು ಸರಿಯಾಗಿ ತಿಳಿಯಲಪೇಕ್ಷಿಸುವವರು ಸ್ಟೇಷನ್‌ಗಳಲ್ಲಿ ಚಿಗಟಾಯಿಸಲ್ಪಟ್ಟಿರುವ ನೋಟೀಸುಗಳಿಂದಲೂ, ಪ್ರಯಾಣಮಾಡುವ ಆ ರೈಲ್ ಗಾಡಿಗಳಲ್ಲಿ ಅಂಟಿಸಿರುವ ನೋಟೀಸುಗಳಿಂದಲೂ ಗೊತ್ತುಮಾಡಿಕೊಳ್ಳಬಹುದಾಗಿದೆ.

ಮದರಾಸ್, — ಆರ್. ಗ್ರೀನಾಲ್,
ತಾ. ೨೪-೫-೧೯೧೦. — ಆಕ್ಟಿಂಗ್ ಜನರಲ್ ಟ್ರಾಫಿಕ್ ಮ್ಯಾನೇಜರ್.

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಸ್ಥಳವಾಸಿಗಳು, ಹೆಬ್ಬೂರು, ಚಂದಾದಾರ್, ಶಿವಮೊಗ್ಗ, ಪ್ರತ್ಯಕ್ಷದರ್ಶಿ, ಸತಾರಾಪುರ; ಪ್ರಜಾಹಿತಚಿಂತಕ, ಮಾರಳವಾಡಿ; ಎನ್ ಎಸ್., ನೆಲಮಂಗಲ, ಲಗ್ನದ ಸುಲಿಗೆ, ಕೋಡಗುಪ್ರಾಂತ್ಯ, ಎಂ ಆರ್, ಬೌರಿಂಗ್‌ಪೇಟೆ —ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ದೇವನಹಳ್ಳಿಯ ವೈದ್ಯಶಾಲಾ ಪಂಡಿತರು ವೆ॥ ನಂದಿಗಿರಿ ದೀಕ್ಷಿತರು ಒಬ್ಬ ಸ್ತ್ರೀಯ ಕೆಟ್ಟ ರೋಗವನ್ನು ಬಹು ಕನಿಕರದಿಂದ ವಾಸಿಮಾಡಿ ಪಥ್ಯ ಮೊದಲಾದ ಸಹಾಯವನ್ನು ಸ್ವಂತವಾಗಿ ಮಾಡಿದರೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಬೆಂಗಳೂರು ಬ್ರಹ್ಮಸಮಾಜದ ಸ್ವಾಮಿಗಳು ಕಳೆದ ವಾರ ಚನ್ನಪಟ್ಟಣದಲ್ಲಿ ದೇವರ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರೆಂದೂ ನೂರಾರು ಜನರು ಕೇಳಿ ಸಂತೋಷಪಟ್ಟು ತಮ್ಮ ಕೃತಜ್ಞತೆಯನ್ನು ಪ್ರಕಾಶ ಪಡಿಸಿದರೆಂದೂ ಕೆಲವರು ಬರೆದಿರುತ್ತಾರೆ

—ಎಡಿಟರ್.

ಕರೆಸ್ಪಾಂಡೆನ್ಸ್.

ನಂಬುವದೇ ಕಷ್ಟ.

ಅಯ್ಯಾ,

ತಿರುಮಕೂಡ್ಲು ನರಸೀಪುರದ ತಾಲ್ಲೂಕು ಗರ್ಗೇಶ್ವರಿ ಎಂಬ ಗ್ರಾಮಕ್ಕೆ ಈಗ್ಗೆ ೩ ವರ್ಷಗಳ ಮುಂಚೆ ವಾಣಿಯಂಬಾಡಿ ಕಡೆಯಿಂದ ಮೂರು ಮಂದಿ ಬಂದು ಈ ಊರಿನ ಚಿಕ್ಕಳವ ಮಂದಿ ಇಟ್ಟು ವ್ಯಾಪಾರಮಾಡುತ್ತಾ ನಂಬಿಗೆಯುಳ್ಳವರಂತೆ ನಟಿಸಿ ಅನೇಕ ಆಕ್ಷೋತ್ತರಗಳನ್ನು ತೋರಿಸಿ ಈ ಗ್ರಾಮದ ಕೆಲವು ದೊಡ್ಡ ಮನುಷ್ಯರಿಂದ ಮುಬಡ್ಡಿಯಾಗಿ ಸುಮಾರು ೧,೫೦೦ ರೂಪಾಯಿ ವರೆಗೆ ತೆಗೆದುಕೊಂಡು ಒಬ್ಬರಿಗೂ ಹೇಳದೆ ರಾತ್ರಿ ವೇಳೆ ಕದ್ದು ಹೊರಟುಹೋದರು. ಇದಂತಿರಲಿ. ಈ ಮೂವರಲ್ಲಿ ಯಜಮಾನನಾಗಿದ್ದವನು ಈ ಊರಿಗೆ ಬಂದನಂತರ ಇದೇ ಸ್ಥಳದ ಒಬ್ಬ ಹುಡುಗಿಯನ್ನು ಮದುವೆಮಾಡಿಕೊಂಡು ಹೆಂಡತಿಯನ್ನೂ ಇಲ್ಲೇ ಬಿಟ್ಟು ಹೊರಟುಹೋಗಿರುತ್ತಾನೆ. ಈಗ ವಿಚಾರಿಸುವಲ್ಲಿ ಇದರಂತೆಯೇ ಇವನು ಇನ್ನು ಕೆಲವು ಸ್ಥಳಗಳಲ್ಲಿ ಮದುವೆಮಾಡಿಕೊಂಡು ಇದೇ ತರಹ ಮೋಸಮಾಡಿ ಹೆಂಡತಿಯರನ್ನು ಆಯಾಯ ಊರಲ್ಲೇ ಬಿಟ್ಟು ಹೊರಟುಹೋಗಿರುವದಾಗಿ ತಿಳಿಯಬರುತ್ತೆ. ಪರ್ಯಾಲೋಚಿಸಿದರೆ ಇವನು ಮದುವೆಮಾಡಿಕೊಳ್ಳುವುದು ನಂಬಿಗೆಯನ್ನುಂಟುಮಾಡಿ ಸಾಲದ ನೆವದಿಂದ ದ್ರವ್ಯಾಕರ್ಷಣಕ್ಕಲ್ಲದೆ ಪರಸ್ಪರ ದಾಂಪತ್ಯ ಸುಖಕ್ಕಲ್ಲ ಎಂಬುವದು ಸ್ಪಷ್ಟವಾಯಿತಲ್ಲವೇ. ಈ ಊರಿನಲ್ಲಿ ಇವನಿಗೆ ಏಳುನೂರು ರೂಪಾಯಿ ಸಾಲ ಕೊಟ್ಟಿದ್ದ ಒಬ್ಬ ವರ್ತಕನು ಇವರು ಓಡಿಹೋದ ವಿಷಯವನ್ನು ಪೋಲೀಸಿಗೆ ತಿಳಿಸಿ ಇವರನ್ನು ಅಥವಾ ಇವರ ಪೈಕಿ ಮೇಲ್ಕಂಡ ಯಜಮಾನನನ್ನು ಪತ್ತೆಮಾಡಿ ಕೊಟ್ಟವರಿಗೆ ೫೦ ರೂಪಾಯಿ ಕೊಡುವದಾಗಿ ಪ್ರಸಿದ್ಧಪಡಿಸಿದಾನೆ.

ನಿಮ್ಮ ಚಂದಾದಾರ.

ದಕ್ಷಿಣ ಇಂಡಿಯಾ ಕನಬಿಗಳ ಕಂಪನಿ,
ಸಿಟಿ ಇಟ್ಟಿಗೆಗಳ ಮತ್ತು ಹಂಚುಗಳ
ಕಾರಖಾನೆಯು, ಬೆಂಗಳೂರು

64 2

ಟೆರಕಾಟಾ ಎಂಬ ಹೊಸ ತರಹಾ

ಮೇಲ್ಛಾವಣಿ ಹಂಚು	ಗಟ್ಟಿ, ತುಂಬಾ ಬಾಳಿಕೆ
,, ಹಾಸುವ ಚಪ್ಪಡಿಬಿಲ್ಲೆ	ನಾನಾ ಚಿತ್ರಗಳುಳ್ಳದ್ದು
,, ಬೆನ್ನುಹಂಚು	೧ ಅಡಿ ೪ ಅಂಗುಲ ಉದ್ದ, ೬೪೦ ಕಾರ ಮತ್ತು ಸಾಮಾನ್ಯ
ನೆಲಕ್ಕೆ ಹಾಸುವ ಚಪ್ಪಡಿಬಿಲ್ಲೆ	೯×೯ ೬×೬ ಅಂ ಅಲಂ ಮತ್ತು ಸಾಮಾನ್ಯ ಗಟ್ಟಿಯಾಗಿ ಸುಟ್ಟದ್ದು

ಗಾಳಿ ಹಂಚು, ಬೆಂಕಿ ಇಟ್ಟಿಗೆ, ಬೆಂಕಿ ಜೇಡಿ ಸಾಮಾನು—ಎಲ್ಲಾ ಉತ್ಕೃಷ್ಟವಾಗಿವೆ

ಕಾರ್ಖಾನೆ ಮತ್ತು ಆಫೀಸ್—ಕೆಂಗೇರಿ ರೋಡ್
ಬೆಂಗಳೂರು ಸಿಟಿ

ಡಿಪೋ ಇರುವ ಸ್ಥಳ.—ಮೈಸೂರು, ಗಡಗ್, ದಾವಣಗೆರೆ, ಪೂನಾ, ಶಿವಮೊಗ್ಗಾ, ತರೀಕೆರೆ, ಮುಂತಾದವು.

ವೃತ್ತಾಂತ ಪತ್ರಿಕೆ

ಸನ್ ೧೯೧೦ ನೇ ಇಸವಿ ಮೇ ತಾ ೨೬ ನೇ ಗುರುವಾರ

ಗತಿಸಿದ ಏಳನೇ ಎಡ್ವರ್ಡ್ ದೊರೆಯವರು

ಗತಿಸಿದ ಎಡ್ವರ್ಡ್ ಚಕ್ರವರ್ತಿ ಸಾರ್ವಭೌಮರವರ ಶವಸಂಸ್ಕಾರ ಕ್ರಿಯೆಗಳೆಲ್ಲಾ ಸಾಂಗವಾಗಿಯೂ ಸರ್ವಸಮ್ಮತವಾಗಿಯೂ ಕಳೆದ ಶುಕ್ರವಾರಕ್ಕೆ ಪೂರೈಸಿದವು ಆ ಕಾಲದಲ್ಲಿ ದೊಡ್ಡ ದೊರೆಗಳೂ ರಾಜಪುತ್ರರೂ ರಾಜಪ್ರತಿನಿಧಿಗಳೂ ಹಾಜರಾಗಿದ್ದದ್ದನ್ನೂ ಪ್ರಜಾಕೋಟಿಗಳು ಕೂಡಿದ್ದದ್ದನ್ನೂ ನೋಡುವಲ್ಲಿ ಆ ಮಹಾ ಪ್ರಭುಗಳು ಸಕಲರಲ್ಲೂ ಎಷ್ಟು ವಿಶೇಷವಾದ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದ್ದರೆಂಬುವುದು ಗೊತ್ತಾಗುತ್ತದೆ ಲಂಡನ್ ಪಟ್ಟಣದಲ್ಲಿ ಕಳೆದ ಶುಕ್ರವಾರ ನೆರವೇರಿದಂಥಾ ಅಮೋಘವಾದ ಕಾರ್ಯವು ಹಿಂದೆ ಯಾವಾಗಲೂ ನಡೆದಿದ್ದಿಲ್ಲ, ಮತ್ತು ಅಷ್ಟು ಪ್ರೀತಿ ಗೌರವ ಸಂತಾಪ ಗಾಂಭೀರ್ಯ ವೈಭವಯುಕ್ತವಾದ ನೋಟವು ಬಹುಶಾ ಹಿಂದೆ ಯಾವ ದೊರೆಗಳ ಕಾಲದಲ್ಲೂ ಯಾವ ರಾಜ್ಯದಲ್ಲೂ ನೆರವೇರಿಲ್ಲವೆಂದು ಹೇಳಬಹುದಾಗಿದೆ

ಎಡ್ವರ್ಡ್ ದೊರೆಯವರು ಲಂಡನ್ ಪಟ್ಟಣದಲ್ಲಿರುವ ಬಕಿಂಗ್ಹಂ ರಾಜಭವನದಲ್ಲಿ ಕಾಲವಾದರು ಅದೇ ರಾಜಭವನದಲ್ಲಿ ಅವರ ರಕ್ತಸಂಬಂಧಿಗಳೂ ಜನಾಂಗದ ಮಹನೀಯರೂ ಅವರ ಕಳೇಬರವನ್ನು ಹೋಗಿ ನೋಡಿಬಂದರು ಆದರೆ ಪ್ರಜೆಗಳು ಕೂಡ ತಮಗೆ ಪ್ರೇಮ ಪಾತ್ರರಾಗಿದ್ದ ದೊರೆಯನ್ನು ಕಡೇ ಸಾರಿ ನೋಡಬೇಕೆಂದು ಕುತೂಹಲ ಪಟ್ಟರು ಅದಕ್ಕೋಸ್ಕರ ಸಾರ್ವಭೌಮರವರ ಶವವನ್ನು ಅರಮನೆಯಿಂದ ಸಾಗಿಸಿ ಪಾರ್ಲಿಮೆಂಟ್ ಸಭಾಮನೆಗಳಲ್ಲಿರುವ ವೆಸ್ಟ್ ಮಿನಿಸ್ಟರ್ ಹಾಲ್ ಎಂಬ ಭವನದಲ್ಲಿ ಇಡಿಸಲಾಯಿತು ಇದು ಪ್ರಜೆಗಳಿಗೆ ಸೇರಿದ್ದು ಈ ಭವನದೊಳಗೆ ಇಂಗ್ಲಿಷ್ ಚರಿತ್ರೆಯಲ್ಲಿ ಕಂಡ ಬಹು ವಿಶೇಷವಾದ ಅನೇಕ ಕಾರ್ಯಗಳು ನಡೆದಿರುತ್ತವೆ ಗತಿಸಿದ ವಿಕ್ಟೋರಿಯಾ ಮಹಾರಾಜ್ಞೀರವರ ಕಳೇಬರವನ್ನು ಈ ಭವನದಲ್ಲಿ ಇಟ್ಟಿದ್ದರು ಈಗಲೂ ಇದೇ ಹಾಲಿನಲ್ಲಿ ನಾಲ್ಕು ಲಕ್ಷ ಪ್ರಜೆಗಳು ಎಡ್ವರ್ಡ್ ದೊರೆಯವರ ಕಳೇಬರವನ್ನು ನೋಡಿಬಂದರು ಪ್ರಜೆಗಳ ಗುಂಪು ಅಪರಿಮಿತವಾಗಿದ್ದದ್ದರಿಂದ ಎಲ್ಲರೂ ಮಂದಿರದೊಳಕ್ಕೆ ಪ್ರವೇಶಿಸುವುದು ಅಸಾಧ್ಯವಾಯಿತು ಅಧಿಕಾರಿಗಳೂ ದೊಡ್ಡ ಮನುಷ್ಯರೂ ಐಶ್ವರ್ಯವಂತರೂ ಸಾಮಾನ್ಯ ಜನರೂ ಬಡಬಗ್ಗರೂ ಏಕೀಭವಿಸಿ ತಾವು ಗೌರವದಿಂದಲೂ ಪ್ರೇಮಪೂರ್ವಕವಾಗಿಯೂ ಕಾಣುತ್ತಿದ್ದ ಆ ಮಹಾಪ್ರಭುವಿನ ಕಳೇಬರವನ್ನು ನೋಡಿ ಕೃತಾರ್ಥರಾದರು

ಶುಕ್ರವಾರದಿನ ದೊರೆಯವರ ಕಳೇಬರವನ್ನು ಲಂಡನ್ ಪಟ್ಟಣದ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ಪ್ಯಾಡಿಂಗ್‌ಟನ್ ಸ್ಟೇಷನ್‌ಗೆ ತೆಗೆದುಕೊಂಡು ಹೋದರು ಐದು ಮೈಲಿಗಳವರೆಗೂ ರಸ್ತೆಗಳ ಉಭಯ ಪಾರ್ಶ್ವಗಳಲ್ಲೂ ಸೈನಿಕರು ಪಹರೆ ನಿಂತಿದ್ದರು ಅವರ ಹಿಂಭಾಗದಲ್ಲಿ ಉದ್ದಕ್ಕೂ ಎಡ್ವರ್ಡ್ ಪ್ರಭುಗಳ ಪ್ರಜೆಗಳು ಸಾವಿರಗಟ್ಟಲೆ ನಿಂತು ತಮ್ಮ ಪ್ರೀತಿಯ ಕಡೇ ಭಾಗವನ್ನು ನೆರವೇರಿಸಿಕೊಂಡರು ಲಂಡನ್ ಪಟ್ಟಣದ ರಾಜಬೀದಿಗಳಲ್ಲಿ ಆ ದಿನ ನಡೆದಂಥಾ ಮೆರವಣಿಗೆಯ ವೈಭವವನ್ನು ಹಿಂದೆ ಅಲ್ಲಿ ನೋಡಿದ್ದು ಅಪರೂಪ ಇಂಗ್ಲಿಷ್ ಚಕ್ರಾಧಿಪತ್ಯದ ಮಹನೀಯರೆಲ್ಲಾ ಸೇರಿದ್ದರು, ಅನೇಕ ದೇಶಗಳ ದೊರೆಗಳೂ ರಾಜಪುತ್ರರೂ ರಾಜಪ್ರತಿನಿಧಿಗಳೂ ರಾಯಭಾರಿಗಳೂ ಭೂಲೋಕದ ಸಕಲ ಜನಾಂಗಗಳ ಪ್ರತಿನಿಧಿಗಳೂ ಮೆರವಣಿಗೆಯಲ್ಲಿದ್ದರು ಶವ ಸಂತವಾದ ಪೆಟ್ಟಿಗೆಯಾದರೋ ಬರೀ ಸಾಮಾನ್ಯವಾದ ಒಂದು ಫಿರಂಗಿ ಗಾಡಿಯ ಮೇಲೆ ಇಟ್ಟಿತ್ತು ಈ ರೀತಿ ಮೆರವಣಿಗೆಯಲ್ಲಿ ಸೇರಿದ್ದ ಸಂದಣಿಯನ್ನು ನೋಡಲಾಗಿ ಬ್ರಿಟಿಷ್ ಚಕ್ರಾಧಿಪತ್ಯ ಒಂದೇ ಅಲ್ಲ ಅದರ ಕೂಡ ಸಮಸ್ತ ಪ್ರಪಂಚವೂ ದುಃಖಪಟ್ಟಿರುತ್ತದೆಂದೂ ಸಕಲರೂ ಆ ಮಹಾ ಪ್ರಭುವನ್ನು ಶಾಂತಿಪ್ರಿಯರೆಂದು ಸನ್ಮಾನಿಸುತ್ತಿದ್ದರೆಂದೂ ಗೊತ್ತಾಗುತ್ತದೆ ಇಷ್ಟು ಪ್ರಜಾಸ್ತೋಮವೂ ರಾಜರುಗಳ ಕೂಟವೂ ಪ್ರಪಂಚದಲ್ಲಿ ಹಿಂದೆ ಯಾವಾಗಲಾದರೂ ಸೇರಿದ್ದದ್ದು ಅನುಮಾನಾಸ್ಪದವಾಗಿರುತ್ತದೆ

ಪ್ಯಾಡಿಂಗ್‌ಟನ್ ಸ್ಟೇಷನ್‌ನಿಂದ ರೈಲ್‌ಗಾಡಿಗಳು ಕಳೇಬರವನ್ನೂ ದುಃಖಪೀಡಿತರಾದ ರಕ್ತಸಂಬಂಧಿಗಳೇ ಮೊದಲಾದವರನ್ನೂ ವಿಂಡ್ಸರ್ ರಾಜಭವನಕ್ಕೆ ತಲುಪಿಸಿದವು ಅಲ್ಲಿನ ರಾಜ ದೇವಾಲಯದೊಳಗೆ ಇಂಗ್ಲಿಷ್ ದೊರೆಗಳನ್ನು ಸಮಾಧಿ ಮಾಡುತ್ತಾರೆ ಆ ಭವನದಲ್ಲಿ ಅಲೆಕ್ಸಾಂಡ್ರಾ ಮಹಾರಾಜ್ಞೀರವರ, ರಾಜಬಂಧುವರ್ಗಕ್ಕೆ ಸೇರಿದವರ ಮತ್ತೂ ಭೂಪ್ರಪಂಚದ ಮಹನೀಯರುಗಳ ಸಾಕ್ಷಿಯಾಗಿ ನಮ್ಮ ಮಹಾರಾಜಾ ಚಕ್ರವರ್ತಿಯವರ ಕಳೇಬರವು ಯಥಾವಿಧಿಯಾಗಿ ಭೂಸ್ಥಾಪನೆ ಮಾಡಲ್ಪಟ್ಟಿತು

ಗತಿಸಿದ ಚಕ್ರವರ್ತಿಯವರ ವಿಷಯದಲ್ಲಿ ರಾಜಭಕ್ತಿಯನ್ನೂ ಪ್ರೀತಿಯನ್ನೂ ಪ್ರಕಾಶಪಡಿಸುವುದರಲ್ಲಿ ನಮ್ಮ ಭರತಖಂಡವು ಹಿಂದೆಬೀಳಲಿಲ್ಲ ಈ ರಾಷ್ಟ್ರದ ಸಮಸ್ತ ಭಾಗಗಳಲ್ಲೂ ನಿತ್ಯಗಟ್ಟಲೆಯ ಕೆಲಸ ಕಾರ್ಯಗಳು ನಿಲ್ಲಿಸಲ್ಪಟ್ಟವು ಪ್ರಜೆಗಳು ತಮ್ಮ ಪ್ರಭುವಿನ ಮರಣದ ವಿಷಯದಲ್ಲಿ ತಮಗುಂಟಾದ ದುಃಖಾತಿಶಯವನ್ನು ಪ್ರಕಾಶಪಡಿಸಿರುತ್ತಾರೆ ನಾನಾತರದ ಸಂಘಗಳೂ ಕೂಟಗಳೂ ನಡೆದು, ಸಾರ್ವತ್ರಿಕವಾಗಿ ನೆಲೆಗೊಂಡಿರುವ ಮಹದ್ವ್ಯಸನವೂ ಅವಿಚ್ಛಿನ್ನವಾದ ರಾಜಭಕ್ತಿಯೂ ಅಪ್ರತಿಮವಾದ ಪ್ರೀತಿಯೂ ಆದ ರೆಜಲ್ಯೂಷನ್‌ಗಳು ಮಾಡಲ್ಪಟ್ಟವು ಈ ವ್ಯಸನವು ಪ್ರಜೆಗಳ ಮನಸ್ಸನ್ನು ಹಿಡಿದು ಸಕಲರೂ ಏಕೋದರರಾಗಿ ದುಃಖಪಟ್ಟಿರುತ್ತಾರೆ

ಸಮಾಧಿ ಕ್ರಿಯೆಗಳು

ಗತಿಸಿದ ಎಡ್ವರ್ಡ್ ಮಹಾರಾಜ ಚಕ್ರವರ್ತಿಯವರ ಉತ್ತರ ಕ್ರಿಯೆ ನಡೆದ ದಿವಸದಲ್ಲಿ ಅವರ ರಾಷ್ಟ್ರಕ್ಕೆ ಸೇರಿದ ಸಕಲ ಪ್ರಜೆಗಳೂ ತಂತಮ್ಮ ಮತಪದ್ಧತಿಗಳಿಗನುಸಾರವಾಗಿ ನಡಿಸಿದ ವಿಶೇಷ ಪೂಜಾದಿಗಳ ಮತ್ತು ಭಗವತ್ಪ್ರಾರ್ಥನೆಗಳ ವರ್ಣನೆಗಳಿಂದ ಈ ಕಾಲದ ವರ್ತಮಾನ ಪತ್ರಿಕೆಗಳು ತುಂಬಿ ತುಳುಕುತ್ತಿವೆ ಇತ್ತಲಾಗಿ ನಮ್ಮ ಮೈಸೂರು ಸರ್ಕಾರದವರು ಕಳೆದ ೨೦ ನೇ ತಾರೀಖು ಶುಕ್ರವಾರದ ದಿವಸ ಪೂಜಾದಿಗಳು ನಡೆಯುತ್ತಿರುವ ಸನ್ನಿಧಿ, ದೇವಾಲಯ ಮುಂತಾದ ಎಲ್ಲಾ ಮುಜರಾಯಿ ಸ್ಥಳಗಳಲ್ಲಿಯೂ ಗತಿಸಿದ ಮಹಾರಾಜ ಚಕ್ರವರ್ತಿಯವರಿಗೆ ಸದ್ಗತಿಯುಂಟಾಗುವುದಕ್ಕೋಸ್ಕರ ವಿಶೇಷ ಪೂಜಾದಿಗಳೂ ಭಗವತ್ಪ್ರಾರ್ಥನೆಗಳೂ ನಡೆಸಲ್ಪಡತಕ್ಕದ್ದು ಎಂಬುದಾಗಿ ಹುಕುಮನ್ನು ಕೊಟ್ಟಿದ್ದರು

ಈ ಹುಕುಮಿನಲ್ಲಿ ಗತಿಸಿದ ಮಹಾರಾಜ ಚಕ್ರವರ್ತಿಯವರಿಗೆ ಸದ್ಗತಿಯುಂಟಾಗುವುದಕ್ಕೋಸ್ಕರ ಈ ಪ್ರಾರ್ಥನೆಗಳನ್ನೂ ಆಚರಣೆಗಳನ್ನೂ ನಡಿಸಬೇಕಾಗಿದೆ ಎಂದು ಹೇಳಿದೆ ಕ್ರೈಸ್ತರು ತಮ್ಮಲ್ಲಿ ಕಾಲವಾಗಿ ಹೋದ ಪ್ರಿಯರಿಗಾಗಿ ಉತ್ತರ ಕ್ರಿಯೆಗಳನ್ನು ಏಕೆ ನಡಿಸುತ್ತಾರೆಂಬುದನ್ನು ಕುರಿತು ಯೋಚಿಸುವುದು ಪ್ರಯೋಜನಕರವಾಗಿದೆ

ಒಬ್ಬ ಮನುಷ್ಯನ ಮುಂದಿನ ಸ್ಥಿತಿಯು ಎಂದರೆ ಅವನು ಮರಣ ಹೊಂದಿದ ನಂತರ ಯಾವ ಸ್ಥಿತಿಯುಳ್ಳವನೆಂದು ತೀರ್ಮಾನಿಸಬೇಕಾದರೆ ಅವನು ಈ ಲೋಕದಲ್ಲಿ ದೇವರನ್ನು ಹೇಗೆ ಪ್ರೀತಿಸಿ ಸೇವಿಸಿದನೆಂಬುದನ್ನು ತಿಳಿಯುವುದು ಅತ್ಯವಶ್ಯಕವಾಗಿದೆಯೆಂದು ಕ್ರೈಸ್ತ ಮತವು ಬೋಧಿಸುತ್ತದೆ ಮನುಷ್ಯನು ತನ್ನ ಉತ್ತರಾವಸ್ಥೆಯನ್ನು ತಾನೇ ನಿರ್ಮಾಣಮಾಡಿಕೊಳ್ಳುವವನಾಗಿರುತ್ತಾನೆ ತಾನು ಯಾವುದನ್ನು ಬಿತ್ತುತ್ತಾನೋ ಅದನ್ನೇ ಕೊಯ್ಯುವನು ಆದುದರಿಂದ ಮೃತಪಟ್ಟ ಮನುಷ್ಯನಿಗಾಗಿ ಮಾಡಲ್ಪಡುವ ಪ್ರಾರ್ಥನೆಗಳಿಂದಾಗಲಿ, ಆಚರಣೆಗಳಿಂದಾಗಲಿ ಯಾವ ಪ್ರಯೋಜನವೂ ಆಗಲಾರದು ಅವನು ಈ ಲೋಕದಲ್ಲಿ ತೋರಿಸಿದ ನಡತೆಗನುಸಾರವಾಗಿ ಅವನ ಮುಂದಿನ ಸ್ಥಿತಿಯು ಇರುವುದು ದೇವರು ಅವನ ಕ್ರಿಯೆಗಳ ಪ್ರಕಾರವಾಗಿ ಅವನಿಗೆ ನ್ಯಾಯ ತೀರಿಸುವನು

ಹೀಗಿರುವಲ್ಲಿ ಪ್ರಾರ್ಥನೆಗಳನ್ನು ಅರ್ಪಿಸುವುದೂ ಆಚರಣೆಗಳನ್ನು ಕೈಕೊಳ್ಳುವುದೂ ಏಕೆ? ಎಂದು ಕೆಲವರು ಪ್ರಶ್ನೆಮಾಡಬಹುದು ಮೃತಪಟ್ಟವರ ಶವಗಳನ್ನು ದಹನ ಮಾಡುವುದಾಗಲಿ, ಅಥವಾ ಹೂಳಿಡುವುದಾಗಲಿ, ಯಾವುದಾದರೂ ಒಂದು ರೀತಿಯಲ್ಲಿ ಅವುಗಳನ್ನು ಕಣ್ಣಿಗೆ ಮರೆಯಾಗಿ ಮಾಡಬೇಕಾಗಿದೆ ಈ ಸಮಾಧಿ ಕ್ರಿಯೆಯು ನಡೆಯುವ ಸ್ಥಳಕ್ಕೆ ಶವವನ್ನು ಮರ್ಯಾದೆಯಿಂದ ವೈಯ್ಯುವುದು ಯೋಗ್ಯವಾಗಿದೆ ಅಲ್ಲದೆ ಕಡೇ ಸಂಸ್ಕಾರವನ್ನು ಪ್ರೀತಿಯಿಂದಲೂ ಗಾಂಭೀರ್ಯದಿಂದಲೂ ಆಚರಿಸಬೇಕಾಗಿದೆ ಹೀಗೆ ಆಚರಿಸುವುದರಿಂದ ಮನುಷ್ಯನ ಆತ್ಮದ ಸ್ಥಿತಿಯನ್ನು ದೇವರ ಮುಂದೆ ಏವಲಂಬನೆ ಮಾಡುವುದಕ್ಕಾಗುವುದಿಲ್ಲ ಮನುಷ್ಯನು ಮಾಡಿದ್ದೆಲ್ಲವೂ ದೇವರಿಗೆ ಗೊತ್ತುಂಟು ಆದ ಪ್ರಯುಕ್ತ ನಾವು ಮಾಡುವ ಪ್ರಾರ್ಥನೆ ಅಥವ ನಡಿಸುವ ಆಚರಣೆಯಿಂದ ಅವನ ಸ್ಥಿತಿಯು ಏವಲಂಬನೆ ಹೊಂದಲಾರದು

ಕ್ರೈಸ್ತರು ಉತ್ತರ ಕ್ರಿಯೆ ನಡಿಸುವಾಗ ಸಾಧಾರಣವಾಗಿ ಪ್ರಾರ್ಥನೆಗಳನ್ನು ಮಾಡಿ ಸಂಗೀತಗಳನ್ನು ಹಾಡುವುದುಂಟು ಆದರೆ ಇದನ್ನು ಮೃತಪಟ್ಟವರಿಗಾಗಿ ಅಲ್ಲ ಜೀವಿತರಾಗಿರುವವರ ಪ್ರಯೋಜನಕ್ಕಾಗಿಯೇ ಮಾಡುತ್ತಾರೆ ಸಮಾಧಿಯಲ್ಲಿಯೇ ಆಗಲಿ ಸ್ಮಶಾನದಲ್ಲಿಯೇ ಆಗಲಿ ಜನರು ಸೇರಿದಾಗ ಮರಣವನ್ನು ತಮ್ಮ ಕಣ್ಣಿದಿರಿಗೆ ನೋಡುವುದರಿಂದ ಅವರ ಹೃದಯಗಳು ತಿದ್ದಲ್ಪಡುತ್ತವೆ ಅವರು ತಾವು ಸಹ ಅದೇ ರೀತಿ ತೀರಿಹೋಗಬೇಕೆಂದು ತಿಳಿಕೊಳ್ಳುತ್ತಾರೆ ಈ ಪ್ರಪಂಚದ ಕಾರ್ಯಗಳು ಎಷ್ಟು ಅಸ್ಥಿರವಾದುವುಗಳೂ ವ್ಯರ್ಥವಾದುವುಗಳೂ ಎಂಬುದನ್ನು ಗ್ರಹಿಸಿಕೊಳ್ಳುತ್ತಾರೆ ಎಡ್ವರ್ಡ್ ಸಾರ್ವಭೌಮರಿಗೆ ಲೌಕಿಕ ಸಂಬಂಧವಾದ ವೈಭವಕ್ಕೂ ಐಶ್ವರ್ಯಕ್ಕೂ ಏನುತಾನೇ ಕಡಿಮೆಯಾಗಿದ್ದಿತು ರಾಜತನಕ್ಕೆ ಎಡರನವೇ ಎಂಬ ಗಾದೆಯಂತೆ ಅವರು ಸಕಲ ಸ್ಥಿತಿಯಲ್ಲಿಯೂ ವೈಭವದಲ್ಲಿಯೂ ಪರಿಪೂರ್ಣರಾಗಿದ್ದರು ಆದರೆ ಮರಣವು ಬಂದು ಅವರನ್ನು ಕರೆಯುವಾಗ್ಗೆ ಅವರು ಎಲ್ಲವನ್ನು ಬಿಟ್ಟು ತಮ್ಮನ್ನು ನಿರ್ಮಿಸಿದ ಸೃಷ್ಟಿಕರ್ತನ ಸನ್ನಿಧಾನಕ್ಕೆ ಹೋಗಬೇಕಾಯಿತು ಹಾಗೆಯೇ ಕಡೇ ಸಂಸ್ಕಾರಗಳು ಜರುಗುವ ಕಾಲದಲ್ಲಿ ನಮ್ಮನ್ನು ಬಿಟ್ಟು ಮುಂದೆ ಹೋಗುವವರಂತೆ ನಾವು ಸಹಾ ಬೇಗನೆ ಅವರನ್ನು ಹಿಂಬಾಲಿಸಲೇ ಬೇಕೆಂಬುವ ಅಂಶವನ್ನು ನಾವೆಲ್ಲರೂ ಮುಂದಿಟ್ಟು ಮಾಡಿಕೊಳ್ಳುತ್ತೇವೆ

ಅಂಥಾ ಕಾಲದಲ್ಲಿ ಎಂದರೆ ಪ್ರಾಪಂಚಿಕ ಕಾರ್ಯಗಳೆಲ್ಲವೂ ಕ್ಷಣಿಕವಾದುವುಗಳೆಂತಲೂ ಸಕಲವನ್ನೂ ಬಿಟ್ಟು ಬಿಟ್ಟು ಹೋಗಬೇಕೆಂತಲೂ, ಪ್ರತಿಯೊಬ್ಬರೂ ತಾವು ಈ ಲೋಕದಲ್ಲಿ ನಡಿಸಿದ ಕೃತ್ಯಗಳಿಗಾಗಿ ಲೆಕ್ಕವನ್ನು ಒಪ್ಪಿಸುವಂತೆ ದೇವರ ಬಳಿಗೆ ಹೋಗಬೇಕಾಗಿದೆಯೆಂತಲೂ ಎಲ್ಲರ ಮನಸ್ಸುಗಳಿಗೆ ವೇದ್ಯವಾಗುವ ಕಾಲದಲ್ಲಿ ಮೇಲ್ಕಂಡ ಸತ್ಯಗಳು ಹೃದಯಂಗಮವಾಗುವಂತೆ, ಆ ಕಾಲಕ್ಕನುಗುಣವಾದ ಭಾಗ್ಯಗಳನ್ನು ಓದಿ ಪ್ರಾರ್ಥನೆಗಳನ್ನು ಸಮರ್ಪಿಸಿ ಸಂಗೀತಗಳನ್ನು ಹಾಡುವುದು ಯುಕ್ತವಾಗಿ ತೋರುತ್ತದೆ ಜೀವಿತರಾಗಿರುವವರು ಈ ಆಚರಣೆಗಳ ಮೂಲಕ ಜ್ಞಾನ ಸತ್ಯತೆಗೂ ಸಂಬಂಧಪಟ್ಟ ಪಾಠಗಳನ್ನು ಕಲಿಯುವಂತೆ ಅವುಗಳನ್ನು ಅನುಸರಿಸುತ್ತಾರೆ ಆ ಪಾಠಗಳ್ಯಾವುವೆಂದರೆ ಎಲ್ಲಾ ಮನುಷ್ಯರೂ ಸಾಯಬೇಕು ಎಲ್ಲಾ ಮನುಷ್ಯರೂ ತಾವು ಈ ಲೋಕದಲ್ಲಿ ಪ್ರೀತಿಸುವ ವಸ್ತುಗಳನ್ನೆಲ್ಲಾ ಬಿಟ್ಟು ಹೋಗಬೇಕು ಎಲ್ಲಾ ಮನುಷ್ಯರೂ ತಮ್ಮ ಶರೀರದ ಗೂಡುಗಳನ್ನು ಬಿಟ್ಟು ಆತ್ಮೀಕವಾದ ಸ್ಥಿತಿಯಲ್ಲಿ ದೇವರನ್ನು ಸಂಧಿಸುವುದಕ್ಕೆ ಹೋಗಬೇಕು ಅಲ್ಲಿ ಆತನಿಂದ ತೀರ್ಪನ್ನು ಹೊಂದಬೇಕು ದೇವರು ಅವರವರ ಕ್ರಿಯೆಗಳ ಪ್ರಕಾರವಾಗಿ ಅವರಿಗೆ ತೀರ್ಪನ್ನು ಕೊಡುವನು ಯಾರು ತನ್ನನ್ನು ಪ್ರೀತಿಸಿ ತನ್ನ ಕಟ್ಟಳೆಗಳನ್ನು ಕೈಕೊಂಡರೋ ಅವರಿಗೆ ಬಹುಮಾನವನ್ನು, ಯಾರು ತನ್ನನ್ನು ತಿರಸ್ಕರಿಸಿ, ಸ್ವಾರ್ಥಪರರಾಗಿಯೂ ದುಷ್ಟರಾಗಿಯೂ ಜೀವಿಸಿದರೋ ಅವರಿಗೆ ಶಿಕ್ಷೆಯನ್ನೂ ವಿಧಿಸುವನು ಗಡಸರೂ ಹೆಂಗಸರೂ ಈ ಪಾಠಗಳನ್ನು ಕಲಿತು ಅವುಗಳ ಮೂಲಕ ತಮ್ಮ ಹೃದಯಗಳಲ್ಲಿ ಸುಪ್ರೇರಣೆಯನ್ನು ಹೊಂದುವುದರಿಂದ ತಾವು ಉತ್ತಮರಾಗಿಯೂ ಶುದ್ಧರಾಗಿಯೂ ಜೀವಿಸುವುದಕ್ಕೆ ತೀರ್ಮಾನಿಸಿಕೊಳ್ಳುವುದಲ್ಲದೆ ತಾವು ಸಾಯುವಾಗ ದೇವರನ್ನು ಭಯವಿಲ್ಲದೆ ಸಂಧಿಸುವುದಕ್ಕೆ ಅನುಕೂಲವಾಗುವಂತೆ ಈ ಲೋಕದಲ್ಲಿ ನಡೆಯಲು ಸ್ಥಿರ ಪ್ರಯತ್ನ ಮಾಡುವವರಾಗಿರುತ್ತಾರೆ ಪ್ರಾರ್ಥನೆಗಳೂ ಉತ್ತರಕ್ರಿಯೆಗಳೂ ಜೀವಿತರಾದವರು ಹೇಗೆ ಬದುಕಿ ದೇವರನ್ನು ಸೇವಿಸಬೇಕೆಂಬುದನ್ನು ತಿಳುಕೊಳ್ಳುವ ಉದ್ದೇಶ್ಯ ನೇಮಕವಾದುವುಗಳಾಗಿವೆ

ಮರಣವೆಂಬುದು ಮಹಾ ಭಯಂಕರವಾದುದೇ ಸರಿ ಆದರೆ ಮರಣದ ಬಾಗಿಲನ್ನು ದಾಟಿ ಅದನ್ನು ಜಯಿಸಿದವನೊಬ್ಬನಿದ್ದಾನೆ ಯೇಸುಸ್ವಾಮಿಯು ಸತ್ತು, ತಿರಿಗಿ ಎದ್ದನು ಅಲ್ಲದೆ ನಾವು ದೇವರೊಂದಿಗೆ ಸಮಾಧಾನವನ್ನು ಹೊಂದಿ ಆತನಿಗೆ ಸೇವೆ ಮಾಡುವ ವಿಧಾನವನ್ನು ಯೇಸುಸ್ವಾಮಿಯು ನಮಗೆ ತಿಳಿಯಪಡಿಸಿರುತ್ತಾರೆ ಎಡ್ವರ್ಡ್ ಸಾರ್ವಭೌಮರವರು ಯೇಸುಕ್ರಿಸ್ತನ ಮೂಲಕ ದೇವರೊಂದಿಗೆ ವಿಶ್ರಾಂತಿಯನ್ನು ಅನುಭವಿಸುತ್ತಿದ್ದಾರೆಂದು ನಾವು ನಂಬುತ್ತೇವೆಯೇ ಹೊರತು, ಅವರು ತೀರಿ ಹೋದ ಮೇಲೆ ಅವರಿಗಾಗಿ ಮಾಡಲ್ಪಟ್ಟ ಪ್ರಾರ್ಥನೆಗಳಿಂದಾಗಲಿ ಆಚರಣೆಗಳಿಂದಾಗಲಿ ಅವರಿಗೆ ಯಾವ ಪ್ರಯೋಜನವಾದರೂ ಆಯಿತೆಂದು ನಂಬುವುದಕ್ಕಾಗುವುದಿಲ್ಲ ಎಡ್ವರ್ಡ್ ಸಾರ್ವಭೌಮರ ವಿಯೋಗವು ದೇವರು ನಮ್ಮನ್ನು ಕರೆಯುವುದಕ್ಕಾಗಿ ತನ್ನ ಮರಣ ದೂತನನ್ನು ಕಳುಹಿಸುವಾಗ ನಾವೆಲ್ಲರೂ ದೇವರನ್ನು ಸಂಧಿಸುವುದಕ್ಕೆ ಸಿದ್ಧರಾಗಿರಬೇಕೆಂಬುವ ವಿಶೇಷವಾದ ಪಾಠವನ್ನು ನಮಗೆ ಕಲಿಸಬೇಕಾಗಿದೆ

ಒಳದೇಶದ ವೃತ್ತಾಂತಗಳು

ಶ್ರೀ| ಕಮಿಷನರ್ ಮ| ಅರವಾಮುದು ಐಯ್ಯಂಗಾರ್ಯರನ್ನು ಬೆಂಗಳೂರು ಸಿಟಿ ಫಸ್ಟ್ ಮ್ಯಾಜಿಸ್ಟ್ರೇಟ್ ಕೆಲಸಕ್ಕೆ ನೇಮಿಸುತ್ತಾರೆಂದು ತಿಳಿದು ಬಂದಿದೆ

* *

ಶ್ರೀಮನ್ ಮಹಾರಾಜರವರು ಈ ತಿಂಗಳು ತಾ ೨೯ ನೇ ಭಾನುವಾರದ ದಿನ ಪರಿವಾರ ಸಹಿತ ನೀಲಗಿರಿಯಿಂದ ರಾಜಧಾನಿಗೆ ವಾಪಸು ಚಿತ್ತೈಸುವವರಾಗಿದ್ದಾರೆಂದು ಕೇಳುತ್ತೇವೆ

* *

ಇದೇ ಮೇ| ತಿಂಗಳು ೨೯ನೇ ತಾ ಭಾನುವಾರ ಸಾಯಂಕಾಲ ೬ ಗಂಟೆಗೆ ಬೆಂಗಳೂರು ೬೬ ಲಾಲ್‌ಬಾಗ್ ರೋಡ್ ಮಾವಳ್ಳಿ ಕೆರೆಯ ಪಕ್ಕದಲ್ಲಿ ಅಗ್ನಿ ತುಳಿಯುವ ಉತ್ಸವವು ತಿಗಳರಪಾಳ್ಯದ ಧರ್ಮರಾಯ ದೇವಸ್ಥಾನದವರು ನಡಿಸುತ್ತಾರೆಂದು ತಿಳಿಯುತ್ತದೆ

* *

ಬೆಂಗಳೂರಿನಲ್ಲಿ ಒಬ್ಬ ಅಂಚೆ ಜವಾನನು ವಿಳಾಸದಾರರಿಗೆ ತಲಪಿಸಬೇಕಾದ ೧೪೦ ಕಾಗದಗಳು, ೧೫ ಪಾರ್ಸೆಲ್ಲುಗಳು, ೩೩ ಪೋಸ್ಟ್ ಕಾರ್ಡುಗಳು ಮೊದಲಾದ ಇನ್ನೂ ಕೆಲವು ವಸ್ತುಗಳನ್ನು ತನ್ನ ಬಳಿಯಲ್ಲೇ ಇಟ್ಟುಕೊಂಡಿದ್ದನೆಂದು ಪೋಸ್ಟ್ ಮಾಸ್ಟರವರು ಅವನ ಮೇಲೆ ಫಿರ್ಯಾದು ತಂದಿದ್ದಾರೆ

* *

ಮೈಸೂರು ಗವರ್ನ್‌ಮೆಂಟಿನವರು ಈ ವರುಷ ದಾಮೋದರದಾಸ್ ಫಂಡಿನಿಂದ ವರುಷಕ್ಕೆ ೨೦೦ ಪೌಂಡುಗಳ ಎರಡು ವಿದ್ಯಾರ್ಥಿವೇತನಗಳನ್ನು ಕೊಡುವದಾಗಿಯೂ, ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು ಜೂನ್ ೨೦ ನೇ ತಾರೀಖಿನೊಳಗಾಗಿ ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಳ್ಳಬಹುದೆಂದೂ ಪ್ರಕಟಮಾಡಿದ್ದಾರೆ

* *

ರಾಜಧಾನಿಯ ಮ್ಯುನಿಸಿಪಲ್ ನೌಕರರಾದ ಮ| ಅಪ್ಪಾಚಾರ್ಯರವರ ತಾಯಿ ಶ್ರೀರಂಗಮ್ಮನೆಂಬವರು ೨ ವರುಷಗಳಿಂದ ಮೇಲ್ಕೋಟೆಯಲ್ಲಿ ವಾಸವಾಗಿದ್ದು ಹಿಂದಿನ ವಾರ ಕಾಲವಾದರು ಅವಸಾನ ಕಾಲದಲ್ಲಿ ಆಕೆಗೆ ೯೬ ವರುಷ ತುಂಬಿದ್ದರೂ ಇಂದ್ರಿಯ ಪಾಟವಗಳು ಚನ್ನಾಗಿದ್ದವೆಂದೂ ತಿಳಿದು ಬಂತು

ಯು ಕಲ್ಯಾಣಿಗೆ ಹೋಗಿ ಸ್ನಾನಾದಿಗಳನ್ನು ಮಾಡಿಕೊಂಡು ಬರುತ್ತಿದ್ದರೆಂದೂ, ಒಂದೇ ದಿನ ಕಾಯಿಲೆ ಮಲಗಿ ಮರುದಿನ ತೀರಿಹೋದರೆಂದೂ ತಿಳಿದು ಬರುತ್ತದೆ

* * *

ಕಳೆದ ಗುರುವಾರ ಮೂರನೇ ಝಾಮದಲ್ಲಿ ರಾಜಧಾನಿಯೊಳಗೆ ಮಳೆಯಾಗಲಿ ಮೋಡವಾಗಲಿ ಇಲ್ಲದೆ ಸಿಡಿಲು ಬಡಿಯಿತು ಇಟ್ಟಿಗೆ ಗೂಡಿನಲ್ಲಿ ಅದು ಒಂದು ತೆಂಗಿನ ಮರಕ್ಕೆ ಬಡಿದು ಅದನ್ನು ಸುಟ್ಟುಹಾಕಿತೆಂದು ತಿಳಿದು ಬಂದಿದೆ ಶನಿವಾರ ಸಾಯಂಕಾಲ ಒಳ್ಳೇ ಮಳೆ ಸುರಿಯಿತು ಇನ್ನೂ ಮಳೆ ಬರುವ ಸೂಚನೆಗಳಿರುತ್ತವೆ ಆದರೂ ಬಿಸಲಿನ ಧಗೆಯು ಇನ್ನೂ ಶಮನವಾಗಲಿಲ್ಲ ಎಲ್ಲಿ ನೋಡಿದರೂ ಹಸರು ಬೆಳೆದು ನೇತ್ರಾನಂದಕರವಾಗಿದೆ, ರೋಗಾದಿಗಳ ಶಂಕೆ ಏನೂ ಇರುವುದಿಲ್ಲ

* * *

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾದ ಮೆ॥ ಜಿ ಹ್ಯಾಂ ಕೈಟ್‌ಯವರು ಮುಂದಿನ ತಿಂಗಳು ಮೊದಲನೇವಾರ ಫರ್ಲೋ ಪಡೆದು ಸೀಮೆಗೆ ತೆರಳುತ್ತಾರೆಂದೂ ಅವರಿಗೆ ಐರ್ಲೆಂಡಿನಲ್ಲಿ ಜುಡಿಷಲ್ ಇಲಾಖೆಯ ನೌಕರಿ ನೇಮಕವಾಗುವದೆಂದೂ ಪ್ರಕಟವಾಗಿದೆ ಅವರು ಮೈಸೂರು ಸಂಸ್ಥಾನದಲ್ಲಿ ೧೯ ವರುಷ ಸರ್ವಿಸ್ ಮಾಡಿ, ಕೋಲಾರ್ ಚಿನ್ನದಗಣಿ, ಬೆಂಗಳೂರು ಗವರ್ನಮೆಂಟ್ ಛಾವಣಿ ಸೆಂಟ್ರಲ್ ಜೈಲ್‌ಗಳಲ್ಲಿ ನೌಕರರಾಗಿದ್ದು, ಈಗ ಮೂರು ವರುಷಗಳಿಂದ ಬೆಂಗಳೂರು ಸಿಟಿ ಟೌನ್ ಮ್ಯಾಜಿಸ್ಟ್ರೇಟರಾಗಿ ಕೆಲಸ ಮಾಡಿರುತ್ತಾರೆ,

* * *

ಕಳೆದ ೨೦ನೇ ತಾ ಶುಕ್ರವಾರ ಏಳನೇ ಎಡ್ವರ್ಡ್ ಸಾರ್ವಭೌಮರವರು ಶವವನ್ನು ಸಂಸ್ಕಾರ ಮಾಡಿದ ದಿನವಾದದ್ದರಿಂದ ಮೈಸೂರು ಸರ್ಕಾರದವರ ಅಪ್ಪಣೆಯ ಪ್ರಕಾರ ಸಂಸ್ಥಾನದೊಳಗೆ ಎಲ್ಲಾ ಕೋರ್ಟು ಕಚೇರಿ ಸ್ಕೂಲುಗಳೂ ಮುಚ್ಚಲ್ಪಟ್ಟಿದ್ದವು ರಾಜಧಾನಿಯಲ್ಲಿ ಆ ದಿನವೆಲ್ಲಾ ವರ್ತಕರು ಅಂಗಡಿಗಳನ್ನು ಸಾಧ್ಯವಾದ ಮಟ್ಟಿಗೂ ಮುಚ್ಚಿ ವ್ಯಾಪಾರಾದಿ ಕೆಲಸಗಳನ್ನು ಬಿಟ್ಟಿದ್ದರು ಆಟಪಾಟಾದಿ ವಿನೋದಗಳೂ ಕೂಟಗಳೂ ನಿಲ್ಲಿಸಲ್ಪಟ್ಟವು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದ ಹಣವನ್ನು ವೈಸ್ ಪ್ರೆಸಿಡೆಂಟರು ಮ್ಯುನಿಸಿಪಲ್ ಕೌನ್ಸಿಲರುಗಳ ಸಹಾಯವನ್ನು ಪಡೆದು ಇಲ್ಲಿನ ಬಡಬಗ್ಗರಿಗೂ ಅಂಗಹೀನರಿಗೂ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಭೋಜನಕ್ಕೆ ಹಣವನ್ನು ಕೊಟ್ಟರು ದೇವಸ್ಥಾನ ಮಸೀದಿ ದೇವಾಲಯಾದಿ ಪವಿತ್ರ ಸ್ಥಳಗಳಲ್ಲಿ ಆಯಾ ಕೋಮಿನವರು ವಿಶೇಷವಾದ ಅರ್ಚನೆ ಪ್ರಾರ್ಥನಾದಿಗಳನ್ನು ನೆರವೇರಿಸಿದರು ಸಾಯಂಕಾಲ ಕೋಟೆ ಕೊತ್ತಲದಿಂದ ೬೮ ಮಿನಿಟ್ ಗುಂಡುಗಳು ಹಾರಿಸಲ್ಪಟ್ಟವು ಆ ಬಳಿಕ ಸಂಜೆಯಲ್ಲಿ ದುಃಖವು ಪಟ್ಟಣವನ್ನೆಲ್ಲಾ ಆವರಿಸಿಕೊಂಡಿರುವುದನ್ನು ಸೂಚಿಸುವಂತೆ ಮೋಡಕವಿದು ಮಳೆ ಸುರಿಯಿತು

ಗತಿಸಿದ ಏಳನೇ ಎಡ್ವರ್ಡ್ ಪ್ರಭುಗಳ ಶವಸಂಸ್ಕಾರವು

ತಂತೀ ವರ್ತಮಾನಗಳ ಸಾರ

ಗತಿಸಿದ ಲೋಕವಿಖ್ಯಾತರಾದ ಏಳನೇ ಎಡ್ವರ್ಡ್ ಪ್ರಭುಗಳ ಕಳೇಬರವನ್ನು ಕಳೆದ ತಾ ೧೭ ನೇ ಮಂಗಳವಾರ ಲಂಡನ್ ಪಟ್ಟಣದ ಬಕಿಂಗ್ಹಾಂ ಎಂಬ ರಾಜಭವನದಿಂದ ಸಕಲ ಬಿರುದುಗಳೊಡನೆ ಸನ್ಮಾನಪೂರ್ವಕವಾಗಿ ವೆಸ್ಟ್ ಮಿನಿಸ್ಟರ್ ಹಾಲ್ ಎಂಬ ರಾಜಭವನಕ್ಕೆ ಸಾಗಿಸಿದರು ಅಲ್ಲಿ ಅದನ್ನು ನಾಲ್ಕು ದಿನಗಳ ತನಕ ಇಡಿಸಿದ್ದರು ಅದರ ಬಳಿಯಲ್ಲಿ ಚಕ್ರವರ್ತಿ ಸಾರ್ವಭೌಮರಾದ ಐದನೇ ಜಾರ್ಜ್‌ಯವರು ಅಲೆಕ್ಸಾಂಡ್ರಾ ಮಹಾರಾಜ್ಞಿಯವರು ಮಹಾರಾಣಿಯವರು ಇತರ ರಾಜವರ್ಗದವರು ಎರಡು ಮೂರು ವೇಳೆ ಕುಳಿತು ಇಷ್ಟಮಿತ್ರ ಪರಿವಾರ ಸಮೇತರಾಗಿ ಮಹಾ ಗುರುಗಳ ಮುಖೇನ ಪ್ರಾರ್ಥನೆಗಳನ್ನು ಮಾಡಿದರು ಪೆಟ್ಟಿಗೆಯಲ್ಲಿದ್ದ ಶವವನ್ನು ನೋಡುವುದಕ್ಕಾಗಿ ಲಕ್ಷಾಂತರ ಪ್ರಜೆಗಳು ಗಂಟೆಗೆ ೮ ೦೦೦ ಮಂದಿಯಂತೆ ಹೋಗಿ ಬರುತ್ತಿದ್ದರು ಮಳೆಯು ಅಪಾರವಾಗಿ ಸುರಿಯುತ್ತಿದ್ದರೂ ಜನರ ನೂಗ್ಗಾಟವೂ ಅವರ ರಾಜಭಕ್ತಿಯೂ ಕುಂದದೆ ಹಗಲೂ ರಾತ್ರಿ ಸರಹೊತ್ತಿನಲ್ಲೂ ಹೋಗಿ ನೋಡುತ್ತಿದ್ದರು ಸ್ವಾಸ್ಥ್ಯಗಳಿಂದಲೂ, ವಿಲಾಯತಿಯ ಸಕಲ ಪ್ರಾಂತ್ಯಗಳಿಂದಲೂ, ಬೇರೆ ಬೇರೆ ರಾಜ್ಯಗಳಿಂದಲೂ, ಖಂಡಗಳಿಂದಲೂ ಅಧಿಕಾರಿಗಳೂ ಪ್ರತಿನಿಧಿಗಳೂ ಅನೇಕವಾಗಿ ಹೋಗಿ ಬರುತ್ತಿದ್ದರು ಯೆಹೂದ್ಯರು, ಹಿಂದುಸ್ಥಾನದವರು, ಆಫ್ರಿಕದವರು, ಜರ್ಮನರು, ಮುಖ್ಯವಾಗಿ ಎಲ್ಲಾ ಜನಾಂಗದವರೂ ಶವವನ್ನು ಹೋಗಿ ನೋಡುವುದರಲ್ಲಿ ಉದ್ಯುಕ್ತರಾಗಿದ್ದರು ೧೮ ನೇ ತಾ, ಬುಧವಾರ ರಾತ್ರಿಯಿಂದ ಶವವನ್ನು ನೋಡಿ ಬಂದವರ ಸಂಖ್ಯೆಯು ಗಂಟೆಗೆ ೧೦,೦೦೦ ಕ್ಕಿಂತ ಹೆಚ್ಚಿತು ಪೋಲೀಸಿನವರು ಜನರ ಗುಂಪನ್ನು ಕಡಮೆ ಮಾಡುವುದಕ್ಕೆ ಬಹಳ ಸಾಹಸಪಡಬೇಕಾಯಿತು

ಶವವನ್ನು ಬಕಿಂಗ್ಹಾಂ ರಾಜಭವನದಿಂದ ಒಂದು ಫಿರಂಗಿ ಗಾಡಿಯ ಮೇಲಿಟ್ಟು ಮೆರವಣಿಗೆಯಲ್ಲಿ ಸಾಗಿಸಿದರು ಮೊದಲು ಭೂಸೈನ್ಯದ ಇಲಾಖೆ ಮುಖ್ಯಾಧಿಕಾರಿಗಳು, ಸಮುದ್ರ ಸೈನ್ಯದ ಅಧಿಕಾರಿಗಳು, ಹಿಂದೂಸ್ಥಾನದ ಆರ್ಡರ್ಲಿಗಳು ಸಾಲು ಕಟ್ಟಿ ಹೊರಟರು ಶವದ ಪೆಟ್ಟಿಗೆಯ ಹಿಂಭಾಗದಲ್ಲಿ ಐದನೇ ಜಾರ್ಜ್ ದೊರೆಯವರು, ಅವರ ಇಬ್ಬರು ಕುಮಾರರು, ರಾಜಮನೆತನದವರು, ಪರರಾಷ್ಟ್ರಗಳ ಹನ್ನೊಂದು ಮಂದಿ ಅರಸುಗಳು, ಆಸ್ಥಾನದ ಅಧಿಕಾರಿಗಳು, ಲೇಟ್ ಚಕ್ರವರ್ತಿಯವರ ವೈದ್ಯರುಗಳು—ಎಲ್ಲಾ ಕಾಲ ಮೇಲೆ ನಡೆದು ಹೋದರು ಇವರ ಒಂದುಗಡೆ ಅಲೆಕ್ಸಾಂಡ್ರಾ ಮಹಾರಾಜ್ಞೀಯವರು, ಮಹಾರಾಣೀ ಮೇರಿಯವರು, ರಾಜಮನೆತನದ ಇತರ ಸ್ತ್ರೀಯರು ಒಂಬತ್ತು ಸಾರೋಟುಗಳಲ್ಲಿ ಕುಳಿತು ಹೋದರು

ಆ ದಿನ ಲಂಡನ್ ಪಟ್ಟಣದಲ್ಲಿರುವ ಸಮಸ್ತ ದೇವಾಲಯಗಳಲ್ಲೂ ಭಕ್ತಾದಿಗಳು ಒಕ್ಕಟ್ಟಿನಿಂದ ಸೇರಿ ದೇವರಿಗೆ ಸ್ತೋತ್ರಗಳನ್ನು ಅರ್ಪಿಸಿ ದುಃಖಾಕ್ರಾಂತರಾಗಿದ್ದರು ವೆಸ್ಟ್ ಮಿನಿಸ್ಟರ್ ರಾಜಭವನದ ಶಿಖರದ ಮೇಲೆ ೧೮೫೮ ನೇ ಇಸವಿಯಲ್ಲಿ ಎರಕ ಹೊಯ್ದು ಏಕಾಮಾರ್ಗದಿ ಕಟ್ಟಿರುವ ಸುಮಾರು ೧೪ ಟನ್ ಭಾರವುಳ್ಳ ಬಿಗ್ ಬೆನ್ ಎಂಬ ಗಂಟೆಯನ್ನು ಆ ದಿನವೂ ತಾ ೨೦ ನೇ ಶುಕ್ರವಾರವೂ ಮಿನಿಟಿಗೆ ನಾಲ್ಕುಸಲದಂತೆ ಗಂಟೆ ಹೊಡೆದರು ಈ ಗಂಟೆಯನ್ನು ಹಿಂದೆ ಯಾವಾಗಲೂ ಶಬ್ದ ಮಾಡಿದ್ದಿಲ್ಲವೆಂದು ತಿಳಿಯುತ್ತದೆ

ಶವಸಂಸ್ಕಾರಕ್ಕಾಗಿ ಡೆನ್ಮಾರ್ಕ್, ನಾರ್ವೆ, ಗ್ರೀಸ್, ಸ್ಪೆಯಿನ್, ಪೋರ್ಚುಗಲ್, ಬೆಲ್ಜಿಯಂ, ಬಲ್ಗೇರಿಯಾ, ಜರ್ಮನಿ ರಾಜ್ಯಗಳ ದೊರೆಗಳು ದಯಮಾಡಿದ್ದರು ನೆದರ್ಲೆಂಡ್ಸ್, ಆಸ್ಟ್ರಿಯಾ, ರೋಮ್ಯಾನಿಯಾ, ಸರ್ವಿಯಾ, ಮಾಂಟಿನೀಗ್ರೋ, ಜಪಾನ್, ಚೈನಾ ಸೈಯಾಂ, ತುರ್ಕಿ, ಸ್ವೀಡನ್, ಸ್ಯಾಕ್ಸ್ ಕೊಬರ್ಗ್, ಬಲ್ಗೇರಿಯಾ, ಸೇರ್ಡನ್ ಸ್ಯಾಕ್ಸನಿ, ವುರ್ಟೆಂಬರ್ಗ್, ಹೆಸ್ಸಿ ಮತ್ತು ಮೆಕ್ಲೆಂಬರ್ಗ್ ಎಂಬೀ ರಾಜ್ಯಗಳ ರಾಜಪುತ್ರರೂ ಅಧಿಪತಿಗಳೂ, ಫ್ರಾನ್ಸಿನಿಂದ ಎಂ ಪೈಚಾನ್ ಮತ್ತು ಪ್ರತಿನಿಧಿಗಳೂ, ಇನ್ನೂ ಅನೇಕ ಮಹನೀಯರುಗಳೂ ಮೆರವಣಿಗೆಯಲ್ಲಿ ಹಾಜರಾಗಿ, ಲೇಟ್ ಚಕ್ರವರ್ತಿಯವರ ಮೇಲೆ ತಮಗಿದ್ದ ಭಕ್ತಿ ಪ್ರೀತಿ ಗೌರವಗಳನ್ನು ಪ್ರಕಾಶಪಡಿಸಿದರು

ಬಕಿಂಗ್ಹಾಂ ರಾಜಭವನದಲ್ಲಿ ೧೧ ಗಂಟೆಗೆ ಶವದ ಪೆಟ್ಟಿಗೆಯ ಸುತ್ತಲೂ ದೊರೆಯವರೂ ಮಹಾರಾಜ್ಞೀಯವರೇ ಮೊದಲಾದವರೂ ಸೇರಿ ದೇವರ ಪ್ರಾರ್ಥನೆಯನ್ನು ನಡಿಸಿದರು ಶವದ ಮೆರವಣಿಗೆಯು ೧೧॥ ಗಂಟೆಗೆ ಅಲ್ಲಿಂದ ಹೊರಟು ವೆಸ್ಟ್‌ಮಿನಿಸ್ಟರನ್ನು ೧೨ ಗಂಟೆಗೆ ತಲುಪಿತು ಅಲ್ಲಿ ೪೦೦ ಮಂದಿ ವಾದ್ಯಗಾರರು ಸೇರಿ ವ್ಯಸನಸೂಚಕವಾದ ಗೀತಗಳನ್ನು ನುಡಿಸಿದರು ರಸ್ತೆಯ ಉದ್ದಕ್ಕೂ ೧೨,೦೦೦ ಸೈನ್ಯಗಳು ಸಾಲುಕಟ್ಟಿ ನಿಂತಿದ್ದರು ಬಂಗಲೆಯೊಳಗೆ ಶವದ ಪೆಟ್ಟಿಗೆಯನ್ನಿಟ್ಟ ವೇಳೆ ೨೦ ನಿಮಿಷಗಳ ತನಕ ದೇವರ ಪ್ರಾರ್ಥನೆಯನ್ನು ನಡಿಸಿದರು ಕ್ಯಾಂಟರ್ಬರಿಯ ಮುಖ್ಯಾಧಿಪತಿಗಳು ಪ್ರಾರ್ಥನೆಯಾದ ಬಳಿಕ ಲೇಟ್ ಚಕ್ರವರ್ತಿಯವರು ನಡಿಸಿದ ರಾಜ್ಯಭಾರ ಕಾರ್ಯಗಳನ್ನು ಸಂಕ್ಷೇಪವಾಗಿಯೂ ಹೃದಯಂಗಮವಾಗಿಯೂ ವಿವರಿಸಿದರು ಆಶೀರ್ವಾದ ವಚನಗಳು ಹೇಳಲ್ಪಟ್ಟ ಬಳಿಕ ಅಲೆಗ್ಸಾಂಡ್ರಾ ಮಹಾರಾಣಿಯವರು ಮೊಣಕಾಲಿನ ಮೇಲೆ ಬಗ್ಗಿ ಕುಳಿತು ಅಂತರಂಗದಲ್ಲೇ ಪ್ರಾರ್ಥನೆ ಮಾಡಿದರು ತರುವಾಯ ಜಾರ್ಜ್ ದೊರೆಯವರು ಮಹಾ ಪತಿವ್ರತೆಯವರ ಹಸ್ತವನ್ನು ಹಿಡಿದು ಎಬ್ಬಿಸಿ ಹೊರಕ್ಕೆ ಕರೆದುಕೊಂಡು ಹೋದರು ಬಳಿಕ ದೊರೆಯವರೂ ರಾಜವರ್ಗದವರೂ ದಿವ್ಯವಾದ ಸಾರೋಟುಗಳಲ್ಲಿ ಕುಳಿತು ಬಾಡಿಗಾರ್ಡ್ ಸವಾರರ ಸಮೇತ ಹಿಂತಿರುಗಿ ಬಕಿಂಗ್ಹಾಂ ರಾಜಭವನಕ್ಕೆ ಚಿತ್ತೈಸಿದರು ಲೇಟ್ ಚಕ್ರವರ್ತಿಯವರ ಕಳೇಬರವಿದ್ದ ಪೆಟ್ಟಿಗೆಯನ್ನು ೫೦,೦೦೦ ಪ್ರಜೆಗಳು ನೋಡಿಕೊಂಡು ಹೋದರೆಂದೂ, ನಾಲ್ಕಾರು ಸಾವಿರ ಜನರಿಗೆ ನೋಡಲು ಅವಕಾಶವಾಗದೆ ವಾಪಸು ಹೋಗಬೇಕಾಯಿತೆಂದೂ ತಿಳಿಯುತ್ತದೆ

ತಾ ೨೦ ರಲ್ಲಿ ನಡೆದ ಕಾರ್ಯಗಳು.

ಏಕಕಾಲದಲ್ಲಿ ಅಷ್ಟು ಜನ ದೊರೆಗಳು ಲಂಡನ್ ಪಟ್ಟಣದಲ್ಲಿ ಸೇರಿರುವುದರಿಂದ ಕ್ರೂರಾತ್ಮರ ದೆಸೆಯಿಂದ ಅವರಿಗೆ ಯಾವ ವಿಧವಾದ ಅಪಾಯವೂ ಸಂಭವಿಸದಂತೆ ಪೋಲೀಸಿನವರು ಬಹು ಸಾಹಸಪಟ್ಟು ಎಚ್ಚರಿಕೆಯ ಏರ್ಪಾಡುಗಳನ್ನು ಮಾಡಿರುತ್ತಾರೆ

ಮೆರವಣಿಗೆ ಹೊರಡುವ ರಸ್ತೆಯ ಉದ್ದಕ್ಕೂ ಎರಡು ಕಡೆಗಳಲ್ಲೂ ಸೈನಿಕರೂ ಪೋಲೀಸಿನವರೂ ಬಹಳ ಒತ್ತಾಗಿ ಅಂದರೆ ಒಬ್ಬರ ಭುಜವು ಇನ್ನೊಬ್ಬರ ಭುಜಕ್ಕೆ ಸೇರುವಂತೆ ನಿಂತು ಇದ್ದರು ಬೆಳಿಗ್ಗೆ ೭॥ ಗಂಟೆಯಿಂದ ರಸ್ತೆಗಳನ್ನೆಲ್ಲಾ ಕಟ್ಟಿ ಗಾಡಿಗಳಾಗಲಿ ಜನವಾಗಲಿ ಸಂಚರಿಸದಂತೆ ತಡೆದಿದ್ದರು ಮೆರವಣಿಗೆಯನ್ನು ನೋಡಬೇಕೆಂಬ ನೋಟಕರಿಗೆ ರಸ್ತೆಯ ಉದ್ದಕ್ಕೂ ಇರುವ ಮೇಲಂತಸ್ತುಗಳಲ್ಲಿ ಮನೆ ಮತ್ತು ಅಂಗಡಿಗಳ ಮಾಲೀಕರು ಸ್ಥಳವನ್ನು ನೆನ್ನೆ ರಾತ್ರಿಯೆಲ್ಲಾ ಏಕರಿ ಮಾಡಿದರು ಒಂದು ಸ್ಥಳಕ್ಕೆ ಅಂದರೆ ಒಬ್ಬರು ಕುಳಿತು ನೋಡುವ ಸ್ಥಳಕ್ಕೆ ೧೫॥ ರೂಪಾಯಿ ಕ್ರಯವಿತ್ತು ಇದೇ ಬಹಳ ಸುಲಭದರವೆಂದು ಹೇಳುತ್ತಾರೆ

ಜಾರ್ಜ್ ದೊರೆಯವರೂ ರಾಜವರ್ಗದವರೂ ಶವದ ಮೇಲೆ ಸರ್ವೋತ್ತಮವಾದ ಮತ್ತು ಸುಗಂಧಯುಕ್ತವಾದ ಹೂವಾಲೆಗಳನ್ನು ಹಾಕಿ ಅಲಂಕಾರ ಮಾಡಿದರು ದೊರಾಧೊರೆಗಳೂ ರಾಜಪ್ರತಿನಿಧಿಗಳೂ ಸಂಘಗಳ ಪ್ರತಿನಿಧಿಗಳೂ ಸಂಸ್ಥೆಗಳ ಅಧಿಪತಿಗಳೂ ದೊಡ್ಡಮನುಷ್ಯರೂ ಮಂತ್ರಿಗಳೂ ಹೂವಾಲೆಗಳನ್ನೂ ಕುಚ್ಚುಗಳನ್ನೂ ಕಳುಹಿಸಿಕೊಟ್ಟರು

ವೆಸ್ಟ್‌ಮಿನಿಸ್ಟರ್ ಭವನದಲ್ಲಿ ಶವವನ್ನು ಇಟ್ಟಿದ್ದ ನಾಲ್ಕು ದಿನಗಳಲ್ಲೂ ಒಟ್ಟು ೪,೦೦,೦೦೦ ಪ್ರಜೆಗಳೂ ಅಧಿಪತಿಗಳೇ ಮುಂತಾದವರೂ ಹೋಗಿ ನೋಡಿ ತಮ್ಮ ರಾಜಭಕ್ತಿಯನ್ನೂ ವ್ಯಸನವನ್ನೂ ಪ್ರಕಾಶಪಡಿಸಿದರು.

ಸಂಸ್ಕಾರಕ್ಕಾಗಿ ಶವವು ಅಲ್ಲಿಂದ ವಿಂಡ್ಸರ್ ರಾಜಭವನಕ್ಕೆ ಸಾಗಿಸಲ್ಪಟ್ಟ ರಸ್ತೆಯ ಉದ್ದಕ್ಕೂ ಲಕ್ಷಾಂತರ ಜನ ನೋಟಕರು ಬೆಳಗಿನ ಝಾವದಿಂದಲೂ ಆತುರವಾಗಿ ನಿಂತಿದ್ದರು ಮಾರ್ಬಲ್ ಆರ್ಚ್, ಹೈಡ್ ಪಾರ್ಕ್, ಹೈಡ್ ಪಾರ್ಕ್ ಮೂಲೆ, ಸೆಂಟ್ ಜೇಂಸ್ ಎಂಬೀ ಚೌಕಗಳಲ್ಲಿ ಜನಸಂದಣಿಯು ಅಪೂರ್ವವಾಗಿತ್ತು ನಾಲ್ವತ್ತುಸಾವಿರ ಸೈನ್ಯದವರೂ ಸಮಸ್ತ ಪೋಲೀಸಿನವರೂ ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಪಹರೆ ಕೊಡುತ್ತಿದ್ದರು

ಕಡೇ ಮೆರವಣಿಗೆಯು

ಲೇಟ್ ಎಡ್ವರ್ಡ್ ಸಾರ್ವಭೌಮರವರ ಕಳೇಬರವನ್ನು ದಫನ್ ಮಾಡುವುದಕ್ಕೆ ಹೊರಟ ಮೆರವಣಿಗೆಯು ಮಹಾ ಶಾಂತವಾಗಿಯೂ ದೀರ್ಘವಾಗಿಯೂ ಅಪೂರ್ವವಾದದ್ದಾಗಿಯೂ ಇತ್ತು ಸಮಸ್ತ ಸೈನ್ಯಗಳೂ ಮೆರವಣಿಗೆಯಲ್ಲಿ ಹೊರಟಿದ್ದವು ಮೆರವಣಿಗೆಯ ಗಾಂಭೀರ್ಯವೂ ವೈಭವವೂ ವಿವರಿಸಲಶಕ್ಯವಾಗಿತ್ತು ಮಧ್ಯಭಾಗದಲ್ಲಿ ಶವಸಹಿತವಾದ ಪೆಟ್ಟಿಗೆಯು ರಾಜ ಚಿಹ್ನೆಗಳಿಂದೊಡಗೂಡಿ ಫಿರಂಗಿ ಗಾಡಿಯ ಮೇಲೆ ಮೆರೆಯುತ್ತಿತ್ತು ಎಡ್ವರ್ಡ್ ಸಾರ್ವಭೌಮರವರು ಹತ್ತಿಕೊಳ್ಳುತ್ತಿದ್ದ ಶ್ರೇಷ್ಠವಾದ ಕುದುರೆಯು ಸವಾರನಿಲ್ಲದೆ ನಡೆದು ಬಂದಿತು ಒಂಭತ್ತು ಮಂದಿ ದೊರೆಗಳೂ ನಾಲ್ವತ್ತೇಳು ಜನ ರಾಜರೂ ರಾಜಕುಮಾರರೂ ಮೆರವಣಿಗೆಯಲ್ಲಿದ್ದರು ಗಾಡಿಯ ಹಿಂದೆ ಜಾರ್ಜ್ ದೊರೆಯವರೂ ಜರ್ಮನಿ ಚಕ್ರವರ್ತಿಯವರೂ ಡ್ಯೂಕ್ ಆಫ್ ಕನ್ನಾಟ್ ಯವರೂ ಒಂದಾಗಿ ನಡೆದು ಬಂದರು ಅವರ ಹಿಂದೆ ಇತರರು ತಮ್ಮ ತಮ್ಮ ದರ್ಜೆಯ ಪ್ರಕಾರ ಮೂರು ಮೂರು ಮಂದಿಯಂತೆ ಸಾಲು ಕಟ್ಟಿ ಬರುತ್ತಿದ್ದರು ಹನ್ನೆರಡು ಸಾರೋಟುಗಳಲ್ಲಿ ರಾಜಮನೆತನದ ಸ್ತ್ರೀ ಶಿರೋಮಣಿಗಳು ಕುಳಿತು ಬಂದರು ಇವರ ಹಿಂದೆ ಇಂಡಿಯಾ, ಕ್ಯಾನಡಾ, ಆಸ್ಟ್ರೇಲಿಯಾ ಪ್ರತಿನಿಧಿಗಳೂ ಕೆನಡಾ ಪರ್ರುಗಳೂ, ಎಂ ಪೈಚಾನ್ ಯವರೂ, ಪರ್ಷಿಯಾ ರಾಯಭಾರಿಯೂ ಬಂದರು ಪ್ರಾರಂಭದಿಂದ ಮೆರವಣಿಗೆಯು ಪ್ಯಾಡಿಂಗ್‌ಟನ್ ಸ್ಟೇಷನ್‌ಗೆ ಬರುವ ತನಕ ಅಂದರೆ ಎರಡು ಗಂಟೆಯ ಹೊತ್ತು ಸಕಲರ ಹೃದಯವನ್ನೂ ವ್ಯಸನದಿಂದ ಕರಗಿಸುವಂಥಾ ದುಃಖಸೂಚಕವಾದ ರಾಗಗಳನ್ನು ವಾದ್ಯಗಳು ನುಡಿಸುತ್ತಿದ್ದವು ಅಲ್ಲಿಗೆ ೧೧ ೫೦ ಗಂಟೆಯಾಯಿತು ಅಲ್ಲಿಂದ ವಿಂಡ್ಸರ್ ರಾಜಭವನದ ಮಧ್ಯರಂಗಕ್ಕೆ ಶವಸಹಿತವಾದ ಪೆಟ್ಟಿಗೆಯನ್ನು ತಂದಿಟ್ಟ ಮೇಲೆ ಮಠಾಧಿಪತಿಗಳು ಸಂಕ್ಷೇಪವಾದ ಪ್ರಾರ್ಥನೆಯನ್ನು ನಡಿಸಿದರು ಬಳಿಕ ಕಳೇಬರಸಹಿತವಾದ ಪೆಟ್ಟಿಗೆಯನ್ನು ರಾಜದೇವಾಲಯದಲ್ಲಿ ಸೀರದ ಬಳಿಯ ನೆಲಮಾಳಿಗೆಯೊಳಗೆ ಭೂಸ್ಥಾಪನೆ ಮಾಡಲಾಯಿತು ಅಲೆಕ್ಸಾಂಡ್ರಾ ಮಹಾರಾಣಿಯವರು ಕರೀ ದಿರಸನ್ನು ಹಾಕಿಕೊಂಡು ಬಿಳುಪಿನ ಕಂಠೀಸರವನ್ನು ಧರಿಸಿಕೊಂಡು ಮುಖಕ್ಕೆ ತೆಳುವಾದ ಬುರುಕಿಯನ್ನು ಹಾಕಿಕೊಂಡಿದ್ದರು ಜರ್ಮನಿ ಚಕ್ರವರ್ತಿಯವರು ಅವರುಗಳ ಬಳಿ ಹೋಗಿ ಅವರನ್ನು ಗಾಡಿಯಿಂದ ಇಳಿಸಿ ಒಳಕ್ಕೆ ಕರೆದುಕೊಂಡು ಹೋದರು ಈ ರೀತಿಯಾಗಿ ಏಳನೇ ಎಡ್ವರ್ಡ್ ಸಾರ್ವಭೌಮರವರ ಶವ ಸಂಸ್ಕಾರ ಕಾರ್ಯಗಳೆಲ್ಲಾ ಸಾಂಗವಾಗಿಯೂ ಗಂಭೀರವಾಗಿಯೂ ನಡೆದು ಮುಕ್ತಾಯವಾದವು.

ಆ ದಿನ ಪ್ರಪಂಚದ ಸಮಸ್ತ ರಾಜ್ಯಗಳಲ್ಲೂ ಇಂಗ್ಲಿಷ್ ಚಕ್ರಾಧಿಪತ್ಯದ ಸಕಲ ಸ್ವಾಸ್ಥ್ಯಗಳಲ್ಲೂ ರಾಜ್ಯಾಂಗಗಳಲ್ಲೂ ಅಧಿಕಾರಿಗಳೂ ಸಾಮಂತ ಅರಸುಗಳೂ ಪ್ರಜಾ ಕೋಟಿಗಳೂ ಪಟ್ಟಣ ಊರು ಗ್ರಾಮಾದಿಗಳಲ್ಲಿ ಪ್ರಾರ್ಥನೆಗಳನ್ನು ನಡಿಸಿ, ಲೇಟ್ ಚಕ್ರವರ್ತಿಯವರ ಗುಣಕಥನವನ್ನು ಮಾಡಿ, ಅವರ ಆತ್ಮಕ್ಕೆ ನೆಮ್ಮದಿಯನ್ನೂ ಅವರ ರಕ್ತಸಂಬಂಧಿಗಳಿಗೆ ಸಮಾಧಾನವನ್ನೂ ದಯಪಾಲಿಸುವಂತೆ ಆಯಾಮತ ಪದ್ಧತಿಗಳ ಪ್ರಕಾರ ದೇವರ ಪ್ರಾರ್ಥನೆಗಳನ್ನು ಮಾಡಿರುತ್ತಾರೆ ಎಲ್ಲಾ ಕಡೆಗಳಲ್ಲೂ ಸಾಧ್ಯವಾದ ಮಟ್ಟಿಗೂ ಜನಗಳು ತಮ್ಮ ನಿತ್ಯ ಕಟ್ಟಳೆಯ ಕೆಲಸ ಕಾರ್ಯಗಳನ್ನು ನಿಲ್ಲಿಸಿ ಬಿಟ್ಟಿದ್ದರು ಬಡಬಗ್ಗರಿಗೆ ಅನ್ನದಾನಾದಿ ಧರ್ಮ ಕೆಲಸಗಳನ್ನೂ ಮಾಡಿದರು.

ನಮ್ಮ ಮೈಸೂರ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಸಮಸ್ತ ಕೋಮುಗಳ ಪ್ರಜೆಗಳೂ ರಾಜಭಕ್ತಿ ಪೂರಿತರಾಗಿ ಕೆಲಸಗಳನ್ನು ನಿಲ್ಲಿಸಿ ದಾನಧರ್ಮಗಳನ್ನು ಮಾಡಿ ದೇವಸ್ಥಾನಾದಿ ಮಂದಿರಗಳಲ್ಲಿ ವಿಶೇಷ ಅರ್ಚನೆ ಆರಾಧನೆಗಳನ್ನೂ ಪ್ರಾರ್ಥನೆಗಳನ್ನೂ ನಡಿಸಿ ತಮ್ಮ ದುಃಖವನ್ನು ಪ್ರಕಾಶಪಡಿಸಿರುತ್ತಾರೆ ಈ ವಿಷಯವಾಗಿ ಕೆಲವು ಸ್ಥಳಗಳಿಂದ ಬಂದಿರುವ ವೃತ್ತಾಂತವನ್ನು ಮಾತ್ರ ಬೇರೊಂದು ಕಡೆ ಪ್ರಕಟಿಸಿರುತ್ತೇವೆ

ದೊರೆಗಳ ಪ್ರಯಾಣ

ಲೇಟ್ ಚಕ್ರವರ್ತಿಯವರ ಉತ್ತರ ಕ್ರಿಯಾದಿಗಳಿಗಾಗಿ ದಯಮಾಡಿದ ಯೂರೋಪಿನ ದೊರೆಗಳೂ ರಾಜಕುಮಾರರೂ ರಾಯಭಾರಿಗಳೂ ಬೇಗಬೇಗನೆ ಹಿಂತಿರುಗಿ ಪ್ರಯಾಣಮಾಡುತ್ತಿದ್ದಾರೆ

ಐದನೇ ಜಾರ್ಜ್‌ಯವರ ಪಟ್ಟಾಭಿಷೇಕವು.

ವಿಲಾಯತಿ ರಾಜ್ಯದ ದೊರೆಯವರೂ ಹಿಂದುಸ್ಥಾನದ ಚಕ್ರವರ್ತಿಯವರೂ ಆದ ಐದನೇ ಜಾರ್ಜ್ ಪ್ರಭುಗಳು ತಮಗೆ ಪಟ್ಟಾಭಿಷೇಕವಾದದ್ದರ ಜ್ಞಾಪಕಾರ್ಥವಾಗಿ, ಸೈನ್ಯದ ಇಲಾಖೆಯಲ್ಲಿ ತಪ್ಪುಗಳನ್ನೂ ಅಪರಾಧಗಳನ್ನೂ ನಡಿಸಿ ಸಜಾ ಅನುಭವಿಸುತ್ತಿರುವ ಸೈನಿಕರಿಗೆ ಕೆಲವು ದಿನಗಳ ಮಟ್ಟಿಗೆ ಶಿಕ್ಷೆಯ ಅವಧಿಯನ್ನು ಕಡಮೆಮಾಡಿ, ಕೆಲವರಿಗೆ ಕ್ಷಮಾಪಣೆಯನ್ನು ದಯಪಾಲಿಸಿರುತ್ತಾರೆ ಸಿವಿಲ್ ಜೈಲನ್ನು ಅನುಭವಿಸುತ್ತಿರುವವರಿಗೂ ಒಂದು ವಾರದ ಲಾಗಾಯಿತು ಮೂರು ತಿಂಗಳವರೆಗೆ ಶಿಕ್ಷೆಯ ಅವಧಿಯನ್ನು ಕ್ಷಮಿಸಿರುವರು

ಚಕ್ರವರ್ತಿಯವರ ಆಜ್ಞೆಯು

ತಾ ೨೩ ನೇ ಸೋಮವಾರ ಜಾರ್ಜ್ ದೊರೆಯವರು "ನನ್ನ ಪ್ರಜೆಗಳಿಗೆ" ಎಂಬ ಶಿರನಾಮೆಯುಳ್ಳ ಒಂದು ಆಜ್ಞಾಪತ್ರವನ್ನು ದಯಪಾಲಿಸಿರುತ್ತಾರೆ ಅದರ ಮುಖ್ಯಾಭಿಪ್ರಾಯವೇನೆಂದರೆ —ನಮ್ಮ ತಂದೆಯವರ ವಿಷಯದಲ್ಲಿ ಚಕ್ರಾಧಿಪತ್ಯದ ಸಮಸ್ತ ಪ್ರಾಂತ್ಯಗಳಿಂದಲೂ ಪ್ರಜೆಗಳು ತಮ್ಮ ಪ್ರೀತಿಯನ್ನೂ ಭಕ್ತಿಯನ್ನೂ ಪ್ರಕಾಶಪಡಿಸಿ ಅರಿಕೆಮಾಡಿರುವಂಥಾ ಸಂತಾಪಯುಕ್ತವಾದ ವಾಕ್ಯಗಳನ್ನು ನಾನು ಕೇಳಿದೆನು ಲಂಡನ್ ಪಟ್ಟಣದಲ್ಲಿ ನಮ್ಮ ತಂದೆಯವರ ಉತ್ತರ ಕ್ರಿಯಾದಿಗಳು ನಡೆದಾಗ ಪ್ರೀತಿಯುತರಾದ ಅಸಂಖ್ಯಾತ ಪ್ರಜೆಗಳು ಶಾಂತವಾಗಿಯೂ ಗೌರವಯುಕ್ತವಾಗಿಯೂ ತಮ್ಮ ಶೋಕವನ್ನು ಪ್ರಕಾಶಪಡಿಸಿರುತ್ತಾರೆ ಈ ವಿಚಾರಗಳು ನನಗೂ ಮತ್ತು ನನ್ನ ಎಲ್ಲಾ ರಕ್ತಸಂಬಂಧಿಗಳಿಗೂ ಬಹು ವಿಶೇಷವಾಗಿ ಹೃದಯಂಗಮವಾಗಿರುವವು ಈ ದುಃಖವು ಅನಿರೀಕ್ಷಿತವಾಗಿದ್ದುದರಿಂದ ಅದು ಬಹಳ ಅಪಾರವಾಗಿದ್ದಿರಬಹುದು ಅದರಿಂದ ಹುಟ್ಟಿದ ಸಂತಾಪವು ಮಹಾ ತೀವ್ರವಾಗಿದ್ದ ಕಾರಣ ಅವರ ಮರಣದಿಂದುಂಟಾದ ನಷ್ಟಕ್ಕೆ ನಾನೂ ನನ್ನ ಪ್ರಜೆಗಳೂ ಸಮಭಾಗಿಗಳಾದೆವೆಂದು ತಿಳಿದ ಕೊಂಡೆನು. ನಷ್ಟ ಸಂಭವಿಸಿದ್ದು ನನಗೊಬ್ಬನಿಗೇ ಅಲ್ಲ ಸಕಲ ಪ್ರಜೆಗಳೂ ಅದರಲ್ಲಿ ನನ್ನ ಕೂಡ ಭಾಗಿಗಳಾಗಿರುತ್ತಾರೆ ಈ ರೀತಿಯಾದ ಆಲೋಚನೆಗಳು ನನ್ನಲ್ಲಿ ಉಂಟಾಗಿ, ದೇವರ ಮೇಲೆ ಅಚಂಚಲವಾದ ನಂಬಿಕೆ ಭಕ್ತಿಗಳನ್ನು ಪಡೆದು, ನನ್ನ ಪ್ರಜೆಗಳ ಮೇಲೆ ಭರವಸವನ್ನು ಇಟ್ಟುಕೊಂಡು, ನನ್ನ ಪ್ರೇಮಪಾತ್ರವಾದ ರಾಜ್ಯಭಾರದ ಪಾಯಿದೆ ಕಾನೂನು ಕಟ್ಟುಪಾಡುಗಳನ್ನು ಕಾಪಾಡುತ್ತಾ ತದನುಸಾರವಾಗಿ ನಡೆದುಕೊಳ್ಳುತ್ತಾ ಬರಲು ನನಗೆ ಧೈರ್ಯ ಸ್ಥೈರ್ಯ ಸಾಮರ್ಥ್ಯಾದಿಗಳು ಉಂಟಾಗಿರುವವು" ಎಂಬುದೇ

ತಾಲ್ಲೋಕು ವರ್ತಮಾನ.

ತರೀಕೆರೆ —ಈವೇ ತಿಂಗಳು ೨೦ ನೇ ತಾ ಶುಕ್ರವಾರ ೭ನೇ ಎಡ್ವರ್ಡ್ ಚಕ್ರವರ್ತಿಯವರ ಸಂಸ್ಕಾರದಿನವಾದದ್ದರಿಂದ ಆ ದಿನ ಈ ಟೌನ್‌ನಲ್ಲಿ ಎಲ್ಲಾ ಸ್ಕೂಲುಗಳು ಕೋರ್ಟು ಅಂಗಡಿಗಳು ಮುಚ್ಚಲ್ಪಟ್ಟಿದ್ದವು ನಮ್ಮ ಅಮಲ್ದಾರರವರು ಊರಿನ ಎಲ್ಲಾ ದೊಡ್ಡಮನುಷ್ಯರನ್ನೂ ವರ್ತಕಮಂಡಲಿಯವರನ್ನೂ ಸೇರಿಸಿ ಇಲ್ಲಿನ ಎ ವಿ ಸ್ಕೂಲಿನಲ್ಲಿ ಒಂದು ಮೀಟಿಂಗ್ ಮಾಡಿದರು. ಆ ಮೀಟಿಂಗಿನಲ್ಲಿ ಮೆ॥ ಬಾಬಾ ಸಾಹೇಬರೂ, ಪೋ॥ ಇನ್ಸ್‌ಪೆಕ್ಟರವರೂ ಮೀಟಿಂಗಿನ ಉದ್ದೇಶವನ್ನು ಸಭಿಕರಿಗೆ ತಿಳಿಸಿದರು ಚಕ್ರವರ್ತಿಯವರನ್ನು ಕಳೆದುಕೊಂಡದ್ದಕ್ಕಾಗಿ ತಾವೂ ದುಃಖಪಡುವದು ಮಾತ್ರವಲ್ಲದೆ ದುಃಖಸಾಗರದಲ್ಲಿ ಮುಳುಗಿರುವ ಚಕ್ರವರ್ತಿನಿಯವರ ಕೂಡ ತಾವೂ ಸಂತಾಪ ಪಡುತ್ತೇವೆಂಬುವದನ್ನು ತೋರ್ಪಡಿಸುವದಕ್ಕಾಗಿ ತಂತಿಯ ಮೂಲಕ ವರ್ತಮಾನ ಕೊಟ್ಟರು ಆ ದಿನ ಇಲ್ಲಿನ ಕ್ರೈಸ್ತರು ತಮ್ಮ ಸ್ಥಳದಲ್ಲಿ ಸೇರಿ, ಚಕ್ರವರ್ತಿನಿಯವರಿಗೆ ಪ್ರಾಪ್ತವಾಗಿರುವ ದುಃಖವನ್ನು ದೇವರು ನಿವಾರಣೆ ಮಾಡುವಂತೆಯೂ, ಈಗ ಅವರ ಸ್ಥಾನಕ್ಕೆ ಬಂದಿರುವ ಚಕ್ರವರ್ತಿಯವರನ್ನೂ, ಎಲ್ಲಾ ರಾಜಮನೆತನದವರನ್ನೂ ದೇವರು ಆಶೀರ್ವದಿಸುವಂತೆಯೂ ಪ್ರಾರ್ಥನಾ ಕೂಟವು ನಡಿಸಲ್ಪಟ್ಟಿತು ಆ ದಿನ ಬಿಸಲು ಮಳೆ ಇಲ್ಲದೆ ಮಬ್ಬಾಗಿದ್ದದ್ದನ್ನು ನೋಡಿದರೆ ಆಕಾಶವು ಕೂಡ ದುಃಖಪಡುತ್ತಿತ್ತೋ ಎಂಬಂತೆ ಕಂಡಿತು —ತರೀಕೆರೆ ತಾಲ್ಲೂಕು ಸಂತವೇರಿ ಬಳಿ ಸುಮಾರು ಮೂರು ತಿಂಗಳ ಕೆಳಗೆ ಸುಮಾರು ೪ ಜನರು ಏನಾದರೆಂಬ ಸಂಗತಿ ಯಾರಿಗೂ ತಿಳಿಯಲಿಲ್ಲ ಇವರಲ್ಲಿ ಸಂತವೇರಿ ಪೋಲೀಸ್ ದಫೇದಾರನೊಬ್ಬನಂತೆ ಈ ಜನರ ವಿಷಯದಲ್ಲಿ ಎಲ್ಲಾ ಗ್ರಾಮಗಳಲ್ಲಿಯೂ ಯಾರೋ ಬಂದು ಮನುಷ್ಯರನ್ನು ಎತ್ತಿಕೊಂಡು ಹೋಗುತ್ತಾರೆಂಬ ಭಯವು ಹಿಡಿದು, ಕಾಡಿಗೆ ಸೌದೆಗೂ, ದನಕರುಗಳನ್ನು ಮೇಯಿಸುವದಕ್ಕೂ ಹೋಗದೆ ಹೆದರುತ್ತಿದ್ದರು. ಈಚೆಗೆ ಯಾರೋ ಇವರನ್ನು ಖೂನಿಮಾಡಿದರೆಂದೂ, ಗುನ್ನೆಯ ಮೇಲೆ ಒಬ್ಬ ಸಾಮಿಯನ್ನು ಇಲ್ಲಿನ ಇನ್ಸ್‌ಪೆಕ್ಟರವರು ಹಿಡಿದಂತೆಯೂ, ಅವನು ತಪ್ಪಿಸಿಕೊಂಡು ಹೋದಂತೆಯೂ, ಅವನನ್ನು ಈಗ ಪತ್ತೆಮಾಡುತ್ತಿದ್ದಾರೆಂದೂ ವರ್ತಮಾನ ಕೇಳುತ್ತೇನೆ

ಸ್ತ್ರೀಯರ ವಿಷಯವಾಗಿ

[ಸಹೋದರಿ ರಾಜಮ್ಮನವರು ಬರೆದದ್ದು.]

ನಮ್ಮ ಭರತಖಂಡದ ಸ್ತ್ರೀಯರು ಪೂರ್ವಕಾಲದಲ್ಲಿ ವಿದ್ಯಾವತಿಯರಾಗಿ ಇದ್ದರೂ ಸ್ತ್ರೀ ವಿದ್ಯಾಭ್ಯಾಸಕ್ಕೆ ನಿಷೇಧ ಉಂಟಾಗಿದ್ದು ಈಗತಾನೇ ಕ್ರಮಕ್ರಮವಾಗಿ ಆ ನಿಷೇಧವು ಪರಿಹರವಾಗುತ್ತಲಿದೆ. ಕೆಟ್ಟ ಸ್ವಭಾವವುಳ್ಳವರಿಗೆ ಅಲ್ಪ ವಿದ್ಯೆಯು ದುರ್ಮಾರ್ಗ ಪ್ರವರ್ತನೆಗೆ ಸಹಾಯವಾಗುವುದು, ಒಳ್ಳೇ ಸ್ವಭಾವವುಳ್ಳವರಿಗೆ ಇದು ಪಾತಿವ್ರತ್ಯಕ್ಕೂ ಧರ್ಮದಿಂದ ನಡೆಯುವದಕ್ಕೂ ಸಾಧಕವಾಗುವುದು ಬೆಂಕಿಯು ಅತ್ಯಂತ ಉಪಯೋಗಕರವಾದದ್ದು ಬೆಂಕಿಯಿಂದ ಅಡಿಗೆ ಮೊದಲಾದ ಕೆಲಸಗಳನ್ನು ಮಾಡುವರು ಬೆಂಕಿಯ ಸಹಾಯದಿಂದ ಸ್ಟೀಮ್ ಬಂಡಿಗಳಿಗೆ ಸಂಬಂಧಪಟ್ಟ ಕೆಲಸಗಳನ್ನೂ ಇನ್ನೂ ಅನೇಕ ವಿಧವಾದ ಯಂತ್ರಗಳ ಮೂಲಕ ಕೋಟ್ಯಂತರ ಜನಗಳು ಮಾಡಬಹುದಾದ ಕೆಲಸಗಳನ್ನೂ ಮಾಡಿಸುವರು ಬೆಂಕಿಯನ್ನು ದುರುಪಯೋಗಪಡಿಸಿದರೆ ಅದು ಲೋಕವನ್ನು ಬೇಕಾದರೂ ಸುಡುವುದು ದುರ್ಮಾರ್ಗರಾದವರು ಬೆಂಕಿಯನ್ನು ದುರುಪಯೋಗಪಡಿಸುತ್ತಾರೆಂದು ಬೆಂಕಿಯ ಉಪಯೋಗವನ್ನೇ ನಿಷೇಧಿಸುವದು ಯುಕ್ತವೇ? ವಿದ್ಯೆಯನ್ನು ದುರ್ಮಾರ್ಗ ಪ್ರವರ್ತಕಿಯರಾದ ಸ್ತ್ರೀಯರು ದುರುಪಯೋಗಪಡಿಸುತ್ತಾರೆಂದು ಸ್ತ್ರೀ ಸಾಮಾನ್ಯಕ್ಕೇ ವಿದ್ಯಾಭ್ಯಾಸವನ್ನು ನಿಷೇಧಮಾಡಬಹುದೇ?

ಹಾಗಾದರೆ ಪುರುಷರಿಗೂ ವಿದ್ಯೆ ವಿಶೇಷವಾಗಿ ನಿಷೇಧವಾಗಬೇಕು ಯಾಕೆಂದರೆ ವಿದ್ಯೆಯನ್ನು ಸ್ತ್ರೀಯರಿಗಿಂತಲೂ ಬಹಳ ಹೆಚ್ಚಾಗಿ ದುರಾತ್ಮರಾದ ಕೆಲವು ಜನ ಗಂಡಸರೂ ದುರುಪಯೋಗ ಪಡಿಸುವರು ವಿದ್ಯೆಯು ಬೆಂಕಿಯಂತೆ ಕೆಟ್ಟ ಕೆಲಸಗಳಿಗೆ ಉಪಯೋಗಪಡಿಸುವುದಕ್ಕಿಂತಲೂ ಹೆಚ್ಚಾಗಿ ಒಳ್ಳೇ ಕೆಲಸಗಳಿಗೆ ಉಪಯೋಗಿಸಲ್ಪಡುತ್ತೆ. ಆದುದರಿಂದ ಸ್ತ್ರೀಪುರುಷರ್‍ಯಾರಿಗೂ ಇದನ್ನು ಪ್ರಾಜ್ಞರು ನಿಷೇಧಿಸುವರು. ಒಂದು ವೇಳೆ ನಿಷೇಧಿಸಿದಾಗ್ಯೂ ಅದು ಎಂದಿಗೂ ಆಚರಣೆಯಾಗುವುದಿಲ್ಲ ನಮ್ಮ ದೇಶಕ್ಕೆ ಉನ್ನತಿಯೂ ಕ್ಷೇಮವೂ ಆಗಬೇಕಾದರೆ ನಮ್ಮ ಭರತಖಂಡದವರಲ್ಲಿ ವಿದ್ಯೆಯು ಧರ್ಮಮಾರ್ಗೈಕ ಪರಾಯಣತೆಯೂ, ಸೌಹಾರ್ದವು, ಪರಸ್ಪರ ಹಿತೈಷಿತ್ವವು, ಇವೇ ಮೊದಲಾದ ಗುಣಗಳು ಬೇಕು ವಿದ್ಯೆಯಿಲ್ಲದ ಜನಗಳಿಗೆ ಈ ಗುಣಾತಿಶಯಗಳು ಬರುವದು ಕಷ್ಟ ಇಷ್ಟು ನಿರಕ್ಷರಕುಕ್ಷಿಯರಾದ ಹೆಂಗಸರು ತಮ್ಮ ಮಕ್ಕಳಿಗೆ ಇಂಥಾ ಗುಣಾತಿಶಯಗಳನ್ನು ಹ್ಯಾಗೆ ತಾನೇ ಉಂಟುಮಾಡ್ಯಾರು? ತಾಯಿಯಂತೆ ಮಕ್ಕಳು ಆಗುವರೆಂದು ಧಾರಾಳವಾಗಿ ಹೇಳಬಹುದು. ಜನಗಳು ಧರ್ಮಿಷ್ಠರಾಗುವುದಕ್ಕೂ ಅಧರ್ಮಿಷ್ಠರಾಗುವುದಕ್ಕೂ ಸಹವಾಸ ಬಹಳ ಮಟ್ಟಿಗೂ ಕಾರಣವಾಗುತ್ತದೆ ಮಕ್ಕಳಿಗೆ ಪ್ರಬಲವಾದ ಮತ್ತು ಪ್ರಾಯಶಃ ಅವಿಚ್ಛಿನ್ನವಾದ ಸಹವಾಸವು ತಾಯಿಯದಾಗಿರುತ್ತೆ. ಆದದ್ದರಿಂದ ಮಕ್ಕಳ ಗುಣಾತಿಶಯಗಳು ಮೇಲುಪಜ್ಞೆಯಾಗಿರುವ ತಾಯಿಯ ಗುಣಾತಿಶಯಗಳಿಗೆ ಅನುರೂಪವಾಗಿರುವದು

ಆದದ್ದರಿಂದ ನಮ್ಮ ದೇಶವು ಮುಂದಾದರೂ ಒಳ್ಳೇ ಸ್ಥಿತಿಗೆ ಬರಬೇಕಾದರೆ ಎಲ್ಲರೂ ಮುಂದೆ ಬರತಕ್ಕ ಭರತಖಂಡದವರಿಗೆ ಮಾತೃಗಳಾಗತಕ್ಕ ಎಲ್ಲಾ ಬಾಲಿಯರಿಗೂ ಸದ್ವಿದ್ಯಾಭ್ಯಾಸವನ್ನು ಮಾಡಿಸಬೇಕು ಈಗ ನಡೆಯುತ್ತಲಿರುವ ಸ್ತ್ರೀ ವಿದ್ಯಾಭ್ಯಾಸವು ಪ್ರಯೋಜನಕಾರಿಯಾಗಿಲ್ಲ ಅನೇಕ ತಂದೆತಾಯಿಗಳೂ, ಅತ್ತೆ ಮಾವಂದಿರೂ ಮತ್ತು ಇತರ ಬಂಧುಗಳೂ ಅನೇಕ ಯುವತಿಯರಿಗೆ ಹತ್ತು ಹನ್ನೆರಡು ವರುಷಗಳಿಗೆ ಪಾಠಶಾಲೆಗೆ ಹೋಗುವದನ್ನು ತಪ್ಪಿಸುತ್ತಾರೆ ಕ್ರಮೇಣ ಅಂಥಾ ಬಾಲೆಯರು ಕಲಿತದ್ದನ್ನು ಮರೆತುಬಿಡುವರು, ಅಥವಾ, ಅಲ್ಪಸ್ವಲ್ಪ ಕಲಿತದ್ದು ಜ್ಞಾಪಕದಲ್ಲಿ ಇದ್ದಾಗ್ಯೂ ಜ್ಞಾನಕ್ಕೆ ಸಾಧನವಾಗುವ ಮಟ್ಟಿಗೂ ವಿದ್ಯೆಯನ್ನು ಇವರು ಪಡೆದಿರುವದಿಲ್ಲ ಇಂಥಾವರು ಹ್ಯಾಗೆ ತಾನೇ ಮಕ್ಕಳ ದೇಹಶಕ್ತಿ, ಬುದ್ಧಿಶಕ್ತಿಗಳನ್ನು ವಿಶೇಷ ಅಭಿವೃದ್ಧಿಗೆ ತರುವದರಲ್ಲಿ ಮಾರ್ಗದರ್ಶಿಗಳಾದಾರು? ಗಂಡಸರು ೩೦ ವರ್ಷಗಳ ವರೆಗೂ ಪಾಠಶಾಲೆಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಾರೆ ಅನಂತರ ಯಾವಜ್ಜೀವವೂ ಹೊಸ ವಿಷಯಗಳನ್ನು ತಿಳಿದುಕೊಳ್ಳುತ್ತಲೂ, ಹೊಸ ಗ್ರಂಥಗಳನ್ನು ಓದುತ್ತಲೂ, ಅತ್ಯಂತ ಆನಂದದಿಂದ ಜ್ಞಾನ ವೈರಾಗ್ಯ ಸಾಮ್ರಾಜ್ಯಗಳನ್ನು ಅನುಭವಿಸುತ್ತಾ, ನಿರ್ದಿಷ್ಟವಾದ ಸಂತೋಷವಾರಿಧಿಯಲ್ಲಿ ಮುಳುಗಿ ತೇಲುತ್ತಲಿರುವರು ಸ್ತ್ರೀಯರು ಈ ರೀತಿ ಯಾತಕ್ಕೆ ಮಾಡಕೂಡದು? ಸ್ತ್ರೀಯರಿಗೆ ಗೃಹಕೃತ್ಯಗಳು ಮುಗಿದ ಮೇಲೆ ಭೋಜನಾನಂತರ ಕೆಲಸವೇನು? ಸದ್ಗ್ರಂಥಾವಲೋಕನವನ್ನು ಮಾಡುತ್ತಾ, ಮಕ್ಕಳಿಗೆ ಮನೋಹರವಾಗಿಯೂ, ಧರ್ಮಗರ್ಭಿತಗಳಾಗಿಯೂ, ಅವರ ಪುರೋವೃದ್ಧಿಗೆ ಸಾಧಕಗಳಾಗಿಯೂ ಇರುವ ಕಥೆಗಳನ್ನು ಹೇಳುತ್ತಾ, ಮನೆಯನ್ನು ಭೂಲೋಕದ ಸ್ವರ್ಗದಂತೆ ಮಾಡಿಕೊಂಡು, ಗಂಡನಿಗೂ ಅತ್ತೆಮಾವಂದಿರಿಗೂ ಬಂಧುಗಳಿಗೂ ಮಾಡಬೇಕಾದ ಶುಶ್ರೂಷೆಗಳನ್ನು ಮಾಡುತ್ತಾ ಬರುವಂತಾದರೆ ಅವರು ಕುಲಪಾಲಿಕಾಶಿರೋಮಣಿಗಳಾಗಿರುವರು

ವಿದ್ಯಾವಿಹೀನೆಯರು ಗೃಹಕೃತ್ಯಗಳಲ್ಲಿ ಉದಾಸೀನರಾಗಿಯೂ ಕಲಹಪ್ರಿಯರಾಗಿಯೂ ಮನೆಗೆ ಮಾರಿಯರಾಗಿಯೂ, ಸ್ವೇಚ್ಛೆಯಿಂದ ಪ್ರವರ್ತಿಸಿ ಮಾನವನ್ನೂ ಕಳೆದುಕೊಂಡು, ತೌರುಮನೆಗೂ ಸೇರಿದ ಮನೆಗೂ ದುಃಖವನ್ನುಂಟುಮಾಡುತ್ತಾ, ಅನೇಕ ಅನರ್ಥಗಳಿಗೆ ಆಸ್ಪದರಾಗುತ್ತಾರೆ

ಪೂರ್ಣ ವಿದ್ಯಾಭ್ಯಾಸಕ್ಕೆ ಅವಕಾಶಕೊಡುವದರಿಂದ ಈ ಅನರ್ಥಗಳು ತಪ್ಪುವದಕ್ಕೆ ಆಸ್ಪದವು ಬಹು ದೂರದ ಮಟ್ಟಿಗೂ ಆಗುವದಿಲ್ಲವೇ ಇದನ್ನು ವಿದ್ವಾಂಸರುಗಳು ಯೋಚಿಸಬೇಕು ಎಂದು ಪ್ರಾರ್ಥಿಸುತ್ತೇನೆ

ಮೈಸೂರು ಸರ್ಕಾರಿ ಹುಕುಮುಗಳು

ಯೂನಿಯನ್‌ಗಳ ಉತ್ಪತ್ತಿಯನ್ನು ಹಚ್ಚಿಸುವುದು

ಮೈಸೂರು ಗವರ್ನಮೆಂಟಿನವರು ಗ್ರಾಮಾಂತರಗಳ ಆರೋಗ್ಯಸ್ಥಿತಿಯನ್ನು ಕಾಪಾಡುವುದಕ್ಕೂ ಪ್ರಜೆಗಳ ಉಪಯೋಗಾರ್ಥವಾದ ಚಿಲ್ಲರೆ ಕಾಮಗಾರಿಗಳನ್ನು ಮಾಡಿಸುವುದಕ್ಕೂ ಯೂನಿಯನ್ ಪಂಚಾಯಿತಿಗಳನ್ನು ನಿರ್ಮಾಣಮಾಡಿರುತ್ತಾರಷ್ಟೆ ಈ ಯೂನಿಯನ್‌ಗಳಲ್ಲಿ ಮನೆ ತೆರಿಗೆ ಮತ್ತು ದೊಡ್ಡಿ ಉತ್ಪತ್ತಿ ಇವೆರಡನ್ನು ಮಾತ್ರ ವಸೂಲ್ಮಾಡಿ ಅದನ್ನು ಮೇಲ್ಕಂಡ ಕಾರ್ಯಗಳಿಗೆ ವಿನಿಯೋಗಿಸುತ್ತಾ ಬಂದರು ಇದು ಖರ್ಚಿಗೆ ಸ್ವಲ್ಪವೂ ಸಾಕಾಗುತ್ತಿರಲಿಲ್ಲ ಈ ವಿಚಾರವನ್ನು ಚಿತ್ರದುರ್ಗದ ಡೆಪ್ಯುಟಿ ಕಮೀಷನರ್‌ರವರು ಗವರ್ನಮೆಂಟಿಗೆ ರಿಪೋರ್ಟು ಮಾಡಿದರು ಗವರ್ನಮೆಂಟಿನವರು ಈ ವಿಷಯವನ್ನು ಪರ್ಯಾಲೋಚನೆ ಮಾಡಿ, ಸಂಸ್ಥಾನಾದ್ಯಂತ ಸಮಸ್ತ ಯೂನಿಯನ್‌ಗಳಲ್ಲೂ ಉತ್ಪತ್ತಿಯಾಗುವ ಖಾಲೀ ಸ್ಥಳಗಳ ಕಂದಾಯವನ್ನೂ ಹಿತ್ತಲುಗಳ ಕಂದಾಯವನ್ನೂ ಆಯಾ ಯೂನಿಯನ್‌ಗೆ ಖರ್ಚುಮಾಡುವುದಕ್ಕಾಗಿ ವಿನಿಯೋಗಿಸಿಕೊಳ್ಳತಕ್ಕದ್ದೆಂದೂ, ಅದನ್ನು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ವಹಿಸಿದೆ ಎಂದು ಹುಕುಂ ಮಾಡಿರುತ್ತಾರೆ

ಜಮೀನಿಗೂ ನೀರಿಗೂ ದರಖಾಸ್ತುಗಳು

ಮೈಸೂರು ಗವರ್ನಮೆಂಟಿನವರು ರೆವಿನ್ಯೂ ಕಮೀಷನರ್‌ರವರ ಮತ್ತು ಚೀಫ್ ಇಂಜನಿಯರವರ ಅಭಿಪ್ರಾಯವನ್ನು ಕೇಳಿ ಅದರ ಮೇಲೆ ಹುಕುಂ ಕೊಟ್ಟಿರುವುದೇನೆಂದರೆ,—ಹಿರಿಯೂರಿನಲ್ಲಿ ಒಡೆದುಹೋಗಿರುವ ಕೃಷ್ಣಾಂಬುದಿ ಕೆರೆಯ ಒಳಾಯವನ್ನು ಗವರ್ನಮೆಂಟಿನವರ ಸ್ಪೆಷಲ್ ಸ್ಯಾಂಕ್ಷನ್ ಪಡೆಯದೆ ವ್ಯವಸಾಯಕ್ಕೆ ಕೊಡಕೂಡದು ಇದಲ್ಲದೆ ಮಾರೀಕಣಿವೆ ಕಲಾವಿನ ನಾಲೆಗಳಿಂದ ಜಮೀನ್ ವ್ಯವಸಾಯಕ್ಕೆ ನೀರು ಬೇಕೆಂದು ದರಖಾಸ್ತು ಬಂದರೆ ಅಂಥಾ ಜಮೀನುಗಳು ಗ್ರಾಮಠಾಣಾದಿಂದ ಎರಡು ಫರ್ಲಾಂಗು ಆಚೆ ಇರುವಂತೆ ನೋಡಿಕೊಳ್ಳಬೇಕು, ಅಂದರೆ ಎರಡು ಫರ್ಲಾಂಗಿನ ಒಳಗೆ ತರೀ ಬೆಳೆಗೆ ಅವಕಾಶಕೊಡಕೂಡದು ಮತ್ತು ಯಾವ ಗ್ರಾಮದಲ್ಲಾದರೂ ೫೦೦ಕ್ಕಿಂತ ಹೆಚ್ಚು ಪ್ರಜಾಸಂಖ್ಯೆ ಇದ್ದಲ್ಲಿ ಅದರ ಗ್ರಾಮಠಾಣಾದಿಂದ ನಾಲ್ಕು ಫರ್ಲಾಂಗಿನ ಆಚೆ ತರೀ ವ್ಯವಸಾಯವಾಗುವಂತೆ ನೀರು ಕೊಡತಕ್ಕದ್ದು

ಕಾರೇಹಳ್ಳಿಯ ಬಳಿ ಹೊಸ ಸುಂಕದ ಕಟ್ಟೆಯು

ತಿಪ್ಟೂರಿನಿಂದ ಚನ್ನರಾಯಪಟ್ಟಣಕ್ಕೆ ಹೋಗುವ ರಸ್ತೆಯನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಹಣ ಸಾಲದಾದ್ದರಿಂದ ಆ ಬಳಿ ಒಂದು ಸುಂಕದ ಕಟ್ಟೆಯನ್ನು ಇಡುವಂತೆ ಅಪ್ಪಣೆ ಆಗಬೇಕೆಂದು ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರು ಸರ್ಕಾರಕ್ಕೆ ರಿಪೋರ್ಟು ಮಾಡಿದರು ಸರ್ಕಾರದವರು ಆ ರಸ್ತೆಯಲ್ಲಿ ಸಂಚರಿಸುವಂಥಾ ಗಾಡಿ ಮತ್ತು ಜಾನುವಾರುಗಳ ಮೇಲೆ ಸುಂಕವನ್ನು ಪಾಕ ೧೯೦೦ನೇ ಜೂಲೈ ತಾ ೧ರಿಂದ ವಸೂಲ್ಮಾಡಬಹುದೆಂದು ಸ್ಯಾಂಕ್ಷನ್ ಮಾಡಿರುತ್ತಾರೆ ಕಾರೇಹಳ್ಳಿಯ ಹತ್ತಿರ ಈ ಸುಂಕದ ಕಟ್ಟೆಯನ್ನು ಇಡಬೇಕೆಂದೂ, ಇದನ್ನು ಮೊದಲನೇ ವರುಷ ಡಿಸ್ಟ್ರಿಕ್ಟ್ ಬೋರ್ಡಿನವರು ಅಮಾನಿಯಾಗಿ ನಡಿಸಬೇಕೆಂದೂ, ಅದರ ಮೇಲ್ವಿಚಾರಣೆಯೆಲ್ಲಾ ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರೇ ವಹಿಸಿಕೊಳ್ಳಬೇಕೆಂದೂ, ಉತ್ಪತ್ತಿಯಲ್ಲಿ ಏಳು ಭಾಗವನ್ನು ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರೂ, ಎರಡು ಭಾಗವನ್ನು ತುಂಕೂರು ಡಿಸ್ಟ್ರಿಕ್ಟ್ ಬೋರ್ಡಿನವರೂ ಹಂಚಿಕೆ ಮಾಡಿ ತೆಗೆದುಕೊಳ್ಳಬೇಕೆಂದೂ ಹುಕುಂ ಮಾಡಿದಾರೆ ಇದಕ್ಕೆ ೩೫ ರೂಪಾಯಿ ಮಾಹೆಯಾನಾ ಶಿಬ್ಬಂದಿ ಖರ್ಚನ್ನೂ, ಎರಡು ಟೋಲ್‌ಗೇಟುಗಳನ್ನು ಕಟ್ಟುವುದಕ್ಕೆ ೧೮೦ ರೂಪಾಯಿ ಖರ್ಚುಮಾಡಬಹುದೆಂದೂ ಸ್ಯಾಂಕ್ಷನ್ ಆಗಿದೆ

ಗೋಕಾಯಿಗಳ ಮರಣವು

೧೮೯೯ನೇ ಡಿಸೆಂಬರ್ ೩೧ಕ್ಕೆ ಆಖೈರಾದ ಮೂರು ತಿಂಗಳಲ್ಲಿ ಸಂಸ್ಥಾನದಲ್ಲಿ ಮೃತಪಟ್ಟ ಗೋಕಾಯಿಗಳ ಸಂಖ್ಯೆ ಎಂತಾದದ್ದನ್ನು ರೆವಿನ್ಯೂ ಕಮೀಷನರ್‌ರವರು ಸರ್ಕಾರಕ್ಕೆ ತಿಳಿಯಪಡಿಸಿದರು ಅದರಲ್ಲಿ ಕಾಣಿಸಿರುವ ಮುಖ್ಯ ವಿಷಯಗಳೇನೆಂದರೆ,— ಆ ಮೂರು ತಿಂಗಳಲ್ಲಿ ಒಟ್ಟು ಎಲ್ಲಾ ಕಾರಣಗಳಿಂದಲೂ ೧೭,೬೯೭ ರಾಸುಗಳು ತೀರಿಹೋದವು ಈ ಪೈಕಿ ರೋಗಾದಿಗಳ ದೆಸೆಯಿಂದ ೭,೮೯೮ ಪಶುಪ್ರಾಣಿಗಳೂ, ಆಕಸ್ಮಿಕವೇ ಮೊದಲಾದ ಇತರ ಕಾರಣಗಳಿಂದ ೭,೮೪೭ ಪ್ರಾಣಿಗಳೂ ಲಯವಾಗಿರುತ್ತವೆ ಅದೇ ಮೂರು ತಿಂಗಳಲ್ಲಿ ಪಶುವೈದ್ಯರು ರೋಗತಗಲದಂತೆ ಐದು ಡಿಸ್ಟ್ರಿಕ್ಟುಗಳಲ್ಲಿ ಗೋಕಾಯಿಗಳಿಗೆ ಸಿಡುಬು ಹಾಕಿರುತ್ತಾರೆ ಹ್ಯಾಗೆಂದರೆ ಶಿವಮೊಗ್ಗೆಯಲ್ಲಿ ೧,೧೧೪ ರಾಸುಗಳು, ಹಾಸನ ೬೧೦, ಕೋಲಾರ ೪೪೪, ತುಂಕೂರು ೨೧೪, ಚಿತ್ರದುರ್ಗ ೨೪ ಈ ಮೂರು ತಿಂಗಳಲ್ಲಿ ೧,೯೫೩ ಗೋಕಾಯಿಗಳನ್ನು ಕಾಡುಮೃಗಗಳನ್ನು ಕೊಂದುಹಾಕಿದವು ಯಾವ ಯಾವ ರಾಸುಗಳು ಎಷ್ಟೆಷ್ಟು ಮೃತಪಟ್ಟವೆಂದರೆ, ಹಸುಗಳು ೪,೮೮೦, ಎತ್ತು ಮತ್ತು ಗೂಳಿಗಳು ೩,೮೩೭ ಕೋಣಗಳು, ೮೫೪, ಎಮ್ಮೆಗಳು ೨,೧೨೧, ಕುರಿ ಮತ್ತು ಆಡುಗಳು ೫,೨೮೪, ಕುದುರೆಗಳು ೬೪, ಕತ್ತೆಗಳು ೮೮, ಜುಮ್ಲಾ ರಾಸುಗಳು ೧೭,೬೯೭

ರೆವಿನ್ಯೂ ಸರ್ವೆ ಇಲಾಖೆಯ ರಿಪೋರ್ಟು

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖೆಯ ವಾರ್ಷಿಕ ರಿಪೋರ್ಟನ್ನು ಸೂಪರಿಂಟೆಂಡೆಂಟರಾದ ಮೆ॥ ಡಿ ರಾಮರಾಯರವರು ರಚಿಸಿ ಗವರ್ನಮೆಂಟಿಗೆ ಕಳುಹಿಸಿಕೊಟ್ಟರು ಅದನ್ನು ಸರ್ಕಾರದವರು ಪರಾಂಬರಿಸಿ ಅದರ ಮೇಲೆ ತಮ್ಮ ಅಭಿಪ್ರಾಯವನ್ನು ಅಪ್ಪಣೆ ಕೊಡಿಸಿರುತ್ತಾರೆ ಅದರ ಮುಖ್ಯಾಂಶಗಳೇನೆಂದರೆ,—

ಗತಸಾಲಿನಲ್ಲಿ ಆರು ಇನಾಂ ಗ್ರಾಮಗಳೊಳಗೆ ೪,೯೫೭ ಎಕರೆ ಜಮೀನನ್ನು ಸರ್ವೆ ಇಲಾಖೆಯವರು ಮೊದಲನೇ ಅಳತೆಯನ್ನು ಮಾಡಿದರು ಮತ್ತು ನಗರ, ತೀರ್ಥಹಳ್ಳಿ, ಕಡೂರು, ತರೀಕೆರೆ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಿಗೆ ಸೇರಿದ ೬೬೪ ಗ್ರಾಮಗಳಲ್ಲಿ ೮,೦೨,೪೮೨ ಎಕರೆ ಉಳ್ಳ ೬೧,೩೩೫ ಜಮೀನುಗಳನ್ನು ರೀಸರ್ವೆಮಾಡಿರುತ್ತಾರೆ ಮದ್ದಗಿರಿ ಮತ್ತು ಮಾಲೂರು ಕೊರಟಗೆರೆ ತಾಲ್ಲೂಕುಗಳಲ್ಲಿ ತರಿ ಮತ್ತು ಬಾಗಾಯತು ಜಮೀನುಗಳ ನೀರು ಸರದಿಯನ್ನು ಪುನಃ ಕ್ಲಾಸ್ ಮಾಡಿದ್ದಾಯಿತು ಇದಲ್ಲದೆ ೧೯ ಇನಾಂ ಗ್ರಾಮಗಳಲ್ಲಿ ಮೊದಲನೇ ಕ್ಲಾಸನ್ನು ಮಾಡಿದರು ಈ ರೀತಿ ೬೦,೬೧೭ ಎಕರೆ ಉಳ್ಳ ೧೪,೫೨೨ ಜಮೀನುಗಳು ಕ್ಲಾಸ್‌ಮಾಡಲ್ಪಟ್ಟಿವೆ ಪಾವಗಡ ತಾಲ್ಲೂಕಿನಲ್ಲಿ ರಿವಿಜನ್ ಸೆಟ್ಲ್‌ಮೆಂಟನ್ನು ಜಾರಿಗೆ ತಂದಿರುತ್ತೆ ಪಾವಗಡ, ಸೀರ, ತುಂಕೂರು ತಾಲ್ಲೂಕುಗಳ ರಿವಿಜನ್ ಸೆಟ್ಲ್‌ಮೆಂಟು ಪೂರೈಸಿ ದರಗಳೂ ಸ್ಯಾಂಕ್ಷನ್ ಆಗಿರುತ್ತವೆ ಹೊನ್ನಾಳಿ ಮತ್ತು ಶಿವಮೊಗ್ಗ ತಾಲ್ಲೂಕುಗಳ, ಸಾಗರ, ನಗರ, ಸುತ್ತುಮುತ್ತು ತಾಲ್ಲೂಕುಗಳ ರಿವಿಜನ್ ಸರ್ವೆ ಸೆಟ್ಲ್ ಆಗುವುದಕ್ಕೆ ಸನ್ನಾಹಗಳು ನಡೆಯುತ್ತಿರುವವು ಚಿತ್ರದುರ್ಗ, ಹೊಳಲ್ಕೆರೆ, ಜಗಲೂರು, ಹಿರಿಯೂರು ತಾಲ್ಲೂಕುಗಳ ಪೋಟಗಿಯನ್ನು ರಿವಿಜನ್ ಮಾಡಿ ಪೂರೈಸಿದೆ

ಈ ಸಾಲಿನಲ್ಲಿ ೩೪೮ ಗ್ರಾಮಗಳ ನಕ್ಷೆಗಳು ತಯಾರಾಗಿ ಹೊರಟಿರುತ್ತವೆ ಈ ನಕ್ಷೆಗಳನ್ನು ಸರ್ಕಾರಿ ಛಾಪಖಾನೆಯಲ್ಲೇ ಅಚ್ಚುಹಾಕುವುದಕ್ಕೆ ಅವಶ್ಯವಾದ ಶಿಲಾ ಯಂತ್ರ ಮುಂತಾದ ಸಾಮಗ್ರಿಗಳನ್ನು ಕೊಂಡು ತರಿಸಲಾಗಿದೆ ಇನ್ನು ಮುಂದೆ ನಕ್ಷೆಗಳು ಜಾಗ್ರತೆಯಾಗಿ ಸಿದ್ಧವಾಗಲು ಅನುಕೂಲವಾಗಿರುವುದು ಇದನ್ನು ತಯಾರುಮಾಡುವ ಖರ್ಚು ಕೂಡ ಸುಲಭವಾಗುತ್ತದೆ

ಸರ್ವೆ ಇಲಾಖೆಯ ಕೆಲಸಗಳು ಜಾಗ್ರತೆ ನಡೆಯದಂತೆ ವಿಶೇಷವಾಗಿ ಮೂರುತರಹಾ ಅಡಚಣೆಗಳು ಉಂಟಾಗಿರುತ್ತವೆಂದು ಸೂಪರಿಂಟೆಂಡೆಂಟರು ತಿಳಿಸುತ್ತಾರೆ (೧) ಬೌಂಡರಿ ಅಥವಾ ಹದ್ದುಬಸ್ತಿನ ಗುರುತುಗಳು ಸರಿಯಾಗಿಲ್ಲ (೨) ಬಹು ಮುಖ್ಯವಾದ ಮತ್ತು ಅಭಿವೃದ್ಧಿ ಸ್ಥಿತಿಯಲ್ಲಿರುವ ಬೇರೂರಿನಂಥಾ ಊರುಗಳಲ್ಲೇ ಗ್ರಾಮಸ್ಥರು ಸಹಾಯ ಮಾಡುವುದು ಕಡಮೆಯಾಗಿದೆ (೩) ರೀಸೆಟ್ಲ್‌ಮೆಂಟಿಗೆ ಲೆಕ್ಕ ಪತ್ರಗಳೇ ಮುಂತಾದ ದಾಖಲೆಗಳನ್ನು ಅಮಲ್ದಾರರು ಒದಗಿಸದೆ ಸುಸ್ತಿ ಮಾಡುತ್ತಾರೆ ಸಾಮಾನ್ಯವಾಗಿ ಪ್ರತಿ ಸಾಲಿನಲ್ಲೂ ಈ ಅಡಚಣೆಗಳನ್ನು ರಿಪೋರ್ಟಿನಲ್ಲಿ ಕಾಣಿಸುತ್ತಾ ಬಂದಿದಾರೆ ಗವರ್ನಮೆಂಟಿನವರು ಪ್ರತಿ ವರುಷವೂ ರೆವಿನ್ಯೂ ಇಲಾಖೆಯವರು ಸರ್ವೆ ಇಲಾಖೆಗೆ ಸಹಾಯ ಸಂಪತ್ತುಗಳನ್ನು ಒದಗಿಸಬೇಕೆಂದು ಒತ್ತಿ ಹೇಳುತ್ತಲೇ ಬಂದಿರುವರು ಈ ಭಾಗದಲ್ಲಿ ರೆವಿನ್ಯೂ ಕಮೀಷನರ್‌ರೂ ಸರ್ವೆ ಸೂಪರಿಂಟೆಂಡೆಂಟರೂ ಪ್ರತಿ ಆರು ತಿಂಗಳಿಗೂ ಒಂದು ರಿಪೋರ್ಟನ್ನು ಕಳುಹಿಸಬೇಕೆಂದು ಹುಕುಂ ಮಾಡಿದೆ ಯಾರು ಸಹಾಯ ಮುಂತಾದದ್ದು ಒದಗಿಸದೆ ತಪ್ಪಿರುತ್ತಾರೋ ಅವರ ಹೆಸರನ್ನು ತಿಳಿಸಿದರೆ ಗವರ್ನಮೆಂಟಿನವರು ತಕ್ಕಹಾಗೆ ತಮ್ಮ ಗಮನಕ್ಕೆ ತಂದುಕೊಳ್ಳುವರು

ದೇವೀ ಸಿಡುಬು ಹಾಕುವ ಇಲಾಖೆಯ ರಿಪೋರ್ಟು

ಮೈಸೂರು ಸಂಸ್ಥಾನದಲ್ಲಿ ೧೮೯೮ನೇ ಇಸವಿಯಲ್ಲಿ ದೇವೀ ಸಿಡುಬು ಹಾಕುವ ಇಲಾಖೆಯ ರಿಪೋರ್ಟನ್ನು ಸ್ಯಾನಿಟರಿ ಕಮೀಷನರ್‌ರವರು ೧೮೯೯ನೇ ನವಂಬರ್ ತಿಂಗಳಲ್ಲಿ ಗವರ್ನಮೆಂಟಿಗೆ ಕಳುಹಿಸಿದರು ಅದನ್ನು ಪರಾಂಬರಿಸಿ ಅದರ ಮೇಲೆ ಬರೆದಿರುವ ಹುಕುಮಿನ ಮುಖ್ಯಾಂಶಗಳೇನೆಂದರೆ,—

ಈ ಸಲ ಈ ಪೋರ್ಟು ಬರುವುದು ಆರು ತಿಂಗಳು ತಡವಾಯಿತು ಇದಕ್ಕೆ ಕಾರಣವನ್ನು ತಿಳಿಸಿಲ್ಲ ಸಿಡುಬಿನ ಒಂಬತ್ತು ಮಂದಿ ಡೆಪ್ಯುಟಿ ಇನ್‌ಸ್ಪೆಕ್ಟರುಗಳ ಪೈಕಿ ಐದು ಜನ ಮದ್ರಾಸಿಗೆ ಸ್ಯಾನಿಟೇಷನ್ ವಿಚಾರವನ್ನು ಕಲಿತು ಬರುವುದಕ್ಕೆ ಕಳುಹಲ್ಪಟ್ಟಿದ್ದರು

ತಾಲ್ಲೂಕ್ ಮತ್ತು ಮ್ಯುನಿಸಿಪಲ್ ಶಿಬ್ಬಂದಿಗೆ ಸೇರಿದ ಸಿಡುಬು ಹಾಕುವ ನೌಕರರೂ ವೈದ್ಯದ ಇಲಾಖೆಯವರೂ ೯೯,೫೦೪ ಜನರಿಗೆ ಸಿಡುಬು ಹಾಕಿರುತ್ತಾರೆ ಅಂದರೆ ವೈದ್ಯದ ಇಲಾಖೆಯವರು ೫,೦೧೨ ಜನರಿಗೂ, ಮ್ಯುನಿಸಿಪಲ್ ನೌಕರರು ೩,೭೦೫ ಜನರಿಗೂ, ತಾಲ್ಲೂಕ್ ಶಿಬ್ಬಂದಿಯವರು ೯೦,೭೮೭ ಜನರಿಗೂ ಸಿಡುಬು ಹಾಕಿದರು ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಇತರ ಎಲ್ಲಾ ಕಡೆಗಳಿಗಿಂತಲೂ ಹೆಚ್ಚು ಜನರಿಗೆ, ಅಂದರೆ ೨೩,೭೭೭ ಜನರಿಗೆ ಸಿಡುಬು ಹಾಕಿರುತ್ತದೆ ಶಿವಮೊಗ್ಗೆಯಲ್ಲಿ ಹೋದ ವರುಷಕ್ಕಿಂತಲೂ ಬಹಳ ಸ್ವಲ್ಪ ಸಿಡುಬು ಹಾಕಲಾಗಿದೆ ಈ ಡಿಸ್ಟ್ರಿಕ್ಟಿನಲ್ಲಿ ೧೧,೬೪೫, ಕಡೂರು ಡಿಸ್ಟ್ರಿಕ್ಟಿನಲ್ಲಿ ೨,೧೩೭ ಕಡಮೆಯಾಗಿರುತ್ತವೆ ಇದು ಅತೃಪ್ತಿಕರವಾಗಿರೋಣದರಿಂದ ಸ್ಯಾನಿಟರಿ ಕಮೀಷನರ್‌ರವರು ಸರಿಯಾದ ಗಮನಕೊಡಬೇಕಾಗಿದೆ ಒಂದು ವರುಷದೊಳಗಿನ ೧೭,೭೮೫ ಮಕ್ಕಳಿಗೆ ಸಿಡುಬು ಹಾಕಲಾಯಿತು ಅಂದರೆ ಹಿಂದಿನ ವರುಷಕ್ಕಿಂತ ೨,೧೭೨ ಹೆಚ್ಚು

೧೮೯೮ನೇ ಇಸವಿಯಲ್ಲಿ ಸಿಡುಬಿನ ಉಪದ್ರದ ದೆಸೆಯಿಂದ ೧೮೯೦ ಮರಣಗಳಾಗಿರುತ್ತವೆ ಹಿಂದಿನ ವರುಷ ೬,೦೧೩ ಮರಣಗಳಾದವು ಸಿಡುಬಿನ ಹಾಲು ತಯಾರಾಗುವ ಕಾರ್ಖಾನೆಯ ಖರ್ಚೂ ಈ ಇಲಾಖೆಯ ಖರ್ಚೂ ಸೇರಿ ಕಳೆದ ವರುಷ ೧೯,೪೧೨ ರೂಪಾಯಿ ಆಗಿರುತ್ತದೆ ಅಂದರೆ, ಹಿಂದಿನ ವರುಷದ ಖರ್ಚಿಗಿಂತ ೨,೫೮೮ ರೂಪಾಯಿ ಕಡಮೆ

ಈ ವರುಷ ಕರ್ನೂಲಿನ ಸಿಡುಬು ಹಾಕುವ ಕ್ರಮವು ಜಾರಿಯಲ್ಲಿ ತರಲ್ಪಟ್ಟು ತೃಪ್ತಿಕರವಾಗಿ ನಡೆಯಿತು ಮೈಸೂರು ಬೆಂಗಳೂರು, ಕೋಲಾರ್ ಚಿನ್ನದಗಣಿ, ಈ ಪ್ರದೇಶಗಳಲ್ಲಿ ಸಿಡುಬನ್ನು ಬಲಾತ್ಕರಿಸಿ ಹಾಕುವ ರೂಲ್ಸು ಜಾರಿಯಲ್ಲಿತ್ತು ೧೨ ವರುಷ ವಯಸ್ಸಾದ ಮೇಲೆ ಸಿಡುಬು ಎದ್ದವರು ವಿನಹಾ ಉಳಿದವರು ಸರ್ಕಾರಿ ಡಿಸ್ಟ್ರಿಕ್ಟ್ ತಾಲ್ಲೂಕು ಮ್ಯುನಿಸಿಪಾಲಿಟಿಗಳಲ್ಲಿ ಹೊಸದಾಗಿ ನೌಕರಿಗೆ ಸೇರುವುದಕ್ಕೆ ಮುಂಚೆ ದೇವೀ ಸಿಡುಬನ್ನು ಹಾಕಿಸಿಕೊಳ್ಳಬೇಕೆಂದು ವಿಧಿಸಲ್ಪಟ್ಟಿರುತ್ತದೆ

ಸಿಡುಬಿನ ಹಾಲು ತಯಾರಾಗುವ ಕಾರ್ಖಾನೆಗಾಗಿ ೧೮೭೭ನೇ ವರುಷ ೯,೦೯೯ ಚಿಲ್ಲರೆ ರೂಪಾಯಿಯೂ ೧೮೯೮ನೇ ವರುಷ ೮,೩೯೬ ಚಿಲ್ಲರೆ ರೂಪಾಯಿಯೂ ಖರ್ಚಾಗಿರುವುದು ಉತ್ಪತ್ತಿಯಾದದೋ ಮೊದಲನೇ ವರುಷ ೨,೯೩೪ ಚಿಲ್ಲರೆ ರೂಪಾಯಿಯೂ ಎರಡನೇ ವರುಷ ೩,೭೭೦ ಚಿಲ್ಲರೆಯೂ ಆಗಿ ಎತ್ತದ

ಸ್ಥಾನಿಕ ವರ್ತಮಾನಗಳು

ಚಿಂತಾಮಣಿ —ಹಸವನ್ನೆ ದಿವ ಇಂಗ್ಲಾಂಡಿನ ಮಹಾರಾಣಿಯರೂ ನಮ್ಮ ಇಂಡಿಯಾದೇಶದ ಚಕ್ರವರ್ತಿನಿಯರೂ ಆದ ಪ್ರಸಿದ್ಧ ವಿಕ್ಟೋರಿಯಾ ಮಹಾ ಪ್ರಭುಗಳು ಸ್ವರ್ಗಸ್ಥರಾದ ಪ್ರಯುಕ್ತ ಅವರ ದುಃಖ ಸೂಚಕವಾಗಿ ಚಿಂತಾಮಣಿಯಲ್ಲಿ ಎಲ್ಲಾ ಮತದವರೂ ನೆನ್ನೆ ದಿನ ಅಂದರೆ ಮೇ ತಾ ೨೦ ರಲ್ಲಿ ಅಂಗಡಿಗಳನ್ನೆಲ್ಲಾ ಮುಚ್ಚಿ, ಅವರವರ ನಿತ್ಯ ಕೆಲಸಗಳಿಂದಲೂ ವ್ಯಾಪಾರಾದಿ ಆದಾಯಗಳಿಂದಲೂ ನಿವೃತ್ತರಾಗಿದ್ದರು ವರ್ತಕರು ಮೊದಲಾದವರು ಊರಿನಲ್ಲಿರತಕ್ಕ ದೇವಾಲಯಗಳಲ್ಲಿ ತಕ್ಕಮಟ್ಟಿಗೆ ವಿಶೇಷ ಪೂಜೆ ಮಾಡಿದ್ದಲ್ಲದೇ ಟವನ್‌ಗೆ ಸುಮಾರು ಎರಡು ಮೈಲಿದೂರದಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಹೋಗಿ ಚಕ್ರವರ್ತಿ ರಾಜಸಂಜೀಶರಿಗೆ ಶುಭವಾಗಲೆಂದು ಪ್ರಾರ್ಥನೆಮಾಡಿಕೊಂಡು ಬಂದಿರುತ್ತಾರೆ —ನೆನ್ನೆ ದಿನವೇ ರಾತ್ರಿ ಮಳೆಬಿದ್ದು ಸುತ್ತುಮುತ್ತು ಸೀಮೆಗೆ ಅವಶ್ಯ ಒದಗಿದ್ದ ಹಳ್ಳಗಳಲ್ಲಿ ಕುಂಟೆಗಳಿಗೆ ನೀರು ಬಂದಿರುತ್ತವೆ ಟವನ್‌ನಲ್ಲಿರುವ ಕೆರೆಗೂ ಸ್ವಲ್ಪ ನೀರು ಬಂದಿರುವದು ಫಿಲ್ಟರು ಎಂಬ ಶೋಧಿಸುವ ಯಂತ್ರದ ಪಂಜೂರು ಆರ್ಡರು ಎಗ್ಗ ನಿರೀಕ್ಷಿಸುತ್ತೇವೆ ಸಾವಕಾಶವಾದಲ್ಲಿ ಮಣ್ಣುಮಿಶ್ರವಾದ ನೀರನ್ನು ಕುಡಿಯುತ್ತಾ ಇರಬೇಕಾಗುತ್ತದೆ ಚಿಂತಾಮಣಿಯಲ್ಲಿರತಕ್ಕ ಮುಸಲ್ಮಾನರಿಗೂ ಹಿಂದುಗಳಿಗೂ ಅಸರುಖಾನೆಯ ವಿಷಯವಾಗಿ ಪುನಃ ಮನಸ್ತಾಪಗಳಿಂದ ಮೊಕದ್ದಮೆ ನಡೆಯುತ್ತಿದ್ದು ತಾಲ್ಲೂಕು ಮ್ಯಾಜಿಸ್ಟ್ರೇಟವರಿಂದ ಹಿಂದಿನ ಗವರ್ನಮೆಂಟು ಆರ್ಡರುಗಳಿಗೆ ಅನುಸಾರವಾಗಿ ಫೈಸಲಾಗಿದೆ —ಇತರ ಕೋಲಾರ ವಗೈರೆ ಗ್ರಾಮಗಳಲ್ಲಿರುವಂತೆ ಇಲ್ಲಿಯೂ ಟವನ್ ಪೊಲೀಸು ಈಗ ಅತ್ಯವಶ್ಯಕವಾಗಿ ಏರ್ಪಾಡು ಆಗಬೇಕೆಂದು ತೋರುತ್ತದೆ

ತಿಪಟೂರು —ಇದೇ ತಾಲೂಕು ಸವನ್ನಾನ್ಯ ಹಾಲುಕುರಿಕೆ ಗ್ರಾಮದಲ್ಲಿ ೧೦ ೧೨ ದಿನಗಳ ಹಿಂದೆ ಅಂಗಾತಿ ಹಲಗಣ್ಣನೆಂಬವರ ಮನೆಯಲ್ಲಿ ಮಧ್ಯಾಹ್ನ ೧ ಘಂಟೆ ಸಮಯದಲ್ಲಿ ಬೆಂಕಿಯಿಂದ ಅನಾಹುತವಾಯಿತು ಬೆಂಕಿ ತಗಲುವದಕ್ಕೆ ಕಾರಣವೇನೆಂದರೆ ಸೀಮೆಎಣ್ಣೆಯ ಡಬ್ಬಾಗಕ್ಕೆ ಹಾಕಿದ ಮೇಣವನ್ನು ತೆಗೆಯುವದಕ್ಕಾಗಿ ಮನೆಯ ಯಜಮಾನನೇ ಬೆಂಕಿಯನ್ನು ಉಪಯೋಗಿಸಿದ್ದರಿಂದ ಬೆಂಕಿಯು ಒಳಗಿದ್ದ ಸೀಮೆಎಣ್ಣೆಗೆ ಹತ್ತಿ ಉರಿಯು ಅಧಿಕವಾಗಿ

ಮನೆಯು ಬೆಂದುಹೋಯಿತು ಆಗ ಸ್ಥಾ॥ ಗುಂಡಪ್ಪನವರು ನಿಂತು ತಮ್ಮ ಮತ್ತು ಇತರ ಜನಗಳ ಸಹಾಯದಿಂದ ಬಹಳ ಶ್ರಮೆಪಟ್ಟರು ಇವರ ಸಾಹಸದಿಂದ ಊರಿನಲ್ಲಿ ಯಾವ ಮನೆಗಳಿಗೂ ಬೆಂಕಿ ವ್ಯಾಪಿಸದೆ ಆ ಒಂದು ಮನೆ ಮಾತ್ರ ಸುಟ್ಟುಹೋಯಿತು ಉರಿಯು ಮನೆಗೆ ವ್ಯಾಪಿಸಿದಾಗ ತೊಟ್ಟಿಲ್ಲಿ ಇದ್ದ ಮಗುವನ್ನು ಈಚೆಗೆ ತೊಟ್ಟಿಲುಸಹಿತ ತಂದರು ಬಾಣಂತಿ ಬೆಂಕಿಯಿಂದ ಸುಟ್ಟುಹೋಗುವಷ್ಟರಲ್ಲಿ ಆಕೆಯನ್ನು ಈಚೆಗೆ ಕರೆದು ತಂದರು ಆದರೂ ಮರುದಿನ ಸತ್ತುಹೋದರು ಮಿಕ್ಕಾದವರನ್ನು ಇಲ್ಲಿನ ಆಸ್ಪತ್ರೆಗೆ ತಂದು ತಕ್ಕ ಚಿಕಿತ್ಸೆ ಮಾಡುತ್ತಿದ್ದರು ೩ ದಿನಗಳ ಹಿಂದೆ ಮನೆಯಜಮಾನನೂ ತೀರಿಹೋದನು ಈ ಕಾಲದಲ್ಲಿ ಸಹಾಯಕರಾಗಿ ನಿಂತ ಸಾಹುಕಾರ್ ಗುಂಡಪ್ಪನವರನ್ನು ಸರ್ಕಾರದವರೂ ಪ್ರಜೆಗಳೂ ಕೊಂಡಾಡಬೇಕಾಗಿದೆ ಇದೇ ತಾಲ್ಲೂಕು ಹೊನ್ನವಳ್ಳಿ ಸಮ್ಮತು ಕುಡುಗೋನಹಳ್ಳಿಯಲ್ಲಿ ಮಧ್ಯಾಹ್ನದಲ್ಲಿ ಬೆಂಕಿ ಹತ್ತಿ ೨೦-೨೫ ಮನೆಗಳು ಸುಟ್ಟುಹೋದವು ಮಧ್ಯಾಹ್ನದ ಹೊತ್ತಾದ್ದರಿಂದ ಪ್ರಾಣ ನಷ್ಟವೇನೂ ಆಗಲಿಲ್ಲ ಆದರೂ ೨೦ ಸಾವಿರ ರೂಪಾಯಿನಷ್ಟು ಆಸ್ತಿಯೆಲ್ಲಾ ನಷ್ಟವಾಯಿತು ಇವರ ಕಷ್ಟಕ್ಕೆ ಸರ್ಕಾರದವರು ತಕ್ಕ ಸಹಾಯ ಮಾಡ್ಯಾರೆಂದು ನಂಬಿಧೇವೆ

ಗುಬ್ಬಿ.—ಕಳೆದ ಭಾನುವಾರ ಒಂದು ಹದ ಮಳೆ ಆಗಿ ಆನೆಕಲ್ಲು ಸುರಿದು ವಿಶೇಷ ಮಳೆಯಾದ ದೆಸೆಯಿಂದ ಇಲ್ಲಿನ ಛತ್ತದ ಫಸಲಿಗೆ ಅನುಕೂಲವಾಗಿ ರೈತರ ಕಷ್ಟನಿವಾರಣೆಯಾಯಿತು—ಕಳೆದ ಏಪ್ರೆಲ್ ತಾ ೨೪ ರಲ್ಲಿ ಇದೇ ಗುಬ್ಬಿ ತಾಲ್ಲೂಕು ಹೊಸಕೆರೆ ಗ್ರಾಮದ ವಾಸಸ್ಥಳದ ಒಬ್ಬ ಹೆಂಗಸು ಹೆತ್ತು ಆ ಮಗುವನ್ನು ಉಪ್ಪಾರರ ಭಾವಿಗೆ ಹಾಕಿದ್ದಳು ಈ ಸಂಗತಿಯನ್ನು ನಮ್ಮ ಇನ್ಸ್‌ಪೆಕ್ಟರವರು ಪತ್ತೆಮಾಡಿ ಇಲ್ಲಿನ ಆಸ್ಪತ್ರೆಗೆ ಕಳುಹಿಸಿದ್ದರು ಡಾಕ್ಟರವರೇ ಅಜಮಾಯಿಷಿ ಮಾಡಿದರು ಈ ಮೊಕದ್ದಮೆಯು ತಾಲ್ಲೂಕು ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ನಡೆಯುತ್ತಾ ಇದೆ—ಮೇ ತಾ ೧೨ ನೇ ಗುರುವಾರ ರೈಲ್ವೆ ಸ್ಟೇಷನ್ ಬಳಿ ಇರುವ ಮುಸಾಫರಿ ಛತ್ರದ ಬಳಿ ಚಪ್ಪಡಿಯಲ್ಲಿ ಕಚೇರಿ ಜವಾನನಾಲಿಯು ಗುಡಿಸುತ್ತಿರುವಾಗ ಚಪ್ಪಡಿಯಲ್ಲಿ ಇದ್ದ ಒಂದು ಬಟ್ಟೆ ಗಂಟನ್ನು ಕಂಡು ಗಾಬರಿಪಟ್ಟು ಬರುವಾಗ ನಮ್ಮ ಇನ್ಸ್‌ಪೆಕ್ಟರವರು ಕಂಡು ವಿಚಾರಮಾಡಿ ಸ್ಥಳಕ್ಕೆ ಹೋಗಿ ತನಿಖೆಮಾಡಿ ಗಂಟಿನ ಹಣವನ್ನು ಕಚೇರಿಯಲ್ಲಿ ತಂದಿಟ್ಟುಕೊಂಡು ಆ ದಿನ ರೇಂದಿ ಹರಾಜಿಗೆ ಬಂದಿದ್ದ ಜನಗಳನ್ನೆಲ್ಲಾ ವಿಚಾರಿಸಿದರು ಆಗ ಇದೇ ಗುಬ್ಬಿ ತಾಲ್ಲೂಕು ದಂಡಿನಶಿವರದಲ್ಲಿರುವ ಶೇರ್ವೇಗಾರ್ ಎದ್ದಲಿಂಗೇಗೌಡರು ಮತ್ತು ಅಮೃತ ಮಹಲ್ ಇಲಾಖಾ ರೈಟರ್ ರಾಮಸ್ವಾಮಿ ಮೊದಲಿಯಾರ್ ಸಹ ಗುಬ್ಬಿಗೆ ಪ್ರಯಾಣ ಮಾಡುವಾಗ್ಗೆ ಸದರಿ ಲಿಂಗೇಗೌಡನ ಪೆಟ್ಟಿಗೆಯಲ್ಲಿದ್ದ ೪೮೩ ರೂಪಾಯನ್ನು ಕಳುವು ಮಾಡಿದಂತೆ ಗೊತ್ತಾಯಿತು ಹಾಲಿ ಆಗಂಟಿನಲ್ಲಿ ಇದ್ದ ಮೊಬಲಗು ೪೧೬ ರೂಪಾಯಿ ಇನ್ಸ್‌ಪೆಕ್ಟರವರು ಪತ್ತೆ ತರದೊದು ನಡಿಸಿ ಸದರಿ ಮೊದಲಿಯಾರರನ್ನು ಲಾಕಪ್ಪಿನಲ್ಲಿ ಇಟ್ಟಿರುತ್ತಾರೆ ತಾಲ್ಲೂಕು ಮ್ಯಾಜಿಸ್ಟ್ರೇಟರಲ್ಲಿ ಮೊಕದ್ದಮೆ ನಡೆಯುತ್ತಾ ಇದೆ – ಈಗ ಎರಡನೇ ಸಾರದ ಕೆಳಗೆ ನಾಗಸಂದ್ರದ ಮರಮ್ಮನ ಜಾತ್ರೆಗೆ ನಡೆದ್ದ ಆರತಿಗಳ ವಿಷಯ ಲಕ್ಕೂರ ವಗ್ಗೆರೆಯು ಮಾಡಾಮಾರಿ ನಡಿಸಿದ್ದದ್ದನ್ನು ನಮ್ಮ ಅಮಲ್ದಾರರು ವಿಚಾರಣೆ ನಡಿಸಿ ಜಡ್ಜ್‌ಮೆಂಟಿಗೆ ಆರ್ಡರ್ ಮಾಡಿರುತ್ತಾರೆಂದು ಕೇಳುತ್ತೇನೆ.

ಚಾಮರಾಜನಗರ.—ಇಲ್ಲಿ ಒಂದೆರಡು ವಾರದಿಂದಲೂ ಮಳೆಯು ಸುನಾಯಿಸಿ ಬೀಳುತ್ತಾ ಇದ್ದರೂ ಒಳ್ಳೇ ಹದವಾದ ಮಳೆಯು ಕಳೆದ ೯ ನೇ ತಾ ಮತ್ತು ೨೧ ನೇ ತಾ ನಲ್ಲಿ ಮಾತ್ರ ಬಿದ್ದಿತು ಜೋಳವು ಸೇರಾವಾಗಿ ಈಗಾಗಲೇ ಹರಕೆಗೆ ಬಂದಿದೆ ಆಗಾಗ್ಗೆ ಮಳೆ ಬೀಳುತ್ತಿದ್ದರೂ ಬಿಸಲಿನ ತಾಪವು ಸಹಿಸಕೂಡದಾಗಿದೆ ಮಾವಿನ ಹಣ್ಣಿನ ಕಾಲ ಬಂದದ್ದರಿಂದ ಎಲ್ಲಿ ನೋಡಿದರೂ ಕಣ್ಣಿನ ನೋವು ಹೆಚ್ಚಾಗಿದೆ ಸಿಡುಬಿನ ಉಪದ್ರವು ಕಡಮೆಯಾದಂತಿದೆ ಈ ತಾಲ್ಲೋಕಿನಲ್ಲಿ ನಡೆಯುವ ಖೂನಿ ಮಾರಾಮಾರಿಗಳ ಪೈಕಿ ಮದಹಳ್ಳಿ ಪ್ರಾಂತ್ಯದಲ್ಲಿಯೇ ಹೆಚ್ಚೆಂದು ಹೇಳುತ್ತಾರೆ ಇದೇ ತಿಂಗಳು ಸುಮಾರು ೧೬ ನೆ ತಾ ಮದಹಳ್ಳಿ ಪ್ರಾಂತ್ಯದಿಂದಲೇ ಆರು ಜನರು ಜಗಳವಾಡಿಕೊಂಡು ಇಲ್ಲಿನ ಆಸ್ಪತ್ರೆಗೆ ಬಂದಿದ್ದರು ಆ ಪೈಕಿ ಇಬ್ಬರು ಮುಖಕ್ಕೆರಿಗೆ ತಲೆಯ ಮೇಲೆ ದೊಣ್ಣೆಯಿಂದ ಬಿದ್ದ ಪೆಟ್ಟಿನ ಏಟು ಸುಮಾರು ಎರಡು ಅಂಗುಲ ಉದ್ದವಾಗಿ ಸೀಳಿದಂತಿದ್ದವು—ಈ ತಾಲ್ಲೋಕಿನ ಅನೇಕ ಕಡೆಗಳಲ್ಲಿ ಸಾಪಾಸು ಕಳ್ಳಿಯು ವಿಶೇಷವಾಗಿ ಬೆಳೆದಿರುವದು ಅದರಲ್ಲೂ ಈ ಊರಿನ ಮ್ಯುನಿಸಿಪಲ್ ಸರಹದ್ದಿನೊಳಗಡೆಯೇ ಅದು ಅನೇಕ ಕಡೆಗಳಲ್ಲಿ ಅಪಾರವಾಗಿ ಒಳೆದಿರುತ್ತದೆ ಇದನ್ನು ನಾಶಮಾಡದೇ ಹೋದರೆ ಇನ್ನು ಕೆಲವು ವರುಷದೊಳಗಾಗಿ ದನಕರುಗಳ ಮೇವಿಗೆ ಆಶ್ರಯವಾದ ಬಂಜರಿನಲ್ಲಿ ಹುಲ್ಲಿಗೆ ಬದಲಾಗಿ ಇದೇ ಬೆಳೆದು ಭೂಮಿಯನ್ನು ಮುಚ್ಚಿಬಿಡುವದು ನಮ್ಮ ಅಮಲ್ದಾರರು ಮ್ಯುನಿಸಿಪಲ್ ಸರಹದ್ದಿನೊಳಗಿರುವ ಈ ಕಳ್ಳಿಯನ್ನು ತೆಗೆಸುವದಕ್ಕೆ ಎರಡು ಆಳುಗಳನ್ನು ಬಿಟ್ಟಿದಾರೆಂದು ವರ್ತಮಾನವಿದೆ ಇನ್ನೂ ಹೆಚ್ಚು ಆಳುಗಳನ್ನು ಬಿಟ್ಟು ಸಂಪೂರ್ಣವಾಗಿ ಅದನ್ನು ನಾಶಮಾಡುವದು ಉತ್ತಮವು—ಇಲ್ಲಿನ ಮ್ಯುನಿಸಿಪಾಲಿಟಿಯಲ್ಲಿ ಕೆಲವು ಕಡೆ ದೀಪವನ್ನೇ ಹಚ್ಚುವದಿಲ್ಲವೆಂದು ಕಾಣುತ್ತದೆ ಯಾಕಂದರೆ ಕಂಬಿಗಳಿದ್ದರೂ ಅವುಗಳ ಮೇಲೆ ಲಾಂದ್ರಗಳೇ ಇರುವದಿಲ್ಲ ವಿಚಾರಿಸಿದರೆ ಲಾಂದ್ರಗಳು ರಿಪೇರಿಯಲ್ಲಿರುವದಾಗಿ ಹೇಳುತ್ತಾರೆ ಸುಮಾರು ಎರಡು ವಾರದಿಂದಲೂ ಇಂಜನೀಯರುಗಳು ಇಲ್ಲಿನ ಮುಸಾಫರಾ ಬಂಗಲೆಯಲ್ಲಿದ್ದುಕೊಂಡು ಇಲ್ಲಿಂದ ನಂಜನಗೂಡು ಕಡೆ ರೈಲ್ವೆ ಲೈನ್ ಹಾಕುವದಕ್ಕಾಗಿ ಸರ್ವೆ ಮಾಡುತ್ತಿದಾರೆ ಈಗಾಗಲೇ ಹೀಗೆ ಸರ್ವೆಮಾಡಿದ್ದು ಒಂದೆರಡು ಸಾರಿ ಆಗಿದೆ ಎಂದು ಹೇಳುತ್ತಿದಾರೆ. ರೈಲ್ ಯಾವಾಗ ಬರುವದೋ ತಿಳಿಯದು

ಅರಸಿಕೆರೆ.—ಕಳೆದ ತಾ ೨೦ ನೇ ಶುಕ್ರವಾರ ಏಳನೇ ಚಕ್ರವರ್ತಿಗಳ ದೇಹವನ್ನು ಭೂಸ್ಥಾಪನೆ ಮಾಡಿದಕಾರಣ ಅವರ ಪ್ರಜೆಗಳಾದ ಅರಸಿಕೆರೆಯ ಜನಗಳು ತಮ್ಮ ದುಃಖಸೂಚನೆಯನ್ನು ತೋರ್ಪಡಿಸುವಂತೆ ಆ ದಿನ ಎಲ್ಲಾ ಅಂಗಡಿಗಳನ್ನು ಮುಚ್ಚಿದ್ದು ಮಾತ್ರವಲ್ಲದೆ ಆ ದಿನ ನಡೆಯಬೇಕಾದ ಸಂತೆಯನ್ನು ಸಹ ನಿಲ್ಲಿಸಿದ್ದು ಮಾತ್ರವಲ್ಲದೆ ಎಲ್ಲಾ ದೇವಸ್ಥಾನಗಳಲ್ಲಿಯೂ ಬೇರೆ ಬೇರೆ ಮತಸ್ಥರು ರಾಜಮನೆತನದವರಿಗೂ ಮುಖ್ಯವಾಗಿ ನಮ್ಮ ತಾಯಿಯಾದ ಕ್ವೀನ್ ಅಲೆಗ್ಸಾಂಡ್ರಮ್ಮನವರಿಗೂ ಮನಸ್ಸಿಗೆ ಆದರಣೆಯನ್ನು ದಯಪಾಲಿಸಲೆಂದು ಬೇಡಿದ್ದು ಮಾತ್ರವಲ್ಲದೆ ಪ್ರಾಟಿಸ್ಟೆಂಟ್ ದೇವಸ್ಥಾನದಲ್ಲಿ ಗುಬ್ಬಿಯಿಂದ ಪಾದ್ರಿಗಳಾದ ಠಾಮಸರ್ ಸಾಹೇಬರು ಮತ್ತು ತುಂಕೂರಿಂದ ಘನ ಎಡ್ವರ್ಡ್ ಸಾಹೇಬರು ಬಂದು ದೇವಸ್ಥಾನದ ಪ್ರಸಂಗದ ಪೀಠಕ್ಕೂ ಮತ್ತು ದೇವಸ್ಥಾನದ ಎಲ್ಲಾ ಭಾಗಕ್ಕೂ ಕರಿಬಟ್ಟೆಯಿಂದ ಮುಚ್ಚಿದ್ದು ಮಾತ್ರವಲ್ಲದೆ ಎಲ್ಲಾ ರಾಜಮನೆತನದವರಿಗೂ ಅವರ ಕುಮಾರರಿಗೂ ಮತ್ತು ಮಹಾರಾಣಿಯವರಿಗೂ ಭಗವಂತನು ತಕ್ಕ ಸಮಾಧಾನವನ್ನು ದಯಪಾಲಿಸಲೆಂದು ಪ್ರಾರ್ಥಿಸಿದರು, ಈ ಕೂಟಕ್ಕೆ ಎಲ್ಲಾ ರೈಲ್ವೆ ನೌಕರರೂ ಮತ್ತು ಮೈಸೂರು ದೇಶದ ಎಲ್ಲಾ ಆಫೀಸರುಗಳೂ ಬಂದಿದ್ದರು ಮತ್ತು ಕೆಲವು ವರ್ತಕರು ಬಡವರಿಗೆ ಅವರ ಹೆಸರಿನಲ್ಲಿ ಅನ್ನವನ್ನು ಹಾಕಿಸಿದರು ಮುಸಲ್ಮಾನರು ಸಹ ಅದರಂತೆಯೇ ಮಾಡಿದರು ಈಗ ಹೊಸದಾಗಿ ಬಂದಿರುವ ಅಮಲ್ದಾರರು ಎಲ್ಲಾ ಕಾರ್ಯಗಳೂ ಕ್ರಮವಾಗಿ ನಡೆಯುವಂತೆ ತಾವೇ ಖುದ್ದಾಗಿ ಪ್ರತಿ ಒಂದು ಸ್ಥಳಕ್ಕೂ ದಯಮಾಡಿ ನೋಡುತ್ತಾ ಬಂದರು—ಅರಸಿಕೆರೆಯ ಪೋಲೀಸ್ ಇನ್ಸ್‌ಪೆಕ್ಟರ್ ಮೆ॥ ಗುಡಿಯಪ್ಪನವರು ಈ ತಾಲ್ಲೋಕಿಗೆ ಬಂದು ಕೊಂಚಕಾಲವಾದಾಗ್ಯೂ ಇವರು ಅನೇಕ ಒಳ್ಳೇ ಕಾರ್ಯಗಳನ್ನು ಮಾಡಿದಾರೆ ಕುಣಿಗಲ ತಾಲ್ಲೋಕಿನಿಂದ ಶಿವಾಚಾರದ ಹುಡುಗಿಯನ್ನು ಅರಸಿಕೆರೆ ತಾಲ್ಲೂಕು ಹೆಗ್ಗುಂದದ ಲಂಬಾಣಿಗರು ನಾಲ್ಕು ಮಂದಿ ಸೇರಿ ಅಪಹರಿಸಿಕೊಂಡುಬಂದಿದ್ದರು ಇನ್ಸ್‌ಪೆಕ್ಟರವರು ಅವರನ್ನು ಹಿಡಿದು ಕಳುಹಿಸಿದರು ಅಪರಾಧಿಗಳಿಗೆ ಒಂದೊಂದು ವರುಷ ಸಜಾ ಆಯಿತು ಮತ್ತು ಚನ್ನರಾಯಪಟ್ಟಣದ ತಾಲ್ಲೋಕು ಬೇಡರಹಳ್ಳಿಯಿಂದ ಸಿದ್ದನೆಂಬುವನು ೧೫೦ ರೂಪಾಯಿ ಬಾಳತಕ್ಕ ಒಂದು ಜೊತೆ ಎತ್ತುಗಳನ್ನು ಕಳುವುಮಾಡಿಕೊಂಡು ಬಂದು ಅರಸಿಕೆರೆ ತಾಲ್ಲೋಕಿನಲ್ಲಿ ಬಿಕರಿಮಾಡುತ್ತಾ ಇರುವಾಗ್ಗೆ ಇದನ್ನು ಕಂಡುಹಿಡಿದು ಮೊಕದ್ದಮೆ ಮಾಡಿದಾರೆ

ತಲಕಾಡು.—ಇಲ್ಲಿ ೩-೪ ದಿವಸಗಳ ಕೆಳಗೆ ಒಳ್ಳೆ ಹದ ಮಳೆಯಾಗಿ ಕೆರೆಕಟ್ಟೆಗಳೆಲ್ಲಾ ತುಂಬಿರುತ್ತೆ ಪೈರುಪಚ್ಚೆ ಚನ್ನಾಗಿದೆ ಕಳೆದ ಮಳೆಯಿಂದ ಅತಿ ವಿಚಿತ್ರವೂ ಗಾತ್ರವೂ ಆದ ಆನೆಕಲ್ಲುಗಳು ಮಿತಿಯಿಲ್ಲದಷ್ಟು ಬಿದ್ದು, ಮಾವಿನ ಕಾಯಿಗಳು ಅನೇಕವಾಗಿ ಉದುರಿ ಹೋಗಿ, ಗುತ್ತಿಗೆದಾರರಿಗೆಲ್ಲಾ ತುಂಬಾ ನಷ್ಟವಾಯಿತು ಹಾಲಿ ಬಿಸಿಲಿನ ವೇಗ ಸಹಿಸಲಸಾಧ್ಯ—ಟವನ್ ಪಾಕೀಜಾ ಚನ್ನಾಗಿದೆ ರೋಗಾದ್ಯುಪದ್ರಗಳೇನೂ ಇಲ್ಲ ಹವಾ ತಕ್ಕ ಮಟ್ಟಿಗೆ ಅನುಕೂಲವಾಗಿದೆ ಈ ಪ್ರಾಂತ್ಯ ಪುಣ್ಯವಂತರಾಗಿಯೂ ಕುಟುಂಬಿಗಳಾಗಿಯೂ ಇರುವ ಸಾಹುಕಾರ್ ಶಿವಬಸವದೇವರು ಒಂದು ಧರ್ಮದ ಛತ್ರವನ್ನು ಕಟ್ಟಿಸಲು ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ಅಸ್ತಿಭಾರ ಹಾಕಿದ್ದದ್ದು ಸರಿಯಷ್ಟೆ ಸದರಿ ಛತ್ರದ ಕಾಮಗಾರಿಯು ಪೂರೈಸಿದ ಕೂಡ್ಲೆ ಈ ಗ್ರಾಮಸ್ಥರ ಅನುಕೂಲಕ್ಕಾಗಿ ಗ್ರಾಮಸ್ಥರ ಮಕ್ಕಳಿಗೆಲ್ಲಾ ಸ್ಥಳದಲ್ಲೇ ಇಂಗ್ಲೀಷ್ ವಿದ್ಯಾಭ್ಯಾಸಮಾಡಿಸಲಿಚ್ಛೈಸಿ ಸದರಿ ಛತ್ರದಲ್ಲಿ ಒಂದು ಇಂಗ್ಲೀಷ್ ಸ್ಕೂಲ ಸ್ಥಾಪಿಸಿ ೫ ೬ ತಿಂಗಳಾಯ್ತು ಕೆಲವು ದಿವಸಗಳ ಹಿಂದೆ ಗೌರ್ನಮೆಂಟ್ ಸ್ಕೂಲುಗಳ ಇನಸ್ಪೆಕ್ಷನ್ ಬಗ್ಗೆ ದಯಮಾಡಿದ್ದ ಡೆಪ್ಯುಟಿ ಇನಸ್ಪೆಕ್ಟರ್ ಮೊದಲಾದವರು ಈ ಸ್ಕೂಲಿನ ಸ್ಥಿತಿಗೆ ತುಂಬಾ ತೃಪ್ತಿಪಟ್ಟು ಸರ್ಟಿಫೈ ಮಾಡಿರುತ್ತಾರೆ ಮುಂದೆ ಈ ಸ್ಕೂಲನ್ನು ಅಭಿವೃದ್ಧಿಗೆ ತರಲು ಸಾಹುಕಾರರು ತಕ್ಕ ಏರ್ಪಾಡನ್ನು ಮಾಡುತ್ತಲಿರುವರು—ಮೊದಲೇ ನಿಬಂಧನೆ ಮಾಡಿದ್ದ ಮೇರೆ ಸಾಹುಕಾರರು ವೈಶಾಖ ಶುದ್ಧ ೫ ಶುಕ್ರವಾರ ವಾದ್ಯಗಳು ಮೊಳಗುತ್ತಿರುವಲ್ಲಿ ಕುಟುಂಬ ಸಮೇತರಾಗಿ ಗುರು ಹಿರಿಯರೊಡಗೂಡಿ ಶಾಸ್ತ್ರೋಕ್ತವಾಗಿ ಛತ್ರದ ಪ್ರತಿಷ್ಠೆಯನ್ನು ವೈಭವದಿಂದ ನೆರವೇರಿಸಿದರು ಆ ದಿವಸ ಬ್ರಾಹ್ಮಣರು, ವೀರಶೈವರು ಮತ್ತು ಕೋಮುವಾರು ಇತರ ಎಲ್ಲಾ ಜಾತಿಯ ಸ್ಥಳ ಪರಸ್ಥಳಗಳ ಸುಮಾರು ೭-೮ ಸಾವಿರ ಜನಗಳಿಗೆ ಅವರವರ ಮತಾನುಸಾರ ಪ್ರತ್ಯೇಕ ಪ್ರತ್ಯೇಕ ಸ್ಥಳಗಳಲ್ಲಿ ಸುಖ ಭೋಜನವಾಯಿತು ಭೋಜನಾನಂತರ ಸಾಹುಕಾರರು ಬ್ರಾಹ್ಮಣರು ವೀರಶೈವರೇ ಮೊದಲಾದವರ ಜನ ಸಮೂಹವನ್ನು ವಾದ್ಯ ಘೋಷದೊಡನೆ ಛತ್ರಕ್ಕೆ ಬರಮಾಡಿಕೊಂಡು, ಸಭೆಯಲ್ಲಿ ಸಂತೋಷಾರ್ಥವಾಗಿ ಸಂಗೀತ ನಡೆಯಿತು ಅನಂತರ ಸಭಾ ಜನಗಳು ಫಲಪುಷ್ಪ ಗಂಧ ತಾಂಬೂಲ ದಕ್ಷಿಣೆಗಳಿಂದ ಗೌರವಿಸಲ್ಪಟ್ಟು ಎಲ್ಲರೂ ಸಾಹುಕಾರರಿಂದ ಬೀಳ್ಕೊಂಡು ಕೋಲಾಹಲದೊಡನೆ ತೆರಳಿದರು ಈ ಮಹನೀಯರು ಮುಂದೆಯೂ ಇಂಥಾ ಸತ್ಕಾರ್ಯದಲ್ಲಿ ನಿರತರಾಗಿ ತನ್ಮೂಲಕ ಸಮಸ್ತ ಜನಗಳಿಗೂ ಆದರ್ಶ ಪ್ರಾಯರಾಗಿ ಇರುವರೆಂದು ನಂಬಿರುತ್ತೇವೆ

ಚಿಕ್ಕಮಗಳೂರು.—ಕಳೆದ ೨೦ ನೇ ತಾ ಶುಕ್ರವಾರ ವಿಲಾಯತಿ ದೊರೆಗಳೂ ಇಂಡಿಯಾ ದೇಶದ ಸಾರ್ವಭೌಮರೂ ಆದ ಏಳನೆಯ ಎಡ್ವರ್ಡ್ ಪ್ರಭುಗಳ ಕಳೇಬರವನ್ನು ಭೂಸ್ಥಾಪನೆ ಮಾಡಿದ ದಿನವಾಗಿಯೂ ಲೋಕದಲ್ಲೆಲ್ಲಾ ದುಃಖ ಸೂಚಕವಾದ ದಿನವಾಗಿಯೂ ಮೈಸೂರು ಸರಕಾರದಿಂದ ಹುಕುಂ ಹೊರಟಿದ್ದುದು ಸರಿಯಷ್ಟೆ ಅದೇ ಸಮಯಕ್ಕೆ ಸರಿಯಾಗಿ ಕಾಫಿ ತೋಟಗಳ ದೊರೆಗಳೆಲ್ಲಾ ರೈಫಲ್ ಮೀಟಿಂಗ್ ಎಂಬ ಕೂಟಕ್ಕೆ ಚಿಕ್ಕಮಗಳೂರಿಗೆ ನೆರೆದು ಬಂದಿದ್ದರು ಯಾಕಂದರೆ ಸ್ವಲ್ಪ ಕಡಮೆ ಇವರುಗಳೆಲ್ಲಾ ವಾಲಂಟಿಯರ್ ಸೈನ್ಯಕ್ಕೆ ಸೇರಿದವರು ಅದೇ ದಿನದಲ್ಲಿ ಇಲ್ಲಿನ ಪಾದ್ರಿ ದೊರೆಗಳಾದ ರೆವರೆಂಡ್ ಜಿ ರೆಡ್ಮಂಡ್‌ಯವರೂ ಮಿಷನ್ ಕಂಪೌಂಡಿನಲ್ಲಿರುವ ದೇವಾಲಯದಲ್ಲಿ ಸಾಯಂಕಾಲ ಸುಮಾರು ೫ ಗಂಟೆಗೆ ದೇವಾರಾಧನೆಯನ್ನು ನಡಿಸಿದರು ದೇವಾಲಯವು ಕಳುಪುಷ್ಪಗಳಿಂದಲೂ ಧೂಮ್ರ ಬಣ್ಣದ ವಸ್ತ್ರಗಳಿಂದಲೂ ಅಲಂಕೃತವಾಗಿತ್ತು ಸ್ಥಳಾಧಿಕಾರಿಗಳಾದ ನಮ್ಮ ಡೆಪ್ಯುಟಿ ಕಮಿಷನರಾ ಸಾಹೇಬರೂ ಇತರ ಅಧಿಕಾರಿಗಳನ್ನೊಡಗೂಡಿ ಆರಾಧನೆಯ ಸಮಯಕ್ಕೆ ದೇವಾಲಯದಲ್ಲಿ ಸೇರಿದ್ದರು ವಾಲಂಟಿಯರುಗಳು ತಮ್ಮ ಪರೇಡಿಗೆ ಲಾಯಖಾದ ಉಡುಪುಗಳನ್ನು ಧರಿಸಿ ತಮ್ಮ ಕಮ್ಯಾಂಡರ ಅಪ್ಪಣೆಯಂತೆ ಬಹು ಕ್ರಮದಿಂದ ಒಂದೊಕುಗಳನ್ನು ಹಿಡಿದುಕೊಂಡು ಆಲಯ ಪ್ರವೇಶವನ್ನು ಮಾಡಿದರು ಆಗ ದೇವಾರಾಧನೆಯು ಪೂರೈಸಿದನಂತರ ಘನ ರೆಡ್ಮಂಡ್ ದೊರೆಗಳು ಗತಿಸಿದ ಚಕ್ರವರ್ತಿಯವರ ಗುಣ ಕಥನವನ್ನು ಮಾಡಿ ಸಭಿಕರಿಗೆಲ್ಲಾ ಒತ್ತಿ ಹೇಳಿದರು ಮುಖ್ಯವಾಗಿ ಚಕ್ರವರ್ತಿಯವರ ಅಧಿಕಾರ, ಸೈನ್ಯ, ಐಶ್ವರ್ಯ, ದರ್ಪಗಳಿಂದ ಪ್ರಜಾ ಪ್ರೀತಿಗೆ ಪಾತ್ರರಾಗದೆ ತಮ್ಮ ಕರ್ತವ್ಯವನ್ನು ತಿಳಿದು ಕಡೇ ವರೆಗೂ ಅದನ್ನು ಸಾಧಿಸಿ ಪ್ರಜೆಗಳ ಹಿತವನ್ನೇ ತಮ್ಮ ಮುಖ್ಯೋದ್ದೇಶವೆಂದೆಣಿಸಿ ಯಾವ ಪಕ್ಷದವರಿಗೂ ಎಡೆಗೊಡದ ನೀತಿಯೆಂಬ ತಕ್ಕಡಿಯಲ್ಲಿ ಎಲ್ಲವನ್ನೂ ತೂಗುತ್ತಿದ್ದದ್ದರಿಂದ ಸಕಲಪ್ರಜೆಗಳ ವಿಶ್ವಾಸಕ್ಕೂ ಪಾತ್ರರಾದರು ಬಡಬಗ್ಗರು ತಕ್ತ ಮನೆಮಠಗಳನ್ನು ಪಡೆದವರಾಗಿ ನೆಮ್ಮದಿಯಿಂದ ಬದುಕಬೇಕೆಂಬ ಕೆಲಸದಲ್ಲಿ ನಮ್ಮ ಸಾರ್ವಭೌಮರಷ್ಟು ಒಳಹೊಕ್ಕು ಪ್ರಯತ್ನಮಾಡಿದವರು ಯಾರೂ ಇರಲಿಲ್ಲ, ಇಷ್ಟೇ ಅಲ್ಲದೆ ಅವರು ಲೋಕದಲ್ಲಿ ಯುದ್ಧದ ಹೆಸರೇ ನಿಂತು ಹೋಗಿ ಸಮಸ್ತ ರಾಜ್ಯಗಳವರನ್ನೂ ಪರಸ್ಪರ ಸಮಾಧಾನದಿಂದ ಒದುಕಬೇಕೆಂಬ ಉದ್ದೇಶದಿಂದ ಅವರು ಮಾಡಿದ ಪ್ರಯತ್ನಗಳು ಸಕಲ ರಾಜ ಪ್ರಜೆಗಳ ಮನಸ್ಸಿಗೂ ಸಂತೋಷಪ್ರದವಾಗಿ ಕಂಡುಬಂದು "ಶಾಂತಿಯನ್ನು ಹರಡುವವರು" ಎಂಬ ಬಿರುದಾಂಕಿತರಾದದ್ದನ್ನು ಕೇಳಿ ಸಭಿಕರೆಲ್ಲಾ ತಮ್ಮ ಸಾರ್ವಭೌಮರ ಸೌಜನ್ಯಕ್ಕಾಗಿ ಮನೋಲ್ಲಾಸವನ್ನು ತಾಳಿದರು ಇಷ್ಟಲ್ಲದೆ ದುಃಖಸೂಚಕವಾಗಿ ಸಮಸ್ತ ಕೋರ್ಟು ಕಚೇರಿ ಸ್ಕೂಲುಗಳನ್ನೂ ಮುಚ್ಚಿದ್ದದ್ದಲ್ಲದೆ ಸಕಲ ಕೋಮಿನವರೂ ತಮ ತಮ್ಮ ಮತಾನುಸಾರವಾಗಿ ದೇವರ ಪ್ರಾರ್ಥನೆಗಳನ್ನು ಅರ್ಪಿಸಿ ಹೊಸ ಸಾರ್ವಭೌಮರಾದಿಯಾಗಿ ಸಕಲ ರಾಜವಂಶೀಕರಿಗೂ ಅಲೆಕ್ಸಾಂಡ್ರಾ ಮಹಾರಾಣಿಯವರಿಗೂ ಕ್ಷೇಮ ಸಮಾಧಾನಗಳನ್ನು ಕೊಟ್ಟು ರಕ್ಷಿಸಲೆಂದು ದೇವರನ್ನು ಬೇಡಿದರು

ಬೌರಿಂಗ್‌ಪೇಟ.—೨೦ ನೇ ತಾ ಶುಕ್ರವಾರದಲ್ಲಿ ಎಡ್ವರ್ಡ್ ಸಾರ್ವಭೌಮರವರ ಉತ್ತರ ಕ್ರಿಯಾದಿಗಳ ದಿವಸವಾದದ್ದರಿಂದ ಹಿಂದೂ, ಕ್ರೈಸ್ತ, ಮುಸಲ್ಮಾನ್ ಎಲ್ಲಾ ಕೋಮಿನ ಪ್ರಜೆಗಳೂ ತಮ್ಮ ತಮ್ಮ ದೇವಾಲಯಗಳಲ್ಲಿ ದುಃಖಸೂಚಕವಾದ ಆರಾಧನೆಗಳನ್ನು ನಡಿಸಿ ಮ್ಮ ರಾಜಭಕ್ತಿಯನ್ನು ಬಹಳ ಗಂಭೀರವಾಗಿ ವ್ಯಕ್ತಪಡಿಸಿದರು ಅಲ್ಲದೆ ಆ ದಿನ ದಿವಾ ೧೨ ರಿಂದ ೧ ಘಂಟೆಯ ವರಿಗೂ ರೈಲ್ವೆ ಯಾವತ್ತು ಕೆಲಸಗಳನ್ನೂ ಮನ್ನಾಮಾಡಿ ಯಾವತ್ತು ನೌಕರರೂ ಪ್ಲಾಟ್ ಫಾರಂನಲ್ಲಿ ಕೂಡಿ ಉತ್ತರ ಕ್ರಿಯಾದಿಗಳ ಕೂಟವು ಘನ ಜೆ ಬಿ ಬಟ್ರಿಕ್ ಸಾಹೇಬರಿಂದ ನಡಿಸಲ್ಪಟ್ಟಿತು ಸದರೀ ರಾತ್ರಿ ೧೧ ಘಂಟೆಯಿಂದ ೧೨ ಘಂಟೆಯವರಿಗೂ ಚಕ್ರವರ್ತಿಯವರ ಉತ್ತರ ಕ್ರಿಯಾದಿಗಳ ಸೂಚಕವೋ ಎಂಬಂತೆ ಮೋಡಗಳು ಕವಿದು ಕಾರ್ಗತ್ತಲು ವ್ಯಾಪಿಸಿ ಭಯಂಕರವಾದ ಗುಡುಗು ಮಿಂಚುಗಳೊಡನೆ ೨ ಇಂಚು ೨೫ ಸೆಂಟ್ ಮಳೆ ಬಿತ್ತು—ಈ ದಿನದಲ್ಲಿ ಈ ಊರಿನ ಥಿಯಾಸೊಫಿಕಲ್ ರೂಮಿನ ಬಳಿ ಚಕ್ರವರ್ತಿಯವರ ಉತ್ತರ ಕ್ರಿಯಾದಿಗಳ ಜ್ಞಾಪಕಾರ್ಥವಾಗಿ ನೂರಾರು ಜನಗಳಿಗೆ ಅನ್ನೋದಕಗಳನ್ನು ಕೊಟ್ಟರು. ಸದರಿ ರೂಮಿನ ಬಳಿ ಇದಕ್ಕಿಂತ ಮುಂಚೆ ಥಿಯಾಸೊಫಿಕಲ್ ಸ್ಥಾಪಕರಾದ ಮೇಡಮ್ ಬ್ಲಾವಟ್ಕೆ ಮರಣದ ಜ್ಞಾಪಕಾರ್ಥವಾಗಿ ಸುಮಾರು ಮುನ್ನೂರು ಜನಗಳಿಗೆ ಅನ್ನ ಮತ್ತು ವಸ್ತ್ರ ದಾನಗಳನ್ನು ಮಾಡಿದರು—"ಒಬ್ಬರಿಗಿಂತ ಇಬ್ಬರು ಲೇಸು" ಎಂಬಂತೆ ಈ ಥಿಯಾಸೊಫಿಕಲ್ ಸೊಸೈಯಟಿಯಲ್ಲಿ ಬ್ರದರ್ ಹುಡ್ ಎಂಬದಾಗಿ ಗಂಡಸರು ಮಾತ್ರವಲ್ಲದೆ "ಡಾಟರ್ಸ್ ಆಫ್ ಇಂಡಿಯಾ" ಎಂಬದಾಗಿ ಈ ಊರಿನ ಅನೇಕ ನಾರೀಮಣಿಗಳು ಸೇರಿ ಸ್ತ್ರೀಯರ ಪ್ರೋತ್ಸಾಹ ಮತ್ತು ಅಭಿವೃದ್ಧಿಯ ಬಗ್ಗೆ ಕೂಟಗಳನ್ನು ನಡಿಸಿ ನಾನಾ ಸಂಗತಿಗಳ ವಿಷಯ ಭಾಷಣಗಳನ್ನು ಮಾಡುತ್ತಿರುತ್ತಾರೆ ಈ ಕೆಲಸದಲ್ಲಿ ಈ ಊರಿನ ಅಮಲ್ದಾರರವರ ಮನೆಯ ನಾರೀಶಿರೋಮಣಿಗಳೇ ಮುಂದಾಳುಗಳಾಗಿ ನಿಂತು ಕಾರ್ಯಭಾಗಗಳನ್ನು ಬಹು ಶ್ಲಾಘನೀಯವಾಗಿ ನಡಿಸುತ್ತಿರುತ್ತಾರೆ ಹಿಂದಿನ ವಾರದಲ್ಲಿ ಕೂಡಿದ್ದ ಇಂಡಿಯಾ ಪುತ್ರಿಯರ ಕೂಟದಲ್ಲಿ ಸದರಿ ಅಮಲ್ದಾರರವರ ಪುತ್ರಿಯವರಾದ ಸೌಭಾಗ್ಯವತಿ ರಾಜಮ್ಮನವರು ಸ್ತ್ರೀವಿದ್ಯಾಭ್ಯಾಸವನ್ನು ಮತ್ತು ಅದರ ಪ್ರಯೋಜನಗಳನ್ನು ಕುರಿತು ಬಹಳ ಪುಷ್ಕಳವಾಗಿ ಭಾಷಣ ಮಾಡಿದರು ನಮಸ್ತರ ತಿಳುವಳಿಕೆಯ ಬಗ್ಗೆ ಸದರಿ ಭಾಷಣವನ್ನು ಇದರೊಡನೆ ರವಾನಿಸಿರುತ್ತೇನೆ ಸೂರ್ಯನ ಸಹಾಯದಿಂದ ಚಂದ್ರ, ತಾರೆಗಳು ಒಡಗೂಡಿ ಭೂಮಂಡಲದ ಮೇಲಿನ ಕತ್ತಲೆಯನ್ನು ಹ್ಯಾಗೆ ಚದರಿಸುತ್ತವೆಯೋ ಹಾಗೆಯೇ ಪುರುಷರು ತಮ್ಮ ಸ್ತ್ರೀಯರುಗಳಿಗೆ ಸ್ವಾತಂತ್ರ್ಯ, ಪ್ರೋತ್ಸಾಹ ಸಹಾಯಗಳನ್ನು ಕೊಟ್ಟರೆ ಈ ನಮ್ಮ ಭರತಖಂಡದ ಸ್ತ್ರೀ ಮಂಡಲದ ಮೇಲಿನ ಕತ್ತಲೆ ಬೇಗನೇ ಕ್ಷೀಣಸ್ಥಿತಿಗೆ ಬಂದು ಸ್ತ್ರೀ ಕುಲಕೋಟಿಗೆ ಮಹಾ ಪ್ರಯೋಜನವಾಗುವದು [ಈ ಭಾಷಣವನ್ನು ನೊಂದು ಕಡೆ ಪ್ರಕಟಿಸಿರುತ್ತೇವೆ —ಎಡಿ]

ಚನ್ನರಾಯಪಟ್ಟಣ.—ಇಲ್ಲಿ ಬಿಸಲಿನ ತಾಪವು ಸಹಿಸಕೂಡದ್ದಾಗಿತ್ತು. ಜನರು ಅಲ್ಲಲ್ಲಿ ಜ್ವರ, ತಲೆ ನೋವುಗಳಿಂದ ಕಷ್ಟಪಡುತ್ತಲಿದ್ದರು ಕಳೆದ ಎರಡು ವಾರಗಳಲ್ಲಿ ಮೂರು ನಾಲ್ಕು ಸಾರಿ ಒಳ್ಳೇ ಮಳೆಯಾಯ್ತು ತಾ ೮ ರಲ್ಲಿ ಒಂದೇ ರಾತ್ರಿ ೬ ಇಂಚುಗಳ ಮಳೆ ಬಿತ್ತು ಇಂಥಾ ಮಳೆ ಮೂರು ನಾಲ್ಕು ವರುಷಗಳಿಂದಲೂ ಬರಲಿಲ್ಲವೆಂದು ಹೇಳುತ್ತಾರೆ. ಈಗ ಭೂಮಿಯು ಬಹುಮಟ್ಟಿಗೆ ತಂಪಾಗಿ ಬಿಸಲಿನ ತಾಪ ಕಡಮೆಯಾಗಿದೆ—ಕಳೆದ ವಾರ ಇಲ್ಲಿನ ಮದವಮ್ಮದೀಯರಲ್ಲಿ ಕಾಲರಾ ರೋಗವು ತಲೆದೋರಿ ಈಗ ಗಾಣಿಗರಲ್ಲಿಯೂ ಹರಡಿದೆ ಇದುವರೆಗೂ ೧೦-೧೨ ಜನರಿಗೆ ತಗಲಿದ್ದರಲ್ಲಿ ೪—೫ ಮರಣಗಳಾದವು ಮೂರು ದಿನಗಳಿಂದ ನಿತ್ಯವೂ ಒಬ್ಬಿಬ್ಬರಿಗೆ ಹೊಸದಾಗಿ ತಗಲುತ್ತಾ ಇದೆ ನಮ್ಮ ಅಮಲ್ದಾರರು ಟವನ್ ಪಾಕೀಜಾ ವಿಚಾರ ತುಂಬಾ ಮುತುವರ್ಜಿಯನ್ನು ವಹಿಸಿರುವರು ನಮ್ಮ ಮೆಡಿಕಲ್ ಆಫೀಸರವರು ಭಾವಿಗಳ ಜಲವನ್ನು ಶುದ್ಧಿ ಮಾಡುತ್ತಲಿರುವರು, ಕಸಾಬರ ಅಂಗಡಿಗಳು ಮುಚ್ಚಲ್ಪಟ್ಟಿರುವವು.—ತಾ ೮ನೇ ಭಾನುವಾರ ಸಾಯಂಕಾಲ ಶ್ರೀಮದಿಂಡಿಯಾ ಚಕ್ರವರ್ತಿಗಳ ಮರಣ ವಾರ್ತೆಯಿಂದ ಈ ಟವನಿನಲ್ಲಿ ದುಃಖಾಂಧಕಾರವು ಮುಸುಕಿದಂತಾಗಿ ಪ್ರಜೆಗಳೆಲ್ಲಾ ಚಕ್ರವರ್ತಿಗಳ ಮರಣಕ್ಕೆ ಆಶ್ಚರ್ಯಪಡುತ್ತಾ, ಅವರ ರಾಜ್ಯಭಾರದ ಸುಖಾಂಶಗಳನ್ನು ಪ್ರಸ್ತಾಪಿಸುತ್ತಾ ತಂತಮ್ಮ ಸಂತಾಪಗಳನ್ನು ತೋರಿಸುತ್ತಿದ್ದರು ಎಲ್ಲಾ ವ್ಯಾಪಾರಿಗಳೂ ಸರ್ಕಾರಿ ಹುಕುಮನ್ನು ಆದರದಿಂದ ಗಣಿಸಿ ತಾ ೯ನೇ ಸೋಮವಾರ ತಮ್ಮ ತಮ್ಮ ವ್ಯಾಪಾರಾದಿಗಳನ್ನು ನಿಲ್ಲಿಸಿಬಿಟ್ಟು ಚಕ್ರವರ್ತಿಗಳಲ್ಲಿನ ರಾಜ ಭಕ್ತಿಯನ್ನು ತೋರಿಸಿದರು. ಆಯಾ ಕೋಮಿನ ಪ್ರಜೆಗಳು ಚಕ್ರವರ್ತಿಗಳ ವಿಯೋಗ ತಾಪಕ್ಕಾಗಿ ಜಪಾರಾಧನೆಗಳನ್ನು ನಡಿಸಿ ರಾಜವರ್ಗದ ಬಂಧು ಮಿತ್ರಾದಿಗಳಿಗೆ ಭಗವದನುಗ್ರಹವನ್ನು ಬಯಸುವವರಾದರು—ಇಲ್ಲಿನ ಹವಾ ಬದಲಾಗಿರುವದರಿಂದ ಬಹಳ ಜನಗಳು ಜ್ವರ ನೆಗಡಿ ತಲೆನೋವುಗಳಿಂದ ಕಷ್ಟಪಡುತ್ತಲಿದಾರೆ ಒಂದು ವಾರದಿಂದಲೂ ಮಳೆ ಇಲ್ಲ ಬಿಸಲಿನ ಧಗೆ ಬಹಳವಾಗಿದೆ ಈಗಿನ ವರೆಗೆ ನಾಲ್ಕಾರು ಇಂಚುಗಳ ಮಳೆ ಬಂದಹಾಗಾಯಿತು ಮಳೆ ಮೋಡಗಳೂ ಗುಡುಗೂ ಮಿಂಚೂ ಹೇರಳವಾಗಿ ತೋರುತ್ತಲಿವೆ—ಸುಮಾರು ಎರಡು ವಾರಗಳಿಂದ ಈಚೆಗೆ ಇಲ್ಲಿ ಕಾಲರಾ ಉಪದ್ರವು ತಲೆದೋರಿ ೬-೧೦ ಜನರು ಮೃತರಾದರು ೮-೧೦ ಜನರು ಹುಷಾರಿಯಾದರು ನಾಲ್ಕು ದಿನಗಳಿಂದ ಹೊಸ ಬಾಯಿಲೆಗಳೇನೂ ಇಲ್ಲವೆಂದು ತಿಳಿದುಬಂದಿದೆ ಇಲ್ಲಿನ ಮೆಡಿಕಲ್ ಆಫೀಸರವರು ತುಂಬಾ ಮುತುವರ್ಜಿವಹಿಸಿ ಜಲಾಧಾರಗಳನ್ನು ಔಷಧಿ ಮೂಲಕ ಶುದ್ಧಿಗೊಳಿಸುತ್ತಾ ಕಾಯಿಲೆಯವರನ್ನು ವಿಚಾರಿಸಿಕೊಳ್ಳುತ್ತಾ ಇದಾರೆ ನಮ್ಮ ಅಮಲ್ದಾರರು ಆಗಾಗ್ಗೆ ಟವನ್ ಗಸ್ತುಮಾಡುತ್ತಾ ಪಾಕೀಜಾ ವಗ್ಯೆರೆ ವಿಚಾರಿಸುತ್ತಾ ಇರುವರು—ಕಳೆದ ತಾ ೨೦ನೇ ಶುಕ್ರವಾರ ಇಲ್ಲಿನ ಕೋರ್ಟು ಸ್ಕೂಲು ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟು, ಪ್ರತಿ ಕೋಮಿನ ಜನಗಳೂ ತಮ್ಮ ತಮ್ಮ ದೇವಾಲಯ ಮಸೀದಿಗಳಲ್ಲಿ ದೇವರ ಪ್ರಾರ್ಥನೆಗಳನ್ನು ನಡಿಸಿ, ಗತಿಸಿದ ಎಡ್ವರ್ಡ್ ಸಾರ್ವಭೌಮರವರಿಗೆ ಸದ್ಗತಿಯನ್ನೂ ಅವರ ಕುಟುಂಬ ಬಾಂಧವರಿಗೆ ಆದರಣೆ ಸಮಾಧಾನಗಳನ್ನೂ, ನೂತನ ಭೂಪತಿ ಜಾರ್ಜ್ ಪ್ರಭುಗಳಿಗೆ ಆಯುರಾರೋಗ್ಯ ಭಾಗ್ಯಗಳನ್ನೂ ಬಯಸುವವರಾಗಿದ್ದರು ಪಟ್ಟಣವೆಲ್ಲಾ ಸತಿಯ ವಿಯೋಗತಾಪದಿಂ ತಪಿಸುತ್ತಿರುವ ಸ್ತ್ರೀಯಂತೆ ಮಂಕಾಗಿದ್ದಿತು ಎರಡು ಮಹಮದೀಯ ಮಸೀದಿಯಲ್ಲಿಯೂ ಫಾತ್ಯಾ ವಗ್ಯೆರೆಗಳು ನಡಿಸಲ್ಪಟ್ಟವು—ಸಮೀಪದ ಗ್ರಾಮವಾದ ಕಾಳೇನಹಳ್ಳಿಯಲ್ಲಿ ತಾ ೨೦ ರಲ್ಲಿ ಒಂದು ಕಾಲರಾ ಕೇಸು ನಡಿಯಿತೆಂಬ ಪುಕಾರು ಇದೆ ಅಜಮಾಯಿಷಿ ಬಗ್ಗೆ ಇಲ್ಲಿನ ಪ್ರೆಸಿಡೆಂಟರವರು ಹೋಗಿ ಬರುವವರಾಗಿದಾರೆ

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ಬುಧವಾರವೂ ಗುರುವಾರವೂ ರಂಗೂನ್ ಪಟ್ಟಣದಲ್ಲಿ ೧೦ ಅಂಗುಲ ಮಳೆ ಸುರಿಯಿತು ಆಕಾಶವು ಮೋಡ ಕವಿದು, ನಿರೋಪ್ಯವಾಗಿ ಮಳೆಯಾಗುತ್ತಿದೆ ಇದ್ದಕ್ಕಿದ್ದ ಹಾಗೇ ಈ ರೀತಿ ಆದದ್ದು ತುಂಬಾ ಗಾಬರಿಯನ್ನೂ ನಷ್ಟವನ್ನೂ ಉಂಟುಮಾಡಿರುವುದು

ಇದುವರೆಗೂ ನಾಸಿಕದ ಛಿತೂರಿ ಮೊಕದ್ದಮೆಯಲ್ಲಿ ಮೂವತ್ತು ಜನ ಅಪರಾಧಿಗಳ ವಿಚಾರಣೆಯು ನಡೆಯಿತು

* * *

ಚಕ್ರವರ್ತಿಯಾದ ಐದನೇ ಜಾರ್ಜರವರ ಚಹರೆಯ ಮೇಲೆ ನಾಣ್ಯಗಳನ್ನು ಛಾಪಿಸುವದಕ್ಕೆ ಅಚ್ಚುಗಳನ್ನು ಈಗಲೇ ತಯಾರುಮಾಡುತ್ತಿದಾರೆ

* * *

ಸಿಂಲಾ ಪಟ್ಟಣದಲ್ಲೂ ಅದರ ಸುತ್ತುಮುತ್ತ ೨,೦೦೦ ಮೈಲಿ ಫಾಸಲೆಯಲ್ಲೂ ಕಳೆದ ವಾರ ಸ್ವಲ್ಪ ಭೂಕಂಪ ಉಂಟಾಯಿತೆಂದು ತಿಳಿದು ಬಂದಿದೆ

* * *

ಭೌನಗರದ ಮಹಾರಾಜರವರು ಅಲ್ಲಿನ ಪಾಪಾದ್ರಿ ಬೆಟ್ಟಗಳಲ್ಲಿ ಕಳೆದ ವಾರ ೭|| ಅಡಿ ಪ್ರಮಾಣವುಳ್ಳ ಒಂದು ಚಿರತೆಯನ್ನು ಶಿಕಾರಿ ಮಾಡಿರುತ್ತಾರೆ

* * *

ಕಳೆದ ವರುಷ ಹಿಂದುಸ್ಥಾನದ ಎಲ್ಲಾ ಪೋಸ್ಟ್ ಆಫಿಸ್ ಸೇವಿಂಗ್ಸ್ ಬ್ಯಾಂಕುಗಳಲ್ಲೂ ಪ್ರಜೆಗಳಿಂದ ಏಳು ಕೋಟಿ ರೂಪಾಯಿ ಡಿಪಾಜಿಟ್ಟು ಇಡಲ್ಪಟ್ಟಿತ್ತು

* * *

ಕಲ್ಕತ್ತೆಯ ಟಂಕಸಾಲೆಯಲ್ಲಿ ೯ ಲಕ್ಷ ರೂಪಾಯಿಯೂ ಬೊಂಬಾಯಿನ ಟಂಕಸಾಲೆಯಲ್ಲಿ ೧೦ ಲಕ್ಷ ರೂಪಾಯಿಯೂ ಹೊಸದಾಗಿ ಛಾಪಾ ಹಾಕಲ್ಪಟ್ಟವೆಂದು ಪ್ರಕಟವಾಗಿದೆ

* * *

ಪಂಜಾಬಿನಿಂದ ೬ ಜನ ಪೋಲೀಸ್ ಇನ್‌ಸ್ಪೆಕ್ಟರುಗಳನ್ನೂ ೬೦ ಮಂದಿ ಕಾನ್‌ಸ್ಟೆಬಲ್‌ಗಳನ್ನೂ ಸರ್ಕಾರದವರು ಚುನಾಯಿಸಿ ವಾಯವ್ಯ ಸರಹದ್ದಿನ ಪ್ರಾಂತ್ಯಕ್ಕೆ ಕಳುಹಿಸಿರುತ್ತಾರೆ

* * *

ಕಳೆದ ಶುಕ್ರವಾರ ಮದರಾಸ್ ಪಟ್ಟಣದಲ್ಲಿ ಬಿಸಲಿನ ಧಗೆಯು ೧೧೩ ಡಿಗ್ರಿ ವರೆಗೆ ಹೆಚ್ಚಿ ಇತ್ತು ಇಷ್ಟು ಸೆಕೆಯು ಆ ಪಟ್ಟಣದಲ್ಲಿ ಹಿಂದೆ ಯಾವಾಗಲೂ ಇರಲಿಲ್ಲವೆಂದು ಹೇಳುವರು

* * *

ಲಾರ್ಡ್ ಕಿಚ್ನರ್ ಲಾರ್ಡ್ ಸೆಲ್ಬೋರ್ನ್ ಮತ್ತು ಸರ್ ಜಾನ್ ಹ್ಯೂಯೆಟ್, ಈ ಮೂವರ ಪೈಕಿ ಯಾರಾದರೂ ಒಬ್ಬರು ಹಿಂದೂಸ್ಥಾನದ ವೈಸರಾಯಿ ಪದವಿಗೆ ನೇಮಿಸಲ್ಪಡಬಹುದೆಂದು ವರ್ತಮಾನವಿದೆ

* * *

ರಂಗೂನ್ ಪಟ್ಟಣದಿಂದ ಹೊರಟ ರೈಲು ಗಾಡಿಯು ಬಿರುಗಾಳಿಗೆ ಸಿಕ್ಕಿ ಪ್ರಯಾಣಿಕರು ಕೂತಿದ್ದ ಮೂರು ಗಾಡಿಗಳು ಕಂಬಿಗಳನ್ನು ಬಿಟ್ಟು ಹೊರಳಿದವು ರೈಲು ರಸ್ತೆಗೆ ಬಹಳ ನಷ್ಟಸಂಭವಿಸಿತು

* * *

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಡೇರಾಡೂನ್ ಪಟ್ಟಣದಲ್ಲೂ ಸುತ್ತುಮುತ್ತಲಲ್ಲೂ ಒಂದು ವಾರ ಪೂರಾ ಮಳೆಯೂ ಸುಂಟರಗಾಳಿಯೂ ಪ್ರಾಪ್ತವಾಗಿ ಅನೇಕ ಮನೆಮಠಾದಿಗಳೂ ತೋಟಗಳೂ ಹಾಳಾದವು

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಮರ್ರಿ ನಗರಕ್ಕೆ ಕಾಡಿನಿಂದ ಸಾಗುವಾನಿ ಮುಂತಾದ ಮರಗಳನ್ನು ಸಾಗಿಸಿ ತರುವುದಕ್ಕೆ ತಂತಿ ಹಗ್ಗಗಳನ್ನು ಪ್ರಯೋಗಿಸಿ ಒಂದು ರಸ್ತೆಯನ್ನು ಮಾಡಬೇಕೆಂದು ಸರ್ಕಾರದವರು ಪ್ರಯತ್ನಪಟ್ಟಿದಾರೆ

* * *

ಇಂಡಿಯಾ ಗವರ್ನ್‌ಮೆಂಟಿನವರು ಸೀಮೆಯಿಂದ ೨೫ ಮಂದಿ ಇಂಜನಿಯರುಗಳನ್ನು ಕರೆಸಿ, ೬ ೭ ಮಂದಿಯನ್ನು ರೈಲ್ವೆ ಇಲಾಖೆಗೂ, ಉಳಿದವರನ್ನು ನೀರಾವರಿ, ರಸ್ತೆ, ಕಟ್ಟಡಗಳ ಕೆಲಸಕ್ಕೂ ನೇಮಕಮಾಡುವವರಾಗಿದಾರೆ

* * *

ಕರಾಚಿಯಲ್ಲಿರುವ ಕಚ್ ಸ್ವದೇಶಿ ಸ್ಟೋರ್ಸ್ ಎಂಬ ಶಾಪಿನ ಮ್ಯಾನೇಜರವರು ರಾಜದ್ರೋಹಕರವಾದ ವರ್ತಮಾನಗಳನ್ನು ಪ್ರಕಟಿಸಿದರೆಂದು ಸರ್ಕಾರದವರು ಅವರನ್ನು ಮೂರು ಸಾವಿರ ರೂಪಾಯಿ ಜಾಮೀನು ಕೊಡಬೇಕೆಂದು ಕೇಳಿದಾರೆ

* * *

ಬರ್ಮಾ ದೇಶದ ವಿದ್ಯಾಭ್ಯಾಸದ ಇಲಾಖೆಯವರು ತಮ್ಮ ಶಾಲೆಯ ೨೩ ವಿದ್ಯಾರ್ಥಿಗಳು ಇನ್ನು ಎರಡು ವರುಷಗಳ ವರೆಗೂ ಯಾವ ಪರೀಕ್ಷೆಗೂ ಹೋಗಕೂಡದೆಂತಲೂ ಮತ್ತೊಬ್ಬನು ಇನ್ನು ಮುಂದಕ್ಕೆ ಸೇರಬೇಕೂಡದೆಂತಲೂ ವಿಧಿಸಿರುತ್ತಾರೆ

* * *

ಕಾಶೀ ಪಟ್ಟಣದ ರಾಧಾಕೃಷ್ಣದಾಸ ಗುಪ್ತನೆಂಬ ವಜ್ರದ ವ್ಯಾಪಾರಗಾರನು ಕಲ್ಕತ್ತೆಯಲ್ಲಿರುವಾಗ್ಗೆ ಆತನ ೭,೦೦೦ ರೂ ಬಾಳುವಷ್ಟು ಒಡವೆಗಳನ್ನು ಯಾರೋ ಕದ್ದುಬಿಟ್ಟರು ಪೋಲೀಸಿನವರು ಗುಮಾನಿಯ ಮೇಲೆ ಇಬ್ಬರನ್ನು ಹಿಡಿದಿರುತ್ತಾರೆ

* * *

ಹಿಂದುಗಳು ಕಾನೂನಿಗೆ ವಿರೋಧವಾಗಿ ನಡೆಯುವ ಅನಾಮಿಕ ಪಾಳ್ಯದವರನ್ನು ಶಿಕ್ಷಿಸುವದಕ್ಕೆ ತಮ್ಮ ಕೈಲಾದ ಮಟ್ಟಿಗೂ ಪ್ರಯತ್ನಪಡಬೇಕೆಂದು ಸಂತೋಷದ ಮನ್ಮಥನಾಥ ಚೌದರಿಯವರು ವರ್ಧಮಾನದ ಮಹಾರಾಜರವರಿಗೆ ಬರೆದು ತಿಳಿಸಿರುತ್ತಾರೆ

* * *

ಬೀಹಾರ್ ಪ್ರಾಂತ್ಯಕ್ಕೆ ಸೇರಿದ ಸಾರನ್ ಡಿಸ್ಟ್ರಿಕ್ಟ್‌ನಲ್ಲಿ ಈಚೆಗೆ ಪ್ಲೇಗ್ ಉಪದ್ರವು ಪ್ರಾರಂಭವಾಗಿದ್ದಾಗ ಮನೆಯವರು ಪ್ಲೇಗ್ ರೋಗಿಗಳ ಬಳಿ ಬೇವಿನ ಚಕ್ಕೆಗಳನ್ನು ಹಾಕಿ ಉರಿಸುತ್ತಾ ಬಂದರೆಂದೂ, ಇದರಿಂದ ಅನೇಕ ರೋಗಿಗಳಿಗೆ ವಾಸಿಯಾಯಿತೆಂದೂ ಪ್ರಕಟವಾಗಿದೆ

* * *

ಪೂನಾ ಪಟ್ಟಣದಲ್ಲಿ ಸುಮಾರು ೧೫೦ ವರುಷಗಳ ಹಿಂದೆ ಕಟ್ಟಿದ್ದ ಮಹಾದೇವನ ದೇವಸ್ಥಾನದ ಒಂದು ಭಾಗವು ಕುಸಿದು ಬಿದ್ದು ಒಬ್ಬ ಮನುಷ್ಯನು ಮೃತನಾದನು ಇನ್ನೂ ಕೆಲವರಿಗೆ ಗಾಯಗಳಾದವು ಅವರನ್ನೆಲ್ಲಾ ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿರುವರು

* * *

ಅಲ್ಲಹಾಬಾದಿನಲ್ಲಿ ಪ್ರಕಟವಾಗುತ್ತಿದ್ದ ಸ್ವಾರಾಜ್ಯವೆಂಬ ಪತ್ರಿಕೆಯ ನಾಲ್ಕನೇ ಎಡಿಟರಾದ ಲಾಲಾ ಲದ್ದಾರಾಮರವರನ್ನು ವಿಚಾರಣೆಗೆ ಗುರಿಮಾಡಿದ್ದಾಗ ತಾವು ಹಿಂದುವಿನಿಂದ ವಿಚಾರಣೆ ಮಾಡಲ್ಪಡುವದಕ್ಕೆ ಅರ್ಹರಲ್ಲವೆಂದೂ, ತಾವು ಯಾವ ತಪ್ಪನ್ನೂ ಮಾಡಿಲ್ಲವೆಂದೂ ಹೇಳಿರುತ್ತಾರೆ

* * *

ಪೂರ್ವ ಬಂಗಾಳಾ ಆಧಿಪತ್ಯಕ್ಕೆ ಸೇರಿದ ಸಿಲ್ಹಟ್ ಗಿನಲ್ಲಿ ಕಳೆದ ಬುಧವಾರ ಸುಮಾರು ೨೫೦ ಮಂದಿ ಘೋಷಾ ಸ್ತ್ರೀಯರು ಸಭೆಸೇರಿ, ಚಕ್ರವರ್ತಿಯವರು ಕಾಲವಾದದ್ದಕ್ಕಾಗಿ ದುಃಖಪಟ್ಟು, ಈಗಿನ ಚಕ್ರವರ್ತಿಯವರಿಗೂ ರಾಜಮಾತೆಯವರಿಗೂ ಸಂತಾಪಸೂಚಕವಾದ ತಂತೀ ವರ್ತಮಾನಗಳನ್ನು ಕಳುಹಿಸಿ ಕೊಟ್ಟರು

* * *

ಹೈದರಾಬಾದ್ ಸಂಸ್ಥಾನದಲ್ಲಿ ಸ್ಕೂಲ್ ಫೈನಲ್ ಎಂಬ ವಾರ್ಷಿಕ ಪರೀಕ್ಷೆಯನ್ನು ಮುಂದಣ ವರುಷದಿಂದ ಜಾರಿಯಲ್ಲಿ ತರಬೇಕೆಂದು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು ಗೊತ್ತುಮಾಡಿರುವರು ಈ ಪರೀಕ್ಷೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ಕೆಲವು ದೇಶೀಯ ದೊಡ್ಡ ಮನುಷ್ಯರನ್ನು ನೇಮಕಮಾಡಿರುತ್ತಾರೆ

* * *

ಪೂನಾ ಪಟ್ಟಣದ ಹತ್ತಿರ ಒಂದು ಹಳ್ಳಿಯಲ್ಲಿ ನಡೆಯುವ ಜಾತ್ರೆಯಲ್ಲಿ ಅನೇಕರು ತಮ್ಮ ಸಣ್ಣ ಹೆಣ್ಣು ಮಕ್ಕಳನ್ನು ದೇವರಿಗಾಗಿ ಒಪ್ಪಿಸುತ್ತಿದ್ದರು ಹಾಗೆ ಒಪ್ಪಿಸಲ್ಪಟ್ಟವರಲ್ಲಿ ಬಹಳ ಮಂದಿ ದುರ್ನಡತೆಯಲ್ಲಿ ಪ್ರವರ್ತಿಸಿದ್ದರಿಂದ ಸರ್ಕಾರದ ಹೊಸ ಹುಕುಮನ್ನು ಅನುಸರಿಸಿ ಈ ವರುಷ ನಡೆದ ಜಾತ್ರೆಯಲ್ಲಿ ಯಾರೂ ಮಕ್ಕಳನ್ನು ಅರ್ಪಿಸಲಿಲ್ಲ

* * *

ಇಟಾವಾ ಪಟ್ಟಣದಲ್ಲಿ ಮುಸ್ಸಾಮತ್ ಸುರಾಜ ಕೌಯರ್ ಮತ್ತು ಬಾಬು ರಘುಶಂಕರದಾಸ್ ಎಂಬವರು ಮತದ್ವೇಷಕ್ಕಾಗಿ ಒಂದು ಮಗುವನ್ನು ಸಂಹರಿಸಿದರು ಮೈನ್‌ಪುರದ ಜಡ್ಜಿಯವರು ಇವರನ್ನು ವಿಚಾರಣೆ ಮಾಡಿ ಇಬ್ಬರಿಗೂ ಜೀವವಿರುವವರೆಗೂ ದ್ವೀಪಾಂತರ ಶಿಕ್ಷೆಯನ್ನು ವಿಧಿಸಿದರು ಮತ್ತು ಅಪರಾಧಿಗಳಾಗಿದ್ದ ನಾಲ್ಕರನ್ನು ಖುಲಾಸೆಮಾಡಿರುತ್ತಾರೆ

* * *

ಕಾಶೀಪಟ್ಟಣದ ಸಬ್ ಇನ್‌ಸ್ಪೆಕ್ಟರ್ ಸೈಯದ್ ಅಮೀನ್ ಹುಸೇನ್ ಎಂಬಾತನು ಒಂದಾನೊಂದು ಕಳುವು ಮೊಕದ್ದಮೆಯಲ್ಲಿ ಗುಮಾನಿಯ ಮೇಲೆ ರಾಮಪುರದಲ್ಲಿ ಒಬ್ಬನ ಮನೆಯನ್ನು ಹುಡುಕುತ್ತಿರುವಾಗ್ಗೆ ಆ ಮನೆಯ ಮಾಲೀಕರಲ್ಲಿ ಒಬ್ಬನು ಇನ್‌ಸ್ಪೆಕ್ಟರ ಕೈಯನ್ನು ಚಾಕುವಿನಿಂದ ತಿವಿದನು ತಕ್ಷಣವೇ ಅವನನ್ನು ದಸ್ತಗಿರಿ ಮಾಡಿರುತ್ತಾರೆ

* * *

ಆಸ್ಟ್ರೇಲಿಯಾ ದ್ವೀಪದಿಂದ ಹೊರಟ ಒಂದಾನೊಂದು ಜಹಜಿಗೆ ಚಕ್ರವರ್ತಿಯವರ ಮರಣವಾರ್ತೆಯು ತಿಳಿದಿರಲಿಲ್ಲ ಕೊಲಂಬೊ ಪಟ್ಟಣದಿಂದ ಹೊರಟು ಅದೇ ಮುಖವಾಗಿ ಪ್ರಯಾಣ ಮಾಡುತ್ತಿದ್ದ ಮತ್ತೊಂದು ಹಡಗು ಗಾಳಿಯ ಮೂಲಕ ತಂತೀ ವರ್ತಮಾನವನ್ನು ಕಳುಹಿಸಿ ೩೫೦ ಮೈಲಿ ದೂರದಲ್ಲಿದ್ದ ಆ ಜಹಜಿಗೆ ಮರಣದ ಸಮಾಚಾರವನ್ನು ತಿಳಿಸಿತು

* * *

ಬಾರ್ನ್ ಪಟ್ಟಣದ ಹತ್ತಿರ ಇಪ್ಪತ್ತು ಜನರು ಭಾವಿಯ ನೀರನ್ನು ಕುಡಿದು ಮೃತಪಟ್ಟರೆಂಬುವದು ಸುಳ್ಳೆಂಬದಾಗಿಯೂ ಹಬ್ಬದ ದಿವಸ ಕೊಳೆತ ಮಾಂಸವನ್ನು ತಿಂದದ್ದರಿಂದ ವಾಂತಿಭೇದಿಯಾಗಿ ಸತ್ತುಹೋದರೆಂತಲೂ ಆ ಉಪದ್ರವನ್ನು ಶಮನಮಾಡುವದಕ್ಕೆ [illegible] ಸರ್ಕಾರದವರ ಅಪ್ಪಣೆಯ ಮೇರೆಗೆ ಭಾವಿಗೆ ಔಷಧವನ್ನು [illegible] ತಿಳಿಸಿರುವರು

* * *

ಒಬ್ಬ ಮೋಸಗಾರನು ಪಂಜಾಬಿನ [illegible]ಗಳಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪಿಸುವದಕ್ಕೆ ಸರ್ಕಾರದವರು ತನ್ನನ್ನು ನೇಮಿಸಿರುವರೆಂದು ಹೇಳಿ ಮೊದಲು ಎರಡು ತಿಂಗಳ ಪಿರ್ಕನ್ನು ಆ ಹಳ್ಳಿಯವರೇ ಕೊಡಬೇಕೆಂದು ಅವರಿಂದಲೂ ಒಬ್ಬ ಸ್ಕೂಲ್ ಇನ್‌ಸ್ಪೆಕ್ಟರಿಂದಲೂ, ತಹಸೀಲ್‌ದಾರರಿಂದಲೂ ಹಣವನ್ನು ವಸೂಲ್ಮಾಡಿಕೊಂಡು ಪರಾರಿಯಾದನು ಈಚೆಗೆ ಅವನು ಸಿಕ್ಕಿಬಿದ್ದು ಜೈಲಿನಲ್ಲಿದಾನೆ

* * *

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೧೧,೨೪೮ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು ಅದು ಹ [illegible] ಹ್ಯಾಗೆಂದರೆ,—ಪಂಜಾಬ್ ಆಧಿಪತ್ಯ ೭ ೩೦೦, ಸಂಯುಕ್ತ ಆಧಿಪತ್ಯಗಳು ೧,೫೯೫ ರಾಜಪುಟಾನಾ ೧,೪೯೭, ಬೊಂಬಾಯಿ ಆಧಿಪತ್ಯ ೪೯೪ ಬಂಗಾಳ ೩೫೦, ಬರ್ಮಾ ೧೫೨ ಮಧ್ಯ ಪ್ರಾಂತ್ಯಗಳು ೩೨ ಕಾಶ್ಮೀರ ೭ ಮಧ್ಯ ಇಂಡಿಯಾ ೬ ಮದರಾಸ್ ಆಧಿಪತ್ಯ ೬, ಮೈಸೂರು ೪

* * *

ರಾಜದ್ರೋಹಕರವಾದ ಅಭಿಪ್ರಾಯವುಳ್ಳ ಮರಾಟೀ ಪದ್ಯಗಳನ್ನು ಬರೆದದ್ದಕ್ಕಾಗಿ ಲಕ್ಷ್ಮಣರಾವ್ ಎಂಬವನನ್ನೂ ಅವುಗಳನ್ನು ಅಚ್ಚು ಹಾಕಿದ್ದಕ್ಕೆ ಭಾಸ್ಕರ ಮಹದೇವ ಎಂಬವನನ್ನೂ ಅವುಗಳನ್ನು ಪ್ರಚಾರಪಡಿಸಿದ ಖಂಡೇರಾವ್ ದ್ವಾರಕೇಜ ಎಂಬವನನ್ನೂ ಸರ್ಕಾರದವರು ಹಿಡಿದು ವಿಚಾರಣೆಗೆ ಗುರಿಮಾಡಿರುತ್ತಾರೆ ವಿಚಾರಣೆಯು ನಡೆಯುವ ವರೆಗೂ ಆ ಮೂವರು ಅಪರಾಧಿಗಳೂ ಜೈಲಿನಲ್ಲಿರತಕ್ಕದ್ದೆಂದು ಗೊತ್ತಾಗಿದೆ

* * *

ಹಿಂದುಸ್ಥಾನದ ಯಾವ ವಿದ್ಯಾನಿಲಯದಲ್ಲಿಯೇ ಆಗಲಿ ಬಿ ಎ ಪರೀಕ್ಷೆಯನ್ನು ಮಾಡಿ, ಪಾಳಿ ಮತ್ತು ಬರ್ಮೀಸ್ ಭಾಷೆಗಳನ್ನು ಚೆನ್ನಾಗಿ ಕಲಿತಿರುವ ಯಾವ ಜನಾಂಗದ ವಿದ್ಯಾರ್ಥಿಯಾದರೂ ಒಬ್ಬನಿಗೆ ಪ್ರಾಚೀನ ಶಾಸ್ತ್ರಾನ್ವೇಷಣವನ್ನು ಕಲಿಯುವದಕ್ಕೆ ತಿಂಗಳಿಗೆ ನೂರು ರೂಪಾಯಿಯಂತೆ ಒಂದು ವರುಷದ ವರೆಗೂ ವಿದ್ಯಾರ್ಥಿ ವೇತನವನ್ನು ಕೊಡುತ್ತೇವೆಂದು ಬರ್ಮಾ ವಿದ್ಯಾಭ್ಯಾಸದ ಇಲಾಖೆಯವರು ಪ್ರಕಟಿಸಿರುತ್ತಾರೆ

ವಿದೇಶ ವರ್ತಮಾನಗಳು

ಹೈಯಿನ ಜನಗಳು ತುರ್ಕಿಯವರ ಮೇಲೆ ತಿರುಗಿ ಬಿದ್ದು ಅವರ ಸೈನ್ಯಾಧಿಪತಿಯ ಮೇಲೆ ಯುದ್ಧಮಾಡಿ ಬಹಳ ನಷ್ಟಪಡಿಸಿರುತ್ತಾರೆ ಸುಲ್ತಾನರು ಸಹಾಯವನ್ನು ಕಳುಹಿಸಿರುತ್ತಾರೆ

* * *

ಟ್ರಾನ್ಸ್‌ವಾಲ್ ಯುದ್ಧದಲ್ಲಿ ಕೈಕಾಲು ಮೊದಲಾದ ಅಂಗಗಳನ್ನು ಕಳೆದುಕೊಂಡವರ ಜೀವನಕ್ಕಾಗಿ ಆ ಗವರ್ನ್‌ಮೆಂಟಿನವರು ೧೮ ಲಕ್ಷದ ೬೫ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

* * *

ಕಳೆದ ಎಂಟು ವರುಷಗಳಿಂದ ನಾವಿಕ ಸೈನ್ಯದ ಡಾಕ್ಟರಾಗಿದ್ದ ಲೆವಿಕ್ ರವರು ದಕ್ಷಿಣ ಮೇರುವಿಗೆ ಹೋಗಬೇಕೆಂದಿರುವ ಕ್ಯಾಪ್ಟನ್ ಸ್ಕಾಟ್ ರವರ ಜೊತೆಯಲ್ಲಿ ಹೋಗಬೇಕೆಂದು ನೇಮಕವಾಗಿದಾರೆ ಇವರಿಬ್ಬರೂ ಮುಂದಿನ ಜೂನ್ ಮೊದಲನೇ ಭಾಗದಲ್ಲಿ ಹೊರಡುವವರಾಗಿದಾರೆ

* * *

ವಿಲಾಯಿತಿಗೆ ಸೇರಿದ ಕಂಬರ್‌ಲ್ಯಾಂಡಿನ ಹತ್ತಿರವಿರುವ ಕಲ್ಲಿದ್ದಲ ಗಣಿಯಲ್ಲಿ ಅನಾಹುತವಾಗಿ ಅನೇಕರು ಸತ್ತುಹೋದರು ಆ ಪೈಕಿ ಒಬ್ಬ ಹೆಂಗಸಿನ ಮಗನೂ, ಗಂಡನೂ, ಮೂರು ಜನ ಸಹೋದರರೂ ಮೃತಪಟ್ಟರು ಇನ್ನು ಮೂರು ತಿಂಗಳ ವರೆಗೆ ಈ ಗಣಿಯನ್ನು ಮುಚ್ಚಿ ಬಿಡುವರೆಂದು ವರ್ತಮಾನವಿದೆ

* * *

ಆಂಗ್ಲೊ ಜಪಾನೀಯರ ಪ್ರದರ್ಶನಶಾಲೆಯು ಲಂಡನ್ ಪಟ್ಟಣದಲ್ಲಿ ಕಳೆದ ವಾರ ವಿಶೇಷ ವಿಜೃಂಭಣೆಯಿಲ್ಲದೆ ತೆರೆಯಲ್ಪಟ್ಟಿತು ಬ್ರಿಟಿಷರ ಮತ್ತು ಜಪಾನೀಯರ ಧ್ವಜಗಳು ಹಾರುತ್ತಿದ್ದವು ಪ್ರದರ್ಶನವು ಎಲ್ಲಾ ಭಾಗದಲ್ಲಿಯೂ [illegible] ಪಕ್ವವಾಗಿದೆ ನಾಲ್ಕು ಸಾವಿರ ಜನರು ತಮ್ಮ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿರುತ್ತಾರೆ

* * *

ದಕ್ಷಿಣ ಆಫ್ರಿಕಕ್ಕೆ ಸೇರಿದ ಜೂಲೂಲ್ಯಾಂಡಿನ ರಾಜ ದೊರೆಯ ಚಕ್ಕಪ್ಪನನ್ನು ಗವರ್ನ್‌ಮೆಂಟಿನವರು ಹಿಡಿದು ನಟಾಲಿಗೆ ಕರೆದು ತಂದು ಇಟ್ಟುಕೊಂಡಿದಾರೆ ಆತನನ್ನು ಮತ್ತೆ ಅಲ್ಲಿಗೆ ಕಳುಹಿಸುವುದಿಲ್ಲ ಈಚೆಗೆ ಜೂಲೂಲ್ಯಾಂಡಿನ ದೇಶೀಯ ಜನರು ದಂಗೆಯೆದ್ದು ದಾಂದಲೆ ನಡಿಸುವುದು ನಿಂತುಹೋಗಿರುತ್ತದೆ

* * *

ಅಮೆರಿಕಾಖಂಡದ ಕೋಟ್ಯಾಧೀಶ್ವರನಾಗಿ ಮೃತನಾದ [illegible] ಕರ್ನಲ್ ಸ್ವೋಪ್ ಎಂಬಾತನಿಗೆ ವಿಷಪ್ರಯೋಗ ಮಾಡಿ ಕೊಂದು ಆತನ ಸಂಸಾರದಲ್ಲಿ ಎಂಟು ಜನರಿಗೆ ವಿಷಮಶೀತಜ್ವರದ ಕ್ರಿಮಿಗಳನ್ನು ಔಷಧಿನಲ್ಲಿ ಸೇರಿಸಿ ಹಾಕಿದನೆಂಬದಾಗಿ ಹಾಕ್ ಹೈಡ್ ಎಂಬ ವೈದ್ಯನನ್ನು ವಿಚಾರಣೆ ಮಾಡಿ ಸಾಯುವವರೆಗೂ ಬಂದೀ ಖಾನೆಯ ಶಿಕ್ಷೆಯನ್ನು ವಿಧಿಸಿರುತ್ತಾರೆ

* * *

ಕೊಚ್ಚಿ ಸಂಸ್ಥಾನದಲ್ಲಿ ಬಾಲಕ ಬಾಲಕಿಯರಿಗೆ ಕೈಗಾರಿಕೆ ಮತ್ತು ಕುಶಲವಿದ್ಯೆಗಳನ್ನು ಕಲಿಸುವುದಕ್ಕೆ ಒಂದು ಪಾಠಶಾಲೆಯನ್ನು ಮುಂದಿನ ಸಪ್ಟಂಬರು ತಿಂಗಳು ೧೭ ನೇ ತಾರೀಖಿನ ದಿನ ಸ್ಥಾಪಿಸುವರು ಹೆಣ್ಣು ಮಕ್ಕಳಿಗೆ ಹೊಲಿಗೆ ಅಂಚು ಕಟ್ಟುವದು ಮುಂತಾದ ಸೂಕ್ಷ್ಮ ಕೆಲಸಗಳನ್ನೂ ಗಂಡು ಹುಡುಗರಿಗೆ ಅಡಗಿನ ಕೆಲಸ ಮರಕೆಲಸ, ಮಣ್ಣಿನ ಕೆಲಸ ಮುಂತಾದವುಗಳನ್ನೂ ಕಲಿಸುವುದಕ್ಕೆ ಏರ್ಪಾಡು ಮಾಡಿರುತ್ತಾರೆ

* * *

ದಕ್ಷಿಣ ಸಮುದ್ರದಲ್ಲಿರುವ ಟಾಂಗಾ, ಸೊಸೈಟಿ, ಸಾಲ್ಮನ್, ಕುಕ್ ಎಂಬೀ ಗುಂಪುಗಳ ದ್ವೀಪಗಳಲ್ಲಿ ದೇಶೀಯ ಜನರು ಮತ್ತೆ ನರಮಾಂಸ ಭಕ್ಷಣೆಯನ್ನು ಪ್ರಾರಂಭಿಸಿರುವಂತೆ ಪ್ರಕಟವಾಗಿದೆ ಕೆಲವು ದಿನಗಳ ಹಿಂದೆ ಆ ಪೈಕಿ ಒಂದು ದ್ವೀಪದ ಜನರು ಹೋರೇಷಿಯೋ ಹಾಪ್ಕಿನ್ ಮತ್ತು ಹೆಕ್ಟರ್ ಮೆಕ್‌ಫರ್ಸನ್ ಎಂಬ ಇಬ್ಬರು ಪಾದ್ರಿಗಳನ್ನು ಹಿಡಿದು ಕೊಂದುಹಾಕಿ ಅವರ ಮಾಂಸವನ್ನು ತಿಂದಿರುತ್ತಾರೆಂದು ವರ್ತಮಾನ ಬಂದಿದೆ

* * *

ಪರ್ಷಿಯಾ ರಾಜ್ಯಕ್ಕೆ ಸೇರಿದ ಷಿರಾಜ್ ಪಟ್ಟಣದಲ್ಲಿ ಪ್ರಸಿದ್ಧರಾದ ಇಬ್ಬರು ಕಳ್ಳರು ಸಿಕ್ಕಿಬಿದ್ದಾಗ ಅವರನ್ನು [illegible] ಗಳಲ್ಲಿ ಹೂಳಿ ನೀರಾದ ಸಿಮೆಂಟ್ ಗಾರೆಯನ್ನು ಅವರ [illegible] ಸುರಿದು ಅವರ ಪ್ರಾಣವು ನಿಧಾನವಾಗಿ ಹೋಗುವಂತೆ ಶಿಕ್ಷಿಸಿದರು ಇಂಗ್ಲೆಂಡಿನ ಪೋಲೀಸ್ ಅಧಿಕಾರಿಯು ಅಪ್ಪಣೆ ಪಡೆಯದೆ ಯಾರೂ ಷಿರಾಜ್ ಪಟ್ಟಣದ ಕಡೆಗೆ ಹೋಗಕೂಡದೆಂದು ಆಜ್ಞೆ ಮಾಡಿದಾರೆ

* * *

ಇಂಗ್ಲೆಂಡಿನ ಗ್ರೇಟ್ [illegible] ಎಂಬ ಕೌಂಟಿಗೆ ಸೇರಿದ ಒಬ್ಬ ಹೆಂಗಸೂ ಹ್ಯಾನಹಾಜಿಟ್ ಎಂಬ ಅವಳ ಮಗಳೂ [illegible] ಒಂದು ಗೋವಿಯು ನುಗ್ಗಿ ತಾಯಿಯನ್ನು ಕೆಳಕ್ಕೆ ಕೆಡವಿ ಕೊಂದು ಹಾಕ ಪಡಕ್ಕೆ ಪ್ರಯತ್ನಿಸಿತು ಆಗ ಅವಳ ಮಗಳು ಗೋವಿಯ [illegible] ನುಗ್ಗಿ ಅದನ್ನು ಅಟ್ಟಿ ತನ್ನ ತಾಯಿಯ ಪ್ರಾಣವನ್ನು [illegible] ಇವಳ ಧೈರ್ಯಕ್ಕೆ ಮೆಚ್ಚಿ ಎಡ್ವರ್ಡ್ ಚಕ್ರವರ್ತಿಯವರು [illegible] (ಬಿರುದಿನ ಬಿಲ್ಲೆ) ಕೊಡಿಸಿದರು

* * *

ದಕ್ಷಿಣ ಆಫ್ರಿಕದ ಬೀಚು ಆನಲ್ಯಾಂಡಿಗೆ ದೊರೆಯಾದ ಖಾಮ ಎಂಬಾತನು ತಾನು ಕ್ರಿಸ್ತಮತಕ್ಕೆ ಸೇರಿ ಹತ್ತು ವರ್ಷಗಳಾದ ಆ ದಿನವನ್ನು ವಿಜೃಂಭಣೆಯಿಂದ ಕಳೆಯುವದಕ್ಕಾಗಿ ತನ್ನ ಸೀಮೆ ಜನರೆಲ್ಲರನ್ನೂ ಸೇರಿಸಿದ್ದನು ಈತನು ಮೊದಲು ಕ್ರೈಸ್ತನಾದಾಗ ಇವನ ತಂದೆಯು ಇವನನ್ನು ಕೊಂದುಹಾಕುವದಕ್ಕೆ ಪ್ರಯತ್ನಪಟ್ಟನು ಕೆಲವು ವರುಷಗಳ ಹಿಂದೆ ಈತನು ಇಂಗ್ಲೆಂಡಿಗೆ ಹೋಗಿದ್ದಾಗ ಅಲ್ಲಿನ ಜನರು ಈತನನ್ನು ಬಹಳ ವಿಶ್ವಾಸವಾಗಿಯೂ ಮರ್ಯಾದೆಯಿಂದಲೂ ಎದುರುಗೊಂಡರು

* * *

ಪೂರ್ವ ಆಫ್ರಿಕದ ಮೆರುವಿನ ಸಮೀಪದಲ್ಲಿ ಡ್ಯೂಕ್ ಆಫ್ ಕನ್ನಾಟ್‌ರವರು ಒಂದು ಭಾರೀ ಸಿಂಹವನ್ನು ಶಿಕಾರಿ ಮಾಡಿರುತ್ತಾರೆ ಎರಡು ದಿವಸಗಳ ವರೆಗೂ ಅದನ್ನು ಕಾದು ಬಂದೂಕಿನಿಂದ ಆ ಮೃಗವನ್ನು ಕೊಂದುಬಿಟ್ಟರು ಆ ಪ್ರಾಂತ್ಯದಲ್ಲಿ ಈಚೆಗೆ ಸಿಂಹಗಳ ಹಾವಳಿಯು ಹೆಚ್ಚಾಗಿರುವದರಿಂದ ಅವುಗಳ ಬಾಧೆಯನ್ನು ಕಡಮೆ ಮಾಡಿಕೊಳ್ಳಲು ಆಗಿಂದಾಗ್ಗೆ ಶಿಕಾರಿಮಾಡಲು ಹೊರಡುತ್ತಾರೆ ಇದೇ ಮೇರೆಗೆ ಒಬ್ಬ ಇಂಗ್ಲೀಷರವನು ಒಂದೇ ಗಂಟೆಯ ಹೊತ್ತಿನಲ್ಲಿ ಆರು ಸಿಂಹಗಳನ್ನು ಶಿಕಾರಿಮಾಡಿದನು

* * *

ಪಶ್ಚಿಮ ಇಂಡಿಯಾ ದ್ವೀಪಗಳಲ್ಲಿ ಬಹಳ ದೊಡ್ಡದಾದ ಕ್ಯೂಬಾ ದ್ವೀಪದಲ್ಲಿ ಹವಾನಾ ಎಂಬ ಪಟ್ಟಣದೊಳಗೆ ಜನಗಳ ಗಲಭೆಯು ಕಳೆದ ವಾರ ಪ್ರಾಪ್ತವಾಗಿ ಸರ್ಕಾರಕ್ಕೆ ಸೇರಿದ ೩,೦೦೦ ಪೌಂಡುಗಳ ಮದ್ದನ್ನು ಪಿನಾರ್ ಡೆಲ್‌ರಿಯೋ ಎಂಬ ಸೈನಿಕರ ರಾಜ್ಯಕ್ಕೆ ಸಾಗಿಸುತ್ತಿದ್ದರು ಆಗ ಒಬ್ಬ ಕೆಲಸಗಾರನು ಒಂದು ಮದ್ದಿನ ಚೀಲವನ್ನು ನೆಲದ ಮೇಲೆ ಕೆಡವಿದನು ಈ ಡೈನಮೈಟ್ ಮದ್ದು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ ಅನಾಹುತ ಸಂಭವಿಸಿತು ಸೈನ್ಯದ ಕಟ್ಟಡಗಳೆಲ್ಲಾ ಒಂದು ಕ್ಷಣದಲ್ಲಿ ಒಡೆದು ಹಾರಿ ನಾಶವಾದವು ನೂರಾರು ಜನರು ಮೃತಪಟ್ಟರು ಅನೇಕರಿಗೆ ಗಾಯಗಳಾದವು ಕೆಲವು ಜನರು ಅಂತರಿಕ್ಷದಲ್ಲಿ ಹಾರಿ ಹೋಗಿ ಬಿದ್ದು ಮೃತಪಟ್ಟರು ಪಟ್ಟಣದಲ್ಲಿ ಗೋಡೆಗಳ ಕೆಳಗೆ ಸಿಕ್ಕಿ ಹಲವರು ಕಾಲವಾದರು

Printed and Published by the Rev H GULLIFORD Proprietor and Manager, Wesleyan Mission Press, Mysore 26/5/1910

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]